ಫೋನ್ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೯ ೧-೪೯ [ಸಂಚಿಕೆ ೧೫೭

ಪಾಕಿಸ್ಥಾನದ ಮೇಲೆ ೩ ಲಕ್ಷ ಪಠಾಣರ ದಂಗೆ

ಉಪಾಧ್ಯಾಯರುಗಳು ಮುಷ್ಕರ ಹೂಡಕೂಡದು

ದ್ಯಾ ಸಮ್ಮೇಳನದಲ್ಲಿ ದಿವಾನರ ಹಿತೋಕ್ತಿ

ಮೈಸೂರು ೮

ಖಿಲ ಭಾರತ ವಿದ್ಯಾ ಸಮ್ಮೇಳನವು ನ್ನೆ ರಾತ್ರಿ ಮುಕ್ತಾಯವಾಯಿತು. ನಾ ಉಪಸಮಿತಿಗಳ ವರದಿಗಳನ್ನು ಸ್ವೀಕರಿಸಲಾಯಿತು ಅನಂತರ ಅ ಭಾರತದಲ್ಲಿರುವ ಎಲ್ಲ ಶಾಲಾ ಕಾಲೇ ... ಉಪಾಧ್ಯಾಯರ ಮಕ್ಕಳಿಗೆ ಉಚಿ ... ಸ ಸೌಕರ್ಯವನ್ನು ಕೊಡಬೇ ... ಯವು ಅಧ್ಯಕ್ಷರಿಂದ ಮಂಡಿಸ ... ಂಗೀಕೃತವಾಯಿತು

... ತೆ ವಹಿಸಿದ್ದ ನಂ' ಆರ್ಕಾಟ್ ... ಮಿ ಮೊದಲಿಯಾರ್ ರವರು ತ ... ನ ಕ್ತ್ಯಾಯ ಭಾಷಣದಲ್ಲಿ ಈ ರೀತಿ ... ವರು -

ಉಪಾಧ್ಯಾಯರುಗಳ ಆರ್ಥಿಕ ಸ್ಥಿತಿಯು ... ಕರವಾಗಿಲ್ಲದಿದ್ದರೂ ಈಗ ಸ್ವಲ್ಪಮ ... ತ್ತಮಗೊಂಡಿದೆ ಉಪಾಧ್ಯಾ ... ಸಾರ್ವಜನಿಕರು ಹಿಂದೆ ಕೊ ... ತ್ತಿದ್ದ ಗೌರವ ಪುರಸ್ಕಾರಗಳು ಈಗ ... ತ್ತಿಲ್ಲ. ಆದರೆ ಆ ಭಾಗ್ಯವನ್ನು ... ವು ಉಪಾಧ್ಯಾಯರುಗಳ ಕೈ ... ದ ಉಪಾಧ್ಯಾಯರುಗಳು ತಮ್ಮ ... ದ ಕೊರತೆಗಳನ್ನು ಶಾಂತಿ ಸಂಧಾನ ... ಂದ ನಿವಾರಿಸಿಕೊಳ್ಳಬೇಕೇ ಹೊ ... ಎಂದಿಗೂ ಮುಷ್ಕರವನ್ನು ಹೂಡ ... ಅವರು ಹಾಗೆ ಮಾಡಿದರೆ ದೇ ... ಕ್ಕೆ ಅತ್ಯಂತ ಹಾನಿಯುಂಟಾಗುವುದು. ... ಶಾಲೆಗಳು ವಿದ್ಯಾಪ್ರಸಾರವನ್ನು ... ಶ್ರದ್ಧೆಯಿಂದ ಮಾಡುತ್ತಿವೆ ಸ ... ದ ಹೊರೆಯನ್ನು ಅವು ನಿರ್ವಹಿಸಾ ... ವೆ ಆದುದರಿಂದ ಅಂತಹ ಶಾ ... ಗೆ ಸರ್ಕಾರದವರು ಆದಷ್ಟು ಹೆಚ್ಚಿನ ... ಸಹಾಯವನ್ನು ಒದಗಿಸಬೇಕು. ... ಶಾಲೆಗಳಲ್ಲಿನ ಉಪಾಧ್ಯಾಯರು ... ಸರ್ಕಾರಿ ಶಾಲೆಗಳಂತೆಯೇ ... ಸವಲತ್ತುಗಳನ್ನು ಕೊಡುವುದು ಅಗ ... ಸರ್ಕಾರಕ್ಕೆ ಯಾವ ಮತಗಳ ಸಂ ... ವೂ ಇಲ್ಲ ಆದುದರಿಂದ ಶಾಲಾ ಕಾ ... ಗಳಲ್ಲಿ ಮತ ಬೋಧನೆಯನ್ನು ಕ ... ವಾಗಿ ಮಾಡಕೂಡದು ಆದರೆ ... ನ್ನು ಸಂಪೂರ್ಣವಾಗಿ ತ್ಯಜಿಸಲೂಬಾ ... ಖಾಸಗೀಯವರು ಅದನ್ನು ವಿದ್ಯಾ ... ಗೆ ತರಗತಿಗಳ ಕಾಲವಾದ ನಂತರ ... ನಿರ್ವಹಿಸಬೇಕು ರೋಮ ... ನ್ನು ಉಪಯೋಗಿಸುವುದರಿಂದ ... ದ ಭಾವಾವಾರು ಸಮಸ್ಯೆಯು ... ವುದೆಂಬುದು ನನ್ನ ಖಚಿತವಾ ... ಯ

... ಷತ್ತಿನ ಅಧ್ಯಕ್ಷರಾದ ಶ್ರೀ ಎಂ. ... ರವರು ತಮ್ಮ ಭರತವಾಕ್ಯದ ... ಅಂಸಕಾರವನ್ನು ತೊಲಗಿಸಿ ... ವಿಗಳನ್ನು ಪ್ರಸಾರ ಮಾಡು ... ಉಪಾಧ್ಯಾಯ ವರ್ಗವನ್ನು ತ ... ಮಾನಸರೆಂದು ಇಂದಿನ ಮಂ ... ಬಾವಿಸಬೇಕೆಂದು ಎಳಸಿ ... ಪಾಧ್ಯಾಯರುಗಳು ತಮ್ಮ ವೃತ್ತಿ ... ರ್ಣ ನಂಬಿಕೆ ವಿಶ್ವಾಸವನ್ನು ... ಸಿದರೆ ಅವರ ಬೇಡಿಕೆಗಳು ... ವುದರಲ್ಲಿ ಸಂದೇಹವಿಲ್ಲವೆಂದೂ ... ರುಗಳಿಗೆ ಸರ್ವರೂ ಪುರಸ್ಕಾ ... ಕಾದುದು ಅಗತ್ಯವೆಂದೂ ತಿ

ನೂತನ ಪೌರಸಭಾಧ್ಯಕ್ಷರು

ಮೈಸೂರು ೮

ರಾಜಧಾನಿಯ ಹೊಸ ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಈ ದಿನ ಮಧ್ಯಾಹ್ನ ತಮ್ಮ ಅಧಿಕಾರವನ್ನು ಶ್ರೀ ಪಿ ಸೀತಾರಾಮಯ್ಯನವರಿಂದ ವಹಿಸಿಕೊಂಡರು

ಸಾರ್ವಜನಿಕ ವಿದ್ಯಾರ್ಥಿನಿಲಯ

ಮೇಲ್ಕಂಡ ವಿದ್ಯಾರ್ಥಿನಿಲಯವು ಯಾವ ಜಾತಿಮತಗಳ ಗೊಂದಲಕ್ಕೂ ಸಿಕ್ಕದೆ ಕೇವಲ ಬಡ ವಿದ್ಯಾರ್ಥಿಗಳಿಗಾಗಿ ಸ್ಥಾಪಿಸಲ್ಪಟ್ಟಿದೆ ಕಳೆದ ವರ್ಷ ನಂಜನಗೂಡು ತಾಲ್ಲೂಕಿನಲ್ಲಿ ೨೦ ಪಲ್ಲ ಭತ್ತ ಭಿಕ್ಷ ಮಾಡಿ ನಿಲಯಕ್ಕೆ ಉಪಯೋಗಿಸಲಾಯಿತು, ಈ ಸಾರಿ ಆ ವಿದ್ಯಾರ್ಥಿಗಳು ಬಿಡುತ್ತಿದ್ದಾರೆ ಈ ಸಾರಿ ಭತ್ತವನ್ನು ನಿಲಯಕ್ಕೆ ಎತ್ತುವುದಕ್ಕಾಗಿ ಎಳಂದೂರು ತಾಲ್ಲೂಕಿನಲ್ಲಿ ಅಗರ ಮಾಂಬಳ್ಳಿಯ ಶ್ರೀ ಎ ಪಿ ರಾಮಚಂದ್ರಯ್ಯನವರನ್ನು ಪ್ರಾರ್ಥಿಸಲಾಗಿದೆ ಮಹಾಜನರು ಅವರಿಗೆ ಭತ್ತವನ್ನು ಸಹಾಯ ಮಾಡಿ ನಿಲಯವನ್ನು ಪಡೆಯಬೇಕಾಗಿ ಸಂಚಾಲಕರಾದ ಶ್ರೀ ಕೆ ಎಸ್. ಸುಬ್ಬಣ್ಣನವರು ಪ್ರಾರ್ಥಿಸಿದ್ದಾರೆ

ಉಚಿತ ನೇತ್ರ ಚಿಕಿತ್ಸೆ

ಹುಬ್ಬಳ್ಳಿಯ ಸುಪ್ರಸಿದ್ಧ ಕಣ್ಣಿನ ವೈದ್ಯರಾದ ಶ್ರೀ॥ ಮೋದಿ ಮುರಗಪ್ಪನವರು ರಾಜಧಾನಿಯ ಪೈಸ್ವಾಮಿ ಆಸ್ಪತ್ರೆಯಲ್ಲಿರುವ ಶ್ರೀ ನಿರಂಜನರಾಜೇ ಅರಸಿನವರ ಶಾಂತಿ ನಿಲಯ ಎಂಬ ಬಂಗಲೆಯಲ್ಲಿ ಕಳೆದ ಏನೇ ತಾ॥ ನಿಂದ ಉಚಿತವಾಗಿ ಕಣ್ಣಿನ ಚಿಕಿತ್ಸೆ ನಡೆಸುತ್ತಿದ್ದಾರಷ್ಟೆ ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ॥ ಆರ್ ಆರ್. ದಿವಾಕರರೂ ಮತ್ತು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ॥ ಎಸ್ ನಿಜಲಿಂಗಪ್ಪನವರೂ, ಕಳೆದ ... ನೇ ತಾ॥ ಅಲ್ಲಿಗ ಭೇಟಿಕೊಟ್ಟು ಅವರ ಚಿಕಿತ್ಸೆ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ

ಮಂತ್ರಿವರ್ಯರಾದ ಶ್ರೀ ಡಿ ಹಚ್ ಚಂದ್ರಶೇಖರಯ್ಯನವರೂ ಮತ್ತು ಕಾರ್ಪೊರೇಷನ್ನಿನ ಕಾರ್ಯದರ್ಶಿಗಳಾದ ಶ್ರೀ ಕೋಟಿ ಶ್ವರನ ರವರು ... ನಂತರ ಸಮಾ ... ಯಿತ

ಪಾಕಿಸ್ಥಾನದ ಮೇಲೆ ಪಠಾಣರ ದಂಗೆಯೇ?

ಗಡಿನಾಡಿನ ಗಾಂಧಿಯವರಾದ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಡಾ॥ ಖಾನ್ ಸಾಹೇಬರವರುಗಳನ್ನು ಪಾಕಿಸ್ಥಾನ ಸರ್ಕಾರದವರು ಬಂಧಿಸಿರುವುದನ್ನು ಪ್ರತಿಭಟಿಸಲು ಯೋಜಿತ ಸಂಸ್ಥಾನದ ೩ ಲಕ್ಷ ಜನ ಪಠಾಣರು ದಂಗೆ ಏಳುವ ಸಂಭವ ಒದಗಿದೆಯೆಂದು ಹೇಳಲಾಗಿದೆ ಕಳೆದ ಕೆಲವು ತಿಂಗಳಿನಿಂದ ಕೇಂದ್ರ ಸರ್ಕಾರದ ಸಂಸ್ಥೆಯವರು ಮೇಲ್ಕಂಡ ಸಂಸ್ಥಾನದಲ್ಲಿ ತಮ್ಮ ಕಾರ್ಯಾಚರಣೆ, ಫಲವಾಗಿ ಅಲ್ಲಿನ ಸರ್ಕಾರವೇ ಒಂದು ಭಾಗವಾಗಿ ಜನರನ್ನು ತಮ್ಮ ಕಡೆಗೆ ಒಲಿಸಿಕೊಂಡಿದ್ದಾರೆಂದು ವರದಿಯಾಗಿದೆ

ಈಜಿಪ್ಟಿನಲ್ಲಿ ಮಾರ್ಷಲ್ ಲಾ

ಕ್ರಾಂತಿಕಾರರ ಹಿಂಸಾ ಚಳುವಳಿಯನ್ನು ಅಡಗಿಸಲು ಈಜಿಪ್ಟಿನಲ್ಲಿ ಮಾರ್ಷಲ್ ಲಾ ವನ್ನು ಜಾರಿಗೆ ತಂದು, ನೂತನ ಪ್ರಧಾನಿ ಅಬ್ದುಲ್ ಹಾದಿ ಪಾಷ ರವರೇ ಮಿಲಿಟರಿ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ

ಕಳ್ಳರನ್ನು ಹಿಡಿಯುವ ನೂತನ ಯಂತ್ರ

ಬ್ರಿಟನ್ನಿನಲ್ಲಿ ಕಳ್ಳರನ್ನು ಹಿಡಿಯುವ ನೂತನ ಯಂತ್ರ ಸಲಕರಣೆಯನ್ನು ತಯಾರಿಸಲಾಗುತ್ತಿದೆ ಕಟ್ಟಡದ ಬಾಗಿಲು ಮತ್ತು ಕಿಟಕಿಗಳಿಗೆ ವಿದ್ಯುಚ್ಛಕ್ತಿ ತಂತಿಗಳನ್ನು ಕಾಣದಂತೆ ಕಟ್ಟಲಾಗುವುದು ಯಾರಾದರೂ ಕಟ್ಟಡವನ್ನು ಪ್ರವೇಶಿಸಿದರೆ ವಿದ್ಯುಚ್ಛಕ್ತಿ ಯಂತ್ರವು ತಕ್ಷಣ ... ದಲ್ಲಿರುವ ಟೆಲಿಫೋನಿಗೆ ತಗಲುವುದು ಕೂಡಲೇ ಪೋಲೀಸ್ ಸ್ಟೇಷನ್ನಿಗೆ ಕಳ್ಳರ ವಿವರಗಳನ್ನು ಟೆಲಿಫೋನು ಕೊಡುವುದು ಇದರಿಂದ ಪೋಲೀಸರು ಬಂದು ಕಳ್ಳರನ್ನು ಹಿಡಿಯಲು ಅನುಕೂಲವಾಗುವುದು

೧೨೦೦ ಉಪಾಧ್ಯಾಯರುಗಳ ರಾಜೀನಾಮೆ

ಸಂಯುಕ್ತ ಪ್ರಾಂತ್ಯ ಸರ್ಕಾರದವರು ... ಗೆ ... ಕಾರಣ ... ರಾಜೀನಾಮೆ ...

ಖಾಸಿಂ ರಜ್ವಿಯ ಮೇಲೆ ಕೊಲೆ ಆಪಾದನೆ

ಹೈದರಾಬಾದಿನ ರಾಷ್ಟ್ರೀಯ ಪತ್ರಿಕೆಯ ಸಂಪಾದಕರಾಗಿದ್ದ ಷೋಯಬುಲ್ಲಾ ರವರ ಕೊಲೆಗೆ ಸಹಾಯಕನಾಗಿದ್ದನೆಂಬ ಆಪಾದನೆಯಮೇಲೆ ರಜಾಕರ ನಾಯಕ ಸಯದ್ ಖಾಸಿಂ ರಜ್ವಿಯಮೇಲೆ ಅಲ್ಲಿನ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗುವುದೆಂದು ಹೇಳಲಾಗಿದೆ

ಕಾಶ್ಮೀರದಲ್ಲಿ ಕದನ ನಿಲ್ಲಿಸಲು ಪಾಕಿಸ್ತಾನದ ಒಪ್ಪಿಗೆಯೇ?

ಕಾಶ್ಮೀರದಲ್ಲಿ ಕದನ ನಿಲ್ಲಿಸಲು ಪಾಕಿಸ್ಥಾನವು ಒಪ್ಪಿದೆಯೆಂದೂ, ಈ ವಾರದೊಳಗಾಗಿ ಅದು ಕಾರ್ಯರೂಪಕ್ಕೆ ಬಂದು, ಕಾಶ್ಮೀರದಲ್ಲಿ ಜನಾಭಿಪ್ರಾಯವನ್ನು ತೆಗೆದುಕೊಳ್ಳಲು ಸಿದ್ಧತೆ ಮಾಡಲಾಗುವುದೆಂದು ಹೇಳಲಾಗಿದೆ ಭಾರತದೊಡನೆ ಯುದ್ಧ ನಡೆಸುವುದರಿಂದ ಪಾಕಿಸ್ತಾನಕ್ಕೆ ಹಾನಿಯೆಂದೂ, ಆದುದರಿಂದ ಕೂಡಲೆ ಕದನ ನಿಲ್ಲಿಸಬೇಕೆಂದೂ ಅಲ್ಲಿನ ಪ್ರಧಾನಿ ಲಿಯಾಕತ್ ಅಲಿಯವರನ್ನು ಪ್ರಮುಖ ನಾಯಕರುಗಳು ಒಪ್ಪಿಸಿರುವರೆಂದೂ ಹೇಳಲಾಗಿದೆ

ಅಣುಶಕ್ತಿಯಿಂದ ನೌಕೆಗಳ ಸಂಚಾರ

ಅಣುಶಕ್ತಿಯ ಸಹಾಯದಿಂದ ಯುದ್ಧ ನೌಕೆಗಳನ್ನು ನಡೆಸುವ ಬಗ್ಗೆ ಅಮೆರಿಕದಲ್ಲಿ ಸಂಶೋಧನೆ ಮಾಡಲಾಗುತ್ತಿದೆಯೆಂದೂ ವಾಷಿಂಗ್ಟನ್ನಿನಲ್ಲಿ ಈಗಾಗಲೇ ಒಂದು ದೊಡ್ಡ ಕಾರ್ಖಾನೆಯಲ್ಲಿ ೬೦೦ ಜನ ವಿಜ್ಞಾನಿಗಳು ಕೆಲಸ ಮಾಡುತ್ತಿರುವರೆಂದು ಹೇಳಲಾಗಿದೆ

ಇಂಡೋನೇಷ್ಯದಲ್ಲಿ ಕದನ ನಿಲ್ಲಿಸಲು ಆಜ್ಞೆ

ಪಶ್ಚಿಮ ಇಂಡೋನೇಷ್ಯದಲ್ಲಿ ನಿನ್ನೆ ರಾತ್ರಿಯಿಂದ ಕದನ ನಿಲ್ಲಿಸುವಂತೆ ಅಲ್ಲಿನ ಸೈನ್ಯಾಧಿಕಾರಿಗಳು ಆಜ್ಞೆ ಇತ್ತಿರುವರೆಂದು ವರದಿಯಾಗಿದೆ

ನಾನ್‌ಕಿಂಗಿನ ಹತ್ತಿರ ಕಮ್ಯೂನಿಸ್ಟರು

ಚೀನಾದ ರಾಜಧಾನಿಯಾದ ನಾನ್‌ಕಿಂಗಿಗೆ ೧೦೦ ಮೈಲಿ ಉತ್ತರದಲ್ಲಿರುವ ಸೂಚೌ ನಲ್ಲಿ ೫ ಲಕ್ಷ ಕಮ್ಯೂನಿಸ್ಟ್ ಸೈನಿಕರ ಜಮಾವಣೆ ಆಗಿದೆಯೆಂದು ವರದಿಯಾಗಿದೆ. ... ನಗರ ಜಿಲ್ಲೆಯಲ್ಲಿರುವ ಅರ್ಧ ಭಾಗ ಕಮ್ಯೂನಿಸ್ಟರ ವಶ ... ಹೇಳಲಾಗಿದೆ ಕದನವನ್ನು ಕೂಡಲೇ ನಿಲ್ಲಿಸಬೇಕೆಂದು ಆ ನಗರದ ... ರು ... ರಲ್ಲಿ ... ಮಾಡಿರುತ್ತಾರೆ

ಲಾಯಕ್ ಅಲಿ ಮಂತ್ರಿ ಮಂಡಲದ ಬಂಧನ ಮುಂದುವರೆಯಿತು

ಹೈದರಾಬಾದಿನ ಮಾಜಿ ಪ್ರಧಾನಿ ಲಾಯಕ್ ಅಲಿ ಮತ್ತು ಇತರ ಮಂತ್ರಿಗಳ ... ಬಂಧನವನ್ನು ... ಮುಂದುವರಿಸಲಾಗಿದೆ. ... ಹೇಳಲಾಗಿದೆ. ... ಪ್ರಸಿದ್ಧ ಕ್ರಿಕೆಟ್ ... ಮೊದಲನೆ ... ಸಲಿರುತ್ತಾರೆ

ಮೇಕೆದಾಟ್ ವಿದ್ಯುಚ್ಛಕ್ತಿ ಬಗ್ಗೆ ಮಾತುಕತೆ

ಮೈಸೂರು ೧

ಮದರಾಸಿನ ಪಬ್ಲಿಕ್ ವರ್ಕ್ಸ್ ಸಚಿವ ಶ್ರೀ ... ಭಕ್ತವತ್ಸಲಂರವರು ನಿನ್ನೆ ದಿನ ವಿದ್ಯುಚ್ಛಕ್ತಿ ಸಚಿವರಾದ ಶ್ರೀ ಕೆ ಟಿ ... ಮತ್ತು ... ಸಚಿವರಾದ ಶ್ರೀ ... ರವರುಗಳೊಡನೆ ಮೇಕೆದಾಟ ವಿದ್ಯುಚ್ಛಕ್ತಿ ಯೋಜನೆಯ ವಿಚಾರವಾಗಿ ಮಾತುಕತೆ ನಡೆಸಿದರು, ಇನ್ನೂ ಯಾವ ನಿರ್ಧಾರವೂ ಆಗಲಿಲ್ಲವೆಂದು ವರದಿಬಂದಿದೆ

... ವಿದ್ಯುಚ್ಛಕ್ತಿ

ಕೃಷ್ಣರಾಜನಗರ ತಾಲ್ಲೂಕು ಚುಂಚನಕಟ್ಟೆ ... ೫೦ ಅಡಿ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ತಯಾರಿಸುವ ಬಗೆ ಪರೀಕ್ಷಿಸಿ ... ಸರ್ಕಾರದವರು ... ಮಾಡಿರುತ್ತಾರೆ

... ವರ್ಷ ಭಾರತದ ... ಚುನಾವಣೆ

... ರಂಗದ ನೇರಿ ಭಾರತ ... ನೇ ವರ್ಷದ ಮಾರ್ಚಿ ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ ... ಎಂದೂ, ಈ ... ದೆಹಲಿಯಲ್ಲಿ ... ತಿಳಿದುಬಂದಿದೆ

ಬಿಂಡಾಂಗರು ರಾಜೀನಾಮೆ ಕೊಡಲು ಸಿದ್ಧ

... ಇದಲ್ಲಿ ... ರಾಜೀನಾಮೆ ಕೊಡಲು ಸಿದ್ಧರಾಗಿರುವುದಾಗಿ ... ಸೂತನ ... ತಿಳಿಸಿರುತ್ತಾರೆ

VIDYARTHI SANGHA
Mysore
Free Coaching Class
Section

Under the auspices of the ... coaching ... for both S S L C ... Intermediate Examination ... will be ... High School ... Last date ... before ... Only a ... number of students ... admitted. Ladies are also admitted. Office:—
BANUMAIAH'S HIGH SCHOOL, MYSORE
Secretary

ಟೆಲಿಫೋನ್ ಮೂಲಕ ಮದುವೆ

ಅಮೇರಿಕವನ್ನು ಪ್ರವೇಶಿಸಲು ಅಲ್ಲಿನ ಅಧಿಕಾರಿಗಳು ಅನುಮತಿ ಕೊಡದಿದ್ದುದರಿಂದ ಇಟಲಿಯ ... ನಗರದ ಡೀನಾ ... ಎಂಬ ತರುಣಿಯು ತನ್ನ ದೇಶಕ್ಕೆ ಹಿಂದಿರುಗಿ ಅಲ್ಲಿಂದ ಟೆಲಿಫೋನಿನ ಮೂಲಕ ಅಮೇರಿಕದ ವಿಮಾನ ದಳದ ನೌಕರನಾದ ... ಎಂಬುವನನ್ನು ಮದುವೆಯಾದಳೆಂದು ವರದಿಯಾಗಿದೆ

ಗಾಳಿಗಿಂತ ಹಗುರವಾದ ವಿಮಾನ

ಅಮೇರಿಕದಲ್ಲಿ ಗಾಳಿಗಿಂತಲೂ ಹಗುರವಾದ ವಿಮಾನಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಲು ಸಿದ್ಧತೆಗಳಾಗಿವೆಯೆಂದು ತಿಳಿದು ಬಂದಿದೆ

ಶ್ರೀಮನ್ಮಹಾರಾಜರವರ ಸತ್ಕಾರ ಕೂಟ

ಮೈಸೂರು ೧

ಅಖಿಲ ಭಾರತ ವಿದ್ಯಾ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ನಿನ್ನೆ ಸಂಜೆ ಚಾಮುಂಡಿ ಜಮುನಾನಾದಲ್ಲಿ ಶ್ರೀಮನ್ಮಹಾರಾಜರವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ದಿವಾನರು ಮುಖ್ಯಮಂತ್ರಿ ಮತ್ತು ಇತರ ಸಚಿವರುಗಳು, ಮದರಾಸಿನ ಸಚಿವರಾದ ಶ್ರೀ ಎಂ ಭಕ್ತವತ್ಸಲಂರವರು, ವಿದ್ಯಾಸಮ್ಮೇಳನದ ಪ್ರತಿನಿಧಿಗಳು ಮತ್ತು ಇತರರೂ ಸೇರಿ ಒಟ್ಟು ೩೫೦೦ ಜನ ಆಹ್ವಾನಿತರು ದಯಮಾಡಿಸಿದ್ದರು ಉಪಾಹಾರದನಂತರ, ಶ್ರೀಮನ್ಮಹಾರಾಜರವರು ಅತಿಥಿಗಳಿದ್ದ ಕಡೆಗೆ ದಯಮಾಡಿಸಿ ಅವರುಗಳ ಪರಿಚಯವನ್ನು ಮಾಡಿಕೊಂಡರು

ಇನ್ನೊಂದು ತಿಂಗಳಲ್ಲಿ ಮಹಾತ್ಮರ ಕೊಲೆ ಮೊಕದ್ದಮೆಯ ತೀರ್ಪು

ದೆಹಲಿಯ ಕೆಂಪು ಕೋಟೆಯಲ್ಲಿ ಕಳೆದ ೬ ತಿಂಗಳಿನಿಂದಲೂ ನಡೆಯುತ್ತಿರುವ ಮಹಾತ್ಮರ ಕೊಲೆ ಮೊಕದ್ದಮೆಯ ವಾದ ವಿವಾದಗಳು ನಿನ್ನೆಗೆ ಮುಕ್ತಾಯವಾದುವು ಇನ್ನು ಒಂದು ತಿಂಗಳಲ್ಲಿ ತೀರ್ಪನ್ನು ಕೊಡಲಾಗುವುದೆಂದು ವಿಶೇಷ ನ್ಯಾಯಾಧೀಶರು ತಿಳಿಸಿರುತ್ತಾರೆ

1-1-49ರಿಂದ ಅನೋಘ 4ನೇ ವಾರ
ಪ್ರತಿ ದಿನ ೩ ಆಟಗಳು
ಮೈ ಸೂ ರು ಅಪೇರಾ
ಬೆಂಗಳೂರು ಸಾಗರ್, ಶಿವಾಜಿ ಮತ್ತುಲಕ್ಷ್ಮೀ
ಕೆ ಜಿ ಎಫ್ ಕೃಷ್ಣಾ ಟಾಕೀಸುಗಳಲ್ಲಿ
ಜೂಪಿಟರ್ ಪಿಕ್ಚರ್ಸ್‌ರವರ:
ಮೋಹಿನಿ ಮೋಹಿನಿ
ಪ್ರಾರಂಭದಿಂದ ಕೊನೆಯವರೆವಿಗೂ ಉಲ್ಲಾಸವನ್ನು ಉಂಟುಮಾಡುವ
ತ ಮಿ ಳು ಚಿ ತ್ರ
ತಾರಾಗಣ:- ವಿ. ಎನ್. ಜಾನಕಿ, ಟಿ. ಎಸ್. ಬಾಲಯ್ಯ,
ಬಾಲಸುಬ್ರಹ್ಮಣ್ಯಂ, ಲಲಿತ, ಪದ್ಮಿನಿ,
ಮುಂತಾದವರು
A Nandi Picture Release



ಗಾಯತ್ರೀ ಟಾಕೀಸ್
1-1-1949 ರಿಂದ
ಪ್ರತಿ ದಿನ ೩ ಪ್ರದರ್ಶನಗಳು
ಕೋಟ್ಯಾಂತರ ರೂಪಾಯಿಗಳನ್ನು
ವಿರ್ಚುಮಾಡಿ ಪ್ರಪಂಚವನ್ನು
ಬೆಳಗಿಸಲು ತಯಾರಾಗಿರುವ
ನೂತನ ವರ್ಷದ, ವರ್ಣ
ರಂಜಿತ ಅಡ್ವೆಂಚರ್
ಚಿತ್ರ ಕಾಣಿಕೆ
20th ಸೆಂಚುರಿ ಫಾಕ್ಸ್
ಕ್ಯಾಪ್ಟನ್ ಫ್ರಮ್
ಕ್ಯಾಸ್ಟೀಲ್
Morning Shows at 10 0 a m
from 1 1 49 for 4 days
M G M's
THE ROMANCE OF
ROSY RIDGE
With Van Johnson

CHAMUNDESWARI
TALKIES
Morning Shows at 10 30 a m
From 31st Dec 48 For 4 days
Double Programme
Sidney Toler in
Shadows over
China Town
and Kane Richmond and
Peter Cookson in
Don't Gamble
with Strangers

ರಾಜಕಮಲ್
ಟಾಕೀಸ್
೨೧-೧೨-೪೮ರಿಂದ
ಅನೋಘ ... ನೇ ವಾರ
ಪ್ರತಿ ದಿನ 3 ಆಟಗಳು
ಭಕ್ತ
ಕುಂಬಾರ
(ಕನ್ನಡ)
—MORNING SHOWS:—
From 1-1-49 for 4 days
THE KILLERS
With
Burt Lancaster,
Ava Gardner,
Edmond O'Brien

ಹರಾಜು ಇಸ್ತಿಹಾರ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ

ಮೈಸೂರು ಸಿಟಿ ... ಹಳೆ ... ಇಲ ... ರಸ್ತೆಯಲ್ಲಿ ಬಂಗ್ಲೆ ಮತ್ತು ಕಾಟೇಜು ಸೈಟುಗಳನ್ನು ಜನವರಿ ಮಾಹೆ ... ಮತ್ತು ... ನೇ ತಾರೀಖುಗಳಲ್ಲಿ ಬೆಳಗ್ಗೆ ... ಗಂಟೆ ಲಾಗಾಯಿತು ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ವಿವರಗಳನ್ನು ಆಫೀಸು ನೋಟೀಸ್ ಬೋರ್ಡಿನಲ್ಲಿ ತಿಳಿದುಕೊಳ್ಳಬಹುದು

(ಸಹಿ) ವಿ. ಕೆ. ಮುಕುಂದನ್,
ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್‌ಮನ್ ...

Printed and published by ... R Nagaraja at ... Press, D Subbiah ... Mysore

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೩ | ಭಾನುವಾರ ೨-೧-೪೯ | ಸಂಚಿಕೆ ೨

ಕಾಶ್ಮೀರದ ಕದನ -ನಿಲ್ಲಿಸಲು ಒಪ್ಪಂದ-

ಮೂಲಶಿಕ್ಷಣದ ವೈಶಿಷ್ಟ್ಯ

ಶ್ರೀಮತಿ ಆಶಾದೇವಿಯವರ ಭಾಷಣ

ಮೈಸೂರು ೧

ಅಖಿಲ ಭಾರತ ವಿದ್ಯಾ ಸಮ್ಮೇಳನದ ಅಂಗವಾಗಿ ನಡೆದ ಮೂಲ ಶಿಕ್ಷಣ ಸಮ್ಮೇಳನದ ಅಧ್ಯಕ್ಷರಾಗಿದ್ದ ತಾಲಿಮಿ ಸಂಘದ ಶ್ರೀಮತಿ ಆಶಾ ದೇವಿಯವರು ವಿಚಾರಪೂರ್ಣ ಭಾಷಣವನ್ನು ಮಾಡಿದರು.

ಪ್ರಪಂಚದಲ್ಲಿ ಮೇಲು ಕೀಳು, ಬಡವ ಬಲ್ಲಿದ ಎಂಬ ಭಿನ್ನ ಭಾವವನ್ನು ತೊಡೆದು ಪ್ರತಿಯೊಬ್ಬನೂ ಸ್ವಪರಿಪೂರ್ಣತೆಯಿಂದ ವಿದ್ಯಾಭ್ಯಾಸದ ನಂತರ ಸರ್ಕಾರಿ ನೌಕರಿಗಳಿಗೆ ಆತೆಪಡದೆ ದೇಶದ ಅಭ್ಯುದಯವನ್ನೇ ಮುಖ್ಯ ಗುರಿಯೆಂದು ತಿಳಿದುಕೊಳ್ಳುವಂತಹ ವಿದ್ಯಾಭ್ಯಾಸವನ್ನು ಕೊಡುವುದು ಅಗತ್ಯವೆಂದು ತಿಳಿದು ಬಾಪೂಜಿಯವರು ಈ ಮೂಲ ಶಿಕ್ಷಣವನ್ನು ಜಾರಿಗೆ ತಂದರೆಂದು ಅವರು ಹೇಳಿದರು.

ಮೂಲ ಶಿಕ್ಷಣದಲ್ಲಿ ಪ್ರತಿ ವಿದ್ಯಾರ್ಥಿಯೂ ತನ್ನ ವಿದ್ಯಾಭ್ಯಾಸದ ಜೊತೆಗೆ ಕೈಗಾರಿಕೆ, ವ್ಯವಸಾಯ ಮತ್ತು ಬಟ್ಟೆ ತಯಾರು ಮಾಡುವುದು ಇವೇ ಮುಂತಾದ ಕಸಬುಗಳನ್ನು ಕಲಿಯಲು ಅವಕಾಶವಿದೆಯೆಂದೂ ಪಾರ ಪ್ರವಚನದ ಜೊತೆಗೆ ಅನ್ಯ ಮತಗಳ ಬಗ್ಗೆ ವಿಶೇಷ ಗೌರವ ಪುರಸ್ಕಾರ ಕೊಡುವುದನ್ನೂ ಸಹ ಹೇಳಿಕೊಡಲಾಗುವುದೆಂದೂ ಈ ಶಿಕ್ಷಣವು ಆಯಾಯ ದೇಶ ಭಾಷೆಗಳಲ್ಲೇ ನಡೆಯುವುದರಿಂದ ಭಾಷಾ ಸಮಸ್ಯೆಯು ಸಹ ತಲೆ ದೋರುವುದಿಲ್ಲವೆಂದೂ ತಿಳಿಸಿದರು.

ಈ ಹೊಸ ವಿಧಾನದ ವಿದ್ಯಾಭ್ಯಾಸದಿಂದ ದೇಶದ ಆರ್ಥಿಕ ಸಂಪತ್ತು ಅಭಿವೃದ್ಧಿಯಾಗಿ ನೂತನ ಪ್ರಪಂಚದ ಪುನರ್ನಿರ್ಮಾಣವಾಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು.

ತಾಯಿ ತಂದೆಗಳು ವಿದ್ಯಾವಂತರಾಗಿದ್ದರೆ ಮಾತ್ರ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಪೋಷಿಸಿ ಅವರಿಗೆ ಒಳ್ಳೆಯ ಜ್ಞಾನವನ್ನು ಉಂಟುಮಾಡಲು ಅನುಕೂಲವಾಗುವುದೆಂದೂ ತಾಯಿಯಾದವಳು ತನ್ನ ೨ ವರ್ಷದ ಮಗುವಿನ ಕೈಯಲ್ಲಿ ೬ ವರ್ಷದ ಮಗುವಿನ ಪೋಷಣೆಯನ್ನು ಬಿಡುವುದು ತಪ್ಪೆಂದೂ, ಆದಷ್ಟು ಮಕ್ಕಳ ಪೋಷಣೆಯ ಕೇಂದ್ರಗಳನ್ನು ತೆರೆಯಬೇಕೆಂದೂ ತಿಳಿಸಿದರು.

ಮಕ್ಕಳಿಗೆ ರುಚಿಯಾಗಿರುವುದನ್ನು, ತರಕಾರಿ ಬೆಳೆಯುವುದು ಮುಂತಾದುವನ್ನು ಕಲಿಸಿ ಅವರಿಗೆ ಸಕೆಂಡರಿ ತರಗತಿಗಳಲ್ಲಿ ಚಿತ್ರ, ವಿಜ್ಞಾನ ಬಟ್ಟೆ ತಯಾರುಮಾಡುವುದು ಇವೇ ಮುಂತಾದುವನ್ನು ಕಲಿಸಲಾಗುವುದೆಂದೂ, ಮನಸ್ಸಿಗೆ ಹರ್ಷ ಉಂಟುಮಾಡಲು ಕೋಲಾಟ, ನಾಟಕ ಮತ್ತು ಜಾನಪದ ಕುಣಿತ ಮುಂತಾದುವುಗಳನ್ನು ಏರ್ಪಡಿಸಿ ಭಾರತದ ಪ್ರಾಂತಗಳಲ್ಲಿನ ಕಲಾಕೌಶಲ್ಯವನ್ನು ಅಭಿವೃದ್ಧಿ ಪಡಿಸಲಾಗುವುದೆಂದೂ ಅವರು ಹೇಳಿದರು.

ಮೈಸೂರು ಅಕ್ಷರ ಪ್ರಚಾರ ಸಮಿತಿಯವರು ವಿದ್ಯಾಪೀಠದಲ್ಲಿ ತಮ್ಮ ಕಾರ್ಯಕ್ರಮದ ಜೊತೆಗೆ ಮನರಂಜನೆಯನ್ನೂ ಏರ್ಪಡಿಸಿರುವುದಕ್ಕೆ ಅವರು ಅಭಿನಂದನೆಯನ್ನು ಸಲ್ಲಿಸಿದರು.

ಕೇಂದ್ರ ವಿಭಾಗದಲ್ಲಿ ಪ್ರಾಮಾಣಿಕತೆ, ಪರಸ್ಪರ ಸೌಹಾರ್ದದಿಂದ ಬಾಳುವುದನ್ನು ಕಲಿಸಲಾಗುವುದೆಂದೂ ಇದರಿಂದ ದೇಶದಲ್ಲಿ ನಡೆಯುತ್ತಿರುವ ಅಶಾಂತಿ ಮತ್ತು ಕೋಮುವಾರು ಕಲಹ

ಹರಿಕಥೆ

ಮೈಸೂರು ೨

ನಾಳೆ ರಾತ್ರಿ ೮-೩೦ ಗಂಟೆಗೆ ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ಸಾಧ್ವಿ ಕಛೇರಿಯ ಮಹಡಿಯ ಮೇಲೆ ಪಾಲಘಾಟಿನ ಹರಿಕಥಾ ವಿದ್ವಾನ್ ಕೀರ್ತನಪಟು ಶ್ರೀ॥ ಕೆ. ಎಸ್. ಗಣಪತಿ ಭಾಗವತರಿಂದ ಸೀತಾ ಕಲ್ಯಾಣ ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಆಹ್ವಾನವುಂಟು.

ಪೋಷಕರ ದಿನಾಚರಣೆ

ರಾಜಧಾನಿಯ ಚಾಮುಂಡಿಪುರಂ ಸರ್ಕಾರಿ ಬಾಲಬೋಧಿನಿ ಕನ್ನಡ ಪ್ರೈಮರಿ ಬಾಲಕಿಯರ ಶಾಲೆಯ ಪೋಷಕರ ದಿನಾಚರಣೆಯು ಪೌರಸಭಾಧ್ಯಕ್ಷರಾದ ಶ್ರೀ ಪಿ. ಸೀತಾರಾಮಯ್ಯನವರ ಧರ್ಮಪತ್ನಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಕ್ಕಳಿಂದ ಆಟಪಾಟಗಳಾದನಂತರ, ರೇಂಜ್ ಇನ್ಸ್‌ಪೆಕ್ಟರಾದ ಶ್ರೀ ಜೆ. ಕೆ. ನಂಜಪ್ಪನವರು ಶಾಲೆಯ ಅಭಿವೃದ್ಧಿಯ ವಿಷಯವಾಗಿ ಕೆಲವು ಸಲಹೆಗಳನ್ನು ಇತ್ತರು. ಅಧ್ಯಕ್ಷಿಣಿಯರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ವೆಂಕಟಕೃಷ್ಣಪ್ಪನವರ ಸೇವೆಯನ್ನು ಪ್ರಶಂಸಿಸಿದರು.

ಮೋಟಾರು ಕೆಲಸಗಾರರ ಬೇಟಿಕೆ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ಕೆ. ದೌಲತ್‌ರಾಯರ ಅಧ್ಯಕ್ಷತೆಯಲ್ಲಿ ಕಳೆದ ೨೦ನೇ ತಾ॥ ನಡೆದು, ಸರ್ಕಾರದವರು ಜಾರಿಗೆ ತರಬೇಕೆಂದಿರುವ ಕಾರ್ಮಿಕ ಶಾಸನದ ೧೪ನೇ ವಿಧಿಯನ್ನು ಜಾರಿಗೆ ತರಕೂಡದೆಂದು ಮಾಲೀಕರು ಒತ್ತಾಯಪಡಿಸುತ್ತಿರುವುದನ್ನು ಖಂಡಿಸಿ, ಕಾರ್ಮಿಕರ ಹಿತಸಾಧನೆಗಾಗಿ ಅದನ್ನು ಕೂಡಲೇ ಜಾರಿಗೆ ತರಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಲಾಯಿತು.

ಳು ಹೋಗಿ ಪ್ರತಿ ವ್ಯಕ್ತಿಯೂ ಸ್ವಪರಿಪೂರ್ಣನಾಗಿ ದೇಶಕ್ಕೆ ಅಥವಾ ಸಮಾಜಕ್ಕೆ ಹೊರೆಯಾಗಿ ನಿಲ್ಲುವುದನ್ನು ತಪ್ಪಿಸಲಾಗುವುದೆಂದೂ ಹೇಳಿದರು.

ಈ ವಿದ್ಯಾಭ್ಯಾಸದಿಂದ ಸೌಹಾರ್ದವೇರ್ಪಟ್ಟು ಪ್ರತಿ ಮನುಷ್ಯನಲ್ಲಿಯೂ ಸಹೋದರ ಭಾವನೆ ಮೂಡಿ ದೇಶದ ಅಭಿವೃದ್ಧಿಗೆ ಸಹಾಯಕವಾಗುವುದರಲ್ಲಿ ಸಂದೇಹವಿಲ್ಲವೆಂದೂ ಇದರಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಸುಖ ಶಾಂತಿಗಳು ಹೆಚ್ಚಿ ಜನಜೀವನ ನಡೆಯುವುದಕ್ಕೆ ಅನುಕೂಲವಾಗುವುದೆಂದೂ ತಿಳಿಸಿದರು.

ರಷ್ಯದಿಂದ ಅಮೆರಿಕದ ಮೇಲೆ ಆಟಂ ಬಾಂಬ್ ಪ್ರಯೋಗ

ರಷ್ಯವು ಅಣುಬಾಂಬಿನ ಪ್ರಯೋಗದ ಸಿದ್ಧತೆಗಳನ್ನು ಅಗಾಧವಾಗಿ ಮಾಡಿಕೊಂಡಿರುವುದಾಗಿ ರಹಸ್ಯವಾದ ಮೂಲಗಳಿಂದ ವರ್ತಮಾನವು ಬಂದಿರುತ್ತದೆ. ರಷ್ಯದ ರಾಜಧಾನಿಯಿಂದ ನೇರವಾಗಿ ನ್ಯೂಯಾರ್ಕ್ ನಗರದ ಮೇಲೆ ಬಾಂಬುಗಳನ್ನು ಹಾಕುವಂತಹ ಯಂತ್ರಗಳು ಪರಿಷ್ಕರಿಸಲ್ಪಟ್ಟಿವೆ. ೫೦ ಪೌಂಡು ತೂಕದ ಹೆಲ್ಲೀಗಳನ್ನು ಅಣುಶಕ್ತಿಯ ಮೂಲಕ ರಷ್ಯದಿಂದಲೇ ಅಮೇರಿಕದ ಮೇಲೆ ಪ್ರಯೋಗಿಸಿ, ಅಲ್ಲಿನ ಯಾವ ನಿರ್ದಿಷ್ಟವಾದ ಪ್ರದೇಶವನ್ನಾಗಲಿ ಕಟ್ಟಡವನ್ನಾಗಲಿ ಧ್ವಂಸ ಮಾಡಬಹುದೆಂದು ಹೇಳಲಾಗಿದೆ. ರಷ್ಯದ ಸೈನ್ಯವು ದ್ವಿಗುಣವಾಗಿ ಹೆಚ್ಚಿಸಲ್ಪಟ್ಟಿದೆ. ವಿಮಾನ ಬಲವು ಶೇಕಡ ೫೦ ರಷ್ಟು ಹೆಚ್ಚಿದೆ.

ಇಷ್ಟೇ ಅಲ್ಲದೆ ರಷ್ಯನರು ಆಹಾರದ ಮಾತ್ರೆಗಳನ್ನು ತಯಾರಿಸುವುದರಲ್ಲಿ ಈಗ ತೊಡಗಿದ್ದಾರೆ. ರಣರಂಗದಲ್ಲಿ ಅನ್ನ ಪಾನಾದಿಗಳು ದೊರಕದಿದ್ದಾಗ ಈ ಮಾತ್ರೆಗಳನ್ನು ನುಂಗಿ ಬದುಕಿ ಕಾಲ ಪ್ರಾಣಧಾರಣೆ ಮಾಡಿಕೊಂಡು ಸೈನಿಕರು ಕದನ ನಡೆಸಬಹುದೆಂದು ಹೇಳಲಾಗಿದೆ.

ಕಾಶ್ಮೀರದಲ್ಲಿ ಕದನ ಮುಕ್ತಾಯಕ್ಕೆ ಒಪ್ಪಂದ

ನಿನ್ನೆ ಮಧ್ಯರಾತ್ರಿಯಿಂದ ಕಾಶ್ಮೀರ ರಣಕ್ಷೇತ್ರದಲ್ಲಿ ಕದನವನ್ನು ನಿಲ್ಲಿಸಲು ಭಾರತ ಮತ್ತು ಪಾಕಿಸ್ತಾನಗಳ ಸರ್ಕಾರಗಳಿಗೆ ಒಪ್ಪಂದವಾಗಿರುತ್ತದೆ. ಅಜಾದ್ ಕಾಶ್ಮೀರ ಸರ್ಕಾರವೂ ಸಹ ಕದನವನ್ನು ನಿಲ್ಲಿಸ ಬೇಕೆಂದು ಒಪ್ಪಿಕೊಂಡಿರುವುದಾಗಿ ಪಾಕಿಸ್ತಾನ ಸರ್ಕಾರವು ತಿಳಿಸಿರುತ್ತದೆ. ಈ ಬಗ್ಗೆ ನಿನ್ನೆ ದಿನ ಕರಾಚಿಯಲ್ಲೂ ನವದೆಹಲಿಯಲ್ಲೂ ಅಧಿಕೃತ ಪ್ರಕಟಣೆಗಳು ಹೊರಡಿಸಲ್ಪಟ್ಟವು. ವಿಶ್ವಸಂಸ್ಥೆಯ ಕಾಶ್ಮೀರ ಸಮಿತಿಯ ನಾಯಕರೊಡನೆ ಪಂಡಿತ ನೆಹರೂರವರು ನ್ಯಾಯಸಮ್ಮತ ಸಂಧಿಯ ಮಾತುಕತೆಯ ನಡೆ ನಡೆಸಿದ್ದಾರೆ. ಈ ನಿರ್ಧಾರವು ಆಗಿರುವುದರಿಂದ ಇದಕ್ಕಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಶಾಂತಿಯ ಸಮಾಧಾನ ಸ್ಥಾಪನೆಯ ಪ್ರಯತ್ನ ತಪ್ಪದೆ ನಡೆಯುವುದೆಂದೂ ಕಾಶ್ಮೀರದ ಪ್ರಜಾಭಿಪ್ರಾಯ ಸಂಗ್ರಹದ ... ಎಂದು ತಿಳಿದು ಬಂದಿದೆ.

ಗುಂಡಿನೇಟಿನಿಂದ ಪಶ್ಚಿಮ ಬಂಗಾಳ ಮಂತ್ರಿಗಳ ಮರಣ

ಪಶ್ಚಿಮ ಬಂಗಾಳದ ಎಕ್ಸೈಜ್ ಸಚಿವರಾದ ಮೋಹಿನಿ ಮೋಹನ್ ಬರ್ಮನ್‌ರವರ ಮೇಲೆ ಕಲ್ಕತ್ತಾದಲ್ಲಿ ಅವರು ವಾಸಿಸುತ್ತಿದ್ದ ಹೋಟೆಲಿನಲ್ಲಿ ಮೊನ್ನೆ ರಾತ್ರಿ ಅವರ ಸೇವಕನೇ ಗುಂಡು ಹಾರಿಸಿದನೆಂದು ತಿಳಿದು ಬಂದಿದೆ. ಅವರು ನಿನ್ನೆ ಜನರಲ್ ಆಸ್ಪತ್ರೆಯಲ್ಲಿ ನಿಧನರಾದರು.

ಗುಂಡು ಹಾರಿಸಿದ ಜವಾನನ ಶುಶ್ರೂಷೆಗೂ ಸಹ ಏಟು ಬಿದ್ದಿರುವುದೆಂದೂ, ತಾನೇ ಸಚಿವರ ಮೇಲೆ ಗುಂಡು ಹಾರಿಸಿದುದಾಗಿ ಆತನು ತನ್ನ ಮರಣ ಕೃತ್ಯಯಲ್ಲಿ ತಿಳಿಸಿರುವುದಾಗಿಯೂ ಹೇಳಲಾಗಿದೆ.

ಮಹಾತ್ಮರ ಅಸ್ಥಿಯ ಸ್ಮಾರಕ

ಕಲ್ಕತ್ತಾದಲ್ಲಿ ಪ್ರವಹಿಸುವ ಹೂಗ್ಲೀ ನದಿಯ ಗಾಂಧಿಘಟ್ಟದಲ್ಲಿ ಮಹಾತ್ಮಾಜಿಯವರ ಅಸ್ಥಿಶೇಷಗಳನ್ನು ಸ್ಥಿರವಾಗಿಡಲು ವ್ಯವಸ್ಥೆ ಮಾಡಲಾಗಿದೆ. ಗೌರ್ನರ್ ಜನರಲ್‌ರಾದ ರಾಜಗೋಪಾಲಾಚಾರಿಯವರು ಕಳುಹಿಸಿರುವ ಮಹಾತ್ಮರ ಅಸ್ಥಿಶೇಷಗಳ ಕರಂಡವು ನಿನ್ನೆ ದಿನ ಕಲ್ಕತ್ತಾಕ್ಕೆ ತಲ್ಪಿತು. ಅದನ್ನು ಅಲ್ಲಿನ ಸರ್ಕಾರಿ ಭವನದಲ್ಲಿಡಲಾಗಿದೆ. ಭಾರತದ ಪ್ರಧಾನಿ ಪಂಡಿತ ನೆಹರೂರವರು ಈ ಸ್ಮಾರಕದ ಆರಂಭೋತ್ಸವವನ್ನು ೧೫ನೇ ತಾ॥ ನೆರವೇರಿಸುವರು.

ಉಪನ್ಯಾಸ

ಸುಬ್ಬರಾಯನಕೆರೆ ನೈರುತ್ಯ ಭಾಗದಲ್ಲಿರುವ ಶ್ರೀ ಗುರು ದತ್ತಾತ್ರೇಯ ದೇವಾಲಯದಲ್ಲಿ ಇದೇ ೨ ನೇ ತಾ॥ ನಿಂದ ಪ್ರತಿ ದಿನ ಸಂಜೆ ೬-೩೦ ಗಂಟೆಗೆ ಗಾಣಗಾಪುರದಿಂದ ದಯಮಾಡಿಸಿರುವ ಶ್ರೀ ದೀಕ್ಷಿತ ವಿಷ್ಣುದಿಗಂಬರ ದತ್ತಾತ್ರೇಯ ಯೋಗೀಶ್ವರರಿಂದ ಪರಮಾತ್ಮ, ಭಕ್ತರುಗಳು ಮತ್ತು ಶ್ರೀ ಗುರು ದತ್ತಾತ್ರೇಯ ಅವತಾರದ ಮಹಿಮೆಗಳ ವಿಚಾರವಾಗಿ ಉಪನ್ಯಾಸಗಳು ನಡೆಯುವುವು. ಸರ್ವರಿಗೂ ಆಹ್ವಾನವುಂಟು.

ವಧೆಗಾಗಿ ದನಗಳು ಸಾಗುತ್ತಲೇ ಇವೆ

ನಮ್ಮ ಸರ್ಕಾರದವರು ಗೋವಧೆಯನ್ನು ಸಂಪೂರ್ಣವಾಗಿ ನಿಲ್ಲಿಸಿರುವುದು ಸರಿಯಷ್ಟೆ. ಆದರೂ ಹಿಂದೆ ವಧೆಗಾಗಿ ತರುತ್ತಿದ್ದ ವರ್ಜಿಯ ದನಗಳನ್ನು ಈಗಲೂ ತರುತ್ತಲೇ ಇದ್ದಾರೆ. ನಿನ್ನೆ ಸಂಜೆ ೫ ಗಂಟೆ ಸಮಯದಲ್ಲಿ ಸುಮಾರು ೦೦-೦೦ ದನಗಳನ್ನು ಕಟುಕರು ಸಂತೆಯಿಂದ ತರುತ್ತಿದ್ದುದನ್ನು ಮೈಸೂರು ನಗರದ ಕಂಬೂಚೆಟ್ಟಿ ರೋಡಿನಲ್ಲಿ ಸಂಬಂಧಪಟ್ಟ ಪೋಲೀಸ್ ಸ್ಟೇಷನ್ನಿನವರಿಗೆ ಮುಂದಾಗಿ ತೋರಿಸಿ, ಅವುಗಳನ್ನು ಹಿಂದೆ ಗೋಮಾಂಸದ ಮಾರ್ಕೆಟ್ ಇದ್ದ ಸ್ಥಳಕ್ಕೆ ಕೇವಲ ಸಮೀಪವಾಗಿರುವ ಕಸಾಯಿ ಕೇರಿಯ ಕೆಲವು ಮನೆಗಳಿಗೆ ಸೇರಿಸಿದುದನ್ನು ತೋರಿಸಲಾಯಿತು. ಇದರ ವಿಚಾರವಾಗಿ ಸರ್ಕಾರದವರು ಆದಷ್ಟು ಬೇಗನೆ ಗಮನ ಕೊಟ್ಟು ಮೇಲ್ಕಂಡ ವ್ಯಾಪಾರಗಳನ್ನು ಉಳಿಸಬೇಕಾಗಿ ವಿನಂತಿ.

ಗೋಮಾತಾ ಸೇವಕ,
ಬಿ. ಎಂ. ಎ ಖಾದರ್,
ಬೆಳ್ಳೂರು.

ಪ್ರತಾಪ ಭವಿಷ್ಯ

[illegible]

ಮೇಷ — ಶಿರೋಗ ಧನಾದಾಯಗಳಿರ ಬಹು ಶಾಸ್ತ್ರಮನುಸರಿಸಿ ಕೋರ್ಟು ಕಚೇರಿ ವ್ಯವಹಾರಗಳಲ್ಲಿ ಜಯ ... ಪ್ರಯಾಸದಿಂದ ಲಾಭವುಂಟಾಗುವುದು ... ತಾ॥ ... ದಿನಗಳು ಮಿತ್ರ ದರ್ಶನ

ವೃಷಭ — ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳ ... ಪಾತ್ರರಾಗುವಿರಿ ... ಕಾರ್ಯಗಳು ... ಪ್ರಯಾಸದಿಂದ ಮಂಗಳಕಾರ್ಯಗಳು ನಿಶ್ಚಿತವಾಗುವುವು ತಾ॥ ... ಸುಖಪ್ರವಾಸ, ಧನಲಾಭ

ಮಿಥುನ — ಅನೇಕ ಸಾಧುಸಂತರ ದರ್ಶನ ಲಾಭವಾಗುವುದು ... ಗಳಿಂದ ... ಲಾಭವುಂಟಾಗುವುದು. ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವುವು ... ಶುಭ ಸಮಾಚಾರ

ಕಟಕ — ... ಚೆನ್ನಾಗಿದ್ದರೂ ... ದಿಂದ ಉಳಿಯುವಿರಿ ... ಕಾರ್ಯಗಳು ಅಧಿಕ ... ವಾಗುವುವು ... ಮಿತ್ರರಿಂದ ಸಹಾಯ ... ಶಾಂತಿ

ಸಿಂಹ — ವ್ಯಾಪಾರಿಗಳಿಗೆ ... ಲಾಭದಾಯಕವಾಗಿದೆ. ಒರಜೀ ... ನಡೆಯುವುವು ... ಚೆನ್ನಾಗಿದೆ ... ನಯೋಗ ...

ಕನ್ಯಾ — ... ಮಕ್ಕಳ ... ಶೈತ್ಯ ... ಸ್ತ್ರೀಯರ ... ಕಾರ್ಯಗಳು ... ತಾ॥ ... ಶಾಂತಿ

ತುಲಾ — ... ದಿಂದ ... ಬರಿಚೇ ... ನಾದ ಧನಪ್ರಾಪ್ತಿ ... ಆರೋಗ್ಯ ಸುಧಾರಣೆಯಾಗಿದೆ ... ಜನರಿಂದ, ವ್ಯಥಾಹಾನಿ

ವೃಶ್ಚಿಕ — ದಾನ ಧರ್ಮಗಳಿಗಾಗಿ ಖರ್ಚು ಹೋದರೂ ಅನೇಕ ಸಾಧು ಸಂತರ ದರ್ಶನ ಲಾಭವಾಗುವುದು ಪ್ರವಾಸದಿಂದ ಶುಭಕಾರ್ಯಗಳು ನಿಶ್ಚಿತವಾಗುವುವು ತಾ॥ ... ದಿನಗಳು, ಕೊಂಚ ಅಶಾಂತಿ

ಧನು — ಪ್ರವಾಸದಿಂದ ನಿವೃತ್ತಿ, ಆರೋಗ್ಯ ... ಸಂಭವವಿದೆ. ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ತಿರಸ್ಕಾರ ... ಧನಾದಾಯ ಸಾಧಾರಣ ... ಮುಂದ ವೆಚ್ಚ

ಮಕರ — ... ಕಾರ್ಯಗಳು ಅರ್ಧಕ್ಕೆ ... ಮನೆಯಲ್ಲಿ ಸಂತಸ ... ನೆರೆಹೊರೆಯವರ ... ತಾ॥ ... ಧನಹಾನಿ, ಜನನಿಂದೆ

ಕುಂಭ — ಆರೋಗ್ಯ ಸಾಧಾರಣವಾಗಿದೆ. ದಾನಧರ್ಮಗಳಿಗಾಗಿ ಖರ್ಚಾಗುವುದು. ಕೋರ್ಟು ಕಚೇರಿ ವ್ಯವಹಾರಗಳಲ್ಲಿ ... ಮಿತ್ರರಿಂದ ಕೊಂಚ ಸಹಾಯ ಲಭಿಸುವುದು ತಾ॥ ... ಕೊಂಚ ಶಾಂತಿ

ಮೀನ — ... ಸಂತಸ ... ಕಾರ್ಯಗಳು ... ಸ್ಥಿತಿ ... ಆರೋಗ್ಯ ... ತಾ॥ ... ಧನಲಾಭ, ಸುಖಪ್ರವಾಸ

ಮೈಸೂರು ಕಾಟನ್ ಕಂಪೆನಿ,

[illegible]

ಕೃಷ್ಣರಾಜೇಂದ್ರ ... ಜಯನಗರ, ... ಕೃಷ್ಣರಾಜ ... ಪ್ರದೇಶಗಳ ... ಅನುಕೂಲವಾಗುವಂತೆ ... ಕಂಟ್ರೋಲ್ ದರದಲ್ಲಿ ಮಿಲ್ ಬಟ್ಟೆಗ ... ಪಡೆದಿದ್ದೇವೆ. ... ಜನಗಳು ಪ್ರೋತ್ಸಾಹಿಸಬೇಕಾ ಗಿ ಪ್ರಾರ್ಥಿಸುತ್ತೇವೆ

ಗಾಯತ್ರೀ ಟಾಕೀಸ್

1-1-1949ರಿಂದ

ಪ್ರತಿ ದಿನ 2 ಪ್ರದರ್ಶನಗಳು

ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಪ್ರಪಂಚವನ್ನು ಬೆಳಗಿಸಲು ತಯಾರಾಗಿರುವ ನೂತನ ವರ್ಷದ ವರ್ಣ ರಂಜಿತ ಅಡ್ವೆಂಚರ್ ಚಿತ್ರ ಕಾಣಿಕೆ

20 ಸೆಂಚುರಿಯವರ

ಕಾಪ್ಟನ್ ಫ್ರಮ್

ಕಾಸ್ಟೀಲ್

VIDYARTHI SANGHA

Mysore

Free Coaching Class Section

Under the auspices of the above association coaching classes for both S S L C and Intermediate Examination-Going Students will be conducted in D. "Banumaiah's High School" daily between 5 p m and 7 p m Students who are willing to join may submit their applications on or before 4th January 1949. Only a limited number of students will be admitted. Ladies are are also admitted. Office :—

BANUMAIAH'S HIGH SCHOOL, MYSORE

Secretary

Edited printed and published by A R Nagarajan at the Sadhvi Press, D Subbiah Road, Mysore

ರಾಜಕಮಲ್

ಟಾಕೀಸ್

31-12-48ರಿಂದ

ಅಮೋಘ 1 ನೇ ವಾರ

ಪ್ರತಿ ದಿನ 3 ಆಟಗಳು

ಭಕ್ತ ಕುಂಬಾರ (ಕನ್ನಡ)

- MORNING SHOWS -

From 31 12-48 for 4 days

THE KILLERS

With

Burt Lancaster, Ava Gardner, Edmond O'Brien

ಹರಾಜು ಇಸ್ತಿಹಾರ್

ಇದರಿಂದ ಸಮಸ್ತ ಜನರಿಗೂ ... ಯಪಡಿಸುವುದೇನಂದರೆ —

ಮೈಸೂರು ಸಿಟಿ ಪಡುವಾರಳ್ಳಿ ... ಉಕ್ಕಡದ ಬಳಿ ಇಲವಾಲದ ರಸ್ತೆಯ ... ಬಂಗ್ಲೆ ಮತ್ತು ಕಾಟೇಜು ಸೈಟುಗಳ ... ಜನವರಿ ಮಾಹೆ ... ಮತ್ತು ... ನೇ ತಾ ... ರೀಖುಗಳಲ್ಲಿ ಬೆಳಿಗ್ಗೆ ... ಗಂಟೆಗಾಗಿ ... ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸ್ ನೋಟೀಸ್ ಬೋರ್ಡಿನಲ್ಲಿ ತಿಳಿದುಕೊಳ್ಳಬಹುದು

(ಸಹಿ) ವಿ. ಕೆ. ಮುಕುಂದನ್

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್‌ಮನ್ನರವರು.

ಪೊಂಗಲ್ ಪಟ್ಟಿಕೆ

ಬೆಂಗಳೂರು — ಸ್ಟೇಟ್ಸ್ - ಸೂಪರ್ - ಶ್ರೀ

ಮೈಸೂರ — ಚಾಮುಂಡೇಶ್ವರಿ - ಗಣೇಶ್

ಕೆ ಜಿ ಎಫ್ ... ಗೇ ಟಾಕೀಸುಗಳಲ್ಲಿ

ಏಕ ಕಾಲದಲ್ಲಿ ಪ್ರದರ್ಶನ

[illegible] ... ಸಂಗೀತ ಮನರಂಜಿಸುವ ನೃತ್ಯಗಳು ಮನಸೆಳೆಯುವ ... ವೈಭವಯುತ ... ದ ಚಿತ್ರವೇ

ಕೃಷ್ಣಾ ಪಿಕ್ಚರ್ಸ್‌ರವರ

ಕೃಷ್ಣ ಭಕ್ತಿ (ತಮಿಳು)

KRISHNA BHAKTHI

ಭೂಮಿಕೆ:- P. U. ಚಿನ್ನಪ್ಪ, T. R. ರಾಜಕುಮಾರಿ, ಕೃಷ್ಣನ್ ಮತ್ತು ಮಧುರಂ.

Distributors SARADA FILMS, ... Gandhinagar, Bangalore

ಕೋ॥ ನಂ. 792 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೩-೧-೪೯ [ಸಂಚಿಕೆ ೧೫೭

ಚಿಯಾಂಗ್‌ರವರಿಂದ ೨ ದಿನದಲ್ಲಿ ರಾಜಿನಾಮೆ

ಹರಿಕಥೆ

ಮೈಸೂರು ೩.

ಈ ರಾತ್ರಿ ೮-೩೦ಕ್ಕೆ ಗಂಟೆಗೆ ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ಸಾಧ್ವಿ ಕಛೇರಿ ಮಹಡಿಯ ಮೇಲೆ ಕಾಲಕ್ಷೇಪನ ಹರಿಕಥಾ ವಿದ್ವಾನ್ ಕೀರ್ತನಪಟು ಶ್ರೀ॥ ಕೆ. ಎಸ್. ಗಣಪತಿ ಭಾಗವತರಿಂದ ಸೀತಾ ಕಲ್ಯಾಣ ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಆಹ್ವಾನವುಂಟು.

ಉತ್ತಮ ಬಟ್ಟೆ ಮೇಲೆ ಹೆಚ್ಚಿಗೆ ತೆರಿಗೆ

ಇದೇ ೧ ನೇ ತಾ॥ ನಿಂದ ತಯಾರಾಗುವ ಶ್ರೇಷ್ಠ ದರ್ಜೆಯ ಬಟ್ಟೆಗಳ ಮೇಲೆ ಶೇಕಡ ೨೫ ರಷ್ಟು ಹೆಚ್ಚು ತೆರಿಗೆಯನ್ನು ವಿಧಿಸಲಾಗುವುದೆಂದು ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ರಾಜೇಂದ್ರ ಪ್ರಸಾದರ ಆರೋಗ್ಯ ಕೆಟ್ಟಿದೆ

ಭಾರತದ ರಾಜ್ಯಾಂಗ ಸಭೆಯ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರವರಿಗೆ ಗೂರಲು ರೋಗವು ಹೆಚ್ಚಾಗಿ, ಅವರ ಆರೋಗ್ಯವು ಕೆಟ್ಟಿದೆಯೆಂದೂ, ಆದುದರಿಂದ ಅವರು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲವೆಂದೂ ಹೇಳಲಾಗಿದೆ.

ಖಾನ್ ಅಬ್ದುಲ್ ಗಫಾರ್ ಖಾನರ ಬಿಡುಗಡೆಯೆ?

ಗಡಿನಾಡಿನ ಗಾಂಧಿಯವರಾದ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಡಾ॥ ಖಾನ್ ಸಾಹೇಬರುಗಳನ್ನು ಬಿಡುಗಡೆ ಮಾಡಬೇಕೆಂದು ಅಲ್ಲಿನ ಪಠಾಣರು ಚಳುವಳಿ ನಡೆಸುತ್ತಿರುವುದರಿಂದ ಅವರುಗಳನ್ನು ಪಾಕಿಸ್ತಾನ ಸರ್ಕಾರದವರು ಬಿಡುಗಡೆ ಮಾಡಬಹುದೆಂದು ಹೇಳಲಾಗಿದೆ. ಈಗ ಅವರುಗಳಿಗೆ ಜೈಲಿನಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲಾಗಿದೆಯೆಂದೂ ವರದಿಯಾಗಿದೆ.

ಸರ್ಕಾರದ ಮೇಲೆ ೫೦ ಲಕ್ಷ ರೂ. ಗೆ. ದಾವಾ

ಕೊಯಮತ್ತೂರಿನ ಭಾರತ ಮೋಟಾರು ಒಬ್ಬ ಕಂಪೆನಿಯ ಮಾಲೀಕರಾದ ಶ್ರೀ ಜಿ. ಡಿ. ನಾಯುಡುರವರು ಸರ್ಕಾರಕ್ಕೆ ೩೦ ಲಕ್ಷ ರೂ. ವರಮಾನ ತೆರಿಗೆ ಕೊಡಬೇಕೆಂದು ಅಧಿಕಾರಿಗಳು ಕೇಳುತ್ತಿರುವುದರಿಂದ ಅವರು ತಮ್ಮ ಮೋಟಾರುಗಳನ್ನೆಲ್ಲಾ ನಿಲ್ಲಿಸಿಬಿಟ್ಟು ಅದರಿಂದ ತಮಗೆ ಉಂಟಾಗಿರುವ ೫೦ ಲಕ್ಷ ರೂ. ನಷ್ಟಕ್ಕಾಗಿ ಸರ್ಕಾರದ ಮೇಲೆ ದಾವಾ ಹೂಡಲು ಪಂಡಿತ ನೆಹರೂರವರ ಒಪ್ಪಿಗೆಯನ್ನು ಕೇಳಿರುವರೆಂದು ವರದಿಯಾಗಿದೆ.

ಚೀಣಾದ ಅಧಿಕಾರಿಗಳಿಗೆ ಚಿಯಾಂಗರ ಮನವಿ

ಚೀಣಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಗೆಲ್ಲಲು ಧೈರ್ಯ ಉಂಟಾದ ಹೋರಾಟ ನಡೆಸಬೇಕೆಂದು ಅಧ್ಯಕ್ಷ ಚಿಯಾಂಗ್ ತಮ್ಮ ಮಂತ್ರಿಮಂಡಲ ಮತ್ತು ೩೦ ಜನ ಉನ್ನತಾಧಿಕಾರಿಗಳಿಗೆ ಮನವಿ ಮಾಡಿರುತ್ತಾರೆ.

ರಿಜರ್ವ್ ಬ್ಯಾಂಕಿನ ರಾಷ್ಟ್ರೀಕರಣ

ಭಾರತದಲ್ಲಿ ೧೪ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ರಿಜರ್ವ್ ಬ್ಯಾಂಕು ಇದೇ ೧ನೇ ತಾ॥ ನಿಂದ ಸರ್ಕಾರದ ಬ್ಯಾಂಕಾಗಿ ಪರಿವರ್ತಿಸಲ್ಪಟ್ಟಿತು.

ಇನ್ನು ೨-೩ ದಿನಗಳಲ್ಲಿ ಚಿಯಾಂಗರ ರಾಜಿನಾಮೆ?

ಚೀಣಾದ ಅಧ್ಯಕ್ಷರಾದ ಚಿಯಾಂಗರು, ಇನ್ನು ೨ ಅಥವ ೩ ದಿನಗಳಲ್ಲಿ ರಾಜಿನಾಮೆ ಕೊಡುವರೆಂದು ಶಾಂಘೈಗೆ ವರ್ತಮಾನ ಬಂದಿದೆ.

ಸಂಧಾನಕ್ಕೆ ಕಮ್ಯೂನಿಸ್ಟರ ಷರತ್ತುಗಳು

ಚಿಯಾಂಗರ ರಾಜಿನಾಮೆ, ನ್ಯಾಷನಲ್ ಅಸೆಂಬ್ಲಿಯ ರದ್ದು ಮತ್ತು ಚೀಣಾ ಸರ್ಕಾರಿ ಸೈನ್ಯದ ಶರಣು—ಈ ಷರತ್ತುಗಳಿಗೆ ಒಪ್ಪುವುದಾದರೆ ಕಮ್ಯೂನಿಸ್ಟರು ಸಂಧಾನ ಮಾಡಿಕೊಳ್ಳುವುದಾಗಿ ತಿಳಿಸಿದ್ದಾರೆ.

ತಾಂಬೂಲ ಸೇವನೆಯನ್ನು ನಿರೋಧಿಸಲು ಚಳುವಳಿ

ಜನರು ಸಿಕ್ಕಿದ ಕಡೆಗಳಲ್ಲೆಲ್ಲಾ ಉಗಿಯುವ ಪದ್ಧತಿಯನ್ನು ತಪ್ಪಿಸಲು ತಾಂಬೂಲ ಸೇವನೆಯನ್ನೇ ತಡೆಗಟ್ಟುವುದಕ್ಕಾಗಿ ಒಂದು ಅಧಿಕಾರಯುತವಾದ ಚಳುವಳಿಯನ್ನು ಹೂಡಬೇಕೆಂಬ ಸಲಹೆಯನ್ನು ಕಲ್ಕತ್ತೆಯಲ್ಲಿ ನಡೆದ ಅಖಿಲ ಭಾರತ ಕ್ಷಯರೋಗ ನಿವಾರಣಾ ಕೆಲಸಗಾರರ ಸಮ್ಮೇಳನದಲ್ಲಿ ಅಧ್ಯಕ್ಷರಾದ ಡಾ॥ ಬಿಲ್ಲಿಮೋರಿಯಾರವರು ಮುಂದಿಟ್ಟಿದ್ದಾರೆ.

ಪಾರಿವಾಳಗಳನ್ನು ಓಡಿಸಲು ಗೊಂಬೆ

ನಾಗಪುರದ ಪೌರಸಭಾ ಭವನದಲ್ಲಿ ಪಾರಿವಾಳಗಳು ಗಲಭೆ ಮಾಡುವುದನ್ನು ತಪ್ಪಿಸಿ ಅವುಗಳನ್ನು ದೂರಕ್ಕೆ ಓಡಿಸಲು ಅಲ್ಲಿನ ಅಧಿಕಾರಿಗಳು ಕಟ್ಟಡದ ಮೇಲೆ ಒಂದು ಗೂಬೆಯ ಬೊಂಬೆಯನ್ನು ಮಾಡಿಸಿಟ್ಟು ಅದರ ಕಣ್ಣುಗಳ ಸ್ಥಾನದಲ್ಲಿ ಎರಡು ಕೆಂಪು ದೀಪಗಳನ್ನಿಟ್ಟಿರುವರೆಂದು ತಿಳಿದು ಬಂದಿದೆ.

ಕಾಶ್ಮೀರದಲ್ಲಿ ಕದನ ನಿಂತಿತು

೧೪ ತಿಂಗಳ ಹಿಂದೆ ಕಾಶ್ಮೀರದಲ್ಲಿ ಪ್ರಾರಂಭವಾದ ಯುದ್ಧವು ಮುಕ್ತಾಯವಾಯಿತು. ಭಾರತ ಮತ್ತು ಪಾಕಿಸ್ತಾನಗಳು ಕದನ ನಿಲ್ಲಿಸುವಂತೆ ಆಜ್ಞೆ ಇತ್ತ ಮೇಲೆ ಎಲ್ಲ ಕ್ಷೇತ್ರಗಳಲ್ಲೂ ನಿನ್ನೆ ಮಧ್ಯಾಹ್ನ ಯುದ್ಧ ನಿಂತಿತು. ಕಾಶ್ಮೀರ ಮತ್ತು ಜಮ್ಮುಗಳಲ್ಲಿ ಜನಾಭಿಪ್ರಾಯ ತೆಗೆದುಕೊಳ್ಳುವ ಬಗ್ಗೆ ವಿಶ್ವ ಸಂಸ್ಥೆಯಿಂದ ಒಬ್ಬ ಅಧಿಕಾರಿಯನ್ನ ಕಳುಹಿಸಲಾಗುವುದು.

ಲೆ॥ಜ॥ ಕರಿಯಪ್ಪನವರ ಆಗಮನ

ಮೈಸೂರು ೩.

ಭಾರತದ ಶ್ರೇಷ್ಠ ದಂಡನಾಯಕರಾಗಿ ನೇಮಿತರಾಗಿರುವ ಲೆ॥ಜ॥ ಕರಿಯಪ್ಪನವರು ನಿನ್ನೆ ಮಧ್ಯಾಹ್ನ ಇಲ್ಲಿಗೆ ಮಡಕೇರಿಯಿಂದ ಆಗಮಿಸಿ, ವಿಮಾನದಲ್ಲಿ ಮದರಾಸಿಗೆ ಪ್ರಯಾಣ ಬೆಳೆಸಿದರು.

ವಂದೇ ಮಾತರಂ ಗೀತೆಗೆ ಸಂಗೀತ ಸಮ್ಮೇಳನದ ಬೆಂಬಲ

ಪ್ರಮುಖ ರಾಷ್ಟ್ರೀಯ ಹಾಡಾಗಿರುವ ವಂದೇ ಮಾತರಂ ಗೀತೆಯು ಬ್ಯಾಂಡಿನಲ್ಲಿ ಬಾರಿಸಲು ಅರ್ಹವಾಗಿದೆಯೆಂದು, ಕಲ್ಕತ್ತನಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ನಿರ್ಧಾರ ಮಾಡಲಾಗಿದೆ.

ಬಾಪೂಜಿಯವರ ಪಿತೃಪಕ್ಷದ ಆಚರಣೆ

ಜನವರಿ ೩೦ರಿಂದ ಫೆಬ್ರವರಿ ೧೨ನೇ ತಾ॥ ವರೆಗೆ ದೇಶದಲ್ಲೆಲ್ಲಾ ಮಹಾತ್ಮರ ರಾಷ್ಟ್ರೀಯ ಪಿತೃಪಕ್ಷವನ್ನಾಗಿ ಆಚರಿಸಿ, ಆ ದಿನಗಳಲ್ಲಿ ಎಲ್ಲರೂ ಕಸ ಗುಡಿಸುವ ಕೆಲಸ ಮಾಡಬೇಕೆಂದು ಲಕ್ನೋ ವಿನ ಬಾಬು ರಾಘವದಾಸರವರು ಮನವಿ ಮಾಡಿರುತ್ತಾರೆ.

ಅಮೆರಿಕದಲ್ಲಿ ಸರ್ ಸಿ. ವಿ. ರಾಮನ್‌ರವರ ಪ್ರವಾಸ

ಭಾರತದ ಸುಪ್ರಸಿದ್ಧ ವಿಜ್ಞಾನಿಗಳಾದ ಸರ್. ಸಿ. ವಿ. ರಾಮನ್‌ರವರು ಅಮೆರಿಕದ ವಿಶ್ವ ವಿದ್ಯಾಲಯಗಳಲ್ಲಿ ಭಾಷಣ ಮಾಡಲು ಸಧ್ಯದಲ್ಲಿಯೇ ಅಲ್ಲಿಗೆ ತೆರಳುವರು.

ಭಾರತದಲ್ಲಿ ಇಂಡೋನೇಷ್ಯದ ಸಮ್ಮೇಳನ

ಇಂಡೋನೇಷ್ಯದ ಸಮಸ್ಯೆಯನ್ನು ಪರಿಶೀಲಿಸಲು ಭಾರತದಲ್ಲಿ ಏಷ್ಯಾ ರಾಷ್ಟ್ರಗಳ ಸಮ್ಮೇಳನವನ್ನು ನಡೆಸುವುದಕ್ಕಾಗಿಯೇ ನಡೆಸಲು ಕೇಂದ್ರ ಸರ್ಕಾರವು ನಿರ್ಧರಿಸಿದೆ. ಈ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಎಲ್ಲ ಏಷ್ಯಾ ರಾಷ್ಟ್ರಗಳಿಗೂ ಆಹ್ವಾನವನ್ನು ಭಾರತವು ಕಳುಹಿಸಿದ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಸರ್ಕಾರದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಬಹುದು ಆಗಿರಲಾಗದ

ದಚ್ಚರಿಂದ ಸುಮಾತ್ರ ಆಕ್ರಮಣ

ಸುಮಾತ್ರದ ಅತಿ ದಕ್ಷಿಣ ಭಾಗವನ್ನು ಡಚ್ ಸೈನಿಕರು ಆಕ್ರಮಿಸಿ, ಇಂಡೋನೇಷ್ಯಕ್ಕೆ ಸೇರಿದ ಮೂರು ಬಂದರುಗಳನ್ನು ಹಿಡಿದಿದ್ದಾರೆ. ಸುಮಾತ್ರದ ಮಧ್ಯ ಪ್ರದೇಶದಲ್ಲಿ ಕಲ್ಲಿದ್ದಲ ಕೇಂದ್ರವನ್ನು ಆಕ್ರಮಿಸಲಾಗಿದೆ. ೧ ನೇ ತಾ॥ ಮಧ್ಯರಾತ್ರಿಯಿಂದ ಕದನ ನಿಲ್ಲಿಸಲಾಗುವುದೆಂದು ಡಚ್ ಸರ್ಕಾರವು ತಿಳಿಸಿದ್ದರೂ, ಈ ಪ್ರದೇಶಗಳಲ್ಲಿ ಯುದ್ಧ ನಡೆಯುತ್ತಲೇ ಇದೆ.

ಪೌರ ಸಭೆಗಳ ಸಮ್ಮೇಳನ

ಸ್ವ ಸು. ಫೋ॥] ಬೆಂಗಳೂರು ೩.

ಸಂಸ್ಥಾನದ ಪೌರ ಸಭಾಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪ್ರತಿನಿಧಿಗಳ ಸಮ್ಮೇಳನವು ಈ ಮಧ್ಯಾಹ್ನ ೧೧ ಗಂಟೆಗೆ ನ್ಯಾಯ ವಿಧಾಯಕ ಸಭಾ ಭವನದಲ್ಲಿ ಶ್ರೀ ಸುಬ್ಬರಾಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಒಟ್ಟು ೬೦ ಪ್ರತಿನಿಧಿಗಳು ದಯಮಾಡಿಸಿದ್ದರು. ಅವರ ಆರಂಭೋತ್ಸವವನ್ನು ನಡೆಸಬೇಕಾಗಿದ್ದ ದಿವಾನರು ಅನಾರೋಗ್ಯದ ನಿಮಿತ್ತ ಬರಲಿಲ್ಲ. ಆದರೆ ಅವರ ಭಾಷಣವನ್ನು ಓದಲಾಯಿತು. ಪೌರ ಸಭೆಗಳು ಸಂಪೂರ್ಣ ಸ್ವತಂತ್ರ ಸಂಸ್ಥೆಗಳಾಗಿರಬೇಕೆಂಬ ವಾದವನ್ನು ತಾವು ಒಪ್ಪುವುದಾಗಿಯೂ, ಕಾರ್ಪೊರೇಷನ್ನಿನ ಮೇಯರು ಪ್ರತಿ ವರ್ಷವೂ ಚುನಾಯಿತರಾಗಿರಬೇಕೆಂದೂ ಆದರೆ ಅವರು ಎಕ್ಸಿಕ್ಯೂಟಿವ್ ಅಧಿಕಾರಿಗಳಾಗಿರಕೂಡದೆಂದೂ ದಿವಾನರು ತಮ್ಮ ಭಾಷಣದಲ್ಲಿ ತಿಳಿಸಿರುತ್ತಾರೆ. ಬೆಂಗಳೂರು ನಗರ ಮತ್ತು ದಂಡಿನ ಪ್ರದೇಶಕ್ಕೆ ಒಂದು ಕಾರ್ಪೊರೇಷನ್ ಇರಬೇಕೆಂದೂ, ಈ ಬಗ್ಗೆ ಸರ್ಕಾರದವರು ತಂದಿರುವ ಮಸೂದೆಗೆ ಎಲ್ಲರೂ ಸ್ವಾಗತ ಕೊಡಬೇಕೆಂದೂ ಅವರು ಕೋರಿರುವರು. ನ್ಯಾಯ ವಿಧಾಯಕ ಸಭೆಗೆ ದಂಡಿನ ಪುರ ಸಭೆಯ ಪ್ರತಿನಿಧಿಗಳೊಬ್ಬರನ್ನು ನಾಮಕರಣ ಮಾಡಲಾಗುವದೆಂದೂ ಅವರು ಹೇಳಿರುವರು.

ಶ್ರೀ ಸುಬ್ಬರಾಮಶೆಟ್ಟರು ಭಾಷಣ ಮಾಡಿ ಪುರಸಭೆಗಳ ಹಣಕಾಸಿನ ಸ್ಥಿತಿಯು ಉತ್ತಮವಾಗಿಲ್ಲವೆಂದೂ, ಸರ್ಕಾರದ ಸಹಾಯವನ್ನು ಕೇಳಿದ, ತಮ್ಮ ಸ್ಥಿತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದೂ ತಿಳಿಸಿದರು. ಆಕ್ಟ್ರಾಯ್ ತೆರಿಗೆಯನ್ನು ರದ್ದು ಮಾಡಿ, ಅದರಿಂದ ಉಂಟಾಗುವ ನಷ್ಟವನ್ನು ಸರ್ಕಾರದಿಂದ ಪುರಸಭೆಗಳಿಗೆ ಕೊಡಲಾಗುವುದೆಂದೂ ಅವರು ಹೇಳಿದರು. ಸಮ್ಮೇಳನವು ನಾಳೆಯೂ ನಡೆಯುವುದು.

ಸಿ. ಆರ್. ರೆಡ್ಡಿಯವರ ಆಗಮನ

ವಿಶ್ವವಿದ್ಯಾಲಯ ಪುನರ್ವಿಮರ್ಶೆ ನಡೆಸಲು ನೇಮಿತರಾಗಿರುವ ಡಾ॥ ಸಿ. ಆರ್. ರೆಡ್ಡಿಯವರು ಈ ದಿನ ಆಗಮಿಸಿ ತಮ್ಮ ಕೆಲಸವನ್ನು ಪ್ರಾರಂಭಿಸಿದರು.

ಮೈಸೂರಿನ ಅಡಿಷನಲ್ ಜಿಲ್ಲಾ ಕೋರ್ಟನ್ನು ಇದೇ ೧ನೇ ತಿಂಗಳಿನಿಂದ ಒಂದು ವರ್ಷ ಕಾಲ ಮುಂದುವರಿಸಲಾಗಿದೆ.

ಮನೆಗಳಲ್ಲೂ ಟೆಲಿಪ್ರಿಂಟರ್

ತಂತಿ ಸಮಾಚಾರಗಳನ್ನು ಬೇಗನೆ ರವಾನಿಸಲು ಅನುಕೂಲವಾಗುವಂತೆ ಮನೆಗಳಲ್ಲೂ, ಅಂಗಡಿಗಳಲ್ಲೂ, ಸಂಸ್ಥೆಗಳಲ್ಲೂ ಟೆಲಿಪ್ರಿಂಟರ್ ಸೌಲಭ್ಯಗಳನ್ನು ಇಡುವ ಯೋಜನೆಯನ್ನು ಅಂಚೆ ಇಲಾಖೆಯವರು ಪರಿಶೀಲಿಸುತ್ತಿರುವರೆಂದು ತಿಳಿದುಬಂದಿದೆ.

ನೈಜಾಮುವಿಂದ ಮೊಂಕ್ಟನ್ನರಿಗೆ ೨೫ ಲಕ್ಷ ರೂ.

ನೈಜಾಮರ ರಾಜಕೀಯ ಸಲಹೆಗಾರರಾಗಿದ್ದ ಸರ್ ವಾಲ್ಟರ್ ಮೊಂಕಟನ್‌ರಿಗೆ ಆ ಸಂಸ್ಥಾನದಿಂದ ದೊರೆತ ಹಣದ ಬಗ್ಗೆ ಅವರು ವರಮಾನ ತೆರಿಗೆಯನ್ನು ಕೊಟ್ಟಿಲ್ಲವೆಂದೂ, ಈ ವಿಚಾರದಲ್ಲಿ ಬ್ರಿಟಿಷ ಸರ್ಕಾರದವರು ತನಿಖೆ ನಡೆಸುತ್ತಿದ್ದಾರೆಂದೂ ಹೇಳಲಾಗಿದೆ. ಸಂಸ್ಥಾನದಿಂದ ಅವರಿಗೆ ಒಟ್ಟು ೨೫ ಲಕ್ಷ ರೂ. ಸಲ್ಲಿಕೆಯಾಗಿರಬಹುದು ಎಂದು ಹೇಳಲಾಗುತ್ತಿದೆ.

ಮಳೆ ಬರಿಸಲು ಕಾಡು ಜನರ ಹಂಚಿಕೆ

ಅಮೇರಿಕದ ಕೆಂಪು ಇಂಡಿಯನ್ ಜನಾಂಗದ ಕಾಡು ಜನರಿಗೆ ಹಣ ವೆಚ್ಚವಿಲ್ಲದೆ ಮಳೆ ಬರಿಸುವ ವಿಧಾನವು ಗೊತ್ತಿದೆಯೆಂದೂ, ಇದನ್ನು ಗಣಿತ ರಸ್ಸೆಲ್ ಕ್ಯಾಲಿಫೋರ್ನಿಯಾದ ಫ್ರಾಂಕ್ಲಿನ್ ಫೆನಂದಾರವರು ಹಿಂದಿನ ವರ್ಷದ ಮುದುಕನೊಬ್ಬನಿಂದ ತಿಳಿದುಕೊಂಡರೆಂದೂ ಹೇಳಲಾಗಿದೆ. ಹಾವು ಪ್ರಾಣಿಯ ಚರ್ಮ, ಮತ್ತಿನ ಗೋಲಿಗಳು ಮತ್ತು ಇರುವೆಯ ಮೊಟ್ಟೆಗಳು ಇವುಗಳಿಂದ ಕೂಡಿದ ಚೀಲವನ್ನು ತೆಗೆದುಕೊಂಡು ಮೋಡ ಪ್ರದೇಶದಲ್ಲೆಲ್ಲಾ ಮಳೆ ಸುರಿಯುತ್ತೆಂದೂ ವರದಿಯಾಗಿದೆ.

ಹಳ್ಳಿಗಳಲ್ಲಿ ನೇತ್ರ ಚಿಕಿತ್ಸೆ ಕೇಂದ್ರಗಳು

ಗ್ರಾಮಾಂತರ ಪ್ರದೇಶಗಳಲ್ಲಿ ನೇತ್ರ ಚಿಕಿತ್ಸೆ ಕೇಂದ್ರಗಳನ್ನು ಬೊಂಬಾಯಿ ಸರ್ಕಾರದವರು ತೆರೆದಿದ್ದಾರೆ. ಅಲ್ಲಿಗೆ ಸುಪ್ರಸಿದ್ಧ ವೈದ್ಯರುಗಳು ಆಗಾಗ್ಗೆ ಹೋಗಿ ಚಿಕಿತ್ಸೆ ನಡೆಸುವರು. ಇದೂ ಅಲ್ಲದೆ ಗ್ರಾಮಾಂತರದ ಆಸ್ಪತ್ರೆಗಳನ್ನೂ ಸ್ಥಾಪಿಸಲಾಗಿದೆ.

೨೪ ಗಂಟೆ ತಂತಿಯ ಮೇಲೆ ವಾಸ

ಒವೇರಿಯಾದ ೨೪ ವರ್ಷದ ಹ್ಯಾರಿ ಡೇವಿಸ್ ಎಂಬಾತನು ೫೦ ಅಡಿ ಎತ್ತರದಲ್ಲಿ ೩ ಅಂಗುಲ ದಪ್ಪದ ತಂತಿಯ ಮೇಲೆ ಯಾವ್ಯ ಸಹಾಯವೂ ಇಲ್ಲದೆ ೨೪ ಘಂಟೆಗಳ ಕಾಲ ನಿಂತು, ಅದರ ಮೇಲೆ ಅಡಿಗೆ ಮಾಡಿ ಊಟಮಾಡಿದನಲ್ಲದೆ, ಮಲಗಿ ನಿದ್ರೆ ಮಾಡಿದನೆಂದೂ ವರದಿಯಾಗಿದೆ.

ಕುದುರೆಯ ಕೊಬ್ಬಿನ ಕಾಳ ಸಂತೆ

ಬ್ರಿಟನ್ನಿನಲ್ಲಿ ಕುದುರೆಯ ಕೊಬ್ಬನ್ನು ತಿಂಡಿ ತಯಾರಿಸಲು ಎಣ್ಣೆಯನ್ನಾಗಿ ಗ್ಯಾಲನ್ನಿಗೆ ೬೦ ಪೌಂಡುಗಳಂತೆ ಕಾಳಸಂತೆಯಲ್ಲಿ ಮಾರಲಾಗುತ್ತಿದೆಯೆಂದೂ ಈ ಆಹಾರದ ಕಾಳಸಂತೆಯನ್ನು ತಡೆಗಟ್ಟಲು ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಂಡಿದ್ದಾರೆಂದೂ ವರದಿಯಾಗಿದೆ.

ಹೋಟೇಲುಗಳನ್ನು ಚೊಕ್ಕಟವಾಗಿಡಲು ಕಾನೂನು

ಹೋಟೆಲುಗಳನ್ನು ಚೊಕ್ಕಟವಾಗಿಡುವ ವಿಚಾರದ ಬಗ್ಗೆ ಸಲಹೆ ಕೊಡಲು ಒಂದು ಸಮಿತಿಯನ್ನು ಭಾರತ ಸರ್ಕಾರದವರು ನೇಮಿಸಲಿರುವರೆಂದೂ, ನಂತರ ಒಂದು ಕಾನೂನನ್ನು ಜಾರಿಗೆ ತರುವರೆಂದೂ ಹೇಳಲಾಗಿದೆ.

ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ಕಾರ್ಖಾನೆ

ದಕ್ಷಿಣ ಇಂಗ್ಲೆಂಡಿನ ಒಂದು ಸ್ಟೈರಿನ ಕಂಪೆನಿಯೊಂದು ಬೆಂಗಳೂರಿನಲ್ಲಿ ಆಧುನಿಕ ಪ್ಲಾಸ್ಟಿಕ್ ಕಾರ್ಖಾನೆಗಾಗಿ ೮ ಲಕ್ಷ ರೂ. ಯಂತ್ರ ಸಲಕರಣೆಗಳನ್ನು ತಯಾರಿಸಿ ಈಗ ಅವುಗಳನ್ನು ರವಾನಿಸಿದೆ. ಶ್ರೀ ಗಣಪತಿ ಎಚ್. ಎಸ್. ವಿಶ್ವೇಶ್ವರಯ್ಯ ಮತ್ತು ಪಿ. ಎಸ್. ಶ್ರೀನಿವಾಸ ಮೊದಲಿಯಾರ್ ರವರುಗಳು ಮೇಲ್ಕಂಡ ಕಂಪೆನಿಯಲ್ಲಿ ೬ ತಿಂಗಳ ಕಾಲ ಶಿಕ್ಷಣವನ್ನು ಪಡೆದು ಈಗ ಬೆಂಗಳೂರಿಗೆ ಹಿಂತಿರುಗಿದ್ದಾರೆ. ಕಾರ್ಖಾನೆಯನ್ನು ಸ್ಥಾಪಿಸಲು ಬ್ರಿಟಿಷ್ ಕಂಪೆನಿಯ ಮೂರು ನಿಪುಣರು ಇಲ್ಲಿಗೆ ಬರಲಿದ್ದಾರೆ.

ಆಸ್ಟ್ರೇಲಿಯದಿಂದ ಆಂಗ್ಲೋ ಇಂಡಿಯನ್ನರ ವಾಪಸು

ಭಾರತದ ಕೆಲವು ಆಂಗ್ಲೋ ಇಂಡಿಯನ್ನರು ಆಸ್ಟ್ರೇಲಿಯಾದಲ್ಲಿ ಬಿಳಿಯ ಜನರಿಗಿರುವ ಸೌಲಭ್ಯಗಳು ತಮಗೆ ದೊರೆಯುವುವೆಂದು ಕಳೆದ ಆಗಸ್ಟ್ ೧೫ ನೇ ತಾ|| ನಂತರ ಭಾರತವನ್ನು ಬಿಟ್ಟು ಅಲ್ಲಿಗೆ ಹೋಗಿದರೆಂದೂ, ಆದರೆ ಅವರುಗಳ ರಕ್ತವು ಅಲ್ಲಿನ ಬಿಳಿಯ ಜನರ ರಕ್ತದಂತಿಲ್ಲದುದರಿಂದ ಅವರುಗಳನ್ನು ವಾಪಸು ಸಾಗಿಸಲಾಯಿತೆಂದೂ ವರದಿಯಾಗಿದೆ.

ಮಧ್ಯ ಪ್ರಾಚ್ಯದಲ್ಲಿ ಅಮೇರಿಕದ ವಿಮಾನ ನಿಲ್ದಾಣ

ಮಧ್ಯ ಪ್ರಾಚ್ಯದ ಎಲ್ ಡಹ್ರಾನ್ ಎಂಬ ಪ್ರದೇಶದಲ್ಲಿ ಅತ್ಯಂತ ದೊಡ್ಡ ವಿಮಾನ ನಿಲ್ದಾಣವನ್ನು ಭೂಮಟ್ಟದ ಅಡಿಯಲ್ಲಿ ಅಮೇರಿಕನ್ನು ೨೦೦ ಲಕ್ಷ ಡಾಲರ್ ಗಳ ಖರ್ಚಿನಿಂದ ನಿರ್ಮಿಸಿದೆಯೆಂದು ಹೇಳಲಾಗಿದೆ.

ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ

ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ಮತ್ತು ರೇಡಿಯೋ ಕೇಂದ್ರವನ್ನು ಸಧ್ಯದಲ್ಲಿಯೇ ಸ್ಥಾಪಿಸಲಾಗುವುದೆಂದು ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರರು ಅಲ್ಲಿನ ಪೌರಸಭೆಯವರು ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವಾಗಿ ತಿಳಿಸಿದ್ದಾರೆ.

ಗಾಯತ್ರೀ ಟಾಕೀಸ್

1-1-1949 ರಿಂದ ಪ್ರತಿ ದಿನ ೩ ಪ್ರದರ್ಶನಗಳು

ನೂತನ ವರ್ಷದ, ವರ್ಣರಂಜಿತ ಅದ್ಭುತ ಚಿತ್ರ ಕಾಣಿಕೆ 20th ಸೆಂಚುರಿಯವರ

ಕ್ಯಾಪ್ಟನ್ ಫ್ರಮ್ ಕ್ಯಾಸ್ಟೀಲ್

ಕೃತಿ

Edited, printed and published by A. R. Nagaraj [illegible] at the Sadhvi Press, D. Subbaiah Road, Mysore.

ಹರಿಜನರಿಗೆ ತಿಂಡಿ ಕೊಡಲು ನಿರಾಕರಣೆ

ನಂಜನಗೂಡಿನ ಶ್ರೀ ಕೈಲಾಸಾ ಆನಂದಭವನದ ಮಾಲೀಕರು ಕಳೆದ ತಿಂಗಳು ೩೦ನೇ ತಾರೀಖು ಕೆಲವು ಹರಿಜನರಿಗೆ ತಿಂಡಿ ಕೊಡಲು ನಿರಾಕರಿಸಿ ಅವಮಾನ ಮಾಡಿದರೆಂದೂ, ಅಲ್ಲಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ಬಂದು ಬುದ್ಧಿ ಹೇಳಿ ಹೋದನಂತರವೂ ಸಹ ಅವರು ನಿರಾಕರಿಸಿದರೆಂದೂ ತಿಳಿಸಿ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಪರಿಶೀಲಿಸಿ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿ ನೊಂದ ವಿದ್ಯಾರ್ಥಿಯೊಬ್ಬರು ಪತ್ರ ಬರೆದಿರುತ್ತಾರೆ.

ಮುನಿಸಿಪಲ್ ಇಯರ್ ಬುಕ್

ಮುನಿಸಿಪಲ್ ಜರ್ನಲ್ ಸಂಪಾದಕರಾದ ಶ್ರೀ ಜಿ. ಎಲ್. ಸ್ವಾಮಿ ಯವರಿಂದ ಮೇಲ್ಕಂಡ ಶಿರೋನಾಮೆಯಲ್ಲಿ ಆಂಗ್ಲಭಾಷೆಯಲ್ಲಿ ಪ್ರಕಟಿತವಾಗಿರುವ ಪುಸ್ತಕವು ನಮ್ಮ ಹಸ್ತಗತವಾಗಿದೆ. ಮೈಸೂರು ನಗರ, ಪೌರಸಭೆಯ ಆಡಳಿತ, ನಗರದ ಜನ ಜೀವನದ ಅವಶ್ಯಕತೆಗಳಿಗೆ ಸಂಬಂಧಪಟ್ಟ ವಿಚಾರ ಪೂರಿತ ಲೇಖನಗಳೂ, ನಗರ ಸೌಂದರ್ಯಕ್ಕೆ ಸಂಬಂಧಿಸಿದ ಚಿತ್ರಗಳೂ ಇದರಲ್ಲಿ ಅಡಕವಾಗಿವೆ. ಇದರ ಬೆಲೆ ೩ ಆಣೆ.

ಇಲಿ ಹಿಡಿಯಲು ಬಾಡಿಗೆ ಹಾವುಗಳು

ಆಸ್ಟ್ರೇಲಿಯದಲ್ಲಿ ಹಾವುಗಳಿಗೆ ದಿನೇ ದಿನೇ ಅಭಾವವು ಹೆಚ್ಚುತ್ತಿದೆಯೆಂದು ವರದಿಯಾಗಿದೆ. ಇಲಿಗಳನ್ನು ಹಿಡಿಯುವುದಕ್ಕಾಗಿ ಒಂದು ಪೌಂಡಿಗೆ ಒಂದು ಹಾವಿನಂತೆ ೪೦ ವರ್ಷಗಳಿಂದಲೂ ಹ್ಯಾರಿ ಕೆಂಪ್ ಎಂಬಾತನು ತನ್ನ ಹಾವುಗಳನ್ನು ಮಾರುತ್ತಿದ್ದನು. ಸಾಕಾದಷ್ಟು ಹಾವುಗಳು ಈಗ ಇಲ್ಲವಾದುದರಿಂದ ಅವುಗಳನ್ನು ಮಾರುವ ಬದಲು ಬಾಡಿಗೆಗೆ ಕೊಡಲು ಆತನು ಆರಂಭಿಸಿದ್ದಾನೆ.

ದಿನಕ್ಕೆ ೧೦೦ ಕೋಟಿ ಸಿಗರೇಟು

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ದಿನಕ್ಕೆ ೧೦೦ ಕೋಟಿ ಸಿಗರೇಟುಗಳು ಸೇದಲ್ಪಡುತ್ತಿವೆಯೆಂದು ಅಂದಾಜಾಗಿರುತ್ತದೆ.

ಹರಾಜು ಇಸ್ತಿಹಾರು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿ ನಡುವಾರಳ್ಳಿ ಹಳೆ ಉಕ್ಕಡದ ಬಳಿ ಇರುವಾಗಲೇ ರಸ್ತೆಯಲ್ಲಿ ಒಂದೆಲ್ಲೆ ಮತ್ತು ಕಾಲೇಜು ಸ್ಕೂಟುಗಳನ್ನು ಜನವರಿ ಮಾಹೆ ೯ ಮತ್ತು ೬ ನೇ ತಾರೀಖುಗಳಲ್ಲಿ ಬೆಳಿಗ್ಗೆ ೮ ಗಂಟೆ ಲಾಗಾಯತು ಸ್ಕೂಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸು ನೋಟೀಸ್ ಬೋರ್ಡಿನಲ್ಲಿ ತಿಳಿದುಕೊಳ್ಳಬಹುದು.

(ಸಹಿ) ವಿ. ಕೆ. ಮುಕುಂದನ್,
ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್‌ಮನ್ನರವರು.

ಜನವರಿ ೧ ನೇ ತಾ|| ಶುಭಾಶಯ ಕೊಡದು

ಜನವರಿ ೧ ನೇ ತಾ|| ಹೊಸ ವರ್ಷದ ಶುಭಾಶಯವನ್ನು ಯಾವ ಅಧಿಕಾರಿಗಳೂ ಕಳುಹಿಸ ಕೂಡದೆಂದು ಮದರಾಸು ಸರ್ಕಾರದವರು ಸರ್ಕಾರಿ ನೌಕರರುಗಳಿಗೆ ಸೂಚನೆ ಕೊಟ್ಟಿರುತ್ತಾರೆ. ಭಾರತಕ್ಕೆ ಸ್ವಾತಂತ್ರ ಬಂದ ಮೇಲೆ ಜನವರಿ ೧ ನೇ ತಾ|| ಶುಭಾಶಯ ಕಳುಹಿಸುವುದು ಸೂಕ್ತವಲ್ಲವೆಂದೂ, ತಮಿಳು ಮತ್ತು ತೆಲುಗು ವಾರ್ಷಿಕ ಹಬ್ಬಗಳ ದಿನ ಅದನ್ನು ಕಳುಹಿಸಬಹುದೆಂದೂ ತಿಳಿಸಲಾಗಿದೆ.

[illegible]

ನಿಮ್ಮ ಸೌಂದರ್ಯ ವೃದ್ಧಿ!

ಕೂದಲಿನ ಬೇಗೆ? ನಿಮ್ಮ ಸೌಂದರ್ಯ ಹುಡುಕುವಿರೋ?

ಹಾಗಾದರೆ

ನಮ್ಮ ಮೈಸೂರು [illegible]

[illegible]

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಕಾಪಾಡಿಕೊಟ್ಟಿದೆ [illegible] ಕಾಪಾಡಿಕೊಡುತ್ತದೆ ಖರೀದಿಸಿ ನೋಡಿರಿ ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ ಬೆಂಗಳೂರು

[illegible]

ಎಲ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಹೇರ್ ಬಾತ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ [illegible]

ಮುಡಿ ಸುಗಂಧ ತೈಲ —
ಚಂದನಾದಿ ತೈಲ —
ಭೃಂಗಾಮಲಕ ತೈಲ —

— ಕೂದಲಿಗೆ ಕಾಂತಿಯ ಉತ್ತಮ ಔಷಧಿಗಳು

ಮಹಾ ಕೇಶ ತೈಲ — [illegible] ಕೊಳ್ಳುವುದಕ್ಕೂ, ಅಭ್ಯಂಜನಕ್ಕೂ ಯೋಗ್ಯವಾಯಿದೆ. [illegible] ಬೆ. [illegible]

ಪಂಚಾಮೃತ — ಮಲೇರಿಯಾ [illegible] ಗಳಿಗೆ ಸಿದ್ಧ ಔಷಧಿ.

ಮೈಸೂರು ಆಯುರ್ವೇದಿಕ್ ಫಾರ್ಮಸಿ, 9 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

[illegible]

ಫೋ॥ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೪-೧-೪೯ [ಸಂಚಿಕೆ ೧೫೮

– ಸರ್ ಆರ್ಕಾಟರು –
ಹೈದ್ರಾಬಾದ್ ಪ್ರಧಾನಿ?

...ಸ್ಥಿತವಾದ ನೇತ್ರ ಚಿಕಿತ್ಸೆ

ಮೈಸೂರು ೪

...ಗಾಮಿನ ಸುಪ್ರಸಿದ್ಧ ನೇತ್ರ ವೈದ್ಯ ... ಡಾ॥ ಎಂ. ಸಿ. ಮೋದಿ ಮುರುಗಪ್ಪ... ಕಳೆದ ಒಂದುವಾರದಿಂದ ರಾಜಧಾ... ಕಣ್ಣಿನ ವ್ಯಾಧಿಯುಳ್ಳವರಿಗೆ ಉಚಿ... ಕೊಡುತ್ತಿರುವ ಚಿಕಿತ್ಸಾ ವಿಧಾನ ...ತ್ಯಂತ ಶ್ಲಾಘನೀಯವಾಗಿರುತ್ತದೆ. ...ಇದುವರೆಗೆ ಸುಮಾರು ಈ ಊರಿ... ಜನರಿಗೆ ಚಿಕಿತ್ಸೆ ಮಾಡಿದ್ದಾರೆ. ...ರು ೧೦೦ ಜನರಿಗೆ ಶಸ್ತ್ರ ಚಿಕಿತ್ಸೆ ... ಮಾಡಿರುತ್ತಾರೆ. ಸ್ವಲ್ಪವೂ ...ತನೆಯಿಲ್ಲದೆ ಕೇವಲ ೧೦ ನಿಮಿಷಗ...ಳಾಗಿ ಇವರು ಮಾಡುವ ಕಣ್ಣಿನ ಚಿಕಿತ್ಸೆಯು ಪ್ರೇಕ್ಷಕರನ್ನು ವಿಸ್ಮಯ...ಗೊಳಿಸುವುದು. ದಿನಕ್ಕೆ ೧೦೦ ಜನರಿಗಾದ ಶಸ್ತ್ರಚಿಕಿತ್ಸೆ ಮಾಡುವುದಾಗಿ ಅವರು ...ನರು ಇತರ ಸಣ್ಣ ಪುಟ್ಟ ನೇತ್ರ ...ಗಿಗಳವರನ್ನು ಲೆಕ್ಕವಿಲ್ಲದ ಸಂಖ್ಯೆಯ...ಲ್ಲಿ ಉಪಚರಿಸುವರು. ಇದುವರೆಗೆ ಒಟ್ಟು ...ರು ...೦ ಸಾವಿರ ಜನರಿಗೆ ಇವರು ...ತ್ಸೆ ಮಾಡಿರುವುದಾಗಿ ತಿಳಿದು ಬಂದಿದೆ ...ರ್ನಾಟಕ ದೇಶದ ಒಂದೊಂದು ಊರಿನ...ಲ್ಲಿ ...ತ್ತಾರು ದಿವಸ ಬಿಡಾರ ಮಾಡಿ ಚಿ...ಕಿತ್ಸೆ ನಡೆಸುತ್ತಿದ್ದಾರೆ ಇದಕ್ಕಾಗಿ ರೋ...ಗಿಗಳಿಂದ ಯಾವ ಪ್ರತಿಫಲವನ್ನು ಅವರು ...ಪಡೆಯದಿರುವುದು ಒಂದು ವಿಶೇಷವೇ

...ಸ್ಥಿತದಲ್ಲಿ ವೈಸ್ರಾಯ್ ರಸ್ತೆಯಲ್ಲಿರ... ...ಜಾರ್ ಸೆಕ್ರೆಟರಿ ಶ್ರೀ ಹೆಚ್. ನಿರಂ...ಜನ... ವರಸಿನವರ ಶಾಂತಿ ನಿಲಯ...ದಲ್ಲಿ ...ಇವರು ಚಿಕಿತ್ಸೆ ನಡೆಸುತ್ತಿದ್ದಾರೆ. ...ಲ್ಲಿ ಸುಮಾರು ೫೦ ಜನ ಸ್ತ್ರೀ ಪುರು...ಷರು ಶಸ್ತ್ರ ಚಿಕಿತ್ಸೆ ಹೊಂದಿ ಗುಣಮುಖ...ರಾಗು...ತ್ತಿದ್ದಾರೆ ಕೆಲವರು ಸಂಪೂರ್ಣ ...ದೃಷ್ಟಿಯನ್ನು ಹೊಂದಿರುಗಿದ್ದಾರೆ. ೧೦೦ ಕ್ಕೆ ... ಜನರು ವ್ಯಾಧಿಯಿಂದ ಪರಿಹಾರ ...ಹೊಂದುವರೆಂದು ಕೇಳಲು ಅತ್ಯಂತ ಆನಂ...ದವಾಗುವುದು ಈ ವೈದ್ಯರನ್ನು ಪ್ರವ...ಚನಗಾಗಿ ಕಳುಹಿಸಿಕೊಟ್ಟಿರುವನೆಂ... ...ಬಲವು ರೋಗಿಗಳು ಹೇಳಿ ಅವರ ಅ... ...ಶಕ್ತಿಯನ್ನು ಕೊಂಡಾಡುತ್ತಿರು...

...ದಿನವೂ ನೂರಾರು ಜನರು ರೋ...ಗಿಗಳನ್ನು ಪರೀಕ್ಷೆ ಮಾಡಿಸಿ ಔಷಧಿ... ...ಪಡೆಯುತ್ತಿರುವರು ವ್ಯಾಧಿಯು ...ತ ಪ್ರಬಲಿಸಿ ಗುಣಪಡಿಸಲು ಸಾ...ಧ್ಯವಿಲ್ಲ ಎಂದರೆ ಅವರು ಅದನ್ನು ಸಹ ಸ್ಪ...ಷ್ಟವಾಗಿ ತಿಳಿಸುವರು. ಕೈಕೊಂಡ ಚಿಕಿತ್ಸೆ ...ಸಂಪೂರ್ಣವಾಗಿ ಯಶಸ್ಸು ಪಡೆ... ... ಇವರು ಇನ್ನು ಕೇವಲ ...ವಾರ ಮಾತ್ರ ಈ ಊರಿನಲ್ಲಿರುವ ...ದು ಬಂದಿದೆ ನಮ್ಮ ಆರೋ...ಗ್ಯ ...ಕ್ರಿಗಳಾದ ಜನಾಬ್ ಮಹಮದ್ ...ರವರೂ, ಭಾರತ ಸರ್ಕಾರದ ಸಚಿ... ...ಶ್ರೀ, ದಿವಾಕರರೇ ಮುಂತಾದ ...ಮುಖಗಳೂ ಅಲ್ಲಿಗೆ ಭೇಟಿ ಇತ್ತು ...ಚಿಕಿತ್ಸಾ ವಿಧಾನಗಳನ್ನು ಬಹಳ ...ಮೆಚ್ಚಿದ್ದಾರೆ ಇನ್ನೂ ಸಾವಿರ ಜನ...ರಿಗೆ ಚಿಕಿತ್ಸೆ ಮಾಡುವುದಾಗಿ ...ವೈದ್ಯರು ಹೇಳುತ್ತಾರೆ ಈ ಸದವ...ಕಾಶವನ್ನು ನೇತ್ರ ವ್ಯಾಧಿ ಪೀಡಿತರು ಉಪ...ಯೋಗಿಸಿಕೊಂಡು ತಮ್ಮ ತೊಂದರೆಯಿಂ... ...ದು ಹಾರೈಸುತ್ತೇವೆ

ರಾಮಸ್ವಾಮಿ ಮೊದಲಿಯಾರರಿಗೆ ಹೈದ್ರಾಬಾದ್ ಪ್ರಧಾನಿ ಸ್ಥಾನವೇ?

ಇನ್ನು ಆರು ವಾರದೊಳಗಾಗಿ ಸರ್ದಾರ್ ಪಟೇಲರ ಭೇಟಿಯಾದನಂತರ ಹೈದರಾಬಾದಿನಲ್ಲಿ ಮಿಲಿಟರಿ ಸರ್ಕಾರವು ರದ್ದಾಗಿ, ಕಾವಲುಗಾರಿಕೆ ಸರ್ಕಾರವೊಂದು ರಚಿತವಾಗುವುದೆಂದೂ, ಮೈಸೂರು ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನು ಅದರ ಪ್ರಧಾನಿಯಾಗಿರುವಂತೆ ಭಾರತ ಸರ್ಕಾರವು ಅವರನ್ನು ಆಹ್ವಾನಿಸಬಹುದೆಂದೂ ವರದಿಯಾಗಿದೆ ಮಂತ್ರಿಮಂಡಲದಲ್ಲಿ ಈಗಿನ ಸರ್ಕಾರದ ಮುಖ್ಯ ಸಿವಿಲ್ ಅಧಿಕಾರಿಗಳಾದ ಶ್ರೀ ಡಿ ಎಸ್. ಬಖ್ಲೆ ಮತ್ತು ಶ್ರೀ ಪ್ರಧಾನರವರೂ, ೩ ಜನ ಮುಸ್ಲಿಮರು, ಒಬ್ಬ ಹರಿಜನರು ಮತ್ತು ೩ ಮಂದಿ ಇತರ ಕೋಮಿನವರು ಇರುವರೆಂದೂ ಹೇಳಲಾಗಿದೆ

ಡಚ್ ಪ್ರಧಾನಿಯ ಪ್ರವಾಸಕ್ಕೆ ಭಾರತದ ಅನುಮತಿ

ಡಚ್ ಪ್ರಧಾನಿ ಡಾ॥ ಡ್ರೀಸ್‌ರವರು ಇಂಡೋನೇಷ್ಯಕ್ಕೆ ವಿಮಾನದಲ್ಲಿ ಭಾರತದ ಮೂಲಕ ಹೋಗಲು ಅನುಮತಿ ಕೊಡಬೇಕೆಂದು ಭಾರತ ಮತ್ತು ಪಾಕಿಸ್ತಾನಗಳನ್ನು ಬ್ರಿಟಿಷ್ ಸರ್ಕಾರದ ಮೂಲಕ ಡಚ್ ಸರ್ಕಾರವು ಪ್ರಾರ್ಥಿಸಿತ್ತು ಈ ವಿಚಾರವನ್ನು ವಿಶ್ವ ಸಂಸ್ಥೆಗೆ ಭಾರತವು ತಿಳಿಸಿತ್ತು ಈಗ ಆ ಸಂಸ್ಥೆಯ ಅಧ್ಯಕ್ಷರ ಪ್ರಾರ್ಥನೆಯ ಮೇರೆ ಭಾರತವು ಅನುಮತಿ ಕೊಟ್ಟಿದೆ

ಟೀಂಟ್ಸಿನ್ ನಗರದ ರಕ್ಷಣಾ ಸಿದ್ಧತೆ

ಚೀಣದ ಟೀಂಟ್ಸಿನ್ ನಗರದ ಮೇಲೆ ಕಮ್ಯೂನಿಸ್ಟರ ಧಾಳಿಯನ್ನು ತಡೆಯಲು ಆ ನಗರವನ್ನು ಬಲವಾದ ಕೋಟೆಯನ್ನಾಗಿ ಪರಿವರ್ತಿಸಲಾಗಿದೆಯೆಂದು ಅಲ್ಲಿನ ದಂಡನಾಯಕರಾದ ಜ॥ ಚನ್‌ಚಾಂಗ್‌ಜಿಯವರು ತಿಳಿಸಿರುತ್ತಾರೆ ಅಲ್ಲಿನ ೨೦ ಲಕ್ಷ ಜನರ ರಕ್ಷಣೆಗಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿದೆ

ನಿಧನ

ಮೈಸೂರು ಟ್ರೇನಿಂಗ್ ಕಾಲೇಜಿನಲ್ಲಿ ಬಹಳ ದಿನಗಳಿಂದ ಕನ್ನಡ ಪಂಡಿತರಾಗಿದ್ದ ಶ್ರೀ ಕೆಚ್ ಶ್ರೀನಿವಾಸಾಚಾರ್ಯರು ನಿನ್ನೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ನೆಹರೂರವರ ಭಾಷಣ ಕೇಳಲು ರೈಲನ್ನು ನಿಲ್ಲಿಸಲಾಯಿತು

ಅಲಹಾಬಾದಿನ ಪಕ್ಕ ಪ್ರದರ್ಶನಾಲಯದ ಮೈದಾನದಲ್ಲಿ ಭಾರತ ಮಹಾ ಪ್ರಧಾನಿ ಪಂಡಿತ ನೆಹರೂರವರು ಭಾಷಣ ಮಾಡುತ್ತಿದ್ದಾಗ, ಅದರ ಸಮೀಪದಲ್ಲಿ ಹೋಗುತ್ತಿದ್ದ ರೈಲನ್ನು ಅದರ ಪ್ರಯಾಣಿಕರು ನಿಲ್ಲಿಸಿ, ಪ್ರಧಾನಿಯವರ ಭಾಷಣವನ್ನು ಒಂದು ಗಂಟೆ ಕಾಲ ಕೇಳಿ ಅನಂತರ ರೈಲು ಹೊರಡಲು ಅನುಮತಿ ಕೊಟ್ಟರೆಂದು ವರದಿಯಾಗಿದೆ ಎಲ್ಲಿ ನೆಹರೂರವರು ಭಾಷಣ ಮಾಡಿದರೆ ಅದೇ ಒಂದು ವೈಶಿಷ್ಟ್ಯ ಜಂಕ್ಷನ್, ಅಲ್ಲಿ ಎಷ್ಟು ಹೊತ್ತು ಆಗತ್ಯವಿದ್ದರೆ ಅಷ್ಟು ಹೊತ್ತು ರೈಲು ನಿಲ್ಲಬೇಕೆಂದು ಹೇಳಿ ಪ್ರಯಾಣಿಕರು ರೈಲನ್ನು ನಿಲ್ಲಿಸಿದರು.

ಚೀಣದಲ್ಲಿ ಕಮ್ಯೂನಿಸ್ಟರ ಮಿಶ್ರ ಸರಕಾರ

ಚೀಣದಲ್ಲಿ ಈ ವರ್ಷದೊಳಗಾಗಿ ಪ್ರಜಾ ಸರ್ಕಾರವು ಸ್ಥಾಪಿತವಾಗಿ ಕಮ್ಯೂನಿಸ್ಟ ಪಕ್ಷದ ನಾಯಕತ್ವದಲ್ಲಿ ಮಿಶ್ರ ಮಂತ್ರಿಮಂಡಲವು ರಚಿಸಲ್ಪಡುವುದೆಂದು ಕಮ್ಯೂನಿಸ್ಟರ ರೇಡಿಯೋ ಪ್ರಚಾರ ಮಾಡಿದೆ ಕಮ್ಯೂನಿಸ್ಟರ ಷರತ್ತುಗಳ ಮೇಲೆ ಚಿಯಾಂಗರು ಶಾಂತಿ ಸಂಧಾನ ಮಾಡಿಕೊಳ್ಳಬೇಕೆಂದೂ ತಿಳಿಸಲಾಗಿದೆ

ಜೆರೂಸಲೆಮಿನ ಮೇಲೆ ವಿಮಾನ ಧಾಳಿ

ಜೆರೂಸಲೆಮಿನ ಯಹೂದ್ಯರ ಪ್ರದೇಶದ ಮೇಲೆ ಈಜಿಪ್ಟಿನ ವಿಮಾನಗಳು ನೆನ್ನೆ ರಾತ್ರಿ ಎರಡು ಬಾರಿ ಧಾಳಿ ನಡೆ... ...ಗಳನ್ನು ... ... ಧಾಳಿ ನಡೆಸಿದರೆ ಕೈರೋ ಮತ್ತು ಇತರ ಈಜಿಪ್ಟಿನ ನಗರಗಳ ಮೇಲೆ ಬಾಂಬುಗಳನ್ನು ಹಾಕುವುದಾಗಿ ಯಹೂದ್ಯರು ಈ ಹಿಂದೆ ಮೊದಲು ಎಚ್ಚರಿಕೆ ಕೊಟ್ಟಿದ್ದರೂ ಪ್ರತಿಸಂರ್ಷ ... ಈ ರೀತಿ ಮಾಡಿದ್ದಾರೆಂದು ಹೇಳಲಾಗಿದೆ

ಗವರ್ನರ್ ಪದವಿಗೆ ಮುಸ್ಲಿಮರ ನಿರಾಕರಣೆ

... ...

ಪುರ ಸಭೆಗಳಿಗೆ ಹೆಚ್ಚು ಅಧಿಕಾರ

ಸಮ್ಮೇಳನದಲ್ಲಿ ನಿರ್ಧಾರ

ಸ್ವಪು ವರದಿಗಾರ] ಬೆಂಗಳೂರು ೪.

ನಿನ್ನೆ ಪ್ರಾರಂಭವಾದ ನಗರ ಪುರ ಸಭೆಗಳ ಸಮ್ಮೇಳನವು ಈ ಮಧ್ಯಾಹ್ನ ೨ ಗಂಟೆಗೆ ಮುಕ್ತಾಯವಾಯಿತು. ಬೆಂಗಳೂರು ನಗರ ಮತ್ತು ದಂಡಿನ ಪುರ ಸಭೆಗಳನ್ನು ಸೇರಿಸಿ, ಒಂದು ಕಾರ್ಪೊರೇಷನ್ ಮಾಡುವ ವಿಚಾರದ ಮೇಲೆ ದೀರ್ಘ ಚರ್ಚೆ ನಡೆಯಿತು

ದಂಡಿನ ಪ್ರತಿನಿಧಿಗಳು ಅದನ್ನು ವಿರೋಧಿಸಿ, ದಂಡನ್ನು ಪ್ರತ್ಯೇಕವಾಗಿಡಬೇಕೆಂದೂ, ಈ ಕಾರ್ಪೊರೇಷನ್‌ಗೆ ಅವಶ್ಯಕತೆ ಇಲ್ಲವೆಂದೂ ಮತ್ತು ದಂಡಿನ ಪ್ರಜೆಗಳ ಅಭಿಪ್ರಾಯವನ್ನು ಸರ್ಕಾರದವರು ತೆಗೆದುಕೊಂಡಿಲ್ಲವೆಂದೂ ತಿಳಿಸಿದರು. ಶ್ರೀಗಳಾದ ಬಿ ನಾರಾಯಣಸ್ವಾಮಿ, ಟಿ. ನರಸಿಂಹ ಅಯ್ಯಂಗಾರ್, ವೀರಭದ್ರಯ್ಯ ಮುಂತಾದವರು ಕಾರ್ಪೊರೇಷನ್ ಮಸೂದೆಯನ್ನು ಸ್ವಾಗತಿಸಿದರು. ಅಧ್ಯಕ್ಷತೆ ವಹಿಸಿದ್ದ ಸಚಿವ ಕಾಮುಡಿಯವರು ಭಾಷಣ ಮಾಡಿ, ಎಲ್ಲ ವಿಷಯವನ್ನು ಪರಿಶೀಲಿಸಲು ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಲಾಗುವುದೆಂದು ತಿಳಿಸಿದರು.

ಪುರ ಸಭೆಗಳಿಗೆ ಹೆಚ್ಚಿನ ಅಧಿಕಾರ ಕೊಡುವ ಬಗ್ಗೆ ಕಾನೂನಿನಲ್ಲಿ ಸೂಕ್ತ ತಿದ್ದುಪಡಿಗಳನ್ನು ಸೂಚಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದೂ, ೨೫ ಸಾವಿರ ರೂ. ವರೆಗಿನ ಅಂದಾಜುಗಳನ್ನು ಮಂಜೂರು ಮಾಡುವ ಅಧಿಕಾರವು ಪುರ ಸಭೆಗಳಿಗೇ ಇರಬೇಕೆಂದೂ, ಅದಕ್ಕೆ ಮೇಲ್ಪಟ್ಟ ಅಂದಾಜುಗಳಿಗೆ ಮಾತ್ರ ಸರ್ಕಾರದ ಮಂಜೂರಾತಿಯಿರಬೇಕೆಂದೂ ಅಭಿಪ್ರಾಯಪಡುವ ನಿರ್ಣಯವನ್ನು ಮಾಡಲಾಯಿತು. ಮೇಲ್ಕಂಡ ಸಮಿತಿಯನ್ನು ರಚಿಸುವ ಬಗ್ಗೆ ಸರ್ಕಾರದವರು ಸಧ್ಯದಲ್ಲಿಯೇ ಆಜ್ಞೆ ಹೊರಡಿಸುವರೆಂದು ಸಚಿವರು ಭರವಸೆ ಕೊಟ್ಟರು

ಪಡುವಾರಹಳ್ಳಿ ನಿವಾಸಿಗಳಿಗೆ ನಿವೇಶನ

ಬಡಾವಣೆ... ನಿವಾಸಿ... ಜನಸಂಖ್ಯೆಯಿರುವ ಮೈಸೂರು ಪಡುವಾರ ಹಳ್ಳಿ ಬಡಾವಣೆಯ ನಿವಾಸಿಗಳಿಗೆ ಅಲ್ಲಿ ವಾಸಿಸಲು ಸಾಕಾದಷ್ಟು ಮನೆಗಳಿಲ್ಲದಿರುವುದರಿಂದ ಪದರಿ ಪ್ರದೇಶದಲ್ಲಿರುವ ಖಾಲಿ ನಿವೇಶನಗಳನ್ನು ಹರಾಜು ಮಾಡಲು ನಗರಾಭಿವೃದ್ಧಿ ಸಮಿತಿಯವರು ಕೈಗೊಂಡಿರುವ ಕಾರ್ಯಕ್ರಮವನ್ನು ರದ್ದು ಮಾಡಿ, ಅಲ್ಲಿನ ಬಡ ಜನರಿಗೇ ಆ ನಿವೇಶನಗಳನ್ನು ಕೊಡಿಸಬೇಕು, ಒಂದು ವೇಳೆ ಅಧಿಕಾರಿಗಳು ಹಾಗೆ ಮಾಡದಿದ್ದರೆ ನಗರದ ಪ್ರಜೆಗಳು ಈ ಹರಾಜಿನಲ್ಲಿ ಭಾಗ ವಹಿಸದೆ ಪಡುವಾರ ಹಳ್ಳಿಯ ನಿವಾಸಿಗಳಿಗೆ ಆ ಸ್ಥಳಗಳು ದೊರೆಯುವಂತೆ ಸಹಕರಿಸಬೇಕು ಎಂಬ ನಿರ್ಣಯಗಳು ನಿನ್ನೆ ... ರಾಮಸ್ವಾಮಿ ... ರವರ ಅಧ್ಯಕ್ಷತೆಯಲ್ಲಿ ಪಡುವಾರಹಳ್ಳಿ ರಾಮ ಮಂದಿರದಲ್ಲಿ ನಡೆದ ಸಭೆಯಲ್ಲಿ ಅಂಗೀಕರಿಸಲ್ಪಟ್ಟವು

... ನಾಳೆಯಿಂದ ಪ್ರತಿ ದಿನ ಸಂಜೆ ೬–೩೦ ಗಂಟೆಗೆ ಶ್ರೀ ಪಾಂಡುರಂಗ ದೇವಾಲಯದಲ್ಲಿ ಶ್ರೀ ... ಎಸ್. ... ದಾಸರಿಂದ ... ಕಥೆ ನಡೆಯುವುದು.

ತಾಲ್ಲೂಕು ಅಧಿಕಾರಿಗಳ ಕಿರುಕುಳ?

ಸ್ವಪ [ ] ಚಾಮರಾಜನಗರ ೩. ಈ ತಾಲ್ಲೂಕಿನ ಅಧಿಕಾರಿಗಳು [illegible] [illegible] ... ಬವಣೆ ...

[illegible]

ಕಾಶ್ಮೀರ ಕದನದಲ್ಲಿ ದಿನಕ್ಕೆ ೨೫ ಲಕ್ಷ ರೂ ಖರ್ಚು

[illegible]

ಕದನ ನಿಲ್ಲಿಸುವಂತೆ ಕಮ್ಯೂನಿಸ್ಟರಿಗೆ ಮನವಿ

[illegible]

ನೇಪಾಳದಲ್ಲಿ ಪ್ರಜಾಪ್ರಭುತ್ವ ಸರ್ಕಾರಕ್ಕೆ ಒತ್ತಾಯ

[illegible]

ಇಂಡೋನೇಷ್ಯಕ್ಕೆ ಬರ್ಮಾದ ಸಹಾಯ

ಇಂಡೋನೇಷ್ಯಕ್ಕೆ ಸಹಾಯ ಮಾಡಲು ಬರ್ಮಾದಲ್ಲಿ ಒಂದು ಸೈನ್ಯವನ್ನು ರಚಿಸಲಾಗುತ್ತದೆಂದು ಅಲ್ಲಿನ ಮಾಜಿ ಪ್ರಧಾನಿ ಡಾ॥ ಬಾಮೊರವರು ತಿಳಿಸಿರುತ್ತಾರೆ. ಈಗಾಗಲೇ ೧೦೦ ಮಂದಿ ಮುಖಂಡರು ಇದಕ್ಕೆ ಸೇರಲು ಮುಂದೆ ಬಂದಿದ್ದಾರೆ.

ಅಲ್ಪ ಸಂಖ್ಯಾತರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡದು

ಭಾರತದಲ್ಲಿ ಅಲ್ಪಸಂಖ್ಯಾತರು ಶಾಸನ ಸಭೆಗಳಿಗೆ ಪ್ರತ್ಯೇಕ ಪ್ರಾತಿನಿಧ್ಯ ... [illegible] ... ಭಾರತವನ್ನು ರಚಿಸಬೇಕೆಂದಿದ್ದ ... ತಿಳಿಸಿರುತ್ತಾರೆ.

ವಿಂಡಸರ್ ಡ್ಯೂಕರು ಅಮೆರಿಕದಲ್ಲಿ ನೆಲೆಸುವರು

ಬ್ರಿಟನ್ನಿನ ಮಾಜಿ ದೊರೆಗಳಾದ ವಿಂಡಸರ್ ಡ್ಯೂಕರು ಯುರೋಪಿನ ಪರಿಸ್ಥಿತಿ ... [illegible] ... ಫ್ರಾನ್ಸಿನಲ್ಲಿರುವ ತಮ್ಮ ಮನೆಯನ್ನೂ ಸಹ ... ಮಾರಲಿದ್ದಾರೆ.

ಮೋಟಾರು ತಯಾರಿಯಲ್ಲಿ ರಷ್ಯ-ಬ್ರಿಟನ್ ಸ್ಪರ್ಧೆ

ರಷ್ಯದಲ್ಲಿ ಈ ವರ್ಷ ... ಮೋಟಾರು ಒಸ್ಸಿ ಮತ್ತು ೬೦ ಸಾವಿರ ಕಾರುಗಳನ್ನು ತಯಾರಿಸಲಾಗುವುದೆಂದೂ ಇದರಿಂದ ಬ್ರಿಟನ್ನಿನ ಮೋಟಾರು ತಯಾರಿಕೆ ಯವರಿಗೆ ಪೈಪೋಟಿ ಉಂಟಾಗಿವೆಯೆಂದೂ ಹೇಳಲಾಗಿದೆ.

ಶನಿಕಥಾ ಶ್ರವಣದಿಂದ ಪ್ಲೇಗು ನಿಂತಿತು

[illegible]

ವಿಜಯಲಕ್ಷ್ಮಿ ಪಂಡಿತರ ಪುತ್ರಿಯ ಮದುವೆ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಮ್ಮ ಎರಡನೇ ಪುತ್ರಿ ತಾರಾಪಂಡಿತರನ್ನು ಶ್ರೀ ಗೌತಮ ಸೇಗಾಲ್‌ರವರಿಗೆ ಕೊಟ್ಟು ವಿವಾಹವನ್ನು ನೆನ್ನೆ ಅಲಹಾಬಾದಿನಲ್ಲಿ ನೆರವೇರಿಸಿದರು. ವಿವಾಹಕ್ಕೆ ಪ್ರಧಾನಿ ಪಂಡಿತ ನೆಹರೂ ಮತ್ತು ಇತರ ಅನೇಕ ನಾಯಕರುಗಳು ದಯಮಾಡಿಸಿದ್ದರು.

ನಾನ್‌ಕಿಂಗಿನ ರಕ್ಷಣೆಯನ್ನು ಭದ್ರಪಡಿಸಲಾಗಿದೆ

ಚೀಣದ ರಾಜಧಾನಿಯಾದ ನಾನ್‌ಕಿಂಗಿನ ರಕ್ಷಣೆಯನ್ನು ಚಿಯಾಂಗರು ಬಲಪಡಿಸುತ್ತಿದ್ದಾರೆಂದೂ, ಉತ್ತರ ಚೀಣದಲ್ಲಿದ್ದ ಹೆಚ್ಚು ಸೈನ್ಯವನ್ನು ಅಲ್ಲಿಗೆ ಕರೆಸಿಕೊಂಡಿರುವರೆಂದೂ ವರದಿಯಾಗಿದೆ. ಸಂಧಾನ ಮಾತುಕತೆಗಳನ್ನು ಕಮ್ಯೂನಿಸ್ಟರು ನಿರಾಕರಿಸಿದರೆ ತಾವು ಕೊನೆಯ ವರೆವಿಗೂ ಕದನ ನಡೆಸುವುದಾಗಿ ಚಿಯಾಂಗರು ತಿಳಿಸಿರುತ್ತಾರೆ.

ಮಾಂಗೋಲಿಯಾ ನಾಯಕರಿಂದ ಶಾಂತಿ ಸಂಧಾನ

ಮಂಗೋಲಿಯದ ರಾಷ್ಟ್ರೀಯ ನಾಯಕರಾದ ರಾಜಕುಮಾರ ದೆವಾಂಗ್‌ರವರು ಕಮ್ಯೂನಿಸ್ಟರೊಂದಿಗೆ ಸಂಧಾನದ ಮಾತುಕತೆ ನಡೆಸಬಹುದೆಂದು ಹೇಳಲಾಗಿದೆ. ಅವರನ್ನು ಈಗ ಚಿಯಾಂಗರು ನಾನ್‌ಕಿಂಗಿಗೆ ಕರೆಸಿಕೊಂಡಿದ್ದಾರೆ. ಇವರ ಮುಖ್ಯ ... ಮಂಗೋಲಿಯದಲ್ಲಿ ಕಮ್ಯೂನಿಸ್ಟರು ಸ್ಥಾಪಿಸಿರುವ ಸರ್ಕಾರದ ಅಧ್ಯಕ್ಷರಾಗಿದ್ದಾರೆ.

ಹೇಳಿದ್ದು ಇಷ್ಟೇ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ಮೈಸೂರು ಸಿಟಿ ... ಹಳೆ ಉಕ್ಕಡದ ... ರಸ್ತೆಯಲ್ಲಿ ... ಜನವರಿ ... ತಾರೀ ... ಗಂಟೆ ... ಮಾಡಲಾಗುತ್ತೆ ... ನೋಟೀಸು ... ಬಹುದು.

(ಸಹಿ) ವಿ. ಕೆ. ಮುಕುಂದನ್.

[illegible]

ಹೆಚ್ಚು ಆಹಾರ ಬೆಳೆ ಯೋಜನೆಗೆ ೬ ಕೋಟಿ ರೂ

ಬಿಹಾರ್ ಪ್ರಾಂತ್ಯದಲ್ಲಿ ಹೆಚ್ಚು ಆಹಾರ ಬೆಳೆಯುವ ಯೋಜನೆಗಾಗಿ ಬಿಹಾರ ಸರ್ಕಾರವು ೬ ಕೋಟಿ ರೂ ... ಮಂಜೂರು ಮಾಡಿರುತ್ತದೆ.

ಕ್ಯಾಲೆಂಡರ್ ಸ್ವೀಕಾರ

ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನ ಶ್ರೀ ಜಿ. ಹೆಚ್ ... ರಾಯರು ಕಳುಹಿಸಿಕೊಟ್ಟಿರುವ ನೂತನ ವರ್ಷದ ಕ್ಯಾಲೆಂಡರನ್ನು ಕೃತಜ್ಞತಾಪೂರ್ವಕನಾಗಿ ಸ್ವೀಕರಿಸಿರುತ್ತೇವೆ.

ಶುಭಾಶಯ

ಸುಪ್ರಸಿದ್ಧ ಸುಗಂಧ ವ್ಯಾಪಾರಿಗಳು ಶ್ರೀ ಎಂ. ಆರ್. ಚೆಟ್ಟಪ್ಪನವರ ಶ್ರೀ ಲೀಲಾ ಅಗರಬತ್ತಿ ಸಂಸ್ಥೆಯವರು ಕಳುಹಿಸಿರುವ ಹೊಸ ವರ್ಷದ ಶುಭಾಶಯವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ.

ರಾಜಕಮಲ್ ಟಾಕೀಸ್

೩೧-೧೨-೪೮ರಿಂದ

ಎಮೋಘ ೩ನೇ ವಾರ

ಪ್ರತಿ ದಿನ ೩ ಆಟಗಳು

ಭಕ್ತ

ಕುಂಬಾರ

(ಕನ್ನಡ)

ಎಸ್. ಎಸ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ ೦-೬-೦

ಮಹಾ ಸುಗಂಧರಾಜ ತೈಲ —)

,, ಚಂದನಾದಿ ತೈಲ —)

,, ಭೃಂಗಾಮಲಕ ತೈಲ —)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು

ಮಹಾಕೇತಕೀ ತೈಲ — ತಲೆ ಕೂದಲು ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಯೋಗ್ಯವಾದ ಉತ್ತಮ ... ಕ್ರೀಮ್ ಬ್ರಾಂಡ್ ...

ಪಂಚಾಮೃತ—ಮಲೇರಿಯಾಗೆ ಸಿದ್ಧ ಸಂಜೀವನ

ಮೈಸೂರು ಆಯುರ್ವೇದಿಕ್ ಫಾರ್ಮಸಿ, ೯೮ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

ಸಿಮೆಂಟ್ ಈಗಲೇ ದೊರೆಯುತ್ತದೆ

ವಿವರಗಳಿಗೆ

ದಿ ಇಂಟರ್ ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,

[illegible] ರಸ್ತೆ, ಮೈಸೂರು.

Edited, printed and published by A R Nagaraja at the Sadhvi Press, D. Subbiah Road, Mysore.

ಫೋನ್ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೫-೧-... [ಸಂಚಿಕೆ ೧೫೫

ಹೈದರಾಬಾದ್ ನಿಜಾಮರಿಗೆ ಒಂದು ಕೋಟಿ ರೂ. ರಾಜಧನ

ರಾಷ್ಟ್ರಗೀತೆ ಬಗ್ಗೆ ಸರ್ಕಾರದ ಸೂಚನೆ

ಬೆಂಗಳೂರು ೫

ಸಾರ್ವಜನಿಕ ಸಮಾರಂಭಗಳಲ್ಲಿ ರಾಷ್ಟ್ರಗೀತೆಯನ್ನು ಹಾಡುವ ವಿಚಾರವಾಗಿ ಸರ್ಕಾರದವರು ಈ ಕೆಳಗೆ ಕಂಡಂತೆ ಸೂಚನೆ ಪತ್ರ ಪ್ರಕಟಣೆಯನ್ನು ಹೊರಡಿಸಿರುತ್ತಾರೆ

ಸಭೆಯ ಆರಂಭದಲ್ಲಿ ಜನಗಣಮನ ಗೀತೆಯ ಮೊದಲನೆಯ ಚರಣವನ್ನು ಹಾಡಬೇಕು ಕಡೆಯಲ್ಲಿ ವಂದೇಮಾತರಂ ಅಥವ ಕಾಯೌ ಶ್ರೀ ಗೌರಿಯ ಎರಡನ್ನೂ ಹಾಡಬೇಕು ಎರಡನ್ನೂ ಹಾಡುವಾಗ ಮೊದಲು ವಂದೇಮಾತರಂ ಗೀತೆಯನ್ನೂ ಅನಂತರ ಕಾಯೌ ಶ್ರೀಗೌರಿಯನ್ನೂ ಹಾಡಬೇಕು

ಅಣು ಶಿಕ್ಷಣ ಪಡೆಯಲು ಭಾರತ ವಿಜ್ಞಾನಿ

ಅಮೇರಿಕದ ಓಕ್ ರಿಡ್ಜ್ ಟೆನಿಸಿ ಸಂಶೋಧನಾ ಕೇಂದ್ರದಲ್ಲಿ ಮದರಾಸಿನ ವಿಜ್ಞಾನಿ ಡಾ॥ ಕೆ ಎಸ್ ಕೃಷ್ಣನ್‌ರವರು ಅಣುವಿಜ್ಞಾನ ಶಿಕ್ಷಣ ಪಡೆಯಲು ಅವಕಾಶ ದೊರೆತಿದೆ

ಪಾರ್ಶ್ವ ವಾಯು ಗುಣಪಡಿಸಲು ನೂತನ ಔಷಧಿ

ಪಾರ್ಶ್ವವಾಯುರೋಗದ ನಿವಾರಣೆಗಾಗಿ ಅಮೇರಿಕದಲ್ಲಿ ಐರ್ಲ ಲಂಗ್ ಎಂಬ ಸಾಧನದ ಬದಲು ನೂತನ ವಿದ್ಯುಚ್ಛಕ್ತಿ ಯಂತ್ರವನ್ನು ಉಪಯೋಗಿಸಲಾಗುವುದೆಂದು ವರದಿಯಾಗಿದೆ

ಕ್ಷಯರೋಗ ತಡೆಯಲು ಕಾರ್ಯಕ್ರಮ

ಒಸ್ತರಲಸ್ಕಿಕದಲ್ಲಿ ಕ್ಷಯರೋಗವನ್ನು ತಡೆಗಟ್ಟಲು ಅಲ್ಲಿನ ೮೦ ಲಕ್ಷ ಜನರಿಗೆ ಈ ರೋಗ ವಿರುದ್ಧ ಇಂಜಕ್ಷನ್ ಕೊಡಲು ಅಲ್ಲಿನ ಫ್ರಂಚ್ ಸರ್ಕಾರದವರು ನಿರ್ಧರಿಸಿದ್ದಾರೆ

ಆತ್ಮಹತ್ಯದ ಚರಿತ್ರೆ ಬರೆದು ಆತ್ಮಹತ್ಯ

ಅಮೇರಿಯದ ಪ್ರೊಫೆಸರೊಬ್ಬರು ಆತ್ಮಹತ್ಯದ ವಿಚಾರವಾಗಿ ಒಂದು ಪ್ರಬಂಧ ಬರೆದು, ಅನಂತರ ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ

ಹಾಲು ಹೆಚ್ಚಿಸಲು ಹಸುವಿಗೆ ರವಿಕೆ

ಹಸುವಿನ ಗರ್ಭ ಚಕ್ಷಲಿನ ಕ್ರ್ಯಾನ್‌ವಾನ್ ರ... ರವಿಕೆ ತೊಡಿಸುವುದರಿಂದ ಶೇಕಡ ... ಹಾಲನ್ನು ಹೆಚ್ಚಿಸಬಹುದೆಂದು ಅಮೇರಿಕದ ವಿಜ್ಞಾನಿಯೊಬ್ಬನು ಕಂಡುಹಿಡಿದಿದ್ದಾನೆ

ಹಣದ ಆಸೆಗಾಗಿ ಮಕ್ಕಳ ಮಾರಾಟ

ಹಣದ ಆಸೆಗಾಗಿ ಜಪಾನಿನಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳನ್ನೇ ಗುಲಾಮರಾಗಲು ಮಾರುತ್ತಿರುವರೆಂದು ಹೇಳಲಾಗಿದೆ ಪುರುಷರೂಪದಲ್ಲಿ ಶಾಲೆಗೆ ತಪ್ಪಿಸಿದ ಹುಡುಗರನ್ನು ಸರ್ಕಾರದವರು ... ಮಂದಿಯನ್ನು ಇವರ ... ಮಾರಿರುವುದು ಪತ್ತೆಯಾಗಿದೆ

ಈಗಿನ ಮಂತ್ರಿಮಂಡಲ ರದ್ದಾಗಬೇಕು

ವೀರಶೈವ ಸಂಘದ ನಿರ್ಧಾರ

ಬಾ] ಬೆಂಗಳೂರು ೫

... ಅಖಿಲ ಮೈಸೂರು ವೀರಶೈವ ಸಂಘದ ಜರೂರು ಸಭೆಯು ಶ್ರೀ ಎಂ ಸಿ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗಿನ ಠರಾವುಗಳ ನಿರ್ಣಯಗಳು ಅಂಗೀಕೃತವಾದವು

೧೯೪೯ನೇ ಜೂನ್ ತಿಂಗಳಿಗೆ ನೂತನ ರಾಜ್ಯಾಂಗವನ್ನು ತಡ ಪ್ರತೀವೆಂದು ಅನಿರ್ದಿಷ್ಟ ಕಾಲವನ್ನು ತಳ್ಳಿಹಾಕುತ್ತಾ ನಿರ್ಣಯವನ್ನು ಉಂಟುಮಾಡಿರುವ ಇಂದಿನ ಮಂತ್ರಿ ಮಂಡಲವನ್ನು ರದ್ದುಪಡಿಸಿ ಹೊಸದಾಗಿ ಮಿಶ್ರ ಮಂತ್ರಿಮಂಡಲವನ್ನು ಸಾಧಿಸಬೇಕೆಂದು ಶ್ರೀಮನ್ಮಹಾರಾಜರವರಲ್ಲಿ ಪ್ರಾರ್ಥಿಸುವುದು

ಸಾರ ಸಮಿತಿಯು ವರದಿಯನ್ನು ಓಂ ಡಿಸಿ, ಅದರಿಂದ ಕರ್ನಾಟಕ ಪ್ರಾಂತ ರಚನೆಗೆ ಜರೂರು ಕಾರ್ಯಕ್ರಮ ಕೈಗೊಳ್ಳಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಪಡಿಸುವುದು

ಶ್ರೀಗಳ ನ್ಯಾಯಾಧೀಶರಾಗಿದ್ದ ಶ್ರೀ ಜ ಪರಮಶಿವಯ್ಯನವರ ಬಲಾತ್ಕಾರ ನಿವೃತ್ತಿ ಮತ್ತು ಶ್ರೀ ಕೆ ಬಿ ಮಲ್ಲಾರಾಧ್ಯರಿಗೆ ಬಲಾತ್ಕಾರದ ರಜೆ ಬಗ್ಗೆ ಖಂಡನೆ

ಮಂತ್ರಿ ಮಂಡಳಿಯಲ್ಲಿರುವ ವೀರಶೈವ ಮಂತ್ರಿಗಳು ಸಮಾಜಕ್ಕೆ ಈ ರೀತಿ ಆದ ಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಲು ಅಸಮರ್ಥರಾದುದಕ್ಕೆ ವಿಷಾದಿಸುವುದು

ಪಲಕಿ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದ ಮಹಾದ್ವಾರದ ಎದುರಿನಲ್ಲಿರುವ ಗಣಪತಿ ದೇವಸ್ಥಾನದ ಮುಂದೆ ನಾಳೆ ರಾತ್ರಿ ... ಗಂಟೆಗೆ ತುಮಕೂರಿನ ಶ್ರೀ ... ಕೃಷ್ಣಭಾಗವತರಿಂದ ಪ್ರಸನ್ನ ಗಣಪತಿ ಶಕ್ತಿ ಎಂಬ ಹರಿಕಥೆ ನಡೆಯುವುದು

ಕಾಶ್ಮೀರ ಕದನದಿಂದ ೩೫ ಕೋಟಿ ರೂ. ಖರ್ಚು

ಕಾಶ್ಮೀರದಲ್ಲಿ ೧೪ ತಿಂಗಳು ಕಾಲ ನಡೆದ ಕದನದಲ್ಲಿ ಭಾರತ ಸರ್ಕಾರಕ್ಕೆ ಒಟ್ಟು ೩೫ ಕೋಟಿ ರೂ ಖರ್ಚಾಗಿದೆಯೆಂದು ಹೇಳಲಾಗಿದೆ

ಡಚ್ಚರ ಮನೋಭಾವವು ಬದಲಾಯಿಸಿತು

ಇಂಡೋನೇಷ್ಯದ ಮೇಲೆ ಡಚ್ಚರು ನಡೆಸುತ್ತಿರುವ ವರ್ತನೆಯನ್ನು ಪ್ರಪಂಚದಲ್ಲೆಲ್ಲಾ ಖಂಡಿಸಿರುವುದರ ಫಲವಾಗಿ ಡಚ್ಚರು ತಮ್ಮ ಧೋರಣೆಯನ್ನು ಬದಲಾಯಿಸಬೇಕಾಗಿ ಬಂದಿರುವುದಾಗಿ ತಿಳಿದುಬರುತ್ತದೆ. ಇಂಡೋನೇಷ್ಯದ ನಾಯಕರ ಬಿಡುಗಡೆಗೆ ಆಜ್ಞೆಯಾಗಿದ್ದು ಈ ಒಂದು ಸಂದರ್ಭದಲ್ಲಿ ಒಪ್ಪಿರುವ ... ಇನ್ನು ಮುಂದೆ ಅವರು ವಿಶ್ವದ ಅಭಿಪ್ರಾಯವನ್ನು ನಿರ್ಲಕ್ಷಿಸಲಾರರೆಂದು ಹೇಳಲಾಗಿದೆ

ರೈಲ್ವೆ ಕೆಲಸಗಾರರ ಬೇಡಿಕೆ ಬಗ್ಗೆ ಒಪ್ಪಂದ

ಭಾರತ ರೈಲ್ವೆ ಕೆಲಸಗಾರರ ಬೇಡಿಕೆಗಳ ವಿಚಾರದಲ್ಲಿ ರೈಲ್ವೆ ಬೋರ್ಡಿನವರಿಗೂ ಮತ್ತು ಕೆಲಸಗಾರರಿಗೂ ಇದ್ದ ಭಿನ್ನಾಭಿಪ್ರಾಯಗಳ ಬಗ್ಗೆ ಕೇಂದ್ರ ಸರ್ಕಾರದ ರೈಲ್ವೆ ಸಚಿವರಾದ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್‌ರವರಿಗೂ ರೈಲ್ವೆ ಫೆಡರೇಷನ್ನಿನ ಅಧ್ಯಕ್ಷರಾದ ಶ್ರೀ ಜಯಪ್ರಕಾಶ್ ನಾರಾಯಣ್‌ರವರಿಗೂ ಬೊಂಬಾಯಿನಲ್ಲಿ ನಿನ್ನೆ ದೀರ್ಘ ಕಾಲ ಮಾತುಕತೆ ನಡೆದು ಒಂದು ಒಪ್ಪಂದಕ್ಕೆ ಬರಲಾಗಿದೆಯೆಂದು ತಿಳಿದು ಬಂದಿದೆ. ತುಟ್ಟಿ ಭತ್ಯ, ದಿನದ ವಾಸ್ತವಿಕ ಕೆಲಸದ ನಿರ್ಧಾರ ಮತ್ತು ಕಾರ್ಮಿಕ ಶಿಕ್ಷಣದ ವಿಚಾರವಾಗಿ ಮಾತುಕತೆಗಳು ಮುಂದುವರಿಯುವುವೆಂದು ಹೇಳಲಾಗಿದೆ

ವಿಂಧ್ಯ ಪ್ರದೇಶದಲ್ಲಿ ಹಿಂದಿ ಸರ್ಕಾರಿ ಭಾಷೆ

ವಿಂಧ್ಯ ಪ್ರದೇಶದಲ್ಲಿ ಹಿಂದಿಯನ್ನು ಸರ್ಕಾರಿ ಭಾಷೆಯನ್ನಾಗಿ ಮಾಡಲಾಗಿದೆಯೆಂದು ಪ್ರಕಟಿಸಲಾಗಿದೆ

ಕೆಪ್ಪನಗೂರು ಜೈಲಿನಲ್ಲಿ ಹಿಂಸಾ ರಷ್ಯ

ಹೈದರಾಬಾದಿನ ... ರವರ ನಾಯಕರ ಸಿಗಿಸಲ್ಪಟ್ಟ ... ಕೆಪ್ಪನಗೂರು ... ಇರಲಾಗಿದೆಯೆಂದು ತಿಳಿದು ಬಂದಿದೆ

ವಿಶ್ವ ವಿದ್ಯಾಲಯದ ರಿಜಿಸ್ಟ್ರಾರರು

ಸ್ವಂ ಸು ವರದಿ] ಬೆಂಗಳೂರು ೫

ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾದ ಶ್ರೀ ಗಾರ್ಡನ್‌ರವರು ಇದೇ ೧ನೇ ತಾ॥ ನಿವೃತ್ತರಾದರಷ್ಟೆ ಅವರ ಸ್ಥಾನದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಮೇಲ್ವಿಚಾರಣಾಧಿಕಾರಿಗಳಾದ ಶ್ರೀ ಎ ಸಿ ದೇವೇಗೌಡರನ್ನು ನೇಮಿಸಲಾಗುವುದೆಂದು ತಿಳಿದು ಬಂದಿದೆ

○ ದಂಡಿನ ಪ್ರತಿನಿಧಿ ಸದಸ್ಯರಾದ ಶ್ರೀ ವಿ ಪಿ ದೀನದಯಾಳು ನಾಯ್ಡುರವರನ್ನು ನ್ಯಾಯವಿಧಾಯಕ ಸಭಾ ಸದಸ್ಯರಾಗಿ ಸರ್ಕಾರದವರು ನಾಮಕರಣ ಮಾಡಿದ್ದಾರೆ

§ ಹಾಸನಕ್ಕೆ ಶ್ರೀಮನ್ಮಹಾರಾಜರವರ ಭೇಟಿಯ ಗೌರವಾರ್ಥವಾಗಿ ಅಲ್ಲಿ ಇಂದಿನ ಸಾರ್ವಜನಿಕ ರಜಾ ಕೊಡಲಾಗಿದೆ

ಮಹಾ ಪ್ರಭುಗಳಿಂದ ಇಂಟರ್ ಕಾಲೇಜಿನ ಶಂಕು ಸ್ಥಾಪನೆ

ಹಾಸನ ೫

ಶ್ರೀಮನ್ಮಹಾರಾಜರವರು ಈ ದಿನ ಬೆಳಿಗ್ಗೆ ೧೦ ಗಂಟೆಗೆ ಇಲ್ಲಿನ ಸಂಕೇ ಮೈದಾನದಲ್ಲಿ ಏರ್ಪಡಿಸಿದ್ದ ವನಗಳ ಜಾತ್ರೆಯ ಬಹುಮಾನ ವಿನಿಯೋಗ ಸಮಾರಂಭವನ್ನು ನೆರವೇರಿಸಿದರು ಈ ಸಂಬಂಧದಲ್ಲಿ ಪೌರ ಸಭೆಯವರು ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಹಾಸನವು ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ಸರ್ಕಾರದವರು ಮತ್ತು ಸಾರ್ವಜನಿಕರು ತೆಗೆದುಕೊಂಡಿರುವ ಆಸಕ್ತಿ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಅನಂತರ ಮಹಾಪ್ರಭುಗಳು ಇಂಟರ್ ಕಾಲೇಜಿನ ಶಂಕು ಸ್ಥಾಪನೆಯನ್ನು ನೆರವೇರಿಸಿ, ಅದು ಬೇಗನೆ ಫಸ್ಟ್‌ಗ್ರೇಡ್ ಕಾಲೇಜಾಗಲೆಂದು ಹಾರೈಸಿದರು ಸಂಸ್ಥಾನದಲ್ಲಿ ದಾನಿಗಳು ಹೆಚ್ಚುತ್ತಿರುವುದು ಶುಭಸೂಚಕವೆಂದು ತಿಳಿಸಿ ಕಾಲೇಜು ಕಟ್ಟಡಕ್ಕೆ ಸಹಾಯ ಮಾಡಿರುವ ದಾನಿಗಳನ್ನು ಪ್ರಶಂಸಿಸಿದರು

ಹಾಸನದಲ್ಲಿ ಔದ್ಯೋಗಿಕ ಶಾಲೆಯನ್ನು ಸ್ಥಾಪಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಅವರು ಅಪ್ಪಣೆ ಕೊಡಿಸಿದರು.

ನೈಜಾಮರಿಗೆ ೧ ಕೋಟಿ ರೂ. ರಾಜ ಧನ

ನೈಜಾಮರಿಗೆ ಈಗ ವರ್ಷಕ್ಕೆ ೫೦ ಲಕ್ಷ ರೂ. ರಾಜಧನವನ್ನು ಕೊಡಲಾಗುತ್ತಿದೆ. ಇದರ ಜೊತೆಗೆ ಅವರ ಸ್ವಂತ ಸ್ವತ್ತುಗಳಿಂದ ವರ್ಷಕ್ಕೆ ೩ ಕೋಟಿ ರೂ ಬರುತ್ತಿದೆ ಸಂಸ್ಥಾನದ ಹಣ ಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಲು, ಅವರಿಗೆ ಬರುತ್ತಿರುವ ವರಮಾನಗಳನ್ನು ಒಂದಾಗಿ ಸೇರಿಸಿ, ವರ್ಷಕ್ಕೆ ೧ ಕೋಟಿ ರೂ ರಾಜಧನವನ್ನು ನಿಗದಿ ಮಾಡಲು ಭಾರತ ಮತ್ತು ಹೈದರಾಬಾದ್ ಸರ್ಕಾರಗಳು ಯೋಚಿಸುತ್ತಿವೆಯೆಂದು ತಿಳಿದುಬಂದಿದೆ ಈ ವಿಚಾರವಾಗಿ ನಂದಿನ ಸೇನೆನಾಯಕರು ನೈಜಾಮರನ್ನು ಭೇಟಿ ಮಾಡಿದ್ದಾಗ ನೈಜಾಮರು ಸಲಹೆ ಮಾಡಿದ್ದಕ್ಕೆ ಸಮ್ಮತಿಸಿದರೆಂದೂ, ಅವರ ಕೈ ನಿಜಾಮರು ಒಪ್ಪಿದ್ದಾರೆಂದೂ ಹೇಳಲಾಗಿದೆ

ಗೋಮಟೇಶ್ವರ ದರ್ಶನಕ್ಕೆ ಸ್ಥಳೀಯ ಸಚಿವರಿಗೆ ಅವಕಾಶವಿಲ್ಲ

ಶ್ರವಣಬೆಳಗೊಳದ ಗೋಮಟೇಶ್ವರನ ದರ್ಶನ ಪಡೆಯಲು ಅಲ್ಲಿಗೆ ಭೇಟಿ ಕೊಡಬೇಕೆಂದಿದ್ದ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್ ಚನ್ನಿಗರಾಮಯ್ಯನವರ ತಮ್ಮ ಪ್ರವಾಸವನ್ನು ಮುಂದೆ ಹಾಕಬೇಕಾ[illegible] ತಮಗೆ [illegible] ಸಚಿವರು [illegible] ಮೊನ್ನೆ ದಿನ ದಸಗಳ ಪ್ರದರ್ಶನದ ಪ್ರಾರಂ[illegible] ಸ್ಥಾನದಲ್ಲಿ ದೇವಾಲಯ ಪ್ರವೇಶದ [illegible] ಈ ರೀತಿ ಸಂಕುಚಿತ ಮನೋಭಾವವನ್ನು ಸಚಿವರು [illegible] ಒಟ್ಟಾಗಿ [illegible] ಭಗವಂತನ [illegible] ದನ್ನು ಎಲ್ಲರೂ ಅರಿಯಬೇಕೆಂದು ಹೇಳುತ್ತಾರೆ

ದಕ್ಷಿಣ ಆಫ್ರಿಕದಲ್ಲಿ ವಿಮಾನ ಸಂಚಾರ ನಿರ್ಬಂಧ

ಭಾರತಕ್ಕೂ ದಕ್ಷಿಣ ಆಫ್ರಿಕಕ್ಕೂ ಇರುವ [illegible] ಒಪ್ಪಂದದ ಪ್ರಕಾರ [illegible] ದಕ್ಷಿಣ ಆಫ್ರಿಕವು ವಿಮಾನದ ಮೂಲಕ [illegible] ಹೋಗಲು ಅವಕಾಶ ಕೊಡಲಾಗುವದಿಲ್ಲವೆಂದು [illegible] ಸರ್ಕಾರದವರು [illegible]

[illegible]

[illegible] ಸಚಿವ ಮಂಡಲಿಯ [illegible] ರಂಗ ಮಂದಿರದಲ್ಲಿ [illegible] ಕೆಲಸಗಳ [illegible] ಶ್ರೀ [illegible] ಕೃಷ್ಣರಾಯರನ್ನೂ [illegible] ಶ್ರೀ ಆರ್ [illegible] ಈ ವರ್ಷವೂ [illegible] ಪದ್ಧತಿಯಂತೆ [illegible] ನವರ [illegible] ಶ್ರೀ [illegible] ಅಧ್ಯಕ್ಷತೆ [illegible] ಕೊಡುಗೊರೆಗಳನ್ನು ಕೊಟ್ಟ ನಂತರ [illegible] ಮುಕ್ತಾಯವಾಯಿತು.

[illegible]

ರಾಜಧಾನಿಯ [illegible] ಶ್ರೀ ಕೆಂಚಪ್ಪನವರ [illegible] ಶ್ರೀ [illegible]

[illegible]

ಪ್ರತಿ ದಿವಸ ಆಟಗಳು

5—1—19[illegible]

[illegible]

ಮಲ್ಲಿಕಾ

[illegible]

[illegible] ಮಿತ್ರರ

ಒಲಂಪಿಯಾ ಟಾಕೀಸ್

[illegible]

ವಿಶ್ವವು ತಪ್ಪು ದಾರಿಯಲ್ಲಿ ಹೋಗುತ್ತಿರುವುದನ್ನು ನಿಲ್ಲಿಸಬೇಕು

ವಿಜ್ಞಾನಿಗಳಿಗೆ ಪಂಡಿತ ನೆಹರೂರವರ ಮನವಿ

ಇಂದಿನ ಪರಿಸ್ಥಿತಿಯು ಈಗ ಕೆಟ್ಟಿದ. ವಿಜ್ಞಾನದ ಪ್ರಗತಿಯಾಗಿದ್ದರೂ, ವಿಶ್ವದಲ್ಲಿ ಅನೇಕ ಪ್ರತಿಭಾಶಾಲಿಗಳಿದ್ದರೂ, ಜಗತ್ತು ತಪ್ಪು ದಾರಿಯಲ್ಲಿಯೇ ಹೋಗುತ್ತಿದೆ. ಇದನ್ನು ತಪ್ಪಿಸಲು ವಿಜ್ಞಾನಿಗಳೆಲ್ಲರೂ ಗಮನ ಕೊಡಬೇಕು. ಎಂದು ಮಹಾಪ್ರಧಾನಿ ಪಂಡಿತ ನೆಹರೂರವರು ಅಲಹಾಬಾದಿನಲ್ಲಿ ಮೊನ್ನೆ ನಡೆದ ಅಖಿಲ ಭಾರತ ವಿಜ್ಞಾನ ಸಮ್ಮೇಳನದಲ್ಲಿ ತಿಳಿಸುತ್ತಾರೆ

ಚೀಣದಲ್ಲಿ ಶಾಂತಿ ನೆಲಸದಿದ್ದರೆ ಆತ್ಮಹತ್ಯೆ

ಚೀಣದಲ್ಲಿರುವ ಮಾರ್ಚಿ ೩೦ ನೇ ತಾರೀಖಿನೊಳಗಾಗಿ ಯುದ್ಧ ನಿಲ್ಲದಿದ್ದರೆ ತಾವು ವಿಮಾನದಿಂದ ಕೆಳಕ್ಕೆ ಧುಮುಕಿ ಆತ್ಮಹತ್ಯ ಮಾಡಿಕೊಳ್ಳುವುದಾಗಿ ಪೀಕಿಂಗಿನ ಸ್ವಾಮಿ [illegible] ತಿಳಿಸಿರುತ್ತಾರೆ. ದೇಶದಲ್ಲಿ ಶಾಂತಿಯ ಅಗತ್ಯದ ಕಡೆಗೆ ಜನರ ಲಕ್ಷ್ಯವನ್ನು ಸೆಳೆಯುವುದೇ ಆತನ ಉದ್ದೇಶವೆಂದು ಹೇಳಲಾಗಿದ

ವಸ್ತು ಪ್ರದರ್ಶನಾಲಯದಲ್ಲಿ ಜಗದಂಬಾ ಶಿಶು ವಿಹಾರದ ಕಾರ್ಯಕ್ರಮ

ರಾಜಧಾನಿಯಲ್ಲಿ ಕಳೆದ ವಾರ ನಡೆದ ಅಖಿಲ ಭಾರತ ವಿದ್ಯಾ ವಸ್ತು ಪ್ರದರ್ಶನದಲ್ಲಿ ಶ್ರೀ ಜಗದಂಬಾ ಶಿಶು ವಿಹಾರವು ಭಾಗ ವಹಿಸಿ ಶಿಶು ವಿಹಾರದ ವಿದ್ಯಾಭ್ಯಾಸ ಕ್ರಮದ ಉಪಕರಣಗಳನ್ನೂ ಮತ್ತು ಮಾಡುವ ತರಗತಿ [illegible] ಕೆಲಸ ಕಾರ್ಯಗಳನ್ನೂ ಪ್ರದರ್ಶಿಸಿ ಮೆಚ್ಚುಗೆಯನ್ನು ಪಡೆದಿದೆ ಶಾಲೆಯ ಮಕ್ಕಳ ಆಟ ಪಾಠಗಳನ್ನು ಪ್ರೇಕ್ಷಕರು ನೋಡಿ ಆನಂದಪಟ್ಟರು ಶಾಲೆಗೆ ಚಿನ್ನದ ಪದಕದ ಪಾರಿತೋಷಕವನ್ನು ಕೊಡಲಾಗಿದ

ಸಮಾಜವಾದಿಗಳ ಸಮ್ಮೇಳನ

ನಾಸಿಕ್‌ನ ಸಮಾಜವಾದಿ ಪಕ್ಷದ ಸಮ್ಮೇಳನವು ಇದೇ ೧೯ ಮತ್ತು ೨೦ ನೇ ತಾರೀಖುಗಳಲ್ಲಿ ರಾಜಧಾನಿಯಲ್ಲಿ ನಡೆಯುವುದು. ಚೆನ್ನಪಟ್ಟಣದ ಕಾರ್ಮಿಕ ಮುಖಂಡರಾದ ಶ್ರೀ ಎಸ್ ಪಿ ಆರೆಕಲ್ ರವರು ಅಧ್ಯಕ್ಷತೆ ವಹಿಸುವರು

[illegible]

ಹರಾಜು ಇಶ್ತಿಹಾರ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ

ಮೈಸೂರಿನ [illegible] ಪಡುವಾರಹಳ್ಳಿ ವಠಾರದ [illegible] ರಸ್ತೆಯಲ್ಲಿ ಒಂದು ಮನೆ [illegible] ಸ್ಥಳಗಳನ್ನು [illegible] ಮತ್ತು ೭ ನೇ ತಾರೀಖು [illegible] ಘಂಟೆ [illegible] ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸು ನೋಟೀಸ್ ಬೋರ್ಡಿನಲ್ಲಿ ತಿಳಿದುಕೊಳ್ಳಬಹುದು

(ಸಹಿ) ವಿ.ಕೆ.ಮುಕುಂದನ್,

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ [illegible]

[illegible]

ಹೆಚ್ಚು ಮಕ್ಕಳಿದ್ದರೆ ಪ್ರಪಂಚ ಉತ್ತಮಗೊಳ್ಳುವುದು

ಉತ್ತಮವಾದ ಪ್ರಪಂಚಕ್ಕೆ ಹೆಚ್ಚು ಮಕ್ಕಳು ಅತ್ಯಗತ್ಯ ಮಕ್ಕಳಿಲ್ಲದೆ ಜನಾಂಗವು ಬೆಳೆಯಲು ಅಸಾಧ್ಯ ಮಕ್ಕಳು ಹೆಚ್ಚಿದಷ್ಟೂ ಪ್ರಪಂಚವನ್ನು ಉತ್ತಮಪಡಿಸಲು ಅನುಕೂಲವಾಗುವುದು. ದೇಶದಲ್ಲಿ ಮಕ್ಕಳಿಲ್ಲದಿದ್ದರೆ ಅದರ ಆವುಗಳ ಸಂಖ್ಯೆಯನ್ನು ಕಿಗದಿಮಾಡಿ ಅಥವ ಅವುಗಳನ್ನು ಉಪೇಕ್ಷಿಸಿದರೆ ಪ್ರೀತಿಯ ಬೆಳವಣಿಗೆಗೆ ಅಡಚಣೆ ಉಂಟುಮಾಡಿದಂತಾಗುವುದು ಇದರಿಂದ ಪ್ರೇಮದ ಮರವೇ ಒಣಗಿ ಹೋಗುವುದು ಮಕ್ಕಳು ಚೆನ್ನಾಗಿ ಬೆಳೆಯಬೇಕಾದರೆ ಸಂತೋಷದ ಮೂಲಕ ಅವರಿಗೆ ವಿದ್ಯೆ ಕಲಿಸಬೇಕು- ಎಂದು ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ದೆಹಲಿಯಲ್ಲಿ ಅಖಿಲ ಭಾರತ ಮಕ್ಕಳ ಸಂಘದ ಆರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿರುತ್ತಾರೆ

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ ಹೊಸ ಹೆಸರು

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೆ 'ಸ್ವರಾಜ್' ಮತ್ತು ಷಹೀದ್ ಎಂಬ ಹೆಸರುಗಳನ್ನಿಡಬೇಕೆಂದು ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಕಾರ್ಯದರ್ಶಿಗಳು ತಿಳಿಸಿರುತ್ತಾರೆ ಮೇಲ್ಕಂಡ ಹೆಸರುಗಳನ್ನು ಕೊಡಬೇಕೆಂದು ಸುಭಾಷ್ ಬೋಸರು ಬಯಸಿದ್ದರೆಂದು ಅವರು ಹೇಳಿರುತ್ತಾರೆ

ಭಾರತದ ಪಾರ್ಲಿಮೆಂಟಿನಲ್ಲಿ ಎರಡು ಸಭೆಗಳು

ಭಾರತದ ಪಾರ್ಲಿಮೆಂಟಿನಲ್ಲಿ ಎರಡು ಶಾಸನ ಸಭೆಗಳಿರಬೇಕೆಂಬ ನಿರ್ಣಯವನ್ನು ರಾಜ್ಯಾಂಗ ಸಭೆಯು ಅಂಗೀಕರಿಸಿದೆ

೫ ವರ್ಷದಲ್ಲಿ ಮಹಾಯುದ್ಧ

ಇನ್ನು ೫ ವರ್ಷದೊಳಗಾಗಿ ಮೂರನೇ ಮಹಾಯುದ್ಧವು ಸಂಭವಿಸುವುದೆಂದೂ, ಅದರಲ್ಲಿ ಭಾರತವು ಸಂಪೂರ್ಣವಾಗಿ ತಟಸ್ಥವಾಗಿರಬೇಕೆಂದು ಶ್ರೀ ಶರತ್ ಚಂದ್ರ ಬೋಸರು ಲಂಡನ್ನಿನಲ್ಲಿ ತಿಳಿಸಿರುತ್ತಾರೆ

[illegible]

ಗಾಯತ್ರೀ ಟಾಕೀಸ್

ಕಾಪ್ಟನ್ ಫ್ಯೂರ್

ಕ್ಯಾಪ್ಟನ್ [illegible]

ಇನ್ನೂ ಮೂರು ದಿನಗಳು

ಮುಂದಿನ ಬದಲಾವಣೆ

ಆರ್ ಕೆ ಒ ರವರ

ಟಾರ್‌ಜಾನ್ ಅಂಡ್ ದಿ ಹಂಟ್ರೆಸ್

[illegible]

Edited, printed and published by A R Nagarajan at the Sadhvi Press, D Subbiah Road, Mysore

ಹೈದರಾಬಾದ್ ಕಮ್ಯುನಿಸ್ಟರ ಮೇಲೆ ಕಾರ್ಯಕ್ರಮ

ಹೈದರಾಬಾದಿನ ವಾರಂಗಲ್ ಮತ್ತು ನಲಗುಂದ ಜಿಲ್ಲೆಗಳಲ್ಲಿ ೨೮೦ ಜನ ಕಮ್ಯುನಿಸ್ಟರನ್ನು ದಸ್ತಗಿರಿ ಮಾಡಲಾಗಿದೆ ಕಮ್ಯೂನಿಸ್ಟರ ಮೇಲಿನ ಮಿಲಿಟರಿ ಮತ್ತು ಪೋಲೀಸರ ಕಾರ್ಯಾಚರಣೆಯಲ್ಲಿ ಮೈಸೂರು ಪದಾತಿ ದಳದವರು ವಿಶೇಷ ಸಹಾಯ ಮಾಡಿದರೆಂದು ವರದಿಯಾಗಿದೆ

ನೌಕರಿಗಳಲ್ಲಿ ಕೋಮುವಾರು ನಿರ್ಮೂಲನದ ಸಮಿತಿ

ಸರ್ಕಾರಿ ನೌಕರಿಗಳಿಗೆ ಜನರನ್ನು ನೇಮಿಸುವಾಗ ಕೋಮುವಾರು ಭೇದವನ್ನು ನಿರ್ಮೂಲ ಮಾಡುವ ವಿಚಾರವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಭಾರತ ಸರ್ಕಾರವು ನೇಮಿಸಲಿದೆಯೆಂದೂ, ಇದಕ್ಕೆ ವಾರ್ತಾ ಸಚಿವರಾದ ಶ್ರೀ ಆರ್ ಆರ್. ದಿವಾಕರರು ಅಧ್ಯಕ್ಷರಾಗಿಯೂ, ಶ್ರೀಗಳಾದ ಸತ್ಯನಾರಾಯಣ ಸಿನ್ಹ, ಬಕ್ಷಿ ಟೇಕ್‌ಚಂದ್, ಶ್ರೀ ಹನುಮಂತಯ್ಯ, ಮತ್ತು ಭಾರತ ಸರ್ಕಾರದ ಗೃಹ ಶಾಖಾಯ ಕಾರ್ಯದರ್ಶಿ ಮತ್ತು ಬೊಂಬಾಯಿ ಮತ್ತು ಮದರಾಸ್ ಸರ್ಕಾರಗಳ ಶ್ರೇಷ್ಠ ಕಾರ್ಯದರ್ಶಿಗಳು ಸದಸ್ಯರಾಗಿರುವರೆಂದೂ ಹೇಳಲಾಗಿದೆ

ಕ್ರೀಡಾರಂಗದಲ್ಲಿ ಜನಸಂದಣಿಯ ನಿಗದಿ

ಸಾರ್ವಜನಿಕರ ರಕ್ಷಣೆಗಾಗಿ ಫುಟ್‌ಬಾಲ್ ಮತ್ತು ಇತರ ಆಟಗಳಲ್ಲಿ ಜನಸಂದಣಿಯು ಇಷ್ಟೇ ಇರಬೇಕೆಂದು ನಿಗದಿ ಮಾಡಲು ಕಾನೂನನ್ನು ಬ್ರಿಟನ್ನು ಜಾರಿಗೆ ತರುವುದೆಂದು ಹೇಳಲಾಗಿದೆ

[illegible]

ಬೆಂಗಾಲ್ ಸಿಲ್ಕ್ ಸೀರೆಗಳಿಗೆ

ಪ್ರಾಮುಖ್ಯವಾದ ಅಂಗಡಿ

ಮೈಸೂರು

ಬಿಜಯ್ ಕುಮಾರ್ ಕಂಸೆ[illegible]

[illegible]

ಎಸ್.ಎನ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೆಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ ೦-[illegible]

ಮಹಾ ಸುಗಂಧರಾಜ ತೈಲ -)

„ ಚಂದನಾದಿ ತೈಲ)

„ ಭೃಂಗಾಮಲಕ ತೈಲ, -)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು

ಮಹಾಕೇತಕೀ ತೈಲ— [illegible] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [illegible] ಯೋಗಿಸ ಬಹುದಾದ ಉತ್ತಮ [illegible] ಬ್ರೀಫ್ ಹೇರ್ [illegible] ಶೀಸೆ ೩-[illegible]

ಪಂಚಾಮೃತ- ಮಲೇರಿಯಾಗೆ [illegible] ಗೆ ಸಿದ್ಧ ಸಂಜೀವನ

ಮೈಸೂರು ಆಯುರ್ವೇದಿಕ್ ಫಾರ್ಮಸಿ

೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್

ಮೈಸೂರು

ಕೋ ನಂ. 792 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು.

ಸಾಧ್ವಿ

ಸಂಪುಟ ೭] ಗುರುವಾರ ೭-೧೦-೪೮ [ಸಂಚಿಕೆ ೧೬೦

– ಸರ್ ಆಕ್ರಾಟರಿಗೆ – ಅಸ್ಸಾಂ ಗೌರ್ನರ್ ಪದವಿ?

ಶಿವ್ವದ ಆನೆಗಳಿಗೆ ನೆಹರೂ ರವರಿಂದ ನಾಮಕರಣ

ಬೆಂಗಳೂರು ೬.

ಭಾರತದ ಮಹಾ ಪ್ರಧಾನಿ ಪಂಡಿತ ನೆಹರೂರವರು ಸಂಸ್ಥಾನಕ್ಕೆ ಭೇಟಿ ಇತ್ತ ಸಮಯದಲ್ಲಿ ಮಾಡಿದ್ದ ವ್ಯವಸ್ಥೆಗಳಿಗಾಗಿ ಕೃತಜ್ಞತೆಯನ್ನು ಸೂಚಿಸಿ ಪತ್ರವನ್ನು ನ್ಯಾಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವ ರಿಗೆ ಬರೆದಿರುತ್ತಾರೆ. ಕೆಡ್ಡಾದಲ್ಲಿ ಹಿಡಿದ ಎರಡು ಸಲಗಗಳಿಗೆ ನಾಗರಾಜ ಮತ್ತು ಜಯಮಂಗಲ ಎಂದು ಹೆಸರಿಡಬೇಕೆಂದು ಅವರು ಸೂಚಿಸಿದ್ದಾರೆ.

ಕಾರ್ಮಿಕರ ವಸತಿ ಗೃಹಕ್ಕೆ ಸರ್ಕಾರದ ಸಹಾಯ ಬೇಕು

ಬೆಂಗಳೂರಿನಲ್ಲಿ ಕಾರ್ಮಿಕರ ವಸತಿಗಾಗಿ ಸರ್ಕಾರದವರು ೧೦ ಲಕ್ಷ ರೂ. ಮಂಜೂರು ಮಾಡಿರುತ್ತಾರಷ್ಟೆ. ಮೈಸೂರಿನ ಲ್ಲಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಿ, ಕಾರ್ಮಿಕರಿಗೆ ಮನೆಗಳ ಅಭಾವವಿರುವುದ ರಿಂದ, ಇಲ್ಲೂ ಸಹ ಕಾರ್ಮಿಕರಿಗಾಗಿ ವಸತಿ ಗೃಹಗಳನ್ನು ಕಟ್ಟಲು ಸರ್ಕಾರದವರು ಧನ ಸಹಾಯ ಮಾಡಬೇಕೆಂದು ರಾಜ ಧಾನಿಯ ಸರ್ಕಾರಿ ರೇಷ್ಮೆ ನೂಲುವ ಕಾರ್ಖಾನೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಕೆ ಆರ್. ರಾಜಾರಾಂ ಪ್ರಸಾದ್‌ರವರು ಪ್ರಾರ್ಥಿಸಿರುತ್ತಾರೆ.

ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಬೇಡಿಕೆ

ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಕಳೆದ ೩ ನೇ ತಾ॥ ನಡೆದ, ಸರ್ಕಾರದವರು ಜಾರಿಗೆ ತರಲಿರುವ ಕಾರ್ಮಿಕ ಶಾಸನದ ೧೫ ನೇ ವಿಧಿಯನ್ನು ಅ ವರುಗಳಿಗೆ ತರಕೂಡದೆಂದು ಕೆಲವು ಮಾಲೀಕರು ಒತ್ತಾಯಪಡಿಸುತ್ತಿರುವುದನ್ನು ಖಂಡಿಸಿ, ಅವರ ಕೋರಿಕೆಯನ್ನು ನೆರವೇರಿಸ ಕೂಡದೆಂದು ಸರ್ಕಾರದವರನ್ನು ಪ್ರಾರ್ಥಿಸಲಾಯಿತು.

ಅಖಿಲ ಮೈಸೂರು ಸಂಗೀತ ಪರಿಷತ್

ಸಂಸ್ಥಾನದಲ್ಲಿ ಸಂಗೀತ ಕಲಾಭಿವೃದ್ಧಿಗೆ ಮತ್ತು ಸಂಗೀತ ಉಪಾಧ್ಯಾಯರ ಕುಂದು ಕೊರತೆಗಳನ್ನು ನಿವಾರಿಸುವುದಕ್ಕೆ ಬೆಂಗಳೂರು ಬಸವನಗುಡಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಮೈಸೂರು ಸಂಸ್ಥಾನದ ಸಂಗೀತ ಪರಿಷತ್ತಿಗೆ ಸದಸ್ಯರನ್ನು ಸೇರಿಸಲು ಶ್ರೀ ಕೆ ಎಸ್. ಚಂದ್ರಶೇಖರಯ್ಯ ನವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಅವರು ಸಂಸ್ಥಾನದಲ್ಲಿ ಸಂಚರಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಅಧಿಕಾರ ಕೊಡಲಾಗಿದೆ. ಮಹಾಜನರೂ, ಸಂಗೀತ ಕಲಾ ಪ್ರೇಮಿಗಳೂ ಮತ್ತು ವಿದ್ವಾಂಸರೂ ಅವರಿಗೆ ಸಹಾಯವನ್ನು ನೀಡಬೇಕೆಂದು ಅವರ ಅಧ್ಯಕ್ಷರು ಮನವಿ ಮಾಡಿರುತ್ತಾರೆ.

ಅಮೆರಿಕಾದಲ್ಲಿ ೫ ವರ್ಷದ ಪಾದ್ರಿ

ಕ್ಯಾಲಿಫೋರ್ನಿಯಾದಲ್ಲಿ ಮೋಜಿ ಗಾರ್ಟರ್ ಎಂಬ ೫ ವರ್ಷದ ಪಾದ್ರಿಯಿದ್ದಾನೆ. ಈ ಕೆಲಸದಲ್ಲಿ ೨ ವರ್ಷದ ಅವನ ತಂದೆಯ ಸಹಾಯಕನಾಗಿದ್ದಾನೆ. ಇತ್ತೀಚೆಗೆ ಇವನು ಒಂದು ಮದುವೆಯಲ್ಲಿ ಪಾದ್ರಿತನವನ್ನು ವಹಿಸಿದ್ದನು. ಆತನಿಗೆ ೧೨ ವರುಷವಾಗುವುದರೊಳಗಾಗಲೇ ಆತ ನಿಗೆ ಪಾದ್ರಿಯ ಕೆಲಸ ಕೊಟ್ಟಿದ್ದನು.

ಕಾಳಾ ವೆಂಕಟರಾಯರ ರಾಜೀನಾಮೆ

ಮದರಾಸಿನ ರೆವಿನ್ಯೂ ಸಚಿವರಾದ ಶ್ರೀ ಕಾಳಾ ವೆಂಕಟರಾಯರು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿ ನೇಮಿತರಾಗಿರುವುದರಿಂದ, ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟಿರುತ್ತಾರೆ.

೭ ವರ್ಷದ ಹಿಂದೆ ಕಳುಹಿಸಿದ ಮನಿಯಾರ್ಡರು ಈಗ ಸೇರಿದೆ

ಕಲ್ಲಿಕೋಟೆಯ ಫೆನ್ನಾಕ್ಕಿ ಎಂಬ ಊರಿನ ಮಾನಕತಲ್ ಇಸ್ಲಾಂ ಸಂಸ್ಥೆಗಳಿಗೆ ಮಲಯದಿಂದ ೩೦೦ ರೂ. ಮನಿ ಆರ್ಡರನ್ನು ೧೯೪೧ ರಲ್ಲಿ ಕಳುಹಿಸಿದ್ದು, ಈಗ ಕೈಸೇರಿದೆಯೆಂದು ಹೇಳಲಾಗಿದೆ.

ಯುದ್ಧ ನಿಲ್ಲಿಸಬೇಕೆಂದು ಚೀನಾ ಪ್ರೊಫೆಸರುಗಳ ಮನವಿ

ಚೀಣದಲ್ಲಿ ಯುದ್ಧವನ್ನು ನಿಲ್ಲಿಸಿ, ಅಲ್ಲಿ ಮಿಶ್ರ ಸರ್ಕಾರವನ್ನು ಸ್ಥಾಪಿಸಲು ಸಂಧಾನ ನಡೆಸಬೇಕೆಂದು ಕಮ್ಯೂನಿಸ್ಟರಿಗೆ ಪೀಕಿಂಗ್ ಕಾಲೇಜಿನ ಪ್ರೊಫೆಸರುಗಳು ಮನವಿ ಮಾಡಿದ್ದಾರೆ.

ಬಿರುಗಾಳಿಯಿಂದ ನೂರಾರು ಜನರ ಮರಣ

ಅಮೆರಿಕದ ತರ್ಕನಾಸಾ ಸಂಸ್ಥಾನಕ್ಕೆ ಸೇರಿದ ವಾರ್ನನಲ್ಲಿ ಪ್ರಚಂಡ ಬಿರುಗಾಳಿ ಎದ್ದು ೪೬ ಜನರು ಸತ್ತರೆಂದೂ, ೩ ನೂರಕ್ಕೂ ಮಿಗಿಲಾಗಿ ಗಾಯಗೊಂಡಿರುವರೆಂದೂ ವರದಿಯಾಗಿದೆ. ಉತ್ತರ ಲೂಸಿಯಾನಾದಲ್ಲೂ ಭಯಂಕರ ಬಿರುಗಾಳಿಯಿಂದ ೫೦ ಜನ ಸತ್ತರು ಮತ್ತು ೧೦ ಲಕ್ಷ ಡಾಲರುಗಳ ನಷ್ಟ ಸಂಭವಿಸಿದೆ.

ಹೋಟೆಲು ಕೆಲಸಗಾರರ ಬೇಡಿಕೆಗಳು

ಮೈಸೂರು ನಗರದ ಹೋಟೇಲು ಕೆಲಸಗಾರರ ಸಂಘದ ಸಭೆಯು ಸೇರಿ, ಕಾರ್ಮಿಕ ಶಾಸನದ ೧೫ ನೇ ವಿಧಿಯನ್ನು ಜಾರಿಗೆ ತರಬೇಕೆಂದೂ, ದಸರ ಕಾಲದಲ್ಲಿ ಕೆಲಸಗಾರರಿಗೆ ದೊರೆಯಬೇಕಾದ ಒಂದು ತಿಂಗಳ ಸಂಬಳವನ್ನು ಕೊಡಬೇಕೆಂದೂ ಮತ್ತು ಇದೇ ೧೫ ನೇ ತಾ॥ ವಾರ್ಷಿಕೋತ್ಸವ ವನ್ನು ನಡೆಸಬೇಕೆಂದೂ ತೀರ್ಮಾನಿಸಲಾಯಿತು.

ರಾಮಸ್ವಾಮಿ ಮೊದಲಿಯಾರರು ಅಸ್ಸಾಂ ಗೌರ್ನರ್ ಆಗುವರೇ?

ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರ್‌ರವರನ್ನು ಅಸ್ಸಾಂ ಪ್ರಾಂತ್ಯದ ಗೌರ್ನರನ್ನಾಗಿ ನೇಮಿಸಬಹುದೆಂದು ದಹಲಿಯ ಅಧಿಕಾರಿ ವಲಯದಲ್ಲಿ ಹೇಳಲಾಗುತ್ತಿದೆ.

ಶಾಸನ ಸಭಾಧಿವೇಶನ

ಜನ್ಮ ಮತ್ತು ಮರಣ ನೋಂದಣಿ ಬಿಲ್ಲು ಸಂಗತ ಸ್ವೀಕಾರ

ಈ ಮಧ್ಯಾಹ್ನ ಶಾಸನ ಸಭೆಯು ಶ್ರೀ ಹೆಚ್. ಬಿ ಗುಂಡಪ್ಪ ಗೌಡರ ಅಧ್ಯಕ್ಷತೆ ಯಲ್ಲಿ ಪ್ರಾರಂಭವಾಯಿತು. ಹೊಸ ಸದಸ್ಯರುಗಳಾದ ಶ್ರೀಗಳು ಎಂ ಕೆ ಅಪ್ಪಾಜಪ್ಪ, ದೀನದಯಾಳು ನಾಯ್ಡು, ಕೆ. ರಂಗಯ್ಯಂಗಾರ್ ಮತ್ತು ಎಂ. ಪಿ ಎಲ್ ಶಾಸ್ತ್ರಿಗಳು ಪ್ರಮಾಣ ವಚನವನ್ನು ಸ್ವೀಕರಿಸಿದರು. ಜನ್ಮ ಮತ್ತು ಮರಣಗಳ ನೋಂದಣಿ ಬಿಲ್ಲಿಗೆ ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಮಂಡಿಸಿದ ಸಂತಾಪ ನಿರ್ಣಯಗಳನ್ನು ಸದಸ್ಯರು ಮೌನದಿಂದ ಎದ್ದು ನಿಂತು ಅಂಗೀಕರಿಸಿದರು.

ಕಾರ್ಯದರ್ಶಿಗಳ ವರದಿಯನ್ನು ಅಂಗೀಕರಿಸಿದನಂತರ, ಪ್ರಶ್ನೋತ್ತರಗಳು ಜರುಗಿದವು.

ಅಸಿಸ್ಟೆಂಟ್ ಪ್ರೊಫೆಸರುಗಳು

ಮಹಾರಾಜಾ ಕಾಲೇಜಿನ ಸಂಸ್ಕೃತ ಅಸಿಸ್ಟೆಂಟ್ ಪ್ರೊಫೆಸರರಾದ ಶ್ರೀ ಎನ್ ಟಿ ತಿರುನಾರಾಯಣಯ್ಯಂಗಾರ್, ಇಂಗ್ಲೀಷ್ ಉಪಾಧ್ಯಾಯರಾದ ಶ್ರೀ ಓ. ಕೆ ನಂಬಿಯಾರ್, ಎಸ್ ಕೃಷ್ಣಮೂರ್ತಿ, ಟಿ ಎಲ್ ಹನುಮಯ್ಯ ರವರುಗಳನ್ನು ಅಸಿಸ್ಟೆಂಟ್ ಪ್ರೊಫೆಸರುಗಳನ್ನಾಗಿ ನೇಮಿಸಲಾಗಿದೆ.

ಟೀಸ್ಸಿನ್ ಮೇಲೆ ಕಮ್ಯೂನಿಸ್ಟರ ಧಾಳಿ

ಚೀಣದ ಟೀಸ್ಸಿನ್ ನಗರದ ಹೊರಭಾಗದಲ್ಲಿ ಕಮ್ಯೂನಿಸ್ಟರು ಆನಾಥ ಸೈನ್ಯವನ್ನು ಸೋಲಿಸಿದ್ದಾರೆಂದು ಹೇಳಲಾಗಿದೆ. ಹಿ ಯೋಪ್ರಾಂತದಲ್ಲಿ ತಾತ್ಕಾಲಿಕ ಸರ್ಕಾರವನ್ನು ಕಮ್ಯೂನಿಸ್ಟರು ೩೬೩ ದಾರಿ ಸಾರ್ಕಿಂಗಿಗೆ ೬೦ ಮೈಲಿ ಪೂರ್ವದಲ್ಲಿರುವ ಟಾಯಿಂಗ್ ಮತ್ತು ಹುಂಗಾಚ ಎಂಬ ಮುಖ್ಯ ನಗರ ಕೇಂದ್ರಗಳನ್ನು ಕಮ್ಯೂನಿಸ್ಟರು ಆಕ್ರಮಿಸಿ ಮುನ್ನುಗ್ಗುತ್ತಿರುವರೆಂದು ವರದಿಯಾಗಿದೆ.

ಇಸ್ರೇಲ್ ರಾಷ್ಟ್ರಕ್ಕೆ ಅಮೆರಿಕದ ಎಚ್ಚರಿಕೆ

ಈಜಿಪ್ಟಿನ ಪ್ರದೇಶಗಳ ಮೇಲೆ ಯಹೂದ್ಯರು ಧಾಳಿ ನಡೆಸುತ್ತಿರುವುದರ ಬಗೆ ಅಮೆರಿಕವು ಇಸ್ರೇಲ್ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದೆಯೆಂದೂ, ಇದರಿಂದ ಆ ಸರ್ಕಾರಕ್ಕೆ ಮನ್ನಣೆ ಕೊಡಲು ತೊಡಕುಂಟಾಗುವುದೆಂದು ತಿಳಿಸಲಾಗಿದೆಯೆಂದೂ ವರದಿಯಾಗಿದೆ. ಈಜಿಪ್ಟಿನ ಮೇಲೆ ಆಕ್ರಮಣ ನಡೆಸುವ ಉದ್ದೇಶವು ತಮಗಿಲ್ಲವೆಂದೂ, ಆ ಪ್ರದೇಶಕ್ಕೆ ನುಗ್ಗಿದ್ದ ಸೈನಿಕರನ್ನೆಲ್ಲಾ ವಾಪಸು ಕರೆಸಲಾಗಿದೆಯೆಂದೂ ಇಸ್ರೇಲ್ ಸರ್ಕಾರವು ತಿಳಿಸಿದೆ.

ಸುಭಾಷರು ಇನ್ನೂ ಬದುಕಿರಬಹುದು

ಸುಭಾಷ್ ಚಂದ್ರಬೋಸರು ಇನ್ನೂ ಬದುಕಿರಬಹುದೆಂದು ಲಂಡನ್ನಿನಲ್ಲಿ ಪ್ರವಾಸ ಮಾಡುತ್ತಿರುವ ಶ್ರೀ ಶರತ್ ಚಂದ್ರ ಬೋಸರು ತಿಳಿಸಿರುತ್ತಾರೆ.

ಸುಮಾತ್ರಾದಲ್ಲಿ ಕದನ ನಿಂತಿತು

ಸುಮಾತ್ರಾದಲ್ಲಿ ಇಂಡೋನೇಷ್ಯದ ಮೇಲೆ ಡಚ್ಚರು ಕೈಗೊಂಡಿದ್ದ ಮಿಲಿಟರಿ ಕಾರ್ಯಾಚರಣೆಯು ನಿನ್ನೆ ಮಧ್ಯಾಹ್ನಕ್ಕೆ ಮುಕ್ತಾಯವಾಯಿತೆಂದು ಡಚ್ ಮುಖ್ಯ ಸೇನಾನಿಯವರು ತಿಳಿಸಿರುತ್ತಾರೆ.

ಇಸ್ರೇಲಿನ ಮೇಲೆ ಬ್ರಿಟನ್ನಿನ ದಂಡಯಾತ್ರೆಯೆ?

ಬ್ರಿಟನ್ನು ಇಸ್ರೇಲ್ ರಾಷ್ಟ್ರದ ಮೇಲೆ ದಂಡಯಾತ್ರೆ ನಡೆಸಲು ಸಿದ್ಧತೆ ನಡೆಸುತ್ತಿದೆಂದೂ ಬ್ರಿಟಿಷ್ ಸೇನೆಗಳನ್ನು ಟ್ರಾನ್ಸ್ ಜೋರ್ಡಾನಿನ ಹತ್ತಿರ ಕೇಂದ್ರೀಕರಿಸಲಾಗಿದೆಯೆಂದೂ ಯಹೂದ್ಯರು ವಿಶ್ವಸಂಸ್ಥೆಗೆ ದೂರು ಕೊಟ್ಟಿದ್ದಾರೆ.

ಜಪಾನಿನಲ್ಲಿ ೩೦ ಲಕ್ಷ ನಿರುದ್ಯೋಗಿಗಳು

ಜಪಾನಿನಲ್ಲಿ ಮುಂದಿನ ವರ್ಷ ಜಾರಿಗೆ ತರುವ ನೂತನ ಆರ್ಥಿಕ ವ್ಯವಸ್ಥೆಯಿಂದ ಅಲ್ಲಿನ ೩೦ ಲಕ್ಷ ಜನ ಕೆಲಸಗಾರರು ನಿರುದ್ಯೋಗಿಗಳಾಗುವರೆಂದು ಹೇಳಲಾಗಿದೆ.

ಏಷ್ಯಾ ರಾಷ್ಟ್ರಗಳ ಸಮ್ಮೇಳನ

ಇಂಡೋನೇಷ್ಯದ ಸಮಸ್ಯೆಯನ್ನು ಬಗೆಹರಿಸಲು ಪಂಡಿತ ನೆಹರೂರವರು ಕರೆದಿರುವ ಏಷ್ಯಾ ರಾಷ್ಟ್ರಗಳ ಸಮ್ಮೇಳನವು ದೆಹಲಿಯಲ್ಲಿ ಇದೇ ೧೫ ನೇ ತಾ॥ ಪ್ರಾರಂಭವಾಗಬಹುದೆಂದು ತಿಳಿದಿದೆ. ಈ ಸಮ್ಮೇಳನದಲ್ಲಿ ಭಾಗವಹಿಸಲು ಆಸ್ಟ್ರೇಲಿಯಾ ಸರ್ಕಾರವು ಒಪ್ಪಿದೆ.

ಶಾಂತಿ ಸಂಧಾನದ ಹಸ್ತ ಪತ್ರಿಕೆಗಳು

ಉತ್ತರ ಚೀಣದ ಕಮ್ಯೂನಿಸ್ಟರ ರಣಕ್ಷೇತ್ರದ ಮೇಲೆ ಸರ್ಕಾರಿ ವಿಮಾನಗಳು ಶಾಂತಿ ಸಂಧಾನದ ಹಸ್ತ ಪತ್ರಿಕೆಗಳನ್ನು ಸುರಿಸಿದುವೆಂದು ವರದಿಯಾಗಿದೆ. ಯುದ್ಧವನ್ನು ಮುಂದುವರಿಸಲು ಶಕ್ತಿಯಿದ್ದರೂ, ರಾಷ್ಟ್ರದ ಹಿತ ದೃಷ್ಟಿಯಿಂದ ಶಾಂತಿ ಸಂಧಾನಕ್ಕೆ ತಾನು ಒಪ್ಪುವುದೆಂದು ಚೀಣಾ ಸರ್ಕಾರವು ಆ ಹಸ್ತಪತ್ರಿಕೆಯಲ್ಲಿ ತಿಳಿಸಿತ್ತು.

ಲಂಡನ್ನಿನ ವೆಸ್ಟ್ ಮಿನಿಸ್ಟರ್ ಬ್ಯಾಂಕಿನಲ್ಲಿರುವ ಹೈದರಾಬಾದಿನ ಹಣಕಾಸಿನ ಲೆಕ್ಕಾಚಾರಗಳನ್ನು ಪರಿಶೀಲಿಸಲು ಮಹತ್ತರ ಕೆಲಸ ಮೊಕದ್ದಮೆಯ ಪ್ರಾಸಿಕ್ಯೂಟರ್ ಶ್ರೀ ವೆಂಕಟರೆಡ್ಡಿಯವರು ಅಲ್ಲಿಗೆ ತೆರಳಿದರು.

ಸಂಸ್ಥಾನಗಳಿಗೆ ಭಾರತ ಸರ್ಕಾರದ ಎಚ್ಚರಿಕೆ

ಸಂಸ್ಥಾನಗಳಲ್ಲಿ ಕೋಮುವಾರು ಗಲಭೆಗಳು ನಡೆದರೆ ಭಾರತ ಸರ್ಕಾರದವರು ... ಎಚ್ಚರಿಕೆ ಕೊಟ್ಟಿರುವುದಾಗಿ ... ಅನೇಕ ಸಂಸ್ಥಾನ ... ಕೇಂದ್ರ ಸರ್ಕಾರ ... ಈ ರೀತಿ ಎಚ್ಚರಿಕೆ ಕೊಟ್ಟಿದೆಯೆಂದು ಹೇಳಲಾಗಿದೆ.

ಚೀಣದಲ್ಲಿ ಮಿಶ್ರ ಸರ್ಕಾರ ಸ್ಥಾಪಿಸಲು ಯತ್ನ

ಚೀಣದಲ್ಲಿ ... ಮಿಶ್ರ ಸರ್ಕಾರವನ್ನು ... ವಿರೋಧ ... ಮಾರ್ಷಲ್ ... ಉತ್ತರ ಚೀಣಕ್ಕೆ ... ವರದಿಯಾಗಿದೆ.

ಪಶ್ಚಿಮ ಜರ್ಮನಿಯಲ್ಲಿ ಪ್ರಜಾಪ್ರಭುತ್ವ

... ಪ್ರಜಾಪ್ರಭುತ್ವ ... ಕೊಡಲಾಗುವುದೆಂದು ... ನೀಡಿರುತ್ತಾರೆ.

... ಮೈಸೂರಿನ ತಾಲ್ಲೂಕು ... ರಹದಾರಿ ಇಲ್ಲದೆ ಕೊಳಿಯ ಭತ್ತವನ್ನು ಒಯ್ಯುತ್ತಿದ್ದವರನ್ನು ಈ ದಿನ ಪೋಲೀಸರು ಪತ್ತೆಮಾಡಿ ಅವರುಗಳ ಮೇಲೆ ಮೊಕದ್ದಮೆ ಹೂಡಿರುತ್ತಾರೆ.

ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸದಸ್ಯರು

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಕೆಳಗೆ ಕಂಡವರನ್ನು ಸದಸ್ಯರನ್ನಾಗಿ ಅಧ್ಯಕ್ಷರು ನೇಮಿಸಿದ್ದಾರೆ.

ಪಂಡಿತ ನೆಹರೂ, ಸರ್ದಾರ್ ಪಟೇಲ್, ಮೌಲಾನ ಅಜಾದ್, ... ಡಾ. ಸಿತಾರಾಮಯ್ಯ, ಶ್ರೀ ಜಗಜೀವನ ರಾಂ, ಪಂಡಿತ ಗೋವಿಂದ ವಲ್ಲಭ ಪಂತ, ಸರ್ದಾರ್ ಪ್ರತಾಪ್ ಸಿಂಗ್, ... ಶ್ರೀಮತಿ ಸುಚೇತಾ ಕೃಪಲಾನಿ, ... ಪಾಟೀಲ್, ... ಸರ್ದಾರ್ ... ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಅಮೆರಿಕಾದಲ್ಲಿ ಹೊಸ ವರ್ಷದ ಅನಾಹುತ

ನೂತನ ವರ್ಷದ ಸಮಾರಂಭದಲ್ಲಿ ಹಿಂದೆ ಎಂದಿಗೂ ಸಂಭವಿಸದಷ್ಟು ಅನಾಹುತಗಳು ಅಮೆರಿಕದಲ್ಲಿ ನಡೆದು ... ಜನರು ಸತ್ತರೆಂದು ವರದಿಯಾಗಿದೆ.

ರಹದಾರಿ ಇಲ್ಲದೆ ಅಕ್ಕಿಸಾಗಿಸಿದ್ದು ಪತ್ತೆ

(ಸ್ವಂ. ಸು.) ಶ್ರೀರಂಗಪಟ್ಟಣ ಜ.

ಇಲ್ಲಿನ ಪೌರ ಸಭೆಯ ಮಾಜಿ ಉಪಾಧ್ಯಕ್ಷರೂ ಮತ್ತು ಪ್ರಜಾಪ್ರತಿನಿಧಿ ಸಭಾ ಸದಸ್ಯರೂ ಆದ ಜನಾಬ್ ವಿ. ಅಬ್ದುಲ್ ರಹಿಮಾನ್‌ರವರು ರಹದಾರಿ ಇಲ್ಲದೆ ಭತ್ತವನ್ನು ಗಿರಣಿಯಲ್ಲಿ ಅಕ್ಕಿ ಮಾಡಿಸುತ್ತಿದ್ದುದನ್ನು ಪೋಲೀಸ್ ಇನ್ಸ್‌ಪೆಕ್ಟರು ಪತ್ತೆಮಾಡಿ ನಾಲ್ಕುನೂರು ಅಕ್ಕಿ ಮತ್ತು ನಾಲ್ಕು ನೂರು ಪಲ್ಲ ಭತ್ತವನ್ನು ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಹೊಸವರ್ಷದ ಪ್ರಶಸ್ತಿ ಪದಕ

ಪೋಲೀಸ್ ಡಿ. ಐ. ಜಿ. ... ಶ್ರೀ ಎಂ. ಕೆ. ಸೋಮಪ್ಪನವರಿಗೆ ಬ್ರಿಟನ್ನಿನ ದೊರೆಗಳು ಈ ನೂತನ ವರ್ಷದ ಪ್ರಶಸ್ತಿಗಳಲ್ಲಿ ಕಿಂಗ್ಸ್ ಪೋಲೀಸ್ ಪದಕವನ್ನು ದಯಪಾಲಿಸಿರುತ್ತಾರೆ.

ಶ್ರೀ ಗಣೇಶಾ ಟಾಕೀಸ್
ತಾ|| 7-1-49 ರಿಂದ
ಪ್ರತಿದಿನ ಮೂರು ಪ್ರದರ್ಶನಗಳು
ವಿಶ್ವಾಮಿತ್ರ (ತಮಿಳು)
ಪಾತ್ರ:- ... ರಾಮಸ್ವಾಮಿ, ಟಿ. ಆರ್. ರಾಜಕುಮಾರಿ, ಕೃಷ್ಣ, ಮಧುರಂ ಮತ್ತು ಕಾಳಿಎನ್ಎಟ್ಟಿ

ಶ್ರೀ ರಾಮಕೃಷ್ಣ ... ರಾಜಧಾನಿಯ ಮಂಡಿ ... ದಲ್ಲಿರುವ ಮೇಲ್ಕಂಡ ಸಂಸ್ಥೆಯವರು ಕಳುಹಿಸಿರುವ ಕ್ಯಾಲೆಂಡರ್ ... ಸುಗಂಧದ ಕಾಗೆಗೊಂಡು ... ಪೊಟ್ಟಣಗಳನ್ನು ಕೃತಜ್ಞತೆಯಿಂದ ... ರಿಸಿದ್ದೇವೆ.

ಬಸವನ ದಾಂಧಲೆ

ರಾಜಧಾನಿಯ ದಿವಾನರ ರಸ್ತೆಯಲ್ಲಿ ಬಸವನೊಂದು ಸೇರಿಕೊಂಡು ರಸ್ತೆಯಲ್ಲಿ ತಿರುಗಾಡುವ ಹೆಂಗಸರು ಮಕ್ಕಳನ್ನು ಅಟ್ಟಿಸಿಕೊಂಡು ಹೋಗುವುದು, ... ನ್ನು ಉರುಳಿಸಿ ಎತ್ತುಗಳನ್ನು ... ವುದು ಇವೇ ಮೊದಲಾಗಿ ದಾಂದಲೆ ನಡೆಸುತ್ತಿದೆ ಇದರಿಂದ ಜನರಿಗೆ ತೊಂದರೆಯವಾಗುತ್ತಿದೆ ಪೌರ ಸಭೆಯವರು ... ನ್ನು ಹಿಡಿದು ಬೇರೆ ಕಡೆಗೆ ರವಾನಿಸಬೇಕೆಂದು ಅಲ್ಲಿನ ನಿವಾಸಿಗಳೊಬ್ಬರು ... ರ್ಥಿಸಿರುತ್ತಾರೆ.

ಚಾಮುಂಡೇಶ್ವರಿ ಟಾಕೀಸ್
ತಾ|| 7-1-49 ರಿಂದ
ಪ್ರತಿದಿನ ಮೂರು ಆಟಗಳು
ಸರ್ದಾರ್ ಪ್ರೊಡಕ್ಷನ್‌ರವರ
ಷಹಜಹಾನ್
ಸೈಗಾಲ್, ಜಯರಾಜ್, ... ಸುಲ್ತಾನಾ, ಸುಲೋಚನಾ ಚಟರ್ಜಿ ... ಅಭಿನಯಿಸಿರುವ ಹಿಂದಿ ಚಿತ್ರ

ಬೆಳಗಿನ ಆಟಗಳು
7—1—49ನೇ ಶುಕ್ರವಾರದಿಂದ
4 ದಿನಗಳು ಮಾತ್ರ
ಸಾಗರ್ ಮೂವಿಟೋನ್‌ರವರ
ಗ್ರಾಮಾಫೋನ್ ಸಿಂಗರ್
ಪಾತ್ರ — ಬಿಬ್ಬೊ, ಸುರೇಂದ್ರ, ... ಮತ್ತಿತರರು
ಪ್ರಭಾ ಪಿಕ್ಚರ್ ಹೌಸ್

ಪ್ರತಿ ದಿನ ೩ ಆಟಗಳು
5—1—49ನೇ ಬುಧವಾರದಿಂದ
ಹಿಂದ್ ಪಿಕ್ಚರ್ಸ್‌ರವರ
ಮಲ್ಲಿಕಾ
ಪಾತ್ರ:- ● ಶೋಭನಾ ಸಮರ್ಥ್, ● ಕಾಶ್ಮೀರಿ ಮತ್ತಿತರರು.
ಒಲಂಪಿಯಾ ಟಾಕೀಸ್

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ ೩ ಪ್ರದರ್ಶನಗಳು
ಕ್ಯಾಪ್ಟನ್ ಫ್ರಂ ಕ್ಯಾಸ್ಟೀಲ್
ನಾಳೆ ಕಡೇ ದಿನ
ತಾ|| ೭-೧-೪೯ರಿಂದ
... ರವರ
ಟಾರ್ಜಾನ್ ಅಂಡ್ ದಿ ಹಂಟ್ರೆಸ್

ರಾಜಕಮಲ್ ಟಾಕೀಸ್
... ರಿಂದ
೭-೧-೪೯ರಿಂದ
ಅಮೋಘ ೬ನೇ ವಾರ
ಪ್ರತಿ ದಿನ ೩ ಆಟಗಳು
ಭಕ್ತ ಕುಂಬಾರ (ಕನ್ನಡ)
Morning-shows
From 7—1—49 for 4 days
COBRA-WOMAN
(In Technicolor)
With—Mysore Sabu
Maria Montez,
John Hall

ಪ್ರಭುದೇವಾ ಟಾಕೀಸಿನಲ್ಲಿ
ಚಕ್ರಧಾರಿ (ತಮಿಳು)
7-1-49 ರಿಂದ
ಅಮೋಘ 6ನೇ ವಾರ
ದಿನವಹಿ ೩ ಆಟಗಳು

ಪ್ರಭಾ
7-1-49 ರಿಂದ ಪ್ರತಿ ದಿನ 3 ಆಟ
ಗಾಂವ್ (ಹಿಂದಿ)
ಭೂಮಿಕೆ:- ಇಂದು, ಕರನ್ ದಿವಾನ್, ಮಿಸ್ರಾ ಮತ್ತು ತಿವಾರಿ.

ಸಿಮೆಂಟ್ ಬೇಕೋ?
ನಾಗಾಡದೆ ಈ ಕೆಳಗೆ ಕಂಡವರಲ್ಲಿ ಕೂಡಲೆ ತೆಗೆದುಕೊಳ್ಳಿರಿ ಸರ್ಕಾರದವರು ನಿಗದಿ ಮಾಡಿರುವ ಕಂಟ್ರೋಲ್ ದರದಂತೆ ದೊರೆಯುತ್ತದೆ.
ಯಳಂದೂರು, ಚಾಮರಾಜನಗರ, ಟಿ. ನರಸೀಪುರ ವ ಮತ್ತು ನಂಜನಗೂಡು ತಾಲ್ಲೂಕುಗಳಿಗೆ ಸೋಲ್ ಏಜೆಂಟರು
ಆರ್. ಮಹಂತದೇವರು ಮತ್ತು ಸಹೋದರರು
(ಕನಕಗಿರಿ)
ಚಾಮರಾಜನಗರ ನಂಜನಗೂಡು

Edited, printed and published by A.R Nagarajan at the Sadhvi Press, ... Road, Mysore.

ಕೋಗೆ ಸಂ. 792 ‖ವಂದೇಮಾತರಂ‖ ಇಂದಿನ ಪತ್ರಿಕೆ 3 ಕಾಸು.

ಸಂಪುಟ ೭] ಶುಕ್ರವಾರ ೭-೧-೫೧ [ಸಂಚಿಕೆ ೧೬೧

- ಪಾಕಿಸ್ತಾನ್ ಪ್ರಧಾನಿ - ಪದಚ್ಯುತರಾಗುವರೇ ?

ಪ್ರಧಾನಿ ಲಿಯಾಖತ್ ಆಲಿಗೆ ಪದಚ್ಯುತಿಯೇ ?

ಭಾರತದ ಬಗ್ಗೆ ಪಾಕಿಸ್ತಾನದ ಮನೋಭಾವದ ಬದಲಾವಣೆ

ಪಾಕಿಸ್ತಾನವು ಭಾರತದೊಡನೆ ಸ್ನೇಹ ಸೌಹಾರ್ದದಿಂದಿರಲು ಬಯಸಿ ಇದುವರೆಗೆ ಭಾರತದ ಬಗ್ಗೆ ಕಲಿಗಿದ್ದ ಸಂದೇಹ ಮನೋವೃತ್ತಿಯನ್ನು ತೊರೆದಿದೆಯೆಂದು ವರದಿಯಾಗಿದೆ ಇದಕ್ಕೆ ಅಲ್ಲಿನ ಸಚಿವರಾದ ಜನಾಬ್ ಗುಲಾಂ ಮಹಮದ್‌ರವರೇ ಕಾರಣರೆಂದು ಹೇಳಲಾಗಿದೆ ಭಾರತ ವಿರುದ್ಧ ವರ್ತನೆಯು ತನ್ನ ದೇಶಕ್ಕೆ ಹಾನಿಯುಂಟುಮಾಡುವುದೆಂದು ಅವರು ಅನೇಕ ಬಾರಿ ವಾದಿಸಿದರೆಂದೂ, ಅವರಿಗೆ ಅಲ್ಲಿನ ಗೌರ್ನರ್ ಜನರಲ್ಲರಾದ ಖ್ವಾಜಿ ನಜೀಮುದ್ದೀನರವರು ಬೆಂಬಲಕಾಗಿರುವುದೂ ವರದಿಯಾಗಿದೆ ಅದರೆ ಪ್ರಧಾನಿ ಲಿಯಾಖತ್ ಆಲಿಯವರು ಇದನ್ನು ವಿರೋಧಿಸಿ ತಮ್ಮ ಸ್ಥಾನಕ್ಕೇ ಧಕ್ಕೆ ತಂದುಕೊಂಡಿರುವರೆಂದೂ, ಸಧ್ಯದಲ್ಲಿಯೇ ಗುಲಾಂ ಮಹಮದ್ ಅವರು ಪಾಕಿಸ್ತಾನದ ಪ್ರಧಾನಿಗಳಾಗಬಹುದೆಂದೂ ಹೇಳಲಾಗಿದೆ

ಅಸಿಸ್ಟೆಂಟ್ ಕಮೀಷನರುಗಳ ವರ್ಗಾವರ್ಗಿ

ಸ್ವಂ ವಾ ಫೋ] ಬೆಂಗಳೂರು, ೭

ಜನಾಬ್ ಡಿ ಎಂ ಅಬ್ದುಲ್ ಜಬ್ಬಾರ್ ರವರನ್ನು ಮೈಸೂರು ಸಬ್ ಡಿವಿಜನ್ ಅಧಿಕಾರಿಗಳಾಗಿಯೂ, ಶ್ರೀ ವಿ ವೀರಪ್ಪನವರನ್ನು ಮೈಸೂರು ಜಿಲ್ಲಾಧಿಕಾರಿಗಳ ಸ್ವಂತಾ ಅಸಿಸ್ಟೆಂಟರಾಗಿಯೂ, ಮೈಸೂರು ಸ್ವಂತಾ ಅಸಿಸ್ಟೆಂಟರಾದ ಶ್ರೀ ಪುಟ್ಟಣ್ಣನವರನ್ನು ಸಕಲೇಶಪುರದ ಎಸ್ ಡಿ ಓ ಆಗಿಯೂ, ಶ್ರೀ ಎಂ ಶೇಷ ಅಯ್ಯಂಗಾರರವರನ್ನು ಲೇಬರ್ ಕಮೀಷನರ ಅಸಿಸ್ಟೆಂಟರಾಗಿಯೂ, ಜನಾಬ್ ಓ ಎಚ್ ಅಮೀರ್‌ರವರನ್ನು ಬೆಂಗಳೂರು ಎಸ್ ಡಿ ಓ ಆಗಿಯೂ, ಶ್ರೀ ಬಿ ವೀರಪ್ಪನವರನ್ನು ರೆವಿನ್ಯೂ ಕಮೀಷನರ ಅಸಿಸ್ಟೆಂಟರಾಗಿಯೂ, ಶ್ರೀ ಎಂ ಬಸಪ್ಪನವರನ್ನು ಲಕ್ಕವಳ್ಳಿ ಯೋಜನೆ ಸಮಿತಿಯ ಅಧಿಕಾರಿಯಾಗಿಯೂ, ಶ್ರೀ ಬಿ ಎಸ್ ನಂಜುಂಡ ಗೌಡರನ್ನು ಪಟ್ಟಣದ ಎಸ್ ಡಿ ಓ ಆಗಿಯೂ, ಜನಾಬ್ ಅಬ್ದುಲ್ ಕರೀಂ ರವರನ್ನು ದೊಡ್ಡ ಬಳ್ಳಾಪುರದ ಎಸ್ ಡಿ ಓ ಆಗಿಯೂ ವರ್ಗಾಯಿಸಲಾಗಿದೆ.

ಬ್ರಹ್ಮಚಾರಿ ಕಾಮರಾಜ ನಾದರಿಗೆ ವಿವಾಹದ ಅಭಿನಂದನಾ ತಂತಿ !

ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ‖ ಕಾಮರಾಜ ನಾದರ್ ರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚುನಾಯಿತರಾಗಿರುವ ಬಗ್ಗೆ ಹಲವು ಮಿತ್ರರು ಅವರಿಗೆ ಅಭಿನಂದನಾ ತಂತಿ ಕಳುಹಿಸಿದ್ದರು ಅವರಿಗೆ ಬಂದ ಈ ತಂತಿಗಳ ಜೊತೆಯಲ್ಲಿ ವಿವಾಹದ ಅಭಿನಂದನಾ ತಂತಿಯೂ ಒಂದು ಇದ್ದು ... ರವರು ಇನ್ನೂ ಬ್ರಹ್ಮಚಾರಿಗಳಾಗಿದ್ದು ... ಅಭಿನಂದನಾ ತಂತಿ ಕಚೇರಿಯಲ್ಲಿ ಬೇರೆ ಯಾರಿಗೋ ... ವಿವಾಹದ ಅಭಿನಂದನಾ ತಂತಿಯನ್ನು ತಪ್ಪಾಗಿ ಇವರಿಗೆ ಕಳುಹಿಸಿದ ಸಂಗತಿ ... ವಿದೆಯೆಂದು ಹೇಳಲಾಗಿದೆ

ಸ್ಫಟಿಕದ ಬುದ್ಧನ ತಲೆಯ ಪತ್ತೆ

ಹೈದರಾಬಾದ್ ಸಂಸ್ಥಾನದ ರಾಯಚೂರಿನ ಬಳಿ ಮಾಸಿಕ್ ಎಂಬಲ್ಲಿ ಭೂಗರ್ಭ ಇಲಾಖೆಯವರು ನಡೆಸಿದ ಸಂಶೋಧನೆಯಿಂದ ಸ್ಫಟಿಕದಿಂದ ಮಾಡಿದ ಬುದ್ಧನ ತಲೆ ಒಂದು ದೊರೆಯಿತೆಂದು ಪತ್ತೆಯಾಗಿದೆ ಅದು ಒಂದು ಅಥವ ಎರಡನೇ ಶತಮಾನಕ್ಕೆ ಸೇರಿದುದೆಂದೂ, ೩೦೦ ವರ್ಷಗಳ ಹಿಂದೆ ಅಲ್ಲಿ ಬೌದ್ಧರ ವಸತಿಯೊಂದು ಇದ್ದಿರಬಹುದೆಂದು ಭೂಗರ್ಭ ಇಲಾಖಾಧಿಕಾರಿಗಳು ತಿಳಿಸಿರುತ್ತಾರೆ ಬೌದ್ಧ ವಿರೋಧ ಚಳುವಳಿ ... ಆ ಬುದ್ಧನ ಪ್ರತಿಮೆಯನ್ನು ನಾಶಪಡಿಸಿರಬಹುದೆಂದೂ ಹೇಳಲಾಗಿದೆ

ಕದನ ನಿಲ್ಲಿಸಲು ಇಸ್ರೇಲಿನ ಒಪ್ಪಿಗೆ

ದಕ್ಷಿಣ ಪ್ಯಾಲಸ್ಟೈನಿನ ನಿಗವ್ ಪ್ರದೇಶದಲ್ಲಿ ಯುದ್ಧ ನಿಲ್ಲಿಸಬೇಕೆಂಬ ಇಸ್ರೇಲ್ ಸಂಸ್ಥಾನದ ... ಹೇಳಲಾಗಿದೆ ... ದಿನ ಪತ್ರಿಕೆ ... ಕೇವಲ ...

ಕೊರಿಯಾ ರಣಕ್ಷೇತ್ರಗಳಲ್ಲಿ ಪುನಃ ಯುದ್ಧ

ಕೊರಿಯಾದ ಎಲ್ಲಾ ರಣಕ್ಷೇತ್ರಗಳಲ್ಲಿ ಕಳೆದ ಎರಡು ವಾರಗಳಿಂದ ಯುದ್ಧ ನಿಂತಿದ್ದು ಈಗ ಪುನಃ ಪ್ರಾರಂಭವಾಗಿದೆಯೆಂದು ವರದಿಯಾಗಿದೆ ಬೀಸ್ಸಿನ್ನಿನ ಉತ್ತರದ ನೂತನ ಹೂಟೆಯನ್ನು ಕಮ್ಯೂನಿಸ್ಟರು ಆಕ್ರಮಿಸಿದ್ದಾರೆ

ಭೂಕಂಪದಿಂದ ಮನೆಗಳ ನಾಶ

... ನಗರಕ್ಕೆ ಉತ್ತರದಲ್ಲಿರುವ ... ಭೂಕಂಪವಾಗಿ ಇಬ್ಬರು ಸತ್ತರೆಂದೂ ನೂರಾರು ಮನೆಗಳು ನಾಶವಾದುವೆಂದೂ ವರದಿಯಾಗಿದೆ

... ಹೆಚ್ಚಾದುದರಿಂದ ... ಯನ್ನು ಕೊಲ್ಲಲು ಆಜ್ಞೆ

... ಪ್ರಾಂತ್ಯದ ಸೂರತ್ ... ಸೇರಿದ ದೊಡ್ಡ ಆನೆಯೊಂದರಿಂದ ಸರ್ಕಾರಕ್ಕೆ ತಿಂಗಳಿಗೆ ೬೦೦ ರೂ ... ಆಗುತ್ತಿರುವುದರಿಂದ ಅದನ್ನು ಗುಂಡು ಹೊಡೆದು ಸಾಯಿಸಬೇಕೆಂದು ... ಕಾರಿಗಳು ಆಜ್ಞೆ ಮಾಡಿರುತ್ತಾರೆ

ಕಾಶ್ಮೀರದ ಬಗ್ಗೆ ಸೈನಿಕರು ತಟಸ್ಥರಾಗಿರಬೇಕು

ಕಾಶ್ಮೀರದ ಭವಿಷ್ಯದ ಬಗ್ಗೆ ಭಾರತ ಸೈನ್ಯವು ... ನಡೆಯುವ ಚರ್ಚೆಗಳಲ್ಲಿ ಭಾಗ ವಹಿಸದೆ ತಟಸ್ಥರಾಗಿರಬೇಕೆಂದು ಆಜ್ಞೆ ಮಾಡಲಾಗಿದೆ

ಧಾರವಾಡದಲ್ಲಿ ರೇಡಿಯೋ ಕೇಂದ್ರ

ಇನ್ನು ಮೂರು ತಿಂಗಳೊಳಗೆ ಅಹಮದಾಬಾದ್ ಮತ್ತು ಕಲ್ಲಿಕೋಟೆಗಳಲ್ಲಿ ರೇಡಿಯೋ ಕೇಂದ್ರಗಳನ್ನು ತೆರೆಯಲಾಗುವುದೆಂದೂ, ಧಾರವಾಡದಲ್ಲಿ ಒಂದು ರೇಡಿಯೋ ಸ್ಟೇಷನನ್ನು ಆರಂಭಿಸಲು ಭಾರತ ಸರ್ಕಾರ ಆಲೋಚಿಸುತ್ತಿದೆಯೆಂದೂ ಕೇಂದ್ರ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್ ಆರ್ ದಿವಾಕರರು ಬೊಂಬಾಯಿನಲ್ಲಿ ತಿಳಿಸಿರುತ್ತಾರೆ

ಜಿಲ್ಲಾಧಿಕಾರಿಗಳ ವರ್ಗ

... ಮಗಳೂರು ಜಿಲ್ಲಾಧಿಕಾರಿಗಳಾದ ... ರಾಮನಾಥಯ್ಯನವರನ್ನು ... ಅಲ್ಲಿನ ಜನಾಬ್ ಕೆ ... ಅಹಮದ್‌ರವರನ್ನು ಚಿಕ್ಕಮಗಳೂರಿಗೆ ವರ್ಗಾಯಿಸಲಾಗಿದೆ.

ಸಮತಾವಾದಿಗಳ ಸಮ್ಮೇಳನ

... ತಿಂಗಳು ೧೮ ಮತ್ತು ೧೯ ನೇ ... ಯಲ್ಲಿ ನಡೆಯಲಿರುವ ... ದ ಸಮತಾವಾದಿಗಳ ಸಮ್ಮೇಳನದ ಸಂಬಂಧವಾದ ಏರ್ಪಾಡುಗಳನ್ನು ... ಇಲ್ಲಿನ ಸಮತಾವಾದಿಗಳ ಸಭೆ ... ಸೇರಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಯಿತು ಶ್ರೀ ಬಿ ರಂಗಸ್ವಾಮಿರವರು ಅದರ ಅಧ್ಯಕ್ಷರು ... ಶ್ರೀನಿವಾಸ್ ಮತ್ತು ಕೆ ವಾಸು ... ಕಾರ್ಯದರ್ಶಿಗಳು.

ಹೌಸಿಂಗ್ ಸೊಸೈಟಿ

... ಸಂಘಕ್ಕೆ ಶ್ರೀ ಪಿ. ಲಿಂಗಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೃಷ್ಣಪ್ಪನವರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ ಎ ಕೃಷ್ಣಮೂರ್ತಿರಾವ್ ... ಕಾರ್ಯದರ್ಶಿಗಳನ್ನಾಗಿಯೂ ... ಆರಿಸಲಾಗಿದೆ

ನ್ಯಾಯ ವಿಧಾಯಕ ಸಭೆ

ಪ್ರಶ್ನೆಗಳು ಸೂಚನೆಗಳು ಮತ್ತು ಹಾಸ್ಟೆಲುಗಳ ...

ಸ್ವಂ ವಾ ಫೋ] ಬೆಂಗಳೂರು, ೭

ಈ ದಿನ ನ್ಯಾಯ ವಿಧಾಯಕ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಜನಾಬ್ ಸಯದ್ ರಹಿಮಾನ್‌ರವರ ಪ್ರಶ್ನೆಗೆ ಆಹಾರ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಉತ್ತರವಿತ್ತು, ಸಂಸ್ಥಾನದಲ್ಲಿ ನೆನ್ನೆಯವರೆಗೆ ಒಟ್ಟು ಆಹಾರದ ಶೇಖರಣೆಯು ಪಟ್ಟಿಯ ಕೆಳಗೆ ಕಂಡಂತೆ ಇದೆಯೆಂದು ತಿಳಿಸಿರುತ್ತಾರೆ -

ಭತ್ತ ೨,೧೯,೬೫೮ ಪಲ್ಲ, ಅಕ್ಕಿ ೨೬,೬೩೨ ಪಲ್ಲ, ನುಚ್ಚು ೨,೧೪೦ ಪಲ್ಲ, ರಾಗಿ ೮,೩೬೦ ಪಲ್ಲ, ಜೋಳ ೪೦,೦೦೦ ಪಲ್ಲ, ಗೋದಿ ೧೦,೩೬೦ ಪಲ್ಲ ಗೋದಿ ಪದಾರ್ಥಗಳು ೨,೬೦೦ ಪಲ್ಲ ಮತ್ತು ದ್ವಿದಳ ಧಾನ್ಯಗಳು ೧೮,೦೦೦ ಪಲ್ಲ ಹೆಚ್ಚು ಕಾಲಕ್ಕೆ ಮೇಲ್ಕಂಡ ಧಾನ್ಯಗಳು ಸಾಕಾಗುವುದಿಲ್ಲವೆಂದೂ, ಈ ಬಗ್ಗೆ ಭಾರತ ಸರ್ಕಾರದ ಸಹಾಯವನ್ನು ಪ್ರಾರ್ಥಿಸಲಾಗಿದೆಯೆಂದೂ, ಒಳ್ಳೆಯ ಅಕ್ಕಿಯನ್ನು ಸರಬರಾಜು ಮಾಡುವಂತೆ ಭಾರತ ಸರ್ಕಾರವನ್ನು ಕೋರಲಾಗಿದೆಯೆಂದೂ ಉಪ ಪ್ರಶ್ನೆಗೆ ಸಚಿವರು ಉತ್ತರ ಕೊಟ್ಟರು

ಗ್ರಾಮಾಂತರ ರಸ್ತೆಗಳ ಅಭಿವೃದ್ಧಿಗಾಗಿ ೭೫ ಲಕ್ಷ ರೂ ಕಾಲುವೆಗಳನ್ನು ಮಂಜೂರು ಮಾಡಲಾಗಿದೆಯೆಂದು ಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರು, ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

... ಮಹಾರಾಜಾ ಕಾಲೇಜಿನ ಉರ್ದು ಪ್ರೊಫೆಸರಾಗಿದ್ದು ರಾಜೀನಾಮೆ ಕೊಟ್ಟ ಜನಾಬ್ ಸರದಾರಿರವರ ಬಗ್ಗೆ ಜನಾಬ್ ಸಯದ್ ಅಬ್ದುಲ್ ರಹಿಮಾನ್‌ರವರು ಕೇಳಿದ ಪ್ರಶ್ನೆಗೆ, ವಿದ್ಯಾ ಸಚಿವ ಶ್ರೀ ಡಿ. ಹೆಚ್ ಚಂದ್ರಶೇಖರಯ್ಯನವರು ಉತ್ತರವಿತ್ತು, ರಾಜೀನಾಮೆ ಕೊಡುವುದಕ್ಕಿಂತ ಮುಂಚೆ ಅವರು ಹೈದರಾಬಾದಿನಲ್ಲಿ ಸಂಪರ್ಕವನ್ನು ಇಟ್ಟುಕೊಂಡಿದ್ದರೆಂದು ದೂರು ಬಂದಿತ್ತೆಂದೂ, ಆದರೆ ಅವರನ್ನು ವಿಚಾರಿಸಿದ ಮೇಲೆ ಅದಕ್ಕೆ ಆಧಾರವಿಲ್ಲವೆಂದು ಗೊತ್ತಾಯಿತೆಂದೂ ತಿಳಿಸಿದರು

ಸಭಾವಿಸರ್ಜನೆ

ಸಂಸ್ಥಾನದಲ್ಲಿ ನೂತನ ರಾಜ್ಯಾಂಗವನ್ನು ರಚಿಸುವ ಬಗ್ಗೆ ಒಂದು ಸಮಿತಿಯನ್ನು ಭಾರತ ಸರ್ಕಾರದವರು ನೇಮಿಸಿರುವುದರಿಂದ, ಮೈಸೂರು ರಾಜ್ಯಾಂಗ ಸಭೆಯ ಕಾರ್ಯ ಕಲಾಪಗಳನ್ನು ಸದ್ಯಕ್ಕೆ ನಿಲ್ಲಿಸಬೇಕಾಗುವುದೆಂದು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ... ವಿಷಯವನ್ನು ಪ್ರಸ್ತಾಪಿಸಲು ಜನಾಬ್ ಮಹಮದ ಇಮಾಂರವರು ... ನಿಲುವಳಿ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು ... ತಿಳಿಸಲ್ಲವೆಂದೂ, ... ಕೇಂದ್ರ ... ಒಂದು ಪತ್ರವನ್ನು ಮಾತ್ರ ... ರೆಡ್ಡಿಯವರು ...

ನೂತನ ... ಪಂಚಿಕೆಯಲ್ಲಿ ... ಇಮಾಂರವರು ...

ಹಣದುಬ್ಬರವನ್ನು ತಡೆಗಟ್ಟಲು ಕಾರ್ಯಕ್ರಮ

[illegible]

ಬೆಂಗಳೂರು, ೬

[illegible]

ಪ್ರಶ್ನೋತ್ತರಗಳು

[illegible]

ನೀರು ಸರಬರಾಜು ಪಕೋಟಿ

ಮೈಸೂರು, ೬

ರಾಜಧಾನಿಯಲ್ಲಿ ಕುಡಿಯುವ ನೀರ [illegible]

[illegible]

Edited, printed and published by [illegible] Nag[illegible]rajan at the Sadhvi Press, D. Subbiah Road, Mysore.

ಚಳಿಯಿಂದ ೪೪೬ ಜನರ ಮರಣ

ಚೀಣದ ಪಾಂಗ್ಸೈನಲ್ಲಿ ವಿಪರೀತ ಚಳಿಯುಂಟಾಗಿ ಮೊನ್ನೆ ರಾತ್ರಿ [illegible] ಜನರು ಸತ್ತರೆಂದೂ, ಆ ಪ್ರಕೃತಿ ಪರಿಸ್ಥಿತಿ ಹೆಚ್ಚಿಗೆ ದೂ ವರದಿಯಾಗಿದೆ. ಕಳೆದ ಎರಡು ದಿನಗಳಲ್ಲಿ ೬೦೦ ಮಂದಿ ನಿರಾಶ್ರಿತರೂ ಸತ್ತರೆಂದು ಹೇಳಲಾಗಿದೆ.

ಲಂಚದ ಆಪಾದನೆಗೆ ಅಧಿಕಾರಿಗೆ ಶಿಕ್ಷೆ

ಕಲ್ಕತ್ತಾದ ಮನೆ ಪಕೋಟಿ ಅಧಿಕಾರಿಗಳಾದ ಎಸ್. ಮಜುಂದಾರರು ಲಂಚ ಪಡೆದರೆಂಬ ಆಪಾದನೆಯ ಮೇಲೆ ಅವರಿಗೆ ೩ ವರ್ಷ ಕಠಿಣ ಶಿಕ್ಷೆ ಮತ್ತು ೫೦೦ ರೂ. ಜುಲ್ಮಾನೆ ತಪ್ಪಿದಲ್ಲಿ ಮತ್ತೆ ೩ ತಿಂಗಳು ಶಿಕ್ಷೆಯನ್ನು ವಿಧಿಸಲಾಗಿದೆ.

ಕಾಶ್ಮೀರದಲ್ಲಿ ಜನಾಭಿಪ್ರಾಯದ ಕ್ರಮ

ಕಾಶ್ಮೀರದಲ್ಲಿ ಜನಾಭಿಪ್ರಾಯವನ್ನು ತೆಗೆದುಕೊಳ್ಳುವ ಬಗ್ಗೆ ವಿಶ್ವಸಂಸ್ಥೆಯ ಕಾಶ್ಮೀರದ ಸಮಿತಿಯು ಪರಿಶೀಲನೆ ನಡೆಸಿ ಒಂದು ನಿರ್ಣಯವನ್ನು ಮಾಡಿದೆ. ಇದನ್ನು ಸಧ್ಯದಲ್ಲಿಯೇ ಭದ್ರತಾ ಸಮಿತಿಯು ಪರಿಶೀಲಿಸಲಿದೆ.

ಛಳಿಗಾಲಕ್ಕೆ ಅವಶ್ಯಕವಾದ

ಕಾಶ್ಮೀರ ಶಾಲುಗಳು, ರಗ್ಗುಗಳು ಮತ್ತು ಪುಲ್ಓವರ್ ಸ್ವೆಟರುಗಳು

ಈಗತಾನೆ ಬಂದಿವೆ

ವಿಜಯಲಕ್ಷ್ಮೀ ವಿಲಾಸ

[illegible] ಬಜಾರ್

[illegible], ಮೈಸೂರು.

ಮಹಾ ಪ್ರಭುಗಳಿಂದ ಆಸ್ಪತ್ರೆಯ ಆರಂಭ

ಹಾಸನ, ೬

ಇಲ್ಲಿನ ಮಲೆನಾಡಿನ ಮಧ್ಯ ಪ್ರದೇಶದಲ್ಲಿರುವ ಯಸಳೂರಿನಲ್ಲಿ ಶ್ರೀ ಮನ್ಮಹಾರಾಜರವರು ಈ ದಿನ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಮಲೆನಾಡನ್ನು ಅಭಿವೃದ್ಧಿ ಪಡಿಸುವ ವಿಚಾರದಲ್ಲಿ ಸರ್ಕಾರದವರಿಗೆ ಹೆಚ್ಚು ಆಸಕ್ತಿ ಇರುವುದೆಂದೂ, ಆ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದೂ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿರುವರು.

ತ್ಯಾಗರಾಜ ಗಾಯನ ಸಭಾ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ತ್ಯಾಗರಾಜ ಗಾಯನ ಸಭೆಯ ವಾರ್ಷಿಕ ಸಭೆಯು ಮೊನ್ನೆ ದಿನ ನಡೆದು, ಶ್ರೀ ಎಂ. ನಾರಾಯಣ ಸಿಂಗ್ ರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೆ. ಬಿ. ಲಕ್ಷ್ಮೀನಾರಾಯಣಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎಂ. ಆರ್. ರಾಮಕೃಷ್ಣ ಭಾಗವತರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಬಿ. ಆರ್. ಬಸಪ್ಪನವರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು.

WANT CEMENT?

Ask For

DALMIA

Superior Quality

Easy Availability

At Govt. Controlled price

-:Enquire at:-

C.B.S. Kumar

Asoka Road, Mysore

Agents for

DALMIA CEMENT

ಶ್ರೀ ಗಣೇಶಾ ಟಾಕೀಸ್

7-1-49 ರಿಂದ :: ಪ್ರತಿ ದಿನ 3 ಪ್ರದರ್ಶನಗಳು

ಒಂದು ವಾರ ಮಾತ್ರ

ವಿಶ್ವಾಮಿತ್ರ (ತಮಿಳು)

ಪಾತ್ರ - ಕೆ. ಆರ್. ರಾಮಸ್ವಾಮಿ, ಟಿ. ಆರ್. ರಾಜಕುಮಾರಿ, ಕೃಷ್ಣನ್, ಮಧುರಂ ಮತ್ತು ಪುಳಿಮೂಟೈ

ಮುಂದಿನ ಬದಲಾವಣೆ [illegible] ರಿಂದ

ಕೃಷ್ಣ ಭಕ್ತಿ

• ಪ್ರಭಾ •

[illegible] ರಿಂದ ಪ್ರತಿ ದಿನ [illegible] ಆಟಗಳು

ಗಾಂಧಿ ವ್

(ಹಿಂದಿ)

ಭೂಮಿಕೆ [illegible] ವಿರ್ಜಾ, ಮಿಸ್ರಾ ಮತ್ತು [illegible]

[illegible]

ಈ ಚಿತ್ರದ ಮುಂಭಾಗದಲ್ಲಿ ನಡೆದ ಹತ್ತಿರ ಮತ್ತು ದೂರ ಪ್ರಾಚ್ಯ ಆರ್ಥಿಕ [illegible]

ಎಸ್. ಎಸ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

[illegible]

ಮಹಾ ಸುಗಂಧರಾಜ ತೈಲ—)

„ ಚಂದನಾದಿ ತೈಲ)

„ ಭೃಂಗಾಮಲಕ ತೈಲ.)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು

ಮಹಾಕೇತಕೀ ತೈಲ— ತಲೆ [illegible] ಕೊಳ್ಳುವುದಕ್ಕೂ ಅಭ್ಯಂಗನಕ್ಕೂ ಉಪಯೋಗಿಸ ಬಹುದಾದ ಉತ್ತಮ [illegible]

ಪಂಚಾಮೃತ— ಮಲೇರಿಯಾಗೆ [illegible] ಗೆ ಸಿದ್ಧ ಸಂಜೀವನ

ಮೈಸೂರು ಆಯುರ್ವೇದಿಕ್ ಫಾರ್ಮಸಿ

[illegible] ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್

ಮೈ. ಸೂ. ರು.

ಫೋನ್ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೬-೧-೪೯ [ಸಂಚಿಕೆ ೧೬೩

ಗ್ರಾಮಗಳ ಅಭಿವೃದ್ಧಿಯೇ ನಿಜವಾದ ಸಮಾಜ ಸೇವೆ

ಕಸ್ತೂರಿಬಾಯಿ ಸ್ಮಾರಕ ಸಮಿತಿಯ ಸಭೆಗೆ ಸ॥ ಪಟೇಲರ ಸಂದೇಶ

ಗ್ರಾಮಾಂತರ ಜನರ ಸೇವೆಯೇ ನಿಜವಾದ ಸಮಾಜ ಸೇವೆ ಭಾರತದ ಸಂಸ್ಕೃತಿಯು ಗ್ರಾಮಾಂತರಗಳಲ್ಲಿ ಪ್ರಕಾಶಕ್ಕೆ ಬಂದಿದೆ ಅಲ್ಲಿರುವ ಕೋಟ್ಯಂತರ ಜನರ ಬಡತನವು ಹೋಗಿ ಅವರ ಜೀವನವು ಸುಖ ಶಾಂತಿಗಳಿಂದ ಕೂಡಿದ್ದವಾಗಬೇಕು ಅವರುಗಳ ಅಭಿವೃದ್ಧಿಗೆ ಮತ್ತು ಬಡ ಜನರ ಸೇವೆಗೆ ಸಿರಶ್ರಮಿಸುವವರು ಕೇವಲ ಸೇವಾ ... ದ ಮುಡಿಯಬೇಕು, ಮಾನವತೆಯ ನಿಜವಾದ ಸೇವೆಯೇ ಅವರ ಸಮ್ಮಾನ—ಎಂದು ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರು ಅರಸೀಕೆರೆಯಲ್ಲಿ ಈ ದಿನ ನಡೆಯುವ ಕಸ್ತೂರಿ ಬಾ ಸ್ಮಾರಕ ಸಮಿತಿಯ ಮತ್ತು ಏಜೆಂಟರು ... ಸಭೆಗೆ ಸಂದೇಶವನ್ನು ಕಳುಹಿಸಿರುತ್ತಾರೆ

ನ್ಯೂಯಾರ್ಕಿನಲ್ಲಿ ಭಾರತದ ೧೦ ಕೊಠಡಿಯ ಭವನ

... ಸಂಸ್ಥೆಯ ಭಾರತದ ಪ್ರತಿನಿಧಿಗಳು ನ್ಯೂಯಾರ್ಕಿನಲ್ಲಿರುವ ಭಾರತದ ಕಾನ್ಸಲ್ ಜನರಲ್ಲರೂ ಮತ್ತು ... ವರೂ ಇರಲು ನ್ಯೂಯಾರ್ಕಿನಲ್ಲಿ ... ಕೊಠಡಿಗಳಿರುವ ಒಂದು ಭವನವನ್ನು ಭಾರತ ಸರ್ಕಾರವು ಕೊಂಡಿದೆ ಅದರಲ್ಲಿ ಸಾರ್ವಜನಿಕರಿಗಾಗಿ ಒಂದು ಪುಸ್ತಕ ಭಂಡಾರವನ್ನು ತೆರೆಯಲಾಗುವುದು

ಸಂಧಾನ ನಡೆಸಲು ಇಂಡೋನೇಷ್ಯದ ಷರತ್ತುಗಳು

ಇಂಡೋನೇಷ್ಯವು ಕೆಳಗೆ ಕಂಡ ಷರತ್ತುಗಳೊಂದಿಗೆ ಡಚ್ಚರಲ್ಲಿ ಸಂಧಾನ ನಡೆಸಲು ಸಿದ್ಧವೆಂದು ಹೇಳಲಾಗಿದೆ

ಬಂಧನದಲ್ಲಿರುವ ಸರ್ಕಾರಿ ಅಧಿಕಾರಿಗಳನ್ನು ... ಕಳೆದ ಡಿಸೆಂಬರ್ ೧೮ ... ಇದ್ದ ಪ್ರದೇಶಗಳಿಗೆ ಡಚ್ಚರು ... ವಾಗಬೇಕು ... ಸುಮಾತ್ರಾ, ... ಪ್ರದೇಶಗಳ ಮೇಲೆ ಇಂಡೋನೇಷ್ಯದ ಪ್ರಭುತ್ವದ ಅಂಗೀಕಾರ, ಡಚ್ಚರ ... ಇಲ್ಲದ ಪ್ರಜಾ ಸರ್ಕಾರದ ... ಇಂಡೋನೇಷ್ಯ ಸರ್ಕಾರ ರಚನೆ ... ಕೂಡಲೇ ಅಲ್ಲಿಂದ ಡಚ್ ಸೈನ್ಯದ ವಾಪಸು ...

ಸಿರೋಹಿ ಸಂಸ್ಥಾನವು ಬೊಂಬಾಯಿ ಆಡಳಿತಕ್ಕೆ

... ಪುರದ ಹತ್ತಿರವಿರುವ ಸಿರೋಹಿ ಸಂಸ್ಥಾನದ ಆಡಳಿತವನ್ನು ಬೊಂಬಾಯಿ ಸರ್ಕಾರದವರು ವಹಿಸಿಕೊಳ್ಳಬೇಕೆಂದು ... ಪ್ರ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಇಂಡೋನೇಷ್ಯದಲ್ಲಿ ಫೆಡರಲ್ ಸರ್ಕಾರ

ಇನ್ನು ಕೆಲವು ವಾರಗಳಲ್ಲಿ ಇಂಡೋನೇಷ್ಯದಲ್ಲಿ ಫೆಡರಲ್ ಸರ್ಕಾರವನ್ನು ಸ್ಥಾಪಿಸಿ ... ಜನರಿಗೆ ಹೆಚ್ಚು ಅಧಿಕಾರವನ್ನು ಕೊಡಲಾಗುವುದೆಂದೂ, ಅನಂತರ ಮಹಾ ಚುನಾವಣೆ ನಡೆದು, ಸರ್ವ ತಂತ್ರ ಸ್ವತಂತ್ರ ಇಂಡೋನೇಷ್ಯ ಸಂಯುಕ್ತ ಸಂಸ್ಥಾನ ... ರಚಿಸಲಾಗುವುದೆಂದೂ ... ರೇಡಿಯೋ ಭಾಷಣ ... ಮತ್ತಾರೆ ಇದನ್ನು ... ಒಪ್ಪುವುದಿಲ್ಲವೆಂದು ಹೇಳಿ

೨೧ ವರ್ಷಕ್ಕಿಂತ ಕಮ್ಮಿಯಾದ ಹುಡಗಿಗೆ ಮದುವೆಯಾಗಲು ಸ್ವಾತಂತ್ರ್ಯವಿಲ್ಲ

ವಿಶೇಷ ವಿವಾಹ ಕಾನೂನಿನ ಉದ್ದೇಶವು ತಂದೆತಾಯಿಗಳಿಗೆ ಅಧಿಕಾರ ಕೊಡುವುದಲ್ಲ. ಅವರೇ ತಮ್ಮ ಮಕ್ಕಳಿಗೆ ಜವಾಬ್ದಾರರು ಆದುದರಿಂದ ಸಮಾಜದ ಹಿತರಕ್ಷಣೆಗೆ ಸಂಬಂಧಪಟ್ಟ ವಿಷಯದಲ್ಲಿ ಅವರಲ್ಲದ ಇನ್ನಾರೂ ಪ್ರವೇಶಿಸಲು ಅಧಿಕಾರವಿಲ್ಲ ಎಂದು ಮದರಾಸಿನ ಹೈಕೋರ್ಟಿನವರು ೨೧ ವರ್ಷಕ್ಕಿಂತ ಕಡಿಮೆಯಾಗಿರುವ ಹುಡುಗಿಯು ತಾನಾಗಿಯೇ ಮಾಡಿಕೊಂಡ ಮದುವೆಯು ಕ್ರಮವಾದ್ದಲ್ಲವೆಂದು ಹೇಳಿ ತೀರ್ಪು ಕೊಟ್ಟಿರುತ್ತಾರೆ

ಕೊಯಮತ್ತೂರಿನ ಕುಮಾರಿ ಜಜು ... ಎಂಬ ೨೦ ವರ್ಷದ ಹುಡುಗಿಯು ಅಲ್ಲಿನ ಮುನಿಸಿಪಲ್ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ತನ್ನ ಜತೆಗಾತಿಯ ಅಣ್ಣನಾದ ಸುಂದರ ರಾಜ ಎಂಬಾತನೊಡನೆ ಸ್ನೇಹ ಬಳೆಸಿ ಕೊನೆಗೆ ಆತನ ಪ್ರೇರಣೆಯಂತೆ ವಿವಾಹಗಳ ರಿಜಿಸ್ಟ್ರಾರರವರ ಸಮ್ಮುಖದಲ್ಲಿ ಮದುವೆ ಕರಾರಿಗೆ ರುಜು ಹಾಕಿದಳೆಂದು ಮೊಕದ್ದಮೆಯಲ್ಲಿ ತಿಳಿಸಲಾಗಿತ್ತು ಹುಡುಗಿಗೆ ೨೧ ವರ್ಷ ವಯಸ್ಸಾಗಿಲ್ಲವಾದುದರಿಂದ ಆಕೆಗೆ ಮದುವೆಯಾಗಲು ಯಾವ ಸ್ವಾತಂತ್ರ್ಯವೂ ಇಲ್ಲವೆಂದು ನ್ಯಾಯಾಧೀಶರು ತೀರ್ಮಾನಿಸಿರುತ್ತಾರೆ

ವಾಕ್ಚಿತ್ರಗಳ ಮೂಲಕ ಶಿಕ್ಷಣ

ಕೆಲವು ಶಾಲೆಗಳಲ್ಲಿ ಮುಂದಿನ ವರ್ಷದಿಂದ ವಾಕ್ಚಿತ್ರಗಳ ಮೂಲಕ ಶಿಕ್ಷಣವನ್ನು ಕೊಡಲು ಮದರಾಸ್ ಸರ್ಕಾರದವರು ಯೋಚಿಸುತ್ತಿದ್ದಾರೆ

ಸ್ಥಳೀಕ

ರಾಜಧಾನಿಯ ವಿ ಸುಬ್ಬಯ್ಯ ರಸ್ತೆಯ ... ಶ್ರೀ ... ನಂದ ಸ್ವಾಮಿಗಳ ... ಬಳಿ ಈ ರಾತ್ರಿ ... ಗಂಟೆಗೆ ಶ್ರೀ ನದೀಪುರಂ ಶ್ರೀನಿವಾಸ ... ಗಮಕ ... ನಡೆಯುವುದು

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿರುವ ... ಗದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ... ಶ್ರೀನಿವಾಸರಾಯರಿಂದ ರಾಮಾಯಣದ ... ಹರಿಕಥೆ ನಡೆಯುವುದು

... ಚಾಮುಂಡಿ ... ಕೆಲಸಗಾರರ ಸಂಘದ ... ನನ್ನು ಕಾಂಗ್ರೆಸ್ಸಿನ ಮಾಜಿ ... ಶ್ರೀ ಕೆ ... ಇವರು ... ಸಂಜೆ ... ಗಂಟೆಗೆ ಕಾರ್ಯಾಲಯದಲ್ಲಿ ನಡೆಸುವರು

ಪೋಲೀಸಿನವನ ಮೇಲೆ ಸಿಪಾಯಿ ಕೈಮಾಡಿದ ಆಪಾದನೆ

ಮೈಸೂರು ೮

ಚಾಮರಾಜ ಒಡೆಯರವರ ಪ್ರತಿಮೆಯ ಬಳಿ ಕಾವಲಿದ್ದ ಪೋಲೀಸ್ ಕಾನ್‌ಸ್ಟೇಬಲ್ ಹರಿಸಿಂಗ್ ಎಂಬುವನನ್ನು ಮೊನ್ನೆ ರಾತ್ರಿ ಆಂಜನೇಯ ದೇವಸ್ಥಾನದ ಹತ್ತಿರ ಅರಮನೆ ಕೋಟೆ ಸಿಪಾಯಿಗಳು ಬಲವಂತವಾಗಿ ಎತ್ತಿಕೊಂಡು ಹೋಗಿ ಗಾರ್ಡ್ ರೂಮಿನಲ್ಲಿ ಇಟ್ಟು ಹೊಡೆದು ತೀವ್ರ ಗಾಯಪಡಿಸಿದರೆಂದೂ, ಅನಂತರ ಪೋಲೀಸ್ ಅಧಿಕಾರಿಗಳಿಗೆ ವರ್ತಮಾನ ಬಂದು ಅಲ್ಲಿಗೆ ಹೋಗಿ ಆತನನ್ನು ಬಿಡಿಸಿ, ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ದಾಖಲು ಮಾಡಿದರೆಂದೂ ವರದಿಯಾಗಿದೆ

... ರಾತ್ರಿ ... ಗಂಟೆ ವೇಳೆಗೆ ಸೇರಿದ ಸಿಪಾಯಿಯೊಬ್ಬನು ಮಫ್ತಿಯಲ್ಲಿ ಪ್ರತಿಮೆಯ ಹತ್ತಿರ ಬಂದು ಕಾವಲಿದ್ದ ಕಾನ್‌ಸ್ಟೇಬಲಿನೊಂದಿಗೆ ಮಾತುಕತೆ ... ಆತನನ್ನು ಹೀನಾಮಾನವಾಗಿ ಬೈದನೆಂದೂ, ನಂತರ ಮಾತು ಬೆಳೆದು, ಜಗಳ ಪ್ರಾರಂಭವಾಯಿತೆಂದೂ ಆದರ ಮೇಲೆ ಸಿಪಾಯಿಯು ಕೋಟೆಯ ಬಾಗಿಲಿನಲ್ಲಿದ್ದ ಇತರ ಸಹಚರರನ್ನು ಕರೆದುಕೊಂಡು ಬಂದನೆಂದೂ ಅನಂತರ ಈ ಘಟನೆ ನಡೆಯಿತೆಂದೂ ಹೇಳಲಾಗಿದೆ ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಎರಡನೇ ತರಗತಿ ಪ್ರಯಾಣಿಕರಿಗೆ ಅನಾನುಕೂಲ

ಶಾಸನ ಸಭೆಯಲ್ಲಿ ... ಸೂಚನೆ

ಬೆಂಗಳೂರು, ೮

ಮೈಸೂರು ರೈಲ್ವೆಯವರು ಹಿಂದಿದ್ದ ಎರಡನೇ ತರಗತಿಯನ್ನು ಮಾರ್ಪಡಿಸಿ ಅದರಲ್ಲಿದ್ದ ಅನುಕೂಲಗಳನ್ನು ತೆಗೆದು ಹಾಕಿರುವುದರಿಂದ ಪ್ರಯಾಣಿಕರಿಗೆ ಆಗಿರುವ ತೊಂದರೆ ಬಗ್ಗೆ ಶ್ರೀ ಓ ... ಅವರು ತಂದ ನಿಲುವಳಿ ಸೂಚನೆಯ ಮೇಲೆ ನಿನ್ನೆ ಮಧ್ಯಾಹ್ನ ಶಾಸನ ಸಭೆಯಲ್ಲಿ ಚರ್ಚೆ ನಡೆಯಿತು.

ರೈಲ್ವೆ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಉತ್ತರವಿತ್ತು, ಭಾರತದ ರೈಲ್ವೆ ಬೋರ್ಡಿನ ನೀತಿಯ ಮೇರೆ ಈ ಬದಲಾವಣೆ ಮಾಡಲಾಗಿದೆಯೆಂದೂ, ಆದರೆ ಮೊದಲಿದ್ದ ಯಾವ ಸೌಲಭ್ಯಗಳನ್ನೂ ಈಗ ತೆಗೆದು ಹಾಕಿಲ್ಲವೆಂದೂ, ಮುಂದೆ ಸಾಧ್ಯವಾದಾಗ ... ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಾಗುವುದೆಂದೂ ತಿಳಿಸಿದರು ಇದರ ಮೇಲೆ ನಿರ್ಣಯವನ್ನು ಸೂಚಕರು ವಾಪಸು ತೆಗೆದುಕೊಂಡರು.

... ಮೈಸೂರಿನ ಮಾಜಿ ... ಸುಬ್ಬರಾಯರವರನ್ನು ... ನೇಮಿಸಲಾಗಿದೆ ... ಯಾಗಿದೆ

ಆರ್. ಎಸ್. ಎಸ್. ನಲ್ಲಿ ಭಾಗವಹಿಸಿದ್ದ ಕಾಲೇಜು ಅಧ್ಯಾಪಕರಿಗೆ ಶಿಕ್ಷೆ

ಮೈಸೂರು ೮.

ಆರ್ ಎಸ್ ಎಸ್ ನವರ ಮೆರವಣಿಗೆಯಲ್ಲಿ ಭಾಗ ವಹಿಸಿದರೆಂಬ ಆಪಾದನೆಯ ಮೇಲೆ ಮೈಸೂರು ಫಸ್ಟ್‌ಗ್ರೇಡ್ ಕಾಲೇಜಿನ ಅಧ್ಯಾಪಕರಾದ ಶ್ರೀ ಗೋಪಾಲಕೃಷ್ಣ ಮತ್ತು ಇತರ ೮ ಮಂದಿಗೆ ತಲಾ ೩ ತಿಂಗಳು ಸಾದಾ ಶಿಕ್ಷೆಯನ್ನು ನಗರ ನ್ಯಾಯಾಧೀಶರು ನಿನ್ನೆ ದಿನ ವಿಧಿಸಿರುತ್ತಾರೆ

ಅಂಗಡಿ ಕೆಲಸಗಾರರ ಸಭೆ

ರಾಜಧಾನಿಯ ಅಂಗಡಿ ಕೆಲಸಗಾರರ ಸಂಘದ ಸಭೆಯು ನಾಳೆ ಬೆಳಿಗ್ಗೆ ೧೦-೩೦ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದು ಕಾಂಗ್ರೆಸ್ಸಿನ ಮಾಜಿ ಕಾರ್ಯದರ್ಶಿ ಶ್ರೀ ಕೆ ಪಟ್ಟಾಭಿರಾಮಯ್ಯನವರು ಭಾಷಣ ಮಾಡುವರು

ಕಸ್ತೂರಿ ಬಾ ಸ್ಮಾರಕ ಸಮಿತಿಯ ಸಭೆ

ಶ್ರೀ ಮಾವಲಂಕರರಿಂದ ವಸ್ತು ಪ್ರದರ್ಶನದ ಪ್ರಾರಂಭ

ವಿ ಬಾ ತಂತಿ] ಅರಸೀಕೆರೆ, ೮,

ಕಸ್ತೂರಿ ಬಾ ಸ್ಮಾರಕ ಸಮಿತಿಯ ಕಾರ್ಯಕಾರೀ ಮಂಡಲಿಯ ಮತ್ತು ಪ್ರಾಂತೀಯ ಏಜೆಂಟರುಗಳ ಸಭೆಯು ಈ ದಿನ ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾದ ಶ್ರೀ ಮಾವಲಂಕರ್‌ರವರ ಅಧ್ಯಕ್ಷತೆಯಲ್ಲಿ ಇಲ್ಲಿ ಪ್ರಾರಂಭವಾಯಿತು ಭಾರತದ ಅನೇಕ ಪ್ರದೇಶಗಳ ಪ್ರತಿನಿಧಿಗಳು ಭಾಗ ವಹಿಸಿದ್ದರು ಮೈಸೂರಿನ ಪ್ರತಿನಿಧಿಯಾದ ಶ್ರೀಮತಿ ಯಶೋಧರಮ್ಮನವರು ಸ್ವಾಗತವನ್ನು ಬಯಸಿದರು. ಈ ದಿನ ಬೆಳಿಗ್ಗೆ ಶ್ರೀ ಮಾವಲಂಕರ್‌ರವರು ರಾಷ್ಟ್ರ ಧ್ವಜವನ್ನು ಹಾರಿಸಿದರು ಅನಂತರ ಗ್ರಾಮೋದ್ಯೋಗ ವಸ್ತು ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಸಾಮಾನ್ಯ ಮನುಷ್ಯನ ಅಭಿವೃದ್ಧಿಗೆ ಸಹಕಾರಿಯಾಗುವಂತೆ ಪ್ರದರ್ಶನಗಳನ್ನು ಏರ್ಪಡಿಸಬೇಕೆಂದು ಅವರು ತಿಳಿಸಿದರು.

ಪಬ್ಲಿಕ್ ಸರ್ವಿಸ್ ಕಮೀಷನ್

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ವರದಿ] ಬೆಂಗಳೂರು, ೮,

೧೯೪೬ ರಲ್ಲಿ ಪ್ರಾರಂಭವಾದ ತುಂಗಾ ಅಣೆಕಟ್ಟು ೧೯೫೩ ಕ್ಕೆ ಮುಗಿಯಬಹುದೆಂದೂ, ಅದಕ್ಕೆ ಒಟ್ಟು ೭೦ ಲಕ್ಷ ರೂ ಖರ್ಚಾಗುವುದೆಂದೂ, ಅದರಿಂದ ... ಸಾವಿರ ಎಕರೆ ಜಮೀನು ಸಾಗುವಳಿಗೆ ಬರುವುದೆಂದೂ ಸಚಿವ ಶ್ರೀ ಹೆಚ್ ಸಿದ್ದಯ್ಯನವರು ಈ ದಿನ ಶಾಸನ ಸಭೆಯಲ್ಲಿ ಶ್ರೀ ಹೆಚ್ ಎಸ್ ರುದ್ರಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಪಬ್ಲಿಕ್ ಸರ್ವಿಸ್ ಕಮಿಷನನ್ನು ಸ್ಥಾಪಿಸಬೇಕೆಂಬ ವಿಷಯವು ಈಗ ಇನ್ನೂ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದೂ ಆದರೆ ಅದನ್ನು ಯಾವಾಗ ರಚಿಸಲಾಗುವುದೆಂಬುದನ್ನು ತಿಳಿಸಲು ಸಾಧ್ಯವಿಲ್ಲವೆಂದೂ ಶ್ರೀ ಹೆಚ್ ಸಿದ್ದಯ್ಯನವರು ಶ್ರೀ ... ಮಾದಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

...

ಆಹಾರ ಇಲಾಖಾ ಡೈರೆಕ್ಟರವರ ಅನುಮತಿ ಇಲ್ಲದೆ ಯಾವ ... ಭತ್ತವನ್ನು ... ಸಾಗಿಸ ... ದರು ...

ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ಸೂಚಿಸಲು ಅಧಿಕಾರ ಬೇಕು

ಶಾಸನ ಸಭೆಯಲ್ಲಿ ಶಾಸಕರ ಸಿಪ್ಪಸಿಯ ಪರವಾಗಿ ಸಲಹೆ

ಬೆಂಗಳೂರು, ೮

ಸಂಸ್ಥಾನದಲ್ಲಿ ಪ್ರಜಾ ಮಂತ್ರಿ ಮಂಡಲವು ರಚಿತವಾದಾಗ ಶ್ರೀಮನ್ಮಹಾರಾಜರವರು ಹೊರಡಿಸಿದ ಘೋಷಣೆ ಪ್ರಕಾರ ಅದು ಸಂಯುಕ್ತ ಜವಾಬ್ದಾರಿಯಿಂದ ಶಾಸನ ಸಭೆಗೆ ವಿಶ್ವಾಸಪಾತ್ರವಾಗಿರಬೇಕೆಂದು ತಿಳಿಸಲಾಗಿತ್ತು. ಆದರೆ ನ್ಯಾಯವಿಧಾಯಕ ಸಭೆಯು ತನಗೆ ಮಂತ್ರಿ ಮಂಡಲದಲ್ಲಿ ವಿಶ್ವಾಸವಿರುವುದನ್ನು ಅಥವ ಇಲ್ಲದಿರುವುದನ್ನು ಸೂಚಿಸಲು ಸ್ಟ್ಯಾಂಡಿಂಗ್ ಆರ್ಡರುಗಳಲ್ಲಿ ಅವಕಾಶವಿಲ್ಲವಾಗಿರುವುದರಿಂದ ಈ ಅವಕಾಶವಿರುವಂತೆ ಸೂಕ್ತ ಬದಲಾವಣೆ ಮಾಡಲು ಒಂದು ಉಪಸಮಿತಿಯನ್ನು ರಚಿಸಬೇಕೆಂದು ಶ್ರೀ ಎಂ. ಸಿ. ಎಲ್. ಶಾಸ್ತ್ರಿಯವರು ನಿನ್ನೆ ದಿನ ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸಿದ ಪಕ್ಷ ಪಾಪ್ಯುಲರ್ ಸೂಚನೆಯ ಮೇಲೆ ದೀರ್ಘ ಚರ್ಚೆ ನಡೆಯಿತು.

ಶ್ರೀಗಳಾದ ಬೇಲೂರು ಶ್ರೀನಿವಾಸ ಅಯ್ಯಂಗಾರ್, ಎಸ್. ಕೆ. ನಸ್ಸಪ್ಪ, ಹೆ. ಪೀರ್‌ಸಾಬ್, ಡಿ. ಎಸ್. ಮಲ್ಲಪ್ಪ, ಸಿ. ವಿ. ವಿಜಯಪ್ಪ, ವೆಂಕಟಾದ್ರಿ ಅವರು ಇದನ್ನು ಸಮರ್ಥಿಸಿದರು.

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಉತ್ತರ ಕೊಡುತ್ತ ಈ ಸಭೆಯು ಅಧಿವೇಶನವು ಕೊನೆಯಾದುದರಿಂದ ಸ್ಟ್ಯಾಂಡಿಂಗ್ ಆರ್ಡರುಗಳ ಬದಲಾವಣೆ ಮತ್ತು ತಿದ್ದುಪಡಿಗಳನ್ನು ಮಾಡುವುದು ತರವಲ್ಲವೆಂದೂ, ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ನಿರ್ಧರಿಸಲು ಸರ್ಕಾರದವರೇ ಬಿಡುವುದು ಸೂಕ್ತವೆಂದೂ ತಿಳಿಸಿದರು. ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯ ತರುವುದಕ್ಕೆ ಅವಕಾಶವಿಲ್ಲವೆಂದು ಚರ್ಚಿಸುವುದರ ಬದಲು ಅಂತಹ ನಿರ್ಣಯವನ್ನೇ ಸಭೆಯ ಮುಂದೆ ತಂದರೆ ಆಗ ಅಧ್ಯಕ್ಷರು ಯಾವರೀತಿ ಅದನ್ನು ಇತ್ಯರ್ಥ ಮಾಡುವರೆಂಬುದು ಗೊತ್ತಾಗುವುದು. ಅಧ್ಯಕ್ಷರಿಗೇ ಈ ಬಗ್ಗೆ ಅಧಿಕಾರವಿದೆಯೆಂದು ಅವರು ಹೇಳಿದರು.

ಸೂಚಕರು ನಿರ್ಣಯವನ್ನು ವಾಪಸು ತೆಗೆದುಕೊಂಡರು.

ಶ್ರೀ

ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್ ಮತ್ತು ಬಟ್ಟೆ ಅಂಗಡಿ

೪೧೯, ದಿವಾನರ ರಸ್ತೆ, ಮೈಸೂರು.

ಇಲ್ಲಿ ಎಲ್ಲ ತರಹ ಬಟ್ಟೆಗಳು ಸರಬರಾಜು, ಕೋಟಿಂಗ್ ವಗೈರೆ ಕೇಂದ್ರ ಸರ್ಕಾರದ ಕಂಟ್ರೋಲ್ ದರದಂತೆ ದೊರೆಯುತ್ತವೆ. ಎಲ್ಲದ ರೀತಿ ಯ ಕೆಲಸ ಕೊಟ್ಟರೆ ಅವರ ಪ್ರಿಂಟ್ ಮಾಡಿಕೊಡಲ್ಪಡುತ್ತದೆ.

ಬಂಡಿಕೊಪ್ಪಲು ಲೇ ಔಟ್ ... ರಾಜ ಕಟ್ಟಡದಲ್ಲಿ ... ಪರ ... ಒಟ್ಟಿಗೆ ... ಕೋರಲ್ಪಡುತ್ತದೆ.

---

೧೫೦ ಜನರು ನೀರು ಪಾಲಾದರು

ಚೀಣದ ಹೂಚೌ ಸಿಂದ ಷಾಂಗೈಗೆ ಸಂಚರಿಸುತ್ತಿದ್ದ ದೋಣಿಯೊಂದು ನೀರು ಪಾಲಾಗಿ ೧೫೦ ಮಂದಿ ಮುಳುಗಿಹೋದರೆಂದೂ, ಕೇವಲ ೩೦ ಜನರನ್ನು ಮಾತ್ರ ರಕ್ಷಿಸಲಾಯಿತೆಂದೂ ಹೇಳಲಾಗಿದೆ.

ಛಳಿಗಾಲಕ್ಕೆ ಅವಶ್ಯಕವಾದ

ಕಾಶ್ಮೀರ ಶಾಲುಗಳು, ರಗ್ಗುಗಳು ಮತ್ತು ಪುಲ್ಲೋವರ್ ಸ್ವೆಟರುಗಳು

ಈಗಲೇ ಬಂದಿವೆ

ವಿಜಯಲಕ್ಷ್ಮೀ ವಿಲಾಸ

೬೭ ಎಂ.ಜಿ. ರಸ್ತೆ, ಸಯ್ಯಾಜಿರಾವ್ ಬಜಾರ್ ... ಮೈಸೂರು

Edited, printed and published by A R Nagarajan at the Sadhvi Press, D. Subbiah Road, Mysore

---

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ ೩ ಆಟಗಳು

೩-೮-೧-೪೯ ರಿಂದ ೬ ದಿನಗಳು ಮಾತ್ರ

M.G.M. ರವರ

ಟಾರ್ಜಾನ್ ಅಂಡ್ ದಿ ಹಂಟ್ರೆಸ್

Tarzan & The Huntress

ಪಾತ್ರ:- ಜಾನಿ ವೈಸ್ಮುಲ್ಲರ್, ಜಾನ್ ಷೆಫೀಲ್ಡ್

Morning Shows at 10-30 From 8—1—49 for 2 days

M.G.M's

Immortal production from the great Novel

Dragon Seed

(Epic Story of China at war)

With:- Akim Tamiroff and Katherine Hepburn

ಜಪಾನಿನ ಪ್ರಜಾಸಂಖ್ಯೆ ಹೆಚ್ಚುತ್ತಿದೆ

ಜಪಾನಿನ ಪ್ರಜಾ ಸಂಖ್ಯೆಯು ೧೯೪೮ನೇ ಅಕ್ಟೋಬರಿನಿಂದೀಚೆಗೆ ನೇ ಅಕ್ಟೋಬರಿಗೆ ೨೦ ಲಕ್ಷ ಹೆಚ್ಚಾಗಿದೆಯೆಂದೂ, ಈಗ ಅಲ್ಲಿ ೮೦ ಲಕ್ಷ ಜನರಿರುವರೆಂದೂ, ೧೯೫೦ರ ಹೊತ್ತಿಗೆ ೧೦೦ ಲಕ್ಷಕ್ಕೆ ಏರುವುದೆಂದೂ ಹೇಳಲಾಗಿದೆ.

ಚಾಮುಂಡೇಶ್ವರಿ ಟಾಕೀಸ್

ತಾ॥ 7-1-49 ರಿಂದ

ಪ್ರತಿ ದಿನ ಮೂರು ಆಟಗಳು

ಸರ್ದಾರ್ ಪ್ರೊಡಕ್ಷನ್ಸರವರ

ಷಹಜಹಾನ್

ಸೈಗಾಲ್, ಜಯರಾಜ್, ಮುನವರ್ ಸುಲ್ತಾನಾ, ಸುಲೋಚನಾ ಚಟರ್ಜಿ, ಅಜೂರಿ ನಟಿಸಿರುವ ಹಿಂದಿ ಚಿತ್ರ

ರಾಜಕಮಲ್ ಟಾಕೀಸ್

೭-೧-೪೯ರಿಂದ

ಅಮೋಘ ೪ ನೇ ವಾರ

ಪ್ರತಿ ದಿನ ೩ ಆಟಗಳು

ಭಕ್ತ

ಕುಂಬಾರ (ಕನ್ನಡ)

Morning Shows From 7—1—49 for 4 days

COBRA - WOMAN

(In Technicolor)

With - Mysore Sabu Maria Montez, John Hall

14-1-49ರಿಂದ :: ಪೊಂಗಲ್ ಹಬ್ಬದ ದಿನ

ಮೈಸೂರು ಬೆಂಗಳೂರು

ಚಾಮುಂಡೇಶ್ವರಿ-ಗಣೇಶ್ ಸ್ಟೇಟ್ಸ್-ಸೂಪರ್

ಕೆ ಜಿ.ಎಫ್. ಗೇ ಟಾಕೀಸುಗಳಲ್ಲಿ ಏಕ ಕಾಲದಲ್ಲಿ ಪ್ರದರ್ಶನ

ಅತ್ಯುತ್ತಮ ಸಂಗೀತ-ಆಹ್ಲಾದಕರ ನೃತ್ಯಗಳು-ಅದ್ಭುತ ಕಥೆ-ಅಮೋಘ ಭಕ್ತಿ ರಸ ಚಿತ್ರ!

ಕೃಷ್ಣಾ ಪಿಕ್ಚರ್ಸರವರ

ಕೃಷ್ಣ ಭಕ್ತಿ (ತಮಿಳು)

KRISHNA BHAKTHI

ಭೂಮಿಕೆ:- ಪಿ.ಯು. ಚಿನ್ನಪ್ಪ, ಟಿ.ಆರ್.ರಾಜಕುಮಾರಿ, ಕೃಷ್ಣನ್ ಮತ್ತು ಮಧುರಂ.

ಬೆಂಗಳೂರು ಶ್ರೀ ಟಾಕೀಸಿನಲ್ಲಿ ಮುಂದಿನ ಬದಲಾವಣೆ

Distributors: **SARADA FILMS**, 174 Gandhinagar, BANGALORE 2

ಪ್ರಭಾ

7-1-49ರಿಂದ ಪ್ರತಿ ದಿನ ೩ ಆಟಗಳು

ಗಾಂವ್

(ಹಿಂದಿ)

ಭೂಮಿಕೆ:- ಕುಮಾರ್, ಕರ್ಣ ದಿವಾನ್, ಪುಷ್ಪಾ ಮತ್ತು ...

ಇದೇ ಕೊನೆಯ ದಿನ ...

ಸಿಮೆಂಟ್ ಕೂಡಲೇ ದೊರಕುತ್ತದೆ

ವಿವರಗಳಿಗೆ

ದಿ ಇಂಟರ್ ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,

... ಪ್ರಿನ್ಸ್ ಆಫ್ ವೇಲ್ಸ್ ರಸ್ತೆ, ಮೈಸೂರು.

ಇವರಲ್ಲಿ ವಿಚಾರಿಸಿ.

ಟೆಂಡರ್ ನೋಟೀಸು

ಮೈಸೂರು ಅರಮನೆಗೆ ಬೇಕಾದ ಸುಮಾರು ಎರಡು ಸಾವಿರದ ಏಳುನೂರು ಪಲ್ಲ ಮರಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಕೆಳಗೆ ರುಜು ಮಾಡಿರುವವರಲ್ಲಿ ೨೩-೧-೧೯೪೯ನೇ ಬುಧವಾರ ಕೊಡಬಹುದು.

ಎಚ್. ನಿರಂಜನ್‌ರಾಜೆ ಅರಸ್

ಹುಜೂರು ಸೆಕ್ರೆಟರಿಯವರು.

ಶೀ೧೧ ನಂ. 793 WEEKLY EDITION ಇಂಡಿಯ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೨] ಭಾನುವಾರ ೯-೧-೪೯ [ಸಂಚಿಕೆ ೨

ಸಾರ್ವಜನಿಕ ರಕ್ಷಣಾ ಕಾನೂನು

ಶಾಸನ ಸಭೆಯ ಅಂಗೀಕಾರ

ಸ್ವಂ. ಸು. ಪ್ರೋ.] ಬೆಂಗಳೂರು ೯

ನಿನ್ನೆ ದಿನ ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೋತ್ತರಗಳಾದನಂತರ ಮಸೂದೆಗಳು ಚರ್ಚೆಗೆ ಬಂದುವು.

ವಿದೇಶೀಯರಿಗೆ ಸಂಬಂಧಿಸಿದ ತಿದ್ದುಪಡಿ ಮಸೂದೆಗಳನ್ನು ಚರ್ಚಿಸಲು ಸರ್ಕಾರವು ಇಷ್ಟಪಡುವುದಿಲ್ಲವೆಂದೂ, ಕೇಂದ್ರ ಸರ್ಕಾರದಲ್ಲಿ ವಿದೇಶೀಯರಿಗೆ ಸಂಬಂಧಪಟ್ಟ ಕಾನೂನುಗಳು ಸಂಸ್ಥಾನದಲ್ಲಿರುವ ವಿದೇಶೀಯರಿಗೆ ಅನ್ವಯಿಸುವುದಿಲ್ಲವೆಂದೂ ತಿಳಿಸಲಾಯಿತು.

ಕಾರ್ಮಿಕ ಸಚಿವ ಶ್ರೀ|| ಕೆ. ಟಿ. ಭಾಷ್ಯಂರವರು ಮಂಡಿಸಿದ ಕನಿಷ್ಠ ವೇತನ ಸಂಬಳದ ಮಸೂದೆಯ ಬಗ್ಗೆ ಚುನಾಯಿತ ಸಮಿತಿಯ ವರದಿಯು ಚರ್ಚೆಯಾದನಂತರ ಅಂಗೀಕೃತವಾಯಿತು. ೨೦೦ಕ್ಕೆ ಮೇಲ್ಪಟ್ಟು ಕೆಲಸಗಾರರಿರುವ ಕಾರ್ಖಾನೆ, ಮತ್ತು ವ್ಯವಸಾಯ ಕ್ಷೇತ್ರಗಳಿಗೆ ಈ ಕಾನೂನು ಅನ್ವಯಿಸುವುದು. ಈ ಮಸೂದೆಯಲ್ಲಿ ವ್ಯವಸಾಯದ ಕಾರ್ಮಿಕರನ್ನು ಸೇರಿಸಿರುವುದನ್ನು ತೆಗೆದುಹಾಕಬೇಕೆಂದು ಜ|| ಮಹಮದ್ ಇಮಾಂರವರು ತಿದ್ದುಪಡಿಯನ್ನು ಸೂಚಿಸಿದರು. ಶ್ರೀ|| ಭಾಷ್ಯಂರವರು ಸೂಕ್ತವಾದ ಉತ್ತರ ಕೊಟ್ಟನಂತರ ಸೂಚಕರು ತಿದ್ದುಪಡಿಯನ್ನು ವಾಪಸು ತೆಗೆದುಕೊಂಡರು.

ಅನಂತರ ಮುಖ್ಯ ಮಂತ್ರಿ ಶ್ರೀ|| ಕೆ. ಸಿ. ರೆಡ್ಡಿಯವರು ಸಾರ್ವಜನಿಕ ರಕ್ಷಣೆಗೆ ಸಂಬಂಧಪಟ್ಟ ವಿಶೇಷ ಕಾನೂನನ್ನು ಸಭೆಯ ಮುಂದೆ ಮಂಡಿಸಿದರು. ಶ್ರೀ|| ಚೆನ್ನಪ್ಪನವರು ಅದನ್ನು ವಿರೋಧಿಸಿದರು. ಶ್ರೀ|| ರೆಡ್ಡಿಯವರು ಸಮಾಧಾನವೀಯುತ್ತಾ ಈ ಕಾನೂನನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಲಾಗುವುದೆಂದೂ, ದೇಶದಲ್ಲಿ ಇತ್ತೀಚೆಗೆ ಉದ್ಭವಿಸಿರುವ ಆರ್. ಎಸ್. ಎಸ್. ಮುಂತಾದ ಕೋಮುವಾರು ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ತಡೆಗಟ್ಟುವುದೇ ಇದರ ಉದ್ದೇಶವೆಂದೂ ತಿಳಿಸಿದರು. ಮಸೂದೆಯನ್ನು ಓಟಿಗೆ ಹಾಕಿದಾಗ ಅದು ಸರ್ವಾನುಮತದಿಂದ ಅಂಗೀಕೃತವಾಯಿತು. ಶ್ರೀ ಚೆನ್ನಪ್ಪನವರೂ ಸಹ ನಿರ್ಣಯದ ಪರವಾಗಿ ಓಟು ಮಾಡಿದರು. ಜೂಜಿನ ಕಟ್ಟೆಗೆ ಸಂಬಂಧಪಟ್ಟ ಮಸೂದೆಯ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಸಭೆ ಮುಕ್ತಾಯವಾಯಿತು.

ಬೆಂಗಳೂರಿಗೆ ಎಂ. ಎನ್. ರಾಯರ ಭೇಟಿ

ಭಾರತದ ರ್‍ಯಾಡಿಕಲ್ ಡೆಮೋಕ್ರಾಟಿಕ್ ಪಕ್ಷದ ನಾಯಕರಾದ ಶ್ರೀ ಎಂ. ಎನ್. ರಾಯ್ ಮತ್ತು ಅವರ ಪತ್ನಿಯವರು ಬೆಂಗಳೂರಿಗೆ ಮುಂದಿನ ತಿಂಗಳು ೬ ನೇ ತಾರೀಖು ಆಗಮಿಸುವರೆಂದು ತಿಳಿದು ಬಂದಿದೆ.

ಜಿನ್ನಾರವರ ಜೀವನ ಚರಿತ್ರೆ

ಪಾಕಿಸ್ತಾನದ ಮಾಜಿ ಗೌರ್ನರ್ ಜನರಲ್ ದಿ|| ಮಿ|| ಜಿನ್ನಾರವರ ಜೀವನ ಚರಿತ್ರೆಯನ್ನು ಪ್ರಕಟಿಸಲು ಸಿದ್ಧತೆಗಳು ನಡೆಯುತ್ತಿವೆಯೆಂದೂ, ಅವರ ಸೋದರಿ ಮಿಸ್ ಫಾತಿಮಾ ಜಿನ್ನಾರವರು ಇದನ್ನು ಬರೆಯುವಂತೆ ಪ್ರಾರ್ಥಿಸಲಾಗಿದೆಯೆಂದೂ ತಿಳಿದುಬಂದಿದೆ.

ಆರೋಗ್ಯ ವಿಚಾರಣಾ ಸಮಿತಿಯವರ ಆಗಮನ

ಮೈಸೂರು ೯

ಭಾರತ ಸರ್ಕಾರದವರಿಂದ ನೇಮಿಸಲ್ಪಟ್ಟಿರುವ ಆರೋಗ್ಯ ವಿಚಾರಣಾ ಸಮಿತಿಯ ಸದಸ್ಯರು ರಾಜಧಾನಿಗೆ ಬಂದಿದ್ದಾರೆ. ಪ್ರತಿ ಊರಿನಲ್ಲಿಯೂ ಅತ್ಯಾವಶ್ಯಕವಾದ ವಸತಿ ಸೌಕರ್ಯ, ನೀರು ಸರಬರಾಜು ಮತ್ತು ಗ್ರಾಮ ನೈರ್ಮಲ್ಯಗಳ ವಿಚಾರದಲ್ಲಿ ಪ್ರಮುಖರ ಸಲಹೆಗಳನ್ನು ತೆಗೆದುಕೊಂಡು ಅವರು ವರದಿ ಮಾಡಲು ದೇಶದಲ್ಲೆಲ್ಲಾ ಪ್ರವಾಸ ಮಾಡುತ್ತಿದ್ದಾರೆ.

ಈ ದಿನ ಅವರನ್ನು ಪೌರಸಭೆಯ ಸದಸ್ಯರು ಸ್ವಾಗತಿಸಿ ಸತ್ಕರಿಸಿದರು. ಅಧ್ಯಕ್ಷರಾದ ಶ್ರೀ|| ಟಿ. ವೆಂಕಟರಮಣಯ್ಯನವರು ಸ್ವಾಗತ ಭಾಷಣ ಮಾಡಿ ಮೈಸೂರು ನಗರದಲ್ಲಿ ಪೌರಸಭೆಯವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿವರಿಸಿದರು.

ಸಮಿತಿಯ ಸದಸ್ಯರಾದ ಡಾ|| ಸುಬ್ರಹ್ಮಣ್ಯಂರವರು ಮಾತನಾಡಿ ನಮ್ಮ ದೇಶದಲ್ಲಿ ಪ್ರಜೆಗಳು ಆರೋಗ್ಯದಿಂದ ಇರಲು ನಿರ್ಮಲವಾದ ವಸತಿ, ಶುದ್ಧವಾದ ನೀರು ಮತ್ತು ಪುಷ್ಟಿಕರವಾದ ಆಹಾರಗಳ ಆವಶ್ಯಕತೆಯು ಬಹಳವಾಗಿದೆಯೆಂಬುದನ್ನು ವಿವರಿಸಿದರು. ಮೈಸೂರಿನಲ್ಲಿ ಈಗಾಗಲೇ ಅನೇಕ ಸೌಲಭ್ಯಗಳನ್ನೊದಗಿಸಿ ಇತರ ಪೌರಸಭೆಗಳಿಗೆ ಮೇಲ್ಪಂಕ್ತಿಯನ್ನು ಹಾಕಿರುವುದಕ್ಕಾಗಿ ಮೆಚ್ಚಿಗೆಯನ್ನು ಸೂಚಿಸಿದರು.

ಸಂಸ್ಥಾನದ ಆರೋಗ್ಯಾಧಿಕಾರಿಗಳಾದ ಡಾ|| ಚಂದ್ರಶೇಖರಯ್ಯನವರು ಮಾತನಾಡಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ವಿವರಿಸಿದರು.

ಪೌರಸಭಾ ಕಮೀಷನರಾದ ಶ್ರೀ|| ಸಿ. ನರಸಿಂಹಮೂರ್ತಿಯವರು ಮಾತನಾಡಿ ಜನಸಂದಣಿ ಇರುವ ಕಡೆಗಳಲ್ಲಿ ಮನೆಗಳನ್ನು ಒಡೆಯುವುದಕ್ಕೆ ಮೊದಲು ಅಲ್ಲಿನ ನಿವಾಸಿಗಳಿಗೆ ಬೇರೆ ಬೇರೆ ಕಡೆ ವಸತಿಯನ್ನು ಏರ್ಪಡಿಸಬೇಕೆಂದು ಸೂಚಿಸಿದರು. ಇಡೀ ಭಾರತ ಖಂಡಕ್ಕೆಲ್ಲಾ ಒಂದೇ ಮಾದರಿಯ ವಸತಿ ನಿರ್ಮಾಣದ ಯೋಜನೆಯನ್ನು ಇಟ್ಟುಕೊಳ್ಳದೆ ಆಯಾ ಸ್ಥಳದ ವಿದ್ಯಮಾನಗಳಿಗೆ ಅನುಗುಣವಾಗಿ ಅವುಗಳನ್ನು ಕಟ್ಟಿಸಲು ಅವಕಾಶ ಕೊಡಬೇಕೆಂದು ಹೇಳಿದರು.

ಉಪಾಧ್ಯಕ್ಷರಾದ ಶ್ರೀ|| ಟಿ. ನರಸಿಂಹಯ್ಯಂಗಾರ್ಯರಿಂದ ಧನ್ಯವಾದಗಳಾದನಂತರ ಸಮಾರಂಭವು ಮುಕ್ತಾಯವಾಯಿತು.

೧ ಪಲ್ಲ ಭತ್ತ ಕುಟ್ಟಿಸಲು ರೆವಿನ್ಯೂ ಇನ್ಸ್‌ಪೆಕ್ಟರವರು ರಹದಾರಿ ಕೊಡಬಹುದು

ಸ್ವಂ. ಸು. ಪ್ರೋ.] ಬೆಂಗಳೂರು ೯

ಒಂದು ಪಲ್ಲ ಭತ್ತ (೧೦೦ ಸೇರು) ವನ್ನು ಮಿಲ್ಲುಗಳಲ್ಲಿ ಕುಟ್ಟಿಸಿ ಅಕ್ಕಿಮಾಡಿಸಲು ರೆವಿನ್ಯೂ ಇನ್ಸ್‌ಪೆಕ್ಟರವರುಗಳು ರಹದಾರಿ ಕೊಡಬಹುದೆಂದು ಸರ್ಕಾರಿ ಆಜ್ಞೆ ಹೊರಟಿದೆ.

● ಶ್ರೀ ಎಸ್. ರಾಧಾಕೃಷ್ಣನ್‌ರವರ ನಾಯಕತ್ವದಲ್ಲಿ ಭಾರತ ಸರ್ಕಾರದವರು ರಚಿಸಿರುವ ವಿಶ್ವವಿದ್ಯಾಲಯಗಳ ಸುಧಾರಣಾ ಸಮಿತಿಯವರು ಬರುವ ಮಾರ್ಚಿ ತಿಂಗಳಲ್ಲಿ ಮೈಸೂರಿಗೆ ಆಗಮಿಸುವರು.

● ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ಶ್ರೀ|| ಎಸ್. ನಿಜಲಿಂಗಪ್ಪನವರು ನೆನ್ನೆ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದರು.

ಶಾಸನಸಭಾ ನಾಮಕರಣಕ್ಕೆ ದಂಡಿನ ಪೌರಸಭಾ ಪ್ರತಿಭಟನೆ

ಶಾಸನಸಭೆಗೆ ಬೆಂಗಳೂರು ದಂಡಿನ ಪೌರಸಭೆಯ ಸದಸ್ಯರೊಬ್ಬರನ್ನು ಸರ್ಕಾರದವರು ನಾಮಕರಣ ಮಾಡಿರುವುದನ್ನು ಅಲ್ಲಿನ ಪುರಸಭೆಯವರು ಪ್ರತಿಭಟಿಸಿ, ಅಷ್ಟು ದೊಡ್ಡ ನಗರಕ್ಕೆ ಒಂದು ಸ್ಥಾನವನ್ನು ಮಾತ್ರ ಕೊಟ್ಟಿರುವುದನ್ನು ಖಂಡಿಸಿರುತ್ತಾರೆ. ಸರ್ಕಾರದವರು ಇದನ್ನು ವಾಪಸು ತೆಗೆದುಕೊಂಡು, ಪುರಸಭೆಯವರಿಂದ ಚುನಾಯಿತ ಸದಸ್ಯರೊಬ್ಬರನ್ನು ಕಳುಹಿಸಲು ಅವಕಾಶ ಕೊಡಬೇಕೆಂದು ನಿರ್ಣಯ ಮಾಡಿದ್ದಾರೆ.

ಮಾರ್ಷಲ್ಲರ ರಾಜೀನಾಮೆ

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಜಾರ್ಜ್ ಮಾರ್ಷಲ್‌ರವರು ರಾಜೀನಾಮೆ ಇತ್ತಿರುವುದರಿಂದ ಅವರ ಸ್ಥಾನಕ್ಕೆ ಮಾಜಿ ಉಪಕಾರ್ಯದರ್ಶಿ ಡೀನ್ ಎಚೆಸನ್ ರವರನ್ನು ನಿಯಮಿಸಲಾಗಿದೆಯೆಂದು ತಿಳಿದು ಬಂದಿದೆ. ಹಂಗಾಮಿ ಕಾರ್ಯದರ್ಶಿ ರಾಬರ್ಟ್ ಲೊವೆಟ್‌ರವರ ರಾಜೀನಾಮೆಯನ್ನು ಅಂಗೀಕರಿಸಿ ಜೇಮ್ಸ್ ವೆಬ್ಬ್‌ರವರನ್ನು ಅವರ ಸ್ಥಾನದಲ್ಲಿ ನಿಯಮಿಸಲಾಗಿದೆ.

ನಾನ್‌ಕಿಂಗ್-ಷಾಂಗೈಗಳ ಮೇಲೆ ಕಮ್ಯೂನಿಸ್ಟರ ಧಾಳಿ

ಚೀಣದ ನಾನ್‌ಕಿಂಗ್ ಮತ್ತು ಷಾಂಗೈ ಕ್ಷೇತ್ರಗಳನ್ನು ರಕ್ಷಿಸುತ್ತಿರುವ ಸರ್ಕಾರಿ ಸೇನೆಗಳ ಮೇಲೆ ಕಮ್ಯೂನಿಸ್ಟರು ಭಾರಿ ಧಾಳಿಯನ್ನು ಪ್ರಾರಂಭಿಸಿರುತ್ತಾರೆ.

ಊದುಬತ್ತಿಗಳ ಸ್ವೀಕಾರ

ರಾಜಧಾನಿಯ ಸುಪ್ರಸಿದ್ಧ ಊದ ಬತ್ತಿ ವ್ಯಾಪಾರಿಗಳಾದ ಶ್ರೀ ಎಂ. ಆರ್. ಪಟ್ಟಪ್ಪನವರು ಕಳುಹಿಸಿರುವ ಕ್ರಿಮಿ ನಾಶಕ ಗಂಧದ ಊದಿನ ಕಡ್ಡಿಗಳು ವಿಶೇಷತರವಾದ ಊದುಬತ್ತಿ ಮತ್ತು ಪರಿಮಳದ ಪ್ಯಾಕೆಟ್ಟುಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ವಿಶ್ವದ ಆಕ್ರಮಣಕ್ಕೆ ಅಮೆರಿಕದ ಹಂಚಿಕೆ ?

ಇನ್ನು ಮುಂದೆ ಅಮೆರಿಕವು ಅಖಂಡ ವಿಶ್ವವನ್ನಾಳುವುದಕ್ಕಾಗಿಯೂ ಮತ್ತು ಇತರ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದಕ್ಕಾಗಿಯೂ ದಂಡಯಾತ್ರೆಗಳನ್ನು ನಡೆಸಲು ಯುಕ್ತಿ ಸುತ್ತಿರುವೆಯೆಂಬ ಅಂಶವು ಅಲ್ಲಿನ ಅಧ್ಯಕ್ಷ ಟ್ರೂಮನ್ನರು ಕಾಂಗ್ರೆಸ್ಸಿಗೆ ಕೊಟ್ಟಿರುವ ಹೇಳಿಕೆಯಿಂದ ಸ್ಪಷ್ಟವಾಗುತ್ತದೆಂದು ರಷ್ಯದ ನ್ಯೂಸ್ ಏಜೆನ್ಸಿಯೊಂದು ಟೀಕಿಸಿದೆ. ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸುವುದೇ ತಮ್ಮ ಗುರಿಯೆಂದು ಟ್ರೂಮನ್ನರು ಹೇಳುತ್ತಿದ್ದರೂ ಅಲ್ಲಿನ ಮಿಲಿಟರಿ ಬಲವನ್ನು ಹೆಚ್ಚಿಸುತ್ತಲೇ ಇರುವುದು ಮೇಲ್ಕಂಡ ಸಂಶಯಕ್ಕೆ ಕಾರಣವಾಗಿದೆಯೆಂದು ಹೇಳಲಾಗಿದೆ.

ಜಿನ್ನಾರವರ ಹೆಸರಿನಲ್ಲಿ ಸ್ಟೇಡಿಯಂ

ಪಾಕಿಸ್ತಾನದ ಒಲಂಪಿಕ್ ಸಂಘವು ಮಾಜಿ ಗೌರ್ನರ್ ಜನರಲ್ ದಿ|| ಜಿನ್ನಾರವರ ಹೆಸರಿನಲ್ಲಿ ೪೦ ಲಕ್ಷ ರೂ. ಗಳ ವೆಚ್ಚದಿಂದ ಸ್ಟೇಡಿಯಂ ಒಂದನ್ನು ಕರಾಚಿಯಲ್ಲಿ ಕಟ್ಟಿಸಲು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ.

ಸಾರ್ವತ್ರಿಕ ಚುನಾವಣೆಗೆ ಓಟುದಾರರ ಪಟ್ಟಿ ಕೂಡಲೇ ತಯಾರಾಗಬೇಕು

ಭಾರತ ರಾಜ್ಯಾಂಗ ಸಭೆಯಲ್ಲಿ ನಿರ್ಣಯ

ಬರುವ ವರ್ಷದಲ್ಲಿ ಭಾರತದ ನಾನಾ ಪ್ರಾಂತೀಯ ಮತ್ತು ಸಂಸ್ಥಾನಗಳ ಶಾಸನ ಸಭೆಗಳಿಗೆ ನಡೆಯಲಿರುವ ಚುನಾವಣೆಗಳಿಗೆ ಸಾಧ್ಯವಾಗುವಂತೆ ಆಯಾ ಸರ್ಕಾರಗಳು ವಯಸ್ಕರ ಮತದಾನ ಹಕ್ಕಿನ ಮೇಲೆ ಓಟರುಗಳ ಪಟ್ಟಿಗಳನ್ನು ತಯಾರಿಸಲು ಕೂಡಲೆ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಪ್ರಧಾನಿ ಪಂ|| ನೆಹರೂರವರು ಮಂಡಿಸಿದ್ದ ನಿರ್ಣಯವು ರಾಜ್ಯಾಂಗ ಸಭೆಯಲ್ಲಿ ಅಂಗೀಕೃತವಾಯಿತು. ಅನಂತರ ಸಭೆಯು ೧೫ನೇ ತಾ||ಗೆ ಮುಂದುವರಿಯಿತು.

ಪತಿ ಪತ್ನಿಯರಿಗೆ ಆಮರಣಾಂತ ಶಿಕ್ಷೆ

ಗ್ಲಾಸ್ಗೊ ನಗರದ ವಿಲಿಯಂ ಪಾರ್ಕ್ ಮತ್ತು ಆತನ ಪತ್ನಿ ಮೇರಿ ಎಂಬುವರು ತಮ್ಮ ಮೂರು ಮಕ್ಕಳನ್ನು ತಾವೇ ಕೊಂದರೆಂಬ ಅಪಾದನೆಯ ಮೇಲೆ ಅವರಿಬ್ಬರಿಗೂ ಜೀವಾವಧಿ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ. ಮೊದಲು ಅವರಿಗೆ ಇದಕ್ಕಾಗಿ ವಿಧಿಸಿದ್ದ ಮರಣದಂಡನೆ ಶಿಕ್ಷೆಯನ್ನು ರದ್ದುಗೊಳಿಸಲಾಗಿದೆ.

ರಾಜಾಜಿಯವರಿಗೆ ಶುಭಾಶಯ

ರಾಜಧಾನಿಯ ಧರ್ಮ ಪ್ರವರ್ತಕ ಎಸ್. ರಂಗಸ್ವಾಮಿ ಅಯ್ಯಂಗಾರ್ಯರು ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಕಳುಹಿಸಿದ್ದ ನೂತನ ವರ್ಷದ ಶುಭಾಶಯಕ್ಕಾಗಿ ಅವರು ವಂದನೆಯನ್ನು ಸಲ್ಲಿಸಿ ಪತ್ರ ಬರೆದಿರುತ್ತಾರೆ.

ಚಿಕ್ಕಪೇಟೆ ವರ್ತಕರ ಸಂಘ

ಮೇಲ್ಕಂಡ ಸಂಘಕ್ಕೆ ಹಾಲಿ ಮೆಂಬರಾಗಿ ಇರತಕ್ಕವರು ಪಾರ್ಲಿಯಾನ ಕೊಡಬೇಕಾದ ಚಂದಾ ಬಾಬತ್ತುಗಳನ್ನು ವಸೂಲಿ ಮಾಡುವುದರ ಮೂಲಕ ಮೆಂಬರುಗಳಾಗಬೇಕಾಗಿಯೂ ಮತ್ತು ಹೆಚ್ಚಿಗೆ ಧನ ಸಹಾಯವನ್ನು ಮಾಡಬೇಕಾಗಿಯೂ ಸಂಘದ ಪರವಾಗಿ ಶ್ರೀ ಆರ್. ವೈ. ಸುಬ್ರಹ್ಮಣ್ಯದೀಕ್ಷಿತರು ಪ್ರಾರ್ಥಿಸಿರುತ್ತಾರೆ.

ಪೌರ ಭವಿಷ್ಯ

ತಾ|| ೯-೧ ರಿಂದ ೧೫-೧-೪೯ರವರೆಗೆ

ದೇಶದ ಸ್ವಾಸ್ಥ್ಯ ಆರೋಗ್ಯವು ಈ ವಾರ ಉತ್ತಮವಾಗಿದೆ. ಸರ್ಕಾರ ಕಾರ್ಯಗಳಿಗಾಗಿ ತೆಗೆದುಕೊಳ್ಳಲಾಗುವುದು. ಪ್ರಜಾ ಸಭೆಯಿಂದ ಅಧಿಕ ಲಾಭವುಂಟಾಗುತ್ತದೆ. ಪ್ರಾರಂಭದಲ್ಲಿ ಕೊಂಚ ನಷ್ಟ ಸಂಭವಿಸಬಹುದು. ತಾ|| ೧೩-೧೪ ಧನ ಲಾಭ ಬರುತ್ತದೆ.

ಪ್ರವಾಸ — ಕೈಗೊಂಡ ಕಾರ್ಯಗಳು ಅಧಿಕ ಯಶಸ್ವಿಯಾಗುವ ಸಿದ್ಧಿಯುಂಟು. ಕೋರ್ಟು ಕಛೇರಿ ವ್ಯವಹಾರಗಳಲ್ಲಿಯೂ ಲಭಿಸುವುದು. ಸೌಕರ್ಯ ವ್ಯವಹಾರಗಳಲ್ಲಿ ಬುದ್ಧಿ ತೋರಿಸುವುದು. ಆರೋಗ್ಯ ಚೆನ್ನಾಗಿದೆ. ತಾ|| ೧೧, ೧೨ ಕಾರ್ಯಸಿದ್ಧಿ, ಸುಖ ಪ್ರವಾಸ.

ಮಿಥುನ — ಅನೇಕ ವಿವಾದಗಳ ಪರಿಹಾರ ಈ ವಾರ ಲಭಿಸುವುದು. ಮನೆಯಲ್ಲಿ ಮಕ್ಕಳು ಮುಂತಾದವರ ಆರೋಗ್ಯ ಕೆಡುವುದು. ಯೋಚಿಸಿದ ಕಾರ್ಯಗಳು ಸಫಲವಾಗುವುವು. ತಾ|| ೧೧, ೧೨ ದ್ರವ್ಯಲಾಭ, ಜನ ನಿಂದೆ.

ಕಟಕ — ಆರೋಗ್ಯ ಸಾಧಾರಣವಾಗಿದೆ. ಕೆಲವು ಕೆಲಸಗಳಲ್ಲಿ ನಷ್ಟವುಂಟಾಗ ಬಹುದು. ನೆರೆಹೊರೆಯವರೊಡನೆ ವೈಷಮ್ಯ ಕಟ್ಟಿಕೊಳ್ಳಬೇಡಿ. ಕೈಗೊಂಡ ಕಾರ್ಯಗಳು ಅರ್ಧಕ್ಕೆ ನಿಲ್ಲುವುವು. ತಾ|| ೧೧, ೧೩ ಬಂಧು ವಿರೋಧ, ವಿವಾದ.

ಸಿಂಹ — ಆರ್ಥಿಕ ಮುಗ್ಗಟ್ಟು ಸಂಪೂರ್ಣವಾಗಿ ಬಗೆಹರಿಯುವುದು. ಪ್ರವಾಸದಿಂದ ಮುಂಗಡ ಕಾರ್ಯಗಳು ಯಶಸ್ವಿಯಾಗುವುವು. ಕೈಗೊಂಡ ಕಾರ್ಯಗಳಲ್ಲಿ ಮಿತ್ರರ ನೆರವು ದೊರಕುವುದು. ತಾ|| ೧೧, ೧೨ ಮಿತ್ರದರ್ಶನ, ಸುಖ ಭೋಜನ.

ಕನ್ಯಾ — ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಯೋಚನೆಗಳು ಹೆಚ್ಚುವುವು. ಕೈಗೊಂಡ ಕಾರ್ಯಗಳು ಅಧಿಕ ಯತ್ನದಿಂದ ಮಾತ್ರ ಸಿದ್ಧಿಸುವುವು. ವಾರಾಂತ್ಯದಲ್ಲಿ ಮಿತ್ರರಿಂದ ಕಲಹ ಸಂಭವ. ತಾ|| ೧೧, ೧೪ ಅರ್ಥ ಹಾನಿ, ಸ್ವಲ್ಪ ಶಾಂತಿ.

ತುಲಾ — ಆರ್ಥಿಕ ಸ್ಥಿತಿಯು ಬಿಗಡಾಯಿಸುವುದು. ಯತ್ನಿಸಿದ ಕಾರ್ಯಗಳು ಅರ್ಧಕ್ಕೇ ನಿಲ್ಲುವುವು. ಬರಬೇಕಾದ ಹಣವು ಸಹ ಬಾರದೆ ಕೈಕಟ್ಟಿದಂತಾಗುವುದು. ಆರೋಗ್ಯ ಸಾಧಾರಣವಾಗಿದೆ. ತಾ|| ೧೧, ೧೩ ನಷ್ಟ, ಚಿಂತೆ.

ವೃಶ್ಚಿಕ — ಆರೋಗ್ಯ ಧನಾದಾಯಗಳೆರಡೂ ಉತ್ತಮವಾಗಿವೆ. ಅನೇಕ ಸ್ನೇಹಿತರ ದರ್ಶನ ಲಾಭವಾಗುವುದು. ಕೈಗೊಂಡ ಕಾರ್ಯಗಳು ಅಧಿಕ ಯತ್ನ ಸಿದ್ಧಿಸುವುವು. ತಾ|| [illegible] ಇಷ್ಟ ಸಿದ್ಧಿ, ಧನಲಾಭ.

ಧನು — [illegible] ಸ್ವಲ್ಪ ಕಾರ್ಯಗಳು ಸಿದ್ಧಿಸುವುವು. [illegible] ಮಿತ್ರರಿಂದ ಸಹಾಯ ದೊರೆಯುವುದು. [illegible]

ಮಕರ — [illegible] ಕಾರ್ಯಗಳು ಸಫಲವಾಗುವುವು. [illegible] ಕೋರ್ಟು ಕಛೇರಿ ವ್ಯವಹಾರ [illegible]

ಭೂಪಾಲ್ ಮಂತ್ರಿಮಂಡಲ ರಾಜೀನಾಮೆ ಕೊಡುವುದು

ಭೂಪಾಲಿನಲ್ಲಿ ಇತ್ತೀಚೆಗೆ ಸ್ಥಾಪಿಸಲ್ಪಟ್ಟಿರುವ ಕಾಂಗ್ರೆಸ್ ಮಂತ್ರಿಮಂಡಲವು ರಾಜೀನಾಮೆ ಕೊಡುವುದೆಂದೂ ಅನಂತರ ಅದರ ಪ್ರಧಾನಿ ಪಂಡಿತ ಚತುರನಾರಾಯಣ ಮಾಲವೀಯರವರು ಮಾಳವ ಯೂನಿಯನ್ನಿನಲ್ಲಿ ಸಂಸ್ಥಾನವು ಐಕ್ಯವಾಗುವ ವಿಚಾರವಾಗಿ ಜಾಂ ಚಳುವಳಿಯನ್ನು ಪ್ರಾರಂಭಿಸುವರೆಂದೂ ಹೇಳಲಾಗಿದೆ.

ಅಶೋಕ ಮುದ್ರೆಯ ಹೊಸ ನಾಣ್ಯಗಳು

ಭಾರತ ಸರ್ಕಾರವು ಹೊಸ ಮಾದರಿಯ ನಾಣ್ಯಗಳನ್ನು ಇಷ್ಟರಲ್ಲಿಯೇ ಚಲಾವಣೆಗೆ ತರುವುದೆಂದೂ, ಅವುಗಳ ಒಂದು ಪಕ್ಕದಲ್ಲಿ ಚಕ್ರವರ್ತಿಯ ತಲೆಯ ಬದಲು ಅಶೋಕ ಸ್ತಂಭದ ಮುದ್ರೆಯು ಇರುವುದೆಂದೂ ತಿಳಿದು ಬಂದಿದೆ. ಈಗ ಚಲಾವಣೆಯಲ್ಲಿರುವ ಎರಡು ರೂ. ನ ನೋಟಿನ ಆಕಾರ ಮತ್ತು ಮಾದರಿಯನ್ನೂ ಸಹ ಬದಲಾಯಿಸಲಾಗುವುದೆಂದು ಹೇಳಲಾಗಿದೆ.

---

೧೨ ಧನಪ್ರಾಪ್ತಿ, [illegible] ತಾ|| ೧೧, ೧೪ ಹೊಣೆ ಚಿಂತೆ, ದುರ್ವಾರ್ತೆ.

ಕುಂಭ — ಮನೆಯಲ್ಲಿ ಮಕ್ಕಳು ಮೊದಲಾದವರ ಆರೋಗ್ಯ ಕೆಟ್ಟು ಜಾಗರೂಕತೆಯಿಂದ ನೋಡಿಕೊಳ್ಳಬೇಕಾಗುವುದು. ನೆರೆಹೊರೆಯವರೊಡನೆ ವೃಥಾ ಮನಸ್ತಾಪ ಕಟ್ಟಿಕೊಳ್ಳಬೇಡಿ. ತಾ|| ೧೧, ೧೪ ಆರೋಗ್ಯ ಭಯ, ಜನ ನಿಂದೆ.

ಮೀನ — ಸೌಕರ್ಯ ದಂಧೆಗಳಲ್ಲಿ ಮೇಲಧಿಕಾರಿಗಳ ವಿಶ್ವಾಸಕ್ಕೆ ಪಾತ್ರರಾಗುವಿರಿ. ಯತ್ನಿಸಿದ ಕಾರ್ಯಗಳಲ್ಲಿ ಕೈಗೂಡುವುವು. ಮನೆಯಲ್ಲಿ ಶುಭ ಕಾರ್ಯಗಳು ಜರುಗುವುವು. ತಾ|| ೧೩ ಸುಖ ಪ್ರವಾಸ, ಶುಭ ವಾರ್ತೆ.

ರಾಜಕಮಲ್ ಟಾಕೀಸ್

೭-೧-೪೯ರಿಂದ
ಅವೋಘ ೪ ನೇ ವಾರ
ಪ್ರತಿ ದಿನ ೩ ಆಟಗಳು

ಭಕ್ತ
ಕುಂಬಾರ
(ಕನ್ನಡ)

Morning Shows
Coming [illegible] days
COBRA - WOMAN
In Technicolor
With Mysore Sale
Maria Montez
Jon Hall

ದೆಹಲಿಯಲ್ಲಿ ಚಳಿಯಿಂದ ೬ ಜನರ ಮರಣ

ದೆಹಲಿಯಲ್ಲಿ ವಿಪರೀತ ಚಳಿಯಿಂದ ಮೊನ್ನೆ ದಿನ ೬ ಜನರು ಸತ್ತುಹೋದರೆಂದೂ, ಅವರಲ್ಲಿ ೩ ಮಕ್ಕಳು ಇದ್ದರೆಂದೂ ವರದಿಯಾಗಿದೆ.

ಪ್ಯಾಲಸ್ಟೈನಿನಲ್ಲಿ ಕದನ ನಿಂತಿತು

ಈಜಿಪ್ಟ್ ಮತ್ತು ಯಹೂದ್ಯರು ಪ್ಯಾಲಸ್ಟೈನಿನಲ್ಲಿ ಕದನ ನಿಲಿಸಿ, ಶಾಂತಿ ಒಪ್ಪಂದದ ಮಾತು ಕತೆಗಳನ್ನು ಪ್ರಾರಂಭಿಸಲು ನಿರ್ಧರಿಸಿರುವರೆಂದು ರಕ್ಷಣಾ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ.

ಕರ್ನಾಟಕ ವಿಶ್ವ ವಿದ್ಯಾಲಯದ ಸ್ಥಾಪನೆ

ಕರ್ನಾಟಕಕ್ಕೆ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಬಗ್ಗೆ ಬೊಂಬಾಯಿ ಸರ್ಕಾರದವರು ಒಂದು ಶಾಸನವನ್ನು ಪ್ರಕಟಿಸಿರುತ್ತಾರೆ.

ಏಷ್ಯಾ ರಾಷ್ಟ್ರಗಳ ಸಮ್ಮೇಳನಕ್ಕೆ ಸಯಾಮಿನ ನಿರಾಕರಣೆ

ಇಂಡೊನೇಷ್ಯದ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಪಂಡಿತ ನೆಹರೂರವರು ಕರೆದಿರುವ ಏಷ್ಯಾರಾಷ್ಟ್ರಗಳ ಸಮ್ಮೇಳನವು ಇದೇ ೨೦ನೇ ತಾ|| ದೆಹಲಿಯಲ್ಲಿ ನಡೆಯುವುದು. ಸಯಾಂ ರಾಷ್ಟ್ರವು ಇದರಲ್ಲಿ ಭಾಗವಹಿಸಲು ನಿರಾಕರಿಸಿದೆ.

ಸಿಮೆಂಟ್ ಬೇಕೊ?
ಇಗೋ, ಡಾಲ್ಮಿಯಾ
ಶ್ರೀಘ್ರ ವಾದದ್ದು—ಸರ್ಕಾರದವರು ನಿಗದಿ ಮಾಡಿರುವ ಬೆಲೆಗೆ ಸಿಕ್ಕುವಂಥಾದ್ದು.
— ಏಜೆಂಟರು —
ಸಿ. ಬಿ. ಎಸ್. ಕುಮಾರ್
ಅಶೋಕಾ ರೋಡು, ಮೈಸೂರು

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ ೩ ಆಟಗಳು
ತಾ|| ೮-೧-೪೯ ರಿಂದ ೬ ದಿನಗಳು ಮಾತ್ರ
R K O ರವರ
ಟಾರ್ಜಾನ್ ಅಂಡ್ ದಿ ಹಂಟ್ರೆಸ್
Tarzan & The Huntress
ಪಾತ್ರ ಜಾನ್ ವೆಸ್ಮಿ ಮುಲ್ಲರ್, ಜಾನ್ ಷೆಫೀಲ್ಡ್

ಹೆಂಗಸರಿಗೆ ಅವಶ್ಯಕವಾದ
ಕಾಶ್ಮೀರ ಶಾಲುಗಳು, ರಗ್ಗುಗಳು ಮತ್ತು ವುಲ್ಲನ್ ಸ್ವೆಟರುಗಳು
ಈಗತಾನೆ ಬಂದಿವೆ
ವಿಜಯಲಕ್ಷ್ಮೀ ವಿಲಾಸ
ಶಿವರಾಂಪೇಟೆ, [illegible]
ಡಿಪ್ಲೊಮಸಿ ಮೈಸೂರು.

Printed and published by C. R. Nagarajan at the Sadhvi Press, D. Subbiah Road, Mysore

ಮಹಾತ್ಮರ ಪಾರ್ಥಿವ ದಿನಾಚರಣೆ

ಇದೇ ೩೦ ನೇ ತಾ|| ಗೆ ಮಹಾತ್ಮರು ಮರಣ ಹೊಂದಿ ಒಂದು ವರ್ಷವಾಗುತ್ತದೆಯಾದ್ದರಿಂದ, ಅದರ ಜ್ಞಾಪಕಾರ್ಥವಾಗಿ ದೆಹಲಿಯ ರಾಜಘಾಟಿನಲ್ಲಿ ವಸ್ತು ಪ್ರದರ್ಶನವೊಂದನ್ನು ೩ ದಿನದಿಂದ ೧೫ ದಿನಗಳವರೆಗೆ ನಡೆಸಲು ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಿರುತ್ತಾರೆ. ಗಾಂಧೀಜೀಯವರ ಚಿತ್ರಗಳು, ಪ್ರತಿಮೆಗಳು, ಮತ್ತು ಇತರ ವಸ್ತುಗಳನ್ನು ಅಲ್ಲಿ ಪ್ರದರ್ಶಿಸಲಾಗುವುದು.

ಷೇಕ್ ಅಬ್ದುಲ್ಲರವರಿಗೆ ೧೦೦ ರೂ. ನೋಟುಗಳ ಹಾರ

ಕಳೆದ ವಾರ ಜಮ್ಮುವಿನಲ್ಲಿ ನಡೆದ ಕ್ರೈರ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಧಾನಿ ಷೇಕ್ ಅಬ್ದುಲ್ಲಾರವರಿಗೆ ಅಲ್ಲಿನ ಪ್ರಜೆಗಳು ೧೦೦ ರೂ ನೋಟುಗಳಿಂದ ತಯಾರಿಸಲ್ಪಟ್ಟ ಒಂದು ಹಾರವನ್ನು ಅರ್ಪಿಸಿದರು.

VIDYARTHI SANGHA

Free Coaching Classes

Under the auspices of the above Sangha Revision lecture classes for Intermediate and S. L. C students have already commenced. The classes will be conducted daily between 5-30 p.m. and 7-30 p.m. in D. Banumiah's High School. Last day for admission is 15th Jan. 49. Ladies will also be admitted. (Office hours 5 to 8 p.m.)

R. L. K. Tatachar
Hon. Secretary.

Office —
D. Banumiah's High School Mysore

ಎಸ್. ಎಸ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ ೦ ೧೩ ೦

ಮಹಾ ಸುಗಂಧರಾಜ ತೈಲ —
" ಚಂದನಾದಿ ತೈಲ
ಭೃಂಗಾಮಲಕ ತೈಲ
—ಬೇಸಿಗೆ ಕಾಲಕ್ಕೆ ಉತ್ತಮ, ಅಭ್ಯಂಗನ ತೈಲಗಳು

ಮಹಾಕೇತಕೀ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಶೀಸೆ ೩-೦-೦
ಪಂಚಾಮೃತ— ಮಕ್ಕಳಿಯಾಗಬೇಕಾದ ಸಿದ್ಧ ಸಂಜೀವನ

ಮೈಸೂರು ಆಯುರ್ವೇದಿಕ ಫಾರ್ಮಸಿ
೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು

ರಿಜಿ. ನಂ. 792 ॥ಸಂಸ್ಕೃತಿ॥ ಒಂದಿಕ ಪ್ರತಿಗೆ ೩ ಕಾಸು

ಸಂಪುಟ ೭] ಸೋಮವಾರ ೧೦-೧-೪೯ [ಸಂಚಿಕೆ ೧೬

ನವಜ್ಯೋತಿ ಸ್ಟುಡಿಯೋವಿನಲ್ಲಿ ಸತ್ಕಾರ ಕೂಟ

ಮೈಸೂರು ೧೦.

ಪಂಡಿತ ನೆಹರೂರವರ ಆಗಮನ ಕಾಲದಲ್ಲಿ ನಡೆದ ಕಿಡ್ಡಾ ವ್ಯವಸ್ಥೆಯ ಚಲನ ಚಿತ್ರಗಳನ್ನು ತೆಗೆದುಕೊಂಡ ಡ್ಯಾರಿಫೋರ್ನಿಯದ ಓರಿಯಂಟಲ್ ಇಂಟರ್ ನ್ಯಾಷನಲ್ ಫಿಲಂ ಕಾರ್ಪೋರೇಷನ್ನಿನ ಅಧ್ಯಕ್ಷರಾದ ಮಿ॥ ಮಾಸೆಲ್ ಹೌಸ ಮತ್ತು ಅವರ ಸಹಪಾಠಿಗಳನ್ನು ಸತ್ಕರಿಸಲು ನವಜ್ಯೋತಿ ಸ್ಟುಡಿಯೋವಿನ ಮ್ಯಾನೇಜಿಂಗ್ ಏಜೆಂಟರುಗಳಾದ ಶ್ರೀಗಳು ಜಿ. ಆರ್. ರಾಮಯ್ಯ ಮತ್ತು ವೈ. ಎಸ್. ಹಿರಣ್ಣಯ್ಯನವರುಗಳು ನಿನ್ನೆ ಒಂದು ಸಮಾರಂಭವನ್ನು ಏರ್ಪಡಿಸಿದ್ದರು.

ಕಾರ್ಯ ಗೌರವದ ನಿಮಿತ್ತ ತ್ವರಿತವಾಗಿ ವಿಮಾನವು ಬಂದುದರಿಂದ ಮುಖ್ಯ ಅತಿಥಿಗಳು ಸಮಾರಂಭಕ್ಕೆ ಮುಂಚಿತವಾಗಿಯೇ ತಮ್ಮ ದೇಶಕ್ಕೆ ತೆರಳಬೇಕಾಗಿ ಬಂದಿತು. ಉಪಾಹಾರದ ನಂತರ ಪೌರ ಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ ಜಿ. ಆರ್. ರಾಮಯ್ಯನವರು ಸಭಿಕರನ್ನು ಸ್ವಾಗತಿಸಿ ಮೇಲ್ಕಂಡ ಚಿತ್ರ ಸಂಸ್ಥೆಯವರಿಗೆ ನವಜ್ಯೋತಿ ಸ್ಟುಡಿಯೋವಿನವರು ನೀಡಿದ ನೆರವನ್ನು ವಿವರಿಸಿದರು. ಮತ್ತು ಮೈಸೂರು ಸಂಸ್ಥಾನದಲ್ಲಿ ಆನೆಗಳನ್ನು ಹಿಡಿಯುವ ದೃಶ್ಯವು ವರ್ಣರಂಜಿತ ಚಿತ್ರಗಳ ಮೂಲಕ ಪ್ರಪಂಚದಲ್ಲೆಲ್ಲಾ ಪ್ರಚಾರವಾಗಲು ಅವಕಾಶವುಂಟಾಗಿದೆಯೆಂದು ತಿಳಿಸಿದರು.

ಶ್ರೀ ಟಿ. ವೆಂಕಟರಮಣಯ್ಯನವರು ಭಾಷಣ ಮಾಡಿ, ನವಜ್ಯೋತಿ ಸ್ಟುಡಿಯೋವಿನವರ ಕಾರ್ಯಶಕ್ತಿಗಳನ್ನು ಪ್ರಶಂಸಿಸಿ ಅದು ಇನ್ನೂ ಯಶಸ್ವಿಯಾಗಿ ಮುಂದುವರೆಯಲೆಂದು ಹಾರೈಸಿದರು. ಶ್ರೀ ಪಿ. ಆರ್. ರಾಮಯ್ಯನವರೂ ಸಹ ಮಾತನಾಡಿ ಮೇಲ್ಕಂಡ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸ್ಟುಡಿಯೋವಿನ ಕಲಾವಿದರು ತಮ್ಮ ಸುಮಧುರವಾದ ಗಾಯನದಿಂದ ಅತಿಥಿಗಳನ್ನು ಸಂತೋಷಪಡಿಸಿದರು. ಸಮಾರಂಭದ ದೃಶ್ಯಗಳನ್ನು ಚಲನಚಿತ್ರಗಳ ಮೂಲಕ ತೆಗೆದುಕೊಳ್ಳಲಾಯಿತು. ಸ್ಟುಡಿಯೋವಿನ ವಿವಿಧ ಕಾರ್ಯಕಲಾಪಗಳನ್ನು ನೋಡಿ ಅತಿಥಿಗಳು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು. ಸಂಸ್ಥಾನದ ಹಲವು ಸಮಾರಂಭಗಳ ಚಲನ ಚಿತ್ರಗಳನ್ನು ಪ್ರದರ್ಶಿಸಿದ ನಂತರ ಸಮಾರಂಭವು ಮುಕ್ತಾಯವಾಯಿತು.

ಮಹಾತ್ಮರ ಪುಣ್ಯ ದಿನಾಚರಣೆ

ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸೂಚನೆ

ಈ ತಿಂಗಳು ೩೦ನೇ ತಾ॥ ಗೆ ಮಹಾತ್ಮಾ ಗಾಂಧಿಯವರು ಸ್ವರ್ಗಸ್ಥರಾಗಿ ಒಂದು ವರ್ಷವಾಗುವುದಷ್ಟೆ. ಆ ದಿನವನ್ನು ಗಾಂಧೀಯವರ ಪುಣ್ಯ ಸ್ಮರಣೆಯ ದಿನವಾಗಿ ಆಚರಿಸಬೇಕೆಂದು ನಿನ್ನೆ ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸಭೆಯು ನಿರ್ಣಯವನ್ನು ಮಾಡಿತು. ದೇಶದಲ್ಲಿ ಐಕ್ಯತೆ ಮತ್ತು ಸೋದರಭಾವವನ್ನು ಬೆಳೆಸಲು ಮಹಾತ್ಮರವರು ಹಾಕಿಕೊಟ್ಟ ಮೇಲ್ಕಂಡ ಮುಖ್ಯ ಸಾಧನಗಳೆಂದು ನಮೂದಿಸಿರುತ್ತದೆ. ಆ ದಿನ ಸಭೆಗಳನ್ನು ನಡೆಸಿ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರು ಕಳುಹಿಸಿಕೊಡುವ ಸಂದೇಶವನ್ನು ಅಂಗೀಕರಿಸಿ ಬೇರೆ ಯಾವ ಭಾಷಣಗಳೂ ಇಲ್ಲದೆ ಸಭೆಗಳನ್ನು ಮುಕ್ತಾಯಗೊಳಿಸಬೇಕೆಂದು ಕೋರಲಾಗಿದೆ.

ವಿದ್ಯಾರ್ಥಿ ಕಾಂಗ್ರೆಸ್ಸಿಗೆ ಪುನಃ ಚುನಾವಣೆಯಾಗಬೇಕು.

ಕೆಲವು ದಿನಗಳ ಹಿಂದೆ ವಿದ್ಯಾರ್ಥಿಗಳಲ್ಲಿ ವಿಶ್ವಾಸಕ್ಕೆ ಪಾತ್ರವಾಗಿದ್ದ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸು ಇಂದು ಕೆಲವು ಸ್ವಾರ್ಥ ಸಾಧಕರ ಸ್ವೇಚ್ಛಾವರ್ತನೆಗಳಿಂದ ದಿನೇ ದಿನೇ ಕ್ಷೀಣಸ್ಥಿತಿಗೆ ಬರುತ್ತಿರುವುದು ವಿಷಾದಕರವಾದ ವಿಷಯವಾಗಿದೆ. ಚುನಾವಣೆಯು ನಡೆದು ಅನೇಕ ವರ್ಷಗಳಾಗಿ ಹೋಗಿದೆ. ಮೊನ್ನೆ ಪಂಡಿತ ನೆಹರೂರವರು ಬರುವ ಮುನ್ನ ಚುನಾವಣೆಯ ನಾಟಕ ನಡೆದು ಹೆಚ್ಚು ಜನ ಹಳೇ ಅಧಿಕಾರ ವರ್ಗದವರೇ ಮತ್ತೆ ಬಂದಿದ್ದಾರೆ. ಸಾಮಾನ್ಯ ಸದಸ್ಯರ ಸಭೆಗೆ ಕೋರಂ ಕೂಡಾ ಇರಲಿಲ್ಲವಾದರೂ ಮನ ಬಂದಂತೆ ನಿರ್ಣಯಗಳನ್ನು ಮಾಡಿದ್ದಾರೆ. ಇದೆಲ್ಲವನ್ನೂ ಪ್ರತಿಭಟಿಸಲು ಆಗಲೇ ೪೦ ಜನ ಪ್ರಮುಖ ವಿದ್ಯಾರ್ಥಿ ಮುಖಂಡರುಗಳು ರಾಜೀನಾಮೆ ಯಿತ್ತಿದ್ದಾರೆ, ಮತ್ತು ಇನ್ನೂ ಅನೇಕ ವಿದ್ಯಾರ್ಥಿಗಳು ರಾಜೀನಾಮೆ ಕೊಡಲು ಕಾತುರರಾಗಿದ್ದಾರೆ. ಇಂದಿನ ಅಧಿಕಾರ ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಲೇಶವೂ ವಿಶ್ವಾಸವಿಲ್ಲ. ಆದ್ದರಿಂದ ಅಧಿಕಾರಿ ವರ್ಗವು ಕೂಡಲೇ ಕಣ್ತೆರೆದು ತನ್ನ ಹಿಂದಿನ ತಪ್ಪುಗಳನ್ನೆಲ್ಲಾ ಕೂಡಲೇ ತಿದ್ದಿಕೊಂಡು ಮತ್ತೆ ಚುನಾವಣೆ ನಡೆಸದಿದ್ದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಸ್ತಿತ್ವಕ್ಕೇ ಧಕ್ಕೆ ಬರುವುದರಲ್ಲಿ ಸಂಶಯವೇ ಇಲ್ಲ—ಎಂದು ಚಿತ್ರಕಲಾ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಶ್ರೀ ಹಿ. ಆರ್. ಜಿ. ಸ್ವಾಮಿ ಮತ್ತು ವಿದ್ಯಾರ್ಥಿ ಕಾಂಗ್ರೆಸ್ಸಿನ ಮಾಜಿ ಕಾರ್ಯದರ್ಶಿ ಶ್ರೀ॥ ಉರಿ ಗೌಡರವರು ತಿಳಿಸಿರುತ್ತಾರೆ.

ಜಿ. ಎ. ನಟೇಶನ್ನರವರ ನಿಧನ

ಮದರಾಸಿನ ಸುಪ್ರಸಿದ್ಧ 'ಇಂಡಿಯನ್ ರಿವ್ಯೂ' ಎಂಬ ಮಾಸ ಪತ್ರಿಕೆಯ ಸಂಪಾದಕರಾದ ಶ್ರೀ ಜಿ. ಎ. ನಟೇಶನ್ನರು ನಿನ್ನೆ ರಾತ್ರಿ ಮದರಾಸಿನಲ್ಲಿ ತಮ್ಮ ೭೬ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಭಾರತದ ಪ್ರಮುಖ ನಾಯಕರುಗಳ ಜೀವನ ಚರಿತ್ರೆಗಳನ್ನೂ, ರಾಷ್ಟ್ರೀಯ, ಪುನರುಜ್ಜೀವನದ ವಿಚಾರಗಳನ್ನೊಳಗೊಂಡ ಅನೇಕ ಅಮೂಲ್ಯವಾದ ಗ್ರಂಥಗಳನ್ನೂ ಅವರು ಪ್ರಕಟಿಸಿದ್ದರು.

ಪ್ರಜಾ ಮಂಡಲದವರ ಉಪವಾಸವೇ ?

ಮೈಸೂರು ೧೦

ಇಂದಿನ ಆಹಾರ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಸರ್ಕಾರಕ್ಕೆ ಪ್ರಜಾ ಮಂಡಲದವರು ಮನವಿ ಮಾಡಿಕೊಂಡು ೨೫ ದಿನಗಳಾದರೂ, ಇಲ್ಲಿಯವರೆಗೆ ಸರ್ಕಾರದಿಂದ ಯಾವ ಪರಿಹಾರವೂ ದೊರೆಯದಿರುವುದರಿಂದಲೂ ಮತ್ತು ಬಡ ಜನರ ಜೀವನದ ಜಿಗುಪ್ಸೆ ತಡೆಯಲಾರದೆಯೂ, ರಾಜಧಾನಿಯ ಪ್ರಜಾ ಮಂಡಲದ ಕಾರ್ಯದರ್ಶಿಗಳಾದ ಶ್ರೀ ಎಸ್. ವೆಂಕಟಸುಬ್ಬಯ್ಯ ಶರ್ಮ ಮತ್ತು ಇತರ ಹಲವರು ಇದೇ ೧೭ ನೇ ತಾ॥ ನಿಂದ ಉಪವಾಸವನ್ನು ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಉಪನ್ಯಾಸ

ಕಲ್ಕತ್ತಾ ವಿಶ್ವವಿದ್ಯಾಲಯದ ಮಹಾಮಹೋಪಾಧ್ಯಾಯ ಅನಂತ ಕೃಷ್ಣಶಾಸ್ತ್ರಿಗಳವರು ನಾಳೆ ಸಂಜೆ ೫-೧೫ ಕ್ಕೆ ಮಹಾರಾಜಾ ಕಾಲೇಜಿನಲ್ಲಿ "ಸಂಸ್ಕೃತ ವಿದ್ಯೆಯ ಆವಶ್ಯಕತೆ ಎಂಬ ವಿಚಾರವಾಗಿ ಭಾಷಣ ಮಾಡುವರು.

ಸ್ವರಾಜ್ಯದ ಆದರ್ಶವನ್ನು ಪೌರಸಭೆಗಳು ತೋರಿಸಬೇಕು

ದಿಕ್ಷಿಣತ್ತಿಗೆ ಮವಲಂಕರ ಉಪದೇಶ

ವಿ. ಬಾ.] ಅರಸೀಕೆರೆ ೯.

ಇಲ್ಲಿನ ಪೌರ ಸಭೆಯವರು ಕಸ್ತೂರಿಬಾ ಕೇಂದ್ರದ ಉಪಾಧ್ಯಕ್ಷರಾದ ಶ್ರೀ ಮವಲಂಕರರವರಿಗೆ ಬಿನ್ನವತ್ತಳೆಯನ್ನು ಈ ದಿನ ಟ್ರಾವಲರ್ಸ್ ಬಂಗಲೆಯಲ್ಲಿ ಅರ್ಪಿಸಿದರು. ಶ್ರೀಗಳಾದ ಮವಲಂಕರ್ ಮತ್ತು ಥಕ್ಕರ್ ಬಾಬರವರನ್ನು ಮೆರವಣಿಗೆಯಲ್ಲಿ ಮಾಲೆಕಲ್ ತಿರುಪತಿಯಿಂದ ಅರಸೀಕೆರೆಗೆ ಕರೆದುಕೊಂಡುಬರಲಾಯಿತು.

ಪೌರ ಸಭಾಧ್ಯಕ್ಷರಾದ ಶ್ರೀ ಅನಂತ ನಾಗರಾಜುರವರು ಬಿನ್ನವತ್ತಳೆಯನ್ನು ಓದಿದರು. ಶ್ರೀ ಮವಲಂಕರರು ಉತ್ತರವಿತ್ತು ಸ್ವರಾಜ್ಯವನ್ನು ಉಳಿಸಿಕೊಳ್ಳಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯ ಪಾಲನೆ ಮಾಡಬೇಕೆಂದೂ ಪೌರಸಭೆಗಳು ನಿತ್ಯ ಜೀವನದ ಸಮಸ್ಯೆಯಾದ ನೀರು ನೈರ್ಮಲ್ಯ, ಗೃಹಪಂಕ್ತಿ ಇವೇ ಮುಂತಾದುವುಗಳನ್ನು ಜನಕ್ಕೆ ಒದಗಿಸಿಕೊಡಬೇಕೆಂದೂ, ಯಾವ ವ್ಯಕ್ತಿಯ ಪ್ರಭಾವಕ್ಕೂ ಒಳಗಾಗದೆ ಲಂಚಕೋರತನ ನಿರ್ಮೂಲನ ಮಾಡಬೇಕೆಂದೂ, ಗ್ರಾಮ ಸ್ವರಾಜ್ಯವನ್ನು ಪರಿಪಾಲಿಸಿ ದೇಶದ ಹಿತ ಸಾಧನೆಗಾಗಿ ಪ್ರಜೆಗಳೊಡನೆ ಪರಸ್ಪರ ನಿಕಟ ಬಾಂಧವ್ಯ ಬೆಳೆಸಬೇಕೆಂದೂ ತಿಳಿಸಿದರು.

ಶ್ರೀ ಥಕ್ಕರ್ ಬಾಬಾರವರು ಮಾತನಾಡಿ ಮೈಸೂರಿನ ಕಸ್ತೂರಿಬಾ ಕೇಂದ್ರವು ಉತ್ತಮ ಗ್ರಾಮ ಸೇವಿಕೆಯರನ್ನು ಆರಿಸಿ ಶಿಕ್ಷಣ ಕೊಡುತ್ತಿದೆಯೆಂದೂ ಮೈಸೂರಿನ ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಕೇಂದ್ರವನ್ನು ಆದಷ್ಟು ಜಾಗ್ರತೆ ಏರ್ಪಡಿಸಬೇಕೆಂದೂ ತಿಳಿಸಿದರು.

ಪತ್ರಿಕಾ ಸ್ವಾತಂತ್ರ್ಯಕ್ಕೆ ಸರ್ಕಾರದ ಪುರಸ್ಕಾರ

ಕೆ. ಸಿ. ರೆಡ್ಡಿ ಯವರ ಭರವಸೆ

ಸ್ವಂ. ಸು. ಪೋ॥] ಬೆಂಗಳೂರು ೧೦

ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕ ಸಭೆಯು ನಿನ್ನೆ ನಡೆಯಿತು. ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಟಿ. ಎಲ್ಲಪ್ಪರಾಯರು ಅತಿಥಿಗಳನ್ನು ಸ್ವಾಗತಿಸಿ ಜವಾಬ್ದಾರಿ ಸರ್ಕಾರವು ಬಂದ ಮೇಲೆ ಸಂಸ್ಥಾನದಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗಿದೆಯೆಂದು ಸೂಚಿಸಿದರು.

ಶ್ರೀ ಕೆ. ಸಿ. ರೆಡ್ಡಿಯವರು ಮಾತನಾಡಿ ಪತ್ರಿಕೋದ್ಯಮವು ಬಹಳ ಪವಿತ್ರವಾದ ವೃತ್ತಿಯೆಂದೂ ಅದರ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ಸರ್ಕಾರದವರು ಬದ್ಧಾದರರಾಗಿರುವರೆಂದು ತಿಳಿಸಿದರು. ಸತ್ಯಾಗ್ರಹ ಸಮಯದಲ್ಲಿ ಸಲ್ಲಿಸಿದ ಸೇವೆಗಾಗಿ ಕೃತಜ್ಞತೆಯನ್ನು ಸೂಚಿಸಿದರು. ಆದರೆ ಅನೇಕ ಕ್ಲಿಷ್ಟಪರಿಸ್ಥಿತಿಗಳು ಉದ್ಭವಿಸಿರುವ ಈ ಸಮಯದಲ್ಲಿ ದೇಶದ ಹಿತ ಸಾಧನೆಗಾಗಿ ಪತ್ರಿಕೆಗಳು ತಾವಾಗಿಯೇ ತಮ್ಮ ಮೇಲೆ ಪರಿಮಿತಿಗಳನ್ನು ಹಾಕಿಕೊಂಡು ಆತ್ಮ ಸಂಯಮವನ್ನು ಆಚರಿಸುವುದು ಅವಶ್ಯಕವೆಂದು ಹೇಳಿದರು.

ಹಲವು ಪತ್ರಿಕೆಗಳ ವರ್ತನೆಯ ಬಗ್ಗೆ ಸರ್ಕಾರಕ್ಕೆ ಪುಕಾರುಗಳು ಬರುತ್ತಿದ್ದರೂ ಸಹ ಅವರು ಕಾರ್ಯಕ್ರಮವನ್ನು ಕೈಗೊಳ್ಳದೆ ಕೇವಲ ಒಂದೆರಡು ಸಂದರ್ಭಗಳಲ್ಲಿ ವಿಧಿಯಿಲ್ಲದೆ ಶಾಸನವನ್ನು ಪ್ರಯೋಗಿಸಬೇಕಾಯಿತೆಂದೂ ತಿಳಿಸಿದರು. ಪತ್ರಿಕೆಗಳ ಮೇಲೆ ಸರ್ಕಾರದವರಿಗೆ ಯಾವದುರುದ್ದೇಶವೂ ಇಲ್ಲವೆಂದೂ, ಸಂದ್ಭಾವನೆಯಿಂದ ಕೂಡಿದ ಟೀಕೆಗಳನ್ನು ಅವರು ಸ್ವಾಗತಿಸುವುದಾಗಿಯೂ ತಿಳಿಸಿದರು.

ಬರುವ ವರ್ಷಕ್ಕೆ ಶ್ರೀ ಬಿ. ಎಸ್. ವೆಂಕಟರಾಮ್‌ರವರು ಸಂಘದ ಅಧ್ಯಕ್ಷರಾಗಿಯೂ, ಶ್ರೀ ವ್ಯಾಸರಾಯರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಪಿ. ಆರ್. ವೆಂಕಟೇಶ್ ಮತ್ತು ಜಯಶೀಲರಾಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಸಂಸ್ಥಾನದಲ್ಲಿ ಬೈಸಿಕಲ್ ಕಾರ್ಖಾನೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು. ಪೋ॥] ಬೆಂಗಳೂರು ೧೦.

ತಿಂಗಳಿಗೆ ೩ ಸಾವಿರ ಬೈಸಿಕಲ್ಲುಗಳನ್ನು ತಯಾರು ಮಾಡುವ ಕಾರ್ಖಾನೆಯೊಂದನ್ನು ಸ್ಥಾಪಿಸಲು ಸರ್ಕಾರದವರು ಇಂಗ್ಲೆಂಡಿನ ಡೇರ್ಟ್ ಕಂಪೆನಿಯವರೊಂದಿಗೆ ವ್ಯವಹಾರ ನಡೆಸುತ್ತಿರುವರೆಂದು ಈ ದಿನ ಶಾಸನ ಸಭೆಯಲ್ಲಿ ಶ್ರೀ ಕೆ. ಲಕ್ಕಪ್ಪನವರ ಪ್ರಶ್ನೆಗೆ ಸರ್ಕಾರದವರು ಉತ್ತರವಿತ್ತರು.

ಬ್ರೆಲ್ವಿಯವರ ನಿಧನ

ಭರತದ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳೂ ಮತ್ತು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರೂ ಆಗಿದ್ದ ಶ್ರೀ ಎಸ್. ಎ. ಬ್ರೆಲ್ವಿಯವರು ನಿನ್ನೆ ಮಧ್ಯಾಹ್ನ ಹೃದಯ ವೇದನೆಯಿಂದ ಬೊಂಬಾಯಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಸಂಸ್ಥಾನದಲ್ಲಿ ಮಾದರಿ 'ಕಸ್ತೂರಿ' ಬಾ ನಗರದ ನಿರ್ಮಾಣ

ಕಸ್ತೂರಿ ಬಾ ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ

ವಿ. ಬಾ] ಅರಸೀಕೆರೆ ೮

ಕಸ್ತೂರಿ ಬಾ ಸಂಸ್ಥೆಯ ಕಾರ್ಯಕಾರಿ ಸಮಿತಿ ಮತ್ತು ಏಜೆಂಟರುಗಳ ಸಭೆಯು ಶ್ರೀ ಮಾವಲಂಕರರ ಅಧ್ಯಕ್ಷತೆಯಲ್ಲಿ ಈ ದಿನ ಬೆಳಿಗ್ಗೆ ಇಲ್ಲಿ ನಡೆಯಿತು.

ಪ್ರಾರ್ಥನೆಯಾದನಂತರ ಮೈಸೂರಿನ ಪ್ರತಿನಿಧಿಯಾದ ಶ್ರೀಮತಿ ಯಶೋಧರಮ್ಮನವರು ಸ್ವಾಗತ ಭಾಷಣ ಮಾಡಿ ಬಾಪೂಜಿಯವರ ಅಪ್ಪಣೆಯಂತೆ ಮೈಸೂರಿನಲ್ಲೂ ಕಸ್ತೂರಿ ಬಾ ಕೇಂದ್ರವನ್ನು ತೆರೆಯಲಾಯಿತೆಂದೂ ಅವರು ಇಲ್ಲಿನ ಕೆಲಸ ಕಾರ್ಯಗಳನ್ನು ಬಹಳ ಆಸಕ್ತಿಯಿಂದ ಪರಿಶೀಲಿಸುತ್ತಿದ್ದರೆಂದೂ ಹೇಳಿದರು. ವಿಧಿಯು ಈ ಪ್ರಪಂಚದಿಂದ ಅವರ ಆತ್ಮವನ್ನು ಬೇರ್ಪಡಿಸಿತೆಂದೂ ಸ್ವರ್ಗದಲ್ಲಿಯೂ ಅವರು ನಮ್ಮಗಳ ಕಾರ್ಯವನ್ನು ಪರೀಕ್ಷಿಸುತ್ತಿರುವರಲ್ಲಿ ಸಂದೇಹವಿಲ್ಲವೆಂದೂ ತಿಳಿಸಿದರು. ಮೈಸೂರು ಸರ್ಕಾರದವರು ಇತ್ತ ಜನಾಸಿನಲ್ಲಿ ಆದರ್ಶವಾದ ಕಸ್ತೂರಿ ಬಾ ನಗರವನ್ನು ನಿರ್ಮಿಸಿ ಅಲ್ಲಿ ರಚನಾತ್ಮಕ ಕಾರ್ಯವನ್ನು ಮುಂದುವರಿಸುವುದಾಗಿಯೂ ಸೂಚಿಸಿದರು.

ಶ್ರೀ ಮಾವಲಂಕರರವರ ಭಾಷಣ

ಅನಂತರ ಟ್ರಸ್ಟಿನ ಉಪಾಧ್ಯಕ್ಷರಾದ ಶ್ರೀ ಮಾವಲಂಕರರವರು ಭಾಷಣ ಮಾಡುತ್ತಾ ಈ ರೀತಿ ತಿಳಿಸಿದರು:—

ನಾಡಿನ ಜೀವನಾಡಿಯಂತಿದ್ದ ಮಹಾತ್ಮ ಗಾಂಧಿಜಿಯವರ ಮಾರ್ಗದರ್ಶಿತ್ವವು ಈಗ ನಮಗಿಲ್ಲವಾಗಿದೆ. ಮಹಾತ್ಮರು ಒಳ್ಳೆಯ ಮಾರ್ಗದರ್ಶಿಗಳಾಗಿದ್ದುದಲ್ಲದೆ ಅವರೂ ಸಹ ನಮ್ಮೊಡನೆ ಕೆಲಸ ಮಾಡುತ್ತಿದ್ದರು. ಹಿಂದೂಸ್ಥಾನದಲ್ಲಿ ಅಜ್ಞಾನಾಂಧಕಾರವು ನಿರ್ಮೂಲವಾಗಲು ನುಹಿಳೆಯರು ಶಿಕ್ಷಣ ಪಡೆದು ದೇಶದ ಏಳಿಗೆಗೆ ಸಹಾಯಕರಾಗಬೇಕು. ಈಗ ನಮಗೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆರ್ಥಿಕ ಸ್ವರಾಜ್ಯವು ಬೇಕು. ಸಮಾಜದಲ್ಲಿ ಅವಮಾನತೆಯನ್ನು ತೊಡೆದು ದೇಶದ ಅತಿ ಮುಖ್ಯ ಅವಶ್ಯಕತೆಗಳಾದ ಆಹಾರ, ಬಟ್ಟೆ ಮುಂತಾದವು ಪ್ರತಿ ಪ್ರಜೆಗೂ ದೊರೆತು ಪ್ರತಿಯೊಬ್ಬನೂ ದೃಢಕಾಯನಾಗಿ ವಿದ್ಯಾಬುದ್ಧಿಯನ್ನು ಕಲಿತರೆ ಆಗ ದೇಶದ ಸಂಪತ್ತೂ ಅಭಿವೃದ್ಧಿಯಾಗುವುದು. ಮಹಿಳೆಯರೇ ಮಹಿಳೆಯರಿಗಾಗಿ ದುಡಿಯುತ್ತಿರುವ ಭಾರತದ ಏಕೈಕ ಸಂಸ್ಥೆಯೆಂದರೆ ಕಸ್ತೂರಿ ಬಾ ಕೇಂದ್ರ. ಇಂತಹ ಕೇಂದ್ರಗಳಿಂದ ಶಿಕ್ಷಿತರಾಗಿ ಹೋಗುವ ವಿದ್ಯಾರ್ಥಿನಿಯರು ಅಥವಾ ಗ್ರಾಮ ಸೇವಕಿಯರು ದೇಶದ ಪುನರುದ್ಧಾರ ಕಾರ್ಯಗಳಲ್ಲಿ ಬಹಳ ಶ್ರದ್ಧೆಯಿಂದ ದುಡಿದು ಸ್ವಾವಲಂಬಿಗಳಾಗುವಂತೆ ಮಾಡಬೇಕಾದುದು ನಮ್ಮ ಕರ್ತವ್ಯ. ಪರಸ್ಪರ ವಿಚಾರ ವಿನಿಮಯದಿಂದ ಕೆಟ್ಟ ಭಾವನೆಗಳು ದೂರವಾಗಿ ಒಳ್ಳೆಯ ಕಾರ್ಯಗಳು ನಡೆಯಲು ಅನುಕೂಲವಾಗುವುದು. ರಚನಾತ್ಮಕ ಕಾರ್ಯಕರ್ತರು ಬಾಪೂಜಿಯ ಮಾರ್ಗದರ್ಶಿತ್ವವನ್ನು ಗಮನದಲ್ಲಿಟ್ಟುಕೊಂಡು ದುಡಿಯಬೇಕು. ಇಂತಹ ಸವ್ಯೋಕನವು ನಡೆಯುವುದರಿಂದ ಜನರಲ್ಲಿ ಉದ್ಭವಿಸಿರುವ ಪ್ರಾಂತೀಯ ಮನೋಭಾವವೂ ಸಹ ತೊಲಗುವುದು.

ಕಾರ್ಯದರ್ಶಿಗಳ ವರದಿ

ಅನಂತರ ಕಾರ್ಯದರ್ಶಿಗಳಾದ ಶ್ರೀ ಠಕ್ಕರ್ ಬಾಬಾರವರು ಸಂಸ್ಥೆಯ ವರದಿಯನ್ನು ಓದಿ ಮೈಸೂರಿನಲ್ಲಿ ಕಸ್ತೂರಿಬಾ ಕೇಂದ್ರವು ನಡೆಸುತ್ತಿರುವ ಕೆಲಸವನ್ನು ಪ್ರಶಂಸಿಸಿದರು.

ಕಸ್ತೂರಿಬಾ ನಿಧಿಗೆ ವಸೂಲಾದ ಹಣ ಒಂದು ಕೋಟಿ ಇಪ್ಪತ್ತಾರು ಲಕ್ಷ ರೂ. ಇಲ್ಲಿಯ ವರಿವಿಗೆ ಖರ್ಚಾಗಿರುವುದು ಹನ್ನೊಂದು ಲಕ್ಷ ರೂ. ಭಾರತದಲ್ಲಿ ಸಂಸ್ಥಾನಗಳೂ ಸೇರಿ ಒಟ್ಟು ೬೦೦ ಕೇಂದ್ರಗಳು ಮಹಿಳೆಯರಿಗಾಗಿ ದುಡಿಯುತ್ತಿವೆ. ತಮಿಳು ನಾಡಿನ ಆರ್ಕಾಟ್ ಕೇಂದ್ರದಲ್ಲಿ ಕುಷ್ಠರೋಗಿಗಳಿಗೆ ಒಂದು ವೈದ್ಯ ಶಾಲೆಯನ್ನು ತೆರೆಯಲಾಗಿದೆ. ಪ್ರಾರಂಭದಲ್ಲಿ ವಿದ್ಯಾರ್ಥಿನಿಯರು ಬರದೆ ಕೆಲಸ ಕಾರ್ಯದಲ್ಲಿ ಅಡಚಣೆಯಾಗಿತ್ತು. ಆದರೆ ಈಗ ಎಲ್ಲಾ ಕಡೆಯಲ್ಲೂ ಗ್ರಾಮ ಸೇವಿಕೆಯರು ಬಂದು ಕೆಲಸವು ತೃಪ್ತಿಕರವಾಗಿ ನಡೆಯುತ್ತಿದೆ ಎಂದು ತಿಳಿಸಿದರು.

ಗಣ್ಯ ಅತಿಥಿಗಳು

ಲಂಡನ್ನಿನಲ್ಲಿ ಮಹಾತ್ಮ ಗಾಂಧಿಯವರ ಆಥ್ಯಾಗತರಾಗಿದ್ದ ಮಿಸ್ ಮ್ಯೂರಿಯಲ್ ಲೆಸ್ಟರ್, ಅಮೆರಿಕದ ನೀಗ್ರೋ ನಾಯಕರಾದ ಮಿ|| ಬೆಯಾರ್ಡ್ ರಸ್ಟಿನ್, ಶ್ರೀಮತಿ ಲಕ್ಷ್ಮೀ ದೇವದಾಸ್ ಗಾಂಧಿ, ಶಾಂತಿಕುಮಾರ್, ಎನ್. ಮೊರಾರ್ಜಿ, ಶ್ರೀ ಮಾವಲಂಕರ್, ಕಾರ್ಯದರ್ಶಿ ಠಕ್ಕರ್ ಬಾಬಾ, ಸಹಕಾರ್ಯದರ್ಶಿ ಶ್ರೀ ರಾಮುಲಾಲ್, ಮೃದುಲಾಬೆನ್ ಸಾರಾಭಾಯ್, ದೇವದಾಸ ಗಾಂಧಿ, ಗೋಶಿಬೆನ್ ಕ್ಯಾಪ್ಟನ್, ಶ್ರೀಮತಿ ಸುಶೀಲಾ ಪೈ, ಕೃಷ್ಣದಾಸ ಜಾಜು, ಮತ್ತು ದನ್ನೊಂದು ಪ್ರಾಂತ್ಯಗಳ ಏಜೆಂಟರುಗಳಾದ ಮದ್ರಾಸಿನ ಡಾ|| ಸೌಂದರಂ, ಕರ್ನಾಟಕದ ಉಮಾಬಾಯಿ ಕುಂದಾಪುರ, ಮೈಸೂರಿನ ಯಶೋಧರಮ್ಮ ದಾಸಪ್ಪ, ಮಹಾಕೋಸಲದ ಜಮುನಾಥಾರ್ವರ್, ಸಿ. ಪಿ. ಮತ್ತು ಬರಾರಿನ ಮತ್ತೂವಾಲ, ಮಹಾರಾಷ್ಟ್ರದ ಪ್ರೇಮ ಕಾಂತಕ್, ಗುಜರಾತಿನ ಸರಳಾದೇವಿ ಸಾರಾಭಾಯ್, ಯು. ಪಿ.ಯ ಭಾನು ಚಂದ್ರಶೇಖರನ್, ಬಿಹಾರಿನ ದೇವದೂತ ವಿದ್ಯಾರ್ಥಿ, ಒರಿಸ್ಸಾ ರಮಾದೇವಿ, ಬಂಗಾಳದ ಲಾವಣ್ಯಲತಾ ಚಂದಾ, ಮತ್ತು ವಾರ್ಧದಲ್ಲಿ ಕುಷ್ಠ ರೋಗಿಗಳಿಗಾಗಿ ದುಡಿಯುತ್ತಿರುವ ಡಾ|| ಜಗದೀಶನ್

ಇಂಗ್ಲೆಂಡಿನಲ್ಲಿ ಸಸ್ಯಾಹಾರಿಗಳ ಸಂಖ್ಯೆ ಹೆಚ್ಚುತ್ತಿದೆ

ಇಂಗ್ಲೆಂಡಿನಲ್ಲಿ ಇತ್ತೀಚೆಗೆ ಮಕ್ಕಳು ಜನಿಸಿದ ಕೂಡಲೇ ಅವುಗಳನ್ನು ಸಸ್ಯಾಹಾರಿಗಳೆಂದು ರಿಜಿಸ್ಟರ್ ಮಾಡಿಸಲಾಗುತ್ತಿದೆ. ಗಿಣ್ಣು ಹಾಲು, ಬೆಣ್ಣೆ ಮತ್ತು ಕೊಬ್ಬುಗಳ ಪಡಿತರವನ್ನು ಸಸ್ಯಾಹಾರಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಡುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಅಲ್ಲಿನ ಜಿಲ್ಲೆಯೊಂದರಲ್ಲಿ ಈ ರೀತಿ ೧೦೦೦ ಮಂದಿ ಸಸ್ಯಾಹಾರಿಗಳು ರಿಜಿಸ್ಟರಾಗಿದ್ದಾರೆ. ಆದರೆ ಅವರುಗಳ ಪೈಕಿ ಬಹು ಮಂದಿ ಹೋಟೇಲುಗಳಿಗೆ ಹೋಗಿ ಮಾಂಸಾಹಾರವನ್ನು ಸೇವಿಸುತ್ತಿರುವರೆಂದು ವರದಿಯಾಗಿದೆ.

* ಮೈಸೂರು ಸರ್ಕಾರ ಆಯುರ್ವೇದ ಮತ್ತು ಯುನಾನಿ ಕಾಲೇಜ್ ಕೊನೆಯ ವರ್ಷದ ತರಗತಿಯ ವಿದ್ಯಾರ್ಥಿಗಳು ಡಾ|| ಎಸ್. ವೆಂಕಟನಾರಾಯಣ ರಾಯರೊಂದಿಗೆ ಪುಣೆ, ಬೊಂಬಾಯಿ, ಬರೋಡಾ, ಡೆಹಲಿ, ಹರಿದ್ವಾರ, ಆಗ್ರ, ಸಿಕಂದರಾಬಾದ್ ಮತ್ತು ಬೆಂಗಳೂರುಗಳಿಗೆ ಕಳೆದ ತಿಂಗಳು ಭೇಟಿ ಕೊಟ್ಟು, ಅಲ್ಲಿ ಅನೇಕ ವೈದ್ಯ ಸಂಸ್ಥೆಗಳನ್ನು ಪರಿಶೀಲಿಸಿ ಇದೇ ನೇ ತಾ|| ರಾಜಧಾನಿಗೆ ವಾಪಸು ಬಂದರು.

ಜನವರಿ ೩೧ ನೇ ತಾ|| ಸ್ಮಾರಕ ದಿನಾಚರಣೆ

ಭಾರತಖಂಡಕ್ಕೆ ಸ್ವಾತಂತ್ರ್ಯ ದೊರೆಯುವುದಕ್ಕೆ ಮೊದಲು ಜನವರಿ ೨೬ ನೇ ತಾರೀಖನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಲಾಗುತ್ತಿತ್ತು. ಆ ದಿನವನ್ನು ಈ ವರ್ಷ ಸ್ಮಾರಕ ದಿನವಾಗಿ ಆಚರಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯು ತೀರ್ಮಾನ ಮಾಡಿರುತ್ತದೆ.

ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ

ಡಾ|| ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ಪುನರ್ರಚಿಸಲ್ಪಟ್ಟಿರುತ್ತದೆ. ಸರ್ದಾರ್ ವಲ್ಲಭಭಾಯಿ ಪಟೇಲ್, ಮೌ|| ಅಬುಲ್ ಕಲಾಂ ಆಜಾದ್, ಡಾ|| ರಾಜೇಂದ್ರ ಪ್ರಸಾದ್ ಮತ್ತು ಶ್ರೀ ಎಸ್. ನಿಜಲಿಂಗಪ್ಪನವರು ಸದಸ್ಯರುಗಳು. ಶ್ರೀ ಕಾಲಾ ವೆಂಕಟರಾಯರು ಕಾರ್ಯದರ್ಶಿಗಳು.

MYSORE CITY MUNICIPALITY
NOTICE

Sealed Tenders will be received by the Municipal Engineer for the follwing works on the dates noted against each.

1.	Cement concreting the area of Jutka stand in front of Devaraja Market.	19—1—1949
2.	Construction of cattle pound in Bidara Krishnappa Road, Devaraja Mohalla, Mysore	19-1-1949
3.	Conve ting the ex ting Jutka stand to shops in Vanivilas M halla	19-1-1949

Each tender must be accompanied with ch llan for having remitted Rs. 115, Rs 80 and Rs. 1 0 in the Municipal Treasury as earnest money for item Nos 1, 2 and 3 respectively. For full particulars please see the office Notice Board.

V. K. MUKUNDAN,
Municipal Engineer.

VIDYARTHI SANGHA

Free Coaching Classes

Under the auspices of the above Sangha Revision lecture classes for Intermediate and S.L.C students have already commenced. The classes will be conducted daily between 5-30 p.m. and 7-0 p.m. in D. Banumiah's High School. Last day for admission is 12th Jan. 49. (Ladies will also be admitted) Office hours 5 to 8 p.m.)

R L K Tatachar
Hon. Secretary

Office:—
D. Banumiah's High School, Mysore.

ಎಸ್. ಎ. ಪಂಡಿತ್ ಅವರ

ಸನ್ಸ್ಟರೆ...

ಯೂನಿವರ್ಸಲ್ ಪೆಯಿನ್ ಬಾಮ್ — ತಲೆನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ. ಸೀಸೆ ೦-೧೦-೦

ಮಹಾ ಸುಗಂಧರಾಜ ತೈಲ:—)
„ ಚಂದನಾದಿ ತೈಲ:—)
„ ಭೃಂಗಾಮಲಕ ತೈಲ:—)
— ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಮಹಾಕೇಶವರ್ಧಕ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸ ಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಸೀಸೆ ೩-೦-೦

ಪಂಚಾಮೃತ — ಮಲೇರಿಯಾಗೆಲ್ಲಾ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು.

Edited, printed and published by A. R. Nagarajan at the Sadhvi Press, D. Subbiah Road, Mysore.

॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೧-೧-೪೯ [ಸಂಚಿಕೆ ೧೬೪

ಹೆಚ್ಚಿನ ತೆರಿಗೆ

ಶಾಸನ ಸಭೆಯಲ್ಲಿ ಮಸೂದೆಗಳ ಅಂಗೀಕಾರ

ಬೆಂಗಳೂರು ೧೧

ಕುದುರೆ ಜೂಜಿನ ತೆರಿಗೆಯನ್ನು ಶೇಕಡ ೬ ರಿಂದ ೮ ಕ್ಕೆ ಹೆಚ್ಚಿಸುವುದು, ಅಧಿಕ ಲಾಭದ ತೆರಿಗೆಯ ತಿದ್ದುಪಡಿ, ಕಾರ್ಮಿಕ ಶಾಸನದ ತಿದ್ದುಪಡಿ ಮಸೂದೆಗಳು ನಿನ್ನೆ ಶಾಸನ ಸಭೆಯಲ್ಲಿ ಅಂಗೀಕರಿಸಲ್ಪಟ್ಟವು.

ಕುದುರೆ ಜೂಜನ್ನೇ ಸಂಪೂರ್ಣವಾಗಿ ರದ್ದು ಮಾಡಬೇಕೆಂದೂ ಅದರಿಂದ ಹೆಚ್ಚು ವರಮಾನವನ್ನು ಗಳಿಸುವ ಪ್ರಯತ್ನವು ಸರಿಯಲ್ಲವೆಂದೂ ಹೇಳಿ ಶ್ರೀ ಲಿಂಗೇಗೌಡರು ಮಸೂದೆಯನ್ನು ವಿರೋಧಿಸಿದರು. ಕುದುರೆ ಜೂಜು ರಾಜ ಯೋಗ್ಯವಾದ ಒಂದು ಕ್ರೀಡೆಯೆಂದೂ ಅದನ್ನು ರದ್ದು ಮಾಡುವುದು ಉಚಿತವಲ್ಲವೆಂದೂ ಶ್ರೀ ಥಿಯೋಬಾಲ್ಡ್‌ರವರು ವಾದಿಸಿದರು. ಕಾಲಕ್ರಮದಲ್ಲಿ ಎಲ್ಲಾ ಬಗೆಯ ಜೂಜಾಟವನ್ನೂ ನಿಲ್ಲಿಸುವುದೇ ಸರ್ಕಾರದ ಉದ್ದೇಶವೆಂದೂ, ಸಧ್ಯದಲ್ಲಿ ಅದರ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಲಾಗುವುದೆಂದೂ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ತಿಳಿಸಿದರು.

ಕಾರ್ಮಿಕ ಸಂಘಗಳಲ್ಲಿ ಹೊರಗಿನವರು ಸದಸ್ಯರಾಗಲು ಅವಕಾಶ ಕೊಡುವುದರಿಂದ ಅನರ್ಥ ಉಂಟಾಗುವುದೆಂದು ಜನಾಬ್ ಮಹಮದ್ ಇಮಾಂರವರು ಹೇಳಿದರು. ಕೆಲಸಗಾರರ ಹಿತಸಾಧನೆಯಲ್ಲಿ ಆಸಕ್ತರಾಗಿರುವವರನ್ನು ತೆಗೆದುಕೊಂಡರೆ ಯಾವ ಬಾಧಕವೂ ಇಲ್ಲವೆಂದು ಶ್ರೀ ಭಾಷ್ಯಂರವರು ನುಡಿದರು.

ಕೆಲಸಗಾರರಿಗೆ ಗೃಹ ವಸತಿಗಳನ್ನು ಕಲ್ಪಿಸುವ ಬಗ್ಗೆ ಶ್ರೀ ಕೆ. ಟಿ. ಭಾಷ್ಯಂರವರು ಮಸೂದೆಯನ್ನು ಮಂಡಿಸಿ ಅದರ ವಿವರಗಳನ್ನು ಪರಿಶೀಲಿಸಲು ವಿಶೇಷ ಸಮಿತಿಗೆ ಕಳುಹಿಸಬೇಕೆಂದು ಸೂಚಿಸಿದರು.

ಎ. ಜಿ. ಬಂದೀಗೌಡರು ಸಕ್ಕರೆ ಕಂಪೆನಿ ಅಧ್ಯಕ್ಷರು

ಮಂಡ್ಯದ ಸಕ್ಕರೆ ಕಂಪೆನಿಯ ಅಧ್ಯಕ್ಷರಾಗಿ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾದ ಶ್ರೀ ಎ. ಜಿ. ಬಂದೀಗೌಡರು ನಿನ್ನೆ ಅಧಿಕಾರವನ್ನು ವಹಿಸಿಕೊಂಡರು.

ಸಂಧಾನ ಮಾಡಿಕೊಳ್ಳಲು ಚೀಣಾ ಸರ್ಕಾರದ ಪ್ರಯತ್ನ

ಚೀಣದ ರಾಜಧಾನಿಯಾದ ನಾನ್‌ಕಿಂಗ್‌ನಿಂದ ೧೦೦ ಮೈಲಿ ಉತ್ತರದಲ್ಲಿ ಕಮ್ಯೂನಿಸ್ಟರು ದಾಳಿ ಧಾಳಿಯನ್ನು ಪ್ರಾರಂಭಿಸಿರುತ್ತಾರೆ. ಇದರಿಂದ ಸರ್ಕಾರದವರು ಸಂಧಾನಕ್ಕೆ ಕಾತುರರಾಗಿದ್ದಾರೆಂದು ವರದಿಯಾಗಿದೆ. ಸಂಧಾನ ಮಾತು ಕತೆ ವಿಚಾರವಾಗಿ ಸಧ್ಯ ಚೀಣದಲ್ಲಿರುವ ನಾಯಕರನ್ನು ಭೇಟಿ ಮಾಡಲು ನಾನ್‌ಕಿಂಗ್‌ನಿಂದ ಜನರಲ್ ಚಾಂಗ್ ಚುಂ ಮತ್ತು ಇತರ ಅಧಿಕಾರಿಗಳು ಹೊರಟಿರುತ್ತಾರೆ.

ಹರಿಕಥೆ

ರಾಜಧಾನಿಯ ಚಾಮರಾಜ ಮಂದಿರದ ಬೀದಿಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದಲ್ಲಿ ಈ ದಿನ ರಾತ್ರಿ ೯-೩೦ ಗಂಟೆಗೆ ... ಶ್ರೀನಿವಾಸರಾಯರಿಂದ ಭಕ್ತ ದಾಮಾಜಿ ಎಂಬ ಹರಿಕಥೆ ನಡೆಯುವುದು.

ಸಮಾಜದ ಪುನರುದ್ಧಾರಕ್ಕೆ ಶ್ರಮಿಸಿರಿ

ಸ್ವಾಗತ ಸಮಿತಿಯ ಬಿನ್ನವತ್ತಳೆಗೆ ಮವಲಂಕರರವರ ಉತ್ತರ

ವಿ. ಬಾ.] ಅರಸೀಕೆರೆ ೮

ಅಖಿಲ ಭಾರತ ಕಸ್ತೂರಿ ಬಾ ಕೇಂದ್ರದ ಉಪಾಧ್ಯಕ್ಷರಾದ ಶ್ರೀ ಮವಲಂಕರರವರಿಗೆ ಕಸ್ತೂರಿಬಾ ಸ್ವಾಗತ ಸಮಿತಿಯ ಪರವಾಗಿ ಈ ದಿನ ಬಿನ್ನವತ್ತಳೆಯನ್ನು ಶ್ರೀ ಎ. ಮುರುಗೇಂದ್ರಪ್ಪನವರು ಅರ್ಪಿಸಿದರು. ಅಮೇರಿಕದ ನೀಗ್ರೋ ನಾಯಕರಾದ ಜೇಯಾರ್ಡ್ ರಸ್ಟಿನ್‌ರವರು ಇಂಗ್ಲೀಷಿನಲ್ಲಿ ಪ್ರಾರ್ಥನೆ ನಡೆಸಿದರು.

ಸಮಾಜದ ಪುನರುದ್ಧಾರಕ್ಕೆ ಎಲ್ಲರೂ ಶ್ರಮಿಸಿ ಜಾತಿ ಮತದ ಭೇದಭಾವವಿಲ್ಲದ ನೂತನ ಪ್ರಪಂಚದ ಸೃಷ್ಟಿಗೆ ಕೆಲಸ ಮಾಡಬೇಕಾದುದು ಅಗತ್ಯ. ಆಹಾರ ವಸ್ತ್ರ ಬಟ್ಟೆಗಳನ್ನು ಸರ್ವರಿಗೂ ದೊರಕುವಂತೆ ಮಾಡಬೇಕಾದುದು ಪ್ರಮುಖ ಕರ್ತವ್ಯ. ಬಾಪೂಜಿಯವರ ಮಾರ್ಗದರ್ಶಿತ್ವವನ್ನು ಪಾಲಿಸಬೇಕು—ಎಂದು ಶ್ರೀ ಮವಲಂಕರರವರು ತಿಳಿಸಿದರು.

ಲಂಡನ್ನಿನ ಶ್ರೀಮತಿ ಮ್ಯೂರಿಯಲ್ ಲೆಸ್ಟರ್ ರವರು ಭಾಷಣ ಮಾಡಿ ೧೯೩೧ರಲ್ಲಿ ಮಹಾತ್ಮ ಗಾಂಧಿಯವರು ಇಂಗ್ಲೆಂಡಿನಲ್ಲಿ ತಮ್ಮಲ್ಲಿ ಇಳಿದುಕೊಂಡಿದ್ದ ವಿಷಯವನ್ನು ತಿಳಿಸಿದರು. ದೇವರು ತನ್ನ ಕೆಲಸವನ್ನು ಗಾಂಧೀಜಿಯ ಮೂಲಕ ಮಾಡಿಸುತ್ತಿದ್ದನೆಂದೂ ಈಗ ಅವರ ಆ ಧ್ಯೇಯವನ್ನು ಎಲ್ಲರೂ ಪಾಲಿಸಬೇಕಾದುದು ಅಗತ್ಯವೆಂದೂ ಹೇಳಿದರು. ತಾವು ಪ್ರಪಂಚದಲ್ಲಿ ಶಾಂತಿ ಮತ್ತು ಸತ್ಯವನ್ನು ಪ್ರಚಾರ ಮಾಡಲು ಹೊರಡುವುದಾಗಿಯೂ ತಿಳಿಸಿದರು.

ಶ್ರೀ ಜೇಯಾರ್ಡ್ ರಸ್ಟಿನ್‌ರವರು ಅಮೇರಿಕದಲ್ಲಿ ನೀಗ್ರೋ ಜನರಿಗೆ ಆಗುತ್ತಿರುವ ಅನ್ಯಾಯವನ್ನು ವಿವರಿಸಿದರು. ಭಾರತವು ಸ್ವರಾಜ್ಯ ಗಳಿಸಿ ಸರ್ವರ ಸಮಾನತೆಗೆ ಶ್ರಮಿಸುತ್ತಿರುವುದರಿಂದ ಚೀಣಾ, ಇಂಡೋನೇಷ್ಯ ಮತ್ತು ನೀಗ್ರೋ ಜನರು ತಮ್ಮ ಸ್ವಾತಂತ್ರ್ಯಬಾಧ್ಯತೆ ಕಾಪಾಡಲು ಭಾರತದ ಕಡೆ ನೋಡುತ್ತಿರುವರೆಂದೂ ಭಾರತವು ಈ ಕಾರ್ಯದಲ್ಲಿ ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲವೆಂದೂ ತಿಳಿಸಿದರು.

ಪ್ರೆಲ್ವಿಯವರ ನಿಧನದ ಬಗ್ಗೆ ಸಂತಾಪ

ಪತ್ರಿಕೋದ್ಯಮದಲ್ಲಿ ಭಾರತವು ಒಬ್ಬ ಸುಪ್ರಸಿದ್ಧ ಪುತ್ರನನ್ನು ಕಳೆದುಕೊಂಡಿತು. ಎಂದು ಹೇಳಿ ಶ್ರೀ ದೇವದಾಸ್ ಗಾಂಧಿಯವರು ಶ್ರೀ ಬ್ರೆಲ್ವಿಯವರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ಸೂಚಿಸಿದರು.

ವಿದ್ಯಾಪೀಠಕ್ಕೆ ಶ್ರೀಮನ್ಮಹಾರಾಜರವರ ಭೇಟಿ

ಮೈಸೂರು ೧೧.

ಅಕ್ಷರ ಪ್ರಚಾರ ಸಮಿತಿಯವರು ನಂಜನಗೂಡಿನ ಬಳಿ ನಡೆಸುತ್ತಿರುವ ವಿದ್ಯಾಪೀಠಕ್ಕೆ ಶ್ರೀಮನ್ಮಹಾರಾಜರವರು ನಾಳೆ ಸಂಜೆ ೬-೩೦ ಗಂಟೆಗೆ ಭೇಟಿ ಕೊಡುವರು. ಅನಂತರ ಸ್ಕೌಟ್ ಶಿಬಿರಕ್ಕೆ ತೆರಳಿ ೭-೪೦ ಗಂಟೆಗೆ ಮೈಸೂರಿಗೆ ಹಿಂತಿರುಗುವರು.

ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ಹೊಂಬಾಳೆ ರಂಗಯ್ಯನವರ ಕುಂಚಿಟಿಗರ ವಿದ್ಯಾರ್ಥಿ ನಿಲಯದ ಮೂರನೇ ವಾರ್ಷಿಕೋತ್ಸವವು ಇದೇ ೧೪ ನೇ ತಾ॥ ಬೆಳಿಗ್ಗೆ ೯-೩೦ ಗಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಅನಂತರ ಬಡಬಗ್ಗರಿಗೆ ಅನ್ನದಾನ ಜರುಗುವುದು.

ನಯನಜ ಕ್ಷತ್ರಿಯರಿಗೆ ಉತ್ತೇಜನ ಕೊಡಬೇಕು

ಸಂಸ್ಥಾನದಲ್ಲಿ ನಯನಜ ಕ್ಷತ್ರಿಯರ ಜನಾಂಗದಲ್ಲಿ ೭೫ ಸಾವಿರ—ಜನರಿರುವುದರಿಂದ ಮುಂದೆ ಪ್ರಜಾಪ್ರತಿನಿಧಿ ಸಭೆ, ಶಾಸನ ಸಭೆ ಮತ್ತು ಇತರ ಸಭೆಗಳಲ್ಲಿ ಅವರಿಗೆ ಒಂದು ಸ್ಥಾನವನ್ನು ಸರ್ಕಾರದವರು ಮೀಸಲಾಗಿಡಬೇಕೆಂದೂ, ವಿದ್ಯಾ ಮತ್ತು ಇಂಜನಿಯರಿಂಗ್ ಇಲಾಖೆಗಳಲ್ಲಿರುವ ತಮ್ಮ ಜನಾಂಗದ ಪದವೀಧರರಿಗೆ ಗೆಜೆಟೆಡ್ ಹುದ್ದೆ ಕೊಡಬೇಕೆಂದೂ ಮತ್ತು ಅಸಿಸ್ಟೆಂಟ್ ಕಮೀಷನರ ಹುದ್ದೆಯಲ್ಲಿರುವವರನ್ನು ಡೆಪ್ಯುಟಿ ಕಮೀಷನರ ಹುದ್ದೆಗೆ ಏರಿಸಬೇಕೆಂದೂ ಪುರಸಭಾ ಸದಸ್ಯರಾದ ಶ್ರೀ ಬೇಲೂರಯ್ಯನವರು ಪ್ರಾರ್ಥಿಸಿದ್ದಾರೆ.

ಅಕ್ರಮ ಗಾಂಜ ಮಾರಾಟದ ಪತ್ತೆ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಮಾನಂದವಾಡಿ ರಸ್ತೆಯಲ್ಲಿ ಜಿಯಾ ಉದ್ದೀನ್ ಷರೀಫ್ ಎಂಬುವನು ಕಳ್ಳತನದಲ್ಲಿ ಗಾಂಜವನ್ನು ಮಾರುತ್ತಿದ್ದುದನ್ನು ನಿನ್ನೆ ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಬಿ. ಎಲ್. ತಿಪ್ಪಯ್ಯನವರು ಪತ್ತೆ ಮಾಡಿ, ಅವನ ಅಂಗಡಿಯಲ್ಲಿದ್ದ ೩೨ ಗಾಂಜ ಪೊಟ್ಟಣಗಳನ್ನು ವಶಪಡಿಸಿಕೊಂಡು, ಅವನನ್ನು ದಸ್ತಗಿರಿ ಮಾಡಿರುತ್ತಾರೆ.

ಒಂದು ಲೋಟ ನೀರಿಗೆ ೯ ಆಣೆ

ದಕ್ಷಿಣ ಆಫ್ರಿಕದಲ್ಲಿ ಅನಾವೃಷ್ಟಿ ಮತ್ತು ವಿಪರೀತ ಬಿಸಿಯುಂಟಾಗಿ ನೀರಿಗೆ ಅಭಾವವಾಗಿದೆಯೆಂದೂ, ಜೋಹಾನ್ಸ್‌ಬರ್ಗ್‌ನಲ್ಲಿ ಒಂದು ಲೋಟ ನೀರಿಗೆ ೯ ಆಣೆಯಂತೆ ಮಾರಲಾಗುತ್ತಿದೆಯೆಂದೂ ವರದಿಯಾಗಿದೆ. ಕೇಪ್ ಟೌನ್ ಪ್ರಾಂತ್ಯದಲ್ಲಿ ಅತಿ ಬಿಸಿಯಿಂದ ಹಂದಿ ಮತ್ತು ಇತರ ಪ್ರಾಣಿಗಳು ಸಾಯುತ್ತಿವೆಯೆಂದೂ ಹೇಳಲಾಗಿದೆ.

ಗೋಪಾಲರಾವ್ ವಿಚಾರಣಾ ಸಮಿತಿ

ಶಾಸನ ಸಭೆಯಲ್ಲಿ ಪ್ರಶ್ನೆಗಳ ಸುರಿಮಳೆ

ಸ್ವಂ. ಸು. ಪ್ರೋ.] ಬೆಂಗಳೂರು

ಗೋಪಾಲರಾಯರ ವಿಚಾರಣಾ ಸಮಿತಿಯ ಸ್ಥಾಪನೆ ಬಗ್ಗೆ ಸರ್ಕಾರದವರು ಹೊರಡಿಸಿದ ತುರಾತುರಿ ಕಾನೂನುಗಳ ವಿಷಯವಾಗಿ ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆಗಳ ಸುರಿಮಳೆಗಳಾದುವು.

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಉತ್ತರವಿತ್ತು, ಇದರಿಂದ ಹೈಕೋರ್ಟಿನ ಅಧಿಕಾರಕ್ಕೆ ಚ್ಯುತಿ ಉಂಟಾಗಿಲ್ಲವೆಂದೂ, ಅಂತಹ ಕಾನೂನನ್ನು ಶಾಸನ ಸಭೆಯ ಮುಂದಿಡಬೇಕಾದ ಅಗತ್ಯವಿಲ್ಲವೆಂದೂ ತಿಳಿಸಿದರು. ಪ್ರಪಂಚದಲ್ಲೇ ನಡೆಯದಂತಹ ಹಣಕಾಸಿನ ದಿವಾಳಿಯು ಸಂಭವಿಸಿದುದರಿಂದ ದೇಶದ ಹಿತದೃಷ್ಟಿಯಲ್ಲಿ ವಿಚಾರಣಾ ಸಮಿತಿಯನ್ನು ನೇಮಿಸಿ, ಅದಕ್ಕೆ ವಿಶೇಷ ಅಧಿಕಾರವನ್ನು ಕೊಡಲಾಯಿತೆಂದೂ ಅವರು ಹೇಳಿದರು. ಇದರಿಂದ ಶಾಸನ ಸಭೆಯ ಮತ್ತು ಹೈಕೋರ್ಟಿನ ಅಧಿಕಾರವನ್ನು ಕಿತ್ತುಕೊಳ್ಳಲಾಯಿತೆಂದು ಹೇಳುವುದು ಸರಿಯಲ್ಲವೆಂದೂ ತಿಳಿಸಿದರು.

ಸಂಸ್ಥಾನದಲ್ಲಿ ರೇಯಾನ್ ಕೈಗಾರಿಕೆಯನ್ನು ಸ್ಥಾಪಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದೂ, ೧೦ ಟನ್ನಿನ ಕಾರ್ಖಾನೆಗೆ ೫ ಕೋಟಿ ರೂ. ಮತ್ತು ೩ ಟನ್ನಿನ ಕಾರ್ಖಾನೆಗೆ ೩ ಕೋಟಿ ರೂ. ವೆಚ್ಚವಾಗುವುದೆಂದೂ ಈ ಬಗ್ಗೆ ಸರ್ಕಾರದವರು ಯಾವ ಅಂತ್ಯ ನಿರ್ಧಾರಕ್ಕೂ ಬಂದಿಲ್ಲವೆಂದೂ ಶ್ರೀ ಕೆ. ಸಿ. ರೆಡ್ಡಿಯವರು ಶ್ರೀ ಎಂ. ಲಿಂಗಣ್ಣನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಪ್ರಿಂಟಿಂಗ್ ಪ್ರೆಸ್ಸಿನವರು ಕಾಗದದ ಲೆಕ್ಕ ಕೊಡಬೇಕು

ಸಂಸ್ಥಾನದಲ್ಲಿ ಎಲ್ಲ ಪ್ರಿಂಟಿಂಗ್ ಪ್ರೆಸ್ಸಿನವರೂ ತಮ್ಮಲ್ಲಿರುವ ನ್ಯೂಸ್‌ಪ್ರಿಂಟನ್ನು ಬಿಟ್ಟು ಮಿಕ್ಕ ಕಾಗದದ ವಿಲೇವಾರಿ ಲೆಕ್ಕವನ್ನು ಪ್ರತಿ ೩ ತಿಂಗಳಿಗೊಮ್ಮೆ ಸಿವಿಲ್ ಸಪ್ಲೈ ಕಂಟ್ರೋಲರಿಗೆ ಕಳುಹಿಸಬೇಕೆಂದು ನಮೂದಿಸಲಾಗಿದ್ದರೂ, ಆ ರೀತಿ ಮಾಡುತ್ತಿಲ್ಲವೆಂದೂ, ಅವರುಗಳು ಲೆಕ್ಕಗಳನ್ನು ಕಳುಹಿಸದೆ ಹೋದರೆ ಅವರುಗಳ ಮೇಲೆ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ಸರ್ಕಾರದವರು ಎಚ್ಚರಿಕೆ ಕೊಟ್ಟಿರುತ್ತಾರೆ.

ಗಾಂಧಿ ಸ್ಮಾರಕ ನಿಧಿಗೆ ಬಸ್ಸು ಮಾಲೀಕರ ಸಹಾಯ

ಬೆಂಗಳೂರು ಬಸ್ಸು ಸರ್ವಿಸಿನ ವ್ಯವಸ್ಥಾಪಕರೂ ಮತ್ತು ಕೆಲಸಗಾರರೂ ಗಾಂಧೀ ಸ್ಮಾರಕ ನಿಧಿಗಾಗಿ ೧೦೪೭೬೯ ರೂ. ಗಳನ್ನು ಕೊಟ್ಟಿರುತ್ತಾರೆ. ಇದುವರೆಗೆ ಸಂಸ್ಥಾನದಲ್ಲಿ ನಿಧಿಗೆ ೧೮॥ ಲಕ್ಷ ರೂ. ವಸೂಲಾಗಿದೆ.

ವಿದೇಶಿ ರಾಯಭಾರಿಗಳಲ್ಲಿ ಶಾಂತಿಗಾಗಿ ಚೀಣದ ಮನವಿ

ಚೀಣದ ಕಮ್ಯೂನಿಸ್ಟರೊಂದಿಗೆ ಶಾಂತಿ ಮಾಡಿಕೊಳ್ಳಲು ಸಹಾಯ ಮಾಡಬೇಕೆಂದು ನಾಲ್ಕು ಮಹಾ ರಾಷ್ಟ್ರಗಳ ರಾಯಭಾರಿಗಳಿಗೆ ಚೀಣಾ ಸರ್ಕಾರದವರು ಮನವಿ ಮಾಡಿರುವರೆಂದು ವರದಿಯಾಗಿದೆ. ನಾನ್‌ಕಿಂಗಿನಲ್ಲಿರುವ ರಾಯಭಾರಿಗಳಲ್ಲಿ ಚೀಣದ ವಿದೇಶಾಂಗ ಮಂತ್ರಿ ಡಾ॥ ಉಚಿಚರ್ ರವರು ಈ ಬಗ್ಗೆ ಪ್ರಯತ್ನ ನಡೆಸುತ್ತಿರುವರೆಂದೂ ಹೇಳಲಾಗಿದೆ.

ಕಾಲೇಜು ವಿದ್ಯಾರ್ಥಿಗಳ ವೇತನ ಮತ್ತು ಫೀಜು ರಿಯಾಯಿತಿ

ವಿಶ್ವ ವಿದ್ಯಾಲಯದ ಕಾಲೇಜುಗಳ ಜ್ಯೂನಿಯರ್ ತರಗತಿಗಳಲ್ಲಿ ವೇತನ ಮತ್ತು ಫೀಜು ರಿಯಾಯಿತಿಗಳು ಹೋದ ವರ್ಷದಿಂದಲೂ ಬರುತ್ತಿಲ್ಲ. ಅಂತಹ ವಿದ್ಯಾರ್ಥಿಗಳಿಗೆಲ್ಲಾ ಸೀನಿಯರ್‌ನಲ್ಲೂ ಮುಂದುವರಿಸಬೇಕೆಂದು ಈ ವರ್ಷ ಆಜ್ಞೆ ಮಾಡಲಾಗಿದೆ. ಇದರಿಂದ ಜೂನಿಯರ್ ತರಗತಿಗಳಲ್ಲಿ ಆ ರಿಯಾಯಿತಿ ಪಡೆಯದಿದ್ದ ಅನೇಕ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಹೋದ ವರ್ಷ ಕ್ಲಾಸ್ ಪರೀಕ್ಷೆಗಳು ನಡೆಯದೆ ಇದ್ದುದರಿಂದ ಈ ವರ್ಷ ಸೀನಿಯರ್ ತರಗತಿಯಲ್ಲಿ ಹೊಸದಾಗಿ ಬಂದ ಅರ್ಜಿಗಳನ್ನು ಪರಿಗಣಿಸದಿದ್ದುದರಿಂದ, ಅನೇಕ ಸೀನಿಯರ್ ತರಗತಿ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ನಿಲ್ಲಿಸಬೇಕಾಗಿ ಬಂದಿದೆ. ಆದುದರಿಂದ ವಿದ್ಯಾ ಮಂತ್ರಿಗಳು ಈ ಸಾರಿ ವಿದ್ಯಾರ್ಥಿ ವೇತನ ಮತ್ತು ಫೀಜು ರಿಯಾಯಿತಿಗಳ ಸಂಖ್ಯೆಯನ್ನು ಹೆಚ್ಚಿಸಿ, ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯೊಬ್ಬರು ಪ್ರಾರ್ಥಿಸಿ ಪತ್ರ ಬರೆದಿರುತ್ತಾರೆ.

ರಾಜಕಮಲ್
ಟಾಕೀಸ್

೭-೧-೪೯ರಿಂದ
ಅಮೋಘ ೪ ನೇ ವಾರ
ಪ್ರತಿ ದಿನ 3 ಆಟಗಳು

ಭಕ್ತ
ಕುಂಬಾರ
(ಕನ್ನಡ)

ಕಸ್ತೂರಿ ಬಾ ಸ್ಮಾರಕ ಸಂಸ್ಥೆ

(ವಿ. ಬಾ. ತಂತಿ) ಅರಸೀಕೆರೆ ೧೧.

ಅಖಿಲ ಭಾರತ ಕಸ್ತೂರಿ ಬಾ ಸ್ಮಾರಕ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಮುದ್ದಲಿಂಗಯ್ಯನವರು ನಿನ್ನೆ ರಾತ್ರಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಕಸ್ತೂರಿ ಬಾ ಸ್ಮಾರಕ ಸಂಸ್ಥೆಯ ಧ್ಯೇಯಗಳನ್ನು ವಿವರಿಸಿದರು. ಸೇವಿಕೆಯರಿಗೆ ಶಿಕ್ಷಣ ಕೊಟ್ಟು ಅವರಿಂದ ಹಳ್ಳಿಗಾಡಿನ ಮಹಿಳೆಯರನ್ನು ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಿದರು.

ಸ್ಕೌಟುಗಳ ಪ್ರವಾಸ

ಮೈಸೂರು ಸಿ. ಹಾಕಿನ್ಸ್ ಮಿಷನ್ ಸ್ಕೂಲಿನ ಸ್ಕೌಟುಗಳು ಕಳೆದ ತಿಂಗಳು ೨ನೇ ತಾರೀಖು ಮೈಸೂರಿನಿಂದ ಬೊಂಬಾಯಿಗೆ ಪ್ರಯಾಣ ಮಾಡಿ, ಅಲ್ಲಿಯ ಪ್ರಮುಖವಾದ ಸ್ಥಳಗಳನ್ನು ನೋಡಿಕೊಂಡು ೯ನೇ ತಾರೀಖು ರಾತ್ರಿ ಸುಖವಾಗಿ ಹಿಂದಿರುಗಿದರು. ಸ್ಕೂಲಿನ ಮುಖ್ಯ ಉಪಾಧ್ಯಾಯರಾದ ಶ್ರೀ ಸ. ಮಿತ್ರರವರು ಸ್ಕೌಟುಗಳ ಜೊತೆಯಲ್ಲಿ ಪ್ರಯಾಣ ಮಾಡಿ, ಪ್ರೇಕ್ಷಣೀಯವಾದ ಸ್ಥಳಗಳಿಗೆ ಭೇಟಿ ಕೊಟ್ಟು ಅದರ ಮಹತ್ವವನ್ನು ವಿದ್ಯಾರ್ಥಿಗಳಿಗೆ ವಿವರಪಡಿಸಿದರು.

ಬೆಳಗಿನ ಆಟಗಳು
13-1-49ನೇ ಗುರುವಾರದಿಂದ
೫ ದಿನಗಳು ಮಾತ್ರ
ಮಾಡ್ರನ್ ಪಿಕ್ಚರ್ಸ್‌ರವರ
ಆಫ್ರಿಕಾ ಸ್ಪೀಕ್ಸ್
13 ಭಾಗಗಳ ಪೂರ್ತಾ ಸೀರಿಯಲ್
ಇದು ಮೈಸೂರಿನಲ್ಲಿ ಪ್ರಥಮ ಪ್ರದರ್ಶನ
ಪ್ರಭಾ ಪಿಕ್ಚರ್ ಹೌಸ್

Edited printed and published by A.R Nagarajan at the Sadhvi Press, D Subbiah Road, Mysore

ಗ್ರಾಮಗಳಲ್ಲಿ ಪಿಂಜರಾ ಪೋಲುಗಳ ಅವಶ್ಯಕತೆ

ಹಳ್ಳಿಗಾಡಿನಲ್ಲಿ ಗೋವು ಮತ್ತು ಎತ್ತುಗಳಿಂದ ಜನರು ಹೆಚ್ಚು ಸಹಾಯ ಪಡೆದು ಅವುಗಳು ಮುದಿಯಾದನಂತರ ಅವುಗಳನ್ನು ಸಾಕದೆ ಸಂತೆಗಳಲ್ಲಿ ಕಟುಕರಿಗೆ ಮಾರುತ್ತಿರುವುದು ತುಂಬಾ ವಿಷಾದಕರ. ಪ್ರತಿಯೊಂದು ಗ್ರಾಮ ಪಂಚಾಯಿತಿಯವರೂ ಪಿಂಜರಾ ಪೋಲನ್ನು ಸ್ಥಾಪಿಸಿ ಅಂತಹ ಮುದಿ ರಾಸುಗಳನ್ನು ಅಲ್ಲಿಗೆ ಕಳುಹಿಸಬೇಕು. ರಾಜಧಾನಿಯಲ್ಲಿ ೩೦ ವರ್ಷಗಳಿಂದ ನಡೆಯುತ್ತಿರುವ ಪಿಂಜಾರಾಪೋಲಿಗೂ ಜನರು ಹೆಚ್ಚು ಉತ್ತೇಜನ ಕೊಡಬೇಕು— ಎಂದು ಶ್ರೀ ಹೊಂಬಾಳೆ ರಂಗಯ್ಯನವರು ಪ್ರಾರ್ಥಿಸಿರುತ್ತಾರೆ.

VIDYARTHI SANGHA

Free Coaching Classes

Under the auspices of the above Sangha Revision lecture classes for Intermediate and S. S. L. C. students have already commenced. The classes will be conducted daily between 5-30 p.m. and 7-30 p.m. in D. Banumiah's High School. Last day for admission is 12th Jan 49. (Ladies will also be admitted. Office hours 5 to 8 p.m.)

R. L. K. Tatachar
Hon. Secretary.

Office.—
D. Banumiah's High School Mysore.

ಟಿಸ್ಟಿನ್ ನಗರಕ್ಕೆ ಗಂಡಾಂತರ

ಉತ್ತರ ಚೀಣದಲ್ಲಿರುವ ಟಿಸ್ಟಿನ್ ನಗರಕ್ಕೆ ಗಂಡಾಂತರ ಒದಗಿದೆ. ಕಮ್ಯೂನಿಸ್ಟರ ಅವಿಚ್ಛಿನ್ನ ಫಿರಂಗಿಗಳ ಹೊಡೆತದಿಂದ ಅನೇಕ ಕಟ್ಟಡಗಳು ನಾಶವಾಗಿವೆ. ಜನರು ನಗರವನ್ನು ಬಿಟ್ಟು ಪಲಾಯನ ಮಾಡುತ್ತಿದ್ದಾರೆ. ಉತ್ತರ ಟಿಸ್ಟಿನ್ನಿನ ಕ್ಷೇತ್ರಭೆಯವರು ಸಂಧಾನಕ್ಕಾಗಿ ಪ್ರಯತ್ನಪಡುತ್ತಿದ್ದಾರೆ.

ನವಜೀವನ

ರಾಜಧಾನಿಯಿಂದ ಪ್ರಕಟವಾಗುತ್ತಿದ್ದ 'ನವಜೀವನ' ವಾರ ಪತ್ರಿಕೆಯು ಈಗ ತವು ಬದಲಾವಣೆಯಾಗಿ, ಈಗ ಜಿ. ಎಸ್. ಸುಬ್ರಹ್ಮಣ್ಯಂರವರ ಸಂಪಾದಕತ್ವದಲ್ಲಿ ಹೊರಟಿದೆ. ಅದರ ಪ್ರಕಾಶಕರಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿ ಪತ್ರಿಕೆಯು ಯಶಸ್ವಿಯಾಗಿ ಸೇವೆ ಸಲ್ಲಿಸಲೆಂದು ಹಾರೈಸುತ್ತೇವೆ.

ಪ್ರತಿ ದಿನ ೩ ಆಟಗಳು
12—1—49ನೇ ಬುಧವಾರದಿಂದ
ರಿಪಬ್ಲಿಕ್ ಪಿಕ್ಚರ್ಸ್‌ರವರ
ಡೇರ್ ಡೆವಿಲ್ ಆಫ್
ದಿ ರೆಡ್ ಸರ್ಕಲ್
ಹನ್ನೆರಡುಭಾಗಗಳ ಪೂರ್ತಾ ಸೀರಿಯಲ್
ಒಲಂಪಿಯಾ ಟಾಕೀಸ್

ನಿಮ್ಮ ಮೈ ಮೊಡವೆಗಳಿಂದ
ಹೋಳೆಯಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ ನಿಮಗೂ
ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

ಪೊಂಗಲ್ ಹಬ್ಬದ ದಿನ 14-1-49 ರಿಂದ ದಿನವಹಿ 3 ಆಟಗಳು
ಮೈಸೂರು ಚಾಮುಂಡೇಶ್ವರೀ—ಗಣೇಶಾ
ಬೆಂಗಳೂರು ಸ್ಟೇಟ್ಸ್, ಸೂಪರ್ ಮತ್ತು ಮೂವಿಲ್ಯಾಂಡ್
ಕೆ. ಜಿ. ಎಫ್. ಗೀ ಟಾಕೀಸುಗಳಲ್ಲಿ ಏಕ ಕಾಲದಲ್ಲಿ ಪ್ರದರ್ಶನ
ಸಂಗೀತ, ನಾಟ್ಯ, ಕಥೆ, ತಾರಾಗಣ, ಅಭಿನಯ ಇವುಗಳೆಲ್ಲದರಲ್ಲೂ ಹೊಸ
ವೈಶಿಷ್ಟ್ಯವನ್ನೇ ಕಲ್ಪಿಸಿರುವ ಅಪೂರ್ವ ಚಿತ್ರ
೩ ವರ್ಷಗಳ ಕಾಲದ ತಯಾರಿಕೆ
ಕೃಷ್ಣಾ ಪಿಕ್ಚರ್ಸ್‌ರವರ ಕೃಷ್ಣ ಭಕ್ತಿ ತಮಿಳು ಭಾಷೆ
KRISHNA BHAKTHI (Tamil)
ಶೀಘ್ರದಲ್ಲಿಯೇ ಬೆಂಗಳೂರು ಶ್ರೀ, ಮಂಗಳೂರು ರೂಪವಾಣಿ, ತುಮಕೂರು ರಾಜಾ, ಚಿತ್ರದುರ್ಗ ರೂಪವಾಣಿ, ಹಾಸನ ಪಿಕ್ಚರ್ ಪ್ಯಾಲೇಸ್ ಗಳಲ್ಲಿ
ಮುಖ್ಯ] Distributors SARADA FILMS, 174 Gandhinagar, Bangalore 2

ಪೊಂಗಲ್ ಸಂಕ್ರಾಂತಿ ಎಳ್ಳು ಬೀರುವ ಹಬ್ಬಕ್ಕೆ
ಹೊಸಾ ಹೊಸ ನಮೂನೆಯಲ್ಲಿ ಸೀರೆಗಳು, ಕಣಗಳು ಅನೇಕವಾಗಿ ಬಂದಿವೆ. ಬಂದು ನೋಡಬೇಕಾಗಿ ವಿನಂತಿ.
ಚಾಮುಂಡೇಶ್ವರಿ ಸಿಲ್ಕ್ ಸೀರೆಗಳ ಅಂಗಡಿ, ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು.

ಫೋ ನಂ 792 ||ವಂದೇಮಾತರಂ|| ಇಂದಿನ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೧೨-೧-೪೯ [ಸಂಚಿಕೆ ೧೬೫

ಸರ್ವೋದಯ ದಿನಾಚರಣೆ

ಈ ತಿಂಗಳು ೩೦ ನೇ ತಾರೀಖು ಮಹಾತ್ಮ ಗಾಂಧಿಯವರ ವರ್ಷಾಬ್ದಿಕ

ಮಹಾತ್ಮ ಗಾಂಧಿಯವರ ನಿಧನದ ಪ್ರಥಮ ವಾರ್ಷಿಕ ದಿನವಾದ ಇದೇ ೩೦ ನೇ ತಾರೀಖನ್ನು ಸರ್ವೋದಯ ದಿನವನ್ನಾಗಿ ದೇಶದಾದ್ಯಂತ ಆಚರಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರು ನಿರ್ಧರಿಸಿ ಕೆಳಗೆ ಕಂಡ ನಿರ್ಣಯವನ್ನು ಮಾಡಿರುತ್ತಾರೆ:—

ಮಹಾತ್ಮಾ ಗಾಂಧಿಯವರು ನಮ್ಮನ್ನಗಲಿ ಈಗಾಗಲೇ ಒಂದು ವರ್ಷವಾಗಿ ಹೋಗುತ್ತ ಬಂತು. ಅವರ ನಿಧನದ ವರ್ಷಾಬ್ದಿಕ ದಿವಸವಾದ ಜನವರಿ ೩೦ನ್ನು ದೇಶದಾದ್ಯಂತ 'ಸರ್ವೋದಯ ದಿನ'ವನ್ನಾಗಿ ಆಚರಿಸಬೇಕು. ಆ ದಿನವನ್ನು ಗಾಂಧೀಜೀಯ ತತ್ವಾನುಷ್ಠಾನಕ್ಕಾಗಿ ಮೀಸಲಿಡಬೇಕು. ಆ ಮಹಾತ್ಮನ ನಿಧನದಂದು ರಾಷ್ಟ್ರದ ಜನಕೋಟಿಯು ಮಹಾತ್ಮನ ಸತ್ಯ ಮತ್ತು ಅಹಿಂಸಾ ತತ್ವದ ಮೂಲಕ ಮಾನವರಲ್ಲಿ ಐಕ್ಯತೆಯನ್ನೂ ಸೌಹಾರ್ದ ಭಾವವನ್ನೂ ನೆಲೆಗೊಳಿಸುವ ಮಹಾ ಸಂದೇಶದ ಕಡೆ ಕೇಂದ್ರೀಕರಿಸಬೇಕು. ಈ ಪುಣ್ಯ ದಿನವನ್ನು ಬಾಪೂಜಿಯವರ ಪವಿತ್ರ ಪುಣ್ಯ ಸ್ಮೃತಿಗೆ ಯೋಗ್ಯವಾದಂಥ ಭಕ್ತಿ ಪುರಸ್ಸರ ರೀತಿಯಲ್ಲಿ ಆಚರಿಸಬೇಕು. ಅಂದು ಸಾಮೂಹಿಕ ಸೂತ್ರಯಜ್ಞ ಮತ್ತು ಸಮಾಜ ಸೇವೆಯ ಕಾರ್ಯಗಳನ್ನು ಎಲ್ಲರೂ ಕೈಗೊಳ್ಳಬೇಕು ಬಹಿರಂಗ ಸಭೆಗಳನ್ನು ಸೇರಿಸಿ ಈ ಕೆಳಕಂಡ ಸಂದೇಶವನ್ನು ಓದತಕ್ಕದ್ದು. ಭಾಷಣಗಳನ್ನು ಮಾಡಲಾಗದು.

ಸಂದೇಶ

ತನ್ನ ಸ್ವಾತಂತ್ರ್ಯ ಹೋರಾಟದ ದೀರ್ಘ ಇತಿಹಾಸದಲ್ಲಿ ಭಾರತ ವರ್ಷವು ಬಹುವಿಧವಾದ ದುಃಖವನ್ನೂ, ಇಚ್ಛಾ ಪೂರ್ತಿಯನ್ನೂ, ಯಶಸ್ಸನ್ನೂ ಅನುಭವಿಸಿತು. ಆದರೆ ನಮ್ಮ ರಾಷ್ಟ್ರಪಿತನ ದೈವೀ ನಾಯಕತ್ವದಲ್ಲಿ ದುಃಖವು ನಮ್ಮನ್ನು ಪವಿತ್ರಗೊಳಿಸುವ ಸಾಧನವಾಯಿತು. ನಾವು ಅನುಭವಿಸಿದ ಸೋಲುಗಳು ವಿಜಯಕ್ಕಾಗಿ ಮಾಡಿದ ಹೆಚ್ಚಿನ ಪ್ರಯತ್ನಗಳಿಗೆ ಅವುಪೀಠಿಕೆಯಾಗಿ ಮಾರ್ಪಟ್ಟವು.

ಇತ್ತೀಚಿನ ಕಾಲವಂತೂ ನಮ್ಮ ರಾಷ್ಟ್ರಕ್ಕೆ ಕಷ್ಟಪೂರ್ಣ ಪರೀಕ್ಷಾ ಸಮಯವಾಗಿ ಪರಿಣಮಿಸಿತು. ಆಗಲೂ ಗಾಂಧೀಜೀಯವರ ಸಂದೇಶವೇ ದೇಶಕ್ಕೆ ಸ್ಫೂರ್ತಿ ನೀಡಿತು. ಅಂತಲೇ ಈ ವರ್ಷಗಳಲ್ಲಿ ನಮ್ಮ ಐಕ್ಯತೆಯೂ ಈ ರೀತಿ ಕೆಲವಾರು ತಲೆಮಾರುಗಳಿಂದ ಹೋರಾಡಿದ ಸ್ವಾತಂತ್ರ್ಯವೂ ಸಾಧಿಸಲ್ಪಟ್ಟವು. ಆದರೆ ಆ ಸ್ವಾತಂತ್ರ್ಯ ಸಾಧನೆಯಲ್ಲಿ ನಾವು ತೆತ್ತ ಬೆಲೆ ತುಂಬ ಹೆಚ್ಚಿನದೆಂಬುದೇನೋ ನಿಜ. ಏಕೆಂದರೆ ದುರ್ದೈವೀ ವಿಭಜನೆಯ ಪರಿಣಾಮವಾಗಿ ದೇಶವು ಇಬ್ಭಾಗವಾಯಿತು. ಜನರು ಹುಚ್ಚು ಆವೇಶದ ಸುಳಿಗೆ ಸಿಕ್ಕಿದರು. ತಾತ್ಕಾಲಿಕವಾಗಿ ಗಾಂಧಿ ಬೋಧಿಸಿದ ಪಾಠವೆಲ್ಲ ಮರೆಯಾಯಿತು. ಆದರೆ ಈ ಕರಾಳ ಕತ್ತಲೆಯೊಳು ಬಾಪೂವಿನ ಸ್ಫೂರ್ತಿ ಸಂದೇಶ ಬೆಳಕು ನೀಡಿತು, ಎಷ್ಟೋ ದುಃಖೀ ಹೃದಯಗಳಿಗೆ ಬಲವನ್ನೂ ತೃಪ್ತಿಯನ್ನೂ ನೀಡಿತು.

ಇವೆಲ್ಲದರ ಬಳಿಕ ರಾಷ್ಟ್ರಕ್ಕೆ ಮಹಾಪಿತೃ, ಪ್ರೇಮಮೂರ್ತಿ, ಭಾರತದ ... ಚೈತನ್ಯ ಪುರುಷನಾದ ಆತನ ನಿಧನವು ಕಗ್ಗೊಲೆಯೇ ಆ ಮಹಾ ವಿಪತ್ತು. ಅಂತಲೇ ಹೋರಾಡಿ ಗಳಿಸಿದ ಸ್ವಾತಂತ್ರ್ಯವು ನವ ಚೈತನ್ಯ ಮೂಡಿಸುವ ಬದಲು ದುಃಖವನ್ನೂ ನಿರಾಶೆಯನ್ನೂ ನಮಗೆ ನೀಡಿತು. ಆದರೆ ಗಾಂಧೀಜೀಯ ಪುಣ್ಯಸ್ಮೃತಿಯ ಹಾಗೂ ಅವರ ತತ್ವ ಬೋಧೆಯ ಕೃಪೆಯಿಂದ ಕ್ಷಣಿಕವಾಗಿ ಭಾರತದ ಮನಕ್ಕೆ ಆವರಿಸಿದ್ದ ವಿಷಣ್ಣತೆಯ ಮಂಜು ಹರಿಯಿತು. ದೇಶದ ಎದುರು ನಿಂತಿದ್ದ ಘೋರ ಬಿಕ್ಕಟ್ಟನ್ನು ಎದುರಿಸಲು ನಾಡಿಗೆ ತ್ರಾಣ ಬಂತು.

ನಾಡಿಗೆ ಬಿಡುಗಡೆಯನ್ನೂ ಜೀವ ಕಳೆಯನ್ನೂ ತಂದ ಆತನು ಕಾಲಾಧೀನನಾಗಿ ಒಂದು ವರ್ಷ ತುಂಬಿಹೋಯಿತು. ನಾಡ ತಂದೆಯ ಪ್ರಥಮ ವರ್ಷಾಬ್ದಿಕದ ದಿನ ಇಂದು ಆ ಮಹಾ ವಿಭೂತಿಯ ಉನ್ನತ ಚೇತನಕ್ಕೂ, ಆತ ಸಾರಿದ ಅಮರ ಸಂದೇಶಕ್ಕೂ, ನಮ್ಮ ಎದೆಯಾಳದಿಂದ ಶ್ರದ್ಧಾಂಜಲಿಯನ್ನರ್ಪಿಸುತ್ತೇವೆ ಮತ್ತು ಆತನ ಚೈತನ್ಯದಾಯಕದ ಸಂದೇಶದ ಬೆಳಕಿನಲ್ಲಿ ಭಾರತದ ಮತ್ತು ಜಗತ್ತಿನ ಸೇವೆ ಸಲ್ಲಿಸುವ ಸಂಕಲ್ಪ ತೊಡುತ್ತೇವೆ.

ಗಾಂಧೀಜಿಯ ಅಹಿಂಸಾ ಮಾರ್ಗದಿಂದ ರಾಜಕೀಯ ಸ್ವಾತಂತ್ರ್ಯ ಸಂಪಾದಿಸಿದ ನಾವು ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಾಧನೆಗಾಗಿ ಈಗ ದುಡಿಯಬೇಕಾಗಿದೆ. ಜಾತಿಮತಗಳ ಭೇದವಿಲ್ಲದೆ ಪ್ರಗತಿ-ವಿಕಾಸಗಳು ಎಲ್ಲರಿಗೂ ಒದಗಬೇಕಾಗಿದೆ. ಆ ಮಹಾಕಾರ್ಯ ಸಾಧನೆಯಲ್ಲಿ ರಾಷ್ಟ್ರ ಸೇವೆಗಾಗಿ ನಾವು ಆತ್ಮಾರ್ಪಣೆ ಮಾಡಬೇಕು. ಇದರಲ್ಲಿ ನಮ್ಮ ರಾಷ್ಟ್ರಪಿತನ ಉದಾತ್ತ ಆದರ್ಶವೇ ನಮ್ಮ ಕೈ ದೀವಿಗೆಯಾಗಲಿ.

ಆನೆಯಿಂದ ಕನ್ಯಾಪಹರಣ

ಹಿಮಾಲಯಾ ತಪ್ಪಲಿನ ಗರ್ವಾಲ್ ಪ್ರದೇಶದ ಗುಡ್ಡಗಾಡಿನ ಹುಡುಗಿಯೊಬ್ಬಳು ನದಿಯ ದಡದಲ್ಲಿ ಹೋಗುತ್ತಿದ್ದಾಗ ಕಾಡಾನೆಯೊಂದು ಓಡಿಬಂದು ಆಕೆಯನ್ನು ಸೊಂಡಲಿನಿಂದ ಎತ್ತಿಕೊಂಡು ಹೋಗಿ ಒಂದು ಗುಂಡಿಯಲ್ಲಿ ಹಾಕಿ ಎಲೆ ಮತ್ತು ಮರಳುಗಳಿಂದ ಮುಚ್ಚಿ ಹೊರಟು ಹೋಯಿತೆಂದು ವರದಿಯಾಗಿದೆ. ಅನಂತರ ಜನರು ಬಂದು ಆಕೆಯನ್ನು ಗುಂಡಿಯಿಂದ ಹೊರಗೆ ತೆಗೆಯಲು ಅವಳು ಪ್ರಜ್ಞೆ ತಪ್ಪಿದ್ದಳು ಕೂಡಲೇ ಅವಳನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಛಡಿ ಶಿಕ್ಷೆ ರಜಾ

ಬೆಂಗಳೂರು ೧೨

ಜನರಲ್ ಕ್ಲಾಸಸ್ ತಿದ್ದುಪಡಿ ಮತ್ತು ರದ್ದುಪಡಿ, ಛಡಿ ಶಿಕ್ಷೆ ರದ್ದು, ಪಾರ್ಟ್ನರ್ಶಿಪ್ ಟೆಲ್‌ಗಳು, ವಿದೇಶಿಯ ವಿನಿಮಯ, ಬಂಡವಾಳಗಾರರ ಜವಾಬ್ದಾರಿ, ಇವುಗಳಿಗೆ ಸಂಬಂಧ ಪಟ್ಟ ಮಸೂದೆಗಳು ನಿನ್ನೆ ಶಾಸನ ಸಭೆಯಲ್ಲಿ ಅಂಗೀಕರಿಸಲ್ಪಟ್ಟವು.

ಸಂಸ್ಥಾನದ ಕಸ್ತೂರಿ ಬಾ ಗ್ರಾಮಕ್ಕೆ ೨ ಲಕ್ಷ ರೂ

ಕೇಂದ್ರ ಸಮಿತಿಯಿಂದ ಮಂಜೂರಾತಿ

ವಿ. ಬಾ.] ಅರಸೀಕೆರೆ, ೧೧.

ಅಖಿಲ ಭಾರತ ಕಸ್ತೂರಿ ಬಾ ನಿಧಿಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು. ಈಗ ನಡೆದಿರುವ ಕಾರ್ಯವನ್ನು ಸುವ್ಯವಸ್ಥೆ ಮಾಡಿ ಜಾರಿಗೆ ತರಲು ಹೆಚ್ಚು ಗಮನ ಕೊಡುವುದು. ವಿಶೇಷವಾಗಿ ಮೂಲಶಿಕ್ಷಣಕ್ಕೆ ಮುಂಚಿತವಾದ ವಿದ್ಯಾಭ್ಯಾಸವನ್ನು ಆರಂಭ ಮಾಡುವುದು. ಈ ವರ್ಷ ೩೫೫ ಗ್ರಾಮಸೇವಿಕೆಯರನ್ನು ತರಬೇತು ಮಾಡುವ ಕೇಂದ್ರ, ೭೦ ಹೆಂಗೆ ಕೇಂದ್ರ ಮತ್ತು ೧೬ ಗ್ರಾಮಸೇವಿಕೆಯರ ವಿದ್ಯಾಲಯಗಳನ್ನು ತೆರೆಯುವುದು, ಈ ವರ್ಷಕ್ಕೆ ೧೪ ಲಕ್ಷ ರೂ. ಖರ್ಚಿನ ಅಂಗೀಕಾರ, ವಾರ್ಧದ ಕುಷ್ಠರೋಗಿ ಕೇಂದ್ರ, ನಾಗಪುರದಲ್ಲಿರುವ ಮಹಿಳೆಯರ ಕುರುಡ ಮೂಗರ ಕೇಂದ್ರ ಮತ್ತು ಥಾನ ಜಿಲ್ಲೆಯಲ್ಲಿ ಹೆರಿಗೆ ಆಸ್ಪತ್ರೆ ಇವುಗಳಿಗಾಗಿ ಹಣದ ಸಹಾಯ. ಶ್ರೀಮತಿ ಯಶೋಧರಮ್ಮನವರು ಅರಸೀಕೆರೆ ಬಳಿ ೧೫೦ ಎಕರೆ ಜಮೀನಿನಲ್ಲಿ ತೆರೆಯಬೇಕೆಂದಿರುವ ಕಸ್ತೂರಿ ಬಾ ಗ್ರಾಮದ ಸ್ಥಾಪನೆಗೆ ಒಪ್ಪಿಗೆ ಒಂದು, ಕೇಂದ್ರ ವಿದ್ಯಾಲಯವನ್ನು ಹಿಂದೀ ಮಾತನಾಡುವ ಪ್ರದೇಶದಲ್ಲಿ ತೆಗೆಯುವ ಯೋಜನೆಗೆ ಶ್ರೀಗಳಾದ ಕೃಷ್ಣದಾಸ ಜಾಜು, ಶ್ರೀ ಶಾಮಲಾಲ್, ಮತ್ತು ಶ್ರೀಮತಿ ಸುಶೀಲಾ ಪೈ ಇವರುಗಳನ್ನೊಳಗೊಂಡ ಒಂದು ಉಪಸಮಿತಿಯ ರಚನೆ, ಭಾಷಾನುಗುಣವಾಗಿ ಕಸ್ತೂರಿ ಬಾ ಗ್ರಾಮಗಳನ್ನು ಪ್ರತಿ ಪ್ರಾಂತಕ್ಕೊಂದರಂತೆ ತೆರೆಯುವುದು. ನಿರಾಶ್ರಿತ ಸಿಂಧಿ ಹೆಂಗಸರ ಸಹಾಯಕ್ಕಾಗಿ ೫೫,೦೦೦ ರೂ. ಸಹಾಯ. ಶ್ರೀಮತಿ ಯಶೋಧರಮ್ಮನವರ ಯೋಜನೆಗೆ ೨ ಲಕ್ಷ ರೂ. ಮಂಜೂರ್ಮಾಡಿ ಇವರಲ್ಲಿ ೫೦ ಸಹಸ್ರ ರೂ.ನ್ನು ಕೇಂದ್ರ ಸಮಿತಿಯಿಂದ ಕೊಡತಕ್ಕದ್ದು. ಶ್ರೀಮತಿಯವರ ಯೋಜನೆಯಂತೆ ಈ ಆದರ್ಶ ಗ್ರಾಮದಲ್ಲಿ ಪಶುಪಾಲನೆ, ಗೃಹ ಕೈಗಾರಿಕೆ, ಹೆರಿಗೆ ಆಸ್ಪತ್ರೆ ಮತ್ತು ೨೦೦ ಜನಕ್ಕೆ ಅನುಕೂಲಿಸುವಂತೆ ಒಂದು ಆಸ್ಪತ್ರೆ ತೆರೆಯಲು ಒಪ್ಪಿಗೆ ಕೊಡಲಾಗಿದೆ. ಇದನ್ನು ಸ್ವಪರಿಪೂರ್ಣತೆಯಿಂದ ಕೂಡಿದ ಕೇಂದ್ರವನ್ನಾಗಿ ಮಾಡಲಾಗುವುದು.

ಜನವರಿ ೩೦ ರಿಂದ ಫೆಬ್ರವರಿ ೨೨ ರವರೆಗೆ ಮಹಾತ್ಮ ಗಾಂಧಿ ಮತ್ತು ಕಸ್ತೂರಿ ಬಾ ದಿನಾಚರಣೆ ನಡೆಸಲು ಒಪ್ಪಿ ಆ ದಿನಗಳಲ್ಲಿ ಸಾಮೂಹಿಕ ನೂಲುವಿಕೆ, ಪ್ರಾರ್ಥನೆ, ಹಳ್ಳಿಗಳಿಗೆ ಭೇಟಿ, ಹೊಸ ಕೇಂದ್ರಗಳ ಸ್ಥಾಪನೆ ಮತ್ತು ಬಡವರಿಗೆ ಬಟ್ಟೆ ಮ. ಹಂಚುವುದು—ಇವೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು. ಸೇವಾಗ್ರಾಮದಲ್ಲಿ ಸ್ವಯಂಸೇವಕರುಗಳಿಗೆ ಒಂದು ಕೇಂದ್ರವನ್ನು ತೆರೆದು ಅದರಲ್ಲಿ ಪ್ರಾಂತೀಯ ಏಜೆಂಟುಗಳಿಗೆ ಶಿಕ್ಷಣ ಕೊಡುವುದು.

ರಿಕ್ರೂಟ್‌ಮೆಂಟ್ ಬಗ್ಗೆ ಕಾಂಗ್ರೆಸ್ ಉಪಸಮಿತಿ

ಶಾಸನ ಸಭೆಯಲ್ಲಿ ಪ್ರಶ್ನೆಗಳು

ಸ್ವಂ. ಸು. ಫೋ] ಬೆಂಗಳೂರು ೧೨

ಸಂಸ್ಥಾನದಲ್ಲಿ ರಿಕ್ರೂಟ್‌ಮೆಂಟ್ ವಿಚಾರದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರಿಂದ ರಚಿಸಲ್ಪಟ್ಟ ಉಪ ಸಮಿತಿಯ ವರದಿಯು ಸರ್ಕಾರಕ್ಕೆ ಬಂದಿಲ್ಲವೆಂದೂ, ಈ ರೀತಿ ಸಲಹೆ ಕೊಡಬೇಕೆಂದು, ಕಾರ್ಯಕಾರೀ ಸಮಿತಿಗೆ ಸರ್ಕಾರದವರು ಸೂಚನೆ ಕೊಟ್ಟಿಲ್ಲವೆಂದೂ, ಭಾರತ ಸರ್ಕಾರದಿಂದ ಈ ವಿಚಾರದಲ್ಲಿ ಯಾವ ಸೂಚನೆಯೂ ಬಂದಿಲ್ಲವೆಂದೂ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಆಡಳಿತಾಂಗ ಮತ್ತು ನ್ಯಾಯಾಂಗವನ್ನು ಪ್ರತ್ಯೇಕ ಪಡಿಸುವ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಸಚಿವ ಶ್ರೀ ಭಾಷ್ಯಂರವರು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

○ ಆಲೂಗೆಡ್ಡೆಯನ್ನು ಸಂಸ್ಥಾನದಿಂದ ಹೊರಕ್ಕೆ ಕಳುಹಿಸಕೂಡದೆಂಬ ನಿಷೇಧವನ್ನು ಮುಂದಿನ ತಿಂಗಳು ಕೊನೆಯವರೆಗೂ ಸರ್ಕಾರದವರು ತೆಗೆದುಹಾಕಿರುತ್ತಾರೆ.

ಚಿಯಾಂಗರು ಫಾರ್ಮೋಸಾಕ್ಕೆ ಓಡುವರೇ?

ಮಧ್ಯ ಚೀಣದ ದಂಡನಾಯಕರಾದ ಜ॥ ಹೆಮಿಂಗ್ ಹಿಸಿಯವರ ಸಹಾಯವನ್ನು ಪಡೆಯಲು ಚೀಣದ ಉನ್ನತಾಧಿಕಾರಿಗಳು ಹಾಂಕ್ಕೆಗೆ ತೆರಳಿರುತ್ತಾರೆ ಇತ್ತೀಚೆಗೆ ಆ ಸೇನಾನಿಯು ಸರ್ಕಾರದ ಪಕ್ಷವನ್ನು ಬಿಟ್ಟು ಸ್ವತಂತ್ರರಾಗಿದ್ದಾರೆಂದು ಹೇಳಲಾಗಿದೆ. ಚಿಯಾಂಗ್‌ರು ಸಹ ಅವರನ್ನು ಭೇಟಿ ಮಾಡಬಹುದೆಂದೂ, ಈ ಮಾತುಕತೆಗಳು ಸಫಲವಾದಲ್ಲಿ, ಚಿಯಾಂಗರು ಕಮ್ಯೂನಿಸ್ಟರೊಂದಿಗೆ ಶಾಂತಿ ಮಾಡಿಕೊಳ್ಳಲು ಒಪ್ಪುವರೆಂದೂ ಅಥವ ರಾಜೀನಾಮೆ ಕೊಟ್ಟು ಫಾರ್ಮೋಸಾಕ್ಕೆ ಓಡಿ ಹೋಗುವರೆಂದೂ ವರದಿಯಾಗಿದೆ.

ಭಾಷಾವಾರು ಪ್ರಾಂತ್ಯಗಳಾಗಿ ಹೈದರಾಬಾದಿನ ವಿಭಜನೆಯೆ?

ಹೈದರಾಬಾದ್ ಸಂಸ್ಥಾನವನ್ನು ತೆಲಗು, ಮರಾಠ, ಮತ್ತು ಕರ್ನಾಟಕ ಪ್ರಾಂತ್ಯಗಳಿಗೆ ಹಂಚಬೇಕೆಂಬ ನಿರ್ಣಯವನ್ನು ಅಲ್ಲಿನ ಸಂಸ್ಥಾನ ಕಾಂಗ್ರೆಸ್ಸಿನವರು ತಯಾರಿಸುತ್ತಿದ್ದಾರೆಂದೂ, ಅದನ್ನು ಮುಂದೆ ಅಲ್ಲಿ ರಚಿತವಾಗಲಿರುವ ರಾಜ್ಯಾಂಗ ಸಭೆಯ ಮುಂದೆ ಮಂಡಿಸಲಾಗುವುದೆಂದೂ ವರದಿಯಾಗಿದೆ.

ಉಪನ್ಯಾಸ

ಮೈಸೂರು ೧೨

ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಈ ದಿನ ಸಂಜೆ ೬ ಗಂಟೆಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದ ನಿವೃತ್ತ ಸಂಸ್ಕೃತ ಪ್ರೊಫೆಸರಾದ ಮಹಾಮಹೋಪಾಧ್ಯಾಯ ಅನಂತ ಕೃಷ್ಣಶಾಸ್ತ್ರಿಗಳು ವಿದ್ಯಾರ್ಥಿಗಳ ಕರ್ತವ್ಯ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಶ್ರೀ ಪಿ. ಸೀತಾರಾಮಯ್ಯನವರ ವಂದನೆ

ಪುರಸಭಾಧ್ಯಕ್ಷರಾಗಿದ್ದ ಶ್ರೀ ಪಿ ಸೀತಾರಾಮಯ್ಯನವರು ತಮ್ಮ ಅಧಿಕಾರವನ್ನು ಬಿಡುವ ಮುನ್ನ ಒಂದು ಹೇಳಿಕೆಯನ್ನಿತ್ತು ತಮಗೆ ನೆರವು ಮತ್ತು ಸಹಕಾರವನ್ನು ನೀಡಿದ ನಗರದ ಪ್ರಜೆಗಳಿಗೆ ವಂದನೆಯನ್ನು ಅರ್ಪಿಸಿರುತ್ತಾರೆ. ತಮ್ಮ ಕಾರ್ಯಗಳಲ್ಲಿ ಸಹಕರಿಸಿದುದಕ್ಕಾಗಿ ಪೌರಸಭಾ ಸದಸ್ಯರುಗಳನ್ನೂ ಮತ್ತು ನೌಕರರನ್ನೂ ವಹ ವಂದಿಸಿರುತ್ತಾರೆ. ತಾವು ತಮ್ಮ ... ತಿಂಗಳಿನ ಅವಧಿಯಲ್ಲಿ ಎಷ್ಟೋ ಕಾರ್ಯಗಳನ್ನು ಪೂರೈಸಲು ಸಾಧ್ಯವಾಗಿಲ್ಲವೆಂದೂ ಅದಕ್ಕೆ ದೇಶದ ಆರ್ಥಿಕ ಪರಿಸ್ಥಿತಿಯೇ ಕಾರಣವೆಂದೂ ತಿಳಿಸಿರುತ್ತಾರೆ. ತಮ್ಮ ನಂತರಬಂದಿರುವ ಶ್ರೀ ಟಿ ವೆಂಕಟರಮಣಯ್ಯನವರಿಗೆ ಸಂಪೂರ್ಣ ಯಶಸ್ಸು ಉಂಟಾಗಲೆಂದು ಹಾರೈಸಿರುತ್ತಾರೆ.

ವಾರ್ಷಿಕೋತ್ಸವ

ರಾಜಧಾನಿಯ ನೇತಾಜಿ ಪ್ರಟಿ ಬಾಲ ಕ್ಲಬ್ಬಿನ ವಾರ್ಷಿಕೋತ್ಸವವು ಮೊನ್ನೆ ದಿನ ಶ್ರೀರಂಗಪಟ್ಟಣದಲ್ಲಿ ಶ್ರೀ ಹೆಚ್ ಕೆ ಕುಮಾರ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸತ್ಯನಾರಾಯಣ ಪೂಜೆ

ರಾಜಧಾನಿಯ ಚಾಮುಂಡಿ ಬಡಾವಣೆ ... ನೇ ಮನೆಯಲ್ಲಿರುವ ಶ್ರೀ ರಾಜರಾಜೇಶ್ವರೀ ಸನ್ನಿಧಾನದಲ್ಲಿ ಪೊಂಗಲ್ ಸಂಕ್ರಾಂತಿ ಪ್ರಯುಕ್ತ ಇದೇ ೧೪ ನೇ ತಾ|| ಶ್ರೀ ಸತ್ಯನಾರಾಯಣ ಪೂಜೆ ನಡೆಯುವುದು. ಭಕ್ತಾದಿಗಳು ಸಹಾಯ ಮಾಡಬೇಕೆಂದು ಕೋರಲಾಗಿದೆ.

ಪ್ರಭಾ 14-1-49ರಿಂದ ದಿನವಹಿ ೩ ಆಟಗಳು

- ದೇಖೋಜಿ -

(ಹಿಂದಿ)

• ಮುಮ್ತಾಜ್ ಶಾಂತಿ •

ಇವರೊಂದಿಗೆ ಮೊದಲನೆಯ ವಾರದಲ್ಲಿ ಇತ್ತೀಚಿನ ಅಖಿಲ ಭಾರತದ

ಜಯಪೂರ್ ಕಾಂಗ್ರೆಸ್

ಅಧಿವೇಶನದ ದೃಶ್ಯಗಳನ್ನು ತೋರಿಸಲಾಗುತ್ತೆ

ಸಿಮೆಂಟ್ ಕೂಡಲೇ ದೊರಕುತ್ತದೆ

ವಿವರಗಳಿಗೆ

ದಿ ಇಂಟರ್ ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,

... ಪ್ರಿನ್ಸ್ ಆಫ್ ವೇಲ್ಸ್ ರಸ್ತೆ, ಮೈಸೂರು. ಇವರಲ್ಲಿ ವಿಚಾರಿಸಿ

Office of the Municipal Engineer, City Municipal Council, Dated 5 1-49

NOTIFICATION

Sealed tenders will be received up to 4 p. m on 21 1949 by the Municipal Engineer for shifting the cattle shed as per existing design at Municipal Farm, Mysore.

Each tender must be accompanied with a challan for having remitted Rs. 110 in the Municipal Treasury as earnest money. For full particulars please see the detailed notification on the Notice Board.

V K. MUKUNDAN,
Municipal Engineer.

ಪ್ರತಿ ದಿನ ೩ ಆಟಗಳು

14—1—49ನೇ ಶುಕ್ರವಾರದಿಂದ

ರಿಪಬ್ಲಿಕ್ ಪಿಕ್ಚರ್ಸ್‌ರವರ

ಡೇರ್ ಡೆವಿಲ್ ಆಫ್ ದಿ ರೆಡ್ ಸರ್ಕಲ್

ಹನ್ನೆರಡುಭಾಗಗಳ ಫೈಟಿಂಗ್ ಸೀರಿಯಲ್

ಒಲಂಪಿಯಾ ಟಾಕೀಸ್

Printed, edited and published by A R Nagarajan at the Sadhvi Press, D Subbiah Road, Mysore

ಸರ್ ಆರ್ಕಾಟರಿಗೆ ವಿಶ್ವ ಸಂಸ್ಥೆಯ ಪ್ರತಿನಿಧಿ ಹುದ್ದೆಯೆ?

ಅಸ್ಸಾಂ ಪ್ರಾಂತ್ಯದ ಗೌರ್ನರ್ ... ಗೆ ಕಾಂಗ್ರೆಸ್ಸಿನವರೊಬ್ಬರನ್ನೇ ನೇಮಕ ಮಾಡಬೇಕೆಂದು ಅಲ್ಲಿನ ಪ್ರಧಾನಿಯ ಅಭಿಪ್ರಾಯವಿದ್ದಂತಿರುವುದರಿಂದಲೂ ಈ ಬಗ್ಗೆ ಅವರು ಡಾ|| ಸುಬ್ಬರಾಯನ್‌ರೊಡನೆ ಸಮಾಲೋಚನೆನಡೆಸಿರುವುದಲೂ ಡಾ|| ಸುಬ್ಬರಾಯರ್‌ರವರನ್ನೇ ... ನೇಮಿಸಲಾಗುವುದೆಂದು ... ಲಾಗಿದೆ. ಈಗ ಸರ್ ರಾಮಸ್ವಾಮಿ ಮುದಲಿಯಾರ್‌ರವರನ್ನು ವಿಶ್ವ ಸಂಸ್ಥೆಗೆ ... ತದ ಖಾಯಂ ಪ್ರತಿನಿಧಿಗಳಾಗಿ ನೇಮಿಸಬಹುದೆಂದು ಹೇಳಲಾಗುತ್ತಿದೆ.

ನರಿ ಮತ್ತು ಹಾವುಗಳ ಹೋರಾಟ

ಉತ್ತರ ಮಲಬಾರಿನ ... ನರಿ ಮತ್ತು ಹಾವು ಜಗಳವಾಡಿ ... ಯಲ್ಲಿ ಎರಡೂ ಸತ್ತುಹೋದ ಪ್ರಸಂಗ ವರದಿಯಾಗಿದೆ. ನರಿಯ ಶರೀರದಲ್ಲಿ ಹಾವು ಕಚ್ಚಿದ ಮತ್ತು ಹಾವಿನ ಮೈಮೇಲೆ ನರಿಯು ಕಚ್ಚಿದ ಗುರುತುಗಳು ಇದ್ದವೆಂದೂ ಹೇಳಲಾಗಿದೆ.

ನ್ಯೂಸ್ ಪ್ರಿಂಟ್

...5 ಆಕಾರದಲ್ಲಿ ...0 ಪೌಂಡ್ ತೂಕದಲ್ಲಿ ನಾರ್ವೀಜಿಯನ್ ನ್ಯೂಸ್ ಪ್ರಿಂಟ್ ದೊರೆಯುತ್ತದೆ. ಕೂಡಲೆ ವಿಚಾರಿಸಿರಿ.

ಶೇಷಾಚಲ ಸ್ಟೋರ್ಸ್

ನಾರಾಯಣ ಶಾಸ್ತ್ರಿ ರೋಡ್
ಮೈಸೂರು

USE KERALA INDUSTRIAL COMBINE'S DHOBI WASHING SOAPS

Distributors:— MAHARASHTRA AGENCIES Mysore & Bangalore

ಪೊಂಗಲ್ ಹಬ್ಬದ ದಿನ 14-1-49 ರಿಂದ ದಿನವಹಿ 3 ಆಟಗಳು

ಮೈಸೂರು ಚಾಮುಂಡೇಶ್ವರೀ-ಗಣೇಶಾ

ಬೆಂಗಳೂರು ಸ್ಟೇಟ್ಸ್, ಸೂಪರ್ ಮತ್ತು ಮೂವಿಲ್ಯಾಂಡ್

ಕೆ.ಜಿ.ಎಫ್. ನೇ ಟಾಕೀಸುಗಳಲ್ಲಿ ಏಕ ಕಾಲದಲ್ಲಿ ಪ್ರದರ್ಶನ

ಸಂಗೀತ ನಾಟ್ಯ ಕಥೆ, ಹಾಡುಗಳು, ಅಭಿನಯ ಇವುಗಳೆಲ್ಲದರಲ್ಲೂ ಹೊಸ ಶೈಲಿ ... ಅಸದೃಶ ಚಿತ್ರ

೩ ವರ್ಷಗಳ ಕಾಲದ ತಯಾರಿಕೆ

ಕೃಷ್ಣಾ ಪಿಕ್ಚರ್ಸ್ ರವರ ಕೃಷ್ಣ ಭಕ್ತಿ ತಮಿಳು ಭಾಷೆ

KRISHNA BHAKTHI (T.)

... ಶ್ರೀ ಮಂಗಳೂರು, ದಾವಣಗೆರೆ, ತುಮಕೂರು ರಾಜಾ, ಚಿತ್ರದುರ್ಗ ... ಇನ್ನೂ ಬೇರೆ ಕಡೆಗಳಲ್ಲಿ

Distributors SARADA FILMS, 14 Gandhinagar, Bangalore 2

ಮೈಸೂರು ಸಂಸ್ಥಾನದ ಪ್ರಮುಖ ಚಿತ್ರ ಮಂದಿರಗಳಲ್ಲೆಲ್ಲಾ ಪ್ರದರ್ಶನಕ್ಕೆ ಬರುತ್ತದೆ.



ಪೊಂಗಲ್ ಸಂಕ್ರಾಂತಿ ಎಳ್ಳು ಬೀರುವ ಹಬ್ಬಕ್ಕೆ

ಹೊಸಾ ಹೊಸ ನಮೂನೆಯಲ್ಲಿ ಸೀರೆಗಳು, ಕಣಗಳು ಅನೇಕವಾಗಿ ಬಂದಿವೆ. ಬಂದು ನೋಡಬೇಕಾಗಿ ವಿನಂತಿ.

... ಕ್ಲಾತ್ ಸ್ಟೋರ್ಸ್, ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

ಫೋ ನಂ. 792 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೧೩-೧-೪೯ [ಸಂಚಿಕೆ ೧೩೬

ವಿದ್ಯಾಪೀಠಕ್ಕೆ ಪ್ರಭುಗಳ ಭೇಟಿ

ಮೈಸೂರು ೧೩

...ನಗರದಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರು ಸ್ಥಾಪಿಸಿರುವ ವಿದ್ಯಾಪೀಠಕ್ಕೆ ನಿನ್ನೆ ಸಂಜೆ ಶ್ರೀಮನ್ಮಹಾರಾಜರು ಭೇಟಿ ಕೊಟ್ಟು ಅಲ್ಲಿನ ಕೆಲಸಕಾರ್ಯಗಳನ್ನು ಪರಿಶೀಲಿಸಿದರು.

ಸಂಜೆ ೪-೩೦ ಗಂಟೆಗೆ ಶ್ರೀಮನ್ಮಹಾರಾಜರವರು ದಿವಾನರೊಡನೆ ಆಗಮಿಸಿದರು. ವಯಸ್ಕರ ಸಮಿತಿಯ ಅಧಿಕಾರಿಗಳೂ ಸದಸ್ಯರುಗಳೂ ಪ್ರಭುಗಳನ್ನು ಸ್ವಾಗತಿಸಿ, ಶಾಲೆಯ ಕೆಲಸಕಾರ್ಯಗಳನ್ನು ತೋರಿಸಿದರು. ಅಲ್ಲಿ ನಡೆಯುತ್ತಿರುವ ವ್ಯವಸಾಯ, ಬಟ್ಟೆ ಹೊಲಿಯುವುದು, ಚಾಪೆ ಮತ್ತು ಇತರ ಕಸಬುಗಳ ಮತ್ತು ಅಕ್ಷರ ಕಲಿಸುವುದು-ಇವೇ ಮೊದಲಾದ ಕಾರ್ಯಗಳನ್ನು ಪ್ರಭುಗಳು ವೀಕ್ಷಿಸಿದರು. ಅನಂತರ ಶ್ರೀಮನ್ಮಹಾರಾಜರವರು ಒಂದು ಮಾವಿನ ಸಸಿಯನ್ನು ನೆಟ್ಟರು. ಮಾವಿನ ತೋಟದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರಭುಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಪ್ರಕೃತಿ ಸೌಂದರ್ಯದ ವಾತಾವರಣದಲ್ಲಿ ಯಾವ ಆಡಂಬರವೂ ಇಲ್ಲದೆ ಸರಳ ರೀತಿಯಿಂದ ನಡೆದ ಈ ಸಮಾರಂಭವು ಗ್ರಾಮ ಜೀವನದ ಪ್ರತಿಬಿಂಬವಾಗಿದ್ದಿತು. ಮತ್ತು ಅತಿ ಮನೋರಂಜಕವೂ ಆಗಿದ್ದಿತು. ಶ್ರೀಮನ್ಮಹಾರಾಜರವರು ಇಂತಹ ನೈಸರ್ಗಿಕವಾದ ಸೊಬಗಿನ ಸನ್ನಿವೇಶದಲ್ಲಿ ಭಾಗವಹಿಸಿರುವುದು ಇದೇ ಮೊದಲೆಂದು ಹೇಳಬಹುದು. ಸಮಿತಿಯ ಅಧ್ಯಕ್ಷರಾದ ಶ್ರೀ ಮಾದಯ್ಯಗೌಡರು ಬಿನ್ನವತ್ತಳೆಯನ್ನು ಓದಿ ಗಂಧದ ಕರಂಡದಲ್ಲಿ ಪ್ರಭುಗಳಿಗೆ ಅರ್ಪಿಸಿದರು. ಅನಂತರ ಗೋಕುಲ ಗ್ರಾಮ ನಿವಾಸಿಗಳು ವೀರಗಾಸೆ ಕುಣಿತ, ಸುಗ್ಗಿ ಮತ್ತು ವೀರ ಕುಣಿತ, ಬಾಕು ... ಮತ್ತು ಶಾಲಾ ವಿದ್ಯಾರ್ಥಿಗಳಿಂದ ... ಮತ್ತು ಕೋಲಾಟಗಳ ಪ್ರದರ್ಶನಗಳು ನಡೆದುವು.

ಶ್ರೀಮನ್ಮಹಾರಾಜರು ಬಿನ್ನವತ್ತಳೆಗೆ ಉತ್ತರವಿತ್ತು, ನಮ್ಮ ದೇಶದಲ್ಲಿ ನಡೆಯುತ್ತಿರುವ ಸಾಮಾಜಿಕ ಮತ್ತು ರಾಜಕೀಯ ಬೆಳವಣಿಗೆಗಳ ದೃಷ್ಟಿಯಿಂದ ವಯಸ್ಕರ ಶಿಕ್ಷಣ ಪ್ರಸಾರದ ಅವಶ್ಯಕತೆಯು ಹೆಚ್ಚಾಗಿದೆಯೆಂದೂ ಪ್ರಜೆಗಳಲ್ಲಿ ವಯಸ್ಕರಿಂದ ಕೇವಲ ಓದು ಬರೆಹಗಳನ್ನು ಕಲಿಸುವುದಷ್ಟೇ ಅಲ್ಲದೆ ನಾಗರಿಕ ಜೀವನದ ಮತ್ತು ಪ್ರಜೆಗಳ ... ವಿಷಯಕವಾದ ತಿಳುವಳಿಕೆ ... ಪಡೆಯಲು ಅವಕಾಶ ... ಕೊಡಬೇಕೆಂದೂ ತಿಳಿಸಿದರು. ಅಕ್ಷರ ಪ್ರಚಾರ ... ಇನ್ನೂ ಹೆಚ್ಚಾಗಿ ನಡೆಯ... ಸರ್ಕಾರದವರು ಸೂಕ್ತ ಕ್ರಮಗಳ... ಕೈಗೊಳ್ಳಲು ಆಲೋಚಿಸುತ್ತಿದ್ದಾರೆಂ... ಭರವಸೆ ಕೊಡಿಸಿದರು.

Edited, printed and published by A. R. Nagarajan at Sadhvi Press, D. Subbiah Road, Mysore.

ಸ್ಕೌಟ್ ಶಿಬಿರಕ್ಕೆ ಶ್ರೀಮನ್ಮಹಾರಾಜರವರ ಭೇಟಿ

ನಂಜನಗೂಡು ೧೩

ಇಲ್ಲಿನ ಟ್ರಾವಲರ್ಸ್ ಬಂಗಲೆಯ ಆವರಣದಲ್ಲಿ ಕೇಂದ್ರ ಸ್ಕೌಟ್ ಸಂಸ್ಥೆಯವರು ಏರ್ಪಡಿಸಿದ್ದ ಶಿಬಿರಕ್ಕೆ ಶ್ರೀಮನ್ಮಹಾರಾಜರವರು ನಿನ್ನೆ ಸಂಜೆ ಭೇಟಿ ಕೊಟ್ಟು ೧ ಗಂಟೆ ಕಾಲ ಅಲ್ಲಿನ ಕೆಲಸ ಕಾರ್ಯಗಳನ್ನು ಪರಾಂಬರಿಸಿದರು. ಮೈಸೂರು ಜಿಲ್ಲೆ, ನಗರ ಮತ್ತು ಮಂಡ್ಯ ಜಿಲ್ಲೆಗಳಿಂದ ಬಂದ್ದ ೧೫೦ ಜನರು ಶಿಕ್ಷಣವನ್ನು ಪಡೆಯುವ ವಿಧಾನವನ್ನು ಪ್ರಭುಗಳು ಪರಿಶೀಲಿಸಿದರು. ಅನಂತರ ಶಿಬಿರದ ಕ್ಯಾಂಪ್ ಫೈರ್ ಸಮಾರಂಭವನ್ನು ವೀಕ್ಷಿಸಿದರು. ಸ್ಕೌಟು ಮತ್ತು ಕಬ್ಬುಗಳಿಂದ ಕೋಲಾಟ ಮತ್ತು ಇತರ ಪ್ರದರ್ಶನಗಳು ನಡೆದುವು. ನಂಜನಗೂಡು ನಾಣಿ ಎಂಬ ಕೃತಕ ಆಕಾಶವಾಣಿಯ ಪ್ರದರ್ಶನವು ಬಹಳ ಮನೋರಂಜಕವಾಗಿತ್ತು. ಡೆಪ್ಯೂಟಿ ಚೀಫ್ ಸ್ಕೌಟ್ ಶ್ರೀ ಪಿ. ಎಸ್. ಶಿವಶಂಕರರವರಿಗೆ ಭಾರತ ಸ್ಕೌಟ್ ಸಂಸ್ಥೆಯವರು ದಯಪಾಲಿಸಿರುವ ಬೆಳ್ಳಿಯ ಆನೆಯನ್ನು ಬಹುಮಾನವನ್ನು ಪ್ರಭುಗಳು ವಿನಿಯೋಗಿಸಿದರು. ಅನಂತರ ಸಮಾರಂಭವು ಮುಕ್ತಾಯವಾಯಿತು.

ಪ್ರಭುಗಳೊಡನೆ ಭೇಟಿ

ಮೈಸೂರು ೧೩

ಅಮೇರಿಕದ ನಿಗ್ರೋ ಮುಖಂಡರಾದ ವಿ... ಬೆಯೊರ್ಡ್ ರವರೂ ... ಭಾರತ ಕಸ್ತೂರಿಬಾ ಸಮಿತಿಯ ಸದಸ್ಯರುಗಳಾದ ಕೃಷ್ಣವೇಣಿ ... ಶಾಂತ ಕುಮಾರ ... ಮೊದಲಾದವರು ... ಶ್ರೀಮತಿ ... ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿದ್ದರು. ಸಂಸ್ಥಾನದ ಎಲ್ಲಾ ... ಶಿಕ್ಷಣವನ್ನು ಕೊಡಬೇಕೆಂದು ಶ್ರೀ ಕೃಷ್ಣವೇಣಿ ... ಬಿನ್ನವಿಸಿಕೊಂಡರು ... ತಿಳಿದು ಬಂದಿದೆ.

ಉಪನ್ಯಾಸ

ಶ್ರೀ ಶಂಕರಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ಕಲ್ಕತ್ತಾ ವಿಶ್ವ ವಿದ್ಯಾಲಯದ ನಿವೃತ್ತ ಸಂಸ್ಕೃತ ಪ್ರೊಫೆಸರಾದ ಮಹಾಮಹೋಪಾಧ್ಯಾಯ ಎ. ಅನಂತಕೃಷ್ಣಶಾಸ್ತ್ರಿಗಳು "ಆಚಾರ್ಯಮಹಿಮಾ" ಎಂಬ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ.

ಸೂಚನೆ

ಉತ್ತರಾಯಣ ಪುಣ್ಯಕಾಲದ ನಿಮಿತ್ತ ನಾಳೆ ದಿನ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ. —ವ್ಯವಸ್ಥಾಪಕ

ರಾಜ್ಯಾಂಗ ಸಭೆ ಮುಂದುವರೆಸಲು ಭಾರತದ ಸಲಹೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು. ಪ್ರೋ.] ಬೆಂಗಳೂರು ೧೩

ಸಂಸ್ಥಾನದ ನೂತನ ರಾಜ್ಯಾಂಗದ ವಿಚಾರವಾಗಿ ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆಗಳ ಸುರಿಮಳೆ ಆಯಿತು. ಸಂಸ್ಥಾನಗಳಿಗೆ ಮಾದರೀ ರಾಜ್ಯಾಂಗವನ್ನು ನಿರ್ಮಿಸುವ ಬಗ್ಗೆ ಭಾರತದ ರಾಜ್ಯಾಂಗ ಸಭೆಯು ಒಂದು ಉಪ ಸಮಿತಿಯನ್ನು ನೇಮಿಸಿದೆಯೆಂದೂ, ಆದ್ದರಿಂದ ಮೈಸೂರು ರಾಜ್ಯಾಂಗ ಸಭೆಯನ್ನು ಮುಂದೆ ಹಾಕಬೇಕೆಂದು ಭಾರತ ಸರ್ಕಾರದಿಂದ ಸಲಹೆ ಬಂದುದರಿಂದ ಸಭೆಯ ಕಾರ್ಯ ಕಲಾಪಗಳನ್ನು ಮುಂದುವರೆಸಲಾಯಿತೆಂದೂ ಮುಖ್ಯ ಮಂತ್ರಿ ಶ್ರೀ ಹೆಚ್. ಎಸ್. ರುದ್ರಪ್ಪನವರ ಪ್ರಶ್ನೆಗೆ ಉತ್ತರವಾದಿತು.

ಸಂಸ್ಥಾನದಲ್ಲಿ ನೂತನ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಸರ್ಕಾರದವರು ನಿರ್ಧರಿಸಿದುದರಿಂದ ಕೈಗಾರಿಕಾ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರನ್ನು ಯೂರೋಪ್ ಮತ್ತು ಅಮೇರಿಕ ದೇಶಗಳಿಗೆ ಕಳುಹಿಸಲಾಯಿತೆಂದೂ, ಈ ಪ್ರವಾಸದಿಂದ ಸರ್ಕಾರಕ್ಕೆ ೩೦ ಸಾವಿರ ರೂ. ವೆಚ್ಚವಾಗುವುದೆಂದೂ ಶ್ರೀ ಕೆ. ಸಿ. ರೆಡ್ಡಿಯವರು ಜನಾಬ್ ಮಹಮದ್ ಅಲಂರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಅವರ ಸಂಗಡ ಕೈಗಾರಿಕಾ ಪ್ರವೀಣರೊಬ್ಬರನ್ನು ಕಳುಹಿಸಬೇಕಾದ ಅಗತ್ಯವಿರಲಿಲ್ಲವೆಂದೂ ಅವರು ಹೇಳಿದರು.

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಮುಷ್ಕರ

ಮೈಸೂರು ೧೩

ನಿನ್ನೆ ರಾತ್ರಿಯಿಂದ ಕೃಷ್ಣರಾಜೇಂದ್ರ ಗಿರಣಿಯ ೩೦೦೦ ಜನ ಕಾರ್ಮಿಕರು ಮುಷ್ಕರ ಹೂಡಿರುತ್ತಾರೆ. ಕಾರಣವನ್ನೇ ತಿಳಿಸದೆ ಆಡಳಿತ ವರ್ಗದವರು ೮ ಜನ ಕೆಲಸಗಾರರನ್ನು ವಜಾ ಮಾಡಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ನೂಲುವ ಸ್ಪರ್ಧೆ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿಯ ಮಹಡಿ ಮೇಲೆ ಇದೇ ೧೬ ನೇ ತಾ|| ಭಾನುವಾರ ಸಂಜೆ ೫ ಗಂಟೆಗೆ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ನೂಲುವ ಸ್ಪರ್ಧೆ ನಡೆಯುವುದು. ಇದರಲ್ಲಿ ಭಾಗ ವಹಿಸುವವರು ಮಹಾತ್ಮಾ ಗಾಂಧಿ ಬಿಸ್ಕತ್ ಫ್ಯಾಕ್ಟರಿಯಲ್ಲಿ ಹೆಸರುಗಳನ್ನು ತಿಳಿಸಬೇಕೆಂದು ಕೋರಲಾಗಿದೆ.

ಆರ್. ಎಸ್. ಎಸ್. ನವರ ಬಿಡುಗಡೆ

ನಿನ್ನೆ ಸಂಜೆ ದೇವರಾಜಾ ಮಾರ್ಕೆಟ್ ಬಳಿ ಮೆರವಣಿಗೆ ನಡೆಸುತ್ತಿದ್ದ ... ಜನ ಆರ್. ಎಸ್. ಎಸ್. ನವರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ.

ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಿಗೆ ರಾಜೀನಾಮೆ

ಮೈಸೂರು ಟ್ರಸ್ಟ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಪಿ. ಸೀತಾರಾಮಯ್ಯನವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿರುತ್ತಾರೆ. ವಾಹನ ಸೌಕರ್ಯದ ಅನಾನುಕೂಲತೆ ಮತ್ತು ಸದರೀ ಅಧ್ಯಕ್ಷ ಪದವಿಯ ಅವಧಿಯು ಕೇವಲ ಒಂದೆರಡು ತಿಂಗಳು ಇರುವುದರಿಂದ ತಾವು ರಾಜೀನಾಮೆ ಕೊಟ್ಟಿರುವುದಾಗಿ ಸರ್ಕಾರಕ್ಕೆ ಅವರು ಪತ್ರ ಬರೆದಿರುವರೆಂದು ತಿಳಿದುಬಂದಿದೆ.

ವಿದ್ಯಾರ್ಥಿಗಳ ಸಭೆಯಲ್ಲಿ ನೀಗ್ರೋ ನಾಯಕರ ಭಾಷಣ

ಅಮೇರಿಕದ ನೀಗ್ರೋ ನಾಯಕರಾದ ಮಿ|| ಬೆಯೊರ್ಡ್ ರಸ್ಟಿನ್ನರವರು ಈ ದಿನ ಬೆಳಗ್ಗೆ ರಾಮಕೃಷ್ಣಾಶ್ರಮದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಶಾಂತರವರು ಸ್ವಾಗತ ಬಯಸಿದರು.

ಅಮೇರಿಕದಲ್ಲಿ ನ್ಯೂಯಾರ್ಕ್ ನಗರವೊಂದನ್ನು ಬಿಟ್ಟು ಮಿಕ್ಕ ಎಲ್ಲ ಪ್ರದೇಶಗಳಲ್ಲೂ ನೀಗ್ರೋಗಳನ್ನು ಪಶುಗಳನ್ನಾಗಿ ಕಾಣಲಾಗುತ್ತಿದೆಯೆಂದೂ, ಅವರುಗಳಿಗೆ ಓಟಿನ ಹಕ್ಕು ಮತ್ತು ಇತರ ಯಾವ ಸೌಲಭ್ಯಗಳೂ ಇಲ್ಲವೆಂದೂ ತಿಳಿಸಿದರು.

ಪ್ರಭಾ — 14-1-49ರಿಂದ ದಿನವಹಿ ೩ ಆಟಗಳು

— ದೇಖೋಜಿ —
(ಹಿಂದಿ)

• ಸಮ್ರಾಜ್ ಶಾಂತಿ •

ಇದರೊಂದಿಗೆ ಮೊದಲನೆಯ ವಾರದಲ್ಲಿ ಇತ್ತೀಚಿನ ಅಖಿಲ ಭಾರತದ ಜಯಪುರ್ ಕಾಂಗ್ರೆಸ್ ಅಧಿವೇಶನದ ದೃಶ್ಯಗಳನ್ನು ತೋರಿಸಲಾಗುತ್ತೆ

ಹೊಂಗಲ್ ಸಂಕ್ರಾಂತಿ ಎಳ್ಳು ಬೀರುವ ಹಬ್ಬಕ್ಕೆ

ಹೊಸಾ ಹೊಸ ನಮೂನೆಯಲ್ಲಿ ಸೀರೆಗಳು, ಕಣಗಳು ಅನೇಕವಾಗಿ ಬಂದಿವೆ, ಬಂದು ನೋಡಬೇಕಾಗಿ ವಿನಂತಿ.

...ಹೊಂಗಲ್ ಸೀರೆ ಅಂಗಡಿ ... ಮೈಸೂರು ... ರಸ್ತೆ, ಮೈಸೂರು.

ಪೊಂಗಲ್ ಪಬ್ಬದ ದಿನ 14-1-49 ರಿಂದ ದಿನವಹಿ 3 ಆಟಗಳು

ಮ್ಯಾಟಿನಿ ಮಧ್ಯಾಹ್ನ 2 ಗಂಟೆಗೆ, ೧ನೇ ಆಟ 6ಕ್ಕೆ, ೨ನೇ ಆಟ 9-30ಕ್ಕೆ

ಮೈಸೂರು ಚಾಮುಂಡೇಶ್ವರೀ--ಗಣೇಶಾ

ಬೆಂಗಳೂರು ಸ್ಟೇಟ್ಸ್, ಸೂಪರ್ ಮತ್ತು ಮೂವಿಲ್ಯಾಂಡ್

ಕೆ.ಜಿ.ಎಫ್. ಗೇ ಟಾಕೀಸುಗಳಲ್ಲಿ ಏಕ ಕಾಲದಲ್ಲಿ ಪ್ರದರ್ಶನ

ಸಂಗೀತ, ನಾಟ್ಯ, ಕಥೆ, ತಾರಾಗಣ, ಅಭಿನಯ ಇವುಗಳಲ್ಲದರಲ್ಲೂ ಹೊಸ

ವೈಶಿಷ್ಟ್ಯವನ್ನೇ ಕಲ್ಪಿಸಿರುವ ಅಸದೃಶ ಚಿತ್ರ

೩ ವರ್ಷಗಳ ಕಾ[illegible]ದ ತಯಾರಿಕೆ

ಕೃಷ್ಣಾ ಪಿಕ್ಚರ್ಸ್ ರವರ **ಕೃಷ್ಣ ಭಕ್ತಿ** ತಮಿಳು ಭಾಷೆ

KRISHNA BHAKTHI (Tamil)

ಶುಭ] Distributors SARADA FILMS, 174 [illegible], Bangalore 2

Sri Gayathri [illegible]

ತಾ|| ೧೪-೧-೪೯ ರಿಂದ [illegible]

ಪ್ರತಿದಿನ ೩ ಪ್ರದರ್ಶನ[illegible]

M-G-M ರವರ ಸುಪ್ರ[illegible]

ಬೇತಿಂಗ್ ಬ[illegible]

Bathing Bea[uty]

(Technicolor)

With:-Esther Wil[liams]

and Red Skelton

Morning Shows at 10.[illegible]

From 18-1-49 for 2 d[ays]

G.M's Thrilling Dr[ama]

of the West,

Appache Tr[ail]

(First Run)

ಪ್ರಭುದೇವಾ ಟಾಕೀಸಿನಲ್ಲಿ

ಜೆ ಪಿ ಸಿ ಯ ವ ರ

ಚಕ್ರಧಾರಿ

ಭಕ್ತ ಗೋರ ಕುಂಬಾರ (ತಮಿಳು)

14-1-49 ರಿಂದ ಅಮೋಘವಾದ 7ನೇ ವಾರ

ದಿನವಹಿ 2 ಆಟಗಳು

ಪಾತ್ರ:—ನಾಗಯ್ಯ, ಪುಷ್ಪವಲ್ಲಿ ಮುಂತಾದವರು

ರಾಜಕಮಲ್ ಮೈಸೂರು

ತಾ|| 14-1-49 ರಿಂದ ಅಮೋಘವಾದ 5ನೇ ವಾರ

ದಿನವಹಿ 3 ಆಟಗಳು

ದೈವ ಭಕ್ತಿಗೆ ಪ್ರಾಪಂಚಿಕ ಸುಖವಿಲ್ಲ! [illegible] ಸಂಸಾರ ಸುಖವಿಲ್ಲ! ಸಂಸಾರ ಸುಖವಿದ್ದವರಿಗೆ ದೈವ ಭಕ್ತಿಯ ಕಡೆ ಮನಸ್ಸಿಲ್ಲ!

[illegible] ಜೀವನ[illegible] ಯುಸದವರಿಗೆ ಸದ್ಗುಣಗಳಿಲ್ಲ!

ಇಂತಹ ಅನೇಕ 'ಜನ್ಮ'ಗಳಲ್ಲಿ "ಹಾದಿ"ಯನ್ನು ತೋರಿಸುವ ಅನುಪಮ

ಭಕ್ತಿ ಪ್ರಧಾನ ಸಂಗೀತಮಯ ಸುಂದರ ಚಿತ್ರ

ಸು[illegible]ಷಿ[illegible]ವ[illegible]

★ ಭಕ್ತ ಕುಂಬಾರ (ಕನ್ನಡ) ★

ಪ್ರಧಾನ ಭೂಮಿಕೆಯಲ್ಲಿ: ಹೊನ್ನಪ್ಪ ಭಾಗವತರ್-ಲಕ್ಷ್ಮೀಬಾಯಿ-ಪಂಡರೀಬಾಯಿ-

ರಾಘವೇಂದ್ರರಾವ್-ಜಯಶ್ರೀ

ಈಗ ನಡೆಯುತ್ತಿದೆ

ಬೆಂಗಳೂರು ಶಾರದ—೧೩ನೇ ವಾರ — ಶಿವಮೊಗ್ಗ ಸುದರ್ಶನ—೬ನೇ ವಾರ

For Particulars - SWARNA FILMS, ([illegible]) [illegible] Films Corporation Bangalore 2

Morning Shows for 4 days From 18-1-49 **AIR RAID WARDENS** WITH Laurel & Hardy

ಪೋ|| ನಂ. 192 ||ವಂದೇಮಾತರಂ|| ಬಿಡಿಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೧೫-೧-೪೯ [ಸಂಚಿಕೆ ೧೩೬

ವಿದ್ಯಾರ್ಥಿ ಕಾಂಗ್ರೆಸ್ ಸಭೆ

ಮೈಸೂರು ೧೫

ನಗರ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ವಿಶೇಷ ಸಭೆಯು ಮೊನ್ನೆ ದಿನ ಶ್ರೀ ಶಾಂತರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಎ. ಬ್ರೆಲ್ವಿ ಮತ್ತು 'ಇಂಡಿಯನ್ ನ್ಯೂಸ್' ಪತ್ರಿಕೆಯ ಸಂಪಾದಕರಾದ ಶ್ರೀ ಪ್ರ ಎ ಚಟರ್ಜಿರವರುಗಳ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು. ಇಂಡೋನೇಷ್ಯದ ಮೇಲೆ ಡಚ್ಚರ ಸಾಮ್ರಾಜ್ಯಶಾಹಿ ನೀತಿಯನ್ನು ಖಂಡಿಸಿ, ಅಲ್ಲಿನ ನಾಯಕರುಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಪಡಿಸಲಾಯಿತು. ಇದೇ ೨೩ ನೇ ತಾ|| ಸುಭಾಷ್ ಬೋಸರ, ೨೬ ನೇ ತಾ|| ಸ್ವಾತಂತ್ರ್ಯ ಸ್ಮಾರಕದ ಮತ್ತು ೩೦ ನೇ ತಾ|| ಸರ್ವೋದಯ ದಿನಾಚರಣೆಗಳನ್ನು ವಿದ್ಯಾರ್ಥಿಗಳ ವಿವಿಧ ಸಂಸ್ಥೆಗಳು ಒಟ್ಟಾಗಿ ಸೇರಿ ಆಚರಿಸಬೇಕೆಂದೂ ತೀರ್ಮಾನಿಸಲಾಯಿತು.

ಲೇಬರ್ ಕಾರ್ಡ್ ಹೋಲ್ಡರುಗಳ ಸಭೆ

ಮೈಸೂರು ನಗರದ ಲೇಬರ್ ಕಾರ್ಡ್ ಹೋಲ್ಡರುಗಳ ಕಾರ್ಯಕಾರೀ ಸಮಿತಿಯ ಸಭೆಯು ನಾಳಿದ್ದು ಸಂಜೆ ೬ ಗಂಟೆಗೆ ಶಿವರಾಮಪೇಟೆಯಲ್ಲಿರುವ ಕುಂಚಿಟಿಗರ ಸಂಘದ ಕಟ್ಟಡದಲ್ಲಿ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಕೇಂದ್ರ ಸಮಿತಿಗೆ ಕೆಲವು ಸದಸ್ಯರ ಚುನಾವಣೆ ಮತ್ತು ಮೊಹಲ್ಲಾ ಉಪಸಮಿತಿಗಳ ರಚನೆ ನಡೆಯುವುದರಿಂದ ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಅಕ್ರಮ ಶೇಂದಿ ಸಾಗಣೆಗೆ ಶಿಕ್ಷೆ

ನಂಜನಗೂಡು ತಾಲ್ಲೂಕು ರಾಂಪುರ ಗ್ರಾಮದಿಂದ ಮೈಸೂರು ತಾಲ್ಲೂಕು ದೂರ ಗ್ರಾಮಕ್ಕೆ ಅಕ್ರಮವಾಗಿ ಶೇಂದಿ ಸಾಗಿಸುತ್ತಿದ್ದ ಕುಳ್ಳ ಮತ್ತು ರಾಮ ಉರುಫ್ ರಾಮಚಂದ್ರಯ್ಯ ಎಂಬುವರನ್ನು ಮೊನ್ನೆ [illegible] ರೇಂಜ್ ಎಕ್ಸೈಜ್ ಅಧಿಕಾರಿಗಳು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಿದ್ದು ನಗರದ ದ್ವಿತೀಯ ನ್ಯಾಯಾಧೀಶರು ಕುಳ್ಳನಿಗೆ ೧೫ ದಿನ ಮತ್ತು ರಾಮನಿಗೆ ಒಂದು ವಾರ ಸಾದಾ ಸಜೆಯನ್ನು ವಿಧಿಸಿರುತ್ತಾರೆ.

ಸಂಗೀತ ಸ್ಪರ್ಧೆಯ ಬಹುಮಾನಗಳು

ಸಂಸ್ಥಾನದ ಸಂಗೀತ ಪರಿಷತ್ತಿನ ಆಶ್ರಯದಲ್ಲಿ ನಂಜನಗೂಡಿನಲ್ಲಿ ನಡೆದ ಸಂಗೀತ ಸ್ಪರ್ಧೆಯಲ್ಲಿ ಕೆಳಗೆ ಕಂಡವರಿಗೆ ಬಹುಮಾನವನ್ನು ಕೊಡಲಾಗಿದೆ:--

ಪ್ರಥಮ ದರ್ಜೆ--ಶ್ರೀಮತಿ ಜೆ. ವೆಂಕಮ್ಮ. ಕೆಳ ದರ್ಜೆ--ಶ್ರೀಮತಿಗಳು ಎಸ್. ಲೀಲಾವತಿ, ಎಂ. ವೆಂಕಟಲಕ್ಷ್ಮಮ್ಮ, ಜಿ. ಆರ್. ಲೀಲಾವತಿ, ಡಿ. ಎಸ್. ಪದ್ಮ, ಎಂ. ಆರ್. ಸ್ವರ್ಣಕುಮಾರಿ, ಹೆಚ್. ಎಸ್. ಸ್ವರ್ಣಮ್ಮ.

ದೇವರ ನಾಮ -- ಶ್ರೀಮತಿಗಳು ಎಂ. ವೆಂಕಟಲಕ್ಷ್ಮಮ್ಮ, ಎಸ್. ಲೀಲಾವತಿ, ಡಿ. ಎಸ್. ಪದ್ಮ ಮತ್ತು ಕೆ. ಆರ್. ಲೀಲಾ...

ಹರಿಕಥೆ

ರಾಜಧಾನಿಯ ವಿ. ಸುಬ್ಬಯ್ಯ ರಸ್ತೆಯ ...ನ ಶ್ರೀ ಪ್ರಸನ್ನಾನಂದ ಔಷಧಾಲಯದಲ್ಲಿ ಈ ರಾತ್ರಿ ೮-೩೦ ಗಂಟೆಗೆ ಶ್ರೀ ನಾ... ಶಾಸ್ತ್ರಿ ಗಮಕಿಯವರಿಂದ ಭಗ... ಸತ್ಯನಾರಾಯಣ ಎಂಬ ಹರಿಕಥೆ ...ವರು

ಸರ್ ಬಿ. ರಾಮರಾಯರು ರಿಜರ್ವ್ ಬ್ಯಾಂಕಿನ ಡೈರೆಕ್ಟರು

ಅಮೆರಿಕದಲ್ಲಿರುವ ಭಾರತದ ರಾಯಭಾರಿಗಳಾದ ಸರ್ ಬೆನಗಲ್ ರಾಮರಾಯರನ್ನು ರಿಜರ್ವ್ ಬ್ಯಾಂಕಿನ ಗೌರ್ನರಾಗಿ ನೇಮಿಸಲಾಗಿದೆ. ಮುಂದಿನ ಜುಲೈ ೧ ನೇ ತಾ|| ಅವರು ಅಧಿಕಾರ ಸ್ವೀಕರಿಸುವರು.

ಚಿಯಾಂಗರು ಭಾರತಕ್ಕೆ ಬರುವರೇ !

ಚೀಣಾ ಸರ್ಕಾರಕ್ಕೆ ಎಲ್ಲೆಲ್ಲೂ ಸೋಲು ಉಂಟಾಗುತ್ತಿದ್ದರೂ, ಮತ್ತು ಚಿಯಾಂಗರು ತಮ್ಮ ಭವಿಷ್ಯದ ಬಗ್ಗೆ ಯಾವ ನಿರ್ಧಾರಕ್ಕೂ ಬಂದಿಲ್ಲವಾದರೂ ಅವರು ಅಂತ್ಯದಲ್ಲಿ ಭಾರತಕ್ಕೆ ಬಂದು ನೆಲಸಬಹುದೆಂದೂ ನಾಂಕಿಂಗ್‌ನಲ್ಲಿ ಹೇಳಲಾಗುತ್ತಿದೆ.

ತಾಲ್ಲೂಕು ಅಧಿಕಾರಿಗಳಿಗೆ ಅಭಿನಂದನೆ

ಸ್ವಂ. ಸು.] ಚಾಮರಾಜನಗರ ೧೪

ಇಲ್ಲಿನ ತಾಲ್ಲೂಕು ಅಧಿಕಾರಿಗಳು ನಾಗವಳ್ಳಿ ಗ್ರಾಮಕ್ಕೆ ಕಳೆದ ೫ ನೇ ತಾ|| ಭೇಟಿ ಕೊಟ್ಟು, ಅಲ್ಲಿ ಹಿಂದೆ ನಡೆದ ಪ್ರಕರಣಕ್ಕೆ ಅವರು ಪಶ್ಚಾತ್ತಾಪ ಪಟ್ಟು, ಒಬ್ಬ ರೈತರಿಂದ ತೆಗೆದು ಕೊಂಡಿದ್ದ ಹೆಚ್ಚಿಗೆ ಒಂದು ಪಲ್ಲಾ ಭತ್ತವನ್ನೂ ವಾಪಸು ಕೊಡಿಸಿದರೆಂದೂ, ಇದರಿಂದ ಅಲ್ಲಿ ಅಧಿಕಾರಿಗಳ ಬಗ್ಗೆ ವಿಶ್ವಾಸ ಮೂಡಿತೆಂದೂ, ಗ್ರಾಮದವರು ಅಧಿಕಾರಿಗಳಿಗೆ ವಂದನೆಯನ್ನು ಸೂಚಿಸಿರುವರೆಂದೂ ತಿಳಿದುಬಂದಿದೆ.

ಸಿಮೆಂಟ್ ಕಳ್ಳ ವ್ಯಾಪಾರ

ಇಲ್ಲಿನ ಸಿಮೆಂಟ್ ಏಜೆಂಟರು ಕಾಳಸಂತೆಯಲ್ಲಿ ಸಿಮೆಂಟನ್ನು ಮಾರುತ್ತಿರುವರೆಂದು ಪುಕಾರು ಬಂದಿದ್ದುದನ್ನು ಸಿಮೆಂಟ್ ಹತೋಟಿ ಅಧಿಕಾರಿಗಳು ವಿಚಾರಣೆ ನಡೆಸಿದರು. ಒಬ್ಬ ಅಧಿಕಾರಿಗಳು ಮೂಟೆ ಒಂದಕ್ಕೆ ೧೦ ರೂ ಪ್ರಕಾರ ಏಜೆಂಟರಿಂದ ಕೊಂಡ ವಿಚಾರವನ್ನು ತಿಳಿಸಿದರೆಂದೂ ಗೊತ್ತಾಗಿದೆ

ಟೀಂಟ್ಸಿನ್ ಮೇಲೆ ಫಿರಂಗಿಗಳ ಪ್ರಯೋಗ

ಚೀಣಾದ ಮುಖ್ಯ ರಕ್ಷಣಾ ಕೇಂದ್ರವಾದ ಟೀಂಟ್ಸಿನ್ ನಗರದ ಮೇಲೆ ಕಮ್ಯೂನಿಸ್ಟರು ಫಿರಂಗಿಗಳನ್ನು ಪ್ರಯೋಗಿಸಿ, ಪ್ರಖ್ಯಾತ ಭವನ ಮತ್ತು ಇತರ ಪ್ರದೇಶಗಳನ್ನು ನಾಶಪಡಿಸಿರುವರೆಂದೂ, ಅನೇಕ ಜನರು ಸತ್ತರೆಂದೂ ವರದಿಯಾಗಿದೆ.

ಕಸ್ತೂರಿ ಬಾ ದಿನಾಚರಣೆ

ರಾಜಧಾನಿಯ ಇಟ್ಟಿಗೆಗೂಡು ಕಸ್ತೂರಿ ಬಾ ಸಮಾಜದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಕಸ್ತೂರಿ ಬಾ ದಿನಾಚರಣೆಯು ಶ್ರೀಮತಿ ಪ್ರಸನ್ನ ಕೃಷ್ಣ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು

ಚೀಣಾದ ಕಮ್ಯೂನಿಸ್ಟರ ಪ್ರದೇಶಗಳು ರಷ್ಯದ ಹತೋಟಿಯಲ್ಲಿ

ಚೀಣಾದಲ್ಲಿ ಕಮ್ಯೂನಿಸ್ಟರು ಆಕ್ರಮಿಸಿರುವ ಪ್ರದೇಶಗಳ ಆಡಳಿತವನ್ನು ರಷ್ಯದ ಅಧಿಕಾರಿಗಳು ವಹಿಸಿಕೊಂಡಿರುವರೆಂದು ವರದಿಯಾಗಿದೆ ಆಕ್ರಮಿತ ಪ್ರದೇಶಗಳಲ್ಲಿ ಅಮೆರಿಕದ ಕೈವಾಡವನ್ನು ತಡೆಗಟ್ಟಲು ಈಗಾಗಲೇ ರಷ್ಯವು ಆ ಪ್ರದೇಶಗಳಲ್ಲಿ ಶಾಂತಿ ಸೌಹಾರ್ದ ಕಾರ್ಯಕ್ರಮಗಳನ್ನು ಕೈಗೊಂಡಿದೆಯೆಂದೂ ಹೇಳಲಾಗಿದೆ

ಆರ್. ಎಸ್. ಎಸ್. ನವರು ರಾಷ್ಟ್ರ ಧ್ವಜವನ್ನು ಹರಿದು ಹಾಕಿದರು

ಭೂಪಾಲಿನಲ್ಲಿ ಆರ್. ಎಸ್. ಎಸ್ ನವರು ಕಳೆದ ೧೩ ನೇ ತಾ|| ಮೆರವಣಿಗೆಯನ್ನು ನಡೆಸಿ ಕಾಂಗ್ರೆಸ್ಸಿನ ವಿರೋಧ ಘೋಷಣೆ ಮಾಡಿ, ಕಾಂಗ್ರೆಸ್‌ನವರ ಮನೆಗಳ ಮೇಲೆ ಇದ್ದ ರಾಷ್ಟ್ರ ಧ್ವಜವನ್ನು ಹರಿದು, ತುಳಿದು ಹಾಕಿದರೆಂದು ವರದಿಯಾಗಿದೆ.

ಸಂಗೀತ ಸ್ಪರ್ಧೆ

ರಾಜಧಾನಿಯ ಶ್ರೀ ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ ಇದೇ ೨೨ ಮತ್ತು ೨೩ ನೇ ತಾ|| ನಡೆಯುವ ಶ್ರೀ ತ್ಯಾಗರಾಜ ಜಯಂತ್ಯುತ್ಸವದ ಅಂಗವಾಗಿ ಇದೇ ೨೩ ನೇ ತಾ|| ಬೆಳಗ್ಗೆ ೯ ಗಂಟೆಗೆ ಸಂಗೀತ ಸ್ಪರ್ಧೆಯು ಜರುಗುವುದು. ೧೬ ವರ್ಷಕ್ಕೆ ಮೀರದ ಬಾಲಕಿಯರಿಗೆ ಮಾತ್ರ ಸ್ಪರ್ಧೆಯಲ್ಲಿ ಅವಕಾಶವುಂಟು. ೨೦ ರ ಒಳಗೆ ಪ್ರವೇಶ ಹಣದೊಡನೆ ಹೆಸರುಗಳನ್ನು ಕಳ್ಳಿಸಬೇಕೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಪಡುವಾರ ಹಳ್ಳಿಯ ನಿವಾಸಿಗಳಿಗೆ ನಿವೇಶನ

ವಾಣೀವಿಲಾಸ ಮೊಹಲ್ಲಾದಲ್ಲಿರುವ ಜಯಲಕ್ಷ್ಮಿ ಬಡಾವಣೆಯಲ್ಲಿ ನಿವೇಶನಗಳನ್ನು ಟ್ರಸ್ಟ್ ಬೋರ್ಡಿನವರು ಹರಾಜು ಮಾಡಲಿದ್ದುದನ್ನು ನಿಲ್ಲಿಸಿ, ಅವುಗಳನ್ನು ಪಡುವಾರ ಹಳ್ಳಿಯ ನಿವಾಸಿಗಳಿಗೆ ಮೀಸಲಾಗಿಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುವುದಕ್ಕಾಗಿ ಅಲ್ಲಿನ ಗ್ರಾಮ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಎಂ ಸಿ ರಾಜಣ್ಣರವರು ಕೃತಜ್ಞತೆಯನ್ನು ಸೂಚಿಸಿರುತ್ತಾರೆ.

ಮಹಾ ಮಂಗಳಾರತಿ

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ವಿಠಲರಾಯರ ಶ್ರೀ ರಾಮ ದೇವಸ್ಥಾನದಲ್ಲಿ ಹೊಸಹಳ್ಳಿಯ ಶ್ರೀ ವಾಸುದೇವಾಚಾರ್ಯರಿಂದ ನಡೆಯುತ್ತಿರುವ ಪುರಾಣ [illegible] ಸಂಬಂಧದಲ್ಲಿ ನಾಳೆ ಮಧ್ಯಾಹ್ನ ೪|| ಗಂಟೆಗೆ ಮಹಾ ಮಂಗಳಾರತಿ ಏರ್ಪಡಿಸಲಾಗಿದೆ

ಡಾ|| ಮೋದಿಯವರ ನೇತ್ರ ಚಿಕಿತ್ಸಾ ಕೇಂದ್ರಕ್ಕೆ ಮಹಾರಾಣಿಯವರ ಭೇಟಿ

ಮೈಸೂರು ೧೫.

ಶ್ರೀಮನ್ಮಹಾರಾಣಿಯವರಾದ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರು ಈ ದಿನ ಬೆಳಗ್ಗೆ ವೈಸ್ರಾಯ್ ರಸ್ತೆಯ ಶಾಂತಿ ನಿಲಯದಲ್ಲಿ ಬೆಳಗಾಮಿನ ಡಾ|| ಎ. ಸಿ. ಮೋದಿ ಮುರುಗಪ್ಪನವರ ನೇತ್ರ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ಕೊಟ್ಟು, ಅವರ ಅದ್ಭುತ ಚಿಕಿತ್ಸಾಕಾರ್ಯವನ್ನು ನೋಡಿ, ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶಸ್ತ್ರ ಚಿಕಿತ್ಸೆ ಪಡೆದ ಅನೇಕ ರೋಗಿಗಳ ಆರೋಗ್ಯವನ್ನು ಅವರು ವಿಚಾರಿಸಿದರು.

ಸಂಸ್ಥಾನದಾದ್ಯಂತ ರೇಷನಿಂಗ್ ಜಾರಿ

ಶಾಸನ ಸಭೆಯಲ್ಲಿ ಪ್ರಶ್ನೆಗೆ ಸರ್ಕಾರದ ಉತ್ತರ

ಸ್ವಂ. ಸು. ಫೋ.] ಬೆಂಗಳೂರು ೧೫

ಸಂಸ್ಥಾನದಾದ್ಯಂತ ರೇಷನಿಂಗ್ ಜಾರಿಗೆ ತರಲು ಸರ್ಕಾರದವರು ನಿರ್ಧರಿಸಿರುವರೆಂದು ಈ ದಿನ ಶಾಸನ ಸಭೆಯಲ್ಲಿ ಆಹಾರ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಶ್ರೀ ಕೆ. ಆರ್. ಶ್ರೀನಿವಾಸನ್‌ರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ಇದೇ ೧೩ ನೇ ತಾ|| ವರೆವಿಗೆ ೪,೩೧,೮೬೦ ಪಲ್ಲ ಭತ್ತ, ೫೬೩ ಪಲ್ಲ ರಾಗಿ ಮತ್ತು ೩೨ ಪಲ್ಲ ಜೋಳ ಅಕ್ವೈರ್ ಮಾಡಲಾಗಿದೆಯೆಂದೂ, ಇದು ಕೇವಲ ೨ ತಿಂಗಳಿಗೆ ಮಾತ್ರ ಸಾಕಾಗುವುದೆಂದೂ, ಅವರು ಹೇಳಿದರು. ಸಂಸ್ಥಾನಕ್ಕೆ ಒಟ್ಟು ೧೧೬ ಲಕ್ಷ ಪಲ್ಲ ಆಹಾರ ಧಾನ್ಯಗಳು ಬೇಕಾಗುವುದೆಂದು ಭಾರತ ಸರ್ಕಾರಕ್ಕೆ ಮನವಿ ಮಾಡಲಾಗಿದೆಯೆಂದೂ ತಿಳಿಸಿದರು.

ರೇಡಿಯೋ ರಹದಾರಿ ಫೀಜನ್ನು ಅಂಚೆ ಇಲಾಖೆಯವರು ವಸೂಲು ಮಾಡುತ್ತಿರುವುದರಿಂದ ಆಕಾಶವಾಣಿಯ ಆಡಳಿತವನ್ನು ಭಾರತದ ರೇಡಿಯೋರವರು ತೆಗೆದುಕೊಳ್ಳುವ ವಿಚಾರವಾಗಿ ಯಾವ ಸೂಚನೆಯು ಭಾರತ ಸರ್ಕಾರದಿಂದ ಬಂದಿಲ್ಲವೆಂದು ಶ್ರೀ ಕೆ. ಸಿ. ರೆಡ್ಡಿಯವರು ಜನಾಬ್ ಸಯ್ಯದ್ ಅಬ್ದುಲ್ ರಹಿಮಾನ್‌ರವರ ಅಲ್ಪಾವಧಿ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಕೇಂದ್ರ ಸರ್ಕಾರದ ಸಚಿವ ಶ್ರೀ ಆರ್. ದಿವಾಕರರು ಆಕಾಶವಾಣಿಯನ್ನು ಬೆಂಗಳೂರಿಗೆ ವರ್ಗಾಯಿಸಿ, ತಮ್ಮ ಹತೋಟಿಗೆ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೂ, ತಮಗೆ ಭಾರತ ಸರ್ಕಾರದಿಂದ ಯಾವ ಸೂಚನೆಯೂ ಬಂದಿಲ್ಲವೆಂದೂ ತಿಳಿಸಿದರು.

ಕಮ್ಯೂನಿಸ್ಟ್ ನಾಯಕ ಶ್ರೀ ಎಸ್. ವಿ. ಶಂಕರ್ ಮತ್ತು ಸಮತಾವಾದಿ ಪಕ್ಷದ ಶ್ರೀ ನಾಗಭೂಷಣರವರುಗಳ ದಸ್ತಗಿರಿ ಬಗ್ಗೆ ಶ್ರೀ ಎಂ. ಸಿ. ಎಲ್. ಶಾಸ್ತ್ರಿಗಳು ತಂದಿದ್ದ ನಿಲುವಳಿ ಸೂಚನೆಗೆ ಚರ್ಚಿಸಲು ಸಭೆಯ ಅಂಗೀಕಾರ ಸಿಕ್ಕದೆ ಬಿದ್ದುಹೋಯಿತು.

ಮೈಸೂರು ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರನ್ನು [illegible] ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಶ್ರೀ ಎಂ. ಶಂಕರಯ್ಯನವರನ್ನು ಮೈಸೂರಿನ ಸರ್ಕಾರದ ಪ್ಲೀಡರಾಗಿ ನೇಮಿಸಲಾಗಿದೆ.

ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಂಘ

ಮೈಸೂರು, ೧೫

ಮೈಸೂರು ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಂಘದ ಆರಂಭ ಭಾಷಣವನ್ನು ಕಾಂಗ್ರೆಸ್ಸಿನ ಮಾಜಿ ಕಾರ್ಯದರ್ಶಿಗಳಾದ ಶ್ರೀ ಕೆ. ಪಟ್ಟಾಭಿರಾಮಯ್ಯನವರು ಕಳೆದ ೧೦ ನೇ ತಾ॥ ನಡೆಸಿದರು. ಕಾರ್ಮಿಕರಿಗೆ ಸಲ್ಲಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಳ್ಳಲು ಅವರು ಒಗ್ಗಟ್ಟಿನಿಂದಲೂ, ಶಿಸ್ತಿನಿಂದಲೂ ವರ್ತಿಸಬೇಕೆಂದು ಅವರು ತಿಳಿಸಿದರು. ಈ ಕಾರ್ಖಾನೆಯಲ್ಲಿ ಹೆಚ್ಚು ಮಂದಿ ಹೆಂಗಸರು ಕೆಲಸ ಮಾಡುತ್ತಿರುವುದರಿಂದ ಸರ್ಕಾರದವರು ಸಂಘಕ್ಕೆ ಹೆಚ್ಚು ಸಹಾಯ ಮತ್ತು ಗಮನ ಕೊಡಬೇಕೆಂದೂ ಹೇಳಿದರು.

ಅಸಿಸ್ಟೆಂಟ್ ಲೇಬರ್ ಕಮೀಷನರಾದ ಶ್ರೀ ಮಹಲಿಂಗಣ್ಣ ಮತ್ತು ಎ. ರಾಮಣ್ಣನವರುಗಳೂ ಭಾಷಣ ಮಾಡಿದರು.

ಸಮಾಜವಾದಿ ನಾಯಕರ ಪತ್ತೆಗೆ ಆಗ್ರಹ

ಮೈಸೂರು ಸಮಾಜವಾದಿ ಪಕ್ಷದ ಕಾರ್ಯಕರ್ತರುಗಳ ಸಭೆಯು ಮೊನ್ನೆ ದಿನ ಶ್ರೀ ಕೆ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆದು, ಕರ್ನಾಟಕ ಸಮಾಜವಾದಿ ಮುಖಂಡರಾದ ಶ್ರೀಗಳು ಎಸ್. ನಾಗಭೂಷಣ ಮತ್ತು ಎಚ್. ರಾಮಸ್ವಾಮಿಯವರನ್ನು ಸರ್ಕಾರದವರು ವಶ್ಯಗಿರಿ ಮಾಡಿರುವುದನ್ನು ಖಂಡಿಸಿ, ಅವರುಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಒತ್ತಾಯಪಡಿಸಲಾಯಿತು. ಇತ್ತೀಚೆಗೆ ಕೆಲವು ಪಕ್ಷದ ಸದಸ್ಯರು, ರಾಜನ್ನಾಮ ಇತ್ತ ಶ್ರೀ ಜಯಪ್ರಕಾಶ ನಾರಾಯಣರವರ ನಾಯಕತ್ವದ ಮೇಲೆ ಸಭೆಗಳನ್ನು ನಡೆಸುತ್ತಿರುವುದನ್ನು ಖಂಡಿಸಲಾಯಿತು.

ಬ್ರಿಟನ್ ಮತ್ತು ಅಮೆರಿಕೆಗಳಲ್ಲಿ ಭಿನ್ನಾಭಿಪ್ರಾಯ

ಅನೇಕ ಮುಖ್ಯ ವಿಚಾರಗಳಲ್ಲಿ ಅಮೆರಿಕೆ ಮತ್ತು ಬ್ರಿಟನ್ನುಗಳಿಗೆ ಭಿನ್ನಾಭಿಪ್ರಾಯ ಉಂಟಾಗಿದೆಯೆಂದು ವರದಿಯಾಗಿದೆ. ಎಸ್ಸೋಲ್ ಬಾರಿ ಅಮೆರಿಕವು ಅನೇಕ ಸಮಸ್ಯೆಗಳ ವಿಚಾರದಲ್ಲಿ ಬ್ರಿಟನ್ನನ್ನು ಕೇಳದೆಯೇ ನಿರ್ಧಾರಕ್ಕೆ ಬರುತ್ತಿದೆಯೆಂದೂ, ವಿಶ್ವ ಸಂಸ್ಥೆಯ ಮುಂದೆ ಪ್ಯಾಲಸ್ಟೈನ್, ಚೀಣ ಮತ್ತು ಇತರ ಸಮಸ್ಯೆಗಳು ಬಂದಾಗ, ಅಮೆರಿಕವು ಬ್ರಿಟನ್ನಿಗೆ ಸಹಾಯ ಮಾಡಲಿಲ್ಲವೆಂದೂ, ವರದಿಯಾಗಿದೆ.

ತ್ಯಾಗರಾಜ ಸ್ವಾಮಿಯವರ ಆರಾಧನೆ

ರಾಜಧಾನಿಯ ಲಕ್ಷ್ಮೀಪುರಂ ಮೊಹಲ್ಲಾ ಅಶೋಕ ರಸ್ತೆಯ ಪಶ್ಚಿಮದ ೪ ನೇ ಗಲ್ಲಿಯಲ್ಲಿ ಅರಮನೆ ಬ್ಯಾಂಡ್ ಮಾಸ್ಟರ್ ಶ್ರೀ ಎಂ. ಪಿ. ರಾಮಸ್ವಾಮಿಯವರ ಗೃಹದಲ್ಲಿ ಇದೇ ೧೭ ನೇ ತಾ॥ ಬೆಳಿಗ್ಗೆ ೧೧ ಗಂಟೆಗೆ ಶ್ರೀ ತ್ಯಾಗರಾಜರವರ ಆರಾಧನೋತ್ಸವವು ನಡೆಯುವುದು. ಆ ದಿನದಿಂದ ೨೫ ನೇ ತಾ॥ ವರೆಗೆ ಪ್ರತಿ ದಿನ ಸಂಜೆ ೭ ಗಂಟೆಗೆ ಸಂಗೀತ ಮತ್ತು ಹರಿಕಥೆಗಳು ನಡೆಯುವುವು.

ಸಿಮೆಂಟ್ ಬೇಕೇ?

ಇಗೋ, ಡಾಲ್ಮಿಯಾ

ಶ್ರೀಕೃಷ್ಣಾದವರು ಸಕಾರದವರು ನಿಗದಿ ಮಾಡಿರುವ ಬೆಲೆಗೆ ಸಿಕ್ಕುವಂಥಾದ್ದು

-: ವಿಚಾರಿಸಿ :-

ಸಿ. ಬಿ. ಎಸ್. ಕುಮಾರ್,

ತಿರೋಕಾ ರೋಡ್, ಮೈಸೂರು.

Printed and published by A. N. Nagarajan at the Sadhvi Press, D. Subbiah Road, Mysore

ಭಾರತದಲ್ಲಿ ಫ್ರಾನ್ಸಿನ ಪ್ರದೇಶಗಳ ಐಕ್ಯ

ಭಾರತದಲ್ಲಿರುವ ಫ್ರಾನ್ಸಿನ ಪ್ರದೇಶಗಳನ್ನು ಬಿಟ್ಟುಹೋಗಲು ಫ್ರೆಂಚ್ ಸರ್ಕಾರದವರು ನಿರ್ಧರಿಸಿ, ಅವುಗಳನ್ನು ಭಾರತಕ್ಕೆ ವರ್ಗಾಯಿಸಲು ಸಿದ್ಧತೆಗಳನ್ನು ನಡೆಸುತ್ತಿದ್ದಾರೆಂದು ಹೇಳಲಾಗಿದೆ. ಈ ಬಗ್ಗೆ ಫ್ರೆಂಚ್ ಮತ್ತು ಭಾರತ ಸರ್ಕಾರಗಳಿಗೆ ಒಪ್ಪಂದವಾಗಿದೆಯೆಂದು ತಿಳಿದುಬಂದಿದೆ.

ಇಂಡೋನೇಷ್ಯ ದಿನಾಚರಣೆ

ಮೈಸೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಮೊನ್ನೆ ದಿನ ಇಂಡೋನೇಷ್ಯ ದಿನಾಚರಣೆಯನ್ನು ಫಸ್ಟ್ ಗ್ರೇಡ್ ಕಾಲೇಜಿನ ಬಳಿ ನೆರವೇರಿಸಲಾಯಿತು. ಇಂಡೋನೇಷ್ಯದ ಮೇಲೆ ಡಚ್ಚರ ಸಾಮ್ರಾಜ್ಯಶಾಹಿ ಧಾಳಿಯನ್ನೂ, ಡಚ್ ವಿರೋಧ ಪ್ರದರ್ಶನಗಳನ್ನು ನಡೆಸಿದ ವಿದ್ಯಾರ್ಥಿಗಳ ಮೇಲೆ ಲಾಠಿ ಮತ್ತು ಟಿಯರ್ ಗ್ಯಾಸ್ ಪ್ರಯೋಗಿಸಿದ ಬೊಂಬಾಯಿ, ಕಲ್ಕತ್ತ ಮತ್ತು ದೆಹಲಿ ಸರ್ಕಾರಗಳ ವರ್ತನೆಯನ್ನೂ ಮತ್ತು ಬೆಂಗಳೂರಿನಲ್ಲಿ ದಿನಾಚರಣೆ ನಡೆಸಲು ಸರ್ಕಾರದವರು ಅಪ್ಪಣೆ ಕೊಡದಿರುವುದನ್ನೂ ಖಂಡಿಸುವ ನಿರ್ಣಯಗಳು ಅಂಗೀಕೃತವಾದುವು.

ರಾಮಾಯಣ ಕಥಾ ಶ್ರವಣ

ರಾಜಧಾನಿಯ ನರಸಿಂಹರಾಜ ಮೊಹಲ್ಲಾ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ನಿನ್ನೆಯಿಂದ ಪ್ರತಿ ದಿನ ಸಂಜೆ ೭ ಗಂಟೆಗೆ ಶ್ರೀ ಕೆ. ಎಸ್. ಗಣಪತಿ ಭಾಗವತರವರಿಂದ ರಾಮಾಯಣ ಕಥಾ ಶ್ರವಣವನ್ನು ಏರ್ಪಡಿಸಲಾಗಿದೆ.

ಬ್ರಿಟನ್ನಿನ ಫುಟ್‌ಬಾಲ್ ಪೂಲು

ಬ್ರಿಟನ್ನಿನಲ್ಲಿ ಪ್ರತಿ ವಾರವೂ ೬೦ ಲಕ್ಷ ಜನರು ಫುಟ್‌ಬಾಲ್ ಪೂಲಿಗಾಗಿ ಕಷ್ಟ ಮಾಡುವರೆಂದೂ, ಪೋಸ್ಟಾಫೀಸಿನ ದ ಹಣ ಕಳುಹಿಸುವ ಮೂಲಕ ೫೦ ಸಾವಿರ ಪೌಂಡುಗಳ ವರೆಗೂ ಖರ್ಚಾಗುತ್ತಿರುವುದೆಂದೂ ವರದಿಯಾಗಿದೆ. ಸರ್ಕಾರಕ್ಕೆ ಇದರಿಂದ ತೆರಿಗೆ ರೂಪದಲ್ಲಿ ೩,೪೦,೦೦೦ ಪೌಂಡುಗಳು ಬರುವುದೆಂದೂ ಹೇಳಲಾಗಿದೆ.

ರಾಜಕಮಲ್ ಟಾಕೀಸ್

೧೪-೧-೪೯ರಿಂದ

ಅಮೋಘ ೫ ನೇ ವಾರ

ಪ್ರತಿ ದಿನ ೩ ಆಟಗಳು

ಭಕ್ತ

ಕುಂಬಾರ

(ಕನ್ನಡ)

Morning Shows For 4 days From 14—1—49

AIR RAID WARDENS

WITH

Laurel & Hardy

ಸಿಮೆಂಟ್ ಕೂಡಲೇ ದೊರಕುತ್ತದೆ

-: ವಿವರಗಳಿಗೆ :-

ದಿ ಇಂಟರ್ ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,

೧೪೭೬, ಪ್ರಿನ್ಸ್ ಆಫ್ ವೇಲ್ಸ್ ರಸ್ತೆ, ಮೈಸೂರು.

ಇವರಲ್ಲಿ ವಿಚಾರಿಸಿ

ಪ್ರಭಾ

14-1-49ರಿಂದ

ದಿನವಹಿ ೩ ಆಟಗಳು

ದೇಖೋಜಿ

(ಹಿಂದಿ)

• ಮನ್ಸೂರ್ ಶಾಂತ •

ಇದರೊಂದಿಗೆ ಮೊದಲನೆಯ ಬಾರಿಗೆ ಇತ್ತೀಚಿನ ಅಖಿಲ ಭಾರತದ

ಜಯಪುರ್ ಕಾಂಗ್ರೆಸ್

ಅಧಿವೇಶನದ ದೃಶ್ಯಗಳನ್ನು ತೋರಿಸಲಾಗುತ್ತೆ

ಮೈಸೂರು ರಾಜ್ಯ ಉತ್ತರ ವಿಭಾಗ ಮುಖ್ಯಸ್ಥರ

ರಾಜ್ಯದವರ ಆರ್ಡರ್ ಮತ್ತು ತಾ॥ ೮ ನೇ ಜನವರಿ ೧೯೪೯

ಪ್ರಕಟನೆ

[illegible]

ಪಿ. ಬಿ. ನಾಯ್ಡು

ಮುಖ್ಯಸ್ಥರು ಇಂಜಿನಿಯರು

ಪಿ. ಡಬ್ಲ್ಯು. ಡಿ. ಉತ್ತರ ವಿಭಾಗ, ಮಂಡ್ಯ

-: ಶ್ರೀ ಗಾಯತ್ರೀ ಟಾಕೀಸ್ :-

ತಾ॥ ೧೫-೧-೪೯ ರಿಂದ ೫ ದಿನಗಳು ಮಾತ್ರ ಪ್ರತಿ ದಿನ ೩ ಪ್ರದರ್ಶನಗಳು



With: ESTHER WILLIAMS and RED SKELTON

ಬೇತಿಂಗ್ ಬ್ಯೂಟಿ

(ವರ್ಣರಂಜಿತ ಚಿತ್ರ)

Morning shows at 10-30 From 15-1-49 for 3 days

M.G.M's Thrilling Drama of the west

APACHE TRAIL (First Run)

ಪೋ॥ ನಂ 792 WEEKLY EDITION

ಸಾಧ್ವಿ

ಸಂಪುಟ ೧೩] ಭಾನುವಾರ ೧೬-೧-೪೯ [ಸಂಚಿಕೆ ೩೪

ಸಮತಾವಾದಿಗಳ ಸಮ್ಮೇಳನ

ಮೈಸೂರು ೧೬

ಸಂಸ್ಥಾನದ ಸಮತಾವಾದಿಗಳ ಪ್ರಥಮ ಸಮ್ಮೇಳನವು ಸಹಕಾರ ಭವನದಲ್ಲಿ ನಿನ್ನೆ ಬೆಳಗ್ಗೆ ಆರಂಭವಾಯಿತು ನಿನ್ನೆ ದಿನದ ಕಾರ್ಯಕಲಾಪಗಳು ರಹಸ್ಯವಾಗಿ ನಡೆದುವು ಈ ದಿನ ಬಹಿರಂಗವಾಗಿ ಜರುಗಿದುವು

ಚಿನ್ನದ ಗಣಿ ಕಾರ್ಮಿಕರ ನಾಯಕರಾದ ಶ್ರೀ॥ ಎಸ್ ಬಿ. ಆರೆಳಲಾರವರು ಅಧ್ಯಕ್ಷತೆಯನ್ನು ವಹಿಸಿದ್ದರು ಸಂಸ್ಥಾನದ ಹಲವು ಕಡೆಗಳಿಂದ ಸುಮಾರು ೭೫ ಜನ ಪ್ರತಿನಿಧಿಗಳು ಬಂದಿದ್ದರು

ಸ್ವಾಗತಾಧ್ಯಕ್ಷರಾದ ಶ್ರೀ॥ ಜೀ ರಂಗನಾಥೇಶರಾಯರು ಎಲ್ಲರಿಗೂ ಸುಸ್ವಾಗತವನ್ನು ಬಯಸಿ ಭಾಷಣ ಮಾಡಿದರು ಅಧ್ಯಕ್ಷರು ತಮಿಳಿನಲ್ಲಿ ಭಾಷಣ ಮಾಡಿ ಭರತ ಖಂಡಕ್ಕೆ ಸ್ವಾತಂತ್ರ್ಯವು ಬಂದನಂತರ ಈಗ ವಿಶೇಷ ಪರಿಸ್ಥಿತಿಯುಂಟಾಗಿದೆಯೆಂದೂ, ಸಮತಾವಾದಿಗಳು ಸಕಲ ವಿಧದಿಂದಲೂ ಸುಸಂಘಟಿತರಾಗಿ ಈಗ ಗಳಿಸಿರುವ ಸ್ವರಾಜ್ಯವನ್ನು ಸಂರಕ್ಷಿಸಬೇಕೆಂದೂ ತಿಳಿಸಿದರು

ಮೈಸೂರು ಸಂಸ್ಥಾನದ ಸಮತಾವಾದಿ ಪಕ್ಷವೆಂದು ಸಂಸ್ಥೆಗೆ ಹೆಸರಿಡುವಂತೆ ನಿರ್ಣಯ ಮಾಡಲಾಯಿತು ಅಖಿಲ ಭಾರತ ಸಮತಾವಾದಿ ಪಕ್ಷದ ಧ್ವಜದಲ್ಲಿ 'M' ಎಂಬ ಅಕ್ಷರವನ್ನು ಸೇರಿಸಿ ಉಪಯೋಗಿಸತಕ್ಕದ್ದೆಂದೂ ತೀರ್ಮಾನಿಸಲಾಯಿತು

ಟೀಟ್ಸಿನ್ ನಗರ ಕಮ್ಯೂನಿಸ್ಟರ ವಶ

ಟೀಟ್ಸಿನ್ ನಗರಕ್ಕೆ ಕಮ್ಯೂನಿಸ್ಟ್ ಪಡೆಗಳು ನಿನ್ನೆ ದಿನ ಪ್ರವೇಶ ಮಾಡಿ ಅದನ್ನು ವಶಪಡಿಸಿಕೊಂಡುವು ಚೀಣಾದಲ್ಲಿ ಕಮ್ಯೂನಿಸ್ಟರ ವಶವಾಗದ ಉಳಿದಿರುವ ನಗರವೆಂದರೆ ಪೀಪಿಂಗ್ ಒಂದೇ ಎಂದು ಹೇಳಲಾಗಿದೆ

ಖಜಾನೆಯಿಂದ ೨೨,೦೦೦ ರೂ. ಕಳುವು

ಬಾರ್ಸಿ ಬಳಿ ಇರುವ ಬೀದರ್ ನಗರದ ಖಜಾನೆಯಿಂದ ೩ ಜನ ಅಪರಿಚಿತರು ಅಲ್ಲಿನ ಉನ್ನತಾಧಿಕಾರಿಗಳ ರುಜುವನ್ನು ಫೋರ್ಜರಿ ಮಾಡಿ, ೨೨,೦೦೦ ರೂಗಳನ್ನು ಎತ್ತಿಕೊಂಡು ಹೋದ ಸಂಗತಿಯು ವರದಿಯಾಗಿದೆ ಕಳುವಾದ ಕೆಲವು ದಿನಗಳ ನಂತರ ಅಲ್ಲಿನ ಸರ್ಕಾರಿ ಅಧಿಕಾರಿಗಳಿಗೆ ರಿಜಿಸ್ಟರ್ ಪಾರ್ಸಲ್ ಮೂಲಕ ಅಪರಿಚಿತರು ೧೧,೦೦೦ ರೂಗಳನ್ನು ಕಳುಹಿಸಿ, ಉಳಿದ ೧೧,೦೦೦ ರೂಗಳ ಪೈಕಿ ತಾವು ೩೦೦೦ ರೂಗಳನ್ನು ಖರ್ಚು ಮಾಡಿರುವುದಾಗಿಯೂ, ತಮ್ಮನ್ನು ಪತ್ತೆ ಮಾಡಿಯಾರೆಂಬ ಭಯದಿಂದ ೮,೦೦೦ ರೂ ನ ನೋಟುಗಳನ್ನು ಸುಟ್ಟುಹಾಕಿರುವುದಾಗಿಯೂ ತಿಳಿಸಿದ್ದಾರೆಂದೂ ಹೇಳಲಾಗಿದೆ

ಲಂಚದ ಆಪಾದನೆ ಮೇಲೆ ಸರ್ಕಾರಿ ಮಂತ್ರಿಯ ದಸ್ತಗಿರಿ

ಪಪಾಸಿನ ಮಾಜಿ ಸಚಿವರಾದ ಗ್ಲಿಚೆ ... ಪಾರವರು ೧೨,೪೩೦ ರೂ ಬಾಳುವ ... ಸಾಮಾನುಗಳನ್ನು ಲಂಚವಾಗಿ ತೆಗೆದುಕೊಂಡರೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಲ್ಪಟ್ಟಿದ್ದಾರೆ

ಬೆಳಗೊಳದ ಕಾರ್ಖಾನೆ ಮೇಲೆ ಇಂಜಂಕ್ಷನ್ ದಾವಾ

ಮೈಸೂರು ೧೬

ಬೆಳಗೊಳದ ಮೈಸೂರು ಕೆಮಿಕಲ್ಸ್ ಫರ್ಟಿಲೈಸರ್ಸ್ ಕಾರ್ಖಾನೆಯ ಕೆಲಸಗಾರರು ಸುಮಾರು ೪ ತಿಂಗಳಿನಿಂದಲೂ ಮುಷ್ಕರ ಹೂಡಿರುವರಷ್ಟೆ ಅಧಿಕಾರಿ ವರ್ಗದವರು ಕೂಲಿಗಾರರ ಕಾನೂನಿಗೆ ವಿರುದ್ಧವಾಗಿ ಬೇರೆ ಕೆಲಸಗಾರರನ್ನು ಹೆಚ್ಚಿಗೆ ಸಂಬಳದ ಮೇಲೆ ನಿಯಮಿಸಿಕೊಂಡಿರುವುದರ ಬಗ್ಗೆ ಅಲ್ಲಿನ ಕೆಲಸಗಾರರ ಸಂಘದವರು, ಮೈಸೂರು ೧ ನೇ ಮುನ್ಸಿಫ್ ಕೋರ್ಟಿನಲ್ಲಿ ಹಂಗಾಮಿ ಇಂಜಂಕ್ಷನ್‌ಗೂ ಮತ್ತು ಇತರ ವಿಷಯಗಳಿಗೂ ದಾವಾ ಮಾಡಿದ್ದರು ಈ ದಿನ ಬೆಳಗ್ಗೆ ೮ ಗಂಟೆಗೆ ಮುನ್ಸೀಫ್ ಶ್ರೀ॥ ಕೃಷ್ಣಯ್ಯ ಶೆಟ್ಟಿಯವರು ಸ್ಪೆಷಲ್ ವಿಚಾರಣೆಯನ್ನು ನಡೆಸಿದರು ಕೆಲಸಗಾರರ ಸಂಘದ ಪರವಾಗಿ ಶ್ರೀ॥ ಎಸ್ ಡಿ ರಂಗಾಚಾರ್ಯರೂ ಅಧಿಕಾರ ವರ್ಗದವರ ಪರವಾಗಿ ಶ್ರೀ॥ ಮಹಂತ ದೇವರೂ ವಕಾಲತ್ತು ವಹಿಸಿದ್ದರು ತೀರ್ಪು ಕಾದಿಡಲ್ಪಟ್ಟಿದೆ

ಆರ್ ಎಸ್ ಎಸ್-ನವರಿಗೆ ಶಿಕ್ಷೆ

ಆರ್ ಎಸ್ ಎಸ್ ಘೋಷಣೆಗಳನ್ನು ಮಾಡುತ್ತಿದ್ದ ಶ್ರೀಗಳು ಎಂ ಪಿ ನಾಗಭೂಷಣಾರಾಧ್ಯ ಸಿ ಎಂ ಪುಟ್ಟಮಾದಪ್ಪ, ಜಿ ವಿ ಕೃಷ್ಣರಾವ್, ಬಿ ಸಿ ಶ್ರೀನಿವಾಸ ರಾಘವನ್ ಎಂಬುವರನ್ನು ಮೊನ್ನೆ ದಿನ ಪೋಲೀಸಿನವರು ದಸ್ತಗಿರಿ ಮಾಡಿ ಅವರ ಮೇಲೆ ಮೊಕದ್ದಮೆ ಹೂಡಿದ್ದರು. ನಿನ್ನೆ ದಿನ ನಗರ ನ್ಯಾಯಾಧೀಶರು ಅವರಿಗೆ ತಲಾ ೩ ತಿಂಗಳ ಸಜಾ ವಿಧಿಸಿದರು

ದಕ್ಷಿಣ ಆಫ್ರಿಕನ್ನರಿಗೂ ಭಾರತೀಯರಿಗೂ ಕಾದಾಟ

೩೦೦ ಜನರ ಮರಣ, ಅನೇಕರಿಗೆ ಗಾಯ

ಡರ್ಬಾನ್ ನಗರ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳ ಆಫ್ರಿಕದ ಜನರು ಅಲ್ಲಿನ ಭಾರತೀಯರ ಮೇಲೆ ಬಿದ್ದು ದೊಂಬಿ ನಡೆಸಿದರೆಂದು ಹೇಳಲಾಗಿದೆ ಇದರಿಂದ ೩೦೦ ಮಂದಿ ಮರಣ ಹೊಂದಿ ಸಹಸ್ರಾರು ಜನರಿಗೆ ಗಾಯಗಳಾಗಿವೆ ಅನೇಕ ಭಾರತೀಯರ ಕೊಲೆಗಳು ನಡೆದಿವೆಯೆಂದೂ, ದಕ್ಷಿಣ ಆಫ್ರಿಕಾದ ಚರಿತ್ರೆಯಲ್ಲಿ ಹಿಂದೆಂದೂ ಇಂತಹ ವರ್ಣದ್ವೇಷದ ಕ್ರೂರ ಘಟನೆಗಳು ಸಂಭವಿಸಿರಲಿಲ್ಲವೆಂದೂ ವರದಿಯಾಗಿದೆ ಒಬ್ಬ ಭಾರತೀಯ ಸ್ಟೋರ್ ಕೀಪರನಿಗೂ ಆಫ್ರಿಕಾದವನೊಬ್ಬನಿಗೂ ಬಸ್ಸಿನಲ್ಲಿ ಜಗಳವಾದುದರ ಪರಿಣಾಮವಾಗಿ ಈ ಗಲಭೆಯು ನಡೆಯಿತು ಸುಮಾರು ೩೦೦ ಮಂದಿ ಹೆಂಗಸರೂ ಮಕ್ಕಳೂ ಕಾಡಿಗೆ ಓಡಿ ಹೋದರೆಂದೂ, ಶಾಂತಿ ಸ್ಥಾಪನೆಗಾಗಿ ಪೋಲೀಸು ಮತ್ತು ಸೈನಿಕರನ್ನು ನೇಮಿಸಲಾಗಿದೆಯೆಂದೂ ತಿಳಿದು ಬಂದಿದೆ

ಧರ್ಮ ಸಮ್ಮೇಳನಗಳು

ಬೆಂಗಳೂರು ೧೬

ಆಗಮತ್ರಯ ಮಹಾ ಮಂಡಲದ ದ್ವಿತೀಯ ಮಹಾ ಸಮ್ಮೇಳನವೂ ಮತ್ತು ಅಖಿಲ ಕರ್ಣಾಟಕ ಸನಾತನ ಧರ್ಮ ದ್ವಿತೀಯ ಮಹಾ ಸಮ್ಮೇಳನವೂ ಇದೇ ತಿಂಗಳು ೨೨ ನೇ ತಾ॥ ನಿಂದ ೩ ದಿನಗಳು ಬೆಂಗಳೂರು ವಿಶ್ವೇಶ್ವರ ಪುರದಲ್ಲಿರುವ ಧರ್ಮಪ್ರಕಾಶ ಸಜ್ಜನರಾಯರ ಕಲ್ಯಾಣ ಮಂದಿರದಲ್ಲಿ ಜರುಗುವುವು ಶ್ರೀ ದ್ವಾರಕಾ ಜಗದ್ಗುರು ಶಂಕರಾಚಾರ್ಯ ಶ್ರೀಮದಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರು ಅಧ್ಯಕ್ಷತೆಯನ್ನು ವಹಿಸುವರು ದಿವಾನಂರಾದ ಸರ್ ಎ ರಾಮಸ್ವಾಮಿ ಮೊದಲಿಯಾರರು ಇವುಗಳ ಆರಂಭೋತ್ಸವವನ್ನು ನೆರವೇರಿಸುವರು ಸಮ್ಮೇಳನದ ವೆಚ್ಚಕ್ಕಾಗಿ ೫ ಸಹಸ್ರ ರೂಗಳು ತಗಲುವುದರಿಂದ ಧರ್ಮಾಭಿಮಾನಿಗಳು ಉದಾರ ಮನಸ್ಸಿನಿಂದ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ ಪರಸ್ಥಳದ ಪ್ರತಿನಿಧಿಗಳಿಗೆ ವಸತಿ ಮತ್ತು ಭೋಜನಾದಿಗಳಿಗೆ ಉಚಿತ ವ್ಯವಸ್ಥೆ ಮಾಡಲಾಗುವುದೆಂದೂ, ಸಮ್ಮೇಳನದಲ್ಲಿ ಭಾಗ ವಹಿಸಲು ಒಯಸುವವರು ೫ ರೂಗೆ ಕಡಿಮೆ ಇಲ್ಲದಂತೆ ತಮ್ಮ ಪ್ರಾತಿನಿಧ್ಯ ದ್ರವ್ಯವನ್ನು ಮಂಡಲದ ಅಧ್ಯಕ್ಷರ ಹೆಸರಿಗೆ ಕಳುಹಿಸಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದೂ ಕೋರಲಾಗಿದೆ

ಅಸ್ಸಾಂ ಗೌರ್ನರಾಗಿ ಸರ್ ಆರ್ಕಾಟರ ನೇಮಕ

ಸ್ವಂ ಸು ಪೋ॥) ಬೆಂಗಳೂರು ೧೬

ಭಾರತದ ಗೌರ್ನರ್ ಜನರಲ್ಲರವರೇ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರಿಗೆ ಪತ್ರ ಬರೆದು ಅಸ್ಸಾಮಿನ ಗೌರ್ನರ್ ಪದವಿಯನ್ನು ಸ್ವೀಕರಿಸುವಂತೆ ಕೋರಿರುವರೆಂದೂ ಈ ನೇಮಕದ ಬಗ್ಗೆ ಸದ್ಯದಲ್ಲಿ ಪ್ರಕಟಣೆ ಹೊರಡುವುದೆಂದೂ ತಿಳಿದುಬಂದಿದೆ

ಅಡ್ವೊಕೇಟ್ ಜನರಲ್

ಶ್ರೀ ವಾಸುದೇವ ಮೂರ್ತಿಯವರನ್ನು ಅಡ್ವೊಕೇಟ್ ಜನರಲ್ಲರಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ಸೆಂಟ್ರಲ್ ಕಾಲೇಜ ದಿನಾಚರಣೆ

ಭಾರತ ಸರ್ಕಾರದ ಆಡಿಟರ್ ಜನರಲ್ಲರಾದ ಶ್ರೀ ವಿ ನರಹರಿರಾಯರು ನಿನ್ನೆ ಸೆಂಟ್ರಲ್ ಕಾಲೇಜಿನ ದಿನಾಚರಣೆಯ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದರು ವಿದ್ಯಾರ್ಥಿಗಳಲ್ಲಿ ಶಿಸ್ತು ಮುಖ್ಯವಾಗಿ ಬೇಕು ರಾಷ್ಟ್ರ ರಚನೆಗೆ ಅವರು ಸಿದ್ಧರಾಗಬೇಕು ಸಂಕುಚಿತ ಭಾವನೆಗಳು ತೊಲಗಬೇಕು ಕ್ರೋಧಮಾಡುವಾರು ವಿಷಮ ನಿರ್ಮೂಲವಾಗಬೇಕು. ಹಿರಿಯರಲ್ಲಿ ಗೌರವವಿಡಬೇಕು ಮಹಾತ್ಮರ ಆದರ್ಶವನ್ನು ಪಾಲಿಸಬೇಕು —ಎಂದು ಅವರು ಸೂಚಿಸಿದರು

ಆರ್. ಎಸ್. ಎಸ್. ಸತ್ಯಾಗ್ರಹ ನಿಲ್ಲುವುದೇ ?

ಒಂದು ತಿಂಗಳಿನಿಂದಲೂ ನಡೆಯುತ್ತಿರುವ ಆರ್ ಎಸ್ ಎಸ್ ಸತ್ಯಾಗ್ರಹವು ಇಷ್ಟರಲ್ಲೇ ಮುಕ್ತಾಯಗೊಳ್ಳಬಹುದೆಂದು ಹೇಳಲಾಗಿದೆ. ಈ ಬಗ್ಗೆ ಸಂಘದ ನಾಯಕರಾದ ಗೋಲ್ವಾಲ್‌ಕರ್ ರವರನ್ನು ಭೇಟಿ ಮಾಡಿ ಮಾತುಕತೆ ನಡೆಸಲು ಬೊಂಬಾಯಿ ಮತ್ತು ಪೂನಾಗಳಿಂದ ಕೆಲವರು ನಾಗಪುರಕ್ಕೆ ತೆರಳಿ ಅವರ ಭೇಟಿಗಾಗಿ ಅಲ್ಲಿನ ಪ್ರಾಂತ ಸರ್ಕಾರದ ಅನುಮತಿ ಕೇಳಿದ್ದಾರೆಂದೂ, ಪ್ರಾಂತ ಸರ್ಕಾರವು ಈ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದೆಯೆಂದೂ ವರದಿಯಾಗಿದೆ ಈ ನಿಯೋಗದವರಿಗೆ ಭೇಟಿ ದೊರೆತರೆ ಸತ್ಯಾಗ್ರಹವನ್ನು ನಿಲ್ಲಿಸುವಂತೆ ಶ್ರೀ ಗೋಲ್ವಾಲ್‌ಕರ್‌ರವರನ್ನು ಅವರು ಒತ್ತಾಯಪಡಿಸುವುದಾಗಿಯೂ ತಿಳಿದು ಬಂದಿದೆ

ಪ್ರಭುಗಳು ಕರ್ಣಾಟಕದ ಗೌರ್ನರಾಗಬೇಕು

ನಿಜಲಿಂಗಪ್ಪನವರ ಹೇಳಿಕೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ॥ ಎಸ್ ನಿಜಲಿಂಗಪ್ಪನವರು ಹುಬ್ಬಳ್ಳಿಯ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ತನ್ನ ಅಭಿಪ್ರಾಯದಲ್ಲಿ ರಾಜ ಮಹಾರಾಜರುಗಳು ಇರಬೇಕಾದ ಅಗತ್ಯವಿಲ್ಲವೆಂದೂ, ಆದರೆ ಮೈಸೂರನ್ನೊಳಗೊಂಡ ಕರ್ಣಾಟಕ ಪ್ರಾಂತ್ಯದ ರಚನೆಯಾಗಿ, ಮೈಸೂರು ಮಹಾರಾಜರವರು ಅದರ ಶಾಸನ ಬದ್ಧ ಗೌರ್ನರಾಗಬೇಕೆಂಬುದೇ ತಮ್ಮ ಅಭಿಲಾಷೆಯೆಂದೂ ತಿಳಿಸಿದ್ದಾರೆ ಕಾಂಗ್ರೆಸ್ ಕೆಲಸಗಾರರು ತಮ್ಮ ಹಿಂದಿನ ಸೇವೆ ಮತ್ತು ತ್ಯಾಗಗಳಿಗೆ ಪ್ರತಿಫಲವನ್ನು ನಿರೀಕ್ಷಿಸದೆ ನಿಸ್ವಾರ್ಥತೆಯಿಂದ ದೇಶ ಸೇವೆಗಾಗಿ ದುಡಿಯಬೇಕೆಂದೂ ಅವರು ಹೇಳಿರುವರು

ಕೃಷ್ಣರಾಜೇಂದ್ರ ಗಿರಣಿ ಮುಷ್ಕರದ ಮುಕ್ತಾಯ

ಕೆಲಸದಿಂದ ತೆಗೆದುಹಾಕಿದ್ದ ೯ ಜನರನ್ನು ವಾಪಸು ತೆಗೆದುಕೊಳ್ಳುವುದಾಗಿ ವ್ಯವಸ್ಥಾಪಕರು ಒಪ್ಪಿಕೊಂಡ ಮೇಲೆ ಕೃಷ್ಣರಾಜೇಂದ್ರ ಗಿರಣಿಯ ಕೆಲಸಗಾರರು ನಿನ್ನೆ ದಿನ ಮುಷ್ಕರವನ್ನು ಮುಕ್ತಾಯ ಮಾಡಿ, ಕೆಲಸದ ಮೇಲೆ ಹಿಂದಿರುಗಿದರೆಂದು ತಿಳಿದು ಬಂದಿದೆ

ಕಾರ್ಮಿಕರಿಗೆ ವಸತಿ

ಕೆಲಸಗಾರರಿಗೆ ವಸತಿಗಳನ್ನೊದಗಿಸುವ ಬಗ್ಗೆ ಚುನಾಯಿತ ಸಮಿತಿಯವರು ಮಾಡಿದ್ದ ವರದಿಯನ್ನು ನಿನ್ನೆ ಶಾಸನ ಸಭೆಯು ಅಂಗೀಕರಿಸಿತು

ವುಡ್‌ಲ್ಯಾಂಡ್ಸ್ ಟಾಕೀಸಿನಲ್ಲಿ

ಇಂದಿನಿಂದ ನಾಲ್ಕು ದಿನಗಳು ಮಾತ್ರ
ಪ್ರತಿ ದಿನ ೩ ಆಟಗಳು

ಟಾರ್ಜನ್ಸ್ ಅಡ್ವೆಂಚರ್ಸ್

ಪಾತ್ರ – ಹರ್ಮ್ಯಾನ್ ಬ್ರಿಕ್ಸ್ ಮತ್ತಿತರರು
ಕಣ್ಣಾನಾಯಣ ಪಿಕ್ಚರ್ಸ್ ಸರ್ಕ್ಯುಟ್ ರಿಲೀಜ್

ವಾರ ಭವಿಷ್ಯ

ತಾ|| ೧೬-೧-೪೯ರಿಂದ ೨೨-೧-೪೯ ರ ವರೆಗೆ

ಮೇಷ:- ವಿದ್ಯಾರ್ಥಿ ಮತ್ತು ಲೇಖಕ ವರ್ಗಕ್ಕೆ ಈ ವಾರ ಅತ್ಯಂತ ಶುಭದಾಯಕವಾಗಿದೆ, ಪ್ರವಾಸದಿಂದ ಅಧಿಕ ಲಾಭವುಂಟಾಗುವುದು. ನೌಕರಿ ದಂಧೆಗಳಲ್ಲಿ ಬಡ್ತಿ ದೊರೆಯುವುದು. ತಾ|| ೧೭, ೨೦ ರ ಶುಭ ವಾರ್ತೆ, ಧನ ಲಾಭ.

ವೃಷಭ:- ಆರ್ಥಿಕ ಸ್ಥಿತಿಯು ಸಂಪೂರ್ಣವಾಗಿ ಸುಧಾರಿಸುವುದು ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು. ಯತ್ನಿಸಿದ ಕಾರ್ಯಗಳಲ್ಲಿ ಮಿತ್ರರ ನೆರವು ದೊರೆಯುವುದು. ಆರೋಗ್ಯ ಚೆನ್ನಾಗಿದೆ. ತಾ|| ೨೦, ೨೨ ಇಷ್ಟಸಿದ್ಧಿ, ಮಿತ್ರ ಭೇಟಿ

ಮಿಥುನ:- ಈ ವಾರ ಪ್ರವಾಸದಿಂದ ಸ್ವಲ್ಪ ಆರೋಗ್ಯಕ್ಕೆ ಧಕ್ಕೆಯುಂಟಾಗಬಹುದು. ಆದಾಯಕ್ಕಿಂತ ಖರ್ಚು ಹೆಚ್ಚುವುದು. ಯತ್ನಿಸಿದ ಕಾರ್ಯಗಳು ಅರ್ಧಕ್ಕೆ ನಿಲ್ಲುವುವು ಅಸ್ತ್ರೀಪ್ಸರಲ್ಲಿ ಮನಸ್ತಾಪ ಸಂಭವ. ತಾ ೨೧, ೨೨ ದುರ್ವಾರ್ತೆ, ಚೋರ ಭಯ.

ಕಟಕ - ಆರೋಗ್ಯ ಸಾಧಾರಣವಾಗಿದೆ. ವ್ಯಾಪಾರ ಉದ್ಯೋಗಗಳಲ್ಲಿ ನಷ್ಟ ಸಂಭವಿಸುವುದು. ವಾರಾಂತ್ಯದಲ್ಲಿ ಮಿತ್ರರಿಂದ ಸಹಾಯವುಂಟಾಗುವುದು ತಾ|| ೧೬, ೨೧ ಶುಭ ಸಮಾಚಾರ, ವೃಥಾಪವಾದ

ಸಿಂಹ:-ಆರೋಗ್ಯ ಧನಾದಾಯಗಳೆರಡೂ ಉತ್ತಮವಾಗಿವೆ ಕೋರ್ಟು ಕಛೇರಿ ವ್ಯವಹಾರಿಗಳಲ್ಲಿ ಜಯ ಲಭಿಸುವುದು. ದಾನ ಧರ್ಮಗಳಿಗಾಗಿ ವೆಚ್ಚವಾದಗುವುದು. ತಾ|| ೧೯, ೨೨ ಧನಲಾಭ, ಸುಖ ಪ್ರವಾಸ

ಕನ್ಯಾ:- ಈ ವಾರ ಅನೇಕ ಅವಮಾನಕರ ಘಟನೆಗಳು ಸಂಭವಿಸುವುವು. ಬಂಧು ಬಳಗದವರೊಡನೆ ಮನಸ್ತಾಪವುಂಟಾಗುವುದು. ವಾರಾಂತ್ಯದಲ್ಲಿ ಕೊಂಚ ಧನಾಗಮನ ತಾ|| ೧೨, ೨೦ ದುಂದು ವೆಚ್ಚ, ಅಲ್ಪ ಲಾಭ.

ತುಲಾ:- ಆರ್ಥಿಕ ಪರಿಸ್ಥಿತಿಯು ಬಿಗಡಾಯಿಸುವುದು. ಯತ್ನಿಸಿದ ಕಾರ್ಯಗಳು ನಿಷ್ಫಲವಾಗುವುವು. ಮನೆಯಲ್ಲಿ ಸಂಶಯ ವಾತಾವರಣವುಂಟಾಗುವುದು. ತಾ|| ೧೯, ೨೧ ಅಹಿತ ವಾರ್ತೆ, ವಾಹನ ಭಯ.

ವೃಶ್ಚಿಕ:-ಕೈಗೊಂಡ ಕಾರ್ಯಗಳು ಅಧಿಕ ಯತ್ನದಿಂದ ಮಾತ್ರ ಸಿದ್ಧಿಸುವುವು. ಅನೇಕ ಸಾಧು ಸಂತರ ದರ್ಶನವಾಗುವುದು. ಬಂಧು ಬಳಗದವರಿಂದ ಮನ್ನಣೆ ದೊರೆಯುವುದು. ತಾ|| ೧೭, ೨೦ ಔತಣ, ಉಲ್ಲಾಸ.

ಧನು:-ಆಮಾಮುಕ್ಕೆರಡರಷ್ಟು ಏಜೋರ ದಗುವುದು. ಬರಬೇಕಾದ ಹಣವೂ ಸಹ ಬಾರದೆ ತೊಂದರೆಯುಂಟಾಗುವುದು. ವಾರಾಂತ್ಯದಲ್ಲಿ ಮಿತ್ರರಿಂದ ಸಹಾಯವೊದಗುವುದು. ತಾ|| ೧೮, ೨೨ ಋಣ ಬಾಧೆ, ಕೊಂಚ ಶಾಂತಿ.

ಮಕರ:- ನೌಕರಿ ದಂಧೆಗಳಲ್ಲಿ ಮೇಲಧಿಕಾರಿಗಳಿಂದ ತಿರಸ್ಕಾರವುಂಟಾಗುವುದು. ಮಿತ್ರರು ಗೋಮುಖ ವ್ಯಾಘ್ರಗಳಂತೆ ವರ್ತಿಸುವರು. ಪ್ರವಾಸದಿಂದ ನಷ್ಟ ಸಂಭವಿಸುವುದು. ತಾ|| ೧೯, ೨೨ ಅರ್ಥ ಹಾನಿ, ಚೋರ ಭಯ.

ಕುಂಭ:- ಹಲ ಕಾಲದ ತೊಂದರೆ ಅಧಿಕವಾಗುವುದು ಪ್ರವಾಸದಿಂದ ಆರೋಗ್ಯಕ್ಕೆ ಧಕ್ಕೆಯುಂಟಾಗಬಹುದು. ಶತ್ರುಗಳಿಂದ ವಿಪರೀತ ನಷ್ಟ ಸಂಭವಿಸುವುದು. ತಾ|| ೧೭, ೨೦ ಅಗ್ನಿ ಭಯ ಅನಾರೋಗ್ಯ.

ಮೀನ:- ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಈ ವಾರ ಪ್ರಗತಿದಾಯಕವಾಗಿದೆ ಅನೇಕ ವಿಘ್ನಗಳ ನಿವಾರಣೆಯುಂಟಾಗುವುದು ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರುವುವು. ತಾ|| ೧೬, ೨೧ ಇಷ್ಟ ಸಿದ್ಧಿ, ಸನ್ಮಾನ.

ವಿದ್ಯಾ ಸಮ್ಮೇಳನದಲ್ಲಿ ಸಂಗೀತಕ್ಕೆ ಪ್ರಾತಿನಿಧ್ಯ

ರಾಜಧಾನಿಯಲ್ಲಿ ಕಳೆದ ತಿಂಗಳು ನಡೆದ ಅಖಿಲ ಭಾರತ ವಿದ್ಯಾ ಸಮ್ಮೇಳನದಲ್ಲಿ ದೇಶದ ಏಳಿಗೆಗೆ ಬಹು ಮುಖ್ಯವಾದ ಸಂಗೀತ ಕಲೆಗೆ ಅವಕಾಶವಿಲ್ಲದಿದ್ದರೂ, ಸಮ್ಮೇಳನದ ಕಾರ್ಯದರ್ಶಿಗಳ ಉದಾರತೆಯಿಂದ ಸಂಸ್ಥಾನದ ಸಂಗೀತ ಪರಿಷತ್ತಿನ ಪ್ರತಿನಿಧಿಗಳಾದ ಶ್ರೀಗಳು ಆರ್. ಕೆ. ಶ್ರೀಕಂಠ, ಮತ್ತು ಎಂ. ಎ ನರಸಿಂಹಾಚಾರ್ಯರು ಭಾಗವಹಿಸಿ, ಸಂಗೀತ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಒತ್ತಾಯಪಡಿಸಿದರು. ಮುಂದಿನ ವರ್ಷ ಹೈದರಾಬಾದಿನಲ್ಲಿ ನಡೆಯುವ ವಿದ್ಯಾ ಸಮ್ಮೇಳನಕ್ಕೆ ಪರಿಷತ್ತಿನ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಲು ಸರ್ಕಾರದವರು ಸಹಾಯ ಮಾಡಬೇಕು-ಎಂದು ಅದರ ಕಾರ್ಯದರ್ಶಿಗಳಾದ ಶ್ರೀ ಕೆ ಎಸ್. ಚಂದ್ರಶೇಖರಯ್ಯನವರು ಪ್ರಾರ್ಥಿಸಿರುತ್ತಾರೆ

ವಾರ್ಷಿಕೋತ್ಸವ

ರಾಜಧಾನಿಯ ಸಾಹುಕಾರ್ ಶ್ರೀ ಹೊಂಬಾಳೆ ರಂಗಯ್ಯನವರ ಕುಂಚಿಟಿಗರ ವಿದ್ಯಾರ್ಥಿ ನಿಲಯದ ನೂರನೇ ವಾರ್ಷಿಕೋತ್ಸವವು ಮೊನ್ನೆ ದಿನ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂಬಂಧದಲ್ಲಿ ಸಾವಿರಾರು ಬಡ ಜನರಿಗೆ ಅನ್ನ ದಾನ ಮಾಡಲಾಯಿತು

ಕಳ್ಳರ ಪತ್ತೆ

ವಾಣೀ ವಿಲಾಸ ಮೊಹಲ್ಲಾದಲ್ಲಿರುವ ಜನಾಬ್ ಅಲ್ಲಿಬಾಗ್ ರವರ ಮನೆಯಲ್ಲಿ ಮೊನ್ನೆ ಸಂಜೆ ೪ ಸಾವಿರ ರೂ ಇರುವ ಹಣದ ಪೆಟ್ಟಿಗೆಯು ಕಳುವಾಯಿತೆಂದು ಪೊಲೀಸರಿಗೆ ದೂರು ಬಂದಿತ್ತು ಅದೇ ರಾತ್ರಿ ೧೨ ಗಂಟೆಗೆ ಸಬ್ ಇನ್ಸ್‌ಪೆಕ್ಟರ್ ಶ್ರೀ ಎಸ್. ಜಿ ಬೋರೇಗೌಡರು ಮತ್ತು ಇಬ್ಬರು ಪೊಲೀಸರು ಪೆಟ್ರೋಲ್ ಮಾಡುತ್ತಿದ್ದಾಗ ಬಿರ್ಜ ಮತ್ತು ಮಾಧವದಾ ಹುಸೇನ್ ಎಂಬುವರು ಪ್ರಿನ್ಸೆಸ್ ರಸ್ತೆಯಿಂದ ಕೃಷ್ಣರಾಜ ಸಾಗರದ ಕಡೆ ಹಣದ ಪೆಟ್ಟಿಗೆ ಸಂಗಡ ಓಡಿಹೋಗುತ್ತಿದ್ದವನ್ನು ಕಂಡು ಅವರನ್ನು ದಸ್ತಗಿರಿ ಮಾಡಿ ಹಣವನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ.

ಮೋಟಾರು ಸ್ವಿಚ್ ಕೀ ಸಿಕ್ಕಿದೆ

ಒಂಟಿಕೊಪ್ಪಲ್ ಆಕಾಶವಾಣಿಯ ಬಳಿ ಕಳೆದ ೧೨ ನೇ ತಾರೀಖು ಮೋಟಾರು ಕಾರಿನ ಸ್ವಿಚ್ ಕೀ ಸಿಕ್ಕಿದೆ. ಮಾಲೀಕರು ಸರಿಯಾದ ರುಜುವಾತು ಕೊಟ್ಟು "ಸಾಧ್ವಿ" ಕಛೇರಿಯಲ್ಲಿ ಪಡೆಯಬಹುದು.

ಸಂಸ್ಕೃತ ಪಾಠಗಳ ತರಗತಿ

ರಾಜಧಾನಿಯ ವಿ ಸುಬ್ಬಯ್ಯ ರಸ್ತೆಯ ೩೫೮ ನೇ ನಂಬರು ಮನೆಯಲ್ಲಿ ವಾಣೀ ವಿಹಾರ ವಿದ್ಯಾ ಮಂದಿರದವರು ಪರೀಕ್ಷೆಗೆ ಕುಳಿತುಕೊಳ್ಳುವ ಸಂಸ್ಕೃತ ವಿದ್ಯಾರ್ಥಿಗಳಿಗೆ ಪಾಠಗಳನ್ನು ಏರ್ಪಡಿಸಿರುತ್ತಾರೆ. ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಠ ಹೇಳಿಕೊಡಲಾಗುತ್ತದೆ ಸೇರಲಿಚ್ಛಿಸುವವರು ಇದೇ ೨೦ ನೇ ತಾ|| ನೊಳಗಾಗಿ ಅರ್ಜಿ ಪ್ರವೇಶ ಧನದೊಡನೆ ಹೆಸರುಗಳನ್ನು ಕಳುಹಿಸಬೇಕೆಂದು ಕೋರಲಾಗಿದೆ.

ಉದಾರ ಸಹಾಯ

ರಾಜಧಾನಿಯ ಪೂಡರ್ರ ಕೆರೆ ಬಳಿ ಶ್ರೀ ಎಸ್ ಪಿ ಧರಣಪ್ಪನವರ ಧರ್ಮ ವಸತಿಯಲ್ಲಿರುವ ನೇತ್ರ ಚಿಕಿತ್ಸಾಲಯಕ್ಕೆ ಮೈಸೂರು ಶಾಂತಿ ಮೆಡಿಕಲ್ ಸ್ಟೋರ್ಸಿನ ನಾರಾಯಣ ಶೆಟ್ಟಿ, ಅರಸೀಕೆರೆಯ ಶ್ರೀ ಎಂ. ಕೆ. ಬಸವರಾಜಪ್ಪ, ಟಿ ನರಸೀಪುರದ ಶ್ರೀನಿವಾಸವರದಾಚಾರ್, ಶ್ರೀ ಕೆಂಪಣ್ಣ, ಶ್ರೀ ಜಿ. ರಾಜಗೋಪಾಲ್ ರವರುಗಳು ತಲಾ ೧೦೦ ರೂ. ಮತ್ತು ಶ್ರೀ ಪುಟ್ಟಸ್ವಾಮೀ ಗೌಡರು ೫೦ ರೂ. ಅನ್ನು ಕೊಟ್ಟಿರುತ್ತಾರೆ.

ಅಕ್ಷರ ಪ್ರಚಾರ ಸಮಿತಿಯ ವಹಿಳೆಯರ ಕಾರ್ಯಕ್ರಮ

ಮೈಸೂರು ನಗರದ ಅಕ್ಷರ ಪ್ರಚಾರ ಸಮಿತಿಯ ವಯಸ್ಕರ ಶಾಲೆಗಳ ಮಹಿಳೆಯರು ಮಹಾರಾಣಿ ಹೈಸ್ಕೂಲಿನಲ್ಲಿ ಕಳೆದ ೧೦ ನೇ ತಾ|| ಗಿರಿಜಾ ಕಲ್ಯಾಣ, ನರ್ತನ ಮುಂತಾದವುಗಳನ್ನು ನಡೆಸಿದರು. ಪಶೀಲರಾದ ಶ್ರೀ ಎಸ್. ವಿ. ಮಂಜುನಾಥ್ ರವರು ಅಧ್ಯಕ್ಷತೆ ವಹಿಸಿದ್ದರು,

ಕಳೆದು ಹೋಗಿದೆ

ಮೈಸೂರು ಸಯ್ಯಾಜಿರಾವ್ ರೋಡಿನಿಂದ ಹಳೇ ಅಗ್ರಹಾರಕ್ಕೆ ಬರುವ ದಾರಿಯಲ್ಲಿ ಒಂದು ಕೈ ಚಿನ್ನದ ಗೊಲಸು ಕಳೆದು ಬಿದ್ದುಹೋಗಿದೆ ಸಿಕ್ಕಿದವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ತಲುಪಿಸಿದಲ್ಲಿ ಸೂಕ್ತ ಬಹುಮಾನ ಕೊಡಲಾಗುತ್ತೆ.

H. P. ಲಿಂಗೋಜಿರಾವ್

No. ೧ ವಾ. ವಿಲಾಸ ಮಾರ್ಕೆಟ್,

ಮೈಸೂರು

Edited printed and published by A. B. Nagarajan at the Sadhvi Press, ... Subbiah Road, Mysore

ಆದಿಕರ್ನಾಟಕ ವಿದ್ಯಾರ್ಥಿನಿಯರ ನಿಲಯದ ಬದಲಾಯಿಸಬೇಕು

ರಾಜಧಾನಿಯ ವಾಣಿವಿಲಾಸ ರಸ್ತೆಯಲ್ಲಿರುವ ಆದಿಕರ್ನಾಟಕ ವಿದ್ಯಾರ್ಥಿನಿ ನಿಲಯದ ಕಟ್ಟಡವು ಸರಿಯಾಗಿಲ್ಲದೆ ಬಹಳ ಕಷ್ಟವಾಗಿರುತ್ತದೆ. ಅದನ್ನು ಬದಲಾಯಿಸಬೇಕೆಂದು ಹಿಂದೆಯೇ ... ಇಲಾಖೆಯವರು ನಿರ್ಧರಿಸಿದ್ದರೂ ಈ ... ಯಾವ ಕಾರ್ಯಕ್ರಮವನ್ನೂ ಇಲ್ಲಿಯವರೆಗೆ ಕೈಗೊಂಡಿಲ್ಲ. ಸಂಬಂಧಪಟ್ಟವರು ಇದಕ್ಕೆ ಕೂಡಲೇ ಗಮನ ಕೊಡಬೇಕು ... ದು ಜಿಲ್ಲಾ ಬೋರ್ಡಿನ ಸದಸ್ಯರಾದ ಎಸ್. ಎಂ ಸಿದ್ದಯ್ಯನವರು ಪ್ರಾರ್ಥಿಸಿರುತ್ತಾರೆ.

ರಾಜಕಮಲ್ ಟಾಕೀಸ್

೧೪-೧-೪೯ರಿಂದ

ಅಮೋಘ ೫ ನೇ ವಾರ

ಪ್ರತಿ ದಿನ 3 ಆಟಗಳು

ಭಕ್ತ

ಕುಂಬಾರ

(ಕನ್ನಡ)

Morning Shows For 4 days

From 11 - 1 — 49

AIR RAID WARDENS

WITH

Laurel & Hardy

ನಂಬರು. R1- 83-48.

ಮೈಸೂರು ಸಿಟಿ ರೇಷನಿಂಗ್ ಆಫೀಸ್

ಮೈಸೂರು

13—1—1949

ಬಟ್ಟೆ ಕೂಪನ್‌ಗಳ ಹಂಚಿಕೆ

ಮೈಸೂರು ನಗರ ನಿವಾಸಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ....

೧೭-೧-೧೯೪೯ ನೇ ತಾರೀಖು ಸೋಮವಾರದ ಲಾಗಾಯ್ತು ೨೦-೧-೧೯೪೯ ಗುರುವಾರದ ವರೆವಿಗೂ (ಈ ಎರಡು ದಿನವೂ ಸೇರಿ) ಡಿಪೋ ಕೆಲಸಗಳು ನಡೆಯುವ ಪ್ರತಿ ದಿನವೂ ಬೆಳಿಗ್ಗೆ ೧೦-೩೦ ರಿಂದ ೧೧-೩೦ ರ ವರೆವಿಗೂ ಮತ್ತು ಸಾಯಂಕಾಲ ೬ ರಿಂದ ೭ ರ ವರವಿಗೆ ರೇಷನ್ ಕಾರ್ಡುದಾರರುಗಳಿಗೆ ಅವರವರ ರೇಷನ್ ಡಿಪೋಗಳಲ್ಲಿ ಬಟ್ಟೆ ಕೂಪನ್‌ಗಳನ್ನು ಹಂಚಲಾಗುತ್ತೆ. ಆಹಾರದ ರೇಷನ್ ಕಾರ್ಡುಗಳನ್ನು ಡಿಪೋಗಳಲ್ಲಿ ಹಾಜರ್ಪಡಿಸಿ ಬಟ್ಟೆ ಕೂಪನ್‌ಗಳನ್ನು ಪಡೆಯಬಹುದು. ತಲಾ ... ಗಣನೆ ಲೆಖ್ಖ ಮಾಡಿ ಕೂಪನ್ ಕೊಡಲಾಗುವುದು. ರೇಷನ್ ಕಾರ್ಡುದಾರರೇ ಖುದ್ದಾಗಿ ಬಂದು ಕೂಪನ್‌ಗಳನ್ನು ತೆಗೆದುಕೊಂಡು ಹೋಗುವುದು ಉತ್ತಮವೆಂದು ಸೂಚಿಸಲಾಗಿದೆ.

(ರುಜು) ಡಿ. ಜಿ. ಬಾಲರಾಜ್

ರೇಷನಿಂಗ್ ಆಫೀಸರು, ಮೈಸೂರು

ಪ್ರಭಾ

೧4-1-49ರಿಂದ

ದಿನವಹಿ ೩ ಆಟಗಳು

- ದೇಖೋಜಿ -

(ಹಿಂದಿ)

• ಮುಮ್ತಾಜ್ ಶಾಂತಿ •

ಇದರೊಂದಿಗೆ ಮೊದಲನೆಯ ವಾರದಲ್ಲಿ ಇತ್ತೀಚಿನ ಅಖಿಲ ಭಾರತದ

ಜಯಪೂರ್ ಕಾಂಗ್ರೆಸ್

ಅಧಿವೇಶನದ ದೃಶ್ಯಗಳನ್ನು ತೋರಿಸಲಾಗುತ್ತೆ

ಫೋನ್ ನಂ. 795 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು.

ಸಂಪುಟ ೨] ಮಂಗಳವಾರ ೧೮-೧-೪೯ [ಸಂಚಿಕೆ ೧೬೯

ಉಪವಾಸ ಮುಕ್ತಾಯ

ವೈಸೂರು ೧೮

ಪ್ರಜಾಮಂಡಲಿಯ ಕಾರ್ಯದರ್ಶಿಗಳಾದ ಶ್ರೀ ವೆಂಕಟಸುಬ್ಬಯ್ಯ ಶರ್ಮ ಮತ್ತು ಶ್ರೀ ಗೋವಿಂದರಾಜಾರವರುಗಳು ನಿನ್ನೆ ಬೆಳಗ್ಗೆ ಆರಂಭಿಸಿದ ಉಪವಾಸವನ್ನು ನಿನ್ನೆ ರಾತ್ರಿ ಮುಕ್ತಾಯ ಗೊಳಿಸಿದರೆಂದು ತಿಳಿದುಬಂದಿದೆ. ಈ ತಿಂಗಳು ೨೮ ನೇ ತಾ॥ ಶುಕ್ರವಾರ ಸಂಜೆ ಬಹಿರಂಗ ಸಭೆಯನ್ನು ನಡೆಸಿ ಸದರಿ ಉಪವಾಸದ ಬಗ್ಗೆ ಮಹಾಜನರ ಅಭಿಪ್ರಾಯವನ್ನು ತಿಗೆದುಕೊಳ್ಳುವುದಾಗಿ ಹೇಳಲಾಗಿದೆ. ಆಹಾರದ ಅಭಾವ, ಹಾಲಿನ ತೊಂದರೆ ಮತ್ತು ಮನೆ ಬಾಡಿಗೆ ಕಿರುಕುಳ ಇವೇ ಮುಂತಾದುವುಗಳು ಬೇಗನೇ ನಿವಾರಣೆಯಾಗಲೆಂದು ಪ್ರಜಾ ಮಂಡಲದವರು ಆಶಿಸಿದ್ದಾರೆ.

ಸಮತಾವಾದಿ ನಾಯಕರುಗಳ ದಸ್ತಗಿರಿಯ ಖಂಡನೆ

ಕರ್ನಾಟಕ ಸಮತಾವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎಸ್. ನಾಗಭೂಷಣ ಮತ್ತು ಕಾರ್ಮಿಕ ಮುಖಂಡರಾದ ಶ್ರೀ ಹೆಚ್. ರಾಮಸ್ವಾಮಿಯವರುಗಳನ್ನು ಸರ್ಕಾರದವರು ದಸ್ತಗಿರಿ ಮಾಡಿರುವುದನ್ನು ರಾಜಧಾನಿಯ ಕನ್ನೇಗೌಡನ ಕೊಪ್ಪಲಿನ ರೈತ ಯುವಕರ ಸಂಘದ ಕಾರ್ಯದರ್ಶಿಗಳು ಖಂಡಿಸಿ, ಸಾರ್ವಜನಿಕ ರಕ್ಷಣಾ ಕಾನೂನನ್ನು ಸರ್ಕಾರದವರು ದುರುಪಯೋಗಪಡಿಸುತ್ತಿದ್ದಾರೆಂದು ತಿಳಿಸಿರುತ್ತಾರೆ.

ನ್ಯಾಷನಲ್ ಇಂಜನಿಯರಿಂಗ್ ಶಾಲೆಗೆ ಅಂಗೀಕಾರ

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನ ಎ. ಎಂ. ಐ. ಇ ಪರೀಕ್ಷೆಗೆ ಕಲ್ಕತ್ತದ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್ ಸಂಸ್ಥೆಯವರು ಅಂಗೀಕಾರ ಕೊಟ್ಟಿರುತ್ತಾರೆ.

ಸಬ್ ಜಡ್ಜಿಗಳು

ಬೆಂಗಳೂರಿನ ವಕೀಲರಾದ ಶ್ರೀ ಕೆ. ಸುಬ್ಬಯ್ಯ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಮುನಿಸ್ವಾಮಿಯವರುಗಳನ್ನು ಸಬ್ ಜಡ್ಜರುಗಳಾಗಿ ಸರ್ಕಾರದವರು ನೇಮಿಸಿದ್ದಾರೆ. ಅವರನ್ನು ಕ್ರಮವಾಗಿ ಮಂಡ್ಯ ಮತ್ತು ತುಮಕೂರಿಗೆ ನೇಮಿಸಲಾಗಿದೆ.

ಕಮ್ಯೂನಿಸ್ಟರಿಗೆ ಗಡೀಪಾರು

ಕೋಲಾರ ಚಿನ್ನದ ಗಣಿ ಪ್ರದೇಶದ ಕಮ್ಯೂನಿಸ್ಟರಾದ ಶ್ರೀ ಕೆ. ವಿ. ಮುನಿಸ್ವಾಮಿ ಮತ್ತು ದಾವಣಗೆರೆಯ ಶ್ರೀಗಳು ಮೆಹಬೂಬ್ ಮತ್ತು ಬಿ. ಮುರುಗಯ್ಯನವರುಗಳನ್ನು ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಿ, ೬ ತಿಂಗಳು ಕಾಲ ಆ ಪ್ರದೇಶಗಳಿಂದ ಗಡೀಪಾರು ಮಾಡಲಾಗಿದೆ.

ಮಹಿಳಾ ಪದವೀಧರರಿಗೆ ದಿವಾನರ ಬಹುಮಾನ

ವೈಸೂರು ೧೮.

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರ ಷಷ್ಠ್ಯಬ್ದಪೂರ್ತಿ ಶಾಂತಿ ಸಮಯದಲ್ಲಿ ಬೆಂಗಳೂರು ಪುರಜನರು ಅರ್ಪಿಸಿದ ಪಾರಿತೋಷಕಗಳ ಬೆಲೆಯಾದ ೨೨ ಸಾವಿರ ರೂ. ನ್ನು ದಿವಾನರು ವೈಸೂರು ಮತ್ತು ಮದರಾಸ್ ವಿಶ್ವವಿದ್ಯಾನಿಲಯಕ್ಕೆ ತಲಾ ೧೧, ೫೦೦ ರೂ. ನಂತೆ ಹಂಚಿಕೊಟ್ಟು, ಅದರಿಂದ ಬರುವ ಉತ್ಪತ್ತಿಯಲ್ಲಿ ಪ್ರತಿ ವರ್ಷವೂ ಶ್ರೇಷ್ಠ ಮಹಿಳಾ ಪದವೀಧರರಿಗೆ ಬಹುಮಾನ ಕೊಡುವಂತೆ ಕೋರಿರುತ್ತಾರೆ.

ನಿಜಲಿಂಗಪ್ಪನವರಿಗೆ ಸತ್ಕಾರ

ಬೆಂಗಳೂರು ೧೮.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸದಸ್ಯರೂ ಆದ ಶ್ರೀ ಎಸ್. ನಿಜಲಿಂಗಪ್ಪನವರ ಗೌರವಾರ್ಥವಾಗಿ ಮೊನ್ನೆ ಸಂಜೆ ಕಬ್ಬನ್ ಪಾರ್ಕಿನಲ್ಲಿರುವ ಶ್ರೀ ಜಯಚಾಮರಾಜೇಂದ್ರ ವಿಕ್ಟರಿ ಭವನದಲ್ಲಿ ಪುರಜನರು ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು.

ಸತ್ಕಾರ ಸಮಿತಿಯ ಪರವಾಗಿ ಶ್ರೀ ಎ. ಆರ್. ಮೂರ್ತಿಯವರು ಬಿನ್ನವತ್ತಳೆಯನ್ನು ಅರ್ಪಿಸಿ, ಶ್ರೀ ನಿಜಲಿಂಗಪ್ಪನವರ ಸೇವೆಯನ್ನು ಪ್ರಶಂಸಿಸಿ ಅವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಪಾರ್ಲಿಮೆಂಟರಿ ಸಮಿತಿಗೆ ಸದಸ್ಯರಾದುದಕ್ಕಾಗಿ ಅಭಿನಂದನೆಯನ್ನು ವ್ಯಕ್ತಪಡಿಸಿದರು.

ದಿವಾನರೂ ಮತ್ತು ಶ್ರೀ ಹೆಚ್. ಬಿ. ಗುಂಡಪ್ಪ ಗೌಡರೂ ಭಾಷಣ ಮಾಡಿ ಶ್ರೀ ನಿಜಲಿಂಗಪ್ಪನವರ ಸೇವೆಯನ್ನು ಪ್ರಶಂಸಿಸಿದರು.

ಶ್ರೀ ನಿಜಲಿಂಗಪ್ಪನವರು ಪುರಜನರ ಅಭಿನಂದನೆಗಳಿಗೆ ವಂದನೆಯನ್ನು ಅರ್ಪಿಸಿ, ವೈಸೂರಿನ ಪ್ರಜಾ ಸರ್ಕಾರವು ಬೇರೆ ಇನ್ನಾವ ಪ್ರಾಂತ್ಯ ಮತ್ತು ಸಂಸ್ಥಾನಗಳ ಸರ್ಕಾರಕ್ಕೂ ಕಡಿಮೆ ಇಲ್ಲವೆಂದೂ, ಆದುದರಿಂದ ವೈಸೂರು ಜನರು ತಮ್ಮ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡಬೇಕೆಂದೂ ತಿಳಿಸಿದರು.

ಬ್ರಿಟನ್ನಿನಲ್ಲಿ ಸಿಗರೇಟುಗಳ ಬೆಲೆ ಹೆಚ್ಚಾಗಿದೆ.

ಬ್ರಿಟನ್ನಿನಲ್ಲಿ ಸಿಗರೇಟುಗಳ ಬೆಲೆಯು ವಿಪರೀತವಾಗಿ, ಜನರಿಗೆ ಧೂಮಪಾನ ಮಾಡುವುದೇ ಕಷ್ಟವಾಗಿರುತ್ತದೆ. ವಿಮಾನ ದಳದ ನಾಯಕರಾದ ವೈಕೌಂಟ್ ಪೋರ್ಟಲ್‌ರವರೂ ಸಹ ಸಿಗರೇಟು ಸೇದುವುದನ್ನು ಬಿಟ್ಟಿರುತ್ತಾರೆ.

ರೈಲ್ವೆ ಪ್ರಯಾಣಿಕರಿಗೆ ರೇಡಿಯೋ

ರೈಲ್ವೆ ಪ್ರಯಾಣಿಕರು ರೇಡಿಯೋ ಪ್ರಸಾರಗಳನ್ನು ಕೇಳಲು ಬ್ರಿಟನ್ನಿನಲ್ಲಿ ಸೌಲಭ್ಯವನ್ನು ಏರ್ಪಡಿಸಲಾಗಿದೆ. ಪ್ರಯಾಣಿಕರು ಕಿವಿ ಫೋನುಗಳ ಮೂಲಕ ರೇಡಿಯೋವನ್ನು ಕೇಳಬಹುದೆಂದು ಹೇಳಲಾಗಿದೆ.

ನೂರು ವರ್ಷದ ನೀಗ್ರೋವಿಗೆ ಪುತ್ರ ಸಂತಾನ

ದಕ್ಷಿಣ ಆಫ್ರಿಕದ ೧೦೦ ವರ್ಷದ ನೀಗ್ರೋ ಒಬ್ಬನಿಗೆ ಪುತ್ರ ಸಂತಾನವಾಗಿದೆಯೆಂದೂ, ಆತನ ಪತ್ನಿಗೆ ೩೯ ವರ್ಷವೆಂದೂ ವರದಿಯಾಗಿದೆ.

ಅಡಿಷನಲ್ ಜಿಲ್ಲಾ ನ್ಯಾಯಾಧೀಶರು

ಬೆಂಗಳೂರು ೧೮

ಬೆಂಗಳೂರು ಸಿವಿಲ್ ಪ್ರದೇಶದಲ್ಲಿ ಪ್ರಥಮ ಮ್ಯಾಜಿಸ್ಟ್ರೇಟರಾಗಿರುವ ಶ್ರೀ ಗಣಪತಿ ಸುಂದರಂರವರನ್ನು ವೈಸೂರಿನ ಅಡಿಷನಲ್ ಜಿಲ್ಲಾ ಜಡ್ಜಿಯವರನ್ನಾಗಿ ನೇಮಿಸಲಾಗಿದೆ.

ವೈಸೂರು ಅಡಿಷನಲ್ ಜಿಲ್ಲಾ ಜಡ್ಜರಾದ ಶ್ರೀ ಎನ್. ಆರ್. ಜಯರಾಯರನ್ನು ಪ್ರಿನ್ಸಿಪಲ್ ಜಿಲ್ಲಾ ಜಡ್ಜರಾಗಿಯೂ, ದಂಡಿನ ಜಿಲ್ಲಾ ಮುನಸೀಫರಾದ ಶ್ರೀ ಬಿ. ಜಿ. ಕೋನಪ್ಪರಾಂರವರನ್ನು ಅಲ್ಲಿನ ಪ್ರಥಮ ಮ್ಯಾಜಿಸ್ಟ್ರೇಟರಾಗಿಯೂ, ಬೆಂಗಳೂರು ವಕೀಲರಾದ ಶ್ರೀ ಪಿ. ಹನುಮಂತ ಗೌಡರನ್ನು ದಂಡಿನ ಜಿಲ್ಲಾ ಮುನಸೀಫರಾಗಿಯೂ ನೇಮಿಸಲಾಗಿದೆ.

ಆಹಾರದ ಪರಿಸ್ಥಿತಿಯ ಪರಿಶೀಲನೆ

– ಶಾಸನ ಸಭೆಯಲ್ಲಿ ವಿಶೇಷ ಚರ್ಚೆ

ಬೆಂಗಳೂರು ೧೮.

ನಿನ್ನೆ ದಿನ ಶಾಸನ ಸಭೆಯಲ್ಲಿ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಸಂಸ್ಥಾನದ ಆಹಾರದ ಪರಿಸ್ಥಿತಿಯ ಮೇಲಿನ ಚರ್ಚೆಯನ್ನು ಆರಂಭಿಸಿದರು. ಆಹಾರದ ಕಂಟ್ರೋಲನ್ನು ಭಾರತ ಸರ್ಕಾರದವರು ಜಾರಿಗೆ ತರಬೇಕಾಗಿ ಬಂದ ಪ್ರಸಂಗವನ್ನು ವಿವರಿಸಿದರು. ಸಂಸ್ಥಾನದಲ್ಲಿರುವ ಆಹಾರದ ಬಿಕ್ಕಟ್ಟನ್ನು ವರ್ಣಿಸಿ ಇದನ್ನು ಬಗೆಹರಿಸಲು ಸಾರ್ವಜನಿಕರೂ, ಪತ್ರಿಕೆಗಳೂ ಸಹಕಾರ ನೀಡಬೇಕೆಂದು ಕೋರಿದರು. ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ಫಸಲು ನಷ್ಟವಾಗಿರುವುದೆಂಬುದನ್ನು ತಿಳಿಸಿ ರಾಗಿ ಜೋಳಗಳ ಬದಲಾಗಿ ಇತರ ಧಾನ್ಯಗಳನ್ನು ರೈತರು ಮಾಡುತ್ತಿರುವ ಅಂಶವನ್ನು ಸೂಚಿಸಿದರು. ಭಾರತ ಸರ್ಕಾರದಿಂದ ಹೆಚ್ಚಿನ ಸಹಾಯವನ್ನು ಕೇಳಲಾಗಿದೆಯೆಂದೂ ಅಲ್ಲದೆ ಸಂಸ್ಥಾನದಲ್ಲಿಯೂ ಧಾನ್ಯ ಸಂಗ್ರಹವನ್ನು ಮಿತವರ್ತನೆಯಿಂದ ನಡಸಲಾಗುತ್ತಿದೆಯೆಂದೂ ಹೇಳಿದರು. ಈ ಪ್ರಯತ್ನಗಳ ಫಲವಾಗಿ ಸಧ್ಯದ ಬಿಕ್ಕಟ್ಟನ್ನು ನಿವಾರಿಸಿ ಎಲ್ಲರಿಗೂ ಸಮರ್ಪಕವಾದ ರೀತಿಯಲ್ಲಿ ಆಹಾರವನ್ನು ಒದಗಿಸುವ ಪ್ರಯತ್ನ ನಡೆಲಾಗುವುದೆಂದು ಸೂಚಿಸಿದರು.

ಸಭೆಯ ಸದಸ್ಯರು ೪೨ ವಿಶೇಷ ನಿರ್ಣಯಗಳನ್ನು ಮಂಡಿಸಿದ್ದರು. ಅವುಗಳನ್ನು ಸರ್ಕಾರದ ಪರವಾಗಿ, ಸಚಿವರು ಒಪ್ಪಿಕೊಂಡರು. ಚರ್ಚೆ ಈ ದಿನ ಮುಂದುವರೆಯಲಿದೆ.

ಭೂ ಕಂದಾಯದ ಪರಿಶೀಲನೆ

ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವ. ಸು. ಪ್ರೋ.] ಬೆಂಗಳೂರು ೧೮

ಸಂಸ್ಥಾನದಲ್ಲಿ ಭೂ ಕಂದಾಯ ಪದ್ಧತಿಯನ್ನು ಮಾರ್ಪಡಿಸುವ ವಿಚಾರವಾಗಿ ಕಳೆದ ಆಗಸ್ಟು ತಿಂಗಳಿನಲ್ಲಿ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿದರೆಂದೂ, ಅದು ನಾಲ್ಕು ಬಾರಿ ಸಭೆ ಸೇರಿತೆಂದೂ, ಇತರ ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲಿರುವ ಪದ್ಧತಿಯ ವಿವರಗಳನ್ನು ಕಳುಹಿಸಬೇಕೆಂದೂ ಆಯಾ ಸರ್ಕಾರಗಳನ್ನು ಪ್ರಾರ್ಥಿಸಲಾಗಿದೆಯೆಂದೂ, ಸಚಿವರಾದ ಶ್ರೀ ಹೆಚ್. ಸಿದ್ದಯ್ಯನವರು ಈ ದಿನ ಶಾಸನ ಸಭೆಯಲ್ಲಿ ಜನಾಬ್ ಸಯದ್ ಅಬ್ದುಲ್ ರಹಿಮಾನ್‌ರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ೫೦೦ ಎಕರೆಗೆ ಮೇಲ್ಪಟ್ಟ ಜಮೀನುದಾರರು ಸಂಸ್ಥಾನದಲ್ಲಿ ೯ ಜನರಿರುವರೆಂದು ಸಚಿವರು ಉಪ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಅನಂತರ ಹೆಚ್ಚಿಗೆ ಗ್ರಾಂಟುಗಳ ಮಂಜೂರಾತಿಬಗ್ಗೆ ಕತ್ತರಿ ನಿರ್ಣಯಗಳು ಮಂಡಿಸಲ್ಪಟ್ಟು ಚರ್ಚೆ ಪ್ರಾರಂಭವಾಯಿತು.

ಕಾರ್ಮಿಕರಿಗೆ ಗೃಹ ನಿರ್ಮಾಣ ಯೋಜನೆ

ಸ್ವ. ಸು. ಪ್ರೋ.] ಬೆಂಗಳೂರು ೧೮

ಕೆಲಸಗಾರರಿಗೆ ಗೃಹ ವಸತಿಯನ್ನು ಕಲ್ಪಿಸುವ ಬಗ್ಗೆ ನೂತನ ಶಾಸನವು ಜಾರಿಗೆ ಬರುವವರೆಗೂ ಬೆಂಗಳೂರಿನಲ್ಲಿ ಕಾರ್ಮಿಕರಿಗೆ ತಲಾ ೨೫೦ ರೂ. ಬೆಲೆ ಬಾಳುವ ಮನೆಗಳನ್ನು ಕಟ್ಟಿಸಿ ಕೊಡುವ ಯೋಜನೆಯೊಂದನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಇದಕ್ಕಾಗಿ ಶೇಕಡ ೩॥ ರೂ. ನ ಬಡ್ಡಿ ದರದ ಮೇಲೆ ೧೧ ಲಕ್ಷ ರೂ. ನ್ನು ಬೆಂಗಳೂರು ನಗರಾಭಿವೃದ್ಧಿ ಸಮಿತಿಗೆ ಒದಗಿಸಿರುತ್ತಾರೆ.

ಚಿಯಾಂಗರು ಪರಾರಿಯಾಗಲು ಸಿದ್ಧತೆ

ಚೀಣದ ಅಧ್ಯಕ್ಷರಾದ ಚಿಯಾಂಗರು ರಹಸ್ಯವಾದ ಒಂದು ಮಿಲಿಟರಿ ಸಮಾರಂಭದಲ್ಲಿ ಭಾಗವಹಿಸಿ, ಅನಂತರ ಚೀಣದ ರಿಪಬ್ಲಿಕ್ಕಿನ ಸ್ಥಾಪಕರಾದ ಸನ್‌ಯತ್‌ಸೇನ್‌ರವರ ಸಮಾಧಿಗೆ ಗೌರವ ಸಲ್ಲಿಸಿದರು. ಚಿಯಾಂಗರು ಸಾರ್ವಜನಿಕರ ಸಮಾರಂಭಗಳಲ್ಲಿ ಭಾಗವಹಿಸುವುದು ಇದೇ ಕೊನೆಯ ಬಾರಿಯೆಂದು, ಹೇಳಲಾಗಿದೆ. ಅವರು ತಮ್ಮ ಜನ್ಮ ಸ್ಥಳವಾದ ಫೆಂಗ್ ಹುವಕ್ಕೆ ಭೇಟಿ ಕೊಟ್ಟು ಅನಂತರ ಫೂಕೀನ್ ಪ್ರಾಂತ್ಯಕ್ಕೆ ಹೊರಟುಹೋಗುವರೆಂದೂ ವರದಿಯಾಗಿದೆ. ಚೀಣದ ಕ್ರಾಂತಿಯನ್ನು ಸಫಲಗೊಳಿಸಲು ಸರ್ಕಾರೀ ಸೈನಿಕರೆಲ್ಲರೂ ಒಗ್ಗಟ್ಟಿನಿಂದ ಕಾದಾಡಬೇಕೆಂದು ಚಿಯಾಂಗರು ಅಂತ್ಯ ಸಂದೇಶವನ್ನು ಕೊಟ್ಟಿರುತ್ತಾರೆ.

ಶಾಂತಿ ಸಂಧಾನದ ಬಗ್ಗೆ ಕಮ್ಯೂನಿಸ್ಟರು ಇತ್ತ ೮ ಷರತ್ತುಗಳನ್ನು ಚೀಣದ ಪಾರ್ಲಿಮೆಂಟ್ ಸಭೆಯು ಪರಿಶೀಲಿಸದೆ ಮುಂದಕ್ಕೆ ಹಾಕಿದೆ. ಸಾರ್ವಜನಿಕರ ಅಭಿಪ್ರಾಯವನ್ನು ತಿಗೆದುಕೊಂಡ ಮೇಲೆ ಅದನ್ನು ಪರಿಶೀಲಿಸಲಾಗುವುದೆಂದು ಪ್ರಧಾನಿಯವರು ತಿಳಿಸಿರುತ್ತಾರೆ.

○ ಬುದ್ಧನ ೨೫೦೦ನೆಯ ವಾರ್ಷಿಕ ದಿನಾಚರಣೆಯನ್ನು ೧೯೫೬ರಲ್ಲಿ ಭಾರತದಲ್ಲಿ ನಡೆಸಬೇಕೆಂದೂ, ಕಲ್ಕತ್ತದ ಬೌದ್ಧರ ಸಭೆಯಲ್ಲಿ ನಿರ್ಧರಿಸಲಾಯಿತು.

ಮಹಿಳಾ ಸದನದ ಸ್ಪರ್ಧೆಯ ಬಹುಮಾನ ವಿನಿಯೋಗ

ಮೈಸೂರು, ೧೮

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಮಹಿಳಾ ಸದನದ ಆಶ್ರಯದಲ್ಲಿ ನಡೆದ ಎಂ. ಡಿ. ಗೋಪಾಲಾಚಾರ್ಯರವರ ಸ್ಮಾರಕ ಸ್ಪರ್ಧೆಯ ಬಹುಮಾನ ವಿನಿಯೋಗ ಸಮಾರಂಭವು ಕಳೆದ ಭಾನುವಾರ ಶ್ರೀ ಎಂ. ಎ. ದೊರಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಮತ್ತು ಕಾರ್ಯದರ್ಶಿಗಳ ವರದಿ [illegible] ತರು, ವಿದ್ಯಾಯ ಪಾರಿತೋಷಕವನ್ನು [illegible] ಪ್ಪಲಿನ ಭಾರತೀ ಶ್ರೀ [illegible], ಪ್ರಥಮ ಬಹುಮಾನವನ್ನು ಶ್ರೀಮತಿ [illegible], ದ್ವಿತೀಯ ಬಹುಮಾನ ಶ್ರೀಮತಿ ಪ್ರಮೀಳ ಮತ್ತು ವಿಶೇಷ ಬಹುಮಾನವನ್ನು ಶ್ರೀಮತಿ ಭಾರತಿ ಮತ್ತು [illegible] ಯವರುಗಳಿಗೂ ವಿನಿಯೋಗ ಮಾಡಿದರು. ಅಧ್ಯಕ್ಷರು ಭಾಷಣ ಮಾಡಿ ಸ್ವತಂತ್ರ ಭಾರತದಲ್ಲಿ ಮಹಿಳೆಯರ ಸ್ಥಾನ ಮತ್ತು [illegible] ವನ್ನು ವಿವರಿಸಿದರು. ಶ್ರೀಮತಿ [illegible] ವಂದನಾರ್ಪಣೆ [illegible] ನಂತರ ಸಭೆ ಮುಕ್ತಾಯವಾಯಿತು.

[illegible]

[illegible] ದಿವಸದಲ್ಲಿ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ ಶ್ರೀ [illegible] ಅವರ ಅಭಿವಾದನೋತ್ಸವವನ್ನು ನಡೆಯುತ್ತದೆ. [illegible] ಗಳಿಂದ ಸಂಗೀತ [illegible].

[illegible]

ರಾಜಧಾನಿಯ [illegible] ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಇದೇ ೩೦ ನೇ ತಾ॥ ಭಾನುವಾರ ಸಂಜೆ ೬ ಗಂಟೆಗೆ ಮಹಾತ್ಮಾ ಗಾಂಧೀಜೀ [illegible] ಹಾರಾಜರವರು ಮತ್ತು ಧರ್ಮರತ್ನಾಕರ [illegible] ಚಿತ್ರಗಳನ್ನು ಶ್ರೀಗಳಾದ ಎಸ್. [illegible], ಟಿ. [illegible] ಮತ್ತು ಎನ್. [illegible] ಚನ್ನಯ್ಯನವರುಗಳು ಅನಾವರಣ ಮಾಡುವರು. ನಗರ ಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸುವರು.

[illegible]

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ [illegible]
ನೋವು, ಕೀಲು ನೋವು ಮುಂತಾದ
ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ ೦-೧೨-೦

ಮಹಾ ಸುಗಂಧರಾಜ ತೈಲ —)
,, ಚಂದನಾದಿ ತೈಲ —)
,, [illegible] ತೈಲ —)

—[illegible] ಉತ್ತಮ [illegible] ತೈಲಗಳು.

ಮಾ[illegible] ತಲೆ ಬಾಚಿಕೊಳ್ಳುವದಕ್ಕೆ [illegible] ಉಪಯೋಗಿಸ [illegible] ಉತ್ತಮವಾದ ಬ್ರೈಲ್ [illegible] ಸೀಸೆ [illegible]

ಪಂಚಾಮೃತ [illegible] ಗೆ ಸಿದ್ಧ [illegible]

ಮೈಸೂರು ಆಯುರ್ವೇದಿಕ ಫಾರ್ಮಸಿ
[illegible] ಬಿಲ್ಡಿಂಗ್
[illegible]

ಸ್ವದೇಶಿ ವಸ್ತು ಪ್ರದರ್ಶನದಲ್ಲಿ ಮೈಸೂರಿನ ಪಾತ್ರ

ಮದರಾಸ್ ೧೭

ಇಲ್ಲಿ ಕಳೆದ ತಿಂಗಳು ೨೪ ನೇ ತಾ॥ ಪ್ರಾರಂಭವಾದ ಅಖಿಲ ಭಾರತ ಸ್ವದೇಶಿ, ಖಾದಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಮೈಸೂರಿನ ಸರ್ಕಾರ ಮತ್ತು ಕೈಗಾರಿಕಾ ಇಲಾಖೆಯವರು ಭಾಗ ವಹಿಸಿರುತ್ತಾರೆ. [illegible] ಸ್ಥಾನಗಳ [illegible] ಮತ್ತು ಅನೇಕ [illegible] ಕೈಗಾರಿಕೆಗಳನ್ನು ಪ್ರದರ್ಶಿಸಲಾಗಿದೆ. [illegible] ಗಳಿಗೆ ಭೇಟಿ [illegible] ವನ್ನು ಪ್ರಶಂಸಿಸಿ [illegible] ಗವರ್ನರ್ ದಂಪತಿಗಳು, ಡಾ॥ ಪಟ್ಟಾಭಿ ಸೀತಾರಾಮಯ್ಯನವರು, [illegible] ಮತ್ತು ಶ್ರೀ [illegible] ನವರೂ ಭೇಟಿ ಕೊಟ್ಟಿದ್ದರು.

ಮಹಿಳಾ ಅಧ್ಯಕ್ಷರ ಕೊಲೆ ಸಿತೂರಿ

ಮಹಿಳಾ ಅಧ್ಯಕ್ಷರಾದ [illegible] ರನ್ನು ಕಳೆದ ಡಿಸೆಂಬರ್ ತಿಂಗಳಲ್ಲಿ ಕೊಲೆ ಮಾಡಲು ಸಿತೂರಿ ನಡೆದಿತ್ತೆಂದೂ, ಅವನ್ನು [illegible] ಮತ್ತು ಪೋಲೀಸರು ಪತ್ತೆ ಮಾಡಿದರೆಂದೂ ಹೇಳಲಾಗಿದೆ. ಅಧ್ಯಕ್ಷರನ್ನು ಕೊಲೆ ಮಾಡಲು ಇಬ್ಬರು [illegible] ರನ್ನು [illegible] ಪ್ರಮುಖರು [illegible] ನೇಮಿಸಿದ್ದರೆಂದೂ, ಈಗ ಅವರನ್ನು ದಸ್ತಗಿರಿ ಮಾಡಲಾಗಿದೆ [illegible].

Edited, printed and published by A. R. Nagarajan at the Sadhvi Press D. Subbiah Road, Mysore

[illegible]

ನಿಮ್ಮ ಮೈ ಮೊಡವೆಯಿಂದ
ಹೊಳೆಯಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಜನರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ [illegible]
[illegible]
[illegible] ಸೋಪು
[illegible]
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ಕಾಂಗ್ರೆಸ್‌ನವರು ಪರ್ಮಿಟ್ಟುಗಳಿಗಾಗಿ ಅಧಿಕಾರಿಗಳನ್ನು ಆಶ್ರಯಿಸಬಾರದು

ಕಾಂಗ್ರೆಸ್ಸಿನವರು ತಮ್ಮ [illegible] ತಮ್ಮ ವರ್ತನೆಗಳಲ್ಲಿ ಬಹಳ ಎಚ್ಚರವಾಗಿರಬೇಕು. ಸಿನಿಮಾ ಮಂದಿರ ಕಟ್ಟಲು ಪರ್ಮಿಟ್ ಮುಂತಾದುವುಗಳಿಗಾಗಿ ಸರ್ಕಾರದ ಅಧಿಕಾರಿಗಳ ಆಶ್ರಯ ಪಡೆಯಬಾರದೆಂದೂ, ಲಂಚ [illegible] ಗಳನ್ನು ಇತರರಿಂದ [illegible] ಬಾರದೆಂದೂ ಮತ್ತು [illegible] ಗಳಲ್ಲಿ ಪಾರ್ಟಿ ಪಕ್ಷಗಳಲ್ಲಿ ಭಾಗ ವಹಿಸಬಾರದೆಂದೂ ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಸೂಚನೆಯನ್ನು ಕೊಟ್ಟಿರುತ್ತಾರೆ.

ಬಿರ್ಲಾ ಭವನವು ರಾಷ್ಟ್ರೀಯ ಸ್ಮಾರಕವಾಗಬೇಕು

ಮಹಾತ್ಮರು ಕೊಲೆಯಾದ ದೆಹಲಿಯ ಬಿರ್ಲಾ ಭವನವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡಲು ಅದನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ದೆಹಲಿಯ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆಯು ಕಾಂಗ್ರೆಸ್ ಅಧ್ಯಕ್ಷರಾದ ಡಾ॥ ಪಟ್ಟಾಭಿ ಸೀತಾರಾಮಯ್ಯ ಮತ್ತು ಡಾ॥ ರಾಜೇಂದ್ರಪ್ರಸಾದರವರುಗಳಲ್ಲಿ ಪ್ರಾರ್ಥಿಸಿಕೊಂಡಿದೆ.

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ [illegible] ಪ್ರದರ್ಶನಗಳು
ತಾ॥ 19-1-49 ರಿಂದ 2 ದಿನಗಳು ಮಾತ್ರ
M. G. M. ರವರ

ದಿ ಬಿಗಿನಿಂಗ್ ಆಫ್ ದಿ ಎಂಡ್

THE BEGINNING OF THE END

(Story of Atom Bomb)

ಆಟಂ ಬಾಂಬನ್ನು [illegible]? [illegible]? [illegible]
ನೋಡಲು [illegible].

Next Change:—

KING KONG

ಚೀಣದಲ್ಲಿ ಮಧ್ಯಸ್ಥಿಕೆಗೆ ರಷ್ಯದ ನಿರಾಕರಣೆ

ಚೀಣದಲ್ಲಿ ಮಧ್ಯಸ್ಥಿಕೆ ವಹಿಸಲು ರಷ್ಯ ನಿರಾಕರಿಸಿದೆ. ಚೀಣಾದಲ್ಲಿ [illegible] ದಾಯಕ ಮತ್ತು ಪ್ರಜಾ ಸತ್ತಾತ್ಮಕ [illegible] ಕಾರ ರಚಿಸುವ ವಿಷಯ ಚೀಣಾದ [illegible] ಸಂಬಂಧಿಸಿದ ಪ್ರಶ್ನೆ ಎಂದು ರಷ್ಯ [illegible] ಕಾರ ತಿಳಿಸಿದೆ. ಬ್ರಿಟನ್ [illegible] ಮತ್ತು ಫ್ರಾನ್ಸುಗಳು ಕೂಡಾ [illegible] ಚೀಣಾದ ಪ್ರಾರ್ಥನೆಯನ್ನು ನಿರಾಕರಿ[illegible] ಎಂದು ಮಾಸ್ಕೋ ರೇಡಿಯೋ ತಿಳಿ[illegible]

[illegible]

ನಂಬರು R-1-80-48.

ಮೈಸೂರು ಸಿಟಿ ರೇಷನಿಂಗ್ ಆಫೀ[illegible]

ಮೈಸೂರು

13—1—19[illegible]

ಬಟ್ಟೆ ಕೂಪನ್‌ಗಳ ಹಂಚಿ[illegible]

ಮೈಸೂರು ನಗರ ನಿವಾಸಿಗಳಿಗೆ ಈ ಮೂ[illegible] ತಿಳಿಯಪಡಿಸುವುದೇನೆಂದರೆ;—

೧೮—೧—೧೯೪೯ ನೇ ತಾರೀಖು ಮಂ[illegible] ಳವಾರದ ಲಾಗಾಯ್ತು ೩೧-೧-೧೯೪೯ [illegible] ಗುರುವಾರದ ವರೆವಿಗೂ (ಈ ಎರಡು ದಿ[illegible] ವೂ ಸೇರಿ) ಡಿಪೋ ಕೆಲಸಗಳು ನಡೆಯು[illegible] ವ ಪ್ರತಿ ದಿವಸವೂ ಬೆಳಿಗ್ಗೆ ೧೦-೩೦ ಗಂ[illegible] ೧೧-೩೦ ರ ವರೆವಿಗೂ ಮತ್ತು ಸಾಯಂ[illegible] ೮ ೬ ರಿಂದ ೭ ರ ವರವಿಗೆ ರೇಷನ್ ಕಾ[illegible] ದಾರರುಗಳಿಗೆ ಅವರವರ ರೇಷನ್ ಡಿಪೋ[illegible] ಗಳಲ್ಲಿ ಬಟ್ಟೆ ಕೂಪನ್‌ಗಳನ್ನು ಹಂಚಲಾ[illegible] ತ್ತೆ. ಆಹಾರದ ರೇಷನ್ ಕಾರ್ಡುಗಳ[illegible] ಡಿಪೋಗಳಲ್ಲಿ ಹಾಜರ್ಪಡಿಸಿ ಬಟ್ಟೆ ಕೂ[illegible] ಗಳನ್ನು ಪಡೆಯಬಹುದು. [illegible] ಗದಂತೆ ಲೆಖ್ಖ ಮಾಡಿ ಕೂಪನ್ [illegible] ಲಾಗುವುದು. ರೇಷನ್ ಕಾರ್ಡುದಾರರು [illegible] ವೇ ಖುದ್ದಾಗಿ ಬಂದು ಕೂಪನ್‌ಗಳ[illegible] ತೆಗೆದುಕೊಂಡು ಹೋಗುವುದು ಉತ್ತ[illegible] ವೆಂದು ಸೂಚಿಸಲಾಗಿದೆ.

(ರುಜು) ಡಿ. ಜೆ. ಬಾಲರಾಜ್[illegible]
ರೇಷನಿಂಗ್ ಆಫೀಸರು, ಮೈಸೂರು

Sree Sitaraghava Press

Ramaswamy Circle,

Mysore

Announcement

We have pleasure to announce that we have arrangements to take up printing work of all kinds in[illegible] of Bills, Posters, Ledgers, Handbills, Books and Pam[illegible] Invitations various kinds of Forms, Statements, etc. a[illegible] reasonable and competitive rates.

We hereby assure the public that prompt attentio[illegible] neat execution are our earnest aims.

May we solicit your patronage please?

Printing in Kannada, Telugu, Tamil, and English [illegible] executed neatly.

ಫೋ: ನಂ. 792 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೬] ಗುರುವಾರ ೨೦-೧-೪೯ [ಸಂಚಿಕೆ ೧೬೧

ಕೈಗಾರಿಕಾ ಕಾರ್ಪೊರೇಷನ್ ಸ್ಥಾಪನೆ

ಶಾಸನ ಸಭೆಯಲ್ಲಿ ಒತ್ತಾಯ

ಸ್ವ ಸು ಫೋನ್] ಬೆಂಗಳೂರು ೨೦

ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ಖಾಸಗೀಯವರು ಸ್ಥಾಪಿಸಲು ಸಾಲದ ರೂಪದ ಸಹಾಯ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದವರು ರಚಿಸಿರುವಂತೆ ಮೈಸೂರಿನಲ್ಲೂ ಒಂದು ಕೈಗಾರಿಕಾ ಕಾರ್ಪೊರೇಷನನ್ನು ಸರ್ಕಾರದವರು ಸ್ಥಾಪಿಸಿ, ಅದಕ್ಕಾಗಿ ಸೂಕ್ತ ಕಾನೂನು ಮಾಡಬೇಕೆಂಬ ಶ್ರೀ ಓ. ವೀರಬಸಪ್ಪನವರ ನಿರ್ಣಯದ ಮೇಲೆ ನಿನ್ನೆ ಶಾಸನ ಸಭೆಯಲ್ಲಿ ದೀರ್ಘ ಚರ್ಚೆ ನಡೆಯಿತು ಶ್ರೀಗಳಾದ ಎಲ್ ಎಸ್ ವೆಂಕಾಜಿ, ಎಸ್ ಚನ್ನಪ್ಪ, ಡಿ ಎಸ್ ಮಲ್ಲಪ್ಪ, ಲಕ್ಕಪ್ಪ, ಸಯದ್ ಅಬ್ದುಲ್ ರಹಮಾನ್ ಮುಂತಾದವರು ಅದಕ್ಕೆ ಬೆಂಬಲವಿತ್ತು ಕೈಗಾರಿಕೆಗಳ ಪ್ರಗತಿಗೆ ಇಂತಹ ಸಂಸ್ಥೆಯು ಅತ್ಯಗತ್ಯವೆಂದು ತಿಳಿಸಿದರು.

ಶ್ರೀ ರಂಗಯ್ಯಂಗಾರ್ಯರು ಅದನ್ನು ವಿರೋಧಿಸಿ, ಸರ್ಕಾರಕ್ಕೆ ಇದರಿಂದ ವಿಶೇಷ ನಷ್ಟ ಉಂಟಾಗುವುದೆಂದು ತಿಳಿಸಿದರು

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಉತ್ತರವಿತ್ತು, ನಿರ್ಣಯದ ತತ್ವವನ್ನು ಸರ್ಕಾರದವರು ಒಪ್ಪಿಕೊಳ್ಳುವರೆಂದೂ ಆದರೆ ಕಾನೂನು ಅಗತ್ಯವಿಲ್ಲವೆಂದೂ ತಿಳಿಸಿದರು ಒಂದು ಹಣ ಕಾಸಿನ ಕಾರ್ಪೊರೇಷನನ್ನು ಸ್ಥಾಪಿಸಬೇಕೆಂದು ಈಗಾಗಲೇ ಸರ್ಕಾರದವರು ನಿರ್ಧರಿಸಿರುವುದರಿಂದ, ಈ ನಿರ್ಣಯವು ಅನವಶ್ಯಕವೆಂದು ಹೇಳಿದರು

ಶ್ರೀಗಳಾದ ಕಡಿದಾಳ್ ಮಂಜಪ್ಪ ಮತ್ತು ಹೆಚ್. ಎಂ ಚನ್ನಬಸಪ್ಪನವರು ಮಾತನಾಡಿ, ಸರ್ಕಾರವು ವ್ಯವಸಾಯದ ಅಭಿವೃದ್ಧಿಗೆ ಹೆಚ್ಚು ಗಮನ ಕೊಡುತ್ತಿಲ್ಲವೆಂದು ಹೇಳಿದರು.

ಪ್ರಜಾ ಸರ್ಕಾರವು ವ್ಯವಸಾಯಕ್ಕೆ ವಿಶೇಷ ಗಮನ ಕೊಡುತ್ತಿದೆಯೆಂದು ಮುಖ್ಯ ಮಂತ್ರಿಗಳು ತಿಳಿಸಿದರು

ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ನಿಲುವಳಿ ನಿರ್ಣಯ

ವಿಶ್ವವಿದ್ಯಾನಿಲಯದವರು ಸ್ಥಾಪಿಸಿರುವ ಕಾರ್ಮರ್ಸ್ ಕಾಲೇಜು ತಮ್ಮ ಆಡಳಿತದಲ್ಲಿರಬೇಕೆಂಬ ವಿಶ್ವವಿದ್ಯಾನಿಲಯ ಕೌನ್ಸಿಲಿನ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಂಡು, ಅನಂತರ ಆ ಕಾಲೇಜಿನ ಆಡಳಿತವನ್ನು ತಮ್ಮ ಅಧಿಕಾರಕ್ಕೆ ತೆಗೆದುಕೊಂಡಿರುವ ವಿಷಯವನ್ನು ಚರ್ಚಿಸಲು ಶ್ರೀ ಎಂ ಪಿ ಎಲ್. ಶಾಸ್ತ್ರಿಯವರು ಒಂದು ನಿಲುವಳಿ ನಿರ್ಣಯವನ್ನು ಸೂಚಿಸಿದ್ದರು ಅದನ್ನು ಅಧ್ಯಕ್ಷರು ತಳ್ಳಿಹಾಕಿದರು.

ಶುಭಾಶಯಕ್ಕೆ ರಾಜಾಜಿಯವರ ವಂದನೆ

ಮಹಾರಾಜರವರ ಅಸಿಸ್ಟೆಂಟ್ ಸೆಕ್ರಟರಿಗಳ ಗುಮಾಸ್ತರಾದ ಶ್ರೀ ಎಚ್ ಕೃಷ್ಣಮೂರ್ತಿಯವರು ಭಾರತದ ಗವರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಚಾರಿಯವರಿಗೆ ಡಿಸೆಂಬರ್ ೩೧ ನೇ ತಾ|| ನೂತನ ವರ್ಷದ ಶುಭಾಶಯವನ್ನು ಕಳುಹಿಸಿದ್ದಕ್ಕೆ ರಾಜಾಜಿಯವರು ಉತ್ತರ ಬರೆದು ಅದನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದಾರೆ

ರೇಷನ್ ಡಿಪೋವಿಗೆ ಜೋಳ ಬಂದಿದೆ

ಮೈಸೂರು ೨೦

ರಾಜಧಾನಿಯ ರೇಷನ್ ಕಛೇರಿಗೆ ಹೊರಗಿನಿಂದ ೯೦೦ ಮೂಟೆ ಜೋಳ ಬಂದಿರುತ್ತದೆ. ಇದನ್ನು ಎಲ್ಲಾ ಡಿಪೋಗಳಿಗೂ ಹಂಚಲಾಗಿದೆ. ಇದುವರೆಗೆ ಬಿ ಕ್ಲಾಸ್ ರೇಷನ್ ಕಾರ್ಡ್ ಹೋಲ್ಡರುಗಳಿಗೆ ಕೇವಲ ೪ ಅಥವಾ ೮ ಆಣೆಗಳಿಗೆ ಜೋಳವನ್ನು ಕೊಡುತ್ತಿದ್ದುದನ್ನು ತಪ್ಪಿಸಿ ಕಡೆಯ ಪಕ್ಷ ೪ ದಿನಗಳ ಪಡಿತರವನ್ನು ಕೊಡುವಂತೆ ಏರ್ಪಾಡು ಮಾಡಲಾಗಿದೆ ಮುಂದೆ ಮತ್ತೆ ಹೆಚ್ಚಿನ ಪ್ರಮಾಣದಲ್ಲಿ ಜೋಳವು ಬಂದನಂತರ ಹೆಚ್ಚಾಗಿ ಕೊಡಲಾಗುವುದು. ಈ ಸಂದರ್ಭದಲ್ಲಿ ಮಹಾ ಜನರು ಏಕತ್ರವಾಗಿ ಪಡಿತರವನ್ನು ಪಡೆದು ಉಪಯೋಗಿಸಿಕೊಳ್ಳಬೇಕೆಂದು ಪೌರ ಸರಬರಾಜು ಆಫೀಸರಾದ ಶ್ರೀ ಟಿ ವೆಂಕಟರಮಣಯ್ಯನವರು ಪ್ರಾರ್ಥಿಸಿರುತ್ತಾರೆ

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರೂ, ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ ಆದ ಶ್ರೀ ಎಸ್. ನಿಜಲಿಂಗಪ್ಪನವರೂ ಮತ್ತು ಮೈಸೂರು ರಾಜ್ಯಾಂಗ ಸಭೆ ಮತ್ತು ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರೂ ಆದ ಶ್ರೀ ಟಿ. ಸುಬ್ರಹ್ಮಣ್ಯಂರವರೂ ಇದೇ ೨೨ ನೇ ತಾ|| ಶನಿವಾರ ಸಂಜೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಗೆ ಭೇಟಿ ಕೊಡುವರು. ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ದಯಮಾಡಿ ಬರಬೇಕಾಗಿ ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಕೋರಿರುತ್ತಾರೆ.

ಹೆಚ್. ಸಿ. ದಾಸಪ್ಪನವರು ೨೫ ನೇ ತಾ|| ವಾಪಸು

ಸ್ವ ಸು ಫೋನ್] ಬೆಂಗಳೂರು ೨೦.

ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರವಾಸ ಮಾಡುತ್ತಿರುವ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ ದಾಸಪ್ಪನವರು ಇದೇ ೨೩ ನೇ ತಾ|| ರಾತ್ರಿ ಬೊಂಬಾಯಿಗೆ ಆಗಮಿಸಿ, ೨೫ ನೇ ತಾ|| ಮಧ್ಯಾಹ್ನ ಬೆಂಗಳೂರಿಗೆ ವಾಪಸು ಬರುವರು

○ ಬೆಂಗಳೂರಿನಲ್ಲಿ ಇಷ್ಟರವರೆಗೆ ಮದರಾಸ್ ಸರ್ಕಾರದ ವಿಮಾನ ರೇಡಿಯೋ ಇಂಜನಿಯರಾಗಿ ಇದ್ದಿನ ಶ್ರೀ ಸಿ ಎಲ್ ರಾಮರಾಯರನ್ನು ನೇಮಿಸಲಾಗಿದೆ.

○ ಲೆ|| ಕ|| ಬಿ ಎ. ಲಿವೆಂಡರ್, ಸರ್ದಾರ್ ಬಹದ್ದೂರ್ ಕ್ಯಾ|| ಕೃಷ್ಣಸ್ವಾಮಿನಾಯ್ಡು, ಮತ್ತು ಕ್ಯಾ|| ಥಾಮಸ್ ರವರುಗಳನ್ನು ಸ್ಪೆಷಲ್ ರಿಜರ್ವ್ ಪೋಲೀಸ್ ದಳದ ಅಸಿಸ್ಟೆಂಟ್ ಕಮ್ಯಾಂಡೆಂಟರಾಗಿ ನೇಮಿಸಲಾಗಿದೆ

ಮುಳಬಾಗಿಲ ಮಠದ ಸ್ವಾಮಿಗಳ ಆಗಮನ

ಓ ಬಾ ಕಂಕಿ] ತೀರ್ಥಹಳ್ಳಿ ೧೯.

ಮುಳಬಾಗಿಲು ಶ್ರೀ ದ್ವಾರಕಾ ಪೀಠದ ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯರವರು ಭಾರತದಲ್ಲಿ ಪ್ರವಾಸ ಮಾಡಿ ಮೊನ್ನೆ ದಿನ ಮುಳಬಾಗಲಿಗೆ ಬರೋಡಾದಿಂದ ವಿಮಾನದಲ್ಲಿ ಆಗಮಿಸಿದರು. ಬರೋಡಾದಲ್ಲಿ ಶ್ರೀಗಳವರನ್ನು ಅಲ್ಲಿನ ಪ್ರಧಾನಿಯವರು ಎರಡು ಬಾರಿ ದರ್ಶನ ಮಾಡಿ ಗೌರವವನ್ನು ಸಲ್ಲಿಸಿದರು. ಕಳೆದ ೧೫ ನೇ ತಾ|| ಅಲ್ಲಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ವಿಶೇಷ ಒಂದು ಸಭೆ ನಡೆದು, ಹಿಂದೂ ಶಾಸನದ ತಿದ್ದುಪಡಿ, ಹಿಂದೂ ಧಾರ್ಮಿಕ ವಿಷಯಗಳಲ್ಲಿ ಸರ್ಕಾರದವರ ಕೈ ಹಾಕುವುದನ್ನು ಖಂಡಿಸುವ ನಿರ್ಣಯಗಳನ್ನು ಮಾಡಲಾಯಿತು

ಶ್ರೀಗಳವರು ಬೆಂಗಳೂರಿಗೆ ಶೀಘ್ರ ಆಗಮಿಸುವರು. ಮತ್ತು ... ಮಹಾ ... ಒಂದು ... ಮತ್ತು ನಾಳೆಯ ... ಸಮ್ಮೇಳನದ ಅಧ್ಯಕ್ಷತೆ ವಹಿಸುವರು

ಚೀಣದಲ್ಲಿ ಯುದ್ಧ ನಿಲ್ಲಿಸಲು ಆಜ್ಞೆ

ಯಾವ ಷರತ್ತುಗಳೂ ಇಲ್ಲದ ಕದನ ನಿಲ್ಲಿಸಬೇಕೆಂದು ಚೀಣಾ ರಾಷ್ಟ್ರೀಯ ಸರ್ಕಾರದವರು ತಮ್ಮ ಸೈನಿಕರಿಗೆ ಆಜ್ಞೆ ಮಾಡಿರುತ್ತಾರೆ ಸಂಧಾನಕ್ಕಾಗಿ ಉಭಯ ಪಕ್ಷದವರು ಪ್ರತಿನಿಧಿಗಳನ್ನು ನೇಮಿಸಬೇಕೆಂದು ಪ್ರಾರ್ಥಿಸಿ ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ ಕಮ್ಯೂನಿಸ್ಟರೊಂದಿಗೆ ಶಾಂತಿ ಮಾಡಿಕೊಳ್ಳಬೇಕೆಂದು ಚೀಣಾ ರಾಷ್ಟ್ರೀಯ ಸರ್ಕಾರದ ಮಂತ್ರಿ ಮಂಡಲದವರು ನಿನ್ನೆ ನಿರ್ಧರಿಸಿದರು.

ಚೀಣದಲ್ಲಿ ಕದನ ನಿಲ್ಲಿಸಿ ಮಿಶ್ರ ಸರ್ಕಾರವನ್ನು ಏರ್ಪಡಿಸಬೇಕೆಂದೂ, ಯಾವ ಪಕ್ಷಕ್ಕೂ ಸೇರದವರನ್ನು ಅಧ್ಯಕ್ಷ ಮತ್ತು ಮುಖ್ಯ ಸೇನಾನಿಯಾಗಿ ನೇಮಿಸಬೇಕೆಂದೂ ಮತ್ತು ಶಾಂಘೈ ಅಥವಾ ನಾನ್ಕಿಂಗ್ ಪ್ರದೇಶದಲ್ಲಿಯೂ ... ಸನ್ನಿವೇಶವನ್ನು ನಡೆಸಬೇಕೆಂದೂ ... ವಿದ್ಯಾಲಯದ ಪ್ರಿನ್ಸಿಪಾಲರು ಸರ್ಕಾರಕ್ಕೂ ಮತ್ತು ಕಮ್ಯೂನಿಸ್ಟರಿಗೂ ಸಲಹೆಗಳನ್ನು ಮಾಡಿದ್ದಾರೆ

ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ಆರೋಗ್ಯ ರಕ್ಷಕ ... ರುವ ಕಚೇರಿಯ ... ಎಂ ವಿ ... ವ ಈ ವರ್ಷದ ಕ್ಯಾಲೆಂಡರನ್ನು ... ಯಿಂದ ಸ್ವೀಕರಿಸಿದ್ದೇವೆ

ಗೋಪಾಲರಾವ್ ಸಮಿತಿ ಯವರ ವಿಚಾರಣೆ

ಮೈಸೂರು ೨೦.

ಗೋಪಾಲರಾಯರ ಸ್ವಜನ ಪಕ್ಷಪಾತದ ವಿಚಾರಣಾ ಸಮಿತಿಯ ಮುಂದೆ ಈ ದಿನ ರಾಜಧಾನಿಯ ವಕೀಲರಾದ ಶ್ರೀ ಎ. ವೆಂಕಟೇಶಯ್ಯ, ಪುಟ್ಟಣ್ಣಯ್ಯ, ಎಸ್ ಚೆನ್ನಕೇಶವಯ್ಯನವರುಗಳೂ, ಅರಮನೆ ಅಸಿಸ್ಟೆಂಟ್ ಇಂಜನಿಯರಾದ ಶ್ರೀ ಮಲ್ಲಿಕಾರ್ಜುನಯ್ಯ, ಶ್ರೀಗಳಾದ ಡಿ ಬಸಪ್ಪ, ಎನ್ ಎಂ. ಮಂಜಯ್ಯ, ಮತ್ತು ಕೆ. ನಂಜಪ್ಪನವರುಗಳೂ, ಸಾಕ್ಷಿ ಕೊಟ್ಟರು

ನಿನ್ನೆ ಕೊಡಗಿನ ಶ್ರೀಮತಿ ಗಂಗಮ್ಮ, ಶ್ರೀ ಡಿ ನಾರಾಯಣ ಶೆಟ್ಟಿ, ಶ್ರೀಮತಿ ಸುಬ್ಬಮ್ಮ, ಶ್ರೀಮತಿ ಸೀತಮ್ಮ, ದಾಸಪ್ಪ, ಶ್ರೀಮತಿ ಲಕ್ಷ್ಮಮ್ಮನವರುಗಳು ಸಾಕ್ಷಿ ವಿತ್ತು, ತಮಗೆ ಗೋಪಾಲರಾಯರ ಪರಿಚಯವಿಲ್ಲವೆಂದೂ, ಶ್ರೀಮತಿ ಸಾಕಮ್ಮನವರಿಗೆ ತಾವು ೧೫೦೦೦, ೩೦೦೦, ೬೦೦೦, ೧೫,೦೦೦ ರೂ ಸಾಲ ಕೊಟ್ಟರೆಂದೂ, ಇಲ್ಲಿಯ ವರೆಗೆ ಯಾವ ಬಡ್ಡಿಯೂ ಬಂದಿಲ್ಲವೆಂದೂ, ಬಡ್ಡಿ ದರವು ಎಷ್ಟು ಎಂಬುದೂ ಗೊತ್ತಿಲ್ಲವೆಂದೂ ತಿಳಿಸಿದರು ತಮ್ಮಲ್ಲಿ ಯಾವ ಲೆಕ್ಕ ಅಥವ ಪ್ರಾಮಿಸರಿ ನೋಟುಗಳು ಇಲ್ಲವೆಂದೂ, ಶ್ರೀಮತಿ ಸಾಕಮ್ಮನವರಿಂದ ಕಳುಹಿಸಲ್ಪಟ್ಟ ಫಾರ್ಮಿಗೆ ತಾವು ರುಜು ಹಾಕಿದುದಾಗಿ ಹೇಳಿದರು

ಶ್ರೀಮತಿ ಸಿ ಬಿ ಕರಿಯಪ್ಪ, ಶ್ರೀಗಳಾದ ಸಿ ಕೆ ತಿಮ್ಮಣ್ಣ, ಸಿ ಎಸ್. ರಾಮಯ್ಯ, ಸಿ ಎಸ್ ನಾರಾಯಣ ರಾವ್, ಸಿ ಎಸ್ ... ಕೆ ವೆಂಕಟಗಿರಿ, ಕೆ ... ಸಾಕ್ಷಿ ...

ರಾಜಧಾನಿಯ ಶ್ರೀಗಳಾದ ಪಿ ಸಿ ಛಬ್ಬ, ಕೆ ವಿದ್ಯಾರಣ್ಯ. ಕ್ಯಾ|| ಮತ್ತು ಶ್ರೀಮತಿ ಪಾರ್ವತಿ, ಕೆ ಕೇಶವದಾಸ್, ಸುಬ್ರಹ್ಮಣ್ಯ ಶಾಸ್ತ್ರಿ ಮತ್ತು ಡಿ ... ಸಾಕ್ಷ್ಯವಿತ್ತರು.

ಮೊಹಲ್ಲಾ ಪರಿಶೀಲನೆ

೨೨-೧-೪೯ ನೇ ಶನಿವಾರ ಬೆಳಿಗ್ಗೆ ೮-೩೦ ಗಂಟೆಯಿಂದ ಪೌರ ಸರಬರಾಜು ಖಾತೆ, ನಗರಸಭಾ ಕಮಿಷನರವರೂ ಕೃಷ್ಣರಾಜ ಮೊಹಲ್ಲ ಮತ್ತು ನಂಜುಮಳಿಗೆ, ... ಮಾಣಿಕ್ಯ ... ಮುಂತಾದ ಪ್ರದೇಶಗಳಲ್ಲಿ ಪರಿಶೀಲನೆ ನಡೆಸುವರು. ... ನಗರ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ಎ ಕೃಷ್ಣಮೂರ್ತಿರಾಯರು ಕೋರಿರುತ್ತಾರೆ

೬೦ ವರ್ಷದ ಮುದುಕಿಗೆ ೨೬ ವರ್ಷದವನೊಡನೆ ವಿವಾಹ

... ಎಂಬಾಕೆಯು ತನ್ನ ... ವಯಸ್ಸಿನ ... ನನ್ನು ... ವಿವಾಹವಾಗಿದ್ದಾಳೆ ...

ರಂತೆ ...

ವಿಷ್ಣು ಮಾಡುವ ದರ ಕಡಿಮೆಯಾಗಬೇಕು

ರೇಷ್ಮೆ ಕಾರ್ಖಾನೆ ಹೋಲ್ಸೇಲುಗಳ ಸಮಿತಿಯ ಸಭೆ

ಮೈಸೂರು ೨೦

[illegible] ರೇಷ್ಮೆ ಕಾರ್ಖಾನೆ [illegible] ಸಮಿತಿಯ ಸಭೆಯು ನಿನ್ನೆ [illegible] ಶ್ರೀ [illegible] ಸುಬ್ರಹ್ಮಣ್ಯ [illegible] ಅಧ್ಯಕ್ಷತೆಯಲ್ಲಿ ನಡೆ[illegible] ನಿರ್ಣಯಗಳು ಅಂಗೀಕೃತವಾದವು

[illegible] ಸರ್ಕಾರದವರು ಉಪಕಾರ ಕೊಟ್ಟರೆ ಪ್ರದಿಂದ ಅವರ [illegible] ರೇಷ್ಮೆ [illegible] [illegible] ಸಹಾಯ [illegible] ಮಾಡಬೇಕೆಂದು ಸರ್ಕಾರವನ್ನು [illegible]

[illegible]

[illegible] ಪ್ರಸ್ತುತ [illegible] ಮಾತ್ರ [illegible] [illegible] ಕೋಶಗಳನ್ನು [illegible] [illegible]

[illegible] ಮಾಡಬೇಕೆಂದು [illegible]

KALPANA[illegible] MYSORE
Morning Shows for 4 days
From 21-1-49

The Pirates of Monterey

(In Technicolor)

With Maria Montez

Rod Cameron

'ವೀರವಾಣಿ'—ದಿನಪತ್ರಿಕೆ

ಬೆಂಗಳೂರಿನಿಂದ ಶ್ರೀ ಜಿ ಮರುಳಪ್ಪನವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ವೀರವಾಣಿ' ಎಂಬ ಕನ್ನಡ ದಿನಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಪ್ರಜಾಪ್ರಭುತ್ವದ [illegible] ಯುಗದಲ್ಲಿ ಮೈಸೂರಿಗೆ ಲಭಿಸುವಂತೆ ಸೇವೆ ಸಲ್ಲಿಸಲು ಹೊರಟಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂದು [illegible] ಬಿಡಿ ಪತ್ರಿಕೆ ಆರು ಕಾಸು

ವಿವೇಕಾನಂದರ ಜನ್ಮ ದಿನ

ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ರಾಮ ಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ಶ್ರೀ ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವವು ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಜಿ ಎಸ್ ನಾಗರಾಜರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀಗಳಾದ ಕೆ ವಿ ರಾಮಾಚಾರ್, ಡಿ ಎಲ್ ನರಸಿಂಹಾಚಾರ್ ಮತ್ತು ಸ್ವಾಮಿ ಸೋಮನಾಥಾನಂದರವರು ಉಪನ್ಯಾಸ ಮಾಡುವರು

Edited, printed and published by A R Nagarajan at the Sadhvi Press, D Subbaiah Road, Mysore

ಕಾರ್ಮಿಕರ ನಾಯಕರ ದಸ್ತಗಿರಿಗೆ ಖಂಡನೆ

[illegible] ಕಾರ್ಯಕಾರೀ ಸಮಿತಿಯು [illegible] ಶ್ರೀ [illegible] ನಾಗಭೂಷಣ [illegible] ಶ್ರೀ [illegible] ರವರು [illegible] ದಸ್ತಗಿರಿ ಮಾಡಿ [illegible] ಬಿಡುಗಡೆ ಮಾಡಬೇಕೆಂದು [illegible] ಒತ್ತಾಯಪಡಿಸಲಾಯಿತು

ವಿವಾಹ [illegible]

[illegible] ಶ್ರೀ ಪಿ ವಿ [illegible] ಸಹೋದರರಾದ ಶ್ರೀ [illegible] ನಾರಾಯಣ ಅಯ್ಯರ್ [illegible] [illegible] ಅವರ ವಿವಾಹ [illegible] ನೆರವೇರಿತು. ಅನೇಕ ಅತಿಥಿಗಳು [illegible]

ಪ್ರಭುದೇವಾ ಟಾಕೀಸ್

ಜೆಮಿನಿಯವರ

ಚಕ್ರಧಾರಿ

(ಭಕ್ತ ಗೋರ ಕುಂಬಾರ)

೨೧-೧-೪೯ನೇ ಶುಕ್ರವಾರದಿಂದ

ಅಭೂತಪೂರ್ವ [illegible] ವಾರ

ಪ್ರತಿ ದಿನ ೩ ಆಟಗಳು

೨೧-೧-೪೯ರಿಂದ :: ೨ನೇ ಜಯಭೇರಿ ವಾರ

ದಿನಂಪ್ರತಿ ೩ ಆಟಗಳು [illegible]

ಮೈಸೂರು [illegible]

ಬೆಂಗಳೂರು ಸ್ಟೇಟ್ಸ್-ಸೂಪರ್-ಪ್ರೀ[illegible]

ಅತ್ಯುತ್ತಮ ಸಂಗೀತ-ನೃತ್ಯ-ಭಕ್ತಿರಸ [illegible]

ಕೃಷ್ಣಾ ಪಿಕ್ಚರ್ಸ್ ರವರ

ಕೃಷ್ಣ ಭಕ್ತಿ (ತಮಿಳು)

KRISHNA BHAKTHI (Tamil)

P.R. ರಾಜಕುಮಾರಿ-P.U. ಚಿನ್ನಪ್ಪ-ಕೃಷ್ಣನ್-ಮಧುರಂ

ಬೆಂಗಳೂರು ಪ್ರೀಮಿಯರ್[illegible] [illegible]

A SHARADA FILMS RELEASE

ಶ್ರೀ ತ್ಯಾಗರಾಜರ ಆರಾ[illegible]

ರಾಜಧಾನಿಯ ಶ್ರೀ [illegible] ಶಾಲೆಯ ಆಶ್ರಯದಲ್ಲಿ ನಿನ್ನೆ ಶ್ರೀ ತ್ಯಾಗರಾಜರ ಆರಾಧನೋತ್ಸವವು [illegible] ಕೃಷ್ಣಪ್ಪನವರ ರಾಮ ಮಂದಿರದಲ್ಲಿ [illegible] ನಡೆಯಿತು. ವಿದ್ವಾಂಸರುಗಳಾದ ಶ್ರೀ [illegible] ನರಸಿಂಹಾಚಾರ್, ಶ್ರೀನಿವಾಸ[illegible] ಮತ್ತು ಶ್ರೀಮತಿ ಸರೋಜಿನಿ [illegible] ವರುಗಳಿಂದ ಸಂಗೀತ ಜರುಗಿತು

ಶ್ರೀ ಗಾಯತ್ರೀ ಟಾ[illegible]

ಪ್ರತಿ ದಿನ ೩ ಪ್ರದರ್ಶನಗಳು

ತಾ॥ 21-1-49 ರಿಂದ 2 [illegible]

R.K.O ರವರ ಭಯಂಕರ [illegible]

ಕಿಂಗ್ ಕಾಂಗ್

(ಹೊಸ ಕಾಪಿ)

KING KONG

(New Print)

Morning show at 10[illegible]

From 22-1-49 for 2 [illegible]

Pearl Buck's Sensa[illegible] Novel,

CHINA SK[illegible]

(The Picture is to be s[illegible] by one and all)

Next Change [illegible]

NIGHT & DAY

(Technicolour)

ಟೆಂಡರ್ ನೋಟಿ[illegible]

ಮೈಸೂರು [illegible] ಅರಮ[illegible] ಬೇಕಾದ ಸುಮಾರು [illegible] ಸಾವಿರದ ಏಳುನೂರು [illegible] ಹುರುಳಿಗಾಗಿ ಮೊಹರು [illegible] ಜಲ್ಪಟ್ಟಿ ಟೆಂಡರುಗಳನ್ನು [illegible] ಕೆಳಗೆ ರುಜು ಮಾಡಿ[illegible] ರಲ್ಲಿ ೨೬-೧-೧೯೪೯ನೇ [illegible] ವಾರ ಕೊಡಬಹುದು.

ಎಚ್. ನಿರಂಜನ್[illegible]

ಮುಜರಾಯಿ ಸೆಕ್ರೆಟರಿಯವ[illegible]

ರಾಜಕಮಲ್ ಟಾಕೀಸ್

21-1-49ನೇ ಶುಕ್ರವಾರದಿಂದ :: ಅಭೂತಪೂರ್ವವಾದ ೭ನೇ ವಾರ

ದಿನಂಪ್ರತಿ ೩ ಆಟಗಳು (ಶನಿವಾರ ಮತ್ತು ಭಾನುವಾರ [illegible] ಮ್ಯಾಟಿನಿ)

ಸುರಭಿಯವರ ಪೌರಾಣಿಕ ಕನ್ನಡ ಚಿತ್ರ

ಭಕ್ತ ಕುಂಬಾರ

ನಟವರ್ಗ: ಹೊನ್ನಪ್ಪ ಭಾಗವತರ್, ಲಕ್ಷ್ಮೀಬಾಯಿ, [illegible], ಲಕ್ಷ್ಮಮ್ಮ

Swarna Films c/o Yeshodhara Films Coron[illegible] Gan[illegible]nagar, Bangalore 2

ಪುಟ ೨೦ ೨೪ ॥ವಂದೇಮಾತರಂ॥ ಇಂದಿನ ಪತ್ರಿಕೆ ೨ ಕಾಸು

ಸಾಧ್ವಿ

ಸಂಪುಟ ೨] ಶುಕ್ರವಾರ ೨೧-೧-೪೯ [ಸಂಚಿಕೆ ೧೬

ವಿದ್ಯಾರ್ಥಿ ಕಾಂಗ್ರೆಸ್ ಅಧಿಕಾರಿ ವರ್ಗದವರ ಹೇಳಿಕೆ

ಮೈಸೂರು ೨೧

ಇತ್ತೀಚೆಗೆ ರಾಜಧಾನಿಯ ಕೆಲವಾರು ಪತ್ರಿಕೆಗಳಲ್ಲಿ 'ವಿದ್ಯಾರ್ಥಿ ಕಾಂಗ್ರೆಸ್ ಕೆಲವು ಸ್ವಾರ್ಥಿಗಳ ಸರ್ವಾಧಿಕಾರಕ್ಕೆ ಒಳಗಾಗಿದೆ, ಚುನಾವಣೆ ಸರಿಯಾಗಿಲ್ಲ, ಪುನಃ ಚುನಾವಣೆಯಾಗಬೇಕು, ಸಂಸ್ಥೆ ಅಧೋಗತಿಗಿಳಿಯುತ್ತಾ ಇದೆ' ಎಂದು ಹೇಳಿಕೆಗಳು ಪ್ರಕಟವಾಗಿವೆ

ಇವರ ಹೇಳಿಕೆಗಳನ್ನು ಖಂಡಿಸದೆ ವಿಧಿಯಿಲ್ಲ. ನೂತನ ಚುನಾವಣೆಗೆ ಪೂರ್ವಭಾವಿಯಾಗಿ ಸಾಕಷ್ಟು ಕಾಲಾವಕಾಶ ಕೊಟ್ಟಿತ್ತು. [illegible]ಗಳಾದ ಟಿ ವೆಂಕಟರಮಣಯ್ಯನವರು ಮತ್ತು ಸುಬ್ರಾಮಯ್ಯನವರು ಚುನಾವಣಾಧಿಕಾರಿಗಳಾಗಿದ್ದರು. ಯಾರಿಗೆ ಬಹುಮತ ಬಂತೋ ಅವರು ಈಗಿನ ಅಧಿಕಾರಿ ವರ್ಗದಲ್ಲಿದ್ದಾರೆ. ಇದರಲ್ಲಿ ಸರ್ವಾಧಿಕಾರಿಗಳೂ ಇಲ್ಲ, ಸ್ವಾರ್ಥತೆಯೂ ಇಲ್ಲ. ಕೆಲವು ಸದಸ್ಯರ ಮೇಲೆ ತೆಗೆದುಕೊಂಡ ನಿರ್ಮಾನವೂ ಸಹ ಸಾಮಾನ್ಯ ಸದಸ್ಯರ ಬಹುಮತದಂತೆ ಮಾಡಲಾಗಿದೆ. ವಿದ್ಯಾರ್ಥಿ ಕಾಂಗ್ರೆಸ್ಸು ಯಾವ ಪಕ್ಷಕ್ಕೂ ಸೇರಿ ರಾಜಕೀಯ ಪಕ್ಷಗಳ ಹೋರಾಟದಲ್ಲಿ ಸಿಕ್ಕಬಾರದೆಂಬುದೇ ನಮ್ಮ ಬಯಕೆ

ವಿದ್ಯಾರ್ಥಿ ಸಹೋದರರಲ್ಲಿ ನಮ್ಮ ಪ್ರಾರ್ಥನೆ ಇಷ್ಟೇ. ಈಗಿರುವ ಅಧಿಕಾರ ವರ್ಗದಲ್ಲಿ ವಿಶ್ವಾಸವಿಲ್ಲದೆ ಇದ್ದಲ್ಲಿ ಸಾಮಾನ್ಯ ಸದಸ್ಯರ ಸಭೆ ಸೇರಿಸಿರಿ, ಅದರ ತೀರ್ಮಾನಕ್ಕೆ ನಾವು ಸದಾ ಬದ್ಧರಿದ್ದೇವೆ. ರಾಜೀನಾಮೆ ಕೊಡಲೂ ಸಿದ್ಧರಿದ್ದೇವೆ

ಕೊನೆಯದಾಗಿ ನಮ್ಮ ವಿನಂತಿ ಏನೆಂದರೆ ವಿದ್ಯಾರ್ಥಿ ಕಾಂಗ್ರೆಸ್ಸು ಯಾವ ಪಕ್ಷಕ್ಕೂ ಹೋಗದೆ ಸರ್ವದಾ ವಿದ್ಯಾರ್ಥಿ ವೃಂದದ ಏಳಿಗೆಗಾಗಿ ದುಡಿಯುವಂತೆ ಪ್ರೋತ್ಸಾಹಿಸಿ, ವಿದ್ಯಾರ್ಥಿಗಳೆಲ್ಲರೆ ವಿಶ್ವಾಸಕ್ಕೆ ಪಾತ್ರವಾಗುವ ಹಾಗೆ ಮಾಡಬೇಕೆಂದು ಕೋರುತ್ತೇವೆ—

ಶಾಂತರಾಜ—ಅಧ್ಯಕ್ಷ
ರಾ ಪುಟ್ಟಸ್ವಾಮಿ ಮತ್ತು
ತಂಬಳೆ ಶ್ರೀನಿವಾಸ ಮೂರ್ತಿ
ಕಾರ್ಯದರ್ಶಿಗಳು
ಎಚ್ ಸುಬ್ರಾಯ—ಖಜಾಂಚಿ

'ಜೀವಾಳ'—ನೂತನ ಪತ್ರಿಕೆ

ರಾಜಧಾನಿಯ 'ಸಿಂಹನಾದ' ಮತ್ತು [illegible] ಪತ್ರಿಕೆಗಳ ಸಂಪಾದಕರಾದ [illegible] ಶ್ರೀಕಂಠಯ್ಯನವರ ಸಂಪಾದಕತ್ವದಲ್ಲಿ ಎನ್ನೆಯಿಂದ ಪ್ರಕಟವಾಗಿರುವ 'ಜೀವಾಳ' ಎಂಬ ಕನ್ನಡ ಪತ್ರಿಕೆಯು ನಮ್ಮ ಸ್ವಾಗತವಾಗಿದೆ. ವಿಶೇಷ [illegible]. ಸಂಪಾದಕರು 'ಜೀವಾಳದ ಜೀವಾಳ' ಎಂಬ ಶೀರ್ಷಿಕೆಯಲ್ಲಿ ಈ ರೀತಿ ಬರೆದಿರುತ್ತಾರೆ

ಜೀವಾಳ ಯಾಕೆ ಹುಟ್ಟಿಕೊಂಡಿತು ಎಂದರೆ ಇಷ್ಟೇ. ಅದರ ಜೀವಾಳ [illegible] ಆಯುಪುದು ನಮಗೊಂದು [illegible] ವ ಜನರು. ನೀವಿದ್ದರೆ [illegible] ನೀವು ನಮಗಾಗಿ [illegible] ಹಿಡಿದು ಜೀವ ಕಳೆ ತುಂಬಿ [illegible] ಜೀವಾಳಕ್ಕೆ ಪಾತ್ರರಾಗಬೇಕು

ಗೋಪಾಲರಾವ್ ಸಮಿತಿಯವರ ವಿಚಾರಣೆ

ಮೈಸೂರು ೨೧

ಬಿ ಎನ್ ಗೋಪಾಲರಾಯರ ವ್ಯವಹಾರದ ವಿಚಾರಣಾ ಸಮಿತಿಯ ಮುಂದೆ ಈ ದಿನ ನಿವೃತ್ತ ಫೈನಾನ್ಷಿಯಲ್ ಸೆಕ್ರೆಟರಿಗಳಾದ ಶ್ರೀ ವೀರರಾಜೇ ಅರಸಿನವರೂ ದಿವಾನ್ ಬಹದ್ದೂರ್ ಕೆ ರಾಮಸ್ವಾಮಿರವರುಗಳೂ ರಹಸ್ಯವಾಗಿ ಸಾಕ್ಷ್ಯವನ್ನು ಕೊಟ್ಟರು

ದಿವಂಗತ ಧರ್ಮ ರತ್ನಾಕರ ಸಿ ಪೆರುಮಾಳ್ ಚೆಟ್ಟಿಯವರ ಮಕ್ಕಳಾದ ಶ್ರೀ ಜಾನಕಿ ರಾಂರವರು ಸಾಕ್ಷ್ಯವನ್ನು ಕೊಟ್ಟು ಈ ವ್ಯವಹಾರದಲ್ಲಿ ತಮಗೆ ಏನೂ ಗೊತ್ತಿಲ್ಲವೆಂದು ತಿಳಿಸಿದರು. ಶ್ರೀ ಪೆರುಮಾಳ್ ಚೆಟ್ಟಿಯವರು ೨ ಲಕ್ಷ ರೂ ಗೆ ಕ್ಲೇಮು ಹಾಕಿರುವುದನ್ನು ಸಮಿತಿಯವರು ತಿಳಿಸಿ ಅದನ್ನು ಅರ್ಧಕ್ಕೆ ಇಳಿಸಬೇಕೆಂದು ಸೂಚಿಸಿದರು

ನಿನ್ನೆ ದಿನ ಗೋಪಾಲರಾಯರ ಅಣ್ಣಂದಿರಾದ ಶ್ರೀ ಬಿ ಎನ್ ಗೋವಿಂದರಾಯರು ರಹಸ್ಯವಾಗಿ ಸಾಕ್ಷ್ಯವನ್ನು ಕೊಟ್ಟರು

ರಾಜಧಾನಿಯ ವಕೀಲರಾದ ಶ್ರೀ ಬಿ ರಾಮರಾಯರು ೪ ಸಾವಿರ ರೂ ನ್ನು ಕೊಟ್ಟಿರುವುದಾಗಿಯೂ, ೫೦೦ ರೂ ಒಡ್ಡಿ ಬಂದಿರುವುದಾಗಿಯೂ ತಿಳಿಸಿದರು. ೩,೭೦೦ ರೂ ಗೆ ಅವರ ಕ್ಲೇಮನ್ನು ಇಳಿಸಬೇಕೆಂದು ಸಮಿತಿಯವರು ಸೂಚಿಸಿದರು

ಶ್ರೀಮತಿ ಸಾಕಮ್ಮನವರ ಹತ್ತಿರದ ಸಂಬಂಧಿಗಳಾದ ಶ್ರೀ ಶಿವಣ್ಣನವರು ಸಾಕ್ಷ್ಯವಿತ್ತು ತಾವು ಸಾಕಮ್ಮನವರ ಮೂಲಕ ೧ ಲಕ್ಷ ರೂ ನ್ನು ಕೊಟ್ಟಿರುವುದಾಗಿಯೂ, ತಮಗೆ ಯಾವ ಬಡ್ಡಿಯೂ ಬಂದಿಲ್ಲವೆಂದೂ ತಿಳಿಸಿದರು. ತಾವು ಗೋಪಾಲರಾಯರಿಗೆ ಒಂದು ಪತ್ರ ಬರೆದು ಅವರ ಪ್ರಭಾವವನ್ನು ಬೀರಿ ಸರ್ ಟಿ ತಂಬೂಚೆಟ್ಟಿಯವರಿಂದ ತಮಗೆ ಅಸಿಸ್ಟೆಂಟ್ ಕಮೀಷನರ ಹುದ್ದೆಯನ್ನು ಕೊಡಿಸಬೇಕೆಂದು ಪ್ರಾರ್ಥಿಸಿದ್ದಾಗಿಯೂ ಹೇಳಿದರು. ಶ್ರೀಮತಿ ಸಾಕಮ್ಮನವರು ಅವರ ಲೆಕ್ಕಕ್ಕೆ ೫೦ ಸಾವಿರ ರೂ ಅನ್ನು ಇಡದಿರುವುದರಿಂದ, ಅಷ್ಟಕ್ಕೆ ಮಾತ್ರ ಅವರು ಕ್ಲೇಮ್ ಹಾಕಬೇಕೆಂದು ಸಮಿತಿಯವರು ಸೂಚಿಸಿದರು

ಕೊಡಗಿನ ಶ್ರೀಮತಿ ಸರೋಜಮ್ಮ [illegible]ಪ್ಪನವರು ಸಾಕ್ಷ್ಯವಿತ್ತು ತಾವು ಗೋಪಾಲರಾಯರಿಗಾಗಲೀ ಅಥವ ಸಾಕಮ್ಮನವರಿಗಾಗಲೀ ಹಣವನ್ನು ಕೊಟ್ಟಿಲ್ಲವೆಂದೂ ತಾವು ಯಾವ ಪ್ರೋನೋಟಿಗೂ ರುಜು ಹಾಕಿಲ್ಲವೆಂದೂ ತಿಳಿಸಿದರು. ಅವರ ಹೆಸರಿನಲ್ಲಿರುವ ೧೫ ಸಾವಿರ ರೂ ನ ಪ್ರೋನೋಟನ್ನು ಸಮಿತಿಯವರು ತೋರಿಸಿದಾಗ ಅದಕ್ಕೆ ರುಜು ತಮ್ಮದಲ್ಲವೆಂದೂ ಹೇಳಿದರು

ಸಮಿತಿಯವರ ಇಲ್ಲಿನ ಕಾರ್ಯಕಲಾಪಗಳು ಇಂದಿಗೆ ಮುಕ್ತಾಯವಾಯಿತು

ಪ್ರಕಟಣಾಧಿಕಾರಿಗಳ ನಿಧನ

ಸ್ವಂ ಸು ಫೋನ್] ಬೆಂಗಳೂರು ೨೦

ಸರ್ಕಾರದ ಪ್ರಕಟಣಾಧಿಕಾರಿಗಳಾದ ಶ್ರೀ ಜಿ ವಿ ರಾಜರತ್ನಂರವರು ಈದಿನ ಬೆಳಗ್ಗೆ ದೇವರಾಜ್ ಶಿವರಾಂ ಕ್ಷಯರೋಗದ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಅವರು ಈಗ್ಯೆ ಎರಡು ತಿಂಗಳ ಹಿಂದೆ ಕ್ಷಯರೋಗದ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ತಮಗೆ ಜೀವನದಲ್ಲಿ ಜಿಗುಪ್ಸೆಯುಂಟಾಗಿದೆಯೆಂದೂ, ತಮಗಾಗಿ ಯಾರು ವ್ಯಥೆಪಡಬೇಕಾಗಿಲ್ಲವೆಂದೂ ತಿಳಿಸಿ ಒಂದು ಪತ್ರ ಬರೆದಿಟ್ಟು, [illegible] ನಿದ್ದೆ ಬರುವ [illegible] ನಿನ್ನೆ ರಾತ್ರಿ ತೆಗೆದುಕೊಂಡು ಮಲಗಿದವರು ಪುನಃ ಏಳಲೇ ಇಲ್ಲವೆಂದು ಹೇಳಲಾಗಿದೆ,

ತೇಜ ಬಹದ್ದೂರ್ ಸಪ್ರೂರವರ ನಿಧನ

ಭಾರತದ ಸುಪ್ರಸಿದ್ಧ ವಕೀಲರಾದ ಸರ್ ತೇಜ ಬಹದ್ದೂರ್ ಸಪ್ರೂರವರು ನಿನ್ನೆ ತಮ್ಮ ೭೪ನೇ ವಯಸ್ಸಿನಲ್ಲಿ ಅಲಹಾಬಾದಿನಲ್ಲಿ ನಿಧನರಾದರು. ಅವರಿಗೆ ೩ ಗಂಡು ಮಕ್ಕಳೂ, ಇಬ್ಬರು ಹೆಣ್ಣುಮಕ್ಕಳೂ, ೧೧ ಮಂದಿ ಮೊಮ್ಮಕ್ಕಳೂ ೩ ಜನ ಮರಿ ಮಕ್ಕಳೂ ಇದ್ದಾರೆ

ಆರ್ ಎಸ್ ಎಸ್. ಸತ್ಯಾಗ್ರಹದ ಮುಕ್ತಾಯ

ಭಾರತದಾದ್ಯಂತ ನಡೆಯುತ್ತಿದ್ದ ಆರ್ ಎಸ್ ಎಸ್ ನವರ ಸತ್ಯಾಗ್ರಹ ಚಳುವಳಿಯನ್ನು ಯಾವ ಷರತ್ತುಗಳೂ ಇಲ್ಲದೆ ನಿಲ್ಲಿಸಲಾಗಿದೆ

ಲೆನಿನ್ ದಿನಾಚರಣೆ

ಈ ದಿನ ಸಂಜೆ ೬ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಮೈಸೂರ ವಿದ್ಯಾರ್ಥಿ ಸಂಘ, ಸೋಷಿಯಲಿಸ್ಟ್ ಮಿತ್ರರ ಸಂಘ, ಬೀಡಿ ಕೆಲಸಗಾರರ ಸಂಘ ಮತ್ತು ಕಮ್ಯೂನಿಸ್ಟ್ ಪಾರ್ಟಿಗಳ ಆಶ್ರಯದಲ್ಲಿ ಲೆನಿನ್ ದಿನಾಚರಣೆಯ ಪ್ರಯುಕ್ತ [illegible] ರಂಗ ಸಭೆಯು ಸೇರುತ್ತದೆ. ಶ್ರೀ ಗೋಪಾಲಕೃಷ್ಣ ಅಡಿಗರು ಅಧ್ಯಕ್ಷತೆ ವಹಿಸುತ್ತಾರೆ. [illegible] ಆರ್ ಎಸ್ ವೆ [illegible] ವರು ಭಾಷಣ ಮಾಡುತ್ತಾರೆ

ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ

ಶ್ರೀಗಳಾದ [illegible] ಸುಬ್ರಹ್ಮಣ್ಯ ಮತ್ತು [illegible] ಪ್ರಧಾನ ನ್ಯಾಯಾಧೀಶರಾದ ಶ್ರೀ [illegible]ನವರು [illegible] ರಾಜ [illegible] ಪತ್ರಿಕೋದ್ಯೋಗಿಗಳ [illegible] ಭೇಟಿ ಕೊಟ್ಟಿದ್ದರು

ಹೋಟೇಲುಗಳಲ್ಲಿ ಇಡ್ಲಿ ಮತ್ತು ದೋಸೆಗಳಿಗೆ ನಿಷೇಧ

ಕಾಫಿ ಕ್ಲಬ್ಬುಗಳಿಗೆ ಕಾಲ ಪರಿಮಿತಿ

ಸ್ವಂ ಸು ಫೋನ್] ಬೆಂಗಳೂರು ೨೧

ಸಂಸ್ಥಾನದಲ್ಲಿ ಅಕ್ಕಿಯು ಸಾಕಷ್ಟು ಇಲ್ಲದುದರಿಂದಲೂ ಮತ್ತು ಹೊರಗಿನಿಂದ ಬರಬೇಕಾದ ಅಕ್ಕಿಯು ಬಂದಿಲ್ಲವಾದುದರಿಂದಲೂ ಹೋಟೇಲುಗಳಲ್ಲಿ ಅಕ್ಕಿಯಿಂದ ಇಡ್ಲಿ ಮತ್ತು ದೋಸೆಗಳನ್ನು ಮತ್ತು ಹಾಲಿನಿಂದ ಕೋವಾ ಮುಂತಾದ ಪದಾರ್ಥಗಳನ್ನೂ ತಯಾರಿಸಕೂಡದೆಂದೂ ಸರ್ಕಾರದವರು ನಿನ್ನೆ ರಾತ್ರಿ ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ

ತಿಂಡಿ ಹೋಟೇಲುಗಳು ಬೆಳಗ್ಗೆ ೬-೩೦ ರಿಂದ ೯-೩೦, ಮಧ್ಯಾಹ್ನ ೩ ರಿಂದ ೬ ರ ವರೆಗೆ ಮಾತ್ರವೂ, ಊಟದ ಹೋಟೇಲುಗಳು ಬೆಳಗ್ಗೆ ೧೦ ರಿಂದ ೩ ಮತ್ತು ಸಂಜೆ ೬ ರಿಂದ ೧೦ ಗಂಟೆವರೆಗೆ ಮಾತ್ರವೂ ತೆರೆದಿರಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಪದ್ಯ ಪಠನ

೨೦-೧-೪೯ ನೇ ಭಾನುವಾರ ಸಾಯಂಕಾಲ ೫ ಘಂಟೆಗೆ ಮಹಾರಾಜರವರ ಸ್ತ್ರೀ ಸಮಾಜದಲ್ಲಿ [illegible] ಭಾರತಿ ಸಾಹಿತ್ಯ ಸಂಘದ ಆಶ್ರಯದಲ್ಲಿ ಸುಪ್ರಸಿದ್ಧ ಕವಿಗಳಾದ ಶ್ರೀಮಾನ್ ಎಂ ಗೋಪಾಲಕೃಷ್ಣ ಅಡಿಗರವರು ತಮ್ಮ ಕೆಲವು ನೂತನ ಪದ್ಯಗಳನ್ನು ಓದುತ್ತಾರೆ. ಸರ್ವರಿಗೂ ಆಹ್ವಾನ [illegible]

ಶ್ರೀ ತ್ಯಾಗರಾಜರ ಜಯಂತಿ

ರಾಜಧಾನಿಯ ಶ್ರೀ ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ ಶ್ರೀ ತ್ಯಾಗರಾಜರವರ ಜಯಂತ್ಯುತ್ಸವ ನಾಳೆ ಮತ್ತು ನಾಳಿದ್ದು ಸಹಕಾರ ಭವನದಲ್ಲಿ ನಡೆಯುವುದು. ನಾಳೆ ಸಂಜೆ ೫ ಗಂಟೆಗೆ ಪ್ರಾರಂಭ. ಪ್ರಸಿದ್ಧ ವಿದ್ವಾಂಸರುಗಳಿಂದ ಸಂಗೀತಗಳು ನಡೆಯುವುವು. ನಾಳಿದ್ದು ಸಂಜೆ ಮಹಿಳೆಯರಿಂದ ಸಂಗೀತವೂ ಜರುಗುವುದು.

ಬಿ. ವಾಸುದೇವ ಮೂರ್ತಿಯವರು ಅಡ್ವೊಕೇಟ್ ಜನರಲ್ಲರು

ವಕೀಲರಾದ ಶ್ರೀ ಬಿ ವಾಸುದೇವ ಮೂರ್ತಿಯವರನ್ನು [illegible] ಅಡ್ವೊಕೇಟ್ ಜನರಲ್ಲಾಗಿ ಮುಂದಿನ ತಿಂಗಳಿನಿಂದ ೩ ವರ್ಷ ಕಾಲ ಸರ್ಕಾರದವರು ನೇಮಿಸಿದ್ದಾರೆ

ಕರ್ನಾಟಕಕ್ಕೆ ಪ್ರಭುಗಳು ರಾಜಸಪ್ರಮುಖ ಅಧಿಪತಿಯಾಗಬೇಕು

ಕೆ. ಪಿ. ಸಿ. ಸಿ ಸಭೆಯಲ್ಲಿ ನಿರ್ಧಾರ

[illegible] ಶ್ರೀ ಎಸ್ [illegible] ಅಧ್ಯಕ್ಷತೆಯಲ್ಲಿ ಸಮಾವೇಶ [illegible] ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ [illegible] ಸಭೆಯಲ್ಲಿ [illegible] ಪ್ರಸಕಾರದ [illegible] ಕರ್ನಾಟಕ ಪ್ರಾಂತವನ್ನು [illegible]

[illegible]

ಡಚ್ಚರ ದಬ್ಬಾಳಿಕೆ ಏಷ್ಯಾಕ್ಕೆ ಸವಾಲು

ಏಷ್ಯಾ ಸಮ್ಮೇಳನದಲ್ಲಿ ಪಂಡಿತ ನೆಹರೂರವರ ಭಾಷಣ

ದೆಹಲಿಯಲ್ಲಿ ನಿನ್ನೆ ಪ್ರಾರಂಭವಾದ ಏಷ್ಯಾ ರಾಷ್ಟ್ರಗಳ ಸಮ್ಮೇಳನಕ್ಕೆ ಭಾರತ ಮುಖ್ಯ ಪ್ರಧಾನಿ ಪಂಡಿತ ನೆಹರೂರವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು

ಪಂಡಿತ ನೆಹರೂರವರು ಭಾಷಣ ಮಾಡಿ, ಇಂಡೋನೇಷ್ಯದ ಪ್ರಜೆಗಳ ಮೇಲೆ ಡಚ್ಚರು ನಡೆಸುತ್ತಿರುವ ದಬ್ಬಾಳಿಕೆಯು ಏಷ್ಯಾ ರಾಷ್ಟ್ರಗಳಿಗೆ ಸವಾಲಿನಂತಿದೆಯೆಂದೂ, ಡಚ್ಚರು ವಿಶ್ವ ಸಂಸ್ಥೆಯ ಸೂಚನೆಯನ್ನು ನಿರ್ಲಕ್ಷಿಸಿದ್ದಾರೆಂದೂ, ಅವರ ಸವಾಲನ್ನು ತಡೆಗಟ್ಟದಿದ್ದಲ್ಲಿ ಅದರ ದುಷ್ಪರಿಣಾಮವು ಕೇವಲ ಏಷ್ಯಾಕ್ಕೆ ಮಾತ್ರವಲ್ಲದೆ ಇಡೀ ಜಗತ್ತಿಗೇ ತಟ್ಟುವುದು ಖಂಡಿತವೆಂದೂ ತಿಳಿಸಿರುತ್ತಾರೆ. ಸಮ್ಮೇಳನದ ಧ್ಯೇಯವನ್ನು ಅವರು ವಿವರಿಸಿ ಅಲ್ಲಿ ತಾವು ಸೇರಿರುವುದು ವಿಶ್ವಸಂಸ್ಥೆಯನ್ನು ಬದಿಗೊತ್ತುವುದಕ್ಕಲ್ಲವೆಂದೂ ಅದರ ಶಕ್ತಿಯನ್ನು ಅಭಿವೃದ್ಧಿಗೊಳಿಸಿ ಅದಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡುವುದೆಂದೂ ಹೇಳಿದರು

ಏಷ್ಯಾದ ಸ್ವತಂತ್ರ ರಾಷ್ಟ್ರಗಳು ಸಮಸ್ತ ರಾಷ್ಟ್ರಗಳಿಗೆ ಸಮಾನವಾದ ಹಿತಗಳನ್ನು ರಕ್ಷಿಸಿಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳಬೇಕೆಂದೂ, ಮಹಾತ್ಮಾ ಗಾಂಧೀಜಿಯವರು ಬೋಧಿಸಿರುವ ಅಹಿಂಸಾ ಮತ್ತು ನ್ಯಾಯಸಮ್ಮತವಾದ ಮಾರ್ಗವನ್ನು ತಾವುಗಳು ಅನುಸರಿಸಬೇಕೆಂದೂ ಅವರು ತಿಳಿಸಿದರು

ನಿನ್ನೆ ಸಂಜೆ ಸಮ್ಮೇಳನವು ೨ ಗಂಟೆಗಳ ಕಾಲ ರಹಸ್ಯವಾಗಿ ಸೇರಿತ್ತು. ಇಂಡೋನೇಷ್ಯದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವು ರಚಿತವಾಗಬೇಕೆಂದೂ, ಅದಕ್ಕಾಗಿ ರಾಜ್ಯಾಂಗ ಸಭೆಯು ನಿರ್ಮಿತವಾಗಬೇಕೆಂದೂ, ಇಂಡೋನೇಷ್ಯದಲ್ಲಿರುವ ಡಚ್ ಸೈನ್ಯವೆಲ್ಲ ವಾಪಸಾಗಬೇಕೆಂದೂ, ಇವುಗಳನ್ನು ಡಚ್ ಸರ್ಕಾರವು ಕಾರ್ಯರೂಪಕ್ಕೆ ತರಬೇಕೆಂದೂ ಸಮ್ಮೇಳನದಲ್ಲಿ ನಿರ್ಧರಿಸಲಾಯಿತೆಂದು ಹೇಳಲಾಗಿದೆ

ಸರ್ವೋದಯ ಮೇಳ

ಭಾರತದ ಸರ್ವೋದಯ ಸಮಾಜದ ಸಮಿತಿಯು ಕಳೆದ ತಿಂಗಳು ೨೦ನೇ ತಾ|| ಜಯಪುರದಲ್ಲಿ ಸೇರಿ, ಇದೇ ೩೦ನೇ ತಾ|| ದೆಹಲಿಯ ರಾಜಘಾಟಿನಲ್ಲಿ ವಾರ್ಷಿಕ ಮೇಳವನ್ನು ಆಚರಿಸಬೇಕೆಂದು ನಿರ್ಧರಿಸಲಾಯಿತು. ಆ ದಿವಸ ಪ್ರತಿಯೊಂದು ಊರಿನಲ್ಲೂ ಸರ್ವೋದಯ ದಿನವನ್ನಾಗಿ ಆಚರಿಸಿ, ಸಾಮುದಾಯಿಕ ಪ್ರಾರ್ಥನೆ ನೂಲುವುದು, ಗ್ರಾಮ ಸ್ವಚ್ಛತೆ ಮತ್ತು ಸಭೆಗಳನ್ನು ನಡೆಸಬೇಕೆಂದು ಕೋರಲಾಗಿದೆ

ಮಹಾತ್ಮರ ಅವಶೇಷಗಳು ವಿಸರ್ಜಿಸಲ್ಪಟ್ಟ ಎಲ್ಲ ಪ್ರದೇಶಗಳಲ್ಲೂ ಮುಂದಿನ ತಿಂಗಳು ೧೨ನೇ ತಾ|| ಸ್ಥಾನಿಕ ಮೇಳಗಳನ್ನು ನಡೆಸಿ, ಆ ದಿನ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ ತೀರ್ಮಾನಿಸಲಾಯಿತು

ಇಂದೂರ ಹತ್ತಿರವಿರುವ ರಾವೂನಲ್ಲಿ ಬರುವ ಮಾರ್ಚಿ ತಿಂಗಳಿನ ೨ನೇ ವಾರದಲ್ಲಿ ಸರ್ವೋದಯ ಸಮಾಜದ ಸೇವಕರ ಸಮ್ಮೇಳನವನ್ನು ನಡೆಸಬೇಕೆಂದೂ, ನಿರ್ಧರಿಸಲಾಯಿತು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ಮುಂದಿನ ತಿಂಗಳು ೨೮ನೇ ತಾ|| ನೊಳಗಾಗಿ ವಾರ್ಧಾದಲ್ಲಿರುವ ಸಮಾಜದ ಕಾರ್ಯಾಲಯಕ್ಕೆ ಹೆಸರುಗಳನ್ನು ತಿಳಿಸಬೇಕೆಂದೂ ಕೋರಲಾಗಿದೆ

ಜೋಗಿನಿಂದ ಭದ್ರಾವತಿಗೆ ವಿದ್ಯುಚ್ಛಕ್ತಿ ಲೈನು

ಜೋಗಿನಿಂದ ಭದ್ರಾವತಿಗೆ ವಿದ್ಯುಚ್ಛಕ್ತಿಯ ಎರಡು ಲೈನುಗಳನ್ನು ಹಾಕಲು ೪೨೧೧,೦೦೦ ರೂ ಅನ್ನು ಸರ್ಕಾರದವರು ಮಂಜೂರುಮಾಡಿರುತ್ತಾರೆ

* ಪ್ರಭಾ *
೨೧-೧-೪೯ರಿಂದ
ಅಮೋಘವಾದ ೨ನೇ ವಾರ
ದೇಖೋಜಿ
(ಹಿಂದಿ)
ಮುಮ್ತಾಜ್ ಶಾಂತಿ

ಸಮಾಜವಾದಿ ನಾಯಕರುಗಳ ದಸ್ತಗಿರಿಗೆ ಖಂಡನೆ

ಸಮಾಜವಾದಿ ಪಕ್ಷದ ಮುಖಂಡರುಗಳಾದ ಶ್ರೀಗಳು ನಾಗಭೂಷಣ ಮತ್ತು ಹೆಚ್. ರಾಮಸ್ವಾಮಿ ರವರುಗಳನ್ನು ಸರ್ಕಾರದವರು ದಸ್ತಗಿರಿ ಮಾಡಿರುವುದನ್ನು ಖಂಡಿಸಿ, ಅವರುಗಳು ಸಾರ್ವಜನಿಕ ಶಾಂತಿಗೆ ಭಂಗ ತರುವಂತಹ ಯಾವ ಕಾರ್ಯದಲ್ಲೂ ತೊಡಗಿರಲಿಲ್ಲವೆಂದೂ, ಈ ದಸ್ತಗಿರಿಯಿಂದ ಕಾರ್ಮಿಕರ ಸಂಘಟನೆಗೆ ಧಕ್ಕೆ ತಂದಂತಾಗಿದೆಯೆಂದೂ, ಆದುದರಿಂದ ಅವರುಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಕರ್ನಾಟಕ ಸಮಾಜವಾದಿ ಪಕ್ಷದ ಮೈಸೂರು ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಎಸ್. ರಾಮಮೂರ್ತಿಯವರು ಕೋರಿರುತ್ತಾರೆ

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ 3 ಪ್ರದರ್ಶನಗಳು
ತಾ|| 21-1-49 ರಿಂದ 2 ದಿನಗಳು
R K.O.ರವರ ಭಯಂಕರ ಅರಣ್ಯ ಚಿತ್ರ
ಕಿಂಗ್ ಕಾಂಗ್
(ಹೊಸ ಕಾಪಿ)
KING KONG
(New Print)
Morning show at 10-30
From 22-1-49 for 2 days
Pearl Buck's Sensational Novel,
CHINA SKY
(The Picture is to be seen by one and all)
Next Change:—
NIGHT & DAY
(Technicolour)

Edited, printed and published by A.R. Nagarajan at the Sadhvi Press, D Subbiah Road, Mysore

ಚರ್ಚಾ ಸ್ಪರ್ಧೆ

ರಾಜಧಾನಿಯ ವಿಠ್ಠಲರಾವ್ ... ನವರ ವಿದ್ಯಾರ್ಥಿನಿಲಯದ ಆಶ್ರ... ಇದೇ ೨೩ ನೇ ತಾ|| ಭಾನುವಾರ ... ಗಂಟೆಗೆ ಅಂತರ ವಿದ್ಯಾರ್ಥಿನಿಲ... ಕನ್ನಡ ಚರ್ಚಾಸ್ಪರ್ಧೆಯು ಆಕಾ... ಯ ಡೈರೆಕ್ಟರಾದ ಶ್ರೀ ಬಿ. ನಾರ... ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನ... ವುದು

ರಾಜಧಾನಿಯ ಶ್ರೀ ಸುತ್ತೂರು ... ರ್ಥಿ ನಿಲಯ ಸಂಘದ ಆಶ್ರಯದಲ್ಲಿ ... ತಿಂಗಳು ನಡೆಯಬೇಕಾಗಿದ್ದ ಅಂ... ದ್ಯಾರ್ಥಿ ನಿಲಯಗಳ ಚರ್ಚಾಸ್ಪ... ಇದೇ ೩೧ ನೇ ತಾ|| ಸಂಜೆ ಶ್ರೀ ... ದೇವೇಗೌಡರ ಅಧ್ಯಕ್ಷತೆಯಲ್ಲಿ ನ... ವುದು

ನಂಬರು, R.1-83-48.

ಮೈಸೂರು ಸಿಟಿ ರೇಷನಿಂಗ್ ...
ಮೈಸೂ...
13-1-...

ಬಟ್ಟೆ ಕೂಪನ್‌ಗಳ ಹಂ...

ಮೈಸೂರು ನಗರ ನಿವಾಸಿಗಳಿಗೆ ಈ ಸ... ತಿಳಿಯಪಡಿಸುವುದೇನೆಂದರೆ —

೧೮-೧-೧೯೪೯ ನೇ ತಾರೀಖು ... ಳವಾರದ ಲಾಗಾಯ್ತು ೨೭-೧-೧೯... ಗುರುವಾರದ ವರೆವಿಗೂ (ಈ ಎರಡ... ವೂ ಸೇರಿ) ಡಿಪೋ ಕೆಲಸಗಳು ನ... ಷ್ಟ ಪ್ರತಿ ದಿನವೂ ಬೆಳಗ್ಗೆ ೧೦-೩೦ ... ೧೧-೩೦ ರ ವರೆವಿಗೂ ಮತ್ತು ಸಾ... ಲ ೬ ರಿಂದ ೭ ರ ವರವಿಗೆ ರೇಷನ್ ... ದಾರರುಗಳಿಗೆ ಅವರವರ ರೇಷನ್ ಡಿ... ಳಲ್ಲಿ ಬಟ್ಟೆ ಕೂಪನ್‌ಗಳನ್ನು ಹಂಚ... ತ್ತಿ ಆಹಾರದ ರೇಷನ್ ಕಾರ್ಡುಗ... ಡಿಪೋಗಳಲ್ಲಿ ಹಾಜರ್ಮಾಡಿ ಬಟ್ಟೆ... ಗಳನ್ನು ಪಡೆಯಬಹುದು ತಲಾ ... ಗಡದಂತೆ ಲೆಖ್ಖ ಮಾಡಿ ಕೂಪನ್ ... ಲಾಗುವುದು. ರೇಷನ್ ಕಾರ್ಡುದಾರ... ವೇ ಖುದ್ದಾಗಿ ಬಂದು ಕೂಪನ್‌ಗ... ತೆಗೆದುಕೊಂಡು ಹೋಗುವುದು ಉ... ವೆಂದು ಸೂಚಿಸಲಾಗಿದೆ

(ರುಜು) **ಡಿ.ಜೆ. ಬಾಲರಾ...**
ರೇಷನಿಂಗ್ ಆಫೀಸರು, ಮೈಸೂ...

UNIVERSITY OF MYSORE

No.Ex-526/48-49 Office of the University of Mysore, Mysore, Dated 18-1-1949

NOTIFICATION

Question papers in Optional English, Optional Kannada, Optional Urdu, Optional Persian, Optional Hindi and Optional Sanskrit for the B.A Degree Examination of March 1949.

—.o.—

As a special case at the March 1949 Examinations for B.A. Degree Examination, there will be two sets of Question Papers in Optional English, Optional Kannada, Optional Urdu, Optional Persian, Optional Hindi and Optional Sanskrit

ONE SET: Those on the text-books prescribed for the March 1949 Examinations

SECOND SET: Those on the text-boks prescribed for the March 1948 Examinations.

The Second Set is for the benefit of candidates who failed at the October 1948 Examination, or those who having entered for the Examination of October 1948 did not take the Examination.

By Order,
I. SIDDALINGA DEVARU
Registrar

Sree Sitaraghava Press
Ramaswamy Circle,
Mysore
Announcement

We have pleasure to announce that we have ma... arrangements to take up printing work of all kinds inclu... of Bills, Posters, Ledgers, Handbills, Books and Pamphl... Invitations, various kinds of Forms, Statements, etc, at ... reasonable and competitive rates.

We hereby assure the public that prompt attention a... neat execution are our earnest aims.

May we solicit your patronage please.

Printing in Kannada, Telugu, Tamil, and English fonts executed neatly.

ಫೋ ನಂ 793 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೨೨-೧-೪೯ [ಸಂಚಿಕೆ ೧೬೩

ಅಖಂಡ ಕರ್ನಾಟಕದಲ್ಲಿ ಮಹಾರಾಜರ ಸ್ಥಾನ

ಪತ್ರಿಕೋದ್ಯೋಗಿ ಸಂಘದಲ್ಲಿ ಶ್ರೀ ನಿಜಲಿಂಗಪ್ಪನವರ ವಿವರಣೆ

ಮೈಸೂರು ೨೨

..ಲಬಾರತ ಕಾಂಗ್ರೆಸ್ ಕಾರ್‍ಯಕಾರೀ ..ಯ ಸದಸ್ಯರಾದ ಶ್ರೀ ಎಸ್ ನಿಜ ..ಪ್ಪ ಮತ್ತು ರಾಜ್ಯಾಂಗ ಸಭಾಧ್ಯಕ್ಷ ಶ್ರೀ ಟಿ ಸುಬ್ರಹ್ಮಣ್ಯಂರವರುಗ ..ಇದಿನ ಬೆಳಿಗ್ಗೆ ಪತ್ರಿಕೋದ್ಯೋಗಿ ..ದವರು ಆಹ್ವಾನಿಸಿ ಸತ್ಕರಿಸಿದರು. ..ನ್ಯಾಯಾಧೀಶರಾದ ಶ್ರೀ ಮೇದಪ್ಪ ..ವಯಮಾಡಿಸಿದ್ದರು

..ಘದ ಅಧ್ಯಕ್ಷರಾದ ಶ್ರೀ ಆರ್. ..ಾಲಕೃಷ್ಣರಾಯರು ಸ್ವಾಗತ ..ಯ

..ಜಲಿಂಗಪ್ಪನವರು ಭಾಷಣಮಾ.. ..ತಂತ್ರ ಭಾರತದಲ್ಲಿ ಪತ್ರಿಕೆಗಳ ಜವಾ.. ..ಯ ವಿಶೇಷ ಗುರುತರವಾದುದು ..ಹೊಸ ಸಮಾಜವನ್ನು ಕಟ್ಟಲು ಪತ್ರಿ.. ..ಿ ದುಡಿಯಬೇಕೆಂದೂ ಮತ್ತು ..ಪ್ಪ ಪಬ್ಬಾಗಿ ಪತ್ರಿಕೆಗಳು ಅಭಿವೃದ್ಧಿ ..ಬೇಕೆಂದೂ ತಿಳಿಸಿದರು

..ರ್ನಾಟಕ ಏಕೀಕರಣದ ವಿಷಯವಾ.. ..ತನಾಡಿ, ಈ ಪ್ರಶ್ನೆಯು ಬಹಳ ..ತನವಾದುದೆಂದೂ, ರಾಜಕೀಯ ಚ.. ..ಯ. ದೇಶದಲ್ಲಿ ಪ್ರಾರಂಭವಾಗುವ ..ಮುಂಚೆಯೇ ಇದು ಆರಂಭವಾಗಿ ..ದೂ ..ರಲ್ಲಿ ಮೈಸೂರಿನಲ್ಲಿ ಇದ.. ..ಸಾಹಿತ್ಯ ಪರಿಷತ್ತು ಜನನವಾಯಿ.. ..ತಿಳಿಸಿದರು ಈಗ ಹಂಚಿಹೋಗಿ ಕರ್ನಾಟಕದ ಭಾಗಗಳನ್ನು ಒಂದು.. ..ಡಿ, ಅಲ್ಲಿರುವ ಸಂಪತ್ತನ್ನು ..ಳ್ಳಿ ..ಗೊಳಿಸಬೇಕೆಂದೂ ಹೇಳಿದರು. ..ಲ್ಲಿ ..ಗಿಂತಲೂ ಕರ್ನಾಟಕದಲ್ಲಿ ..ಷ್ಟು ವಿಶೇಷವಾಗಿದೆಯೆಂದೂ ..ಾಂಡ ಬಂದರು ಪ್ರಪಂಚದಲ್ಲೇ ..ನೆಯ ದೊಡ್ಡ ಬಂದರೆಂದೂ, ಅದ.. ..ರ್ನಾಟಕದವರು ಅಭಿವೃದ್ಧಿಪಡಿಸ.. ..ದೂ ಹೇಳಿದರು ಕರ್ನಾಟಕಕ್ಕೆ ..ಿ ಎಂತಹ ಸೌಲಭ್ಯಗಳನ್ನು ತಿಳಿಸಿ ..ಪತಿ ಬಳಗಾಂ ಮತ್ತು ಕಾರವಾರ ..ಗಳ ಮಧ್ಯಭಾಗದಲ್ಲಿ ಭಾರತ ..ಿ ಇಲ್ಲದಂತಹ ಖನಿಜ ಸಂಪತ್ತು ಇದ.. ..ು ..ಮೆರಿಕದ ಪ್ರವೀಣರು ಅಭಿಪ್ರಾ.. ..ರುವ ವಿಷಯವನ್ನು ತಿಳಿಸಿದರು ..ೂರು ಮತ್ತು ಕರ್ನಾಟಕದ ಇತರ ..ಒಂದಾಗಿ ಸೇರುವುದರಿಂದ, ..ರ್ವಹಣೆಗೆ ಅನುಕೂಲವಾಗುವು.. ..ಹೇಳಿದರು

..ಿಕೆ ಯ ಮತ್ತು ಇತರ ಎಲ್ಲ ಪ್ರಶ್ನೆ ..ಮೈಸೂರು ಮಹಾರಾಜರ ಕರ್ನಾಟಕ ಪ್ರಾಂತ್ಯದ ಶಾಸನ ಒಡ್ಡ.. ..ಗಬೇಕು ಕರ್ನಾಟಕದ ಎಲ್ಲ ..ಗನ್ನು ಒಟ್ಟಾಗಿ ಸೇರಿಸಲು ಅವರು ..ರೋಗುವುದರಲ್ಲಿ ಸಂದೇಹವಿಲ್ಲ ..ಾಜರವರನ್ನು ಕರ್ನಾಟಕ ..ಲ್ಲಾಗಿ ಮಾಡಲು ಹೊರಗಿನ ..ಹೊಂಡಿದ್ದಾರೆ ಕರ್ನಾಟಕ ..ನೆಯಾಗುವುದರಿಂದ ಆನಕ್ಕೆ ..ಕೋಟಿ ರೂ ಉತ್ಪತ್ತಿ ..ಾಂ ಸಮಿತಿಯವರೂ ಸಮ ..ವ ತು ಕೇರಳ ಪ್ರಾಂತ್ಯಗಳ ..ು ಸಲಹೆ ಮಾಡಿ

ಮದುವೆ ಮುಂಜಿ ಅತಿಥಿಗಳ ಸಂಖ್ಯೆಗೆ ಪರಿಮಿತಿ

ಬೆಂಗಳೂರು ೨೨.

ಅಕ್ಕಿ, ರಾಗಿ ಮುಂತಾದ ಕೇರ್ಷ ಧಾನ್ಯಗಳಿಂದ ಇಡ್ಲಿ, ದೋಸೆ ಮುಂತಾದ ತಿಂಡಿ ಪದಾರ್ಥಗಳನ್ನು ಮಾಡಕೂಡದೆಂದೂ, ಮದುವೆ, ಮುಂಜಿ ಸಮಾರಂಭಗಳಲ್ಲಿ ೫೦ ಜನರಿಗಿಂತಲೂ ಹೆಚ್ಚಿಗೆ ಆಗಿಯೂ ಮತ್ತು ಧಾರ್ಮಿಕ ,ಸಮಾರಂಭಗಳಲ್ಲಿ ೨೫ ಕ್ಕಿಂತ ಹೆಚ್ಚಿಗೆ ಆಗಿಯೂ ಜನರನ್ನು ಊಟಕ್ಕೆ ಕರೆಯ ಕೂಡದೆಂದೂ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ನೇತಾಜಿ ಸ್ಮಾರಕ ಭವನ

ಕಲ್ಕತ್ತದಲ್ಲಿ ನೇತಾಜಿ ಸುಬಾಷ ಚಂದ್ರಬೋಸರು ಆರ್ದ ಕಟ್ಟಿ ..ದ್ದ ಮಹಾಜಾತಿ ಸದನದ ಕಟ್ಟಡವನ್ನು ಪೂರ್ತಿ ಮಾಡಿ, ಅದನ್ನು ನೇತಾಜಿಸ್ಮಾರಕವನ್ನಾಗಿ ಮಾಡಲು, ಪಶ್ಚಿಮ ಬಂಗಾಳ ಸರ್ಕಾರದವರು ನಿರ್ಧರಿಸಿದ್ದಾರೆ

ದ್ವಾರ__ಮೈಸೂರು ಮತ್ತು ಕರ್ನಾಟಕ ಕಾಂಗ್ರೆಸ್ ಸಮಿತಿಗಳೂ ಇದನ್ನು ಒಪ್ಪಿವೆ ಇದಕ್ಕೆ ಹೊರಗಿನವರಿಂದ ವಿರೋಧ ಬರುವುದಿಲ್ಲ ಶ್ರೀಮನ್ಮಹಾರಾಜರವರು ಸಾಂಕೇತಿಕ ದೊರೆಗಳಾಗುವುದರಿಂದ ಪ್ರಾಂತ್ಯಕ್ಕೆ ನಷ್ಟವಾಗುವುದಿಲ್ಲ ಇದರಿಂದ ಭಾರತದ ಐಕ್ಯತೆಗೂ ಧಕ್ಕೆ ಬರುವುದಿಲ್ಲ ಎಲ್ಲರೂ ಒಗ್ಗಟ್ಟಿನಿಂದ ಕರ್ನಾಟಕದ ಏಕೀಕರಣಕ್ಕೆ ದುಡಿಯಬೇಕು ಎಂದು ಅವರ ಹೇಳಿದರು

ಶ್ರೀ ಟಿ ಸುಬ್ರಹ್ಮಣ್ಯಂರವರು ಭಾಷಣ ಮಾಡಿ, ಸ್ವತಂತ್ರ ಭಾರತದಲ್ಲಿ ಪತ್ರಿಕೋದ್ಯಮಕ್ಕೆ ಹೆಚ್ಚು ಸ್ವಾತಂತ್ರ್ಯವನ್ನು ಕೋರ..ಲಾಗಿದೆಯೆಂದೂ, ಭಾರತದ ಭವಿಷ್ಯ ರಾಜ್ಯಾಂಗದಲ್ಲಿ ಪತ್ರಿಕೆಗಳ ಸ್ವಾತಂತ್ರ್ಯದ ..ಚಾರವನ್ನು .. ..ದ ಮಾತ್ರಕ್ಕೆ ಅದಕ್ಕೆ ಸ್ವತಂತ್ರವಿಲ್ಲವೆಂದು ಭಾವಿಸಕೂಡದೆಂದೂ, ಅಭಿಪ್ರಾಯ ಸ್ವಾತಂತ್ರ್ಯದಲ್ಲಿ ಇವು ಗಳಿಲ್ಲವು ಅಡಕವಾಗಿವೆಯೆಂದೂ ತಿಳಿಸಿ ..ರು ಪವಿತ್ರವಾದ ಭಾರತದ ಹೆಸರನ್ನು ಉಳಿಸಿ ನೂತನ ಸಮಾಜವನ್ನು ಕಟ್ಟಲು ಪತ್ರಿಕೆಗಳು ದುಡಿಯಬೇಕೆಂದೂ ಅವರು ಕೋರಿದರು

ಕರ್ನಾಟಕ ಏಕೀಕರಣವು ಅಗತ್ಯವೆಂದೂ, ಇದಕ್ಕೆ ಯಾವ ವಿರೋಧವೂ ಇಲ್ಲವೆಂದೂ ತಿಳಿಸಿದರು ಕೆಲವು ..ದ ಮಾತ್ರ ಮಹಾರಾಜರವರ ..ರಬೇಕಾಗಿ ..ಲ್ಲವೆಂದು ಅಭಿಪ್ರಾಯ ಪಡುತ್ತಿದ್ದಾರೆಂದೂ ಅವರ ಶಾಸನ ಒಪ್ಪಿದ ರಾಜರು ಇದರ ಬಾಧಕವಿಲ್ಲವೆಂದೂ ಅವರ ರಾಜರು ದುರ್ವರ್ತನ ಮಾಡಿದರೆ ..ವರನ್ನು ತೆಗೆದು ..ಕದ ..ರ ..ರ ..ಶ ದೂ ..ದ ..ರ

ಮಲಾನ್ ಸರ್ಕಾರದಲ್ಲಿ ಅವಿಶ್ವಾಸ

ಯುರೋಪ್ಯ ಜನಾಂಗಕ್ಕೆ ಸೇರಿದ ಇತರ ಪ್ರಜೆಗಳ ಪಕ್ಷದ ಸಂಬಂಧವಾಗಿ ಅಲ್ಲಿನ ಸರಕಾರವು ಅನುಸರಿಸುತ್ತಿರುವ ನೀತಿಯು ಬಹು ಅತೃಪ್ತಿಯುಂಟುಮಾಡಿದೆಯೆಂಬ ಕಾರಣದ ಮೇಲೆ ದಕ್ಷಿಣ ಆಫ್ರಿಕಾದ ಶಾಸನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಜನರಲ್ ಸ್ಮಟ್ಸ್‌ರವರು ಅವಿಶ್ವಾಸ ನಿರ್ಣಯವನ್ನು ಸೂಚಿಸಲಿರುವರು.

೬ ವರ್ಷದ ಬಾಲಕಿ ಮೇಲೆ ಮುದುಕನ ಅತ್ಯಾಚಾರ

ಮುದುಗಿರಿಯ ೬೦ ವರ್ಷದ ಕೃಷ್ಣಪ್ಪ ಎಂಬ ಮುದುಕನು ೬ ವರ್ಷದ ಬಾಲಕಿಯೊಬ್ಬಳಿಗೆ ಸಿಹಿ ತಿಂಡಿಗಾಗಿ ಆರುಕಾಸು ಕೊಟ್ಟು ಅತ್ಯಾಚಾರ ನಡಸಿದನೆಂದು ವರದಿಯಾಗಿದೆ

ಭಾವ ಚಿತ್ರಗಳ ಅನಾವರಣ

ನೆನ್ನೆ ಸಂಜೆ ನಜರಬಾದಿನ ದುರ್ಗಾದೇವಿ ಗುಡಿಯಲ್ಲಿ ಮಹಾತ್ಮ ಗಾಂಧಿ, ಶ್ರೀ ಮನ್ ಮಹಾರಾಜರು ಮತ್ತು ಡಾ|| ರಾ||.. ..ರು ..ಚೆಟ್ಟಿರ ಬಾವಚಿತ್ರಗಳನ್ನು ಕಾಂಗ್ರೆಸ್ ಮುಖಂಡರಾದ ಶ್ರೀ ಎಸ್ ನಿಜಲಿಂಗಪ್ಪ, ಟಿ. ಸುಬ್ರಹ್ಮಣ್ಯ ಮತ್ತು ಎಸ್ ಚನ್ನಯ್ಯ ಇವರುಗಳು ಅನಾವರಣ ಮಾಡಿದರು ಶ್ರೀ ಸುಬ್ರಹ್ಮಣ್ಯರು ತಮ್ಮ ಭಾಷಣದಲ್ಲಿ ಶ್ರೀಮನ್ ಮಹಾರಾಜರ ದೂರದರ್ಶಿತ್ವವನ್ನು ಕೊಂಡಾಡಿ, ಅವರು ಪ್ರಜಾ ಪ್ರಭುತ್ವಕ್ಕೆ ಅವಕಾಶ ಮಾಡಿ ಕೊಟ್ಟುದನ್ನು ಪ್ರಶಂಸಿಸಿದರು. ಪ್ರಜೆಗಳು ತಮಗೆ ದೊರೆತ ಅಧಿಕಾರವನ್ನು ಸದುಪಯೋಗ ಪಡಿಸಿಕೊಂಡು ನ್ಯಾಯ, ಧರ್ಮ ಮತ್ತು ಸತ್ಯದಿಂದ ನಡೆದುಕೊಂಡು ಬರಬೇಕೆಂದು ಪ್ರಾರ್ಥಿಸಿದರು.

ನಗರ ಕಾಂಗ್ರೆಸ್ ಸಮಿತಿ

ಈ ದಿನ ಪ್ರಾತಃಕಾಲ ನಗರ ಕಾಂಗ್ರೆಸ್ ಸಮಿತಿ ಸಭೆ ಸೇರಿತ್ತು ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಬರುವ ೨೬ ನೇ ತಾರೀಖು ಮತ್ತು ೩೦ ನೇ ತಾರೀಖುಗಳಲ್ಲಿ ಕ್ರಮವಾಗಿ ಸ್ವಾತಂತ್ರ ದಿನ ಮತ್ತು ಮಹಾತ್ಮರ ಪುಣ್ಯ ದಿನಗಳನ್ನು ಅಖಿಲ ಭಾರತ ಕಾಂಗ್ರೆಸ್ಸಿನ ಸೂಚನೆಯಂತೆ ಆಚರಿಸಬೇಕೆಂದು ತೀರ್ಮಾನವಾಯಿತು ಕಾಂಗ್ರೆಸ್ಸಿನ ಕೆಲಸ ಕಾರ್ಯಗಳಿಗಾಗಿ ಚಂದಾ ವಸೂಲು ಮಾಡಲು ಶ್ರೀ ಕೃಷ್ಣ..ರವರನ್ನು ನೇಮಿಸಲಾಯಿತು

ಹರಿಕಥೆ

ರಾಜಧಾನಿಯ ..ಂತೇಪೇಟೆಯ ..ರ ನ ಕುಂಚಿಟಿಗರ ಶ್ರೀರಾಮಮಂದಿರದಲ್ಲಿ .. ಸಂಜೆ .. ಗಂಟೆಗೆ .. ಶ್ರೀನಿವಾಸರಾ.. ..ಂದ ಪಕ್ಷಪಾತ.. ..

ಕದನ ನಿಲ್ಲಿಸಲು ಕಮ್ಯೂನಿಸ್ಟರ ನಿರಾಕರಣೆ

ಶಾಂತಿ ಸಂಧಾನಕ್ಕಾಗಿ ಕಮ್ಯೂನಿಸ್ಟರು ಕೂಡಲೇ ಕದನ ನಿಲ್ಲಿಸಬೇಕೆಂಬ ಚೀಣಾ ಸರ್ಕಾರದ ಮನವಿಯನ್ನು ಕಮ್ಯೂನಿಸ್ಟರು ತಿರಸ್ಕರಿಸಿದ್ದಾರೆಂದು ಕಮ್ಯೂನಿಸ್ಟರ ರೇಡಿಯೋ ತಿಳಿಸಿದೆ ವಿವೇಚನಾ ರಹಿತವಾದ ಈ ನಿರ್ಧಾರದಿಂದ ಶಾಂತಿ ಸಂಧಾನ ಮಾತು ಕತೆಗಳಿಗೆ ಅವಕಾಶವಿಲ್ಲದಂತಾಗಿದೆಯೆಂದೂ ಕಮ್ಯೂನಿಸ್ಟರು ಹೇಳಿದ್ದಾರೆ

ಪೋರ್ಚುಗಲ್ಲಿನಿಂದ ಗೋವಾಕ್ಕೆ ಸೈನ್ಯ

ಭಾರತದಲ್ಲಿ ಏಷ್ಯಾ ರಾಷ್ಟ್ರಗಳ ಸಮ್ಮೇಳನವು ನಡೆಯುತ್ತಿರುವುದನ್ನು ಕಂಡು ಬೆದರಿ ಗೋವಾಕ್ಕೆ ೮ ..ಾವಿರ ಸೈನಿಕರನ್ನು ಪೋರ್ಚುಗಲ್ ಕಳುಹಿಸಿದೆಯೆಂದು ಗೋವಾ ಕಾಂಗ್ರೆಸ್ ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ಲಂಚದ ಆಪಾದನೆಗೆ ರೈಲ್ವೆ ಅಧಿಕಾರಿಯ ದಸ್ತಗಿರಿ

ಮದರಾಸಿನ ಎಸ್ ಐ ಆರ್ ರೈಲ್ವೆಯ ಡೆಪ್ಯೂಟಿ ಚೀಫ್ ಇಂಜಿನಿಯರಾದ ಮಿ|| ಸ್ಟ್ರಾಂಗ್‌ರವರನ್ನು ಲಂಚದ ಆಪಾದನೆಯ ಮೇಲೆ ದಸ್ತಗಿರಿ ಮಾಡಲಾಗಿದೆ

ಕೋಮುವಾರ ಸಂಸ್ಥೆಗಳಿಗೆ ಅಧಿಕಾರಿಗಳು ರಾಜೀನಾಮೆ ಕೊಡಬೇಕು

ಬೊಂಬಾಯಿ ಪ್ರಾಂತ್ಯದಲ್ಲಿರುವ ಕೋಮುವಾರು ಸಂಸ್ಥೆಗಳಿಗೆ ಸದಸ್ಯರಾಗಿರುವ ಎಲ್ಲ ಸರ್ಕಾರಿ ಅಧಿಕಾರಿಗಳು ಆ ಸಂಸ್ಥೆಗಳಿಗೆ ರಾಜೀನಾಮೆ ಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಕಮ್ಯೂನಿಸ್ಟರ ಸರ್ಕಾರಕ್ಕೆ ಬ್ರಿಟನ್ನಿನ ಅಂಗೀಕಾರ

ಚೀಣಾದಲ್ಲಿ ಸ್ಥಾಪಿಸಲ್ಪಡುವ ಕಮ್ಯೂನಿಸ್ಟರ ಸರ್ಕಾರಕ್ಕೆ ಬ್ರಿಟಿಷ ಸರ್ಕಾರವು ಅಂಗೀಕಾರ ಕೊಡುವುದೆಂದು ಹಾಂಕಾಂಗಿನ ಪತ್ರಿಕೆಯೊಂದು ವರದಿ ಮಾಡಿದೆ.

ಸಂಗೀತ ಕಛೇರಿ

ರಾಜಧಾನಿಯ ಬಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಔಷಧಾಲಯದ ಬಳಿ ಈ ರಾತ್ರಿ ೭ ಗಂಟೆಗೆ ಶ್ರೀ ..ಗರಾಯಿ ..ಸ್ತ್ರಿ ರಾಮರಾಯರು ಮತ್ತು ಅವರ ಸಂಗಡಿಗರು ಮಕ್ಕಳಿಂದ ಸಂಗೀತ ಕಛೇರಿ ನಡೆಯುವುದು

ನೇತಾಜಿ ಜಯಂತಿ

ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಾಳೆ .. ..ಗಂಟೆಗೆ ನೇತಾಜಿ ಜಯಂತಿಯನ್ನು ಪ್ರವೇಶನದಲ್ಲಿ ಆಚರಿಸಲಾಗುವುದು ..ಮೀಡಿಯಟ್ ಕಾಲೇಜು ಮತ್ತು ..ಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕರು .. ಭಾಷಣ ಮಾಡುವರು

ವಿದ್ಯಾರ್ಥಿಗಳ ಮುಷ್ಕರ

..ಂಗಳೂರಿನ .. ..ಗಳ .. ..ದಿದ್ದಾರೆ

ಅಧಿಕಾರಿಗಳು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ದುಡಿಯಬೇಕು

ಸತ್ಕಾರಕೂಟದಲ್ಲಿ ಶ್ರೀ ನಿಜಲಿಂಗಪ್ಪನವರ ಹೇಳಿಕೆ

ಮೈಸೂರು [illegible]

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ [illegible] ಶ್ರೀ [illegible] ನಿಜಲಿಂಗಪ್ಪನವರ ಗೌರವಾರ್ಥ [illegible] ನಗರ ಕಾಂಗ್ರೆಸ್ [illegible] ಸತ್ಕಾರ ಕೂಟವನ್ನು [illegible] ಶ್ರೀ [illegible] ಇತರ [illegible]

[illegible] ನಂತರ, ಶ್ರೀ [illegible] ಜಿಲ್ಲೆಯಲ್ಲಿ ಸಂಭವಿಸಿದ [illegible] ನಿವಾರಣೆಗಾಗಿ ಶ್ರೀ ನಿಜಲಿಂಗಪ್ಪನವರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ [illegible] ತಿಳಿಸಿದರು. ಶ್ರೀ ನಿಜಲಿಂಗಪ್ಪನವರಿಂದ ದೇಶಕ್ಕೆ ಇನ್ನೂ ಹೆಚ್ಚಿನ ಸೇವೆಯು ಸಲ್ಲಬೇಕೆಂದು ಹಾರೈಸಿದರು.

ಶ್ರೀ ನಿಜಲಿಂಗಪ್ಪನವರು ಉತ್ತರವಿತ್ತು [illegible] ಶ್ರೀ ಚನ್ನಯ್ಯನವರು [illegible] ಸ್ವಾತಂತ್ರ್ಯ ಹೋರಾಟದಲ್ಲಿ [illegible] ಶ್ರೀ ಚನ್ನಯ್ಯನವರ [illegible] ತ್ತೆಂದು ತಿಳಿಸಿದರು.

ದೇಶಕ್ಕೆ ಸ್ವಾತಂತ್ರ್ಯ [illegible] ದೇಶದಲ್ಲಿ [illegible] ಜನರು ಸಹಕರಿಸಬೇಕು. [illegible] ಸರ್ಕಾರವು ಎಲ್ಲವನ್ನು [illegible] ಸರ್ಕಾರಕ್ಕೆ [illegible] ನೂರಾರು [illegible] ನಿವಾರಣೆ [illegible] ಭಾರತ [illegible]

ವರ್ಷದಲ್ಲಿ ನಿವಾರಣೆ ಮಾಡಿರುತ್ತದೆ. ಮೈಸೂರಿನಲ್ಲಿ ಶ್ರೀಮನ್ಮಹಾರಾಜರವರು ಜನಾಭಿಪ್ರಾಯವನ್ನು ಅರಿತು, ದೂರದರ್ಶಿತ್ವದಿಂದ ಪ್ರಜಾ ಸರ್ಕಾರಕ್ಕೆ ದಾರಿ ಮಾಡಿರುತ್ತಾರೆ. ಹೊರಗಿನ ಜನರು ಈಗ ಅವರನ್ನು ಕರ್ನಾಟಕ ಸಿಂಹಾಸನಾಧೀಶರನ್ನಾಗಿ ಮಾಡಲು ಒಪ್ಪಿದ್ದಾರೆ. ಮೊನ್ನೆ ಹರಿಹರದಲ್ಲಿ ನಡೆದ ಕೆ. ಪಿ. ಸಿ. ಸಿ. ಸಭೆಯಲ್ಲೂ ಈ ಬಗ್ಗೆ ಸರ್ವಾನುಮತದಿಂದ ನಿರ್ಣಯ [illegible] ಶ್ರೀ ನಿಜಲಿಂಗಪ್ಪನವರು [illegible]

[illegible] ಭಾರತವು ಈಗ ಹೊರಗಿನವ [illegible] ಅವರು [illegible] ತಡೆಗಟ್ಟಿ, ಕೈತರೂ, ಜನರೂ ಮತ್ತು ಅಧಿಕಾರಿಗಳು ಒಟ್ಟಾಗಿ ಸಹಕರಿಸಿ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಹೇಳಿದರು. ಈ ವಿಚಾರದಲ್ಲಿ ಅಧಿಕಾರಿಗಳ [illegible] ಹೆಚ್ಚಿನ ಜವಾಬ್ದಾರಿ ಇದೆಯೆಂದೂ, ಭಾರತವು ಅತಿ ಕಷ್ಟ ಪರಿಸ್ಥಿತಿಯಲ್ಲಿ ಇರುವುದನ್ನು ಅಧಿಕಾರಿಗಳು ತಿಳಿದು ಪ್ರಾಮಾಣಿಕತನದಿಂದಲೂ ಜವಾಬ್ದಾರಿಯಿಂದಲೂ ದುಡಿಯಬೇಕೆಂದೂ ಅವರು ವಿನಂತಿ ಮಾಡಿದರು.

ಭಾರತದ ಪ್ರತಿಷ್ಠೆಯು ದಿನ ದಿನಕ್ಕೆ ಹೆಚ್ಚುತ್ತಿದೆಯೆಂದೂ, ಎಲ್ಲ ರಾಷ್ಟ್ರಗಳೂ ಮಾರ್ಗ ದರ್ಶನಕ್ಕಾಗಿ ಹಿಂದೂಸ್ಥಾನದ ಕಡೆಗೇ ನೋಡುತ್ತಿವೆಯೆಂದೂ, ಆದುದರಿಂದ ಎಲ್ಲರೂ ದಕ್ಷತೆಯಿಂದಲೂ, ಪ್ರಾಮಾಣಿಕತನದಿಂದಲೂ ದೇಶದ ಸೇವೆ ಮಾಡಬೇಕೆಂದೂ ತಿಳಿಸಿದರು.

ದೇಶದಲ್ಲಿ ಉದ್ಭವಿಸುವ ಆರ್. ಎಸ್. ಎಸ್. ಕಮ್ಯೂನಿಸ್ಟ್ ಮತ್ತು ಇತರ ವಿನಾಶಕ ಚಟುವಟಿಕೆಗಳನ್ನು ತಡೆಗಟ್ಟಬೇಕಾದರೆ ಕಾಂಗ್ರೆಸ್ಸನ್ನು ಬಲಪಡಿಸಬೇಕು ಮತ್ತು ಬೆಳೆಸಬೇಕು. ರಾಜಕೀಯ ಮತ್ತು ಇತರ ಎಲ್ಲ ಬಾಬಿನಲ್ಲೂ ಉಂಟಾಗಿರುವ ಜಾತಿಯ ಭೇದವನ್ನು ನಿರ್ಮೂಲ ಮಾಡಬೇಕಾದರೆ ಕಾಂಗ್ರೆಸ್ ಸಂಸ್ಥೆಯೊಂದರಿಂದ ಮಾತ್ರ ಸಾಧ್ಯ. ಕಾಂಗ್ರೆಸ್ಸಿನಲ್ಲಿ [illegible] ಹೊಸ [illegible] ಕಾಂಗ್ರೆಸ್ [illegible] ಕಾಂಗ್ರೆಸ್ಸನ್ನು [illegible] ಎಲ್ಲರೂ ಸಹಕರಿಸಿ ದೇಶದ [illegible] ಮಾಡಬೇಕು- ಎಂದು ಅವರು [illegible]

ಈ ಸಂದರ್ಭದಲ್ಲಿ ಬಣ್ಣದ ಸಾಮಾನುಗಳ ವ್ಯಾಪಾರಿಗಳಾದ ವೆಂಕಟಸುಬ್ಬಶೆಟ್ಟಿಯವರು ಸುಂದರವಾದ ವಾಕಿಂಗ್ ಸ್ಟಿಕ್ಕನ್ನು ಶ್ರೀ ನಿಜಲಿಂಗಪ್ಪನವರಿಗೆ ಅರ್ಪಿಸಿದರು.

Edited, printed and published by A.R. Nagarajan at the Sadhvi Press, D. Subbiah Road, Mysore.

ಚಿಯಾಂಗರು ಅಧಿಕಾರವನ್ನು ಬಿಟ್ಟು ತೆರಳಿದರು

ಚೀಣದ ಅಧ್ಯಕ್ಷರಾದ ಚಿಯಾಂಗ್ ಕೈಷೇಕ್‌ರವರು ತಮ್ಮ ಅಧಿಕಾರವನ್ನು ಬಿಟ್ಟು ನಾನ್‌ಕಿಂಗಿನಿಂದ ತಮ್ಮ ಸ್ವಂತ ಊರಾದ ಫೆಂಗುವಾಕ್ಕೆ ಮೊನ್ನೆ ಹೊರಟು ಹೋದರೆಂದು ವರದಿಯಾಗಿದೆ. ಉಪಾಧ್ಯಕ್ಷರಾದ ಲಿಟ್ಸುಂಗ್ ಜೆನ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದಾರೆ.

ಇಂಗ್ಲೆಂಡಿಗೆ ಅಮೇರಿಕದ ಸಹಾಯ

ಅಮೇರಿಕದ ಆರ್ಥಿಕ ಮತ್ತು ರಫ್ತಿನ ಬ್ಯಾಂಕಿನವರು ಇಂಗ್ಲೆಂಡಿಗೆ ೩೫೦ ಲಕ್ಷ ಡಾಲರುಗಳ ಸಾಲವನ್ನು ಕೊಟ್ಟಿರುತ್ತಾರೆ. ಮತ್ತು ೩೫೦ ಲಕ್ಷ [illegible] ಅವರಿಗಾಗಿ ಮೀಸಲಾಗಿಟ್ಟಿದ್ದಾರೆ.

ನೈಜಾಂ ಸೈನ್ಯದಲ್ಲಿ ಖೋತಾ

ಹೈದರಾಬಾದಿನ ಸೈನ್ಯದ ಸಂಖ್ಯೆಯಲ್ಲಿ ಶೇಡ ೪೦ ರಷ್ಟು ಕಡಿಮೆ ಮಾಡಲು ಅಲ್ಲಿನ ಮಿಲಿಟರಿ ಸರ್ಕಾರವು ನಿರ್ಧರಿಸಿದೆಯೆಂದೂ, ಇದರಿಂದ ನೈಜಾಂ ಸೈನ್ಯದಲ್ಲಿ ೧೦ ಸಾವಿರ ಮಂದಿ ಮಾತ್ರ ಇರುವರೆಂದೂ ಹೇಳಲಾಗಿದೆ.

೩೪ ಸಾವಿರ ಉಪಾಧ್ಯಾಯರ ರಾಜೀನಾಮೆ

ಸಂಯುಕ್ತ ಪ್ರಾಂತ್ಯದ ೩೪ ಸಾವಿರ ಜನ ಜಿಲ್ಲಾ ಬೋರ್ಡ್ ಶಾಲಾ ಉಪಾಧ್ಯಾಯರುಗಳು ತಮ್ಮ ಸಂಬಳ ಸಾರಿಗೆ ಬಗ್ಗೆ ಮುಷ್ಕರ ಹೂಡಿದ್ದು ಇಗರಾಜೀನಾಮೆ ಇತ್ತಿದ್ದಾರೆ.

UNIVERSITY OF MYSORE
No. Ex. 3. 747/48-49.
Office of the University of Mysore, Mysore.
Dated 15th January 1949.

NOTIFICATION

SUBJECT:—Marks Cards of the Intermediate Examination of October-November 1949.

It is hereby notified for the information of candidates who had appeared for the Intermediate Examination of October-November 1948, that the Intermediate Marks Cards have been forwarded to the Heads of Colleges from which the candidates appeared for the Examination for distribution.

Candidates may apply for the marks cards to the Heads of the colleges.

By Order,
T. Siddalinga Devaru
Registrar.

ಸಿ. ಚಿಯಾಂಗರು ಅಮೇರಿಕಾದಿಂದ ವಾಪ[illegible]

ಚೀಣಾ ಜನಾಂಗಕ್ಕೆ ತಮ್ಮ [illegible] ಯ ಸಂದೇಶವೊಂದನ್ನು ಕೊಡು[illegible] ಮಾ॥ ಚಿಯಾಂಗ್ ಕೈಷೇಕರು ಚೀ[illegible] ನಿದವಾದ ಪರಿಸ್ಥಿತಿಯು ಕಮ್ಯೂನಿಸ್[illegible] ಮನವರಿಕೆಯಾಗಿ ಅವರು ಯುದ್ಧ[illegible] ಸಂಧಾನ ಮಾರ್ಗ ಹಿಡಿದುದಾದರೆ [illegible] ಕೃತಕೃತ್ಯವಾಗುವುದಾಗಿ ತಿಳಿಸಿದ್ದಾ[illegible] ರ ಪತ್ನಿ ಅಮೇರಿಕಾದಲ್ಲಿ ನಡೆಸಿದ ಸಂ[illegible] ವಿಫಲವಾದುದರಿಂದ ಸ್ವದೇಶಕ್ಕೆ [illegible] ರುಗಲಿದ್ದಾರೆ.

ರಾಜಕಮಲ [illegible]
ಟಾಕೀಸ್
21—1—49 ರಿಂದ
ಅಮೋಘವಾದ 6ನೇ ವಾ[illegible]
ಪ್ರತಿ ದಿನ 2 ಆಟಗಳು
ಭಕ್ತ ಕುಂಬಾ[illegible]
(ಕನ್ನಡ)
Morning Shows for 4 da[illegible]
From 21—1—49
The Pirates o[illegible] Monterey
(In Technicolor)
With:—MARIA MONTEZ [illegible]
ROD CAMERON

ಶ್ರೀ ಗಾಯತ್ರೀ ಟಾಕೀ[illegible]
ಪ್ರತಿ ದಿನ ೩ ಪ್ರದರ್ಶನಗಳು
ತಾ॥ ೨೨-೧-೪೯ರಿಂದ ೨ ದಿನಗ[illegible]
Warners Technicolour
Drama
Night And Da[illegible]
ನೈಟ್ ಅಂಡ್ ಡೇ
(ವರ್ಣರಂಜಿತ ಚಿತ್ರ)
WITH:—Gary Grant a[illegible] Alexis Smith.
Morning Shows at 10-[illegible]
From 22-1-49 for 2 da[illegible]
Pearl Buck's Sensation[illegible] Novel,
CHINA SKY
(The Picture is to be Se[illegible] by one and all)
NEXT CHANGE:—
Fort Apache

ಸಿಮೆಂಟ್ ಕೂಡಲೇ ದೊರಕುತ್ತದೆ
—: ವಿವರಗಳಿಗೆ :—
ದಿ ಇಂಟರ್‌ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್
೧೩೩೮. ಪ್ರಿನ್ಸ್ ಆಫ್ ವೇಲ್ಸ್ ರಸ್ತೆ, ಮೈಸೂರು,
ಇವರಲ್ಲಿ ವಿಚಾರಿಸಿ

ಪೋ॥ ನಂ. 792 WEEKLY EDITION ಒಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೨೩-೧-೪೯ [ಸಂಚಿಕೆ ೨೫

ಮಂಡಿ ಮೊಹಲ್ಲೆಯಲ್ಲಿ ಖಾಸಗೀ ಹೈಸ್ಕೂಲು

ಮೈಸೂರು. ೨೨.

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿ ಖಾಸಗೀ ಹೈಸ್ಕೂಲೊಂದನ್ನು ಸ್ಥಾಪಿಸಲು ಪ್ರಮುಖರ ಸಭೆಯೊಂದು ಕಳೆದ ಗುರುವಾರ ಶ್ರೀ॥ ನ ಭದ್ರಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು

ವಿದ್ಯಾ ವರ್ಧಕ ಸಂಘವೆಂಬ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು. ಇದಕ್ಕಾಗಿ ಸಮಿತಿಯೊಂದನ್ನು ರಚಿಸಿ ಅದಕ್ಕೆ ಶ್ರೀಗಳಾದ ಎಸ್ ಚನ್ನಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಎಂ ಶಂಕರಯ್ಯ ಚಿನ್ನಸ್ವಾಮಿಶೆಟ್ಟಿ ಮತ್ತು ಪಜರುಲ್ಲಾರಹಿಮಾನರವರನ್ನು ಉಪಾಧ್ಯಕ್ಷರುಗಳನ್ನಾಗಿಯೂ, ನ. ಭದ್ರಯ್ಯ ಮತ್ತು ಕೆ ಪುಟ್ಟಸ್ವಾಮಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಮತ್ತು ಸಾಹುಕಾರ್ ತಮ್ಮಣ್ಣಗೌಡರನ್ನು ಖಜಾಂಚಿಗಳನ್ನಾಗಿಯೂ ಚುನಾಯಿಸಲಾಯಿತು

ಗಾಂಧೀ ನಿಧಿಗೆ ಕೃಷ್ಣರಾಜೇಂದ್ರ ಗಿರಣಿಯವರ ಕಾಣಿಕೆ

ಕೃಷ್ಣರಾಜೇಂದ್ರ ಗಿರಣಿಯ ನೌಕರರೂ ಮತ್ತು ಕೆಲಸಗಾರರೂ ಮಹಾತ್ಮ ಗಾಂಧಿ ಸ್ಮಾರಕನಿಧಿಗೆ ರೂ ೬೨೦೩-೧೦-೩ ಕಾಣಿಕೆಯನ್ನು ಸಲ್ಲಿಸಿರುತ್ತಾರೆ

ಸುತ್ತೂರು ವಿದ್ಯಾರ್ಥಿ ನಿಲಯ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ನಿನ್ನೆ ದಿನ ಬಾಪೂಜಿಯವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಆ ಭಾ॥ ಕಾ॥ ಕಾರ್ಯಕಾರೀ ಸಮಿತಿಯ ಸದಸ್ಯರೂ ಕೆ. ಪಿ ಸಿ ಸಿ ಅಧ್ಯಕ್ಷರೂ ಆದ ಶ್ರೀ॥ ಎಸ್ ನಿಜಲಿಂಗಪ್ಪನವರು ನೆರವೇರಿಸಿದರು ಬಾಪೂಜಿಯವರ ಭಾವಚಿತ್ರವನ್ನು ಟಿ.ನರಸೀಪುರ ತಾಲ್ಲೂಕು ಕಿರಗಸೂರು ಗ್ರಾಮದ ಶ್ರೀ ಕೆ ಪುಟ್ಟವೀರಪ್ಪನವರು ಮೇಲ್ಕಂಡ ಸಂಘಕ್ಕೆ ದಯಪಾಲಿಸಿದ್ದರು

ತ್ಯಾಗರಾಜ ಸ್ವಾಮಿಗಳ ಆರಾಧನೆ

ನಜರಬಾದು ಮೊಹಲ್ಲಾ ಇಟ್ಟಿಗೆ ಗೂಡಿನಲ್ಲಿರುವ ಕುಪ್ಪಮ್ಮನವರ ಶ್ರೀರಾಮ ಮಂದಿರದಲ್ಲಿ ತ್ಯಾಗರಾಜಸ್ವಾಮಿಗಳ ಆರಾಧನೆಯ ಪ್ರಯುಕ್ತ ಈ ದಿನ ರಾತ್ರಿ ೭-೩೦ ಗಂಟೆಯಿಂದ ಉತ್ಸವವು ಜರುಗುತ್ತದೆ ಶ್ರೀಗಳಾದ ಎಂ ವೆಂಕಟ ವಿಜೂರಪ್ಪ ಮತ್ತು ಎಸ್. ರಾಜಪ್ಪನವರ ನಾಗಸ್ವರವು ಶ್ರೀ ಗಾಯನ ಎಂ. ಕೆ ದೊರೆಸ್ವಾಮಿ ಮತ್ತು ಎಂ ಪಿ ವೆಂಕಟಪ್ಪನವರ ಡೋಲಿನೊಡನೆ ನಡೆಯುವುದು

ಸಿಮೆಂಟು ವ್ಯಾಪಾರಿಗಳ ರಹದಾರಿ ರದ್ದು

ನಂಜನಗೂಡು ಮತ್ತು ಚಾಮರಾಜನಗರಗಳ ಸಿಮೆಂಟು ವ್ಯಾಪಾರಿಗಳ ರಹದಾರಿಯನ್ನು ರದ್ದುಮಾಡಲಾಗಿದೆ. ಅವರ ಲೆಕ್ಕದಲ್ಲಿ ನ್ಯೂನತೆಗಳು ಕಂಡುಬಂದುದರಿಂದ ಸಿಮೆಂಟು ಹಂಚಿಕೆಯೂ ಸಹ ಸಮರ್ಪಕವಾಗಿಲ್ಲವೆಂದು ಹೇಳಲಾಗಿದೆ

ಬರೋಡ ಬೊಂಬಾಯಿಗೆ ಸೇರಬೇಕು

ಬೊಂಬಾಯಿ ಪ್ರಾಂತ್ಯದಲ್ಲಿ ಬರೋಡಾ ಸಂಸ್ಥಾನವು ಐಕ್ಯವಾಗುವಂತೆ ಅಲ್ಲಿನ ಮಹಾರಾಜರಿಗೆ ಸಲಹೆ ಮಾಡುವುದಕ್ಕಾಗಿ ತಾವು ಅಲ್ಲಿಗೆ ಹೋಗಿರುವುದಾಗಿ ಸರ್ದಾರ ವಲ್ಲಭಾಯಿ ಪಟೇಲರು ನಿನ್ನೆ ಬರೋಡಾದ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಮುಂದಿನ ಯುದ್ಧದಲ್ಲಿ ಆಟಂ ಬಾಂಬನ್ನು ಮೀರಿಸುವ ಅಸ್ತ್ರಗಳು

ವಿಶ್ವ ಸಂಸ್ಥೆಯ ಅಧ್ಯಕ್ಷ ಡಾ॥ ಇವಾಟರವರು ವಿಶ್ವ ಸಂಸ್ಥೆಯ ಸಂಘವನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಪ್ರಪಂಚದ ಮೂರನೇ ಮಹಾಯುದ್ಧವಾದಲ್ಲಿ ಜನತೆಯ ನಾಗರೀಕತೆಯನ್ನೇ ನಿರ್ನಾಮ ಮಾಡುವಂತಹ ಹಾನಿಕರವಾದ ಶಸ್ತ್ರಾಸ್ತ್ರಗಳು ಆಟಂ ಬಾಂಬಿನೊಡನೆ ಉಪಯೋಗಿಸಲ್ಪಡುವುವೆಂದು ತಿಳಿಸಿದ್ದಾರೆ.

ಕರಾಚಿಯಲ್ಲಿ ಮನೆಗಳ ಪಡಿತರ

ಪಾಕೀಸ್ಥಾನದ ರಾಜಧಾನಿಯಾದ ಕರಾಚಿಯಲ್ಲಿ ಮನೆಗಳ ರೇಷನಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಇದರ ಪ್ರಕಾರ ಅಲ್ಲಿನ ಪುರಜನರನ್ನು ಬಂಡವಾಳಗಾರರು, ಮಧ್ಯಮ ವರ್ಗದವರು ಮತ್ತು ಬಡವರು ಎಂದು ೩ ವಿಭಾಗಗಳನ್ನಾಗಿ ಮಾಡಲಾಗಿದೆ ನಗರದಲ್ಲಿ ಬಹುಮುಖ್ಯ ಕಾರ್ಯಗಳಲ್ಲಿ ಭಾಗವಹಿಸುವವರಿಗೆ-ಮಾತ್ರ ವಸತಿ ಸೌಕರ್ಯವನ್ನು ಒದಗಿಸಲಾಗುವುದೆಂದು ಕರಾಚಿಯ ಅಧಿಕಾರಿಗಳು ತಿಳಿಸಿರುತ್ತಾರೆ

ಸ್ವಾಮಿಜಿಯವರ ಆಮರಣಾಂತ ಉಪವಾಸ

ಮದರಾಸು ಸರ್ಕಾರದವರು ಹಿಂದೂ ಧರ್ಮದ ಧರ್ಮಾದಾಯಗಳಿಗೆ ಸಂಬಂಧಪಟ್ಟ ಮಸೂದೆಯನ್ನು ಜಾರಿಗೆ ತರುವುದಾದರೆ ತಾವು ಜಲಪಾನವನ್ನೂ ಸಹ ಮಾಡದೆ ತಮ್ಮ ಜೀವಾತ್ಮವು ಸ್ಥೂಲ ಶರೀರವನ್ನು ಬಿಟ್ಟು ಹೋಗುವವರೆಗೆ ಅಲ್ಲಿನ ಸೆಕ್ರೆಟೇರಿಯಟ್ ಮುಂದೆ ಉಪವಾಸವನ್ನು ಕೈಗೊಳ್ಳುವುದಾಗಿ ಮದರಾಸಿನ ಅಖಿಲ ಭಾರತ ಸನಾತನ ಧರ್ಮಾಚರಣಸಂಘದ ಸ್ಥಾಪಕರಾದ ಸ್ವಾಮಿ ಸತ್ಯಾನಂದ ಸರಸ್ವತಿಯವರು ತಿಳಿಸಿರುತ್ತಾರೆ

ಬಾಪೂಜಿ ಪುಣ್ಯ ದಿನಾಚರಣೆ

ಸಂಸ್ಥಾನವಾದ್ಯಂತವೂ ಈ ತಿಂಗಳು ೩೦ ನೇ ತಾರೀಕನ್ನು ರಾಷ್ಟ್ರಪಿತ ಮಹಾತ್ಮಾ ಗಾಂಧಿಜಿಯವರ ಪುಣ್ಯ ದಿನವನ್ನಾಗಿ ಆಚರಿಸಬೇಕೆಂದೂ ಆ ದಿನ ಬೆಳಿಗ್ಗೆ ೯ ಗಂಟೆಗೆ ಧ್ವಜಾರೋಹಣ ಮತ್ತು ಪ್ರಾರ್ಥನೆ ೧೦ರಿಂದ ಸಂಜೆ ೫ ರ ವರೆಗೆ ಗಾಂಧಿ ಸ್ಮಾರಕ ನಿಧಿಯ ಶೇಖರಣೆ ಮತ್ತು ಸಂಜೆ ೬-೩೦ ಗಂಟೆಗೆ ಬಹಿರಂಗ ಸಭೆಗಳು ಈ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಮೈಸೂರು ಕಾಂಗ್ರೆಸ್ಸಿನ ಸಹ ಕಾರ್ಯದರ್ಶಿ ಶ್ರೀ ಕೆ ಆರ್ ಮಾಧವ ರಾವ್ ಮನವಿ ಮಾಡಿರುತ್ತಾರೆ

ಹಿಂದೂ ಧರ್ಮದ ಮಹತ್ವ

ದ್ವಾರಕಾ ಜಗದ್ಗುರುಗಳ ಭಾಷಣ

ಸ್ವಂ ಸು. ಫ್ರೋ॥] ಬೆಂಗಳೂರು ೨೩

ಬರೋಡಾ ಸಂಸ್ಥಾನದ ರಾಜಗುರುಗಳೂ ದ್ವಾರಕಾ ಶ್ರೀ ಮಠದ ಅಧ್ಯಕ್ಷರೂ ಆದ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಆಗಮತ್ರಯ ಸಮ್ಮೇಳನವು ನೆನ್ನೆ ಸಜ್ಜನರಾಯರ ಛತ್ರದಲ್ಲಿ ಜರುಗಿತು ಸುಮಾರು ನಾನೂರು ಜನ ಪ್ರತಿನಿಧಿಗಳು ಸಂಸ್ಥಾನದಿಂದಲೂ ಹೊರಗಡೆಯಿಂದಲೂ ಬಂದಿದ್ದರು

ಪೌರಸಭಾಧ್ಯಕ್ಷರಾದ ಶ್ರೀ ಆರ್ ಸುಬ್ಬಣ್ಣನವರು ಸ್ವಾಮಿಗಳವರಿಗೆ ವಿನ್ನವತ್ತಳೆಯನ್ನು ಸಮರ್ಪಿಸಿದರು

ಆಗಮತ್ರಯ ಸಂಘದ ಅಧ್ಯಕ್ಷರಾದ ವೇ॥ಬ್ರ॥ಶ್ರೀ॥ಮಲ್ಲಿಕಾರ್ಜುನ ಶಾಸ್ತ್ರಿಗಳು ಸಂಸ್ಥೆಯ ಪರವಾಗಿ ವಿನ್ನವತ್ತಳೆಯನ್ನು ಶ್ರೀ ಶ್ರೀಯವರಿಗೆ ಅರ್ಪಿಸಿದರು

ದಿವಾನ್ ಸರ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರ್‌ರವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ, ಈ ರೀತಿ ಹೇಳಿದರು --ಇತರ ರಾಷ್ಟ್ರಗಳಲ್ಲಿ ಪ್ರಭುತ್ವದ ಧರ್ಮ ಎಂಬುದಾಗಿ ರೂಢಿಯಲ್ಲಿರುತ್ತದೆ ಅಲ್ಲಿನ ರಾಜರುಗಳು ಆ ಧರ್ಮದ ರಕ್ಷಕರೆಂದೂ ಭಾವಿಸಲಾಗಿದೆ. ಆದರೆ ನಮ್ಮ ದೇಶದಲ್ಲಿ ಯಾವುದೇ ಒಂದು ನಿರ್ದಿಷ್ಟವಾದ ಮತದೊಡನೆ ಆಡಳಿತವನ್ನು ಐಕ್ಯಗೊಳಿಸುವ ಪದ್ಧತಿಯು ಯಾವಾಗಲೂ ಜಾರಿಗೆ ಬಂದಿರುವುದಿಲ್ಲ ಅಲ್ಲದೆ ಧರ್ಮವನ್ನು ಪ್ರಾಪಂಚಿಕ ಅಧಿಕಾರ ವರ್ಗದವರಿಗೆ ಅಧೀನ ಪಡಿಸುವ ಪದ್ಧತಿಯೂ ಇರುವುದಿಲ್ಲ ಹಿಂದೂ ಮತವು ಬಹಳ ವಿಶಾಲವಾದುದು ಅದರ ಸಂದೇಶವು ಜಗತ್ತಿಗೆಲ್ಲಾ ಅನ್ವಯಿಸುವುದು ನಮ್ಮ ದೇವಸ್ಥಾನಗಳೂ ಮಠಗಳೂ ಮಠಾಧಿಪತಿಗಳೂ ಅದನ್ನು ಸಹಸ್ರಾರು ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದಿರುತ್ತಾರೆ

ಸ್ವಾತಂತ್ರ್ಯವು ಬಂದಮೇಲೆ ಪಾರಮಾರ್ಥಿಕ ವಿಷಯಗಳ ಕಡೆ ಗಮನವು ಕಡಿಮೆಯಾಗಿ ಐಹಿಕ ವಿಚಾರಗಳಲ್ಲಿಯೇ ಆಸಕ್ತಿಯು ಹೆಚ್ಚುತ್ತಿರುವಂತೆ ಕಂಡುಬರುತ್ತಿದೆ ನಮ್ಮ ಧಾರ್ಮಿಕ ನಾಯಕರುಗಳು ಈ ಸ್ಥಿತಿಯನ್ನು ತಡೆಗಟ್ಟಿ ಸನಾತನ ಧರ್ಮದ ಪ್ರಭಾವವು ಜನರಮೇಲೆ ಪರಿಪೂರ್ಣವಾಗಿರುವಂತೆ ಮಾಡುವುದು ಆವಶ್ಯಕ

ಹಿಂದೂ ಆಗಮಗಳಲ್ಲಿ ಅನೇಕ ಉಪಸಂಗಡಗಳನೆಯೂ ... [illegible] ... [illegible]

ರೊಟ್ಟಿ ಬೆಲೆಯ ನಿಗದಿ

ಬೇಕರಿ ಮಾಲೀಕರುಗಳ ಸಭೆಯಲ್ಲಿ ನಿರ್ಣಯ

ಮೈಸೂರು ೨೨

ರಾಜಧಾನಿಯ ಬೇಕರಿ ಸಂಘದ ಸಭೆಯು ನಿನ್ನೆ ದಿನ ನಗರದ ರೇಷನಿಂಗ್ ಆಫೀಸರ್ ಶ್ರೀ॥ ಬಾಲರಾಜರವರ ಅಧ್ಯಕ್ಷತೆಯಲ್ಲಿ ರೇಷನಿಂಗ್ ಆಫೀಸಿನಲ್ಲಿ ನಡೆಯಿತು ನಗರದ ಎಲ್ಲಾ ಬೇಕರಿಗಳ ಮಾಲೀಕರುಗಳೂ ಹಾಜರಿದ್ದು ತಮ್ಮ ಕುಂದು ಕೊರತೆಗಳನ್ನು ವ್ಯಕ್ತಪಡಿಸಿದರು ನಗರದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪ್ರತಿಯೊಂದು ಕುಟುಂಬಕ್ಕೂ ದಿನವೊಂದಕ್ಕೆ ಒಂದು ಪೌಂಡಿಗೆ ಮೀರದಂತೆ ಬ್ರೆಡ್ಡನ್ನು ಎಲ್ಲಾ ಬೇಕರಿಗಳಲ್ಲೂ ಪೌಂಡಿಗೆ ೭ ಆಣೆಯಂತೆ ಮಾರಬೇಕೆಂದು ತೀರ್ಮಾನಿಸಲಾಯಿತು. ಪೌಂಡಿಗೆ ೭ ಆಣೆಗಿಂತ ಹೆಚ್ಚಿಗೆ ಮಾರಿದಲ್ಲಿ ಅದನ್ನು ಮಹಾಜನರು ಸಿಟಿ ರೇಷನಿಂಗ್ ಆಫೀಸರವರಲ್ಲಿ ತಿಳಿಸಬೇಕೆಂದೂ ಕೋರುವ ಠರಾವು ಮಾಡಲಾಯಿತು

ಕಮ್ಯೂನಿಸ್ಟರ ಷರತ್ತುಗಳಿಗೆ ಅಂಗೀಕಾರ

ಶಾಂತಿ ಸಂಧಾನಕ್ಕಾಗಿ ಕಮ್ಯೂನಿಸ್ಟರಿಂದ ಮಂಡಿಸಲಾಗಿರುವ ಸಲಹೆಗಳನ್ನು ಒಪ್ಪಿಕೊಂಡಿರುವುದಾಗಿ ಚೀಣಾದ ಹೊಸ ಅಧ್ಯಕ್ಷರಾದ ಲಿಸುಂಗ್ ಜೆನ್‌ರವರು ತಿಳಿಸಿದ್ದಾರೆ

ಪ್ಯಾಲಸ್ಟೀನ್ ಸಮಸ್ಯೆ ಬಗೆಹರಿಯಿತು

ಅರಬ್ ಮತ್ತು ಯಹೂದ್ಯ ಪ್ರತಿನಿಧಿಗಳು ನೆನ್ನೆ ರಾತ್ರಿ ರ್ಹೋಡ್ಸ್ ನಗರದಲ್ಲಿ ಸಭೆ ಸೇರಿ ತಾತ್ಕಾಲಿಕವಾದ ಶಾಂತಿಸಂಧಾನಕ್ಕೆ ಒಪ್ಪಿಕೊಂಡರೆಂದು ತಿಳಿದುಬಂದಿದೆ. ಈ ಬಗ್ಗೆ ಕರಡು ಒಪ್ಪಂದವೊಂದನ್ನು ತಯಾರಿಸಲು ಮುಖ್ಯವಾದ ಸಭೆಯೊಂದು ಸದ್ಯದಲ್ಲಿಯೇ ಸೇರುವುದೆಂದೂ ಹೇಳಲಾಗಿದೆ

ದ ಹಿಂದೂ ಸಮಾಜವು ಧಾರ್ಮಿಕ ಜೀವನವನ್ನು ಅವಲಂಬಿಸುತ್ತಿದೆ ಸಂಗಡಿಗರಿಂದ ಯಾವ ನಷ್ಟವೂ ಉಂಟಾಗುವುದಿಲ್ಲ ಪ್ರತ್ಯೇಕತೆಯ ಮನೋಭಾವನೆಂದಲೇ ಸಕಲ ಅನರ್ಥಗಳೂ ಸಂಭವಿಸುತ್ತವೆ ಈ ಭಿನ್ನಭಾವಗಳನ್ನು ತೊಡೆದು ಹಾಕಿ ಗುರುಪೀಠಗಳವರು ಪ್ರಯತ್ನಪಡಬೇಕು -- ಮೈಸೂರಿನ ರಾಜವಂಶದವರು ಸನಾತನ ಧರ್ಮದ ಸಂರಕ್ಷಣೆಗಾಗಿ ಸಕಲ ಸಹಾಯಗಳನ್ನೂ ನೀಡುತ್ತಿದ್ದಾರೆ ಮೈಸೂರಿನ ಪ್ರಭುಗಳೂ ಮತ್ತು ಪ್ರಜೆಗಳೂ ಸ್ವಾಮಿಗಳವರಿಗೆ ಹೃತ್ಪೂರ್ವಕ ಸುಸ್ವಾಗತವನ್ನು ಬಯಸುತ್ತಾರೆ

ತರುವಾಯ ಜಗದ್ಗುರುಗಳು ಭಾಷಣ ಮಾಡಿ ಸನಾತನ ಧರ್ಮದ ಮೂಲ ತತ್ವಗಳನ್ನು ವಿವರಿಸಿದರು. ಸಮಸ್ತ ಜೀವರಾಶಿಗಳಲ್ಲಿ ಮಾನವ ಜನ್ಮ ಶ್ರೇಷ್ಠವಾದುದೆಂದೂ ಇದಕ್ಕೆ ಪರಮಾತ್ಮನು ಮನುಷ್ಯನಿಗೆ ಕರುಣಿಸಿರುವ ಜ್ಞಾನವೇ ಮುಖ್ಯ ಕಾರಣವೆಂದೂ ಇದನ್ನು ಸಮ್ಯಗ್ ರೀತಿಯಲ್ಲಿ ಉಪಯೋಗಿಸಿಕೊಂಡರೆ ಜಗತ್ತಿನ ಅನೇಕ ... [illegible] ... ವೆಂದು ಅಪ್ಪಣೆ ಕೊಡಿಸಿದರು.

ಸಮ್ಮೇಳನವು ... [illegible] ... ಯುತ್ತಿದೆ ಸಮ್ಮೇಳನಕ್ಕಾಗಿ ... [illegible] ... ದವರು ... [illegible] ... ಜಾಸ್ತಾ ... [illegible]

ವಾರ ಭವಿಷ್ಯ

ತಾ॥೨೩-೧-೪೯ರಿಂದ ೩೦-೧-೪೯ರ ವರೆಗೆ

ಮೇಷ— ದೇಹಾರೋಗ್ಯ ಉತ್ತಮವಾಗಿದೆ. ಬರಬೇಕಾದ ಹಣವೆಲ್ಲವೂ ವಸೂಲಾಗುವುದು. ಪ್ರವಾಸದಿಂದ ಮಂಗಳ ಕಾರ್ಯಗಳು ನಿಶ್ಚಿತವಾಗುವುವು. ವಾರಾಂತ್ಯದಲ್ಲಿ ಕೊಂಚ ನಷ್ಟ ಸಂಭವಿಸುವುದು. ತಾ॥ ೨೪, ೨೫ ಧನಲಾಭ, ಅಶಾಂತಿ.

ವೃಷಭ— ಆರೋಗ್ಯ ಸಾಧಾರಣವಾಗಿದೆ. ವೆಚ್ಚಕ್ಕೆ ತಕ್ಕ ಆದಾಯವಿರುವುದು ಕೈಗೊಂಡ ಕಾರ್ಯಗಳಲ್ಲಿ ಮಿತ್ರರಿಂದ ಸಹಾಯವೊದಗುವುದು. ಮನೆಯಲ್ಲಿ ಶುಭಕಾರ್ಯಗಳು ಜರುಗುವುವು. ತಾ॥೨೫, ೨೭ ಮಿತ್ರ ದರ್ಶನ, ಸುಖ ಭೋಜನ.

ಮಿಥುನ— ಆರ್ಥಿಕ ಮುಗ್ಗಟ್ಟು ಸಂಪೂರ್ಣವಾಗಿ ಬಗೆಹರಿಯುವುದು ಕೈಗೊಂಡ ಕಾರ್ಯಗಳು ಅಧಿಕ ಪ್ರಯತ್ನದಿಂದ ಸಿದ್ಧಿಸುವುವು [illegible] ಅಪೂರ್ವ [illegible] ಆರೋಗ್ಯ ಚೆನ್ನಾಗಿದೆ ತಾ॥ [illegible] ಪ್ರವಾಸ, ಧನಲಾಭ

ಕಟಕ [illegible] ವಿದ್ಯಾರ್ಥಿ ವರ್ಗಕ್ಕೆ ಈ ವಾರ [illegible] ತಾ॥ ೨೪ ೨೭ [illegible] ದರ್ಶನ, ದ್ರವ್ಯಲಾಭ.

ಸಿಂಹ— ಆರ್ಥಿಕ ಸ್ಥಿತಿಯು ಬಗೆಹರಿಯದ ಸಮಸ್ಯೆಯಾಗುವುದು. ಕೈಗೊಂಡ ಕಾರ್ಯಗಳಲ್ಲಿ ಮಿತ್ರರಿಂದಲೇ ವಿಘ್ನವುಂಟಾಗುವುದು ಪ್ರವಾಸದಿಂದ ಸಿಪ ಆರೋಗ್ಯಕ್ಕೆ ಧಕ್ಕೆಯುಂಟಾಗುವುದು ತಾ॥ ೨೬, ೨೭ ಅರ್ಥಹಾನಿ, ಜನನಿಂದೆ.

ಕನ್ಯಾ— ಆದಾಯಕ್ಕಿಂತಲೂ ಖರ್ಚು ಅಧಿಕವಾಗುವುದು. ಅನೇಕ ಅವಮಾನಕರ ಘಟನೆಗಳು ಸಂಭವಿಸುವುವು. ಕೈಗೊಂಡ ಕಾರ್ಯಗಳು ಅರ್ಧಕ್ಕೇ ನಿಲ್ಲುವುವು. ಆರೋಗ್ಯ ಸಾಧಾರಣವಾಗಿದೆ ತಾ॥ ೨೬, ೨೯ ಅಪಘಾತದ ಘೋರ ಭಯ.

ತುಲಾ— ಕೋರ್ಟು ಕಚೇರಿ ವ್ಯವಹಾರಗಳಲ್ಲಿ ಅವಮಾನಿತರಾಗುವಿರಿ ಲಾಟರಿ ಸಟ್ಟಾಗಳಿಂದ ವಿಪರೀತ ನಷ್ಟಸಂಭವಿಸುವುದು ವಾರಾಂತ್ಯದಲ್ಲಿ ಮಿತ್ರರಿಂದ ಕೊಂಚ ಸಹಾಯವೊದಗುವುದು. ತಾ॥ ೨೭, ೨೯ ಅನಾರೋಗ್ಯ, ಸ್ತ್ರೀ ಶಾಂತಿ.

ವೃಶ್ಚಿಕ— ಮಾನಸಿಕ ಚಿಂತೆಗಳು ದೂರವಾಗುವುವು. ಯುಕ್ತಿಯಿಂದ ಕಾರ್ಯಗಳು ಸಿದ್ಧಿಸುವುವು ವಾಹನಗಳಿಂದಾಗಿ [illegible] ಸಂಭವಿಸುವುದು. ಅನೇಕ ವಿಘ್ನ [illegible] ತಾ॥ ೨೭, ೨೮ ಶುಭವಾರ್ತೆ, ಸುಖ ಭೋಜನ.

ಹುಯಿಲಾಳು ಗ್ರಾಮದ ಅಭಿವೃದ್ಧಿಯಾಗಬೇಕು

ಮೈಸೂರು ತಾಲ್ಲೂಕು ಇಲವಾಲದ ಹೋಬಳಿ ಹುಯಿಲಾಳು ಗ್ರಾಮದಲ್ಲಿ ಒಂದು ಗ್ರಾಮ ಪಂಚಾಯಿತಿ ಭವನವನ್ನು ಕಟ್ಟಿಸಲು ಸರ್ಕಾರದವರನ್ನು ೨೦೦೦ರೂ. ಗ್ರಾಂಟು ಕೇಳಲಾಗಿತ್ತು. ಅಲ್ಲದೆ ರಸ್ತೆ ರಿಪೇರಿ ವಗೈರೆಗಳನ್ನು ಮಾಡಿಸಿಕೊಡಬೇಕೆಂದೂ, ಆ ಊರಿಗೆ ಒಂದು ಜಿಲ್ಲಾ ಬೋರ್ಡು ಆಸ್ಪತ್ರೆಯನ್ನು ಕಟ್ಟಿಸಿ ಕೊಡಬೇಕೆಂದೂ ಮತ್ತು ಊರಿನ ಅಭಿವೃದ್ಧಿಗಾಗಿ ಎಲ್ಲ ಸಹಾಯಗಳನ್ನೂ ಮಾಡಬೇಕೆಂದೂ ಸಹ ಪ್ರಾರ್ಥಿಸಿಕೊಳ್ಳಲಾಗಿತ್ತು. ಆದರೆ ಇದುವರೆಗೂ ಯಾವ ವಿಧವಾದ ಸಹಾಯವಾಗಿರುವುದಿಲ್ಲ ಆದ್ದರಿಂದ ಸಂಬಂಧಪಟ್ಟವರು ಕೂಡಲೇ ಉಪಯುಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹುಯಿಲಾಳು ಗ್ರಾಮದ [illegible] ಪ್ರಾರ್ಥಿಸಿದ್ದಾರೆ.

ಧನು— ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಕ್ಲೇಶಗಳು ಅಧಿಕವಾಗಿರುವುವು [illegible] ಕಾರ್ಯಗಳು ಅರ್ಧಕ್ಕೇ ನಿಲ್ಲುವುವು ತಾ॥ ೨೫, ೨೮ ಅರ್ಥ [illegible] ಅಪಘಾತದ ಘೋರ ಭಯ.

ಮಕರ— ಲಾಟರಿ ಸಟ್ಟಾಗಳಿಂದ ವಿಪರೀತ ಹಾನಿಯುಂಟಾಗುವುದು. ನೌಕರಿ ವ್ಯವಹಾರಗಳಲ್ಲಿ ಮೇಲಧಿಕಾರಿಗಳ ತಿರಸ್ಕಾರಕ್ಕೊಳಗಾಗುವಿರಿ. ಮನೆಯಲ್ಲಿ ಸಂಶಯ ವಾತಾವರಣವುಂಟಾಗುವುದು. ತಾ॥ ೨೭, ೨೯ ಅವಮಾನ, ದುಂದು ವೆಚ್ಚ.

ಕುಂಭ— ವಿದ್ಯಾರ್ಥಿ ಮತ್ತು ಲೇಖಕ ವ್ಯಕ್ತಿಗಳಿಗೆ ಈ ವಾರ ಅತ್ಯಂತ ಶುಭದಾಯಕವಾಗಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನೆರವೇರುವುವು. ಅನೇಕ ಸಾಧುಸಂತರ ದರ್ಶನ ಲಾಭವಾಗುವುದು. ಆರೋಗ್ಯ ಚೆನ್ನಾಗಿದೆ ತಾ॥ ೨೩, ೨೫ ಶುಭವಾರ್ತೆ, ದ್ರವ್ಯಲಾಭ.

ಮೀನ— ಆರೋಗ್ಯ ಧನಾದಾಯಗಳೆರಡೂ ಉತ್ತಮವಾಗಿವೆ ಮಾನಸಿಕ ಚಿಂತೆಗಳೆಲ್ಲಾ ಬಗೆಹರಿಯುವುವು ಪ್ರವಾಸದಿಂದ ಅಪೂರ್ವ ಲಾಭವುಂಟಾಗುವುದು ಕೈಗೊಂಡ ಕಾರ್ಯಗಳಲ್ಲಿ ಮಿತ್ರರ ನೆರವು ದೊರೆಯುವುದು. ತಾ॥ ೨೪, ೨೮ ಇಷ್ಟಸಿದ್ಧಿ, ಕೊಂಚ ನಷ್ಟ

Edited, printed and published by A R. Nagarajan at the Sadhvi Press, D. Subbaiah Road, Mysore.

ದ್ವಾರಕಾ ಪೀಠದ ಜಗದ್ಗುರುಗಳ ಮೆರವಣಿಗೆ

ಬೆಂಗಳೂರು ೨೨

ಬರೋಡಾ ಸಂಸ್ಥಾನದ ರಾಜಗುರುಗಳಾದ ಶ್ರೀ ದ್ವಾರಕಾ ಶಾರದಾ ಪೀಠಾಧೀಶ್ವರ ಶ್ರೀ ಶಂಕರಾಚಾರ್ಯ ಶ್ರೀಮದಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರು ನಿನ್ನೆ ಬೆಳಗ್ಗೆ ಮಲ್ಲೇಶ್ವರದ ಕಾಡು ಮಲ್ಲೇಶ್ವರ ಸ್ವಾಮಿ ದೇವಾಲಯದಿಂದ ಸಮಸ್ತ ಮರ್ಯಾದೆಗಳೊಡನೆ ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಮೈಸೂರು ಬ್ಯಾಂಕ್ ಚೌಕದ ಬಳಿ ಇರುವ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ನಿರ್ಮಿತವಾಗಿದ್ದ ಚಪ್ಪರಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀಗಳವರಿಗೆ ಅಭೂತಪೂರ್ವ ಸ್ವಾಗತವನ್ನು ನೀಡಲಾಯಿತು ಮುಜರಾಯಿ ಸಚಿವರಾದ ಶ್ರೀ॥ ಸಾಹುಕಾರ ಸುಬ್ಬರಾಮಚೆಟ್ಟಿ, ಶ್ರೀಗಳು ವೇದವ್ಯಾಸಾಚಾರ್ಯ, ಕೃಷ್ಣರಂಗಸ್ವಾಮಿ, [illegible] ಸಬ್ಬಣ್ಣ ಮುಂತಾದ ಗಣ್ಯ ಮಹನೀಯರುಗಳು ಫಲಪುಷ್ಪಗಳನ್ನು ಅರ್ಪಿಸಿದರು ಅನಂತರ ಶ್ರೀಗಳವರು ಶ್ರೀ ಚಾಮರಾಜೇಂದ್ರ ವೇದ ಮಹಾಪಾಠಶಾಲೆಗೆ ಮೆರವಣಿಗೆಯಲ್ಲಿ ದಯಮಾಡಿಸಿದರು. ದಾರಿಯುದ್ದಕ್ಕೂ ಸಹಸ್ರಾರು ಜನರು ಸೇರಿದ್ದು ಶ್ರೀ ಸ್ವಾಮಿಗಳವರ ದರ್ಶನ ಲಾಭ ಪಡೆದರು.

ಯೂರೋಪಿಗೆ ಟ್ರೂಮನ್ನರ ಭೇಟಿ

ಬರುವ ವಸಂತ ಋತುವಿನಲ್ಲಿ ಅಮೆರಿಕದ ಅಧ್ಯಕ್ಷ ಹ್ಯಾರಿ ಟ್ರೂಮನ್ನರು ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಗಳಿಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಗಳನ್ನು ಪರಿಶೀಲಿಸುವರೆಂದು ತಿಳಿದು ಬಂದಿದೆ. ವಿಶ್ವಶಾಂತಿ ಸ್ಥಾಪನೆಗಾಗಿ ಟ್ರೂಮನ್ನರು ಈ ಪ್ರವಾಸವನ್ನು ಕೈಗೊಳ್ಳಲಿರುವರೆಂದೂ, ಜರ್ಮನಿಯ ಯಾವುದೋ ಒಂದು ಪ್ರದೇಶದಲ್ಲಿ ಅವರು ಸ್ಟಾಲಿನರವರನ್ನು ಭೇಟಿ ಮಾಡುವರೆಂದೂ ಲಂಡನ್ನಿನ ರಾಜಕೀಯ ವೃತ್ತದಲ್ಲಿ ಹೇಳಲಾಗುತ್ತಿದೆ.

ತ್ಯಾಗರಾಜ ಜಯಂತಿ

ನಂಜನಗೂಡು ರಿಟೈರ್ಡ್ ಮಾಸ್ಟರ್ ಶ್ರೀ॥ ರಂಗಸ್ವಾಮಿ ಅಯ್ಯಂಗಾರರವರು ಕಳೆದ ಬುಧವಾರ ತ್ಯಾಗರಾಜ ಜಯಂತಿಯನ್ನು ತಮ್ಮ ಗೃಹದಲ್ಲಿ [illegible] ಸಿದರು. ಶ್ರೀಮತಿ ಸೀತಮ್ಮ [illegible] ಯವರಿಂದ ಗಾಯನ ಕಛೇರಿ ನಡೆ[illegible]

ರಾಜಕಮಲ
ಟಾಕೀಸ್

21—1—49 ರಿಂದ

ಅನೋಘವಾದ 6ನೇ ವಾ[ರ]

ಪ್ರತಿ ದಿನ 2 ಆಟಗಳು

ಭಕ್ತ
ಕುಂಬಾ
(ಕನ್ನಡ)

Morning Shows for 4 [days]
From 21—1—49
The Pirates of Monterey
(In Technicolor)
With:-MARIA MONTEZ, ROD CAMERON

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ 3 ಪ್ರದರ್ಶನಗಳು
ತಾ॥ ೨೩-೧-೪೯ರಿಂದ ೩ ದಿನಗಳು
Warners Technicolor Drama
Night And Day
ನೈಟ್ ಅಂಡ್ ಡೇ
(ವರ್ಣರಂಜಿತ ಚಿತ್ರ)
WITH:-Cary Grant and Alexis Smith.
NEXT CHANGE :-
Fort Apache

Sree Sitaraghava Press
Ramaswamy Circle,
Mysore

Announcement.

We have pleasure to announce that we have arrangements to take up printing work of all kinds including Bills, Posters, Ledgers, Handbills, Books and Pamphlets, Invitations, various kinds of Forms, Statements, etc, at reasonable and competitive rates.

We hereby assure the public that prompt attention and neat execution are our earnest aims.

May we solicit your patronage please?

Printing in Kannada, Telugu, Tamil, and English were executed neatly.

ಪ್ರಭಾ
22 1 49ರಿಂದ
ಪ್ರತಿದಿನ 4 ಆಟಗಳು
- ದೇವಕೋಟಿ -
(ಹಿಂದಿ)
• ಮಮ್ತಾಜ್ ಶಾಂತಿ •
[illegible] ಪ್ರದರ್ಶಿಸಲಾಗುವುದು

ಫೋನ್ ನಂ. 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೨೪-೧-೪೯ [ಸಂಚಿಕೆ ೧೬೪

ಡವೇಜರ್ ಮಹಾರಾಣಿಯವರ ಸಹಾಯ

ಮೈಸೂರು ೨೪

ರಾಜಧಾನಿಯ ಲಕ್ಷ್ಮೀಪುರಂ ಶಾಂತಿನಿಲಯದಲ್ಲಿ ಶ್ರೀ ಮುರಗಪ್ಪಮೋದಿಯವರಿಂದ ಚಿಕಿತ್ಸೆ ಪಡೆಯುತ್ತಿರುವ ಸುಮಾರು ... ಜನಗಳಿಗೆ ಊಟೋಪಚಾರಗಳನ್ನು ಒದಗಿಸಲು ಡವೇಜರ್ ಮಹಾರಾಣಿಯವರ ... ಸಲಕರಣೆಗಳನ್ನು ಉದಾರವಾಗಿ ಒದಗಿಸಿಕೊಟ್ಟಿದ್ದಾರೆ.

... ಸಲಹಾಸಮಿತಿ ಸದಸ್ಯತ್ವದ ಬಗ್ಗೆ ಸಲಹೆ

ಸರ್ಕಾರವು ಆಹಾರ ಸಲಹಾ ಸಮಿತಿಗೆ ... ನಾಮಕರಣ ಮಾಡುವಾಗ ದೀರ್ಘಕಾಲ ... ಸೇವೆ ಮಾಡಿ ಬಡವರ, ಕಡಿಮೆ ವೇತನ ... ಕರವ ತನ್ನ ಬಡ ರೈತರುಗಳ ... ಇರುವ, ನಿಸ್ವಾರ್ಥತೆಯಿಂದ ಪ್ರಜಾಸೇವೆ ಮಾಡಲು ಉತ್ಸಾಹದಿಂದ ... ತೆಗೆದುಕೊಳ್ಳಬೇಕೆಂದು ... ರೇಷನ್‌ಕಾರ್ಡು ಹೋಲ್ಡರ್ ... ಕಾರ್ಯದರ್ಶಿ ಶ್ರೀ ಎಂ ಸಿ ... ನವರು ಪ್ರಾರ್ಥಿಸಿಕೊಂಡಿದ್ದಾರೆ.

... ವಸ್ತ್ರಾನಕ್ಕೆ ದೀಪದ ಸಹಾಯ

... ನಗರದ ಸುಪ್ರಸಿದ್ಧ ಬ್ಯಾಂಕರ್ ... ಶ್ರೀ ಸ್ವಂ ಭಾಸ್ಕರ ಶೆಟ್ಟಿಯವರು ... ಸಂಸ್ಕೃತ ಪಾಠಶಾಲೆ ಆವರಣದಲ್ಲಿರುವ ಶ್ರೀ ವಿದ್ಯಾಭಿನವ ... ಸ್ವಾಮಿಗಳವರ ದೇವಾಲಯಕ್ಕೆ ... ಲೈಟೊಂದನ್ನು ಧರ್ಮಾರ್ಥವಾಗಿ ಹಾಕಿಸಿಕೊಟ್ಟಿರುವರು. ಇದನ್ನು ಕೃತಜ್ಞತೆಯಿಂದ ಸ್ವೀಕರಿಸುವುದಾಗಿ ಸದ್ಗುರು ಸೇವಾ ಸಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಪ್ರತಿಭಟನಾ ಸಭೆ

ಕಲ್ಕತ್ತಾದಲ್ಲಿ ಕಳೆದ ವಾರ ವಿದ್ಯಾರ್ಥಿಗಳ ಮೇಲೆ ಪೋಲೀಸರು ಗುಂಡು ಹಾರಿಸಿದನ್ನು ಖಂಡಿಸಲು ನಾಳೆ ದಿನ ಸಂಜೆ ... ಮೈದಾನದಲ್ಲಿ ವಿದ್ಯಾರ್ಥಿ ಸಂಘ ... ವಿದ್ಯಾರ್ಥಿಗಳ ಮೆರವಣಿಗೆ ಏರ್ಪಟ್ಟಿವೆ. ಅನಂತರ ಒಂದು ಸಭೆ ... ನಡೆಯುತ್ತದೆ.

ಸೋಮನಾಥದೇವಾಲಯದ ಜೀರ್ಣೋದ್ಧಾರ

... ಸಂಸ್ಥಾನದ ವೀರವಾಲ್ ... ಪ್ರದೇಶದಲ್ಲಿರುವ ಸುಪ್ರಸಿದ್ಧ ಸೋಮನಾಥ ದೇವಾಲಯವನ್ನು ಜೀರ್ಣೋದ್ಧಾರ ಮಾಡಲು ಹಣ ಸಂಗ್ರಹ ... ಏರ್ಪಾಟುಗಳ ಬಗ್ಗೆ ಈಗ ... ಭೇಟಿ ಕೊಟ್ಟಿರುವ ಭಾರತದ ... ಸರ್ದಾರ ಪಟೇಲರು ಮಾತನಾಡುತ್ತಿದ್ದರು. ... ಈಗಾಗಲೇ ... ಸಂಗ್ರಹವಾಗಿದೆ ... ಕೋಟಿ ರೂ ಖರ್ಚಾಗುವುದು ಎಂದು ಹೇಳಲಾಗಿದೆ.

ಹಿಂದೂ-ಮುಸ್ಲಿಂ ವಿವಾಹ

... ಪ್ರಾಂತದ ನವಾಜ ಹಣಕಾಸು ಮಂತ್ರಿ ಶ್ರೀ ಕೃಷ್ಣನಪ್ತ ಪಲಿವಾಲ್ ... ಪ್ರಾಂತದಲ್ಲಿ ವ್ಯವಸಾಯ ... ಆಗಿರುವ ... ಬೇಗಂ ... ಅಧಿಕಾರಿಣಿಯನ್ನು ... ಲಿಗಡದಲ್ಲಿ ವಿವಾಹವಾದರು ... ಮತ್ತಾರೆ.

ಮೈಸೂರು ಮಂತ್ರಿ ಮಂಡಲದಲ್ಲಿ ಬದಲಾವಣೆಯೇ?

ಸ್ವಂ ನು ಫೋರ್] ಬೆಂಗಳೂರು ೨೪

ಈ ದಿನ ಇಲ್ಲಿನ ಕ್ರೆಸೆಂಟ್ ಭವನದಲ್ಲಿ ಪ್ರ॥ ಪ್ರ॥ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಸೇರಿ ವುದಿದೆ. ಈಗ ಇರುವ ತಾತ್ಕಾಲಿಕ ಮಂತ್ರಿ ಮಂಡಲದಲ್ಲಿ ಬದಲಾವಣೆ ವಿಚಾರವು ಅಲ್ಲಿ ಪರಿಶೀಲಿಸಲ್ಪಡುವುದೆಂದು ಹೇಳಲಾಗಿದೆ. ಅಲ್ಲದೆ ಶಾಸನ ಸಭೆಗಳ ಅವಧಿಯನ್ನು ಹೆಚ್ಚಿಸುವ ವಿಷಯವೂ ಸರ್ವಾಲೋಚಿಸಲ್ಪಡುವುದು. ನೂತನ ರಾಜ್ಯಾಂಗದ ರಚನೆಯು ತಡವಾಗುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಕಾಂಗ್ರೆಸ್ ಸಮಿತಿಯ ಸ್ವಂತ ಭವನದ ಪ್ರವೇಶೋತ್ಸವ

ಬೆಂಗಳೂರು ತರಳೇಪೇಟೆಯಲ್ಲಿ ನಿರ್ಮಿತವಾಗಿರುವ ನಗರ ಕಾಂಗ್ರೆಸ್ ಸಮಿತಿಯ ಸ್ವಂತ ಕಾರ್ಯಾಲಯದ ಪ್ರವೇಶೋತ್ಸವವನ್ನು ಇದೇ ... ತಾ॥ ಬೆಳಿಗ್ಗೆ ೧೧ ಗಂಟೆಗೆ ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ನೆರವೇರಿಸುವರು.

ಧೂಮ ಪಾನದಿಂದ ಒಬ್ಬ ಮನುಷ್ಯನಿಗೆ ೭೫ ಸಾವಿರ ರೂ. ಖರ್ಚು

ಬಾಲಕರು ಧೂಮ ಪಾನ ಮಾಡುವುದು ನಿಷೇಧಿಸುವ ಮಸೂದೆಯೊಂದು ಸಂಯುಕ್ತ ಪ್ರಾಂತ್ಯ ಶಾಸನ ಸಭೆಯಲ್ಲಿ ಅಂಗೀಕೃತವಾಗಿದೆ. ಬಾಲ್ಯದಿಂದ ೬೦ ವರ್ಷದ ವರೆಗೆ ಧೂಮ ಪಾನ ಮಾಡುವ ಪ್ರತಿಯೊಬ್ಬ ಮನುಷ್ಯನಿಗೂ ಒಟ್ಟು ೭೫ ಸಾವಿರ ರೂ ಖರ್ಚಾಗುವುದೆಂದು ವಿಧಾನದಿಂದ ಮಸೂದೆಯನ್ನು ಮಂಡಿಸಿದ ಶ್ರೀ ರಾಮಾಪ್ರಸಾದ ಟಾಮಟರವರು ತಿಳಿಸಿರುತ್ತಾರೆ.

ನಾನ್‌ಕಿಂಗಿನ ಪತನ

ಚೀಣದ ರಾಜಧಾನಿಯಾದ ನಾನ್‌ಕಿಂಗಿನ ಸೇನಾಪಡೆ ... ನಗರವನ್ನು ಕಮ್ಯೂನಿಸ್ಟರು ಆಕ್ರಮಿಸಿರುವರೆಂದು ವರದಿಯಾಗಿದೆ. ಕಮ್ಯೂನಿಸ್ಟರೊಡನೆ ಪ್ರತ್ಯೇಕ ಶಾಂತಿ ಸಂಧಾನ ಮಾಡಿಕೊಳ್ಳಲು ... ಅಧಿಕಾರಿಗಳು ಪ್ರಯತ್ನ ನಡೆಸುತ್ತಿದ್ದಾರೆ. ಕಮ್ಯೂನಿಸ್ಟರೊಂದಿಗೆ ಶಾಂತಿ ಮಾಡಿಕೊಳ್ಳಲು ಚೀಣಾ ಸರ್ಕಾರವು ... ಜನರ ಒಂದು ನಿಯೋಗವನ್ನು ರಚಿಸಿದೆ.

ದರ್ಬಾನಿನ ಗಲಭೆಯಲ್ಲಿ ನೊಂದವರಿಗೆ ಸಹಾಯ

ದಕ್ಷಿಣ ಆಫ್ರಿಕದ ದರ್ಬಾನಿನಲ್ಲಿ ಇತ್ತೀಚೆಗೆ ನಡೆದ ಗಲಭೆಗಳಲ್ಲಿ ನೊಂದ ಭಾರತೀಯರ ಸಹಾಯಕ್ಕಾಗಿ ... ರೂ ನ್ನು ಭಾರತ ಸರ್ಕಾರದವರು ಕೊಟ್ಟಿರುತ್ತಾರೆ.

ಬ್ಲಾಕ್ ಮಾರ್ಕೆಟ್ ಮಾಡಿ ದವರಿಗೆ ವ್ಯಾಪಾರದ ರಹದಾರಿ ಇಲ್ಲ

ಬಟ್ಟೆ ವರ್ತಕರ ಸಭೆಯಲ್ಲಿ ಸಿವಿಲ್ ಸಪ್ಲೈ ಕಂಟ್ರೋಲರ ಸ್ಪಷ್ಟೋಕ್ತಿ

ಮೈಸೂರು ೨೪

ರಾಜಧಾನಿಯ ಬಟ್ಟೆ ವ್ಯಾಪಾರಿಗಳ ಸಂಘದ ಪಾಂಚ ವಾರ್ಷಿಕೋತ್ಸವವು ನೆನ್ನೆ ಸಂಜೆ ಶ್ರೀ ಶಾಂತಲಾಂಡರ್ಸನ್ ಭವನದಲ್ಲಿ ಸಂಸ್ಥಾನದ ಸಿವಿಲ್ ಸಪ್ಲೈಸ್ ಕಂಟ್ರೋಲರ್ ಶ್ರೀ ಎಂ ಜೆ ಅಪ್ಪಾಜಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಕುಮಾರಿಗಳಾದ ಚಂದ್ರಭಾಗ, ಇಂದ್ರಾಣಿ ಮತ್ತು ... ಇವರುಗಳಿಂದ ಸುಶ್ರಾವ್ಯವಾದ ಗಾಯನವೂ ಉಪಾಹಾರವೂ ನಡೆದುವು. ಸಂಘದ ಅಧ್ಯಕ್ಷರಾದ ಶ್ರೀ ಯು. ಎಲ್ ರಾವ ಚಂದ್ರರಾಯರು ಸ್ವಾಗತ ಭಾಷಣ ಮಾಡಿ ಬಟ್ಟೆ ವರ್ತಕರು, ಸರ್ಕಾರದವರ ಸೂಚನೆಯಂತೆ ಹೇಗೆ ಕೆಲಸ ಮಾಡುತ್ತಿರುವರೆಂಬುದನ್ನು ನಿವರಿಸಿದರು. ಹಿಂದೆ ಕಾಳಸಂತೆಯಲ್ಲಿ ಬಟ್ಟೆ ಸ್ವಲ್ಪ ಲಾಭ ಪಡೆದಿರಬಹುದಾದವರಿಗೂ ರಿಯಾಯಿತಿ ತೋರಿಸಿ ರಹದಾರಿ ಕೊಡಬೇಕೆಂದು ಕೋರಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸರ್ಕಾರದ ಹೊಸಬಟ್ಟೆ ಹಂಚಿಕೆ ಯೋಜನೆಯನ್ನು ವಿವರಿಸಿದರು. ಸ್ವತಂತ್ರ ಭಾರತದಲ್ಲಿ ಸಕಲ ಪ್ರಜೆಗಳೂ ಹೊಸ ವಾತಾವರಣಕ್ಕೆ ಅನುಗುಣವಾಗಿ ತಮ್ಮ ಪಾತ್ರವನ್ನು ನಿರ್ವಹಿಸಬೇಕೆಂದರು. ವರ್ತಕರು ಪ್ರಾಮಾಣಿಕತೆಯಿಂದಲೂ ಧರ್ಮಸಮ್ಮತವಾಗಿಯೂ ತಮ್ಮ ಉದ್ಯಮದಲ್ಲಿ ತೊಡಗಿ ದೇಶಕ್ಕೂ ತಮ್ಮ ವೃತ್ತಿಗೂ ಗೌರವವನ್ನು ತರಬೇಕೆಂದು ಸೂಚಿಸಿದರು. ಅವರು ಹಾಗೆ ಮಾಡಿದರೆ ಸರ್ಕಾರದವರ, ಸಕಲ ಸಹಾಯವನ್ನೂ ನೀಡುವುದಾಗಿ ತಿಳಿಸಿದರು. ಆದರೆ ಹಿಂದೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ವ್ಯಾಪಾರಮಾಡಿದವರಿಗೆ ರಹದಾರಿಯನ್ನು ಖಂಡಿತವಾಗಿ ಕೊಡುವುದಿಲ್ಲವೆಂದು ತಿಳಿಸಿದರು.

ಕಾರ್ಯದರ್ಶಿಗಳಾದ ಶ್ರೀ ಬಿ ಎಸ್ ರುದ್ರಪ್ಪನವರು ವರದಿಯನ್ನು ಒಪ್ಪಿಸಿದರು.

ಗಾಂಧಿ ನಿಧಿಗೆ ಸಂಘದವರು ... ದಾನವಾಗಿ ಸಹಾಯಮಾಡಬೇಕೆಂದು ... ಶ್ರೀ ಪಿ ನಂಜಪ್ಪನವರು ವಂದನಾರ್ಪಣೆ ಮಾಡಿದರು. ಧನ್ಯವಾದಾನಂತರ ಸಮಾರಂಭವು ಮುಕ್ತಾಯವಾಯಿತು.

ಗೋವಧೆ ನಿಲ್ಲಿಸಲು ತೆರಿಗೆ

... ಗೋವಧೆಯನ್ನು ನಿಷೇಧಿಸಬೇಕೆಂದೂ ಮತ್ತು ... ಗೋವಿನ ತೆರಿಗೆಯನ್ನು ಜಾರಿಗೆ ತರಬೇಕೆಂದು ... ಶ್ರೀ ... ಗೋವಿಂದ ... ದವರ ... ಭಾರತ ... ಗೋರಕ್ಷಣ ... ಪ್ರಕಟಿಸಿ ... ಮೂಲದಿಂದ ... ಶ್ವತ್ ... ಕ್ಕಾರ

ಗರಡಿಯವರ ಸಂಘದ ಸ್ಥಾಪನೆ

ಮೈಸೂರು ೨೪

ನಗರದ ಎಲ್ಲ ಗರಡಿ ಪ್ರತಿನಿಧಿಗಳ ಸಭೆಯು ನಿನ್ನೆ ಮಧ್ಯಾಹ್ನ ... ಚಿಕ್ಕಗಡಿಯಾರದ ಕೆಳಗಡೆ ಇರುವ ಛತ್ರದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ೪೫ ಜನ ಪ್ರತಿನಿಧಿಗಳು ಹಾಜರಿದ್ದರು. ಶ್ರೀಗಳಾದ ಬಿ ನಾರಾಯಣ ಸ್ವಾಮಿ ಮತ್ತು ಎಸ್ ಶಂಕರಯ್ಯನವರುಗಳು ಭಾಷಣ ಮಾಡಿ ಸ್ವತಂತ್ರ ಭಾರತದ ಜನರು ದೃಢಕಾಯರಾಗಿರಲು ಪುರಾತನವಾದ ಗರಡಿಗಳು ಪುನರುಜ್ಜೀವನಗೊಳ್ಳಬೇಕೆಂದೂ, ಆಧುನಿಕ ಪದ್ಧತಿಗೆ ಅನುಸರಿಸಿಕೊಂಡು ಅವುಗಳು ಅಭಿವೃದ್ಧಿಯಾಗಬೇಕೆಂದೂ ತಿಳಿಸಿದರು. ಅನಂತರ ನಗರದ ಗರಡಿಯವರ ಸಂಘವೊಂದನ್ನು ಸ್ಥಾಪಿಸಿ, ಅದಕ್ಕೆ ಶ್ರೀ ಎಸ್. ಚೆನ್ನಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಹಾಜಿ ಅಮೀರುದ್ದೀನ್ ಶುಕೂರ್ ಒಯವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಕೆ ಪುಟ್ಟಸ್ವಾಮಿ ಮತ್ತು ಎ. ಶಿವಣ್ಣರವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು.

ಇಂಡೋನೇಷ್ಯದಲ್ಲಿ ಜವಾಬ್ದಾರಿ ಸರ್ಕಾರ ಏರ್ಪಾಡಾಗಬೇಕು

ಏಷ್ಯಾ ಸಮ್ಮೇಳನದಲ್ಲಿ ನಿರ್ಧಾರ

ದೆಹಲಿಯಲ್ಲಿ ಕಳೆದ ಮೂರು ದಿನಗಳಿಂದಲೂ ಸಮಾವೇಶಗೊಂಡಿದ್ದ ೧೯ ಏಷ್ಯಾ ರಾಷ್ಟ್ರಗಳ ಸಮ್ಮೇಳನವು ನಿನ್ನೆ ಮುಕ್ತಾಯವಾಯಿತು. ಬಂಧಿಸಲ್ಪಟ್ಟಿರುವ ಎಲ್ಲ ಇಂಡೋನೇಷ್ಯ ನಾಯಕರನ್ನೂ ಬಿಡುಗಡೆ ಮಾಡಬೇಕೆಂದೂ, ಇಂಡೋನೇಷ್ಯದಲ್ಲಿ ಕೂಡಲೇ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಬೇಕೆಂದೂ, ೧೯೪೮ನೇ ಡಿಸೆಂಬರ್ ತಿಂಗಳಲ್ಲಿ ಇಂಡೋನೇಷ್ಯದ ಸರ್ಕಾರದ ಅಧೀನದಲ್ಲಿದ್ದ ಯಾವ ಪ್ರದೇಶಗಳಿದ್ದವೋ ಅವುಗಳನ್ನೆಲ್ಲಾ ಬರುವ ಮಾರ್ಚಿ ತಿಂಗಳೊಳಗಾಗಿ ಡಚ್ಚರು ವಾಪಸು ಮಾಡಬೇಕೆಂದೂ, ೧೯೪೯ನೇ ಅಕ್ಟೋಬರ್ ತಿಂಗಳ ಹೊತ್ತಿಗೆ ಇಂಡೋನೇಷ್ಯದಲ್ಲಿ ರಾಜ್ಯಾಂಗ ಸಭಾ ಚುನಾವಣೆಗಳು ನಡೆದು ೧೯೫೦ನೇ ಜನವರಿ ಹೊತ್ತಿಗೆ ಪೂರ್ಣ ಅಧಿಕಾರವನ್ನು ಡಚ್ಚರು ವಹಿಸಿ ಕೊಡಬೇಕೆಂದೂ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು. ಈ ಸಲಹೆಗಳನ್ನು ಯಾವ ಪಕ್ಷವೇ ಆಗಲಿ ಅಂಗೀಕರಿಸದೆ ಹೋದರೆ ಭದ್ರತಾ ಸಮಿತಿಯು ತಕ್ಕ ಕಾರ್ಯಕ್ರಮ ಕೈಗೊಳ್ಳುವಂತೆ ಕೋರಲಾಯಿತು.

ಸಿ. ಆರ್. ರೆಡ್ಡಿಯವರ ಆಗಮನ

ಮೈಸೂರು ೨೪

ವಿಶ್ವವಿದ್ಯಾನಿಲಯ ಮತ್ತು ಇತರ ವಿದ್ಯಾಭ್ಯಾಸ ಕ್ರಮಗಳ ಪುನರ್ವಿಮರ್ಶೆ ಮಾಡಲು ಸರ್ಕಾರದವರಿಂದ ಆಹ್ವಾನಿಸಲ್ಪಟ್ಟಿರುವ ಡಾ॥ ಸಿ ಆರ್ ರೆಡ್ಡಿಯವರು ರಾಜಧಾನಿಗೆ ಮೊನ್ನೆ ರಾತ್ರಿ ಆಗಮಿಸಿದರು. ಅವರು ಇನ್ನು ಒಂದು ವಾರ ಇಲ್ಲಿ ಇದ್ದು, ಕಾಲೇಜು ಮತ್ತು ಇತರ ಶಾಲೆಗಳಿಗೆ ಭೇಟಿ ಕೊಟ್ಟು ಸರ್ಕಾರಕ್ಕೆ ನೀಡಲಿರುವರು. ... ಪ್ರಥಮ ... ವಿಚಾರ ಮಾಡುವರು.

ವಿದ್ಯಾರ್ಥಿಗಳ ಮುಷ್ಕರದಿಂದ ಕಾಲೇಜು ಮುಚ್ಚಿತು

ಬಿಹಾರಿನಲ್ಲೆಲ್ಲಾ ವಿದ್ಯಾರ್ಥಿಗಳು ನಡೆಸುತ್ತಿರುವ ಮುಷ್ಕರಗಳ ಕಾಲುವಾಗಿ ಎಲ್ಲಾ ಕಾಲೇಜುಗಳನ್ನೂ ಮುಚ್ಚಬೇಕೆಂದು ಬಿಹಾರ್ ಸರಕಾರವು ನಿರ್ಧಾರ ಮಾಡಿಕೊಂಡಿದೆ. ಈ ಸಂಬಂಧವಾಗಿ ಮುಖ್ಯ ಮಂತ್ರಿಗಳು ದೊಡ್ಡ ದೊಡ್ಡ ಅಧಿಕಾರಿಗಳ ಸಭೆಯೊಂದನ್ನು ಸೇರಿಸಿ ಪರ್ಯಾಲೋಚನೆ ನಡೆಸಿದರು. ಈ ಮುಷ್ಕರಗಳು ಕಮ್ಯೂನಿಸ್ಟರ ಪೂರ್ಣ ಪಿತೂರಿಯಿಂದ ಕೂಡಿದ ವಿದ್ಯಾರ್ಥಿಗಳಿಂದ ನಡೆದುವೆಂದೂ, ಇಂತಹ ಅಶಿಸ್ತು ಮತ್ತು ಅಶಾಂತಿಯಿಂದ ದೇಶದಲ್ಲಿ ಕಮ್ಯೂನಿಸಂ ಶಕ್ತಿಯನ್ನು ಬೆಳವಣಿಗೆ ಮಾಡಲೋಸುಗವೇ ಈ ಮುಷ್ಕರಗಳು ನಡೆಯುತ್ತಿರುವುದಾಗಿಯೂ ಸರಕಾರಕ್ಕೆ ತಿಳಿದು ಬಂದಿದೆ.

ಪಾಕಿಸ್ತಾನದಲ್ಲಿ ಮಹಾತ್ಮರ ಪತ್ರಗಳ ಪ್ರಚಾರ

ಗಾಂಧೀಜಿಯವರ ಉಪದೇಶಗಳನ್ನು ಪ್ರಚಾರ ಮಾಡಲು ಪಾಕಿಸ್ತಾನದಲ್ಲಿ ನ್ಯಾಯ ... ಸರಕಾರ ... ಪ್ರತಿ ... ಘಂಟೆ ಕಾಲ ... ಬೇಕೆಂದೂ, ... ತಿಂಗಳ ಅವಧಿಯಲ್ಲಿ ... ಮಾಡಬೇಕೆಂದೂ ... ಮಾಡಲಾಗಿದೆ.

ಭೂಪಾಲ ಸಂಸ್ಥಾನವು ಭಾರತದಲ್ಲಿ ಐಕ್ಯವಾಗಬೇಕು

ವಿಕ್ಟೋರಿಯ ಮಹಾರಾಜರು ಭೂಪಾಲ್ ಸಂಸ್ಥಾನಕ್ಕೆ ಭೇಟಿ ಕೊಟ್ಟಿದ್ದ ... ಕಂಡು ... ಭಾರತದ ಸ್ವಾತಂತ್ರ್ಯವನ್ನು ಭದ್ರಪಡಿಸಲು ಭೂಪಾಲ್ ಸಂಸ್ಥಾನವು ಭಾರತದೊಡನೆ ಐಕ್ಯವಾಗಬೇಕೆಂದು ಅವರು ನವಾಬರಿಗೆ ಬುದ್ಧಿವಾದ ಹೇಳಿದರೆಂದೂ ವರದಿಯಾಗಿದೆ.

ಗೋವಾಕ್ಕೆ ಯುದ್ಧ ವಿಮಾನಗಳು

ಗೋವಾಕ್ಕೆ ... ಯುದ್ಧ ವಿಮಾನಗಳನ್ನು ... ಪೋರ್ಚುಗಲ್ ಸರ್ಕಾರವು ... ಹೇಳಲಾಗಿದೆ. ಅಲ್ಲಿಗೆ ... ಜನ ... ಸೈನಿಕರನ್ನು ... ಲಾಗಿದೆಯೆಂದೂ, ... ಮತ್ತು ಇತರ ... ವರದಿಯಾಗಿದೆ.

ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಮೇಲೆ ಅವಿಶ್ವಾಸ

ಮೈಸೂರು ೨೩

... ಸಭೆಯು ... ನಿನ್ನೆ ಶ್ರೀ ... ಅಧ್ಯಕ್ಷತೆಯಲ್ಲಿ ನಡೆಯಿತು. ... ಅಧ್ಯಕ್ಷರಾದ ಶ್ರೀ ... ಕಾರ್ಯದರ್ಶಿ ... ಅವಿಶ್ವಾಸ ... [illegible]

ದಿನಾಚರಣೆ

ಮೈಸೂರು ೨೩

ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಈ ದಿನ ಸಂಜೆ ೫-೩೦ ಗಂಟೆಗೆ ಕೃಷ್ಣವಿಲಾಸ ಅಗ್ರಹಾರದಲ್ಲಿರುವ ಸಾದರಿ ಶಾಲೆಯಲ್ಲಿ ನೇತಾಜಿ ಜಯಂತಿಯು ಡಾ|| ಪಾರ್ಥ ನಾರಾಯಣ ಪಂಡಿತರ ಅಧ್ಯಕ್ಷತೆಯಲ್ಲಿ ನಡೆಯುವುದು.

ಇದೇ ಜನವರಿ ತಾ|| ೨೬ನೆ ೮-೩೦ ಗಂಟೆಗೆ ಸುಬ್ಬರಾಯನ ಕೆರೆ ... ಸ್ವಾತಂತ್ರ್ಯ ದಿನಾಚರಣೆಯು ... ಭಾರತ ... ವನದಿಂದ ... ನಡೆಯುವುವು.

ಇದೇ ಜನವರಿ ೩೦ನೇ ತೇದಿ ... ಗಾಂಧೀಜಿಯವರ ... ಗಂಟೆಗೆ ... ಜರುಗುವುವು.

ಗಾಂಧಿ ಮತ್ತು ... ಗಳ ಅನಾವರಣ

... ಮಹಾರಾಜರು ... ಶ್ರೀ ... ಮಾರ್ಟಿನ್ ... ಶ್ರೀ ... ಶ್ರೀರಂಗ ... ಸವರ ... ಶ್ರೀ ... ಶ್ರೀ ... ಪಂಡಿತ ... ನಂಗೀತ ... ಶ್ರೀ ... ಶ್ರೀರಂಗ ... ನಂತರ ಸಮಾರಂಭವು ಮುಕ್ತಾಯವಾಯಿತು.

ವೈಜ್ಞಾನಿಕರು ನಮ್ಮ ... ವಾಗಬೇಕು

ವೈಜ್ಞಾನಿಕರನ್ನು ಕೂಡಲೇ ... ಹೈದರಾಬಾದಿನ ... ಮಾಡಬೇಕೆಂದು ... ಭಾರತ ... ದ ಶ್ರೀ ಅಶೋಕ ಮೆಹತಾರವರು ಹೈದರಾಬಾದಿನ ... ಭಾರತದ ... ಭಾರತದಲ್ಲಿ ... ಹೇಳಿದ್ದಾರೆ.

ಕೇಂದ್ರದಲ್ಲಿ ಹುಟ್ಟಿ ಭತ್ಯ ಹೆಚ್ಚಿಸು

[illegible]

ಉಪಾಧ್ಯಾಯರಿಲ್ಲದೆ ವಿದ್ಯಾರ್ಥಿಗಳ ತೊಂದರೆ

ನಂಜನಗೂಡು ೨೩

ಇಲ್ಲಿನ ಹೈಸ್ಕೂಲಿನ ಕಾರ್ಮರ್ಸ್ ತರಗತಿಗೆ ಉಪಾಧ್ಯಾಯರಿಲ್ಲದೆ ವಿದ್ಯಾರ್ಥಿಗಳು ಬಹಳ ತೊಂದರೆ ಪಡುತ್ತಿದ್ದಾರೆ. ಈ ವರ್ಷ ಮೂರು ತಿಂಗಳಾದನಂತರ ಒಬ್ಬ ಉಪಾಧ್ಯಾಯರನ್ನು ಈಗ ಎರಡು ತಿಂಗಳ ಹಿಂದೆ ವರ್ಗಾಯಿಸಿರುವುದರಿಂದ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಪಾಠ ಪ್ರವಚನವಿಲ್ಲದೆ ಬಹಳ ಅನಾನುಕೂಲವಾಗಿದೆ. ಇದನ್ನು ಕೂಡಲೇ ಸರಿಪಡಿಸಬೇಕೆಂದು ಅಲ್ಲಿನ ನೊಂದ ವಿದ್ಯಾರ್ಥಿಗಳು ಪ್ರಾರ್ಥಿಸುತ್ತಾರೆ.

ಪಾಕಿಸ್ತಾನದಲ್ಲಿ ಜೋಗವಾರಿನ ನಿರ್ಬಂಧ ತೀರ್ಮಾನ

ಪಾಕಿಸ್ತಾನದ ಸಾರ್ವಜನಿಕ ... ನಿರ್ಬಂಧವಾಗಿ ... ಸರ್ಕಾರದವರ ... ದ್ದಾರೆಂದೂ, ... ದನ್ನು ... ಇತರ ... ದಿಯಾಗಿದೆ.

ಹಿಂದೂ ... ಆನಕ್ತ ರಕ್ತವಾಗಿ ಕೊಡದು

... ಸಂಯುಕ್ತ ಪ್ರಾಂತ್ಯದಲ್ಲಿ ... ಅನಕ್ತರಕ್ತವನ್ನಾಗಿರಲು ಬಿಡಲಾಗುವುದಿಲ್ಲವೆಂದೂ, ಅವಕ್ಕೆ ಸೂಕ್ತ ... ಪ್ರಚಾರ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗಿದೆಯೆಂದೂ ... ತಿಳಿಸಿರುತ್ತಾರೆ.

ಗಡಿನಾಡಿನ ಮಂತ್ರಿಸ್ಥಾನ ಹೋಯಿತು

ಗಡಿನಾಡಿನ ... ಮಂತ್ರಿಗಳಾದ ... ರವರು ಗಡಿನಾಡಿನ ಶಾಸನ ಸಭಾ ... ಸಂಬಂಧವಾಗಿ ಕೋರ್ಟಿನ ತೀರ್ಪಿನ ಪ್ರಕಾರ ತಮ್ಮ ಸ್ಥಾನವನ್ನು ಕಳೆದುಕೊಂಡರು. ಇವರ ಸ್ಥಾನಕ್ಕೆ ... ನೇಮಿಸಲಾಯಿತು.

ಎಸ್. ಎಸ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ... ಸೋಪು, ... ಸಕಲ ... ಗಂಧ ... ತೈಲ ... ತೈಲ ... ತೈಲ ... ತೈಲಗಳು ... ಪ್ರೆಸ್ ... ಮೈಸೂರು ... [illegible]

ಬಸ್ ಕೆಲಸಗಾರರಿಗೆ ಬಾಕಿ ಬಟ್ಟೆ ಅಭಾವ

ಮೈಸೂರು ೨೩

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯು ನಿನ್ನೆ ಸಂಜೆ ಶ್ರೀ ಕೆ. ಬಾಲತಾರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಡ್ರೈವರ್ ಮತ್ತು ಕಂಡಕ್ಟರುಗಳು ಬಾಕಿಉಡುಪನ್ನು ಧರಿಸಬೇಕೆಂದು ಸರ್ಕಾರದವರು ವಿಧಾಯಕ ಮಾಡಿ ಅವರುಗಳಿಗೆ ಬಾಕಿ ಬಟ್ಟೆಯು ಸಿಕ್ಕದೆ ಪೋಲೀಸರ ಕಿರುಕುಳ ವಿಶೇಷವಾಗಿರುವುದರಿಂದ ಬಾಕಿ ಬಟ್ಟೆಯನ್ನು ಅವರುಗಳಿಗೆ ಸರ್ಕಾರದವರು ಒದಗಿಸಿ ಕೊಡಬೇಕೆಂದೂ ಅಥವಾ ಆ ಆಜ್ಞೆಯನ್ನು ತಾತ್ಕಾಲಿಕವಾಗಿ ರದ್ದು ಮಾಡಬೇಕೆಂದು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು. ಕೆಲಸಗಾರರ ಸಂಘದ ಕೋರಿಕೆಗಳನ್ನು ನಿರ್ವಹಿಸಬೇಕೆಂದು ಮಾಲೀಕರೂ ಮತ್ತು ಲೈಸೆನ್ಸ್ ಕಮಿಷನರವರುಗಳಿಗೆ ಕಳೆದ ವಾರ್ಷಿಕ ಸಭೆಯಲ್ಲಿ ಒತ್ತಾಯ ಮಾಡಿದ್ದರೂ ಇಲ್ಲಿಯವರೆಗೂ ಅವರುಗಳು ಯಾವ ಪ್ರತ್ಯುತ್ತರವನ್ನೂ ಕೈಗೊಳ್ಳದಿರುವುದು ಶೋಚನೀಯವಾದ ಸೂಚಿಸಿ, ಅವುಗಳನ್ನು ಪೂರೈಸಬೇಕೆಂದು ಪ್ರಾರ್ಥಿಸಲಾಯಿತು.

ಬೆಂಗಳೂರಿನಿಂದ ಹರಿಹರಕ್ಕೆ ವಿದ್ಯುಚ್ಛಕ್ತಿಯ ರೈಲು

ಮೈಸೂರು ಮತ್ತು ಬೆಂಗಳೂರಿಗೆ ವಿದ್ಯುಚ್ಛಕ್ತಿ ರೈಲ್ವೆಯನ್ನು ಏರ್ಪಡಿಸುವ ಬಗ್ಗೆ ಪ್ರಾರಂಭವಾಗಿ ಸರ್ವೆ ನಡೆಸಿದ ಬ್ರಿಟಿಷ್ ಕಂಪೆನಿಯವರಿಗೆ ಅಲ್ಲಿ ಪ್ರವಾಸ ಮಾಡಿದ ಕೈಗಾರಿಕಾ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಕಂಡು, ಬೆಂಗಳೂರು ಮತ್ತು ಹರಿಹರಕ್ಕೆ ವಿದ್ಯುಚ್ಛಕ್ತಿ ರೈಲನ್ನು ಹಾಕುವ ಸಾಧ್ಯಾಸಾಧ್ಯತೆಯನ್ನು ಚರ್ಚಿಸಿದರೆಂದೂ, ಈ ಬಗ್ಗೆ ಅಂದಾಜು ಪಟ್ಟಿಯನ್ನು ಆ ಕಂಪೆನಿಯಿಂದ ತರಿಸಿ ಸರ್ಕಾರಕ್ಕೆ ಕಳುಹಿಸಲಾಗಿದೆಯೆಂದೂ ತಿಳಿದು ಬಂದಿದೆ.

ಭಾರತಕ್ಕೆ ಸೂಕಾರ್ನೊ ಭೇಟಿ

ಭಾರತಕ್ಕೆ ಇಂಡೋನೇಷ್ಯದ ಮಾಜಿ ಮುಖ್ಯಮಂತ್ರಿಗಳಾದ ಡಾ|| ಸುತನ್ ಷಹರೀರ್‌ರವರು ಭೇಟಿ ಕೊಡುವ ಸಂಭವವಿದೆ. ಇದಕ್ಕಾಗಿ ಪಂಡಿತ ನೆಹರೂ ಪ್ರಯತ್ನ ಪಡುತ್ತಿದ್ದಾರೆ.

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ ೩ ಪ್ರದರ್ಶನಗಳು.

ತಾ|| ... ರಿಂದ ೩ ದಿನಗಳು

R.K.O. ರವರ ಸಾಹಸಮಯ ಚಿತ್ರ

ಫೋರ್ಟ್ ಅಪಚಿ

FORT APACHE

(A Master-piece from Indian Frontier)

With—Henry Fonda and Shirley Temple.

NEXT CHANGE :-

Walt Disney's

SONG OF THE SOUTH

(Technicolor)

Edited, printed and published by A.R. Nagarajan at the Sadhvi Press, D. Subbaiah Road, Mysore.

ಫೋನ್ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೨೫-೧-೪೯ [ಸಂಚಿಕೆ ೧೬೫

ಸ್ಮರಣಾ ದಿನೋತ್ಸವ

ಮೈಸೂರು ೨೫

[illegible]ತದ ಸ್ವಾತಂತ್ರ್ಯಕ್ಕಾಗಿ ದುಡಿದ [illegible]ಪ್ರಖ್ಯಾತ ಹುತಾತ್ಮರನ್ನು ಸ್ಮರಿಸ[illegible] ಸ್ವಾತಂತ್ರ್ಯವನ್ನು ಕಾಪಾಡಲು [illegible]ತ್ಮರು ದೇಶಕ್ಕೆ ಬೋಧಿಸಿರುವ ಆದ[illegible]ನ್ನು ಮುಂದಿಟ್ಟುಕೊಂಡು, ದೇಶ[illegible] ಜನತೆಗೆ ಸೇವೆ ಸಲ್ಲಿಸುವ ದೃಢ[illegible] ಮಾಡಲು ನಾಳೆ ಸಂಜೆ ೬-೩೦[illegible] ನಗರ ಕಾಂಗ್ರೆಸ್ ಕಛೇರಿಯಲ್ಲಿ [illegible]ನಡೆಯುವುದು ಮಹಾ ಜನಗಳೂ [illegible] ಎಲ್ಲ ಸಂಸೆಗಳೂ ಭಾಗವಹಿಸ[illegible]ಬೇಕೆಂದು ನಗರ ಕಾಂಗ್ರೆಸ್ ಸಮಿತಿಯ [illegible]ಕಾರ್ಯದರ್ಶಿ ಶ್ರೀ ಟಿ ನರಸಿಂಹಯ್ಯಂಗಾ[illegible] ಪ್ರಾರ್ಥಿಸಿರುತ್ತಾರೆ.

ಉಂಗುರದ ಬಹುಮಾನ

[illegible]ಜಧಾನಿಯ ಟಿಂಬರ್ ಮತ್ತು ಫ್ಲೈ[illegible] ಕಾರ್ಪೊರೇಷನ್ನಿನ ಕೆಲಸಗಾರರ [illegible]ಘದ ಸಾಮಾನ್ಯ ಸಭೆಯು ಮಾಡರ್ನ್ [illegible] ನೆನ್ನೆ ಸಂಜೆ ಅಡ್ವೋಕೇಟರಾ[illegible] ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆ[illegible] ಜರುಗಿತು ಸಂಘದ ಕಾರ್ಯದರ್ಶಿ[illegible] ಶ್ರೀ ಬಿ ಲಿಂಗಯ್ಯನವರು ಸಂಘ[illegible] ನಾಡಿದ ಸೇವೆಯ ಗೌರವಾರ್ಥವಾ[illegible]ವರಿಗೆ ಚಿನ್ನದ ಉಂಗುರವೊಂದನ್ನು [illegible]ಬಹುಮಾನವಾಗಿ ಕೊಡಲಾಯಿತು.

ವಿವಾಹ ಮಹೋತ್ಸವ

ರಾಜಧಾನಿಯ ಚಲುವಾಂಬಾ ಆರನು [illegible]ಕಾಂಪೌಂಡಿನಲ್ಲಿರುವ ಆಂಜನೇಯ ಗು[illegible] ಆವರಣದಲ್ಲಿ ರಾಜಧಾನಿಯ ಕಂ[illegible]ಕ್ಟರಾದ ಶ್ರೀ ಟಿ ಪಿ. ಕೋದಂಡಯ್ಯ[illegible]ಪಿಳ್ಳೆಯವರ ಪುತ್ರಿ ಶ್ರೀಮತಿ ತಾರಾ[illegible] ಅಮ್ಮಾಳ್ ಮತ್ತು ಗುಂತಕಲ್ಲಿನ [illegible] ಟಿ ಪಿ. ಮುರಗೇಶಂ ಪಿಳ್ಳೆಯವರ ಕು[illegible]ಮಾರ ಶ್ರೀ ಕುಪ್ಪುಸ್ವಾಮಿ ಪಿಳ್ಳೆಯವರ [illegible]ವಾಹವು ವೈಭವದಿಂದ ನಿನ್ನೆ [illegible]ರವೇ[illegible]

[illegible]ತರ ಕಾಲೇಜ್ ಚರ್ಚಾ ಸ್ಪರ್ಧೆ

ರಾಜಧಾನಿಯ ಪಸ್ಟ್‌ಗ್ರೇಡ್ ಕಾಲೇ[illegible] ಸಂಘದ ಆಶ್ರಯದಲ್ಲಿ ಕಳೆದ ಸಾಲಿನ[illegible] ನಡೆದಂತೆ ಈ ವರ್ಷವೂ ಸಹ [illegible] [illegible] ಅಂತರ ಕಾಲೇಜುಗಳ [illegible] ಸ್ಪರ್ಧೆ ಏರ್ಪಾಡಾಗಿದೆ. ಈ ಮ[illegible] ನೇ ತಾರೀಕು ಮಧ್ಯಾಹ್ನ [illegible] ಗಂ[illegible] ಕಾಲೇಜು ಒಳಾಂಗಣದಲ್ಲಿ ಸ್ಪರ್ಧೆ ನ[illegible]ಯುವುದು ಡಾ॥ ಎಂ ಅಣ್ಣಾಜಪ್ಪನ[illegible] ಉತ್ತಮ ಸ್ಪರ್ಧಿಗಳಿಗೆ ಕೊಡುವ[illegible]ವಾಗಿ ಗುರಾಣಿಯೊಂದನ್ನು [illegible] [illegible]ವಾಗಿ ಕೊಟ್ಟಿದ್ದಾರೆ ಕಾಲೇಜ[illegible]ಗಳಿಂದ ಇಬ್ಬರು ಪ್ರತಿನಿಧಿಗಳನ್ನು [illegible]ಕಳುಹಿಸಬೇಕೆಂದು ಕೋರಲಾಗಿದೆ.

ಜಿಲ್ಲಾ ಬೋರ್ಡಿಗೆ ಇಂಜನಿಯರುಗಳು

ಚಿತ್ರದುರ್ಗದ ಅ॥ ಇಂಜನಿಯರ್ ಶ್ರೀ [illegible]ಪ್ಪನವರನ್ನೂ ಮತ್ತು ಮೈಸೂ[illegible] [illegible] ಡಿವಿಜನ್ನಿನ ಶ್ರೀ ಕೆ ವಿ [illegible]ರವರನ್ನೂ ಮೈಸೂರು ಜಿಲ್ಲಾ [illegible] ಇಂಜನಿಯರುಗ[illegible] ವರ್ಗ ಮಾಡಲಾಗಿದೆ.

ಚಮ್ಮಾರ ಸಹಕಾರ ಸಂಘ

[illegible] ಭಾನುವಾರ ಸಂಸ್ಥಾನದ [illegible] ಸಹಕಾರ ಸಂಘದ ಸಭೆಯು [illegible] ಮೈಸೂರು ಆದಿಕರ್ನಾಟಕ ಸಂಘ[illegible] [illegible]ರಾದ ಶ್ರೀ ಟಿ ಪಿ ರಾಮ[illegible]ರವ[illegible] [illegible] ಅಧ್ಯಕ್ಷರನ್ನಾಗಿ [illegible] [illegible]

ಭಾರತ ಸಚಿವರ ಆಗಮನ

ಸ್ವಂ ಸು. ಫೋನ್] ಬೆಂಗಳೂರು ೨೫

ಭಾರತ ಸರ್ಕಾರದ ಮಾರ್ಗಾನುಕೂಲದ ಸಚಿವರಾದ ಜನಾಬ್ ರಫಿಅಹಮದ್ ಕಿದ್ವಾಯ್‌ರವರು ಈ ಮಧ್ಯಾಹ್ನ ವಿಮಾನದಲ್ಲಿ ಡೆಹಲಿಯಿಂದ ಆಗಮಿಸಿದರು ನಾಳೆ ಬೆಳಿಗ್ಗೆ ಅವರು ಅಂಚೆ ಮತ್ತು ತಂತಿ ಇಲಾಖೆಯ ನೌಕರರನ್ನು ಉದ್ದೇಶಿಸಿ [illegible]ಷಣ ಮಾಡುವರು.

ಸಿನಿಮಾ ಮಂದಿರಗಳಲ್ಲಿ ಒತ್ತಾಯದ ಪ್ರದರ್ಶನ

ಪ್ರತಿಯೊಂದು ಸಿನಿಮಾ ಮಂದಿರದವರು ಸಾವಿರ ಅಡಿಗೆ ಮೀರದ ಮತ್ತು ಸರ್ಕಾರದವರಿಂದ ಗೊತ್ತು ಮಾಡಲ್ಪಟ್ಟ ಚಲನ ಚಿತ್ರಗಳನ್ನು ಪ್ರತಿ ಆಟದಲ್ಲಿಯೂ ಪ್ರದರ್ಶಿಸುವಂತೆ ಒತ್ತಾಯಪಡಿಸಲು ಸರ್ಕಾರದವರು ಸಿನಿಮಾ ಶಾಸನದಲ್ಲಿ ತಿದ್ದುಪಡಿಯನ್ನು ಮಾಡಿರುತ್ತಾರೆ.

○ ವಾರ್ತಾ ಪ್ರಸಾರ ಸಮ್ಮೇಳನದ ಸಂಬಂಧದಲ್ಲಿ ಪ್ರಧಾನ ಮಂತ್ರಿ ಶ್ರೀ ಕೆ [illegible] ರೆಡ್ಡಿಯವರು [illegible] ತಿಂಗಳು [illegible] ನೇ [illegible] ಡೆಹಲಿಗೆ ತೆರಳುವರು

○ ಸಚಿವರಾದ ಶ್ರೀ ಎಚ್. ಸಿ ದಾಸಪ್ಪನವರು ನಿನ್ನೆ ಮಧ್ಯರಾತ್ರಿ ಬೊಂಬಾಯಿಗೆ ಆಗಮಿಸಿದರು ಈ ದಿನ ಸಂಜೆ ವಿಮಾನದಲ್ಲಿ ಇಲ್ಲಿಗೆ ಬರುವರು ನಾಳೆ ಬೆಳಿಗ್ಗೆ ಮಂತ್ರಿಮಂಡಲದ ಸಭೆ ಸೇರುವುದು.

○ ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕೈಗಾರಿಕೆಯ ಬೆಳವಣಿಗೆಯು ಒಮ್ಮೆಲೆ ಹೆಚ್ಚಿ ಜನ [illegible]ದಣಿಯು ಮಿತಿ ಮೀರಿರುವುದರಿಂದ ಉಂಟಾಗಿರುವ ತೊಂದರೆಗಳ ಬಗ್ಗೆ ಬರುತ್ತಿರುವ ದೂರುಗಳನ್ನು ಪರಿಗಣಿಸಿ ಇನ್ನು ಮುಂದೆ ದೊಡ್ಡ ಕೈಗಾರಿಕೆಗಳನ್ನು [illegible] [illegible]ವಾದ ಪಟ್ಟಣ ದೂರ ಪ್ರದೇಶಗಳಲ್ಲಿ [illegible] ಹಿಸುವುದೇ ಸರ್ಕಾರದ ನೀತಿಯೆಂದು ಒಂದು ಪ್ರಕಟಣೆ ತಿಳಿಸುತ್ತದೆ

ಟ್ರಸ್ಟ್ ಬೋರ್ಡ್ ಅಧ್ಯಕ್ಷರು

ಮೈಸೂರು, ೨೫

ಪೌರ ಸಭಾಧ್ಯಕ್ಷರಾದ ಶ್ರೀ ಟಿ ಎನ್ [illegible] ಟರಮಣಯ್ಯನವರನ್ನು ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರನ್ನಾಗಿ ಸರ್ಕಾರದವರು ನೇಮಿಸಿದ್ದಾರೆ

ಮೆಡಿಕಲ್ ಕಾಲೇಜು ಅಧ್ಯಾಪಕರು

ಮಂಡ್ಯ ಜಿಲ್ಲೆಯ ಆರೋಗ್ಯಾಧಿಕಾರಿಗಳಾದ ಶ್ರೀ [illegible] ಗೋಪಾಲರಾವ ರವರನ್ನು ಮೈಸೂರು ಮೆಡಿಕಲ್ ಕಾಲೇಜಿನ ಆರೋಗ್ಯ ಶಾಸ್ತ್ರದ ಪ್ರೊಫೆಸರನ್ನಾಗಿ[illegible] ಚಿತ್ರದುರ್ಗ ಜಿಲ್ಲೆಯ ಆರೋಗ್ಯಾಧಿ[illegible] ಗಳಾದ ಶ್ರೀ ಎಸ್ ಜಿ ಸಂಪತ್ತು [illegible] ರವರನ್ನು ಅಸಿಸ್ಟೆಂಟ್ ಪ್ರೊಫೆಸರನ್ನಾಗಿಯೂ ನೇಮಿಸಲಾಗಿದೆ

ನಳಂದಾ, ತಕ್ಷಶಿಲಾಗಳಲ್ಲಿ ಧಾರ್ಮಿಕ ವಿಶ್ವವಿದ್ಯಾಲಯ

ಪತ್ರಿಕಾ ಸಮ್ಮೇಳನದಲ್ಲಿ ಜಗದ್ಗುರುಗಳ ವಿವರಣೆ

ಸ್ವಂ ಸು. ಫೋನ್] ಬೆಂಗಳೂರು ೨೫

ಪ್ರಾಚೀನ ಭಾರತದ ವಿದ್ಯಾಪೀಠಗಳಾದ ನಳಂದಾ ಮತ್ತು ತಕ್ಷಶಿಲಾ ಪ್ರದೇಶಗಳಲ್ಲಿ ಧಾರ್ಮಿಕ ವಿಶ್ವವಿದ್ಯಾಲಯವನ್ನು ತಾವು ಸ್ಥಾಪಿಸಬೇಕೆಂದಿರುವುದಾಗಿಯೂ, ಇದಕ್ಕೆ ಭಾರತ ಮತ್ತು ಇತರ ಸರ್ಕಾರಗಳ ನೆರವನ್ನು ಕೋರಿರುವುದಾಗಿಯೂ ದ್ವಾರಕಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿಗಳವರು ನಿನ್ನೆ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಧರ್ಮದ ಮೂಲ ತತ್ತ್ವಗಳಿಗೆ ಧಕ್ಕೆ ಬರದಂತೆ ಹೊಸ ಯುಗಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಸಮಾಜ ಸುಧಾರಣೆಯಾಗಬೇಕು ಈ ವಿಚಾರದಲ್ಲಿ ಮಠಾಧಿಪತಿಗಳೂ ಕೂಡ ಯೋಚಿಸುತ್ತಿರುವರು. [illegible] ಸುಧಾರಣೆಗಳ ಬಗ್ಗೆ ಸರ್ಕಾರದವರು ಮಾಡಿರುವ ಶಾಸನವನ್ನು ಎದುರಿಸಿ ಫಲವಿಲ್ಲ. ಈಗ ಭಾರತದಲ್ಲಿ ಅಗತ್ಯವಾಗಿರುವುದು ಸಂಘಟನೆ ಈ ದೃಷ್ಟಿಯಿಂದ ಸರ್ಕಾರದವನ್ನು ಎದುರಿಸಬಾರದು. ಜಾತ್ಯತೀತ ರಾಷ್ಟ್ರ ನಿರ್ಮಾಣ ಮಾಡುತ್ತೇವೆಂದು ಹೊರಟಿರುವ ಸರ್ಕಾರವು ಕೇವಲ ಹಿಂದೂ ಧರ್ಮದಲ್ಲಿ ಪ್ರವೇಶ ಮಾಡುತ್ತಿದೆ, ಇದು ಜಾತ್ಯತೀತ ರಾಷ್ಟ್ರದ ಲಕ್ಷಣವಲ್ಲ ಎಂದು ಸ್ವಾಮಿಗಳವರು ತಿಳಿಸಿದರು.

ದೇವಾಲಯ ಪ್ರವೇಶದ ವಿಚಾರವನ್ನು ಪ್ರಸ್ತಾಪಿಸಿ, ಒತ್ತಾಯದಿಂದ ದೇವಾಲಯ ಪ್ರವೇಶ ಮಾಡುವುದು ಗಾಂಧಿಜಿಯವರ ಅಭಿಪ್ರಾಯವಾಗಿರಲಿಲ್ಲವೆಂದೂ, ಇಂತಹ ವಿಚಾರಗಳಲ್ಲಿ ಶಾಸನವನ್ನು ಮಾಡುವುದು ಸೂಕ್ತವಲ್ಲವೆಂದೂ ಅವರು ತಿಳಿಸಿದರು ಹಿಂದೂ ಮಹಾ ಸಭೆಯ ಮತ ಸಾಧ್ಯನೀತಿಯನ್ನು ಸಾಮಾನ್ಯವಾಗಿ ಅನುಮೋದಿಸುವೆನೆಂದು ಹಿಂಸಾ ಮಾರ್ಗದಲ್ಲಿ ಪ್ರವರ್ತಿಸುತ್ತಿರುವ ನಾಯಕರುಗಳ ಚಟುವಟಿಕೆಗಳಿಂದ ಅನರ್ಥ ಉಂಟಾಗುತ್ತಿದೆಯೆಂದು ಅಭಿಪ್ರಾಯಪಟ್ಟರು.

ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆದ ಸನಾತನ ಧರ್ಮ ಸಮ್ಮೇಳನವು ನಿನ್ನೆ [illegible] [illegible] [illegible] ನಂತರ [illegible] [illegible] ಪತ್ತಿ ಚಿತ್ರಿಯ [illegible]

ಶಾಂತಿ ಸಂಸ್ಥಾಪನೆಗೆ ಕಮ್ಯೂನಿಸ್ಟರ [illegible]

[illegible] ಕಮ್ಯೂನಿಸ್ಟರ ಒಪ್ಪಿರುವರೆಂದು. [illegible]

[illegible]

ಭೂಪಾಲಿನ ಐಕ್ಯಕ್ಕೆ ನವಾಬರ ಸಿದ್ಧತೆ

ಭೂಪಾಲಿನ ನವಾಬರು ತಮ್ಮ ಸಂಸ್ಥಾನವನ್ನು ಮಧ್ಯ ಭಾರತದೊಡನೆ ಐಕ್ಯ ಮಾಡಲು ಸಿದ್ಧತೆ ನಡೆಸುತ್ತಿರುವರೆಂದು ಹೇಳಲಾಗಿದೆ. ಲಕ್ಷಾಂತರ ರೂ. ಬೆಲೆ ಬಾಳುವ ತಮ್ಮ ೨೭ ಪೋಲೋ ಆಟದ ಕುದುರೆಗಳನ್ನು ಮಾರಾಟ ಮಾಡಲು ಅವುಗಳನ್ನು ಬೊಂಬಾಯಿಗೆ ರವಾನಿಸಿರುವರೆಂದೂ, ಅರಮನೆಯಲ್ಲಿ ಚಿನ್ನ ಮತ್ತು ಬೆಳ್ಳಿಯ ಒಡವೆಗಳನ್ನು ಕರಗಿಸಿ ಗಟ್ಟಿ ಮಾಡಿಸುತ್ತಿರುವರೆಂದೂ ಮತ್ತು ಅನೇಕ ರತ್ನಾಭರಣಗಳನ್ನು ಈಗಾಗಲೇ ಅವರು ಮಾರಿರುವರೆಂದೂ ವರದಿಯಾಗಿದೆ.

ಜಕೋಸ್ಲವೇಕಿಯಾ ಸರ್ಕಾರವನ್ನು ಉರುಳಿಸಲು ಸಿತೂರಿ

ಕಳೆದ ಕ್ರಿಸ್ಮಸ್ಸಿನಲ್ಲಿ ಜಕೋಸ್ಲವೇಕಿಯಾ ಸೈನ್ಯದವರು ತಮ್ಮ ದೇಶದ ಸರ್ಕಾರವನ್ನು ಉರುಳಿಸಲು ಪಿತೂರಿ ನಡೆಸಿದ್ದರೆಂದೂ, ಅದು ಪತ್ತೆಯಾಗಿ ೪೨೦ ಜನ ಸೈನ್ಯಾಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆಯೆಂದೂ ವರದಿಯಾಗಿದೆ

ಈ ಸಂಬಂಧವಾಗಿ ಅಮೇರಿಕದ ಗುಪ್ತ [illegible]ಚಾರರಿಗೆ ಸೇರಿದ ೭೨ ಜನರನ್ನು ಬಂಧಿಸಲಾಗಿದೆಯೆಂದೂ, ಅದರಲ್ಲಿ ಒಬ್ಬ ಪಾದ್ರಿ ಮತ್ತು ೩ ಮಂದಿ ಮಹಿಳೆಯರೂ ಇರುವರೆಂದೂ ಹೇಳಲಾಗಿದೆ

ಹೈದರಾಬಾದ್ ಕಾಂಗ್ರೆಸ್ಸಿಗರಲ್ಲಿ ಒಪ್ಪಂದ

ಹೈದರಾಬಾದಿನಲ್ಲಿರುವ ಎರಡು ಕಾಂಗ್ರೆಸ್ ಸಂಸ್ಥೆಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಸರ್ದಾರ್ ಪಟೇಲರು [illegible]ಕೊಡುವ ತೀರ್ಮಾನಕ್ಕೆ ಎರಡು ಪಕ್ಷದವರೂ ಒಪ್ಪಿರುವುದಾಗಿ ತಿಳಿದು ಬಂದಿದೆ

ನೇತಾಜಿ ಸುಭಾಷರೊಡನೆ ಸಂಪರ್ಕ

ಸುಭಾಷ್ ಚಂದ್ರಬೋಸರು ಬದುಕಿದ್ದಾರೆಂದೂ, ಅವರ ಸಂಗಡ ತಾವು ಈಗಲೂ ಸಂಪರ್ಕವಿಟ್ಟುಕೊಂಡಿರುವುದಾಗಿ ಮಧುರೆಯ ತಮಿಳು ನಾಡು ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷರಾದ ಶ್ರೀ ಯು. ಮುತ್ತುರಾಮಲಿಂಗ [illegible]ರವರು ಮಧುರೆಯಲ್ಲಿ ನಡೆದ ನೇತಾಜಿ ವಿಮೋಚನೆಯ ಸಮಾರಂಭದಲ್ಲಿ ತಿಳಿಸುತ್ತಾರೆ

ಶ್ರೀ ತೇವರ್‌ರವರು, ೩॥ ವರ್ಷಗಳ ಕಾಲ ಅಜ್ಞಾತ ವಾಸದಲ್ಲಿದ್ದು, ಇದೇ ಮೊದಲನೆಯ ಬಾರಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಸುಭಾಷರು ಬದುಕಿದ್ದು ಆರೋಗ್ಯವಾಗಿದ್ದಾರೆಂದೂ, ಅವರಲ್ಲಿ ತಾವು ಆಧುನಿಕ ವಿಧಾನದಿಂದ ಸಂಪರ್ಕವಿಟ್ಟುಕೊಂಡಿರುವುದಾಗಿಯೂ ತಿಳಿಸಿರುತ್ತಾರೆ [illegible] ಮೂರನೆ ಮಹಾಯುದ್ಧವು ಸಂಭವಿಸ[illegible] [illegible] ದೂ, ಆಗ್ಗೆ ನೇತಾಜಿ[illegible]ರು [illegible] [illegible] [illegible] [illegible] ಭಾಗ [illegible] [illegible] [illegible]ದ್ದಾರೆ.

[illegible] ತಿಳಿಸಿದ್ದಾರೆಂದು [illegible] ಆವರೆ [illegible] [illegible] ಇಲ್ಲಿ [illegible] [illegible] ನಾಯಕರಾ [illegible] [illegible]ಲ್ಲಿ

ಭೂಪಾಲ್ ನವಾಬರಿಗೆ ಸ॥ ಪಟೇಲರ ಎಚ್ಚರಿಕೆ

ಭೂಪಾಲಿನಲ್ಲಿ ರಾಜರಿಗೂ ಮತ್ತು ಪ್ರಜೆಗಳಿಗೂ ಘರ್ಷಣೆಯು ನಡೆಯುತ್ತಿದೆ. ಹೆಂಗಸರು ಮತ್ತು ಮಕ್ಕಳ ಮೇಲೂ ಅತ್ಯಾಚಾರ ಜರುಗುತ್ತಿದೆ. ಪ್ರಜಾ ಪ್ರತಿನಿಧಿಗಳಿಗೆ ತಾವು ಅಧಿಕಾರವನ್ನು ವಹಿಸಿರುವುದಾಗಿಯೂ, ಆದುದರಿಂದ ಈಗ ನಡೆಯುತ್ತಿರುವ ಗೊಂದಲವು ಪ್ರಜಾ ಸರ್ಕಾರದ ಜವಾಬ್ದಾರಿಯೇ ಹೊರತು ತಮ್ಮದಲ್ಲವೆಂದೂ ನವಾಬರು ಹೇಳುತ್ತಿದ್ದಾರೆ. ಅಲ್ಲಿನ ಪ್ರಜೆಗಳು ಸಂಸ್ಥಾನವು ಮಧ್ಯ ಭಾರತದಲ್ಲಿ ಐಕ್ಯವಾಗಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ನವಾಬರೇ ಗೊಂದಲಕ್ಕೆ ಕಾರಣರೆಂದೂ ಅವರೇ ಪ್ರಜೆಗಳಲ್ಲಿ ಕಾದಾಟವುಂಟುಮಾಡಿರುವರೆಂದೂ ಇನ್ನು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಬ್ರಿಟಿಷರ ಆಳ್ವಿಕೆಯಲ್ಲಿ ಈ ರೀತಿ ನಡೆಯುತ್ತಿದ್ದುದಾಗಿತ್ತು. ಆದರೆ ಸ್ವತಂತ್ರ ಭಾರತದಲ್ಲಿ ಈಗ ಹೀಗೆ ನಡೆಯುವ ಹಾಗಿಲ್ಲ ಮತ್ತು ಅದನ್ನು ಸಹಿಸಲೂ ಸಾಧ್ಯವಿಲ್ಲ. ಈ ವಿಚಾರದಲ್ಲಿ ಭಾರತ ಸರ್ಕಾರವು ಪ್ರವೇಶಿಸಬೇಕೆಂದು ಮನವಿಗಳು ಬಂದಿವೆ. ಆದರೆ ಭೂಪಾಲಿನ ನವಾಬರಿಗೆ ಬೇಗನೆ ವ್ಯಾಸೋದಯವಾಗಿ ಸಂಸ್ಥಾನದ ಭವಿಷ್ಯವನ್ನು ಪ್ರಜೆಗಳೇ ನಿರ್ಧರಿಸಿಕೊಳ್ಳಲು ಅವಕಾಶ ಕಲ್ಪಿಸುವರೆಂಬ ಭರವಸೆಯಿಂದ ಭಾರತ ಸರ್ಕಾರವು ಪ್ರವೇಶಿಸಿಲ್ಲ. ಸಂಸ್ಥಾನಗಳ ಪ್ರಭುತ್ವಾಧಿಕಾರವು ಸಂಸ್ಥಾನದ ಪ್ರಜೆಗಳಲ್ಲಿ ಮತ್ತು ಅವರ ಮುಖಾಂತರ ಭಾರತ ಸರ್ಕಾರದಲ್ಲಿ ಪ್ರತಿಷ್ಠಿತವಾಗಿರುತ್ತದೆ. ಪ್ರಜಾಭಿಪ್ರಾಯವನ್ನು ನಿರ್ಬಂಧಿಸುವ ಯಾವ ಸರ್ಕಾರವೇ ಆಗಲಿ ಹೆಚ್ಚು ಕಾಲ ಉಳಿಯುವುದಿಲ್ಲ. ರಾಜರು ತಪ್ಪು ದಾರಿಯಲ್ಲಿ ನಡೆದರೆ ಅದನ್ನು ಸರಿಪಡಿಸುವುದೇ ಈಗ ಪ್ರಜೆಗಳ ಕರ್ತವ್ಯ—ಎಂದು ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರು ಬರೋಡದ ಸಾರ್ವಜನಿಕ ಸಭೆಯಲ್ಲಿ ತಿಳಿಸಿರುತ್ತಾರೆ.

ಸದ್ಯಕ್ಕೆ ಕೈಗಾರಿಕೆಗಳ ರಾಷ್ಟ್ರೀಕರಣ ಇಲ್ಲ

ಇನ್ನೂ ಅನೇಕ ವರ್ಷಗಳ ಕಾಲ ಕೈಗಾರಿಕೆಗಳನ್ನು ಪೂರ್ಣವಾಗಿ ರಾಷ್ಟ್ರೀಕರಣ ಮಾಡಲು ಸಾಧ್ಯವಿಲ್ಲವೆಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ದೆಹಲಿಯಲ್ಲಿ ನಡೆದ ಕೇಂದ್ರ ಕೈಗಾರಿಕಾ ಸಲಹಾ ಸಮಿತಿಯ ಸಭೆಯಲ್ಲಿ ತಿಳಿಸಿದ್ದಾರೆ.

ದಿನಾಚರಣೆ

ಮೈಸೂರು ೨೫

ಮೈಸೂರು ಸಹೋದರರವರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ನಾಳಿದ್ದು ಸಂಜೆ ೬ ಗಂಟೆಗೆ ತ್ಯಾಗರಾಜ ಜಯಂತಿಯ ಪ್ರಯುಕ್ತ 'ಸಂಗೀತ ನಡೆಯುವುದು.

೨೮ ನೇ ತಾ॥ ಶುಕ್ರವಾರ ಸಂಜೆ ೬ ಗಂಟೆಗೆ ಸಹಕಾರ ಭವನದಲ್ಲಿ ದರ್ಬಾರ್ ಭಕ್ಷಿಯವರಾದ ಶ್ರೀ ಹೆಚ್. ಎಲ್. ದೇವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಸಂಗೀತ ಕಛೇರಿ ಮತ್ತು ಶ್ರೀ ತ್ಯಾಗರಾಜರವರ ವಿಷಯವಾಗಿ ಉಪನ್ಯಾಸ ನಡೆಯುವುದು.

೨೯ ನೇ ತಾ॥ ಸಂಜೆ ೬ ಗಂಟೆಗೆ ಶ್ರೀ ಎ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶ್ರೀ ಪುರಂದರ ದಾಸರ ಪುಣ್ಯ ದಿನಾಚರಣೆಯು ಮಂದಿರದಲ್ಲಿ ನಡೆಯುವುದು.

೩೦ ನೇ ತಾ॥ ಸಂಜೆ ೬ ಗಂಟೆಗೆ ಗಾಂಧೀಜಿಯವರ ಸ್ಮಾರಕ ದಿನಾಚರಣೆಯು ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಮಂದಿರದಲ್ಲಿ ಜರುಗುವುದು.

ಆರ್. ಎಸ್. ಎಸ್. ವಿದ್ಯಾರ್ಥಿಗಳಿಗೆ ರಿಯಾಯಿತಿ

ಆರ್. ಎಸ್. ಎಸ್. ಸಂಸ್ಥೆಗೆ ಸೇರಿ ಜೈಲುಗಳಿಗೆ ಹೋಗಿರುವ ವಿದ್ಯಾರ್ಥಿಗಳಿಗೆ ಬೊಂಬಾಯಿ ಸರಕಾರವು ರಿಯಾಯಿತಿ ಕೊಡಲು ತೀರ್ಮಾನಿಸಿದೆ. ಆರ್. ಎಸ್. ಎಸ್. ಸತ್ಯಾಗ್ರಹವು ನಿಂತ ಮೇಲೆ ಯಾವ ಯಾವ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಸೌಲಭ್ಯ ಕೇಳುವರೋ ಅವರುಗಳಿಗೆ ಪ್ರವೇಶದ ಅರ್ಜಿಗಳನ್ನು ಜೈಲುಗಳಿಗೆ ಕಳುಹಿಸಿ ಕೊಡಲಾಗುವುದು.

ಯೂರೋಪ್ ಬಿಕ್ಕಟ್ಟಿನ ನಿವಾರಣೆಗೆ ನೆಹರೂ ಮಧ್ಯಸ್ಥಿಕೆ

ರಷ್ಯ ಮತ್ತು ಪಶ್ಚಿಮ ರಾಷ್ಟ್ರಗಳಿಗಿರುವ ಬಿಕ್ಕಟ್ಟನ್ನು ಬಗೆ ಹರಿಸಲು ಭಾರತದ ಮಹಾ ಪ್ರಧಾನಿ ಪಂಡಿತ ನೆಹರೂರವರನ್ನು ಮಧ್ಯಸ್ಥಿಕೆಗಾರರನ್ನಾಗಿ ಮಾಡಬೇಕೆಂದು ಅಮೆರಿಕದ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯಲ್ಲಿ ಸೂಚಿಸಲಾಗಿದೆ.

Edited, printed and published by A.R. Nagarajan at the Sadhvi Press, D. Subbaiah Road, Mysore.

ಭೂಪಾಲ್ ಪೋಲೀಸರ ಅತ್ಯಾಚಾರ ಖಂಡಿಸಲು ಉಪವಾಸ

ಭೂಪಾಲಿನಲ್ಲಿ ನಡೆಯುತ್ತಿರುವ ಪೋಲೀಸರ ಅತ್ಯಾಚಾರವನ್ನು ಖಂಡಿಸಲು ಬಂಧನದಲ್ಲಿರುವ ಡಾ॥ ಶಂಕರ ದಯಾಳ್ ಶರ್ಮರವರು ನಿನ್ನೆಯಿಂದ ೭೨ ಗಂಟೆಗಳ ಕಾಲ ಉಪವಾಸ ಮುಷ್ಕರ ಹೂಡಿದ್ದಾರೆ.

ನೇತಾಜಿ ಬೋಸರ ಜಯಂತಿ ಸಂದರ್ಭದಲ್ಲಿ ಅಲ್ಲಿ ನಡೆದ ಮಹಿಳೆಯರ ಮೆರವಣಿಗೆಯನ್ನು ಪೋಲೀಸರು ತಡೆದು ಚದುರಿಸಿದರು.

ಮನೆ [illegible] ಕೊ[illegible] [illegible] ಅಧಿಕಾರ

[illegible] ಖರ್ಚಿಗಾಗಿ ಗಂಡಾಂತರ. ಕೊಟ್ಟ [illegible] [illegible] ತಾಯ [illegible] ಹೊಂದಿರೇ ಇಟ್ಟುಕೊ [illegible] ಅಧಿಕಾರವನ್ನು [illegible] ಗಳಿಗೆ ಕೊಡುವ [illegible] ಬ್ರಿಟಿಷ್ ನ ಪಾರ್ಲಿ [illegible] ಪದಸ್ಥರಾದ ಶ್ರೀ [illegible] ಪಂಡಿತರವರಿಂದ ಹೇಳಲಾಗಿದೆ.

ಎಸ್. ಎ. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೆಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ ೦-೧೨-೦

ಮಹಾ ಸುಗಂಧರಾಜ ತೈಲ:—)
,, ಚಂದನಾದಿ ತೈಲ:—)
,, ಭೃಂಗಾಮಲಕ ತೈಲ:—)
— ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು

ಮಹಾಕೇತಕೀ ತೈಲ - ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ ಪ್ರೀ ಟಾನಿಕ್ ಸೀಸೆ ೨-೦-೦

ಪಂಚಾಮೃತ--ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವಿನಿ

ಮೈಸೂರ ಆಯುರ್ವೇದಿಕ್ ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈ ಸೂ ರು.

ರಾತ್ರಿ ಕಾಲದಲ್ಲಿ ವಿಮಾನ ಮೂಲಕ ಅಂಚೆ

ಬೊಂಬಾಯಿ, ದೆಹಲಿ, ಕಲ್ಕತ್ತಾ, ಮದ್ರಾಸು ಮತ್ತು ನಾಗಪುರ ಇವುಗಳ [illegible] ವೆ ರಾತ್ರಿ ಕಾಲದಲ್ಲಿ ಅಂಚೆಗಳನ್ನೂ [illegible] ಇತರ ಸಾಮಗ್ರಿಗಳನ್ನೂ ರವಾನಿಸಲು [illegible] ರತ ಸರಕಾರವು ಪರೀಕ್ಷಾರ್ಥವಾಗಿ [illegible] ಟು ಮಾಡಿದೆ.

ಸಂಸ್ಕೃತ ವಿಶ್ವ ವಿದ್ಯಾಲಯ ಸ್ಥಾಪನೆ

[illegible] ಸಂಸ್ಕೃತ ವಿಶ್ವ [illegible] ಸ್ಥಾಪಿಸಲು [illegible] ಪ್ರಚಾರ [illegible] ಪಡಿಸಿದ್ದಾರೆ.

ಪದ್ಯ ಪಠನ

ಮೊನ್ನೆ ಸಂಜೆ ಶ್ರೀನಿವಾಸ [illegible] ಪ್ರೌಢ ಶಾಲೆಯಲ್ಲಿ ಶ್ರೀ ಗೋಪಾಲ [illegible] ಅಡಿಗರವರಿಂದ ಪದ್ಯ ಪಠನವು ನೆರವೇರಿತು. ಅವರ ಗೋಪನ ಮುರಲಿ [illegible] ಕಾವ್ಯವು ರಸಭರಿತವಾಗಿತ್ತು. ವಿಶ್ವ [illegible] ಸಾಹಿತ್ಯ ಸಂಘದ ಉಪಾಧ್ಯಕ್ಷ ಶ್ರೀ [illegible] ಎಂ. ಶಂಕರ ನಾರಾಯಣರಾವ್‌ರವರು [illegible] ಧ್ಯಕ್ಷತೆ ವಹಿಸಿದ್ದರು.

ಗಾಂಧಿ ಸ್ಮಾರಕ ನಿಧಿ

ಸಂಸ್ಥಾನದಲ್ಲಿ ಮಹಾತ್ಮರ ಸ್ಮಾರಕ ನಿಧಿಗೆ ಇದೇ ೨೦ ನೇ ತಾ॥ ವರೆಗೆ [illegible] ರೂ. ೧೧,೨೨,೭೮೯–೧೩–೪ ಸಂಗ್ರಹವಾಗಿದೆ

ಬೇಕಾಗಿದೆ

೫೦೦೦ ರೂಪಾಯಿಗಳಿಗೆ ಒಂದು ಮನೆ ಕ್ರಯಕ್ಕೆ ಅಥವಾ ಭೋಗ್ಯಕ್ಕೆ ಕೂಡಲೇ ಬೇಕಾಗಿದೆ.

ಜಯ ಅಂಡ್ ಕಂಪೆನಿ
ಮನೆಗಳ ಮತ್ತು ಜಮೀನುಗಳ ಏಜೆಂಟರು
ಸಯ್ಯಾಜಿ ರಾವ್ ರಸ್ತೆ, ಮೈಸೂರು.

ರಾಜಕಮಲ ಟಾಕೀಸ್
21—1—49 ರಿಂದ
ಅಮೋಘವಾದ 6 ನೇ ವಾರ
ಪ್ರತಿ ದಿನ 2 ಆಟಗಳು
ಭಕ್ತ ಕುಂಬಾರ
(ಕನ್ನಡ)

ಪ್ರತಿ ದಿನ ೩ ಆಟಗಳು
26-1-49 ನೇ ಬುಧವಾರದಿಂದ
*** ರಾಜಾ ***
(ಹಿಂದಿ)
ಪಾತ್ರ: -- ಕರೋಲ್ [illegible], [illegible] ಗುಪ್ತ, ಪಂಡಿತ ಬದ್ರಿ ಪ್ರಸಾದ್ ಮತ್ತಿತರರು.
ಒಲಂಪಿಯಾ ಟಾಕೀಸ್

ಸಿಮೆಂಟ್ ಕೂಡಲೇ ಮಾ[illegible]ತ್ತೆ
—: ವಿವರಗಳಿಗೆ: -
ದಿ ಇಂಟರ್‌ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,
೧೪೭ಬಿ. ಪ್ರಿನ್ಸ್ ಆಫ್ ವೇಲ್ಸ್ ರಸ್ತೆ, ಮೈಸೂರು.
ಇವರಲ್ಲಿ ವಿಚಾರಿಸಿ

ಪ್ರಭಾ → **28-1-49 ರಿಂದ**
ದಿನವಹಿ ೩ ಆಟಗಳು
ಪತಿ ಸೇವಾ (ಹಿಂದಿ)
ಪಾತ್ರ - ಯಾಕೂಬ್, ಸುಲೋಚನ ಚಟರ್ಜಿ, ತ್ರಿಲೋಕ್ ಕಪೂರ್
— — ಈ ರಾತ್ರಿ — —
ಮಹಾತ್ಮಾ ಶಾಂತಿ ನಟಿಸಿರುವ **ದೇಖೋಜಿ** (ಹಿಂದಿ)
ಇದರೊಡನೆ ಕಾಶ್ಮೀರ ಯುದ್ಧದ ದೃಶ್ಯಗಳನ್ನು ತೋರಿಸಲಾಗುವುದು

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ 3 ಪ್ರದರ್ಶನಗಳು
ತಾ॥ ೨೫-೧-೪೯ರಿಂದ ೨ ದಿನಗಳು
R.K.O. ರವರ ಸಾಹಸಮಯ ಚಿತ್ರ
ಫೋರ್ಟ್ ಅಪೆಚಿ
FORT APACHE
(A Master piece from Indian Frontier. With Henry Fonda and Shirley Temple
Next C[illegible]
Walt Disney's
SONG OF THE SOUTH

ಫೋನ್ ನಂ. 792 ॥ವಂದೇಮಾತರಂ॥ ಇಂದಿನ ಸಂಚಿಕೆ ೩ ಕಾಸು

ಸಂಪುಟ ೭] ಬುಧವಾರ ೨೬-೧-೪೯ [ಸಂಚಿಕೆ ೧೬೬

ದಿವಾನರ ಹುದ್ದೆ ರದ್ದಾಗದಿರುವ ಬಗ್ಗೆ ವಿಷಾದ

ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಹನುಮಂತಯ್ಯನವರ ಹೇಳಿಕೆ

[ನಮ್ಮ ಫೋನ್] ಬೆಂಗಳೂರು ೨೫

ಪ್ರಜಾ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆ ಸಂಜೆ ಶ್ರೀ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ೬೦ ಮಂದಿ ಸದಸ್ಯರುಗಳೂ, ಸಚಿವರುಗಳಾದ ಶ್ರೀಗಳು ಕೆ ಸಿ ರೆಡ್ಡಿ, ಕೆ ಟಿ ಭಾಷ್ಯಂ, ಎಚ್ ಸಿ ದಾಸಪ್ಪ, ಮತ್ತು ಚನ್ನಿಗರಾಮಯ್ಯನವರೂ, ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ ಟಿ ಸುಬ್ರಮಣ್ಯಂರವರೂ ಹಾಜರಾಗಿದ್ದರು

ಶ್ರೀ ಹನುಮಂತಯ್ಯನವರು ಭಾಷಣ ಮಾಡಿ ಮಂತ್ರಿ ಮಂಡಲವು ಕೇವಲ ಆರು ತಿಂಗಳ ಕಾಲ ಮಾತ್ರ ಅಧಿಕಾರದಲ್ಲಿರುವುದಾಗಿಯೂ, ಅಷ್ಟರೊಳಗೆ ರಾಜ್ಯಾಂಗವನ್ನು ನಿರ್ಮಿಸಲಾಗುವುದೆಂದೂ ತಿಳಿಸಿದ್ದರು, ಈ ಬಗ್ಗೆ ಸರ್ಕಾರದವರು ಯಾವ ನಿಶ್ಚಯ ನಿರ್ಧಾರವನ್ನು ತಿಳಿಸಿಲ್ಲವೆಂದೂ, ೧೯೫೦ ರ ವರೆಗೂ ರಾಜ್ಯಾಂಗವು ಸಿದ್ಧವಾಗಲಾರದೆಂದೂ ತಿಳಿಸಿದರೆಂದು ಹೇಳಲಾಗಿದೆ ಈಗಿನ ಶಾಸನ ಸಭೆಗಳ ಕಾಲಾವಧಿಯನ್ನು ಮುಂದುವರಿಸುವ ವಿಷಯವನ್ನು ಸರ್ಕಾರದ ನಿರ್ಧಾರಕ್ಕೇ ಬಿಡಬೇಕೆಂದೂ, ನೂತನ ರಾಜ್ಯಾಂಗವು ಬರುವ ವರೆಗೂ ಚುನಾವಣೆ ನಡೆಸುವುದು ಸಾಧ್ಯವಿಲ್ಲವೆಂದೂ ಅವರು ಅಭಿಪ್ರಾಯ ಪಟ್ಟರು ದಿವಾನರ ಹುದ್ದೆಯನ್ನು ರದ್ದು ಮಾಡಬೇಕೆಂದು ತಮ್ಮ ಸಭೆ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ತೀರ್ಮಾನ ಮಾಡಿದ್ದರೂ, ಈ ಬಗ್ಗೆ ಸರ್ಕಾರದವರು ಯಾವ ಕಾರ್ಯಕ್ರಮವನ್ನು ಕೈಗೊಳ್ಳದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿದರು

ಅನಂತರ ಆಹಾರದ ಪರಿಸ್ಥಿತಿ, ಮಂತ್ರಿಮಂಡಲದ ಕಾರ್ಯಕ್ರಮ ಮತ್ತು ಅದು ಮುಂದುವರಿಸುವುದು-ಇವೇ ಮುಂತಾದ ವಿಚಾರಗಳಲ್ಲಿ ಚರ್ಚೆ ನಡೆಯಿತೆಂದು ತಿಳಿದು ಬಂದಿದೆ

ಈಗಿನ ಶಾಸನ ಸಭೆಗಳನ್ನು ಒಂದು ವರ್ಷ ಕಾಲ ಮುಂದುವರಿಸಬೇಕೆಂದು ಶ್ರೀ ಕೆ ಟಿ ಭಾಷ್ಯಂರವರು ತಿಳಿಸಿದರೆಂದೂ, ಈ ಬಗ್ಗೆ ಸರ್ಕಾರವು ಯಾವ ನಿರ್ಧಾರಕ್ಕೂ ಬಂದಿಲ್ಲವೆಂದೂ ಶ್ರೀ ಕೆ. ಸಿ ರೆಡ್ಡಿಯವರು ಹೇಳಿದರೆಂದೂ ಗೊತ್ತಾಗಿದೆ

ಸ್ಮರಣಾ ದಿನಾಚರಣೆ

ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಈದಿನ ಬೆಳಿಗ್ಗೆ ಧರ್ಮಾಂಬುದಿ ಕೆರೆ ಮೈದಾನದಲ್ಲಿ ಸ್ಮರಣಾ ದಿನಾಚರಣೆಯ ಮುಖ್ಯ, ಭಾರತದ ಧ್ವಜವನ್ನು ಹಾರಿಸಿದರು

ಇದೇ ಸಂಬಂಧದಲ್ಲಿ ನ್ಯಾಯಾಂಗ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಅರಳೇಪೇಟೆಯಲ್ಲಿ ನಿರ್ಮಿತವಾಗಿರುವ ನೂತನ ನಗರ ಕಾಂಗ್ರೆಸ್ ಸಮಿತಿ ಕಛೇರಿಯ ಕಾರ್ಯಾಲಯದ ಪ್ರಾರಂಭೋತ್ಸವವನ್ನು ಈದಿನ ಬೆಳಗ್ಗೆ ನೆರವೇರಿಸಿದರು

ಭಾರತದ ಸಚಿವರಿಂದ ಪರಿಶೀಲನೆ

ಭಾರತ ಸರ್ಕಾರದ ಮಾರ್ಗಾನುಕೂಲ ಸಚಿವರಾದ ಜನಾಬ್ ರಫಿ ಅಹಮದ್ ಕಿದ್ವಾಯಿರವರು ಈದಿನ ವಿಮಾನ ಮತ್ತು ಟೆಲಿಫೋನ್ ಕಾರ್ಖಾನೆಗಳಿಗೆ ಭೇಟಿ ಕೊಟ್ಟರು ಅವರು ನಾಳೆ ಬೆಳಿಗ್ಗೆ ತಿರುಚನಾಪಳ್ಳಿಗೆ ಪ್ರಯಾಣ ಬೆಳೆಸುವರು

ಸಕ್ಕರೆ ಕಾರ್ಖಾನೆಯಲ್ಲಿ ಕಾಕಂಬಿ ಟ್ಯಾಂಕಿನ ಸಿಡಿತ.

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ನಿನ್ನೆ ೧೫೦೦ ಟನ್ನುಗಳ ಕಾಕಂಬಿ ತುಂಬಿದ ಒಂದು ಟ್ಯಾಂಕ್ ಸಿಡಿದು, ಸಂಪೂರ್ಣವಾಗಿ ನಾಶವಾಯಿತು ಇದರಿಂದ ೨ ಲಕ್ಷ ರೂ ನಷ್ಟ ಸಂಭವಿಸಿದೆಯೆಂದು ಹೇಳಲಾಗಿದೆ ಪ್ರಾಣಹಾನಿಯೇನೂ ಆಗಲಿಲ್ಲ

ಸಂಸ್ಥಾನಗಳ ರೈಲು ಈಗಲೇ ಕೇಂದ್ರದ ವಶವಿಲ್ಲ

ಸಂಸ್ಥಾನಗಳಲ್ಲಿರುವ ರೈಲುಗಳನ್ನು ಕೇಂದ್ರಸರಕಾರವು ಈಗಲೇ ತನ್ನ ಅಧೀನಕ್ಕೆ ತೆಗೆದುಕೊಳ್ಳುವ ವಿಚಾರವು ಅವರ ಗಮನದಲ್ಲಿ ಇಲ್ಲವೆಂದು ಮದ್ರಾಸಿನಲ್ಲಿ ಮಾತನಾಡುತ್ತಾ ಮಾರ್ಗಾನುಕೂಲ ಮಂತ್ರಿ ರಫಿ ಅಹಮದ್ ಕಿದ್ವಾಯಿಯವರು ತಿಳಿಸಿದ್ದಾರೆ

ಭೂಪಾಲಿನ ಮಂತ್ರಿಗಳು ರಾಜೀನಾಮೆ ಕೊಡಬೇಕು

ಭೂಪಾಲಿನ ಮಂತ್ರಿ ಮಂಡಲದಲ್ಲಿರುವ ೪ ಮಂದಿ ಕಾಂಗ್ರೆಸ್ ಸಚಿವರುಗಳು ಕೂಡಲೇ ರಾಜೀನಾಮೆ ಕೊಡಬೇಕೆಂದು ಅಲ್ಲಿನ ಕಾಂಗ್ರೆಸ್ ಸಮಿತಿಯವರು ನಿರ್ಣಯ ಮಾಡಿದ್ದಾರೆ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಮಂತ್ರಿಗಳು ಮಂತ್ರಿಮಂಡಲದಲ್ಲಿರುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಅವರು ತಿಳಿಸಿರುತ್ತಾರೆ

ಅರಣ್ಯ ಅಧಿಕಾರಿಗಳ ವರ್ಗ

ಅರಣ್ಯ ಇಲಾಖಾ ಮುಖ್ಯಾಧಿಕಾರಿಗಳ ಟೆಕ್ನಿಕಲ್ ಅಸಿಸ್ಟೆಂಟರಾದ ಶ್ರೀ ಎಂ ಎಸ್ ರಾಮಸ್ವಾಮಿಯವರನ್ನು ಅರಣ್ಯ ಇಲಾಖಾ ಸಂಶೋಧನಾ ಕೇಂದ್ರದ ಅಧಿಕಾರಿಗಳಾಗಿಯೂ, ಚಿಕ್ಕಮಗಳೂರಿನ ಜಿಲ್ಲಾ ಅರಣ್ಯಾಧಿಕಾರಿಗಳಾದ ಜನಾಬ್ ಮಹಮದ್ ಅಹಮದ್‌ರವರನ್ನು ಭದ್ರಾವತಿಯ ಟಿಂಬರ್ ಅಧಿಕಾರಿಗಳಾಗಿಯೂ, ಶಿವಮೊಗ್ಗದ ಶ್ರೀ ಎಂ ಎಸ್ ಭಗವಾನ್‌ರವರನ್ನು ಚಿಕ್ಕಮಗಳೂರಿಗೂ, ಭದ್ರಾವತಿಯ ಶ್ರೀ ಬಿ ಹೆಚ್ ಗುಲಾಬ್ ಸಿಂಗ್‌ರವರನ್ನು ಮುಖ್ಯಾಧಿಕಾರಿಗಳ ಟೆಕ್ನಿಕಲ್ ಅಸಿಸ್ಟೆಂಟರಾಗಿಯೂ ವರ್ಗಾಯಿಸಲಾಗಿದೆ

ಮೈಸೂರಿಗೆ ೨ ಸಾವಿರ ಟನ್ ಗೋಧಿ

ಭಾರತ ಸರ್ಕಾರದವರು ಮುಂದಿನ ತಿಂಗಳಿಗೆ ೨ ಸಾವಿರ ಟನ್ ಗೋಧಿಯನ್ನು ಸಂಸ್ಥಾನಕ್ಕೆ ಕೊಡುತ್ತಾರೆ

○ ಕೋಲಾರದ ಮುನಸೀಫರಾದ ಶ್ರೀ ಎಸ್ ಎನ್ ಅನಂತ ರಾಜ್‌ರವರನ್ನು ಮಡಿಕೇರಿ ಮುನಸೀಫರಾಗಿಯೂ, ಬೆಂಗಳೂರು ವಕೀಲರಾದ ಶ್ರೀ ಬಿ ಹನುಮಂತ ಗೌಡರನ್ನು ಕೋಲಾರದ ಮುನಸೀಫರಾಗಿಯೂ ವರ್ಗಾಯಿಸಲಾಗಿದೆ

ಪಾಲಹಳ್ಳಿ ಸೀತಾರಾಮಯ್ಯನವರ ರಾಜೀನಾಮೆ

ತಿರಿಗೆದಾರರಿಗೆ ಸೇವೆ ಸಲ್ಲಿಸಲು ಸಾಧ್ಯವಿಲ್ಲವೆಂಬ ಕಾರಣ

ಮೈಸೂರು ೨೫

ರಾಜಧಾನಿಯ ಪೌರಸಭೆಯಲ್ಲಿ ಕಳೆದ ಕಾಲು ಶತಮಾನದಿಂದಲೂ ಸದಸ್ಯರಾಗಿ ಸೇವೆಸಲ್ಲಿಸುತ್ತಿರುವ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ತಮ್ಮ ಪೌರಸಭಾ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ ರಾಜಧಾನಿಯ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಗೆ ಪತ್ರವೊಂದನ್ನು ಬರೆದಿದ್ದಾರೆ ತಾವು ಪಾರ್ಟಿಯಲ್ಲಿ ಈಗ ಇರುವ ಪರಿಸ್ಥಿತಿಯ ದೆಸೆಯಿಂದ ತೆರಿಗೆದಾರರಿಗೆ ಸೇವೆ ಸಲ್ಲಿಸಲು ಸಾಧ್ಯವಿಲ್ಲವೆಂದು ಅವರ ಅಂತಕರಣವು ಹೇಳುತ್ತಿರುವುದಾಗಿ ಅವರು ತಿಳಿಸಿರುವರೆಂದು ಗೊತ್ತಾಗಿದೆ

ಈ ವಿಷಯವು ಮೊನ್ನೆ ನಡೆದ ಪಾರ್ಟಿ ಸಭೆಯಲ್ಲಿ ಚರ್ಚೆಗೆ ಬಂದಿತ್ತು ಆದರೆ ಶ್ರೀ ಸೀತಾರಾಮಯ್ಯನವರು ರಾಜಧಾನಿಯಲ್ಲಿ ಇರದಿದ್ದ ಪ್ರಯುಕ್ತ ಈ ವಿಚಾರವನ್ನು ಇತ್ಯರ್ಥಪಡಿಸಲು ಮುಂದಿನ ಸಭೆಗೆ ಮುಂದೂಡಲಾಯಿತು

ಸ್ಮರಣ ದಿನಾಚರಣೆ

ಈದಿನ ಪ್ರಾತಃಕಾಲ ಸುಬ್ಬರಾಯನ ಕೆರೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಗಾಗಿ ವಿದ್ಯಾರ್ಥಿ ಕಾಂಗ್ರೆಸ್ಸಿನವರು ನೆರೆದಿದ್ದರು ಶ್ರೀ ಕೆ ಪುಟ್ಟಸ್ವಾಮಿಯವರು ರಾಷ್ಟ್ರಧ್ವಜಾರೋಹಣ ಮಾಡಿದರು ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ಸ್ವಾತಂತ್ರ್ಯ ದಿನದ ಮಹತ್ವವನ್ನು ಕುರಿತು ಭಾಷಣ ಮಾಡಿದರು ಭಾರತ ಸೇವಾ ಸಮಾಜದವರಿಂದಲೇ ಜೀ ಪ್ರದರ್ಶನವಾಯಿತು

ಮಹಿಳಾ ಮಂಡಲಿ

ಬಾಪು ಸ್ಮರಣೆ ದಿನವನ್ನು ತಾ॥ ೩೦-೧-೪೯ ರ ಸಂಜೆ ಐದು ಗಂಟೆಗೆ ಶ್ರೀ ಆಂಡಾಳ್ ಮಂದಿರದಲ್ಲಿ ಮಹಿಳಾ ಮಂಡಲಿಯವರು ಆಚರಿಸುತ್ತಾರೆ ಸ್ವಾಮಿ ಶ್ರೀ ಸೋಮನಾಥಾನಂದಜಿಯವರು ಭಾಷಣ ಮಾಡುವರು

ದಿವಾನರೊಡನೆ ಪ್ರಜಾ ಮಂಡಲಿಗರ ಮಾತುಕತೆ

ಮೈಸೂರು ೨೫

ಮೈಸೂರು ಪ್ರಜಾ ಮಂಡಲದ ನಾಯಕರುಗಳಾದ ಶ್ರೀಗಳು ಎಂ ಚೆನ್ನರಾಜೇ ಅರಸ್ ಬಿ ಎನ್ ಪಿ ಕಟ್ಟಿ ಶರ್ಮ ಮತ್ತು ಎಂ ಎಸ್ ವಿಶ್ವನಾಥರವರುಗಳು ಬೆಂಗಳೂರಿನಲ್ಲಿ ನಿನ್ನೆ ದಿನ ದಿವಾನರನ್ನು ಭೇಟಿ ಮಾಡಿ, ಆಹಾರ ಮತ್ತು ಇತರ ವಿಷಯಗಳ ಬಗ್ಗೆ ಮಾತುಕತೆ ನಡೆಸಿದರೆಂದೂ ಸರ್ಕಾರವು ಈ ಬಗ್ಗೆ ತಕ್ಕ ಗಮನ ಕೊಡುವುದಾಗಿ ಅವರ ಭೇಟಿಯ ಅನಂತರ ತಿಳಿಸಿರುತ್ತಾರೆ

ಪಶ್ಚಿಮ ಪಂಜಾಬಿನಲ್ಲಿ ಗೌರ್ನರರ ಸರ್ಕಾರ

ಪಶ್ಚಿಮ ಪಂಜಾಬಿನ ಶಾಸನ ಸಭೆಯನ್ನು ರದ್ದು ಮಾಡಿ ಸರ್ಕಾರದ ಆಡಳಿತವನ್ನು ಗೌರ್ನರರು ವಹಿಸಬೇಕೆಂದು ಪಾಕಿಸ್ತಾನ ಗೌರ್ನರ್ ಜನರಲ್ಲರು ಒಂದು ವಿಶೇಷ ಆಜ್ಞೆಯನ್ನು ಹೊರಡಿಸಿರುತ್ತಾರೆ ಪಂಜಾಬಿನಲ್ಲಿ ಲಂಚ ರುಷುವತ್ತು ಮತ್ತು ಪಕ್ಷಭೇದಗಳು ಹೆಚ್ಚಾಗಿ, ಸರ್ಕಾರದ ಆಡಳಿತದಲ್ಲಿ ಬಿಗಿಯಿಲ್ಲವೆಂದೂ, ಮತ್ತು ಕೆಲವು ಜನರ ಉಪಯೋಗಕ್ಕಾಗಿ ಸರ್ಕಾರದ ಆಡಳಿತವು ನಡೆಯುತ್ತಿದೆಯೆಂದೂ ಮತ್ತು ಸಾರ್ವಜನಿಕರ ಅಭಿವೃದ್ಧಿ ಬಗ್ಗೆ ಯಾವ ಗಮನವನ್ನೂ ಅದು ಕೊಟ್ಟಿಲ್ಲವೆಂದೂ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಬರೋಡಾ ಮಹಾರಾಜರ ರಾಜಧನ ೪೦ ಲಕ್ಷ ರೂ.

ಬರೋಡಾ ಸಂಸ್ಥಾನಾಧೀಶರ ರಾಜಧನವನ್ನು ವರ್ಷಕ್ಕೆ ೪೦ ಲಕ್ಷ ರೂ ವೆಂದು ನಿರ್ಧರಿಸಲಾಗಿದೆಯೆಂದೂ ಅದರ ಮೇಲೆ ೧೫ ಲಕ್ಷ ರೂ ಅನ್ನು ಅವರು ಸಂಸ್ಥಾನಕ್ಕೆ ಕೊಡಬೇಕಾದ ಕೋಟ್ಯಾಂತರ ರೂ ಸಾಲಕ್ಕೆ ತೆಗೆದುಕೊಳ್ಳಲಾಗುವುದೆಂದೂ ಮತ್ತು ಮಹಾರಾಣಿ ಶಾಂತಾದೇವಿಯವರಿಗೆ ೧೫ ಲಕ್ಷ ರೂ ಸಲ್ಲುವುದೆಂದೂ ಹೇಳಲಾಗಿದೆ

'ಕೇಸರಿ' ಪತ್ರಿಕೆಗೆ ನೋಟೀಸ್

ಬೆಂಗಳೂರಿನಿಂದ ಪ್ರಕಟವಾಗುತ್ತಿರುವ 'ಕೇಸರಿ' ವಾರ ಪತ್ರಿಕೆಯಲ್ಲಿ ಕಳೆದ ನವೆಂಬರ್ ೨೮ ನೇ ತಾ॥ "ನಮ್ಮ ಸರ್ಕಾರ" ಎಂಬ ಶಿರೋನಾಮೆಯಲ್ಲಿ ಪ್ರಕಟವಾದ ಅಗ್ರಲೇಖನಕ್ಕಾಗಿ ಠೇವಣಿಯನ್ನು ಏಕೆ ಕೇಳಬಾರದೆಂಬುದಕ್ಕೆ ಇದೇ ೩೧ ನೇ ತಾ॥ ಒಳಗಾಗಿ ಸಮಜಾಯಿಷಿ ಕೊಡಬೇಕೆಂದು ಆ ಪತ್ರಿಕೆಯ ಪ್ರಕಾಶಕರಾದ ಶ್ರೀ ಆರ್. ಎಸ್ ನಾರಾಯಣರವರಿಗೆ ಸರ್ಕಾರದವರು ನೋಟೀಸ್ ಕೊಟ್ಟಿರುತ್ತಾರೆ

ಅಂಚೆ ಮುದ್ರೆಯಲ್ಲಿ ಮಹಾತ್ಮರ ಉಪದೇಶ

ಮಹಾತ್ಮರ ಪ್ರಥಮ ವಾರ್ಷಿಕ ದಿನಾಚರಣೆಯ ಜ್ಞಾಪಕಾರ್ಥವಾಗಿ ಇದೇ ೩೦ ನೇ ತಾ॥ ಅಂಚೆ ಇಲಾಖೆಯವರು ಎಲ್ಲ ಕಾಗದಗಳ ಮೇಲೂ "ಸಬ್ ಕೋ ಸನ್ಮತಿ ದೇ ಭಗವಾನ್" ಎಂಬ ಪದ್ಯವನ್ನೊಳಗೊಂಡ ಟಪ್ಪೆಯನ್ನು ಹಾಕಲು ಏರ್ಪಾಡು ಮಾಡಿರುವರು.

ಇಂಡೋನೇಷ್ಯದಿಂದ ಡಚ್ಚರನ್ನು ಓಡಿಸಲು ಕ್ರಮ

ಇಂಡೋನೇಷ್ಯವನ್ನು ಡಚ್ಚರು ಬಿಡುವಂತೆ ವಿಶ್ವಸಂಸ್ಥೆಯು ಮಾಡದಿದ್ದಲ್ಲಿ ಏಷ್ಯಾರಾಷ್ಟ್ರಗಳು ಅವಶ್ಯಕವಿದ್ದರೆ ಆರ್ಥಿಕ ಪ್ರತಿಕಾರವನ್ನು ಹಾಕಿ ಡಚ್ಚರನ್ನು ಇಂಡೋನೇಷ್ಯದಿಂದ ಬಲಾತ್ಕಾರವಾಗಿ ಓಡಿಸಬೇಕೆಂದು ಭಾರತದ ಮಹಾಪ್ರಧಾನಿ ಪಂಡಿತ ನೆಹರೂರವರು ತಿಳಿಸಿರುತ್ತಾರೆ ಏಷ್ಯಾವನ್ನು ಒಡಂಬಡಿಕೆಯಾಗಿ ಶೋಷಿಸುವುದನ್ನು ಯೂರೋಪ್ ರಾಷ್ಟ್ರಗಳು ಇನ್ನು ಮುಂದೆ ನಿಲ್ಲಿಸಬೇಕೆಂದೂ ಅವರು ಎಚ್ಚರಿಕೆ ಕೊಟ್ಟಿದ್ದಾರೆ

○ ಭೂಪಾಲಿನಲ್ಲಿ ನಡೆಯುತ್ತಿರುವ ಪೊಲೀಸರ ಅತ್ಯಾಚಾರವನ್ನು ಖಂಡಿಸಲು ಅಲ್ಲಿನ ೪ ಮಂದಿ ಕಾಂಗ್ರೆಸ್ ಕಾರ್ಯಕರ್ತರೂ ಮತ್ತು ಕುಮಾರಿ ಮೋಹಿನಿ ದೇವಿಯವರೂ ಆಮರಣಾಂತ ಉಪವಾಸವನ್ನು ಮೊನ್ನೆಯಿಂದ ಕೈಗೊಂಡಿದ್ದಾರೆ

ರಾಜಘಾಟಿನಲ್ಲಿ ಸರ್ವೋದಯ ದಿನಾಚರಣೆ

ಭಾರತದ ಆದ್ಯಂತದಲ್ಲೂ ಈ ತಿಂಗಳು ೩೦ ನೇ ತಾರೀಖು ಮಹಾತ್ಮ ಗಾಂಧೀಜಿಯವರ ಪುಣ್ಯ ದಿನದ ಜ್ಞಾಪಕಾರ್ಥವಾಗಿ ಸರ್ವೋದಯ ದಿನಾಚರಣೆಯು ನಡೆಯುವುದಷ್ಟೆ ಆ ದಿನ ಗಾಂಧೀಜಿಯವರ ಚಿತೆಯು ದಹನವಾದ ದೆಹಲಿಯ ರಾಜಘಾಟಿನಲ್ಲಿ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿದೆ ಆ ಪ್ರಕಾರ ೩೦ ನೇ ತಾರೀಖು ಬೆಳಿಗ್ಗೆ ೬-೪೫ ಘಂಟೆಗೆ ಪ್ರಾರ್ಥನೆ ಮತ್ತು ಗೀತಾ ಪಾರಾಯಣ, ಬೆಳಿಗ್ಗೆ ೭ ರಿಂದ ಸಂಜೆ ೭ ರ ವರೆಗೆ ಸೂತ್ರ ಯಜ್ಞ, ಮಾರನೇ ದಿನ ಬೆಳಿಗ್ಗೆ ೧೦-೩೦ ಕ್ಕೆ ಗಾಂಧಿ ಮಂಟಪದಲ್ಲಿ ಕಲಾ ಪ್ರದರ್ಶನ ಬೆಳಿಗ್ಗೆ ೯-೩೦ ರಿಂದ ಮಧ್ಯಾಹ್ನ ೧ ಘಂಟೆ ವರೆಗೆ ೫೦೦ ಚರಕಗಳಿಂದ ಸಾಮೂಹಿಕ ನೂಲುವಿಕೆ ಸಂಜೆ ೫ ಘಂಟೆಗೆ ಆಚಾರ್ಯ ವಿನೋಬಾ ಭಾವೆಯವರ ಭಾಷಣ ಆಮೇಲೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರ ಸೂಚನೆ ಪ್ರಕಾರ ಸಂದೇಶದ ಪಠನ

ಗಾಂಧೀಜಿಯವರು ತಮ್ಮ ಜೀವಿತದ ಕಾಲದಲ್ಲಿ ಜಗತ್ತಿನ ಪ್ರಮುಖರಿಗೆ ಸ್ವಹಸ್ತಾಕ್ಷರದಲ್ಲಿ ಬರೆದ ಪತ್ರಗಳನ್ನು ರಾಜಘಾಟಿನ ಗಾಂಧಿ ಮಂಟಪದಲ್ಲಿ ಪ್ರದರ್ಶಿಸಲಾಗುವುದು.

ಮದ್ರಾಸ್ ಬಸ್ ಕೆಲಸಗಾರರ ಮೇಲೆ ಲಾಠಿ ಪ್ರಯೋಗ

ಮದ್ರಾಸಿನ ಸಿಟಿ ಬಸ್ ಕೆಲಸಗಾರರು ಹೆಚ್ಚಿಗೆ ಸಂಬಳ ಸಾರಿಗೆ ಬಗ್ಗೆ ಮೊನ್ನೆಯಿಂದ ಮುಷ್ಕರ ಹೂಡಿದ್ದಾರೆ ಆದರೂ ಪೋಲೀಸ್ ಪಾರ್ಟಿ ಡ್ರೈವರುಗಳ ಸಹಾಯದಿಂದ ೧೫೦ ಬಸ್ಸುಗಳು ಓಡಾಡುತ್ತಿವೆ. ಶೆಡ್ಡಿನಿಂದ ಬಸ್ಸುಗಳನ್ನು ಹೊರಕ್ಕೆ ತರಲು ಅಡ್ಡಿ ಪಡಿಸುತ್ತಿದ್ದ ಮುಷ್ಕರಗಾರರ ಮೇಲೆ ಪೋಲೀಸರು ನಿನ್ನೆ ಎರಡು ಬಾರಿ ಲಾಠಿ ಪ್ರಯೋಗ ಮಾಡಿದರು. ಬಸ್ಸುಗಳು ಸಂಚಾರ ಮಾಡದಂತೆ ಕೆಲವು ಮುಷ್ಕರಗಾರರು ರಸ್ತೆಗಳಲ್ಲಿ ಮಲಗಿದ್ದರು. ಅವರುಗಳನ್ನು ಪೋಲೀಸರು ಎತ್ತಿಕೊಂಡು ಹೋದರು ಈ ಬಗ್ಗೆ ೧೩೫ ಜನರನ್ನು ದಸ್ತಗಿರಿ ಮಾಡಲಾಗಿದೆ.

||ಶ್ರೀ||

ಗಣೇಶಾ ಟಾಕೀಸ್

೨೮-೧—49ರಿಂದ

೧ ವಾರ ಮಾತ್ರ ಪ್ರತಿದಿನ ೩ ಆಟಗಳು

ಅಲಿ ಬಾಬಾ

ಮತ್ತು ೪೦ ಜನ ಕಳ್ಳರು

(ತಮಿಳು)

ಪಾತ್ರ § ಪುಳಿಮೂಟೆ, § ಕೃಷ್ಣನ್ ಮತ್ತು § ಮಧುರಂ

ಮುಂದಿನ ಆಕರ್ಷಣೆ

4-2-49 ರಿಂದ

ಕನ್ನಿಕಾ (ತಮಿಳು)

Edited, printed and published by V R Nagarajan at the Sadhvi Press, D Subbiah Road Mysore

ಶೃಂಗೇರಿಗೆ ಮದ್ರಾಸ್ ಗೌರ್ನರ್ ಭೇಟಿ

ಮದ್ರಾಸಿನ ಗೌರ್ನರ್ ಆದ ಭಾವನಗರದ ಮಹಾರಾಜರು ತಮ್ಮ ಪರಿವಾರದೊಡನೆ ಮೊನ್ನೆ ದಿನ ಶೃಂಗೇರಿಗೆ ಆಗಮಿಸಿದರು ಊರಿನ ಮಹಾಜನಗಳಲ್ಲದೆ ಅವರನ್ನು ಪೌರಸಭೆಯವರು ಸ್ವಾಗತಿಸಿದರು. ಶೃಂಗೇರಿ ಮಠದ ಮರ್ಯಾದೆಗಳೂ ಸಹ ಸಲ್ಲಿಸಲ್ಪಟ್ಟವು. ತನಂತರ ಅವರು ಮಠಕ್ಕೆ ಆಗಮಿಸಿ, ಶ್ರೀ ದಿವಾನರವರು ಸೇವೆ ಸಲ್ಲಿಸಿದರು ಜಗದ್ಗುರುಗಳಿಗೆ ತಮ್ಮ ಪ್ರಣಾಮಗಳನ್ನು ಗೌರ್ನರು ಸಲ್ಲಿಸಿ, ಅವರಿಗೂ, ಉತ್ತರಾಧಿಕಾರಿಗಳಿಗೂ ೫೦೧ ಮತ್ತು ೩೦೧ ರೂ ಗಳನ್ನು ಮರ್ಯಾದೆಗಾಗಿ ಕೊಟ್ಟರು ಜಗದ್ಗುರುಗಳು ಗೌರ್ನರವರಿಗೆ ಬಂಗಾರದ ಜರಿಯ ಶಾಲುಗಳನ್ನೂ ಭಾವನಗರದ ಮಹಾರಾಣಿಯವರಿಗೆ ಬಂಗಾರದ ಅಂಚಿನ ಸೀರೆಯನ್ನೂ ದಯಪಾಲಿಸಿದರು ಅನಂತರ ಎಲ್ಲರೂ ಹಾಸನಕ್ಕೆ ತೆರಳಿದರು.

ಅಣು ಬಾಂಬು ಯಂತ್ರಕ್ಕೆ ೪೦೦ ಜನ ಪ್ರೊಫೆಸರುಗಳು

ಅಮೆರಿಕದ ಎಲ್ಲ ವಿಶ್ವ ವಿದ್ಯಾಲಯಗಳಲ್ಲೂ ಅಣು ಬಾಂಬು ತಯಾರಿಕಾ ಯಂತ್ರವು ೪೦೦ ಜನ ಪ್ರೊಫೆಸರುಗಳ ಮೇಲ್ವಿಚಾರಣೆಯಲ್ಲಿದೆಯೆಂದೂ ಬ್ರಿಟನ್ನಿನ ಸುಪ್ರಸಿದ್ಧ ವಿಜ್ಞಾನಿ ಸರ್ ಲಾರೆನ್ಸ್‌ರವರು ತಿಳಿಸಿರುತ್ತಾರೆ.

ಅಮೆರಿಕದಲ್ಲಿ ೩೪೫ ಲಕ್ಷ ಕೋಟಿ ಸಿಗರೇಟುಗಳು

ಅಮೆರಿಕದಲ್ಲಿ ಕಳೆದ ವರ್ಷ ೩೪೫ ಲಕ್ಷ ಕೋಟಿ ಸಿಗರೇಟುಗಳನ್ನು ತಯಾರಿಸಲಾಗಿತ್ತೆಂದೂ, ಪ್ರತಿಯೊಬ್ಬನು ವರ್ಷಕ್ಕೆ ೧೫೫ ಪ್ಯಾಕೆಟ್ ಸಿಗರೇಟನ್ನು ಉಪಯೋಗಿಸಿರುವುದಾಗಿಯೂ ವರದಿಯಾಗಿದೆ.

ಟ್ರಾಫಿಕ್ ಉಲ್ಲಂಘನೆಗೆ ದಂಡ

ಮೈಸೂರು ೨೬

ಫುಟ್‌ಪಾತಿನಲ್ಲಿ ನಡೆಯದೆ ಮಧ್ಯ ರಸ್ತೆಯಲ್ಲಿ ತಿರುಗಾಡಿದುದಕ್ಕಾಗಿ ಫ್ರಾನ್ಸಿಸ್ ಬ್ರಿಸ್ಟೊ ಮತ್ತು ಇತರ ಆರು ಮಂದಿಗೆ ತಲಾ ೧ ರೂ ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದುದಕ್ಕಾಗಿ ಸುಬ್ಬಯ್ಯ ಮತ್ತು ಇತರ ೫ ಮಂದಿಗೆ ತಲಾ ೨ ರೂ ದಂಡವನ್ನು ನಗರದ ದ್ವಿತೀಯ ನ್ಯಾಯಾಧೀಶರು ವಿಧಿಸಿರುತ್ತಾರೆ

ಓವರ್‌ಲೋಡ್ ಮಾಡಿದರೆಂಬ ಆಪಾದನೆಯ ಮೇಲೆ ಲಾರಿ ಡ್ರೈವರ್ ಕೃಷ್ಣನಾಯರ್, ಚಿಕ್ಕಯ್ಯ, ಮಹಮದ್ ಷರೀಫ್, ಇವರಿಗೆ ೩೦, ೧೫, ೧೫ ರೂ ದಂಡವನ್ನೂ ಲಾರಿ ಮಾಲೀಕರಾದ ಶ್ರೀ ಟಿ. ಸಿ ಬೋರಯ್ಯನವರಿಗೆ ರೂ ೧೦೪-೧೪-೦ ದಂಡವನ್ನೂ ವಿಧಿಸಲಾಗಿದೆ

ದರ್ಬಾನ್ ದಂಗೆಯಲ್ಲಿ ಅನಾಹುತವೆಷ್ಟು?

ಕಳೆದ ವಾರ ದಕ್ಷಿಣ ಆಫ್ರಿಕದ ದರ್ಬಾನ್ ನಗರದಲ್ಲಿ ಆಫ್ರಿಕನ್ನರು ಅಲ್ಲಿ ವಾಸಿಸುತ್ತಿರುವ ಭಾರತೀಯರ ಮೇಲೆ ನಡೆಸಿದ ಅತ್ಯಾಚಾರದಿಂದ ಸುಮಾರು ೧೩೬ ಮಂದಿ ಮಡಿದು, ೧೯೭೬ ಮಂದಿಗೆ ತೀವ್ರ ಗಾಯಗಳಾಗಿವೆ ಈ ಪೈಕಿ ೮೩ ಜನ ಆಫ್ರಿಕನ್ನರು ಸತ್ತಿದ್ದಾರೆ ಅವರಲ್ಲಿ ೮ ಮಂದಿ ಸ್ತ್ರೀಯರು ೫೩ ಜನ ಭಾರತೀಯರು ಮಡಿದಿದ್ದಾರೆ ಅವರ ಪೈಕಿ ೩ ಜನ ಮಹಿಳೆಯರು. ೩೫೦೦ ಸಂಸಾರ ನಿರ್ಗತಿಕವಾಗಿ ಶಾಲೆಗಳಲ್ಲಿ ವಾಸಿಸುತ್ತಿದ್ದಾರೆ

ಫುಟ್‌ಬಾಲ್ ಆಟಗಾರರಿಗೆ ನಿವೃತ್ತಿ ವೇತನ

ಬ್ರಿಟನ್ನಿನ ಫುಟ್‌ಬಾಲ್ ಆಟಗಾರರು ನಿವೃತ್ತಿಯಾದಮೇಲೆ ಅವರುಗಳು ಎಷ್ಟು ವರ್ಷ ಆಟವಾಡಿದ್ದರೋ ಅಷ್ಟನ್ನು - ಪ್ರತಿ ವರ್ಷವೂ ೫೦ ಪೌಂಡುಗಳನ್ನು ವೇತನವಾಗಿ ಕೊಡಲು ಅಲ್ಲಿನ ಫುಟ್‌ಬಾಲ್ ಲೀಗು ನಿರ್ಧರಿಸಿದೆ ಇದರಿಂದ ಬ್ರಿಟನ್ನಿನ ಫುಟ್‌ಬಾಲ್ ಕ್ಲಬ್ಬುಗಳಿಗೆ ವರ್ಷಕ್ಕೆ ೧ ಲಕ್ಷ ಪೌಂಡು ಖರ್ಚಾಗುವುದು

ಶಾಂತಿಗಾಗಿ ಸತಿ ಸುನ್‌ಯಾತ್‌ಸೇನರವರ ಸಹಾಯ

ಚೀಣದಲ್ಲಿ ಶಾಂತಿ ನೆಲೆಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಸಹಾಯಮಾಡಬೇಕೆಂದು ಚೀಣಾ ರಿಪಬ್ಲಿಕ್ಕಿನ ಸಂಸ್ಥಾಪಕರಾದ ಸುನ್‌ಯಾತ್‌ಸೇನರವರ ಪತ್ನಿಯವರಿಗೆ ಅಧ್ಯಕ್ಷ ಲಿಸುಂಗ್‌ಜೇನರವರು ಮನವಿಮಾಡಿ ತಮ್ಮ ಪ್ರತಿನಿಧಿಗಳನ್ನು ಅವರಲ್ಲಿಗೆ ಕಳುಹಿಸಿದ್ದಾರೆ

||ಶ್ರೀ||

ಗಾಯತ್ರೀ ಟಾಕೀಸ್

ತಾ||27-1-49ರಿಂದ ೩ ದಿನಗಳು

ಪ್ರತಿ ದಿನ 3 ಪ್ರದರ್ಶನಗಳು

Walt Disney's First Live Action Comedy Feature in Technicolor,

Song of The South

Including animated tales of "Uncle Remill"

ಸಾಂಗ್ ಆಫ್ ದಿ ಸೌತ್

(ವರ್ಣರಂಜಿತ ಚಿತ್ರ)

Morning Shows at 10-30 From 29-1-49 for 2 days

20th's **NOB-HILL** in Glorious Technicolour

ತ್ಯಾಗರಾಜ ಮತ್ತು ಪುರಂದರದಾಸರ ದಿನಾಚರಣೆ

ನಂಜನಗೂಡು

ಎಂ. ಎಸ್. ಮೂರ್ತಿಗಳ ಶಿಷ್ಯ ಮಂಡಲಿಯ ಆಶ್ರಯದಲ್ಲಿ ಶ್ರೀ ತ್ಯಾಗರಾಜರ ಆರಾಧನೆ ಮತ್ತು ಶ್ರೀ ಪುರಂದರ ದಾಸರ ಪುಣ್ಯ ದಿನಾಚರಣೆಗಳ ಪ್ರಯುಕ್ತ ಸಾಯಂಕಾಲ ೬-೩೦ ಗಂಟೆಗೆ ಮಹಿಳಾ ಸೇವಾ ಸಮಾಜದಲ್ಲಿ ಸಂಗೀತ ನಡೆಯುವುದು. ಹೆಂಗಸರಿಗೆ ಮಾತ್ರ ಪ್ರವೇಶ ... ಬೆಳಿಗ್ಗೆ ೯ ಗಂಟೆಗೆ ಶ್ರೀ ಶಂಕರ ಮಠದ ಹತ್ತಿರವಿರುವ ಶ್ರೀ ಸ್ವರಾವಧಾನಿಗಳ ಪಾಠಶಾಲೆಯಲ್ಲಿ ಪೂಜೆ ಮತ್ತು ಸಂಜೆ ... ಗಂಟೆಗೆ ಸಂಗೀತ ನಡೆಯುವುವು

ಹುಲಿಗಳನ್ನು ಕೊಲ್ಲಲು ಸೈನಿಕರು

ಅಸ್ಸಾಂ ಪ್ರಾಂತ್ಯದ ಮನೇರಿ ಮಂಗ...ದ ಪ್ರದೇಶದಲ್ಲಿ ಹುಲಿಗಳ ಹಾವಳಿ ವಿಶೇಷವಾಗಿ ೧೨ ಜನರನ್ನು ತಿಂದು ಹಾಕಿರುವುದರಿಂದ ಅವುಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರದವರು ಸೈನಿಕರನ್ನು ಅಲ್ಲಿಗೆ ಕಳುಹಿಸಿದ್ದಾರೆ,

ಪ್ರತಿ ದಿನ ೪ ಆಟಗಳು

26-1-49ನೇ ಬುಧವಾರದಿಂದ

* ರಾ ಜಾ *

(ಹಿಂದಿ)

ಪಾತ್ರ: - ಕಿಶೋರ್ ಸಾಹು, ಶ್ರೀಮ... ದಾಸ್ ಗುಪ್ತ, ಪಂಡಿತ್ ಬದ್ರಿ ಪ್ರಸಾದ್ ಮತ್ತಿತರರು

ಒಲಂಪಿಯಾ ಟಾಕೀಸ್

ಶ್ರೀ ಗಣೇಶಾ ಟಾಕೀಸ್

Reviving their Morning Shows Programme

3 days from 28—1—49 at 10-30 a m.

Count of Monte Cristo

28—1—49 ರಿಂದ

ಬೆಳಗಿನ ಪ್ರದರ್ಶನ

೩ ದಿನಗಳ ಮಾತ್ರ ಬೆಳಿಗ್ಗೆ ೧೦-೩೦ ಗಂಟೆಗೆ

ಕೌಂಟ್ ಆಫ್ ಮಾಂಟಿ ಕ್ರಿಸ್ಟೋ

ಹರಾಜು ಪ್ರಕಟಣೆ

ಚಾಮುಂಡಿ ಬೆಟ್ಟದ ಪಾದದ ಬಳಿ ಇರುವ ಪಿಂಜ್ರಾಪೋಲ್ ತೋಟದಲ್ಲಿರುವ ಹುಣಸೆ, ಮಾವು, ಬೇಲ, ನೇರಳೆ ಫಸಲುಗಳನ್ನು ಈ ಲಾಗಾಯ್ತು ಮೂರು ವರ್ಷ ಗುತ್ತಿಗೆಗೆ ೪-೨-೪೯ನೇ ಶುಕ್ರವಾರ ಬೆಳಿಗ್ಗೆ ೮-೩೦ ಗಂಟೆಗೆ ತೋಟದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಇಷ್ಟವುಳ್ಳವರು ಬಂದು ಹರಾಜಿನಲ್ಲಿ ರೂಲ್ಸ್ ಪ್ರಕಾರ ಬಿಡ್ ಮಾಡಬಹುದು.

(ಸಹಿ) ಎಂ. ರಾಮಸ್ವಾಮಿ

ಗೌರವ ಕಾರ್ಯದರ್ಶಿ

ಪ್ರಭಾ → 28-1-49ರಿಂದ

ದಿನವಹಿ ೩ ಆಟಗಳು

ಪತಿ ಸೇವಾ (ಹಿಂದಿ)

ಪಾತ್ರ ಯಾಕೂಬ್, ಸುಲೋಚನ ಚಟರ್ಜಿ, ತ್ರಿಲೋಕ್ ಕಪೂರ್

ಈ ರಾತ್ರಿ

ಮುಮ್ತಾಜ್ ಶಾಂತಿ ನಟಿಸಿರುವ ದೇಖೋಜಿ (ಹಿಂದಿ)

ಇದರೊಂದಿಗೆ ಕಾಶ್ಮೀರ ಯುದ್ಧದ ದೃಶ್ಯಗಳನ್ನು ತೋರಿಸಲಾಗುವುದು

ಫೋನ್ ನಂ. 792 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು.

ಸಂಪುಟ ೭] ಗುರುವಾರ ೨೭-೧-೪೯ [ಸಂಚಿಕೆ ೧೬೭

ಸ್ಮರಣಾ ದಿನಾಚರಣೆ

ಮೈಸೂರು ೨೭

ನಿನ್ನೆ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ...ಎಸ್ ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಸ್ಮರಣಾ ದಿನಾಚರಣೆಯ ಸಂಬಂಧವಾಗಿ ಸಾರ್ವಜನಿಕ ಸಭೆ ನಡೆಯಿತು. ಪ್ರಾರ್ಥನೆಯಾದನಂತರ, ಅಧ್ಯಕ್ಷರು ಭಾಷಣ ಮಾಡಿ, ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಆಚರಿಸಲಾಗುತ್ತಿದ್ದ ಸ್ವಾತಂತ್ರ್ಯ ದಿನಾಚರಣೆ ಮತ್ತು ಇಂದಿನ ಸ್ಮರಣಾ ದಿನೋತ್ಸವಗಳ ಮಹತ್ವವನ್ನು ... ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಎಲ್ಲರೂ ಮಹಾತ್ಮರ ತತ್ವಗಳನ್ನು ಪರಿಪಾಲಿಸಬೇಕೆಂದು ತಿಳಿಸಿದರು ... ಸ್ವಾತಂತ್ರ್ಯ ಸಾಧನೆಗಾಗಿ ಮಡಿದ ಹುತಾತ್ಮರ ಆತ್ಮಕ್ಕೆ ಶಾಂತಿ ಕೋರಲು ... ಒಂದು ನಿಮಿಷ ಕಾಲ ಮೌನದಿಂದ ... ನಿರ್ಣಯ ಮಾಡಿದರು.

ಮುಕ್ತಾಯ ಭಾಷಣ

ರಾಜಧಾನಿಯ ಸೆಂಟ್ ಫಿಲೋಮಿನಾ ಕಾಲೇಜ್ ನಿಲಯ ಸಂಘದ ಮುಕ್ತಾಯ ಭಾಷಣವನ್ನು ವಿಶ್ವವಿದ್ಯಾಲಯದ ... ಉಪಸ್ಥಾನಪತಿಗಳಾದ ಶ್ರೀ ... ಕಸ್ತೂರಿ ರಾಜ ಚೆಟ್ಟಿಯವರು ನಾಳೆ ಬೆಳಿಗ್ಗೆ ೧೦ ಗಂಟೆಗೆ ಮಾಡುವರು

ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಸಭೆ

ಮೈಸೂರು ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಸಭೆಯು ನಿನ್ನೆ ಸಂಜೆ ಶ್ರೀ ... ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಕಾರ್ಯದರ್ಶಿ ಶ್ರೀ ... ಎಲ್ ಸ್ವಾಮಿಯವರು ಕಳೆದ ವರ್ಷದ ವರದಿ ಮತ್ತು ಲೆಕ್ಕಾಚಾರ ಪಟ್ಟಿಯನ್ನು ಓದಿದರು ಅವುಗಳನ್ನು ಅಂಗೀಕರಿಸಿದ ನಂತರ, ಬರುವ ವರ್ಷಕ್ಕೆ ... ಎನ್ ಶ್ರೀನಿವಾಸಮೂರ್ತಿಯವರನ್ನು ಸಂಘದ ಅಧ್ಯಕ್ಷರನ್ನಾಗಿಯೂ, ಶ್ರೀ ಟಿ. ... ಕೃಷ್ಣರಾಯರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ ಎನ್ ಎನ್ ಶಾಸ್ತ್ರಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು

ಮೈಸೂರು ಸರ್ಕಾರದ ಪ್ರಕಟಣಾಧಿಕಾರಿಗಳಾದ ಶ್ರೀ ಜಿ.ವಿ ರಾಜರತ್ನಂರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು

ಬಿಡುಗಡೆಯಾಗಿದ್ದ ೭ ಜನ ಕಮ್ಯೂನಿಸ್ಟರ ದಸ್ತಗಿರಿ

ಬೆಂಗಳೂರು ಜೈಲಿನಿಂದ ಬಿಡುಗಡೆ ... ಗಡೀಪಾರು ಮಾಡಲ್ಪಟ್ಟ ೭ ಜನ ಕಮ್ಯೂನಿಸ್ಟರು ನಿಗರೇಟು ಕಾರ್ಖಾನೆ ... ಕ್ರಾಂತಿಕರ ಪತ್ರಪತ್ರಿಕೆಗಳನ್ನು ಹಂಚುತ್ತಿದ್ದರೆಂದು ಅವರುಗಳನ್ನು ದಂಡಿನ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ ... ಪೇಟೆಯಲ್ಲಿರುವ ಕಮ್ಯೂನಿಸ್ಟ್ ... ನಿಲಯವನ್ನು ಪೊಲೀಸರು ಶೋಧಿಸಿ, ... ಪತ್ರಪತ್ರಿಕೆಗಳನ್ನು ವಶಪಡಿಸಿಕೊಂಡಿರುತ್ತಾರೆ

ಸೈನಿಕರಿಗೆ ರಾಜಕೀಯ ಅಭ್ಯಾಸ ಬೇಡ

ಭಾರತದ ಪ್ರಧಾನ ಸೇನಾಪತಿ ಜನರಲ್ ... ಕಾರಿಯಪ್ಪನವರು ಮೊನ್ನೆ ದಿನ ... ಸಮ್ಮೇಳನವೊಂದನ್ನು ಕರೆದು ಅದ ... ಸೈನಿಕರು ರಾಜಕೀಯ ಅಭ್ಯಾಸ ... ವೆಂದೂ ಜನತಾ ಸೇನೆಯೇ ... ಯವೆಂದೂ ತಿಳಿಸಿದರು

ಮೈಸೂರಿಗೆ ಮದರಾಸ್, ಬೊಂಬಾಯಿ ಕರ್ನಾಟಕ ಪ್ರದೇಶಗಳು

ಕೆ. ಎಂ. ಮುನ್ಷಿಯವರ ಸೂಚನೆ

ಮೈಸೂರಿಗೆ ಬೊಂಬಾಯಿ ಮತ್ತು ಮದರಾಸ್ ಪ್ರಾಂತ್ಯಗಳ ಕರ್ನಾಟಕ ಪ್ರದೇಶಗಳು ಸೇರುವುದು ಆವಶ್ಯಕವೆಂದೂ, ಇದರಿಂದ ಆಡಳಿತದ ತೊಂದರೆಗಳು ಕಡಿಮೆಯಾಗುವುವೆಂದೂ ಶ್ರೀ ಕೆ ಎಂ ಮುನ್ಷಿಯವರು ತಿಳಿಸಿರುತ್ತಾರೆ ಮೈಸೂರಿನಲ್ಲಿ ಈಗಾಗಲೇ ಸಿದ್ಧವಾದ ರಾಜಧಾನಿ, ವಿಶ್ವವಿದ್ಯಾಲಯ ಮತ್ತು ಹೈಕೋರ್ಟುಗಳು ಇರುವುದರಿಂದ ಕರ್ನಾಟಕ ಪ್ರಾಂತ್ಯಕ್ಕೆ ವಿಶೇಷ ಉಪಯೋಗವಾಗ ಪುದೆಂದೂ, ಮೈಸೂರು ಮಹಾರಾಜರವರ ಇಡೀ ಕರ್ನಾಟಕಕ್ಕೆ ಶಾಸನ ಬದ್ಧ ಅಧಿಪತಿಗಳಾಗಬೇಕೆಂದೂ ಅವರು ಹೇಳಿದ್ದಾರೆ

ಚೀಣದ ನೂತನ ಸರ್ಕಾರಕ್ಕೆ ಭಾರತದ ಮಾನ್ಯತೆ

ಚೀಣದಲ್ಲಿ ಕಮ್ಯೂನಿಸ್ಟರಿಗೂ ಸರ್ಕಾರಕ್ಕೂ ಶಾಂತಿ ಸಂಧಾನದ ಮಾತು ಕತೆಗಳು ನಡೆದು ಅಲ್ಲಿ ಸ್ಥಾಪಿತವಾಗಲಿರುವ ಸಮ್ಮಿಶ್ರ ಸರ್ಕಾರಕ್ಕೆ ಭಾರತವು ಮಾನ್ಯತೆ ಕೊಡುವುದೆಂದು ಹೇಳಲಾಗಿದೆ. ಅಲ್ಲಿ ನೂತನ ಸರ್ಕಾರವನ್ನು ಏರ್ಪಡಿಸಲು ಪೈಪಿಂಗಿನಲ್ಲಿ ಮಾತು ಕತೆಗಳು ಕೂಡಲೇ ಪ್ರಾರಂಭವಾಗುವುವೆಂದು ವರದಿಯಾಗಿದೆ

ಸತಿ ಚಿಯಾಂಗರು ಅಮೆರಿಕದಲ್ಲಿ ನೆಲೆಸುವರೇ

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕರವರ ಮಡದಿ ಸತಿ ಚಿಯಾಂಗರು ಅಮೆರಿಕದ ಪ್ರಜೆಯಾಗಿ ಅಲ್ಲೇ ನೆಲೆಸಲು ಪ್ರಯತ್ನ ನಡೆಸುತ್ತಿದ್ದಾರೆಂದೂ, ಅಲ್ಲಿನ ವೆಲೆಸ್ಲಿ ಮಹಿಳಾ ಕಾಲೇಜಿನ ಉಪಾಧ್ಯಾಯಿನಿಯರಾಗಲು ಅವರಿಗೆ ಆಹ್ವಾನ ಬಂದಿದೆಯೆಂದೂ ವರದಿಯಾಗಿದೆ.

ರಷ್ಯಾದಲ್ಲಿ ಬ್ರೆಡ್ಡಿಗೆ ಹಣ ಕೊಡಬೇಕಾಗಿಲ್ಲ

ರಷ್ಯಾದ ಎಲ್ಲ ಸಹಕಾರ ಸಂಘಗಳಲ್ಲಿ ಯಾರು ಬೇಕಾದರೂ ಹೋಗಿ ದುಡ್ಡು ಕೊಡದೆ ತನಗೆ ಬೇಕಾದಷ್ಟು ಬ್ರೆಡ್ಡನ್ನು ಪಡೆಯಬಹುದೆಂದು ಹೇಳಲಾಗಿದೆ ದೇಶದಲ್ಲಿರುವ ಲಕ್ಷಾಂತರ ಸಹಕಾರ ಸಂಘಗಳಲ್ಲಿ ಬಂದ ಲಾಭವನ್ನು ಜನರಿಗೆ ಈ ಮೂಲಕ ಹಂಚಲು ಏರ್ಪಾಡುಮಾಡಲಾಗಿದೆ

ಸಿನಿಮಾ ನಟರ ನಿಧನ

ಭಾರತದ ಸುಪ್ರಸಿದ್ಧ ಹಾಸ್ಯ ಸಿನಿಮಾ ನಟರಾದ ಶ್ರೀ ನಿ ... ವೇ... ವರು ಮೊನ್ನೆ ದಿನ ... ೩೬ ನೇ ವಯಸ್ಸಿನಲ್ಲಿ ನಿಧನರಾದರು

ಮಹಾರಾಜರವರೊಡನೆ ಡಾ|| ಮೋದಿಯವರ ಭೇಟಿ

ಮೈಸೂರು ೨೭

ಬಿಳಗಾಮಿನ ಸುಪ್ರಸಿದ್ಧ ನೇತ್ರ ಚಿಕಿತ್ಸೆಯ ಡಾ|| ಮೋದಿಯವರಿಗೆ ಈದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಭೇಟಿಯನ್ನು ದಯಪಾಲಿಸಿ, ಅವರು ನಡೆಸುತ್ತಿರುವ ಚಿಕಿತ್ಸಾ ವಿಧಾನಗಳನ್ನು ಕೇಳಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದರೆಂದು ತಿಳಿದುಬಂದಿದೆ

ಪೌರ ಸಭೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರು

ನಗರ ಪೌರಸಭೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆ ನಡೆಯುವವರೆಗೆ ಇನ್ನು ಮುಂದ ಸರ್ಕಾರದ ಅಂಗೀಕಾರದ ನಿರೀಕ್ಷಣೆಯ ವೇಳೆ ಅವರು ತಮ್ಮ ಹುದ್ದೆಯ ಕೆಲಸ ಕಾರ್ಯಗಳನ್ನು ನಡೆಸಿಕೊಳ್ಳಬಹುದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಜವಳಿ ವರ್ತಕರ ಸಂಘ

ರಾಜಧಾನಿಯ ಜವಳಿ ವರ್ತಕರ ಸಂಘಕ್ಕೆ ಶ್ರೀಗಳಾದ ಯು ಎಲ್. ರಾಮಚಂದ್ರರಾಯರು ಅಧ್ಯಕ್ಷರಾಗಿಯೂ, ಜಿ ವಿ ಸೂರ್ಯನಾರಾಯಣ ಶೆಟ್ಟರು ಉಪಾಧ್ಯಕ್ಷರಾಗಿಯೂ, ಶ್ರೀ ಬಿ ಎಸ್. ರುದ್ರಪ್ಪನವರು ಕಾರ್ಯದರ್ಶಿಯಾಗಿಯೂ, ಎನ್. ಎಸ್ ಅನಂತರಾಯರು ಜಂಟಿ ಕಾರ್ಯದರ್ಶಿಯಾಗಿಯೂ, ಬಿ ಜಯರಾಯರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರು

○ ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನವೊಂದು ಮಾರ್ಚಿ ತಿಂಗಳಿನಲ್ಲಿ ಸಂಸ್ಥಾನದಲ್ಲಿ ನಡೆಯುವುದೆಂದು ತಿಳಿದು ಬಂದಿದೆ

ಏಷ್ಯಾ ರಾಷ್ಟ್ರಗಳ ಸಂಘಟನೆ ಮುರಿಯಲು ಪಿತೂರಿ

ಭಾರತದ ಮಹಾ ಪ್ರಧಾನಿ ಪಂಡಿತ ನೆಹರೂರವರು ದೆಹಲಿಯಲ್ಲಿ ನಡೆಸಿದ ಏಷ್ಯಾ ರಾಷ್ಟ್ರಗಳ ಸಮ್ಮೇಳನವನ್ನು ವಿಫಲಗೊಳಿಸಿ ಅದರಿಂದ ಏಷ್ಯಾ ಸಂಘಟನೆಗೆ ಧಕ್ಕೆ ತರಲು ಪಶ್ಚಿಮ ರಾಷ್ಟ್ರಗಳು ಪಿತೂರಿ ನಡೆಸುತ್ತಿವೆಯೆಂದೂ ವರದಿಯಾಗಿದೆ ಇದಕ್ಕೆ ... ಪ್ರಯತ್ನ ಮಾಡುತ್ತಿವೆ ಅಲ್ಲಿನ ವಿದೇಶಾಂಗ ಉಪ ಕಾರ್ಯದರ್ಶಿಗಳಾದ ಸರ್ ವಿಲಿಯಂ ಸ್ಟ್ರಾಂಗ್‌ರವರನ್ನು ಆಗ್ನೇಯ ಏಷ್ಯಾದಲ್ಲಿ ಪ್ರವಾಸ ಮಾಡಲು ಕಳುಹಿಸಲಾಗಿದೆ ಕರ್ನಲ್ ... ಅ ದೇ... ಮತ್ತು ... ಭೇಟಿ ... ಭತ್ರ... ವರು.

ಅಂಚೆ ನೌಕರರು ಮುಷ್ಕರ ಹೂಡಬಾರದು

ಭಾರತ ಸಚಿವರ ಹಿತೋಕ್ತಿ

ಸ್ವಂ ಸು. ಫೋನ್] ಬೆಂಗಳೂರು ೨೭.

ಭಾರತ ಸರ್ಕಾರದ ಸಚಿವರಾದ ರಫಿ ಅಹಮದ್ ಕಿದ್ವಾಯಿರವರು ನಿನ್ನೆ ಅಂಚೆ ಮತ್ತು ತಂತಿ ನೌಕರರನ್ನು ಕುರಿತು ಭಾಷಣ ಮಾಡುತ್ತಾ, ಜನರ ಸೌಕರ್ಯಕ್ಕೆ ಅತ್ಯವಶ್ಯಕವಾದ ತಮ್ಮ ಇಲಾಖೆಯ ಕಾರ್ಯದಲ್ಲಿ ಆಸಕ್ತಿಯನ್ನು ಸ್ವಲ್ಪವೂ ಕುಗ್ಗಿಸಬಾರದೆಂದೂ, ಅವರುಗಳ ಹಿತರಕ್ಷಣೆಯನ್ನು ಸರ್ಕಾರದವರು ಖಂಡಿತವಾಗಿಯೂ ಮಾಡಿಕೊಡುವರೆಂದೂ ತಿಳಿಸಿದರು ಮುಷ್ಕರ ಹೂಡಿದರೆ ಜನರ ಸಹಾನುಭೂತಿ ದೊರೆಯುವುದಿಲ್ಲವೆಂದು ಸಭಾಧ್ಯಕ್ಷರಾಗಿದ್ದ ಶ್ರೀ ಕೆ ಹನುಮಂತಯ್ಯನವರು ಹೇಳಿದರು

ಈ ದಿನ ಬೆಳಿಗ್ಗೆ ಜನಾಬ್ ಕಿದ್ವಾಯಿರವರು ತಿರುಚನಾಪಳ್ಳಿಗೆ ತೆರಳಿದರು.

○ ನಿನ್ನೆ ಮತ್ತು ಈದಿನ ಮಂತ್ರಿಮಂಡಲದ ಸಭೆ ನಡೆಯಿತು ಚಿನ್ನದಗಣಿಯ ಮೇಲ್ವಿಚಾರಣೆಯನ್ನು ಸರ್ಕಾರದವರೇ ವಹಿಸಿಕೊಳ್ಳುವ ವಿಚಾರವು ಪರಿಶೀಲಿಸಲ್ಪಟ್ಟಿತು

○ ನ್ಯಾಯಾಂಗ ಮಂತ್ರಿಗಳಾದ ಶ್ರೀ ... ಬಾಷ್ಯಂರವರು ವಿದ್ಯುಚ್ಛಕ್ತಿ, ಸೀಮೆ ... ಮತ್ತು ಕಾರ್ಮಿಕ ಮುಖ್ಯಾಧಿಕಾರಿಗಳೊಡನೆ ಈ ಬೆಳಿಗ್ಗೆ ಮದರಾಸಿಗೆ ತೆರಳಿದರು. ಅಲ್ಲಿನ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ಕಾರ್ಮಿಕರ ಉದ್ಯೋಗ ವ್ಯವಸ್ಥೆಯ ಶಾಖೆಯನ್ನು ಪರಿಶೀಲಿಸಿ ಈ ದಿನ ಸಂಜೆ ಹಿಂದಿರುಗುವರು

೩೦ ನೇ ತಾ|| ಸಿನಿಮಾ ಮಂದಿರಗಳು ಮುಚ್ಚಬೇಕು

ಮಹಾತ್ಮರ ಪ್ರಥಮ ವಾರ್ಷಿಕ ದಿನವಾದ ಇದೇ ೩೦ ನೇ ತಾ|| ದಕ್ಷಿಣ ಭಾರತದ ಚಲನ ಚಿತ್ರ ಮಂದಿರದವರು ಪ್ರದರ್ಶನ ನಡೆಸದೆ ಸಿನಿಮಾಗಳನ್ನು ಮುಚ್ಚಬೇಕೆಂದು ದಕ್ಷಿಣದ ಭಾರತ ಚಲನ ಚಿತ್ರ ಸಂಸ್ಥೆಯ ಅಧ್ಯಕ್ಷರು ಮನವಿ ಮಾಡಿದ್ದಾರೆ.

ಕ್ಯಾಂಟನ್ನಿಗೆ ಚೀನಾ ಸರ್ಕಾರದ ವರ್ಗ

ಚೀಣದ ರಾಜಧಾನಿಯಾದ ನಾನ್‌ಕಿಂಗಿನಿಂದ ಸರ್ಕಾರವನ್ನು ಕ್ಯಾಂಟನ್ನಿಗೆ ವರ್ಗಾಯಿಸಲಾಗುತ್ತಿದೆ ಡಾ|| ಸನ್‌ಫೋರವರ ಮಂತ್ರಿಮಂಡಲದವರು ಸಧ್ಯದಲ್ಲಿಯೇ ಕ್ಯಾಂಟನ್ನಿಗೆ ಹೋಗಲಿದ್ದಾರೆ ನಾನ್‌ಕಿಂಗನ್ನು ಖಾಲಿ ಮಾಡಬೇಕೆಂದು ಚೀಣದ ಪಾರ್ಲಿಮೆಂಟ್ ಸಭೆಯು ನಿರ್ಧಾರ ಮಾಡಿದ ಮೇಲೆ ಅಲ್ಲಿದ್ದ ಸೈನಿಕರು ಯಾಂಗ್ಸಿ ನದಿಯ ಮೂಲಕ ನಗರವನ್ನು ತ್ಯಜಿಸಿದರು

ಅಂಚೆ ಮತ್ತು ತಂತಿ ನೌಕರರ ಮುಷ್ಕರ

ಬರುವ ಮಾರ್ಚಿ ೯ ನೇ ತಾ|| ನಿಂದ ಭಾರತದ ಎಲ್ಲ ಅಂಚೆ ಮತ್ತು ತಂತಿ ಇಲಾಖೆಯ ನೌಕರರುಗಳು ಮುಷ್ಕರ ಹೂಡಬೇಕೆಂದು ಮದರಾಸಿನಲ್ಲಿ ಮೊನ್ನೆ ನಡೆದ ಅಖಿಲ ಭಾರತ ಅಂಚೆ ಮತ್ತು ತಂತಿ ಕೆಲಸಗಾರರ ಸಂಘದ ಕಾರ್ಯ ... ಸಮಿತಿಯು ... ನಿರ್ಧರಿಸಿದೆ ... ವ ... ಮುಷ್ಕರ ಹೂಡ ... ಮಾಡಿದ್ದರು.

ಬೋಸ್ ದಿನಾಚರಣೆಯಲ್ಲಿ ಹೊಡೆದಾಟ

ಕಳೆದ ಭಾನುವಾರ ಝಾನ್ಸಿ ನಗರದಲ್ಲಿ ಸುಭಾಷ್ ಚಂದ್ರಬೋಸರ ದಿನಾಚರಣೆ ಏರ್ಪಾಡಾಗಿತ್ತು. ಅದರಲ್ಲಿ ಕಾಂಗ್ರೆಸ್ಸಿನ ಸಂಗಡಿಗರೂ, ಸಮಾಜವಾದಿಗಳೂ ಸಭಾಧ್ಯಕ್ಷರು ಯಾರಾಗಬೇಕೆಂಬ ಬಗ್ಗೆ ಚಿಕ್ಕಾಟವಾಗಿ ಹೊಡೆದಾಟನಾಯಿತು. ಕಾಂಗ್ರೆಸ್ಸಿನವರ, ಪಕ್ಷೇತರರೊಬ್ಬರನ್ನು ಸಭೆಗ ಅಧ್ಯಕ್ಷರನ್ನಾಗಿ ಮಾಡಬೇಕೆಂದೂ, ಸಮಾಜವಾದಿಗಳು ... ದವರೊಬ್ಬರನ್ನು ... ಸ್ಥಾನಕ್ಕೆ ... ಬೇಕೆಂದು ... ಒಡೆದು ... ಎರಡು ಪಕ್ಷದವರೂ ಪ್ರತ್ಯೇಕ ಸಭೆಗಳನ್ನು ... ಗಜದ ಅಂತರದಲ್ಲಿಯೇ ನಡೆಸಿದರು ... ಕೊಂಡರು. ಈ ಮಧ್ಯೆ ಸಮಾಜವಾದಿ ... ಕಾರ್ಯಕರ್ತರು ಕಾಂಗ್ರೆಸ್ ... ಮೇಲೆ ಕಲ್ಲು ... ಪೊಲೀಸರು ... ಚದುರಿಸಿದರು.

ಶ್ರೀ ಗಣೇಶಾ ಟಾಕೀಸ್

Reviving their Morning Shows Programme daily from 28-1-49 at 10-30 a.m.

Count of Monte Cristo

28—1—49 ರಿಂದ

ಬೆಳಗಿನ ಪ್ರದರ್ಶನ

೩ ದಿನಗಳು ಮಾತ್ರ ಬೆಳಗ್ಗೆ ೧೦-೩೦ ಗಂಟೆಗೆ

ಕೌಂಟ್ ಆಫ್ ಮಾಂಟಿ ಕ್ರಿಸ್ಟೋ

UNIVERSITY OF MYSORE

No. Ex. 3. 747/48-49

Office of the University of Mysore, Mysore

Dated 15th January 1949.

NOTIFICATION

Subject.—Marks Cards of the Intermediate Examination of October-November 1949.

It is hereby notified for the information of candidates who had appeared for the Intermediate Examination of October-November 1948, that the Intermediate Marks Cards have been forwarded to the Heads of Colleges from which the candidates appeared for the Examination for distribution.

Candidates may apply for the marks cards to the Heads of the colleges.

By Order

... Subbiah Devaru
Registrar.

Edited printed and published by ... at the Sadhvi Press, D. Subbiah Road, Mysore.

ಎಸ್. ಕೆ. ಪಾಟೀಲರು ಅಸ್ಸಾಂ ಗೌರ್ನರ್ ಆಗುವರೇ?

ಅಸ್ಸಾಂ ಪ್ರಾಂತ್ಯದ ಗೌರ್ನರ್ ಪದವಿಗೆ ಈಗಾಗಲೇ ಸೂಚಿತವಾಗಿರುವ ಹೆಸರುಗಳ ಜೊತೆಗೆ ಬೊಂಬಾಯಿ ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರ ಹೆಸರನ್ನೂ ಸೇರಿಸಲಾಗಿದೆ. ಆದರೆ ಪ್ರಧಾನಿ ನೆಹರೂರವರು ಇವರ ನೇಮಕಕ್ಕೆ ಒಪ್ಪುತ್ತಿಲ್ಲ.

ಭೂಪಾಲಿನಲ್ಲಿ ಪತ್ರಿಕೋದ್ಯೋಗಿಯ ದಸ್ತಗಿರಿ

ಭೂಪಾಲಿನ ಪರಿಸ್ಥಿತಿಯನ್ನು ವರದಿ ಮಾಡಲು ಅಲ್ಲಿಗೆ ಹೋಗಿದ್ದ ದೆಹಲಿಯ ... ಟೈಮ್ಸ್ ಪತ್ರಿಕೆಯ ವಿಶೇಷ ಪತ್ರಿಕಾ ವಾರ್ತಾದಾರರಾದ ಶ್ರೀ ಸೂರ್ಯನಾರಾಯಣ ... ರವರನ್ನು ಭೂಪಾಲ್ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ.

ಕರ್ನಾಟಕ ಏಕೀಕರಣದ ಮಹಾಸಭೆ

ಕರ್ನಾಟಕ ಏಕೀಕರಣ ಮಹಾ ಸಮಿತಿಯ ವಾರ್ಷಿಕ ಸಭೆಯು ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆ ಹುಬ್ಬಳ್ಳಿಯಲ್ಲಿ ನಡೆಯಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕೆಂದೂ ಮತ್ತು ಅದಕ್ಕೆ ಮೈಸೂರಿನ ಮಹಾರಾಜರು ಶಾಸನಬದ್ಧ ಅಧಿಪತಿಗಳಾಗಬೇಕೆಂದೂ ಮಾಡಿರುವ ನಿರ್ಣಯವನ್ನು ಅನುಮೋದಿಸಲಾಯಿತು.

ಬೆಳಗಿನ ಆಟಗಳು

28—1—49ನೇ ಶುಕ್ರವಾರದಿಂದ 4 ದಿನಗಳು ಮಾತ್ರ

ಹಿಂದ್ ಪಿಕ್ಚರ್ಸ್‌ರವರ

ಲೈಲಾ ಮಜನು

ಪಾತ್ರ.— ನಜೀರ್, ಸ್ವರ್ಣಲತಾ, ಗೋಪ್ ಮತ್ತಿತರರು

ಪ್ರಭಾ ಪಿಕ್ಚರ್ ಹೌಸ್

ಗಂಗಾಧರೇಶ್ವರ ಜೀರ್ಣ ಲಿಂಗ ಪ್ರತಿಷ್ಠೆ

ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಕೋಟೆ ಪುಷ್ಕರಣೀ ದಡದಲ್ಲಿ ನೂತನವಾಗಿ ನಿರ್ಮಿಸಿರುವ ದೇವಾಲಯದಲ್ಲಿ ಶ್ರೀ ಗಂಗಾಧರೇಶ್ವರ ಜೀರ್ಣ ಲಿಂಗ ಪ್ರತಿಷ್ಠಾ ಮಹೋತ್ಸವವು ಮುಂದಿನ ತಿಂಗಳು ೩ ನೇ ತಾ|| ನಡೆಯುವುದು. ಈ ಕಾರ್ಯಕ್ಕೆ ಮಹಾಜನರು ಸಹಾಯ ಮಾಡಬೇಕೆಂದೂ, ಹಣವನ್ನು ಗಂಗಾಧರೇಶ್ವರ ನಿಧಿ, ತಾಲ್ಲೂಕು ಕಚೇರಿ, ಕಡೂರು- ಇಲ್ಲಿಗೆ ಕಳುಹಿಸಬೇಕೆಂದೂ ಕಡೂರಿನ ಶ್ರೀ ವೆಂಕಟರಮಣ ಶಾಸ್ತ್ರಿಗಳು ತಿಳಿಸಿರುತ್ತಾರೆ.

ಶ್ರೀ

ಗಣೇಶಾ ಟಾಕೀಸ್

1—49ರಿಂದ

... ವಾರ ಮಾತ್ರ ಪ್ರತಿದಿನ ೩ ಆಟಗಳು

ಅಲಿ ಬಾಬಾ

ಮತ್ತು ೪೦ ಜನ ಕಳ್ಳರು

(ತಮಿಳು)

ಪಾತ್ರ — § ಪುಳಿಮೂಟೆ, § ಕೃಷ್ಣ ಮತ್ತು § ಮದುರಂ

ಮುಂದಿನ ಬದಲಾವಣೆ

4—2—49 ರಿಂದ

... (ತಮಿಳು)

ಬೆಳಗಿನ ಆಟಗಳು

28—1—49ನೇ ಶುಕ್ರವಾರದಿಂದ 4 ದಿನಗಳು ಮಾತ್ರ

ಚಂದ್ರ ಆರ್ಟ್ ಪ್ರೊಡಕ್ಷನ್ಸ್‌ರವರ

ಬಹದ್ದೂರ್ ಕಿಸಾನ್

ಪಾತ್ರ.— ಚಂದ್ರರಾವ್ ಕದಂ, ಹಂಸಾ ವಾಡ್ಕರ್, ಭಗವಾನ್ ಮತ್ತಿತರರು

ಒಲಂಪಿಯಾ ಟಾಕೀಸ್

ಕಾಂಗ್ರೆಸ್ ಸದಸ್ಯರ ಮೇಲೆ ಶಿಸ್ತಿನ ಕ್ರಮಕ್ಕೆ ಶಿಫಾರಸು

ಶಿವಮೊಗ್ಗ ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ... ದ್ರಪ್ಪನವರು ಪಕ್ಷದ ತೀರ್ಮಾನಕ್ಕೆ ವಿರುದ್ಧವಾಗಿ ವರ್ತಿಸಿದುದಕ್ಕಾಗಿ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ... ಸಾನದ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಗೆ ಶಿಫಾರಸು ಮಾಡಲಾಗಿದೆ.

ರಾಜಕಮಲ್

ಮೈಸೂರು

ತಾ|| ೨೮-೧-೪೯ನೇ ಶುಕ್ರವಾರದಿಂದ ಪ್ರಾರಂಭ

ಪ್ರತಿ ದಿನ ೩ ಆಟಗಳು

ಝುಮಕಿ

(ಹಿಂದಿ)

ಭೂಮಿಕೆ:—ಅಕ್ತರ್ ಜಾಗಿರ್‌ದಾರ್

Morning Shows at 10-30 From 28-1-49 for 4 days

SLAVE GIRL

(In Technicolour)

With :- Vyone-de carlo George Brent

ನಿಮ್ಮ ಮೈ ಮೊಕಮಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ !

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗು ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಪ್ರಭುದೇವಾ ಟಾಕೀಸಿನಲ್ಲಿ

28-1-49 ನೇ ಶುಕ್ರವಾರದಿಂದ

ಪ್ರತಿ ದಿನ ೩ ಆಟಗಳು

ಬಿಂಧ್ಯಾರಾಣಿ

(ತೆಲುಗು)

ಜೆಮಿನಿ ಸ್ಟುಡಿಯೋ ತಯಾರಿಕೆ

ಪಾತ್ರ.— ಪುಷ್ಪವಲ್ಲಿ, ಸರಲಕ್ಷ್ಮೀ, ಜಿ. ವಿ. ಸುಬ್ಬರಾವ್

ಮುಂತಾದವರು. Jallim Release

ಪ್ರಭಾ → 28-1-49ರಿಂದ

ದಿನವೂ ೩ ಆಟಗಳು

ಪತಿ ಸೇವಾ

... ಇದರೊಂದಿಗೆ

... ಕಾರ್ಯಕ್ರಮ ... ಪ್ರದರ್ಶಿಸಲಾಗುವುದು.

ಫೋನ್ ನಂ. 792 | 1ಸಂಚೀಮಾಚಣೆ | ಇಂದಿನ ಪತ್ರಿಕೆ ೩ ಕಾಸು.

ಸಾಧ್ವಿ

ಸಂಪುಟ ೭] | ಶುಕ್ರವಾರ ೨೮-೧-೪೯ | [ಸಂಚಿಕೆ ೧೩೮

ಮಹಾತ್ಮರ ಪುಣ್ಯ ದಿನಾಚರಣೆಯ ಕಾರ್ಯಕ್ರಮ

ಮೈಸೂರು ೨೮

ನಗರ ಕಾಂಗ್ರೆಸ್ ಸಮಿತಿಯ ಕಾರ್ಯದ ...ಗಳಾದ ಶ್ರೀ ಟಿ ನರಸಿಂಹಯ್ಯಂಗಾ ...ರು ಈ ರೀತಿ ತಿಳಿಸಿರುತ್ತಾರೆ —

ಮಹಾತ್ಮಾ ಗಾಂಧೀಜಿಯವರ ಪ್ರಥಮ ...ರ್ಷಿಕ ದಿನವಾದ ಇದೇ ೩೦ ನೇ ತಾ|| ...ರತದಾದ್ಯಂತ ಪುಣ್ಯ ದಿನವನ್ನಾಗಿ ಆಚ ...ಬೇಕು ಮತ್ತು ಮಹಾತ್ಮರು ಉಪ ...ಶ ಮಾಡಿದ ಉತ್ತಮ ಮಾರ್ಗಗಳಲ್ಲಿ ...ದು ಅವರ ತತ್ವಗಳನ್ನು ಅನುಷ್ಠಾನದಲ್ಲಿ ...ಟ್ಟುಕೊಂಡು ದೇಶದ ಮತ್ತು ವಿಶ್ವದ ...ಂತಿ ಸುಖಗಳಿಗಾಗಿ ಎಲ್ಲರೂ ಶ್ರಮಿಸಬೇ... ಈ ಮಹಾ ಪವಿತ್ರ ದಿನದ ಕಾರ್ಯಕ್ರ...ವು ಕೆಳಗೆ ಕಂಡಂತೆ ಇರುವುದು.

ಬೆಳಗ್ಗೆ ೬ ಗಂಟೆಗೆ—ಕಾಂಗ್ರೆಸ್ ಕಛೇರಿ ...ಲ್ಲಿ ಪ್ರಾರ್ಥನೆ ಮತ್ತು ಸೂತ್ರ ಯಜ್ಞ ... ಗಂಟೆಗೆ—ಟೌನ್‌ಹಾಲ್ ಮೈದಾನದಲ್ಲಿ ...ಧ್ವಜಾರೋಹಣ ಸಂಜೆ ೫ ರಿಂದ ೬ ಗಂ... ವರೆಗೆ ಕಾಂಗ್ರೆಸ್ ಕಛೇರಿಯಲ್ಲಿ ನೂಲು ...ಸ್ಪರ್ಧೆ ಸಂಜೆ ೬-೩೦ ಗಂಟೆಗೆ ಟೌನ್ ...ಹಾಲ್ ಮೈದಾನದಲ್ಲಿ ಬಹಿರಂಗ ಸಭೆ

ಸರ್ಕಾರದ ಕೆಳದರ್ಜೆ ನೌಕರರ ಅಹವಾಲು

ಬೆಂಗಳೂರು ಅಠಾರಾ ಕಛೇರಿಯ ಕೆಳ ...ರ್ಜೆ ನೌಕರರು ನಿನ್ನೆ ದಿವಾನರು ಮ... ಹಣಕಾಸಿನ ಸಚಿವರನ್ನು ಭೇಟಿ ...ಮಾಡಿ, ತಮಗೆ ತುಟ್ಟಿ ಭತ್ಯವನ್ನು ಹೆಚ್ಚಿ...ಸಬೇಕೆಂದೂ ಮತ್ತು ಮನೆ ಬಾಡಿಗೆ ...ಭತ್ಯವನ್ನು ಕೊಡಬೇಕೆಂದೂ ಪ್ರಾರ್ಥಿಸಿ...ಕೊಂಡರೆಂದೂ, ಅವುಗಳನ್ನು ಪರಿಶೀಲಿ...ಸುವುದಾಗಿ ಭರವಸೆ ಕೊಡಲಾಯಿತೆಂದೂ ...ಹೇಳಲಾಗಿದೆ

ಬಟ್ಟೆ ವ್ಯಾಪಾರಗಾರರ ಲಾಭದ ಪರಿಮಿತಿ

ಸಂಸ್ಥಾನದಲ್ಲಿ ತಯಾರಾದ ಬಟ್ಟೆಗಳ ...ಲೆ ರೂ ಗೆ ೩ ಆಣೆಯಂತೆಯೂ, ಹೊ... ತಯಾರಾದ ಬಟ್ಟೆಗಳ ಮೇಲೆ ರೂ ಗೆ ...ಆಣೆಯಂತೆಯೂ ಲಾಭವನ್ನು ಬಟ್ಟೆ ...ರರು ತೆಗೆದುಕೊಳ್ಳಬಹುದೆಂದೂ, ...ಲಾಭದಲ್ಲಿ ಮಾರಾಟದ ತೆರಿಗೆ, ಮತ್ತು ...ಎಲ್ಲ ಖರ್ಚಿನ ಬಾಬುಗಳೂ ಸೇರಿವೆ ...ಮೂ ಸರ್ಕಾರದ ಸಿವಿಲ್ ಸಪ್ಲೈಸ್ ...ಪ್ಟ್ರೋಲರು ತಿಳಿಸಿರುತ್ತಾರೆ ಆ ದರ... ಪ್ರದೇಶದ ಸುಂಕವು ಸೇರುವುದಿಲ್ಲ ...ು ಹೇಳಲಾಗಿದೆ

ವಿಶ್ವಭಾರತಿ ಸಾಹಿತ್ಯ ಸಂಘ

ಗನ್ಸ್ಪೋಹಸ ಬೀಗಲೆ ಬಳಿ ಇರುವ ...ಶಾಲೆಯ ಮಹಡಿ ಮೇಲೆ ನಾಳೆ ... ಗಂಟೆಗೆ ಮೇಲ್ಕಂಡ ಸಂಘದ ...ದಲ್ಲಿ ಶ್ರೀ ನ. ಯೋಗರವರು ಕವನಗಳನ್ನು ಓದುವರು. ಮೇ... ಸಂಘದ ಆಶ್ರಯದಲ್ಲಿ ಇದೇ ೩೦ ತಾ|| ಸಂಜೆ ೫ ಗಂಟೆಗೆ ಮಹಾರಾ...ಸ್ಕೂಲಿನ ಮೇಲ್ಭಾಗದಲ್ಲಿ ಗಾಂಧಿ ...ರಣೆ ಸಂಬಂಧವಾಗಿ ಕರ್ನಾಟಕದ ಸಾಹಿತಿಗಳಾದ ಶ್ರೀ ಶಿವರಾಮ...ರ ಭಾಷಣವನ್ನು ಏರ್ಪಡಿಸಲಾ...

...ಕುಮಾರಿ ಎಲಿಜಬೆತ್ ರವರಿಗೆ ದಡಾರ

...ನ್ನಿನ ರಾಜಕುಮಾರಿ ಎಲಿಜಬೆ... ...ಗೆ ದಡಾರ ಕಾಣಿಸಿದೆಯೆಂದು ವ...ಗಿದೆ

ಭಾರತಕ್ಕೆ ಸತಿ ಮೌಂಟ್ ಬ್ಯಾಟನ್ನರ ಭೇಟಿ

ಭಾರತದ ಮಾಜಿ ಗೌರ್ನರ್ ಜನರಲ್ಲ ರಾದ ಲಾರ್ಡ್ ಮೌಂಟ್ ಬ್ಯಾಟನ್ನರ ಮಡದಿ ಸತಿ ಮೌಂಟ್ ಬ್ಯಾಟನ್ನರು ಮುಂದಿನ ತಿಂಗಳು ಭಾರತಕ್ಕೆ ಭೇಟಿ ಕೊಡುವರೆಂದೂ, ಅಲಹಾಬಾದಿನಲ್ಲಿ ಮುಂದಿನ ತಿಂಗಳು ೨೮ ನೇ ತಾ|| ನಡೆಯುವ ಕಮಲಾ ನೆಹರೂ ಸ್ಮಾರಕ ಆಸ್ಪತ್ರೆಯಲ್ಲಿ ಬೇಗಂ ಅಜಾದ್‌ರವರ ವಾರ್ಡಿನ ಆರಂಭೋತ್ಸವ ಸಮಾರಂಭದಲ್ಲಿ ಅವರು ಭಾಗವಹಿಸುವರೆಂದೂ ಹೇಳಲಾಗಿದೆ

ಕೋರ್ಟುಗಳಲ್ಲಿ ಗಂಟಲು ವ್ಯಾಜ್ಯಗಳನ್ನು ನಿಲ್ಲಿಸಲು ಮಸೂದೆ

ಅನವಶ್ಯಕವಾದ ಗಂಟಲ ವ್ಯಾಜ್ಯಗಳನ್ನು ಕೋರ್ಟುಗಳಲ್ಲಿ ಹೂಡಿ ಪ್ರತಿವಾದಿಗಳ ವ್ಯರ್ಥ ಕಾಲಹರಣವಾಗ ...ವನ್ನು ತಡೆಗಟ್ಟಲು, ಮದರಾಸ್, ಸರ್ಕಾರದವರು ಒಂದು ಮಸೂದೆಯನ್ನು ಮೊನ್ನೆ ದಿನ ಶಾಸನ-ಸಭೆಯಲ್ಲಿ ಮಂಡಿಸಿದರು ... ರಾಸ್ ಪ್ರಾಂತ್ಯದ ಪ್ರತಿಯೊಂದ ... ಟಿನಲ್ಲೂ ಇಂತಹ ಮೊಕದ್ದಮೆಗಳನ್ನು ಹೂಡುವ ಕೆಲವು ಜನರಿದ್ದಾರೆಂದು, ನ್ಯಾಯಾಂಗ ಸಚಿವರಾದ ಶ್ರೀ ಕೆ ಮಾಧವ ಮೆನನ್‌ರವರು ತಿಳಿಸಿರುತ್ತಾರೆ ಇಂತಹ ವ್ಯಾಜ್ಯಗಳನ್ನು ತರುವ ಜನರು ಇನ್ನು ಮುಂದೆ ಯಾವ ಮೊಕದ್ದಮೆಗಳನ್ನೂ ಹೂಡದಂತೆ ಮಾಡಲು ಹೈಕೋರ್ಟಿನವರಿಗೆ ಅಧಿಕಾರ ಕೊಡಲಾಗಿದೆ

ಕಾಶ್ಮೀರದಿಂದ ಗುಡ್ಡಗಾಡಿನವರ ವಾಪಸು

ಕಾಶ್ಮೀರದಲ್ಲಿ ಗಡಿನಾಡಿನಿಂದ ಬಂದು ಕದನ ನಡೆಸುತ್ತಿದ್ದ ಗುಡ್ಡಗಾಡಿನವರನ್ನು ತಮ್ಮ ವಾಸಸ್ಥಾನಕ್ಕೆ ಹಿಂತಿರುಗುವಂತೆ ಪ್ರೇರೇಪಿಸಲಾಗಿದೆಯೆಂದೂ, ಕಳೆದ ೨೫ ನೇ ತಾ|| ಸಾವಿರಾರು ಜನರು ರಾವಲಪಿಂಡಿಯ ಮೂಲಕ ಗಡಿನಾಡಿಗೆ ಪ್ರಯಾಣ ಬೆಳೆಸಿದರೆಂದೂ ವರದಿಯಾಗಿದೆ

ಪಶ್ಚಿಮ ಪಂಜಾಬ್ ಸರ್ಕಾರದ ರಾಜೀನಾಮೆ

ಪಶ್ಚಿಮ ಪಂಜಾಬಿನ ಪ್ರಧಾನಿ ಖಾನ್ ಇಫ್ತಿಕಾರ್ ಹುಸೇನ್ ಖಾನರವರ ಮಂತ್ರಿ ಮಂಡಲವು ರಾಜೀನಾಮೆ ಕೊಟ್ಟಿದೆ ಪಾಕೀಸ್ತಾನದ ಗೌರ್ನರ್ ಜನರಲ್ಲರ ವಿಶೇಷ ಆಜ್ಞೆಯ ಮೇಲೆ ಸರ್ಕಾರದ ಆಡಳಿತವನ್ನು ಗೌರ್ನರರೇ ವಹಿಸಿ ಕೊಂಡಿರುತ್ತಾರೆ ಅಲ್ಲಿನ ಶಾಸನ ಸಭೆಯನ್ನ ರದ್ದು ಮಾಡಿ ನೂತನ ಚುನಾವಣೆಗೆ ಅವರ ಆಜ್ಞೆ ... ಡಿರುತ್ತಾನೆ

ಪ್ರಧಾನಿ ಪಟ್ಟವನ್ನು ತ್ಯಜಿಸಲು ನೆಹರೂರವರ ಅಪೇಕ್ಷೆ

ಪಂಡಿತ ಜವಹರ್‌ಲಾಲ್ ನೆಹರೂರವರು ಭಾರತದ ಪ್ರಧಾನ ಮಂತ್ರಿ ಪದವಿಯಿಂದ ಬಹಳ ಬೇಗ ಬಿಡಬೇಕೆನ್ನುತ್ತಿರುವುದಾಗಿ ತಮ್ಮ ಅನೇಕ ಬಂಧುಗಳೊಡನೆ ಅವರು ಹಲವು ಬಾರಿ ಹೇಳಿರುವುದಾಗಿ ವರದಿಯಾಗಿದ ಆದರೆ ಭಾರತಕ್ಕೆ ಅವರ ಸೇವೆಯು ಅತ್ಯಗತ್ಯವಾಗಿ ಬೇಕಾಗಿರುವುದರಿಂದ ಅವರು ಈ ಅಧಿಕಾರದಿಂದ ನಿವೃತ್ತರಾಗಲು ಸಾಧ್ಯವಿಲ್ಲವಾಗಿದೆ.

ಪ್ರಧಾನಿ ಪಟ್ಟವನ್ನು ಸ್ವೀಕರಿಸಿದ ಎರಡನೇ ತಿಂಗಳಿನಿಂದಲೇ ನೆಹರೂರವರಿಗೆ ಅತೃಪ್ತಿಯುಂಟಾಗಿರುವುದಾಗಿಯೂ, ಈಗ ಅವರು ಭಾರತದ ಜನರಲ್ಲಿ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ಇಚ್ಛಿಸುತ್ತಿರುವರೆಂದೂ ಇದಕ್ಕಾಗಿ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸ ಮಾಡಲು ಅಪೇಕ್ಷಿಸಿರುವರೆಂದೂ ವರದಿಯಾಗಿದೆ

ಒಂದು ದಿನ ರಾತ್ರಿ ಪಂಡಿತ ನೆಹರೂರವರು, ಸರ್ದಾರ್ ಪಟೇಲ್—ಮತ್ತು—ಶ್ರೀ ಸಿ ರಾಜಗೋಪಾಲಾಚಾರಿಯವರೊಡನೆ ತ್ವರಿತ ತಮ್ಮನ್ನು ಈ ಜವಾಬ್ದಾರಿ ಪದವಿಯಿಂದ ನಿವೃತ್ತಿ ಮಾಡಬೇಕೆಂದು ಪ್ರಾರ್ಥಿಸಿದರೆಂದು ಹೇಳಲಾಗಿದೆ. ಆದಕ್ಕೆ ಅವರಿಬ್ಬರೂ 'ನಾವುಗಳು ನಮ್ಮ ಸ್ಥಾನದಲ್ಲಿ ಮುಂದುವರಿಸಬೇಕಾದರೆ ನೀವೂ ಸಹ ಮುಂದುವರಿಯಬೇಕು, ಮೂರ್ಖತನಕ್ಕೆ ಇದು ಕಾಲವಲ್ಲ'' ಎಂದು ತಿಳಿಸಿದರೆಂದು ಹೇಳಲಾಗಿದೆ.

ಜಲಪುರಿಯಲ್ಲಿ ಮಹಾತ್ಮರ ವಾರ್ಷಿಕ ದಿನಾಚರಣೆ

ರಾಜಧಾನಿಯ ಜಲಪುರಿಯಲ್ಲಿ ಜಿಲ್ಲಾ ಮತ್ತು ನಗರ ಹರಿಜನ ಸೇವಾ ಸಂಘದ ಆಶ್ರಯದಲ್ಲಿ ನಾಳಿದ್ದು ಸಂಜೆ ೫|| ಗಂಟೆಗೆ ಶ್ರೀ ಓ ಸಿ ರಾಮರವರ ಅಧ್ಯಕ್ಷತೆಯಲ್ಲಿ ಗಾಂಧೀಜಿಯವರ ಪ್ರಥಮ ವಾರ್ಷಿಕ ದಿನಾಚರಣೆ ನಡೆಯುವುದು

ಪ್ರತಿಭಟನಾ ಸಭೆ

ಕರ್ನಾಟಕ ಪ್ರಾಂತ ಸೋಷಲಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎಸ್ ನಾಗಭೂಷಣ ಮತ್ತು ಶ್ರೀ ಹೆಚ್. ರಾಮಸ್ವಾಮಿಯವರ ಬಂಧನವನ್ನು ಪ್ರತಿಭಟಿಸಲು ನಾಳೆ ಸಂಜೆ ೫ ಗಂಟೆಗೆ ಮೈಸೂರು ನಗರದ ಸೋಷಲಿಸ್ಟ್ ಪಕ್ಷದ ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಪ್ರಮುಖವಾ ಟಾಕೀಸ್ ... ದ ಮೈದಾನದಲ್ಲಿ ಏರ್ಪಡಿಸಲಾಗಿದೆ

○ ... [illegible] ... ರವರ ... ಮಾರಣೆ

ಗಾಂಧಿ ಸ್ಮಾರಕ ನಿಧಿಗೆ ಸಹಾಯ

ಸ್ವ ಸು ಫೋ|] ಬೆಂಗಳೂರು ೨೮

ದಂಡಿನ ಪುರ ಸಭೆಯವರು ಗಾಂಧಿ ಸ್ಮಾರಕ ನಿಧಿಗೆ ೨೫ ಸಾವಿರ ರೂ ಅನ್ನು ಕೊಟ್ಟಿರುತ್ತಾರೆ

ಜಿಲ್ಲಾ ವಿದ್ಯಾಧಿಕಾರಿಗಳ ವರ್ಗ

ಶ್ರೀ ಟಿ ಆರ್ ಅಯ್ಯಂಗಾರ್ಯರನ್ನು ಚಿಕ್ಕಮಗಳೂರಿನಿಂದ ಹಾಸನಕ್ಕೂ, ಶ್ರೀ ಡಿ ನರಸಿಂಹರವರನ್ನು ಬೆಂಗಳೂರಿನಿಂದ ಚಿಕ್ಕಮಗಳೂರಿಗೂ, ಶ್ರೀ ಟಿ ವಾಸುದೇವಯ್ಯನವರನ್ನು ಶಿವಮೊಗ್ಗದಿಂದ ಬೆಂಗಳೂರಿಗೂ ವರ್ಗಾಯಿಸಲಾಗಿದೆ

○ ಮದರಾಸಿಗೆ ತೆರಳಿದ್ದ ನ್ಯಾಯಾಂಗ ಸಚಿವ ಶ್ರೀ ಕೆ ಟಿ ಭಾಷ್ಯಂರವರು ನಿನ್ನೆ ಸಂಜೆ ವಾಪಸು ಹಿಂದಿರುಗಿದರು ಅಲ್ಲಿ ಅವರು ಮೇಕೆದಾಟು ವಿದ್ಯುಚ್ಛಕ್ತಿ ಯೋಜನೆ ವಿಚಾರವಾಗಿ ಅಲ್ಲಿನ ಸಚಿವ ಶ್ರೀ ಭಕ್ತವತ್ಸಲಂ ರವರೊಡನೆ ಮಾತುಕತೆ ನಡೆಸಿದರೆಂದೂ, ಶೀಘ್ರದಲ್ಲಿಯೇ ಒಂದು ಒಪ್ಪಂದಕ್ಕೆ ಬರುವ ಸೂಚನೆಯಿದೆಯೆಂದು ತಿಳಿದು ಬಂದಿದೆ

○ ಕೈಗಾರಿಕಾ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ನಾಳೆ ಸಂಜೆ ರಾಜಧಾನಿಗೆ ಆಗಮಿಸುವರು ನಾಳಿದ್ದು ಬೆಳಗ್ಗೆ ಮಂಡ್ಯದ ಸಕ್ಕರೆ ಕಂಪೆನಿಯ ಕೆಲಸಗಾರರ ಸಂಘದವರ ಗಾಂಧಿಜೀ ವಾರ್ಷಿಕ ದಿನಾಚರಣೆಯಲ್ಲಿ ಭಾಗವಹಿಸುವರು

○ ಮುಂದಿನ ತಿಂಗಳು ೪ ನೇ ತಾ|| ಪ್ರಾರಂಭವಾಗುವ ಸ್ವದೇಶಿ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ನೆರವೇರಿಸುವಂತೆ ಪ್ರಾರ್ಥಿಸಲಾಗಿದೆ

ಫೆಬ್ರುವರಿ ೧೦ ಕ್ಕೆ ಗಾಂಧಿ ಕೊಲೆ ಮೊಕದ್ದಮೆಯ ತೀರ್ಪು

ಮುಂದಿನ ತಿಂಗಳು ೧೦ ನೇ ತಾ|| ಗಾಂಧಿ ಕೊಲೆ ಮೊಕದ್ದಮೆಯ ತೀರ್ಪು ಕೊಡಲಾಗುವುದೆಂದು ತಿಳಿದು ಬಂದಿದೆ

ಹದ್ದು ಮಗುವನ್ನು ಹೊತ್ತು ಕೊಂಡು ಹೋಯಿತು

ಕೊಯಮುತ್ತೂರಿನ ರಸ್ತೆಯಲ್ಲಿ ನಿನ್ನೆ ದಿನ ಆಟವಾಡುತ್ತಿದ್ದ ೧½ ವರ್ಷದ ಮಗುವನ್ನು ಹದ್ದು ತನ್ನ ಕಾಲುಗಳಲ್ಲಿ ಎತ್ತಿಕೊಂಡು ಹಾರಿ ಹೋಗುತ್ತಿದ್ದುದನ್ನು ಜನರು ಕಂಡು ಅದರ ಮೇಲೆ ಕಲ್ಲುಗಳನ್ನು ಎಸೆದರೆಂದೂ, ಕಡೆಗೆ ಬಂದೂಕಿನಿಂದ ಹೊಡೆದು ಅದನ್ನು ನೆಲಕ್ಕೆ ಉರುಳಿಸಲಾಯಿತೆಂದೂ ವರದಿಯಾಗಿದೆ ಹದ್ದು ಸತ್ತು ಹೋಯಿತು. ಮಗುವು ಬದುಕಿರುತ್ತದೆ

ಹೈದರಾಬಾದ್ ರೈಲ್ವೆಯಲ್ಲಿ ಮುಷ್ಕರ

ನೈಜಾಂ ರೈಲ್ವೆ ಲೇಬರ್ ಯೂನಿಯನ್ ಗುಪ್ತದ ವರ್ಕ್‌ಶಾಪಿನ ಕೆಲವು ಕೆಲಸಗಾರರನ್ನು ವಜಾ ಮಾಡಿದ ದಕ್ಕಾಗಿ ಅಲ್ಲಿನ ೪ ಸಾವಿರ ಮಂದಿ ಕಾರ್ಮಿಕರು ಮೊನ್ನೆಯಿಂದ ಮುಷ್ಕರ ಹೂಡಿದ್ದಾರೆ ಇದರಿಂದ ಎಲ್ಲ ರೈಲುಗಳ ಓಡಾಟವೂ ನಿಂತುಹೋಗಿದೆ ಕಂಬಿಗಳ ಮೇಲೆ ... [illegible] ... ಕೊಂಡು ... ಎಂಜಿನ್ನುಗಳನ್ನು ತೆ... ದಿದ್ದರು. ಆ ಪ್ರದೇಶದಲ್ಲೆಲ್ಲಾ ಪೋಲೀಸರ ಕಾವಲನ್ನು ಹಾಕಲಾಗಿದೆ.

ಸ್ಮರಣಾ ದಿನಾಚರಣೆ

ಶ್ರೀರಂಗಪಟ್ಟಣ ೨೮

ಇಲ್ಲಿನ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಸ್ಮರಣಾ ದಿನಾಚರಣೆಯು ಮೊನ್ನೆ ದಿನ ಡಾ॥ ಸಿ. ಬಂಡೀಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎಂ. ಜಿ. ಬಂಡೀಗೌಡರೂ ಮತ್ತು ಇತರರೂ ಭಾಷಣ ಮಾಡಿದರು.

ಕೀರ್ತನೆ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದಲ್ಲಿ ಶ್ರೀ ಪುರಂದರ ದಾಸರ ಪುಣ್ಯ ದಿನಾಚರಣೆಯ ಪ್ರಯುಕ್ತ ೨೦ನೇ ತಾ॥ ಸಂಜೆ ೬-೩೦ ಗಂಟೆಗೆ ಶ್ರೀ ಚೆಲುವಾಚಾರ್ಯರಿಂದ ಶ್ರೀ ಪುರಂದರ ದಾಸರ ಮಹಿಮೆ ಎಂ.. ಕೀರ್ತನೆ ನಡೆಯುವುದು

ಸಹಾಯಾರ್ಥ ಸಂಗೀತ ಕಛೇರಿ

ಟಿ ನರಸೀಪುರದ ತಾಲ್ಲೂಕು ಸೋಸಲೆ ತೋಪಿನ ಶ್ರೀ ಷಡಕ್ಷರ ಸ್ವಾಮಿಗಳವರ ಮಠದ ಜೀರ್ಣೋದ್ಧಾರದ ನಿಧಿಗಾಗಿ ಮುಂದಿನ ತಿಂಗಳು ೭ನೇ ತಾ॥ ಮಧ್ಯಾಹ್ನ ೩ ಗಂಟೆಗೆ ಟಿ. ನರಸೀಪುರದ ಭಗವಾನ್ ಟಾಕೀಸಿನಲ್ಲಿ ಆ॥ ವಿ॥ ಎಂ ಶಿವಪ್ಪನವರ ಸಂಗೀತವು ಶ್ರೀ ಎ ಎಸ್. ಶಿವರುದ್ರಪ್ಪನವರ ಪಿಟೀಲು ವಾದನ ಮತ್ತು ಶ್ರೀ ಕೆ. ವೆಂಕಟೇಶದೇವರುರವರ ಮೃದಂಗದೊಡನೆ ದರ್ಬಾರ್ ಭಕ್ಷಿಗಳಾದ ಶ್ರೀ ಪಿ ಎಚ್ ದೇವರಾಜ್ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಚೀಣದಲ್ಲಿ ಶಾಂತಿ ಸಂಧಾನ ಮಾತುಕತೆ ತಡವಾಗುವುದು

ಕಮ್ಯೂನಿಸ್ಟರು ನಾನ್‌ಕಿಂಗ್ ನಗರವನ್ನು ಆಕ್ರಮಿಸಿದ ಹೊರತು ಕದನ ನಿಲ್ಲಿಸುವುದಿಲ್ಲವೆಂದೂ ಮತ್ತು ಯುದ್ಧ ಪಾತಕಿಗಳ ಹೆಸರುಗಳನ್ನು ಅವರು ಘೋಷಿಸಲಿರುವುದರಿಂದಲೂ, ಶಾಂತಿ ಸಂಧಾನದ ಮಾತುಕತೆಗಳ ಪ್ರಾರಂಭವು ತಡವಾಗಬಹುದೆಂದು ಹೇಳಲಾಗಿದೆ.

ಚಂದ್ರಲೇಖರವರೊಡನೆ ಅಶೋಕ ಮೆಹತಾರವರ ವಿವಾಹ

ರಷ್ಯದ ಭಾರತ ರಾಯಭಾರಿಯಾದ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರವರ ಪುತ್ರಿ ಶ್ರೀಮತಿ ಚಂದ್ರಲೇಖಾರವರನ್ನು ಅಖಿಲ ಭಾರತ ಸಮತಾವಾದಿ ಪಕ್ಷದ ನಾಯಕರಾದ ಶ್ರೀ ಅಶೋಕಮೆಹತಾರವರು ಬರುವ ಮಾರ್ಚಿ ತಿಂಗಳಲ್ಲಿ ವಿವಾಹವಾಗಲಿರುವರು.

ಪ್ರತಿಯೊಂದು ಅಮೆರಿಕನ ಪ್ರಜೆಗೂ ೩೮೩ ಡಾಲರುಗಳ ತೆರಿಗೆ

ಅಮೆರಿಕ ಸರ್ಕಾರದ ವೆಚ್ಚಕ್ಕಾಗಿ ಅಲ್ಲಿನ ಪ್ರತಿಯೊಬ್ಬ ಪ್ರಜೆಯೂ ೩೮೩ ಡಾಲರುಗಳನ್ನು ಕೊಡಬೇಕಾಗಿರುವುದಾಗಿ ಅಂದಾಜು ಮಾಡಲಾಗಿದೆ. ಅಲ್ಲಿನ ಪ್ರಜಾ ಸಂಖ್ಯೆಯು ೧೪ ಕೋಟಿ, ೬೦ ಸಾವಿರ ಒಟ್ಟು ಸರ್ಕಾರದ ಆದಾಯವು ೪೧೮೦ ಕೋಟಿ ಡಾಲರುಗಳು.

Edited, printed and published by A K Nagarajan at the Sadhvi Press, D. Subbiah Road, Mysore

ರಾಜಘಾಟಿನಲ್ಲಿ ವಸ್ತು ಪ್ರದರ್ಶನ

ಮಹಾತ್ಮರ ಸ್ಮಾರಕಾರ್ಥವಾಗಿ ದೆಹಲಿಯ ರಾಜಘಾಟಿನಲ್ಲಿ ಏರ್ಪಡಿಸಿರುವ ಮಂಟಪದಲ್ಲಿ ಗಾಂಧಿಜೀಯವರ ಚಿತ್ರಗಳು ಮತ್ತು ಅವರ ಲೇಖನಗಳನ್ನು ಪ್ರದರ್ಶಿಸಲಾಗುವುದು. ಅದರ ಪ್ರಾರಂಭೋತ್ಸವವನ್ನು ನಾಳಿದ್ದು ಪಂಡಿತ ನೆಹರೂರವರು ನೆರವೇರಿಸುವರು. ಇದೇ ಸಂಬಂಧದಲ್ಲಿ ಅಲ್ಲಿ ಸೇವಾ ಗ್ರಾಮದಲ್ಲಿರುವಂತೆ ಗಾಂಧೀಜೀಯವರ ಗುಡಿಸಲನ್ನು ನಿರ್ಮಿಸಿ ಅಲ್ಲಿ ೨೪ ಗಂಟೆಗಳ ಕಾಲ ಅಖಂಡ ನೂಲುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸುಪ್ರಸಿದ್ಧ ಶಿಲ್ಪಿ ಕ್ಲಾರಾಕ್ವಿನ್‌ರವರು ಗಾಂಧೀಜೀಯವರು ನೂಲುತ್ತಿರುವ ಪ್ರತಿಮೆಯೊಂದನ್ನು ಅಲ್ಲಿ ನಿರ್ಮಿಸುತ್ತಿದ್ದಾರೆ

ಸರ್. ಸಿ. ಪಿ. ಯವರ ಪ್ರತಿಮೆಗೆ ಉಚ್ಚಾಟನೆ

ತಿರುವಾಂಕೂರು ಶಾಸನ ಸಭಾ ಭವನದ ಮುಂದೆ ಇಟ್ಟ ಸರ್ ಸಿ. ಪಿ ರಾಮಸ್ವಾಮಿ ಅಯ್ಯರ್‌ರವರು ಪ್ರತಿಮೆಯನ್ನು ಸರ್ಕಾರದವರು ಕಿತ್ತಿಹಾಕಿದ್ದಾರೆ. ಅದನ್ನು ತೆಗೆಯಬೇಕೆಂದು ೧೯೪೭ ರಿಂದಲೂ ಒತ್ತಾಯ ನಡೆಯುತ್ತಿತ್ತು

ಟೀ ರಫ್ತಿಗೆ ಪ್ರತಿಬಂಧಕ

ಸಂಸ್ಥಾನದಿಂದ ಟೀಯನ್ನು ಹೊರಕ್ಕೆ ರಫ್ತು ಮಾಡುವುದನ್ನು ಪ್ರತಿಬಂಧಿಸುವ ಮತ್ತು ಅದರ ಬೆಳೆಯನ್ನು ಅಭಿವೃದ್ಧಿ ಪಡಿಸುವ ವಿಶೇಷ ಎಮರ್ಜನ್ಸಿ ಕಾನೂನನ್ನು ಮೈಸೂರು ಸರ್ಕಾರದವರು ಹೊರಡಿಸಿರುತ್ತಾರೆ

ಪ್ರಭಾ → 28-1-49ರಿಂದ
ದಿನವಹಿ ೩ ಆಟಗಳು
ಪೃಥ್ವಿರಾಜ್, ಸುಶೋಭನಾ ಚಟರ್ಜಿ, ತ್ರಿಲೋಕ್ ಕಪೂರ್, ಮನೋರಮಾ ಪಾತ್ರ ವಹಿಸಿರುವ ಹಿಂದಿ ಚಿತ್ರ
ಪತಿ ಸೇವಾ
— ಇದರೊಂದಿಗೆ :—
ಗೃಹ ಕೈಗಾರಿಕಾ ಪ್ರದರ್ಶನ, ಡೆಹ್ರಾಡೂನಿನಲ್ಲಿ ಪಂಡಿತ್ ನೆಹ್ರೂ, ಸಿ. ಕೆ. ನಾಯಿಡು ಅವರ ಕ್ರಿಕೆಟ್ ಕ್ರೀಡೆ, ಕಾಶಿಯಲ್ಲಿ ರಾಜಾಜಿ, ಹೈದರಾಬಾದಿಗೆ ಪ್ರಧಾನಿ ನೆಹ್ರೂ ಭೇಟಿ, ಇತ್ಯಾದಿಗಳನ್ನೊಳಗೊಂಡ ಭಾರತ ಸರ್ಕಾರದ ನ್ಯೂಸ್ ರೀಲ್ ನಂ. ೧೩ ನ್ನೂ ಪ್ರದರ್ಶಿಸಲಾಗುವುದು.

ಪ್ರಭು ದೇವಾ ಟಾಕೀಸಿನಲ್ಲಿ
28-1-49 ನೇ ಶುಕ್ರವಾರದಿಂದ
ಪ್ರತಿ ದಿನ ೩ ಆಟಗಳು
ವಿಂಧ್ಯಾರಾಣಿ
(ತೆಲುಗು)
ಜೆಮಿನಿ ಸ್ಟುಡಿಯೋ ತಯಾರಿಕೆ
ಪಾತ್ರ:- ಪುಷ್ಪವಲ್ಲಿ, ವರಲಕ್ಷ್ಮೀ, ಜಿ.ವಿ. ಸುಬ್ಬರಾವ್ ಮುಂತಾದವರು [Tallam Release

UNIVERSITY OF MYSORE

No.Ex.-526 48-49 Office of the University of Mysore, Mysore, Dated 18-1-1949

NOTIFICATION

Question papers in Optional English, Optional Kannada, Optional Urdu, Optional Persian, Optional Hindi and Optional Sanskrit for the B.A. Degree Examination of March 1949.

—:o:—

As a special case at the March 1949 Examinations for B.A. Degree Examination, there will be TWO SETS OF QUESTION PAPERS in Optional English, Optional Kannada, Optional Urdu, Optional Persian, Optional Hindi and Optional Sanskrit

ONE SET : Those on the text-books prescribed for the March 1949 Examinations.

SECON SET : Those on the text-boks prescribed for the March 1948 Examinations.

The Second Set is for the benefit of candidates who failed at the October 1948 Examination, or those who having entered for the Examination of October 1948 did not take the Examination. By Order,

T. SIDDALINGA DEVARU
Regitsrar

ಜಿಬ್ರಾಲ್ಟರನ್ನು ಅಮೆರಿಕಕ್ಕೆ ಬ್ರಿಟನ್ನು ಮಾರುವುದೇ?

ಬ್ರಿಟನ್ನು ಕಳೆದ ೨೫೦ ವರ್ಷಗಳಲ್ಲೂ ಮುಖ್ಯ ಮಾರ್ಗಸೂಚಕವಾದ ಜಿಬ್ರಾಲ್ಟರ್ ದ್ವೀಪವನ್ನು ಅಲ್ಲಿ ೧೭೦೪ ರಲ್ಲಿ ಅದನ್ನು ಸ್ಪೇಂ ದೇಶದಿಂದ ಕಸಿದುಕೊಂಡಾರಭ್ಯ, ಅದನ್ನು ಭದ್ರಪಡಿಸಿ ಸಂರಕ್ಷಿಸುತ್ತಿದೆ. ಆದರೆ ಬ್ರಿಟಿಷ್ ಸಾಮ್ರಾಜ್ಯ ಪದವಿಯನ್ನು ಕಳೆದುಕೊಂಡಮೇಲೂ ಮತ್ತು ಆರ್ಥಿಕ ಮುಗ್ಗಟ್ಟಿನಿಂದಲೂ, ೧॥ ಮೈಲಿ ಸುತ್ತಳತೆ ಇರುವ ಈ ಸಣ್ಣ ಪ್ರದೇಶವನ್ನು ಅದು ಸಂರಕ್ಷಿಸಲು ಸಾಧ್ಯವಿಲ್ಲವಾಗಿದೆ. ಆದುದರಿಂದ ಅದನ್ನು ಅಮೆರಿಕಕ್ಕೆ ಮಾರಾಟ ಮಾಡಬಹುದೆಂದು ಹೇಳಲಾಗಿದೆ, ಅಮೆರಿಕಕ್ಕೆ ಸ್ಪೇನ್ ಸೇರಿದ ಕಾಟಾ ಕೇಂದ್ರವು ಅಗತ್ಯವಾಗಿರುವುದರಿಂದ ಜಿಬ್ರಾಲ್ಟರಿನ ಆಡಳಿತವನ್ನು ಸ್ವೀಕರಿಸಿದೊಡನೆ ಅದು ಇಟ್ಟುಕೊಳ್ಳಬಹುದೆಂದೂ ಹೇಳಲಾಗಿದೆ.

ಸೋಮನಾಥ ದೇವಾಲಯದ ಜೀರ್ಣೋದ್ಧಾರಕ್ಕೆ ೧ ಲಕ್ಷ ರೂ.

ಭಾರತದ ಸುಪ್ರಸಿದ್ಧ ಸೋಮನಾಥ ದೇವಾಲಯದ ಜೀರ್ಣೋದ್ಧಾರದ ನಿಧಿಗೆ ಗೊಂಡಾಲ್ ಮಹಾರಾಜರವರು ೧ ಲಕ್ಷ ರೂ. ಅನ್ನು ಕೊಟ್ಟಿರುತ್ತಾರೆ.

ಚಿಯಾಂಗ್ ಕೈಷೇಕರ ದಸ್ತಗಿರಿಯಾಗಬೇಕು

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕರು ಮತ್ತು ಅವರ ಸರ್ಕಾರದ ಇತರ ಯುದ್ಧ ಪಾತಕಿಗಳನ್ನು ದಸ್ತಗಿರಿ ಮಾಡಬೇಕೆಂದು ಉತ್ತರ ಚೀಣದ ಷಾಸಿ ರೇಡಿಯೋ ಒತ್ತಾಯಪಡಿಸಿದೆ.

ಸಭೆ ಮುಂದೆ ಹೋಯಿತು

ರಾಜಧಾನಿಯ ಪ್ರಜಾ ಮಂಡಲದವರು ಈ ದಿನ ಏರ್ಪಡಿಸಿದ್ದ ಬಹಿರಂಗ ಸಭೆಯನ್ನು ಮುಂದು ವರಿಸಲಾಗಿದೆಯೆಂದೂ ಮುಂದೆ ನಡೆಯುವ ಸಭೆಗೆ ಬೆಂಗಳೂರು ಪ್ರಜಾ ಮಂಡಲದ ನಾಯಕರಾದ ಶ್ರೀ ಎಲ್. ಎಸ್. ರಾಜುರವರನ್ನು ಆಹ್ವಾನಿಸಲಾಗಿದೆ ಯೆಂದೂ ಅದರ ಕಾರ್ಯದರ್ಶಿ ತಿಳಿಸಿರುತ್ತಾರೆ.

॥ ಶ್ರೀ ॥
ಗಾಯತ್ರೀ ಟಾಕೀಸ್
ತಾ॥ ೨೭-೧-೪೯ರಿಂದ ೩ ದಿನಗಳು
ಪ್ರತಿ ದಿನ ೩ ಪ್ರದರ್ಶನಗಳು
Walt Disney's First Li[ve]
Action Comedy Feature
Technicolour,
Song of the South
Including animated tal[es]
of "Uncle Remill"
ಸಾಂಗ್ ಆಫ್ ದಿ ಸೌ[ತ್]
(ವರ್ಣರಂಜಿತ ಚಿತ್ರ)
Morning Shows at 10
From 29-1-49 for 2 da[ys]
20th's NOB-HIL[L]
In Glorious Technicol[or]

ರೋ. ನಂ. 792 ॥ ವಂದೇಮಾತರಂ ॥

ಸಾಧ್ವಿ

ಸಂಪುಟ ೭] ಶನಿವಾರ ೨೯-೧-೪೯ [ಸಂಚಿಕೆ ೧೮೯

ಸರ್ವೋದಯ ದಿನಾಚರಣೆಗೆ ರಾಜಾಜಿಯವರ ಸಂದೇಶ

ನಾಳೆ ನಮ್ಮ ಪ್ರೀತಿಪಾತ್ರರಾದ ನಾಯಕರ ಪ್ರಥಮ ಪುಣ್ಯ ದಿನ. ಆದದರಿಂದ ನಾವೆಲ್ಲರೂ ಶ್ರದ್ಧಾ ಭಕ್ತಿಯಿಂದ ಅವರನ್ನು ಸ್ಮರಿಸೋಣ. ಮನುಷ್ಯನ ಲೋಪದೋಷವೇನೇ ಇರಲಿ, ತಾನು ಕಲ್ಮಷರಹಿತವಾಗಿ ಪ್ರೇಮ ಮಾರ್ಗದಲ್ಲಿ ನಡೆಯಬೇಕೆಂಬುದೇ ಗಾಂಧೀಜೀಯವರ ಜೀವನದ ತತ್ವ. ಮಹಾತ್ಮರ ಜೀವನದ ಕಡೆಯ ಕೆಲವು ತಿಂಗಳುಗಳಲ್ಲಿ ಈ ಮಹತ್ವದ ಆದರ್ಶವು ಹಿಂದೆಂದೂ ಕಾಣದ ರೀತಿಯಲ್ಲಿ ವ್ಯಕ್ತವಾಗುತ್ತಿತ್ತು. ಪ್ರತಿ ಪ್ರಾಣಿಯಲ್ಲೂ ಭಗವಂತನು ಇದ್ದಾನೆಂಬ ಅಂಶವನ್ನು ಮರೆಯದೇ ಇರೋಣ. ಜೀವನದಲ್ಲಿ ದಯೆ ಕರುಣೆ, ಸೌಹಾರ್ದಗಳನ್ನು ಕಂಡಾಗ ಅದೇ ಭಗವಂತನ ಪ್ರೇಮ ಕಿರಣವೆಂದು ತಿಳಿಯಬೇಕು. ಪ್ರೇಮವು ಕಣ್ಮರೆಯಾದ ತಕ್ಷಣವೇ ಭಗವಂತನ ಬೆಳಕು ಬಳಕ್ಕೆ ಬರದಂತೆ ಬಾಗಿಲನ್ನು ಮುಚ್ಚಿದಂತೆಯೇ ಸರಿ. ನಮ್ಮ ಪ್ರೇಮ ಮತ್ತು ಪರೋಪಕಾರ ಪೂರಿತವಾದ ನಡವಳಿಕೆಗಳೇ ಮಹಾತ್ಮರಿಗೆ ನಿಜವಾದ ಶ್ರಾದ್ಧ ಮತ್ತು ಭಗವಂತನ ಪೂಜೆ—ಎಂದು ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ನಾಳೆ ನಡೆಯಲಿರುವ ಸರ್ವೋದಯ ದಿನಾಚರಣೆಗೆ ಸಂದೇಶ ಕೊಟ್ಟಿರುತ್ತಾರೆ.

ಸರ್ವೋದಯ ದಿನಾಚರಣೆ

ಮೈಸೂರು, ೨೯

ಮಹಾತ್ಮಜಿಯವರ ಪುಣ್ಯತಿಥಿಯ ವಾರ್ಷಿಕ ದಿನದ ಪ್ರಯುಕ್ತ ನಾಳೆ ಬೆಳಿಗ್ಗೆ ಕಾಂಗ್ರೆಸ್ ಕಾರ್ಯಾಲಯದಲ್ಲಿ ಬೆಳಿಗ್ಗೆ ೬ರಿಂದ ಸಂಜೆ ೫ ಗಂಟೆ ವರೆಗೆ ಪ್ರಾರ್ಥನೆ ಮತ್ತು ಸೂತ್ರಯಜ್ಞ, ಬೆಳಿಗ್ಗೆ ೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ, ಸಂಜೆ ೫ ರಿಂದ ೬ ಗಂಟೆ ವರೆಗೆ ಗಾಂಧೀ ಸೇವಾ ಸಂಘದಲ್ಲಿ ನೂಲುವ ಸ್ಪರ್ಧೆ, ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಮತ್ತು ಬಹಿರಂಗ ಸಭೆ ನಡೆಯುವುವು.

ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೮-೩೦ ಗಂಟೆಗೆ ಕೃಷ್ಣವಿಲಾಸ ಅಗ್ರಹಾರದಲ್ಲಿರುವ ಕೂದಂ ಶಾಲೆಯಲ್ಲಿ ಸಾಮೂಹಿಕ ಪ್ರಾರ್ಥನೆಯು ಶ್ರೀ ಶಿವರಾಂ ಕಾರಂತರ ನೇತೃತ್ವದಲ್ಲಿ ನಡೆಯುವುದು. ಮಧ್ಯಾಹ್ನ ೩-೩೦ ಗಂಟೆಗೆ ಸೂತ್ರಯಜ್ಞ ನಡೆಯುವುದು.

ರಾಜಧಾನಿಯ ಆರ್ಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ದೊಡ್ಡಪೇಟೆ ಪಶ್ಚಿಮ ೫ ನೇ ಕ್ರಾಸ್ ರೋಡಿನ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ಬಾಪೂಜಿಯವರ ಸ್ಮಾರಕ ದಿನಾಚರಣೆಯು ಶ್ರೀ ಎಚ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ಕೃಷ್ಣಮೂರ್ತಿಪುರಂ ದೇಶೀಯ ವಿದ್ಯಾಶಾಲೆಯ ಆಶ್ರಯದಲ್ಲಿ ಶ್ರೀ ಎಸ್. ಎ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ಬೆಳಗಿನಿಂದ ಸಂಜೆಯವರೆಗೂ ಪೂಜ್ಯ ಬಾಪೂಜಿ ದಿನಾಚರಣೆ ನಡೆಯುವುದು.

ಗಾಂಧಿ ಸಪ್ತಾಹ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಮುಂದೆ ನಾಳೆಯಿಂದ ೬ ನೇ ತಾ॥ ವರೆಗೆ ಗಾಂಧಿ ಸ್ಮಾರಕ ವಾರ್ಷಿಕ ನಾಲ್ಕನೆ ಸಪ್ತಾಹದ ಸಂಬಂಧದಲ್ಲಿ ಪ್ರತಿದಿನ ಬೆಳಿಗ್ಗೆ ೭ ಗಂಟೆಗೆ ಪೂಜೆ ಮತ್ತು ಗೀತಾ ಪ್ರವಚನ, ರಾತ್ರಿ ೮ ಗಂಟೆಗೆ ಭಜನೆ ಸಂಗೀತ ಮತ್ತು ಹರಿಕಥೆಗಳು ನಡೆಯುವುವು.

ಪೆರೇಡು ನಿಂತಿತು

ಗಾಂಧೀಜಿಯವರ ಪುಣ್ಯ ದಿನದ ಪ್ರಯುಕ್ತ ನಾಳೆ ನಡೆಯಬೇಕಾಗಿದ್ದ ಹೋಂಗಾರ್ಡ್ ಪೆರೇಡನ್ನು ನಿಲ್ಲಿಸಲಾಗಿದೆ.

ಲಂಡನ್ನಿನಲ್ಲಿ ಮೈಸೂರಿನ ಟ್ರೇಡ್ ಕಮಿಷನರು

ಮೈಸೂರು ಸಂಸ್ಥಾನವು ೧೯೩೯ ರಲ್ಲಿ ಇಂಗ್ಲೆಂಡಿನಲ್ಲಿ ಟ್ರೇಡ್ ಕಮಿಷನರನ್ನು ನೇಮಿಸಿತೆಂದು ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಶಾಸನಸಭೆಯಲ್ಲಿ ಇತ್ತೀಚೆಗೆ ತಿಳಿಸಿದ ವಿಚಾರವಾಗಿ ಮೈಸೂರಿನ ಮಾಜಿ ದಿವಾನರಾದ ಸರ್ ಆಲ್ಬಿಯನ್ ಬ್ಯಾನರ್ಜಿಯವರು ಒಂದು ಹೇಳಿಕೆಯನ್ನಿತ್ತು ತಾವು ೧೯೨೮ ರಲ್ಲಿ ಲಂಡನ್ನಿಗೆ ಹೋದಾಗ ಈ ವಿಚಾರವನ್ನು ಪರಿಶೀಲಿಸಿ ೩ ವರ್ಷಗಳ ಕಾಲ ಒಬ್ಬ ಅಧಿಕಾರಿಯನ್ನು ಟ್ರೇಡ್ ಕಮಿಷನರಾಗಿ ನೇಮಿಸಬೇಕೆಂದು ಶ್ರೀಮನ್ಮಹಾರಾಜರವರಿಗೆ ಸಲಹೆ ಕೊಟ್ಟರೆಂದೂ, ೧೯೨೯ನೇ ಜುಲೈ ೧೧ನೇ ತಾ॥ ಈ ಬಗ್ಗೆ ಶ್ರೀಮನ್ಮಹಾರಾಜರವರ ಆಜ್ಞೆ ಹೊರಟಿತೆಂದೂ ತಿಳಿಸಿರುತ್ತಾರೆ.

ನಾಳೆ ಪ್ರಾರ್ಥನಾ ದಿನವನ್ನಾಗಿ ಆಚರಿಸಬೇಕು

ಮಹಾತ್ಮರ ಪ್ರಥಮ ವಾರ್ಷಿಕ ದಿನವಾದ ನಾಳೆ ಪ್ರಾರ್ಥನಾ ದಿನವನ್ನಾಗಿ ಎಲ್ಲರೂ ಆಚರಿಸಬೇಕೆಂದು ಮೈಸೂರು ಸರ್ಕಾರದವರು ಪ್ರಾರ್ಥಿಸಿರುತ್ತಾರೆ. ದೇವಾಲಯ, ಮಸೀದಿ ಮತ್ತು ಚರ್ಚುಗಳಲ್ಲೂ ಮತ್ತು ಮನೆಗಳಲ್ಲೂ ಜನರು ಪ್ರಾರ್ಥನೆ ನಡೆಸಿ ಮಹಾತ್ಮರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಸೂಚಿಸಿರುತ್ತಾರೆ. ಮೈಸೂರಿನ ಎಲ್ಲಾ ಪ್ರದೇಶಗಳಲ್ಲಿ ಪ್ರಾರ್ಥನೆ ನಡೆಸಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಅಧಿಕಾರಿಗಳಿಗೆ ಸರ್ಕಾರದವರು ಸೂಚನೆ ಕೊಟ್ಟಿರುತ್ತಾರೆ.

ಬೋಸರು ಬದುಕಿದ್ದಾರೆಂದು ಶರತ್ ಬಾಬುಗಳ ಹೇಳಿಕೆ

ಸುಭಾಷ್ ಚಂದ್ರಬೋಸರು ಬದುಕಿದ್ದಾರೆಂದೂ, ಅವರು ಯಾವ ಕಾರಣದಿಂದಲೂ ಗುಪ್ತವಾಗಿದ್ದುಕೊಂಡಿರುವರೆಂದೂ ಸಮಯ ಬಂದಾಗ, ಅವರು ಹೊರಗೆ ಕಾಣಿಸಿಕೊಂಡು, ಭಾರತಕ್ಕೆ ವಾಪಸು ಬರುವರೆಂದೂ, ಅವರ ಅಣ್ಣಂದಿರಾದ ಶ್ರೀ ಶರತ್ ಚಂದ್ರಬೋಸರು ಕಲ್ಕತ್ತೆಯಲ್ಲಿ ತಿಳಿಸಿರುತ್ತಾರೆ.

ಡಾ॥ ಮೋದಿಯವರು

ಮೈಸೂರು, ೨೯

ಬೆಳಗಾವಿಯ ಸುಪ್ರಸಿದ್ಧ ನೇತ್ರ ಚಿಕಿತ್ಸಾ ವೈದ್ಯರಾದ ಡಾ॥ ಮೋದಿಯವರು ಕಳೆದ ಒಂದು ತಿಂಗಳಿನಿಂದಲೂ ರಾಜಧಾನಿಯಲ್ಲಿ ಉಚಿತ ನೇತ್ರ ಚಿಕಿತ್ಸೆ ನಡೆಸುತ್ತಿದ್ದರಷ್ಟೆ. ಅವರು ಮುಂದಿನ ತಿಂಗಳು ೬ ಅಥವಾ ೭ ನೇ ತಾ॥ ಬೆಳಗಾವಿಗೆ ವಾಪಸು ಹಿಂದಿರುಗುವರು. ಅವರು ಮುಂದಿನ ತಿಂಗಳು ಕೊನೆಯ ವಾರದಲ್ಲಿ ಹಾಸನಕ್ಕೆ ಭೇಟಿ ಕೊಟ್ಟು ಚಿಕಿತ್ಸೆ ನಡೆಸುವರು.

ಪೇಪರ್‌ದಾರರುಗಳ ಸಭೆ

ಸರ್ಕಾರಿ ಪೆನ್ಷನ್‌ದಾರರುಗಳ ಕುಂದುಕೊರತೆಗಳ ನಿವಾರಣೆ ಬಗ್ಗೆ ನಾಳೆ ಸಂಜೆ ೪ ಗಂಟೆಗೆ ಪೂರ್ಣಯ್ಯನವರ ಛತ್ರದಲ್ಲಿ ಪ್ರಜಾಮಂಡಲದ ಆಶ್ರಯದಲ್ಲಿ ಸಭೆ ನಡೆಯುವುದು.

ನೈಜಾಂ ರೈಲ್ವೆಯ ಮುಷ್ಕರ ಮುಕ್ತಾಯ

ಹೈದರಾಬಾದ್ ರೈಲ್ವೆ ವರ್ಕ್‌ಷಾಪಿನ ೮ ಸಾವಿರ ಕೆಲಸಗಾರರು ಕಳೆದ ಮೂರು ದಿನಗಳಿಂದಲೂ ಮುಷ್ಕರ ಹೂಡಿದ್ದು ನಿನ್ನೆ ಕೆಲಸಕ್ಕೆ ... ... ಕೆಲಸಗಾರರು ಕೆಲಸಕ್ಕೆ ಹಿಂತಿರುಗಿದ್ದಾರೆ.

"ಕೇಸರಿ" ವಾರ ಪತ್ರಿಕೆಯೂ ನಿಂತಿತು

ಬೆಂಗಳೂರಿನಿಂದ ಶ್ರೀ ಆರ್. ಎಸ್. ನಾರಾಯಣರವರ ಸಂಪಾದಕತ್ವದಲ್ಲಿ ಹೊರಡುತ್ತಿರುವ "ಕೇಸರಿ" ವಾರ ಪತ್ರಿಕೆಯು ನಾಳೆಯಿಂದ ನಿಲ್ಲುವುದು. ಆ ಪತ್ರಿಕೆಗೆ ಸರಕಾರದವರು ಕೊಟ್ಟ ಶೀವಣಾತಿ ನೋಟಿಸೇ ಇದಕ್ಕೆ ಕಾರಣವೆಂದು ಸಂಪಾದಕರು ತಿಳಿಸಿದ್ದಾರೆ. "ಸರ್ಕಾರ ಪತ್ರಿಕಾ ಸ್ವಾತಂತ್ರ್ಯವನ್ನು ಪೂರ್ತಿ ತುಳಿಯಲು ಸಂಕಲ್ಪಿಸಿರುವಂತಿದೆ. ಇಂತಹ ವಾತಾವರಣದಲ್ಲಿ ಪ್ರಾಮಾಣಿಕವಾದ ಮತ್ತು ಸ್ವತಂತ್ರವಾದ ಪತ್ರಿಕೋದ್ಯಮ ಸಾಗದು, ಹೀಗೆಂದು ಸಂಪಾದಕರು ತಿಳಿಸಿ ನಾಳೆ ಗಾಂಧಿಜಿಯವರ ಪುಣ್ಯ ದಿನದಿಂದ ತಮ್ಮ ಪತ್ರಿಕೆಯೂ ಸಹ "ನಿರ್ವಾಣ" ಹೊಂದುವದೆಂದು ಹೇಳಿದ್ದಾರೆ.

ದಕ್ಷಿಣ ಅಮೆರಿಕದಿಂದ ನಿಗ್ರೋಗಳ ವರ್ಗವೇ?

ದಕ್ಷಿಣ ಅಮೆರಿಕದಲ್ಲಿರುವ ನಿಗ್ರೋ ಜನಗಳಿಗೆ ಪೌರ ಹಕ್ಕು ಮತ್ತು ಇತರ ಸೌಲಭ್ಯಗಳನ್ನು ಕೊಡಲು ಅಲ್ಲಿನ ಬಿಳಿಯ ಜನರು ನಿರಾಕರಿಸಿರುವುದರಿಂದ ಅಲ್ಲಿರುವ ೧೫ ಲಕ್ಷ ನಿಗ್ರೋ ಸಂಸಾರಗಳನ್ನು ಉತ್ತರ ಅಮೆರಿಕಕ್ಕೆ ವರ್ಗಾಯಿಸಬೇಕೆಂದು ಅಮೆರಿಕದ ಕಾಂಗ್ರೆಸ್ ಸಭೆಯಲ್ಲಿ ರಿಚರ್ಡ್‌ಸನ್‌ರವರು ಒಂದು ಮಸೂದೆಯನ್ನು ತರಲಿರುವರೆಂದು ಹೇಳಲಾಗಿದೆ. ಖಾಲಿಯಾದ ಜಾಗಕ್ಕೆ ಉತ್ತರದಿಂದ ಬಿಳಿಯ ಜನರನ್ನು ಕಳುಹಿಸಬೇಕೆಂದೂ ಅವರು ಸೂಚಿಸಿದ್ದಾರೆ. ಇದಕ್ಕಾಗಿ ಕೋಟ್ಯಾಂತರ ಡಾಲರುಗಳು ವೆಚ್ಚವಾಗುವುದು.

ಪಶ್ಚಿಮ ಪಂಜಾಬಿನ ಮಾಜಿ ಮಂತ್ರಿಗಳ ಮೇಲೆ ಮೊಕದ್ದಮೆ

ಪಶ್ಚಿಮ ಪಂಜಾಬಿನ ಮಾಜಿ ಸಚಿವರುಗಳಾದ ಸರ್ದಾರ್ ಷೌಕತ್ ಹಯಾತ್ ಖಾನ್ ಮತ್ತು ಷೇಕ್ ಕರಾಮತ್ ಅಲಿಯವರುಗಳ ಮೇಲೆ ಲಂಚ ರುಸುವತ್ತುಗಳಿಗಾಗಿ ಮೊಕದ್ದಮೆ ಹೂಡಲಾಗುವುದೆಂದೂ, ಈ ಬಗ್ಗೆ ಪಾಕಿಸ್ತಾನದ ಪೊಲೀಸರು ತನಿಖೆಯನ್ನು ನಡೆಸುತ್ತಿರುವರೆಂದೂ ವರದಿಯಾಗಿದೆ.

ಎರಡು ತಿಂಗಳಿನಿಂದಲೂ ಬೆಂಕಿ ಉರಿಯುತ್ತಿದೆ

ಆಸ್ಟ್ರೇಲಿಯಾದ ಸಿಡ್ನಿಯ ಕಲ್ಲಿದ್ದಲಿನ ಗಣಿ ಹತ್ತಿರದ ಪ್ರದೇಶಕ್ಕೆ ೩ ತಿಂಗಳ ಹಿಂದೆ ಬೆಂಕಿ ಹತ್ತಿಕೊಂಡಿತೆಂದೂ, ಅದನ್ನು ಆರಿಸಲು ಸಾವಿರಾರು ಗ್ಯಾಲನ್ನು ನೀರು ಮತ್ತು ಮರಳನ್ನು ಉಪಯೋಗಿಸಿದರೂ ನಿಷ್ಫಲವಾಗಿ ಈಗಲೂ ಅದು ಉರಿಯುತ್ತಿದೆಯೆಂದೂ ವರದಿಯಾಗಿದೆ.

ದಂಡಿನ ೨೮ ಜನ ಪೋಲೀಸರ ವಜಾ

ಬೆಂಗಳೂರು ದಂಡಿನಲ್ಲಿ ಇತ್ತೀಚೆಗೆ ನಡೆದ ಪೋಲೀಸರ ಮುಷ್ಕರ ಸಂಬಂಧದಲ್ಲಿ ೨೮ ಜನ ಪೋಲೀಸರನ್ನು ಕೆಲಸದಿಂದ ವಜಾ ಮಾಡಲಾಗಿದೆ ಮತ್ತು ೮ ಜನರಿಗೆ ಎಚ್ಚರಿಕೆ ಕೊಡಲಾಗಿದೆ.

ಸೂಚನೆ

ಮಹಾತ್ಮ ಗಾಂಧಿಜಿಯವರ ಪುಣ್ಯ ದಿನಾಚರಣೆ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ,

PRABHAT BANGLE
Stores,
Sayaji Rao Road, Mysore
Just arrived
BANGLES
RIBBONS
& Toilet Goods
★
ಪ್ರಭಾತ್ ಬ್ಯಾಂಗಲ್
ಸ್ಟೋರ್ಸ್
ಬಳೆಗಳು
ರಿಬ್ಬನ್‌ಗಳು
ಮತ್ತು
ಟಾಯಿಲೆಟ್ ಸಾಮಾನುಗಳು
ಈಗತಾನೆ ಬಂದಿದೆ

ಲಗ್ನದ ಮನೆಗಳಿಗೆ

ನಮ್ಮಲ್ಲಿ ಮದ್ವ ನಾದ ಮೈಸೂರು ಸಿಲ್ಕ್ ಸಕ್ಕರೆ ... ಬೆಂಗಳೂರು ... ಕುಂಭಕೋಣಂ ಸೀರೆ ... ಪಂಚೆಗಳೂ ಮತ್ತು ... ಒಂದೇ ಭೇಟಿ ಕೊಡಿ

ಗುರುದೇವಾ ಹಾಲ್,
ಬೆಂಗಳೂರು ಜವಳಿ ಅಂಗಡಿ,
ಶಿವರಾಂಪೇಟೆ ಮೈಸೂರು

ಗೃಹಕೃತ್ಯದ ನೋಟೀಸು

ಮೈಸೂರು ತಾಲ್ಲೂಕು ಕಾಮನಕೆರೆ ಹುಂಡಿಯಲ್ಲಿರುವ ಹಡ ನಿಂಗೇಗೌಡರ ಸಿಂಗಯ್ಯನ ಹೆಂಡತಿ ಕೆಂಪಮ್ಮ, ಇವರ ಮಕ್ಕಳು ೧ ನೇ ಹನುಮೇಗೌಡ, ೨ ನೇ ಮೈಸೂರು ಸುಬ್ಬೇಗೌಡರ ಇರಾದೆಯ ಮೇರೆ ತಿಳಿಯಪಡಿಸುವುದೇನೆಂದರೆ.—

ಷೆಡ್ಯೂಲು ಸ್ವತ್ತುಗಳು ನನ್ನ ಕಕ್ಷಿಗಾರರ ಅವಿಭಕ್ತ ಕುಟುಂಬಕ್ಕೆ ಸೇರಿದವುಗಳಾಗಿ ನನ್ನ ಕಕ್ಷಿಗಾರರ ಸ್ವಾಧೀನಾನುಭವದಲ್ಲಿವೆ ಹಡ ನಿಂಗೇಗೌಡರ ಸಿಂಗಯ್ಯನಿಗೆ ಈಗ್ಗೆ ಒಂದು ವರ್ಷದಿಂದ ಬುದ್ಧಿ ಭ್ರಮಣೆಯುಂಟಾಗಿ ಸಿಕ್ಕಿದ ಕಡೆ ತಿರುಗುತ್ತಲಿರುತ್ತಾನೆ ಬುದ್ಧಿ ಭ್ರಮಣೆಯಿಂದ ವ್ಯವಹರಿಸಲ್ಲಾನವಿಲ್ಲದ ಕಾರಣದಿಂದ ಯಾರೇ ಆಗಲಿ ಷೆಡ್ಯೂಲು ಸ್ವತ್ತುಗಳನ್ನು ಕ್ರಯ ದಾನ, ಆಧಾರ, ಭೋಗ್ಯ ವಗೈರೆ ಯಾವ ರೀತಿಯಿಂದಲಾದರೂ ಪಡೆದುಕೊಂಡಲ್ಲಿ, ಅಂಥವರಿಗೆ ಸದರಿ ಸ್ವತ್ತುಗಳಲ್ಲಿ ಏನೊಂದು ಹಕ್ಕುಬಾಧ್ಯತೆ, ಸ್ವಾಧೀನ ಸಹ ಉಂಟಾಗುವುದಿಲ್ಲವೆಂದು ಈ ಮೂಲಕ ಪ್ರಚುರಪಡಿಸಿರುತ್ತೆ

ಷೆಡ್ಯೂಲು —ಕಾಮನಕೆರೆ ಹುಂಡಿಯಲ್ಲಿರುವ (೧) ಸ ನಂ ... ನೇ ... ಎಕರೆ ... ಗುಂಟೆ, ... (೨) ಸ ನಂ ... ನೇ ... ಗುಂಟೆ ಹೊಲ ... ಪೂರ್ವಕ್ಕೆ ಬುಯ್ಯಪ್ಪನ ಮನೆ, ಪಶ್ಚಿಮಕ್ಕೆ ಈರಮ್ಮನ ಮನೆ, ಉತ್ತರಕ್ಕೆ ಗಲ್ಲಿ ಮತ್ತು ಮಾಯಪ್ಪನ ಮನೆ, ದಕ್ಷಿಣಕ್ಕೆ ರಸ್ತೆ ಈ ಮಧ್ಯ ಇರುವ ಮನೆ—(೪) ಚರಸ್ವತ್ತುಗಳು — ... ಎಮ್ಮೆ, ... ಹಸುಗಳು, ... ಎತ್ತುಗಳು, ... ಕುರಿಗಳು

ಎಂ. ಎನ್. ಅನಂತರಾಮ ಶಾಸ್ತ್ರಿ,
ಪ್ಲೀಡರ್, ಮೈಸೂರು

ನಾಗ ಪೇಪನ್ನರ ಶಿಕ್ಷೆ ರದ್ದು

ಹಿಟ್ಲರನ ಪ್ರಭುತ್ವ ವೈಸ್‌ಛಾನ್ಸಲರೂ ಮತ್ತು ಟರ್ಕಿಯಲ್ಲಿ ಜರ್ಮನಿಯ ರಾಯಭಾರಿಯೂ ಆಗಿದ್ದ ವಾನ್ ಪೇಪನ್ನರಿಗೆ ಯುದ್ಧ ಪಾತಕಿಯೆಂದು ೮ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿತ್ತು ಈಗ ಅದನ್ನು ಶ್ರೇಷ್ಠಕೋರ್ಟಿನವರು ರದ್ದು ಮಾಡಿರುತ್ತಾರೆ

ರಾಜಕಮಲ್,
ಮೈಸೂರು
ತಾ|| ೨೮-೧-೪೯ನೇ
ಶುಕ್ರವಾರದಿಂದ ಪ್ರಾರಂಭ
ಪ್ರತಿ ದಿನ ೩ ಆಟಗಳು
ಝುಂಕಿ
(ಹಿಂದಿ)
ಭೂಮಿಕೆ :—ಅಕ್ತಾರ್
ಜಾಗಿರ್‌ದಾರ್,
Morning Shows at 10-30
From 28-1-49 for 4 days
SLAVE GIRL
(In Technicolour)
With - Vyone-de-carlo,
George Brent

ಗಾಂಧಿ ಸ್ಮಾರಕ ನಿಧಿ

ಭಾರತದಾದ್ಯಂತ ಗಾಂಧಿ ಸ್ಮಾರಕ ನಿಧಿಗೆ ಕಳೆದ ಡಿಸೆಂಬರ್ ಅಂತ್ಯದ ವರೆಗೆ ... ಕೋಟಿ ರೂ ... ವಸೂಲಾಗಿದೆ

ಮೈಸೂರು ಸ್ಟೇಟ್ ರೈಲ್ವೆ

ನಾನ್ ವೆಜಿಟೇರಿಯನ್ ಉಪಾಹಾರ ಮಂದಿರಗಳ ನಿರ್ಮಾಣಕ್ಕೆ ಟೆಂಡರು

ಇದೇ ೧೯೪೯ ನೇ ಫೆಬ್ರವರಿ ೧೫ನೇ ತಾರೀಖಿನಿಂದ ೧೯೫೦ ನೇ ಜುಲೈ ೧ ರವರೆಗೆ ಮೈಸೂರು ಸ್ಟೇಟ್ ರೈಲ್ವೆಯ ಈ ಕೆಳಕಂಡ ಸ್ಟೇಷನ್ನುಗಳಲ್ಲಿ ನಾನ್ ವೆಜಿಟೇರಿಯನ್ (ಜನರಲ್) ಉಪಹಾರ ಮಂದಿರಗಳನ್ನು ನಿರ್ವಹಿಸಲು ಟೆಂಡರುಗಳನ್ನು ಆಹ್ವಾನಿಸಲಾಗಿದೆ

೧) ತುಮಕೂರು, ೨) ಹಾಸನ, ೩) ಅರಸೀಕೆರೆ, ೪) ಬೀರೂರು, ೫) ಶಿವಮೊಗ್ಗ, ೬) ಸಾಗರ, ೭) ಹರಿಹರ ೮) ದೊಡ್ಡಬಳ್ಳಾಪುರ

ಇದೇ ೧೯೪೯ನೇ ಫೆಬ್ರವರಿ ೫ನೇ ತಾರೀಖು ಮಧ್ಯಾಹ್ನ ೩ ಘಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸಲಾಗುವುದು ಟೆಂಡರಿನ ಬಗ್ಗೆ ವಿವರ ಮತ್ತು ನಮೂನೆ ಫಾರಂಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ ಮೈಸೂರು-ಇವರಿಂದ ತಿಳಿಯಬಹುದು

ಮೀರ್ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರು
ಟ್ರಾಫಿಕ್ ಮ್ಯಾನೇಜರ ಕಛೇರಿ,
ಮೈಸೂರು ೧೭-೧-೧೯೪೯

ಪ್ರಭುದೇವಾ ಟಾಕೀಸ್
28-1-49 ನೇ ಶುಕ್ರವಾರದಿಂದ
ಪ್ರತಿ ದಿನ ೩ ಆಟಗಳು
ವಿಂಧ್ಯಾರಾಣಿ
(ತೆಲುಗು)
ಜೆಮಿನಿ ಸ್ಟುಡಿಯೋ ತಯಾರಿಕೆ
ಪಾತ್ರ:- ಪುಷ್ಪವಲ್ಲಿ, ವರಲಕ್ಷ್ಮೀ, ಜಿ.ವಿ. ಸುಬ್ಬರಾವ್
ಮುಂತಾದವರು [Jallam Release

ಪ್ರಭಾ → 28-1-49ರಿಂದ
ದಿನವಹಿ ೩ ಆಟಗಳು
ಯಾಕೂಬ್, ಸುಲೋಚನಾ ಚಟರ್ಜಿ,
ತ್ರಿಲೋಕ್ ಕಪೂರ್, ಮನೋರಮಾ
ಪಾತ್ರ ವಹಿಸಿರುವ ಹಿಂದಿ ಚಿತ್ರ
ಪತಿ ಸೇವಾ
— ಇದರೊಂದಿಗೆ.—
ಗೃಹ ಕೈಗಾರಿಕಾ ಪ್ರದರ್ಶನ, ಡೆಹ್ರಾಡೂನಿನಲ್ಲಿ ಪಂಡಿತ ನೆಹ್ರೂ, ... ನಾಯ್ಡು ಅವರ ಕ್ರಿಕೆಟ್ ಕ್ರೀಡೆ, ಕಾಶ್ಮೀರದಲ್ಲಿ ರಾಜಾಜಿ, ಹೈದರಾಬಾದಿಗೆ ಪ್ರಧಾನಿ ನೆಹ್ರೂ ಭೇಟಿ, ಇತ್ಯಾದಿಗಳನ್ನೊಳಗೊಂಡ ಭಾರತ ಸರ್ಕಾರದ ನ್ಯೂಸ್ ರೀಲ್ ನಂ ೧೩ ನ್ನೂ ಪ್ರದರ್ಶಿಸಲಾಗುವುದು

ಸಿಮೆಂಟ್ ಕೂಡಲೇ ದೊರಕುತ್ತದೆ
ವಿವರಗಳಿಗೆ
ದಿ ಇಂಟರ್‌ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,
... ಪ್ರಿನ್ಸ್ ಆಫ್ ವೇಲ್ಸ್ ರಸ್ತೆ ಮೈಸೂರು
ಇವರಲ್ಲಿ ವಿಚಾರಿಸಿ

ಗವರ್ನರ್ ಜನರಲ್ಲರ ... ಕಡಿಮೆಯಾಯಿತು

ಭಾರತದ ಗೌರ್ನರ್ ಜನರಲ್ಲರ ... ವನ್ನು ವರ್ಷಕ್ಕೆ ೨,೫೦,೦೦೦ ... ನ್ನು ... ೧೬ ಸಾವಿರ ರೂಗಳಿಗೆ ... ಮಾಡಲಾಗಿದೆಯೆಂದು ಅಧಿಕೃತ ... ಹೊರಟಿದೆ

||ಶ್ರೀ||
ಗಾಯತ್ರೀ ಟಾಕೀಸ್
ತಾ|| ೩೦-೧-೪೯ರಿಂದ ೪-ದಿನಗಳು
Warner'sರವರ
ಸಿಲ್ವರ್ ರಿವರ್
(SILVER RIVER)
With - Errol Flynn and
Ann Sheridan
Morning Shows at 10.30
From 29-1-49 for 2 days
20th's
NOB-HILL
In Glorious Technicolour

ಗಾಂಧಿ ಸಾಹಿತ್ಯ
ಕನ್ನಡ ಮತ್ತು ಇಂಗ್ಲಿಷ್

Autobiography	7	0
Delhi Diary	3	0
Homage to Bapu	1	8
ಗಾಂಧಿ ಪ್ರಮಾಣ ವಚನಗಳು	1	0
ಗಾಂಧಿಜಿ (ಜೀವನ ಚರಿತ್ರೆ)	1	8
... (ಗಾಂಧಿ ತತ್ವ ದರ್ಶನ)	2	0

ಸಿದ್ದವ್ವನ ಹಳ್ಳಿ, ಕೃಷ್ಣಶರ್ಮರ ... ಪುಸ್ತಕಗಳು,
ಚೇತನ ಪುಸ್ತಕಾಲಯ ಮೈಸೂರು

ಗೃಹಕೃತ್ಯದ ನೋಟೀಸು

ನಂಜನಗೂಡು ತಾಲ್ಲೂಕು ... ಯಲಚಗೆರೆ ಗ್ರಾಮದ ... ನಗರದ ಟೀಲ್ ... ಮುತ್ತುರ್ ... ಕೃಷ್ಣವರ ಮಗ ರಾಮಚಂದ್ರಯ್ಯ ... ಜನರಿಗೂ ತಿಳಿಯಪಡಿಸುವುದೇನೆಂದರೆ.—

ಇದೇ ಯಲಚಗೆರೆ ಗ್ರಾಮದ ... ನವರ ಮಕ್ಕಳು ೨. ... ಎಂಬುವರು ನಾನು ನನ್ನ ಬಾಬ್ತು ... ಗ್ರಾಮದ ಸರ್ವೆ ... ನಂಬರು ... ನುಗಳನ್ನೂ ಮತ್ತು ಕೊಟ್ಟಿ ... ವರಿಗೆ ೧೫೦೦ ರೂಪಾಯಿಗಳಿಗೆ ಕ್ರಯಕ್ಕೆ ... ಒಪ್ಪಿರುವುದಾಗಿಯೂ, ... ಗಳನ್ನು ಅಡ್ವಾನ್ಸು ತೆಗೆದುಕೊಂಡಿರುವ ... ಯೂ ಸುಳ್ಳು ಸಂಗತಿಗಳನ್ನು ... ತ್ತಾರೆ. ಆದರೂ ನನಗೆ ... ನನ್ನ ಮಾಡಬೇಕೆಂಬ ... ದ ಸುಳ್ಳು ಸಂಗತಿಯನ್ನು ... ಯಲ್ಲಿ ಹರಡಿಸಿರುತ್ತಾರೆ ನಾನು ... ನ್ನು ಕ್ರಯಕ್ಕೆ ಕೊಡುವುದಾಗಿ ಅವರಲ್ಲಿ ... ಒಪ್ಪಂದವನ್ನೂ ಮಾಡಿಕೊಂಡಿರುವುದಿಲ್ಲ ... ರೀತಿ ಯಾವ ಅಡ್ವಾನ್ಸನ್ನೂ ತೆಗೆದು ... ಮತ್ತು ಅವರಿಗೆ ಯಾವ ಕರಾರನ್ನೂ ... ಬರೆಕೊಟ್ಟಿರುವುದಿಲ್ಲ, ನನ್ನ ಸ್ವತ್ತುಗಳೆಲ್ಲಾ ... ಸ್ವಾಧೀನಾನುಭವದಲ್ಲಿಯೇ ಇರುತ್ತವೆ ... ಸ್ವತ್ತುಗಳಲ್ಲಿ ಸದರಿ ... ರಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ... ರುವುದಿಲ್ಲ— ಎಂದು ಈ ಮೂಲಕ ... ತ್ತದೆ.

ರಾಮಚಂದ್ರಯ್ಯ

Edited, printed and published by A.R. Nagaraja ... the Sadhvi Press, D Subbaiah Road, Mysore

ಕ್ರೋ ನಂ 792 ||ವೇದೋ ನಾರಾಯಣ|| ಇಂಡಿಯ ಪತ್ರಿಕೆ ನಂ-೧೬೪

ಸಂಪುಟ ೭] ಸೋಮವಾರ ೩೧-೧-೪೯ [ಸಂಚಿಕೆ ೧೭೦

ನೇತ್ರ ಚಿಕಿತ್ಸಾಲಯಕ್ಕೆ ಸಚಿವರ ಭೇಟಿ

ಮೈಸೂರು, ೩೧

ಡಾ|| ಮೋದಿಯವರು ನಡೆಸುತ್ತಿರುವ ...ಚಿಕ ನೇತ್ರ ಚಿಕಿತ್ಸಾ ಕೇಂದ್ರಕ್ಕೆ ನಿನ್ನೆ ...ರೋಗ್ಯ ಸಚಿವರಾದ ಶ್ರೀ|| ಹೆಚ್. ಸಿ. ...ದಾಸಪ್ಪನವರು ಭೇಟಿಯಿತ್ತು, ಅಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಮತ್ತು ಇಷ್ಟು ಸುಲಭ ರೀತಿಯಲ್ಲಿ ಕಣ್ಣಿನ ವ್ಯಾಧಿಯನ್ನು ಗುಣಪಡಿಸುತ್ತಿರುವ ಡಾ|| ಮೋದಿಯವರ ಸೇವೆಯಿಂದ ಬಹ ಜನರಿಗೆ ಇತೋಧ್ಯಕಿಕಯುವಾದ ಸಹಾಯವು ದೊರೆಯಲೆಂದು ಹಾರೈಸಿದರು.

ನಿನ್ನೆ ಸಂಜೆ ಶ್ರೀಮತಿ ಯಶೋಧರಾ ದಾಸಪ್ಪನವರು ಮೇಲ್ಕಂಡ ಕೇಂದ್ರಕ್ಕೆ ಭೇಟಿ ಕೊಟ್ಟು ಅಲ್ಲಿರುವ ರೋಗಿಗಳನ್ನೆಲ್ಲಾ ನೋಡಿ. ಅವರುಗಳು ಅತಿ ಸುಲಭ ರೀತಿಯಲ್ಲಿ ತಮ್ಮ ವ್ಯಾಧಿಗಳನ್ನು ನಿವಾರಣೆ ಮಾಡಿಸಿಕೊಂಡಿರುವ ಅಂಶವನ್ನರಿತು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಮುಂದೆ ಹಾಸನದಲ್ಲಿ ಡಾ|| ಮೋದಿಯವರು ತೆರೆಯಲಿರುವ ಕೇಂದ್ರದಲ್ಲಿ ತಾವೂ ಮತ್ತು ಕಸ್ತೂರಿ ಬಾಯಿ ಕೇಂದ್ರದ ಹಲವು ಸೇವಕಿಯರೂ ಶಿಕ್ಷಣ ಪಡೆದು ಗ್ರಾಮಸ್ಥರಿಗೆ ನೇತ್ರ ಚಿಕಿತ್ಸೆಯನ್ನು ಮಾಡಬೇಕೆಂದಿರುವುದಾಗಿಯೂ ತಿಳಿಸಿದರು.

ಡಾ|| ಮೋದಿಯವರು ಶಸ್ತ್ರ ಚಿಕಿತ್ಸೆಗಳನ್ನು ಸಧ್ಯಕ್ಕೆ ನಿಲ್ಲಿಸಿರುತ್ತಾರೆ ಇನ್ನು ನಾಲ್ಕೈದು ದಿನಗಳಲ್ಲಿ ಊರಿನಿಂದ ಬೇಗಾ ...ಗೆ ತೆರಳುವವರಾಗಿದ್ದಾರೆ.

ಬೇಂದ್ರೆಯವರ ಭಾಷಣ

ಸುಪ್ರಸಿದ್ಧ ಸಾಹಿತಿಗಳಾದ ಶ್ರೀ|| ದ. ರಾ. ಬೇಂದ್ರೆಯವರು ಈ ದಿನ ಸಂಜೆ ೬-೩೦ ಗಂಟೆಗೆ ವಿದ್ಯಾರ್ಥಿಗಳನ್ನುದ್ದೇಶಿಸಿ ...ನ್ ಹಾಲಿನಲ್ಲಿ ಭಾಷಣ ಮಾಡುವರು. ಕಾವ್ಯ ವಾಚನವೂ ಸಹ ನಡೆಯುವುದು.

ಹೆಮ್ಮರಗಾಲದಲ್ಲಿ ವಿಶೇಷ ಪೂಜೆ

...ನಂಜನಗೂಡು ತಾಲ್ಲೂಕು ಹೆಮ್ಮರಗಾಲದಲ್ಲಿ ನಿನ್ನೆ ಸರ್ವೋದಯ ದಿನಾಚರಣೆ ಪ್ರಯುಕ್ತ ಗ್ರಾಮ ಪಂಚಾಯಿತಿ ಛೇರ್ಮನ್ ಶ್ರೀ ಹೆಚ್. ವಿ. ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ವಿಶೇಷ ಪ್ರಾರ್ಥನಾ ಸಭೆ ಜರುಗಿ ದಿವಂಗತ ಮಹಾತ್ಮಾ ಗಾಂಧೀಜೀಯವರ ದಿವ್ಯಾತ್ಮಕ್ಕೆ ಚಿರ ಶಾಂತಿಯನ್ನೂ ...ತ್ತು ವಿಶ್ವ ಮಾನ್ಯತೆಯನ್ನೂ ಪಡೆದಿರುವ ಅವರ ಅಹಿಂಸಾ ತತ್ವಕ್ಕೆ ಚಿರಾಯುವನ್ನಿ ದಯಪಾಲಿಸುವಂತೆ ಭಗವಂತನನ್ನು ...ರ್ಥಿಸಿ ಗ್ರಾಮದ ಎಲ್ಲಾ ದೇವಸ್ಥಾನಗಳಲ್ಲೂ ವಿಶೇಷ ಪೂಜೆ ನಡೆಯಿಸಲಾಯಿತು.

ಪ್ರ ಭಾ ತ

ರಾಜಧಾನಿಯಿಂದ ಮೇಲ್ಕಂಡ ಶಿರೋನಾಮೆಯಲ್ಲಿ ಶ್ರೀ|| ರಾಜರಾಯರ ಸಂಪಾದಕತ್ವದಲ್ಲಿ ಪ್ರಾತಃಕಾಲ ಹೊರಡುವ ಕನ್ನಡ ದಿನಪತ್ರಿಕೆಯ ಪ್ರಥಮ ಸಂಚಿಕೆಯನ್ನು ನಮ್ಮ ಹಸ್ತಗತವಾಗಿದೆ ಈ ನೂತನ ಪತ್ರಿಕೆಯು ಚಿರಕಾಲ ಜನಸೇವೆಯನ್ನು ಸಲ್ಲಿಸಲೆಂದು ಹಾರೈಸುತ್ತೇವೆ. ಬಿಡಿ ಪ್ರತಿಗೆ ೩ ಕಾಸು

ಶ್ರೀ ಪ್ರಕಾಶರು ಅಸ್ಸಾಂ ಗೌರ್ನರ್

...ಕಿಸ್ಥಾನದಲ್ಲಿ ಭಾರತದ ಹೈ ಕಮಿಷನರ್ ಆಗಿರುವ ಬಾಬು ಶ್ರೀ ಪ್ರಕಾಶರವರು ಅಸ್ಸಾಂ ಗೌರ್ನರ್ ಆಗಿ ನೇಮಿಸಲ್ಪಟ್ಟಿದ್ದಾರೆ.

ಅಮೆರಿಕದಲ್ಲಿ ರಷ್ಯದ ಗೂಢಚಾರರು

ಪ್ರಪಂಚದಲ್ಲೇ ಅತ್ಯಂತ ಅಗಾಧವಾದ ರಷ್ಯದ ಗೂಢ ಚಾರರ ಗುಂಪು ಅಮೆರಿಕದಲ್ಲಿದೆಯೆಂದೂ, ಅದೇ ಎಕ ಸರ್ಕಾರದ ಶಿಸ್ತನ್ನು ಮುರಿಯಲು ವಿಶೇಷವಾಗಿ ಹಣವನ್ನು ವೆಚ್ಚ ಮಾಡಲಾಗುತ್ತಿದೆಯೆಂದೂ ವರದಿಯಾಗಿದೆ.

ಮದರಾಸಿಗೆ ರಾಜಾಜಿಯವರ ಭೇಟಿ

ಭಾರತದ ಗೌರ್ನರ್ ಜನರಲ್ಲಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಮದರಾಸಿಗೆ ಮುಂದಿನ ತಿಂಗಳು ೮ ನೇ ತಾ|| ಭೇಟಿ ಕೊಡುವರು. ಮಾರನೇ ದಿನ ತುತ್ತುಕುಡಿಯಲ್ಲಿ ಚಿದಂಬರ ಪಿಳ್ಳೆಯವರ ಹೆಸರಿನ ನೌಕೆಯ ಪ್ರಾರಂಭೋತ್ಸವವನ್ನು ನೆರವೇರಿಸಿ, ೧೦ ನೇ ತಾ|| ಮದರಾಸಿಗೆ ವಾಪಸು ಬಂದು, ೧೧ ನೇ ತಾ|| ದಹಲಿಗೆ ಹಿಂದಿರುಗುವರು.

ಪೂ|| ಪಾಕಿಸ್ಥಾನಕ್ಕೆ ಕಮ್ಯೂನಿಸ್ಟರ ಭಯ ?

ಪೂರ್ವ ಪಾಕಿಸ್ಥಾನಕ್ಕೆ ಬರ್ಮಾದಿಂದ ಕಮ್ಯೂನಿಸ್ಟರ ಭಯವು ತಪ್ಪಿದ್ದಲ್ಲವೆಂದು ಬರ್ಮಾದಲ್ಲಿರುವ ಪಾಕಿಸ್ಥಾನದ ರಾಯಭಾರಿ ಮಹಮದ್ ಆಲಿಯವರು ಎಚ್ಚರಿಸಿದ್ದಾರೆ.

ದಕ್ಷಿಣ ಆಫ್ರಿಕ ಸರ್ಕಾರದ ನೀತಿಯ ಬಗ್ಗೆ ಖಂಡನೆ

ಮೈಸೂರು ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ಶಾಂತರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆದು ಭಾರತದ ಸುಪ್ರಸಿದ್ಧ ವಕೀಲರಾದ ಸರ್ ತೇಜಬಹದ್ದೂರ್ ಸಪ್ರೂರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಮೇಲೆ ಅಲ್ಲಿನ ಕಪ್ಪು ಜನರು ನಡೆಸಿದ ಅತ್ಯಾಚಾರವನ್ನು ಮತ್ತು ಅಲ್ಲಿನ ಸರ್ಕಾರದ ನೀತಿಯನ್ನು ಖಂಡಿಸಿ, ನೊಂದವರಿಗೆ ಸಹಾನುಭೂತಿ ವ್ಯಕ್ತಪಡಿಸಿ ಭಾರತ ಸರ್ಕಾರವು ಕೈಗೊಂಡಿರುವ ಪರಿಹಾರ ಕಾರ್ಯಕ್ಕೆ ಬೆಂಬಲ ನೀಡಲಾಯಿತು.

ರಜ್ವಿಗೆ ಹೊಟ್ಟೆ ನೋವು

ಪೂನಾದಲ್ಲಿ ಬಂಧನದಲ್ಲಿರುವ ಹೈದರಾಬಾದ್ ರಜಾಕರರ ನಾಯಕನಾದ ಖಾಸಿಂ ರಜ್ವಿಯು ವಿಪರೀತ ಹೊಟ್ಟೆನೋವು ಬಾಧೆಯಿಂದ ನರಳುತ್ತಿರುವನೆಂದು ವರದಿಯಾಗಿದೆ. ಇ ದ ಕ್ಕಾ ಗಿ ಶಸ್ತ್ರ ಚಿಕಿತ್ಸೆ ನಡೆಸಬೇಕೆಂದು ವೈದ್ಯರು ಸಲಹೆ ಮಾಡಿದರೆಂದೂ ಆದರೆ ಆತನು ಅದಕ್ಕೆ ಒಪ್ಪಲಿಲ್ಲನೆಂದೂ ಹೇಳಲಾಗಿದೆ. ಈಗ ಆತನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿದೆ.

ಗಾಂಧಿ ನಿಧಿಗೆ ಪುರ ಸಭೆಯ ಕಾಣಿಕೆ

ಮೈಸೂರು ೩೦

ಇಲ್ಲಿನ ಪೌರ ಸಭೆಯ ಸಾಮಾನ್ಯ ಸಭೆಯು ಮೊನ್ನೆ ಸಂಜೆ, ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಗಾಂಧಿ ನಿಧಿಗೆ ೧೦ ಸಾವಿರ ರೂ ಗಳ ಕಾಣಿಕೆಯನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು. ಸರ್ ತೇಜ್ ಬಹದ್ದೂರ್ ಸಪ್ರೂರವರು ನಿಧನರಾದುದಕ್ಕೆ ಸಂತಾಪ ಸೂಚಿಸಲಾಯಿತು. ಜ|| ಕಾರಿಯಪ್ಪನವರು ಭಾರತದ ಪ್ರಧಾನ ಸೇನಾನಿಯಾಗಿ ನೇಮಿತರಾದುದಕ್ಕೆ ಅವರನ್ನು ಅಭಿನಂದಿಸುವ ನಿರ್ಣಯವೂ ಆಯಿತು.

ಗಂಗಾ ಕುಲ ಯುವಜನ ವಿದ್ಯಾರ್ಥಿ ನಿಲಯ

ಜನಾನಿಯ ಡಿ ಸುಬ್ಬಯ್ಯ ರಸ್ತೆಯ ...ನೇ ನಂಬರಿನ ಮನೆಯಲ್ಲಿ ಕಳೆದ ೧೫ನೇ ತಾ|| ನಿಂದ ಗಂಗಾ ಕುಲ ಯುವ ಜನ ವಿದ್ಯಾರ್ಥಿ ನಿಲಯವನ್ನು ತೆರೆಯಲಾಗಿದೆಯೆಂದೂ ಅದಕ್ಕೆ ಮತಾಭಿಮಾನಿಗಳು ಸಹಾಯ ಮಾಡಬೇಕೆಂದೂ ಕೋರಲಾಗಿದೆ.

ಸ್ವೀ ಕಾ ರ

ರಾಜಧಾನಿಯ ಸುಪ್ರಸಿದ್ಧ ಫೋಟೋಗ್ರಾಫರುಗಳಾದ ರಾಜ ಸೋದರರು ಕಳುಹಿಸಿಕೊಟ್ಟಿರುವ ಬಾಪೂಜಿಯವರ ಭಾವಚಿತ್ರವನ್ನೂ, ಶ್ರೀ ಧನಲಕ್ಷ್ಮೀ ಮುದ್ರಣಾಲಯದವರು ಕಳುಹಿಸಿರುವ ರಾಮಭಜನೆಯ ಪ್ರತಿಯನ್ನೂ ಆದರದಿಂದ ಸ್ವೀಕರಿಸಿದ್ದೇವೆ.

ಇಂಡೊನೇಷ್ಯಕ್ಕೆ ೧೯೫೦ನೇ ಜುಲೈ ೧ಕ್ಕೆ ಸ್ವಾತಂತ್ರ್ಯ

ಭದ್ರತಾ ಸಮಿತಿ ಮಹತ್ವ ನಿರ್ಣಯ

ಮುಂದಿನ ವರ್ಷ ಜುಲೈ ೧ ನೇ ತಾರೀಖಿನೊಳಗೆ ಇಂಡೊನೇಷ್ಯಾದ ಸಂಯುಕ್ತ ಸಂಸ್ಥಾನಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕೆಂದೂ, ಅಲ್ಲಿ ನಡೆಯುತ್ತಿರುವ ಕದನಗಳು ಈಗಲೇ ನಿಲ್ಲಬೇಕೆಂದೂ, ಅಲ್ಲಿನ ನಾಯಕರನ್ನು ಬಿಡುಗಡೆ ಮಾಡಿ, ಅವರು ಸ್ವಾತಂತ್ರ್ಯದಿಂದ ವರ್ತಿಸಲು ಪೂರ್ಣ ಅವಕಾಶ ಕಲ್ಪಿಸಬೇಕೆಂದೂ, ಪ್ರಪಂಚ ಸಂಸ್ಥೆಯ ಭದ್ರತಾ ಸಮಿತಿಯು ನಿರ್ಣಯ ಮಾಡಿದೆ. ಈ ನಿರ್ಣಯವು ಹಿಂದೆ ೧೯ ರಾಷ್ಟ್ರಗಳ ನಿರ್ಣಯವನ್ನು ಪುಷ್ಟೀಕರಿಸಿ ಮಾಡಿದುದಾಗಿದೆ.

ಗಾಂಧಿ ನಿಧಿಗೆ ಅರಮನೆ ದಾನ

ಪೂನ ಪತ್ರಿಕೆ ಇರುವ ... ನರ ಅರಸರು. ಗಾಂಧಿ ನಿಧಿಗಾಗಿ ತಮ್ಮ ... ಅರಮನೆಯನ್ನೇ ... ಕೊಟ್ಟಿದ್ದಾರೆ.

ಮೋಸದಿಂದ ಯುವತಿಯ ಅಪಹಾರವೇ ?

ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಗೆ ಸೇರಿದ ಬಿ. ಎಂ. ಶ್ರೀನಿವಾಸ ಮೂರ್ತಿ ಎಂಬಾತನು ಕೆಲ ದಿನಗಳ ಹಿಂದೆ ಬೊಂಬಾಯಿಗೆ ತೆರಳಿ, ಅಲ್ಲಿ ಮೋರ್ಶಿ ಎಂಬುವರ ಮನೆಯಲ್ಲಿ ಉಳಿದುಕೊಂಡು, ಅವರ ೧೪ ವರ್ಷ ವಯಸ್ಸಿನ ಹುಡುಗಿಗೆ ಪಾಠ ಹೇಳಿಕೊಡುವುದಾಗಿ ಹೇಳಿ ನಂತರ ಆಕೆಯನ್ನು ಪಂಢರಪುರಕ್ಕೆ ಸಾಗಿಸಿಕೊಂಡು ಬಂದ ವಿಚಾರವನ್ನು ಪಂಢರಪುರದ ಪೋಲೀಸರು ಪತ್ತೆ ಹಚ್ಚಿದ್ದಾರೆ. ಈತನು ತಾನೊಬ್ಬ ರಾಜಪುತ್ರನೆಂದೂ, ದಹಲಿಯಲ್ಲಿ ವಾಸಿಸುತ್ತಿರುವುದಾಗಿಯೂ ತನ್ನ ಹೆಸರು ರಮೇಶ ಕುಮಾರನೆಂದೂ ತಿಳಿಸಿದುದಾಗಿ ಹೇಳಲಾಗಿದೆ. ಹುಡುಗಿಯನ್ನು ತಾನೇ ಲಗ್ನವಾಗುವುದಾಗಿಯೂ ಆತನು ಹೇಳಿದ್ದನಂತೆ. ಪೋಲೀಸರು ಆತನನ್ನು ಪಂಢರಪುರದ ಶಾಂತಾಬಾಯಿ ಹೋಟೇಲಿನಲ್ಲಿ ಹಿಡಿದು ಹುಡುಗಿಯನ್ನು ತಂದೆತಾಯಿಗಳಿಗೆ ಒಪ್ಪಿಸಿದರು. ಆತನ ದಸ್ತಗಿರಿಯಾಗಿದೆ.

ಚೀಣಾ ಮಂತ್ರಿಗಳು ಫಾರ್ಮೋಸಕ್ಕೆ

ಚೀಣಾ ಸರಕಾರದ ಮುಖ್ಯ ಮಂತ್ರಿ ಡಾ|| ಸನ್‌ಫೋರವರೂ ಇವರ ಹಲವು ಮಂತ್ರಿಗಳೂ ಫಾರ್ಮೋಸಕ್ಕೆ ಹೋದರು. ಚೀಣಾದಲ್ಲಿ ಶಾಂತಿ ನೆಲಸದಿದ್ದರೆ ಮುಂದೆ ಯುದ್ಧ ನಡೆಸಲು ಫಾರ್ಮೋಸ ಸುತ್ತಮುತ್ತಲೂ ೩ ಲಕ್ಷ ಸರಕಾರಿ ಸೈನಿಕರು ಸಿದ್ಧರಾಗಿರುವರೆಂದು ಹೇಳಲಾಗಿದೆ.

ಪ್ರಾಂತೀಕರಣದ ಕಾರ್ಯ ನಿಧಾನವಾದರೆ ಒಳಿತು

ಶ್ರೀ ಟಿ. ಮರಿಯಪ್ಪನವರ ಭಾಷಣ

ಮದ್ರಾಸಿನ ಕರ್ನಾಟಕ ಸೇವಾ ಸಂಘದ ಆಶ್ರಯದಲ್ಲಿ ವೈ. ಎಂ. ಸಿ. ಎ. ನಲ್ಲಿ ಮೊನ್ನೆ ಸಂಜೆ ನಡೆದ ಸಭೆಯಲ್ಲಿ ಮೈಸೂರು ಸಂಸ್ಥಾನದ ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಮಾತನಾಡುತ್ತಾ ದೇಶವು ಈಗ ಎದುರಿಸಬೇಕಾಗಿರುವ ತೊಂದರೆಗಳನ್ನೂ, ಈಗಲೇ ಪರಿಹಾರವಾಗಲೇ ಬೇಕಾಗಿರುವ ಸಮಸ್ಯೆಗಳನ್ನೂ ಕುರಿತು ಆಲೋಚಿಸಿದರೆ ಪ್ರಾಂತೀಕರಣದ ಕಾರ್ಯದಲ್ಲಿ ನಿಧಾನವಾಗಿ ಹೋಗುವುದು ಒಳಿತಲ್ಲವೇ ಎಂದು ಅನ್ನಿಸುತ್ತದೆಂದರು. ಹೊಸದಾಗಿ ಸಂಪಾದಿಸಿರುವ ಸ್ವಾತಂತ್ರ್ಯವನ್ನು ಪೂರ್ಣವಾಗಿ ಭದ್ರಗೊಳಿಸುವವರೆಗೆ ಕಾಯಬೇಕೆಂದು ಅವರು ಅಭಿಪ್ರಾಯಪಟ್ಟರು.

ಸರದಾರ್ ಬಲದೇವ್ ಸಿಂಗರ ಆಗಮನ

(ಸ್ವಂ. ಸು ಪ್ರೆ ಃ) ಬೆಂಗಳೂರು ೩೧

ಭಾರತದ ರಕ್ಷಣಾ ಮಂತ್ರಿಗಳಾದ ಸರದಾರ್ ಬಲದೇವ ಸಿಂಗ ರವರು ಇಲ್ಲಿಗೆ ಫೆಬ್ರವರಿ ೧೮ ನೇ ತಾರೀಖಿಗೆ ಬರುವರೆಂದು ನಿರೀಕ್ಷಿಸಲಾಗಿದೆ.

ಪ್ರತಿಭಟನಾ ಸಭೆ

ಸರಕಾರವು ಸೋಷಲಿಸ್ಟ್ ಮುಖಂಡರಾದ ಶ್ರೀ ಸಾಗರನಹಳ್ಳಿ ರಾಮಸ್ವಾಮಿಯವರನ್ನು ಬಂಧಿಸಿರುವುದನ್ನು ಖಂಡಿಸಲು ನಿನ್ನೆ ಸಂಜೆ ಸೋಷಲಿಸ್ಟ್ ಪಾರ್ಟಿಯ ... ಅಧ್ಯಕ್ಷತೆಯಲ್ಲಿ ... ಪ್ರತಿಭಟನಾ ಸಭೆಯು ನಡೆಯಿತು.

ಸರ್ವೋದಯ ದಿನಾಚರಣೆ ಟೌನ್ ಹಾಲಿನಲ್ಲಿ ಪ್ರಾರಂಭ

ಮೈಸೂರು ೩೧

ನಿನ್ನೆ ದಿನ ರಾಜಧಾನಿಯ ಅನೇಕ ಕಡೆಗಳಲ್ಲಿ ಮಹಾತ್ಮ ಗಾಂಧಿಯವರ ಪ್ರಥಮ ವಾರ್ಷಿಕಾಬ್ದದ ಪ್ರಯುಕ್ತ ಸರ್ವೋದಯ ದಿನಾಚರಣೆಯು ನಡೆಸಲ್ಪಟ್ಟಿತು. ನಗರ ಕಾಂಗ್ರೆಸ್ ಸಮಿತಿ ಮತ್ತು ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಟೌನ್ ಹಾಲಿನಲ್ಲಿ ಸಮಾರಂಭವು ಜರುಗಿತು.

ಬೆಳಿಗ್ಗೆ ೬ ಗಂಟೆಗೆ ಸರಿಯಾಗಿ ಪ್ರಾರ್ಥನೆಯು ನಡೆಯಿತು. ಅನಂತರ ಸೂತ್ರ ಯಜ್ಞವು ಆರಂಭವಾಗಿ ರಾತ್ರಿಯ ವರೆಗೆ ಜರುಗಿತು. ಟೌನ್ ಹಾಲ್ ಭವನದ ಮಧ್ಯ ಪ್ರದೇಶದಲ್ಲಿ ಶ್ರೀ ಕೃಷ್ಣ ಮತ್ತು ಬಾಪೂಜಿ ಮತ್ತು ಕಸ್ತೂರಿ ಬಾಯಿ ಗಾಂಧಿಯವರ ಸುಂದರವಾದ ವಿಗ್ರಹಗಳನ್ನು ಎತ್ತರವಾದ ವೇದಿಕೆಯ ಮೇಲೆ ಇಟ್ಟು ಶೃಂಗರಿಸಲಾಗಿತ್ತು. ಇದನ್ನು ಸಾವಿರಾರು ಜನರು ಬಂದು ನೋಡಿ ತಮ್ಮ ಭಕ್ತಿಯನ್ನು ಸಲ್ಲಿಸಿದರು.

ಸೂತ್ರ ಯಜ್ಞದಲ್ಲಿ ನಗರದ ಅನೇಕ ಮಹಿಳೆಯರೂ ಮಹನೀಯರೂ ಭಾಗವಹಿಸಿದ್ದರು. ರಾಜಧಾನಿಗೆ ಆಗಮಿಸಿದ್ದ ಪ್ರಮುಖರಾದ ಶ್ರೀ ಹೆಚ್. ಸಿ. ದಾಸಪ್ಪನವರೂ ಸಹ ಕೈರಾಟೆಯಿಂದ ನೂಲನ್ನು ತೆಗೆದರು. ಸಂಜೆ ನಡೆದ ನೂಲುವ ಸ್ಪರ್ಧೆಯಲ್ಲಿ ಅನೇಕ ಮಹಿಳೆಯರೂ ಮಹನೀಯರೂ ಭಾಗಿಗಳಾಗಿದ್ದರು.

ಬೆಳಿಗ್ಗೆ ೯ ಗಂಟೆಗೆ ಸರಿಯಾಗಿ ಟೌನ್ ಹಾಲ್ ಮೈದಾನದಲ್ಲಿ ಧ್ವಜಾರೋಹಣ ಸಮಾರಂಭವು ಜರುಗಿತು. ಪೌರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ರಾಷ್ಟ್ರಧ್ವಜವನ್ನೂ, ನಗರ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಬಿ. ನಾರಾಯಣ ಸ್ವಾಮಿಯವರು ಮೈಸೂರು ಧ್ವಜವನ್ನೂ ಹಾರಿಸಿದರು. ನೂರಾರು ಜನ ಇವರಲ್ಲಿ ಭಾಗ ವಹಿಸಿದ್ದರು.

ಸಂಜೆ ೬–೩೦ ಗಂಟೆಗೆ ಟೌನ್ ಹಾಲಿನಲ್ಲಿ ಬಹಿರಂಗ ಸಭೆಯು ಸೇರಿತ್ತು. ಭಗವದ್ಗೀತೆ, ಖುರಾನ್, ಬೈಬಲ್‌ಗಳ ಪ್ರಾರ್ಥನೆಯ ನಂತರ ಭಜನೆ ಗೀತೆಗಳೂ, ರಾಮ ಧ್ಯಾನವೂ ಜರುಗಿದುವು. ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯಿಂದ ಬಂದಿದ್ದ ಸಂದೇಶವನ್ನು ಪೌರ ಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಓದಿದರು. ಸಭೆಯವರೆಲ್ಲರೂ ಎದ್ದು ನಿಂತು ಅದನ್ನು ಸ್ವೀಕರಿಸಿದರು.

ವಂದೇ ಮಾತರಂ ಗೀತೆಯ ನಂತರ ಜಯಘೋಷಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಪತ್ರಿಕೋದ್ಯೋಗಿಗಳ ಸಂಘದಲ್ಲಿ

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದಲ್ಲಿ ದಿನಾಚರಣೆಯು ನೆರವೇರಿಸಲ್ಪಟ್ಟಿತು. ಸಚಿವರಾದ ಶ್ರೀ ಎಚ್. ಸಿ. ದಾಸಪ್ಪನವರು ಮಹಾತ್ಮರ ಭಾವಚಿತ್ರಕ್ಕೆ ಪುಷ್ಪ ಮಾಲೆಯನ್ನು ಹಾಕಿ ಮಾತನಾಡುತ್ತ ದೇಶಗಳು ಗಾಂಧಿಜಿಯವರನ್ನು ಏಸು ಕ್ರಿಸ್ತನಿಗೆ ಸರಿಸಮಾನವಾಗಿ ಕಾಣುತ್ತಿರುವ ಅಂಶವನ್ನು ವಿವರಿಸಿದರು. ಮಹಾತ್ಮರ ಆದರ್ಶಗಳು ರಾಷ್ಟ್ರ ರಚನೆಯಲ್ಲಿ ನಮಗೆ ಮುಂದೆಯೂ ದಾರಿ ತೋರಲೆಂದು ಹಾರೈಸಿದರು. ಸಂಘದ ಅಧ್ಯಕ್ಷರಾದ ಶ್ರೀ ಶ್ರೀನಿವಾಸಮೂರ್ತಿಯವರು ಸಚಿವ ರನ್ನು ಸ್ವಾಗತಿಸಿ ಅಂತ್ಯಕಾಲದಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಹೊಂದಿದ್ದ ಶ್ರೀ ದಾಸಪ್ಪನವರು ಆ ದಿನದ ಸಮಾರಂಭದಲ್ಲಿ ಭಾಗ ವಹಿಸಿದುದಕ್ಕಾಗಿ ಸಂತೋಷವನ್ನು ಸೂಚಿಸಿದರು.

ವರಲಕ್ಷ್ಮೀ ವಿದ್ಯಾ ಮಂದಿರದಲ್ಲಿ

ಚಾಮರಾಜ ರಸ್ತೆಯಲ್ಲಿರುವ ಶ್ರೀ ವರಲಕ್ಷ್ಮೀ ವಿದ್ಯಾ ಮಂದಿರದಲ್ಲಿ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮೈಸೂರು ಸೋದರರಿಂದ ರಾಷ್ಟ್ರಗೀತೆಗಳು ಸುಶ್ರಾವ್ಯವಾಗಿ ಹಾಡಲ್ಪಟ್ಟವು. ರಾವ್ ಬಹದ್ದೂರ್ ಎಂ. ರಾಮಸ್ವಾಮಿ, ಶ್ರೀ ಅಗರಂ ಸೂರ್ಯ ನಾರಾಯಣ ಪಂಡಿತ್ ಮತ್ತು ಅಧ್ಯಕ್ಷರು ಭಾಷಣ ಮಾಡಿ ಮಹಾತ್ಮರ ಗುಣಕಥನ ಮಾಡಿದರು. ಅವರು ಹಾಕಿಕೊಟ್ಟ ಮಾರ್ಗದಿಂದ ನಾಡಿಗೆ ದೊರೆತಿರುವ ಸ್ವಾತಂತ್ರ್ಯವು ಸರ್ವತೋಮುಖವಾದ ಅಭ್ಯುದಯಕ್ಕೆ ಸಾಧಕವಾಗಲೆಂದು ಹಾರೈಸಿದರು. ಸರ್ವೋದಯದ ಸಂದೇಶವನ್ನು ಸಭೆಯಲ್ಲಿ ಪಠಿಸಲಾಯಿತು.

ವಕೀಲ ಸಂಘದಲ್ಲಿ

ನಗರದ ವಕೀಲರುಗಳು ನಿನ್ನೆ ಬೆಳಿಗ್ಗೆ ಸಭೆ ಸೇರಿ ಪ್ರಾರ್ಥನೆಯನಂತರ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಬಂದಿದ್ದ ಸಂದೇಶವನ್ನು ಅಂಗೀಕರಿಸಿದರು.

ವಿದ್ಯಾರ್ಥಿ ಕಾಂಗ್ರೆಸ್ಸಿನಲ್ಲಿ

ನಗರದ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಕೃಷ್ಣವಿಲಾಸ ಅಗ್ರಹಾರದ ಮಾದರಿ ಶಾಲೆಯಲ್ಲಿ ನಿನ್ನೆ ದಿನ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆಯನ್ನು ನಡೆಸಲಾಯಿತು. ಪ್ರತಿಜ್ಞೆಯನ್ನು ಓದಿದ ನಂತರ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಶಿವರಾಮ ಕಾರಂತರವರು ಮಹಾತ್ಮರ ಅಮರ ಸಂದೇಶಗಳನ್ನು ಕುರಿತು ಭಾಷಣ ಮಾಡಿದರು. ಮಧ್ಯಾಹ್ನ ಸಾಮೂಹಿಕ ಸೂತ್ರ ಯಜ್ಞವು ನಡೆಯಿತು.

ವಿದ್ಯಾರ್ಥಿ ಸಂಘದಲ್ಲಿ

ಟಿ. ಬನುಮಯ್ಯ ಹೈಸ್ಕೂಲಿನಲ್ಲಿ ನಿನ್ನೆ ಮಧ್ಯಾಹ್ನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಪ್ರಾರ್ಥನೆ ಮತ್ತು ಭಜನೆಗಳು ನಡೆದುವು.

ಚಾಮುಂಡಿ ಪುರಂನಲ್ಲಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಸರ್ವೋದಯ ದಿನಾಚರಣೆಯು ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು.

॥ ಶ್ರೀ ॥

ಗಾಯತ್ರೀ ಟಾಕೀಸ್

ತಾ॥ ೩೦–೧–೪೯ರಿಂದ ೪ ದಿನಗಳು

Warner'sರವರ

ಸಿಲ್ವರ್ ರಿವರ್

(SILVER RIVER)

With - Errol Flynn and Ann Sheridan

Edited, printed and published by A.R. Nagarajan at the Sadhvi Press, D Subbiah Road, Mysore

ಬ್ರಿಟನ್ನಿನ ವಿದೇಶಾಂಗ ಮಂತ್ರಿಯ ಬದಲಾವಣೆಯೆ?

ಬ್ರಿಟನ್ನಿನ ಮಂತ್ರಿ ಮಂಡಲದಲ್ಲಿ ಬದಲಾವಣೆ ಮಾಡಲು ಪ್ರಧಾನಿ ಮಿ॥ ಅಟ್ಲಿರವರು ನಿರ್ಧರಿಸಿದ್ದಾರೆಂದು ವರದಿಯಾಗಿದೆ. ವಿದೇಶಾಂಗ ಮಂತ್ರಿಗಳಾದ ಮಿ॥ ಬೆವಿನ್‌ರವರ ಬಗ್ಗೆ ಯಾರಿಗೂ ವಿಶ್ವಾಸವಿಲ್ಲವೆಂದೂ, ಅವರ ಸ್ಥಾನದಲ್ಲಿ ಮಿ॥ ಬಟ್ಲರ್‌ರವರನ್ನು ನೇಮಿಸಬಹುದೆಂದೂ ಹೇಳಲಾಗಿದೆ.

ಹೈದ್ರಾಬಾದು ಕಮ್ಯೂನಿಸ್ಟರನ್ನು ಅಡಗಿಸಲು ಮೈಸೂರು ಪೋಲೀಸು

ಹೈದರಾಬಾದಿನ ನಲಗೊಂಡ ಜಿಲ್ಲೆಯಲ್ಲಿ ಉಂಟಾಗಿರುವ ಕಮ್ಯೂನಿಸ್ಟರ ಉಪಟಲವನ್ನು ಮಟ್ಟ ಹಾಕಲು ಮೈಸೂರಿನ ಶಸ್ತ್ರ ಸಜ್ಜಿತ ರಿಸರ್ವ್ ಪೋಲೀಸಿಗೆ ಸೇರಿದ ಎರಡು ಬೆಟಾಲಿಯನ್‌ಗಳನ್ನು ಕಳುಹಿಸಬೇಕೆಂದು ಕೇಂದ್ರ ಸರಕಾರವು ಮೈಸೂರು ಸರಕಾರಕ್ಕೆ ತಿಳಿಸಿದೆ. ಆ ಜಿಲ್ಲೆಯಲ್ಲಿ ಈಗಾಗಲೆ ಒಂದು ಮೈಸೂರು ಬೆಟಾಲಿಯನ್ ಕೆಲಸ ಮಾಡುತ್ತಿದೆ. ಹೊಸ ಬೆಟಾಲಿಯನ್‌ಗಳು ಒಂದು ವಾರದೊಳಗಾಗಿ ಹೊರಡಬಹುದು.

ಬರ್ಮಾ ಸರ್ಕಾರೀ ನೌಕರರ ಮುಷ್ಕರ

ಬರ್ಮಾ ಸರ್ಕಾರದವರು ತಮ್ಮ ನೌಕರರಿಗೆ ಕೊಡುತ್ತಿರುವ ಭತ್ಯವನ್ನು ಕಡಿಮೆ ಮಾಡಿರುವುದನ್ನು ಪ್ರತಿಭಟಿಸಲು ಅಲ್ಲಿನ ಟ್ರೇಡ್ ಯೂನಿಯನ್ನಿನ ೩೦ ಸಾವಿರ ಸರ್ಕಾರೀ ಸದಸ್ಯರುಗಳು ಮುಂದಿನ ತಿಂಗಳು ೭ ನೇ ತಾ॥ ನಿಂದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ. ಸರ್ಕಾರದವರು ತಮ್ಮ ಆಜ್ಞೆಯನ್ನು ರದ್ದು ಮಾಡಲು ೪ ನೇ ತಾ॥ ವರೆಗೆ ಕಾಲಾವಕಾಶವನ್ನು ಕೊಡಲಾಗಿದೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ ನೋಟಿಫಿಕೇಷನ್

ನಂಬರು R 8 P.R. 19/48

ತಾ॥ ೨೮–೧–೪೯

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಸಿಟಿ ಮುನಿಸಿಪಾಲಿಟಿ ವಂಡಿ ಮಾರ್ಕೆಟ್ಟಿನಲ್ಲಿ ಮೊಹದಾಗಿ ನಿರ್ಮಿಸಿರುವ ಸೈಕಲ್ ಸ್ಟ್ಯಾಂಡಿನಲ್ಲಿ ಬಂದು ನಿಲ್ಲುವ ಬೈಸಿಕಲ್‌ಗಳ ಮೇಲೆ ಸುಂಕ ವಸೂಲು ಮಾಡುವ ಹಕ್ಕನ್ನು ೧೯೪೯ನೇ ಫೆಬ್ರವರಿ ಮಾಹೆ ತಾರೀಖು ೫ನೇ ಶನಿವಾರ ದಿವಿ ೧೧ ಘಂಟೆಗೆ ಮೇಲ್ಕಂಡ ಸ್ಥಳದಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲಾಗುತ್ತೆ. ಜಾಬನ್ನು ಪಡೆಯಲು ಇಷ್ಟವುಳ್ಳವರು ಹರಾಜು ಕಾಲಕ್ಕೆ ಹಾಜರಾಗಿ ಭಾಗ ವಹಿಸಲು ಮೂಲಕ ಪಡೆಯಬಹುದು.

ಹೆಚ್ಚಿಗೆ ವಿಷಯಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ನಡೆಯುವ ಕಾಲದಲ್ಲಿ ತಿಳಿಯಬಹುದು.

ಟಿ. ರಾಮರಾವ್

ಮುನಿಸಿಪಲ್ ಕಮೀಷನರಿಗಾಗಿ

ಮಾರಾಟದ ತೆರಿಗೆ ಕೊಡುವುದಿಲ್ಲವೆಂದು ಹೋಟೇಲಿನವರ ನಿರ್ಧಾರ

ಅವಶ್ಯಕ ಬಿದ್ದರೆ ಹೋಟೆಲುಗಳನ್ನು ಮುಚ್ಚುವುದಾಗಿಯೂ ಸೂಚನೆ

ಬೆಂಗಳೂರು ೩೦

ನಗರ ಮತ್ತು ದಂಡಿನ ಪ್ರದೇಶದ ಎಲ್ಲಾ ಹೋಟೇಲು ಮಾಲೀಕರುಗಳ ಸಭೆಯು ನೆನ್ನೆ ಪ್ರಾತಃಕಾಲ ಆನಂದಭವನದಲ್ಲಿ ಸೇರಿ ಸರ್ಕಾರವು ವಿಧಿಸುವ ಮಾರಾಟದ ತೆರಿಗೆಯನ್ನು ಕೊಡಕೂಡದೆಂದು ನಿರ್ಧರಿಸಲಾಯಿತು. ಹೋಟೇಲುಗಳು ಇರುವುದರಿಂದ ಆಹಾರ ಹೆಚ್ಚಿನ ದಗೆಟ್ಟು. ಪಡಿತರ ಪದ್ಧತಿಯು ಸರಿಯಾದ ದಾರಿಗೆ ಬರುತ್ತಿಲ್ಲವೆಂಬ ಅಭಿಪ್ರಾಯವನ್ನು ಮೈಸೂರು ಸರ್ಕಾರವು ಇಟ್ಟುಕೊಂಡಿದ್ದೇ ಆದರೆ, ಅವಶ್ಯಕವಿದ್ದಷ್ಟು ಕಾಲ ಅಥವಾ ಒಂದೇ ಬಾರಿಗೆ ಎಲ್ಲಾ ಹೋಟೇಲುಗಳನ್ನು ಮುಚ್ಚಬೇಕೆಂದೂ ತೀರ್ಮಾನವಾಯಿತು. ಹೋಟೇಲುಗಳಿಗೆ ಸಂಬಂಧಿಸಿದಂತೆ ಹೊರಟ ಇತ್ತೀಚಿನ ಸರ್ಕಾರಿ ಆಜ್ಞೆಯನ್ನು ಖಂಡಿಸಲಾಯಿತು.

ಪ್ರತಿ ದಿನ ೩ ಆಟಗಳು

೩೧–೧–೪೯ನೇ ಸೋಮವಾರದಿಂದ

ಚಂದ್ರಮಾ ಪಿಕ್ಚರ್ಸ್‌ರವರ

ಆಪ್-ಕಿ-ಸೇವಾ ಮೆ

ಪಾತ್ರ:— ದೀಕ್ಷಿತ್, ಶಾಂತಾರಿ, ಕೇಸರಿ, ನಿಂಬಾಲ್ಕರ್ ಮತ್ತಿತರರು

ಒಲಂಪಿಯಾ ಟಾಕೀಸ್

ಲಗ್ನದ ಮನೆಗಳಿಗೆ

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕ್ ಮತ್ತು ನೂಲಿನಿಂದ ತಯಾರಾದ ಬೆಂಗಳೂರು ಧರ್ಮಾವರಂ ಮತ್ತು ಕೊಳ್ಳೇಗಾಲ ಸೀರೆಗಳೂ, ಪಂಚೆಗಳೂ ಮತ್ತು ಜಮಖಾನಗಳು ಬಂದಿವೆ. ದಯವಿಟ್ಟು ಇಂದೇ ಭೇಟಿ ಕೊಡಿ.

ಗುರುಪಿ ... ಹಾಲ್,

ಬೆಂಗಳೂರು ಬಜಾರ್ ಅಂಗಡಿ,

ಶಿವರಾಂಪೇಟೆ ಮೈಸೂರು.

ಎಸ್. ಎ. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇನ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ ೦–೧೦–೦

ಮಹಾ ಸುಗಂಧರಾಜ ತೈಲ:—)

„ ಚಂದನಾದಿ ತೈಲ:—)

„ ಭೃಂಗಾಮಲಕ ತೈಲ:—)

—ಬೇಸಿಗ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು

ಮಹಾಕೇತಕೀ ತೈಲ—ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸೆ ಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಸೀಸೆ ೨–೦

ಪಂಚಾಮೃತ—ಮಲೇರಿಯಾ ಗೆಡ್ಡೆಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ

೪೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್

ಮೈಸೂರು.

ಫೋನ್ ನಂ ೨೪೭ | ಸಂಪಾದಕ [illegible] | ಇಂಡಿಯ ಏಪ್ರಿಲ್ [illegible]

ಸಾಧ್ವಿ

ಸಂಪುಟ ೭] ಮಂಗಳವಾರ ೧-೭-೪೯ [ಸಂಚಿಕೆ ೧೭೧

ಭೂಪಾಲ್ ಪ್ರಧಾನಿಯ ಉಪವಾಸದ ಬೆದರಿಕೆ

ರಾಜಧಾನಿಯ ನೀರು ಸರಬರಾಜುಬಗ್ಗೆ ಪ್ರಯೋಗ

ಮೈಸೂರು ೧

ರಾಜಧಾನಿಗೆ ಬೇಕಾಗುವ ನೀರನ್ನು [illegible]ಯಾಗಿ ಸಂಗ್ರಹಿಸಿ, ನಗರದ ಎಲ್ಲಾ [illegible]ಗೂ ಉತ್ತಮ ರೀತಿಯಲ್ಲಿ ಹಂಚ[illegible] ಪ್ರಯೋಗಗಳನ್ನು ಮಾಡಲು [illegible]ನವರು ಏರ್ಪಡಿಸಿದ್ದಾರೆ ಎತ್ತರ [illegible]ಪ್ರದೇಶಗಳ ವಿನಹ ಇತರ ಭಾಗಗಳಿಗೆ [illegible] ರಿಂದ ೧೨ ಗಂಟೆ ವರೆಗೆ [illegible] ಎರಡು ಘಂಟೆಗಳ ಹೊತ್ತು [illegible] ಕಾಲದಲ್ಲಿ ನೀರನ್ನು ಒದಗಿಸುವ [illegible] ರಾತ್ರಿ ಹೊತ್ತು ನೀರನ್ನು ನಿಲ್ಲಿ[illegible]ದು. ಅಲ್ಲದೆ ವೇಳಾ ಪಟ್ಟಿಯಂ[illegible] ಮೊದಲ್ಲಾಗಳಿಗೂ ನೀರನ್ನು [illegible]ಗುತ್ತದೆ ಈ ಪ್ರಯೋಗವು [illegible]ವಾಗುವಂತೆ ಮಹಾ ಜನರು [illegible]ಬೇಕೆಂದೂ, ಈ ವ್ಯವಸ್ಥೆ ಸರಿ[illegible] ನಡೆಯದಿದ್ದರೆ ನೀರು ಸರಬರಾ[illegible]ಗಳಿಗಾಗಲಿ, ಪೌರಸಭಾ ಕ[illegible]ಗಲಿ ನಿವಾಸಿಗಳು ತಿಳಿಸಿದ [illegible] ಸರಿಪಡಿಸಲಾಗುವುದೆಂದೂ ಪೌರ[illegible] ಶ್ರೀ ಟಿ. ವೆಂಕಟರಮಣಯ್ಯ[illegible] ಪ್ರಕಟಣೆಯೊಂದನ್ನು ಹೊರಡಿಸಿ[illegible]

ಪ್ರಾರ್ಥನೆ

[illegible]ವಿದ್ದಿರುವ ಆರ್ಥಿಕ ಮುಗ್ಗಟ್ಟು ಇ[illegible] ಮುಂತಾದವುಗಳಿಂದ ಉಂಟಾದ ಅ[illegible] ಹೋಗಿ ಎಲ್ಲರಲ್ಲಿಯೂ ಶಾಂ[illegible] ಪ್ರೇಮ ಮುಂತಾದುವುಗಳು ನೆ[illegible] ಸಾತ್ವಿಕ ತತ್ವಗಳು ರೂಢಮೂ[illegible]ವಂತಾಗಿ ಮತ್ತು ಅವರ ಆತ್ಮ[illegible] ಸಿಗುಂಟಾಗಬೇಕೆಂದು ದೇವರ [illegible]ರ್ಥನೆಯು ಮೈಸೂರು ಸಂಸ್ಥಾನದ [illegible] ನೌಕರರ ಸಂಘದಲ್ಲಿ ಮೊನ್ನೆ ಸಂಜೆ [illegible] ಉಪಾಧ್ಯಕ್ಷ ಜಿ|| ಗುಲಾಂ [illegible]ನವರು ಅಧ್ಯಕ್ಷತೆ ವಹಿಸಿದ್ದರು

ಮಧ್ವ ನವಮಿ ಉತ್ಸವ

[illegible]ರಾಜಧಾನಿಯ ಸುಬ್ಬರಾಯನಕೆರೆ ಸಿರಿ[illegible] ಶ್ರೀ ರಾಘವೇಂದ್ರ ಸ್ವಾ[illegible] ಮಠದವರು ನೆನ್ನೆಯಿಂದ ಇದೇ [illegible] ತಾರೀಖಿನವರೆಗೆ ಮಧ್ವ ನವಮಿ [illegible]ತ್ಸವವನ್ನು ಆಚರಿಸುತ್ತಾರೆ. [illegible] ದಿನಗಳವರೆಗೆ ಪ್ರಾತಃಕಾಲ [illegible] ವಿಜಯ ಪಾರಾಯಣ, ಅಭಿಷೇಕ, [illegible]ರತಿ, ಸಂಜೆ ೬|| ವಿ ದುರ್ಗಾಂ[illegible]ಚಾರ್ಯರಿಂದ ಮಧ್ವ ವಿಜಯದ [illegible] ನಾದ ೭ ನೇ ತಾರೀಖು ಪ್ರಾತಃ[illegible] ಮಂಗಳ, ಪಂಚಾಮೃತಾಭಿಷೇಕ [illegible] ಮಂಗಳಾರತಿ ಸಂಜೆ ಶ್ರೀ ಭೀ[illegible]ರ್ಯರಿಂದ ಉಪನ್ಯಾಸ ಇವುಗಳು [illegible]ವುವು

ಗಾಂಧಿ ಮಂಟಪ

[illegible]ಲಿಯ ರಾಜಘಟ್ಟದಲ್ಲಿ ಸಂ|| ನೆಹ[illegible] ಮಹಾತ್ಮ ಗಾಂಧಿ ಮಂಟಪದ [illegible] ಆರಂಭೋತ್ಸವವನ್ನು ನೆನ್ನೆ [illegible]ನೆರವೇರಿಸಿದರು ಗಾಂಧಿಯವರ ಮ[illegible]ವಾದ ಒಂದು ಸಂದೇಶದ ಸಂಕೇತ [illegible] ಅವರ ತತ್ವವನ್ನು ಕಲ್ಲು ಅಥ[illegible] ಮೂಲಕ ಪ್ರತಿಬಿಂಬಿಸಲು [illegible] ರಾಷ್ಟ್ರ ಜೀವನದ ಎಷ್ಟ[illegible] ಮಹಾತ್ಮರ ಪ್ರಭಾವವಿತ್ತೆಂ[illegible] ನಿರ್ಧರಿಸುವುದು ಅಸಾಧ್ಯ ಎಂ[illegible]ತರ ನುಡಿದರು

ಮೋಟಾರು ಕೆಲಸಗಾರರಲ್ಲಿ ಒಡಕು ತರಬಾರದು

ಸಂಘದ ಕಾರ್ಯದರ್ಶಿಗಳ ಹೇಳಿಕೆ

ಮೈಸೂರು ೧

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಟಿ ಎಸ್ ಸುಬ್ಬಣ್ಣನವರು ಹೇಳಿಕೆಯೊಂದನ್ನು ಕೊಟ್ಟು ಮೋಟಾರು ಕೆಲಸಗಾರರ ಹಿತ ರಕ್ಷಣೆಗಾಗಿ ಈಗ ೩ ವರ್ಷಗಳಿಂದಲೂ ಜಿಲ್ಲಾ ಸಂಘವು ಕೆಲಸ ಮಾಡುತ್ತಿರುವುದಾಗಿಯೂ, ಆದರೆ ಇತ್ತೀಚೆಗೆ ಹಲವರು ಬಸ್ಸುಗಳ ಮಾಲೀಕರ ಪ್ರೇರಣೆಗೆ ಒಳಗಾಗಿ ಬೇರೆ ಸಂಘಗಳ ಸ್ಥಾಪನೆಗೆ ಹೊರಟಿರುವುದು ವ್ಯಸನಕರವಾಗಿದೆಯೆಂದೂ, ಅಂತಹವರ ಮಾತಿಗೆ ಮರುಳಾಗದೇ ಈಗ ಇರುವ ಸಂಘದ ನಿಯಮಾವಳಿಗೆ ಕೆಲಸಗಾರರು ಬದ್ಧರಾಗಬೇಕೆಂದೂ, ಸಂಘವನ್ನು ಮುರಿಯಲೆತ್ನಿಸುವವರು ಕೆಲಸಗಾರರ ಹಿತ ದೃಷ್ಟಿಯಿಂದ ಸುಮ್ಮನಿರಬೇಕೆಂದೂ ತಿಳಿಸಿದ್ದಾರೆ.

ಉಪನಯನಗಳು

ಕೆ. ಪಿ ಮೋಟಾರು ಸರ್ವಿಸ್ಸಿನ ಮ್ಯಾನೇಜರ್ ಶ್ರೀ ಟಿ ಜಿ. ದಿವಾಕರ ಶಾಸ್ತ್ರಿಗಳು ತಮ್ಮ ದ್ವಿತೀಯ ಕುಮಾರ ಚಿ|| ರಾಜಾರಾಮನಿಗೂ, ವೈದಿಕ ಪ್ರವೀಣ ಶಿವರಾಮಯ್ಯನವರ ಮಕ್ಕಳು ಆಸ್ಥಾನ ವಿದ್ವಾನ್ ಅನಂತ ಪದ್ಮನಾಭರಾಯರು. ತಮ್ಮ ಸಹೋದರ ಚಿ|| ನಾರಾಯಣ ಮೂರ್ತಿಗೂ ನಿನ್ನೆ ದಿನ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ಶಾಂತಿ ಸ್ಥಾಪಿಸಲು ಸಹಕರಿಸುವುದಾಗಿ ಸ್ಟಾಲಿನ್ನರ ಘೋಷಣೆ

ರಷ್ಯದ ನಾಯಕರಾದ ಸ್ಟಾಲಿನವರು ಪ್ರಪಂಚದ ಶಾಂತಿಗಾಗಿ ಘೋಷಣೆಯೊಂದನ್ನು ಹೊರಡಿಸಿದ್ದಾರೆ ಇದೊಂದು ಒಪ್ಪಂದದ ಸಲಹೆಯಂತಿದೆ ಅವರು ಶಾಂತಿಯನ್ನು ಸಾಧಿಸಲು ಅಮೆರಿಕಾದ ಅಧ್ಯಕ್ಷ ಟ್ರೂಮನ್ನರನ್ನು ಭೇಟಿ ಮಾಡಲು ಸಿದ್ಧರಿರುವುದಾಗಿ ರಷ್ಯದ ಪತ್ರಿಕೆಗಳು ತಿಳಿಸಿವೆ ಸ್ಟಾಲಿನ್ನರ ಘೋಷಣೆಯು ಪ್ರಪಂಚದಲ್ಲಿ ತಯಾರಾಗುತ್ತಿರುವ ಮೃತ್ಯು ಶಸ್ತ್ರಾಸ್ತ್ರಗಳನ್ನು ಮತ್ತು ಅಣು ಶಸ್ತ್ರಗಳನ್ನು ರದ್ದು ಮಾಡುವುದೇ ಮೊದಲಾದ ವಿಷಯಗಳನ್ನು ಒಳಗೊಂಡಿವೆ

ಪೈಗಂಬರರ ದಿನಾಚರಣೆ

ಸಚಿವ ಭಾಷ್ಯಂರ ಭಾಷಣ

ಕುಣಿಗಲು ೩೧

ಮಹಮದ್ ಪೈಗಂಬರ್ ದಿನಾಚರಣೆಯನ್ನು ಇಲ್ಲಿನ ನಿವಾಸಿಗಳು ನೆನ್ನೆ ನೆರವೇರಿಸಿದರು. ಸಂಸ್ಥಾನದ ನ್ಯಾಯಾಂಗ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂರವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ಭಾಷಣ ಮಾಡಿ ಮತ ಸ್ಥಾಪಕರಲ್ಲಿ ಪ್ರತಿಯೊಬ್ಬರ ಜಯಂತಿ ಉತ್ಸವವೂ ಪವಿತ್ರವೆಂದು ತಿಳಿಸಿದರು. ಪೈಗಂಬರರ ಜೀವಿತಕಾರ್ಯಗಳನ್ನು ಉದಹರಿಸಿ, ಜನರು ಇಂತಹ ಮಹಾ ಪುರುಷರ ಗುಣಗಳನ್ನು ಗ್ರಹಿಸಿ ಅದರಂತೆ ನಡೆದುಕೊಳ್ಳಬೇಕೆಂದು ತಿಳಿಸಿದರು. ದೇಶ ಕಾಲಭೇದದಿಂದು ಜನಾಂಗಗಳ ಜಾಯಮಾನದಿಂದ ಬೇರೆ ಬೇರೆ ಮತಗಳು ಸ್ಥಾಪಿತವಾದುವು. ಪ್ರತಿಯೊಬ್ಬರೂ ತಮ್ಮ ತಮ್ಮ ಮತ ಧರ್ಮಗಳನ್ನು ಪಾಲಿಸಿದರೆ, ಸಮಸ್ತ ಜನಾಂಗಗಳೂ ಏಕ ಕುಟುಂಬದವರಂತೆ ಶಾಂತಿಯಿಂದಲೂ ಪ್ರೀತಿಯಿಂದಲೂ ಬಾಳುವುದು ಸಾಧ್ಯ. ಮತಸ್ಥಾಪಕರು ವೈರಿಗಳನ್ನು ಸಹ ಪ್ರೀತಿಸಬೇಕೆಂದು ಉಪದೇಶವಿತ್ತಿರುವರು ಎಂದು ತಿಳಿಸಿದರು ಹಾಗೆ ಮಾಡಿದರೆ ಪ್ರಪಂಚದಲ್ಲಿ ಶಾಂತಿಯೂ, ಸೋದರ ಭಾವನೆಯೂ ನೆಲಸಿ ಸಂತೋಷದಿಂದ ಮನುಷ್ಯರು ಬಾಳಲು ಸಾಧ್ಯವಾಗುವುದೆಂದರು

ಬರೋಡಾ-ಕೊಲ್ಹಾಪುರಗಳು ಬೊಂಬಾಯಿಗೆ ಸೇರುವುವು.

ಭಾರತ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿ ಬರೋಡಾ ಮತ್ತು ಕೊಲ್ಹಾಪುರ ಸಂಸ್ಥಾನಗಳು ಬೊಂಬಾಯಿ ಪ್ರಾಂತ್ಯದೊಡನೆ ಸೇರಲು ಒಪ್ಪಿರುವುದಾಗಿ ತಿಳಿಸಿದ್ದಾರೆ. ಸರ್ದಾರ್ ಪಟೇಲರೊಡನೆ ಮಾತುಕತೆ ನಡೆಸಿದನಂತರ ಈ ನಿರ್ಧಾರಕ್ಕೆ ಬಂದಿರುವುದಾಗಿಯೂ ಅದಕ್ಕೆ ಶಾಸನ, ಮಂತ್ರಿ ಮಂಡಲಗಳ ಒಪ್ಪಿಗೆ ಇ[illegible] ಸರ್ದಾರರೂ ಈ ಎರಡು ಸಂಸ್ಥಾನಗಳ [illegible] ತಿಳಿಸಿದ್ದಾರೆ

ಬಾಪೂ ಪುಣ್ಯ ದಿನಾಚರಣೆ

ಶ್ರೀರಂಗಪಟ್ಟಣ ೩೧

ಇಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು, ಪೂಜ್ಯ ಬಾಪೂಜಿಯವರ ಪುಣ್ಯದಿನವನ್ನು ನೆನ್ನೆ ದಿನ ಆಚರಿಸಿದರು. ತಾಲ್ಲೂಕ್ [illegible] ೨ನೇ [illegible] ಬಂದಿಗೌಡರು ಅಧ್ಯಕ್ಷತೆ [illegible]

ಭೂಪಾಲ್ ಸಂಸ್ಥಾನದ ಮುಖ್ಯ ಮಂತ್ರಿಯ ಉಪವಾಸ

ಭೂಪಾಲ್ ಸಂಸ್ಥಾನವು ಭಾರತ ಡೊಮಿನಿಯನ್ನಿನಲ್ಲಿ ಐಕ್ಯವಾಗುವ ವಿಚಾರದಲ್ಲಿ ಅಲ್ಲಿನ ನವಾಬರಿಗೂ ಭಾರತ ಸರ್ಕಾರದ ಸಂಸ್ಥಾನ ಶಾಖೆಯವರಿಗೂ ಆಗಿರುವ ಒಪ್ಪಂದವನ್ನು ಪ್ರತಿಭಟಿಸಿ ಅಲ್ಲಿನ ಪ್ರಧಾನ ಮಂತ್ರಿ ಚತುರ ನಾರಾಯಣ ಮಾಳವೀಯರು ಹೇಳಿಕೆಯೊಂದನ್ನು ಕೊಟ್ಟು ಈ ವಿಚಾರವನ್ನು ತೀರ್ಮಾನಿಸುವವರು ಸಂಸ್ಥಾನದ ಪ್ರಜೆಗಳೇ ಹೊರತು ಇತರರಲ್ಲವೆಂದು ತಿಳಿಸಿದ್ದಾರೆ ಮೇಲ್ಕಂಡ ಒಪ್ಪಂದವನ್ನು ಪ್ರತಿಭಟಿಸಲು ತಾವು ಇಂದಿನಿಂದ ಮೂರು ವಾರ ಕಾಲ ಉಪವಾಸವನ್ನು ಕೈಗೊಳ್ಳುವುದಾಗಿಯೂ ಹೇಳಿದ್ದಾರೆ. ಭೂಪಾಲ್ ಸಂಸ್ಥಾನದ ಮನೆ ಮನೆಗೂ ಮಹಾತ್ಮರ ಶಾಂತಿ ಸೌಹಾರ್ದ ಸಂದೇಶವನ್ನು ಸಾರಲು ತಮ್ಮ ಉಳಿದ ಜೀವಿತ ಕಾಲವನ್ನೂ ವಿನಿಯೋಗಿಸುವುದಾಗಿಯೂ ಅವರು ತಿಳಿಸಿದ್ದಾರೆ

ಸರ್ವೋದಯ ದಿನಾಚರಣೆ

ರಾಜಧಾನಿಯ ಲಕ್ಷ್ಮೀಪುರಂ ಶಿಶುವಿಹಾರದಲ್ಲಿ ಸರ್ವೋದಯ ದಿನಾಚರಣೆ ನಡೆಯಿತು. ಪೂರಾರು ಮಕ್ಕಳು ತಕಲಿಯಿಂದ ನೂಲನ್ನು ನೂತರು ದೇವರಾಜ್, ನಾಗರಾಜ್ ಮುಂತಾದ ಮಕ್ಕಳಿಂದ ಭಾಷಣ ವಾಯಿತು ಯಾರೂ ಸುಳ್ಳು ಆಡಬಾರದೆಂದು ಮತ್ತೊಬ್ಬರನ್ನು ನೋಯಿಸಬಾರದೆಂದೂ ಪ್ರಮಾಣ ವಚನವಾಯಿತು.

ಲಕ್ಷ್ಮೀಪುರಂ ಮಾಧ್ಯಮಿಕ ಶಾಲಾ

ಈ ದಿನ ಶಾಲಾ ಕಾರ್ಯಕ್ರಮವು ಪ್ರಾರಂಭವಾಗುವುದಕ್ಕೆ ಪೂರ್ವಭಾವಿಯಾಗಿ, ಜಗದ್ವಂದ್ಯರೂ ಭಾರತದ ತಂದೆಯವರೂ ಎನಿಸಿದ ಪೂಜ್ಯ ಮಹಾತ್ಮಾ ಗಾಂಧಿಜೀಯವರ ಮೊದಲನೇ ವರ್ಷದ ಪುಣ್ಯ ದಿನಾಚರಣೆಯನ್ನು ನೆರವೇರಿಸಲಾಯಿತು. ಮುಖ್ಯೋಪಾಧ್ಯಾಯರಾದ ಶ್ರೀ ಎಂ.ಆರ್. ನಾಗರಾಜರಾಯರು ಅಧ್ಯಕ್ಷತೆ ವಹಿಸಿದ್ದರು. ಬಾಪೂಜಿಯವರು ಹಾಕಿ ಕೊಟ್ಟಿರುವ ಮೇಲ್ಪಂಕ್ತಿಯನ್ನು ಅನುಸರಿಸುವ ಠರಾವನ್ನು ಅನುಮೋದಿಸಲಾಯಿತು.

ನಿಧನ

ರಾಜಧಾನಿಯ ಶ್ರೀ ಚಾಮುಂಡೇಶ್ವರಿ ಭವನದ ಮಾಲೀಕರಾದ ಶ್ರೀ ಸಿ.ವಿ ರಾಮಯ್ಯರವರ ತಂದೆಯವರಾದ ಸಿ ಎಸ್. ವೈದ್ಯನಾಥಯ್ಯರವರು ತಮ್ಮ ೭೫ ನೇ ವಯಸ್ಸಿನಲ್ಲಿ ನಿನ್ನೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ

ಒಂಟಿಕೊಪ್ಪಲ್ ಕ್ಲಬ್

ಓಪನ್ ಟೆನಿಸ್ ಟೋರ್ನಮೆಂಟ್

ಜೆಂಟ್ಸ್ ಸಿಂಗಲ್ಸ್ ಮತ್ತು ಡಬಲ್ಸ್

ಎಲ್ಲಾ ಕಡೆಗಳಿಂದಲೂ ಟೋರ್ನಮೆಂಟಿಗೆ ಉತ್ಸಾಹ ಪೂರಿತವಾದ ಪ್ರೋತ್ಸಾಹವು ದೊರಕುತ್ತಿದೆ ಆಟಗಾರರ ಹೆಸರುಗಳನ್ನು ಈಗಾಗಲೇ ಕೊಡುತ್ತಿದ್ದಾರೆ ಉಳಿದವರ ಹೆಸರನ್ನು [illegible]ನೇ ಫೆಬ್ರವರಿ ೩ನೇ ತಾ|| ಸಂಜೆ ೬ ಗಂಟೆವರೆಗೆ ಸ್ವೀಕರಿಸಲಾಗುವುದು.

[illegible]

ದೆಹಲಿಯಲ್ಲಿ ಸರ್ವೋದಯ ದಿನಾಚರಣೆ

ಗಾಂಧೀಜಿಯವರ ಪ್ರಥಮ ವಾರ್ಷಿಕ ಶ್ರಾದ್ಧವು ದೆಹಲಿಯ ಬಿರ್ಲಾ ಭವನದಲ್ಲಿ ಶ್ರದ್ಧಾ ಭಕ್ತರಿಗಳಿಂದ ಆಚರಿಸಲ್ಪಟ್ಟಿತು. ಗಾಂಧೀಜಿಯವರು ಮೃತರಾದ ದಿನ ... ಹೊತ್ತಿಗೆ ಅಂದರೆ ಬೆಳಿಗ್ಗೆ ೩-೩೦ ... ಟೆಗೆ ಅವರಿಗೆ ಗುಂಡಿನೇಟು ... ಪ್ರದೇಶದಲ್ಲಿ ವಿಶೇಷ ಪ್ರಾ... ಕಗುಲಿದ್ದು ಪಂಡಿತ್ ನೆಹ... ರ್ಗನೆ ನಡೆಯಿದ್ದರು. ಅವರು ... ಹೂರವರು ಪ್ರಾಜ ದ್ರ ... ರಾಜಘಾ... ಟ್ಟದಾಗಿ ಅಲ್ಲಿ ನಿಂತಿ ಕ್ಕೆ ಏರ್ಪಟ್ಟ ... ಟಿಗೆ ಸುಮಾರು ಲಕ್ಷ ಗಿದ್ದರು. ... ಜನರು ಯಾತ್ರೆ ಹೋ... ಭ

ಸ

...ಪಾಲ್ ಸಂಸ್ಥಾನದ ಸತ್ಯಾಗ್ರಹ ಮುಕ್ತಾಯ

ಕಳೆದ ಎರಡು ವಾರಗಳಿಂದ ಭೂಪಾಲ್ ಸಂಸ್ಥಾನದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹವು ಮುಕ್ತಾಯ ವಾಯಿತೆಂದು ತಿಳಿದುಬಂದಿದೆ. ಜೈಲಿನಲ್ಲಿರುವ ನಾಯಕರೆಲ್ಲರ ಬಿಡುಗಡೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಪ್ರತಿ ಹಳ್ಳಿಗೂ ಒಂದು ಪ್ರಾಥಮಿಕ ಶಾಲೆ

ಹೈದರಾಬಾದಿನ ಸರಕಾರದವರು ಆ ಸಂಸ್ಥಾನದಲ್ಲಿರುವ ೨೨ ಸಾವಿರ ಹಳ್ಳಿಗಳಿಗೂ ಒಂದೊಂದು ಪ್ರಾಥಮಿಕ ಶಾಲೆಯನ್ನು ಕೊಡುವ ವಿಚಾರವಾಗಿ ಯೋಜನೆಯೊಂದನ್ನು ತಯಾರಿಸಿದ್ದಾರೆ.

ವಿಮಾನ ಅಪಘಾತದಲ್ಲಿ ಮಂತ್ರಿಗಳಿಗೆ ಗಾಯ

ಮಧ್ಯ ಭಾರತ ಸರಕಾರದ ಕೂಲಿಗಾರರ ಮಂತ್ರಿ ಶ್ರೀ ಡಿ.ಎಂ ಪಾರುಳೇಕರ್‌ರವರು ಮತ್ತು ಸಂಯುಕ್ತ ಪ್ರಾಂತದ ವಾ... ಕಾರ್ಯದರ್ಶಿ ಗೋವಿಂದ ಸಹಾಯ್ ಇವರುಗಳು ರೂಪ್ಸಿಗೆ ೬೦ ಮೈಲಿ ದೂರದಲ್ಲಿ ವಿಮಾನ ಅಪಘಾತದಿಂದ ಗಾಯ ಗೊಂಡಿದ್ದಾರೆ.

ಚಿಯಾಂಗರ ದಸ್ತಗಿರಿಗೆ ಕಮ್ಯೂನಿಸ್ಟರ ಒತ್ತಾಯ

ಚೀನಾದ ಕಮ್ಯೂನಿಸ್ಟರು ಅಲ್ಲಿನ ಮಾಜಿ ಅಧ್ಯಕ್ಷ ಚಿಯಾಂಗ್ ಕೈಷೇಕರನ್ನೂ, ಡಾ|| ಟಿ ವಿ ಸೂಂಗ್‌ರನ್ನೂ ದಸ್ತಗಿರಿ ಮಾಡಿದರೆ ಶಾಂತಿ ಸಂಧಾನಕ್ಕೆ ಒಪ್ಪುವುದಾಗಿ ತಿಳಿಸಿರುವರೆಂದು ಹೇಳಲಾಗಿದೆ. ಇವರೊಡನೆ ಚೀನಾದಲ್ಲಿರುವ ಮಾಜಿ ಜಪಾನ್ ಮುಖ್ಯ ಸೇನಾನಿ ಒಕಾಮುರಾರನ್ನೂ ಹಿಡಿಯ ಬೇಕೆಂದು ಕೇಳಲಾಗಿದೆ ಒಟ್ಟು ೧೩ ಜನರನ್ನು ಬಂಧಿಸಬೇಕೆಂದು ತಿಳಿಸಲಾಗಿದೆ.

ರಾಜಘಾಟ್ ಸ್ಮಾರಕಕ್ಕೆ ೫ ಲಕ್ಷ ರೂ. ವೆಚ್ಚ

ಗಾಂಧೀಜಿಯವರ ಚಿತೆಯು ಭಸ್ಮವಾದ ಸ್ಥಳದಲ್ಲಿ ಸೂಕ್ತವಾದ ಸ್ಮಾರಕ ನಿರ್ಮಾಣಮಾಡಲು ತ್ವರಿತ ಕಾರ್ಯಕ್ರಮವು ಕೇಂದ್ರ ಸರಕಾರದವರಿಂದ ಕೈಗೊಳ್ಳಲ್ಪಟ್ಟಿದೆ. ಆ ಸ್ಥಳದಲ್ಲಿ ... ಎಕರೆಯಷ್ಟು ಉದ್ಯಾನವನವು ನಿರ್ಮಿತವಾಗಿ ಅದರ ಮಧ್ಯೆ ಸ್ಮಾರಕವು ಕಟ್ಟಲ್ಪಡುವುದು. ಇದಕ್ಕಾಗಿ ... ಲಕ್ಷ ... ಸಾವಿರ ರೂಗಳ ವೆಚ್ಚದ ... ವಾಗಿದೆ.

ಸರ್ವೋದಯ ದಿನಾಚರಣೆ

ಬೆಂಗಳೂರು ३೧

ನೆನ್ನೆ ದಿನ ಸರ್ವೋದಯ ದಿನಾಚರಣೆ ನಡೆಯಿತು. ಬಹಿರಂಗ ಸಭೆಯೊಂದು ಸುಭಾಷ್ ನಗರದಲ್ಲಿ ಏರ್ಪಡಾಗಿತ್ತು. ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯನವರು ಪುಟ್ಟ ಭಾಷಣ ಮಾಡಿ ಗಾಂಧೀಜಿಯವರು ಹಾಕಿಕೊಟ್ಟಿರುವ ಮಾರ್ಗವನ್ನು ಅನುಸರಿಸಬೇಕೆಂದು ಪ್ರಾರ್ಥಿಸಿದರು ಸಂಸ್ಥಾನವು ಗಾಂಧಿ ನಿಧಿಗೆ ಕನಿಷ್ಟ ಪಕ್ಷ ೬೫ ಲಕ್ಷ ರೂ ಗಳನ್ನಾದರೂ ಶೇಖರಿಸಬೇಕೆಂದು ನಿಧಾಯಕವಾಗಿದ್ದರೂ, ಇನ್ನೂ ಸಹ ಕೇವಲ ೧೨ ಲಕ್ಷ ರೂಪಾಯಿಗಳು ಮಾತ್ರ ವಸೂಲಾದುದಕ್ಕಾಗಿ ಅವರು ವ್ಯಸನಪಟ್ಟರು ಮಹಾ ಜನರು ಈ ನಿಧಿಗೆ ಹೆಚ್ಚಿಗೆ ಹಣ ಕೊಡಬೇಕೆಂದು ಪ್ರಾರ್ಥಿಸಿದರು ಇತರ ಕಾರ್ಯಕ್ರಮಗಳೂ ನಡೆದವು.

ಏಷ್ಯಾ ಸಮ್ಮೇಳನದ ಬಗ್ಗೆ ರಷ್ಯದ ಟೀಕೆ

ಇಂಡೋನೇಷ್ಯಾ ಸಂಬಂಧವಾಗಿ ದೆಹಲಿಯಲ್ಲಿ ನಡೆದ ಸಮ್ಮೇಳನದ ಕಾರ್ಯಕಲಾಪಗಳನ್ನು ಕುರಿತು ಟೀಕಿಸುವ ವಿಷಯವನ್ನೊಳಗೊಂಡ ವಿದೇಶಾಂಗ ನೀತಿಯ ಹೇಳಿಕೆಯನ್ನು ರಷ್ಯವು ಕೊಟ್ಟಿದೆ ಆಗ್ನೇಯ ಏಷ್ಯಾ ದೇಶಗಳನ್ನು ಒಟ್ಟಿಗೆ ಸೇರಿಸಿ ಹಲವು ರಾಜ್ಯಗಳು ಪ್ರಪಂಚದ ಆಧಿಪತ್ಯ ಹೂಡಲು ಹೊರಟಿವೆಯೆಂದು ಆ ಟೀಕೆಯಲ್ಲಿ ಹೇಳಲಾಗಿದೆ

ಗೋಲ್ವಾಲ್ಕರ್ ದೆಹಲಿಗೆ

ಆರ್. ಎಸ್. ಎಸ್. ಸಂಘದ ಮುಖ್ಯಸ್ಥರಾದ ಶ್ರೀ ಗೋಳ್ವಾಳ್ಕರವರನ್ನು ಸಂಘದ ಮುಖಂಡರೊಡನೆ ಮಾತು ಕತೆ ನಡೆಸುವ ಸಲುವಾಗಿ ನಾಗಪುರದಿಂದ ದೆಹಲಿ ಜೈಲಿಗೆ ವರ್ಗಾಯಿಸಲಾಗಿದೆ.

ಗಾಂಧಿ ನಿಧಿ ಅವಧಿ ಹೆಚ್ಚಿತು

ಗಾಂಧೀ ಸ್ಮಾರಕ ನಿಧಿಗೆ ಹಣ ಶೇಖರಿಸುವ ಅವಧಿಯನ್ನು ಏಪ್ರಿಲ್ ೩೦ನೇ ತಾರೀಖಿನವರೆಗೆ ಹೆಚ್ಚಿಸಲಾಗಿದೆ

ಭೂಪಾಲ್ ಸಂಸ್ಥಾನದ ಮಂತ್ರಿ ಮಂಡಲದ ವಿಸರ್ಜನೆ

ಭೂಪಾಲ್ ಸಂಸ್ಥಾನದ ಮಂತ್ರಿ ಮಂಡಲದ ಪೈಕಿ ೪ ಜನ ಕಾಂಗ್ರೆಸ್ಸಿನ ಪ್ರತಿನಿಧಿಗಳು ರಾಜೀನಾಮೆಯಿತ್ತ ಪ್ರಯುಕ್ತ, ಮಂತ್ರಿ ಮಂಡಲವನ್ನು ವಿಸರ್ಜಿಸಿ ಭೂಪಾಲ್ ನವಾಬರೇ ಆಡಳಿತಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ರಾಜಕಮಲ್,

ಮೈ ಸೂ ರು

ತಾ|| 1-2-49 ರಿಂದ

ಪ್ರತಿ ದಿನ ೩ ಆಟಗಳು

* ಸ್ವ ಪ್ನ *

(ಹಿಂದೀ ಸಾಮಾಜಿಕ ಚಿತ್ರ

... ಭೂಮಿಕೆ.

ಕೌಸಲ್ಯಾ ಮತ್ತು

ಬ ಲ ವಂ ತ ಸಿಂ ಗ್

ಡಾ|| ಮೋದಿಯವರಿಗೆ ಸತ್ಕಾರ

ನಂಜನಗೂಡು ೧

ಸುಪ್ರಸಿದ್ಧ ನೇತ್ರ ಚಿಕಿತ್ಸಾ ವೈದ್ಯರಾದ ಡಾ|| ಮುರುಗಪ್ಪ ಮೋದಿಯವರನ್ನು ಬರಮಾಡಿಕೊಂಡು, ಇಲ್ಲಿನ ಪುರನಿವಾಸಿಗಳು ನೆನ್ನೆ ಮಧ್ಯಾಹ್ನ ರೆಸಿಡೆನ್ಸಿಯಲ್ಲಿ ಸತ್ಕರಿಸಿದರು. ಭೋಜನಾನಂತರ ಪುರನಿವಾಸಿಗಳ ಪರವಾಗಿ ಪೌರ ಸಭಾಧ್ಯಕ್ಷರಾದ ಶ್ರೀ ... ಆರಾಧ್ಯರವರು ಡಾ|| ಮೋದಿಯವರಿಗೆ ಬೆಳ್ಳಿ ಪತ್ತಳೆಯನ್ನು ಅರ್ಪಿಸಿದರು. ರಾಜಧಾನಿಯ ಪೌರ ಸಭಾ ... ಶ್ರೀ ಎ ಕೃಷ್ಣಮೂರ್ತಿರಾಯರು ಭಾಷಣ ಮಾಡಿ, ಡಾ|| ಮೋದಿಯವರ ಅದ್ಭುತ ಚಿಕಿತ್ಸಾ ಕ್ರಮವನ್ನು ಪ್ರಶಂಸಿಸಿದರು. ಇಂತಹವರು ಇಡೀ ಕರ್ನಾಟಕಕ್ಕೆ ಹೆಸರಾಗಿರುವರೆಂದೂ ತಿಳಿಸಿ, ಅವರು ಶೀಘ್ರದಲ್ಲಿಯೇ ಕೈಕೊಳ್ಳಲಿರುವ ಪಾಶ್ಚಾತ್ಯ ಪ್ರವಾಸದಲ್ಲಿ ಹೆಚ್ಚು ಅನುಭವ ಗಳಿಸಿ ಕೀರ್ತಿಯುತರಾಗಲೆಂದು ಹಾರೈಸಿದರು. ಡಾ|| ಮೋದಿಯವರು ಉತ್ತರಪತ್ರ ಬೆಳ್ಳಿ ಪತ್ತಳೆ ಸಮರ್ಪಿಸಿದ ಪುರನಿವಾಸಿಗಳಿಗೂ, ಇತರರಿಗೂ ವಂದನೆಗಳನ್ನು ಸಲ್ಲಿಸಿದರು.

ಹೈದರಾಬಾದಿನ ಪೋಲೀಸರು ಗುಂಡು ಹಾರಿಸಿದರು

ಹೈದರಾಬಾದಿಗೆ ಸ್ವಲ್ಪ ದೂರ ಇರುವ ಗೋಲಗುಡ ... ಏರ್ಪಟ್ಟಿರುವ ನಿರಾಶ್ರಿತರ ಶಿಬಿರದಿಂದ ಎರಡು ಸೆಲೆಗಳನ್ನು ಸುತ್ತ ಮುತ್ತಲಿನ ಜನರು ಸುಟ್ಟುದಕ್ಕಾಗಿ, ಅವರನ್ನು ತಡೆಯಲು ಪೋಲೀಸರು ಮೊನ್ನೆ ಗುಂಡು ಹಾರಿಸಬೇಕಾಯಿತು. ಇದರಿಂದ ಒಬ್ಬನು ಸತ್ತು ಇಬ್ಬರಿಗೆ ತೀವ್ರ ಗಾಯವಾಗಿದೆ. ೧೫ ವರ್ಷದೊಳಗಿನ ಸುಮಾರು ೧೦೦ ಮಂದಿ ಹುಡುಗರು ಘೋಷಣೆ ಮಾಡುತ್ತಾ ಶಿಬಿರಗಳ ಬಳಿ ಹೋದಾಗ ಇದನ್ನು ಸಹಿಸದ ಮುಸ್ಲಿಂ ನಿರಾಶ್ರಿತರು ಅವರನ್ನು ಅಟ್ಟಿಸಿಕೊಂಡು ಹೋದರೆಂದೂ ಎಲ್ಲ ಹುಡುಗರೂ ತಪ್ಪಿಸಿಕೊಂಡು ಹೋದರೆಂದೂ, ಆದರೆ ಆ ಪೈಕಿ ಇಬ್ಬರನ್ನು ಹಿಡಿದುಕೊಂಡರೆಂಬ ಸಂಶಯವು ಉತ್ಪನ್ನವಾಗಿ ಶಿಬಿರದ ಸುತ್ತ ಮುತ್ತಲಿನ ಹಳ್ಳಿಗರು ಸೇರಿ ಸೆಲೆಗಳಿಗೆ ಬೆಂಕಿ ಇಟ್ಟರೆಂದೂ ಉದ್ರಿಕ್ತ ಜನರನ್ನು ತಡೆಯಲು ಗುಂಡು ಹಾರಿಸಬೇಕಾಯಿತೆಂದೂ ... ಲಾಗಿದೆ ಕರ್ಫ್ಯೂ ಆಜ್ಞೆ ಆ ಪ್ರದೇಶದಲ್ಲಿ ಜಾರಿಗೆ ಬಂದಿದೆ

ಪ್ರತಿ ದಿನ ೪ ಆಟಗಳು

...ನೇ ಸೋಮವಾರದಿಂದ

ಚಂದ್ರಮಾ ಪಿಕ್ಚರ್ಸ್‌ರವರ

ಆಪ್-ಕಿ- ಸೇವಾ ಮೆ

ಪಾತ್ರ:- ದೀಕ್ಷಿತ್, ಶಾಂತಾರ್ಕಿ, ಕೇಸರಿ, ನಿಂಬಾಳ್ಕರ್ ಮತ್ತಿತರರು

...ಸಿನಿಮಾ ಟಾಕೀಸ್

Edited printed and published by V R Nagarajan at the Sadhvi Press, D Subb... ...Road, Mysore

"ಧರ್ಮ ಪ್ರಚಾರ-ನಿರ... ಪ್ರಶಸ್ತಿ

ರಾಜಧಾನಿಯಲ್ಲಿ ಹೊರಡುತ್ತಿರುವ ... ತ್ಯವಾದಿ ಪತ್ರಿಕೆಯ ಸಂಪಾದಕರಾದ ಎಂ ಎಸ್. ಕೃಷ್ಣರಾಯರಿಗೆ ಶ್ರೀ ... ಜಗದ್ಗುರುಗಳು "ಧರ್ಮಪ್ರಚಾರ..." ಎಂಬ ಪ್ರಶಸ್ತಿಯನ್ನು ದಯಪಾಲಿಸಿ... ಅಲ್ಲದೆ ಶ್ರೀಯುತರಿಗೆ ದ್ವಾರಕಾದಿ... ಯರೆಯನ್ನೂ ಅನುಗ್ರಹಿಸಿದ್ದಾರೆ.

ಸರ್ವೋದಯ ದಿನಾಚರಣೆ

ಹಿಂದೀ ಪ್ರಚಾರ ಸಭೆಯವರು ... ನ್ನೆ ದಿನ ಬೆಳಿಗ್ಗೆ ಸಹಕಾರ ಭವನದಲ್ಲಿ ತಮ್ಮ ಸಭೆಯಲ್ಲಿ ವಿಶೇಷ ಪ್ರಾರ್ಥನೆ ... ಸಿ ಕಾರ್ಯಕಾರೀ ಸಮಿತಿಯವರು ರಚಿ... ಸಂದೇಶವನ್ನು ಓದಿದರು.

ಹಿಂದೀ ಪ್ರಚಾರ ಸಭೆಯ ಕಾರ್ಯ... ಸಮಿತಿಗೆ ಪ್ರಚಾರಕರ ಪರವಾಗಿ ಶ್ರೀ... ದ ಬಿ ಪದ್ಮನಾಭಾಚಾರ್ ಹೆ. ಶಾಸ್ತ್ರಿ ಮತ್ತು ರಾಜಗೋಪಾಲ್ ರವರು... ಚುನಾಯಿತರಾಗಿರುವರು.

ಕ್ರಿಕೆಟ್

ಲಕ್ಷ್ಮೀಪುರಂ ಮಿಡಲ್ ಸ್ಕೂಲ್ ... ತ್ತು ಅರಸು ಬೋರ್ಡಿಂಗ್ ಸ್ಕೂಲ್ ... ಮುಗಳಿಗೆ ಅರಸು ಬೋರ್ಡಿಂಗ್ ಸ್ಕೂ... ಗೋಲ್ಡನ್ ಜೂಬಿಲಿ ಟೂರ್ನಮೆಂಟಿನ ... ಯದಲ್ಲಿ ನಡೆದ ಕ್ರಿಕೆಟ್ ಫೈನಲ್ ... ದಲ್ಲಿ ಲಕ್ಷ್ಮೀಪುರಂ ಸ್ಕೂಲಿನವರು ಗೆದ್ದ...

ವಿಶ್ವಭಾರತಿ ಮತ್ತು ಸಾಹಿತ್ಯ ಸಂ...

ಸುಪ್ರಸಿದ್ಧ ಸಾಹಿತಿಗಳಾದ ಶ್ರೀಗಳಾದ ದ ರಾ ಬೇಂದ್ರೆ ಪು ತಿ. ನರಸಿಂಹಾಚಾರ್ ಮತ್ತು ಶಿವರಾಮ ಕಾರಂತರವರುಗಳು ಮೊನ್ನೆ ಸಹಕಾರ ಭವನದಲ್ಲಿ ವಿ... ಸಂಘಗಳಾಶ್ರಯದಲ್ಲಿ ಭಾಷಣ ... ತಮ್ಮ ಕವಿತೆಗಳನ್ನೋದಿದರು. ಕಾರ್ಯ... ಲಾಪಗಳು ಆರಂಭವಾಗುವುದಕ್ಕೆ ಮುನ್ನ ಸಭೆಯು ಮಹಾತ್ಮ ಗಾಂಧೀಜಿಯವರ ನಿಧನಕ್ಕಾಗಿ ಎರಡು ನಿಮಿಷಗಳ ... ಮೌನ ಸೂಚಿಸಿತು. ಶ್ರೀ ಗೋಪಾಲಕೃ... ಅಡಿಗರು ಮುಖ್ಯ ಅತಿಥಿಗಳನ್ನು ಸ್ವಾಗ... ಸಿದರು.

ಹೊಸ ಅಂಚೆ ವ್ಯವಸ್ಥೆ

ಬಿಹಾರ್ ಪ್ರಾಂತ್ಯದಲ್ಲಿ ಅಂಚೆಯನ್ನು ಕೊಂಡೊಯ್ಯಲು ಹೊಸ ವ್ಯವಸ್ಥೆಯಾ... ವುದಿದೆ. ಅಂಚೆಯವರನ್ನು ಡಾಕ್ ಸೇವ... ರು ಎಂದು ಕರೆಯಲಾಗುವುದು. ... ಯವರು ಏಕ ಕಾಲದಲ್ಲಿ ಸಬ್ ಪೋಸ್ಟ್ ಮಾಸ್ಟರ್, ರನ್ನರ್ ಮತ್ತು ಪೋಸ್ಟ್... ವರ್ ಕೆಲಸಗಳನ್ನು ನೋಡಿಕೊಳ್ಳಬೇಕು. ಎರಡುಸಾವಿರ ಜನರು ವಾಸವಿರುವ ಹಳ್ಳಿ... ಗೆ ಅಥವಾ ಹಳ್ಳಿಗಳ ಗುಂಪಿಗೆ ಒಬ್ಬರ... ಈ ರೀತಿ ನೇಮಕವಾಗುವುದು.

ಲಗ್ನದ ಜವಳಿಗಾಗಿ

ಗು ರು ದೇ ವಾ ಹಾ ಲ್

ದಯಮಾಡಿ ಒಂದೇ ಭೇಟಿ ಕೊಡಿ

ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವ... ಮಗ್ಗದಿಂದ ತಯಾರಾದ ಬೆಂಗಳೂರು ... ಧರ್ಮಾವರಂ, ಆರಣಿ ಮತ್ತು ಕುಂಭಕೋಣ... ಸೀರೆಗಳು, ಕಲಾಬತ್ತು ಪಂಚೆಗಳು, ಮಗ... ಗಳು ಸಹ ದೊರೆಯುತ್ತವೆ.

ಬೆಂಗಳೂರು, ಜವಳಿ ಅಂಗಡಿ ... ಚಿಕ್ಕಪೇಟೆ :: ಮೈಸೂ...

ಫೋನ್ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಬುಧವಾರ ೨-೨-೧೯೪೯ [ಸಂಚಿಕೆ ೧೭೩

ಶಿವಮೊಗ್ಗಾ ಜಿಲ್ಲೆಯಲ್ಲಿ ಚಿನ್ನದ ಗಣಿ ಸ್ಥಾಪನೆ

ಚಿಯಾಂಗರ ದಸ್ತಗಿರಿಗೆ ಚೀಣಾ ನಿರಾಕರಣೆ

ಚೀಣದ ಮಾಜಿ ಅಧ್ಯಕ್ಷ ಚಿಯಾಂಗ್ ಕೈಷೇಕ್‌ರವರನ್ನೂ ಇತರ ಹದಿನೈದು ಬಂದಿಗಳನ್ನೂ ದಸ್ತಗಿರಿ ಮಾಡಿದರೆ ಶಾಂತಿ ಸಂಧಾನ ಸಾಧ್ಯವೆಂದು ಚೀಣಿ ಕಮ್ಯೂನಿಸ್ಟರು ತಿಳಿಸಿದ್ದರಷ್ಟೆ. ಆದರೆ ಚೀಣಾ ಸರಕಾರವು ಈ ಷರತ್ತನ್ನು ನಿರಾಕರಿಸಿರುತ್ತದೆ

ಹೈದರಾಬಾದಿನಲ್ಲಿ ಮುಷ್ಕರ

ಹೈದರಾಬಾದಿನಲ್ಲೂ ಸುತ್ತಮುತ್ತಲೂ ಇರುವ ಹನ್ನೆರಡು ಗಿರಣಿಗಳಲ್ಲಿ ಕೆಲಸ ಮಾಡುವ ಸುಮಾರು ೧೦ ಸಾವಿರ ಕೆಲಸಗಾರರು ೩ ದಿನದಿಂದ ಮುಷ್ಕರ ಹೂಡಿದ್ದಾರೆ ಕೂಲಿಗಾರರು ೨೧ ದಿನದ ನೋಟೀಸನ್ನು ಕೊಟ್ಟಿದ್ದರು. ಅದು ಮುಗಿದ ನಂತರ ಮುಷ್ಕರ ಹೂಡಲಾಯಿತು.

ಸೂಪರ್ ಆಟಂ ಬಾಂಬಿನ ಸೃಷ್ಟಿ

ಅಮೇರಿಕಾದ ಸಂಯುಕ್ತ ಸಂಸ್ಥಾನಗಳು ಹಿಂದೆ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಹಾಕಿದ ಅಣು ಬಾಂಬುಗಳನ್ನು ಮೀರಿಸುವ ಸೂಪರ್ ಆಟಂ ಬಾಂಬುಗಳು ತಯಾರಾಗಿವೆ. ಇವಕ್ಕೆ ಇನ್ನೂ ಹೆಚ್ಚಿನ ಆಸ್ಫೋಟಕ ಶಕ್ತಿಯಿದೆ.

ಚಲನ ಚಿತ್ರಗಳಲ್ಲಿ ಭಾರತ ಮಹಿಳೆಯರ ಅಪಚಾರ

ಭಾರತೀಯ ಚಲನ ಚಿತ್ರ ತಯಾರಿಕೆಯಲ್ಲಿ, ಭಾರತ ಸ್ತ್ರೀ ವೃಂದಕ್ಕೆ ಅಪಚಾರವಾಗುವ ಪಾತ್ರಾಭಿನಯಗಳ ಬಗ್ಗೆ ಪ್ರತಿಭಟಿಸಿ ಬೊಂಬಾಯಿ ಪ್ರಾಂತದ ಮಹಿಳಾ ಮಂಡಲಿಯು ನಿರ್ಣಯವನ್ನು ಮಾಡಿದೆ. ಮನುಷ್ಯನ ಕೆಳ ದರ್ಜೆಯ ವಿಕಾರಗಳ ತೃಪ್ತಿಗಾಗಿ ಇಂತಹ ಪಾತ್ರಗಳನ್ನು ನಟಿಯರಿಗೆ ಕೊಟ್ಟು ಹಣ ಸಂಪಾದಿಸುವುದನ್ನು ಖಂಡಿಸಲಾಗಿದೆ. ಮಂಡಲಿಯು ಅಂತಹ ಚಲನ ಚಿತ್ರಗಳಲ್ಲಿ ಪಾತ್ರ ವಹಿಸುವ ಮಹಿಳೆಯರನ್ನು ಎಚ್ಚರಿಸುವುದಲ್ಲದೆ ಇಂತಹ ತಯಾರಿಕೆಗಳನ್ನು ನಿಲ್ಲಿಸಲು ಒಪ್ಪದಿದ್ದರೆ, ಸರಕಾರವು ಅವುಗಳಿಗೆ ಲೈಸೆನ್ಸುಗಳನ್ನು ಕೊಡಲೇ ಕೂಡದೆಂದು ಪ್ರಾರ್ಥಿಸಿದೆ.

ಕಳ್ಳತನ ಮಾಡುತ್ತಿದ್ದಾಗ ಪತ್ತೆ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದಲ್ಲಿ ಈಗ ಮೂರು ನಾಲ್ಕು ದಿನಗಳಿಂದಲೂ ರಾತ್ರಿ ಕಳವು ನಡೆಯುತ್ತಾ ಇದ್ದಿತು. ನೆನ್ನೆ ರಾತ್ರಿ ಸಕ್ಕರೆಯ ನೂಜಿ ಪಟೇಲ್ ನಂಜ ಎಂಬುವನು ಅಗ್ರಹಾರದ ಒಂದು ಮನೆಯ ಮೇಲಿನ ಹೆಂಚು ತೆಗೆದು ಇಳಿದು ಹಿತ್ತಾಳೆ ಪಾತ್ರೆಗಳನ್ನು ಸಾಗಿಸುತ್ತಿದ್ದಾಗ ಪಾತ್ರೆ ಒಂದು ಬಿದ್ದು ಸದ್ದಾಗಿ ಮನೆಯವರು ಎಚ್ಚರಗೊಂಡು ಆತನನ್ನು ಹಿಡಿಸಿಕೊಂಡಿರುವರು. ಅವನು ಕೈಗೆ ಸಿಕ್ಕದೆ ಅಕ್ಕಪಕ್ಕದ ಮನೆಗಳ ಮೇಲೆ ಹಾದು ಒಂದು ಮಾಳಿಗೆ ಮೇಲ್ಛಾವಣಿಯ ಕೆಳಗೆ ಅವಿತು ಕುಳಿತಿದ್ದುದು ಪತ್ತೆಯಾಗಿ ಜನರು ಅವನನ್ನು ಹಿಡಿದು ಕೃಷ್ಣರಾಜ ಪೋಲೀಸ್ ಸ್ಟೇಷನ್ನಿಗೆ ಒಪ್ಪಿಸಿರುವರು. ಈತನು ಕೆಲವು ದಿನಗಳ ಹಿಂದೆ ಇಂತಹ ಕಳ್ಳತನದಲ್ಲಿ ಶಿಕ್ಷೆ ಹೊಂದಿರುವನೆಂದು ಹೇಳಲಾಗಿದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ

ನಮ್ಮ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮವನ್ನು ವ್ಯಾಸಂಗದ ವಿಷಯವನ್ನಾಗಿ ಏರ್ಪಡಿಸಲು ಮೈಸೂರು ಸರ್ಕಾರವು ಅದರ ಪಾಠಕ್ರಮ ಮತ್ತು ಪರೀಕ್ಷೆ ಇವುಗಳ ಬಗ್ಗೆ ಯೋಜನೆಯೊಂದನ್ನು ಸಿದ್ಧಗೊಳಿಸಿ ವರದಿಯನ್ನೊಪ್ಪಿಸಬೇಕೆಂದು ಆರು ಜನರ ಒಂದು ಸಮಿತಿಯನ್ನು ಏರ್ಪಡಿಸಿದೆ. ಇದರಲ್ಲಿ ಮದ್ರಾಸಿನ ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಶ್ರೀನಿವಾಸನ್, ಬೆಂಗಳೂರಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆ ಸಂಪಾದಕ ಶ್ರೀ ಪೋತನ್ ಜೋಸೆಫ್, ತಾಯಿನಾಡು ಮಾಲೀಕರಾದ ಶ್ರೀ ಪಿ. ಆರ್. ರಾಮಯ್ಯ ಮತ್ತು ಪ್ರೊ|| ಕೃ|| ಸಭಾ ಸದಸ್ಯರಾದ ಶ್ರೀ ಬಿ. ಎಂ. ಗುಪ್ತ (ಕನ್ವೀನರ್) ಇವರುಗಳು ಇರುವರು.

ಗಾಂಧಿ ನಿಧಿಗೆ ಗಂಧದೆಣ್ಣೆ ಕಾರ್ಖಾನೆಯವರ ಕಾಣಿಕೆ

ಮೊನ್ನೆ ಸಂಜೆ ಗಂಧದೆಣ್ಣೆ ಕಾರ್ಖಾನೆಯ ಆವರಣದಲ್ಲಿ ಗಾಂಧಿ ಸ್ಮಾರಕ ನಿಧಿ ಸಮಿತಿಯ ಸಭೆಯು ವರ್ಕ್ಸ್ ಮಾನೇಜರ್ ಶ್ರೀ ಕೆ ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಅಲ್ಲಿನ ಕೆಲಸಗಾರರ ಪರವಾಗಿ ಶೇಖರಣೆಯಾಗಿದ್ದ ರೂ ೩೦೦-೪-೦ ಗಾಂಧಿ ಸ್ಮಾರಕ ನಿಧಿಗೆ ಕಳಿಸಿರುವ ವಿಷಯವನ್ನು ತಿಳಿಸಲಾಯಿತು. ಅಹಿಂಸಾ ಮತ್ತು ಪ್ರೇಮದ ತತ್ವಗಳಿಂದ ಮಹಾತ್ಮ ಗಾಂಧಿಯವರು ವಿಶ್ವಕ್ಕೂ ಭಾರತಕ್ಕೂ ಮಾಡಿರುವ ಮಹದುಪಕಾರಕ್ಕೆ ಪ್ರತಿಯೊಬ್ಬನೂ ಚಿರಋಣಿಯಾಗಿರಬೇಕಲ್ಲದೆ, ಅವರ ತತ್ವಗಳನ್ನು ಅನುಷ್ಠಾನಕ್ಕೆ ತಂದರೆ ಈಗಿನ ಸಮಸ್ಯೆಗಳು ನಿವಾರಣೆಯಾಗಿ ಸುಖಶಾಂತಿಗಳು ಲಭಿಸುವುವೆಂದು ಅಧ್ಯಕ್ಷರು ತಿಳಿಸಿದರು.

ಹೆ..ಟೇಲು ಕೆಲಸಗಾರರ ಪಟ್ಟು

ಬೊಂಬಾಯಿ ಆನಂದ ಭವನದವರು ಕಾರಣವಿಲ್ಲದೆ ಏಳು ಜನ ಕೆಲಸಗಾರರನ್ನು ವಜಾ ಮಾಡಿರುವುದನ್ನು ಹೋಟೆಲ್ ಕೆಲಸಗಾರರ ಸಂಘದವರು ಪ್ರತಿಭಟಿಸಿ ಅವರನ್ನು ಕೂಡಲೆ ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದು ಕೋರಿದ್ದಾರೆ. ಈ ಕೋರಿಕೆ ಯೊಳಗೆ ಹಾಗೆ ಮಾಡದಿದ್ದಲ್ಲಿ ರಾತ್ರಿ ೮ ಗಂಟೆಗೆ ಮುಷ್ಕರ ಹೂಡುವ [illegible] ತಿಳಿಸಿದ್ದಾರೆ

ಶಿವಮೊಗ್ಗದಲ್ಲಿ ಚಿನ್ನದ ಗಣಿಯೋ ?

ಸ್ವಂ. ಸು. ಪ್ರೋ॥] ಬೆಂಗಳೂರು ೨

ಭೂಗರ್ಭ ಇಲಾಖೆಯ ಸಂಶೋಧನೆಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಎರಡು ಕಡೆ ಚಿನ್ನದ ಅದುರುಗಳು ಸಿಕ್ಕಿ ಅಲ್ಲಿ ಚಿನ್ನದ ಗಣಿಗಳಿವೆಯೆಂದು ತಿಳಿದು ಬಂದಿದೆ. ಅಲ್ಲಿ ಚಿನ್ನವನ್ನು ತೆಗೆಯುವ ಉದ್ಯಮವು ಫಲಕಾರಿಯಾಗುವುದೆಂದು ಹೇಳಲಾಗಿದೆ. ಆದುದರಿಂದ ಭಾರಿ ನೀರಾವರಿ ಕಾಲುವೆ ಕೆಲಸವೊಂದನ್ನು ಸರ್ಕಾರದವರು ಹಿಂದಿಟ್ಟು ಈ ಉದ್ಯಮವನ್ನು ಕೈಗೊಳ್ಳುವ ಆಲೋಚನೆಯಲ್ಲಿರುವರೆಂದು ತಿಳಿದುಬಂದಿದೆ [illegible]

[illegible] ಕಾಂಗ್ರೆಸ್ ವಸ್ತುಪ್ರದರ್ಶನದ ಟಿಕೆಟ್ಟು ಮಾರಾಟದಿಂದ ಐವತ್ತು ಸಾವಿರ ರೂ ಉಳಿತಾಯವಾಗುವ ನಿರೀಕ್ಷಣೆ ಇದೆಯೆಂದೂ ಮೈಸೂರು ಕಾಂಗ್ರೆಸ್ ಕೇಂದ್ರ ಭವನವನ್ನು ಕಟ್ಟಲು ಈ ಹಣವನ್ನು ವಿನಿಯೋಗಿಸಲಾಗುವುದೆಂದೂ ತಿಳಿದು ಬಂದಿದೆ. ಪ್ರದರ್ಶನವು ಮುಂದೆಯೂ ಶಾಶ್ವತವಾಗಿ ನಡೆಯಲು ಅಧಿಕಾರಿ ಮತ್ತು ಖಾಸಗಿ ಜನರ ಖಾಯಂ ಸಮಿತಿಯೊಂದನ್ನು ನೇಮಿಸುವುದಾಗಿಯೂ ಹೇಳಲಾಗಿದೆ.

ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿ ಶ್ರೀ ಪಿ ಎಸ್. ಕೆ. ನಾಯಿಡೂರವರೇ ದಿವಾನರ ಪ್ರೈವೇಟ್ ಸೆಕ್ರೆಟರಿ ಕೆಲಸವನ್ನು ನೋಡಿಕೊಳ್ಳುವಂತೆ ಆಜ್ಞೆಯಾಗಿದೆ.

ತಿರುವಾಂಕೂರು ತಮಿಳರ ಸತ್ಯಾಗ್ರಹ

ತಿರುವಾಂಕೂರು ಸಂಸ್ಥಾನದಲ್ಲಿರುವ ತಮಿಳು ಭಾಗಗಳು ಭಾರತ ಡೊಮಿನಿಯನ್ನಿಗೆ ಸೇರಿಸಿ [illegible] ಒತ್ತಾಯಿಸಿ [illegible] ಕಾಂಗ್ರೆಸ್ಸಿನವರು [illegible] ತಾ॥ [illegible] ಸತ್ಯಾಗ್ರಹ ಹೂಡುವರು.

[illegible]ಸಿನ ಪ್ರಾಂತೀಯ ಸಂಸ್ಥೆಗೆ ಚುನಾವಣೆ ಇಲ್ಲ

[illegible]

ಎಂ. ಶೇಷಾದ್ರಿಯವರು ಹೈದರಾಬಾದು ಸಚಿವರು

ಮೈಸೂರು ನಿವೃತ್ತ ಸಚಿವರೂ ಹಾಲಿ ಹೈದರಾಬಾದು ಚುನಾವಣಾಧಿಕಾರಿಗಳೂ ಆಗಿರುವ ಶ್ರೀ ಎಂ. ಶೇಷಾದ್ರಿಯವರು ಈ ತಿಂಗಳು ೭ನೇ ತಾ॥ ನಿಂದ ಹೈದರಾಬಾದಿನ ರೆವಿನ್ಯೂ ಸಚಿವರಾಗಿ ಅಧಿಕಾರ ವಹಿಸಿಕೊಳ್ಳುವರೆಂದು ತಿಳಿದುಬಂದಿದೆ

ಅಂಚೆಯವರ ಮುಷ್ಕರ

ಮಾರ್ಚ್ ೯ ನೇ ತಾ॥ ನಿಂದ ಅಂಚೆ ಮತ್ತು ತಂತಿ ಇಲಾಖೆಯ ನೌಕರರು ಮುಷ್ಕರ ಹೂಡುವುದಾಗಿ ಸರ್ಕಾರಕ್ಕೆ ತಿಳುವಳಿಕೆ ಕೊಟ್ಟಿದ್ದಾರೆ. ಸಂಬಳ ಮತ್ತು ಭತ್ಯವನ್ನು ಹೆಚ್ಚಿಸಬೇಕೆಂದು ಅವರು ಕೇಳಿದ್ದಾರೆ. ಅವರ ಸಂಘದಲ್ಲಿ ೪೦ ಸಾವಿರ ಸದಸ್ಯರಿರುವರೆಂದು ಹೇಳಲಾಗಿದೆ

ತ್ರಿವಳಿ ಮಕ್ಕಳು

ಸೇಲಂ ತಾ॥ ವಲಸಯೂರಿನ ಬೋಯರ್ ಜಾತಿಯ ಸ್ತ್ರೀಯೊಬ್ಬಳು ಮೂರು ಗಂಡು ಮಕ್ಕಳನ್ನು ಏಕ ಕಾಲದಲ್ಲಿ ಹಡೆದಿದ್ದಾಳೆ. ಎಲ್ಲರೂ ಆರೋಗ್ಯವಾಗಿದ್ದಾರೆ.

ನಾಟಕ ರಂಗಗಳ ಮೂಲಕ ಮದ್ಯಪಾನ ನಿಷೇಧದ ಶಿಕ್ಷಣ

ಮದ್ರಾಸು ಅಧಿಕಾರಿಗಳು ಪ್ರದೇಶಗಳಲ್ಲಿ ನಾಟಕ ರಂಗಗಳ ಮೂಲಕ ಮದ್ಯಪಾನ ನಿಷೇಧದ ಶಿಕ್ಷಣದ ಪ್ರಚಾರವನ್ನು ಏರ್ಪಾಡು ಮಾಡಲು ಮದ್ರಾಸು ಸರಕಾರವು ಆಲೋಚಿಸಿದೆ

ಹಡಗುಗಳ ಡಿಕ್ಕಿಯಿಂದ ಸಾವಿರ ಜನರ ಮರಣ

ಕಳೆದ ಗುರುವಾರ ಚೀಣದ ಯಾಂಗ್‌ಟ್ಸೆ ನದೀ ಮುಖದಲ್ಲಿ ಎರಡು ಹಡಗುಗಳಿಗೆ ಡಿಕ್ಕಿ ಹೊಡೆದು ಸಾವಿರ ಜನರು ಮೃತಪಟ್ಟಿರುವರೆಂದು ತಿಳಿದುಬಂದಿದೆ ೩೩ ಜನರನ್ನು ಮಾತ್ರ ರಕ್ಷಿಸಲಾಗಿದೆ. ೩೩೪ ಜನರಿಗೆ ಗೊತ್ತಾಗಿದ್ದ ರಹದಾರಿ ಟಿಕೆಟ್ಟಿಲ್ಲವೆ ಇನ್ನೂ ೫೦೦ ಜನರು ಹೆಚ್ಚಾಗಿ ಹತ್ತಿದ್ದರೆಂದೂ, ಕೇವಲ ಅರ್ಧ ಘಂಟೆಯಲ್ಲಿ ಎರಡು ಹಡಗುಗಳೂ ಮುಳುಗಿದುವೆಂದೂ ಹೇಳಲಾಗಿದೆ.

ಡಾ|| ಪಿ. ಸುಬ್ಬರಾಯನ್ ಪಾಕಿಸ್ತಾನದ ಹೈ ಕಮೀಷನರ್

ಬಾಬು ಶ್ರೀ ಪ್ರಕಾಶರ ಸ್ಥಾನದಲ್ಲಿ ಮದರಾಸಿನ ಮಾಜಿ ಮಂತ್ರಿ ಡಾ|| ಸುಬ್ಬರಾಯನ್‌ರವರನ್ನು ಪಾಕಿಸ್ತಾನದ ಹೈ ಕಮೀಷನರನ್ನಾಗಿ ನೇಮಿಸಲಾಗುವುದೆಂದು ತಿಳಿದು ಬಂದಿದೆ.

ಹಿಟ್ಲೇಲು-ಭಾರತ ನಾಟಕ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯ ಮಠದ ಶ್ರೀ ಪ್ರಕಾಶಾನಂದ ಸ್ವಾಮಿಗಳ [illegible]

[illegible]

ಸಿಂಧ್ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚನೆ

ಪಾಕಿಸ್ತಾನಕ್ಕೆ ಸೇರಿದ ಸಿಂಧ್ ಪ್ರಾಂತದ ಮಂತ್ರಿಮಂಡಲದ ಮೇಲೆ ಆ ಪ್ರಾಂತದ ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅವಿಶ್ವಾಸ ನಿರ್ಣಯವು ಅಂಗೀಕಾರವಾಯಿತು. ಮಂತ್ರಿಮಂಡಲಕ್ಕೆ ಪಾರ್ಟಿಯ ಸದಸ್ಯರ್‍ಯಾರೂ ಬೆಂಬಲವನ್ನು ಕೊಡಕೂಡದೆಂದು ತಿಳುವಳಿಕೆ ಕೊಡಲಾಯಿತು.

೧॥ ಲಕ್ಷ ರೂ. ಗಳ ದಾನ

ಲಕ್ನೋ ವಿಶ್ವ ವಿದ್ಯಾನಿಲಯದ ರಜತ ಮಹೋತ್ಸವದ ಸಂದರ್ಭದಲ್ಲಿ ಸಾಮಾಜಿಕ ಶಾಸ್ತ್ರ ಮತ್ತು ಮಾನವ ಶಾಸ್ತ್ರಗಳನ್ನು ಬೋಧಿಸುವ ಶಾಲೆಯೊಂದನ್ನು ಪ್ರಾರಂಭಿಸಲು ಕಾನ್ಪುರದ ಸರ್ ಪದ್ಮಪತ ಸಿಂಘಾನಿಯಾರವರು ೧ ಲಕ್ಷ ರೂ ಗಳನ್ನು ದಾನ ಮಾಡಿದ್ದಾರೆ.

೧೦ ಸಾವಿರ ರಜಕಾರರ ಖೈದು

ಕೇಂದ್ರ ಪಾರ್ಲಿಮೆಂಟಿನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಸರ್ದಾರ್ ಪಟೇಲರು ಹೈದರಾಬಾದಿನಲ್ಲಿ ಹತ್ತು ಸಾವಿರದ ಮುನ್ನೂರು ಮಂದಿ ರಜಕಾರರನ್ನು ಸೆರೆ ಹಾಕಲಾಗಿದೆಯೆಂದು ತಿಳಿಸಿದರು.

ಮಧ್ವ ನವಮಿ ಸಮಾರಂಭ

ಮದ್ರಾಸಿನ ಶ್ರೀ ಮಧ್ವ ಸಂಘದವರು ಕಳೆದ ೩೧ ನೇ ತಾರೀಖಿನಿಂದ ಒಂದನೇ ತಾರೀಖಿನವರೆಗೆ ಗಂಗಾಧರೇಶ್ವರ ಗುಡಿ ಬೀದಿಯಲ್ಲಿರುವ ದಾಸ ಪ್ರಕಾಶದಲ್ಲಿ ಮಧ್ವನವಮಿಯ ಸಮಾರಂಭವನ್ನು ಆಚರಿಸಲಿರುವರು. ಮೈಸೂರು ಆಸ್ಥಾನ ವಿದ್ವಾನ್ ವೇ॥ ಕೋಳಿವಾಡ ನರಸಿಂಹಾಚಾರ್ ಮತ್ತು ವಿದ್ವಾನ್ ಹೆಚ್. ಎಸ್. ರಾಘವೇಂದ್ರಾಚಾರ್ ಇವರುಗಳನ್ನು ವಿಶೇಷ ಉಪನ್ಯಾಸದ ಮೇಲೆ ಬರಮಾಡಿಕೊಂಡು ಅವರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ.

ವಿವಾಹ ಮಹೋತ್ಸವ

ಮದರಾಸು ಅಡ್ವೊಕೇಟರಾದ ಶ್ರೀ ಎ. ಎನ್. ರಂಗಸ್ವಾಮಿ ಅಯ್ಯಂಗಾರರು ತಮ್ಮ ಕುಮಾರಿ ಸೌ॥ ಪದ್ಮಜಾರವರನ್ನು ಮದ್ರಾಸಿನ ಶ್ರೀ ಎಸ್. ಕೃಷ್ಣಮಾಚಾರಿಯವರ [illegible] ಸಂತಾನಂರವರಿಗೆ ಕೊಟ್ಟು [illegible] ವಿವಾಹವನ್ನು ನೆರವೇರಿಸಿದರು.

[illegible]

ಅಗ್ಗದ ಜವಳಿಗಾಗಿ

ಗುರುದೇವಾ ಹಾಲ್

[illegible]

ಬೆಂಗಳೂರು ಜವಳಿ ಅಂಗಡಿ

[illegible]

Edited printed and published by [illegible] at [illegible] Sadhvi [illegible] Mysore

ನದಿಯಲ್ಲಿ ಎಮ್ಮೆ ತೊಳೆದ ಕಾರಣದಿಂದ ಹೊಡೆದಾಟ

ಕಲ್ಕತ್ತದ ದಕ್ಷಿಣ ಭಾಗದಲ್ಲಿ ಹರಿಯುವ ಗಂಗೆಯಲ್ಲಿ ಹಲವರು ಹೊಸ್ತೆ ಸ್ನಾನ ಮಾಡುತ್ತಿರುವ [illegible] ವಸ ಕಾಯುವವರು ಎಮ್ಮೆಗಳ ಮೈ ತೊಳೆಯಲು ಬಂದರು. ಹಾಗೆ ಎಮ್ಮೆಗಳನ್ನು ತೊಳೆಯಬಾರದೆಂದು [illegible] ಸ್ನಾನ ಮಾಡುತ್ತಿದ್ದವರು ಪ್ರತಿಭಟಿಸಿದರು. ನಂತರ ಎರಡು ಗುಂಪಿಗೂ ಜಗಳವಾಗಿ ಕಲ್ಲುಗಳಿಂದ [illegible] ಹೊಡೆದಾಡಿದರು. ಇಬ್ಬರನ್ನು ಆಸ್ಪತ್ರೆಗೆ ಹಾಕಲಾಯಿತು. [illegible]

೩ ಲಕ್ಷ ರೂ. ಖೋಟಾ ನೋಟುಗಳ ಮೋಸ

ಮದ್ರಾಸು ಆಧಿಪತ್ಯದ ತಿರುನಲ್ವೇಲಿ, ಮದುರಾ, ರಾಮ್ನಾಡ್, ಸೇಲಂ, ತಿರುವಾಂಕೂರು, ಮಲಬಾರುಗಳಲ್ಲಿ ವಿಲಿಯಂಸ್ ಮತ್ತು ಇತರ ಮೂವತ್ತು ಜನರು ೩ ಲಕ್ಷ ಖೋಟಾ ನೋಟುಗಳನ್ನು ತಯಾರಿಸಿ ಅರ್ಧ ಬೆಲೆಗೆ ಅವುಗಳನ್ನು ಜನರಿಗೆ ಮಾರುತ್ತಿದ್ದುದು ಪತ್ತೆಯಾಗಿದೆ. ಈ ಕಾರ್ಯದಲ್ಲಿ ಅವರಿಗೆ ಹಲವು ಪೋಲೀಸ್ ನೌಕರರೂ ಸಹಾಯಕರಾಗಿದ್ದರೆಂದು ಹೇಳಲಾಗಿದೆ. ೫, ೧೦, ೬೦, ಸಾವಿರ ರೂ. ಕಿಮ್ಮತ್ತಿಲ್ಲದ ನೋಟುಗಳನ್ನು ಇವರು ತಯಾರ್ಮಾಡಿದ್ದರೆಂದೂ ಹೇಳಲಾಗಿದೆ.

೬೦ ಲಕ್ಷ ಎಕರೆ ಜಮೀನಿನ ಸಾಗುವಳಿ

ದೇಶದ ಹೊರಗಿನಿಂದ ಆಹಾರ ಧಾನ್ಯಗಳನ್ನು ತರಿಸುವುದನ್ನು ತಪ್ಪಿಸಿ ಇಲ್ಲಿನ ಆಹಾರದ ಕೊರತೆಯನ್ನು ನಿವಾರಿಸಲು ಭಾರತ ಸರಕಾರದ ಮಂತ್ರಿಗಳ ಸಭೆಯು ಜರುಗಿತು. ಹಲವು ಪ್ರಾಂತಗಳು ಈಗಾಗಲೇ ೬೦ ಲಕ್ಷ ಎಕರೆ ಪಾಳು ಜಮೀನುಗಳನ್ನು ಶೀಘ್ರದಲ್ಲಿಯೇ ವ್ಯವಸಾಯಕ್ಕೆ ಯೋಗ್ಯವಾದುದನ್ನಾಗಿ ಮಾಡುವ ಸಲುವಾಗಿ ಯೋಜನೆ ಸಿದ್ಧಗೊಳಿಸಿರುವುದನ್ನು ಒಪ್ಪಲಾಯಿತು. ಯಂತ್ರಗಳಿಂದ ಉಳಲು ಅವಕಾಶವಿರುವ ಪ್ರದೇಶಗಳಲ್ಲಿ ಇವುಗಳ ಶೀಘ್ರವಾಗಿ ಹೊಸ ಪ್ರಯೋಗವು ನಡೆಯುವುದು.

ಶ್ರೀ ಗಣೇಶಾ ಟಾಕೀಸ್

4-2-49 ರಿಂದ ಪ್ರತಿ ದಿನ ೩ ಆಟಗಳು

[illegible]

ಕನ್ನಿಕಾ

(ತಮಿಳು)

ನಾಯಿಕೆ ಎಂ. ಎಸ್. ಸರೋಜಿನಿ, ಟಿ. ಆರ್. [illegible] ಎಸ್. ಕೃಷ್ಣ, ಟಿ. ಎ. ಮಧುರಂ

Morning Shows on 4th 5th, 6th at 10-15 A.M.

Call of Tarzan

[illegible] ಕಾಲದ ಪ್ರದರ್ಶನಗಳು

[illegible]

ಮೈಸೂರು ಸಿಟಿ ಮುನಿಸಿಪಾಲಿಟಿ

ಸಿಡುಬು ರೋಗ

[illegible] ರೋಗದ ಪ್ರಾಬಲ್ಯವು ಈ ಜಿಲ್ಲೆಗೆ ವಿಶೇಷವಾಗಿ ಹರಡುವ [illegible] ಕಂಡು ಬಂದಿದೆ. ಈ ಪಟ್ಟಣದ ಕೆಲವು ಭಾಗಗಳಲ್ಲಿ ಸೋಲ್ಕಂಡ ರೋಗವು ಪ್ರಾಪ್ತವಾಗಿರುತ್ತದೆ. ಈ ರೋಗವು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಅಂಟು ಜಾಡ್ಯವಾಗಿದೆ. ಈ ಸಿಡುಬು ರೋಗವು ಎಲ್ಲಾ ವಯಸ್ಸಿನವರಿಗೂ ಬರುವುದಾದರೂ ಎಳೆಯ ಮಕ್ಕಳಲ್ಲಿ ಇದರ ಹಾವಳಿಯು ಹೆಚ್ಚು. ಈ ರೋಗ ತಗುಲಿದಲ್ಲಿ ಮುಖ ವಿಕಾರವಾಗುವುದೂ, ಕಣ್ಣು, ಕೈ, ಕಾಲು ಮುಂತಾದ ಅಂಗಗಳು ಹೋಗುವ ಸಂಭವವೂ ಇದೆ. ಮೇಲಾಗಿ ಅನೇಕ ವೇಳೆ ಪ್ರಾಣಾಪಾಯವೂ ಉಂಟು. ಈ ಜಾಡ್ಯವನ್ನು ನಿವಾರಣೆ ಮಾಡುವುದು ಸುಲಭ. ಮುಂಜಾಗ್ರತೆಯಿಂದ ದೇವೀ ಹಾಕಿಸಿಕೊಳ್ಳುವುದರಿಂದಲೇ ಇದನ್ನು ಸುಲಭವಾಗಿ ನಿವಾರಿಸಬಹುದು. ಆಗ ತಾನೇ ಜನನವಾದ ಶಿಶುಗಳ ಮೊದಲುಗೊಂಡು ಹಣ್ಣು ಮುದುಕರವರೆವಿಗೂ ದೇವೀ ಹಾಕಿಸಿಕೊಳ್ಳುವುದು ಒಳ್ಳೆಯದು. ಈ ರೋಗ ಪ್ರಾಪ್ತವಾದಾಗ ಎಲ್ಲಾ ವಯಸ್ಸಿನವರೂ ಮೊದಲೇ ದೇವೀ ಹಾಕಿಸಿಕೊಂಡಿದ್ದರೂ ಕೂಡಾ ಪುನಃ ದೇವೀ ಹಾಕಿಸುವುದು ಅತ್ಯಾವಶ್ಯಕ. ಒಂದು ಶತಮಾನದಿಂದಲೂ ದೇವಿ ಹಾಕಿಸುವುದರಿಂದ ಉಂಟಾಗುವ ಪ್ರಯೋಜನವು ಇಡೀ ಪ್ರಪಂಚದ ಎಲ್ಲಾ ಜನಾಂಗದ ಅನುಭವಕ್ಕೆ ಒಂದು ವಿಷಯವಾಗಿರುತ್ತದೆ. ರೋಗವು ಆರಂಭವಾದ [illegible] ನಿವಾರಣೆ ಕ್ರಮವನ್ನು ಕೈಕೊಳ್ಳಲು [illegible]

ಅಂಟು ಜಾಡ್ಯ ತಲೆದೋರಿದ ಒಡನೆಯೇ ಮನೆಯ ಯಜಮಾನರು ನಮ್ಮ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನವನ್ನು ಕೊಡಬೇಕೆಂಬ ಬಗ್ಗೆ ೧೯೦೬ ಸಾವಿರದೊಂಭೈನೂರ ಆರನೇ ಇಸ್ವಿ ಮೈಸೂರು ಮುನಿಸಿಪಲ್ ೬ನೇ ರೆಗ್ಯುಲೇಷನ್ ೪೬,(೧) ನೇ ಸೆಕ್ಷನ್ ಮೇರೆ ತಯಾರಿಸಿದ ಬೈಲಾಗಳ ಸೆಕೆಂಡ್ ಕಾಲಮ್ಮಿನಲ್ಲಿ ನಿಬಂಧಿಸಲ್ಪಟ್ಟಿದೆ. ಹೀಗೆ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನ ಕೊಡದಿದ್ದಲ್ಲಿ ೫೦ ರೂಪಾಯಿಗಳವರೆಗೂ ಜುಲ್ಮಾನೆ ವಿಧಿಸಲು ಅವಕಾಶವಿದೆ. ಆದ್ದರಿಂದ ಈ ಜಾಡ್ಯ ಸಂಭವಿಸಿದ ಮನೆಯ ಯಜಮಾನನು ಕೂಡಲೇ ಸಂಬಂಧಪಟ್ಟ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನವನ್ನು ದಯವಿಟ್ಟು ಕೊಡಬೇಕಾಗಿ ಎಚ್ಚರಿಸಿದೆ. ಹೀಗೆ ಮಾಡುವುದರಿಂದ ರೋಗದ ಹಾವಳಿಯನ್ನು ಜಾಗ್ರತೆಯಾಗಿ ತಡೆದು ಪ್ರಜಾ ಸೌಖ್ಯವನ್ನು ಭದ್ರಪಡಿಸಲು ಅನುಕೂಲವಾಗುತ್ತದೆ.

ಮುನಿಸಿಪಲ್ ಆರೋಗ್ಯ ಶಾಖೆಯ ಹೆಲ್ತ್ ಇನ್ಸ್‌ಪೆಕ್ಟರುಗಳೂ ಮತ್ತು ವ್ಯಾಕ್ಸಿನೇಟರುಗಳೂ ಈಗಾಗಲೇ ದೇವಿ ಹಾಕುವ ಕೆಲಸವನ್ನು ಪ್ರತಿ ಮೊಹಲ್ಲಾದಲ್ಲಿಯೂ [illegible] ಪರಿಶೀಲಿಸುತ್ತಾರೆ. ಅಲ್ಲದೆ [illegible] ಮುನಿಸಿಪಲ್ ಆಸ್ಪತ್ರೆ [illegible] ಮಾಡಲಾಗಿರುತ್ತವೆ [illegible]

ಶ್ರೀ ಗಾಯತ್ರೀ ಟಾ[illegible]

ಪ್ರತಿ ದಿನ 3 ಪ್ರದರ್ಶನಗಳ[illegible]

ತಾ॥ 1-2-49 ರಿಂದ 3 ದಿನ[illegible]

20th's Century's Grea[illegible] Comedy Hit

ALI BABA GOES T[illegible] TOWN

(ಅಲಿ ಬಾಬ ಗೋಸ್ ಟು

ಪಾತ್ರ:— ಎಡ್ಡಿ ಕ್ಯಾಂಟರ್[illegible]

—:Next Change:—

20th's BLACK SWA[illegible]

Morning Shows at 10[illegible]

From 5-2-49 for 2 da[illegible]

Warner's

MILDRED PIERC[illegible]

With:-JOAN CRAWFORD

ಮೈಸೂರು ಸಿಟಿ ಮುನಿಸಿಪಲ್ ಕೌ[illegible] ಕಮಿಷನರವರ ಆಫೀಸಿನಿಂದ:

ನೋಟೀಸ[illegible]

ಮೈಸೂರು ಸಿಟಿ ಮುನಿಸಿಪಾಲಿ[illegible] ಆಕ್ಟಿನ ೬೧ನೇ ಸೆಕ್ಷನ್ ಪ್ರಕಾರ ಸಿಟಿ [illegible] ಕೂರು ದೇವರಾಜ, ಚಾಮರಾಜ,[illegible] ಮಂಡಿ ಮತ್ತು ನಜರ್‌ಬಾದ್ ಮೊ[illegible] ವಾಸಸ್ಥರಿಗೆ ಈ ಮೂಲಕ ತಿಳಿಯ[illegible] ವುದೇನೆಂದರೆ:—

ಸಿಟಿ ಮಜ್ಕೂರಿನಲ್ಲಿ ೫೦ ಗಳ[illegible] ನೇ ಸಾಲಿಗೆ ನಡೆದಿರತಕ್ಕ ಮೊಹಲ್ಲಾ[illegible] ಹಲ್ಲಾಗಳ ಬಾಬ್ತು ಜನರಲ್ [illegible] ಅಸೆಸ್‌ಮೆಂಟು ರಿಜಿಸ್ಟರುಗಳನ್ನು [illegible] ರ್ಮಾಡಿಸಿ ಮುನಿಸಿಪಲ್ ಆಫೀಸಿನಲ್ಲಿ [illegible] ಸಿರುತ್ತೆ. ಇಷ್ಟ ಉಳ್ಳವರು ಅಂದರೆ [illegible] ಯ ಮಾಲೀಕರಾಗಲೀ ಅಥವಾ [illegible] ರಾಗಲೀ ಅವರ ಕಡೆಯ ಏಜಂಟರು[illegible] ಗಲೀ ಆಫೀಸು ಇರತಕ್ಕ ದಿವಸಗಳ[illegible] ಧ್ಯಾನ್ಹ ೩ ಗಂಟೆ ಆಗಾಯ್ತು ೫ ಗಂ[illegible] ರೆವಿಗೆ ಬಂದು ನೋಡಿಕೊಂಡು ಹೋ[illegible] ಹುದು. ಅಲ್ಲದೆ ರಿಜಿಸ್ಟರಿನಿಂದ ತಮಗೆ[illegible] ಕಾದ ಎಕ್ಸ್‌ಟ್ರಾಕ್ಟನ್ನು ಫೀಜು ಇಲ್ಲ[illegible] ವೇ ಬರೆದುಕೊಳ್ಳಬಹುದು. ಹಾ[illegible] ಖಲ್ಮಾದಿರತಕ್ಕ ಕಂದಾಯದ ವಿಷ[illegible] ತಕರಾರು ಉಳ್ಳವರು ನೋಟೀಸು ಕೊ[illegible] ಒಂದು ತಿಂಗಳ ಒಳಗಾಗಿ ತಮ್ಮ [illegible] ರನ್ನು ಅರ್ಜಿಯ ಮೂಲ್ಕ ಈ ಆಫೀ[illegible] ಗುಜರಾಯಿಸಿಕೊಳ್ಳಬಹುದು. ವಾ[illegible] ಮೀರಿದ ಅರ್ಜಿಗಳಿಗೆ ಸಿಗಾ ಕೊಡ[illegible] ವುದಿಲ್ಲ, ತಿಳಿಯುವುದು.

(ರುಜು) ಸಿ. ನರಸಿಂಹಮೂ[illegible]

ಕಮೀಷನರ್, ಸಿಟಿ ಮುನಿಸಿಪ[illegible] ಕೌನ್ಸಿಲ್, ಮೈಸೂರು.

ಮುನಿಸಿಪಲ್ ಹೆಲ್ತ್ ಆಫೀಸಿನಲ್ಲಿಯೂ [illegible] ಪ್ರತಿ ದಿನವೂ ಬೆಳಗ್ಗೆ ಮತ್ತು ಸಾ[illegible] ಕಾಲಗಳಲ್ಲಿ ದೇವೀ ಹಾಕಲು ಏರ್[illegible] ಮಾಡಲಾಗಿದೆ. ದೇವೀ ಹಾಕಿಸು[illegible] ಲದಲ್ಲಿ ಪ್ರಜಾ ಹಿತೈಷಿಗಳೂ [illegible] ಪ್ರಮುಖರೂ ಮುಂದಾಳುಗಳಾ[illegible] ಟು ಮುನಿಸಿಪಲ್ ಅಧಿಕಾರಿಗ[illegible] ಪ್ರೀತಿ ಪೂರ್ವಕವಾಗಿ ಸಹಕರಿಸಿ [illegible] ಗವನ್ನು ಶೀಘ್ರವಾಗಿ ತಡೆಗಟ್ಟಿ [illegible] ಗ್ಯಭಾಗ್ಯವನ್ನು ಕಾಪಾಡಲು [illegible] ಬೇಕೆಂದು ಪ್ರಾರ್ಥಿಸಿದೆ.

(ಸಹಿ) ಎಸ್. ಆರ್. ಬಾಂಬೆ[illegible]

ಹೆಲ್ತ್ ಆಫೀಸರ್, ಮೈಸೂರು [illegible]

ರೋ॥ ನಂ. 792 ॥ವಂದೇಮಾತರಂ॥ ಇಂದಿನ ಪತ್ರಿಕೆ ... ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೩-೩-೧೯೪೯ [ಸಂಚಿಕೆ ೧೭೩

ಆಹಾರದ ಹತೋಟಿ ವ್ಯವಸ್ಥೆ

ಮೈಸೂರು ೩

ಕೆಲವು ದಿನಗಳ ಹಿಂದೆ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಗರದ ರೇಷನ್ ಕಾರ್ಡು ಹೋಲ್ಡರುಗಳ ಸಭೆ ನಡೆದು, ಸರಕಾರಕ್ಕೆ ಕಳುಹಿಸಿಕೊಟ್ಟ ನಿರ್ಣಯಗಳ ಬಗ್ಗೆ ಆಹಾರ ಸಚಿವರು ಉತ್ತರವಿತ್ತು ಎ ಮತ್ತು, ಬಿ ತರಗತಿಗಳ ಬೇಧವನ್ನು ವಜಾಮಾಡುವುದು ಕಷ್ಟವಾಗುವುದೆಂದೂ, ಇತರ ಪ್ರಾಂತಗಳಲ್ಲಿ ಜನರು ಸೇವಿಸುವ ಆಹಾರಗಳಿಗೆ ತಕ್ಕಂತೆ ಬೇಧವನ್ನು ಕಲ್ಪಿಸಲಾಗಿದೆಯೆಂದೂ, ಇದರಲ್ಲಿ ಪಕ್ಷಪಾತವೇನೂ ಇಲ್ಲವೆಂದೂ ತಿಳಿಸಿದ್ದಾರೆ. ...ಲ್ಲದೆ ಅಲ್ಲಿ ಅಕ್ಕಿ ಪಡಿತರ ಮತ್ತು ಮಿಶ್ರಪಡಿತರ ಎಂಬ ಬೇಧವು ಸಹ ಇರುತ್ತದೆ ಕೆಲವು ತಿಂಗಳುಗಳಿಂದ ಈಚೆಗೆ "ಬಿ" ತರಗತಿಯವರಿಗೆ ಸ್ವಲ್ಪ ಹೆಚ್ಚು ಅಕ್ಕಿಯನ್ನು ಕೊಡಲಾಗುತ್ತಿದೆ, ಪಡಿತರವನ್ನು ಹೆಚ್ಚಿಸುವುದು. ಮತ್ತು ಕಡಿಮೆಮಾಡುವುದು ಧಾನ್ಯ ...ದಗುವುದರ ಮೇಲೆ ನಿಂತಿದೆ. ಹೊಸದಾಗಿ ಹೋಟಲುಗಳನ್ನು ಪ್ರಾರಂಭಿಸ ಬಾರದು. ಹತೋಟಿ ಆಜ್ಞೆಯನ್ನು ಹೊರಡಿಸಲಾಗಿದೆ ಉಳಿದ ಅಂಶಗಳನ್ನು ಕಾಲಕ್ಕೆ ಸಹಾನುಭೂತಿಯಿಂದ ಪರಿಶೀಲಿಸಲಾಗುತ್ತದೆ-ಎಂದು ಅವರು ತಿಳಿಸಿರುವರು

ಹೋಟೆಲ್ ಕೆಲಸಗಾರರಿಗೆ ಸಹಾನುಭೂತಿ

ಬೊಂಬಾಯಿ ಆನಂದಭವನದಿಂದ ವಜಾ ಮಾಡಲ್ಪಟ್ಟಿರುವ ಕೆಲಸಗಾರರಿಗೆ ಸಹಾನುಭೂತಿತೋರಿ, ಅವರನ್ನು ಕೂಡಲೇ ...ಸದ ಮೇಲೆ ಸೇರಿಸಿಕೊಳ್ಳಬೇಕೆಂದು ಒತ್ತಾಯಪಡಿಸಲು ನೆನ್ನೆ ರಾತ್ರಿ ನೂರಾರು ಹೋಟಲು ಕೆಲಸಗಾರರು ನಗರದ ಮುಖ್ಯ ಬೀದಿಗಳಲ್ಲಿ ಟಾರ್ಚ್‌ಲೈಟ್ ಪರೇಡ್ ಮಾಡಿ ಮೆರವಣಿಗೆ ನಡೆಸಿದರು.

ದಿಕರ್ನಾಟಕರ ಸಮ್ಮೇಳನ

ಟಿ ನರಸೀಪುರ ೩

ಟಿ ನರಸೀಪುರದ ತಾಲ್ಲೂಕು ತಲಕಾಡಿನಲ್ಲಿ ಕಳೆದ ಭಾನುವಾರ ಮೈಸೂರು ಜಿಲ್ಲಾ ...ವೃದ್ಧಿ ಅಧಿಕಾರಿಗಳಾದ ಶ್ರೀ ಜಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ದಿಕರ್ನಾಟಕರ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಶ್ರೀ ಎಸ್. ಎಂ. ಸಿದ್ದಯ್ಯನವರು ಮಾತನಾಡಿ ಮಹಾತ್ಮ ಗಾಂಧಿಯವರು ಹರಿಜನರಿಗೆ ಸಲ್ಲಿಸಿದ ಸೇವೆಯ ವಿಷಯವನ್ನು ತಿಳಿಸಿ ಪ್ರತಿಯೊಬ್ಬ ಹರಿಜನನೂ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮವನ್ನು ಕೈಲಾದ ಮಟ್ಟಿಗೂ ಕಾರ್ಯಗತ ಮಾಡಬೇಕೆಂದೂ ಅದರಿಂದ ಗಾಂಧೀಜಿಯವರ ಆತ್ಮಕ್ಕೆ ಶಾಂತಿಯಾಗುವುದೆಂದೂ ತಿಳಿಸಿದರು. ಮತ್ತು ಹರಿಜನರ ...ಯ ವಿಷಯದಲ್ಲಿ ಸವರ್ಣೀಯರೂ ಸರ್ಕಾರಿ ಅಧಿಕಾರಿಗಳೂ ಸೇವಾ ದೃಷ್ಟಿಯಿಂದ ಕೆಲಸ ಮಾಡಬೇಕೆಂದೂ ಅರಿಕೆ ಮಾಡಿದರು. ಶ್ರೀ ಎಸ್. ರಾಚಯ್ಯನವರೂ, ಕೆ ಎಂ ...ಜಯ್ಯನವರು ಮಾತನಾಡಿದರು. ಅಧ್ಯಕ್ಷರು ಹರಿಜನರ ಏಳಿಗೆ ಮತ್ತು ...ಜೆ ಈ ವಿಷಯಗಳ ಮೇಲೆ ತಾವೇ ...ರುವ ಲಾವಣಿಗಳನ್ನು ಸೊಗಸಾಗಿ ...ದರು. ಹೊಸದಾಗಿ ಮನೆಗಳ ಗೋಡೆ...ನ್ನು ಹಾಕಿಕೊಳ್ಳುವ ಎಲ್ಲಾ ಹರಿಜನರಿಗೆ ...ಹೆಂಚು, ಗಳುಗಳನ್ನು ಸರ್ಕಾರದಿಂದ ...ಪತ್ತಾಗಿ ಕೊಡಿಸಿ ಕೊಡುತ್ತೇವೆಂದು ...ವಚನ ಕೊಟ್ಟರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಇಂಜಂಕ್ಷನ್ ಆಜ್ಞೆ ಕೊಡಲು ನಿರಾಕರಣೆ

ಮೈಸೂರು ೩

ಬೆಂಗಳೂರಿನ ... ಕಲ ... ಫ್ಯಾಕ್ಟರಿ ಕಾರ್ಖಾನೆ ... ಕಳೆದ ಐದಾರು ತಿಂಗಳಿನಿಂದ ಮುಷ್ಕರ ಹೂಡಿರುವುದು ಸರಿಯಷ್ಟೆ. ಈ ಸಂಬಂಧವಾಗಿ ಸರಕಾರದವರು ಕೆಲಸಗಾರರ ವಿರುದ್ಧ ಕಾನೂನು ... ತೆಗೆದುಕೊಂಡು ... ಕಾರ್ಖಾನೆಯವರು ... ಹೊಸಬರನ್ನು ಸೇರಿಸಿಕೊಂಡು ಕೆಲಸ ಮಾಡಿಸುತ್ತಿರುವುದನ್ನು ನಿಲ್ಲಿಸಬೇಕೆಂದು ಮುಷ್ಕರ ಹೂಡಿರುವವರ ಪರವಾಗಿ ... ಮುನ್ಸಿಫ್ ಕೋರ್ಟಿನಲ್ಲಿ ತಾತ್ಕಾಲಿಕ ಇಂಜಕ್ಷನ್ ಕೊಡಬೇಕೆಂದು ಕೇಳಲಾಗಿತ್ತು. ಮುನ್ಸಿಫರು ಈ ದಿನ ತೀರ್ಪು ಕೊಟ್ಟು ಇಂಜಂಕ್ಷನ್ ಆಜ್ಞೆಯನ್ನು ಕೊಡಲು ನಿರಾಕರಿಸಿದ್ದಾರೆ ಈ ತೀರ್ಪಿನ ಮೇಲೆ ಜಿಲ್ಲಾ ನ್ಯಾಯಾಧೀಶರಲ್ಲಿ ಅಪೀಲು ದಾಖಲಾಗಿದೆ.

ಜಿಲ್ಲಾಧಿಕಾರಿಗಳ ಮನೆಯಲ್ಲಿ ಕೋಳಿ ಕಳುವು

ಮೈಸೂರು ಜಿಲ್ಲಾಧಿಕಾರಿಗಳಾದ ಮಿ॥ ಜಾರ್ಜ್ ಮ್ಯಾಥ್ಯೂರವರ ಮನೆಗೆ ಕಳ್ಳರು ಕೆಲವು ದಿನಗಳ ಹಿಂದೆ ನುಗ್ಗಿ ೮ ಕೋಳಿಗಳನ್ನು ಕದ್ದರೆಂದು ತಿಳಿದು ಬಂದಿದೆ.

ಶ್ರೀ ಬಂದೀಗೌಡರಿಗೆ ಸತ್ಕಾರ

ಶ್ರೀರಂಗಪಟ್ಟಣ ೩

ಮಂಡ್ಯದ ಸಕ್ಕರೆ ಕಂಪೆನಿಯ ಅಧ್ಯಕ್ಷರಾದ ಶ್ರೀ ಎ. ಜಿ. ಬಂದೀಗೌಡರಿಗೆ ಶ್ರೀರಂಗಪಟ್ಟಣದ ಕಾಂಗ್ರೆಸ್ ಕೆಲಸಗಾರರು ಕೃಷ್ಣಮೂರ್ತಿಯವರ ಬಂಗಲೆಯಲ್ಲಿ ಸತ್ಕಾರ ಕೂಟವನ್ನು ನೆನ್ನೆ ದಿನ ಏರ್ಪಡಿಸಿದ್ದರು. ಮಂಡ್ಯದ ಶ್ರೀ ಹೆಚ್. ಬೊಮ್ಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲೆಯ ಕಾಂಗ್ರೆಸ್ ಮುಖಂಡರು ಭಾಗ ವಹಿಸಿದ್ದರು. ಡಾ॥ ಸಿ ಬಂದೀಗೌಡರ ಭಾಷಣವಾದನಂತರ, ಮುಖ್ಯ ಅತಿಥಿಗಳಾದ ಶ್ರೀ ಎ ಜಿ ಬಂದೀಗೌಡರು ಉತ್ತರವಿತ್ತು ತಾವು ಸಕ್ಕರೆ ಕಂಪೆನಿ ಅಧ್ಯಕ್ಷರಾದ ಮೇಲೆ ಅಲ್ಲಿ ಮಾಡಿರುವ ಹಲವು ಸುಧಾರಣೆಗಳನ್ನು ಕುರಿತು ತಿಳಿಸಿದರು. ಮಲವಳ್ಳಿಯ ಶ್ರೀ ಪುಟ್ಟಸ್ವಾಮಿ ಗೌಡರು ವಂದನಾರ್ಪಣೆ ಮಾಡಿದರು.

ಕಾಂಗ್ರೆಸ್ ಕೆಲಸಗಾರರ ಸಭೆ

ಚಾಮರಾಜನಗರ

ಇಲ್ಲಿನ ಕಾಂಗ್ರೆಸ್ ಕೆಲಸಗಾರರು ... ಪ್ರಚಾರ ವಿಷಯ ... ಕಾರ್ಯಕ್ರಮಗಳನ್ನು ... ನಡೆಸುವಂತೆ ಏರ್ಪಡಿಸಲು ... ಕಾಂಗ್ರೆಸ್ ಸಮಿತಿಯ ... ಸಭೆ ಬರುವ ... ನೇ ತಾ॥ ... ನಡೆಯುವುದು. ... ಕಾರ್ಯದರ್ಶಿಯವರು ಕೋರಿದ್ದಾರೆ

ಆಹಾರ ಮಂತ್ರಾಲಯದ ಅನ್ನ ಛತ್ರ

ಮೇಲ್ಕಂಡ ಸ್ಥಳದಲ್ಲಿ ಹಿಂದೆ ಅನ್ನ ಛತ್ರವನ್ನು ನಡೆಸುತ್ತಿದ್ದವರ ನಿಲ್ಲಿಸುತ್ತಿ ... ವರೆಂದೂ ಅದನ್ನು ಶ್ರೀ ದಾಸ ಶಾಸ್ತ್ರಾಚಾರ್ಯರು ನಡೆಸುತ್ತಿರುವುದಾಗಿಯೂ ತಿಳಿದು ಬಂದಿದೆ ಇದಕ್ಕಾಗಿ ದಿನವೊಂದಕ್ಕೆ ಇಪ್ಪತ್ತೈದು ರೂ ವೆಚ್ಚವಾಗುತ್ತಿದೆಯೆಂದೂ ರಾಯರ ಛತ್ರದ ... ಉದಾರ ಸಹಾಯ ಮಾಡಬೇಕೆಂದೂ ಕೋರಲಾಗಿದೆ

ಆರು ಕಾಲಿನ ಕರು

ಹೊಸಕೋಟೆ ತಾ॥ ... ಗ್ರಾಮದಲ್ಲಿ ಒಂದು ಹಸುವು ಹೋರಿ ಕರುವನ್ನು ಈಯಿದೆ. ಅದಕ್ಕೆ ಮುಂದೆ ಎರಡು ...ಗಳೂ ಹಿಂದೆ ನಾಲ್ಕು ಕಾಲುಗಳೂ ಇವೆ. ಇವುಗಳಲ್ಲಿ ಎರಡು ಒಂದೇ ಸಮನಾಗಿವೆ. ಒಂದು ಕಾಲು ಮಾತ್ರ ಮೊಣಕಾಲಿನ ... ಗೊರಸು ... ರಸಿನಂತಿದೆ ಎರಡು ಮೂತ್ರಕೋಶಗಳಿವೆ.

ಕಾಕೋಸ್ ದ್ವೀಪವನ್ನು ಬ್ರಿಟಿಷರು ಕೊಳ್ಳುವರು

ಹಿಂದೂ ಸಾಗರದಲ್ಲಿ ಇಪ್ಪತ್ತು ಸಣ್ಣ ದ್ವೀಪಗಳನ್ನೊಳಗೊಂಡ ಕಾಕೋಸ್ ದ್ವೀಪಸಮುದಾಯವನ್ನು ಇಂಗ್ಲೆಂಡು ಕೊಂಡುಕೊಳ್ಳುವುದೆಂದು ತಿಳಿದು ಬಂದಿದೆ.

ಬೆಳಗೊಳ ಕೆಮಿಕಲ್ಸ್ ಫ್ಯಾಕ್ಟರಿಗೆ ವಿದ್ಯುಚ್ಛಕ್ತಿ ಸರಬರಾಜು ತಪ್ಪಿತು

ಬೆಳಗೊಳದಲ್ಲಿರುವ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆಯ ಕೆಲಸಗಾರರು ಕಳೆದ ೫॥ ತಿಂಗಳುಗಳಿಂದ ಮುಷ್ಕರ ಹೂಡಿರುವುದು ಸರಿಯಷ್ಟೆ. ಈ ಕಂಪೆನಿಯವರು ಸರಕಾರಕ್ಕೆ ಸಾಲಿಯಾನ ... ಶಕ್ತಿ ಸರಬರಾಜಿಗೆ ... ಲಕ್ಷ ರೂಪಾಯಿಗಳನ್ನು ಚಾರ್ಜ್ ಆಗಿ ಕೊಡಬೇಕಾಗಿತ್ತು. ಇದನ್ನು ಕೊಡಲಿಲ್ಲವಾದುದರಿಂದ ಸರಕಾರದವರು ಕಂಪೆನಿಗೆ ನೋಟೀಸ ಕೊಟ್ಟು ...-೩ ದಿನದಿಂದ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಿದ್ದಾರೆ

ನ್ಯೂಜಿಲೆಂಡಿನಲ್ಲಿ ಜಿ...ಗರು ...?

[illegible]

ಮೈಸೂರಿಗೆ ವಿ. ಪಿ. ಮೆನನ್ ರವರ ಭೇಟಿ

ಬೆಂಗಳೂರು ೩

ಭಾರತ ಸರ್ಕಾರದ ಸಂಸ್ಥಾನ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ವಿ. ಪಿ ಮೆನನ್ ರವರು ಸದ್ಯದಲ್ಲೇ ಸಂಸ್ಥಾನಕ್ಕೆ ಭೇಟಿ ಕೊಡುವರೆಂದು ತಿಳಿದು ಬಂದಿದೆ.

೦ ಸೆಂಟ್ರಲ್ ಜೈಲಿನಲ್ಲಿ ಬಂಧನದಲ್ಲಿದ್ದ ಕಮ್ಯೂನಿಸ್ಟರಾದ ಶ್ರೀ ಎಲ್. ಸಿಂಗರನ್ನು ಬಿಡುಗಡೆ ಮಾಡಿ, ಸಂಸ್ಥಾನದಿಂದ ಗಡೀಪಾರು ಮಾಡಲಾಗಿದೆ.

ಚಿನ್ನದ ಗಣಿಯಲ್ಲಿ ಮುಷ್ಕರ

ಕೋಲಾರದ ಉರಿಗಂ ಮತ್ತು ನಂದೀದುರ್ಗದ ಸುಮಾರು ೯ ಸಾವಿರ ಕೆಲಸಗಾರರು, ಮೊನ್ನೆಯಿಂದ ಮುಷ್ಕರ ಹೂಡಿದ್ದಾರೆ

ಅಮೆರಿಕ ಅಧ್ಯಕ್ಷರಿಗೆ ಸ್ಟಾಲಿನ್‌ರವರ ಆಹ್ವಾನ

ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ಮಾತುಕತೆ ನಡೆಸಲು ರಷ್ಯದ ಸ್ಟಾಲಿನ್‌ರವರು ಅಮೆರಿಕದ ಅಧ್ಯಕ್ಷರಾದ ಟ್ರೂಮನ್ನರಿಗೆ ಆಹ್ವಾನವನ್ನು ಕೊಟ್ಟು, ಮಾಸ್ಕೋ, ಸ್ಟಾಲಿನ್‌ಗ್ರಾಡ್, ಒಡೆಸ್ಸಾ ಅಥವ ಯಾಲ್ಟಾದಲ್ಲಿ ಭೇಟಿ ನಡೆಸಬಹುದೆಂದೂ, ರಷ್ಯದಲ್ಲಿ ಭೇಟಿ ನಡೆಸಲು ಇಷ್ಟವಿಲ್ಲದಿದ್ದರೆ ಪೋಲೆಂಡ್ ಅಥವ ಜೆಕೋಸ್ಲವೇಕಿಯಾಗಳಲ್ಲಿ ಸೇರಬಹುದೆಂದೂ ತಿಳಿಸಿದ್ದಾರೆಂದು, ವರದಿಯಾಗಿದೆ ಅಮೆರಿಕಕ್ಕೆ ತಾವು ಹೋಗಬೇಕೆಂಬ ಆಸೆ ಇದ್ದರೂ, ವಿಮಾನ ಅಥವ ನೌಕಾ ಪ್ರಯಾಣ ಕೂಡದೆಂದು ತಮಗೆ ವೈದ್ಯರು ಸೂಚಿಸಿರುವುದಾಗಿ ಸ್ಟಾಲಿನ್‌ರವರು ಹೇಳಿರುತ್ತಾರೆ

ತಿರುಪತಿಯಲ್ಲಿ ಗಲಭೆ

ಕಳುವಿನ ಆಪಾದನೆಯ ಮೇಲೆ ರಾಮನ್ ನಾಯರ್ ಎಂಬುವನನ್ನು ತಿರುಪತಿ ಪೋಲೀಸರು ದಸ್ತಗಿರಿ ಮಾಡಿದುದರ ಬಗ್ಗೆ, ನಾಲ್ಕುಗಂಟೆಗಳೊಂದು ಆತನು ಪೋಲೀಸ್ ಸ್ಟೇಷನ್ನಿನಲ್ಲಿ ಮರಣ ಹೊಂದಿದನು. ಇದರ ಮೇಲೆ ಜನರ ಗುಂಪು ಮೆರವಣಿಗೆ ಹೊರಟು ಆತನ ಮರಣದ ಬಗೆ ವಿಚಾರಣೆ ನಡೆಯಬೇಕೆಂದು ಗಲಭೆ ನಡೆಸಿದರೆಂದೂ, ಕೆಲವು ಪೋಲೀಸರಿಗೂ ಜನರಿಗೂ, ಘರ್ಷಣೆ ಆಯಿತೆಂದೂ ವರದಿಯಾಗಿದೆ ಶಾಲಾ ಕಾಲೇಜುಗಳು ಮತ್ತು ಅಂಗಡಿಗಳು ಮುಚ್ಚಲ್ಪಟ್ಟಿವೆ

ಬಹಿರಂಗ ಸಭೆ

ನಾಳೆ ಸಂಜೆ ೫ ಘಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಪ್ರಜಾ ... ಪಕ್ಷದ ಆಶ್ರಯದಲ್ಲಿ ಆಹಾರದ ವಿಚಾರವಾಗಿ ಬಹಿರಂಗ ಸಭೆಯು ಶ್ರೀ ಎಂ ಚೆನ್ನರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಯುವುದು

ಡಚ್ಚರಿಗೆ ಅಮೆರಿಕದ ಎಚ್ಚರಿಕೆ

[illegible]

ಕೃಷ್ಣರಾಜ ಮೊಹಲ್ಲಾ ಕುಂದು ಕೊರತೆಗಳು

ಮೈಸೂರು ಪೌರಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ಎ. ಕೃಷ್ಣಮೂರ್ತಿರಾಯರು ಈ ರೀತಿ ತಿಳಿಸಿರುತ್ತಾರೆ —

ತಾ॥ ೧೯-೧-೪೯ರಲ್ಲಿ ನಡೆದ ಕೃಷ್ಣರಾಜ ಮೊಹಲ್ಲಾ ಸಂಪೇಲನೆಯಲ್ಲಿ ಈ ಕೆಳಗೆ ಕಂಡ ಅಂಶಗಳನ್ನು ಅಧಿಕಾರಿಗಳ ಗಮನಕ್ಕೆ ತಂದಿರುತ್ತೆ -

ತೊಗರಿ ಬೀದಿ ದೊಡ್ಡ ರಸ್ತೆಗೆ ಅಜು ಬಾಜು ಕ್ರಾಸ್ ರಸ್ತೆಗಳಿಂದ ಮಳೆಗಾಲದಲ್ಲಿ ನೀರು ನುಗ್ಗಿ ಕೊರಕಲು ಬೀಳುತ್ತಿರುವುದನ್ನು ತಪ್ಪಿಸಲು ರಸ್ತೆಯ ಎರಡು ಪಕ್ಕಗಳಲ್ಲಿ ಚರಂಡಿ ತೆಗೆಸತಕ್ಕದ್ದು. ಇದೇ ಬೀದಿಯ ೨೨-೧ನೇ ನಂಬರಿನ ಮನೆ ಎದುರು ರಸ್ತೆಯನ್ನು ದುರಸ್ತುಮಾಡಿಸಿ ಜಲ್ಲಿ ಹಾಕಿಸ ತಕ್ಕದ್ದು. ಈ ವೀದಿಯ ಸ್ಥಳಲ್ಲಾ ತೊಗರಿ ಹರಡುವುದು, ಬೇಳೆ ತೂರುವುದು ಮುಂತಾದ ಕೆಲಸಗಳಿಂದ ನಿವಾಸಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಈ ಬಗ್ಗೆ ಹೆಲ್ತ್ ಆಫೀಸರು ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳ ತಕ್ಕದ್ದು

ಆಂಜನೇಯ ದೇವಸ್ಥಾನದ ಬೀದಿಯಲ್ಲಿರುವ ಒಂದು ಹೋಟಲು ಲೈಸನ್ಸ್ ಇಲ್ಲದೆ ನಡೆಯುತ್ತಿದೆಯೆಂದು ತಿಳಿದು ಬಂದಿದೆ. ಈ ವಿಚಾರದಲ್ಲಿ ಹೆಲ್ತ್ ಆಫೀಸರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಸೊಪ್ಪಿನ ಕೊಳದ ವೀದಿಯಲ್ಲಿರುವ ಮಕ್ಕಳ ಆಟದ ಮೈದಾನಕ್ಕೆ ಹಸ್ತಿ ಹಾಕಿ ಪಾರ್ಕು ಮಾಡಿಸುವುದಲ್ಲದೆ ಒಂದು ರೇಡಿಯೋವನ್ನು ಸ್ಥಾಪನೆ ಮಾಡಬೇಕು

ತ್ಯಾಗರಾಜ ರೋಡ್ ೧೩-೮ನೇ ದೀಪದ ಕಂಬದ ಪಕ್ಕದಲ್ಲಿ ನಲ್ಲಿಯನ್ನು ದುರಸ್ತು ಮಾಡಿಸಿ ನೀರು ಸರಬರಾಜು ಮಾಡಬೇಕು. ವಾಹನ ಸಂಚಾರ ಬಹಳ ಹೆಚ್ಚು ರಸ್ತೆಯು ಕೆಟ್ಟು ಅಂಗಡಿಗಳೆಲ್ಲವೂ ಧೂಳಿನಿಂದ ತುಂಬಿ ತೊಂದರೆಯಾಗಿರುತ್ತೆ. ಈ ರಸ್ತೆಯನ್ನು ಆದಷ್ಟು ಜಾಗ್ರತೆ ಸರಿಪಡಿಸುವುದು

ಕೃಷ್ಣರಾಜ ಕೋ-ಆಪರೇಟಿವ್ ಸೊಸೈಟಿ ಹಿಂಭಾಗದ ಪ್ರದೇಶದಲ್ಲಿ ಜನಗಳು ಹೇಸಿಗೆ ಮಾಡಿ ಕೆಡಿಸುತ್ತಿದ್ದಾರೆ. ಇಲ್ಲಿ "ಹೇಸಿಗೆ ಮಾಡುವವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತೆ" ಎಂಬ ಬೋರ್ಡನ್ನು ಹಾಕಿ, ಪೋಲೀಸು ಕಾವಲನ್ನು ಕೆಲವು ದಿನಗಳವರೆಗೆ ಇಡಲು ಡಿ ಎಸ್ ಪಿ ಯವರನ್ನು ಪ್ರಾರ್ಥಿಸತಕ್ಕದ್ದು

ವಾಹನ ಸಂಚಾರ ಹೆಚ್ಚಾಗಿರುವ ಸರ್ಕಲ್ ಮತ್ತು ಚೌಕಗಳಲ್ಲಿ "ಸ್ಲೋ ಅಂಡ್ ಡ್ರೈವ್ ಸ್ಲೋಲಿ" ಎಂಬ ಬೋರ್ಡನ್ನು ಹಾಕಿಸತಕ್ಕದ್ದು

"ಸ್ಕೂಲ್ ಡ್ರೈವ್ ಸ್ಲೋಲಿ" ಎಂಬ ಬೋರ್ಡನ್ನು ವೀಣೆ ಶೇಷಣ್ಣನವರ ಬೀದಿ ಪಶ್ಚಿಮ ಭಾಗದಲ್ಲಿ ಸ್ಕೂಲಿನಿಂದ ಬರುವ ಹುಡುಗರ ರಕ್ಷಣೆಗಾಗಿ ತುರುತು ಹಾಕಬೇಕು

ವಾಣೀ ವಿಲಾಸ ಮಾರ್ಕೆಟ್ ಉತ್ತರ ಪಾರ್ಶ್ವದ ಫುಟ್‌ಪಾತನ್ನು ಅಲ್ಲಿನ ಅಂಗಡಿ ಮಾಲೀಕರುಗಳಿಂದ ಕಾಂಟ್ರಿಬ್ಯೂಷನ್ ಎತ್ತಿ ಸಿಮೆಂಟ್ ಕಾನ್‌ಕ್ರೀಟ್ ಮಾಡಿಸತಕ್ಕದ್ದು

ಆದಂಖಾನ್ ಮುನಿ ದಿ ನಸ್ತೆಗಳ ಚರಂಡಿ ದುರಸ್ತು ಮಾಡಿಸಿ ನೀರು ಸಲೀಸಾಗಿ ಹೋಗಲು ಏರ್ಪಡಿಸಬೇಕು

ಹುಲ್ಲಿನ ಬೀದಿಯಲ್ಲಿ ಒಂದು ದೀಪದ ಆವಶ್ಯಕತೆ ಇರುತ್ತೆ. ಸೂಕ್ತವಾದ ಜಾಗದಲ್ಲಿ ಹಾಕಿಸತಕ್ಕದ್ದು

ವಾಣೀವಿಲಾಸ ಮಾರ್ಕೆಟ್ ಮಾಂಸದ ಅಂಗಡಿಗೆ ಗೂಸ್‌ನೆಕ್ ದೀಪಹಾಕಿ ಬೆಳಕು ಬೀದಿಗೂ ಬೀಳುವಂತೆ ಏರ್ಪಡಿಸಬೇಕು

ಯುದ್ಧ ಮುಂದುವರಿಸಲು ಚೀಣಾ ಸರಕಾರದ ನಿರ್ಧಾರ

ಚೀಣಾದ ಅಧ್ಯಕ್ಷ ಲಿಸಂಗರ್ಚಿರವರು ಆತ್ಮರಕ್ಷಣಾ ಯುದ್ಧವನ್ನು ಮುಂದುವರಿಸಿಕೊಂಡು ಒರಲು ನಿಶ್ಚಯಿಸಿದ್ದಾರೆ. ಜೊತೆಗೆ ಕಮ್ಯೂನಿಸ್ಟರೊಡನೆ ಶಾಂತಿ ಮಾಡಿಕೊಳ್ಳಲು ಸಾಧ್ಯವಾದ ಪ್ರಯೋಗಗಳೆಲ್ಲವನ್ನೂ ಮಾಡಲಿರುವರು. ಇತರ ಅಧಿಕಾರಿಗಳೊಡನೆ ಮಾತುಕತೆಯಾಡಿದನಂತರ ಈ ನಿರ್ಧಾರಕ್ಕೆ ಅಧ್ಯಕ್ಷರು ಬಂದರು.

ಉಪವಾಸ ಮತ್ತು ಮೌನ

ಮದ್ರಾಸು ಸರ್ಕಾರದವರು ತಂದಿರುವ ಹಿಂದೂ ಮತದ ಮಠಾಧಿಪತಿಗಳ ಸಂಬಂಧ ಪಟ್ಟ ಮಸೂದೆಯನ್ನು ಪ್ರತಿಭಟಿಸುವ ಸಲುವಾಗಿ ಕಳೆದ ಒಂದು ವಾರದಿಂದಲೂ ಸ್ವಾಮಿ ಸತ್ಯಾನಂದ ಸರಸ್ವತಿಯವರು ಮದ್ರಾಸ ಸರ್ಕಾರದ ಕಛೇರಿ ಮುಂದೆ ಉಪವಾಸ ವ್ರತ ಹೂಡಿರುವರಷ್ಟೆ? ಈಗ ಅವರು ಮೌನ ವ್ರತವನ್ನೂ ಸಹ ಹಿಡಿದಿದ್ದಾರೆ

ಪೂರ್ವ ಬಂಗಾಳದಿಂದ ೧ ಕೋಟಿ ಜನರು ಪಶ್ಚಿಮಕ್ಕೆ

ಪೂರ್ವ ಬಂಗಾಳ (ಪಾಕಿಸ್ತಾನ) ದಿಂದ ಸುಮಾರು ೧ ಕೋಟಿ ೭೦ ಲಕ್ಷ ಜನರು ಪಶ್ಚಿಮ ಬಂಗಾಳಕ್ಕೆ ಬಂದು ನೆಲಸಿರುವುದಾಗಿ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ॥ ಬಿ ಸಿ ರಾಯ್‌ರವರು ತಿಳಿಸಿದ್ದಾರೆ

ಹರಿಕಥೆ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಬೋಧಶಾಲೆಯಲ್ಲಿ ಈ ರಾತ್ರಿ ೮॥ ಘಂಟೆಗೆ ಶ್ರೀ ಮುಳಬಾಗಿಲು ನಾರಾಯಣ ದಾಸರಿಂದ 'ಭಕ್ತ ರಾಮದಾಸ್' ಎಂಬ ಕಥೆ ನಡೆಯುತ್ತದೆ

ತ್ಯಾಗರಾಜ ಮತ್ತು ಪುರಂದರ ದಾಸರ ಆ[...] ಮೈ[...]

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ[...]ರದ ಆಶ್ರಯದಲ್ಲಿ ಕಳೆದ ತಿಂಗಳು [...] ತಾರೀಖಿನಿಂದ ೨೦ ನೇ ತಾರೀ[...] 'ಗೂ ತ್ಯಾಗರಾಜ ಜಯಂತಿ ಮತ್ತು [...]ದರ ದಾಸರ ಪುಣ್ಯದಿನ ಮಹೋ[...]ಳು ನಡೆದವು. ೨೦ ನೇ ತಾರೀಖು [...] ವಾರ ಸಂಜೆ ದರ್ಬಾರ್ ಬಕ್ಷಿ [...] ಎಲ್. ದೇವರಾಜ ಅರಸಿನವರ [...]ಯಲ್ಲಿ ತ್ಯಾಗರಾಜ ಜಯಂತಿಯು [...]ರ ಭವನದಲ್ಲಿ ನಡೆಯಿತು. ಮಂ[...]ಧ್ಯಕ್ಷರಾದ ರಾ॥ ಬ॥ ಎಂ ರಾ[...] ಯವರ ಸ್ವಾಗತ ಭಾಷಣ ಮ[...] ಯ್ ದರ್ಶಿಗಳವರದಿಯು ಪಠನ[...] ತರ ಶ್ರೀ ಮೈಸೂರು ಸಹೋದ[...] ಶ್ರೀ ತ್ಯಾಗರಾಜರ ಕೀರ್ತನೆಗ[...] ನಂತರ ಅಧ್ಯಕ್ಷರು ಮಾತನಾಡಿ, [...] ರಾಜರ ಭಕ್ತಿ ಮಾರ್ಗ, ಆಧ್ಯಾತ್ಮಿ[...]ನದ ಸಂಧ ಮತ್ತು ಸಂಗೀತದ [...]ಯನ್ನು ವಿವರಿಸಿ ಅವರ ಗುಣ[...] ಶ್ಲಾಘಿಸಿದರು. ಅವರ ಜೀವನವು [...]ಯವಾಗಿದ್ದರೂ ಸಹ, ತ್ಯಾಗರಾ[...]ದನ್ನು ತೃಣಸಮಾನವಾಗಿ ಎಣಿಸಿ [...] ಗುರಿಯನ್ನು ಸಾಧಿಸಿ ಜನರಿಗೆ [...] ದ ಸದ್ಬೋಧನೆ ಮಾಡಿದರು. [...] ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾ[...]ಯಿತು

ಇದರ ಹಿಂದಿನ ದಿನ ವೈ॥ ಶ್ರೀ[...]ಟಗಿರಿಯಪ್ಪನವರ ಅಧ್ಯಕ್ಷತೆಯ[...] ದಿರದಲ್ಲಿ ತ್ಯಾಗರಾಜ ಜಯಂತಿ [...] ನಡೆಯಿತು. ೨೧ ನೇ ತಾರೀಖು [...] ರಾ॥ ಬ॥ ರಾಮಸ್ವಾಮಿಯವರ [...]ಯಲ್ಲಿ ಪುರಂದರ ದಾಸರ ಪುಣ್ಯದಿ[...] ಚರಣೆಯಾಗಿ, ವಿದ್ವಾಂಸರಿಂದ [...] ಕೀರ್ತನೆ, ಭಾಷಣ, ಮುಂತಾದ[...] ದುವು

ಶ್ರೀ ಗಣೇಶಾ ಟಾಕೀಸ್

4-2-49 ರಿಂದ ಪ್ರತಿ ದಿನ ೩ ಆಟಗಳು

ಪಕ್ಷಿರಾಜಾ ಫಿಲಂರವರ

ಕನ್ನಿಕಾ

(ತಮಿಳು)

ಭೂಮಿಕೆ - ಎಂ. ಎಸ್. ಸರೋಜಿನಿ, ಟಿ. ಆ. ನರರ್ದ, ಎನ್. ಎಸ್. ಕೃಷ್ಣ, ಟಿ. ಎ. ಮಧುರಂ

Morning Shows on 4th 5th 6th at 10 15 a.m.

Call of Tarzan

ಪ್ರಾತಃಕಾಲದ ಪ್ರದರ್ಶನಗಳು

ತಾ॥ ೪ ೫ ಮತ್ತು ೬ ರಲ್ಲಿ ಬೆಳಿಗೆ ೧೦ ೧೫ ಗಂಟೆಗೆ

ಕಾಲ್ ಆಫ್ ಟಾರ್ಜಾನ್

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ ೩ ಪ್ರದರ್ಶನಗಳು

ತಾ॥ 4-2-49 ರಿಂದ ೨ ದಿನಗಳು

20th's Cantor's Greatest Comedy Hit

ALI BABA GOES TO TOWN

(ಅಲಿ ಬಾಬ ಗೋಸ್ ಟು ಟೌನ್)

ಪಾತ್ರ —ಎಡ್ಡಿ ಕ್ಯಾಂಟರ್

– Next Change.–

20th's **BLACK SWAN**

Morning Shows at 10 30

From 5-2-49 for 2 days

Warner's

MILDRED PIERCE

With JOAN CRAWFORD

ಅಗ್ಗದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಇಂದೇ ಭೇಟಿ ಕೊಡಿ

ಉತ್ತಮವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ ಆರಣಿ ಮತ್ತು ಕುಂಬಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು ಮುಂತಾದ್ದುಗಳು ಸಹ ದೊರೆಯುತ್ತವೆ

ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ ಮೈಸೂರು

S.S.L.C. General Science 1940-48 Nov Physics, Chemistry & Biology With over 50 Figs

By C S VIJAYARAGHAVACHAR

(Pocsmons's High Sch)

Copies sold at Book-sellers & 346 D Subbiah Road MYSORE

ಪ್ರಭುದೇವಾ ಟಾಕೀಸ್

4-2-49 ರಿಂದ ಯಶಸ್ವೀ 2ನೇ ವಾರ

ಪ್ರತಿ ದಿನ ೩ ಆಟಗಳು

ಪಿಂಢಾರಾ ರಿ

(ತೆಲುಗು)

ಜೆಮಿನಿ ಸ್ಟುಡಿಯೋ ತಯಾರಿಕೆ

ಪಾತ್ರ:- ಪುಷ್ಪವಲ್ಲಿ, ವರಲಕ್ಷ್ಮೀ, ಜಿ. ವಿ. ಸುಬ್ಬರಾವ್

ವಿತರಣೆ Tallam Release

ರಾಜಕಮಲ

ಮೈಸೂರು

4-2-49 ರಿಂ[...]

ಆನೋ[...] ಪ್ರಾರಂ[...]

ಪ್ರತಿ ದಿನ ೩ ಆಟಗಳು

ಚಂದ್ರಹಾ[...]

(ಹಿಂ[...])

— ಮುಖ್ಯ ಪಾತ್ರ —

ಪ್ರೇಮ್ ಅದೀಬ್, ನವನ[...]

ಇದರೊಡನೆ ಮಹಾತ್ಮಾ ಗಾಂಧಿ[...] ಅಂತ್ಯ ಯಾತ್ರೆಯ ಒಂದು ಚಿ[...] ಸಹ ಪ್ರದರ್ಶಿಸಲಾಗುತ್ತದೆ

Morning Shows

From 4-2-49 For 4[...]

Bells of St. M[...]

–With–

Bing Crosby &

Ingrid Bergman

Edited, printed and published by A R Nagarajan at the Sadhvi Press D Subbiah Road, Mysore

ಪೋ ನಂ 792 — ವಂದೇಮಾತರಂ — ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೪-೨-೧೯೪೮ [ಸಂಚಿಕೆ ೧೭೪

— ಖಾಸಿಂ ರಜ್ವಿಯ — ಕ್ಷಮಾ ಯಾಚನೆಯೋ?

ಭಾರತದ ಪಶು ಸಂರಕ್ಷಣಾ ಸಮ್ಮೇಳನ

ಮೈಸೂರು ೪

ಭಾರತ ಸರ್ಕಾರದ ವ್ಯವಸಾಯ ಸಂಶೋಧನೆಯ ಕೌನ್ಸಿಲಿನ ಪಶು ಸಂರಕ್ಷಣಾ ಶಾಖೆಯ ೮ ನೇ ವಾರ್ಷಿಕ ಸಭೆಯು ರಾಜಧಾನಿಯಲ್ಲಿ ಇದೇ ೧೪ ನೇ ತಾ॥ ಅದರ ಅಧ್ಯಕ್ಷರಾದ ಸರ್ ದಾತಾರ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಪ್ರಾಂತ ಮತ್ತು ಸಂಸ್ಥಾನಗಳಿಂದ ಸುಮಾರು ೨೦೦ ಜನ ಪ್ರತಿನಿಧಿಗಳು ಭಾಗ ವಹಿಸಲಿರುವರು. ಸಭೆಯು ೮ ದಿನಗಳು ನಡೆಯುವುದೆಂದು ತಿಳಿದುಬಂದಿದೆ.

ಸಂಗೀತ ಮತ್ತು ಹರಿಕಥೆ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಮಠಾಲಯದ ಮುಂದೆ ಈ ಸಂಜೆ ೬ ಗಂಟೆಗೆ ಮೈಸೂರು ಸಹೋದರರಿಂದ ಸಂಗೀತ ಮತ್ತು ರಾತ್ರಿ ೯ ಗಂಟೆಗೆ ಶ್ರೀ [illegible]ಪತಿ ಸಹೋದರರಿಂದ ದೈವ ಪೌರುಷ [illegible] ಹರಿಕಥೆ ನಡೆಯುವುವು.

ರಾಗಿ, ಜೋಳದ ಮೇಲೆ ಹತೋಟಿ

ಬೆಂಗಳೂರು ೪

ಸಂಸ್ಥಾನಾದ್ಯಂತ ಅಕ್ಕಿ ಮತ್ತು ಗೋಧಿ ಮೇಲೆ ಇರುವಂತೆ ಹತೋಟಿಯನ್ನು ರಾಗಿ ಮತ್ತು ಜೋಳದ ಮೇಲೂ ಸರ್ಕಾರದವರು ಜಾರಿಗೆ ತಂದಿದ್ದಾರೆ.

ಗೋಪಾಲರಾವ್ ವಿಚಾರಣಾ ಸಮಿತಿ

ಧರ್ಮರತ್ನಾಕರ ಗೋಪಾಲರಾಯರ ವ್ಯವಹಾರದ ವಿಚಾರಣಾ ಸಮಿತಿಯವರು ಈ ತಿಂಗಳಿನ ಅಂತ್ಯದೊಳಗಾಗಿ ತಮ್ಮ ವರದಿಯನ್ನು ಸರ್ಕಾರಕ್ಕೆ ಒಪ್ಪಿಸುವರೆಂದು ತಿಳಿದುಬಂದಿದೆ.

ವಿದ್ಯುಚ್ಛಕ್ತಿ ಸರಬರಾಜು

ಸರ್ಕಾರದವರು ಎಲ್ಲಿಗೆ ಬೇಕಾದರೂ ವಿದ್ಯುದ್ದೀಪಗಳನ್ನು ಕೊಡಲು ಸಿದ್ಧರಾಗಿದ್ದು ಆದರೆ ಹೆಚ್ಚಿಗೆ ದೀಪಗಳು ಬೇಕಾದ ನಗರಸಭೆಗಳು ಕೇಳಬೇಕು ಮತ್ತು ಹಣವನ್ನು ಕೊಡಬೇಕು—ಎಂದು ಸರ್ಕಾರವು ಪ್ರಕಟಣೆಯೊಂದು ತಿಳಿಸಿರುತ್ತದೆ.

ಬೆಂಗಳೂರಿನಲ್ಲಿ ರೈಲುಗಾಡಿಗಳ ತಯಾರಿಕೆ

ಬೆಂಗಳೂರಿನಲ್ಲಿರುವ ವಿಮಾನ ಕಾರ್ಖಾನೆಯಲ್ಲಿ ಲೋಹದಿಂದಲೇ ಮಾಡಿದ [illegible] ಒಂದುನೂರು ೩ ನೇ ತರಗತಿಯ ರೈಲು ಗಾಡಿಗಳು ಮುಂದಿನ ವರ್ಷದ ಮಾರ್ಚಿ ತಿಂಗಳೊಳಗಾಗಿ ತಯಾರಾಗುವುವೆಂದೂ ಒಂದು ಗಾಡಿಗೆ ೯೫ ಸಾವಿರ [illegible] ವೆಚ್ಚವಾಗುವುದೆಂದೂ ತಿಳಿದುಬಂದಿದೆ.

ಇಟಲಿಯಲ್ಲಿ ರಾಜರನ್ನು ತೆಗಲು ಪ್ರಯತ್ನ

ಪ್ರಜಾಪ್ರಭುತ್ವವಿರುವ ಇಟಲಿಯಲ್ಲಿ [illegible] ರಾಜರನ್ನು ಪುನಃ ಗದ್ದುಗೆಗೇರಿಸಲು ಒಂದು ಪ್ರಯತ್ನ ನಡೆಯುತ್ತಿದ್ದಾರೆಂದು ತಿಳಿದುಬಂದಿದೆ. ರಾಜಪಕ್ಷದ ಕೆಲವು ನಾಯಕರು [illegible] ಅಜ್ಞಾತವಾಸದಲ್ಲಿರುವ ಮಾಜಿ ರಾಜರಾದ ಉಂಬರ್ಟೊರವರಲ್ಲಿ ಸಂಬಂಧವಿಟ್ಟುಕೊಂಡಿರುವರೆಂದೂ, ಅವರು ಒಂದು ಬಾರಿ ಮೋಟಾರು ಕಾರನ್ನು [illegible]ರಲ್ಲಿಗೆ ಕಳುಹಿಸಲಿರುವರೆಂದೂ [illegible].

ಸೂಚನೆ

ರಥಸಪ್ತಮಿ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ಹೋಟೆಲ್ ಮಾಲೀಕರ ನಿರಾಕರಣೆ

ಸ್ವಂ. ವ. ಪ್ರ] ಬೆಂಗಳೂರು ೪

ಸರ್ಕಾರದವರು ಹೋಟೆಲುಗಳ [illegible] ದ ನಿಗದಿ ಮಾಡಿ ಹೊರಡಿಸಿರುವ ಹೊಸ ಆಜ್ಞೆಯಿಂದ ಉಂಟಾಗಿರುವ ತೊಂದರೆಯನ್ನು ಪರಿಹರಿಸಿ [illegible] ಅವಕಾಶ ಕೊಡಬೇಕೆಂದ [illegible] ಹೋಟೆಲ್ ಮಾಲೀಕರ ನಿಯೋಗವೊಂದು ಸಚಿವರಾದ ಶ್ರೀ ಟಿ ವಿ [illegible] ರ ಬಳಿಗೆ ನಿನ್ನೆ ಹೋಗಿತ್ತು. ಇಂದಿನ ಆಹಾರದ ಪರಿಸ್ಥಿತಿಯಲ್ಲಿ ಈ ಆಜ್ಞೆಯು ಅತ್ಯಗತ್ಯವಾಗಿರುವುದರಿಂದ ಅದನ್ನು ರದ್ದು ಮಾಡಲು ಸಾಧ್ಯವಿಲ್ಲವೆಂದು ಸಚಿವರು ತಿಳಿಸಿದರೆಂದು ಗೊತ್ತಾಗಿದೆ.

ಮೈಸೂರು ಟ್ರೈನಿಂಗ್ ಕಾಲೇಜಿನ ಶ್ರೀ ಕೆ ಶ್ರೀಪಾದಾಚಾರ್ಯರನ್ನು ಶಿವಮೊಗ್ಗ ಜಿಲ್ಲಾ ವಿದ್ಯಾಧಿಕಾರಿಗಳನ್ನಾಗಿ ಈ ತಿಂಗಳು ೭ ನೇ ತಾ॥ ನಿಂದ ವರ್ಗಾಯಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರದೇಶದಲ್ಲಿ ಸಂಜೆ ೭ ಗಂಟೆಯಿಂದ ಬೆಳಗ್ಗೆ ೭ ಗಂಟೆ ವರೆಗೆ ಅಕ್ಕಿ ಗಿರಣಿಗಳಲ್ಲಿ ಹಲ್ಲರುಗಳು ಕೆಲಸ ಮಾಡಕೂಡದೆಂದು ಆಜ್ಞೆ ಮಾಡಲಾಗಿದೆ.

ಬೊಂಬಾಯಿ ಪ್ರಾಂತ್ಯದ ಹಲವು ಪಟ್ಟಣಗಳಿಗೆ ಜೋಗ್ ವಿದ್ಯುಚ್ಛಕ್ತಿಯನ್ನು ಪಡೆಯುವ ವಿಷಯವಾಗಿ ಮಾತುಕತೆ ನಡೆಸಲು [illegible] ಮತ್ತು ಸ್ಥಳೀಯ ಸ್ವಾಯತ್ತ ಸಚಿವರುಗಳು ಈ ತಿಂಗಳು ೧೦ ನೇ ತಾ॥ ಬೆಂಗಳೂರಿಗೆ ಬರಲಿರುವರು.

ಸ್ಟಾಲಿನ್ನರ ಆಹ್ವಾನಕ್ಕೆ ಟ್ರೂಮನ್ನರ ನಿರಾಕರಣೆ

ಇನ್ನು ಮುಂದೆ ಪ್ರಪಂಚದಲ್ಲಿ ಯುದ್ಧ ಆಗದಂತೆ ತಪ್ಪಿಸಲು, ಮಾತುಕತೆ ನಡೆಸುವುದಕ್ಕಾಗಿ ರಷ್ಯಾದ ಸ್ಟಾಲಿನ್ನರ ಇತ್ತ ಆಹ್ವಾನವನ್ನು ಅಮೇರಿಕದ ಟ್ರೂಮನ್ನರು ನಿರಾಕರಿಸಿದ್ದಾರೆ. ಇತರ ರಾಷ್ಟ್ರಗಳಿಗೂ ಸಂಬಂಧಪಟ್ಟ ವಿಷಯಗಳನ್ನು ಈ ಎರಡು ರಾಷ್ಟ್ರಗಳೇ ಚರ್ಚಿಸುವುದು ಸೂಕ್ತವಲ್ಲವೆಂದ ಅಧ್ಯಕ್ಷರ ಅಭಿಪ್ರಾಯ ಪಟ್ಟಿದ್ದಾರೆ.

ಖಾಸಿಂ ರಜ್ವಿ ಕ್ಷಮಾ ಯಾಚನೆ

ಎ ಪಿ ಎ] ನವದೆಹಲಿ ೩೦

ಹೈದರಾಬಾದಿನ ಘಟನೆಗಳಿಗೆ ಮೂಲ ಪುರುಷನೂ, ರಜಾಕಾರರ ಸಂಸ್ಥೆಯ ಮುಖ್ಯಸ್ಥನೂ ಆಗಿದ್ದ ಖಾಸಿಂ ರಜ್ವಿಯು ಹೈದರಾಬಾದಿನ [illegible] ಜನರಲ್ ಚೌಧರಿಯವರಿಗೆ ಪತ್ರವೊಂದನ್ನು ಬರೆದು ತನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿರುವನೆಂದು ತಿಳಿದುಬಂದಿದೆ. ತನ್ನ ಹಿಂದಿನ ಕೃತ್ಯಗಳಿಗೆ ತಾನು ಪಶ್ಚಾತ್ತಾಪ ಪಡುತ್ತಿರುವುದಾಗಿ ಆ ಕಾಗದದಲ್ಲಿ [illegible]ರುವನೆಂದೂ, ಜನರಲ್ ಚೌಧರಿಯವರು ತನ್ನನ್ನು ಕ್ಷಮಿಸಿ, ಬಿಡುಗಡೆ ಮಾಡಬೇಕೆಂದೂ ಕೇಳಿರುವನಾಗಿ ಗೊತ್ತಾಗಿದೆ. ಬಿಡುಗಡೆಯಾದನಂತರ ಪಾಕಿಸ್ಥಾನಕ್ಕೆ ತಾನು ತೆರಳಿ ಅಲ್ಲಿ ಹಿಂದೂ ಮುಸ್ಲಿಂ ಐಕ್ಯಮತ್ಯಕ್ಕಾಗಿ ತನ್ನ ಭವಿಷ್ಯ ಜೀವನವನ್ನು ಉಪಯೋಗಿಸುವುದಾಗಿ ಆತನು ಸೂಚಿಸಿರುವನೆಂದು ಹೇಳಲಾಗಿದೆ.

ಚಿಯಾಂಗರು ಅಮೇರಿಕಕ್ಕೆ ಪಲಾಯನಮಾಗಿದ್ದಾರೆಯೋ?

ಎ ಪಿ ಎ] ನಾನ್‌ಕಿಂಗ್ ೩

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕರು ಈಗ ನಾನ್‌ಕಿಂಗಿನಲ್ಲಿ ಇಲ್ಲವೆಂದೂ, ಅವರು ಅಮೇರಿಕಕ್ಕೆ ಪ್ರಯಾಣ ಮಾಡಿರುವರೆಂದೂ, ಮತ್ತು ಅಲ್ಲಿಯೇ ಅವರು ವಾಯುಂ [illegible] ನೆಲೆಸುವರೆಂದೂ ಇಲ್ಲಿ ವರ್ತಮಾನ ಹರಡಿವೆ.

ಶಾಂತಿ ಸಂಧಾನಕ್ಕಾಗಿ ಪಶ್ಚಿಮ ಸರ್ಕಾರ [illegible] ಸೇರಿದವರು ಮಧ್ಯಸ್ಥಿಕೆ ವಹಿಸಲು ನಿರಾಕರಿಸಿದ್ದಾರೆಂದು ವರದಿಯಾಗಿದೆ.

ಯುವಕರ ಸಂಘಗಳನ್ನು

[illegible] ಕ್ರೆಸ್ಸಿನವರು [illegible]

[illegible] ಲ್ಲಿ ಯುವಕರು ನಿರಾಶ್ರಿತರ [illegible] ಸಂಘಗಳನ್ನು [illegible] ತಡೆಗಟ್ಟಿ [illegible] ರಚನಾತ್ಮಕ [illegible] ಭಾರತ ಕಾಂಗ್ರೆಸ್ಸಿನ [illegible]

ಹೈದರಾಬಾದ್ ಜಹಗೀರು ಆಡಳಿತ ಸರ್ಕಾರಕ್ಕೆ

ಎಂ. ಶೇಷಾದ್ರಿಯವರು ಜಹಗೀರು ಆಡಳಿತಾಧಿಕಾರಿ

ಎ ಪಿ ಎ] ಹೈದರಾಬಾದ್ ೩

ಹೈದರಾಬಾದ್ ಸಂಸ್ಥಾನದಲ್ಲಿರುವ ಜಹಗೀರುಗಳ ಮತ್ತು ನೈಜಾಮರಿಗೆ ಸೇರಿದ ಸ್ವಂತ ಜಮೀನುಗಳ ಆಡಳಿತವನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳುವ ಯೋಚನೆಯು ಭಾರತ ಸರ್ಕಾರದ ಪರಿಶೀಲನೆಯಲ್ಲಿದೆಯೆಂದೂ, ಈ ಬಗ್ಗೆ ಶೀಘ್ರದಲ್ಲಿಯೇ ಒಂದು ನಿರ್ಧಾರಕ್ಕೆ ಬರಲಾಗುವುದೆಂದೂ ಹೇಳಲಾಗಿದೆ.

ಮೈಸೂರು ಸಂಸ್ಥಾನದ ಮಾಜಿ ಸಚಿವರೂ ಮತ್ತು ಹೈದರಾಬಾದಿನ ಚನಾವಣಾ ಕಮೀಷನರೂ ಆದ ಶ್ರೀ ಎಂ ಶೇಷಾದ್ರಿಯವರನ್ನು ಜಹಗೀರು ಆಡಳಿತಾಧಿಕಾರಿಗಳಾಗಿ ನೇಮಿಸಬಹುದೆಂದು ಹೇಳಲಾಗುತ್ತಿದೆ.

ವಿವಾಹ ಮಹೋತ್ಸವ

ದಿವಾನ್ ಬಹದ್ದೂರ್ ರಾಜಕಾರ್ಯಪ್ರಸಕ್ತ ಕೆ [illegible]ರವರು ತಮ್ಮ ಪುತ್ರಿ ಶ್ರೀ ಕೆ [illegible] ಯವರಿಗೆ [illegible] ಎಲೆಕ್ಟ್ರಿಕಲ್ ಇಂಜನಿಯರ್ ಶ್ರೀ ಕೆ [illegible] ತಾ॥ [illegible] ರವರನ್ನು ತಂದ [illegible] ಮಹೋತ್ಸವ [illegible] ತಮ್ಮ ಗೃಹದಲ್ಲಿ [illegible] ನಡೆಸಿದರು. ಸಾವಿರಾರು ಜನ [illegible] ಬಂದ ವಧೂವರರನ್ನು ಆಶೀರ್ವದಿಸಿದರು. ಶ್ರೀಮನ್ಮಹಾರಾಜರವರು [illegible] ವಸ್ತ್ರಾಭರಣಗಳನ್ನು ಕಳುಹಿಸಿಕೊಟ್ಟಿದ್ದರು. ಶ್ರೀಮತಿ [illegible] ಅವರ ಮನೋಜ್ಞವಾದ ಸಂಗೀತವು ಏರ್ಪಾಡಾಗಿತ್ತು.

ಚಿಯಾಂಗರು ನಾನ್‌ಕಿಂಗಿಗೆ ವಾಪಸು ಬರುವರೇ?

ಚೀಣಾದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕರು ನಾನ್‌ಕಿಂಗಿಗೆ ಸಧ್ಯದಲ್ಲಿಯೇ ವಾಪಸು ಬರಬಹುದೆಂದೂ, ಮತ್ತು ಅಲ್ಲಿ ನಡೆಯುತ್ತಿರುವ ಶಾಂತಿ ಸಂಧಾನಗಳು ರದ್ದಾಗಬಹುದೆಂದೂ ಸುದ್ದಿ ಪತ್ರಿಕೆಗಳಲ್ಲಿ ವದಂತಿ ಹರಡಿದೆ.

ಶಾಂತಿ ಸಂಧಾನಕ್ಕೆ ಕಮ್ಯೂನಿಸ್ಟರ ಪ್ರಯತ್ನ

ನಾನ್‌ಕಿಂಗಿನ ರಕ್ಷಣೆಗಾಗಿ [illegible] ಪ್ರತಿ [illegible] ಗಳಿಂದಲೂ ಮತ್ತು [illegible] ರಕ್ಷಣಾ ಪಡೆಗಳು [illegible] ಕಮ್ಯೂನಿಸ್ಟರ [illegible] ಪ್ರಯತ್ನಿಸುತ್ತಿರುವುದ [illegible] ಕೊಳ್ಳಲು [illegible]

[illegible]

ಪ್ಯಾರಿಸ್ ಆಸ್ಪತ್ರೆ ಕೆಲಸಗಾರರ ಮುಷ್ಕರ

ಪ್ಯಾರಿಸ್‌ನಗರದ ಸರ್ಕಾರೀ ಆಸ್ಪತ್ರೆಗಳ ೪೩೪ ಸಾವಿರ ಕೆಲಸಗಾರರು ತಮ್ಮ ಸಂಬಳ ಸಾರಿಗೆಯನ್ನು ಹೆಚ್ಚಿಸಬೇಕೆಂದು ಮೊನ್ನೆಯಿಂದ ಮುಷ್ಕರ ಹೂಡಿದ್ದಾರೆ. ತಮಗೆ ಹೆಚ್ಚಿಗೆ ರೇಷನ್ ಕೊಡದಿದ್ದ ಪಕ್ಷದಲ್ಲಿ ರಕ್ತದ ಸಹಾಯವನ್ನು ಕೊಡುವುದಿಲ್ಲವೆಂದು ೧೬ ಸಾವಿರ ಜನರು ಸರ್ಕಾರಕ್ಕೆ ನೋಟೀಸು ಕೊಟ್ಟಿರುತ್ತಾರೆ.

ದರ್ಬಾನಿನ ಗಲಭೆಯ ಬಗ್ಗೆ ಭಾರತದ ವಿಚಾರಣೆ

ದಕ್ಷಿಣ ಆಫ್ರಿಕದ ದರ್ಬಾನಿನಲ್ಲಿ ಕಪ್ಪು ಜನರು ಭಾರತೀಯರ ಮೇಲೆ ನಡೆಸಿದ ಗಲಭೆಗೆ ಕಾರಣವೇನೆಂಬುದನ್ನು ಪರಿಶೀಲಿಸಲು ಎಲ್ಲಾ ಸೌಕರ್ಯಗಳನ್ನು ಭಾರತದ ಪ್ರತಿನಿಧಿಗಳಾದ ಶ್ರೀ ಆರ್. ಟಿ. ಚಾರಿಯವರಿಗೆ ಕೊಡಲಾಗುವುದೆಂದು ಅಲ್ಲಿನ ಪ್ರಧಾನಿ ಡಾ|| ಮಲಾನರವರು ಭರವಸೆ ಇತ್ತಿದ್ದಾರೆ.

ಜಲಪುರಿಯಲ್ಲಿ ಸರ್ವೋದಯ ದಿನಾಚರಣೆ

ಮೈಸೂರು ೪

ಮಹಾತ್ಮರ ಪುಣ್ಯದಿನದ ಪ್ರಥಮ ವಿನಾಚರಣೆಯ ಸಂಬಂಧವಾಗಿ ಮೈಸೂರು ನಗರ ಮತ್ತು ಜಿಲ್ಲಾ ಹರಿಜನ ಸಂಘದ ಆಶ್ರಯದಲ್ಲಿ ಜಲಪುರಿಯಲ್ಲಿರುವ ರಾಮಮಂದಿರದಲ್ಲಿ ಶ್ರೀ ಟಿ.ಪಿ. ರಾಮರ್‌ರವರ ಅಧ್ಯಕ್ಷತೆಯಲ್ಲಿ ಸರ್ವೋದಯ ದಿನಾಚರಣೆಯು ಕಳೆದ ಭಾನುವಾರ ನಡೆಯಿತು. ಶ್ರೀ ಕೆ. ಶೇಷಾದ್ರಿ ಮತ್ತು ಅಧ್ಯಕ್ಷರು ಭಾಷಣ ಮಾಡಿ, ಹರಿಜನರ ಏಳಿಗೆಗಾಗಿ ಮಹಾತ್ಮರು ಸಲ್ಲಿಸಿರುವ ಸೇವೆಯನ್ನು ತಿಳಿಸಿ, ಅವರ ಉಪದೇಶಗಳನ್ನು ಎಲ್ಲರೂ ಆಚರಣೆಗೆ ತರಬೇಕೆಂದು ಕೋರಿದರು. ಅನಂತರ ಎಲ್ಲರೂ ಎದ್ದು ನಿಂತು, ಮಹಾತ್ಮರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ಹರಿಜನ ಸಂಘದ ಶ್ರೀಗಳಾದ ಪಿ. ಸೀತಾರಾಮಯ್ಯ, ಕೆ. ಶೇಷಾದ್ರಿ ಮತ್ತು ಶ್ರೀಮತಿ ಕಾಮೇಶ್ವರಮ್ಮನವರುಗಳು ಚಾಮರಾಜ ಮೊಹಲ್ಲಾ ಹರಿಜನ ಕೇರಿಗೆ ಕಳೆದ ೧೬ ನೇ ತಾ|| ಭೇಟಿ ಕೊಟ್ಟು ಅವರ ಕುಂದುಕೊರತೆಗಳನ್ನು ಪರಿಶೀಲಿಸಿದರು.

ಕಳೆದ ೩೦ ನೇ ತಾ|| ಶ್ರೀ ಕೆ. ಶೇಷಾದ್ರಿ ಮತ್ತು ಹರಿಜನ ಸೇವಕರು ತಮಿಳು ದೇವರ ಗುಡಿಯ ಕೇರಿಗೆ ಭೇಟಿ ಕೊಟ್ಟರು.

ಕಳೆದ ಸೋಮವಾರ ಪೇಟೆಗೆ ಹರಿಜನರ ಸಂಘದ ಸದಸ್ಯರುಗಳು ಮತ್ತು ಶ್ರೀ ಕೆ. ಶೇಷಾದ್ರಿಯವರು ದೊಡ್ಡ ಆಗ್ರಹಾರ ಪ್ರದೇಶಕ್ಕೆ ಭೇಟಿ ಕೊಟ್ಟು, ಅಲ್ಲಿನ ಕುಂದುಕೊರತೆಗಳನ್ನು ಪರಿಶೀಲಿಸಿದರು.

ಅಕ್ರಮ ಭತ್ತ ಗೋಧಿ ರವಾನೆ ಪತ್ತೆ

ರಾಜಧಾನಿಯ ಮಂಡಿ ಮೊಹಲ್ಲಾ ನಿವಾಸಿ ಚಾಮ ಎಂಬುವನು ೨೫ ಸೇರು ಭತ್ತ ಮತ್ತು ಸಿಲ್ಕ್‌ರಾಜ್ ಮತ್ತು ಲಕ್ಷ್ಮೀಷ್ ಎಂಬುವರು ೧೭ ಸೇರು ಗೋಧಿಯನ್ನು ರಹದಾರಿ ಇಲ್ಲದೆ ಸಾಗಿಸುತ್ತಿದ್ದುದನ್ನು ನಿನ್ನೆ ಫುಡ್ ರೇಡ್ ಪಾರ್ಟಿ ಪೋಲೀಸರು ಪತ್ತೆ ಮಾಡಿ, ಮಾಲನ್ನು ವಶಪಡಿಸಿಕೊಂಡಿರುತ್ತಾರೆ.

ಎರಡನೇ ಬಾರಿ ಹೆಂಡತಿ ಕೊಂದವನಿಗೆ ಫಾಸಿ

ಬ್ರಿಟಿಷ್ ಗಯೋನಾದಲ್ಲಿ ಅನೇಕ ವರ್ಷಗಳಿಂದ ನೆಲೆಸಿರುವ ಲಹುರಿ ಎಂಬ ಭಾರತೀಯನು ತನ್ನ ಎರಡನೆಯ ಹೆಂಡತಿಯನ್ನು ಕೊಂದುದಕ್ಕಾಗಿ ಮರಣ ದಂಡನೆಗೆ ಗುರಿಯಾಗಿರುವನು. ಹದಿನಾರು ವರ್ಷಗಳ ಹಿಂದೆ ಈತನು ತನ್ನ ಮೊದಲನೆ ಹೆಂಡತಿಯನ್ನು ಕೊಲೆ ಮಾಡಿದ್ದನು. ಆಗ ಅವನಿಗೆ ಫಾಸಿ ಶಿಕ್ಷೆಯಾಗಿ, ಜೀವಾವಧಿ ಶಿಕ್ಷೆಗೆ ಇಳಿಸಲಾಗಿತ್ತು. ೧೯೪೭ ನೇ ಆಗಸ್ಟಿನಲ್ಲಿ ಬಿಡುಗಡೆಯಾಗಿದ್ದನು.

ದಂಪತಿ ಮಕ್ಕಳನ್ನು ಕೊಲೆ ಮಾಡಿ, ಅಧಿಕಾರಿಯ ಆತ್ಮ ಹತ್ಯೆ

ಜಿಬ್ರಾಲ್ಟರಿನ ಸೇನಾಧಿಕಾರಿಗಳಾದ ... ನರ್ ಸ್ಕಾಟರವರು ಆರ್ಥಿಕ ಕಷ್ಟದಲ್ಲಿದ್ದು, ಸರ್ಕಾರಕ್ಕೆ ಸೇರಿದ ಹಣವನ್ನು ದುರುಪಯೋಗ ಪಡಿಸಿಕೊಂಡ ಅಪಮಾನವನ್ನು ತಡೆಯಲಾರದೆ ತಮ್ಮ ಹೆಂಡತಿ ಮತ್ತು ಇಬ್ಬರು ಮಕ್ಕಳನ್ನು ಕೊಲೆ ಮಾಡಿ, ತಾವೂ ಆತ್ಮಹತ್ಯೆ ಮಾಡಿಕೊಂಡಿರುವುದು ವರದಿಯಾಗಿದೆ.

ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕು

ಸತ್ಕಾರ ಕೂಟದಲ್ಲಿ ನಿಜಲಿಂಗಪ್ಪನವರ ಭಾಷಣ

ಸ್ವಂ ಸು ಪ್ರೋ.] ಬೆಂಗಳೂರು,

ನಿನ್ನೆ ಸಂಜೆ ನಗರ ಕಾಂಗ್ರೆಸ್ ಸಮಿತಿಯವರು ಶ್ರೀ ಎಸ್. ನಿಜಲಿಂಗಪ್ಪನವರ ಗೌರವಾರ್ಥವಾಗಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಶಾಮರಾಜ ಅಯ್ಯಂಗಾರ್‍ಯರು ಅತಿಥಿಗಳನ್ನು ಸ್ವಾಗತಿಸಿದರು.

ಶ್ರೀ ನಿಜಲಿಂಗಪ್ಪನವರು ಭಾಷಣ ಮಾಡಿ ಇಂದಿನ ಪರಿಸ್ಥಿತಿಯಲ್ಲಿ ಬ್ರಿಟಿಷರ ಆಳ್ವಿಕೆಯು ಇದ್ದಿದ್ದರೂ ಸಹ ಈಗಿನ ಸರ್ಕಾರಕ್ಕಿಂತ ಹೆಚ್ಚು ಸಹಾಯ ಮಾಡಲು ಶಕ್ತರಿರಲಿಲ್ಲವೆಂದು ತಿಳಿಸಿದರು. ಅತ್ಯಂತ ಪ್ರಾಮುಖ್ಯವಾದ ಅನ್ನ ಮತ್ತು ಬಟ್ಟೆಯ ಸಮಸ್ಯೆಗಳನ್ನು ಬಗೆಹರಿಸಲು ನಾಗರಿಕರು ಸರ್ಕಾರಕ್ಕೆ ನೆರವಾಗಿ ಕಾಳಸಂತೆಯನ್ನು ತಡೆಗಟ್ಟಬೇಕೆಂದು ಸೂಚಿಸಿ, ... ರು ಕಾಂಗ್ರೆಸ್ಸಿನಲ್ಲಿ ಹೊಸ ದೃಷ್ಟಿ ಉಂಟಾಗಿ ಸಂಸ್ಥೆಯು ಬಲಗೊಳ್ಳಬೇಕೆಂದು ತಿಳಿಸಿದರು. ಜನರಲ್ಲಿ ನಿಜವಾದ ಪರಿಜ್ಞಾನವನ್ನು ಉಂಟು ಮಾಡಿ ಸದ್ಭಾವನೆಗಳನ್ನು ... ಯುಂಟು ಮಾಡಬೇಕೆಂದು ಕೋರಿದರು. ಕಾರ್ಮಿಕ ಕ್ಷೇತ್ರದಲ್ಲಿ ಕಮ್ಯೂನಿಸ್ಟರುಗಳಿಂದಲೂ, ಸಮಾಜವಾದಿಗಳಿಂದಲೂ ಉಂಟಾಗುತ್ತಿರುವ ತೊಂದರೆಯನ್ನು ಪ್ರತಿಭಟಿಸಬೇಕೆಂದು ಸೂಚಿಸಿದರು. ಮಾತನಾಡುವುದನ್ನು ಕಡಿಮೆ ಮಾಡಿ ಕಾಂಗ್ರೆಸ್ಸಿನವರು ಕಾರ್ಯದಲ್ಲಿ ಹೆಚ್ಚು ಆಸಕ್ತಿ ತೋರಿಸಬೇಕೆಂದು ತಿಳಿಸಿದರು.

ಉಪನಯನ ಮಹೋತ್ಸವಗಳು

ನಂಜನಗೂಡಿನ ಶ್ರೀ ಬಿ ವಿ ಸು... ತರು ತಮ್ಮ ಪುತ್ರ ಚಿ|| ರಾಜಗೋಪಾಲನಿಗೂ,

ರಾಜಧಾನಿಯ ವಕೀಲರಾದ ಶ್ರೀ ಎಂ. ಎನ್. ನಂಜುಂಡಯ್ಯನವರು ತಮ್ಮ ಮಗ ಚಿ|| ಶ್ರೀಕಂಠಯ್ಯನಿಗೂ,

ಅರಮನೆ ಮೋತೀಖಾನೆಯ ಮುನ್ಷಿಯಾದ ಶ್ರೀ ಕೆ. ಸುಬ್ಬರಾಯರು ತಮ್ಮ ಕುಮಾರ ಚಿ|| ಕೆ. ಎಸ್. ಶ್ರೀನಿವಾಸನಿಗೂ,

ಮೈಸೂರು ಸಿಲ್ಕ್ ಫಿಲೇಚರ್ಸ್ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಜಿ. ಕೃಷ್ಣಮೂರ್ತಿರಾಯರು ತಮ್ಮ ಮಗ ಚಿ|| ಲಕ್ಷ್ಮೀನಾರಾಯಣನಿಗೂ,

ಮೈಸೂರು ರೈಲ್ವೆಯ ಆಫೀಸರಾದ ಶ್ರೀ ಎ. ಆರ್. ರಾಘವೇಂದ್ರರಾಯರು ತಮ್ಮ ಪುತ್ರ ಚಿ|| ನರಸಿಂಗರಾಯನಿಗೂ ಉಪನಯನವನ್ನು ನಿನ್ನೆ ನೆರವೇರಿಸಿ ಅನೇಕ ಬಂಧು ಮಿತ್ರರುಗಳನ್ನು ಆಹ್ವಾನಿಸಿ ಸತ್ಕರಿಸಿದರು.

ಮೈಸೂರು ಸಿಟಿ ಮುನಿಸಿಪಾಲಿಟಿ

ಸಿಡುಬು ರೋಗ

ಸಿಡುಬು ರೋಗದ ಪ್ರಾಬಲ್ಯವು ಈ ಬೇಸಿಗೆಯಲ್ಲಿ ವಿಶೇಷವಾಗಿ ಹರಡುವ ನಿರೀಕ್ಷಣೆಯಿದೆಯೆಂದು ತಿಳಿಯಲಾಗಿದೆ. ಈಗಾಗಲೇ ಈ ಪಟ್ಟಣದ ಕೆಲವು ಭಾಗಗಳಲ್ಲಿ ಮೇಲ್ಕಂಡ ರೋಗವು ಪ್ರಾರಂಭವಾಗಿರುತ್ತದೆ. ಈ ರೋಗವು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಅಂಟು ಜಾಡ್ಯವಾಗಿದೆ. ಈ ಸಿಡುಬು ರೋಗವು ಎಲ್ಲಾ ವಯಸ್ಸಿನವರಿಗೂ ಬರುವುದಾದರೂ ಎಳೆಯ ಮಕ್ಕಳಿಗೆ ಇದರ ಹಾವಳಿಯು ಹೆಚ್ಚು. ಈ ರೋಗತಗುಲಿದಲ್ಲಿ ಮುಖ ವಿಕಾರವಾಗುವುದೂ, ಕಣ್ಣು, ಕೈ, ಕಾಲು ಮುಂತಾದ ಅಂಗಗಳು ಹೋಗುವ ಸಂಭವವೂ ಇದೆ. ಮೇಲಾಗಿ ಅನೇಕ ವೇಳೆ ಪ್ರಾಣಾಪಾಯವೂ ಉಂಟು. ಈ ಜಾಡ್ಯವನ್ನು ನಿವಾರಣೆ ಮಾಡುವುದು ಸುಲಭ. ಮುಂಜಾಗ್ರತೆಯಿಂದ ದೇವಿ ಹಾಕಿಸಿಕೊಳ್ಳುವುದರಿಂದಲೇ ಇದನ್ನು ಸುಲಭವಾಗಿ ನಿವಾರಿಸಬಹುದು. ಆಗ ತಾನೇ ಜನನವಾದ ಶಿಶುಗಳ ಮೊದಲುಗೊಂಡು ಹಣ್ಣು ಮುದುಕರವರೆವಿಗೂ ದೇವಿ ಹಾಕಿಸಿಕೊಳ್ಳುವುದು ಒಳ್ಳೆಯದು. ಈ ರೋಗ ಪ್ರಾಪ್ತವಾದಾಗ ಎಲ್ಲಾ ವಯಸ್ಸಿನವರೂ ಮೊದಲೇ ದೇವಿ ಹಾಕಿಸಿಕೊಂಡಿದ್ದರೂ ಕೂಡಾ ಪುನಃ ದೇವಿ ಹಾಕಿಸುವುದು ಅತ್ಯಾವಶ್ಯಕ. ಹಿಂದಿನ ಅನುಭವದಿಂದ ಈ ದೇವಿ ಹಾಕಿಸುವುದರಿಂದ ಉಂಟಾಗುವ ಪ್ರಯೋಜನವು ಇಡೀ ಪ್ರಪಂಚದ ಎಲ್ಲಾ ಜನಾಂಗದ ಅನುಭವಕ್ಕೆ ಒಂದ ವಿಷಯವಾಗಿರುತ್ತದೆ. ರೋಗವು ಆರಂಭವಾದ ಕೂಡಲೇ ವರ್ತಮಾನ ದೊರೆತಲ್ಲಿ ಅದು ಹರಡದಂತೆ ನಿವಾರಣೆ ಕ್ರಮವನ್ನು ಕೈಕೊಳ್ಳಲು ಅನುಕೂಲ.

ಅಂಟು ಜಾಡ್ಯ ತಲೆದೋರಿದ ಒಡನೆಯೇ ಮನೆಯ ಯಜಮಾನರು ನಮ್ಮ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನವನ್ನು ಕೊಡಬೇಕೆಂಬ ಬಗ್ಗೆ ೧೯೧೬ ಸಾವಿರದೊಂಭೈನೂರ ಆರನೇ ಇಸ್ವಿ ಮೈಸೂರು ಮುನಿಸಿಪಲ್ ಒನೇ ರೆಗ್ಯುಲೇಷನ್ ೪೮,(೧) i ನೇ ಸೆಕ್ಷನ್ ಮೇರೆ ತಯಾರಿಸಿದ ಬೈಲಾಗಳ ಸೆಕೆಂಡ್ ಕಾಲಮ್ಮಿನಲ್ಲಿ ನಿರ್ಬಂಧಿಸಲ್ಪಟ್ಟಿದೆ. ಹೀಗೆ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನ ಕೊಡದಿದ್ದಲ್ಲಿ ೫೦ ರೂಪಾಯಿಗಳವರೆಗೂ ಜುಲ್ಮಾನೆ ವಿಧಿಸಲು ಅವಕಾಶವಿದೆ. ಆದ್ದರಿಂದ ಈ ಜಾಡ್ಯ ಸಂಭವಿಸಿದ ಮನೆಯ ಯಜಮಾನನು ಕೂಡಲೇ ಸಂಬಂಧಪಟ್ಟ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನವನ್ನು ದಯವಿಟ್ಟು ಕೊಡಬೇಕಾಗಿ ಎಚ್ಚರಿಸಿದೆ. ಹೀಗೆ ಮಾಡುವುದರಿಂದ ರೋಗದ ಹಾವಳಿಯನ್ನು ಜಾಗ್ರತೆಯಾಗಿ ತಡೆದು ಪ್ರಜಾ ಸೌಖ್ಯವನ್ನು ಭದ್ರಪಡಿಸಲು ಅನುಕೂಲವಾಗುತ್ತದೆ.

ಮುನಿಸಿಪಲ್ ಆರೋಗ್ಯ ಶಾಖೆಯ ಹೆಲ್ತ್ ಇನ್ಸ್‌ಪೆಕ್ಟರುಗಳೂ ಮತ್ತು ವ್ಯಾಕ್ಸಿನೇಟರುಗಳೂ ಈಗಾಗಲೇ ದೇವಿ ಹಾಕುವ ಕೆಲಸವನ್ನು ಪ್ರತಿ ಮೊಹಲ್ಲಾದಲ್ಲಿಯೂ ಚುರುಕಿನಿಂದ ಪರೀಕ್ಷಿಸುತ್ತಾರೆ. ಅಲ್ಲದೆ ಆಯಾ ಮೊಹಲ್ಲಾದ ಮುನಿಸಿಪಲ್ ಆಸ್ಪತ್ರೆಗಳಲ್ಲಿಯೂ ದೇವಿ ಹಾಕುವಂತೆ ಏರ್ಪಾಡು ಮಾಡಲಾಗಿರುತ್ತದೆ. ಮತ್ತು ಮುನಿಸಿಪಲ್ ಹೆಲ್ತ್ ಆಫೀಸಿನಲ್ಲಿಯೂ ಸಹ ಪ್ರತಿ ದಿನವೂ ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ದೇವಿ ಹಾಕಲು ಏರ್ಪಾಡು ಮಾಡಲಾಗಿದೆ. ದೇವಿ ಹಾಕಿಸುವ ಕಾಲದಲ್ಲಿ ಪ್ರಜಾ ಹಿತೈಷಿಗಳೂ ಪುರಪ್ರಮುಖರೂ ಮುಂದಾಳುಗಳಾಗಿ ಬಂದು ಮುನಿಸಿಪಲ್ ಅಧಿಕಾರಿಗಳೊಡನೆ ಪ್ರೀತಿ ಪೂರ್ವಕವಾಗಿ ಸಹಕರಿಸಿ ಈ ರೋಗವನ್ನು ಶೀಘ್ರವಾಗಿ ತಡೆಗಟ್ಟಿ ಆರೋಗ್ಯ ಭಾಗ್ಯವನ್ನು ಕಾಪಾಡಲು ನೆರವಾಗಬೇಕೆಂದು ಪ್ರಾರ್ಥಿಸಿದೆ.

(ಸಹಿ) ಎಸ್. ಆರ್. ಬಾಂಗ್ಲೋರೆ

ಹೆಲ್ತ್ ಆಫೀಸರ್, ಮೈಸೂರು ಸಿಟಿ

ಪ್ರಭಾ → 4-2-49 ರಿಂದ

ಅನೋಸುವಾದ ... ವಾರ

ಪತಿ ಸೇವಾ (ಹಿಂದಿ)

ಪಾತ್ರ ಸುಲೋಚನ ಚಟರ್ಜಿ ಯಾಕೂಬ್

ಲಗ್ನದ ಜವಳಿಗಾಗಿ

ಗುರುದೇವಾ ...

ದಯವಿಟ್ಟು ಇಂದೇ ಭೇಟಿ ಕೊಡಿ

ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ... ಮಗ್ಗದಿಂದ ತಯಾರಾದ ಬೆಂಗಳೂರು ಸೀರೆಗಳು, ಕಣಗಳು, ... ಸರ್ಕಾರ, ಅಂಚು ಮತ್ತು ಕುಂಬಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು, ... ಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ :: ಮೈಸೂರು

Edited, printed and published by A.R. Nagarajan ... the Sadhvi Press, D. Subbaiha Road, Mysore

ರೀ॥ ನಂ. 79[illegible] [illegible] [illegible] ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೭-೩-೧೯೪೯ [ಸಂಚಿಕೆ ೧೬೫

ಭಾರತ ಮುಖ್ಯ ನೌಕಾಧಿಕಾರಿಗಳ ಆಗಮನ

ಮೈಸೂರು ೭

ರಾಯಲ್ ಇಂಡಿಯನ್ ನೌಕಾ ದಳದ ಮುಖ್ಯ ಸೇನಾಪತಿಗಳಾದ ವೈಸ್ ಅಡ್ಮಿರಲ್ ಪ್ಯಾರಿಯವರು ಈ ಬೆಳಿಗ್ಗೆ ೯-೩೦ ಗಂಟೆಗೆ ಮದ್ರಾಸಿನಿಂದ ವಿಮಾನದಲ್ಲಿ ರಾಜಧಾನಿಯ ಬಳಿ ಇರುವ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಅವರನ್ನು ಗೃಹ ಮಂತ್ರಿ ಶ್ರೀ ಟಿ. ಮರಿಯಪ್ಪ, ಶ್ರೀಮನ್ಮಹಾರಾಜರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಜಿ. ಎಲ್. ನಾಗರಾಜ ರಾವ್, ಜಿಲ್ಲಾಧಿಕಾರಿಗಳು, ಮುನ್ಸಿಪಲ್ ಪ್ರೆಸಿಡೆಂಟರಾದ ಶ್ರೀ ಟಿ. ವೆಂಕಟರಮಣಯ್ಯ ಕಮೀಷನರ್ ಶ್ರೀ ಸಿ. ನರಸಿಂಹಮೂರ್ತಿ ಮತ್ತು ಎಸ್. ಚನ್ನಯ್ಯನವರು ಸ್ವಾಗತಿಸಿದರು. ವೈ॥ ಅ॥ ಪ್ಯಾರಿಯವರು ಕೃಷ್ಣರಾಜ ಸಾಗರದಲ್ಲಿ ಶ್ರೀಘ್ರದಲ್ಲಿಯೇ ತೆರೆಯಲಾಗುವ ನೌಕಾ ಶಾಲೆಯ ಸನ್ನಿವೇಶದ ಪರೀಕ್ಷೆಗಾಗಿ ಆಗಮಿಸಿದ್ದರು. ಅವರು ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ, ಅನಂತರ ಮಧ್ಯಾಹ್ನ ಕೊಚ್ಚಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು.

ಎಲ್. ಎಸ್. ಗುಬ್ಬಿಯವರಿಗೆ ಸತ್ಕಾರ

ಬೊಂಬಾಯಿನ ಮೈಸೂರು ಸಂಘದ ಅಧ್ಯಕ್ಷರಾದ ಶ್ರೀ ಎಲ್. ಎಸ್. ಗುಬ್ಬಿಯವರ ಗೌರವಾರ್ಥವಾಗಿ ಶ್ರೀ ಎಸ್. ಚನ್ನಯ್ಯನವರು ಮೊನ್ನೆ ತಮ್ಮ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಪೌರ ಸಭಾ ಸದಸ್ಯರುಗಳೂ, ಇತರ ಹಲವು ಅತಿಥಿಗಳೂ ಬಂದಿದ್ದರು. ಶ್ರೀ ಗುಬ್ಬಿಯವರು ಮೈಸೂರು ಕಾಂಗ್ರೆಸ್ಸಿಗೂ ಮೈಸೂರಿನ ನಿವಾಸಿಗಳಿಗೂ ಮಾಡಿರುವ ಸಹಾಯಗಳನ್ನು ಪ್ರಶಂಸಿಸಿ, ಶ್ರೀ ಚನ್ನಯ್ಯನವರು ಭಾಷಣ ಮಾಡಿದರು. ಶ್ರೀ ಗುಬ್ಬಿಯವರು ಸತ್ಕಾರಕ್ಕಾಗಿ ಧನ್ಯವಾದವನ್ನು ಸಲ್ಲಿಸಿ, ಸ್ವಾತಂತ್ರ್ಯವು ದೊರೆತಿರುವ ಈ ಸಮಯದಲ್ಲಿ ಎಲ್ಲರೂ ಮಾತನ್ನು ಕಡಿಮೆ ಮಾಡಿ, ರಾಷ್ಟ್ರ ರಚನಾ ಕಾರ್ಯದಲ್ಲಿ ತೊಡಗಬೇಕೆಂದು ಹೇಳಿದರು.

ತ್ಯಾಗರಾಜ ಪುರಂದರ ದಾಸರ ಮತ್ತು ಗಾಂಧಿ ಜಯಂತಿ

ರಾಜಧಾನಿಯ ಶ್ರೀ ತ್ಯಾಗರಾಜ ಗಾನ ಸಭೆಯ ಆಶ್ರಯದಲ್ಲಿ ಈ ದಿನ ಸಂಜೆ ೬ ಗಂಟೆಗೆ ನಗರ ಸಭೆಯ ಕಮೀಷನರ್ ಶ್ರೀ [illegible] ನರಸಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಶ್ರೀ ತ್ಯಾಗರಾಜರ, ಪುರಂದರ ದಾಸರ ಮತ್ತು ಗಾಂಧೀಜಿಯವರ ಜಯಂತಿಯು, [illegible] ಭವನದಲ್ಲಿ ನಡೆ[illegible] ಸಂಗೀತ [illegible] ಉಪನ್ಯಾಸ [illegible]

ಹೋಟೇಲಿನಲ್ಲಿ ಅಕ್ರಮ ವಾಸ್ತವ್ಯ ಪತ್ತೆ

[illegible] ವಿದೊಡ್ಡ [illegible] ವರ್ಷ ಆಸ್ಪತ್ರೆ [illegible] ಗದ್ದೆಯಲ್ಲಿರುವ [illegible] ಮೂಡಿ ಹೋಟೇಲಿನಲ್ಲಿ ಅಕ್ರ[illegible] ವಹಿವಾಟು ನಡೆಸುವ [illegible] [illegible] ಸೇರು ಗೋಧಿ, [illegible] ಗೋಧಿ ಹಿಟ್ಟು ಮತ್ತು [illegible] ಸೇರು [illegible] ಭಕ್ಷ್ಯಗಳನ್ನು ಈ ದಿನ [illegible] ಇನ್ಸ್‌ಪೆಕ್ಟರಾದ ಶ್ರೀ [illegible] ಪೋಲೀಸರ ಸಹಾಯದಿಂದ ಪತ್ತೆ ಮಾಡಿ, ಅವನ್ನು ವಶಪಡಿಸಿಕೊಂಡು, ಮುಂದಿನ ತನಿಖೆ ನಡೆಸುತ್ತಾರೆ.

ಗಾಂಧಿ ಹೆಸರನ್ನು ಹೇಳಿಕೊಂಡು ಆತ್ಮ ಹತ್ಯೆ

ಬೆಂಗಳೂರು ೬

ಮಂಗಳೂರಿನವನೆಂದು ಹೇಳಲಾದ ೩೫ ವರ್ಷ ವಯಸ್ಸಿನ ಅಪರಿಚಿತನೊಬ್ಬನು ನಿನ್ನೆ ಮಧ್ಯಾಹ್ನ ದೊಡ್ಡಪೇಟೆ ವಿಕ್ಟೋರಿಯಾ ಹಾಲ್ ಎದುರಿನಲ್ಲಿ ಗಾಂಧಿಜಿಯ ಸ್ಮರಣೆ ಮಾಡುತ್ತ ಎದೆಗೆ ಚೂರಿಯಿಂದ ತಿವಿದುಕೊಂಡ ವಿಚಿತ್ರ ಘಟನೆಯು ನಡೆಯಿತು. ಚಾಕುಗಳನ್ನು ಮಾರಾಟ ಮಾಡುವವನಬಳಿ ಹೋಗಿ ಆತನ ಹತ್ತಿರ ಇದ್ದ ಚಾಕುವೊಂದನ್ನು ಎತ್ತಿಕೊಂಡು ಆವನು ಮೇಲೆ ಹೇಳಿದ ಕೃತ್ಯ ನಡೆಸಿದನೆಂದು ವರದಿಯಾಗಿದೆ.

ಸಿನಿಮಾ ಮತ್ತು ಅಂಗಡಿಗಳಿಗೆ ಕಾಲದ ನಿಗದಿ

ಮದ್ರಾಸ್ ಸರಕಾರದವರು ಬರುವ ಏಪ್ರಿಲ್ ೧ ನೇ ತಾರೀಖಿನಿಂದ ಆ ಪ್ರಾಂತದಲ್ಲಿರುವ ಯಾವುದೇ ಅಂಗಡಿಯಾಗಲಿ ಬೆಳಿಗ್ಗೆ ಆರು ಘಂಟೆಗಿಂತ ಮುಂಚೆ ತೆರೆಯಕೂಡದೆಂದು ಮತ್ತು ಸಂಜೆ ೮ ಘಂಟೆಯಾದ ನಂತರ ತೆರೆದಿರಕೂಡದೆಂದು ಆಜ್ಞೆ ಮಾಡಿದ್ದಾರೆ. ಊಟ ತಿಂಡಿ ಹೋಟೇಲುಗಳು ಬೆಳಿಗ್ಗೆ ೫ ಘಂಟೆಗಿಂತ ಮುಂಚೆ ತೆರೆಯಕೂಡದು ಮತ್ತು ರಾತ್ರಿ ೧೦ ಘಂಟೆವರೆಗೆ ಮಾತ್ರ ತೆರೆದಿರಬೇಕು. ಹಾಗೆಯೇ ಸಿನಿಮಾ ಮಂದಿರಗಳು ಮಧ್ಯಾಹ್ನ ೧ ಘಂಟೆಗಿಂತ ಮುಂಚೆ ಪ್ರಾರಂಭಿಸಕೂಡದು. ರಾತ್ರಿ ೧ ಘಂಟೆಗೆ ಮುಂಚೆ ಮುಗಿಯಬೇಕು.

ಹೈದರಾಬಾದ್ ಕಾಂಗ್ರೆಸ್ಸಿನವರಲ್ಲಿ ಒಪ್ಪಂದ

ಹೈದರಾಬಾದಿನಲ್ಲಿ ಕಾಂಗ್ರೆಸ್ಸಿನ ಎರಡು ಪಕ್ಷದವರಿಗೆ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ಉಪ ಪ್ರಧಾನಿ ಸರ್ದಾರ್ ಪಟೇಲರ ಮಧ್ಯಸ್ಥಿಕೆಯಿಂದ ಬಗೆಹರಿದು ಒಪ್ಪಂದವೊಂದಕ್ಕೆ ಒಳಗಾಗಿದೆ. ಸ್ವಾಮಿ ರಮಾನಂದ ತೀರ್ಥರ ನಾಯಕತ್ವದಲ್ಲಿ ಸಂಸ್ಥಾನದ ಕಾಂಗ್ರೆಸ್ ಮಾತ್ರವಿದ್ದು, ಅದರಲ್ಲಿ ಬೇರೆ ಪಕ್ಷದ ಕಾಂಗ್ರೆಸ್ಸಿನವರನ್ನೂ ಸೇರಿಸಿಕೊಳ್ಳಲಾಗುವುದು ಮತ್ತು ಈಗಿರುವ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯನ್ನು ಪುನರ್ರಚಿಸಲಾಗುವುದು.

ಸಿಮೆಂಟ್ ಬೇಕೇ?

ಬಗೋ[illegible], ಡಾಲ್ಮಿಯಾ

ಪ್ರೀಸ್ಕ್ರೈಬ್‌ ಮಾಡಿದ್ದು ಸರ್ಕಾರದವರು ನಿಗದಿ ಮಾಡಿರುವ ಬೆಲೆಗೆ ಸಿಕ್ಕುವಂತಾದ್ದು

... ಇತಿ.

ಸಿ. ಬಿ. ಎಸ್. ಕಂಪನಿ,

ಅಶೋಕಾ ರೋಡ್ ಮೈಸೂರು

ಮಂತ್ರಿ ಮಂಡಲದಲ್ಲಿ ಬದಲಾವಣೆಯಾಗಬೇಕು

ಪ್ರಜಾ ಮಂಡಲದವರ ನಿರ್ಣಯ

ಮೈಸೂರು ೭

ಪ್ರಜಾ ಮಂಡಲದ ಆಶ್ರಯದಲ್ಲಿ ಕಳೆದ ಶುಕ್ರವಾರ ಟೌನ್ ಹಾಲ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು, —

ಯಾವುದೇ ಕಾರಣದಿಂದಲೂ ಮಾದರಿ ಮೈಸೂರಿಗೆ ಕಳಂಕವನ್ನು ತರಕೂಡದು. ಸತ್ಯ ಮತ್ತು ನ್ಯಾಯ ಧರ್ಮವನ್ನು ಕಾಪಾಡಿಕೊಂಡು ಬರುವ ಉದ್ದೇಶದಲ್ಲಿ ಎಷ್ಟೇ ಕಷ್ಟ ನಷ್ಟಗಳುಂಟಾದರೂ ಪ್ರಜೆಗಳು ಧೈರ್ಯಗೆಡದೆ ಇರಬೇಕು. ಈಗಿನ ಮಂತ್ರಿ ಮಂಡಲವನ್ನು ಕೂಡಲೇ ಬದಲಾಯಿಸಬೇಕೆಂದು ಶ್ರೀಮನ್ಮಹಾರಾಜರವರನ್ನು ಒತ್ತಾಯಪಡಿಸುವುದು. ಮಾದರಿ ಮೈಸೂರಿನ ಆರ್ಥಿಕ ಮತ್ತು ಸಾಂಸ್ಕೃತಿಕ ಅಭ್ಯುದಯಕ್ಕೆ ಬಹಳ ಅನುಕೂಲವಾದುದರಿಂದ ಅದಕ್ಕೆ ಭಾರತ ಸರ್ಕಾರದವರು ಸಹಕರಿಸಬೇಕು.

ಮಹಾತ್ಮರ ವಾರ್ಷಿಕ ಶಾಂತಿ ಸಪ್ತಾಹ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಮುಂಭಾಗದಲ್ಲಿ ಕಳೆದ ಒಂದು ವಾರದಿಂದ ನಡೆಯುತ್ತಿದ್ದ ಗಾಂಧೀಜಿ ಸ್ಮಾರಕ ವಾರ್ಷಿಕ ಸಪ್ತಾಹವು ನಿನ್ನೆಗೆ ಮುಕ್ತಾಯವಾಯಿತು. ನಗರದ ಮುಖ್ಯ ರಸ್ತೆಗಳಲ್ಲಿ ನಿನ್ನೆ ಮಧ್ಯಾಹ್ನ ೬ ಜೊತೆ ಎತ್ತುಗಳನ್ನು ಕಟ್ಟಿದ ರಥದಲ್ಲಿ ಶ್ರೀ ಕೃಷ್ಣ ಮತ್ತು ಮಹಾತ್ಮರ ಭಾವ ಚಿತ್ರಗಳನ್ನಿಟ್ಟು ಮೆರವಣಿಗೆ ನಡೆಸಲಾಯಿತು. ಅನಂತರ ನೂರಾರು ಬಡ ಜನರಿಗೆ ಅನ್ನದಾನ ಜರುಗಿತು.

ಗಾಂಧೀಜಿ ಕೊಲೆ ಸಂಬಂಧವಾಗಿ ಮತ್ತಿಬ್ಬರ ದಸ್ತಗಿರಿ

ಮಹಾತ್ಮ ಗಾಂಧಿಯವರ ಕೊಲೆಯ ಪಿತೂರಿಗೆ ಸೇರಿದವರೆಂಬ ಅಪಾದನೆಯ ಮೇರೆ ಬೊಂಬಾಯಿನಲ್ಲಿ ಗಂಗಾಧರ್ ದಂಡವತೆ ಮತ್ತು ಗಂಗಾಧರ ಜಾಧವ [illegible] ನರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ. ಈ ಕೊಲೆ ಸಂಬಂಧದಲ್ಲಿ ಮೊದಲು ಅಪಾದಿತ[illegible] ದಸ್ತಗಿರಿಯಾಗದೆ ತಪ್ಪಿಸಿಕೊಂಡಿದ್ದರೆಂದೂ, ಮೊದಲನೆಯವ[illegible] ನಾಥ ಸಕಾಲದಲ್ಲಿಯೇ ಕರ್ಮಾನು [illegible] ಸಿಕ್ಕಿದ್ದನೆಂದೂ ಹೇಳಲಾಗಿದೆ.

[illegible] ಸಕಲೇಶಪುರದ [illegible] ಪ್ರಮುಖ [illegible] [illegible] ಎಂಬುವರನ್ನು [illegible] ಪ್ರತಿವಾದಿ ದಸ್ತಗಿ[illegible] ಮಾಡ [illegible] [illegible] ವಿಚಾರಣೆ ನಡೆದು [illegible] ವಿಚಾರ [illegible] ಜನಾಬರು ಮಾ[illegible] ಗಿದ್ದರು

ಕ್ಷಾಮದಿಂದ ಜನರು ಹುಲ್ಲು ತಿನ್ನುತ್ತಿದ್ದಾರೆ

ದಕ್ಷಿಣ ಆಫ್ರಿಕದಲ್ಲಿರುವ ನ್ಯಾಸಾಲೆಂಡಿನಲ್ಲಿ ಮಳೆ ಬಾರದೆ, ಕ್ಷಾಮವು ತಲೆದೋರಿ, ಅಲ್ಲಿನ ನಿವಾಸಿಗಳು ಹೊಟ್ಟೆಗೆ ಆಹಾರವಿಲ್ಲದೆ ಹುಲ್ಲು ಮತ್ತು ಬೇರುಗಳನ್ನು ತಿನ್ನುತಿದ್ದಾರೆಂದು ವರದಿಯಾಗಿದೆ. ಸರ್ಕಾರದವರು ಕ್ಷಾಮ ನಿವಾರಣಾ ಕಾರ್ಯಕ್ರಮವನ್ನು ಕೈಗೊಂಡು, ಬೀರ್ ಎಂಬ ಮದ್ಯದ ತಯಾರಿಕೆಯನ್ನು ನಿಷೇಧಿಸಿ, ಆಹಾರ ಧಾನ್ಯಗಳ ಸಂಗ್ರಹಣೆ ಲೆಕ್ಕವನ್ನು ಜನರು ಕೊಡಬೇಕೆಂದು ಆಜ್ಞೆ ಮಾಡಿರುತ್ತಾರೆ.

ಪರ್ಷಿಯಾದ ಷಾರವರ ಮೇಲೆ ಗುಂಡಿನೇಟು

ಪರ್ಷಿಯಾದ ದೊರೆಗಳಾದ ಷಾ ಮಹಮ್ಮದ್ ರೇಜಾ ಪೆಹ್ಲವಿಯವರ ಮೇಲೆ ಮೊನ್ನೆ ದಿನ ಫಕ್ರ ರಾಯ್ ಎಂಬ ಪತ್ರಿಕೋದ್ಯೋಗಿಯು ಗುಂಡನ್ನು ಹಾರಿಸಿ ಗಾಯ ಪಡಿಸಿದನೆಂದು ವರದಿಯಾಗಿದೆ. ಅವರಿಗೆ ತುಟಿ ಮತ್ತು ಬೆನ್ನಿನ ಮೇಲೆ ಗಾಯವಾಗಿದೆ. ಟೆಹರಾನಿನ ವಿಶ್ವವಿದ್ಯಾಲಯದ ಸಮಾರಂಭವೊಂದರಲ್ಲಿ ಭಾಗ ವಹಿಸಲು ಷಾರವರು ಅಲ್ಲಿಗೆ ಹೋಗಿ, ಬಮವಾಹನ ವಿನಿಯೋಗ ಮಾಡುತ್ತಿದ್ದಾಗ ಈ ಘಟನೆ ನಡೆಯಿತೆಂದು ಹೇಳಲಾಗಿದೆ. ಗುಂಡು ಹಾರಿಸಿದವನ ಮೇಲೆ, ಜನರು ಬಿದ್ದು ಗಾಯಪಡಿಸಿದ್ದರಿಂದ ಆತನು ಸತ್ತುಹೋದನು.

ನಿಜಾಮರ ಸ್ವಂತ ಆಸ್ತಿ ಸರ್ಕಾರದ ವಶ

ಹೈದರಾಬಾದ್ ನೈಜಾಮರಿಗೆ ಸೇರಿದ ಸುಮಾರು ೯ ಸಾವಿರ ಚದುರ ಮೈಲಿಯುಳ್ಳ ಸ್ವಂತ ಆಸ್ತಿಯನ್ನೆಲ್ಲಾ ಸರ್ಕಾರದವರು ತಮ್ಮ ಹತೋಟಿಗೆ ಮುಂದಿನ ವಾರದೊಳಗೆ ತೆಗೆದುಕೊಳ್ಳಲಿರುವರೆಂದು ಅದರ ಒಟ್ಟು ೫॥ ಕೋಟಿ ರೂ, ಉತ್ಪತ್ತಿ ಪೈಕಿ, ೧ ಕೋಟಿ ರೂ. ಅನ್ನು ಮಾತ್ರ ನೈಜಾಮರಿಗೆ ರಾಜಧನವಾಗಿ ಕೊಡಲಾಗುವುದೆಂದೂ ವರದಿಯಾಗಿದೆ. ಈ ಬಗ್ಗೆ ನೈಜಾಮರು ನಿನ್ನೆ ಒಂದು ಘೋಷಣೆಯನ್ನು ಹೊರಡಿಸಿ ತಮ್ಮ ಜಮೀನುಗಳನ್ನೆಲ್ಲಾ ಸರ್ಕಾರದ ಆಡಳಿತಕ್ಕೆ ಕೊಟ್ಟಿರುತ್ತಾರೆ.

ಮಹಾತ್ಮರ ಕೊಲೆ ಮೊಕದ್ದಮೆಯ ತೀರ್ಪು

ಮಹಾತ್ಮರ ಕೊಲೆ ಮೊಕದ್ದಮೆಯ ತೀರ್ಪು ಇದೇ ೧೦ ನೇ ತಾ॥ ಗುರುವಾರ ಬೆಳಗ್ಗೆ ೧೧-೩೦ ಗಂಟೆಗೆ ಕೊಡಲ್ಪಡುವುದು.

RAJAKAMAL MYSORE

From 6-2-49

Daily 3 Shows

3 p.m. 6-15 p.m. & 9-45 p.m.

UNIVERSAL's Full Thrilling Serial

Don Winslow of the Coast Guard

ಯುನಿವರ್ಸಲ್‌ರವರ

ಡಾನ್ ವಿನ್ಸ್ಲೋ ಆಫ್ ದಿ ಕೋಸ್ಟ್ ಗಾರ್ಡ್

ವಿದ್ಯಾರ್ಥಿಗಳಿಗೆ

ಕ್ಷಯ ನಿವಾರಣೆ ಇಂಜಕ್ಷನ್

ಕ್ಷಯ ರೋಗದ ನಿವಾರಣಾ ಮುಂಜಾಗ್ರತಾ ಕಾರ್ಯಕ್ರಮದ ಅಂಗವಾಗಿ ಮದರಾಸ್ ನಗರದ ಎಲ್ಲಾ ಶಾಲಾ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಬಿ ಸಿ ಜಿ ವ್ಯಾಕ್ಸೀನ್ ಇಂಜಕ್ಷನನ್ನು ಕೊಡಲು ಸರ್ಕಾರದವರು ನಿರ್ಧರಿಸಿದ್ದಾರೆ. ಮದರಾಸ್ ಪ್ರಾಂತ್ಯದಾದ್ಯಂತ ಈ ಕಾರ್ಯಕ್ರಮವನ್ನು ಇನ್ನು ಎರಡು ವಾರಗಳಲ್ಲಿ ಕೈಗೊಳ್ಳಲಾಗುವುದು.

ಕೋಳಿಗಳ ಪತ್ತೆ

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಜಾರ್ಜ್ ಮ್ಯಾಥ್ಯೂ ಮತ್ತು ನಿವೃತ್ತ ಜಿಲ್ಲಾ ಪೋಲೀಸ್ ಅಧಿಕಾರಿಗಳಾದ ಶ್ರೀ ಮರಿಯಪ್ಪನವರ ಮನೆಗಳಲ್ಲಿ ಇತ್ತೀಚೆಗೆ ಕೋಳಿಗಳನ್ನು ಕಳುವು ಮಾಡಿದನೆಂಬ ಆಪಾದನೆಯ ಮೇಲೆ ನಂಜಿ ... ... ಎಂಬುವನನ್ನು ಪೋಲೀಸರ ವಶಕ್ಕೆ ಮಾಡಿ ... ಕೋಳಿಗಳನ್ನು ಪತ್ತೆ ಮಾಡಿರುತ್ತಾರೆ ... ಮೂರು ... ಶಿಕ್ಷೆ ಅನುಭವಿಸಿರುತ್ತಾನೆ

ಅಗ್ಗದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಒಂದು ಭೇಟಿ ಕೊಡಿ

... ಮೈಸೂರು ... ... ಬೆಂಗಳೂರು ಧರ್ಮವರಂ, ಆರಣಿ ಮತ್ತು ಕುಂಭಕೋಣಂ ಸೀರೆಗಳು, ಕಲಾಪತ್ತು ಪಂಚೆಗಳು ಮುಂತಾದವು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ . ಮೈಸೂರು

JAWA

Motor Cycle for Sale

Contact :--St. Philomena's College Mysore

ವಿವಾಹ ಮಹೋತ್ಸವ

ದಾವಣಗೆರೆ ನಿವೃತ್ತ ಸ್ಕ್ರಾ॥ ಇನ್ಸ್‌ಪೆಕ್ಟರ್ ಶ್ರೀ ಹೆಚ್. ಸೀತಾರಾಮಯ್ಯನವರು ತಮ್ಮ ದ್ವಿತೀಯ ಕುಮಾರ ಚಿ॥ ವೆಂಕಟಗಿರಿಯವರಿಗೆ ತುಮಕೂರು ತಾಲ್ಲೂಕು ಹೆಬ್ಬೂರಿನ ಸ್ಕೂಲ್ ಮಾಸ್ಟರ್ ಸುಬ್ಬರಾಯರ ಪುತ್ರಿ ಚಿ॥ ಸೌ॥ ನಂಜಮ್ಮನನ್ನು ತಂದುಕೊಂಡು ಹೆಬ್ಬೂರು ಗ್ರಾಮದಲ್ಲಿ ವಿವಾಹವನ್ನು ಕಳೆದ ಗುರುವಾರ ನೆರವೇರಿಸಿದರು.

ನಿಮ್ಮ ಮೈ ಮೊಕವಲ್ಲಿನಂತೆ

ಹೊಳೆಯಬೇಕೆ? ನೀವು

ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಿಮ್ಮ ಮೈಸೂರು ... ... ವಲ

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಎಲ್ಲರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

ಉಪನಯನ

ದಾಸಪ್ರಕಾಶ ಹೋಟೇಲಿನ ವ್ಯವಸ್ಥಾಪಕರಾದ ಶ್ರೀ ಬಿ. ಎಂ. ಎಸ್. ತಂತ್ರಿಯವರು ತಮ್ಮ ಹಿರಿಯ ಕುಮಾರ ಚಿ॥ ಅನಂತ ಪ್ರಕಾಶನಿಗೆ ಕಳೆದ ಶುಕ್ರವಾರ ನಂಜರಾಜ ಬಹದ್ದೂರ್ ಛತ್ರದಲ್ಲಿ ಬ್ರಹ್ಮೋಪದೇಶವನ್ನು ನೆರವೇರಿಸಿ, ಅನೇಕ ಜನ ಬಂಧುಮಿತ್ರರನ್ನು ಬರಮಾಡಿಕೊಂಡು ಸತ್ಕರಿಸಿದರು

Edited, printed and published by A.R.Nagarajan at the Sadhvi Press, D. Subbaiah Road, Mysore.

ಪ್ರಭುದೇವಾ ಟಾಕೀಸಿನಲ್ಲಿ

7-2-49ರಿಂದ ಆರಂಭ

ಪ್ರತಿ ದಿನ ೩ ಆಟಗಳು

ಭಕ್ತ ಗೌರಿ

(ತಮಿಳು)

ಪಾತ್ರ:-U. R. ಜೀವರತ್ನಂ S. D. ಸುಬ್ಬಯ್ಯ L. ನಾರಾಯಣರಾವ್ C. V. V. ಪಂತುಲು K. K. ಪೆರುಮಾಳ್

P. S. ಶಿವಭಾಗ್ಯಂ, ಕಾಳಿ N ರತ್ನಂ

ಮೈಸೂರು ಸಿಟಿ ಮುನಿಸಿಪಾಲಿಟಿ

ಸಿಡುಬು ರೋಗ

ಸಿಡುಬು ರೋಗದ ಪ್ರಾಬಲ್ಯವು ಈ ಬೇಸಿಗೆಯಲ್ಲಿ ವಿಶೇಷವಾಗಿ ಹರಡುವ ನಿರೀಕ್ಷಣೆಯಿದೆಯೆಂದು ತಿಳಿಯಲಾಗಿದೆ. ಅಲ್ಲದೆ ಈ ಪಟ್ಟಣದ ಕೆಲವು ಭಾಗಗಳಲ್ಲಿ ಮೊಲ್ಕಂಡ ರೋಗವು ಪ್ರಾಪ್ತವಾಗಿರುತ್ತದೆ. ಈ ರೋಗವು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಅಂಟು ಜಾಡ್ಯವಾಗಿದೆ. ಈ ಸಿಡುಬು ರೋಗವು ಎಲ್ಲಾ ವಯಸ್ಸಿನವರಿಗೂ ಬರುವುದಾದರೂ ಎಳೆಯ ಮಕ್ಕಳಲ್ಲಿ ಇದರ ಹಾವಳಿಯು ಹೆಚ್ಚು. ಆರೋಗ ತಗುಲಿದಲ್ಲಿ ಮುಖ ವಿಕಾರವಾಗುವುದೂ, ಕಣ್ಣು, ಕೈಕಾಲು ಮುಂತಾದ ಅಂಗಗಳು ಹೋಗುವ ಸಂಭವವೂ ಇದೆ. ಮೇಲಾಗಿ ಅನೇಕ ವೇಳೆ ಪ್ರಾಣಾಪಾಯವೂ ಉಂಟು. ಈ ಜಾಡ್ಯವನ್ನು ನಿವಾರಣೆ ಮಾಡುವುದು ಸುಲಭ. ಮುಂಜಾಗ್ರತೆಯಿಂದ ಮೇಲು ಹಾಕಿಸಿಕೊಳ್ಳುವುದರಿಂದಲೇ ಇದನ್ನು ಸುಲಭವಾಗಿ ನಿವಾರಿಸಬಹುದು. ಆಗ ತಾನೇ ಜನನವಾದ ಶಿಶುಗಳ ... ಹಣ್ಣು ಮುದುಕರವರೆಗೂ ಮೇಲು ಹಾಕಿಸಿಕೊಳ್ಳುವುದು ... ರೋಗ ಪ್ರಾಪ್ತವಾದಾಗ ಎಲ್ಲಾ ವಯಸ್ಸಿನವರೂ ... ಮೇಲು ಹಾಕಿಸಿಕೊಂಡಿದ್ದರೂ ... ... ಗುವ ಪ್ರಯೋಜನವು ... ಎಲ್ಲಾ ಜನಾಂಗದ ಅನುಭವಕ್ಕೆ ... ವಿಷಯವಾಗಿರುತ್ತದೆ. ರೋಗವು ಆರಂಭವಾದ ಕೂಡಲೇ ವರ್ತಮಾನ ಕೊಡುವುದರಿಂದ ... ಹರಡದಂತೆ ನಿವಾರಣೆ ... ವನ್ನು ಕೈಗೊಳ್ಳಲು ಅನುಕೂಲ.

ಅಂಟು ವ್ಯಾಧಿ ತಲೆದೋರಿದ ... ದೆ. ... ... ಮುನಿಸಿಪಲ್ ... ವರ್ತಮಾನವನ್ನು ಕೊಡಬೇಕೆಂದು ... ಸಾವಿರದೊಂಭೈನೂರ ಆರನೇ ಇಸ್ವಿ ಮೈಸೂರು ಮುನಿಸಿಪಲ್ ... ನೇ ರೆಗ್ಯುಲೇಷನ್ ... ನೇ ಸೆಕ್ಷನ್ ಮೇರೆ ತಯಾರಿಸಲಾಗಿರುವ ಬೈಲಾಗಳ ಸೆಕೆಂಡ್ ಷೆಡ್ಯೂಲಿನಲ್ಲಿ ನಿರ್ಧರಿಸಲ್ಪಟ್ಟಿದೆ. ಹೀಗೆ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನ ಕೊಡದಿದ್ದಲ್ಲಿ ... ರೂಪಾಯಿಗಳವರೆಗೂ ಜುಲ್ಮಾನೆ ವಿಧಿಸಲು ಅವಕಾಶವಿದೆ. ಆದ್ದರಿಂದ ಈ ... ಯಲ್ಲಿ ಸಂಭವಿಸಿದ ಮನೆಯ ಯಜಮಾನನು ಕೂಡಲೇ ಸಂಬಂಧಪಟ್ಟ ಮುನಿಸಿಪಲ್ ಅಧಿಕಾರಿಗಳಿಗೆ ವರ್ತಮಾನವನ್ನು ತಪ್ಪದೆ ಯವಿಟ್ಟು ಕೊಡಬೇಕಾಗಿ ಎಚ್ಚರಿಸಿದೆ. ಹೀಗೆ ಮಾಡುವುದರಿಂದ ರೋಗದ ಹಾವಳಿಯನ್ನು ಜಾಗ್ರತೆಯಾಗಿ ತಡೆದು ಜನರ ಸೌಖ್ಯವನ್ನು ಭದ್ರಪಡಿಸಲು ಅನುಕೂಲವಾಗುತ್ತದೆ.

ಮುನಿಸಿಪಲ್ ಆರೋಗ್ಯ ಶಾಖೆಯ ... ಇನ್ಸ್‌ಪೆಕ್ಟರುಗಳೂ ಮತ್ತು ... ನೇಟರುಗಳೂ ಈಗಾಗಲೇ ಮೇಲು ... ವ ಕೆಲಸವನ್ನು ಪ್ರತಿ ಮೊಹಲ್ಲಾದಲ್ಲಿ ... ಸುರುಕಿನಿಂದ ನಡೆಸುತ್ತಿದ್ದಾರೆ. ... ಆಯಾ ಮೊಹಲ್ಲಾದ ಮುನಿಸಿಪಲ್ ... ತ್ರೆಗಳಲ್ಲಿಯೂ ಮೇಲು ಹಾಕಿಸುವ ... ರ್ಪಾಟು ಮಾಡಲಾಗಿರುವುದಲ್ಲದೆ ... ಮುನಿಸಿಪಲ್ ಹೆಲ್ತ್ ಆಫೀಸಿನಲ್ಲಿಯೂ ಪ್ರತಿ ದಿನವೂ ಬೆಳಿಗ್ಗೆ ಮತ್ತು ಸಂಜೆ ... ಶಾಲೆಗಳಲ್ಲಿ ಮೇಲು ಹಾಕಲು ... ಮಾಡಲಾಗಿದೆ ... ಮೇಲು ಹಾಕಿಸಿ ... ಲವಿಲ್ಲ ... ಪ್ರವ ... ಮುನಿಸಿಪಲ್ ಅಧಿಕಾರಿಗಳಿಗೆ ಪ್ರೀತಿ ಪೂರ್ವಕವಾಗಿ ಸಹಕರಿಸಿ ರೋಗವನ್ನು ಶೀಘ್ರವಾಗಿ ತಡೆಗಟ್ಟಿ ... ಗ್ಯ ಭಾಗ್ಯವನ್ನು ಕಾಪಾಡಬೇಕೆಂದು ಪ್ರಾರ್ಥಿಸಿದೆ

ಎಸ್. ಆರ್. ಬಾಂಬೆ...

ಹೆಲ್ತ್ ಆಫೀಸರ್, ಮೈಸೂರು ...

Council of Scientific and Industrial Research

—:0:—

CENTRAL FOOD TECHNOLOGICAL RESEARCH INSTITUTE.

Sealed Tenders will be received in the Office of the Planning Officer, Central Food Technological Research Institute, Cheluvamba Mansion, Mysore up to 5 p. m. on 12th February 1949 for repairing and remodelling an existing building to accommodate the Animal House.

Each tender must be accompanied by a receipt for having credited to the Office of the Institute the deposit of Rs 250 in cash. The work must be completed by 15th March 1949. Tender forms must be given as so much percent. above or below the estimate in words on forms which can be obtained from the Office of the Institute on payment of 4 Annas per form. Plans and other particulars relating to the work can be obtained from the office of the Institute on any working day from 10 a m to 5 p m

ಫೋ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೮–೭–೧೯೪೮ [ಸಂಚಿಕೆ ೧೭೭

ರೈಲ್ವೆ ಪಾರ್ಸಲ್ಲುಗಳ ಕಳುವಿನ ಪತ್ತೆ

ವೀರರಾಜಪೇಟೆ ಔಟ್ ಏಜೆನ್ಸಿಯಲ್ಲಿ ನೌಕರರೊಬ್ಬರ ಸಹಾಯದಿಂದ ೩ ವರ್ಷಗಳಿಂದಲೂ ಮೈಸೂರು ರೈಲ್ವೆಯಲ್ಲಿ ಪಾರ್ಸಲ್ಲುಗಳನ್ನು ಕಳುವು ಮಾಡಿ, ಅವುಗಳ ಬದಲು ಕಲ್ಲುಗಳನ್ನು ಭರ್ತಿ ಮಾಡುತ್ತಿದ್ದುದನ್ನು ಸಿಟಿ ರೈಲ್ವೆ ಪೋಲೀಸರು ಪತ್ತೆ ಮಾಡಿ, ಕೆಲವು ಸಾಮಾನುಗಳನ್ನು ವಶಪಡಿಸಿಕೊಂಡಿರುತ್ತಾರೆ. ಈ ಸಂಬಂಧದಲ್ಲಿ ಔಟ್ ಏಜೆನ್ಸಿಯಲ್ಲಿ ಗಾಡಿ ಹೊಡೆಯುತ್ತಿದ್ದ ಸೈದ್ ಅಹಮದ್ ಎಂಬುವನನ್ನು ದಸ್ತಗಿರಿ ಮಾಡಲಾಗಿದೆ.

ಶ್ರೀ ಮುರುಘರಾಜೇಂದ್ರಸ್ವಾಮಿಗಳ ಸ್ವರ್ಣ ಮಹೋತ್ಸವ

ಚಿತ್ರದುರ್ಗದ ಶ್ರೀ ನಿರಂಜನ ಜಗದ್ಗುರು ಜಯದೇವ ಮುರುಘ ರಾಜೇಂದ್ರ ಸ್ವಾಮಿಗಳವರ ಸ್ವರ್ಣ ಮಹೋತ್ಸವವು ಇದೇ ೧೫ನೇ ತಾ॥ ಗುರುವಾರ ಚಿತ್ರದುರ್ಗದಲ್ಲಿರುವ ಬೃಹನ್ಮಠದಲ್ಲಿ ನಡೆಯುವುದು. ಮಾರನೇ ದಿನ ಬೆಳಿಗ್ಗೆ ೭–೮ ಗಂಟೆಗೆ ಧಾರವಾಡ ಜಿಲ್ಲೆಯ ಬಂಡಿವಾಡ ಗ್ರಾಮದ ಹಿರಿಯ ಮಠದ ಶ್ರೀ ಶಿವಲಿಂಗ ದೇವರುಗಳವರ ಉತ್ತರಾಧಿಕಾರ ಮಹೋತ್ಸವವು ಜರುಗುವುದು.

ಯುವಕರ ಸಂಘಕ್ಕೆ ಸಹಾಯ

ಮೈಸೂರು ಇಟ್ಟಿಗೆಗೂಡು ಯುವಕರ ಸಂಘಕ್ಕೆ ಶ್ರೀ ಕೆ. ಶಿಖಾಮಣಿ ಚೆಟ್ಟಿಯವರು ತಮ್ಮ ಕುಮಾರನ ಲಗ್ನದ ಸಂಬಂಧದಲ್ಲಿ ೧೦ ರೂ ಅನ್ನು ಕೊಟ್ಟಿರುತ್ತಾರೆ.

ನಗರದ ವಯಸ್ಕರ ಶಿಕ್ಷಣಸಮಿತಿ

ರಾಜಧಾನಿಯ ಚಾಮರಾಜಪುರಂ ರೈಲ್ವೆ ನಿಲ್ದಾಣದ ಹಿಂಭಾಗದಲ್ಲಿ ೧೧೧೫ನೇ ಮನೆಯಲ್ಲಿದ್ದ ನಗರ ವಯಸ್ಕರ ಶಿಕ್ಷಣ ಸಮಿತಿಯ ಕಛೇರಿಯನ್ನು ಇದೇ ೩ನೇ ತಾ ನಿಂದ ಶ್ರೀ ಗಣೇಶ ಟಾಕೀಸ್ ಪಕ್ಕದಲ್ಲಿರುವ ಶ್ರೀ ಬೋರಯ್ಯ ಬಸವಯ್ಯನವರ ಕಟ್ಟಡಕ್ಕೆ ಬದಲಾಯಿಸಲಾಗಿದೆ.

ಶ್ರೀ ಶ್ಯಾಮಾ ಶಾಸ್ತ್ರಿಯವರ ದಿನಾಚರಣೆ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದಲ್ಲಿ ಶ್ರೀ ಶ್ಯಾಮಾ ಶಾಸ್ತ್ರಿಯವರ ದಿನಾಚರಣೆಯು ಈ ಸಂಜೆ ೭ ಗಂಟೆಗೆ ನಡೆಯುವುದು.

ಜನ್ಮ ಭೂಮಿ

ಬೆಂಗಳೂರಿನಿಂದ ಶ್ರೀ ಎ ಸುಬ್ಬಣ್ಣ ಶಾಸ್ತ್ರಿವರ ಸಂಪಾದಕತ್ವದಲ್ಲಿ ಪ್ರಕಟವಾಗುವ 'ಜನ್ಮ ಭೂಮಿ' ಎಂಬ ಕನ್ನಡ ವಾರ ಪತ್ರಿಕೆಯ ಮೊದಲನೇ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಈ ನೂತನ ಪತ್ರಿಕೆಯು ಚಿರಕಾಲ ಸೇವೆ ಸಲ್ಲಿಸಲೆಂದು ಹಾರೈಸುತ್ತೇವೆ.

ಕೆರೆ ದುರಸ್ತು ಮಾಡಿಸಬೇಕು

ಚಾಮರಾಜ ನಗರದ ತಾಲ್ಲೂಕು ಜ್ಯೋತಿಗೌಡನಪುರದ ಕೆರೆಯು ೧೯೩೬ ರಲ್ಲಿ ಒಡೆದು ಹೋಗಿ ಅದನ್ನು ದುರಸ್ತು ಮಾಡಿಸಲು ರೈತರುಗಳು ಕಂಟ್ರಿಬ್ಯೂಷನ್ ಕೊಡುವುದಾಗಿ ೨ ವರ್ಷಗಳ ಹಿಂದೆ ಮುಚ್ಚಳಿಕೆ ಬರೆದುಕೊಟ್ಟಿದ್ದರೂ, ಇಲ್ಲಿಯವರೆಗೆ ಕೆಲಸ ಏನೇನೂ ನಡೆದಿಲ್ಲ. ಅಲ್ಲಿನ ಜನರು ಕೆರೆಯ ಅಂಗಳದಲ್ಲಿ ಬೆಳೆ ಬೆಳೆಸುತ್ತಿದ್ದಾರೆ. ಇದರಿಂದ ರೈತರುಗಳಿಗೆ ಬಹಳ ನಷ್ಟ ಉಂಟಾಗಿರುತ್ತವೆ. ಕೂಡಲೆ ಸರ್ಕಾರದವರು ಕೆರೆಯನ್ನು ದುರಸ್ತು ಮಾಡಿಸಬೇಕೆಂದು ಅಲ್ಲಿನ ರೈತರುಗಳು ಕೋರಿರುತ್ತಾರೆ.

ರಾಜ್ಯಾಂಗ ಸಭೆಯು ಶಾಸನ ಸಭೆಯಾಗಕೂಡದು

ಕಾಂಗ್ರೆಸ್ಸೇತರ ಪ್ರತಿನಿಧಿಗಳ ನಿರ್ಣಯ

ಬೆಂಗಳೂರು, ೮

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ಸೇತರ ಪ್ರತಿನಿಧಿಗಳ ಸಭೆಯು ಮೊನ್ನೆ ದಿನ ಡ್ಯಾಲಿ ಸ್ಮಾರಕ ಭವನದಲ್ಲಿ ಶ್ರೀ ಎಸ್. ಸಿ. ಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ರಾಜ್ಯಾಂಗವನ್ನು ತಯಾರಿಸಲು ರಚಿತವಾಗಿರುವ ಸಭೆಯನ್ನು ಶಾಸನ ಸಭೆಯನ್ನಾಗಿ ಪರಿವರ್ತನೆ ಮಾಡುವುದು ಶಾಸನ ಬದ್ಧವಾಗುವುದಿಲ್ಲವೆಂದು ನಿರ್ಣಯ ಮಾಡಲಾಯಿತು

ರಾಜ್ಯಾಂಗದ ಕರಡನ್ನು ಶ್ರೀಮನ್ಮಹಾರಾಜರವರಿಗೊಪ್ಪಿಸುವ ಮುನ್ನ ಪ್ರಜೆಗಳು ಮತ್ತು ಪ್ರಜಾ ಪ್ರತಿನಿಧಿಗಳು ಅವರ ಒಪ್ಪಿಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವಿರಬೇಕು. ಮಹಾ ಚುನಾವಣೆಗಳು ನಡೆದು ನೂತನ ರಾಜ್ಯಾಂಗವು ಜಾರಿಗೆ ಬರುವ ವರೆಗೂ ಸಂಸ್ಥಾನದಲ್ಲಿ ಎಂದಿನಂತೆ ನೂತನ ಚುನಾವಣೆಗಳು ನಡೆದು ಶಾಸನ ಸಭೆಗಳು ಪುನರ್ರಚಿತವಾಗಬೇಕು. ಮೈಸೂರು ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಕರ್ಣಾಟಕ ಏಕೀಕರಣವು ಆಗಬಹುದಾದರೂ, ಇತರ ಪ್ರಾಂತಗಳೊಡನೆ ಮೈಸೂರು ಐಕ್ಯವಾಗಬೇಕೆಂಬುದನ್ನು ವಿರೋಧಿಸುವುದು. ಈ ವಿಷಯಗಳನ್ನು ತಿಳಿಸಲು ಶ್ರೀಮನ್ಮಹಾರಾಜರವರಲ್ಲಿ ನಿಯೋಗವೊಂದು ಹೋಗಬೇಕು—ಇವೇ ಮುಂತಾದ ನಿರ್ಣಯಗಳು ಅಂಗೀಕೃತವಾದುವು.

ಚೀಣಾ ಸರ್ಕಾರವು ಶರಣಾಗತವಾಗುವುದಿಲ್ಲ.

ಚೀಣದಲ್ಲಿ ಕಮ್ಯೂನಿಸ್ಟರು ನ್ಯಾಯವಾದ ಷರತ್ತುಗಳ ಮೇಲೆ ಶಾಂತಿ ಸಂಧಾನಕ್ಕೆ ಒಪ್ಪದಿದ್ದಲ್ಲಿ ಸರ್ಕಾರವು ಕೊನೆಯ ವರೆಗೂ ಕದನ ನಡೆಸುವುದೆಂದು ಅಲ್ಲಿನ ಪ್ರಧಾನ ಮಂತ್ರಿ ಡಾ॥ ಸನ್‌ಫೋರವರು ತಿಳಿಸಿರುತ್ತಾರೆ. ಯುದ್ಧ ಪಾತಕಿಗಳನ್ನು ಒಪ್ಪಿಸಲು ಮತ್ತು ಯಾವ ಷರತ್ತೂ ಇಲ್ಲದೆ ಶರಣಾಗತವಾಗಲು ಚೀಣಾ ಸರ್ಕಾರವು ಸಿದ್ಧವಿಲ್ಲವೆಂದು ಅವರು ಹೇಳಿರುತ್ತಾರೆ

ನಾಟಕ ವಾಚನ

ಮಹಾರಾಜಾಸ್ ಇಂಟರ್ ಮೀಡಿಯೇಟ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಂಘದ ಅಧ್ಯಕ್ಷರೂ, ಕನ್ನಡದ ಪ್ರೊಫೆಸರೂ ಆದ ಶ್ರೀ ಕೆ ವಿ ಪುಟ್ಟಪ್ಪನವರು ಜೂನಿಯರ್ ಬಿ. ಎ ಕೊಠಡಿಯಲ್ಲಿ ನಾಟಕ ವಾಚನವನ್ನು ಮಾಡುವರು. ಎಲ್ಲರಿಗೂ ಆಹ್ವಾನವಿದೆ

ಮದರಾಸಿನಲ್ಲಿ ಇನ್ನಿಬ್ಬರ ಉಪವಾಸ

ಮದರಾಸ್ ಸರ್ಕಾರದವರು ಹಿಂದೂ ಧಾರ್ಮಿಕ ಕಾನೂನಿನ ತಿದ್ದುಪಡಿಯನ್ನು ಶಾಸನ ಸಭೆಯಲ್ಲಿ ಮಂಡಿಸಿರುವುದನ್ನು ಪ್ರತಿಭಟಿಸಲು ಶ್ರೀ ನಿತ್ಯಾನಂದ ಸರಸ್ವತಿ ಸ್ವಾಮಿಯವರು ಕಳೆದ ೧೬ ದಿನಗಳಿಂದಲೂ ಅಲ್ಲಿನ ಅರಾರಾ ಕಛೇರಿಯ ಮುಂದೆ ಉಪವಾಸ ಮುಷ್ಕರವನ್ನು ಕೈಗೊಂಡಿದ್ದಾರಷ್ಟೆ. ಅವರ ಸಹಾನುಭೂತಿಗಾಗಿ ಶ್ರೀ ಬ್ರಹ್ಮೇಂದ್ರ ಸರಸ್ವತಿ ಸ್ವಾಮಿ ಎಂಬುವರು ಸಹ ಉಪವಾಸ ಪ್ರಾರಂಭಿಸಿರುತ್ತಾರೆ. ಕುಂಭಕೋಣದಲ್ಲಿ ಶ್ರೀ ಸುಬ್ಬಯ್ಯ ಭಾರತಿ ಎಂಬುವರೂ ಸಹ ಉಪವಾಸವನ್ನು ಕೈಗೊಂಡಿದ್ದಾರೆ.

ಯುದ್ಧ ಕಾಲದಲ್ಲಿ ಸರ್ಕಾರಕ್ಕೆ ಸಾಮಾಗ್ರಿಗಳನ್ನು ಸರಬರಾಜು ಮಾಡಿದ ಒಬ್ಬರಿಗೆ ೭೨ ಸಾವಿರ ರೂ. ಭಾರತ ಸರ್ಕಾರದಿಂದ ಬರಬೇಕೆಂದು ಮತ್ತೊಬ್ಬರು ಮದರಾಸ್ ಅರಾರಾ ಕಛೇರಿಯ ಹತ್ತಿರ ಉಪವಾಸ ಮಾಡುತ್ತಿದ್ದಾರೆ.

ಭೂಕಂಪದಿಂದ ನೂರಾರು ಮನೆಗಳ ನಾಶ

ದಕ್ಷಿಣ ತುರ್ಕಿಯ ಇಸ್ತಾಂಬುಲ್ ಪ್ರಾಂತ್ಯದಲ್ಲಿ ಮೊನ್ನೆ ದಿನ ಭೂಕಂಪವಾಗಿ ೧೦೦ ಮನೆಗಳು ನಾಶವಾದುವೆಂದೂ, ಯಾರೂ ಸಾಯಲಿಲ್ಲವೆಂದೂ ವರದಿಯಾಗಿದೆ

ಬರ್ಮಾದಲ್ಲಿ ಭಾರತೀಯ ನೌಕರರ ವಜಾ

ಬರ್ಮಾದೇಶಕ್ಕೆ ಸೇರದೆ ಇರುವ ಇತರರನ್ನು ಸರಕಾರಿ ಉದ್ಯೋಗದಿಂದ ತೆಗೆದು ಹಾಕಲು ಅಲ್ಲಿನ ಸರ್ಕಾರವು ತೀರ್ಮಾನ ಮಾಡಿರುವುದೆಂದೂ, ಇದರಿಂದ ಅಲ್ಲಿರುವ ೩೫೦೦ ಜನ ಭಾರತೀಯ ನೌಕರರು ಅಧಿಕಾರದಿಂದ ಹೊರಕ್ಕೆ ಬರಬೇಕಾಗುವುದೆಂದೂ ಹೇಳಲಾಗಿದೆ

ಭಾರತೀಯ ಅಧಿಕಾರಿಗಳ ಉಡುಪು

ಭಾರತದ ಅಧಿಕಾರಿಗಳು ಸತ್ಕಾರ ಕೂಟಗಳು ಮತ್ತು ಸಮಾರಂಭಗಳಿಗೆ ಹೋಗುವಾಗ ವಿಶೇಷ ಉಡುಪನ್ನು ಬಟ್ಟೆ ಕಪ್ಪು ಒಣ್ಣದ ಶೇರ್ವಾನಿ ಅಥವ ಕತ್ತಿನ ವರೆಗೂ ಗುಂಡಿಗಳುಳ್ಳ ಕಪ್ಪು ಒಣ್ಣದ ಅಂಗಿ ಮತ್ತು ... ಪರಾಯಿಗಳನ್ನೊಳಗೊಂಡ ಭಾರತೀಯ ಉಡುಪನ್ನೇ ಧರಿಸಬೇಕೆಂದು ಭಾರತ ಸರ್ಕಾರದವರು ... ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ ಇದು ಸಿವಿಲ್ ... ... ಮಾತ್ರವಲ್ಲ ಮಿಲಿಟರಿ ... ... ಸರ್ಕಾರದವರು ...

ಅಕ್ರಮ ಭತ್ತ ರವಾನೆಗೆ ದಂಡ

ಮೈಸೂರು ೮

ಮಹಮದ್ ಅಬ್ದುಲ ಎಂಬುವನು ೪ ನರಸೀಪುರದ ಟೋಲ್ ಗೇಟಿನಿಂದ ೩। ಪಲ್ಲ ಭತ್ತವನ್ನು ಅಕ್ರಮವಾಗಿ ತರುತ್ತಿದ್ದುದನ್ನು ನಗರದ ಫುಡ್ ರೇಡ್ ಪಾರ್ಟಿಯವರು ಪತ್ತೆ ಮಾಡಿ ಮೊಕದ್ದಮೆ ಹೂಡಿದ್ದರು. ನಗರ ನ್ಯಾಯಾಧೀಶರು ಈ ದಿನ ಆತನಿಗೆ ೫೦ ೬ ... ದಂಡವನ್ನು ವಿಧಿಸಿದ್ದಾರೆ. ತಿಮ್ಮ ಶೆಟ್ಟಿಎಂಬುವನು ೪೧॥ಸೇರು ಭತ್ತವನ್ನು ರಹದಾರಿ ಇಲ್ಲದೆ ತಂದುದಕ್ಕಾಗಿ ೩೦ ರೂ. ಜುಲ್ಮಾನೆ ವಿಧಿಸಲಾಯಿತು.

ನಾಗೇನಹಳ್ಳಿಯ ಕಡೆಯಿಂದ ೯ ಜನರು ೧೬೭ ಸೇರು ಭತ್ತವನ್ನು ರಹದಾರಿ ಇಲ್ಲದೆ ತರುತ್ತಿದ್ದುದನ್ನು ಫುಡ್ ರೇಡ್ ಪಾರ್ಟಿಯವರು ಈ ದಿನ ಪತ್ತೆ ಮಾಡಿ ಮಾಲನ್ನು ವಶಪಡಿಸಿಕೊಂಡಿರುತ್ತಾರೆ.

ಸಂಸ್ಥಾನದಲ್ಲಿ ಹಾಲಿನ ಸಹಕಾರ ಸಂಘಗಳು

ಸ್ವ. ಸು. ಪೋ] ಬೆಂಗಳೂರು ೮

ಜನರಿಗೆ ಒಳ್ಳೆಯ ಹಾಲು ಸರಬರಾಜು ಮಾಡಲು ಸಂಸ್ಥಾನದಲ್ಲಿ ಹಾಲಿನ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಪ್ರತಿ ಜಿಲ್ಲೆಯ ಮುಖ್ಯ ಪ್ರದೇಶಗಳಲ್ಲಿಯೂ ಒಂದೊಂದು ಸಹಕಾರ ಕೇಂದ್ರವನ್ನು ತೆರೆಯಲಾಗುವುದು. ಮೈಸೂರು ಮತ್ತು ಬೆಂಗಳೂರು ಸಂಘಗಳಿಗೆ ೩೫೦ ರೂ. ಮತ್ತು ಉಳಿದ ಜಿಲ್ಲಾ ಕೇಂದ್ರಗಳಿಗೆ ತಲಾ ೫೦೦ ರೂ. ಗ್ರಾಂಟನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ

● ಭಡಿ ಶಿಕ್ಷೆ ವಜಾ ಮಾಡುವುದು, ಪೀನಲ್ ಕೋಡು ತಿದ್ದುಪಡಿ, ಇವೇ ಮುಂತಾದ ೩೮ ಮಸೂದೆಗಳಿಗೆ ಶ್ರೀಮನ್ಮಹಾರಾಜರವರ ಒಪ್ಪಿಗೆ ದೊರೆತಿದೆ.

● ಲಂಡನ್ ಚೇಂಬರ್ ಆಫ್ ಕಾಮರ್ಸಿನ ಸಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಪರೀಕ್ಷೆಗಳನ್ನು ಮೈಸೂರು ಕಮರ್ಷಿಯಲ್ ಪರೀಕ್ಷೆಗಳಿಗೆ ಸರಿಸಮಾನಾದುವೆಂದು ಸರ್ಕಾರದ ಪ್ರಕಟನೆ ತಿಳಿಸುತ್ತದೆ.

● ... ಉಪಾಧ್ಯಾಯರ ಶಿಕ್ಷಣ ಕಾಲೇಜಿನ ವಿದ್ಯಾ ಸ್ಪೆಷಲಿಸ್ಟರಾದ ಶ್ರೀ ಕೆ. ಆರ್. ಕೆ. ಅನಂತರನ್ನು ಆ ಹುದ್ದೆಯಲ್ಲಿ ಖಾಯಂ ಮಾಡಲಾಗಿದೆ.

ನೆಹರೂರವರಿಗೆ ಮಿತಾಹಾರ

ದೇಶದಲ್ಲಿ ಉಂಟಾಗಿರುವ ಆಹಾರದ ಅಭಾವವನ್ನು ತಡೆಗಟ್ಟಲು ಜನರು ಮಿತ ಮತ್ತು ನಿಯಮಿತವಾದ ಆಹಾರವನ್ನು ತೆಗೆದುಕೊಳ್ಳಬೇಕೆಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ಮನವಿ ಮಾಡಿ, ತಾವು ಗೋಧಿ ಮತ್ತು ಸಿರಿ ಗಣಸುಗಳಿಂದ ಮಿಶ್ರವಾದ ಆಹಾರವನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ.

ಕಾಶ್ಮೀರದ ರಾಜರು ಪದಚ್ಯುತರಾಗುವರೇ ?

ಪಾಕಿಸ್ಥಾನದ ಕಾಶ್ಮೀರದ ಮಹಾರಾಜರೊಡನೆ ರಹಸ್ಯವಾಗಿ ಸಂಬಂಧವನ್ನಿಟ್ಟುಕೊಂಡು ಅದನ್ನು ಬಲಿಪಡಿಸಿಕೊಳ್ಳಲು ಪ್ರಯತ್ನ ನಡೆಸುವ ಸಂಭವವಿರುವುದರಿಂದ ಮಹಾರಾಜ ಸರ್ ಹರಿಸಿಂಗರವರನ್ನು ಪದಚ್ಯುತರನ್ನಾಗಿ ಮಾಡಿ ಅವರ ಪುತ್ರರನ್ನು ರಾಜರನ್ನಾಗಿ ಮಾಡಬಹುದೆಂದು ದೆಹಲಿಯ ರಾಜಕೀಯ ವರ್ತುಲದಲ್ಲಿ ಅಭಿಪ್ರಾಯ ಪಡಲಾಗಿದೆ.

ವಿವಾಹ ಮಹೋತ್ಸವಗಳು

ರಾಜಧಾನಿಯ ವಕೀಲರಾದ ಶ್ರೀ ಕೆ. ಕೃಷ್ಣಾಚಾರ್ಯರು ತಮ್ಮ ಸಹೋದರರ ಪುತ್ರಿ ಚಿ॥ ಸೌ॥ ಗೌರಮ್ಮನನ್ನು ಶ್ರೀ ಕೆ. ಕೃಷ್ಣಮೂರ್ತಿ ಇವರ ಪುತ್ರರು ಚಿ॥ ಕೆ. ... ಅವರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ... ರಂದು ತಮ್ಮ ಗೃಹದಲ್ಲಿ ನೆರವೇರಿಸಿದರು.

... ಬ್ರಾಂಚ್ ಪ್ರೆಸ್ಸಿನ ಶ್ರೀ ... ಅಯ್ಯಂಗಾರ್ಯರು ತಮ್ಮ ... ಶ್ರೀ ಶ್ರೀನಿವಾಸ ... ಮೈಸೂರು ... ಶ್ರೀ ... ಎಸ್. ರಘುನಾಥರ ... ಪುತ್ರಿ ಚಿ॥ ಸೌ॥ ಮಧುರಾ ಬಾಯಿ ಯನ್ನು ತಂದುಕೊಂಡು ವಿವಾಹ ಮಹೋತ್ಸವವನ್ನು ಮೈಸೂರಿನಲ್ಲಿ ಕಳೆದ ... ನಡೆಸಿದರು.

ನಾರಾಯಣ ಶಾಸ್ತ್ರಿ ರಸ್ತೆಗೆ ಟಾರಿನ ಅವಶ್ಯಕತೆ

ರಾಜಧಾನಿಯ ನಾರಾಯಣ ಶಾಸ್ತ್ರಿ ... ರಸ್ತೆ ... ದ ಅಲ್ಲಿ ಧೂಳು ವಿಪರೀತವಾಗಿ ಜನರ ಆರೋಗ್ಯಕ್ಕೆ ತುಂಬಾ ಅಪಾಯವಾಗಿರುವುದರಿಂದ ಆ ರಸ್ತೆಗೆ ಕೂಡಲೇ ಟಾರ್ ಹಾಕಬೇಕೆಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸುತ್ತಾರೆ.

ಅಗ್ಗದ ಜವಳಿಗಾಗಿ

ಗುರುದೇವಾ ಹಾಲ್

ದಯಮಾಡಿ ಇಂದೇ ಭೇಟಿ ಕೊಡಿ

ಪ್ರಸಿದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಮತ್ತು ಕುಂಬಕೋಣಂ ಸೀರೆಗಳು, ರವಿಕೆಗಳು, ಪಂಚೆಗಳು, ಮಗುಟ ಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ .. ಮೈಸೂರು

Edited, printed and published by A. R. Nagarajan at the Sadhvi Press, D. Subbiah Road, Mysore

ಕೇರಳ ಪ್ರಾಂತ್ಯಕ್ಕೆ ನೀಲಗಿರಿ ಮತ್ತು ಕೊಡಗು ?

ತಿರುವಾಂಕೂರು ಕೊಚ್ಚಿ ಮತ್ತು ಮಲಬಾರು ಪ್ರತಿನಿಧಿಗಳ ಸಭೆಯು ಮೊನ್ನೆ ಅಲೆಪ್ಪಿಯಲ್ಲಿ ಶ್ರೀ ಕೆ. ಕೇಳಪ್ಪನ್‌ರವರ ಅಧ್ಯಕ್ಷತೆಯಲ್ಲಿ ನಡೆದು ಕೂಡಲೆ ಅಖಂಡ ಕೇರಳಾ ಪ್ರಾಂತ್ಯ ಸ್ಥಾಪಿಸಬೇಕೆಂದು ಭಾರತ ಸರ್ಕಾರವನ್ನು ಒತ್ತಾಯ ಪಡಿಸುವ ನಿರ್ಣಯ ಮಾಡಲಾಯಿತು. ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅಖಂಡ ಕೇರಳ ಪ್ರಾಂತ್ಯದಲ್ಲಿ ಕೊಚ್ಚಿ, ತಿರುವಾಂಕೂರು ಸಂಸ್ಥಾನಗಳಲ್ಲದೆ, ಮಲಬಾರು, ನೀಲಗಿರಿ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೂ ಸೇರಬೇಕೆಂದು ಅಧ್ಯಕ್ಷತೆ ವಹಿಸಿದ್ದ ಶ್ರೀ ಕೇಳಪ್ಪನ್‌ರವರು ತಮ್ಮ ಭಾಷಣದಲ್ಲಿ ತಿಳಿಸಿದರು.

ಘೋಷಾ ತೆಗೆಯಲು ರಾಣಿಯ ಸೂಚನೆ

ರಜಪುತಾನಾ ಮಹಿಳೆಯರು ಘೋಷದ ಪದ್ಧತಿಯನ್ನು ರದ್ದು ಮಾಡಿ, ಒಮ್ಮೆ ದೇಶದ ಅಭಿವೃದ್ಧಿಗಾಗಿ ಸೇವೆ ಮಾಡಲು ಮುಂದೆ ಬರಬೇಕೆಂದು ಜಯಪುರದ ಮಹಾರಾಣಿಯವರಾದ ಶ್ರೀ ಗಾಯತ್ರಿ ದೇವಿಯವರು ಅಲ್ಲಿನ ಯೋಧರ ಕ್ಲಬ್ಬಿನಲ್ಲಿ ಮಹಿಳೆಯರಿಗೆ ನೂತನವಾಗಿ ಸದಸ್ಯತನ ವನ್ನಿತ್ತ ಸಮಾರಂಭದಲ್ಲಿ ಭಾಷಣ ಮಾಡುತ್ತಾ ತಿಳಿಸಿರುತ್ತಾರೆ.

ಚಿರತೆ ಮೇಲೆ ಬಸ್ ಬಿಟ್ಟು ಕೊಲ್ಲಲಾಯಿತು

ಜಂಗಲ್‌ಪಟ್ಟಿಗೆ ... ಮೈಲಿ ದೂರದಲ್ಲಿರುವ ತಿರುಪ್ಪೂರೂರು ರಸ್ತೆಯಲ್ಲಿ ಕುಳಿತಿದ್ದ ಚಿರತೆಯೊಂದರ ಮೇಲೆ ಒಬ್ಬ ಬಸ್ ಡ್ರೈವರನು ಬಸ್ಸನ್ನು ಬಿಟ್ಟು ಕೊಂದುಹಾಕಿದನೆಂದು ವರದಿಯಾಗಿದೆ. ಅತನು ಬಸ್ಸನ್ನು ಹಿಂದಿರುಗಿಸಿ ಪುನಃ ಚಿರತೆಯ ಮೇಲೆ ಎರಡನೇ ಬಾರಿ ಓಡಿಸಿ, ಅದರ ಪ್ರಾಣವನ್ನು ಸಂಪೂರ್ಣವಾಗಿ ನೀಗಿಸಿದನು.

ಬಟ್ಟೆ ದಾಸ್ತಾನು ಪ್ರಮಾಣ ಹೆಚ್ಚುತ್ತಿದೆ.

ದೇಶದ ನಾನಾ ಬಟ್ಟೆ ಗಿರಣಿಗಳಲ್ಲಿ ಈಗ ಇರುವ ವಿಪರೀತ ಬಟ್ಟೆಯ ದಾಸ್ತಾನಿನ ಪ್ರಮಾಣವನ್ನು ಕಡಿಮೆಮಾಡಿ ಅದರಿಂದ ಗಿರಣಿಗಳಿಗೆ ಉಂಟಾಗಿರುವ ಹಣಕಾಸಿನ ಮತ್ತು ಇತರ ತೊಂದರೆಗಳನ್ನು ಪರಿಹರಿಸಲು ತಕ್ಕ ಏರ್ಪಾಡು ಮಾಡಬೇಕೆಂದು ಅಹಮದಾಬಾದಿನ ಬಟ್ಟೆ ಗಿರಣಿಗಳ ಮಾಲೀಕರ ಸಂಘದವರು ಸಭೆ ಸೇರಿ, ಸರಕಾರಕ್ಕೆ ಪ್ರಾರ್ಥನೆಯೊಂದನ್ನು ಸಲ್ಲಿಸ್ಸಾರೆ.

ಬೆಳ್ಳಿಯ ಫಿರಂಗಿಯಲ್ಲಿ ಚಿನ್ನವತ್ತಳೆ

ಭಾರತದ ಶ್ರೇಷ್ಠ ಸೇನಾನಿ ಜನರಲ್ ಕರಿಯಪ್ಪನವರಿಗೆ ಮುದಿರಾಜ ಪುರ ಸಭೆಯವರು ಮೊನ್ನೆ ಬಿನ್ನವತ್ತಳೆಯನ್ನು ರಜತ ಕರಂಡದ ಬದಲು ಬೆಳ್ಳಿಯ ಫಿರಂಗಿಯೊಳಗೆ ಅರ್ಪಿಸಿದರು.

ಪಬ್ಲಿಕ್ ಲೈಬ್ರರಿ

ರಾಜಧಾನಿಯ ಹಳೇ ಕೈಸ್ತೆ ಕಛೇರಿಯ ಭವನದಲ್ಲಿದ್ದ ಪಬ್ಲಿಕ್ ಲೈಬ್ರರಿಯನ್ನು ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಶಾಲೆಯ ಮಹಡಿ ಮೇಲಕ್ಕೆ ವರ್ಗಾಯಿಸಲಾಗಿದೆ. ಮಹಡಿಯ ಮೆಟ್ಟಲುಗಳ ಕೆಲಸವು ಪೂರೈಸಿದಕೂಡಲೇ ಲೈಬ್ರರಿಯು ಪ್ರಾರಂಭವಾಗುವುದು. ಅಲ್ಲಿಯವರೆಗೆ ರೀಡಿಂಗ್ ರೂಮಿನ ಶಾಖೆಯನ್ನು ತಾತ್ಕಾಲಿಕವಾಗಿ ಹಳೇ ಕೈಸ್ತೆ ಕಛೇರಿಯ ಮುಂಭಾಗದಲ್ಲಿರುವ ವರ್ತಕ ಭವನದಲ್ಲಿ ಇಡಲಾಗಿದೆ.

ವಿದ್ಯಾವಂತ ನಿರುದ್ಯೋಗಿಗಳ ಸಂಘ

ಅಜ್ಮೀರಿನ ವಿದ್ಯಾವಂತ ನಿರುದ್ಯೋಗಿಗಳು ಸಭೆ ಸೇರಿ ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಬಂದು ಸಂಘವನ್ನು ಸ್ಥಾಪಿಸಿರುತ್ತಾರೆ.

ವಜ್ರದ ಗಣಿಗಳು

ಭಾರತದಲ್ಲಿ ಈಗಲೂ ಸಹ ತಿಳಿಯದೆ ಇರುವ ಅನೇಕ ವಜ್ರದ ಗಣಿಗಳಿರಬಹುದೆಂದು ಸರ್. ಸಿ. ವಿ. ರಾಮನ್‌ರವರು ಬೊಂಬಾಯಿ ರತ್ನ ಪಡಿ ವ್ಯಾಪಾರಿಗಳ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ತಿಳಿಸಿರುವರು. ಭೂಗರ್ಭದ ಇಲಾಖೆಯವರು ಈ ಬಗ್ಗೆ ಸಂಶೋಧನೆ ನಡೆಸಬೇಕೆಂದು ಅವರು ಹೇಳಿರುತ್ತಾರೆ.

RAJKAMAL, MYSORE

From 6-2-49 For 5 days

Daily 3 Shows

3 P.M. 6-15 P.M. & 9-30 P.M.

UNIVERSAL'S Full Thrilling Serial

Don Winslow of the Coast Guard

ಯೂನಿವರ್ಸಲ್‌ರವರ

ಡಾನ್ ವಿನ್‌ಸ್ಲೋ ಆಫ್ ದಿ ಕೋಸ್ಟ್ ಗಾರ್ಡ್

ಹಸನಾದ ಮಿಲ್ ಬಟ್ಟೆಯು

ಒಟ್ಟಾಗಿಯೂ ಮತ್ತು ಚಿಲ್ಲರೆಯಾಗಿಯೂ ಸಿಗುತ್ತದೆ.

ಕೂಪನ್ನಿನ ಅಗತ್ಯವಿಲ್ಲ

(Shirtings and Sarees)

ವಿವರಗಳಿಗೆ:-

ಆರ್. ವಾಸುದೇವ ಮೂರ್ತಿ ಅಂಡ್ ಕೋ.,

ಜವಳಿ ವ್ಯಾಪಾರಿಗಳು, ಪ್ರಭಾ ಪಿಕ್ಚರ್ ಹೌಸ್ ಎದುರು.



ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು

(ಬೀರು, ಕ್ಯಾಷ್ ಬಾಕ್ಸ್ ಸುಲಭ ಬೆಲೆಗೆ ದೊರೆಯುತ್ತವೆ)

ರಿಪೇರಿ ಮತ್ತು ಪೇಂಟಿಂಗ್ ಮಾಡಲಾಗುತ್ತೆ

ಬೇಕಾದವರು ಭೇಟಿ ಕೊಡಿ

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್

ಹಳ್ಳದಕೇರಿ, ಮೈಸೂರು

Council of Scientific and Industrial Research

CENTRAL FOOD TECHNOLOGICAL RESEARCH INSTITUTE.

Sealed Tenders will be received in the Office of the Planning Officer, Central Food Technological Research Institute, Cheluvamba Mansion, Mysore up to 5 p.m. on 12th February 1949 for providing water supply and sanitary connections to the Animal House to be constructed.

Each tender must be accompanied by a receipt for having credited to the Office of the Institute the deposit of Rs. 150 in cash. The work must be completed by 15th March 1949. Tender forms must be given as ... percent, above or below the estimate in work on forms which can be obtained from the Office of the Institute on payment of 4 Annas per form. Plans and other particulars relating to the work can be obtained from the Office of the Institute on any working day from 10 a.m. to 5 p.m.

ಪ್ರಭುದೇವಾ ಟಾಕೀಸಿನಲ್ಲಿ

7-2-49 ರಿಂದ ಆರಂಭ

ಪ್ರತಿ ದಿನ 3 ಆಟಗಳು

ಭಕ್ತ ಗೌರಿ

(ತಮಿಳು)

ಪಾತ್ರ U. R. ಜೀವರತ್ನಂ S. D. ಸುಬ್ಬಯ್ಯ L. ನಾರಾಯಣ

ರಾವ್ C. V. V. ಪಂತುಲು K. K. ಪೆರುಮಾಳ್

P. S. ಶಿವಭಾಗ್ಯಂ, ಕಾಳಿ N ರತ್ನಂ

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು.

ಸಂಪುಟ ೬] ಬುಧವಾರ ...-೪೯ [ಸಂಚಿಕೆ ೧೫೩

ನಿಜಾಮರಿಗೆ ರಾಜಧನ ೧॥ ಕೋಟಿ ರೂಪಾಯಿ

ಪಾದ್ರಿಯವರಿಗೆ ಜೀವಾವಧಿ ಶಿಕ್ಷೆ

ಬುಡಾಪೆಸ್ಟಿನ ಪಾದ್ರಿಗಳಾದ ಮೆಂಜೊ ಜಾನಿಯವರು ಕಾಳ ಸಂತೆಯಲ್ಲಿ ಡಾಲರುಗಳನ್ನು ಮಾರಿ ಅಕ್ರಮವಾಗಿ ಹಣ ಸಂಪಾದಿಸಿ ಸರ್ಕಾರಕ್ಕೆ ನಷ್ಟವುಂಟುಮಾಡಿದ ಆಪಾದನೆಯ ಮೇಲೆ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ

ಮಕ್ಕಳಿಗೆ ಉಚಿತ ಹಾಲು ಮತ್ತು ಊಟದ ವ್ಯವಸ್ಥೆ

ವಿಶ್ವಸಂಸ್ಥೆಯ ಭಾರತದ ರಾಷ್ಟ್ರೀಯ ಸಮಿತಿಯಲ್ಲಿ ಬಡ ಮಕ್ಕಳಿಗೆ ಉಚಿತ ಹಾಲು ಮತ್ತು ಊಟವನ್ನು ಕೊಡುವ ವ್ಯವಸ್ಥೆ ಮಾಡುತ್ತಿದ್ದಾರೆ. ಇದಕ್ಕಾಗಿ ಅಂತರ ರಾಷ್ಟ್ರೀಯ ಮಕ್ಕಳ ಪೋಷಣಾ ಸಮಿತಿಯವರು ೫ ಲಕ್ಷ ಡಾಲರುಗಳ ಆಹಾರ ಮತ್ತು ಹಾಲನ್ನು ಸರಬರಾಜು ಮಾಡುವುದಾಗಿ ತಿಳಿಸಿರುತ್ತಾರೆ. ಭಾರತ ಸರ್ಕಾರದವರು ಅಷ್ಟೇ ಹಣವನ್ನು ಕೊಡಬೇಕೆಂದು ಷರತ್ತು ಹಾಕಲಾಗಿದೆ ಹಣ ಸಹಾಯ ಮಾಡುವುದಾದರೆ ಈ ವ್ಯವಸ್ಥೆಯನ್ನು ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲೂ ಜಾರಿಗೆ ತರಲಾಗುವುದು

ಆದಿ ಕರ್ನಾಟಕಪುರದ ಕುಂದುಕೊರತೆಗಳು

ರಾಜಧಾನಿಯ ಜಲಪುರಿ ಆದಿಕರ್ನಾಟಕರ ಸಂಘದ ಆಶ್ರಯದಲ್ಲಿ ಕಳೆದ ಭಾನುವಾರ ಸಿಮ್ಲಾ ತರಗತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಿ ರಾಚಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಂಘದ ಅಧ್ಯಕ್ಷ ಶ್ರೀ ಟಿ ಪಿ ರಾಮರ್‌ರವರು ಭಾಷಣ ಮಾಡಿ ನೀರು ಸರಬರಾಜು, ವಿದ್ಯುಚ್ಛಕ್ತಿ, ರಸ್ತೆಗಳ ರಿಪೇರಿ, ಗ್ರಾಮ ಕೈಗಾರಿಕೆಗಳು- ಇವೇ ಮುಂತಾದುವುಗಳ ಬಗ್ಗೆ ಇರುವ ಕುಂದುಕೊರತೆಗಳನ್ನು ತಿಳಿಸಿದರು ಅಧ್ಯಕ್ಷರು ಭಾಷಣ ಮಾಡಿ, ಅದನ್ನು ಸೌಕರ್ಯಗಳನ್ನು ಒದಗಿಸಲು ತಾವು ಸಹಾಯ ಮಾಡುವುದಾಗಿ ತಿಳಿಸಿದರು

ತಪ್ಪು ಅಳತೆಗಾಗಿ ಜುಲ್ಮಾನೆ

ಶಿವಾಜಿರಾವ ಮೊಹಲ್ಲಾ ನಂಬರ್ ೧೦ ... ಡಿಪೋವಿನಲ್ಲಿ ತಪ್ಪು ಅಳತೆಗ ... ಇದ್ದುದನ್ನು ರೇಷನಿಂಗ್ ಅಧಿಕಾರಿಗಳು ಪತ್ತೆ ಮಾಡಿ, ಅದರ ಮಾಲೀಕರಾದ ಶ್ರೀ ಶಿವಲಿಂಗಯ್ಯನವರಿಗೆ ೨೦ ರೂ. ದಂಡವನ್ನು ವಿಧಿಸಿರುತ್ತಾರೆ

ಲೆಕ್ಕದ ಪುಸ್ತಕ ಕಳೆದು ಹೋಗಿದೆ

ರಾಜಧಾನಿಯ ಪ್ರಭುದೇವಾ ಟಾಕೀಸಿನ ... ಒಬ್ಬರ ಲೆಕ್ಕದ ಪುಸ್ತಕವು ಕಳೆದುಹೋಗಿದೆ. ಅದನ್ನು ಪತ್ತೆಮಾಡಿ ತಂದುಕೊಟ್ಟವರಿಗೆ ಪ್ರಭುದೇವಾ ಟಾಕೀಸ ... ರೂ ಬಹುಮಾನವನ್ನು ಕೊಡುವುದಾಗಿ ತಿಳಿಸಿರುತ್ತಾರೆ

ಸ್ಕೈಮರಿ ಶಾಲಾ ಬಾಲಕರ ತೊಂದರೆ

... ಬಾಲಕರ ಶಾಲೆಯು ... ಗಂಟೆಗೆ ಪ್ರಾರಂಭವಾಗಿ, ಅಲ್ಲಿನ ... ಗಂಟೆಯವರೆಗೂ ವಿರಾಮ ... ವಿಸರ್ಜನೆಗೆ ಅವಕಾಶವಿಲ್ಲದೆ ... ಕಷ್ಟಪಡುತ್ತಿದ್ದಾರೆ ಸಂಬಂಧಪಟ್ಟ ... ಇದನ್ನು ಸರಿಪಡಿಸಬೇಕ ... ತ್ತಾರೆ

ತಾಂಬೂಲ ಸೇವನೆಯನ್ನು ನಿಷೇಧಿಸಬೇಕಂತೆ

ಭಾರತದಲ್ಲಿ ಎಲೆಯಡಿಕೆ ಹಾಕುವುದನ್ನು ನಿಷೇಧಿಸಬೇಕೆಂದು ಡಾ॥ ಬಿಲ್ಲಿಮೋರಿಯಾ ಎಂಬುವರು ಕಲ್ಕತ್ತದಲ್ಲಿ ನಡೆದ ಕ್ಷಯ ರೋಗ ನಿವಾರಣಾ ಕೆಲಸಗಾರರ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ ಎಲೆಯಡಿಕೆ ಹಾಕಿ ಅದನ್ನು ಬೀದಿಗಳಲ್ಲಿ ಉಗಿಯುವುದರಿಂದ ಕ್ಷಯ ರೋಗವು ಹೆಚ್ಚಾಗುವುದೆಂದು ಅವರು ಹೇಳಿರುತ್ತಾರೆ

ಹೆಂಡತಿ, ಮಕ್ಕಳ ನಷ್ಟದಿಂದ ನೇತ್ರಗಳ ನಾಶ

ಪಶ್ಚಿಮ ಪಂಜಾಬನ್ನು ಬಿಟ್ಟು ಭಾರತಕ್ಕೆ ಬಂದಿರುವ ಸಾವಿರಾರು ನಿರಾಶ್ರಿತರ ಪೈಕಿ ಲಯಾಲ್‌ಪುರದ ರೂಪಲಾಲನ ಸ್ಥಿತಿಯು ಅತಿ ಕರುಣಾಜನಕವಾಗಿದೆ ಅತನು ತನ್ನ ಹೆಂಡತಿ ಮತ್ತು ಮೂರು ಮಕ್ಕಳ ಕೊಲೆಯಾದ ದನ್ನು ಕೇಳಿ ... ಅತ್ತು ಅತನ ಕಣ್ಣುಗ ... ಅವುಗಳ ಚಿಕಿತ್ಸೆ ... ಸ್ಟೈದ ರೂ ನಷ್ಟ ಹೊಂದಿದ ದನ್ನು ಕೇಳಿ ಆತನ ಕಣ್ಣುಗಳು ಕುರುಡಾದುವು ಈಗ ಅವನು ಭಿಕ್ಷೆ ಬೇಡಲಾರದೆ ತನ್ನ ಬಾಲಕಿಯ ಸಹಾಯದಿಂದ ಬುಟ್ಟಿನೆಕಾಯು ಮಾರಾಟ ಮಾಡುತ್ತಾ ಜೀವಿಸುತ್ತಿದ್ದಾನೆ

ನೋಯುತ್ತಿದ್ದ ದನಗಳ ಮರಣ

ಮಲಬಾರು ಜಿಲ್ಲೆಯ ... ಬ್ಲಾಕ್ ಕೋಟೆಗಳ ... ನೋಯು ತ್ತಿದ್ದ ದನಗಳ ... ಜಾನುವಾರುಗಳ ... ಹಲ್ಲಿನ ಕೆಳಕ್ಕೆ ... ದನ್ನ ಸತ್ತುಹೋದುವೆಂದು ಹೇಳಲಾಗಿದೆ ... ದಕ್ಷಿಣ ... ಕರಿಗಳನ್ನು ... ಪಕ್ಷಿಗೆ ... ದನಗಳ ಮರಣ ... ಜನಗಳು ಹೇಳುತ್ತಿದ್ದಾರೆ

ರಥೋತ್ಸವ

... ಮಾಡಿದರು ...

ಪ್ರಭುಗಳಿಂದ ಪಶುಪಾಲನಾ ಸಮ್ಮೇಳನದ ಆರಂಭ

ಮೈಸೂರು –

ಇದೇ ಗುರುವಾರ ತಾ॥ ... ರಿಂದ ರಾಜಧಾನಿಯಲ್ಲಿ ಪ್ರಾರಂಭವಾಗುವ ಅಖಿಲ ಭಾರತ ವ್ಯವಸಾಯ ಮತ್ತು ಪಶುಪಾಲನಾ ಸಮ್ಮೇಳನದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ನೆರವೇರಿಸುವರು

ನೈಜಾಮರಿಗೆ ೧॥ ಕೋಟಿ ರಾಜಧನ

ನೈಜಾಮರು ೩ ಕೋಟಿ ರೂ ಉತ್ಪತ್ತಿಯಿರುವ ತಮ್ಮ ಸ್ವಂತ ಜಹಗೀರಿಗಳನ್ನು ಸರ್ಕಾರದ ವಶಕ್ಕೆ ವಹಿಸಿರುವುದರಿಂದ ಅವರಿಗೆ ಈಗ ಕೊಡುತ್ತಿರುವ ೫೦ ಲಕ್ಷ ರೂ ರಾಜಧನದ ಜೊತೆಗೆ ಮತ್ತೊಂದು ಕೋಟಿ ರೂ ಕೊಡಲಾಗುವುದೆಂದು ತಿಳಿಸಲಾಗಿದೆ

ಚಿನ್ನದ ಗಣಿಯಲ್ಲಿ ೨೫ ಸಾವಿರ ಕಾರ್ಮಿಕರ ಮುಷ್ಕರ

ಕೋಲಾರದ ಚಿನ್ನದ ಗಣಿಯ ಒಟ್ಟು ೨೫ ಸಾವಿರ ಕೆಲಸಗಾರರು ಮುಷ್ಕರ ಹೂಡಿದ್ದಾರೆ ಇದೇ ... ಚಾಂಪಿಯನ್, ನಂದಿ ದುರ್ಗ, ಊರಗಾಂ ಗಣಿಗಳ ... ಸಾವಿರ ಕಾರ್ಮಿಕರು ಮುಷ್ಕರ ಹೂಡಿದ್ದಾರೆ ... ಎಲ್ಲ ಗಣಿಗಳವರೂ ಇದರಲ್ಲಿ ಸೇರಿದ್ದಾರೆ ಇವರ ಜೊತೆಗೆ ... ಸಾವಿರ ... ವರೂ ಮುಷ್ಕರ ... ಕೆಲಸಗಾರರ ಸಂಘದ ಕಾರ್ಯದರ್ಶಿ ಮತ್ತು ಇತರ ಮೂರು ಜನರನ್ನು ... ದಸ್ತಗಿರಿ ಮಾಡಿದ್ದಾರೆ ಅವರನ್ನು ... ಕಾರ್ಮಿಕರು ... ಜನರನ್ನು ... ಇನ್‌ಸ್ಪೆಕ್ಟರ್ ... ಆಗಿದೆ

ಆಹಾರ ಸಂಗ್ರಹ ... ಕೇಂದ್ರದ ಸಲಹಾ ಸಮಿತಿ

...

ಬ್ರಿಟನ್ನಿನಿಂದ ಟಿಪ್ಪು ಸುಲ್ತಾನನ ವಾಪಸು ಪಡೆಯಲು ಪ್ರಯತ್ನ

ಟಿಪ್ಪು ಸುಲ್ತಾನನಿಗೆ ಸೇರಿದ ಸಿಂಹಾಸನ ಮತ್ತು ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟ ಇತರ ಪುರಾತನ ಐತಿಹಾಸಿಕ ಸ್ಮಾರಕಗಳನ್ನು ವಾಪಸು ಪಡೆಯಲು ಮೈಸೂರು ಸರ್ಕಾರದವರು ಪ್ರಯತ್ನಿಸುತ್ತಿರುವರೆಂದು ತಿಳಿದುಬಂದಿದೆ. ದೆಹಲಿಗೆ ಪ್ರಯಾಣ ಬೆಳೆಸಿರುವ ವಿದ್ಯಾ ಸಚಿವ ಶ್ರೀ ಡಿ ಎಚ್. ಚಂದ್ರಶೇಖರಯ್ಯನವರು, ಭಾರತ ಸರ್ಕಾರದವರು ಈ ಬಗ್ಗೆ ಕೂಡಲೇ ತಕ್ಕ ಕಾರ್ಯಕ್ರಮ ಕೈಗೊಳ್ಳುವಂತೆ ಒತ್ತಾಯಪಡಿಸುವರೆಂದು ಹೇಳಲಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಹೈದರಾಬಾದ್ ಸಂಸ್ಥಾನದ ಕಲಬುರಗಿಯಲ್ಲಿ ಮುಂದಿನ ತಿಂಗಳು ೫, ೬ ಮತ್ತು ೭ ನೇ ತಾ॥ ನಡೆಯಲಿರುವ ೩೨ ನೇ ಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಧಾರವಾಡದ ಶ್ರೀ ಉತ್ತಂಗಿ ಚೆನ್ನಪ್ಪನವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ.

ಭಾರತದ ನೂತನ ನೋಟುಗಳು

ಭಾರತದಲ್ಲಿ ಈಗಿರುವ ೨ ರೂ. ನೋಟುಗಳ ಮೇಲಿರುವ ಬ್ರಿಟನ್ನಿನ ಜಾರ್ಜ್ ದೊರೆಗಳ ಚಿತ್ರವನ್ನು ತೆಗೆದುಹಾಕಿ, ಅಶೋಕ ಧ್ವಜವನ್ನು ಹಾಕಲಾಗುವುದೆಂದೂ, ಅದರ ಹಿಂಭಾಗದಲ್ಲಿ ಸಿಕ್ಕದ ಹುಲಿ ಯ ಚಿತ್ರವಿರುವುದೆಂದೂ ಭಾರತ ಸರ್ಕಾರದ ಪ್ರಕಟಣೆ ತಿಳಿಸುತ್ತದೆ ಹೊಸ ೧೦ ರೂ ನೋಟುಗಳು ಮುಂದಿನ ಆಗಸ್ಟ್ ತಿಂಗಳಿನಿಂದ ಹೊರಗೆ ಬಂದು, ಅದರಲ್ಲಿ ಅಶೋಕ ಧ್ವಜ ಮತ್ತು ಅರ್ಥ ಕಾರ್ಯದರ್ಶಿ ಶ್ರೀ ಕೆ. ಆರ್. ಕೆ. ಮೆನ್ನನ್‌ರವರ ರುಜು ಇರುವುವು. ನೂತನ ನೂರು ರೂ ನೋಟುಗಳು ಬೂದು ಬಣ್ಣದಲ್ಲಿದ್ದು ಹಿಂದುಗಡೆ ಎರಡು ಆನೆಗಳ ಚಿತ್ರವಿರುವುದು.

ನೈಜಾಮರ ನೀತಿಯನ್ನು ಜಹಗೀರುದಾರರು ಅನುಸರಿಸುವರು

ಹೈದರಾಬಾದಿನ ಜಹಗೀರುದಾರರೆಲ್ಲ ೧೦ ನೈಜಾಮರ ನೀತಿಯನ್ನು ಅನುಸರಿಸಿ ತಮ್ಮ ಜಮೀನುಗಳನ್ನೆಲ್ಲಾ ಸರ್ಕಾರದ ಆಡಳಿತಕ್ಕೆ ವಹಿಸಲು ನಿರ್ಧರಿಸಿರುವರೆಂದು ಹೇಳಲಾಗಿದೆ.

ರೈಲ್ವೆ ಗಾಡಿಯಲ್ಲಿ ಗಲಭೆ ಮತ್ತು ಚೂರಿ ಇರಿತ

... ಯಿಂದ ಮದ್ರಾಸಿಗೆ ಹೊರಟ ಸೆಟಲ್ ರೈಲಿನಲ್ಲಿ ಪ್ರಯಾಣಿಕರ ... ಗಲಭೆ ನಡೆದು, ೩ ಜನರಿಗೆ ಗಾಯ ... ವರದಿಯಾಗಿದೆ. ರೈಲು ... ಸಮಯದಲ್ಲಿ ಒಬ್ಬನು ... ಗೆ ಕುಳಿತಿದ್ದವನಿಗೆ ... ಜನರಿಗೆ ಚಾ ... ರೈಲನ್ನು ನಿಲ್ಲಿಸಿ ಪಾಪ ... ತರಲಾಯಿತೆಂದೂ, ಅವ ... ಕ್ಕೆಗೆ ದಾಖಲು ಮಾಡ ... ಕ್ಷವಾಗಿದೆ

ಬ್ರಿಟನ್ನಿನಲ್ಲಿ ಮಹಿಳಾ ಸೈನ್ಯ ಪಡೆ

ಬ್ರಿಟನ್ನಿನ ಮಹಿಳೆಯರು ತಮ್ಮ ಆಜೀವ ಪರ್ಯಂತ ಸೈನಿಕ ಹುದ್ದೆಯಲ್ಲಿರಬಹುದು ಅವಕಾಶವಾಗುವಂತೆ ಒಂದು ಹೊಸ ಕಾನೂನನ್ನು ಬ್ರಿಟನ್ನಿನಲ್ಲಿ ಜಾರಿಗೆ ತರಲಾಗಿದೆ. ಇದೇ ಮೊದಲನೆಯದಾಗಿ ಬ್ರಿಟಿಷ್ ಸೈನ್ಯಗಳಲ್ಲಿ ಮಹಿಳಾ ಪಡೆಯನ್ನು ಏರ್ಪಡಿಸಲಾಗಿದೆ. ಅದರಲ್ಲಿ ನೌಕಾ ವಾಯು ದಳವೂ ಸೇರಿದೆ. ೧೮ ರಿಂದ ೩೯ ವರ್ಷಗಳ ಮಹಿಳೆಯರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಹುದು. ಪೂರ್ಣ ಸದಸ್ಯರು ೨೨ ವರ್ಷಗಳ ನೌಕರಿ ಮಾಡಬೇಕು.

ಮಳೆಗಾಗಿ ವಿಶೇಷ ಪ್ರಾರ್ಥನೆ

ಕಾಲಕಾಲಕ್ಕೆ ಮಳೆಯಾಗಲೆಂದು ದೇವರನ್ನು ಪ್ರಾರ್ಥಿಸಲು ಪ್ರತಿ ಶುಕ್ರವಾರ ಪ್ರಾಂತ್ಯದ ಎಲ್ಲ ದೇವಸ್ಥಾನ, ಮಠಗಳಲ್ಲಿ ವಿಶೇಷ ಪ್ರಾರ್ಥನೆ ನಡೆಸಬೇಕೆಂದು ಮದರಾಸ್ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಬರ್ಮದ ೩೦ ಸಾವಿರ ಸರ್ಕಾರಿ ನೌಕರರ ಮುಷ್ಕರ

ಬರ್ಮಾ ಸರ್ಕಾರದ ೩೦ ಸಾವಿರ ನೌಕರರು ತಮ್ಮ ತುಟ್ಟಿ ಭತ್ಯವನ್ನು ಕಡಿಮೆ ಮಾಡಿರುವುದರ ಬಗ್ಗೆ ರಂಗೂನಿನಲ್ಲಿ ಮೊನ್ನೆಯಿಂದ ಮುಷ್ಕರ ಹೂಡಿರುತ್ತಾರೆ. ಪೊಲೀಸರು ಮುಷ್ಕರಗಾರರ ನಾಯಕರನ್ನು ಮತ್ತು ಸರ್ಕಾರಿ ನೌಕರರ ಸಂಘದ ಅಧಿಕಾರೀ ವರ್ಗದವರನ್ನು ದಸ್ತಗಿರಿ ಮಾಡಿರುತ್ತಾರೆ.

ನೋಟೀಸ್

ನಮ್ಮ ಕಕ್ಷಿಗಾರರಾದ ನಂಜನಗೂಡು ತಾಲ್ಲೂಕು ಬಿಳಿಗೆರೆ ಹೋಬಳಿ ಗೆಜ್ಜಿಗನಹಳ್ಳಿಯಲ್ಲಿರುವ ಗಿರಿಜಮ್ಮನ ಬಸವಯ್ಯನ ಮಗ ಬಸವಯ್ಯನವರ ಪರ ತಿಳಿಯಪಡಿಸುವುದೇನೆಂದರೆ:-- ನಮ್ಮ ಕಕ್ಷಿದಾರರ ತಾಯಿ, ಬಸವಮ್ಮ ನವರ ಹೆಸರಿನಲ್ಲಿರುವ ಸ್ವತ್ತು ಗಳೆಲ್ಲಾ ನಮ್ಮ ಕಕ್ಷಿಗಾರರು ಬಸವಯ್ಯನವರ ಸಿತ್ರಾರ್ಜಿತ ಮತ್ತು ಪಿತ್ರಾರ್ಜಿತ ಸ್ವತ್ತುಗಳ ಸಹಾಯದಿಂದ ಪಡೆದ ಸ್ವತ್ತುಗಳಾಗಿ ನಮ್ಮ ಕಕ್ಷಿಗಾರರ ಸಂಪೂರ್ಣ ಹಕ್ಕಿಗೆ ಒಳಪಟ್ಟು ಅವರ ಸ್ವಾಧೀನಾನುಭವದಲ್ಲಿರುತ್ತವೆ. ಅವುಗಳ ಮೇಲೆ ಸದರಿ ಬಸವಮ್ಮನವರಿಗೆ ಜೀವನಾಂಶದ ಹಕ್ಕೊಂದು ವಿನಹ ಮತ್ಯಾವ ಹಕ್ಕೂ ಇರುವುದಿಲ್ಲ. ಆಕೆಗೆ ಎಪ್ಪತ್ತು ವರ್ಷಗಳ ಮೇಲೆ ವಯಸ್ಸಾಗಿರುತ್ತೆ. ಆಕೆಗೆ ದುರ್ಬೋಧನೆ ಮಾಡಿ ಆಕೆಯಿಂದ ಸದರಿ ಸ್ವತ್ತುಗಳನ್ನು ಪರಭಾರೆ ಮಾಡಿಸಲು ಪ್ರಯತ್ನಗಳು ನಡೆಯುತ್ತಿವೆ. ಸದರಿ ಸ್ವತ್ತುಗಳನ್ನು ಯಾರಾದರೂ ಯಾವ ರೀತಿಯಲ್ಲಾದರೂ ಪರಭಾರೆ ಮಾಡಿಸಿಕೊಂಡಲ್ಲಿ ಅಂಥಾ ಪರಭಾರೆಗಳಿಂದ ಅವರಿಗೆ ಯಾವ ಹಕ್ಕೂ ಉಂಟಾಗುವುದಿಲ್ಲ.

ತಾ॥ 8 - 2 - 49
ಮೈಸೂರು.

ಬಿ. ರಾಮರಾವ್,
ಅಡ್ವೊಕೇಟ್.

ಟಿ. ನರಸೀಪುರದ ಗ್ರಾಮ ಪ್ರೌಢ ಶಾಲೆ

ಟಿ. ನರಸೀಪುರದ ಗ್ರಾಮ ವಿದ್ಯೋದಯ ಸಂಘದ ೧೯೪೬-೪೭ ಮತ್ತು ೪೭ ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಸಂಘದ ಅಂಗವಾಗಿ ಪ್ರೌಢಶಾಲೆಯು ೩ ವರ್ಷಗಳ ಹಿಂದೆ ಪ್ರಾರಂಭವಾಗಿ ಒಟ್ಟು ೩೬೦ ವಿದ್ಯಾರ್ಥಿಗಳು ಶಿಕ್ಷಣ ಪಡೆದಿರುತ್ತಾರೆ. ಎಲ್ಲಮಕ್ಕಳಿಗೂ ನಿರ್ಬಂಧವಾಗಿ ಸೇವಾದಳದ ಶಿಕ್ಷಣವನ್ನು ಕೊಡಲಾಗುತ್ತಿದೆ. ಶಾಲಾ ಕಟ್ಟಡಕ್ಕಾಗಿ ೫ ಎಕರೆ ಜಮೀನನ್ನು ಕೊಂಡು ಕೊಳ್ಳಲಾಗಿದೆ. ಜಿಲ್ಲಾ ಬೋರ್ಡಿನವರು ೮ ಸಾವಿರ ರೂ ಮತ್ತು ಸರ್ಕಾರದವರು ೯೪೦೦ ರೂ ಗ್ರಾಂಟನ್ನು ಕಟ್ಟಡದ ನಿಧಿಗೆ ಕೊಟ್ಟಿರುತ್ತಾರೆ. ಕಟ್ಟಡಕ್ಕೆ ಒಟ್ಟು ೧,೨೨,೦೦೦ ರೂ ಖರ್ಚಾಗುವುದು. ಇದಕ್ಕಾಗಿ ಮಹಾಜನಗಳು ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಎಂ. ಸಿ ಶಿವಾನಂದ ಶರ್ಮರವರು ಪ್ರಾರ್ಥಿಸಿರುತ್ತಾರೆ. ಶಾಲೆಯು ಇನ್ನೂ ಹೆಚ್ಚಿಗೆ ಸೇವೆ ಸಲ್ಲಿಸಲೆಂದು ಹಾರೈಸುತ್ತೇವೆ.

ಮಹಾತ್ಮರ ಪ್ರತಿಮೆಯ ಪೂಜೆಗೆ ಪಾಕಿಸ್ಥಾನ ಅಡ್ಡಿ

ಮಹಾತ್ಮರ ಪ್ರಥಮ ವಾರ್ಷಿಕ ದಿನ ಕಳೆದ ೩೦ ನೇ ತಾ॥ ಪಾಕಿಸ್ತಾನದಲ್ಲಿರುವ ಭಾರತದ ಹೈ ಕಮಿಷನರು ಕರಾಚಿಯಲ್ಲಿರುವ ಗಾಂಧೀಜಿಯವರ ಪ್ರತಿಮೆಗೆ ಪುಷ್ಪಹಾರವನ್ನು ಅರ್ಪಿಸಲು ಪಾಕಿಸ್ಥಾನ ಸರ್ಕಾರದವರು ಅವಕಾಶ ಕೊಡಲಿಲ್ಲವೆಂದು ಹೇಳಲಾಗಿದೆ. ಅದರೆ ಢಾಕಾದಲ್ಲಿ ಪಾಕಿಸ್ಥಾನದ ಗೌರ್ನರ್ ಜನರಲ್ಲರು ಮತ್ತು ಪೂರ್ವ ಬಂಗಾಳದ ಗೌರ್ನರರು ಮಹಾತ್ಮರ ವಾರ್ಷಿಕ ದಿನಾಚರಣೆಯಲ್ಲಿ ಭಾಗ ವಹಿಸಿದ್ದರು.

ಸ್ಕೂಲ್ ಫೈನಲ್ ವಿಜ್ಞಾನ ಪ್ರಶ್ನೋತ್ತರಗಳು

ಮೈಸೂರು ಸೆಂಟ್ ಫಿಲೋಮಿನಾ ಹೈಸ್ಕೂಲು ಅಧ್ಯಾಪಕರಾದ ಶ್ರೀ ಸಿ.ಎಸ್.ವಿಜಯರಾಘವಾಚಾರ್ಯರು ಪ್ರಕಟಿಸಿರುವ ಎಸ್.ಎಸ್.ಎಲ್ ಸಿ ಪರೀಕ್ಷೆಯ ಫಿಜಿಕ್ಸ್ ಕೆಮಿಸ್ಟ್ರಿ ಮತ್ತು ಬಯಾಲಜಿ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನೊಳಗೊಂಡ ಪುಸ್ತಕವು ನಮ್ಮ ಹಸ್ತಗತವಾಗಿದೆ. ಪರೀಕ್ಷೆಗೆ ಕೂಡುತ್ತಿರುವ ವಿದ್ಯಾರ್ಥಿಗಳಿಗೆ ಇದರಿಂದ ತುಂಬಾ ಉಪಯೋಗವಾಗುವುದು. ಪ್ರತಿಯೊಂದು ಉತ್ತರದ ಜೊತೆಗೂ ಅದನ್ನು ಉದಹರಿಸುವ ಚಿತ್ರವನ್ನು ಕೊಡಲಾಗಿದೆ. ಬೆಲೆ. ರೂ. ೨-೪-೦

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ದಯಮಾಡಿ ಇಂದೇ ಭೇಟಿ ಕೊಡಿ

ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಮತ್ತು ಕುಂಬಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು, ಮಗುಟಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ
ಶಿವರಾಂಪೇಟೆ : ಮೈಸೂರು

ಶ್ರೀ ರಾಘವೇಂದ್ರಾ ಸ್ಟೋರ್ಸ್
ದೇವರಾಜ ಮೊಹಲ್ಲಾ, ಮೈಸೂರು.

ಪರಮಾಯಿಷಿ ತೊಗರಿ ಬೇಳೆ
ಸೇರು ೧ಕ್ಕೆ ರೂ. 0-10-0

Edited, printed and published by A.R.Nagarajan at the Sadhvi Press, D. Subbiah Road, Mysore.

ಹೈದರಾಬಾದಿನಲ್ಲಿ ಜಹಗೀರುಗಳ ರದ್ದು

ಹೈದರಾಬಾದಿನಲ್ಲಿರುವ ಎಲ್ಲ ಜಹಗೀರುಗಳು ಮತ್ತು ಜಮೀನುದಾರಿಗಳನ್ನು ಸರ್ಕಾರದವರು ವಶಪಡಿಸಿಕೊಂಡು ಅಲ್ಲಿರುವ ಪಾಳೇಗಾರ ಪದ್ಧತಿಯನ್ನು ವಜಾ ಮಾಡುವ ತೀರ್ಮಾನಕ್ಕೆ ಬಂದಿದೆ. ಇಷ್ಟರಲ್ಲಿಯೇ ಜಹಗೀರುಗಳನ್ನೂ ಕೈಗೊಳ್ಳಲಿರುವರೆಂದು ಹೇಳಲಾಗಿದೆ.

॥ಶ್ರೀ॥

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಪ್ರದರ್ಶನಗಳು
ತಾ॥ 10-2-49 ರಿಂದ 2 ದಿನ

ರೇಸ್ ಸ್ಟ್ರೀಟ್

ಪಾತ್ರ:- ಜಾರ್ಜ್ ರಾಫ್ಟ್ ಮತ್ತು ವಿಲಿಯಂ ಬೆಂಡಿಕ್ಸ್

From 10-2-49
For 2 days only
Daily 3 Shows

RACE STREET

—: With :—
GEORGE RAFT and
WILLIAM BENDIX

11-2-49 ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು

ಮೈಸೂರು
ರಾಜಕಮಲ್
ಮತ್ತು
ನ್ಯೂ ಆಪೆರಾ
ಟಾಕೀಸುಗಳಲ್ಲಿ

ಆದಿತ್ಯನ
ಕನಸು
(ತಮಿಳು)

—: ಮುಖ್ಯ ಪಾತ್ರ:—
† ಅಂಜಲಿದೇವಿ,
† ಟಿ.ಆರ್. ಮಹಾಲಿಂಗಂ
† ಕಾಳಿ ಎನ್. ರತ್ನಂ

ಬೆಂಗಳೂರಿನ
ನ್ಯೂ ಅಪೆರಾ, ಶಿವಾಜಿ
ಸ್ವಾಸ್ತಿಕ್
ಟಾಕೀಸುಗಳಲ್ಲೂ ಮತ್ತು
ಮಂಗಳೂರು
ಸೆಂಟ್ರಲ್ ಟಾಕೀಸಿನಲ್ಲೂ

ಪ್ರತಿ ಸ್ತ್ರೀ ಮತ್ತು ಪುರುಷರೂ ನೋಡಬೇಕಾದ ಕಥೆ. ಸಕಲರಿಗೂ ಸಂತೋಷ ಕೊಡುವ ಸಂಗೀತ ನೃತ್ಯ ಕೂಡಿದ ಚಿತ್ರ.

ಪ್ರಭುದೇವಾ ಟಾಕೀಸಿನಲ್ಲಿ
7-2-49 ರಿಂದ ಆರಂಭ
ಪ್ರತಿ ದಿನ ೩ ಆಟಗಳು

• ಭಕ್ತ ಗೌರಿ •
(ತಮಿಳು)

ಪಾತ್ರ:- U. R ಜೀವರತ್ನಂ S. D. ಸುಬ್ಬಯ್ಯ L. ನಾರಾಯಣರಾವ್ C. V. V ಪಂತಲು K. K. ಪೆರುಮಾಳ್ P. S. ಶಿವಭಾಗ್ಯಂ, ಕಾಳಿ N ರತ್ನಂ

ಹೊಸನಾದ ಮಿಲ್ ಬಟ್ಟೆಯು

ಒಟ್ಟಾಗಿಯೂ ಮತ್ತು ಬಿಡಿಯಾಗಿಯೂ ಸಿಗುತ್ತದೆ
ಕೂಪನ್ನಿನ ಆಗತ್ಯವಿಲ್ಲ
(Shirtings and Sarees)
ವಿವರಗಳಿಗೆ
ಆರ್. ವಾಸುದೇವ ಮೂರ್ತಿ ಅಂಡ್ ಕೊ.,
ಜವಳಿ ವ್ಯಾಪಾರಿಗಳು, ಪ್ರಭಾ ಟಾಕೀಸ್ ಹೌಸ್ ಎದುರು.

ಬೆಂಗಾಲ್ ಬೆನಾರಿಸ್ ಮೈಸೂರು ಸಿಲ್ಕ್ ಸೀರೆಗಳು

ಮಂಗಳಕರವಾದ ಮದುವೆ ಜವಳಿಗಳು ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ. ನಾಣ್ಯವಾದ ಮಾಲು. ಬಾಹುಸಾರ್ ಕಂಪೆನಿ, ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೧೦-೨-೧೯೪೯ [ಸಂಚಿಕೆ ೧೭೯

ನಾಥೂರಾಂ ಗೋಡ್ಸೆಗೆ ಮರಣ ದಂಡನೆ

ರಾಜಕುಮಾರಿಯ ಮೇಲೆ ಪತಿಯನ್ನು ಕೊಲೆ ಮಾಡಿದ ಆಪಾದನೆ

ಮಧ್ಯ ಪ್ರಾಂತ್ಯದ ಕೆಂಕೇರಿ ಸಂಸ್ಥಾನದ ಜೂನಿಯರ್ ಮಹಾರಾಣಿಯವರ ಪುತ್ರಿ ಶ್ರೀಮತಿ ಗೋವಿಂದ ಕುಮಾರಿಯವರು ತಮ್ಮ ಪತಿ ಶ್ರೀ ಜ್ಯೋತಿಲಾಲರನ್ನು ಕೊಲೆ ಮಾಡಿಸಿದರೆಂಬ ಆಪಾದನೆಯ ಮೇಲೆ ಅಲಹಾಬಾದಿನ ಹೈಕೋರ್ಟಿನಲ್ಲಿ ಅವರ ಮತ್ತು ಇತರ ಇಬ್ಬರ ಮೇಲೆ ಮೊಕದ್ದಮೆ ಹೂಡಲಾಗಿದೆ. ಗೋವಿಂದ ಕುಮಾರಿಯವರು ೧೯೩೪ನೇ ಮೇ ತಿಂಗಳಿನಲ್ಲಿ ಶ್ರೀ ಜ್ಯೋತಿ ಲಾಲರನ್ನು ದೆಹಲಿಯಲ್ಲಿ ಭೇಟಿ ಮಾಡಿ ವಿವಾಹವಾದರು. ಅವರುಗಳು ಹಲವು ವರ್ಷ ಲಂಡನ್ ಮುಂತಾದ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಕೊನೆಗೆ ಝಾನ್ಸಿಯಲ್ಲಿ ಬಂದು ನೆಲೆಸಿದರು. ಅಲ್ಲಿ ಗೋವಿಂದ ಕುಮಾರಿಯವರಿಗೂ, ರಘುರಾಜ್ ಎಂಬವನಿಗೂ ಪ್ರೀತಿ ಬೆಳೆದು, ಅವನ ಪ್ರೇರಣೆಯ ಮೇಲೆ ಆಕೆಯು ತನ್ನ ಸೇವಕರಾದ ದಂಗಾಲಿ ಮತ್ತು ಬಾಬು ಲಾಲ್‌ರವರ ಸಹಾಯದಿಂದ ೧೯೪೭ನೇ ಡಿಸೆಂಬರ್ ೧೯ನೇ ತಾ॥ ರಾತ್ರಿ ಜ್ಯೋತಿ ಲಾಲರನ್ನು ಚಾಕುವಿನಿಂದ ತಿವಿದು ಕೊಲೆ ಮಾಡಿಸಿದರೆಂದು ಆಪಾದಿಸಲಾಗಿದೆ.

ಇಂಗ್ಲೀಷ್ ಕಡಲ್‌ಗಾಲುವೆ ಕೆಳಗೆ ಸುರಂಗದ ಮಾರ್ಗ

ಫ್ರಾನ್ಸಿಗೂ ಮತ್ತು ಇಂಗ್ಲೆಂಡಿಗೂ ನಡುವೆ ಇರುವ ಇಂಗ್ಲೀಷ್ ಕಡಲ್ಗಾಲುವೆಯ ಕೆಳಗೆ ೬೦ ಅಡಿ ಕೆಳ ಭಾಗದಲ್ಲಿ ೩೫ ಮೈಲಿ ಉದ್ದದ ಸುರಂಗ ಮಾರ್ಗವೊಂದನ್ನು ತೆಗೆಯುವ ಯೋಜನೆಯು ಇಂಗ್ಲೆಂಡ್ ಮತ್ತು ಫ್ರಾನ್ಸ್ ಸರಕಾರಗಳ ಆಲೋಚನೆಯಲ್ಲಿದೆಯೆಂದು ಹೇಳಲಾಗಿದೆ. ಇದಕ್ಕೆ ೬೫ ಕೋಟಿ ರೂ. ಖರ್ಚು ಆಗುವುದೆಂದೂ ಇದು ಅಣುಬಾಂಬಿನ ಹೊಡೆತಕ್ಕೆ ಸಿಗುವುದಿಲ್ಲವೆಂದೂ ಮತ್ತು ಇತರ ಸಂಚಾರಕ್ಕೂ ಅನುಕೂಲವಾಗುವುದೆಂದೂ ಹೇಳಲಾಗಿದೆ. ಕೇಪ್‌ಗ್ರಿನೆ ಎಂಬಲ್ಲಿಂದ ಬ್ರಿಟಿಷ್ ತೀರದ ಫೋಕ್‌ಸ್ಟನ್ನಿಗೆ ಸುರಂಗ ಹಾಕಲಾಗುವುದು.

ಸ್ಕೌಟ್ ರ್‍ಯಾಲಿಯ ಕಾರ್ಯಕ್ರಮ

ಮೈಸೂರು ೧೦

ನಗರದ ಸ್ಕೌಟ್ ಕೌನ್ಸಿಲ್ಲಿನ ಆಶ್ರಯದಲ್ಲಿ ಸ್ಕೌಟ್ ರ್‍ಯಾಲಿಯು ಇದೇ ೧೨, ೧೩ ಮತ್ತು ೧೪ನೇ ತಾ॥ಗಳಲ್ಲಿ ನಡೆಯುವುದು.

೧೨ನೇ ತಾ॥ ಮಧ್ಯಾಹ್ನ ೩ ಗಂಟೆಯಿಂದ ದೊಡ್ಡಕೆರೆ ಮತ್ತು ಟೌನ್ ಹಾಲ್ ಮೈದಾನಗಳಲ್ಲಿ—ಸ್ಕೌಟ್ ರಿಲೆ, ಕಬ್ಬುಗಳ ಆಟಪಾಟ ಮತ್ತು ಕ್ಯಾಂಪ್ ಫೈರ್ ೧೩ನೇ ತಾ॥ ಬೆಳಿಗ್ಗೆ ೮ ರಿಂದ ಟೌನ್ ಹಾಲ್ ಮೈದಾನದಲ್ಲಿ ಪ್ರದರ್ಶನ. ೧೪ನೇ ತಾ॥ ಬೆಳಿಗ್ಗೆ ೮ ಗಂಟೆಗೆ ಮೆರವಣಿಗೆ ಸಂಜೆ ೫ ಗಂಟೆಗೆ ಟೌನ್ ಹಾಲಿನಲ್ಲಿ ಸಭೆ ಮತ್ತು ಬಹುಮಾನ ವಿನಿಯೋಗ—ಇವು ಜರುಗುವುವು.

ಆರಾಧನೆ

ಸಿದ್ಧಗಂಗೆಯ ಬಿಲ್ಲೆ ಮೊದಲ್ಗಾ ಪೀಠವಣ್ಣನವರ ರಸ್ತೆಯಲ್ಲಿರುವ ಶ್ರೀನಿವಾಸ ರಾಘವೇಂದ್ರ ಸೇವಾ ಮಂದಿರದಲ್ಲಿ ಇದೇ ೧೩ನೇ ತಾ॥ ಶ್ರೀ ರಾಘವೇಂದ್ರ ಸ್ವಾಮಿಯವರ ಮಂಡಲಾರಾಧನೆ ಮತ್ತು ಸತ್ಯನಾರಾಯಣ ಪೂಜೆಗಳು ನಡೆಯುವುವು.

ಡಾ॥ ಎ. ಎ. ಅಯ್ಯಂಗಾರ್ ಸೀನಿಯರ್ ಸರ್ಜನರೇ ?

ಸ್ವಂ ಸು. ಫೋ॥] ಬೆಂಗಳೂರು ೧೦

ಸಂಸ್ಥಾನದ ಸೀನಿಯರ್ ಸರ್ಜನರಾದ ಡಾ॥ ಮಾಂಟೇರೋ ರವರು ಸಧ್ಯದಲ್ಲೇ ನಿವೃತ್ತರಾಗುವರೆಂದೂ, ಅವರ ಸ್ಥಾನದಲ್ಲಿ ಡಾ॥ ಎ. ಎ. ಅಯ್ಯಂಗಾರ್‌ರವರನ್ನು ನೇಮಿಸಲಾಗುವುದೆಂದೂ ತಿಳಿದುಬಂದಿದೆ.

ಬೊಂಬಾಯಿ ಸಚಿವರ ಆಗಮನ

ಬೊಂಬಾಯಿನ ಹಣಕಾಸು ಸಚಿವ ಡಾ॥ ಗಿಲ್ಡರ್ ಮತ್ತು ವ್ಯವಸಾಯ ಸಚಿವ ಶ್ರೀ॥ ಎಂ. ಪಿ. ಪಾಟೀಲ್‌ರವರುಗಳು ನಿನ್ನೆ ಸಂಜೆ ಇಲ್ಲಿಗೆ ಆಗಮಿಸಿದರು. ಜೋಗದಿಂದ ಬೊಂಬಾಯಿ ಪ್ರಾಂತ್ಯಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ವಿಚಾರವಾಗಿ ವಿದ್ಯುಚ್ಛಕ್ತಿ ಸಚಿವ ಶ್ರೀ ಕೆ. ಟಿ. ಭಾಷ್ಯಂರವರೊಡನೆ ಈ ದಿನ ಮಾತುಕತೆ ನಡೆಸಿದರು.

ಬಟ್ಟೆ ಸರಬರಾಜು

ಮೈಸೂರು ನಗರ ಮತ್ತು ತಾಲ್ಲೂಕುಗಳನ್ನು ಬಟ್ಟೆ ಕೂಪನ್ನುಗಳ ಹಂಚಿಕೆಗೆ ಪ್ರತ್ಯೇಕ ಭಾಗಗಳನ್ನಾಗಿ ಮಾಡಿದುದನ್ನು ರದ್ದು ಮಾಡಿ, ಎರಡು ಪ್ರದೇಶಗಳನ್ನೂ ಒಂದನ್ನಾಗಿ ಮಾಡಲಾಗಿದೆಯೆಂದೂ. ಈ ಪ್ರದೇಶದ ಯಾವ ಅಂಗಡಿಯಲ್ಲಾದರೂ ಜಿಲ್ಲಾ ನಿವಾಸಿಗಳು ಬಟ್ಟೆ ಕೊಳ್ಳಬಹುದೆಂದೂ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ. ಇದೇ ರೀತಿ ಬೆಂಗಳೂರು ನಗರ ಮತ್ತು ದಂಡಿನ ಪ್ರದೇಶದಲ್ಲೂ ವ್ಯವಸ್ಥೆ ಮಾಡಲಾಗಿದೆ.

ಪರ್ಷಿಯಾ ರಾಜ್ಯವನ್ನು ಉರುಳಿಸಲು ಪಿತೂರಿ

ಪರ್ಷಿಯದ ಸ್ವಾತಂತ್ರ್ಯವನ್ನು ಕೊನೆಗಾಣಿಸಿ, ಅದನ್ನು ಪರ ರಾಷ್ಟ್ರಗಳ ಅಧೀನಕ್ಕೆ ಒಳಪಡಿಸಲು ಒಬ್ಬ ತೊಡಗಿದವರು ಪಿತೂರಿ ನಡೆಸುತ್ತಿದ್ದಾರೆಂದು ಹೇಳಲಾಗಿದೆ. ಷಾರವರನ್ನು ಕೊಲೆ ಮಾಡಲು ಯತ್ನಿಸಿದ ಸಂಬಂಧದಲ್ಲಿ ಈ ಪಿತೂರಿಯು ಬಯಲಾಯಿತೆಂದೂ, ಈ ಸಂಬಂಧದಲ್ಲಿ ಜನರೆಲ್ಲರೂ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನೆಲ್ಲಾ ಸರ್ಕಾರಕ್ಕೆ ೨೦ ದಿನಗಳೊಳಗೆ ಒಪ್ಪಿಸಬೇಕೆಂದೂ ಆಜ್ಞೆ ಮಾಡಲಾಗಿದೆ.

ಅಂಚೆ ಹಂಚುವ ವ್ಯವಸ್ಥೆಯಲ್ಲಿ ಸುಧಾರಣೆ

ಮೈಸೂರು ೧೦

ನಗರದಲ್ಲಿ ಜನರ ಸೌಕರ್ಯಕ್ಕಾಗಿ ಅಂಚೆ ಇಲಾಖೆಯವರು ಈಗಿರುವಂತೆ ಎರಡು ಬಾರಿ ಕಾಗದಗಳನ್ನು ಹಂಚುವುದರ ಜೊತೆಗೆ ಮತ್ತೆರಡು ಬಾರಿ ಹಂಚಲು ವ್ಯವಸ್ಥೆ ಮಾಡುತ್ತಾರೆ. ೩೪ ಜನ ಹೆಚ್ಚಿನ ಪೋಸ್ಟ್‌ಮನ್ನುಗಳನ್ನು ನೇಮಕ ಮಾಡಲಾಗಿದೆ. ಬೆಳಿಗ್ಗೆ ೭-೩೦ ಮತ್ತು ಮಧ್ಯಾಹ್ನ ೧-೧೫ ಗಂಟೆಗಳಿಗೆ ಕಾಗದಗಳನ್ನೂ, ಪುನಃ ಬೆಳಿಗ್ಗೆ ೮ ಮತ್ತು ಮಧ್ಯಾಹ್ನ ೩-೩೦ ಗಂಟೆಗೆ ರಿಜಿಸ್ಟರ್ ಕಾಗದಗಳು ಮತ್ತು ಮನಿಯಾರ್ಡರುಗಳನ್ನು ಹಂಚಲಾಗುವುದು. ಮಧ್ಯಾಹ್ನ ಮನಿಯಾರ್ಡರುಗಳನ್ನು ಕೊಡುವುದಿಲ್ಲ. ಹಂಚುವಿಕೆಯಲ್ಲಿ ತಡವಾದರೆ ಇಲಾಖೆಯವರ ಗಮನಕ್ಕೆ ತಂದು ಮಹಾಜನರು ಸಹಕರಿಸಬೇಕೆಂದು ಕೋರಲಾಗಿದೆ.

ಆರ್. ಎಸ್. ಎಸ್. ನಾಯಕರ ಬಿಡುಗಡೆ ಇಲ್ಲ

ಆರ್. ಎಸ್. ಎಸ್. ಸಂಸ್ಥೆಯ ನಾಯಕರುಗಳನ್ನು ಸಧ್ಯಕ್ಕೆ ಬಿಡುಗಡೆ ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂದು ಉಪ ಪ್ರಧಾನಿ ಸರ್ದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ. ಅನೇಕ ಸರ್ಕಾರಿ ನೌಕರರು ಆರ್. ಎಸ್. ಎಸ್. ನಲ್ಲಿದ್ದಾರೆಂದೂ, ಶಿಕ್ಷೆಗೆ ಒಳಗಾದವರನ್ನು ಕೆಲಸದಿಂದ ವಜಾ ಮಾಡಲಾಗುವುದೆಂದೂ, ವಿದ್ಯಾರ್ಥಿಗಳನ್ನು ಮಾತ್ರ ಬಿಡಲಾಗುವುದೆಂದೂ ಅವರು ಹೇಳಿರುತ್ತಾರೆ.

ಉಪಾಧ್ಯಾಯರ ಮುಷ್ಕರದ ಮುಕ್ತಾಯ

ಸಂಯುಕ್ತ ಪ್ರಾಂತ್ಯದ ಜಿಲ್ಲಾ ಬೋರ್ಡಿನ ೪೦ ಸಾವಿರ ಉಪಾಧ್ಯಾಯರುಗಳು ಕಳೆದ ೩೭ ದಿನಗಳಿಂದಲೂ ಹೂಡಿದ್ದ ಮುಷ್ಕರವನ್ನು ಮೊನ್ನೆಗೆ ಮುಕ್ತಾಯ ಮಾಡಿರುತ್ತಾರೆ. ಉಪಾಧ್ಯಾಯರುಗಳ ಸಂಘದ ... ಒಪ್ಪಂದದ ... ಕ್ರಮವನ್ನು ... ಪ್ರಾಂತ್ಯದ ಕಾಂಗ್ರೆಸ್ ಅಧ್ಯಕ್ಷರು ... ಕೊಟ್ಟ ... ಮುಷ್ಕರವನ್ನು ಕೊನೆಗೊಳಿಸ...

ಮಹಾತ್ಮರ ಕೊಲೆ ಅಪಾದಿತರಿಬ್ಬರಿಗೆ ಮರಣ ದಂಡನೆ

ಸಾವರ್ಕರರ ಬಿಡುಗಡೆ

ಸ್ವಂ. ಸು. ಫೋ॥] ಬೆಂಗಳೂರು ೧೦

ಗಾಂಧೀಜಿಯವರ ಕೊಲೆ ಮೊಕದ್ದಮೆಯಲ್ಲಿ ಈ ದಿನ ತೀರ್ಪು ಕೊಡಲ್ಪಟ್ಟು, ನಾಥೂರಾಂ ವಿನಾಯಕ ಗೋಡ್ಸೆ ಮತ್ತು ನಾರಾಯಣ ಆಪ್ಟೆರವರುಗಳಿಗೆ ಮರಣ ದಂಡನೆಯನ್ನೂ, ಮದನ ಲಾಲ್, ಗೋಪಾಲ ಗೋಡ್ಸೆ, ಕರಾಕರೆ ಮತ್ತು ಪರಚುರೆ ಇವರುಗಳಿಗೆ ಜೀವಾವಧಿ ಶಿಕ್ಷೆಯನ್ನೂ, ಶಂಕರ ಕೃಷ್ಟೈರವರಿಗೆ ೭ ವರ್ಷ ಕಠಿಣ ಶಿಕ್ಷೆಯನ್ನೂ ವಿಧಿಸಲಾಯಿತೆಂದೂ, ಸಾವರ್ಕರ್ ಮತ್ತು ಬಡ್ಗೆ ಅಪ್ರೂವರ್ ಬ್ಯಾಡ್ಗೆರವರುಗಳನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಲಾಯಿತೆಂದೂ ಇಲ್ಲಿಗೆ ವರ್ತಮಾನ ಬಂದಿರುತ್ತದೆ.

ಮಧ್ಯ ಪ್ರಾಂತ್ಯದಲ್ಲಿ ಭೂಪಾಲಿನ ಐಕ್ಯ

ಭೂಪಾಲ್ ಸಂಸ್ಥಾನವನ್ನು ಮಧ್ಯ ಪ್ರಾಂತ್ಯದಲ್ಲಿ ಐಕ್ಯ ಮಾಡಲಾಗುವುದೆಂದೂ, ಈ ಕಾರ್ಯವು ಇದೇ ತಿಂಗಳು ಮೂರನೇ ವಾರದಲ್ಲಿ ನಡೆಯಬಹುದೆಂದೂ ಹೇಳಲಾಗಿದೆ.

ರಾಜರ ಅರಮನೆಗಳನ್ನು ಸರ್ಕಾರವು ಕೊಳ್ಳುವುದು

ದೆಹಲಿಯಲ್ಲಿರುವ ನಾನಾ ಮಹಾರಾಜರುಗಳ ಅರಮನೆಗಳನ್ನು ಭಾರತ ಸರ್ಕಾರದವರು ಕೊಂಡುಕೊಳ್ಳಬೇಕೆಂದು ಆಲೋಚಿಸುತ್ತಿರುವುದಾಗಿ ಉಪ ಪ್ರಧಾನಿ ಸರ್ದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ. ಅರಮನೆಗಳನ್ನು ಭಾರತ ಸರ್ಕಾರಕ್ಕೆ ವಿನಃ ಇನ್ನಾರಿಗೂ ಮಾರಕೂಡದೆಂದು ರಾಜರುಗಳಿಗೆ ಈಗಾಗಲೇ ಸೂಚನೆ ಕೊಡಲಾಗಿದೆಯೆಂದೂ ಅವರು ಹೇಳಿರುತ್ತಾರೆ.

ಬಸ್ಸಿನಲ್ಲಿ ನಿಲ್ಲುವ ಪ್ರಯಾಣಿಕರ ಸಂಖ್ಯೆ

ಬೆಂಗಳೂರು ೧೦

ಬೆಂಗಳೂರು ನಗರ ಮತ್ತು ಸಂಸ್ಥಾನದ ಇತರ ಭಾಗಗಳಲ್ಲಿ ಸಂಚರಿಸುವ ಬಸ್ಸುಗಳಲ್ಲಿ ನಿಗದಿಯಾಗಿರುವ ಸಂಖ್ಯೆಗಿಂತಲೂ ಹೆಚ್ಚಾಗಿ ಪ್ರಯಾಣಿಕರು ನಿಂತುಕೊಂಡು ಹೋಗಲು ಸರ್ಕಾರದವರು ಗೊತ್ತುಪಡಿಸಿ ೧೦ ರಿಂದ ೧೫ ಸೀಟಿನ ಬಸ್ಸಿನಲ್ಲಿ ಇಬ್ಬರು; ೧೫ ರಿಂದ ೧೯ ಸೀಟಿನ ಬಸ್ಸಿನಲ್ಲಿ ಮೂವರು; ೨೦ ರಿಂದ ೨೪ ಸೀಟಿನ ಬಸ್ಸಿನಲ್ಲಿ ನಾಲ್ವರು; ೨೫ ಕ್ಕೆ ಮೇಲ್ಪಟ್ಟ ಬಸ್ಸುಗಳಲ್ಲಿ ೫ ಜನರು ನಿಲ್ಲಲು ಅವಕಾಶ ಕೊಟ್ಟಿದ್ದಾರೆ.

ಪೋಲೀಸ್ ಠಾಣೆಯಲ್ಲಿ ದಫೇದಾರನಿಗೆ ಏಟು

ಕೋಲಾರ ಜಿಲ್ಲೆಯ ಏಮರಾಪ್ಪನಹಳ್ಳಿಯಲ್ಲಿ ಕೆಲವರು ಗಾಂಜಾ ಗಿಡ ಬೆಳೆಸುತ್ತಿರುವ ರೆಂಬ ಗುಮಾನಿಯ ಮೇಲೆ ಪೋಲೀಸರು ಕೆಲವು ಮನೆಗಳನ್ನೂ ಮತ್ತು ಜಮೀನುಗಳನ್ನೂ ಶೋಧಿಸಿದ ಸಂಬಂಧದಲ್ಲಿ ಅಲ್ಲಿನ ಪೋಲೀಸ್ ಠಾಣೆಗೆ ಕೆಲವರು ನುಗ್ಗಿ ಶೋಧನ ನಡೆಸಿದ ದಫೇದಾರರನ್ನು ಹೊಡೆದು ಗಾಯಪಡಿಸಿರುವರೆಂದು ವರದಿಯಾಗಿದೆ. ಆತನನ್ನು ಗೌರಿಬಿದನೂರು ಆಸ್ಪತ್ರೆಗೆ ಸಾಗಿಸಲಾಗಿದೆ.

ಉಪವಾಸಕ್ಕೆ ಪ್ರತಿ ಉಪವಾಸವೇ ?

ಮದ್ರಾಸು ಶಾಸನ ಸಭೆಯಲ್ಲಿ ಹಿಂದೂ ಮತ ಸಂಬಂಧದ ಮಸೂದೆಯು ಚರ್ಚೆಗೆ ಬಂದಿರುವುದರಿಂದ ಅದನ್ನು ಪ್ರತಿಭಟಿಸಿ ಅಲ್ಲಿನ ಆರಾರಾ ಕಛೇರಿ ಎದುರಿನಲ್ಲಿ ಸ್ವಾಮಿ ನಿತ್ಯಾನಂದ ಸರಸ್ವತಿಯವರು ಕಳೆದ ೧೬ ದಿನಗಳಿಂದಲೂ ಉಪವಾಸ ಮಾಡುತ್ತಿರುವುದು ಸರಿಯಷ್ಟೆ? ಈ ರೀತಿ ಉಪವಾಸ ಮಾಡಿ ಬಲಾತ್ಕಾರದಿಂದ ಮಾಡುವವರ ಇಷ್ಟವನ್ನು ಈಡೇರಿಸಲು ಸರ್ಕಾರದವರು ಮಸೂದೆಯನ್ನು ವಾಪಸು ತೆಗೆದುಕೊಂಡರೆ ಆಗ ಅನೇಕ ಜನರು ಉಪವಾಸ ಮಾಡುವುದಾಗಿ ತಮಗೆ ತಿಳಿಸಿರುವುದಾಗಿ ಮದರಾಸ್ ಶಾಸನ ಸಭೆಯಲ್ಲಿ ಸದಸ್ಯರೊಬ್ಬರು ಹೇಳಿರುತ್ತಾರೆ

ಬಾಕಿ ಹಣಕ್ಕಾಗಿ ಪ್ರಾರಂಭಿಸಿದ ಉಪವಾಸ ಮುಕ್ತಾಯ

ತಿರುಮಂಗಳದ ಶ್ರೀ ರಾಮಯ್ಯ ನಾದರ್ ಎಂಬುವರು ಯುದ್ಧಕಾಲದಲ್ಲಿ ಈರುಳ್ಳಿಯನ್ನು ಸರ್ಕಾರಕ್ಕೆ ಸರಬರಾಜು ಮಾಡಿದ ಬಾಬ್ತು ಹಣವು ಬಂದಿಲ್ಲವೆಂದು ಮದರಾಸ್ ಆರಾರಾ ಕಛೇರಿಯ ಹತ್ತಿರ ಕಳೆದ ೨೯ ದಿನಗಳಿಂದಲೂ ಉಪವಾಸವನ್ನು ಮಾಡುತ್ತಿದ್ದು, ಮೊನ್ನೆ ಅದನ್ನು ಮುಕ್ತಾಯಗೊಳಿಸಿದರು. ವ್ಯವಸಾಯ ಸಚಿವರಾದ ಶ್ರೀ ಕೆ ಮಾಧವ ಮೆನನ್‌ರವರು ಅವರ ಕುಂದುಕೊರತೆಗಳನ್ನು ಪರಿಶೀಲಿಸುವುದಾಗಿ ಭರವಸೆ ಇತ್ತರು

ಗಣಿ ಕಾರ್ಮಿಕರು ಸರ್ಕಾರದಲ್ಲಿ ಭರವಸೆ ಇಡಬೇಕು

ಕಾರ್ಮಿಕ ಸಚಿವರ ಹೇಳಿಕೆ

ಬೆಂಗಳೂರು ೧೦

ಕೋಲಾರ ಚಿನ್ನದ ಗಣಿ ಕೆಲಸಗಾರರು ತಪ್ಪು ದಾರಿಯಲ್ಲಿ ಹೋಗುತ್ತಿದ್ದಾರೆ. ಅವರ ಮುಷ್ಕರವು ನ್ಯಾಯ ಬಾಹಿರವಾದುದು ನಾನು ಕಾರ್ಮಿಕರ ಬಗ್ಗೆ ಸಹಾನುಭೂತಿಯುಳ್ಳವನಾಗಿದ್ದೇನೆ. ಆದರೆ ಕೆಲಸಗಾರರ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಬೇಕಾದರೆ ಮುಷ್ಕರವು ಮಾರ್ಗವಲ್ಲ ಮುಷ್ಕರ ನಿಲ್ಲಿಸುವವರೆಗೂ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುವಹಾಗಿಲ್ಲ. ಆದ್ದರಿಂದ ಕಾರ್ಮಿಕರು ಕೂಡಲೆ ಕೆಲಸಕ್ಕೆ ವಾಪಸು ಬರಬೇಕು. ಅವರು ಹಾಗೆ ಮಾಡಿದರೆ ಕನಿಷ್ಠ ವೇತನವನ್ನು ನಿಗದಿ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ಕೂಡಲೇ ನೇಮಿಸಲಾಗುವುದು. ಕಾರ್ಮಿಕರು ಕೆಲಸಕ್ಕೆ ಹಿಂತಿರುಗಿ, ಒಳ್ಳೆಯ ಮಾರ್ಗದಲ್ಲಿ ನಡೆದರೆ, ತಾತ್ಕಾಲಿಕ ಪರಿಹಾರ ಕೊಡಲೂ ಅನುಕೂಲವಾಗುವುದು. ಕಾರ್ಮಿಕರು ಸರ್ಕಾರದವರಲ್ಲಿ ಭರವಸೆ ಇಡಬೇಕು. ಎಂದು ಕಾರ್ಮಿಕ ಸಚಿವರಾದ ಶ್ರೀ ಕೆ ಟಿ. ಭಾಷ್ಯಂರವರು ಒಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಪ್ರಪಂಚದ ಆಹಾರ ಉತ್ಪತ್ತಿ ಹಿಂದಿನ ಸ್ಥಿತಿ ಮುಟ್ಟಿತು

ಯುದ್ಧಕ್ಕೆ ಪೂರ್ವದಲ್ಲಿ ಉತ್ಪನ್ನವಾಗಿದ್ದಷ್ಟು ಅಕ್ಕಿಯು ಈ ವರ್ಷದಲ್ಲಿ ಆಗಿದೆಯೆಂದು ಹೇಳಲಾಗಿದೆ. ಈ ವರ್ಷ ೭೪೭ ಕೋಟಿ ಬುಸೆಲ್‌ಗಳಷ್ಟಾಗಿವೆ. ಯುದ್ಧಕ್ಕೆ ಪೂರ್ವದಲ್ಲಿ ಇಷ್ಟು ಅಕ್ಕಿಯಾಗಿತ್ತು.

ಡಾ॥ ಮೋದಿಯವರಿಗೆ ಸತ್ಕಾರ

ಮೈಸೂರು ೧೧

ರಾಜಧಾನಿಯ ಶ್ರೀ ಸುತ್ತೂರು ವಿದ್ಯಾರ್ಥಿ ನಿಲಯ ಸಂಘದವರು 'ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ॥ ಎಂ.ಸಿ. ಮೋದಿಯವರ ಗೌರವಾರ್ಥವಾಗಿ ನಿನ್ನೆ ಸಂಜೆ ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಪುರಸಭಾಧ್ಯಕ್ಷರಾದ ಶ್ರೀ ಕೆ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳಿಂದ ಸ್ವಾಗತ ಮತ್ತು ಪರಿಚಯ ಭಾಷಣಗಳಾದನಂತರ, ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಎಂ. ಸಿ. ಮಲ್ಲಪ್ಪನವರೂ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್.ಎಂ. ಚನ್ನಬಸಪ್ಪನವರೂ ಭಾಷಣ ಮಾಡಿ ಡಾ॥ ಮೋದಿಯವರ ಸೇವೆಯನ್ನು ಕೊಂಡಾಡಿದರು ನಂತರ ನಿಲಯದವರು ಡಾ॥ ಮೋದಿಯವರಿಗೆ ಒಂದು ಬಿನ್ನವತ್ತಳೆಯ ಅರ್ಪಿಸಿ, ಬಡಜನರಿಗೆ ಅವರು ಸಲ್ಲಿಸುತ್ತಿರುವ ಅಮೋಘ ಸೇವೆಯನ್ನು ಪ್ರಶಂಸಿಸಿದರು. ಡಾ॥ ಮೋದಿಯವರು ಭಾಷಣ ಮಾಡಿ, ಸತ್ಕಾರಕ್ಕಾಗಿ ತಮ್ಮ ಕೃತಜ್ಞತೆಯನ್ನು ಸೂಚಿಸಿ, ಕರ್ನಾಟಕದಲ್ಲಿ ಒಬ್ಬರೂ ದೃಷ್ಟಿ ಕಳೆದುಕೊಂಡಿರುವವರು ಇರಕೂಡದೆಂಬುದೇ ಅವರ ಧ್ಯೇಯವೆಂದೂ, ತಮ್ಮ ಕಾರ್ಯದಲ್ಲಿ ಎಲ್ಲರೂ ನೆರವಾಗಬೇಕೆಂದೂ ಕೋರಿದರು

ಸಭಾಧ್ಯಕ್ಷರೂ ಡಾ॥ ಮೋದಿಯವರನ್ನು ಪ್ರಶಂಸಿಸಿ ಭಾಷಣ ಮಾಡಿದರು.

ಪಾಕಿಸ್ತಾನ್ ಮತ್ತು ಬರ್ಮಾ ಗಡಿಯು ಬಂದು

ಪೂರ್ವ ಪಾಕಿಸ್ತಾನ ಮತ್ತು ಬರ್ಮಾ ಮಧ್ಯದಲ್ಲಿರುವ ಗಡಿಯನ್ನು ಪಾಕಿಸ್ತಾನ ಸರ್ಕಾರದವರು ಮುಚ್ಚಿರುತ್ತಾರೆ. ಗಡಿ ಹತ್ತಿರದ ಅರಕಾನ್ ಪ್ರಾಂತ್ಯದಲ್ಲಿ ಕಮ್ಯೂನಿಸ್ಟರ ಚಟುವಟಿಕೆ ವಿಶೇಷವಾಗಿದ್ದು, ಅಲ್ಲಿ ಹಲವು ಬಾರಿ ಸರ್ಕಾರದ ಸೈನ್ಯಕ್ಕೂ ಕಮ್ಯೂನಿಸ್ಟರಿಗೂ ಘರ್ಷಣೆಯಾಗಿ, ಅನೇಕ ಜನರು ಪೂರ್ವ ಪಾಕಿಸ್ತಾನಕ್ಕೆ ಬಂದಿರುವರೆಂದೂ ಇದನ್ನು ತಡೆಗಟ್ಟಲು ಗಡಿಯನ್ನು ಮುಚ್ಚಲಾಗಿದೆಯೆಂದೂ ಹೇಳಲಾಗಿದೆ.

ಎಸ್. ಎಗ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೆಯಿನ್ ಬಾಮ್

ನೋವು, ಕೀಲು ನೋವು ಮುಂತಾದ

ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ ೦-೧೨-೦

ಮಹಾ ಸುಗಂಧರಾಜ ತೈಲ—)

,, ಚಂದನಾದಿ ತೈಲ)

,, ಭೃಂಗಾಮಲಕ ತೈಲ -)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು.

ಮಹಾಕೇಶಕೀ ತೈಲ— ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಶೀಸೆ ೨-೦-೦

ಪಂಚಾಮೃತ—ಮಲೇರಿಯಾ ಜ್ವರಕ್ಕೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ

೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್

ಮೈ ಸೂ ರು.

॥ಶ್ರೀ॥

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಪ್ರದರ್ಶನಗಳು

ತಾ॥ 10-2-49 ರಿಂದ 2 ದಿನಗಳು

ರೇಸ್ ಸ್ಟ್ರೀಟ್

ಪಾತ್ರ - ಜಾರ್ಜ್ ರಾಫ್ಟ್ ಮತ್ತು ವಿಲಿಯಂ ಬೆಂಡಿಕ್ಸ್

From 10-2-49

For 2 days only

Daily 3 Shows

RACE STREET

— With :

GEORGE RAFT and

WILLIAM BENDIX

Morning Shows on Sat 12th, Sun 13th at 1-30 a m

R K O's

TO MORROW IS FOR EVER

Apply for

LODGING

and

BOARDING

(Only for Students)

2333 New Mysore Lodge

K. G. Koppal

Near to all the Colleges.

ಶ್ರೀ ಗಣೇಶಾ ಟಾಕೀಸ್

೧೧—೨—೪೯ ರಿಂದ

ಯಶಸ್ವಿಯಾದ 2 ನೇ ವಾರ

ಪ್ರತಿ ದಿನ ಮೂರು ಪ್ರದರ್ಶನಗಳು

ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ

ಕನ್ನಿಕಾ (ತಮಿಳು)

ಪಾತ್ರ:— ಎಂ. ಎಸ್. ಸರೋಜಿನಿ, ಟಿ. ಇ. ವರದನ್, ಎನ್.ಎಸ್. ಕೃಷ್ಣನ್, ಟಿ.ಎ. ಮಧುರಂ

Morning Shows on 11, 12, and 13th at 10 15 a. m

Secret Code

ಸೀಕ್ರೆಟ್ ಕೋಡ್

ಅಗ್ಗದ ದರಗಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ

Edited, printed and published by N.R Nagarajan at the Sadhvi Press D. Subbiah Road, Mysore

S.S.L.C. General Science 1940-48 Nov. Physics, Chemistry & Biology With over 50 Figs.

By C.S. VIJAYARAGHAVACHAR

(St Philomena's High School)

Copies sold at Book-sellers: & 346 D. Subbiah Road, MYSORE

* ರಾಜಕಮಲ್ ಟಾಕೀಸ್ *

11-2-49 ರಿಂದ ಆರಂಭ

ದಿನವಹಿ ೩ ಆಟಗಳು

ಆದಿತ್ಯನ ಕನಸು (ತಮಿಳು)

ಮುಖ್ಯ ಪಾತ್ರ:

† ಅಂಜಲಿದೇವಿ,

† ಟಿ. ಆರ್. ಮಹಾಲಿಂಗಂ,

† ಕಾಳಿ ಎನ್. ರತ್ನಂ,

† ವಾರಾ ಚೌಧುರಿ

† ಲಲಿತಾ ಪದ್ಮಿನಿ.

ಬೆಳಗಿನ ಆಟಗಳು : : ತಾ॥ ೧೧-೨-೪೯ರಿಂದ

ಕುಂಕುಮ್ ದಿ ಡ್ಯಾನ್ಸರ್ (ಹಿಂದಿ)

ಪಾತ್ರ ಸಾಧನಾ ಬೋಸ್ ಮತ್ತು ಮಧು ಬೋಸ್

ಫೋ ನಂ. 792 ॥ವಂದೇ ಮಾತರಂ॥ ಚಂದಾ ವರ್ಷಕ್ಕೆ ೩ ರೂ.

ಸಾಧ್ವಿ

ಸಂಪುಟ ೭] ಶುಕ್ರವಾರ ೧೧-೨-೧೯೪೯ [ಸಂಚಿಕೆ ೧೮೦

ಗಾಂಧೀ ಕೊಲೆ ಮೊಕದ್ದಮೆಯಲ್ಲಿ ಪೋಲೀಸರ ಮೇಲೆ ಟೀಕೆ

ಪೋಲೀಸರು ಹೆಚ್ಚು ಶ್ರದ್ಧೆ ವಹಿಸಿದ್ದರೆ ಮಹಾತ್ಮರ ಕೊಲೆ ನಡೆಯುತ್ತಿರಲಿಲ್ಲ

ಕೊಲೆ ಮೊಕದ್ದಮೆಯಲ್ಲಿ ನ್ಯಾಯಾಧೀಶರ ಅಭಿಪ್ರಾಯ

ಮಹಾತ್ಮರ ಕೊಲೆ ಮೊಕದ್ದಮೆಯ ತೀರ್ಪು ನಿನ್ನೆ ಮಧ್ಯಾಹ್ನ ೧೧-೩೦ ಗಂಟೆಗೆ ಕೊಡಲ್ಪಟ್ಟಿತಷ್ಟೆ. ಶ್ರೀ ಆತ್ಮಚರಣ್‌ರವರ ವಿಶೇಷ ನ್ಯಾಯಾಸ್ಥಾನವು ಜನ ಸಂದಣಿಯಿಂದ ಕಿಕ್ಕಿರಿದು ತುಂಬಿತ್ತು. ಕೆಂಪು ಕೋಟೆಯ ಪ್ರದೇಶವನ್ನು ಬಹಿಷ್ಕೃತ ಪ್ರದೇಶವೆಂದು ಸರ್ಕಾರವು ಸಾರಿತ್ತು. ಪೋಲೀಸರ ಮತ್ತು ಮಿಲಿಟರಿಯವರ ಪಹರೆಯು ವಿಶೇಷವಾಗಿತ್ತು. ಪ್ರವೇಶ ಕಾಗದ ಗಳಿದ್ದವರಿಗೆ ಮಾತ್ರ ಒಳಗೆ ಹೋಗಲು ಅವಕಾಶವಿತ್ತು. ನಾಥೂರಾಂ ಗೋಡ್ಸೆ ಮತ್ತು ಇತರ ೮ ಜನ ಅಪಾದಿತರುಗಳು ದಾಕಿನೊಳಕ್ಕೆ ಹೋದಕೂಡಲೇ ಅದಕ್ಕೆ ಬೀಗ ಹಾಕಲಾಯಿತು. ನ್ಯಾಯಾಧೀಶರು ತೀರ್ಪನ್ನು ಓದುತ್ತಿದ್ದಾಗ ಅಪಾದಿತರೆಲ್ಲರೂ ಒಟ್ಟೊಟ್ಟಾಗಿ ನಿಂತು ತಲೆಬಾಗಿ ನಮಸ್ಕರಿಸಿದರು. ಅವರುಗಳನ್ನು ಹೊರಗೆ ಕರೆದುಕೊಂಡುಹೋಗುವ ಕಾಲದಲ್ಲಿ ಅಪಾದಿತರೂ "ಹಿಂದೂ ಧರ್ಮಕಿ ಜೈ, ಹಿಂದಿ, ಹಿಂದು, ಹಿಂದೂಸ್ಥಾನ್" ಎಂಬ ಘೋಷಣೆಗಳನ್ನು ಮಾಡಿದರು.

ನಾಥೂರಾಂ ಗೋಡ್ಸೆಯು ಮಹಾತ್ಮರನ್ನು ಉದ್ದೇಶಪೂರ್ವಕವಾಗಿಕೊಲೆ ಮಾಡಿರುತ್ತಾನೆ. ಅವನಿಗೆ ಇದಲ್ಲದೆ ಬೇರಾವ ಉದ್ದೇಶವೂ ಇದ್ದಿತೆಂದು ತೋರುವುದಿಲ್ಲ-ಎಂದು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ತಿಳಿಸಿರುತ್ತಾರೆ.

ಎರಡನೇ ಅಪಾದಿತನಾದ ನಾರಾಯಣ ಆಪ್ಟೆಯು ಈ ಕೃತ್ಯದಲ್ಲಿ ಭಾಗ ವಹಿಸಿರುವುದು ಅತ್ಯಂತ ಹೀನಾಯವಾಗಿದೆ. ಮೊದಲಿನಿಂದಲೂ ಆತನು ನಾಯಕತ್ವ ವಹಿಸಿದ್ದಾನೆ ಮತ್ತು ಕ್ಲಿಷ್ಟ ಸಮಯದಲ್ಲಿ ಸ್ಥೈರ್ಯ ಹೀನರಾಗಿದ್ದಾನೆ. ಈ ಕೃತ್ಯದಲ್ಲಿ ಆತನು ಚಾತುರ್ಯವನ್ನು ಉಪಯೋಗಿಸದಿದ್ದರೆ ಗಾಂಧಿಜಿಯವರ ಕೊಲೆಯಾಗುತ್ತಿರಲಿಲ್ಲ. ಮದನ ಲಾಲ್ ಮತ್ತು ಡಾ॥ ಜೈನ್‌ರವರ ಹೇಳಿಕೆಗಳು ಪೋಲೀಸಿನವರ ವಶದಲ್ಲಿದ್ದರೂ ಅದನ್ನು ಸದುಪಯೋಗಪಡಿಸಿಕೊಳ್ಳಲಿಲ್ಲ. ಪೋಲೀಸರು ಸ್ವಲ್ಪ ಶ್ರದ್ಧೆ ವಹಿಸಿ ಕೆಲಸ ಮಾಡಿದ್ದರೆ ಮಹಾತ್ಮರ ಕೊಲೆ ನಡೆಯುತ್ತಿರಲಿಲ್ಲ- ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

ಮೊಕದ್ದಮೆಗೆ ಸಂಬಂಧಪಟ್ಟ ಆಯುಧ, ಸ್ಫೋಟಕ ವಸ್ತುಗಳು, ಪಿಸ್ತೂಲು ಮತ್ತು ಮಹಾತ್ಮರ ದೇಹದಲ್ಲಿ ಹೊಕ್ಕ ಗುಂಡುಗಳನ್ನು ಭದ್ರವಾಗಿಟ್ಟಿರಬೇಕೆಂದೂ, ಭಾರತ ಸರ್ಕಾರದ ಅನುಮತಿಯಿಲ್ಲದೆ ಎಲ್ಲಿಗೂ ಕಳುಹಿಸಕೂಡದೆಂದೂ ನ್ಯಾಯಾಧೀಶರು ಆಜ್ಞೆ ಮಾಡಿರುತ್ತಾರೆ.

ಮರಣಗೀತೆ ಕೇಳುತ್ತಿದ್ದಾಗ ಕವಿಯ ನಿಧನ

ಈಜಿಪ್ಟಿನ ಸುಪ್ರಸಿದ್ಧ ಕವಿಯಾದ ಷೇಕ್ ಆಲಿ ಎಲ್‌ಗಾರೆಂರವರು ಇತ್ತೀಚೆಗೆ ಕೊಲೆಮಾಡಲ್ಪಟ್ಟ ನೊಕ್ರಾಷಿ ಪಾಷಾರವರ ಜ್ಞಾಪಕಾರ್ಥವಾಗಿ ಅವರು ರಚಿಸಿದ್ದ ಕವನವನ್ನು ಮತ್ತೊಬ್ಬರು ಪಠಿಸುತ್ತಿದ್ದುದನ್ನು ಕೇಳುತ್ತಿದ್ದಾಗ ಮೃತ ಪಟ್ಟರೆಂದು ಸುದ್ದಿಯಾಗಿದೆ.

ನಗರದ ಆಹಾರ ಸಲಹಾ ಸಮಿತಿ

ಮೈಸೂರು ೧೧

ರಾಜಧಾನಿಯ ಆಹಾರ ಸಲಹಾ ಸಮಿತಿಯನ್ನು ಸರ್ಕಾರದವರು ಪುನರ್ರಚಿಸಿದ್ದಾರೆ. ಅದರಲ್ಲಿ ಈ ಕೆಳಗೆ ಕಂಡವರು ಸದಸ್ಯರಾಗಿದ್ದಾರೆ:—

ಮುನಿಸಿಪಲ್ ಕಮಿಷನರ್ (ಚೀಫ್ ರೇಷನಿಂಗ್ ಆಫೀಸರರು) ಅಧ್ಯಕ್ಷರು, ಶ್ರೀ ಗೌಡ ಪಾಲಹಳ್ಳಿ, ಸೀತಾರಾಮಯ್ಯ, ಕೆ. ಪುಟ್ಟಸ್ವಾಮಿ, ಎಸ್. ಲಿಂಗಣ್ಣ, ಎ ಕೃಷ್ಣ ಮೂರ್ತಿ ರಾವ್, ಟಿ ವೆಂಕಟರಮಣಯ್ಯ, ಬಿ ನಾರಾಯಣ ಸ್ವಾಮಿ, ರಟ್ಟಿಹಳ್ಳಿ ರಾಮಪ್ಪ, ಪಟ್ನಿ, ಎಚ್. ಥಿಯೊಬಾಲ್ಡ್, ಎಂ. ಸಿ. ನರಸಿಂಹಯ್ಯ, ಇ ಪಿ ನಂಜಪ್ಪ ಮೀರ್ ನೂರ್ ಹುಸೇನ್, ಬಿ ತಮ್ಮಯ್ಯ, ಎನ್. ಶ್ರೀನಿವಾಸಮೂರ್ತಿ, ಎಚ್. ಸುಬ್ಬರಾವ್, ಪಿ. ಎನ್. ಸಂಗಪ್ಪ, ಶ್ರೀಮತಿ ಲೀಲಾವತಿ ಅಂಜನಪ್ಪ ನಗರದ ರೇಷನಿಂಗ್ ಅಧಿಕಾರಿಗಳು ಕಾರ್ಯದರ್ಶಿಗಳಾಗಿದ್ದಾರೆ.

ಆಕಾಶವಾಣಿ ಭಾಷಣ

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಈ ರಾತ್ರಿ ೯-೪೫ ಗಂಟೆಗೆ ಆಕಾಶವಾಣಿಯಲ್ಲಿ ಮೈಸೂರು ಸಂಸ್ಥಾನದ ಆಹಾರ ಪರಿಸ್ಥಿತಿ ಕುರಿತು ಭಾಷಣ ಮಾಡುವರು.

ಗೋಶಾಲೆಗೆ ೧ ಲಕ್ಷ ರೂ ಸಹಾಯ

ಸಂಸ್ಥಾನದಲ್ಲಿ ಒಂದು ಗೋಶಾಲೆಯನ್ನು ಸರ್ಕಾರದವರು ಸ್ಥಾಪಿಸಲು ಮಾರ್ವಾಡಿ ಜನಾಂಗದವರು ೧,೦೦,೦೦೦ರೂ ಧನ ಸಹಾಯಮಾಡುವುದಾಗಿ ತಿಳಿಸಿರುವುದಾಗಿಯೂ ಅಂತಹ ಶಾಲೆಯನ್ನು ಕೂಡಲೇ ಸರ್ಕಾರದವರು ಸ್ಥಾಪಿಸಬೇಕೆಂದೂ ಅಖಿಲ ಭಾರತ ಗೋರಕ್ಷಣಾ ಸಮ್ಮೇಳನದ ದಕ್ಷಿಣ ಭಾರತದ ಶಾಖೆಯ ಕಾರ್ಯದರ್ಶಿಗಳಾದ ಡಾ॥ ಪಿ ಎಸ್ ನಾರಾಯಣರವರು ಪ್ರಾರ್ಥಿಸಿರುತ್ತಾರೆ.

ಕೋತಿಗಳ ರವಾನೆ

ಲಕ್ನೋ ನಗರದಲ್ಲಿ ಕೋತಿಗಳ ಹಾವಳಿಯು ವಿಪರೀತವಾಗಿರುವುದರಿಂದ ಅವುಗಳನ್ನು ಹಿಡಿದು ದೂರದ ಅರಣ್ಯಕ್ಕೆ ರವಾನಿಸಲು ಅಲ್ಲಿನ ಪುರಸಭೆಯವರು ಕಂಟ್ರಾಕ್ಟರುಗಳನ್ನು ನೇಮಿಸಿ, ೧೦ ಸಾವಿರ ರೂ ಮಂಜೂರು ಮಾಡಿರುತ್ತಾರೆ.

ಬೊಂಬಾಯಿಗೆ ೧೧½ ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿ

ಸ್ವಂ. ಸು. ಫೋ] ಬೆಂಗಳೂರು ೧೧

ಬೊಂಬಾಯಿ ಪ್ರಾಂತ್ಯಕ್ಕೆ ಜೋಗ್ ವಿದ್ಯುಚ್ಛಕ್ತಿ ಕೇಂದ್ರದಿಂದ ೧೧½ ಸಾವಿರ ಕಿಲೊವಾಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಕೊಡಲು ಮೈಸೂರು ಸರ್ಕಾರದವರು ಒಪ್ಪಿಕೊಂಡಿರುವುದಾಗಿ ಗೊತ್ತಾಗಿದೆ.

ಅಖಿಲ ಭಾರತ ವ್ಯವಸಾಯ ಸಂಶೋಧನಾ ಸಮಿತಿಯ ಸ್ಟಾಂಡಿಂಗ್ ಫೈನಾನ್ಸ್ ಸಮಿತಿಗೆ ರೆವಿನ್ಯೂ ಸಚಿವರಾದ ಶ್ರೀ ಎಚ್. ಸಿದ್ದಯ್ಯನವರನ್ನು ಸದಸ್ಯರನ್ನಾಗಿ ನೇಮಕ ಮಾಡಿದೆ.

ಡಾ॥ ಸಿ. ಪಿ ನಟರಾಜರವರನ್ನು ಸಂಸ್ಥಾನದ ಸಾರ್ವಜನಿಕ ಆರೋಗ್ಯ ಇಲಾಖೆಯ ಡೆಪ್ಯುಟಿ ಡೈರೆಕ್ಟರಾಗಿ ನೇಮಿಸಲಾಗಿದೆ.

ಸರ್ಕಾರದವರು ಸಂಸ್ಥಾನದ ಕೇಂದ್ರ ಮತ್ತು ಬೆಂಗಳೂರು, ಮೈಸೂರು ನಗರಗಳ ಆಹಾರ ಸಲಹಾ ಸಮಿತಿಗಳನ್ನು ಪುನರ್ರಚಿಸಿದ್ದಾರೆ. ಕೇಂದ್ರ ಸಮಿತಿಗೆ ಆಹಾರ ಇಲಾಖೆಯ ಡೈರೆಕ್ಟರವರೇ ಅಧ್ಯಕ್ಷರಾಗಿದ್ದಾರೆ.

ಸಂಸ್ಥಾನಕ್ಕೆ ಲಕ್ಷ ಟನ್ ಆಹಾರ ಧಾನ್ಯ

ನಮ್ಮ ಸಂಸ್ಥಾನಕ್ಕೆ ಈ ವರ್ಷವಲ್ಲಿ ೧ ಲಕ್ಷ ಟನ್ನಿನಷ್ಟು ವಿವಿಧ ಆಹಾರ ಧಾನ್ಯವನ್ನು ಕೊಡಲು ಭಾರತ ಸರ್ಕಾರದವರು ಒಪ್ಪಿದ್ದಾರೆ. ಈ ಸೈಕಿ ೨೪ ಸಾವಿರ ಟನ್ ಅಕ್ಕಿ ಮತ್ತು ೨೫ ಸಾವಿರ ಟನ್ ಗೋಧಿ ಸರಬರಾಜಾಗುವುದು. ಉಳಿದುದಕ್ಕೆ ಇತರ ಧಾನ್ಯಗಳನ್ನು ಕೊಡಲಾಗುವುದು.

ರಾಷ್ಟ್ರೀಕರಣ-ಅರ್ಥವಿಲ್ಲದ ಘೋಷಣೆಯೇ?

ನಿನ್ನೆ ಸಂಜೆ ಹಣ ಕಾಸಿನ ಸಚಿವರಾದ ಶ್ರೀ ಎಚ್. ಸಿ. ದಾಸಪ್ಪನವರು ವಾಣಿಜ್ಯ ಸಂಸ್ಥೆಗೆ ಭೇಟಿಯಿತ್ತರು ಅಲ್ಲಿ ಅವರು ಭಾಷಣ ಮಾಡಿ, ತಾವು ಅಮೆರಿಕದಲ್ಲಿ ಪಡೆದ ಅನುಭವವನ್ನು ತಿಳಿಸಿ, ಭಾರತದಲ್ಲಿ ಕೇಳಿಬರುತ್ತಿರುವ ಕೈಗಾರಿಕೆಗಳ ರಾಷ್ಟ್ರೀಕರಣದ ಶಬ್ದವು ಅರ್ಥವಿಲ್ಲದ ಘೋಷಣೆಯೆಂದು, ಸರ್ಕಾರವು ಹೊಸದ ಮೂಲ ಕೈಗಾರಿಕೆಗಳನ್ನು ಸರ್ಕಾರವು ವಹಿಸಿಕೊಂಡರೆ ಸಾಕು, ಉಳಿದ ಕೈಗಾರಿಕೆಗಳು ಖಾಸಗಿಯವರ ಕೈಯಲ್ಲಿರುವುದೇ ಸರಿಯೆಂದು ಅಭಿಪ್ರಾಯಪಟ್ಟರು

ನ್ಯಾಯಾಧೀಶರ ಕರ್ತವ್ಯವು ಕಾನೂನಿಗೆ ಒಳಪಟ್ಟಿರಬೇಕು

ಲಾ ಕಾಲೇಜಿನಲ್ಲಿ ದಿವಾನರ ಭಾಷಣ

ಸ್ವಂ. ಸು. ಫೋ] ಬೆಂಗಳೂರು ೧೧

ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರು ನೆನ್ನೆ ಸಂಜೆ ಲಾ ಕಾಲೇಜಿಗೆ ಭೇಟಿ ಕೊಟ್ಟು ಅಲ್ಲಿನ ಯೂನಿಯನ್ನಿನಲ್ಲಿ ಭಾಷಣ ಮಾಡಿದರು. ದೇಶದ ನ್ಯಾಯಾಸ್ಥಾನಗಳು ಸ್ವತಂತ್ರವಾಗಿರಬೇಕೆಂದೂ, ಆದರೆ ನ್ಯಾಯಾಧೀಶರು ದೇಶದಲ್ಲಿ ಜಾರಿಯಲ್ಲಿರುವ ಕಾನೂನಿನ ಚೌಕಟ್ಟಿನೊಳಗೆ ಮಾತ್ರ ತಮ್ಮ ವಿಮರ್ಶೆಗಳನ್ನು ಮಾಡಬೇಕೇ ವಿನಹ ಕಾನೂನಿನ ಔಚಿತ್ಯವನ್ನು ಟೀಕಿಸುವುದು ಅವರ ಕರ್ತವ್ಯವಲ್ಲವೆಂದೂ, ಆ ಕರ್ತವ್ಯವೇನಿದ್ದರೂ ಶಾಸನ ಸಭೆಗಳಿಗೆ ಸೇರಿದುದೆಂದೂ ತಿಳಿಸಿದರು.

ಶೇಷಾದ್ರಿಯವರು ಹೈದ್ರಾಬಾದ್ ರೆವಿನ್ಯೂ ಸಚಿವರು

ಮೈಸೂರಿನ ಮಾಜಿ ಸಚಿವರೂ ಮತ್ತು ಹೈದರಾಬಾದಿನ ಚುನಾವಣಾ ಕಮೀಷನರೂ ಆದ ಶ್ರೀ ಎಂ ಶೇಷಾದ್ರಿಯವರನ್ನು ಹೈದರಾಬಾದ್ ರೆವಿನ್ಯೂ ಮಂತ್ರಿಗಳನ್ನಾಗಿ ನೇಮಕ ಮಾಡಲಾಗಿದೆ. ಅವರು ಇದೇ ೨೦ ನೇ ತಾ॥ ಅಧಿಕಾರ ವಹಿಸಿಕೊಳ್ಳುವರು.

ಸತ್ತಮೇಲೆ ಗಾಂಧೀಜಿಗೆ ಶಾಂತಿ ಬಹುಮಾನ

ಬಂಗಾಳದ ರಾಯಲ್ ಏಸ್ಯಾಟಿಕ್ ಸೊಸೈಟಿಯವರು ಮಹಾತ್ಮ ಗಾಂಧಿಯವರಿಗೆ ಶಾಂತಿ ಮತ್ತು ಸಂಸ್ಕೃತಿಯ ಪದಕವನ್ನು ಅವರು ನಿಧನರಾದ ನಂತರ ಬಹುಮಾನವಾಗಿ ಕೊಟ್ಟಿದ್ದಾರೆ. ಈ ವಿಧದ ಬಹುಮಾನವನ್ನು ಕೊಡಲು ಉಪಕ್ರಮಿಸಬೇಕೆಂದು ಕಳೆದ ವರ್ಷ ಗೌರ್ನರ್ ಜನರಲ್ ರಾಜಾಜಿಯವರು ಸಂಸ್ಥೆಯವರಿಗೆ ಸಲಹೆ ಮಾಡಿದ್ದರು.

ಸಾವರ್ಕರರ ಮೇಲೆ ಪ್ರತಿಬಂಧಕಾಜ್ಞೆ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಅಪಾದಿತರಾಗಿದ್ದು ಖುಲಾಸೆಯಾದ ಶ್ರೀ ಸಾವರ್ಕರರು ದೆಹಲಿಗೆ ಮೂರು ತಿಂಗಳ ಕಾಲ ಬರಕೂಡದೆಂದು ಅಲ್ಲಿನ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿರುತ್ತಾರೆ. ಅವರು ನಿನ್ನೆ ಬೊಂಬಾಯಿಗೆ ಪ್ರಯಾಣ ಮಾಡಿದರು. ಕೆಂಪು ಕೋಟೆಯನ್ನು ಬಿಟ್ಟು ಹೋಗಕೂಡದೆಂದು ಅವರ ಮೇಲೆ ಮೊದಲು ಪ್ರತಿಬಂಧಕಾಜ್ಞೆಯನ್ನು ಹಾಕಲಾಗಿತ್ತು.

ಪಾಕಿಸ್ಥಾನದಲ್ಲಿ ವಿಗ್ರಹಾರಾಧನೆಗೆ ಅವಕಾಶವಿಲ್ಲ

ವಿಗ್ರಹಾರಾಧನೆಯು ಮುಸ್ಲಿಂ ತತ್ವಕ್ಕೆ ವಿರೋಧವಾದುದರಿಂದ ಕರಾಚಿಯಲ್ಲಿರುವ ಮಹಾತ್ಮರ ಪ್ರತಿಮೆಗೆ ಪುಷ್ಪವನ್ನು ಅವರ ಪ್ರಥಮ ವಾರ್ಷಿಕ ದಿನದಲ್ಲಿ ಅರ್ಪಿಸಲು ಭಾರತದ ಹೈ ಕಮಿಷನರಿಗೆ ಪಾಕಿಸ್ತಾನ ಸರ್ಕಾರವು ಅವಕಾಶ ಕೊಡಲಿಲ್ಲವೆಂದು ಅಧಿಕೃತವಾಗಿ ತಿಳಿಸಲಾಗಿದೆ

ರಥೋತ್ಸವ

ಈ ಶ್ರೀ ಸರ್ವಧಾರಿನಾಮಸಂವತ್ಸರದ ಮಾಘ ಬಹುಳ ಚತುರ್ದಶೀ ರವಿವಾರ (೧೩-೨-೪೯) ಈ ದಿವಸ ೬ ಗಂಟೆಗೆ ಶ್ರೀ ತ್ರಿನಯನೇಶ್ವರ ಸ್ವಾಮಿಯವರ ರಥೋತ್ಸವವು ಅರಮನೆ ಕೋಟೆ ಒಳಗೆ ನಡೆಯುತ್ತದೆ

ಅಂಚೆ ಮುಷ್ಕರದ ಬಗ್ಗೆ ಸರ್ಕಾರದ ಮುಂಜಾಗ್ರತೆ

ಅಂಚೆ ಇಲಾಖೆಯ ನೌಕರರು ಸರ್ಕಾರದವರ ಭರವಸೆಯನ್ನು ಉಪೇಕ್ಷಿಸಿ ಮುಷ್ಕರ ಹೂಡುವುದಾದರೆ ಅತಿ ತೀವ್ರ ಕಾರ್ಯಕ್ರಮವನ್ನು ಭಾರತ ಸರ್ಕಾರದವರು ತೆಗೆದುಕೊಳ್ಳುವರೆಂದು ಎಚ್ಚರಿಕೆ ಕೊಡಲಾಗಿದೆ. ಮುಷ್ಕರ ನಡೆಯುವುದಾದರೆ, ಹಂಗಾಮಿ ಕೆಲಸಗಾರರನ್ನು ನೇಮಿಸಿ ಕೊಳ್ಳುವುದಲ್ಲದೆ ಮುಷ್ಕರಗಾರರನ್ನು ಕೆಲಸದಿಂದ ವಜಾ ಮಾಡಲಾಗುವುದೆಂದೂ, ಆಡಳಿತವನ್ನೆ ಕೇಂದ್ರ ಸರ್ಕಾರದವರು ವಹಿಸಿಕೊಳ್ಳಬಹುದೆಂದೂ ಹೇಳಲಾಗಿದೆ.

ಖಾಸಗಿಯವರಿಗೆ ಗೌರವ

ಕಳೆದವಾರ ಗೌರ್ನರ್ ಜನರಲ್ ರಾಜಾಜಿಯವರು ಮದ್ರಾಸಿಗೆ ಆಗಮಿಸಿದಾಗ ಅವರನ್ನು ಸ್ವಾಗತಿಸಲು ಬಂದಿದ್ದ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರಾದ ಕಾಮರಾಜ ನಾದಾರ್‌ರವರೂ ಅವರ ಹಿಂಬಾಲಕರೂ, ಪೋಲೀಸರ ವರ್ತನೆಯಿಂದ ಅತೃಪ್ತಿ ಹೊಂದಿ ಹೊರಟು ಹೋಗಿ ನಂತರ ಪ್ರತಿಭಟನೆ ಮಾಡಿದ್ದರಷ್ಟೆ. ಈಗ ಗೌರ್ನರ್ ಜನರಲ್‌ರವರು ಹಿ.ದನ್ನೇ ಎಲ್ಲಾ ಪ್ರಾಂತ್ಯಗಳ ಕಾಂಗ್ರೆಸ್ ಅಧ್ಯಕ್ಷ, ಕಾರ್ಯದರ್ಶಿಗಳಿಗೂ ಮೊದಲನೆ ಸ್ಥಾನದ ಗೌರವವನ್ನು ಕೊಡಬೇಕೆಂದು ಸರ್ಕಾರದವರು ಸೂಚನೆ ಕೊಟ್ಟಿದ್ದಾರೆ.

ಕೇಂದ್ರ ಸರಕಾರದ ಮೇಲೆ ಚಿಕ್ಕ ಸಂಸ್ಥಾನದ ದಾವಾ

ಅಸ್ಸಾಂ ಪ್ರಾಂತದಲ್ಲಿ ಖಾಸಿ ಗುಡ್ಡಗಳ ಮಧ್ಯೆ ಇರುವ ಸಣ್ಣ ಸಂಸ್ಥಾನವೊಂದು ಫೆಡರಲ್ ಕೋರ್ಟಿನಲ್ಲಿ ದಾವಾ ಹೂಡಿದೆ. ಕೇಂದ್ರ ಸರಕಾರದವರು ಸಂಸ್ಥಾನಗಳ ಕೇಂದ್ರಕ್ಕೆ ಸೇರುವ ಬಗ್ಗೆ ಇರುವ ಒಪ್ಪಂದದ ಕರಾರನ್ನು ಅತಿಕ್ರಮಿಸಿ, ಸಂಸ್ಥಾನದ ವ್ಯವಹಾರದಲ್ಲಿ ಪ್ರವೇಶಿಸಿರುವುದಾಗಿ ದೂರು ಕೊಟ್ಟಿದೆ. ಈಗ ಫೆಡರಲ್ ಕೋರ್ಟು ಈ ವಿಚಾರದಲ್ಲಿ ತೀರ್ಪು ಕೊಡಬೇಕಾಗಿದೆ.

ಮಂಜಿನ ಗೆಡ್ಡೆ ಹೊಡೆತದಿಂದ ಮಳೆ

ಮಂಜಿನ ಗೆಡ್ಡೆಯನ್ನು ಮೋಡಗಳ ಮೇಲೆ ಹೊಡೆದು ಮಳೆ ಬರಿಸುವ ವಿಧಾನವನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿ ಆಸ್ಟ್ರೇಲಿಯಾ ವಿಜ್ಞಾನಿಗಳು ಎಲ್ಲರಿಗಿಂತ ಮುಂದಿದ್ದಾರೆ. ಇವರು ನಡೆಸಿದ ೫೦ ಪರೀಕ್ಷೆಗಳಲ್ಲಿ ಒಮ್ಮೆಯಾಗಿ ಮಳೆ ಬಂದದಾಗಿ ಗೊತ್ತಾಗಿದೆ.

ಖಾಲಿ ನಿವೇಶನಕ್ಕೆ ಪ್ರತ್ಯೇಕ ತೆರಿಗೆ

ಮನೆಗಳಿಗೆ ಸೇರಿದ ಖಾಲಿ ಜಾಗಗಳ ಮೇಲೆ ಪ್ರತ್ಯೇಕ ತೆರಿಗೆಯನ್ನು ಹಾಕಬೇಕೆಂದು ಮದರಾಸ್ ಕಾರ್ಪೊರೇಷನ್ನಿನ ಕಮಿಷನರು ಸಲಹೆ ಮಾಡಿರುತ್ತಾರೆ. ಎರಡು ಎಕರೆಗಿಂತ ಹೆಚ್ಚಿನ ಖಾಲಿ ನಿವೇಶನಕ್ಕೆ ೬ ರಂತೆ ತೆರಿಗೆ ಹಾಕಬೇಕೆಂದು ಸೂಚಿಸಿರುತ್ತಾರೆ.

ಕೊಲ್ಹಾಪುರ ದೊರೆಗಳ ರಾಜಧನ

ಬೊಂಬಾಯಿ ಪ್ರಾಂತ್ಯದಲ್ಲಿ ಒಂದಾಗಲಿರುವ ಕೊಲ್ಹಾಪುರ ಸಂಸ್ಥಾನದ ಮಹಾರಾಜರ ರಾಜಧನವನ್ನು ೧೦ ಲಕ್ಷ ರೂ. ಗೆ ಗದಿ ಮಾಡಲಾಗಿದೆ

ಪ್ರಾಣಿ ಬಲಿ ನಿಲ್ಲಿಸಬೇಕು

ಸಂಸ್ಥಾನದಲ್ಲಿ ಸರ್ಕಾರದವರು ಪ್ರಾಣಿ ಬಲಿಯನ್ನು ನಿಷೇಧಿಸಿ ಕಾನೂನು ಮಾಡಿದ್ದರೂ, ಅದು ಸಂಪೂರ್ಣವಾಗಿ ನಿಂತಿಲ್ಲ. ನೂರಾರು ಕೋಣಗಳನ್ನು ಬಲಿಕೊಡುವಂತಹ ದೇವಸ್ಥಾನಗಳು ದೇಶದಲ್ಲಿ ೯೦ ಇರುತ್ತವೆ. ದೇವರ ಹೆಸರಿನಲ್ಲಿ ಅನೇಕ ಕೋಣ, ಕುರಿ, ಮೇಕೆ, ಮುಂತಾದವುಗಳನ್ನು ಬೇರೆ ಪ್ರದೇಶಗಳಲ್ಲಿ ಬಲಿ ಕೊಡಲಾಗುತ್ತಿದೆ. ಅನೇಕ ದನಗಳನ್ನು ಕೊಲೆ ಮಾಡಲು ರವಾನಿಸಲಾಗುತ್ತಿದೆ. ಇಂತಹ ಕಾರ್ಯ ಮಾಡುವವರಿಗೆ ಉಗ್ರ ಶಿಕ್ಷೆ ವಿಧಿಸಬೇಕು ಮತ್ತು ಮಹಾಜನರು ಮತ್ತು ಸರ್ಕಾರದವರು ಈ ಬಗ್ಗೆ ಹೆಚ್ಚು ನಿಗಾ ಕೊಡಬೇಕು— ಎಂದು ಗೋ ಸೇವ ಕರಾದ ಬೆಲ್ಗಾಂನ ಶ್ರೀ ಬಿ.ಎಂ.ಎ. ಪಾದರ್‌ರವರು ಪ್ರಾರ್ಥಿಸಿರುತ್ತಾರೆ.

೧೬ ಔನ್ಸ್ ಪಡಿತರ ಕೊಡಬೇಕು

ಜನರಿಗೆ ಸಾಕಷ್ಟು ಪಡಿತರವನ್ನು ಸರ್ಕಾರದವರು ಕೊಡದಿರುವುದರಿಂದ ಅವರು ಆಹಾರ ಪದಾರ್ಥಗಳನ್ನು ಕಾಳ ಸಂತೆಯಲ್ಲಿ ಕೊಳ್ಳುವುದು ಮತ್ತು ಮಾರಾಟ ಮಾಡುವುದು, ಅಕ್ರಮ ದಾಸ್ತಾನು, ದರೋಡೆ, ಕಳ್ಳತನ ಮತ್ತು ರೇಷನ್ ಕಾರ್ಡುಗಳಲ್ಲಿ ಸುಳ್ಳು ಸಂಖ್ಯೆ ಕೊಡುವುದು ಇವೇ ಮುಂತಾದ ಅನೀತಿಗಳಿಗೆ ಅನುಕೂಲವಾಗುತ್ತದೆ. ಇದನ್ನು ತಡೆಗಟ್ಟಲು ೧೬ ಔನ್ಸ್ ಪಡಿತರವನ್ನು ಸರ್ಕಾರದವರು ಕೊಡಬೇಕು— ಎಂದು ರಾಜಧಾನಿಯ ರೇಷನ್ ಕಾರ್ಡ್ ಹೋಲ್ಡರುಗಳ ಸಭೆಯ ಸಂಚಾಲಕರಾದ ಶ್ರೀ ಎಂ.ಕೆ. ನರಸಿಂಹಯ್ಯನವರು ಪ್ರಾರ್ಥಿಸಿರುತ್ತಾರೆ.

Edited, printed and published by A.R.Nagarajan at the Sadhvi Press, D. Subbiah Road, Mysore.

ಭಾಷಣಕಾರರನ್ನು ಕೊಲೆ ಮಾಡಲು ಯತ್ನ

ಕುಂಭಕೋಣದಲ್ಲಿ ಮೊನ್ನೆ ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡುತ್ತಿದ್ದ ಶ್ರೀ ವೀರಭದ್ರ ಸ್ವಾಮಿಗಳನ್ನು ವೇದಿಕೆಯ ಹಿಂದೆ ಕುಳಿತಿದ್ದ ಹಲವರು ಕೊಲೆ ಮಾಡಲು ಯತ್ನಿಸಿದರು. ಅವರನ್ನು ಹಿಡಿದು ಹತ್ತಿರದ ಹೊಟೇಲು ಒಂದರಲ್ಲಿ ಬಂಧಿಸಲಾಯಿತು, ಆದರೆ ಅಲ್ಲಿಂದ ಅವರು ಪರಾರಿಯಾದರು. ನಂತರ ಹಲವು ದಾರಿಗರ ಮೇಲೆ ಪುಂಡರು ಕೈ ಮಾಡಿ, ಒಬ್ಬರನ್ನು ಚೂರಿಯಿಂದ ಇರಿದರು.

ಬಿಹಾರ್ ಶಾಸನ ಸಭೆಯಲ್ಲಿ ಹಿಂದಿಯಲ್ಲೇ ಕಾರ್ಯಕಲಾಪ

ಬಿಹಾರ್ ಶಾಸನ ಸಭೆಯಲ್ಲಿ ಮೊನ್ನೆ ದಿನ ಎಲ್ಲಾ ಸಭಾ ಕಾರ್ಯ ಕಲಾಪಗಳನ್ನು ಹಿಂದೀ ಭಾಷೆಯಲ್ಲಿಯೇ ಮಾಡಲಾಯಿತು

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಇಂದೇ ಭೇಟಿ ಕೊಡಿ

ಪ್ರಖ್ಯಾತವಾದ ಮೈಸೂರು ಸಿಲ್ಕಿನಲ್ಲಿ ಕ್ರೇಪ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಮತ್ತು ಕುಂಭಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು, ಮಗುಟಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ :: ಮೈಸೂರು

Apply for
LODGING
and
BOARDING
(Only for Students)
2333, New Mysore Lodge
K. G. Koppal
Near to all the Colleges

ಸೋಮನಾಥ ಗುಡಿಯ ಬಂಗಾರದ ಬಾಗಿಲು

ಕಸಿಮೂನದ ಹಿಂದೆ ಘಜ್ನಿ ಮಹಮ್ಮದನು ಗುಜರಾತಿನಲ್ಲಿರುವ ಸೋಮನಾಥ ದೇವಾಲಯದ ಮುಂಭಾಗದಲ್ಲಿ ಚಿನ್ನದ ಬಾಗಿಲನ್ನು ಅಫ್ಘಾನಿಸ್ತಾನಕ್ಕೆ ಸಾಗಿಸಿದ್ದನ್ನು ಈಗ ಭಾರತ ಸರಕಾರವು ಪುನಃ ವಾಪಸು ಪಡೆಯಲು ಯಾವ ಸಂಧಾನವನ್ನು ಅಫ್ಘಾನಿಸ್ತಾನದೊಡನೆ ನಡೆಸುತ್ತಿಲ್ಲವೆಂದು ಸರದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿದರು. ಆ ರೀತಿ ವಾಪಸು ಕೇಳಬೇಕೆಂದು ಅಂಥ ವಸ್ತುಗಳನ್ನು ಕೊಳ್ಳುವುದು ಉಚಿತವಾದುದಲ್ಲವೆಂದು ಅವರು ಅಭಿಪ್ರಾಯ ಪಟ್ಟರು.

ಸಿಂಧ್‌ನಲ್ಲೂ ಸಹ ಗೌರ್ನರ್ ಆಡಳಿತವೇ?

ಸಿಂಧ್ ಪ್ರಾಂತದಲ್ಲಿ ಮಂತ್ರಿ ಮಂಡಲ ರಾಜೀನಾಮೆ ಕೊಡುತ್ತಿರುವರೋ ಇಲ್ಲವೋ? ಈ ಸಂದರ್ಭದಲ್ಲಿ ಅಲ್ಲಿನ ಗೌರ್ನರ್ ಆಡಳಿತವನ್ನು ತಾವೇ ವಹಿಸಿಕೊಳ್ಳುವರೆಂದು ತಿಳಿಯಬರುತ್ತದೆ.

ಈ ಸಂಧಾನ ಮಾತುಕತೆಗಳಿಗಾಗಿ ಚೀಣದ ಅಧ್ಯಕ್ಷರು ಕಳುಹಿಸಿದ ಶಾಂತಿ ನಿಯೋಗವನ್ನು ಕಮ್ಯೂನಿಸ್ಟರು ಸ್ವೀಕರಿಸಲು ಸಿದ್ಧರೆಂದು ವರದಿಯಾಗಿದೆ. ಚೀಣದ ಅಧ್ಯಕ್ಷರು ಶಾಂತಿಯ ಹೆಸರಿನಲ್ಲಿ ಮೋಸ ಮಾಡುತ್ತಿರುವರೆಂದು ಕಮ್ಯೂನಿಸ್ಟರು ಆಪಾದಿಸಿರುತ್ತಾರೆ.

[illegible]

ಚಾಮುಂಡಿಪುರಂ

ನಿರಂಜನರಾಜ ಅರಸಿನವರ ಕೋಟೆಯ

ಒಂದು ಸೈಟು

ಕೊಡಲ್ಪಡುತ್ತದೆ

ಬೇಕಾದವರು ವಿಚಾರಿಸಬಹುದು

ಶ್ರೀ ಬಿ.ಎಸ್. ಸುಬ್ಬರಾವ್,

ಜಗನ್ಮೋಹನ ಬಂಗ್ಲೆ ರೋಡ್, ಮೈಸೂರು

[illegible]

ಎಸ್.ಎಸ್. ಪಂಡಿತ್ ಅಂಡ್ ಸನ್ಸ್

ಯೂನಿವರ್ಸಲ್ ಹೆರ್ಬಲ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ ೦-೧೨

ಮಹಾ ಸುಗಂಧರಾಜ ತೈಲ:—

,, ಚಂದನಾದಿ ತೈಲ:—

,, ಭೃಂಗಾಮಲಕ ತೈಲ:—

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಜನ ತೈಲಗಳು

ಮಹಾಕೇಶ ಕೇಶ ತೈಲ—ತಲೆ ಕೂದಲು ಬೆಳೆಸಿ ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ ಬ್ರೇನ್ ಟಾನಿಕ್ ಸೀಸೆ ೨-

ಪಂಚಾಮೃತ—ಮಲೇರಿಯಾ ಜ್ವರಕ್ಕೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು.

11-2-49 ರಿಂದ ಆರಂಭ

ಮೈಸೂರು ರಾಜಕಮಲ್ ಮತ್ತು ನ್ಯೂ ಅಪೇರಾ ಟಾಕೀಸುಗಳಲ್ಲಿ



ದಿನವಹಿ ೩ ಆಟಗಳು

ಆದಿತ್ತನ ಕನಸು

(ತಮಿಳು)

ಮುಖ್ಯ ಪಾತ್ರ: ✝ ಅಂಜಲಿದೇವಿ, ✝ ಟಿ. ಆರ್. ಮಹಾಲಿಂಗಂ, ✝ ಕಾಳಿ ಎನ್. ರತ್ನಂ, ✝ ತಾರಾ ಚೌಧುರಿ ✝ ಲಲಿತಾ ಪದ್ಮಿನಿ. ✝

ಬೆಂಗಳೂರಿನ ನ್ಯೂ ಅಪೇರಾ, ಶಿವಾಜಿ ಮತ್ತು ಸ್ಟಾಸ್ಟಿಕ್ ಟಾಕೀಸುಗಳಲ್ಲೂ ಮತ್ತು ಮಂಗಳೂರು ಸೆಂಟ್ರಲ್ ಟಾಕೀಸಿನಲ್ಲೂ.

ಪ್ರತಿ ಸ್ತ್ರೀ ಮತ್ತು ಪುರುಷರೂ ನೋಡಬೇಕಾದ ಕಥೆ ಸಕಲರಿಗೂ ಸಂತುಷ್ಟಿ ಕೊಡುವ ಸಂಗೀತ ನೃತ್ಯಗಳಿಂದ ಕೂಡಿದ ಚಿತ್ರ

[ರ ಭ

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೩೦-೪-೧೯೪೯ [ಸಂಚಿಕೆ ೧೮೧

ಜಪಾನನ್ನು ಅಮೆರಿಕವು ಬಿಟ್ಟು ಹೋಗುವುದೇ?

ಹರಿಕಥೆ

ಮೈಸೂರು ೧೨

ಹುಣ್ಣಿಮೆ ಪ್ರಯುಕ್ತ ನಾಳೆ ರಾತ್ರಿ ೯ ಗಂಟೆ ಮೇಲೆ ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿಯಲ್ಲಿ ವಿದ್ವಾನ್ ಎಸ್. ಕೃಷ್ಣಯ್ಯಂಗಾರ್ಯರಿಂದ ಲವಕುಶ ಎಂಬ ಹರಿಕಥೆ ನಡೆಯುತ್ತದೆ. ಸರ್ವರಿಗೂ ಸ್ವಾಗತವುಂಟು.

ಉಪನ್ಯಾಸ

ರಾಜಧಾನಿಯ ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಇದೇ ೧೮ನೇ ತಾ॥ ಸೋಮವಾರ ಸಂಜೆ ೬-೩೦ ಗಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ಆ॥ ಪುರೋಹಿತ ನಂಜುಂಡಶಾಸ್ತ್ರಿಯವರು ಪುರುಷ ಪುರುಷ ಸ್ವರೂಪ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಶಾಲೆಗೆ ಕಳುಹಿಸದುದ್ದಕ್ಕೆ ಜುಲ್ಮಾನೆ

ಮೈಸೂರು ತಾಲ್ಲೂಕಿನಲ್ಲಿ ಒತ್ತಾಯದ ವಿದ್ಯಾಭ್ಯಾಸ ಶಿಕ್ಷಣ ಕಾನೂನು ಜಾರಿಯಲ್ಲಿರುವುದರಿಂದ ಶಾಲೆಗೆ ಮಕ್ಕಳನ್ನು ಕಳುಹಿಸದೆ ಅದನ್ನು ಉಲ್ಲಂಘಿಸಿ, ಜಯಪುರದ ಹೋಬಳಿಯ ಕಡಕೊಳ, ಜಯಪುರ, ಮಾರ್ಬಳ್ಳಿ, ತಳೂರು, ದಾರೀಪುರಗಳಕೆಲ್ಲವು ಪೋಷಕರ ಮೇಲೆ ಅಮಲ್ದಾರ್-ಮ್ಯಾಜಿಸ್ಟ್ರೇಟರ ಮುಂದೆ ಮೊಕದ್ದಮೆ ಹೂಡಲಾಗಿತ್ತು. ಕೆಲವರಿಗೆ ತಲಾ ೨ರೂ. ಜುಲ್ಮಾನೆಯನ್ನೂ ಮತ್ತು ಇತರರಿಗೆ ಎಚ್ಚರಿಕೆಯನ್ನೂ ಕೊಡಲಾಗಿದೆ. ಇದರಿಂದ ಇನ್ನು ಮುಂದೆ ಪೋಷಕರುಗಳು ಎಚ್ಚೆತ್ತುಕೊಂಡು ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುವರೆಂದು ನಂಬಲಾಗಿದೆ.

ಭೀಮರಥಿ ಶಾಂತಿ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀ ಚೌಡ್ರಿ ಕೃಷ್ಣ ಶೆಟ್ಟಿಯವರ ೭೦ನೇ ವರ್ಷದ ಭೀಮರಥಿ ಶಾಂತಿ ಮಹೋತ್ಸವವು ಮೊನ್ನೆ ದಿನ ಪ್ರಾರಂಭವಾಗಿ ನಾಳೆ ದಿನ ಮುಕ್ತಾಯವಾಗುವುದು. ಈ ಸಂದರ್ಭದಲ್ಲಿ ನಾಳೆ ದಿನ ಅಶೋಕಾ ರಸ್ತೆಯ ಕ್ರಾಸಿನಲ್ಲಿರುವ ಗೀತಾ ಸದನದಲ್ಲಿ ಬೆಳಗ್ಗೆ ವಿಶೇಷ ಪೂಜೆಯೂ, ಸಂಜೆ ೬ ಗಂಟೆಗೆ ಶ್ರೀ ಹರಿಸರ್ವೋತ್ತಮ ದಾಸರವರಿಂದ ಉಷಾ ಕಲ್ಯಾಣ ಎಂಬ ಹರಿಕಥೆಯೂ ನಡೆಯುವುವು

ರೇಷನ್ ಕಾರ್ಡ್ ಹೋಲ್ಡರುಗಳ ಸಮಿತಿಯ ಸಭೆ

ನಗರದ ರೇಷನ್ ಕಾರ್ಡ್ ಹೋಲ್ಡರುಗಳ ಸಭೆಯ ಕಾರ್ಯಕಾರಿ ಸಮಿತಿಯು ನಾಳೆ ಸಂಜೆ ೬ ಗಂಟೆಗೆ ಶಿವರಾಂ ಪೇಟೆಯಲ್ಲಿರುವ ಕುಂಚಿಟಿಗರ ಸಂಘದ ಭವನದಲ್ಲಿ ನಡೆಯುವುದು. ಆಹಾರದ ಪರಿಸ್ಥಿತಿ ನಿವಾರಣೆ ಬಗ್ಗೆ ಕೇಂದ್ರ ಮತ್ತು ಮೈಸೂರು ಸರ್ಕಾರಗಳಿಂದ ಬಂದಿರುವ ಉತ್ತರಗಳನ್ನು ಪರಿಶೀಲಿಸಲಾಗುವುದು.

ಭಾರತದ ಗೌರ್ನರುಗಳ ಸಂಬಳ

೧೯೪೭ನೇ ಆಗಸ್ಟ್ ತಿಂಗಳಿನಿಂದ ಈಚೆಗೆ ಭಾರತದ ನಾನಾ ಪ್ರಾಂತಗಳ ಗೌರ್ನರ್ ಸಂಬಳವನ್ನು ವರ್ಷಕ್ಕೆ ೬೬ ಸಾವಿರ ರೂ.ಗಳಿಗೆ ನಿಗದಿ ಮಾಡಲಾಗಿದೆ. ಹಿಂದೆ ಮದ್ರಾಸು, ಬೊಂಬಾಯಿ, ಬಂಗಾಳ ಪ್ರಾಂತ್ಯಗಳ ಗೌರ್ನರರುಗಳಿಗೆ ೧ ಲಕ್ಷ ೨ ಸಾವಿರ ರೂ. ಗಳನ್ನು ಕೊಡಲಾಗು...

ಸರ್ಕಾರದವರೇ ನೇರವಾಗಿ ವ್ಯವಸಾಯ ಮಾಡಿಸುವ ಯೋಜನೆ

ಸ್ವಂ. ಸು. ಫೋನ್] ಬೆಂಗಳೂರು ೧೨

ಆಹಾರ ಸಚಿವರಾದ ಶ್ರೀ ಟಿ. ಮರಿಯಪ್ಪನವರು ನಿನ್ನೆ ಸಂಜೆ ಪತ್ರಿಕಾ ಸಮ್ಮೇಲನವೊಂದನ್ನು ನಡೆಸಿ, ಆಹಾರದ ಪರಿಸ್ಥಿತಿಯನ್ನು ವಿವರಿಸಿದರು

ಸಂಸ್ಥಾನಕ್ಕೆ ಒಟ್ಟು ೪೫ ಲಕ್ಷ ಟನ್ನುಗಳಷ್ಟು ಆಹಾರ ಬೇಕಾಗುವುದು. ಪ್ರಕೃತಿ ದೇಶದಲ್ಲಿ ೬೫ ಲಕ್ಷ ಟನ್ ಬೆಳೆಯುವುದು. ಭಾರತ ಸರ್ಕಾರದವರು ಈ ವರ್ಷಕ್ಕೆ ೧೫ ಲಕ್ಷ ಟನ್ ಆಹಾರ ಕೊಡಲು ಒಪ್ಪಿದ್ದಾರೆ. ಇನ್ನು ಸಾಲದೆ ಇರುವುದನ್ನು ತರಿ ರಾಗಿಯ ಬೆಳೆ ಯೋಜನೆಯಿಂದ ಪರಿಹರಿಸಲಾಗುವುದು. ಈ ಯೋಜನೆ ಪ್ರಕಾರ ೬೬,೯೦೦ ಎಕರೆ ಜಮೀನುಗಳನ್ನು ೩ ತಿಂಗಳುಗಳಲ್ಲಿ ಸಾಗುವಳಿ ಮಾಡಿ ೧,೩೪,೫೦೦ ಪಲ್ಲ ರಾಗಿಯನ್ನು ಬೆಳೆಸಲಾಗುವುದು. ಇರ್ವಿನ್ ಕಾಲುವೆ, ಕೃಷ್ಣರಾಜಸಾಗರ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಪ್ರದೇಶಗಳಲ್ಲಿ ಇದನ್ನು ಕಾರ್ಯರೂಪಕ್ಕೆ ತರಲಾಗುವುದು. ಟಿ. ನರಸೀಪುರ ತಾಲ್ಲೂಕಿನಲ್ಲಿ ೪೦೦ ಎಕರೆಯಲ್ಲಿ ರಾಗಿ ಬೆಳೆಯಲು ರೈತರು ಮುಂದೆ ಬಂದಿದ್ದಾರೆ. ಈ ಬಗೆಯ ಉದ್ಯಮವನ್ನು ಪ್ರೋತ್ಸಾಹಿಸಲು ಸರ್ಕಾರದವರು ೧೦ ಸಾವಿರ ರೂ. ಬಹುಮಾನವನ್ನು ಕೊಡಲು ಮಂಜೂರು ಮಾಡಿದ್ದಾರೆ. ಈಗಾಗಲೇ ಈ ಯೋಜನೆಗೆ ೩ ಲಕ್ಷ ರೂ. ಖರ್ಚು ಮಾಡಲಾಗಿದೆ. ಒಟ್ಟು ೬ ಲಕ್ಷ ರೂ. ವೆಚ್ಚ ಮಾಡಲಾಗುವುದು. ಈ ವರ್ಷ ೬,೩೫,೦೦೦ ಟನ್ ಅಕ್ಕಿ, ೩,೭೮,೭೦೦ ಟನ್ ರಾಗಿ ಮತ್ತು ೪೦,೭೦೦ ಟನ್ ಜೋಳ ಉತ್ಪತ್ತಿಯಾಗುವುದು, ಅದರಲ್ಲಿ ಬೆಳೆಯುವವರಿಗೆ ಬಿಟ್ಟು ೭೦ ಸಾವಿರ ಟನ್ ಅಕ್ಕಿ, ೬೦ ಸಾವಿರ ಟನ್ ರಾಗಿ ಮತ್ತು ೫ ಸಾವಿರ ಟನ್ ಜೋಳವನ್ನು ಸರ್ಕಾರವು ವಶಪಡಿಸಿಕೊಳ್ಳುವುದು. ಇಲ್ಲಿಯವರೆಗೆ ೧೬ ಸಾವಿರ ಟನ್ ವಶಪಡಿಸಿಕೊಳ್ಳಲಾಗಿದೆ. ರಾಗಿ ಮತ್ತು ಜೋಳದ ಸಂಗ್ರಹದ ಕಾರ್ಯಕ್ರಮವು ಈಗ ಪ್ರಾರಂಭವಾಗಿದೆ. ಸಂಸ್ಥಾನದಲ್ಲಿರುವ ಎಲ್ಲ ಹೋಟೇಲುಗಳನ್ನೂ ಮುಚ್ಚಬೇಕು ಸಾಧ್ಯವಿಲ್ಲ. ಹೊಸ ಹೋಟೆಲುಗಳಿಗೆ ರಹದಾರಿ ಕೊಡಲಾಗುವುದಿಲ್ಲ ಎಂದು ಅವರು ತಿಳಿಸಿದರು.

ಹುರುಳಿ, ಅವರೆ, ತೊಗರಿ ರವಾನೆಗೆ ಅಡ್ಡಿ

ಸ್ವಂ. ಸು. ಫೋನ್] ಬೆಂಗಳೂರು ೧೨

ಸಂಸ್ಥಾನದಿಂದ ಹೊರಕ್ಕೆ ಹುರುಳಿ, ಅವರೆ ಮತ್ತು ತೊಗರಿಯನ್ನು ಯಾರೂ ರವಾನಿಸಕೂಡದೆಂದು ಸರ್ಕಾರದವರು ನಿಷೇಧಾಜ್ಞೆಯನ್ನು ಹೊರಡಿಸಿರುತ್ತಾರೆ.

○ ಶ್ರೀಗಳಾದ ಜಿ.ವಿ. ದಾಸಪ್ಪ ಮತ್ತು ಲಿಂಗಪ್ಪ ಮತ್ತು ಬಿ.ಎಸ್. ಶ್ರೀನಾಥರವರುಗಳನ್ನು ಅಮಲ್ದಾರರುಗಳನ್ನಾಗಿ ನೇಮಿಸಲಾಗಿದೆ.

○ ಹಾಸನದ ಎಕ್ಸಿಕ್ಯೂಟಿವ್ ಇಂಜನಿಯರಾದ ಶ್ರೀ ಹೆಚ್. ಸಿ. ಕೆ. ಭಟ್ಟಾಚಾರ್ಯರಿಗೆ ಕಳೆದ ತಿಂಗಳು ೨೧ನೇ ತಾ॥ ನಿಂದ ೩ ತಿಂಗಳ ರಜಾ ಕೊಡಲಾಗಿದೆ.

○ ಕಾನಕಾನಹಳ್ಳಿಯಲ್ಲಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಯ ಅಧಿಕಾರಿಗಳಾದ ಶ್ರೀ ಎ. ಸಾಂಬಮೂರ್ತಿಯವರನ್ನು ಇಂಜನಿಯರಿಂಗ್ ಇಲಾಖೆಗೆ ವಾಪಸು ಕಳುಹಿಸಲಾಗಿದೆ. ಅಸಿಸ್ಟೆಂಟ್ ಇಂಜನಿಯರಾದ ಶ್ರೀ ಎ ವಿ. ಜಯರಾಮರವರನ್ನು ಅಲ್ಲಿಗೆ ವರ್ಗಾಯಿಸಲಾಗಿದೆ.

ಗಾಂಧಿ ಕೊಲೆ ಅಪಾದಿತರಿಗೆ ಶಿಕ್ಷೆ ಹೆಚ್ಚೆಂತೆ

ಆಪ್ಟೆ ಮತ್ತು ಇತರ ಐವರಿಗೆ ಕೊಡಲ್ಪಟ್ಟ ಶಿಕ್ಷೆ ಬಹು ಕಠಿಣವಾದುದೆಂದು ಗಾಂಧಿ ಕೊಲೆ ಮೊಕದ್ದಮೆಯಲ್ಲಿ ಡಾ॥ ಸಾವರಕರ್‌ರವರ ವಕೀಲರಾಗಿದ್ದ ಶ್ರೀ ಭೋಪಟಕರ್‌ರವರು ಹೇಳಿದ್ದಾರೆ. ಗೋಡ್ಸೆ ಮತ್ತು ಆಪ್ಟೆಯವರಿಗೆ ಕೊಡಲಾಗಿರುವ ಮರಣದಂಡನೆಯ ಶಿಕ್ಷೆಯನ್ನು ಪೂರ್ವ ಪಂಜಾಬು ಹೈಕೋರ್ಟಿನವರು ಖಾಯಂ ಮಾಡುವವರೆಗೂ ಅವನ್ನು ಜಾರಿಗೆ ಕೊಡಲ್ಪಡುವುದಿಲ್ಲವೆಂದು ಹೇಳಲಾಗಿದೆ.

ವ್ಯವಸಾಯ ಸಚಿವರಾದ ಶ್ರೀ ಎಚ್. ಸಿದ್ದಯ್ಯನವರು ಪ್ರಾತಃನಾದಿ, ಆಹಾರ ಬೆಳೆಯಲು ಸರ್ಕಾರದವರು ಕೈಗೊಂಡಿರುವ ದೀರ್ಘಾವಧಿ ಯೋಜನೆಗಳನ್ನು ವಿವರಿಸಿದರು. ಸಂಸ್ಥಾನದಲ್ಲಿ ಅನೇಕ ಕಡೆ ಫಲವತ್ತಾದ ಜಮೀನುಗಳು ಬೀಳಾಗಿ ಇದ್ದು, ಅಕ್ಕಿ ಕೈಸರುಗಳ ಅಭಾವದಿಂದ ಸಾಗುವಳಿ ಮಾಡುತ್ತಿಲ್ಲವಾಗಿ ತಿಳಿಸಿ... ಜನರ ... ಮಾಡಿಸುವುದಾಗಿಯೂ ಇನ್ನು ... ಸರ್ಕಾರದವರೇ ಆ ಪ್ರದೇಶಗಳಲ್ಲಿ ... ನೇರವಾಗಿ ವ್ಯವಸಾಯ ಮಾಡಿಸಲು ಯೋಜನೆ ಮಾಡುತ್ತಿರುವುದಾಗಿಯೂ ಅವರು ತಿಳಿಸಿದರು.

ಜಪಾನನ್ನು ಅಮೆರಿಕವು ತ್ಯಜಿಸುವುದೇ ?

ಮುಂದೆ ಯುದ್ಧ ಸಂಭವಿಸುವುದಾದರೆ ಆಗ ಅಮೆರಿಕವು ಜಪಾನನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲವೆಂದೂ, ಆದುದರಿಂದ ಅದನ್ನು ಅಮೆರಿಕವು ತ್ಯಜಿಸಬೇಕೆಂದು ಅಲ್ಲಿನ ಮಿಲಿಟರಿ ಪ್ರವೀಣರು ಕೆಲವರು ಸೂಚಿಸಿರುವರೆಂದೂ ವರದಿಯಾಗಿದೆ. ಮಿಲಿಟರಿಯವರು ನಡೆಸಿದ ಪರಿಶೀಲನೆ ಪ್ರಕಾರ ಪೆಸಿಫಿಕ್ ಕ್ಷೇತ್ರದ ರಕ್ಷಣಾ ವ್ಯವಸ್ಥೆಯು ಅಷ್ಟು ಮುಖ್ಯವಾದುದಲ್ಲವೆಂದೂ, ಆ ಪ್ರದೇಶಗಳಲ್ಲಿ ಅಮೆರಿಕಾ ಸೈನ್ಯಗಳನ್ನು ಇಡುವುದು ವ್ಯರ್ಥವೆಂದು ಹೇಳಲಾಗಿದೆ. ಜಪಾನಿನಲ್ಲಿ ಅಮೆರಿಕದ ಸ್ಥಾನವನ್ನು ರಷ್ಯವು ಆಕ್ರಮಿಸಬಹುದೆಂದೂ ಅಭಿಪ್ರಾಯಪಡಲಾಗಿದೆ.

ವಿಜಯಲಕ್ಷ್ಮೀ ಪಂಡಿತರು ವಿಶ್ವ ಸಂಸ್ಥೆಯ ಪ್ರತಿನಿಧಿ

ರಷ್ಯದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರನ್ನು ವಿಶ್ವ ಸಂಸ್ಥೆಯಲ್ಲಿ ಮಂತ್ರಿ ಪದವಿಯ ಅಧಿಕಾರವುಳ್ಳ, ಖಾಯಂ ಪ್ರತಿನಿಧಿಗಳನ್ನಾಗಿ ನೇಮಕ ಮಾಡಲಾಗುವುದೆಂದು ದೆಹಲಿಯ ರಾಜಕೀಯ ಆವರಣದಲ್ಲಿ ಹೇಳಲಾಗುತ್ತಿದೆ.

೧೧೦ ವರ್ಷದ ಮುದುಕಿಯ ಮರಣ

ದಕ್ಷಿಣ ಆಫ್ರಿಕದ ಪ್ರಿಟೋರಿಯಯಲ್ಲಿ ೧೧೦ ವಯಸ್ಸಿನ ಶ್ರೀಮತಿ ಘೋಲಿ ಎಂಬ ಭಾರತೀಯ ಮಹಿಳೆಯು ಮರಣ ಹೊಂದಿರುವುದಾಗಿ ವರದಿಯಾಗಿದೆ.

ಗಣಿ ಮುಷ್ಕರಗಾರರಿಗೆ ಸಮತಾವಾದಿಗಳ ಸಹಾನುಭೂತಿ

ಸಂಸ್ಥಾನದ ಸಮತಾವಾದಿ ಪಕ್ಷದ ಮೈಸೂರು ನಗರದ ಸಮಸ್ಕರ ಸಭೆಯು ನಿನ್ನೆ ಶ್ರೀ ಪಿ. ಶ್ರೀಕಂಠಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಚಿನ್ನದ ಗಣಿ ಕೆಲಸಗಾರರ ಮುಷ್ಕರದ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಕೆಲಸಗಾರರ ಮುಖಂಡರನ್ನು ಸರ್ಕಾರದವರು ದಸ್ತಗಿರಿ ಮಾಡಿರುವುದನ್ನು ಖಂಡಿಸುವ ನಿರ್ಣಯ ಮಾಡಲಾಯಿತು.

ಮೈಸೂರು ನಗರದ ಸಮಿತಿಯು ರಚಿಸಲ್ಪಟ್ಟು ಶ್ರೀ ಎಲ್. ಟಿ. ಶ್ರೀನಿವಾಸ್‌ರವರನ್ನು ಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು.

ಅಣು ಬಾಂಬಿನ ಗಾತ್ರವೆಷ್ಟು ?

ಅಣು ಬಾಂಬಿನ ಗಾತ್ರವು ಕೇವಲ ಗಾಲ್ಫ್ ಆಟದ ಚೆಂಡಿನಷ್ಟು ಇದೆಯೆಂದೂ, ಆದರೆ ಅದನ್ನು ಪ್ರಯೋಗಿಸಲು ಒಂದು ದೊಡ್ಡ ಯುದ್ಧ ವಿಮಾನ ಬೇಕಾಗುವುದೆಂದೂ, ಅದರ ವ್ಯಾಪ್ತಿಯು ೩ ಮೈಲಿಗಳ ದೂರವಿರುವುದೆಂದೂ ಅಮೆರಿಕದ ಮಿಲಿಟರಿ ಪ್ರವೀಣರೊಬ್ಬರು ಹೇಳಿರುತ್ತಾರೆ. ಅಮೆರಿಕದಲ್ಲಿರುವ ಅಣು ಬಾಂಬುಗಳ ಸಂಖ್ಯೆಯನ್ನು ರಹಸ್ಯವಾಗಿಟ್ಟಿರುವುದಾಗಿ ಅಧ್ಯಕ್ಷ ಟ್ರೂಮನ್ನರು ತಿಳಿಸಿರುತ್ತಾರೆ

● ಹೋಟೇಲು, ಕ್ಷೌರದ ಅಂಗಡಿ ಮತ್ತು ಇತರ ವ್ಯಾಪಾರ ಕೇಂದ್ರಗಳು ರಾಷ್ಟ್ರನಾಯಕರುಗಳ ಹೆಸರುಗಳನ್ನು ದುರುಪಯೋಗಪಡಿಸಿಕೊಳ್ಳದಂತೆ ಸರ್ಕಾರದವರು ನಿಷೇಧಿಸಬೇಕೆಂದು ಬೊಂಬಾಯಿ ಶಾಸನ ಸಭೆಯಲ್ಲಿ ಸದಸ್ಯರೊಬ್ಬರು ನಿರ್ಣಯವನ್ನು ಮಂಡಿಸಲಿದ್ದಾರೆ

ರಾಜ್ಯಾಂಗ ಸಭಾ ಸದಸ್ಯರ ಉಪವಾಸ

ಸಂಯುಕ್ತ ಪ್ರಾಂತ್ಯದ [illegible] ಕಾರ್ಮಿಕರು ನಾಳೆಯಿಂದ ಹೂಡಲಿರುವ ಮುಷ್ಕರವನ್ನು [illegible] ಸರ್ಕಾರದವರು [illegible] ಪ್ರತಿಭಟಿಸಿ [illegible] ಸದಸ್ಯರಾದ ಶ್ರೀ [illegible] ನಾಳೆಯಿಂದ ಉಪವಾಸ ಮಾಡುವುದಾಗಿ ತಿಳಿಸಿರುತ್ತಾರೆ

ಪೋಸ್ಟಾಫೀಸಿನಲ್ಲಿ ೧॥ ಲಕ್ಷ ರೂ. ಕಳವು

ಸಿಕಂದರಾಬಾದಿನಲ್ಲಿರುವ ಭಾರತದ [illegible] ಪೋಸ್ಟಾಫೀಸಿನಲ್ಲಿ ಮೊನ್ನೆ ದಿನ ೧॥ ಲಕ್ಷ ರೂ [illegible] ಕಳವಾಯಿತೆಂದು ವರದಿಯಾಗಿದೆ

ಪ್ರಕಟಣೆ

[illegible]

ಮಾದೇಶ್ವರ ಬೆಟ್ಟದ ಜಾತ್ರೆಗೆ ಹೋಗುವವರಿಗೆ

ಎಚ್ಚರಿಕೆ

ಕಾಲರಾ ಭಯವಿರುವುದರಿಂದ ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕು

[illegible] ಮಾದೇಶ್ವರ ಬೆಟ್ಟದ [illegible] ನಡೆಯುವುದು [illegible] ಮಾಡಿಸಿ [illegible] ವರದಿ ಬಳಸಿದೆ

ಮಾದೇಶ್ವರ ಬೆಟ್ಟದ ಜಾತ್ರೆಗೆ [illegible] ಇನಾಕ್ಯುಲೇಷನ್ ಮಾಡಿದ [illegible]

ಎಸ್. ಆರ್ [illegible]

ಪ್ರಜಾಪ್ರತಿನಿಧಿ ಸಭಾ ಸದಸ್ಯರ ಖುಲಾಸೆ

ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ [illegible] ಕಾಳಿಂಗಪ್ಪನವರು [illegible] ಜನರ ಸಹಾಯದಿಂದ ಕಳೆದ [illegible] ನವೆಂಬರ್ [illegible] ತಾ॥ ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ [illegible] ದರೋಡೆ ಮತ್ತು ಲೂಟಿ ನಡೆಸಿದರೆಂಬ ಆಪಾದನೆಯ ಮೇಲೆ ಸವರನ್ನು ವಿಚಾರಣೆಗೆ ಗುರಿಯಾಗಿದ್ದರು ಬೆಂಗಳೂರು ಜಿಲ್ಲಾ [illegible] ಯವರು ಅವರನ್ನು ಮತ್ತು ಇತರ [illegible] ಜನರನ್ನು ತಪ್ಪಿತಸ್ಥರಲ್ಲವೆಂದು [illegible] ಮಾಡಿರುತ್ತಾರೆ

ಗಂಟೆಗೆ ೬೦೭ ಮೈಲಿ ವೇಗದ ಬಾಂಬರ್ ವಿಮಾನ

[illegible] ಮೈಲಿ ವೇಗದಲ್ಲಿ [illegible] ನೂತನ ಜೆಟ್ ಬಾಂಬರ್ ವಿಮಾನವನ್ನು ಅಮೆರಿಕದಲ್ಲಿ ತಯಾರಿಸಲಾಗಿದೆ

Apply for
LODGING
and
BOARDING
(Only for Students)
2333 New Mysore Lodge
K G Koppal
Near to all the Colleges

ನೈಜಾಮರ ಮಾಜಿ ಪ್ರತಿನಿಧಿಗಳ ಮೇಲೆ ಮೊಕದ್ದಮೆ

ವಿಶ್ವಸಂಸ್ಥೆಯ ಹೈದರಾಬಾದಿನ ಮಾಜಿಪ್ರತಿನಿಧಿಗಳಾಗಿದ್ದ ನವಾಬ್ ಮೋಯಿನ್ ನವಾಜ್ ಜಂಗ್‌ರವರು ಸಂಸ್ಥಾನಕ್ಕೆ ಸೇರಿದ ೧॥ ಕೋಟಿ ರೂ ಅನ್ನು ಲಂಡನ್ನಿನ ಬ್ಯಾಂಕೊಂದರಿಂದ ಪಾಕೀಸ್ಥಾನಕ್ಕೆ ರವಾನಿಸಿದ್ದಾರಷ್ಟೆ ಈ ವಿಚಾರದಲ್ಲಿ ಲಂಡನ್ನಿನಲ್ಲಿರುವ ಭಾರತದ ಹೈಕಮಿಷನರು ಸಿವಿಲ್ ನಡೆಸಿರುವರೆಂದೂ, ಸಧ್ಯದಲ್ಲಿಯೇ ಅವರಮೇಲೆ ಮೊಕದ್ದಮೆ ಹೂಡಲಾಗುವುದೆಂದೂ ಹೇಳಲಾಗಿದೆ

ಅಗ್ಗದ ಜವಳಿಗಾಗಿ
ಗುರುದೇವಾ ಹಾಲ್

[illegible] ಮೈಸೂರು [illegible] ಬೆಂಗಳೂರು [illegible] ಜಮಖಾನ, ಹೊದಿಕೆ ಮತ್ತು [illegible] ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ
[illegible] ಮೈಸೂರು

Edited, printed and published by V R Nagarajan at the Sadhvi Press, D. Subbaiah Road, Mysore

ಮದ್ರಾಸ್ ಸ್ವಾಮಿಗಳ ಸ್ಥಿತಿ ಕಳವಳಕರ

ಮದರಾಸ್ ಸರ್ಕಾರದವರು [illegible] ದ ಹಿಂದೂ ಧಾರ್ಮಿಕ [illegible] ವನ್ನು ಪ್ರತಿಭಟಿಸಿ ಕಳೆದ ೧೯ ದಿನಗಳಿಂದ [illegible] ಕಛೇರಿಯ ಮುಂದೆ ಉಪವಾಸ ಕೈಗೊಂಡಿರುವ ಶ್ರೀ ನಿತ್ಯಾನಂದ ಸರಸ್ವತಿ ಸ್ವಾಮಿಯವರ ಸ್ಥಿತಿಯು ಕಳವಳಕ್ಕೀಡಾಗಿದೆ ಅವರು ವಿಶೇಷ ನಿಶ್ಶಕ್ತರಾಗಿದ್ದಾರೆ. ಕಳೆದ ೨ ದಿನಗಳಲ್ಲಿ ೫ ಪೌಂಡು ತೂಕ ಕಡಿಮೆಯಾಗಿದೆ

ಕರ್ನಾಟಕ ಏಕೀಕರಣ ಸಮ್ಮೇಳನ

ಹೈದರಾಬಾದ್ ಸಂಸ್ಥಾನದ ಕಲಬುರ್ಗಿಯಲ್ಲಿ ಮುಂದಿನ ತಿಂಗಳು [illegible] ಕರ್ನಾಟಕ ಏಕೀಕರಣ ಮಹಾಸಮ್ಮೇಳನವು ನಡೆಯುವುದು ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರರು ಅದರ [illegible] ಮಹೋತ್ಸವವನ್ನು ನೆರವೇರಿಸುವರು. ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು.

WANTED

A Few Engineers Lawyers Doctors, Officers and Pensioners interested in Immediate Farm Production for family Consumption —No Capital —But Working Expenses Necessary. Success Assured and Guaranteed.

Please Apply to Rowe
84, Nazarbad, Mysore

11-2-49 ರಿಂದ ಆರಂಭ
ರಾಜಕಮಲ್, ಮೈಸೂರು

ದಿನವಹಿ ೩ ಆಟಗಳು

ಮ್ಯಾಟಿನಿ [illegible], ಸಂಜೆ [illegible]
ಮತ್ತು ರಾತ್ರಿ [illegible] ಗಂಟೆಗೆ

ಆದಿತ್ತನ ಕನಸು
(ತಮಿಳು)

ಮುಖ್ಯ ಪಾತ್ರ
ಅಂಜಲಿದೇವಿ,
ಟಿ. ಆರ್. ಮಹಾಲಿಂಗಂ,
ಕಾಳಿ ಎನ್. ರತ್ನಂ,
ತಾರಾ ಚೌಧುರಿ ಲಲಿತಾ ಪದ್ಮಿನಿ.

ಬೆಳಗಿನ ಆಟಗಳು : ತಾ॥ ೧೧-೨-೪೯ರಿಂದ

ಕುಂಕುಮ್ [illegible] ಪಾಸ್ಟರ್

ಮತ್ತು ಸಾಧನಾ ಬೋಸ್ [illegible] ಬೋಸ್

READY FOR SALE

COLLEGE TRANSLATION
(For [illegible] College Classes)
By
C MAHADEVAPPA B [illegible]
[illegible] University of Mysore
[illegible] KOWSALYA STORES
[illegible] MYSORE

॥ಶ್ರೀ॥
ಗಾಯತ್ರೀ ಟಾಕೀಸ್

ಪ್ರತಿ ದಿನ ೩ ಪ್ರದರ್ಶನಗಳು.
[illegible] 12-2-49 ರಿಂದ 6 ದಿನಗಳು [illegible] ಹಿಂದೆ ನಡೆದ [illegible] ರತ ಆಕರ್ಷಣೀಯ ವರ್ಣರಂಜಿತ ಚಿತ್ರ
ಕೊಲಂಬಿಯಾರವರ

ಲವ್ಸ್ ಆಫ್ ಕಾರ್ಮೆನ್
Loves of Carmen

The last Picture of 'RITA HAYWORTH'
Morning Shows on Sat 12th, Sun 13th at 10-30 a m

R.K.O's
TOMORROW IS FOR EVER

With CLAUDETTE COLBERT ORSON WELLES

ಫೋ॥ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ..ಕಾಸು
ಪುಟ ೭] ... ವಾರ ... [ಸಂಚಿಕೆ ...

ಇನ್ನು ಮುಂದೆ ದಿವಾನರ ಸಂಬಳ ೩,೫೦೦ ರೂ.

ಜಮೀನುದಾರರಿಗೆ ಹೆಚ್ಚು ಪಡಿತರ ಕೊಡದು.

ಮೈಸೂರು ೧೪

ನಗರದ ರೇಷನ್ ಕಾರ್ಡು ಹೋಲ್ಡರುಗಳ ಸಮಿತಿಯ ಸಭೆಯು ನಿನ್ನೆ ನಡೆಯಿತು. ರೇಷನ್ ಪದ್ಧತಿಯಲ್ಲಿ ಜಮೀನುದಾರರಿಗೆ ಒಂದು ರೀತಿ ಮತ್ತು ಜಮೀನು ಇಲ್ಲದವರಿಗೆ ಒಂದು ರೀತಿ ವ್ಯವಸ್ಥೆ ಮಾಡಿರುವುದನ್ನು ವಜಾ ಮಾಡಿ, ಎಲ್ಲರಿಗೂ ಒಂದೇ ರೀತಿ ಪಡಿತರವನ್ನು ಕೊಡುವುದರಿಂದ ಜಮೀನುದಾರರಲ್ಲಿರುವ ಧಾನ್ಯವನ್ನು ವಶಪಡಿಸಿಕೊಂಡು, ಪಡಿತರವನ್ನು ಹೆಚ್ಚಿಸಲು ಅನುಕೂಲವಾಗುವುದೆಂದೂ, ಕೇವಲ ಹೊಸ ಹೋಟೇಲುಗಳಿಗೆ ಲೈಸನ್ಸು ಕೊಡದಿರುವ ನೀತಿಯನ್ನು ಬದಲಾಯಿಸಿ ಈಗಿರುವ ಹೋಟೇಲುಗಳನ್ನು ಮತ್ತು ಹಾಲಿನ ಅಂಗಡಿಗಳನ್ನು ಮುಚ್ಚಬೇಕೆಂದೂ ಸರಕಾರದವರನ್ನು ಒತ್ತಾಯ ಪಡಿಸುವ ನಿರ್ಣಯಗಳು ಅಂಗೀಕೃತವಾದುವು.

ಬೆಂಗಳೂರಿನಲ್ಲಿ ಬ್ರಿಟಿಷ್ ಜೆಟ್ ವಿಮಾನ ಪ್ರದರ್ಶನ

ಗಂಟೆಗೆ ೫೦೦ ಮೈಲಿ ವೇಗವುಳ್ಳ ಬ್ರಿಟಿಷ್ ಜೆಟ್ ವ್ಯಾಂಪೈರ್ ವಿಮಾನಗಳು ಪೂನಾ, ಬೆಂಗಳೂರು, ಮದ್ರಾಸುಗಳಲ್ಲಿ ಪ್ರದರ್ಶನ ನಡೆಸಲು ಸಧ್ಯದಲ್ಲಿಯೇ ಭಾರತಕ್ಕೆ ಬರಲಿವೆ. ಫೆಬ್ರವರಿ ೨೮ ರಲ್ಲಿ ಬೆಂಗಳೂರಿನಲ್ಲಿ ಪ್ರದರ್ಶನ ಏರ್ಪಾಡಾಗಿದೆ.

ಕಬ್ಬು ಬೆಳೆಯಲು ಸರಕಾರದ ನಿಷೇಧ

ಸಂಸ್ಥಾನದಲ್ಲಿ ಬರುವ ನಾಲ್ಕು ತಿಂಗಳ ಕಾಲ ಕಬ್ಬನ್ನು ಬೆಳೆಯಕೂಡದೆಂದ ನಿಷೇಧಿಸುವುದಾಗಿ ತಿಳಿದುಬಂದಿದೆ. ಸಂಸ್ಥಾನದ ಅಧಿಕ ಬೆಳವಣಿಗೆಗೆ ಅಷ್ಟು ಮುಖ್ಯವಲ್ಲದ ಇತರ ವ್ಯಾಪಾರಿ ಪೈರುಗಳನ್ನು ಬೆಳೆಯುವುದನ್ನು ತಪ್ಪಿಸಲಾಗುವುದು. ದೇಶಕ್ಕೆ ಆಹಾರ ಧಾನ್ಯ ಒದಗಿಸಲು ಅವಶ್ಯಕವಾದ ರಾಗಿ ಮುಂತಾದ ಪೈರನ್ನು ಬೆಳೆಯಲು ವಿಶೇಷ ಪ್ರೋತ್ಸಾಹವನ್ನು ಸರಕಾರದವರು ಕೊಡುವರು.

ಪತಿ ವಿಚ್ಛೇದನದ ಅವಕಾಶ

ಮೈಸೂರ ಶಾಸನ ಸಭೆಯಲ್ಲಿ ಶ್ರೀ ಆರ್. ಕೆ. ಸಿದ್ದಪ್ಪರವರು ಹೆಂಡತಿಯು ತನ್ನ ಗಂಡನೊಡನೆ ಇರಲು ಇಚ್ಛಿಸದೆ ಇದ್ದಲ್ಲಿ ಅತನನ್ನು ಬಿಡಲು ಅವಕಾಶವಿರಬೇಕೆಂದೂ ಗಂಡನು ಬೇರೊಬ್ಬಳನ್ನು ವಿವಾಹವಾದರೆ ಅಥವಾ ಸಂಪರ್ಕ ಮಾಡಿದರೆ ಅಗ್ನಿ ಆತನಿಂದ ಜೀವನಾಂಶ ಪಡೆಯಲು ಪತ್ನಿಗೆ ಹಕ್ಕಿರಬೇಕೆಂದೂ ಮಂಡಿಸಿದ ಮಸೂದೆಗೆ ಅಂಗೀಕಾರ ದೊರೆಯಿತು.

ವಿವಾಹ ಶಿಕ್ಷಣ ಶಾಲೆಗಳು

ದೇಶದಲ್ಲಿ ದಾಂಪತ್ಯವಿಚ್ಛೇದನವನ್ನು ಕಡಿಮೆ ಮಾಡಲು, ಇಂಗ್ಲೆಂಡಿನಲ್ಲಿ ವಿವಾಹ ಶಿಕ್ಷಣ ಶಾಲೆಗಳನ್ನು ತೆರೆಯಲಾಗಿದೆ. ಯುವಕರಿಗೆ ಲಗ್ನವಾದ ಮೇಲೆ ಉದ್ಭವಿಸುವ ಸಮಸ್ಯೆ ಮತ್ತು ಇತರ ವಿಷಯಗಳ ಮೇಲೆ ಪ್ರವೀಣ ವೈದ್ಯರುಗಳು ಅಲ್ಲಿ ಸಲಹೆ ಕೊಡುವರು.

ಉಪಾಧ್ಯಾಯರ ಮುಷ್ಕರ ದಿಂದ ಮಕ್ಕಳಿಗೆ ವಿರಾಮ

ಮಾಂಟ್ರಿಯಲಿನ ಸಾವಿರಾರು ಉಪಾಧ್ಯಾಯರುಗಳು ತಮಗೆ ವರ್ಷಕ್ಕೆ ೧೭೫೦ ರೂ. ಹೆಚ್ಚು ಕೊಡಬೇಕೆಂದು ಮುಷ್ಕರ ಹೂಡಿದ್ದಾರೆ. ಇದರಿಂದ ... ಸಾ... ಮಕ್ಕಳಿಗೆ ವಿರಾಮವು ದೊರೆತಿದೆ.

೨೦ ವರ್ಷ ಗಂಡಸಿನಂತೆ ಜೀವಿಸಿದ ಯುವತಿ

ಸ್ಪೇನಿನ ಕಾರಲೋನಾ ಎಂಬ ೪೦ ವರ್ಷದ ಯುವತಿಯು ತನ್ನ ಸಹೋದರರಿಗಿರುವ ಸ್ವಾತಂತ್ರ್ಯವು ತನಗಿಲ್ಲವೆಂದು ಮನೆಯಿಂದ ಪರಾರಿಯಾಗಿ, ೨೦ ವರ್ಷಗಳ ಕಾಲ ಉದ್ಯೋಗದಲ್ಲಿ ತೊಡಗಿ ಗಂಡಸಿನಂತೆ ಜೀವನ ನಡೆಸಿದ ಆಶ್ಚರ್ಯ ಪ್ರಸಂಗವು ವರದಿಯಾಗಿದೆ. ಮೇರಿಯಾ ಎಂಬ ಈಕೆಯನ್ನು ಆಕೆಯು ಮುದುಕಿಯಾಗಿದ್ದಳೆಂದೂ, ತನಗೆ ಖಾಯಿಲೆಯಾದಾಗ, ಈ ಗುಟ್ಟು ರಟ್ಟಾಯಿತೆಂದೂ ಹೇಳಲಾಗಿದೆ.

ದಸ್ತಗಿರಿ ಮಾಡಿದುದಕ್ಕೆ ಪೋಲೀಸರ ಮೇಲೆ ದಾವಾ

ಅಮೇರಿಕದ ಆಲ್ಬರ್ಟ್ ಪಾರ್ಕಿ ಎಂಬುವನು ಕುಡಿದು ಮೋಟಾರನ್ನು ನಡೆಸಿಕೊಂಡು ಹೋಗುತ್ತಿದ್ದಾಗ ಪೋಲೀಸರು ಅವನನ್ನು ತಡೆದು ನಗೆ ಹೋಗುವಂತೆ ತಿಳಿಸಿದರು. ದಾರಿಯಲ್ಲಿ ಆಕಸ್ಮಿಕ ಉಂಟಾಗಿ ಅವನಿಗೆ ಗಾಯವಾಯಿತು. ತನ್ನನ್ನು ಪೋಲೀಸರು ದಸ್ತಗಿರಿ ಮಾಡದಿದ್ದುದರಿಂದ ಈ ಆಕಸ್ಮಿಕವು ನಡೆಯಿತೆಂದು ಪೋಲೀಸರ ಮೇಲೆ ಆತನು ೨,೫೦೦ ಪೌಂಡುಗಳಿಗೆ ದಾವಾ ಮಾಡಿದ್ದಾನೆ.

ಐರ್ಲೆಂಡ್ ಐಕ್ಯಕ್ಕೆ ಬಹುಮತ ಸಿಕ್ಕಲಿಲ್ಲ

ಕಳೆದ ೧೦ರ ವಾರ ಉತ್ತರ ಐರ್ಲೆಂಡಿನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಇದರಲ್ಲಿ ಬ್ರಿಟನ್ ಬ್ರಿಟನಿನೊಡನೆಯೇ ಇರಬೇಕೆಂಬ ಸರಕಾರಿ ಪಕ್ಷದವರಿಗೆ ಬಹುಮತ ಒಂದು ಐಕ್ಯ ... ಪ್ರಾಂತಗಳು ಒಂದಾಗಬೇಕೆಂದು ಕೇಳುವವರ ಪಕ್ಷಕ್ಕೆ ಪರಾಜಯವಾಯಿತು.

ಬ್ರಿಟನ್ನಿನಲ್ಲಿ ಯುದ್ಧದ ಪದಕಗಳನ್ನು ಕೇಳುವವರಿಲ್ಲ

ಕಳೆದ ಯುದ್ಧದಲ್ಲಿ ಸೇವೆ ಸಲ್ಲಿಸಿದ ಯೋಧರಿಗಾಗಿ ತಯಾರಿಸಲ್ಪಟ್ಟಿದ್ದ ... ಲಕ್ಷ ಪದಕಗಳನ್ನು, ಬ್ರಿಟನ್ನಿನ ... ಕೇಳುವವರೇ ಇಲ್ಲದಾಗಿದೆ ... ಜನರಿಗೆ ... ಬೇಕೆಂದೂ ಮತ್ತು ... ಸಂಘದವರು ಬೇಡವೆಂದೂ ಕೇಳಿ...

ಎಸ್. ಶ್ರೀನಿವಾಸ ಮೂರ್ತಿಯವರಿಗೆ ಸತ್ಕಾರ

ಮೈಸೂರು ೧೩

ರಾಜಧಾನಿಯಲ್ಲಿ ತಾಯಿನಾಡು ಪತ್ರಿಕೆಯ ಬಾತ್ಮೀದಾರರಾದ ಶ್ರೀ ಎಸ್. ಶ್ರೀನಿವಾಸ ಮೂರ್ತಿಯವರ ಗೌರವಾರ್ಥವಾಗಿ ನಿನ್ನೆ ಸಂಜೆ ಸದಕಾರ ಭವನದಲ್ಲಿ ಪುರಸಭಾಧ್ಯಕ್ಷರಾದ ಶ್ರೀ ಬಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಕೆಲವು ಮಿತ್ರರು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು.

ಪ್ರಾರ್ಥನೆ ಮಾದರಿ ಶಾಲಾ ಬಾಲಕರಿಂದ ಪ್ರಹಸನ ಮತ್ತು ಶ್ರೀಮತಿ ಸರೋಜಿನಿಯವರಿಂದ ಸಂಗೀತಗಳಾದನಂತರ ಪ್ರಸಾರಕರಾದ ಶ್ರೀ ಬಿ ಎಸ್ ಸುಬ್ಬರಾಯರು ಸ್ವಾಗತ ಭಾಷಣ ಮಾಡಿ, ಅತಿಥಿಯವರ ಗುಣಕಥನ ಮಾಡಿದರು. ಶ್ರೀ ಗ... ವಿ ನಾರಾಯಣ ಸ್ವಾಮಿ, ಎಂ. ಎಲ್. ಎ. ..., ಚೌಡಯ್ಯ ಮುಂತಾದವರು ಮಾತನಾಡಿ ಶ್ರೀ ಶ್ರೀನಿವಾಸಮೂರ್ತಿಯವರ ಸರಳತೆ, ಪ್ರಸನ್ನ ಶೈಲಿಗಳನ್ನು ... ಅವರ ಸೇವೆಯನ್ನು ಪ್ರಶಂಸಿಸಿದರು.

ಪುರಸಭಾ ಕಮೀಷನರಾದ ಶ್ರೀ ... ನರಸಿಂಹಮೂರ್ತಿಯವರು ಮಾತನಾಡಿ ಅತಿಥಿಯ ಗುಣ ಕಥನ ಮಾಡಿದರು. ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಯವರು ಕಳುಹಿಸಿಕೊಟ್ಟ ಪಂಡಿತ ನೆಹರೂರವರ ಛಾಯಾಚಿತ್ರವನ್ನು ಅವರಿಗೆ ಅರ್ಪಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪತ್ರಿಕೋದ್ಯಮದ ಆದರ್ಶವನ್ನು ವಿವರಿಸಿ ಶ್ರೀ ಶ್ರೀನಿವಾಸಮೂರ್ತಿಯವರ ಸೇವೆಯನ್ನು ಪ್ರಶಂಸಿಸಿದರು. ಶ್ರೀ ಬಿ ಆರ್. ... ರವರ ವಂದನಾರ್ಪಣೆಯಾದನಂತರ ಸಮಾರಂಭವು ಮುಕ್ತಾಯವಾಯಿತು. ಇದೇ ಸಂದರ್ಭದಲ್ಲಿ ನಿನ್ನೆ ರಾತ್ರಿ ಕೆಲವು ಮಿತ್ರರಿಗೆ ಭೋಜನ ಕೂಟವು ಏರ್ಪಾಡಾಗಿತ್ತು.

ಕೋಸು ಗೆಡ್ಡೆ ರಸದಿಂದ ಹೊಟ್ಟೆ ಹುಣ್ಣಿನ ಗುಣ

ಕೋಸು ಗೆಡ್ಡೆಯ ರಸವನ್ನು ಕುಡಿಯುವುದರಿಂದ ಹೊಟ್ಟೆಯೊಳಗಿರುವ ಹುಣ್ಣು ... ಗುಣವಾಗುವುದೆಂದು ... ಪ್ರತ್ಯಕ್ಷವಾಗಿ ... ತೋರಿಸಿಕೊಟ್ಟಿದ್ದಾರೆ ... ಇದು ... ಕಂಡುಬಂದಿದೆ ... ಬೇಕಾಗಿದೆ ...

ಹೈದ್ರಾಬಾದಿಗೆ ...

... ಹೈದ್ರಾಬಾದು ಪ್ರದೇಶದಲ್ಲಿ ವಿಶೇಷ ವಿಷ್ಣ ... ಬಲವಾದ ಕಾವಲಿನೊಡನೆ ಹೈದ್ರಾಬಾದಿಗೆ ಕರೆತರಲಾಯಿತು. ಅದರೆ ಕೋರ್ಟಿನಲ್ಲಿ ... ಸಹಕರಿ ... ಮೊಕ್ಕದ್ದಮೆ ಮುಂದೂಡಲಾಯಿತು.

ಆಗಸ್ಟ್ ೧೫ರೊಳಗೆ ಭಾರತ ರಾಜ್ಯಾಂಗ

ಭಾರತದ ರಾಜ್ಯಾಂಗವನ್ನು ಬರುವ ಆಗಸ್ಟ್ ತಿಂಗಳು ೧೫ನೇ ತಾರೀಖಿನೊಳಗೆ ತಯಾರಿಸಲಾಗುವುದೆಂದು ಭಾರತ ಸರ್ಕಾರದ ನ್ಯಾಯಾಂಗ ಮಂತ್ರಿ ಡಾ। ಅಂಬೇಡ್ಕರ್‌ರವರು ತಿಳಿಸಿದ್ದಾರೆ.

ತಂತಿ ಮೂಲಕ ಫೋಟೋಗಳನ್ನು ಕಳುಹಿಸಲೇರ್ಪಾಡು

ಅಮೇರಿಕದ ಹಲವು ನಗರಗಳಿಗೂ, ಬ್ರಿಟನ್, ಆಫ್ರಿಕ, ಆಸ್ಟ್ರೇಲಿಯಾ, ಈಜಿಪ್ಟ್ ಮುಂತಾದ ಕಡೆಗಳಿಗೆ ಭಾರತದಿಂದ ಇನ್ನು ಮುಂದೆ ತಂತಿ ಮೂಲಕ ಫೋಟೋಗಳನ್ನು ಕಳುಹಿಸಲು ಏರ್ಪಾಡಾಗಿದೆ.

ಇನ್ನು ಮುಂದೆ ದಿವಾನರ ಸಂಬಳ ೩॥ ಸಾವಿರ ರೂ.

ಸ್ವಂತ ಸುದ್ದಿ (ಫೋನ್) ಬೆಂಗಳೂರು ೧೪

ದಿವಾನರಾದ ಸರ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ತಮಗೆ ಈಗ ಬರುತ್ತಿರುವ ೬॥ ಸಾವಿರ ರೂ. ಸಂಬಳವನ್ನು ತಾವೇ ಕಡಿಮೆ ಮಾಡಿಕೊಂಡು, ಮುಂದಿನ ತಿಂಗಳಿನಿಂದ ೩॥ ಸಾವಿರ ರೂ. ತೆಗೆದುಕೊಳ್ಳಲು ಒಪ್ಪಿದ್ದಾರೆಂದೂ ತಿಳಿದು ಬಂದಿದೆ.

ಮೈಸೂರಿಗೆ ಮತ್ತೊಂದು ರಸಾಯನಿಕ ಗೊಬ್ಬರದ ಕಾರ್ಖಾನೆ

ಸಂಸ್ಥಾನದಲ್ಲಿ ಮತ್ತೊಂದು ರಸಾಯನಿಕ ಗೊಬ್ಬರ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ನ್ಯೂಯಾರ್ಕಿನ ಕೆಮಿಕಲ್ ಕಾರ್ಪೋರೇಷನ್ನಿನ ಅಧಿಕಾರಿಯೊಬ್ಬರು ಸಧ್ಯದಲ್ಲಿಯೇ ದೆಹಲಿಯಲ್ಲಿ ಭಾರತ ಸರ್ಕಾರದೊಡನೆ ಮಾತುಕತೆ ನಡೆಸಲಿರುವರೆಂದು ಹೇಳಲಾಗಿದೆ.

ಅಮೇರಿಕದಲ್ಲಿ ದಿವಾನರ ಪ್ರವಾಸ

ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರು ಮುಂದಿನ ತಿಂಗಳು ೩ ನೇ ತಾ॥ ಅಮೇರಿಕಕ್ಕೆ ತೆರಳಿ ಅಲ್ಲಿ ಒಂದು ತಿಂಗಳ ಕಾಲ ಪ್ರವಾಸ ಮಾಡುವರೆಂದು ತಿಳಿದುಬಂದಿದೆ. ನ್ಯೂಯಾರ್ಕಿನಲ್ಲಿ ನಡೆಯುವ ಅಂತರರಾಷ್ಟ್ರೀಯ ಸಿವಿಲ್ ಸರ್ವೀಸ್ ಸಮಿತಿಯ ಸಭೆಯಲ್ಲಿ ಅವರು ಭಾಗ ವಹಿಸುವುದಲ್ಲದೆ, ಮಾರ್ಚಿ ೩೧ನೇ ತಾ॥ ಮಾಸ್ಕೊನ್ನಿನಲ್ಲಿ ನಡೆಯುವ ಮಾಸಚು ಸೆಟ್ಸ್ ವಿದ್ಯೋಗಿಕ ಶಾಲಾ ಶತಮಹೋತ್ಸವದಲ್ಲೂ ಭಾಗವಹಿಸುವರು. ಈ ಸಂದರ್ಭದಲ್ಲಿ ನಡೆಯುವ ಸುಪ್ರಸಿದ್ಧ ಜ್ಞಾನಿಗಳ ಚರ್ಚಾ ಗೋಷ್ಠಿಯಲ್ಲಿ ದಿವಾನರು ... ರಕ್ಷಣೆ ... ವಿಷಯದ ಚರ್ಚೆಯಲ್ಲಿ ಹಿಂದುಳಿದಿರುವ ಪ್ರದೇಶಗಳ ... ಬಗ್ಗೆ ಭಾಷಣ ಮಾಡುವರು.

ಮಾರ್ಚಿ ೯ ರಿಂದ ಎಸ್. ಐ. ಆರ್. ರೈಲ್ವೆ ಮುಷ್ಕರ

ಮದರಾಸಿನ ಎಸ್. ಐ. ಆರ್. ರೈಲ್ವೆ ... ಕೆಲಸಗಾರರು ಮುಂದಿನ ತಿಂಗಳು ... ನೇ ... ರಿಂದ ಮುಷ್ಕರ ಹೂಡಬೇಕೆಂದು ... ನಡೆದ ರೈಲ್ವೆ ... ಸಂಘದ ಸಭೆಯಲ್ಲಿ ತೀರ್ಮಾನವಾಗಿದೆ ...

ಗಾಂಧೀ ಸ್ಮಾರಕ ಪ್ರದರ್ಶನದ ...

ಗಾಂಧೀಜಿಯ ಸ್ಮಾರಕ ... ಸಂದರ್ಭದಲ್ಲಿ ದೆಹಲಿಯ ರಾಜಘಾಟಿನಲ್ಲಿ ಪ್ರದರ್ಶಿಸಲ್ಪಟ್ಟ ವಸ್ತುಗಳನ್ನು ಒಂದು ... ಟ್ರೈನಿನಲ್ಲಿಟ್ಟು, ದೇಶಾದ್ಯಂತದಲ್ಲಿರುವ ಪಟ್ಟಣಗಳಲ್ಲೆಲ್ಲಾ ಪ್ರದರ್ಶಿಸುವಂತಾಗಬೇಕೆಂದು ಬೊಂಬಾಯಿನ ಪ್ರಮುಖರು ಅಭಿಪ್ರಾಯಪಟ್ಟಿದ್ದಾರೆ

ಕಮ್ಯೂನಿಸ್ಟ್ ಸೈನ್ಯ ಮುನ್ನುಗ್ಗದಂತೆ ಆಜ್ಞೆ

ಚೀಣದ ಕಮ್ಯೂನಿಸ್ಟ್ ಸೈನ್ಯಗಳು ದಕ್ಷಿಣಾಭಿಮುಖವಾಗಿ ಮುನ್ನುಗ್ಗದಂತೆ ಕಮ್ಯೂನಿಸ್ಟ್ ಸೈನ್ಯದ ಮುಖಂಡರು ... ಯಿತ್ತಿದ್ದಾರೆ ಅವರು ಶಾಂತಿ ಸಂಧಾನದಲ್ಲಿ ಇಚ್ಛೆ ಹೊಂದಿರುವರೆಂಬುದನ್ನು ತೋರಿಸಬೋಕ್ಕವರೆ, ಈ ಆಜ್ಞೆಯಿತ್ತಿರುವರೆಂದು ... ತಿಳಿದಿದೆ

ಕುಳ್ಳರು ಎತ್ತರವಾಗಿ ಬೆಳೆಯಲು ಹೊಸ ಸಾಧನ

ಕುಳ್ಳರು ಎತ್ತರವಾಗಿ ಬೆಳೆಯಲು ಅನುಕೂಲವಾಗುವಂತೆ ಜಪಾನಿನಲ್ಲಿ ಸಂಶೋಧನ ನಡೆಸಲಾಗಿದೆ. ಅಲ್ಲಿನ ಪ್ರೊ॥ ಕಾಕಾ ... ಅವರು ದಿನಗಳ ಗ್ರಂಥಿಗಳನ್ನು ಮನುಷ್ಯ ದೇಹಕ್ಕೆ ವರ್ಗಾಯಿಸುವುದರಿಂದ ಮನುಷ್ಯನು ಬೆಳೆಯಲು ಅನುಕೂಲವಾಗುವುದೆಂದು ಕಂಡುಹಿಡಿದಿದ್ದಾರೆ ಇದರಿಂದ ಮನುಷ್ಯನು ತಿಂಗಳಿಗೆ ಮುಕ್ಕಾಲು ಅಂಗುಲದಷ್ಟು ಎತ್ತರವಾಗಬಲ್ಲನೆಂದು ಹೇಳಲಾಗಿದೆ. ನಾಯಿಗಳ ಮೇಲೆ ಈ ಸಾಧನ ವಪ್ರಯೋಗವಾಗಿ ಅವುಗಳೂ ಸಹ ಎರಡರಷ್ಟು ಎತ್ತರ ಬೆಳೆದುವೆಂದು ವರದಿಯಾಗಿದೆ

ಬಾಪೂ ದರ್ಶನ

ಆಕಾಶವಾಣಿಯವರು ಕಳೆದ ತಿಂಗಳು ೩೦ನೇ ತಾರೀಖು ಗಾಂಧೀಜಿಯವರ ಸ್ಮಾರಕ ದಿನದಲ್ಲಿ, "ಬಾಪೂ ದರ್ಶನ" ಎಂಬ ಗ್ರಂಥವನ್ನು ಪ್ರಕಟಿಸಿರುವರು ಅನೇಕ ಗಣ್ಯ ಮಹನೀಯರುಗಳು ಆಕಾಶವಾಣಿಯಲ್ಲಿ ಕಳೆದ ಗಾಂಧಿ ಜಯಂತಿಯಲ್ಲಿ ಮಾಡಿದ ಭಾಷಣಗಳನ್ನು ಈ ಗ್ರಂಥದಲ್ಲಿ ಕೊಡಲಾಗಿದೆ ಅವುಗಳೆಲ್ಲವೂ ಬಾಪೂವಿನ ಜೀವನದ ಸಾರವನ್ನು ತೋರಿಸುವ ಅಂಶಗಳನ್ನೊಳಗೊಂಡಿವೆ ಶ್ರೀ ಗಳಾದ ಕೆ. ಸಿ ರೆಡ್ಡಿ, ಹೆಚ್ ಸಿ. ದಾಸಪ್ಪ, ಟಿ. ಮರಿಯಪ್ಪ, ಪರೀಕ್ಷ ಮುಂತಾದವರೇ ಅಲ್ಲದೆ ಶ್ರೀಗಳಾದ ಕೆ. ವಿ. ಪುಟ್ಟಪ್ಪ, ಸಿದ್ದವ್ವನಹಳ್ಳಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ... ಮುಂತಾದವರು ಬಾಪೂಜಿ ಜೀವನದಲ್ಲಿ ತಮಗೆ ಕಂಡುಬಂದ ಅಂಶಗಳನ್ನು ಎತ್ತಿ ತೋರಿಸಿದ್ದಾರೆ ... ಪತ್ರದಲ್ಲಿ ಶ್ರೀ ಸ್ವಾಮಿಯವರ ಕೈ ... ದ ಬಾಪೂ ಚಿತ್ರವಿದೆ ಅಲ್ಲದೆ ... ಗೂ ಇತರ ಚಿತ್ರಗಳು ಇವೆ. ಬೆಲೆ ರೂ ೧-೪-೦ ಎಲ್ಲರೂ ಓದಬೇಕಾದ ಗ್ರಂಥವಿದು.

ಉಪನ್ಯಾಸ

ಮಹಾರಾಜಾ ಕಾಲೇಜಿನ ... ಮತ್ತು ಮಿತ್ರ ಮೇಳದ ಆಶ್ರಯದಲ್ಲಿ ಈ ವರ್ಷದ ಬಿ ಎ ... ಎಸ್. ಸಿ. ಪರೀಕ್ಷೆಗಳ ಇಂಗ್ಲಿಷ್ ಮತ್ತು ಕನ್ನಡ ಪಠ್ಯ ಪುಸ್ತಕಗಳ ಮೇಲೆ ಈ ... ದಿನ ... ಗಂಟೆಗೆ ಉಪನ್ಯಾಸಗಳು ... ಮಂದಿರದಲ್ಲಿ ನಡೆಯುವುವು

ಉದಾರ ಸಹಾಯ

ರಾಜಧಾನಿಯ ಅಶೋಕಾ ರಸ್ತೆಯಲ್ಲಿ ಇರುವ ಶ್ರೀ ಚೌಡಿ ಕೃಷ್ಣಶೆಟ್ಟರ ೩೦ ನೇ ವಾರ್ಷಿಕೋತ್ಸವದ ಸಂಬಂಧವಾಗಿ ನೆನ್ನೆ ಗೀತಾ ಸದನದಲ್ಲಿ ನಡೆಸಿದ ವಿಶೇಷ ಪೂಜಾ ಸಮಾರಂಭದಲ್ಲಿ, ತಮ್ಮ ಪತ್ನಿ ಶ್ರೀಮತಿ ಚಿನ್ನಮ್ಮನವರ ಹೆಸರಿನಲ್ಲಿ ಪ್ರತಿ ವರ್ಷವೂ ಶ್ರೀ ರಾಮ ನವಮಿ ದಿವಸ ದೇವರಿಗೆ ಪೂಜೆ ನಡೆಸಲು ೩೦೧ ರೂ. ಅನ್ನು ಗೀತಾ ಸದನಕ್ಕೆ ಅವರು ಕೊಟ್ಟಿರುತ್ತಾರೆ

ತಿರುವಾಂಕೂರು ಕಾಂಗ್ರೆಸ್ ಮುಖಂಡರ ಸಭಾ ತ್ಯಾಗ

ತಿರುವಾಂಕೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆ ನಡೆಯುತ್ತಿದ್ದಾಗ ಮಾಜಿ ಮುಖ್ಯ ಮಂತ್ರಿ ಶ್ರೀ ಪಟ್ಟಂ ತಾನು ಪಿಳ್ಳೆಯವರು ೧೩ ಜನ ಇತರ ಸದಸ್ಯರೊಡನೆ ಸಭಾ ಪರಿತ್ಯಾಗ ಮಾಡಿದರು ಶ್ರೀಯುತರು ಸಭೆಯಲ್ಲಿ ನಿರ್ಣಯವೊಂದನ್ನು ಮಂಡಿಸಿ ತಿರುವಾಂಕೂರಿನ ರಾಜ್ಯಾಂಗವು ಭಾರತದಲ್ಲಿ ಸ್ಥಾಪಿತವಾಗುವ ಪ್ರಜಾ ಸತ್ತಾತ್ಮಕ ಪ್ರಜಾ ರಾಜ್ಯದೊಳಗೆ ಐಕ್ಯವಾಗುವಂತಿರಬೇಕೆಂದೂ, ತಿರುವಾಂಕೂರಿನಲ್ಲಿ ಕಾನೂನುಬದ್ಧವಾದ ರಾಜತ್ವವುಳ್ಳ ಸರಕಾರವಿರತಕ್ಕದ್ದೆಂದೂ, ರಾಜರೇ ಸಂಸ್ಥಾನದ ಅಧಿಪತಿಗಳಾಗಿದ್ದು, ರಾಜ್ಯಾಂಗವನ್ನು ಎತ್ತಿ ಹಿಡಿಯುವವರಾಗಿರತಕ್ಕದ್ದೆಂದೂ ತಿಳಿಸಿದ್ದರು. ನಿರ್ಣಯವನ್ನು ಇತರರು ವಿರೋಧಿಸಿದರು. ಬಹು ಬಿರುಸಾದ ವಾಗ್ವಾದವಾದನಂತರ ನಿರ್ಣಯವು ತಿರಸ್ಕೃತವಾಯಿತು. ಅನಂತರ ಸಭಾ ಪರಿತ್ಯಾಗವೂ ಆಯಿತು.

WANTED

A Few Engineers Lawyers Doctors, Officers and Pensioners interested in Immediate Farm Production for family Consumption. No Capital but Working Expenses Necessary. Success Assured and Guaranteed.

Please Apply to Rowjee. 84, Nazarbad, Mysore.

ಚಳಿಯಿಂದ ೯೫ ಜನರ ಮರಣ

ಲಿಬಿಯ ಮರಳು ಕಾಡಿನ ಪ್ರದೇಶದಲ್ಲಿ ಚಂಡ ಮಂಜಿನ ಮಳೆ ಬಂದು, ಚಳಿಯಿಂದ ೯೫ ಜನರು ಸತ್ತರೆಂದೂ, ... ಶಕ್ತಿ ಇಲ್ಲವೆಂದೂ ಹೇಳಲಾಗಿದೆ ... ಹಳ್ಳಿಯಲ್ಲಿ ಶಾಲೆಗೆ ಹೋಗುತ್ತಿದ್ದ ... ಶ್ಶುವೂ ಮತ್ತು ತಾಯಿಯೂ ... ಹೊಂದಿದರೆಂದು ವರದಿಯಾಗಿದೆ

ಪಂಚಾಯಿತಿ ಚುನಾವಣೆ ಜಗಳದಲ್ಲಿ ಒಬ್ಬನ ಮರಣ

ಸಂಯುಕ್ತ ಪ್ರಾಂತ್ಯದ ಸೀತಾಪುರ ಜಿಲ್ಲೆಯ ರುಪಿಪುರ್ ಹಳ್ಳಿಯ ಪಂಚಾಯತಿ ಚುನಾವಣೆಯ ಸಂಬಂಧದಲ್ಲಿ ... ಪಕ್ಷದವರಿಗೆ ಹೊಡೆದಾಟವಾಗಿ ಒಬ್ಬನು ಸತ್ತನೆಂದೂ, ಆರು ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ. ಪೋಲೀಸರು ೬ ಜನರನ್ನು ದಸ್ತಗಿರಿ ಮಾಡಿದ್ದಾರೆ.

ಲಗ್ನಕ್ಕಾಗಿ
ಹೊಸ ಜವಳಿಗಳು
ವೀರಣ್ಣ ಸಿಲ್ಕ್ ಎಂಪೋರಿಯಂ
ಇರ್ವಿನ್ ರಸ್ತೆ, ಮೈಸೂರು
—★—
ವಿಧವಿಧವಾದ
ಕಲಾಪತ್ತು ರೇಷ್ಮೆ ಮತ್ತು
ನೂಲಿನ ಸೀರೆಗಳು
ಸುಲಭ ದರದಲ್ಲಿ ದೊರೆಯುವವು
ದಯವಿಟ್ಟು ಭೇಟಿ ಕೊಡಿ
ವಿ. ರಾಮಯ್ಯ & ಬ್ರದರ್ಸ್

ಫೋರ್ಡ್ ವಿ. 8. ಸಿಡಾನ್ ಕಾರಿನ ಹರಾಜು ಮಾರಾಟ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಆಕಾಶವಾಣಿ ಪ್ರಸಾರ ಕೇಂದ್ರದ ನಿವೇಶನದಲ್ಲಿ ಕೆಳಕಂಡ ವರ್ಣನೆಯ ಫೋರ್ಡ್ ಕಾರನ್ನು ೨೪-೨-೪೯ನೇ ಗುರುವಾರ ಬೆಳಗ್ಗೆ ೮ ಘಂಟೆಯಿಂದ ೧೧ ಘಂಟೆಯ ವರೆಗೆ ಈ ಕೆಳಗೆ ಸಹಿ ಮಾಡಿರುವವರು ಅಥವಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆಂದು ಈ ಮೂಲಕ ಸಾರ್ವಜನಿಕರಿಗೆ ಪ್ರಕಟಪಡಿಸಲಾಗಿದೆ.

ಬಿಡ್‌ದಾರರು ಆಫೀಸು ವೇಳೆಯಲ್ಲಿ ಕಾರನ್ನು ೧೪-೨-೪೯ರಿಂದ ಆಫೀಸಿನ ಯಾವ ದಿನವಾದರೂ ಮಧ್ಯಾಹ್ನ ... ಘಂಟೆಯಿಂದ ೬ ಘಂಟೆವರೆಗೆ ನೋಡಬಹುದು

ಕೊನೆಯ ಬಿಡ್ಡನ್ನು ಅಂಗೀಕರಿಸುವುದು, ಬಿಡುವುದು ಆಕಾಶವಾಣಿ ಡೈರೆಕ್ಟರವರ ಇಚ್ಛೆಗೆ ಸೇರಿದ್ದು

ಕಾರಿನ ವಿವರ.— ವಿ. 8 ೧೯... ಮಾಡಲು; ಸಿಡಾನ್ ಕಾರು ೩೦ ಅಶ್ವ ... ಐದು ಜನ ಕೂಡುವಂಥದು ... ರ್ ನಂ. ಎಂ ವೈ ಜೆಡ್ ...

ಇತರ ವಿವರಗಳನ್ನು ಆಫೀಸು ವೇಳೆಯಲ್ಲಿ ಆಫೀಸಿನಿಂದ ಪಡೆಯಬಹುದು.

(ಸಹಿ) ಬಿ. ನಾರಾಯಣಸ್ವಾಮಿ
ಡೈರೆಕ್ಟರ್ ಆಕಾಶವಾಣಿ

ನಿಮ್ಮ ಮೈ ಮೊಗವು ಹಿಂದಿನಂತ ನೋಡಿಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಆರೋಗ್ಯಕ್ಕೆ ಸೌಂದರ್ಯವನ್ನು ... ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ ... ಫ್ಯಾಕ್ಟರಿ.

Apply for LODGING and BOARDING (Only for Students)
2333, New Mysore Lodge
K. G. Koppal
Near to all the Colleges

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ದಯವಿಟ್ಟು ಒಂದೇ ಭೇಟಿ ಕೊಡಿ
ಸುಪ್ರಸಿದ್ಧ ಮೈಸೂರು ಸಿಲ್ಕಿನಲ್ಲಿ ... ಸುಗ್ರಹದಿಂದ ... ಬೆಂಗಳೂರು ಧರ್ಮಾವರಂ, ... ಮತ್ತು ಕುಂಬಕೋಣಂ ಸೀರೆಗಳು, ... ದೊರೆಯುತ್ತವೆ.
ಬೆಂಗಳೂರು ಜವಳಿ ಅಂಗಡಿ
... ಮೈಸೂರು

Edited, printed and published by A.R.Nagarajan at the Sadhvi Press, D. Subbaiah Road, Mysore.

ಶ್ರೀ ಗಣೇಶ - ಚಾಮುಂಡೇಶ್ವರೀ ಟಾಕೀಸುಗಳಲ್ಲಿ
... ವರ್ಣರಂಜಿತ ದೃಶ್ಯಗಳೊಡನೆ ಕೂಡಿದ
ಕನ್ನಿಕಾ (ತಮಿಳು)
ಅಮೋಘವಾದ ೨ನೇ ವಾರ
ದಿನ್ ರಾತ್ (ಹಿಂದಿ)
21-2-49 ರಿಂದ ಪ್ರಾರಂಭ
... "ಪೂಜ್ಯ ಗಾಂಧೀಜಿ" ಚಿತ್ರ
... 14-2 ... ಒಂದು ವಾರ ಮಾತ್ರ ತೋರಿಸಲಾಗು...
... ಪ್ರಿಯವಾದ ...
... ಪ್ರದರ್ಶನ

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೫-೩-೧೯೪೯ [ಸಂಚಿಕೆ ೧೮೩

ಸಿ.ಪಿ.ಸಿ.ಯವರ ಕೊಲೆ - ಮೊಕದ್ದಮೆ ತೀರ್ಪು -

ಇಬ್ಬರಿಗೆ ಮರಣ ದಂಡನೆ, ನಾಲ್ವರಿಗೆ ಜೀವಾವಧಿ ಶಿಕ್ಷೆ, ಒಬ್ಬನ ಖುಲಾಸೆ

ಮೈಸೂರು ೧೫

ಧರ್ಮರತ್ನಾಕರ ಸಿ. ಪೆರುಮಾಳ್ ಚೆಟ್ಟರ ಕೊಲೆ ಮೊಕದ್ದಮೆಯ ತೀರ್ಪು ಇಂದು ಜಿಲ್ಲಾ ಮತ್ತು ಸೆಷನ್ ಜಡ್ಜರಾದ ಶ್ರೀ ಎಸ್ ಆರ್. ಜ ...ರಾಯರಿಂದ ಕೊಡಲ್ಪಟ್ಟಿತು ಆಪಾದಿತರಾದ ಚಿಕ್ಕಲಿಂಗ ಮತ್ತು ಬಸವ ಉರುಫ್ ಕೋಳಿ ಕು... ಇವರಿಬ್ಬರಿಗೆ ಮರಣ ದಂಡನೆ ವಿಧಿಸಲಾಯಿತು ಮರಿಲಿಂಗ ಶೆಟ್ಟಿ, ಮರಿಕ ...ಲಿಂಗ ಶೆಟ್ಟಿ. ಕರಿ ಮಾದಶೆಟ್ಟಿ ಮತ್ತು ದೊಡ್ಡ ಇವರುಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ನಿಂಗ ಎಂಬ ಆಪಾದಿತನನ್ನು ನ್ಯಾಯಾಧೀಶರು ಬಿಡುಗಡೆ ಮಾಡಿದರು. ಕಳೆದ ವರ್ಷ ಆಗಸ್ಟ್ ತಿಂಗಳು ೩ ನೇ ತಾ।। ನಲ್ಲಿ ಧರ್ಮರತ್ನಾಕರ ಸಿ. ಪೆರುಮಾಳ ಚೆಟ್ಟರು ನಂಜನಗೂಡಿಗೆ ಹೋಗಿ ಅಲ್ಲಿ ಕಪಿಲಾ ಟೆಕ್ಸ್‌ಟೈಲ್ ಗಿರಣಿಯ ಕಟ್ಟಡ ಮುಂತಾದುವನ್ನು ಪರೀಕ್ಷೆ ಮಾಡಿ ಮನೆಗೆ ... ತ್ತಿದ್ದಾಗ ಚಿಕ್ಕಲಿಂಗ ಮತ್ತು ಬಸವ ಎಂಬುವರಿಬ್ಬರೂ ಮಚ್ಚಿನಿಂದ ಶ್ರೀ ಚೆಟ್ಟರನ್ನು ಹೊಡೆದು ಕೊಲೆ ಮಾಡಿದರೆಂದು ಆಪಾದನೆ ಮಾಡಲಾಗಿತ್ತು. ಇತರ ನಾಲ್ವರು ಆಪಾದಿತರು ಈ ಕೊಲೆಗೆ ಸಹಾಯಕರಾಗಿದ್ದರೆಂದು ಅವರುಗಳ ಮೇಲೆ ಆಪಾದನೆ ಹೊರಿಸಲಾಗಿತ್ತು

ಅಂಚೆ ಲಕ್ಕೋಟೆಗಳ ಮೇಲೆ ತೆರಿಗೆ

ಅಂಚೆ ಲಕ್ಕೋಟೆ ಮತ್ತು ರಿಜಿಸ್ಟರ್ಡ್ ಲಕ್ಕೋಟೆಗಳ ತಯಾರಿಕೆಯ ಬೆಲೆಯು ವಿಶೇಷವಾಗಿರುವುದರಿಂದ, ಅವುಗಳನ್ನು ಕೊಳ್ಳುವವರ ಮೇಲೆ ತೆರಿಗೆಯನ್ನು ಹಾಕಬೇಕೆಂದು ಕೇಂದ್ರ ಸರ್ಕಾರದ ಸಂಚಾರ ಇಲಾಖೆಯ ಸಲಹಾ ಸಮಿತಿಯವರು ನಿರ್ಧರಿಸಿದ್ದಾರೆ, ರಿಜಿಸ್ಟರ್ಡ್ ಲಕ್ಕೋಟೆಗಳ ತಯಾರಿಕಾ ಬೆಲೆಯು ... ರೂ ಆದರೂ ಒಂದು ಲಕ್ಕೋಟೆಗೆ ಕೇವಲ ಆರು ಕಾಸನ್ನು ಮಾತ್ರ ತೆಗೆದು... ಲಾಗುತ್ತಿದೆಯೆಂದು, ಇದರಿಂದ ಇಲಾಖೆಗೆ ನಷ್ಟ ಉಂಟಾಗುತ್ತಿದೆ ... ಲಾಗಿದೆ ಇನ್ನುಮುಂದೆ ... ದ ಲಕ್ಕೋಟೆಗಳನ್ನು ... ತೆಗೆ ... [illegible] ಗವುದೆಂದೂ ... [illegible]

ಗಣಿ ಲಗ್ಗಾರರ ಸತ್ಯಾಗ್ರಹವೆ ?

ಸ್ವಂ. ವರದಿಗಾರ] ಬೆಂಗಳೂರು ೧೫

ಕೋಲಾರದ ಚಿನ್ನದ ಗಣಿಗಳ ಕೂಲಿಗಾರರು ಸತ್ಯಾಗ್ರಹ ಹೂಡಿರುವರಷ್ಟೆ? ಈ ಪೈಕಿ ೩೦ ಜನ ಕೂಲಿಗಾರರು ನೆನ್ನೆ ಅರಮನೆ ಕಚೇರಿಯ ಹತ್ತಿರ ಬಂದು ಪ್ರದರ್ಶನ ನಡೆಸಿದರು ಅವರ ಪೈಕಿ ಶಿವಾನಂದ ಮತ್ತು ಚೆನ್ನಯ್ಯ ಎಂಬುವರು ನ್ಯಾಯಾಂಗ ಮಂತ್ರಿಗಳನ್ನು ಕಂಡಿದ್ದರು. ಮಂತ್ರಿಗಳು ಸರಕಾರದವರ ವೇಜಸ್ ಬೋರ್ಡ್ ಅನ್ನು ನೇಮಿಸುವುದಾಗಿಯೂ, ಅದಕ್ಕೆ ಸಂಬಂಧಿಸಿದವರಾಗಿ ಮುಷ್ಕರವು ಮುಕ್ತಾಯವಾಗಬೇಕೆಂದು ಸೂಚನೆ ಇತ್ತರು.

ಪ್ರದರ್ಶನಕಾರರು ಸತ್ಯಾಗ್ರಹ ನಡೆಸುವುದಾಗಿ ಹೇಳುತ್ತಿದ್ದಾರೆ ಪರಿಸ್ಥಿತಿ ಹಾಗೆಯೇ ಇದೆ

ಆರ್. ಎಸ್. ಎಸ್. ವಿದ್ಯಾರ್ಥಿಗಳ ಪ್ರದರ್ಶನ

ನೆನ್ನೆ ಮಧ್ಯಾಹ್ನ ಆರ್ ಎಸ್ ಎಸ್ ... ಯ ೧೫೦ ಜನ ವಿದ್ಯಾರ್ಥಿಗಳು ಅರಮನೆ ಕಚೇರಿಯ ಹತ್ತಿರ ಮೆರವಣಿಗೆ ಹೊರಟು ಪ್ರದರ್ಶನ ನಡೆಸಿದರು. ಸರ್ಕಾರಿ ಮುದ್ರಣಾಲಯದ ಹತ್ತಿರ ಅವರನ್ನು ಪೋಲೀಸರು ತಡೆದರು ಆಗ್ಯೆ ತಮ್ಮ ಭವನಕ್ಕೆ ಹಿಂತಿರುಗುತ್ತಿದ್ದ ದಿವಾನರನ್ನು ಕಂಡು ವಿದ್ಯಾರ್ಥಿಗಳು ಅವರ ಕಾರನ್ನು ನಿಲ್ಲಿಸಿ ತಮ್ಮ ಕುಂದುಕೊರತೆಗಳನ್ನು ತಿಳಿಸಿದರು. ಆರ್ ಎಸ್ ಎಸ್. ಸತ್ಯಾಗ್ರಹದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆಲ್ಲಾ ದಾಖಲೆಯನ್ನು ಕೊಡಬೇಕು . ಪರೀಕ್ಷೆಗೆ ಕೂಡಲು ಕಾಲಾವಧಿ ಮೀರಿಹೋಗಿರುವುದರಿಂದ ಅವರಿಗೆ ಅವಕಾಶ ಕಲ್ಪಿಸಿಕೊಡಬೇಕು ... ಇವೇ ಮುಂತಾದ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ... ವಿದ್ಯಾರ್ಥಿಗಳು ರುಜು ಮಾಡಿ ದಿವಾನರಿಗೆ ಕೊಟ್ಟರೆಂದೂ, ವಿದ್ಯಾರ್ಥಿಗಳ ಕೋರಿಕೆಗಳನ್ನು ಸರ್ಕಾರವು ಸಹಾನುಭೂತಿಯಿಂದ ... ಲಿಸುವುದಾಗಿ ... ಉತ್ತರ ... [illegible]

[illegible]

ನೂತನ ಅಂಚೆ ಸ್ಟ್ಯಾಂಪುಗಳು

ಪುರಾತನ ಭಾರತದ ಕಲೆ ಮತ್ತು ಸಂಸ್ಕೃತಿಯ ಚಿತ್ರಗಳನ್ನೊಳಗೊಂಡ ನೂತನ ಸ್ಟ್ಯಾಂಪುಗಳನ್ನು ಮುಂದಿನ ಏಪ್ರಿಲ್ ೧ ನೇ ತಾ।। ನಿಂದ ಮಾರಾಟ ಮಾಡಲು ಅಂಚೆ ಇಲಾಖೆಯವರು ವ್ಯವಸ್ಥೆ ಮಾಡುತ್ತಾರೆ. ಕಡಿಮೆ ಬೆಲೆಯ ಸ್ಟ್ಯಾಂಪುಗಳ ಮೇಲೆ ಮೊಹೆಂಜೊ ದಾರೊ, ಅಜಂತ, ಸಾಂಚಿ ಸ್ತೂಪ, ಭುವನೇಶ್ವರ ಇತ್ಯಾದಿ ಪುರಾತನ ಕಲಾ ವಸ್ತುಗಳ ಚಿತ್ರಗಳನ್ನೂ ಹೆಚ್ಚಿನ ಬೆಲೆಯ ಸ್ಟ್ಯಾಂಪುಗಳ ಮೇಲೆ ಬಿಜಾಪುರದ ಗುಂಬಜ್, ಚಿತ್ತೂರು ಕೋಟೆಯ ವಿಜಯ ಮಂಟಪ, ಅಮೃತ ಸರದ ಚಿನ್ನದ ದೇವಸ್ಥಾನ, ಕೆಂಪು ಕೋಟೆ ಮತ್ತು ಟಾಜ್ ಮಹಲುಗಳನ್ನು ಚಿತ್ರಿಸಲಾಗಿದೆ ೧೦ ರೂ. ಸ್ಟ್ಯಾಂಪಿನಲ್ಲಿ ಕುತುಬ್ ಮಿನಾರನ್ನು ಮುದ್ರಿಸಲಾಗಿದೆ.

ಅಮೆರಿಕದಿಂದ ಮೈಸೂರಿಗೆ ೨೦ ಲಕ್ಷ ಡಾಲರು ಸಹಾಯವೇ ?

ಬೆಂಗಳೂರು ೧೫

ಅಮೆರಿಕದಿಂದ ಸಂಸ್ಥಾನಕ್ಕೆ ೨೦ ಲಕ್ಷ ಡಾಲರುಗಳ ಸಹಾಯವನ್ನು ಒದಗಿಸಿಕೊಳ್ಳಲು ಸರ್ಕಾರದವರು ಪ್ರಯತ್ನಿಸುತ್ತಿರುವರೆಂದು ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ. ದಾಸಪ್ಪನವರು ಮೈಸೂರು ವಾಣಿಜ್ಯ ಸಂಘದ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿರುತ್ತಾರೆ. ಸರ್ಕಾರಿ ಕೈಗಾರಿಕೆಗಳ ನೀತಿ ಮತ್ತು ಅಭಿವೃದ್ಧಿ ಸಂಬಂಧವಾಗಿ ಸಲಹೆ ನೀಡಲು ಪ್ರವೀಣರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗುವುದೆಂದೂ ಅವರು ಹೇಳಿರುತ್ತಾರೆ

ಆಹಾರ ಪರಿಶೀಲನೆ ಬಗ್ಗೆ ಕಾಂಗ್ರೆಸ್ ಸಲಹಾ ಸಮಿತಿ

ಮೈಸೂರು ಕಾಂ।। ಕಾರ್ಯಕಾರಿ ಮಂಡಲಿ ಸಭೆಯು ಮೊನ್ನೆಯ ದಿನ ಸೇರಿ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿತು ಸರ್ಕಾರದ ಆಹಾರ ಹಂಚಿಕೆ, ಕ್ರಮ ಮತ್ತು ಯೋಜನೆಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ದೋಷದೋಷಗಳ ನಿವಾರಣೆ ಬಗ್ಗೆ ಸಲಹೆ ಮಾಡಲು ಶ್ರೀಗಳಾದ ಟಿ ಸುಬ್ರಹ್ಮಣ್ಯಂ. ಕೆ. ಎಂ ಹುಸೇನ್, ಕೆ. ಜಿ ಒಡೆಯರ್, ಎಸ್. ರಂಗರಾಮಯ್ಯ, ಎಂ. ಎಲ್. ನಂಜರಾಜೇ ಅರಸ್, ಮತ್ತು ಹೆಚ್. ಕೆ. ವೀರಣ್ಣ ಗೌಡರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಲಾಯಿತೆಂದು ತಿಳಿದುಬಂದಿದೆ.

ಸಾವರ್ಕರರು ರಾಜಕೀಯ ಬಿಡುವರೇ ?

ಹಿಂದೂ ಮಹಾ ಸಭಾ ನಾಯಕರಾದ ಶ್ರೀ ವಿ ಡಿ. ಸಾವರ್ಕರರು ಇನ್ನು ಮುಂದೆ ರಾಜಕೀಯದಿಂದ ನಿವೃತ್ತರಾಗಿ, ಬೊಂಬಾಯಿ ಅಥವಾ ಪೂನಾದಲ್ಲಿ ಖಾಯಂ ಆಗಿ ನೆಲಸುವರೆಂದು ತಿಳಿದುಬರುತ್ತದೆ ಗಾಂಧಿ ಕೊಲೆ ಮೊಕದ್ದಮೆಯು ಮುಗಿದು ಅವರು ಖುಲಾಸೆಯಾದಾಗಿನಿಂದ ಅವರ ಮನೋಸ್ಥಿತಿ ಬದಲಾವಣೆ ಹೊಂದಿದೆ.

ದೇಶದಲ್ಲಿನ ಟೆಲಿಫೋನ್ ಅಂಚೆ ಮತ್ತು ಇತರ ... ಸಂಸ್ಥೆಗಳಲ್ಲಿ ಮುಷ್ಕರ ಆಗುವುದನ್ನು ತಡೆಗಟ್ಟಲು ಒಂದು ಅವಸರದ ... ವನ್ನು ಭಾರತ ಸರ್ಕಾರದವರು ಸಿದ್ಧಪಡಿಸಿ ... ತರಲಿರುವರೆಂದು ಹೇಳಲಾಗಿದೆ

ವನಗಳ ಖಾಯಿಲೆ ತನಿಖೆ ಅಧಿಕಾರಿಗಳ ಸಮ್ಮೇಳನ

ಮೈಸೂರು. ೧೫.

ಅಖಿಲ ಭಾರತ ವನಗಳ ಖಾಯಿಲೆ ತನಿಖೆ ಅಧಿಕಾರಿಗಳ ಸಮ್ಮೇಳನದ ದ್ವಿತೀಯ ಅಧಿವೇಶನವು ನಿನ್ನೆ ವಸ್ತು ಪ್ರದರ್ಶನದ ಭವನದಲ್ಲಿ ಅಸ್ಸಾಮಿನ ಡಾ।। ಪಿ ಆರ್. ಗೋಪಾಲಕೃಷ್ಣ ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಸುಮಾರು ೫೦ ಜನ ಪ್ರತಿನಿಧಿಗಳು ಪ್ರಾಂತ್ಯ ಮತ್ತು ಸಂಸ್ಥಾನಗಳಿಂದ ಬಂದಿದ್ದಾರೆ

ಭಾರತ ಸರ್ಕಾರದ ವ್ಯವಸಾಯ ಮತ್ತು ಜಾನುವಾರು ರಕ್ಷಣಾ ಸಮಿತಿಯ ಆಶ್ರಯದಲ್ಲಿ ಜಾನುವಾರು ರಕ್ಷಣಾ ಸಮ್ಮೇಳನದ ೧೬ ನೇ ಅಧಿವೇಶನವು ಇದೇ ೧೮ ನೇ ತಾ ಸರ್ ದಾತರ್ ಸಿಂಗರ ಅಧ್ಯಕ್ಷತೆಯಲ್ಲಿ ವಸ್ತುಪ್ರದರ್ಶನದ ಭವನದಲ್ಲಿ ನಡೆಯುವುದು

ವಿವಾಹ ಮಹೋತ್ಸವ

ಶ್ರೀ ಜಾನಗಲ್ ಯಜ್ಞೇಶ್ವರ ಶಾಸ್ತ್ರಿಗಳು ತಮ್ಮ ಕುಮಾರಿ ಚಿ।। ಸೌ।। ರೇಣುಕಾಂಬಾಳನ್ನು ಸೊರಬದ ಶ್ರೀ ಹೆಡಿಯಾಲ್ ಶೇಷಗಿರಿರಾಯರ ಕುಮಾರ ಚಿ।। ರಾಮಚಂದ್ರ ಕುಲಕರ್ಣಿಯವರಿಗೆ ಕೊಟ್ಟು ನಿನ್ನೆ ದಿನ ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ತಮ್ಮ ಮನೆಯಲ್ಲಿ ವಿವಾಹವನ್ನು ನೆರವೇರಿಸಿದರು.

● ಸರ್ಕಾರದವರು ಈಗಿರುವ ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳನ್ನು ಪುನರ್ರಚಿಸಿ ೩ ವರ್ಷ ಕಾಲ ನೇಮಿಸಿದ್ದಾರೆ

ಹೈಸ್ಕೂಲು ವಾರ್ಷಿಕೋತ್ಸವ

ಸಾಲಿಗ್ರಾಮ ೧೪

ನೆನ್ನೆ ದಿನ ಇಲ್ಲಿಯ ಮುನ್ಸಿಪಲ್ ಹೈಸ್ಕೂಲಿನ ವಾರ್ಷಿಕೋತ್ಸವವು ಮೈಸೂರಿನ ಅಡ್ವೋಕೇಟರಾದ ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು ಸ್ವಾಗತ ಭಾಷಣ, ವಿವಿಧ ವೇಷ ಪ್ರದರ್ಶನ ಹೆಚ್ಚಾಗಿರುವ ನಾಟಕ ಮತ್ತು ಬಹುಮಾನ ವಿನಿಯೋಗಗಳು ನಡೆದವು ನಂತರ ಅಧ್ಯಕ್ಷರು ಭಾಷಣ ಮಾಡಿದರು. ಜನರಲ್ಲಿ ವಿದ್ಯಾ ಪ್ರಸಾರವು ಹೆಚ್ಚಾಗಿ ನಡೆಯಬೇಕು. ವಿದ್ಯಾಭ್ಯಾಸದ ಗುರಿ ಮನುಷ್ಯನನ್ನು ದೃಢಕಾಯನನ್ನಾಗಿ ಮಾಡುವುದೇ ಅಲ್ಲದೆ ಜ್ಞಾನವಂತನನ್ನಾಗಿ ಮಾಡುವುದೂ, ಆಗಿದೆ. ಇದರಿಂದ ಜನರು ನೀತಿಯುತರಾಗುವರು ಸ್ವತಂತ್ರ ಭಾರತದಲ್ಲಿ ಈಗ ಕೈಗಾರಿಕೆ, ವ್ಯವಸಾಯ, ಸೈನ್ಯ ನಿರ್ಮಾಣ ಮುಂತಾದ ಅನೇಕ ರಾಷ್ಟ್ರ ನಿರ್ಮಾಣ ಕಾರ್ಯಗಳಾಗಬೇಕಾಗಿರುವುದರಿಂದ ಎಲ್ಲಕ್ಕಿಂತಲೂ ವಿದ್ಯೆಯೇ ಸಿದ್ಧಿಪಡೆ -- ಎಂದು ಅವರು ಹೇಳಿದರು. ಜನರನ್ನು ಸುಧಾರಿಸುವ ಕೋಮು ವಾರು ಭಾವನೆ ತೊಡೆಯಬೇಕೆಂದೂ ಅವರು ತಿಳಿಸಿದರು,

ಐರ್ಲೆಂಡಿನ ಐಕ್ಯಕ್ಕೆ ಅಮೆರಿಕದ ಸಹಾಯವೇ ?

ಯೂರೋಪಿನ ರಕ್ಷಣಾ ವ್ಯವಸ್ಥೆಯಲ್ಲಿ ... ಸೇರಬೇಕಾದರೆ ಉತ್ತರ ಮತ್ತು ದಕ್ಷಿಣ ಐರ್ಲೆಂಡುಗಳ ಪ್ರತ್ಯೇಕ ... ಮೊದಲು ಹೋಗಬೇಕು ... ತಿಳಿಸಿ, ... ಅಮೆರಿಕ ... ಸಹಾಯ ... ದೊರೆಯುವುದೆಂದು.

ಈಜಿಪ್ಟಿನ ಮುಸ್ಲಿಂ ನಾಯಕರ ಕೊಲೆ

ಈಜಿಪ್ಟಿನ ಮುಸ್ಲಿಂ ಸಹೋದರ ಎಂಬ ಸಂಸ್ಥೆಯ ನಾಯಕರಾದ ಶೇಕ್ ಹಸನ್ ಎಲ್ ಬಾನಾರವರನ್ನು ಕೈರೋವಿನಲ್ಲಿ ಮೊನ್ನೆ ಯಾರೋ ಗುಂಡುಹಾರಿಸಿ ಹೊಡೆದು ಕೊಲೆ ಮಾಡಿದರೆಂದು ವರದಿಯಾಗಿದೆ. ಇದರ ಗುಂಪಿಗೆ ಸೇರಿದವರೊಬ್ಬರು ಈಜಿಪ್ಟಿನ ಪ್ರಧಾನಿಗಳಾದ ನಕ್ರಾಷಿ ಪಾಷರವರನ್ನು ಕೊಲೆ ಮಾಡಿದ್ದರು.

ಭೂಪಾಲ್ ನವಾಬರ ವಿಮಾನಗಳ ಮಾರಾಟ

ಭೂಪಾಲ್ ಸಂಸ್ಥಾನವು ಇಷ್ಟರಲ್ಲಿಯೇ ಬೇರೆ ಪ್ರಾಂತ್ಯದೊಡನೆ ಐಕ್ಯವಾಗುವುದರಿಂದ ಅದರ ನವಾಬರು ತಮ್ಮ ಸ್ವಂತ ವಿಮಾನಗಳನ್ನು ಮಾರಲು ನಿರ್ಧರಿಸಿರುವರೆಂದು ವರದಿಯಾಗಿದೆ.

ಇಂಗ್ಲೆಂಡಿಗೆ ಪಂಡಿತ ಕಾಕ್ ರವರ ಪ್ರಯಾಣ

ಕಾಶ್ಮೀರದ ಮಾಜಿ ಪ್ರಧಾನಿ ಪಂಡಿತ ರಾಮಚಂದ್ರಕಾಕ್‌ರವರು ಮೊನ್ನೆ ಇಂಗ್ಲೆಂಡಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು.

ಫೆಡರಲ್ ಕೋರ್ಟಿನಲ್ಲಿ ವಾದಿಸಲು ಬಂದ ಬ್ಯಾರಿಸ್ಟರ ಮರಣ

[illegible] ರವರು ಫೆಡರಲ್ ಕೋರ್ಟಿನಲ್ಲಿ ವಾದಿಸಲು ವಿಮಾನದಲ್ಲಿ ಡಿಲ್ಲಿಗೆ ಹೋದರು. ವಿಮಾನದ ಸಿಲಮುಟ್ಟುತ್ತಲೇ ಅವರು ತಲೆ ತಿರುಗುವುದಾಗಿ ಹೇಳುತ್ತಿದ್ದರು. ನಂತರ ಕೋರ್ಟಿನಲ್ಲಿ ಹೋಗುವಾಗ ಕಾರಿನಲ್ಲಿಯೇ ಹೃದಯ ಸ್ತಂಭನವಾಗಿ ಅವರು ನಿಧನರಾದರು.

ಜೇಬು ಕತ್ತರ ಶಾಲೆ

ಜರ್ಮನಿಯ ವಾರ್ಸಾ ನಗರದಲ್ಲಿ ಜೇಬು ಕಳುವಿನ ಶಿಕ್ಷಣ ಶಾಲೆಯೊಂದನ್ನು ಪೋಲೀಸರು ಪತ್ತೆ ಮಾಡಿದ್ದಾರೆ. ಅಲ್ಲಿ ಯುವಕರಿಗೆ ಕೃತಕ ಗೊಂಬೆಗಳ ಸಹಾಯದಿಂದ ಕಳುವು ಮಾಡುವುದನ್ನು ಹೇಳಿ ಕೊಡಲಾಗುತ್ತಿದೆ.

ಹಲ್ಲುಗಳಿಂದ ಸೀಸದ ಕಡ್ಡಿ ಕಚ್ಚಿ ಬರವಣಿಗೆ

ದರ್ಬಾನಿನ ಚಕ್ರವರ್ತಿ ವಾಲರ್ ಎಂಬ ದಾದಿಯು ಸರ್ಪ್ಪ ವಾಯುವಿನಿಂದ ಮಲಗಿದ್ದರೂ ತನ್ನ ಹಲ್ಲುಗಳ ಮಧ್ಯೆ ಸೀಸದ ಕಡ್ಡಿಯನ್ನು ಕಚ್ಚಿಕೊಂಡು ಮೂರು ಕಥೆಗಳನ್ನೊಳಗೊಂಡ ಒಂದು ಪುಸ್ತಕವನ್ನು ಬರೆದು ಮುಗಿಸಿದ್ದಾಳೆ ಎಂದು ವರದಿಯಾಗಿದೆ.

ಅಗ್ಗದ ಜವಳಿಗಾಗಿ
ಗುಂಡು ದೇವರಾಜು [illegible]

[illegible]

ಬೆಂಗಳೂರು [illegible]

Editor [illegible] the Sadhvi [illegible] aiah Road, Mysore

ಗೋಡ್ಸೆ ಅಪೀಲು ಮಾಡುವುದಿಲ್ಲ

ಮಹಾತ್ಮರ ಕೊಲೆ ಮೊಕದ್ದಮೆಯಲ್ಲಿ ಮರಣದಂಡನೆಗೆ ಗುರಿಯಾಗಿರುವ ನಾಥೂರಾಂ ವಿನಾಯಕ ಗೋಡ್ಸೆಯು ತನ್ನ ಶಿಕ್ಷೆಯ ಬಗ್ಗೆ ಅಪೀಲು ಮಾಡುವುದಿಲ್ಲ.

ನಾರಾಯಣ ಆಪ್ಟೆ, ವಿಷ್ಣು ಕರಕರೆ, ಮದನಲಾಲ್, ಗೋಪಾಲ ಗೋಡ್ಸೆ ಮತ್ತು ಪರಚುರೆ ಇವರುಗಳು ಇದೇ ೧೪ ನೇ ತಾ॥ ಈಸ್ಟ್ ಪಂಜಾಬ್ ಹೈಕೋರ್ಟಿನಲ್ಲಿ ಅಪೀಲು ಹೂಡುವವರು.

ಗಂಟೆಗೆ ೭೧೦ ಮೈಲಿ ವೇಗದ ವಿಮಾನ

ಅಮೇರಿಕದ ಎಕ್ಸ್‌—೪೭ ಎಂಬ ಜೆಟ್ ವಿಮಾನವು ಗಂಟೆಗೆ ೭೧೦ ಮೈಲಿ ವೇಗವಾಗಿ ಸಂಚರಿಸುವುದೆಂದು ಹೇಳಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಭುಗಳ ಪ್ರವಾಸ

ಶ್ರೀಮನ್ಮಹಾರಾಜರವರು ಬರುವ [illegible] ತಿಂಗಳಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರು. ಈ ಪ್ರವಾಸದ ಕಾಲದಲ್ಲಿ ಚಿಕ್ಕಮಗಳೂರಿನಲ್ಲಿ ನಡೆಯುವ [illegible] ಸಂಗೀತ ಸಮ್ಮೇಳನದ [illegible] ಮಹೋತ್ಸವವನ್ನು [illegible] ನೆರವೇರಿಸುವರು.

ಶ್ರೀರಾಮ ಸಪ್ತಾಹ

ರಾಜಧಾನಿಯ ಶ್ರೀ [illegible] ಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮ ಸಪ್ತಾಹ ಮಹೋತ್ಸವದ ಸಂಬಂಧವಾಗಿ ಪ್ರತಿ ದಿನ ಸಂಜೆ ೬ ಗಂಟೆಗೆ ಶ್ರೀ [illegible] ರವರಿಂದ ಹರಿಕಥೆ ನಡೆಯುವುದು. ೨೦ ನೇ ತಾ॥ ಶ್ರೀರಾಮ ಪಟ್ಟಾಭಿಷೇಕ ಉತ್ಸವ ಮತ್ತು ಮಧ್ಯಾಹ್ನ ೧೨ ಗಂಟೆಗೆ ಸಂತರ್ಪಣೆಯೂ ಜರುಗುವುದು.

ಮೈಸೂರು ಕಾಂಗ್ರೆಸ್ ನಿಯೋಗ

ಸ್ವಂತ ವರದಿಗಾರರಿಂದ] ಬೆಂಗಳೂರು ೧೪

ನಿನ್ನೆ ಇಲ್ಲಿ ಸಮಾವೇಶಗೊಂಡಿದ್ದ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಮೈಸೂರು ಕಾಂಗ್ರೆಸ್ಸು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನಲ್ಲಿ ಐಕ್ಯವಾಗಬೇಕೇ ಅಥವ ಪ್ರತ್ಯೇಕ ಸಮಿತಿಯಾಗಿರಬೇಕೇ ಎಂಬ ವಿಷಯವಾಗಿ ದೀರ್ಘ ಚರ್ಚೆ ನಡೆದು, ಈ ಬಗ್ಗೆ ಮೂರು ಸದಸ್ಯರನ್ನೊಳಗೊಂಡ ಒಂದು ನಿಯೋಗವು ಗುಂತಕಲ್ಲಿನಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯವರಲ್ಲಿ ಹೋಗಬೇಕೆಂದು ನಿರ್ಧರಿಸಲಾಯಿತೆಂದು ತಿಳಿದು ಬಂದಿದೆ

11-2-49 ರಿಂದ ಆರಂಭ

ರಾಜಕಮಲ್,

ಮೈ ಸೂ ರು.

ದಿನವಹಿ ೩ ಆಟಗಳು

ಮ್ಯಾಟನಿ ೩-೩೦. ಸಂಜೆ ೬-೧೫ ಮತ್ತು ರಾತ್ರಿ ೯-೪೫ ಗಂಟೆಗೆ

ಆದಿತ್ಯನ ಕನಸು

(ತಮಿಳು)

ಪಾತ್ರ:—ಟಿ. ಆರ್. ಮಹಾಲಿಂಗಂ ಅಂಜಲಿದೇವಿ, ಕಾಳಿ ಎನ್. ರತ್ನಂ, ತಾರಾ ಚೌಧುರಿ, ಲಲಿತಾ ಪದ್ಮಿನಿ.

ಆರ್. ಎಸ್. ಎಸ್. ನವರ ಪಿತೂರಿ

ಅಂತರ ಪ್ರಾಂತೀಯ ರಹಸ್ಯ [illegible] ಯೊಂದನ್ನು ಬೊಂಬಾಯಿ ಪೋಲೀಸರು ಪತ್ತೆ ಮಾಡಿ, ಈ ಸಂಬಂಧದಲ್ಲಿ ಬೊಂಬಾಯಿ ಪ್ರಾಂತೀಯ ಹಿಂದೂ ಮಹಾಸಭೆಯ ಪ್ರಮುಖರನ್ನೂ ಮತ್ತು [illegible] ಆರ್. ಎಸ್. ಎಸ್. ನವರನ್ನೂ ದಸ್ತಗಿರಿ ಮಾಡಿರುತ್ತಾರೆ. ಪಿಸ್ತೂಲು ಮತ್ತು ಇನ್ನು [illegible] ಆಕ್ಷೇಪಕರ ಕಾಗದ ಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮದರಾಸಿಗೆ ಸ॥ ಪಟೇಲರ ಭೇಟಿ

ಇದೇ ೨೨ ನೇ ತಾ॥ ಭಾರತದ [illegible] ಪ್ರಧಾನಿ ಸರ್ದಾರ್ ಪಟೇಲರು ಮದರಾಸಿಗೆ ಆಗಮಿಸುವರು. ಅದೇ ದಿನ ಮಧ್ಯಾಹ್ನ ಅವರು ಶಾಸನ ಸಭೆಯಲ್ಲಿ ಭಾಷಣ ಮಾಡುವರು. ಮಾರನೇದಿನ ಸಂಜೆ ಬಹಿರಂಗ ಸಭೆಯಲ್ಲಿ ಭಾಗ ವಹಿಸುವರು. ೨೪ ನೇ ತಾ॥ ಹೈದರಾಬಾದಿಗೆ ಪ್ರಯಾಣ ಬೆಳೆಸುವರು.

ಬೇಕಾಗಿದೆ.

ಸರ್ಕಾರಿ ಕೆಲಸದಿಂದ ನಿವೃತ್ತಿಯಾಗಿರುವ ಅಥವಾ ಬೇರೆಯವರು ಇಂಗ್ಲೀಷ್ ಕನ್ನಡ, ಕರೆಸ್ಪಾಂಡೆಂಟ್ ಮತ್ತು ಅಸಿಸ್ಟೆಂಟ್ ಸೀನಿಯರ್ ಹೆಡ್‌ಕ್ಲಾರ್ಕ್ ಕೆಲಸಕ್ಕೆ ಬೇಕಾಗಿದ್ದಾರೆ. ಬಾಕಿ ವಿಚಾರ ಮೊಖತಃ ಅಥವಾ ಟಪಾಲು ಮುಖಾಂತರ.

ರಿಕಬ್ ಚಂದ್ ಮಿಠ್ಠಾಲಾಲ್
ಬಟ್ಟೆ ಅಂಗಡಿ, ಅಶೋಕಾ ರೋಡ್, ಮೈಸೂರು

ಭೇಟಿಯ ಕಾಲ
ಮಧ್ಯಾಹ್ನ ೩ ರಿಂದ ೬

* 15-2-49 *

ಮೊದಲನೆಯ ವಾರ್ಷಿಕೋತ್ಸವ

ನಮ್ಮ ಚಿತ್ರಮಂದಿರದ ಏಳಿಗೆಗೆ ನೆರವು ನೀಡಿದ ಪ್ರೇಕ್ಷಕ ವರ್ಗಕ್ಕೂ, ಬಂಧು ಮಿತ್ರರಿಗೂ, ಹಿತೈಷಿಗಳಿಗೂ ಮತ್ತು ಅಧಿಕಾರಿ ವರ್ಗಕ್ಕೂ ಈ ದಿನ ನಮ್ಮ ಅಭಿನಂದನೆಗಳನ್ನು ಸಲ್ಲಿಸುವುದಲ್ಲದೆ, ಇನ್ನು ಮುಂದೆಯೂ, ಇದೇ ರೀತಿ ಪ್ರೋತ್ಸಾಹಿಸ ಬೇಕಾಗಿ ಕೋರುತ್ತೇವೆ.

ಪ್ರಭಾ ಪಿಕ್ಚರ್ ಹೌಸ್, ಮೈಸೂರು

ಎಸ್. ಎಗ. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ ೦—೧೪—

ಮಹಾ ಸುಗಂಧರಾಜ ತೈಲ:—)
,, ಚಂದನಾದಿ ತೈಲ:—)
,, ಭೃಂಗಾಮಲಕ ತೈಲ:—)

—ಬೇಸಿಗೆ ಅತ್ಯುತ್ತಮ ಅಭ್ಯಂಗ ತೈಲಗಳು

ಮಹಾಕೇತಕೀ ತೈಲ— ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ ಮಸಾಲೆ

ಫ್ರೇ ಟಾನಿಕ್ .ಸೀಸೆ ೩-೦-

ಪಂಚಾಮೃತ— ಮಲೇರಿಯಾ ಗೆಡ್ಡೆಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಅಗ್ಗ ಕಡ್ಡಿಗೆ [illegible]
ಖಾದಿ ಬಟ್ಟೆಗಳು

ನವನವವಾದ ಕಲಾಪೂರ್ಣ ರೇಷ್ಮೆ ಮತ್ತು ನೂಲಿನ [illegible] ಸುಲಭ ದರದಲ್ಲಿ ಬಂದಿವೆ.
ದಯವಿಟ್ಟು ಭೇಟಿ ಕೊಡಿ

ಶೀರಣ್ಣ [illegible] ಎಂಪೋರಿಯಂ, ಇರ್ವಿನ್ ರಸ್ತೆ, ಮೈಸೂರು.

ಸಿ. ರಾಮಯ್ಯ ಅಂಡ್ ಬ್ರದರ್

ಫೋ|| ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೧೬—೨—೧೯೪೯ [ಸಂಚಿಕೆ ೧೮೪

೨೪ನೇ ತಾ|| ಮೈಸೂರಿಗೆ ಸ|| ಪಟೇಲರ ಆಗಮನ

ಗೋಡ್ಸೆಯೂ ಅಪೀಲ್ ಮಾಡಿದ್ದಾನೆ

ಗಾಂಧಿ ಕೊಲೆ ಮೊಕದ್ದಮೆಯಲ್ಲಿ ಶಂಕರ ಕಿಷ್ಟಯ್ಯನು ಉಳಿದುಮಿಕ್ಕೆಲ್ಲ ಶಿಕ್ಷಿತರೂ ಅಪೀಲು ಮಾಡಿದ್ದಾರೆ. ನಾಥೂ ರಾಂ ಗೋಡ್ಸೆಯು ಪಿತೂರಿಯ ಸಂಬಂಧವಾದ ಶಿಕ್ಷೆಯ ಮೇಲೆ ಮಾತ್ರ ಅಪೀಲು ಮಾಡಿದ್ದಾನೆ.

ನೆಹರೂರವರಿಗೆ ಟ್ರೂಮನ್ನರ ಆಹ್ವಾನವೇ ?

ಭಾರತದ ರಕ್ಷಣೆ ಮತ್ತು ಕಮ್ಯೂನಿಸ್ಟರ ಪ್ರಭಾವ ಇವುಗಳನ್ನು ಕುರಿತು ಚರ್ಚಿಸಲು ಅಮೆರಿಕದ ಅಧ್ಯಕ್ಷರಾದ ಟ್ರೂಮನ್ನರವರು ಭಾರತದ ಮಹಾ ಪ್ರಧಾನಿ ಪಂಡಿತ ನೆಹರೂರವರನ್ನು ಆಹ್ವಾನಿಸಿರುವರೆಂದು ಪತ್ರಿಕೆಯೊಂದು ವರದಿ ಮಾಡಿದೆ.

ಉಚಿತ ಪಡಿತರ ಪಡೆಯಲು ಉಪವಾಸ ಮುಷ್ಕರ

ಅಹಮದಾಬಾದಿನ ಹತ್ತಿರವಿರುವ ಉಪ ನಗರದ ೨ ಸಾವಿರ ಮಂದಿ ಹರಿಜನ ನಿರಾಶ್ರಿತರು ತಮಗೆ ಉಚಿತ ಪಡಿತರ ಕೊಡಬೇಕೆಂದು ಕಳೆದ ೪ ದಿನಗಳಿಂದ ಉಪವಾಸ ಮುಷ್ಕರವನ್ನು ಹೂಡಿರುತ್ತಾರೆ. ತಮ್ಮ ರೇಷನ್ ಕಾರ್ಡುಗಳನ್ನೆಲ್ಲಾ ಗಂಟು ಕಟ್ಟಿ ಅದನ್ನು ಒಂದು ಕೋಲಿಗೆ ನೇತು ಹಾಕಿ, ಅದರ ಸುತ್ತಲೂ ಕುಳಿತು ಭಜನೆ ಮಾಡುತ್ತಿದ್ದಾರೆ. ತಮಗೆ ನಿಯಮಿತ ಕೆಲಸವಿಲ್ಲವೆಂದೂ, ಜೀವನಕ್ಕೆ ಯಾವ ವ್ಯವಸ್ಥೆಯೂ ಇಲ್ಲವೆಂದೂ ಅವರು ತಿಳಿಸಿರುತ್ತಾರೆ.

ಯುದ್ಧವಾದರೆ ರಷ್ಯದ ಮೊದಲನೆ ಏಟು ಎಲ್ಲಿ?

ಯುದ್ಧವೇನಾದರೂ ಆದಲ್ಲಿ, ರಷ್ಯವು ಉತ್ತರ ಕೆನಡಾ ಮೇಲೆ ಮೊದಲು ಪ್ರಹಾರ ಮಾಡುವುದೆಂದು ಕೆನಡಾದ ಮಿಲಿಟರಿ ತಜ್ಞರು ಭಾವಿಸಿದ್ದಾರೆ. ಅದನ್ನು ತಪ್ಪಿಸಲು ಈಗ ಉತ್ತರ ಕೆನಡಾದಲ್ಲೆಲ್ಲಾ ವಿದ್ಯುತ್ಶಕ್ತಿಯ "ರಾಡಾರ್" ಎಂಬ ಸಾಧನವನ್ನು ನಿರ್ಮಿಸುವರು. ಇದು ಅಂತರಿಕ್ಷದಲ್ಲಿ ಹಾರಾಡುವ ವಿಮಾನಗಳನ್ನು ತಕ್ಷಣವೇ ಕಂಡುಹಿಡಿಯಬಲ್ಲದು.

ರೈಲ್ವೆ ವರಮಾನದಲ್ಲಿ ಆದಾಯ

ಭಾರತದ ರೈಲ್ವೆ ಶಾಖೆಯ ವರಮಾನದಲ್ಲಿ ಈ ವರ್ಷ ೧೪.೫ ಕೋಟಿ ರೂ. ಹೆಚ್ಚು ಆದಾಯ ಬಂದಿದೆಯೆಂದೂ, ೧೯೪೯ರನೇ ಸಾಲಿನಲ್ಲಿ ಇನ್ನೂ ೫.೫ ಕೋಟಿ ರೂ ಆದಾಯ ಬರುವ ನಿರೀಕ್ಷೆ ಯಿದೆಯೆಂದೂ, ಕೇಂದ್ರ ಶಾಸನ ಸಭೆಯಲ್ಲಿ ರೈಲ್ವೆ ಬಜೆಟ್ಟನ್ನು ಮಂಡಿಸುತ್ತಾ ರೈಲ್ವೆ ಸಚಿವರು ತಿಳಿಸಿರುತ್ತಾರೆ. ರೈಲ್ವೆ ಶಾಖೆಯ ನೌಕರರ ಸಂಬಳ ಸಾರಿಗೆಗಳು ಹೆಚ್ಚಿರುವುದರಿಂದ ಉಳಿತಾಯವು ಕಡಿಮೆಯಾಗುವುದೆಂದು ಅವರು ಹೇಳಿರುತ್ತಾರೆ.

ಹಿಂದುಸ್ಥಾನದಲ್ಲಿ ಒಂದು ಎಂಜಿನ್ ತಯಾರಿಕಾ ಕಾರ್ಖಾನೆ ಮತ್ತು ಹಗುರವಾದ ಉಕ್ಕಿನ ರೈಲ್ವೆ ಗಾಡಿಗಳನ್ನು ತಯಾರಿಸಲು ಒಂದು ವರ್ಕ್ ಷಾಪನ್ನು ಸ್ಥಾಪಿಸಲು ಆಲೋಚಿಸಲಾಗುತ್ತಿದೆಯೆಂದೂ, ಪ್ರಯಾಣಿಕರ ಸೌಕರ್ಯದ ನಿಧಿಗೆ ೪೪ ಕೋಟಿ ರೂ. ಮೀಸಲಾಗಿಡಲಾಗಿದೆಯೆಂದೂ ತಿಳಿಸಲಾಯಿತು.

ಮುಷ್ಕರ ಹೂಡುವುದು ಸಮಾಜ ದ್ರೋಹ

ಪತ್ರಿಕಾ ಸಮ್ಮೇಳನದಲ್ಲಿ ಕಾರ್ಮಿಕ ಸಚಿವರ ಹೇಳಿಕೆ

ಸ್ವಂ. ಸು. ಫೋ||] ಬೆಂಗಳೂರು ೧೬

ಕಾರ್ಮಿಕ ಸಚಿವರಾದ ಶ್ರೀ ಕೆ.ಟಿ. ಭಾಷ್ಯಂರವರು ಈ ದಿನ ಬೆಳಿಗ್ಗೆ ಪತ್ರಿಕಾ ಸಮ್ಮೇಳನವನ್ನು ನಡೆಸಿ, ಸಂಸ್ಥಾನದ ಕಾರ್ಮಿಕರ ಸ್ಥಿತಿಗತಿಗಳನ್ನು ವಿವರಿಸಿದರು. ಸಂಸ್ಥಾನದಲ್ಲಿ ಸಾಮಾನ್ಯವಾಗಿ ಕಾರ್ಮಿಕರ ಸ್ಥಿತಿಯು ಉತ್ತಮವಾಗಿರುವುದೆಂದೂ, ಮುಷ್ಕರಗಳು ಅತಿ ಕಡಿಮೆಯೆಂದೂ, ಕಾರ್ಮಿಕರ ಹಿತರಕ್ಷಣೆ ಬಗ್ಗೆ ಈಗಿನ ಸರ್ಕಾರದವರು ಹಲವು ಕಾನೂನನ್ನು ಮಾಡಿರುವುದಲ್ಲದೆ ಹೆಚ್ಚು ಸಹಾನುಭೂತಿ ವುಳ್ಳವರಾಗಿದ್ದಾರೆಂದೂ ತಿಳಿಸಿದರು. ಈಗಿನ ಪರಿಸ್ಥಿತಿಯಲ್ಲಿ ಮುಷ್ಕರ ಹೂಡುವುದು ಸಮಾಜಕ್ಕೆ ಅಪರಾಧ ಮಾಡಿದಂತಾಗುವುದು. ಗಣಿ ಕೆಲಸಗಾರರ ಮುಷ್ಕರವು ನ್ಯಾಯಬಾಹಿರವಾದುದು. ಅವರುಗಳು ಕೆಲಸಕ್ಕೆ ವಾಪಸು ಹಿಂತಿರುಗಬೇಕು. ಆಗ ಅವರ ಬೇಡಿಕೆಗಳನ್ನು ಪರಿಶೀಲಿಸಲಾಗುವುದು. ಅವರಲ್ಲಿ ಎರಡು ಪಕ್ಷದವರಿದ್ದು, ಕೆಲವು ನಾಯಕರುಗಳು ಅಧಿಕಾರದ ಲಾಲಸೆಯಿಂದ ಮುಷ್ಕರವನ್ನು ಹೂಡಿಸಿರುತ್ತಾರೆ: ನಿಜವಾಗಿ ಕಾರ್ಮಿಕರ ಹಿತ ಸಾಧನೆಗೆ ಅಲ್ಲ, ಇದು ಬಹಳ ಅನ್ಯಾಯವಾದ ಮುಷ್ಕರ ಸಧ್ಯದಲ್ಲಿಯೇ ತಮ್ಮ ಸಲಹೆಗೆ ಮನ್ನಣೆ ಕೊಟ್ಟು ಕೆಲಸಗಾರರು ವಾಪಸು ಹಿಂತಿರುಗುವರೆಂದು ನಂಬಲಾಗಿದೆ ಎಂದು ಸಚಿವರು ತಿಳಿಸಿದರು.

◯ ಭಾರತ ಸರ್ಕಾರದ ಹಣಕಾಸಿನ ಇಲಾಖೆಯ ಅಧಿಕಾರಿಗಳಾದ ಶ್ರೀ ಸ್ವಾಮಿನಾಥನ್‌ರವರು ಕಳೆದ ಭಾನುವಾರ ಇಲ್ಲಿಗೆ ಆಗಮಿಸಿದರು.

◯ ಅಮೆರಿಕದ ನ್ಯೂಯಾರ್ಕ್ ನಗರದ ಕಾಲೇಜೊಂದರ ವಿದ್ಯಾರ್ಥಿಗಳು ಕುಳಿತುಕೊಳ್ಳಲು ತಮ್ಮ ಕುರ್ಚಿಗಳನ್ನು ತಾವೇ ಕಾಲೇಜಿಗೆ ತೆಗೆದುಕೊಂಡು ಹೋಗಬೇಕೆಂದು ಆಜ್ಞಾಪಿಸಲಾಗಿದೆ.

ಕೇಂದ್ರದಲ್ಲಿ ೧೭೫ ಜನ ಐರೋಪ್ಯ ಅಧಿಕಾರಿಗಳು

ಭಾರತದ ಸರಕಾರದಲ್ಲಿ ಇನ್ನೂ ೧೭೫ ಮಂದಿ ಐರೋಪ್ಯರು ನೌಕರಿಯಲ್ಲಿದ್ದಾರೆ [illegible]

ಸಂಸ್ಥಾನಕ್ಕೆ ಸರ್ದಾರ್ ಪಟೇಲರ ಭೇಟಿ

ಸ್ವಂ. ಸು. ಫೋ||] ಬೆಂಗಳೂರು ೧೬

ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರು ಇದೇ ೨೪ ನೇ ತಾ|| ಬೆಳಿಗ್ಗೆ ಮದರಾಸಿನಿಂದ ಮೈಸೂರಿಗೆ ಆಗಮಿಸುವರು. ಮಾರನೇ ದಿನ ಬೆಳಿಗ್ಗೆ ಬೆಂಗಳೂರಿಗೆ ತೆರಳಿ, ಅರ್ದೇ ಸಂಜೆ ವಿಮಾನದಲ್ಲಿ ಹೈದರಾಬಾದಿಗೆ ಪ್ರಯಾಣ ಬೆಳೆಸುವರೆಂದು ಅಧಿಕೃತವಾಗಿ ತಿಳಿದುಬಂದಿದೆ.

ದಿವಾನರಿಂದ ಮೈಸೂರು ಇಂಜನಿಯರುಗಳ ಪ್ರಶಂಸೆ

ಇಂಜನಿಯರಿಂಗ್ ಕಾಲೇಜ್ ಸಂಘದ ವಾರ್ಷಿಕ ಸಮಾರಂಭದಲ್ಲಿ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರು ನಿನ್ನೆ ಭಾಷಣ ಮಾಡುತ್ತಾ, ಸರ್ ಎಂ. ವಿಶ್ವೇಶ್ವರಯ್ಯನವರನ್ನೂ ಮತ್ತು ಮೈಸೂರು ಇಂಜನಿಯರುಗಳನ್ನೂ ಪ್ರಶಂಸಿಸಿ, ಕಾಲೇಜಿನಲ್ಲಿ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಬೇಕೆಂದು ತಿಳಿಸಿದರು.

ಬ್ರಿಟನ್ನಿನ ಗ್ರಾಮದಲ್ಲಿ ಮಹಾತ್ಮರ ಚರಕ

ಬ್ರಿಟನ್ನಿನ ಕಾಲ್ಸ್‌ಫೋಲ್ಡ್ ಎಂಬ ಗ್ರಾಮದ ಜನರು ಮಹಾತ್ಮ ಗಾಂಧಿಯವರ ಚರಕವನ್ನು ಈಗ ಖಾದಿಯ ದಾರ ತೆಗೆಯಲು ಉಪಯೋಗಿಸುತ್ತಿದ್ದಾರೆ. ಮಹಾತ್ಮರ ೭೫ ನೇ ವರ್ಷದ ವರ್ಧಂತಿ ಸಮಯದಲ್ಲಿ ಲಂಡನ್ನಿನ ಭಾರತೀಯ ವಿದ್ಯಾರ್ಥಿಗಳು ಅವರಿಗೆ ಸಮರ್ಪಿಸಿದ ಚರಕವನ್ನು ಈ ಹಳ್ಳಿಯ ಇಬ್ಬರು ಮಹಿಳೆಯರಿಗೆ ಬಹುಮಾನವಾಗಿ ಅವರು ಕೊಟ್ಟಿದ್ದರು.

ಚರ್ಚಾ ಸ್ಪರ್ಧೆ

ನಿಜಗುಣಶಿವಯೋಗಿ ಕ್ಯಾತನಹಳ್ಳಿ ಸಂಸ್ಕೃತ ಕಾಲೇಜಿನಲ್ಲಿ ನೆನ್ನೆ ಸಂಜೆ ದಿ|| ಶ್ರೀ ಸಿ. ಸುಬ್ಬಣ್ಣನವರ ಸ್ಮಾರಕ ಅಂತರ ವಿದ್ಯಾ [illegible] ಚರ್ಚಾ ಸ್ಪರ್ಧೆ ನಡೆಯಿತು. ಮೈಸೂರು [illegible] ಸಭೆ ಸದಸ್ಯರಾದ ಶ್ರೀ ಡಿ. ಎಂ. ಸಿದ್ದಯ್ಯನವರು ಅಧ್ಯಕ್ಷತೆ [illegible] [illegible]

ಅಂತರಾಷ್ಟ್ರೀಯ ರೋಟರಿ ಸಮ್ಮೇಳನ

ಮೈಸೂರು ೧೫

ಅಂತರಾಷ್ಟ್ರೀಯ ರೋಟರಿ ಸಮ್ಮೇಳನದ ೧೩ ನೇ ಅಧಿವೇಶನವು ಬರುವ ತಿಂಗಳು ೧೨ ಮತ್ತು ೧೩ ನೇ ತಾ|| ಕೃಷ್ಣರಾಜ ಸಾಗರದಲ್ಲಿ ನಡೆಯುವುದು. ಶ್ರೀ ಮನ್ಮಹಾರಾಜರವರು ಅದರ ಆರಂಭೋತ್ಸವವನ್ನು ನೆರವೇರಿಸುವರೆಂದು ತಿಳಿದು ಬಂದಿದೆ.

ಮೋಟಾರು ಕೆಲಸಗಾರರ ಸಹಕಾರ ಸಂಘ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಹಕಾರ ಸಂಘದ ಸಭೆಯು ಮೊನ್ನೆ ಶ್ರೀ ಸಿ. ಜೆ. ದೇವನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆದು ಪ್ರಸಕ್ತ ಸಾಲಿಗೆ ಶ್ರೀ ಕೆ. ದೌಲತ್ ರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಂ. ಸಿ. ವಗ್ಗಪ್ಪನವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು. ಶ್ರೀಗಳಾದ ಟಿ. ಎಸ್. ಸುಬ್ಬಣ್ಣ, ಜಿ. ಆರ್. ನಾರಣಪ್ಪ, ತಿರುವೆಂಗಡಂ, ಸಿ. ಜೆ. ದೇವನಾಥ್, ಸಿ. ಹೆಚ್. ಲಕ್ಷ್ಮಣರಾವ್, ಎಂ. ಜವರಪ್ಪ ಮತ್ತು ಎಸ್. ಕೃಷ್ಣಮೂರ್ತಿ ರವರುಗಳನ್ನು ಪಂಚಾಯಿತರನ್ನಾಗಿ ಚುನಾಯಿಸಲಾಯಿತು.

◯ ೫ ವರ್ಷಗಳ ಫಿಕ್ಸೆಡ್ ಡಿಪಾಜಿಟ್ಟಿನ ಬಡ್ಡಿಯ ದರವನ್ನು ಶೇ|| ೨ ರಿಂದ ೨|| ರೂ.ಗೆ ಏರಿಸಲಾಗಿದೆಯೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ನೂತನ ಹೋಟೇಲುಗಳಿಗೆ ರಹದಾರಿ ಇಲ್ಲ

ಸಂಸ್ಥಾನದಲ್ಲಿ ಹೊಸದಾಗಿ ಹೋಟೇಲುಗಳನ್ನು ತೆರೆಯಲು ಲೈಸೆನ್ಸ್ ಕೊಡಕೂಡದೆಂದೂ ಮತ್ತು ರಹದಾರಿ ಇಲ್ಲದೆ ನಡೆಯುತ್ತಿರುವ ಹೋಟೇಲುಗಳನ್ನು ನಿಲ್ಲಿಸಲು ತೀವ್ರ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದೂ ಮಂತ್ರಿಮಂಡಲದ ಉಪಸಮಿತಿಯವರು ಸಲಹೆ ಮಾಡಿರುವರೆಂದು ತಿಳಿದುಬಂದಿದೆ.

ರೇಡಿಯೋ ಪ್ರಸಾರದ ಘಟನೆಯಿಂದ ೧೬ ಜನ ಮರಣ

ಅಂಗಾರಕ ಗ್ರಹದಿಂದ ಕಂಠಾಳ ಮೃಗಗಳು ಕ್ವಿಟೋ ದೇಶಕ್ಕೆ ನುಗ್ಗಿ ಬರುತ್ತಿವೆಯೆಂದು ಇಕ್ವೆಡಾರಿನ ರೇಡಿಯೋ ಕೇಂದ್ರ ನಾಟಕ ಪ್ರಸಾರವನ್ನು ಜನರು ನಿಜವೆಂದು ತಿಳಿದು ಉದ್ರೇಕಗೊಂಡು ರೇಡಿಯೋ ಕೇಂದ್ರವನ್ನು ಸುಟ್ಟು ಗಲಭೆ ನಡೆಸಿದರಷ್ಟೆ. ಈ ಗಲಭೆಯನ್ನು ನಿಲ್ಲಿಸಲು ಸೈನಿಕರು ಟಿಯರ್ ಗ್ಯಾಸ್ ಮತ್ತು ಟ್ಯಾಂಕುಗಳನ್ನು ಪ್ರಯೋಗಿಸಬೇಕಾಯಿತೆಂದೂ ಇದರಿಂದ ಒಟ್ಟು ೧೬ ಜನರು ಸತ್ತರೆಂದೂ ವರದಿಯಾಗಿದೆ.

ಸುಮಾತ್ರದಲ್ಲಿ ಡಚ್ ಸೈನಿಕರ ದಂಗೆ

ಸುಮಾತ್ರಾದ ಪಶ್ಚಿಮ ಭಾಗದಲ್ಲಿರುವ ಬುಕ್ಕಿಟಿಂಗಿಯಲ್ಲಿ ಡಚ್ ಸೈನಿಕರು ದಂಗೆಯೆದ್ದು, ೩೦೦ ಜನ ಡಚ್ ಮತ್ತು ಇಂಡೋನೇಷ್ಯದ ಸೈನಿಕರನ್ನು ಗುಂಡಿನಿಂದ ಹೊಡೆದು ಕೊಲೆ ಮಾಡಿರುವರೆಂದು ವರದಿಯಾಗಿದೆ. ಇಂಡೋನೇಷ್ಯದ ಗೆರಿಲ್ಲಾ ಪಡೆಗಳ ಕಾರ್ಯಾಚರಣೆಯು ಅಧಿಕವಾಗಿರುವುದರಿಂದ ಡಚ್ ಸೈನಿಕರು ಸೋಲಿನ ಮನೋಭಾವನ್ನುಳ್ಳವರಾಗಿದ್ದಾರೆಂದು ಹೇಳಲಾಗಿದೆ.

ರಾಜೇಂದ್ರ ಬಾಬುಗಳ ಗೂರಲು ಭೂತದಿಂದ ನಿವಾರಣೆಯೇ?

ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರವರು ಒಂದು ನಿರ್ದಿಷ್ಟ ಕಾಲದವರೆಗೆ ಚಿನ್ನದ ನಾಗ ಪ್ರತಿಷ್ಠೆ ಮಾಡಿ ಅದನ್ನು ಪೂಜೆ ಮಾಡಿದರೆ ಅವರ ಗೂರಲು ರೋಗವು ಗುಣವಾಗುವುದೆಂದು ಅವರಿಗೆ ಭೂತವೊಂದು ತಿಳಿಸಿರುವುದಾಗಿ ವರದಿಯಾಗಿದೆ. ದೇಶಕ್ಕೆ ರಾಜೇಂದ್ರ ಬಾಬೂರವರ ಸೇವೆಯು ಅವಶ್ಯಕತೆಯು ಇನ್ನೂ ಬಹಳ ಕಾಲ ಬೇಕಾಗಿರುವುದರಿಂದ ಅವರ ಖಾಯಿಲೆಯನ್ನು ಗುಣಪಡಿಸುವುದಾಗಿ ಆ ಭೂತವು ಹೇಳಿರುವುದೆಂದೂ, ೪ ವಾರಗಳಿಂದೀಚೆಗೆ ಅವರಿಗೆ ಗೂರಲು ಕಡಿಮೆ ಯಾಗಿರುವುದೆಂದೂ ಹೇಳಲಾಗಿದೆ.

ರೈಲಿನ ಮೆಟ್ಟಿಲ ಮೇಲೆ ನಿಂತ ದುರಂತ ಪರಿಣಾಮ

ಕಲ್ಕತ್ತಾ—ಸಾಬ್ರಾ ಬಗ ಹೋಗುವ ಎ... ನಡೆ ಎನರ ಒನಪು ... ಲ್ ... ರೈಲಿನ ಮೆಟ್ಟಿಲ ಮೇಲೆ ನಿಂತಿದ್ದ ಜನರ ... ಮಂದಿ ಸತ್ತರು ... ಜನರಿಗೆ ಗಾಯವಾಗಿದೆ.

ಗೃಹ ನಿರ್ಮಾಣದ ಕಾರ್ಖಾನೆ

ವರ್ಷಂ ಪ್ರತಿ ಐದು ಸಾವಿರ ಮನೆಗಳನ್ನು ನಿರ್ಮಿಸಲು ಬೇಕಾಗುವ ಸಾಧನ ಸಂಪತ್ತುಗಳನ್ನು ಒದಗಿಸಿಕೊಳ್ಳಲು ಭಾರತ ಸರ್ಕಾರದವರು ದೆಹಲಿಯಲ್ಲಿ ಒಂದು ಕಾರ್ಖಾನೆಯನ್ನು ಏರ್ಪಡಿಸುವವರಿದ್ದಾರೆ. ಮಾರ್ಚಿಯಲ್ಲಿ ಹಲವು ಇಂತಹ ಮಾದರಿ ಗೃಹಗಳನ್ನು ಕಟ್ಟಲ್ಪಡುವುವೆಂದೂ, ಸರಿಯಾದ ಕ್ರಮದ ಕಾರ್ಯವು ಈ ವರ್ಷ ಮಧ್ಯ ಭಾಗದಿಂದ ಆಗುವುದೆಂದೂ ಹೇಳಲಾಗಿದೆ. ಈ ಗೃಹಗಳಲ್ಲಿ ನಿರಾಶ್ರಿತರು, ಬಡವರು, ವಾಸಿಸಬಹುದು ಮತ್ತು ಸರಕಾರಕ್ಕೆ ಅಗತ್ಯವಾಗಿ ಬೇಕಾದ ಕೆಲಸಗಳಿಗಾಗಿ ಉಪಯೋಗ ಮಾಡಲ್ಪಡುವುದು.

ಎಸ್. ಎನ್. ಪಂಡಿತ್ ಅಂಡ್ ಸನ್ಸ್ ಸರಸ್ವತಿ

ಯುನಿವರ್ಸಲ್ ... ಬಾಮ್ ... ನಕಲಿ ... ನಾಯಿ ...

... ೮—೯—೮

ಮಹಾ ... ತೈಲ

... ತೈಲ

... ತೈಲ

... ತೈಲಗಳು.

... ದ ... ...

ಪ್ರಭಾ ಸಿನಿಮಾ ಮಂದಿರದ ವಾರ್ಷಿಕೋತ್ಸವ

ರಾಜಧಾನಿಯ ಪ್ರಭಾ ಪಿಕ್ಚರ್ ಹಾಲಿನ ಪ್ರಥಮ ವಾರ್ಷಿಕೋತ್ಸವವು ನಿನ್ನೆ ಜರುಗಿತು. ಈ ಸಂಬಂಧದಲ್ಲಿ ಅದರ ಮಾಲೀಕರಾದ ಶ್ರೀ ರಟ್ಟೆಹಳ್ಳಿ ರಾಮಪ್ಪನವರು ನಗರದ ಮಹನೀಯರನ್ನು ಆಹ್ವಾನಿಸಿ, ಉಪಾಹಾರ ಮತ್ತು ಪುಷ್ಪಗಳಿಂದ ಸತ್ಕರಿಸಿದರು. ಶ್ರೀಮತಿ ರಂಗನಾಯಕಮ್ಮನವರ ಸುಶ್ರಾವ್ಯವಾದ ಸಂಗೀತವೂ ನಡೆಯಿತು. ಮಂದಿರದ ನೌಕರರಿಗೆ ಒಂದು ತಿಂಗಳ ಬೋನಸ್ಸನ್ನು ಕೊಡಲಾಗಿದೆ. ಇನ್ನು ಮುಂದೆ ಇತ್ತೀಚಿನ ಮತ್ತು ಉತ್ತಮ ಚಿತ್ರಗಳನ್ನು ಪ್ರದರ್ಶಿಸಲು ವ್ಯವಸ್ಥೆ ಮಾಡಿರುವುದು ಸಂತೋಷವಾದ ಸಂಗತಿ.

ಹಿಂದಿ ತರಗತಿಗಳ ಸ್ಥಳ ಬದಲಾವಣೆ

ರಾಜಧಾನಿಯ ಭಾರತ ಸೇವಾ ಸಮಾಜದ ಆಶ್ರಯದಲ್ಲಿ ... ರಸ್ತೆಯ ... ಎಂ. ಎಲ್. ... ಶಿಕ್ಷಣ ಕ್ರಮ ... ರಸ್ತೆಯಲ್ಲಿರುವ ಕೃಷ್ಣರಾಜೇಂದ್ರ ... ಅಪ್ಪರ್ ಪ್ರೈಮರಿ ಶಾಲಾ ಕಟ್ಟಡದಲ್ಲಿ ನಡೆಯತಕ್ಕದ್ದಾಗಿದೆ. ಈ ... ಆರಂಭೋತ್ಸವವನ್ನು ೧೫ ನೇ ತಾರೀಖು ಶ್ರೀ ... ಸ್ವಾಮಿಯವರು ಮಾಡಿದರು.

Edited, printed and published by A R.Nagarajan at the Sadhvi Press, D Subbaiah Road Mysore

ಹಾ॥ ಟಿಟೋ ಯಾರು?

ಬರ್ಲಿನ್ ನಗರದಲ್ಲಿ ಬ್ರಿಟಿಷರ ಭಾಗದಿಂದ ಆಚ್ಚಾಗಿ ಪ್ರಕಟವಾಗುತ್ತಿರುವ ಸೋಷಿಯಲ್ ಡೆ ಮೊಕ್ರಾಟ್ ಎಂಬ ಪತ್ರಿಕೆಯು ವಿಚಿತ್ರವಾದ ಸುದ್ದಿಯೊಂದನ್ನು ಕೊಟ್ಟಿದೆ. ಈಗ ಯೂಗೋಸ್ಲೇವಿಯಾದ ಮುಖ್ಯಾಧಿಕಾರಿಯಾಗಿರುವ ಜೋಸೆಫ್ ಟಿಟೋರವರು ರಷ್ಯದವರೆಂದೂ, ಅವರ ನಿಜವಾದ ಹೆಸರು ಲೊಬಿನೇವ್ ಎಂದೂ ಹೇಳಲಾಗಿದೆ. ಅವರು ರಷ್ಯದ ಸೈನ್ಯದಲ್ಲಿ ಕೆಲಸದಲ್ಲಿದ್ದರು. ನಿಜವಾದ ಟಿಟೋರವರು ೧೯೪೪ ರಲ್ಲಿಯೇ ಸತ್ತುಹೋದರೆಂದೂ, ಜರ್ಮನರು ... ಆವಿತುಕೊಂಡಿದ್ದ ಸ್ಥಳದ ಮೇಲೆ ವಿಮಾನದಿಂದ ಇಳಿದು ಕೊಂದು ಹಾಕಿದರೆಂದೂ ಹೇಳಲಾಗಿದೆ.

ಫ್ರಾನ್ಸಿನ ಲಾಮಾಂತಿ ಎಂಬ ಹಳ್ಳಿಯ ನಿವಾಸಿಗಳ ಪೈಕಿ, ೯೦ ವರ್ಷದವರು ೨೦ ಮಂದಿ ೮೦ ವರ್ಷದವರು ೧೦ ಮಂದಿ ಮತ್ತು ೭೫ ವರ್ಷದ ೧೫ ಜನರೂ, ೯೯ ವರ್ಷದ ರಾಯ್ ಎಂಬಾಕೆಯೊಬ್ಬಳೂ ಇರುವರೆಂದು ಹೇಳಲಾಗಿದೆ.

ಇದೇ ... ತಾ॥ ಕಾಂಗ್ರೆಸ್ ಕಾರ್ಯ ಸಮಿತಿಯ ಸಭೆಯು ಬೆಂಗಳೂರಿನಲ್ಲಿ ನಡೆಯುವುದು.

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಇಂದೇ ಭೇಟಿ ಕೊಡಿ

ಶ್ರದ್ಧೆವಾದ ... ಸಿಲ್ಕಿನಲ್ಲಿ ಸ್ವಂತ ... ದಿಂದ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಮತ್ತು ಕುಂಬಕೋಣಂ ಸೀರೆಗಳು, ಕಲಾಬತ್ತು ರವಿಕೆಗಳು ಮುಂತಾದುವುಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ ಮೈಸೂರು

ಭಾರತದಲ್ಲಿ ೩ ವರ್ಷಗಳಲ್ಲಿ ಪೆನ್ಸಿಲೀನ್ ಕಾರ್ಖಾನೆ

ಭಾರತದಲ್ಲಿ ಇನ್ನು ಮೂರು ವರ್ಷದೊಳಗೆ ಸರ್ವ ರೋಗಗಳಿಗೂ ಚಿಕಿತ್ಸೆಯಾಗಬಲ್ಲ ಪೆನ್ಸಿಲೀನ್ ಔಷಧಿಯ ತಯಾರಿಕಾ ಕಾರ್ಖಾನೆಯು ಆಗುವುದು. ಈ ಬಗ್ಗೆ ಭಾರತ ಸರಕಾರಕ್ಕೂ ಸ್ವೀಡನ್ನಿನ ಕಂಪೆನಿಯೊಂದಕ್ಕೂ ಒಪ್ಪಂದವಾಗಿದೆ. ೧ ಲಕ್ಷದ ೩೦ ಸಾವಿರ ಕೋಟಿ ಪೆನ್ಸಿಲೀನ್ ಯೂನಿಟ್ಟುಗಳು ವರ್ಷಂಪ್ರತಿ ತಯಾರಾಗಲು ... ವಾಗಿದೆ. ಅಲ್ಲದೆ ಮಲೇರಿಯಾ ... ರೋಧಿ ಔಷಧವೂ ೧ ಲಕ್ಷ ಪೌಂಡಿನಷ್ಟು ಕೂಡ ತಯಾರಾಗುವುದು. ಇದರಿಂದ ವರ್ಷಕ್ಕೆ ೩॥ ಕೋಟಿ ರೂ. ಉಳಿತಾಯವಾಗುವುದೆಂದು ಹೇಳಲಾಗಿದೆ.

ಪೋಲೀಸರೇ ಲೂಟಿ ಮಾಡಿದರು

ಪಳನಿಯಲ್ಲಿ ಕಾವಲು ಕಾಯಲು ಇಟ್ಟಿದ್ದಾಗಿರುವ ವಿಶೇಷ ಶಸ್ತ್ರ ಸಜ್ಜಿತ ಪೋಲೀಸರೇ, ತಮ್ಮ ಬಿಡುವಿನ ಕಾಲದಲ್ಲಿ ಹಲವು ಮನೆಗಳಿಗೆ ನುಗ್ಗಿ ಅಂಗಡಿಗಳನ್ನು ಲೂಟಿ ಮಾಡಿದರು. ಅಗ್ಗಿ ಜನರಿಗೂ ಅವರಿಗೂ ಘರ್ಷಣೆಯಾಗಿ ಕೆಲವು ಮಂದಿ ಗಾಯಗಳಾಗಿವೆ. ಅಲ್ಲಿಗೆ ಬೇರೆ ರಿಸರ್ವ್ ಪಡೆ ಮತ್ತೆ ಹೋಗಿದೆ.

ಸರೋಜಿನಿ ನಾಯ್ಡುರವರಿಗೆ ೭೦ ವರ್ಷ ತುಂಬಿತು

ಸಂಯುಕ್ತ ಪ್ರಾಂತದ ಗೌರ್ನರ್ ಶ್ರೀಮತಿ ಸರೋಜಿನಿ ನಾಯ್ಡುರವರಿಗೆ ನಿನ್ನೆಗೆ ೭೦ ವರ್ಷ ತುಂಬಿತು. ತಮ್ಮ ಪುತ್ರಿ ಪದ್ಮಜಾ ಮತ್ತು ನೆಹರು ಮಗಳು ಇಂದಿರಾ ಕೂಡನೆ ಅವರು ರಾಜಘಾಟಿಗೆ ಪ್ರಯಾಣ ಮಾಡಿ ಅಲ್ಲಿ ಪೂಜಾವಿಧಿಯನ್ನು ನಡೆಸಿದರು.

ಸಾವರ್ಕರ್ ಅಭಿನಂದನಾ ದಿನಾಚರಣೆ

ಗಾಂಧೀಜಿಯವರ ಕೊಲೆ ಮೊಕದ್ದಮೆಯಲ್ಲಿ ಖುಲಾಸೆಯಾದ ಡಾ॥ ವಿ. ಡಿ. ಸಾವರ್ಕರರ ಅಭಿನಂದನೆಮಾಡಲು ಎಲ್ಲಾ ಹಿಂದೂ ಮಹಾಸಭೆ ಸಮಿತಿಗಳೂ ಈ ತಿಂಗಳ ೨೭ನೇ ತಾರೀಖು ಅಭಿನಂದನಾ ದಿನಾಚರಣೆ ಮಾಡತಕ್ಕದ್ದೆಂದು ಅ॥ ಭಾ॥ ಹಿಂದೂ ಮಹಾಸಭೆ ಅಧ್ಯಕ್ಷ ಶ್ರೀ ಎಲ್. ಬಿ. ಭೋಪಟಕರರು ಪ್ರಾರ್ಥಿಸಿದ್ದಾರೆ.

ಸಿಗ್ ಕಾರ್ಟ ೧ ಕೋಟಿ ಕೊಂಡು ಹೋದನು

ಸಿಡ್ನಿ ಕಾಟನ್ನನು ಹೈದರಾಬಾದಿನಿಂದ ೧ ಕೋಟಿ ರೂ ಗಳ ಕರೆನ್ಸಿ ನೋಟುಗಳನ್ನು ಸಾಗಿಸಿರುವುದು ಗೊತ್ತಾಗಿದೆ. ಲಾಯಕ್ ಅಲಿಯ ಮಂತ್ರಿಮಂಡಲವು ಹೊರಗಿನ ಪ್ರಚಾರಕ್ಕಾಗಿಯೇ ೮ ಕೋಟಿ ... ಹೆಚ್ಚಿಗೆ ಹಣ ಖರ್ಚು ಮಾಡಿದೆ.

ನಿಧನ

ರಿಟೈರ್ಡ್ ಸಬ್ ಓವರ್ಸೀಯರ್ ... ಚ ಗ್ರಾಮದ ವೈ. ಸುಬ್ಬರಾಯರು ತಮ್ಮ ೬೫ ನೇ ವಯಸ್ಸಿನಲ್ಲಿ ೧೧—೨—೪೯ನೇ ಶುಕ್ರವಾರದ ದಿನ ಮಧ್ಯಾಹ್ನ ೧೨—೩೦ಕ್ಕೆ ಟಿಗೆ ಕೃಷ್ಣರಾಜ ನಗರದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಮೃತರ ಬಂಧು ಮಿತ್ರರು

ಪ್ರಭಾ * 18-2-49 ರಿಂದ

ಪ್ರತಿದಿನ ಆಟಗಳು

ಪ್ರಭಾತ್ ರವರ

ಆಗೇ ಬಢೋ

ಖುರ್ಷಿದ್, ದೇವಾನಂದ್ ನಟಿಸಿರುವ ಹಿಂದಿ ಚಿತ್ರ

ಇದರೊಂದಿಗೆ "ಸ್ವತಂತ್ರ ಭಾರತದ" ನ್ಯೂಸ್ ರೀಲನ್ನು ಪ್ರದರ್ಶಿಸ ಲಾಗುತ್ತದೆ



ಈಗ ಕಿಕ್ಕಿರಿದ ಜನ ಸಂದಣಿಗೆ ಪ್ರದರ್ಶಿತವಾಗುತ್ತಿದೆ.

ದಿನವಹಿ ೩ ಪ್ರದರ್ಶನಗಳು

... ಬಿಕಮಲ್ ಮತ್ತು ... ಅಪೇರಾ

ಹಂಚಿಕೆ — ನ್ಯೂ ಒಪೆರಾ, ಶಿವಾಜಿ ಮತ್ತು ಸ್ವಸ್ತಿಕ್

ಮಂಗಳೂರು ಸೆಂಟ್ರಲ್ ಟಾಕೀಸುಗಳಲ್ಲಿ

ಲಗ್ನ ಪತ್ರಿಕೆಗೆ ... ವಿಧವಿಧವಾದ ರೇಷ್ಮೆ ಮತ್ತು ನೂಲಿನ ಸೀರೆಗಳು

... ಬಟ್ಟೆ ... ಎಂಪೋರಿಯಂ,

... ಸ್ಟ್ರೀಟ್

ಫೋ೯ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೧೭-೨-೧೯೪೯ [ಸಂಚಿಕೆ ೧೨೫

- ಬಾಲ್ಟಿಕ್ ತೀರದಲ್ಲಿ - ರಷ್ಯದ ಸೈನ್ಯ ಚಟುವಟಿಕೆ

ಮಹಾರಾಜರನ್ನು ಕರ್ನಾಟಕ ಮನ್ನಿಸುವುದು

ಬೊಂಬಾಯಿ ಸರ್ಕಾರದ ವ್ಯವಸಾಯ ಸಚಿವರಾದ ಶ್ರೀ ಎಂ. ಪಿ. ಪಾಟೀಲರು ಮೈಸೂರಿನ ಅರಸರು ಇಡೀ ಕರ್ನಾಟಕದ ರಾಜರಾಗಲು ಎಲ್ಲರ ಒಪ್ಪಿಗೆಯಿರುವುದಾಗಿ ಹೇಳಿದ್ದಾರೆ. ಶೀಘ್ರದಲ್ಲಿಯೇ ಕರ್ನಾಟಕ ಪ್ರಾಂತವೂ ಸಹ ರಚನೆಯಾಗಲಿರುವುದೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ನೈಜಾಮರ ಸ್ವಂತ ಖರ್ಚಿನಲ್ಲಿ ಖೋತಾ

ಪ್ರಪಂಚದಲ್ಲೇ ಅತ್ಯಂತ ಐಶ್ವರ್ಯವಂತರಾದ ಹೈದರಾಬಾದಿನ ನೈಜಾಮರು ವರ್ಷಕ್ಕೆ [illegible] ಕೋಟಿ ರೂ. ಅನ್ನು ತಮ್ಮ ಸ್ವಂತ ಖರ್ಚು ಮಾಡುತ್ತಿದ್ದಾರೆಂದೂ ಅವರು ಈಗ ತಮ್ಮ ಗೃಹಕೃತ್ಯದ ಖರ್ಚನ್ನು ಮತ್ತು ನೌಕರರ ಸಂಖ್ಯೆ ಮತ್ತು ಸಂಬಳಗಳನ್ನು ಕಡಿಮೆ ಮಾಡಲು ನಿರ್ಧರಿಸಿರುವುದೂ ವರದಿಯಾಗಿದೆ.

ತಮ್ಮ ಬಂಧು ಬಳಗದವರಾದ ಮು[illegible] ಜಹಗೀರುದಾರರುಗಳಿಗೆ ಜೀವನಾಂಶವನ್ನು ತಮ್ಮ ಸ್ವಂತ ಹಣದಿಂದ ಕೊಡಲು ಒಂದು ನಿಧಿಯನ್ನು ನಿರ್ಮಿಸುವಂತೆ ನೈಜಾಮರು ಆಜ್ಞೆ ಮಾಡಿರುತ್ತಾರೆ.

ಕಾಂಗ್ರೆಸ್ ಮುಖಂಡರಲ್ಲಿ ಪುನಃ ಭಿನ್ನತೆ

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸ್ವಾಮಿ ರಾಮಾನಂದ ತೀರ್ಥರಿಗೂ, ಶ್ರೀಯುತ ಜನಾರ್ಧನ ದೇಸಾಯಿಯವರಿಗೂ ಪುನಃ ಭಿನ್ನತೆ ಯುಂಟಾಗಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ದೇಸಾಯಿ ಪಕ್ಷದವರಿಗೆ ನಾಲ್ಕು ಸ್ಥಳವನ್ನು ಕೊಡುವುದಾಗಿ ಶ್ರೀ ತೀರ್ಥರು ಹೇಳಿದ್ದಾರೆಂದೂ, ತಮ್ಮ ಪಕ್ಷಕ್ಕೆ ಎಂಟು ಜಾಗ ಬೇಕೆಂದು ಶ್ರೀ ದೇಸಾಯಿಯವರು ಒತ್ತಾಯಪಡಿಸುತ್ತಿರುವುದಾಗಿಯೂ ಹೇಳಲಾಗಿದೆ. ಇವರೀರ್ವರ ಉಭಯರಿಗೂ ಒಪ್ಪಿಗೆಯಾಗಿಲ್ಲ.

ಬಟ್ಟೆ ಹತೋಟಿ ಹೋಗುವುದಿಲ್ಲ

ಬಟ್ಟೆ ಹಂಚಿಕೆ ಹತೋಟಿಯನ್ನು ತೆಗೆಯುವ ಯೋಜನೆಯು ಭಾರತ ಸರ್ಕಾರಕ್ಕೆ ಇಲ್ಲವೆಂದೂ ಮತ್ತು ಹತ್ತಿಯ ಬಗ್ಗೆ ಈಗಿರುವ ಕನಿಷ್ಠಾಂಶ ಮತ್ತು ಅಧಿಕಾಂಶ ಬೆಲೆಗಳನ್ನು ವ್ಯತ್ಯಾಸ ಮಾಡುವುದಿಲ್ಲವೆಂದೂ ಕೇಂದ್ರ ಶಾಸನ ಸಭೆಯಲ್ಲಿ ಕೈಗಾರಿಕಾ ಮಂತ್ರಿಗಳು ತಿಳಿಸಿರುತ್ತಾರೆ.

ಚಾಮುಂಡಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಭೆ

ಮೈಸೂರು ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಬಹಿರಂಗ ಸಭೆ ಮೊನ್ನೆ ದಿನ ಶ್ರೀ ಬಿ. ಬಾಲಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಗ[illegible] ಎ ರಾಮಣ್ಣ ಮತ್ತು ಸಣ್ಣೇಗೌಡ ರಾಮಣ್ಣನವರು ಕೆಲಸಗಾರರಲ್ಲಿ ಒಡಕ ತರಲು ಆಡಳಿತ ವರ್ಗದವರು ಪ್ರಯತ್ನಿಸುತ್ತಿರುವುದನ್ನು ಖಂಡಿಸಿ, ಕಾರ್ಮಿಕರೈ ಮತ್ತು ಒಗ್ಗಟ್ಟಿನಿಂದ ವರ್ತಿಸಬೇಕೆಂದು ಹೇಳಿದರು.

ಶಾಲೆಗೆ ಮಕ್ಕಳನ್ನು ಕಳುಹಿಸದಿದ್ದುದಕ್ಕೆ ದಂಡ

ಮೈಸೂರು ತಾಲ್ಲೂಕಿನ ರಾಯನಕೆರೆ [illegible] ಬೆಳವಾಡಿ ಗ್ರಾಮದ ಇಬ್ಬರು ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸದಿದ್ದಕ್ಕೆ ಅಮಲ್ದಾರ್ ಮ್ಯಾಜಿಸ್ಟ್ರೇಟರಾದ [illegible] ಎಂ ಆರ್ ನರಸಿಂಗರಾಯರು ಒತ್ತಾಯ ಪ್ರಾಥಮಿಕ ಶಿಕ್ಷಣ ಕಾನೂನಿನ ರೀತ್ಯಾ ಅವರುಗಳಿಗೆ ತಲಾ [illegible] ರೂ [illegible] ದಂಡವನ್ನು ವಿಧಿಸಿರುತ್ತಾರೆ.

ಹಿಂದೂ ಧರ್ಮಕ್ಕೆ ಮದ್ರಾಸು ಶಾಸನವು ಧಕ್ಕೆ ತಂದಿದೆ

ಹಿಂದೂ ಧಾರ್ಮಿಕ ಮಸೂದೆಗೆ ಮಂತ್ರಾಲಯದ ಗುರುಗಳ ವಿರೋಧ

ಮದರಾಸ್ ಸರ್ಕಾರದವರು ತಂದಿರುವ ಹಿಂದೂ ಧಾರ್ಮಿಕ ತಿದ್ದುಪಡಿ ಕಾನೂನನ್ನು ನಂಜನಗೂಡಿನ ಶ್ರೀ ರಾಘವೇಂದ್ರ ಮಠದ ಸ್ವಾಮಿಗಳು ಖಂಡಿಸಿ ಮಂತ್ರಾಲಯದಿಂದ ಈ ರೀತಿ ಒಂದು ಹೇಳಿಕೆಯನ್ನಿತ್ತಿರುತ್ತಾರೆ :-

ಇಂದಿನ ಸರ್ಕಾರವು ಜಾತ್ಯತೀತ ರಾಜ್ಯವೆಂದು ಭಾರತ ಸರ್ಕಾರವು ಸಾರಿರುವಾಗ ಮತ್ತು ಪ್ರತಿಯೊಂದು ಧರ್ಮ ಸಂಸ್ಥೆಯೂ ತನ್ನ ಪದ್ಧತಿಯಂತೆ ನಡೆದುಕೊಂಡು ಬರಲು ಸ್ವಾತಂತ್ರ್ಯವಿದೆಯೆಂದು ರಾಜ್ಯಾಂಗ ಸಭೆಯು ನಿರ್ಧರಿಸಿರುವಾಗ ಮದರಾಸ್ ಸರ್ಕಾರದವರು ರಾಜ್ಯಾಂಗ ಸಭೆಯ ಮೂಲ ಭೂತ ಹಕ್ಕುಗಳ ನಿರ್ಣಯಕ್ಕೆ ವಿರೋಧವಾಗಿ ವರ್ತಿಸಿ, ಈ ಮಸೂದೆಯನ್ನು ತಂದಿರುವುದು ವಿಷಾದಕರ. ಪವಿತ್ರ ಮಠಗಳಿಗೆ ಇಂದು ಸ್ವತಂತ್ರ ಭಾರತದಲ್ಲಿ ವಿಪತ್ತು ಒದಗಿದೆ. ಈ ಕಾನೂನನ್ನು ತರಲು ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ಅನೇಕ ಪ್ರವೀಣರು ಅಭಿಪ್ರಾಯಪಟ್ಟಿದ್ದರೂ, ಕೇವಲ ಅಡ್ವೋಕೇಟ್ ಜನರಲ್ಲರ ಸಲಹೆ ಮೇಲೆ ಇದನ್ನು ತಂದಿರುವುದು ನ್ಯಾಯ ಬಧ್ಧವಲ್ಲ. ಮಠಗಳನ್ನು ಯಾವ ಸರ್ಕಾರವೂ ಸ್ಥಾಪಿಸಿಲ್ಲ. ಅದಕ್ಕೆ ಯಾವ ಸಹಾಯವೂ ಮಾಡಿಯೂ ಇಲ್ಲ. ಅಂತ ಮೇಲೆ ಅವುಗಳ ವಿಷಯದಲ್ಲಿ ಸರ್ಕಾರಕ್ಕೆ ಕೈಹಾಕಲು ಹಕ್ಕಿಲ್ಲ. ಮಠಾಧಿಪತಿಗಳ ಅಧಿಕಾರವನ್ನು ಕಸಿದುಕೊಂಡು ಅವರನ್ನು ಸಾಮಾನ್ಯ ಕಮೀಷನರುಗಳನ್ನಾಗಿ ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಇದರಿಂದ ಹಿಂದೂ ಧರ್ಮಕ್ಕೆ ಧಕ್ಕೆ ಬಂದಿದೆ. ಆದುದರಿಂದ ಈ ಕಾನೂನಿನಲ್ಲಿ ಮಠಗಳ ವಿಷಯವನ್ನು ತೆಗೆದು ಹಾಕಬೇಕು. ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಮಠಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರಕೂಡದೆಂದು ಸೂಚಿಸುತ್ತೇನೆ.

● ಗೋಧಿಯಿಂದ [illegible] ಬೆಲೆ[illegible] [illegible] ಗುತ್ತಿವೆಯೆಂದ [illegible] ಸರಾಸರಿ [illegible] ಗಿರುವುದುದೂ ಹೇಳಲಾಗಿದೆ

ಸಂಸ್ಥಾನಕ್ಕೆ ವಿ. ಪಿ. ಮೆನ್ನನ್ ರವರ ಭೇಟಿ

ಬೆಂಗಳೂರು ೧೭

ಭಾರತ ಸರ್ಕಾರದ ಸಂಸ್ಥಾನ ಶಾಖೆಯ ಕಾರ್ಯದರ್ಶಿಗಳಾದ ಶ್ರೀ. ವಿ ಪಿ ಮೆನನ್ ರವರು ನಾಳೆ ದಿನ ಬೆಂಗಳೂರಿಗೆ ಆಗಮಿಸುವರೆಂದು ತಿಳಿದುಬಂದಿದೆ.

ಠೇವಣಿ ಕೇಳಿರುವುದು ಅಕ್ರಮ

ಬೆಂಗಳೂರಿನಿಂದ ಪ್ರಕಟವಾಗುವ [illegible] ಕಿಡಿ ಪತ್ರಿಕೆಯ ಮುದ್ರಕರಾದ ಶ್ರೀ ಎಂ. ಎಸ್. ಚಿಂತಾಮಣಿಯವರು ೨೦೦೦ ರೂ. ಠೇವಣಿಯನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳು ಇತ್ತ ಆಜ್ಞೆಯ ಮೇಲೆ ಅವರು ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ಶ್ರೀ ಆರ್. ಪುಟ್ಟರಾಜೇ ಅರಸಿನವರು ನಿನ್ನೆ ತೀರ್ಪು ಕೊಟ್ಟು ಠೇವಣಿಯನ್ನು ಕೇಳಿರುವುದು ಕ್ರಮ ಬದ್ಧವಾಗಿಲ್ಲವೆಂದು ಆಜ್ಞೆ ಮಾಡಿರುತ್ತಾರೆ.

ರಷ್ಯದಲ್ಲಿ ೧೪೦ ಲಕ್ಷ ಮಂದಿ ಗುಲಾಮರು

ರಷ್ಯದಲ್ಲಿ ಈಗ ೧೦ ರಿಂದ ೧೫ ಕೋಟಿ ನಲವತ್ತು ಲಕ್ಷದಷ್ಟು ಜನರನ್ನು ಗುಲಾಮತನ ಉದ್ಯೋಗಕ್ಕೆ ನಿಯಮಿಸಲಾಗಿದೆಯೆಂದೂ, ಅಲ್ಲಿ ಒಬ್ಬೊಬ್ಬರಿಗೂ ಗುಲಾಮಗಿರಿಯು ಇರುವುದಕ್ಕೆ ಅನೇಕ ಆಧಾರಗಳಿವೆಯೆಂದೂ ಪ್ರಪಂಚ ಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಭೆಯ ಮುಂದೆ ಅಮೇರಿಕೆದ ಪ್ರತಿನಿಧಿ ದೂರು ಕೊಟ್ಟಿದ್ದಾರೆ.

ರೈಲ್ವೆ ಮುಷ್ಕರವು ನಡೆಯಲಾರದು

ಅಖಿಲ ಭಾರತ ರೈಲ್ವೆ ಕೆಲಸಗಾರರ ಫೆಡರೇಷನ್ನಿನ ಅಧ್ಯಕ್ಷರಾದ ಶ್ರೀ ಜಯಪ್ರಕಾಶ ನಾರಾಯಣರವರು ನಿನ್ನೆ ಪಾಟ್ನಾ ಒಳ ಬಾಗಲ್ ನಲ್ಲಿ ನಡೆದ ಸಭೆಯಲ್ಲಿ ಭಾಷಣ ಮಾಡುತ್ತಾ, ರೈಲ್ವೆ ನೌಕರರ ಮುಷ್ಕರ [illegible] ನೋಟೀಸ್ ಕೊಡಬಾರದೆಂದೂ, ಅವರಿಗೆ ಈಗ ದೊರೆತಿರುವ ಸೌಲಭ್ಯಗಳನ್ನು ಉಳಿಸಿಕೊಂಡು, ಸಂಘದ ಬಲವನ್ನು ಹೆಚ್ಚಿಸಿಕೊಳ್ಳಬೇಕೆಂದೂ, ರೈಲ್ವೆ ಸಚಿವರು ಕೊಟ್ಟಿರುವ ಭರವಸೆಯನ್ನು [illegible] [illegible]

ಕರ್ನಾಟಕ ಪ್ರಾಂತ್ಯ ರಚನೆಬಗ್ಗೆ ಅಭಿಪ್ರಾಯ ಕೊಡಕೂಡದು

ಕಾಂಗ್ರೆಸ್ ನಾಯಕರುಗಳಿಗೆ ವಿ. ಪಿ. ಮೆನನ್ನರವರ ಸೂಚನೆ

ಬೆಂಗಳೂರು ೧೭.

ಭಾಷಾವಾರು ಪ್ರಾಂತ್ಯ ರಚನೆ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ಸಿನವರು ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಿರುವುದರಿಂದ ಕರ್ನಾಟಕ ಪ್ರಾಂತ್ಯ ಸ್ಥಾಪನೆ ಬಗ್ಗೆ ಪರ ಅಥವ ವಿರೋಧವಾಗಿ ಅಭಿಪ್ರಾಯವನ್ನು ಯಾವ ಕಾಂಗ್ರೆಸ್ ನಾಯಕರುಗಳು ಸೂಚಿಸಕೂಡದೆಂದು, ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು, ಮುಖ್ಯ ಮಂತ್ರಿಗಳಿಗೂ ಶ್ರೀ ವಿ ಪಿ ಮೆನನ್ನರವರು ಪತ್ರವೊಂದನ್ನು ಬರೆದಿರುವರೆಂದೂ, ಅದನ್ನು ಮೊನ್ನೆ ನಡೆದ ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯಲ್ಲಿ ಚರ್ಚಿಸಲಾಯಿತೆಂದೂ ತಿಳಿದುಬಂದಿದೆ.

ಬಾಲ್ಟಿಕ್ ತೀರದಲ್ಲಿ ರಷ್ಯದ ಮಿಲಿಟರಿ ಕೇಂದ್ರಗಳು

ಯೂರೋಪಿನ ಬಾಲ್ಟಿಕ್ ತೀರ ಪ್ರದೇಶದಲ್ಲಿ ರಷ್ಯವು ಬಲವಾದ ಮಿಲಿಟರಿ ರಕ್ಷಣಾ ಕೇಂದ್ರಗಳನ್ನು [illegible] ಅಲ್ಲಿ ಹೆಚ್ಚು ಸೈನ್ಯವನ್ನು ಜಮಾಯಿಸುತ್ತಿದೆಯೆಂದು ವರದಿಯಾಗಿದೆ. ವಿಮಾನ ಮತ್ತು ರೈಲ್ವೆ ನಿಲ್ದಾಣಗಳು, ಗ[illegible] ಟ್ಯಾಂಕು ಡಿಪೋಗಳನ್ನು [illegible] ಸ್ಥಾಪಿಸಲಾಗುತ್ತಿದೆಯೆಂದೂ, ದಕ್ಷಿಣ ಎಸ್ಟೋನಿಯಾದಲ್ಲಿ ವಿ-೨ ಬಾಂಬುಗಳನ್ನು ಪ್ರಯೋಗಿಸಲು ನಿಲ್ದಾಣಗಳನ್ನು ಕಟ್ಟಲಾಗುತ್ತಿದೆಯೆಂದೂ ಹೇಳಲಾಗಿದೆ.

ಪರೀಕ್ಷಕರ ನೇಮಕದಲ್ಲಿ ಪಕ್ಷಪಾತವಿರಕೂಡದು

ಬೆಂಗಳೂರು ೧೭.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಗೆ ಪರೀಕ್ಷಕರನ್ನು ನೇಮಿಸುವ ವಿಷಯದಲ್ಲಿ ಸೆಕೆಂಡರಿ ವಿದ್ಯಾಭ್ಯಾಸ ಬೋರ್ಡಿನವರು ಹಿಂದುಳಿದ ಪಂಗಡದವರ ಬಗ್ಗೆ ಇತ್ತ ಸೂಚನೆ ವಿಚಾರದಲ್ಲಿ ತನಿಖೆ ನಡೆಸಿ ಸರಕಾರದವರು [illegible] ಯನ್ನು ಹೊರಡಿಸಿರುತ್ತಾರೆ.

ಹಿಂದುಳಿದ ಪಂಗಡದವರಿಂದ ಕೇವಲ [illegible] ಅರ್ಜಿಗಳ [illegible] ಬೋರ್ಡಿನವರಿಗೆ ಬಂದ[illegible] ಅನುಭವವಿರುವವರನ್ನು ಮಾತ್ರ ಪರೀಕ್ಷಕರನ್ನಾಗಿ [illegible] ನೇಮಿಸುವ[illegible] [illegible] ಪಂಗಡದವರಿಂದ ಅರ್ಜಿಗಳನ್ನು [illegible] ಯಿತೆಂದೂ [illegible] ಇವರ ಮೇಲೆ ಸರ್ಕಾರದವರು [illegible] ನಡೆಸಿ, ಇಂತಹ [illegible] ಯು ಅವಳಿ [illegible] ಇದ್ದರೂ [illegible] ಪಕ್ಷಪಾತವಿಲ್ಲದೆ [illegible] ದಕ್ಷತೆ ಮತ್ತು ನಿಷ್ಪಕ್ಷಪಾತ [illegible] [illegible]

○ ಭಾರತದ [illegible]

ಅಂಚೆ ಮುಷ್ಕರ ಮುಂದಕ್ಕೆ ಹೋಯಿತು

ಭಾರತ ಸರ್ಕಾರದ ಸಂಚಾರ ಮಂತ್ರಿಗಳಾದ ರ. ಅಹಮದ್ ಕಿದ್ವಾಯಿಯವರೊಡನೆ ಮಾತುಕತೆಯಾದ ಫಲವಾಗಿ ಅ॥ ಭಾ ಅಂಚೆ ಕೆಲಸಗಾರರ ಕಾರ್ಯಕಾರಿ ಸಮಿತಿಯು ಮುಷ್ಕರ ಹೂಡುವುದನ್ನು ಮುಂದಕ್ಕೆ ಹಾಕಿತು. ಮಂತ್ರಿಗಳು ಅವರ ಬೇಡಿಕೆಗಳಲ್ಲಿ ಮುಖ್ಯವಾದವುಗಳೆಲ್ಲವನ್ನೂ ಅಂಗೀಕರಿಸಿ ಮಾಡಿಕೊಡುವುದಾಗಿ ಭರವಸೆ ಕೊಟ್ಟರೆಂದು ಹೇಳಲಾಗಿದೆ

ಹೈದರಾಬಾದ್ ಸರ್ಕಾರದ ವಿಸ್ತರಣ

ಹೈದರಾಬಾದಿನಲ್ಲಿ ಈಗಿರುವ ಮಿಲಟರಿ ಸರ್ಕಾರವನ್ನು ವಿಸ್ತರಿಸಿ, ೪ ಅಥವ ೫ ಜನ ಪ್ರಜಾ ನಾಯಕರನ್ನು ಮಂತ್ರಿಗಳನ್ನಾಗಿ ತೆಗೆದುಕೊಳ್ಳಲು ಭಾರತ ಸರ್ಕಾರದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ

ಪ್ರಯಾಣಿಕರು ರೈಲು ನಿಲ್ಲಿಸಿ ಅಕ್ಕಿ ಸಾಗಿಸಿದರು

ಸುಮಾರು ನೂರು ಜನ ಪ್ರಯಾಣಿಕರು ಸೇಲಂ ಹತ್ತಿರ ಅತ್ತೂರು ಎಂಬಲ್ಲಿ ರೈಲು ಹತ್ತಿ ಚೆಕ್ಕ ಸ್ಟೇಷನ್ ಒಂದರಲ್ಲಿ ಇಳಿದು, ರೈಲಿನವರನ್ನು ಹೆದರಿಸಿ, ನೂರು ಅಕ್ಕಿ ಚೀಲಗಳನ್ನು ಸಾಗಿಸಿಕೊಂಡು ಹೋದರು

ಮದ್ರಾಸಿಗೊಂದು ಉಕ್ಕಿನ ಕಾರ್ಖಾನೆ

ಬಳ್ಳಾರಿ ಜಿಲ್ಲೆಯ ಪ್ರದೇಶದಲ್ಲಿ ...ದೂರಿನ ಹತ್ತಿರ ಉಕ್ಕಿನ ಕಾರ್ಖಾನೆಯನ್ನು ಮದ್ರಾಸು ಸರ್ಕಾರವು ಸ್ಥಾಪಿಸಲು ಆಲೋಚಿಸಿದೆ ಈ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ಕೇಳಲಾಗಿದೆ.

ರಷ್ಯದಲ್ಲಿ ಅಮೆರಿಕದ ಮಹಿಳೆಯ ದಸ್ತಗಿರಿ

ಅಮೆರಿಕಾ ದೇಶದ ಗ್ರಂಥಕರ್ತೃ ... ನಾಸ್ಟ್ರಾಂಗ್ ಎಂಬುವಳನ್ನು ರಷ್ಯದ ಪೋಲೀಸರು ದಸ್ತಗಿರಿಮಾಡಿದ್ದಾರೆ. ಅವಳು ರಷ್ಯದಲ್ಲಿ ಗೂಢಚಾರಿಣಿಯೆಂತ ವರ್ತಿಸಿದಳೆಂದು ಹೇಳಲಾಗಿದೆ ಅವಳನ್ನು ... ದೇಶದಿಂದ ಗಡೀಪಾರು ಮಾಡಲಾಗುತ್ತದೆ

ಚೀಣಾ ಪ್ರಧಾನರ ರಾಜೀನಾಮೆ

ಚೀಣದ ಪ್ರಧಾನರಾದ ಡಾ॥ ಸ... ರವರು ರಕ್ಷಣ ಇತ್ತೆಹದ ... ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತರು.

THE

ELITE' HAIR-DRESSERS

Dhanavanthary Road, MYSORE

(Rahmania Building)

Have great pleasure to announce the opening of the most MODERN HAIR CUTTING SALOONS in Mysore

They offer cleanliness, courteous treatment and moderate charges together with Stylish Hair-dressing

YOUR PATRONAGE IS SOLICITED

ಪ್ರತಿ ದಿನ ೩ ಆಟಗಳು

18-2-49ನೇ ಶುಕ್ರವಾರದಿಂದ ಭಾಗ್ಯ ಚಿತ್ರದವರ

ಲಾಲಚ್

ಪಾತ್ರ ಭಗವಾನ್, ಬಾಬುರಾವ್ ಉಪ

ಒಲಂಪಿಯಾ ಟಾಕೀಸ್

ಪ್ರಭಾ★18-2-49 ರಿಂದ

ಪ್ರತಿದಿನ ೩ ಆಟಗಳು

ಪ್ರಭಾತ ರವರ **ಆಗೇ ಬಡೋ**

ಸುರೈಯಾ, ದೇವಾನಂದ್ ನಟಿಸಿರುವ ಹಿಂದಿ ಚಿತ್ರ

ಇದರೊಂದಿಗೆ ಸ್ವತಂತ್ರ ಭಾರತದ ನ್ಯೂಸ್ ರೀಲನ್ನು ಪ್ರದರ್ಶಿಸಲಾಗುತ್ತದೆ

AAGE BADHO

18-2-49 ರಿಂದ

ಅಮೋಘವಾದ ೨ನೇ ವಾರ

ರಾಜಕಮಲ್,

ವೈ ಷ್ ರ.

ದಿನವಹಿ ೩ ಆಟಗಳು

ಮ್ಯಾಟಿನಿ ೩-೩೦ ಸಂಜೆ ೬-೩೦ ಮತ್ತು ರಾತ್ರಿ ೯-೩೦ ಗಂಟೆಗೆ

ಆದಿತ್ತನ ಕನವು

(ತಮಿಳು)

ಪಾತ್ರ ಟಿ.ಆರ್. ಮಹಾಲಿಂಗಂ ಅಂಜಲಿದೇವಿ, ಕಾಳಿ ಎನ್.ರತ್ನಂ, ತಾರಾ ಚೌಧುರಿ, ಲಲಿತಾ ಪದ್ಮಿನಿ.

Morning Shows from 18-2-49 for 4 days

Marie Walewaska

With - Charles Boyer Greta Garbo

ಚಾಮುಂಡೇಶ್ವರೀ ಟಾಕೀಸ್

18-2.49 ರಿಂದ ಪ್ರತಿ ದಿನ ೩ ಆಟಗಳು

The Three MUSKETERS

(ದಿ ತ್ರೀ ಮಸ್ಕೆಟಿಯರ್ಸ್)

(By Alexander Dumast with - John Wayne, Ruth Hall and a host of others

A Soul-stirring Thrilling Drama

Morning Shows on 18th, 19th & 20th at 10-30 a. m.

SEA OF GRASS

Starrrng - Spencer Tracy, Katharine Hepburn, Robert Walker Melwyn Douglas

Miss not to see this Spectacular M G M's Dramatization.

Next Morning Show SONG OF SCHERAZADE

Make a note to see the SREE GANESHA TALKIES on 18th, 19th and 20th at 10-15 a. m.

Dick Tracey Returns

Starring - Ralph Byrd, Lynn Roberts

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಪ್ರದರ್ಶನಗಳು

ಕಡೇ ದಿನ

ಲೌಸ್ ಆಫ್ ಕಾರ್ಮೆನ್

18-2-49 ರಿಂದ ೨-ದಿನಗಳು ಮಾತ್ರ

THE BACHELOR AND THE BOBBY SOXER

(ದಿ ಬ್ಯಾಚಿಲರ್ ಅಂಡ್ ದಿ ಬಾಬಿ ಸಾಕ್ಸರ್)

ಪಾತ್ರ.—ಷರ್ಲಿ ಟೆಂಪಲ್

Morning Shows on 19th Sat. and 20th Sun 20th's

Diamond Horse-shoe

In Technicolor

ಅಕ್ಷದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಇಂದೇ ಭೇಟಿ ಕೊಡಿ

ಉದ್ದವಾದ ಮೈಸೂರು ರೇಷ್ಮೆಯಲ್ಲಿ ಸ್ವಂತ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ ಆರ್ನಿ ಸೀರೆ, ರವಿಕೆಖಣಗಳು ಸೀರೆಗಳು, ಕಲಾಬತ್ತು ಜರಿಗಳು ಮುಂತಾದುವುಗಳು ಸಹ ದೊರೆಯುತ್ತವೆ

ಬೆಂಗಳೂರು ಜವಳಿ ಅಂಗಡಿ

... ಮೈಸೂರು

ದ್ವಾರಕಾದೇವಾ ಟಾಕೀಸಿನಲ್ಲಿ

18-2-49ನೇ ಶುಕ್ರವಾರದಿಂದ

ದಿನವಹಿ ಮೂರು ಆಟಗಳು

ಜೆಮಿನಿ ಪಿಕ್ಚರ್ಸ್ ರವರ

ಮಾರಿಯಮ್ಮ

ತಮಿಳು ಭಾಷೆ

ಪಾತ್ರ ಸಂತಾನಲಕ್ಷ್ಮಿ, ಟಿ.ಎಸ್. ಬಾಲಯ್ಯ, ಕಾಳಿ ಎನ್. ರತ್ನಂ ಮುಂತಾದವರು

Edited printed and published by ... V R Nagarajan at the Sadhvi Press D Subbaiah Road Mysore

ಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ದಿನಾಂಕ ೧೯-೩-೧೯೫೪ [ಸಂಚಿಕೆ ೧೫೭

ಬೆಳಗೊಳದ ಮುಷ್ಕರ ಕಾರರಿಗೆ ನೋಟೀಸ್

ಮೈಸೂರು ೧೯

...ಕಳೆದ ೫ ತಿಂಗಳಿನಿಂದಲೂ ಮುಷ್ಕರ ...ಹೂಡಿರುವ ಬೆಳಗೊಳದ ಕಾರ್ಖಾನೆಯ ...ಕರಿಗೆ ಅಲ್ಲಿನ ಅಧಿಕಾರ ವರ್ಗದವ ...ನೋಟೀಸ್ ಕೊಟ್ಟು, ೧೫ ದಿನಗಳೊ ...ಗಾಗಿ ಕೆಲಸಗಾರರು ಕೆಲಸಕ್ಕೆ ಹಿಂತಿರು ...ಗಿದ್ದರೆ ನೂ, ಇಲ್ಲದಿದ್ದಲ್ಲಿ ಅವರುಗಳನ್ನು ...ಡಿಸಲಾಗುವುದೆಂದೂ ತಿಳಿಸಿರು ...ರೆ

ಶ್ರೀ ಮುರಘರಾಜೇಂದ್ರ ಸ್ವಾಮಿಗಳ ಸ್ವರ್ಣ ಮಹೋತ್ಸವ

...ಚಿತ್ರದುರ್ಗದ ಬೃಹನ್ಮಠದ ಶ್ರೀ ನಿರಂ ...ನ ಜಾದ್ಗುರು ಜಯದೇವ ಮುರಘರಾ ...ದ್ರ ಸ್ವಾಮಿಗಳ ಸ್ವರ್ಣ ಮಹೋತ್ಸ ...ವು ೧೬ನೇ ದಿನ ವಿಜೃಂಭಣೆಯಿಂದ ನಡೆ ...ತು ಈ ಸಮಾರಂಭಕ್ಕೆ ದಿವಾನರೂ, ...ಗಳಾದ ಶ್ರೀಗಳು ಹೆಚ್. ಸಿದ್ದ ...ಯ್ಯ ಹೆಚ್. ಚಂದ್ರಶೇಖರಯ್ಯ, ...ಚನ್ನಿಗರಾಮಯ್ಯ, ಎಸ್. ನಿಜಲಿಂ ...ಪ್ಪ ಮತ್ತು ಇನ್ನೂ ಅನೇಕ ಗಣ್ಯ ಮಹ ...ಯರುಗಳು ದಯಮಾಡಿಸಿದ್ದರು.

...ಸುಂದರವಾಗಿ ಅಲಂಕರಿಸಲ್ಪಟ್ಟಿದ್ದ ಪೆ ...ಯ ಪಲ್ಲಕ್ಕಿಯಲ್ಲಿ ಶ್ರೀ ಶ್ರೀಗಳವರಮೆರವ ...ಗೆ ನಡೆಯಿತು. ನಂತರದರ್ಬಾರಿನ ...ಗಿತ ಶ್ರೀ. ಪಿ. ವೀರಬಸಪ್ಪನವರು ಒಂ ...ಭಿನಂದನ ಪತ್ರವನ್ನು ಅರ್ಪಿಸಿ, ಕಳೆದ ...ವರ್ಷಗಳಿಂದ ವೀರಶೈವ ಧರ್ಮಕ್ಕೂ ...ಮತ್ತು ದೇಶಕ್ಕೂ ಶ್ರೀ ಶ್ರೀಗಳವರು ಸಲ್ಲಿಸಿ ...ಸೇವೆಯನ್ನು ಪ್ರಶಂಸಿಸಿದರು.

...ನಿನ್ನೆ ದಿನ ಧಾರವಾಡ ಜಿಲ್ಲೆಯ ನವಲ ...ಂದ ತಾಲ್ಲೂಕು ಅಂಡಿಮಾದ ಗ್ರಾಮದ ...ಮಠದ ಶ್ರೀ. ಶಿವಲಿಂಗದೇವರು ...ಗೆ ಶ್ರೀ ಮಠದ ಉತ್ತರಾಧಿಕಾರ ಮ ...ತ್ಸವವು ನಡೆಯಿತು.

ವಿವಾಹ ಮಹೋತ್ಸವಗಳು

ಮೈಸೂರು ಅರಮನೆ ...ಜನಿಯರಾದ ...ಎಲ್. ರಾಜುರವರು ತಮ್ಮ ...ಪುತ್ರಿ ಚಿ॥ ಸೌ॥ ಚಂದ್ರಾವತಮ್ಮನನ್ನು ... ನವರಾಜುರವರ ಪುತ್ರ ಶ್ರೀ ಚಿ॥ ...ರ ರಾಜುರವರಿಗೆ ಕೊಟ್ಟು ವಿ ...ವನ್ನು ನಿನ್ನೆ ...ರಾಜಧಾನಿಯಲ್ಲಿ ನೆರ ...ರು.

...ರವರ ಟ್ರಿಜರರ್ ಶ್ರೀ ಎಸ್. ನಾಗ ...ನವರು ತಮ್ಮ ಸಹೋದರ ಚಿ॥ ಸೌ॥ ...ನ್ನನ್ನು ಕೊಳ್ಳೇಗಾಲ ತಾಲ್ಲೂ ...ದ ಶ್ರೀ ಕೃಷ್ಣಪ್ಪನವರ ಪುತ್ರ ... ಗೋವಿಂದರಾಜ್‌ರವರಿಗೂ, ...ತಮ್ಮ ಸಹೋದರ ಶ್ರೀ ಕಾಳಿಂಗ ...ನವರ ಪುತ್ರಿ ಚಿ॥ ಸೌ॥ ಲಕ್ಷ್ಮಮ್ಮನ ...ಬೆಂಗಳೂರಿನ ಶ್ರೀ ಕೆ ರಾಮಸ್ವಾಮಿ ...ನವರ ಪುತ್ರ ಶ್ರೀ ಕೆ. ನಾಗರಾಜ ...ರಿಗೆ ಕೊಟ್ಟು ವಿವಾಹವನ್ನು ರಾಜ ...ನಿಯಲ್ಲಿ ಮೊನ್ನೆ ದಿನ ನಡೆಸಿದರು.

...ಡು ಶ್ರೀ ಲಿಂಗಾಭಟ್ಟರು ತಮ್ಮ ...ಸೌ॥ ಅಂಬಾರವರನ್ನು ತಮ್ಮ ...ಕೆ ನಾಡಿಗ ಸುಬ್ಬರಾಯರ ಪುತ್ರ ...ರಾಜರವರಿಗೆ ಕೊಟ್ಟು ವಿವಾಹ ...ತಲಕಾಡಿನಲ್ಲಿ ಮೊನ್ನೆ ನೆರವೇರಿ ...

ಪಿ. ಸೀತಾರಾಮಯ್ಯನವರ ರಾಜೀನಾಮೆ ವಾಪಸು

ಮೈಸೂರು ೧೯

ಪುರಸಭೆಯ ಸದಸ್ಯತನಕ್ಕೆ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ರಾಜೀನಾಮೆ ಕೊಟ್ಟ ವಿಷಯವು ಮೊನ್ನೆ ನಡೆದ ಪುರಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಪರಿಶೀಲನೆಗೆ ಬಂದಾಗ, ಅದನ್ನು ಶ್ರೀಯುತರು ಹಿಂತ್ತೆಗೆಯ ಒಪ್ಪಿಕೊಂಡರೆಂದು ತಿಳಿದು ಬಂದಿದೆ.

ರೈತರಿಗೆ ಬಂದೂಕದ ಲೈಸೆನ್ಸ್

ಸಂಸ್ಥಾನದ ಮಲನಾಡು ಮತ್ತು ಅರಣ್ಯ ಪ್ರದೇಶಗಳಲ್ಲಿರುವ ರೈತರು ತಮ್ಮ ಪೈರುಗಳನ್ನು ಕಾಪಾಡುವುದಕ್ಕಾಗಿ ಬಂದೂಕ ವನ್ನಿಟ್ಟುಕೊಳ್ಳಲು ರಹದಾರಿಯನ್ನು ಜಮೀನುದಾರರುಗಳ ಆಕ್ಷೇಪಣೆ ಇಲ್ಲದಿದ್ದರೆ ಅವರು ಸ್ವತಃ ಜಮೀನು ಸಾಗುವಳಿ ಮಾಡದಿದ್ದರೂ ರಹದಾರಿಯನ್ನು ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸರ್ಕಾರದವರು ಸೂಚನೆ ಕೊಟ್ಟಿರುತ್ತಾರೆ.

ಟಿಕೆಟ್ ಕಲೆಕ್ಟರಿಂದ ಪಾರಾಗುವ ಪ್ರಯತ್ನದಲ್ಲಿ ಮರಣ

ಮೊನ್ನೆ ಸಂಜೆ ಮಂಡ್ಯದಿಂದ ರೈಲಿನಲ್ಲಿ ಟಿಕೇಟು ಇಲ್ಲದೆ ಪ್ರಯಾಣ ಮಾಡುತ್ತಿದ್ದವನೊಬ್ಬನು ಟಿಕೆಟ್ ಕಲೆಕ್ಟರ್ ... ಗೆ ಬಂದಾಗ, ಅವನಿಂದ ತಪ್ಪಿಸಿಕೊಳ್ಳಲು ಓಡುತ್ತಿದ್ದ ಗಾಡಿಯಿಂದ ಕೆಳಕ್ಕೆ ... ಗೆ ಫುಟ್ ಬೋರ್ಡಿನ ಮೇಲಿಂದ ... ಯತ್ನಿಸಿ ಕೆಳಕ್ಕೆ ಬಿದ್ದುದರಿಂದ ಅವನಿಗೆ ತೀವ್ರ ಗಾಯವಾಯಿತೆಂದೂ, ನಂತರ ಅವನನ್ನು ಮಂಡ್ಯದ ಆಸ್ಪತ್ರೆಗೆ ದಾಖಲು ಮಾಡಲಾಯಿತೆಂದೂ, ಅದರೆ ಅಲ್ಲಿ ಅತನು ಮೃತಪಟ್ಟನೆಂದೂ ವರದಿಯಾಗಿದೆ.

ತರುಣಿಯು ನಿರ್ಲಕ್ಷಿಸಿದುದರಿಂದ ರೈಲಿಗೆ ಸಿಕ್ಕಿ ಆತ್ಮಹತ್ಯೆ

ಕರ್ನೂಲಿನ ಹೈಸ್ಕೂಲ್ ವಿದ್ಯಾರ್ಥಿಯೊಬ್ಬನು ಅದೇ ಶಾಲೆಯ ವಿದ್ಯಾರ್ಥಿನಿಯೊಬ್ಬಳಿಗೆ ಪ್ರೇಮ ಪತ್ರವನ್ನು ಬರೆದು ಅದಕ್ಕೆ ಆಕೆಯಿಂದ ಉತ್ತರ ಬರಲಿಲ್ಲವಾದುದರಿಂದ ಜೀವನದಲ್ಲಿ ಜಿಗುಪ್ಸೆಗೊಂಡು ರೈಲ್ವೆ ... ಮೇಲೆ ಮಲಗಿ ರೈಲಿಗೆ ಸಿಕ್ಕಿ ... ಮತನಾದನೆಂದು ವರದಿಯಾಗಿದೆ.

ಸೆರಿಂಗಪಟಾಂ ಬದಲು ಶ್ರೀರಂಗಪಟ್ಟಣ

ಸರ್ಕಾರಿ ... [illegible]

ಸಂಸ್ಥಾನದ ಅಭಿವೃದ್ಧಿ ಯೋಜನೆಗಳಿಗಾಗಿ ೧೮೫ ಕೋಟಿ ರೂ

ಸ್ವಂ ಸು ಫೋ॥] ಬೆಂಗಳೂರು ೧೯

ಬೆಂಗಳೂರಿಗೆ ಆಗಮಿಸಿರುವ ವಿಶ್ವ ಬ್ಯಾಂಕಿನ ಪ್ರತಿನಿಧಿಗಳೊಡನೆ ಮಂತ್ರಿ ಮಂಡಲದವರು ಸಮಾಲೋಚನೆ ನಡೆಸಿ, ಒಂದು ವಿವಿಧ ಮನಃಪಟ್ಟಿಯನ್ನು ಸಲ್ಲಿಸಿದರೆಂದೂ, ಇನ್ನು ೧೦-೧೫ ವರ್ಷಗಳಲ್ಲಿ ಮಾಡಬೇಕೆಂದಿರುವ ಕೈಗಾರಿಕೆಗಳ ಯೋಜನೆಗಳಿಗಾಗಿ ಬ್ಯಾಂಕಿನವರು ಸಂಸ್ಥಾನಕ್ಕೆ ೧೮೫ ಕೋಟಿ ರೂ ಧನವನ್ನು ಒದಗಿಸಬೇಕೆಂದು ಬೇಡಿರುವರೆಂದೂ ತಿಳಿದುಬಂದಿದೆ.

ದೋಸೆ ಮಾಡಿದುದಕ್ಕೆ ಜುಲ್ಮಾನೆ

ಇಲ್ಲಿ ಗೋಕುಲ ರೆಸ್ಟೋರೆಂಟಿನವರು ಆಹಾರ ಹತೋಟಿ ಕಾನೂನನ್ನು ಉಲ್ಲಂಘಿಸಿ, ಅಕ್ಕಿಯಿಂದ ದೋಸೆ ಹಿಟ್ಟನ್ನು ತಯಾರಿಸಿದರೆಂದು ಅವರಿಗೆ ನಗರದ ನ್ಯಾಯಾಧೀಶರು ೨೦೦ ರೂ.ಗಳ ದಂಡ, ತಪ್ಪಿದರೆ ಒಂದು ತಿಂಗಳು ಸಾದಾ ಸಜಾ ವಿಧಿಸಿದ್ದಾರೆ.

ಶ್ರೀಶೈಲಕ್ಕೆ ಹೋಗುವ ಯಾತ್ರಿಕರಿಗೆ ಇನಾಕ್ಯುಲೇಷನ್

ಕರ್ನೂಲ್ ಜಿಲ್ಲೆಯ ಶ್ರೀ ಶೈಲದ ಅಕ್ಕಪಕ್ಕದ ಪ್ರದೇಶದಲ್ಲಿ ಕಾಲರಾ ರೋಗವಿರುವುದರಿಂದ ಅಲ್ಲಿ ನಡೆಯಲಿರುವ ಮಹಾ ಶಿವರಾತ್ರಿ ಉತ್ಸವಕ್ಕೆ ಹೋಗುವ ಜನರು ಇನಾಕ್ಯುಲೇಷನ್ ಮಾಡಿಸಿಕೊಂಡು ಅಲ್ಲಿಗೆ ಹೋಗಬೇಕೆಂದು ಸರ್ಕಾರದವರು ಸೂಚನೆ ಕೊಟ್ಟಿರುತ್ತಾರೆ.

ಭೂಪಾಲ್ ಆಡಳಿತ ಕೇಂದ್ರ ಸರ್ಕಾರಕ್ಕೆ

ಭೂಪಾಲ್ ಸಂಸ್ಥಾನದ ಆಡಳಿತವನ್ನು ಕೆಲವು ಕಾಲ ಭಾರತ ಸರ್ಕಾರದವರೇ ವಹಿಸಿಕೊಳ್ಳುವರೆಂದು ತಿಳಿಯಬರುತ್ತದೆ. ಆ ಸಂಸ್ಥಾನವನ್ನು ಮಧ್ಯ ಭಾರತ ಯೂನಿಯನ್ನಿನಲ್ಲಿ ಸೇರಿಸುವ ಬಗ್ಗೆ ಬಂದ ಭಿನ್ನಾಭಿಪ್ರಾಯವು ನಿವಾರಣೆಯಾಗುವವರೆಗೆ ಈ ಹೊಸ ಏರ್ಪಾಡು ಆಗುವುದು.

ಬೆಂಕಿ ಅನಾಹುತ

ಇದೇ ತಿಂಗಳ ೧೧ನೆಯ ತಾರೀಖು ಬೆಳಗಿನ ಜಾವ ೩ ಘಂಟೆಯ ... [illegible]

ನೂತನ ಗ್ರಾಮಾಭಿವೃದ್ಧಿ ಯೋಜನೆ

ಸ್ವ. ಸು ಫೋ॥] ಬೆಂಗಳೂರು ೧೯

ಸರ್ಕಾರದವರು ಕೈಗೊಳ್ಳಲಿರುವ ಹೊಸ ಗ್ರಾಮಾಭಿವೃದ್ಧಿ ಯೋಜನೆಯ ವಿವರಗಳನ್ನು ಈ ದಿನ ಬೆಳಿಗ್ಗೆ ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ೧೯೫೨ ಮತ್ತು ೫೩ ನೇ ಇಸವಿಗಳಲ್ಲಿ ಸರ್ಕಾರದವರು ಕೈಗೊಂಡಿದ್ದ ಗ್ರಾಮಾಭಿವೃದ್ಧಿ ಯೋಜನೆಯು ಫಲಕಾರಿಯಾಗದಿದ್ದುದರಿಂದ ಇನ್ನೂ ಹೆಚ್ಚು ಪ್ರಭಾವಶಾಲಿಯಾದ ಯೋಜನೆಯನ್ನು ಈಗ ಸಿದ್ಧಗೊಳಿಸಲಾಗಿದೆ. ಮುಖ್ಯವಾಗಿ ಗ್ರಾಮಸ್ಥರೇ ತಮ್ಮ ತಮ್ಮ ಊರಿನ ಉನ್ನತಿಯನ್ನು ಸಾಧಿಸಬೇಕು. ಸರ್ಕಾರದವರು ಅವರಿಗೆ ಬೇಕಾದ ನೆರವನ್ನು ನೀಡುವರು. ತಾಲ್ಲೂಕು ಸಮಿತಿಗಳವರು ಸಾವಿರ ರೂ.ವರೆವಿಗೂ, ಜಿಲ್ಲಾ ಸಮಿತಿಗಳವರು ೫ ಸಾವಿರ ರೂ.ವರೆವಿಗೂ ವೆಚ್ಚ ಮಾಡಲು ಅಧಿಕಾರ ಕೊಡಲಾಗುವುದು. ಹಳ್ಳಿಗಳಲ್ಲಿ ಅಂತಃಕಲಹ ಮತ್ತು ಗಲಭೆಗಳನ್ನು ಎಬ್ಬಿಸಲು ಕಾರಣಕರ್ತರಾದ ಪುಂಡರ ಪಟ್ಟಿಯನ್ನು ತಯಾರಿಸಿ, ಅವರುಗಳನ್ನು ಬಂದೋಬಸ್ತಿನಲ್ಲಿಡಲಾಗುವುದು. ಈ ಯೋಜನೆಗೆ ಒಟ್ಟು ೨೫ ಲಕ್ಷ ರೂ ಖರ್ಚಾಗುವುದು. ಸಿಬ್ಬಂದಿ ವರ್ಗದವರ ಏಳಿಗೆಯ ಕಾರ್ಯವನ್ನು ಈ ಸಮಿತಿಗಳಿಗೆ ವಹಿಸಲಾಗುವುದು. ಅದಕ್ಕಾಗಿ ಈಗ ಪ್ರತ್ಯೇಕವಾಗಿ ರಚಿಸಿರುವ ಸಮಿತಿಯನ್ನು ರದ್ದು ಮಾಡಲಾಗುವುದು. ಪೂರ್ವ ಕಾಲದಲ್ಲಿದ್ದಂತೆ ಗ್ರಾಮಗಳು ಸ್ವಯಂಪೂರ್ಣವಾಗಿರುವ ಹಾಗೆ ಮಾಡಲು ಪ್ರಯುಕ್ತಿಸಲಾಗುವುದು--ಎಂಬುದಾಗಿ ಸಚಿವರು ತಿಳಿಸಿದರು.

ಮಾರ್ಚಿ ೭ ನೇ ತಾ॥ ಒಂದೊಂದು ಜಿಲ್ಲಾ ಕೇಂದ್ರದಲ್ಲಿಯೂ ಒಬ್ಬೊಬ್ಬ ಮಂತ್ರಿಗಳು ಈ ಯೋಜನೆಯ ಆರಂಭೋತ್ಸವವನ್ನು ನಡೆಸುವರು. ಬೆಂಗಳೂರಿನಲ್ಲಿ ಪ್ರಧಾನಮಂತ್ರಿಗಳೂ, ಮೈಸೂರಿನಲ್ಲಿ ಆರೋಗ್ಯ ಸಚಿವರು ಇದರಲ್ಲಿ ಭಾಗವಹಿಸುವರು. ಇದೇ ಸಂದರ್ಭದಲ್ಲಿಧಾನ್ಯಸಂಗ್ರಹದ ಕಾರ್ಯಕ್ರಮವನ್ನೂ ಸಹ ಒಂದು ವಾರ ಕಾಲ ಕೈಗೊಳ್ಳಲಾಗುವುದು.

ಕಮ್ಯೂನಿಸ್ಟರುಗಳ ದಸ್ತಗಿರಿ

ಮೈಸೂರು ೧೯

ಕೆಲವು ದಿನಗಳ ಹಿಂದೆ ಬಂಧಿಸಲ್ಪಟ್ಟು ಬಿಡುಗಡೆ ಹೊಂದಿದ್ದ ಕಮ್ಯೂನಿಸ್ಟರುಗಳಾದ ಶ್ರೀಗಳು ಎಂ. ಎಸ್. ರಾಮರಾವ್ ಎಂ. ಆರ್. ರಾಜಶೇಖರಯ್ಯ, ಅನಂತಸ್ವಾಮಿ, ಉಗ್ರಪ್ಪ ಮತ್ತು ವಿಠ್ಠಲರಾವ್ ಇವರುಗಳನ್ನು ಪುನಃ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಈ ದಿನ ಬಂಧಿಸಲಾಗಿದೆ. ಮೊದಲನೆಯವರನ್ನು ಹಾಸನಗೆ ... ಯಲ್ಲೂ, ೪ ಮತ್ತು ೩ ನೇ ಯವರನ್ನು ನಂಜನಗೂಡಿನಲ್ಲೂ, ಉಳಿದ ಇಬ್ಬರನ್ನೂ ಈ ಊರಿನಲ್ಲೂ ದಸ್ತಗಿರಿ ಮಾಡಲಾಗಿದೆ.

ನೀರು ಸರಬರಾಜು

ನಾಳೆ ಬೆಳಿಗ್ಗೆ ... ರಿಂದ ೧೨ ಗಂಟೆಯವರೆವಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಲಾಗುವುದರಿಂದ ಬೆಳಿಗ್ಗೆ ೫ ಗಂಟೆಗೆ ನೀರನ್ನು ಬಿಡಲಾಗುವುದೆಂದೂ, ... ಗಂಟೆ ... [illegible]

ಪತ್ರಿಕೋದ್ಯೋಗಿಗಳಿಗೆ ಸತ್ಕಾರ

ಚಿಕ್ಕಮಗಳೂರು ೧೬

ಈ ದಿನ ಇಲ್ಲಿಗೆ ಆಗಮಿಸಿದ್ದ ಮೈಸೂರಿನ ಶ್ರೀ ಆಗರಂ ರಂಗಯ್ಯ ಮತ್ತು ಹಿಂದೂ ಮಹಾ ಸಭಾ ಕಾರ್ಯದರ್ಶಿ ಶ್ರೀ ಪುಟ್ಟವೀರಯ್ಯನವರ ಗೌರವಾರ್ಥವಾಗಿ ಪತ್ರಿಕೋದ್ಯೋಗಿ ಸಂಘದವರು ಒಂದು ಸತ್ಕಾರ ಸಮಾರಂಭವನ್ನು ಕಾಂಗ್ರೆಸ್ ಕಛೇರಿಯಲ್ಲಿ ಏರ್ಪಡಿಸಿದ್ದರು. ಶ್ರೀ ಬಿ ವಿ ಪ್ರಭುದೇವರು ಸದಸ್ಯರಿಗೆ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಆಗರಂ ರಂಗಯ್ಯನವರು ಸತ್ಕಾರಕ್ಕಾಗಿ ಧನ್ಯವಾದವನ್ನು ಅರ್ಪಿಸಿ, ದಿನೇ ದಿನೇ ವಿಸ್ತರಿಸುತ್ತಿರುವ ಪತ್ರಿಕೋದ್ಯಮದಲ್ಲಿ ತೊಡಗಿರುವವರೆಲ್ಲರೂ ತಮ್ಮ ಪತ್ರಿಕಾ ಘನತೆ ಗೌರವಗಳನ್ನೂ ಹಕ್ಕು ಬಾಧ್ಯತೆಗಳನ್ನೂ ಸಂಘಟಿತರಾಗಿ ಸಾಧಿಸಬೇಕೆಂದು ಕೋರಿದರು.

ಶ್ರೀ ಪುಟ್ಟವೀರಯ್ಯನವರು ಮಾತನಾಡಿ ತಾವು ಹೊರಡಿಸಬೇಕೆಂದಿರುವ ನೂತನ ಪತ್ರಿಕೆಗೆ ಎಲ್ಲರೂ ಬೆಂಬಲ ನೀಡಬೇಕೆಂದು ಕೋರಿದರು. ಧನ್ಯವಾದದ ನಂತರ ಸಮಾರಂಭವು ಮುಕ್ತಾಯವಾಯಿತು.

ಉ ಪ ನ ಯ ನ

ರಾಜಧಾನಿಯ ಶ್ರೀ ಎಂ ನಾರಾಯಣ ಜೋಯಿಸರ ಮಕ್ಕಳು ಶ್ರೀ ಎಂ ಎನ್ ರಾಮಚಂದ್ರ ಜೋಯಿಸರು ತಮ್ಮ ಪುತ್ರ ಚಿ|| ಲಕ್ಷ್ಮೀನರಸಿಂಹನ ಉಪನಯನವನ್ನು ಮೊನ್ನೆ ನೆರವೇರಿಸಿದರು.

ಹೈದರಾಬಾದಿನ ರಜಾಕರರ ಚಟುವಟಿಕೆಯ ಸಂಬಂಧವಾಗಿ ಅಲ್ಲಿನ ವಕೀಲರಾದ ಹೈದರ್ ರಾಜಾ ಜೈದಿ ಮತ್ತು ಹಬೀಬ್ ಮಹಮದ್ ಖಾನ್ ಎಂಬ ಕಂಟ್ರಾಕ್ಟರನ್ನು ದಸ್ತಗಿರಿ ಮಾಡಲಾಗಿದೆ

18-2-49 ರಿಂದ
ಅಮೋಘವಾದ ೨ನೇ ವಾರ
ರಾಜಕಮಲ್,
ದಿನವಹಿ ೩ ಆಟಗಳು
ಮ್ಯಾಟನಿ ೩ ಘಂ. ...
ಮತ್ತು ರಾತ್ರಿ ...
ಆಡಿದ್ದೇ ಕನಸು
(ತಮಿಳು)
ಪಾತ್ರ:- ಟಿ.ಆರ್. ಮಹಾಲಿಂಗಂ ಅಂಜಲಿದೇವಿ, ಕಾಳಿ ಎನ್. ರತ್ನಂ, ತಾರಾ ಚೌಧುರಿ, ಲಲಿತಾ ಪದ್ಮಿನಿ.
Morning Shows from 18-2-49 for 4 days
Marie Walewaska
With:- Charles Boyer, Greta Garbo

10,000 ರೂಪಾಯಿಗಳ ಬಹುಮಾನಗಳು
—:o:—
ಕಾರು ರಾಗಿಯನ್ನು ಹೆಚ್ಚಾಗಿ ಮತ್ತು ಚೆನ್ನಾಗಿ ಬೆಳೆಯುವ ರೈತರಿಗೆ
ಸರ್ಕಾರದವರು 10,000 ರೂಪಾಯಿಗಳನ್ನು ಬೇರೆ ಬೇರೆ ಬಹುಮಾನಗಳಾಗಿ **ಹಂಚುವರು**
ಈ ಒಳ್ಳೆಯ ಸಮಯವನ್ನು **ರೈತರಾರೂ ಕಳೆದುಕೊಳ್ಳಬಾರದು**
ಆದ್ದರಿಂದ-
ಬಹುವಾಗಿ ಬೆಳೆಯಿರಿ!
ಬಹುಮಾನ ಪಡೆಯಿರಿ!!
ದೇಶಸೇವೆ ಮಾಡಿರಿ!!!
ಕಾರು ರಾಗಿ ಬೆಳೆಯುವವರಿಗೆ ರಿಯಾಯಿತಿಗಳು
ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಎಕರೆ ಒಂದಕ್ಕೆ 15 ರೂಪಾಯಿಗಳಂತೆ ರಿಯಾಯಿತಿ ದರದಲ್ಲಿ ಬೆಲೆ ಬಾಳುವ
ಬಿತ್ತನೆ ಬೀಜ ಮತ್ತು ಗೊಬ್ಬರ
- ಇವುಗಳನ್ನು ಕಾರು ರಾಗಿ ಬೆಳೆಯುವ ರೈತರಿಗೆ ಮುಂಗಡವಾಗಿ ಕೊಡಲಾಗುವುದು.
- ಈ ಮುಂಗಡ ಪಡೆಯುವ ರೈತರು ಎಕರೆ ಒಂದಕ್ಕೆ ಒಂದು ಪಲ್ಲದಂತೆ ಸರ್ಕಾರ ಕಂಟ್ರೋಲ್ ದರದಲ್ಲಿ ರಾಗಿಯನ್ನು ಆಹಾರದ ಡಿಪೋಗೆ ಕೊಟ್ಟರೆ ಸಾಕು.
- ಹಾಗೆ ಕೊಟ್ಟಲ್ಲಿ ಈ ಮುಂಗಡವನ್ನು ರೈತರಿಗೆ ಮುಫತ್ತಾಗಿ ಬಿಟ್ಟು ಬಿಡಲಾಗುವುದು
ರೈತ ಬಾಂಧವರೇ!
ಈ ಸುಸಮಯವನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯಿರಿ.
ಎಂ. ಮಲ್ಲರಾಜ ಅರಸ್, ಕಾರ್ಯದರ್ಶಿ "ಗ್ರೋ ಮೋರ್ ಫುಡ್ ಕಮಿಟಿ"
ವಿ. ವೇದವ್ಯಾಸಾಚಾರ್ಯ, ರೆವಿನ್ಯೂ ಕಮಿಷನರ್ ಮತ್ತು ಅಧ್ಯಕ್ಷ "ಗ್ರೋ ಮೋರ್ ಫುಡ್ ಕಮಿಟಿ"

ಪ್ರಭಾ ★ 18-2-49 ರಿಂದ
ಪ್ರತಿ ದಿನ ೩ ಆಟಗಳು
ಪ್ರಭಾತ್ ರವರ
ಆಗೇ ಬಢೋ
ಖುರ್ಷಿದ್, ದೇವಾನಂದ್ ನಟಿಸಿರುವ ಹಿಂದಿ ಚಿತ್ರ
ಇದರೊಂದಿಗೆ "ಸ್ವತಂತ್ರ ಭಾರತದ" ನ್ಯೂಸ್ ರೀಲನ್ನು ಪ್ರದರ್ಶಿಸ
AAGE BADHO

ಶುಭಮಸ್ತು
|| ಸಮಸ್ತ ಸನ್ಮಂಗಳಾನಿ ಭವಂತು ||
ಮದುವೆ ಜವಳಿಗಳಿಗೆ
ಹೆಸರುವಾಸಿಯಾದ ಅಂಗಡಿ
ನ್ಯಾಯವಾದ ಬೆಲೆ ನಾಣ್ಯವಾದ ವರ್ತನೆ
ಬಾಸುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

ಲಗ್ನಕ್ಕಾಗಿ
ಹೊಸ ಜವಳಿಗಳು
ಸುಲಭ ದರದಲ್ಲಿ ಬಂದಿವೆ.
ವಿಧವಿಧವಾದ ರೇಷ್ಮೆ ಮತ್ತು ನೂಲಿ ಸೀರೆಗಳು
ವೀರಣ್ಣ ಸಿಲ್ಕ್ ಎಂಪೋರಿಯಂ,
ವಿ. ರಾಮಯ್ಯ & ಬ್ರದರ್
ಇಲವಾಲ ರಸ್ತೆ, ಮೈಸೂರು

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ದಯವಿಟ್ಟು ಇಂದೇ ಭೇಟಿ ಕೊಡಿ
ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಮತ್ತು ಕುಂಬಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು, ಮಗುಟಗಳು ಸಹ ದೊರೆಯುತ್ತವೆ.
ಬೆಂಗಳೂರು ಜವಳಿ ಅಂಗಡಿ
ಸಯ್ಯಾಜಿರಾವ್ ರೋಡ್, ಮೈಸೂರು

ಪ್ರಭುದೇವಾ ಟಾಕೀಸಿನಲ್ಲಿ
18-2-49ನೇ ಶುಕ್ರವಾರದಿಂದ
ದಿನವಹಿ ಮೂರು ಆಟಗಳು
ಜೈಮಿನಿ ಪಿಕ್ಚರ್ಸ್ ರವರ
★ ಮಾರಿಯಮ್ಮ ★
ತಮಿಳು ಭಾಷೆ
ಪಾತ್ರ: ಸುಶಾಂತಲಕ್ಷ್ಮಿ, ಟಿ.ಎಸ್. ಬಾಲಯ್ಯ, ಕಾಳಿ ಎನ್. ರತ್ನಂ ಮುಂತಾದವರು

Edited, printed and published ... at the Sadhvi Press, D. Subbiah Road, Mysore

ಪೋ॥ ನಂ 792 WEEKLY EDITION ಇಂದಿನ ಪತ್ರಿಕೆ ೭ ಕಾಸು

ಸಾಧ್ವಿ

ಸಂಪುಟ ೧೩] ಬಾನುವಾರ ೨೦-೩-೧೯೪೯ [ಸಂಚಿಕೆ ೨೮

ವಾರ ಭವಿಷ್ಯ

ತಾ ೨೦-೩-೪೯ ರಿಂದ ೨೬-೩-೪೯ ರ ವರೆಗೆ

ಮೇಷ—ಎಲ್ಲ ಕಾರ್ಯಗಳಲ್ಲಿ ಜಯ, ... ನೆಟ್ಟಗೆ ಕುಟುಂಬದಲ್ಲಿ ಸೌಖ್ಯ ... ಆಗುವುವು, ನೌಕರಿಯಲ್ಲಿ ... ಅನಪೇಕ್ಷಿತ ಲಾಭಯೋಗ ತಾ॥ ... ಶುಭ, ಮಂಗಲ ಕಾರ್ಯಕ್ಕಾಗಿ ...

ವೃಷಭ -ಸದಾಚಾರಿಗಳ ಮತ್ತು ವಿ... ಭೇಟಿ, ಆರೋಗ್ಯ, ನೌಕರಿ ... ನವು ಉತ್ತಮ, ಧನಲಾಭ, ... ಕಾರ್ಯದಲ್ಲಿ ಜಯ. ತಾ॥ ೨೪- ...

ಮಿಥುನ- ಆಲಸ್ಯಂ ಅಮೃತಂ ವಿಷಂ ... ತು ನೆನಪಿನಲ್ಲಿಡಿ ಎಲ್ಲ ಕಾರ್ಯ... ಈಗಲೇ ಮಾಡಿರಿ ಎಲ್ಲಾ ... ದ ಈ ವಾರ ಪ್ರಗತಿದಾ... ತಾ॥ ೨೦-೨೧, ಅತಿಥಿ ಅಭ್ಯಾಗತ ... ಕಾಲವ್ಯಯ, ಮನಸ್ಸಿಗೆ ಕಿರಿಕಿರಿ.

ಕಟಕ - ತೊಂದರೆ ವಾಟಲು ಶಕ್ತಿ ಇ... ವರು ವಿಘ್ನ ಪಡಿಸಲೆತ್ನಿಸಿ ವಿಫಲ ... ರು ಆರೋಗ್ಯ ನೆಟ್ಟಗಿರದು. ... ೨೩ ಅಗ್ನಿ ಭಯ.

ಸಿಂಹ- ಅಪ್ರಿಯ ವಾರ್ತೆ, ಪತ್ನಿಯ ಆ... ಆರ್ಥಿಕ ಸ್ಥಿತಿ ಕೆಡುವುದು. ... ಕಾರ್ಯ ಅರ್ಧಕ್ಕೆ ನಿಲ್ಲುವುದು. ... ೨೫ ನಿದ್ರಾ ನಾಶ, ತಳಮಳ ಸಿ... ಗೆ ಖರ್ಚು, ಧಂಧೆಯಲ್ಲಿ ವಿಘ್ನ ...

ಕನ್ಯಾ -ಪ್ರಿಯ ಜನರ ಸಮಾಗಮ. ... ಸ್ವಸ್ಥತೆ, ಪತ್ನಿಯಿಂದ ಆನಂದ, ... ಅಭಾವ ದೂರಾಗುವುದು. ... ೨೩ ಶುಭ ಕಾರ್ಯ.

ತುಲಾ - ಆರೋಗ್ಯ ನೆಟ್ಟಗೆ, ಮಕ್ಕಳ ... ಗಿರದು, ವಿದ್ಯಾರ್ಥಿಗಳಿಗೆ ಆಲಸ್ಯ, ... ನೌಕರಿಗಳಲ್ಲಿ ಮಾತ್ರ ಉತ್ಸಾಹ, ... ಕಾರ್ಯ ಜರುಗುವುದು. ತಾ॥ ... ಮಿತ್ರ ಭೇಟಿ.

ವೃಶ್ಚಿಕ -ಆರೋಗ್ಯ ನೆಟ್ಟಗಿಲ್ಲ, ವಾ... ಎಲ್ಲವೂ ಪರಿಹಾರವಾಗುವುದು ... ೨೫ ಮಿತ್ರ ಸಹಾಯ

ಧನಸ್ -ಕಾರ್ಯಗಳೆಲ್ಲದರ ಸಾಫಲ್ಯ ನೌ... ಗಳಲ್ಲಿ ಲಾಭ ಆಪ್ತಜನ ಭೇಟಿ, ... ಪ್ರವಾಸ, ಲೇಖನದಲ್ಲಿ ಪ್ರಗತಿ. ... ೨೧, ಅತಿಥಿಗಳ ಆಗಮನ

ಮಕರ ಆರೋಗ್ಯ ನೆಟ್ಟಗೆ ಕಳ್ತ... ಭವ ವ್ಯಾಪಾರ, ನೌಕರಿ ಉ... ವುಗಳಲ್ಲಿ ವೃಥಾ ಕಿರುಕುಳ ... ಅತಿಥಿಗಳಿಗಾಗಿ ಖರ್ಚು

ಕುಂಭ ಅತ್ಯಂತ ಚಿಂತೆದಾಯಕ ... ಆರೋಗ್ಯ ನೆಟ್ಟಗಿರದು ಸ್ತ್ರೀ... ಯಿಂದರೆ ಹೆಚ್ಚುವುದು ಪ್ರಿಯ ... ಯೋಗ. ತಾ॥ ೨೦, ೨೫ ದಿನದ ...

ಮೀನ ... ಯಿಂದ ತೊಂದರೆ ಎದುರಿಸಿರಿ ... ಮಾನಸಿಕ ಸ್ಥಿತಿ ನೆಟ್ಟಗಿರದು. ... ಮಿತ್ರ ಸಹಾಯ ಆರ್ಥಿಕ ... ವಾಗುವುದು

ಬೆಳಗೊಳದ ಕೆಮಿಕಲ್ಸ್ ಕಾರ್ಖಾನೆಗೆ ಕೆಲಸಗಾರರ ಸೂಚನೆ

ಬೆಳಗೊಳ ೨೮

ಇಲ್ಲಿಯ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಕಾರ್ಖಾನೆಯ ಕೆಲಸಗಾರರು ಹೂಡಿರುವ ಮುಷ್ಕರದ ಸಂಬಂಧವಾಗಿ ಮ್ಯಾನೇಜುಮೆಂಟಿನವರು ನೋಟೀಸು ಕೊಟ್ಟು ಕೆಲಸಗಾರರು ಹಿಂತಿರುಗದಿದ್ದರೆ ಬೇರೆಯವರನ್ನು ಸೇರಿಸಿಕೊಳ್ಳುವುದಾಗಿ ತಿಳಿಸಿರುವ ಬಗ್ಗೆ ಕೆಲಸಗಾರರು ಕಾರ್ಖಾನೆ ಅಧ್ಯಕ್ಷರಿಗೆ ಪತ್ರ ಬರೆದು ಮ್ಯಾನೇಜುಮೆಂಟಿನ ನಡವಳಿಕೆಯನ್ನು ಖಂಡಿಸಿ ಅದನ್ನು ವಾಪಸು ತೆಗೆದುಕೊಳ್ಳಬೇಕೆಂದು, ಕೇಳಿದ್ದಾರೆ ಅಲ್ಲದೆ ಕೂಲಿಗಾರರ ಶಾಸನದ ೨೨ ನೇ ಸೆಕ್ಷನ್ ೧ ನೇ (ಡಿ) ಪ್ರಕಾರ ಕಾರ್ಖಾನೆಯವರ ಮೇಲೆ ಕ್ರಮ ಜರುಗಿಸಬಾರದೇಕೆಂಬುದಾಗಿ ಕೆಲಸಗಾರರು ಕೇಳಿದ್ದಾರೆ ಈಗ್ಯೆ ಕೆಲವು ದಿನಗಳ ಹಿಂದೆ ಮೈಸೂರು ಲೇಬರ್ ಕಮಿಷನರರು ಇಲ್ಲಿಗೆ ಬಂದು ಸಂಧಾನವನ್ನು ಮಾಡುವುದಾಗಿ ತಿಳಿಸಿದ್ದರೆಂದು ಹೇಳಲಾಗಿದೆ

ದಾಮೋದರ್ ಕಣಿವೆ ಯೋಜನೆಗೆ ಮೈಸೂರು ಇಂಜಿನಿಯರು

ಬೆಂಗಳೂರು ಬಿಲ್ಡಿಂಗ್ಸ್ ಡಿವಿಜನ್ನಿನ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ವಿ ಕೃಷ್ಣಮಾಚಾರಿಯವರು ದಾಮೋದರ ಕಣಿವೆ ಯೋಜನೆ ಸಂಬಂಧದಲ್ಲಿ ೨ ಸಾವಿರ ರೂ ಗಳ ಸಂಬಳದ ಮೇಲೆ ನೇಮಿತರಾಗಿದ್ದಾರೆ ಅವರ ಕಛೇರಿ ರಾಂಚಿಯಲ್ಲಿರುತ್ತದೆ

ವಾಷಿಂಗ್‌ಟನ್ನಿಗೆ ನೆಹರೂ ಭೇಟಿಯೇ ?

ಭಾರತದ ಪ್ರಧಾನಿ ಪಂಡಿತ ನೆಹರೂರವರು ಅಮೇರಿಕದ ಅಧ್ಯಕ್ಷ ಟ್ರೂಮನ್ನರ ಆಹ್ವಾನವನ್ನು ಮನ್ನಿಸಿ ವಾಷಿಂಗ್‌ಟನ್ನಿಗೆ ಪ್ರಯಾಣ ಬೆಳಸಿ, ಟ್ರೂಮನ್ನರೊಡನೆ ಮಾತನಾಡಬಹುದೆಂದು ಲಂಡನ್ನಿನಲ್ಲಿ ಹೇಳಲಾಗುತ್ತಿದೆ

ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರಿಗೆ ಗೌರವ

ಭಾರತ ರಾಜ್ಯಾಂಗ ಸಭೆಯ ಮೈಸೂರಿನ ಸದಸ್ಯರಾಗಿರುವ ಶ್ರೀ ಎಸ್ ವಿ ಕೃಷ್ಣಮೂರ್ತಿರಾಯರನ್ನು ಡೊಮಿನಿಯನ್ ಪಾರ್ಲಿಮೆಂಟಿನ ಉಪಾಧ್ಯಕ್ಷ ಸ್ಥಾನಕ್ಕೆ ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ ಮಾವಲಂಕರರು ಸೇರಿಸಿದ್ದಾರೆ ಈ ಪಟ್ಟಿಯಲ್ಲಿ ಪಂಡಿತ ಠಾಕೂರ್‌ದಾಸ್ ... ಶ್ರೀಮತಿ ದುರ್ಗಾಬಾಯಿ, ... ಇವೆ

ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳು

ಮೈಸೂರು ೨೮

ಮೈಸೂರು ಜಿಲ್ಲಾ ಅಭಿವೃದ್ಧಿ ಸಮಿತಿಗೆ ಸರಕಾರದವರು ಅಡ್ವೋಕೇಟರಾದ ಶ್ರೀ ಎಸ್ ರಂಗರಾಮಯ್ಯನವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ. ಅಲ್ಲದೆ, ತಾಲ್ಲೂಕು ಸಮಿತಿಗಳಿಗೆ ಈ ರೀತಿ ಅಧ್ಯಕ್ಷರುಗಳ ನೇಮಕವಾಗಿದೆ. ಟಿ ನರಸೀಪುರ- ಶ್ರೀ ಟಿ ಪಿ. ಬೋರಯ್ಯ, ಯಳಂದೂರು ಶ್ರೀ ಸೋಮಾರಾಧ್ಯ, ಚಾಮರಾಜನಗರ- ಶ್ರೀ ಎಂ ಪಿ ಬಸಪ್ಪ, ಮೈಸೂರು-ಶ್ರೀ ಹೆಚ್ ಕೆ ಕುಮಾರಸ್ವಾಮಿ, ಗುಂಡ್ಲುಪೇಟೆ-ಶ್ರೀ ಬಿ ದೊಡ್ಡಯ್ಯ, ಹೆಗ್ಗಡದೇವನ ಕೋಟೆ-ಶ್ರೀ ಸಿ ದಾಸಪ್ಪ, ಹುಣಸೂರು- ಶ್ರೀ ಜಿ ಕೃಷ್ಣಮೂರ್ತಿ ಪಿರಿಯಾಪಟ್ಟಣ- ಶ್ರೀ ವೆಂಕಟರಾಂ, ಕೃಷ್ಣರಾಜನಗರ-ಶ್ರೀ ಎಸ್ ಎಚ್ ತಮ್ಮಯ್ಯ ಮತ್ತು ನಂಜನಗೂಡು-ಶ್ರೀ ಕೆ ವಿಶ್ವೇಶ್ವರನಾಥ

ಲಕ್ಷ ದ್ವೀಪಗಳು ಭಾರತ ಸರ್ಕಾರದ ಆಡಳಿತಕ್ಕೆ

ಮಲಬಾರ್ ತೀರ ಪ್ರದೇಶದಲ್ಲಿರುವ ಲಕ್ಷ ದ್ವೀಪಗಳ ಆಡಳಿತವನ್ನು ಭಾರತ ಸರ್ಕಾರದವರೇ ನೇರವಾಗಿ ವಹಿಸಿಕೊಳ್ಳಬು ನಿರ್ಧರಿಸಿರುತ್ತಾರೆ ಇತ್ತೀಚೆಗೆ ಅಲ್ಲಿ ಗಲಭೆಯಾಗಿ, ಮದರಾಸಿನಿಂದ ವಿಶೇಷ ಪೊಲೀಸ್ ಪಡೆಯನ್ನು ಕಳುಹಿಸಲಾಗಿತ್ತು

ಬಾಲಕಿಯ ಮೇಲೆ ಅತ್ಯಾಚಾರ ಮತ್ತು ಕೊಲೆ

ಮಧುಗಿರಿ ತಾಲ್ಲೂಕು ಚನ್ನಹಳ್ಳಿ ಗ್ರಾಮದ ದೊಡ್ಡ ಮುತ್ತಯ್ಯನ ೯ ವರ್ಷದ ಮಗಳು ಎಂಬ ಬಾಲಕಿಯ ಮೇಲೆ ಯಾರೋ ಕಳೆದ ೮ ನೇ ತಾ॥ ಅತ್ಯಾಚಾರ ನಡೆಸಿ ನಂತರ ಕೊಲೆ ಮಾಡಿ ಆಕೆಯನ್ನು ತೋಟದ ಬಾವಿಯಲ್ಲಿ ಎಸೆದು ಹೋಗಿದ್ದಾರೆಂದು ವರದಿದೆ

ಮುಷ್ಕರ ತಡೆಗಟ್ಟಲು ವಿಶೇಷಾಧಿಕಾರ

ರೈಲ್ವೆ ಮತ್ತು ಅಂಚೆ ಮುಷ್ಕರಗಳು ನಡೆಯುವ ಸಂಭವ ಇದ್ದರೂ ಕಮ್ಯೂನಿಸ್ಟರುಗಳ ಪ್ರೇರಣೆಯಿಂದ ಅಲ್ಲಲ್ಲಿ ... ಮುಷ್ಕರಗಳು ನಡೆಯುವ ಸೂಚನೆಗಳಿವೆ, ಇವುಗಳನ್ನು ತಡೆಗಟ್ಟಲು ಭಾರತ ಸರ್ಕಾರದವರು ವಿಶೇಷಾಧಿಕಾರಗಳನ್ನು ... ಸಭೆಯಲ್ಲಿ ... ಶಾಸನವನ್ನು ... ಮಾಡಲಿ ...

ರಾಜಾಜಿ ಮತ್ತು ನೆಹರೂ ಸರ್ಕಲ್

ಮೈಸೂರು ೨೦

ರಾಜಧಾನಿಯ ಕೃಷ್ಣರಾಜ ಸ್ಟ್ಯಾಚ್ಯು ಬಳಿ ಇರುವ ಚೌಕಕ್ಕೆ ರಾಜಾಜಿ ಸರ್ಕಲ್ ಎಂದೂ, ಅಲ್ಲಿಂದ ಪೂರ್ವದಲ್ಲಿ ಮೈಸೂರು ಬ್ಯಾಂಕು ಮತ್ತು ಟಪ್ಪಾಲ್ ಆಫೀಸು ಬಳಿ ಇರುವ ಚೌಕಕ್ಕೆ ನೆಹರೂ ಸರ್ಕಲ್ ಎಂದೂ, ನಾಮಕರಣ ಮಾಡುವಂತೆ ನಿನ್ನೆ ಪೌರಸಭೆಯಲ್ಲಿ ನಿರ್ಣಯ ಮಾಡಲಾಯಿತು

ಮಹಾಜನರ ಸೌಕರ್ಯಕ್ಕಾಗಿ ಪ್ರತಿಯೊಂದು ಮೊಹಲ್ಲೆಯಲ್ಲಿಯೂ ಪೌರಸಭೆಯ ಉಪಕಛೇರಿಗಳನ್ನು ತೆರೆಯಬೇಕೆಂದೂ ತೀರ್ಮಾನವಾಯಿತು

ಶ್ರವಣಬೆಳಗೊಳಕ್ಕೆ ಹರಿಜನರ ಪ್ರವೇಶ

ಹರಿಜನರು ಈಗ ಶ್ರವಣ ಬೆಳಗೊಳದ ಶ್ರೀ ಗೋಮಟೇಶ್ವರ ದೇವಾಲಯಕ್ಕೆ ಹೋಗಲು ಅಡ್ಡಿ ಇಲ್ಲವೆಂದೂ, ಈ ಬಗ್ಗೆ ಅವರಿಗೆ ಬೇಕಾದ ಏರ್ಪಾಡನ್ನು ಮಾಡಿಕೊಡಲಾಗುವುದೆಂದೂ ಮಂಡ್ಯದ ಜೈನಸಮಾಜ ಸೇವಕ ಶ್ರೀ ಎಲ್ ಸಿ ಮುದ್ದಣ್ಣನವರು ತಿಳಿಸಿರುತ್ತಾರೆ

ಅಮೇರಿಕದ ವಿಮಾನ ನೆಲೆಗಳ ತ್ಯಾಜ್ಯ

೨ನೆ ಯುದ್ಧ ಹಡಗುಗಳಿಗೆ ಪ್ರತಿಯಾಗಿ ೧೯೪೦ ರಲ್ಲಿ ಇಂಗ್ಲೆಂಡ್ ದೇಶವು ಅಮೇರಿಕಕ್ಕೆ ೯೯ ವರ್ಷಗಳ ಭೋಗ್ಯದ ಕಂಟ್ರಾಕ್ಟಿನ ಮೇಲೆ ಕೊಟ್ಟಿದ್ದ ವೆಸ್ಟ್ ಇಂಡೀಸಿನ ಅಂಟಿಗ್ವಾ, ಸೇಂಟ್ ಲೂಸಿಯಾ ಮತ್ತು ಆಂಟಿಗ್ವ ಎಂಬ ಮೂರು ವಿಮಾನ ನೆಲೆಗಳನ್ನು ಈಗ ಅಮೇರಿಕವು ಖಾಲಿ ಮಾಡುತ್ತಿವೆಯೆಂದು ತಿಳಿದು ಬಂದಿದೆ.

ಕಾಂಗ್ರೆಸ್ಸಿನವರಿಗೆ ಸರ್ದಾರ್ ಪಟೇಲರ ಭಾಷಣ

ಬೆಂಗಳೂರು ೧೯

ಸರದಾರ್ ಪಟೇಲರು ಇಲ್ಲಿಗೆ ದಯಮಾಡಿಸಿದಾಗ್ಯೆ ರೆಸಿಡೆನ್ಸಿ ಭವನದಲ್ಲಿ ೨೩ ನೇ ತಾರೀಖು ಬೆಳಗ್ಯೆ ೧೦ ಘಂಟೆಗೆ ಕಾಂಗ್ರೆಸ್ ಸದಸ್ಯರನ್ನು ಕುರಿತು ಭಾಷಣಮಾಡುವರು. ವರ್ಕಿಂಗ್ ಕಮಿಟಿ, ಎ ಐ. ಸಿ ಸಿ, ಜಿಲ್ಲಾ ಸಮಿತಿ, ಶಾಸನ ಸಭಾ, ರಾಜ್ಯಾಂಗ ಸಭೆಗಳ ಸದಸ್ಯರು ಭಾಗವಹಿಸುವರು

ಪಟೇಲರಿಂದ ಗಾಂಧಿ ಸ್ತೂಪದ ಶಂಕುಸ್ಥಾಪನೆ

ಮೈಸೂರು ೨೦

೨೪ನೇ ತಾ॥ ಗುರುವಾರ ಸಂಜೆ ಸರ್ದಾರ್ ಪಟೇಲರಿಗೆ ಪೌರಸಭೆಯವರು ಬಿನ್ನವತ್ತಳೆಯನ್ನರ್ಪಿಸಿದನಂತರ ಮಹಾತ್ಮಗಾಂಧಿ ಸ್ತೂಪದ ಶಂಕುಸ್ಥಾಪನೆಯನ್ನೂ ಅವರು ನೆರವೇರಿಸುವರು. ಬಿನ್ನವತ್ತಳೆಯನ್ನು ಟೌನ್ ಹಾಲಿನ ದಕ್ಷಿಣ ಭಾಗದ ಮೈದಾನದಲ್ಲಿ ಸಂಜೆ ೪ ಗಂಟೆಗೆ ಅರ್ಪಿಸಲಾಗುವುದು. ಅಲ್ಲಿಂದಲೇ ವಿದ್ಯುಚ್ಛಕ್ತಿ ಸ್ವಿಚ್ಚಿನ ಮೂಲಕ ಸ್ತೂಪದ ಶಂಕುಸ್ಥಾಪನೆ ನಡೆಯುವುದು ಗಾಂಧಿ ಚೌಕದಲ್ಲಿ ಸ್ತೂಪವು ಸ್ಥಾಪಿಸಲ್ಪಡುವುದು ಇದಕ್ಕಾಗಿ ವರ್ತಕರಾದ ಶ್ರೀ ನೇಕಾಬ ಸುಬ್ಬಯ್ಯಶೆಟ್ಟರು ಹತ್ತು ಸಾವಿರ ರೂ ದಾನ ಮಾಡಿರುವರು. ಸರ್ದಾರ್ ಪಟೇಲರಿಗೆ ಬಿನ್ನವತ್ತಳೆಯನ್ನು ... ಸುವ ಸಮಾರಂಭಕ್ಕಾಗಿ ಪೌರಸಭೆಯವರು ... ರೂ ... ಮಾಡಿದ್ದಾರೆ

ಪ್ರಕಟನೆ

ದಿ ಇಂಟರ್ ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸ್ ಬೊಂಬಾಯಿ.

[illegible] ಬ್ರಾಂಚುಗಳು.

ಬೆಂಗಳೂರು ಮತ್ತು ಮೈಸೂರು, ಅಧಿಕೃತ ಬಂಡವಾಳ ಐದು ಕೋಟಿ (5,00,00,000)ರೂ ಗಳು. ಚಂದಾ ಮತ್ತು ಇತರ ಬಂಡವಾಳಗಳು [illegible] ಪ್ರಕಟಿಸ್ಪ[illegible]

[illegible] ಮತ್ತು ಮೈಸೂರಿನಲ್ಲಿ [illegible] ಸೊಸೈಟಿಗೆ ಸೇರಿದ [illegible] ರೂ.

ಬೆಂಗಳೂರು ಮತ್ತು ಮೈಸೂರುಗಳಲ್ಲಿ ಸೊಸೈಟಿಯು ಕಟ್ಟಡಗಳನ್ನು ವಸೂಲಾಗಿ [illegible] ಸುಮಾರು [illegible] ರೂ

ಮೇಲ್ಕಂಡ ಸೊಸೈಟಿಯ ಬೋರ್ಡಿನ ವರು ಮೈಸೂರು ದೇಶದಲ್ಲಿ ಮೊದಲು [illegible] ಲಕ್ಷ (1,00,000 ರೂ ಗಳ ಷೇರುಗಳನ್ನು ಸಾವಕಾಶವಾಗುವಂತೆಯೂ, ಅನಂತರ ಇವನ್ನು (5,00,000 ರೂ) ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸುವಂತೆಯೂ ತೀರ್ಮಾನಿಸಿದ್ದಾರೆ

ಮೈಸೂರು ದೇಶದ ಡಾಯಿರೆಕ್ಟರು [illegible] ಕಂಪೆನಿಗಳ ರಿಜಿಸ್ಟ್ರಾರವರು ತಮ್ಮ Mis. C. G. R. [illegible] ತಾ[illegible] [illegible] ರ ಮಂಜೂರು ಎಂದಾರ್ಡರ್ ಮೇರೆಗೆ ಐದು ಲಕ್ಷ ರೂಪಾಯಿಗಳಿಗೆ [illegible] ಷೇರುಗಳನ್ನು ಹೆಚ್ಚಿಸಿಕೊಳ್ಳುವ ವಿಷಯದಲ್ಲಿ ಆ ಸರ್ಟಿಫಿಕೇಟಿನಲ್ಲಿ ಅನುಮತಿಯನ್ನು ಪಡೆಯುವಂತೆ ಸಲಹೆ ಕೊಟ್ಟಿರುತ್ತಾರೆ

ಮೈಸೂರಿನಲ್ಲಿ ಷೇರುಗಳನ್ನು ಒದಗಿಸುವುದಕ್ಕೋಸ್ಕರ ಮೈಸೂರು [illegible] ನ ನಾಚನಹಳ್ಳಿ ಪಾಳ್ಯದಲ್ಲಿ ಆಗಷ್ಟ್ (50 acres) ಎಕರೆ ಜಮೀನನ್ನು ಸುಮಾರು ಈ ತಿಂಗಳ ಆಖೈರಿನಲ್ಲಿ ಒಂದು ಲಕ್ಷ ರೂಪಾಯಿಗಳ ಬೆಲೆಗೆ ಕ್ರಯಕ್ಕೆ ತೆಗೆದುಕೊಳ್ಳಲು ಏರ್ಪಾಡಾಗಿರುತ್ತೆ.

ಮೇಲ್ಕಂಡ ಸೊಸೈಟಿಯ ಕೆಲಸ ಕಾರ್ಯಗಳನ್ನು ಕೆಲವು ಕಕ್ಷಿಗಾರರು ಅಪಪ್ರಚಾರ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ ಇವ ರುಜುವಾತಾದಲ್ಲಿ ಅಂಥಾ ಕಕ್ಷಿಗಾರರು ರೂಲ್ಸಿನ ಪ್ರಕಾರ ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ. ಮುನ್ನವೇ ಎಚ್ಚರಿಕೆ ಕೊಟ್ಟಿದ್ದೇವೆ.

(ಸಹಿ) ಟಿ. ಕೆ. ನಾರಾಯಣಮೂರ್ತಿ
ಡಿವಿಜನಲ್ ಮ್ಯಾನೇಜರ್
ಇಂಚಾರ್ಜ್
ಮೈಸೂರು ಬ್ರಾಂಚ್
ತಾ[illegible]
ಮೈಸೂರು

Edited, printed and published by A. R. Nagarajan at the Sadhvi Press, D. Subbaiah Road, Mysore

ಗಾಂಧಿಕೊಲೆ ಮೊಕದ್ದಮೆಯಲ್ಲಿ ಎರಡು ಲಾರಿ ಕಾಗದಪತ್ರ

ಮಹಾತ್ಮಗಾಂಧೀ ಕೊಲೆ ಮೊಕದ್ದಮೆ ಸಂಬಂಧಪಟ್ಟ ದಾಖಲೆಗಳನ್ನು ಎರಡು ಲಾರಿಯಲ್ಲಿ ತುಂಬಿ ಪೂರ್ವ ಪಂಜಾಬು ಹೈಕೋರ್ಟಿಗೆ ಪತ್ರ ಸಹಿತ ಕಳುಹಿಸಲಾಯಿತು. ಆದರೆ ಅಪರಾಧಿಗಳ ಅಪೀಲು ಅರ್ಜಿಗಳು ಇನ್ನೂ ಕೋರ್ಟಿಗೆ ತಲುಪಿಲ್ಲವೆಂದು ವರದಿಯಾಗಿದೆ.

ಹಡಗಿನಲ್ಲಿ ಆಸ್ಫೋಟನೆ

ಕಲ್ಕತ್ತೆಗೆ [illegible] ಮೈಲಿ ದೂರ ಬಂಗಾಳ ಕೊಲ್ಲಿಯಲ್ಲಿ [illegible] ಸಂಚಾರದ ಹಡಗಿನಲ್ಲಿ ಮೊನ್ನೆ ಒಂದು ಭಾರಿ ಆಸ್ಫೋಟನೆ ಆಗಿ ಅದರ ಮುಖ್ಯ ಇಂಜಿನಿಯರರು [illegible] ಇಂಜಿನಿಯರರು ಮತ್ತು ಮತ್ತೊಬ್ಬ ಅಧಿಕಾರಿಗಳು ಸತ್ತರೆಂದೂ, ಇನ್ನೊಬ್ಬರಿಗೆ ತೀವ್ರಗಾಯವಾಯಿತೆಂದೂ ವರದಿಯಾಗಿದೆ

ವಿವಾಹ ಮಹೋತ್ಸವಗಳು

ರಾಜಧಾನಿಯ ನ್ಯೂಸ್ ಪೇಪರ್ ಹೌಸಿನ ಮಾಲಿಕರಾದ ಶ್ರೀ ಲಕ್ಷ್ಮೀನಾರಾಯಣ ಚಂದ್ರರಾಯರು ತಮ್ಮ ಪುತ್ರಿ ಚಿ॥ ಸೌ॥ ಕಮಲಾಬಾಯಿಯವರನ್ನು ಬೇಲೂರಿನ ಶ್ರೀ ವ್ಯಾಸಾಚಾರ್ಯರ ಪುತ್ರ ಶ್ರೀ ನರಸಿಂಹಮೂರ್ತಿಯವರಿಗೆ ಕೊಟ್ಟು ವಿವಾಹವನ್ನು ನಂಜನಗೂಡಿನ ವಿದ್ಯಾ ಪೀಠದಲ್ಲಿ ಮೊನ್ನೆ ನಡೆಸಿದರು.

ಸಂಸ್ಕೃತ ಪಾಠಶಾಲೆಯ ಜ್ಯೋತಿಷ [illegible] ಜೆನ್ನಿಗರಾಯ. ಪುರಾ[illegible] ತಮ ಜೆನ್ನಪ್ಪನವರ ಪುತ್ರ [illegible] ರವರ ಪುರಾಣಿಕರಿಗೆ ಕೊಟ್ಟದ್ದ ಶ್ರೀ [illegible] ರಂಗನಾಥಭಟ್ಟರ ಪುತ್ರಿ ಚಿ॥ ಸೌ॥ [illegible] ಲಕ್ಷ್ಮಿ ವನ್ನು ತಂದುಕೊಂಡು ವಿವಾಹವನ್ನು [illegible] ನಡೆಸಿದರು.

ಶ್ರೀ ಗಾಯತ್ರೀ ಟಾಕೀಸ್

20-2-49 ರಿಂದ 3 ದಿನಗಳು ಮಾತ್ರ
ಪ್ರತಿದಿನ ಮೂರು ಆಟಗಳು

[illegible]

ಟ್ರೆಷರ್ ಆಫ್ ಸಿಯರಾ ಮಾಡ್ರೆ

TREASURE OF SIERRA MADRE

Next Change.

My Wild Irish Rose
(Technicolour)

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಇಂದೇ ಭೇಟಿ ಕೊಡಿ

[illegible] ಮೈಸೂರು ಸಿಲ್ಕಿನಲ್ಲಿ [illegible] [illegible] ಬೆಂಗಳೂರು [illegible] ಕುಂಬಕೋಣಂ ಸೀರೆಗಳು, ಕಣಗಳು, ಪಂಚೆಗಳು, ಸೂಟು [illegible] ಗಳು [illegible]

ಬೆಂಗಳೂರು ಜವಳಿ ಅಂಗಡಿ
ಶಿವರಾಂಪೇಟೆ : ಮೈಸೂರು

ಚಾಮುಂಡೇಶ್ವರೀ ಟಾಕೀಸ್

ತಾ॥ 20-2-49 ರಿಂದ
ದಿನವಹಿ 3 ಆಟಗಳು

ಸೊಸೈಟಿ (ಹಿಂ[illegible]

ಮುಖ್ಯ ಪಾತ್ರ :-- ನರ್ಗೀಸ್, ಸ[illegible] ಗೋಪ್.

ಗೃಹಕೃತ್ಯದ ನೋಟೀಸು

ನೀಲಗಿರಿ ಜಿಲ್ಲಾ ಮಳ್ಳೂರು [illegible] ಲ್ಲಿರುವ ಚನ್ನರಾಯ ಪಟ್ಟದ ತಾಲ್ಲೂ[illegible] ಹಿರಿಸಾವೆ ಹೋಬಳಿ ಕೊನ್ನಮಾ[illegible] ಳ್ಳಿ ಗ್ರಾಮದ ಹುಚ್ಚೇಗೌಡನ ಮಗ [illegible] ಕಂಠೇಗೌಡನ ಹೆಂಡತಿ ಕಾಳಮ್ಮನು [illegible] ಮೂಲಕ ಸಕಲರಿಗೂ ತಿಳಿಯಪಡಿಸು[illegible] ದೇನೆಂದರೆ :-

ನನ್ನ ಗಂಡ ವಿಷಕಂಠೇಗೌಡರು ನನ್ನ ಮೇಲೆ ಪ್ರೀತಿಯಿಲ್ಲದೆ ಎರಡನೇ ಲಗ್ನವಾ[illegible] ಗಿರುವುದರಿಂದ ಅವರ ಮೇಲೆ ಮತ್ತು [illegible] ವರ ತಂದೆ ಹುಚ್ಚೇಗೌಡರ ಮೇಲೆ ಜೀ[illegible] ನಾಂಶದ ಹಕ್ಕಿಗಾಗಿ ನಾನು ವ್ಯವಹಾರ [illegible] ಡೆಸಬೇಕೆಂದಿರುತ್ತೇನೆ. ಇದನ್ನು ತಿಳಿ[illegible] ಆತನು ಪಿತ್ರಾರ್ಜಿತವಾದ ಸ್ವತ್ತುಗಳನ್ನೂ ಚರಸ್ಥಿರ ಆಸ್ತಿಗಳನ್ನೂ ಮತ್ತು ಲೇವಾದೇವಿಗಳನ್ನೂ ಪರಭಾರೆ ಮಾಡಲು ಹೊ[illegible] ಡಿರುತ್ತಾನೆ.

ಹಾಗೆ ಆತನಿಂದ ಯಾರಾದರೂ [illegible] ಪರಿ ಸ್ವತ್ತುಗಳನ್ನು ಆಧಾರ, ಭೋಗ್ಯ [illegible] ಯ ವಗೈರೆ ಮಾಡಿಸಿಕೊಂಡಲ್ಲಿ ಅದು [illegible] ರ್ಜಿತವಾಗತಕ್ಕದ್ದಲ್ಲವೆಂಬ ಅಂಶವನ್ನು [illegible] ಮೂಲಕ ತಿಳಿಯಪಡಿಸಲಾಗಿದೆ.

ಸ್ವತ್ತುಗಳು ಚನ್ನರಾಯ ಪಟ್ಟದ ತಾ[illegible] ಲ್ಲೂಕು ಹಿರಿಸಾವೆ ಹೋಬಳಿ ಗೌಡರ [illegible] ಳ್ಳಿ ಗ್ರಾಮ, ಬಾಳಗಂಚಿ ಗ್ರಾಮ, ಬಾಳಗಂ[illegible] ಚಿ ಅಮಾನಿಕೆರೆ ಹೊನ್ನಮಾರನ ಹಳ್ಳಿ [illegible] ಗಳಲ್ಲಿವೆ.

● ಕಾಳಮ್ಮನ ರುಜು

18-2-49 ರಿಂದ

ಅಪೋಘವಾದ 9ನೇ ವಾರ

ರಾಜಕಮಲ್,

ದಿನವಹಿ 3 ಆಟಗಳು

ಮ್ಯಾಟಿನಿ 3-30, ಸಂಜೆ 6-30 ಮತ್ತು ರಾತ್ರಿ 9-30 ಗಂಟೆಗೆ

ಆದಿತ್ತನ ಕನಸು

(ತಮಿಳು)

ಪಾತ್ರ : ಟಿ. ಆರ್. ಮಹಾಲಿಂಗಂ ಅಂಜಲಿದೇವಿ, ಕಾಳಿ ಎನ್. ರತ್ನಂ, ತಾರಾ ಚೌಧುರಿ, ಲಲಿತಾ ಪದ್ಮಿನಿ.

Morning Shows from 18-2-49 for 4 days

Marie Walewaska

With - Charles Boyer
Greta Garbo

ಲಗ್ನಕ್ಕಾಗಿ

ಹೊಸ ಜವಳಿಗಳು

ಸುಲಭ ದರದಲ್ಲಿ ಬಂದಿವೆ

ವೀರಭದ್ರ ಸಿಲ್ಕ್ ಎಂಪೋರಿಯಂ

ವಿ. ರಾಮಯ್ಯ & ಬ್ರದರ್ : : ಇಲವಾಲ ರಸ್ತೆ, ಮೈಸೂರು

ವಿಧವಿಧವಾದ ರೇಷ್ಮೆ ಮತ್ತು ನೂಲಿನ ಸೀರೆಗಳು

ಪ್ರಭುದೇವಾ ಟಾಕೀಸಿನಲ್ಲಿ

18-2-49ನೇ ಶುಕ್ರವಾರದಿಂದ

ದಿನವಹಿ ಮೂರು ಆಟಗಳು

ಜೈಮಿನಿ ಪಿಕ್ಚರ್ಸ್ ರವರ

ಮಾರಿಯಮ್ಮ

ತಮಿಳು ಭಾಷೆ

ಪಾತ್ರ ಸಂತಾನಲಕ್ಷ್ಮಿ, ಟಿ. ಎಸ್. ಬಾಲಯ್ಯ, ಕಾಳಿ ಎನ್. ರತ್ನಂ ಮುಂತಾದವರು

* BUY MURPY RADIOS *

FOR QUALITY & SATISFACTION

Ask for Demonstration at

THE INTERNATIONAL AGENCY C. H. Bank Buildings Mysore

ಫೋನ್ ನಂ 792   ವಂದೇ ಮಾತರಂ   ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭]   ಸೋಮವಾರ ೨೧-೨-೧೯೪೯   [ಸಂಚಿಕೆ ೧೮೮

ಭದ್ರಗೊಳದ ಕಾರ್ಮಿಕರು ಕೆಲಸಕ್ಕೆ ಹಿಂದಿರುಗುವುದಿಲ್ಲ

ಮೈಸೂರು ೨೧

ಭದ್ರಗೊಳದ ಕಮಿಕಲ್ಸ್ ಮತ್ತು ಫರ್ಟಿಲೈಸರ್ ಕಾರ್ಖಾನೆಯ ಕೆಲಸಗಾರರು ಬೆಳಗ್ಗೆ ಜೀವಣ್ಣರಾಯರ ಕಟ್ಟೆ ಮೈದಾನದಲ್ಲಿ ಸಭೆ ಸೇರಿ, ಅಧಿಕಾರಿವರ್ಗದವರು ಕೆಲಸಕ್ಕೆ ಹಿಂತಿರುಗಬೇಕೆಂದು ಸೂಚನೆಯನ್ನು ತಿರಸ್ಕರಿಸಿ, ಕೆಲಸಕ್ಕೆ ಹಿಂದಿರುಗಕೂಡದೆಂದು ನಿರ್ಧರಿಸಿದ್ದಾರೆ. ನೋಟೀಸು ಕೊಟ್ಟಿರುವುದು ಕಾನೂನು ಬಾಹ್ಯ ವೆಂದು ನಿರ್ಧರಿಸಲಾಯಿತು. ... ಮತ್ತು ಕಾರ್ಮಿಕ ಸಚಿವರು ... ಹೋಗಬೇಕೆಂದೂ, ಈ ... ಕಾರ್ಮಿಕರು ಶಾಂತಿ, ಶಿಸ್ತು ... ದಿಂದ ಮುಷ್ಕರವನ್ನು ಮುಂ... ಬೇಕೆಂದೂ ಪ್ರಾರ್ಥಿಸುವ ನಿರ್ಣಯ ... ಸಲಾಯಿತು.

ವಾರ್ಷಿಕೋತ್ಸವ

... ಮುದ್ರಣಾಲಯದ ಮೈಸೂರು ... ಯ ವಾರ್ಷಿಕ ಸಮಾರಂಭವು ... ದಿನ ಶ್ರೀಮನ್ಮಹಾರಾಜರವರ ... ಕಾರ್ಯದರ್ಶಿಗಳಾದ ಶ್ರೀ ಜಿ ... ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಮತ್ತು ವಾರ್ಷಿಕ ವರದಿ ಓದಿದನಂತರ ಕೆಲಸಗಾರರ ಪರವಾಗಿ ... ವೆಂಕೋಬರಾಯರು ಸ್ವಾಗತ ಭಾಷಣ ಮಾಡಿ ಕೆಲಸಗಾರರ ಕುಂದುಕೊರತೆಗಳನ್ನು ಸರ್ಕಾರದವರು ಈಡೇರಿಸಬೇಕೆಂದೂ ಮತ್ತು ಕಾರ್ಮಿಕರು ಮನೆ ಕಟ್ಟಿಕೊಳ್ಳಲು ಸುಲಭ ದರದಲ್ಲಿ ನಿವೇಶನವನ್ನು ಸರ್ಕಾರದವರು ಕೊಡಬೇಕೆಂದೂ ಪ್ರಾರ್ಥಿಸಿಕೊಂಡರು. ಅಧ್ಯಕ್ಷರು ... ಗಳನ್ನು ವಿತರಿಸಿ, ಕೆಲಸಗಾರರು ... ತ್ಯದಿಂದ ದುಡಿದು ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಬೇಕೆಂದು ತಿಳಿಸಿದರು. ವಂದನೆ ಮತ್ತು ರಾಷ್ಟ್ರ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

... ಇರ್‌ಷೂರ್ ಕವರುಗಳ ಕಳುವು

ಈಗ ಕೆಲವು ದಿವಸಗಳ ಹಿಂದೆ ಬೊಂಬಾಯಿ ... ಮೇಲ್ ರೈಲಿನ ಟಪಾಲು ... ಯಲ್ಲಿದ್ದ ಅಂಚೆ ಚೀಲವನ್ನು ... ಸ್ಟೇಷನ್ನಿನಲ್ಲಿ ಬಿಚ್ಚಿ ನೋಡಿ ... ದರಲ್ಲಿದ್ದ ... ಇನ್ಷ್ಯೂರ್ ಕವರು ... ವಾಗಿದ್ದುವು ಮೊಗಲ್ ಸರೈ ... ಹಾಬಾದ್ ಸ್ಟೇಷನ್ನುಗಳ ನಡುವೆ ಈ ಕೃತ್ಯವು ನಡೆದಿದೆಯೆಂದು ಹೇಳಲಾಗಿದೆ. ಪೋಲೀಸರ ತನಿಖೆ ನಡೆಯುತ್ತಿದೆ.

CHAMUNDESWARI TALKIES
from 22-2-49
Daily 3 Shows
For 3 days only
Bud Abbott & Lou Costello in Hollywood
(ಬಡ್ ಅಬ್ಬಾಟ್ ಅಂಡ್ ಲೌ ಕಾಸ್ಟೆಲೊ ಇನ್ ಹಾಲಿವುಡ್
ಮೂರು ದಿನಗಳು ಮಾತ್ರ)

ದೇಶದ ಗೋಧನವನ್ನು ಅಭಿವೃದ್ಧಿ ಪಡಿಸಬೇಕು

ಪಶುಪಾಲನಾ ಸಮ್ಮೇಳನದಲ್ಲಿ ಶ್ರೀಮನ್ಮಹಾರಾಜರವರ ಭಾಷಣ

ಮೈಸೂರು ೨೧

ಈ ದಿನ ಬೆಳಿಗ್ಗೆ ವಸ್ತು ಪ್ರದರ್ಶನ ಭವನದಲ್ಲಿ ಅಖಿಲ ಭಾರತ ವ್ಯವಸಾಯ ಮತ್ತು ಪಶುಪಾಲನಾ ಬೋರ್ಡಿನ ಪಶುಪಾಲನಾ ಶಾಖೆಯ ಎಂಟನೇ ಸಮ್ಮೇಳನದ ಪ್ರಾರಂಭೋತ್ಸವವು ಶ್ರೀಮನ್ಮಹಾರಾಜರಿಂದ ನೆರವೇರಿಸಲ್ಪಟ್ಟಿತು

ಬಾಲಕಿಯರಿಂದ ದೇವತಾ ಪ್ರಾರ್ಥನೆಯಾದ ನಂತರ ಸಮ್ಮೇಳನದ ಅಧ್ಯಕ್ಷರಾದ ಸರ್ ದಾತಾರ್‌ಸಿಂಗರು ಸ್ವಾಗತ ಭಾಷಣಮಾಡಿದರು ಭಾರತ ದೇಶವು ಇಬ್ಭಾಗವಾದುದರಿಂದ ಒಟ್ಟು ಇದ್ದ ಪಶು ಸಂಖ್ಯೆಯು ಕಡಿಮೆಯಾಗಿ ಭಾರತಕ್ಕಿಂತ ಪಾಕಿಸ್ಥಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೋವುಗಳು ಸೇರಿಹೋದವು ಇಲ್ಲಿನ ಗೋವುಗಳ ಸಂಖ್ಯೆಯು ಜನರ ಸಂಖ್ಯೆಗೆ ಅನುಗುಣವಾಗಿ ಇರದೆ ಜನರಿಗೆ ಹಾಲಿನ ಕೊರತೆ ವಿಪರೀತವಾಗಿದೆ. ಕಳೆದ ನಾಲ್ಕಾರು ವರ್ಷಗಳಿಂದ ಬಹಳವಾಗಿ ಡಬ್ಬಿಗಳಲ್ಲಿ ತುಂಬಿದ ಹಾಲನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಆದರೂ ಮನುಷ್ಯ ಮಾತ್ರದವನಿಗೆ ಬೇಕಾದಷ್ಟು ಅಂದರೆ ದಿನಕ್ಕೆ ಕನಿಷ್ಠ ಪಕ್ಷ ಎಂಟು ಔನ್ಸ್ ಹಾಲು ದೊರೆಯುತ್ತಿಲ್ಲ ಹಾಗೆ ದೊರೆಯುವಂತೆ ಮಾಡುವುದೇ ಈ ಸಮ್ಮೇಳನದ ಉದ್ದೇಶ ಎಂದು ಅವರು ಹೇಳಿದರು

ನಂತರ ಶ್ರೀಮನ್ಮಹಾರಾಜರವರು ಪ್ರಾರಂಭ ಭಾಷಣ ಮಾಡಿದರು ತಮ್ಮ ಭಾಷಣದಲ್ಲಿ ಪ್ರಭುಗಳು ಹೀಗೆ ತಿಳಿಸಿದರು,—

ಭಾರತೀಯ ಜನಾಂಗದ ಜೀವನದಲ್ಲಿ ಜಾನುವಾರುಗಳ ಸಂರಕ್ಷಣೆಯು ಬಹಳ ಮುಖ್ಯವಾದುದೆಂಬ ಅಂಶವು ಪುರಾತನ ಕಾಲದಿಂದಲೂ ಭಾರತೀಯರಿಗೆ ಮನವರಿಕೆಯಾಗಿದೆ ಗೋವುಗಳು ಭಾರತ ದೇಶದ ಸಂಪತ್ತೆಂಬುದಕ್ಕೆ ದೃಷ್ಟಾಂತವಾಗಿ ಅನೇಕ ಕಥೆಗಳು ಪುರಾಣಗಳಲ್ಲಿ ಅಡಕವಾಗಿವೆ ಲೆಕ್ಕಗಳ ಪ್ರಕಾರ, ಪ್ರಪಂಚದ ಜಾನುವಾರುಗಳ ಒಟ್ಟು ಸಂಖ್ಯೆಯಲ್ಲಿ ಶೇಕಡ ಮೂವತ್ತರಷ್ಟು ಭಾಗದ ಜಾನುವಾರುಗಳು ಭರತಖಂಡದಲ್ಲಿವೆ ಆದರೆ, ಭಾರತದಲ್ಲಿ ಜಾನುವಾರುಗಳ ಸಂಖ್ಯೆಯು ಇಷ್ಟು ಅಧಿಕವಾಗಿದ್ದಾಗ್ಯೂ, ಅದು ವಾಸ್ತವವಾಗಿ, ಆ ಸಂಖ್ಯೆಗನುಗುಣವಾದಷ್ಟು ಹೆಚ್ಚಿನ ಆರ್ಥಿಕ ಸಂಪತ್ತನ್ನು ಸೂಚಿಸುತ್ತದೆಯೆಂದು ಹೇಳುವಂತಿಲ್ಲ ಆದಕಾರಣ ಈ ವಿಚಾರದಲ್ಲಿ ಈಗ ವಿಶೇಷ ಶ್ರಮ ... ಪಶು ಸಂಪತ್ತನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಂಬಂಧಪಟ್ಟ ಅನೇಕ ಯೋಜನೆಗಳು ರಚಿತವಾಗಿ ಅವು ಕಾರ್ಯತಃ ರೂಪುಗೊಳ್ಳುತ್ತಿರುವುದೂ ನಮಗೆ ಹರ್ಷವನ್ನುಂಟುಮಾಡಿವೆ

"ಭರತಖಂಡದಲ್ಲಿ ಸ್ಥಾಪಿತವಾಗಿರುವ ವ್ಯವಸಾಯ ಸಂಶೋಧನೆಗೆ ಸಂಬಂಧಪಟ್ಟ "ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್" ಎಂಬ ಸಂಸ್ಥೆಯವರು ವ್ಯವಸಾಯ ಮತ್ತು ಪಶುಪಾಲನೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಶೀಲಿಸಿ ಪರಿಹಾರೋಪಾಯಗಳನ್ನು ಕಂಡುಹಿಡಿಯಲು ಕೆಲಸ ಮಾಡಿದ್ದಾರೆ.

ಗಾಡಿಗಳನ್ನೆಳೆಯುವುದೇ ಮುಂತಾದ ಕೆಲಸಗಳಿಗೆ ಉಪಯೋಗಿಸುವ ಜಾನುವಾರುಗಳನ್ನು ಮತ್ತು ಹಾಲು ಕೊಡುವ ಹಸುಗಳನ್ನು ರಕ್ಷಣೆ ಮಾಡುವುದಕ್ಕೆ ಸಂಬಂಧಪಟ್ಟ ವಿಚಾರವು ಕೆಲವು ಕಾಲದಿಂದಲೂ ನಮ್ಮ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಈ ಅಧಿವೇಶನದಲ್ಲಿ ನೀವುಗಳು ನಡೆಯಿಸತಕ್ಕ ಸಮಾಲೋಚನೆಗಳ ಫಲಿತಾಂಶವಾಗಿ ಈ ವಿಚಾರದಲ್ಲಿ ಆಸಕ್ತಿಯನ್ನು ಹೆಚ್ಚಿಸುವುದಕ್ಕೂ ಮತ್ತು ಸಮರ್ಪಕವಾದ ಸಾಧನೋಪಾಯಗಳನ್ನು ಕಂಡುಹಿಡಿಯುವುದಕ್ಕೂ ಸಾಧ್ಯವಾಗುವುದೆಂದು ನಾವು ನಂಬಿದ್ದೇವೆ ನಮ್ಮ ದೇಶದಲ್ಲಿ ಗೋಸಂಪತ್ತೇನೋ ಅಧಿಕವಾಗಿದೆ, ಆದಾಗ್ಯೂ, ಅವಶ್ಯಕ್ಕನುಗುಣವಾದಷ್ಟು ಮಟ್ಟಿಗೆ ಯಥೇಷ್ಟವಾಗಿ ಹಾಲು ದೊರೆಯುತ್ತಿಲ್ಲ ನಮ್ಮ ದೇಶದಲ್ಲಿ ಜಾನುವಾರುಗಳಿಗೆ ಸಾಕಾದಷ್ಟು ಮೇವೂ ಮತ್ತು ಪುಷ್ಟಿಕರವಾದ ಆಹಾರವೂ ಇಲ್ಲದಿರುವುದು ಅವು ಅಷ್ಟು ಉತ್ತಮ ರೀತಿಯಲ್ಲಿಲ್ಲದೆ ಜೀರ್ಣಾಗಿರುವುದಕ್ಕೆ ಬಹುಮಟ್ಟಿಗೆ ಕಾರಣವೆಂದು ಹೇಳಬಹುದಾಗಿದೆ ಗೋಮಾಳದ ಜಮೀನುಗಳೇ ಮುಂತಾಗಿ ಹೆಚ್ಚು ಹೆಚ್ಚು ಜಮೀನುಗಳನ್ನು ಸಾಗುವಳಿಗೆ ತರುತ್ತಿರುವುದರಿಂದಲೂ, ಮತ್ತು ಜನಸಂಖ್ಯೆಯು ಬೆಳೆಯುತ್ತಬಂದಿರುವುದರಿಂದಲೂ ವ್ಯವಸಾಯಗಾರರು ತಮ್ಮ ದನಕರುಗಳಿಗೆ ವಾಡಿಕೆಯಾಗಿ ಒದಗಿಸುತ್ತಿದ್ದಷ್ಟು ಮೇವನ್ನು ಒದಗಿಸುವುದಕ್ಕೆ ಸಾಧ್ಯವಾಗದ ಹೋಗಿದೆ ಆಂದ ಮೇವಿಗೆ ಬದಲಾಗಿ ಜಾನುವಾರುಗಳಿಗೆ ಪುಷ್ಟಿ ಕೊಡತಕ್ಕ ಇತರ ಆಹಾರಗಳನ್ನು ಒದಗಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲದಂತಾಗಿದೆ ಜಾನುವಾರುಗಳಿಗೆ ತಗಲತಕ್ಕ ಮತ್ತು ಕೆಲವುವೇಳೆ ಅವುಗಳ ಸಂಖ್ಯೆಯನ್ನು ಕಡಮೆ ಮಾಡತಕ್ಕ ರೋಗಗಳಿಗೆ ಸಂಬಂಧಪಟ್ಟ ಸಮಸ್ಯೆಗಳಿಗೂ ಗಮನ ಕೊಡಬೇಕಾಗಿದೆ ಈ ಸಂಬಂಧವಲ್ಲಿ ... ಸಾಧಿಸಿರುವುದನ್ನು ಯಾರೂ ಕಡೆಗಣಿಸುವಂತಿಲ್ಲ

ದನಗಳ ತಳಿಗಳು ಅಭಿವೃದ್ಧಿಯಾಗಿ, ಅವು ಪುಷ್ಟಿಕರವಾಗಿ ಬೆಳೆದು ಗೋಸಂಪತ್ತು ಹೆಚ್ಚುವುದರ ಮೂಲಕ ಜನಗಳ ಆರ್ಥಿಕ ಸ್ಥಿತಿಯು ಉತ್ತಮಗೊಂಡು, ನಮ್ಮ ದೇಶವು ಸಮೃದ್ಧವಾದ ಸಂಪತ್ತಿನಿಂದ ಕೂಡಿ ಕಳಕಳಿಸುವಂಥ ಉತ್ತಮ ಪರಿಸ್ಥಿತಿ ಏರ್ಪಡುವ ಪ್ರಗತಿ ಸಾಧನೆಯ ಮಾರ್ಗದಲ್ಲಿ, ಈ ಸಮ್ಮೇಳನದ ಪರಿಣಾಮವಾಗಿ ನಾವು ಮತ್ತೊಂದು ಮೆಟ್ಟಲನ್ನು ಮುಟ್ಟಿದಂತಾಗುವುದೆಂಬುದರಲ್ಲಿ ಸಂದೇಹವಿಲ್ಲ

ಸಮ್ಮೇಳನದ ಅಂಗವಾಗಿ ಒಂದು ಸಣ್ಣ ಪ್ರದರ್ಶನವನ್ನು ಸಹ ಏರ್ಪಡಿಸಲಾಗಿದೆ. ಅದರಲ್ಲಿ ಪಶುಪಾಲನೆ, ಕುರಿಗಳ ಪೋಷಣೆ, ಕೋಳಿಗಳ ರಕ್ಷಣೆ ಮತ್ತು ಮೀನುಗಳ ಮೂಲಕ ಮಲೇರಿಯಾ ನಿವಾರಣೆ ಮುಂತಾದುವುಗಳಿಗೆ ಸಂಬಂಧಪಟ್ಟ ವಸ್ತುಗಳನ್ನು ಇಡಲಾಗಿದೆ

ಸುಮಾರು ಇನ್ನೂರು ಜನ ಪ್ರತಿನಿಧಿಗಳು ಭರತಖಂಡದ ನಾನಾ ಭಾಗಗಳಿಂದ ಬಂದಿರುತ್ತಾರೆ ಎಲ್ಲಾ ಪ್ರಾಂತಗಳ ವ್ಯವಸಾಯ ಅಧಿಕಾರಿಗಳೂ, ಅಲ್ಲದೆ ಅಮೆರಿಕದ ವ್ಯವಸಾಯ ಇಲಾಖಾ ಪ್ರತಿನಿಧಿಗಳು ಮತ್ತು ಬಂಗಾಳದ ಹಾಲಿ ತಯಾರಿಕಾ ಕೇಂದ್ರಗಳ ವ್ಯವಸ್ಥಾಪಕರೂ ಗೋರಕ್ಷಣಾ ಕಾರ್ಯನಿರತರೂ ಆಗಿರುವ ಬಾಬು ... ಚಂದ್ರ ... ಪ್ರಮುಖರು ...

ಆಯುರ್ವೇದ ಮತ್ತು ಯುನಾನಿ ಕಾಲೇಜ್ ವಿದ್ಯಾರ್ಥಿಗಳ ಮುಷ್ಕರ

ಮೈಸೂರು. ೨೧

ಈದಿನ ಬೆಳಗ್ಗೆಯಿಂದ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಸುಮಾರು ೫೦ ಜನ ವಿದ್ಯಾರ್ಥಿಗಳು ತಮ್ಮ ಬೇಡಿಕೆಯನ್ನು ಸರ್ಕಾರದವರು ಇಲ್ಲಿಯವರೆವಿಗೂ ಈಡೇರಿಸದಿದ್ದುದರಿಂದ ಮುಷ್ಕರ ಹೂಡಿರುತ್ತಾರೆ

ವಿದ್ಯಾರ್ಥಿಗಳು ಇಂದು ಸಭೆಸೇರಿ, ಮುಷ್ಕರ ಕಾರ್ಯಕಾರೀ ಸಮಿತಿಯನ್ನು ನಿರ್ಮಿಸಿ ಅದಕ್ಕೆ ಶ್ರೀ ಸಿ ವೇಂಕಟಾಚಾರ್ಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಜಿ ಸೀತಾರಾಂ ರವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಿರುತ್ತಾರೆ.

ಕಮ್ಯೂನಿಸ್ಟರ ದಸ್ತಗಿರಿ

ರಾಜಧಾನಿಯ ಕಮ್ಯೂನಿಸ್ಟರಾದ ಶ್ರೀಗಳು ಸಿದ್ದಪ್ಪ, ಯೂಸುಫ್ ಮತ್ತು ಮಹಮದ್ ರವರುಗಳನ್ನು ಪೋಲೀಸರು ನೆನ್ನೆ ಸಂಜೆ ದಸ್ತಗಿರಿ ಮಾಡಿದ್ದಾರೆ.

ಧರ್ಮ ಪ್ರವರ್ತ ಎಂ. ಎಲ್. ನಾಗಪ್ಪಶೆಟ್ಟರ ನಿಧನ

ಚಿಕ್ಕಮಗಳೂರು ೨೦

ಈ ಊರಿನ ಸುಪ್ರಸಿದ್ಧ ವರ್ತಕರೂ ಶ್ರೀಮಂತರೂ ಧರ್ಮಿಷ್ಟರೂ ಆದ ಧರ್ಮ ಪ್ರವರ್ತ ಎಂ. ಎಲ್. ನಾಗಪ್ಪ ಶೆಟ್ಟರು ನೆನ್ನೆ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕಿರಣ್ ಶಂಕರರಾಯ್‌ರವರ ನಿಧನ

ಪಶ್ಚಿಮ ಬಂಗಾಳದ ಗೃಹ ಸಚಿವರಾದ ಶ್ರೀ ಕಿರಣ್ ಶಂಕರರಾಯ್‌ರವರು ನಿನ್ನೆ ಬೆಳಗ್ಗೆ ತಮ್ಮ ೫೮ ನೇ ವಯಸ್ಸಿನಲ್ಲಿ ನಿಧನರಾದರು

ಪ್ರಕಟನೆ

ದಿ ಇಂಟರ್ ನ್ಯಾಷನಲ್ ಬಿಲ್ಡಿಂಗ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸ್ — ಬೊಂಬಾಯಿ.

— ಮೈಸೂರು ದೇಶದ ಬ್ರಾಂಚುಗಳು —

ಬೆಂಗಳೂರು ಮತ್ತು ಮೈಸೂರು.

ಅಧಿಕೃತ ಬಂಡವಾಳ ಐದು ಕೋಟಿ (೫೦೦೦೦೦೦೦)ರೂ ಗಳು ಚಂದೆ ಮತ್ತು ಇತರ ಬಂಡವಾಳಗಳು ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವುವು

ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಸೊಸೈಟಿಗೆ ಸೇರಿದ ಆಸ್ತಿ (assets) ಸುಮಾರು ೩,೫೦೦೦೦ ರೂ

ಬೆಂಗಳೂರು ಮತ್ತು ಮೈಸೂರುಗಳಲ್ಲಿ ಸೊಸೈಟಿಯು ಶಕ್ಷಿಗಾರರಿಂದ ವಸೂಲಾಗಿರುವುದು ಸುಮಾರು ೯೦,೦೦೦ ರೂ

ಮೇಲ್ಕಂಡ ಸೊಸೈಟಿಯ ಬೋರ್ಡಿನವರು ಮೈಸೂರು ದೇಶದಲ್ಲಿ ಮೊದಲು ಐದು ಲಕ್ಷ (೫೦೦೦೦೦ ರೂ ಗಳ ಷೇರುಗಳನ್ನು ಶಾವತಿ ಆಗುವಂತೆಯೂ, ಅನಂತರ ಇದನ್ನು (೨೫,೦೦೦೦೦ ರೂ) ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸುವಂತೆಯೂ, ತೀರ್ಮಾನಿಸಿದ್ದಾರೆ

ಮೈಸೂರು ದೇಶದ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರವರು ತಮ್ಮ Mis C G R ನಂ ೪೮-೪೯ ತಾ|| ೯-೩-೧೯೪೯ ರ ಮೆಕುರಾಂ ಎಂಡಾರ್ಸ್‌ಮೆಂಟಿನಲ್ಲಿ ಐದು ಲಕ್ಷ ರೂಪಾಯಿಗಳಿಗೆ ಮೀರುವಂತೆ ಷೇರುಗಳನ್ನು ಹೆಚ್ಚಿಸಿಕೊಳ್ಳುವ ವಿಷಯದಲ್ಲಿ ಲಾ ಸಕ್ರೆಟರಿಯವರ ಅನುಮತಿಯನ್ನು ಪಡೆಯುವಂತೆ ಸಲಹೆ ಕೊಟ್ಟಿರುತ್ತಾರೆ.

ಮೈಸೂರಿನಲ್ಲಿ ಸೈಟುಗಳನ್ನು ಒದಗಿಸಿ ಕೊಡುವುದಕ್ಕೋಸ್ಕರ ಮೈಸೂರು ತಾಲ್ಲೂಕಿನ ನಾಚನಹಳ್ಳಿ ಪಾಳ್ಯದಲ್ಲಿ ಅರವತ್ತು ನಾಲ್ಕು (೬೪ acres) ಎಕರೆ ಜಮೀನನ್ನು ಸುಮಾರು ಈ ತಿಂಗಳ ಆಖೈರಿನಲ್ಲಿ ಒಂದು ಲಕ್ಷ ರೂಪಾಯಿಗಳ ಬೆಲೆಗೆ ಕ್ರಯಕ್ಕೆ ತೆಗೆದುಕೊಳ್ಳಲು ಏರ್ಪಾಡಾಗಿರುತ್ತೆ

ಮೇಲ್ಕಂಡ ಸೊಸೈಟಿಯ ಕೆಲಸ ಕಾರ್ಯಗಳನ್ನು ಕೆಲವು ಕಕ್ಷಿಗಾರರು ಅಪಪ್ರಚಾರ ಮಾಡುತ್ತಿರುವುದು ನಮ್ಮ ಗಮನಕ್ಕೆ ತಿಳಿದು ಬಂದಿದೆ, ಇದು ರುಜುವಾತಾಗಲ್ಲಿ ಅಂಥಾ ಕಕ್ಷಿಗಾರರು ರೂಲ್ಸಿನ ಪ್ರಕಾರ ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗ ಬೇಕಾಗುತ್ತದೆ. ಮುನ್ನವೇ ಎಚ್ಚರಿಕೆ ಕೊಟ್ಟಿದ್ದೇವೆ

(ಸಹಿ) ಟಿ. ಕೆ. ನಾರಾಯಣಮೂರ್ತಿ
ಡಿವಿಜನಲ್ ಮ್ಯಾನೇಜರ್
ಇನ್‌ಛಾರ್ಜ್
ಮೈಸೂರು ಬ್ರಾಂಚ್

ತಾ|| ೧೯-೩-೪೯
ಮೈಸೂರು

Edited, printed and published by A.R Nagarajan at the Sadhvi Press, D Subbaiah Road, Mysore

ಸತ್ಕಾರ ಕೂಟ

ಮೈಸೂರು ೨೧

ರಾಜಧಾನಿಯ ಜೈನ ಮಾರ್ವಾಡಿ ಮಹಾಜನ ಗೋಸೇವಾ ಸಂಘದವರು ಅಖಿಲ ಭಾರತ ಪ್ರಾಣಿ ಸಂರಕ್ಷಣಾ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಮೊನ್ನೆ ದಿನ ವಸ್ತುಪ್ರದರ್ಶನ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಉಪಾಹಾರದನಂತರ ಸಂಘದ ಅಧ್ಯಕ್ಷರಾದ ಶ್ರೀ ಮಾಣಿಕ್ ಚಂದ್ ಪುರ್‌ರಾಜ್‌ರವರು ಭಾಷಣಮಾಡಿ ಗೋಸೇವಾ ರಕ್ಷಣೆಗಾಗಿ ತಮ್ಮ ಸಂಘದವರು ಸಂಗ್ರಹಿಸುತ್ತಿರುವ ನಿಧಿಗೆ ಕೇಂದ್ರ ಸರ್ಕಾರದವರು ನೆರವು ನೀಡಬೇಕೆಂದು ಪ್ರಾರ್ಥಿಸಿದರು ಪ್ರತಿನಿಧಿಗಳ ಪರವಾಗಿ ಡಾ|| ದಾಸಗುಪ್ತ ಮತ್ತು ಡಾ|| ದತ್ತಾರವರು ಭಾಷಣ ಮಾಡಿ ಸತ್ಕಾರಕ್ಕಾಗಿ ವಂದನೆಯನ್ನು ಅರ್ಪಿಸಿದರು

10,000 ರೂಪಾಯಿಗಳ ಬಹುಮಾನಗಳು

ಕಾರು ರಾಗಿಯನ್ನು ಹೆಚ್ಚಾಗಿ ಮತ್ತು ಚೆನ್ನಾಗಿ ಬೆಳೆಯುವ ರೈತರಿಗೆ

ಸರ್ಕಾರದವರು 10,000 ರೂಪಾಯಿಗಳನ್ನು ಬೇರೆ ಬೇರೆ ಬಹುಮಾನಗಳಾಗಿ ಹಂಚುವರು

ಈ ಒಳ್ಳೆಯ ಸಮಯವನ್ನು ರೈತರಾರೂ ಕಳೆದುಕೊಳ್ಳಬಾರದು

ಆದ್ದರಿಂದ

ಬಹುವಾಗಿ ಬೆಳೆಯಿರಿ!
ಬಹುಮಾನ ಪಡೆಯಿರಿ!!
ದೇಶಸೇವೆ ಮಾಡಿರಿ!!!

ಕಾರು ರಾಗಿ ಬೆಳೆಯುವವರಿಗೆ ರಿಯಾಯಿತಿಗಳು

ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಎಕರೆ ಒಂದಕ್ಕೆ 15 ರೂಪಾಯಿಗಳಂತೆ ರಿಯಾಯಿತಿ ದರದಲ್ಲಿ ಬೆಲೆ ಬಾಳುವ

ಬಿತ್ತನೆ ಬೀಜ ಮತ್ತು ಗೊಬ್ಬರ

- ಇವುಗಳನ್ನು ಕಾರು ರಾಗಿ ಬೆಳೆಯುವ ರೈತರಿಗೆ ಮುಂಗಡವಾಗಿ ಕೊಡಲಾಗುವುದು
- ಈ ಮುಂಗಡ ಪಡೆಯುವ ರೈತರು ಎಕರೆ ಒಂದಕ್ಕೆ ಒಂದು ಪಲ್ಲದಂತೆ ಮಾತ್ರ ಕಂಟ್ರೋಲ್ ದರದಲ್ಲಿ ರಾಗಿಯನ್ನು ಆಹಾರದ ಡಿಪೋವಿಗೆ ಕೊಟ್ಟರೆ ಸಾಕು.
- ಹಾಗೆ ಕೊಟ್ಟಲ್ಲಿ ಈ ಮುಂಗಡವನ್ನು ರೈತರಿಗೆ ಮುಫತ್ತಾಗಿ ಬಿಟ್ಟು ಬಿಡಲಾಗುವುದು

ರೈತ ಬಾಂಧವರೇ!

ಈ ಸುಸಮಯವನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯಿರಿ

ಎಂ. ಮಲ್ಲರಾಜ ಅರಸ್,	**ವಿ. ವೇದವ್ಯಾಸಾಚಾರ್ಯ,**
ಕಾರ್ಯದರ್ಶಿ	ರೆವಿನ್ಯೂ ಕಮಿಷನರ್ ಮತ್ತು ಅಧ್ಯಕ್ಷರು
"ಗ್ರೋ ಮೋರ್ ಫುಡ್ ಕಮಿಟಿ	ಗ್ರೋ ಮೋರ್ ಫುಡ್ ಕಮಿಟಿ"

ಲಗ್ನಕ್ಕಾಗಿ

ಹೊಸ ಜವಳಿಗಳು

ಸುಲಭ ದರದಲ್ಲಿ ಬಂದಿವೆ

ವಿವಿಧವಾದ ರೇಷ್ಮೆ ಮತ್ತು ನೂಲಿನ ಸೀರೆಗಳು

ವೀರಭದ್ರ ಸಿಲ್ಕ್ ಎಂಪೋರಿಯಂ,
ವಿ. ರಾಮಯ್ಯ & ಬ್ರದರ್ಸ್
ಇರ್ವಿನ್ ರಸ್ತೆ, ಮೈಸೂರು

ಶ್ರೀ ಜಯಲಕ್ಷ್ಮೀ [illegible]
ಶ್ರೀರಂಗಪಟ್ಟಣ
ಶಿವರಾತ್ರಿ ಪ್ರಯುಕ್ತ

ಡೆಮರ್ಕ್- ಲ್ಯಾಂಡ್

(ತಮಿಳು) ಶ್ರೀ

— ಭೂಮಿಕೆ.—

ಟಿ. ಆರ್ ಮಹಾಲಿಂಗಂ, ಕೆ. ಸಾರಂಗಪಾಣಿ, ಆರ್ ಬಾಲಸುಬ್ರಹ್ಮಣ್ಯಂ, ಯೋಗಮಂಗಳಂ, ಕೆ. ಆರ್. ಚೆಲ್ಲಂ, ಸಿ.ಟಿ. ರಾಜಕಾಂತಂ ಮತ್ತು ಕುಮಾರಿ ಕಮಲ ತಾರಾ ಚೌಧರಿ.

ಪ್ರತಿ ದಿನ [illegible]

A TALLAM RELEASE

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಇಂದೇ ಭೇಟಿ ಕೊಡಿ

ಶುದ್ಧವಾದ ಮೈಸೂರು ಸಿಲ್ಕಿನ ಸ್ಕಾರ್ಫ್, ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಮತ್ತು ಕುಂಬಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು, ಮುಗುಟಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ
ಶಿವರಾಂಪೇಟೆ :: ಮೈಸೂರು

ORIENTAL ELECTRIC House
478 Asoka Road Mysore

BENGAL LAMPS
15 25 & 30 Watts
Re. 1—4—0 each.

ನಿಮ್ಮ ಮೈ ಮೊಗವುಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಬೆಂಗಾಲ್, ಬೆನಾರಿಸ್, ಮೈಸೂರು ಸಿಲ್ಕ್ ಸೀರೆಗಳು

[illegible] ಜವಳಿಗಳು ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ ನಾಣ್ಯವಾದ ಮಾಲು. **ಬಾಪೂಸಾಹ್ ಕಂಪೆನಿ, ಮೈಸೂರು**

ಕೋ ನಂ. 792 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ೭] ಗುರುವಾರ ೨೪-೨-೧೯೪೯ [ಸಂಚಿಕೆ ೧೯೧

ಸರ್ದಾರ್ ಪಟೇಲರಿಗೆ ರಾಜಧಾನಿಯ ಸ್ವಾಗತ



ಸರ್ದಾರ್ ಪಟೇಲರ ಆಗಮನ

ವಿಮಾನ ನಿಲ್ದಾಣದಲ್ಲಿ ಪ್ರಭುಗಳಿಂದ ಸ್ವಾಗತ

ಮೈಸೂರು ೨೪

ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರು ಈ ದಿನ ಬೆಳಗ್ಗೆ ೯|| ಗಂಟೆಗೆ ಮದರಾಸಿನಿಂದ ವಿಶೇಷ ವಿಮಾನದಲ್ಲಿ ಆಗಮಿಸಿದರು. ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಅವರನ್ನು ಶ್ರೀಮನ್ಮಹಾರಾಜರವರೂ ಮತ್ತು ದಿವಾನರೂ ಸ್ವಾಗತಿಸಿದರು. ಅನಂತರ ಸರ್ದಾರ್ ಪಟೇಲರಿಗೆ ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿ ಇತರ ಸಚಿವರುಗಳು, ಶ್ರೇಷ್ಠ ನ್ಯಾಯಾಧೀಶರು, ರಾಜ್ಯಾಂಗ ಶಾಸನ ಸಭೆ ಮತ್ತು ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರುಗಳು ಮತ್ತು ಇತರ ಸಿವಿಲ್ ಮತ್ತು ಮಿಲಿಟರಿ ಉನ್ನತಾಧಿಕಾರಿಗಳನ್ನು ಪ್ರಭುಗಳು ಪರಿಚಯ ಮಾಡಿಕೊಟ್ಟರು. ಶ್ರೀಮನ್ಮಹಾರಾಜರವರ ಪದಾತಿ ದಳದವರಿಂದ ಗಾರ್ಡ್ ಆಫ್ ಆನರನ್ನು ಸ್ವೀಕರಿಸಿದನಂತರ, ಶ್ರೀಮನ್ಮಹಾರಾಜರವರೊಡನೆ ಸರ್ದಾರರು ಮೋಟಾರಿನಲ್ಲಿ ಲಲಿತ ಮಹಲ್ ಅರಮನೆಗೆ ತೆರಳಿದರು. ಸರ್ದಾರರ ಪುತ್ರಿ ಶ್ರೀಮತಿ ಮಣಿಬೆನ್ ಪಟೇಲರೂ ದಯಮಾಡಿಸಿರುವರು.

ಮಂಡಕಳ್ಳಿ ನಿಲ್ದಾಣದಿಂದ ಲಲಿತಮಹಲ್ ಅರಮನೆಯ ರಸ್ತೆಯ ಅಕ್ಕಪಕ್ಕದಲ್ಲಿ ಸಾವಿರಾರು ಜನರು ತುಂಬಿದ್ದು, ಸರ್ದಾರರ ದರ್ಶನವನ್ನು ಪಡೆದರು.

ಮೈಸೂರು ಕಾಂಗ್ರೆಸ್ ಪ್ರತ್ಯೇಕವಾಗಿರಲು ಕರ್ನಾಟಕದ ಪ್ರತಿಭಟನೆ

ಮೈಸೂರು ಕಾಂಗ್ರೆಸ್ಸು ಪ್ರತ್ಯೇಕ ಪ್ರಾಂತೀಯ ಸಂಸ್ಥೆಯಾಗಿರಬೇಕೆಂಬ ವಿಚಾರವಾಗಿ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಲ್ಲಿಗೆ ನಿಯೋಗ ಹೋಗಬೇಕೆಂದು ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯವರು ನಿರ್ಧರಿಸಿರುವುದನ್ನು ಪ್ರತಿಭಟಿಸಿ, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ಕಾಂಗ್ರೆಸ್ ಅಧ್ಯಕ್ಷರಿಗೂ, ರಾಜ್ಯಾಂಗ ಸಭಾಧ್ಯಕ್ಷರಿಗೂ, ಪ್ರಧಾನಿ ಮತ್ತು ಉಪ ಪ್ರಧಾನಿಗಳಿಗೂ ಪತ್ರ ಬರೆದಿದ್ದಾರೆ. ಈ ಪ್ರತ್ಯೇಕ ಭಾವನೆಯು ಕರ್ನಾಟಕದ ಜನರಲ್ಲಿ ಅಸಮಾಧಾನವನ್ನುಂಟು ಮಾಡಿದೆಯೆಂದು ಅವರು ತಿಳಿಸಿದ್ದಾರೆ.

ಸರ್ದಾರ್ ಪಟೇಲರು ಮೈಸೂರಿಗೆ ಭೇಟಿಕೊಡುವ ಸಮಯದಲ್ಲಿ ಅವರನ್ನು ಕಂಡು ಈ ಬಗ್ಗೆ ಮಾತುಕತೆ ನಡೆಸಲು ಒಂದು ನಿಯೋಗವನ್ನು ಕಳುಹಿಸಬೇಕೆಂದೂ ಮತ್ತು ಕರ್ನಾಟಕ ಏಕೀಕರಣಕ್ಕೆ ಮೈಸೂರಿನ ಜನರಿಂದ ಬೆಂಬಲ ಪಡೆಯಲು ಮತ್ತೊಂದು ನಿಯೋಗವನ್ನು ಕಳುಹಿಸಬೇಕೆಂದೂ ಹುಬ್ಬಳ್ಳಿಯಲ್ಲಿ ಕಳೆದ ಭಾನುವಾರ ನಡೆದ ಕರ್ನಾಟಕ ಏಕೀಕರಣ ಮಹಾ ಸಭೆಯಲ್ಲಿ ನಿರ್ಧರಿಸಲಾಯಿತು.

ಮಹಿಳಾ ಹಿತರಕ್ಷಣಾ ಕೇಂದ್ರ

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಆಶ್ರಯದಲ್ಲಿ ಮೈಸೂರು ಸೌತ್ ಕಾಲೋನಿಯಲ್ಲಿ ಮಹಿಳೆಯರ ಹಿತರಕ್ಷಣೆ ಕೇಂದ್ರದ ಆರಂಭೋತ್ಸವವನ್ನು ಶ್ರೀ ಆರ್ ರಾಮಕೃಷ್ಣರವರು ಮೊನ್ನೆ ದಿನ ನೆರವೇರಿಸಿದರು. ಗೃಹಸಚಿವರಾದ ಶ್ರೀ ಟಿ ಮರಿಯಪ್ಪನವರು ಈ ಕೇಂದ್ರಕ್ಕೆ ಸಹಾಯ ನೀಡುವುದಾಗಿ ಭರವಸೆ ಕೊಟ್ಟಿರುತ್ತಾರೆ.

ಹಿಂದೀ ತರಗತಿಗಳು

ರಾಜಧಾನಿಯ ಹಿಂದೀ ಪ್ರಚಾರಸಮಿತಿಯ ಆಶ್ರಯದಲ್ಲಿ ಹಿಂದೀ ಪ್ರವೇಶಿಕಾ ಮತ್ತು ... ತರಗತಿಗಳು ಮಾರ್ಚಿ ೧ನೇ ... ನೂಡಿ ರಸ್ತೆಯಲ್ಲಿರುವ ಕಾರ್ಯಾಲಯದಲ್ಲಿ ನಡೆಯುವುದೆಂದೂ, ಸೇರಲಿಚ್ಛಿಸುವವರು ಇದೇ ೨೮ನೇ ತಾ|| ನೊಳಗೆ ಹೆಸರುಗಳನ್ನು ಕೊಡಬೇಕೆಂದೂ ... ಕರಾದ ಶ್ರೀ ರಾಜಗೋಪಾಲ್ ... ತಿಳಿಸಿರುತ್ತಾರೆ.

... ವಸ್ತು ಪ್ರದರ್ಶನದಲ್ಲಿ ಭಾರಿ ಬೆಂಕಿ

... ಹಳ್ಳಿಯ ಪುರಸಭೆಯವರು ... ಅಖಿಲಭಾರತ ಖಾದಿ, ಸ್ವದೇಶೀ ... ಕಾರಿಕಾ ವಸ್ತು ಪ್ರದರ್ಶನದಲ್ಲಿ ... ಅನಾಹುತವು ಸಂಭವಿಸಿ ... ರೂ. ಅಷ್ಟು ನಷ್ಟ ಉಂಟಾಗಿದೆಯೆಂದು ವರದಿಯಾಗಿದೆ. ಅಂಚೆ ... ಎರಡು ಸ್ಟಾಲುಗಳು ಸುಟ್ಟು ಹೋದವು.

... ನೌಕರರ ಮುಖಂಡರ ದಸ್ತಗಿರಿ

... ಭಾರತ ಅಂಚೆ ಮತ್ತು ತಂತಿ ... ಕೆಲಸಗಾರರ ಸಂಘದ ಶ್ರೇಷ್ಠ ... ಶ್ರೀ ಓಂ. ಪ್ರಕಾಶಗುಪ್ತರ ... ನಡೆಯಬೇಕಾಗಿದ್ದ ... ಕಾರ್ಯಕಾರಿ ಸಮಿತಿಯಲ್ಲಿ ಭಾಗವಹಿಸಲು ಬಂದಿದ್ದಾಗ ಮೊನ್ನೆ ದಸ್ತಗಿರಿ ಮಾಡಲಾಯಿತು.

ಉಚಿತ ನೇತ್ರ ಚಿಕಿತ್ಸೆ

ಬೆಳಗಾವಿಯ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ. ಸಿ ಮೋದಿಯವರು ಮುಂದಿನ ತಿಂಗಳು ೭ ಮತ್ತು ೮ನೇ ತಾರೀಖು ಹಾಸನದಲ್ಲಿ ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ನಡೆಸುವರು. ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವವರು ಹತ್ತು ದಿನಗಳು ಅಲ್ಲಿಯೇ ಇರಬೇಕೆಂದೂ, ಅವರು ಹಾಸಿಗೆ, ಹೊದ್ದಿಗೆ ಮತ್ತು ಇತರ ಅವಶ್ಯಕವಾದ ಸಾಮಾನುಗಳನ್ನು ತರಬೇಕೆಂದೂ ತಿಳಿಸಲಾಗಿದೆ.

ಬಿಲ್ವ ಚಿಂತಾಮಣಿ

ಅರಮನೆಯ ಮೋತೀಖಾನೆ ಮುಸೀಬರಾದ ಶ್ರೀ ಎಂ ಎಲ್ ಸುಬ್ಬರಾಜ ಅರಸರವರು ಪ್ರಕಾಶಪಡಿಸಿರುವ ಬಿಲ್ವ ಚಿಂತಾಮಣಿ ಎಂಬ ಚಿಕ್ಕ ಗ್ರಂಥವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ಬಿಲ್ವ ವೃಕ್ಷ ಮಹಾತ್ಮ್ಯ ಮತ್ತು ಬಿಲ್ವ ದೀಕ್ಷಾ ಎಂಬ ಗ್ರಂಥಗಳ ಸಾರವನ್ನು ಎತ್ತಿ ಕೊಡಲ್ಪಟ್ಟಿದೆ. ಶಿವರಾತ್ರಿಯು ಸಮೀಪಿಸಿರುವ ವೇಳೆಗೆ ಈ ... ಉಪಯುಕ್ತವಾಗಿದೆ.

ಕಾರು ರಾಗಿ ಬೆಳೆ ಪ್ರಚಾರ

ಸ್ವಂ. ಸು] ಶ್ರೀರಂಗಪಟ್ಟಣ ೨೨

ಸರ್ಕಾರದವರು ಕೈಗೊಂಡಿರುವ ಕಾರು ರಾಗಿ ಬೆಳೆ ಯೋಜನೆಯ ಸಂಬಂಧವಾಗಿ ಕಳೆದ ಭಾನುವಾರ ಕಿರಂಗೂರಿನಲ್ಲಿ ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು. ಶ್ರೀಗಳಾದ ಎಂ. ಮಲ್ಲರಾಜೇ ಅರಸ್, ಎ. ಜಿ ಬಂದೀಗೌಡ, ಬಿ ಚಾಮಯ್ಯ ಮತ್ತು ಎಂ ಸುಬ್ಬಯ್ಯ ಮುಂತಾದವರು ಭಾಷಣ ಮಾಡಿ, ಹೆಚ್ಚು ಆಹಾರ ಬೆಳೆಯಲು ಸರ್ಕಾರದವರು ರೈತರಿಗೆ ಹೆಚ್ಚು ರಿಯಾಯಿತಿಗಳನ್ನು ಕೊಡುವರೆಂದೂ, ಈ ಸೌಲಭ್ಯಗಳನ್ನು ರೈತರು ಉಪಯೋಗ ಮಾಡಿಕೊಂಡು, ದೇಶದಲ್ಲಿ ಉಂಟಾಗಿರುವ ಆಹಾರ ಕ್ಷಾಮವನ್ನು ನಿವಾರಣೆ ಮಾಡಬೇಕೆಂದೂ ಕೋರಿದರು.

ಸಚಿವರು ಭಾಷಣಮಾಡಿ, ರೈತರೆಲ್ಲರೂ ಕಷ್ಟಪಟ್ಟು ಈ ಸಾರಿ ಕಾರು ರಾಗಿ ...

ಸರದಾರರೊಡನೆ ಭೇಟಿಗಳು

ಮೈಸೂರು ೨೪

ಈ ದಿನ ಮಧ್ಯಾಹ್ನ ಕೊಡಗಿನ ನಿಯೋಗದವರಿಗೂ, ಮೈಸೂರು ರಾಷ್ಟ್ರೀಯ ಮುಸ್ಲಿಮರ ಸಂಘದ ಅಧ್ಯಕ್ಷರಾದ ಜನಾಬ್ ಮಿರ್ಜಾ ನೂರ್ ಹುಸೇನರಿಗೂ, ಸರದಾರ್ ಪಟೇಲರು ಭೇಟಿಯಿತ್ತರು. ಕೊಡಗಿನ ನಿಯೋಗದಲ್ಲಿ ಅಲ್ಲಿನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಸಿ ಕರುಂಬಯ್ಯ, ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಕಾಳಪ್ಪ, ಮಡಿಕೇರಿ ಪೌರಸಭಾಧ್ಯಕ್ಷರಾದ ಶ್ರೀ ಮಲ್ಲಪ್ಪ ಶ್ರೀಗಳಾದ ಸಿ ಎ. ಬೆಳ್ಳಿಯಪ್ಪ, ಸಿ ಎ. ಮುದ್ದಣ್ಣ, ಬಿ. ಕೆ. ನಂಜುಂಡೇಶ್ವರ, ಕೆ ಎನ್. ದೇವಯ್ಯ, ಎಂ. ಎ. ಬೆಳ್ಳಿಯಪ್ಪ, ಕೆ. ಗಣಪತಿ, ಇವರುಗಳು ಇದ್ದರು. ಇವರು ಪಟೇಲರಿಗೆ ಒಂದು ಮನವಿಯನ್ನು ಸಲ್ಲಿಸಿ ಕೊಡಗು ದೇಶಕ್ಕೂ ಮೈಸೂರು ಸಂಸ್ಥಾನಕ್ಕೂ ಇರುವ ನೈಸರ್ಗಿಕ ಸಂಬಂಧ ಮತ್ತು ವ್ಯವಹಾರಗಳ ದೃಷ್ಟಿಯಿಂದ ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂದೂ ಇದಕ್ಕೆ ವಿರುದ್ಧವಾದ ಅಪಪ್ರಚಾರಗಳಿಗೆ ಗಮನ ಕೊಡಬಾರದೆಂದೂ ಪ್ರಾರ್ಥಿಸಿದ್ದರು.

ರೇಡಿಯೋ ಪ್ರಸಾರ ಯಂತ್ರಗಳ ತಯಾರಿಕಾ ಕಾರ್ಖಾನೆ

ಭಾರತದಲ್ಲಿ ರೇಡಿಯೋ ಪ್ರಸಾರ ಯಂತ್ರಗಳ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲು ಸರ್ಕಾರದವರು ಆಲೋಚಿಸಿರುವುದಾಗಿ ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವರಾದ ಡಾ|| ಶ್ಯಾಮ ಪ್ರಸಾದ ಮುಖರ್ಜಿಯವರು ತಿಳಿಸಿರುತ್ತಾರೆ. ಸದರಿ ಕಾರ್ಖಾನೆಯಲ್ಲಿ ಉತ್ತಮ ತರದ ರೇಡಿಯೋಗಳನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಇತರಭಾಗಗಳನ್ನೂ ತಯಾರಿಸಲಾಗುವುದೆಂದೂ ಹೇಳಲಾಗಿದೆ. ಕಾರ್ಖಾನೆಗೆ ೩ ಕೋಟಿ ರೂ ಬಂಡವಾಳ ತಗಲುವುದೆಂದು ಅಂದಾಜು ಮಾಡಲಾಗಿದೆ.

ಅರಮನೆಗೆ ಸರ್ದಾರರ ಭೇಟಿ

ಮೈಸೂರು ೨೪

ಈ ದಿನ ಬೆಳಗ್ಗೆ ೧೦|| ಘಂಟೆ ಸಮಯದಲ್ಲಿ ಸರ್ದಾರ್ ಪಟೇಲರು ಅರಮನೆಗೆ ಭೇಟಿಯಿತ್ತು ಶ್ರೀಮನ್ಮಹಾರಾಜರವರೊಡನೆ ಕುಶಲ ಸಂಭಾಷಣೆ ನಡೆಸಿದರು.

ಚಾಮರಾಜೇಂದ್ರ ಕಲಾ ಶಾಲೆಯಲ್ಲಿ

ಅನಂತರ ಸರದಾರರು ಚಾಮರಾಜೇಂದ್ರ ವೃತ್ತಿ ಕಲಾಶಾಲೆಗೆ ಭೇಟಿಕೊಟ್ಟು ಅಲ್ಲಿನ ಕೆಲಸಕಾರ್ಯಗಳನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ಪ್ರದರ್ಶಿಸಿದರು.

ಬೆಳಗೊಳ ಕಾರ್ಮಿಕರ ಅಪೀಲು ವಜಾ

ಮೈಸೂರು ೨೪

ಬೆಳಗೊಳದ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆಯ ಕೆಲಸಗಾರರ ಸಂಘದ ಅಧ್ಯಕ್ಷರು ಕಂಪೆನಿಯ ಮೇಲೆ ದಾವಾ ಹೂಡಿ, ತಮಗೆ ಇಂಜಂಕ್ಷನ್ ಕೊಡಬೇಕೆಂದು ನಗರದ ೧ ನೇ ಮುನಸೀಫ್ ಕೋರ್ಟಿನಲ್ಲಿ ಕೇಳಿದ್ದರು. ಮುನಸೀಫರು ಇಂಜಂಕ್ಷನ್ ಕೊಡಲು ನಿರಾಕರಿಸಿದ್ದರಿಂದ ಜಿಲ್ಲಾ ಜಡ್ಜರಲ್ಲಿ ಅಪೀಲು ದಾಖಲಿಸಿದ್ದರು. ನೆನ್ನೆ ದಿವಸ ಜಿಲ್ಲಾ ನ್ಯಾಯಾಧೀಶರು ಅಪೀಲನ್ನು ವಜಾ ಮಾಡಿದ್ದಾರೆ.

ಚಾಮುಂಡೇಶ್ವರೀ
ಟಾಕೀಸ್
25-2-49ರಿಂದ
ಪ್ರತಿ ದಿನ ೩ ಆಟಗಳು
ಶೋಭನಾಚಲರವರ
ಕೀಲುಗುರ್ರಂ
(ತೆಲುಗು)
ನಟವರ್ಗ: ಅಂಜಲಿದೇವಿ
ನಾಗೇಶ್ವರರಾವ್
ಮುಂತಾದವರು.
ಮಹಾಶಿವರಾತ್ರಿ ಪ್ರಯುಕ್ತ
ರಾತ್ರಿ ೧ ಘಂಟೆಗೆ ಸ್ಪೆಷಲ್
ಆಟ ಉಂಟು

ಪ್ರಭಾತ್ 25-2-49ರಿಂದ
ಪ್ರತಿ ದಿನ ೩ ಆಟಗಳು
ಇಂಪಾದ ಸಂಗೀತ, ಮೆಚ್ಚಿನ ನೃತ್ಯಗಳನ್ನೊಳಗೊಂಡ
ಫೇಮಸ್ ಪಿಕ್ಚರ್ಸ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ
ಪ್ಯಾರ್-ಕಿ-ಜೀತ್ (ಹಿಂದಿ)
(ಪ್ರೇಮದ ಗೆಲುವು)
ಪಾತ್ರ:— ಸಂಗೀತ ಸೊಗಸಿನ ರಾಣಿ ಸುರೈಯ್ಯಾ, ರೆಹಮಾನ್
ಮತ್ತು ಗೋಪ್.
ಇದರೊಡನೆ "ಬಾಪೂ ಕಿ-ಅಮರ್ ಕಹಾನಿ" ಎಂಬ ಚಿಲನ್ನೂ
ಸಹ ತೋರಿಸಲಾಗುತ್ತೆ

ಶಿವರಾತ್ರಿ ಹಬ್ಬದ ಪ್ರಯುಕ್ತ
ಸ್ಪೆಷಲ್ ಪ್ರೋಗ್ರಾಂ
25-2-49ರಿಂದ ಪ್ರತಿ ದಿನ ೩ ಆಟಗಳು
ದೇವಿ ಫಿಲಂಸ್‌ರವರ
ಪುರಂದರ ದಾಸ್
ಕನ್ನಡದಲ್ಲಿ
ಪಾತ್ರ:—ಕೃಷ್ಣಸ್ವಾಮಿ ಅಯ್ಯಂಗಾರ್,
ತ್ರಿಪುರಾಂಬ
ಒಲಂಪಿಯಾ ಟಾಕೀಸ್

ರಾಜಕಮಲ್
25-2-49 ರಿಂದ
ಅಪೋಘವಾದ ೩ ನೇ ವಾರ
ದಿನವಹಿ ೩ ಆಟಗಳು
ಮ್ಯಾಟಿನಿ ೨-೩೦, ಸಂಜೆ ೬-೧೫
ಮತ್ತು ರಾತ್ರಿ ೯-೪೫ ಗಂಟೆಗೆ
ಮಹಾಶಿವರಾತ್ರಿ ಪ್ರಯುಕ್ತ ಅಂದೇ ರಾತ್ರಿ
ರಾತ್ರಿ ೧ ಘಂಟೆಗೆ ಸ್ಪೆಷಲ್ ಆಟ
ಏರ್ಪಡಿಸಿರುತ್ತೆ
ಆದಿತ್ಯನ
ಕನಸು
(ತಮಿಳು)
ಪಾತ್ರ:—ಟಿ. ಆರ್. ಮಹಾಲಿಂಗಂ
ಕಾಳಿ ಎನ್. ರತ್ನಂ, ಅಂಜಲಿದೇವಿ,
ತಾರಾ ಚೌಧುರಿ, ಲಲಿತಾ ಪದ್ಮಿನಿ.

MORNING SHOWS
From 25—2—49
For 4 days only
The Man Within
With:-Michael Redgrave
Jean Kent,
Joan Greenwood

ಶ್ರೀ ಗಾಯತ್ರೀ ಟಾಕೀಸ್
ಮಹಾಶಿವರಾತ್ರಿ ಪ್ರಯುಕ್ತ ಸ್ಪೆಷಲ್
ಪ್ರೋಗ್ರಾಂ
25-2-49ನೇ ಶುಕ್ರವಾರ 4 ಪ್ರದರ್ಶನ
3-30, 6-30, 9-45 ಮತ್ತು 12—15ಕ್ಕೆ
M.G.M.ರವರ
ಟಾರ್ಜಾನ್ ಟ್ರೈಡ್
ಎ ಸನ್
ಪಾತ್ರ:—ಜಾನಿ ವೆಸ್ಸ್ ಮುಲ್ಲರ್
ಬೆಳಗಿನ ಪ್ರದರ್ಶನ
on 26th Sat, 27 Sun.
20th's
The Dolly Sisters
(In Technicolor)
With -Betty Gable

10,000 ರೂಪಾಯಿಗಳ ಬಹುಮಾನಗಳು

ಕಾರು ರಾಗಿಯನ್ನು ಹೆಚ್ಚಾಗಿ ಮತ್ತು ಚೆನ್ನಾಗಿ ಬೆಳೆಯುವ ರೈತರಿಗೆ

ಸರ್ಕಾರದವರು 10,000 ರೂಪಾಯಿಗಳನ್ನು ಬೇರೆ ಬೇರೆ ಬಹುಮಾನಗಳಾಗಿ ಹಂಚುವರು

ಈ ಒಳ್ಳೆಯ ಸಮಯವನ್ನು ರೈತರಾರೂ ಕಳೆದುಕೊಳ್ಳಬಾರದು

ಆದ್ದರಿಂದ–

ಬಹುವಾಗಿ ಬೆಳೆಯಿರಿ!

ಬಹುಮಾನ ಪಡೆಯಿರಿ!!

ದೇಶಸೇವೆ ಮಾಡಿರಿ!!!

ಕಾರು ರಾಗಿ ಬೆಳೆಯುವವರಿಗೆ ರಿಯಾಯಿತಿಗಳು

ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಎಕರೆ ಒಂದಕ್ಕೆ 15 ರೂಪಾಯಿಗಳಂತೆ ರಿಯಾಯಿತಿ ದರದಲ್ಲಿ ಬೆಲೆ ಬಾಳುವ

ಬಿತ್ತನೆ ಬೀಜ ಮತ್ತು ಗೊಬ್ಬರ

- ಇವುಗಳನ್ನು ಕಾರು ರಾಗಿ ಬೆಳೆಯುವ ರೈತರಿಗೆ ಮುಂಗಡವಾಗಿ ಕೊಡಲಾಗುವುದು
- ಈ ಮುಂಗಡ ಪಡೆಯುವ ರೈತರು ಎಕರೆ ಒಂದಕ್ಕೆ ಒಂದು ಪಲ್ಲಾದಂತೆ ಮಾತ್ರ ಕಂಟ್ರೋಲ್ ದರದಲ್ಲಿ ರಾಗಿಯನ್ನು ಆಹಾರದ ಡಿಪೋಗೆ ಕೊಟ್ಟರೆ ಸಾಕು
- ಹಾಗೆ ಕೊಟ್ಟಲ್ಲಿ ಈ ಮುಂಗಡವನ್ನು ರೈತರಿಗೆ ಮುಫತ್ತಾಗಿ ಬಿಟ್ಟು ಬಿಡಲಾಗುವುದು

ರೈತ ಬಾಂಧವರೇ!

ಈ ಸುಸಮಯವನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯಿರಿ

ಎಂ. ಮಲ್ಲರಾಜ ಅರಸ್, ಕಾರ್ಯದರ್ಶಿ, "ಗ್ರೋ ಮೋರ್ ಫುಡ್ ಕಮಿಟಿ"

ವಿ. ವೇದವ್ಯಾಸಾಚಾರ್ಯರ್, ರೆವಿನ್ಯೂ ಕಮಿಷನರ್ ಮತ್ತು ಅಧ್ಯಕ್ಷರು "ಗ್ರೋ ಮೋರ್ ಫುಡ್ ಕಮಿಟಿ"

ಅಗ್ಗದ ಬೆಲೆಗಾಗಿ
ಗುರುದೇವಾ ಹಾಲ್
ದಯವಿಟ್ಟು ಇಂದೇ ಭೇಟಿ ಕೊಡಿ
ಬಗೆ ಬಗೆ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ ಆರ್ನಿ ಮತ್ತು ಕುಂಭಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು, ಮುಗುಟಗಳು ಇಲ್ಲಿ ದೊರೆಯುತ್ತವೆ
ಬೆಂಗಳೂರು ಜವಳಿ ಅಂಗಡಿ
ಶಿವರಾಂಪೇಟೆ ಮೈಸೂರು

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್, ಮೈಸೂರು

ಷೇರು ಸರ್ಟಿಫಿಕೇಟು ಕಳೆದು ಹೋಗಿರುವ ಬಗ್ಗೆ ನೋಟೀಸು

ಮೈಸೂರಿನ ಶ್ರೀ ಚಂಗಲಯ್ಯ ದೇವಿ ಡಾ|| ಸೀತಲಕಂಠಪ್ಪನವರ ಹೆಸರಿನಲ್ಲಿ ಕಂಪೆನಿಯ ಪುಸ್ತಕಗಳಲ್ಲಿ ಇರುವ ೭೬೧-೭೦ ಮತ್ತು ೭೬೨-೬೦ನೇ ನಂಬರುಗಳನ್ನು ಒಳಗೊಂಡ ಎರಡು ಷೇರುಗಳ ೧೧೬೩ನೇ ನಂಬರು ಷೇರು ಸರ್ಟಿಫಿಕೇಟು ಕಳೆದು ಹೋಗಿರುವುದಾಗಿ ತಿಳಿದು ಬಂದಿದೆ. ಮೇಲ್ಕಂಡ ಷೇರು ಸರ್ಟಿಫಿಕೇಟಿನ ಡೂಪ್ಲಿಕೇಟಿಗಾಗಿ ಅರ್ಜಿ ಬಂದಿರುವುದರಿಂದ ಅಸಲು ಸರ್ಟಿಫಿಕೇಟಿನ ಮೇಲೆ ಮುಂದಾಗಿ ಯಾರು ವ್ಯವಹಾರವನ್ನು ನಡೆಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ ಮತ್ತು ಇನ್ನು ಹದಿನೈದು ದಿನಗಳೊಳಗಾಗಿ ಕಂಪೆನಿಯ ರಿಜಿಸ್ಟರ್ಡ್ ಕಛೇರಿಯಲ್ಲಿ ಡೂಪ್ಲಿಕೇಟ್ ಷೇರು ಸರ್ಟಿಫಿಕೇಟನ್ನು ಕೊಡುವ ಬಗ್ಗೆ ಲಿಖಿತ ಮೂಲಕ ಆಕ್ಷೇಪಣೆಯು ಬಾರದಿದ್ದಲ್ಲಿ ಈ ವಿಚಾರವನ್ನು ಪತ್ರಿಕೆ ಪ್ರಕಟನೆ ಏರ್ಪಡಿಸಲಾಗುವುದು.

(ರುಜು) ಬಿ. ಎಸ್. ಸಿದ್ದೇಶ್ವರಯ್ಯ, ಸೆಕ್ರೆಟರಿ

Edited, printed and published by A R. Nagarajan at the Sadhvi Press, D Subbiah Road, Mysore.

ಪ್ರಭಾತ್ ನಾವೆಲ್ಟಿ ಸ್ಟೋರ್ಸ್
ಚಾಮುಂಡೇಶ್ವರಿ ಟಾಕೀಸ್ ಕೆಳಗೆ
ಮೈಸೂರು
PRABHATH NOVELTY STORES
FANCY BANGLES RIBBONS. TOILETS.
Sayaji Rao Road, Below Chamundeswari Talkies

ಪೋ॥ ನಂ. 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೭] ಶುಕ್ರವಾರ ೨೫-೨-೧೯೪೯ [ಸಂಚಿಕೆ ೧೯೨

ಬಡವರಿಗೆ ಸೌಕರ್ಯಗಳನ್ನು ಒದಗಿಸಬೇಕಾದುದು ಪುರಸಭೆಯ ಕರ್ತವ್ಯ

ಸತ್ಕಾರ ಸಮಾರಂಭದಲ್ಲಿ ಪಟೇಲರ ಭಾಷಣ

ಮೈಸೂರು ೨೪

ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರಿಗೆ ನಿನ್ನೆ ಸಂಜೆ ಟೌನ್‌ಹಾಲಿನ ಆವರಣದಲ್ಲಿ ಪುರಸಭೆಯವರು ಬಿನ್ನವತ್ತಳೆಯನ್ನು ಅರ್ಪಿಸಿದರು.

ಸಂಜೆ ೪-೩೦ ಗಂಟೆಗೆ ಸರ್ದಾರ್ ಪಟೇಲರು ಲಲಿತಮಹಲ್ ಅರಮನೆಯಿಂದ ಟೌನ್‌ಹಾಲಿಗೆ ಮೆರವಣಿಗೆಯಲ್ಲಿ ರೋಲ್ಸ್ ರಾಯ್ ಮೋಟಾರಿನಲ್ಲಿ ಆಗಮಿಸಿದರು. ಪುರಸಭಾಧ್ಯಕ್ಷರೂ, ಸದಸ್ಯರುಗಳೂ ಮತ್ತು ಇತರರೂ ಅವರನ್ನು ಸ್ವಾಗತಿಸಿ ಉತ್ತರ ಬಾಗಿಲಿನ ಕಡೆ ಏರ್ಪಡಿಸಿದ್ದ ವಿಶೇಷ ವೇದಿಕೆಗೆ ಅವರನ್ನು ಕರೆದೊಯ್ದರು. ವೇದಿಕೆಯ ಮೇಲೆ ನಿಂತು ಸರ್ದಾರರು ಸಾವಿರಾರು ಜನರ ಸ್ವಾಗತವನ್ನು ಕೈಮುಗಿದು ಸ್ವೀಕರಿಸಿದರು.

ವಿದ್ವಾನ್ ವೆಂಕಟನರಸಿಂಹಾಚಾರ್ಯರವರ ವೇದ ಸಂಸ್ಕೃತದಲ್ಲೂ, ಶ್ರೀಮತಿ ರಾಜಮ್ಮ ಕಲ್ಲೋಳಿ ಮಠರವರಿಂದ ಕನ್ನಡದಲ್ಲೂ ಮಂಗಳ ಪದ್ಯಗಳ ಪಠಣವಾದ ನಂತರ, ಪುರ ಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಬಿನ್ನವತ್ತಳೆಯನ್ನು ಓದಿ, ಸುಂದರವಾದ ರಜತ ಕರಂಡದಲ್ಲಿ ಸರ್ದಾರ್ ಪಟೇಲರಿಗೆ ಅರ್ಪಿಸಿದರು. ಭಾರತದ ಸ್ವಾತಂತ್ರ್ಯಕ್ಕೆ ಸರ್ದಾರರು ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿ, ನೂರಾರು ಸಣ್ಣ ಪುಟ್ಟ ಸಂಸ್ಥಾನಗಳನ್ನು ಐಕ್ಯಗೊಳಿಸಿ ರಾಷ್ಟ್ರವನ್ನು ಬಲಗೊಳಿಸಿ, ಪ್ರಪಂಚದಲ್ಲಿ ಪ್ರಖ್ಯಾತಿಯನ್ನು ಅವರು ಪಡೆದಿರುವುದಾಗಿ, ಬಿನ್ನವತ್ತಳೆಯಲ್ಲಿ ತಿಳಿಸಲಾಗಿತ್ತು.

ಅನಂತರ ಗಾಂಧಿ ಚೌಕದಲ್ಲಿ ಮಹಾತ್ಮರ ಸ್ಮಾರಕಸ್ತೂಪವನ್ನು ನಿರ್ಮಿಸಲು ೫೦೦೦ ರೂ ದಾನ ಮಾಡಿರುವ ರಾಜಧಾನಿಯ ವರ್ತಕರಾದ ಶ್ರೀ ಆರ್. ವೆಂಕಟಸುಬ್ಬಯ್ಯ ಶೆಟ್ಟಿಯವರು ಸರ್ದಾರರಿಗೆ ರಜತ ಕರಂಡದಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿದರು. ತಮ್ಮ ಮಾತೃಶ್ರೀಯವರಾದ ಶ್ರೀಮತಿ ಮಹಾಲಕ್ಷ್ಮಮ್ಮನವರ ಹೆಸರಿನಲ್ಲಿ ಗಾಂಧೀ ಸ್ತೂಪವನ್ನು ಕಟ್ಟಲು ನಿವೇಶನವನ್ನು ಪುರಸಭೆಯವರು ಒದಗಿಸಿದುದಕ್ಕೆ ವಂದನೆಯನ್ನು ಅವರು ಅರ್ಪಿಸಿದರು.

ಅನಂತರ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರೂ ಗರಡಿ ಮೊಹಲ್ಲಾ ಕಾಂಗ್ರೆಸ್ ಸಮಿತಿಯ ಪರವಾಗಿ ಹಾರವನ್ನೂ, ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಶಾಂತರಾಜರವರೂ ಹಾರವನ್ನು ಸರ್ದಾರ್ ಪಟೇಲರಿಗೆ ಅರ್ಪಿಸಿದರು.

ಪಟೇಲರ ಭಾಷಣ

ಸರ್ದಾರ್ ಪಟೇಲರು ಪೌರಸಭೆಯವರಿಗೆ ವಂದನೆಯನ್ನು ಅರ್ಪಿಸಿ, ಹಿಂದಿಯಲ್ಲಿ ಭಾಷಣ ಮಾಡಿದರು. ೧೯೩೮ರಲ್ಲಿ ಹಿಂದೆ ಈ ಸಂಸ್ಥಾನಕ್ಕೆ ಭೇಟಿಕೊಟ್ಟು ಕಾಂಗ್ರೆಸ್ ಕೆಲಸಗಾರರನ್ನು ಸಂದರ್ಶಿಸಿ ಮಾಡಿದ ವಿಷಯವನ್ನು ತಿಳಿಸಿ, ಆ ಕಾಲದ ಸ್ಥಿತಿಯನಂತರ ಭಾರತದಲ್ಲೂ ಮೈಸೂರಿನಲ್ಲೂ ಅನೇಕ ಬದಲಾವಣೆಗಳಾಗಿವೆಯೆಂದು ಅವರು ತಿಳಿಸಿದರು.

ಮಹಾತ್ಮರ ಶ್ರಮದ ಫಲದಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದರೂ ನಿಜವಾದ ಸ್ವಾತಂತ್ರ್ಯವು ಈಗ ದೊರಕಿಲ್ಲವೆಂದೂ, ಅನೇಕ ಕಷ್ಟ ಮತ್ತು ಅಗಾಧವಾದ ಸಮಸ್ಯೆಗಳನ್ನು ಭಾರತವು ಎದುರಿಸಬೇಕಾಗಿದೆಯೆಂದೂ, ದೇಶದಲ್ಲಿ ಶಾಂತಿಯಿಲ್ಲವೆಂದೂ, ಅದನ್ನು ಸ್ಥಾಪಿಸಲು ಸರ್ವರೂ ಒಗ್ಗಟ್ಟಿನಿಂದ ದುಡಿಯಬೇಕೆಂದೂ ಅವರು ಹೇಳಿದರು.

ಆಹಾರದ ಪರಿಸ್ಥಿತಿಯನ್ನು ಪ್ರಸ್ತಾಪಿಸಿ ದೇಶದಲ್ಲಿ ಶೇಕಡ ೭ ರಷ್ಟು ಮಾತ್ರ ಆಹಾರದ ಅಭಾವವಿರುವುದೆಂದೂ, ಅದನ್ನು ನಿವಾರಿಸುವುದು ಅಷ್ಟೇನೂ ಕಷ್ಟವಲ್ಲವೆಂದೂ ಹೆಚ್ಚು ಆಹಾರವಿರುವ ಕಡೆಯಿಂದ ಕಡಿಮೆ ಇರುವ ಪ್ರದೇಶಕ್ಕೆ ಧಾನ್ಯಗಳನ್ನು ಕಳುಹಿಸಲು ದೇಶದಲ್ಲಿ ಒಂದೇ ವಿಧವಾದ ಆಡಳಿತನೀತಿ ಇರಬೇಕೆಂದೂ, ಪ್ರಜೆಗಳೂ, ರೈತರೂ, ಕೆಲಸಗಾರರೂ ಕಷ್ಟಪಟ್ಟು ಕೆಲಸ ಮಾಡಿದರೆ ಆಹಾರ ಅಭಾವವನ್ನು ನಿವಾರಿಸಲು ಸಾಧ್ಯವಾಗುವುದೆಂದೂ ತಿಳಿಸಿದರು.

ನೂರಾರು ಸಂಸ್ಥಾನಗಳ ಸಮಸ್ಯೆಯನ್ನು ರಾಜ ಮಹಾರಾಜರುಗಳ ಸಹಕಾರ ಸಹಾಯದಿಂದ ನಿವಾರಿಸಲು ಸಾಧ್ಯವಾಯಿತೆಂದೂ, ಅವರ ಬೆಂಬಲವಿಲ್ಲದಿದ್ದರೆ ದೇಶದಲ್ಲಿ ಪಾಕೀಸ್ಥಾನ ಹಿಂದೂಸ್ಥಾನ ಮತ್ತು ರಾಜಾಸ್ಥಾನಗಳು ಇದ್ದು ಅನೇಕ ಕಷ್ಟ ಸಮಸ್ಯೆಗಳು ಉದ್ಭವವಾಗುತ್ತಿದ್ದುವೆಂದೂ ಸರ್ದಾರರು ಹೇಳಿದರು. ಮೈಸೂರಿನಲ್ಲಿ ಪ್ರಜೆಗಳ ಅಭಿಪ್ರಾಯವನ್ನು ಮನ್ನಿಸಿ, ಜವಾಬ್ದಾರಿ ಸರ್ಕಾರವನ್ನು ದಯಪಾಲಿಸಿದುದಕ್ಕಾಗಿ ಶ್ರೀಮನ್ಮಹಾರಾಜರವರನ್ನು ಅವರು ಅಭಿನಂದಿಸಿದರು.

ದೇಶದಲ್ಲಿ ಕಾನೂನು ಜಾರಿಗೆ ಬಂದಿದ್ದರೂ ಹರಿಜನರ ಕುಂದು ಕೊರತೆಗಳು ನಿವಾರಣೆಯಾಗಿಲ್ಲ ಕೋಮುವಾರು ಭಾವನೆ ಹೆಚ್ಚಾಗಿದೆ. ಇವುಗಳೆಲ್ಲವನ್ನು ನಿವಾರಿಸಲು ಜನರು ಮಹಾತ್ಮ ಗಾಂಧಿಜಿಯವರ ಮೇಲ್ಪಂಕ್ತಿಯನ್ನು ಅನುಸರಿಸಬೇಕು ಎಂದು ತಿಳಿಸಿದರು.

ಮೈಸೂರು ಅತಿಸುಂದರವಾದ ನಗರವೆಂದೂ, ಆದರೂ ಸಾವಿರಾರು ಜನರು ಮನೆಗಳಿಲ್ಲದೆ ಕಷ್ಟಪಡುತ್ತಿರುವರೆಂದೂ. ನಾಗರಿಕರಿಗೆ ಅವರಲ್ಲಿಯೂ ಬಡವರಿಗೆ ಪೌರ ಸೌಲಭ್ಯಗಳನ್ನೊದಗಿಸುವುದು ಪೌರಸಭೆಯವರ ಕರ್ತವ್ಯವೆಂದೂ, ಅವರ ಕೆಲಸವು ಸೇವಾ ಮನೋಭಾವನೆಯಿಂದ ಕೂಡಿರಬೇಕೆಂದೂ, ಸರ್ದಾರರು ತಿಳಿಸಿದರು.

ಅನಂತರ ಸರ್ದಾರ್ ಪಟೇಲರು ಕುಳಿತಿದ್ದ ವೇದಿಕೆಯಿಂದಲೇ ವಿದ್ಯುಚ್ಛಕ್ತಿಯನ್ನು ಒತ್ತಿ ಗಾಂಧೀ ಸ್ತೂಪದ ಶಂಕುಸ್ಥಾಪನೆಯನ್ನು ನೆರವೇರಿಸಿದರು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಬೆಂಗಳೂರಿನಲ್ಲಿ ಸರದಾರ್ ಪಟೇಲರಿಗೆ ಸ್ವಾಗತ

ಕಾಂಗ್ರೆಸ್ಸಿಗರ ಕರ್ತವ್ಯದ ಬಗ್ಗೆ ಪಟೇಲರ ಬುದ್ಧಿವಾದ

ಸ್ವಂ ಸು. ಫೋ॥ ಬೆಂಗಳೂರು ೨೪

ಈ ದಿನ ಪ್ರಾತಃಕಾಲ ೧೧-೧೦ ಘಂಟೆಗೆ ಸರ್ದಾರ್ ಪಟೇಲರು, ತಮ್ಮ ಪುತ್ರಿ ಕುಮಾರಿ ಮಣಿಬೆನ್ ಮತ್ತು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರುಗಳೊಡನೆ ರಾಜಧಾನಿಯಿಂದ ಮೈಸೂರು ಡಕೋಟಾ ವಿಮಾನದಲ್ಲಿ ಜಕ್ಕೂರು ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಅವರನ್ನು ದಿವಾನ್ ಸರ್ ಎ. ರಾಮಸ್ವಾಮಿ ಮೊದಲಿಯಾರರು ಸ್ವಾಗತಿಸಿದರು. ಸುಮಾರು ಒಂದು ಸಾವಿರ ಜನರು ನಿಲ್ದಾಣದಲ್ಲಿ ನೆರೆದಿದ್ದರು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಸರದಾರರಿಗೆ ಪುಷ್ಪ ಮಾಲಿಕೆಯನ್ನು ಅರ್ಪಿಸಿದರು. ವಿಮಾನ ನಿಲ್ದಾಣದ ಹೊರಗೆ ಬಂದಾಗ-ನಗರ ಸಭಾಧ್ಯಕ್ಷ ಶ್ರೀ ಆರ್ ಸುಬ್ಬಣ್ಣನವರೂ, ಬೆಂಗಳೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಕ್ಯಾಮರಾಜ ಅಯ್ಯಂಗಾರ್ಯರೂ ಹಾರಗಳನ್ನು ಅರ್ಪಿಸಿದರು. ನಂತರ ಸರದಾರರು ಮೈಸೂರು ಇನ್‌ಫೆಂಟ್ರಿಯವರಿಂದ ಗಾರ್ಡ್ ಆಫ್ ಆನರ್ ಅನ್ನು ಸ್ವೀಕರಿಸಿದರು.

ತರುವಾಯ ದಿವಾನರೂ ಮತ್ತು ಮಣಿಬೆನ್ ಪಟೇಲರೊಡನೆ ಭಾರತದ ಉಪಪ್ರಧಾನಿಗಳು ಹಿಂದೂಸ್ಥಾನ್ ವಿಮಾನ ಕಾರ್ಖಾನೆಗೆ ಭೇಟಿ ಇತ್ತರು ಅಲ್ಲಿಂದ 'ಕೆರೆದ' ಕಾರಿನಲ್ಲಿ ಕುಳಿತಿದ್ದು ಬಂಗಲೆಗೆ ಬಂದರು. ದಾರಿಯುದ್ದಕ್ಕೂ ಸುಮಾರು ೫೦ ಸಾವಿರ ಜನರು ನೆರೆದು ಸರದಾರರಿಗೆ ಜಯ ಘೋಷಗಳನ್ನು ಮಾಡಿದರು.

ಕುಮಾರಕೃಪ ಬಂಗಲೆಯಲ್ಲಿ ಸರದಾರರು ಕಾಂಗ್ರೆಸ್ ಕೆಲಸಗಾರರನ್ನು ಕುರಿತು ೪೦ ನಿಮಿಷ ಭಾಷಣಮಾಡಿದರು ಶ್ರೀ ಟಿ ಸಿದ್ದಲಿಂಗಯ್ಯನವರು ಸ್ವಾಗತಿಸಿದರು

ಸರದಾರ್ ಪಟೇಲರು ಭಾಷಣಮಾಡಿ ಭಾರತಕ್ಕೂ ಸಂಸ್ಥಾನಗಳಿಗೂ ಪಡೆದಿರುವ ಬಂದ ಸ್ವಾತಂತ್ರ್ಯವನ್ನು ಈಗ ಉಳಿಸಿಕೊಳ್ಳುವುದೇ ಜನರ ಮುಂದಿರುವ ಕರ್ತವ್ಯವೆಂದು ಹೇಳಿದರು. ಈಗ ರಾಜರೊಡನೆ ಹೋರಾಟ ಮಾಡಬೇಕಾದ ಪ್ರಮೇಯವೇನೂ ಇಲ್ಲವೆಂದೂ, ಗಾಂಧೀಜಿಯವರ ಕೊಲೆಗಾಗಿ ಅವರು ಬಹಳ ವ್ಯಥೆ ಪಟ್ಟು ಇಂತಹ ದುರಂತದಿಂದ ಪ್ರಪಂಚದ ಎದುರಿನಲ್ಲಿ ಭಾರತವು ತಲೆ ತಗ್ಗಿಸುವಂತಾಯಿತೆಂದೂ, ಗಾಂಧೀಜಿಯವರ ದಿವ್ಯ ಸಂದೇಶವು ಇಡೀ ಪ್ರಪಂಚಕ್ಕೇ ಇದೆಯೆಂದೂ ಅವರ ಸೂತ್ರಗಳನ್ನು ಎಲ್ಲರೂ ಅನುಷ್ಠಾನಕ್ಕೆ ತರಬೇಕೆಂದೂ ಹೇಳಿದರು

ಮೈಸೂರು ಒಂದು ಪ್ರಗತಿಯುತವಾದ ಸಂಸ್ಥಾನ ಇಲ್ಲಿ ನಾಲ್ಕೆಂಟು ಕಾರ್ಖಾನೆ ಮವು ಚೆನ್ನಾಗಿವೆ ಮೈಸೂರಿನ ಬಗ್ಗೆ ಕೇವಲ ಕಡಿಮೆ ಸಂಖ್ಯೆಯ ದೂರುಗಳು ಮಾತ್ರ ಬಂದಿವೆ ಇನ್ನು ಒಂದು ಅಭಿನಂದನಾ ಯವಂದುದು ಈಗ ದೊರೆತಿರುವ ಅಧಿಕಾರವನ್ನು ಯೋಗ್ಯರೀತಿಯಲ್ಲಿ ಉಪಯೋಗಿಸಿಕೊಂಡು ಜನರ ಮೆಚ್ಚುಗೆಗೆ ಕಾಂಗ್ರೆಸ್ಸಿನವರು ಪಾತ್ರರಾಗಬೇಕ [illegible]

ಶ್ರೀಮನ್ಮಹಾರಾಜರವರ ಸತ್ಕಾರ ಕೂಟ

ಸರ್ದಾರ್ ಪಟೇಲರ ಗೌರವಾರ್ಥವಾಗಿ ನಿನ್ನೆ ಸಂಜೆ ಚಾಮುಂಡಿ ಜಮಖಾನದಲ್ಲಿ ಶ್ರೀಮನ್ಮಹಾರಾಜರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ದಿವಾನರೂ, ಸಚಿವರುಗಳೂ ಮತ್ತು ಅನೇಕ ಮಾನ್ಯ ಮಹನೀಯರೂ, ಮಹಿಳೆಯರೂ ಆದಿಯಾಗಿ ೪೦೦ ಜನರು ಆಹ್ವಾನಿಸಲ್ಪಟ್ಟಿದ್ದರು

ಸರ್ದಾರರಿಗೆ ಅಖಂಡ ಕರ್ನಾಟಕ ಭೂಪಟ

ಕರ್ನಾಟಕ ಏಕೀಕರಣ ಮಹಾ ಸಭೆಯ ನಿಯೋಗದವರು ನಿನ್ನೆ ಮಧ್ಯಾಹ್ನ ಲಲಿತ ಮಹಲ್ ಅರಮನೆಯಲ್ಲಿ ಸರ್ದಾರ್ ಪಟೇಲರನ್ನು ಭೇಟಿ ಮಾಡಿ, ಅಖಂಡ ಕರ್ನಾಟಕದ ಭೂಪಟವನ್ನು ಅವರಿಗೆ ಅರ್ಪಿಸಿದರು.

ಪುರ ಸಭಾಧ್ಯಕ್ಷರ ಅಭಿನಂದನೆ

ಸರ್ದಾರ್ ಪಟೇಲರು ರಾಜಧಾನಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅವರಿಗೆ ಸ್ವಾಗತ ನೀಡಿದ ಸಮಾರಂಭದಲ್ಲಿ ಸಹಕರಿಸಿದ ರಾಜಧಾನಿಯ ಎಲ್ಲ ಪ್ರಜೆಗಳಿಗೂ ಪೌರಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರು ತಮ್ಮ ಕೃತಜ್ಞತಾಪೂರ್ವಕ ವಂದನೆಯನ್ನು ಸಲ್ಲಿಸಿದ್ದಾರೆ.

ಹರಿಕಥೆ

ಮಹಾಶಿವರಾತ್ರಿ ಪ್ರಯುಕ್ತ ಈ ದಿನ ರಾತ್ರಿ ೯-೩೦ ಗಂಟೆಗೆ ಸಯ್ಯಾಜಿ ರಸ್ತೆಯ ರಜಪುಟಾಣ ಷಾಪಿನ ಬಳಿ ಶ್ರೀ ಆರ್. ಎಸ್. ಶೇಷಗಿರಿದಾಸರಿಂದ ಸುಗ್ರೀವಸಖ್ಯ ಎಂಬ ಕೀರ್ತನೆ ನಡೆಯುವುದು.

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಬಳಿ ಈ ರಾತ್ರಿ ೯ ಘಂಟೆಗೆ "ಮಹಾ ಶಿವ ರಾತ್ರಿ ಪ್ರಯುಕ್ತ" ವೇ ಬ್ರಂ॥ ಶ್ರೀ॥ ಲಕ್ಷ್ಮೀಪತಿ ಸಹೋದರರಿಂದ 'ಪಾರ್ವತೀ ರಮಹಿಮಾ' ಎಂಬ ಕಥೆಯು ನಡೆಯುತ್ತದೆ.

ಬಟ್ಟೆ ವಿಚಾರಗಳಲ್ಲಿ ಸಂಸ್ಥಾನವು ಕೊರತಾ ಪ್ರದೇಶವಾಗಿದೆ. ಕಾಂಗ್ರೆಸ್ಸಿನವರೆಲ್ಲರೂ ಸೇರಿ, ರೈತರೇ ಆದಿಯಾಗಿ, ಜನರು ಹೆಚ್ಚು ಆಹಾರ ಬೆಳೆಯುವಂತೆ ಪ್ರೋತ್ಸಾಹಿಸಬೇಕು ಕಾಂಗ್ರೆಸ್ಸಿಗರು ಆಡಳಿತ ಯಂತ್ರದಲ್ಲಿ ಕೈಹಾಕಕೂಡದು ಹಾಗೆ ಅವರು ಪ್ರವೇಶಿಸಿದರೆ ಆಡಳಿತ ಯಂತ್ರವು ಕುಸಿಯಬಹುದು—ಎಂದು ಸರ್ದಾರರು ಹೇಳಿದರು.

ಕರ್ನಾಟಕ ಏಕೀಕರಣ ವಿಚಾರದಲ್ಲಿ ಅನವಶ್ಯಕವಾದ ವಾದವಿವಾದಗಳು ಉದ್ಭವಿಸಿರುವುದು ಶೋಚನೀಯವೆಂದೂ, ಭಾಷಾವಾರು ಪ್ರಾಂತಗಳ ರಚನೆ ಬಗ್ಗೆ ಕಾಂಗ್ರೆಸ್ಸಿನ ಸಮಿತಿಯು ಆಲೋಚನೆ ಮಾಡಿ ಸೂಕ್ತ ಮಾರ್ಗ ತೋರುವವರೆಗೆ ಎಲ್ಲರೂ ಮೌನ ತಾಳಬೇಕೆಂದೂ ತಿಳಿಸಿದರು ಐದು ವರ್ಷಗಳ ಕಾಲವಾದರೂ ಎಲ್ಲರೂ ಒಗ್ಗಟ್ಟಿನಿಂದ ರಚನಾತ್ಮಕ ಕಾರ್ಯದಲ್ಲಿ ತೊಡಗಿದರೆ ಭಾರತವು ಬಲಯುತವಾಗುವುದೆಂದು ತಿಳಿಸಿದರು. ಅನಂತರ ಕಾಂಗ್ರೆಸ್ ಅಧ್ಯಕ್ಷರು ಪಟೇಲರಿಗೆ ವಂದನೆ ಅರ್ಪಿಸುತ್ತಾ ಮೈಸೂರು ಕಾಂಗ್ರೆಸ್ಸಿನವರು ತಮ್ಮ ತಪ್ಪನ್ನರಿಯೇ ವ್ಯಾಜ್ಯ ಮಾಡುವುದಿಲ್ಲವೆಂದು ಭರವಸೆಯಿತ್ತರು.

೧೯೪೬ ರ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ [illegible] ವ್ಯ ಸರದಾರರಿಗೆ ಕೊಟ್ಟರು

ಶ್ರೀ ಗಾಯತ್ರೀ ಟಾಕೀಸ್

ಮಹಾಶಿವರಾತ್ರಿ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

26-2-49ನೇ ಶುಕ್ರವಾರ 4 ಪ್ರದರ್ಶನ 3-30, 6-30, 9-45 ಮತ್ತು 12-15ಕ್ಕೆ

M.G.M'ರವರ

ಟಾರ್ಜನ್ಸ್ ಸೀಕ್ರೆಟ್ ಟ್ರೆಷರ್

ಎ ಸನ್ಸ್

ಪಾತ್ರ —ಜಾನಿ ವೆಸ್ಮುಲ್ಲರ್

ಬೆಳಗಿನ ಪ್ರದರ್ಶನ on 26th Sat. 27 Sun 20th's

The Dolly Sisters

(In Technicolor)

WITH:-Betty Gable

||ಶ್ರೀ||

ಗಣೇಶಾ ಟಾಕೀಸ್

26-2-49 ರಿಂದ

ಪ್ರತಿ ದಿನ ೩ ಪ್ರದರ್ಶನಗಳು

ಮಹಾತ್ಮಾ ಕಬೀರ್

(ಕನ್ನಡ)

— ಮುಖ್ಯಪಾತ್ರ —

ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಮರಿರಾಪ್, ಲಕ್ಷ್ಮೀಬಾಯಿ

MORNING SHOWS :—

For 3 days From 25-2-49 at 10-30 a.m.

Romeo & Juliet

ಮಿತ್ರಮೇಳದ ವಾರ್ಷಿಕೋತ್ಸವ

ಮಹಾರಾಜಾ ಕಾಲೇಜಿನ ಮಿತ್ರಮೇಳದ ಮುಖ್ಯಾಯ ಭಾಷಣವನ್ನು ಶ್ರೀ ಸಿ ಆರ್. ನರಸಿಂಹಶಾಸ್ತ್ರಿಯವರು ಮೊನ್ನೆ ದಿನ ಮಾಡಿದರು. ಸ್ವಾಗತ ಭಾಷಣ, ವರದಿ, ಮತ್ತು ಅಪ್ಪಣ್ಣನ ಆಡಾವುದಿ ಎಂಬ ನಾಟಕಗಳು ಆದವು

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ದಯವಿಟ್ಟು ಇಂದೇ ಭೇಟಿಕೊಡಿ

ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಬೆಂಗಳೂರು ಧರ್ಮಾವರಂ, ಆರನಿ ಮತ್ತು ಕುಂಭಕೋಣಂ ಸೀರೆಗಳು, ಕಲಾಬತ್ತು ಪಂಚೆಗಳು, ಸುಗುಟಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ

ಶಿವರಾಂಪೇಟೆ :: ಮೈಸೂರು

ಸ್ವಚ್ಛವ

ಹೊಸ ಜವಳಿಗಳಿಗೆ

ದಯವಿಟ್ಟು ಭೇಟಿಕೊಡಿ

ವೀರಭದ್ರ ಸಿಲ್ಕ್ ... ರಿಯಂ

ಇರ್ವಿನ್ ರಸ್ತೆ, ಮೈಸೂರು

CHAMUNDESWARI TALKIES

Morning Shows

For 4 days only

From 25-2-49 at 10-30 a.m.

Song of Scheherazade

(Technicolour)

ಚಾಮುಂಡೇಶ್ವರಿ ಟಾಕೀಸ್

25-2-49ರಿಂದ ದಿನವಹಿ 3 ಆಟಗಳು

ಶೋಭನಾಚಲರವರ

ಕೀಲುಗುರ್ರಂ

(ತೆಲುಗು)

: ನಟರು :

ಅಂಜಲಿದೇವಿ, ನಾಗೇಶ್ವರರಾವ್ ಮುಂತಾದವರು

ಮಹಾಶಿವರಾತ್ರಿ ಪ್ರಯುಕ್ತ

ರಾತ್ರಿ ೧ ಘಂಟೆಗೆ ಸ್ಪೆಷಲ್ ಆಟ ಉಂಟು

A Tallam Release]

ಪ್ರಭಾ 25-2-49ರಿಂದ

ಪ್ರತಿದಿನ ೩ ಆಟಗಳು

ಇಂಪಾದ ಸಂಗೀತ, ಮೆಚ್ಚಿನ ನೃತ್ಯಗಳನ್ನೊಳಗೊಂಡ

ಫೇಮಸ್ ಪಿಕ್ಚರ್ಸ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ

ಪ್ಯಾರ್-ಕಿ-ಜೀತ್ (ಹಿಂದಿ)

(ಪ್ರೇಮದ-ಗೆಲವು)

ಪಾತ್ರ:— ಸಂಗೀತ ಸೊಗಸಿನ ರಾಣಿ ಸುರೈಯ್ಯಾ, ರಹಮಾನ್ ಮತ್ತು ಗೋಪ್.

ಇದರೊಡನೆ "ಬಾಪೂ-ಕಿ-ಅಮರ್ ಕಹಾನಿ" ಎಂಬ ರೀಲನ್ನೂ ಸಹ ತೋರಿಸಲಾಗುತ್ತೆ

+ ಇಡೀ ನಗರವೇ ನೋಡಿ ನಲಿಯುತ್ತಿದೆ +

ಮಾಡರನ್ ಥಿಯೇಟರ್ಸ್‌ರವರ

ಆದಿತ್ಯನ ಕನಸು

(ತಮಿಳು)

ಅಂಜಲಿದೇವಿ - ಮಹಲಿಂಗಂ— ಲಲಿತಾ-ಪದ್ಮಿನಿ

ಈಗ 3 ನೇ ವಾರ

ಮೈಸೂರು :- ರಾಜಕಮಲ್- ನ್ಯೂ ಅಪೇರಾ

ಬೆಂಗಳೂರು :— ನ್ಯೂ ಅಪೇರಾ— ಶಿವಾಜಿ — ಸ್ವಾಸ್ತಿಕ್

ಮಂಗಳೂರು ಸೆಂಟ್ರಲ್‌ಗಳಲ್ಲಿ — ದಿನವಹಿ 3 ಪ್ರದರ್ಶನಗಳು

ಶುಭ] ÷Shree Vijaya Pictures Release÷



ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು

(ಬೀರು, ಕ್ಯಾಷ್ ಬಾಕ್ಸ್ ಸುಲಭ ಬೆಲೆಗೆ ದೊರೆಯುತ್ತವೆ.)

ರಿಪೇರಿ ಮತ್ತು ಪೇಂಟಿಂಗ್ ಮಾಡಲಾಗುತ್ತೆ

ಬೇಕಾದವರು ಭೇಟಿಕೊಡಿ

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್

೨೭೭೭, ಹಳ್ಳದಕೇರಿ, ಮೈಸೂರು.

Edited, printed and published by A. R. Nagarajan at the Sadhvi Press, D. Subbiah Road, Mysore.

* ಪ್ರಭುದೇವಾ ಟಾಕೀಸಿನಲ್ಲಿ *

25-2-49ನೇ ಶುಕ್ರವಾರದಿಂದ

ಗಣಪತಿ ಪಿಕ್ಚರ್ಸ್‌ರವರ

ಸುಲೋಚನ

ಮಹಾ ಶಿವರಾತ್ರಿ ಪ್ರಯುಕ್ತ

4 ಆಟಗಳು

3, 6-30, 10 ಮತ್ತು 1 ಘಂಟೆಗೆ

ಪಾತ್ರ:— ಕೆ.ಎಲ್.ವಿ. ವಸಂತ, ಟಿ.ಆರ್. ಸುಂದರಂ, ಕಾಳಿ ಎನ್. ರತ್ನಂ ಮುಂತಾದವರು

ಪು ೧೧ ನಂ. 792 | ವಂದೇಮಾತರಂ || | ಇಂದಿನ ಪತ್ರಿಕೆ ೩ ಕಾಸು
ಸಂಪುಟ ೭] ರವಿವಾರ ೨೭-೨-೧೯೪೯ [ಸಂಚಿಕೆ ೧೯೩

ಮೈಸೂರು ಇತರರಿಗೆ ಮೇಲ್ಪಂಕ್ತಿಯಾಗಿದೆ

ಪೌರ ಸತ್ಕಾರ ಸಮಾರಂಭದಲ್ಲಿ ಪಟೇಲರ ಪ್ರಶಂಸೆ

ಸ್ವಂ ಸು. ಫೋ] ಬೆಂಗಳೂರು ೨೬

ನಿನ್ನೆ ಮಧ್ಯಾಹ್ನ ೪ ಗಂಟೆಗೆ ರೇಸ್ ಕೋರ್ಸಿನಲ್ಲಿ ನಗರ ಮತ್ತು ದಂಡಿನ ಪುರ ಸಭೆಯವರು ಸರ್ದಾರ್ ಪಟೇಲರಿಗೆ ಮಾನ ಪತ್ರಗಳನ್ನು ಅರ್ಪಿಸಿದರು. ನಗರದ ಪುರ ಸಭಾಧ್ಯಕ್ಷರಾದ ಶ್ರೀ ಆರ್. ಸುಬ್ಬಣ್ಣನವರೂ ಮತ್ತು ದಂಡಿನ ಪುರ ಸಭೆಯ ಉಪಾಧ್ಯಕ್ಷರಾದ ಜನಾಬ್ ಮೈತ್ರಿಯವರು ಬಿನ್ನವತ್ತಳೆಯನ್ನು ಓದಿ ಸುಂದರವಾದ ಗಂಧದ ಕರಂಡದಲ್ಲಿ ಅರ್ಪಿಸಿದರು. ೫೦ ಸಾವಿರ ಜನರು ಸೇರಿದ್ದರು.

ಸರ್ದಾರ್ ಪಟೇಲರು ಕೆಲವು ನಿಮಿಷಗಳ ಕಾಲ ಹಿಂದಿಯಲ್ಲಿ ಮಾತನಾಡಿ, ಅನಂತರ ಜನರ ಕೋರಿಕೆಯ ಮೇಲೆ ಇಂಗ್ಲಿಷಿನಲ್ಲಿ ಭಾಷಣ ಮಾಡಿ, ಈ ರೀತಿ ಹೇಳಿದರು:—

ಮೈಸೂರು ಸಂಸ್ಥಾನದಲ್ಲಿ ಒಳ್ಳೆಯ ವಾತಾವರಣ ನೆಲೆಸಿದೆ. ಜನರು ಸುಖವಾಗಿದ್ದಾರೆ ಮತ್ತು ಶಾಂತಿ ನೆಲೆಸಿದೆ. ಮಹಾತ್ಮ ಗಾಂಧೀಜಿಯವರಿಗೆ ಮೈಸೂರಿನ ಮೇಲೆ ಬಹಳ ಮಮತೆ ಮತ್ತು ಅಭಿಮಾನ ಇತ್ತು. ರಾಜರಿಗೂ ಪ್ರಜೆಗಳಿಗೂ ಸುಮಧುರ ಸಂಬಂಧವೇರ್ಪಟ್ಟಿದೆ ಇದು ಬಹು ಸಂತೋಷದಾಯಕವಾದ ವಿಚಾರ ಪ್ರಗತಿದಾಯಕವಾದ ಮೈಸೂರು ಇತರ ಸಂಸ್ಥಾನ ಮತ್ತು ಪ್ರಾಂತ್ಯಗಳಿಗೆ ಮೇಲ್ಪಂಕ್ತಿಯಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದು ೧॥ ವರ್ಷದಲ್ಲಿ ಅನೇಕ ಬಾರಿ ಮತ್ತು ಕ್ಲಿಷ್ಟ ಸಮಸ್ಯೆಗಳು ಉತ್ಪನ್ನವಾದುವು ಭಾರತವನ್ನು ಬ್ರಿಟಿಷರು ಬಿಟ್ಟು ಹೋದರೂ ನಾವು ಕೆಲಸ ಮಾಡುತ್ತಿಲ್ಲ. ನಾವಿಂದು ಸ್ವಪರಿಪೂರ್ಣರಾಗಿಲ್ಲ ಹುಟ್ಟಿ ಬಟ್ಟೆಗಾಗಿ ಇತರರನ್ನು ಆಶ್ರಯಿಸಬೇಕಾಗಿದೆ ಭಗವಂತನ ಕೃಪೆಯಿಂದ ಭಾರತದಲ್ಲಿ ಈಗ ಶಾಂತಿ ನೆಲೆಸಿದೆ. ... ಆರ್. ಎಸ್. ಎಸ್ ಕಮ್ಯೂನಿಸ್ಟರ ಮತ್ತು ಇತರ ವಿನಾಶಕರ ... ತಲೆ ಎತ್ತಿವೆ. ಇವುಗಳನ್ನು ... ದೇಶದಲ್ಲಿ ರೈಲ್ವೆ ಮತ್ತು ಅಂಚೆ ಕೆಲಸಗಾರರು ಮುಷ್ಕರ ಹೂಡಿ ಹವಣಿಸುತ್ತಿದ್ದಾರೆ ಇದರಿಂದ ... ಮತ್ತು ದೇಶಕ್ಕೂ ಉಪಯೋಗವಾಗುವುದಿಲ್ಲ ಮತ್ತು ಅಶಾಂತಿ, ಅಸಮಾಧಾನ ... ಉಂಟಾದುವುಗಳು ತಲೆದೋರುವುದರಿಂದ ಈ ಕಾರ್ಯಕ್ಕೆ ಕಾರ್ಮಿಕರು ... ಕಬಾರದು

... ಈಗ ಅನಾಥ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರಕ್ಕೆ ... ವಿರುವಾಗ, ಕೈಗಾರಿಕೆಗಳ ... ಎಲ್ಲಿ ಸಾಧ್ಯ. ಆದುದರಿಂದ ...

ಲಗ್ನದ ಜವಳಿಗಾಗಿ
... ರು ದೇವಾ ... ಹಾಲ್
... ಒಂದೇ ಭೇಟಿ ಕೊಡಿ
... ಮೈಸೂರು ಸಿಲ್ಕಿನಲ್ಲಿ ಸ್ವಂತ ... ತಯಾರಾದ ಬೆಂಗಳೂರು ... ಅರಣಿ ಮತ್ತು ಕುಂಬಕೋಣಂ ... ಸಂಟಿಗಳು, ಮುಗುಟ ... ದೊರೆಯುತ್ತವೆ.
... ಬೆಂಗಳೂರು ಜವಳಿ ಅಂಗಡಿ
... ಮೈಸೂರು

ಸೂಚನೆ

ಶಿವರಾತ್ರಿ ಪಾರಣೆ ಪ್ರಯುಕ್ತ 'ವಾರ್ತಿ' ಪತ್ರಿಕೆಗೆ ನಾಳೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ಸರ್ಕಾರಿ ವ್ಯವಹಾರದಲ್ಲಿ ನಿಜಾಮರ ಹೆಸರಿಲ್ಲ

ಹೈದರಾಬಾದಿನ ಸರ್ಕಾರಿ ವ್ಯವಹಾರದಲ್ಲಿ ಇನ್ನು ಮುಂದೆ ನೈಜಾಂ ಸರ್ಕಾರದ ಬದಲು ಹೈದರಾಬಾದ್ ಸ್ಟೇಟ್ ಸರ್ಕಾರ ಎಂದು ಇರಬೇಕೆಂದು ಆಜ್ಞೆಯಾಗಿದೆ.

ಮಹಾರಾಜಾ ಹೈಸ್ಕೂಲ್ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಮಹಾರಾಜಾ ಹೈಸ್ಕೂಲ್ ಸಂಘದ ವಾರ್ಷಿಕೋತ್ಸವವು ಮೊನ್ನೆ ಸಂಜೆ ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ, ಸ್ವಾಗತ ಭಾಷಣ, ಸಂಗೀತ, ವೇಷಗಳ ಸ್ಪರ್ಧೆಗಳಾದ ನಂತರ, ಅಧ್ಯಕ್ಷರು ಬಹುಮಾನಗಳನ್ನು ವಿತರಿಸಿದರು. ವಿದ್ಯಾರ್ಥಿಗಳ ತಮ್ಮ ವ್ಯಾಸಂಗಕ್ಕೆ ಹೆಚ್ಚು ಗಮನ ಕೊಟ್ಟು ... ಬೇಕೆಂದು ಭಾಷಣ ಮಾಡಿದರು. ನಾಟಕ ಪ್ರದರ್ಶನದ ನಂತರ ಸಮಾರಂಭವು ಮುಕ್ತಾಯವಾಯಿತು.

... ಹಣವಂತರೂ, ಕಾರ್ಮಿಕರೂ, ಕೈಗಾರಿಕೋದ್ಯಮಿಗಳೂ ಎಲ್ಲರೂ ಒಟ್ಟಾಗಿ ... ಕಾರ್ಖಾನೆಗಳಲ್ಲಿ ದುಡಿದು ಹೆಚ್ಚು ಉತ್ಪತ್ತಿ ಮಾಡಬೇಕು.

ವಿದ್ಯಾರ್ಥಿಗಳು ವ್ಯಾಸಂಗಕ್ಕೆ ಹೆಚ್ಚು ಗಮನ ಕೊಡಬೇಕು ಕೋಮುವಾರು ಭಾವನೆ ಮತ್ತು ವಿನಾಶಕರ ಚಟುವಟಿಕೆಗಳನ್ನು ಅವರು ತ್ಯಜಿಸಬೇಕು ಯುವಕರಲ್ಲಿ ಸಂಕುಚಿತ ಭಾವನೆ ತೊಲಗಬೇಕು.

ಜನತೆಯ ಸುಖಸಾಧನೆಗಾಗಿ ಎಲ್ಲರೂ ಶ್ರಮಿಸಬೇಕು. ಒಟ್ಟಿನಲ್ಲಿ ಭಾರತೀಯರು ಕಲಹಗಳನ್ನು ಬಿಟ್ಟು ಪರಸ್ಪರ ಸೌಹಾರ್ದದಿಂದ ಮಹಾತ್ಮರ ಉಪದೇಶಗಳನ್ನು ಕಾರ್ಯರೂಪಕ್ಕೆ ತರಬೇಕು.

ನೋಟೀಸ್

ಮೈಸೂರ್ ಸ್ಟೇಟ್ ರೈಲ್ವೆ

೧ನೇ ಮಾರ್ಚಿ ... ರಿಂದ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಮೊದಲನೇ ತರಗತಿಯಲ್ಲಿ ಸೀಟುಗಳನ್ನೂ ... ಗಳನ್ನೂ ಮತ್ತು ಎರಡನೇ ತರಗತಿಗಳಲ್ಲಿ ಸೀಟುಗಳನ್ನೂ, ರಿಜರ್ವ್ ಮಾಡಲು ಇದವರೆಗೆ ಇದ್ದ ೪ ಆಣೆ ರುಸುಮನ್ನು ... ಗೆ ಏರಿಸಲಾಗುವುದು.

ಮೈಸೂರ್ ... ಟ್ರಾಫಿಕ್ ಮ್ಯಾನೇಜರ್

ಅಂಚೆ ಮುಷ್ಕರವಿಲ್ಲ

ಅಖಿಲ ಭಾರತ ಅಂಚೆ ಮತ್ತು ತಂತಿ ಇಲಾಖಾ ನೌಕರರ ಸಂಘದ ಸುಪ್ರೀಂ ಕೌನ್ಸಿಲಿನ ಸಭೆಯು ನಿನ್ನೆ ಮದರಾಸಿನಲ್ಲಿ ಸೇರಿ ಮುಷ್ಕರವನ್ನು ಹೂಡುವುದಾಗಿ ಕೊಟ್ಟಿದ್ದ ನೋಟೀಸನ್ನು ರದ್ದು ಮಾಡಬೇಕೆಂದು ನಿರ್ಧರಿಸಲಾಯಿತು.

ಡಾ॥ ಸಯ್ಯದ್ ಹುಸೇನರ ನಿಧನ

ಈಜಿಪ್ಟಿನಲ್ಲಿ ಭಾರತದ ರಾಯಭಾರಿಯಾಗಿದ್ದ ಡಾ॥ ಸಯದ್ ಹುಸೇನರವರು ನಿನ್ನೆ ಹೃದಯ ಸ್ತಂಭನದಿಂದ ಕೈರೋದಲ್ಲಿ ನಿಧನರಾದರು.

ಜಿನರಾತ್ರಿ ಉತ್ಸವ

ಶ್ರೀರಂಗಪಟ್ಟಣದ ಶ್ರೀ ಆದೀಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆ ಬೆಳಗ್ಗೆ ... ಗಂಟೆಗೆ ಜಿನರಾಜರ ನಿರ್ವಾಣ ಕಲ್ಯಾಣ ಪೂಜಾ ಮಹೋತ್ಸವವು ನಡೆಯುವುದು. ಎಲ್ಲರೂ ದಯಮಾಡಿಸಬೇಕೆಂದು ರಾಜಧಾನಿಯ ಜೈನ ಪಂಚರು ... ಪ್ರಾರ್ಥಿಸಿರುತ್ತಾರೆ

ಹರಿಕಥೆ

... ಶ್ರೀ ... ಸ್ವಾಮಿಯವರ ... ಇಂದು ... ಜೆ ... ರಾತ್ರಿ ... ಹರಿಕಥೆ ನಡೆಯುತ್ತದೆ.

ರಾಜಕಮಲ್,
25-2-49 ರಿಂದ
ಅನೇಕ ... ೩ನೇ ವಾರ
ದಿನವಹಿ ೩ ಆಟಗಳು
ಮ್ಯಾಟಿನಿ ೬-೩೦, ಸಂಜೆ ...
ಮತ್ತು ರಾತ್ರಿ ... ಗಂಟೆಗೆ
ಆದಿತ್ಯನ ಕನಸು
(ತಮಿಳು)
ಪಾತ್ರ: ಟಿ. ಆರ್. ಮಹಾಲಿಂಗಂ ಕಾಳಿ ಎನ್. ರತ್ನಂ, ಅಂಜಲಿದೇವಿ, ... ಲಲಿತಾ ಪದ್ಮಿನಿ
Morning Shows ... Daily
From 27-2-49
The Man Within

ಹೈದರಾಬಾದಿಗೆ ಸರ್ದಾರ್ ಪಟೇಲರ ಪ್ರಯಾಣ

ಸ್ವಂ ಸು ಫೋ] ಬೆಂಗಳೂರು ೨೬

ಈ ದಿನ ಬೆಳಗ್ಗೆ ೭-೪೫ ಗಂಟೆಗೆ ಸರ್ದಾರ್ ಪಟೇಲರು ಜಕ್ಕೂರ್ ವಿಮಾನ ನಿಲ್ದಾಣದಿಂದ ಹೈದರಾಬಾದಿಗೆ ಪ್ರಯಾಣ ಬೆಳೆಸಿದರು. ... ಮಂತ್ರಿಮಂಡಲದ ಸದಸ್ಯರುಗಳೂ ಅವರಿಗೆ ... ಸರ್ದಾರರು ... ವಿಮಾನ ನಿಲ್ದಾಣ ... ಭೇಟಿ ಕೊಟ್ಟಿದ್ದರು

ಕಸ್ತೂರಿ ಬಾ ದಿನಾಚರಣೆ

ನಿನ್ನೆ ಸಂಜೆ ೭-೩೦ ಗಂಟೆಗೆ ... ಗಳಲ್ಲಿ ಕಸ್ತೂರಿ ಬಾ ದಿನಾಚರಣೆಯ ಸಂಬಂಧವಾಗಿ ಸರ್ದಾರ್ ಪಟೇಲರ ಸಮ್ಮುಖದಲ್ಲಿ ... ಕಸ್ತೂರಿ ಬಾ ... ಕೇಂದ್ರದವರಿಂದ ಪ್ರಾರ್ಥನೆ ... ಅನಂತರ ಸರ್ದಾರರು ಭಾಷಣ ಮಾಡಿ, ಕಸ್ತೂರಿ ಬಾರವರು ಭಾರತದ ಮಹಾ ಮಾತೆಯೆಂದೂ, ಅವರ ಆದರ್ಶವನ್ನು ಮಹಿಳೆಯರೆಲ್ಲರೂ ಅನುಸರಿಸಬೇಕೆಂದೂ ತಿಳಿಸಿದರು

ಸಾರ್ವಜನಿಕರಿಗೆ ಭೇಟಿ

ಸರ್ದಾರ್ ಪಟೇಲರು ನಿನ್ನೆ ಮಧ್ಯಾಹ್ನ ಶ್ರೀಗಳಾದ ಹೆಚ್. ಬಿ. ಗುಂಡಪ್ಪಗೌಡ, ಎಲ್. ಎಸ್ ವೆಂಕಾಜಿರಾವ್, ಅಪ್ಪಾಜಿ ಗೌಡ, ಶಂಕರಲಿಂಗೇಗೌಡ, ಹರಿಜನ ಕೈಗಾರಿಕೋದ್ಯಮಿಗಳಾದ ಸಿ. ಕೆ. ರಾಮಚಂದ್ರ, ಗುಜರಾತಿ ಸಮಾಜದವರು, ಹಿಂದೂ ನಿರಾಶ್ರಿತ ಬಟ್ಟೆ ವ್ಯಾಪಾರಿ ಸಂಘದವರು, ... ನಿರಾಶ್ರಿತ ಸಹಾಯ ... ಎಸ್. ... ಮತ್ತು ವಿದ್ಯಾರ್ಥಿ ... ಕೃಷ್ಣಪ್ಪನವರುಗಳಿಗೆ ಭೇಟಿ ಇತ್ತಿದ್ದರು, ಶ್ರೀ ... ಕೃಷ್ಣಪ್ಪನವರು ... ಚಿತ್ರವನ್ನು ಸಮರ್ಪಿಸಿದರು

ಕರ್ನಾಟಕ ಏಕೀಕರಣದ ನಿಯೋಗ

ನಿನ್ನೆ ... ಸರ್ದಾರ್ ಪಟೇಲರನ್ನು ... ಕರ್ನಾಟಕ ... ಬಸವಲಿಂಗಪ್ಪ, ... ಮುನಿಸ್ವಾಮಿ, ... ಶಿವರ ... ಎಸ್ ... ಮತ್ತು ಎಸ್ ಎಸ್ ನಿಂ ... ನಿಯೋಗದವರುಗಳು ಭೇಟಿ ಮಾಡಿ ಕರ್ನಾಟಕ ಪ್ರಾಂತ್ಯ ರಚನೆ ಬಗ್ಗೆ ಮಾತುಕತೆ ನಡೆಸಿದರು ಈ ಪ್ರಶ್ನೆಯನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದೂ ಕಾಂಗ್ರೆಸ್ಸಿನ ಸಮಿತಿಯವರು ಇದನ್ನು ಬಗೆಹರಿಸುವರೆಂದೂ ಸರ್ದಾರರು ತಿಳಿಸಿದರೆಂದು ಗೊತ್ತಾಗಿದೆ

೦ ರಾಜಧಾನಿಯ ಮಕ್ಕಳ ಕೂಟದ ಆಶ್ರಯದಲ್ಲಿ ನಾಳೆ ... ಗಂಟೆಗೆ ಲಕ್ಷ್ಮೀಪುರಂ ಶಿಶು ವಿಹಾರದ ಪ್ರಾಂಗಣದಲ್ಲಿ ಪೂಜ್ಯ ಮಾತೆ ಶ್ರೀ ಕಸ್ತೂರಿ ಬಾ ಮತ್ತು ಶ್ರೀ ಕಮಲಾ ನೆಹರೂರವರ ದಿನಾಚರಣೆಯು ನಡೆಯುವುದು ಶ್ರೀಮತಿ ರಾಜೇಶ್ವರಿ ನರಸಿಂಹಮೂರ್ತಿಯವರು ಅಧ್ಯಕ್ಷತೆ ವಹಿಸುವರು

ಶ್ರೀ ಗಾಯತ್ರೀ ಟಾಕೀಸ್
2੦-2-49 ನೇ ಶುಕ್ರವಾರದಿಂದ
M.G.M ರವರ
ಮಿಜರ್ಸ್ ಫ್ರೀಡ್
...
... ಪ್ರದರ್ಶನ
... sters

10,000 ರೂಪಾಯಿಗಳ ಬಹುಮಾನಗಳು

—.o.—

ಕಾರು ರಾಗಿಯನ್ನು ಹೆಚ್ಚಾಗಿ ಮತ್ತು ಚೆನ್ನಾಗಿ ಬೆಳೆಯುವ ರೈತರಿಗೆ

ಸರ್ಕಾರದವರು 10,000 ರೂಪಾಯಿಗಳನ್ನು ಬೇರೆ ಬೇರೆ ಬಹುಮಾನಗಳಾಗಿ ಹಂಚುವರು

ಈ ಒಳ್ಳೆಯ ಸಮಯವನ್ನು ರೈತರಾರೂ ಕಳೆದುಕೊಳ್ಳಬಾರದು

ಆದ್ದರಿಂದ-

ಬಹುವಾಗಿ ಬೆಳೆಯಿರಿ!
ಬಹುಮಾನ ಪಡೆಯಿರಿ!!
ದೇಶಸೇವೆ ಮಾಡಿರಿ!!!

ಕಾರು ರಾಗಿ ಬೆಳೆಯುವವರಿಗೆ ರಿಯಾಯಿತಿಗಳು

ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಎಕರೆ ಒಂದಕ್ಕೆ 15 ರೂಪಾಯಿಗಳಂತೆ ರಿಯಾಯಿತಿ ದರದಲ್ಲಿ ಬೆಳೆ ಬಾಳುವ

ಬಿತ್ತನೆ ಬೀಜ ಮತ್ತು ಗೊಬ್ಬರ

- ಇವುಗಳನ್ನು ಕಾರು ರಾಗಿ ಬೆಳೆಯುವ ರೈತರಿಗೆ ಮುಂಗಡವಾಗಿ ಕೊಡಲಾಗುವುದು
- ಈ ಮುಂಗಡ ಪಡೆಯುವ ರೈತರು ಎಕರೆ ಒಂದಕ್ಕೆ ಒಂದು ಪಲ್ಲಾದಂತೆ ಮಾತ್ರ ಕಂಟ್ರೋಲ್ ದರದ ರಾಗಿಯನ್ನು ಆಹಾರದ ಡಿಪೋವಿಗೆ ಕೊಟ್ಟರೆ ಸಾಕು
- ಹಾಗೆ ಕೊಟ್ಟಲ್ಲಿ ಈ ಮುಂಗಡವನ್ನು ರೈತರಿಗೆ ಮುಫತ್ತಾಗಿ ಬಿಟ್ಟು ಬಿಡಲಾಗುವುದು

ರೈತ ಬಾಂಧವರೇ!

ಈ ಸುಸಮಯವನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯಿರಿ

ಎಂ. ಮಲ್ಲರಾಜ ಅರಸ್, ಕಾರ್ಯದರ್ಶಿ, "ಗ್ರೋ ಮೋರ್ ಫುಡ್ ಕಮಿಟಿ"

ವಿ. ವೇದವ್ಯಾಸಾಚಾರ್ಯ, ರೆವಿನ್ಯೂ ಕಮೀಷನರ್ ಮತ್ತು ಅಧ್ಯಕ್ಷರು, "ಗ್ರೋ ಮೋರ್ ಫುಡ್ ಕಮಿಟಿ"

Edited, printed and published by A.R.Nagarajan at the Sadhvi Press, D Subbiah Road, Mysore

ಲಗ್ನದ ಹೊಸ ಜವುಳಿಗಳಿಗೆ

ನಮ್ಮಲ್ಲಿ ದಯಯಿಟ್ಟು ಭೇಟಿಕೊಡಿ

ವೀರಣ್ಣ ಸಿಲ್ಕ್ ಎಂಪೋರಿಯಂ,

ಇಲವಾಲ ರಸ್ತೆ, ಮೈಸೂರು

CHAMUNDESWARI TALKIES

Morning Shows
For 4 days only
From 25—2—49
at 10-30 a.m.

Song of Scheherazade
(Technicolour)

॥ಶ್ರೀ॥
ಗಣೇಶಾ ಟಾಕೀಸ್
26-2-49 ರಿಂದ
ಪ್ರತಿ ದಿನ ೩ ಪ್ರದರ್ಶನಗಳು

ಮಹಾತ್ಮಾ ಕಬೀರ್
(ಕನ್ನಡ)

—. ಮುಖ್ಯಪಾತ್ರ :—
ಸುಬ್ಬಯ್ಯನಾಯ್ಡು, ನಾಗೇಂದ್ರ ರಾವ್, ಮರಿರಾವ್, ಲಕ್ಷ್ಮೀಬಾಯಿ

MORNING SHOWS :—
For 3 days From 25-2-49
at 10-30 a.m
Romeo & Juliet

ಚಾಮುಂಡೇಶ್ವರಿ ಟಾಕೀಸ್

25-2-49ರಿಂದ ದಿನವಹಿ 3 ಆಟಗಳು

ಶೋಭನಾಚಲರವರ

ಕೀಲು ಗುರ್ರಂ
(ತೆಲುಗು)

—: ನಟವರ್ಗ :—
ಅಂಜಲಿದೇವಿ, ನಾಗೇಶ್ವರರಾವ್ ಮುಂತಾದವರು

A Tallam Release

ಪ್ರಭಾ 25-2-49ರಿಂದ
ಪ್ರತಿ ದಿನ ೩ ಆಟಗಳು

ಇಂಪಾದ ಸಂಗೀತ, ಮೆಚ್ಚಿನ ನೃತ್ಯಗಳನ್ನೊಳಗೊಂಡ
ಫೇಮಸ್ ಪಿಕ್ಚರ್ಸ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ

ಪ್ಯಾರ್-ಕಿ-ಜೀತ್ (ಹಿಂದಿ)
(ಪ್ರೇಮದ ಗೆಲವು)

ಪಾತ್ರ.—ಸಂಗೀತ ಸೊಗಸಿನ ರಾಣಿ ಸುರೈಯ್ಯಾ, ರೆಹಮಾನ್ ಮತ್ತು ಗೋಪ್.

ಇದರೊಡನೆ "ಜಾಪೂ-ಕಿ-ಅಮರ್ ಕಹಾನಿ" ಎಂಬ ರೀಲನ್ನೂ ಸಹ ತೋರಿಸಲಾಗುತ್ತೆ

* ಪ್ರಭುದೇವಾ ಟಾಕೀಸಿನಲ್ಲಿ *

25-2-49ನೇ ಶುಕ್ರವಾರದಿಂದ

ಗಣಪತಿ ಪಿಕ್ಚರ್ಸ್‌ರವರ

ಸುಲೋಚನ

ದಿನವಹಿ ೩ ಆಟಗಳು

3, 6-30, ಮತ್ತು 10 ಘಂಟೆಗೆ

ಪಾತ್ರ: ಕೆ.ಎಲ್.ವಿ. ವಸಂತ, ಟಿ.ಆರ್. ಸುಂದರಂ, ಕಾಳಿ ಎನ್. ರತ್ನಂ, ಟಿ.ಎಸ್. ದೊರೆರಾಜ್ ಮುಂತಾದವರು

ಕೊ ೧೯ ನಂ. 792 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ೭] ಸೋಮವಾರ ೨೮-೨-೧೯೪೪ [ಸಂಚಿಕೆ ೧೯೪

ಯುವಕರು ಸೇವಾದಳದ ಶಿಕ್ಷಣ ಪಡೆಯಬೇಕು

ಸುತ್ತೂರು ನಿಲಯದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಮನವಿ

ಮೈಸೂರು ೨೮

ಶ್ರೀ ಸುತ್ತೂರು ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವು ನಿನ್ನೆ ಸಂಜೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಮಿಕ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂ ರವರು ಮುಖ್ಯ ಭಾಷಣ ಮಾಡಿದರು.

ಪ್ರಾರ್ಥನೆ, ಸ್ವಾಗತ ಭಾಷಣ, ವಾರ್ಷಿಕ ವರದಿ, ವಿವಿಧ ವೇಷಗಳ ಸ್ಪರ್ಧೆ, ಕುಮಾರಿ ಪ. ಸಿ. ಪ್ರೇಮಾರವರಿಂದ ಭಾವಗೀತೆಗಳ ನಂತರ, ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು.

ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ... ಶ್ರೀ ಎಂ.ವಿ ಸನತ್ಕುಮಾರ್ ... ಕೊಟ್ಟ ಮಹಾತ್ಮ ಗೌತಮ ಬುದ್ಧನ ಭಾವ ಚಿತ್ರವನ್ನು ಅನಾವರಣ ಮಾಡಿ, ... ಬುದ್ಧನ ತ್ಯಾಗ ಸೇವೆ ಮುಂತಾದ ... ಗಳನ್ನು ತಿಳಿಸಿ, ಅವರ ಆದರ್ಶವನ್ನು ... ಪಾದಿಸಬೇಕೆಂದು ಹೇಳಿದರು. ... ಕೇವಲ ರಾಜಕೀಯ ಸ್ವಾತಂತ್ರ್ಯ ಮಾತ್ರ ಬಂದಿದೆಯೆಂದೂ, ನಿಜವಾದ ಸ್ವಾತಂತ್ರ್ಯಕ್ಕಾಗಿ ಎಲ್ಲರೂ ದುಡಿಯಬೇಕೆಂದೂ, ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡಿ ದೇಶದ ಸೇವೆಗಾಗಿ ಸಿದ್ಧರಾಗಬೇಕೆಂದು ಅವರು ತಿಳಿಸಿದರು.

ಶ್ರೀ ಟಿ ಸಿದ್ದಲಿಂಗಯ್ಯನವರು ಭಾಷಣ ಮಾಡಿ ದೇಶದ ರಕ್ಷಣೆಗಾಗಿ ಯುವಕರೆಲ್ಲರೂ ಸೇವಾದಳದ ಶಿಕ್ಷಣವನ್ನು ಪಡೆಯಬೇಕೆಂದೂ, ಇದೇ ಬೇಸಿಗೆಯಲ್ಲಿ ನಡೆಯಲಾಗುವ ಶಿಕ್ಷಣ ತರಬೇತಿಗೆ ವಿದ್ಯಾರ್ಥಿಗಳೆಲ್ಲರೂ ಸೇರಬೇಕೆಂದೂ ಕೋರಿದರು.

ಬೆಳಗಾವಿಯ ಸುಪ್ರಸಿದ್ಧ ನೇತ್ರ ಚಿಕಿತ್ಸಕರಾದ ಡಾ|| ಮೋದಿ ಮತ್ತು ಶ್ರೀ ... ಸನತ್ಕುಮಾರ್‌ರವರುಗಳಿಗೆ ... ಗಳನ್ನು ಅರ್ಪಿಸಲಾಯಿತು.

... ಗಳ ಪ್ರದರ್ಶನದ ನಂತರ ... ರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಈ ಸಂದರ್ಭದಲ್ಲಿ ನಿಲಯದ ಕಾವ್ಯಗಳು ಮತ್ತು ಚಿತ್ರಗಳನ್ನೊಳಗೊಂಡ "ತೈಜಸ" ಎಂಬ ಕನ್ನಡ ಗ್ರಂಥವನ್ನು ಅಧ್ಯಕ್ಷರು ಪ್ರಕಾಶಗೊಳಿಸಿದರು.

ಸರಸ್ವತಿ ಪೂಜೆ

... ಗೌಡನ ಕೊಪ್ಪಲು ವಿದ್ಯಾರ್ಥಿ ... ಸಂಘದ ಆಶ್ರಯದಲ್ಲಿ ಶ್ರೀ ಸರಸ್ವತಿ ಪೂಜೆಯು ಶ್ರೀ ಎಲ್. ಎಸ್. ... ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಯುವಕರು ಶಿಸ್ತಿನಿಂದ ... ಬೇಕೆಂದೂ ಮತ್ತು ದೇಶದಲ್ಲಿರುವ ... ಕೊರತೆಯನ್ನು ನಿರ್ಮೂಲನ ಮಾಡಲು ಸರ್ವಪ್ರಯತ್ನ ಮಾಡಬೇಕೆಂದು ಅಧ್ಯಕ್ಷರು ತಿಳಿಸಿದರು.

ಪಬ್ಲಿಕ್ ಲೈಬ್ರರಿ

... ರಾಜಧಾನಿಯ ಪಬ್ಲಿಕ್ ಲೈಬ್ರರಿ ಪ... ರೀಡಿಂಗ್ ರೂಮಿನ ಶಾಖೆಯನ್ನು ... ದ ... ಇಂದ ಚಾಮರಾಜೇಂದ್ರ ... ಕಾಲೇಜು ವ ಹಡಿ ... ಲಾಗ ವುದು.

ಬೆಂಕಿ ಅನಾಹುತ

ಹಿರೀಸಾವೆ ೨೮

ಇದೇ ಹೋಬಳಿ ಸೇರಿದ ಘಟ್ಟ ಗ್ರಾಮದಲ್ಲಿ ಮೊನ್ನೆ ಶ್ಯಾನಭೋಗರಾದ ಶ್ರೀ ನಾರಣಪ್ಪನವರ ಮನೆಗೆ ಬೆಂಕಿ ಬಿದ್ದು ಪಕ್ಕದ ನೂರು ಮನೆಗಳು ಸುಟ್ಟುಹೋಗಿ ... ಸಾವಿರ ರೂ ನಷ್ಟವುಂಟಾಗಿದೆ.

ಕೋಟಿಗ್ರಾಮದ ಪಟೇಲ್ ಶ್ರೀ ಕಪಿನಿ ಗೌಡರು ಸತ್ಯನಾರಾಯಣ ಉದ್ಯಾಪನೆಯನ್ನು ನೆರವೇರಿಸಿ, ನೂರಾರು ಜನರಿಗೆ ಅನ್ನದಾನ ಮಾಡಿದರು

ಹೈದರಾಬಾದು ಕಮ್ಯೂನಿಸ್ಟರ ಆಸ್ತಿ ವಶ

ಹೈದರಾಬಾದಿನ ಕಮ್ಯೂನಿಸ್ಟರ ಹಾವಳಿ ತಡೆಯಲು ಅಲ್ಲಿನ ಮಿಲಿಟರಿ ಸರಕಾರದವರು ಅವರುಗಳ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವ ವಿಶೇಷ ಆಜ್ಞೆಯೊಂದನ್ನು ಹೊರಡಿಸಲು ಯೋಚಿಸುತ್ತಿರುವುದಾಗಿ ಗೊತ್ತಾಗಿದೆ.

ಡಾ|| ಮೋದಿಯವರ ಪ್ರವಾಸ

ಕಳೆದ ೩ ತಿಂಗಳಿನಿಂದಲೂ ರಾಜಧಾನಿಯಲ್ಲಿ ಉಚಿತ ನೇತ್ರ ಚಿಕಿತ್ಸೆ ನಡೆಸುತ್ತಿದ್ದ ಡಾ|| ಮೋದಿಯವರು ಇಂದು ಬೆಳಗಾವಿಗೆ ಪ್ರಯಾಣ ಮಾಡುವರು. ಅವರು ಮುಂದಿನ ತಿಂಗಳು ೭ ಮತ್ತು ೮ ನೇ ತಾ|| ... ಕಾಸನದಲ್ಲಿ ನೇತ್ರ ಶಸ್ತ್ರ ಚಿಕಿತ್ಸೆ ನಡೆಸುವರು

ವಿದ್ಯಾರ್ಥಿಗಳಿಗೆ ವಾಂತಿ

ರಾಜಧಾನಿಯ ಸೆಂಟ್ ಫಿಲೊಮಿನಾ ಹೈಸ್ಕೂಲಿನ ಸುಮಾರು ೧೧೦ ಮಂದಿ ವಿದ್ಯಾರ್ಥಿಗಳು ಮೊನ್ನೆ ದಿನ ಚಾಮುಂಡಿ ಬೆಟ್ಟಕ್ಕೆ ಹೋಗಿ ಅಲ್ಲಿ ಪಾಪ್ತ ತಗೆದು ಕೊಂಡು ಹೋದ ಪಾಕವನ್ನು ತಿಂದದ್ದಾಗ, ... ಜನಕ್ಕೆ ವಾಂತಿ ಆಯಿತೆಂದೂ, ಕೂಡಲೇ ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಮಾಡಲಾಯಿತೆಂದೂ ವರದಿಯಾಗಿದೆ ಕೆಲವು ಗಂಟೆಗಳ ನಂತರ ಅವರೆಲ್ಲರೂ ಆರೋಗ್ಯವಾಗಿ ಮನೆಗೆ ಹಿಂತಿರುಗಿದರು

ಜೂಜುಕೋರರಿಗೆ ಜುಲ್ಮಾನೆ

ರಾಜಧಾನಿಯ ಮಂಡಿ ಮೊಹಲ್ಲಾ ಮಿರ್ಜಾ ಆಸ್ಪತ್ರೆಯ ರಸ್ತೆಯಲ್ಲಿ ಸುಲ್ತಾನ್ ಮಹಮದ್ ಖಾನ್ ದುರಾನಿ ಎಂಬುವರ ಮನೆಯಲ್ಲಿ ಸಣ್ಣೇಗೌಡ ಮತ್ತು ೧೧ ಮಂದಿ ದಿನ ಜೂಜಾಡುತ್ತಿದ್ದದನ್ನು ಪೊಲೀಸರು ಪತ್ತೆ ಮಾಡಿ ಮೊಕದ್ದಮೆ ಹೂಡಿದ್ದರು. ನಗರ ದ್ವಿತೀಯ ನ್ಯಾಯಾಧೀಶರು ಅವರುಗಳಿಗೆ ತಲಾ ೨೫ ರೂ ದಂಡ ಮತ್ತು ಮನೆ ಮಾಲೀಕನಾದ ... ಖಾನ್ ... ರೂ ... ಹಾಕಿದ್ದಾರೆ.

ಜರ್ಮನಿಯಿಂದ ಬ್ರಿಟಿಷ್ ಅಮೆರಿಕನ್‌ರನ್ನು ಓಡಿಸಲು ಪಿತೂರಿ

ಜರ್ಮನಿಯ ಆಕ್ರಮಿತ ಪ್ರದೇಶದಿಂದ ಬ್ರಿಟಿಷ ಮತ್ತು ಅಮೆರಿಕನ್ನರನ್ನು ಓಡಿಸಲು ರಷ್ಯದ ಕಮ್ಯೂನಿಸ್ಟ್ ನಾಯಕರುಗಳು ಪಿತೂರಿ ನಡೆಸುತ್ತಿರುವರೆಂದು ವರದಿಯಾಗಿದೆ. ಆ ಪ್ರದೇಶಗಳಲ್ಲಿ ಗಲಭೆ ಮತ್ತು ಸಂಚಾರ ಮಾರ್ಗಗಳನ್ನು ನಾಶಪಡಿಸುವ ಕಾರ್ಯಗಳಲ್ಲಿ ಅವರು ತೊಡಗಿರುವರೆಂದೂ, ಕೊನೆಯಲ್ಲಿ ಜರ್ಮನಿಯ ಎಲ್ಲವನ್ನೂ ರಷ್ಯದ ಆಡಳಿತಕ್ಕೆ ತೆಗೆದುಕೊಳ್ಳಲು ಹಂಚಿಕೆ ನಡೆದಿದೆಯೆಂದೂ ಹೇಳಲಾಗಿದೆ.

ಹೈದರಾಬಾದ್ ಕಾಂಗ್ರೆಸ್ ಬಿಕ್ಕಟ್ಟು ಬಗೆಹರಿಯಿತು

ಹೈದರಾಬಾದ್ ಕಾಂಗ್ರೆಸ್ಸಿನ ಎರಡು ಪಕ್ಷದವರಿಗೆ ಇದ್ದ ಭಿನ್ನಾಭಿಪ್ರಾಯಗಳು ಹೋಗಿ ಒಪ್ಪಂದಕ್ಕೆ ಬರಲಾಗಿದೆ. ಭಾರತ ಸರ್ಕಾರದ ಸಂಸ್ಥಾನ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ವಿ.ಪಿ ಮೆನನ್‌ರವರ ಮಧ್ಯಸ್ಥಿಕೆಯ ಫಲವಾಗಿ, ವಿರೋಧ ಪಕ್ಷದ ನಾಯಕರಾದ ಶ್ರೀ ಜನಾರ್ದನ ರಾವ್ ... ಸ್ವಾಮಿರವರ ಶ್ರೀ ರಾಮಾನಂದ ತೀರ್ಥರ ನಾಯಕತ್ವದಲ್ಲಿ ಕೆಲಸ ಮಾಡಲು ಒಪ್ಪಿರುವರು

ಸರ್ ಸ್ಟೀಫನ್ ಬ್ಯಾಟೆನ್ನರ ರಾಜೀನಾಮೆ

ಭಾರತಕ್ಕೆ ಆಗಮಿಸಿರುವ ಸರ್ ಸ್ಟೀಫನ್ ಬ್ಯಾಟೆನ್ನರ್ ಅವರದ್ದು ಕೇವಲ ಸಂಯುಕ್ತ ನಿರಾಶ್ರಿತರ ಪರಿಹಾರ ಕಾರ್ಯಕ್ಕೆ ಅಲ್ಲದೇ ವಿವೇಕೀಯ ... ರಾಗಿ ಭಾರತ ಸರ್ವರ್ಕ್ ... ದ್ದಾಗಿದೆಯೆಂದು ಹೇಳಲಾಗಿದೆ. ಪಂಡಿತ ನೆಹರೂರವರನ್ನು ವಾಷಿಂಗ್ಟನ್ನಿಗೆ ಭೇಟಿ ಕೊಡಲು ಅವಕಾಶ ಕಲ್ಪಿಸಲು ಅವರು ಸರ್ವ ಸನ್ನಾಹ ಮಾಡುತ್ತಿರುವುದಾಗಿ ತಿಳಿದು ಬಂದಿದೆ

ಮಹಾರಾಜಾ ಕಾಲೇಜ್ ಸಂಘದ ವಾರ್ಷಿಕೋತ್ಸವ

ಮೈಸೂರು ಮಹಾರಾಜಾ ಕಾಲೇಜ್ ಸಂಘದ ವಾರ್ಷಿಕೋತ್ಸವವು ಮೊನ್ನೆ ಸಂಜೆ ಶ್ರೀ ಟಿ ರಂಗನಾಥರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರಿಯನ್ ಪತ್ರಿಕೆ ಸಂಪಾದಕರಾದ ಮಿ|| ಫಿಲಿಪ್ಸ್‌ಸ್ವಾಮಿ ರವರು ಸಂಘದ ಮುಖ್ಯ ಭಾಷಣವನ್ನು ಮಾಡಿದರು.

ಪ್ರಾರ್ಥನೆ, ಸ್ವಾಗತ, ಭಾಷಣ ಕುಸ್ತಿ, ವಿವಿಧ ವೇಷಗಳ ಸ್ಪರ್ಧೆ, ಸಂಗೀತ ಕಾರ್ಯಕ್ರಮಗಳ ನಡೆದವು ... ಸಲ ... ಕಪ್ ... ನಡೆಸಿದ ...

ಸಂಸ್ಥಾನದ ಹಣಕಾಸಿನ ಸ್ಥಿತಿಯ ಪರಿಶೀಲನೆ

ಸ್ಪೆಷಲ್ ಫೋನ್] ಬೆಂಗಳೂರು ೨೮

ಭಾರತ ಸರ್ಕಾರದ ಹಣಕಾಸಿನ ಇಲಾಖೆಯ ಅಧಿಕಾರಿಗಳಾದ ಶ್ರೀ ಎಂ. ಸ್ವಾಮಿನಾಥರವರು ಇಲ್ಲಿಗೆ ಆಗಮಿಸಿದ್ದಾರೆ. ಅವರು ಮೈಸೂರಿನ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಪರಿಶೀಲನೆ ನಡೆಸುವರೆಂದು ತಿಳಿದುಬಂದಿದೆ.

ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನ

ರಾಜಧಾನಿಯಲ್ಲಿ ಮುಂದಿನ ತಿಂಗಳು ೨೮ನೇ ತಾ|| ನಿಂದ ಪ್ರಾರಂಭವಾಗುವ ದೂರ ಪ್ರಾಚ್ಯ ದೇಶಗಳ ಅರಣ್ಯ ಸಮ್ಮೇಳನದ ವಿರ್ವಾಹದ ಸಂಬಂಧದಲ್ಲಿ ಅರಣ್ಯ ಮುಖ್ಯಾಧಿಕಾರಿಗಳ ಟೆಕ್ನಿಕಲ್ ಸಲಹೆಗಾರರಾದ ಶ್ರೀ ಡಿ ಪಿಚ್. ಗುಲಾಬ್ ಸಿಂಗ್ ರವರನ್ನು ವಿಶೇಷ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ದಿವಾನರು ರಜದ ಮೇಲೆ ಹೋಗುವರೇ?

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಸಧ್ಯದಲ್ಲಿಯೇ ದೀರ್ಘಕಾಲ ರಜದ ಮೇಲೆ ಹೋಗುವರೆಂದೂ, ಇದರಿಂದ ಮಂತ್ರಿ ಮಂಡಲದಲ್ಲಿ ಬದಲಾವಣೆ ಆಗಬಹುದೆಂದೂ ತಿಳಿದು ಬಂದಿದೆ.

ಕಲ್ಕತ್ತೆಯ ವಿಮಾನ ನಿಲ್ದಾಣದ ಮೇಲೆ ಮುತ್ತಿಗೆ

ಮದ್ದು ಗುಂಡಿನ ಕಾರ್ಖಾನೆ ಮೇಲೂ ಧಾಳಿ

ಕಲ್ಕತ್ತೆಗೆ ೭ ಮೈಲಿ ದೂರದಲ್ಲಿರುವ ಡಂಡಂ ವಿಮಾನ ನಿಲ್ದಾಣದ ಮೇಲೆ ನೆನ್ನೆ ದಿನ ೧೩ ಜನ ಸಶಸ್ತ್ರ ಯುವಕರು ಧಾಳಿ ನಡೆಸಿ, ಬಾಂಬುಗಳನ್ನು ಹಾಕಿ, ಕಾವಲುಗಾರರಿಗೆ ಗಾಯಪಡಿಸಿ, ೭ ಬಂದೂಕಗಳನ್ನು ಅಪಹರಿಸಿಕೊಂಡು ಹೋದರು. ಅವರು ಪರಾರಿಯಾಗುತ್ತಿದ್ದಾಗ ರಸ್ತೆಯಲ್ಲಿ ಸಿಕ್ಕಿದ ಪ್ರಯಾಣಿಕರ ಬಸ್ಸಿನ ಮೇಲೆ ಗುಂಡು ಹಾರಿಸಿದರು. ವಿಮಾನ ನಿಲ್ದಾಣದ ಹತ್ತಿರದಲ್ಲಿರುವ ಮದ್ದು ಗುಂಡುಗಳ ಕಾರ್ಖಾನೆ, ಪ್ರಿಸಿಷನ್ ಇಂಜನಿಯರಿಂಗ್ ಕಂಪೆನಿ, ಗೌರಿಪುರದ ಪೋಲೀಸ್ ಠಾಣೆ ಮತ್ತು ಕಲ್ಕತ್ತೆಗೆ ೩೦ ಮೈಲಿ ದೂರದ ... ಪೋಲೀಸ್ ಸ್ಟೇಷನ್ ಮತ್ತು ಅಲ್ಲಿನ ಸಬ್ ಜೈಲು ಮತ್ತು ಖಜಾನೆಯಲ್ಲೂ ಮತ್ತೊಂದು ದರೋಡೆಗಾರರ ಗುಂಪು ಧಾಳಿ ನಡೆಸಿ ಗುಂಡು ಹಾರಿಸಿತು. ಇವರಲ್ಲಿ ಒಟ್ಟು ೫೫ ಜನರು ಸತ್ತು ೭ ಮಂದಿಗೆ ಗಾಯಗಳಾಗಿವೆ. ಇಬ್ಬರನ್ನು ಜೀವಸಹಿತ ಹಿಡಿಯಲಾಯಿತು. ಈಗ ವಿಮಾನ ನಿಲ್ದಾಣವನ್ನು ಮಿಲಿಟರಿಯವರು ಕಾಯುತ್ತಿದ್ದಾರೆ ಈ ಸಂಬಂಧದಲ್ಲಿ ಪೋಲೀಸರು ೧೩ ಮಂದಿಯನ್ನು ವಶಕ್ಕೆ ತೆಗೆದುಕೊಂಡು, ೭ ಟ್ರ್ಯಾಕ್ಟರುಗಳು ಮತ್ತು ಟೆಲಿಫೋನ್ ತಂತಿಗಳನ್ನು ಕತ್ತರಿಸುವ ಸಾಧನಗಳನ್ನು ವಶಪಡಿಸಿಕೊಂಡಿದ್ದಾರೆ

ಸೇಲಮಿನಲ್ಲಿ ಭಾರಿ ಗಲಭೆ

ಮೊನ್ನೆ ರಾತ್ರಿ ಸೇಲಮಿನ ರಾಜಧಾನಿಯಾದ ... ಕಿನ ... ರಸ್ತೆಗಳಲ್ಲಿ ಅಲ್ಲಿನ ನೌಕರರ ... ಗೆ ಹೊಡೆದಾಟವಾಯಿತೆಂದೂ ಎರಡು ಕಡೆಯವರೂ ಧಿಕ್ಕರಿಸಿ ... ನನ್ನು ... ಬೆಳಗಿನ ವರೆಗೂ ... ವಾಗಿದೆ

ಕಮ್ಯೂನಿಸ್ಟ್ ಧ್ವಜ ಹಾರಿಸ ಕೂಡದು

ಹೈದರಾಬಾದು ಸಂಸ್ಥಾನದಲ್ಲೆಲ್ಲಾ ಕಮ್ಯೂನಿಸ್ಟರ ಧ್ವಜವಾದ ಕುಡುಗೋಲು ಸುತ್ತಿಗೆ ಗುರುತುಳ್ಳ ಕೆಂಪು ಬಾವುಟವನ್ನು ಪ್ರದರ್ಶಿಸಕೂಡದೆಂದು ಅಲ್ಲಿನ ಪೊಲೀಸ್ ಇಲಾಖೆಯ ... ನಿಷೇಧಿಸಿದ್ದಾರೆ

ಸಿಂಧಿನ ಮಾಜಿ ಪ್ರಧಾನಿಗೆ ಶಿಕ್ಷೆ

ಸಿಂಧ್ ಪ್ರಾಂತ್ಯದ ಮಾಜಿ ಪ್ರಧಾನಿ ಮಹಮದ್ ಅಯೂಬ್ ಖ್ರೋರವರು ನಂಬಿಕೆ ದ್ರೋಹ ಮತ್ತು ಕದ್ದ ಮಾಲನ್ನು ಇಟ್ಟುಕೊಂಡಿದ್ದರೆಂಬ ಆಪಾದನೆಯ ಮೇಲೆ ಅವರಿಗೆ ೨ ವರ್ಷ ಶಿಕ್ಷೆ ಮತ್ತು ೧ ಸಾವಿರ ರೂ. ಜುಲ್ಮಾನೆಯನ್ನು ವಿಧಿಸಲಾಗಿದೆ

ನೋಟೀಸ್

ಮೈಸೂರ್ ಸ್ಟೇಟ್ ರೈಲ್ವೆ

೧೯೪೯ನೇ ಮಾರ್ಚಿ ೧ ರಿಂದ ಮೈಸೂರು ರೈಲ್ವೆ ನಿಲ್ದಾಣದಲ್ಲಿ ಮೊದಲನೇ ತರಗತಿಯಲ್ಲಿ ಸೀಟುಗಳನ್ನೂ ಮತ್ತು ಬರ್ತುಗಳನ್ನೂ ಮತ್ತು ಎರಡನೇ ತರಗತಿಗಳಲ್ಲಿ ಸೀಟುಗಳನ್ನೂ ರಿಜರ್ವ್ ಮಾಡಲು ಇದುವರೆಗೆ ಇದ್ದ ೪ ಆಣೆ ಶುಲ್ಕವನ್ನು ೮ ಆಣೆಗೆ ಏರಿಸಲಾಗುವುದು.

ಮೀರ್ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್.

ಟ್ರಾಫಿಕ್ ಮ್ಯಾನೇಜರ ಕಛೇರಿ,
ಮೈಸೂರು ೨೨—೨—೪೯

ನಿಮ್ಮ ಮೈ ಮೊಗ್ಗಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಯುದ್ಧ ಕಾಲದಲ್ಲಿ ಜನರು ಪರಾರಿಯಾಗಲು ಟಿಕೇಟುಗಳು

ಯುದ್ಧ ಸಂಭವಿಸಿದ ಪಕ್ಷದಲ್ಲಿ ಜನರು ದೇಶವನ್ನು ಬಿಟ್ಟು ಹೋಗಲು ಅನುಕೂಲವಾಗುವಂತೆ ಸ್ವಾಲೆಂಡಿನಲ್ಲಿ ಒಂದು ಕಂಪೆನಿಯವರು ತಲೆಯೊಂದಕ್ಕೆ ೪೦೦ ಪೌಂಡಿನಂತೆ ಟಿಕೆಟನ್ನು ಮಾರುತ್ತಿದ್ದಾರೆ. ಇವರಿಂದ ಕ್ಯಾನರಿ ದ್ವೀಪಕ್ಕೆ ಹೋಗಲು ಅವರು ವ್ಯವಸ್ಥೆ ಮಾಡಿರುವರೆಂದೂ ಹೇಳಲಾಗಿದೆ ೧೯೫೩ ರವರೆಗೆ ಈ ಟಿಕೆಟುಗಳು ಚಾಲ್ತಿಯಲ್ಲಿರುವುವು.

ಅರಮನೆ ಇಲಾಖೆಗಳ

ಅನೇಕ ತರಹಾವರಿ ಸಾಮಾನುಗಳು ತಾ|| 2-3-49ನೇ ಬುಧವಾರದಲಾಗಾಯ್ತು ಪ್ರತಿ ದಿನವೂ ಬೆಳಗ್ಗೆ ೯ ಘಂಟೆಗೆ

ಹರಾಜು

ಜಗನ್ಮೋಹನ ಬಂಗ್ಲೆ ಅವರಣದಲ್ಲಿ

ವಿವರಗಳಿಗೆ ಹಸ್ತ ಪತ್ರಿಕೆ ನೋಡಿ

ಸಿಟಿ ಅಕ್ಷನಿಯರಿಂಗ್ ಕೋ

ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

10,000 ರೂಪಾಯಿಗಳ ಬಹುಮಾನಗಳು

:o:

ಕಾರು ರಾಗಿಯನ್ನು ಹೆಚ್ಚಾಗಿ ಮತ್ತು ಚೆನ್ನಾಗಿ ಬೆಳೆಯುವ ರೈತರಿಗೆ

ಸರ್ಕಾರದವರು 10,000 ರೂಪಾಯಿಗಳನ್ನು ಬೇರೆ ಬೇರೆ ಬಹುಮಾನಗಳಾಗಿ ಹಂಚುವರು

ಈ ಒಳ್ಳೆಯ ಸಮಯವನ್ನು ರೈತರಾರೂ ಕಳೆದುಕೊಳ್ಳಬಾರದು

ಆದ್ದರಿಂದ—

ಬಹುವಾಗಿ ಬೆಳೆಯಿರಿ!
ಬಹುಮಾನ ಪಡೆಯಿರಿ!!
ದೇಶಸೇವೆ ಮಾಡಿರಿ!!!

ಕಾರು ರಾಗಿ ಬೆಳೆಯುವವರಿಗೆ ರಿಯಾಯಿತಿಗಳು

ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಎಕರೆ ಒಂದಕ್ಕೆ 15 ರೂಪಾಯಿಗಳಂತೆ ರಿಯಾಯಿತಿ ದರದಲ್ಲಿ ಬೆಲೆ ಬಾಳುವ

ಬಿತ್ತನೆ ಬೀಜ ಮತ್ತು ಗೊಬ್ಬರ

- ಇವುಗಳನ್ನು ಕಾರು ರಾಗಿ ಬೆಳೆಯುವ ರೈತರಿಗೆ ಮುಂಗಡವಾಗಿ ಕೊಡಲಾಗುವುದು.
- ಈ ಮುಂಗಡ ಪಡೆಯುವ ರೈತರು ಎಕರೆ ಒಂದಕ್ಕೆ ಒಂದು ಪಲ್ಲದಂತೆ ಮಾತ್ರ ಕಂಟ್ರೋಲ್ ದರದ ರಾಗಿಯನ್ನು ಆಹಾರದ ಡಿಪೋವಿಗೆ ಕೊಟ್ಟರೆ ಸಾಕು.
- ಹಾಗೆ ಕೊಟ್ಟಲ್ಲಿ ಈ ಮುಂಗಡವನ್ನು ರೈತರಿಗೆ ಮುಫತ್ತಾಗಿ ಬಿಟ್ಟು ಬಿಡಲಾಗುವುದು.

ರೈತ ಬಾಂಧವರೇ!

ಈ ಸುಸಮಯವನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯಿರಿ

ಎಂ. ಮಲ್ಲರಾಜ ಅರಸ್,
ಕಾರ್ಯದರ್ಶಿ,
"ಗ್ರೋ ಮೋರ್ ಫುಡ್ ಕಮಿಟಿ"

ಪಿ. ವೇದವ್ಯಾಸಾಚಾರ್ಯ,
ರೆವಿನ್ಯೂ ಕಮೀಷನರ್ ಮತ್ತು ಅಧ್ಯಕ್ಷರು
"ಗ್ರೋ ಮೋರ್ ಫುಡ್ ಕಮಿಟಿ"

28-2-49 ನೇ ಸೋಮವಾರ ಕಡೇ ದಿನ

(ಕನ್ನಡ) ಪುರಂಧರ ದಾಸ

ಪ್ರತಿ ದಿನ 3 ಆಟಗಳು

1-3-49 ನೇ ಮಂಗಳವಾರದಿಂದ

ನ್ಯಾಷನಲ್ ರವರ

ದಿಮ್ಮಿ ಡಾಗ್

(ತೆಲುಗು)

ಪ್ರತಿ ದಿನ 3 ಆಟಗಳು

ಒಲಂಪಿಯಾ ಟಾಕೀಸ್

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ದಯಮಾಡಿ ಇಂದೇ ಭೇಟಿ ಕೊಡಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವ ಮಗ್ಗದಿಂದ ತಯಾರಾದ ರಂಗುಗಳುಳ್ಳ ಮಾರ್ವದಿ, ಆರಣಿ ಮತ್ತು ಕಾಂಚೀಪುರ ಸೀರೆಗಳು, ಕಲಾಬತ್ತು ಪಂಚೆಗಳು, ... ಗಳು ಸಹ ದೊರೆಯುತ್ತವೆ.

ಬೆಂಗಳೂರು ಜವಳಿ ಅಂಗಡಿ
ಶಿವರಾಂಪೇಟೆ :: ಮೈಸೂರು

ಶುಭಕರವಾದ

ಲಗ್ನದ ಜವಳಿಗಳಿಗೆ

ನಮ್ಮಲ್ಲಿಗೆ ದಯೆಯಿಟ್ಟು ಭೇಟಿ ಕೊಡಿ

ವೀರಣ್ಣ ಸಿಲ್ಕ್ ಎಂಪೋರಿಯಂ

ವಿ. ರಾಮಯ್ಯ ಅಂಡ್ ಬ್ರದರ್
ಇಲವಾಲ ರಸ್ತೆ :: ಮೈಸೂರು

WANT
CEMENT?

: Enquire at :-

C.B.S. Kumar,
Asoka Road, Mysore
Agents for
DALMIA CEMENT

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು

ಪ್ರಕಟಣೆ

ನಮ್ಮಲ್ಲಿ ಕೆಲವು ವರ್ಷಗಳಿಂದಲೂ ನೌಕರಿಯಲ್ಲಿದ್ದ ಶ್ರೀ ಆರ್. ದೇವಿ ಪ್ರಸಾದ್ ಎಂಬುವರು ನಮ್ಮ ನೌಕರಿಯಲ್ಲಿ ಈಗ ಇರುವುದಿಲ್ಲವೆಂತಲೂ, ಆದುದರಿಂದ ನಮ್ಮ ಅಂಗಡಿಯ ಗಿರಾಕಿಗಳು ಅವರೊಡನೆ ನಮ್ಮ ಪರವಾಗಿ ಯಾವ ವ್ಯವಹಾರವನ್ನೂ ಇಟ್ಟುಕೊಳ್ಳಕೂಡದೆಂತಲೂ ಈ ಮೂಲಕ ಮಹಾಜನರ ತಿಳುವಳಿಕೆಗಾಗಿ ತರಲಾಗಿದೆ

ಕೆ. ಎಸ್. ಶ್ರೀಕಂಠಶೆಟ್ಟಿ
ಪ್ರೊಪ್ರೈಟರ್

ಮೈಸೂರು
೨೪—೨—೪೯

Edited, printed and published by A.R.Nagarajan at the Sadhvi Press, D. Subbiah Road, Mysore.

ಬೆಂಗಾಲ್, ಬೆನಾರಿಸ್, ಮೈಸೂರು ಸಿಲ್ಕ್ ಸೀರೆಗಳು

ಮಂಗಳ ... ಅನೇಕವಾಗಿ ... ಸಾಧ್ಯವಾದ ಮಾಲು ...

ಅಂಚೆ ಕವರಿಗೆ ೨ ಆಣೆ ಕಾರ್ಡಿಗೆ ೯ ಕಾಸು

ಭಾರತ ಸರ್ಕಾರದ ಆಯವ್ಯಯದ ಪಟ್ಟಿ

ನಿನ್ನೆ ದಿನ ಕೇಂದ್ರ ಶಾಸನ ಸಭೆಯಲ್ಲಿ ಭಾರತ ಸರ್ಕಾರದ ಹೊಸ ವರ್ಷದ ಆಯವ್ಯಯದ ಪಟ್ಟಿಯನ್ನು ಆರ್ಥಿಕ ಸಚಿವ ... ಜಾನ್ ಮಥಾಯಿಯವರು ಮಂಡಿಸಿದರು. ಬರುವ ವರ್ಷ ಒಟ್ಟು ವರಮಾನ ... ಕೋಟಿ ರೂ. ಆಗುವುದೆಂದೂ ... ೨೨ ಕೋಟಿ ರೂ. ಆಗಿ, ೧೫ ... ರೂ. ಇಳಿತಾಯ ಉಂಟಾಗುವ ... ದೂ ಅವರು ತಿಳಿಸಿದರು. ಹೊಸದಾಗಿ ... ಹಲವು ಭೋಗ್ಯ ವಸ್ತುಗಳ ... ತೆರಿಗೆಗಳಿಂದ ಈ ಇಳಿತಾಯ ... ನ್ನು ... ಸರಿಪಡಿಸಿ, ಕಡೆಗೆ ೮೫ ಲಕ್ಷ ರೂ. ... ವಾಗು ವಂತೆ ಮಾಡಲಾ ... ವುದು.

... ವಾಗಿ ಅಂಚೆ ಕವರುಗಳ ಬೆಲೆ ... ೨ ಆಣೆಯಿಂದ ೨ ಆಣೆಗೆ ಹೆಚ್ಚಿಸಲಾಗುವುದು. ಕಾರ್ಡಿನ ಬೆಲೆಯನ್ನು ... ೯ ಕಾಸಿಗೆ ಹೆಚ್ಚಿಸಲಾಗುತ್ತದೆ. ಆದರೆ ಇದುವರೆಗೆ ರೈಲು ಮೂಲಕ ... ಗ ... ದ್ದ ಅಂಚೆ ಕಾಗದ ಪತ್ರಗಳನ್ನೆಲ್ಲ ಇನ್ನು ಮುಂದೆ ವಿಮಾನದ ಮೂಲಕ ರವಾನಿಸಲಾಗುವುದು. ವಿಮಾನದ ಮೂಲಕ ಹೋಗುತ್ತಿದ್ದ ಕಾಗದ ಪತ್ರಗಳ ... ತೆಗೆದುಕೊಳ್ಳುತ್ತಿದ್ದ ಒಂದಾಣೆ ಹೆಚ್ಚಿನ ... ವನ್ನು ವಜಾ ಮಾಡಲಾಗುವುದು.

ಹೊರಗಡೆಯಿಂದ ತರಿಸುವ ಅಡಿಕೆ ... ಲೆ ಸುಂಕವನ್ನು ಪೌಂಡ್ ೧ ಕ್ಕೆ ೫ ... ದ ೭ ಆಣೆಗೆ ಹೆಚ್ಚಿಸಲಾಗುವುದು. ನ್ಯೂಸ್ ಪ್ರಿಂಟ್ ಬಟ್ಟೆ ಉಳಿದ ... ದ, ಸ್ಟೇಷನರಿ, ಗಾಜು, ಲೋಹದ ... ಗಳು, ಮೋಟಾರು ವಸ್ತುಗಳು ... ತ್ತು ... ಡಿಯೋಗಳ ಮೇಲೂ ಸುಂಕ ... ಹೆಚ್ಚಿಸಲಾಗುವುದು. ... ಮೇಲೆ ಶೇಖಡ ೬॥ ರಷ್ಟು ... ಮತ್ತು ಒರಟು ಬಟ್ಟೆ ... ಗಜಕ್ಕೊ ೬ ಕಾಸಿನಂತೆ ತೆರಿಗೆ ... ವಿಧಿಸಲಾಗುವುದು. ಪೆಟ್ರೋಲಿನ ತೆರಿಗೆಯನ್ನು ಗ್ಯಾಲನ್ ೧ ಕ್ಕೆ ೧೨ ಆಣೆಯಿಂದ ... ಗೆ ಹೆಚ್ಚಿಸಲಾಗುವುದು. ಸಕ್ಕರೆ ... ಹಂಡ್ರೆಡ್ ವೇಟ್ ಗೆ ೩ ರೂ. ... ಸಿದ್ದುದನ್ನು ರೂ.೩-೧೨-೦ ಏರಿಸ ... ಮೋಟಾರು ಟೈರಿನಮೇಲಿನ ಸುಂಕವನ್ನು ಶೇಖಡ ೧೫ ರಿಂದ ೩೦ ಕ್ಕೆ ಏರಿಸಲಾಗುವುದು. ಕೃತಕ ರೇಷ್ಮೆ ಮತ್ತು ... ಮೇಲಿನ ಸುಂಕವನ್ನು ಎರಡರಷ್ಟು ಹೆಚ್ಚಿಸಲಾಗುವುದು.

... ಜಗಳಲ್ಲಿ ... ನ ಮೇಲೆ ಮತ್ತು ... ಮೇಲೆ ಹಾಕಿದ್ದ ತೆರಿಗೆಯನ್ನು ... ಸಲಾಗುವುದು.

... ಯುದ್ಧದ ಬಗ್ಗೆ ... ಯಲ್ಲಿ ಸಮ್ಮೇಳನ

... ಪರಿಸ್ಥಿತಿಯನ್ನು ಪರಿಶೀಲಿಸ ... ಲ್ಲಿ ನಿನ್ನೆ ದಿನ ಬ್ರಿಟನ್, ಆಸ್ಟ್ರೇ ... ಮತ್ತು ಭಾರತ ದೇಶಗಳ ಪ್ರತಿನಿ ... ಮ್ಮೇಳನವು ನಡೆಯಿತು. ... ಲ್ಲಿ ನಡೆಯುವ ಅಂತಃಕಲಹವ ... ಅಲ್ಲಿ ಶಾಂತಿ ಸ್ಥಾಪಿಸಲು ... ಧಾನ ಕಾರ್ಯಕ್ರಮವನ್ನು ಕೈ ... ಒಮರ್ ಪ್ರಧಾನಿಯವರ ... ಬೇಕೆಂದು ನಿರ್ಧರಿಸಲಾ ...

ಸಂಪುಟ ೬] ಮಂಗಳವಾರ ೧-೩-೧೯೫೦ [ಸಂಚಿಕೆ ೧೫೫

ಬೆಳಗೊಳದ ಕಾರ್ಮಿಕರ ಮುಷ್ಕರದ ಮುಕ್ತಾಯ

ಮೈಸೂರು ೧

ಕಳೆದ ೫॥ ತಿಂಗಳಿನಿಂದಲೂ ಮುಷ್ಕರ ಹೂಡಿದ್ದ ಬೆಳಗೊಳದ ಕಾರ್ಮಿಕರು ಡಾ॥ ಪಾರ್ಥನಾರಾಯಣ ಪಂಡಿತರು, ಕಾರ್ಮಿಕ ಸಚಿವರು, ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳವರ ಪ್ರಯತ್ನಗಳಿಂದ ಮುಷ್ಕರವನ್ನು ಕೊನೆಗಾಣಿಸಿ, ನಾಳೆಯಿಂದ ಕೆಲಸಕ್ಕೆ ಹಿಂತಿರುಗಲು ನಿರ್ಧರಿಸಿರುತ್ತಾರೆ.

ಕಾರ್ಮಿಕರ ಸಂಘದ ಸಭೆಯೊಂದು ನಿನ್ನೆ ಬೆಳಗೊಳದಲ್ಲಿ ನಡೆದು ಕೆಳಗೆ ಕಂಡ ಷರತ್ತುಗಳ ಮೇಲೆ ಒಪ್ಪಂದವಾಗಿದೆಯೆಂದು ತಿಳಿಸಲಾಯಿತು.

ಅಧಿಕಾರವರ್ಗದವರು ಕೊಟ್ಟಿರುವ ಬೆದರಿಕೆಯ ನೋಟೀಸನ್ನು ವಾಪಸು ತೆಗೆದುಕೊಳ್ಳುವುದು; ತುಟ್ಟಿಭತ್ಯ, ಹೆಚ್ಚಿಗೆ ... ಬಳ ಮುಂತಾದ ವಿಷಯಗಳನ್ನು ವೇತನ ಬೋರ್ಡಿನವರು ಪರಿಶೀಲಿಸಿ, ೨ ತಿಂಗಳೊಳಗಾಗಿ ಅವುಗಳನ್ನು ತೀರ್ಮಾನಿಸುವುದು. ಮತ್ತು ಹೆಚ್ಚಿಗೆ ಬೋನಸ್ಸನ್ನು ಸಹ ಪರಿಶೀಲಿಸುವುದು; ಮ ... ಲದಲ್ಲಿ ಕಾರ್ಮಿಕರಿಗೆ ತಾತ್ಕಾಲಿಕವಾಗಿ ಒಂದು ತಿಂಗಳು ಸಂಬಳ ಮತ್ತು ಬೋನಸ್ ಕೊಡಿಸಲು ಒಪ್ಪಿದ್ದ ಕಾರ್ಮಿಕ ಮಂತ್ರಿಗಳು ಈಗ ತಮ್ಮ ನೈತಿಕ ಶಕ್ತಿಯಿಂದ ಇನ್ನೊಂದು ತಿಂಗಳ ಸಂಬಳ ಕೊಡಿಸುವುದಾಗಿ ಇತ್ತ ಭರವಸೆಯನ್ನು ಒಪ್ಪುವುದು. ಮುಷ್ಕರಗಾರರಿಗೆ ಮುಂದೆ ಯಾವ ತೊಂದರೆಯನ್ನೂ ಕೊಡಲಾಗದು; ವಿಶ್ವ ... ಲಾವಣೆ ನೋಟೀಸುಗಳನ್ನು ಪಂಚಾಯಿತಿಗೆ ಒಪ್ಪಿಸುವುದು: ಈ ಸಭೆಯಲ್ಲಿ ಡಾ॥ ಪಾರ್ಥನಾರಾಯಣ ಪಂಡಿತರು ಮತ್ತು ಅಸಿಸ್ಟೆಂಟ್ ಲೇಬರ್ ಕಮೀಷನರಾದ ಶ್ರೀ ಮಹಾಲಿಂಗಣ್ಣನವರು ಭಾಷಣಮಾಡಿ, ಸಚಿವರ ಭರವಸೆಯನ್ನು ಒಪ್ಪಿ ಕೆಲಸಗಾರರು ಮುಷ್ಕರ ಮುಕ್ತಾಯ ಮಾಡಲು ಒಪ್ಪಿರುವುದಕ್ಕೆ ಅವರುಗಳನ್ನು ಅಭಿನಂದಿಸಿದರು.

ಬೊಂಬಾಯಿನಲ್ಲಿ ಕೊಲ್ಲಾಪುರದ ಐಕ್ಯ

ಕೊಲ್ಲಾಪುರ ಸಂಸ್ಥಾನವು ಈ ದಿನದಿಂದ ಬೊಂಬಾಯಿ ಪ್ರಾಂತ್ಯದಲ್ಲಿ ಐಕ್ಯವಾಗುವುದು. ಈ ಸಂಬಂಧದಲ್ಲಿ ಅಲ್ಲಿ ವಿಶೇಷ ಸಮಾರಂಭವು ಏರ್ಪಟ್ಟಿತ್ತು. ಸಂಸ್ಥಾನದಲ್ಲಿ ಈ ದಿನ ಸಾರ್ವಜನಿಕ ರಜಾ ದಿನವೆಂದ ಘೋಷಿಸಿ ... ಳನ್ನು ಬಿಡುಗಡೆ ಮಾಡಲಾಯಿತು.

ದಿವಾನಗಿರಿ ರದ್ದಾಗಬೇಕು

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಮತ್ತೆ ನಿರ್ಣಯ

ಸ್ವಂ. ವ. ಪ್ರೆಸ್] ಬೆಂಗಳೂರು ೧

ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ನಿನ್ನೆ ಮತ್ತು ಮೊನ್ನೆ ದಿನ ನಡೆಯಿತು. ದಿವಾನಗಿರಿಯನ್ನು ಕೂಡಲೇ ರದ್ದು ಮಾಡಬೇಕೆಂದೂ, ಈಗಿನ ಶಾಸನ ಸಭೆಗಳಿಗೆ ಇನ್ನೊಂದು ಮಹಜರನ್ನು ... ಕೊಡಬೇಕೆಂದೂ ಸರ್ಕಾರಕ್ಕೆ ಸಲಹೆ ಮಾಡಬೇಕೆಂದು ನಿರ್ಣಯ ಮಾಡಲಾಯಿತು.

ದೇಶದಲ್ಲಿ ಕಮ್ಯೂನಿಸ್ಟರ ವಿನಾಶಕರ ಚಟುವಟಿಕೆಯನ್ನು ನಿರ್ಮೂಲ ಮಾಡಲು ಸರ್ಕಾರದವರು ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಲಾಯಿತು. ಸಂಸ್ಥಾನಗಳ ಹಣಕಾಸಿನ ಪರಿಶೀಲನಾ ಸಮಿತಿಯ ಸದಸ್ಯರಾದ ಶ್ರೀ ಗಳು ದಂಡೇಕರ್ ಮತ್ತು ಸ್ವಾಮಿನಾಥನವರುಗಳು ... ಕ ಸಚಿವರು ಮತ್ತು ದಿವಾನರೊಡನೆ ಮಾತುಕತೆ ನಡೆಸಿ, ಈದಿನ ದೆಹಲಿಗೆ ಹಿಂತಿರುಗಿದರು.

ಅಕಡೆಮಿಕ್ ಕೌನ್ಸಿಲ್ ಸಭೆ

ನಿನ್ನೆ ನಡೆದ ವಿಶ್ವವಿದ್ಯಾಲಯದ ಅಕಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಇನ್ನು ೫ ವರ್ಷಗಳಕಾಲ ಪಬ್ಲಿಕ್ ಪರೀಕ್ಷೆಗಳಲ್ಲಿ ಗ್ರೇಸ್ ಮಾರ್ಕುಗಳನ್ನು ಕೊಡುವ ಪದ್ಧತಿಯನ್ನು ರದ್ದು ಮಾಡಬೇಕೆಂದು ಶ್ರೀ ಪಿ. ಜಿ. ನಾಗಪ್ಪನವರು ಮಂಡಿಸಿದ ನಿರ್ಣಯವನ್ನು ಉಪಸ್ಥಾನಪತಿಗಳು ತಳ್ಳಿ ಹಾಕಿದರು.

ಇದೇ ೧೨ ರಿಂದ ೨೦ ನೇ ತಾ॥ ವರೆಗೆ ಬೆಂಗಳೂರಿನಲ್ಲಿ ತಿರುವಾಡಿಯಲ್ಲಿ ನಡೆಯುವ ಶ್ರೀ ತ್ಯಾಗರಾಜ ಆರಾಧನಾ ಮಹೋತ್ಸವದ ಸಹಾಯಾರ್ಥವಾಗಿ ಸಂಗೀತ ಕಛೇರಿಗಳು ನಡೆಯುವುವು.

ಸಮತಾವಾದಿ ಪಕ್ಷದ ಕಛೇರಿಗೆ ಭೇಟಿ

ಬೆಂಗಳೂರು ವೈಸಿಂಡಿಯಾ ಪತ್ರಿಕೆಯ ಸಂಪಾದಕರಾದ ಮಿ॥ ಫಿಲಿಪ್ ಸ್ಪ್ರಾಟ್ ರವರು ಮೊನ್ನೆ ರಾಜಧಾನಿಯ ಸಮತಾವಾದಿಪಕ್ಷದ ಕಾರ್ಯಾಲಯಕ್ಕೆ ಭೇಟಿಕೊಟ್ಟು ಅವರುಗಳನ್ನುದ್ದೇಶಿಸಿ ಭಾಷಣ ಮಾಡಿದರು.

ಉಪನಯನ

ರಾಜಧಾನಿಯ ಬ್ಯಾನ್ಸ್ ಡೌನ್ ಬಜಾರಿನಲ್ಲಿರುವ ಅಶೋಕಾ ಫಾರ್ಮಸಿಯ ಶ್ರೀ ಕೆ. ಪಿ. ಪುರಾಣಿಕರು ಅವರ ತಮ್ಮ ಶ್ರೀ ... ಪುರಾಣಿಕರ ಹಿರಿಯ ಕುಮಾರ ... ದಿನೇಶ ಪುರಾಣಿಕನಿಗೆ ನಾಳೆ ... ...

ಚಿನ್ನದ ಗಣಿ ಮುಷ್ಕರ ಮುಕ್ತಾಯ

ಬೆಂಗಳೂರು ೧

ಮುಷ್ಕರ ಹೂಡಿರುವ ಚಿನ್ನದ ಗಣಿ ಕೆಲಸಗಾರರ ನಿಯೋಗವೊಂದು ನಿನ್ನೆ ಕಾರ್ಮಿಕ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂ ರವರನ್ನು ಕಂಡು ಮಾತುಕತೆ ನಡೆಸಿತು. ಕಾರ್ಮಿಕರು ಮುಷ್ಕರವನ್ನು ನಿಲ್ಲಿಸುವುದಾದರೆ ತುಟ್ಟಿ ಭತ್ಯವನ್ನು ಕೂಡಲೇ ಹೆಚ್ಚಿಸಲಾಗುವುದೆಂದೂ, ವೇತನ ಬೋರ್ಡನ್ನು ರಚಿಸಿ, ಅದರ ವರದಿ ಬರುವವರೆಗೂ ತಾತ್ಕಾಲಿಕ ಪರಿಹಾರವನ್ನು ಕೊಡುವ ವಿಷಯವನ್ನು ಪರಿಶೀಲಿಸಲಾಗುವುದೆಂದೂ, ದಸ್ತಗಿರಿಯಾಗಿರುವ ಮುಖಂಡರನ್ನು ಬಿಡುಗಡೆ ಮಾಡಲಾಗುವುದೆಂದೂ, ಸಚಿವರು ಭರವಸೆ ಇತ್ತರೆಂದೂ, ಇದರಿಂದ ಮುಷ್ಕರವು ಈ ದಿನದಿಂದ ಮುಕ್ತಾಯವಾಯಿತೆಂದೂ ತಿಳಿದುಬಂದಿದೆ.

ಭಾರಿ ಕ್ರಾಂತಿಯೆಬ್ಬಿಸಲು ಕಮ್ಯೂನಿಸ್ಟರ ಹಂಚಿಕೆ

ಭಾರತದಲ್ಲಿ ಅನೇಕ ಕಮ್ಯೂನಿಸ್ಟ್ ನಾಯಕರು ತಲೆ ತಪ್ಪಿಸಿಕೊಂಡಿರುತ್ತಾರೆಂದೂ, ದೊಡ್ಡ ಪ್ರಮಾಣದಲ್ಲಿ ವಿನಾಶ ಕಾರ್ಯಗಳನ್ನೂ ಮತ್ತು ರೈಲ್ವೆ ಮುಷ್ಕರವನ್ನೂ ನಡೆಸಲು ಅವರು ಹವಣಿಸುತ್ತಿದ್ದಾರೆಂದೂ ಅವರನ್ನು ಸಂಪೂರ್ಣವಾಗಿ ಸದೆ ಬಡಿಯಲು ಸರ್ಕಾರವು ಸಿದ್ಧವಾಗಿದೆಯೆಂದೂ ಪಂಡಿತ ನೆಹರೂರವರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ. ಕಮ್ಯೂನಿಸ್ಟರ ಪಕ್ಷವನ್ನು ಅಕ್ರಮವೆಂದು ಘೋಷಿಸುವ ವಿಷಯವನ್ನು ಭಾರತ ಸರ್ಕಾರವು ಆಲೋಚಿಸುತ್ತಿದೆಯೆಂದೂ ಅವರು ತಿಳಿಸಿದ್ದಾರೆ.

ಜೂಜುಕೋರರ ಮುಖಕ್ಕೆ ಮಸಿ, ಪಾದರಕ್ಷೆ ಹಾರ ಮತ್ತು ಮೆರವಣಿಗೆ

ಸಿಂಧ್ ಹೈದರಾಬಾದಿನಲ್ಲಿ ಜೂಜಾಡುತ್ತಿದ್ದ ೧೭ ಜನರಿಗೆ ನೂತನ ರೀತಿಯ ಶಿಕ್ಷೆಯನ್ನು ವಿಧಿಸಲಾಯಿತು. ಅವರುಗಳ ಮುಖಕ್ಕೆ ಮಸಿಯನ್ನು ಬಳಿದು, ಹಳೇ ಚಪ್ಪಲಿಗಳ ಹಾರವನ್ನು ಹಾಕಿ, ಒಂದು ದಿನವೆಲ್ಲಾ ಊರಿನಲ್ಲಿ ಮೆರವಣಿಗೆ ಮಾಡಲಾಯಿತು.

ನೂತನ ಶ್ರೇಷ್ಠ ಸೇನಾಪತಿ

ಸ್ವಂ. ವ. ಪ್ರೆಸ್] ಬೆಂಗಳೂರು ೧

ಭಾರತ ಸೈನ್ಯದ ಬ್ರಿ॥ ಡಿ. ಪ್ರೊನ್ನಪ್ಪನವರನ್ನು ಸಂಸ್ಥಾನದ ಶ್ರೇಷ್ಠ ಸೇನಾಧಿಪತಿಯನ್ನಾಗಿ ಬ್ರಿ॥ ಬಾಲ್ ರವರ ಸ್ಥಾನದಲ್ಲಿ ನೇಮಿಸಲಾಗಿದೆ.

ಕುದುರೆ ಪಂದ್ಯ

ಬರುವ ಮೇ ೨೧ ನೇ ತಾ॥ ನಿಂದ ಜುಲೈ ೨ ನೇ ತಾ॥ ವರೆವಿಗೆ ೧೨ ಕುದುರೆ ಪಂದ್ಯಗಳು ಬೆಂಗಳೂರಿನಲ್ಲಿ ನಡೆಯುವುವು.

ಸಚಿವರ ಮನೆ ಮುಂದೆ ಪ್ರದರ್ಶನ ನಡೆಸಿದ್ದಕ್ಕೆ ಶಿಕ್ಷೆ

ಕಾರ್ಮಿಕ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರ ಮನೆ ಮುಂದೆ ನಿನ್ನೆ ದಿನ ಪ್ರದರ್ಶನ ನಡೆಸಿದರೆಂಬ ಆಪಾದನೆಯ ಮೇಲೆ ೧೭ ಜನ ಚಿನ್ನದ ಗಣಿ ಕೆಲಸಗಾ ... ... ಜನ ... ವನ್ನು ವಿಧಿಸಲಾಗಿದೆ.

'ಬಿ' ತರಗತಿಯವರಿಗೆ ಅಕ್ಕಿ ಮತ್ತು ಗೋಧಿ

ರೇಷನಿಂಗ್ ಅಧಿಕಾರಿಗಳ ವಿವರಣೆ

ಮೈಸೂರು ೧

[illegible] ರೇಷನಿಂಗ್ ಅಧಿಕಾರಿಗಳಾದ ಶ್ರೀ [illegible] ನವರು ನಿನ್ನೆ ದಿನ [illegible] ನಗರದ ಆಹಾರ [illegible] ವಿವರಿಸಿದರು. ರಾಗಿ ಮತ್ತು ಜೋಳದ ಸರಬರಾಜು ಕಡಿಮೆಯಾಗಿರುವುದರಿಂದ 'ಬಿ' ತರಗತಿಯ ಪಡಿತರದವರಿಗೆ ಈ ದಿನದಿಂದ 'ಎ' ತರಗತಿಯವರಂತೆಯೇ ೬ ಔನ್ಸು ಅಕ್ಕಿ ಮತ್ತು ೩ ಔನ್ಸು ಗೋಧಿಯನ್ನು ರಾಗಿ, ಜೋಳ ದಾಸ್ತಾನು ಬರುವವರೆವಿಗೆ ತಾತ್ಕಾಲಿಕವಾಗಿ ಕೊಡಲಾಗುವುದು. ಜನವರಿ ತಿಂಗಳಲ್ಲಿ ಹೆಚ್ಚು ಜನ ಸಂತೆ ಕೊಟ್ಟಿದ್ದ [illegible] ಜನರನ್ನು ಕಾರ್ಡಿನಿಂದ ವಜಾ ಮಾಡಲಾಯಿತು. ನಗರದಲ್ಲಿ [illegible] ಹೋಟಲುಗಳಿವೆ. [illegible] ಯಾವ ರೇಷನಿಂಗ್ ಪದಾರ್ಥವನ್ನು ಸರಬರಾಜು [illegible] ಹೋಟಲುಗಳಿಗೆ ತಿಂಗಳಿಗೆ [illegible] ಪಲ್ಲಾ ಅಕ್ಕಿ ಮತ್ತು [illegible] ಪಲ್ಲಾ ಗೋಧಿ ಕೊಡಲಾಗುತ್ತಿದೆ. ಮದುವೆಗೆ [illegible] ಸೇರು ಅಕ್ಕಿ ಮತ್ತು ಇತರ ಶುಭ ಕಾರ್ಯಗಳಿಗೆ [illegible] ಸೇರು ಅಕ್ಕಿಯನ್ನು ಕೊಡಲಾಗುವುದು. [illegible] ಕಾರ್ಯಗಳಿಗಾಗಿ [illegible] ಪಲ್ಲಾ ಅಕ್ಕಿ ತಿಂಗಳೊಂದಕ್ಕೆ ಖರ್ಚಾಗುತ್ತಿದೆ. ಮೈಸೂರು ನಗರದಲ್ಲಿ ಒಟ್ಟು ೨,೭೦,೦೦೦ ಜನರಿರುವರು. ಇವರಿಗಾಗಿ ತಿಂಗಳೊಂದಕ್ಕೆ [illegible],೦೦೦ ಪಲ್ಲಾ ಅಕ್ಕಿ [illegible] ಪಲ್ಲಾ ರಾಗಿ ಮತ್ತು [illegible] ಪಲ್ಲಾ ಗೋಧಿ ಬೇಕಾಗುವುದು. [illegible] ಜನ ಭತ್ತವನ್ನು [illegible] ಗೋಧಿಯನ್ನು ಕೊಡಬಾಗುತ್ತಿಲ್ಲ. ರೇಷನ್ ಪ್ರದೇಶಕ್ಕೆ ಹೊರಗಿನಿಂದ ಒಂದು ಸೇರ ರೇಷನಿಂಗ್ ಧಾನ್ಯವನ್ನು ತರಕೂಡದು. ಇಡ್ಲಿ ಮತ್ತು ದೋಸೆಯನ್ನು ಅಕ್ಕಿಯಲ್ಲಿ ಮಾಡುವುದಕ್ಕಾಗಿ ೩ ಹೋಟಲುಗಳ ಮೇಲೆ ಕ್ರಮ ನಡೆಸಲಾಗುತ್ತಿದೆ. ಇನ್ನು ಮುಂದೆ ಯಾವ ಹೋಟೇಲುಗಳಲ್ಲೂ ಇಡ್ಲಿ ಮತ್ತು ದೋಸೆಗಳನ್ನು ಯಾವ ಪದಾರ್ಥಗಳಲ್ಲೂ ಮಾಡಕೂಡದೆಂದು ನಗರದ ಆಹಾರ ಸಮಿತಿಯವರು ನಿರ್ಣಯ ಮಾಡಿ ಸರ್ಕಾರಕ್ಕೆ ಶಿಫಾರಸು ಮಾಡಿರುವರು ಎಂದು ಅವರು ತಿಳಿಸಿದರು.

ರಾಜಕಮಲ್
25-2-49 ರಿಂದ
ಅಪೋಘವಾದ ೩ ನೇ ವಾರ
ದಿನವಹಿ ೩ ಆಟಗಳು
ಮ್ಯಾಟಿನಿ [illegible] ಸಂಜೆ [illegible]
ಮತ್ತು ರಾತ್ರಿ [illegible] ಗಂಟೆಗೆ
ಅದಿತನ ಕನಸು
(ತಮಿಳು)
ಪಾತ್ರ, ಟಿ. ಆರ್. ಮಹಾಲಿಂಗಂ
ಕಾಳ ಎನ್. ರತ್ನಂ, ಅಂಜಲಿದೇವಿ,
[illegible]

ರಚನಾತ್ಮಕ ಯೋಜನೆಗೆ ೧ ಕೋಟಿ ರೂ

ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಮುಂಬಾಯಿ ಸರ್ಕಾರದವರು ೧ ಕೋಟಿ ರೂ [illegible] ಮಂಜೂರು ಮಾಡಿರುತ್ತಾರೆ.

ಸರ್ಕಾರಿ ಬಸ್ಸುಗಳಲ್ಲಿ ಮೈಲಿಗೆ ೬ ಕಾಸು

ಸರ್ಕಾರೀ ಬಸ್ಸುಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಈ ದಿನದಿಂದ ಮೈಲಿಗೆ ೬ ಕಾಸಿನಂತೆ ವಸೂಲು ಮಾಡಲಾಗುವುದೆಂದು ತಿಳಿಸಲಾಗಿದೆ.

ಲಷ್ಕರ್ ಮೊಹಲ್ಲಾ ಕುಂದುಕೊರತೆಗಳ ಪರಿಶೀಲನೆ

ಲಷ್ಕರ್ ಮೊಹಲ್ಲಾ ನಿವಾಸಿಗಳಿಗೆ ಬೇಕಾದ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಕಾರ್ಯಕ್ರಮ [illegible] ದರಿಂದ [illegible] ೧೦ನೇ ತಾ॥ ನೊಳಗಾಗಿ ತಮ್ಮಲ್ಲಿಗೆ ಕಳುಹಿಸಬೇಕೆಂದು ಮೊಹಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ [illegible] ಗಣ್ಣನವರು ಕೋರಿರುತ್ತಾರೆ.

ನಲ್ಲಿಯ ಆವಶ್ಯಕತೆ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಕೊಲ್ಲಾಪುರದಮ್ಮನ ದೇವಸ್ಥಾನದ ಬೀದಿಗೆ ಒಂದು ನೀರಿನ ನಲ್ಲಿಯು ಮಂಜೂರಾಗಿ ಬಹಳ ತಿಂಗಳುಗಳಾದರೂ ಇಲ್ಲಿಯವರೆಗೂ ಅದನ್ನು ಹಾಕದಿರುವುದರಿಂದ ಜನರಿಗೆ ತುಂಬಾ ಕಷ್ಟವಾಗಿರುತ್ತದೆ. ಕೂಡಲೇ ನಲ್ಲಿಯನ್ನು ಹಾಕಿಸಿ ಕೊಡಬೇಕೆಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿರುತ್ತಾರೆ.

ಶುಭಕರವಾದ
ಲಗ್ನದ ಜವಳಿಗಳಿಗೆ
ನಮ್ಮಲ್ಲಿಗೆ ದಯೆಯಿಟ್ಟು ಭೇಟಿ ಕೊಡಿ
ವೀರಣ್ಣ ಸಿಲ್ಕ್ ಎಂಪೋರಿಯಂ
ವಿ. ರಾಮಯ್ಯ ಅಂಡ್ ಬ್ರದರ್
ಇರ್ವಿನ್ ರಸ್ತೆ :: ಮೈಸೂರು

ಶ್ರೀ ಗಾಯತ್ರೀ ಟಾಕೀಸ್
ಪ್ರತಿ ದಿನ ೩ ಪ್ರದರ್ಶನಗಳು
13-3-49 ರಿಂದ 3 ದಿನಗಳು ಮಾತ್ರ
20ನೇ ಸೆಂಚುರಿಯವರ
13 RUE MADELEINE
13 ರೂ ಮಾಡೆಲೀನ್
ಪಾತ್ರ: ಜೇಮ್ಸ್ ಕಾಗ್ನೆ, ಎನಬೆಲ್ಲ, ಮತ್ತು ರಿಚರ್ಡ್ ಕಾನ್ಟೆ

ವಿಭೂತಿ ಸ್ವಾಮಿಯವರ ದಸ್ತಗಿರಿ

[illegible] ನವರಿ [illegible] ದಿನದಲ್ಲಿ [illegible] ಶ್ರೀ ರಾಘವೇಂದ್ರ ಸ್ವಾಮಿ [illegible] ತಿರುವಣ್ಣಾಮಲೆಯ [illegible] ವಿಭೂತಿ ಸ್ವಾಮಿಯವರನ್ನು [illegible] ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಅನೇಕ ಬಾರಿ [illegible] ಮಾಡಿರುವುದಾಗಿಯೂ, [illegible] ವಾಪಸು ಹಿಂತಿರುಗಿ [illegible] ಹೇಳುವ [illegible] ಗೌರವ [illegible] ಬಂಧಿಸಲಾಗಿದೆ.

ಎಸ್. ಐ. ರೈಲ್ವೆ ಕೆಲಸಗಾರರಿಗೆ ಎಚ್ಚರಿಕೆ

ಕಮ್ಯೂನಿಸ್ಟರ ಪ್ರೇರೇಪಣೆಯಿಂದ ಮದರಾಸಿನ ಎಸ್.ಐ ರೈಲ್ವೆ ಕೆಲಸಗಾರರು ಮುಷ್ಕರ ಹೂಡುವುದಾದರೆ, ಎಂ. ಎಸ್. ಎಂ. ರೈಲ್ವೆ ನೌಕರರು ಅವರ ಬದಲು [illegible] ಎಂ. ಎಸ್. ಎಂ. [illegible] ಸಂಘದ ಕಾರ್ಯದರ್ಶಿಗಳು [illegible] ಕೊಟ್ಟಿರುತ್ತಾರೆ.

ಯಜಮಾನನನ್ನು ಹುಲಿಯ ಬಾಯಿಂದ ಪಾರು ಮಾಡಿದ ನಾಯಿ

ಸಂಯುಕ್ತ ಪ್ರಾಂತದ ಘೂಲಿಯಾನ [illegible] ಬಳ್ಳಿನ ಕಾಶೀರಾಂ ಎಂಬುವನು ಸೌದೆ ತರಲು ಕಾಡಿಗೆ ಹೋದಾಗ, ಅವನ ಮೇಲೆ ಹುಲಿಯೊಂದು ಬಿದ್ದಿತೆಂದೂ, ಆಗ ಹಿಂಬಾಲಿಸಿದ್ದ ಆತನ ನಾಯಿಯು ಆತನನ್ನು ರಕ್ಷಿಸಲು ಹುಲಿಯನ್ನು ಕಚ್ಚಿ ಹೋರಾಟ ನಡೆಸಿತೆಂದೂ, ಈ ಮಧ್ಯೆ ಹಳ್ಳಿಯ ಜನ [illegible] ಬಂದು ಹುಲಿಯನ್ನು ಕೊಂದುಹಾಕಿ [illegible] ವರದಿಯಾಗಿದೆ.

ಕರ್ನಾಟಕಕ್ಕೆ ರಾಜೇಂದ್ರ ಪ್ರಸಾದರ ಭೇಟಿ

ಮಹಾತ್ಮಾ ಗಾಂಧೀಜಿಯವರ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರವರು ನಿಧಿ ಸಂಗ್ರಹ ಕಾರ್ಯವನ್ನು [illegible] ಸಂಯುಕ್ತ ಪ್ರಾಂತ್ಯ, ಬಿಹಾರ್, ಬೊಂಬಾಯಿ, ಪಶ್ಚಿಮ ಬಂಗಾಳ, ಆಂಧ್ರ, ತಮಿಳು, ಕರ್ನಾಟಕ ಪ್ರಾಂತ್ಯಗಳಲ್ಲಿ ಪ್ರವಾಸವನ್ನು ಶೀಘ್ರದಲ್ಲಿಯೇ ಕೈಗೊಂಡಿರುತ್ತಾರೆ.

ಬರ್ಮಾ ಗಲಭೆಯಲ್ಲಿ ೩೦ ಸಾವಿರ ಜನರ ಮರಣ

ಬರ್ಮಾದಲ್ಲಿ ಕಮ್ಯೂನಿಸ್ಟರ ಗಲಭೆಯಿಂದ ಇಲ್ಲಿಯವರೆಗೆ ೩೦ ಸಾವಿರ ಜನರು ಮರಣ ಹೊಂದಿರುವರೆಂದೂ, ಸರ್ಕಾರಕ್ಕೆ [illegible] ಕೋಟಿ ರೂ. ನಷ್ಟವಾಗಿದೆಯೆಂದು ಅಲ್ಲಿನ ಪ್ರಧಾನಿಯವರು ತಿಳಿಸಿರುತ್ತಾರೆ.

ಶುಭಮಸ್ತು
॥ ಸಮಸ್ತ ಸನ್ಮಂಗಳಾನಿ ಭವಂತು ॥
ಮದುವೆ ಜವಳಿಗಳಿಗೆ
ಹೆಸರುವಾಸಿಯಾದ ಅಂಗಡಿ
ನ್ಯಾಯವಾದ ಬೆಲೆ ನಾಣ್ಯವಾದ ಮಾಲು
ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

ದೇವದಾಸ್ ಗಾಂಧಿಯವರು ರಷ್ಯದಲ್ಲಿ ರಾಯಭಾರಿಯೇ

ಮಹಾತ್ಮರ ಪುತ್ರರೂ, ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ಸಂಪಾದಕರೂ ಆದ ದೇವದಾಸ್ ಗಾಂಧಿಯವರನ್ನು ರಷ್ಯಕ್ಕೆ ಭಾರತದ ರಾಯಭಾರಿಯಾಗಿ ನೇಮಿಸಲಾಗುವುದೆಂದೂ, ಶ್ರೀಮತಿ ವಿಜಯಲಕ್ಷ್ಮಿ [illegible] ಅಮೇರಿಕದ ರಾಯಭಾರಿಯಾಗಿ ಹೋಗುವರೆಂದೂ ಹೇಳಲಾಗಿದೆ.

ವಿದ್ಯಾರ್ಥಿ ಸಂಘದ ಸತ್ಕಾರ [illegible]

ರಾಜಧಾನಿಯ ವಿದ್ಯಾರ್ಥಿ ಸಂಘದ [illegible] ಅಲ್ಲಿನ ಉಪಾಧ್ಯಾಯರುಗಳಿಗೆ ಒಂದು ಸತ್ಕಾರಕೂಟವನ್ನು ಮೊನ್ನೆ ಸಂಜೆ [illegible] ಯ್ಯನವರ ಹೈಸ್ಕೂಲಿನಲ್ಲಿ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. [illegible] ಸಂಗೀತ, ವಿವಿಧ ವೇಷಗಳ ಸ್ಪರ್ಧೆ [illegible] ಬಹುಮಾನ ವಿನಿಯೋಗಗಳಾದನಂತರ ಅಧ್ಯಕ್ಷರು ಭಾಷಣಮಾಡಿ, ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಸಮಾಜಸೇವೆ ಮಾಡಬೇಕೆಂದೂ, ಹಳ್ಳಿಯ ಶಾಲೆಗಳು ಬರಿಯ ವಿದ್ಯಾ ಸಂಸ್ಥೆಗಳಾಗಿರದೆ ಗ್ರಾಮದ [illegible] ಚಟುವಟಿಕೆಗಳ ಕೇಂದ್ರವಾಗಿರಬೇಕೆಂದೂ ತಿಳಿಸಿದರು. ನಾಟಕ ಪ್ರದರ್ಶನವಾದನಂತರ, ಸಮಾರಂಭವು ಮುಕ್ತಾಯವಾಯಿತು.

ಅರಮನೆ ಇಲಾಖೆಗಳ
ಅನೇಕ ತರವಾದ ಸಾಮಾನುಗಳು
ತಾ॥ 2-3-49ನೇ ಬುಧವಾರ
ಲಾಗಾಯ್ತು ಪ್ರತಿ ದಿನವೂ ಬೆಳಿಗ್ಗೆ [illegible]
ಘಂಟೆಗೆ
ಹರಾಜು
ಜಗನ್ಮೋಹನ ಬಂಗ್ಲೆ
ಆವರಣದಲ್ಲಿ
ವಿವರಗಳಿಗೆ ಹಸ್ತಪತ್ರಿಕೆ ನೋಡಿ
ಪಿಟಿ ಆಕ್ಷನಿಯರಿಂಗ್ [illegible]
ಜಗನ್ಮೋಹನ ಬಂಗ್ಲೆ ಬಳಿ, ಮೈಸೂ[illegible]

ಎಸ್. ಎಸ್. ಪಂಡಿತ್ ಅಂ[illegible]
ಸನ್ಸ್‌ರವರ
ಯೂನಿವರ್ಸಲ್ ಪೆಯಿನ್ ಬಾಮ್
ನೋವು, ಕೀಲು ನೋವು [illegible]
ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ [illegible]
ಮಹಾ ಸುಗಂಧರಾಜ ತೈಲ—)
,, ಚಂದನಾದಿ ತೈಲ—)
,, ಭೃಂಗಾಮಲಕ ತೈಲ—)
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಜನ ತೈಲಗಳು
ಮಹಾಕೇತಕೀ ತೈಲ— [illegible] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [illegible] ಯೋಗಿಸಬಹುದಾದ ಉತ್ತಮ [illegible]
ಪ್ರೇ [illegible] ಸೀಸೆ [illegible]
ಪಂಚಾಮೃತ ಮಲೇರಿಯಾ [illegible]
[illegible] ಸಿದ್ಧ ಸಂಜೀವಿನ
ಮೈಸೂರು ಆಯುರ್ವೇದಿಕ [illegible]
[illegible] ಬಿಲ್ಡಿಂಗ್
ಮೈಸೂರು.

Edited, printed and published [illegible] V. R. Nagarajan at the Sadhvi Press, [illegible] Mysore

ಫೋನ್ ನಂ: 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಬುಧವಾರ ೨-೩-೧೯೪೯ [ಸಂಚಿಕೆ ೧೯೯

ಶ್ರೀಮತಿ ಸರೋಜಿನಿ ದೇವಿಯವರ ನಿಧನ

ಭಾರತದ ಕವಿ ಕೋಕಿಲೆಯ ನಿಧನ

ಸಂಯುಕ್ತ ಪ್ರಾಂತ್ಯದ ಗವರ್ನರರೂ, ಭಾರತದ ಕವಿ ಕೋಕಿಲೆಯೆಂದು ಸುಪ್ರಸಿದ್ಧರೂ ಕಾಂಗ್ರೆಸ್ ಮಹಾ ಸಭೆಯ ಮಾಜಿ ಅಧ್ಯಕ್ಷರೂ ಆದ ಶ್ರೀಮತಿ ಸರೋಜಿನಿ ದೇವಿಯವರು ಈ ದಿನ ಬೆಳಗಿನ ಜಾವ ೩-೩೦ ಗಂಟೆಯಲ್ಲಿ ಸ್ವರ್ಗಸ್ಥರಾದರೆಂಬ ವಿಷಾದ ವಾರ್ತೆ ಬಂದಿರುತ್ತದೆ. ಇವರಿಗೆ ಕೆಲವು ದಿನಗಳಿಂದಲೂ ದೇಹಾಲಸ್ಯವಾಗಿತ್ತು. ಇವರಿಗೆ ೭೦ ವರ್ಷ ವಯಸ್ಸಾಗಿತ್ತು. ಇವರ ಪತಿ ಮೇಜರ್ ಡಾ|| ಎಂ. ಜಿ. ನಾಯುಡು ರವರು ಹೈದರಾಬಾದಿನಲ್ಲಿ ಸುಪ್ರಸಿದ್ಧ ವೈದ್ಯರಾಗಿರುತ್ತಾರೆ. ಅವರಿಗೆ ಇಬ್ಬರು ಪುತ್ರಿಯರೂ, ಒಬ್ಬರು ಪುತ್ರರೂ ಇದ್ದಾರೆ.

ಬಂಗಾಳದ ಕವಿ ಶ್ರೇಷ್ಠರಾದ ಶ್ರೀ ಅಘೋರನಾಥ ಚಟ್ಟೋಪಾಧ್ಯಾಯರು ಸರೋಜಿನಿ ದೇವಿಯವರ ತಂದೆಯವರು. ಸುಪ್ರಸಿದ್ಧ ಕವಿ ಹರೀಂದ್ರ ನಾಥ ಚಟ್ಟೋಪಾಧ್ಯಾಯರು ಇವರ ತಮ್ಮಂದಿರು. ಬಾಲ್ಯದಿಂದಲೇ ತನ್ನ ಕವಿತಾ ಪ್ರೌಢಿಮೆಯನ್ನು ಪ್ರದರ್ಶಿಸಿ ಭಾರತದ ಕವಿ ಕೋಕಿಲೆಯೆಂಬ ಹೆಸರನ್ನು ಶ್ರೀಮತಿಯವರು ಪಡೆದರು. ...ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅಮೃತವಾದ ಕವನಗಳನ್ನು ರಚಿಸಿ, ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿದ್ವಾಂಸರುಗಳ ಪ್ರಶಂಸೆಗೆ ಪಾತ್ರರಾಗಿದ್ದರು. ಅನೇಕ ಸಾರಿ ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರವಾಸ ಮಾಡಿ, ಭಾರತದ ಸಂಸ್ಕೃತಿಯನ್ನು ಪ್ರಚಾರ ಮಾಡಿದವರು.

ಗೋಪಾಲ ಕೃಷ್ಣ ಗೋಖಲೆಯವರ ಕಾಲದಿಂದಲೂ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿ ನಾಡಿನ ಸ್ವಾತಂತ್ರ್ಯಕ್ಕೆ ದುಡಿದವರು. ಹಿಂದೂ ಮುಸ್ಲಿಂ ಐಕ್ಯವೇ ಇವರ ಜೀವನದ ಮೂಲ ಮಂತ್ರ. ಗಾಂಧೀಜಿ ಮಹಾತ್ಮರ ಅನುಯಾಯಿಗಳಾಗಿ ...ಯ ವಾಸವನ್ನೂ ಅನುಭವಿಸಿದ್ದರು.

೧೯೨೫ ರಲ್ಲಿ ಕಾನ್ಪುರದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದ ಅಧ್ಯಕ್ಷರಾಗಿದ್ದರು.

ಇವರು ಮೈಸೂರಿಗೂ ಹಲವು ಬಾರಿ ಭೇಟಿಕೊಟ್ಟು ರಾಜ ಅತಿಥಿಗಳಾಗಿದ್ದರು. ...ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ...ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸ್ವತಂತ್ರ ಭಾರತದಲ್ಲಿ ಪ್ರಥಮ ಮಹಿಳಾ ಗವರ್ನರಾಗುವ ಸುಯೋಗವು ಇವರದಾಗಿತ್ತು. ತಮ್ಮ ಕರ್ತವ್ಯವನ್ನು ...ದಿಂದಲೂ, ಚಾತುರ್ಯದಿಂದಲೂ ನಿರ್ವಹಿಸಿ ಯಶಸ್ಸನ್ನು ಪಡೆದಿರುತ್ತಾರೆ.

ಈ ವೀರ ರಮಣಿಯ ನಿಧನದಿಂದ ದೇಶಕ್ಕೆ ಉಂಟಾಗಿರುವ ನಷ್ಟವು ಅಪಾರ. ಇವರ ಆದರ್ಶವನ್ನು ನಮ್ಮೆಲ್ಲರೂ ಅನುಸರಿಸಲೆಂದು ಹಾರೈಸಿ ... ಆತ್ಮಕ್ಕೆ ಶಾಶ್ವತ ಶಾಂತಿಯನ್ನು ಕರುಣಿಸುವಂತೆ ಭಗವಂತನನ್ನು ...

ಪೋಲೀಸ್ ಜಮೇದಾರರ ಕೊಲೆ

ಸಿರಾದಲ್ಲಿ ಕೋಮುವಾರು ಗಲಭೆ

ಸ್ವಂ. ಸು. ಪ್ರೋ.] ಬೆಂಗಳೂರು, ೨.

ತುಮಕೂರು ಜಿಲ್ಲಾ ಸಿರಾದಲ್ಲಿ ನಿನ್ನೆ ಕೋಮುವಾರು ಗಲಭೆ ನಡೆದು ಒಬ್ಬ ಪೋಲೀಸ್ ಜಮೇದಾರರು ಕೊಲೆ ಮಾಡಲ್ಪಟ್ಟರೆಂದೂ, ಚೂರಿಯ ಇರಿತದಿಂದ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರೆಂದೂ, ಇನ್ನಿಬ್ಬರು ಮರಣ ಹೊಂದಿರುವರೆಂದೂ ವರದಿ ಬಂದಿದೆ. ಗಲಭೆಯ ಕಾರಣ ಗೊತ್ತಾಗಿಲ್ಲ. ಸುದ್ದಿ ಬಂದೊಡನೆ ಪೋಲೀಸ್ ಡಿ. ಐ. ಜಿ. ಶ್ರೀ ಸೋಮಪ್ಪನವರು ತಕ್ಕ ಸಿಬ್ಬಂದಿಯೊಡನೆ ಸ್ಥಳಕ್ಕೆ ತೆರಳಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಈಗ ಊರು ಶಾಂತವಾಗಿರುವುದಾಗಿ ಹೇಳಲಾಗಿದೆ.

ಇಡ್ಲಿ, ದೋಸೆಗಳನ್ನು ಸಂಪೂರ್ಣವಾಗಿ ನಿಷೇಧಿಸಲು ಸಲಹೆ

ಕೇಂದ್ರ ಆಹಾರ ಸಲಹಾ ಸಮಿತಿಯ ಸಭೆಯು ಶ್ರೀ ಕೆ. ಗುರುದತ್ತ ರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆದು, ... ತರ ಪ್ರದೇಶಗಳಲ್ಲಿ ಕೂಡಲೇ ... ಪೋಗಳನ್ನು ತೆರೆಯಬೇಕೆಂದೂ, ಹೊಟೇಲುಗಳಲ್ಲಿ ಯಾವ ಪದಾರ್ಥಗಳಲ್ಲಾದರೂ ಇಡ್ಲಿ ಮತ್ತು ದೋಸೆಗಳನ್ನು ತಯಾರಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದೂ ಸರ್ಕಾರಕ್ಕೆ ಶಿಫಾರಸು ಮಾಡಲಾಯಿತು.

ಹತ್ತಿ, ನೆಲಗಡಲೆ, ತಂಬಾಕು ಮೊದಲಾದ ಲಾಭದಾಯಕ ಬೆಳೆಗಳನ್ನು ಹತೋಟಿಯಲ್ಲಿರಿಸಿ, ಆಹಾರ ಪದಾರ್ಥಗಳನ್ನೇ ಹೆಚ್ಚಾಗಿ ಬೆಳೆಯುವಂತೆ ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಲಾಯಿತು. ಸಂಸ್ಥಾನದಲ್ಲಿ ಇದುವರೆವಿಗೆ ೧೧ ಲಕ್ಷದ ಸಾವಿರ ಪಲ್ಲ ಭತ್ತ ವಸೂಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು.

ಹೈದರಾಬಾದ್ ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಹೈದರಾಬಾದ್ ಕಾಂಗ್ರೆಸ್ಸಿನಲ್ಲಿದ್ದ ಭಿನ್ನಾಭಿಪ್ರಾಯಗಳು ಹೋಗಿ ಅದರ ಅಧ್ಯಕ್ಷರಾದ ಶ್ರೀ ಸ್ವಾಮಿ ರಮಾನಂದ ತೀರ್ಥರವರು ನೂತನ ಕಾರ್ಯಕಾರಿ ಸಮಿತಿಯನ್ನು ರಚಿಸಿರುತ್ತಾರೆ ... ನರನ್ನು ಸಮಿತಿಗೆ ...

ಈ ದಿನ ಸಾರ್ವತ್ರಿಕ ರಜಾ

ಸ್ವಂ. ಸು. ಪ್ರೋ.] ಬೆಂಗಳೂರು, ೨.

ಸಂಯುಕ್ತ ಪ್ರಾಂತ್ಯದ ಗೌರ್ನರ್ ಶ್ರೀಮತಿ ಸರೋಜಿನಿ ದೇವಿಯವರ ಗೌರವಾರ್ಥವಾಗಿ ಈ ದಿನ ಸಂಸ್ಥಾನದ ಎಲ್ಲಾ ಶಾಲಾ, ಕೋರ್ಟು ಮತ್ತು ಕಛೇರಿಗಳಿಗೂ ಸರ್ಕಾರದವರು ಸಾರ್ವಜನಿಕರ ರಜಾ ಮಂಜೂರು ಮಾಡಿರುತ್ತಾರೆ.

ಎಲ್ಲಾ ಸರ್ಕಾರಿ ಕಟ್ಟಡಗಳ ಮೇಲೂ ಧ್ವಜಗಳನ್ನು ಅರ್ಧ ಮಟ್ಟಕ್ಕೆ ಹಾರಿಸಬೇಕೆಂದೂ ಆಜ್ಞೆಯಾಗಿದೆ.

○ ಭಾರತ ಸರ್ಕಾರದ ಸಂಸ್ಥಾನ ಶಾಖಾ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್ ರವರು ಇಲ್ಲಿಗೆ ದಿನ ಈ ಬಂದರು. ಅವರು ಮೂರು ದಿವಸ ಇಲ್ಲಿ ಬಿಡಾರ ಮಾಡುವರು.

○ ಒಬ್ಬಾರದ ಚಿನ್ನದಗಣಿ ಕೆಲಸಕ್ಕೆ ನೀರು ಸರಬರಾಜು ಮಾಡಲು ಅಣೆಕಟ್ಟು ಕಟ್ಟುವುದಕ್ಕಾಗಿ ಸರ್ಕಾರದ ಆಜ್ಞೆಯಾಗಿರುತ್ತದೆ.

○ ... ಶ್ರೀ ಎ. ... ನಿವೃತ್ತರಾಗುವವರೆಗೆ ... ದಿಂದ ... ರಜಾ ಕೊಡಲಾಗಿದೆ.

● ... ಯ ಸಿವಿಲ್ ಸರ್ವಿಸ್ ಸಂಸ್ಥೆಯಲ್ಲಿ ಭಾಗವಹಿಸಲು ವಿಮಾನದ ... ಪ್ರಯಾಣ ಬೆಳೆಸುವರು. ಇದಕ್ಕಾಗಿ ಅವರಿಗೆ ೧|| ತಿಂಗಳು ರಜಾ ಕೊಡಲಾಗಿದೆ.

● ಜಯ ಚಾಮರಾಜೇಂದ್ರ ವೃತ್ತಿ ಕಲಾ ಶಾಲೆಯ ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಇಂಜನಿಯರಿಂಗ್ ಡಿಪ್ಲೋಮಾಗಳನ್ನು ಇಂಜನಿಯರಿಂಗ್ ಸ್ಕೂಲಿನ ಅದೇ ಡಿಪ್ಲೋಮಾಗಳಿಗೆ ಸಮಾನವಾಗಿರುವಂತೆ ಪರಿಗಣಿಸತಕ್ಕದ್ದೆಂದು ಸರ್ಕಾರದ ಆಜ್ಞೆಯಾಗಿದೆ.

ಫ್ರಾನ್ಸಿನಲ್ಲಿ ಕಮ್ಯೂನಿಸ್ಟರ ಗೂಢಚಾರರು

ಫ್ರಾನ್ಸಿನಲ್ಲಿ ಕಮ್ಯೂನಿಸ್ಟ್ ಗೂಢಚಾರರ ಚಟುವಟಿಕೆಗಳನ್ನು ಪೋಲೀಸರು ಪತ್ತೆ ಹಚ್ಚಿ, ಅನೇಕರನ್ನು ದಸ್ತಗಿರಿ ಮಾಡಿರುತ್ತಾರೆ. ದೇಶದ ರಕ್ಷಣೆಗೆ ಭಂಗ ತರುವುದು ಮತ್ತು ರಕ್ಷಣೆಯ ರಹಸ್ಯಗಳನ್ನು ಪರದೇಶದವರಿಗೆ ತಿಳಿಸುವುದು ಇವರ ಮು... ... ನಡೆದಿದ್ದರೇ ...

ನಾಳೆ ಸಂತಾಪ ಸೂಚಕ ಸಭೆ

ಮೈಸೂರು ೨.

ಸಂಯುಕ್ತ ಪ್ರಾಂತ್ಯದ ಗೌರ್ನರರಾದ ಶ್ರೀಮತಿ ಸರೋಜಿನಿ ದೇವಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಲು ನಾಳೆ ಸಂಜೆ ೫-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆಯು ನಡೆಯುವುದು.

ರೈತರಿಗೆ ಹೆಚ್ಚು ರಿಯಾಯಿತಿ

ರಿಯಾಯಿತಿ ದೊರೆತಿರುವ ರೈತರು ತಮ್ಮ ಬಳಿ ಇರುವ ಧಾನ್ಯವನ್ನು ಕೊಡುವುದಾದರೆ ಅವರುಗಳಿಗೆ ಈಗ ನಿಗದಿ ಮಾಡಿರುವ ಬೆಲೆಗಿಂತ ೨ ರೂ. ಹೆಚ್ಚು ಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಆಯುರ್ವೇದ, ಯುನಾನಿ ಕಾಲೇಜ್ ವಿದ್ಯಾರ್ಥಿಗಳ ಮುಷ್ಕರ

ಕಳೆದ ತಿಂಗಳು ೨೧ ನೇ ತಾ|| ನಿಂದ ಹೂಡಿರುವ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರವು ಶಾಂತ ರೀತಿಯಿಂದ ಮುಂದುವರಿಯುತ್ತಿದೆ.

ನೀರಿನ ತೊಂದರೆ

ಚಾಮರಾಜ ಮೊಹಲ್ಲಾ, ಕೋರ್ಟು ಹಿಂಭಾಗದಲ್ಲಿ ೧೫-೨೦ ದಿವಸಗಳಿಂದ ನೀರಿನ ತೊಂದರೆಯು ವಿಶೇಷವಾಗಿದೆ. ಬೆಳಗಿನ ಜಾವ ೪ರಿಂದ ೬ ಗಂಟೆ ವರೆಗೆ ಮಾತ್ರ ನೀರು ಅತಿ ಸಣ್ಣಗೆ ಬರುತ್ತಿದೆ. ಮೊಹಲ್ಲಾ ನಿವಾಸಿಗಳಿಗೆ ಇದರಿಂದ ತುಂಬಾ ಕಷ್ಟವಾಗಿರುತ್ತದೆ. ಇದನ್ನು ಕೂಡಲೇ ಪರಿಹರಿಸಬೇಕೆಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿರುತ್ತಾರೆ.

ರಾಜಾ ಗೋಪೀಚಂದ್

ಸುಪ್ರಸಿದ್ಧ ನಾಟಕ ಕರ್ತರೂ, ಅಭಿನಯ ಕಾರರೂ ಆದ ಶ್ರೀ ಹುಣಸೂರು ಕೃಷ್ಣಮೂರ್ತಿಯವರು ರಚಿಸಿರುವ ರಾಜಾ ಗೋಪೀ ಚಂದ್ ಎಂಬ ನಾಟಕ ಗ್ರಂಥದ ಪ್ರತಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಗುಬ್ಬಿ ಕಂಪೆನಿಯ ವಜ್ರ ಮಹೋತ್ಸವಕ್ಕಾಗಿ ರಂಗ ಭೂಮಿಯ ಮೇಲೆ ಈ ನಾಟಕವನ್ನು ತರಲಾಯಿತು. ಸಾವಿರಾರು ಜನರು ನಾಟಕವನ್ನು ನೋಡಿ ಪ್ರಶಂಸಿಸಿರುವರು. ಪುಸ್ತಕದ ಬೆಲೆ ರೂ. ೧-೪-೦

ಕೊಲ್ಲಾಪುರದ ಮಹಾರಾಜರಿಗೆ ೧೦ ಲಕ್ಷ ರೂ. ರಾಜಧನ

ಕೊಲ್ಲಾಪುರ ಸಂಸ್ಥಾನವು ನಿನ್ನೆಯಿಂದ ಬೊಂಬಾಯಿ ಪ್ರಾಂತ್ಯದಲ್ಲಿ ಐಕ್ಯವಾಯಿತಷ್ಟೆ. ಅಲ್ಲಿನ ಮಹಾರಾಜರಿಗೆ ೧೦ ಲಕ್ಷ ರೂ. ರಾಜ ಧನವನ್ನೂ ಮತ್ತು ಸ್ವಲ್ಪ ಖಾಸಗೀ ಜಮೀನು ಮತ್ತು ಕೆಲವು ಅರಮನೆಗಳನ್ನು ಕೊಡುವಂತ ನಿರ್ಧರಿಸಲಾಗಿದೆ.

ಚಂಡಮಾರುತದಿಂದ ಹಡಗು ಮುಳುಗಿತು

ಬ್ರಿಟನ್ ಮತ್ತು ಪಶ್ಚಿಮ ಯೂರೋಪಿನಲ್ಲಿ ಪ್ರಚಂಡ ಬಿರುಗಾಳಿ ... ನಿನ್ನೆ ದಿನ ... ಹಡಗು ... ಪತ್ರಿಕೆಗಳು ... ವರದಿ ...

ಕಲ್ಕತ್ತೆಯಲ್ಲಿ ೫೦ ಜನ ದರೋಡೆಗಾರರ ದಸ್ತಗಿರಿ

ಕಲ್ಕತ್ತೆಯ ದಂಡು ವಿಮಾನ ನಿಲ್ದಾಣ ಪತ್ತಿರವಿರುವ ದ ಕ್ಷಿಣದ ತಿದರೋ ದರೋಡೆಗಾರರ ಹಾವಳಿ ಸಂಬಂಧದಲ್ಲಿ ೫೦ ಜನರನ್ನು ಪೋಲೀಸರು ದಸ್ತಗಿರಿ ಮಾಡಿ, ಆ ಜನರಿಂದ ಮದ್ದುಗುಂಡು ಮತ್ತು ಇತರ ಶಸ್ತ್ರಗಳನ್ನು ವಶಪಡಿಸಿಕೊಂಡಿರುತ್ತಾರೆ

ಜನವರಿ ೩೦ ನೇ ತಾ|| ಗೋ ದಿನಾಚರಣೆ

ಭಾರತದಲ್ಲಿ ಗೋ ಸಂಪತ್ತನ್ನು ಹೆಚ್ಚಿಸಲು ಪ್ರತಿ ವರ್ಷವೂ ದನಗಳ ಸ್ಪರ್ಧೆಯನ್ನು ನಡೆಸಬೇಕಾದುದು ಆಗತ್ಯವೆಂದು ಕೇಂದ್ರ ಸರ್ಕಾರದ ಆಹಾರ ಸಚಿವರಾದ ಶ್ರೀ ಜೈರಾಂದಾಸ್ ದೌಲತ್‌ರಾಂರವರು ತಿಳಿಸಿರುತ್ತಾರೆ ಪ್ರತಿ ವರ್ಷವೂ ಜನವರಿ ೩೦ ನೇ ತಾ|| ಅನ್ನು ಪಶುಪ್ರದರ್ಶನಾ ದಿನವೆಂದು ಪರಿಗಣಿಸ ಬೇಕೆಂದೂ, ೨೦ ಹಳ್ಳಿಗಳಿಗೊಂದು ಪ್ರದರ್ಶನವನ್ನು ಪ್ರತಿ ವರ್ಷ ಮಾಡಿಸಬೇಕೆಂದೂ ಅವರು ಸಲಹೆ ಮಾಡಿರುತ್ತಾರೆ

ಕೋಮುವಾರು ರಾಜಕೀಯ ಗ್ರಂಥಗಳಿಗೆ ನಿಷೇಧ

ಕೋಮು ವಾರು ರಾಜಕೀಯವನ್ನೊಳಗೊಂಡ ಗ್ರಂಥಗಳನ್ನು ಮಾಧ್ಯಮಿಕ ಶಾಲೆಗಳ ಪುಸ್ತಕ ಭಂಡಾರಗಳಲ್ಲಿ ಇಡಕೂಡದೆಂದು ಮ ದ್ರಾಸ್ ಸರ್ಕಾರದವರು ಶಿಕ್ಷಾ ಇಲಾಖೆಗೆ ಸೂಚನೆ ಕೊಟ್ಟಿರುತ್ತಾರೆ

ಮೈಸೂರಿಗೆ ಕಾಕಾ ಕಾಲೇಲ್‌ಕರ್‌ರವರ ಭೇಟಿ

ಮ ಹಾತ್ಮಾ ಗಾಂಧಿಜಿಯವರ ಅನುಯಾಯಿಗಳಾದ ಶ್ರೀ ಕಾಕಾ ಕಾಲೇಲ್ಕರ್‌ರವರು ಸರ್ವೋದಯ ಸಮಾಜದ ಕಾರ್ಯಕ್ರಮಗಳ ಸಂಬಂಧದಲ್ಲಿ ಮೈಸೂರು ಮತ್ತು ಹಳ್ಳಿಗೆ ಈ ತಿಂಗಳಲ್ಲಿ ಭೇಟಿ ಕೊಡುವರೆಂದು ಹೇಳಲಾಗಿದೆ

ಚರ್ಚಿಲರ ಮೇಲೆ ಬಾಂಬುಗಳು

ಬ್ರಿಟನ್ನಿನ ಮಾಜಿ ಪ್ರಧಾನಿ ಮಿ|| ಚರ್ಚಿಲರು ಬ್ರಸ್ಸೆಲ್ಸ್‌ನಲ್ಲಿ ಯೂರೋಪಿನ ಐಕ್ಯತೆ ವಿಚಾರವಾಗಿ ಭಾಷಣ ಮಾಡ ಬೇಕಾಗಿದ್ದಾಗ ಕಮ್ಯೂನಿಸ್ಟರ ಗುಂಪು ಅವರ ಮೇಲೆ ಬಾಂಬುಗಳನ್ನು ಎಸೆದು, "ಚರ್ಚಿಲರಿಗೆ ಧಿಕ್ಕಾರ, ಹಿಟ್ಲರನ ಅವತಾರವಾದ ಚರ್ಚಿಲ್,, ಎಂಬ ಘೋಷಣೆಯನ್ನು ಮಾಡಿ, ಹಸ್ತಪತ್ರಿಕೆಗಳನ್ನೂ ಹಂಚಿ ಗಲಭೆ ನಡೆಸಿದರೆಂದು ವರದಿಯಾಗಿದೆ

ಭಾರತದಲ್ಲಿ ಬಣ್ಣದ ಹತ್ತಿ ಬೆಳೆಯಲು ಯತ್ನ

ರಷ್ಯದಲ್ಲಿರುವಂತೆ ಭಾರತದಲ್ಲೂ ಬಣ್ಣದ ಹತ್ತಿಯನ್ನು ಬೆಳೆಯಲು ಪ್ರಯತ್ನ ನಡೆಸಲಾಗುತ್ತಿದೆಯೆಂದು ಕೇಂದ್ರ ಶಾಸನ ಸಭೆಯಲ್ಲಿ ಆಹಾರ ಸಚಿವರು ತಿಳಿಸಿರುತ್ತಾರೆ

ಪುರಂದರ ದಾಸರ ಪುಣ್ಯ ದಿನ

ರಾಜಧಾನಿಯ ದಿವಾನ್ಸ್ ರಸ್ತೆಯಲ್ಲಿರುವ ಮಹಿಳಾ ಸದನದಲ್ಲಿ ಕಳೆದ ಬಾನುವಾರ ಪುರಂದರ ದಾಸರ ಪುಣ್ಯ ದಿನಾಚರಣೆಯು ಶ್ರೀಮತಿ ವೈ ಕಮಲಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ ದಾಸರ ಪದ್ಯಗಳ ಪಠಣಗಳಾದನಂತರ ಶ್ರೀ ಎಸ್ ಎಸ್ ವೆಂಕಟಸುಬ್ಬ ರಾಯರು ಕನ್ನಡ ಸಂಸ್ಕೃತಿಯಲ್ಲಿ ದಾಸರ ಸ್ಥಾನ–ಮಾನ ವಿಷಯವಾಗಿ ಉಪನ್ಯಾಸ ಮಾಡಿದರು ದಾಸರ ಪದಗಳ ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು ಶ್ರೀ ಬಿ ಎಂ ಕೃಷ್ಣರವರಿಂದ ಕೊಡಲ್ಪಟ್ಟ ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನು ಶ್ರೀಮತಿ ಎಸ್ ವಿ ರಾಜೇಶ್ವರಿ ಮತ್ತು ಎ ಆರ್. ಸುಭದ್ರಾರವರಿಗೂ, ಉಳಿದ ಮೂರು ಬಹುಮಾನಗಳನ್ನು ಶ್ರೀಮತಿ ಸಿ ಎಸ್. ಶ್ರೀರಂಗಮ್ಮ, ಕೆ ಎಂ ಮಹಾಲಕ್ಷಮ್ಮ ಮತ್ತು ಎಸ್. ಡಿ. ಸುಂದರವಲ್ಲಿ ರವರಿಗೂ ಕೊಡಲಾಯಿತು

ತಾಯಿ ಕೊಲೆಗೆ ಮಗನ ದಸ್ತಗಿರಿ

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಲಿಗೆರೆಯ ರೈತ ಯಜ್ಞನಾರಾಯಣ ಭಟ್ಟ ಎಂಬುವನು ತನ್ನ ತಾಯಿಯನ್ನು ಕುಡಗೋಲಿನಿಂದ ಹೊಡೆದು ಕೊಲೆ ಮಾಡಿದನೆಂದು ಆಪಾದಿಸಿ ಪೋಲೀಸರು ಅವನನ್ನು ದಸ್ತಗಿರಿ ಮಾಡಿರುತ್ತಾರೆ

ಪ್ರತಿ ಪ್ರಾಂತ್ಯಕ್ಕೂ ಒಂದು ವಿಮಾನ ಶಿಕ್ಷಣ ಶಾಲೆ

ಭಾರತದ ಪ್ರತಿಯೊಂದು ಪ್ರಾಂತ್ಯ ಮತ್ತು ಸಂಸ್ಥಾನಗಳ ರಾಜಧಾನಿಯಲ್ಲೂ ಒಂದೊಂದು ವಿಮಾನ ಶಿಕ್ಷಣ ಶಾಲೆಯನ್ನು ಸ್ಥಾಪಿಸಬೇಕೆಂದು ಭಾರತ ಸರ್ಕಾರವು ಆಲೋಚಿಸುತ್ತಿರುವುದಾಗಿ ಕೇಂದ್ರ ಶಾಸನ ಸಭೆಯಲ್ಲಿ ಸಂಚಾರದ ಸಚಿವರು ತಿಳಿಸಿರುತ್ತಾರೆ

ಗ್ರಾಮಗಳಲ್ಲಿ ೨,೦೦೦ ಅಂಚೆ ಕಛೇರಿ

ಗ್ರಾಮಾಂತರಗಳಲ್ಲಿ ೨,೦೦೦ ಅಂಚೆ ಕಛೇರಿಗಳನ್ನು ಈ ವರ್ಷ ತೆರೆಯಲಾಗುವುದೆಂದು ಕೇಂದ್ರ ಶಾಸನ ಸಭೆಯಲ್ಲಿ ಭಾರತ ಸರ್ಕಾರದ ಸಂಚಾರ ಸಚಿವರು ತಿಳಿಸಿರುತ್ತಾರೆ

೧೫ ಸಾವಿರ ಮುಂಬಯಿ ಬಂದರು ಕೆಲಸಗಾರರ ಮುಷ್ಕರ

ಬೊಂಬಾಯಿ ಬಂದರಿನ ಕಾರ್ಮಿಕ ಸಂಘದ ಕಾರ್ಯದರ್ಶಿ ಶ್ರೀ ಪಿ ಡಿಮೆಲ್ಲೊರವರನ್ನು ದಸ್ತಗಿರಿಮಾಡಿರುವುದನ್ನು ಮತ್ತು ಅವರಿಗೆ ಕೊಡಲಾಗುತ್ತಿದ್ದ ದಿನಸಿ ಭತ್ಯೆ ನ್ಯಾಯ ಕೇಳುವರನ್ನು ರದ್ದುಗೊಳಿಸಿದ್ದುದನ್ನು ಪ್ರತಿಭಟಿಸಲು ಹದಿನೈದು ಸಾವಿರ ಜನ ಬಂದರು ಕೆಲಸಗಾರರು ನಿನ್ನೆಯಿಂದ ಮುಷ್ಕರ ಹೂಡಿರುತ್ತಾರೆ

ಶ್ರೀ ಗಾಯತ್ರೀ ಟಾಕೀಸ್

ತಾ|| 1-3-49 ರಿಂದ

ಪ್ರತಿ ದಿನ 3 ಪ್ರದರ್ಶನಗಳು

ಕಳೆದ ಮಹಾ ಯುದ್ಧದಲ್ಲಿ ವಿಶ್ವವನ್ನೇ ವಿಕಾರ ಗೊಳಿಸಬೇಕೆಂದಿದ್ದ ಜರ್ಮನರ ರಹಸ್ಯವನ್ನು ಬಹಿರಂಗ ಪಡಿಸಿದ ಮಹಾವ್ಯಕ್ತಿ

ಯ ಅತ್ಯ ಕಥೆ

20th 13 ರೂ ಮ್ಯಾಡಲೀನ್

ಪಾತ್ರ–ಜೇಮ್ಸ್ ಕಾಗ್ನೆ, ಎನಬೆಲ್ಲಿ ಮತ್ತು ರಿಚರ್ಡ್ ಕಾನಾಟ್

ದಳವಾಯಿ ಹೈಸ್ಕೂಲ್ ಸಂಘದ ವಾರ್ಷಿಕೋತ್ಸವ

ಮೈಸೂರು,

ದಳವಾಯಿ ಹೈಸ್ಕೂಲ್ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನಿನ್ನೆ ಸಂಜೆ ಜಿಲ್ಲಾಬೋರ್ಡ್ ಅಧ್ಯಕ್ಷರಾದ ಶ್ರೀ ಎಚ್. ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು

ಸಂಘದ ಅಧ್ಯಕ್ಷರಾದ ಶ್ರೀ ಬಿ ವಿ ಪುಟ್ಟಜುಂಡಯ್ಯನವರಿಂದ ಸ್ವಾಗತ ಭಾಷಣವಾದನಂತರ ಕಾರ್ಯದರ್ಶಿಗಳು ವರದಿಯನ್ನು ಓದಿದರು ಅನಂತರ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿ ಭಾಷಣ ಮಾಡಿದರು.

ಈಗಿನ ವಿದ್ಯಾಭ್ಯಾಸ ಪದ್ಧತಿಯು ಬದಲಾವಣೆಯಾಗಬೇಕು, ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಈಗ ಸರ್ಕಾರದವರು ಕೊಡುತ್ತಿರುವ ಉತ್ತೇಜನ ಸಾಲದು, ದೇಶದಲ್ಲಿ ವಿದ್ಯಾ ಪ್ರಚಾರ ಅಭಿವೃದ್ಧಿಯಾಗಬೇಕಾದರೆ ಖಾಸಗೀ ಸಂಸ್ಥೆಗಳು ಹೆಚ್ಚಾಗಿ, ಅವುಗಳಿಗೆ ವಿಶೇಷ ಪ್ರೋತ್ಸಾಹ ದೊರೆಯಬೇಕು ಸರ್ಕಾರದವರು, ಪೋಷಕರು ಮತ್ತು ಉಪಾಧ್ಯಾಯರುಗಳು ಎಲ್ಲರೂ ಸೇರಿ ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯೆಯನ್ನು ಕೊಡಲು ಪ್ರಯತ್ನಿಸಬೇಕು– ಎಂದು ಅವರು ಹೇಳಿದರು.

ನೃತ್ಯ ಮತ್ತು ನಾಟಕಗಳ ಪ್ರದರ್ಶನ ನಡೆದನಂತರ ಸಮಾರಂಭವು ಮುಕ್ತಾಯವಾಯಿತು.

ಪಾಕಿಸ್ತಾನದಲ್ಲಿ ಭಾರತದ ಹೈ ಕಮೀಷನರ್

ಸಂಯುಕ್ತ ಪ್ರಾಂತ್ಯ ಶಾಸನ ಸಭೆಯ ಅಧ್ಯಕ್ಷರಾದ ಡಾ|| ಸೀತಾರಾಂ ರವರು ಪಾಕೀಸ್ತಾನದಲ್ಲಿ ಭಾರತದ ಹೈ ಕಮೀಷನರನ್ನಾಗಿ ನೇಮಿಸಲ್ಪಟ್ಟಿದ್ದಾರೆ

ಭಾರತದಲ್ಲಿ ಈ ವರ್ಷ ನಾಲ್ಕು ಹೊಸ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಲಾಗುವುದೆಂದೂ, ಗ್ರಹಿಸಿದಲ್ಲಿ ೫ ಲಕ್ಷ ಟನ್ನಿನಷ್ಟು ಸಿಮೆಂಟು ಹೆಚ್ಚುವರಿದೂ ಕೇಂದ್ರ ಶಾಸನ ಸಭೆಯಲ್ಲಿ ಕೈಗಾರಿಕಾ ಸಚಿವರು ತಿಳಿಸಿರುತ್ತಾರೆ.

UNIVERSITY OF MYSORE

Office of the University of Mysore Mysore, dated the 26th February 49

NOTIFICATION

No Ex-2 864/48-49

Dated 26th Februray 1949

University Examinations of March 1949

It is hereby notified that the St. Philomena's College Mysore will be a Centre for the following Examinations —

i. Intermediate in Arts

ii) Intermediate in Science

iii B Sc

The time-table in respect of practical Examination of the B Sc will be notified in due course by the Principal, St. Philomena's College.

By Order

PALANGADEVARU

ಶುಭಕರವಾದ

ಲಗ್ನದ ಜವಳಿಗಳಿಗೆ

ನಮ್ಮಲ್ಲಿಗೆ ದಯೆಯಿಟ್ಟು ಭೇಟಿ ಕೊಡಿ

ವೀರಣ್ಣ ಸಿಲ್ಕು ಎಂಪೋರಿಯಂ

ವಿ ರಾಮಯ್ಯ ಅಂಡ್ ಬ್ರದರ್

ಇರ್ವಿನ್ ರಸ್ತೆ : ಮೈಸೂರು

ಲಗ್ನದ ಜವಳಿಗಾಗಿ

ಗುರು ದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಅಂದೇ ಭೇಟಿ ಕೊಡಿ

ಶಿವರಾಂಪೇಟೆ . ಮೈಸೂರು

ರಾಜಕಮಲ್ ಟಾಕೀಸ್

ಮೈಸೂರು ದೇಶದಲ್ಲಿ ಪ್ರಥಮ ಪ್ರದರ್ಶನ

4-3-49 ರಿಂದ ಆರಂಭ

ಪ್ರತಿ ದಿನ ೩ ಆಟಗಳು

ದಸರ ಕನ್ನಡ ದಸರ

ಈಗ ನಡೆಯುತ್ತಿದೆ ಅವಿತ್ರನ ಕನಸು

ಎಸ್. ಎಂ. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇಯಿನ್ ಬಾಮ್

ನೋವು, ಕೀಲು ನೋವು ಮುಂತಾದ ಎಲ್ಲಾ ಬಾಧೆಗಳಿಗೂ ರಾಮಬಾಣ

ಶೀಸೆ 0-12

ಮಹಾ ಸುಗಂಧರಾಜ ತೈಲ—

,, ಚಂದನಾದಿ ತೈಲ—

,, ಭೃಂಗಾ ಮಲಕ ತೈಲ—

—ಬೇಸಿಗೆ ಕಾಲಕ್ಕೆ ಉತ್ತಮ ಉಪಯುಕ್ತ ತೈಲಗಳು

ಮಹಾಕೇತಕೀ ತೈಲ—ತಲೆಗೆ ಹಚ್ಚಿ ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ಕೃಷ್ಟ

ಬ್ರೇನ್ ಟಾನಿಕ್ ಶೀಸೆ 2-0

ಪಂಚಾಮೃತ– ಮಲೇರಿಯಾಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

Edited, printed and published by A R Nagarajan at the Sadhvi Press D Subbaiah Road, Mysore

ಪ್ರೋ ೧೯ನಂ 792 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೮-೩-೧೯೪೯ [ಸಂಚಿಕೆ ೧೮೦

— ಶಾಸನ ಸಭೆಗಳಿಗೆ — ೧ ವರ್ಷ ಜೀವದಾನ

ಸಂತಾಪ ಸೂಚಕ ಸಭೆ

ಮೈಸೂರು ೮

ಸಂಯುಕ್ತ ಪ್ರಾಂತ್ಯದ ಗವರ್ನರರಾಗಿದ್ದ ಶ್ರೀಮತಿ ಸರೋಜಿನಿ ದೇವಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಲು ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು ಆಶ್ರಮ ಭಜನೆಯಾದ ನಂತರ ಶ್ರೀಗಳಾದ ಎಂ ಎನ್ ಜೋಯಿಸ್, ಎಸ್ ರಂಗರಾಮಯ್ಯ ಮತ್ತು ಟಿ ವೆಂಕಟನರಸಿಂಹಯ್ಯನವರುಗಳು ಭಾಷಣ ಮಾಡಿ ಶ್ರೀಮತಿಯವರ ಗುಣಕಥನ ಮಾಡಿದರು ಅನಂತರ ಎಲ್ಲರೂ ಎದ್ದು ನಿಂತು ಮೌನದಿಂದ ಸಂತಾಪ ಸೂಚಕ ನಿರ್ಣಯವನ್ನು ಅನುಮೋದಿಸಿದರು

ಹರಿಜನರನ್ನು ಹಿಂಸಿಸಿದುದಕ್ಕೆ ಶಿಕ್ಷೆ

ಸೋಲಾಪುರದಲ್ಲಿ ಹರಿಜನ ಹೆಂಗಸರು ಬಾವಿಯಿಂದ ನೀರು ತೆಗೆದುಕೊಳ್ಳುತ್ತಿದ್ದಾಗ ಬಾಬುರಾವ್ ಸಾಗರೆ ಮತ್ತು ಇತರ ಇಬ್ಬರು ಸವರ್ಣ ಹಿಂದೂಗಳು ಅವರ ಮಡಕೆಗಳನ್ನು ಒಡೆದುಹಾಕಿ ಅಲ್ಲಿ ನೆರೆದಿದ್ದ ಹರಿಜನ ಗಂಡಸರನ್ನು ಹೊಡೆದರೆಂಬ ಆಪಾದನೆಯ ಮೇಲೆ ಅವರುಗಳಿಗೆ ೮ ತಿಂಗಳ ಕಠಿಣ ಶಿಕ್ಷೆ ಮತ್ತು ೫೦೦ ರೂ ದಂಡವನ್ನು ವಿಧಿಸಲಾಗಿದೆ

ಆಯವ್ಯಯದ ಪಟ್ಟಿಯಲ್ಲಿ ಕಮ್ಯೂನಿಸ್ಟರ ಕೈವಾಡ

ಸಂಯುಕ್ತ ಪ್ರಾಂತ್ಯದ ಪ್ರಧಾನಿಗಳು ಮಂಡಿಸಿದ ಆಯವ್ಯಯದ ಪಟ್ಟಿಯ ಭಾಷಣದಲ್ಲಿ ತುಟ್ಟಿ ಭತ್ಯವು ೧೨ ರೂ ಇರಬೇಕಾದುದು ೨೧ ರೂ ಎಂದು ತಪ್ಪು ಬಿದ್ದಿತ್ತೆಂದೂ, ಅದು ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದಾಗ ಕಮ್ಯೂನಿಸ್ಟರು ಅದನ್ನು ಬದಲಾಯಿಸಿರಬಹುದೆಂದೂ ಊಹಿಸಲಾಗಿದೆ

ಚೀಣಾದ ೭೭೦ ನಗರಗಳು ಕಮ್ಯೂನಿಸ್ಟರ ವಶ

ಚೀಣಾದ ಕಮ್ಯೂನಿಸ್ಟರು ೭೭೦ ನಗರಗಳನ್ನು ವಶಪಡಿಸಿಕೊಂಡು ೨೦ ಕೋಟಿ ಜನರನ್ನು ಬಂಧ ವಿಮುಕ್ತರನ್ನಾಗಿ ಮಾಡಿರುವುದಾಗಿ ಹೇಳಿದ್ದಾರೆ

ಪಾಟ್ನಾದಲ್ಲಿ ವಿದ್ಯಾರ್ಥಿಗಳ ಸ್ಮಾರಕ ಸ್ತಂಭ

೧೯೪೨ ನೇ ಆಗಸ್ಟ್ ೮ ನೇ ತಾ|| ಪಾಟ್ನಾದ ಸಚಿವಾಲಯ ಕಛೇರಿ ಮುಂದೆ ಪೋಲೀಸರ ಗುಂಡಿನಿಂದ ಮಡಿದ ೭ ಜನ ವಿದ್ಯಾರ್ಥಿಗಳ ಜ್ಞಾಪಕಾರ್ಥವಾಗಿ ಒಂದು ಸ್ಮಾರಕ ಸ್ತಂಭವನ್ನು ನಿರ್ಮಿಸಬೇಕೆಂದು ಬಿಹಾರ ಸರ್ಕಾರದವರು ನಿರ್ಧರಿಸಿರುತ್ತಾರೆ

ಪ್ರತಿ ದಿನ ಮೂರು ಆಟಗಳು

೬-೩-೪೯ ನೇ ಶನಿವಾರದಿಂದ

ಸೂಪರ್ ಪಿಕ್ಚರ್ಸ್‌ರವರ

ಪಹಲಿ - ಪಹಚಾನ್

ಪಾತ್ರ ರಾಜಾ ರಾಣಿ, ನಿಹಾಲ್

ಮತ್ತಿತರರು

ಒಲಿಂಪಿಯಾ ಟಾಕೀಸ್

ಧಾನ್ಯ ಸಂಗ್ರಹ ಕಾರ್ಯಕ್ರಮ

ಮೈಸೂರು ೮

ಇದೇ ಆರನೇ ತಾ|| ಬೆಳಗ್ಗೆ ೯ ಗಂಟೆಗೆ ಟೌನ್‌ಹಾಲಿನಲ್ಲಿ ನೂತನ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾರಂಭೋತ್ಸವವು ನಡೆಯುವುದಲ್ಲದೆ ಅದೇ ದಿನ ಮಧ್ಯಾಹ್ನದಿಂದ ಒಂದು ವಾರ ಕಾಲ ಧಾನ್ಯ ಸಂಗ್ರಹಣೆ ಕಾರ್ಯಕ್ಕಾಗಿ ಗ್ರಾಮಗಳಲ್ಲಿ ಪ್ರವಾಸ ಏರ್ಪಡಿಸಲಾಗಿದೆ ಇದರಲ್ಲಿ ಸಹಕರಿಸಬೇಕೆಂದು ಕೋರಲಾಗಿದೆ

ಗುಮಾಸ್ತೆ ಕೆಲಸದಲ್ಲಿ ಮಹಿಳೆಯರಿಗೆ ಪ್ರಾಶಸ್ತ್ಯ

ಸರ್ಕಾರೀ ಕೆಲಸಗಳಿಗೆ ಗುಮಾಸ್ತರನ್ನು ನೇಮಿಸಿಕೊಳ್ಳುವಾಗ ಅರ್ಹತೆಯುಳ್ಳ ಮಹಿಳೆಯರು ಅರ್ಜಿ ಹಾಕಿಕೊಂಡರೆ ಗಂಡಸರಿಗಿಂತಲೂ ಅವರಿಗೇ ಹೆಚ್ಚು ಪುರಸ್ಕಾರ ಕೊಡುವುದಾಗಿ ಮದರಾಸು ಶಾಸನಸಭೆಯಲ್ಲಿ ಮಂತ್ರಿಗಳಾದ ಡಾ|| ರಾಜನ್‌ರವರು ತಿಳಿಸಿರುತ್ತಾರೆ ಸರ್ಕಾರೀ ನೌಕರಿಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವು ಸಾಕಾದಷ್ಟು ಇಲ್ಲದಿರುವುದೇ ಇದಕ್ಕೆ ಕಾರಣವೆಂದು ಅವರು ಹೇಳಿರುವರು

ರಷ್ಯದ ಭಾಷೆಯಲ್ಲಿ "ಮಹಾ ಭಾರತ"

ಲೆನಿನ್‌ಗ್ರಾಡ್ ವಿಶ್ವವಿದ್ಯಾಲಯದ ಪ್ರೊಫೆಸರ್ ಅಲೆಕ್ಸಿ ಬಾರಾನಿಕೊ ಎಂಬುವರು ಮಹಾ ಭಾರತವನ್ನು ರಷ್ಯದ ಭಾಷೆಗೆ ತರ್ಜುಮೆ ಮಾಡುತ್ತಿರುವರೆಂದು ತಿಳಿದು ಬಂದಿದೆ ಅವರು ಕಳೆದ ವರ್ಷ ರಾಮಾಯಣವನ್ನು ಇದೇ ಭಾಷೆಯಲ್ಲಿ ಪ್ರಕಟಪಡಿಸಿದ್ದರು

"ಸಂಸ್ಥಾನಗಳ ಭವಿಷ್ಯ"

ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕರಾದ ಶ್ರೀ ಗ ಸ ಹಾಲಪ್ಪನವರು ಪ್ರಕಟಿಸಿರುವ "ಸ್ವತಂತ್ರ ಭಾರತದಲ್ಲಿ ಸಂಸ್ಥಾನಗಳ ಭವಿಷ್ಯ" ಎಂಬ ಇಂಗ್ಲೀಷ್ ಪುಸ್ತಕದ ಒಂದು ಪ್ರತಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಸಂಸ್ಥಾನಗಳ ವಿಲೀನೀಕರಣವಾಗುತ್ತಿರುವ ಈ ಸಮಯದಲ್ಲಿ ಈ ಪುಸ್ತಕವು ವಿಶೇಷ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ

● ಬರ್ಡ್ವಾನಿನ ಇಂಟರ್ ಕಾಲೇಜ್ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಗಳನ್ನು ಕಳವು ಮಾಡಿ ಅವುಗಳಿಗೆ ಉತ್ತರಗಳನ್ನು [illegible] ಸ್ವೀಕರಿಸುವರು [illegible] ತಿಳಿದು ಬಂದಿದೆ

ಶಿರಾ ಗಲಭೆಯಲ್ಲಿ ಇನ್ನಿಬ್ಬರ ಮರಣ

ಸ್ವಂ ಸು ಫೋ] ಬೆಂಗಳೂರು ೮

ಶಿರಾದಲ್ಲಿ ನಡೆದ ಕೋಮುವಾರು ಗಲಭೆಯ ಸಂಬಂಧವಾಗಿ ಇತ್ತೀಚಿನ ಸುದ್ದಿ ಪ್ರಕಾರ ಆಸ್ಪತ್ರೆಯಲ್ಲಿದ್ದ ಇನ್ನು ಇಬ್ಬರು ಸತ್ತರೆಂದೂ, ಇದುವರೆಗೂ ಹತ್ತು ಜನರನ್ನು ಬಂಧಿಸಲಾಯಿತೆಂದೂ ತಿಳಿದು ಬಂದಿದೆ ಈಗ ಅಲ್ಲಿನ ಪರಿಸ್ಥಿತಿ ಶಾಂತ ಸ್ಥಿತಿಗೆ ಬಂದಿದೆ ಪೋಲೀಸರು ಹಲವು ಮನೆಗಳನ್ನು ಶೋಧನೆ ಮಾಡಿದರು ಒಟ್ಟು ೧೫೦ ಮಂದಿಗೆ ಗಾಯವಾಗಿರುವುದಾಗಿ ತಿಳಿದು ಬಂದಿದೆ ನೆನ್ನೆ ಸಂಜೆಯಿಂದ ಬೆಳಗ್ಗಿನವರೆಗೆ ಕರ್ಫ್ಯೂ ಇತ್ತು ಸಂತೆ ಸೇರಿದ್ದ ದಿನ ಜನರು ಗಾಬರಿಗೊಂಡು ಬಿಟ್ಟು ಹೋದ ಸಾಮಾನುಗಳನ್ನು ಅವರವರಿಗೆ ವಾಪಸು ಕೊಡಲಾಯಿತು

ಗೋಪಾಲರಾವ್ ವಿಚಾರಣಾ ಸಮಿತಿ

ನೇಮಕಗೊಂಡ ಸಮಿತಿಯ ಮುಂದೆ ಶ್ರೀ [illegible] ಎಸ್ ದೀಕ್ಷಿತ್‌ರವರು ಸಾಕ್ಷ್ಯವಿತ್ತು, ಗೋಪಾಲರಾಯರು ನಿಜವಾದ ಲೇವಾದೇವಿಯನ್ನು ನಡೆಸುತ್ತಿರಲಿಲ್ಲವೆಂದು ಗೊತ್ತಾದುದರಿಂದಲೂ ಮತ್ತು ಅನೇಕ ಬಡ ಜನರು ಕಷ್ಟಪಡುತ್ತಿರುವುದರಿಂದಲೂ ತಾವು ೨ ಲಕ್ಷ ೫ ಸಾವಿರ ರೂ ಗಳನ್ನು ಸಮಿತಿಗೆ ವಾಪಸು ಕೊಡುವುದಾಗಿಯೂ ೪ ಲಕ್ಷ ೭೦ ಸಾವಿರ ರೂ ಗಳನ್ನು ತಮ್ಮ ಕ್ಲೇಮಿನಿಂದ ಬಿಟ್ಟುಬಿಡುವುದಾಗಿಯೂ ತಿಳಿಸಿದ್ದಾರೆ

ಚಿನ್ನದ ಗಣಿ ಕೆಲಸಗಾರರಿಗೆ ಶಿಕ್ಷೆ

ಆಡಳಿತ ಕಛೇರಿ ಮುಂದೆ ಪ್ರದರ್ಶನ ನಡೆಸಿದರೆಂಬ ಆಪಾದನೆಯ ಮೇಲೆ ೭೭ ಜನ ಚಿನ್ನದ ಗಣಿ ಕೆಲಸಗಾರರಿಗೆ ೧೫ ದಿನ ಸಾದಾ ಶಿಕ್ಷೆಯನ್ನು ವಿಧಿಸಲಾಗಿದೆ

○ ಇದೇ ೧೩ ರಿಂದ ೨೦ ನೇ ತಾ|| ವರೆಗೆ ಕಾರ್ಮಿಕ ಸಚಿವರಾದ ● ಕೆ ಟಿ ಭಾಷ್ಯಂರವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರು

○ ವಿವಾನವು ಈ ದಿನ ಬೆಂಗ್ಳೂರಿನಿಂದ ಹೊರಟ ಕ್ಷೆ ಪ್ರಯಾಣ ಬೆಳೆಸಿದರು ಅವರ [illegible] ರುದ್ರಾಭಿಷೇಕದಲ್ಲಿ ಮುಖ್ಯ ಮಂತ್ರಿ [illegible] ದಿವಾನರ [illegible]

ಶಾಸನ ಸಭೆಗಳಿಗೆ ಒಂದು ವರ್ಷ ಜೀವ ದಾನ

ಸ್ವಂ ಸು ಫೋ] ಬೆಂಗಳೂರು ೮

ಈ ತಿಂಗಳು ೧೮ ನೇ ತಾರೀಕಿಗೆ ಅಂತ್ಯವಾಗಲಿರುವ ಮೈಸೂರು ಶಾಸನ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳ ಅವಧಿಯನ್ನು ಒಂದು ವರ್ಷ ಕಾಲ ಹೆಚ್ಚಿಸಿ ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ

ಮೈಸೂರು ಅಧಿಕಾರಿಗಳು ಹೈದರಾಬಾದಿಗೆ

ಭಾರತ ಸರ್ಕಾರದ ಸಂಸ್ಥಾನದ ಶಾಖೆಯ ಸಲಹೆಗಾರರಾದ ● ವಿ ಪಿ ಮೆನನ್‌ರವರ ಆಗಮನದ ಫಲವಾಗಿ ಮೈಸೂರು ಸಂಸ್ಥಾನದ ಹಲವು ಅಧಿಕಾರಿಗಳ ನೆರವನ್ನು ಹೈದರಾಬಾದಿಗೆ ಎರವಲಾಗಿ ಕೊಡಲಾಗುವುದೆಂದು ತಿಳಿದುಬಂದಿದೆ

ದೂರ ಪ್ರಾಚ್ಯ ರಾಷ್ಟ್ರಗಳ ಅರಣ್ಯ ಸಮ್ಮೇಳನ

ಮೈಸೂರು ೮

ವಿಶ್ವ ಸಂಸ್ಥೆಯ ಆಶ್ರಯದಲ್ಲಿ ಇದೇ ೨೮ ನೇ ತಾ|| ರಾಜಧಾನಿಯ ಚಲುವಾಂಬಾ ಭವನದಲ್ಲಿ ನಡೆಯಲಿರುವ ದೂರ ಪ್ರಾಚ್ಯ ರಾಷ್ಟ್ರಗಳ ಅರಣ್ಯ ಸಮ್ಮೇಳನದಲ್ಲಿ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳನ್ನು ಸ್ವಾಗತಿಸಿ ಶ್ರೀಮನ್ಮಹಾರಾಜರವರು ಭಾಷಣ ಮಾಡುವರು ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜಯರಾಂದಾಸ್ ದೌಲತ್‌ರಾಂರವರು ಇದರಲ್ಲಿ ಭಾಗವಹಿಸುವರು ಮಹಾಪ್ರಧಾನಿ ಪಂಡಿತ ನೆಹರೂರವರು ಇದರ ಆರಂಭೋತ್ಸವವನ್ನು ನೆರವೇರಿಸುವ ನಿರೀಕ್ಷಣೆ ಇದೆ

ಮದರಾಸ್ ಪ್ರಾಂತ್ಯದಲ್ಲಿ ೧೨ ಔನ್ಸು ರೇಷನ್

ನಾಳಿದ್ದಿನಿಂದ ಮದರಾಸ್ ಪ್ರಾಂತ್ಯದಲ್ಲಿ ಒಟ್ಟು ರೇಷನ್ ಪ್ರಮಾಣವನ್ನು ೧೦ರಿಂದ ೧೨ ಔನ್ಸಿಗೆ ಹೆಚ್ಚಿಸುವಂತೆ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಇದರ ಪ್ರಕಾರ ೮ ಔನ್ಸು ಅಕ್ಕಿ, ೨ ಔನ್ಸು ಗೋಧಿ, ಮತ್ತು ೨ ಔನ್ಸು ಇತರ ಧಾನ್ಯಗಳು ಕೊಡಲ್ಪಡುವುವು "ಬಿ ತರಗತಿಯವರಿಗೆ ೬ ಔನ್ಸು ಅಕ್ಕಿ, "ಸಿ" ತರಗತಿಯವರಿಗೆ ೩ ಔನ್ಸು ಅಕ್ಕಿ ಮತ್ತು ಇತರ ಧಾನ್ಯಗಳೂ ಕೊಡಲ್ಪಡುವುವು

ಜರ್ಮನಿಯಲ್ಲಿ ಕೃತಕ ಮಾಂಸದ ತಯಾರಿ

ಮಾಂಸದ ಅಭಾವವುಂಟಾಗಿರುವ ಪ್ರಯುಕ್ತ ವಿಜ್ಞಾನ ಶೋಧನೆಯ ಮೂಲಕ ಕೃತಕ ಮಾಂಸವನ್ನು ತಯಾರಿಸಲು ಜರ್ಮನಿಯ ವೈಜ್ಞಾನಿಕರು ಏರ್ಪಾಡು ಮಾಡಿರುತ್ತಾರೆ ಇನ್ನು ಒಂದು ತಿಂಗಳೊಳಗಾಗಿ ಜರ್ಮನರು ಈ ಮಾಂಸವನ್ನು ಉಪಯೋಗಿಸಲು ಅನುಕೂಲವಾಗುವುದು. ಇದು ನಿಜವಾದ ಮಾಂಸದಂತೆಯೇ ಇರುವುದು ಸೋಯಾ ಬೀನ್ ಎಂಬ ಬೀಜ ಕೋಳಿ ಮೊಟ್ಟೆ, ಮೀನು ಮತ್ತು ಕುರಿ ಮಾಂಸಗಳ ಸಾರದಿಂದ ಇದನ್ನು ತಯಾರಿಸಲಾಗುವುದು ಇದನ್ನು ಭಾರಿ ಪ್ರಮಾಣದಲ್ಲಿ ತಯಾರು ಮಾಡಿ ಪರದೇಶಗಳಿಗೆ [illegible] ಕಳುಹಿಸುವ ಮಾಂಸದ ಆಮದನ್ನು ಸಂಪೂರ್ಣವಾಗಿ ತಡೆಗಟ್ಟಬಹುದೆಂದು ಹೇಳಲಾಗಿದೆ

ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನ

ಮೈಸೂರು ೩

ಇದೇ ... ನಡೆಯಲಿರು ... ರಾಷ್ಟ್ರಗಳ ಅರಣ್ಯ ಸಮ್ಮೇಳನವನ್ನು ... ಆಹಾರ ಮತ್ತು ವ್ಯವಸಾಯ ಸಮಿತಿಯ ಡೈರೆಕ್ಟರ್ ಜನರಲ್ ... ಉದ್ಘಾಟಿಸುವರು ... ರಾಷ್ಟ್ರಗಳ ಪ್ರತಿನಿಧಿಗಳು ... ವೇಗಗಳಲ್ಲಿ ಯುದ್ಧದಿಂದ ... ಸ್ಥಳಗಳಲ್ಲಿ ಮನೆಗಳು, ... ಮತ್ತು ... ವಾಸಿಗಳನ್ನು ಒದಗಿಸುವ ವಿಚಾರಗಳನ್ನು ಈ ಸಮ್ಮೇಳದಲ್ಲಿ ಪರಿಶೀಲಿಸಲಾಗುವುದು

ವಿವಾಹ ಮಹೋತ್ಸವ

ರಾಜಧಾನಿಯ ವರ್ತಕರೂ ಮತ್ತು ಪ್ರಭಾತ ... ಮಾಲೀಕರೂ ಆದ ಶ್ರೀ ನಂಜುಂಡಪ್ಪ ಅಂಡ್ ಸನ್ಸ್‌ರವರು ತಮ್ಮ ಶ್ರೀ ಸಿಂಗನ ... ನವರ ಪುತ್ರ ಶ್ರೀ ... ಶಿವಪ್ಪನವರಿಗೆ ಬೆಂಗಳೂರು ... ಶ್ರೀ ... ಅಂಡ್ ಸನ್ಸ್‌ರವರ ... ಶ್ರೀ ವೀರಭದ್ರಪ್ಪನವರ ಪುತ್ರಿ ... ವಿವಾಹ ... ಬೆಂಗಳೂರು ... ಚಿಕ್ಕಪೇಟೆ ... ವೀರಭದ್ರಪ್ಪನವ ... ನೆರವೇರಿಸಿದರು

... ಸಂಪಾದಕರಾದ ಶ್ರೀ ... ಗೌಡರು ತಮ್ಮ ... ವಿವಾಹವನ್ನು ಈ ದಿನ ... ನೆರವೇರಿಸಿದರು

ಶ್ರೀ ... ಮಾಲೀಕರಾದ ಶ್ರೀ ಕೆ ನಾರಾಯ ... ರವರು ತಮ್ಮ ಪುತ್ರಿ ಚಿ॥ ಸೌ॥ ... ರವರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಉಪಾಧ್ಯಾಪಕರಾದ ಶ್ರೀ ಎನ್ ಅನಂತ ... ರವರಿಗೆ ಕೊಟ್ಟು ವಿವಾಹವನ್ನು ಈ ದಿನ ... ನೆರವೇರಿಸಿದರು

ಉಪನ್ಯಾಸ

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಶಾಲಾ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಡಾ॥ ... ರವರು 'ಆಹಾರ ಸಂಶೋಧನೆಯಲ್ಲಿ ಇಂಜನಿಯರುಗಳ ಪಾತ್ರ' ಎಂಬ ವಿಚಾರವಾಗಿ ಭಾಷಣಮಾಡುವರು

ಬಿ. ಎನ್. ದಾಸ್‌ರವರ ನಿಧನ

ಬೆಂಗಳೂರು ೩

ಜೋಗಿನ ಮಹಾತ್ಮಾ ಗಾಂಧೀ ವಿದ್ಯುಚ್ಛಕ್ತಿ ಕೇಂದ್ರದ ಸೂಪರಿಂಟೆಂಡೆಂಟರಾದ ಶ್ರೀ ಬಿ ಎನ್ ದಾಸ್‌ರವರು ನೊನ್ನೆ ರಾತ್ರಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ ಅವರಿಗೆ ೫೧ ವರ್ಷ ವಯಸ್ಸಾಗಿತ್ತು

ಕೇಳಪ್ಪನ್‌ರವರ ಆಗಮನ

ಕೇರಳ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೇಳಪ್ಪನ್‌ರವರು ಇಲ್ಲಿಗೆ ನಿನ್ನೆ ಆಗಮಿಸಿದರು ಸಂಸ್ಥಾನ ರಾಜಾ ಕಾರ್ಯದರ್ಶಿಗಳಾದ ಶ್ರೀ ವಿ ಪಿ. ಮೇನನ್‌ರವರೊಡನೆ ಅವರು ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ

ಬೆಂಗಳೂರಿನಲ್ಲಿ ಜೆಟ್ ವಿಮಾನಗಳ ತಯಾರಿಕೆ

ಆಧುನಿಕ ಜೆಟ್ ವಿಮಾನಗಳನ್ನು ಬೆಂಗಳೂರು ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ತಯಾರಿಸಲು ಭಾರತ ಸರ್ಕಾರದವರು ಒಂದು ಯೋಜನೆ ಸಿದ್ಧಗೊಳಿಸಿರುವರೆಂದೂ, ಸಧ್ಯದಲ್ಲಿಯೇ ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ಕಾರ್ಖಾನೆಯಲ್ಲಿ ತೆರೆಯಲಾಗುವುದೆಂದೂ ಹೇಳಲಾಗಿದೆ.

ಕಮ್ಯೂನಿಸ್ಟರನ್ನು ತಡೆಗಟ್ಟಲು ಏಷ್ಯಾ ರಾಷ್ಟ್ರಗಳ ಸಮ್ಮೇಳನ

ಏಷ್ಯಾ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟರ ಹಾವಳಿಯನ್ನು ತಡೆಗಟ್ಟುವುದಕ್ಕಾಗಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಭಾರತ ಸರ್ಕಾರದವರು ಸಧ್ಯದಲ್ಲಿಯೇ ಒಂದು ಏಷ್ಯಾ ರಾಷ್ಟ್ರಗಳ ಸಮ್ಮೇಳನವನ್ನು ವಹಲಿಯಲ್ಲಿ ಕರೆಯಲಿದ್ದಾರೆಂದು ತಿಳಿದು ಬಂದಿದೆ

ಶೇ॥ ೮೦ ವಿದ್ಯಾರ್ಥಿಗಳಿಗೆ ಕ್ಷಯ ರೋಗದ ಸೋಂಕು

ಮದರಾಸ್ ನಗರದ ಕಾಲೇಜುಗಳ ವಿದ್ಯಾರ್ಥಿಗಳ ಪೈಕಿ, ಶೇಕಡ ೮೦ ರಷ್ಟು ಜನರಿಗೆ ಕ್ಷಯ ರೋಗದ ಸೋಂಕು ಇದೆ ಯೆಂದು ಅಲ್ಲಿ ನಡೆದ ಬಿ ಸಿ.ಜಿ. ವ್ಯಾಕ್ಸಿನೇಷನ್ ಪ್ರಚಾರದಲ್ಲಿ ಕಂಡು ಹಿಡಿಯಲಾಗಿದೆ

ಪೂಜೆಗಾಗಿ ಮದ್ಯವೇ?

ಕರ್ನೂಲಿನ ಪಾನ ನಿರೋಧ ಅಧಿಕಾರಿಗಳಾದ ಶ್ರೀ ಜಿ ವೆಂಕಟಸ್ವಾಮಿ ಎಂಬುವರು ಒಂದು ಸೀಸೆ ಮದ್ಯವನ್ನು ತಮ್ಮ ಮನೆಯಲ್ಲಿಟ್ಟುಕೊಂಡಿದ್ದರೆಂಬ ಆಪಾದನೆಯ ಮೇಲೆ ಅವರಿಗೆ ೬ ವಾರಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ ಅಕ್ಟೋಬರ್ ...ನೇ ತಾ॥ ರಾತ್ರಿ ಪಾನ ನಿರೋಧ ಡೆಪ್ಯೂಟಿ ಅಧಿಕಾರಿಗಳು ಅಪರಾಧಿಗಳ ಮನೆಯನ್ನು ಶೋಧನೆ ಮಾಡಿದರು ತಾವು ಪೂಜೆಗಾಗಿ ಅದನ್ನು ಇಟ್ಟುಕೊಂಡಿದ್ದರೆಂದು ಅಪರಾಧಿಯು ಕೋರ್ಟಿನಲ್ಲಿ ತಿಳಿಸಿದರು

ಅಕ್ಕಿ ಇಲ್ಲದೆ ಜನರು ಉಪವಾಸ ಮಾಡಬೇಕಾಧೀತು

ಅಕ್ಕಿಯನ್ನೇ ಮುಖ್ಯ ಆಹಾರವನ್ನಾಗಿ ಉಳ್ಳ ಅನೇಕ ಏಷ್ಯಾ ರಾಷ್ಟ್ರಗಳ ಲಕ್ಷಾಂತರ ಜನರು ಅಕ್ಕಿಯಿಲ್ಲದೆ ಉಪವಾಸ ಮಾಡುವ ಸಂಭವವುಂಟಾಗಿದೆಯೆಂದು ವಿಶ್ವದ ಆಹಾರ ಮತ್ತು ವ್ಯವಸಾಯ ಸಂಸ್ಥೆಯವರು ಎಚ್ಚರಿಕೆ ಕೊಟ್ಟಿರುತ್ತಾರೆ. ಪ್ರಪಂಚದಲ್ಲಿ ಅಭಾವ ಪ್ರದೇಶಗಳು ಹೆಚ್ಚಾಗಿವೆ ಕಳೆದ ವರ್ಷ ೧೮॥ ಕೋಟಿ ಟನ್ ಅಕ್ಕಿ ಬೆಳೆಯಾಗಿದ್ದರೂ, ಜನ ಸಂಖ್ಯೆಯು ಶೇಕಡ ೧೧ ರಷ್ಟು ಹೆಚ್ಚಾಗಿರುವುದೆಂದೂ ತಿಳಿಸಲಾಗಿದೆ

ಶ್ರೀ ಗಾಯತ್ರೀ ಟಾಕೀಸ್

ತಾ। 3-3-49 ರಿಂದ 3 ದಿನಗಳು

ಪ್ರತಿ ದಿನ 3 ಪ್ರದರ್ಶನಗಳು

WARNER ರವರ ಸಾಹಸ ಚಿತ್ರ

ದೆ ಡೈಡ್ ವಿತ್ ದೇರ್ ಬೂಟ್ಸ್ ಆನ್

THEY DIED WITH THEIR BOOTS ON

WITH.— Errol Flynn & Olivia de Havilland

MORNING SHOWS at 10-30 on Sat. 5th & Sun 6th

20th MARGIE ಮಾರ್ಜಿ

ವರ್ಣರಂಜಿತ ಚಿತ್ರ

ಭಾರತದಲ್ಲಿ ನ್ಯೂಸ್ ಪ್ರಿಂಟ್ ಕಾರ್ಖಾನೆ

ವರ್ಷಕ್ಕೆ ... ಸಾವಿರ ಟನ್ ನ್ಯೂಸ್ ಪ್ರಿಂಟ್ ಕಾಗದವನ್ನು ತಯಾರಿಸುವ ... ದು ಕಾರ್ಖಾನೆಯನ್ನು ಮುಂದಿನ ... ಭಾರತದಲ್ಲಿ ಸ್ಥಾಪಿಸಲಾಗುವುದೆಂದು ... ಸ್ಟ್ರೇಲಿಯದಲ್ಲಿ ಪ್ರವಾಸ ಮಾಡುತ್ತಿ ... ಡಾ॥ ಕೃಷ್ಣರವರು ತಿಳಿಸಿರುತ್ತಾರೆ

ನ್ಯಾಯಾಧೀಶರ ಮೇಲೆ ಪಾದರಕ್ಷೆ ಎಸೆದ ಶ್ರ...

ಮದರಾಸಿನ ಮೂರನೇ ಪ್ರೆಸಿ ... ಕೋರ್ಟಿನಲ್ಲಿ ಜಯವರ್ಧನ ಎಂಬುವ ... ಕಳುವಿನ ಆಪಾದನೆಗೆ ಮೂರು ... ಶಿಕ್ಷೆಯನ್ನು ವಿಧಿಸಿದಾಗ, ಅಪರಾಧಿ ... ಅದನ್ನು ಕೇಳಿದೊಡನೆಯೇ ನ್ಯಾಯಾಧೀ ... ಶರ ಕಡೆಗೆ ... ಬಂದು ಅವರ ಮೇ ... ಪಾದರಕ್ಷೆಯನ್ನು ಎಸೆದನೆಂದು ... ಯಾಗಿದೆ

ವಿ. ವಿ. ಗಿರಿಯವರಿ ... ಗೌರ್ನರ್ ಪದವಿಯೇ!

ಸಿಲೋನಿನಲ್ಲಿ ಭಾರತದ ... ಶನರಾದ ಶ್ರೀ ವಿ ವಿ. ಗಿರಿಯವರನ್ನು ... ತದ ಒಂದು ಪ್ರಾಂತ್ಯದ ಗವರ್ನರನ್ನಾಗಿ ... ಮಕ ಮಾಡಲಾಗುವುದೆಂದು ... ಲಾಗಿದ

ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ

ನೆ ಟ್ ಬ ನೀ ನು ಗ ಳು

ಕಾಲು ಚೀಲಗಳು ಬಂದಿ...

ಮಿಲ್ಲು ಬಟ್ಟೆಗಳು ಕೂಡ ... ದೊ ರೆ ಯು ತ್ತ ವೆ.

ಮೈಸೂರು ಕಾಟನ್ ಕಂಪ...

ಬಟ್ಟೆ ಶಾಪ್, 1234, ಕೃಷ್ಣಮೂರ್ತಿ ಪುರಂ, ಮೈಸೂರು.

ಎಸ್. ಎನ್. ಪಂಡಿತ್ ಅಂ... ಸನ್ಸ್‌ರವರ

ಯೂನಿವರ್ಸಲ್ ಪೆಯಿನ್ ಬಾಮ್

ನೋವು, ಕೀಲು ನೋವು, ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ 0-12

"ಮಧ್ವ" ಸುಗಂಧರಾಜ ತೈಲ—)

,, ಚಂದನಾದಿ ತೈಲ—)

,, ಗಂಗಾ ಮುಲಕ ತೈಲ—)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು

ಮಹಾಕೇಶರಾಜ ತೈಲ— ತಲೆ ... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸಬಹುದಾದ ಉತ್ತಮವಾದ ಹೇರ್ ಟಾನಿಕ್ ಸೀಸೆ 2-0

ಪಂಚಾಮೃತ - ಮಲೇರಿಯಾ ... ಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈ ಸೂ ರು

ಶುಭಕರವಾದ ಲಗ್ನದ ಜವಳಿಗಳಿಗೆ

ನಮ್ಮಲ್ಲಿಗೆ ದಯೆಯಿಟ್ಟು ಭೇಟಿ ಕೊಡಿ

ವೀರಣ್ಣ ಸಿಲ್ಕ್ ಎಂಪೋರಿಯಂ

... ಅಂಡ್ ಬ್ರದರ್ಸ್ ... ಮೈಸೂರು

ಲಗ್ನದ ಜವಳಿಗಾಗಿ

ಗು ... ಹಾಲ್ ...

ಪ್ರಭಾ 4-3-49 ರಿಂದ ಯಶಸ್ವಿಯಾದ 2ನೆಯ ವಾರ

ಫೇಮಸ್ ಪಿಕ್ಚರ್ಸ್‌ರವರ ದಿನವಹಿ ೩ ಆಟಗಳು

ಪ್ಯಾರ್-ಕಿ-ಜೀತ್ (ಹಿಂದಿ)

ಪಾತ್ರ:- ಸುರಯ್ಯ, ಮನೋರಮ, ರೆಹಮಾನ್

ಇದರೊಂದಿಗೆ "ಬಾಪೂಕೀ ಅಮರ್ ಕಹಾನಿ" ಎಂಬ ಮಹಾತ್ಮ ಗಾಂಧಿಯವರ ಜೀವನ ಚರಿತ್ರೆಯ ರೀಲನ್ನೂ ಪ್ರದರ್ಶಿಸಲಾಗುವುದು

ಬೆ ಳ ಗಿ ನ ಪ್ರ ದ ರ್ಶ ನ ಗ ಳು

ಮಾರ್ಚಿ 4 ರಿಂದ 7ರ ವರೆಗೆ (ನಾಲ್ಕು ದಿನಗಳು ಮಾತ್ರ)

ರಾಮ್ ಶಾಸ್ತ್ರಿ

ಜಗದೀಶ್ ಸೇಠ್ ಕೌಶಲ್ಯಾ ನಟಿಸಿದ ಹಿಂದಿ ಚಿತ್ರ

Edited printed and published by A R Nagarajan at the Sadhvi Press, D Subbiah Road Mysore.

... ಬನಾರಿಸ್, ಮೈಸೂರು ಸಿಲ್ಕ್ ಸೀರೆಗಳು

... ಗಳು ಅನೇಕ ... ಪಾಲು ... ಪೇಟೆ ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೭ ಕಾಸು

ವಾಣಿ

ಸಂಪುಟ ೭] ಶನಿವಾರ ೫-೩-೧೯೪೯ [ಸಂಚಿಕೆ ೧೮೧

ತಾಲ್ಲೂಕು ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕ್ರಮ

ಮೈಸೂರು ೫

ನಾಳೆ ಬೆಳಗ್ಗೆ ೧೧-೩೦ ಗಂಟೆಗೆ ದೇವಯ್ಯನ ಹುಂಡಿಯಲ್ಲಿ ಶ್ರೀ ಸಾ. ಭದ್ರಯ್ಯನವರೂ, ೧೨-೩೦ ಗಂಟೆಗೆ ಜಯಪುರದಲ್ಲಿ ಶ್ರೀ ಎಸ್. ಚನ್ನಯ್ಯನವರೂ, ೬-೩೦ ಗಂಟೆಗೆ ವರುಣದಲ್ಲಿ ಶ್ರೀ ಟಿ ವೆಂಕಟರಮಣಯ್ಯನವರೂ ಮತ್ತು ಸಂಜೆ ೬ ಗಂಟೆಗೆ ಇಲವಾಲದಲ್ಲಿ ಶ್ರೀ ಎಂ. ಸಿ ಗೋಯಿಸರೂ ತಾಲ್ಲೂಕು ಗ್ರಾಮಾಭಿವೃದ್ಧಿ ಯೋಜನೆಯ ಪ್ರಾರಂಭೋತ್ಸವವನ್ನು ನೆರವೇರಿಸುವರು. ಮಹಾಜನಗಳು ಇದರಲ್ಲಿ ಭಾಗವಹಿಸಿ ಸಹಕರಿಸಬೇಕೆಂದು ತಾಲ್ಲೂಕು ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್ ಕೆ. ಕುಮಾರಸ್ವಾಮಿಯವರು ಕೋರಿರುತ್ತಾರೆ

ಚಲನ ಚಿತ್ರ ಪ್ರದರ್ಶನ

ನೂತನ ಗ್ರಾಮಾಭಿವೃದ್ಧಿ ಯೋಜನೆಯ ಅಂಗವಾಗಿ ನಾಳೆ ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರಿಂದ ಚಲನಚಿತ್ರ ಪ್ರದರ್ಶನವು ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಸರ್ವರಿಗೂ ಸ್ವಾಗತವುಂಟು

ಚಿನ್ನದ ಗಣಿ ಕಾರ್ಮಿಕರ ಮುಷ್ಕರ

ಕಾರ್ಮಿಕರ ಸಚಿವರಾದ ಶ್ರೀ ಕೆ ಟಿ. ಭಾಷ್ಯಂರವರ ಮಧ್ಯಸ್ತಿಕೆಯಿಂದ ಚಿನ್ನದ ಗಣಿ ಕೆಲಸಗಾರರು ಮುಷ್ಕರವನ್ನು ಕೊನೆಗಾಣಿಸಿ, ಕೆಲಸಕ್ಕೆ ಹಿಂತಿರುಗುವುದಾಗಿ ಭರವಸೆ ಕೊಟ್ಟಿದ್ದರೂ, ಕೇವಲ ಸ್ವಲ್ಪ ಜನರು ಮಾತ್ರ ಕೆಲಸಕ್ಕೆ ಹಿಂತಿರುಗಿರುವರೆಂದು ತಿಳಿದು ಬಂದಿದೆ.

ರಷ್ಯದಲ್ಲಿ ಅಣು ಬಾಂಬು

ರಷ್ಯದಲ್ಲಿ ಅಣು ಬಾಂಬುಗಳಿವೆ ಸೈಬೀರಿಯಾ ಮತ್ತು ಪೂರ್ವ ತೀರದಲ್ಲಿ ೪೦ ಆಕಾಶಿಕ ವಿಮಾನ ನಿಲ್ದಾಣಗಳನ್ನು ರಷ್ಯವು ನಿರ್ಮಿಸಿದೆ ರಷ್ಯದಲ್ಲಿ ಒಟ್ಟು ೧೩೦೦೦ ಆಕಾಶಿಕ ವಿಮಾನ ಮತ್ತು ನೌಕೆಗಳಿವೆ—ಎಂದು ರಷ್ಯವನ್ನು ತ್ಯಜಿಸಿದ ಒಬ್ಬ ಅಲ್ಲಿನ ಸೈನಿಕನು ತಿಳಿಸಿರುತ್ತಾನೆ

ಗೋಡೆಗೆ ತಲೆ ಹೊಡೆದು ಖೈದಿಯ ಆತ್ಮಹತ್ಯ

ವೆಲ್ಲೂರು ಜೈಲಿನಲ್ಲಿ ಕೊಲೆ ಅಪಾದಿತನಾಗಿ ಖೈದಿಯಾಗಿ ಇಡಲ್ಪಟ್ಟಿದ್ದ ಭೀಮಾವರದ ರಾಜಶೇಖರರಾವ್ ಎಂಬುವನು ತನ್ನ ತಲೆಯನ್ನು ಜೈಲಿನ ಗೋಡೆಗೆ ಬಡಿದುಕೊಂಡು ಸತ್ತನೆಂದು ವರದಿಯಾಗಿದೆ.

ಸ್ಫೋಟನದಿಂದ ೨೦ ಜನರ ಮರಣ

ಟರ್ಕಿಯ ರಾಜಧಾನಿಯಾದ ಇಸ್ತಾಂಬುಲಿನ ಶಸ್ತ್ರ ತಯಾರಿಕಾ ಕಾರ್ಖಾನೆಯಲ್ಲಿ ಅಸ್ಫೋಟನೆಯಾಗಿ ೨೦ ಜನರು ಸತ್ತು ನೂರಾರು ಮಂದಿಗೆ ಗಾಯಗಳಾಗಿವೆಯೆಂದು, ವರದಿಯಾಗಿದೆ

ಫ್ರಾನ್ಸಿನ ಕಮ್ಯೂನಿಸ್ಟರು ರಷ್ಯದ ಕಡೆ

ಮುಂದಿನ ಮಹಾ ಯುದ್ಧದಲ್ಲಿ ಫ್ರೆಂಚ್ ಕಮ್ಯೂನಿಸ್ಟರು ರಷ್ಯಕ್ಕೆ ಸಹಾಯಕರಾಗಿ ನಿಲ್ಲುವರೆಂದು ಅವರ ನಾಯಕರು ತಿಳಿಸಿರುವರು

ವಿ. ಪಿ. ಮೆನನ್‌ರವರಿಂದ ಮೈಸೂರಿನ ಪ್ರಶಂಸೆ

ಸ್ವಂ. ಸು. ಫೋನ್] ಬೆಂಗಳೂರು ೫

ಭಾರತ ಸರ್ಕಾರದ ಸಂಸ್ಥಾನಗಳ ಶಾಖಾ ಸಲಹೆಗಾರರಾದ ಶ್ರೀ ವಿ ಪಿ. ಮೆನನ್‌ರವರಿಗೆ ಇಲ್ಲಿನ ಪೌರ ಸಭೆಯವರು ನಿನ್ನೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಆ ಸಮಯದಲ್ಲಿ ಶ್ರೀ ಮೆನನ್‌ರವರು ಭಾಷಣ ಮಾಡಿ, ಮೈಸೂರು ಸಂಸ್ಥಾನದ ಸರ್ವತೋಮುಖವಾದ ಪ್ರಗತಿಯನ್ನು ಪ್ರಶಂಸಿಸಿದರು. ಮೊದಲಿನಿಂದಲೂ ರಾಜನೀತಿ ನಿಪುಣರಾದ ಆಡಳಿತಗಾರರು ಭದ್ರವಾದ ಅಸ್ತಿಭಾರವನ್ನು ಹಾಕಿರುವುದೇ ಇದಕ್ಕೆ ಕಾರಣವೆಂದು ಹೇಳಿದರು ತಾವೂ ಸಹ ಮೈಸೂರು ಸಂಸ್ಥಾನದ ಪ್ರಜೆಯೆಂದು ನೆನೆಯಲು ಹೆಮ್ಮೆ ಪಡುವುದಾಗಿಯೂ ಅವರು ತಿಳಿಸಿದರು. ಪ್ರಾರಂಭದಲ್ಲಿ ತಾವು ಮೈಸೂರು ಸರ್ಕಾರದ ನೌಕರಿಯಲ್ಲಿದ್ದು ಅನಂತರ ಕ್ರಮ ಕ್ರಮವಾಗಿ ಮುಂದುವರಿದು, ಈಗಿನ ಸ್ಥಾನಕ್ಕೆ ಬಂದಿರುವ ಅಂಶವನ್ನು ವಿವರಿಸಿದರು. ಸರ್ದಾರ್ ಪಟೇಲ್ ಮತ್ತು ಪಂಡಿತ ನೆಹರೂರವರುಗಳ ನಾಯಕತ್ವದಲ್ಲಿ ತಾವು ಕೆಲಸ ಮಾಡುತ್ತಿರುವುದು ಒಂದು ಸುಯೋಗವೆಂದು ಹೇಳಿದರು. ಮೈಸೂರಿನ ಸ್ಥಾನಮಾನ ಮತ್ತು ಸೌಲಭ್ಯಗಳ ದೃಷ್ಟಿಯಿಂದ ಅದು ಒಂದು ವಿಶೇಷ ಸ್ಥಾನವನ್ನು ಹೊಂದಲು ಅರ್ಹವಾಗಿದೆಯೆಂದು ತಿಳಿಸಿದರು

ಜಯಪುರ ರಾಜಧಾನಿಯಾಗಲು ಉದಯಪುರ ರಾಜರ ಪ್ರತಿಭಟನೆ

ಮಹಾ ರಾಜಸ್ಥಾನದ ಸಂಸ್ಥಾನಕ್ಕೆ ಸೇರುವಬಗ್ಗೆ ಉದಯಪುರದ ಮಹಾರಾಜರವರು ಕರಾರಿಗೆ ರುಜು ಹಾಕಲು ನಿರಾಕರಿಸಿದ್ದಾರೆಂದು ಹೇಳಲಾಗಿದೆ. ಮೇವಾಡದ ಮಹಾರಾಜರುಗಳು ಮಹಾರಾಣಾ ಪ್ರತಾಪ ಸಿಂಗರ ಕಾಲದಿಂದಲೂ ದಿಹಲಿ ಮತ್ತು ಜಯಪುರಕ್ಕೆ ಕಾಲಿಡುತ್ತಿಲ್ಲವಾದುದರಿಂದ ಜಯಪುರವನ್ನು ರಾಜಸ್ಥಾನದ ರಾಜಧಾನಿಯನ್ನಾಗಿ ಮಾಡಲು ಅವರು ನಿರಾಕರಿಸಿ ಈ ರೀತಿ ಮಾಡಿದ್ದಾರೆಂದು ಹೇಳಲಾಗಿದೆ

ನೋವಿಲ್ಲದ ಹೆರಿಗೆ

ಬ್ರಿಟಿಷ್ ನಿಪುಣರು ನೋವಿಲ್ಲದ ಹೆರಿಗೆಯನ್ನು ಮಾಡಿಸುವ ಯಂತ್ರವನ್ನು ಕಂಡು ಹಿಡಿದಿರುತ್ತಾರೆ ಸಾವಿರಾರು ಜನ ಗರ್ಭಿಣಿಯರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ ಮೂಗಿನ ಮೂಲಕ ಈ ಯಂತ್ರದ ಸಹಾಯದಿಂದ [illegible] ಪಥಿಯು ಯೋಜಿಸಿ [illegible] ಸುದೆಂದು ಹೇಳಲಾಗಿದೆ

ನೈಜಾಮರಿಗೆ ಬೆರಾರಿನ ೨೫ ಲಕ್ಷ ರೂ. ನಿಂತಿತು

ಭಾರತ ಸರ್ಕಾರದವರು ನೈಜಾಮರಿಗೆ ಬೆರಾರಿನ ಬಗ್ಗೆ ಪ್ರತಿ ವರ್ಷವೂ ಕೊಡುತ್ತಿದ್ದ ೨೫ ಲಕ್ಷ ರೂ 'ಕ್ವಿಟ್ ರೆಂಟನ್ನು' ಈ ವರ್ಷದಿಂದ ನಿಲ್ಲಿಸಿದ್ದಾರೆ

ಪ್ರಾಣಿಗಳ ಭಾಷೆ

ಅಮೇರಿಕದ ಡಿಟ್ರಾಯಿಟ್ ಎಂಬಲ್ಲಿಯ ಮೃಗಾಲಯದ ೪ ಸಾವಿರ ಪ್ರಾಣಿಗಳೊಡನೆ ಅಲ್ಲಿನ ಮೇಲ್ವಿಚಾರಣಾಧಿಕಾರಿಗಳಾದ ಆರ್ಥರ್ ಗ್ರೀನ್‌ವಾಲ್ ಎಂಬುವರು ಪ್ರಯೋಗಗಳನ್ನು ನಡೆಸಿ, ಮೃಗಗಳು ತಮ್ಮ ತಮ್ಮಲ್ಲಿಯೇ ಪರಸ್ಪರ ಮಾತನಾಡಿಕೊಳ್ಳುವ ಭಾಷೆಯ ವಿವರಗಳನ್ನು ಸಂಶೋಧನೆ ಮಾಡುತ್ತಿದ್ದಾರೆಂದು ತಿಳಿದುಬಂದಿದೆ ಪ್ರಾಣಿಗಳ ಶಬ್ದಗಳನ್ನು ಗುರುತು ಹಾಕಿಕೊಳ್ಳಲು ಒಂದು ಯಂತ್ರವನ್ನೂ ಸಹ ಅವರು ಉಪಯೋಗಿಸುತ್ತಿದ್ದಾರೆ.

ನೆಹರೂರವರ ಅತ್ತೆಯ ನಿಧನ

ಭಾರತ ಪ್ರಧಾನಿ ಪಂಡಿತ ನೆಹರೂರವರ ಅತ್ತೆಯವರಾದ ಶ್ರೀಮತಿ ರಾಜಪತಿ ಕೌಲ್‌ರವರು ಆಗ್ರಾದಲ್ಲಿ ನಿನ್ನೆ ಬೆಳಗಿನ ಝಾವ ನಿಧನರಾದರು ಕೆಲವು ಕಾಲದಿಂದಲೂ ಅವರು ತಮ್ಮ ಅಳಿಯ ಪ್ರೊಫೆಸರ್ ಕಚ್ಚೂರವರ ಮನೆಯಲ್ಲಿ ಖಾಯಿಲೆಗಾಗಿ ಶುಶ್ರೂಷೆ ಹೊಂದುತ್ತಿದ್ದರು.

ಗಾಯಿತ್ರೀ ಹೋಮ

ಸಾಗರದ ಶ್ರೀ ಗಣಪತಿ ದೇವಾಲಯದಲ್ಲಿ ಶ್ರೀ ಗಾಯತ್ರೀ ಮಹಾ ಯಜ್ಞವು ಇದೇ ೧೦ ನೇ ತಾ॥ ನಿಂದ ಪ್ರಾರಂಭವಾಗಿ ೧೬ ನೇ ತಾ ಸೋಮವಾರ ಪೂರ್ಣಾಹುತಿ ಸಮರ್ಪಣೆಯು ನಡೆಯುವುದು. ರಾಜಧಾನಿಯ ಶ್ರೀ ಗಮಕಿ ರಾಮಕೃಷ್ಣ ಶಾಸ್ತ್ರಿಯವರ ಮೂಲಕ ಶಿವಮೊಗ್ಗದ ಶ್ರೀ ಗುರುಮೂರ್ತಿ ಶಾಸ್ತ್ರಿಯವರು ಶಾಸ್ತ್ರ ಕಲಾಪಗಳನ್ನು ನೆರವೇರಿಸುವರು ಬೆಳಗ್ಗೆ ೮ ಗಂಟೆಯಿಂದ ಪೂಜೆ, ರಾತ್ರಿ ೯ ಗಂಟೆಗೆ ಪುರಾಣ ಮತ್ತು ಉಪನ್ಯಾಸಗಳು ಪ್ರತಿ ದಿನ ನಡೆಯುವುವು

ಕಸ್ತೂರಿಬಾಯಿ ದಿನಾಚರಣೆ

ನೆನ್ನೆ ಸಂಜೆ ದೇವರಾಜ ಮೊಹಲ್ಲಾ ಮಹಿಳಾ ಸದನದಲ್ಲಿ ಪೂಜ್ಯಮಾತೆ ಕಸ್ತೂರಿಬಾಯಿ ದಿನಾಚರಣೆಯು ವನಿತಾ ಸದನದ ಪ್ರಾಂಶುಪಾಲಕಿಯವರಾದ ಶ್ರೀ ಮತಿ ಸಿ. ಶೀಲಾಬಾಯಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾಮೂಹಿಕ ಪ್ರಾರ್ಥನೆ ಮತ್ತು ಸುಬ್ಬಲಕ್ಷ್ಮಿಯವರಿಂದ ಗಾನ, ಶ್ರೀ [illegible] ಸುಂದರಮ್ಮನವರಿಂದ [illegible] ದಲ ತತ್ವಗಳು ನಡದಮೇಲೆ ಅಧ್ಯಕ್ಷರ ಭಾಷಣವಾಯಿತು ಕಸ್ತೂರಿಬಾಯಿಯವರು ಜೀವನ [illegible] ಗಾಂಧೀಜಿಯವರ [illegible] ಪ್ರಧಾನವಾದ [illegible]

ಗೋಪಾಲರಾವ್ ವಿಚಾರಣಾ ಸಮಿತಿ

ಬೆಂಗಳೂರು ೫

ದಂಡಿನ ಮಾಜಿ ಅಸಿಸ್ಟೆಂಟ್ ಪೋಲೀಸ್ ಕಮೀಷನರಾದ ಶ್ರೀ ಎಸ್ ಸರ್ವೋತ್ತಮರಾಯರು ಮೇಲ್ಕಂಡ ಸಮಿತಿಯ ಮುಂದೆ ಸಾಕ್ಷ್ಯವಿತ್ತು, ತಾವು ಗೋಪಾಲರಾಯರ ಲೇವಾದೇವಿಯಿಂದ ಪಡೆದ ಲಾಭದ ಹಣವನ್ನೆಲ್ಲಾ ವಾಪಸು ಕೊಡುವುದಾಗಿ ತಿಳಿಸಿರುತ್ತಾರೆ [illegible] ಲೇವಾದೇವಿಯಿಂದ [illegible] ಲಕ್ಷ ರೂ. ಮಾಡಲಾಗಿದೆಯೆಂದೆಯೇ ಎಂಬ ಪ್ರಶ್ನೆಗೆ ಅವರು ಉತ್ತರ ಕೊಡದೇ ಮೌನದಿಂದ ಇದ್ದರು

○ ಈ ದಿನ ಬೆಳಗ್ಗೆ ಶ್ರೀ ಪಿ ಪಿ ಮೆನನ್‌ರವರು ಕೊಚ್ಚಿಗೆ ಪ್ರಯಾಣ ಬೆಳೆಸಿದರು.

ದೆಹಲಿಯಲ್ಲಿ ಭೂ ಕಂಪ

ದೆಹಲಿಯಲ್ಲಿ ನಿನ್ನೆ ಪ್ರಧಾನಿ ಪಂಡಿತ ನೆಹರೂರವರು ಭಾರತದ ವಾಣಿಜ್ಯ ಸಂಘದ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ಭೂ ಕಂಪವಾಗಿ, ಕಿಟಕಿ ಮತ್ತು ಬಾಗಿಲುಗಳು ಕಲುಕಿದುವೆಂದೂ, ಒಂದು ನಿಮಿಷದನಂತರ ಅವರು ತಮ್ಮ ಭಾಷಣವನ್ನು ಮುಂದುವರಿಸಿದರೆಂದೂ ವರದಿಯಾಗಿದೆ

ಲಾಹೋರ್ ಮತ್ತು ಜಯಪುರಗಳಲ್ಲೂ ಭೂ ಕಂಪವಾಯಿತೆಂದು ಹೇಳಲಾಗಿದೆ

ರಾಮಪಾದ ಸಾಗರದ ಅಣೆಕಟ್ಟಿನ ಯೋಜನೆ ಮುಂದೆ ಹೋಗುವುದೇ ?

ದೇಶದಲ್ಲಿರುವ ಎಲ್ಲಾ ಸಿಮೆಂಟು ಕಬ್ಬಿಣ ಮತ್ತು ಕಾರ್ಮಿಕರ ಸಹಾಯಗಳನ್ನೂ ಹತ್ತೊಂಭತ್ತು ವರ್ಷಗಳ ಕಾಲ ವಿನಿಯೋಗಿಸಿ ನೂರು ಮೂವತ್ತು ಕೋಟಿ ರೂ ವೆಚ್ಚ ಮಾಡಬೇಕಾಗಿರುವ ರಾಮಪಾದ ಸಾಗರದ ಅಣೆಕಟ್ಟಿನ ಕೆಲಸವನ್ನು ಸಧ್ಯಕ್ಕೆ ಮುಂದೆ ಹಾಕುವಂತೆ ಮದರಾಸು ಸರಕಾರದವರಿಗೆ ಭಾರತ ಸರಕಾರದವರು ಸೂಚನೆಕೊಟ್ಟಿರುವುದಾಗಿ ತಿಳಿದುಬಂದಿದೆ

ಬ್ರಿಟನ್-ಆಸ್ಟ್ರೇಲಿಯಗಳ ಮಧ್ಯಸ್ತಿಕೆಗೆ ಬರ್ಮದ ನಿರಾಕರಣೆ

ಬರ್ಮದಲ್ಲಿ ನಡೆಯುತ್ತಿರುವ ಗಲಭೆಗಳನ್ನು ತಪ್ಪಿಸಲು ಬ್ರಿಟನ್ ಮತ್ತು ಆಸ್ಟ್ರೇಲಿಯಾ ಮುಂತಾದ ರಾಷ್ಟ್ರಗಳ ಮಧ್ಯಸ್ತಿಕೆಯನ್ನು ಸ್ವಾಗತಿಸಲು ಬರ್ಮವು ಅಪೇಕ್ಷಿಸುವುದಿಲ್ಲವೆಂದೂ, ಆದರೆ ಭಾರತದ ಸಹಾಯ ಮತ್ತು ಸಹಕಾರಗಳನ್ನು ಮಾತ್ರ ಸ್ವೀಕರಿಸುವುದೆಂದೂ ಅಲ್ಲಿನ ಪ್ರಧಾನಿ ಥಾಕಿನ್ ನೂ ರವರು ಪಂಡಿತ ನೆಹರೂರವರಿಗೆ ಬರೆದಿರುವುದಾಗಿ ವರದಿಯಾಗಿದೆ

ದಾರಿದ್ರ್ಯದಿಂದ ೪ ಮಕ್ಕಳ ಕೊಲೆ ಮತ್ತು ಆತ್ಮಹತ್ಯ

ಕಡಲೂರಿನ ೭ ಳಿ ಮಂಗಳ [illegible] ಗ್ರಾಮದ ಪದಯ್ಯ ಎಂಬ ೪೫ ವರ್ಷ ವಯಸ್ಸಿನ ಹರಿಜನ ರೈತನು ಬಡತನದ ಬೇಗೆಯನ್ನು ತಾಳಲಾರದೆ ತನ್ನ ೩ ಗಂಡುಮಕ್ಕಳು ಮತ್ತು ಒಬ್ಬ ಹೆಣ್ಣುಮಗಳನ್ನೂ ಕೊಲೆ ಮಾಡಿ ತಾನೂ ಸಹ ನೇಣು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರದಿಯಾಗಿದೆ

ಮಾಲೊಟೊಫ್‌ರವರ ನಿವೃತ್ತಿ

ರಷ್ಯದ ವಿದೇಶಾಂಗ ಮಂತ್ರಿ ಮಾಲೊಟೊಫ್ [illegible] ನಿವೃತ್ತಿ [illegible] ವರದಿಯಾಗಿದೆ

೯೩ ಗಂಟೆಗಳಲ್ಲಿ ವಿಮಾನದ ಭೂ ಪ್ರದಕ್ಷಣೆ

ಅಮೇರಿಕದ ಬಿ ೫೦ ಎಂಬ ಬಾಂಬರ್ ವಿಮಾನವು ೯೩ ಗಂಟೆಗಳಲ್ಲಿ ೨೩,೫೦೦ ಮೈಲಿ ದೂರವನ್ನು ಹಿಂದೆಬಿಡದೆ ಭೂಮಿಯ ಸುತ್ತಲೂ ಸಂಚರಿಸಿ, ವಾಪಸು ಬಂದಿದೆಯೆಂದೂ, ಆ ಕಾಲದಲ್ಲಿಯೇ ಪೆಟ್ರೋಲನ್ನು ಅದಕ್ಕೆ ತುಂಬಲಾಯಿತೆಂದೂ ವರದಿಯಾಗಿದೆ

ಹೊಸ ನಕ್ಷತ್ರ ಶಾಲೆಗಳು

ಖಗೋಳ ಶಾಸ್ತ್ರದ ಅಭ್ಯಾಸಕ್ಕೆ ಸಹಾಯಕವಾಗಲೆಂದು ಭಾರತ ವಿಶ್ವ ವಿದ್ಯಾಲಯಗಳಲ್ಲಿ ಇನ್ನೂ ಐದು ನಕ್ಷತ್ರ ಶಾಲೆಗಳನ್ನು ತೆರೆಯಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ನೂರು ಅಂಗುಲ ಉದ್ದದ ದೂರದರ್ಶಕ ಯಂತ್ರವೊಂದನ್ನು ಉಜ್ಜಯನಿಯಲ್ಲಿ ಕಟ್ಟಲಾಗುವ ನಕ್ಷತ್ರ ಶಾಲೆಯಲ್ಲಿ ಸ್ಥಾಪಿಸಲಾಗುವುದೆಂದು ಹೇಳಲಾಗಿದೆ

ವಿವಾಹ ಮಹೋತ್ಸವ

ಮಹಾಮಹೋಪಾಧ್ಯಾಯ ಪ್ರೊಫೆಸರರಾದ ಶ್ರೀ ಜ ಆರ್ ರಂಗಸ್ವಾಮಿಯವರು ತಮ್ಮ ಪುತ್ರಿ ಚಿ ಸೌ ರುಕ್ಮಿಣಿಯನ್ನು ನಮ್ಮ ಶಿಕ್ಷಕರ ಶ್ರೀ ನಾರಾಯಣ ಭಟ್ಟರವರ ಪುತ್ರ ಶ್ರೀ ಕೆ ಎಸ್ ನರಸಿಂಹಸ್ವಾಮಿಯವರಿಗೆ ಕೊಟ್ಟು ವಿವಾಹವನ್ನು ನಿನ್ನೆ ರಾಜಧಾನಿಯಲ್ಲಿ ನೆರವೇರಿಸಿದರು

ಮಹಾತ್ಮರ ಸ್ಮಾರಕ ಕೀರ್ತಿ ಮಂದಿರ

ಗುಜರಾತಿನ ಪೋರ್ ಬಂದರಿನಲ್ಲಿ ಮಹಾತ್ಮ ಗಾಂಧೀಜೀಯವರು ಜನಿಸಿ ಬೆಳೆದ ಗೃಹವನ್ನು ಕೀರ್ತಿ ಮಂದಿರವನ್ನಾಗಿ ಪರಿವರ್ತಿಸಲೆಂದು ಅದರ ಮಾಲೀಕರಾದ ಶ್ರೀ ಶಾಂತಿದಾಸ್ ನಾಂಜಿರವರು ಮನೆಯನ್ನೂ ಮತ್ತು ೨½ ಲಕ್ಷ ರೂ ಅನ್ನು ಕೊಟ್ಟಿರುತ್ತಾರೆ ಅವಶ್ಯಕ ಬಿದ್ದರೆ ಇನ್ನೂ ಹೆಚ್ಚಿನ ಹಣ ಕೊಡುವುದಾಗಿ ತಿಳಿಸಿರುತ್ತಾರೆ ಪಕ್ಕದ ಜಮೀನನ್ನು ಕೊಂಡು ಕೊಳ್ಳಲು ಸಿದ್ಧತೆ ನಡೆಯುತ್ತಿದೆ

ಸೂರ್ಯ ರಶ್ಮಿಯ ಉಪಯೋಗ

ಗೃಹಕೃತ್ಯದ ಉಪಯೋಗಕ್ಕೂ ಭಾರಿ ಕೈಗಾರಿಕೆಗೂ ಸೌದೆ ಬದಲು ಸೂರ್ಯ ರಶ್ಮಿಯನ್ನು ಉಪಯೋಗಿಸಿ ಕೊಳ್ಳಲು ಪ್ರಯೋಗಗಳು ಅಮೇರಿಕದಲ್ಲಿ ನಡೆಯುತ್ತಿವೆ ಈ ಪ್ರಯತ್ನಗಳಿಂದ ಸ್ವಲ್ಪ ಮಟ್ಟಿನ ಪ್ರಯೋಜನ ಉಂಟಾಗಿರುವುದಾಗಿ ಹೇಳಲಾಗಿದೆ ಕ್ಯಾಲಿಫೋರ್ನಿಯದಲ್ಲಿ ನೀರನ್ನು ಕಾಯಿಸಲು ಬಿಸಿಲನ್ನು ಉಪಯೋಗಿಸುತ್ತಿರುವರೆಂದ ವರದಿಯಾಗಿದೆ ಮನೆಯ ಸೂರುಗಳಮೇಲೆ ವಿಶೇಷ ರೀತಿಯ ಕೊಳಾಯಿಗಳನ್ನಿಟ್ಟು ಕನ್ನಡಿಗಳ ಮೂಲಕ ಸೂರ್ಯ ರಶ್ಮಿಗಳನ್ನು ಕೇಂದ್ರೀಕರಿಸಿ ನೀರನ್ನು ಕಾಯಿಸಲಾಗುತ್ತಿದೆ.

೩ನೇ ತರಗತಿ ಪ್ರಯಾಣಿಕರಿಂದ ೭೭ ಕೋಟಿ ರೂ. ವರಮಾನ

ಕಳೆದ ವರ್ಷ ಭಾರತದ ರೈಲಿನಲ್ಲಿ ಮೂರನೇ ತರಗತಿ ಪ್ರಯಾಣಿಕರಿಂದ ೭೭ ಕೋಟಿ ರೂ. ಆದಾಯ ಬಂದಿತೆಂದೂ, ಒಟ್ಟು ೬೫ ಕೋಟಿ ಜನರು ಅದರಲ್ಲಿ ಪ್ರಯಾಣ ಮಾಡಿದರೆಂದೂ ಹೇಳಲಾಗಿದೆ. ಮೊದಲನೇ ತರಗತಿ ಪ್ರಯಾಣಿಕರಿಂದ ೩ ಕೋಟಿ ರೂ. ಮತ್ತು ಎರಡನೇ ತರಗತಿಯವರಿಂದ ೬.೨೭ ಕೋಟಿ ರೂ ಆದಾಯ ಬಂದಿರುವುದೆಂದೂ ತಿಳಿಸಲಾಗಿದೆ.

ಮಹಾಬಲೇಶ್ವರದಲ್ಲಿ ಭೂಕಂಪ

ಪುಣೆಯ ಸಮೀಪದಲ್ಲಿರುವ ಮಹಾಬಲೇಶ್ವರದಲ್ಲಿ ಮೊನ್ನೆ ರಾತ್ರಿ ೯ ಗಂಟೆಗೆ ಕೆಲವು ಸೆಕೆಂಡುಗಳ ಕಾಲ ಭೂ ಕಂಪವಾಯಿತೆಂದೂ, ಹಲವು ಹಳೇ ಗೋಡೆಗಳು ಬಿದ್ದುಹೋದುವೆಂದೂ, ವರದಿಯಾಗಿದೆ. ಮನೆಗಳಲ್ಲಿದ್ದ ಪಾತ್ರೆ ಪದಾರ್ಥಗಳು ಉರುಳಿದುವು ಕುರ್ಚಿಯ ಮೇಲೆ ಕುಳಿತಿದ್ದ ಜನರು ದೂರಕ್ಕೆ ಎಸೆಯಲ್ಪಟ್ಟರು

ಪ್ರಭಾ 4-3-49ರಿಂದ ಯಶಸ್ವಿಯಾದ 2ನೆಯ ವಾರ

ಫೇಮಸ್ ಪಿಕ್ಚರ್ಸ್‌ರವರ ಪ್ಯಾರ್-ಕಿ-ಜೀತ್ (ಹಿಂದಿ)

ದಿನವಹಿ ೩ ಆಟಗಳು

ಪಾತ್ರ:- ಸುರಯ್ಯ, ಮನೋರಮ, ರೆಹಮಾನ್

ಇದರೊಂದಿಗೆ "ಬಾಪೂಕಿ ಅಮರ್ ಕಹಾನಿ" ಎಂಬ ಮಹಾತ್ಮ ಗಾಂಧಿಯವರ ಜೀವನ ಚರಿತ್ರೆಯ ಫಿಲಮ್ಮೂ ಪ್ರದರ್ಶಿಸಲಾಗುವುದು

ಬೆಳಗಿನ ಪ್ರದರ್ಶನಗಳು

ಮಾರ್ಚಿ 4 ರಿಂದ 7ರ ವರೆಗೆ (ನಾಲ್ಕು ದಿನಗಳು ಮಾತ್ರ)

* ರಾಯ್ ಸಾಹೆಬ್ *

* ಜಗದೀಶ್ * ಕೌಶಲ್ಯಾ ನಟಿಸಿರುವ ಹಿಂದಿ ಚಿತ್ರ

ರಾಜಕಮಲ್ ಟಾಕೀಸ್

ಮೈಸೂರು ದೇಶದಲ್ಲಿ ಪ್ರಥಮ ಪ್ರದರ್ಶನ

4-3-49ರಿಂದ ಆರಂಭ

ಪ್ರತಿ ದಿನ ೩ ಆಟಗಳು

ದಸರ ಕನ್ನಡ ದಸರ

ಭೂಮಿಕೆ:- ಸರಸ್ವತಿ, ಲತಾ, ಲೀಲಾ, ಶ್ರೀಧರ ಎಂ.ಎಸ್. ಆರಾಧ್ಯ

RAJAKAMAL

Mysore

Morning Shows from 4-3-49 for 4 days only

WHITE SAVAGE

(In Technicolor)

With: Maria Montez, John Hall & Mysore Sabu.

ನಿಮ್ಮ ಮೈ ಮೊಗವುಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ

[illegible]

ಜನರಲ್ ಮ್ಯಾನೇಜರ್‌ರವರ ಕಚೇರಿ, ಗಂಧದ ಎಣ್ಣೆ ಕಾರ್ಖಾನೆ, ಮೈಸೂರು. ತಾ|| ೨೮-೨-೪೯

ಟೆಂಡರು ನೋಟೀಸು

ಈ ಕೆಳಗೆ ರುಜು ಮಾಡಿರುವವರಿಂದ, ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ದೊರೆಯುವ ಒಂದು ಟನ್ ತಗಡು ತುಂಡುಗಳನ್ನು (Tin Scraps)ಕೊಂಡುಕೊಳ್ಳಲು ಸೀಲಾದ ಟೆಂಡರುಗಳನ್ನು ೧೯೪೯ನೇ ಮಾರ್ಚಿ ೨೧ನೇ ತಾರೀಖು ೩ ಘಂಟೆಯವರೆವಿಗೂ ತೆಗೆದು ಕೊಳ್ಳಲಾಗುವುದೆಂದು ಈ ಮೂಲಕ ಸಾರ್ವಜನಿಕರಿಗೆ ಪ್ರಕಟಿಸಲಾಗಿದೆ.

ಟೆಂಡರನ್ನು ಕಳುಹಿಸುವಾಗ ಅದರ ಮೇಲೆ "ತಗಡು ತುಂಡುಗಳನ್ನು ಕೊಂಡುಕೊಳ್ಳುವುದಕ್ಕೆ ಟೆಂಡರು" ಎಂದು ವಿಶದವಾಗಿ ನಮೂದಿಸಿ ಟೆಂಡರಿನೊಂದಿಗೆ ಒಂದು ನೂರು ರೂಪಾಯಿಗಳ (ರೂ ೧೦೦) ಠೇವಣಾತಿಯನ್ನು ಕಳುಹಿಸಬೇಕು.

ಟೆಂಡರುಗಳನ್ನು ತಾರೀಕು ೨೧-೩-೧೯೪೯ ರಂದು ೪ ಘಂಟೆಗೆ ಅಲ್ಲಿ, ಆ ಕಾಲದಲ್ಲಿ ನೆರದಿರುವ ಟೆಂಡರುದಾರರ ಎದುರಿನಲ್ಲಿ ತೆಗೆಯಲಾಗುವುದು.

ಮೈಸೂರು-ಬೆಂಗಳೂರಿನ ಗಂಧದ ಎಣ್ಣೆ ಕಾರ್ಖಾನೆಗಳ ಡೈರೆಕ್ಟರವರೇ ಟೆಂಡರುಗಳನ್ನು ಯಾವ ಕಾರಣಗಳನ್ನೂ ಕೊಡದೆ ಒಪ್ಪುವುದಕ್ಕೂ ಅಥವಾ ನಿರಾಕರಿಸುವುದಕ್ಕೂ ಪರಮಾಧಿಕಾರಿಗಳು

ಒಪ್ಪಲ್ಪಟ್ಟ ಟೆಂಡರುದಾರನು, ಬಿಕ್ಕ ಹಣವನ್ನು ಟೆಂಡರನ್ನು ಒಪ್ಪಿದ ಒಂದು ವಾರದೊಳಗಾಗಿ ಪಾವತಿ ಮಾಡಿ ಮಾಲನ್ನು ಕಾರ್ಖಾನೆಯ ಆವರಣದಿಂದ ಖಾಲಿ ಮಾಡಬೇಕು, ಇಲ್ಲದಿದ್ದಲ್ಲಿ ಟೆಂಡರಿನ ಠೇವಣಾತಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಮಾಲನ್ನು ಪುನಃ ಮಾರಾಟ ಮಾಡಲಾಗುವುದು. ಹಾಗೆ ಮಾಡುವಾಗ ಏನಾದರೂ ನಷ್ಟವಾದಲ್ಲಿ ಟೆಂಡರುದಾರನು ಹೊಣೆಯಾಗಬೇಕು

ಜನರಲ್ ಮ್ಯಾನೇಜರ್,
ಗಂಧದೆಣ್ಣೆ ಕಾರ್ಖಾನೆ, ಮೈಸೂರು.

ಶ್ರೀ ಗಾಯತ್ರೀ ಟಾಕೀಸ್

ತಾ|| 6-3-49 ರಿಂದ 3 ದಿನಗಳು

ಪ್ರತಿ ದಿನ 3 ಪ್ರದರ್ಶನಗಳು

ಪ್ಯಾರಾಮೌಂಟ್ಸ್‌ರವರ

ದಿ ಲೈವ್ಸ್ ಆಫ್ ಎ ಬೆಂಗಾಲ್ ಲ್ಯಾನ್ಸರ್

(THE LIVES OF A BENGAL LANCER)

ಪಾತ್ರ:- ಗ್ಯಾರಿ ಕೂಪರ್

MORNING SHOWS at 10-30 on Sat. 5th & Sun 6th

20th MARGIE

ಮಾರ್ಜಿ

ವರ್ಣರಂಜಿತ ಚಿತ್ರ

ಲಗ್ನದ ಜವಳಿಗಾಗಿ

ಗುರುದೇವಾ ...

ಬೆಂಗಳೂರು ಜವಳಿ ಅಂಗಡಿಗೆ

ಒಂದೇ ಭೇಟಿ ಕೊಡಿ

ಶಿವಾಜೀಪೇಟೆ ... ಮೈಸೂರು

ಶುಭಕರವಾದ

ಲಗ್ನದ ಜವಳಿಗಳಿಗೆ

ನಮ್ಮಲ್ಲಿಗೆ ದಯೆಯಿಟ್ಟು ಭೇಟಿ ಕೊಡಿ

ವೀರಣ್ಣ ಸಿಲ್ಕು ಎಂಪೋರಿಯಂ

ವಿ. ರಾಮಯ್ಯ ಅಂಡ್ ಬ್ರದರ್ಸ್

ಇರ್ವಿನ್ ರಸ್ತೆ :: ಮೈಸೂರು

ಸಿಮೆಂಟ್ ಬೇಕೇ

ಇಗೋ, ಡಾಲ್ಮಿಯಾ

ಶ್ರೇಷ್ಠವಾದದ್ದು, ಸರ್ಕಾರದವರು ಅಂಗೀಕಾರ ಮಾಡಿರುವ ಬೆಲೆಗೆ ಸಿಕ್ಕುವಂಥದ್ದು

—:ಏಜೆಂಟರು:—

ಸಿ. ಬಿ. ಎಸ್. ಕುಮಾರ್

ಅಶೋಕಾ ರೋಡ್, ಮೈಸೂರು

Edited printed and published by A P N ... araiana at the Sadhvi Press, D Subbiah Road Mysore.

ಶೆ (ೕ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸ

ಸಾಧ್ವಿ

ಸಂಪುಟ ೧೩] ಭಾನುವಾರ ೬-೩-೧೯೪೯ [ಸಂಚಿಕೆ ೨೯

ಗ್ರಾಮಗಳು ಸಂಸ್ಕೃತಿಯ ಸಿರಿ ಬೀಡಾಗಬೇಕು

ಗ್ರಾಮಾಭಿವೃದ್ಧಿ ಯೋಜನೆಯ ಆರಂಭೋತ್ಸವದಲ್ಲಿ ಪ್ರಭುಗಳ ಸಂದೇಶ

ಮೈಸೂರು ೬

ಸರ್ಕಾರದವರು ಮಂಜೂರು ಮಾಡಿರುವ ನೂತನ ಗ್ರಾಮಾಭಿವೃದ್ಧಿಯ ಪ್ರಾರಂಭೋತ್ಸವವನ್ನು ಈ ದಿನ ಬೆಳಗ್ಗೆ ಸಚಿವರಾದ ನಾಬ್ ಮಹಮದ್ ಷರೀಫರವರು ನೆರವೇರಿಸಿದರು. ಬೆಳಗ್ಗೆ ೮ ಗಂಟೆಗೆ ಹೋಂ ಗಾರ್ಡುಗಳು, ಸ್ಕೌಟುಗಳು ಮತ್ತು ಗ್ರಾಮಾಭಿವೃದ್ಧಿ ಕೆಲಸಗಾರರು ಅ... ಕಛೇರಿಯಿಂದ ಮೆರವಣಿಗೆಯಲ್ಲಿ ... ಇಲ್ಲಿಗೆ ಬಂದರು

... ಹಾಲ್ ಮೈದಾನದಲ್ಲಿ ಶ್ರೀ ಎಸ್. ರಂಗರಾಮಯ್ಯನವರು ರಾಷ್ಟ್ರ ಧ್ವಜವನ್ನೂ ... ಮಹಮದ್ ಷರೀಫರು ಗಂಡಭೇರುಂಡ ಧ್ವಜವನ್ನೂ ಹಾರಿಸಿದರು.

ಶ್ರೀಮತಿ ಅನಸೂಯಾಬಾಯಿ ಮತ್ತು ಶ್ರೀ ... ರಾಮಕೃಷ್ಣ ಶಾಸ್ತ್ರಿಗಳವರಿಂದ ದೇವತಾ ಪ್ರಾರ್ಥನೆಯೊಡನೆ ಕಾರ್ಯಕ್ರಮವು ಆರಂಭವಾಯಿತು. ಜಿಲ್ಲಾಧಿಕಾರಿಗಳಾದ ಮಿ|| ಜಾರ್ಜ್ ಮ್ಯಾಥ್ಯೂರವರು ಸ್ವಾಗತ ಭಾಷಣ ಮಾಡಿದರು. ಅನಂತರ ಶ್ರೀಗಳ ವಿ ಎಸ್. ರಂಗರಾಮಯ್ಯ ಮತ್ತು ... ಎಂ ಚನ್ನಬಸಪ್ಪನವರುಗಳು ಭಾಷಣ ಮಾಡಿ, ನೂತನ ಯೋಜನೆಯನ್ನು ... ಅದು ಯಶಸ್ವಿಯಾಗುವಂತೆ ಮಾಡಲು ಸರ್ವರೂ ಸಹಕರಿಸಬೇಕೆಂದು ಕೋರಿದರು. ಸಮಾರಂಭಕ್ಕೆ ಯಶಸ್ಸನ್ನು ... ಶ್ರೀ ಪ್ರಭುಗಳು ಕೆಳಗೆ ಕಂಡ ಸಂದೇಶವನ್ನು ಕಳುಹಿಸಿದ್ದರು.

ಶ್ರೀಮನ್ಮಹಾರಾಜರವರ ಸಂದೇಶ

ನಮ್ಮ ಸರ್ಕಾರದವರು ಗ್ರಾಮಾಭಿವೃದ್ಧಿಯ ನೂತನ ಯೋಜನೆಯೊಂದನ್ನು ... ಕರೆಗೆ ತರಬೇಕೆಂದು ನಿಶ್ಚಯಿಸಿ ಮಾ... ಈ ದಿನ ಒಂದೊಂದು ಜಿಲ್ಲೆಯಲ್ಲಿ ಒ... ಸಚಿವರಿಂದ ಅದು ಒಟ್ಟು ... ನದಲ್ಲಿ ಆರಂಭವಾಗುವುದು ನಮಗೆ ಬಹಳ ಸಂತೋಷಕರವಾಗಿದೆ. ಆಧುನಿಕ ಪರಿಸ್ಥಿತಿಗಳಿಂದಲೂ ಮತ್ತು ನವೀನ ಕಾಲದ ಜೀವನದ ಅವಶ್ಯಕತೆಗಳಿಂದಲೂ ಗ್ರಾಮಾಂತರ ವ್ಯವಸ್ಥೆಯು ಶೀಘ್ರವಾಗಿ ಶಿಥಿಲವಾಗುತ್ತಾ ಬರಲು ಕಾರಣವಾಯಿ...

ಸಂಸ್ಥಾನದ ಹಿತಸಾಧನೆಯಲ್ಲಿ ಗ್ರಾಮಾಂತರ ವ್ಯವಸ್ಥೆಯು ಎಷ್ಟು ಪ್ರಾಮುಖ್ಯವಾದುದೆಂಬುದನ್ನು ನಮ್ಮ ಸರ್ಕಾರದವರು ಬಹುಕಾಲಕ್ಕೆ ಹಿಂದೆಯೇ ... ಒಂದು ತಲೆಮಾರಿಗಿಂತ ... ತ್ತು ಕಾಲದಿಂದ ಗ್ರಾಮಾಂತರ ವ್ಯವಸ್ಥೆಯನ್ನು ಉತ್ತಮಗೊಳಿಸುವ ಪ್ರಯತ್ನಗಳನ್ನು ನೆರವೇರಿಸುತ್ತಿದ್ದಾರೆ. ... ಶಾಂತಿಯು ನೆಲಸಿರುವುದೇ ಗ್ರಾಮಗಳ ... ಎಂಬುದೂ, ಮತ್ತು ಗ್ರಾಮನಿವಾಸಿ ... ಅಭ್ಯುದಯವು ಒಟ್ಟು ಸಂಸ್ಥಾನದ ... ಭದ್ರತೆಗೂ ಸಾಧಕ ಎಂಬುದೂ, ... ವಾದ ಸತ್ಯವಾಣಿಗಳಾಗಿವೆ. ಅ... ಪದೇ ಪದೇ ಸೂಚಿತವಾಗುವ ... ಹಲವು ಸಂದರ್ಭಗಳಲ್ಲಿ ಕಂಡ... ಅವುಗಳ ಆಶಯವು ಪೂರ್ಣ... ಸಮುಟ್ಟಿದುದರ ನಿದರ್ಶನಗಳು ... ಹೇಳಬೇಕಾಗಿದೆ. ಹಿಂದೆ, ... ಆಡಳಿತ ಸ್ವಾತಂತ್ರ್ಯವಿದ್ದು, ... ಅವಶ್ಯಕತೆಗಳೆಲ್ಲ ಅನ್ಯವಸ್ಥೆ... ಯಿಂದಲೇ ನೆರವೇರುತ್ತಿದ್ದವು. ಆ ಬಗೆಯ ಆಡಳಿತ ವ್ಯವಸ್ಥೆಯು ಈಗ ಶಿಥಿಲವಾಗಿಹೋಗಿದೆ. ಈಗ ಗ್ರಾಮದ ಅವಶ್ಯಕತೆಗಳು ಗ್ರಾಮ ವ್ಯವಸ್ಥೆಯಿಂದ ಒದಗಿಸಲ್ಪಡುತ್ತಿಲ್ಲ. ಗ್ರಾಮಸ್ಥರಲ್ಲಿ ಅನೇಕರು ಜೀವನೋಪಾಯಕ್ಕಾಗಿ ಪೌರ ಪ್ರದೇಶಗಳಿಗೆ ವಲಸೆ ಹೋಗುವುದು ಏಕ ಪ್ರಕಾರವಾಗಿ ಹೆಚ್ಚುತ್ತಿದೆ. ಅದರ ಪರಿಣಾಮವಾಗಿ ಆರ್ಥಿಕವಾಗಿಯೂ ಮತ್ತು ನೈತಿಕವಾಗಿಯೂ ಅನೇಕ ಸಮಸ್ಯೆಗಳು ಏಕಪ್ರಕಾರವಾಗಿ ಒದಗುತ್ತಿವೆ.

ಗ್ರಾಮಾಭಿವೃದ್ಧಿಯ ಹೊಸ ಯೋಜನೆಯು, ಗ್ರಾಮಾಂತರ ಪ್ರದೇಶದ ನಾನಾ ಕಾರ್ಯಕಲಾಪಗಳಿಗೂ ನವ ಚೈತನ್ಯವನ್ನು ... ಗ್ರಾಮಸ್ಥರ ಆತ್ಮಸ್ಥೈರ್ಯವನ್ನು ... ಮಾಡಿ, ... ಅಭ್ಯುದಯವನ್ನು ಸಾಧಿಸುವ ಧ್ಯೇಯದಿಂದ ... ವಾಗಿದೆ. ವ್ಯವಸಾಯ ... ಉತ್ತಮವಾಗುವುದಕ್ಕೂ, ... ಹೆಚ್ಚಾಗಿ ಬೇಕಾದ ... ನಡೆದು ಹೆಚ್ಚು ಬೆಳೆ ಬರುವಂತೆ ಮಾಡುವ ಸೌಕರ್ಯಗಳು ವ್ಯವಸಾಯಗಾರರಿಗೆ ದೊರೆಯುವುದಕ್ಕಾಗಿ ಅವಕಾಶ ಕಲ್ಪಿಸುವುದು ಈ ಯೋಜನೆಯ ಉದ್ದೇಶಗಳಲ್ಲೊಂದಾಗಿದೆ. ಜಮೀನುಗಳಿಂದ ಎಷ್ಟು ಮಂದಿಗೆ ಜೀವನವಾಗಬಹುದೋ ಅಷ್ಟಕ್ಕಿಂತಲೂ ಹೆಚ್ಚು ಮಂದಿಗಳು ಅವುಗಳ ಅವಲಂಬನೆಯನ್ನು ... ಮಾಡುವುದನ್ನು ತಪ್ಪಿಸುವುದು, ಗ್ರಾಮಸ್ಥರು ಇತರ ನಾನಾ ಕಸಬುಗಳನ್ನು ಅವಲಂಬಿಸುವಂತೆ ಮಾಡುವುದು — ಇವೇ ಮುಂತಾದ ಕಾರ್ಯಕಲಾಪಗಳನ್ನು ಗ್ರಾಮಾಭಿವೃದ್ಧಿ ಸಮಿತಿಗಳವರು ತೀವ್ರಾಸಕ್ತಿಯಿಂದ ನೆರವೇರಿಸಬೇಕೆಂದು ಗೊತ್ತಾಗಿದೆ.

ಗ್ರಾಮಗಳು ಅಭಿವೃದ್ಧಿ ಹೊಂದಿ, ಸಂಸ್ಕೃತಿಯ ಸಿರಿ ಬೀಡಾಗಿ ಪರಿಣಮಿಸಬೇಕು. ಗ್ರಾಮಸ್ಥರು ಹಿಂದಿನಂತೆ ಕ್ರಿಯಾಶೀಲರಾಗಬೇಕು. ಭಿನ್ನಭಾವಗಳೂ ಮತ್ತು ದ್ವೇಷಾಸೂಯೆಗಳಿಂದ ಕೂಡಿದ ಪಕ್ಷಪಾತ ಭಾವಗಳೂ ದೂರವಾಗಬೇಕು. ಇನ್ನು ಮುಂದೆ ಪ್ರೀತಿಮಯವಾದ ಸಹಕಾರವನ್ನು ತೋರಿಸುವ ವರ್ತನೆಯಲ್ಲಿ ಜನರು ಒಬ್ಬರನ್ನು ಮತ್ತೊಬ್ಬರು ಮೀರಿಸುವ ಸ್ಪರ್ಧೆಯನ್ನು ಪ್ರದರ್ಶಿಸಬೇಕು. ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ ಹೊಸದಾಗಿ ಏರ್ಪಟ್ಟಿರುವ ಸಮಿತಿಗಳಲ್ಲಿ ಮುಖ್ಯವಾಗಿ ... ದುಗಳೇ ಸದಸ್ಯರಾಗಿದ್ದಾರೆ. ಅಲ್ಲದೆ ಸಮಿತಿಗಳಿಗೆ ಸ್ವತಂತ್ರವಾದ ... ಈ ನೂತನ ... ಅಭಿವೃದ್ಧಿ ಸಮಿತಿಗಳು ಗ್ರಾಮಗಳ ... ಧ್ಯೇಯ ಸಾಧನೆ ಮಾಡಿ, ಗ್ರಾಮಸ್ಥರ ಜೀವನದ ನವ ಚೈತನ್ಯದಿಂದ ... ಮಾಡುತ್ತವೆಂದು ಸಾಧ್ಯವಾದ ... ದ ಹಾರೈಸುತ್ತಿದ್ದೇವೆ.

ಭಾಷಣಗಳಾದ ನಂತರ ಜನಾಬ್ ಷರೀಫರು ಆರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ ಸೇವೆಯೇ ಜನರ ಧ್ಯೇಯವಾಗಿರಬೇಕೆಂದು, ಆದರಿಂದ ... ತಿಳಿಸಿ, ಮಲೆನಾಡಿನಲ್ಲಿ ತಾವು ... ವಾಸ ಮಾಡಿದಾಗ ... ಹೊಲ್ಲಿಗೆ ... ಸ್ಥಿತಿ ... ನ ... ನಾಗಿತ್ತೆಂದ...

ಕಣ್ಣಾನೂರು ಸೆಂಟ್ರಲ್ ಜೈಲಿನಿಂದ ಕಮ್ಯೂನಿಸ್ಟರ ಪರಾರಿ

ಹದಿನಾಲ್ಕು ಜನ ಕಮ್ಯೂನಿಸ್ಟ್ ಖೈದಿಗಳು ಕಣ್ಣಾನೂರು ಸೆಂಟ್ರಲ್ ಜೈಲಿನಿಂದ ಮೊನ್ನೆ ಅಜ್ಞಾತ ಕಾಲ ತಪ್ಪಿಸಿ ಕೊಂಡರೆಂದು ತಿಳಿದು ಬಂದಿದೆ. ಈ ಪೈಕಿ ಇಬ್ಬರು ಶಿಕ್ಷಿಸಲ್ಪಟ್ಟವರು. ಉಳಿದವರು ಆಪಾದಿತರು.

ಅಪಹೃತ ಹಿಂದೂ ಮತ್ತು ಸಿಕ್ ಮಹಿಳೆಯರು ವಾಪಸು

ಪಾಕಿಸ್ಥಾನದ ... ಪುರದ ಜಿಲ್ಲೆಯಿಂದ, ರಕ್ಷಿಸಲ್ಪಟ್ಟ ಆರು ಜನ ಹಿಂದೂ ಮತ್ತು ಸಿಕ್ ಅಪಹೃತ ಯುವತಿಯರು ... ವ್ಯತಸರಕ್ಕೆ ಆಗಮಿಸಿದ್ದಾರೆ. ಅವರನ್ನು ಜಲಂಧರ್‌ನಲ್ಲಿರುವ ನಿರಾಶ್ರಿತ ಶಿಬಿರಕ್ಕೆ ಕಳುಹಲಾಗುವುದು. ೫೫ ವರ್ಷದ ವೃದ್ಧಳು ಮುಲ್ತಾನಿನಿಂದ ಬಂದಿದ್ದಾಳೆ. ಆಕೆಯ ಮಗನು ಇಸ್ಲಾಂ ಮತಕ್ಕೆ ಸೇರಿಸಲ್ಪಟ್ಟು, ಈಗ ಆತನು ಅಲ್ಲಿಯೇ ಇದ್ದಾನೆ.

ದ. ಆಫ್ರಿಕಾದಿಂದ ೧೩ ಜನ ಭಾರತೀಯರು ವಾಪಸು

ಹದಿಮೂರು ಜನ ಭಾರತೀಯರು ದ. ಆಫ್ರಿಕಾದ ಡರ್ಬಾನ್‌ನಿಂದ ಮೊನ್ನೆ ಭಾರತಕ್ಕೆ ವಾಪಸು ಹೊರಟರು. ದ. ಆಫ್ರಿಕಾ ಸರಕಾರವು ಭಾರತೀಯರನ್ನು ಹೊರಕ್ಕೆ ಕಳುಹಿಸುವ ಏರ್ಪಾಡಿನ ಅಂಗವಾಗಿಯೇ ಈ ಪ್ರಯಾಣ ನಡದಿದೆ.

ಮುಂದೆ ... ಈ ಕಾರ್ಯವನ್ನು ನಡೆಸಬೇಕೆಂದೂ ತಿಳಿಸಿದರು. ಸರಕಾರದವರು ಈ ಯೋಜನೆಯನ್ನು ಬಹು ಎಚ್ಚರಿಕೆಯಿಂದ ಪರಿಶೀಲಿಸಿ ತಂದಿರುವರೆಂದರು.

ಸರ್ಕಾರದ ಯೋಜನೆಗೆ ಪ್ರೋತ್ಸಾಹ ಕೊಡುವ ... ಒಳ ... ಕೃಷಿ ... ಆಹಾರ ಧಾನ್ಯ ಸಂಗ್ರಹಕ್ಕಾಗಿ ... ಸಮಿತಿ ರಚಿತವಾಯಿತು. ಇದರಲ್ಲಿ ಶ್ರೀ ಎಸ್. ರಂಗರಾಮಯ್ಯ, ಶ್ರೀ ಬಿ ಪಿ ಬೋರಯ್ಯ, ಶ್ರೀ ಎಂ ಎಚ್. ... ಅರಸ್, ಶ್ರೀ ... ಮತ್ತು ಶ್ರೀ ಕೆ. ವಿಶ್ವೇಶ್ವರಗೌಡರು ಇದ್ದಾರೆ. ಇಲ್ಲಿಗೆ ಸಮಾರಂಭವು ಮುಕ್ತಾಯವಾಯಿತು.

ಸಂಗೀತ ಕಛೇರಿ

ಶ್ರೀ ಸರಸ್ವತಿ ಸಂಗೀತ ಸಮಾಜದ ಆಶ್ರಯ... ಶಾಸ್ ಬಾನುವಾರ ಸಾಯಂ ೬ ಗಂಟೆಗೆ ... ಭವನದಲ್ಲಿ ... ಶ್ರೀಮತಿ ಎಸ್ ಪಿ. ರುಕ್ಮಿಣಿ ... ನವರ ... ಗ ... ನಡೆಯುತ್ತದೆ.

ಗ್ರಾಮಾಭಿವೃದ್ಧಿ ಯೋಜನೆ

ಶ್ರೀ ಕೆ. ಸಿ. ರೆಡ್ಡಿಯವರಿಂದ ಆರಂಭೋತ್ಸವ

ಸ್ವಂ. ಫೋನ್] ಬೆಂಗಳೂರು ೬

ನೂತನ ಗ್ರಾಮಾಭಿವೃದ್ಧಿ ಯೋಜನೆಯ ಆರಂಭೋತ್ಸವವನ್ನು ಈ ದಿನ ಬೆಳಗ್ಗೆ ಪ್ರಧಾನ ಸಚಿವ ಶ್ರೀ ಕೆ ಸಿ ರೆಡ್ಡಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಅವರು ಕೆಳಗೆ ಕಂಡಂತೆ ಭಾಷಣ ಮಾಡಿದರು.-

ಈ ಗ್ರಾಮಾಭಿವೃದ್ಧಿ ಯೋಜನೆಗಳು ಹೊಸದೇನೂ ಅಲ್ಲ, ಇವು ೧೯೧೦ನೇ ಇಸವಿಯಲ್ಲೇ ಸರ್ ಎಂ. ವಿಶ್ವೇಶ್ವರಯ್ಯನವರಿಂದ ತಯಾರಿಸಲ್ಪಟ್ಟಿದ್ದವು. ಈಗಿನ ಯೋಜನೆಗಳು ಕೆಲವು ಮಾರ್ಪಾಡುಗಳಿಂದ ಕೂಡಿ ಬಹಳ ಚೆನ್ನಾಗಿ ಇದೆ. ಇದರಿಂದ ಮುಖ್ಯವಾಗಿ ಗ್ರಾಮಾಧಿಕಾರಿಗಳಿಗೆ ಹೆಚ್ಚು ಅಧಿಕಾರ ಕೊಟ್ಟಂತಾಗಿದೆ. ಗ್ರಾಮಗಳಲ್ಲಿ ಸ್ವಾವಲಂಬನೆ ಮತ್ತು ಸ್ವಪರಿಪೂರ್ಣತೆಯನ್ನು ಸ್ಥಾಪಿಸುವುದೇ ಈ ಯೋಜನೆಯ ಮೂಲೋದ್ದೇಶ.

ಶ್ರೀ ವಿ ವೆಂಕಟಪ್ಪನವರು ಯೋಜನೆಯನ್ನು ಸ್ವಾಗತಿಸಿ ಭಾಷಣ ಮಾಡಿದರು.

● ಬ್ರಿಗೇಡಿಯರ್ ಜನರಲ್ ಕೆ.ಎಂ ಕರಿಯಪ್ಪನವರು ಈ ತಿಂಗಳು ಮೂರನೇ ವಾರದಲ್ಲಿ ಇಲ್ಲಿಗೆ ಬರುವ ನಿರೀಕ್ಷಣೆಯಿದೆ

ಶಿವಮೊಗ್ಗ ಹಳ್ಳಿಯಲ್ಲಿ ಭಾರಿ ಬೆಂಕಿ ಅನಾಹುತ

ಶಿವಮೊಗ್ಗ ಜಿಲ್ಲೆ ಸೊರಬ್ ತಾಲ್ಲೂಕು ... ಹಳ್ಳಿಯಲ್ಲಿ ಕಳ್ಳಭಟ್ಟಿ ತಯಾರು ಮಾಡುತ್ತಿದ್ದಾಗ ಆಕಸ್ಮಿಕವಾಗಿ ಬೆಂಕಿ ತಗುಲಿ ೫೭ ಮನೆಗಳು ಸುಟ್ಟುಹೋದವು. ೮ ದನಗಳು ಸತ್ತವು, ೩೦೦ ಪಲ್ಲ ಆಹಾರ ಧಾನ್ಯಗಳು ನಾಶವಾದವು. ಅಲ್ಲದೆ ೬೦ ಹುಲ್ಲು ಬಣವೆಗಳು ಸುಟ್ಟುಹೋದವು. ಒಟ್ಟು ೧ ಲಕ್ಷ ರೂ. ನಷ್ಟವೆಂದು ಅಂದಾಜಾಗಿದೆ.

ಇದೇ ಜಿಲ್ಲೆಯ ಆನವಟ್ಟಿಯಲ್ಲಿ ಮತ್ತೊಂದು ಬೆಂಕಿ ಪ್ರಮಾದ ಸಂಭವಿಸಿ ೩ ವರ್ಷದ ಮಗುವು ಅಗ್ನಿಗೆ ಆಹುತಿಯಾಯಿತು. ೪೫ ಮನೆಗಳು ಸುಟ್ಟು ಅಧಿಕ ನಷ್ಟ ಸಂಭವಿಸಿರುವುದಾಗಿ ವರದಿಯಾಗಿದೆ.

ಪಾಕಿಸ್ತಾನದ ಮೇಲೆ ಇಪಿ ಫಕೀರನ ಧಾಳಿ

ಪಾಕಿಸ್ತಾನದ ಪಶ್ಚಿಮ ಗಡಿಯ ಥಾಲ್ ಕೋಟೆಯನ್ನು ಹಿಡಿಯಲು ಇಪಿ ಫಕೀರನು ತನ್ನ ೨೦೦ ಜನ ಹಿಂಬಾಲಕರೊಡನೆ ಕೋಟೆ ಮೇಲೆ ಬಿದ್ದು ಧಾಳಿ ಮಾಡಿದನೆಂದೂ, ಅವನನ್ನು ಮಾರ್ಟರ್ ಮತ್ತು ವಿಮಾನಗಳ ಸಹಾಯದಿಂದ ಹಿಮ್ಮೆಟ್ಟಿಸಲಾಯಿತೆಂದೂ, ಪಾಕಿಸ್ತಾನದ ಸೈನ್ಯಾಧಿಕಾರಿಗಳ ಹೇಳಿಕೆ ತಿಳಿಸಿದೆ. ಫಕೀರನ ಕಡೆ ೫೦ ಜನರ ಸಾವು ನೋವಾಗಿದೆ. ಥಾಲ್ ಕೋಟೆ ಆಫ್ಘಾನಿಸ್ಥಾನದ ಗಡಿಯಲ್ಲಿದೆ

ಲೌಡ್ ಸ್ಪೀಕರುಗಳ ಮೂಲಕ ಪರೀಕ್ಷೆಯ ಉತ್ತರ

ಬರ್ದ್ವಾನಿನ ಇಂಟರ್ ಕಾಲೇಜು ವಿದ್ಯಾರ್ಥಿಗಳು ಕಳೆದ ಸೋಮವಾರ ಪರೀಕ್ಷೆಗೆ ಕುಳಿತಿದ್ದಾಗ, ತಮಗೆ ಕೊಟ್ಟ ಪ್ರಶ್ನೆ ಪತ್ರಿಕೆಯನ್ನು ಕೂಡಲೇ ... ತನದಲ್ಲಿ ಹೊರಕ್ಕೆ ಸಾಗಿಸಿ, ಅವುಗಳ ಉತ್ತರವನ್ನು ಸುರಗಳಿಗೆ ಕಟ್ಟಿದ್ದ ಲೌಡ್ ಸ್ಪೀಕರುಗಳ ಮೂಲಕ ಪಡೆದು, ಅವುಗಳನ್ನು ಬರೆಯುತ್ತಿದ್ದರೆಂದು ವರದಿಯಾಗಿದೆ. ವಿಶ್ವವಿದ್ಯಾಲಯದ ಅಧಿಕಾರಿಗಳು ... ಪರೀಕ್ಷೆ ...

ವಾರ ಭವಿಷ್ಯ

ತಾ|| ೬-೩-೪೯ ರಿಂದ ೧೨-೩-೪೯ ರ ವರೆಗೆ

ಮೇಷ ಮಹತ್ತರ ಕಾರ್ಯ ಈಗ ಲೇ ಪೂರೈಸಿ ಆರೋಗ್ಯ ಲಾಭ ಸ್ವೀಕೃತ ಕಾರ್ಯಜಯ ನೌಕರಿ ದಂಧೆಗಳಲ್ಲಿ ಎದುರಾಳಿಗಳು ತಲೆ ತಗ್ಗಿಸುವರು ತಾ|| ೭-೯ ಮಹತ್ವ ಪತ್ರ ಆಗಮನ ಮಿತ್ರರ ಪ್ರೋತ್ಸಾಹ

ವೃಷಭ ಹಣಕಾಸಿನ ಲಾಭವುಂಟು ಆರೋಗ್ಯ ನೆಟ್ಟಗೆ ಮಿತ್ರರ ಆಗ್ರಹದಿಂದ ಪ್ರವಾಸ ವ್ಯಾಪಾರಾದಿಗಳಲ್ಲಿ ಕೀರ್ತಿ, ಮೇಲ್ಪಟ್ಟವರ ಸುಪ್ರಸನ್ನತೆ, ತಾ|| ೯ ೧೧ ಚಿತಣ, ಶುಭ ವಾರ್ತೆ

ಮಿಥುನ– ಇಷ್ಟರ ಭೇಟಿ ಹಣಕಾಸಿನ ಸ್ಥಿತಿ ಉತ್ತಮ ವಿದ್ಯಾರ್ಥಿಗಳಿಗೆ ಮತ್ತು ಲೇಖಕರಿಗೆ ಕೀರ್ತಿ ಪತ್ನಿ ಆರೋಗ್ಯವುಂ[illegible] ಮನೆಯಲ್ಲಿ ಮನರಂಜನೆ ಘಟನೆ ತಾ|| ೧೨ ೧೧ ಆಕಸ್ಮಿಕ ಲಾಭ

ಕರ್ಕ– ಉಗ್ರ ಪರಿಸ್ಥಿತಿ ಕಡಿಮೆಯಾಗುವುದು [illegible]ತಿ ದೂರವಾಗಿ ಶಾಂತಿ ಲಭ್ಯ ಪ್ರವಾಸ ಬೇಡ ಹಣಕಾಸಿನ ಸ್ಥಿತಿ ಸಮಾಧಾನಕರ ತಾ|| ೬-೭ ಕುಶಲ ಪತ್ರ

ಸಿಂಹ –ಮಾನಸಿಕ ಅಸ್ಥಿರತೆ ವಿಶ್ರಾಂತಿ ಲಭಿಸ [illegible] ಖರ್ಚು ಆಧಿಕ್ಯ ಪ್ರವಾಸದಲ್ಲಿ ವಿಘ್ನ ತಾ|| ೭-೯ ಮಿತ್ರನಿಂದ ಮಹತ್ವದ ಕಾರ್ಯಕ್ಕೆ ಆಕಸ್ಮಿಕ ನೆರವು

ಕನ್ಯಾ—ಕುಶಲ ಪತ್ರ ಆಗಮನ ಆರೋಗ್ಯವುಂಟು- ಆನಂದದ ವಿಚಾರ ಕಲ್ಪನೆ ನೌಕರಿ ದಂಧೆಯಲ್ಲಿ ಆದರ ತಾ|| ೧೦-೧೧ ನೂತನ ಪರಿಚಯ, ಸುಖ ಪ್ರವಾಸ

ತುಲಾ —ಮುಖ್ಯ ಆರೋಗ್ಯ ಉತ್ತಮಗೊಳ್ಳುವುದು ಜನರಿಂದ ಸ್ತೋತ್ರ ನೌಕರಿ ದಂಧೆಗಳಲ್ಲಿ ಶುಭ ವಾರ್ತೆ ತಾ|| ೬-೯ ಧನ ಲಾಭ, ಆಪ್ತ ಜನ ಭೇಟಿ

ವೃಶ್ಚಿಕ- ದೈವಿಕ ಕಠೋರತೆಯ ಅನುಭವ ಆರೋಗ್ಯದ ಕಡೆ ಗಮನವಿಡಿ ಕಷ್ಟಕರ ಘಟನೆಗಳು, ಪ್ರವಾಸ ಬೇಡ ತಾ|| ೬-೯ ಅಪ್ರಿಯ ವಾರ್ತೆ, ಖರ್ಚು ಹೆಚ್ಚು

ಧನು –ಧಾರ್ಮಿಕ ಮಂಗಳ ಕಾರ್ಯಗಳು ನಡೆಯುವುವು ಪರೀಕ್ಷೆಯಲ್ಲಿ ತೇರ್ಗಡೆ ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಉತ್ತಮ ತಾ|| ೧೦, ೧೧ ಸತ್ಸಹವಾಸ, ಧನ ಲಾಭ

ಮಕರ– ಅವಿಶ್ರಾಂತ ಶ್ರಮ, ಆರೋಗ್ಯ ನೆಟ್ಟಗಿದ್ದರೂ ನೆಂಟರ ಹಾವಳಿಯಿಂದ ಮನಸ್ಸಿಗೆ ಜಿಗುಪ್ಸೆ ತಾ|| ೬, ೭ ಶುಭ ವಾರ್ತೆ, ಆರ್ಥಿಕ ಚಿಂತಾ ನಾಶ.

ಕುಂಭ ವಾರದ ಕಷ್ಟಗಳೆಲ್ಲವನ್ನೂ ಎದುರಿಸಿ ನಿದ್ರಾ ನಾಶ ದಂಧೆಗಳಲ್ಲಿ ವಿರುದ್ಧ ಘಟನೆ ಪ್ರಾಪ್ತಿ ತಾ|| ೬, ೭ ಅಪಘಾತ, ವಿಚಿತ್ರ ವಾರ್ತೆ

ಮೀನ [illegible] ವಾಕ್ಚಾಯ ಕರ್ತವ್ಯ [illegible] ತಾ|| ೮, ೯ ನೌಕರಿ [illegible] ಚಿಂತೆಯಾಗಿ ವಾರ್ತೆ ಪ್ರಾಪ್ತಿ

ಲಗ್ನದ ಜವಳಿಗಾಗಿ

ಗುರುಪ್ರಸಾದ್ ಹಾಲ್

ಬೆಂಗಳೂರು ಪೇಟೆ ಅಂಗಡಿಗೆ ಇಂದೇ ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ರಾಜಕಮಲ್ ಟಾಕೀಸ್

ಮೈಸೂರು ದೇಶದಲ್ಲಿ ಪ್ರಥಮ ಪ್ರದರ್ಶನ

4-3-49 ರಿಂದ ಆರಂಭ

ಪ್ರತಿ ದಿನ ೩ ಆಟಗಳು

✦ ದಸರ ಕನ್ನಡ ದಸರ ✦

ಭೂಮಿಕೆ:- ಸರಸ್ವತಿ, ಲತಾ, ಲೀಲಾ, ಶ್ರೀಧರ

ಎಂ.ಎಸ್. ಆರಾಧ್ಯ

ಮುಂದಿನ ಬದಲಾವಣೆ

'ಫಿಲ್ಮಿಸ್ತಾನ್' ರವರ **ಸಾಜನ್**

ಟೆಂಡರ್ ನೋಟಿಫಿಕೇಷನ್

ತಾರೀಖು ೫-೩-೧೯೪೯

ಮೈಸೂರು ಜಿಲ್ಲಾ ಬೋರ್ಡ್ ಪ್ರೆಸಿಡೆಂಟರವರ ಆಫೀಸಿನಿಂದ- ಈ ಮೂಲಕ ತಿಳಿಯಪಡಿಸುವದೇನೆಂದರೆ:

ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಆಯಾ ಸ್ಥಳದ ಮುಂದೆ ನಮೂದಿಸಿರುವ ಮೊಬಲಗಿನ ಅಂದಾಜುಗಳು ಮಂಜೂರಾಗಿರುತ್ತವೆ

ಸದರಿ ಕಟ್ಟಡಗಳ ಕೆಲಸವನ್ನು ಕೆಳಗೆಕಂಡ ಷರತ್ತುಗಳಿಗನುಸಾರವಾಗಿ ಕಟ್ಟಿಸಲು ಇಷ್ಟವುಳ್ಳವರು ತಾ|| ೧೬-೩-೧೯೪೯ ನೇ ಮಂಗಳವಾರ ಸಾಯಂಕಾಲ ೩ ಘಂಟೆ ಒಳಗಾಗಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರವರ ಆಫೀಸಿಗೆ ಸೀಲಾದ ಕವರಿನಲ್ಲಿ ಟೆಂಡರನ್ನು ಕಳುಹಿಸತಕ್ಕದ್ದು

ಪ್ಲಾನು ಮತ್ತು ಅಂದಾಜವನ್ನು ಜಿಲ್ಲಾ ಬೋರ್ಡು ಆಫೀಸಿನಲ್ಲಿ ರಜಾ ದಿನಗಳು ಹೊರ್ತು ಉಳಿದ ದಿವಸಗಳಲ್ಲಿ ಪ್ರತಿ ದಿನ ೧೧ ರಿಂದ ಸಾಯಂಕಾಲ ೫ ಘಂಟೆ ವರೆಗೆ ನೋಡಿ ಅವಶ್ಯಕವಾದ ಹೆಚ್ಚಿನ ವಿವರಗಳನ್ನು ತಿಳಿಯಬಹುದು

ಟೆಂಡರಿನ ಷರತ್ತುಗಳು

೧ ಪ್ರತಿಯೊಂದು ಕೆಲಸದ ಪರಮಾವಧಿ ಅಂದಾಜವು ಆಯಾ ಕೆಲಸದ ಮುಂದೆ ನಮೂದಿಸಿರುವಂತೆ ಇರುತ್ತದೆ

೨. ಪ್ರತಿ ಟೆಂಡರಿನೊಂದಿಗೆ ಡಿಸ್ಟ್ರಿಕ್ಟ್ ಫಂಡಿಗೆ ೧೦೦ ರೂಗಳನ್ನು ಜಮಾ ಮಾಡಿದ ಬಗ್ಗೆ ಚಲನ್ ಹಾಜರ್‌ಪಡಿಸತಕ್ಕದ್ದು

೩. ಟೆಂಡರುದಾರರು ಅಂದಾಜ ಮೊಬಲಗಿನಮೇಲೆ ಶೇಕಡವಾರು ಹೆಚ್ಚು ಕಡಿಮೆಯನ್ನು ಸೂಚಿಸಿ ಸ್ಪಷ್ಟವಾಗಿ ಬರೆದು ಟೆಂಡರು ಕೊಡತಕ್ಕದ್ದು

೪ ಟೆಂಡರು ಮಂಜೂರಾದ ಮೂರು ತಿಂಗಳೊಳಗಾಗಿ ಕೆಲಸವನ್ನು ಪೂರೈಸಿ ಮಾಡಿ ಜಿಲ್ಲಾ ಬೋರ್ಡಿನ ಛಾರ್ಜಿಗೆ ವಹಿಸತಕ್ಕದ್ದು

೫ ಉತ್ತೀರ್ಣವಾದ ಟೆಂಡರುದಾರರು ಸರಿಯಾದ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟು ಕೆಲಸವನ್ನು ಕೈಗೊಳ್ಳತಕ್ಕದ್ದು.

೬. ಟೆಂಡರನ್ನು ಅಂಗೀಕರಿಸುವ ವಿಷಯದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಪೂರ್ಣಾಧಿಕಾರ ಇರುತ್ತದೆ

೭ ಕಮ್ಮಿಯಾದ್ದನ್ನೇ ಅಂಗೀಕರಿಸಬೇಕೆಂಬ ನಿಯಮ ಇರುವುದಿಲ್ಲ. ಯಾವ ಕಾರಣವನ್ನೂ ತಿಳಿಸದೆ ಟೆಂಡರನ್ನು ನಿರಾಕರಿಸತಕ್ಕ ಅಧಿಕಾರ ಅಧ್ಯಕ್ಷರಿಗೆ ಇರುತ್ತದೆ

೮ ಉತ್ತೀರ್ಣವಾದ ಟೆಂಡರುದಾರರು ಕೆಲಸವನ್ನು ಮತ್ಯಾರಿಗೂ ಕಿರುಗುತ್ತಿಗೆ (Sub-let) ಮಾಡಕೂಡದು

೯ ಒಪ್ಪಿಕೊಂಡ ಕಾಲದಲ್ಲಿ ಕೆಲಸವನ್ನು ಪೂರೈಸಿಮಾಡದೆ ಇದ್ದಲ್ಲಿ ಟೆಂಡರು ಡಿಪಾಜಿಟ್ಟನ್ನು ಡಿಸ್ಟ್ರಿಕ್ಟ್ ಫಂಡಿಗೆ ದಂಡವಾಗಿ ತೆಗೆದುಕೊಳ್ಳಲಾಗುತ್ತೆ.

೧೦. ಈ ಸಂಬಂಧದಲ್ಲಿ ಒದಬಹುದಾದ ಎಲ್ಲಾ ತಕರಾರುಗಳ ವಿಷಯದಲ್ಲಿ ಜಿಲ್ಲಾ ಬೋರ್ಡಿನ ತೀರ್ಮಾನವೇ ಅಖೈರು ತೀರ್ಮಾನವಾಗಿರತಕ್ಕದ್ದು

ಜಂಜರು ನಂಬರು	ತಾಲ್ಲೂಕು	ಗ್ರಾಮ	ಅಂದಾಜು ಮೊಬಲಗು
೧	ಕೃಷ್ಣರಾಜನಗರ	ಕೆಡಗ	೩೦೦೦ ರೂ.ಗಳು
೨	,,	ನಾಟನಹಳ್ಳಿ	೩,೦೦೦ ,,
೩	,,	ತಂಡ್ರೆ	೩,೦೦೦ ,,
೪	ಹುಣಸೂರು	ಹೆಗ್ಗಂದೂರು	೩,೦೦೦ ,,
೫		ಹರಳಹಳ್ಳಿ	೩,೦೦೦ ,,
೬	ಮೈಸೂರು	ಮೊಸರಹಂಡಿ	೩,೦೦೦ ,,
೭	ಗುಂಡ್ಲುಪೇಟೆ	ಓಂಕಾರ	೩,೦೦೦ ,,
೮	,,	ಬನ ಕೆರೆ	೩,೦೦೦ ,,
೯	ಪಿರಿಯಾಪಟ್ಟ	ಹ ಣಸವಾಡಿ	೩,೦೦೦ ,,
೧೦	,,	ಅತ್ತಿಗೋಡು	೫೦೦೦ ,,
೧೧	ಟಿ ನರಸೀಪುರ	ಕರುಬೂರು	೫೦೦೦ ,,
೧೨	ನಂಜನಗೂಡು	ಇವರ್ನಾಪುರ	೫೦೦೦ ,,

ಹೆಚ್.ಎಂ. ಚನ್ನಬಸಪ್ಪ,
ಜಿಲ್ಲಾ ಬೋರ್ಡ ಅಧ್ಯಕ್ಷರು, ಮೈಸೂರು

ಹೋಟೇಲ್ ಕೆಲಸಗಾರರ ಕೋರಿಕೆಗಳು

ಮೈಸೂರು ನಗರ ಹೋಟೇಲ್ ಕೆ[illegible]ಗಾರರ ಸಂಘದ ಸಭೆಯು ಕಳೆದ ಸೋ[illegible]ವಾರ ಶ್ರೀ ಸಿ. ಪಿ. ಸುಬ್ರಹ್ಮಣ್ಯ ಶಾಸ್ತ್ರಿ[illegible]ವರ ಅಧ್ಯಕ್ಷತೆಯಲ್ಲಿ ನಡೆಯಿತು. ದ[illegible] ಕಾಲದಲ್ಲಿ ಹೆಚ್ಚಿಗೆ ಕೆಲಸ ಮಾಡಿದ [illegible]ರ್ಮಿಕರಿಗೆ ವಿಶೇಷ ಭತ್ಯವನ್ನು ಕೊ[illegible]ವುದಾಗಿ ಕಾರ್ಮಿಕ ಸಚಿವರು ಭರವಸೆ[illegible]ತ್ತಿದ್ದರೂ ಇಲ್ಲಿಯವರೆಗೂ ಅದು [illegible]ರುವುದಕ್ಕೆ ವಿಷಾದವನ್ನು ವ್ಯಕ್ತಪಡಿ[illegible]ದನ್ನು ಕೂಡಲೇ ಕೊಡಿಸಿಕೊಡಬೇ[illegible]ದು ಪ್ರಾರ್ಥಿಸುವ ನಿರ್ಣಯ ಮಾಡ[illegible]ಯಿತು ಷಾಪ್ ಅಸಿಸ್ಟೆಂಟ್ ಕಾನೂ[illegible] ಪ್ರಕಾರ ಕೆಲಸಗಾರರಿಗೆ ಸಾಯಿಲೆ ಮ[illegible] ಇತರ ರಜಾಗಳನ್ನು ಕೊಡಿಸಬೇಕೆಂದ[illegible] ಬಾಂಬೆ ಕೃಷ್ಣಭವನದವರು ಟಿ ಕೆ [illegible]ಧರ್ಮ ನಾಯರ್ ಎಂಬ ಕೆಲಸಗಾರನ[illegible] ವಜಾ ಮಾಡಿರುವುದನ್ನು ಖಂಡಿಸಿ[illegible] ನಿರ್ಣಯಗಳನ್ನು ಅಂಗೀಕರಿಸಲಾಯಿ[illegible]

RAJAKAMAL
Mysore.

Morning Shows from 4-3-49 for 4 days only

WHITE - - SAVAG[E]

(In Technicolor)

With- Maria Montez, Jo[hn] Hall & Mysore Sabu.

ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ

ನೆಟ್ ಬನೀನುಗಳು

ಕಾಲು ಚೀಲಗಳು ಬಂದಿ[ವೆ]

ಮಿಲ್ಲು ಬಟ್ಟೆಗಳು ಕಂಟ್ರೋಲ್ ಮೇಲೆ ದೊರೆಯುತ್ತವೆ

ಮೈಸೂರು ಕಾಟನ್ ಕಂಪೆ[ನಿ]

ಬಟ್ಟೆ ಶಾಪ್, 1234, ಕೃಷ್ಣಮೂರ್ತಿಪುರಂ, ಮೈಸೂರು.

ಶ್ರೀ ಗಾಯತ್ರೀ ಟಾಕೀಸ್

ತಾ|| 6-3-49 ರಿಂದ 3 ದಿನಗಳ

ಪ್ರತಿ ದಿನ 3 ಪ್ರದರ್ಶನಗಳು

ಪ್ಯಾರಮೌಂಟ್ಸ್‌ರವರ

ದಿ ಲೈವ್ಸ್ ಆಫ್ ಎ ಬೆಂಗಾಲ್ ಲ್ಯಾನ್ಸರ್

(THE LIVES OF A BENGAL LANCER)

ಪಾತ್ರ:- ಗ್ಯಾರಿ ಕೂಪರ್

ಶುಭಕರವಾದ

ಲಗ್ನದ ಜವಳಿಗಳಿಗೆ

ನಮ್ಮಲ್ಲಿಗೆ ದಯೆಯಿಟ್ಟು ಭೇಟಿ ಕೊ[ಡಿ]

ವೀರಣ್ಣ ಸಿಲ್ಕು ಎಂಪೋರಿಯಂ

ಎ. ರಾಮಯ್ಯ ಅಂಡ್ ಬ್ರದರ್ಸ್

ಇಲವಾಲ ರಸ್ತೆ :: ಮೈಸೂರು

Edited, printed and published by A.R. Nagarajan at the Sadhvi Press D. Subbiah Road, Mysore

ಸರಿ ಪತ್ರಿಕೆಯ ಅಪೀಲು ಫೋ ನ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೮-೬-೧೯೪೯ [ಸಂಚಿಕೆ ೧೪೬

– ಧಾನ್ಯದ ರೂಪದಲ್ಲಿ – ಕಂದಾಯದ ವಸೂಲಿ

ಸರಿ ಪತ್ರಿಕೆಯ ಅಪೀಲು ವಜಾ

ಬೆಂಗಳೂರು ೮

... ದಿನ ಪತ್ರಿಕೆಯ ಸಂಪಾದಕರಾ ಶ್ರೀ ಆರ್. ಎಸ್. ನಾರಾಯಣರವರ ... ಸರ್ಕಾರದವರು ಕೊಟ್ಟ ೩೫೦೦ ... ಮಾನತಿ ನೋಟೀಸಿನ ಬಗ್ಗೆ ಅವ... ಹೈಕೋರ್ಟಿನಲ್ಲಿ ಸಲ್ಲಿಸಿದ್ದ ಅರ್ಜಿಯು ನ್ಯಾಯಾಧೀಶರುಗಳಾದ ಶ್ರೀಗಳು ... ವೆಂಕಟರಾಮಯ್ಯ ಮತ್ತು ವಿ. ಕಂ... ಪ್ಪೆ ... ಒಳ್ಳಿಯವರು ವಜಾ ಮಾಡಿರು... ೦ ... ೩೧-೮-೪೮ ನೇ ತಾರೀಖಿನ ... ಯಲ್ಲಿ ಬಂದ ಅಗ್ರ ಲೇಖನವು ಆ... ಯವಾಗಿರುವುದೆಂದೂ, ಲೇಖನ ... ಅನ್ಯ ಅಭಿಪ್ರಾಯವನ್ನು ವ್ಯಕ್ತ ... ವೆಂದಾಗಲೀ ಅಥವ ಆಡಳಿತ ಪ... ವನ್ನು ಸಾಧುವಾದ ರೀತಿಯಲ್ಲಿ ... ಮಾಡುವುದೆಂದಾಗಲೀ ಪರಿಗಣಿಸ... ಸಾಧ್ಯವಿಲ್ಲವೆಂದೂ ನ್ಯಾಯಾಧೀಶರು ... ರ್ಪಿನಲ್ಲಿ ಹೇಳಿರುತ್ತಾರೆ.

... ಜೀವನರಾಂ ರವರ ಭೇಟಿ

... ತರ ಸರ್ಕಾರದ ಕಾರ್ಮಿಕ ಸಚಿ... ಶ್ರೀ ಜಗಜೀವನ ರಾಂರವರು ... ನ ತಿಂಗಳು ಮೊದಲನೇ ವಾರದಲ್ಲಿ ... ಕ್ಕೆ ಭೇಟಿ ಕೊಡುವರೆಂದ ತಿಳಿ... ದೆ

ಮದರಾಸಿನಲ್ಲಿ ೪ ಸಕ್ಕರೆ ಕಾರ್ಖಾನೆ

ಮದರಾಸ್ ಪ್ರಾಂತ್ಯದಲ್ಲಿ ೪ ಸಕ್ಕರೆ ಮ... ವನಸ್ಪತಿ ಕಾರ್ಖಾನೆಗಳನ್ನು ಸ್ಥಾ... ಭಾರತ ಸರ್ಕಾರವು ಅನುಮತಿ ಕೊ... ಯೆಂದು ಮದರಾಸ್ ಸರ್ಕಾರದ ಕೈ... ಸಚಿವರು ತಿಳಿಸಿರುತ್ತಾರೆ.

ಬ್ರಿಟನ್ನಿನಲ್ಲಿ ನೂತನ ವಿಮಾನ

... ಎತ್ತರದಲ್ಲಿ ಗಂಟೆಗೆ ೫೦೦ ಮೈಲಿ... ಗಿ ಸಂಚರಿಸಬಲ್ಲ ನೂತನ ವಿಮಾ... ನವನ್ನು ಬ್ರಿಟನ್ನಿನಲ್ಲಿ ತಯಾರಿಸಲಾಗು... ವೆಯೆಂದು ಹೇಳಲಾಗಿದೆ.

ರಷ್ಯದ ಡೆಪ್ಯೂಟಿ ವಿದೇಶಾಂಗ ಮಂತ್ರಿ

... ದ ಡೆಪ್ಯೂಟಿ ವಿದೇಶಾಂಗ ಮಂತ್ರಿ... ಗಿ ಆಂಡ್ರಿ ಗ್ರೋಮಿಕೋರವರನ್ನು ನೇ... ಲಾಗಿದೆ

ಇಂಗ್ಲಿಷ್ ರಾಮಾಯಣ

... ರಾಮಾಯಣ ಗ್ರಂಥವನ್ನು ಉತ್ತಮ ... ಲಿ ಆಂಗ್ಲಭಾಷೆಗೆ ತರ್ಜುಮೆ ಮಾ... ಬೊಂಬಾಯಿನ ಸುಪ್ರಸಿದ್ಧ ವರ್ತಕ ... ರ್ ಪುರುಷೋತ್ತಮ ದಾಸ್ ಠಾ... ಕೂರರವರು ೩೧,೦೦೦ ರೂ ಬಹು... ನ್ನು ಇಟ್ಟಿರುತ್ತಾರೆ.

ಮೈಸೂರಿನಲ್ಲಿ ನೂತನ ಲೋಹದ ಪತ್ತೆ

ಬೆಂಗಳೂರು ೭

... ನದ ಆರು ಪ್ರದೇಶಗಳಲ್ಲಿ ವರ್... ಟ್ ಎಂಬ ಲೋಹವು ಪತ್ತೆ ಆ... ದೂ, ಅದನ್ನೂ ತೆಗೆಯಲು ಸ... ವರು ಭೂಗರ್ಭ ಶಾಖೆಯವರಿಗೆ ... ಡಿರುವರೆಂದೂ ತಿಳಿದು ಬಂದಿ... ಲೋಹವು ದೊರಕಿರುವುದು ಭಾ... ಇದು ಪ್ರಥಮಬಾರಿ. ಈ ಲೋಹ ... ೦೦ ಡಿಗ್ರಿಗಳಷ್ಟು ಕಾಯಿಸುವುದ... ದು ಹಗುರವಾಗುವುದೆಂದೂ, ... ವೆಂಟನೊಡನೆ ಬೆರಸಿ ತಗುಡು ಮಾಡಿ, ಮನೆಗಳಾ ಉಪ... ಸಬಹುದೆಂದೂ ಹೇಳಲಾಗಿದೆ

ಗೋವಾ ಕಾಂ||ನಾಯಕರಿಗೆ ದ್ವೀಪಾಂತರ ವಾಸ

ಗೋವಾ ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಪಿ. ಎಲ್. ಮೊರಾಯಸ್ ಮತ್ತು ಇತರ ನಾಲ್ಕು ಮಂದಿಗಳಿಗೆ ತಲಾ ೧೫ ವರ್ಷ ಶಿಕ್ಷೆಯನ್ನು ವಿಧಿಸಲಾಗಿದೆಯೆಂದೂ ಅವರುಗಳನ್ನು ಪೋರ್ಚುಗಲ್ಲಿಗೆ ಕಳುಹಿಸಿ ಅಟ್ಲಾಂಟಿಕ್ ದ್ವೀಪಾಂತರ ಜೈಲಿನಲ್ಲಿಡಲಾಗುವುದೆಂದೂ ವರದಿಯಾಗಿದೆ. ವ. ತ್ರೋಟ್ಕರಿಗೆ ೫ ವರ್ಷ ಶಿಕ್ಷೆಯನ್ನು ವಿಧಿಸಿ, ಕತ್ತಲೆ ಕೋಣೆಯಲ್ಲಿ ಇಡಲಾಗಿದೆ

ಸಾಹಿತ್ಯ ಸಮ್ಮೇಳನದಲ್ಲಿ ಧಾರ್ ಸಮಿತಿಯ ಖಂಡನೆ

ಗುಲ್ಬರ್ಗದಲ್ಲಿ ಮೊನ್ನೆ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಪ್ರಾಂತಗಳ ಪುನರ್ರಚನೆಯ ಬಗ್ಗೆ ಧಾರ್ ಸಮಿತಿಯವರು ಒಪ್ಪಿಸಿರುವ ವರದಿಯನ್ನು ಖಂಡಿಸಿ ನಿರ್ಣಯ ಮಾಡಲಾಯಿತು ಮತ್ತು ಸಮಿತಿಯ ಸಲಹೆಗಳನ್ನು ತಿರಸ್ಕರಿಸಬೇಕೆಂದೂ ತೀರ್ಮಾನವಾಯಿತು. ಹೈದರಾಬಾದಿನ ಕನ್ನಡ ಪ್ರದೇಶಗಳಲ್ಲಿ ಕನ್ನಡವನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂದೂ ತೀರ್ಮಾನಿಸಲಾಯಿತು

ರಾಜರುಗಳ ಆಸ್ತಿ ಧೃಢತೆ

ತಮ್ಮ ಖಾಸಗಿ ಸ್ವತ್ತುಗಳು, ನಗದು ಹಣ ಮುಂತಾದ ವಿವರಗಳನ್ನು ಇದುವರೆಗೆ ೧೧೩ ಜನ ರಾಜರುಗಳು ಭಾರತ ಸರ್ಕಾರಕ್ಕೆ ಒಪ್ಪಿಸಿರುವರೆಂದು ತಿಳಿದುಬಂದಿದೆ.

ಮೂರು ಮಂದಿ ಅರಸರು ತಮ್ಮ ಆಸ್ತಿಯ ವಿವರಗಳನ್ನು ಕೊಟ್ಟಿಲ್ಲವೆಂದೂ, ರಾಜರುಗಳ ಸಾಲದ ಜವಾಬ್ದಾರಿಯನ್ನು ಸರ್ಕಾರದವರು ತೆಗೆದುಕೊಳ್ಳುವುದಿಲ್ಲವೆಂದೂ ತಿಳಿಸಲಾಗಿದೆ

೭೭೮ ಪಲ್ಲ ರಾಗಿ ಸಂಗ್ರಹ

ಬೆಂಗಳೂರು ೭

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೂ ಮತ್ತು ಇತರ ಅಧಿಕಾರಿಗಳೂ ಧಾನ್ಯ ಸಂಗ್ರಹದ ಸಂಬಂಧದಲ್ಲಿ ಬೆಂಗಳೂರು ದಕ್ಷಿಣ ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಮೊನ್ನೆ ದಿನ ಪ್ರವಾಸ ಮಾಡಿ, ೭೭೮ ಪಲ್ಲ ರಾಗಿಯನ್ನು ವಸೂಲು ಮಾಡಿದರು. ಸರ್ಜಾಪುರ ಮತ್ತು ಇನ್ನೂ ಕೆಲವು ಹಳ್ಳಿಯವರು ಖಾನ ... ಇಲ್ಲದೆ ಹಿಂದಿನ ರಾತ್ರಿಯೇ ಸಂಗ್ರಹ ಮಾಡಿ ... ಪಲ್ಲ ರಾಗಿಯನ್ನು ... ದ ಒಪ್ಪಿಸಿದರು

[ಸ್ವಂ ಸು ಫೋ] ಬೆಂಗಳೂರು ೮

ಇಂದಿನ ಆಹಾರದ ಪರಿಸ್ಥಿತಿಯಿಂದ ಸರ್ಕಾರದವರು ಈ ವರ್ಷದ ಕಂದಾಯವನ್ನು ಧಾನ್ಯರೂಪದಲ್ಲಿಯೇ ಸಾಧ್ಯವಾದಷ್ಟು ಮಟ್ಟಿಗೆ ವಸೂಲು ಮಾಡಲು ನಿರ್ಧರಿಸಿರುತ್ತಾರೆ. ಈ ವಿಚಾರವನ್ನು ಸಾರ್ವಜನಿಕರಿಗೆ ವಿಶದಪಡಿಸಿ, ಅವರ ಸಹಕಾರವನ್ನು ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಈಗ ಸರ್ಕಾರದವರು ಗೊತ್ತುಮಾಡಿರುವ ದರದಂತೆ ಧಾನ್ಯವನ್ನು ತೆಗೆದುಕೊಂಡು ಕಂದಾಯಕ್ಕಾಗಿ ಅದನ್ನು ಜಮಾ ತೆಗೆದುಕೊಳ್ಳಲಾಗುವುದು. ಅಲ್ಲದೆ ಏಪ್ರಲ್ ೧ ನೇ ತಾ|| ನೊಳಗೆ ಈ ರೀತಿ ಕಂದಾಯವನ್ನು ಪಾವತಿ ಮಾಡುವವರಿಗೆ ಧಾನ್ಯಗಳ ಬಗ್ಗೆ ಏರ್ಪಾಡಾಗಿರುವ ಬೋನಸ್ಸನ್ನೂ ಸಹ ಕೊಡಲಾಗುವುದು. ಪಟೇಲ್, ಶ್ಯಾನುಭೋಗರುಗಳು ಧಾನ್ಯವನ್ನೂ ರೈತರ ಮನೆಯಲ್ಲಿಯೇ ತೆಗೆದುಕೊಳ್ಳುವರು. ಡಿಪೋಗಳಿಗೆ ಅವುಗಳನ್ನು ರೈತರು ಒಪ್ಪಿಸಬೇಕಾಗಿಲ್ಲ. ಈ ಕಾರ್ಯಕ್ರಮದಿಂದ ತೃಪ್ತಿಕರವಾದ ಪ್ರಮಾಣದಲ್ಲಿ ಧಾನ್ಯಸಂಗ್ರಹವು ಆಗುವುದೆಂದು ಸರ್ಕಾರದವರು ಆಶಿಸಿದ್ದಾರೆ

ವಿಶ್ವಸಂಸ್ಥೆಯ ಕಾರ್ಯದರ್ಶಿಯವರು

ಮೈಸೂರಿನಲ್ಲಿ ನಡೆಯುವ ದೂರ ಪ್ರಾಚ್ಯದ ಅರಣ್ಯ ಸಮ್ಮೇಳನದಲ್ಲಿ ಭಾಗವಹಿಸಲು ವಿಶ್ವಸಂಸ್ಥೆಯ ಕಾರ್ಯದರ್ಶಿಗಳೊಬ್ಬರಾದ ಮಿ|| ಹ್ಯೂಬರ್ಟ್ ಎಂಬುವರು ಇದೇ ೧೯ನೇ ತಾ|| ಇಲ್ಲಿಗೆ ಬರುವರು.

ಜಟಕ ಗಾಡಿಗಳಿಗೆ ಗಂಟೆ

ಜಟಕ ಮತ್ತು ಬಾಂಡಿಗಳಿಗೆ ಗಂಟೆಯನ್ನು ಹಾಕಬೇಕೆಂಬ ಕಾನೂನನ್ನು ಜಾರಿಗೆ ತರಲು ನಿನ್ನೆ ಇಲ್ಲಿನ ಪೌರಸಭೆಯು ನಿರ್ಣಯವನ್ನು ಮಾಡಿತು

ಅಜಾದರಿಗೆ ಈಜಿಪ್ಟ್ ರಾಯಭಾರತ್ವವೇ ?

ಭಾರತ ಸರ್ಕಾರದ ವಿದ್ಯಾ ಸಚಿವರಾದ ಮೌಲಾನ ಅಬುಲ್ ಕಲಾಂ ಆಜಾದರನ್ನು ಈಜಿಪ್ಟಿನಲ್ಲಿ ಭಾರತದ ರಾಯಭಾರಿಯನ್ನಾಗಿ ನೇಮಿಸಬಹುದೆಂದು ಹೇಳಲಾಗಿದೆ

ರಾಷ್ಟ್ರದ ರಕ್ಷಣೆಗಾಗಿ ೧೫೩೭ ಕೋಟಿ ರೂ.

೧೯೪೯-೫೦ ನೇ ಸಾಲಿನಲ್ಲಿ ರಾಷ್ಟ್ರದ ರಕ್ಷಣಾ ಕಾರ್ಯಗಳಿಗಾಗಿ ೧೫೩೭ ... ಕೋಟಿ ರೂ ವೆಚ್ಚ ಮಾಡಲು ಕೇಂದ್ರ ಸರಕಾರ ... ಪಡಿಸಿದೆ ... ಕೋಟಿಡೆ

ಶ್ರೀಮನ್ಮಹಾರಾಜರವರು ಕರ್ನಾಟಕದ ಅಧಿಪತಿಗಳಾಗಲು ವಿರೋಧ

ಕರ್ನಾಟಕ ಏಕೀಕರಣ ಸಮ್ಮೇಳನದಲ್ಲಿ ನಿರ್ಣಯ

ಗುಲ್ಬರ್ಗ ೬

ನಿನ್ನೆ ಇಲ್ಲಿ ನಡೆದ ಕರ್ನಾಟಕ ಏಕೀಕರಣ ಸಮ್ಮೇಳನದಲ್ಲಿ ಶ್ರೀ ಆರ್ ನೆಸ್ವಿಯವರು ಕರ್ನಾಟಕ ಪ್ರಾಂತ್ಯವನ್ನು ರಚಿಸಲು ಕೇಂದ್ರ ಸರ್ಕಾರದವರು ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಿರ್ಣಯವನ್ನು ಮಂಡಿಸಿದರು. ಮೈಸೂರು ಮಹಾರಾಜರನ್ನು ಅಖಂಡ ಕರ್ನಾಟಕದ ಶಾಸನಬದ್ಧ ಅಧಿಪತಿಗಳನ್ನಾಗಿ ನೇಮಿಸಕೂಡದೆಂದು ಶ್ರೀ ಪುಟ್ಟಪ್ಪ ಪಾಟೀಲರವರು ತಂದ ತಿದ್ದುಪಡಿಯೊಡನೆ ಮೂಲ ನಿರ್ಣಯವು ಅಂಗೀಕೃತವಾಯಿತು. ರಾಜತ್ವವನ್ನೇ ನಿರ್ಮೂಲ ಮಾಡಬೇಕೆಂದು ಹಲವರು ತಿದ್ದುಪಡಿಯನ್ನು ಅನುಮೋದಿಸುತ್ತಾ ತಿಳಿಸಿದರು

ಶ್ರೀ ಟಿ ಸುಬ್ರಹ್ಮಣ್ಯಂರವರು ತಿದ್ದುಪಡಿಯನ್ನು ವಿರೋಧಿಸಿ, ಮೈಸೂರಿನವರು ಇದನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ಹೇಳಿದರು

ಟಿ. ರಾಮಯ್ಯನವರ ನಿಧನ

ಬೆಂಗಳೂರು ೭

ಲ್ಯಾಂಡ್ ರಿಕಾರ್ಡ್ಸ್ ಕಮೀಷನರಾಗಿದ್ದ ಶ್ರೀ ಟಿ. ರಾಮಯ್ಯನವರು ತಮ್ಮ ೫೫ನೇ ವಯಸ್ಸಿನಲ್ಲಿ ನಿನ್ನೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಅವರು ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿಗಳಾಗಿ ಅನೇಕ ವರ್ಷ ಕೆಲಸ ಮಾಡಿದ್ದರು.

ಲಾರಿಯು ನದಿಗೆ ಬಿದ್ದು ೧೦ ಜನರ ಮರಣ

ಉತ್ತರ ತಿರುವಾಂಕೂರಿನ ಕೊಡಪೂಜ ಎಂಬಲ್ಲಿನ ಕಾರಿಕಾಡ್ ದೇವಾಲಯದ ಉತ್ಸವಕ್ಕೆ ಜನರನ್ನೂ ಮತ್ತು ಸಾಮಾನುಗಳನ್ನೂ ಒಯ್ಯುತ್ತಿದ್ದ ಭಾರಿ ಲಾರಿಯೊಂದು ಕೊಡಪೂಜಾ ನದಿಯ ಸೇತುವೆಯ ಮೇಲೆ ಹೋಗುತ್ತಿದ್ದಾಗ ಅಲ್ಲಿಂದ ಜಾರಿ ೩೦ ಅಡಿ ಎತ್ತರದಿಂದ ನದಿಗೆ ಬಿದ್ದಿತೆಂದೂ ಇದರಿಂದ ೧೦ ಜನರು ಸತ್ತು ೬೦ ಮಂದಿಗೆ ತೀವ್ರ ಗಾಯಗಳಾದುವೆಂದೂ ವರದಿಯಾಗಿದೆ.

ರೇಡಿಯೋ ಭೇಟಿ

ಅಮೆರಿಕದಿಂದ ಹಿಂದಿರುಗಿರುವ ಶ್ರೀ ಜೆ. ಡಿ ಆರ್ ಅಯ್ಯಂಗಾರ್ಯರ ರೇಡಿಯೋ ಭೇಟಿಯು ಮೈಸೂರು ಆಕಾಶವಾಣಿ ಕೇಂದ್ರದಿಂದ ಈ ರಾತ್ರಿ ... ಗಂಟೆಗೆ ನಡೆಯುವುದು

ಅಕ್ರಮ ರವಾನೆಗೆ ದಂಡ

ಮಂಡಿಮೊಹಲ್ಲೆಯ ... ಎಂಬುವನು ರಹದಾರಿ ಇಲ್ಲದೆ ... ಸೇರು ಕ... ಮೆಣಸಿನಕಾಯಿ ಮತ್ತು ... ಸೇರು ಭತ್ತವನ್ನು ಇಟ್ಟುಕೊಂಡಿದ್ದ ... ಮೊಹದೀನ್ ನವಾಜ್ ಖಾನ್ ಎಂಬುವನೆ. ... ಸೇರು ಬ್ರಜಿಲ್ ... ಅನ್ನು ರವಾನಿಸಿದುದಕ್ಕಾಗಿಯೂ ಅವರಿಗೆ ... ಮತ್ತು ... ರೂ ದಂಡವನ್ನು ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ

ಗ್ರಾಮಾಭಿವೃದ್ಧಿ ಯೋಜನೆ

ಹೆಗ್ಗಡದೇವನಕೋಟೆ ೭

ಈ ತಾಲ್ಲೂಕಿನ ಗ್ರಾಮಾಭಿವೃದ್ಧಿ ಯೋಜನೆಯ ಆರಂಭೋತ್ಸವವನ್ನು ನಿನ್ನೆ ಪುರಸಭಾ ಉಪಾಧ್ಯಕ್ಷರಾದ ಶ್ರೀ ಹೆಚ್ ವಿ ದಾಸಪ್ಪನವರು ನೆರವೇರಿಸಿದರು. ಶ್ರೀಗಳಾದ ಕೆ ಮಾದಪ್ಪ ನಂಜುಂಡಯ್ಯ, ನಾರಾಯಣರಾವ್ ಹೆಚ್ ಎ ಲಿಂಗಣ್ಣಯ್ಯ ಹೆಚ್ ವಿ ಸುಬ್ಬರಾವ್, ಮತ್ತು ರಾಮಸಿಂಗಾಚಾರ್ಯರವರುಗಳು ಭಾಷಣಮಾಡಿ, ನೂತನ ಯೋಜನೆಯನ್ನು ವಿವರಿಸಿ, ಎಲ್ಲರೂ ಸಹಕರಿಸಿ ಅದು ಯಶಸ್ವಿಯಾಗುವಂತೆ ಮಾಡಬೇಕೆಂದು ಕೋರಿದರು

ಪಿರಿಯಾಪಟ್ಟಣದಲ್ಲಿ

ಇಲ್ಲಿನ ತಾಲ್ಲೂಕು ಗ್ರಾಮಾಭಿವೃದ್ಧಿಯ ಯೋಜನೆಯ ಪ್ರಾರಂಭೋತ್ಸವವನ್ನು ಪ್ರದೇಶ ಉಪಾಧ್ಯಕ್ಷರಾದ ಜನಾಬ್ ಮೀರ್ ... ಅಲಿಯವರು ಮೊನ್ನೆ ದಿನ ನೆರವೇರಿಸಿದರು. ಧ್ವಜ ವಂದನೆಯ ನಂತರ ... ಶ್ರೀ ಚಂದ್ರಶೇಖರಯ್ಯ ... ಕೆ ವಿ ನಾರಾಯಣರಾವ್ ... ಮತ್ತು ಅಧ್ಯಕ್ಷರು ... ಯೋಜನೆಯನ್ನು ವಿವರಿಸಿ ... ಸಹಕರಿಸಬೇಕೆಂದು ತಿಳಿಸಿದರು

ಚುಂಬಿಸಿದ ಪ್ರೊಫೆಸರಿಗೆ ದಂಡ

ಇಟಲಿ ... ಪ್ರಸಿದ್ಧರಾದ ಪಾರ್ಲೆರ್ಜಾನ ಪಾಲ್ಸಿ ... ಯವರು ... ವಿದ್ಯಾರ್ಥಿಯಾಗಿದ್ದಾಗ ರಸ್ತೆಯಲ್ಲಿ ಹೋಗುತ್ತಿದ್ದ ತರುಣಿಯೊಬ್ಬಳನ್ನು ಚುಂಬಿಸಿದುದಕ್ಕಾಗಿ ಅವರಿಗೆ ೨೦೦ ಲೈರ್ ದಂಡವನ್ನು ನ್ಯಾಯಾಧೀಶರು ವಿಧಿಸಿ ಅದನ್ನು ಕೊಡಲು ಕಾಲಾವಕಾಶ ಕೊಟ್ಟಿದ್ದರು ಆದರೆ ಅದನ್ನು ಕೊಡಲು ಅವರು ಸಂಪೂರ್ಣವಾಗಿ ಮರೆತುಹೋದರು ಈಗ ಸರ್ಕಾರದವರು ಹಿಂದಿನ ಕಾಗದ ಪತ್ರಗಳನ್ನು ನೋಡುವಾಗ ಇದು ಗಮನಕ್ಕೆ ಬಂದು ೩ ಸಾವಿರ ಲೈರ್ ಹಣವನ್ನು ಕೊಡಬೇಕೆಂದು ಪ್ರೊಫೆಸರ್‌ರವರಿಗೆ ನೋಟೀಸ್ ಕೊಟ್ಟಿರುತ್ತಾರೆ

ವಿವಾಹ ಮಹೋತ್ಸವಗಳು

ರಾಜಧಾನಿಯ ಶ್ರೇಷ್ಠ ವರ್ತಕರಾದ ಶ್ರೀ ಎಂ ಕೆ ಮಾಧವರಾವ್ ಪವಾರ್‌ರವರು ತಮ್ಮ ಪುತ್ರ ಶ್ರೀ ಎಂ ಸದಾಶಿವರಾವ್ ಪವಾರ್‌ರವರಿಗೆ ಬಾಳಾಸಾಹೇಬ್ ತಾತ್ಯಾ ಸಾಹೇಬ್ ಸಿಂಧ್ಯರವರ ಪುತ್ರಿ ಚಿ|| ಸೌ|| ಸುಲೋಚನಾ ಬಾಯಿಯನ್ನು ತಂದುಕೊಂಡು ವಿವಾಹವನ್ನು ರಾಜಧಾನಿಯಲ್ಲಿ ನಿನ್ನೆ ನೆರವೇರಿಸಿದರು

ಮೈಸೂರು ಪುರಸಭಾ ಸದಸ್ಯರಾದ ಶ್ರೀ ಇ ಓ ನಂಜಪ್ಪನವರು ತಮ್ಮ ಭಾವಿಮೈದುನ ಪುತ್ರ ಶ್ರೀ ಎಸ್ ಕೆ ಲಕ್ಷ್ಮೀನರಸಿಂಹಯ್ಯನವರಿಗೆ ಬೆಂಗಳೂರು ದಂಡಿನ ಶ್ರೀ ವೇಣುಗೋಪಾಲ್‌ರವರ ಸೋದರ ಸೊಸೆ ಚಿ|| ಸೌ|| ಜೀವರತ್ನನನ್ನು ತಂದುಕೊಂಡು ವಿವಾಹವನ್ನು ನಿನ್ನೆ ಬೆಂಗಳೂರಿನಲ್ಲಿ ನಡೆಸಿದರು.

ಕಾಣಿಕೆ

ಶ್ರೀ ಸದ್ಗುರು ಮಹಾ ಸನ್ನಿಧಾನಕ್ಕೆ ವಿದ್ವಾನ್ ಯಾನಗಲ್ ಗಣೇಶಶಾಸ್ತ್ರಿಗಳು ತಮ್ಮ ಅಣ್ಣಂದಿರ ಮತ್ತು ಶ್ರೀ ಹೆಚ್ ವಿ ಮಂಗಳಮೂರ್ತಿಯವರು ತಮ್ಮ ಸೋದರಳಿಯರ ವಿವಾಹಮಹೋತ್ಸವ ಸಂಬಂಧವಾಗಿ ಒಂದು ಜರತಾರಿ ಶಲ್ಲೆ ಮತ್ತು ಕಾಣಿಕೆಯನ್ನು ಸಲ್ಲಿಸಿರುವರೆಂದು ರಾಜಧಾನಿಯ ಶ್ರೀ ಸದ್ಗುರು ಸೇವಾಮಂಡಲಿಯವರು ತಿಳಿಸಿರುತ್ತಾರೆ

ಕ್ಯಾಲೆಂಡರ್ ಸ್ವೀಕಾರ

ಬೆಂಗಳೂರು ವಿಶ್ವೇಶ್ವರಪುರದ ಇಂಜಿನಿಯರ್ ಮತ್ತು ವರ್ತಕರಾದ ಒರಿಯಂಟಲ್ ಎಲೆಕ್ಟ್ರಿಕ್ ಕಂಪೆನಿಯವರು ಕಳುಹಿಸಿರುವ ಈ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಗುಹೆಯಲ್ಲಿ ನಗ್ನ ಹೆಂಗಸರೊಡನಿದ್ದ ಸಾಧು

ಭುವನೇಶ್ವರದ ಖಾಂಡಗಿರಿ ಬೆಟ್ಟದಲ್ಲಿನ ಗುಹೆ ಯೊಂದರಲ್ಲಿ ಸಾಧು ಒಬ್ಬನು ಆರು ಜನ ನಗ್ನರಾದಹೆಂಗಸರೊಡನೆ ಇದ್ದುದನ್ನು ಅಲ್ಲಿನ ಭೂ ಸಂಶೋಧನಾ ಇಲಾಖೆಯವರು ಕಂಡುಹಿಡಿದು, ಅಂತಹ ಚಿರಪ್ರಖ್ಯಾತವಾದ ಗುಹೆಯನ್ನು ವಾಸಸ್ಥಾನವಾಗಿ ಮಾಡಿರುವುದನ್ನು ತಪ್ಪಿಸಲು ಅವರ ಪ್ರಯತ್ನಗಳು ವಿಫಲವಾದುವೆಂದೂ ಕೊನೆಯಲ್ಲಿ ಪೋಲೀಸರು ಬಂದು ಅವರನ್ನು ಬಲತ್ಕಾರವಾಗಿ ಹೊರಕ್ಕೆ ಕರದೊಯ್ದರೆಂದು ವರದಿಯಾಗಿದೆ

ಮಂಜುಗೆಡ್ಡೆಗಳ ಮೂಲಕ ಮಳೆ

ದಕ್ಷಿಣ ಆಫ್ರಿಕದಲ್ಲಿ ಮಳೆ ಬರುವಂತೆ ಮಾಡಲು ಅಲ್ಲಿಗೆ ೩೦೦ ಭಾರಿ ಮಂಜಿನ ಗೆಡ್ಡೆಗಳನ್ನು ರವಾನಿಸಲು ಯತ್ನ ನಡೆಯುತ್ತಿದೆಯೆಂದು ಹೇಳಲಾಗಿದೆ ದೊಡ್ಡ ಮಂಜಿನಗೆಡ್ಡೆಗಳನ್ನು ತೀರ ಪ್ರದೇಶದಲ್ಲಿ ಮುಳುಗಿಸುವುದರಿಂದ ವಾತಾವರಣವು ತಣ್ಣಗಾಗುವುದೆಂದೂ, ಮಂಜುಗೆಡ್ಡೆಗಳು ಕರಗಲು ೨ ವರ್ಷಕಾಲ ಹಿಡಿಯುವುದೆಂದೂ, ಅವುಗಳಿಂದ ತುಂತುರುಗಳು ಉಂಟಾಗಿಮಳೆ ಬರಲು ಅನುಕೂಲವಾಗುವುದೆಂದೂ ಹೇಳಲಾಗಿದೆ

ಚುಂಬನದ ಆತುರದಲ್ಲಿ ಮೋಟಾರಿನ ಡಿಕ್ಕಿ

ಅಮೆರಿಕದ ಮಿಚಿಗನ್ನಿನ ನಿವಾಸಿಯೊಬ್ಬನು ತನ್ನ ಕೆಲಸಕ್ಕೆ ಮೋಟಾರಿನಲ್ಲಿ ಹೊರಟು, ಮಧ್ಯ ತನ್ನ ಪತ್ನಿಯನ್ನು ಚುಂಬಿಸುವುದನ್ನು ಮರೆತಿರುವುದು ಜ್ಞಾಪಕಕ್ಕೆ ಬರಲು ಆತನು ವಾಪಸು ಅದಕ್ಕಾಗಿ ಹಿಂತಿರುಗುತ್ತಿದ್ದಾಗ, ಆತನ ಪತ್ನಿಯು ಸಹ ಅದಕ್ಕಾಗಿಯೇ ಬರುತ್ತಿದ್ದ ಮತ್ತೊಂದು ಕಾರಿನ ಮೇಲೆ ಡಿಕ್ಕಿ ಹೊಡೆದನೆಂದು ವರದಿಯಾಗಿದೆ

ಮಿಲಿಟರಿ ಜಾತಿಯ ಕಾಲ ಹೋಯಿತು

ಪ್ರತ್ಯೇಕ ಮಿಲಿಟರಿ ಜಾತಿ ಇದೆಯೆಂಬ ಕಾಲ ಹೋಯಿತು ಮದರಾಸಿನ ಜನರು ಕಾಶ್ಮೀರ ರಣರಂಗದಲ್ಲಿ ಪ್ರಶಂಸೆಯನ್ನು ಪಡೆದಿದ್ದಾರೆ ಹೈದರಾಬಾದಿನ ಪೋಲೀಸ್ ಕಾರ್ಯಾಚರಣೆಯು ಬಂಗಾಳಿಗಳಿಂದ ನಡೆಸಲ್ಪಟ್ಟಿತು ಕತ್ತಿಯಕಾಲ ಹೋಯಿತು ಈಗ ಅಣು ಬಾಂಬಿನ ಕಾಲ ಎಂದು ಸರ್ದಾರ್ ಪಟೇಲರು ಪೂರ್ವಪಂಜಾಬಿನ ಘಟಿಕೋತ್ಸವದಲ್ಲಿ ಹೇಳಿರುತ್ತಾರೆ

ಸಂಸ್ಥಾನದಲ್ಲಿ ಸೈಕಲ್ ಕಾರ್ಖಾನೆ

ಬೆಂಗಳೂರು

ಬ್ರಿಟನ್ನಿನ ಬರ್ಮಿಂಗ್ಯಾಮ್ ಬಿ ಎಸ್ ಎ ಸೈಕಲ್ ತಯಾರಿಕಾ ಕಾರ್ಖಾನೆಯ ಪ್ರತಿನಿಧಿಗಳಾದ ಮಿ|| ಟಾಮ್ಸನ್‌ರು ಇಲ್ಲಿಗೆ ಆಗಮಿಸಿದ್ದಾರೆ. ಸಂಸ್ಥಾನದಲ್ಲಿ ವರ್ಷಕ್ಕೆ ಒಂದು ಲಕ್ಷ ಸೈಕಲ್ಲುಗಳ ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸುವ ವಿಚಾರವಾಗಿ ಯೋಜನೆ ತಯಾರಿಸಲು ಅವರು ಕೈಗಾರಿಕಾ ಸಚಿವರೊಡನೆ ಮಾತುಕತೆ ನಡೆಸಿದರು ಕಾರ್ಖಾನೆಯನ್ನು ವೈಟ್‌ಫೀಲ್ಡ್, ತುಮಕೂರು ಅಥವ ಮಾಲೂರುಗಳಲ್ಲಿ ಸ್ಥಾಪಿಸಬಹುದೆಂದೂ, ಪ್ರಾರಂಭದಲ್ಲಿ ಅದು ಜೋಡಿಸುವ ಕಾರ್ಖಾನೆಯಾಗಿದ್ದು, ೧೦ ವರ್ಷಗಳಲ್ಲಿ ಭಾಗಗಳನ್ನು ಇಲ್ಲೇ ತಯಾರಿಸಲಾಗುವುದೆಂದೂ ತಿಳಿದು ಬಂದಿದೆ

ಟ್ರಾಫಿಕ್ ಉಲ್ಲಂಘನೆಗೆ ದಂಡ

ರಾಜಧಾನಿಯಲ್ಲಿ ಕಳೆದ ತಿಂಗಳು ಟ್ರಾಫಿಕ್ ಉಲ್ಲಂಘನೆಗಾಗಿ ೪೧೦ ಮೊಕದ್ದಮೆಗಳನ್ನು ಟ್ರಾಫಿಕ್ ಪೋಲೀಸರು ಹೂಡಿದ್ದು, ಒಟ್ಟು ರೂ ... ಜುಲ್ಮಾನೆ ವಸೂಲಾಯಿತು

ಗಣೇಶಾ ಟಾಕೀಸ್

8-3-49 ರಿಂದ 3 ದಿನಗಳು ಮಾತ್ರ ಪ್ರತಿ ದಿನ 3 ಪ್ರದರ್ಶನಗಳು ತಾಜ್‌ಮಹಲ್ ಪಿಕ್ಚರ್ಸ್‌ರವರ

* ಬೇಗಂ

ಅಶೋಕ ಕುಮಾರ್, ನಾಜೀಮ್ ಮತ್ತು ವಿ. ಎಚ್. ದೇಸಾಯಿ ಪಾತ್ರ ವಹಿಸಿರುವ ಹಿಂದೀ ಚಿತ್ರ

-: ಮುಂದಿನ ಬದಲಾವಣೆ :-

ಸಂಸಾರ ನೌಕೆ (ತಮಿಳು)

11-3-49ನೇ ಶುಕ್ರವಾರದಿಂದ

ಎಸ್. ಎ. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಹೇರ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ ಸೀಸೆ 0-12

ಮಹಾ ಸುಗಂಧರಾಜ ತೈಲ —
,, ಚಂದನಾದಿ ತೈಲ —
,, ಭೃಂಗಾ ಮಲಕ ತೈಲ —
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು

ಮಹಾಕೇಶಕೇಶಿ ತೈಲ — ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮ ಬ್ರೇನ್ ಟಾನಿಕ್ ಸೀಸೆ 2-0

ಪಂಚಾಮೃತ — ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವನ

ಮೈಸೂರು ಆಯುರ್ವೇದಿಕ್ ಫಾರ್ಮಸಿ.

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈ ಸೂ ರು

ಪ್ರತಿ ದಿನ ಮೂರು ಆಟಗಳು

9-3-49 ನೇ ಬುಧವಾರದಿಂದ

ಪ್ರಭಾತ್‌ರವರ ಹಿಂದಿ ಚಿತ್ರ

- ಚಾಂದ್ -

ಪಾತ್ರ - ಬೇಗಂ ಪ್ಯಾರಾ, ಸಿತಾರಾ, ಪ್ರೇಂ ಅದೀಬ್, ಬಾಲಗ್ರಾಂ ಮತ್ತಿತರರು

ಒಲಂಪಿಯಾ ಟಾಕೀಸ್

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ಫೋರ್ಡ್ ಎಂಜಿನ್ ವಿಕ್ರಯಕ್ಕಿದೆ

1941ನೇ ಮಾಡಲ್ ಫೋರ್ಡ್ ಲಾರಿ ಇಂಜಿನ್ ಪೂರಾ ಸಜ್ಜುಗಳೊಡನೆ ವಿಕ್ರಯಕ್ಕಿದೆ ಕೇಳಿಕೆ ... ವಿಚಾರಿಸಿ —

ಪ್ರಭಾತ್ ಸಾನಲ್ಲಿ ಸ್ಟೋರ್ಸ್,

... ಮೈಸೂರು

ಶುಭಕರವಾದ

ಲಗ್ನದ ಜವಳಿಗಳಿಗೆ

ನಮ್ಮಲ್ಲಿಗೆ ದಯೆ ಮಾಡಿ ಭೇಟಿ ಕೊಡಿ

ಆರಣಿ ಸಿಲ್ಕ್ ಎಂಪೋರಿಯಂ

... ಅಂಡ್ ಬ್ರದರ್ಸ್

ಹರ್ಷ ರಸ್ತೆ ಮೈಸೂರು

RAJAKAMAL, MYSORE

From 11-3-49 : Daily 3 Shows

An unusual Combination of attractive Story amusing Songs, alluring Dances in Filmisthan's

SAJAN

With - Ashok Kumar & Rehana (Hindi)

ಈಗ ಯಶಸ್ವಿಯಾಗಿ ನಡೆಯುತ್ತಿದ— ದಸರಾ (ಕನ್ನಡ)

ಶುಭಮಸ್ತು

||ಸಮಸ್ತ ಸನ್ಮಂಗಳಾನಿ ಭವಂತು||

ಮದುವೆ ಜವಳಿಗಳಿಗೆ

ಹೆಸರುವಾಸಿಯಾದ ಅಂಗಡಿ

ನ್ಯಾಯವಾದ ಬೆಲೆ ನಾಣ್ಯವಾದ ಮಾಲು

ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರ್ ಬ್ಯಾಂಕ್ ರೋಡ್, ಮೈಸೂರು

Edited printed and published by A R Nagaraj ... at the Sadhvi Press, ... Road, Mysore

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೯–೩–೧೯೪೯ [ಸಂಚಿಕೆ ೧೮೪

ರೈಲ್ವೆ ಮುಷ್ಕರದ ಬಗ್ಗೆ ಮುಂಜಾಗ್ರತಾ ಕಾರ್ಯಕ್ರಮ

ಭಾರತದ ರೈಲ್ವೆ ಕಾರ್ಮಿಕರು ಕಮ್ಯೂ ನಿಸ್ಟರ ಪ್ರೇರೇಪಣೆಯಮೇಲೆ ಇಂದಿನಿಂದ ಮುಷ್ಕರ ಹೂಡಬಹುದೆಂದು ಎಲ್ಲ ಪ್ರಾಂತ್ಯ ಸರ್ಕಾರದವರೂ ಮುಂಜಾಗ್ರತಾ ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ. ...ಮುಖ್ಯ ಪ್ರದೇಶಗಳ ಹತ್ತಿರ ಸಂದೇಹಾಸ್ಪದವಾಗಿ ತಿರುಗಾಡುವ ಮತ್ತು ಸಾರ್ವಜನಿಕ ವಸ್ತುಗಳನ್ನು ನಾಶ ಮಾಡುವ ಯಾರನ್ನಾದರೂ ಗುಂಡಿನಿಂದ ಹೊಡೆಯಬಹುದೆಂದು ಪೋಲೀಸರಿಗೆ ಅಧಿಕಾರವನ್ನು ...ಂಬಾಯಿ ಸರ್ಕಾರದವರು ಕೊಟ್ಟಿರುತ್ತಾರೆ. ಎಲ್ಲ ಮುಖ್ಯ ರೈಲ್ವೆ ಪ್ರದೇಶಗಳಲ್ಲೂ ಪೋಲೀಸ್ ಮತ್ತು ಮಿಲಿಟರೀ ಕಾವಲನ್ನು ಹಾಕಲಾಗಿದೆ.

ಎಸ್. ಐ. ಆರ್. ಕೆಲಸಗಾರರ ಸಂಘಕ್ಕೆ ...ತ್ತ ಮಾನ್ಯತೆಯನ್ನು ರೈಲ್ವೆಯವರು ...ಗೆದು ಹಾಕಿದ್ದಾರೆ.

೧೪ ನೇ ತಾ|| ರಿಂದ ಎಸ್. ಐ. ಆರ್. ಮುಷ್ಕರ

...ದೇ ೧೪ ನೇ ತಾ|| ಮಧ್ಯ ರಾತ್ರಿ ...ಂದ ಎಸ್. ಐ. ಆರ್. ರೈಲ್ವೆಯ ಮುಷ್ಕರವು ಆರಂಭವಾಗುವುದೆಂದು ಅದರ ...ಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಗಾಂಧೀ ಸ್ಮಾರಕ ನಿಧಿ ಟ್ರಸ್ಟ್

...ದೆಹಲಿಯಲ್ಲಿ ಮೊನ್ನೆ ದಿನ ಗಾಂಧೀ ಸ್ಮಾರಕ ನಿಧಿ ಟ್ರಸ್ಟಿನ ಸಭೆಯು ಡಾ|| ರಾಜೇಂದ್ರ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಇಲ್ಲಿಯವರೆಗೆ ನಿಧಿಗೆ ೯ ಕೋಟಿ ರೂ. ಸಂಗ್ರಹವಾಗಿದೆಯೆಂದು ತಿಳಿಸಲಾಯಿತು. ಬೋರ್ಡಿನ ಅಧ್ಯಕ್ಷರನ್ನಾಗಿ ಡಾ|| ರಾಜೇಂದ್ರ ಪ್ರಸಾದ್‌ರವರನ್ನು ಚುನಾಯಿಸಲಾಯಿತು. ಮಹಾತ್ಮರ ತತ್ವಗಳ ಮೇಲೆ ಕೆಲಸಮಾಡುವ ಸಂಸ್ಥೆಗಳಿಗೆ ಧನ ಸಹಾಯ ಮಾಡುವ ಬಗ್ಗೆ ಉಪ ಸಮಿತಿಯನ್ನು ರಚಿಸಲಾಯಿತು.

ಧಾರ್ಮಿಕ ವಿಚಾರದಲ್ಲಿ ಶಾಸನ ಸಭೆಗಳು ಪ್ರವೇಶಿಸ ಬಾರದು

ಶಾಸನ ಸಭೆಯು ಒಂದು ಕೋಮಿನ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರವೇಶಿಸುವುದನ್ನು ವಿರೋಧಿಸಿ, ಅಂತಹ ಕೆಲಸವು ಆ ...ಮಿನ ನಾಯಕರುಗಳಿಂದಲೇ ನಡೆಯಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಪಟ್ಟಾಭಿಸೀತಾರಾಮಯ್ಯನವರು ದೆಹಲಿಯಲ್ಲಿ ನಡೆದ ಹಿಂದೂ ಧಾರ್ಮಿಕ ಮಸೂದೆಯನ್ನು ವಿರೋಧಿಸುವ ಅಖಿಲ ಭಾರತ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ.

'ಜಾಗೃತಿ' ಪತ್ರಿಕೆಗೆ ನೋಟೀಸ್

ಬೆಂಗಳೂರು ೮

...ಲ್ಲಿನ 'ಜಾಗೃತಿ' ಪತ್ರಿಕೆಯು ನವೆಂಬರ್ ...ನೇ ಸಂಚಿಕೆಯಲ್ಲಿ "ಅರಸೊತ್ತಿಗೆ ...ದು ೩ ಕೋಟಿ ಕನ್ನಡಿಗರ ನಾಡು ...ಲಿ' ಎಂಬ ಶಿರೋನಾಮೆಯಲ್ಲಿ ಪ್ರಕಟವಾದ ಲೇಖನವು ಆಕ್ಷೇಪಾರ್ಹವಾಗಿದೆಯೆಂದು ಅದರ ಸಂಪಾದಕರಾದ ಶ್ರೀ ...ರಾಮಣ್ಣನವರ ಮೇಲೆ ಏಕೆ ಕ್ರಮ ...ಹೂಡಬಾರದೆಂಬುದಕ್ಕೆ ನಾಳೆ ಒಳಗೆ ವಿವರಣೆ ಕೊಡಬೇಕೆಂದು ಸರ್ಕಾರದವರು ಅವರಿಗೆ ನೋಟೀಸ್ ಕೊಟ್ಟಿರುತ್ತಾರೆ.

ಮೈಸೂರು ಸೈನ್ಯ ಭಾರತ ಸರ್ಕಾರದ ಆಡಳಿತಕ್ಕೆ

ಮೈಸೂರು ಸಂಸ್ಥಾನದ ರಾಜಕೀಯ ಸ್ಥಾನ ಮಾನಗಳಲ್ಲಿ ಯಾವ ಬದಲಾವಣೆಗಳನ್ನು ಮಾಡಲು ಭಾರತ ಸರ್ಕಾರಕ್ಕೆ ಯಾವ ಉದ್ದೇಶವೂ ಇಲ್ಲವೆಂದೂ, ಕೇಂದ್ರ ಸರ್ಕಾರದೊಡನೆ ಅದು ಮಾಡಿಕೊಂಡಿರುವ ಕರಾರಿನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವುದು ಮತ್ತು ಸಂಸ್ಥಾನದ ಸೈನ್ಯವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಳ್ಳುವುದು ಈ ವಿಚಾರಗಳನ್ನು ಚರ್ಚಿಸಲು ಸಂಸ್ಥಾನಕ್ಕೆ ತಾವು ಭೇಟಿ ಕೊಟ್ಟ ಉದ್ದೇಶವಾಗಿತ್ತೆಂದು ಸಂಸ್ಥಾನ ರಾಜಕೀಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್‌ರವರು ತಿರುವಾಂಕೂರಿನಲ್ಲಿ ತಿಳಿಸಿರುತ್ತಾರೆ.

ಕೌಟಿಲ್ಯ ಸಂಘದ ಸ್ಥಾಪನೆ

ಮೈಸೂರು ೮

ರಾಜಧಾನಿಯಲ್ಲಿ ರಾಜಕೀಯ ವಿಚಾರ ವಿನಿಮಯ ಸಂಸ್ಥೆಯೊಂದನ್ನು ಸ್ಥಾಪಿಸಲು ನಿನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಡಾ|| ಎಂ. ವಿ. ಗೋಪಾಲಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆಯೊಂದು ನಡೆಯಿತು. ಕಾಲೇಜಿನ ಅನೇಕ ಪ್ರೊಫೆಸರುಗಳೂ, ಉಪಾಧ್ಯಾಯರುಗಳೂ ಮತ್ತು ನಗರದ ಗಣ್ಯ ಮಹನೀಯರುಗಳೂ ದಯಮಾಡಿಸಿದ್ದರು. ಶ್ರೀ ಎಂ. ವಿ. ಕೃಷ್ಣರಾಯರು ಸಭೆಯ ಉದ್ದೇಶವನ್ನು ವಿವರಿಸಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ರಾಜಕೀಯ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಬೇಕಾದುದು ಅತ್ಯಗತ್ಯವೆಂದೂ, ಇವನ್ನು ಸಾಧಿಸಲು ಒಂದು ಸಂಸ್ಥೆಯು ಅವಶ್ಯಕವೆಂದೂ ತಿಳಿಸಿದರು. ಅನಂತರ ಕೌಟಿಲ್ಯ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ನಿಯಮಾವಳಿಗಳನ್ನು ಸಿದ್ಧಗೊಳಿಸಲು ಒಂದು ಉಪ ಸಮಿತಿಯನ್ನೂ ರಚಿಸಲಾಯಿತು.

ಚಾಮುಂಡೇಶ್ವರಿಯವರ ಉತ್ಸವ

ರಾಜಧಾನಿಯ ಮೇದರ ರಾವ್. ಪ್ರಾಂಪಿರದಿಂದ ಶ್ರೀ ಚಾಮುಂಡೇಶ್ವರಿಯವರ ಉತ್ಸವವು ಈ ಸಂಜೆ ೬-೩೦ಕ್ಕೆ ಹೊರಟು ಸಯ್ಯಾಜಿರಾವ್ ರಸ್ತೆ, ಕಾಳಮ್ಮನ ಗುಡಿ ಬೀದಿ, ಅಶೋಕಾ ರಸ್ತೆ ಮತ್ತು ಶಿವರಾಂ ಪೇಟೆಗಳ ಮೂಲಕ ಬರುವುದು.

ಚೀಣವನ್ನು ಬಿಡಲು ಚಿಯಾಂಗರ ನಿರಾಕರಣೆ

ಶಾಂತಿ ಸ್ಥಾಪನೆಗೆ ಸಹಾಯವಾಗಲು ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕ್‌ರವರು ದೇಶವನ್ನು ಬಿಟ್ಟು ಹೊರಕ್ಕೆ ಹೋಗಬೇಕೆಂದು ಸರ್ಕಾರದವರು ಇತ್ತ ಸೂಚನೆಯನ್ನು ನಿರಾಕರಿಸಿದ್ದಾರೆಂದು ವರದಿಯಾಗಿದೆ.

ಚಿಕ್ಕಮಗಳೂರು, ಶಿವಮೊಗ್ಗದಲ್ಲಿ ಪಾನನಿರೋಧ

ಸ್ವಂ. ಸು. ಫೋ|] ಬೆಂಗಳೂರು ೯

ಬರುವ ಜುಲೈ ತಿಂಗಳಿನಿಂದ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪಾನ ನಿರೋಧವು ಜಾರಿಗೆ ಬರುವುದು. ಇದರಿಂದ ಸರ್ಕಾರಕ್ಕೆ ೩೦ ಲಕ್ಷ ರೂ. ನಷ್ಟವಾಗುವುದು.

○ ಬರುವ ವರ್ಷದ ಬಜೆಟ್ಟಿನ ಅಂದಾಜಿನಲ್ಲಿ ಶಸ್ತ್ರವೈದ್ಯಶಾಲೆಗಳಿಗಾಗಿ ಒದಗಿಸಿರುವ ೩|| ಲಕ್ಷ ರೂ. ಜೊತೆಗೆ ಇನ್ನೂ ೬ ಲಕ್ಷ ರೂ. ಅನ್ನು ಒದಗಿಸಲಾಗಿದೆ.

○ ಖಜಾನಾ ಕಛೇರಿಯ ಮುಂದೆ ಪ್ರದರ್ಶನ ನಡೆಸಿದರೆಂದು ೧೫ ಜನ ಚಿನ್ನದ ಗಣಿ ಕೆಲಸಗಾರರಿಗೆ ತಲಾ ಒಂದು ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಲಾಗಿದೆ.

○ ಗೋಪಾಲರಾವ್ ವಿಚಾರಣಾ ಸಮಿತಿಯ ಮುಂದೆ ಶ್ರೀ ಜೆ. ಬಿ. ದಾಸಪ್ಪನವರು ಸಾಕ್ಷ್ಯವಿತ್ತು, ಶ್ರೀ ಗೋಪಾಲರಾಯರೊಡನೆ ತಾವು ನಡೆಸಿದ ಲೇವಾದೇವಿಯಿಂದ ೧೧ ಲಕ್ಷ ರೂ. ಸಂಪಾದಿಸಿರುವುದಾಗಿಯೂ, ಅದೆಲ್ಲವನ್ನೂ ಸಮಿತಿಗೆ ವಾಪಸು ಕೊಡುವುದಾಗಿಯೂ ತಿಳಿಸಿರುತ್ತಾರೆ.

ಅಜಾದ್ ಕಾಶ್ಮೀರ ಸರ್ಕಾರದ ರಾಜೀನಾಮೆ

ಅಜಾದ್ ಕಾಶ್ಮೀರ ಸರ್ಕಾರದ ಅಧ್ಯಕ್ಷರಾದ ಸರ್ದಾರ್ ಇಬ್ರಾಹಿಂ ಖಾನ್ ಮತ್ತು ಇತರ ಸಚಿವರುಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟಿರುತ್ತಾರೆ.

ಸರ್ ಚಾರಲ್ಸ್ ಟಾಡ್‌ಹಂಟರರ ನಿಧನ

ಶ್ರೀಮನ್ಮಹಾರಾಜರವರ ಖಾಸಗಿ ಕಾರ್ಯದರ್ಶಿಗಳಾಗಿದ್ದು ನಿವೃತ್ತರಾದ ಸರ್ ಚಾರಲ್ಸ್ ಟಾಡ್ ಹಂಟರ್‌ರವರು ಲಂಡನ್ ನಗರದಲ್ಲಿ ತಮ್ಮ ೮೦ ನೇ ವಯಸ್ಸಿನಲ್ಲಿ ನಿಧನರಾದರೆಂಬ ವಾರ್ತೆ ಬಂದಿದೆ.

ಚೀಣಾ ಪ್ರಧಾನಿಯ ರಾಜೀನಾಮೆ

ಚೀಣಾದ ಪ್ರಧಾನಿ ಡಾ|| ಸನ್‌ಫೋರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆ. ಕಮ್ಯೂನಿಸ್ಟರೊಂದಿಗೆ ಸಂಧಾನ ಮಾಡಿಕೊಳ್ಳುವ ಬಗ್ಗೆ ಮಂತ್ರಿಮಂಡಲಿ ಶಿಷ್ಟ ಅವರಿಗೂ ಇದ್ದ ಭಿನ್ನಾಭಿಪ್ರಾಯವೇ ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ.

ಭಾರತದಲ್ಲಿ ಪೆನ್ಸಿಲಿನ್ ತಯಾರಿಕೆ

೧|| ಕೋಟಿ ರೂ. ಖರ್ಚಿನಿಂದ ಭಾರತದಲ್ಲಿ ಪೆನ್ಸಿಲಿನ್ ತಯಾರಿಕೆಯ ಕಾರ್ಖಾನೆಯನ್ನು ಕೇಂದ್ರ ಸರ್ಕಾರದವರೇ ತೆರೆಯಲು ಆಲೋಚಿಸುತ್ತಿದ್ದಾರೆಂದು ಹೇಳಲಾಗಿದೆ.

ಡಾ|| ಜಯರಾಂರವರು ಸೀನಿಯರ್ ಸರ್ಜನ್

ಸ್ವಂ. ಸು. ಫೋ|] ಬೆಂಗಳೂರು ೯

ಡಾ|| ಬಿ. ಜಯರಾಂ ನಾಯ್ಡುರವರನ್ನು ಸೀನಿಯರ್ ಸರ್ಜನರನ್ನಾಗಿ ನೇಮಿಸಲು ಸರ್ಕಾರದವರು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ.

○ ಗೊರೂರು ಮತ್ತು ದೊಡ್ಡ ಪೇಟೆ ಕುರಿಕೆಗಳಲ್ಲಿ ಹೈ ಸ್ಕೂಲುಗಳನ್ನು ಸ್ಥಾಪಿಸಲು ಅನುಮತಿ ದೊರೆತಿದೆ.

○ ಮಲೆನಾಡಿನ ಪ್ರೈಮರಿ ಉಪಾಧ್ಯಾಯರುಗಳಿಗೆ ರೂ. ಗೆ ನಾಲ್ಕು ಆಣೆಯಂತೆ ವಿಶೇಷ ಸರಾಸರಿ ಭತ್ಯವನ್ನು ಇನ್ನು ಮುಂದೆ ಕೊಡಲಾಗುವುದು.

○ ಭಾರತ ಸರ್ಕಾರದ ಮೆಡಿಕಲ್ ಕೌನ್ಸಿಲ್ಲಿನವರು ನಾಳೆ ಇಲ್ಲಿಗೆ ಬರುವರು. ೧೧ ಮತ್ತು ೧೨ ನೇ ತಾ|| ಮೈಸೂರಿನ ಮೆಡಿಕಲ್ ಕಾಲೇಜಿನ ಪರಿಶೀಲನೆ ನಡೆಸುವರು.

○ ಭಾರತದ ಕಾರ್ಮಿಕ ಮಂತ್ರಿ ಶ್ರೀ ಜಗಜೀವನರಾಂರವರು ಏಪ್ರಿಲ್ ೨ನೇ ತಾ|| ಬೆಂಗಳೂರಿಗೆ ಬಂದು, ಜಾಲಹಳ್ಳಿಯಲ್ಲಿ ನಿರಾಶ್ರಿತರ ಪರಿಹಾರ ಸಮಿತಿ ಡೈರೆಕ್ಟರುಗಳ ಸಮ್ಮೇಳನದಲ್ಲಿ ಭಾಗವಹಿಸುವರು.

○ ಭಾರತದ ದಂಡ ನಾಯಕರಾದ ಜನರಲ್ ಕರಿಯಪ್ಪನವರು ಇದೇ ೧೮ ನೇ ತಾ|| ಇಲ್ಲಿಗೆ ಬಂದು ೩ ದಿನಗಳು ತಂಗುವರು.

ಅಕ್ರಮ ರವಾನೆಗೆ ಜುಲ್ಮಾನೆ

ಮೈಸೂರು ೯

...ಗಂಗೇಶ್ವರಿ ಮಿಲ್ ಮಾದಯ್ಯ ಎಂಬುವನು ೧೦ ಟಿನ್ ಸೀಮೆಎಣ್ಣೆಯನ್ನೂ ಮತ್ತು ದೊಡ್ಡಬಾಗಿಲು ಪೇರ್ ಎಂಬುವನು ೨ ಟಿನ್ ಸೀಮೆಎಣ್ಣೆಯನ್ನೂ ಅಕ್ರಮವಾಗಿ ಸಾಗಿಸುತ್ತಿದ್ದುದನ್ನು ಫುಡ್ ರೇಡ್ ಪಾರ್ಟಿಯವರು ಪತ್ತೆಮಾಡಿ ನೊಕದ್ದಮೆ ಹೂಡಿದ್ದರು. ನಗರ ನ್ಯಾಯಾಧೀಶರು ಈ ದಿನ ಅವರಿಗೆ ೨೫ ಮತ್ತು ೨೦ ರೂ. ದಂಡವನ್ನು ವಿಧಿಸಿದರು.

ರೇಷನ್ ಡಿಪೋದಲ್ಲಿ ಕಪ್ಪು ಅಳತೆ ಪತ್ತೆ

ಕೃಷ್ಣರಾಜ ಮೊಹಲ್ಲಾದ ಶ್ರೀ ಶಾಂತಿ ಸುಬ್ಬಣ್ಣನವರ ರೇಷನ್ ಡಿಪೋವಿನಲ್ಲಿ ನಿನ್ನೆ ೫|| ಸೇರು ಅಳತೆ ಮಾಡಿಕೊಟ್ಟದ್ದರಲ್ಲಿ ೧ ಚಟಾಕು ಕಡಿಮೆ ಇದ್ದುದನ್ನು ಅಳತೆ ಮತ್ತು ತೂಕದ ಇನ್ಸ್‌ಪೆಕ್ಟರರು ಪತ್ತೆ ಮಾಡಿ, ಸೇರನ್ನು ವಶಪಡಿಸಿಕೊಂಡರು. ಅವರ ಮೇಲೆ ನೊಕದ್ದಮೆ ಹೂಡಿರುತ್ತಾರೆ. ಸೇರಿನ ಅಳವು ತಪ್ಪಾಗಿತ್ತೆಂದೂ ಹೇಳಲಾಗಿದೆ.

ತಿರುವಾಂಕೂರು, ಕೊಚ್ಚಿ ಸಂಸ್ಥಾನಗಳ ಐಕ್ಯವೇ?

ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳು ಸದ್ಯದಲ್ಲಿಯೇ ಐಕ್ಯವಾಗುವುವೆಂದೂ, ಇದಕ್ಕೆ ಇವುಗಳ ರಾಜರೂ ಮತ್ತು ಮಂತ್ರಿಗಳೂ ಒಪ್ಪಿಗೆ ಕೊಟ್ಟಿರುವರೆಂದೂ ತಿಳಿದುಬಂದಿದೆ.

ಖಾಸಿಂ ರಜ್ವಿಯ ಮೇಲೆ ಮೊಕದ್ದಮೆ

ಹೈದರಾಬಾದಿನ ಗುಲ್ಬರ್ಗ ಕೋರ್ಟಿನಲ್ಲಿ ರಜಾಕರರ ನಾಯಕನಾಗಿದ್ದ ಖಾಸಿಂ ರಜ್ವಿ ಮತ್ತು ಇತರ ೨೦ ಜನರ ಮೇಲೆ ಕೊಲೆ, ಸುಲಿಗೆ, ಲೂಟಿ ಮತ್ತು ಇತರ ಅಪರಾಧಗಳ ಮೇಲೆ ... ಹೂಡಲಾ...

ಪ್ರತ್ಯೇಕತಾ ಮನೋಭಾವ ಕೂಡದು

ಮುಸ್ಲಿಂ ಅನಾಥಾಲಯದಲ್ಲಿ
ಕೆ. ಸಿ. ರೆಡ್ಡಿಯವರ ಭಾಷಣ

ಮೈಸೂರು ೯

ಸಯ್ಯಾಜಿರಾವ್ ರಸ್ತೆಯಲ್ಲಿರುವ ಮುಸ್ಲಿಂ ಅನಾಥಾಲಯದ ನಾಲ್ಕನೇ ವಾರ್ಷಿಕೋತ್ಸವವು ನಿನ್ನೆ ಪ್ರಧಾನ ಸಚಿವರಾದ ಶ್ರೀ ಕೆ ಚ-ಗಲ್‌ರಾಯ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಾಲಕ ಬಾಲಕಿಯರಿಂದ ಪ್ರಾರ್ಥನೆಯಾದನಂತರ ಅಧ್ಯಕ್ಷರಾದ ಶ್ರೀ ರೆಡ್ಡಿಯವರು ಬಾಪೂಜಿಯವರ ನಿಧನಕ್ಕೆ ಸಂತಾಪ ಸೂಚಿಸುವ ನಿರ್ಣಯವನ್ನು ಸಭೆಯ ಮುಂದಿಟ್ಟರು. ಒಂದು ನಿಮಿಷ ಮೌನದಿಂದ ಸಭೆಯು ಒಪ್ಪಿಸಿತು. ಅದನ್ನು ಅಂಗೀಕರಿಸಿತು ಅನಾಥಾಲಯದ ಬಾಲಕರಿಂದ ಪದ್ಯಗಳನ್ನು ಹಾಡಿಸಲಾಯಿತು. ಜಗೀ ಅಬ್ದುಲ್ ರಜಾಕ್ ರವರು ಸರ್ವರಿಗೂ ಸ್ವಾಗತ ಕೋರಿ ಅನಾಥಾಲಯದ ವರದಿಯನ್ನು ಒಪ್ಪಿಸಿದರು. ಕಾ ಕರೀಂರವರು ಉರ್ದುವಿನಲ್ಲಿ ವರದಿಯನ್ನು ಒಪ್ಪಿಸಿದರು.

ಶ್ರೀ ಕೆ ಸಿ ರೆಡ್ಡಿಯವರು ಮಾತನಾಡಿ ಈ ದೇಶಯಾಗಿ ಮುಸ್ಲಿಂ ಬಾಂಧವರ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಅನುಕೂಲ ಪೋಷಕರೆಂದುದಕ್ಕೆ ಸಂಚಾಲಕರನ್ನು ವಂದಿಸಿದರು. ಮುಸ್ಲಿಂ ಮಹಿಳೆಯರು ಇರುವ ಅನಾಥಾಲಯವನ್ನು ತಾವು ಸಂದರ್ಶಿಸಿದುದಾಗಿಯೂ ಅಲ್ಲಿನ ವಿದ್ಯಾರ್ಥಿನಿಯರಿಗೆ ಕಲ್ಪಿಸಿಕೊಟ್ಟಿರುವ ಅವಕಾಶ ಮತ್ತು ಅನುಕೂಲಗಳು ತಂದೆ ತಾಯಿಗಳು ಇರುವ ಅನೇಕ ಮಕ್ಕಳಿಗೂ ಇಲ್ಲವೆಂದೂ ತಿಳಿಸಿದರು. ಸ್ವಾತಂತ್ರ್ಯ ಬಂದಮೇಲೆ ಪ್ರಜಾ ಸರ್ಕಾರವು ನಾಡಿನ ಸತ್ಪ್ರಜೆಯನ್ನು ತಯಾರು ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿರುವುದರಿಂದ ಇಂತಹ ಅನಾಥಾಲಯಗಳು ಬಾವೀ ಪ್ರಜೆಯಾದ ಮಕ್ಕಳಿಗೆ ಒಳ್ಳೆ ಶಿಕ್ಷಣ ಕೊಡಬೇಕಾದುದು ಅಗತ್ಯ. ಮಹಮದ್ ಪೈಗಂಬರರೂ ಸಹ ಬಾಲ್ಯದಲ್ಲೇ ಅನಾಥರಾಗಿದ್ದು ಅವರು ಪಡೆದ ವಿದ್ಯಾಭ್ಯಾಸದಿಂದ ಪ್ರಪಂಚಕ್ಕೇ ಆದರ್ಶವನ್ನು ತೋರಿಸಿದರು. ಆದುದರಿಂದ ಅನಾಥ ಮಕ್ಕಳು ಒಳ್ಳೆಯ ವಿದ್ಯಾಭ್ಯಾಸ ಹೊಂದಿದರೆ ಅವರು ಸತ್ಪ್ರಜೆಗಳಾಗಲು ಅವಕಾಶವಿದೆ ಎಂದು ತಿಳಿಸಿದರು.

ದೇಶದಲ್ಲಿ ಕೋಮುವಾರು ನಿಲಯಗಳು ಹೆಚ್ಚಿ ವಿದ್ಯಾರ್ಥಿ ದಶೆಯಲ್ಲಿಯೇ ಪ್ರತ್ಯೇಕತಾ ಮನೋಭಾವ ಬರಲು ಕಾರಣವಾಯಿತೆಂದೂ ಇನ್ನು ಮುಂದೆ ಇಂತಹ ಸಂಸ್ಥೆಗಳು ಕಡಿಮೆಯಾಗಿ ಪ್ರತಿ ನಿಲಯದಲ್ಲೂ ಸರ್ವರಿಗೂ ಸಮಾನಾವಕಾಶ ಇರುವಂತೆ ಪ್ರತಿ ಸಿ ಸರ್ವತೋಮುಖವಾದ ಅಭಿವೃದ್ಧಿಗೆ ಜನರು ದುಡಿಯಬೇಕೆಂದೂ ಹೇಳಿದರು. ಬೆಂಗಳೂರಿನಲ್ಲಿ ಈ ತತ್ವಪ್ರತಿಪಾದನೆಯು ಮೊದಲನೆ ಹಂತವಾಗಿ ಗಾಂಧಿ ನಗರದಲ್ಲಿರುವ ಹೈಲನ್ನು ಬೇರೆ ಕಡೆಗೆ ವರ್ಗಾಯಿಸಿ ಇತರ ಕಡೆಗಳಲ್ಲಿರುವ ಹಲವು ವಿದ್ಯಾರ್ಥಿ ನಿಲಯಗಳನ್ನು ಒಂದೇ ಕಡೆ ಅಲ್ಲಿ ಇರುವಂತೆ ಮಾಡಲು ಸರ್ಕಾರವು ಯೋಚಿಸುತ್ತಿದೆಯೆಂದು ತಿಳಿಸಿದರು. ಕೆಲವು ಹಾಸ್ಟಲುಗಳಲ್ಲಿ ಸರ್ವರಿಗೂ ಅವಕಾಶ ಕೊಟ್ಟಿರುವುದಕ್ಕೆ ಅಲ್ಲಿನ ಕಾರ್ಯ ನಿರ್ವಾಹಕ ಮಂಡಲಿಯವರನ್ನು ಅಭಿನಂದಿಸಿದುದಲ್ಲದೆ ಮೈಸೂರಿನಲ್ಲಿ ಮುಸ್ಲಿಂ ಮಹಿಳೆಯರಿರುವ ಕಟ್ಟಡದಲ್ಲಿ ಸರ್ವ ಜನಾಂಗದ ಮಹಿಳೆಯರಿಗೂ ಹೈಸ್ಕೂಲನ್ನು ತೆರೆಯಬೇಕೆಂದಿರುವ ಯೋಚನೆಯನ್ನು ಪ್ರಶಂಸಿಸಿ ಇದಕ್ಕೆ ಸರ್ಕಾರದವರು ಸೂಕ್ತ ಸಹಾಯ ಮಾಡುವುದಾಗಿ ಭರವಸೆ ಇತ್ತರು.

ಮಹಾತ್ಮ ಗಾಂಧಿಜಿಯವರಂತೆ ಎಲ್ಲರ ಶ್ರೇಯಸ್ಸಿಗೆ ದುಡಿಯಬೇಕೆಂದೂ ಪ್ರತ್ಯೇಕ ಭಾವನೆ ಬಿಟ್ಟು ಎಲ್ಲರೂ ಸತ್ಪ್ರಜೆಯಾಗಿ ಬಾಳಲು ಶ್ರಮಿಸಬೇಕೆಂದೂ ತಿಳಿಸಿದರು.

ಪ್ರಭಾ ★ ಈ ರಾತ್ರಿ
ಪ್ಯಾರ್-ಕಿ-ಜೀತ್ (ಹಿಂದಿ)
ಪಾತ್ರ - ಸುರೈಯ್ಯ ಮನೋರಮಾ, ರೆಹಮಾನ್
- ಬೆಳಗಿನ ಪ್ರದರ್ಶನಗಳು -
11ನೇ ಶುಕ್ರವಾರದಿಂದ 14ನೇ ಸೋಮವಾರದ ವರೆಗೆ
* ಕೀರ್ತಿ * (ಹಿಂದಿ)
† ಲಲಿತ ಪವಾರ್ † ಜಯರಾಜ್ †

ಲಗ್ನದ ಜನರಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿಗೆ
ಎಂದೇ ಭೇಟಿ ಕೊಡಿ
ಶಿವರಾಂಪೇಟೆ ಮೈಸೂರು

If you need the services of an expert Kindergartener and Child Educationist for your children at home, please write to:—
The Director
Sri Jagadamba Sishuvihar,
Dewan's Road, Mysore.

ಶ್ರೀ ಗಾಯತ್ರೀ ಟಾಕೀಸ್
9-3-49ರಿಂದ 2 ದಿನಗಳು ಮಾತ್ರ
ಪ್ರತಿ ದಿನ 3 ಆಟಗಳು
ಪ್ಯಾರಮೌಂಟ್ಸ್‌ರವರ
WILD HARVEST
With—Alan Ladd
Dorothy Lamour

* ಶ್ರೀ ಗಣೇಶಾ ಟಾಕೀಸ್ *
11-3-49ರಿಂದ : ಅಮೋಘ ಆರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
ಪ್ರಗತಿ ಪಿಕ್ಚರ್ಸ್ ಮತ್ತು ಸ್ಟಾರ್ ಕಂಬೈನ್ಸ್‌ರವರ

(ತಮಿಳು ಭಾಷೆ)
ಸಂಸಾರ ನೌಕೆ
ತಾರಾಗಣ - ಬಿ. ಆರ್. ಪಂತುಲು, ಟಿ. ಆರ್. ರಾಮಚಂದ್ರನ್, ಸೂರ್ಯ ಕುಮಾರಿ, ಪ್ರೇಮಾವತಿ ಮುತ್ತಿತರರು.

ಶ್ರೀ ಬಂದಿಗಳಿಗೆ ಬೇಡಿ ಹಾಕಕೂಡದು
ಶ್ರೀ ಬಂದಿಗಳಿಗೆ ಕೈ ಬೇಡಿ ಹಾಕುವ ಸಂಪ್ರದಾಯವಿದ್ದರೆ ಅದನ್ನು ನಿಲ್ಲಿಸಲು ಆಜ್ಞೆಯನ್ನು ಮಾಡಲಾಗುವುದೆಂದು ದಾರ್ ಪಟೇಲರು ಹೇಳಿರುತ್ತಾರೆ

ಪ್ರತಿ ದಿನ ಮೂರು ಆಟಗಳು
9-3-49 ನೇ ಬುಧವಾರದಿಂದ
ಪ್ರಭಾತ್ ರವರ ಹಿಂದಿ ಚಿತ್ರ
- ಚಾಂದ್
ಪಾತ್ರ, ಬೇಗಂ ಪ್ಯಾರಾ, ಸಿತಾರಾ, ... ಅದೀಬ್, ಬಾಲಗ್ರಾಂ ಮುತ್ತಿತರರು
ಒಲಿಂಪಿಯಾ ಟಾಕೀಸ್

UNIVERSITY OF MYSORE
Office of the University of Mysore, Mysore. Dated the 26th February
No Ex-3—867/48 49

NOTIFICATION

Admission Tickets for University Examinations March 1949

It is hereby notified for the information of candidates who have appeared for the several University Examinations of March 1949 that the Admission Tickets will be issued by the Heads of Colleges through which they have sent their applications for the Examination.

Candidates who have APPEARED in PRIVATE must get their admission tickets from the Heads of Colleges through which they have sent their applications for the Examination.

ADMISSION TICKETS WILL NOT BE SENT TO CANDIDATES DIRECT FROM THE UNIVERSITY OFFICE.

By Order,
T Sr. ...alinga Devaru,
Registrar I/c,

ಪ್ರಭುದೇವಾ ಟಾಕೀಸಿನಲ್ಲಿ
11-3-49ನೇ ಶುಕ್ರವಾರದಿಂದ ಪ್ರತಿದಿನ 3 ಆಟಗಳು
* ನವೀನ ವಳ್ಳಿ ಮತ್ತು ಕೃಷ್ಣ ತುಲಾಭಾರಂ *
ಡಬ್ಬಲ್ ಪ್ರೋಗ್ರಾಂ :: (ತಮಿಳು)
ಪಾತ್ರ —ನಾಗರ ಕೋಯಿಲ್ ಮಹದೇವನ್, ಜಯಶ್ರೀ, ಎ.ಕೆ. ಶ್ರೀನಿವಾಸನ್, ಕೃಷ್ಣಮೂರ್ತಿ ಮುಂತಾದವರು

Edited, printed and published by A R Nagarajan at the Sadhvi Press, D Subbiah Road Mysore.

ಫೋ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೬ ಕಾಸು

ಸಂಪುಟ ೭] ಗುರುವಾರ ೧೦-೬-೧೯೫೪ [ಸಂಚಿಕೆ ೧೮೫

ಚಿನ್ನದಗಣಿ ಸರ್ಕಾರಕ್ಕೆ ವಶಪಡಿಸಲು ಒಪ್ಪಂದ

ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಪ್ರಜೆಗಳ ಸಹಕಾರ

ಮೈಸೂರು ೧೦

ಪ್ರಧಾನ ಮಂತ್ರಿಗಳಾದ ಶ್ರೀ ಕೆ. ಸಿ ರೆಡ್ಡಿ ಯವರು, ನಿನ್ನೆ ದಿನ ಲಲಿತಾದ್ರಿಪುರಕ್ಕೆ ...ಚಾರ ಸಂಗ್ರಹಣೆಗಾಗಿ ಭೇಟಿಯಿತ್ತರು. ...ಲ್ಲಿನ ನಿವಾಸಿಗಳು ಅವರನ್ನು ವೈಭವಪೂ ...ರ್ವಕವಾಗಿ ಸ್ವಾಗತಿಸಿದರು. ಪಟೇಲರೂ ಮತ್ತು ಛೇರ್ಮನ್ನರೂ ಆದ ಶ್ರೀ ಮಾದ ...ಯ್ಯನವರು ಮಂತ್ರಿವರ್ಯರಿಗೆ ಸ್ವಾಗತವ ...ಿತ್ತು ಕುಡಿಯುವ ನೀರಿನ ಅಭಾವವನ್ನು ...ಪ್ಪಿಸಬೇಕೆಂದು ಕೋರಿದರು. ಅದಿಕ ...ರ್ನಾಟಕರಿಗೆ ರೇಷನ್ ಕೊಡಿಸಬೇಕೆಂದು ...ಕೋರಲಾಯಿತು. ತಾಲ್ಲೂಕು ಗ್ರಾಮಾಭಿ ...ವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ...ಾರಸ್ವಾಮಿಯವರು ಭಾಷಣಮಾಡಿ ಅ ...ಭಾವದ ಕಾಲದಲ್ಲಿ ಮಂತ್ರಿವರ್ಯ ...ರು ದೇಶಸಂಚಾರಮಾಡಿ ಪ್ರಜೆಗಳಿಗೆ ...ಹಾರವನ್ನೊದಗಿಸಲು ಕೈಕೊಂಡಿರುವ ...ಕಾರ್ಯವನ್ನು ಪ್ರಶಂಸಿಸಿದರು.

ಶ್ರೀ ರೆಡ್ಡಿಯವರು ಮಾತನಾಡಿ ...ಕುಡಿಯುವನೀರಿನ ಅಭಾವವನ್ನು ತಪ್ಪಿಸ ...ು ಪ್ರಯತ್ನಿಸುವುದಾಗಿಯೂ ಆದಿಕರ್ನಾ ...ಟಕರಿಗೆ ಏನತ್ತು ಸಂಸಾರಕ್ಕೆ ೭ ಎಕರೆಗ ...ಳ ಜಮೀನುಗಳನ್ನು ಕೊಡಿಸುವುದಾ ...ಗಿಯೂ ತಿಳಿಸಿದರು

ಸರ್ಕಾರದವರು ಕೈಗೊಳ್ಳುವ ಯೋಜ ...ನೆಗಳು ಕಾರ್ಯಗತವಾಗಬೇಕಾದರೆ ಪ್ರಜೆಗ ...ಳ ಸಹಕಾರ ಅಗತ್ಯವೆಂದೂ ಪ್ರಜಾಸರ್ಕಾ ...ರದೊಡನೆ ಪ್ರತಿಯೊಬ್ಬರೂ ಸಹಕರಿಸಿ ಆ ...ಹಾರದ ಅಭಾವವನ್ನು ನಿವಾರಿಸಬೇಕೆಂ ...ದು ತಿಳಿಸಿದರು

ಗ್ರಾಮಸ್ಥರು ೧೦ ಪಲ್ಲ ರಾಗಿ ಕೊಡುವು ...ದಾಗಿ ತಿಳಿಸಿದರು

ಶ್ರೀ ರೆಡ್ಡಿಯವರು ತರುವಾಯ ಕಳ್ಳಿ ...ಹಳ್ಳಿಗೆ ಭೇಟಿ ಇತ್ತು ನೂತನ ಯೋಜನೆ ...ಯನ್ನು ರೈತರಿಗೆ ವಿವರಿಸಿ ಅವರಿಂದಲೂ ಸಹಕಾರದ ಭರವಸೆಯನ್ನು ಪಡೆದು ಬೆಂ ...ಗಳೂರಿಗೆ ತೆರಳಿದರು

ಹರಿ ಕ ಥೆ

ರಾಜಧಾನಿಯ ಚೆಲುವಾಂಬಾ ಅಗ್ರಹಾ ...ರದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ...ಸ್ವಾಮಿ ದೇವಸ್ಥಾನದಲ್ಲಿ ಏಕಾದಶೀ ಪ್ರ ...ಯುಕ್ತ ನಾಳೆ ರಾತ್ರಿ ೯ ಗಂಟೆಗೆ ಪಂಡರೀ ...ಪುರ ... ಇರುವ ಗಾಣಿಗಾಪುರದ ಶ್ರೀ ...ದಿಗಂಬರ ದತ್ತಾತ್ರೇಯಸ್ವಾಮಿ ಮ ...ಠದವರಿಂದ ಸುಭದ್ರಾಕಲ್ಯಾಣ ಎಂ ...ಬ ಹರಿಕಥೆ ನ ಡೆ ಯು ವು ದು.

---

೮೦ ಪಲ್ಲ ಭತ್ತ ಸಂಗ್ರಹ

ಮೈಸೂರು ೧೦

...ನಗರ ಮತ್ತು ಮಣಸೂರು ... ೧೬ ಗ್ರಾಮಗಳಲ್ಲಿ ನಿನ್ನೆ ಜಿ ...ಲ್ಲಾ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷ ...ರಾದ ಶ್ರೀ ಎಸ್ ರಂಗರಾಮಯ್ಯ, ಶ್ರೀ ... ಜೋಸೆಫ್ ಮತ್ತು ಅಧಿಕಾರಿ ...ವರು ಸಂಚಾರ ಮಾಡಿ, ನೂತನ ...ಮಾಭಿವೃದ್ಧಿಯೋಜನೆಯನ್ನು ವಿವರಿ ...ಸಿ ಸಹಕಾರವನ್ನು ಕೋರಿದರು. ...ಂಬಂಧದಲ್ಲಿ ಗ್ರಾಮಸ್ಥರು ಒಟ್ಟು ... ಪಲ್ಲ ಭತ್ತ ಮತ್ತು ೭೦೦ ಹಣ್ಣು ...ಕೊಡುವುದಾಗಿ ತಿಳಿಸಿದರು

ನಗರದ ಸ್ಕೌಟ್ ರ್‍ಯಾಲಿ

ಮೈಸೂರು ೧೦

ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸ್ಕೌಟ್ ರ್‍ಯಾಲಿಯು ಭೋರ್ಮಾನ್ಸ್ ನಿನ್ನೆ ನಡೆಯಿತು ಸಚಿವರಿಂದ ಧ್ವಜಾರೋಹಣ ವಾದನಂತರ, ಸ್ಕೌಟುಗಳ ಮಾರ್ಚ್ ಪಾಸ್ಟ್ ಜರುಗಿತು. ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರು ಸ್ಕೌಟ್ ಚಳುವಳಿಯ ಇತಿಹಾಸವನ್ನು ವಿವರಿಸಿ ಸ್ವಾಗತ ಭಾಷಣಮಾಡಿದರು. ಅಂತರ ರಾಷ್ಟ್ರೀಯ ಸ್ಕೌಟ್ ಸಮ್ಮೇಳನದ ಒಂದು ದೃಶ್ಯವನ್ನು ವಿನೋದ ರೂಪದಲ್ಲಿ ಪ್ರದರ್ಶಿಸಲಾಯಿತು.

ಶ್ರೀ ಡಿ ಬಿ ಕೃಷ್ಣಪ್ಪನವರು ... ಹೈಸ್ಕೂಲ್ ಗ್ರೂಪಿನ ಶೀಲ್ಡು ಜಯಾ ಸ್ಪೆಷಲ್ಗೂ, ಉತ್ತಮ ಸ್ಕೌಟ್ ಗ್ರೂಪಿನ ಭಾಗಕ್ಕೆ ಶ್ರೀ ಬಿ. ಆರ್ ಲಕ್ಷ್ಮಣ ಶೆಟ್ಟಿಯವರು ಕೊಟ್ಟ ಬೆಳ್ಳಿ ಯಬಟ್ಟಲು ಸಹ ಜಯಾ ಸ್ಪೆಷಲ್‌ಗೂ ಮಿಡಲ್ ಸ್ಕೂಲ್ ಗ್ರೂಪಿನ ಭಾಗಕ್ಕೆ ಶ್ರೀ ವೇಣುಗೋಪಾಲ್ ಮೊದಲಿಯಾರರು ಕೊಟ್ಟ ಶೀಲ್ಡು ಬಾಡಿಗಾರ್ಡ್ ಶಾಲೆಗೂ, ಪ್ರೈಮರಿಭಾಗಕ್ಕೆ ಶ್ರೀ ಡಿ ಬಿ ಕೃಷ್ಣಪ್ಪನವರು ಕೊಟ್ಟ ಶೀಲ್ಡು ಕೃಷ್ಣರಾಜ... ರ್ದ್ ಶಾಲೆಗೂ ಬಹುಮಾನವಾಗಿ ವಿನಿಯೋಗಿಸಲ್ಪಟ್ಟವು

ಅನಂತರ ಸಚಿವರು ಭಾಷಣ ಮಾಡಿ ಈಗ ಬಂದಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಒಳ್ಳೆಯ ಸೇವಾ ತತ್ವಂತ್ರ್ಯದೇಶಾಭಿಮಾನಗಳು ಬೇಕೆಂದೂ ಅವುಗಳು ಪುಸ್ತಕದಿಂದಾಗಲೀ ಶಾಲೆಗಳಿಂದಾಗಲೀ ಸಾಧ್ಯವಿಲ್ಲವೆಂದೂ, ಹೊರಗಿನ ವಾತಾವರಣದಲ್ಲಿ ಮಾತ್ರ ಅದು ಸಾಧ್ಯವೆಂದೂ ತಿಳಿಸಿದರು ದೇಶದಲ್ಲಿ ಅತಿ ಮುಖ್ಯ ... ಕಾರ್ಯವಾದ ವಿಶ್ವದ ಜನರನ್ನು ... ಜ್ಜಿನ ಗಮನ ಕೊಡಬೇಕು, ... ಕೋಮುವಾರು ಭಾವನೆ ಬೆಳೆಯಬಾರದು, ಶಾಂತಿ ಕೊಡತಕ್ಕದ್ದು ಪ್ರಪಂಚವೆಲ್ಲಾ ಶಾಂತಿಗಾಗಿ ಭಾರತವನ್ನು ವೀಕ್ಷಿಸುತ್ತಿರುವುದರಿಂದ ಗಾಂಧೀಜಿಯವರ ತತ್ವಗಳನ್ನು ಪ್ರತಿಪಾದಿಸಲು, ಒಳ್ಳೆಯ ಪ್ರಜೆಗಳನ್ನು ತಯಾರು ಮಾಡಲು ... ಮುಂದೆ ಬರಬೇಕು ಎಂದು ... ರು.

ಡಿ. ರಾಮಯ್ಯನವರ ಭಾವಚಿತ್ರ ಅನಾವರಣ

ಮೈಸೂರು ೧೦

ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲ್ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ವಹಿಸಿ ಹಣಕಾಸಿನ ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ನಿನ್ನೆ ಸಂಘದ ಸ್ಥಾಪಕ-ಅಧ್ಯಕ್ಷರಾದ ಶ್ರೀ ಡಿ ರಾಮಯ್ಯನವರ ಭಾವ ಚಿತ್ರದ ಅನಾವರಣವನ್ನು ಮಾಡಿದರು. ಸ್ವಾಗತ ಗೀತೆ, ಸಂಗೀತ, ವೇಷಸ್ಪರ್ಧೆ, ಕಾರ್ಯದರ್ಶಿಗಳ ವರದಿ ಬಹುಮಾನ ವಿನಿಯೋಗಗಳಾದ ನಂತರ ಮೇಜರ್ ಚನ್ನರಾಜೆ ಅರಸಿನವರು ಭಾಷಣಮಾಡಿ ಅರಸು ಬೋರ್ಡಿಂಗ್ ಸ್ಕೂಲಿಗೆ ಶ್ರೀ ಡಿ ರಾಮಯ್ಯನವರು ಮಾಡಿರುವ ಸೇವೆಯನ್ನು ಕೊಂಡಾಡಿದರು.

ತರುವಾಯ ಶ್ರೀ ಡಿ ರಾಮಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಿದರು ಈ ರೀತಿ ತಮ್ಮನ್ನು ಗೌರವಿಸಿದುದಕ್ಕಾಗಿ ಶ್ರೀ ರಾಮಯ್ಯನವರು ತಮ್ಮ ಧನ್ಯವಾದವನ್ನು ಸಲ್ಲಿಸಿ ಶಾಲೆಗೆ ಇನ್ನೂ ಹೆಚ್ಚಿನ ಶ್ರೇಯಸ್ಸುಂಟಾಗಲೆಂದು ಹಾರೈಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ರಾಮಯ್ಯನವರ ಗುಣಾತಿಶಯಗಳನ್ನು ಕೊಂಡಾಡಿದರು ಸರ್ಕಾರಿ ನೌಕರಿಯ ವ್ಯಾಮೋಹವನ್ನು ತೊರೆದು ಅರಸು ಜನಾಂಗದ ತರುಣರು ನಿಸ್ವಾರ್ಥವಾಗಿ ಸಮಾಜದ ನಾಯಕರಾಗಿ ಸೇವೆ ಸಲ್ಲಿಸಬೇಕೆಂದು ಹಾರೈಸಿದರು ರಾಜಕೀಯದ ಏಕೀಕೃತ ಕರ್ನಾಟಕ ರಾಜ್ಯವನ್ನು ಸ್ಥಾಪಿಸಬೇಕೆಂದು ಗುಲ್ಬರ್ಗದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಹಲವರು ವ್ಯಕ್ತಪಡಿಸಿದ ... ಪ್ರಾಯ ... ಪ್ರತಿಭಟಿಸಿ ... ಭಾರತೀಯರೆಲ್ಲರೂ ಒಂದೇ ... ಎಂದು ... ವಾರೈಸಿದರು

ಸಂಗೀತ ಸಮ್ಮೇಳನ

ಅಖಿಲ ಮೈಸೂರು ಸಮ್ಮೇಳನವು ಮುಂದಿನ ಬಂಗಳೂರು ... ವಾರದಲ್ಲಿ ಚಿಕ ... ಸಂಗೀತ ರತ್ನಾಕರ ಚೌಡಯ್ಯನವರ ... ವಹಿಸುವುದು ... ಅವರ ಪ್ರಾರಂ ... ವನ್ನು ... ಸುವರು

ಚಿನ್ನದ ಗಣಿ ಮೈಸೂರಿಗೆ ವಾಪಸು ಬರುವುದು

ಸ್ವಂ.ಸು ಫೋನ್] - ಬೆಂಗಳೂರು ೧೦

ಕೋಲಾರದ ಚಿನ್ನದಗಣಿಯ ಆಡಳಿತ ಮತ್ತು ಮೇಲ್ವಿಚಾರಣೆಯನ್ನು ಸರ್ಕಾರಕ್ಕೆ ವಹಿಸಿಕೊಡುವ ಬಗ್ಗೆ ಚಿನ್ನದಗಣಿ ಕಂಪೆನಿಗೂ ಮತ್ತು ಸರ್ಕಾರಕ್ಕೂ ಒಪ್ಪಂದವಾಗಿರುವುದೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ ಇದಕ್ಕಾಗಿ ಈಗಿರುವ ಚಿನ್ನದ ಮೇಲಿನ ತೆರಿಗೆ ಕಾನೂನನ್ನು ಬದಲಾಯಿಸಲು ಸಧ್ಯದಲ್ಲಿಯೇ ಶಾಸನ ಸಭೆಗಳ ಮುಂದೆ ಸರ್ಕಾರದವರು ಒಂದು ಮಸೂದೆಯನ್ನು ತರಲಿದ್ದಾರೆ

O ಎಕ್ಸಿಕ್ಯೂಟಿವ್ ಇಂಜನಿಯರಾದ ಶ್ರೀ ಬಿ ಆರ್. ಮಾಣಿಕ್ಯಂರವರನ್ನು ಮಿ|| ಕೋಯಿನ್ಸ್ ಬರ್ಗ್‌ರವರ ಸ್ಥಾನದಲ್ಲಿ ಸರ್ಕಾರದ ಆರ್ಕಿಟೆಕ್ಟರಾಗಿ ನೇಮಿಸಲಾಗಿದೆ

ಪ್ರಭುಗಳ ಪದಚ್ಯುತಿ ಪ್ರಯತ್ನಕ್ಕೆ ವಿರುದ್ಧವಾಗಿ ಹೋರಾಟವೇ ?

ಗುಲ್ಬರ್ಗದಲ್ಲಿ ಕಳೆದ ಮಂಗಳವಾರ ನಡೆದ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನದಲ್ಲಿ ಏಕೀಕೃತ ಕರ್ನಾಟಕ ಪ್ರಾಂತ್ಯಕ್ಕೆ ಮೈಸೂರಿನ ಮಹಾರಾಜರು ಶಾಸನಬದ್ಧ ಅಧಿಪತಿಗಳಾಗಿರಕೂಡದೆಂಬ ನಿರ್ಣಯವು ಅಂಗೀಕಾರವಾಯಿತಷ್ಟೆ ಮೈಸೂರು ರಾಜ್ಯಾಂಗ ಸಭಾಧ್ಯಕ್ಷರಾದ ಶ್ರೀ|| ಟಿ. ಸುಬ್ರಹ್ಮಣ್ಯಂರವರು ಅದನ್ನು ವಿರೋಧಿಸಿ. ಮಹಾರಾಜರನ್ನು ಪದಚ್ಯುತಿಗೊಳಿಸುವ ಯತ್ನಕ್ಕೆ ಮೈಸೂರಿನವರು ವಿರುದ್ಧವಾಗಿ ಹೋರಾಡುವುದಾಗಿ ಸವಾಲು ಹಾಕುವುದಾಗಿ ತಿಳಿದುಬರುತ್ತದೆ. ಆ ಸವಾಲನ್ನು ಅಂಗೀಕರಿಸುವುದಾಗಿ ಸಭಿಕರೊಬ್ಬರು ಹೇಳಿದರಂತೆ

ಚಿನ್ನಿಕಟ್ಟೆ ಬಂದಿಗಳ ಬಿಡುಗಡೆ

ಚಿನ್ನಿಕಟ್ಟೆ ಬಂದಿಗಳನ್ನು ಇನ್ನು ಒಂದು ವಾರದೊಳಗೆ ಬಿಡುಗಡೆ ಮಾಡಲಾಗುವುದೆಂದು ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಶ್ರಾವಣಗೆರೆಯಲ್ಲಿ ಕರ್ನಾಟಕ ಸಮಾಜವಾದಿ ಪಕ್ಷದವರ ನಿಯೋಗಕ್ಕೆ ಉತ್ತರವಾಗಿ ತಿಳಿಸಿರುತ್ತಾರೆ. ಸಮಾಜವಾದಿ ಪಕ್ಷದ ಮುಖಂಡರಾದ ಶ್ರೀ ರಾಮಸ್ವಾಮಿಯವರನ್ನೂ ಬಿಡುಗಡೆ ಮಾಡಲಾಗುವುದೆಂದು ಅವರು ಹೇಳಿರುತ್ತಾರೆ

ಗ್ರಾಮಾಭಿವೃದ್ಧಿ ಯೋಜನೆ

ಮೈಸೂರು ಪುರಸಭಾ ಸದಸ್ಯರಾದ ಶ್ರೀ ಕೆ. ಎಸ್ ಸತ್ಯನಾರಾಯಣರಾವ್‌ರವರು ಒಂದು ಹೇಳಿಕೆಯ ಮೂಲಕ ಈ ರೀತಿ ತಿಳಿಸುತ್ತಾರೆ: —

ಸರ್ಕಾರದವರು ಕೈಗೊಂಡಿರುವ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಹಲವು ಸಮಿತಿಗಳನ್ನು ನೇಮಿಸಲಾಗಿದೆ. ಅವುಗಳಲ್ಲಿ ಕೆಲವು ... ಕೆಲಸಗಾರರು ಇಲ್ಲದಿರಬಹುದು. ... ಅಧಿಕಾರ ... ಸ್ವಾರ್ಥ ... ಸ್ಥಾನವನ್ನು ... ಸಿಕ್ಕಲಿಲ್ಲವೆಂದ ಮಾತ್ರಕ್ಕೆ ಇಂತಹ ಕಾರ್ಯಕ್ರಮಕ್ಕೆ ಅಡಚಣೆ ... ಸರ್ಕಾರದ ಕೋರಿಕೆಯನ್ನು ... ಸಂಕುಚಿತ ಸ್ವಭಾವದ ಕೆಲವು ಸ್ವಾರ್ಥಿಗಳು ಅವರ ... ಅಗತ್ಯ ... ದಕ್ಕೆ ಗಮನ ಕೊಡದೆ ...

ಅಜಂತಾಕ್ಕೆ ಪಂಡಿತ ನೆಹರೂರವರ ಭೇಟಿ

ಭಾರತದ ಪ್ರಧಾನಿ ಪಂಡಿತ ನೆಹರೂರವರು ಸತಿ ಮೌಂಟ್ ಬ್ಯಾಟನ್, ಅವರ ಪುತ್ರಿ ಪೆಮಿಲಾ ಮೌಂಟ್ ಬ್ಯಾಟನ್ ಮತ್ತು ಶ್ರೀಮತಿ ಇಂದಿರಾ ಗಾಂಧಿಯವರೊಡನೆ ಔರಂಗಾಬಾದಿನ ಹತ್ತಿರವಿರುವ ಸುಪ್ರಸಿದ್ಧ ಅಜಂತಾ ಗುಹೆಗಳಿಗೆ ನಾಳೆ ಮತ್ತು ನಾಳಿದ್ದು ಭೇಟಿ ಕೊಟ್ಟು ಗಿ ನೇ ತಾ॥ ದೆಹಲಿಗೆ ಹಿಂತಿರುಗುವರು

ಬ್ರಿಟಿಷ್ ದೊರೆಗಳಿಗೆ ಶಸ್ತ್ರ ಚಿಕಿತ್ಸೆ

ಬ್ರಿಟನ್ನಿನ ದೊರೆಗಳು ಕಾಲುನೋವಿನಿಂದ ನರಳುತ್ತಿರುವರಷ್ಟೆ ಅವರ ಬಲಗಾಲಿಗೆ ಸಾಕಷ್ಟು ರಕ್ತ ಚಲನವುಂಟಾಗುವಂತೆ ಮಾಡಲು ಶಸ್ತ್ರ ಚಿಕಿತ್ಸೆಯನ್ನು ಸಧ್ಯದಲ್ಲಿಯೇ ನಡೆಸಲಾಗುವುದೆಂದು ಹೇಳಲಾಗಿದೆ

ಅಮೆರಿಕದಲ್ಲಿ ೪೮ ಲಕ್ಷ ಜನ ನಿರುದ್ಯೋಗಿಗಳು

ಅಮೆರಿಕದಲ್ಲಿ ಜನವರಿ ತಿಂಗಳೊಂದರಲ್ಲಿಯೇ ೬,೩೦,೦೦೦ ಜನ ನಿರುದ್ಯೋಗಿಗಳು ಸರ್ಕಾರದಿಂದ ಪರಿಹಾರವನ್ನು ಪಡೆದಿರುವರೆಂದೂ, ನ್ಯೂಯಾರ್ಕ್ ನಗರದಲ್ಲಿ ೬೦ ಸಾವಿರ ಜನ ನಿರುದ್ಯೋಗಿಗಳಿರುವರೆಂದೂ ಹೇಳಲಾಗಿದೆ.

ಸರ್ಕಾರೀ ಗಂಧದ ಎಣ್ಣೆ ಕಾರ್ಖಾನೆ
ಮೈಸೂರು

ನೋಟಿಫಿಕೇಷನ್

ತಾ॥ ೩-೩-೧೯೪೯

ಮೇಲ್ಕಂಡ ಕಾರ್ಖಾನೆಗೆ ಸೇರಿದ ಅಪ್ರಯುಕ್ತ ಪದಾರ್ಥಗಳನ್ನು ೧೯೪೯ನೇ ಮಾರ್ಚಿ ೨೧ನೇ ತಾರೀಕು ದಿವ ೧೧ ಗಂಟೆಗೆ ಕಾರ್ಖಾನೆ ಆವರಣದಲ್ಲಿ ಬಹಿರಂಗವಾಗಿ ಹರಾಜು ಹಾಕಲಾಗುತ್ತೆಂದು ಈ ಮೂಲಕ ತಿಳಿಸಲಾಗಿದೆ.

ಹರಾಜು ಷರತ್ತುಗಳು ಮತ್ತು ಇತರ ವಿವರಗಳಿಗೆ ೧೯೪೯ನೇ ಮಾರ್ಚಿ ೧೯ನೇ ತಾರೀಕಿನ ಮತ್ತು ಆನಂತರದ ಮೈಸೂರು ಗೆಜೆಟ್ಟನ್ನು ದಯವಿಟ್ಟು ನೋಡಿ.

ಬಿ. ಪಿ. ರಾಮಕೃಷ್ಣ.
ಜನರಲ್ ಮ್ಯಾನೇಜರ್
ಸರ್ಕಾರಿ ಗಂಧದೆಣ್ಣೆ ಕಾರ್ಖಾನೆ
ಮೈಸೂರು

Edited, printed and published by A.R. Nagarajan at the Sadhvi Press, D. Subbiah Road, Mysore

ಯುದ್ಧವನ್ನು ತಡೆಯುವುದೇ ಭಾರತದ ನೀತಿ

ಈಗ ಇನ್ನೊಂದು ಯುದ್ಧವು ಸಂಭವಿಸುವುದಾದರೆ, ಪ್ರಪಂಚದಲ್ಲಿ ಮಹಾ ಅನರ್ಥವೇ ಸಂಭವಿಸುವುದು. ಅದರಿಂದ ಮಾನವ ಕೋಟಿಯ ಪ್ರಗತಿಯೇ ನಿಂತು ಹೋಗುವುದು ಸಂಗ್ರಾಮವನ್ನು ತಪ್ಪಿಸುವುದಕ್ಕೆ ಭಾರತವು ಬಹಳ ಪ್ರಯತ್ನ ಮಾಡಬೇಕು ಆದುದರಿಂದ ಅದು ಯಾವ ಗುಂಪಿನೊಡನೆಯೂ ಸೇರಿಕೊಳ್ಳುವುದಿಲ್ಲ. ಯುದ್ಧವನ್ನು ತಪ್ಪಿಸಿ ವಿಶ್ವ ಶಾಂತಿಯನ್ನು ಪಾಲಿಸುವುದೇ ಭಾರತದ ನೀತಿ ಎಂದು ಪಂಡಿತ ನೆಹರೂರವರು ತಿಳಿಸಿರುತ್ತಾರೆ

ಕನ್ನಡ ಜನತೆಗಾಗಿ
ಗುರುದೇವಾ ಹಾಲ್
ಬೆಂಗಳೂರು ಜನತೆ ಅಂಗಡಿಗೆ
ಇಂದೇ ಭೇಟಿ ಕೊಡಿ
ಶಿವರಾಂಪೇಟೆ . ಮೈಸೂರು

'ಓರಿಯಂಟಲ್ ಮೆಡಿಸಿನ್'

ಮೈಸೂರಿನ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜ್ ಸಂಘದವರಿಂದ ಪ್ರಕಟವಾಗಿರುವ ಮೇಲ್ಕಂಡ ಹೆಸರಿನ ಆಂಗ್ಲ-ಕನ್ನಡ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಜನರಿಗೆ ವೈದ್ಯಕೀಯ ವಿಷಯಗಳಲ್ಲಿ ಹೆಚ್ಚು ಜ್ಞಾನವುಂಟಾಗುವಂತೆ ಮಾಡಲು ಹೊರಟಿರುವ ಈ ಪತ್ರಿಕೆಯು ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ.

ಕುರುಬರ ವಿದ್ಯಾರ್ಥಿ ನಿಲಯ ಸಂಘದ ವಾರ್ಷಿಕೋತ್ಸವ

ನಂಜನಗೂಡಿನ ಕುರುಬರ ವಿದ್ಯಾರ್ಥಿ ನಿಲಯ ಸಂಘದ ವಾರ್ಷಿಕೋತ್ಸವವು ಇದೇ ೨೦ನೇ ತಾ॥ ನೀಲಗಿರಿಯ ಶ್ರೀ ಎಚ್. ಕೆ. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಮತ ಬಾಂಧವರೆಲ್ಲರೂ ಇದರಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ

ತಾಲ್ಲೂಕು ಕಛೇರಿಯ ಕಿರುಕುಳ

ಗುಂಡ್ಲುಪೇಟೆ ವಿಜಯ ನಾರಾಯಣಸ್ವಾಮಿ ದೇವಾಲಯದ ಅರ್ಚಕರಿಗೆ ಬೇಕಾದ ಸಂಬಳವನ್ನು ಪಡೆಯಲು ನ ತಾಲ್ಲೂಕು ಕಛೇರಿಗೆ ಅವರು ಹೋಗ, ಅಲ್ಲಿ ಸಿಕ್ಕಾಪಟ್ಟೆ ಮಾತುಗಳು, ಸಂಬಳವು ಸಿಕ್ಕದುದರಿಂದ ಅರ್ಚಕರು ಮನನೊಂದು ರಾಜೀನಾಮೆ ಕೊಟ್ಟಿರುವರು. ಇದರಿಂದ ದೇವರ ಪೂಜಾದಿಗಳಿಗೆ ಅಡಚಣೆಯುಂಟಾಗಿ ಗ್ರಾಮಾಂತರದ ಬಡ ಉಪಾಧ್ಯಾಯರಿಗೂ ಇದೇ ರೀತಿ ಕಷ್ಟವಾಗಿರುತ್ತದೆ. ದನ್ನು ಕೂಡಲೇ ಸರಿಪಡಿಸಬೇಕೆಂದು ... ನಿವಾಸಿಗಳು ... ರು ... ಸಿರುತ್ತಾರೆ.

ವಿದ್ಯಾರ್ಥಿಗಳ ಮುಷ್ಕರ

ಮೈಸೂರಿನ 'ಸರ್ಕಾರಿ' ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಕುಂದುಕೊರತೆಗಳ ... ಕಳೆದ ತಿಂಗಳು ೨೧ನೇ ತಾ॥ ನಿಂದ ಮುಷ್ಕರ ಹೂಡಿದ್ದರೂ, ಕಾಲೇಜಿನ ಅಧಿಕಾರಿಗಳಾಗಲೀ ಅಥವ ಸರ್ಕಾರದವರಾಗಲೀ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದು ಶೋಚನೀಯವೆಂದು ... ಗಳೂರಿನ ಹಾ॥ ಆಚಾರ್ಯರು ಎಂಬುವರು ಪತ್ರ ಬರೆದು ತಿಳಿಸಿರುತ್ತಾರೆ

ರಾಜಕಮಲ್, ಮೈಸೂರು
11—3—49 ರಿಂದ :: ಅನೋಘ ಆರಂಭ
ಪ್ರತಿ ದಿನ ೩ ಆಟಗಳು
ಅಪೂರ್ವವಾದ ಕಥಾ ವಿಶೇಷದಿಂದಲೂ, ಇಂಪಾದ ಸಂಗೀತಗಳಿಂದಲೂ, ಮನೋಹರ ನೃತ್ಯಗಳಿಂದಲೂ ನಿಬಿಡವಾಗಿರುವ
ಫಿಲ್ಮಿಸ್ತಾನರವರ
- ಸಾಜನ್ -
ಪಾತ್ರ:- ಅಶೋಕ್ ಕುಮಾರ್, ರೆಹನ

ಶ್ರೀ ಗಣೇಶಾ ಟಾಕೀಸ್
11-3-49 ರಿಂದ : ಅನೋಘ ಆರಂಭ

ಪ್ರತಿ ದಿನ ಮೂರು ಪ್ರದರ್ಶನಗಳು
ಪ್ರಗತಿ ಪಿಕ್ಚರ್ಸ್ ಮತ್ತು ಸ್ಟಾರ್ ಕಂಬೈನ್ಸ್‌ರವರ ತಮಿಳು ಚಿತ್ರ
ಸಂಸಾರ ನೌಕೆ
ತಾರಾಗಣ:- ಬಿ. ಆರ್. ಪಂತುಲು, ಟಿ. ಆರ್. ರಾಮಚಂದ್ರ, ಸೂರ್ಯ ಕುಮಾರಿ, ಪ್ರೇಮಾವತಿ ಮುಂತಾದವರು.

MORNING SHOWS From 11-3-49 For 3-days at 10-30 a.m
R.K.O. Radio's **HEART BEAT**
With:- Ginger Rogers

ಶ್ರೀ ಚಾಮುಂಡೇಶ್ವರಿ ಟಾಕೀಸ್
11—3—49 ರಿಂದ
ಯಶಸ್ವಿಯಾದ 3 ನೇ ವಾರ
ಕೀಲುಗುರ್ರಂ (ತೆಲುಗು)
ಪಾತ್ರ:- ಅಂಜಲಿ ದೇವಿ, ನಾಗೇಶ್ವರ ರಾವ್ ಮುಂತಾದವರು.

RAJAKAMAL
Mysore.
Morning Shows for 4 days From 11—3—49
-JASSY
(In Technicolor)
With:- Margaret Lockwood, Patricia Roc Dennis Price.

ಪ್ರಭುದೇವಾ ಟಾಕೀಸ್ 11-3-49 ರಿಂದ
ನವೀನ ವಳ್ಳಿ ಮತ್ತು ಕೃಷ್ಣ ತುಲಾಭಾರಂ
ಡಬ್ಬಲ್ ಪ್ರೋಗ್ರಾಂ :: ಪ್ರತಿ ದಿನ ೩ ಆಟಗಳು
ಪಾತ್ರ:— ನಾಗರ ಕೋಯಿಲ್ ಮಹದೇವನ್, ಜಯಶ್ರೀ, ಎ.ಕೆ. ಶ್ರೀನಿವಾಸನ್, ಕೃಷ್ಣಮೂರ್ತಿ ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

ಫೋ ನಂ. 752 ।ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೬] ಶುಕ್ರವಾರ ೧೧-೩-೧೯೪೯ [ಸಂಚಿಕೆ ೧೧೬

ನೂತನ ಗ್ರಾಮಾಭಿವೃದ್ಧಿ ಯೋಜನೆಯ ಮೇಲೆ ಟೀಕೆ

ಜಿಲ್ಲಾ ಬೋರ್ಡಿನಲ್ಲಿ ನಿರ್ಣಯ

ಮೈಸೂರು ೧೧

ನಿನ್ನೆ ಮಧ್ಯಾಹ್ನ ಮೈಸೂರು ಜಿಲ್ಲಾ ಬೋರ್ಡು ಅಧಿವೇಶನವು ಶ್ರೀ ಹೆಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಮತಿ ಸರೋಜಿನಿ ದೇವಿಯವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸುವ ನಿರ್ಣಯ ಮಾಡಲಾಯಿತು.

ಸರ್ಕಾರದವರು ಕೈಗೊಂಡಿರುವ ಹೊಸ ಗ್ರಾಮಾಭಿವೃದ್ಧಿ ಯೋಜನೆಯನ್ನು ... ಹಲವು ಸದಸ್ಯರು ಟೀಕಿಸಿ ... ಈ ಯೋಜನೆಯನ್ನು ಜಾರಿಗೆ ... ದಕ್ಕೆ ಮುಂಚಿತವಾಗಿ ಜಿಲ್ಲಾ ಬೋರ್ಡಿನ ಸಲಹೆಯನ್ನು ಸರ್ಕಾರದವರು ... ಬೇಕಾಗಿತ್ತೆಂದೂ, ಹಾಗೆ ಮಾಡದಿರುವುದರಿಂದ ಬೋರ್ಡುಗಳ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟಾಗುವುದೆಂದೂ ಹಲವು ಸದಸ್ಯರು ಹೇಳಿದರು ಜಿಲ್ಲಾ ಬೋರ್ಡುಗಳು ಮಾಡುವ ಕೆಲಸವನ್ನೇ ಗ್ರಾಮಾಭಿವೃದ್ಧಿ ಸಮಿತಿಗಳೂ ಮಾಡುವುದರಿಂದ ಸದರಿ ಸಮಿತಿಗಳಲ್ಲಿ ಜಿಲ್ಲಾ ಬೋರ್ಡಿನ ಸದಸ್ಯರುಗಳನ್ನೆಲ್ಲಾ ... ಬೇಕಾಗಿತ್ತೆಂದು ಮತ್ತೊಬ್ಬ ಸದಸ್ಯರು ಸೂಚಿಸಿದರು ನಾಮಕರಣ ಪದ್ಧತಿಯ ರೀತಿ ಗ್ರಾಮಾಭಿವೃದ್ಧಿ ಸಮಿತಿಗಳ ಸದಸ್ಯರನ್ನು ನೇಮಿಸಿರುವುದಕ್ಕಾಗಿ ಕೆಲವರು ಅಸಮಾಧಾನವನ್ನು ವ್ಯಕ್ತಪಡಿಸಿದರು

ಜಿಲ್ಲಾ ಬೋರ್ಡುಗಳಿಗೆ ಸಂಬಂಧಪಡದಿರುವ ಕೆಲಸಗಳನ್ನು ಮಾತ್ರ ಹೊಸ ಯೋಜನೆಯ ಸಮಿತಿಗಳು ಕೈಗೊಳ್ಳುವುದರಿಂದ, ಬೋರ್ಡಿನ ಕೆಲಸಕ್ಕೂ ಸಮಿತಿಗಳ ಕೆಲಸಕ್ಕೂ ಯಾವ ಘರ್ಷಣೆಯೂ ಉಂಟಾಗುವುದಿಲ್ಲವೆಂದೂ ಅಧ್ಯಕ್ಷರೂ ಮತ್ತು ಸಬ್ ಡಿವಿಜನಲ್ ಅಧಿಕಾರಿಗಳೂ ತಿಳಿಸಿದರು

ಸರ್ಕಾರದವರು ಕೈಗೊಂಡಿರುವ ಗ್ರಾಮಾಭಿವೃದ್ಧಿ ಯೋಜನೆಯು ಕೇಳುವುದಕ್ಕೆ ... ದಾಗಿದೆ. ಇದರಿಂದ ಜಿಲ್ಲಾ ಬೋರ್ಡಿನ ಕೆಲಸ ಕಾರ್ಯಗಳಿಗೆ ತೊಡಕುಂಟಾಗುತ್ತದೆ ಮತ್ತು ಪ್ರಜಾ ಪ್ರಭುತ್ವದ ಮೂಲತತ್ವಕ್ಕೆ ಧಕ್ಕೆಯುಂಟಾಗುತ್ತದೆ ಇದಕ್ಕೆ ವೆಚ್ಚ ಮಾಡುವ ಹಣ ಮತ್ತು ಸಿಬ್ಬಂದಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಬೋರ್ಡುಗಳಿಗೆ ಒದಗಿಸಿದರೆ ಯೋಜನೆಯು ಫಲಕಾರಿಯಾಗುವುದು–ಎಂಬ ಶ್ರೀ ಶಿವನಂಜಪ್ಪನವರ ನಿರ್ಣಯವು ಬಹು ಮತದಿಂದ ಅಂಗೀಕೃತವಾಯಿತು

... ಧಿ ಸ್ಮಾರಕ ನಿಧಿಗೆ ... ಸಾವಿರ ರೂ ಕೊಡಬೇಕೆಂದೂ ನಿರ್ಧರಿಸಲಾಯಿತು.

ಸಂತಾಪ ಸೂಚಕ ಸಭೆ

... ಸ್ಥಾನಿಯ ಸಾರ್ವಜನಿಕ ವಿದ್ಯಾರ್ಥಿ ... ದವರು ಶ್ರೀ ಪ್ರತಾಪಸಿಂಗ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ಸಭೆ ಸೇರಿ, ಶ್ರೀ ಸರೋಜಿನಿ ದೇವಿಯವರ ನಿಧನದ ... ತಾಪ ಸೂಚಿಸುವ ನಿರ್ಣಯವ ... ಸಿದರು.

ಬೆಂಗಳೂರಿನಲ್ಲಿ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನ

ಈ ... ದಿನ ಮೇ ತಿಂಗಳು ೩ನೇ ತಾ॥ ... ದಿನಗಳು ಅಖಿಲಭಾರತ ಪತ್ರಿಕಾ ಸಂಪಾದಕರ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯುವುದು ಶ್ರೀ ದೇವದಾಸ್ ಗಾಂಧಿಯವರು ಅಧ್ಯಕ್ಷತೆ ವಹಿಸುವರು

೨೭೦೦ ಪಲ್ಲ ಭತ್ತ ಸಂಗ್ರಹ

ಮೈಸೂರು ೧೧

ನಂಜನಗೂಡು ತಾಲ್ಲೂಕಿನ ೧೦ ಗ್ರಾಮಗಳಲ್ಲಿ ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ರಂಗರಾಮಯ್ಯನವರು ತಾಲ್ಲೂಕು ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಗೌಡರು ಶ್ರೀ ಹೆಚ್. ಕೆ. ಕುಮಾರಸ್ವಾಮಿ, ಮತ್ತು ಅಧಿಕಾರಿ ವರ್ಗದವರೊಡನೆ ನಿನ್ನೆ ದಿನ ಪ್ರವಾಸಮಾಡಿ, ಗ್ರಾಮಾಭಿವೃದ್ಧಿ ಯೋಜನೆಯನ್ನು ವಿವರಿಸಿ ಆಹಾರಾಭಾವವನ್ನು ನಿವಾರಿಸಲು ಮಹಾಜನರು ತಮ್ಮಲ್ಲಿರುವ ಹೆಚ್ಚು ಧಾನ್ಯವನ್ನು ಕೊಡಬೇಕೆಂದು ಕೋರಿದರು. ತಾಂಡವಪುರ,ಹಸವನಪುರ, ಇನ್ನಾವು ಬೊಕ್ಕಳ್ಳಿ, ಹೂರಳವಾಡಿ ಗ್ರಾಮದವರು ತಲಾ ೧೦೦ ಪಲ್ಲ, ಕೆಂಬಿನಹುಂಡಿ ೩೦೦, ಹುಳಿಮಾವು ೨೦೦, ಕದಿನೂರು, ನಗರ್ಲೆ ಮತ್ತು ಸುತ್ತೂರು ಗ್ರಾಮದವರು ತಲಾ ೩೦೦ ಪಲ್ಲ ಭತ್ತವನ್ನು ಕೊಡಲು ವಾಗ್ದಾನ ಮಾಡಿದರು, ಹುಲ್ಲಹಳ್ಳಿ ಹೋಬಳಿ ಗ್ರಾಮದಿಂದ ೫೦೦ ಪಲ್ಲ ರಾಗಿಯನ್ನು ಶೇಖರಿಸಲಾಯಿತು

ಸುತ್ತೂರಿನ ಸ್ವಾಮಿಗಳು ಸಹ ಮಠದಿಂದ ೧೦೦ ಪಲ್ಲ ಭತ್ತವನ್ನು ಉದಾರವಾಗಿ ಸಹಾಯ ಮಾಡಿದರು

ಕಳುವಾದ ಪತ್ನಿಯನ್ನು ಪಡೆಯಲು ವಿಶ್ವಸಂಸ್ಥೆಗೆ ಅರ್ಜಿ

ಪಶ್ಚಿಮ ಆಫ್ರಿಕದ ಕಪ್ಪು ಜನಾಂಗದವನೊಬ್ಬನು ಹಿಂದಿನ ಮಹಾಯುದ್ಧದಲ್ಲಿ ಫ್ರೆಂಚ್ ಸೈನಿಕರೊಡನೆ ಸೇರಿ ಕದನ ನಡೆಸುತ್ತಿದ್ದಾಗ, ತನ್ನ ಪತ್ನಿಯನ್ನು ಅಪಹರಿಸಿಕೊಂಡು ಹೋದರೆಂದೂ ತನ್ನ ಹೆಂಡತಿಯನ್ನು ವಾಪಸು ಕೊಡಿಸಬೇಕೆಂದೂ ವಿಶ್ವಸಂಸ್ಥೆಗೆ ಈಗ ಆತನು ಅರ್ಜಿ ಹಾಕಿಕೊಂಡಿರುತ್ತಾನೆ

ಪೊಲೀಸ್ ಸ್ಟೇಷನ್ನುಗಳ ಮೇಲೆ ಬಾಂಬುಗಳು

ಕಲ್ಕತ್ತೆಯ ಜೋರಾಬಾಗ್ ಮತ್ತು ... ಘಾಟಿನ ಪೋಲಿಸ್ ಸ್ಟೇಷನ್ನುಗಳ ಮೇಲೆ ಗಲಭೆಕಾರರು ಧಾಳಿ ನಡೆಸಿ ಬಾಂಬುಗಳನ್ನು ಎಸೆದರೆಂದೂ, ಕೆಲವು ಪೋಲೀಸರಿಗೆ ಇದರಿಂದ ಗಾಯಗಳಾಗಿವೆಯೆಂದೂ ಪೋಲೀಸರು ಗುಂಡು ಹಾರಿಸಿ ಗಲಭೆಯನ್ನು ತಹಬಂದಿಗೆ ತಂದರೆಂದೂ ವರದಿಯಾಗಿದೆ ಚಂದ್ರನಗರದ ... ರೈಲ್ವೆಯ ಕಛೇರಿಯ ಮೇಲೂ ಬಾಂಬುಗಳನ್ನು ಎಸೆಯಲಾಯಿತು.

ಬಳ್ಳಾರಿಯ ಪಾದ್ರಿಗಳಿಗೆ ಜೀವಾವಧಿ ಶಿಕ್ಷೆ

ಬಳ್ಳಾರಿಯದ ನಾಲ್ಕು ಜನ ಪಾದ್ರಿಗಳು ದೇಶದ ಮಿಲಿಟರಿ ಸಮಾಚಾರಗಳನ್ನು ಪರರಾಷ್ಟ್ರಗಳಿಗೆ ಕೊಡುತ್ತಿದ್ದರೆಂಬ ಆಪಾದನೆಯ ಮೇಲೆ ಅವರುಗಳಿಗೆ ಜೀವಾವಧಿ ಶಿಕ್ಷೆ ಮತ್ತು ೧೦ ಲಕ್ಷ ಲಿವಾ ದಂಡವನ್ನು ವಿಧಿಸಲಾಗಿದೆ ಅವರ ಆಸ್ತಿಪಾಸ್ತಿಗಳನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಬೇಕೆಂದು ಆಜ್ಞೆಯಾಗಿದೆ

ಹೆಚ್ಚು ವರಮಾನದ ಸಿನಿಮಾ ತಾರೆ

ಹಾಲಿವುಡ್ಡಿನ ಸುಪ್ರಸಿದ್ಧ ಸಿನಿಮಾ ತಾರೆ ಬೆಟ್ಟಿ ಡೇವಿಸ್ ಎಂಬಾಕೆಗೆ ವರ್ಷಕ್ಕೆ ೯೧ ಸಾವಿರ ಪೌಂಡುಗಳಷ್ಟು ವರಮಾನ ಬರುತ್ತಿದೆಯೆಂದು, ಇದು ಹಾಲಿವುಡ್ಡಿನಲ್ಲೇ ಅತ್ಯಂತ ಹೆಚ್ಚಿನ ವರಮಾನವೆಂದೂ ಹೇಳಲಾಗಿದೆ

ಬ್ರಾಹ್ಮಣ ಸಮ್ಮೇಳನ

ಹಾಸನದಲ್ಲಿ ಮುಂದಿನ ತಿಂಗಳು ೨೩ನೇ ತಾ॥ ಅಖಿಲ ಮೈಸೂರು ಬ್ರಾಹ್ಮಣ ಮಹಾ ಸಭೆಯ ದ್ವಿತೀಯ ಸಮ್ಮೇಳನವು ನಡೆಯುವುದು ಸ್ವಾಗತ ಸಮಿತಿಯ ಸದಸ್ಯತ್ವದ ಶುಲ್ಕವು ೧೦ ರೂ ಪ್ರತಿನಿಧಿ ಶುಲ್ಕವು ೩ ರೂ ಯೆಂದು ನಿಗದಿ ಮಾಡಲಾಗಿದೆ. ಬ್ರಾಹ್ಮಣ ಮಹಾಜನರೆಲ್ಲರೂ ಸಹಕರಿಸಿ, ಧನಧಾನ್ಯ ಸಹಾಯ ಮಾಡಬೇಕೆಂದು ಅದರ ಕಾರ್ಯದರ್ಶಿಗಳು ಕೋರಿರುತ್ತಾರೆ

ಭಾರತದಲ್ಲಿ ಪೂರ್ಣ ಪಾನ ನಿರೋಧ

ಕೇಂದ್ರ ಸರ್ಕಾರದ ಆದೇಶದಲ್ಲಿರುವ ಪ್ರದೇಶಗಳಲ್ಲಿ ಇನ್ನು ೫ ವರ್ಷಗಳಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಲಾಗುವುದೆಂದು ತಿಳಿಸಲಾಗಿದೆ

ಸಿದ್ಧಗೊಳಿಸಿದ ಮನೆಗಳು

ಇನ್ನು ಆರು ತಿಂಗಳೊಳಗಾಗಿ ದೆಹಲಿಯಲ್ಲಿ ಸ್ಥಾಪಿಸಿರುವ ಕಾರ್ಖಾನೆಯಲ್ಲಿ ದಿನಕ್ಕೆ ೧೦೦ ರಂತೆ ಸಿದ್ಧಗೊಳಿಸಿದ ಪ್ರಿಫ್ಯಾಬ್ರಿಕೇಟೆಡ್ ಮನೆಗಳನ್ನು ತಯಾರಿಸಲಾಗುವುದೆಂದೂ, ಈ ಯೋಜನೆಗೆ ಒಟ್ಟು ... ಲಕ್ಷ ರೂ ಖರ್ಚಾಗುವುದೆಂದೂ ಹೇಳಲಾಗಿದೆ ಒಂದು ಕೊಠಡಿ, ಒಂದು ಅಡಿಗೆ ಮನೆ, ಮತ್ತು ಅಂಗಳವಿರುವ ಪ್ರತಿ ಮನೆಗೆ ... ರೂ ಬೆಲೆಯಾಗುವುದೆಂದೂ, ಭಾರತದ ಇತರ ಭಾಗಗಳಲ್ಲೂ ಮುಂದೆ ಇಂತಹ ಮನೆಗಳನ್ನು ತಯಾರಿಸಲಾಗುವುದೆಂದೂ ತಿಳಿಸಲಾಗಿದೆ

ಬಟ್ಟೆಯ ಮೇಲೆ ಹೊಸ ಸುಂಕ

ಸ್ವಂ ಸು.ಪ್ರೋ.] ಬೆಂಗಳೂರು ೧೧

ಸಂಸ್ಥಾನದಲ್ಲಿ ತಯಾರಾದ ಹತ್ತಿಬಟ್ಟೆಯ ಮೇಲೆ ಸೂಪರ್‌ಫೈನಿಗೆ ರೂ. ೧-೪ ಆಣೆ, ಫೈನ್‌ಗೆ ೧ ಆಣೆ ಮೀಡಿಯಂ ಮತ್ತು ಒರಟು ಬಟ್ಟೆ ಗಜ ೧ ಕ್ಕೆ ೩ ಕಾಸಿನಂತೆ ತಯಾರಿಕಗಾರರು ಸುಂಕ ಕೊಡಬೇಕೆಂದೂ ಅದನ್ನು ಉಲ್ಲಂಘಿಸಿದವರಿಗೆ ೩ ಸಾವಿರ ರೂ. ಜುಲ್ಮಾನೆ ವಿಧಿಸಲಾಗುವುದೆಂದೂ ಸರ್ಕಾರದ ಆಜ್ಞೆಯಾಗಿದೆ

ಆರ್. ಎಸ್. ಎಸ್. ನಾಯಕರುಗಳ ಗಡೀಪಾರು

ಬೆಂಗಳೂರು ಜೈಲಿನಲ್ಲಿ ಬಂಧನದಲ್ಲಿರುವ ಕರ್ನಾಟಕ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸೇನಾನಿ ಶ್ರೀ ಯಾದವರಾವ್ ಜೋಷಿ, ಮತ್ತು ಅವರ ಕಾರ್ಯದರ್ಶಿಗಳಾದ ಶ್ರೀ ಗೇಲು ದೇವಯ್ಯ ಮತ್ತು ಬಾಳಕಾಳೆಯವರನ್ನು ನಿನ್ನೆ ಬಿಡುಗಡೆ ಮಾಡಿ ಸಂಸ್ಥಾನದಿಂದ ಗಡೀಪಾರು ಮಾಡಲಾಯಿತು.

ಡಾ॥ ಜಯರಾಂ ನಾಯ್ಡು ರವರು ಸೀನಿಯರ್ ಸರ್ಜನ್

ಕ್ಷಯರೋಗ ಇಲಾಖಾ ಡೈರೆಕ್ಟರಾದ ಡಾ॥ ಬಿ ಜಯರಾಂನಾಯ್ಡು ರವರನ್ನು ಸೀನಿಯರ್ ಸರ್ಜನರನ್ನಾಗಿ ನೇಮಿಸಿ ಈ ದಿನ ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ ಡಾ॥ ವಿ ವಿ ಮಾಂಟೆರೋರವರಿಗೆ ನಿವೃತ್ತರಾಗಲು ಅನುಮತಿ ಕೊಡಲಾಗಿದೆ

ಮೆಡಿಕಲ್ ಕೌನ್ಸಿಲಿನ ಸದಸ್ಯರ ಆಗಮನ

ಮೈಸೂರು ೧೧

ಭಾರತದ ಮೆಡಿಕಲ್ ಕೌನ್ಸಿಲಿನ ಸದಸ್ಯರಾದ ಡಾ॥ ಹೆಜಾರೆ, ಡಾ॥ ಗೋಯಲ್ ಮತ್ತು ಡಾ॥ ಹಮೀದ್ ರವರು ಈ ದಿನ ಬೆಳಗ್ಗೆ ರಾಜಧಾನಿಗೆ ಆಗಮಿಸಿದರು ಮೈಸೂರು ಮೆಡಿಕಲ್ ಕಾಲೇಜಿಗೆ ಮಾನ್ಯತೆ ಕೊಡುವ ಬಗ್ಗೆ ಅವರುಗಳು ಮೆಡಿಕಲ್ ಕಾಲೇಜು ಮತ್ತು ಇತರ ಆಸ್ಪತ್ರೆಗಳಲ್ಲಿ ಈ ದಿನ ಮತ್ತು ನಾಳೆ ಪರಿಶೀಲನೆ ನಡೆಸುವರು.

ವಿವಾಹ ಮಹೋತ್ಸವ

ರಾಜಧಾನಿಯ ಜವಳಿ ವರ್ತಕರಾದ ಶ್ರೀ ಆದಿಶೇಷಯ್ಯನವರು, ತಮ್ಮ ಪುತ್ರ ಶ್ರೀ ಶೇಷಶಯನರವರ ಪುತ್ರಿ ಚಿ॥ ಸೌ॥ ಮಹಾಲಕ್ಷ್ಮಿಯನ್ನು ಜವಳಿ ವರ್ತಕರಾದ ಶ್ರೀ ಎಂ. ಕೆ. ಕೃಷ್ಣಪ್ಪನವರ ಪುತ್ರ ಶ್ರೀ ಎಂ. ಕೆ. ನರಸಿಂಹಯ್ಯನವರಿಗೆ ಕೊಟ್ಟು ವಿವಾಹವನ್ನು ನಿನ್ನೆ ರಾಜಧಾನಿಯಲ್ಲಿ ನೆರವೇರಿಸಿದರು

ಉಪನ್ಯಾಸಗಳು

ರಾಜಧಾನಿಯ ಮಹಿಳಾ ಸದನದ ಆಶ್ರಯದಲ್ಲಿ ಸ್ಕೂಲ್ ಮೈನರ್ ವಿದ್ಯಾರ್ಥಿನಿಯರ ಉಪಯೋಗಾರ್ಥವಾಗಿ ನಾಳೆಯಿಂದ ೨೬ನೇ ತಾ॥ ವರೆಗೆ ದಿನದಿನ ಸಂಜೆ ೪ ಗಂಟೆಗೆ ಉಪನ್ಯಾಸಗಳನ್ನು ಜಯನಗರದಲ್ಲಿರುವ ಸದನದ ಕಟ್ಟಡದಲ್ಲಿ ಏರ್ಪಡಿಸಲಾಗಿದೆ

೨) ಸಂಸ್ಥಾನದಲ್ಲಿ ... ಗೊಬ್ಬರ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸುವ ವಿಚಾರವನ್ನು ಪರಿಶೀಲಿಸಲು ... ಅಮೆರಿಕದಿಂದ ... ರ. ಬೆಂಗಳೂರಿಗೆ ... ಶ್ರೀ ... ರವರೊಡನೆ ಮಾತುಕತೆ ನಡೆಸಿದರು.

ಮೌಂಟ್ ಬ್ಯಾಟನ್ನರ ತೆರಿಗೆ ಹೊರೆ

ಬ್ರಿಟನ್ನಿನ ಮೌಂಟ್ ಬ್ಯಾಟನ್ ಮನೆತನದವರು ಸರ್ಕಾರಕ್ಕೆ ಕೊಡುವ ತೆರಿಗೆಯು ವಿಪರೀತವಾಗಿ ಕಷ್ಟಕ್ಕೊಳಗಾಗಿದ್ದಾರೆಂದೂ, ಆದುದರಿಂದ ಪತಿ ಮೌಂಟ್ ಬ್ಯಾಟನ್ನರು ಇದಕ್ಕೆ ಯೋಚಿಯಾಗದಿರಲು ಒಂದು ಕಾನೂನನ್ನು ಸಧ್ಯದಲ್ಲಿಯೇ ಪಾರ್ಲಿಮೆಂಟ್ ಸಭೆಯಲ್ಲಿ ತರಲಾಗುವುದೆಂದೂ ಹೇಳಲಾಗಿದೆ

ವಿಮಾನದಲ್ಲಿ ಕಾಡು ಮೃಗಗಳ ರವಾನೆ

ಬ್ಯಾಂಕಾಕ್ ಮತ್ತು ಸಿಂಗಪ್ಪುರದ ಅರಣ್ಯಗಳಿಂದ ೬ ಆನೆಗಳು, ... ಅಡಿ ಉದ್ದದ ಹೆಬ್ಬಾವು, ... ಕೋತಿಗಳು, ಇವೇ ಮುಂತಾದ ... ಕಾಡು ಮೃಗಗಳನ್ನು ವಿಮಾನದಲ್ಲಿ ... ತರಲಾಗಿದೆಯೆಂದು ವರದಿಯಾಗಿದೆ

ಭದ್ರಾಚಲ ದೇವಾಲಯಕ್ಕೆ ಹರಿಜನರ ಪ್ರವೇಶ

[illegible]

... ಉತ್ಪತ್ತಿ ... ರಪ್ಪು ಹಚ್ಚಿವೆ

ಭಾರತದಲ್ಲಿ ... ಉತ್ಪತ್ತಿಯು ... ರಫ್ತು ಈಗ ಹೆಚ್ಚಾಗಿರುವುದೆಂದು ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವರು ತಿಳಿಸಿರುತ್ತಾರೆ

ಪ್ರಭಾ ★ ಈ ರಾತ್ರಿ

ಪ್ಯಾರ್-ಕಿ-ಜೀತ್ (ಹಿಂದಿ)

ಪಾತ್ರ:- ಸುರೈಯ್ಯಾ, ಮನೋರಮ, ರೆಹಮಾನ್

-:ಬೆಳಗಿನ ಪ್ರದರ್ಶನಗಳು:-

11ನೇ ಶುಕ್ರವಾರದಿಂದ 14ನೇ ಸೋಮವಾರದ ವರೆಗೆ

* ಕೀರ್ತಿ * (ಹಿಂದಿ)

† ಲಲಿತ ಪವಾರ್ † ಜಯರಾಜ್ †

Edited printed and published by A.R. Nagarajan at the Sadhvi Press, D. Subbiah Road Mysore.

ನೂತನ ವರ್ಷದ ಪಂಚಾಂಗ

ಜ್ಯೋತಿಶ್ಶಾಸ್ತ್ರಾಂತಕೇಸರಿ ಆಸ್ಥಾನವಿದ್ವಾನ್ ಕೊಳ್ಳೇಗಾಲದ ವೆಂಕಟಸುಬ್ಬಶಾಸ್ತ್ರಿಗಳವರಿಂದ ರಚಿಸಲ್ಪಟ್ಟಿರುವ ಶ್ರೀ ಸೀತಾರಾಘವ ವೈದ್ಯಶಾಲೆಯ ಶ್ರೀ ವಿರೋಧಿ ನಾಮ ಸಂವತ್ಸರದ ಪಂಚಾಂಗವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

If you need the services of an expert Kindergartener and Child Educationist for your children at home, please write to:-

The Director,
Sri Jagadamba Sishuvihar.
Dewan's Road, Mysore.

ಶ್ರೀ
ಸರಸ್ವತಿ ಸಂಗೀತ ಸಮಾಜ
(ರಿ) ಮೈಸೂರು

13-3-49 ನೇ ಭಾನುವಾರ ಸಂಜೆ 6 ಘಂಟೆಗೆ ಮೈಸೂರು ಸಹಕಾರ ಭವನದಲ್ಲಿ ಶ್ರೀಮತಿಯರಾದ

ಎಲ್. ವಿ. ರುಕ್ಮಿಣಿ (ತಿರುಚ್ಚಿ) ಯವರ ಹಾಡುಗಾರಿಕೆ,

ಪಿ. ಎಸ್. ರಂಗನಾಯಕಿ (ತಿರುಚ್ಚಿ) ಯವರ ಪಿಟೀಲು ಮತ್ತು

ಕನಕಾಂಬುಜಂ (ಮದರಾಸ್.) ಇವರ ಮೃದಂಗವು ನಡೆಯುವುದು

ಗಂಡಸರಿಗೆ ರೂ 2 ರು. 1
ಹೆಂಗಸರಿಗೆ ರೂ 1 ಹುಡುಗರಿಗೆ ಅ. 8

* ಶ್ರೀ ಗಣೇಶಾ ಟಾಕೀಸ್ *

11-3-49 ರಿಂದ ಅಮೋಘ ಆರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಪ್ರಗತಿ ಪಿಕ್ಚರ್ಸ್ ಮತ್ತು ಸ್ಟಾರ್ ಕಂಬೈನ್ಸ್‌ರವರ ತಮಿಳು ಚಿತ್ರ

ಸಂಸಾರ ನೌಕ

ತಾರಾಗಣ ಬಿ. ಆರ್. ಪಂತುಲು, ಟಿ. ಆರ್. ರಾಮಚಂದ್ರನ್, ಸೂರ್ಯ ಕುಮಾರಿ, ಪ್ರೇಮಾವತಿ ಮತ್ತಿತರರು.

MORNING SHOWS From 11-3-49 For 3 days at 10-30 a.m.

R.K.O. Radio's
HEART BEAT
With:- Ginger Rogers

ಮನಕರಗಿಸುವ ಕಥೆ - ಮನರಂಜಿಸುವ ಸಂಗೀತದಿಂದ ಕೂಡಿದ ಏಕೈಕ ಚಿತ್ರ

ವಾಡಿಯಾ ಫಿಲಂಸ್‌ರವರ

ಮೇಲಾ (ಹಿಂದಿ) MELA

ಪಾತ್ರ:—ನರ್ಗೀಸ್ – ದಿಲೀಪ್ ಕುಮಾರ್ – ಜೀವನ್

ಈಗ 4 ನೇ ವಾರ

ಫ್ರಡ್‌ಲ್ಯಾಂಡ್ಸ್ ಟಾಕೀಸಿನಲ್ಲಿ

ಬೆಂಗಳೂರು ಮೆಜೆಸ್ಟಿಕ್‌ನಲ್ಲಿ 7ನೇ ವಾರ

A Dreamland Pictures Release

ಶ್ರೀ ಗಾಯತ್ರೀ ಟಾಕೀ...

11-3-49 ರಿಂದ 5 ದಿನಗಳು ...
ಪ್ರತಿ ದಿನ 3 ಪ್ರದರ್ಶನಗಳು,

Sail Ho ?
The Cry that loosed the fury of the Robin Hood of the Sea
Warner's
THE SEA HAW...
ದಿ ಸೀ ಹಾಕ್
ಪಾತ್ರ:- ಎರಾಲ್ ಫ್ಲಿನ್

MORNING SHOWS on Sat. 12th, Sun. 13th March

M.G.M's
The Courage of Lassie
ದಿ ಕರೇಜ್ ಆಫ್ ಲ್ಯಾಸಿ
With.-Elizabeth Tayl...

UNIVERSITY OF MYSO...

Office of the University of Mysore: Dated the 26th February

No. Ex-3 8674649

NOTIFICATION

Admission Tickets for the University Examinations of March 1949

It is hereby notified for the information of candidates who have appeared for the several University Examinations of March 1949 that the Admission Tickets will be issued by the Heads of Colleges through which they have sent their applications for the Examination.

Candidates who have APPEARED in PRIVATE must get their admission tickets from the Heads of Colleges through which they have sent their applications for the Examination

ADMISSION TICKETS WILL NOT BE SENT TO CANDIDATES DIRECT FROM THE UNIVERSITY OFFICE.

By Order,
T Siddalinga Devaru
Registrar I c.

ಪ್ರಭುದೇವಾ ಟಾಕೀಸ್ 11-3-49 ರಿಂದ

ನವೀನ ವಲ್ಲಿ ಮತ್ತು ಕೃಷ್ಣ ತುಲಾಭಾರಂ

ಡಬ್ಬಲ್ ಪ್ರೋಗ್ರಾಂ

ಪ್ರತಿ ದಿನ 4 ಆಟಗಳು

ಪಾತ್ರ —ನಾಗರ ಕೋಯಿಲ್ ಮಹದೇವನ್, ಜಯಲಕ್ಷ್ಮಿ, ಎ.ಕೆ. ಶ್ರೀನಿವಾಸನ್, ಕೃಷ್ಣಮೂರ್ತಿ ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

ಫೋ|| ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೧೨-೩-೧೯೪೯ [ಸಂಚಿಕೆ ೪೬೭

ಚರ್ಚಾ ಕೂಟ

ಮೈಸೂರು ೧೧

ಇದೇ ೧೫ನೇ ತಾ|| ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಬ್ರಿಟಿಷ್ ಚರ್ಚಾ ಕೂಟದ ಸದಸ್ಯರುಗಳಿಗೂ ಕಾಲೇಜ್ ಸಂಘದವರಿಗೂ ಚರ್ಚಾಕೂಟವು ಶ್ರೀ ವಿ ಎಲ್. ಡಿಸೋಜಾರವರ ಅಧ್ಯಕ್ಷತೆಯಲ್ಲಿ ನಡೆಯುವುದು. ವಿಶ್ವಸಂಸ್ಥೆಯ ಮೂಲಕವೇ ಪ್ರಪಂಚದಲ್ಲಿ ಶಾಂತಿಯನ್ನು ಸಾಧಿಸಲು ಸಾಧ್ಯ ಎಂಬುದು ಚರ್ಚೆಯ ವಿಚಾರ, ಸರ್ವರಿಗೂ ಆಹ್ವಾನವುಂಟು

ರೇಷನ್ ಕಾರ್ಡ್ ಹೋಲ್ಡರುಗಳ ಸಂಘ

ನಗರದ ರೇಷನ್ ಕಾರ್ಡ್ ಹೋಲ್ಡರುಗಳ ಕಾರ್ಯಕಾರಿ ಸಮಿತಿಯ ಸಭೆಯು ನಾಳೆ ಸಂಜೆ ೬ ಗಂಟೆಗೆ ಇಲವಾಲ ರಸ್ತೆಯಲ್ಲಿರುವ ಕುಂಚಿಟಿಗರ ಸಂಘದ ಕಟ್ಟಡದಲ್ಲಿ ನಡೆಯುತ್ತದೆ ಮುಖ್ಯ ವಿಚಾರಗಳನ್ನು ಚರ್ಚೆ ಮಾಡಲಿರುವುದರಿಂದ ಸದಸ್ಯರು ಸಕಾಲಕ್ಕೆ ದಯಮಾಡಿಸಬೇಕೆಂದು ಕೋರಲಾಗಿದೆ.

ಸರೋಜಿನಿ ದೇವಿಯವರ ಸ್ಮಾರಕ

ಶ್ರೀಮತಿ ಸರೋಜಿನಿದೇವಿಯವರ ಜ್ಞಾಪಕಾರ್ಥವಾಗಿ ಅವರ ಹೆಸರಿನಲ್ಲಿ ಒಂದು ಮಕ್ಕಳ ಆಸ್ಪತ್ರೆಯನ್ನು ನಿರ್ಮಿಸಲು ೧೦ ಲಕ್ಷ ರೂ ನಿಧಿಯನ್ನು ಸಂಗ್ರಹಿಸಬೇಕೆಂದು ನಿರ್ಧರಿಸಿ ಅದಕ್ಕೆ ಎಲ್ಲರೂ ಸಹಾಯ ಮಾಡಬೇಕೆಂದು ಗೌರ್ನರ್ ಜನರಲ್ಲರಾದ ಶ್ರೀ ರಾಜಾಜಿ, ಪಂಡಿತ ನೆಹರೂ ಮತ್ತು ಸರ್ದಾರ್ ಪಟೇಲ್‌ರವರುಗಳು ಒಂದು ಮನವಿಯನ್ನು ಹೊರಡಿಸಿರುತ್ತಾರೆ.

ಭಾರತಕ್ಕೆ ರಷ್ಯದ ಮೋಟಾರುಗಳು

ಮೋಟಾರುಕಾರುಗಳು, ಟ್ರ್ಯಾಕ್ಟರುಗಳು ಮತ್ತು ಟ್ರಕ್ಕುಗಳನ್ನು ರಷ್ಯವು ಭಾರತಕ್ಕೆ ಸರಬರಾಜುಮಾಡಲು ಸಿದ್ಧವಾಗಿದೆಯೆಂದೂ ಇದರಿಂದ ಬ್ರಿಟಿಷ್ ಮೋಟಾರ್ ಕಂಪನಿಯವರಿಗೆ ತಲೇನೋವು ಉಂಟಾಗಿದೆಯೆಂದೂ ಹೇಳಲಾಗಿದೆ ಈ ವರ್ಷ ೫ ಲಕ್ಷ ಮೋಟಾರು ಕಾರುಗಳು ಮತ್ತು ೭೫ ಸಾವಿರ ಟ್ರಕ್ಕುಗಳನ್ನು ರಷ್ಯವು ತಯಾರಿಸಿದೆ

ಮಾತನಾಡುವ ಕಾಗದ

ಟೆಲಿಫೋನ್ ಮೂಲಕ ಮಾತನಾಡುವ ಕಾಗದವನ್ನು ಕಳುಹಿಸಲು ಸಂಶೋಧನೆ ನಡೆಯುತ್ತಿರುವುದೆಂದು ವರದಿಯಾಗಿದೆ. ಫ್ರಾನ್ಸಿನ ಇಂಜನಿಯರೊಬ್ಬರು ಒಂದು ನೂತನ ಪ್ರಾವಕವನ್ನು ಕಂಡುಹಿಡಿದಿದ್ದಾರೆ ಈ ಮಾತನಾಡುವುದನ್ನು ಕಾಗದದ ಮೇಲೆ ರಿಕಾರ್ಡು ಮಾಡಬಹುದೆಂದೂ ಈ ಯಂತ್ರಕ್ಕೆ ೧೫೦ ಪೌಂಡು ಬೆಲೆಯಾಗುವುದೆಂದೂ ಹೇಳಲಾಗಿದೆ

ಚೀಣದ ನೂತನ ಪ್ರಧಾನಿ

ಹೋಯಿಂಗ್ ಚಿನ್‌ರವರು ಚೀಣದ ನೂತನ ಪ್ರಧಾನಿಗಳಾಗಲು ಒಪ್ಪಿದ್ದಾರೆಂದು ವರದಿಯಾಗಿದೆ

ಕಾಂ|| ಅಧ್ಯಕ್ಷರ ಪ್ರವಾಸ

ಬೆಂಗಳೂರು ೧೩

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಇದೇ ೧೪ ರಿಂದ ೩೦ನೇ ತಾರೀಖಿನವರೆಗೆ ಸಂಸ್ಥಾನದಲ್ಲಿ ಪ್ರವಾಸವನ್ನು ಕೈಗೊಂಡಿರುತ್ತಾರೆ ಇದೇ ೨೬ನೇ ತಾ||ಬೆಳಿಗ್ಗೆ ಗಂಟೆಗೆ ರಾಜಧಾನಿಗೆ ಆಗಮಿಸುವರು ಅಂದೇ ದಿನ ಹಾಸನಕ್ಕೆ ಪ್ರಯಾಣ ಮಾಡುವರು

ಶಾಂತಿ ಸೌಹಾರ್ದಗಳ ಆವಶ್ಯಕತೆ ಎಂದಿಗಿಂತಲೂ ಈಗ ಹೆಚ್ಚಾಗಿದೆ.

ರಾಟರಿ ಸಮ್ಮೇಳನದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಮೈಸೂರು ೧೩

ರಾಟರಿ ಇಂಟರ್ ನ್ಯಾಷನಲ್ ಸಂಸ್ಥೆಯ ೩೩ ಮತ್ತು ೩೪ನೇ ಜಿಲ್ಲೆಗಳ ಮೂರನೇ ಸಮ್ಮೇಳನದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ಈ ದಿನ ಬೆಳಿಗ್ಗೆ ಜಗನ್ಮೋಹನ ಭವನದಲ್ಲಿ ನೆರವೇರಿಸಿದರು ಇದಕ್ಕಾಗಿ ಹಲವಾರು ಪ್ರಾಂತಗಳಿಂದ ಸುಮಾರು ೧೬೦ ಜನ ಪ್ರತಿನಿಧಿಗಳು ಬಂದಿರುವರು ಸಮ್ಮೇಳನದ ಕಾರ್ಯಕಲಾಪಗಳು ಇಂದು,ನಾಳೆ ಮತ್ತು ನಾಳಿದ್ದು ಕೃಷ್ಣರಾಜ ಸಾಗರದಲ್ಲಿ ನಡೆಯುವುವು.

ಮೈಸೂರು ರೋಟರಿ ಸಂಘದ ಅಧ್ಯಕ್ಷ ಶ್ರೀ ಎಸ್ ರಾಮರಾಯರು ರಜತ ವಿಗ್ರಹದೊಡನೆ ಮಾನ ಪತ್ರವನ್ನರ್ಪಿಸಿದರು. ವಿಶ್ವದಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಉಂಟುಮಾಡುವುದೇ ಈ ಸಂಸ್ಥೆಯ ಧ್ಯೇಯ. ಮೈಸೂರು ರಾಟರಿ ಸಂಘದವರು ಗ್ರಾಮಾಭಿವೃದ್ಧಿ ಮತ್ತು ಸಮಾಜಕ ಸೇವೆಯ ಕಾರ್ಯಕ್ರಮಗಳನ್ನು ಕೈಗೊಂಡು, ಮೂರು ವರ್ಷಗಳ ಹಿಂದೆ ಒಂದು ಶಿಶು ಸಂರಕ್ಷಣಾಲಯ ಮತ್ತು ಹಾಲಿನ ಕೇಂದ್ರವನ್ನು ಸ್ಥಾಪಿಸಿ, ಅವನ್ನು ಪುರ ಸಭೆಯ ಆಡಳಿತಕ್ಕೆ ವಹಿಸಿಕೊಟ್ಟಿರುತ್ತಾರೆ ಕಳೆದ ವರ್ಷ ಭಾರತದ ನಿರಾಶ್ರಿತರ ಸಹಾಯಾರ್ಥವಾಗಿ ೫೦೦ ರೂ ಮತ್ತು ಬಟ್ಟೆಗಳನ್ನು ಕೊಡಲಾಯಿತು. ಈ ವರ್ಷ ಕುಕ್ಕರಹಳ್ಳಿಯ ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದೆ-ಎಂದು ಬಿನ್ನವತ್ತಳೆಯಲ್ಲಿ ತಿಳಿಸಲಾಯಿತು ನೂತನ ಗವರ್ನರರಾಗಿ ಚುನಾಯಿತರಾಗಿರುವ ಡಾ|| ಬಿ ಜಯರಾಂರವರು ಸ್ವಾಗತ ಭಾಷಣ ಮಾಡಿ ರಾಟರಿ ಸಂಸ್ಥೆಯ ಧ್ಯೇಯವನ್ನು ವಿವರಿಸಿದರು

ಅನಂತರ ಶ್ರೀಮನ್ಮಹಾರಾಜರವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಈ ರೀತಿ ತಿಳಿಸಿದರು.

ಸಂಸ್ಥಾನದ ರಾಜಧಾನಿಗೆ ತಮ್ಮೆಲ್ಲರನ್ನು ಸ್ವಾಗತಿಸಿ ತಮ್ಮ ಕಾರ್ಯಕಲಾಪಗಳು ಯಶಸ್ವಿಯಾಗಿ ಆಗಲೆಂದು ನಾವು ಹಾರೈಸುತ್ತೇವೆ ೧೯೩೭ರಲ್ಲಿ ನಮ್ಮ ಕೀರ್ತಿಶೇಷರಾದ ಶ್ರೀಮದ್ಯುವರಾಜರವರು ಈ ಸಮ್ಮೇಳನವನ್ನು ಸ್ವಾಗತಿಸಿದ್ದರು ವಿಶ್ವ ಶಾಂತಿ ಮತ್ತು ಮಾನವ ಪ್ರೇಮವನ್ನು ಬೆಳೆಸಿ ವ್ಯಾಪಾರ ಮತ್ತು ಉದ್ಯೋಗಗಳಲ್ಲಿ ಅತ್ಯುನ್ನತವಾದ ಆದರ್ಶಗಳನ್ನು ಸಾಧಿಸಲು ಪ್ರಯತ್ನಿಸುತ್ತಿದ್ದವರ ಉತ್ಸಾಹಕ್ಕೆ ಭಂಗವುಂಟಾಗುವಂತಹ ಹಲವು ಘಟನೆಗಳು ಅಂದಿನಿಂದ ಈಚೆಗೆ ಸಂಭವಿಸುತ್ತಿವೆ

ಕಳೆದ ಯುದ್ಧದ ಕಾಲದಲ್ಲಿ ರಾಟರಿ ಚಳುವಳಿಗೂ ಅಂಧಕಾರವು ಕವಿದಿತ್ತು. ಸ್ವಾರ್ಥಕ್ಕಿಂತಲೂ ಸೇವೆಯನ್ನೇ ಮುಂದಿಟ್ಟುಕೊಂಡು ವಿಶ್ವಪ್ರೇಮವನ್ನು ಹರಡಲು ಬದ್ಧ ಕಂಕಣರಾಗಿರುವ ನಿಜವಾದ ರಾಟರಿ ಸದಸ್ಯರು ಘೋರ ಸಂಗ್ರಾಮದ ದುಷ್ಪರಿಣಾಮದಿಂದ ಪಾರಾಗಿ ಆತ್ಮ ವಿಶ್ವಾಸದಿಂದ ತಮ್ಮ ಧ್ಯೇಯವನ್ನು ದೃಢಪಡಿಸಿಕೊಂಡಿರುವರು ಸತ್ಯವೂ ಉದಾತ್ತವೂ ಆದ ಮಾರ್ಗಗಳನ್ನು ಅಧಃಪತನಕ್ಕೆ ತಾತ್ಕಾಲಿಕವಾಗಿ ಕರಾಳ ಶಕ್ತಿಗಳು ತುಳಿದಿದ್ದ ರಾಜ್ಯಗಳಲ್ಲಿ ಈ ಚಳುವಳಿಯು ಮತ್ತೆ ತಲೆ ಎತ್ತಿ ಇಮ್ಮಡಿಯಾದ ಚೈತನ್ಯದಿಂದ ಅಂತರ ರಾಷ್ಟ್ರೀಯ ಪ್ರೀತಿ ವಿಶ್ವಾಸಗಳನ್ನು ಸಾಧಿಸುತ್ತಿದೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ದೃಷ್ಟಿಗಳಿಂದ ಶಾಂತಿ ಮತ್ತು ಸೌಹಾರ್ದಗಳ ಆವಶ್ಯಕತೆಯು ಎಂದೂ ಇಲ್ಲದಷ್ಟು ಈಗ ಉಂಟಾಗಿರುತ್ತದೆ ನಮ್ಮ ಭಾರತ ದೇಶದಲ್ಲಿಯೂ ಸಹ ಹಲವು ಕಡೆಗಳಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿ ಶಾಂತಿಗೆ ಭಂಗವುಂಟಾಗುವುದನ್ನು ನಾವು ಕಂಡಿದ್ದೇವೆ.

ಶಾಂತಿ ಸ್ಥಾಪನೆಗಾಗಿ ದುಡಿಯುತ್ತಿರುವ ಅನೇಕ ಸಂಸ್ಥೆಗಳಿರುತ್ತವೆ ಅವುಗಳಲ್ಲಿ ರಾಟರಿ ಸಂಸ್ಥೆಗೆ ಒಂದು ಉನ್ನತ ಸ್ಥಾನವು ಇರುತ್ತದೆ ಜಾತಿ, ಮತ, ಕೋಮುಗಳ ಭೇದವಿಲ್ಲದ ಅಖಂಡ ಜಗತ್ತಿನ ನಿರ್ಮಾಣದಲ್ಲಿಯೂ ಮತ್ತು ಮಾನವ ಪ್ರೇಮಕ್ಕಾಗಿ ಮಹನೀಯರುಗಳು ಸ್ಥಾಪಿಸಬೇಕೆಂದಿರುವ ಅಭಿನ್ನವಾದ ಶಾಂತಿ ಸ್ಥಾಪನಾ ಕಾರ್ಯದಲ್ಲಿಯೂ ರಾಟರಿ ಸಂಸ್ಥೆಯು ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆಯೆಂದು ಕೇಳಿ ನಾವು ಅತ್ಯಂತ ಹರ್ಷಿಸುತ್ತೇವೆ ನಮ್ಮ ಸಂಸ್ಥಾನದಲ್ಲಿ ರಾಟರಿ ಸಂಘವೂ ಸಹ ಅನೇಕ ವಿಧದಲ್ಲಿ ದೀನ ಮತ್ತು ದಲಿತರ ಸೇವೆಯನ್ನು ಮಾಡುತ್ತಿರುವ ಅಂಶವು ಹರ್ಷಪ್ರದವಾಗಿರುತ್ತದೆ ರಾಟರಿ ಧ್ಯೇಯಗಳು ಇನ್ನೂ ಹೆಚ್ಚಿನ ಪ್ರಚಾರವನ್ನು ಹೊಂದಿ ಪ್ರಪಂಚದಲ್ಲಿರುವ ಎಲ್ಲಾ ಸತ್ಪುರುಷರನ್ನೂ ತನ್ನ ಸೇವಾ ಕ್ಷೇತ್ರದಲ್ಲಿ ಒಳಗೊಳ್ಳುವಂತೆ ನಾವು ಮನಃಪೂರ್ವಕವಾಗಿ ಹಾರೈಸುತ್ತೇವೆ

ಕೊನೆಯಲ್ಲಿ ಬೊಂಬಾಯಿ ಸಂಸ್ಥೆಯ ಶ್ರೀ ಇ ಟಿ. ಮೆಹತಾರವರು ಭಾಷಣ ಮಾಡಿ, ವಿಶ್ವ ಶಾಂತಿ ಸ್ಥಾಪನೆಯೇ ರಾಟರಿಯ ಗುರಿಯೆಂದು ಹೇಳಿದರು.

೨೧ನೇ ತಾ|| ನಿಂದ ಗೋಡ್ಸೆ ಅಪೀಲು ವಿಚಾರಣೆ

ಸಿಮ್ಲಾ ಪಂಜಾಬ್ ಹೈಕೋರ್ಟಿನಲ್ಲಿ ಇದೇ ೨೧ನೇ ತಾ|| ನಿಂದ ಮಹಾತ್ಮರ ಕೊಲೆ ಮೊಕದ್ದಮೆಯ ಅಪರಾಧಿಗಳಾದ ಗೋಡ್ಸೆ ಮತ್ತು ಇತರರ ಅಪೀಲು ಅರ್ಜಿಗಳ ವಿಚಾರಣೆ ಪ್ರಾರಂಭವಾಗುವುದು

ಕೊಲೆ ಮೊಕದ್ದಮೆಯಲ್ಲಿ ಖುಲಾಸೆ

ಮೈಸೂರು ೧೩

ರಾಜಾರಾಂ ಅಗ್ರಹಾರದಲ್ಲಿ ನಾರಾಯಣ ಸ್ವಾಮಿ ಎಂಬಾತನನ್ನು ೨೧-೫-೪೮ರಲ್ಲಿ ಬಂದೂಕದಿಂದ ಒಡೆದು ಕೊಲೆ ಮಾಡಿದ ಅಪಾದನೆ ಮೇಲೆ ವಿಚಾರಣೆಗೆ ಗುರಿಯಾಗಿದ್ದ ರಂಗನಾಥಲು ಎಂಬಾತನಿಗೆ "ಬೆನಿಫಿಟ್ ಆಫ್ ಡೌಟ್" ಕೊಟ್ಟು ಅ||ಸೆ|| ಜಡ್ಜರಾದ ಶ್ರೀ ಗಣಪತಿ ಸುಂದರಂರವರು ಈ ದಿನ ಆತನನ್ನು ಖುಲಾಸೆ ಮಾಡಿದರು

ಆರ್.ಎಸ್.ಎಸ್.ನವರ ಬಿಡುಗಡೆ

ಡಿ. ನಾರಾಯಣ್ ಮತ್ತು ಕೆ.ಆರ್ ಸುಬ್ಬರಾವ್ ಎಂಬುವರು ಆರ್.ಎಸ್ ಎಸ್ ನವರು ಈ ದಿನ ಮೈಸೂರು ಜೈಲಿನಿಂದ ಬಿಡುಗಡೆ ಹೊಂದಿದರು

ಆ ರ ತ ಕ್ಷ ತೆ

ಶ್ರೀ ಕರೀಕಲ್ಲಯ್ಯನವರ ಮಕ್ಕಳು ಶ್ರೀ ಎಸ್ ಕೆ ಲಕ್ಷ್ಮೀನರಸಿಂಹಯ್ಯನವರಿಗೆ ಬೆಂಗಳೂರಿನ ಶ್ರೀ ವೇಣುಗೋಪಾಲ್‌ರವರ ಸೋದರ ಸೊಸೆ ಚಿ|| ಸೌ|| ಜೀವರತ್ನರವರನ್ನು ತಂದುಕೊಂಡು ವಿವಾಹ ಮಹೋತ್ಸವವನ್ನು ನಡೆಸಿದ ಸಂಬಂಧವಾಗಿ ಪೌರಸಭಾ ಸದಸ್ಯರಾದ ಶ್ರೀ ಇ ಪಿ. ನಂಜಪ್ಪನವರು ನಿನ್ನೆ ಶ್ರೀ ತಿಮ್ಮಯ್ಯಾಚಾರ್ಯರ ಛತ್ರದಲ್ಲಿ ಒಂದು ಸ್ವಾಗತ ಸತ್ಕಾರ ಸಮಾರಂಭವನ್ನು ಏರ್ಪಡಿಸಿ ಅನೇಕ ಪುರ ಪ್ರಮುಖರನ್ನು ಆಹ್ವಾನಿಸಿ ಸತ್ಕರಿಸಿದರು ಗಾನ ಕೋಕಿಲ ಶ್ರೀಮತಿ ಎಸ್ ರತ್ನಮ್ಮನವರ ಸುಶ್ರಾವ್ಯವಾದ ಸಂಗೀತವೂ ನಡೆಯಿತು

ಬೆಂಕಿ ಅನಾಹುತದಲ್ಲಿ ಇಬ್ಬರ ಆಹುತಿ

೨೮ ಗುಡಿಸಲು ಮತ್ತು ೬೦ ಪಲ್ಲ ಧಾನ್ಯ ನಾಶ

ಮೈಸೂರು ೧೩

ಚಾಮರಾಜನಗರ ತಾಲ್ಲೂಕು ಕೌಲಂದೆಯ ಹರಿಜನರ ಕೇರಿಯಲ್ಲಿ ನಿನ್ನೆ ಬೆಳಿಗ್ಗೆ ಭಾರಿ ಬೆಂಕಿ ಅನಾಹುತವುಂಟಾಗಿ ೨೮ ಗುಡಿಸಲುಗಳು ಸಂಪೂರ್ಣವಾಗಿ ಸುಟ್ಟು ಹೋದುವೆಂದೂ, ಸುಮಾರು ೫೦-೬೦ ಪಲ್ಲ ಧಾನ್ಯ ಭಸ್ಮೀಭೂತವಾಯಿತೆಂದೂ ವರದಿಯಾಗಿದೆ ಗುಡಿಸಲಿನಲ್ಲಿದ್ದ ಹಣವನ್ನು ನೋಟುಗಳನ್ನು ರಕ್ಷಿಸಲು ಹೋದ ೭೦ ವರ್ಷದ ಮುದುಕಿಯೂ ಮತ್ತು ೬ ವರ್ಷದ ಒಂದು ಹೆಣ್ಣು ಮಗುವೂ ಬೆಂಕಿಗೆ ಆಹುತಿಯಾದರು. ಒಟ್ಟು ೧೦ ಸಾವಿರ ರೂ ನಷ್ಟ ಸಂಭವಿಸಿದೆಯೆಂದು ಹೇಳಲಾಗಿದೆ ಮಲ್ಲಮ್ಮ ಎಂಬಾತನು ಗುಡಿಸಲಿನಲ್ಲಿ ಅಡಿಗೆ ಮಾಡುತ್ತಿದ್ದಾಗ ಗಾಳಿಗೆ ಬೆಂಕಿಯು ಹರಡಿ, ಈ ಘಟನೆಯು ಸಂಭವಿಸಿತೆಂದು ಹೇಳಲಾಗಿದೆ

೩೫೦ ಪಲ್ಲ ಧಾನ್ಯ ಸಂಗ್ರಹ

ಮೈಸೂರು, ೧೩

ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ರಂಗರಾಮಯ್ಯನವರು, ಶ್ರೀ ಎಚ್ ಕೆ [illegible], ವಿ [illegible] ಮತ್ತು ಅಧಿಕಾರಿ [illegible] ಪೇಟೆ ತಾಲ್ಲೂಕಿನಲ್ಲಿ ಪ್ರವಾಸ ಮಾಡಿ, ೩೫೦ ಪಲ್ಲ ಧಾನ್ಯವನ್ನು ಸಂಗ್ರಹಿಸಿ [illegible]

ಬರ್ಮಾ ಸೈನ್ಯ ಕೇಂದ್ರದ ಪತನ

ಮಾಂಡಲೇ ಸಮೀಪದಲ್ಲಿರುವ ಬರ್ಮಾ ಸೈನ್ಯ ಕೇಂದ್ರವಾದ ಮೇಮಿಯೋ ಗಲಭೆಕೋರರು ವಶಪಡಿಸಿಕೊಂಡಿರುತ್ತಾರೆಂದು ವರದಿಯಾಗಿದೆ. ಅಲ್ಲಿ ಸರ್ಕಾರಿ ಸೈನ್ಯವು ಘೋರ ಕದನ ನಡೆಸಿ ಅದನ್ನು ತ್ಯಜಿಸಿತೆಂದು ಹೇಳಲಾಗಿದೆ.

೩ ಸಾವಿರ ಭಾವಿಗಳನ್ನು ತೆಗೆಯಲು ಅಮೆರಿಕದ ಪ್ರವೀಣರು

[illegible]

ರಾಜ್ಯದಲ್ಲಿ ಸಾರ್ವತ್ರಿಕ ಚುನಾವಣೆ

[illegible]

ಪಬ್ಲಿಕ್ ಲೈಬ್ರೆರಿ

ರಾಜಧಾನಿಯ ಪಬ್ಲಿಕ್ ಲೈಬ್ರೆರಿಯು ಹಿಂದಿನ ಕೈಲ್ವೆ ಕಛೇರಿ ಕಟ್ಟಡದಿಂದ ಟಿಕ್ಕಿಕಲ್ ಕಾಲೇಜು ಮುಖಮಂಟಪಕ್ಕೆ ವರ್ಗಾಯಿಸಲ್ಪಟ್ಟು ಕೆಲಸ ಮಾಡುತ್ತಿದ್ದರೂ ಅದಕ್ಕೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕದಿರುವುದರಿಂದ ತುಂಬಾ ಅನಾನುಕೂಲವಾಗಿದೆ. ಇದನ್ನು ಕೂಡಲೇ ಸರಿಪಡಿಸಬೇಕು.

ಕಳೆದ ಸಾಲಿನ ವಾರ್ಷಿಕ ಸಭೆಯು ಸೇರಿ ಏಳು ತಿಂಗಳ ಹಿಂದೆ ಇದರ ಕಾರ್ಯಕಾರೀ ಸಮಿತಿಯ ಚುನಾವಣೆ ನಡೆದಿದ್ದರೂ, ಅದರ ಚುನಾಯಿತ ಪತ್ರ ನಾಮಕರಣ ಸದಸ್ಯರ ಪಟ್ಟಿಯನ್ನು ಮತ್ತು ನಾಮಕರಣ ಆಧ್ಯಕ್ಷರ ಹೆಸರನ್ನೂ ಸರ್ಕಾರದವರು ಪ್ರಕಟಿಸಿಲ್ಲ. ಕೂಡಲೇ ಸರ್ಕಾರದವರು ಹೊಸ ಕಾರ್ಯಕಾರೀ ಸಮಿತಿಗೆ ಮನ್ನಣೆಯನ್ನು ಕೊಟ್ಟು ಪ್ರಕಟಿಸಬೇಕು ಎಂದು ಒಬ್ಬ ಸದಸ್ಯರು ಕೋರಿರುತ್ತಾರೆ.

ಮೈಸೂರು ಸಿಟಿ ರೇಷನಿಂಗ್ ಆಫೀಸು, ಮೈಸೂರು ೧೦-೩-೪೯

No. M. 9-1 48-49

ಪ್ರಕಟಣೆ

ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷನ್ ಡಿಪೋಗಳು ಮತ್ತು ಮೊಹಲ್ಲಾ ಸಬ್ ಗೌಡೌನ್‌ಗಳೂ ಸಹ ಇದೇ ಮಾರ್ಚಿ ೧೪-೩-೪೯ನೇ ಸೋಮವಾರ ಮಧ್ಯಾಹ್ನ ಮಾತ್ರ ಹೋಳಿ ಹಬ್ಬಕ್ಕೋಸ್ಕರವಾಗಿ ಮುಚ್ಚಲ್ಪಡುತ್ತವೆ.

(Sd) ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಪ್ರಭಾ ★ ಈ

ಸೌಭಾಗ್ಯ-ಕೀ-ಜೀತ್

ಪಾತ್ರ:-ಸುರೈಯ್ಯಾ, ಮನೋಹರ್, ರೆಹಮಾನ್

-:ಬೆಳಗಿನ ಪ್ರದರ್ಶನಗಳು
11ನೇ ಶುಕ್ರವಾರದಿಂದ 14 ಸೋಮವಾರದ ವರೆಗೆ

* ಕೀರ್ತಿ *

† ಲಲಿತ ಪವಾರ್ † ಜಯರಾ...

ನಿಮ್ಮ ವೈಮೋಕವುಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪು ಫ್ಯಾಕ್ಟರಿ
ಬೆಂಗಳೂರು.

ಶ್ರೀ ಗಾಯತ್ರೀ ಟಾಕೀಸ್

11-3-49ರಿಂದ 5 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು

Sail Ho!
The Cry that loosed the fury of the Robin Hood of the Sea
Warner's
THE SEA HAWK
ದಿ ಸೀ ಹಾಕ್
ಪಾತ್ರ:-ಎರೋಲ್ ಫ್ಲೈನ್

MORNING SHOWS on Sat. 12th, Sun 13th March
M.G.M's
The Courage of Lassie
ದಿ ಕರೇಜ್ ಆಫ್ ಲ್ಯಾಸಿ
With:-Elizabeth Taylor

RAJAKAMAL
Mysore
Morning Shows for 4 days From 11-3-49
- JASSY -
In Technicolour
With Margaret Lockwood, Patricia Roc, Dennis Price

ಅಗ್ಗದ ಜವಳಿಗಾಗಿ
ಗುರುದೇವ ಹಾಲ್
ಬೆಂಗಳೂರು ಜವಳಿ ಅಂಗಡಿಗೆ ಇಂದೇ ಭೇಟಿ ಕೊಡಿ
ಶಿವರಾಂಪೇಟೆ ಮೈಸೂರು

ನಾಳೆ ನಡೆಯುವ ಮೈಸೂರ ಕೋ-ಆಪರೇಟಿವ್ ಸೊಸೈಟಿಯ
ಡೈರೆಕ್ಟರುಗಳ ಚುನಾವಣೆಯಲ್ಲಿ
22
ನಂ ಅಭ್ಯರ್ಥಿಗೂ ಓಟು ಮಾಡಬೇಕಾಗಿ ಪ್ರಾರ್ಥನೆ
ತಮ್ಮ ವಿಧೇಯ:-
ಬಿ. ಎಸ್. ಸುಬ್ಬರಾವ್,
ಪ್ರೊಪ್ರೈಟರ್ ಓರಿಯಂಟಲ್ ಇಂಡಸ್ಟ್ರೀಸ್, ಮೈಸೂರು.

Edited, printed and published by A.R. Nagarajan at the Sadhvi Press, D. Subbiah Road, Mysore.

ರಾಜಕಮಲ್, ಮೈಸೂರು

11 3 49ರಿಂದ :: ಅಮೋಘ ಆರಂಭ
ಪ್ರತಿ ದಿನ ೩ ಆಟಗಳು

ಅಪೂರ್ವವಾದ ಕಥಾ ವಿಶೇಷದಿಂದಲೂ,
ಇಂಪಾದ ಸಂಗೀತಗಳಿಂದಲೂ,
ಮನೋಹರ ನೃತ್ಯಗಳಿಂದಲೂ
ನಿಬಿಡವಾಗಿರುವ

ಸಾಜನ್

ಫಿಲ್ಮಿಸ್ತಾನ್‌ರವರ ಹಿಂದಿ ಚಿತ್ರ
ಪಾತ್ರ:-ಅಶೋಕ್ ಕುಮಾರ್, ರೆಹನ

ಮೈಸೂರು ಕೋ-ಆಪರೇಟಿವ್ ಸೊಸೈಟಿ

ಡೈರೆಕ್ಟರುಗಳ ಚುನಾವಣೆ :: ಡಿ ಬನುಮಯ್ಯನವರ ಹೈ ಸ್ಕೂಲಿನಲ್ಲಿ
13—3—49ನೇ ಭಾನುವಾರ ಮಧ್ಯಾಹ್ನ
3 30 ರಿಂದ 7 ಗಂಟೆ ವರೆಗೆ
—:ಮೆಂಬರುಗಳಲ್ಲಿ ವಿಜ್ಞಾಪನೆ:—
ಮಾಮೂಲಿನಂತೆ ಈ ವರ್ಷವೂ ನಾನು ಉಮೇದುವಾರನಾಗಿರುತ್ತೇನೆ. ದಯವಿಟ್ಟು ಅಮೂಲ್ಯವಾದ ಓಟನ್ನು ಕೊಟ್ಟು ತಮ್ಮ ಸೇವೆ ಮಾಡಲು ಉತ್ತೇಜನನ್ನಾಗಿ ಮಾಡಬೇಕೆಂದು ಕೋರುತ್ತೇನೆ

ನಂಬರ್ 24.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ, ಜ್ಯುಯೆಲರ್ ಮತ್ತು ಬಟ್ಟೆ ವ್ಯಾಪಾರಿಗಳು, ಸಯ್ಯಾಜಿರಾವ್ ರಸ್ತೆ, ಮೈಸೂರು.

ವಿಶೇಷ ಸೂಚನೆ — ನಿಮಗೆ ಓಟು ಮಾಡಲು ಕೊಡುವ ಓಟಿಂಗ್ ಲಿಸ್ಟಿನಲ್ಲಿ ನನ್ನ ನಂಬರ್ ಮತ್ತು ಹೆಸರು ಕಡೆಯಲ್ಲಿರುತ್ತದೆಂಬುದನ್ನು ಅದಕ್ಕೆ ಕಚ್ಚದೆ ಓಟುಕೊಡಬೇಕೆಂಬುದನ್ನು ಮರೆಯಬೇಡಿ

ಪ್ರಭುದೇವಾ ಟಾಕೀಸ್ 11-3-49 ರಿಂದ

ನವೀನ ವಳ್ಳಿ ಮತ್ತು ಕೃಷ್ಣ ತುಲಾಭಾರಂ

ಪಬ್ಲಿಕ್ ಪ್ರೋಗ್ರಾಂ :: ಪ್ರತಿ ದಿನ ೩ ಆಟಗಳು
ಪಾತ್ರ—ಸಾಗರ ಕೋಯಿಲ್ ಮಹದೇವನ್, ಜಯಶ್ರೀ, ಎ.ಕೆ. ಶ್ರೀನಿವಾಸನ್, ಕೃಷ್ಣಮೂರ್ತಿ
ಮೊದಲಾದವರು ಪಾತ್ರವಹಿಸಿರುವ ತಮಿಳು ಚಿತ್ರ

ಫೋ|| ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೧೪-೩-೧೯೪೮ [ಸಂಚಿಕೆ ೬೦

ಅರಸೀಕೆರೆಯಲ್ಲಿ ಅಧಿಕಾರಿಗಳ ದೌರ್ಜನ್ಯವೇ?

ಅರಸೀಕೆರೆಯ ವರ್ತಕರಾದ ಶ್ರೀ … ಬಸವರಾಜರವರ ಮನೆಗೆ ಕಳೆದ ಗುರುವಾರ ಮಧ್ಯರಾತ್ರಿಯಲ್ಲಿ ತಾ|| ಅಮಲ್ದಾರರೂ … ಇನ್ಸ್‌ಪೆಕ್ಟರವರೂ ಶಸ್ತ್ರಸಹಿತ ನುಗ್ಗಿ … ಧನೆ ನಡೆಸುವ ನೆಪದಲ್ಲಿ ಬಹಳ ಅಕ್ರಮ … ಯಲ್ಲಿ ನಡೆದುಕೊಂಡರೆಂದೂ ಜಿಲ್ಲಾಧಿಕಾರಿಗಳೂ ಪೋ|| ಸೂಪರಿಂಟೆಂಡೆಂಟರೂ ತನಿಖೆ ನಡೆಸುತ್ತಿರುವರೆಂದೂ ವರದಿಯಾಗಿದೆ.

ಅಮಲ್ದಾರರ ಹೆಸರು ಶ್ರೀ ಪದ್ಮನಾಭ… ಇನ್ಸ್‌ಪೆಕ್ಟರು ಶ್ರೀ ನಾಗಭೂಷಣರಾ… ಎರಡು ದಿನಗಳಿಂದ ಶ್ರೀ ಬಸವರಾಜಪ್ಪನವರ ಮನೆ ಸುತ್ತಲೂ ಪೋಲೀಸ್ ಕಾವಲು ಹಾಕಲಾಗಿತ್ತೆಂದೂ, ಮನೆಯೊಳಗೆ ನುಗ್ಗಿದ ಮೇಲೆ ಶ್ರೀ ಬಸವರಾಜಪ್ಪನವರನ್ನೂ, ಅವರ ಪತ್ನಿಯನ್ನೂ ಬೂಟಿ… ಲಿನಿಂದ ಒದ್ದರೆಂದೂ, ಅವರ ಮಗನನ್ನ ಬೆದರಿಸಿದರೆಂದೂ ಸಹ ವರದಿಯಾಗಿದೆ. ಈ ವಿಚಾರವು ವಿಶೇಷ ಕೋಲಾಹಲವನ್ನುಂಟುಮಾಡಿರುತ್ತದೆ.

ಶಾಲಾ ಸಂಘದ ದಿನಾಚರಣೆ

ಮೈಸೂರು ೧೨

… ಮಲ್ಲಪ್ಪನವರ ಪ್ರಾಕ್ಟೀಸಿಂಗ್ ಮಿಡ್ಲ್ ಸ್ಕೂಲ್ ಸಂಘದ ವಾರ್ಷಿಕೋತ್ಸವವು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆಯಿತು. ಪ್ರಾರ್ಥನೆ, ವೇಷಸ್ಪರ್ಧೆ, ಸಂಭಾಷಣೆ, ಬಹುಮಾನ ವಿನಿಯೋಗಗಳ ನಂತರ ಡಾ|| ಸಿದ್ದಲಿಂಗಯ್ಯನವರು ಭಾಷಣ ಮಾಡಿ ಮೂಲಶಿಕ್ಷಣ-ಮತ್ತು ಉಪಾಧ್ಯಾಯರುಗಳ ತರಬೇತಿನ ಆವಶ್ಯಕತೆಯ ವಿಚಾರವನ್ನು ಒತ್ತಿ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್. ಎಸ್ ಪರೀಕ್ಷೆಯನ್ನು ವಜಾ ಮಾಡಬೇಕೆಂದು ಹೇಳಿದರು. ಗುಮಾಸ್ತರನ್ನು ತಯಾರು ಮಾಡುವ ವಿದ್ಯೆಯನ್ನು ತಪ್ಪಿಸಿ ಪರಸ್ಪರ ಪ್ರೀತಿ ವಿಶ್ವಾಸಗಳನ್ನೂ ಸೇವಾ ಭಾವನೆಯನ್ನೂ ಬೆಳೆಸುವ ವಿದ್ಯೆಯ ಆವಶ್ಯಕತೆಯನ್ನು ಒತ್ತಿ ಹೇಳಿದರು. ನಾಟಕ ಪ್ರದರ್ಶನಗಳ ನಂತರ ಧನ್ಯವಾದಗಳೊಡನೆ ಸಭೆ ಮುಗಿಯಿತು.

ರಥೋತ್ಸವ

ಅಭಿನವ ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯಸ್ವಾಮಿಗಳವರ ಸಾನ್ನಿಧ್ಯದಲ್ಲಿ ೧೨-೩-೪೮ ನೇ ಶುಕ್ರವಾರದಿಂದ ೧೭-೩-೪೮ ನೇ ಬುಧವಾರದವರೆಗೆ ಹೊಂಬುಜ ಕ್ಷೇತ್ರದಲ್ಲಿ ರಥೋತ್ಸವ ನಡೆಯುವುದು. ಪ್ರತಿ ದಿನವೂ ಸಂಜೆ … ಭಾಷಣವೂ ನಡೆಯುವುದು.

ದಿವಾಕರರಿಗೆ ಕನ್ನಡ ಟೈಪ್ ರೈಟರ್ ಅರ್ಪಣೆ

…ನವಾಸಿಯ ಪತ್ರಿಕೋದ್ಯೋಗಿಗಳಾದ … ಕೆ ಅನಂತ ಸುಬ್ಬರಾಯರು ಕನ್ನಡ ಟೈಪ್ ರೈಟರನ್ನು ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ರಂಗನಾಥ ದಿವಾಕರರಿಗೆ ತಯಾರು ಮಾಡಿಕೊಟ್ಟಿರುತ್ತಾರೆ.

ಹೈದರಾಬಾದಿಗೆ ಮೈಸೂರಿನ ಪೋಲೀಸ್

…ರಡು ರಿಸರ್ವ್ ಪೋಲೀಸ್ ಪಡೆಗಳ …ನಿಗಳು ನಾಳೆ ಸಂಸ್ಥಾನದಿಂದ ಬೆಂಗಳೂರಿಗೆ ತೆರಳುವುವು. ಈಗಾಗಲೇ ಶಸ್ತ್ರಗಳನ್ನು ಅಡಗಿಸುತ್ತಿರುವ ಮೈಸೂರು ದಳದೊಡನೆ ಸೇರಿ ಇವರೂ ಕೆಲಸ ಮಾಡುವರು.

ಶಾಸನ ಸಭೆಗಳಿಗೆ ಜೀವದಾನ

ಸ್ಪೆಷಲ್ ಫೋನ್] ಬೆಂಗಳೂರು ೧೩

ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆಗಳಿಗೆ ೧೯೪೮ನೇ ಮಾರ್ಚಿ ೩೧ನೇ ತಾ|| ವರೆಗೆ ಅವಧಿಯನ್ನು ಹೆಚ್ಚಿಸಿ ಸರ್ಕಾರದವರು ನಿನ್ನೆ ಆಜ್ಞೆಯನ್ನು ಹೊರಡಿಸಿದರು.

ನ್ಯಾಯವಿಧಾಯಕಸಭೆಯ ಆಯವ್ಯಯ ಅಧಿವೇಶನವು ೨೦-೩-೪೮ರಲ್ಲಿಯೂ ಪ್ರ|| ಪ್ರ|| ಸಭಾಧಿವೇಶನವು ೬-೪-೪೮ರಲ್ಲೂ ಬೆಂಗಳೂರಿನಲ್ಲಿ ನಡೆಯುವಂತೆ ಗೊತ್ತಾಗಿದೆ.

O ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದ ಮೋಟಾರು ವಾಹನಗಳನ್ನು ಸಂಸ್ಥಾನದಿಂದ ಹೊರಕ್ಕೆ ಸಾಗಿಸುವ ಬಗ್ಗೆಯೂ ಅವುಗಳ ಮಾರಾಟದ ಬಗ್ಗೆಯೂ ಇದ್ದ ಪ್ರತಿಬಂಧಕವನ್ನು ರದ್ದುಮಾಡಲಾಗಿದೆ.

ಉದ್ಯೋಗಗಳಲ್ಲಿ ಕೋಮುವಾರು ಸಂಖ್ಯೆ ಇದ್ದೇ ಇರುತ್ತೆ

ಇನ್ನೂ ಕೆಲವು ಕೋಮುಗಳು ಹಿಂದೆ ಬಿದ್ದಿರುವುದರಿಂದ ಸರ್ಕಾರಿ ನೌಕರಿಗಳಲ್ಲಿಯೂ ಹಲವು ವಿದ್ಯಾ ಸಂಸ್ಥೆಗಳಲ್ಲಿಯೂ ಪ್ರವೇಶವನ್ನು ಕೋಮುವಾರು ಸಂಖ್ಯೆಗೆ ಅನುಗುಣವಾಗಿ ಗೊತ್ತುಮಾಡುವ ಪದ್ಧತಿಯನ್ನು ಈಗಲೇ ರದ್ದುಮಾಡಲು ಇಷ್ಟಪಡುವುದಿಲ್ಲವೆಂದು ಮದರಾಸ್ ಸರ್ಕಾರದವರು ತಿಳಿಸಿರುತ್ತಾರೆ.

ಡಾ|| ಮಲಾನ್ ಪಕ್ಷಕ್ಕೆ ಜಯ

ದಕ್ಷಿಣ ಆಫ್ರಿಕದ ಪ್ರಾಂತ್ಯ ಸಭೆಗಳ ಚುನಾವಣೆಯಲ್ಲಿ ಈಗಿನ ಸರ್ಕಾರದ ರಾಷ್ಟ್ರೀಯ ಪಕ್ಷದ ಡಾ|| ಮಾಲನ್ನರಿಗೆ ಪ್ರಾಪ್ತ ಜಯವುಂಟಾಗಿರುತ್ತದೆ. ಅವರ ಪಕ್ಷಕ್ಕೆ ೭೩ ಸ್ಥಾನಗಳೂ, ಜ|| ಸ್ಮಟ್ಸರ ಪಕ್ಷಕ್ಕೆ ೬೫, ಸ್ವತಂತ್ರರಿಗೆ ೭ ಮತ್ತು ಕಾರ್ಮಿಕ ಪಕ್ಷಕ್ಕೆ ೩ ಸ್ಥಾನಗಳೂ ದೊರೆತಿವೆ.

ರಾಗಿ ಸರಬರಾಜು

ಮೈಸೂರು ೧೩

ರಾಜಧಾನಿಯ ರೇಷನ್ ಕಚೇರಿಗೆ ಸ್ವಲ್ಪ ಮಟ್ಟಿನ ರಾಗಿ ದಾಸ್ತಾನು ಬಂದಿರುವುದರಿಂದ ಬರುವ ವಾರದಲ್ಲಿ ಬಿ ತರಗತಿಯ ರೇಷನ್ ಕಾರ್ಡುದಾರರಿಗೆ ರಾಗಿಯನ್ನು ಕೊಡಲಾಗುವುದೆಂದು ತಿಳಿಸಲಾಗಿದೆ.

ಧಾನ್ಯ ಸಂಗ್ರಹಣೆ

ಗುಂಡ್ಲುಪೇಟೆ ೧೦

ಇಲ್ಲಿನ ತಾಲ್ಲೂಕು ಅಮಲ್ದಾರರು ಮತ್ತು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ ದೊಡ್ಡಯ್ಯನವರು ಹೊಸೂರು, ವೀರನಪುರ ಮತ್ತು ವೇ…ಗಡಹಳ್ಳಿ ಗಳಲ್ಲಿ ಕಳೆದ ೮ ನೇ ತಾ|| ಪ್ರವಾಸ ಮಾಡಿ ೩೦೦ ಪಲ್ಲ ಧಾನ್ಯವನ್ನು ಸಂಗ್ರಹಿಸಿರುತ್ತಾರೆ.

ಸಾವರ್ಕರರ ಆಗಮನ

ಬೆಂಗಳೂರು ೧೨

ಹವಾ ಬದಲಾವಣೆಗಾಗಿ ಹಿಂದೂ ಮಹಾ ಸಭಾ ಮಾಜಿ ಅಧ್ಯಕ್ಷ ಶ್ರೀ ವಿ ಡಿ ಸಾವರ್ಕರರು ಮೊನ್ನೆ ತಮ್ಮ ಕಾರ್ಯದರ್ಶಿಗಳೊಡನೆ ಇಲ್ಲಿಗೆ ಬಂದು ಬೃಂದಾವನ ಹೋಟಲಿನಲ್ಲಿ ಬಿಡಾರ ಮಾಡಿರುವರು.

O ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಭಾರತ ದೇಶದ ಹವಾಗುಣಕ್ಕೆ ಅನುಕೂಲವಾಗುವ ನಾಲ್ಕು ಬಗೆಯ ವಿಮಾನಗಳನ್ನು ಇನ್ನು ಮುಂದೆ ತಯಾರಿಸಲಾಗುವುದು. ಬ್ರಿಟನ್ನಿನಿಂದ ಬರುವ ಸಾಮಾನುಗಳನ್ನು ಜೋಡಿಸಿ ಮೊದಲು ಅವುಗಳನ್ನು ಸಿದ್ಧಗೊಳಿಸಿ ಕ್ರಮೇಣ ಆ ಸಾಮಗ್ರಿಗಳನ್ನು ಇಲ್ಲಿಯೇ ತಯಾರಿಸಲಾಗುವುದೆಂದು ಹೇಳಲಾಗಿದೆ.

O ವಿಮಾನ ಕಾರ್ಖಾನೆಯಲ್ಲಿ ೧೦೦ ಅಡಿ ಉದ್ದದ ಉಕ್ಕಿನ ರೈಲು ಗಾಡಿಗಳನ್ನು ಸಮಸ್ತ ಸೌಕರ್ಯಗಳೊಡನೆ ತಯಾರಿಸಲಾಗುತ್ತಿದೆಯೆಂದು ಗೊತ್ತಾಗಿದೆ.

O ಸಿನಿಮಾ ಮುಂತಾದ ಮನರಂಜನೆಯ ಸ್ಥಳಗಳಲ್ಲಿರುವ ಫಲಹಾರ ಮಂದಿರಗಳಿಗೆ ಇತರ ಮಂದಿರಗಳ ಕಾಲದ ನಿರ್ಬಂಧವು ಅನ್ವಯಿಸುವುದಿಲ್ಲವೆಂದು ಆಹಾರ ಇಲಾಖಾ ಡೈರೆಕ್ಟರು ತಿಳಿಸಿದ್ದಾರೆ.

ತಾಲ್ಲೂಕು ಸಮಿತಿಗಳಿಗೆ ಹೆಚ್ಚು ಅಧಿಕಾರವಿರಬೇಕು

ಮೈಸೂರು ೧೩

ಮೈಸೂರು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಯ ಸಭೆಯು ನಿನ್ನೆ ಶ್ರೀ ಹೆಚ್. ಕೆ. ಮಾದಪ್ಪನಾಯಕರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಮ್ಯಾಥ್ಯೂರವರು ಭಾಷಣ ಮಾಡಿ ನೂತನ ಯೋಜನೆಯಂತೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ವಿವರಿಸಿದರು. ಹೊಸ ಯೋಜನೆಗೂ ಧಾನ್ಯ ಸಂಗ್ರಹಕ್ಕೂ ಗ್ರಾಮಸ್ಥರು … ಸಹಕಾರಕ್ಕಾಗಿ ಅಭಿನಂದಿಸಿದರು. ಈಗ ರಚಿತವಾಗಿರುವ ಗ್ರಾಮಾಭಿವೃದ್ಧಿ ಸಮಿತಿಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಮತ್ತು ಧನಸಹಾಯವನ್ನು … ಸರ್ಕಾರವನ್ನು ಪ್ರಾರ್ಥಿಸುವ … ನಿರ್ಣಯಗಳು ಮಾಡಲ್ಪಟ್ಟುವು.

ಜಿಲ್ಲಾಬೋರ್ಡುಗಳನ್ನು ರದ್ದುಮಾಡಬೇಕೆಂಬುದಾಗಿ ಬಂದ ಸಲಹೆಯು … ಅಂಗೀಕರಿಸಲ್ಪಡಲಿಲ್ಲವೆಂದು … ಕಡೆಯಿಂದ …

ಮಹಿಳಾ ಪೋಲೀಸ್ ಇನ್ಸ್‌ಪೆಕ್ಟರುಗಳು

ಸ್ತ್ರೀಯರನ್ನು ಪೋಲೀಸ್ ಇನ್ಸ್‌ಪೆಕ್ಟರುಗಳಾಗಿ ನೇಮಿಸಿಕೊಳ್ಳಲು … ಮದರಾಸ್ ಸರ್ಕಾರದವರು ತೀರ್ಮಾನಿಸಿದ್ದಾರೆ.

ಕೇಸರಿ ವಾರಪತ್ರಿಕೆ ಸಾವಿರ ರೂ. ಠೇವಣಿ ಕೊಡಬೇಕು

ಬೆಂಗಳೂರು ೧೩

ಇಲ್ಲಿನ ಕೇಸರಿ ವಾರ ಪತ್ರಿಕೆಯಲ್ಲಿ ಕಳೆದ ನವೆಂಬರ್ ೨೮ ನೇ ತಾ|| ಪ್ರಕಟವಾದ "ನಮ್ಮ ಸರ್ಕಾರ" ಎಂಬ ಅಗ್ರ ಲೇಖನದ ಸಂಬಂಧವಾಗಿ ಸಂಪಾದಕರೂ, ಮುದ್ರಣಕಾರರೂ ಆದ ಶ್ರೀ ಆರ್. ಎಸ್. ನಾರಾಯಣರವರು ಮುದ್ರಣಾಲಯದ ಮಾಲೀಕರಾಗಿ ೫೦೦ ರೂ ಮತ್ತು ಪತ್ರಿಕೆಯ ಪ್ರಕಟಣಕಾರರಾಗಿ ೫೦೦ ರೂ. ಠೇವಣಿಯನ್ನು ಇದೇ ೨೦ ನೇ ತಾ||ನೊಳಗೆ ಕೊಡಬೇಕೆಂದು ಸರ್ಕಾರದವರು ಕೇಳಿರುತ್ತಾರೆ.

ನೇಪಾಳದಲ್ಲಿ ಅಮೆರಿಕದ ವಿಮಾನ ನೆಲೆ

ನೇಪಾಳದಲ್ಲಿ ಅಮೆರಿಕವು ಒಂದು ವಿಮಾನ ನೆಲೆಯನ್ನು ಸ್ಥಾಪಿಸಿಕೊಳ್ಳಲು ಉಭಯ ರಾಜ್ಯಗಳಿಗೂ ರಹಸ್ಯ ಒಪ್ಪಂದವಾಗಿರುವುದಾಗಿ ವರದಿಯಾಗಿದೆ. ಇದಕ್ಕೆ ಪ್ರತಿಯಾಗಿ ಅಮೆರಿಕವು ನೇಪಾಳಕ್ಕೆ ವಿಶೇಷವಾದ ಡಾಲರ್ ಸಾಲವನ್ನು ಕೊಡುವುದೆಂದೂ ಹೇಳಲಾಗಿದೆ.

ಪಾಕಿಸ್ತಾನದಲ್ಲಿ ಬಂದೂಕಕ್ಕೆ ಅನುಮತಿ

ಅಗತ್ಯವಾದಾಗ ಆತ್ಮ ರಕ್ಷಣೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಪಾಕಿಸ್ತಾನದ ಪ್ರಜೆಗಳೆಲ್ಲರೂ ಬಂದೂಕಗಳನ್ನಿಟ್ಟುಕೊಳ್ಳುವುದಕ್ಕೆ ಧಾರಾಳವಾಗಿ ರಹದಾರಿಯನ್ನು ಕೊಡುವ ತೀರ್ಮಾನವನ್ನು ಅಲ್ಲಿನ ಸರ್ಕಾರದವರು ಪರಿಶೀಲಿಸುತ್ತಿರುವರು.

ಕಾಶ್ಮೀರದಲ್ಲಿ ಒಪ್ಪಂದ

ಮೊನ್ನೆ … ದ ಕಿರ್ಪಾಲ್ ಮತ್ತು ಕರ್ತಾರರಿಗೆ ಸಮರ ತ್ಯಾಗದ … ರತಕ್ಕದ್ದೆಂದು ಭಾರತ ಮತ್ತು ಪಾಕಿಸ್ತಾನಗಳ ಸೈನ್ಯಾಧಿಪತಿಗಳಲ್ಲಿ ತಾತ್ಕಾಲಿಕ ಒಪ್ಪಂದವಾಗಿರುವುದಾಗಿ ತಿಳಿದುಬಂದಿದೆ.

ರೈಲಿನಲ್ಲಿ ಕುಡಿಯುವ ನೀರು

ಪ್ರಯಾಣಿಕರಿಗೆ ರೈಲು ಗಾಡಿಗಳೊಳಗೆ ಕುಡಿಯುವ ನೀರನ್ನು ಒದಗಿಸಲು ಎಂ ಎಸ್ ಎಂ ರೈಲ್ವೆಯವರು ಏರ್ಪಾಡು ಮಾಡಿರುತ್ತಾರೆ. ಜನರು ಕುಳಿತಿರುವ ಕಡೆಯೇ ನೀರಿನವರು ಬಂದು ಪಾತ್ರೆಗಳಿಗೆ ನೀರು ತುಂಬಿಕೊಟ್ಟು ಹೋಗುವರು.

ಇಂಡೋನೇಷ್ಯದಲ್ಲಿ ಗೊರಿಲ್ಲಾ ಯುದ್ಧ

ಡಚ್ ಪೋಲೀಸರ ಕೈಗೆ ಸಿಕ್ಕದೆ ತಪ್ಪಿಸಿಕೊಂಡಿರುವ ಇಂಡೋನೇಷ್ಯಾ ಸೈನಾಧಿಪತಿ ಜ|| ಸುದಿರ್ಮಾನರು … ತಮ್ಮ ಸೈನಿಕರೊಡನೆ … ಸೇರಿರುವುದಾಗಿಯೂ … ತಮ್ಮ ಸೈನಾಧಿಕಾರಿಗಳ ಸಹಕಾರದಿಂದ … ಮೇಲೆ ಗೊರಿಲ್ಲಾ ಯುದ್ಧವನ್ನು ಪ್ರಾರಂಭಿಸುವುದಾಗಿಯೂ ತಿಳಿಸಿದ್ದಾರೆ.

ಭಾಷಾವಾರು ಪ್ರಾಂತ ರಚನೆ ಬಗ್ಗೆ ವರದಿ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಭಾಷಾವಾರು ಪ್ರಾಂತ ರಚನೆಯ ಬಗ್ಗೆ ನೇಮಿಸಿರುವ ಉಪಸಮಿತಿಯವರು ತಮ್ಮ ವರದಿಯನ್ನು … ರವರ …

ವಾರ ಭವಿಷ್ಯ

ತಾ|| ೧೩-೩-೪೯ ರಿಂದ ೨೦-೩-೪೯ ರ ವರೆಗೆ

ಮೇಷ ಹಣಕಾಸಿನ ಖರ್ಚು ಹೆಚ್ಚುವುದು ಆರೋಗ್ಯ ಉತ್ತಮಗೊಳ್ಳುವುದು ನೌಕರಿ ದಂಧೆಗಳಲ್ಲಿ ವಿಘ್ನ, ತಾ|| ೧೬, ೧೮ ಕಳವಿನ ಸಂಭವ

ವೃಷಭ ನೌಕರಿಗಳಲ್ಲಿ ಶತ್ರು ಕಾಟ, ಪ್ರವಾಸದಲ್ಲಿ ತ್ರಾಸವಾಗುವುದು ವಿದ್ಯಾರ್ಥಿಗಳಿಗೆ ನಿರುತ್ಸಾಹ ಶುಭಕಾರ್ಯಗಳಿಗೆ ವಿಘ್ನ ತಾ|| ... ಕುಟುಂಬಕ್ಕೆ ಅನಾರೋಗ್ಯ

ಮಿಥುನ ... ಶತ್ರುಗಳ ಕಾಟದಿಂದ ... ಹಣಕಾಸಿನಲ್ಲಿ ... ಕಾರ್ಯಗಳು ಬರುಗುವುದು ... ಪ್ರವಾಸಕ್ಕಾಗಿ ಖರ್ಚು

ಕರ್ಕ ಆರೋಗ್ಯ ತೃಪ್ತಿಕರವಾಗಿರುವುದು ... ನೌಕರಿ ದಂಧೆಗಳಲ್ಲಿ ... ತಾ|| ... ಪ್ರವಾಸ

ಸಿಂಹ ... ನೌಕರಿ ... ನಷ್ಟ

ಕನ್ಯಾ ... ವಿದ್ಯಾರ್ಥಿಗಳು ... ಗಳಲ್ಲಿ ಅಧಿಕ ಲಾಭ ಸಾಂಪತ್ತಿಕ ಸ್ಥಿತಿ ಉತ್ತಮಗೊಳ್ಳುವುದು ತಾ|| ೧೫, ೧೭ ಶುಭ ಪ್ರವಾಸ

ತುಲಾ - ಶರೀರ ಸ್ಥಿತಿ ಸಮಾಧಾನಕರವಾಗಿರುವುದು ಮಾನಸಿಕ ಕ್ಲೇಶಗಳಿಂದ ಪಾರಾಗುವಿರಿ ಶತ್ರುನಾಶ ತಾ|| ೧೦, ೧೪ ಶುಭಕಾರ್ಯಕ್ಕಾಗಿ ಪ್ರವಾಸ, ಖರ್ಚು

ವೃಶ್ಚಿಕ ಕುಟುಂಬದ ಆರೋಗ್ಯ ತೃಪ್ತಿಕರವಾಗಿರುವುದಿಲ್ಲ ಶತ್ರುಗಳು ನಿಮಗೆ ತೊಂದರೆ ಕೊಡಲು ಪ್ರಯತ್ನಿಸಿ ವಿಫಲರಾಗುವರು ಶುಭಕಾರ್ಯಗಳಿಗೆ ವಿಘ್ನ ಸಂಭವ ತಾ|| ೧೭ ... ಅಶಾಂತಿ

ಧನು ಮಾನಸಿಕ ಮತ್ತು ದೈಹಿಕ ಶ್ರಮದಿಂದ ದೂರವಾಗಿರಿ. ಆರೋಗ್ಯ ಕೆಡುವ ಸಂಭವ ಆಹಾರದಲ್ಲಿ ನಿಯತವಾಗಿರಬೇಕು. ತಾ|| ೧೬, ೧೮ ಯತ್ನಿಸಿದ ಕಾರ್ಯಗಳಿಗೆ ವಿಘ್ನ, ವಿಶೇಷ ಖರ್ಚು

ಮಕರ - ವ್ಯಾಪಾರ ನೌಕರಿ ಉದ್ಯೋಗಗಳಲ್ಲಿ ಮೇಲಾಧಿಕಾರಿಗಳ ಮನ್ನಣೆ ಕೋರ್ಟು ವ್ಯವಹಾರಗಳಲ್ಲಿ ಜಯ ವಿವಾಹಗಳು ನಿಶ್ಚಿತವಾಗುವುವು ತಾ|| ೧೫, ೧೭ ಆಪ್ತೇಷ್ಟರ ಭೇಟಿ

ಕುಂಭ ನಿಮ್ಮ ಆರೋಗ್ಯ ತೃಪ್ತಿಕರವಾಗಿರುವುದು ಶತ್ರುಗಳು ನಾಶವಾಗುವರು ವಿದ್ಯಾರ್ಥಿಗಳಿಗೆ ಉತ್ಸಾಹ ಮಂಗಳ ಕಾರ್ಯಗಳಿಗಾಗಿ ಪ್ರವಾಸ ತಾ|| ೧೪, ೧೯ ಮಹತ್ವ ಪತ್ರಾಗಮನ

ಮೀನ ನೌಕರಿ ದಂಧೆಗಳಲ್ಲಿ ಜಯ ವ್ಯಾಪಾರಸ್ಥರಿಗೆ ನಿರುತ್ಸಾಹ ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಅಡಚಣೆ ತಾ|| ೧೬, ೧೮ ಮಂಗಳ ಕಾರ್ಯಗಳಿಗಾಗಿ ಪ್ರವಾಸ

ಡಾಕಾ ವಿಶ್ವ ವಿದ್ಯಾಲಯ ಮುಚ್ಚಿತು

ಡಾಕಾ ವಿಶ್ವವಿದ್ಯಾಲಯದ ಕೆಳ ದರ್ಜೆ ನೌಕರರು ತಮ್ಮ ಸಂಬಳ ಸಾರಿಗೆ ಒಗ್ಗೆ ಕೆಲವು ನೇ ತಾ|| ಮುಷ್ಕರ ಹೂಡಿದ್ದರು. ಅವರಿಗೆ ಸಹಾನುಭೂತಿ ತೋರಿಸಲು ಅಲ್ಲಿನ ವಿದ್ಯಾರ್ಥಿಗಳೂ ಮುಷ್ಕರ ಹೂಡಿರುವುದರಿಂದ ಅನಿರ್ದಿಷ್ಟ ಕಾಲದವರೆಗೆ ವಿಶ್ವವಿದ್ಯಾಲಯವನ್ನು ಮುಚ್ಚಲಾಗಿದೆಯೆಂದು ಅದರ ಉಪ ಸ್ಥಾನಪತಿಗಳು ತಿಳಿಸಿರುತ್ತಾರೆ

ಬಟ್ಟೆ ಬಂದಿದೆ

ಜಯ ಅಂಡ್ ಕಂಪೆನಿ

ಸಯ್ಯಾಜಿ ರಾವ್ ರಸ್ತೆ, ಮೈಸೂರು

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ ಇಂದೇ ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

RAJAKAMAL

Mysore

Morning Shows for 4 days From 11--3--49

- JASSY -

(In Technicolor)

With - Margaret Lockwood, Patricia Roc, Dennis Price.

ಶ್ರೀ ಗಾಯತ್ರೀ

11-3-49ರಿಂದ 5 ದಿನ ಪ್ರತಿ ದಿನ 3 ಪ್ರದರ್ಶ

Sail Ho ? The Cry that loo fury of the Robi of the Sea

Warner's

THE SEA H

ದಿ ಸೀ ಹಾ

ಪಾತ್ರ:-ಎರಾಲ್ ಫ್ಲಿ

ಮೈಸೂರು ಸಿಟಿ ರೇಷನಿಂಗ್ ಮೈಸೂರು ೧೧-೩-೪

No. M. 9-1

ಪ್ರಕಟಣೆ

ಮೈಸೂರು ಸಿಟಿಯಲ್ಲಿರುವ ಪರ್ ಡಿಪೋಗಳು ಮತ್ತು ಮೊಹ ಗೌಡೌನ್‌ಗಳೂ ಸಹ ಇದೇ ೧೪-೩-೪೯ನೇ ಸೋಮವಾರ ಮಾತ್ರ ಹೋಳಿ ಹಬ್ಬಕ್ಕೋ ಮುಚ್ಚಲ್ಪಡುತ್ತವೆ

(Sd) ಡಿ.ಜೆ. ಬಾಲರಾ

ರೇಷನಿಂಗ್ ಆಫೀಸರ್, ಮೈಸೂ

Edited, printed published by A.R. N rajan at the Sadhvi D. Subbiah Road, M

ರಾಜಕಮಲ್, ಮೈಸೂರು

11-3-49ರಿಂದ :: ಅಮೋಘ ಆರಂಭ

ಪ್ರತಿ ದಿನ ೩ ಆಟಗಳು

ಅಪೂರ್ವವಾದ ಕಥಾ ವಿಶೇಷದಿಂದಲೂ, ಇಂಪಾದ ಸಂಗೀತಗಳಿಂದಲೂ, ಮನೋಹರ ನೃತ್ಯಗಳಿಂದಲೂ ಸಿಬಿಡವಾಗಿರುವ

ಸಾಜನ್

ಫಿಲ್ಮಿಸ್ಥಾನ್‌ರವರ ಹಿಂದಿ ಚಿತ್ರ

ಪಾತ್ರ:- ಅಶೋಕ್ ಕುಮಾರ್, ರೆಹನ

ಮನಕರಗಿಸುವ ಕಥೆ - ಮನರಂಜಿಸುವ ಸಂಗೀತದಿಂದ ಕೂಡಿದ ಏಕೈಕ ಚಿತ್ರ

ವಾಡಿಯಾ ಫಿಲಂಸ್‌ರವರ

ಮೇಲಾ (ಹಿಂದಿ) MELA

ಪಾತ್ರ — ನರ್ಗೀಸ್ - ದಿಲೀಪ್ ಕುಮಾರ್ - ಜೀವನ್

ಈಗ 4ನೇ ವಾರ **ವುಡ್‌ಲ್ಯಾಂಡ್ಸ್** ಟಾಕೀಸಿನಲ್ಲಿ

ಬೆಂಗಳೂರು ಮಜೆಸ್ಟಿಕ್‌ನಲ್ಲಿ 7 ವಾರ

A Dreamland Pictures Release

ಬೆಂಗಾಲ್, ಬೆನಾರಿಸ್, ಮೈಸೂರು ಸಿಲ್ಕ್ ಸೀರೆಗಳು

ಮಂಗಳಕರವಾದ ಮದುವೆ ಜವಳಿಗಳು ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ ನಾಣ್ಯವಾದ ಮಾಲು. ಬಾಡುಸಾಬ್ ಕಂಪೆನಿ, ಮೈಸ

ಪ್ರಭುದೇವಾ ಟಾಕೀಸ್ 11-3-49 ರಿಂದ

ನವೀನ ವಳ್ಳಿ ಮತ್ತು ಕೃಷ್ಣ ತುಲಾಭಾರಂ

ಡಬ್ಬಲ್ ಪ್ರೋಗ್ರಾಂ :: ಪ್ರತಿ ದಿನ ೩ ಆಟಗಳು

ಪಾತ್ರ — ನಾಗರ ಕೋಯಿಲ್ ಮಹದೇವನ್, ಜಯಶ್ರೀ, ಎ.ಕೆ. ಶ್ರೀನಿವಾಸನ್, ಕೃಷ್ಣಮೂರ್ತಿ

ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭]   ಸೋಮವಾರ ೧೩-೬-೧೯೪೯   [ಸಂಚಿಕೆ ೧೩೮

ಭಾರತ ಸೈನ್ಯವು ಭೂಪಾಲಿಗೆ ನುಗ್ಗಿತು

ಪ್ರಾರಂಭೋತ್ಸವ

ಮೈಸೂರು ೧೬

ಮೈಸೂರು ಜಿಲ್ಲೆಯವಲ್ಲಾ ತಾಲ್ಲೂಕು ಗಳಲ್ಲೂ ತಾಲ್ಲೂಕು ಗ್ರಾಮಾಭಿವೃದ್ಧಿ ಸ ಮಿತಿಗಳ ಆರಂಭೋತ್ಸವವು ಮೊನ್ನೆ ವಿ ಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಶ್ರೀ ಚನ್ನಪ್ಪನವರು ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿದರು ಸಬ್ ಡಿವಿಷನ್ ಆಫೀಸರ್‌ರವರೂ ಸಹ ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳಿಗೆ ಹೋಗಿದ್ದರು ಎಲ್ಲಾ ಕಡೆಗಳಲ್ಲೂ ಗ್ರಾಮಾಭಿವೃದ್ಧಿ ಯೋಜನೆಯನ್ನು ಸವಿಸ್ತಾರವಾಗಿ ಸದಸ್ಯರಿಗೆ ವಿವರಿಸಿ ಅದರ ಸಹಕಾರವನ್ನು ಕೋರಲಾಯಿತು. ಆಹಾರ ಪರಿಸ್ಥಿತಿಯನ್ನು ವಿವರಿಸಿ ಪ್ರಜೆಗಳ ಜವಾಬ್ದಾರಿ ಬಹಳ ಗುರುತರವಾದುದೆಂದೂ ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಉದಾರತೆಯಿಂದ ಸರ್ಕಾರಕ್ಕೆ ಧಾನ್ಯವನ್ನು ಕೊಡಬೇಕೆಂದೂ ಪ್ರಾರ್ಥಿಸಲಾಯಿತು

ಸಿನಿಮಾ ಕಛೇರಿಯ ಪ್ರಾರಂಭೋತ್ಸವ

ರಾಜಧಾನಿಯ ಶ್ರೀ ಹರಿ ಪಿಕ್ಚರ್ಸ್ ಮಾಲೀಕರಾದ ಶ್ರೀ ಎ ಕೆ ಮೋಹನ ವೇಲುರವರು ತಮ್ಮ ನೂತನ ಹರಿಶಕ್ತಿ ಎಂಬ ಹೊಸ ಚಿತ್ರದ ತಯಾರಿಕೆಯ ಸಂಬಂಧದಲ್ಲಿ ನೆನ್ನೆ ಸಂಜೆ ಶಿವರಾಂಪೇಟೆಯಲ್ಲಿನ ದೇವನಿಂಗ್ ಬಜಾರಿನ ಕಟ್ಟಡದಲ್ಲಿ ನೂತನ ಕಛೇರಿಯ ಆರಂಭೋತ್ಸವ ಸಮಾರಂಭವನ್ನು ಏರ್ಪಡಿಸಿದ್ದರು ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಗ್ರಾಮಾಭಿವೃದ್ಧಿ ಯೋಜನೆಯ ಪ್ರಚಾರ

ಅಗರ ಮಾಂಬಳ್ಳಿ ೧೪

ನೆನ್ನೆ ಸಾಯಂಕಾಲ ಇಲ್ಲಿ ಬಹಿರಂಗ ಸಭೆಯು ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಆಸ್ಪತ್ರೆ ಆವರಣದಲ್ಲಿ ನಡೆಯಿತು ಸಭೆಯಲ್ಲಿ ಶ್ರೀ ಗಳಾದ ಎಂ ಕೆ ಲೋಯಿಸ್ ಮತ್ತು ಬಿ ನಾರಾಯಣಸ್ವಾಮಿಯವರು ಭಾಷಣಮಾಡಿ ಗ್ರಾಮಾಭಿವೃದ್ಧಿ ಯೋಜನೆಯನ್ನು ವಿವರಿಸಿ. ಆಹಾರ ಪರಿಸ್ಥಿತಿಯನ್ನು ಎಲ್ಲರಿಗೂ ಮನದಟ್ಟಾಗುವಂತೆ ತಿಳಿಸಿ ಎಲ್ಲರೂ ತಮ್ಮ ಕೈಲಾದಷ್ಟು ಧಾನ್ಯವನ್ನು ಕೊಡಬೇಕೆಂದು ಪ್ರಾರ್ಥಿಸಿದರು ಇವರುಗಳ ನಂತರ ಭಾಷಣಮಾಡಿ ಗ್ರಾಮಾಭಿವೃದ್ಧಿಯೋಜನೆಯ ಸ್ವರೂಪವನ್ನು ವಿವರಿಸಿದರು ಪ್ರತಿಯೊಬ್ಬರೂ ಗ್ರಾಮ ಸೇವೆಯ ಕೆಲಸವು ತಮ್ಮದೆಂದು ತಿಳಿದು ತಾಲ್ಲೂಕು ಸಮಿತಿಗಳಿಗೆ ತಮ್ಮ ಪೂರ್ಣ ಸಹಕಾರವನ್ನ ಕೊಟ್ಟು ಗ್ರಾಮ ಸುಖಸಂತೋಷಗಳ ಬೀಡಾಗ ಬೇಕೆಂದು ತಿಳಿಸಿದರು ಈ ಯೋಜನೆ ಗಾಂಧೀಜಿಯವರು ಕನಸು ಕಾಣುತ್ತಿದ್ದ ರಾಮ ಸ್ವರಾಜ್ಯದ ಅಂಕುರಾರ್ಪಣ ವೆಂದು ಹೇಳಿದರು ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಧಾನ್ಯವನ್ನು ಕೊಡಬೇಕೆಂದ, ಪ್ರಾರ್ಥಿಸಿದರು ತಾಲ್ಲೂಕು ಸಮಿತಿಯ ಅಧ್ಯಕ್ಷರಾದ ಶ್ರೀ ರಂಗರಾಮಯ್ಯನವರ ವಂದನಾರ್ಪಣೆ ಯಾಯಿತು

ಹರಿಕಥೆ

ಮೈಸೂರು ೧೪

ಈದಿನ ರಾತ್ರಿ ೯ ಗಂಟೆಮೇಲೆ ಪೂರ್ಣಮೆ ಪ್ರಯುಕ್ತ ಡಿ ಸುಬ್ಬಯ್ಯನವರ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿಯ ಮಹಡಿಯಮೇಲೆ ಪಂಢರೀಪುರದ ಬಳಿ ಗಾಣಗಾಪುರದಿಂದ ಬಂದಿರುವ ಬ್ರಂ|| ಶ್ರೀ ವಿಷ್ಣು ದಿಗಂಬರ ದತ್ತಾತ್ರೇಯ ಮಹಾರಾಜರವರು "ಉಷಾ ಪರಿಣಯ" ಎಂಬ ಹರಿಕಥೆಯನ್ನು ನಡೆಸುವರು ಸರ್ವರಿಗೂ ಸ್ವಾಗತವಿದೆ

ಎಂ. ವಿ. ವೆಂಕಟರಾಯರ ನಿಧನ

ಮೈಸೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಎಂ ವಿ ವೆಂಕಟರಾಯರು ಈ ದಿನ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ನಿಧನ

ನಿವೃತ್ತ ಅಮಲ್ದಾರ್ ಶ್ರೀ ಎಂ ಎಸ್ ರಾಮರಾಜಪ್ಪನವರ ಪತ್ನಿ ಶ್ರೀಮತಿ ಪುಟ್ಟಮ್ಮನವರು ಮೊನ್ನೆ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಲಯಾಕ್‌ಅಲಿ ಮಂತ್ರಿ ಮಂಡಲದ ಮೇಲೆ ಮೊಕದ್ದಮೆ

ಹೈದರಾಬಾದಿನ ಲಯಾಕ್‌ಅಲಿಯ ಮಂತ್ರಿಮಂಡಲ ಮತ್ತು ಖಾಸಿಂ ರಜ್ವಿರವರುಗಳಮೇಲಿನ ಮೊಕದ್ದಮೆಯು ಇದೇ ೧೭ನೇ ತಾ|| ಸಿಕಂದರಾಬಾದಿನ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ ಪ್ರಾರಂಭವಾಗುವುದು ಇತ್ತೆಹಾದ್ ಮುಸ್ಲಿಮೀನ್ ಸಂಸ್ಥೆ ನಾಯಕರು ಮತ್ತು ಅದರ ಇತರ ೫೦ ಮಂದಿ ಮೇಲಿನ ಮೊಕದ್ದಮೆಯು ಗುಲ್ಬರ್ಗಾ ಕೋರ್ಟಿನಲ್ಲಿ ನಡಯುವುದು

ಮಂತ್ರಿಗಳಿಗೂ ಬ್ಲಾಕ್ ಮಾರ್ಕೆಟ್ಟೇ?

ಈಗ ಕೊಡುತ್ತಿರುವ ಪಡಿತರವು ಸ್ವಲ್ಪವೂ ಸಾಲದೆಂದೂ, ಹೊಟ್ಟೆ ತುಂಬ ಅನ್ನವನ್ನು ತಿನ್ನಲು ತಾವೂ ಮತ್ತು ಮಂತ್ರಿಗಳೂ ಕಾಳಸಂತೆಯಲ್ಲಿ ಧಾನ್ಯವನ್ನು ಕೊಂಡೇ ತೀರಬೇಕೆಂದೂ ಮೊನ್ನೆ ಮದರಾಸ್ ಶಾಸನ ಸಭೆಯಲ್ಲಿನೆಲ್ಲೂರಿನ ಸದಸ್ಯರೊಬ್ಬರು ಹೇಳಿದರು ಮಂತ್ರಿಗಳು ಕಾಳಸಂತೆಯಲ್ಲಿ ಕೊಂಡುಕೊಳ್ಳುತ್ತಿಲ್ಲ ವೆಂದು, ಸರ್ಕಾರದವರ ... ವರು

ವಿದ್ಯುಚ್ಛಕ್ತಿಯ ಮೂಲಕ ೬೦ ಜನ ವಿದ್ಯಾರ್ಥಿಗಳ ಕೊಲೆ

ಗೋರಿಲ್ಲಾ ಯುದ್ಧಕ್ಕೆ ಡಚ್ಚರ ಪ್ರತೀಕಾರ

ಇಂಡೋನೇಷ್ಯದ ಪ್ರಜೆಗಳು ಡಚ್ಚರ ಮೇಲೆ ಈಗ ಆರಂಭಿಸಿರುವ ಗೊರಿಲ್ಲಾ ಯುದ್ಧ ಕಾರ್ಯಾಚರಣೆಗೆ ಪ್ರತೀಕಾರವಾಗಿ ಡಚ್ಚರು ಅತ್ಯಂತ ಹೇಯವಾದ ಕೃತ್ಯಗಳಲ್ಲಿ ತೊಡಗಿರುವರೆಂದು ವರದಿಯಾಗಿದೆ ರಿಪಬ್ಲಿಕ್ಕಿನ ನಾಯಕರುಗಳಿಗೆ ಅತ್ಯಂತ ಅಗೌರವವಾದ ವರ್ತನೆಯನ್ನು ತೋರಲಾಗುತ್ತಿದೆ ಡಚ್ಚರ ಸೈನಿಕರು ರಾಜಧಾನಿಯಾದ ಜೋಗ್‌ಕಾರ್ತಾ ನಗರವನ್ನು ಲೂಟಿ ಮಾಡಿರುವರು ಎಲ್ಲಕ್ಕಿಂತಲೂ ಹೇಯವಾದ ಕೃತ್ಯವೇನೆಂದರೆ ೬೦ ಜನ ವಿದ್ಯಾರ್ಥಿಗಳನ್ನು ವಿದ್ಯುಚ್ಛಕ್ತಿಯ ಕೇಂದ್ರದಲ್ಲಿ ವಿದ್ಯುತ್ತಿನ ಮೂಲಕ ಕೊಂದು ಹಾಕಿರುವುದು. ಈ ಅಂಶವನ್ನು ವಿಶ್ವಸಂಸ್ಥೆಯ ಗಮನಕ್ಕೆ ತರಲು ಪ್ರಯತ್ನಗಳು ನಡೆಯುತ್ತಿವೆ

ಮಾಂಡಲೆಗೆ ಧಾಳಿಕಾರರ ಪ್ರವೇಶ

ರಂಗೂನಿಗೆ ೫೦ ಮೈಲಿ ದೂರದಲ್ಲಿರುವ ಬರ್ಮಾ ರಾಜರುಗಳ ಪುರಾತನ ರಾಜಧಾನಿಯಾದ ಮಾಂಡಲೆ ನಗರದ ಕೆಲವು ಭಾಗಗಳನ್ನು ದಂಗೆಕೋರರಾದ ಕರೆನ್ನರು ಆಕ್ರಮಿಸಿರುವರೆಂದು ತಿಳಿದುಬಂದಿದೆ ಬರ್ಮಾ ಸರ್ಕಾರದ ಸೈನಿಕರಿಗೂ ಅವರಿಗೂ ನಗರದ ಹೊರಭಾಗದಲ್ಲಿ ಬಾರಿ ಕದನವಾಗುತ್ತಿದೆಯೆಂದು ವರದಿಯಾಗಿದೆ

ಲಯಾಕ್‌ಅಲಿ ಮಂತ್ರಿ ಮಂಡಲದ ದುಂದು ವೆಚ್ಚ

೧೩|| ಕೋಟಿ ರೂ.

ಭಾರತದ ಮೇಲೆ ಕದನ ನಡೆಸಲು ಹೈದರಾಬಾದಿನ ಲಿಯಾಕ್‌ಅಲಿ ಮಂತ್ರಿಮಂಡಲದವರು ೧೩|| ಕೋಟಿ ರೂ ಅನ್ನು ಮಿಲಿಟರಿ ಸಿದ್ಧತೆಗಾಗಿ ವೆಚ್ಚ ಮಾಡಿದ್ದರೆಂದು ಹೇಳಲಾಗಿದೆ

ಹೈದ್ರಾಬಾದ್ ನಾಣ್ಯ ಚಲಾವಣೆಯ ರದ್ದು

ಹೈದ್ರಾಬಾದ್ ಸಂಸ್ಥಾನದ ನಾಣ್ಯದ ಚಲಾವಣೆಯನ್ನು ರದ್ದುಮಾಡುವ ವಿಚಾರವನ್ನು ಭಾರತ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಹೇಳಲಾಗಿದೆ

ಭೂಪಾಲ್ ಸಂಸ್ಥಾನಕ್ಕೆ ಭಾರತದ ಸೈನ್ಯ ನುಗ್ಗಿತು

ಭಾರತದ ಮಿಲಿಟರಿ ಮತ್ತು ಪೋಲೀಸ್ ದಳಗಳು ಹೆಚ್ಚಿನ ಸಂಖ್ಯೆಯಲ್ಲಿ ಭೂಪಾಲಿಗೆ ನುಗ್ಗಿವೆಯೆಂದೂ, ಸಧ್ಯದಲ್ಲಿಯೇ ಸಂಸ್ಥಾನವನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಲಾಗುವುದೆಂದೂ ಹೇಳಲಾಗಿದೆ

ಏಳು ಅಂಗುಲದ ಮಗು

ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗ್ ಎಂಬಲ್ಲಿನ ಒಬ್ಬಾಕೆಯು ಕೇವಲ ಏಳು ಅಂಗುಲ ಉದ್ದವಿರುವ ಮಗುವನ್ನು ಹೆತ್ತಿರುವಳು ಮಗುವಿನ ಅವಯವಗಳೆಲ್ಲವೂ ಸರಿಯಾಗಿವೆ ಹುಟ್ಟಿದಾಗ ಅದರ ತೂಕ ಒಂದುಪೌಂಡು ನಾಲ್ಕು ಔನ್ಸು ಅದು ಸಂಪೂರ್ಣ ಆರೋಗ್ಯದಿಂದಿದೆ

ಗೊರಕೆ ತಪ್ಪಿಸಲು ಸಾಧನ

ನ್ಯೂಯಾರ್ಕ್ ನಗರದಲ್ಲಿ ೬೦ ಸಾವಿರ ಜನ ಗೊರಕೆ ಹೊಡೆಯುವವರಿದ್ದಾರೆ ಅವರು ಸುಖವಾಗಿ ನಿದ್ದೆ ಮಾಡಲು ಒಂದು ಸಾಧನವನ್ನು ಈಗ ಕಂಡುಹಿಡಿಯಲಾಗಿದೆ. ಅದನ್ನು ಬಾಯಿಯಲ್ಲಿ ಇಟ್ಟುಕೊಳ್ಳುವುದರಿಂದ ಮೂಗಿನ ಮೂಲಕ ಉಸಿರಾಡುವಂತಾಗಿ ಗೊರಕೆಯು ನಿಲ್ಲುವುದು

ತುಳಸಿಯಿಂದ ಕರ್ಪೂರ

ತುಳಸಿಯಿಂದ ಕರ್ಪೂರವನ್ನು ತಯಾರಿಸಲು ಅಂಬಾಲದಲ್ಲಿರುವ ಕೈಗಾರಿಕಾ ಪರಿಶೋಧನಾಲಯದಲ್ಲಿ ಸಂಶೋಧನೆ ನಡೆಸಲಾಗುತ್ತಿದಯೆಂದು ಹೇಳಲಾಗಿದೆ

ಹೈದರಾಬಾದಿನ ೧೫ ಲಕ್ಷ ಪೌಂಡು ಸ್ಟರ್ಲಿಂಗ್ ಬ್ಯಾಲೆನ್ಸ್!

ಹೈದರಾಬಾದಿನ ಮಾಜಿ ಹಣಕಾಸಿನ ಸಚಿವರಾಗಿದ್ದ ನವಾಬ್ ಮೋಯಿನವಾಜ್ ಜಂಗ್‌ರವರಲ್ಲಿ ೧೫ ಲಕ್ಷ ಪೌಂಡುಗಳ ಸ್ಟರ್ಲಿಂಗ್ ಬ್ಯಾಲೆನ್ಸ್ ಹಣವು ಸಿಕ್ಕಿಬಿದ್ದಿರುವುದಾಗಿಯೂ, ಅದನ್ನು ವಾಪಸ್ಸು ಪಡೆಯಲು ಭಾರತ ಸರ್ಕಾರದವರು ಪ್ರಯತ್ನಿಸುತ್ತಿರುವರೆಂದೂ ಹೇಳಲಾಗಿದೆ

ಎಸ್. ಐ. ಆರ್. ರೈಲ್ವೆ ಮುಷ್ಕರ ರದ್ದು

ಈ ರಾತ್ರಿ ೧೨ ಗಂಟೆಯಿಂದ ಮುಷ್ಕರ ಹೂಡುವುದಾಗಿ ಕೊಟ್ಟ ನೋಟೀಸನ್ನು ಎಸ್ ಐ ಆರ್ ರೈಲ್ವೆ ಕಾರ್ಮಿಕ ಸಂಘದವರು ವಾಪಸು ತೆಗೆದುಕೊಂಡಿರುತ್ತಾರೆ

ದಾದಿಗಳ ಶಿಕ್ಷಣ ಕಾಲೇಜು

ಸಂಸ್ಥಾನದಲ್ಲಿ ದಾದಿಯರನ್ನು ತರಬೇತು ಮಾಡಲು ಒಂದು ಶಿಕ್ಷಣ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಒಂದು ಯೋಜನೆಯನ್ನು ತಾವು ಸರ್ಕಾರಕ್ಕೆ ಒಪ್ಪಿಸಿರುವುದಾಗಿ ಸೀನಿಯರ್ ಸರ್ಜನರಾದ ಡಾ|| ... ಯರಾಂರವರವರು ತಿಳಿಸುತ್ತಾರೆ ಈ ಕಾಲೇಜು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿರುವುದು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಇದಕ್ಕೆ ಸೇರಲು ಅರ್ಹರೆಂದೂ, ನಾಲ್ಕು ವರ್ಷಗಳ ಶಿಕ್ಷಣ ಕೊಡಲಾಗುವುದೆಂದು ಅವರು ಹೇಳಿರುತ್ತಾರೆ

ಅಂಡಮಾನಿಗೆ ಸುಭಾಷರ ಹೆಸರು

ಅಂಡಮಾನ್ ದ್ವೀಪಕ್ಕೆ ಇನ್ನು ಮುಂದೆ ಸುಭಾಷ್ ಬೋಸ್ ದ್ವೀಪವೆಂದು ಕರೆಯಬೇಕಾಗಿ ಪುಣೆಯ ಪತ್ರಿಕೆ ... ಮಾಡಿರುವರು ...

ಪಡಿತರವನ್ನು ೧೭ ಔನ್ಸಿಗೆ ಹೆಚ್ಚಿಸಬೇಕು

ರೇಷನ್‌ಕಾರ್ಡು ಹೋಲ್ಡರುಗಳ ಸಮಿತಿಯ ನಿರ್ಣಯ

ಮೈಸೂರು ೧೪

ನಗರದ ರೇಷನ್ ಕಾರ್ಡು ಹೋಲ್ಡರುಗಳ ಸಂಘದ ಕಾರ್ಯಕಾರೀ ಮಂಡಲಿಯ ಸಭೆಯು ನಿನ್ನೆ ಕುಂಚಿಟಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿ ಶ್ರೀ ತಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮದರಾಸಿನಲ್ಲಿ ಈಚೆಗೆ ಪಡಿತರದ ಪ್ರಮಾಣವನ್ನು ಹೆಚ್ಚಿಸಿರುವುದರಿಂದಲೂ ಮತ್ತು ಧಾನ್ಯ ಸಂಗ್ರಹದ ಕಾರ್ಯಕ್ರಮದ ಪ್ರಕಾರ ಜಾಹಗೀ ಮತ್ತು ಅಧಿಕಾರೀ ಮಹನೀಯರುಗಳ ಪ್ರಯತ್ನದಿಂದ ವಿಶೇಷವಾಗಿ ಕೈವಶವಾದ ಧಾನ್ಯವನ್ನು ವಸೂಲುಮಾಡಿರುವುದರಿಂದಲೂ ಸರ್ಕಾರದವರ ಇನ್ನು ಮುಂದೆ ಪಡಿತರವನ್ನು ೧೭ ಔನ್ಸಿಗೆ ಹೆಚ್ಚಿಸಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಮಾಡಲಾಯಿತು.

ಹಿಂದೆ ಬಹಿರಂಗ ಸಭೆಯಲ್ಲಿ ನಿರ್ಣಯ ಮಾಡಿದ್ದಂತೆ ಅಕ್ಕಿಯನ್ನು ರೂ ಗೆ ೪ ಸೇರಿನ ಬೆಲೆಗಾಗಿ ಮತ್ತು ಜೋಳವನ್ನು ... ಸೇರಿನ ಬೆಲೆಯೂ ಮಾರಿಸಲು ಸರ್ಕಾರದವರ ... ಮಾಡಬೇಕೆಂದು ... ನಿರ್ಣಯವೂ ಅಂಗೀಕಾರವಾಯಿತು.

ನಗರದ ಆಹಾರ ಸಮಿತಿಯಲ್ಲಿ ರೇಷನ್ ಕಾರ್ಡುಹೋಲ್ಡರುಗಳ ಸಂಘದಿಂದ ಕಡೇ ಪಕ್ಷ ೧೦ ಜನ ಪ್ರತಿನಿಧಿಗಳನ್ನಾದರೂ ಆರಿಸಿ ಕಳುಹಿಸಿ, ಅದನ್ನು ಸುಪ್ರಾತಿನಿಧ್ಯವುಳ್ಳದ್ದನ್ನಾಗಿ ಮಾಡಲು ಸರ್ಕಾರದವರು ಅವಕಾಶ ಕಲ್ಪಿಸಬೇಕೆಂದೂ ಪ್ರಾರ್ಥಿಸಲಾಯಿತು. ಶ್ರೀಮತಿ ಸರೋಜಿನಿದೇವಿಯವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸುವ ನಿರ್ಣಯವೂ ಅಂಗೀಕರಿಸಲ್ಪಟ್ಟಿತು.

ಡೈರೆಕ್ಟರುಗಳ ಚುನಾವಣೆ

ನಿನ್ನೆ ನಡೆದ ಮೈಸೂರು ಕೋ-ಆಪರೇಟಿವ್ ಸೊಸೈಟಿ ಡೈರೆಕ್ಟರುಗಳ ಚುನಾವಣೆಯಲ್ಲಿ ಕೆಳಗೆ ಕಂಡವರು ಜಯಶೀಲರಾಗಿದ್ದಾರೆ —

ಶ್ರೀಗಳಾದ ಎ ಕೃಷ್ಣಮೂರ್ತಿರಾವ್, ಟಿ ಎಸ್ ರಾಜಗೋಪಾಲಯ್ಯಂಗಾರ್, ಎಸ್ ಚಿನ್ನಸ್ವಾಮಿಶೆಟ್ಟಿ, ಜಿ ವಿ ದೇಶಿಕಾಚಾರ್, ಪಿ ಆರ್ ಜೋಯ್ಸರ್, ಎಂ ಆರ್ ಸಿ ಬಸಪ್ಪ, ಬಿ ಎಸ್ ರುದ್ರಪ್ಪ, ಬಿ ಆರ್ ಲಕ್ಷ್ಮಣಶೆಟ್ಟಿ, ಎಗ್ ಶ್ರೀನಿವಾಸಮೂರ್ತಿ, ಜಿ ವಿ ಸೂರ್ಯನಾರಾಯಣಶೆಟ್ಟಿ, ಶ್ರೀಮತಿ ಪ್ರಮೀಲಮ್ಮ, ಟಿ ಕೃಷ್ಣರಾವ್, ಕೆ ರಾಮಸ್ವಾಮಿ ಅಯ್ಯಂಗಾರ್, ಎಂ ಎಗ್ ನಾಗಪ್ಪ ಮತ್ತು ಎಸ್ ಚನ್ನಕೇಶವಯ್ಯಂಗಾರ್

ಮೈಸೂರು ಕೋ-ಆಪರೇಟಿವ್ ಸೊಸೈಟಿ ಮೆಂಬರುಗಳಲ್ಲಿ ವಿಜ್ಞಾಪನೆ

... ನಿಮ್ಮನ್ನು ಡೈರೆಕ್ಟರ್ ... ಮಾಡಿದುದಕ್ಕಾಗಿ ... ಮಾಡಿಕೊಳ್ಳುತ್ತೇನೆ ...

ಜಿ ವಿ ಸೂರ್ಯನಾರಾಯಣ ಶೆಟ್ಟಿ ... ಮೈಸೂರು

ಬಿಳಿಯ ಹೆಂಗಸಿನ ವಿವಾಹಕ್ಕೆ ಪ್ರತಿಭಟನೆ

ಆಫ್ರಿಕದ ಗುಡ್ಡಗಾಡಿನ ಜನರು ಬಿಳಿಯ ಹೆಂಗಸರನ್ನು ವಿವಾಹವಾಗುವುದನ್ನು ವಿರೋಧಿಸುತ್ತಿದ್ದಾರೆ. ಅವರ ನಾಯಕರಾದ ಸಿರಿಸ್ಸಾಕಾಮಾರವರು ಲಂಡನ್ನಿನ ಟೈಪಿಸ್ಟ್ ಯುವತಿಯೊಬ್ಬಳನ್ನು ಮದುವೆಯಾಗಿರುವುದನ್ನು ಅಲ್ಲಿನ ಜನಾಂಗದವರು ನಾಲ್ಕು ದಿನ ಸಭೆ ನಡೆಸಿ ಪ್ರತಿಭಟಿಸುತ್ತಾರೆ. ನಾಯಕರು ಬಿಳಿಯ ಹುಡುಗಿ ಅಥವ ರಾಜ್ಯದ ಪೈಕಿ ಎರಡರಲ್ಲೊಂದನ್ನು ಚುನಾಯಿಸಿಕೊಳ್ಳಬೇಕೆಂದು ನಿರ್ಣಯ ಮಾಡಿದ್ದಾರೆ. ಬ್ರಿಟಿಷ್ ಸರ್ಕಾರಕ್ಕೂ ಈ ಒಪ್ಪಿಗೆ ಮನವಿಯನ್ನು ಕಳುಹಿಸಲಾಗಿದೆ.

ಅಣು ಭೇದನ ಪ್ರಯೋಗ

ಅಣುಗಳನ್ನು ಭೇದಿಸುವ ೧ ಸಾವಿರ ಟನ್ ಭಾರವುಳ್ಳ ನೂತನ ಯಂತ್ರವನ್ನು ತಯಾರುಮಾಡಲಾಗಿದೆಯೆಂದೂ, ಅದನ್ನು ಬ್ರಿಟನ್ನಿನ ಬರ್ಮಿಂಗ್ಯಾಮ್ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಹೊಸ ಕಟ್ಟಡ ತಯಾರಾಗುತ್ತಿದೆಯೆಂದೂ ಹೇಳಲಾಗಿದೆ.

ಪಾಕೀಸ್ಥಾನದಲ್ಲಿ ಹೊಟ್ಟೆಗಿಲ್ಲದ ಯುವಕ

ಪಾಕೀಸ್ಥಾನದಲ್ಲಿ ತಾನು ಹೊಟ್ಟೆಗಿಲ್ಲದೆ ಸಾಯಬೇಕಾಗಿ ಬಂದುದರಿಂದ ಭಾರತಕ್ಕೆ ಹಿಂದಿರುಗಿದುದಾಗಿ ಫರೀದಾಪುರದಲ್ಲಿ ದಸ್ತಗಿರಿಯಾಗಿರುವ ಮುಸ್ಲಿಂ ಯುವಕನೊಬ್ಬನು ಪೋಲೀಸರಿಗೆ ತಿಳಿಸಿರುತ್ತಾನೆ. ಭಾರತದಲ್ಲಿ ತಾನು ಗುಂಡಿನಿಂದ ಹೊಡೆದುಕೊಂಡು ಸಾಯುವುದಾದರೂ ಪಾಕೀಸ್ತಾನಕ್ಕೆ ವಾಪಸು ಹೋಗುವುದಿಲ್ಲವೆಂದು ಆತನು ತಿಳಿಸಿರುತ್ತಾನೆ.

ಆರ್.ಎಸ್.ಎಸ್.ಗೆ ಕೇವಲ ಸಾಮಾಜಿಕ ಕಾರ್ಯ

ಇನ್ನು ಮುಂದೆ ಆರ್. ಎಸ್. ಎಸ್. ಸಂಸ್ಥೆಯು ರಾಜಕೀಯವನ್ನು ತೊರೆದು, ಕೇವಲ ಸಂಸ್ಕೃತಿ ಮತ್ತು ಸಾಮಾಜಿಕಾಭಿವೃದ್ಧಿ ಕಾರ್ಯದಲ್ಲಿ ಮಾತ್ರ ತೊಡಗುವಂತೆ ಅದರ ಸ್ಥಾಪಕರಾದ ಗೋಲ್ವಾಲ್ಕರರು ಅದರ ಅಂಗರಚನೆಯನ್ನು ಬದಲಾಯಿಸಲು ಒಪ್ಪಿರುವರೆಂದು ತಿಳಿದುಬಂದಿದೆ.

If you need the services of an expert Kindergartener and Child Educationist for your children at home, please write to:-

The Director,
Sri Jagadamba Sishuvihar,
Dewan's Road, Mysore

ರಜತ ಮಹೋತ್ಸವ

ಮೈಸೂರು ೧೪

ರಾಜಧಾನಿಯ ಧವನ್ ರಸ್ತೆಯಲ್ಲಿರುವ ಜವಳಿ ವರ್ತಕರಾದ ಶ್ರೀ ಎಸ್. ರಂಗಯ್ಯಶೆಟ್ಟಿಯವರು ತಮ್ಮ ಅಂಗಡಿಯ ರಜತ ಮಹೋತ್ಸವವನ್ನು ಪುರಸಭಾ ಸದಸ್ಯರಾದ ಶ್ರೀ ಇ ಪಿ. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಪ್ರಾರ್ಥನೆ ಮತ್ತು ಸಂಗೀತಗಳಾದನಂತರ ಶ್ರೀ ಶೆಟ್ಟರು ಮಹಾತ್ಮರ ಸ್ಮಾರಕನಿಧಿಗೆ ೧೧೧ ರೂ, ನರಸಿಂಹರಾಜಪುರದಲ್ಲಿರುವ ಜೈನ ಮಠಕ್ಕೆ ೧೧೧ ರೂ, ಅಶೋಕಾ ರಸ್ತೆ ಮತ್ತು ಶಿವರಾಂಪೇಟೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನಗಳಿಗೆ ತಲಾ ೫೧ ಮತ್ತು ಜವಳಿ ವರ್ತಕರ ಸಂಘದ ಕಟ್ಟಡದ ನಿಧಿಗೆ ೧೦೧ರೂ ಅನ್ನು ಉದಾರವಾಗಿ ದಾನಮಾಡಿದರು. ಅಧ್ಯಕ್ಷರು ಭಾಷಣಮಾಡಿ ಶ್ರೀಯುತರ ಧರ್ಮ ಬುದ್ಧಿಗಾಗಿ ಅಭಿನಂದಿಸಿ, ಶ್ರೀ ಶೆಟ್ಟಿಯವರ ಉದ್ಯಮ ಯಶಸ್ವಿಯಾಗಿ ಬೆಳೆಯಲೆಂದು ಹಾರೈಸಿದರು.

ನಿಧನ

ಸ್ವಂ ಸು] ಶ್ರೀರಂಗಪಟ್ಟಣ ೧೩

ಇಲ್ಲಿನ ಸಬ್ ರಿಜಿಸ್ಟ್ರಾರರಾಗಿದ್ದ ಶ್ರೀ ಲಕ್ಷ್ಮೀನರಸಿಂಹ ಶೆಟ್ಟರು ಕಳೆದ ಗುರುವಾರ ನಿಧನರಾದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ.

ವಾರ್ಷಿಕೋತ್ಸವ

ಇಲ್ಲಿನ ಸರ್ಕಾರಿ ಮಾಧ್ಯಮಿಕ ಶಾಲಾ ವಾರ್ಷಿಕೋತ್ಸವವು ಡಾ|| ಸಿ ಬಂದೀಗೌಡರ ಅಧ್ಯಕ್ಷತೆಯಲ್ಲಿ ನಿನ್ನೆ ನೆರವೇರಿತು. ಸ್ವಾಗತ ಭಾಷಣ, ಶಾಲಾ ವರದಿ, ವಿವಿಧ ವಿನೋದಾವಳಿಗಳಾದನಂತರ, ಅಧ್ಯಕ್ಷರು ಮಹಾತ್ಮರ ಮತ್ತು ಶ್ರೀ ಎಗ್ ಎಸ್. ಸುಬ್ಬರಾಯರ ಭಾವಚಿತ್ರವನ್ನು ಅನಾವರಣಮಾಡಿದರು. ಬಹುಮಾನ ವಿನಿಯೋಗ ಮತ್ತು ನಾಟಕಪ್ರದರ್ಶನದನಂತರ ಸಮಾರಂಭವು ಮುಕ್ತಾಯವಾಯಿತು.

ಪ್ರೌಢಶಾಲೆಯ ಮೂರನೇ ತರಗತಿಯ ವಾರ್ಷಿಕೋತ್ಸವವು ಶ್ರೀ ಬಿ ವಿ. ಸುಬ್ಬರಾಮಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ಜರುಗಿತು.

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿಗೆ
ಇಂದೇ ಭೇಟಿ ಕೊಡಿ
ಶಿವರಾಂಪೇಟೆ : ಮೈಸೂರು

Edited, printed and published by A.R. Nagarajan at the Sadhvi Press, D. Subbiah Road, Mysore.

ಸರೋಜಿನಿಯವರ ಸ್ಥಾನದಲ್ಲಿ ವಿ. ವಿ. ಗಿರಿ

ಸಿಂಹಳ ದ್ವೀಪದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ವಿ. ವಿ. ಗಿರಿಯವರು ಶ್ರೀಮತಿ ಸರೋಜಿನಿ ದೇವಿಯವರ ಸ್ಥಾನದಲ್ಲಿ ಸಂಯುಕ್ತ ಪ್ರಾಂತ್ಯದ ಗವರ್ನರಾಗಿ ನೇಮಿಸಲ್ಪಡುವರೆಂದು ತಿಳಿದುಬಂದಿದೆ. ಮತ್ತು ಆರ್ಕೋಟ್ ... ರಾಯಭಾರಿಯಾಗಿರುವ ಶ್ರೀ ... ಯವರನ್ನು ಭಾರತ ಸರ್ಕಾರದ ... ಮಂತ್ರಿಯಾಗಿ ಸಹ ನೇಮಿಸಲಾಗುವುದೆಂದು ಹೇಳಲಾಗಿದೆ.

೧೯೫೦ಕ್ಕೆ ಬೊಂಬಾಯಿಯಲ್ಲಿ ಕುದುರೆ ಜೂಜು ರದ್ದು

ಬೊಂಬಾಯಿ ಸರ್ಕಾರದವರು ೧೯೫೦ರ ... ಇಸವಿಯ ಹೊತ್ತಿಗೆ ಕುದುರೆ ಜೂಜನ್ನು ಸಂಪೂರ್ಣವಾಗಿ ರದ್ದುಮಾಡಲು ನಿರ್ಧರಿಸಿದ್ದಾರೆಂದು ತಿಳಿದು ಬಂದಿದೆ. ಈ ಜೂಜನ್ನು ಪೂರ್ಣವಾಗಿ ನಿಲ್ಲಿಸಿದಲ್ಲದೆ ಒಳ್ಳೆ ಹಾವುಗಳನ್ನು ತಡೆಗಟ್ಟಲು ಸಾಧ್ಯವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಗಾಯತ್ರೀ ಟಾಕೀಸ್

11-3-49ರಿಂದ 5 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
Sail Ho?
The Cry that loosed the fury of the Robin Hood of the Sea
Warner's
THE SEA HAWK
ದಿ ಸೀ ಹಾಕ್
ಪಾತ್ರ:- ಎರಾಲ್ ಫ್ಲೈನ್

ಎಸ್.ಎಗ್.ಪಂಡಿತ್ ಅಂಡ್ ಸನ್ಸ್‌ರವರ
ಯೂನಿವರ್ಸಲ್ ಹೆರ್ಬು ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ 0 12
ಮಹಾ ಸುಗಂಧರಾಜ ತೈಲ
,, ಚಂದನಾದಿ ತೈಲ
,, ಭೃಂಗಾ ಮಲಕ ತೈಲ
— ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಜನ ತೈಲಗಳು
ಮಹಾಶೀತಲ ತೈಲ — ತಲೆಗೆ ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಯೋಗಿಸಲಾಗುವ ಉತ್ತಮ
ಬ್ರೇನ್ ಟಾನಿಕ್ ಸೀಸೆ 2-0
ಪಂಚಾಮೃತ — ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವನ.
ಮೈಸೂರು ಆಯುರ್ವೇದಿಕ್ ಫಾರ್ಮೆಸಿ.
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು



ಪ್ರಭಾ → 16-3-49
ನೇ ಬುಧವಾರದಿಂದ
ದಿನವಹಿ ೩ ಆಟಗಳು
ಪ್ರಭಾತ್‌ರವರ
ಸೀಧಾ ರಾಸ್ತಾ
(ಹಿಂದಿ)
(ಸುಗಮ ಮಾರ್ಗ)
ಪಾತ್ರ - ಕಮಲಾಕೊಟ್ನಿಸ್, ಸಾಹು ಮೋದಕ್ ಮತ್ತು ಚಂದ್ರಕಾಂತ್

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೫-೬-೧೯೪೮ [ಸಂಚಿಕೆ ೧೫೯

ಹೈದರಾಬಾದ್ ನೈಜಾಮರು ಇಂಗ್ಲೆಂಡಿನಲ್ಲಿ ನೆಲೆಸುವರೇ?

ಕಮ್ಮಿ ಅಳತೆ ಸೇರಿನ ಪತ್ತೆ

ಮೈಸೂರು ೧೫

ಕೃಷ್ಣರಾಜ ಮೊಹಲ್ಲಾ, ರಂಗಣ್ಣನವರ ಡಿಪೋವಿನಲ್ಲಿ ನಿನ್ನೆ ದಿನ ಚಿಕ್ಕಯ್ಯ ಎಂಬವರಿಗೆ ಅಳೆದು ಕೊಟ್ಟಿದ್ದ ೧೨ ಸೇರು ಅಕ್ಕಿಯನ್ನು ಅಳತೆ ಮತ್ತು ತೂಕದ ಇನ್ಸ್‌ಪೆಕ್ಟರಾದ ಶ್ರೀ ಸಹಾರಾಮರಾಯರು ಪರೀಕ್ಷಿಸಿ ಪುನಃ ಅಳತೆ ಮಾಡಿಸಲು ೧೧½ ಸೇರ ಮಾತ್ರ ಇದ್ದಿತೆಂದೂ, ಸರ್ಕಾರಿ ಮುದ್ರೆ ಇಲ್ಲದ ೪೫ ನೇ ಇಸವಿಯ ಸೇರನ್ನು ಉಪಯೋಗಿಸಲಾಗಿತ್ತೆಂದೂ ತಿಳಿದು ಬಂದಿದೆ. ಮಹಜರ್ ಕ್ರಮ ನಡೆಸಿ ಅಕ್ಕಿಯನ್ನು, ಸೇರನ್ನೂ ವಶಪಡಿಸಿಕೊಳ್ಳಲಾಗಿದೆ

ಉದಾರ ದಾನ

ಚಾಮುಂಡೇಶ್ವರಿ ಮತ್ತು ಗಣೇಶಾ ಮಿಲ್ಸುಗಳ ಮಾಲೀಕರಾದ ಶ್ರೀ ಟಿ. ವರದಾಚಾರ್ಯರು ತಮ್ಮ ಕಿರಿಯ ಪುತ್ರರಾದ ಶ್ರೀ ವೈ. ಚಲುವಾಚಾರ್ಯರ ಷಷ್ಟ್ಯಬ್ದದ ಅರತಕ್ಷತೆ ಮಹೋತ್ಸವದ ಸಂದರ್ಭದಲ್ಲಿ ಶ್ರೀ ಕಾಳಮ್ಮನ ದೇವಸ್ಥಾನಕ್ಕೆ ೧೧ ರೂ ಪೂಜ್ಯ ಗಾಂಧೀಜಿ ನಿಧಿಗೆ ೨೫ ರೂ. ಕಾಂಗ್ರೆಸ್ಸಿಗೆ ೨೫ ರೂ ಮತ್ತು ವಿಶ್ವಕರ್ಮ ಸಮಾಜದ ವಿದ್ಯಾರ್ಥಿ ನಿಲಯಕ್ಕೆ ೩೦ ರೂ ಹೀಗೆ ೧೦೦ ರೂಗಳ ಉದಾರ ದಾನವಿತ್ತಿದ್ದಾರೆ

ಶ್ರೀರಂಗಪಟ್ಟಣದ ಪ್ರಾಚೀನ ಚರಿತ್ರೆಯ ಪತ್ತೆ

ಮೈಸೂರು ಸಂಸ್ಥಾನದ ಪ್ರಾಚೀನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಚರಿತ್ರೆಯ ಬಗ್ಗೆ ಮೈಸೂರು ಅರಮನೆ ಇಲಾಖೆಯ ನೌಕರರಾದ ಶ್ರೀ ರಾಮಯ್ಯ ಎಂಬವರು ಕನ್ನಡದಲ್ಲಿ ಬರೆದ ಗ್ರಂಥವೊಂದನ್ನು ಭೂ ಸಂಶೋಧನಾ ಶಾಖೆಯವರು ಪತ್ತೆ ಮಾಡಿರುತ್ತಾರೆ ಅದನ್ನು ಭೂ ಸಂಶೋಧನಾ ಪ್ರದರ್ಶನಾಲಯದಲ್ಲಿ ಇಡಲಾಗಿದೆ

ಪಾಕಿಸ್ತಾನಕ್ಕೆ ಇಸ್ಲಾಂ ತತ್ವದ ರಾಜ್ಯಾಂಗ

ಪಾಕಿಸ್ತಾನದ ರಾಜ್ಯಾಂಗವನ್ನು ಇಸ್ಲಾಂ ತತ್ವಗಳಿಗನುಸಾರವಾಗಿ ರಚಿಸಲಾಗುವುದೆಂದು ಅಲ್ಲಿನ ರಾಜ್ಯಾಂಗ ಸಭೆಯ ನಿರ್ಧರಿಸಲಾಗಿದೆ. ಪ್ರಜಾ ಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ- ಇವುಗಳ ಆಧಾರದ ಮೇಲೆ ರಾಜ್ಯಾಂಗವಿರುವುದೆಂದೂ, ಮುಸಲ್ಮಾನರಲ್ಲದವರಿಗೆ ಅವರ ಸಂಸ್ಕೃತಿ ಮತ್ತು ಧರ್ಮಗಳನ್ನು ರಕ್ಷಿಸಿಕೊಳ್ಳಲು ಎಲ್ಲ ಅವಕಾಶವನ್ನು ಕೊಡಲಾಗುವುದೆಂದೂ ಘೋಷಿಸಲಾಗಿದೆ

ಸ್ವಾವಲಂಬನ ಗೀಗೀ ಪದಗಳು

ಮುಂಬಾಯಿ ಪ್ರಾಂತ್ಯದ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘದವರು ಪ್ರಕಟಿಸಿರುವ ವಸ್ತ್ರ ಸ್ವಾವಲಂಬನ ಗೀಗೀ ಪದಗಳುಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ ಮೂಲವಾದವು ಗೀತಾ ಮೇಳದ ಶ್ರೀ ಬಸಪ್ಪ ಉಕ್ಕಲಿರವರು ಇದನ್ನು ರಚಿಸಿರುತ್ತಾರೆ ವಸ್ತ್ರ ಸ್ವಾವಲಂಬನ ಕಾರ್ಯವು ದೇಶದ ಪ್ರತಿಯೊಂದು ಭಾಗದಲ್ಲೂ ಹರಡಬೇಕೆಂಬ ಕಾರಣಕರ್ತರಾದ ಸರ್ದಾರ್ ಕೆ ಎ ವೆಂಕಟರಾಮಯ್ಯನವರ ಆಶಯ ಈಡೇರಲು ಇದು ಸಹಕಾರಿ ಪುಸ್ತಕ ಬೆಲೆ ೨ ಆಣೆ

ಇಡ್ಲಿ, ದೋಸೆ ತಯಾರಿ ನಿಷೇಧಕ್ಕೆ ಪ್ರತಿಭಟನೆ

ಹೊಟೇಲುಗಳಲ್ಲಿ ಇಡ್ಲಿ ಮತ್ತು ದೋಸೆಗಳನ್ನು ರೇಷನ್ ಅಲ್ಲದ ಪದಾರ್ಥಗಳಿಂದಲೂ ತಯಾರಿಸಕೂಡದೆಂದು ಕೇಂದ್ರ ಆಹಾರ ಸಮಿತಿಯವರು ಮಾಡಿರುವ ನಿರ್ಣಯವನ್ನು ಪ್ರತಿಭಟಿಸಿ, ಅದನ್ನು ಸರ್ಕಾರದವರು ಅಂಗೀಕರಿಸಕೂಡದೆಂದು ಬೆಂಗಳೂರು ನಗರದ ಹಿಂದೂ ಹೋಟೇಲು ಸಂಘದ ಕಾರ್ಯಕಾರೀ ಸಮಿತಿ ಸಭೆಯವರು ನಿರ್ಣಯ ಮಾಡಿರುತ್ತಾರೆ.

೫ ಕೋಟಿ ರೂ. ನ ವಿದ್ಯುಚ್ಛಕ್ತಿ ಕಾರ್ಖಾನೆ

ಭಾರತದಲ್ಲಿ ೫೦ ಕೋಟಿ ರೂ ಖರ್ಚಿನಿಂದ ವಿದ್ಯುಚ್ಛಕ್ತಿ ತಯಾರಿಕಾ ಸಾಧನಗಳ ಕಾರ್ಖಾನೆಯೊಂದನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ನಿರ್ಧರಿಸಿದ್ದಾರೆ ೧೯೫೧ ಕ್ಕೆ ಈ ಕಾರ್ಖಾನೆಯು ಸಿದ್ಧವಾಗುವುದೆಂದೂ, ೩ ಲಕ್ಷ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಇದರಿಂದ ತಯಾರಿಸಲು ಅನುಕೂಲವಾಗುವುದೆಂದೂ ಹೇಳಲಾಗಿದೆ

ಸಿನಿಮಾ ಟಿಕೆಟ್ಟುಗಳ ಮೇಲೆ ಹೆಚ್ಚಿನ ತೆರಿಗೆ

ಸಿನಿಮಾ ಟಿಕೆಟ್ಟುಗಳ ಮೇಲೆ ಹೇರಿದ ತೆರಿಗೆಯನ್ನು ಮನರಂಜನೆಯ ತೆರಿಗೆಯನ್ನು ವಿಧಿಸಲು ಮಧ್ಯಪ್ರಾಂತ್ಯ ಸರ್ಕಾರದವರು ಆಲೋಚಿಸುತ್ತಿರುವರೆಂದೂ, ಇದರಿಂದ ವರ್ಷಕ್ಕೆ ೫ ಲಕ್ಷ ರೂ ಹೆಚ್ಚಿನ ಉತ್ಪತ್ತಿ ಬರುವುದೆಂದೂ ಹೇಳಲಾಗಿದೆ ಆ ಪ್ರಾಂತ್ಯದಲ್ಲಿ ಒಟ್ಟು ೨೪ ಸಿನಿಮಾ ಮಂದಿರಗಳಿವೆ

ಕೊಚ್ಚಿ, ತಿರುವಾಂಕೂರು ಐಕ್ಯವಾಗಲು ಒಪ್ಪಂದ

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಐಕ್ಯವಾಗಲು ಅವುಗಳ ಸರ್ಕಾರದವರು ಒಪ್ಪಿದ್ದಾರೆಂದೂ ಈ ಸಂಬಂಧದಲ್ಲಿ ಎರಡು ಸರ್ಕಾರಗಳ ಪ್ರಧಾನಿಗಳು ದೆಹಲಿಗೆ ಇದೇ ೬೦ ನೇ ತಾ|| ಹೋಗಲಿರುವರೆಂದೂ ಗೊತ್ತಾಗಿದೆ

ಭಾರತಕ್ಕೆ ಆಂಥೊನಿ ಈಡನ್ನರ ಭೇಟಿ

ಬ್ರಿಟನ್ನಿನ ವಿರೋಧ ಪಕ್ಷದ ಉಪ ನಾಯಕರಾದ ಮಿ|| ಆಂಥೊನಿ ಈಡನ್ನರವರು ಇದೇ ೨೦ನೇ ತಾ|| ಭಾರತಕ್ಕೆ ಭೇಟಿ ಕೊಟ್ಟು ೩ ದಿನಗಳು ಪ್ರವಾಸ ಮಾಡುವರೆಂದು ತಿಳಿದುಬಂದಿದೆ

ಬೆಂಗಳೂರು ಹಾಲಿನ ಸಂಶೋಧನಾಲಯಕ್ಕೆ ಬಹುಮಾನ

ದೆಹಲಿಯಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ದನಗಳ ಪ್ರದರ್ಶನದಲ್ಲಿ ಬೆಂಗಳೂರಿನ ಹಾಲಿನ ಸಂಶೋಧನಾಲಯದ ಹೆಚ್ಚು ಹಾಲು ಕೊಡುವ ಸಿಂಧಿ ಹಸುವಿಗೆ ಬಹುಮಾನವು ದೊರೆತಿದೆ

ಎಣ್ಣೆ ಬಾವಿಗಳಲ್ಲಿ ಭಾರಿ ಆಸ್ಫೋಟನ

ನ್ಯೂ ಆರ್ಲಿಯನ್ಸಿನ ಎರಡು ಎಣ್ಣೆ ಬಾವಿಗಳಲ್ಲಿ ಭಾರಿ ಆಸ್ಫೋಟನೆಯಾಗಿ ೧೦ ಲಕ್ಷ ಡಾಲರುಗಳಷ್ಟು ನಷ್ಟ ಸಂಭವಿಸಿರುವುದೆಂದೂ, ೧೨ ಜನ ಕೆಲಸಗಾರರಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ

ನೈಜಾಮರ ಆಸ್ತಿ ಪಾಸ್ತಿಗಳ ಪಟ್ಟಿ ತಯಾರಿ

ನೈಜಾಮರ ಸ್ವಂತ ಆಸ್ತಿ ಪಾಸ್ತಿಗಳ ಪಟ್ಟಿಯನ್ನು ಮಿಲಿಟರಿ ಸರ್ಕಾರದವರು, ಭಾರತದ ಸಂಸ್ಥಾನಾ ಶಾಖೆಯ ಸೂಚನೆ ಮೇರೆ ತಯಾರಿಸುತ್ತಿರುವರೆಂದು ಹೇಳಲಾಗಿದೆ ಆಸ್ತಿಯ ವಿವರಗಳನ್ನು ಕೊಡಬೇಕೆಂದು ನೈಜಾಮರನ್ನು ಕೋರಿದ್ದರೂ ಅದಕ್ಕೆ ಅವರು ಹೆಚ್ಚಿನ ಸಹಕಾರ ನೀಡಲಿಲ್ಲವೆಂದೂ ಹೇಳಲಾಗಿದೆ ಅವರ ಒಟ್ಟು ಆಸ್ತಿ ಪಾಸ್ತಿಗಳು ೧೫೦ ಕೋಟಿ ರೂ ಆಗಬಹುದೆಂದು ಅಂದಾಜಾಗಿದೆ

ಗಡಿನಾಡು ಪ್ರಧಾನಿ ಕೊಲೆಗೆ ಪಿತೂರಿಯೇ?

ಹಜಾರ ಜಿಲ್ಲೆಯ ಪೊಲೀಸು ಸರಿಟೆಂಡೆಂಟರು ಗಡಿನಾಡಿನ ಪ್ರಧಾನಿಯವರನ್ನು ಕೊಲೆ ಮಾಡಿ, ಕಾಶ್ಮೀರದ ಗಡಿ ಪ್ರದೇಶದಲ್ಲಿ ಅಶಾಂತಿ ನೆಲೆಸುವಂತೆ ಮಾಡಲು ಪಿತೂರಿ ನಡೆಸುತ್ತಿದ್ದುದನ್ನು ಪಾಕಿಸ್ತಾನದ ಸರ್ಕಾರದವರು ಪತ್ತೆ ಮಾಡಿ, ಅನೇಕರನ್ನು ದಸ್ತಗಿರಿ ಮಾಡಿರುವರೆಂದು ಅಧಿಕೃತ ಪ್ರಕಟಣೆ ತಿಳಿಸಿರುತ್ತದೆ ಪಾಕಿಸ್ತಾನಕ್ಕೆ ಕಾಶ್ಮೀರವು ಸೇರದಂತೆ ಮಾಡಲು ಪಿತೂರಿಗಾರರು ಭಾರತಕ್ಕೂ ಮತ್ತು ಶೇಕ್ ಅಬ್ದುಲ್ಲರವರಿಗೂ ಗಡಿನಾಡು ಸರ್ಕಾರದ ಸಮಾಚಾರಗಳನ್ನು ಗುಪ್ತವಾಗಿ ಕಳುಹಿಸುತ್ತಿದ್ದರೆಂದೂ ಆಪಾದಿಸಲಾಗಿದೆ

ನೈಜಾಮರು ಯಾತ್ರೆ ಹೋಗುವರೇ?

ಹೈದರಾಬಾದು ನೈಜಾಮರು ಸಂಸ್ಥಾನವನ್ನು ಬಿಟ್ಟು ಯಾತ್ರೆ ಹೊರಡುವರೆಂದೂ, ಅನಂತರ ತಮ್ಮ ಕೊನೆಯ ದಿನಗಳನ್ನು ಇಂಗ್ಲೆಂಡಿನಲ್ಲಿ ಕಳೆಯುವರೆಂದೂ ಒಂದು ವರದಿಯು ತಿಳಿಸುತ್ತದೆ ಆದರೆ ಈ ಬಗ್ಗೆ ಇನ್ನೂ ಯಾವ ವ್ಯವಸ್ಥೆಯೂ ಆಗಿಲ್ಲವೆಂದು ಹೇಳಲಾಗಿದೆ

ವಿಶ್ವ ಶಾಂತಿಗೆ ಮಹಾತ್ಮರ ಹೆಸರಿನಲ್ಲಿ ಪ್ರದುವಟ್ಟು

ಪ್ರಪಂಚದಲ್ಲಿ ಸಂಪೂರ್ಣವಾಗಿ ಯುದ್ಧವನ್ನು ನಿಲ್ಲಿಸಲು ಮತ್ತು ಅಹಿಂಸಾ ತತ್ವದ ಮೇಲೆ ನಾಗರೀಕತೆಯನ್ನು ಸ್ಥಾಪಿಸಲು ದುಡಿದ ಮಹಾತ್ಮ ಗಾಂಧಿಜಿಯವರ ಹೆಸರಿನಲ್ಲಿ ಒಂದು ಪ್ರದುವಟ್ಟನ್ನು ರಚಿಸಿ ಅವರ ಸ್ಮಾರಕ ನಿಧಿಯಿಂದ ೫೦ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಮೀಸಲಾಗಿಡಬೇಕೆಂದೂ ದೆಹಲಿಯ ಪ್ರಮುಖ ಕಾಂಗ್ರೆಸ್ ನಾಯಕರುಗಳು ಮನವಿ ಮಾಡಿರುತ್ತಾರೆ ಈ ಹಣದಿಂದ ಬಂದ ಬಡ್ಡಿಯಲ್ಲಿ ಮಹಾತ್ಮರ ಉಪದೇಶಗಳನ್ನು ಪ್ರಚಾರ ಮಾಡಲು ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಅವರು ಕೋರಿದ್ದಾರೆ

ಕೇರಳ ಯೂನಿಯನ್

ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳು ಐಕ್ಯವಾಗಿ, ಅದನ್ನು ಕೇರಳ ಯೂನಿಯನ್ ಎಂದು ಕರೆಯಲಾಗುವುದೆಂದೂ, ಈ ಬಗ್ಗೆ ಅಧಿಕೃತ ಪ್ರಕಟಣೆಯು ಭಾರತ ಸರ್ಕಾರದಿಂದ ಸಧ್ಯದಲ್ಲಿಯೇ ಹೊರಬೀಳುವುದೆಂದೂ ತಿಳಿದುಬಂದಿದೆ.

ಮಾಂಡಲೆಯ ಆಕ್ರಮಣ

ರಂಗೂನಿಗೆ ೫೦೦ ಮೈಲಿ ಉತ್ತರದಲ್ಲಿರುವ ಮಾಂಡಲೇ ನಗರವನ್ನು ಕರೇನ ಗಲಭೆಕೋರರು, ಮೂರು ದಿನಗಳು ಕದನ ನಡೆಸಿ ಸಂಪೂರ್ಣವಾಗಿ ಆಕ್ರಮಿಸಿರುತ್ತಾರೆ

ಇದೇ ೩೦ನೇ ತಾ|| ನೊಳಗಾಗಿ ಕರೇನ ದಂಗೆಕೋರರು ಕದನ ನಿಲ್ಲಿಸಿ ಶರಣಾಗತರಾದರೆ, ಅವರಿಗೆ ಕ್ಷಮಾಭಿಕ್ಷೆ ನೀಡಲಾಗುವುದೆಂದೂ ಮತ್ತು ಅವರಿಗೆ ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸಲಾಗುವುದೆಂದೂ ಬರ್ಮಾ ಸರ್ಕಾರದವರು ತಿಳಿಸಿರುತ್ತಾರೆ

ಚೀಣಾದ ಮಾಜಿ ಪ್ರಧಾನಿಯ ಮೇಲೆ ಅಪರಾಧ

ಚೀಣಾದ ಮಾಜಿ ಪ್ರಧಾನಿ ಡಾ|| ಸೂಂಗ್‌ರವರು ತಾವು ಅಧಿಕಾರದಲ್ಲಿದ್ದಾಗ ಜಪಾನಿನೊಡನೆ ಯುದ್ಧ ಸಂಗ್ರಾಮ ಕಾಲದಲ್ಲಿ ಸರ್ಕಾರದವರು ವಶಪಡಿಸಿಕೊಂಡಿದ್ದ ಆ ಬರ್ಮಾ ಜಪಾನಿನ ಒಬ್ಬನ ಸಾಮಾನುಗಳನ್ನು ಆತನಿಗೆ ವಾಪಸು ಕೊಡಬೇಕೆಂದು ಆಜ್ಞೆ ಮಾಡಿದ್ದರೆಂದು ಅವರ ಮೇಲೆ ಅಪರಾಧ ಹೊರಿಸಬೇಕೆಂದು ಅಲ್ಲಿನ ನ್ಯಾಯಾಂಗ ಸಭೆಯು ನಿರ್ಧರಿಸಿದೆ.

ಅಖಿಲ ಭಾರತ ಸಹಕಾರ ಸಮ್ಮೇಳನ

ಬೆಂಗಳೂರಿನಲ್ಲಿ ಮುಂದಿನ ಮೇ ತಿಂಗಳ ಪ್ರಥಮ ವಾರದಲ್ಲಿ ಅಖಿಲ ಭಾರತ ಸಮ್ಮೇಳನವು ನಡೆಯುವುದು

ಮಂತ್ರಿಗಳು ಅಧಿಕಾರಿಗಳಿಂದ ಸತ್ಕಾರ ಪಡೆಯಕೂಡದು

ಪೂರ್ವ ಪಂಜಾಬ್ ಪ್ರಾಂತ್ಯದ ಸಚಿವರುಗಳು, ಪ್ರಧಾನ ನಾಡಿಗಾರ್ ಸರ್ಕಾರೀ ಅಧಿಕಾರಿಗಳ ಮನೆಯಲ್ಲಿ ತೇಗಕೂಡದೆಂದೂ ಮತ್ತು ಅವರುಗಳಿಂದ ಸತ್ಕಾರ ಕೊಟಗಳನ್ನು ಸ್ವೀಕರಿಸಕೂಡದೆಂದೂ ಸೂಚಿಸಿ ಅಲ್ಲಿನ [illegible] ಜನ ಶಾಸನ ಸಭಾ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ನಿರ್ಣಯವನ್ನು ಕಳುಹಿಸಿರುತ್ತಾರೆ.

ಪುದುಚೇರಿ ಕಮ್ಯೂನಿಸ್ಟರ ಪಿತೂರಿ ಕೇಂದ್ರ

ಭಾರತದ ಕಮ್ಯೂನಿಸ್ಟರು ಪುದುಚೇರಿಯನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡು, ಅಲ್ಲಿಂದ [illegible] ಭಾರತದಲ್ಲಿ [illegible] ಅಶಾಂತಿಯನ್ನುಂಟುಮಾಡಲು ಪ್ರಯತ್ನಿಸುತ್ತಿದ್ದಾರೆಂದ [illegible] ಅಲ್ಲಿ ಪತ್ರಿಕೆ ಮತ್ತು ಕಮ್ಯೂನಿಸ್ಟರ ಪ್ರಚಾರ ಸಾಹಿತ್ಯಗಳನ್ನು [illegible] ಭಾರತದಲ್ಲಿ [illegible] ಹೇಳಲಾಗಿದೆ.

ಅಂಡಮಾನಿನಲ್ಲಿ ನಿರಾಶ್ರಿತರ ವಸತಿ

[illegible] ಸರಕಾರದವರು ಮತ್ತು [illegible] ಜನರ [illegible] ಸಂಸಾರ [illegible] ಮಾಡಲಾಗುವ

ಕಳೆದ ವರ್ಷ [illegible] ಲಕ್ಷ ಮಣ ಹೆಚ್ಚು ಬೆಳೆ

ಕಳೆದ ವರ್ಷ ಹೆಚ್ಚು ಬೆಳೆ ಯೋಜನೆಯ ಪ್ರಕಾರ [illegible] ಲಕ್ಷ ಮಣ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯಲಾಯಿತೆಂದೂ, ಇದಕ್ಕಾಗಿ [illegible] ರೂ ವೆಚ್ಚವಾಯಿತೆಂದೂ ಹೇಳಲಾಗಿದೆ.

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಇಂದೇ ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ಪ್ರತಿ ದಿನ ೩ ಆಟಗಳು

15-3-49ನೇ ಮಂಗಳವಾರದಿಂದ

[illegible] ದಿನಗಳು ಮಾತ್ರ

[illegible]ರವರ

ಶಾದಿ

(ಹಿಂದಿ)

ಪಾತ್ರ - ಮೋತೀಲಾಲ್, ಖುರ್ಷಿದ್ ಮತ್ತಿತರರು.

ಮುಂದಿನ ಬದಲಾವಣೆ

15-3-49ರಿಂದ

ಪ್ರತಿಜ್ಞ[illegible]

[illegible]

ಟಾಕೀಸ್

Edited, printed and published by [illegible] N.R. Naga[illegible] at the Sadhvi Press, [illegible] Mysore

ವಿಶ್ವ ವಿದ್ಯಾರ್ಥಿಗಳ ಸಮ್ಮೇಳನ

ಮುಂದಿನ ಜುಲೈ ತಿಂಗಳಿನಲ್ಲಿ ಏಷ್ಯಾ ರಾಷ್ಟ್ರಗಳ ವಿಶ್ವ ವಿದ್ಯಾನಿಲಯಗಳ ವಿದ್ಯಾರ್ಥಿ ಸಮ್ಮೇಳನವನ್ನು ಕರೆಯಬೇಕೆಂದು ಅಲಹಾಬಾದ್ ವಿಶ್ವ ವಿದ್ಯಾಲಯದ ಸಂಘದವರು ನಿರ್ಧರಿಸಿರುತ್ತಾರೆ.

ಸ್ವರಾಜ್ಯ ಭವನದಲ್ಲಿ ಮಕ್ಕಳ ಸಂಸ್ಥೆ

ಅಲಹಾಬಾದಿನಲ್ಲಿರುವ ಪಂಡಿತ ನೆಹರೂರವರ ಸ್ವರಾಜ್ಯ ಭವನದಲ್ಲಿ ರಾಷ್ಟ್ರೀಯ ಮಕ್ಕಳ ಸಂಸ್ಥೆಯನ್ನು ಮುಂದಿನ ತಿಂಗಳಿನಿಂದ ತೆರೆಯಬೇಕೆಂದೂ, ಪ್ರಾರಂಭದ [illegible] ನಿರಾಶ್ರಿತ ಮಕ್ಕಳಿಗೆ ಸೌಕರ್ಯಗಳನ್ನು ಒದಗಿಸಬೇಕೆಂದೂ ನಿರ್ಧರಿಸಲಾಗಿದೆ.

ಪ್ರಾಚೀನ ಗಾಜಿನ ಕಾರ್ಖಾನೆಯ ಪತ್ತೆ

[illegible] ವರ್ಷಗಳ ಹಿಂದೆ ಇದ್ದ ಒಂದು ಪ್ರಾಚೀನ ಗಾಜಿನ ತಯಾರಿಕಾ ಕಾರ್ಖಾನೆಯನ್ನು ಸಂಯುಕ್ತ ಪ್ರಾಂತ್ಯದ ಕೋಸಿಯಾ ಎಂಬ ಹಳ್ಳಿಯಲ್ಲಿ ಭೂ ಸಂಶೋಧನಾ ಇಲಾಖೆಯವರು ಕಂಡು ಹಿಡಿದಿದ್ದಾರೆ. ಒಣ್ಣಒಣ್ಣದ ಗಾಜಿನ ಮಣಿಗಳು, ಮತ್ತು ಇತರ ಸಾಧನಗಳು, ಸಿಕ್ಕಿವೆಯೆಂದು ಹೇಳಲಾಗಿದೆ ಅನಾಮೋ ನದಿಯ ದಂಡದಲ್ಲಿರುವ ಈ ಎತ್ತರವಾದ ದಿಣ್ಣೆಯಲ್ಲಿ ಗೌತಮ ಬುದ್ಧನು ರಾಜ್ಯವನ್ನು ಬಿಟ್ಟು ತನ್ನ ಉಡುಪು ಮತ್ತು ಆಭರಣಗಳನ್ನು ಬಿಟ್ಟು ಹೋಗಿದ್ದನೆಂದು ಹೇಳಲಾಗಿದೆ.

ಪ್ರತಿ ೫೦೦ ಜನರ ಗ್ರಾಮಕ್ಕೆ ಒಂದು ಸಹಕಾರ ಸಂಘ

ಬೆಂಗಳೂರು ೧೫

ಸಂಸ್ಥಾನದ ಪ್ರತಿಯೊಂದು ಜಿಲ್ಲಾ ತಾಲ್ಲೂಕು ಮತ್ತು ಹೋಬಳಿಗಳಲ್ಲೂ ವಿವಿಧೋದ್ದೇಶ ಸಂಘಗಳನ್ನು ಸ್ಥಾಪಿಸುವ ಯೋಜನೆಯನ್ನು ಸರ್ಕಾರದವರು ಆಲೋಚಿಸುತ್ತಿರುವರೆಂದೂ ಗ್ರಾಮಗಳಲ್ಲಿ ಸಹಕಾರ ತತ್ವವನ್ನು ಪ್ರಚಾರ ಮಾಡುವುದೇ ಈ ಯೋಜನೆಯ ಉದ್ದೇಶವೆಂದೂ, ಸಹಕಾರ ಸಂಘಗಳ ರಿಜಿಸ್ಟ್ರಾರಾದ ಶ್ರೀ ಟಿ ರಂಗಸ್ವಾಮಿಯವರು ತಿಳಿಸಿರುತ್ತಾರೆ. ೫೦೦ ಮತ್ತು ಅದಕ್ಕಿಂತ ಹೆಚ್ಚಾದ ಜನ ಸಂಖ್ಯೆಯುಳ್ಳ ಪ್ರತಿಯೊಂದು ಗ್ರಾಮದಲ್ಲೂ ಒಂದು ಸಹಕಾರ ಸಂಘವನ್ನು ಸ್ಥಾಪಿಸಲಾಗುವುದೆಂದೂ, ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳ ಕೇಂದ್ರದಲ್ಲಿ ಮಾರ್ಕೆಟಿಂಗ್ ಸಹಕಾರ ಸಂಘಗಳನ್ನು ಸ್ಥಾಪಿಸಿ, ಅದರ ಮೂಲಕ ಬೆಳೆಗಳನ್ನು ಮಾರಲು ಏರ್ಪಾಡು ಮಾಡಲಾಗುವುದೆಂದೂ ಅವರು ಹೇಳಿರುತ್ತಾರೆ. ಪರಸ್ಪರ ಸಹಾಯ ತತ್ವದ ಪ್ರಕಾರ ಮಳವಳ್ಳಿ ತಾಲ್ಲೂಕು ನೇತ್ರಕಲ್ ಗ್ರಾಮದಲ್ಲಿ ೩೦೦ ಎಕರೆ ಜಮೀನುಗಳಲ್ಲಿ ಅಧಿಕಕರ್ನಾಟಕಂದ ಸಾಗುವಳಿ ಮಾಡಿಸಲಾಗುವುದೆಂದೂ ತಿಳಿಸಿದರು.

[illegible]ಚಿಯಾಂಗರು ತ[illegible] ಊರನ್ನು ಬಿಟ್ಟರ[illegible]

ಚೀಣದ ಮಾಜಿ ಅಧ್ಯಕ್ಷ[illegible] ಯಾಂಗ್ ಕೈಷೇಕರವರು ತಮ್ಮ[illegible] ದ ಸ್ಥಳವಾದ ಚಿಕೌವನ್ನು ಬಿಟ್ಟ[illegible] ಚೇಣಾವಲ್ಲಿರುವ ಕುಲನ್ನು ದ್ವೀ[illegible] ಳಿರುವರೆಂದೂ, ಇದರಿಂದ ಕಮ[illegible] ರೊಂದಿಗೆ ಸರ್ಕಾರದವರು ಶಾಂತಿ[illegible] ನ ಮಾಡಿಕೊಳ್ಳಲು ಅನುಕೂಲ[illegible] ದೆಂದೂ ಹೇಳಲಾಗಿದೆ.

ವ್ಯವಸಾಯಾಭಿವೃದ್ಧಿ[illegible] ೫೦೦ ಕೋಟಿ ರೂ[illegible]

ಮದರಾಸ್ ಪ್ರಾಂತ್ಯದಲ್ಲಿ ವ್ಯ[illegible] ವನ್ನು ಅಭಿವೃದ್ಧಿ ಪಡಿಸಲು ೫೦[illegible] ಟಿ ರೂ. ನಿಧಿ ಬೇಕಾಗುವುದೆಂದು[illegible] ಕ್ಕಾಗಿ ವ್ಯವಸಾಯದ ಹಣಕಾ[illegible] ಪೊರೇಷನ್ ಸಂಸ್ಥೆಯನ್ನು ಸ್ಥಾ[illegible] ಕೆಂದೂ, ಮದರಾಸಿನ ಪ್ರಧಾನಿ[illegible] ತಿಳಿಸಿರುತ್ತಾರೆ.

ಶಾರದಾ ಪೂಜೆ

ಗುಂಡ್ಲುಪೇ[illegible]

ಇಲ್ಲಿನ ಪುರ ಪ್ರೌಢಶಾಲೆಯ[illegible] ದಿ ಸಂಘದವರೂ ಮೊನ್ನೆ ದಿನ[illegible] ಕು ಅಮಲ್ದಾರರಾದ ಜನಾಬ್[illegible] ಮಹಮದ್‌ರವರ ಅಧ್ಯಕ್ಷತೆಯಲ್ಲಿ [illegible] ಪೂಜೆಯನ್ನು ನೆರವೇರಿಸಿದರು. [illegible] ಕೆ ಕೃಷ್ಣರಾಯರಿಂದ ಭಾರತ ಪ[illegible] ದನಂತರ, ಶ್ರೀ ಎಸ್. ನಾರಾಯ[illegible] ಯರು ಮತ್ತು ಅಧ್ಯಕ್ಷರು ಭಾಷಣ[illegible] ಡಿದರು.

If you need the servi[illegible] of an expert Kinderga[illegible] ner and Child Educatio[illegible] for your children at ho[illegible] please write to:-

The Director,

Sri Jagadamba Sishuvih[illegible]

Dewan's Road, Mysore

ರಾಜಕಮಲ್,

ಮೈಸೂರು

11-3-49ರಿಂದ

ಅನೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

ಅಪೂರ್ವವಾದ ಕಥಾ ವಿಶೇಷದಿಂದಲೂ,

ಇಂಪಾದ ಸಂಗೀತಗಳಿಂದಲೂ,

ಮನೋಹರ ನೃತ್ಯಗಳಿಂದಲೂ

ನಿಬಿಡವಾಗಿರುವ

ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಸಾಜನ್

ಪಾತ್ರ:— ಆಶೋಕ ಕುಮಾರ್

ರೆಹಾನ

॥ ಶ್ರೀ ॥

ಗಾಯತ್ರೀ ಟಾಕೀಸ್

16-3-49ರಿಂದ 2 ದಿನಗಳು ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಸಿಸಿಲ್ ಬಿ ಡಿ ಮಿಲ್ಲರವರ,

ದಿ ಬಕನೀರ್

(THE BUCCANEER)

ಪಾತ್ರ:— ಫ್ರೆಡ್ರಿಕ್ ಮಾರ್ಚ್

ಎಸ್. ಎಂ. ಪಂಡಿತ್ ಅ[illegible]

ಸನ್ಸ್‌ರವರ

ಯೂನಿವರ್ಸಲ್ ಹೇರ್ ಆ[illegible]

ನೋವು, ಕೀಲು ನೋವು ಮು[illegible]

ಸಕಲ ಬಾಧೆಗಳಿಗೂ ರಾಮಬಾ[illegible]

ಶೀಸೆ 0-12

ಮಹಾ ಸುಗಂಧರಾಜ ತೈಲ—

,, ಚಂದನಾದಿ ತೈಲ—

,, ಭೃಂಗಾ ಮಲಕ ತೈಲ—

—ಬೇಸಿಗೆ ಕಾಲಕ್ಕೆ ಉತ್ತಮ [illegible]

ತೈಲಗಳು

ಮಹಾ ಕೇಶತೇಜ ತೈಲ— ತಲ[illegible]

ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [illegible]

ಯೋಗಿಸಬಹುದಾದ ಉತ್ತಮ[illegible]

ಬ್ರೇನ್ ಟಾನಿಕ್ ಶೀಸೆ 2-0

ಪಂಚಾಮೃತ- ಮಲೇರಿಯಾ[illegible]

ಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್

ಫಾರ್ಮಸಿ.

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್

ಮೈಸೂರು

ಪ್ರಭಾ 16-3-49

ನೇ ಬುಧವಾರದಿಂದ

ದಿನವಹಿ ೩ ಆಟಗಳು

ಪ್ರಭಾತ್‌ರವರ

ಸೀಧಾ ರಾಸ್ತಾ

(ಹಿಂದಿ)

(ಸುಗಮ ಮಾರ್ಗ)

ಪಾತ್ರ - ಕಮಲಾ ಕೊಟ್ನಿಸ್, ಸಾಹು ಮೋದಕ್ ಮತ್ತು ಚಂದ್ರಕಾಂತ್

Morning Shows for 4 days From 18-3-49

DICK TRACY RETURNS

(A Republic Serial)

ಶುಭಮಸ್ತು

॥ಸಮಸ್ತ ಸನ್ಮಂಗಳಾನಿ ಭವಂತು॥

ಮದುವೆ ಜವಳಿಗಳಿಗೆ

ಹೆಸರುವಾಸಿಯಾದ ಅಂಗಡಿ

ನ್ಯಾಯವಾದ ಬೆಲೆ ನಾಣ್ಯವಾದ ಮಾಲು.

ಬಾಬುಸಾಬ್ ಕಂಪೆನಿ, ಬಿಲ್ಲ್ಸ್ ಮೈಸೂರ್ ಬ್ಯಾಂಕ್ ರೋಡ್, ಮೈಸೂರು

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೧೬-೩-೧೯೪೯ [ಸಂಚಿಕೆ ೧೯೦

ಭೂಪಾಲ್ ಸಂಸ್ಥಾನವು ಚೀಫ್ ಕಮೀಷನರ ಪ್ರಾಂತ್ಯವೆ?

ಬ್ರಿಟನ್ನಿನ ಪ್ರತಿನಿಧಿಗಳೊಡನೆ ಚರ್ಚಾ ಕೂಟ

ಮೈಸೂರು ೧೬

ಪ್ರಪಂಚದ ಶಾಂತಿಗೆ ವಿಶ್ವ ಸಂಸ್ಥೆಯು ಸಹಕಾರಿಯಾದ ಸಾಧನ" ಎಂಬ ವಿಚಾರವಾಗಿ ನಿನ್ನೆ ಸಂಜೆ ಮಹಾರಾಜಾ ಕಾಲೇಜ್ ಸಂಘದ ಆಶ್ರಯದಲ್ಲಿ ಚರ್ಚಾ ಕೂಟವು ನಡೆಯಿತು. ಪ್ರೊ॥ ವಿ.ಎಲ್. ಡಿ ಸೋಜಾರವರು ಅಧ್ಯಕ್ಷತೆ ವಹಿಸಿದ್ದರು. ಬ್ರಿಟನ್ನಿನಿಂದ ಬಂದಿರುವ ಚರ್ಚಾ ಕೂಟದ ೩ ಜನ ಸದಸ್ಯರಾದ ಮಿ॥ ಮೆಕ್‌ಡೋನಲ್, ಜೆ. ಕಾರ್ಲಿ ಜಾರ್ಕ್ಸ್ ಮತ್ತು ಸ್ಟ್ಯಾನ್ಲಿ ಕೆ ಜಂಕಿನ್ಸ್‌ರವರುಗಳು ಭಾಗವಹಿಸಿದ್ದರು. ನಿರ್ಣಯದ ಪರವಾಗಿ ಶ್ರೀಗಳಾದ ಮೆಕ್‌ಡೋನಲ್, ಡಿ. ವಿಜಯದೇವರಾಜೇ ಅರಸ್, ಬಿ.ಜಿ. ಶ್ರೀನಿವಾಸಮೂರ್ತಿ ಮತ್ತು ಕಾರ್ಲಿ ಜಾರ್ಕ್ಸನವರುಗಳೂ, ವಿರೋಧವಾಗಿ ಶ್ರೀಗಳಾದ ಕೆ ರಂಗನಾಥ ರಾವ್, ಕೆ. ಜೆಂಕಿನ್ಸ್ ನಗರ್ವಾರರವರುಗಳೂ ಮಾತನಾಡಿದರು. ಕೊನೆಯಲ್ಲಿ ಓಟಿಗೆ ಹಾಕಿದಾಗ ನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು.

ಉಪನಯನ

೬ ನರಸೀಪುರದ ತಾಲ್ಲೂಕು ಮೂಗೂರಿನ ಶ್ರೀ ಕೃಷ್ಣ ಜೋಯಿಸರ ಮಕ್ಕಳು ಶ್ರೀ [illegible] ಜೋಯಿಸರ ಪುತ್ರ ಚಿ॥ ಸತ್ಯನಾರಾಯಣನಿಗೂ ಮತ್ತು ಶ್ರೀ ನಾರಾಯಣ ಜೋಯಿಸರ ಪುತ್ರ ಚಿ॥ ಎಂ ಗುಂಡಪ್ಪನಿಗೂ ಉಪನಯನವು ಈ ದಿನ ಮೂಗೂರಿನಲ್ಲಿ ನೆರವೇರಿಸಲ್ಪಟ್ಟಿತು.

ಸಂತಾಪ ಸೂಚನೆ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರೀ ಮಂಡಲಿಯ ಸಭೆಯು ಕಳೆದ ಭಾನುವಾರ ಶ್ರೀ ಕೆ ದ್ವಾರಕನಾಥಯ್ಯರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀಮತಿ ಸರೋಜಿನಿ ದೇವಿಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು.

ಹರಿಹರದ ಬಳಿ ವಿಮಾನ ನಿಲ್ದಾಣ

ಹರಿಹರದ ಬಳಿ ವಿಮಾನನಿಲ್ದಾಣವೊಂದನ್ನು ಸ್ಥಾಪಿಸುವ ವಿಚಾರವು ಸರ್ಕಾರದ ಆಲೋಚನೆಯಲ್ಲಿದೆಯೆಂದು ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರು ತಿಳಿಸಿದ್ದಾರೆ.

ಇಂಪೀರಿಯಲ್ ಪೋಸ್ಟಾಫೀಸ್ ಎಂಬ ಹೆಸರು ರದ್ದು

ಸಂಸ್ಥಾನಗಳಲ್ಲಿ ಭಾರತ ಸರ್ಕಾರದವರು ಸ್ಥಾಪಿಸಲ್ಪಟ್ಟಿರುವ ಅಂಚೆ ಕಛೇರಿಗಳನ್ನು ಇನ್ನು ಮುಂದೆ "ಇಂಪೀರಿಯಲ್ ಪೋಸ್ಟ್ ಆಫೀಸ್" ಎಂದು ಕರೆಯದೆ ಇದ್ದೂ, ಅದರ ಬದಲು "ಇಂಡಿಯನ್ ಯೂನಿಯನ್ ಪೋಸ್ಟಾಫೀಸ್" ಎಂದು ಕರೆಯಬೇಕೆಂದು ಕೇಂದ್ರ ಸರ್ಕಾರದವರು ತಿಳಿಸಿರುತ್ತಾರೆ. ಬ್ರಿಟಿಷ್ ಇಂಡಿಯಾ ಎಂಬ ಪದವೂ ಸಹ ರದ್ದಾಗತಕ್ಕದ್ದೆಂದು ತಿಳಿಸಲಾಗಿದೆ.

[illegible]ಸ್ತ್ರಾ ಯುವಕರ ಸಮ್ಮೇಳನ

[illegible] ರಾಷ್ಟ್ರಗಳ ಯುವಕರ ಸಮ್ಮೇಳನವು ಮುಂದಿನ ಅಕ್ಟೋಬರ್ ತಿಂಗಳಲ್ಲಿ ನಡೆಸಬೇಕೆಂದು ಪಾಟ್ನಾದಲ್ಲಿ ನಡೆದ ಕಾರ್ಯಕಾರೀ ಸಮಿತಿಯಲ್ಲಿ ನಿರ್ಧರಿಸಿದೆ.

ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಭೆ

ಮೈಸೂರು ೧೬

ಮೈಸೂರು ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಭೆಯು ಇದೇ ೨೧ ನೇ ತಾ॥ ಸೋಮವಾರ ಬೆಳಿಗ್ಗೆ ೯ ಗಂಟೆಗೆ ರಾಜಧಾನಿಯ ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆಯುವುದು. ಜಿಲ್ಲಾ ಕಾಂಗ್ರೆಸ್ ಕೆಲಸಗಾರರೂ, ಎ. ಎಂ ಸಿ ಸಿ ಸದಸ್ಯರೂ, ಶಾಸನ ಸಭಾ ಮತ್ತು ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷದ ಸದಸ್ಯರುಗಳೂ, ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳ ಪ್ರತಿನಿಧಿಗಳೂ ಸಭೆಗೆ ತಪ್ಪದೆ ದಯಮಾಡಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಂ ಎಲ್. ನಂಜರಾಜೇ ಅರಸಿನವರು ಕೋರಿರುತ್ತಾರೆ.

ಅಂಗಡಿ ಕೆಲಸಗಾರರ ಸಂಘ,

ಮೇಲ್ಕಂಡ ಕೆಲಸಗಾರರ ಸಭೆಯು ತಾ॥ ೨೦-೩-೪೯ ನೇ ಭಾನುವಾರ ಬೆಳಿಗ್ಗೆ ೧೦ ಘಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ವಿಜಯಾ ಏಜನ್ಸೀಸಿನಲ್ಲಿ ಶ್ರೀ ವಿ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಕೆಲಸಗಾರರೆಲ್ಲರೂ ತಪ್ಪದೆ ಬರಬೇಕಾಗಿ ಕೋರಲಾಗಿದೆ.

ವಿವೇಕಾನಂದರ ಭಾವಚಿತ್ರ ಅನಾವರಣ

ಲಕ್ಷ್ಮೀಪುರಂ ಮಾಧ್ಯಮ ಶಾಲೆಯ ನಾಲ್ಕನೇ ತರಗತಿ ವಿದ್ಯಾರ್ಥಿಗಳು ಶ್ರೀ ಶಾರದಾ ಪೂಜೆಯನ್ನು ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಈ ಸಮಯದಲ್ಲಿ ಶ್ರೀ ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಸೋಮನಾಥಾನಂದಜಿಯವರಿಂದ ವಿವೇಕಾನಂದರ ಭಾವಚಿತ್ರ ಅನಾವರಣ ಮಹೋತ್ಸವವೂ ನಡೆಯಿತು.

ಲಕ್ಷ್ಮೀ ಮೆಡಿಕಲ್ ಹಾಲ್

ಡಾ॥ ಎಂ ಸಿ ನಾಗರಾಜರವರು ಮೇಲ್ಕಂಡ ಹೆಸರಿನಲ್ಲಿ ನಂಜನಗೂಡು, ಅಂಗಡಿ ಬೀದಿಯಲ್ಲಿ ನಾಳಿನಿಂದ ಹೊಸ ಔಷಧಾಲಯವನ್ನು ಆರಂಭಿಸಲಿರುವರು.

ಪೆಸಿಫಿಕ್ ರಕ್ಷಣಾ ವ್ಯವಸ್ಥೆ

ಬ್ರಿಟನ್ ಮತ್ತು ಬ್ರಿಟನೇತರ ರಾಷ್ಟ್ರಗಳನ್ನೊಳಗೊಂಡ ಪೆಸಿಫಿಕ್ ಕ್ಷೇತ್ರಗಳಲ್ಲಿ ರಕ್ಷಣಾ ವ್ಯವಸ್ಥೆಯನ್ನು ಮಾಡುವ ವಿಚಾರವಾಗಿ ಈಗ ಚರ್ಚೆ ನಡೆಯುತ್ತಿದೆಯೆಂದು, ಆಸ್ಟ್ರೇಲಿಯದ ಪ್ರಧಾನಿಯವರು ತಿಳಿಸಿರುತ್ತಾರೆ. ಮುಂದಿನ ವಾರ ಡೊಮಿನಿಯನ್ ರಾಷ್ಟ್ರಗಳ ಪ್ರತಿನಿಧಿಗಳು ಸೇರಿ ಮಾತುಕತೆ ನಡೆಸುವರೆಂದು ಕೇಳಲಾಗಿದೆ.

ಗ್ರಾಮಗಳಲ್ಲಿ ನೂರು ಸಹಕಾರ ಸಂಘಗಳು

ಸ್ವಂ. ಸು. ಪ್ರೋ॥] ಬೆಂಗಳೂರು ೧೬

ಬರುವ ತಿಂಗಳಿನಲ್ಲಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ನೂರು ಸಹಕಾರ ಸಂಘಗಳನ್ನು ತೆರೆಯಲು ಆಲೋಚಿಸುತ್ತಿದ್ದಾರೆ.

○ ಹಣಕಾಸಿನ ಸಚಿವರಾದ ಶ್ರೀ ಎಚ್. ಸಿ ದಾಸಪ್ಪನವರು ಇದೇ ೨೧ ನೇ ತಾ॥ ದೆಹಲಿಯಲ್ಲಿ ನಡೆಯುವ ಸಂಸ್ಥಾನದ ಹಣಕಾಸಿನ ಪರಿಶೀಲನಾ ಸಮಿತಿಯಲ್ಲಿ ಭಾಗವಹಿಸುವರು.

ಶಾಸನ ಸಭೆಗಳಿಗೆ ಪೇಟವಿಲ್ಲದೆ ಬರಬಹುದೇ!

ಮದರಾಸ್ ಶಾಸನ ಸಭೆಯ ಸದಸ್ಯರುಗಳಾದ ಶ್ರೀಗಳು ವಿ. ಎಸ್ ವರದಾಚಾರಿ ಮತ್ತು ವೇದರತ್ನಂ ಪಿಳ್ಳೆಯವರು ಪೇಟವನ್ನೂ ಸಹ ಹಾಕಿಕೊಳ್ಳದೆ ಬರಿ ಅಂಗವಸ್ತ್ರವನ್ನು ಹೊದ್ದುಕೊಂಡು ಸಭೆಗೆ ಬರುತ್ತಿರುವ ವಿಚಾರವಾಗಿ ಅಲ್ಲಿ ನಿನ್ನೆ ವಿಶೇಷ ಪ್ರಶ್ನೋತ್ತರಗಳಾದುವು. ಸಭಾ ಮರ್ಯಾದೆಗೆ ಇತರ ನಿರ್ಬಂಧಗಳಿರುವಂತೆ ಉಡುಪಿನ ನಿರ್ಬಂಧವೂ ಇರಬೇಕೆಂದು ಹಲವು ಸದಸ್ಯರು ವಾದಿಸಿದರು. ಸಭಾ ನಾಯಕರಾದ ಶ್ರೀ ಪ್ರಿ. ಗೋಪಾಲ ರೆಡ್ಡಿಯವರು ಯಾವ ಉಡುಪಿಗಾದರೂ ಅವಕಾಶ ಕೊಡಬಹುದೆಂದು ಅಭಿಪ್ರಾಯ ಪಟ್ಟರು. ಕಡೆಗೆ ಪೇಟವೂ ಸಹ ಇಲ್ಲದೆ ಬರಬಹುದೆಂದು ಹೇಳಿದರು. ಮೇಲೆ ಹೇಳಿದ ಇಬ್ಬರು ಸದಸ್ಯರು ಇನ್ನು ಮುಂದೆ ಪೇಟವಿಲ್ಲದೆ ಬರುವುದಾದರೆ ತಾವೂ ಸಹ ಮಾರನೇ ದಿನದಿಂದ ಹಾಗೇ ಮಾಡುವುದಾಗಿ ಶ್ರೀ ಪಿ ನಟೇಶನವರು ಹೇಳಿದಾಗ, ತಮಗೆ ಸಾಕಾಗುವಷ್ಟು ಕ್ರಾಪಿಯ ನೂಲನ್ನು ಶ್ರೀ ನಟೇಶನವರು ತೆಗೆದುಕೊಟ್ಟರೆ ತಾವು ಪೇಟ ಹಾಕಿಕೊಂಡೇ ಬರುವುದಾಗಿ ಶ್ರೀ ವರದಾಚಾರಿಯವರು ಹೇಳಿದರು. ಈ ವಿಷಯವನ್ನು ಇತ್ಯರ್ಥಪಡಿಸಲು ಅಗತ್ಯವಾದರೆ ಒಂದು ಸಮಿತಿಯನ್ನು ನೇಮಿಸುವುದಾಗಿ ಅಧ್ಯಕ್ಷರು ತಿಳಿಸಿದಾಗ, ಈ ಬಗ್ಗೆ ಏನು ತೀರ್ಮಾನವೂ ಬೇಕಾಗುವುದಿಲ್ಲವೆಂದೂ ಈ ವಿಷಯವನ್ನು ಮುಂದಕ್ಕೆ ಹಾಕಬೇಕೆಂದೂ ಸಭಾ ನಾಯಕರು ಸೂಚಿಸಿದರು.

ರಾಯಚೂರು ಬಳಿ ಚಿನ್ನ

ರಾಯಚೂರು ಜಿಲ್ಲೆಯ ಹಟ್ಟಿ ಎಂಬಲ್ಲಿ ಚಿನ್ನವನ್ನು ತೆಗೆಯಲು ೫೦ ಲಕ್ಷ ರೂ ವೆಚ್ಚದಿಂದ ಯಂತ್ರಗಳನ್ನು ತರಿಸಲು ಹೈದರಾಬಾದ್ ಸರ್ಕಾರದವರು ನಿರ್ಧರಿಸಿದ್ದಾರೆ.

ಶ್ರೀ ಮದ್ಯಾಹ್ನರಾಜರ ಸ್ಮಾರಕ

ಬೆಂಗಳೂರು ೧೬

ಮೈಸೂರು, ಹಾಸನ ಮತ್ತು ಶಿವಮೊಗ್ಗಗಳಲ್ಲಿ ವ್ಯಾಯಾಮ ಶಿಕ್ಷಣ ಕಾಲೇಜನ್ನು ಸ್ಥಾಪಿಸಬೇಕೆಂಬ ಅಂಶವನ್ನು ನಿನ್ನೆ ನಡೆದ ಶ್ರೀ ಮದ್ಯಾಹ್ನರಾಜರ ಸ್ಮಾರಕ ಸಮಿತಿಯ ಸಭೆಯಲ್ಲಿ ಪರಿಶೀಲಿಸಲಾಯಿತು. ಶ್ರೀಮನ್ಮಹಾರಾಜಾರವರ ಸೂಚನೆಯಂತೆ ಕಲಾ ಶಾಲೆ ಅಥವ ವ್ಯಾಯಾಮ ಕಾಲೇಜನ್ನು ಸ್ಥಾಪಿಸಬೇಕೆಂಬ ಅಂಶವನ್ನು ನಿರ್ಧರಿಸಲು ಒಂದು ಸಮಿತಿಯನ್ನು ರಚಿಸಲಾಯಿತು. ಈ ಸ್ಮಾರಕ ನಿಧಿಗೆ ೩॥ ಲಕ್ಷ ರೂ. ಸಂಗ್ರಹವಾಗಿದೆ.

ಕಮೀಷನರ ಮೇಲೆ ಅವಿಶ್ವಾಸ ನಿರ್ಣಯ

ಬೆಂಗಳೂರು ಪುರ ಸಭೆಯ ಕಮೀಷನರಾದ ಜನಾಬ್ ಎ.ಎಸ್. ಖಲೀಲ್‌ರವರ ಮೇಲೆ ಅವಿಶ್ವಾಸ ನಿರ್ಣಯವನ್ನು ತರಬೇಕೆಂದು ಅದರ ಕಾಂಗ್ರೆಸ್ ಪಕ್ಷದವರು ನಿರ್ಧರಿಸಿರುತ್ತಾರೆ.

ಹೊಸ ಅಂಗಡಿ

ಶ್ರೀಗಳಾದ ಜಿ ಆರ್. ರಾಮರಾವ್ ಮತ್ತು ಶ್ರೀಕಂಠಸ್ವಾಮಿಯವರುಗಳು ಡಿ ಸುಬ್ಬಯ್ಯನ ರಸ್ತೆಯಲ್ಲಿ ಈ ದಿನ ಬೆಳಿಗ್ಗೆ ತಮ್ಮ ನೂತನ ಕಾಂಡಿಮೆಂಟ್ ಸ್ಟೋರಿನ ಆರಂಭೋತ್ಸವವನ್ನು ನೆರವೇರಿಸಿದರು.

○ ಭಾರತ ಸರ್ಕಾರದ ಮಲೇರಿಯಾ ರೋಗ ನಿವಾರಣಾ ಶಾಖೆಯ ಡೈರೆಕ್ಟರಾದ ಶ್ರೀ ಜಸವಂತಸಿಂಗರು ಇಲ್ಲಿಗೆ ಆಗಮಿಸಿ, ಗ್ರಾಮಾಂತರಗಳಲ್ಲಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ವಿಚಾರವಾಗಿ ಮೈಸೂರು ಸರ್ಕಾರದವರೊಡನೆ ಮಾತುಕತೆ ನಡೆಸಿದರು.

ಭೂಪಾಲ್ ಚೀಫ್ ಕಮೀಷನರ ಪ್ರಾಂತ್ಯವಾಗುವುದೇ?

ಭಾರತ ಸರ್ಕಾರದ ಸಂಸ್ಥಾನ ಶಾಖೆಯ ಸಲಹೆಗಾರರಾದ ಶ್ರೀ ವಿ ಪಿ. ಮೆನನ್‌ರವರಿಗೂ ಮತ್ತು ಭೂಪಾಲ್ ನವಾಬರಿಗೂ ನಿನ್ನೆ ನಡೆದ ಮಾತುಕತೆಗಳ ಫಲವಾಗಿ, ಸಂಸ್ಥಾನವು ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಡುವುದು. ಅದು ಚೀಫ್ ಕಮೀಷನರ ಪ್ರಾಂತ್ಯವಾಗಿರುವುದೆಂದು ತಿಳಿದುಬಂದಿದೆ.

ಗ್ರಾಮಾಭಿವೃದ್ಧಿ ಕಮೀಷನರವರ ಪ್ರವಾಸ

ಮೈಸೂರು ೧೬

ಗ್ರಾಮಾಭಿವೃದ್ಧಿ ಕಮಿಷನರಾದ ಶ್ರೀ ಎಂ ಎಸ್ ತಿಮ್ಮಯ್ಯನವರು ನಿನ್ನೆ ಜಿಲ್ಲಾ ಸಮಿತಿ ಅಧ್ಯಕ್ಷರಾದ ಶ್ರೀ ರಂಗರಾಮಯ್ಯನವರು ಮತ್ತು ಅಧಿಕಾರ ವರ್ಗದವರೊಡನೆ ಅಲನಹಳ್ಳಿ, ವರುಣ, ವಾಜಮಂಗಲ ಮತ್ತು [illegible] ಗ್ರಾಮಗಳಿಗೆ ಭೇಟಿಯಿತ್ತು ಗ್ರಾಮೋದ್ಧಾರ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು. ಎಲ್ಲಾ ಗ್ರಾಮಗಳಲ್ಲೂ ಆಯಾ ಗ್ರಾಮಸ್ಥರು ಮನೆಗಳಿಗೆ ಭೇಟಿಯಿತ್ತು ಮನೆಗಳನ್ನು ಚೊಕ್ಕಟವಾಗಿಟ್ಟುಕೊಳ್ಳಬೇಕೆಂದು ತಿಳಿಸಿದರು. ಗ್ರಾಮಗಳಲ್ಲಿ ಕಂಪೋಸ್ಟ್ ಗೊಬ್ಬರ ತಯಾರಿಕೆಗಾಗಿ [illegible] ಗುಂಡಿಗಳನ್ನು ಪರೀಕ್ಷಿಸಿ, ಈ ಪದ್ಧತಿಯನ್ನು ಹೆಚ್ಚು ಬಳಕೆಗೆ ತರಬೇಕೆಂದು ತಿಳಿಸಿದರು. [illegible] ವರುಣದಲ್ಲಿ ಗ್ರಾಮಸ್ಥರ ಉಪಯೋಗಕ್ಕಾಗಿ [illegible] ಕಟ್ಟಬೇಕೆಂದು [illegible] ಕೊಡಬೇಕೆಂದು [illegible]

ಬಸ್ ಸ್ಟ್ಯಾಂಡಿನಲ್ಲಿ ನೀರಿನ ತೊಂದರೆ

ರಾಜಧಾನಿಯ ಬಸ್ ಸ್ಟ್ಯಾಂಡಿನಲ್ಲಿ ಕುಡಿಯುವ ನೀರಿನ ಒಂದು ನಲ್ಲಿಯೂ ಕೂಡ ಇಲ್ಲದೆ ಈ ಉರಿಯುವ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಪ್ರಯಾಣಿಕರು ಪಡುತ್ತಿರುವ ಪರದಾಟವು ಹೇಳತೀರದೆಂದೂ. ಸಾವಿರಾರು ರೂ.ವರಮಾನವಿರುವ ಈ ಸ್ಥಳದಲ್ಲಿ ಒಂದು ನಲ್ಲಿಯನ್ನಾದರೂ ಇಡುವುದಲ್ಲದೆ ಪ್ರಯಾಣಿಕರು ಕುಳಿತುಕೊಳ್ಳಲು ನೆರಳಿನ ಆಶ್ರಯವನ್ನು ಸಹ ಕೂಡಲೇ ಬೌರಸಭೆಯವರು ಕಲ್ಪಿಸಿಕೊಡಬೇಕೆಂದ ನೊಂದ ಪ್ರಯಾಣಿಕರೊಬ್ಬರು ಕೋರಿದ್ದಾರೆ

ಚಾಂಪಿಯನ್ ಮೆಟ್ರೊಪಾಲಿಟನ್ ಕಾಲೇಜ್ ಸಂಘ

ರಾಜಧಾನಿಯ ಚಾಂಪಿಯನ್ ಮೆಟ್ರೊಪಾಲಿಟನ್ ಕಾಲೇಜು ಸಂಘದ ವಾರ್ಷಿಕ ಸಮಾರಂಭ[illegible] ಮೊನ್ನೆ [illegible] ಸಹಕಾರ ಭವನದಲ್ಲಿ ನಡೆ[illegible] [illegible] ಸಂಗೀತ [illegible] [illegible] [illegible] ಶ್ರೀ [illegible] [illegible] [illegible] ನಡೆದಿತು

ಗೃಹಕೃತ್ಯದ ನೋಟೀಸು

[illegible] ಕಟಿಸಾಮಿ ಶೆಟ್ಟರವರ ಎರಡನೇ ಹೆಂಡತಿ ಮಗಳು ಮತ್ತು ವೆಂಕಟಮ್ಮಾಶೆಟ್ಟಿ ಕ[illegible] ಶ್ರೀಮತಿ ವೆಂಕಟಮ್ಮನು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ -

ಇದೇ ಮೈಸೂರು ಸಿಟಿ ಪಡುವಾರಹಳ್ಳಿ ಗ್ರಾಮಕ್ಕೆ ಸೇರಿದ ಮುನಿಸಿಪಲ್ ಡೋರ್ ನಂಬರು [illegible] ಮನೆಯು ನನ್ನ ಜನಕ ತಾಯಿ ಲಕ್ಷ್ಮಮ್ಮ ಉರುಫ್ ಚಿನ್ನತಾಯಕ್ಕ ಎಂಬುವರಿಗೆ ಸೇರಿದ್ದು, ಅವರ ಸ್ವಾಧೀನಾನುಭವದಲ್ಲಿತ್ತು. ಅವರು ಈಗೆ ಸುಮಾರು ಮೂರು ತಿಂಗಳಲ್ಲಿ ಮೃತಿಯಾಗಿರುತ್ತಾರೆ ಈಚೆಗೆ ನನ್ನ ತಂದೆಯ ಮೊದಲನೇ ಹೆಂಡತಿ ಮಗಳು ಶ್ರೀಮತಿ ಲಕ್ಷ್ಮಕ್ಕ ಎಂಬುವರು ಇತರರ ದುರ್ಬೋಧನೆಗೆ [illegible] ಇಲ್ಲದ ಹಕ್ಕು ಉಂಟುಮಾಡಿಕೊಳ್ಳುವುದಕ್ಕೆ ಸದರಿ ಸ್ವತ್ತನ್ನು ಇತರರಿಗೆ ಪರಭಾರೆ ಮಾಡುವುದಕ್ಕೆ [illegible] [illegible] [illegible] [illegible] [illegible] [illegible] [illegible] ಪರಭಾರೆ[illegible] [illegible] ಮಾತ್ರವೂ ಒಪ್ಪ[illegible] [illegible] [illegible] [illegible] (ರುಜು) ವೆಂಕಟಮ್ಮ

ಅತ್ಯಂತ ಹಗುರವಾದ ಮೋಟಾರು

ಬ್ರಿಟನ್ನಿನ ಸ್ಟ್ಯಾಂಡರ್ಡ್ ಮೋಟಾರ್ ಕಂಪನಿಯವರು "ವಿಜಯ ಟ್ರಯಂಫ್" ಎಂಬ ಅತ್ಯಂತ ಹಗುರವಾದ ಮೋಟಾರು ಕಾರನ್ನು ತಯಾರಿಸುತ್ತಿದ್ದಾರೆಂದು ಹೇಳಲಾಗಿದೆ

ಸರ್ಕಾರಿ ಜವಾನರುಗಳಿಗೆ ಖಾದಿ ಉಡುಪಿನ ಒತ್ತಾಯ

ಮದರಾಸ್ ಸರ್ಕಾರದ ಎಲ್ಲ ಜವಾನರುಗಳೂ ಖಾದಿ ಬಟ್ಟೆಯ ಸಮ ವಸ್ತ್ರಗಳನ್ನೇ ಧರಿಸಬೇಕೆಂದು ಆಜ್ಞೆಯಾಗಿದೆ.

ಅಮೆರಿಕದಲ್ಲಿ ಮಕ್ಕಳ ಸಾವು ಹೆಚ್ಚಾಗಿದೆ

--ಮೆರಿಕದಲ್ಲಿ ಮಕ್ಕಳು ಸಾಯುತ್ತಿರುವುದು ಹೆಚ್ಚಾಗುತ್ತಿದೆಯೆಂದೂ, ಕಳೆದ ವರ್ಷ [illegible] ಮಕ್ಕಳು ಸತ್ತವೆಂದೂ ಹೇಳಲಾಗಿದೆ

ಸ್ಕಾಟ್ ಚಳುವಳಿಯಲ್ಲೂ ಕಮ್ಯೂನಿಸ್ಟರು

ಸ್ಕಾಟ್ ಚಳುವಳಿಯಲ್ಲಿ ಕಮ್ಯೂನಿಸ್ಟರ ಪ್ರಭಾವವು ಹೆಚ್ಚಾಗಿ ಅವರ ತತ್ವವನ್ನು [illegible] ಮಾಡುತ್ತಿದೆಯೆಂದು ಬ್ರಿಟನ್ನಿನ ಪಾರ್ಲಿಮೆಂಟ್ ಸದಸ್ಯರೊಬ್ಬರು ತಿಳಿಸುತ್ತಾರೆ

ಬಣ್ಣ ಎರಚಿದುದಕ್ಕೆ ೫೫೫ ಮಂದಿ ದಸ್ತಗಿರಿ

ಕಲ್ಕತ್ತೆಯಲ್ಲಿ ಮೊನ್ನೆ ದಿನ ಕಾಮನ ಹಬ್ಬದ ಸಂಬಂಧದಲ್ಲಿ ಬಣ್ಣ ಎರಚಿದರೆಂದು ೫೫೫ ಜನರನ್ನು ದಸ್ತಗಿರಿ ಮಾಡಲಾಗಿದೆ ಈ ಸಂಬಂಧದಲ್ಲಿ ಅನೇಕ ಕಡೆ ಘರ್ಷಣೆ ನಡೆದು, ೪೦ ಜನರಿಗೆ ಗಾಯಗಳಾಗಿವೆ ಬಣ್ಣಗಳನ್ನು ಬೀದಿಯಲ್ಲಿ ಹೋಗುತ್ತಿದ್ದ ಜನರು,ಮೋಟಾರು ಕಾರುಗಳು ಮತ್ತು ಬಸ್ಸುಗಳ ಮೇಲೆ ಎರಚಲಾಯಿತೆಂದೂ. ಅನೇಕ ಭಾಗಗಳಲ್ಲಿ ಟ್ರಾಮು ಓಡಾಟವನ್ನು ನಿಲ್ಲಿಸಬೇಕಾಯಿತೆಂದೂ ಹೇಳಲಾಗಿದೆ.

ನಿರಾಶ್ರಿತರ ಉಪವಾಸ

ದೆಹಲಿಯಲ್ಲಿರುವ ನಿರಾಶ್ರಿತರ ಕುಂದು ಕೊರತೆಗಳ ಬಗ್ಗೆ ಕಳೆದ ಶನಿವಾರದಿಂದ ಉಪವಾಸ ಹೂಡಿರುವ ೫ ಮಂದಿ ನಿರಾಶ್ರಿತರುಗಳಿಗೆ ಸಹಾನುಭೂತಿ ತೋರಿಸಲು ಅಲ್ಲಿನ ಕಿಂಗ್ಸ್‌ವೇ ಕೇಂದ್ರದ ೧ ಸಾವಿರ ಜನ ನಿರಾಶ್ರಿತರು ಮೊನ್ನೆಯಿಂದ ಉಪವಾಸವನ್ನು ಪ್ರಾರಂಭಿಸಿರುತ್ತಾರೆ

ಷರತ್ತಿಲ್ಲದೆ ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡಬೇಕು

ಬಿಡುಗಡೆಯಾದ ಕೂಡಲೇ ಪೋಲೀಸ್ ಸೂಪರಿಂಟೆಂಡೆಂಟರಿಗೆ ಹಾಜರಾತಿ ಕೊಡಬೇಕು; ದಿನಕ್ಕೆ ಒಂದು ಬಾರಿ ಹತ್ತಿರವಿರುವ ಪೋಲೀಸ್ ಸ್ಟೇಷನ್ನಿನಲ್ಲಿ ಹಾಜರಾತಿ ಕೊಡಬೇಕು, ಯಾರಾದರೊಬ್ಬರ ಜಾಮೀನು ಕೊಟ್ಟು, ಈ ಬಗ್ಗೆ ಒಪ್ಪಿಗೆಯ ಮುಚ್ಚಳಿಕೆಯನ್ನು ಬರೆದುಕೊಡಬೇಕು-ಎಂಬ ಷರತ್ತುಗಳಮೇಲೆ ಮೈಸೂರು ಜೈಲಿನಲ್ಲಿರುವ ಕಮ್ಯೂನಿಸ್ಟ್ ವಿದ್ಯಾರ್ಥಿಗಳಾದ ಶ್ರೀಗಳು ಉಗ್ರಪ್ಪ ಮತ್ತು ಅನಂತ ಸ್ವಾಮಿರಾವ್‌ರವರುಗಳನ್ನು ಪರೀಕ್ಷೆಗೆ ಕುಳಿತುಕೊಳ್ಳಲು ಬಿಡುಗಡೆ ಮಾಡಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿರುವುದನ್ನು ಪ್ರತಿಭಟಿಸಿ, ಯಾವ ಷರತ್ತುಗಳು ಇಲ್ಲದೆ ಅವರುಗಳನ್ನು ಬಿಡುಗಡೆ ಮಾಡಬೇಕೆಂದು ಮೈಸೂರು ವಿದ್ಯಾರ್ಥಿ ಸಂಘದವರು ಪ್ರಾರ್ಥಿಸಿರುತ್ತಾರೆ

ವಿವಾಹ ಮಹೋತ್ಸವ

ಹಾಸನ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಟಿ ಆರ್ ಅಯ್ಯಂಗಾರ್ಯರು ತಮ್ಮ ಪುತ್ರಿ ಚಿ॥ಸೌ॥ ಲಲಿತಮ್ಮನನ್ನು ಹೈದರಾಬಾದಿನ ಶ್ರೀ ವಿ ರಾಮಚಂದ್ರರವರ ಪುತ್ರ ಶ್ರೀ ವಿ ಶ್ರೀನಿವಾಸರವರಿಗೆ ಕೊಟ್ಟು ವಿವಾಹವನ್ನು ಈ ದಿನ ಹಾಸನದಲ್ಲಿ ನೆರವೇರಿಸಿದರು.

॥ ಶ್ರೀ ॥

ಗಾಯತ್ರೀ ಟಾಕೀಸ್

16-3-49ರಿಂದ 2 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಸಿಸಿಲ್ ಬಿ.ಡೀ ಮಿಲ್ಲ್ಸರವರ,

ದಿ ಬಕನೀರ್
(THE BUCCANEER)
ಪಾತ್ರ:— ಫ್ರೆಡ್ರಿಕ್ ಮಾರ್ಚ್

ಒಲಿಂಪಿಯನ್ ಟಾಕೀಸ್

17-3-49ನೇ ಗುರುವಾರದಿಂದ
ಪ್ರತಿ ದಿನ ೩ ಆಟಗಳು
ಮೆಹಬೂಬ್‌ರವರ

*** ತಕ್‌ದೀರ್ ***

ಪಾತ್ರ:- ಚಂದ್ರ ಮೋಹನ್,ನರ್ಗೀಸ್, ಚಾರ್ಲಿ, ಮೋತಿಲಾಲ್ ಮತ್ತಿತರರು

ಪ್ರಭಾ ★→ 16-3-49
ನೇ ಬುಧವಾರದಿಂದ



ದಿನವಹಿ ೩ ಆಟಗಳು
ಪ್ರಭಾತ್‌ರವರ

*** ಸೀತಾರಾಮ ರಾಸ್ತಾ ***
(ಹಿಂದಿ)
(ಸುಗಮ ಮಾರ್ಗ)

ಪಾತ್ರ ಕಮಲಾ ಕೊಟ್ನೀಸ್,ಸಾಹು ಮೋದಕ್ ಮತ್ತು ಚಂದ್ರಕಾಂತ್

Morning Shows for 4 days From 18-3-49

DICK TRACY RETURNS
(A Republic Serial)

ಸಂಪಾದನೆ ಮಾಡುವವರೆಗೆ ಮದುವೆ ನಿರ್ಬಂಧದ ಶಾ[illegible]

ಕ್ರಮವಾದ ಸಂತಾನ ನಿರೋಧ[illegible] ಜಾರಿಗೆ ತರದಿದ್ದರೆ ಕ್ರಿ.ಶ. ೨೦೦೦ರಲ್ಲಿ ಭಾರತದ ಜನ ಸಂಖ್ಯೆಯು ೫೦ ಕೋಟಿ ಮೀರುವುದು ಅದಕ್ಕೆ ಸರಿಯಾಗಿ [illegible] ಇಲ್ಲದೆ ಭಾರತದ ಜನರು ಉಪವಾ[illegible]ಡಬೇಕಾದಿತು. ಈಗ ಕೇವಲ [illegible] ಜನರಿಗೆ ಬಾಳಲು ಯಾವ ಅಧಿಕಾರ[illegible]ಲ್ಲ ಕೋಟ್ಯಾಂತರ ಮಂದಿ ಊರಿ[illegible] ದಿರುಗುತ್ತಾ ಭಿಕ್ಷೆ ಬೇಡಿ ಮತ್ತು [illegible]ನ ಮಾಡಿ ಜೀವಿಸುತ್ತಿದ್ದಾರೆ. ಇ[illegible] ತಡೆಗಟ್ಟಬೇಕು. ಪ್ರತಿಯೊಬ್ಬನೂ [illegible] ಸಂಸಾರವನ್ನು ನಡೆಸಿಕೊಂಡು ಹೋ[illegible] ಶಕ್ತನಾಗುವವರೆವಿಗೂ ಮದುವೆ[illegible] ಕೂಡದೆಂದು ನಿರ್ಬಂಧಪಡಿಸುವ [illegible] ವನ್ನು ಜಾರಿಗೆ ತರಬೇಕು—ಎಂದು [illegible] ರಾಷಿನ ಗೃಹ ಶಾಖೆಯ ಕಾರ್ಯದರ್ಶಿ[illegible] ಶ್ರೀ ಓ ಪುಲ್ಲಾರೆಡ್ಡಿಯವರು ಒಂದು ಪಡವಲ್ಲಿ ತಿಳಿಸಿರುತ್ತಾರೆ.

ಲಗ್ನದ ಜವಳಿಗಾಗಿ
ಗುರುದೇವಾ [illegible]
ಬೆಂಗಳೂರು ಜವಳಿ ಅಂಗಡಿಗೆ
ಇಂದೇ ಭೇಟಿ ಕೊಡಿ
ಶಿವರಾಂಪೇಟೆ .. ಮೈ[illegible]

If you need the serv[illegible] of an expert Kindergar[illegible]ner and Child Education[illegible] for your children at ho[illegible] please write to:-
The Director.
Sri Jagadamba Sishuvi[illegible]
Dewan's Road, Mysor[illegible]

ಎಸ್.ಎಗ್.ಪಂಡಿತ್ ಅ[illegible] ಸನ್ಸ್‌ರವರ
ಯೂನಿವರ್ಸಲ್ ಹೆಯರ್ ಬಾ[illegible]
ನೋವು, ಕೀಲು ನೋವು ಮು[illegible] ಸಕಲ ಬಾಧೆಗಳಿಗೂ ರಾಮಬಾ[illegible]
ಸೀಸೆ0-12
ಮಹಾ ಸುಗಂಧರಾಜ ತೈಲ—
„ ಚಂದನಾದಿ ತೈಲ—
„ ಭೃಂಗಾ ಮಲಕ ತೈಲ—
—ಬೇಸಿಗೆ ಕಾಲಕ್ಕೆ ಉತ್ತಮ [illegible] ತೈಲಗಳು
ಮಹಾ ಕೇತಕೀ ತೈಲ—ತಲೆ[illegible] ಕೆಸಳ್ಳುವುದಕ್ಕೂ ಅಭ್ಯಂಜನಕ್ಕೂ [illegible] ಯೋಗಿಸಬಹುದಾದ ಉತ್ತಮ[illegible]
ಬ್ರೇನ್ ಟಾನಿಕ್ ಸೀಸೆ 2.0[illegible]
ಪಂಚಾಮೃತ- ಮಲೇರಿಯಾ[illegible]ಗಳಿಗೆ ಸಿದ್ಧ ಸಂಜೀವನ.
ಮೈಸೂರು ಆಯುರ್ವೇದಿಕ್ ಫಾರ್ಮಸಿ.
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು

Edited, printed [illegible] published by A.R. Nag[illegible]rajan at the Sadhvi Pr[illegible] D. Subbiah Road, Myso[illegible]

ಫೋನ್ ನಂ ೪೨ ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೧೭-೩-೧೯೪೯ [ಸಂಚಿಕೆ ೯೯೦

ಪಾನಿನ ಚಕ್ರವರ್ತಿಗಳ

ವಿಚಾರಣೆ ಇಲ್ಲ

ಜಪಾನಿನ ಚಕ್ರವರ್ತಿಗಳಾದ ಹಿರೋ ಟೋ ಅಥವ ಮತ್ತಾರನ್ನೂ ಯುದ್ಧ ಸಿ ತ ವತ್ತು ಪಿತೂರಿ ನಡೆಸಿದರೆಂಬ ಅ ಪನೆಯ ಮೇಲೆ ವಿಚಾರಣೆಗೆ ಗುರಿಪಡಿ ಸಗ ವುದಿಲ್ಲವೆಂದು ಅಧಿಕೃತವಾಗಿ ತಿ ಳಾಗಿದೆ

ಕರಿಗೆ ಹೆಚ್ಚಿಸಿದುದಕ್ಕಾಗಿ ನಿಮಾ ಮಂದಿರಗಳ ಬಂದು

ವ ಥ ಪ್ರಾಂತ್ಯದಲ್ಲಿರುವ ಸಿನಿಮಾ ದಿ ಳ ಮೇಲೆ ಶೇಕಡ ೫೦ ರಷ್ಟು ನರ ನೆ ತೆರಿಗೆಯನ್ನು ಸರ್ಕಾರದವ ಹೇ ಸಿರುವುದರಿಂದ ಅದನ್ನು ಪ್ರತಿಭ ಸ ತಿಂಗಳ ಕಾಲ ಅವುಗಳನ್ನು ಚ್ಚ ಕೆಂದು ಅದರ ಮಾಲೀಕರುಗ ಚಿಸುತ್ತಿದ್ದಾರೆ

ವಾಹ ಮಹೋತ್ಸವ

ನಾನಿಯ ಧರ್ಮಪ್ರಕಾಶ ಒನು ಪ ವರ ಮಕ್ಕಳು ಶ್ರೀ ವಿಶ್ವಂಭರ ನ ರ. ತಮ್ಮ ಅಣ್ಣಂದಿರ ದತ್ತು ಪ್ರ ಶ್ರೀ ಡಯ್ಯನವರಿಗೆ ಗಂಜಾಂ ಶ್ರೀ ಅ ಯ್ಯನವರ ಪುತ್ರಿ ಚಿ|| ಸೌ|| ಸು ವ ನನ್ನು ತಂದುಕೊಂಡು ವಿವಾಹ ದಿನ ನೆರವೇರಿಸಿದರು

ನ್ಯಾಷನಲ್ ಇಂಜನಿಯರಿಂಗ್ ಶಾಲೆ

ರಾಜಧಾನಿಯ ನ್ಯಾಷನಲ್ ಇನ್ಸ್ಟಿಟ್ಯೂ ಇಂಜನಿಯರಿಂಗ್ ಶಾಲೆಯ ನ ವಿದ್ಯಾರ್ಥಿಗಳು ಸಿವಿಲ್ ಇಂಜ ರ್ ಡಿಪ್ಲೊಮಾ ಪರೀಕ್ಷೆಗೆ ಕುಳಿತಿ ದ್ದವರೂ ತೇರ್ಗಡೆಯಾಗಿರುವುದಾಗಿ ವ ತ್ತು ಅವರೆಲ್ಲರಿಗೂ ಮದರಾಸಿನ ಡ ದೊರೆತಿರುವುದಾಗಿಯೂ ತಿಳಿದು ಬಿದೆ

ಂಧೀ ಸ್ಮಾರಕನಿಧಿಗೆ ಸಹಾಯ

ರಾಜಧಾನಿಯ ಚಾಮುಂಡಿಪುರದ ವ ಸಂಘದವರು ಮಹಾತ್ಮರ ಸ್ಮಾ ನಿಗೆ ರೂ ಅನ್ನು ಕೊಟ್ಟ ರು

ಲ್ಲಾ, ತಾಲ್ಲೂಕು ಕಾಂ|| ರ್ಯದರ್ಶಿಗಳಿಗೆ ಸಂಬಳ

ಗ್ರೆಸ್ ಕೆಲಸಗಾರರ ಸಭೆಯಲ್ಲಿ ತೀರ್ಮಾನ

ಬೆಂಗಳೂರು ೧೭

ಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದ ಪ ನವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಕೆಲಸಗಾರರ ಸಭೆಯ ಕಂಡ ನಿರ್ಣಯಗಳು ಅಂಗೀಕೃ

ತ ಪರಿಸ್ಥಿತಿಯಲ್ಲಿ ಜಿಲ್ಲಾ ಮತ್ತು ಕಾಂಗ್ರೆಸ್ ಸಮಿತಿಗಳು ಸುವ್ಯ ಗಿ ನಡೆಯಬೇಕಾದರೆ ಅವುಗಳ ಹೆಯಾನ ೫೦ ರೂ ಗಳ ಗೌರವ ಮೇಲೆ ಕಾರ್ಯದರ್ಶಿಗಳನ್ನು ನೇ ಸಮಿತಿಗಳಿಗೆ ಸರ್ಕಾರದವ ರನ್ನು ನಾಮಕರಣ ಮಾಡುವು ಕ್ಷಿಸಬೇಕು

ಎಸ್ ಎಸ್ ಮತ್ತು ಕಮ್ಯೂನಿ ವಳಿಯನ್ನು ನಿರ್ಮೂಲ ಮಾಡ ದ ಕಾಂಗ್ರೆಸ ಸೇವಾದಳಗಳನ್ನು ಯಲ್ಲಿಯೂ ಸ್ಥಾಪಿಸಬೇಕು

ಪ್ಪಿನವರಲ್ಲಿ ತಲೆ ಹಾಕಿರುವ ಅ ನ್ನು ತೊಡೆದುಹಾಕಲು ಜಯ ಧಿವೇಶನದಲ್ಲಿ ಅಂಗೀಕೃತವಾದ ವನ್ನು ಕಾರ್ಯರೂಪಕ್ಕೆ ತರಬೇಕು

ಅಬಿಸೀನಿಯಕ್ಕೆ ಭಾರತದ ಉಪಾಧ್ಯಾಯರುಗಳು

ಭಾರತದ ಅನೇಕ ಉಪಾಧ್ಯಾಯರುಗಳು ಅಬಿಸೀನಿಯಾಕ್ಕೆ ಹೋಗಲಿರ ವರೆಂದೂ, ಈಗ ಅವರುಗಳಿಗೆ ಇಲ್ಲಿ ಕೊಡುತ್ತಿರುವ ಅತ್ಯಲ್ಪ ಸಂಬಳವೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ ಇಥಿಯೋಪಿಯಾ ಸರ್ಕಾರವು ಅವರುಗಳಿಗೆ ಕೆಲಸ ಕೊಡಲು ಒಪ್ಪಿದೆ

ಬೆಲ್ಜಿಯಂಗೆ ಭಾರತದಿಂದ ಮೂಳೆ ಸರಬರಾಜು

ವರ ವಜ್ರ ಮತ್ತು ಜಲೆಟೀನ್ ತಯಾರಿಕೆಗಾಗಿ ಮೂಳೆಗಳು ಅಪಾರವಾಗಿ ಬೇಕಾಗಿರುವುದರಿಂದ ಅವನ್ನು ಭಾರತದಿಂದ ಪಡೆಯಲು ಬೆಲ್ಜಿಯಮ್ಮಿನ ಕ್ರೇತೀಕಾ ನಿಯೋಗದವರು ಇಲ್ಲಿಗೆ ಬರಲಿರುವರೆಂದು ಹೇಳಲಾಗಿದೆ ಹಿಂದಿನ ವರ್ಷ ೯ ಸಾವಿರ ಟನ್ ಮೂಳೆಗಳನ್ನು ಭಾರತವು ಪರದೇಶಗಳಿಗೆ ಸರಬರಾಜು ಮಾಡಿತ್ತು

ಮುಂದಿನ ತಿಂಗಳಿನೊಳಗಾಗಿ ಧಾನ್ಯದಬೆಲೆ ಇಳಿಯುವುದು

ಮುಂದಿನ ತಿಂಗಳ ಅಂತ್ಯದಿಂದ ಭಾರತದಲ್ಲಿ ಧಾನ್ಯಗಳ ಧಾರಣೆಯು ಇಳಿವ ಖವಾಗ ವ ಸೂಚನೆಗಳಿವೆಯೆಂದೂ, ಒರುವ ಆರು ತಿಂಗಳಲ್ಲಿ ಭಾರತದ ಸ್ಥಿತಿಯು ಬಹು ಮಟ್ಟಿಗೆ ತೃಪ್ತಿಕರವಾಗುವ ನಿರೀಕ್ಷೆಯಿದೆಯೆಂದೂ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಡಾ|| ಜಾನ್ ಮಥಾಯ್‌ರವರು ತಿಳಿಸಿರುತ್ತಾರೆ

ಚೀಣಾ ಸರ್ಕಾರಕ್ಕೆ ಕಮ್ಯೂನಿಸ್ಟರ ಎಚ್ಚರಿಕೆ

ಚೀಣಾ ಸರ್ಕಾರದ ಶಾಂತಿ ನಿಯೋಗದವರು ಪೀಪಿಂಗಿಗೆ ಕೂಡಲೇ ಬರದಿದ್ದರೆ ಕಮ್ಯೂನಿಸ್ಟರು ಶಾಂತಿ ಸಂಧಾನವನ್ನು ತ್ಯಜಿಸಿ, ಧಾಳಿ ಕದನ ಪ್ರಾರಂಭಿಸುವುದಾಗಿ ಅಂತ್ಯ ಎಚ್ಚರಿಕೆಯನ್ನು ಕೊಡುವ ಸಂಭವವಿದೆಯೆಂದು ಹೇಳಲಾಗಿದೆ

ಇಲಿಗಳ ನಾಶಕ್ಕಾಗಿ ಪ್ರಯತ್ನ

ಇಲಿಗಳ ಹಾವಳಿಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವುದಕ್ಕಾಗಿ ವೈಜ್ಞಾನಿಕರು ನೂತನ ಸಾಧನಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿರುವರೆಂದು ಹೇಳಲಾಗಿದೆ ನಿಷ್ವದಲ್ಲಿ ಈಗ ೬೫೦ ಲಕ್ಷ ಇಲಿಗಳವೆಯೆಂದೂ ಅವುಗಳಿಂದ ಪ್ರತಿ ವರ್ಷವೂ ಒಟ್ಟು ೧೦೪ ಕೆ ೯ ಕೋ ರೂ ಬೆಲೆ ಬಾಳುವ ಸಾಮಗ್ರಿಗಳು ನಾಶವಾಗುತ್ತಿವೆಯೆಂದೂ ಅಂದಾಜು ಮಾಡಲಾಗಿದೆ

ಖಾಸಿಂ ರಜ್ವಿ ಮತ್ತು ೫೭ ಮಂದಿ ಮೇಲೆ ಮೊಕದ್ದಮೆ

ಹೈದರಾಬಾದಿನ ರಜಾಕರರ ನಾಯಕನಾಗಿದ್ದ ಖಾಸಿಂ ರಜ್ವಿ ಮತ್ತು ಅವನ ೫೭ ಮಂದಿ ಅನುಯಾಯಿಗಳ ಮೇಲೆ ಗುಲ್ಬರ್ಗ ನ್ಯಾಯಾಧೀಶರ ಕೋರ್ಟಿನಲ್ಲಿ ರಾಜದ್ರೋಹ, ಕೊಲೆ, ಪಿತೂರಿ, ದರೋಡೆ ಮುಂತಾದ ಆಪಾದನೆಯ ಮೇಲೆ ಮೊಕದ್ದಮೆ ಹೂಡಲಾಗಿದೆ

ದೌಲತ್‌ರಾಂರವರು ಯು. ಪಿ. ಗೌರ್ನರರಾಗುವರೇ?

ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜೈ ರಾಂ ದಾಸ್ ದೌಲತ್ ರಾಂರವರನ್ನು ಸಂಯುಕ್ತ ಪ್ರಾಂತ್ಯದ ಗವರ್ನರರಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ

ದಕ್ಷಿಣ ಕೋರಿಯಾದಲ್ಲಿ ದಂಗೆ

ದಕ್ಷಿಣ ಕೋರಿಯಾದ ಚೇಜು ಎಂಬ ದ್ವೀಪದಲ್ಲಿ ೫೦೦ ಜನ ದಂಗೆ ಕೋರರು ಒಂದು ಸಾವಿರ ಜನರ ಇತರರ ಸಹಾಯದಿಂದ ದಂಗೆ ಎದ್ದಿರುವರೆಂದೂ ಇವರಿಗೆ ಕಮ್ಯೂನಿಸ್ಟರ ಸಹಾಯ ವಿರುವ್ರದಾಗಿಯೂ ವರದಿಯಾಗಿದೆ ರಷ್ಯದ ಪಿ-೫೧ ಗನ್ನುಗಳನ್ನು ವಶಪಡಿಸಿಕೊಂಡು ಅವರಿಂದ ತರಪೇತಾದ ಗಲಭೆ ನಾಯಕರುಗಳನ್ನು ಈಗ ವಶಗಿರಿ ಮಾಡಲಾಗಿದೆ

ಮಧ್ಯ ಪ್ರಾಂತ್ಯ ಅರಣ್ಯದಲ್ಲಿ ಮೈಸೂರು ವಿದ್ಯಾರ್ಥಿಗಳ ಬೇಟೆ

ಮೈಸೂರು ವಿಶ್ವ ವಿದ್ಯಾಲಯದ ಭೂಗರ್ಭ ಶಾಖೆಯ ವಿದ್ಯಾರ್ಥಿಗಳು ಮಧ್ಯ ಪ್ರಾಂತ್ಯ ಸೋನಿ ಎಂಬ ಭೂ ಗರ್ಭ ಸಂಶೋಧನೆಗಳಿಗಾಗಿ ಪ್ರವಾಸ ಮಾಡಲು ಅಲ್ಲಿಗೆ ಹೋದಾಗ ವಿಚಿತ್ರ ಘಟನೆ ನಡೆಯಿತೆಂದು ವರದಿಯಾಗಿದೆ ಆ ರೈಲ್ವೆ ನಿಲ್ದಾಣದಲ್ಲಿ ಅವರು ಇಳಿದು ಟಿಕೇಟುಗಳನ್ನು ಯಾರು ಕೇಳುವವರಿಲ್ಲದ್ದುದರಿಂದ ಅವರುಗಳು ಅಲ್ಲಿಂದ ನೇರವಾಗಿ ಕಾಡಿನ ಪ್ರದೇಶಕ್ಕೆ ಹೊರಟುಹೋದರೆಂದೂ ಅನಂತರ ಅಲ್ಲಿನ ರೈಲ್ವೆ ನೌಕರರುಗಳಿಗೆ ಅವರ ಬಗ್ಗೆ ಸಂದೇಹ ಬಂದು ಪೋಲೀಸರಿಗೆ ವರ್ತಮಾನ ಕೊಟ್ಟರೆಂದೂ ಅವರುಗಳು ಕಮ್ಯೂನಿಸ್ಟರು ಅಥವ ವಿನಾಶಕೃತ್ಯಗಳಲ್ಲಿ ತೊಡಗಿರುವರೆಂದು ಅವರನ್ನು ಹುಡುಕಲು ಪೋಲೀಸರು ತಂಡೂರು ಮಾಡಿದರೆಂದೂ ಕೊನೆಯಲ್ಲಿ ವಿದ್ಯಾರ್ಥಿಗಳು ಪ್ರಸ್ತಾದೇ ಸ್ಥಳಕ್ಕೆ ವಾಪಸು ಬಂದವೇಲೆ ನಿಜ ಸ್ಥಿತಿ ಗೊತ್ತಾಯಿತೆಂದೂ ಹೇಳಲಾಗಿದೆ

ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನ

ಮೈಸೂರು ೧೭

ಇದೇ ಏಪ್ರಿಲ್ ತಾ|| ನಿಂದ ಇಲ್ಲಿನ ಚಲುವಾಂಬಾ ಭವನದಲ್ಲಿ ಎರಡು ವಾರ ನಡಯಲಿರುವ ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನದಲ್ಲಿ ಭಾರತ, ಸಿಲೋನ್, ಪಾಕಿಸ್ಥಾನ, ಬರ್ಮಾ, ಸಯಾಂ, ಚೀಣ, ಮಲಯ, ಇಂಡೋನೇಷ್ಯಾ ಆಸ್ಟ್ರೇಲಿಯಾ ನ್ಯೂಜಿಲೆಂಡ್, ನೇಪಾಳ, ಭೂತಾನ, ಕೊರಿಯಾ ಮತ್ತು ರಷ್ಯಾ ದೇಶಗಳ ಪ್ರತಿನಿಧಿಗಳು ಭಾಗವಹಿಸುವರು ಈ ಬಗ್ಗೆ ಸಿದ್ಧತೆಗಳನ್ನು ಮಾಡುವುದಕ್ಕಾಗಿ ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನದ ಮತ್ತು ಏಷ್ಯಾ ಪೆಸಿಫಿಕ್ ಭಾಗಗಳ ಸೆಕ್ರೆಟರಿ ಜನರಲ್ಲರಾದ ಡಾ|| ಎಂ ಎ ಹ್ಯೂಬರ್ಮನ್‌ರವರು ಇಲ್ಲಿಗೆ ನಿನ್ನೆ ಸಂಜೆ ಆಗಮಿಸಿದರು ಏಷ್ಯಾ ಖಂಡದ ಸಮಸ್ಯೆ, ಮನೆಕಟ್ಟಲು, ಮರ ಮುಟ್ಟುಗಳು ಕಾರ್ಖಾನೆಗಳಿಗೆ ಬೇಕಾಗಿರುವ ಮುಖ್ಯವಾದ ವಸ್ತುಗಳ ಸರಬರಾಜು ಮತ್ತು ಅರಣ್ಯ ಸಂಪತ್ತನ್ನು ಹೆಚ್ಚಿಸುವುದು --ಇವೇ ಮುಂತಾದ ವಿಷಯಗಳನ್ನು ಸಮ್ಮೇಳನದಲ್ಲಿ ಪರಿಶೀಲಿಸಲಾಗುವುದು

೯೦ ಸಾವಿರ ಪಲ್ಲ ಧಾನ್ಯ ಸಂಗ್ರಹ

ಬೆಂಗಳೂರು ೧೭

ಗ್ರಾಮಾಭಿವೃದ್ಧಿ ಯೋಜನೆಯು ಜಂಗಮಾಗ ಒಂದು ವಾರ ಕಾಲ ಕೈಗೊಂಡ ಆಹಾರ ಸಂಗ್ರಹಣೆಯ ಫಲವಾಗಿ ಸಂಸ್ಥಾನದಲ್ಲಿ ಒಟ್ಟು ೭೫ ಸಾವಿರ ಪಲ್ಲ ಭತ್ತ ಮತ್ತು ೧೫ ಸಾವಿರ ಪಲ್ಲ ರಾಗಿ ಸಂಗ್ರಹವಾಗಿದೆಯೆಂದು ಹೇಳಲಾಗಿದೆ

ಚರ್ಮದ ಕಾರ್ಖಾನೆಗಳಿಗೆ ಪೆಟ್ಟು

ಸಂಸ್ಥಾನದಲ್ಲಿ ಗೋಹತ್ಯ ನಿರೋಧ ಶಾಸನವು ಜಾರಿಗೆ ಬಂದಿರುವುದರಿಂದ ಇಲ್ಲಿರುವ ೪೧ ಚರ್ಮ ಹದ ಮಾಡುವ ಕಾರ್ಖಾನೆಗಳಿಗೆ ಸಾಕಾದಷ್ಟು ಚರ್ಮ ದೊರೆಯದೆ ವಿಶೇಷ ನಷ್ಟ ಉಂಟಾಗಿ ಅನೇಕ ಕಾರ್ಖಾನೆಗಳನ್ನು ಮುಚ್ಚಲಾಗಿದೆಯೆಂದೂ ೧೬ ಕಾರ್ಖಾನೆಗಳು ಮಾತ್ರ ಕೆಲಸಮಾಡುತ್ತಿವೆಯೆಂದು ತಿಳಿದುಬಂದಿದೆ

ಚಿನ್ನದ ಗಣಿ ಮುಷ್ಕರದ ಪರಿಸ್ಥಿತಿ

ಚಿನ್ನದಗಣಿ ಕೆಲಸಗಾರರ ಮುಷ್ಕರದ ಪರಿಸ್ಥಿತಿಯು ಉತ್ತಮಗೊಂಡಿಲ್ಲವೆಂದೂ, ೨೦,೦೦೦ ಸಾವಿರ ಜನ ಮುಷ್ಕರಗಾರರ ಪೈಕಿ, ೯೦೦ ಜನರು ಮಾತ್ರ ಕೆಲಸಕ್ಕೆ ಹಿಂತಿರುಗಿರುವರೆಂದೂ ಹೇಳಲಾಗಿದೆ ಈ ಪರಿಸ್ಥಿತಿಯನ್ನು ಪರಿಶೀಲಿಸಲು ನಿನ್ನೆ ದಿನ ಮುಖ್ಯ ಮಂತ್ರಿಗಳಾದ ಶ್ರೀ ಕೆ ಸಿ. ರೆಡ್ಡಿಯವರು,ಗಣಿಯ ಅಧಿಕಾರಿಗಳ, ಲೇಬರ್ ಕಮೀಷನರುಗಳೊಡನೆ ಸಮಾಲೋಚನ ನಡೆಸಿದರೆಂದೂ, ಮುಷ್ಕರವು ನ್ಯಾಯಬಾಹಿರವಾದುದರಿಂದ ಕಾರ್ಮಿಕರು ಕೆಲಸಕ್ಕೆ ವಾಪಸು ಹಿಂತಿರುಗಿದ ಹೊರತು ಯಾವ ಪರಿಹಾರವನ್ನು ಸರ್ಕಾರದವರು ಕೊಡಲು ಸಾಧ್ಯವಿಲ್ಲವೆಂದೂ ತೀರ್ಮಾನಿಸಲಾಯಿತೆಂದು ತಿಳಿದುಬಂದಿದೆ ಮುಷ್ಕರದ ಪರಿಸ್ಥಿತಿಯು ಶಾಂತಿಯುತವಾಗಿದ್ದರೂ ಗಣಿ ಪ್ರದೇಶಗಳಲ್ಲಿ ಪಿಓಟಿ ಕಾವಲನ್ನು ಹಾಕಲಾ ವ

ಕೋಮುವಾರು ಭಾವನೆಯ ಸರ್ಕಾರಿ ನೌಕರರಿಗೆ ಎಚ್ಚರಿಕೆ

ಸರ್ಕಾರಿ ಆಡಳಿತ ವರ್ಗದವರಲ್ಲಿ ಕೋಮುವಾರು ವಿಷವನ್ನು ಬಿತ್ತುವ ನೌಕರರನ್ನು ವಜಾ ಮಾಡಲಾಗುವುದೆಂದು ಪೂರ್ವ ಪಂಜಾಬ್ ಪ್ರಧಾನಿಯವರು ಎಚ್ಚರಿಕೆ ಕೊಟ್ಟಿರುತ್ತಾರೆ

ಕ್ರೈಸ್ತ ದೇವಾಲಯಕ್ಕಾಗಿ ೫೦ ಸಾವಿರ ಡಾಲರು

ಅಣು ಬಾಂಬಿನಿಂದ ನಾಶವಾದ ಜಪಾನಿನ ಹಿರೋಷಿಮಾ ನಗರವನ್ನು ಈಗ ಪುನರ್ರಚಿಸಲಾಗುತ್ತಿದೆಯಷ್ಟೆ. ಅಲ್ಲಿ ಒಂದು ಕ್ರೈಸ್ತ ದೇವಾಲಯವನ್ನು ಕಟ್ಟಲು ೫೦ ಸಾವಿರ ಡಾಲರುಗಳನ್ನು ಅಮೆರಿಕದವರೊಬ್ಬರು ಕೊಟ್ಟಿರುತ್ತಾರೆ

ಕೋಮುವಾರು ಗಲಭೆಯಲ್ಲಿ ೧೦ ಜನರ ಮರಣ

ಲಕ್ನೋದಿಂದ ೭೫ ಇರುವ ಸಹರಾನ್‌ಪುರದಲ್ಲಿ ಕಳೆದ ಭಾನುವಾರ ಕೋಮುವಾರು ಗಲಭೆ ಉಂಟಾಗಿ, ೧೦ ಜನರು ಸತ್ತರೆಂದೂ, ೩೦ ಮಂದಿಗೆ ಗಾಯಗಳಾದುವೆಂದೂ ಹೇಳಲಾಗಿದೆ. ದನದ ಮಾಂಸವನ್ನು ಗಾಡಿಯಲ್ಲಿ ತರುತ್ತ ಪ್ರವೇಶದಲ್ಲಿ ಮುಸ್ಲಿಮರನ್ನು ಒಂದು ಕೋಮಿನವರು ಆಕ್ಷೇಪಿಸಿ ಅವನ್ನು ತಡೆದರೆಂದೂ ಇದರಿಂದ ಗಲಭೆ ಉಂಟಾಗಿ, ಕೆಲವು ಮನೆಗಳು ಲೂಟಿ ಮಾಡಲ್ಪಟ್ಟುವೆಂದೂ ವರದಿಯಾಗಿದೆ

೭೦೦ ರೂ. ಗಾಗಿ ೧೧೫ ವರ್ಷದ ಮುದುಕನ ಕೊಲೆ

ಸಿಕಂದರಾಬಾದಿಗೆ ಸೇರಿದ ಬೋಲಾರಮ್ಮಿನ ಮಸೀದಿಯ ಇಮಾಂರವರಾದ ೧೧೫ ವರ್ಷದ ಮೌಲ್ವಿ ಜಲಾಲುದ್ದೀನರವರನ್ನು ಕರ್ತಾರ್ ಸಿಂಗ್ ಎಂಬ ಸೈನ್ಯಾಧಿಕಾರಿಯೂ ಮತ್ತು ಒಬ್ಬ ಅಡಿಗೆಯವನೂ ಸೇರಿ ಕೊಲೆ ಮಾಡಿ ಅವರಲ್ಲಿದ್ದ ೭೦೦ ರೂ ಗಳನ್ನು ಅಪಹರಿಸಿದರೆಂದೂ, ಈಗ ಅವರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ವರದಿಯಾಗಿದೆ

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಇಂದೇ ಭೇಟಿ ಕೊಡಿ

ಶಿವರಾಂಪೇಟೆ :. ಮೈಸೂರು

Edited, printed and published by A.R. Nagarajan at the Sadhvi Press, D. Subbiah Road, Mysore.

ನಾಗಾ ರಾಣಿಗೆ ಗೌರವ

ಅಸ್ಸಾಮಿನ ಗಂಡಿಲೋ ರಾಣಿ ಎಂಬಾಕೆಯು ತನ್ನ ೧೬ನೇ ವಯಸ್ಸಿನಲ್ಲೇ ಶಾಲೆಯನ್ನು ಬಿಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, ೧೯೩೦ರಲ್ಲಿ ನಾಗಾ ಜನಾಂಗದವರ ನಾಯಕತ್ವವನ್ನು ವಹಿಸಿ, ಬ್ರಿಟಿಷರನ್ನು ಎದುರಿಸಿದ್ದಳು. ಈ ಅಪರಾಧಕ್ಕಾಗಿ ಆಕೆಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಆದರೆ ಅದನ್ನು ೩ ವರ್ಷಕ್ಕೆ ಇಳಿಸಲಾಗಿತ್ತು. ಈಗ ಆಕೆಯು ತನ್ನ ಜನಾಂಗದವರ ಪುರೋಭಿವೃದ್ಧಿಗಾಗಿ ದುಡಿಯುತ್ತಿದ್ದಾಳೆ. ಆಕೆಯ ಸೇವೆಯ ಗೌರವಾರ್ಥವಾಗಿ ಒಂದು ಸ್ಮಾರಕವನ್ನು ನಿರ್ಮಿಸಬೇಕೆಂದು ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಆಲೋಚಿಸುತ್ತಾರೆ

ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಬಹಿಷ್ಕಾರ

ತಿರುವಾಂಕೂರು ವಿಶ್ವ ವಿದ್ಯಾನಿಲಯದ ಇಂಟರ್ ಪರೀಕ್ಷೆಗಳನ್ನು ಅಲ್ಲಿನ ವಿದ್ಯಾರ್ಥಿಗಳು ಬಹಿಷ್ಕರಿಸಿರುವುದರಿಂದ, ಸಂಸ್ಥಾನದಲ್ಲಿರುವ ಕಾಲೇಜುಗಳನ್ನು ಅನಿರ್ದಿಷ್ಟಕಾಲದ ವರೆಗೆ ಮುಚ್ಚಬೇಕೆಂದು ಆಜ್ಞೆಯಾಗಿದೆ

ಉಪಾಧ್ಯಾಯಿನಿಯರಿಗೆ ಪಲ್ಲಕ್ಕಿ ಮತ್ತು ಡೋಲಿಗಳು

ಲಕ್ನೋ ಪುರಸಭೆಯವರು ಬಾಲಕಿಯರ ಶಾಲೆಗಳ ಉಪಾಧ್ಯಾಯಿನಿಯರನ್ನು ಶಾಲೆಗೆ ಕರೆದೊಯ್ಯಲು ಇಟ್ಟಿದ್ದ ೧೨ ಪಲ್ಲಕ್ಕಿ ಮತ್ತು ಡೋಲಿಗಳನ್ನು ಮುಂದಿನ ಜುಲೈ ತಿಂಗಳಿನಿಂದ ವಜಾ ಮಾಡಲು ನಿರ್ಧರಿಸಿರುತ್ತಾರೆ.

ರೈಲಿನಲ್ಲಿ ಜೇಬುಕಳ್ಳರು

ಜಿ. ಐ. ಪಿ. ರೈಲ್ವೆಯ ಜಬ್ಬಲ್‌ಪುರ, ಕೋಟ್ನಿ ಮತ್ತು ಇಟಾರ್ಸಿ ಎಂಬ ಮಾರ್ಗಗಳಲ್ಲಿ ಜೇಬು ಕಳ್ಳರ ಹಾವಳಿ ವಿಪರೀತವಾಗಿದೆಯೆಂದೂ, ಸಣ್ಣ ಹುಡುಗರ ತಂಡವೊಂದು ರೈಲುಗಾಡಿಗಳಲ್ಲೂ ಮತ್ತು ಟಿಕೆಟ್ಟು ಕೊಡುವ ಸ್ಥಳಗಳಲ್ಲೂ ನಿಂತುಕೊಂಡು ಪ್ರಯಾಣಿಕರ ಜೇಬಿನಿಂದ ಹಣ ಮತ್ತು ಇತರ ಪದಾರ್ಥಗಳನ್ನು ಅಪಹರಿಸುತ್ತಿರುವರೆಂದೂ ವರದಿಯಾಗಿದೆ.

ಜೈನ ದೇವಾಲಯಕ್ಕೆ ಹರಿಜನರ ಪ್ರವೇಶವಿಲ್ಲ

ಜೈನರು ಪುರಾತನ ಮತೀಯರೆಂದೂ, ಅವರು ಹಿಂದೂಗಳಿಂದ ಬೇರೆಯೆಂದೂ, ಅವರಿಗೆ ಪ್ರತ್ಯೇಕ ಸಂಸ್ಕೃತಿ ಮತ್ತು ವೈಶಿಷ್ಟ್ಯಗಳಿವೆಯೆಂದೂ, ಆದ್ದರಿಂದ ಜೈನ ದೇವಾಲಯಗಳಿಗೆ ಹರಿಜನ ದೇವಾಲಯ ಪ್ರವೇಶ ಮಸೂದೆಯು ಅನ್ವಯಿಸುವುದಿಲ್ಲವೆಂದೂ ಸಾಲಿಗ್ರಾಮದಲ್ಲಿ ಕಳೆದ ಶನಿವಾರ ನಡೆದ ಜೈನ ಮುಖಂಡರ ಸಭೆಯಲ್ಲಿ ತೀರ್ಮಾನವಾಗಿದೆ

ಗಣೇಶಾ ಟಾಕೀಸ್

18-3-49ನೇ ಶುಕ್ರವಾರದಿಂದ

ಅಮೋಘವಾದ ೨ನೇ ವಾರ

ಸಂಸಾರ ನೌಕ

(ತಮಿಳು)

ಪಾತ್ರ:— ಬಿ ಆರ್ ಪಂತಲು, ಟಿ.ಆರ್. ರಾಮಚಂದ್ರ, ಸೂರ್ಯಕುಮಾರಿ, ಪ್ರೇಮಾವತಿ

ಹೋಳಿ ಹಬ್ಬದ ಗಲಭೆಯಲ್ಲಿ ಒಬ್ಬನ ಮರಣ

ಕಲ್ಕತ್ತೆಗೆ ೨೨ ಮೈಲಿ ದೂರದ ಶಾಂಕಿನಾರಾ ಎಂಬಲ್ಲಿ ಹೋಳಿ ಹಬ್ಬದ ಸಂಬಂಧವಾಗಿ ಜನರು ಬಣ್ಣವನ್ನು ಪ್ರಯೋಗಿಸುತ್ತ ಎರಡು ಗುಂಪಿನವರಿಗೆ ಘರ್ಷಣೆ ನಡೆಯಿತೆಂದೂ, ಇದರಿಂದ ಒಬ್ಬ ಸತ್ತು, ೧೨ ಜನರಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ

೪ ನೂತನ ಸಿದ್ಧೌಷಧಗಳು

ಇಲ್ಲಿಯವರೆಗೆ ಔಷಧಿಗಳಿಂದ ಗುಣವಾಗದಿರುವ ಖಾಯಿಲೆಗಳನ್ನು ವಾಸಿ ಮಾಡುವಂತಹ ೪ ಸಿದ್ಧೌಷಧಿಗಳನ್ನು ಅಮೇರಿಕದಲ್ಲಿ ತಯಾರಿಸಲಾಗುತ್ತಿದೆಯೆಂದು ಹೇಳಲಾಗಿದೆ. ಕ್ಷಯ, ಪಾರ್ಶ್ವವಾಯು, ದ[illegible] ವಿಷಮ ಶೀತಜ್ವರ, ನೆಗಡಿ ಮುಂತಾದ ರೋಗಗಳನ್ನು ಈ ಔಷಧಿಗಳಿಂದ ಗುಣಪಡಿಸಬಹುದೆಂದು ಹೇಳಲಾಗಿದೆ.

ಮೈಸೂರು ರೈಲ್ವೆ ಕೆಲಸಗಾರರ ಸಂಘ

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಕಳೆದ ೯ನೇ ತಾ॥ ನಡೆದು ರಾಜೀನಾಮೆ ಕೊಟ್ಟ ಶ್ರೀ ಬಿ ಎಶ್. ರಾಜಾರಾಂ ಸ್ಥಾನದಲ್ಲಿ ಶ್ರೀ ಪಿ. ಆರುಮುಗಂರವರು ಕಾರ್ಯದರ್ಶಿಗಳನ್ನಾಗಿ ಚುನಾಯಿಸಲ್ಪಟ್ಟರು.

ರಾಜಕಮಲ್

ಮೈಸೂರು

18—3—49ರಿಂದ

ಅಮೋಘ 2ನೇ ವಾರ

ಪ್ರತಿ ದಿನ ೩ ಆಟಗಳು

ಅಪೂರ್ವವಾದ ಕಥಾ ವಿಶೇಷದಿಂದಲೂ ಇಂಪಾದ ಸಂಗೀತಗಳಿಂದಲೂ, ಮನೋಹರ ನೃತ್ಯಗಳಿಂದಲೂ ನಿಬಿಡವಾಗಿರುವ

ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಸಾಜನ್

ಪಾತ್ರ:— ಅಶೋಕ್ ಕುಮಾರ್ ರೆಹನ

MORNING SHOWS From 18-3-49 For 4 days

The Adventures of Marco Polo

WITH.- Gary Cooper Basil Rathbone

ಚಾಮುಂಡೇಶ್ವರಿ ಟಾಕೀಸ್

18-3-49ರಿಂದ ಜಯಪ್ರದವಾದ 4ನೇ ವಾರ

ಶೋಭನಾಚಲರವರ

ಕೀಲುಗುರ್ರಂ

(ತೆಲುಗು)

—: ನಟವರ್ಗ—

ಅಂಜಲಿದೇವಿ, ನಾಗೇಶ್ವರರಾವ್ ಮುಂತಾದವರು

Morning Shows for 4 days From 18-3-49

M G M's **UNDER CURRENT**

Featuring —Robert Taylor, Katharine Hepburn

* ಪ್ರಭುದೇವಾ ಟಾಕೀಸ್‌ನಲ್ಲಿ *

18-3-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವಹಿ ★ **ಸೂರ್ಯಪುತ್ರಿ** ★ 3 ಆಟಗಳು

[ತಮಿಳು]

ಪಾತ್ರ:- ಟಿ. ಆರ್. ರಾಜಕುಮಾರಿ, ಕೊತ್ತಮಂಗಲಂ ಶೀನು, ಸುಂದರೀ ಬಾಯಿ, ಎಸ್. ಜಾನಕಿ, ಚೆಲ್ಲಂ ಮುಂತಾದವರು

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೬] ಶುಕ್ರವಾರ ೧೮-೩-೧೯೪೮ [ಸಂಚಿಕೆ ೧೫೧

-ಭಾರತದೊಡನೆ- ಮೈಸೂರು ಸೈನ್ಯದ ಐಕ್ಯ

ಕಾಂ|| ಅಧ್ಯಕ್ಷರ ಪ್ರವಾಸ ಮುಂದೆ ಹೋಯಿತು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ನಾಳೆ ದೆಹಲಿಗೆ ಪ್ರಯಾಣ ಬೆಳೆಸುವುದರಿಂದ ಸಂಸ್ಥಾನಾದ್ಯಂತ ಕೈಕೊಂಡಿದ್ದ ಪ್ರವಾಸವನ್ನು ಏಪ್ರಿಲ್ ತಿಂಗಳಿಗೆ ಮುಂದುಹಾಕಿದ್ದಾರೆ.

ಹಿಂದೂ ಮಹಾ ಸಭಾ ನಾಯಕರುಗಳ ಪ್ರವಾಸ

ಮೈಸೂರು ಸಂಸ್ಥಾನದ ಹಿಂದೂ ಮಹಾ ಸಭಾಧ್ಯಕ್ಷರಾದ ಶ್ರೀ ಎಂ.ಸಿ ಮಲ್ಲಪ್ಪನವರೂ, ಕಾರ್ಯದರ್ಶಿಗಳಾದ ಶ್ರೀ ಎಸ್ ಪುಟ್ಟಿ...ರಯ್ಯನವರೂ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರವಾಸವನ್ನು ಕೈಗೊಂಡಿರುತ್ತಾರೆ

೪ ಲಕ್ಷ ಎಕರೆ ಜಮೀನು ಸಾಗುವಳಿ

ಮದರಾಸ್ ಪ್ರಾಂತ್ಯದಲ್ಲಿ ೪ ಲಕ್ಷ ಎಕರೆ ಜಮೀನುಗಳನ್ನು ಸಾಗುವಳಿಗೆ ತರಲು ಯೋಜನೆ ತಯಾರಾಗಿದೆಯೆಂದೂ ಅದಕ್ಕೆ ... ಕೋಟಿ ರೂ. ವೆಚ್ಚವಾಗುವುದೆಂದೂ ತಿಳಿಸಲಾಗಿದೆ

ದಹಲಿಯ ಬಸ್ಸುಗಳಲ್ಲಿ ಮಹಿಳಾ ಕಂಡಕ್ಟರುಗಳು

ದೆಹಲಿ ನಗರದಲ್ಲಿ ಸರ್ಕಾರದವರಿಂದ ನಡೆಸಲ್ಪಡುತ್ತಿರುವ ಬಸ್ಸುಗಳಲ್ಲಿ ಮಹಿಳಾ ಕಂಡಕ್ಟರುಗಳನ್ನು ನೇಮಿಸಲು ನಿರ್ಧಾರವಾಗಿದೆ

ಸಯಾಂ ಸರ್ಕಾರವನ್ನು ಉರುಳಿಸಲು ಪಿತೂರಿ

ಸಯಾಮಿನ ರಾಜಧಾನಿಯಾದ ಬಾಂಗಾಕಿನಲ್ಲಿ ಮೊನ್ನೆ ರಾತ್ರಿ ಪೋಲೀಸರಿಗೂ ನೌಕಾಪಡೆಯವರಿಗೂ ಘರ್ಷಣೆ ನಡೆಯಿತೆಂದೂ, ಯಾರೋ ನೂತನ ಸರ್ಕಾರ ಸ್ಥಾಪಿಸಲಾಯಿತೆಂದೂ ರೇಡಿಯೋದಿಂದ ಪ್ರಚಾರ ಮಾಡಿದರೆಂದೂ ಹೇಳಲಾಗಿದೆ. ಸರ್ಕಾರವನ್ನು ಉರುಳಿಸುವ ಪಿತೂರಿಯಲ್ಲಿ ಸೇರಿದ್ದವರೆಂದು ೩ ಜನ ಮಾಜಿ ಮಂತ್ರಿಗಳನ್ನು ಪೋಲೀಸರು ದಸ್ತಗಿರಿಮಾಡಲು ಹೋದಾಗ ಅವರು ಪರಾರಿಯಾಗಲು ಯತ್ನಿಸಿದರೆಂದೂ, ಆಗ ಅವರನ್ನು ಗುಂಡಿನಿಂದ ಹೊಡೆದು ಕೊಲ್ಲಲಾಯಿತೆಂದೂ ವರದಿಯಾಗಿದೆ

ಧತ್ತೂರಿ ವಿಷ ಕೊಟ್ಟು ಮೋಸಪಡಿಸುವ ತಂಡ

ಮಧ್ಯ ಪ್ರಾಂತ್ಯದಲ್ಲಿ ಜನರಿಗೆ ದತ್ತೂರಿ ಎಂಬ ವಿಷ ಪ್ರಯೋಗದ ಸಿಹಿ ತಿಂಡಿಗಳನ್ನು ಕೊಟ್ಟು ಅವರನ್ನು ಮೋಸಗೊಳಿಸುತ್ತಿರುವ ಕೃತ್ಯಗಳು ಹೆಚ್ಚಾಗುತ್ತಿವೆಯೆಂದೂ, ಆದ್ದರಿಂದ ಜನರು ಎಚ್ಚರಿಕೆಯಿಂದಿದ್ದು ಅಂತಹ ಪ್ರಸಂಗಗಳನ್ನು ಪೊಲೀಸರಿಗೆ ತಿಳಿಸಿ, ಮೋಸಗಾರರನ್ನು ಹಿಡಿದುಕೊಟ್ಟಲ್ಲಿ ಬಹುಮಾನ ಕೊಡಲಾಗುವುದೆಂದೂ ಸರ್ಕಾರದವರು ತಿಳಿಸಿರುತ್ತಾರೆ. ಈ ರೀತಿಯ ಅಂತರ ಪ್ರಾಂತೀಯ ತಂಡದವರು ಎಲ್ಲೆಲ್ಲೂ ತಿರುಗುತ್ತಿದ್ದು ಜನರೊಡನೆ ಸ್ನೇಹಬೆಳೆಸಿ, ಅವರಿಗೆ ವಿಷಪ್ರಯೋಗದ ಸಿಹಿ ತಿಂಡಿಗಳನ್ನು ಕೊಟ್ಟು ಹಣ ಮತ್ತು ಇತರ ವಸ್ತುಗಳನ್ನು ಅಪಹರಿಸುತ್ತಿದ್ದಾರೆಂದು ಹೇಳಲಾಗಿದೆ

ಆರ್. ಎಸ್. ಎಸ್. ಮೇಲಿನ ಪ್ರತಿಬಂಧಕ ರದ್ದಾಗುವುದೇ

ಆರ್ ಎಸ್ ಎಸ್. ಸಂಸ್ಥೆಯ ಮೇಲೆ ಇರುವ ಬಹಿಷ್ಕಾರವನ್ನು ಭಾರತ ಸರ್ಕಾರದವರು ತೆಗೆದುಹಾಕಬಹುದೆಂದು ತಿಳಿದು ಬಂದಿದೆ ಸಂಸ್ಥೆಯ ಅಂಗ ರಚನೆಯ, ಕರಡು ಪ್ರತಿಯನ್ನು ಅದರ ನಾಯಕರು ಸರ್ದಾರ್ ಪಟೇಲರಿಗೆ ಕಳುಹಿಸಿರುವರೆಂದೂ, ಅದು ಹಿಂಸಾಯುತ ವರ್ತನೆಯನ್ನು ತ್ಯಜಿಸಿ, ಸಾಂಸ್ಕೃತಿಕ ಕಾರ್ಯದಲ್ಲಿ ತೊಡಗುವುದಲ್ಲದೆ ಅದರ ಸದಸ್ಯರಿಗೆ ಯಾವುದೇ ರಾಜಕೀಯ ಪಕ್ಷಕ್ಕೆ ಸೇರುವ ಹಕ್ಕಿರುವುದೆಂದೂ ಮತ್ತು ತ್ರಿವರ್ಣ ಧ್ವಜವನ್ನು ರಾಷ್ಟ್ರ ಧ್ವಜವೆಂದು ಅದು ಅಂಗೀಕರಿಸುವುದೆಂದೂ ಗೊತ್ತಾಗಿದೆ

ಹಿಂದೂ ದೇವಾಲಯದ ಕಲಶಕ್ಕೆ ಮುಸ್ಲಿಮರ ನೆರವು

ಗುಲ್ಬರ್ಗದ ಸುಪ್ರಸಿದ್ಧ ಶರಣ ಬಸಪ್ಪ ದೇವಾಲಯಕ್ಕೆ ಕಲಶವನ್ನು ಹಾಕಲು ಇಷ್ಟು ದಿನಗಳೂ ಅಡ್ಡಿಪಡಿಸುತ್ತಿದ್ದ ಮುಸ್ಲಿಮರು ಈಗ ಅದನ್ನು ಹಾಕಬೇಕೆಂದು ತಾವೇ ಪ್ರಾರ್ಥಿಸಿಕೊಂಡಿರುತ್ತಾರೆ ನಾಳಿದ್ದು ಈ ಕಲಶ ಸ್ಥಾಪನಾ ಮಹೋತ್ಸವವು ನಡೆಯುವುದು

ಮದರಾಸ್ ಗವರ್ನರ ಸಂಬಳ ಖೋತಾ

ಮದರಾಸ್ ಗವರ್ನರ ಕಚೇರಿಯ ಖರ್ಚು ವರ್ಷಕ್ಕೆ ೧೨,೦೦೦ ಇದ್ದುದನ್ನು ೨೩ ಸಾವಿರ ರೂಗೆ ಇಳಿಸಲಾಗಿದೆ ಅವರ ಸಿಬ್ಬಂದಿ ಪ್ರವಾಸ ಮುಂತಾದವುಗಳಿಗೆ ವರ್ಷಕ್ಕೆ ಒಟ್ಟು ೧೩.೬೮ ಲಕ್ಷ ರೂ ಖರ್ಚಾಗುತ್ತಿದ್ದುದು ಈಗ ೬.೭೭ ಲಕ್ಷ ರೂ ಗೆ ಇಳಿದಿದೆ ಗವರ್ನರು ತಾವಾಗಿಯೇ ತಮ್ಮ ಸಂಬಳ ಮತ್ತು ಇತರ ವೆಚ್ಚಗಳನ್ನು ಕಡಿಮೆ ಮಾಡಿಕೊಂಡಿರುವರು ಗೌರ್ನರರ ಸಂಬಳ ತಿಂಗಳಿಗೆ ಹತ್ತು ಸಾವಿರ ರೂ ಇದ್ದುದು ಈಗ ೫೫೦೦ಕ್ಕೆ ಇಳಿದಿದೆ

ಭಾರತದ ಹೊಸ ಟಂಕಸಾಲೆ

ಅಲಿಪುರದ ಬಳಿ ಅತ್ಯಾಧುನಿಕ ರೀತಿಯಲ್ಲಿ ನೂತನ ಟಂಕಸಾಲೆಯನ್ನು ಭಾರತ ಸರ್ಕಾರದವರು ಸ್ಥಾಪಿಸಲಿರುವರೆಂದೂ, ೧೯೫೧ ರ ಹೊತ್ತಿಗೆ ಅದು ಸಿದ್ಧವಾಗುವುದೆಂದೂ ಹೇಳಲಾಗಿದೆ

ಸಿ. ಆರ್. ರೆಡ್ಡಿಯವರ ವರದಿ

ಸ್ವಂ ಸು ಫೋ] ಬೆಂಗಳೂರು ೧೮

ಡಾ|| ಸಿ ಆರ್ ರೆಡ್ಡಿಯವರು ಏಪ್ರಿಲ್ ೧ ನೇ ತಾ|| ಗೆ ಇಲ್ಲಿಗೆ ಹಿಂದಿರುಗಿ ಸಂಸ್ಥಾನದ ವಿದ್ಯಾಭ್ಯಾಸದ ಸುಧಾರಣೆಯ ವಿಚಾರವಾಗಿ ತಮ್ಮ ವರದಿಯನ್ನು ಒಂದು ವಾರದಲ್ಲಿ ಒಪ್ಪಿಸುವರೆಂದು ತಿಳಿದುಬಂದಿದೆ

○ ಮನರಂಜನೆ ತೆರಿಗೆಯನ್ನು ಏಪ್ರಿಲ್ ೧ ರಿಂದ ಕೃಷ್ಣರಾಜನಗರದಲ್ಲಿ ವಸೂಲು ಮಾಡಲಾಗುವುದೆಂದು ಸರ್ಕಾರೀ ಪ್ರಕಟಣೆ ತಿಳಿಸುತ್ತದೆ

○ ಚಿತ್ರದುರ್ಗದ ವಕೀಲರಾದ ಶ್ರೀ ಬಿ ಎಸ್. ಜಯದೇವಾರವರನ್ನು ಶಿವಮೊಗ್ಗದ ಎರಡನೇ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಲಾಗಿದೆ

ರಾಷ್ಟ್ರ ಕವಿಗಳು

ದೇಶ ಭಾಷೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಲು ಮದರಾಸ್ ಸರ್ಕಾರದವರು ವಿವಿಧ ಭಾಷೆಗಳಲ್ಲಿ ಕೆಳಗೆ ಕಂಡ ೫ ಜನ ರಾಷ್ಟ್ರ ಕವಿಗಳನ್ನು ನೇಮಿಸಿದ್ದಾರೆ ಅವರಿಗೆ ೫ ವರ್ಷಗಳವರೆಗೆ ವರ್ಷಕ್ಕೆ ೧ ಸಾವಿರ ರೂ ನಂತೆ ಸಂಭಾವನೆಯನ್ನು ಕೊಡಲಾಗುವುದು-ಕನ್ನಡ ಶ್ರೀ ಎಂ ಗೋವಿಂದಪೈ, ತಮಿಳು ಶ್ರೀ ನಾಮಕಲ್ ರಾಮಲಿಂಗ ಪಿಳ್ಳೆ; ತೆಲುಗು-ಶ್ರೀ ಚೆಲ್ಲಪಿಲ್ಲ ವೆಂಕಟೇಶ ಶಾಸ್ತ್ರಿ, ಮಲಯಾಳ-ಶ್ರೀ ವಲ್ಲತೋಳ್ ನಾರಾಯಣ ಮೇನನ್; ಸಂಸ್ಕೃತ-ಶ್ರೀ ಕೆ ಎಸ್ ಕೃಷ್ಣಮೂರ್ತಿ ಶಾಸ್ತ್ರಿ

ಕೊಡಗಿನ ಭವಿಷ್ಯ

ಕೊಡಗು, ಅಜ್ಮೀರ್-ಮೇವಾರು, ಪಂಥ್-ಪಿಪ್ಲೋಡ ಮುಂತಾದ ಪ್ರದೇಶಗಳನ್ನು ನೆರೆಯ ಪ್ರಾಂತ್ಯ ಅಥವ ಸಂಸ್ಥಾನಗಳಲ್ಲಿ ಐಕ್ಯಗೊಳಿಸುವ ವಿಚಾರವು ಕೇಂದ್ರ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆಯೆಂದು ಹೇಳಲಾಗಿದೆ

ಮೊಹಲ್ಲಾ ಪರಿಶೀಲನೆ

ನಾಳೆ ಬೆಳಗ್ಗೆ ೮-೩೦ ಗಂಟೆಯಿಂದ ಪುರ ಸಭಾಧ್ಯಕ್ಷರೂ, ಸದಸ್ಯರೂ ಮತ್ತು ಅಧಿಕಾರಿ ವರ್ಗದವರೂ ದೇವರಾಜಾ ಮಾರ್ಕೆಟ್, ಶೀಲಯ್ಯನ ಗಲ್ಲಿ,ಆನೆ ಸಾಹುಕಾರ ಬೀದಿ ಮತ್ತು ಶಿವರಾಂಪೇಟೆಗಳಲ್ಲಿ ಪರಿಶೀಲನೆ ನಡೆಸುವರೆಂದೂ, ಅಲ್ಲಿನ ನಿವಾಸಿಗಳು ತಮ್ಮ ಕುಂದು ಕೊರತೆಗಳನ್ನು ತಿಳಿಸಬೇಕೆಂದೂ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎ ಕೃಷ್ಣಮೂರ್ತಿಯವರು ಪ್ರಾರ್ಥಿಸುತ್ತಾರೆ

ಬರುವ ಏಪ್ರಿಲ್‌ನಿಂದ ಮೈಸೂರು ಸೈನ್ಯ ಭಾರತಕ್ಕೆ

ಸ್ವಂ. ಸು ಫೋ] ಬೆಂಗಳೂರು ೧೮

ಮುಂದಿನ ತಿಂಗಳಿನಿಂದ ಮೈಸೂರು ಸಂಸ್ಥಾನದ ಸೇನಾ ದಳಗಳು ಭಾರತ ಸೇನೆಯೊಂದಿಗೆ ಐಕ್ಯವಾಗುವುವೆಂದು ನಂಬಿಕೆಗೆ ಅರ್ಹವಾದ ಕಡೆಗಳಿಂದ ತಿಳಿದುಬಂದಿದೆ. ಭಾರತದ ದಂಡನಾಯಕರಾದ ಜ|| ಕಾರಿಯಪ್ಪನವರ ಆಗಮನದ ಪರಿಣಾಮವಾಗಿ ಈ ವ್ಯವಸ್ಥೆಯು ಏರ್ಪಡುವುದೆಂದು ಹೇಳಲಾಗಿದೆ.

ಜ|| ಕಾರಿಯಪ್ಪನವರು ಈ ದಿನ ಸಂಜೆ ಇಲ್ಲಿಗೆ ಆಗಮಿಸುವರು. ಇಲ್ಲಿ ಅವರು ಎರಡು ದಿನಗಳಿರುವರು

ಪ್ರತಿ ತಿಂಗಳು ೩೦ನೇ ತಾ|| ಹರಿಜನ ದಿನಾಚರಣೆ

ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮವು ನಿರೀಕ್ಷಿಸಿದಷ್ಟು ಕಡೇರಿಲ್ಲವಾದುದರಿಂದ ಅದನ್ನು ತೀವ್ರಗೊಳಿಸಲು ಮದರಾಸ್ ಸರ್ಕಾರದವರು ಈ ವರ್ಷದ ಅಂತ್ಯದವರೆಗೆ ಪ್ರತಿ ತಿಂಗಳ ೩೦ ನೇ ತಾ||ಅನ್ನು ಹರಿಜನ ದಿನವನ್ನಾಗಿ ಆಚರಿಸಬೇಕೆಂದು ಸೂಚಿಸಿರುತ್ತಾರೆ ಈ ಬಗ್ಗೆ ಕಾಂಗ್ರೆಸ್, ಹರಿಜನ ಸೇವಕ ಸಂಘ ಮತ್ತು ಇತರ ಸಂಸ್ಥೆಗಳೊಡನೆ ಕಲೆತು ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಕಲೆಕ್ಟರುಗಳಿಗೆ ಆಜ್ಞೆ ಮಾಡಿರುತ್ತಾರೆ

ಹುಲ್ಲು ಮೆದೆಗೆ ಬೆಂಕಿ ಇಟ್ಟ ಪ್ರಸಂಗ

ಗುಂಡ್ಲುಪೇಟೆ ೧೭

ಗುಂಡ್ಲುಪೇಟೆ ತಾಲ್ಲೂಕು ಕೋಡಹಳ್ಳಿ ಗ್ರಾಮದಲ್ಲಿ ಕುಳ್ಳೆಗೌಡ ಎಂಬುವರ ಫಸಲನ್ನು ವ ಶ್ಯೊಂದ. ಕೋಮಿನವರು ಅಕ್ರಮವಾಗಿ ಕೊಯ್ದಿದರೆಂದೂ, ಕಳೆದ ೧೩ನೇ ತಾ|| ರಾತ್ರಿ ಅವರ ಹೊಲದಲ್ಲಿದ್ದ ಹುಲ್ಲು ಮೆದೆಗೆ ಬೆಂಕಿ ಇಟ್ಟು ನಾಶಪಡಿಸಿದರೆಂದೂ ವರದಿಯಾಗಿದೆ ಗ್ರಾಮಾಧಿಕಾರಿಗಳು ಪೋಲೀಸರಿಗೆ ದೂರುಕೊಡಲು ನಿರಾಕರಿಸಿದರೆಂದೂ, ಈಗ ನೊಂದವರೇ ಪೋಲೀಸರಿಗೆ ಅರ್ಜಿ ಕೊಟ್ಟಿರುವರೆಂದೂ ವರ್ತಮಾನ ಬಂದಿದೆ

ಉಪಾಧ್ಯಾಯರುಗಳಿಗೆ ೪೦ ರೂ. ಕನಿಷ್ಠ ಸಂಬಳ

ಪ್ರೈಮರಿ ಶಾಲಾ ಉಪಾಧ್ಯಾಯರುಗಳಿಗೆ ೪೦ ರೂ ಕನಿಷ್ಠ ಸಂಬಳ ಮತ್ತು ಪದವೀಧರ ಉಪಾಧ್ಯಾಯರುಗಳಿಗೆ ೧೫೦ ರೂ ಬೇಕೆಂದುಭಾರತ, ಸರ್ಕಾರದ ಕೇಂದ್ರ ವಿದ್ಯಾ ಸಲಹಾ ಸಮಿತಿಯು ಸಲಹೆ ಮಾಡಿರುವುದಾಗಿ ಕೇಂದ್ರ ಶಾಸನ ಸಭೆಯಲ್ಲಿ ವಿದ್ಯಾಸಚಿವರು ತಿಳಿಸಿರುತ್ತಾರೆ. ಈ ರೀತಿ ಸಂಬಳವನ್ನು ಕೊಡಬೇಕೆಂದು ಎಲ್ಲ ಪ್ರಾಂತ್ಯ ಸರ್ಕಾರಗಳನ್ನೂ ಕೋರಲಾಗಿದೆಯೆಂದು ತಿಳಿಸಲಾಗಿದೆ

ವಿಮಾನ ಮೂಲಕ ಅಂಚೆ ರವಾನೆ

ಮುಂದಿನ ೧ನೇ ತಾ|| ನಿಂದ ಎಲ್ಲ ಅಂಚೆ ಕಾಗದಗಳನ್ನು ವಿಮಾನದ ಮೂಲಕ ಒಯ್ಯಲಾಗುವುದೆಂದು ತಿಳಿಸಲಾಗಿದೆ.

೩೫ ವರ್ಷಕ್ಕೆ ಋತುಮತಿಯಾದ ಹುಡುಗಿ

ಗುಂತೂರು ಆಸ್ಪತ್ರೆ ಸೇರಿದ್ದ ವಾಸಿಸಿ ಮಾಡಿಸಿದ್ದ ೩ ವರ್ಷದ ಹೆಣ್ಣು ಮಗುವಿಗೆ ಋತುವಾದ ಮತ್ತು ಸ್ತನಗಳಾದ್ದ ಲಕ್ಷಣಗಳು ಕಂಡುಬಂದಿದ್ದವೆ ದು ಅಲ್ಲಿನ ವೈದ್ಯಾಧಿಕಾರಿಗಳು ತಿಳಿಸುತ್ತಾರೆ

ರಾಜರಿಲ್ಲದ ಕರ್ನಾಟಕಕ್ಕೆ ಸಮತಾವಾದಿಗಳ ಬೆಂಬಲ

ಬೆಂಗಳೂರು ೧೭

ಬೆಂಗಳೂರು, ನಗರದ ಸಮತಾವಾದಿ ಪಕ್ಷದ ಕಾರ್ಯಕಾರೀ ಸಮಿತಿಯ ಸಭೆಯು ಕಳೆದ ಭಾನುವಾರ ನಡೆದು ಮೈಸೂರು ಅರಸರಿಲ್ಲದ ಐಕ್ಯ ಕರ್ನಾಟಕ ಪ್ರಾಂತ್ಯ ಸ್ಥಾಪನೆಯಾಗಬೇಕೆಂಬ ಗುಲ್ಬರ್ಗದ ನಿರ್ಣಯಕ್ಕೆ ಸ್ವಾಗತವಿತ್ತು, ಮೈಸೂರಿನ ಜನತೆಯು ಕಾಂಗ್ರೆಸ್ಸಿನವರ ಸ್ವಾರ್ಥ ಮನೋಭಾವಕ್ಕೆ ಒಳಗಾಗದೆ ದಿಟ್ಟತನದಿಂದ ಉಳಿದ ಕನ್ನಡಿಗರಿಗೆ ಬೆಂಬಲ ನೀಡಿ ಮೈಸೂರರಸರಿಲ್ಲದ ಕರ್ನಾಟಕ ರಾಜ್ಯದ ಸ್ಥಾಪನೆಗೆ ಹೋರಾಡಬೇಕೆಂದು ಕೋರುವ ನಿರ್ಣಯವು ಅಂಗೀಕೃತವಾಯಿತು.

ಅಂಚೆ ಕಳುವಿಗಾಗಿ ರೈಲ್ವೆ ಗಾರ್ಡಿನ ದಸ್ತಗಿರಿ

ಮೈಸೂರು, ರೈಲ್ವೆಯ ಮಾಜಿ ಗಾರ್ಡ್ ಎಸ್. ಎ. ಒಲೀರ್ [illegible] ಎಂಬುವರು, ಕಳೆದ ನವೆಂಬರ್ [illegible]ನೇ ತಾ [illegible] ರೈಲಿನಲ್ಲಿ [illegible] ಕೆಲಸ ಮಾಡುತ್ತಿದ್ದಾಗ ಅಂಚೆ ಚೀಲವನ್ನು ಒಡೆದು, ಇನ್‌ಷೂರೆನ್ಸ್ ಕವರಿನಲ್ಲಿ [illegible] ಸಾವಿರ ರೂ ನೋಟುಗಳನ್ನು ಅಪಹರಿಸಿದ್ದರೆಂಬ ಆಪಾದನೆಯ ಮೇಲೆ ಈಗ ಅವರನ್ನು ದಸ್ತಗಿರಿ ಮಾಡಿ [illegible] ರೂ ಅನ್ನು ವಶಪಡಿಸಿಕೊಳ್ಳಲಾಗಿದೆ.

ಕೆಮ್ಮುನವರಿಗೆ ೩ ಪೌಂಡ್ ಬಾಡಿಗೆ

ಅಮೆರಿಕದ ರೇಡಿಯೋ ಕೇಂದ್ರದಿಂದ ಕ್ಷಯರೋಗದ ವಿಚಾರವಾಗಿ ಪ್ರಚಾರ ಮಾಡುವಾಗ ಕೆಮ್ಮುವವರಿಗಾಗಿ ತಲಾ ೩ ಪೌಂಡು ಹಣವನ್ನು ಕೊಡಬೇಕೆಂದು ಅಲ್ಲಿನ ಕಲಾವಿದ ಸಂಘದವರು ನಿರ್ಧರಿಸಿರುತ್ತಾರೆ. ಕೆಮ್ಮುವುದೂ ಒಂದು ಕಲೆ ಯೆಂದು ಅವರು ಹೇಳುತ್ತಾರೆ.

ಮಿ॥ ಗ್ರೋಸ್ ರವರು ರಾಯಭಾರಿಗಳಾದರು

ನ್ಯೂಯಾರ್ಕಿನ ಎಡ್ವರ್ಡ್ ಆರ್. ಹ ಡ್ಲಿ ಎಂಬ [illegible]ಗ್ರೋಸರವರನ್ನು ಸ್ವಿಟ್ಸರ್ಲೆಂಡಿಯಾದಲ್ಲಿ ಅಮೆರಿಕದ ರಾಯಭಾರಿಗಳಾಗಿ ಅಧ್ಯಕ್ಷ ಟ್ರೂಮನ್‌ರು ನೇಮಿಸಿದ್ದಾರೆ.

ವಿವಾಹ ಮಹೋತ್ಸವಗಳು

ಮಾಂಬಳ್ಳಿಯ ಸಾಹುಕಾರ್ ಶ್ರೀ ಎಂ. ಎಸ್. ಬಸವಣ್ಣದೇವರುರವರುಗಳವರ ಪುತ್ರಿ ಶ್ರೀ ಎಂ. ಸಿ. ಸುಬ್ಬಣ್ಣನವರ ಪುತ್ರಿ ಚಿ॥ ಸೌ ಪನ್ನಗವೇಣಮ್ಮನವರನ್ನು ತಲಕಾಡು ಸಾಹುಕಾರ್ ಶ್ರೀ ಟಿ. ಎಸ್. ಸದಾಶಿವ ಮೂರ್ತಿಯವರ ಪುತ್ರ ಶ್ರೀ ಟಿ. ಎಸ್. ನಟೇಶ ಮೂರ್ತಿಯವರಿಗೆ ಕೊಟ್ಟು ನಿನ್ನೆ ವಿವಾಹವನ್ನು ನೆರವೇರಿಸಿದರು.

ನಿವೃತ್ತ ಓವರ್‌ಸಿಯರಾದ ಶ್ರೀ ಕೆ. [illegible] ಕೃಷ್ಣಮೂರ್ತಿಯವರು ತಮ್ಮ ಪುತ್ರಿ ಚಿ॥ಸೌ॥ ಸುಬ್ಬಲಕ್ಷ್ಮಮ್ಮನವರನ್ನು ಮಾದಾಪುರದ ಶ್ರೀ ವೆಂಕಟಕೃಷ್ಣಪ್ಪನವರಿಗೆ ಕೊಟ್ಟು ವಿವಾಹವನ್ನು ನಿನ್ನೆ ರಾಜಧಾನಿಯಲ್ಲಿ ನೆರವೇರಿಸಿದರು.

೫೯ ವರ್ಷದ ಮಹಿಳೆಗೆ ಮಗು

ಅಮೆರಿಕದ ೫೯ ವರ್ಷದ ಫ್ರ[illegible] ಎಂಬ ಮಹಿಳೆಗೆ ಈಗ ಒಂದು ಗಂಡು ಮಗುವು ಜನನವಾಗಿದೆ. ಇಷ್ಟು ವಯಸ್ಸಿನ ಹೆಂಗಸಿಗೆ ಮಕ್ಕಳಾಗಿರುವುದು ಸ್ವಲ್ಪ ಆಶ್ಚರ್ಯವನ್ನುಂಟು ಮಾಡಿದೆ. [illegible]ನೇ ಶತಮಾನದಲ್ಲಿ ಸ್ಕಾಂಡಿನೇ[illegible] ೧೦೩ ವರ್ಷದ ಮಹಿಳೆಯೊಬ್ಬಳು [illegible]ವತಿಯಾಗಿದ್ದಳೆಂದೂ, [illegible] ಸ್ಕಾಟ್ಲೆಂಡಿನ ೬೨ ವರ್ಷದ [illegible]ನ್ನ ೨೨ ನೇ ಮಗುವಿಗೆ ಜನ್ಮವಿತ್ತಳೆಂದೂ ಹೇಳಲಾಗಿದೆ.

ಚೀಣದ ಅಧ್ಯಕ್ಷರನ್ನು ಅಪಹರಿಸಲು ಪಿತೂರಿ

ಚೀಣದ ಅಧ್ಯಕ್ಷರಾದ ಲೀರವರ [illegible]ಕಾರದ ಇಬ್ಬರು ಪ್ರಮುಖ ಅಧಿ[illegible]ಳು ಅಪಹರಿಸಿ ಕಮ್ಯೂನಿಸ್ಟರು [illegible]ಟ್ಸಿನದಿಯನ್ನು ದಾಟಲು ಅನುಕೂ[illegible]ಗುವಂತೆ ಪಿತೂರಿ ನಡೆಸಿದ್ದರೆಂದು [illegible] ಅವರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಹೇಳಲಾಗಿದೆ.

ನಿರುದ್ಯೋಗದ ಪರಿಣಾಮವಾಗಿ ಪ್ರಣಯಿಗಳ ಆತ್ಮಹತ್ಯೆ

ಪಶ್ಚಿಮ ಜರ್ಮನಿಯ [illegible] ಎಂಬಲ್ಲಿ ಅರ್ನೆಸ್ಟ್ ಸ್ಮಿತ್ ಎಂಬ [illegible]ದ ಯುವಕ ಮತ್ತು ಮೇರಿ ಆಲ್[illegible]ಬರ್ ಎಂಬ ೧೭ ವರ್ಷದ ಹುಡುಗಿ[illegible]ಗಳಿಗೆ ಪರಸ್ಪರ ಪ್ರೇಮ ಬೆಳೆದು ಮ[illegible] ಮಾಡಿಕೊಳ್ಳಲು ಯಾವ ಸೌಕರ್ಯ ದೊರೆಯದಿದ್ದುದರಿಂದ ಗುಂಡಿನಿಂದ [illegible]ದೆದುಕೊಂಡು ಇಬ್ಬರೂ ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ.

ಧರಣೀಕೆ ಆಕಾಶವುಕಾರೆ ಆಜಾ ಆಜಾ ಪ್ರೇಮ್‌ದ್ವಾರೆ ಅನಾಹೀ ಹೋಗಾ!
ಈ ಹಾಡು ನಿಮ್ಮ ಮನವನ್ನೇ ಸೂರೆಗೊಳ್ಳುವುದು!

ಮೇಲಾ MELA

ಪಾತ್ರ ನರ್ಗೀಸ್ – ದಿಲೀಪ್ ಕುಮಾರ್ – ಜೀವನ್

ಈಗ 5 ನೇ ವಾರ ವುಡ್‌ಲ್ಯಾಂಡ್ಸ್ ಟಾಕೀಸಿನಲ್ಲಿ

ಬೆಂಗಳೂರು ಮೆಜಸ್ಟಿಕ್‌ನಲ್ಲಿ 8ನೇ ವಾರ

A Dreamland Pictures Release

ಅಪೇರಾ ಟಾಕೀಸ್

18-3-49ನೇ :: ಶುಕ್ರವಾರದಿಂದ

ಪ್ರತಿ ದಿನ ೩ ಆಟಗಳು

ಶ್ರೀ ಮಹಾ ಸಭಾ

ಅಮೋಘ ತಮಿಳು ಚಿತ್ರ

ಪಾತ್ರ – ಎಸ್.ಎಂ. ಕುಮರೇಶ್, ಬಿ.ಎಸ್. ಸರೋಜ, ಪುಳಿಮೂಟ್ಟೆ ಕುಮಾರಿ ಎಂ. ರಾಜಂ.

Yashodhara Release

ಗಾಯತ್ರೀ ಟಾಕೀಸ್

ಪ್ರತಿ ದಿನ ೩ ಆಟಗಳು

18-3-49ರಿಂದ 6 ದಿನಗಳು ಮಾತ್ರ

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಚಿತ್ರ
ಆಂಗ್ಲೇಯ ಸುಪ್ರಸಿದ್ಧ ಕವಿ ರಾಬರ್ಟ್ ಲೂಯಿಸ್ ಸ್ಟೀವನ್‌ಸನ್‌ರವರ
ಕೊಲಂಬಿಯಾರವರ

ದಿ ಬ್ಲಾಕ್ ಆರೋ

THE BLACK ARROW

ಪಾತ್ರ – ಲೂಯಿಸ್ ಹೇವರ್ಡ್ ಮತ್ತು ಜಾನೆಟ್ ಬ್ಲೇರ್

–ಬೆಳಗಿನ ಪ್ರದರ್ಶನ–

19-1-49ರಿಂದ 2 ದಿನಗಳು

ದಿ ಬಾಡಿ ಸ್ನ್ಯಾಚರ್

ಪಾತ್ರ – ಬೋರಿಸ್ ಕಾರ್ಲಾಫ್

ಲಗ್ನದ ಜವಳಿಗಾಗಿ
ಗುರುದೇವಾ [illegible]
ಬೆಂಗಳೂರು ಜವಳಿ ಅಂಗಡಿ[illegible]
[illegible]
ಶಿವರಾಂಪೇಟೆ :: [illegible]

RAJAKAMAL
Mysore.

MORNING SHOW
From 18-3-49 For 4 d[ays]

ALONG CAM[E]
JONES

With– Gary Cooper
Loretta Young

Edited, printed and published by A.R. Nagarajan at the Sadhvi Press D. Subbiah Road, Mysore.,

* ಪ್ರಭುದೇವಾ ಟಾಕೀಸ್‌ನಲ್ಲಿ *

18-3-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವೂ ★ ಸೂರ್ಯ ಪುತ್ರಿ ★ 3 ಆಟಗಳು

[ತಮಿಳು]

ಪಾತ್ರ:– ಟಿ.ಆರ್. ರಾಜಕುಮಾರಿ, ಕೊತ್ತಮಂಗಲಂ ಶೀನು, ಸುಂದರೀ ಬಾಯಿ, ಎಸ್. ಜಾನಕಿ, ಚೆಲ್ಲಂ ಮುಂತಾದವರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಂಪುಟ ೭] ಶನಿವಾರ ೧೯-೩-೧೯೪೯ [ಸಂಚಿಕೆ ೧೯೨

ಮೈಸೂರಿನ ಭವಿಷ್ಯ ಪರಿಶೀಲನೆಯಲ್ಲಿದೆ

ಭಾರತದಲ್ಲಿರುವ ಒಟ್ಟು ೫೦೨ ಸಂಸ್ಥಾನಗಳ ಪೈಕಿ ೫೩೮ ಸಂಸ್ಥಾನಗಳು ಒಕ್ಕೂಟಕ್ಕೆ ಸೇರಿವೆ. ಮಣಿಪುರ, ಕಾಶಿ, ಕೂಚ್ ಬಿಹಾರ್, ರಾಮಪುರ, ತ್ರಿಪುರ, ಟೆಹರಿ ಗರವಾಲ ಸಂಸ್ಥಾನಗಳನ್ನೂ ಸೇರಿಸಿಕೊಳ್ಳಲಾಗುವುದು. ಮೈಸೂರು, ತಿರುವಾಂಕೂರು ಮತ್ತು ಕೊಚ್ಚಿಗಳ ಬಗ್ಗೆ ಅನುಸರಿಸಬೇಕಾದ ನೀತಿಯನ್ನು ಪರಿಶೀಲಿಸಲಾಗುತ್ತಿದೆ ಹೈದರಾಬಾದ್ ಮತ್ತು ಕಾಶ್ಮೀರದ ಭವಿಷ್ಯವು ಅಲ್ಲಿನ ಪ್ರಜೆಗಳಿಗೇ ಸೇರಿದ್ದು. ರಾಜ ಧನವನ್ನು ಕಡಿಮೆ ಮಾಡಿರುವುದರಿಂದ ೨॥ ಕೋಟಿ ರೂ ಉಳಿತಾಯವಾಗಿದೆ ಎಂದು ಭಾರತದ ಸಂಸ್ಥಾನ ಶಾಖೆಯ ವರದಿಯಲ್ಲಿ ತಿಳಿಸಲಾಗಿದೆ

ಉಲುಚುನಾಡು ಸಭೆ

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭೆಯ ಮಂದಿರದಲ್ಲಿ ನಾಳೆ ಸಂಜೆ ೪ ಗಂಟೆಗೆ ಉಲುಚುನಾಡ ಮಹಾಸಭೆಯು ನಡೆಯುವುದು. ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಪ್ರಾರ್ಥಿಸಲಾಗಿದೆ

ವಿಶ್ವ ಸಂಸ್ಥೆಗೆ ರಕ್ಷಣಾ ಪಡೆ

ವಿಶ್ವ ಸಂಸ್ಥೆಯ ಅಧಿಕಾರಿ ವರ್ಗದವರು ಪರದೇಶಗಳಲ್ಲಿ ಕೆಲಸ ಮಾಡಲು ಹೋದಾಗ ಅವರ ರಕ್ಷಣೆಗಾಗಿ ಒಂದು ಪಡೆಯನ್ನು ಸ್ಥಾಪಿಸುವ ವಿಚಾರವನ್ನು ಮುಂದಿನ ತಿಂಗಳು ನಡೆಯುವ ವಿಶ್ವ ಸಂಸ್ಥೆಯ ಸಭೆಯಲ್ಲಿ ಪರಿಶೀಲಿಸಲಾಗುವುದೆಂದೂ ಈ ಪಡೆಗೆ ೧೦೦೦ ಮಂದಿಯನ್ನು ಮಾತ್ರ ಸೇರಿಸಲಾಗುವುದೆಂದೂ ಹೇಳಲಾಗಿದೆ

ಪೂರ್ವ ಪಶ್ಚಿಮಗಳ ಭಿನ್ನತೆಯಿಂದ ಯುದ್ಧ ಅನಿವಾರ್ಯ

ವಿಶ್ವ ಸಂಸ್ಥೆಯ ಸೆಕ್ರೆಟರಿ ಜನರಲ್ ಶ್ರೀ ಟ್ರಿಗ್ವಿ ಲೀಯವರು ಒಂದು ಹೇಳಿಕೆಯಿತ್ತು ಪೂರ್ವ ಮತ್ತು ಪಶ್ಚಿಮ ಮಧ್ಯೆ ಬೆಳೆಯುತ್ತಿರುವ ಭಿನ್ನತೆಗಳನ್ನು ನಿವಾರಿಸಿ ಪರಸ್ಪರ ಸೌಹಾರ್ದವನ್ನು ಉಂಟುಮಾಡದಿದ್ದರೆ ಮತ್ತೊಂದು ಮಹಾ ಯುದ್ಧವು ಅನಿವಾರ್ಯವೆಂದು ತಿಳಿಸಿರುತ್ತಾರೆ

ಮನುಷ್ಯನ ದೇಹದಲ್ಲಿ ಕೋತಿಯ ನರ

ಕ್ಯಾಲಿಫೋರ್ನಿಯ ಆಸ್ಪತ್ರೆಯೊಂದರಲ್ಲಿ ಕಾಲು ಮುರಿದ ವ್ಯಕ್ತಿಯಾದ ೪೩ ವಯಸ್ಸಿನವನೊಬ್ಬನ ಹೃದಯದ ಮೇಲ್ಭಾಗದಲ್ಲಿ ೧೫ ಅಂಗುಲ ಉದ್ದವಿರುವ ಕೋತಿಯ ನರವನ್ನು ಇಡಲಾಗಿದೆ ಎಂದು ಹೇಳಲಾಗಿದೆ

ಕರಾಚಿಯಲ್ಲಿ ಕಾಟನ್ನನ ಮೋಸ

ಹೈದರಾಬಾದಿಗೆ ಅಕ್ರಮವಾಗಿ ಶಸ್ತ್ರಗಳನ್ನು ಸರಬರಾಜು ಮಾಡಿ ಪ್ರಖ್ಯಾತಿ ಪಡೆದ ಸಿಡ್ನಿ ಕಾಟನ್ನನು ಕೆಲವು ತಿಂಗಳ ಹಿಂದೆ ಕರಾಚಿಯ ವರ್ತಕರಲ್ಲಿ ೯೦ ಸಾವಿರ ರೂ.ಗೆ ಒಂದು ಚೆಕ್ಕನ್ನು ಕೊಟ್ಟು ಅಕ್ರಮವಾದ ಚೆಕ್ಕನ್ನು ಕೊಟ್ಟಿದ್ದೂ, ಅದರ ಮೇಲೆ ಅಲ್ಲಿನ ವರ್ತಕರವರು ಅದನ್ನು ವಾಪಸು ಮಾಡಿದ್ದು ಕೋರ್ಟಿನಲ್ಲಿ ಈತನು ವರ್ತಕರಿಗೆ ಹಣ ಮತ್ತು ವ್ಯವಹಾರದ ಖರ್ಚು ಕೊಡಬೇಕೆಂದು ಆಜ್ಞೆಯಾಯಿತು.

೧೭೦೦ ಪಲ್ಲ ಭತ್ತ ವಸೂಲಿ

ಸ್ವಂ. ಸು] ಶ್ರೀರಂಗಪಟ್ಟಣ ೧೭

ಈ ತಾಲ್ಲೂಕಿನ ಅರಕೆರೆ ಗ್ರಾಮಕ್ಕೆ ಪ್ರ॥ ಪ್ರ॥ ಸಭೆ ಸದಸ್ಯರಾದ ಡಾ॥ ಸಿ ಬಂದಿಗೌಡರು, ಶ್ರೀ ಕೆ ವಿ ಶಂಕರೇಗೌಡ ಮತ್ತು ಅಧಿಕಾರಿ ವರ್ಗದವರು ೧೪ನೇ ತಾರೀಖು ಆಗಮಿಸಿ, ನೂತನ ಗ್ರಾಮಾಭಿವೃದ್ಧಿ ಯೋಜನೆಯನ್ನು ಗ್ರಾಮಸ್ಥರಿಗೆ ವಿವರಿಸಿದರು ಒಂದು ಸಾವಿರ ಪಲ್ಲ ಭತ್ತವನ್ನು ಗ್ರಾಮಸ್ಥರು ಕೊಡುವುದಾಗಿ ಭರವಸೆಯನ್ನು ಕೊಟ್ಟರು

ಡಾ॥ ಸಿ ಬಂದಿಗೌಡರು ಮತ್ತು ತಾಲ್ಲೂಕಿನ ಅಮಲ್ದಾರರಾದ ಶ್ರೀ ಎಸ್ ಕೃಷ್ಣಮೂರ್ತಿ, ಶ್ರೀ ಹೆಚ್ ಬಿ ಕೃಷ್ಣಯ್ಯ ಮತ್ತು ಇತರ ಖಾಸಗಿ ದೊಡ್ಡ ಮನುಷ್ಯರು ಬೆಳಗೊಳಕ್ಕೆ ೧೫ ನೇ ತಾರೀಖು ಹೋಗಿದ್ದರು. ಅಲ್ಲಿ ಸುಮಾರು ೩೦೦ ಪಲ್ಲ ಭತ್ತವನ್ನು ಗ್ರಾಮಸ್ಥರಿಂದ ಕೊಡಿಸಲು ವಾಗ್ದಾನ ಪಡೆದರು ಮಾರನೇ ದಿನ ಶ್ರೀ ಹೆಚ್. ಬೊನ್ನಯ್ಯ ಮುಂತಾದವರೊಡನೆ ಡಾ॥ ಬಂದೀಗೌಡರು ಮಹದೇವಪುರಕ್ಕೆ ಹೋಗಿ ಅಲ್ಲಿ ೪೦೦ ಪಲ್ಲ ಭತ್ತವನ್ನು ಗ್ರಾಮಸ್ಥರಿಂದ ಸರಕಾರಕ್ಕೆ ಕೊಡಿಸುವ ವಾಗ್ದಾನ ಪಡೆದು ವಾಪಸು ಬಂದರು

ಮದರಾಸ್-ಮೈಸೂರು-ತಿರುವಾಂಕೂರು ವಿಮಾನ ಸಂಚಾರದ ಏರ್ಪಾಡು

ಬರುವ ಏಪ್ರಿಲ್ ೧ನೇ ತಾರೀಖಿನಿಂದ ಬೊಂಬಾಯಿನ ಟಾಟಾ ಏರ್ ಲೈನ್ಸ್ ಕಂಪೆನಿಯವರು ಮದರಾಸಿನಿಂದ ಬೆಂಗಳೂರು, ಮೈಸೂರು, ಕೊಯಮತ್ತೂರು, ಕೊಚ್ಚಿ, ಮಾರ್ಗವಾಗಿ ತಿರುವನಂತಪುರಕ್ಕೆ ಪ್ರವಾದ ವಿಮಾನ ಸಂಚಾರದ ಏರ್ಪಾಟನ್ನು ವ್ಯವಸ್ಥೆಗೊಳಿಸುವರು

ಸಕ್ಕರ್ ಅಣೆಕಟ್ಟಿನಲ್ಲಿ ಬಿರುಕು

ಪ್ರಪಂಚದಲ್ಲೇ ಭಾರಿಯಾದ ಸಿಂಧ್ ಪ್ರಾಂತದ ಸುಕ್ಕೂರ್ ಅಣೆಕಟ್ಟು ಹಲವಾರು ಜಾಗಗಳಲ್ಲಿ ಬಿರುಕು ಬಿಟ್ಟಿದೆಯೆಂದು ಹೇಳಲಾಗಿದೆ ಅಣೆಕಟ್ಟಿನ ಮಧ್ಯಭಾಗದಲ್ಲಿರುವ ಸುಮಾರು ೧೦೦ ಅಡಿಗಳಷ್ಟು ದೂರದ ಕಂಬದಲ್ಲಿ ಈ ರೀತಿ ಬಿರುಕು ಕಾಣಿಸಿಕೊಂಡಿದೆ ಈ ಅಣೆಕಟ್ಟನ್ನು ಕಟ್ಟಲು ೧೭ ಕೋಟಿ ರೂ ಖರ್ಚಾಗಿತ್ತು

ವ್ಯಾಸರಾಜರ ಪುಣ್ಯದಿನ

ರಾಜಧಾನಿಯ ಚಿಕ್ಕ ಮೊಹಲ್ಲಾದಲ್ಲಿರುವ ಶ್ರೀ ಶ್ರೀನಿವಾಸರಾಘವೇಂದ್ರ ಮತ್ತು ಸತ್ಯನಾರಾಯಣ ಸೇವಾ ಸಂಘದ ವತಿಯಿಂದ ನೆನ್ನೆಯಿಂದ ಮೂರು ದಿನಗಳು ಶ್ರೀ ವ್ಯಾಸರಾಯ ಸ್ವಾಮಿಗಳವರ ಪುಣ್ಯದಿನಾಚರಣೆಯನ್ನು ನೆರವೇರಿಸಲಾಗುತ್ತಿದೆ

ದಂಡ ನಾಯಕರ ಆಗಮನ

ಸ್ವಂ ಸು. ಫೋನ್] ಬೆಂಗಳೂರು ೧೯

ಭಾರತದ ದಂಡ ನಾಯಕರಾದ ಜ॥ ಕಾರಿಯಪ್ಪನವರು ನೆನ್ನೆ ಸಂಜೆ ೪-೩೦ಕ್ಕೆ ವಿಮಾನದಲ್ಲಿ ಆಗಮಿಸಿದರು ಪ್ರಧಾನ ಮಂತ್ರಿಗಳೂ ಇತರ ಸಚಿವರುಗಳೂ ಸೇನಾಧಿಕಾರಿಗಳೂ, ಅವರನ್ನು ಸ್ವಾಗತಿಸಿದರು ಯುದ್ಧದಲ್ಲಿ ನೊಂದವರಿಗಾಗಿ ಏರ್ಪಡಿಸಿರುವ ನಿಲಯವನ್ನು ಸೇನಾಪತಿಗಳು ಪರಿಶೀಲಿಸಿದರು. ಈ ದಿನ ಬೆಳಗ್ಗೆ ಹೊಸ ಸೈನಿಕ ಸ್ವಯಂ ಸೇವಕರ ಪರಿಶೀಲನೆ ನಡೆಸಿದರು ಈ ದಿನ ಮಧ್ಯಾಹ್ನ ಸೇನಾದಳದ ಕವಾಯಿತನ್ನು ವೀಕ್ಷಿಸಿ ಸೆಲ್ಯೂಟ್ ಸ್ವೀಕರಿಸಿದರು

ವೈದ್ಯರುಗಳ ವರ್ಗಾವರ್ಗಿ

ಕೃಷ್ಣರಾಜೇಂದ್ರ ಆಸ್ಪತ್ರೆಯ ವೈದ್ಯರಾದ ಡಾ॥ ಕಣಿಯಾರ್ ನರಸಿಂಹಯ್ಯಂಗಾರ್ಯರವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೂ, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಡಾ॥ ಬಿ ಮರಿಸಿದ್ದಪ್ಪನವರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ ವರ್ಗಾಯಿಸಲಾಗಿದೆ

ಜಿಲ್ಲಾ ಕಾಂ॥ ಕೆಲಸಗಾರರ ಸಭೆ ಮುಂದುವರಿಯಿತು

ಮೈಸೂರು ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಭೆಯು ಈ ತಿಂಗಳು ೨೧ನೇ ತಾರೀಖು ಸೇರುವುದಿತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ಧಲಿಂಗಯ್ಯನವರು ದೆಹಲಿಗೆ ತೆರಳುವ ಪ್ರಯುಕ್ತ ಈ ಸಭೆಯಲ್ಲಿ ಭಾಗವಹಿಸುವುದಿಲ್ಲವಾಗಿ ಕೆಲಸಗಾರರ ಸಭೆಯನ್ನು ಮುಂದೆವರಿಸಲಾಗಿದೆಯೆಂದು ಜಿ. ಕಾಂ॥ ಅಧ್ಯಕ್ಷರಾದ ಶ್ರೀ ಎಂ. ಎಲ್ ನಂಜರಾಜೆ ಅರಸಿನವರು ತಿಳಿಸಿರುತ್ತಾರೆ.

ಸಾರ್ವಜನಿಕರಿಗೆ ಹೋಟೇಲುಗಳ ಬಂದು

ರಾಜಧಾನಿಯಲ್ಲಿ ನಡೆಯಲಿರುವ ವಿಸ್ತಾರಂಪ್ಪಗಳ ಅರಣ್ಯ ಸಮ್ಮೇಳನದ ಸಂಬಂಧದಲ್ಲಿ ಮೈಸೂರಿನ ಹೋಟೇಲು ಮೆಟ್ರೋಪೋಲನ್ನೂ, ಕೃಷ್ಣರಾಜ ಸಾಗರದ ಬೃಂದಾವನದ ಹೋಟೆಲನ್ನೂ ಈ ತಿಂಗಳು ೨೬ ನೇ ತಾರೀಖಿನಿಂದ ಏಪ್ರಿಲ್ ಮೊದಲ ವಾರದವರೆಗೆ ಸಾರ್ವಜನಿಕರಿಗೆ ಮುಚ್ಚಲಾಗುವುದು

ವಿಜಯಲಕ್ಷ್ಮಿ ಪಂಡಿತರ ಮಗಳ ವಿವಾಹ

ರಷ್ಯದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮುಂದಿನ ತಿಂಗಳು ತಮ್ಮ ಪುತ್ರಿ ಶ್ರೀಮತಿ ಚಂದ್ರಲೇಖಾರವರ ವಿವಾಹ ಸಂಬಂಧವಾಗಿ ಭಾರತಕ್ಕೆ ಸಧ್ಯದಲ್ಲಿಯೇ ಬರುವರು

ಸಂಸ್ಥಾನದಲ್ಲಿ ಧಾನ್ಯ ಸಂಗ್ರಹ

ಸ್ವಂ.ಸು.ಫೋನ್] ಬೆಂಗಳೂರು ೧೯

ಸರ್ಕಾರದವರ ಧಾನ್ಯ ಸಂಗ್ರಹದ ಕಾರ್ಯಕ್ರಮದ ಪ್ರಕಾರ ಇದುವರೆಗೆ ಸಂಸ್ಥಾನದಲ್ಲಿ ೭೩ ಸಾವಿರ ಪಲ್ಲ ಭತ್ತ ೧೫ ಸಾವಿರ ಪಲ್ಲ ರಾಗಿ ಮತ್ತು ೭೦೦ ಪಲ್ಲ ಜೋಳ ವಸೂಲಾಗಿರುವುದಾಗಿ ತಿಳಿದು ಬಂದಿದೆ, ಮಾಮೂಲಾಗಿ ವಸೂಲಾಗಬೇಕಾಗಿದ್ದ ಅಂಶವೂ ಇದರಲ್ಲಿ ಸೇರಿರುತ್ತದೆ ಮೇಲ್ಕಂಡ ಪ್ರಚಾರ ಕಾರ್ಯದಿಂದ ಸಂಗ್ರಹ ಕಾರ್ಯವು ಬಿರುಸಿನಿಂದ ನಡೆದಿರುತ್ತದೆ

ಸರ್ಕಾರದವರು ವಸೂಲಿಗಾಗಿ ಗುರಿಯಿಟ್ಟುಕೊಂಡಿರುವ ೧೪ ಲಕ್ಷ ಪಲ್ಲ ಭತ್ತ, ೧ ಲಕ್ಷ ೭೦ ಸಾವಿರ ಪಲ್ಲ ರಾಗಿ ೨೭ ಸಾವಿರ ಪಲ್ಲ ಜೋಳದಪೈಕಿ ಇದುವರೆಗೆ ೧೨ ಲಕ್ಷದ ೭೨ ಸಾವಿರಪಲ್ಲ ಭತ್ತ ೪೦ ಸಾವಿರ ಪಲ್ಲ ರಾಗಿ ೬೦ ಸಾವಿರ ಪಲ್ಲ ಜೋಳ ವಸೂಲಾಗಿರುತ್ತದೆ ಇನ್ನೂ ಅನೇಕರು ಧಾನ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ. ಇದರಿಂದ ಆಹಾರದ ಬಗ್ಗೆ ಇದ್ದ ಆತಂಕವು ಬಹು ಮಟ್ಟಿಗೆ ನಿವಾರಣೆಯಾಗುವ ಭರವಸೆಯಿದೆ ಸಂಗ್ರಹದ ಕಾರ್ಯವನ್ನು ಇನ್ನೂ ಮುಂದುವರಿಸಲಾಗುವುದೆಂದು ಸರ್ಕಾರದವರು ತಿಳಿಸಿರುತ್ತಾರೆ.

ಹಗಲು ಕಳ್ಳ ಸಿಕ್ಕಿಬಿದ್ದ

ಮದರಾಸಿನವನೆಂದು ಹೇಳಿಕೊಂಡ, ಸ್ಟೆಲ್ಲಿವರ್ಸ್‌ನಾಮಿನಲ್ಲಿ ಕೆಲಸದಲ್ಲಿರುವ ರಾಜು ಎಂಬುವನು ಈ ದಿನ ೧೧ ಘಂಟೆ ಸಮಯದಲ್ಲಿ ಸರಸ್ವತಿ ಪುರದಲ್ಲಿರುವ ಸಬ್ ಜಡ್ಜ್ ಶ್ರೀ ಪದ್ಮನಾಭಯ್ಯನವರ ಮನೆಗೆ ನುಗ್ಗಿ ಸಾಮಾನು ಕದಿಯಲು ಪ್ರಯತ್ನಿಸುತ್ತಿದ್ದಾಗ ಮನೆಯಲ್ಲಿದ್ದ ಆಳುಗಳು ಬಹಳ ಪ್ರಯತ್ನದಿಂದ ಅವನನ್ನು ಹಿಡಿದು ತಂದು ಪೋಲೀಸರಿಗೆ ಒಪ್ಪಿಸಿರುತ್ತಾರೆ

ಸೈನಿಕರ ಪ್ರದರ್ಶನ ದಂಡ ನಾಯಕರ ಹಿತವಚನ

ಸ್ವಂ ಸು ಫೋನ್] ಬೆಂಗಳೂರು ೧೯

ಭಾರತ ದಂಡ ನಾಯಕ ಜ॥ ಕಾರಿಯಪ್ಪನವರ ಗೌರವಾರ್ಥವಾಗಿ ಈ ದಿನ ಬೆಳಿಗ್ಗೆ ಸಂಪಂಗಿ ಕೆರೆ ಮೈದಾನದಲ್ಲಿ ಮಾಜಿ ಸೈನಿಕರ ಮತ್ತು ಹೊಸರಿಕ್ರೂಟುಗಳ ಪ್ರದರ್ಶನವು ನಡೆಯಿತು ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅವರನ್ನು ಸ್ವಾಗತಿಸಿ ಭಾಷಣ ಮಾಡಿದರು ಜ॥ ಕಾರಿಯಪ್ಪನವರು ಭಾಷಣ ಮಾಡಿ ಭಾರತ ಸೇನಾ ಪಡೆಗಳ ಶಕ್ತಿ ಸಾಮರ್ಥ್ಯವನ್ನು ಕೊಂಡಾಡಿದರು ಕಾಶ್ಮೀರ ಮತ್ತು ಹೈದರಾಬಾದುಗಳಲ್ಲಿ ವಿಜಯವುಂಟಾಗಿರುವುದಕ್ಕಾಗಿ ಸುಮ್ಮನೆ ಕುಳಿತುಕೊಳ್ಳದೆ ಮುಂದೆ ರಾಷ್ಟ್ರ ರಕ್ಷಣೆಗಾಗಿ ಬಲವಾದ ಸೇನೆಯನ್ನು ಸಿದ್ಧಗೊಳಿಸಬೇಕೆಂದು ಹೇಳಿದರು ಕೋರೆಗಾಂವ್ ಬಾರಾಪಾನಿ ಭಾಷಣವಿಲ್ಲ ಸರ್ವರ ಮತ್ತು ಜವಾಬ್ದಾರಿಯನ್ನೂ ತಿಳಿದು ದೇಶಸೇವೆ ಮಾಡಲು ಸಿದ್ಧರಾಗಿರಬೇಕೆಂದು ಹೇಳಿದರು.

ನಗರಗಳಲ್ಲಿ ಗೋಹತ್ಯ ನಿಷೇಧ

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಗೋಹತ್ಯವನ್ನು ತಪ್ಪಿಸಲು ಸದ್ಯದಲ್ಲಿಯೇ ಶಾಸನ ಮಾಡಲಾಗುವುದೆಂದು ಭಾರತ ಸರ್ಕಾರದ ಸಚಿವರಾದ ಶ್ರೀ ಜೈರಾಂದಾಸ್ ದೌಲತ್‌ರಾಂರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ

ಇಟಲಿಯ ಶಾಸನಸಭೆಯಲ್ಲಿ ಹೊಡೆದಾಟ

ಅಟ್ಲಾಂಟಿಕ್ ಚಾರ್ಟರ್ ವಿಚಾರವಾಗಿ ಇಟಲಿಯ ಶಾಸನಸಭೆಯಲ್ಲಿ ಚರ್ಚೆ ನಡೆಯುತ್ತಿದ್ದಾಗ, ಕಮ್ಯೂನಿಸ್ಟ್ ಮತ್ತು ಸಮತಾವಾದಿ ಪಕ್ಷದ ಸದಸ್ಯರುಗಳಿಗೆ ಮಾತು ಬೆಳೆದು, ಗುದ್ದಾಟಕ್ಕೆ ಪ್ರಾರಂಭವಾಗಿ ದೊಡ್ಡಗೊಂದಲ ನಡೆಯಿತೆಂದು ವರದಿಯಾಗಿದೆ.

ಮುಖ್ಯ ಇಲಾಖೆಗಳಲ್ಲಿ ಒಂದೇ ಸಮನಾದ ಆಡಳಿತ

ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲಿರುವ ಒಂಬತ್ತು ಮುಖ್ಯ ಸರ್ಕಾರೀ ಇಲಾಖೆಗಳಲ್ಲಿ ಒಂದೇ ಸಮನಾದ ಆಡಳಿತವಿರಲು ಒಂದು ಯೋಜನೆಯನ್ನು ಭಾರತ ಸರ್ಕಾರದವರು ತಯಾರಿಸುತ್ತಿರುವರೆಂದೂ, ಇದರಲ್ಲಿ ಎಲ್ಲ ಸಂಸ್ಥಾನಗಳೂ ಸೇರಿರುವುವೆಂದು ಸರ್ದಾರ್ ಪಟೇಲರು ತಿಳಿಸಿರುತ್ತಾರೆ.

ನಿಮ್ಮ ಸೌಂದರ್ಯವೃದ್ಧಿಯಂತೆ

ಹೊಳೆಯಬೇಕೆ? ನೀವು

ಲಾವಣ್ಯವತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Edited, printed and published by A.R. Nagarajan at the Sadhvi Press, D. Subbiah Road Mysore

ಲಕ್ಷದ ಜನಲಿಗಾಗಿ

ಗು ರು ದೇ ವಾ ಹಾ ಲ್,

ಬೆಂಗಳೂರು ಜನಲ ಅಂಗಡಿಗೆ.

ಇಂದೇ ಟಿಕೆಟ್ ಕೊಡಿ

ಶಿವಾಜಿನಗರ :: ಮೈಸೂರು

RAJAKAMAL

Mysore

MORNING SHOWS

From 18-3-49 For 4 days

ALONG CAME JONES

With- Gary Cooper, & Loretta Young

ರಾಜಕಮಲ್

ಮೈ ಸೂ ರು

18—3—49ರಿಂದ

ಅಮೋಘ 2ನೇ ವಾರ

ಪ್ರತಿ ದಿನ 4 ಆಟಗಳು

ಅಪೂರ್ವವಾದ ಕಥಾ ವಿಶೇಷದಿಂದಲೂ,

ಇಂಪಾದ ಸಂಗೀತಗಳಿಂದಲೂ,

ಮನೋಹರ ನೃತ್ಯಗಳಿಂದಲೂ

ನಿಬಿಡವಾಗಿರುವ

ಫಿಲ್ಮಿಸ್ತಾನ್‌ರವರ ಹಿಂದಿ ಚಿತ್ರ

ಸಾಜನ್

ಪಾತ್ರ ಅಶೋಕ ಕುಮಾರ್

ರೆಹನ

COUNCIL OF SCIENTIFIC AND INDUSTRIAL RESEARCH

Office of the Central Food

F.T.R.I. 371 48-49 Technological Research Institute,

"CHALUVAMBA MANSION"

Mysore, Dated 17-3-49

NOTIFICATION

Tenders in the prescribed form enclosed in a sealed cover superscribed as TENDER FOR Supplying Laboratory work tables will be received in the office of the undersigned up to 4 p.m. on 25-3-1949. The Tenders should be accompanied by a stamped receipt for having credited a sum of Rs 100 (one hundred) in cash as earnest money in the above office. No cheques will be accepted. Tenders not accompanied by such receipts will be disqualified.

Detailed Estimates, Plans and Agreement Forms may be seen in the office on all working days between 10 a.m. and 12 Noon, after making an appointment. Prescribed Tender Forms can be had in the office on payment of a sum of four annas.

Tenders/Quotations should be on percentage basis detailed rates to be quoted. Such rates must hold good for a period of four months from the date of Tender. All non-tendered items will be paid for on data including ten per cent profit.

The work should be completed within two months from the date of acceptance of the Tender.

The undersigned reserves the right to accept or reject any tender without assigning any reason whatsoever.

M. G. SRINIVASAN

For Planning Officer,

F. T. R. I., Mysore

ರಷ್ಯದ ಅಪಾರ ವಿಮಾನ ದಳ

ಜನರು ತಿಳಿದುಕೊಂಡಿರುವ್ವಕ್ಕಿಂತಲೂ ಅತ್ಯಧಿಕವಾದ ವಿಮಾನ ಬಲ ರಷ್ಯದಲ್ಲಿ ಇರುವುದೆಂದೂ, ಇದು ಅಮೆರಿಕಕ್ಕೆ ಸಮಾನವಾಗಿಯೂ ... ವಿದ್ದೇ ಇರುವುದೆಂದೂ ಅಮೆರಿಕದ ಮುಖ ವಿಮಾನ ಸಂಸ್ಥೆ ಅಧ್ಯಕ್ಷ ಮಿ॥ ವಿಲಿಯಂ ಜೋರ್ಡಾನ್ ಎಂಬುವರು ಹೇಳಿರುತ್ತಾರೆ. ರಷ್ಯದ ಮೇಲೆ ... ನಡೆಸಬೇಕಾಗಿ ಒಂದರೆ ತಾವು ವಿಮಾನ್ನ ನಡೆಸಲು ಹಿಂಜರಿಯುವುದಾಗಿ... ರು ತಿಳಿಸಿದ್ದಾರೆ. ಏಕೆಂದರೆ ರಷ್ಯ ಯುದ್ಧ ವಿಮಾನಗಳಿಂದ ಗಗನವನ್ನೇ ಆವರಿಸಿಬಿಡುವುದು. ರಷ್ಯನರು ಇತ್ತೀಚೆಗೆ ತ ಹೆಚ್ಚು ವಿಮಾನಗಳನ್ನು ತಯಾರಿಸುತ್ತಿದ್ದಾರೆ. ಮತ್ತು ಅವರ ವಿಮಾನಗಳು ಹೆಚ್ಚು ಎತ್ತರದಲ್ಲಿ ಹಾರುತ್ತವೆ. ಎಂದು ಸಹ ಅವರು ಹೇಳಿರುತ್ತಾರೆ.

ಒಳ್ಳೆ ನಡತೆಯ ವಿದ್ಯಾರ್ಥಿಗೆ ರಾಜಾಜಿಯವರ ಬಹುಮಾನ

ಭಾರತದ ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರು ಸೇಲಮ್ಮಿನ ಮುನಿಸಿಪಲ್ ಕಾಲೇಜಿನ ಪ್ರತಿ ವರ್ಷವೂ ಒಳ್ಳೆನಡತೆಯ ವಿದ್ಯಾರ್ಥಿಯೊಬ್ಬನಿಗೆ ಬಹುಮಾನ ಕೊಡಲು ... ರಿಸಿ ಅಲ್ಲಿನ ಬ್ಯಾಂಕಿನಲ್ಲಿದ್ದ ತಮ್ಮ ... ಹೇರು ಹಣದಿಂದ ಬರುವ ... ಮೊತ್ತಿಯನ್ನು ತಮ್ಮ ಸ್ನೇಹಿತರಾದ ದಿ॥ ಶ್ರೀ ಎ. ವಿ. ಕೃಷ್ಣಯ್ಯಚೆಟ್ಟಿಯವರ ... ರಿನಲ್ಲಿ ಕೊಡಬೇಕೆಂದು ಸೂಚಿಸಿದ್ದಾರೆ.

ಗಾಯತ್ರೀ ಟಾಕೀಸ್

ಪ್ರತಿ ದಿನ 4 ಆಟಗಳು

18-3-49ರಿಂದ 6 ದಿನಗಳು ಮಾತ್ರ

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ

ಆಂಗ್ಲೇಯ ಸುಪ್ರಸಿದ್ಧ ಕವಿ ರಾಬರ್ಟ್

ಲೂಯಿಸ್ ಸ್ಟೀವನ್‌ಸನ್‌ರವರ

ಕೊಲಂಬಿಯಾರವರ

ದಿ ಬ್ಲಾಕ್ ಆರೋ

THE BLACK ARROW

ಪಾತ್ರ:- ಲೂಯಿಸ್ ಹೇವರ್ಡ್ ಮತ್ತು

ಜಾನೆಟ್ ಬ್ಲೇರ್

——ಬೆಳಗಿನ ಪ್ರದರ್ಶನ——

19—3—49ರಿಂದ 2 ದಿನಗಳು

ದಿ ಬ್ಲಾ. ಡಿ ಸ್ವಾನ್ ...

ಪಾತ್ರ:- ಜೋಯಿಸ್ ಕಾರ್ ...

* ಪ್ರಭುದೇವಾ ಟಾಕೀಸಿನಲ್ಲಿ *

18-3-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವಹಿ ★ ಸೂರ್ಯ ಪುತ್ರಿ ★ 3 ಆಟಗಳು

[ತಮಿಳು]

ಪಾತ್ರ:— ಟಿ. ಆರ್. ರಾಜಕುಮಾರಿ, ಕೊತ್ತಮಂಗಲಂ ಶೀನು, ಸುಂದರೀ ಬಾಯಿ, ಎಸ್. ಜಾನಕಿ, ಚೆಲ್ಲಂ ಮುಂತಾದವರು

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಫಾಲ್ಗುಣ ಶುದ್ಧ ೨೦-೩-೧೯೪೯ [ಸಂಚಿಕೆ ೩೧

- ರಂಗೂನ್ ನಗರದ -
ಪತನ ಸನ್ನಿಹಿತ

ಗ್ರಾಮಾಭಿವೃದ್ಧಿ ಕಮಿಷನರ ಪ್ರವಾಸ

ಮೈಸೂರು ೧೯

ಕಳೆದ ಮೂರು ದಿನಗಳಿಂದಲೂ ಸಂಸ್ಥಾನದ ಗ್ರಾಮಾಭಿವೃದ್ಧಿ ಕಮಿಷನರ್ ಶ್ರೀ ಎಸ್. ಹಿರಣ್ಣಯ್ಯನವರು ಶ್ರೀಗಳು ಎಸ್ ರಂಗರಾಮಯ್ಯ. ಬಿಚ್. ಕೆ. ಕುಮಾರಸ್ವಾಮಿ, ರೀಜನಲ್ ಆಫೀಸರ್ ಶ್ರೀ ಬಿ ರಂಚಪ್ಪ ಮತ್ತು ಇತರೇ ಅಧಿಕಾರ ವರ್ಗದವರೊಡನೆ, ಟಿ ನರಸೀಪುರ, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಒಟ್ಟು ೩೪ ಗ್ರಾಮಗಳಲ್ಲಿ ಸಂಚರಿಸಿದರು. ಅತ್ತಿಹಳ್ಳಿ, ಕೊತ್ತೇಗಾಲ ಕೋಲಂಬಳ್ಳಿ, ಆಲೂರು, ಹರವೆ ಗ್ರಾಮಗಳಲ್ಲಿ ಭಾರಿ ಬಹಿರಂಗ ಸಭೆಗಳು ನಡೆದು ಅಲ್ಲಿ ಗ್ರಾಮಾಭಿವೃದ್ಧಿ ಯೋಜನೆಯನ್ನು ವಿವರಿಸಲಾಯಿತು ಅಲ್ಲದೆ ಹೆಮ್ಮಿಗೆಆಲೂರು ಮತ್ತು ಕೊರಮಾವು ಗ್ರಾಮಗಳಲ್ಲಿ ಆದಿಕರ್ನಾಟಕರ ಸಮ್ಮೇಳನವು ಏರ್ಪಾಡಾಗಿದ್ದು, ನಿಮ್ನವರ್ಗದವರ ಏಳಿಗೆಗಾಗಿ ಬೇಕಾದ ವಿಚಾರಗಳನ್ನು ಚರ್ಚಿಸಲಾಯಿತು ಶ್ರೀ ಹಿರಣ್ಣಯ್ಯನವರು ಈ ಸಮ್ಮೇಳನಗಳ ಅಧ್ಯಕ್ಷತೆಯನ್ನು ವಹಿಸಿ, ಸ್ಫೂರ್ತಿಪೂರಿತ ಭಾಷಣ ಮಾಡಿದರು. ಪ್ರತಿ ಗ್ರಾಮದಲ್ಲೂ ಜನರು ತಮ್ಮ ಕಷ್ಟಗಳನ್ನು ನಿವೇದಿಸಿಕೊಂಡರು ಇಂದಿನ ಆಹಾರ ಪರಿಸ್ಥಿತಿಯನ್ನು ಗ್ರಾಮಸ್ಥರಿಗೆ ತಿಳಿಸಿ ಪ್ರತಿಯೊಬ್ಬರ ಕರ್ತವ್ಯವು ಬಹಳ ಗುರುತರವಾದದ್ದೆಂದೂ, ತಮ್ಮ ಕೈಲಾದಷ್ಟು ಧಾನ್ಯವನ್ನು ಕೊಡಬೇಕೆಂದೂ ಪ್ರಾರ್ಥಿಸಿದರು. ಒಟ್ಟು ೩,೦೦೦ ಪಲ್ಲ ಧಾನ್ಯ ಸಂಗ್ರಹಣೆಯಾಯಿತು. ಇದುವರೆಗೆ ಒಟ್ಟು ಮೈಸೂರು ಜಿಲ್ಲೆಯಲ್ಲಿ ೮,೦೦೦ ಪಲ್ಲ ಧಾನ್ಯ ಸಂಗ್ರಹಣೆಯಾಗಿರುತ್ತದೆ. ಈಗಾಗಲೇ ರೈತರು ಮುಂದೆ ಬಂದು ಧಾನ್ಯವನ್ನು ಡಿಪೋಗಳಿಗೆ ಕೊಡುತ್ತಿರುವರೆಂದು ತಿಳಿದು ಬಂದಿದೆ

ಕುರುಬರ ವಿದ್ಯಾರ್ಥಿಗಳಿಗೆ ಊಟ ವಸತಿ ಸೌಕರ್ಯ

ರಾಜಧಾನಿಯ ಕುರುಬರ ಸಂಘದ ಆಶ್ರಯದಲ್ಲಿ ಕಳೆದ ಗುರುವಾರ ಕುರುಬ ಜನಾಂಗದವರು ಶ್ರೀ|| ಶ್ರೀ ರೇವಣಸಿದ್ಧೇಶ್ವರ ಒಡೆಯರ್ ಮಹಾಸ್ವಾಮಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು ಸ್ವಾಮಿಗಳು ಸಿದ್ಧರವಾಗಿ, ರಾಜಧಾನಿಯಲ್ಲಿ ಕುರುಬರ ಮಠವೊಂದನ್ನು ಸ್ಥಾಪಿಸಿ ಜನಾಂಗದ ಬಡ ವಿದ್ಯಾರ್ಥಿಗಳಿಗೆ ಬರುವ ವರುಷದಿಂದಲೇ ಊಟ ವಸತಿಗಳ ಸೌಕರ್ಯ ಏರ್ಪಡಿಸುವುದಾಗಿ ತಿಳಿಸಿ, ನಾಗರೀಕರ ಸಹಕಾರವನ್ನು ಕೋರಿದರು ಮಂಗಳಾರತಿ ಮತ್ತು ಪ್ರಸಾದ ವಿನಿಯೋಗವಾದ ಮೇಲೆ ರವ ಪಳಿಯರಿಂದ ರೇವಣ ಸಿದ್ಧೇಶ್ವರರ ಸ್ತವನವು ಸಭೆ ಮುಕ್ತಾಯವಾಯಿತು.

ಮಹಾ ಮಂಗಳಾರತಿ

ನಜರ್‌ಬಾದ್ ಮೊಹಲ್ಲಾದಲ್ಲಿರುವ ಶ್ರೀ ವೆಂಕಟೇಶ್ವರ ದೇವಿಯವರ ಜಾತ್ರೆ ವೈಭವವಾಗಿ ನಡೆದು ಮಂಗಳಾರತಿಯನ್ನು ನಾಳಿದ್ದು ಸಂಜೆ ೬-೩೦ಕ್ಕೆ ನಜರ್‌ಬಾದ್ ಪೋಲೀಸ್ ಸ್ಟೇಷನ್ ಸರ್ಕಲ್ಲಿನಲ್ಲಿ ಏರ್ಪಡಿಸಲಾಗಿದೆ

೧೨೫ ವರ್ಷದ ವೃದ್ಧನಿಗೆ ೮ ಪೌಂಡಿನ ಮಗು

ದಕ್ಷಿಣ ಆಫ್ರಿಕಾದ ಕೇಪ್ ಪ್ರಾಂತದ ೧೨೫ ವರ್ಷದ ಹೆನ್ರಿ ಸಾಟ್ಸ್ ಎಂಬ ವೃದ್ಧನಿಗೆ ೮ ಪೌಂಡು ತೂಕವುಳ್ಳ ಗಂಡು ಮಗುವು ಆಗಿದೆ ಈತನ ಪತ್ನಿಗೆ ೬೯ ವಯಸ್ಸು.

ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಹಣ ಕೊಡದೆ ಪರಾರಿಯೇ?

ಸ್ವ ವ] ಶ್ರೀರಂಗಪಟ್ಟಣ ತಾ|| ೨೦

ಕಳೆದ ಬುಧವಾರ ಮುತ್ತಪ್ಪನ ಕೊಪ್ಪಲಿನ ಜವರೇಗೌಡ 'ಉ' ಮಾದೇಗೌಡನ ಹೆಂಡತಿ ಸುಮಾರು ಹನ್ನೆರಡು ವರ್ಷ ವಯಸ್ಸಿನಳ್ಳ ಸಿಂಗಮ್ಮನಿಂದ ಮಲ್ಲನ ಕೊಪ್ಪಲು ಕೆಂಪೇಗೌಡ ಎಂಬುತನು ಎರಡು ಎಕರೆ ನಾಲ್ಕುಗುಂಟೆ ಜಮೀನನ್ನು ೩,೦೦೦ ರೂಪಾಯಿಗಳಿಗೆ ಖರೀದಿ ಮಾಡಿ ಪತ್ರ ಬರೆಯಿಸಿ ಇಲ್ಲಿಯ ಸಬ್ ರಿಜಿಸ್ಟ್ರಾರ್ ಆಫೀಸಿಗೆ ಬಂದು ರಿಜಿಸ್ಟರ್ ಮಾಡಿಸಿ ಹಣ ಕೊಡದೆ ಪರಾರಿಯಾದನೆಂದು ತಿಳಿದುಬಂದಿದೆ. ತಕ್ಷಣವೇ ಆಫೀಸಿನ ನೌಕರರು ಬಾಗಿಲನ್ನು ಹಾಕಿಕೊಂಡರೆಂದೂ ಒಳಗಿದ್ದ ಸಿಂಗಮ್ಮ ಮತ್ತು ಅವಳ ಬಂಧುಗಳು ಗಲಾಟೆ ಮಾಡಲಾಗಿ ಸಬ್‌ಇನ್ಸ್‌ಪೆಕ್ಟರ್ ಸಿದ್ದರಾಜೇ ಅರಸಿನವರು ಬಂದು ಪರಾರಿಯಾಗಿದ್ದ ಕೆಂಪೇಗೌಡನನ್ನು ಹಿಡಿದು ತರಿಸಿ ತನಿಖೆ ನಡೆಸಿ ಅವನಲ್ಲಿದ್ದ ೩,೫೦೦ ರೂಪಾಯಿಗಳನ್ನು ವಶಪಡಿಸಿಕೊಂಡು ಅದನ್ನು ತಾ|| ಕಛೇರಿಯಲ್ಲಿ ಐದು ವರ್ಷದವರೆಗೂ ಡಿಪಾಜಿಟ್ ಆಗಿರುವಂತೆ ಮಾಡಿರುವರೆಂದೂ ಹೇಳಲಾಗಿದೆ ಮುಂದಿನ ತನಿಖೆ ಕ್ರಮ ನಡೆಸುತ್ತಿದ್ದಾರೆ.

ಅಟ್ಲಾಂಟಿಕ್ ರಕ್ಷಣಾ ಒಪ್ಪಂದ

ಬ್ರಿಟನ್, ಅಮೆರಿಕಾ, ಫ್ರಾನ್ಸ್, ಬೆಲ್ಜಿಯಂ, ಕೆನಡಾ, ಲಕ್ಸೆಂಬರ್ಗ್ ಹಾಲೆಂಡ್ ರಾಜ್ಯಗಳಿಗೆ ಹೊಸ ರಕ್ಷಣಾ ಒಪ್ಪಂದವಾಗಿದೆ. ಈ ರಾಜ್ಯಗಳ ಪೈಕಿ ಯಾವ ರಾಜ್ಯದ ಮೇಲಾದರೂ ಆಕ್ರಮಣ ನಡೆದುದಾದರೆ ಅದನ್ನು ಸಾಮೂಹಿಕವಾಗಿ ಎದುರಿಸಲು ರುಜು ಹಾಕಿದ ರಾಜ್ಯಗಳೆಲ್ಲವೂ ಬದ್ಧವಾಗಿರುತ್ತವೆ. ಈ ಕರಾರಿಗೆ ೨೦ ವರ್ಷ ಆಯುಷ್ಯ

ಚೀಣಾ ಸರ್ಕಾರದ ಮೇಲೆ ಅಲ್ಲಿನ ಸೇನಾಪತಿಯ ದಂಗೆ

ಚೀಣಾ ಸರ್ಕಾರದ ಮೇಲೆ ಅಲ್ಲಿನ ಸೇನಾಪತಿಯು ಆಂಗ್‌ಕಾಲ್‌ರವರು ದಂಗೆಯೆದ್ದು ಸ್ವಾಟೋ ಎಂಬ ಬಂದರನ್ನು ಆಕ್ರಮಿಸಿರುವರೆಂದು ತಿಳಿದುಬಂದಿದೆ ಪ್ರಮುಖ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳನ್ನೂ ಮತ್ತು ಇತರ ನಾಯಕರುಗಳನ್ನೂ ಅವರು ಬಂಧನದಲ್ಲಿಟ್ಟಿರುವರೆಂದೂ ಸಹ ಹೇಳಲಾಗಿದೆ

ಹತ್ತು ಕೋಟಿ ರೂ.ನ ಮತ್ತೊಂದು ಭಾರಿ ವಿದ್ಯುದ್ಯೋಜನೆ

ಸ್ವಂ ಸ. ವರದಿ] ಬೆಂಗಳೂರು ೧೯

ಜೋಗ್ ವಿದ್ಯುಚ್ಛಕ್ತಿ ಕಾರ್ಖಾನೆ ಬಳಿ ಹೊನ್ನೆಮರಡು ಎಂಬಲ್ಲಿ ಇನ್ನೊಂದು ಭಾರಿ ಆಣೆಕಟ್ಟನ್ನು ಕಟ್ಟಿ ವಿದ್ಯುಚ್ಛಕ್ತಿಯನ್ನು ತಯಾರಿಸುವ ಯೋಜನೆಯನ್ನು ಸರಕಾರದವರು ಪರಿಶೀಲಿಸುತ್ತಿರುವರೆಂದು ತಿಳಿದುಬಂದಿದೆ ಇದಕ್ಕೆ ೧೦ ಕೋಟಿ ರೂ ವೆಚ್ಚವಾಗುವುದೆಂದೂ, ಇಲ್ಲಿ ೫ ಲಕ್ಷ ಕಿಲೋವಾಟ್ ನಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದೆಂದೂ ಅಂದಾಜಾಗಿದೆ. ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಇಲಾಖಾ ಇಂಜನಿಯರರಾದ ಜನಾಬ್ ಹಯಾತ್ ರೊಡನೆ ಆಸಫೀಕ್ಕೆ ಇತ್ತೀಚೆಗೆ ಭೇಟಿ ಯತ್ತಿದ್ದರು ಈ ಯೋಜನೆ ಸಂಬಂಧವಾಗಿ ಕೆಲಸಗಳನ್ನು ಕೂಡಲೇ ಕೈಗೊಳ್ಳಲಾಗುವುದೆಂದೂ ಸಹ ತಿಳಿದು ಬಂದಿದೆ.

ಜೋಳದ ಗಿಡದಲ್ಲಿ ಹದಿನಾಲ್ಕು ತೆನೆ

ಪಾಟ್ನಾದ ವಿಜ್ಞಾನ ಶಾಸ್ತ್ರದ ಕಾಲೇಜನ ಸಸ್ಯಶಾಸ್ತ್ರ ಪಾರಂಗತರಾದ ಪ್ರೊ|| ಆರ್ ಸಿ ಲೂಸಿ ಎಂಬುವರು ಅನೇಕ ವರ್ಷ ಕಷ್ಟಪಟ್ಟು ಹೊಸ ಮಾದರಿಯ ಜೋಳದ ಪೈರನ್ನು ಬೆಳೆಸುತ್ತಿದ್ದಾರೆ ಈ ಪೈರಿನ ಗಿಡವು ೫ರಿಂದ ೧೪ ತೆನೆಗಳನ್ನಿಡುತ್ತದೆ ಅಲ್ಲದೆ ಇನ್ನೂ ಅನೇಕ ಗುಣಗಳನ್ನು ಹೊಂದಿರುತ್ತದೆ ಸಾಮಾನ್ಯವಾಗಿ ಜೋಳದ ಗಿಡಕ್ಕೆ ಒಂದೇ ತೆನೆ ಇರುವುದು.

ನಗರದಲ್ಲಿ ವಿಮಾನ ಸಂಚಾರ ಸೌಲಭ್ಯ

ಮೈಸೂರು ೩೦

ಇದೇ ಏಪ್ರಿಲ್ ೧ನೇ ತಾರೀಖಿನಿಂದ ಟಾಟಾ ವಿಮಾನ ಸಂಸ್ಥೆಯವರು ಮೈಸೂರು ನಗರದ ಮಾರ್ಗವಾಗಿ ವಿಮಾನ ಸಂಚಾರ ಸೌಲಭ್ಯಗಳನ್ನು ಏರ್ಪಡಿಸಲಿರುವರಷ್ಟೆ? ಇದಕ್ಕಾಗಿ ಈಗಾಗಲೇ ಸಿದ್ಧತೆಗಳು ನಡೆಯುತ್ತಿವೆ. ಟಾಟಾ ಕಂಪೆನಿಯ ಹಲವು ಪ್ರತಿನಿಧಿಗಳು ರಾಜಧಾನಿಗೆ ಬಂದು ಮಂಡಕಳ್ಳಿ ವಿಮಾನ ನಿಲ್ದಾಣದ ದಕ್ಷಿಣ ಭಾಗದಲ್ಲಿ ತಮ್ಮ ಕಛೇರಿಯೊಂದನ್ನು ಕಟ್ಟಲು ಸ್ಥಳ ಪರಿಶೀಲನೆ ನಡೆಸಿದರು ಸದ್ಯಕ್ಕೆ ಈಗಿರುವ ಕಟ್ಟಡದ ಜೊತೆಗೆ ಇನ್ನು ಕೆಲವು ಕೊಠಡಿಗಳನ್ನು ಸೇರಿಸಿ ಕಛೇರಿ ಕ್ವಾರ್ಟರ್ ವಿಶ್ರಾಂತಿ ಸ್ಥಾನ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಬೆಂಗಳೂರಿನಲ್ಲಿರುವ ಟಾಟಾ ಕಂಪನಿಯ ಪ್ರತಿನಿಧಿಗಳೇ ಇಲ್ಲಿಗೆ ಬಂದು ಕಛೇರಿಯನ್ನು ಆರಂಭಿಸುವರು

ಸದ್ಯಕ್ಕೆ ಹೋಟೇಲು ಮೆಟ್ರೋಪೋಲಿನಲ್ಲಿ ಕಛೇರಿಯನ್ನು ತೆರೆದು ಅನಂತರ ಬೇರೆ ಕಟ್ಟಡವನ್ನು ತೆಗೆದುಕೊಳ್ಳುವಂತೆ ಆಲೋಚಿಸಲಾಗಿದೆ ಪ್ರಯಾಣಿಕರನ್ನು ನಗರದಿಂದ ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಲಾಗುವುದು.

ಈ ವಿಮಾನ ಸರ್ವಿಸ್ಸು ಪ್ರತಿ ದಿನವೂ ನಡೆಯುವುದು ಪ್ರತಿ ದಿನ ಬೆಳಿಗ್ಗೆ ಮದರಾಸಿನಿಂದ ಹೊರಟು ಬೆಂಗಳೂರು ಮಾರ್ಗವಾಗಿ ಮೈಸೂರಿಗೆ ಬಂದು ಇಲ್ಲಿಂದ ಕೊಯಿಮತ್ತೂರು, ಕೊಚ್ಚಿ ಮೂಲಕ ತಿರುವನಂತಪುರಕ್ಕೆ ತಲಪುವುದು ಮತ್ತು ಮಧ್ಯಾಹ್ನ ಅಲ್ಲಿಂದ ಅದೇ ಮಾರ್ಗವಾಗಿ ಸಂಜೆ ಮದರಾಸಿಗೆ ತಲಪುವುದು ಈ ವ್ಯವಸ್ಥೆಗೆ ಭಾರತ ಸರ್ಕಾರದ ರಹದಾರಿಯು ದೊರಕಿರುತ್ತದೆ.

ರಂಗೂನಿಗೆ ವಿಪತ್ತು

ಕೆರೆನ್ನರ ಧಾಳಿಯು ಬಹಳ ಬಿರುಸಾಗಿ ಸಾಗುತ್ತಿದೆ. ಮಾಂಡಲೆಯು ಅವರ ವಶವಾಗಿರುವುದರಿಂದ ಇಡೀ ಬರ್ಮಾ ದೇಶವೇ ಅವರ ಸ್ವಾಧೀನಕ್ಕೆ ಬಂದಂತಾಗಿದೆ. ರಾಜಧಾನಿಯಾದ ರಂಗೂನ್ ಮತ್ತು ಅದರ ಸುತ್ತ ಮುತ್ತಲಿನ ಹತ್ತು ಮೈಲಿ ಪ್ರದೇಶ ವಿನಾ ಉಳಿದ ಭಾಗವೆಲ್ಲಾ ದಂಗೆ ಕೋರರ ವಶದಲ್ಲಿವೆ ಬರ್ಮಾ ಸರ್ಕಾರದ ಹಲವು ಸೈನಿಕರೂ ಸಹ ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತು ಕೆರೆನ್ನರ ಕಡೆ ಸೇರುತ್ತಿರುವರು ಪ್ರಧಾನಿ ಥಾಕಿನ್‌ನೂರವರು ನಸ್ತುತಃ ಬಂಧನದಲ್ಲಿದ್ದಾರೆ ಮನೆಬಿಟ್ಟು ಅವರು ಹೊರಗೆ ಬರುತ್ತಲೇ ಇಲ್ಲವೆಂದು ಹೇಳಲಾಗಿದೆ.

ಗಾಯತ್ರೀ ಟಾಕೀಸ್

ಪ್ರತಿ ದಿನ ೩ ಆಟಗಳು
18-3-49ರಿಂದ 6 ದಿನಗಳು ಮಾತ್ರ
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಚಿತ್ರ
ಇಂಗ್ಲೀಷು ಸುಪ್ರಸಿದ್ಧ ಕವಿ ರಾಬರ್ಟ್ ಲೂಯಿಸ್ ಸ್ಟೀವನ್‌ಸನ್‌ರವರ
ಕೊಲಂಬಿಯಾರವರ
ದಿ ಬ್ಲಾಕ್ ಆರೋ
THE BLACK ARROW
ಪಾತ್ರ - ಲೂಯಿಸ್ ಹೇವರ್ಡ್ ಮತ್ತು ಜಾನೆಟ್ ಬ್ಲೇರ್

RAJAKAMAL
Mysore
MORNING SHOWS
From 18 3-49 For 4 days
ALONG CAME JONES
With Gary Cooper. &
Loretta Young

ಅಗ್ಗದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿಗೆ
ಇಂದೇ ಭೇಟಿ ಕೊಡಿ
ಶಿವರಾಂಪೇಟೆ . ಮೈಸೂರು

ಮೈಸೂರ ಸಿಟಿ ಮಹಾಜನಗಳಲ್ಲಿ

ವಿನಂತಿ

ಟಿ. ಎನ್. ಲಕ್ಷ್ಮಯ್ಯ ಶೆಟ್ಟರು ಸರ್ವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:— ನನ್ನ ಹಿರಿ ಮಗನಾದ ಟಿ. ಎಲ್. ನರಸಿಂಹ ಶೆಟ್ಟಿ ... ನನ್ನ ... ಕುಟುಂಬದಕ್ಕರಲು ... ದವೆ ಬೇರೆಯಾಗಿ ಹೋಗಿದ್ದಾನೆ ... ದಲ್ಲೂ ... ಮಸೆನ ... ನನ್ನ ... ಮೈಸೂರು ಸಿಟಿಯಲ್ಲಿ ... ನನಗೆ ತಿಳಿದು ... ಸಂಬಂಧವಿಲ್ಲ ... ಜವಾಬ್ದಾರನಲ್ಲವೆಂದು ...

ಟಿ. ಎನ್. ಲಕ್ಷ್ಮಯ್ಯ ಶೆಟ್ಟಿ,
... ಮೈಸೂರು

ಫೋರ್ಡ್ ಎಂಜಿನ್ ಬಿಕರಿಗಿದೆ
... ಮಾಡಲ್ ಫೋರ್ಡ್ ಲಾರಿ ... ಎಂಜಿನ್ ... ಬಿಕರಿಗಿದೆ. ಕೆಳಗೆ ಕಂಡವರಲ್ಲಿ ವಿಚಾರಿಸಿ
ಪ್ರಭಾತ್ ಸಾವಳಿ ಸ್ಟೋರ್ಸ್,
ಸಯ್ಯಾಜಿರಾವ್ ರಸ್ತೆ, ಮೈಸೂರು.

Daily over 1,00,000 people see the
ADVERTISEMENT
on the Mysore
CITY BUSES
Only few spaces on the TOP 1'x6' and on the body 2'x3' are available.
Please enquire or call on
Mys. Advt. Corpn
Phone 563
or
M. Subbaramiah & Co., Advt. Agents.
Lansdowne Buildings. Mysore

Edited, printed and published by A. R. Nagarajan at the Sadhvi Press, D. Subbiah Road Mysore.

ವಾರ ಭವಿಷ್ಯ

ತಾ ೨೦-೩-೪೯ ರಿಂದ ೨೭-೩-೪೯ ರ ವರೆಗೆ

ಮೇಷ ಮನ ನೋಯುವ ಅನೇಕ ಘಟನೆಗಳ ಸಂಭವ. ಕುಟುಂಬೀಕರಲ್ಲಿ ಪರಸ್ಪರ ತಪ್ಪುಭಾವನೆ ಸ್ವೀಕೃತ ಕಾರ್ಯ ಅರ್ಧಕ್ಕೆ ನಿಲ್ಲುವುದು, ಕಾಲು ನೋವು, ಕಣ್ಣುರಿ, ಧಾರ್ಮಿಕ ಕಾರ್ಯದಲ್ಲಿ ನಿರುತ್ಸಾಹ ತಾ|| ೨೧, ೨೩ ಆರ್ಥಿಕ ಚಿಂತಾ ನಿವಾರಣೆ ಮಹತ್ವದ ಪತ್ರಾಗಮನ

ವೃಷಭ —ಉಚ್ಚ್ರೈರ್ಧೇಯದ ಸೇವೆ ಮಾ ದಲು ಎತ್ತರ ನೆರವು ಸಿಕ್ಕುವುದು. ಆರೋಗ್ಯ ನೆಟ್ಟಗೆ ಮನಸ್ಸಿಗೆ ಹರ್ಷ ಜಣದ ಲಾಭ ಸುಖ ಪ್ರವಾಸ, ಸಜ್ಜನರ ಪರಿಚಯ. ತಾ ೨೦, ೨೪, ೨೫ ಆಪ್ತರಿಂದ ಲಾಭ ಪ್ರಿಯ ಜನರ ಭೇಟಿ ಧನಲಾಭ

ಮಿಥುನ ನಿಷ್ಠ ಕರ್ತವ್ಯ ದಕ್ಷತೆಯ ಮೆಚ್ಚಿಗೆ, ಆರೋಗ್ಯ ನೆಟ್ಟಗೆ ಹಣದ ಲಾಭ ಮಾನಸಿಕ ಶಾಂತಿ ವಿದ್ಯಾಭ್ಯಾಸ, ಲೇಖನಗಳಲ್ಲಿ ಯಶ, ಪರೋಪಕಾರ, ತಾ|| ೨೦, ೨೪ ಅತಿಥಿಗಳ ... ಖರ್ಚು ಗೊಂದಲ

ಕರ್ಕ- ಕಳೆದವಾರದ ಸಮಸ್ಯೆ ಈ ವಾರ ಮುಗಿಯುವುದು, ಆರೋಗ ಉತ್ತಮ. ವಿದ್ಯಾರ್ಥಿ ದೆಸೆಯವರಿಗೆ ತೇರ್ಗಡೆ ನೌಕರಿ ದಂಧೆಗಳಲ್ಲಿ ಜಯ ತಾ|| ೨೧, ೨೩, ಧರ್ಮಕ್ಕಾಗಿ ಖರ್ಚು ಅತಿಥಿಗಳ ಆಗಮನಾರಂಭ

ಸಿಂಹ- ಮನಸ್ಸಿಗೆ ಅಶಾಂತಿ ಆರೋಗ್ಯದ ಬಗ್ಗೆ ಎಚ್ಚರಿಕೆ ಇರಲಿ ಆಹಾರ ವಿಹಾರಗಳಲ್ಲಿ ಮಿತಿ ಬೇಕು. ವ್ಯಾಪಾರ, ಉದ್ಯೋಗಗಳಲ್ಲಿ ಚಮತ್ಕಾರ ಘಟನೆ ಮೇಲಧಿಕಾರಿಗಳೊಡನೆ ವಾದವಿವಾದ, ತಾ| ೨೩, ೨೪, ೨೫ ಅಗ್ನಿ ಶಸ್ತ್ರ ಭಯ ಅಪ್ರಿಯ ವಾರ್ತೆ, ಖರ್ಚು ಸಂತಾಪ

ಕನ್ಯಾ--ಆರೋಗ್ಯ ನೆಟ್ಟಗೆ ಆದರೆ ಪತ್ನಿಯದು ಹಾಗಲ್ಲ, ಕೈಕೊಂಡ ಕಾರ್ಯಗಳು ಅರ್ಧಕ್ಕೆ ನಿಲ್ಲುವವು ತಾ|| ೨೧, ೨೩ ವೇದ ಖರ್ಚು, ಆಪ್ತರ ವಿಯೋಗ ಗುಪ್ತ ಚಿಂತೆ ಶತ್ರುತ್ವ

ತುಲಾ- ಈ ವಾರ ಹಿತದಾಯಕ ಎದುರಾಳಿಗಳು ಬೆರಗಾಗುವರು ಹೆಚ್ಚಿನ ಸಮಾಜಸೇವೆ ವ್ಯಾಪಾರಾದಿಗಳಲ್ಲಿ ಜಯ ಪ್ರವಾಸದಲ್ಲಿ ಇಷ್ಟಾರ್ಥಸಿದ್ಧಿ ತಾ|| ೨೦, ೨೧, ೨೩ ಪ್ರವಾಸ. ಕ್ರಯಾದಿ ವ್ಯವಹಾರ. ಪ್ರಯತ್ನದಲ್ಲಿ ಯಶ

ವೃಶ್ಚಿಕ ಆಪ್ತರ ಕುಶಲವಾರ್ತೆಯಿಂದ ಮನಶಾಂತಿ ಆರೋಗ್ಯ ಉತ್ತಮ. ಧನಲಾಭ ವ್ಯಾಪಾರಾದಿಗಳಲ್ಲಿ ಯಶ ತಾ|| ೨೩, ೨೪ ಧನಲಾಭ ಶುಭವಾರ್ತೆ

ಧನು ಪ್ರಿಯಾ ಪ್ರಿಯತೆಯ ವಿವೇಚನೆ ಇಲ್ಲದೆ ಕಾರ್ಯತತ್ಪರರಾಗಿರಿ. ಅದರಿಂದ ಕೀರ್ತಿ ಉಂಟು. ಆರೋಗ್ಯ ಆರ್ಥಿಕ ಮಾನಸಿಕ ಸ್ಥಿತಿ ಸಮರ್ಪಕವಿರಲಾರದು. ತಾ|| ೨೦ ೨೧, ವಿಯೋಗ ವಿರಹ. ಮೃತ್ಯು ವಿರೋಧ, ಅಪಘಾತ

ಮಕರ - ಕಾರ್ಯಜಯದಿಂದ ಮನೋಲ್ಲಾಸ ಆರೋಗ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಹಿತದಾಯಕ ಘಟನೆ ಸುಖಪ್ರವಾಸ ತಾ ೨೦, ೨೧, ಮಿತ್ರರಿಂದ ಸನ್ಮಾನ ಮೃಷ್ಟಾನ್ನ ಭೋಜನ

ಕುಂಭ— ಈ ವಾರದಲ್ಲಿ ಹಿತೈಷಿಗಳಂತೆ ವರ್ತಿಸುವಿರಿ ಆರೋಗ್ಯ ಮಾನಸಿಕ ಸ್ಥಿತಿ ಉತ್ತಮ ನೌಕರಿ ಇತ್ಯಾದಿಗಳಲ್ಲಿ ಜಯ ತಾ|| ೨೧, ೨೩ ಮಹತ್ವದ ... ಬರೆಯಲು ಅಧಿಕಾರಿಗಳನ್ನು ಕಾಣಲು ಶುಭ ದಿನಗಳು.

ಮೀನ-- ಅನೇಕ ಅಪ್ರಿಯ ಘಟನೆಗಳು, ನೌಕರಿದಂಧೆಗಳಲ್ಲಿ ಸಂತಾಪ. ಹೊಸ ಜವಾಬ್ದಾರಿ. ಕೌಟುಂಬಿಕ ಅಶಾಂತಿ ತಾ|| ೨೦, ೨೪ ಹಬ್ಬ ಹರಿದಿನ ... ಆಧಾರ, ಚಿಂತಾನಾಶ.

ರಾಜಕಮಲ್,
ಮೈಸೂರು
18—3—49ರಿಂದ
ಅಮೋಘ 2ನೇ ವಾರ
ಪ್ರತಿ ದಿನ ೩ ಆಟಗಳು
ಫಿಲ್ಮಿಸ್ತಾನರವರ ಹಿಂದಿ ಚಿತ್ರ
ಸಾಜನ್
ಪಾತ್ರ:—ಅಶೋಕ ಕುಮಾರ್
ರೆಹನ

ಉಪನ್ಯಾಸ

ಮೇಲ್ಕಂಡ ಸಮಿತಿಯ ಆಶ್ರಯದಲ್ಲಿ ಇದೇ ತಾ|| ೨೧ನೇ ಸೋಮವಾರ ಸಾಯಂಕಾಲ ೬ ಘಂಟೆಗೆ ಸಿಟಿ ಕೋ-ಆಪರೇಟಿವ್ ಬ್ಯಾಂಕು ಸಭಾಂಗಣದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ... ನಾಗಪ್ಪನವರು "ರಾಜ್ಯಾಡಳಿತದಲ್ಲಿ ... ಕಾರ ತತ್ತ್ವ" ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುತ್ತಾರೆ.

ಪ್ರಕಟಣೆ

ಮೈಸೂರು ತಾಲ್ಲೂಕು ಕಸಬಾ ... ಹಿನಕಲ್ ಗ್ರಾಮದಲ್ಲಿರುವ ... ಚಾರಿ ಮೊಮ್ಮಗ ನಾರಾಯಣಾಚಾರಿ ತಿಳಿಯಪಡಿಸುವುದೇನೆಂದರೆ:

ನಾವು ಇಬ್ಬರು ಅಣ್ಣ ತಮ್ಮಂದಿರು ... ನ್ನ ತಮ್ಮ ಚಲುವಾಚಾರಿಯು ... ಹೋಗಿರುತ್ತಾನೆ ಇವನಿಗೆ, ಪುಟ್ಟಮ್ಮ ... ಬ ಹೆಂಡತಿ ಇರುತ್ತಾಳೆ. ಇವಳಿಗೆ ... ರು ೪-೫ ವರುಷದ ಗಂಡು ಮಗನಿ ... ನೆ ಇವರಿಗೆ ಗ್ರಾಮ ಪಂಚಾಯಿತಿ ... ಕೆಯಂತೆ ಜೀವನಾಂಶ ನಡೆಸುತ್ತಾ ... ನೆ. ಪುಟ್ಟಮ್ಮನು ತಂದೆಯ ದುಡಿಮೆ ... ಗೆ ವಳ ಪಟ್ಟಿ ಷಡ್ಯೂಲಿನಲ್ಲಿ ಕಂಡ ... ಗಳನ್ನು ಪರಭಾರೆ ಮಾಡಲು ಸಿದ್ಧ ... ತ್ತಾಳೆ ಆದ್ದರಿಂದ ಷಡ್ಯೂಲು ... ಗಳನ್ನು ಪುಟ್ಟಮ್ಮನಿಂದ ಕ್ರಯ, ... ಭೋಗ್ಯ ವಗೈರೆ ಏನು ಮಾಡಿಕೊ ... ಹಕ್ಕು ಆಗುವುದಿಲ್ಲವೆಂದು ಈ ... ಸಮಸ್ತ ಜನಗಳಿಗೂ ತಿಳಿಸಿರು ... ಖಂಡಿತ ತಿಳಿಯುವುದು.

ಷಡ್ಯೂಲು:—ಮೈಸೂರು ತಾ ... ಬಸವನಹಳ್ಳಿ ಗ್ರಾಮದ ಸರ್ವೆ ... ನಂಬರು ೩ನೇ ಪೋಡು ಖುಷ್ಕಿ ... ೧೯೯ನೇ ನಂಬರು ಖುಷ್ಕಿ. ಮೈ ... ತಾಲ್ಲೂಕು ಹಿನಕಲ್ ಗ್ರಾಮದ ... ೩೨ನೇ ನಂಬರು ೩ನೇ ಪೋಡು ... ಹಿನಕಲ್‌ನಲ್ಲಿರುವ ೪ ಕಂಭದ ... ಹೆಂಚಿನ ಮನೆ ಈ ಸ್ವತ್ತುಗಳನ್ನು ... ರೆ ಮಾಡಲು ಯಾವ ವಿಧವಾದ ... ಬಾಧ್ಯತೆಯೂ ಇರುವುದಿಲ್ಲಾ.

ನಾರಾಯಣಾ ...

ಮೈಸೂರು ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ಮೈಸೂರು
ಉಗಾದಿ ಹಬ್ಬಕ್ಕಾಗಿ ಈ ಕೆಳಗೆ ನಮೂದಿಸಿರುವ ಸಾಮಾನುಗಳು ಸೊಸೈಟಿಗೆ ಬಂದಿರುತ್ತೆ. ದಯವಿಟ್ಟು ಒಂದು ಸಾರಿ ಬಂದು ಪರೀಕ್ಷಿಸುವುದು
- ಸಾಮಾನಿನ ವಿವರ -

ಸಿಲ್ಕ್ ಸೀರೆಗಳು	ಮಿಲ್ ಸೀರೆಗಳು ವಾಯಿಲ್
,, ಕಣಗಳು	ರಗ್ಗು ಮತ್ತು ಶಾಲುಗಳು
ವಾಯಿಲ್ ಮತ್ತು ಚೀಟಿಗಳು	ಟ್ವೀಡ್ ಮತ್ತು ಸರ್ಜ್
ಹಸನಾದ ಕೇಸರಿ	ಸಿಲ್ಕ್ ಜಾಕೀಟಿನ ಬಟ್ಟೆ

ಅಲ್ಲದೆ ಕಾಫಿ ಬೀಜ. ಸಕ್ಕರೆ ತೊಗರಿ ಬೇಳೆ ವಗೈರೆ ಬಿಕರಿಗೆ ಸಿದ್ಧವಾಗಿವೆ
(ರುಜು) ಜಿ. ವಿ. ವೆಂಕಟಾಚಾರ್,
ಆ ಸೆಕ್ರಟರಿ

* ಪ್ರಭುದೇವಾ ಟಾಕೀಸಿನಲ್ಲಿ *
18-3-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ದಿನವಹಿ **ಸೂರ್ಯ ಪುತ್ರಿ** ೩ ಆಟಗಳು
[ತಮಿಳು]
ಪಾತ್ರ: ಟಿ. ಆರ್. ರಾಜಕುಮಾರಿ, ಕೊತ್ತಮಂಗಲಂ ಶೀನು, ಸುಂದರೀಬಾಯಿ, ಎಸ್. ಜಾನಕಿ, ಚೆಲ್ಲಂ ಮುಂತಾದವರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೨೧-೩-೧೯೪೯ [ಸಂಚಿಕೆ ೧೯೩

ಗೋಪಾಲರಾವ್ ಸಮಿತಿಗೆ ಮುಟ್ಟುಗೋಲಿನ ಅಧಿಕಾರ

ಅರಣ್ಯ ಸಮ್ಮೇಳನ

ಮೈಸೂರು ೨೧

ಇದೇ ೨೪ ರಿಂದ [illegible] ನಡೆಯಲಿರುವ ಪೂರ್ವ ಪ್ರಾಚ್ಯ ರಾಷ್ಟ್ರಗಳ ಅರಣ್ಯ ಸಮ್ಮೇಳನದ ಆರಂಭೋತ್ಸವವನ್ನು ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜಯರಾಮದಾಸ್ ದೌಲತ್‌ರಾಂರವರು ನೆರವೇರಿಸುವರು. ಮಹಾ ಪ್ರಧಾನಿ ಪಂಡಿತ ನೆಹರೂರವರು ಬರುವುದಿಲ್ಲ.

ವಿಶ್ವ ಸಂಸ್ಥೆಯ ವೀಕ್ಷಕರ ದಸ್ತಗಿರಿ

ಜಮ್ಮುವಿನಲ್ಲಿ ನಡೆದ ಗಡಿ ಘರ್ಷಣೆಯ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾಗ, ವಿಶ್ವ ಸಂಸ್ಥೆಯ ಇಬ್ಬರು ವೀಕ್ಷಕರನ್ನು ಪಾಕಿಸ್ತಾನದ ಪೋಲೀಸರು ತಪ್ಪು ತಿಳಿವಳಿಕೆಯಿಂದ ದಸ್ತಗಿರಿ ಮಾಡಿ, ೨ ಗಂಟೆಗಳನಂತರ ಅವರುಗಳನ್ನು ಬಿಡುಗಡೆ ಮಾಡಿದರೆಂದೂ, ಈ ಬಗ್ಗೆ ವಿಶ್ವ ಸಂಸ್ಥೆಗೆ ದೂರು ಕೊಡಲಾಗಿದೆಯೆಂದೂ ವರದಿಯಾಗಿದೆ.

ರೇಷನ್ ಡಿಪೋಗಳ ಮೂಲಕ ಗೋಧಿ ಹಿಟ್ಟಿನ ಸರಬರಾಜು

ಗೋಧಿಯ ಹಿಟ್ಟನ್ನು ಜನರಿಗೆ ರೇಷನ್ ಡಿಪೋಗಳ ಮೂಲಕ ಹಂಚಲು ಭಾರತ ಸರ್ಕಾರದವರು ಯೋಚಿಸುತ್ತಿದ್ದಾರೆಂದು ತಿಳಿದುಬಂದಿದೆ. ಇದನ್ನು ಗೋಧಿ ಹಿಟ್ಟಿನ ಸಂಗಡ ಮಿಶ್ರ ಮಾಡಿ ಉಪಯೋಗಿಸಬಹುದೆಂದು ಹೇಳಲಾಗಿದೆ.

೧೯೫೧ ರಿಂದ ಆಹಾರದ ಆಮದು ಇಲ್ಲ

ಸ್ಥಿತಿಗಳು ಕೆಟ್ಟ ಅತ್ಯುಗ್ರ ಪರಿಸ್ಥಿತಿ ಬಾರದೆಹೋದಲ್ಲಿ ೧೯೫೧ ರಿಂದ ಪರ ದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸುವುದಿಲ್ಲವೆಂದು ಭಾರತ ಸರ್ಕಾರವು ನಿರ್ಧರಿಸಿದೆಯೆಂದು ಆಹಾರ ಸಚಿವರು ತಿಳಿಸಿರುತ್ತಾರೆ.

ಗಂಟೆಗೆ ಸಾವಿರ ಮೈಲಿ ಸಂಚರಿಸುವ ವಿಮಾನ

ರಾಡಾರ್ ಸಹಾಯದಿಂದ ಗಂಟೆಗೆ ೧ ಸಾವಿರ ಮೈಲಿ ವೇಗವಾಗಿ ಸಂಚರಿಸಬಲ್ಲ ವಿಮಾನವೊಂದು ಅಮೆರಿಕದಲ್ಲಿ ಮುಂದೆ ತಯಾರಿಸಲಾಗುವುದೆಂದು ಅಂತರ್ರಾಷ್ಟ್ರೀಯ ವೈಮಾನಿಕ ಸಂಸ್ಥೆಯ ಅಧ್ಯಕ್ಷರು ತಿಳಿಸಿದ್ದಾರೆ.

ಮೇಹ ರೋಗವನ್ನು ಗುಣಪಡಿಸುವ ಮರ

ಮುಜಫರ್ ಜಿಲ್ಲೆಯ ತೋರ್ಪಕೆರ್ರೈ ಪ್ರಾಣದ ಬಳಿ ಇರುವ ಮರವೊಂದರ ತೊಗಟೆ ಮತ್ತು ಎಲೆಗಳಿಂದ ಮೇಹ ರೋಗಗಳು ಗುಣವಾಗುತ್ತಿರುವುವು. ಇದನ್ನು ಅರಣ್ಯ ಇಲಾಖೆಯವರು ಪರೀಕ್ಷಿಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಚೀಣದಲ್ಲಿ ಶಾಂತಿಯ ಸಂಭವವಿಲ್ಲ

ಚೀಣದಲ್ಲಿ ಶಾಂತಿ ನೆಲೆಸುವ ಸಂಭವ ಕಾಣಬರುತ್ತಿಲ್ಲವೆಂದೂ, ಕಮ್ಯೂನಿಸ್ಟರು ಯಾಂಗ್ಸಿ ನದಿಯ ಉತ್ತರ ದಡದಲ್ಲಿ ಸೈನ್ಯವನ್ನು ಸಜ್ಜುಗೊಳಿಸಿ, ಪ್ರಬಲ ದಾಳಿಗೆ ಸಿದ್ಧತೆ ಮಾಡುತ್ತಿರುವರೆಂದೂ ವರದಿಯಾಗಿದೆ.

ಕರ್ಣಾಟಕ ಏಕೀಕರಣದ ಬಗ್ಗೆ ನಿಯೋಗ

ಮೈಸೂರು ಕಾಂಗ್ರೆಸ್ ಮತ್ತು ಕೆ. ಪಿ. ಸಿ. ಸಿ. ಕರ್ಣಾಟಕ ಏಕೀಕರಣದ ಸಂಧಾನ ಸಮಿತಿಗಳು ಹುಬ್ಬಳ್ಳಿಯಲ್ಲಿ ಕಳೆದ ಗುರುವಾರ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಕರ್ಣಾಟಕ ಪ್ರಾಂತ್ಯಕ್ಕೆ ಮೈಸೂರು ರಾಜರು ಶಾಸನಬದ್ಧ ಅಧಿಪತಿಗಳಾಗಿರಬೇಕೆಂಬ ಪರಿಷತ್ತಿನ ಕೆ. ಪಿ. ಸಿ. ಸಿ. ಮತ್ತು ಬೀದರಿನ ಎ. ಎಂ. ಸಿ. ಸಿ. ನಿರ್ಣಯಗಳನ್ನು ಅಂಗೀಕರಿಸಿ, ಈ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಅದರ ಉಪ ಸಮಿತಿಗಳಿಗೆ ನಿಯೋಗ ಹೋಗಬೇಕೆಂದು ನಿರ್ಧರಿಸಿದವು.

ಜನರು ನೋಡಲು ಅಣು ನಗರ ತೆರೆಯಲಾಯಿತು

ಅಮೇರಿಕದಲ್ಲಿ ೧೯೪೩ರಿಂದಲೂ, ರಹಸ್ಯವಾಗಿಟ್ಟಿದ್ದ ಓಕ್ ರಿಡ್ಜ್ ಎಂಬ ಅಣು ಶಕ್ತಿಯ ನಗರವನ್ನು ಈಗ ಜನರು ನೋಡಲು ತೆರೆಯಲಾಗಿದೆ. ಸಾವಿರಾರು ಜನರು ನಗರವನ್ನು ನೋಡಲು ನುಗ್ಗಿದ್ದಾಗ, ೧೪ ಮೈಲಿಗಳ ಆವರಣದಲ್ಲಿ ಅಣು ಕಾರ್ಖಾನೆಗಳ ಸುತ್ತಲೂ ತಂತಿಗಳನ್ನು ಹಾಕಿ ಅವುಗಳೊಳಗೆ ಜನರು ಹೋಗುವುದನ್ನು ತಡೆಯಲಾಗಿದೆ.

ಆಸ್ಟ್ರೇಲಿಯಾ ಅಣು ಪರೀಕ್ಷಾ ಕೇಂದ್ರ

ದಕ್ಷಿಣ ಆಸ್ಟ್ರೇಲಿಯಾದಲ್ಲಿರುವ ಪ್ರದೇಶವನ್ನು ಅತ್ಯಂತ ದೊಡ್ಡ ಅಣು ಪರೀಕ್ಷಾ ಕೇಂದ್ರವನ್ನಾಗಿ ಮಾಡಲಾಗುವುದೆಂದೂ ಈ ಬಗ್ಗೆ ಅಮೇರಿಕಾ, ಬ್ರಿಟನ್ ಮತ್ತು ಆಸ್ಟ್ರೇಲಿಯಾಗಳಿಗೆ ಒಪ್ಪಂದವಾಗಿದೆಯೆಂದೂ ಹೇಳಲಾಗಿದೆ. ಈ ಒಪ್ಪಂದದ ಪ್ರಕಾರ, ಅಣುಬಾಂಬುಗಳ ರಹಸ್ಯವನ್ನು ಆಸ್ಟ್ರೇಲಿಯದ ವೈಜ್ಞಾನಿಕರುಗಳಿಗೆ ಅಮೆರಿಕವು ತಿಳಿಸುವುದು.

ಬ್ರಿಟನ್ನಿನ ಸಹಾಯಕ್ಕಾಗಿ ಬರ್ಮಾದ ಮನವಿ

ಬರ್ಮಾದಲ್ಲಿ ಕಮ್ಯೂನಿಸ್ಟರ ಮತ್ತು ಕರೇನ್ ಘಾತಕರ ದಂಗೆಯನ್ನಡಗಿಸಲು ಸಹಾಯ ಮಾಡಬೇಕೆಂದು ಬ್ರಿಟನ್ನಿಗೆ ಬರ್ಮಾದ ರಾಯಭಾರಿಗಳು ಮನವಿ ಮಾಡಿಕೊಂಡಿರುತ್ತಾರೆ.

ಸಿಟಿ ಬಸ್ ನಡೆಸಲು ಪುರಸಭೆಗೆ ಅನುಮತಿ ಇಲ್ಲ

ಮೈಸೂರು ೨೧

ರಾಜಧಾನಿಯ ಬಸ್ ಸರ್ವಿಸ್ಸನ್ನು ಪೌರ ಸಭೆಯವರೇ ನಡೆಸಲು ಅನುಮತಿ ಕೊಡಬೇಕೆಂದು ಹಿಂದೆ ಮಾಡಿದ್ದ ನಿರ್ಣಯಕ್ಕೆ ಸರ್ಕಾರದವರು ಅಂಗೀಕಾರವಿತ್ತಿರುವುದಿಲ್ಲ. ಸರ್ಕಾರದವರೇ ಈ ನಗರದಲ್ಲಿಯೂ ಬಸ್ ಸಂಚಾರ ವ್ಯವಸ್ಥೆಯನ್ನು ಮಾಡುವ ಉದ್ದೇಶದಿಂದಿರುವುದು ಇದಕ್ಕೆ ಕಾರಣವೆಂದು ತಿಳಿದುಬಂದಿದೆ.

ಶುದ್ಧೀಕರಣ ಮತ್ತು ವಿವಾಹ

ಬೆಂಗಳೂರಿನ ಆರ್. ಎಸ್. ಎಸ್. ದಳದ ಮತ್ತು ಕ್ರೈಸ್ತರಾದ ಶ್ರೀ ಜಿ. ಎಸ್. ರಾಜಮಾಣಿಕ್ಯಂರವರನ್ನು ಮೈಸೂರು ಹಿಂದೂ ಮಹಾ ಸಭಾ ಕಾರ್ಯದರ್ಶಿಗಳಾದ ಶ್ರೀ ಕೆ. ಶೇಷಾದ್ರಿಯವರು ಶುದ್ಧಿ ಮಾಡಿ, ಹಿಂದೂ ಮತಕ್ಕೆ ಸೇರಿಸಿ, ಅವರಿಗೆ ಟಿ. ನರಸೀಪುರದ ಶ್ರೀ ಎನ್. ಎಸ್. ಎಸ್. ರಾಜಣ್ಣನವರ ಪುತ್ರಿ ಶ್ರೀಮತಿ ಸ. ಜಯಮ್ಮನವರನ್ನು ಕೊಟ್ಟು ಕಳೆದ ಗುರುವಾರ ಪತ್ನಿಯ ಮನೆಯಲ್ಲಿ ವಿವಾಹವನ್ನು ನೆರವೇರಿಸಿದರು.

ಸಿನಿಮಾ ಮಂದಿರಗಳಲ್ಲಿ ಧೂಮಪಾನ ನಿಷೇಧ

ಬೆಂಗಳೂರು, ೨೧

ಆರೋಗ್ಯದ ದೃಷ್ಟಿಯಿಂದ ಸಂಸ್ಥಾನದ ಸಿನಿಮಾ ಮಂದಿರಗಳಲ್ಲಿ ಧೂಮ ಪಾನ ಮಾಡುವುದನ್ನು ನಿಷೇಧಿಸಬೇಕೆಂದು ಮೈಸೂರು ಫಿಲಂ ಸೆನ್ಸಾರ್ ಬೋರ್ಡಿನವರು ಸಲಹೆ ಮಾಡಿದ್ದಾರೆ.

ಮೈಸೂರಿಗೆ ಮುಸುಕಿನ ಜೋಳ

ಅರ್ಜೆಂಟೈನಾದಿಂದ [illegible] ಟನ್ ಮುಸುಕಿನ ಜೋಳವು ಈಗ ಮದರಾಸಿಗೆ ಬಂದಿದೆ. ಅದರಲ್ಲಿ [illegible] ಟನ್ನು ಮೈಸೂರಿಗೆ ಬಂದಿದೆ.

ಹೆಚ್ಚು ಗೆಣಸು ಬೆಳೆಯಲು ಪ್ರಚಾರ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಬೆಂಗಳೂರು ದಕ್ಷಿಣ ಮತ್ತು ರಾಮನಗರ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ [illegible] ಆಹಾರ ಅಭಾವವನ್ನು ನಿವಾರಿಸಲು [illegible] ಹೆಚ್ಚು ಗೆಣಸು ಮತ್ತು ಆಲೂಗೆಡ್ಡೆಯನ್ನು ಬೆಳೆಯಬೇಕೆಂದು [illegible] ಮಾಡಿರುತ್ತಾರೆ.

ಗೋಪಾಲರಾವ್ ಸಮಿತಿಗೆ ಹೆಚ್ಚು ಅಧಿಕಾರ

ಬೆಂಗಳೂರು ೨೧

ಆದಾಯದ ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕೂ ಮತ್ತು ಧರ್ಮರತ್ನಾಕರ ಗೋಪಾಲರಾಯರೊಡನೆ ಇಟ್ಟುಕೊಂಡಿದ್ದ ಲೇವಾ ದೇವಿಯ ವಿವರಗಳನ್ನು ಮರೆ ಮಾಡುವುದಕ್ಕೂ ಪ್ರಯತ್ನಿಸುವವರ ಹಣ ಕಾಸುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಗೋಪಾಲರಾವ್ ವಿಚಾರಣಾ ಸಮಿತಿಯವರಿಗೆ ಅಧಿಕಾರವನ್ನು ಕೊಡುವ ಜರೂರು ಶಾಸನವೊಂದನ್ನು ಸಧ್ಯದಲ್ಲಿಯೇ ಸರ್ಕಾರದವರು ಜಾರಿಗೆ ತರಲಿರುವರೆಂದು ತಿಳಿದುಬಂದಿದೆ.

ಚಿನ್ನದ ಗಣಿ ಮುಷ್ಕರದ ಮುಕ್ತಾಯವೇ?

ಚಿನ್ನದ ಗಣಿ ಕೆಲಸಗಾರರಿಗೆ ಈಗ ಕೊಡುತ್ತಿರುವ ತುಟ್ಟಿ ಭತ್ಯವನ್ನು ರೂ. ೧೦ ರಿಂದ ೨೫ ರೂ.ಗೆ ಹೆಚ್ಚಿಸಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ. ಮುಷ್ಕರಕಾರರು ಕೆಲಸಕ್ಕೆ ಹಿಂದಿರುಗಿದರೆ ನಾಯಕರ ಬಿಡುಗಡೆಯನ್ನು ಸರ್ಕಾರದವರು ಪರಿಶೀಲಿಸುವರೆಂದು ತಿಳಿಸಲಾಗಿದೆ. ಮುಷ್ಕರಕಾರರ ಸಮಿತಿಯವರು ಇದನ್ನು ಪರಿಶೀಲಿಸುತ್ತಿದ್ದಾರೆ ಮತ್ತು ಮುಷ್ಕರವು ಕೊನೆಗಾಣಬಹುದೆಂದೂ ನಿರೀಕ್ಷಿಸಲಾಗಿದೆ.

ಮೈಸೂರಿಗೆ ವಿಶ್ವ ಸಂಸ್ಥೆಯ ಸೆಕ್ರೆಟರಿ ಜನರಲ್

ಮೈಸೂರು ೨೧

ವಿಶ್ವ ಸಂಸ್ಥೆಯ ಸೆಕ್ರೆಟರಿ ಜನರಲ್‌ರಾದ ಮಿ. ಟ್ರಿಗ್ವೆ ಲೀರವರು ೧೯೪೯ ನೆಯ [illegible] ರಾಜಧಾನಿಗೆ ಬರುವ ಜನವರಿ ತಿಂಗಳಿನಲ್ಲಿ ಆಗಮಿಸಿ, ಒಂದು ತಿಂಗಳ ಕಾಲ ಇಲ್ಲಿ ಇರುವರೆಂದು ತಿಳಿದುಬಂದಿದೆ.

ಮಗು ಸಿಕ್ಕಿದೆ

ನೂರಡಿ ರಸ್ತೆಯ ೫ ರಾಂದ್ರದ ಕಂಭದ ಹತ್ತಿರ ೩ ವರ್ಷದ ಹೆಣ್ಣು ಮಗುವೊಂದು ಈ ದಿನ ವಾರಸುದಾರರಿಲ್ಲದೆ ಇದ್ದುದನ್ನು ಕಂಡು, ಅದನ್ನು ಲಷ್ಕರ್ ಪೋಲೀಸ್ ಸ್ಟೇಷನ್ನಿನಲ್ಲಿ ಇಡಲಾಗಿದೆ. ಸಂಬಂಧಪಟ್ಟವರು ಅಲ್ಲಿಗೆ ಹೋಗಿ ಮಗುವನ್ನು ಪಡೆಯಬಹುದು.

ಡಿಸೆಂಬರ್ ೧೧ಕ್ಕೆ ಫ್ರೆಂಚ್ ಭಾರತದಲ್ಲಿ ಜನ ಮತಗಣನೆ

ಭಾರತದಲ್ಲಿರುವ ಫ್ರಾನ್ಸಿಗೆ ಸೇರಿದ ಪ್ರದೇಶಗಳು ನಿಶ್ಚಯಿಸಬೇಕಾದ [illegible] ಸರ್ಕಾರದ ಆಡಳಿತದಲ್ಲಿ ಇರಬೇಕೇ [illegible] ಬರುವ ಡಿಸೆಂಬರ್ [illegible] ಜನ ಮತಗಣನೆಯು [illegible] ಬೇಕೆಂದು [illegible] ತಿಳಿದುಬಂದಿದೆ.

ಪೋಲೀಸ್ ಸಿ. ಐ. ಡಿ. ಯಲ್ಲೂ ಕಮ್ಯೂನಿಸ್ಟರು

[illegible] ಪೋಲೀಸ್ ಇಲಾಖೆ [illegible] ತಿಳಿದಿದೆ.

ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘ

ಮೈಸೂರು [illegible]

ನಗರದ ಪ್ರಾಥಮಿಕ ಶಾಲಾ ಉಪಾಧ್ಯಾ [illegible] ವಾರ್ಷಿಕೋತ್ಸವವು [illegible] ಭವನದಲ್ಲಿ ನಡೆಯಿತು. [illegible] ವೆಂಕಟರ [illegible] [illegible] ಪ್ರಾರ್ಥನೆ [illegible] ಸ್ವಾಗತ [illegible] ಸಂಘದ [illegible] ಅಧ್ಯಕ್ಷರು [illegible]

[illegible]

[illegible] ಕೋಟಿ ರೂ. ನ ಪೈರು ಕಾರ್ಯಾರ್ನ

[illegible]

ನೋಟುಗಳ ಮೊತ್ತ ೧೧೭೩ ಕೋಟಿ ರೂ.

ಈ ತಿಂಗಳ [illegible] ನೇ ತಾರೀಖಿನವರೆಗೆ ಚಲಾವಣೆಯಲ್ಲಿದ್ದ [illegible] ನೋಟುಗಳ ಒಟ್ಟು ಬೆಲೆ ೧೧೭೩ ಕೋಟಿ ರೂ ಎಂದು ತಿಳಿದುಬಂದಿದೆ [illegible] ಕಳೆದ ಡಿಸೆಂಬರ್ ವರೆಗೆ ಚಲಾವಣೆಯಲ್ಲಿದ್ದ ನಾಣ್ಯಗಳ ಬೆಲೆ [illegible] ಕೋಟಿ ರೂ ಎಂದು ಹೇಳಲಾಗಿದೆ

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

[illegible]

ಶಿವರಾಂಪೇಟೆ ಮೈಸೂರು

ಜಯಲಕ್ಷ್ಮೀ ಟಾಕೀಸ್

[illegible]

ಅಪೂರ್ವ ಸಹೋದರರು

[illegible]

ಬಿಳಿಯ ಮಹಿಳೆ ಕಪ್ಪಾದ ಪ್ರಸಂಗ

[illegible] ವರ್ಷದ ಬಿಳಿಯ ಮ[illegible] ಸಂಪೂರ್ಣ ಕಪ್ಪು ಬಣ್ಣಕ್ಕೆ ತಿರುಗಿದ ಆಶ್ಚರ್ಯ ಪ್ರಸಂಗ ವರದಿಯಾಗಿದೆ ಆಕೆಯು [illegible] ಕೆಲಸ ಮಾಡುತ್ತಿದ್ದಾಗ ಬಿಟ್ಟಿನ ವಿಷ ಪ್ರಯೋಗದಿಂದ ಆಕೆಗೆ ಈ ರೀತಿ ಆಗಿದೆಯೆಂದೂ ವೈದ್ಯರು ಕಂಡುಹಿಡಿದಿದ್ದಾರೆ ಆಕೆಗೆ ಬಿಟ್ಟಿನ ಆಹಾರವನ್ನು ನಾಲ್ಕು ತಿಂಗಳ ಕಾಲ ಕೊಟ್ಟಿದ್ದರಿಂದ ಆಕೆಯು ಪುನಃ [illegible] ಬಣ್ಣಕ್ಕೆ ತಿರುಗುತ್ತಿದ್ದಾಳೆ

ಶ್ರೀ ರಾಮೋತ್ಸವ

ರಾಜಧಾನಿಯ ಚಾಮುಂಡಿ ಬಡಾವಣೆಯ ೧೧೦೬-೪೦ ನೇ ಗೃಹದಲ್ಲಿರುವ ಶ್ರೀ ರಾಜರಾಜೇಶ್ವರೀ ಸನ್ನಿಧಿಯಲ್ಲಿ ಪ್ರತಿವರ್ಷ ನಡೆಯುತ್ತಿದ್ದ ಶ್ರೀರಾಮೋತ್ಸವವು ಕಡೂರಿನಲ್ಲಿ ನೂತನವಾಗಿ ಪ್ರತಿಷ್ಠೆಯಾಗಿರುವ ಶ್ರೀ ಗಂಗಾಧರೇಶ್ವರ ದೇವಾಲಯದಲ್ಲಿ ಈ ಸಾರಿ ನಡೆಯುವುದೆಂದೂ. ಭಕ್ತಾದಿಗಳೆಲ್ಲರೂ ಇದಕ್ಕೆ ಧನ ಸಹಾಯಮಾಡಿ ಹಣವನ್ನು ಕಡೂರು ತಾಲ್ಲೂಕು ಟ್ರೆಜರಿಯಲ್ಲಿರುವ ಶ್ರೀ ಗಂಗಾಧರೇಶ್ವರ ನಿಧಿಗೆ ಕಳುಹಿಸಬೇಕೆಂದೂ ಶ್ರೀ ಕಡೂರು ವೆಂಕಟರಮಣ ಶಾಸ್ತ್ರಿಗಳು ಕೋರಿರುತ್ತಾರೆ

ಚಕ್ಕಳದಲ್ಲಿ ಪಿಟೀಲು

ಇಂಗ್ಲೆಂಡಿನ ಸ್ಟ್ಯಾಫರ್ಡ್‌ಷೈರ್ ಪ್ರಾಂತದ [illegible] ಮ್ಯಾರ ನೊಬ್ಬನು ಚಕ್ಕಳದಿಂದ ಒಂದು ಪಿಟೀಲನ್ನು ತಯಾರಿಸಿರುವನು. ಪಿಟೀಲಿನ ಪ್ರವೀಣರು ಈ ಪಕ್ಕವಾದ್ಯವನ್ನು ಪರೀಕ್ಷಿಸಿ, ಅದು ಸರಿಯಾದ ಧ್ವನಿ ಕೊಡುವುದೆಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತ ರೆಡ್‌ಕ್ರಾಸಿಗೆ ನಿಧಿ

ಭಾರತ ಸೈನ್ಯದ ರೆಡ್ ಕ್ರಾಸ್ ಸಂಸ್ಥೆ [illegible] ನಿವೃತ್ತ ಯೋಧರು ೩೫೦೦ ರೂ. ನಿಧಿಯನ್ನು ಇಲ್ಲಿಗೆ ಆಗಮಿಸಿದ್ದ ಶ್ರೇಷ್ಠ ದಂಡನಾಯಕರಾದ ಜನರಲ್ ಕಾರಿಯಪ್ಪನವರ ಮೂಲಕ ಅರ್ಪಿಸಿರುತ್ತಾರೆ

ಅಮೆರಿಕಕ್ಕೆ ಜೈಲ್ ಸೂಪರಿಂಟೆಂಡೆಂಟರ ಪ್ರವಾಸ

ಸಂಸ್ಥಾನದಲ್ಲಿ ಜೈಲು ಸುಧಾರಣೆ ನಡೆಸುವುದಕ್ಕಾಗಿ ಅಮೆರಿಕದಲ್ಲಿರುವ ಜೈಲುಗಳನ್ನು ನೋಡಿಕೊಂಡು ಬರಲು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾದ [illegible] ಅಮೀರ್‌ರವರನ್ನು ಅಲ್ಲಿಗೆ ಕಳುಹಿಸಲಾಗುವುದೆಂದು ಅವರು ಅಲ್ಲಿಂದ ಹಿಂತಿರುಗಿದಮೇಲೆ ಅವರನ್ನು ಜೈಲಿನ ಐ. ಜಿ. ಪಿ. ಗಳನ್ನಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ಕಣಿಯರ ಸೇವಾ ಸಮಾಜದ ವಾರ್ಷಿಕೋತ್ಸವ

ರಾಜಧಾನಿಯ ಕಣಿಯರ ಸೇವಾ ಸಮಾಜದ ವಾರ್ಷಿಕೋತ್ಸವವು ನಿನ್ನೆ ಮ[illegible] ಪುರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ, ಸ್ವಾಗತ ಭಾಷಣ ಮತ್ತು ಸಂಘದ ವರದಿಗಳಾದನಂತರ, ಅಧ್ಯಕ್ಷರು ಭಾಷಣ ಮಾಡಿ, ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಅರಿತು ದೇಶದ ಅಭ್ಯುದಯಕ್ಕೆ ದುಡಿಯಬೇಕೆಂದು ತಿಳಿಸಿದರು ಮೇಲು ಮತ್ತು ಕೀಳು ಎಂಬ ಭಾವನೆಯು ಇರಕೂಡದೆಂದೂ, ಎಲ್ಲರೂ ಭಾರತದ ಪ್ರಜೆಗಳೆಂದು ಕೆಲಸ ಮಾಡಬೇಕೆಂದೂ ಮತ್ತು ಎಲ್ಲರೂ ಸರ್ಕಾರದ ಆಶ್ರಯವನ್ನು ಕೋರದೆ ಮುಂದುವರೆಯಬೇಕೆಂದೂ ಹೇಳಿದರು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಆರತಕ್ಷತೆ

ರಾಜಧಾನಿಯ ಶ್ರೀ ಡಿ. ಬಿ. ವಿಶ್ವಂಭರಯ್ಯನವರು ತಮ್ಮ ಅಣ್ಣನವರ ದತ್ತು ಪುತ್ರ ಶ್ರೀ ಬಿ. ವಿ. ಚೌಡಯ್ಯನವರ ವಿವಾಹ ಸಂಬಂಧದಲ್ಲಿ ನಿನ್ನೆ ಸಂಜೆ ಒನಮಯ್ಯನವರ ಹೈಸ್ಕೂಲಿನಲ್ಲಿ ಆರತಕ್ಷತೆ ಸಮಾರಂಭವನ್ನು ಏರ್ಪಡಿಸಿ, ಅನೇಕ ಗಣ್ಯ ಮಹನೀಯರನ್ನು ಆಹ್ವಾನಿಸಿ ಫಲ ತಾಂಬೂಲದೊಡನೆ ಸತ್ಕರಿಸಿದರು. ಶ್ರೀಮತಿ ನೀಲಮ್ಮ ಕಡಾಂಬಿಯವರ ಸುಶ್ರಾವ್ಯವಾದ ಸಂಗೀತವೂ ನಡೆಯಿತು

* ಪ್ರಭುದೇವಾ ಟಾಕೀಸಿನಲ್ಲಿ *

18-3-49ರಿಂದ ಆಮೋಘ ಪ್ರಾರಂಭ

ಸೂರ್ಯ ಪುತ್ರಿ

(ತಮಿಳು)

ಪಾತ್ರ [illegible] ಟಿ ಆರ್ ರಾಜಕುಮಾರಿ ಕೊತ್ತಮಂಗಲಂ ಶೀನು, ಸುಂದರೀಬಾಯಿ, ಎಸ್ ಜಾನಕಿ ಚೆಲ್ಲಂ, ಮುಂತಾದವರು

COUNCIL OF SCIENTIFIC AND INDUSTRIAL RESEARCH

Office of the Central Food
C F T R I 572 48 49 Technological Research Institute
"CHALUVAMBA MANSION"
Mysore, Dated 17-3-49.

NOTIFICATION

Tenders in the prescribed form enclosed in a sealed cover superscribed as "TENDER FOR Supplying Racks and shelves required for the store-room." will be received in the Office of the undersigned up to 4 p.m.. on 25-3-1949 The Tenders should be accompanied by a stamped receipt for having credited a sum of Rs. 150(one hundred and fifty) in cash as earnest money in the above office. No cheques will be accepted. Tenders not accompanied by such receipts will be disqualified.

Detailed Estimates, Plans and Agreement Forms may be seen in the office on all working days between 10 a.m. and 12 Noon, after making an appointment Prescribed Tender Forms can be had in the office on payment of a sum of four annas.

Tenders should be on percentage basis detailed rates to be quoted. Such rates must hold good for a period of four months from the date of Tender All non tendered items will be paid for on data including ten per cent profit

The work should be completed within two months from the date of acceptance of the Tender

The undersigned reserves the right to accept or reject any tender without assigning any reason whatsoever

M G SRINIVASAN
For PLANNING OFFICER.
C F T R I, Mysore

Edited, printed and published by A.R. Nagarajan at the Sadhvi Press D. Subbiah Road, Mysore

ಬೆಂಗಾಲ್. ಬನಾರಿಸ್, ಮೈಸೂರು ಸಿಲ್ಕ್ ಸೀರೆಗಳು

[illegible] ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ ನಿಷ್ಕ್ರಿಯವಾದ ಮಾಲು. ಚಾಮುಂಡಿ ಕಂಪೆನಿ, ಮೈಸೂರು

ಫೋನ್ ನಂ. 792   ॥ವಂದೇ ಮಾತರಂ॥   ಬಿಡಿಪ್ರತಿ ೩ ಕಾಸು

ಸಾಧ್ವಿ

ಸಂಪುಟ ೭]   ಮಂಗಳವಾರ ೨೨-೩-೧೯೪೯   [ಸಂಚಿಕೆ ೧೯೪

ಕಮಿಷನರ ಮೇಲೆ ಅವಿಶ್ವಾಸ ಪ್ರಕರಣ

ಸ್ವಂ. ಫೋನ್] ಬೆಂಗಳೂರು ೨೨

ನಗರ ಪುರ ಸಭಾ ಕಮಿಷನರಾದ ಜನಾಬ್ ಖಲೀಲ್‌ರವರ ಮೇಲೆ ಪೌರ ಸಭೆ ಕಾಂಗ್ರೆಸ್ ಪಕ್ಷದವರು ಮಂಡಿಸಿರುವ ಅವಿಶ್ವಾಸ ನಿರ್ಣಯವು ಈ ದಿನ ನಡೆಯುವ ಪುರ ಸಭೆಯ ಮುಂದೆ ಬರಲಾರದೆಂದು ತಿಳಿದುಬಂದಿದೆ. ಸರ್ಕಾರದವರು ಅವರನ್ನು ವರ್ಗಾಯಿಸುವುದಾಗಿ ಭರವಸೆ ಕೊಟ್ಟಿರುವುದೇ ಇದಕ್ಕೆ ಕಾರಣವೆಂದು ತಿಳಿಯಲಾಗಿದೆ.

ವಿದ್ಯಾ ಶಾಖಾ ಕಾರ್ಯದರ್ಶಿಗಳಾದ ಶ್ರೀ ಎ ಸಿ. ನಿರ್ವಾಣೇಗೌಡರಿಗೆ ೨೫ ನೇ ತಾ॥ ಯಿಂದ ೩ ತಿಂಗಳು ರಜ ಕೊಡಲಾಗಿದೆ.

ಹಣ ಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಇದೇ ೨೬ ನೇ ದೆಹಲಿಗೆ ಪ್ರಯಾಣ ಬೆಳೆಸುವರು.

ವ್ಯವಸಾಯ ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ ಟಿ ಎಸ್ ರಾಮರೆಡ್ಡಿಯವರು ನಿವೃತ್ತರಾಗುವುದಕ್ಕೆ ಮುಂಚೆ ಮೇ ೧೦ ನೇ ತಾ॥ ನಿಂದ ಅವರಿಗೆ ರಜ ಕೊಡಲಾಗಿದೆ

ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ನಿನ್ನೆ ಅಧಿಕಾರಿಗಳ ಸಭೆಯನ್ನು ನಡೆಸಿ, ನೂತನ ಗ್ರಾಮಾಭಿವೃದ್ಧಿ ಯೋಜನೆಯು ಫಲಕಾರಿಯಾಗುವಂತೆ ಮಾಡಲು ಅಧಿಕಾರಿಗಳು ವಿಶೇಷ ಆಸಕ್ತಿ ಮತ್ತು ಶ್ರಮ ತೋರಿಸಬೇಕೆಂದು ತಿಳಿಸಿದರು

ರಮಣಿ ದಂತ ಮಂಜನಂ

ಮೈಸೂರು ಚಾಮುಂಡಿಪುರದಲ್ಲಿರುವ ಎಸ್ ಎ ಶರ್ಮ ಅಂಡ್ ಸನ್ಸ್‌ರವರು ತಯಾರಿಸಿರುವ ಮೇಲ್ಕಂಡ ಹೆಸರಿನ ಪುಡಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಶಾಸ್ತ್ರೀಯ ಬಗೆಯ ಮೂಲಿಕೆಗಳಿಂದ ಇದು ಮಾಡಲ್ಪಟ್ಟಿರುತ್ತದೆ. ಹಲ್ಲು ನೋವನ್ನು ನಿವಾರಿಸಿ, ಶುಭ್ರವಾಗಿಡಲು ಇದು ಸಹಕಾರಿಯಾಗಿರುತ್ತದೆ. ಮಹಾಜನರು ಇದಕ್ಕೆ ಉದಾರವಾದ ಪ್ರೋತ್ಸಾಹ ನೀಡುವರೆಂದು ನಂಬಿದ್ದೇವೆ

ಮಹಿಳೆಯರಿಗೆ ಗೃಹ ಕೈಗಾರಿಕಾ ಶಿಕ್ಷಣ

ರಾಜಧಾನಿಯ ಹೊಸ ಸಯ್ಯಾಜಿರಾವ್ ರಸ್ತೆಯಲ್ಲಿರುವ ಗೃಹ ಕೈಗಾರಿಕಾ ಸಂಸ್ಥೆಯಲ್ಲಿ ಬರುವ ಬೇಸಿಗೆ ರಜದಲ್ಲಿ ಅನುಕೂಲ [illegible]ಗಳನ್ನು ತಯಾರಿಸಲು ಮಹಿಳೆಯರಿಗೆ ಶಿಕ್ಷಣ ಕೊಡಲಾಗುವುದೆಂದೂ, ಶಿಕ್ಷಣ ಪಡೆದ ನಂತರ ತಮ್ಮ ಮನೆಗಳಲ್ಲೇ ಅವರು [illegible] ತಯಾರಿಸಲು ಸೌಲಭ್ಯವನ್ನೇರ್ಪಡಿಸಲಾಗುವುದೆಂದೂ ಅದರ ವ್ಯವಸ್ಥಾಪಕರಾದ ಶ್ರೀ ಎಂ ಪಿ ಲಿಂಗಪ್ಪನವರು ತಿಳಿಸಿರುತ್ತಾರೆ

ಪರೀಕ್ಷಾ ಪ್ರಶ್ನೆ ಪತ್ರಿಕೆಗಳು ಬಹಿರಂಗವಾದುವು

ಬನಾರಸ್ ವಿಶ್ವವಿದ್ಯಾಲಯದ ಬಿ ಎ ಬಿ ಎಸ್ ಸಿ ಆನರ್ಸ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿರುವುದರಿಂದ ಈ ವಿಷಯದಿಂದ ನಡೆಯಬೇಕಾಗಿದ್ದ ಪರೀಕ್ಷೆಗಳನ್ನು ಸದ್ಯ ಕಾಲದವರೆಗೆ ಮುಂದೆ ಹಾಕಲಾಗಿದೆಯೆಂದು ಹೇಳಲಾಗಿದೆ

ಮಹಿಳೆಯ ಆಭರಣಗಳ ಕಳುವಿಗಾಗಿ ಶಿಕ್ಷೆ

ಸ್ವಂ. ಸು. ಫೋನ್] ಬೆಂಗಳೂರು ೨೨

ಅರುಣಾಚಲಂ ಉರುಫ್ ರಾಮಲಿಂಗಂ ಎಂಬುವನು ಮದರಾಸಿನಿಂದ ಕಮಲಮ್ಮ ಉರುಫ್ ಕಾವೇರಿಬಾಯಿ ಎಂಬ ಯುವತಿಯನ್ನು ಸಿನಿಮಾ ನಟಿಯನ್ನಾಗಿ ಸೇರಿಸುವುದಾಗಿ ಬೆಂಗಳೂರಿಗೆ ಕರೆದುಕೊಂಡು ಬಂದು, ಹೋಟೆಲಿನ ಕೊಟಡಿಯಲ್ಲಿ ಆಕೆಯು ಇಲ್ಲದಾಗ, ಆಕೆಯ ೧ ಸಾವಿರ ರೂ. ಬೆಲೆ ಬಾಳುವ ಆಭರಣಗಳನ್ನು ಕಳುವುಮಾಡಿದನೆಂಬ ಆಪಾದನೆ ಮೇಲೆ ಆತನಿಗೆ ನಗರ ನ್ಯಾಯಾಧೀಶರು ೯ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ

ರಾಜಕಾರಣಿಗಳಿಗೆ ನೆಹರೂರವರ ಎಚ್ಚರಿಕೆ

ನಿತ್ಯ ಜೀವನದಲ್ಲಿ ರಾಜ ಕಾರಣಿಗಳು ಧಾರ್ಮಿಕ ಮತ್ತು ನೈತಿಕ ತತ್ವಗಳನ್ನು ಉಪೇಕ್ಷಿಸಿದರೆ ಭವಿಷ್ಯವು ತೃಪ್ತಿಕರವಾಗಿರುವುದಿಲ್ಲ—ಎಂದು ಪ್ರಧಾನಿ ಪಂಡಿತ ನೆಹರೂರವರು ದೆಹಲಿಯಲ್ಲಿ ನಡೆದ ಶ್ರೀ ರಾಮಕೃಷ್ಣ ಪರಮ ಹಂಸರ ಜನ್ಮ ದಿನಾಚರಣೆಯ ಸಂಬಂಧದಲ್ಲಿ ಭಾಷಣ ಮಾಡುತ್ತಾ ತಿಳಿಸಿರುತ್ತಾರೆ. ರಾಜಕಾರಣಿಗಳು ಸಮಯ ಸಂದರ್ಭಗಳನ್ನನುಸರಿಸಿ ವರ್ತಿಸುವರೆಂದೂ ಅವರು ಜನತೆಯ ಮನೋಭಾವಕ್ಕೆ ತಕ್ಕಂತೆ ಹೊಂದಿ ಕೊಂಡು ಹೋಗುವವರೆಂದೂ, ಜೀವನದಲ್ಲಿ ನೈತಿಕ ತತ್ವಗಳನ್ನು ಮರೆತರೆ ವಿಶ್ವದ ಒಗ್ಗಟ್ಟಿಗೆ ಧಕ್ಕೆ ಬರುವುದೆಂದೂ ಅವರು ಹೇಳಿರುತ್ತಾರೆ.

ಧಾನ್ಯಗಳ ವಿನಿಮಯದ ವ್ಯವಸ್ಥೆ

ಸ್ವಂ. ಸು ಫೋನ್] ಬೆಂಗಳೂರು ೨೨

ಧಾನ್ಯಗಳನ್ನು ಬೆಳೆಯುವವರು ತಾವು ಬೆಳೆಯುವ ಒಂದು ಬಗೆಯ ಕಾಳುಗಳನ್ನು ಕೊಟ್ಟು ತಮಗೆ ಬೇಕಾಗಿರುವ ಬೇರೆ ಬಗೆಯ ಕಾಳುಗಳನ್ನು ತೆಗೆದುಕೊಳ್ಳಲು ಮುಂದೆ ಬರುತ್ತಿರುವರೆಂಬ ವಿಚಾರವು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಅಂತಹವರ ಸೌಕರ್ಯಕ್ಕಾಗಿ ಸರ್ಕಾರೀ ಡಿಪೋಗಳಲ್ಲಿ ಧಾನ್ಯಗಳನ್ನು ವಿನಿಮಯ ಮಾಡಿಕೊಳ್ಳಲು ಏರ್ಪಾಡು ಮಾಡಲಾಗಿದೆ ೩ ಪಲ್ಲ ಭತ್ತವನ್ನು ಕೊಡುವವರಿಗೆ ೧ ಪಲ್ಲ ರಾಗಿಯನ್ನೂ, ೧॥ ಪಲ್ಲ ರಾಗಿ ಕೊಡುವವರಿಗೆ ೨ ಪಲ್ಲ ಭತ್ತವನ್ನೂ ಕೊಟ್ಟು, ಬಾಕಿ ಧಾನ್ಯದ ನೋಟಗಳನ್ನು ಚಾಲ್ತಿಯಲ್ಲಿರುವ ದರದ ಮೇಲೆ ತಾಖತಿಮಾಡಲು ವ್ಯವಸ್ಥೆ ಮಾಡಲಾಗಿದೆ ಡಿಪೋಗಳಲ್ಲಿ ಇರುವ ದಾಸ್ತಾನಿಗೆ ಅನುಗುಣವಾಗಿ ಈ ವಿನಿಮಯವನ್ನು ಮಾಡಲಾಗುವುದು.

ಶಿಶುಗಳನ್ನು ಮಾರುವ ಮಹಿಳೆ

ಮದುವೆಯಾಗದೆ ಅಕ್ರಮವಾಗಿ ಮಕ್ಕಳನ್ನು ಪಡೆದ ತಾಯಂದಿರಿಂದ ಶಿಶುಗಳನ್ನು ಕೊಂಡು ೬ ತಿಂಗಳ ಅವಧಿಯಲ್ಲಿ ೭೦ ಮಕ್ಕಳನ್ನು ವಿಶೇಷ ಬೆಲೆಗೆ ಮಾರಾಟ ಮಾಡಿದಳೆಂದು ನ್ಯೂಯಾರ್ಕಿನ ಅಲೈಸ್ ಸ್ಕಾಟರ್‌ವೇಲ್ ಎಂಬ ೫೬ ವರ್ಷದ ಮಹಿಳೆಯನ್ನು ಈಗ ವಿಚಾರಣೆಗೆ ಗುರಿಪಡಿಸಲಾಗಿದೆ ಮಕ್ಕಳಿಲ್ಲದವರಿಗೆ ಇಂತಹ ಶಿಶುಗಳನ್ನು ಆಕೆಯು ಕೊಡುತ್ತಿದ್ದಳೆಂದು ಹೇಳಲಾಗಿದೆ ಕಳೆದ ೫ ವರ್ಷಗಳಲ್ಲಿ ನೂರಾರು ಮಕ್ಕಳನ್ನು ಮಾರಿ, ಅವುಗಳನ್ನು ದತ್ತು ಮಕ್ಕಳನ್ನಾಗಿ ಮಾಡಿದ್ದಾಳೆ ಮಕ್ಕಳು ಹುಟ್ಟುವುದಕ್ಕೆ ಮುಂಚೆಯೇ ಅವಿವಾಹಿತ ತಾಯಂದಿರುಗಳಿಂದ ಮಕ್ಕಳನ್ನು ಮಾರಲು ಕರಾರು ಬರೆಸಿಕೊಳ್ಳುತ್ತಿದ್ದಳೆಂದೂ ಆಕೆಯ ಮೇಲೆ ಆಪಾದಿಸಲಾಗಿದೆ.

ಪರೀಕ್ಷಾ ಪ್ರಶ್ನೆ-ಪತ್ರಿಕೆ ಬಹಿರಂಗವಾದುದಕ್ಕೆ ಉಪಾಧ್ಯಾಯರ ಆತ್ಮಹತ್ಯೆ

ಭದ್ರಾವತಿ ಬಾಯ್ಸ್ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ವಿ ಆನಂದರವರು ಕಳೆದ ಶನಿವಾರ ಸಂಜೆ ಭದ್ರಾವತಿಯಿಂದ ಬಿರೂರಿಗೆ ಹೋಗುತ್ತಿದ್ದ ರೈಲ್ವೆ ಎಂಜಿನಿಗೆ ಹೋಗಿ ಡಿಕ್ಕಿ ಹೊಡೆದು ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿವೆ ಹೈಸ್ಕೂಲಿನ ಪರೀಕ್ಷೆ ಪ್ರಶ್ನೆ ಪತ್ರಿಕೆಗಳು ಮುಂಚೆಯೇ ಬಹಿರಂಗವಾದ ಸಂದರ್ಭದಲ್ಲಿ ಅವರು ವಿಚಾರಣಾ ಸಮಿತಿಯ ಮುಂದೆ ಹೋಗಬೇಕಾದುದರಿಂದಲೂ ಮತ್ತು ಅವರು ಜೀವನದಲ್ಲಿ ಕಷ್ಟಗಳನ್ನು ಸಹಿಸಲಾರದೆ ಯೂ ಈರೀತಿ ಪ್ರಾಣ ಕಳೆದುಕೊಂಡರೆಂದು ಹೇಳಲಾಗಿದೆ

ದೊಡ್ಡ ಜಾತ್ರೆ

ನಂಜನಗೂಡು ೨೨

ಇಲ್ಲಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡ ಜಾತ್ರೆ ಪ್ರಯುಕ್ತ ಮುಂದಿನ ತಿಂಗಳು ೨ ನೇ ತಾ॥ ಅಂಕುರಾರ್ಪಣೆ, ೬ ನೇ ತಾ॥ ಶ್ರೀಕಂಠ ಮುಡಿ ಉತ್ಸವವೂ ೯ ನೇ ತಾ॥ ಶನಿವಾರ ಬೆಳಿಗ್ಗೆ ರಥೋತ್ಸವವೂ, ೧೧ ನೇ ತಾ॥ ತೀರ್ಥ ಸ್ನಾನ ಮತ್ತು ರಾತ್ರಿ ತೆಪ್ಪೋತ್ಸವವೂ ಜರುಗುವುವು

ಪೋಸ್ಟ್‌ಮಾಸ್ಟರ್ ನೌಕರಿಯ ಪರೀಕ್ಷೆ

ಅಂಚೆ ಇಲಾಖೆಯವರು ಪೋಸ್ಟ್‌ಮನ್ನುಗಳನ್ನು ನೇಮಿಸಿಕೊಳ್ಳುವುದಕ್ಕಾಗಿ ಮೇ ತಿಂಗಳಿನಲ್ಲಿ ಬೆಂಗಳೂರು ಮತ್ತು ಇತರ ಪ್ರಮುಖ ನಗರಗಳಲ್ಲಿ ಪರೀಕ್ಷೆಗಳನ್ನು ಏರ್ಪಡಿಸಿರುತ್ತಾರೆ

ನೈಜಾಂ ದರ್ಜಿಗಳ ಮುಷ್ಕರ

ನೈಜಾಮರ ಕಿಂಗ್ ಕೋಠಿ ಅರಮನೆಯಲ್ಲಿ ಕೆಲಸಮಾಡುತ್ತಿರುವ ೨೦೦ಜನ ದರ್ಜಿಯವರು ತಮಗೆ ಹೆಚ್ಚಿನ ಸಂಬಳ, ತುಟ್ಟಿ ಭತ್ಯ ಮತ್ತು ಮನೆ ಬಾಡಿಗೆ ಕೊಡಬೇಕೆಂದು ಮುಷ್ಕರ ಹೂಡಿರುತ್ತಾರೆ ಎರಡು ಶತಮಾನದಿಂದಲೂ ಅರಮನೆಯಲ್ಲಿ ಈ ದರ್ಜಿಯವರು ಕೆಲಸಮಾಡುತ್ತಿದ್ದಾರೆ ಅವರು ತಮ್ಮ ಬೇಡಿಕೆಗಳನ್ನು ನಿಜಾಮರಿಗೂ ಮತ್ತು ಮಿಲಿಟರಿ ಗವರ್ನರರಿಗೂ ಕಳುಹಿಸಿರುತ್ತಾರೆ.

ನವಾಬ್ ಮೊಯಿನ್ ಜಂಗರ ವಜಾ

ಹೈದರಾಬಾದಿನ ಮಾಜಿ ಲಯಾಕಾಲಿ ಮಂಡಲದಲ್ಲಿ ಹಣಕಾಸಿನ ಸಚಿವರಾಗಿದ್ದ ನವಾಬ್ ಮೊಯಿನ್ ನವಾಜ್ ಜಂಗರನ್ನು ಕೆಲಸದಿಂದ ವಜಾ ಮಾಡಲಾಗಿದೆ. ಅವರು ಸರ್ಕಾರದ ಹಣವನ್ನು ದುರುಪಯೋಗಪಡಿಸಿರುವುದಲ್ಲದೆ, ನೈಜಾಮರಲ್ಲಿ ಅವಿಧೇಯರಾಗಿದ್ದರೆಂದೂ ಆಪಾದಿಸಲಾಗಿದೆ.

ಲಂಡನ್ನಿನಲ್ಲಿ ನೈಜಾಮರ ಏಜೆಂಟರಾಗಿದ್ದ ನವಾಬ್ ಮೀರ್ ನವಾಜ್ ಜಂಗರನ್ನೂ ಕೆಲಸದಿಂದ ನಿವೃತ್ತಿ ಮಾಡಲಾಗಿದೆ

ಕೆ. ಸಿ. ನಿಯೋಗಿಯವರ ರಾಜೀನಾಮೆಯೇ ?

ಭಾರತ ಸರ್ಕಾರದ ವಾಣಿಜ್ಯ ಸಚಿವರಾದ ಶ್ರೀ ಕೆ. ಸಿ. ನಿಯೋಗಿಯವರು ಪಂಕ್ತಿಯೊಂದಕ್ಕೆ ಆಮದು ರಹದಾರಿಯನ್ನು ಕೊಟ್ಟ ವಿಚಾರವಾಗಿ ಕೇಂದ್ರ ಶಾಸನ ಸಭೆಯಲ್ಲಿ ತೀವ್ರ ಟೀಕೆಗಳಾದುದರಿಂದ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವರೆಂದು ಹೇಳಲಾಗಿದೆ.

ಚೀಣದಲ್ಲಿ ನೂತನ ಮಂತ್ರಿ ಮಂಡಲ

ಹೋಯಿಂಗ್ ಚಿಂಗ್‌ರವರ ನಾಯಕತ್ವದಲ್ಲಿ ಚೀಣದಲ್ಲಿ ನೂತನ ಮಂತ್ರಿ ಮಂಡಲ ಏರ್ಪಾಡಾಗಿದೆ.

ಕಳ್ಳ ಭಟ್ಟಿ ಸಾರಾಯಿ ತಯಾರಿಸಿದವರ ಮೇಲೆ ಗುಂಡು

ದಾವಣಗೆರೆ ತಾಲ್ಲೂಕು ಸಿರಿಗೆರೆ ಹೋಬಳಿ ಹಣಸೆಯ ಲಂಬಾಣಿ ತಾಂಡದಲ್ಲಿ ಕಳ್ಳ ಭಟ್ಟಿ ಸಾರಾಯಿ ಮಾಡುತ್ತಿರುವುದನ್ನು ಪತ್ತೆ ಹಚ್ಚಲು ಎಕ್ಸೈಜ್ ಇಲಾಖೆಯವರು ಪೋಲೀಸರೊಡನೆ ಹೋದಾಗ ಅವರ ಮೇಲೆ ಜನರು ಬಿಲ್ಲು ಮಚ್ಚು ಮತ್ತು ದೊಣ್ಣೆಗಳಿಂದ ಹೊಡೆದರೆಂದೂ, ಪೋಲೀಸರು ಆತ್ಮ ರಕ್ಷಣೆಗಾಗಿ ಗುಂಡು ಹಾರಿಸಬೇಕಾಯಿತೆಂದೂ ವರದಿಯಾಗಿದೆ. ಹಲವು ಪೋಲೀಸರಿಗೆ ಗಾಯಗಳಾಗಿವೆ. ೧೭ ಜನ ಲಂಬಾಣಿಯವರನ್ನು ದಸ್ತಗಿರಿ ಮಾಡಲಾಗಿದೆ

ಚಿನ್ನದ ಗಣಿ ಕಾರ್ಮಿಕ ಸಂಘಗಳ ಮೇಲೆ ಪ್ರತಿಬಂಧಕವೇ?

ಸ್ವಂ ಸು ಫೋನ್] ಬೆಂಗಳೂರು ೨೨

ತುಟ್ಟಿ ಭತ್ಯವನ್ನು ೧೬-೮-೦ ರೂ [illegible] ೨೨ ರೂ ಗೆ ಹೆಚ್ಚಿಸಿದ್ದರೂ ಸಹ ಕೆಲಸಗಾರರು ಹಿಂತಿರುಗದೆ ಇರುವುದರಿಂದ ಚಿನ್ನದ ಗಣಿ ಕೆಲಸಗಾರರ ಸಂಘವನ್ನು ಅಕ್ರಮ ಸಂಸ್ಥೆಯೆಂದು ಸಾರಿ ಅದರ ಕಾರ್ಯಕರ್ತರನ್ನು ಬಂಧಿಸಿ, ಸಂಘದ ಕಾಗದಗಳನ್ನು ಸರ್ಕಾರದವರು ವಶಪಡಿಸಿಕೊಳ್ಳುವ ಸಂಭವವಿದೆ [illegible]

ವರದಕ್ಷಿಣೆ ನಿಷೇಧಿಸಲು ಕಾನೂನು

[illegible] ಯನ್ನು ನಿಷೇಧಿಸಲು [illegible] ನ್ನು ಜಾರಿಗೆ ತರಲ [illegible] ರ್ಕಾರದವರು [illegible] ದು ಅಲ್ಲಿನ ಪ್ರಧಾನಿಗಳು ತಿಳಿಸಿರುತ್ತಾರೆ

ಕೋಳಿಗೆ ಕೊಂಬು

ಸ್ಪೇನಿನಲ್ಲಿ [illegible] ವೆಯೆಂದೂ [illegible] ಪ್ರಾಣಿಗಳನ್ನು [illegible] ಯೆಂದೂ ವರದಿಯಾಗಿದೆ

ಮೇಜುಗಳ ಅಭಾವದಿಂದ ಪರೀಕ್ಷೆ ಮುಂದೆ ಹೋಗಿದೆ

[illegible]

ದೇಶ [illegible] ಆಸ್ತಿ [illegible]

[illegible] ರವರು [illegible] ನ ಘೋಷಣೆ [illegible] ತ್ತಾ ತಿಳಿಸಿರುತ್ತಾರೆ [illegible] ಎಂದು ಅವರು ಹೇಳಿದರು

ಅಂಚೆ ಇಲಾಖೆಯ ಅಂಕಿ ಅಂಶಗಳು

ಭಾರತದ ಅಂಚೆ ಕಚೇರಿಗಳು ಕಳೆದ ವರ್ಷ ಒಟ್ಟು [illegible] ಇತರ ಸಾಧನಗಳನ್ನು [illegible] ವೆಂದೂ [illegible] ಲಕ್ಷ ತಂತಿಗಳನ್ನು ಕಳುಹಿಸಿದು ವೆಂದೂ ಹೇಳಲಾಗಿದೆ [illegible] ಅಂಚೆ ಕಛೇರಿಗಳನ್ನು ಗ್ರಾಮಾಂತರಗಳಲ್ಲಿ ತೆರೆಯಲಾಯಿತು [illegible] ಜನ ಸಂಖ್ಯೆ ಇರುವ ಪ್ರತಿಯೊಂದು ಹಳ್ಳಿಯಲ್ಲೂ ಅಂಚೆ ಕಛೇರಿಯನ್ನು ತೆರೆಯಬೇಕೆಂದು ಆಲೋಚಿಸಲಾಗಿದೆ

ಜರ್ಮನಿಯಲ್ಲಿ [illegible]

[illegible] ಯೊಂದ [illegible] ಹೇಳಲಾಗಿದೆ [illegible] ಯಾಗಿದೆ

ಮಾಧ್ಯಮಿಕ ಶಾಲೆಗಳಲ್ಲಿ ಒತ್ತಾಯ ಹಿಂದಿ ಶಿಕ್ಷಣ

[illegible] ಎಲ್ಲ ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿಯನ್ನು ಒತ್ತಾಯ ಶಿಕ್ಷಣವನ್ನಾಗಿ ಮಾಡಬೇಕೆಂದು ಬೆಂಗಳೂರಿನ [illegible] ಹಿಂದೀ [illegible] ಪ್ರಚಾರ [illegible] ಸಭೆಯಲ್ಲಿ ನಿರ್ಣಯ ಮಾಡಲಾಗಿದೆ [illegible] ಸರ್ಕಾರದವರು [illegible] [illegible]

ಬಿಳಿಯ ಬ್ರೆಡ್ಡಿನಿಂದ ತೂಕ ಹೆಚ್ಚುವುದು

ದಕ್ಷಿಣ ಆಫ್ರಿಕದಲ್ಲಿ ಕಳೆದ ಎರಡು ತಿಂಗಳಿನಿಂದಲೂ ಜನರು ಬಿಳಿಯ ಬ್ರೆಡ್ಡನ್ನು ತಿನ್ನುತ್ತಿರುವುದರಿಂದ ಅವರ ತೂಕವು ಹೆಚ್ಚುತ್ತಿದೆಯೆಂದು ಹೇಳಲಾಗಿದೆ ಬೊಜ್ಜನ್ನೂ, ತೂಕವನ್ನೂ ಇಳಿಸಲು ಔಷಧಿಗಳನ್ನು ಜನರು ಕೇಳುತ್ತಿದ್ದಾರೆ

ತಿದ್ದುಪಡಿ

ತಾ॥ [illegible] ನೇ ಸಾಧ್ವಿ ಸಂಚಿಕೆಯಲ್ಲಿ ಎರಡನೇ ಪುಟ, ಮೊದಲನೇ ಕಾಲಂನಲ್ಲಿ ಪ್ರಕಟವಾಗಿರುವ ವಿನಂತಿ ಎಂಬ ಶಿರೋನಾಮೆಯುಳ್ಳ ಪ್ರಕಟಣೆಯ ಮಧ್ಯಭಾಗದಲ್ಲಿ '[illegible] ರಲ್ಲಿ ಅವನು ಖುಲಾಸೆ ಪತ್ರ' ಇತ್ಯಾದಿ ಇರುವುದನ್ನು '[illegible] ರಲ್ಲಿ ಅವನು ಖುಲಾಸೆ ಪತ್ರ" ಎಂಬುದಾಗಿ ಓದಿ ಕೊಳ್ಳಬೇಕಾಗಿ ವಿನಂತಿ

ಧೂಮಪಾನದಿಂದ ಕೂ[illegible] ಬಿದ್ದು ಹೋಗುವು[illegible]

ಧೂಮಪಾನವನ್ನು ವಿಶೇಷವಾ[illegible] ಡುವುದರಿಂದ ಮಹಿಳೆಯರು ಕೂ[illegible] ಕಳೆದುಕೊಳ್ಳುವರೆಂದು ಡೇ[illegible] ವೈದ್ಯರೊಬ್ಬರು ತಿಳಿಸಿರುತ್ತಾರೆ.

ಗ್ರೀಸಿಗೆ ಜರ್ಮನ್

ಗ್ರೀಸಿನ ಗೆರಿಲ್ಲಾ ಸೈನಿಕರ ಸ[illegible] ಕ್ಕಾಗಿ ಪೂರ್ವ ಜರ್ಮನಿಯಲ್ಲಿರ[illegible] ರ್ಮನ್ ಸೈನಿಕರನ್ನು ಅಲ್ಲಿಗೆ ರವ್ವಾ[illegible] ಹಿಸಿದೆಯೆಂದು ವರದಿಯಾಗಿದೆ

ಪ್ರತಿ ದಿನ ಮೂರು ಆಟ[illegible]
22-3-49ನೇ ಮಂಗಳವಾರದಿ[illegible]
ಮೆಹಬೂಬ್ ಪ್ರೊಡಕ್ಷನ್[illegible]
ಹುಮಾಯೂನ[illegible]
(ಹಿಂದಿ)
ಪಾತ್ರ – ಅಶೋಕ ಕುಮಾರ್, ನ[illegible] ಚಂದ್ರ ಮೋಹನ್, ವೀಣಾ ಮುಕ್ತಿ[illegible]
ಒಲಂಪಿಯಾ ಟಾಕೀಸ[illegible]

ಅಗ್ಗದ ಜವಳಿಗಾಗಿ
ಗು ರು ದೇ ವಾ ಹಾ[illegible]
ಬೆಂಗಳೂರು ಜವಳಿ ಅಂಗಡಿಗೆ
ಇಂದೇ ಭೇಟಿ ಕೊಡಿ
ಶಿವರಾಂಪೇಟೆ :: ಮೈ[illegible]

ಎಸ್. ಎಲ್. ಪಂಡಿತ್ ಅಂ[illegible]
ಸನ್ಸ್‌ರವರ
ಯೂನಿವರ್ಸಲ್ ಹೇರ್ ಬಾ[illegible]
ನೋವು, ಕೀಲು ನೋವು ಮುಂ[illegible]
ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ 0-12
ಮಹಾ ಸುಗಂಧರಾಜ ತೈಲ —)
,, ಚಂದನಾದಿ ತೈಲ —)
,, ಭೃಂಗಾ ಮಲಕ ತೈಲ —)
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂ[illegible] ತೈಲಗಳು
ಮಹಾಕೇತಕೀ ತೈಲ— ತಲೆ [illegible] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [illegible] ಯೋಗಿಸಬಹುದಾದ ಉತ್ತಮವಾ[illegible]
ಬ್ರೇನ್ ಟಾನಿಕ್ ಶೀಸೆ 2-0[illegible]
ಪಂಚಾಮೃತ—ಮಲೇರಿಯಾಗಳಿಗೆ ಸಿದ್ಧ ಸಂಜೀವಿನ.
ಮೈಸೂರು ಆಯುರ್ವೇದಿಕ್ ಫಾರ್ಮಸಿ.
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈ ಸೂ ರು

-- ರಾಜಧಾನಿಗೆ ಸಧ್ಯದಲ್ಲೇ ಬರುತ್ತದೆ !--
ಐ ಮಿ ಸ್ಟ ದೆ
ಗ್ರೇಟ್ ಹರ್ಮಾನ್
ಸರ್ಕಸ್
[illegible] ರಾಯನ ಕಟ್ಟೆಯಲ್ಲಿ ಪ್ರದರ್ಶನ
COMING SHORTLY
GREAT HARMAN
CIRCUS
At Jeevanraya[n]akatte,
MYSORE

ರಾಜಕಮಲ್ ಟಾಕೀಸ್
25-3-49 ರಿಂದ ಆರೋಪ ಪ್ರಾರಂಭ
ಪ್ರತಿ ದಿನ ೩ ಆಟಗಳು
ಸ್ವತಂತ್ರ ಫಿಲಂಸ್‌ರವರ
ದ್ರೋಹಿ
(ತೆಲುಗು)
ಪ್ರಜಾ ರಕ್ಷೆಯನ್ನು ನಿರೂಪಿಸುವ ಸಾಂಘಿಕ ಚಿತ್ರ
ಭೂಮಿಕೆ:—ವರಲಕ್ಷ್ಮಿ, ಲಕ್ಷ್ಮೀರಾಜ್ಯಂ, ಪ್ರಕಾಶರಾವ್, ಪ್ರಸಾದ್
ಈಗ ನಡೆಯುತ್ತಿದೆ
ಸಾಜನ್ (ಹಿಂದಿ)

NOTIFICATION

Sealed tenders will be received up to 4 p.m. on 31-3-1949 by the Municipal Engineer for supplying Cycl[e] B[adges], [illegible] badges, Municipal Councillors' and Drivers b[ad]ges etc. for the year 1949-50. Each tender must be accompanied with a chellan for having [paid] [illegible] Rs. 50 in the Municipal Treasury as [earnest money]. For full Particulars please see the [illegible] Notice Board.

(Sd.) V. K. Mukundan,
Municipal Engineer,
Mysore

ಯ[illegible] ಹಬ್ಬಕ್ಕೆ ಕಾಟನ್ ಮಿಲ್ ಬಟ್ಟೆಗಳು
[illegible] ಹೊಸ [illegible] ನಮೂನೆಯಲ್ಲಿ ಬಂದಿವೆ
ಬಾಪುಸಾಬ್ ಕಂಪೆನಿ, ಒಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂ[illegible]

Edited, printed a[nd] published by A.R. Nag[a]rajan at the Sadhvi Pre[ss] D. Subbiah Road, Mys[ore]

ಪೋ. ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಒ [illegible] [ಸಂಚಿಕೆ ೧೫೨

ಮೇಕೆದಾಟಿನಲ್ಲಿ — ೫ ಕೋಟಿ ಯೋಜನೆ

ಸೆಂಟ್ರಲ್ ಜೈಲಿನಲ್ಲಿ ಲಾಠಿ ಪ್ರಯೋಗವೇ?

ಸ್ವಂ ಸು ಪ್ರೋ.] ಬೆಂಗಳೂರು ೨೩

ಶ್ರೀಗಳಾದ ಮಾರ್ಕ ವತ್ತು ಗೋವಿಂದರ್ [illegible] ಇಬ್ಬರು ಕಮ್ಯೂನಿಸ್ಟ ಖೈದಿಗಳ [illegible] ಮೈಸೂರು ಜೈಲಿಗೆ ವರ್ಗಾಯಿಸುವ ಸಂದರ್ಭದಲ್ಲಿ ಇತರ ಕಮ್ಯೂನಿಸ್ಟ ಖೈದಿ [illegible] ಪ್ರತಿಭಟಿಸಿದರೆಂಬ ಕಾರಣದಿ [illegible] ಸೆಂಟ್ರಲ್ ಜೈಲಿನಲ್ಲಿ ನೆನ್ನೆ ಲಾಠಿ ಪ್ರಯೋಗವಾಯಿತೆಂದೂ, ಇದರಿಂದ ಇಬ್ಬರ [illegible] ಆಸ್ಪತ್ರೆಗೆ ದಾಖಲ್ಮಾಡಲಾಯಿತೆಂದೂ ತಿಳಿದು ಬಂದಿದೆ.

○ [illegible] ಗಳನ್ನು ಕೂಗುತ್ತಾ ಹೋ [illegible] ಜನ ಚಿಕ್ಕದಣ್ಣಕೆಲಸಗಾರ [illegible] ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

○ ಗೋಪಾಲರಾವ್ ವಿಚಾರಣಾ ಸಮಿತಿಯಿಂದ ದಂಡಿತ ಮಾಜಿ ಪೋಲೀಸ್ ಅಧಿಕಾರಿಗಳಾದ ಶ್ರೀ ಸರ್ವೋತ್ತಮರಾಯರ [illegible] ನೆನ್ನೆ ನಡೆಯಿತು. ಅವರು ಗೋಪಾಲರಾಯರಿಂದ ಸುಮಾರು ೫೦ ಸಾವಿರ [illegible] ಕಮೀಷನನ್ನೂ ೩೧ ಸಾವಿರ ರೂಪಾಯಿ ಬಡ್ಡಿಯನ್ನು ಪಡೆದಿರುವುದಾಗಿಯೂ ಅದನ್ನು ಪೂರ್ಣವಾಗಿ ವಾಪಸು [illegible] ಮಂತ್ರಿ ಶ್ರೀ ಮೋದಪ್ಪನವರು ಸೂಚಿ [illegible] ಐವತ್ತೈದು ಸಾವಿರ ರೂಪಾಯಿ ಜಮಾ [illegible] ಮಾಡುವುದಾಗಿ ಅವರು ಹೇಳಿದರೆಂ [illegible] ಸಮಿತಿಯವರು ಅದಕ್ಕೆ ಒಪ್ಪಲಿಲ್ಲ [illegible] ತಿಳಿದುಬಂದಿದೆ. ⓑ ಮತಿಗಳಾದ [illegible] ಕಮ್ಮ, ಡಿ ಸಿದ್ದಮ್ಮನವರುಗಳ [illegible] ಕೆಗಳನ್ನೂ ಸಹ ತೆಗೆದು ಕೊ [illegible] ತು

ಪ್ರತಿ ಹೋಬಳಿಗೂ ೨ ಸಹಕಾರ ಸಂಘಗಳು

ಸಂಸ್ಥಾನದ ಗ್ರಾಮಾಭಿವೃದ್ಧಿಯ ಕೇಂದ್ರ ಸಮಿತಿಯು ಕಳೆದ ಭಾನುವಾರ ಗೃಹ [illegible] ಶ್ರೀ ಟಿ ಮರಿಯಪ್ಪನವರ ಅ [illegible] ತೆಯಲ್ಲಿ ನಡೆದು, ಏಪ್ರಿಲ್ ಗಳಿ [illegible] ಯಿಂದ ಪ್ರತಿ ಹೋಬಳಿಗಳಲ್ಲೂ ೨ [illegible] ರದ ಸಂಘಗಳನ್ನು ಸ್ಥಾಪಿಸಬೇಕೆಂ [illegible] ಸಂಸ್ಥಾನಾದ್ಯಂತ ಅವಶ್ಯಕವಾಗಿರು [illegible] ಬಾವಿಗಳನ್ನು ತೆಗೆಸಬೇಕೆಂದೂ [illegible] ರ್ಮಾನಿಸಲಾಯಿತು.

ಅಮೆರಿಕದಲ್ಲಿ ಗಂಡಸರು ಕ್ಷೀಣಿಸುತ್ತಿದ್ದಾರೆ

ಮಹಿಳೆಯರಿಗಿಂತ, ಗಂಡಸರಲ್ಲಿ ಬಲ [illegible] ಕುಂದು ಒರುತ್ತಿದೆಯೆಂದು ಅಮೆ [illegible] ಹಾರ್ವರ್ಡ್ ಮೆಡಿಕಲ್ ಕಾಲೇ [illegible] ವೈದ್ಯನಿಕರು ಅಭಿಪ್ರಾಯ ಪಟ್ಟಿ [illegible] ಅಮೆರಿಕದಲ್ಲಿ ಗಂಡಸರು ನಿಶ್ಶಕ್ತರಾಗುವರಲ್ಲದೆ ಸಂಖ್ಯೆಯಲ್ಲೂ ಕಡಿ [illegible] ತ್ತಿರುವರು ೧೯೧೦ರಲ್ಲಿ ಹೆಂಗ [illegible] ೨ ಲಕ್ಷದಷ್ಟು ಹೆಚ್ಚು ಗಂಡಸರಿ [illegible] ಗಂಡಸರಿಗಿಂತ ೪,೪೫೦೦೦ [illegible] ಹೆಂಗಸರು ಹೆಚ್ಚಾಗಿರುವರು [illegible] ಲಕ್ಷ ಹೆಂಗಸರು ಹೆಚ್ಚು [illegible] ಹೇಳಲಾಗಿದೆ

ಕಾಲಿನ ಕೋಳಿ ಮರಿ

[illegible] ಚಿಕ್ಕಸ್ವಾಮಿ ನಾಯಕ [illegible] ಮನೆಯಲ್ಲಿ ಒಂದು ಕೋಳಿ [illegible] ಕಾಲಿರುವ ಮರಿಯನ್ನು ಹಾಕಿ [illegible] ಒಡುತಿರುತ್ತದೆ ಇದು [illegible] ಓಡಾಡುತ್ತದೆ ಇದನ್ನು [illegible] ಅನೇಕರು ಹೋಗುತ್ತಿದ್ದಾರೆ

ಅರಣ್ಯ ಸಮ್ಮೇಳನಕ್ಕೆ ಭಾರತದ ನಿಯೋಗ

ಮೈಸೂರು ೨೩

ಇದೇ ೨೮ ನೇ ತಾ॥ ನಡೆ [illegible] ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನದಲ್ಲಿ ಭಾಗವಹಿಸುವ ಭಾರತದ [illegible] ತ್ತು ಸಂಸ್ಥಾನಗಳ ಪ್ರತಿನಿಧಿಗಳ [illegible] ರಾಗಿ ಜೋಧಪುರ ಮತ್ತು ತಿರುವಾಂಕೂರುಗಳ ಮಾಜಿ ದಿವಾನರಾದ ಸರ್ ಟಿ [illegible] ಜಯ ರಾಘವಾಚಾರ್ಯರ [illegible] ರುವರು

ಭಾರತ ಸರ್ಕಾರದ [illegible] ಸಚಿವರಾದ ಶ್ರೀ ಜಯರಾಂದಾಸ್ ದೌಲತ್ ರಾಂರವರು ಇದೇ ೨೭ ನೇ ತಾ॥ ಆಗಮಿ [illegible] ಭಾನಿಗೆ ೨೮ ನೇ ತಾ॥ [illegible] ಡನೆ ಕೇಂದ್ರ ಸರ್ಕಾರದ [illegible] ಮುಖ್ಯಾಧಿಕಾರಿಗಳಾದ [illegible] ರ್ಟ ಮತ್ತು ಡೆಪ್ರಾಡೂನಿನಲ್ಲಿರುವ [illegible] ಸಂಶೋಧನಾ ಶಾಖೆಯ [illegible] ಶ್ರೀ ರಂಗನಾಥರ್ ರವರೂ ಬರುವರು

ಪ್ರಧಾನಿ ಪಂಡಿತ್ ನೆಹರೂರವರು [illegible] ಮ್ಮೇಳನಕ್ಕೆ [illegible] ಸಂದೇಶವನ್ನು ಕಳುಹಿಸಲು ಒಪ್ಪಿ [illegible] ದೂ ತಿಳಿದು ಬಂದಿದೆ

ವಿವಿಧ ಉದ್ದೇಶಗಳ ಸಹಕಾರ ಸಂಘ

ಮೈಸೂರು ತಾಲ್ಲೂಕಿನಲ್ಲಿ ವಿವಿಧ ಉದ್ದೇಶಗಳ ಸಹಕಾರ ಸಂಘವೊಂದನ್ನು ಸ್ಥಾಪಿಸಲಾಗಿದೆ ಅದರ [illegible] ಸದಸ್ಯರ ಸಭೆಯು ಕಳೆದ ಶನಿವಾರ ಮೈಸೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ [illegible] ಧ್ಯಕ್ಷತೆಯಲ್ಲಿ ನಡೆದು ಶ್ರೀ [illegible] ಮಾರಪ್ಪನವರನ್ನು ಅಧ್ಯಕ್ಷರನ್ನಾಗಿಯೂ ತಾಲ್ಲೂಕು ಸಹಕಾರ ಸಂಘಗಳ ಇನ್ಸ್‌ಪೆಕ್ಟರಾದ ಶ್ರೀ [illegible] ಅವರನ್ನು [illegible] ಚುನಾಯಿಸಲಾಗಿದೆ

ಸರ್ಕಾರಿ ರೇಷ್ಮೆ ನೂಲುವ ಕಾರ್ಖಾನೆಗೆ ಭೇಟಿ

ಸರ್ಕಾರಿ ರೇಷ್ಮೆ ನೂಲುವ [illegible] ಲೇಬರ್ ಕಮೀಷನರಾದ ಜನಾಬ್ [illegible] ಲ್ ಪರೀಕ್ಷಾರವರು ನೆನ್ನೆ ಭೇಟಿ [illegible] ರು [illegible] ಸ್ವಾಗತಿಸಿದರು [illegible] ಧಿಕಾರ ವರ್ಗದವರ [illegible] ವರ್ತಿಸಿ, ಕೆಲಸಗಾರ [illegible]

ಸರ್ ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರ ಅನಾವರಣ

ಮೈಸೂರು ೨೩

[illegible] ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಇದೇ ೨೯ ನೇ ತಾ॥ ಬೆಳಗ್ಗೆ [illegible] ಚೌಲ್ಟ್ರಿಯಲ್ಲಿ ಸರ್ ಎಂ ವಿಶ್ವೇಶ್ವರಯ್ಯನವರ ಭಾವಚಿತ್ರವನ್ನು ಅನಾವರಣ ಮಾಡುವರು. ಇದನ್ನು ಶ್ರೀ [illegible] ಸಿ ನಂ [illegible] ರವರು [illegible] ಸಭೆಗೆ ಕೊಡುತ್ತಾರೆ

[illegible] ಸಭೆಯನ್ನು [illegible] ಶ್ರೀ ಕಂ [illegible] ರವರು ಸಲ್ಲಿಸಿರುವ ಸೇವೆಗಾ [illegible] ಕರಿಂದವನ್ನು [illegible] ಸುವರು.

[illegible] ಸಿನಿಮಾ [illegible] ದಾವಾ

[illegible] ಸಿನಿಮಾ ನಟ [illegible] ಜನದ ಚರಿತ್ರೆಯ [illegible] ಪತ್ರಿಕೆಯೊಂದು [illegible] ಅವರುಗಳು [illegible] ಕೋರ್ಟಿನ [illegible] ರತ್ತಾರೆ

[illegible] ಬಾಂಬು [illegible] ಕ್ಷಮೆ

[illegible] ದಂಡನೆಯ ಶಿಕ್ಷೆಯು ಇದ [illegible] ತಮ್ಮ ನೀತಿಗೆ ಅನುಗುಣ [illegible] ವಾಗಿ [illegible] ನವೆಂಬರ್ [illegible] ಬಾಂಬು [illegible] ತಮ್ಮನ್ನು ಕೋರ್ಟ [illegible] ವಿಧಿಸಲಾಗಿದ್ದ [illegible] ಜೀವಾವಧಿ ಶಿಕ್ಷೆಗೆ ಇಳಿ [illegible]

[illegible] ಚಿಕಿತ್ಸೆ

[illegible] ನಡೆಸುವ [illegible] ಗೋವೆಯ [illegible] ಚಿಕಿತ್ಸೆ [illegible]

ಮೇಕೆದಾಟು ಒಪ್ಪಂದ

ಸ್ವಂ ಸು ಪ್ರೋ.] ಬೆಂಗಳೂರು ೨೩

ಮೇಕೆದಾಟಿನಲ್ಲಿ ಕಾವೇರಿ ನದಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಬಗ್ಗೆ ಮೈಸೂರು, ಮತ್ತು ಮದರಾಸು ಸರಕಾರಗಳಿಗೆ ಒಪ್ಪಂದವಾಗುತ್ತದೆ.

ಅವರ, ವಿವರಗಳು ಈ ರೀತಿ ಇರುತ್ತವೆ. ೧೯೩೪ ರಲ್ಲಿ ಎರಡು ಸರ್ಕಾರಕ್ಕೂ ಆಗಿರುವ ಒಪ್ಪಂದದಂತೆ ನೀರಾವರಿ ಕೆಲಸಗಳ ಬಗ್ಗೆ ಯಾವ ಅಡಚಣೆಯೂ ಇರಕೂಡದು. ಮೇಕೆದಾಟಿನಿಂದ ೫೦೦ ಕೋಟಿ ಘನ ಅಡಿ ನೀರನ್ನೂ ೬ ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿಯನ್ನೂ ಮದರಾಸು ಪ್ರಾಂತ್ಯಕ್ಕೆ ಸರಬರಾಜು ಮಾಡಲಾಗುವುದು.

೫ ಕೋಟಿಯ ವೆಚ್ಚದ ಈ ಯೋಜನೆಯನ್ನು ಕೂಡಲೇ ಸರ್ಕಾರದವರು ಕಾರ್ಯರೂಪಕ್ಕೆ ತರಲಿದ್ದಾರೆ ೧೫೦ ಅಡಿ ಎತ್ತರದ ಅಣೆಕಟ್ಟನ್ನು ಕಟ್ಟಲಾಗುವುದು. ಇದರಿಂದ ೧೫ ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು ಮತ್ತು ೧೫೦೦ ಕೋಟಿ ಘನ ಅಡಿ ನೀರನ್ನು ಶೇಖರಿಸಲಾಗುವುದು.

○ ಪೌರ ಸಭಾ ಕಮೀಷನರಾದ ಜನಾಬ್ ಏ ಎಸ್ ಖಲೀಲರನ್ನು ವರ್ಗಾಯಿಸುವ ಬಗ್ಗೆ ನೆನ್ನೆ ದಿನ ಪೌರಸಭೆಯ ವಿಶೇಷ ಅಧಿವೇಶನ ಸೇರಿತ್ತು. ಸರಕಾರದವರು ಈ ಬಗ್ಗೆ ಭರವಸೆ ಯಿತ್ತಿರುವ ಪ್ರಯುಕ್ತ ಯಾವ ನಿರ್ಣಯವನ್ನೂ ಮಾಡದೆ ಸಭೆಯು ಮುಕ್ತಾಯವಾಯಿತು.

○ ಜನಾಬ್ ಖಲೀಲ್‌ರವರನ್ನು ವಿದ್ಯಾ ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸಲಾಗುವುದೆಂದು ತಿಳಿದು ಬಂದಿದೆ.

○ ಈ ಮಧ್ಯಾಹ್ನ ಮಂತ್ರಿಮಂಡಲದ ಸಭೆ ನಡೆಯುವುದು. ಸಂಸ್ಥಾನದ ಹಣಕಾಸುಗಳ ಒಂದು ಗೂಡಿಸ ವಿಷಯವನ್ನು ಪರಿಶೀಲಿಸಲಾಗುವುದು

ಸಮತಾವಾದಿ ಸಭೆಗೆ ಅಡ್ಡಿ

ಬೆಂಗಳೂರು ನಗರದ ಸಮತಾವಾದಿ ಪಕ್ಷದವರು ಮಾರ್ಕೆಟ್ ಚೌಕದಲ್ಲಿ ನೆನ್ನೆ ದಿನ ಏರ್ಪಡಿಸಿದ್ದ ಬಹಿರಂಗ ಸಭೆಯನ್ನು ನಡೆಸಕೂಡದೆಂದು ಪೋಲೀಸರು ಅಡ್ಡಿಪಡಿಸಿದರೆಂದೂ, ಇದನ್ನು ಪ್ರತಿಭಟಿಸಿ ಸಮತಾವಾದಿಗಳು ಮೆರವಣಿಗೆಯಲ್ಲಿ ವಾಪಸು ತಮ್ಮ ಕಛೇರಿಗೆ ಹೊರಟು ಹೋದರೆಂದೂ ಹೇಳಲಾಗಿದೆ.

ಲಂಡನ್ನಿಗೆ ಪಂಡಿತ ನೆಹರೂ

ಮುಂದಿನ ತಿಂಗಳು ೩ ನೇ ವಾರದಲ್ಲಿ ಲಂಡನ್ನಿನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಪಂಡಿತ ನೆಹರೂರವರು ಏಪ್ರಿಲ್ ತಿಂಗಳಿನ ಮೊದಲನೇ ವಾರದಲ್ಲಿ ಪ್ರಯಾಣ ಬೆಳಸುವರು.

ತಿರುವಾಂಕೂರು ರಾಜರು ಯು. ಪಿ. ಗವರ್ನರರೇ?

ತಿರುವಾಂಕೂರು ಮಹಾರಾಜರವರು ಸಂಯುಕ್ತ ಪ್ರಾಂತ್ಯದ ಗವರ್ನರರಾಗಲೆಂದು [illegible] ಅದನ್ನು [illegible] ಪ್ರಿಲ್ ವತ್ತಿ [illegible] ಅದನ್ನು ಅವರು ಒಪ್ಪಿಕೊಂಡರೆ ಮಹಾರಾಜರು ಪಡೆವ [illegible] ಕೊಚ್ಚಿ [illegible] ರಾಜರವರನ್ನು [illegible] ನೇಮಿಸಲಾಗುವುದೆಂದು [illegible] ಬಂದಿದೆ

ಭಾರತದಲ್ಲಿ ೧೨ ಕೋಟಿ ಜನರಿಗೆ ಪಡಿತರ

ಭಾರತದಲ್ಲಿ ೧೨ ಕೋಟಿ ಜನರು ರೇಷನ್ ವ್ಯವಸ್ಥೆಗೆ ಒಳಗಾಗಿದ್ದಾರೆ. ೪ ಲಕ್ಷ ಮಂದಿ ನಿರಾಶ್ರಿತರು ದೇಶದ ಅನೇಕ ಭಾಗಗಳಲ್ಲಿರುವ ೬೦ ಕೇಂದ್ರಗಳಲ್ಲಿ ಸರ್ಕಾರದಿಂದ ಆಹಾರವನ್ನು ಪಡೆಯುತ್ತಿದ್ದಾರೆ. ಭಾರತವು ವಿಭಾಗವಾಗುವುದಕ್ಕೆ ಮುಂಚೆ ಇದ್ದ ಪ್ರದೇಶದಲ್ಲಿ, ಈಗ ಅಕ್ಕಿಯು ಕೇಳದರ್ಜೆ ರಷ್ಟು, ಗೋಧಿಯು ಹೆಚ್ಚು ರಷ್ಟು ಇದೆ. ಕಳೆದ ವರ್ಷ ೬ ಲಕ್ಷ ಟನ್ ಗೋಧಿಯನ್ನು ಬೆಳೆಯಲಾಯಿತು. ಮುಂದಿನ ತಿಂಗಳು ೧೦ನೇ ತಾ|| ನೊಳಗಾಗಿ ಬರ್ಮಾದಿಂದ ೯೩೩೦ ಟನ್, ಸಯಾಮಿನಿಂದ ೫೨೬೦೦ ಟನ್ ಮತ್ತು ಈಜಿಪ್ಟಿನಿಂದ ೧೬೨೦೦ ಟನ್ ಅಕ್ಕಿಯನ್ನು ತರಿಸಲಾಗುವುದು.

ಅಧಿಕಾರಿಗಳು ಹಿಂದೀ ಕಲಿಯಬೇಕು

ಮದರಾಸ್ ಸರ್ಕಾರದ ಅಧಿಕಾರಿಗಳು ಹಿಂದೀ ಕಲಿಯಬೇಕೆಂದ ಒತ್ತಾಯಪಡಿಸುವ ವಿಷಯವನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಅಲ್ಲಿನ ಪ್ರಧಾನಿಯವರು ತಿಳಿಸಿರುತ್ತಾರೆ.

ಮುಸ್ಲಿಮರನ್ನು ಕೆಲಸಕ್ಕೆ ತೆಗೆದುಕೊಳ್ಳದಂತೆ ಆಜ್ಞೆ

ಮದರಾಸ್ ಸರ್ಕಾರದ ಯಾವ ಇಲಾಖೆಗಳಲ್ಲಿ ಮುಸ್ಲಿಂ ನೌಕರರ ಸಂಖ್ಯೆಯು ಹೆಚ್ಚಾಗಿದೆಯೋ ಅದು ಕಡಿಮೆಯಾಗುವವರೆಗೂ ಅವರನ್ನು ಕೆಲಸಕ್ಕೆ ಸೇರಿಸಕೂಡದೆಂದು ರಹಸ್ಯವಾಗಿ ಮದರಾಸ್ ಸರ್ಕಾರದವರು ಒಂದು ಆಜ್ಞೆ ಇತ್ತಿರುವ ಅಂಶವು ಮದರಾಸ್ ಶಾಸನ ಸಭೆಯಲ್ಲಿ ಮೊನ್ನೆ ದಿನ ಬಹಿರಂಗವಾಯಿತು. ಕೋಮುವಾರು ಪ್ರಾತಿನಿಧ್ಯದ ಸರ್ಕಾರಿ ಆಜ್ಞೆಯನ್ನು ಜಾರಿಗೆ ತರುವ ಉದ್ದೇಶದಿಂದ ಈ ರೀತಿ ಮಾಡಲಾಗಿದೆಯೆಂದು ಸಚಿವ ಶ್ರೀ ಬಿ. ಗೋಪಾಲ ರೆಡ್ಡಿಯವರು ತಿಳಿಸಿರುತ್ತಾರೆ.

ಅಗ್ಗದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಇಂದೇ ಭೇಟಿ ಕೊಡಿ

ಶಿವರಾಂಪೇಟೆ : ಮೈಸೂರು

Edited, printed and published by A.R Nagarajan at the Sadhvi Press, D. Subbiah Road, Mysore.

ವಿಶ್ವಾ ಸಮ್ಮೇಳನವನ್ನು ನಡೆಸುವಂತೆ ಭಾರತಕ್ಕೆ ಅರಬ್ಬರ ಮನವಿ

ಏಷ್ಯಾ ಮತ್ತು ವಿಶ್ವದ ಇತರ ರಾಷ್ಟ್ರಗಳಲ್ಲಿ ಸೌಹಾರ್ದ ಮತ್ತು ವಿಶ್ವಾಸವನ್ನು ನೆಲೆಸುವಂತೆ ಮಾಡಲು ಭಾರತವು ಏಷ್ಯಾ ಸಮ್ಮೇಳನವೊಂದನ್ನು ಮತ್ತೊಮ್ಮೆ ಕರೆಯಬೇಕೆಂದು ಕೈರೋವಿನಲ್ಲಿ ನಡೆದ ಅರಬ್ ಲೀಗಿನ ಸಭೆಯಲ್ಲಿ ಪಂಡಿತ ನೆಹರೂರವರಿಗೆ ಮನವಿ ಮಾಡಲಾಗಿದೆ.

ನಾಯಿಕೊಡೆ ತಿಂದುದರಿಂದ ೩ ಮಂದಿ ಮರಣ

ಅಸ್ಸಾಮಿನ ಹಳ್ಳಿಯೊಂದರ ೫ ಜನರು ನಾಯಿಕೊಡೆಯಿಂದ ತಯಾರಾದ ಆಹಾರವನ್ನು ತಿಂದುದರಿಂದ ಪ್ರಜ್ಞಾನ ತಪ್ಪಿದ್ದರೆಂದೂ, ಅವರ ಪೈಕಿ ೩ ಜನರು ಸತ್ತರೆಂದೂ ವರದಿಯಾಗಿದೆ.

ತಿದ್ದುಪಡಿ

ಇದೇ ೨೦ನೇ ತಾ|| ನ ಸಂಚಿಕೆಯಲ್ಲಿ 'ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ಹಣ ಕೊಡದೆ ಹರಾಜಿಯೇ' ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿರುವ ಸುದ್ದಿಯು ನಿರಾಧಾರವಾದುದೆಂದೂ, ಅದು ಈ ರೀತಿ ಇದೆಯೆಂದೂ ಶ್ರೀ ಸಿದ್ದೇಗೌಡರು ತಿಳಿಸಿರುತ್ತಾರೆ –

ನಾನು ತಮ್ಮ ವರದಿಯಲ್ಲಿ ನಮೂದಿಸಿರುವ ಸಿಂಗಮ್ಮನಿಗೆ ಜವರೇಗೌಡರವರ ಹೆಂಡತಿಯಲ್ಲ. ಜವರೇಗೌಡ ಉರುಫ್ ಮೂಗೇಗೌಡರ ಹೆಂಡತಿ. ಸದರಿ ಸಿಂಗಮ್ಮನು ಮೊಬಲಗಿಗೆ ಬಂದಿರತಕ್ಕ ಬಗ್ಗೆ ಕೋರ್ಟ್ ದಾಖಲೆಗಳಿವೆ. ಆಕೆಗೆ ೧೨ ವರ್ಷ ಎಂಬುದು ಸುಳ್ಳು. ಹೆಣ್ಣು ಮಗಳಿಗೆ ಸಂದಾಯವಾಗಬೇಕಾದ ಕ್ರಯದ ಮೊಬಲಗನ್ನು ಕೆಲವರು ಪೋಲಿಗಳು ಆ ದಿನ ಅಪಹರಿಸಿಕೊಂಡು ಹೋಗಿ ಆಕೆಗೆ ಮೋಸ ಮಾಡಬೇಕೆಂದು ಏರ್ಪಾಡು ಮಾಡಿದ್ದರು. ತಮ್ಮ ಸುದ್ದಿಯಲ್ಲಿ ನಮೂದಿಸಿರುವ ಮಲ್ಲಯ್ಯನ ಕೊಪ್ಪಲು ಕೆ ಸಿದ್ದೇಗೌಡರು ಈ ಮೋಸಕ್ಕೆ ಅವಕಾಶಕೊಡದೆ ಮೊಬಲಗು ಪೋಲಾಗದಂತೆ ವರ್ತಿಸಿ ಹುಡುಗಿಯ ಹೆಸರಿನಲ್ಲಿ ತಾಲ್ಲೂಕು ಕಛೇರಿಯಲ್ಲಿ ಮೊಬಲಗನ್ನು ಡಿಪಾಜಿಟ್ ಮಾಡಿಸಿಟ್ಟಿದ್ದಾರೆ. ಅವರು ಮಾಡಿದ ಉಪಕಾರದಿಂದ ನನ್ನ ಮಗಳ ಮೊಬಲಗು ಉಳಿಯಿತು. ನಾನೂ, ನನ್ನ ಮಗ, ನನ್ನ ಮಗಳು ಮೇಲ್ಕಂಡ ಸಿಂಗಮ್ಮ ಸೇರಿ ಕ್ರಯ ಪತ್ರ ಬರೆದು ಕೊಟ್ಟಿದ್ದೇವೆ.

* ಶ್ರೀ ಗೋಪಾಲ ಟಾಕೀಸ್ *

25-3-49ರಿಂದ : ಅಮೋಘ ಆರಂಭ

ಜಯ ಪ್ರಕಾಶ್‌ರವರ ತಮಿಳು ಚಿತ್ರ

ಭೋಜನ್

ಪ್ರತಿ ದಿನ ಮೂರು ಪ್ರದರ್ಶನಗಳು

ತಾರಾ ಗಣ.– ಪಿ ಎನ್ ಗೋವಿಂದನ್, ಕಾಳಿ ಎನ್ ರತ್ನಂ, ವರಲಕ್ಷ್ಮಿ, ಸಿ. ಟಿ. ರಾಜಾ ಕಾಂತಂ ಲಲಿತ ಪದ್ಮಿನಿ ಮತ್ತು ತಾರಾ ಚೌಧುರಿ.

ಇದರಲ್ಲಿ "ಪಲ್ಲಿ ತಿರವಣಂ" ಎಂಬ ಅಮೋಘ ನೃತ್ಯವೂ ಇದೆ.

+ ರಾಜಧಾನಿಗೆ ಸದ್ಯದಲ್ಲೇ ಬರುತ್ತದೆ +

ಬರುತ್ತದೆ

ಗ್ರೇಟ್ ಹರ್ಮಾನ್

ಸರ್ಕಸ್

ಜೀವಣ್ಣರಾಯನ ಕಟ್ಟೆಯಲ್ಲಿ ಪ್ರದರ್ಶನ

COMING SHORTLY

GREAT HARMAN

CIRCUS

At Jeevannarayanakatte, MYSORE

ಯುಗಾದಿ ಹಬ್ಬಕ್ಕೆ

ಹೊಸ ಹೊಸ ನಮೂನೆಗಳಲ್ಲಿ ಸೀರೆಗಳನ್ನೂ ಖಣಗಳನ್ನೂ ತರಿಸಿದ್ದೇವೆ. ಬಂದು ನೋಡಬೇಕಾಗಿ ವಿನಂತಿ.

ಬಾಂಬೆ ಸ್ಟೋರ್ ಕಂಪೆನಿ, ಮೈಸೂರು.

-: ಮೂರು ಅಂತಸ್ತಿನ ಮಹಡಿ ಮನೆ ಕ್ರಯಕ್ಕಿದೆ :-

ಮೈಸೂರು ಸಿಟಿಯಲ್ಲಿ ಹೊಸದಾಗಿ ಕಟ್ಟಿ ಮಾಡದ ಬಳಿ ಆಧುನಿಕ ಸಲಕರಣೆಗಳಿಂದ ಕೂಡಿದ, ಮೂರು ಅಂತಸ್ತಿನ ಮಹಡಿ ಮನೆ ಖರೀದಿಗೆ ಇದೆ. ಕೂಡಲೇ ಸ್ವಾಧೀನಕ್ಕೆ ಕೊಡಲಾಗುತ್ತೆ. ತಕ್ಷಣ ನಮ್ಮಲ್ಲಿ ವಿಚಾರಿಸಿ

ಬಿ. ಆರ್. ಲಕ್ಷ್ಮಣ ಶೆಟ್ಟಿ,

ಇಲೆಕ್ಟ್ರಿಕ್ ಪ್ರಾವಿಶನ್ ಹೌಸ್ : ಸಯ್ಯಾಜಿರಾವ್ ರಸ್ತೆ, ಮೈಸೂರು

ಪ್ರಸಿದ್ಧ ಪತ್ರಿಕೆ

ಅರಮನೆ ಎಸ್ಟೇಟು ಇಲಾಖೆಗೆ ಸೇರಿದ ಅತ್ಯುತ್ತಮವಾದ ಮತ್ತು ಪಳಗಿಸಿದ ಅನೇಕ ಹಸುಗಳು ಹೋರಿಗಳನ್ನು ತಾ|| ೯–೪ [illegible] ಮತ್ತು ೧೦–೪–[illegible] ಈ ಎರಡು ದಿವಸಗಳಲ್ಲೂ ಮೈಸೂರಿನಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಧರ್ಮಶಾಲೆಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಮೇಲ್ಕಂಡ ಸ್ಥಳಕ್ಕೆ ಬಂದು ಹರಾಜು ವರಖಾಸ್ತು ಮಾಡಿ ಹೋರಿಗಳನ್ನು ಕೊಳ್ಳಬಹುದು. ಹರಾಜು ಹುಜೂರು ಸೆಕ್ರೆಟರಿಯವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಬಾಕಿ ವಿವರಗಳನ್ನು ಅರಮನೆ ಎಸ್ಟೇಟು ಇಲಾಖಾದಲ್ಲಿ ತಿಳಿಯಬಹುದು.

ಎಂ. ಮರುಳಸಿದ್ದಪ್ಪ,

ಅಧ್ಯಕ್ಷರು,

ಅರಮನೆ ಎಸ್ಟೇಟು ಇಲಾಖೆ.

★ ಪ್ರಭುದೇವಾ ಟಾಕೀಸಿನಲ್ಲಿ ★

18-3-49ರಿಂದ ಪ್ರಾರಂಭ

* ಸೂರ್ಯ ಪುತ್ರಿ *

(ತಮಿಳು)

ಪಾತ್ರ [illegible] ಆರ್ ರಾಜಕುಮಾರಿ ಕೊತ್ತಮಂಗಲಂ ಶೀನ ಸುಂದರೀಬಾಯಿ, ಎಸ್ ಜಾನಕಿ, ಚೆಲ್ಲಂ, ಮುಂತಾದವರು

ಮುಂದಿನ ಬದಲಾವಣೆ

* ಗೀತಾ ಗಾಂಧೀ *

(ಹಿಂದಿ)

ಪಾತ್ರ [illegible], ಪಿ. ಎಲ್ ರಾಮಚಂದ್ರ ಲಲಿತಾ ಪದ್ಮಿನಿ, [illegible] ಮುಂತಾದವರು

ಫೋ|| ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೨೪-೩-೧೯೪೯ [ಸಂಚಿಕೆ ೧೯೬

– ೫೦ ಘಟಸರ್ಪಗಳ – ಶಿಸ್ತಿನ ಮೆರವಣಿಗೆ

ಪುರಸಭಾ ಕಾಂಗ್ರೆಸ್ ಪಕ್ಷದ ನಾಯಕರ ಮೇಲೆ ಅವಿಶ್ವಾಸವೇ?

ಬೆಂಗಳೂರು ೨೪

ನಗರದ ಪುರಸಭಾ ಕಮೀಷನರಾದ ಜನಾಬ್ ಖಲೀಲ್‌ರವರ ಮೇಲೆ ಅವಿಶ್ವಾಸ ಸೂಚಕ ನಿರ್ಣಯವನ್ನು ೨೬ನೇ ತಾ|| ನಡೆಯುವ ಸಭೆಯಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಪಕ್ಷದ ಸಭೆಯಲ್ಲಿ ನಿರ್ಧಾರವಾಗಿದ್ದರೂ, ಮೊನ್ನೆ ನಡೆದ ಪುರಸಭೆಯಲ್ಲಿ ನಿರ್ಣಯವನ್ನೇ ವಾಪಸು ತೆಗೆದುಕೊಳ್ಳಬೇಕೆಂದು ಪಕ್ಷದ ನಾಯಕರಾದ ಶ್ರೀ ಎಸ್. ಕೇಶವಯ್ಯಂಗಾರ್ಯರು ಸೂಚಿಸಿದುದರಿಂದ, ಅವರ ಮೇಲೆ ಅವಿಶ್ವಾಸ ಸೂಚಕ ನಿರ್ಣಯವನ್ನು ಸದಸ್ಯರಾದ ಶ್ರೀ [illegible] ಶರ್ಮರವರು ಮಂಡಿಸಲಿರುವರೆಂದು ತಿಳಿದು ಬಂದಿದೆ

ಸಂಸ್ಥಾನದಲ್ಲಿ ಮತ್ತೊಂದು ವಿದ್ಯುಚ್ಛಕ್ತಿ ಕಾರ್ಖಾನೆ

ಭಾರತ ಸರ್ಕಾರದವರು ಸ್ಥಾಪಿಸಲಿರುವ ೯ ವಿದ್ಯುತ್ ಯಂತ್ರ ತಯಾರಿಕಾ ಕಾರ್ಖಾನೆಗಳ ಪೈಕಿ, ಒಂದನ್ನು ಸಂಸ್ಥಾನದಲ್ಲಿ ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರದ ಇಬ್ಬರು ಅಧಿಕಾರಿಗಳು ಬೆಂಗಳೂರಿಗೆ ಆಗಮಿಸಿ ಸ್ಥಳ ಪರಿಶೀಲನೆ ನಡೆಸಿದರೆಂದು ತಿಳಿದು ಬಂದಿದೆ

ಕೊಚ್ಚಿ ಮಹಾರಾಜರು ದೆಹಲಿಗೆ

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ಒಕ್ಕೂಟದ ವಿಚಾರವಾಗಿ ಸರ್ದಾರ್ ಪಟೇಲರೊಡನೆ ಮಾತುಕತೆ ನಡೆಸಲು ಕೊಚ್ಚಿ ಮಹಾರಾಜರವರು ದೆಹಲಿಗೆ ಹೋಗಲಿರುವರೆಂದು ತಿಳಿದು ಬಂದಿದೆ. ಅಲ್ಲಿನ ಪ್ರಧಾನಿಯವರೂ ಮತ್ತು ಇತರ ಅಧಿಕಾರಿಗಳೂ ಮುಂದಿನ ವಾರ ದೆಹಲಿಗೆ ಹೋಗಲಿದ್ದಾರೆ ಮುಂದಿನ ತಿಂಗಳು ೪ನೇ ತಾ|| ಎರಡು ಸಂಸ್ಥಾನಗಳ ಐಕ್ಯದ ಬಗ್ಗೆ ಕೇಂದ್ರ ಸರ್ಕಾರದ ಪ್ರಕಟಣೆ ಹೊರಬೀಳಲಿದೆಯೆಂದು ತಿಳಿದುಬಂದಿದೆ

ಹಳ್ಳಿಗಳಲ್ಲಿ ಆಹಾರ ಡಿಪೋಗಳ ಅಗತ್ಯ

ಸುಗ್ಗಿಕಾಲವು ಮುಗಿದು ಮೂರು ತಿಂಗಳಾದರೂ ಹಳ್ಳಿಗಳಲ್ಲಿ ಸರ್ಕಾರದವರು ಆಹಾರ ಡಿಪೋಗಳನ್ನು ತೆರೆಯದಿರುವುದು ಬಹು ಶೋಚನೀಯವಾದುದು. ಇದರಿಂದ ಹಳ್ಳಿಗಳಲ್ಲಿ ಕೂಲಿ ಕೆಲಸ ಮಾಡುವವರಿಗೆ ಆಹಾರ ಸಿಕ್ಕದೆ ಕಷ್ಟವಾಗಿದೆ ಹಳ್ಳಿಯವರು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ ಸರ್ಕಾರದವರು ಗ್ರಾಮಾಭಿವೃದ್ಧಿ ಯೋಜನೆಗಳನ್ನು ರದ್ದು ಮಾಡಿ, ಆಹಾರದ ಸಮಸ್ಯೆಯ ಕಡೆ ಹೆಚ್ಚು ಗಮನ ಕೊಟ್ಟು ಹಳ್ಳಿಗಳಲ್ಲಿ ಕೂಡಲೇ ಡಿಪೋಗಳನ್ನು ತೆರೆಯಬೇಕು ಎಂದು ಮೈಸೂರು ಜಿಲ್ಲಾ [illegible] ಸಂಘದ ಉಪಾಧ್ಯಕ್ಷರಾದ ಶ್ರೀ [illegible] ಹಳ್ಳಿ ರಾಮಸ್ವಾಮಿಯವರು ತಿಳಿಸಿದ್ದಾರೆ

ಪುದುಕೋಟೆ ಬಂಗನಪಲ್ಲಿ ಅರಸರ ರಾಜಧನ

ಪುದುಕೋಟೆಯ ರಾಜರಿಗೆ ೩,೬೬,೫೦೦ ಮತ್ತು ಬಂಗನಪಲ್ಲಿ ನವಾಬರಿಗೆ [illegible]೨೦ ರೂ ವರ್ಷಕ್ಕೆ ರಾಜಧನವನ್ನು ಕೊಡಲಾಗುತ್ತಿದೆ ಎಂದು ಮದರಾಸು ಸರ್ಕಾರದವರು ತಿಳಿಸುತ್ತಾರೆ

ಮೈಸೂರಿಗೂ ಕೊಚ್ಚಿ-ತಿರುವಾಂಕೂರುಗಳ ಗತಿಯೇ?

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳನ್ನು ಒಂದುಗೂಡಿಸಿದನಂತರ, ಅವನ್ನು ಸುಲಭವಾಗಿ ಮದರಾಸ್ ಪ್ರಾಂತ್ಯಕ್ಕೆ ಸೇರಿಸಿಬಿಡಬಹುದು. ಇದರಿಂದ ಕೇರಳದ ೩ ವಿಭಾಗಗಳು ಒಂದೇ ಕಡೆ ಸೇರಿದಂತಾಗುವುದು ಆಗ ಭಾಷಾವಾರು ಪ್ರಾಂತ ರಚನೆಯು ಸುಲಭವಾಗುವುದು ಇದೆಲ್ಲಾ ಸರ್ದಾರ್ ಪಟೇಲರ ಘನ ಕೌಶಲ್ಯ. ದೇಶೀಯ ಸಂಸ್ಥಾನಗಳನ್ನು ನೆರೆಯ ಪ್ರಾಂತ್ಯಗಳೊಡನೆ ಸಮಾವೇಶ ಮಾಡಿಸಬಿಟ್ಟರೆ ಆಮೇಲೆ ಭಾಷಾವಾರು ಪ್ರಾಂತೀಕರಣ ಕಾರ್ಯವನ್ನು ಗೌರ್ನರ್ ಜನರಲ್ಲರು ಒಂದು ಹುಕುಮಿನಿಂದ ಮಾಡಿಬಿಡಬಹುದು. ಕರ್ನಾಟಕ ಪ್ರಾಂತ್ಯ ರಚನೆಗಾಗಿ ಮೈಸೂರನ್ನು ಸಹ ಇದೇ ರೀತಿ ಮಾಡಬಹುದು – ಎಂದು ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಮದರಾಸಿನ ಭಾಷಣವೊಂದರಲ್ಲಿ ತಿಳಿಸಿರುತ್ತಾರೆ.

ಸಂಸ್ಥಾನದಲ್ಲಿ ನೂತನ ಗೊಬ್ಬರದ ಕಾರ್ಖಾನೆ

೨ ಕೋಟಿ ರೂ ಖರ್ಚಿನಲ್ಲಿ ೨೫ ಸಾವಿರ ಟನ್ ಅಮೋನಿಯಂ ಸಲ್ಫೇಟ್ ಮತ್ತು ೨೫ ಸಾವಿರ ಟನ್ ನೈಟ್ರೋ ಚಾಕ್ (ಗೊಬ್ಬರಗಳು)ಗಳನ್ನು ತಯಾರಿಸುವ ಒಂದು ಕಾರ್ಖಾನೆಯನ್ನು ಸಂಸ್ಥಾನದಲ್ಲಿ ಸ್ಥಾಪಿಸಲು ಸರ್ಕಾರದವರು ಆಲೋಚಿಸುತ್ತಿದ್ದಾರೆ ಈ ಬಗ್ಗೆ ಅಮೆರಿಕದ ಸಂಸ್ಥೆಯೊಂದರ ಪ್ರವೀಣರಾದ ಮಿ|| ಲೇಸರ್‌ರವರು ಬೆಂಗಳೂರಿಗೆ ಆಗಮಿಸಿ ಸರ್ಕಾರದವರೊಡನೆ ಮಾತುಕತೆ ನಡೆಸುತ್ತಿದ್ದಾರೆ

ಗ್ವಾಲಿಯರ್ ಸಚಿವರ ವಿಚಾರಣೆ

ಗ್ವಾಲಿಯರ್ ಸಂಸ್ಥಾನದ ಸಚಿವರಾದ ಶ್ರೀ ರಾದೇಲಾಲ್ ವ್ಯಾಸರವರು ಲಕ್ಷಾಂತರ ರೂ ನ ಕಬ್ಬಿಣವನ್ನು ಕೊಂಡ ವಿಚಾರದಲ್ಲಿ ಪ್ರಾಮಾಣಿಕವಾಗಿ ವರ್ತಿಸಲಿಲ್ಲವೆಂಬ ಅಪವಾದನೆ ಮೇಲೆ ಅವರನ್ನು ವಿಚಾರಣೆಗೆ ಗುರಿಪಡಿಸಲಾಗಿದೆ ಈಗ ಅವರಿಗೆ ಎರಡು ತಿಂಗಳು ರಜಾ ಕೊಡಲಾಗಿದೆ ಸೌರಾಷ್ಟ್ರದ ಪ್ರಿನ್ಸಿಪಲ್ ನ್ಯಾಯಾಧೀಶರಾದ ಸರ್ ಹರ್ಷದ್ ಭಾಯ್ ದಿವೇಟಿಯವರನ್ನು ವಿಶೇಷ ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ

ಬರ್ಮಾ ಸರ್ಕಾರಕ್ಕೆ ಗಂಡಾಂತರ

ಬರ್ಮಾದ ಪಶ್ಚಿಮ ತೀರ ಮತ್ತು ಇತರೆ ಪ್ರದೇಶಗಳಲ್ಲಿ ಕರೇನ್ ಗಲಭೆಗಾರರು ಭೀಕರ ಕದನ ನಡೆಸುತ್ತಿದ್ದಾರೆಂದು ಹೇಳಲಾಗಿದೆ ಬರ್ಮಾ ಸರ್ಕಾರದ ಪರಿಸ್ಥಿತಿಯು ಸುರಕ್ಷಿತವಾಗಿಲ್ಲ ಬ್ರಿಟನ್ನಿನಿಂದ ಶಸ್ತ್ರ ಸರಬರಾಜನ್ನು ನಿರೀಕ್ಷಿಸಲಾಗಿದೆ ಬ್ರಿಟನ್ನಿನಿಂದ ಸಹಾಯ ದೊರೆತ ಹೊರತು ಸರ್ಕಾರವು ಉಳಿಯುವ ಹಾಗಿಲ್ಲ ಕರೇನ್ ಗಲಭೆಗಾರರೊಡನೆ ಕಮ್ಯೂನಿಸ್ಟರೂ ಲೂಟಿ ಕೊಲೆ ಮತ್ತು ಬೆಂಕಿ ಮುಂತಾದ ವಿನಾಶ ಕೃತ್ಯಗಳಲ್ಲಿ ತೊಡಗಿದ್ದಾರೆ ಕರೇನರು ಆಕ್ರಮಿಸಿರುವ ಪ್ರದೇಶಗಳಲ್ಲಿರುವ ಭಾರತೀಯರು ವಿಶೇಷ ಕಷ್ಟಪಡುತ್ತಿದ್ದಾರೆ. ಅವರುಗಳಿಗೆ ಯಾವ ಅಪಾಯವೂ ಆಗದಂತೆ ಭಾರತ ಸರ್ಕಾರದವರು ವ್ಯವಸ್ಥೆ ಮಾಡಬೇಕಾಗಿದೆ

೨ ರೂ.ಗೆ ಪ್ರಶ್ನೆ ಪತ್ರಿಕೆಗಳ ಮಾರಾಟ

ಅಲಹಾಬಾದ್ ವಿಶ್ವವಿದ್ಯಾಲಯದ ಇಂಟರ್ ಮತ್ತು ಹೈಸ್ಕೂಲು ಪರೀಕ್ಷಾ ಪ್ರಶ್ನೆ ಪತ್ರಿಕೆಗಳು ಬಹಿರಂಗವಾದುವೆಂದು ಮೊನ್ನೆಯಿಂದ ಪ್ರಾರಂಭವಾಗಬೇಕಾಗಿದ್ದ ಪರೀಕ್ಷೆಗಳನ್ನು ಮುಂದಕ್ಕೆ ಹಾಕಲಾಗಿದೆ. ಕೆಲವು ಪ್ರಶ್ನೆ ಪತ್ರಿಕೆಗಳನ್ನು ಲಕ್ನೋವಿನಲ್ಲಿ ೨ರಿಂದ ೫ ರೂ ಬೆಲೆಗೆ ಮಾರಲಾಯಿತೆಂದು ಹೇಳಲಾಗಿದೆ. ಪರೀಕ್ಷೆಯನ್ನು ಮುಂದುವರಿಸಿದುದನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರೆಂದೂ, ಈ ಗಲಭೆಯಲ್ಲಿ ಒಬ್ಬ ವಿದ್ಯಾರ್ಥಿ ಮತ್ತು ಉಪಾಧ್ಯಾಯರಿಗೆ ಗಾಯಗಳಾಗಿ ಆಸ್ಪತ್ರೆಗೆ ದಾಖಲು ಮಾಡಲಾಯಿತೆಂದೂ ವರದಿಯಾಗಿದೆ

ಆಂಧ್ರ ಪ್ರಾಂತ್ಯಕ್ಕೆ ಮೈಸೂರು ಸೇರಬೇಕಂತೆ

ರಾಜ್ಯಾಂಗ ಸಭಾ ಸದಸ್ಯರಾದ ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ನಡೆದ ಚಿಂತಾಮಣಿ ತಾಲ್ಲೂಕ ಸಮ್ಮೇಳನದಲ್ಲಿ ಮೈಸೂರು ಸಂಸ್ಥಾನವು ಆಂಧ್ರ ಪ್ರಾಂತ್ಯಕ್ಕೆ ಸೇರಬೇಕೆಂಬ ಶ್ರೀ [illegible] ನಾರಾಯಣ ಶೆಟ್ಟಿಯವರ ನಿರ್ಣಯವನ್ನು ಕೋಲಾರ ಜಿಲ್ಲಾ ಸಮ್ಮೇಳನಕ್ಕೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ಊರು ಮಧ್ಯ ರಸ್ತೆಯಲ್ಲಿ ಸರ್ಪಗಳ ಮೆರವಣಿಗೆ

ತಿರುವಾಂಕೂರು ಸಂಸ್ಥಾನದ ಎರ್ನಾಕುಲಮ್ಮಿಗೆ ೨೫ ಮೈಲಿ ಸಮೀಪದಲ್ಲಿರುವ ಥಣ್ಣೀರುವಳ್ಳಂ ಎಂಬ ಹಳ್ಳಿಯ ದೇವಸ್ಥಾನದ ಹತ್ತಿರದಿಂದ ಕಳೆದ ೧೬ನೇ ತಾರೀಖು ಸಂಜೆ ಸುಮಾರು ೫೦ ದೊಡ್ಡ ಸರ್ಪಗಳು ತಮ್ಮ ಹೆಡೆಗಳನ್ನು ಆಗಾಗ್ಯೆ ಎತ್ತಿ ಬುಸುಗುಟ್ಟುತ್ತಾ ಊರಿನ ರಸ್ತೆಯ ಮಾರ್ಗದಲ್ಲೇ ಮೆರವಣಿಗೆ ಹೊರಟ ಭೀಕರ ಪ್ರಸಂಗವು ವರದಿಯಾಗಿದೆ ಅವುಗಳ ಮೆರವಣಿಗೆಯು ಒಳ್ಳೆಯ ಶಿಸ್ತಿನಿಂದ ಕೂಡಿತ್ತು ಸ್ವಲ್ಪ ದೂರ ರಸ್ತೆಯಲ್ಲಿ ಈ ರೀತಿ ನಡೆದು ಅನಂತರ ಅವು ಪಕ್ಕದ ಕಾಡಿನಲ್ಲಿ ಹೋಗಿ ಕಣ್ಮರೆಯಾದುವು ಇವುಗಳಿಂದ ಯಾರಿಗೂ ಯಾವ ತೊಂದರೆಯೂ ಆಗಲಿಲ್ಲ

ಪುತ್ತನಂಪಳ್ಳಂ ಎಂಬ ದೇವಸ್ಥಾನಕ್ಕೆ ಹೋಗುತ್ತಿದ್ದ ಹಳ್ಳಿಯವನೊಬ್ಬನು ಈ ದೃಶ್ಯವನ್ನು ಕಂಡು ಗಾಬರಿಯಿಂದ ಕಿರಚಿಕೊಂಡು ಓಡಿದನು ಅನಂತರ ಅನೇಕ ಜನರು ಇದನ್ನು ಕಂಡು ಚಕಿತರಾಗಿ ಪರಾರಿಯಾದರು. ಸರ್ಪಗಳು ತಮ್ಮ ಪಾಡಿಗೆ ತಾವು ಕಾಡಿಗೆ ಹೋಗುತ್ತಿದ್ದುದನ್ನು ಕೆಲವು ಧೈರ್ಯಶಾಲಿಗಳು ಮಾತ್ರ ನೋಡಿದರು ಮಾರನೇ ದಿನ ಕೆಲವರು ಕಾಡಿಗೆ ಹೋಗಿ ನೋಡಿದಾಗ ಅವುಗಳು ಕಂಡು ಬರಲಿಲ್ಲ

ಸರ್ಪಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗಿರಬಹುದಾದರೂ, ಇದು ಮುಂದೆ ಅನಿಷ್ಟದ ಸೂಚನೆಯೆಂದು ಗಾಬರಿಗೊಂಡ ಹಳ್ಳಿಯವರು ಭಾವಿಸಿದ್ದಾರೆ.

ಲಾಠಿ ಪ್ರಯೋಗದಿಂದ ೩೦ ಜನರಿಗೆ ಗಾಯ

ಬೆಂಗಳೂರು ೨೪

ಮೊನ್ನೆ ದಿನ ಸೆಂಟ್ರಲ್ ಜೈಲಿನಲ್ಲಿ ೨೦೦ ಜನ ಕಮ್ಯೂನಿಸ್ಟರು ಮತ್ತು ಕೋಲಾರದ ಚಿನ್ನದ ಗಣಿ ಕೆಲಸಗಾರರ ಮೇಲೆ ಜೈಲು ಅಧಿಕಾರ ವರ್ಗದವರು ಲಾಠಿ ಪ್ರಯೋಗ ಮಾಡಿದಾಗ ೩೦ ಜನರಿಗೆ ತೀವ್ರ ಗಾಯಗಳಾಗಿವೆಯೆಂದೂ, ೬ ಜನರ ಸ್ಥಿತಿ ಚಿಂತಾಜನಕವಾಗಿದೆಯೆಂದೂ ಹೇಳಲಾಗಿದೆ. ಘೋಷಣೆಗಳನ್ನು ಕೂಗಿದುದರಿಂದ ಬಂದಿತರ ಬ್ಯಾರಕ್ಕುಗಳಿಗೆ ನುಗ್ಗಿ ಲಾಠಿ ಪ್ರಹಾರ ಮಾಡಲಾಯಿತೆಂದೂ ಹೇಳಲಾಗಿದೆ

ಬದರಿಕಾಶ್ರಮಕ್ಕೆ ದವೇಜರ್ ಮಹಾರಾಣಿಯವರ ಭೇಟಿ

ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನ ದವೇಜರ್ ಮಹಾರಾಣಿಯವರು ಬರುವ ಮೇ ತಿಂಗಳಿನಲ್ಲಿ ಬದರಿಕಾಶ್ರಮಕ್ಕೆ ಭೇಟಿ ಕೊಡುವರೆಂದು ತಿಳಿದುಬಂದಿದೆ

ಕೋ-ಆಪರೇಟಿವ್ ಸೊಸೈಟಿಯ ಅಧಿಕಾರ ವರ್ಗ

ಮೈಸೂರು ಸಿಟಿ ಕೋ-ಆಪರೇಟಿವ್ ಸೊಸೈಟಿಯ ಮುಂದಿನ ವರ್ಷದ ಅಧಿಕಾರಿ ವರ್ಗದ ಚುನಾವಣೆಯು ನಿನ್ನೆ ನಡೆದು ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷರಾಗಿಯೂ ಶ್ರೀ ಎಚ್ ಚೆನ್ನಸ್ವಾಮಿ ಶೆಟ್ಟರು ಉಪಾಧ್ಯಕ್ಷರಾಗಿಯೂ ಶ್ರೀ ಜಿ ವಿ [illegible] ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ

ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಸಹಾಯ

ಮೈಸೂರು ೨೪

ಮೈಸೂರು ಜಿಲ್ಲೆಯ ೬೦ ಗ್ರಾಮಗಳಲ್ಲಿ ನೂತನ ಗ್ರಾಮಾಭಿವೃದ್ಧಿ ಯೋಜನೆಯು ಇದೇ ೭ನೇ ತಾ॥ ಪ್ರಾರಂಭಿಸಲ್ಪಟ್ಟಿತು. ಆ ದಿನ ಅನೇಕ ಗ್ರಾಮಸ್ಥರುಗಳೇ ಮುಂದೆ ಬಂದು ತಿಪ್ಪೆ ಗುಂಡಿಗಳನ್ನು ತೆಗೆಯುವುದು, ರಸ್ತೆ ಮತ್ತು ಚರಂಡಿಗಳ ರಿಪೇರಿ, ಮರಗಳನ್ನು ನೆಡುವುದು ಇವೇ ಮುಂತಾದ ಕಾರ್ಯಗಳಲ್ಲಿ ತೊಡಗಿದ್ದರು. ಟಿ ನರಸೀಪುರ ತಾಲ್ಲೂಕು ಹೊಳೆಸಾಲು ಗ್ರಾಮದಲ್ಲಿ ೨೧೫ ರೂ ನಂಜನಗೂಡು ತಾ॥ ಹುಲ್ಲಹಳ್ಳಿಯಲ್ಲಿ ೧೫೩೦ ರೂ ಮತ್ತು ಹುಂ ಗ್ರಾಮದಲ್ಲಿ ೬೦ ರೂ ಅಭಿವೃದ್ಧಿ ಕೆಲಸಗಳಿಗಾಗಿ ಗ್ರಾಮಸ್ಥರು ದಾನ ಮಾಡಿದರು. ... ನಕೋಟೆ ತಾ॥ ಮೊಳೆಯೂರು ಗ್ರಾಮದಲ್ಲಿ ಶ್ರೀ ಮುದ್ದೇಗೌಡರು ಒಂದು ... ಕಟ್ಟಡವನ್ನೂ, ಶ್ರೀ ಬೋರೇಗೌಡ ... ಆಸ್ಪತ್ರೆ ಕಟ್ಟಡವನ್ನೂ ... ಗಳಲ್ಲಿ ಕಟ್ಟಿಸಿ ಕೊಡ... ರೆ

ಡಾ॥ ಸುಬ್ಬರಾಯನ್ನರು ಮದ್ರಾಸಿನ ಮುಖ್ಯ ಮಂತ್ರಿಯೋ ?

ಇದೇ ೩೧ನೇ ತಾ॥ ನಡೆಯಲಿರುವ ಮದರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯಲ್ಲಿ ಮಾಜಿ ಮಂತ್ರಿ ಡಾ॥ ಸುಬ್ಬರಾಯನ್‌ರವರು ಸ್ಪರ್ಧಿಸಿ, ಮುಖ್ಯ ಮಂತ್ರಿಗಳಾಗಲು ವಿಶೇಷ ಆಸಕ್ತಿ ವಹಿಸುತ್ತಿರುವರೆಂದು ಹೇಳಲ್ಪಾಗಿದೆ ಶ್ರೀ ಗಳಾದ ವಿ ವಿ ಗಿರಿ, ಟಿ ಪ್ರಕಾಶಂ, ಕುಮಾರ ಸ್ವಾಮಿ ರಾಜಾರವರುಗಳೂ ಸ್ಪರ್ಧಿಸಲಿದ್ದಾರೆ

ಅಗ್ಗದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಇಂದೇ ಭೇಟಿ ಕೊಡಿ

ಶಿವರಾಂಪೇಟೆ : ಮೈಸೂರು

Edited, printed and published by A.R. Nagarajan at the Sadhvi Press, D Subbiah Road, Mysore.

ಕಾಶ್ಮೀರದ ಪ್ಲೆಬಿಸೈಟ್ ಅಧಿಕಾರಿಗಳು

ಕಾಶ್ಮೀರ್ ಸಂಸ್ಥಾನದಲ್ಲಿ ನಡೆಯಲಿರುವ ಜನಾಭಿಪ್ರಾಯದ ವ್ಯವಸ್ಥೆಗಾಗಿ ಅಮೆರಿಕದ ಅಡ್ಮಿರಲ್ ನಿ... ಟ್ಸ್‌ರವರನ್ನು ಮುಖ್ಯ ಅಧಿಕಾರಿಗಳನ್ನಾಗಿ ವಿಶ್ವಸಂಸ್ಥೆಯು ನೇಮಿಸಿದೆ.

ಪಾಕೀಸ್ತಾನದಲ್ಲಿ ಭಾ... ಧ್ವಜದ ಚಿತ್ರಕ್ಕೆ ನಿಷೇ...

ಪೂರ್ವ ಪಾಕೀಸ್ತಾನದಲ್ಲಿ ... ಧ್ವಜ ಮತ್ತು ರಾಷ್ಟ್ರೀಯ ಫೋ... ನ್ನೊಳಗೊಂಡ ಚಿತ್ರಗಳನ್ನು ಪ್ರ... ಕೂಡದೆಂದು ಅಲ್ಲಿನ ಸಿನಿಮಾ ... ಬೋರ್ಡಿನವರು ನಿರ್ಧರಿಸಿರುತ್ತಾ...

ಶ್ರೀ ಗಾಯತ್ರೀ ಟಾಕೀಸ್

24-3-49ರಿಂದ 2 ದಿನಗಳು ಮಾತ್ರ

ಕಿಡ್ ಮಿಲಿಯನ್ಸ್

KID MILLIONS

ಪಾತ್ರ: ಎಡ್ಡಿ ಕ್ಯಾಂಟರ್

ಬೆಳಗಿನ ಪ್ರದರ್ಶನ

26-3-49ರಿಂದ 2 ದಿನಗಳು ಮಾತ್ರ

BULL FIGHTERS

ಬುಲ್ ಫೈಟರ್ಸ್

ಪಾತ್ರ — ಲಾರೆಲ್ ಮತ್ತು ಹಾರ್ಡಿ

ಚಾಮುಂಡೇಶ್ವ... ಟಾಕೀಸ್

25-3-49ನೇ ಶುಕ್ರವಾರದಿ...

ಯಶಸ್ವಿಯಾದ ೫ನೇ ವಾ...

ಶೋಭನಾಚಲರವರ

ಕೀಲು ಗುರ್ರ...

(ತೆಲುಗು)

ನಟವರ್ಗ:— ಅಂಜಲೀ ದೇ... ನಾಗೇಶ್ವರ ರಾವ್

ರಾಜಕಮಲ್ ಟಾಕೀಸ್

25-3-49ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

ಸ್ವತಂತ್ರ ಫಿಲಂಸ್‌ರವರ

★ ದ್ರೋಹಿ ★

(ತೆಲುಗು)

ಪ್ರಜಾ ಶಕ್ತಿಯನ್ನು ನಿರೂಪಿಸುವ ಸಾಂಘಿಕ ಚಿತ್ರ

ಭೂಮಿಕೆ:— ವರಲಕ್ಷ್ಮಿ, ಲಕ್ಷ್ಮೀರಾಜ್ಯಂ, ಪ್ರಕಾಶರಾವ... ಪ್ರಸಾದ್

Morning Shows From 25-3-49 for 4 da...

The Adventures of MARCO POLO

With:-Gary Cooper, Sigrid Gurie, Basil Rathbone

+ ರಾಜಧಾನಿಗೆ ಸಧ್ಯದಲ್ಲೇ ಬರುತ್ತದೆ +

ಬರುತ್ತದೆ

ಗ್ರೇಟ್ ಹರ್ಮಾನ್

ಸರ್ಕಸ್

ಜೀವಣ್ಣ ರಾಯನ ಕಟ್ಟೆಯಲ್ಲಿ ಪ್ರದರ್ಶನ

COMING SHORTLY

GREAT HARMAN CIRCUS

At Jeevannarayanakatte, MYSORE

ಬೆಲೆ ಸುಲಭ :: ದರ್ಜೆ ಉತ್ತಮ

ಉಗಾದಿಗೆ ಉಡುಗೆರೆ

ಸರ್ವ ಮಾನ್ಯ ಸಿಲ್ಕ್ ಫ್ಯಾಕ್ಟರಿಯವರು

ತಯಾರಿಸಿದ ಮೈಸೂರು ಫಿಲೇಚರಿನ ಸಿಲ್ಕ್ ಸೀರೆಗಳೂ, ಷರ್ಟಿಂಗುಗಳೂ ನಮ್ಮಲ್ಲಿ ದೊರೆಯುತ್ತವೆ.

ಶ್ರೀ ಮಲ್ಲಿಕಾರ್ಜುನ ಸ್ಟೋರ್ಸ್

ನೂರಡಿ ರಸ್ತೆ :: ಮೈಸೂರು

ಉಗಾದಿ ಹಬ್ಬಕ್ಕೆ

ಹೊಸಾ ಹೊಸ ನಮೂನೆಗಳಲ್ಲಿ ಸೀರೆಗಳನ್ನೂ ಖಣಗಳನ್ನೂ ತರಿಸಿದ್ದೇವೆ. ಒಂದು ನೋಡಬೇಕಾಗಿ ವಿನಂತಿ.

ಬಾಪು ಸಾರ್ ಕಂಪೆನಿ, ಮೈಸೂರು.

*** ಶ್ರೀ ಗಣೇಶಾ ಟಾಕೀಸ್**

25-3-49ರಿಂದ : ಅಮೋಘ ಆರಂಭ

ಜಯ ಪ್ರಕಾಶ್‌ರವರ ತಮಿಳು ಚಿತ್ರ

- ಭೋಜನ್

ಪ್ರತಿ ದಿನ ಮೂರು ಪ್ರದರ್ಶನಗಳು

ತಾರಾ ಗಣ.- ಪಿ ಎಸ್. ಗೋವಿಂದನ್, ಕಾಳಿ ಎನ್. ರತ್ನಂ, ವರ ಲಕ್ಷ್ಮಿ, ರಾಜಾ ಕಾಂತಂ, ಲಲಿತ ಪದ್ಮಿನಿ ಮತ್ತು ತಾರಾ ಚೌಧುರಿ.

ಇದರಲ್ಲಿ "ತಿರಮಣಂ" ... ಅಮೋಘ ನೃತ್ಯವೂ ಇದೆ

★ ಪ್ರಭುದೇವಾ ಟಾಕೀಸಿನಲ್ಲಿ ★

25-3-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವಹಿ ಮೂರು ಆಟಗಳು

ಮ್ಯಾಟನಿ ೨-೩೦, ಮೊದಲನೆಯ ಆಟ ೬-೩೦, ಎರಡನೆಯ ಆಟ ರಾತ್ರಿ ೧೦

ಗೀತಾ ಗಾಂಧೀ GITA GANDHI

ಪೇಯಿದು ನಾಯುಡು, ಟಿ.ಆರ್. ರಾಮಚಂದ್ರನ್, ಲಲಿತಾ ಪದ್ಮಿನಿ. ಬೇಬಿ ಸರೋಜ ಮತ್ತು ಪದ್ಮ ಪಾತ್ರ ವಹಿಸಿರುವ ತಮಿಳು ಚಿತ್ರ.

ಫೋ ನಂ 792 ॥ವಂದೇ ಮಾತರಂ॥ ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೨೫-೩-೧೯೪೯ [ಸಂಖ್ಯೆ ೧೯೭

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ

ಸ್ವಂ ಸು.ಪೋ] ಬೆಂಗಳೂರು ೨೫

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಂಶೋಧನಾ ಕಾರ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಭಾರತ ಸರ್ಕಾರದವರು ಮೈಸೂರಿನೊಡನೆ ವ್ಯವಹಾರ ನಡೆಸುತ್ತಿದ್ದಾರೆಂದೂ, ಇದಕ್ಕೆ ಎಲ್ಲ ಅನುಕೂಲಗಳನ್ನೂ ಒದಗಿಸುದಾಗಿ ಮೈಸೂರು ಸರ್ಕಾರದವರು ತಿಳಿಸಿರುವರೆಂದೂ, ಗೊತ್ತಾಗಿದೆ

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮೇಲೆ ಮೊಕದ್ದಮೆ

ಬೆಂಗಳೂರಿನ ವಕೀಲರಾದ ಶ್ರೀ ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರು ತಮ್ಮ ಔಟ್ ಹೌಸ್ ಖಾಲಿಯಾದುದನ್ನು ರೆ. ಕಂಟ್ರೋಲರಿಗೆ ತಿಳಿಸಲಿಲ್ಲವೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ

ಕಲ್ಕತ್ತ ವಿಶ್ವವಿದ್ಯಾಲಯದ ತರಗತಿಗಳು ಮುಚ್ಚಿದವು

ಕಲ್ಕತ್ತದ ಹಲವು ವಿದ್ಯಾರ್ಥಿಗಳು ಮೊನ್ನೆ ದಿನದಿಂದ ಮುಷ್ಕರ ಹೂಡಿ, ಮೆರವಣಿಗೆ ಹೊರಟು ಪ್ರದರ್ಶನ ನಡೆಸಿದರೆಂದೂ, ಬಲಾತ್ಕಾರವಾಗಿ ತರಗತಿಗಳಿಗೆ ನುಗ್ಗಿ ಕಿಟಕಿಗಳನ್ನು ಮುರಿದು ಗಲಭೆ ನಡೆಸಿದರೆಂದೂ ಅವರನ್ನು ಚದುರಿಸಲು ಪೋಲೀಸರು ಟಿಯರ್ ಗ್ಯಾಸ್ ಪ್ರಯೋಗಿಸಿ, ೧೭ ಜನರನ್ನು ದಸ್ತಗಿರಿಮಾಡಿದರೆಂದೂ ವರದಿಯಾಗಿದೆ ಇದರಿಂದ, ವಿಶ್ವವಿದ್ಯಾಲಯದ ಎಲ್ಲ ತರಗತಿಗಳನ್ನೂ ಮುಚ್ಚಲಾಗಿದೆ

ಭಾರತದಲ್ಲಿ ಅಣು ಬಾಂಬು ತಯಾರಿಸುವುದಿಲ್ಲ

ಭಾರತದಲ್ಲಿ ಅಣುಬಾಂಬನ್ನು ತಯಾರಿಸಬೇಕೆಂದು ಆಲೋಚಿಸಿಲ್ಲ ಆದರೆ ಅಣುಶಕ್ತಿಯನ್ನು ರಚನಾತ್ಮಕ ಕಾರ್ಯಗಳಿಗೆ ಉಪಯೋಗಿಸಲು ಸಂಶೋಧನೆ ನಡೆಸಲಾಗುತ್ತಿದೆ ಮತ್ತು ಅದರ ಜ್ಞಾನ ವಿನಿಮಯಕ್ಕಾಗಿ ಇತರ ರಾಷ್ಟ್ರಗಳೊಡನೆ ಸಂಪರ್ಕವನ್ನಿಟ್ಟುಕೊಳ್ಳಲಾಗುವುದು ಎಂದು ಪಂಡಿತ ನೆಹರೂರವರು ತಿಳಿಸಿರುತ್ತಾರೆ

ಮುಂದಿನ ವರ್ಷ ಮಾರ್ಚಿ ವರೆವಿಗೂ ಹತೋಟಿ

ಆಹಾರ ಧಾನ್ಯ, ಹತ್ತಿ, ಉಣ್ಣೆ, ಜವಳಿ, ಕಾಗದ, ಪೆಟ್ರೋಲ್, ಕಬ್ಬಿಣ, ಉಕ್ಕು, ಕಾರ್ಖಾನೆಗಳ, ಯಂತ್ರ ಸಾಧನದಿಂದ ಚಲಿಸುವ, ವಾಹನಗಳ, ಯಂತ್ರೋಪಕರಣಗಳು ಇವೇ ಮುಂತಾದ ಮುಖ್ಯ ವಸ್ತುಗಳ ಮೇಲೆ ೧೯೫೦ನೇ ಇಸವಿ ಮಾರ್ಚಿ ೩೧ನೇ ತಾ॥ ವರೆವಿಗೂ ಹತೋಟಿಯನ್ನು ಇಟ್ಟಿರಬೇಕೆಂಬ ನಿರ್ಣಯವು ಕೇಂದ್ರ ಶಾಸನ ಸಭೆಯಲ್ಲಿ ಅಂಗೀಕೃತವಾಯಿತು

ಸಧ್ಯಕ್ಕೆ ಯುದ್ಧದ ಭೀತಿ ಇಲ್ಲ

ಸಧ್ಯಕ್ಕೆ ಯುದ್ಧದ ಭಯವು ಇಲ್ಲದಿದ್ದರೂ, ಶಾಂತಿ ರಕ್ಷಣೆಗಾಗಿ ಅಮೇರಿಕವು ತನ್ನ ಸೈನ್ಯ ಬಲವನ್ನು ಹೆಚ್ಚಿಸಬೇಕೆಂದು ಅಲ್ಲಿನ ಸೈನ್ಯ ಇಲಾಖಾ ಮಂತ್ರಿಗಳಾದ ಜ. ಕೆನೆತ್ ರಾಯಲ್‌ರವರು ತಿಳಿಸಿರುತ್ತಾರೆ ಅಮೇರಿಕದ ಸೈನ್ಯ ಬಲವು ...೦೦೦ ಮಂದಿ ಇರಬೇಕೆಂದೂ ಮತ್ತು ...೦೦೦ ಮಂದಿಯು ಟೆರಿಟೋರಿಯಲ್ ಸೈನ್ಯವೂ ಇರಬೇಕೆಂದೂ ಅವರು ಸಲಹೆ ಮಾಡಿರುತ್ತಾರೆ

ಜೋಗಿನ ಬಳಿ ೪೫ ಕೋಟಿ ರೂ. ವಿದ್ಯುಚ್ಛಕ್ತಿ ಯೋಜನೆ

ಸ್ವಂ ಸು ಪೋ] ಬೆಂಗಳೂರು ೨೫

ಜೋಗಿನಲ್ಲಿರುವ ಹೊನ್ನೆಮರಡು ಬಳಿ ಶರಾವತಿ ನದಿಯ ನೀರಿನಿಂದ ವಿದ್ಯುಚ್ಛಕ್ತಿ ತಯಾರಿ ಯೋಜನೆಯೊಂದನ್ನು ಕೈಗೊಳ್ಳಲು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ, ಇದಕ್ಕೆ ೪೫ ಕೋಟಿ ರೂ. ವೆಚ್ಚವಾಗಬಹುದೆಂದೂ ತಿಳಿದುಬಂದಿದೆ. ಇದರಿಂದ ೫ ಲಕ್ಷ ಅಶ್ವಶಕ್ತಿಯಷ್ಟು ಉತ್ಪತ್ತಿಯಾಗುವುದು ಯೋಜನೆಯನ್ನು ಸಿದ್ಧಗೊಳಿಸಲು ವಿಮಾನದ ಮೂಲಕ ಸರ್ವೆ ನಡೆಸಲಾಗುವುದೆಂದು ಹೇಳಲಾಗಿದೆ

ಅರಣ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳ ಆಗಮನ

ರಾಜಧಾನಿಯಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನಕ್ಕೆ ಭಾರತ ನಿಯೋಗದ ನಾಯಕರಾದ ಸರ್ ಟಿ ವಿಜಯರಾಘವಾಚಾರ್ಯರು ಈ ದಿನ ಇಲ್ಲಿಗೆ ಆಗಮಿಸಿದರು ಬರ್ಮದ ಮೂವರು ಪ್ರತಿನಿಧಿಗಳೂ, ಚೀಣದಿಂದ ಇಬ್ಬರೂ ಮತ್ತು ಮಲಯದಿಂದ ಒಬ್ಬರೂ ನಿನ್ನೆ ಸಂಜೆ ಆಗಮಿಸಿದರು. ಅಂತರ ರಾಷ್ಟ್ರೀಯ ಅರಣ್ಯ ಸಮಿತಿಯ ಅಧ್ಯಕ್ಷಾಧಿಕಾರಿಗಳಾದ ಮಿ॥ ಮಾರ್ಷಲ್ ಲಿಲೋರವರು ಈ ದಿನ ಬರುವರು

ಹೊಸ ರೇಷನ್ ಪದಾರ್ಥಗಳು

ರಾಗಿ, ಜೋಳ, ಮುಸುಕಿನ ಜೋಳ, ಮೈದಾ ಮತ್ತು ಸವಣೆಗಳನ್ನು ರೇಷನ್ ಪದಾರ್ಥಗಳೆಂದು ಸಂಸ್ಥಾನಾದ್ಯಂತ ಪರಿಗಣಿಸಬೇಕೆಂದೂ, ಅವುಗಳು ರೇಷನ್ ಹತೋಟಿ ಆಜ್ಞೆಗೆ ಒಳಪಡುವುವೆಂದೂ ಸರಕಾರದ ಪ್ರಕಟಣೆ ತಿಳಿಸಿರುತ್ತದೆ ಸವಣೆಯ ದರವನ್ನು ಪಲ್ಲಗಕ್ಕೆ ೧೯ ರೂ ನಂತೆ ನಿಗದಿ ಮಾಡಲಾಗಿದೆ

ಅವಿವಾಹಿತ ಯುವತಿಯರ ಮೇಲೆ ತೆರಿಗೆ

ಆಲಾಸ್ಕಾದಲ್ಲಿ ೪೦ ಸಾವಿರ ಯುವಕರು ಮತ್ತು ೨೦ ಸಾವಿರ ಯುವತಿಯರುವರೆಂದೂ, ತರುಣಿಯರು ಮದುವೆಯಾಗಲು ನಿರಾಕರಿಸಿರುವುದರಿಂದ ಅವರ ಮೇಲೆ ೧೫ ಪೌಂಡು ೧೦ ಷಿಲಿಂಗ್ ತೆರಿಗೆ ಹಾಕಬೇಕೆಂದು ಸರ್ಕಾರದವರು ಆಲೋಚಿಸುತ್ತಿದ್ದಾರೆಂದೂ ಹೇಳಲಾಗಿದೆ

ಭಾರತಕ್ಕೆ ಬರಲು ಫ್ರೆಂಚ್ ಇಂಡಿಯಾದವರಿಗೆ ರಹದಾರಿ

ಫ್ರೆಂಚ್ ಇಂಡಿಯಾದಿಂದ ಭಾರತಕ್ಕೆ ಬರತಕ್ಕವರು ಏಪ್ರಿಲ್ ೧ನೇ ತಾ॥ ನಿಂದ ರಹದಾರಿ ಪಡೆಯಬೇಕೆಂದು ಕೇಂದ್ರ ಸರ್ಕಾರದವರು ನಿರ್ಧರಿಸಿರುತ್ತಾರೆ ಚಂದ್ರನಗರದಿಂದ ಬರುವವರಿಗೆ ಇದು ಅನ್ವಯಿಸುವುದಿಲ್ಲ

ಸಂಸ್ಥಾನದ ಹಣ ಕಾಸಿನ ಮೇಲೆ ಭಾರತದ ಹತೋಟಿ

ಸ್ವಂ ಸು ಪೋ] ಬೆಂಗಳೂರು ೨೫

ಭಾರತ ಸರ್ಕಾರದವರು ಸಂಸ್ಥಾನದ ಹಣ ಕಾಸಿನ ಮೇಲೆ ಸಂಪೂರ್ಣ ಹತೋಟಿಯನ್ನಿಟ್ಟುಕೊಂಡು, ಕೆಲವು ಬಾಬುಗಳನ್ನು ನೇರವಾಗಿ ತಮ್ಮ ಆಡಳಿತಕ್ಕೆ ತೆಗೆದುಕೊಳ್ಳುವ ವಿಚಾರವನ್ನು ನಿನ್ನೆ ನಡೆದ ಮೈಸೂರು ಮಂತ್ರಿಮಂಡಲದಲ್ಲಿ ಪರಿಶೀಲಿಸಲಾಯಿತೆಂದೂ, ಈ ವಿಚಾರವನ್ನು ದೆಹಲಿಗೆ ನಾಳೆ ಹೋಗುವ ಹಣ ಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಇದಕ್ಕೆ ಸಂಬಂಧಪಟ್ಟ ಸಮಿತಿಯವರೊಡನೆ ಮಾತುಕತೆ ನಡೆಸುವರೆಂದೂ ತಿಳಿದು ಬಂದಿದೆ

ಚಿನ್ನದ ಗಣಿ ಕೆಲಸಗಾರರ ಮುಷ್ಕರ ಮತ್ತು ಪುರಸಭಾ ಕಮೀಷನರಾದ ಜ॥ ಖಲೀಲ್‌ರವರ ವರ್ಗ ಇವುಗಳ ವಿಚಾರಗಳೂ ಪರಿಶೀಲಿಸಲ್ಪಟ್ಟವೆಂದೂ ಗೊತ್ತಾಗಿದೆ

ಅಕ್ರಮ ಗೋಧಿ ರವಾನೆಗೆ ಶಿಕ್ಷೆ

ಮೊನ್ನೆ ಸಿಂಧು ಘಟ್ಟಕ್ಕೆ ೧೧೦ ಸೇರು ಗೋಧಿಯನ್ನು ಚನ್ನಯ್ಯ ಮತ್ತು ನಂಜಯ್ಯ ಎಂಬುವರು ಸಾಗಿಸುತ್ತಿದ್ದಾಗ ಜಿಲ್ಲಾ ಸೈಲು ಚೀಫ್ ವಾರ್ಡನ್ ಶ್ರೀ ಡಿ ಎಸ್ ಲಕ್ಷ್ಮೀನಾರಾಯಣರಾಯರು ಪತ್ತೆ ಮಾಡಿ ಪೋಲೀಸರ ಮೂಲಕ ಮೊದಲನೇ ಮ್ಯಾಜಿಸ್ಟ್ರೇಟರ ಮುಂದೆ ಮೊಕದ್ದಮೆ ಹೂಡಲು ಅಪರಾಧಿತರುಗಳಿಗೆ ತಲಾ ೨೦ ಮತ್ತು ೨೫ ರೂ. ಜುಲ್ಮಾನೆ ವಿಧಿಸಲ್ಪಟ್ಟಿತು. ಗೋಧಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ಆಜ್ಞೆ ಮಾಡಲಾಯಿತು

ಹರಿಕಥೆ

ಶಿವರಾಂಪೇಟೆಯಲ್ಲಿರುವ ವಿಠಲರಾಯರ ಶ್ರೀ ರಾಮಮಂದಿರದಲ್ಲಿ ಈ ರಾತ್ರಿ ೯೦ ಗಂಟೆಗೆ ಏಕಾದಶಿ ಪ್ರಯುಕ್ತ ಬೆಂಗಳೂರಿನ ವಿದ್ವಾನ್ ಸುಬ್ರಾಯ ದಾಸರಿಂದ ಗಂಡಭೇರುಂಡ ಹರಿಕಥೆ ನಡೆಯುವುದು

ಪ್ರತಿ ಜಿಲ್ಲೆಯಲ್ಲೂ ಮರದ ಡಿಪೋಗಳು

ಹಳ್ಳಿಯ ಜನರಿಗೆ ಸುಲಭದಲ್ಲಿ ಮರಮುಟ್ಟುಗಳನ್ನು ಒದಗಿಸುವ ಉದ್ದೇಶದಿಂದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಒಂದೊಂದು ಮರದ ಡಿಪೋವನ್ನು ತೆರೆಯಬೇಕೆಂದು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ತಿಳಿದು ಬಂದಿದೆ

ಹೈದರಾಬಾದ್ ಸೈನ್ಯ ಭಾರತದೊಡನೆ ಐಕ್ಯ

ಹೈದರಾಬಾದ್ ಸಂಸ್ಥಾನದ ಸೈನ್ಯವು ಭಾರತ ಸೈನ್ಯದೊಡನೆ ಸಮ್ಮಿಳಿತವಾಗುವುದೆಂದೂ, ಅದನ್ನು ಪುನರ್ವ್ಯವಸ್ಥೆ ಮಾಡಲಾಗುವುದೆಂದೂ ತಿಳಿಸಲಾಗಿದೆ

ಸಿಂಹದ ಬೋನಿಗೆ ಹಾರಿ ಆತ್ಮಹತ್ಯೆ

ಮದರಾಸಿನ ೨೪ ವರ್ಷದ ಶಂಕರರಾಜು ಎಂಬ ಯುವಕನು ಜೀವನದಲ್ಲಿ ಜಿಗುಪ್ಸೆಗೊಂಡು, ಮದರಾಸ್ ಮೃಗಾಲಯದಲ್ಲಿರುವ ಸಿಂಹದ ಬೋನಿನೊಳಕ್ಕೆ ಮೊನ್ನೆ ಸಂಜೆ ಹಾರಿ ಆತ್ಮಹತ್ಯ ಮಾಡಿಕೊಳ್ಳಲು ಯತ್ನಿಸಿದನೆಂದು ವರದಿಯಾಗಿದೆ ಆತನು ಗೋಡೆಯನ್ನು ಹತ್ತಿ ಪಂಜರದೊಳಕ್ಕೆ ಧುಮುಕಿದನೆಂದೂ ಅಲ್ಲಿದ್ದ ಒಂದು ಗಂಡು ಸಿಂಹ ಮತ್ತು ೨ ಹೆಣ್ಣು ಸಿಂಹಗಳು ಆತನ ಮೇಲೆ ಬಿದ್ದು ಅವನನ್ನು ಕಚ್ಚಿ ಎತ್ತಿಕೊಂಡು ಹೋಗುತ್ತಿದ್ದಾಗ, ಅಲ್ಲಿನ ಆಳುಗಳು ಬಂದು ಸಿಂಹಗಳನ್ನು ಹಿಮ್ಮೆಟ್ಟಿಸಿ ಪಂಜರಕ್ಕೆ ಓಡಿಸಿ, ತೀವ್ರ ಗಾಯಗೊಂಡ ಆತನನ್ನು ಆಸ್ಪತ್ರೆಗೆ ಕಳುಹಿಸಿದರೆಂದೂ, ಆದರೆ ಆತನು ಅಲ್ಲಿ ಮರಣ ಹೊಂದಿದನೆಂದೂ ವರದಿಯಾಗಿದೆ

ಕಾಳಸಂತೆ ನಿರ್ಮೂಲ ಮಾಡಲು ಕಾನೂನು

ಮದರಾಸ್ ಪ್ರಾಂತ್ಯದಲ್ಲಿ ಕಾಳಸಂತೆಯನ್ನು ನಿರ್ಮೂಲಮಾಡಲು ಸರ್ಕಾರದವರು ಒಂದು ಮಸೂದೆಯನ್ನು ಪ್ರಕಟಿಸಿರುತ್ತಾರೆ ಮಿತಿ ಮೀರಿದ ಲಾಭದಾಸೆಯಿಂದ ಹೆಚ್ಚಿನ ಬೆಲೆಗೆ ಪದಾರ್ಥಗಳನ್ನು ಮಾರುವವರಿಗೆ ಅದರ ಅದನ್ನು ಸ್ವಂತ ಮಾರುವುದಕ್ಕಾಗಿ ಹೆಚ್ಚಿನ ದರದಲ್ಲಿ ಕೊಳ್ಳುವವರಿಗೂ ಉಗ್ರ ಶಿಕ್ಷೆ ವಿಧಿಸಲಾಗುವುದೆಂದೂ ಕಳ್ಳ ವ್ಯಾಪಾರಿಗಳ ಹೆಸರುಗಳನ್ನು ಬಹಿರಂಗಪಡಿಸಲಾಗುವುದೆಂದೂ, ೬ ತಿಂಗಳಿಂದ ೭ ವರ್ಷದವರೆಗೆ ಶಿಕ್ಷೆ ವಿಧಿಸಲಾಗುವುದೆಂದೂ ಅದರಲ್ಲಿ ನಮೂದಿಸಲಾಗಿದೆ.

ತಾನೇ ವಾದಿಸಲು ಗೋಡ್ಸೆಗೆ ಅವಕಾಶ

ಮಹಾತ್ಮರ ಕೊಲೆ ಅಪಾದನೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾಥೂರಾಂ ಗೋಡ್ಸೆಯ ಅಪೀಲು ವಿಚಾರಣೆಯಲ್ಲಿ ತಾನೇ ವಕಾಲತ್ತು ವಹಿಸಿ ವಾದಿಸಲು ಅನುಮತಿಯನ್ನು ಪೂರ್ವ ಪಂಜಾಬ ಹೈ ಕೋರ್ಟಿನ ನ್ಯಾಯಾಧೀಶರು ಕೊಟ್ಟಿರುತ್ತಾರೆ

ಗೋವಧೆ ನಿಲ್ಲಿಸಲು ಕಾನೂನು

ದೇಶದಲ್ಲಿ ಜಾನುವಾರುಗಳ ರಕ್ಷಣೆಗಾಗಿ ಅವುಗಳನ್ನು ಕೊಲ್ಲುವುದಾಗಲಿ, ಆಹಾರಕ್ಕಾಗಿ ಮಾರುವುದಾಗಲಿ ನಿಷೇಧಿಸುವ ಕಾನೂನನ್ನು ಸಧ್ಯದಲ್ಲಿಯೇ ಜಾರಿಗೆ ತರಲಾಗುವುದೆಂದು ಭಾರತ ಸರ್ಕಾರದ ಆಹಾರ ಸಚಿವರು ತಿಳಿಸಿರುತ್ತಾರೆ

ಕರಾಚಿಯಲ್ಲಿ ಮನೆಗೂ ರೇಷನ್

ಕರಾಚಿಯಲ್ಲಿ ಮನೆಗಳ ಅಭಾವವಿರುವುದರಿಂದ, ಮನೆಗಳನ್ನೂ ರೇಷನ್ ಮಾಡಲಾಗುವುದೆಂದೂ ಒಂದು ಸಂಸಾರಕ್ಕೆ ಎಷ್ಟು ಸ್ಥಳ ಬೇಕೋ ಅಷ್ಟನ್ನು ಮಾತ್ರ ಕೊಡಲಾಗುವುದೆಂದೂ, ಇದನ್ನು ಬಲವಂತದಿಂದ ಜಾರಿಗೆ ತರಲಾಗುವುದೆಂದು ಸಿಂಧ್ ಗವರ್ನರವರು ತಿಳಿಸಿರುತ್ತಾರೆ

* ಶ್ರೀ ಗಣೇಶಾ ಟಾಕೀಸ್ *

25-3-49ರಿಂದ : ಅಮೋಘ ಆರಂಭ

ಜಯ ಪ್ರಕಾಶ್ ರವರ ತಮಿಳು ಚಿತ್ರ

- ಭೋಜನ್ -

ಪ್ರತಿ ದಿನ ಮೂರು ಪ್ರದರ್ಶನಗಳು

ತಾರಾ ಗಣ.- ಪಿ. ಎಸ್. ಗೋವಿಂದನ್, ಕಾಳಿ ಎನ್. ರತ್ನಂ, ವರ ಲಕ್ಷ್ಮಿ, ಸಿ. ಟಿ. ರಾಜಾ ಕಾಂತಂ, ಲಲಿತ ಪದ್ಮಿನಿ ಮತ್ತು ತಾರಾ ಚೌಧುರಿ.

ಇದರಲ್ಲಿ " ತಿ ರ ಮ ಣ ಂ " ಎಂಬ ಅಮೋಘ ನೃತ್ಯವೂ ಇದೆ

ಒಪೇರಾ ಟಾಕೀಸ್

25-3-49ನೇ :: ಶುಕ್ರವಾರದಿಂಡ

ಅಮೋಘವಾದ ೭ನೇ ವಾರ

ಧನ ಅಮರಾವತಿ

ಅಮೋಘ ತಮಿಳು ಚಿತ್ರ

ಪಾತ್ರ—ಎಸ್.ಎಂ. ಕುಮರೇಶನ್, ಬಿ.ಎಸ್. ಸರೋಜ, ಪುಳಿಮೂಟ್ಟೆ ಕುಮಾರಿ ಎನ್. ರಾಜನ್. [A Yashodhara Release

ಅಗ್ಗದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಇಂದೇ ಭೇಟಿ ಕೊಡಿ

ಶಿವರಾಂಪೇಟೆ :: ಮೈಸೂರು

ಶ್ರೀ ಗಾಯತ್ರೀ ಟಾಕೀಸ್

24-3-49ರಿಂದ 2 ದಿನಗಳು ಮಾತ್ರ

ಕಿಡ್ ಮಿಲಿಯನ್ಸ್

KID MILLIONS

ಪಾತ್ರ.—ಎಡ್ಡಿ ಕ್ಯಾಂಟರ್

ಬೆಳಗಿನ ಪ್ರದರ್ಶನ

26-3-49ರಿಂದ 2 ದಿನಗಳು ಮಾತ್ರ

BULL FIGHTERS

ಬುಲ್ ಫೈಟರ್ಸ್

ಪಾತ್ರ:—ಲಾರೆಲ್ ಮತ್ತು ಹಾರ್ಡಿ

* ಪ್ರಭಾ

ಬೆಳಗಿನ ಪ್ರದರ್ಶನ

25—3—49ರಿಂದ ೩ ದಿನಗಳು :

ನಿರ್ದೋಷ

(ಹಿಂದಿ

ಪಾತ್ರ:— ನಳಿನಿ ಜಯವಂತ

ಕನ್ಯಾಲಾಲ್

Edited, printed published by A.R. Na rajan at the Sadhvi Pr D. Subbiah Road, Mys

ಉಗಾದಿ ಹಬ್ಬಕ್ಕೆ

ಹೊಸಾ ಹೊಸ ನಮೂನೆಗಳಲ್ಲಿ ಸೀರೆಗಳನ್ನೂ, ಖಣಗಳನ್ನೂ ಕರಿಸಿದ್ದೇ ಬಂದು ನೋಡಬೇಕಾಗಿ ವಿನಂತಿ.

ಬಾಹುಸಾರ್ ಕಂಪನಿ, ಮೈಸೂರು

* ರಾಜಕಮಲ್ ಟಾಕೀಸ್, ಮೈಸೂರು *

25-3-49ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ಸ್ವತಂತ್ರ ರವರ { ದ್ರೋಹಿ DROHI { ತೆಲುಗು ಭಾಷೆ

ದಿನವಹಿ ಮೂರು ಆಟಗಳು :: ೩-೧೫, ೬-೩೦ ಮತ್ತು ೯-೪೫

ಪಾತ್ರ:-ವರಲಕ್ಷ್ಮಿ, ಲಕ್ಷ್ಮೀರಾಜ್ಯಂ, ಪ್ರಕಾಶರಾವ್, ಪ್ರಸಾದ್ [Yashodhara Films Corporation Release

★ ಪ್ರಭುದೇವಾ ಟಾಕೀಸಿನಲ್ಲಿ ★

ಪೆರಿಯ ನಾಯಕಿ, ಟಿ.ಆರ್. ರಾಮಚಂದ್ರನ್, ಲಲಿತಾ ಪದ್ಮಿನಿ, ಬೇಬಿ ಸರೋಜ ಮತ್ತು ಪದ್ಮ ಪಾತ್ರ ವಹಿಸಿರುವ ತಮಿಳು ಚಿತ್ರ.

ಗೀತಾ ಗಾಂಧಿ

ಮ್ಯಾಟಿನಿ ೩-೩೦,

ಮೊದಲನೆಯ ಆಟ ೬-೩೦,

ಎರಡನೆಯ ಆಟ ರಾತ್ರಿ ೧೦

25-3-49ರಿಂದ ಅಮೋಘ ಪ್ರಾರಂಭ

...792 WEEKLY EDITION — ದಿನ ಪತ್ರಿಕೆ ೬ ಕಾಸು

ಸಂಪುಟ ೧೩ ... ಶನಿವಾರ ... [ಸಂಚಿಕೆ ...

ಹೈದ್ರಾಬಾದು ಗೌರ್ನರ್ ಪ್ರಾಂತ್ಯವಾಗುವುದೇ?

ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರುಗಳ ಸಭೆ

ಮೈಸೂರು ೨೩.

ಬರುವ ತಿಂಗಳು ೩ನೇ ತಾರೀಖು ಸಂಸ್ಥಾನದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿಗಳ ಅಧ್ಯಕ್ಷರುಗಳ ಸಭೆಯು ಬೆಂಗಳೂರಿನ ಆಠಾರಾ ಕಛೇರಿಯ ನ್ಯಾಯ ವಿಧಾಯಕ ಸಭಾ ಮಂದಿರದಲ್ಲಿ ಸೇರುತ್ತದೆ. ಗೃಹ ಸಚಿವರಾದ ಶ್ರೀ ... ವರು ಅಧ್ಯಕ್ಷತೆ ವಹಿಸುವರು. ವಿವಿಧೋದ್ದೇಶಗಳ ಸಹಕಾರ ಸಂಘಗಳ ಸ್ಥಾಪನೆ ವಿಚಾರ ಕುರಿತು ಚರ್ಚೆ ನಡೆಯುವುದೆಂದು ಹೇಳಲಾಗಿದೆ.

ಮೈ॥ ತಾಲ್ಲೂಕು ಸಮ್ಮೇಳನ

ಮೈಸೂರು ತಾಲ್ಲೂಕು ಸಮ್ಮೇಳನವು ಮುಂದಿನ ತಿಂಗಳು ೮ನೇ ತಾರೀಖು ಪ್ರ॥ ... ಸಭಾ ಸದಸ್ಯರಾದ ಶ್ರೀಮಾನ್ ... ನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಟ್ರಸ್ಟ್ ಬೋರ್ಡಿಗೆ ಚುನಾವಣೆ

ಪುರಸಭೆಯಿಂದ ಶ್ರೀ ಗಳಾದ ಬಿ. ನಾರಾಯಣಸ್ವಾಮಿ ಮತ್ತು ಎಸ್. ಲಿಂಗಣ್ಣನವರು ನಗರಾಭಿವೃದ್ಧಿ ಸಮಿತಿಗೆ ಚುನಾಯಿಸಲ್ಪಟ್ಟಿರುವರು.

ವಿಶ್ವವಿದ್ಯಾಲಯಗಳ ಕಮಿಷನರ ಆಗಮನ

ಸ್ವಂ ಸು.] ಬೆಂಗಳೂರು ೨೫

ಭಾರತ ಸರ್ಕಾರದವರು ನೇಮಿಸಿರುವ ವಿಶ್ವ ವಿದ್ಯಾಲಯಗಳ ಸಮಿತಿಯವರು ೩೧ನೇ ತಾರೀಖು ಬರುವರು. ೩ನೇ ತಾರೀಖು ರಾಜಧಾನಿಗೆ ಹೋಗುವರು.

ಹೈಕೋರ್ಟು ನ್ಯಾಯಾಧೀಶರ ನಿವೃತ್ತಿ

ಹೈಕೋರ್ಟಿನ ನ್ಯಾಯಾಧೀಶರಾದ ವೆಂಕಟಸ್ವಾಮಿ ಶೆಟ್ಟಿಯವರು ಮುಂದಿನ ತಿಂಗಳು ೮ನೇ ತಾ॥ ನಿವೃತ್ತರಾಗುವರು.

ಶಿರಾ ಗಲಭೆ ಬಗ್ಗೆ ವಿಶೇಷ ಕೋರ್ಟು

ಶಿರಾದಲ್ಲಿ ನಡೆದ ಕೋಮುವಾರು ಗಲಭೆಯ ಸಂಬಂಧವಾಗಿ ವಿಚಾರಣೆ ನಡೆಸಲು ಒಂದು ವಿಶೇಷ ಕೋರ್ಟನ್ನು ಸರ್ಕಾರದವರು ಸಧ್ಯದಲ್ಲಿಯೇ ನೇಮಿಸಲಿದ್ದಾರೆ.

ಹಣಕಾಸಿನ ಸಚಿವರಾದ ಶ್ರೀ ಕೆ. ಸಿ. ರಾಮಪ್ಪನವರು, ಲೇಬರ್ ಕಮಿಷನರ್, ಭದ್ರಾವತಿ ಕಾರ್ಖಾನೆಯ ಡೈರೆಕ್ಟರ್ ಕಾರ್ಯದರ್ಶಿ, ಶ್ರೀ ಭರಣಯ್ಯ ಮತ್ತು ಹಣಕಾಸಿನ ಶಾಖೆ ಕಾರ್ಯದರ್ಶಿ ... ಮೊನ್ನೆ ದೆಹಲಿಗೆ ಪ್ರಯಾಣ ಬೆಳೆಸಿದರು. ಅವರು ಒಂದು ವಾರದ ನಂತರ ಹಿಂತಿರುಗುವರು.

ಕಾಫಿ ಕ್ಯೂರಿಂಗ್ ವರ್ಕ್ಸ್ ಕೂಲಿಗಾರರ ಬೇಡಿಕೆ ಪರಿಶೀಲನೆ ಸಮಿತಿ

ರಾಜಧಾನಿಗೆ ಮೂರು ಮೈಲಿ ದೂರದ ... ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಂಘದವರು ಕೊಟ್ಟಿರುವ ಬೇಡಿಕೆ ... ಪಟ್ಟಿಯನ್ನು ಪರಿಶೀಲಿಸಲು ಮ್ಯಾನೇಜ್‌ಮೆಂಟಿನ ಮತ್ತು ಕೂಲಿಗಾರರ ಸಂಘದವರ ಒಪ್ಪಿಗೆಯಿಂದ ೧೫ ಜನರ ಸಮಿತಿಯು ಈ ಬೇಡಿಕೆಗಳ ಪರಿಶೀಲನೆಗಾಗಿ ನೇಮಿತವಾಗಿದೆ. ಅ॥ ಲೇ॥ ಕಮಿಷನರಾದ ಶ್ರೀ ಮಹಾಲಿಂಗಣ್ಣನವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಂಘದ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಗೌಡರು ಕೆಲಸಕ್ಕೆ ಪ್ರವೇಶ ... ಕೊಳ್ಳಲಾಗಿದೆ.

ನುಗು ಜಲಾಶಯದ ಹತ್ತಿರ ಲೋಹದ ಗಣಿ ಪತ್ತೆ

ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನ ಬಳಿ ಕಟ್ಟಲಾಗುತ್ತಿರುವ ನುಗು ಜಲಾಶಯದ ಹತ್ತಿರ ಅಮೂಲ್ಯವಾದ ಲೋಹದ ಅದುರು ಪತ್ತೆಯಾಗಿರುವುದೆಂದೂ, ಅದನ್ನು ಪರಿಶೀಲಿಸಲು ಜಲಾಶಯದ ಕೆಲಸವನ್ನು ನಿಲ್ಲಿಸಲಾಗಿದೆಯೆಂದೂ ತಿಳಿದು ಬಂದಿದೆ.

ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಹೈಸ್ಕೂಲು

ಹೆಗ್ಗಡದೇವನಕೋಟೆ ತಾಲ್ಲೂಕು ... ಬಸ್ತೀಗೆಯಲ್ಲಿ ಮೊನ್ನೆ ದಿನ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಹಾಜನರ ಸಭೆಯು ನಡೆದು ತಾಲ್ಲೂಕಿನಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸುವ ವಿಚಾರವಾಗಿ ಚರ್ಚೆ ನಡೆದು ಅದನ್ನು ಇತ್ಯರ್ಥ ಪಡಿಸಲು ಒಂದು ಸಮಿತಿಯನ್ನು ರಚಿಸಲಾಯಿತು.

ಸ್ಕೂಲ್ ಫೈನಲ್ ಪರೀಕ್ಷೆಗೆ ೧೧,೫೩೨ ವಿದ್ಯಾರ್ಥಿಗಳು

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಗೆ ಸಂಸ್ಥಾನದಲ್ಲಿ ಒಟ್ಟು ೧೧,೫೩೨ ವಿದ್ಯಾರ್ಥಿಗಳೂ, ಲೋವರ್ ಸೆಕೆಂಡರಿ ಪರೀಕ್ಷೆಗೆ ಒಟ್ಟು ೩೦,೬೧೫ ವಿದ್ಯಾರ್ಥಿಗಳೂ ಕುಳಿತಿದ್ದಾರೆ.

ಹೈದರಾಬಾದ್ ಸಂಸ್ಥಾನದ ಸೈನ್ಯ ವಿಸರ್ಜನೆ

ಹೈದರಾಬಾದು ಸಂಸ್ಥಾನದ ಸೈನ್ಯಗಳ ವಿಸರ್ಜನೆಯ ಕಾರ್ಯವು ಬರುವ ತಿಂಗಳು ೧ನೇ ತಾರೀಖಿನ ಹೊತ್ತಿಗೆ ಮುಗಿಯುವುದು. ಅಲ್ಲಿಂದ ಮುಂದೆ ಸಂಸ್ಥಾನದ ಸೈನ್ಯದಲ್ಲಿ ಕೇವಲ ೫ ಸಾವಿರ ಜನರಿರುವರು.

ಗಣಿತ ಪ್ರಶ್ನೆಗಳು ಗೋಡೆಗಳ ಮೇಲೆ

ನಾಸಿಕದಲ್ಲಿ ನಡೆಯುತ್ತಿರುವ ಸ್ಕೂಲ್ ಫೈನಲ್ ಪರೀಕ್ಷೆಯ ... ಗಣಿತದ ಪ್ರಶ್ನೆ ಪತ್ರದಲ್ಲಿದ್ದ ಕೆಲವು ಪ್ರಶ್ನೆಗಳು ಊರಿನ ಗೋಡೆಗಳ ಮೇಲೆ ... ದ್ದು, ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆದಿವೆ.

ಹೈದರಾಬಾದಿಗೆ ಗೌರ್ನರ್ ಪ್ರಾಂತ್ಯದ ಸ್ಥಾನ

ಹೈದರಾಬಾದ್ ಸಂಸ್ಥಾನವನ್ನು ಗೌರ್ನರ್ ಪ್ರಾಂತ್ಯವನ್ನಾಗಿ ಪರಿವರ್ತಿಸುವ ವಿಚಾರವನ್ನು ಭಾರತ ಸರ್ಕಾರದ ಸಂಸ್ಥಾನಗಳ ಶಾಖೆಯವರು ಪರಿಶೀಲಿಸುತ್ತಿರುವರೆಂದು ವರದಿಯಾಗಿದೆ.

೧೫ ಲಕ್ಷ ರೂ. ಚಿನ್ನ ಪತ್ತೆ

ಕುರಿ ಚರ್ಮದ ಮೂಟೆಗಳೊಳಗೆ ಮುಚ್ಚಿ ಮಧ್ಯ ಪ್ರಾಚ್ಯದಿಂದ ಎರಡು ತಿಂಗಳ ಹಿಂದೆ ತರಿಸಿಕೊಳ್ಳಲ್ಪಟ್ಟು ದಿನಕ್ಕೆ ಒಂದೊಂದು ಮೂಟೆಯಂತೆ ಬಂದರಿನಿಂದ ಸಾಗಿಸಲ್ಪಡುತ್ತಿದ್ದ ೧೫ ಲಕ್ಷ ರೂ ನ ಮುನ್ನೂರು ಪೌಂಡು ಚಿನ್ನದ ಗಟ್ಟಿಗಳನ್ನು ಬೊಂಬಾಯಿನ ಗೂಢಚಾರ ಪೋಲೀಸರು ಪತ್ತೆ ಹಚ್ಚಿ ವಶಪಡಿಸಿಕೊಂಡಿರುತ್ತಾರೆ.

ಅವಿಭಕ್ತ ಕುಟುಂಬದ ಮೇಲೆ ಆದಾಯ ತೆರಿಗೆ

ಹಿಂದೂ ಅವಿಭಕ್ತ ಕುಟುಂಬಗಳ ಮೇಲೆ ... ಆದಾಯ ತೆರಿಗೆಯ ... ೫,೦೦೦ ... ಕಿತ್ತುಹಾಕಿ ...

ಪ್ರೊಬೇಷನರಿ ತಹಸೀಲ್ದಾರ್ ಹುದ್ದೆ

ಮದರಾಸಿನಲ್ಲಿ ಇನ್ನು ಮುಂದೆ ಮಹಿಳೆಯರನ್ನು ಡೆಪ್ಯುಟಿ ತಹಸೀಲ್ದಾರರನ್ನಾಗಿ ನೇಮಿಸಲಾಗುವುದು. ಈ ಬಗ್ಗೆ ಇದ್ದ ನಿರ್ಬಂಧವು ತೆಗೆಯಲ್ಪಟ್ಟಿದೆ.

ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನ.

ಮೈಸೂರು ೨೩

ಅಂತರ ರಾಷ್ಟ್ರೀಯ ಅರಣ್ಯ ಮತ್ತು ಮರಮುಟ್ಟುಗಳ ಸಮ್ಮೇಳನವು ನಾಳೆ ೧೧ ಗಂಟೆಗೆ ಚಲುವಾಂಬಾ ಭವನದಲ್ಲಿ ಪ್ರಾರಂಭವಾಗುತ್ತದೆ. ಶ್ರೀಮನ್ ಮಹಾರಾಜರು ಸಮ್ಮೇಳನದ ಸ್ವಾಗತ ಭಾಷಣ ಮಾಡುವರು.

ಸುಮಾರು ೬೦ ಮಂದಿ ಪ್ರತಿನಿಧಿಗಳು ಮತ್ತು ವೀಕ್ಷಕರು ನಾನಾ ದೇಶಗಳಿಂದ ಬರಲಿರುವರು. ಈಗಾಗಲೇ ಭಾರತ, ಪಾಕಿಸ್ತಾನ ... ಮುಂತಾದ ... ದೇಶಗಳ ಪ್ರತಿನಿಧಿಗಳು ... ಬಂದಿದ್ದಾರೆ ...

ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಸಭಾತ್ಯಾಗವೇ?

ಮೈಸೂರು ೨೩

ನಗರ ಕಾಂಗ್ರೆಸ್ ಸಮಿತಿ ಸಭೆಯು ನೆನ್ನೆ ರಾತ್ರಿ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಎಚ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀಮತಿ ಸರೋಜಿನಿ ನಾಯ್ಡುರವರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಲಾಯಿತು. ಕಾರ್ಯಕ್ರಮದ ಪಟ್ಟಿಯಲ್ಲಿ ಒಂದು ಅಂಶವನ್ನು ತುರ್ತಾಗಿ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಅಧ್ಯಕ್ಷರಿಗೂ ಹಲವು ಸದಸ್ಯರಿಗೂ ಭಿನ್ನಾಭಿಪ್ರಾಯ ಬಂದು ಶ್ರೀಗಳಾದ ಎಂ. ಎ. ... ಕೃಷ್ಣ, ... ಗಂಗಣ್ಣನವರುಗಳು ಸಭಾ ಪರಿತ್ಯಾಗ ಮಾಡಿದರೆಂದು ತಿಳಿಸಲಾಗಿದೆ.

ನಗರ ಪೌರಸಭಾ ಕಾಂಗ್ರೆಸ್ ಪಕ್ಷವು ಇನ್ನು ಮುಂದೆ ನಗರ ಸಮಿತಿಯ ಮೇಲ್ವಿಚಾರಣೆಗೆ ಒಳಪಟ್ಟಿರಬೇಕೆಂದೂ ಆ ಬಗ್ಗೆ ತಕ್ಕ ನಿಬಂಧನೆಗಳಾಗಬೇಕೆಂದೂ, ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡಲಾಯಿತು. ಸಮಿತಿಯ ಮೂರು ಸಭೆಗಳಿಗೆ ಹಾಜರಾಗದೇ ಇದ್ದ ಸದಸ್ಯರು ಸದಸ್ಯತನವನ್ನು ಕಳೆದುಕೊಳ್ಳುವರೆಂದು ತೀರ್ಮಾನಿಸಲಾಯಿತು.

ದೆಹಲಿಯಲ್ಲಿ ಮಹಿಳಾ ಪೋಲೀಸರು

ದೆಹಲಿಯಲ್ಲಿ ೧೮ ಪೋಲೀಸ್ ಮಹಿಳಾ ಕಾನ್ಸ್‌ಟೇಬಲ್ಲುಗಳೂ ಮತ್ತು ಇಬ್ಬರು ಹೆಡ್ ಕಾನ್ಸ್‌ಟೇಬಲ್ಲುಗಳಿದ್ದಾರೆಂದು ಹೇಳಲಾಗಿದೆ.

ನರ್ತಿಸುತ್ತಿದ್ದಾಗಲೇ ಮೃತ್ಯು

... ಕ್ವಾರ್ಟರ್ ಒಳ ... ನದಿಯ ... ಮಾಡಿದ್ದ ... ಗುಂಡು ಆಸ್ಫೋಟನವಾಗಿ ಮರಳಿಗಿತು. ... ಆಗ ನರ್ತಿಸುತ್ತಿದ್ದ ... ಜನ ... ರು ...ದರು.

ಭಾರತದಲ್ಲಿ ರಾಡರ್ ಮತ್ತು ರೇಡಿಯೋ ಸಾಧನ ತಯಾರಿ

ಭಾರತದಲ್ಲಿ ರೇಡಿಯೋ, ವೈರ್‌ಲೆಸ್ ಮತ್ತು ರಾಡರ್ ಸಾಧನಗಳನ್ನು ತಯಾರಿಸಲು ... ಅ. ಇ. ಕೆ. ... ಮತ್ತು ... ನವರ ಮೂರು ಕಂಪೆನಿಗಳವರು ಭಾರತ ಸರ್ಕಾರದವರು ಒಪ್ಪಿಗೆ ಪಡೆದಿದ್ದಾರೆ.

ಪರೀಕ್ಷೆಗಳೇ ವಿದ್ಯೆಯ ಗುರಿಯಲ್ಲ

ಪರೀಕ್ಷೆಗಳು ವಿದ್ಯೆಯ ಗುರಿಯಲ್ಲವೆಂದು ಬೊಂಬಾಯಿನ ಪ್ರಧಾನಿ ಎ. ಜಿ. ಖೇರರವರು ... ಪರೀಕ್ಷೆಗಳ ... ಶಿಕ್ಷಣ ... ಪರೀಕ್ಷೆಗಳನ್ನೇ ಮುಖ್ಯ ... ಎಂದು ಹೇಳಿದ್ದಾರೆ.

ಭಾರತ ಸರ್ಕಾರದ ಮುದ್ರೆಗೆ ಸಂಸ್ಥಾನದವರ ಅಭ್ಯಂತರ

[illegible]

ವಾರ ಭವಿಷ್ಯ

ತಾ॥ ೨೭ ೩ ೪೯ ರಿಂದ ೨-೪-೪೯ ರವರೆಗೆ

ಮೇಷ ಹಣಕಾಸಿನ ಸ್ಥಿತಿ ಅನುಕೂಲಕರ. ಆರೋಗ್ಯ ನೆಟ್ಟಗಿರದು ಕಣ್ಣಿನ ಬಾಧೆ. ಕೈಕಾಲು ಉಳುಕು. ವ್ಯಾಪಾರಾದಿಗಳಲ್ಲಿ ನಿರುತ್ಸಾಹ ಜನಕ ಘಟನೆಗಳು. ಆಪ್ತರೊಬ್ಬರಿಗೆ ಖಾಯಿಲೆ ಸಂಭವ ತಾ॥ ೨೮, ೨೯, ೩೦ ಧನನಷ್ಟ, ಮಾನಸಿಕ ಭಯ ಮಿತ್ರರೊಡನೆ ಭಿನ್ನತೆ

ವೃಷಭ ... ಆರೋಗ್ಯ ನೆಟ್ಟಗೆ ಹಣಕಾಸಿನ ಸ್ಥಿತಿ ... ವ್ಯಾಪಾರಾದಿಗಳಲ್ಲಿ ... ತಾ॥ ೩೧, ೧ ... ಜನರಿಗಾಗಿ ಖರ್ಚು, ಪ್ರವಾಸ ...

ಮಿಥುನ ಆರೋಗ್ಯ ನೆಟ್ಟಗೆ ನೌಕರಿ ದಂಧೆಗಳಲ್ಲಿ ಪ್ರಗತಿ ಸಾಂಸ್ಕೃತಿಕ ಲಾಭ ಧರ್ಮಕಾರ್ಯ ನಡೆಯುವುವು. ಕೋರ್ಟ ವ್ಯವಹಾರದಲ್ಲಿ ನಿಮ್ಮ ಕಡೆಗೆ ಜಯ ತಾ॥ ೩೧, ೧ ಮಹತ್ವದ ಪತ್ರ ಬರುವಿಕೆ ಅಪ್ತರ ಭೇಟಿ ಆರ್ಥಿಕ ಲಾಭ

ಕರ್ಕ ಆರೋಗ್ಯವಲ್ಲಿ. ವ್ಯಾಪಾರ, ಉದ್ಯೋಗಾದಿಗಳಲ್ಲಿ ಉನ್ನತಿ ಅತ್ಯಂತ್ರವು ಸರಕಾರದವರಿಂದ ನಿಮ್ಮ ಕೀರ್ತಿ ಹೆಚ್ಚುವುದು. ತಾ॥ ೨೯, ೩೦ ಮಹತ್ವದ ಪತ್ರ ಆಗಮನ ನೂತನ ಕಾರ್ಯ. ಮಿತ್ರಭೇಟಿ.

ಸಿಂಹ ಪರೋಪಕಾರದಿಂದ ಧನವ್ಯಯ ಬೇರೆ ಪ್ರವಾಸಕ್ಕೆ ಹೋಗ ಬೇಕಾಗಿರದು ಮಾನಹಾನಿ ಕಳ್ಳತನ ಪರೋಕ್ಷ ಶತ್ರುಗಳ ಭಯ. ನೌಕರಿ ದಂಧೆಗಳಲ್ಲಿ ಪ್ರತಿಸ್ಪರ್ಧಿಗಳ ತಂತ್ರ. ತಾ॥ ೨೮, ೨೯, ೩೦ ಅನ್ಯರಿಂದ ಹಾನಿ ಭಯಂಕರ ವಾರ್ತೆ ಶರೀರಕ್ಕೆ ಜಖಂ.

ಕನ್ಯಾ—ಮಾನಸಿಕ ಅಶಾಂತಿ. ನಿಮ್ಮ ಆರೋಗ್ಯ ನೆಟ್ಟಗಿದ್ದರೂ ಪತ್ನಿಯದು ಹಾಗಲ್ಲ ಮಕ್ಕಳ ಸ್ಥಿತಿಯೂ ಹಾಗೆಯೇ. ನೌಕರಿ ದಂಧೆಗಳಲ್ಲಿ ತ್ರಾಸ ಕೈಕೆಳಗಿನವರ ಅಶಿಸ್ತು ತಾ॥ ೩೧, ೧ ವಿಶ್ವಾಸಘಾತ ಪ್ರಿಯಜನರ ವಿಯೋಗ, ಅನಪೇಕ್ಷಿತಭೇಟಿ

ತುಲಾ—ಆರೋಗ್ಯ ನೆಟ್ಟಗಿದೆ, ಚಿಂತಿಸಿದ ಕಾರ್ಯಗಳಲ್ಲಿ ಜಯ ಲಭ್ಯ ಕೋರ್ಟು ವ್ಯವಹಾರಗಳಲ್ಲಿ ಹಾಗೆಯೇ ತಾ॥ ೨೮, ೨೯, ೩೦ ಹಿರಿತನಕ್ಕೆ ಕಡಿಮೆ, ಖರ್ಚು, ಗೊಂದಲ.

ವೃಶ್ಚಿಕ— ಗಂಡ ಹೆಂಡರ ಆರೋಗ್ಯ ನೆಟ್ಟಗೆ, ಮಕ್ಕಳದು ಹಾಗಲ್ಲ ಮಡದಿಗೆ ವಿಘ್ನ ನೌಕರಿ ದಂಧೆಗಳಲ್ಲಿ ಪ್ರಗತಿ ತಾ॥ ೩೧, ೧ ಸ್ಥಳಾಂತರ, ಹಣಕಾಸಿನ ಗೊಂದಲ

ಧನು ಅಪ್ತರ ಸಹಕಾರವಿಲ್ಲದೆ ಶ್ರಮವಾಗುವುದು ಆರೋಗ್ಯ ನೆಟ್ಟಗಿರದು ಅಜೀರ್ಣ, ಮೂಲ ವ್ಯಾಧಿಗಳ ಕಿರುಕುಳ. ಆಹಾರದಲ್ಲಿ ಮಿತಿ ಇರಲಿ. ತಾ॥ ೨೮, ೨೯, ೩೦ ಅಪ್ರಿಯ ವಾರ್ತೆ, ನಿಯೋಗ ಕಲಹ, ಅಪಮಾನ, ಅಪಘಾತ

ಮಕರ ಆರೋಗ್ಯ ನೆಟ್ಟಗೆ, ಧನಲಾಭ, ಪರಾಕ್ರಮ ತೋರಿಸಿ, ಕಾರ್ಯಸಿದ್ಧಿ, ಅಧಿಕಾರ ಪ್ರಾಪ್ತಿ ಓದುಗರಿಗೆ ಪ್ರಗತಿ ತಾ॥ ೩೧, ೧ ಅಪ್ತರಿಗೆ ಔತಣ

ಕುಂಭ ಹಣಕಾಸು ದೊರೆತು ಸನ್ನಿವೇಶ ನೌಕರಿ ದಂಧೆಗಳ ... ಆಪತ್ತು ... ಮಾಡುವುದು ...

ಮಹತ್ವದ ಪತ್ರ

ಮೀನ—ಅನಾಸಕ್ತಿಯಿಂದ ಕಾರ್ಯೋನ್ಮುಖರಾಗಿ ಅಂತ್ಯದಲ್ಲಿ ಜಯ ಸಿದ್ಧ ನಿದ್ರಾಭಂಗ, ಸಿಡುಕುತನ, ಪತ್ನಿಯೊಡನೆ ವಿರಸ, ನೌಕರಿ ದಂಧೆಗಳಲ್ಲಿ ಅತೃಪ್ತಿ, ತಾ॥ ೨೭, ೨೮ ಪ್ರವಾಸ ಆಶ್ಚರ್ಯ, ಹಣಕಿ ಪೆಟ್ಟು

Edited, printed and published by A.R. Nagarajan at the Sadhvi Press, D Subbiah Road, Mysore.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ

R.A. 108/48-49

... ಕೆ. ಆರ್. ... ರಾವ್,
... ಬಾಕಿ ಮೊಬಲಗು ...
... ದಿನಾಂಕ ... ವಾದಿಗೆ ... ಜಾರಿ ...

ಮಿರ್ಜೆ ಎಸ್. ಶ್ರೀಕಂಠಯ್ಯ,
ಅಪೀಲದಾರರ ಅಡ್ವೋಕೇಟು,
೨೬-೩-೪೯

-:ಉಗಾದಿ ಹಬ್ಬಕ್ಕೆ ಮಿಲ್ ಬಟ್ಟೆ ಬಂದಿದೆ:-

ಹಬ್ಬದ ಪ್ರಯುಕ್ತ ಈ ದಿನ ಭಾನುವಾರ ನಮ್ಮ ಅಂಗಡಿಯನ್ನು ಬೆಳಿಗ್ಗೆ ೮-೩೦ ರಿಂದ ರಾತ್ರಿ ೮-೩೦ ರವರೆಗೆ ತೆರೆದಿರುತ್ತೇವೆ

ಸಿ... ಅಂಡ್ ಕಂಪೆನಿ,
ಸಯ್ಯಾಜಿರಾವ್ ರೋಡ್, : ಮೈಸೂರು

ಪ್ರಭುದೇವಾ ಟಾಕೀಸಿನಲ್ಲಿ

ಗೀತಾ ಗಾಂಧಿ

ಮ್ಯಾಟಿನಿ ೩-೩೦ ಮೊದಲನೆಯ ಆಟ ೬-೩೦ ಎರಡನೆಯ ಆಟ ರಾತ್ರಿ ೧೦

ಪೆರಿಯನಾಯಕಿ, ಟಿ.ಆರ್. ರಾಮಚಂದ್ರನ್, ಲಲಿತಾ ಪದ್ಮಿನಿ, ಬೇಬಿ ಸರೋಜ ಮುತ್ತು ಪದ್ಮ ಪಾತ್ರವಹಿಸಿರುವ ತಮಿಳು ಚಿತ್ರ

25-3-49ರಿಂದ ಅಮೋಘ ಪ್ರಾರಂಭ

-:ನೂರು ಅಂತಸ್ತಿನ ಮಹಡಿ ಮನೆ ಕ್ರಯಕ್ಕಿದೆ:-

ಮೈಸೂರು ಸಿಟಿಯಲ್ಲಿ ದೊಡ್ಡ ಗಡಿಯಾರದ ಬಳಿ ಆಧುನಿಕ ಸಲಕರಣೆಗಳಿಂದ ಕೂಡಿದ, ಮೂರು ಅಂತಸ್ತಿನ ಮಹಡಿ ಮನೆ ಖಾಲಿಯಾಗಿ ಇದೆ. ಕೂಡಲೇ ಸ್ವಾಧೀನಕ್ಕೆ ಕೊಡಲಾಗುತ್ತೆ ತಕ್ಷಣ ನಮ್ಮಲ್ಲಿ ವಿಚಾರಿಸಿ

ಬಿ. ಆರ್. ಲಕ್ಷ್ಮಣ ಶೆಟ್ಟಿ,
ಇಲೆಕ್ಟ್ರಿಕ್ ಟ್ರೇಡಿಂಗ್ ಹೌಸ್ : : ಸಯ್ಯಾಜಿರಾವ್ ರಸ್ತೆ, ಮೈಸೂರು

ಉಗಾದಿ ಹಬ್ಬಕ್ಕೆ

ಹೊಸಾ ಹೊಸ ನಮೂನೆಗಳಲ್ಲಿ ಸೀರೆಗಳನ್ನೂ ಖಣಗಳನ್ನೂ ತರಿಸಿದ್ದೇವೆ ಬಂದು ನೋಡಬೇಕಾಗಿ ವಿನಂತಿ.

ಬಾಪು ಸಾರ್ ಕಂಪೆನಿ, ಮೈಸೂರು

ರಾಜಕಮಲ್ ಟಾಕೀಸ್

25-3-49ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

ಸ್ವತಂತ್ರ ಫಿಲಂಸ್‌ರವರ

ದ್ರೋಹಿ

(ತೆಲುಗು)

ಪ್ರಜಾ ಶಕ್ತಿಯನ್ನು ನಿರೂಪಿಸುವ ಸಾಂಘಿಕ ಚಿತ್ರ

Morning Shows From 25-3-49 for 4 days

The Adventures of MARCO POLO

With G... Cooper, ... Basil Rathbone

ಕೇಂದ್ರ ಹಣಕಾಸು ಸಮಿತಿಗೆ ಮೈಸೂರು ಸದಸ್ಯರು

ಕೇಂದ್ರ ಶಾಸನ ಸಭೆಯಲ್ಲಿ ... ಸಿನ ಮಸೂದೆ ಪರಿಶೀಲಿಸಲು ನೇಮಿಸಲಾಗಿರುವ ಸಮಿತಿಗೆ ಶ್ರೀಗಳಾದ ವಿ. ಕೃಷ್ಣಮೂರ್ತಿರಾವ್, ಮ... ನ. ಮುಂತಯ್ಯನವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಕೈ ಸ್ವಾಧೀನವಿಲ್ಲದ ಪರೀಕ್ಷಾ ವಿದ್ಯಾರ್ಥಿಗೆ ಸಹಾಯ

ಕಾರವಾರದ ಗರ್ಲ್ಸ್ ಹೈಸ್ಕೂಲಿನ ... ಯ ವಿದ್ಯಾರ್ಥಿಯೊಬ್ಬಳಿಗೆ ತನ್ನ ... ಗಾಯವಾಗಿ ಬರೆಯುವುದಕ್ಕೆ ... ಅಡಚಣೆ ಉಂಟಾಗಿರುವುದರಿಂದ ... ಪರೀಕ್ಷೆಯಲ್ಲಿ ಸಹಾಯ ಮಾಡಲು ... ಗುಮಾಸ್ತನನ್ನು ಕೊಡಲಾಗಿದೆ ಎಂದು ವರದಿಯಾಗಿದೆ.

ಅರ್ಚಕರ ಮುಷ್ಕರ

ಮಾಗಡಿಯ ತಿರುಮಲೆ ಶ್ರೀ ... ಥಸ್ವಾಮಿ ದೇವಸ್ಥಾನದ ಕೆಲಸಗಾರರು ... ಮಗೆ ಕೊಡುತ್ತಿರುವ ಸಂಬಳವನ್ನು ... ಚ್ಚು ಮಾಡಬೇಕೆಂದು ಮೊನ್ನೆಯಿಂದ ... ಷ್ಕರ ಹೂಡಿರುತ್ತಾರೆ.

ಲಗ್ನದ ಜವಳಿಗಾಗಿ

ಗುರುದೇವಾ ...

ಬೆಂಗಳೂರು ಜವಳಿ ಅಂಗಡಿ ...

ಇಂದೇ ಭೇಟಿ ಕೊಡಿ

ಶಿವರಾಂಪೇಟೆ ::

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಪ್ರದರ್ಶನಗಳು.

26-3-49ರಿಂದ 2 ದಿನಗಳು ...

ಲೇಡಿ ಹ್ಯಾಮಿಲ್ಟನ್

(Lady Hamilton)

28-3-49ರಿಂದ 2 ದಿನಗಳು

ದಿ ಡೆವ್ಲೋರ್ಸ್ ಆಫ್ ... ಎಕ್ಸ್...

(ವರ್ಣರಂಜಿತ ಚಿತ್ರ)

ಮೈಸೂರು ಸಿಟಿ ರೇಷನಿಂಗ್

ನಂ M. 9-3/48-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ... ಕಾರಿ ಡಿಪೋ, ಮೊಹಲ್ಲಾ ... ಡಿಪೋ, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳೂ ಸಹ ಈ ಕೆಳಗಿನ ದಿವಸಗಳಲ್ಲಿ ಮುಚ್ಚಲ್ಪಡುತ್ತವೆ

೩೦-೩-೪೯ನೇ ಬುಧವಾರ ಉಗಾದಿ ಹಬ್ಬದ ಪ್ರಯುಕ್ತ ಎಲ್ಲಾ ಡಿಪೋಗಳಿಗೆ ಮಧ್ಯಾಹ್ನ ರಜಾ.

೩೧-೩-೪೯ನೇ ಗುರುವಾರ ಸರ್ಕಾರಿ ಡಿಪೋ, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಿಗೆ, ದಾಸ್ತಾನು ಎಣಿಕೆಗೈ, ಪೂರ್ತಾ ರಜಾ.

೧-೪-೪೯ನೇ ಶುಕ್ರವಾರ ಮೊಹಲ್ಲಾ ಸಬ್ ಗೋಡೌನ್‌ಗಳಿಗೆ ಮಾತ್ರ, ದಾಸ್ತಾನು ಎಣಿಕೆ ಬಗ್ಗೆ ಪೂರ್ತಾ ರಜಾ.

(ಸಹಿ) ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

ಮೈಸೂರು
21 3 49

ಪೋ ಸಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೭] ಸೋಮವಾರ ೨೮-೩-೧೯೫೬ [ಸಂಚಿಕೆ ೯೧

ಖಾಸಿಂ ರಜ್ವಿಯ ವಿಚಾರಣೆಗಾಗಿ ವಿಶೇಷ ಕೋರ್ಟು

ಹೈದರಾಬಾದಿನ ರಜಾಕರರ ನಾಯಕನಾಗಿದ್ದ ಖಾಸಿಂ ರಜ್ವಿಯ ವಿಚಾರಣೆಯು ಗುಲ್ಬರ್ಗ ಅಡಿಷನಲ್ ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಕಳೆದ ೧೧ನೇ ತಾ|| ಪ್ರಾರಂಭವಾದಾಗ, ಈ ವಿಚಾರಣೆಗಾಗಿ ವಿಶೇಷ ಕೋರ್ಟನ್ನು ಸ್ಥಾಪಿಸಬೇಕೆಂದು ಸರ್ಕಾರದವರು ನಿರ್ಧರಿಸಿರುವುದರಿಂದ ಮೊಕದ್ದಮೆಯನ್ನು ಮುಂದುವರಿಸಬೇಕೆಂದು ಕೋರಿದ್ದರಿಂದ ಅದನ್ನು ನ್ಯಾಯಾಧೀಶರು ಅನಿರ್ದಿಷ್ಟ ಕಾಲದವರೆಗೂ ಮುಂದೂಡಿರುತ್ತಾರೆ.

ಪತ್ರಿಕೋದ್ಯೋಗಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ

ಭಾರತದ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ದಿವಂಗತ ಬಿ. ಜಿ. ಹಾರ್ನಿಮನ್, ಕೆ. ನಟರಾಜನ್, ಕೆ. ಪುನ್ನಯ್ಯ, ಸಯದ್ ಬ್ರೆಲ್ವಿ ಮತ್ತು ಜಿ. ಎ. ನಟೇಶನ್‌ರವರುಗಳ ಜ್ಞಾಪಕಾರ್ಥವಾಗಿ ಬೊಂಬಾಯಿನ ಮಾತುಂಗಾದಲ್ಲಿರುವ ಹಾರ್ನಿಮನ್ ಪತ್ರಿಕೋದ್ಯಮ ಶಿಕ್ಷಣ ಕಾಲೇಜಿನಲ್ಲಿ ೧೫ ಜನರಿಗೆ ವಿದ್ಯಾರ್ಥಿ ವೇತನವನ್ನು ಕೊಡಲು ನಿರ್ಧರಿಸಲಾಗಿದೆ.

ಆಹಾರದ ಯೋಜನೆ ಬಗ್ಗೆ ಕೇಂದ್ರ ಆಹಾರ ಸಚಿವರ ಪ್ರಶಂಸೆ

ಮೈಸೂರು ೨೮

ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ಈ ದಿನ ಬೆಳಿಗ್ಗೆ ಭಾರತದ ಆಹಾರ ಸಚಿವರಾದ ಶ್ರೀ ಜಯರಾಂ ದಾಸ್ ದೌಲತ್ರಾಂರವರನ್ನು ಭೇಟಿ ಮಾಡಿ, ಮೈಸೂರಿನಲ್ಲಿ ಆಹಾರದ ಪರಿಸ್ಥಿತಿಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮವನ್ನು ವಿವರಿಸಿ, ಸಂಸ್ಥಾನಕ್ಕೆ ಹೆಚ್ಚು ಟ್ರಾಕ್ಟರುಗಳು, ಗೊಬ್ಬರ ಮತ್ತು ಆಹಾರ ಧಾನ್ಯಗಳ ಅವಶ್ಯಕತೆ ಬಗ್ಗೆ ಒಂದು ಮನವಿಯನ್ನು ಒಪ್ಪಿಸಿದರೆಂದೂ, ಮೈಸೂರು ಸರ್ಕಾರದ ಕಾರ್ಯಕ್ರಮದ ವಿಷಯದಲ್ಲಿ ಶ್ರೀ ದೌಲತ್‌ರಾಂರವರು ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಕೈಲಾದ ಸಹಾಯ ನೀಡುವುದಾಗಿ ಭರವಸೆ ಇತ್ತರೆಂದೂ ತಿಳಿದು ಬಂದಿದೆ.

ಯುಗಾದಿ ಹಬ್ಬಕ್ಕೆ ಹೆಚ್ಚಿನ ಪಡಿತರ

ಯುಗಾದಿ ಹಬ್ಬಕ್ಕಾಗಿ ಹಿಂದೂ ಸಂಸಾರದಲ್ಲಿರುವ ಪ್ರತಿಯೊಬ್ಬ ದೊಡ್ಡವರಿಗೂ ಅರ್ಧ ಪಾವು, ಪ್ರತಿ ಮಕ್ಕಳಿಗೂ ಕಾಲು ಪಾವು ಅಕ್ಕಿಯನ್ನು ಕೊಡಲು ಸರ್ಕಾರದ ಆಜ್ಞೆಯಾಗಿದೆ. ರೇಷನ್ ಕಾರ್ಡು ಹೋಲ್ಡರುಗಳು ಅದನ್ನು ತಮ್ಮ ತಮ್ಮ ಡಿಪೋಗಳಲ್ಲಿ ಪಡೆಯಬಹುದು.

ಗ್ರಾಮ ವಿದ್ಯೋದಯ ಹೈಸ್ಕೂಲಿಗೆ ಸಹಾಯ

ನರಸೀಪುರದ ಗ್ರಾಮ ವಿದ್ಯೋದಯ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಸೆಂಟ್ರಲ್ ಹೈಸ್ಕೂಲು ನಿಧಿಗೆ ಇಲ್ಲಿಯವರೆಗೆ ೧೫ ಸಾವಿರ ರೂ. ವಸೂಲಾಗಿದೆ. ಬೆಂಗಳೂರಿನ ವರ್ತಕರಾದ ಧರ್ಮಪ್ರಕಾಶ್ ರುದ್ರಯ್ಯನವರು ಒಂದು ಶಿಕ್ಷಣ ಶಿಬಿರವನ್ನು ಕಟ್ಟಿಸಿಕೊಡಲು ಒಪ್ಪಿದ್ದಾರೆ. ಬೆಂಗಳೂರು ರೇಷ್ಮೆ ವ್ಯಾಪಾರಿಗಳಾದ ಶ್ರೀ ಎಚ್. ವೆಂಕಟರಮಣಪ್ಪನವರು ೫೦೦ ರೂ. ಕೊಟ್ಟಿರುತ್ತಾರೆ.

ಭಾರತದ ಸಂಸ್ಕೃತಿಗೆ ಅರಣ್ಯ ಪ್ರದೇಶವೇ ಮೂಲ ಸ್ಥಾನ

ಅರಣ್ಯ ಸಮ್ಮೇಳನದಲ್ಲಿ ದೌಲತ್‌ರಾಂರವರ ಭಾಷಣ

ಮೈಸೂರು ೨೮

ಏಷ್ಯಾ ಮತ್ತು ಪೆಸಿಫಿಕ್ ರಾಷ್ಟ್ರಗಳ ಅರಣ್ಯ ಸಮ್ಮೇಳನದ ೩ನೇ ಅಧಿವೇಶನವು ಈ ದಿನ ಬೆಳಿಗ್ಗೆ ೧೧ ಗಂಟೆಗೆ ಜಲುವಾಂಬಾ ಭವನದಲ್ಲಿ ಪ್ರಾರಂಭವಾಯಿತು. ಬರ್ಮಾ, ಚೀಣಾ, ಕೊರಿಯಾ, ಇಂಡೋನೇಷ್ಯಾ, ಥೈಲ್ಯಾಂಡ್, ಜಪಾನ್, ಸಿಲೋನ್, ಭಾರತ, ಪಾಕಿಸ್ತಾನ್ ಇವೇ ಮುಂತಾದ ೫೦ ರಾಷ್ಟ್ರಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಶ್ರೀಮನ್ಮಹಾರಾಜರವರು ಸ್ವಾಗತ ಭಾಷಣ ಮಾಡಿ, ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸಿದರು.

ಪ್ರಭುಗಳು ಮೈಸೂರು ಸಂಸ್ಥಾನದಲ್ಲಿರುವ ಅರಣ್ಯಗಳ ಅಭಿವೃದ್ಧಿಗೆ ಅನುಕೂಲಿಸುವಂತಹ ನೈಸರ್ಗಿಕ ಸಂಪತ್ತಿನ ಸೌಕರ್ಯಗಳನ್ನು ವಿವರಿಸಿ, ಇಲ್ಲಿನ ಸರ್ಕಾರದವರು ಅನೇಕ ವರ್ಷಗಳಿಂದಲೂ ಈ ಬಗ್ಗೆ ಕೈಕೊಂಡಿರುವ ಅಂಶಗಳನ್ನೂ ತಿಳಿಸಿದರು. ಅರಣ್ಯಾಭಿವೃದ್ಧಿಯಿಂದ ದನಕರುಗಳಿಗೆ ದೊರಕುವ ಮೇವು ಮತ್ತು ವ್ಯವಸಾಯಕ್ಕೆ ಉಂಟಾಗುವ ಅನುಕೂಲಗಳ ಜೊತೆಗೆ ಭೂಮಿಯ ನಿಸ್ಸಾರವಾಗುವುದನ್ನು ತಪ್ಪಿಸಬಹುದೆಂದು ತಿಳಿಸುತ್ತ ಇವೇ ಅಲ್ಲದೆ ಕಾಗದ, ರೆಯಾನ್ (ಕೃತಕ ರೇಷ್ಮೆ) ಆಗ್ಗಿ ಕಾಲಿನಿಂದ ತಯಾರಾಗುವ ಕೈಗಾರಿಕೆಗಳ ಅರಣ್ಯ ಸಂಪತ್ತಿನಿಂದಲೇ ಆಗಬೇಕಾಗಿದೆಯೆಂದೂ ಆದ್ದರಿಂದ ಅರಣ್ಯಗಳ ಅವಶ್ಯಕತೆಯು ಅತ್ಯಾವಶ್ಯಕವೆಂದೂ ಅಭಿಪ್ರಾಯಪಟ್ಟು, ಸಮ್ಮೇಳನಕ್ಕೆ ಯಶಸ್ಸನ್ನು ಕೋರಿದರು.

ಅನಂತರ ಭಾರತ ಸರ್ಕಾರದ ಆಹಾರ ಇಲಾಖೆಯ ಕಾರ್ಯದರ್ಶಿ ಶ್ರೀ ಕೆ. ಎಲ್. ಪಂಜಾಬಿಯವರು ಪಂ|| ನೆಹರೂರವರಿಂದ ಬಂದಿದ್ದ ಸಂದೇಶವನ್ನು ಓದಿದರು. ಅಂತರ ರಾಷ್ಟ್ರೀಯ ಅರಣ್ಯ ಸಮಿತಿಯ ಡೈರೆಕ್ಟರ್ ಜನರಲ್ ನಾರಿಸ್ ಡಾಡ್‌ರವರು ಕಳುಹಿಸಿರುವ ಸಂದೇಶವನ್ನು ಮಿ|| ಹೂಬರ್ಮನ್‌ರವರು ಓದಿದರು.

ತರುವಾಯ ಭಾರತದ ಆಹಾರ ಸಚಿವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಸಚಿವರು ಭರತಖಂಡದ ಸಂಸ್ಕೃತಿಯು ನಿಜವಾಗಿಯೂ ಅರಣ್ಯಗಳಲ್ಲೇ ಉದ್ಭವಿಸಿತೆಂದೂ ನಮ್ಮ ಪುರಾತನ ಋಷಿಗಳು ಪ್ರಪಂಚದ ಮೂಲ ತತ್ವಗಳನ್ನು ಈ ಸ್ಥಳಗಳಲ್ಲೇ ಕಂಡು ಹಿಡಿದರೆಂದೂ, ದೇಶದ ಸಾಮಾಜಿಕ, ಧಾರ್ಮಿಕ ಜೀವನದಲ್ಲಿ ಅರಣ್ಯದ ಪಾತ್ರವು ಪ್ರಾಮುಖ್ಯವಾದುದಾಗಿತ್ತೆಂದೂ ಹೇಳಿದರು. ಈಗ ಜನಸಂಖ್ಯೆಯು ಹೆಚ್ಚುತ್ತಿರುವುದರಿಂದ ಅರಣ್ಯಗಳ ಅವಶ್ಯಕತೆ ಎನ್ನುವ ಹಿತ, ಅವನ್ನು ನಿರ್ಲಕ್ಷಿಸುವುದರಿಂದ ಒದಗುವ ನಷ್ಟಕ್ಕೆ ಒಳಗಾಗಿರುವೆನೆಂದೂ ಅರಣ್ಯಗಳ ಬೆಳವಣಿಗೆಯಿಂದ ಬಹು ಪ್ರಯೋಜನವುಂಟೆಂದೂ ತಿಳಿಸಿದರು. ಇದರಿಂದ ಭೂಮಿಯ ಫಲವತ್ತು ಕಡಿಮೆಯಾಗದೇ ಹೆಚ್ಚುವುದೆಂದು ಭಾರತದ ಗ್ರಾಮಾಂತರಗಳಲ್ಲಿ ಅವಶ್ಯಕವಾದ ಆರ್ಥಿಕ ಸುಧಾರಣೆಗಳಿಗೆ ಇಂತಹ ಹೊಸ ಮಾರ್ಗಗಳನ್ನು ಕಂಡುಹಿಡಿಯಬೇಕೆಂದೂ ಹೇಳಿದರು. ಇಲ್ಲಿನ ಪ್ರಕೃತಿಯಲ್ಲಿ ಅಡಗಿರುವ ಗೂಢ ವಿಷಯಗಳ ಸಂಶೋಧನೆ ಯಾಗಬೇಕಾಗಿದೆ. ಏಷ್ಯಾ ಜನಾಂಗದವರಲ್ಲಿ ಒಂದೇ ಸಮನಾದ ಸಂಸ್ಕೃತಿಯು ಬಹುಕಾಲದಿಂದಲೂ ಬೆಳದು ಬಂದಿದೆ. ಇದನ್ನು ಮಹಾತ್ಮಾ ಗಾಂಧಿಯವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದು ತೋರಿಸಿದ್ದರು. ಈಗ ಅವರು ನಮ್ಮಗಳ ಮಧ್ಯದಲ್ಲಿ ಇಲ್ಲದಿರುವುದು ದುರ್ದೈವ ಆದರೂ ನವ ಭರತಖಂಡವು ಅವರ ಆದರ್ಶಗಳಂತೆ ನಡೆದು ಮಾನವ ಕಲ್ಯಾಣಕ್ಕಾಗಿ ಮಡಿಯಲು ಸಿದ್ಧವಾಗಿದೆ—ಎಂದು ಹೇಳಿದರು.

ಅನಂತರ ಸಮ್ಮೇಳನದ ಅಧ್ಯಕ್ಷರ ಚುನಾವಣೆ ನಡೆಯಿತು. ಭಾರತದ ಪ್ರತಿನಿಧಿಗಳ ನಾಯಕರಾದ ಸರ್ ಟಿ. ವಿಜಯರಾಘವಾಚಾರಿಯವರು, ಅಧ್ಯಕ್ಷರಾಗಿ ಆಯ್ಕೆಯಾದರು. ವಿವಿಧ ರಾಷ್ಟ್ರಗಳ ನಾಯಕರುಗಳನ್ನೊಳಗೊಂಡ ಒಂದು ಸ್ಟೀರಿಂಗ್ ಸಮಿತಿಯನ್ನೂ ರಚಿಸಲಾಯಿತು. ಅದು ನಾಳೆ ಬೆಳಿಗ್ಗೆ ಸೇರುವುದು.

ಆಹಾರೋತ್ಪತ್ತಿ ಸಮ್ಮೇಳನ

ಮುಂದಿನ ತಿಂಗಳು ೧೨ ಮತ್ತು ೧೩ನೇ ತಾರೀಖು ಗ್ವಾಲಿಯರ್ ಸಂಸ್ಥಾನದ ಶಿವಪುರಿಯಲ್ಲಿ ಅಖಿಲ ಭಾರತ ಆಹಾರೋತ್ಪತ್ತಿ ಸಮ್ಮೇಳನವು ಕೇಂದ್ರ ಸರ್ಕಾರದ ಆಹಾರ ಸಚಿವರಾದ ಶ್ರೀ ಜೈ ರಾಂ ದಾಸ್ ದೌಲತ್ ರಾಂ ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಪಂಡಿತ ನೆಹರೂರವರು ಅದರ ಆರಂಭೋತ್ಸವವನ್ನು ನೆರವೇರಿಸುವರು. ರಾಷ್ಟ್ರದ ಆಹಾರ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸಲು ಸರ್ಕಾರದವರೂ ಮತ್ತು ಪ್ರಜೆಗಳೂ ಸುಸಂಘಟಿತರಾಗಿ ಕಾರ್ಯಕ್ರಮ ಕೈಗೊಳ್ಳುವುದೇ ಇದರ ಮುಖ್ಯ ಉದ್ದೇಶವಾಗಿದೆ. ಇದರಲ್ಲಿ ಭಾಗವಹಿಸುವವರು ಮತ್ತು ಸೂಚನೆಗಳನ್ನು ಕಳುಹಿಸುವವರು ಸಮ್ಮೇಳನದ ಕಾರ್ಯದರ್ಶಿಯವರೊಡನೆ ನೇರವಾಗಿ ವ್ಯವಹಾರ ನಡೆಸಬಹುದೆಂದು ತಿಳಿಸಲಾಗಿದೆ.

ಮಹಾರಾಣಿ ಕಾಲೇಜಿನ ನಿಧಿಯ ಸಹಾಯಕ್ಕಾಗಿ ಇಲ್ಲಿ ನಡೆದ ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರ ಸಂಗೀತ ಕಚೇರಿಯಿಂದ ... ರೂ. ವಸೂಲಾಗಿದೆ.

ಅರಣ್ಯ ಸಂಪತ್ತನ್ನು ಅಭಿವೃದ್ಧಿಪಡಿಸಬೇಕು

ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ಪಂಡಿತ ನೆಹರೂರವರ ಸಂದೇಶ

ಮೈಸೂರು ೨೮

ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನಕ್ಕೆ ಭಾರತದ ಪ್ರಧಾನಿ ಪಂಡಿತ ನೆಹರೂರವರು ಈ ರೀತಿ ಒಂದು ಸಂದೇಶವನ್ನು ಕಳುಹಿಸಿರುತ್ತಾರೆ:—

ಪಾರ್ಲಿಮೆಂಟ್ ಸಭೆಯಲ್ಲಿ ನಾನು ಇರಬೇಕಾದುದರಿಂದ ಸಮ್ಮೇಳನದ ಆರಂಭೋತ್ಸವವನ್ನು ನಡೆಸಲು ಬಂದಿರುವ ಆಹ್ವಾನವನ್ನು ಅಂಗೀಕರಿಸಲು ಸಾಧ್ಯವಿಲ್ಲದುದಕ್ಕೆ ನನ್ನ ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಅರಣ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ನನಗೆ ಹೆಚ್ಚು ಆಸಕ್ತಿ ಇರುತ್ತದೆ. ಮತ್ತು ಅರಣ್ಯಗಳ ರಕ್ಷಣೆಗೆ ನಾನು ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿರುತ್ತೇನೆ. ಪೂರ್ವ ರಾಷ್ಟ್ರಗಳ ಜನರಿಗೂ ಮತ್ತು ಇಡೀ ಪ್ರಪಂಚಕ್ಕೂ ಅರಣ್ಯ ಸಮಸ್ಯೆ ಒಂದು ಸವಾಲನ್ನು ಹಾಕಿದೆ. ಅದನ್ನು ಎದುರಿಸಿ, ಜನರು ಸುಖವಾಗಿ ಬಾಳುವಂತೆ ಮಾಡಲು ಪಕ್ಷವನ್ನು ಉತ್ತಮಪಡಿಸಬೇಕು. ಎಲ್ಲ ರಾಷ್ಟ್ರಗಳೂ ಈ ಸಮಸ್ಯೆಗಳು ಇದ್ದೇ ಇವೆ. ಈ ಸಮ್ಮೇಳನವು ಅವುಗಳನ್ನು ಪರಿಶೀಲಿಸುವುದಲ್ಲದೆ ಪೂರ್ವ ರಾಷ್ಟ್ರಗಳ ಅರಣ್ಯ ಇಲಾಖಾ ಜನರನ್ನು ಒಂದು ಗೂಡಿಸಿ ಸೌಹಾರ್ದವನ್ನು ಏರ್ಪಡಿಸಿ, ಎಲ್ಲ ರಾಷ್ಟ್ರಗಳಲ್ಲೂ ಸ್ನೇಹಭಾವವು ಅಭಿವೃದ್ಧಿಯಾಗುವಂತೆ ಮಾಡಲೆಂದು ಆಶಿಸುತ್ತೇನೆ.

ಮೋಟಾರಿನ ಮೇಲೆ ಕಾಲೇಜ್ ಹುಡುಗಿಯರ ಕಲ್ಲೇಟು

ಮೈಸೂರು ೨೮

ಈ ದಿನ ಮಧ್ಯಾಹ್ನ ಜಲುವಾಂಬಾ ಭವನದಲ್ಲಿ ಅರಣ್ಯ ಸಮ್ಮೇಳನವು ಮುಗಿದ ನಂತರ ಹಲವು ಕಾಂಗ್ರೆಸ್ ಪ್ರಮುಖರು, ಒರಕ್ಕಿದ ಮೋಟಾರು ಕಾರು ಬಂದಕ್ಕೆ ಅಲ್ಲಿ ಹೋಗುತ್ತಿದ್ದ ಕೆಲವರು ಕಾಲೇಜ್ ಹಾಸ್ಟಲ್ ಹುಡುಗಿಯರು ಕಲ್ಲನ್ನು ಎಸೆದ ಪ್ರಸಂಗವು ಅತ್ಯಂತ ವಿಸ್ಮಯಕಾರಕವೂ ವಿಷಾದಕಾರಕವೂ ಆಗಿರುತ್ತದೆ. ಒಡನೆಯೇ ಕಾರನ್ನು ನಿಲ್ಲಿಸಿ ಅತ್ತಲಾಗಿ ಬರುತ್ತಿದ್ದ ಮಹಾರಾಣಿ ಕಾಲೇಜ್ ಸೂಪರಿಂಟೆಂಡೆಂಟ್ ಶ್ರೀಮತಿ ಸುಂದರಿ ಕೃಷ್ಣಸ್ವಾಮಿಯವರಿಗೆ ಈ ವಿಷಯವನ್ನು ತಿಳಿಸಲಾಗಿ ಅವರು ಮೇಲ್ಕಂಡ ತರುಣಿಯರನ್ನು ವಿಚಾರಿಸಿ ಅವರೆಲ್ಲರನ್ನು ಕಾರಿನ ಬಳಿಗೆ ಕರೆದುಕೊಂಡು ಬಂದು ತನ್ನ ಕೃತ್ಯಕ್ಕಾಗಿ ಆಕೆಯು ಕ್ಷಮಾಪಣೆ ಕೇಳಿಕೊಳ್ಳುವಂತೆ ಮಾಡಿದರು. ಕಾರಿನಲ್ಲಿದ್ದವರು ತರುಣಿಗೆ ಬುದ್ಧಿವಾದ ಹೇಳಿ ಇಂತಹ ಮಾರ್ಗದಲ್ಲಿ ಪ್ರವರ್ತಿಸದಂತೆ ಹೇಳಿದರು.

ಹರಿಕಥೆ

ರಾಜಧಾನಿಯ ಶಂಕರಪುರದ ಬಳಿಯಿರುವ ಶ್ರೀ ರಾಮಲಿಂಗೇಶ್ವರ ಜ್ಞಾನೇಶ್ವರಿ ಎಂಬುವರ ದೇವಾಲಯದಲ್ಲಿ ನಾಳೆ ಸಂಜೆ ೭ ಘಂಟೆಗೆ ಶ್ರೀ ಆರ್. ಕೇಶವಗಿರಿ ದಾಸರವರ ... ವನವಾಸ ಚರಿತ್ರೆ ಎಂಬ ಹರಿಕಥೆ ನಡೆಯುವುದು.

ಟಾಂಗಾಗಾಡಿ ಬಾಡಿಗೆಗಳ ವಿಮರ್ಶೆ

ಪೌರಸಭೆಯಲ್ಲಿ ಪ್ರಶ್ನೋತ್ತರ

ನಗರದ ... ಬಾಡಿಗೆ ... ವಿಚಾರವು ಪೌರಸಭೆಯಲ್ಲಿ ... ಚರ್ಚಿಸಲ್ಪಟ್ಟಿತು ... ಟಾಂಗಾಗಾಡಿ ... ಬಾಡಿಗೆಗಳನ್ನು ... ಬೋರ್ಡುಗಳನ್ನು ... ತೀರ್ಮಾನ ... ಮಾಡಬೇಕೆಂದು ...

ಇತ್ತೀಚೆಗೆ ... ಜನರಿಗೆ ... ಜನರು ... ತಿಳಿಸಿದರು.

ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಲಿರುವುದರಿಂದ ಪೌರಸಭೆಗೆ ಒಂದು ಬಸ್ಸು ನಡೆಸಲು ಅವಕಾಶ ಕೊಡಲಾಗ ಪುದಿಲ್ಲವೆಂದು ಸರ್ಕಾರದಿಂದ ಒಂದಿದ್ದ ಪತ್ರದ ವಿಚಾರವಾಗಿ ಚರ್ಚೆ ನಡೆದು ಸರ್ಕಾರದವರಾದರೂ ಕೂಡಲೇ ನಗರದಲ್ಲಿ ಬಸ್ ಸರ್ವಿಸ್ಸನ್ನು ತೆರೆದು ಜನರಿಗೆ ಸೌಕರ್ಯವುಂಟು ಮಾಡಬೇಕೆಂದು ತೀರ್ಮಾನಿಸಲಾಯಿತು.

ವಿವಿಧ ಮೊಹಲ್ಲಾಗಳಲ್ಲಿ ಕೆಲಸ ಮಾಡುವ ಥೂಪದವಾಲಿಗಳ ಸಂಖ್ಯೆಯ ಬಗ್ಗೆ ಶ್ರೀ ಪಿ ಗೋಪಾಲಕೃಷ್ಣಶೆಟ್ಟರ ಪ್ರಶ್ನೆ ಹಾಕಿ ಉತ್ತರ ಪಡೆದರು.

ಹೊಸದಾಗಿ ದೀಪಗಳನ್ನು ಹಾಕಲು ... ದೀಪಗಳನ್ನು ... ಸರ್ಕಾರದವರು ...

ತಾಯಿಂದಿರಲ್ಲಿ ಕಿತ್ತಾಟ

ಆಸ್ಟ್ರೇಲಿಯದ ಮೆಲಬೋರ್ನ್ ನಗರದ ಹೆರಿಗೆ ಆಸ್ಪತ್ರೆಯಲ್ಲಿ ... ಮಗುವಿಗಾಗಿ ಇಬ್ಬರು ತಾಯಿಯಂದಿರು ಬಗ್ಗೆ ... ವಾಗಿ ಆದು ಯಾರಿಗೆ ಸೇರಿದ್ದೆಂಬುದರ ಬಗ್ಗೆ ಕೋರ್ಟಿನ ತೀರ್ಮಾನವಾಗಬೇಕಾದ ಗಿದೆ ... ಅರೋಪಿಸಲಾಗಿದೆ ...

ಶ್ರೀ

ರಮಣೀ ಹಲ್ಲುಪುಡಿ

ಎಲ್ಲಾ ವಿಧವಾದ ಹಲ್ಲಿನ ಬಾಧೆಗಳಿಗೂ ಸಂಜೀವನ

ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಏಜೆಂಟರು ಬೇಕಾಗಿದ್ದಾರೆ.

ಶ್ರೀ ರಮಣೀ ಟ್ರೇಡಿಂಗ್ ಕಂಪೆನಿ,

ಸರ್ಕಾರಕ್ಕೆ ನೇರವಾಗಿ ಅರ್ಜಿ ಕೊಡದು

ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ... ಗ್ರಾಮಗಳಿಗೆ ನೀರು ಸರಬರಾಜು, ರಸ್ತೆಗಳು ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಈ ಸಮಿತಿಗಳ ಅಧಿಕಾರಕ್ಕೆ ವಹಿಸಲ್ಪಟ್ಟಿರುವುದರಿಂದ ಸಾರ್ವಜನಿಕರು ಸರ್ಕಾರಕ್ಕೆ ಈ ಬಗೆ ಅರ್ಜಿ ಹಾಕಿಕೊಳ್ಳುವುದಕ್ಕೆ ಮುಂಚೆ ಈ ಸಮಿತಿಗಳಿಗೆ ಅರ್ಜಿಗಳನ್ನು ಕಳುಹಿಸಬೇಕೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಕಲ್ಕತ್ತಾದಲ್ಲಿ ದಿನಕ್ಕೆ ೫ ಲಕ್ಷ ಅಂಚೆ ಕಾಗದಗಳು

ಕಲ್ಕತ್ತಾ ನಗರದ ... ದಿನದಿನಕ್ಕೆ ೫ ಲಕ್ಷ ಅಂಚೆ ಕಾಗದಗಳು ಬಟವಾಡೆಗಾಗಿ ಬರುತ್ತವೆ.

ಟೀ ಸೊಪ್ಪು ವಿಷಪೂರಿತವಾದುದೇ ?

ಟೀ ಸೊಪ್ಪು ವಿಷಪೂರಿತವಾದುದೇ ಎಂಬುದನ್ನು ವೈದ್ಯರು ಕಂಡು ಹಿಡಿಯಬೇಕೆಂದು ಕೇಂದ್ರ ಶಾಸನ ಸಭೆಯಲ್ಲಿ ಸದಸ್ಯರೊಬ್ಬರು ಸಲಹೆ ಮಾಡಿರುತ್ತಾರೆ.

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಇಂದೇ ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ಗಾಯತ್ರೀ ಟಾಕೀಸ್

28-3-49ರಿಂದ 2 ದಿನಗಳು ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ದಿ ಡ್ರೈವ್ರೋರ್ಸ್ ಆಫ್ ಲೇಡಿ ಎಕ್ಸ್

ಪಾತ್ರ: ... ಮತ್ತು ಲಾರೆನ್ಸ್ ಆಲಿವರ್

ಮುಂದಿನ ಬದಲಾವಣೆ —

30-3-49ರಿಂದ 2 ದಿನಗಳು

ನೆಸ್ಟಿ ಗರ್ಲ್

ಪಾತ್ರ ... 3ರ್ಡರ್

ಹೊಸ ವರ್ಷದ ಶುಭಾಶಯಗಳು

ಶ್ರೀ ವಿರೋಧಿ ನಾಮ ಸಂವತ್ಸರದಲ್ಲಿ ನಮ್ಮ ಪ್ರಿಯ ಗಿರಾಕಿಗಳಿಗೂ, ಸ್ನೇಹಿತರಿಗೂ, ಹಿತಚಿಂತಕರಿಗೂ ಮತ್ತು ಸರ್ವರಿಗೂ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಎಂ. ಸುಬ್ಬರಾಮಯ್ಯ & ಕಂಪೆನಿ,
ಸಿಟಿ ಬಸ್ ಅಡ್ವರ್ಟೈಸಿಂಗ್ ಏಜಂಟರು,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

Edited, printed and published by A.R. Nagarajan at the Sadhvi Press, D Subbiah Road, Mysore.

ಪ್ರಭಾ

30-3-49ರಿಂದ

ಪ್ರತಿ ದಿನ 3 ಆಟಗಳು

3, 6-30 ಮತ್ತು 10 ಘಂಟೆಗೆ

ಗೋಕುಲ ದಾಸಿ

(ತಮಿಳು)

ಹೊನ್ನಪ್ಪ ಭಾಗವತರ್, ಎಂ.ವಿ ರಾಜಮ್ಮ ಮತ್ತು ಟಿ.ಆರ್ ರಾಮಚಂದ್ರ

MORNING SHOWS 2nd & 3rd April FUGITIVE An R.K.O. Picture



ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು

(ಬೀರು, ಕ್ಯಾಷ್ ಬಾಕ್ಸ್ ಸುಲಭ ಬೆಲೆಗೆ ದೊರೆಯುತ್ತವೆ.)

ರಿಪೇರಿ ಮತ್ತು ಪೇಂಟಿಂಗ್ ಮಾಡಲಾಗುತ್ತದೆ

ಬೇಕಾದವರು ಭೇಟಿ ಕೊಡಿ

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್

ಹಳ್ಳದಕೇರಿ, ಮೈಸೂರು

ಉಗಾದಿ ಹಬ್ಬಕ್ಕೆ

... ಹೊಸ ... ಸರಕುಗಳನ್ನು ತರಿಸಿದ್ದೇವೆ

ಬಂದು ನೋಡಬೇಕಾಗಿ ವಿನಂತಿ

... ಕಂಪೆನಿ, ಮೈಸೂರು

ಮಾಜಿ ಕೊಚ್ಚಿ ರಾಜಪುತ್ರ ವಿಚಾರಣೆ

ಕೊಚ್ಚಿಯ ದಿವಂಗತ ಮಹಾರಾಜರ ಪುತ್ರ ದಾಮೋದರರ್ ಎಂಬುವರು ... ರಕ್ಕೆ ೫ ಲಕ್ಷ ರೂ ... ಅಪಾದನೆಗಾಗಿ ವಿಚಾರಣೆ ... ಕೊಚ್ಚಿ ಮಹಾರಾಜರವರು ... ಕೋರ್ಟನ್ನು ರಚಿಸಿರುತ್ತಾರೆ

ವಿವಾಹದ ವಯಸ್ಸನ್ನು ಹೆಚ್ಚಿಸಬೇಕು.

ವಿವಾಹದ ವಯಸ್ಸು ... ಮತ್ತು ಸ್ತ್ರೀಯರಿಗೆ ... ಕೊಡಬೇಕೆಂದು ಇದಕ್ಕಾಗಿ ... ದೆಹಲಿಯ ಶಾಸನ ಸಭಾ ... ಮಾಡಿದೆ

ಪಂಚಾಂಗ ಶ್ರವಣ

ಇದೇ ೩ನೇ ತಾ॥ ಬುಧವಾರ ... ಘಂಟೆಗೆ ... ಸಂಸ್ಕೃತ ಮಹಾ ಪಾಠಶಾಲೆಯ ... ಶ್ರೀ ಸದ್ಗುರು ಸೇವಾ ... ಹೊಸ ವರ್ಷದ ಪ್ರಯುಕ್ತ ಪಂಚಾಂಗ ಶ್ರವಣವು ನಡೆಯುತ್ತೆ ... ಸ್ವಾಗತವುಂಟು

ರಾಜಧಾನಿಯ ಏಜೆಂಟರು

... ರಿಂದ ಮೈಸೂರು ನಗರದಲ್ಲಿ ಸಾಧ್ವಿ ಪತ್ರಿಕೆಗೆ ದಿ ನ್ಯೂಸ್ ... ಪೇಪರ್‌ಹೌಸ್, ಜಯನಗರ, ಮೈಸೂರು ಇವರನ್ನು ಏಜಂಟರನ್ನಾಗಿ ನೇಮಿಸಲಾಗಿದೆ.

ಮಹಾಜನರು ಪ್ರೋತ್ಸಾಹಿಸಬೇಕೆಂದು ವಿನಂತಿ

—ವ್ಯವಸ್ಥಾಪಕ

—: ತೊಂದರೆ ತಪ್ಪಿತು :—

ಉಗಾದಿ ಹಬ್ಬಕ್ಕಾಗಿ ಬಟ್ಟೆಗಳು ... ಲಿಲ್ಲವೆಂದು ಯೋಚಿಸಬೇಡಿ ... ಬ್ಯಾಂಕ್‌ರೋಡಿನಲ್ಲಿರುವ ಸೆಲೆಕ್ಟ್ ... ಸ್ಟೋರ್ಸಿಗೆ ನಡೆಯಿರಿ ... ದವಾದ ಉಡುಪುಗಳು ಸಿಕ್ಕುತ್ತವೆ.

ಎಸ್. ಎಸ್. ಪಂಡಿತ್ ಅಂಡ್ ಸನ್ಸ್ ರವರ

ಯೂನಿವರ್ಸಲ್ ಪೇಯಿನ್ ಬಾಮ್

... ನೋವು, ಕೀಲು ನೋವು ... ಸಕಲ ... ಗಳಿಗೂ ರಾಮಬಾಣ

ಸೀಸೆ 0-12

ಮಹಾ ಸುಗಂಧರಾಜ ತೈಲ—

„ ಚಂದನಾದಿ ತೈಲ—

„ ಭೃಂಗಾ ಮಲಕ ತೈಲ—

—ಬೇಸಿಗೆ ಕಾಲಕ್ಕೆ ಉತ್ತಮ ... ತೈಲಗಳು

ಮಹಾ ಕೇತಕೀ ತೈಲ— ತಲೆ ... ಕೆಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸಬಹುದಾದ ಉತ್ತಮ ... ಬ್ರೇನ್ ಟಾನಿಕ್ ಶೀಸೆ 2-0

ಪಂಚಾಮೃತ—ಮಲೇರಿಯಾ ... ಗಳಿಗೆ ಸಿದ್ಧ ಸಂಜೀವಿನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ.

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್

ಮೈಸೂರು

ರಿ. ನಂ. 792 ||ವಂದೇಮಾತರಂ|| ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೨೧-೩-೧೯೪೮ [ಸಂಚಿಕೆ ೩೧೦

ಮದರಾಸಿನಲ್ಲಿ ಹೊಸ ಮಂತ್ರಿ ಮಂಡಳಿ

ಮಾವಿನ ಸೊಪ್ಪು ತರಲು ಹೋಗಿ ಮರದಿಂದ ಬಿದ್ದು ಮರಣ

ಮೈಸೂರು-೩೧

ಯುಗಾದಿ ಹಬ್ಬಕ್ಕಾಗಿ ಮಾವಿನ ಸೊಪ್ಪನ್ನು ತರಲು ಕೃಷ್ಣರಾಜ ಮೊಹಲ್ಲಾ ದೇವಟಗೆ ಬೀದಿಯಲ್ಲಿರುವ ರುದ್ರಪ್ಪ ಎಂಬ ೨೫ ವರ್ಷದವರು ನಿನ್ನೆ ಬೆಳಗ್ಗೆ ಬ್ರೂಸ್‌ಲ್ಯಾ ಗೇಟಿನ ಹತ್ತಿರವಿರುವ ನಂಜುಂಡರಾಜೇ ಅರಸಿನವರ ತೋಟಕ್ಕೆ ಹೋಗಿ ಮಾವಿನ ಮರಕ್ಕೆ ಹತ್ತಿ ಸೊಪ್ಪನ್ನು ಕೊಯ್ಯುತ್ತಿರುವಾಗ ಅಲ್ಲಿಂದ ಕೆಳಕ್ಕೆ ಬಿದ್ದು ಮರಣಹೊಂದಿದರೆಂದು ವರದಿಯಾಗಿದೆ. ಪೊಲೀಸರು ಸ್ಥಳಕ್ಕೆ ಹೋಗಿ ಮಹಜರ್ ಕ್ರಮ ನಡೆಸಿದರು.

ಕೃಷ್ಣರಾಜೇಂದ್ರ ಗಿರಣಿಗೆ ಬಸ್ ಸೌಕರ್ಯ

ಕೃಷ್ಣರಾಜೇಂದ್ರ ಬಟ್ಟೆ ಗಿರಣಿಯಲ್ಲಿ ಕೆಲಸ ಮಾಡುವವರು ನಗರದಿಂದ ಹೋಗಲು ಮತ್ತು ವಾಪಸು ಬರಲು ಅನುಕೂಲಿಸುವಂತೆ ಸಿಟಿ ಬಸ್ಸಿನವರು ಪ್ರತಿನಿತ್ಯ ಪ್ರಾತಃಕಾಲ ಮತ್ತು ಸಂಜೆ ಬಸ್ಸುಗಳು ಸಂಚಾರವನ್ನು ಏರ್ಪಾಡು ಮಾಡಿರುವರು.

ನೂಲುವ ಸ್ಪರ್ಧೆ

ರಾಜಧಾನಿಯ ಗಾಂಧೀ ಸೇವಾ ಸಂಘ ಕಾರ್ಯಾಲಯದಲ್ಲಿ ಕಳೆದ ಭಾನುವಾರ ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನೂಲುವ ಸ್ಪರ್ಧೆ ನಡೆಯಿತು. ಶ್ರೀ ರಾಜಶೇಖರಯ್ಯನವರು ಕೊಟ್ಟ ಮೊದಲನೇ ಬಹುಮಾನವು ಶ್ರೀಮತಿ ಶಾರದಾರವರಿಗೂ, ಶ್ರೀ ಪಿ. ಎನ್. ಕೃಷ್ಣಮೂರ್ತಿಯವರ ಎರಡನೇ ಬಹುಮಾನವು ಶ್ರೀಮತಿ ವಾಸುಕಿ ಬಾಯಿಯವರಿಗೂ, ಶ್ರೀ ರಾಮಕೃಷ್ಣ ಸುಗಂಧಿಯವರ ೩ನೇ ಬಹುಮಾನವು ಶ್ರೀ ಲೀಲಾವತಿಯವರಿಗೂ ಕೊಡಲ್ಪಟ್ಟವು.

ಸಂಗೀತ ಸ್ಪರ್ಧೆಗಳು

ಚಿಕ್ಕಮಗಳೂರಿನಲ್ಲಿ ಮುಂದಿನ ತಿಂಗಳು ೩ನೇ ವಾರದಲ್ಲಿ ನಡೆಯಲಿರುವ ಅಖಿಲ ಮೈಸೂರು ಸಂಗೀತ ಸಮ್ಮೇಳನದ ಅಂಗವಾಗಿ ಬಾಲಕಿಯರಿಗೆ ಹೈಯರ್ ಗ್ರೇಡ್ ಮತ್ತು ದೇವರನಾಮಗಳಲ್ಲಿ ಸಂಗೀತ ಸ್ಪರ್ಧೆಯು ನಡೆಯುತ್ತದೆ. ಸಂಗೀತ ವಿದ್ವತ್ತಿನ ಜಿಲ್ಲಾ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರೂ ಇದರಲ್ಲಿ ಭಾಗವಹಿಸಬಹುದು. ಊಟ ತಿಂಡಿ ವಗೈರೆ ಖರ್ಚುಗಳನ್ನು [illegible]ಗಳೇ ವಹಿಸಿಕೊಳ್ಳುತ್ತಾರೆ. ಭಾಗವಹಿಸತಕ್ಕವರು ಮುಂದಿನ ತಿಂಗಳು ೫ನೇ ತಾ|| ಯೊಳಗಾಗಿ ಪ್ರವೇಶಪತ್ರಗಳನ್ನು ಕಳುಹಿಸಬೇಕೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಚಿರತೆಯ ಶಿಕಾರಿ

ಸ್ವಂ. ವ.] ಚಾಮರಾಜನಗರ ೩೦

ಈ ತಾಲ್ಲೂಕಿನ ಹೆಗ್ಗೊಠಾರದಲ್ಲಿ ಕಳೆದ ಕೆಲವು ದಿನಗಳಿಂದಲೂ ಭಾರಿ ಚಿರತೆ ಯೊಂದು ಜನರಿಗೆ ತುಂಬಾ ತೊಂದರೆ ಕೊಡುತ್ತಿದ್ದು ಮೊನ್ನೆ ದಿನ ಇಬ್ಬರಿಗೆ ಗಾಯ ಪಡಿಸಿತು. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಹೋಗಿ ಪೊದೆಯಲ್ಲಿ ಸೇರಿರುತ್ತಿದ್ದ ಈ ಚಿರತೆಯನ್ನು ಪತ್ತೆ ಮಾಡಿ ಅದನ್ನು ಗುಂಡಿನಿಂದ ಹೊಡೆದು ಕೊಲ್ಲಿಸಿದರು.

ಪಟೇಲರ ವಿಮಾನವು ಇಳಿಯಬೇಕಾಯಿತು

ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರು ಮೊನ್ನೆ ಸಂಜೆ ೫-೧೦ ಗಂಟೆಗೆ ಜಯಪುರಕ್ಕೆ ದೆಹಲಿಯಿಂದ ವಿಮಾನದಲ್ಲಿ ಪ್ರಯಾಣ ಬೆಳೆಸಿದಾಗ, ರಾತ್ರಿ ೧೦ ಗಂಟೆಯವರೆಗೂ ಜಯಪುರವನ್ನು ತಲುಪದೇ ಯಾವ ಸಮಾಚಾರವೂ ಗೊತ್ತಾಗದೇ ಕಳವಳ ಉಂಟಾಗಿತ್ತೆಂದೂ ಜಯಪುರಕ್ಕೆ ೬೦ ಮೈಲಿ ದೂರದಲ್ಲಿ ವಿಮಾನವು ಕೆಟ್ಟು ಬಲತ್ಕಾರವಾಗಿ ಇಳಿಯಬೇಕಾಯಿತೆಂದೂ ವರದಿಯಾಗಿದೆ. ಸರ್ದಾರ್ ಪಟೇಲರಿಗೆ ಯಾವ ಅಪಾಯವೂ ಸಂಭವಿಸದೆ ಸುರಕ್ಷಿತರಾಗಿದ್ದಾರೆ ಮತ್ತು ಅವರು ರಾತ್ರಿ ೧೧ ಗಂಟೆಗೆ ಜಯಪುರವನ್ನು ತಲುಪಿದರು.

ಗಾಂಧೀಜಿ ಪ್ರತಿಮೆ ಬಳಿ ಹರಿಜನರ ಉಪವಾಸ

ಜಾಮ್‌ನಗರಕ್ಕೆ ಪಾಕಿಸ್ತಾನದಿಂದ ಬಂದ ೫೦ ಮಂದಿ ಹರಿಜನರು ತಮಗೆ ಉಚಿತ ರೇಷನ್, ಮನೆ ಕಟ್ಟಲು ಹಣದ ಸಹಾಯ, ಮತ್ತು ಇತರ ಸೌಲಭ್ಯಗಳನ್ನು ಈ ದಿನದೊಳಗಾಗಿ ಸೌರಾಷ್ಟ್ರ ಸರ್ಕಾರದವರು ಕೊಡದಿದ್ದಲ್ಲಿ ಮಹಾತ್ಮರ ಪ್ರತಿಮೆಯ ಮುಂದೆ ಉಪವಾಸ ಮಾಡುವುದಾಗಿ ತಿಳಿಸಿರುತ್ತಾರೆ.

ಮದರಾಸಿಗೆ ಹೊಸ ಮಂತ್ರಿಮಂಡಲಿ

ಈ ದಿನ ಮದರಾಸು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯು ನಡೆದು, ಶ್ರೀ ಕುಮಾರಸ್ವಾಮಿ ರಾಜರವರು ಬಹುಮತದಿಂದ ಚುನಾಯಿತರಾದರು. ಡಾ|| ಸುಬ್ಬರಾಯನ್‌ರವರು ಸೋಲನ್ನು ಹೊಂದಿದರು. ಪ್ರಧಾನಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯವರು ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ಅವರ ಮಂತ್ರಿ ಮಂಡಲದವರು ಈ ದಿನ ರಾಜೀನಾಮೆ ಕೊಡುವರು.

Edited, printed and published by A.R. Nagarajan at the Sadhvi Press, D. Subbiah Road, Mysore

ಮರಮುಟ್ಟುಗಳ ಇಂಜನಿಯರಿಂಗ್ ಮತ್ತು ಬೊಂಬುಗಳ ಉಪಯೋಗ

ಮೈಸೂರು ೩೧

ಅಂತರ ರಾಷ್ಟ್ರೀಯ ಅರಣ್ಯ ಸಮ್ಮೇಳನವು ಈ ದಿನ ಮುಂದುವರೆಯಿತು. ಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವುದು, ಅವುಗಳ ಹಂಚಿಕೆ ಮತ್ತು ಕಟ್ಟಡಗಳ ಸಾಮಾನಿನ ಮೌಲ್ಯ, ಹತೋಟಿ, ಮರಮುಟ್ಟುಗಳಲ್ಲಿ ಜಾತಿವಾರು ವಿಂಗಡನೆ, ಬೊಂಬುಗಳ ಉಪಯೋಗ ಇವೇ ಮುಂತಾದವುಗಳ ಚರ್ಚೆಯಾಯಿತು. ಹನ್ನೆರಡು ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಮರಮುಟ್ಟುಗಳ ಸಮಿತಿಗೆ ಮಲಯದ ಪ್ರತಿನಿಧಿ ಮಿ|| ಎಡ್ವರ್ಡ್ಸ್‌ರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಭಾರತದ ಪ್ರತಿನಿಧಿ ಡಾ|| ಕಾಮೇಶಂರವರು ಭಾಷಣ ಮಾಡಿ ಮರಮುಟ್ಟುಗಳ ಇಂಜನಿಯರಿಂಗ್ ಶಾಖೆಯನ್ನು ತೆರೆಯಬೇಕೆಂದೂ ಬೊಂಬುಗಳ ಉಪಯೋಗದ ಬಗ್ಗೆ ಹೊಸ ಯೋಜನೆ ಸಿದ್ಧಗೊಳಿಸಬೇಕೆಂದೂ ಮರಮುಟ್ಟುಗಳ ಸಂಬಂಧವಾಗಿ ಅರಣ್ಯಗಳ ಹತೋಟಿಯನ್ನು ಬದಲಾಯಿಸುವುದಲ್ಲದೇ, ಮರಮುಟ್ಟುಗಳ ಕೆಲಸಗಾರರ ಸಂಘವನ್ನು ಸ್ಥಾಪಿಸಬೇಕೆಂದೂ ಹೇಳಿದರು.

ಕಾರ್ಪೊರೇಷನ್ ಮಸೂದೆಗೆ ವಿರೋಧ

ಸ್ವಂ. ವ. ಪ್ರ.] ಬೆಂಗಳೂರು ೩೧

ನಗರ ಮತ್ತು ದಂಡಿನ ಪುರಸಭೆಗಳನ್ನು ಒಂದಾಗಿ ಸೇರಿಸಿ ಕಾರ್ಪೊರೇಷನ್ ಮಾಡಬೇಕೆಂಬ ಸರ್ಕಾರದ ಸಲಹೆಯನ್ನು ವಿರೋಧಿಸುವ ನಿರ್ಣಯವು ಈ ದಿನ ನಡೆದ ದಂಡಿನ ಪುರಸಭೆಯಲ್ಲಿ ಅಂಗೀಕೃತವಾಯಿತು.

ಗೋಪಾಲರಾವ್ ಸಮಿತಿ

ಗೋಪಾಲರಾವ್ ವಿಚಾರಣಾ ಸಮಿತಿಯ ಕಡೆಯ ಸಭೆಯು ಮುಂದಿನ ತಿಂಗಳು ೫ನೇ ತಾ|| ಸೇರಿ, ಗೋಪಾಲರಾಯರ ಸಾಕ್ಷ್ಯವನ್ನು ಬಹಿರಂಗವಾಗಿ ತೆಗೆದುಕೊಳ್ಳಲಾಗುವುದು.

[illegible] ಶ್ರೀ [illegible] ತ್ರಿವಿಕ್ರಮರಾಯರವರು [illegible] ಸಾಕ್ಷ್ಯ [illegible]

ಅಲ್ಬೇನಿಯಾದಲ್ಲಿ ರಷ್ಯದ ನೂತನ ಸಬ್‌ಮೆರಿನ್ ನೆಲೆ

ಅಲ್ಬೇನಿಯಾ ತೀರ ಪ್ರದೇಶದಲ್ಲಿ ಭಾರಿ ಸಬ್‌ಮೆರಿನ್ ನೆಲೆಯನ್ನು ರಷ್ಯವು ಕಟ್ಟುತ್ತಿದೆಯೆಂದು ಮಾರ್ಷಲ್ ಟಿಟೋರವರು ಬೆಲ್‌ಗ್ರೇಡಿನಲ್ಲಿರುವ ಅಮೇರಿಕದ ರಾಯಭಾರಿಗೆ ತಿಳಿಸಿರುವರೆಂದು ವರದಿಯಾಗಿದೆ. ಮೆಡಿಟರೇನಿಯನ್ ಕ್ಷೇತ್ರದಲ್ಲಿ ಎಲ್ಲ ಬ್ರಿಟಿಷ್ ಮತ್ತು ಅಮೇರಿಕ ಹಡಗುಗಳನ್ನು ರಷ್ಯದ ಸಬ್‌ಮೆರಿನ್ನುಗಳು ಈ ನೂತನ ಕೇಂದ್ರದಿಂದ ನಾಶಪಡಿಸಲು ಅನುಕೂಲವಾಗುವುದೆಂದು ಹೇಳಲಾಗಿದೆ.

ನೂತನ ದಿನ ಪತ್ರಿಕೆಗಳು

ರಾಜಧಾನಿಯಲ್ಲಿ ನಿನ್ನೆಯಿಂದ ಶ್ರೀ ಎಂ. ಎಸ್. ನರಸಿಂಹ್ಮರವರ ಸಂಪಾದಕತ್ವದಲ್ಲಿ "ಜ್ವಾಲಾ" ಮತ್ತು ಶ್ರೀ ಎನ್. ಶ್ರೀಕಂಠಯ್ಯನವರ ಸಂಪಾದಕತ್ವದಲ್ಲಿ "ವರ್ತಮಾನ" ಎಂಬ ದಿನ ಪತ್ರಿಕೆಗಳು ಹೊರಟಿವೆ. ಬೆಲೆ ೬ ಕಾಸು. ಈ ಪತ್ರಿಕೆಗಳು ಯಶಸ್ವಿಯಾಗಿ ಚಿರಕಾಲ ಬಾಳಲೆಂದು ಹಾರೈಸುತ್ತೇವೆ.

ಶುಭಾಶಯಗಳು

ಮೈಸೂರು ನಗರದ ಮಹಾಜನರಿಗೆ ನೂತನ ವರ್ಷದಲ್ಲಿ ಸಕಲ ಶ್ರೇಯಸ್ಸು ಮತ್ತು ಸೌಭಾಗ್ಯವೂ ದೊರಕಿ ಸನ್ಮಂಗಳಗಳುಂಟಾಗಲೆಂದು ಪುರಸಭೆಯ ಕಾಂಗ್ರೆಸ್ ಪಕ್ಷದವರು ಹಾರೈಸಿದ್ದಾರೆ.

ನಾಳೆ ದಿನ ಭಾರತದಾದ್ಯಂತ ಸಿನಿಮಾಗಳ ಬಂದು

ಮಧ್ಯ ಪ್ರಾಂತ್ಯ ಸರ್ಕಾರದವರು ನಾಳೆಯಿಂದ ಸಿನಿಮಾ ಮಂದಿರಗಳ ಮೇಲೆ ತೆರಿಗೆಯನ್ನು ಶೇಕಡ ೫೦ರಷ್ಟು ಹೆಚ್ಚಿಸಬೇಕೆಂದು ನಿರ್ಧರಿಸಿರುವುದನ್ನು ಪ್ರತಿಭಟಿಸಲು ನಾಳೆ ದಿನ ಆ ಪ್ರಾಂತ್ಯದ ಎಲ್ಲಾ ಸಿನಿಮಾ ಮಂದಿರಗಳನ್ನೂ ಮುಚ್ಚಬೇಕೆಂದು ನಾಗಪುರದಲ್ಲಿ ನಡೆದ ಪ್ರಾಂತೀಯ ಸಿನಿಮಾ ಮಾಲೀಕರುಗಳ ಸಭೆಯಲ್ಲಿ ತೀರ್ಮಾನವಾಗಿದೆ. ಅವರುಗಳಿಗೆ ಸಹಾನುಭೂತಿ ತೋರಿಸಲು ಭಾರತದಾದ್ಯಂತ ಎಲ್ಲ ಸಿನಿಮಾಗಳನ್ನೂ ಮುಚ್ಚಬೇಕೆಂದು ಪ್ರಾರ್ಥಿಸಲಾಗಿದೆ.

ಸಮುದ್ರದ ನೀರಿನಿಂದ ಪೆಟ್ರೋಲ್

ಪೆಟ್ರೋಲನ್ನು ಹೇಗೆ ಸಮುದ್ರದ ನೀರಿನಿಂದ ತಯಾರಿಸಬಹುದೆಂಬ ಪ್ರಯೋಗವೊಂದನ್ನು ನಿನ್ನೆ ದಿನ ಮದ್ರಾಸಿನಲ್ಲಿ ನಡೆಸಲಾಯಿತು. ಇಂಜನಿಯರಿಂಗ್ ಇಲಾಖೆಯವರು ಹೇಗೆ ತಯಾರಾದ ಪೆಟ್ರೋಲಿನ ಮೂಲಕ ಕೆಲವು ಯಂತ್ರಗಳನ್ನು ನಡೆಸುವ ವಿಧಾನವನ್ನು ಪ್ರದರ್ಶನ ಮಾಡಿದರು.

ಅಮೇರಿಕದ ಅಧ್ಯಕ್ಷರಲ್ಲಿಗೆ ಹಂದಿಗಳ ನಿಯೋಗ

ಜರ್ಸಿಯ ಸಿಟಿ ನಗರದ ಇಬ್ಬರು ಹಂದಿ ಸಾಕುವವರು ಕಾಲ್ನಡಿಗೆಯಲ್ಲಿ ಜರ್ಸಿಯಿಂದ ಅಮೇರಿಕದ ರಾಜಧಾನಿ ವಾಷಿಂಗ್ಟನ್ನಿಗೆ ಐದು ಹಂದಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಟ್ರೂಮನ್ನರನ್ನು ಭೇಟಿ ಮಾಡಲು ಹೊರಟಿರುವರು. ಹಂದಿಗಳ ಸಾಕಣೆಗೆ ಬಗಿದಿರುವ ಪಟ್ಟಿಯಲ್ಲಿ ಜರ್ಸಿಯಲ್ಲಿರುವ ಹಂದಿಗಳಿಗೆ ಹೊಟ್ಟೆಗೆ ಆಹಾರವನ್ನು ಕೊಡಿಸಲು ನಿಯೋಗ ಹೋಗುವುದಾಗಿ ಬರೆಯಲ್ಪಟ್ಟಿದೆ. ಈ ಐದು ಹಂದಿಗಳನ್ನು ಅಧ್ಯಕ್ಷರಿಗೆ ಬಹುಮಾನವಾಗಿ ಕೊಡುವುದೂ ಅವರ ಉದ್ದೇಶವಾಗಿದೆ.

ನೂತನ ವರ್ಷದ ಶುಭಾಶಯಗಳು

ರಾಷ್ಟ್ರೀಯ ಸಚಿವರಾದ ಶ್ರೀ ಕೆ ಟಿ ಭಾಷ್ಯಂ, ರಾಜಧಾನಿಯ ಎಸ್ ಎಸ್ ಪಂಡಿತ್ ವನಿತಾ ಸದನ ನಾ. ಶ್ರೀ ರೇಡಿಯೋ ಸಂಸ್ಥೆ ಶ್ರೀ ಎಸ್ ದೇವರಾಜ್ ಅರಸ್, ಶ್ರೀ ಸಿ ಬಿ ಎಂ ಚಂದ್ರಯ್ಯ ಸಿವಿಲ್ ಕರ್ನಾಟಕ ಸೆಂಟ್ರಲ್ ಬ್ಯೂರೋ ಪಾರ್ಶ್ವಸಿ ಶ್ರೀ ಎಸ್ ನಾರಾಯಣರಾವ್, ನೇ ಬೆಂಗಳೂರು, ನೇ ತುಮಕೂರು, ನೇ ಮೈಸೂರು ಮತ್ತು ನೇ ಮೈಸೂರು ಸ್ಟೇಟ್ ವರ್ತಕರು ಶ್ರೀ ಇ ವೆಂಕೋಬರಾವ್ ಇವರುಗಳು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಗೃಹ ಕೈಗಾರಿಕಾ ಶಾಲೆಗೆ ಭೇಟಿ

ರಾಜಧಾನಿಯ ಶ್ರೀ ಎ. ... ಲಿಂಗಪ್ಪನವರ ಗೃಹ ಕೈಗಾರಿಕಾ ಶಾಲೆಗೆ ವಿದ್ಯಾ ಸಚಿವರಾದ ಶ್ರೀ ಟಿ ಎಚ್ ಚಂದ್ರಶೇಖರಯ್ಯನವರ ಕಳೆದ ಸೋಮವಾರ ಭೇಟಿ ಇತ್ತು ಅಲ್ಲಿನ ಕೆಲಸ ಕಾರ್ಯಗಳನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರೆಂದು ತಿಳಿದುಬಂದಿದೆ

ಚೇಳು ಕಡಿತಕ್ಕೆ ಉಚಿತ ಚಿಕಿತ್ಸೆ

ಚೇಳು ಕಡಿದವರಿಗೆ ರಾಜಧಾನಿಯ ಚಾಮುಂಡಿಪುರದ ಚಾಮುಂಡಿ ರಸ್ತೆಯಲ್ಲಿ ... ನೇ ನಂಬರ್ ಅಂದ ಶ್ರೀ ... ಔಷಧಾಲಯದಲ್ಲಿ ಉಚಿತ ಚಿಕಿತ್ಸೆ ನಡೆಸಲಾಗುವುದು

ಪಂಚಾಂಗಗಳ ಸ್ವೀಕಾರ

ಈ ಕೆಳಗೆ ಕಂಡ ಮಹನೀಯರುಗಳು ಕಳುಹಿಸಿ ಕೊಟ್ಟಿರುವ ನೂತನ ವರ್ಷದ ಪಂಚಾಂಗಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ —ಶ್ರೀ ಸೀತಾರಾಘವ ವೈದ್ಯಶಾಲೆ, ಸಯ್ಯಾಜಿರಾವ್ ರಸ್ತೆಯ ನ್ಯೂ ಮಾಡಲ್ ಟೈಲರಿಂಗ್ ಹಾಲಿನ ಮಾಲೀಕರಾದ ಶ್ರೀ ಎಂ ಎಲ್. ಶ್ರೀನಿವಾಸರಾವ್ ಸಿದ್ಧಾಂತಿ ಎಂ. ಸಚ್ಚಿದಾನಂದ ಜೋಯಿಸರ ಮಕ್ಕಳು ಶ್ರೀ ಎಂ.ಎಸ್ ಚಂದ್ರಶೇಖರ ಜೋಯಿಸರು, ವಿದ್ವಾನ್ ಎಸ್ ಎನ್ ಕೃಷ್ಣಜೋಯಿಸರು ಮತ್ತು ಮಹಾ ವಿದ್ವಾನ್ ಸಂಸ್ಕೃಷ್ಣ ಜೋಯಿಸರು

ತಾಲ್ಲೂಕು ಸಮ್ಮೇಳನ

ಗುಂಡ್ಲುಪೇಟೆ ತಾಲ್ಲೂಕು ಸಮ್ಮೇಳನವು ಮುಂದಿನ ತಿಂಗಳು ೨ನೇ ತಾರೀಖಿನ ವಾರ ಮಧ್ಯಾಹ್ನ ... ಗಂಟೆಗೆ ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಹೆಚ್ ಕೆ ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿಗೆ

ಶಿವರಾಂಪೇಟೆ ಮೈಸೂರು

ವಿಜಯಲಕ್ಷ್ಮೀ ವಿಲಾಸ,

ಶಿವರಾಂಪೇಟೆ, ಮೈಸೂರು

ಹೊಸ ತರದ ನಮೂನೆ ಗುಲಾಬಿ ... ಸೀರೆ ... ಗಳು ... ಬೆಲೆಗೆ ... ದೊರೆಯುತ್ತವೆ

ಟ್ಯಾಕ್ಸಿಯವರ ತೊಂದರೆ

ರಾಜಧಾನಿಯ ಟ್ಯಾಕ್ಸಿ ಸ್ಟಾಂಡಿನ ಸುತ್ತಲೂ ಬಾಗಿಲ ಕಾರುಗಳು ನಿಂತು ಬಾಡಿಗೆಗೆ ಓಡಿಸುತ್ತಿರುವುದರಿಂದ ಟ್ಯಾಕ್ಸಿ ಮಾಲೀಕರುಗಳಿಗೆ ತುಂಬಾ ನಷ್ಟವುಂಟಾಗುತ್ತಿದೆ ಬಸ್ಸಿನ ಮಾಲೀಕರುಗಳು ನಾರಾಯಣನಿಗಳಲ್ಲಿ ಬಸ್ಸುಗಳು ಸ್ಟಾಂಡನ್ನು ಬಿಟ್ಟು ಪಸ್ಟ್ ಮತ್ತು ಹೋಟೇಲುಗಳಿಗೆ ಹೋಗಿ ಪ್ರಯಾಣಿಕರನ್ನು ಕರೆದು ಕೊಂಡು ಹೋಗುತ್ತಿರುವುದರಿಂದ ಟ್ಯಾಕ್ಸಿಯವರಿಗೆ ಬಹಳ ನಷ್ಟ ಉಂಟಾಗುತ್ತಿದೆ. ಸರ್ಕಾರದವರು ಇದನ್ನು ತಪ್ಪಿಸಬೇಕು ಎಂದು ಮೈಸೂರು ನಗರದ ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷರು ಪ್ರಾರ್ಥಿಸಿರುತ್ತಾರೆ

೫ ಪಲ್ಲ ಭತ್ತ ಕುಟ್ಟಿಸಲು ರಹದಾರಿ

ಒಂದು ಬಾರಿಗೆ ೧೦೦ ಸೇರು ಬತ್ತವನ್ನು ಕುಟ್ಟಿ ಸಲು ಲೈಸೆನ್ಸು ಇರಬೇಕೆಂದು ವಾರಾಡಿಸಿ ರಹದಾರಿ ಕೊಡಬೇಕೆಂದು ಸರ್ಕಾರದವರು ಮಾಡಿದ್ದ ಆಜ್ಞೆಯಿಂದ ಜನರಿಗೆ ತೊಂದರೆಯಾಗುತ್ತಿದೆಯೆಂದು ದೂರು ಬಂದಿರುವುದರಿಂದ ೫ ಪಲ್ಲ ಭತ್ತವನ್ನು ಕುಟ್ಟಿಸಲು ಲೈಸೆನ್ಸು ಇನ್ಸ್‌ಪೆಕ್ಟರವರು ರಹದಾರಿ ಕೊಡಬಹುದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ,

ಗ್ರಾಮಾಭಿವೃದ್ಧಿಗೆ ಸಹಾಯ ಬೇಕು

ಮೈಸೂರು ತಾಲ್ಲೂಕು ಹುಯಿಲಾಳು ಗ್ರಾಮದ ಪಂಚಾಯಿತಿ ಕಟ್ಟಡಕ್ಕೆ ೨೦೦೦ ರೂ ಗ್ರಾಂಟು, ರಸ್ತೆ ರಿಪೇರಿಗಾಗಿ ೫೦೦ ರೂ ಜಿಲ್ಲಾ ಬೋರ್ಡಿನಿಂದ ಆಸ್ಪತ್ರೆ ಮತ್ತು ಕುಡಿಯುವ ನೀರಿನ ಬಾವಿಗಳನ್ನು ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರೂ ಇಲ್ಲಿಯವರೆಗೆ ಯಾವ ಪ್ರಯೋಜನವೂ ಉಂಟಾಗಿಲ್ಲ. ನೂತನ ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿಯವರಾದರೂ ಸಹಾಯ ಮಾಡಬೇಕೆಂದು ಅಲ್ಲಿನ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಹೆಚ್. ಪಿ ರಾಮಚಂದ್ರಯ್ಯನವರು ಕೋರಿರುತ್ತಾರೆ.

ರಾಜಕಮಲ್

ಮೈಸೂರು

1-4-49 ರಿಂದ

ಅಪೋಘವಾದ ೨ ನೇ ವಾರ

ಪ್ರತಿ ದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ: ವರಲಕ್ಷ್ಮಿ, ಲಕ್ಷ್ಮೀ ರಾಜ್ಯಂ, ಪ್ರಕಾಶ ರಾವ್, ಪ್ರಸಾದ್

MORNING SHOWS

From 1-4-49 for 4 days

ROMAN SCANDALS

With

EDDIE CANTOR

ಚಾಮುಂಡೇಶ್ವರಿ ಟಾಕೀಸ್

1-4-49ನೇ ಶುಕ್ರವಾರದಿಂದ

ಯಶಸ್ವಿಯಾದ ೬ ನೇ ವಾರ

ಶೋಭನಾಚಲರವರ

ಕೀಲು ಗುರ್ರಂ

(ತೆಲುಗು)

ನಟವರ್ಗ:- ಅಂಜಲಿ ದೇವಿ ನಾಗೇಶ್ವರ ರಾವ್

ಗಣೇಶಾ ಟಾಕೀಸ್

1—4—49ನೇ ಶುಕ್ರವಾರದಿಂದ

ಅಪೋಘವಾದ ೨ ನೇ ವಾರ

ಜಯ ಪ್ರಕಾಶ್‌ರವರ ತಮಿಳು ಚಿತ್ರ

ಭೋಜ್

— ತಾರಾಗಣ —

ಪಿ ಎಸ್ ಗೋವಿಂದರ್, ಕಾಳಿ ಎನ್ ರತ್ನಂ ವರಲಕ್ಷ್ಮೀ, ರಾಜಕಾಂತಂ.ಲಲಿತ ಪದ್ಮಿನಿ

ಜಪದ ಕಟ್ಟೆ ಮಠದ ವಿಚಾರ

ಮೈಸೂರು ಲಷ್ಕರ್ ಮೊಹಲ್ಲಾ ಕೋಟೆ ರೋಡಿನಲ್ಲಿರುವ ಅರಮನೆಗೆ ಸೇರಿದ ಶ್ರೀ ಜಪದ ಕಟ್ಟೆ ಮಠದ ಕಟ್ಟಡ ಸ್ಥಾನಕ್ಕೆ ಶಾಸ್ತ್ರೋಕ್ತ್ಯಾ ಸಕಲ ವಿಧಿವರ ಬಹು ಮಹತ್ತರವಾದ ಸರಿಯಾದ ... ವನ್ನು ಆರಿಸಲು ಮತ್ತು ಕಾರ್ಯಕ್ರಮ ನಡೆಸಲು ಸಹಾ ಸಕಲ ವೀರಶೈವರು, ಶ್ರೀಮನ್ಮಹಾರಾಜರವರಿಗೆ ಕರುವ ಅರ್ಜಿಯಂತೆ ಸದರೀ ಮಠದ ... ವ. ಕೀಶರ ವರ್ಗದವರಿಗೂ, ವೀರಶೈವರಿಗೂ, ಯಾವ ವಿಧದಲ್ಲೂ ಚ್ಯುತಿ ಬಾರದ ರೀತ್ಯಾ ಕಾರ್ಯಕ್ರಮ ನಡೆಸಲು ಅಪ್ಪಣೆಯಪಾಲಿಸಬೇಕಾಗಿ ನಮ್ಮ ಶ್ರೀಮನ್ಮಹಾರಾಜರವರಲ್ಲಿ ಪ್ರಾರ್ಥಿಸುವೆ.

ಅರಮನೆ ಜಪದ ಕಟ್ಟೆ ಮಠದ ಅಧ್ಯಕ್ಷ

ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು

ಪ್ರಭುದೇವಾ ಟಾಕೀಸಿನಲ್ಲಿ

• ಗೀತಾ ಗಾಂಧಿ •

ಮ್ಯಾಟಿನಿ ೩-೩೦ ಮೊದಲನೆಯ ಆಟ ೬-೩೦ ಎರಡನೆಯ ಆಟ ರಾತ್ರಿ ೧೦

ಪೆರಿಯನಾಯಕಿ, ಟಿ.ಆರ್. ರಾಮಚಂದ್ರನ್, ಲಲಿತಾ ಪದ್ಮಿನಿ, ಬೇಬಿ ಸರೋಜ ಮತ್ತು ಪದ್ಮ ಪಾತ್ರವಹಿಸಿರುವ ತಮಿಳು ಚಿತ್ರ

1-4-49 ರಿಂದ

ಅಪೋಘ 2ನೇ ವಾರ

For Quality Paper & Books Please Call on

* RAO & CO., *

1273, Yelwal Road, Mysore.

(Dharmaparayana Srimati Alamma's Choultry Buildings)

	Rate per Ream	Per Quire
1) Mysore White-ledger Fools-cap 10 lbs	8-12-9	0-7-10
2) Mysore Buff Fools-cap 10 lbs.	6-4-4	0-5-9
3) Mysore White-ledger D. Crown 26 lbs.	22-13-9 (in reams only)	
4) Mysore White-ledger D. Demy 34 lds.	29-14-9	
5) Foreign Fools cap 16 lbs (Double)	14-8-0	0-13 0
6) Foreign Fools-cap 8lbs.	7-6-0	0-6-0
7) Parchment 20×30 (Butter)	17-0-0 (Ream lot)	
8) Manifold Colour 17×23	10-0-0	
9) Machanical Printing 24 lbs. D Crown	11-8-0	
10) Swedish Kraft 22½×35 19 lbs	14-0-0	
11) Wood Free D. Crown 40 lbs.	35 0 0	
12) Wood Free Writing D Fools-cap 20 lbs.	17-0-0	

Students' Note Books & Exercise Books Etc at reasonable rates

ಫೋನ್ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೨] ಶುಕ್ರವಾರ ೧-೪-೧೯೪೯ [ಸಂಚಿಕೆ ೨೮೧

ಕಾರ್ಡು ಕವರಿನ ಬೆಲೆ ಇಂದಿನಿಂದ ಏರಿತು

ರಾಜಧಾನಿಗೆ ವಿಮಾನ ಸಂಚಾರ ಸೌಕರ್ಯ

ಮೈಸೂರು ೧

ಮೊದಲೇ ತಿಳಿಸಿದ್ದಂತೆ ಭಾರತದ ಏರ್ ವೇಸ್ ಕಂಪೆನಿಯವರು ಮದರಾಸಿನಿಂದ ರು ವಾ ೦ ಕೂ ರಿ ಗೆ ಬೆಂಗಳೂರು ಮೈಸೂರು, ಕೊಯಮುತ್ತೂರು ಮಾರ್ಗವಾಗಿ ಈ ದಿನದಿಂದ ವಿಮಾನ ಸಂಚಾರವನ್ನು ಏರ್ಪಡಿಸಿದ್ದಾರೆ. ಮದರಾಸಿನಿಂದ ಬೆಳಗ್ಗೆ ಹೊರಟ ವಿಮಾನವು ಮೈಸೂರಿಗೆ ೧೧೦ ಘಂಟೆಗೆ ಬಂದಿತು. ನಂತರ ತಿರುವಾಂಕೂರಿನಿಂದ ಅದು ವಾಪಸು ಮಧ್ಯಾಹ್ನ ೩-೩೫ಕ್ಕೆ ಬಂದು ಮದರಾಸಿಗೆ ತೆರಳಿತು.

ಮದ್ರಾಸಿನ ಮಂತ್ರಿ ಮಂಡಲದ ರಚನೆಗೆ ಆಹ್ವಾನ

ಮದರಾಸಿನ ಪ್ರಧಾನಿ ಓಮಂದೂರ್ ರಾಮಸ್ವಾಮಿ ರೆಡ್ಡಿಯಾರ್‌ರವರು ಗೌರ್ನರ್‌ರಿಗೆ ಮಂತ್ರಿಮಂಡಲದ ರಾಜೀನಾಮೆಯನ್ನು ನೆನ್ನೆ ಮಧ್ಯಾಹ್ನ ಒಪ್ಪಿಸಿದರು. ಗೌರ್ನರರು ಕಾಂಗ್ರೆಸ್ಸ್ ಪಕ್ಷದ ನೂತನ ನಾಯಕರಾದ ಶ್ರೀ॥ ಕುಮಾರಸ್ವಾಮಿ ರಾಜಾರವರನ್ನು ಮಂತ್ರಿ ಮಂಡಲ ರಚಿಸುವಂತೆ ಪ್ರಾರ್ಥಿಸಿದುದರ ಮೇಲೆ ಅವರು ಒಪ್ಪಿ ಕಾಲಾವಕಾಶ ಬೇಡಿದರು

ಆಹಾರ ಪರಿಶೀಲನೆ ಬಗ್ಗೆ ಬಹಿರಂಗ ಸಭೆ

ರಾಜಧಾನಿಯಲ್ಲಿ ಕಾಳ ಸಂತೆಯನ್ನು ನಿರ್ಮೂಲ ಮಾಡಿ, ಆಹಾರ ಪದಾರ್ಥಗಳು ಜನರಿಗೆ ಸರಿಯಾದ ಬೆಲೆಗೆ ದೊರೆಯುವಂತೆಯೂ ಮತ್ತು ಅಳತೆ ತೇರು ಮತ್ತು ತೂಕದ ಒಟ್ಟುಗಳನ್ನು ಕ್ರಮಪಡಿಸುವಂತೆಯೂ ಏರ್ಪಾಡು ಮಾಡಲು ಇದೇ ೮ರ ನೇ ತಾ॥ ಚಿಕ್ಕ ಮೊಹಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ (ಮಹಾತ್ಮ ಬಿಸ್ಕತ್ ಫ್ಯಾಕ್ಟರಿ) ಬಹಿರಂಗ ಸಭೆಯು ನಡೆಯುವುದೆಂದು ಮೊಹಲ್ಲಾ ಸಮಿತಿಯ ಸಂಚಾಲಕರಾದ ಶ್ರೀ ಎ ಎಸ್ ಕೃಷ್ಣಮೂರ್ತಿಯವರು ತಿಳಿಸುತ್ತಾರೆ

ಪ್ಲಾಸ್ಟಿಕ್ ಗಡಿಯಾರದ ಪಟ್ಟಿಯಿಂದ ತೊನ್ನು?

ಪ್ಲಾಸ್ಟಿಕ್‌ನಿಂದ ತಯಾರಾದ ಗಡಿಯಾರವನ್ನು ಕಟ್ಟಿಕೊಳ್ಳುವ ಪಟ್ಟಿಯಿಂದ ಬಿಳಿ ತೊನ್ನು ರೋಗವು ಬರುವುದೆಂದ ಮದರಾಸ್ ಶಾಸನ ಸಭೆಯಲ್ಲಿ ಸದಸ್ಯರು ಹೇಳಿಯ ಪಟ್ಟಿರುವುದರಿಂದ ಬೆಂಗಳೂರಿನ ಅನೇಕ ಜನರು ಅದನ್ನು ಉಪಯೋಗಿಸಲು ಹೆದರುತ್ತಿರುವರೆಂದೂ, ಪ್ರಾರಂಭದಲ್ಲಿ ಅದರ ಮೇಲಿದ್ದ ವ್ಯಾಮೋಹ ಈಗ ಸಂಪೂರ್ಣ ನಿಂತುಹೋಗಿದೆ ಎಂದೂ ಹೇಳಲಾಗಿದೆ

ಪೋಷಕರ ದಿನಾಚರಣೆ

ನಂಜನಗೂಡಿನ ಪ್ರೈಮರಿ ಮತ್ತು ಸ ಸಿ ಸ್ಕೂಲಿನ ಪೋಷಕರ ದಿನಾಚರಣೆ ಇದೇ ೩ ನೇ ತಾ॥ ಭಾನುವಾರ ಸಂಜೆ ೫-೦ ಗಂಟೆಗೆ ಸ್ಪೆಷಲ್ ಸೆಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಟಿ ಗೋಪಾಲನವರ ಅಧ್ಯಕ್ಷತೆಯಲ್ಲಿ ನಡೆಯುವುದು

ಕಾರ್ಡು, ಕವರು ಬೆಲೆ ಹೆಚ್ಚಿತು

ಇಂದಿನಿಂದ ಕಾರ್ಡಿನ ಬೆಲೆಯನ್ನು ... ಕವರಿನ ಬೆಲೆಯನ್ನು ... ಏರಿಸಲಾಗಿದೆ

ಚಿನ್ನದ ಗಣಿ ಮುಷ್ಕರ ಮುಕ್ತಾಯ

ಸ್ವಂ ಸು ಪ್ರೋ॥] ಬೆಂಗಳೂರು ೧

ಕಳೆದ ೩ ತಿಂಗಳಿನಿಂದಲೂ ಮುಷ್ಕರ ಹೂಡಿದ್ದ ಚಿನ್ನದಗಣಿ ಕೆಲಸಗಾರರೆಲ್ಲರೂ ನೆನ್ನೆಯಿಂದ ಕೆಲಸಕ್ಕೆ ಹಿಂತಿರುಗಿರುವರು

ಭಾರತ ಸರ್ಕಾರಕ್ಕೆ ಮೈಸೂರು ಶಾಖೆಗಳ ವರ್ಗ ಇಲ್ಲ

ಮೈಸೂರು ಸರ್ಕಾರದವರು ವಿಮಾನ ತೆರಿಗೆ, ಆಕಾಶವಾಣಿ, ಮೈಸೂರು ರೈಲ್ವೆಗಳು ಮತ್ತು ಟೆಲಿಫೋನ್ ಶಾಖೆಗಳನ್ನು ಭಾರತ ಸರ್ಕಾರಕ್ಕೆ ವಹಿಸಲಿರುವರೆಂದೂ ಮತ್ತು ೧೯೫೦ರ ವೇಳೆಗೆ ಮೈಸೂರು ಸರ್ಕಾರದವರೇ ೩ ಕೋಟಿ ರೂ ಅನ್ನು ಕೇಂದ್ರ ಸರ್ಕಾರಕ್ಕೆ ಕೊಡುವರೆಂದೂ ಪತ್ರಿಕೆಗಳಲ್ಲಿ ಬಂದಿರುವ ವರದಿಯು ನಿರಾಧಾರವಾದುದೆಂದೂ, ಈ ಅಂಶಗಳ ಬಗ್ಗೆ ಇನ್ನೂ ಪರಿಶೀಲನೆ ಮತ್ತು ಮಾತುಕತೆಗಳು ನಡೆಯುತ್ತಿರುವುವೆಂದೂ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ

ಖಲೀಲ್‌ರವರ ವರ್ಗ

ಪ್ರೆಸ್ ಕಮೀಷನರಾದ ಜನಾಬ್ ಖಲೀಲ್‌ರವರನ್ನು ಆಹಾರ ಶಾಖೆಯ ಕಾರ್ಯದರ್ಶಿಗಳಾಗಿ ವರ್ಗಾಯಿಸಲಾಗಿದೆ. ಪ್ರಚಾರಾಧಿಕಾರಿ ದೊರೆಸ್ವಾಮಿರವರನ್ನು ಪ್ರೆಸ್ ಕಮೀಷನರನ್ನಾಗಿ ನೇಮಿಸಲಾಗಿದೆ

○ ಭಾರತದ ವಿಶ್ವವಿದ್ಯಾಲಯ ಗಳ ಪುನರ್‌ರಚನಾ ಸಮಿತಿಯವರು, ಈ ದಿನ ಮಧ್ಯಾಹ್ನ ಇಲ್ಲಿಗೆ ಆಗಮಿಸುವರು. ೭ನೇ ತಾ॥ ವರೆಗೆ ಸಂಸ್ಥಾನದಲ್ಲಿದ್ದು ಬೆಂಗಳೂರು ಮತ್ತು ಮೈಸೂರುಗಳಲ್ಲಿ ವಿದ್ಯಾ ಸಂಸ್ಥೆಗಳಿಗೆ ಭೇಟಿ ಕೊಡುವರು

○ ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ನಾಳೆ ದಿನ ದೆಹಲಿಯಿಂದ ಹಿಂತಿರುಗುವರು

ಸೂರತ್ತಿನ ಬಳಿ ಭಾರಿ ಬೆಂಕಿ

ಸೂರತ್ತಿನ ಹತ್ತಿರವಿರುವ ಕಾಡಿನಲ್ಲಿ ಕಳೆದ ೧೫ ದಿನಗಳಿಂದಲೂ ಭಾರಿ ಬೆಂಕಿ ಉರಿಯುತ್ತಿದೆಯೆಂದೂ, ಇದರ ಸುತ್ತಮುತ್ತಲಿನ ೬೦೦ ಹಳ್ಳಿಯ ಜನರನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆಯೆಂದೂ, ವರದಿಯಾಗಿದೆ. ಕಾಡಿನಲ್ಲಿದ್ದ ಹುಲಿ ಮತ್ತು ಇತರ ಪ್ರಾಣಿಗಳು ... ಹಳ್ಳಿಗಳಿಗೆ ನುಗ್ಗುತ್ತಿವೆಯೆಂದೂ ... ಅನಾಹುತದಿಂದ ... ಲಕ್ಷ ರೂ ನಷ್ಟ ಉಂಟಾಗಿದೆಯೆಂದೂ ಹೇಳಲಾಗಿದೆ

ಬಲಾತ್ಕಾರದ ವ್ಯವಸಾಯ ಶಾಸನ

ಸ್ವಂ ಸು ಪ್ರೋ॥] ಬೆಂಗಳೂರು ೧

ಸಂಸ್ಥಾನದಲ್ಲಿ ಸಾಗುವಳಿಗೆ ಯೋಗ್ಯವಾದ ಜಮೀನುಗಳಲ್ಲೆಲ್ಲ ಆಹಾರ ಧಾನ್ಯವನ್ನು ಬೆಳೆಯಬೇಕೆಂದು ಬಲಾತ್ಕಾರ ಪಡಿಸುವ ಶಾಸನವೊಂದನ್ನು ಮುಂದಿನ ತಿಂಗಳು ನಡೆಯಲಿರುವ ಪ್ರಜಾ ಪ್ರತಿನಿಧಿ ಸಭೆಯ ಮುಂದೆ ಮಂಡಿಸಲು ಸರ್ಕಾರದವರು ಆಲೋಚಿಸುತ್ತಿರುವುದಾಗಿ ಕಾರ್ಮಿಕ ಸಚಿವರಾದ ಶ್ರೀ ಕೆ ಟಿ ಬಾಷ್ಯಂರವರು ತಿಳಿಸಿರುತ್ತಾರೆ. ಸಂಸ್ಥಾನದಲ್ಲಿ ೨೦ ಲಕ್ಷ ಎಕರೆ ಜಮೀನು ಸಾಗುವಳಿಗೆ ಯೋಗ್ಯವಾಗಿದೆಯೆಂದೂ, ೧೯೫೧ರಿಂದ ಧಾನ್ಯವನ್ನು ಹೊರದೇಶಗಳಿಂದ ತರಿಸುವುದನ್ನು ನಿಲ್ಲಿಸಲು ಭಾರತ ಸರ್ಕಾರದವರು ನಿರ್ಧರಿಸಿರುವುದರಿಂದ ಈ ಕಾರ್ಯಕ್ರಮ ಕೈಗೊಳ್ಳಬೇಕಾಗಿದೆಯೆಂದು ಅವರು ಹೇಳಿರುತ್ತಾರೆ

ಲಾರಿ ಹರಿದು ಸ್ಯಾನಿಟರಿ ಇನ್‌ಸ್ಪೆಕ್ಟರ ಮರಣ

ಮೈಸೂರು ೧

ಪುರಸಭೆಗೆ ಸೇರಿದ ಲಾರಿಯೊಂದು ಈ ದಿನ ಬೆಳಗ್ಗೆ ೧೧-೩೦ ಗಂಟೆಯ ಹೊತ್ತಿನಲ್ಲಿ ಕನ್ನೇಗೌಡನ ಕೊಪ್ಪಲಿನಿಂದ ಕಸ ತುಂಬಿಕೊಂಡು ಹಿಂತಿರುಗುತ್ತಿದ್ದಾಗ, ಅಲ್ಲಿ ಸ್ಯಾನಿಟರಿ ಇನ್‌ಸ್ಪೆಕ್ಟರಾದ ಶ್ರೀ ಗೋವಿಂದಪ್ಪನವರು ಅದನ್ನು ನಿಲ್ಲಿಸಿ, ಇನ್ನೂ ಅಲ್ಲಿ ಬಿದ್ದಿದ್ದ ಕಸವನ್ನು ತುಂಬಿಕೊಂಡು ಹೋಗಲು ಸೂಚನೆಯಿತ್ತರೆಂದೂ, ಪುನಃ ಹಿಂದುಗಡೆ ತಿರುಗಿಸಿ ಡ್ರೈವರನು ಲಾರಿಯನ್ನು ಹಿಂದಕ್ಕೆ ನಡೆಸಿದನೆಂದೂ, ಸೈಕಲ್ ಮೇಲೆ ಕುಳಿತು ಲಾರಿಯನ್ನು ಹಿಡಿದುಕೊಂಡಿದ್ದ ಶ್ರೀ ಗೋವಿಂದಪ್ಪನವರು ಕೆಳಕ್ಕೆ ಬಿದ್ದರೆಂದೂ, ಅವರ ಮೇಲೆ ಲಾರಿಯು ಹರಿದು ಅವರಿಗೆ ತೀವ್ರ ಗಾಯಗಳಾದವೆಂದೂ, ಅನಂತರ ಅವರು ಆಸ್ಪತ್ರೆಯಲ್ಲಿ ಮರಣ ಹೊಂದಿದರೆಂದೂ ಹೇಳಲಾಗಿದೆ

ಶ್ರೀ ರಾಮೋತ್ಸವ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ಶ್ರೀ ದೊಡ್ಡ ರಾಮ ದೇವಸ್ಥಾನದಲ್ಲಿ ನೆನ್ನೆಯಿಂದ ಗರ್ಭ ನವರಾತ್ರ ಮತ್ತು ಶ್ರೀ ರಾಮ ನವಮಿ ಉತ್ಸವಗಳು ... ಇದೇ ... ತಾ॥ ... ಪ್ರತಿ ದಿನ ... ಸಂಗೀತ ಹರಿಕಥೆ ... ನಡೆಯುವುವು

ಬಿ. ಕ್ಲಾಸಿನವರಿಗೆ ಸಹಾಯದ ಅಕ್ಕಿ ನುಚ್ಚು

ಮೈಸೂರು ೧

ನಗರದ ಚೀಫ್ ರೇಷನಿಂಗ್ ಅಧಿಕಾರಿಗಳಾದ ಶ್ರೀ ಸಿ ನರಸಿಂಹಮೂರ್ತಿಯವರು ಈ ದಿನ ಬೆಳಗ್ಗೆ ಪತ್ರಿಕಾ ಸಮ್ಮೇಳನವನ್ನು ನಡೆಸಿ, ಆಹಾರದ ಪರಿಸ್ಥಿತಿಯನ್ನು ವಿವರಿಸಿದರು

ರಾಗಿ ಮತ್ತು ಜೋಳದ ಸ್ಟಾಕು ಕಡಿಮೆ ಇರುವುದರಿಂದ ಬಿ ಕ್ಲಾಸ್ ಕಾರ್ಡುದಾರರಿಗೆ ಈ ತಿಂಗಳಿನ ಮೊದಲನೆ ವಾರದಲ್ಲಿ ರಾಗಿ ಮತ್ತು ಸಹಾಯದಿಂದ ಬಂದಿರುವ ಅಕ್ಕಿ ನುಚ್ಚನ್ನು ಕೊಡಲಾಗುವುದು. ಅದನ್ನು ರೂ ೧ಗೆ ೫ ಸೇರಿನಂತೆ ಮಾರಲಾಗುವುದು. ದ್ವಿದಳ ಧಾನ್ಯಗಳ ಅಭಾವವಿರುವುದರಿಂದ ಮುಸುಕಿನ ಜೋಳವನ್ನು ಬಿ ಕ್ಲಾಸಿನವರು ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸಲಾಗುವುದು. ಅದನ್ನೂ ಸಹ ರೂ ೧ಗೆ ೫ ಸೇರಿನಂತೆ ಮಾರಲಾಗುವುದು. ಎ ಕ್ಲಾಸಿನವರು ಕೇಳಿದಲ್ಲಿ ಗೋಧಿ ಬದಲು ನುಚ್ಚನ್ನು ಕೊಡಲಾಗುವುದು. ಫೆಬ್ರವರಿ ತಿಂಗಳಿನಲ್ಲಿ ೨೨೦೦ ಸುಳ್ಳು ರೇಷನ್ ಕಾರ್ಡುಗಳನ್ನು ವಜಾ ಮಾಡಲಾಯಿತು. ಕಳೆದ ೨। ವರ್ಷಗಳಲ್ಲಿ ೬ ಅಕ್ರಮ ದಾಸ್ತಾನು, ೬ ಅಕ್ರಮ ರವಾನೆ, ರೇಷನ್ ಪದಾರ್ಥಗಳನ್ನು ದುರುಪಯೋಗಿಸಿದ ೬ ಹೋಟೇಲುಗಳು, ೩ ಕಡಿಮೆ ಅಳತೆ ಮೊಕದ್ದಮೆಗಳನ್ನು ಹೂಡಲಾಯಿತು ಎಂದು ಅವರು ತಿಳಿಸಿದರು

ಮೈನ್ ಆಸ್ಫೋಟನೆಯಿಂದ ೫೦ ಜನರ ಮರಣ

ಜಪಾನಿನ ನಾರ್ದೇಟ್ ಎಂಬ ಪಟ್ಟಣದ ಸಮುದ್ರ ತೀರದಲ್ಲಿದ್ದ ಭಾರಿ ಮೈನು ಆಸ್ಫೋಟನೆಯಾಗಿ, ಅದನ್ನು ನೋಡಲು ಹೋಗಿದ್ದ ಜನರ ಪೈಕಿ ೫೦ ಮಂದಿ ಸತ್ತರೆಂದೂ ೧೦೦ ಜನರಿಗೆ ಗಾಯಗಳಾದುವೆಂದೂ ವರದಿಯಾಗಿದೆ

ಬೊಂಬಾಯಿನಲ್ಲಿ ಎಲ್ಲ ವಿಧವಾದ ಜೂಜುಗಳ ರದ್ದು

ಕುದುರೆ ಜೂಜು ಅಲ್ಲದೆ ಇತರ ಎಲ್ಲಾ ವಿಧವಾದ ಜೂಜುಗಳನ್ನೂ ರದ್ದುಮಾಡಲು ಬೊಂಬಾಯಿ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಲಿದ್ದಾರೆಂದು ಹೇಳಲಾಗಿದೆ

ಸೋಷಲಿಸ್ಟ್ ಪಕ್ಷದ ಸಭೆ

ಸೋಷಲಿಸ್ಟ್ ಪಕ್ಷ (ಕರ್ನಾಟಕ) ದ ಮೈಸೂರು ನಗರದ ಕಾರ್ಯಕರ್ತರುಗಳ ಮತ್ತು ಹಿತೈಷಿಗಳ ಸಭೆಯು ೩ ನೇ ಏಪ್ರಿಲ್ ಭಾನುವಾರ ಸಂಜೆ ೬॥ ಘಂಟೆಗೆ ಪಕ್ಷದ ಕಾರ್ಯಾಲಯದಲ್ಲಿ ಸೇರಲಿದೆ. ಪಕ್ಷದ ಎಲ್ಲಾ ಕಾರ್ಯಕರ್ತರೂ ಹಿತೈಷಿಗಳೂ ತಪ್ಪದೆ ಭಾಗವಹಿಸಬೇಕಾಗಿ ಕಾರ್ಯದರ್ಶಿಗಳು ಕೋರಿದ್ದಾರೆ

ಸಂಗೀತರತ್ನ ಚೌಡಯ್ಯನವರಿಗೆ ನೆಹರೂ ಸತ್ಕಾರ

ಮೈಸೂರಿನ ಸುಪ್ರಸಿದ್ಧ ಪಿಟೀಲು ವಾದಕರಾದ ಸಂಗೀತ ರತ್ನ ಟಿ ಚೌಡಯ್ಯನವರ ... ಗೌರವಾರ್ಥವಾಗಿ ಭಾರತದ ಪ್ರಧಾನಿ ಪಂಡಿತ ನೆಹರೂರವರು ಮೊನ್ನೆ ದಿನ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು

ನೈಜಾಮರ ಆಸ್ತಿ ಪಾಸ್ತಿಗಳ ಪಟ್ಟಿ

ಹೈದರಾಬಾದ ನೈಜಾಮರಿಗೆ ಸೇರಿದ ಆಸ್ತಿಪಾಸ್ತಿಗಳ ಪಟ್ಟಿಯನ್ನು ತಯಾರಿಸ ಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಅಮೂಲ್ಯ ಆಭರಣಗಳ ಪ್ರಕೆ, ನೈಜಾಮರಿಗೆ ಮತ್ತು ಸರ್ಕಾರಕ್ಕೆ ಯಾವುದು ಸೇರಿದ ಎಂಬುದರ ಬಗ್ಗೆ ಯೂ ಪಟ್ಟಿ ತಯಾರಿಸಬೇಕೆಂದು ಆಜ್ಞೆ ಯಾಗಿದೆ ಈ ಅಮೂಲ್ಯ ಆಭರಣಗಳು ಅಗಾಧವಾಗಿರುವುದರಿಂದ ಪಟ್ಟಿಯನ್ನು ತಯಾರಿಸಲು ೩ ಅಥವ ೪ ತಿಂಗಳುಗಳು ಆಗ ಬಹುದೆಂದು ಹೇಳಲಾಗಿದೆ

ರಂಗೂನಿನಲ್ಲಿ ಹೋರಗಡೆ ಗಲಭೆಕೋರರ ಸೈನ್ಯ

ಹಲವಾರು ಗಲಭೆ ಕೋರರು ರಂಗೂನಿನ ಹೊರಭಾಗವನ್ನು ಹೆಚ್ಚಾಗಿ ನವನ್ನು ವಶಪಡಿಸಿಕೊಳ್ಳುತ್ತಿರುವರೆಂದು ವರದಿಯಾಗಿದೆ ಕಮ್ಯೂನಿಸ್ಟರ ಸೈನ್ಯ ಸೇನಸ್ ಸಂಸ್ಥಾನದ ಕೆಲವು ಸ್ಥಳಗಳನ್ನು ರಂಗೂನಿನಲ್ಲಿ ವಶಪಡಿಸಿ ಕೊಂಡಿರುವರೆಂದು ಹೇಳಲಾಗಿದ ರಂಗೂನ್ ನಗರದಲ್ಲಿ ಸಂಜೆ ಕರ್ಫ್ಯೂ ಆಜ್ಞೆ ಜಾರಿಗೆ ತರಲಾಗಿದ

ಸಮತಾವಾದಿಗಳ ಸಮ್ಮೇಳನ

ಕರ್ನಾಟಕ ಪ್ರಾಂತ ಸಮತಾವಾದಿ ಪಕ್ಷದ ಎಲ್ಲಾ ಕಾರ್ಯನಿರ್ವಾಹಕರ ಸಭೆಯು ಬೆಂಗಳೂರಿನಲ್ಲಿ ಕಳೆದ ೨೭ನೇ ತಾ|| ನಡೆದು ಶ್ರೀಗಳಾದ ಎನ್ ನಾಗಭೂಷಣ ಮತ್ತು ಶ್ರೀ ಎಸ್ ರಾಮಸ್ವಾಮಿಯವರನ್ನು ಸರ್ಕಾರದವರು ಬಂಧನದಲ್ಲಿಟ್ಟಿರುವುದನ್ನು ಖಂಡಿಸಿ, ಅವರ ಮೇಲೆ ಆಪಾದನೆಯಿದ್ದಲ್ಲಿ ವಿಚಾರಣೆಗೆ ಗುರಿಪಡಿಸಬೇಕೆಂದು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು

ಪಕ್ಷದ ತೃತೀಯ ವಾರ್ಷಿಕ ಅಧಿವೇಶನವು ಶಿವಮೊಗ್ಗದಲ್ಲಿ ಮುಂದಿನ ತಿಂಗಳು ೧೭, ೧೮ ಮತ್ತು ೧೯ ನೇ ತಾ||ಗಳಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆಯುವುದು

ಸಿರಿಯಾದಲ್ಲಿ ಮಿಲಿಟರಿ ಸರ್ಕಾರ

ಸಿರಿಯಾದ ಶ್ರೇಷ್ಠ ದಂಡನಾಯಕರಾದ ಜ|| ಹುಸನಿ ಜಾಯಿಂರವರು ಸರ್ಕಾರವನ್ನು ಉರುಳಿಸಿ, ತಾವೇ ಡಿಕ್ಟೇಟರಾಗಿ ಮಿಲಿಟರಿ ಸರ್ಕಾರವನ್ನು ಸ್ಥಾಪಿಸಿರುವುದಾಗಿ ತಿಳಿಸಿರುತ್ತಾರೆ ದೇಶದಾದ್ಯಂತ ಮಾರ್ಷಲ್‌ಲಾವನ್ನು ಆಚರಣೆಗೆ ತಂದು, ಸಂಜೆ ಕರ್ಫ್ಯೂವನ್ನು ಜಾರಿಗೆ ತರಲಾಗಿದೆ

೨೪ ಗಂಟೆಗಳಲ್ಲಿ ಚಂದ್ರನನ್ನು ಮುಟ್ಟಬಹುದು

ರಾಕೆಟ್ ಮೂಲಕ ಚಂದ್ರನನ್ನು ಕೇವಲ ೨೪ ಗಂಟೆಗಳಲ್ಲಿ ಮುಟ್ಟಬಹುದೆಂದು ಅಮೇರಿಕದ ವಿಜ್ಞಾನಿಕರಾದ ಡಾ|| ಲಿಯಾನ್ ಮೋರ್ಗ್ವಾನ್‌ರವರು ಅಭಿಪ್ರಾಯ ಪಟ್ಟಿರುತ್ತಾರೆ

ಶಾಲೆಯು ಕುಸಿದು ಬಿದ್ದು ೧೩ ಜನರ ಮರಣ

ಕೈರೋವಿನ ಹತ್ತಿರವಿರುವ, ಹಳ್ಳಿಯ ಶಾಲೆಯೊಂದರ ಮೇಲ್‌ಚಾವಣಿಯು ಕುಸಿದು ಬಿದ್ದು ೧೩ ಜನ ವಿದ್ಯಾರ್ಥಿಗಳು ಮರಣ ಹೊಂದಿದರೆಂದೂ ೮ ಜನರಿಗೆ ಗಾಯಗಳಾದವೆಂದೂ ವರದಿಯಾಗಿದ

ರಾಜರ ಬಿರುದುಗಳಿಗೆ ನಿಷೇಧವಿಲ್ಲ

ಸರ್ಕಾರದ ವ್ಯವಹಾರಗಳಲ್ಲಿ ಬಿರುದುಗಳನ್ನು ನಮೂದಿಸಕೂಡದೆಂಬ ಕೇಂದ್ರ ಸರ್ಕಾರದ ಆಜ್ಞೆಯು ರಾಜರುಗಳಿಗೆ ಅನ್ವಯಿಸುವುದಿಲ್ಲವೆಂದು ಸರ್ದಾರ್ ಪಟೇಲರು ತಿಳಿಸಿರುತ್ತಾರೆ

ಮರಣ ದಂಡನೆ ವಜಾ ಇಲ್ಲ

ಸಧ್ಯಕ್ಕೆ ಮರಣ ದಂಡನೆಯನ್ನು ವಜಾ ಮಾಡಲಾಗುವುದಿಲ್ಲವೆಂದು ಭಾರತ ಸರ್ಕಾರದ ಉಪಪ್ರಧಾನಿ ಸರ್ದಾರ್ ಪಟೇಲರು ತಿಳಿಸಿರುತ್ತಾರೆ

Edited, printed and published by A R. Nagarajan at the Sadhvi Press, D. Subbiah Road, Mysore

ಪುನಃ ಈಜಿಪ್ಟ್ ರಾಜಕುಮಾರಿಯ ವಿವಾಹ

ಕೆಲವು ತಿಂಗಳಿನ ಹಿಂದೆ ವಿವಾಹ ವಿಚ್ಛೇದನ ಪಡೆದ ಪರ್ಷಿಯಾದ ರಾಜರ ಪಂಡತಿಯಾದ ಮತ್ತು ಈಜಿಪ್ಟಿನ ದೊರೆಗಳ ತಂಗಿಯೂ ಆದ ರಾಜಕುಮಾರಿ ಫೌಜಿಯಾರವರು ಕೈರೋವಿನ ಇಸ್ಮೇಲ್ ಬಿ ಚಿಂಜೇರವರನ್ನು ವಿವಾಹವಾಗಿದ್ದಾರೆ

ಬಟ್ಟೆಬೆಲೆ ಹೆಚ್ಚುವುದು

ಒಟ್ಟೆ ಮತ್ತು ನೂಲಿನ ಬೆಲೆಯನ್ನು ಈ ದಿನದಿಂದ ಹೆಚ್ಚಿಸಲಾಗುವುದೆಂದು ತಿಳಿದು ಬಂದಿದೆ ಅತ್ಯುತ್ತಮ ದರ್ಜೆಯ ಬಟ್ಟೆಗೆ ಶೇಕಡ ೫ ರಷ್ಟು, ಮಧ್ಯಮ ತರಗತಿಗೆ ಶೇಕಡ ೩ ರಷ್ಟು, ಬೆಲೆಯನ್ನು ಹೆಚ್ಚಿಸಲಾಗುವುದು.

ಹರಿಕಥೆ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಒಳಗೆ ಈ ರಾತ್ರಿ ೮-೩೦ ಗಂಟೆಗೆ ಶ್ರೀ ಕೋಣನೂರು ಸೀತಾರಾಮ ಶಾಸ್ತ್ರಿಗಳವರಿಂದ ಶ್ರೀ ಕೃಷ್ಣ ಚರಿತಾಮೃತ ಎಂಬ ಹರಿಕಥೆ ನಡೆಯುವುದು.

ಶ್ರೀ
ರಮಣಿ ಹಲ್ಲುಪುಡಿ
ಎಲ್ಲಾ ವಿಧವಾದ ಹಲ್ಲಿನ ಬಾಧೆಗಳಿಗೂ ಸಂಜೀವನ
ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಒಟ್ಟಿನ ವ್ಯಾಪಾರದ ಏಜೆಂಟರುಗಳು ಬೇಕು
— ವಿವರಗಳಿಗೆ ಬರೆಯಿರಿ —
ಶ್ರೀ ರಮಣಿ ಟ್ರೇಡಿಂಗ್ ಕಂಪೆನಿ,
925 ಚಾಮುಂಡಿ ಪುರಂ, ಮೈಸೂರು.

ವಿಜಯಲಕ್ಷ್ಮೀ ವಿಲಾಸ,
ಶಿವರಾಂಪೇಟೆ, ಮೈಸೂರು
ನಾನಾ ತರಹ ನವೀನ ಮಾದರಿಯ, ಸೀರೆಗಳೂ ಮತ್ತು ಕಾಶ್ಮೀರ ಶಾಲುಗಳೂ ಈಗ ತಾನೆ ಬಂದಿವೆ ಕಂಟ್ರೋಲ್ ಬೆಲೆಗೆ ಚೀಣಾ ಜವಳಿ ಸಹ ಕೂಪನ್ ಮೇಲೆ ದೊರೆಯುತ್ತೆ

ಬೇಸಿಗೆಯಲ್ಲಿ ವಿದ್ಯಾರ್ಥಿಗಳಿಂದ ಗ್ರಾಮಾಭಿವೃದ್ಧಿ ಕಾರ್ಯ

ಸಂಸ್ಥಾನಾದ್ಯಂತ ವಿದ್ಯಾರ್ಥಿಸ್ಟಿನವರು ಬೇಸಿಗೆಯಲ್ಲಿ ಗ್ರಾಮಸೇವೆಯನ್ನು ಮಾಡಬೇಕೆಂದ ನಿದರುವುದರಿಂದ, ಅದಕ್ಕೆ ಸೇರಲಿಚ್ಛಿಸುವ ನಗರದ ವಿದ್ಯಾರ್ಥಿಗಳು ತಮ್ಮ ಹೆಸರು ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ವಿದ್ಯಾರ್ಥಿ ಕಾಂಗ್ರೆಸ್ ಕಛೇರಿಗೆ ಕಳುಹಿಸಬೇಕೆಂದೂ, ಚುನಾಯಿಸಿದ ವಿದ್ಯಾರ್ಥಿಗಳ ಊಟ ವಸತಿ ಏರ್ಪಾಡುಗಳನ್ನು ಮೇಲ್ಕಂಡ ಸಂಸ್ಥೆಯವರೇ ವಹಿಸಿಕೊಳ್ಳುವರೆಂದೂ, ಅದರ ಅಧ್ಯಕ್ಷರಾದ ಶಾಂತರಾಜಾರವರು ತಿಳಿಸಿರುತ್ತಾರೆ

ಹಿಂದೀ ತರಗತಿ

ನಜರ್‌ಬಾದಿನ ಚೆಸ್ತರ ಕೇರಿಯಲ್ಲಿನ ಗರಡಿಯಲ್ಲಿ ನಗರದ ಹಿಂದೀ ಪ್ರಚಾರ ಸಭೆಯವರು ಹಿಂದೀ ತರಗತಿಗಳನ್ನು ತೆರೆದಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರ ಭಾಷಾ ತರಗತಿಗಳು ಸಾಯಂಕಾಲ ೭-೦ರಿಂದ ೮-೩೦ ಗಂಟೆ ವರೆಗೆ ನಡೆಯುವುವು

ಒಲಂಪಿಯಾ ಟಾಕೀಸ್
ಪ್ರತಿ ದಿನ ೩ ಆಟಗಳು
2—4—49ನೇ ಶನಿವಾರದಿಂದ
ಖಾಮ್ ದಾನ್
(ಹಿಂದಿ)
ಪಾತ್ರ — ನಂದ್ರೇಕರ್, ವನಮಾಲ —ಮತ್ತಿತರರು
ಬೆಳಗಿನ ಆಟಗಳು
2—4—49ನೇ ಶನಿವಾರದಿಂದ
೩ ದಿನಗಳು ಮಾತ್ರ
ಬಹಾನ
ಪಾತ್ರ:—ಅಲಕನಂದ, ಬೆಂಜಾಮಿನ್, ಅಮಿನ, ಮತ್ತಿತರರು

ಎಸ್.ಎನ್.ಪಂಡಿತ್ ಅಂಡ್ ಸನ್ಸ್‌ರವರ
ಯೂನಿವರ್ಸಲ್ ಪೇಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಬೆಲೆ 0-12
ಮಹಾ ಸುಗಂಧರಾಜ ತೈಲ:—)
,, ಚಂದನಾದಿ ತೈಲ:—)
,, ಭೃಂಗಾ ಮಲಕ ತೈಲ:—)
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು
ಮಹಾಕೇತಕೀ ತೈಲ—ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಬೆಲೆ 2-0-0
ಪಂಚಾಮೃತ—ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವನ
ಮೈಸೂರು ಆಯುರ್ವೇದಿಕ್ ಫಾರ್ಮಸಿ.
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿಗೆ
ಅಂದೇ ಭೇಟಿ ಕೊಡಿ
ಶಿವರಾಂಪೇಟೆ ಮೈಸೂರು

ಗಾಯತ್ರೀ ಟಾಕೀಸ್
1—4—49ರಿಂದ 2 ದಿನಗಳು ಮಾತ್ರ
ಸ್ಯಾರಮೌಂಟ್ ರವರ ವರ್ಣರಂಜಿತ ಚಿತ್ರ
ಅಡ್ವೆಂಚರ್ ಐಲೆಂಡ್
ADVENTURE ISLAND
in Gorgeous Tropic colour
ಪಾತ್ರ ರೋರಿ ಕಾಲ್ ರೋಂಡ ಫ್ಲೆಮಿಂಗ್
:ಬೆಳಗಿನ ಪ್ರದರ್ಶನ:—
2 4 49ರಿಂದ 2 ದಿನಗಳು
ಮೈ ಡಾರ್ಲಿಂಗ್ ಕ್ಲೆಮೆಂಟೈನ್
ಚಿತ್ರ

ಪ್ರಭುದೇವಾ ಟಾಕೀಸಿನಲ್ಲಿ
ಗೀತಾ ಗಾಂಧಿ
ಮ್ಯಾಟಿನಿ ೩ ೩೦ ಮೊದಲನೆಯ ಆಟ ೬-೩೦
ಎರಡನೆಯ ಆಟ ರಾತ್ರಿ ೧೦
ಪೆರಿಯನಾಯಕಿ, ಟಿ.ಆರ್. ರಾಮಚಂದ್ರನ್,
ಲಲಿತಾ ಪದ್ಮಿನಿ, ಬೇಬಿ ಸರೋಜ ಮತ್ತು
ಪದ್ಮ ಪಾತ್ರವಹಿಸಿರುವ ತಮಿಳು ಚಿತ್ರ
1-4-49 ರಿಂದ
ಅನೋಘವಾದ 2ನೇ ವಾರ

ಶುಭಮಸ್ತು
||ಸಮಸ್ತ ಮಂಗಳಾನಿ ಭವಂತು||
ಮದುವೆ ಜವಳಿಗಳಿಗೆ
ಹೆಸರುವಾಸಿಯಾದ ಅಂಗಡಿ
ಹೊಸ ಮಾದರಿ ಸೀರೆಗಳು ಆದ ಮಾಲು
ಬಾಬುಸಾಬ್ ಕಂಪೆನಿ, ... ರೋಡ್ ಮೈಸೂರು

ಫೋ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾ ಸೆ.

ಸಾಧ್ವಿ

ಸಂಪುಟ ೭] [illegible] [ಸಂಚಿಕೆ ೨೦೩

– ಈ ವರ್ಷದೊಳಗೇ – ಮತ್ತೊಂದು ಯುದ್ಧವೇ

ವಿದ್ಯಾಲಯಗಳ ಸುಧಾರಣಾ ಸಮಿತಿ

ಮೈಸೂರು ೩

ಭಾರತ ವಿಶ್ವವಿದ್ಯಾನಿಲಯಗಳ ಸುಧಾರಣೆಗಾಗಿ ಡಾ॥ ಎಸ್. ರಾಧಾಕೃಷ್ಣನ್‌ರ ಅಧ್ಯಕ್ಷತೆಯಲ್ಲಿ ನೇಮಿತವಾಗಿರುವ ಸಮಿತಿಯವರು ನಿನ್ನೆ ಸಂಜೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಅವರು ಇಲ್ಲಿಗೆ ಬಂದ ಕೂಡಲೇ ಆಗಮಿಸುವರು ... ಮಹಾರಾಜಾ ... ಫಸ್ಟ್ ಗ್ರೇಡ್ ಕಾಲೇಜು, ವಿಶ್ವವಿದ್ಯಾನಿಲಯ ಪುಸ್ತಕ ಭಂಡಾರಗಳಿಗೆ ಭೇಟಿ ಕೊಡುವರು ಮಂಗಳವಾರ ಸೆನೆಟ್ ... ಮತ್ತು ಸೆನೆಟ್ ಸದಸ್ಯರುಗಳು ... ಗಳು ಮತ್ತು ೪೦ ಜನ ... ಯರುಗಳಿಗೂ ಭೇಟಿ ಕೊಡುವರು.

ಸಂಗೀತ

ಕೃಷ್ಣರಾಜ ಮೊಹಲ್ಲಾ ದೊಡ್ಡರಾಮ ... ದಲ್ಲಿ ಶ್ರೀರಾಮೋತ್ಸವದ ಪ್ರಯುಕ್ತ ನಾಳೆ ವಿದ್ವಾನ್ ಚಿಕ್ಕಸ್ವಾಮಿಯವರ ... ನಾಳಿದ್ದು ಶ್ರೀಮತಿ ಕುಲ್ಲೂರಿ ... ನವರಿಂದಲೂ ಗಾಯನವು ನಡೆಯುತ್ತದೆ.

ಆಹಾರ ಹತೋಟಿ ಆಜ್ಞೆಗಳನ್ನು ಬಿಗಿಪಡಿಸಬೇಕು

... ದೇಶದಲ್ಲಿ ಆಹಾರಭಾವವಿರುವುದರಿಂದ ... ಕ್ಕೆ ಸಂಬಂಧಪಟ್ಟ ಹತೋಟಿ ಮತ್ತು ... ಆಜ್ಞೆಗಳನ್ನು ಬಿಗಿಪಡಿಸಲು ತಕ್ಕ ಕ್ರಮವನ್ನು ಕೈಗೊಳ್ಳಬೇಕೆಂದು ಪ್ರಾಂತ್ಯ ... ಸಂಸ್ಥಾನಗಳಿಗೆ ಭಾರತ ಸರಕಾರದವರು ಸೂಚನೆ ಕೊಟ್ಟಿರುವರು. ಕಳ್ಳ ವ್ಯಾಪಾರ, ದಾಸ್ತಾನು, ಅಕ್ರಮ ... ಸಾಗಾಣಿಕೆ, ಸರ್ಕಾರಿ ನೌಕರರಲ್ಲಿ ... ಇವುಗಳನ್ನು ತಡೆಗಟ್ಟಲು ಉಗ್ರ ಕ್ರಮ ಕೈಗೊಳ್ಳುವುದಲ್ಲದೆ, ಅವರು ... ಶಿಕ್ಷೆಗೆ ಒಳಪಡಿಸಿ, ಅವುಗಳನ್ನು ... ಪಡಿಸಬೇಕೆಂದೂ ತಿಳಿಸಲಾಗಿದೆ.

...ಯಾದಲ್ಲಿ ಮಿಲಿಟರಿ ಸರ್ಕಾರ

... ಸೇನಾನಿ ಕ್ಕಲ ಹಸ್ನಿ ಜೈಮ್‌ರ ... ಸರ್ವಾಧಿಕಾರಿಯಾಗಿ ಮಿಲಿಟರಿ ಸ... ವನ್ನು ಅಲ್ಲಿ ಸ್ಥಾಪಿಸಿರುವರನ್ನು ... ಮತ್ತು ಮಿಲಿ ಕೋಟುಲಿ ... ಮಂಡಲದವರನ್ನು ದಸ್ತಗಿರಿ ... ಮಾಡಲಾಗಿದೆ. ಟ್ರಾನ್ಸ್ ಜೋರ್ಡಾನಿನ ... ಅಬ್ದುಲ್ಲಾರವರ ಮಹಾ ಸಿರಿಯ ... ಯೋಜನೆಯನ್ನು ವಿರೋಧಿಸುವುದೇ ಈ ದಂಗೆಯ ಉದ್ದೇಶವೆಂದು ... ವೀಕ್ಷಕರು ... ಸರ್ವಾಧಿಕಾರಿ ... ಪಾರ್ಲಿಮೆಂಟನ್ನು ರದ್ದುಗೊಳಿಸಿರುವರು ... ಮತ್ತು ಪ್ರಧಾನಿಯವ ... ರಾಜಕೀಯದಲ್ಲಿ ... ವರೆಂದೂ ಅವರುಗಳ ಮೇಲೆ ... ಹಾಕಿರುತ್ತಾರೆ.

...ರ್ ಪಟೇಲರ ವಿಮಾನ ...ಟನೆ ಬಗ್ಗೆ ತನಿಖೆ

... ಪಟೇಲರು ದಹಲಿಯಿಂದ ... ಕ್ಕೆ ಹೊರಟಾಗ ವಿಮಾನವು ... ಕ್ಕೀಡಾದ ಘಟನೆಯ ... ತನಿಖೆ ನಡೆಸಲು ... ಯನ್ನು [illegible]

ಹೈದರಾಬಾದಿನಿಂದ ಪೊಲೀಸ್ ಕಾರ್ಯಾಚರಣೆಯ ಹಣ ವಸೂಲಿ

ಹೈದರಾಬಾದಿನ ಪೊಲೀಸ್ ಕಾರ್ಯಾಚರಣೆಗೆ ಎಷ್ಟು ಹಣ ಖರ್ಚಾಯಿತೆಂಬುದನ್ನು ಲೆಕ್ಕಾಚಾರ ಹಾಕಲಾಗುತ್ತಿದೆಯೆಂದೂ, ಆ ಹಣವನ್ನು ಹೈದರಾಬಾದ್ ಸರ್ಕಾರದವರಿಂದ ವಸೂಲು ಮಾಡಲು ಆಲೋಚಿಸಲಾಗುತ್ತಿದೆಯೆಂದೂ ಸರ್ದಾರ್ ಪಟೇಲರು ತಿಳಿಸಿರುತ್ತಾರೆ. ಲಾಯಕ್ ಅಲಿ ಮಂತ್ರಿಮಂಡಲದವರು ಭಾರತ ಸರ್ಕಾರದ ಮೇಲೆ ಅಪಪ್ರಚಾರ ನಡೆಸಲು ೫೦ ಲಕ್ಷ ರೂ ಮತ್ತು ... ಹೈದರಾಬಾದ್ ಪ್ರಶ್ನೆಯ ಸಂಬಂಧ ... ಲಕ್ಷ ರೂ ಖರ್ಚು ಮಾಡಿದ್ದರೆಂದು ತಿಳಿಸಲಾಗಿದೆ.

ಪಾಕಿಸ್ಥಾನಕ್ಕೂ ಆಫ್ಘಾನಿಸ್ಥಾನಕ್ಕೂ ಯುದ್ಧವೇ?

ಆಫ್ಘಾನಿಸ್ಥಾನದ ... ನಡೆಸಿಕೊಳ್ಳಲು ಪಾಕಿಸ್ಥಾನವು ... ಯುತ್ತಿದೆಯೆಂದೂ, ಇನ್ನೊಬ್ಬರ ... ರಾಷ್ಟ್ರಗಳು ಪರಿಹಾರ ... ಕೊಟ್ಟಿದೆಯೆಂದೂ ಇವನ್ನು ತಡೆಗಟ್ಟಲು ಕೂಡಲೇ ಕಾರ್ಯಕ್ರಮ ಕೈಗೊಳ್ಳದಿದ್ದರೆ ಎರಡು ರಾಷ್ಟ್ರಗಳಿಗೂ ಯುದ್ಧ ... ವೆಂದೂ ಹೇಳಲಾಗಿದೆ. ಗಡಿ ಪ್ರದೇಶದಲ್ಲಿ ಸೈನ್ಯ ಮತ್ತು ವಿಮಾನದಳಗಳನ್ನು ಆಫ್ಘಾನಿಸ್ಥಾನ ಸರ್ಕಾರದವರು ಇಟ್ಟಿರುತ್ತಾರೆಂದೂ ವರದಿಯಾಗಿದೆ.

ಅಕ್ರಮ ರವಾನೆಗೆ ದಂಡ

ನಂಜನಗೂಡು ೩

ಕಳೆದ ೨೮ನೇ ತಾ॥ ಮಂಗಳವಾರ ಓಡವನಪುರದಿಂದ ಕದ ... ಕಡೆಗೆ ಎರಡು ಚಕ್ಕಡಿ ಪುರಿಯನ್ನು ರಹದಾರಿಯಿಲ್ಲದ ಸಾಗಿಸಿದ ಚಕ್ಕಡಿಗೆ ... ರೂ ದಂಡ ... ನಂಜನಗೂಡಿನಿಂದ ರಹದಾರಿಯಿಲ್ಲದೆ ... ಗಿಯನ್ನು ಸಾಗಿಸುತ್ತಿದ್ದ ... ಮಾಡಿದ್ದ ... ವನ್ನು [illegible]

ರಹದಾರಿ ಇಲ್ಲದ ಅಕ್ಕಿ ಪತ್ತೆ

ಲಷ್ಕರ್ ಮೊಹಲ್ಲಾ ಅಕ್ಬರ್ ರಸ್ತೆಯಲ್ಲಿರುವ ಹೈಹಿಂದ್ ಮುಸಾಫಿರ್ ಖಾನ ಹೋಟೆಲಿನಲ್ಲಿ ಯಲ್ಲಪ್ಪಶೆಟ್ಟಿ ಎಂಬುವರು ರಹದಾರಿ ಇಲ್ಲದೆ ಅಕ್ಕಿಯಿಂದ ಹಲವು ಮತ್ತು ಇಡ್ಲಿಯನ್ನು ತಯಾರಿಸಿದ್ದುದಲ್ಲದೆ, ರೇಷನ್ ಕಾರ್ಡಿಲ್ಲದ ೧೩॥ ಸೇರು ಅಕ್ಕಿಯನ್ನು ಇಟ್ಟುಕೊಂಡಿದ್ದವನ್ನು ಸಪ್ ಇನ್ಸ್‌ಪೆಕ್ಟರ್ ಶ್ರೀ ವಿ. ರಾಮಚಂದ್ರರಾಯರು ಪತ್ತೆ ಮಾಡಿ ವಶಪಡಿಸಿಕೊಂಡು ಮುಂದಿನ ರಹದಾರಿಯ ... ನಡೆಸುತ್ತಿದ್ದಾರೆ.

ಕಳ್ಳತನಗಳು

... ಮೊಹಲ್ಲಾದಲ್ಲಿ ಇತ್ತೀಚೆಗೆ ಕಳ್ಳತನಗಳು ಹೆಚ್ಚುತ್ತಿವೆಯೆಂದೂ, ಪೊಲೀಸ್ ಸಿಬ್ಬಂದಿಯನ್ನು ಹೆಚ್ಚಿಸಿ ಬಂದೋಬಸ್ತು ಮಾಡಬೇಕೆಂದೂ ನಿವಾಸಿಗಳು ಕೋರುತ್ತಾರೆ ಮತ್ತು ಇದೇ ಮೊಹಲ್ಲಾ ... ಕಡೆ ದೀಪವಿಲ್ಲದೆ ತೊಂದರೆಯಾಗಿರುವುದರಿಂದ ... ದೀಪಗಳನ್ನು ಹಾಕಿಸಿಕೊಡಬೇಕೆಂದೂ ಸಹ ಕೋರಲಾಗಿದೆ.

ದಿವಾನರ ಆಗಮನ

ಅಮೆರಿಕದ ಪ್ರವಾಸವನ್ನು ಮುಗಿಸಿಕೊಂಡು ದಿವಾನ್ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ರವರು ಈ ತಿಂಗಳು ೨೦ನೇ ತಾ॥ ಮೈಸೂರಿಗೆ ಹಿಂತಿರುಗುವರೆಂದು ತಿಳಿದುಬಂದಿದೆ.

ರಾಯಭಾರಿ ಕಛೇರಿಗಳ ಖರ್ಚು

ಭಾರತ ಸರ್ಕಾರದವರು ವಿದೇಶಗಳ ... ವಿವಿಧ ರಾಯಭಾರಿ ಕಛೇರಿಗಳ ಖರ್ಚು ಈ ರೀತಿ ಇದೆ —

ಲಂಡನ್ ೫೦ ಲಕ್ಷ ರೂ, ವಾಷಿಂಗ್‌ಟನ್ ... ರೂ, ಮಾಸ್ಕೋ ... ರೂ, ಈಜಿಪ್ಟ್ ೭ ಲಕ್ಷ ರೂ, ಚೀಣ ೬ ಲಕ್ಷ ರೂ, ಕಂಚಿ ... ಲಕ್ಷ ರೂ.

ಮದ್ರಾಸ್ ಮಂತ್ರಿಮಂಡಲ

ಮದ್ರಾಸಿನಲ್ಲಿ ಕಾಂಗ್ರೆಸ್ ಪಕ್ಷದ ನಾ... ಶ್ರೀ ಕುಮಾರ ... ಈ ದಿನ ದೆಹಲಿಗೆ ... ತೆರಳಿದರು ... [illegible]

ಈ ವರ್ಷದೊಳಗಾಗಿ ಇನ್ನೊಂದು ಯುದ್ಧವೇ?

ಅಟ್ಲಾಂಟಿಕ್ ಒಪ್ಪಂದವನ್ನು ಹಲವು ರಾಷ್ಟ್ರಗಳು ಕಾರ್ಯ ರೂಪಕ್ಕೆ ತರುವುದರೊಳಗಾಗಿ ರಷ್ಯವು ನಾರ್ವೆ ಮೇಲೆ ದಂಡಯಾತ್ರೆ ನಡೆಸಬಹುದೆಂದೂ, ಇದರಿಂದ ಮತ್ತೊಂದು ಮಹಾಯುದ್ಧವು ಈ ವರ್ಷದಲ್ಲೇ ಪ್ರಾರಂಭವಾಗಬಹುದೆಂದೂ ಅಮೆರಿಕದ ಸುಪ್ರಸಿದ್ಧ ಪತ್ರಿಕೋದ್ಯಮಿಗಳಾದ ಡ್ರ್ಯೂ ಪಿಯರ್ಸನ್ ರವರು ಅಭಿಪ್ರಾಯಪಟ್ಟಿರುತ್ತಾರೆ. ಪಶ್ಚಿಮ ಯೂರೋಪಿನ ರಾಷ್ಟ್ರಗಳ ಶಕ್ತಿಯನ್ನು ಈ ವರ್ಷ ರಷ್ಯವು ಪರೀಕ್ಷೆ ಮಾಡುವುದೆಂದೂ, ಎಂದಾದರೂ ಯುದ್ಧ ನಡೆಯಲೇಬೇಕಾಗಿರುವುದರಿಂದ ಅದು ಈಗಲೇ ನಡೆಯುವುದು ಉತ್ತಮವೆಂದು ರಷ್ಯವು ಭಾವಿಸಿದೆಯೆಂದೂ ಅವರು ಹೇಳಿರುತ್ತಾರೆ.

ನೋಟುಗಳಲ್ಲಿ ಬ್ರಿಟಿಷ್ ರಾಜರ ಮುದ್ರೆ ಇಲ್ಲ

ಇನ್ನು ಮುಂದೆ ನಮ್ಮ ದೇಶದಲ್ಲಿ ಚಲಾವಣೆಯಾಗುವ ನೋಟುಗಳಲ್ಲಿ ಬ್ರಿಟಿಷ್ ರಾಜರ ತಲೆಯನ್ನು ಮುದ್ರಿಸಲಾಗದೆಂದೂ ಅಶೋಕ ಚಕ್ರವನ್ನು ಹಾಕಬೇಕೆಂದೂ ಭಾರತದ ಪಾರ್ಲಿಮೆಂಟ್ ಸಭೆ ನಿರ್ಧರಿಸಿರುತ್ತದೆ. ನಾಣ್ಯಗಳ ಆಕಾರವನ್ನು ಬದಲಾಯಿಸುವ ವಿಚಾರವೂ ಸಹ ಪರಿಶೀಲನೆಯಲ್ಲಿದೆ.

ಜರ್ಮನಿಯನ್ನು ಬ್ರಿಟಿಷ್ ಮತ್ತು ಫ್ರಾನ್ಸ್‌ಗಳು ಬಿಡಬೇಕು

ಜರ್ಮನಿಯಲ್ಲಿ ಶಾಂತಿ ನೆಲೆಸಬೇಕಾದರೆ ಅಲ್ಲಿರುವ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಕೂಡಲೇ ಅದನ್ನು ಬಿಟ್ಟು ಹೋಗಬೇಕೆಂದೂ, ರಷ್ಯದ ಸೇನೆಯು ಜರ್ಮನಿಯ ಪೂರ್ವ ಮತ್ತು ಪಶ್ಚಿಮ ಗಡಿಪ್ರದೇಶಗಳಿಗೆ ಹಿಂತಿರುಗಬೇಕೆಂದೂ, ತಿಳಿಸುವ ಪತ್ರಿಕೆಗಳನ್ನು ಜರ್ಮನ್ ಕಮ್ಯೂನಿಸ್ಟರು ಹಂಚುತ್ತಿದ್ದಾರೆಂದು ವರದಿಯಾಗಿದೆ.

ಜಯಪ್ರಕಾಶರ ಕಾರು ಮುರಿಯಿತು

ಭಾರತದ ಸಮಾಜವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಬಿಹಾರಿನ ಪಾಟ್ನಾದಿಂದ ದೌಲತ್‌ಗಂಜಿಗೆ ಮೋಟಾರು ಕಾರಿನಲ್ಲಿ ಹೋಗುತ್ತಿದ್ದಾಗ, ಕಾರು ಅಪಘಾತಕ್ಕೆ ಒಳಗಾಗಿ, ಅವರ ಬಲಗೈ ಮುರಿಯಿತೆಂದೂ, ಅವರ ಪತ್ನಿಯವರಿಗೂ ತೀವ್ರ ಗಾಯವಾಯಿತೆಂದೂ ವರದಿಯಾಗಿದೆ.

ತಿರುವಾಂಕೂರು ಮತ್ತು ಕೊಚ್ಚಿ ಐಕ್ಯವಾಗಲು ಒಪ್ಪಿಗೆ

ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳು ಐಕ್ಯವಾಗಲು, ಎರಡು ಸರ್ಕಾರಗಳೂ ಒಪ್ಪಿವೆಯೆಂದು ಅವುಗಳ ಪ್ರಧಾನಿಗಳು ಸರ್ದಾರ್ ಪಟೇಲರಿಗೆ ತಿಳಿಸಿರುತ್ತಾರೆ. ಈ ಬಗ್ಗೆ ಇನ್ನೆರಡು ದಿನಗಳಲ್ಲಿ ಪ್ರಕಟಣೆ ಹೊರಬೀಳಲಿದೆ.

ಶಿಕ್ಷಣ ಪದ್ಧತಿ [illegible]

... ದೇಶದಲ್ಲಿ ಶಿಕ್ಷಣ ಪದ್ಧತಿಯನ್ನು ... ಮಾಡಬೇಕೆಂದು ... [illegible]

ಕರ್ನಾಟಕ ಏಕೀಕರಣದ ಬಗ್ಗೆ ಉತ್ತರ ಕರ್ನಾಟಕದ ಉತ್ಸಾಹ

ಮೈ|| ಕಾಂ|| ಮುಖಂಡರ ಅಭಿಪ್ರಾಯ

ಮೈಸೂರು ೩

ಕರ್ನಾಟಕ ಏಕೀಕರಣದ ಬಗ್ಗೆ ಉತ್ತರ ಕರ್ನಾಟಕವನ್ನು ಸಂಚರಿಸಿ ಬಂದ ಮೈಸೂರು ಕಾಂಗ್ರೆಸ್ಸಿನ ಮುಖಂಡರುಗಳಾದ ಶ್ರೀಗಳು ಎಸ್. ಚನ್ನಯ್ಯ ಮತ್ತು ಎ. ಜಿ. ಬ [illegible] ಸಂಜೆ ಪತ್ರಿಕೋದ್ಯೋ[illegible] ಒದಗಿಸಿ [illegible]

ಉತ್ತರ ಕರ್ನಾಟಕದ ಜನರು ಏಕೀಕರಣದ ಬಗ್ಗೆ ಬಹಳ ಉತ್ಸಾಹ [illegible] ಕರ್ನಾಟಕ ಏಕೀಕರಣವಾದ ನಂತರ [illegible] ಕರ್ನಾಟಕಕ್ಕೆ ಗೌರ್ನರ್ [illegible] ಅಧಿಪತಿಗಳಾಗಿರಲಿ [illegible] ಕರ್ನಾಟಕ [illegible] ಕನ್ನ ಡಿಗ [illegible] ಏಕೀಕರಣವಾದನಂತರ [illegible] ಪ್ರದೇ [illegible] ಜಿಲ್ಲೆಗಳ ಆಡಳಿತ ನಡೆಸಲು [illegible] ಸಾಧ್ಯವಾಗುವುದು.

[illegible] ವಿಷಯದಲ್ಲಿ [illegible] ಮಾಡುವುದರಿಂದ [illegible] ವಿದ್ಯುಚ್ಛಕ್ತಿಯು ಸಿಗುವುದು. ವಿಜಾಪುರದಲ್ಲಿ [illegible] ಯೋಜನೆಗಳನ್ನು ನಡೆಸಿದರೆ ಆಹಾರದ ವಿಷಯದಲ್ಲಿ [illegible] ಕರ್ನಾಟಕವು ಸ್ವಯಂಪೂರ್ಣತೆಯನ್ನು ಹೊಂದುವುದು—ಎಂದು ಅವರುಗಳು ತಿಳಿಸಿದರು.

ಕಮ್ಯೂನಿಸ್ಟ ತತ್ವವನ್ನು ಪ್ರತಿಪಾದಿಸುವ ಕೆಲವರು ಮಾತ್ರ ಶ್ರೀಮನ್ಮಹಾರಾಜರ ಅಧಿಕಾರದ ಬಗ್ಗೆ ಅಸಮ್ಮತಿ ಸೂಚಿಸುತ್ತಿರುವರೆಂದು ಅವರು ಹೇಳಿದರು

ಬೀದರಿನ ಪ್ರಸ್ತಾಪವೆತ್ತಿ ಕಾರವಾರದ [illegible] ಉತ್ತಮ [illegible] ಪ್ರಪಂಚದಲ್ಲೇ ಇದು ಎರಡನೆ [illegible] ಗುವುದೆಂದೂ [illegible] ಅಭ್ಯುದಯ ತುಂಬಾ ಸಂಪತ್ತು [illegible] ರಿಯಾಗಿ [illegible] ಬೇಕಾಗುವ [illegible] ದರು.

ಸಮಿತಿ ಸದಸ್ಯರು ಮಂಗಳೂರು ಮತ್ತು ಕೊಡಗು ಪ್ರದೇಶಗಳಿಗೆ ಭೇಟಿ ಕೊಡುವರೆಂದೂ [illegible] ವರದಿ [illegible]

[illegible]

[illegible] ಶ್ರೀ [illegible]

ಜಿಲ್ಲಾಬೋರ್ಡಿಗೆ ಸ್ಥಳೀಯ ಸಚಿವರ ಭೇಟಿ

ಮೈಸೂರು ೩

ಸ್ಥಳೀಯ ಸಂಸ್ಥೆಯ ಸಚಿವರಾದ ಶ್ರೀ ಆರ್. ಚನ್ನಿಗರಾಮಯ್ಯನವರು ಮೈಸೂರು ಜಿಲ್ಲಾ ಬೋರ್ಡಿಗೆ ಕಳೆದ ಮಂಗಳವಾರ ಭೇಟಿಯಿತ್ತು, ಅಧ್ಯಕ್ಷರೊಡನೆ ಬೋರ್ಡಿಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಮಾತುಕತೆ ನಡೆಸಿದರು. ಬೋರ್ಡಿನವರು ಕೈಗೊಂಡಿರುವ ಕಾರ್ಯಕ್ರಮಗಳನ್ನು ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ವಿವರಿಸಿದರು. ೩,೧೬,೦೦೦ ರೂ ನೆಚ್ಚವಳ್ಳಿ ಸ್ಪೆಷಲ್ ಮತ್ತು ಡೈರ್ಡ್ ನಾಲೆ ಕಟ್ಟಡಗಳನ್ನು ಜಮೀನುಗಳಿಗಾಗಿ ಕಟ್ಟಿಸುವ ಮುಂತಾದ ಕಾರ್ಯಗಳನ್ನು ವಿವರಿಸಿ, ನಂಜನಗೂಡು-ಚಾಮರಾಜನಗರ ರೈಲನ್ನು ಸರ್ಕಾರಕ್ಕೆ ಮಾರಿದ ಬಗ್ಗೆ ಬಂದ ಹಣದ ಪೈಕಿ ಲಕ್ಷ ರೂ ಅನ್ನು ಈಗಲೇ ಬೋರ್ಡಿಗೆ ಕೊಡಬೇಕೆಂದೂ, ಇದರಿಂದ ಮುಂದಿನ ವರ್ಷ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಅನುಕೂಲವಾಗುವುದೆಂದೂ ಮನವಿ ಮಾಡಿಕೊಂಡರು. ನೂತನ ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಣೆಯನ್ನು ಜಿಲ್ಲಾ ಬೋರ್ಡುಗಳಿಗೆ ವಹಿಸಬೇಕೆಂದೂ ತಿಳಿಸಿದರು. ಜಾತ್ರೆಗಳ ಮೇಲ್ವಿಚಾರಣೆಯು ಬೋರ್ಡಿಗೇ ಇರಬೇಕೆಂದೂ ಮತ್ತು ಕೆಲವು ಬಾಬುಗಳಿಗೆ ರಹದಾರಿಕೊಡಲು ತಮಗೆ ಹಕ್ಕಿರಬೇಕೆಂದೂ ಹೇಳಿದರು. ಅವುಗಳನ್ನು ಸರ್ಕಾರದವರು ಪರಿಶೀಲಿಸುವುದಾಗಿ ಸಚಿವರು ಭರವಸೆ ಕೊಟ್ಟರು

ಸೇವಾದಳ ಶಿಕ್ಷಣ ಶಿಬಿರದ ಆರಂಭ

ತುಮಕೂರು ಜಿಲ್ಲಾ ಶ್ರೀ ಸಿದ್ಧಗಂಗೆಯಲ್ಲಿ ಇದೇ ೭ನೇ ತಾ|| ನಿಂದ ಪ್ರಾರಂಭವಾಗಲಿರುವ ಸಂಸ್ಥಾನದ ಸೇವಾದಳದ ಶಿಕ್ಷಣ ಶಿಬಿರದ ಆರಂಭೋತ್ಸವವನ್ನು ಡಾ|| ಎನ್. ಎಸ್. ಹರ್ಡೀಕರ್‌ರವರು ೭ನೇ ತಾ|| ಬೆಳಿಗ್ಗೆ ನೆರವೇರಿಸುವರು.

ಶಾಂತಿ ಸಂಧಾನಕ್ಕೆ ಚಿಯಾಂಗರ ಬೆಂಬಲ

ಚೀಣದ ರಾಷ್ಟ್ರೀಯ ಸರ್ಕಾರದವರು ಈ ದಿನದಿಂದ ಕೈಗೊಳ್ಳಲಿರುವ ಶಾಂತಿ ಸಂಧಾನ ಮಾತುಕತೆಗಳಿಗೆ ಮಾಜಿ ಅಧ್ಯಕ್ಷ ಚಿಯಾಂಗ್ ಕೈಷೇಕರವರು ಸಂಪೂರ್ಣ ಬೆಂಬಲ ನೀಡಿರುವರೆಂದೂ, ಪೀಕಿಂಗ್‌ನಲ್ಲಿ ಶಾಂತಿ ಮಾತುಗಳನ್ನು ಸರ್ಕಾರದ ೭ ಮಂದಿ ಪ್ರತಿನಿಧಿಗಳು ನಡೆಸುವರೆಂದೂ ಹೇಳಲಾಗಿದೆ

ಚಂದಾದಾರರಲ್ಲಿ ವಿನಂತಿ

ನಿನ್ನೆಯಿಂದ ನಾವು ಮೈಸೂರು ನಗರದಲ್ಲಿ ಸಾಧ್ವಿ ಪತ್ರಿಕೆಯ ಏಜೆಂಟರಾಗಿ ನೇಮಿಸಲ್ಪಟ್ಟಿರುತ್ತೇವಷ್ಟೆ. ಮಾನ್ಯ ಚಂದಾದಾರರು ತಮ್ಮ ಚಂದಾ ಮೊಬಲಗನ್ನು ನಮಗಾಗಲಿ ನಮ್ಮ ಕಡೆಯಿಂದ ರಶೀತಿ ತರುವವರಿಗಾಗಲಿ ಮುಂಗಡವಾಗಿ ಪಾವತಿ ಮಾಡಬೇಕೆಂದು ಕೋರುತ್ತೇವೆ.

ನ್ಯೂಸ್ ಪೇಪರ್ ಹೌಸ್
ಜಯನಗರ.

ಗ್ರಾಮ ಪಂಚಾಯ[illegible] ಅಧ್ಯಕ್ಷಿಣಿಯರು

ಸಂಯುಕ್ತ ಪ್ರಾಂತ್ಯದಲ್ಲಿ ಇತ್ತೀಚೆಗೆ ನಡೆದ ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ೩೨ ಮಂದಿ ಮಹಿಳೆಯರು ಅಧ್ಯಕ್ಷಿಣಿಯರಾಗಿಯೂ, ೭೨ ಮಂದಿ ಮಹಿಳೆಯರು ಸದಸ್ಯರಾಗಿಯೂ ಚುನಾಯಿತರಾಗಿದ್ದಾರೆ.

ವಿಜಯಲಕ್ಷ್ಮೀ ವಿಲಾಸ್

ಶಿವರಾ. ಪೇಟೆ, ಮೈಸೂರು

ನಾನಾ ತರಹ ನವೀನ ಮಾದರಿ ಸೀರೆಗಳೂ ವಸ್ತ್ರ ಕಾಶ್ಮೀರ ಶಾಲುಗಳು ಈಗ ತಾನೆ ಬಂದಿವೆ. ಕಂಟ್ರೋಲ್ ಬೆಲೆಗೆ ಚೀಣಾ ಜವಳಿ ಸಹ ಕ್ಲೋಸ್ ಬೆಲೆ ದೊರೆಯುತ್ತೆ.

Edited, printed and published by A.R. Nagarajan at the Sadhvi Press D. Subbiah Road, Mysore

ಪ್ರಭುದೇವಾ ಟಾಕೀಸಿನಲ್ಲಿ

✱ ಗೀತಾ ಗಾಂಧಿ ✱

ಮ್ಯಾಟನಿ ೩-೩೦ ಮೊದಲನೆಯ ಆಟ ೬-೩೦
ಎರಡನೆಯ ಆಟ ರಾತ್ರಿ ೧೦

ಪೆರಿಯನಾಯಕಿ, ಟಿ.ಆರ್. ರಾಮಚಂದ್ರ್, ಲಲಿತಾ ಪದ್ಮಿನಿ, ಬೇಬಿ ಸರೋಜ ಮತ್ತು ಪದ್ಮ ಪಾತ್ರವಹಿಸಿರುವ ತಮಿಳು ಚಿತ್ರ

1-4-49 ರಿಂದ
ಅಮೋಘವಾದ 2ನೇ ವಾರ

ರಾಜಕಮಲ್

ಮೈ ಸೂ ರು

1-4-49 ರಿಂದ
ಅಮೋಘವಾದ ೨ ನೇ ವಾರ
ಪ್ರತಿ ದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ - ವರಲಕ್ಷ್ಮಿ, ಲಕ್ಷ್ಮೀ ರಾಜ್ಯಂ, ಪ್ರಕಾಶರಾವ್, ಪ್ರಸಾದ್

MORNING SHOWS
From 1-4-49 for 4 days

ROMAN SCANDALS
With
Eddie CANTOR

For Quality Paper & Books Please Call on

✱ RAO & CO., ✱

1273, Yelwal Road, Mysore.
(Dharmaparayane Srimati Alamma's Choultry Building)

		Rate per Ream	Per Quire
1)	Mysore White-ledger Fools-cap 10 lbs.	8-12-9	0-7-10
2)	Mysore Buff Fools-cap 10 lbs.	6-4-4	0-5-9
3)	Mysore White-ledger D. Crown 16 lbs.	22-13-9 (in reams only)	
4)	Mysore White-ledger D. Demy 34 lds	29-14-9	"
5)	Foreign Fools cap 16 lbs (Double)	14-8-0	0-13 0
6)	Foreign Fools-cap 8lbs.	7-6-0	0-6-0
7)	Parchment 20×30 (Butter)	17-0 0 (Ream lot)	
8)	Manifold Colour 17×23	10-0-0	"
9)	Machanical Printing 24 lbs D. Crown	11-8-0	"
10)	Swedish Kraft 22½×35 19 lbs	14-8-0	
11)	Wood Free D Crown 40 lbs.	35-0-0	
12)	Wood Free Writing D Fools-cap 20 lbs.	17-0-0	

Students' Note Books & Exercise Books Etc at reasonable rates

ಫೋನ್ ನಂ 792 WEEKLY EDITION ಇಂದಿನ ಪತ್ರಿಕೆ ೬ ಅಣೆ

ಸಾಧ್ವಿ

ಸಂಪುಟ ೧೩] ಭಾನುವಾರ ...-೪-೧೯೪೯ [ಸಂಚಿಕೆ ೩೩

ವಾರ ಭವಿಷ್ಯ

...-೪-೪೯ ರಿಂದ ೧೦-೪-೪೯ ರವರೆಗೆ

ಮೇಷ — ಅತಿಥಿಗಳ ಸಾವಳಿ ಆರ್ಥಿಕ ... ಅಂಗಾಂಗಳಲ್ಲಿ ಉನ್ನತಿ ಧನ ... ವ್ಯಾಪಾರದಲ್ಲಿ ಒಳಪಡಿ ವಾಹನಾ... ತಾ॥ ೮, ೯ ಕಲಹ ಬೆಲೆಬಾಳುವ ... ವಸ್ತುವಿನ ಕಳವು

ವೃಷಭ — ನೌಕರಿ ಧಂಧೆಗಳಲ್ಲಿ ಪ್ರೀತಿ ... ಘಟನೆ ಕೋರ್ಟು ವ್ಯವಹಾರದ ಜಯ ತಾ॥ ೫, ೬ ರ ಧನಲಾಭ

ಮಿಥುನ — ಆರೋಗ್ಯ ನೆಟ್ಟಗೆ ಪರೋ... ಕಾರ್ಯ ಮನೋಭೀಷ್ಟ ಸಿದ್ಧಿ, ನೌಕ... ಧಂಧೆಗಳಲ್ಲಿ ವಿಚಿತ್ರ ಘಟನೆ ತಾ॥ ... ಕೋರ್ಟು ವ್ಯವಹಾರದಲ್ಲಿ ಜಯ

ಕರ್ಕ — ಓದುಗರ ತೇರ್ಗಡೆ. ಆರ್ಥಿಕ ... ಸಮರ್ಪಕ ಉದ್ಯೋಗಾದಿಗಳಲ್ಲಿ ... ಅಪೇಕ್ಷೆಯಂತೆ ಕಾರ್ಯ ನಡೆಯುವು... ತಾ॥ ೩, ೪, ೭ ಲಾಭ, ಶುಭವಾರ್ತೆ

ಸಿಂಹ — ವಿವೇಚನಾ ಶಕ್ತಿ ಕಡಿಮೆ ... ಅಗ್ನಿ ಭಯಾನಕ ಅಪಘಾ... ಪ್ರಾಸಂಗಿಕ ವಿಷಯದಲ್ಲಿ ಜ... ತಾ॥ ೫, ೬ ವಿಘ್ನದಿಂದ ಪಾರು

ಕನ್ಯಾ — ಆರೋಗ್ಯ ನೆಟ್ಟಗಿದ್ದರೂ ಉದ್ಯ... ಲಾಭದಾಯಕ ಸಲವಿಲ್ಲ ... ಅನಾರೋಗ್ಯ ಕೋರ್ಟು ವ್ಯವ... ಮುಂದಕ್ಕೆ ಹೋಗುವುದು ತಾ॥೩, ... ಕುಳ ಪ್ರವಾಸ

ತುಲಾ — ಆರೋಗ್ಯ ಉತ್ತಮ ಮನ... ಹಣಕಾಸಿನ ಲಾಭ ಸುಖ ... ವ್ಯಾಪಾರಾದಿಗಳಲ್ಲಿ ಜಯ, ತಾ॥ ... ಚಿತ್ರ ವಿಚಿತ್ರ ಸನ್ಮಾನ

ವೃಶ್ಚಿಕ — ಸಾ॥ಯ ಆರೋಗ್ಯ ನೆಟ್ಟಗೆ ... ಹಾಗಿಲ್ಲ — ಓದುಗರ ಅಲಕ್ಷ್ಯ ... ಸಂಧೆಗಳ ಸ್ಥಿತಿ ಉತ್ತಮ ತಾ॥ ... ಧಾರ್ಮಿಕ ಕಾರ್ಯ ಧನ ಲಾಭ

ಧನು — ಉತ್ಕೃಷ್ಟ ಬಾಧೆ ನೌಕರಿಯ... ಸಾದ ಪ್ರವಾಸ ಕಷ್ಟಕರ ತಾ॥ ... ಶಸ್ತ್ರ ಭಯ

ಮಕರ — ಉತ್ಸಾಹಕರ ಘಟನೆ ... ಧನಲಾಭ, ಪ್ರವಾಸದಿಂದ ಇಷ್ಟ ... ವ್ಯಾಪಾರಾದಿಗಳಲ್ಲಿ ಜಯ ತಾ॥ ೭ ... ಮೂಲಕ ಲಾಭ

ಕುಂಭ — ಆರೋಗ್ಯ ನೆಟ್ಟಗಿದ್ದರೂ, ... ಅಭಾವ ನೌಕರಿ ಧಂಧೆಗಳ ಸ್ಥಿತಿ ... ಎಲ್ಲ ಅನಪೇಕ್ಷಿತ ಪ್ರವಾಸ ತಾ॥ ... ಸಂಕಟ ನಾಶ

ಮೀನ — ಆರೋಗ್ಯದ ಕಡೆ ದೃಷ್ಟಿ ಇ... ಧಂಧೆಗಳಲ್ಲಿ ಅವಿಶ್ರಾಂತಿ ... ಹೆಚ್ಚಳ ಹಣಕಾಸಿನ ಅಭಾ... ಮಿತ್ರಸಹಾಯ

ಅಟ್ಲಾಂಟಿಕ್ ಒಪ್ಪಂದದ ಸಂಕೇತ

...ಟಿಕ್ ಒಪ್ಪಂದದ ವಿಷಯವಾ... ಬ್ರಿಟನ್ನಿನ ದೇಶಾಂಗ ಸಚಿವನ್ನರು ಪತ್ರಿಕಾ ಗೋಷ್ಠಿಯಲ್ಲಿ ... ಕೊಟ್ಟಿದ್ದಾರೆ ಅಕಸ್ಮಾತ್ತಾಗಿ ... ಸಂಭವಿಸಿದರೆ ಪ್ರಜಾ ಸತ್ತಾತ್ಮಕ ... ಎಲ್ಲವೂ ಒಂದುಗೂಡಿ ಏಕ ಮುಖ... ಮಗಳನ್ನು ಕೈಗೊಳ್ಳಲು ಸಿದ್ಧವಾ... ಒಪ್ಪಂದದ ಸಂಕೇತವೆಂದು ತಿಳಿಸಿದರು ಕೇವಲ ಒಪ್ಪಂದಕ್ಕೆ ... ರುವುದರಿಂದ ಏನೂ ಪ್ರಯೋಜ... ...ದರು

ಮೈಸೂರಿನ ನೌಕರರು ಹೈದರಾಬಾದಿಗೆ

ಸ್ವಂ ಸು ಫೋ॥] ಬೆಂಗಳೂರು ೩

ಹೈದರಾಬಾದಿನ ರೆವಿನ್ಯೂ ಮಂತ್ರಿಗಳಾದ ಶ್ರೀ ಎಂ ಶೇಷಾದ್ರಿಯವರ ಈಗ ಬೆಂಗಳೂರಿಗೆ ಬಂದಿದ್ದಾರೆ ಹೈದರಾಬಾದು ಸಂಸ್ಥಾನದ ಎಲ್ಲಾ ಸರ್ಕಾರಿ ಇಲಾಖೆಗಳನ್ನೂ, ಮುಖ್ಯವಾಗಿ ರೆವಿನ್ಯೂ ಇಲಾಖೆಯನ್ನೂ ಪುನರ್ವ್ಯವಸ್ಥೆಗೊಳಿಸುವ ಕಾರ್ಯದಲ್ಲಿ ಅವರು ತೊಡಗಿದ್ದಾರೆ ಇದಕ್ಕಾಗಿ ಎಲ್ಲಾ ಇಲಾಖೆಗಳಲ್ಲಿಯೂ ಕೆಲಸ ಮಾಡಬಲ್ಲ ಹಲವು ನೌಕರರನ್ನು ಮೈಸೂರಿನಿಂದ ಹೈದರಾಬಾದಿಗೆ ಕೊಂಡೊಯ್ಯಲು ಅವರು ಮೈಸೂರು ಸರ್ಕಾರದೊಡನೆ ಸಮಾಲೋಚನೆ ನಡೆಸುತ್ತಿದ್ದಾರೆ.

○ ಕಾಗದದ ಸರಬರಾಜು ಉತ್ತಮಗೊಂಡಿರುವುದರಿಂದ ... ಪ್ರಕಟಣಕಾರರಿಗೂ ಕೊಡ ... ದ ಪ್ರಮಾಣವನ್ನು ಒಂದ... ಹೆಚ್ಚಿಸಿದೆ ... [illegible] ... ಕನೊಳಗೆ ಹಿಂದಕ್ಕೆ ಕಳುಹಿಸಿ ... ನ್ನು ಪಡೆಯಬೇಕೆಂದು ಸೂಚಿಸಲಾಗಿದೆ

○ ರೈಲ್ವೆ ಪ್ರಯಾಣ ಮಾಡದೇ ... ಟಿಕೆಟುಗಳ ಹಣವನ್ನು ... ಬೇಕಾದ ಸಂದರ್ಭಗಳಲ್ಲಿ ರೈಲು ಪ್ರಯಾಣದ ಕಾಲದ ೩ ಘಂಟೆಯ ಅವಧಿಯೊಳಗೆ ಅರ್ಜಿ ಬರೆದ ಕೊಳ್ಳದೆಯ ... ನಂತರ ಟ್ರಾಫಿಕ್ ಮ್ಯಾನೇಜರವರಿಗೆ ಅರ್ಜಿ ಬರೆದುಕೊಳ್ಳುವುದರ ಮೂಲಕವೂ ಹಣವನ್ನು ವಾಪಸು ಪಡೆಯಬಹುದೆಂದು ಪ್ರಕಟಿಸಲಾಗಿದೆ

ರಾಮಲಿಂಗಂ ಎಲ್ಲಿನ ಮೊಕದ್ದಮೆಯ ಸಂಬಂಧದಲ್ಲಿ ಹೈ ಕೋರ್ಟು ನ್ಯಾಯಾಧೀಶರುಗಳಾದ ಶ್ರೀಗಳು ಕಂದಸ್ವಾಮಿ ಪಿಳ್ಳೆ ಮತ್ತು ಎಂ ... ರವರುಗಳು ಆಸ್ತಿಯ ಹಕ್ಕುದಾರಿ ಒಗ್ಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿರುವುದರಿಂದ ಇದನ್ನು ಫುಲ್‌ಬೆಂಚ್ ಪರಿಶೀಲನೆಗೆ ಹಾಕತಕ್ಕದೆಂದು ಇತ್ಯರ್ಥವಾಗಿರುತ್ತದೆ

...ಸಿಯರ ಐ॥ ಎ॥ ಎಸ್ ಆಫೀಸರ್, ಶ್ರೀ ಡಿ ಕೆ ಶ್ರೀನಿವಾಸಾಚಾರ್ಯರನ್ನು ... ಜಿಲ್ಲಾಧಿಕಾರಿಯನ್ನಾಗಿ ನೇಮಿಸಲಾಗಿದೆ

MILL GOODS
Just arrived
Coating - Shirting - Voil
Mull - Long cloth
Bed-sheets, Towel, twill
etc against Coupons
Uttarkar Rajalakshmi Hall
& Institute Yelv? R?ad
Mysore

ನೌಕರರೊಬ್ಬರ ಮರಣದ ಬಗ್ಗೆ ಪೌರಸಭೆಯ ಸಂತಾಪ

ಮೈಸೂರು ೩

ತಮ್ಮ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಲಾರಿ ಅಪಘಾತಕ್ಕೆ ಗುರಿಯಾದ ಅ॥ ಸ್ಯಾನಿಟರಿ ಇನ್ಸ್‌ಪೆಕ್ಟರ್ ಗೋವಿಂದಪ್ಪನವರ ಬಗ್ಗೆ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನು ನಿನ್ನೆ ನಡೆದ ಪೌರಸಭೆಯ ಮುಂದುವರಿದ ಅಧಿವೇಶನದಲ್ಲಿ ಸದಸ್ಯರು ಎರಡು ನಿಮಿಷ ಮೌನದಿಂದ ಎದ್ದು ನಿಂತು ಅಂಗೀಕರಿಸಿದರು

ತಮ್ಮ ಭಾವ ಚಿತ್ರವನ್ನು ಅನಾವರಣ ಮಾಡಿ ತಮ್ಮನ್ನು ಗೌರವಿಸಿದುದಕ್ಕಾಗಿ ಸಿ ಎಂ ಪಿಚ್ಚೇಶ್ವರಯ್ಯನವರು ಪೌರಸಭೆಗೆ ಧನ್ಯವಾದವನ್ನು ಸಲ್ಲಿಸಿ ಬರೆದಿದ್ದ ಪತ್ರವನ್ನು ರೆಕಾರ್ಡ್ ಮಾಡಲಾಯಿತು

ದೆಹಲಿಗೆ ತೆರಳಿದ್ದ ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ನೆನ್ನೆ ಬೆಂಗಳೂರಿಗೆ ಹಿಂತಿರುಗಿದರು

ನಗರದ ... ಹೈಸ್ಕೂಲನ್ನು ಸ್ಥಾಪಿಸಲು ಸರ್ಕಾರದವರು ಅನುಮತಿಯಿತ್ತಿದ್ದಾರೆ

ಭೋಜನ ಕೂಟ

ಪೌರಸಭಾ ಸದಸ್ಯರೂ ವಕೀಲರೂ ಆದ ಶ್ರೀ ಎ. ... ಯ್ಯನವರು ನಿನ್ನೆ ದಿನ ಅನೇಕ ಪತ್ರಿಕೆಗಳನ್ನೂ ಇತರ ಬಂಧು ಮಿತ್ರರನ್ನೂ ಕರೆಸಿಕೊಂಡು ತಿಮ್ಮಯ್ಯಾ ... ಭೋಜನ ಕೂಟದಿಂದ ಸತ್ಕರಿಸಿದರು

ರಾಜಕಮಲ್
ಮೈಸೂರು

1-4-49 ರಿಂದ
ಅಪೂರ್ವವಾದ ೨ ನೇ ವಾರ
ಪ್ರತಿ ದಿನ ೩ ಆಟಗಳು
ದ್ರೋಹಿ
(ತೆಲುಗು)
ಪಾತ್ರ - ವರಲಕ್ಷ್ಮೀ, ಲಕ್ಷ್ಮೀ ರಾಜ್ಯಂ, ಪ್ರಕಾಶ ರಾವ್, ಪ್ರಸಾದ್

MORNING SHOWS
From 1-4-49 for 4 days
ROMAN SCANDALS
With
Eddie Cantor

ಹೈದರಾಬಾದ್ ಚಳುವಳಿಯಲ್ಲಿ ಸರ್ ಸಿ. ಪಿ. ಯವರ ಕೈವಾಡ

ಲಾಯಕ್ ಅಲಿ ಮಂತ್ರಿಮಂಡಲಿಯು ಭಾರತ ಸರ್ಕಾರದೊಡನೆ ಹೋರಾಟ ನಡೆಸಲು ನಿರ್ಧರಿಸಿದಾಗ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಅವರಿಗೆ ಸಲಹೆಗಳನ್ನೂ ಬೆಂಬಲವನ್ನೂ ಕೊಡುತ್ತಿದ್ದ ಬಗ್ಗೆ ಹಲವು ದಾಖಲೆಗಳು ಈಗಿನ ಹೈದರಾಬಾದ್ ಮಿಲಿಟರಿ ಗೌರ್ನರ್ ಮೇ॥ಜ॥ ಚೌಧುರಿಯವರಿಂದ ಪತ್ತೆ ಮಾಡಲ್ಪಟ್ಟಿವೆಯೆಂದು ಒಂದು ವರದಿಯು ತಿಳಿಸುತ್ತದೆ

ನೆಹರೂ, ಪಟೇಲರ ಹೆಸರಿನಲ್ಲಿ ೫೦ ಲಕ್ಷ ರೂ. ಸ್ಟೇಡಿಯಂ

ದೆಹಲಿಯಲ್ಲಿ ನೆಹರೂರವರ ಹೆಸರಿನಲ್ಲಿಯೂ, ಬೊಂಬಾಯಿಯಲ್ಲಿ ಪಟೇಲರ ಹೆಸರಿನಿಂದಲೂ ಐವತ್ತು ಲಕ್ಷ ರೂ ವೆಚ್ಚದಲ್ಲಿ ಕ್ರೀಡಾ ರಂಗಸ್ಥಳಗಳನ್ನು ಕಟ್ಟಿಸಲು ರಾಷ್ಟ್ರೀಯ ಕ್ರೀಡಾ ಸಂಘದ ವ್ಯವಸ್ಥಾಪಕರು ಪರ್ಯಾಲೋಚಿಸುತ್ತಿರುವರು ಎಲ್ಲ ಮುಖ್ಯ ನಗರಗಳಲ್ಲೂ ಇವನ್ನು ಸ್ಥಾಪಿಸಲು ಸಹಾಯ ನೀಡುವುದಾಗಿ ಪಂ॥ ನೆಹರೂರವರು ಅವರಿಗೆ ತಿಳಿಸಿರುವರು

ಹುಡುಗಿಯನ್ನು ಮತಾಂತರಪಡಿಸುವ ಪ್ರಯತ್ನ

ಕಲ್ಲಿಕೋಟೆಯ ರೌತರ್ ಎಂಬುವನು ೧೪ ವರ್ಷದ ಸರೋಜಿನಿ ಎಂಬ ಹಿಂದೂ ಮೈನರ್ ಹುಡುಗಿಯನ್ನು ಇಸ್ಲಾಂ ಮತಕ್ಕೆ ಸೇರಿಸಲು ಪೊನ್ನಾನಿ ಎಂಬ ಊರಿಗೆ ಕರೆದುಕೊಂಡು ಹೋಗುತ್ತಿದ್ದನೆಂಬ ಅಪಾದನೆಯ ಮೇಲೆ ಆತನಿಗೆ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ಅಬೂಬೇಕರ್ ಎಂಬಾತನಿಗೆ ೬ ತಿಂಗಳು ಶಿಕ್ಷೆಯನ್ನು ವಿಧಿಸಲಾಗಿದೆ.

ಆರು ಜನ ಬರ್ಮಾ ಮಂತ್ರಿಗಳ ರಾಜೀನಾಮೆ

ಸಮತಾವಾದಿ ಪಕ್ಷಕ್ಕೆ ಸೇರಿದ ನಾಲ್ವರೂ, ಪೀಪಲ್ಸ್ ವಾಲಂಟಿಯರ್ ... ಸೇರಿದ ಇಬ್ಬರೂ ಸೇರಿ ಒಟ್ಟು ಆರು ಜನ ಬರ್ಮಾ ಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆ

ವಿಶ್ವವಿದ್ಯಾಲಯ ಸಮಿತಿಯವರ ಆಗಮನ

ಸರ್ ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ ವಿಶ್ವವಿದ್ಯಾಲಯಗಳ ಸಮಿತಿಯವರು ೩ನೇ ದಿನ ಬೆಳಗ್ಗೆ ರಾಜಧಾನಿಗೆ ಆಗಮಿಸಿ ಪ್ರಭುತ್ವ ಭವನದಲ್ಲಿ ತಂಗಿದ್ದಾರೆ ನಾಳೆ ನಾಳಿದ್ದು ಅವರು ಇಲ್ಲಿನ ಪ್ರಮುಖ ವಿದ್ಯಾಲಯಗಳಿಗೆ ಭೇಟಿ ಕೊಡುವರು. ಮತ್ತು ಹಲವರೊಡನೆ ಸಂಭಾಷಣೆ ನಡೆಸುವರು

ಗಾಯತ್ರೀ ಟಾಕೀಸ್
3-4-49 ರಿಂದ ೩ ದಿನಗಳು ಮಾತ್ರ
ಪ್ರತಿ ದಿನ ೩ ಪ್ರದರ್ಶನಗಳು
ವಾರ್ನರ್ಸ್‌ರವರ ಆಕರ್ಷಣೀಯ ವರ್ಣರಂಜಿತ ಚಿತ್ರ
ಟು ಟೆಕ್ಸಾಸ್ ನೈಟ್ಸ್
TWO TEXAS KNIGHTS
ಪಾತ್ರ ಡೆನಿಸ್ ಮಾರ್ಗನ್, ಜ್ಯಾಕ್ ಕಾರ್ಸನ್

(ಇದು ಪ್ರಕಟಣೆಯೇ ಹೊರತು ಪ್ರಾಸ್ಪೆಕ್ಟಸ್ ಅಲ್ಲ)

ಕಾವೇರಿ ಪೇಪರ್ ಮಿಲ್ಸ್ ಮತ್ತು ಫಾರೆಸ್ಟ್ ಇಂಡಸ್ಟ್ರೀಸ್ ಲಿ.

(ಕೊಡಗು ಪ್ರಾಂತ್ಯದಲ್ಲಿ ಇಂಡಿಯನ್ ಕಂಪನೀಸ್ ಆಕ್ಟ್ ಅನುಸಾರವಾಗಿ ರಿಜಿಸ್ಟರಾಗಿದೆ)

[ಇಂಗ್ಲೀಷಿನ ಪ್ರಾಸ್ಪೆಕ್ಟಸ್ಸಿನ ಪ್ರತಿಯನ್ನು ಕೊಡಗಿನ ಜಾಯಿಂಟ್ ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರ್ ಆಫೀಸಿನಲ್ಲಿ ದಾಖಲು ಮಾಡಲಾಗಿದೆ. ಪ್ರಾಸ್ಪೆಕ್ಟಸ್ಸಿನ ಕಾಪಿಗಳನ್ನು ಸೌರಾಷ್ಟ್ರ ಮತ್ತು ರಾಜಸ್ಥಾನ, ವಿಂಧ್ಯ ಪ್ರದೇಶ, ಮಧ್ಯ ಭಾರತ ಯೂನಿಯನ್ನುಗಳ ಮತ್ತು ಮೈಸೂರು, ಹೈದರಾಬಾದ್, ಜಯಪುರ, ಭೂಪಾಲ್, ಕೊಚಿನ್, ಕಾಶ್ಮೀರ್ ಮತ್ತು ಪಟಿಯಾಲಾ, ಕಾಶ್ಮೀರದ ಸಂಸ್ಥಾನಗಳ ಜಾಯಿಂಟ್ ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರ್ ಆಫೀಸುಗಳಲ್ಲೂ ದಾಖಲು ಮಾಡಲಾಗುವುದು.]

ಈ ಕಂಪೆನಿಗೆ ಎರಡೂವರೆ ಕೋಟಿ ರೂಪಾಯಿಗಳ ಬಂಡವಾಳವನ್ನು ಒದಗಿಸಿಕೊಳ್ಳಲು ಭಾರತ ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ. ಅನುಮತಿ ಪತ್ರದ ಪೂರ್ಣ ಪ್ರತಿಯನ್ನು ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ಪರಿಶೀಲಿಸಬಹುದು. ಅನುಮತಿ ಕೊಟ್ಟ ಮಾತ್ರಕ್ಕೆ ಕಂಪನಿಯ ಆರ್ಥಿಕ ಭದ್ರತೆಗಾಗಲೀ ಅದರ ವಿಚಾರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗಾಗಲೀ ಮಾಡಲಾಗಿರುವ ಹೇಳಿಕೆಗಳ ಸತ್ಯಕ್ಕಾಗಲೀ ಸರ್ಕಾರವು ಹೊಣೆಯಲ್ಲವೆಂಬುದನ್ನು ಗಮನಿಸಬೇಕು.

ಮೈಸೂರು ಸರ್ಕಾರದವರೂ ಸಂಸ್ಥಾನದಲ್ಲಿ ೧೫ ಲಕ್ಷ ರೂಪಾಯಿಗಳ ಷೇರುಗಳನ್ನು ಮಾರಾಟ ಮಾಡಲು ಬಹುತರವಾಗಿ ಕಂಡ ಷರತ್ತಿನಂತೆಯೇ ಅನುಮತಿ ಕೊಟ್ಟಿದ್ದಾರೆ.

ಈ ಕಂಪನಿಯ ಷೇರುಗಳು ಸಾರ್ವಜನಿಕ ಹಂಚಿಕೆಗೆ ೧೯೪೯ನೇ ಏಪ್ರಿಲ್ ೬ ನೇ ತಾರೀಖಿನಿಂದ ಪ್ರಾರಂಭವಾಗುವುದು.

ಡೈರೆಕ್ಟರುಗಳು ಸೂಕ್ತ ತೋರಿದೊಡನೆಯೇ ಹಂಚಿಕೆಯ ಅವಧಿಯನ್ನು ಮುಕ್ತಾಯಗೊಳಿಸಬಹುದು.

ಅಧಿಕೃತ ಬಂಡವಾಳ	2,50,00,000 ರೂಪಾಯಿಗಳು
ಹೊರಗೆಡವಲಾದ ಬಂಡವಾಳ	2,50,00,000 ರೂಪಾಯಿಗಳು
ಸಾರ್ವಜನಿಕರಿಗೆ ಹೊರಗೆಡವಲಾದ ಬಂಡವಾಳ	2,00,00,000 ರೂಪಾಯಿಗಳು.

: ವಿಂಗಡಣೆ ಮತ್ತು ಪಾವತಿ ರೀತಿ :—

ನೂರು ರೂಪಾಯಿ ಬೆಲೆಯ ಇಪ್ಪತ್ತು ಲಕ್ಷ ಆರ್ಡಿನರಿ ಷೇರುಗಳು ಪ್ರತಿ ಷೇರಿಗೂ ದರಖಾಸ್ತಿನೊಡನೆ ೨ ರೂಪಾಯಿ ಅಲಾಟ್‌ಮೆಂಟ್ ಆದಾಗ ೨ ರೂಪಾಯಿ ಉಳಿದ ೬ ರೂಪಾಯಿಗಳು ಎರಡು ತಿಂಗಳ ಅಂತರವಿರುವ, ಎರಡು ರೂಪಾಯಿನ ಮೂರು ಕಂತುಗಳಲ್ಲಿ 20,00,00[illegible]

ನೂರು ರೂಪಾಯಿ ಬೆಲೆಯ (ಆದಾಯ ತೆರಿಗೆಯಿಲ್ಲದೆ) ಶೇಕಡಾ ಆರರಂತೆ ಕೂಡು ಬಡ್ಡಿಯ ಪ್ರಿಫರೆನ್ಸ್ ಷೇರುಗಳು ಐವತ್ತು ಸಾವಿರ 50,00,00[illegible]

ದರಖಾಸ್ತಿನೊಡನೆ ೨೫ ರೂಪಾಯಿ, ಅಲಾಟ್‌ಮೆಂಟ್ ಆದಾಗ ೨೫ ರೂಪಾಯಿ, ಉಳಿದ ೫೦ ರೂಪಾಯಿಗಳು ಎರಡು ತಿಂಗಳು ಅಂತರವಿರುವ ೨೫ ರೂಪಾಯಿ ಎರಡು ಕಂತುಗಳಲ್ಲಿ

ಹೊರಗೆಡವಲಾದ ಬಂಡವಾಳದಲ್ಲಿ ೪೦,೦೦,೦೦೦ ರೂಪಾಯಿ ಬೆಲೆಯ ನಾಲ್ಕು ಲಕ್ಷ ಆರ್ಡಿನರಿ ಷೇರುಗಳನ್ನೂ ೧೦,೦೦,೦೦೦ ರೂಪಾಯಿ ಬೆಲೆಯ ಹತ್ತು ಸಾವಿರ ಪ್ರಿಫರೆನ್ಸ್ ಷೇರುಗಳನ್ನೂ ಡೈರೆಕ್ಟರುಗಳೂ, ಪ್ರಮೋಟರುಗಳೂ ಮತ್ತು ಅವರ ಸ್ನೇಹಿತರುಗಳೂ, ತೆಗೆದುಕೊಳ್ಳಲು ಒಪ್ಪಿದ್ದಾರೆ. ಇದರ ಪೈಕಿ ೧೨,೫೦,೩೦೦ ಮೊತ್ತದ ೧,೦೫,೪೩೨ ಆರ್ಡಿನರಿ ಷೇರುಗಳೂ ಮತ್ತು [illegible] ಮೊತ್ತದ [illegible] ಪ್ರಿಫರೆನ್ಸ್ ಷೇರುಗಳೂ ಚಂದಾ ಆಗಿದೆ ಮತ್ತು ೪,೬೫,೫೫೫ ರೂಪಾಯಿಗಳು ಪಾವತಿಯಾಗಿದೆ. ಉಳಿದ ೧,೬೦,೦೦,೦೦೦ ಮೊತ್ತದ ಹದಿನಾರು ಲಕ್ಷ ಆರ್ಡಿನರಿ ಷೇರುಗಳನ್ನೂ ಮತ್ತು ೪೦,೦೦,೦೦೦ ಮೊತ್ತದ ನಲವತ್ತು ಸಾವಿರ ಪ್ರಿಫರೆನ್ಸ್ ಷೇರುಗಳನ್ನೂ ಮಾತ್ರ ಸಾರ್ವಜನಿಕರಿಗಾಗಿ ಹೊರಗೆಡವಲಾಗಿದೆ

ಡೈರೆಕ್ಟರು ಮಂಡಲಿ

ರಾಜಮಂತ್ರ ಪ್ರವೀಣ ಹೆಚ್. ಬಿ. ಗುಂಡಪ್ಪಗೌಡರು ಬಿ ಎ ಬಿ ಎಲ್, ಮೈಸೂರು ಸರ್ಕಾರದ ಮಾಜಿ ಮಂತ್ರಿಗಳು ಮೈಸೂರು ಶಾಸನ ಸಭಾಧ್ಯಕ್ಷರು "ಭಕ್ತಿ ನಿಲಯ" ಬಸವನಗುಡಿ, ಬೆಂಗಳೂರು. (ಛೇರ್ಮನ್)

ಸೇಠ್ ರತನ್‌ಚಂದ್ ಹೀರಾಚಂದ್, ಎಂ ಪಿ 'ಕನ್‌ಸ್ಟ್ರಕ್ಷನ್ ಹೌಸ್', ಬಾಲಾರ್ಡ್ ಎಸ್ಟೇಟ್, ಫೋರ್ಟ್ಸ್ ಬೊಂಬಾಯಿ (ವೈಸ್ ಛೇರ್ಮನ್) ಡೈರೆಕ್ಟರ್—ಪ್ರಿಮಿಯರ್ ಕನ್‌ಸ್ಟ್ರಕ್ಷನ್ ಕಂಪೆನಿ, ಲಿಮಿಟೆಡ್, ರಾವಲ್‌ಗಾವ್ ಷುಗರ್ ಫಾರಂ, ಲಿಮಿಟೆಡ್ ಇಂಡಿಯನ್ ಹ್ಯೂಂ ಪೈಪ್ ಕಂಪೆನಿ, ಲಿಮಿಟೆಡ್ ದೇವಕರಣ ನಾಂಜಿ ಬ್ಯಾಂಕಿಂಗ್ ಕಂಪೆನಿ, ಲಿಮಿಟೆಡ್, ಈಸ್ಟರ್ನ್ ಸ್ಟೀಂ ನ್ಯಾವಿಗೇಷನ್ ಕಂಪನಿ, ಲಿಮಿಟೆಡ್,

ದಿವಾನ್ ಬಹದ್ದೂರ್ ಕೆ.ಎಸ್. ರಾಮಸ್ವಾಮಿ ಶಾಸ್ತ್ರಿಯಾರ್, ಬಿ.ಎ, ಬಿ ಎಲ್ ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜ್ ರಾಯಪೇಟೆ ಮದರಾಸು

ಶ್ರೀ ಟಿ ಸಿದ್ದಲಿಂಗಯ್ಯ, ಬಿ ಎ ಎಲ್ ಎಲ್ ಬಿ, ಮೈಸೂರು ಕಾಂಗ್ರೆಸ್ ಅಧ್ಯಕ್ಷರು, ಲಾಂಗ್‌ಫರ್ಡ್ ಗಾರ್ಡನ್, ಸಿವಿಲ್ ಸ್ಟೇಷನ್, ಬೆಂಗಳೂರು.

ಶ್ರೀ ಬಿ ವೆಂಕಟಪ್ಪ, ಜಮೀನ್ದಾರ್ ತಿಟ್ಟಮಾರನಹಳ್ಳಿ, ಚನ್ನಪಟ್ಟಣ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರು. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಮಾಜಿ ಅಧ್ಯಕ್ಷರು. ಛೇರ್ಮನ್—ಮೈಸೂರು ಇನ್‌ಷೂರೆನ್ಸ್ ಕಂಪೆನಿ. ಲಿಮಿಟೆಡ್. ಮೈಸೂರು ಪ್ರಾವಿಡೆಂಟ್ ಇನ್‌ಷೂರೆನ್ಸ್ ಕಂಪೆನಿ. ಲಿಮಿಟೆಡ್

ರಾವ್ ಬಹದ್ದೂರ್, ಕೆ ಜ ಬೆಳ್ಳಿಯಪ್ಪನವರು ಬಿ ಎ ರಿಟೈರ್ಡ್ ಫಾರೆಸ್ಟ್ ಆಫೀಸರು 'ವಿ ಲಾಡ್ಜ್' ಮಡಿಕೇರಿ ಡೈರೆಕ್ಟರ್ ಕೂರ್ಗ್ ಜನರಲ್ ಇಂಡಸ್ಟ್ರೀ [illegible]

[illegible] ಕಂಪೆನಿ, ಲಿಮಿಟೆಡ್ ಕಾವೇರಿ ಎಲೆಕ್ಟ್ರಿಕ್ ಕಂಪೆನಿ, ಲಿಮಿಟೆಡ್

ಶ್ರೀ ಬಿ ನಾರಾಯಣಸ್ವಾಮಿ ಬಿ ಎ ಎಲ್ ಎಲ್ ಬಿ ಅಡ್ವೋಕೇಟ್ ಹೈಕೋರ್ಟ್ ಬೊಂಬಾಯಿ ೫, "ಮೌಂಟ್ ಮಾತುಂಗ" ಕಿಂಗ್ಸ್ ಸರ್ಕಲ್, ಬೊಂಬಾಯಿ ೧೯.

ಶ್ರೀ ಕೆ ಎಂ. ಮುತ್ತಣ್ಣನವರು [ಎಕ್ಸ್ ಆಫಿಸಿಯೋ] ಏಲಕ್ಕಿ ಪ್ಲಾಂಟರು ಮಾದೇನಾಡು, ಮಡಿಕೇರಿ ಪೋಸ್ಟ್, ಡೈರೆಕ್ಟರು; ಕಾರ್ಡಮಂ ಗ್ರೋಯರ್ಸ್ ಅಸೋಸಿಯೇಷನ್ ಪಾರ್ಟ್‌ನರ್, ವಿಜಯವೇಲ್ ಕಂಪೆನಿ, ಬೆಂಗಳೂರು.

ಶ್ರೀ ಜೆ.ವಿ ದೊಡ್ಡವೀರಪ್ಪನವರು, (ಎಕ್ಸ್ ಆಫಿಸಿಯೊ,) ಮ್ಯಾನೇಜಿಂಗ್ ಪಾರ್ಟ್‌ನರ್, ವಿಜಯವೇಲ್ ಕಂಪೆನಿ, ಬೆಂಗಳೂರು ಇಂಡಸ್ಟ್ರಿಯಲಿಸ್ಟ್ಸ್ ಮತ್ತು ಜನರಲ್ ಏಜೆಂಟರು,"ಶಿವಂ" ಸಂಪಂಗಿ ಟ್ಯಾಂಕ್ ರೋಡ್ ಬೆಂಗಳೂರು ಛೇರ್ಮನ್, ಜನರಲ್ ಟ್ರೇಡಿಂಗ್ ಕಂಪೆನಿ, ಲಿಮಿಟೆಡ್, ಮ್ಯಾನೇಜಿಂಗ್ ಏಜೆಂಟರು, ಮೆಸರ್ಸ್ ವಿಜಯವೇಲ್ ಮತ್ತು ಕಂಪನಿ ಇಂಡಸ್ಟ್ರಿಯಲಿಸ್ಟ್ಸ್ ಮತ್ತು ಜನರಲ್ ಏಜೆಂಟ್ಸ್ 'ಶಿವಂ' ಸಂಪಂಗಿ ಟ್ಯಾಂಕ್ ರೋಡ್ ಬೆಂಗಳೂರು

ಮ್ಯಾನೇಜಿಂಗ್ ಏಜೆಂಟರು

ಮೆಸರ್ಸ್ ವಿಜಯವೇಲ್ ಮತ್ತು ಕಂಪೆನಿ ಇಂಡಸ್ಟ್ರಿಯಲಿಸ್ಟ್ಸ್ ಮತ್ತು ಜನರಲ್ ಏಜೆಂಟ್ಸ್ "ಶಿವಂ", ಸಂಪಂಗಿ ಟ್ಯಾಂಕ್ಸ್ ರೋಡು, ಬೆಂಗಳೂರು.

ಆಡಿಟರು

ಶ್ರೀ ಎಸ್. ಆರ್ ಮಾಂಡ್ರೆ, ಎಂ ಎ ಬಿ ಕಾಂ ಎಫ್ ಎಸ್ ಎಂ ಎ [ಲಂಡನ್] ಆರ್ ಎ ಇನ್‌ಕಾರ್ಪೊರೇಟೆಡ್. ಅಕೌಂಟೆಂಟ್ ಮತ್ತು ಆಡಿಟರು ಗಾಂಧಿನಗರ, ಬೆಂಗಳೂರು ಸಿಟಿ

ನ್ಯಾಯ ಸಲಹೆಗಾರರು

ಡಾಕ್ಟರ್ ವಿ ಕೆ ಜಾನ್, ಬ್ಯಾರಿಸ್ಟರ್, ಮತ್ತು ಮದರಾಸಿನ ನ್ಯಾಯ ವಿಧಾಯಕ ಸಭೆ ಸದಸ್ಯರು [ಮೆಸರ್ಸ್ ಜಾನ್ ಅಂಡ್ ರಾವ್, ಅಡ್ವೋಕೇಟ್ ಮತ್ತು ನೋಟರಿ ಪಬ್ಲಿಕ್, ಮದರಾಸು]

ಶ್ರೀ ಎಂ ಪಿ ಸೋಮಶೇಖರರಾವ್, ಬಿ ಎ, ಎಲ್ ಎಲ್ ಬಿ, ಹೈಕೋರ್ಟ್ ಅಡ್ವೋಕೇಟ್, ಬೆಂಗಳೂರು

ಬ್ಯಾಂಕರುಗಳು

ಬ್ಯಾಂಕ್ ಆಫ್ ಮೈಸೂರು, ಲಿಮಿಟೆಡ್,

ಪಂಜಾಬ್ ನ್ಯಾಷನಲ್ ಬ್ಯಾಂಕ್ ಲಿ.,

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್

ಇಂಡಿಯನ್ ಬ್ಯಾಂಕ್ ಲಿಮಿಟೆಡ್.

ರಿಜಿಸ್ಟರ್ಡ್ ಆಫೀಸ್

ಫ್ರೇಜರ್‌ಪೇಟೆ, ಕೊಡಗು.

ಇತರ ಉದ್ಯಮ ಕಚೇರಿಗಳು

೨೭, ಲಾಲ್ ಬಾಗ್, ಬೆಂಗಳೂರು.

೧೦೩, ಆರ್ಮೀನಿಯನ್ ರಸ್ತೆ, ಮದ್ರಾಸು

೩೬ ಮಾಡರ್ನ್ ಹೌಸ್ ಡಾಕ್ಯಾರ್ಡ್ ರೋಡ್, ಬಾಂಬೆ, ೮

ಬ್ರೋಕರುಗಳು

ಪಿ ಆರ್. ಸುಬ್ರಹ್ಮಣ್ಯಂರವರು, ೨ ಪೊಲ್ಲೋಕ್ ಸ್ಟ್ರೀಟ್, ಫೋರ್ಟ್, ಬಾಂಬೆ

ರಾಜಪಾಲ್ ಛಡ್ಡಾ ಅಂಡ್ ಕಂಪೆನಿ, ಚಾಂದಿನಿ ಚೌಕ, ಡೆಲ್ಲಿ

ಸೋಮಯಾಜುಲು ಕಂಪೆನಿ. ಜಿ ಟಿ. ಮದರಾಸು

ಏಷನ್‌ದ್ಯಾಲ್ ದಯಾರಾಂ,

೩, ತಾರಾಚಂದ್ ದತ್ ಸ್ಟ್ರೀಟ್. ಕಲ್ಕತ್ತಾ

ಅಯ್ಯರ್ ಅಂಡ್ ಕಂಪೆನಿ,

ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ,

ಉದ್ದೇಶಗಳು

ಮೆಮೋರ್ಯಾಂಡಂನಲ್ಲಿ ವಿವರಿಸಿರುವ ಉದ್ಯಮಗಳನ್ನು ಕೈಗೊಳ್ಳಲೂ, ಮುಖ್ಯವಾಗಿ ಕೊಡಗಿನಲ್ಲಿ ಕಾಗದ ಮತ್ತು ಬೋರ್ಡು ಕಾರ್ಖಾನೆಯನ್ನು ಸ್ಥಾಪಿಸಿ ಉತ್ತಮ ತರದ ಮುದ್ರಣ ಕಾಗದ. ಬರೆಯುವ ಕಾಗದ ಬಾಂಡ್ ಕಾಗದ, ಮ್ಯಾನಿಫೋಲ್ಡ್, ಕ್ರೀಂ ಲೆಯಿಡ್ ಕಾರ್ಟ್ರಿಡ್ಜ್, ಟಿಷ್ಯೂ ಕಾಗದ, ಏವರಿ ಗ್ಲೇಜ್ ಮುಂತಾದ ಕಾಗದಗಳನ್ನೂ ಮತ್ತು ಸ್ಟ್ರಾ ಬೋರ್ಡ್, ಬಾಕ್ಸ್ ಬೋರ್ಡ್, ಡೂಪ್ಲೆ, ಟ್ರಿಪ್ಲೆ ಮುಂತಾದ ವಿವಿಧ ರಟ್ಟುಗಳನ್ನು ಮತ್ತು ಪಲ್ಪ್‌ನ್ನೂ ತಯಾರಿಸಿ ಮಾರಾಟ ಮಾಡುವುದಲ್ಲದೆ ಗಂಧದೆಣ್ಣೆ ತಯಾರಿಕೆ ಮತ್ತು ಮಾರಾಟ ಮಾಡುವ ಉದ್ದೇಶಗಳಿಂದ ಕಂಪೆನಿಯು ಸ್ಥಾಪನೆಯಾಗಿದೆ.

ಷೇರು ದರಖಾಸ್ತು

ಷೇರು ದರಖಾಸ್ತುಗಳನ್ನು [೧೦ ಆರ್ಡಿನರಿ ಷೇರಿಗೆ ಕಮ್ಮಿ ಇಲ್ಲದ ಹಾಗೆ] ಪ್ರಾಸ್ಪೆಕ್ಟಸ್ಸಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ದರಖಾಸ್ತಿನ ಹಣದೊಂದಿಗೆ ಕಂಪನಿಯ ರಿಜಿಸ್ಟರ್ಡ್ ಆಫೀಸಿಗಾಗಲೀ ಅಥವಾ ಕಂಪೆನಿಯ ಬೆಂಗಳೂರು ಆಫೀಸಿಗಾಗಲೀ ಅಥವಾ ಕಂಪೆನಿಯ ಬ್ಯಾಂಕುಗಳಿಗಾಗಲೀ ಕಳುಹಿಸಬೇಕು. ಷೇರು ದರಖಾಸ್ತು ಮಂಜೂರಾಗದಿದ್ದರೆ ಪೂರ್ತಾ ಹಣವನ್ನು ವಾಪಸ್ಸು ಮಾಡಲಾಗುವುದು. ದರಖಾಸ್ತಿನಲ್ಲಿ ನಮೂದಿಸಿರುವ ಷೇರಿನ ಪೈಕಿ ಒಂದು ಭಾಗವು ಮಂಜೂರಾದಲ್ಲಿ ಉಳಿಕೆಯಾದ ಹಣದಲ್ಲಿ ಮಂಜೂರಾದ ಷೇರುಗಳ ಬಾಬ್ತು ಅಲಾಟ್‌ಮೆಂಟ್ ಹಣವನ್ನು ಕಟಾಯಿಸಿ ಉಳಿಕೆಯಾದ ಹಣವನ್ನು ವಾಪ್ಸು ಮಾಡಲಾಗುವುದು.

[ಸಹಿ] ಹೆಚ್. ಬಿ. ಗುಂಡಪ್ಪಗೌಡ
ಸೇಠ್ ರತನ್‌ಚಂದ್ ಹೀರಾಚಂದ್
ಕೆ ಎಸ್. ರಾಮಸ್ವಾಮಿಶಾಸ್ತ್ರಿಯಾರ್
ಟಿ ಸಿದ್ದಲಿಂಗಯ್ಯ
ಬಿ. ವೆಂಕಟಪ್ಪ
ಕೆ ಜಿ ಬೆಳ್ಳಿಯಪ್ಪ
ಬಿ. ನಾರಾಯಣಸ್ವಾಮಿ
ಟಿ ಸಿದ್ದಣ್ಣ
ಎಂ ಸುಬ್ರಹ್ಮಣ್ಯ ಮೊದಲಿಯಾರ್
ಆರ್. ವಿ. ನಾಯ್ಡು
ಬಿ. ನಾರಾಯಣ ರಾವ್
ಸಿ. ಡಿ ಬೋಪಯ್ಯ
ಕೊಡಿಗೌಡ ರಾಫ್ ಪಟ್ಟಸ್ವಾಮಿಗೌಡ
ಸಿ. ಜಿ ಚುಂಚೇಗೌಡ
ಕೃಷ್ಣಸ್ವಾಮಿ ಮೊದಲಿಯಾರ್
ಕೆ ಎಂ. ಮುತ್ತಣ್ಣ
ಜೆ ವಿ ದೊಡ್ಡವೀರಪ್ಪ.

[illegible] published by A R. Nagarajan at the Sadhvi Press, D. Subbaih Road, Mysore

ಫೋ|| ನಂ 792 ||ವಂದೇಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೪-೪-೧೯೪೯ [ಸಂಚಿಕೆ ೨೦೩

ವಿಶ್ವ ವಿದ್ಯಾಲಯ ಸುಧಾರಣಾ ಸಮಿತಿ

ಮೈಸೂರು ೪

ಸರ್ ಎಸ್. ರಾಧಾಕೃಷ್ಣನ್‌ರವರ ನಾಯಕತ್ವದಲ್ಲಿ ರಚಿತವಾಗಿರುವ ವಿಶ್ವ ವಿದ್ಯಾನಿಲಯಗಳ ಸುಧಾರಣಾ ಸಮಿತಿಯವರು ನಿನ್ನೆ ಮಧ್ಯಾಹ್ನ ಹಲವು ಸೆನೆಟ್ ಸದಸ್ಯರುಗಳಿಗೆ ಭೇಟಿ ಇತ್ತು ಅವರುಗಳ ಹೇಳಿಕೆಗಳನ್ನು ತೆಗೆದುಕೊಂಡರು ಶ್ರೀಗಳಾದ ಪಿ. ಸುಬ್ರಹ್ಮಣ್ಯ ಅಯ್ಯರ್ ಮತ್ತು ಎಂ. ಹಿರಿಯಣ್ಣನವರುಗಳೊಡನೆಯೂ ಮಾತುಕತೆ ನಡೆಸಿದರು. ವಿಶ್ವ ವಿದ್ಯಾಲಯದಲ್ಲಿ ದಕ್ಷತೆಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದೂ ಮಹಿಳೆಯರಿಗೆ ಗೃಹವಿಜ್ಞಾನ ಶಿಕ್ಷಣ ಕೊಡಲು ವ್ಯವಸ್ಥೆ ಮಾಡಬೇಕೆಂದೂ ಹಲವು ಸದಸ್ಯರುಗಳು ತಿಳಿಸಿದರೆಂದು ಗೊತ್ತಾಗಿದೆ ವಿಶ್ವವಿದ್ಯಾಲಯದ ಅಧ್ಯಾಪಕರುಗಳೊಡನೆಯೂ ಅವರು ಸಂಭಾಷಣೆ ನಡೆಸಿದರು. ವಿಶ್ವ ವಿದ್ಯಾಲಯಗಳ ಆಡಳಿತವನ್ನೆಲ್ಲಾ ಕೇಂದ್ರ ಸರ್ಕಾರದವರೇ ನಡೆಸುವಂತೆ ಏರ್ಪಾಡಾಗಬೇಕೆಂದು ಅಧ್ಯಾಪಕ ವರ್ಗದವರು ಸಲಹೆ ಮಾಡಿದರೆಂದು ತಿಳಿದುಬಂದಿದೆ ಈ ದಿನ ಅವರು ಕಾಲೇಜುಗಳು, ವಿಶ್ವ ವಿದ್ಯಾನಿಲಯ ಮತ್ತು ಓರಿಯಂಟಲ್ ಲೈಬ್ರರಿಗಳಿಗೆ ಭೇಟಿ ಕೊಟ್ಟರು

ಪುರಸಭಾಧ್ಯಕ್ಷರೇ ಕಸ ಗುಡಿಸಿದರು

ಅಲಹಾಬಾದಿನ ೮೦೦ ಜನ ಜಾಡಮಾಲಿಗಳು ತಮ್ಮ ಸಂಬಳ ಸಾರಿಗೆ ಬಗ್ಗೆ ಮೈಷ್ಕಿಯಿಂದ ಮುಷ್ಕರ ಹೂಡಿರುವರು. ಪುರಸಭಾಸದಸ್ಯರು ಮತ್ತು ಜನರು ಮುಂದೆ ಬಂದು ನಗರವನ್ನು ಸ್ವಚ್ಛವಾಗಿಡಬೇಕೆಂದು ಅಲ್ಲಿನ ಪುರಸಭಾಧ್ಯಕ್ಷರು ಮನವಿ ಮಾಡಿ ತಾವೇ ಬಂದು ರಸ್ತೆಯನ್ನು ಕಸ ಗುಡಿಸಿದರೆಂದು ಹೇಳಲಾಗಿದೆ ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ಕೆಲವು ನೌಕರರೂ ಹಾಗೆಯೇ ಮಾಡಿದರು

ಸಿಂಹಳದ ಶಾಸನ ಸಭೆಯಲ್ಲಿ ಬುಷ್ ಕೋಟಿಗೆ [illegible]

ಸಿಂಹಳ ದ್ವೀಪದ ಪಾರ್ಲಿಮೆಂಟ್ ಸಭೆಯಲ್ಲಿ ಒಬ್ಬ ಸದಸ್ಯರು ಬುಷ್ ಕೋಟನ್ನು ಧರಿಸಿಕೊಂಡು ಬಂದಿದ್ದುದಕ್ಕಾಗಿ ಅಧ್ಯಕ್ಷರು ಆಕ್ಷೇಪಣೆಮಾಡಿ ಸದರಿ ಉಡುಪು ಪಾರ್ಲಿಮೆಂಟರಿ ಪದ್ಧತಿಗೆ ವಿರೋಧವಾದುದೆಂದೂ, ಅದಕ್ಕೆ ಅವಕಾಶ ಕೊಡಲಾಗುವುದಿಲ್ಲವೆಂದೂ ತಿಳಿಸಿರುವರು

ಕೈಲ್ವೆ ಪಾರ್ಸೆಲ್ಲಿನ ೨೨ ತಿಂಗಳ ಪ್ರವಾಸ

ಕಾಂಗ್ರೆಸ್ ಅಧ್ಯಕ್ಷರು ಅಲಹಾಬಾದಿನಿಂದ ಬೆಂಗಳೂರಿನಲ್ಲಿರುವ ಕಾಂಗ್ರೆಸ್ ಕಛೇರಿಗೆ ಕಳುಹಿಸಿದ ರಶೀತಿ ಪುಸ್ತಕ ವಗೈರೆ ಪಾರ್ಸೆಲ್ಲೊಂದು ಒಂದು-ವರ್ಷದ [illegible] ತಿಂಗಳನಂತರ ಈಗ ತಾನೆ ವಿಳಾಸದಾರರಿಗೆ ಪಾವತಿಯಾಗಿರುತ್ತದೆ

ಅಲಾರಂ ಬಾರಿಸುವ ಕೈ ಗಡಿಯಾರ

ಅಲಾರಂ ಹೊಡೆಯುವಂತಹ ನೂತನ ಗಡಿಯಾರವು ಭಾರತಕ್ಕೆ ಮೊಟ್ಟ ಮೊದಲಿಗೆ [illegible] ಬರಲಿದೆಯೆಂದೂ, ಅದು ಚಿಕ್ಕ [illegible] ಮಾಡುವಷ್ಟು ಧ್ವನಿ ಕೊಡುವುದೆಂದೂ ಹೇಳಲಾಗಿದೆ

ಹೈದರಾಬಾದಿನಲ್ಲಿ ವಿದ್ಯುತ್ ಯೋಜನೆ

ತುಂಗಭದ್ರ ಮತ್ತು ನೈಜಾಂ ಸಾಗರ ಅಣೆಕಟ್ಟುಗಳಿಂದ ವಿದ್ಯುಚ್ಛಕ್ತಿ ತಯಾರಿಸಲು ಹೈದರಾಬಾದ್ ಸರ್ಕಾರದವರು ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ ತುಂಗಭದ್ರ ಯೋಜನೆಯನ್ನು ಹೈದರಾಬಾದ್ ಮತ್ತು ಮದರಾಸ್ ಸರ್ಕಾರಗಳೆರಡೂ ಸೇರಿ ನಡೆಸುವುವೆಂದೂ, ಹೈದರಾಬಾದಿಗೆ ೩೦ ಸಾವಿರ ಅಶ್ವ ಶಕ್ತಿಯಷ್ಟು ವಿದ್ಯುಚ್ಛಕ್ತಿ ಸರಬರಾಜಾಗುವುದೆಂದೂ ಹೇಳಲಾಗಿದೆ

ಕೊಡಗಿನ ಭವಿಷ್ಯದ ಬಗ್ಗೆ ಜನಾಭಿಪ್ರಾಯ

ಕೊಡಗಿನ ಭವಿಷ್ಯವನ್ನು ತೀರ್ಮಾನ ಮಾಡುವುದಕ್ಕಿಂತ ಮುಂಚೆ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಅಲ್ಲಿನ ಶಾಸನ ಸಭೆಯು ಬಹುಮತದಿಂದ ತೀರ್ಮಾನ ಮಾಡಿರುತ್ತದೆ

ನೀರಿನಿಂದ ತಯಾರಾಗುವ ಪೆಟ್ರೋಲ್ ಗ್ಯಾಲನ್ನಿಗೆ ೮ ಆಣೆ

ಮದರಾಸಿನ ಶ್ರೀ ಸಿ ಆರ್ ಭಕ್ತವತ್ಸಲ ರೆಡ್ಡಿ ಎಂಬುವರು ಸಮುದ್ರದ ನೀರಿನಿಂದ ಪೆಟ್ರೋಲ್ ತಯಾರಿಸುವ ನೂತನ ಸಾಧನವನ್ನು [illegible] ಮಾಡಿ ಇಂತಹ ಪೆಟ್ರೋಲನ್ನು ಗ್ಯಾಲನ್ನಿಗೆ ೮ ಆಣೆಯಂತೆ ಮಾರಬಹುದೆಂದು [illegible] ಪಡಿಸಿದ್ದಾರೆಂದೂ ಹೇಳಲಾಗಿದೆ ಅದನ್ನು ತಯಾರಿಸುವ ವಿಧಾನವನ್ನು ರಹಸ್ಯವಾಗಿಟ್ಟಿದ್ದರೂ, ತಮ್ಮ ಸಂಶೋಧನೆಯನ್ನು ಭಾರತ ಸರ್ಕಾರಕ್ಕೆ ಕೊಡುವುದಾಗಿ ಅವರು ತಿಳಿಸಿದರು.

ಗೋಪಾಲರಾಯರಿಗೆ ಮಾಸಾಶನ

ಸ್ಟಂ ಸು ಫೋ] ಬೆಂಗಳೂರು ೪.

ಸರ್ಕಾರದ ಸೇವೆಗರ ಸ್ವಾಧೀನದಲ್ಲಿರುವ ತಮ್ಮ ಆಸ್ತಿಯಿಂದ ತಮ್ಮ ಜೀವನಕ್ಕಾಗಿ ಮಾಸಾಶನವನ್ನು ಕೊಡಿಸಬೇಕೆಂದು ಶ್ರೀ ಬಿ. ಎನ್ ಗೋಪಾಲರಾಯರು ಹಾಕಿಕೊಂಡಿದ್ದ ಅರ್ಜಿಯ ಮೇಲೆ ಮಾಹೆಯಾನಾ ೧೫೦ ರೂ ಕೊಡಬಹುದೆಂದೂ ಸಬ್ ಜಡ್ಜಿಯವರು ಆಜ್ಞೆ ಮಾಡಿರುತ್ತಾರೆ

ಅಖಿಲ ಭಾರತ ರೇಷ್ಮೆ ಸಮಿತಿ

ಭಾರತ ಸರ್ಕಾರದವರು ರಚಿಸಿರುವ ಅಖಿಲಭಾರತ ರೇಷ್ಮೆ ಸಮಿತಿಯ ಮೊದಲನೆಯ ಸಭೆಯು ಈ ತಿಂಗಳ ಆದಿಯಲ್ಲಿ ಬೆಂಗಳೂರಿನಲ್ಲಿ ನಡೆಯುವುದು ಭಾರತದ ಸಚಿವರಾದ ಡಾ. [illegible] ಅಧ್ಯಕ್ಷತೆ ವಹಿಸುವರು

ನೆಹರೂ ದರ್ಶನದಲ್ಲಿ ಗೌರ್ನರ್ ಮತ್ತು ಸಚಿವರ ನಜ್ಜುಗುಜ್ಜು

ಮೊನ್ನೆ ಮುಜಫರ್‌ಪುರದಲ್ಲಿ ನಡೆದ ಬಿಹಾರ್ ಪ್ರಾಂತ್ಯದ ರಾಜಕೀಯ ಸಮ್ಮೇಳನದಲ್ಲಿ ಭಾಷಣ ಮಾಡಿದ ಪಂಡಿತ ನೆಹರೂರವರ ದರ್ಶನಕ್ಕಾಗಿ ಸುತ್ತ ಮುತ್ತಲಿನಿಂದ ಬಂದಿದ್ದ ೫ ಲಕ್ಷ ಜನರ ಗುಂಪು ಎಲ್ಲೆಮೀರಿ ನುಗ್ಗಿದುದರಿಂದ ಬಿಹಾರದ ಬಾಲಕನು ಜಜ್ಜಿಹೋದನೆಂದು ವರದಿಯಾಗಿದೆ ಗೌರ್ನರರಾದ ಶ್ರೀ ಎಂ.ಎಸ್ ಅಣೆಯವರೂ ಸಹ ನೂಕು ನುಗ್ಗಲಿನಲ್ಲಿ ಹಿಂದಕ್ಕೆ ತಗೆಯಲ್ಪಟ್ಟರು ಭಾರತದ ಉಪ ಮಂತ್ರಿ ಡಾ|| ಕೇಸ್ಕರ್‌ರವರು ಜಜ್ಜಿಹೋಗದೇ ಪಾರಾದರು ಸಾವಿರ ಜನ ಪೋಲೀಸರೂ, ಸ್ವಯಂ ಸೇವಕರೂ ಇದ್ದರೂ ಜನ ಗುಂಪನ್ನು ಹತೋಟಿಯಲ್ಲಿಡಲಾಗಲಿಲ್ಲ ಬಾಬು ರಾಜೇಂದ್ರ ಪ್ರಸಾದರವರು ಚಪ್ಪರಕ್ಕೆ ಹೋಗುವುದಕ್ಕೆ ಬಹಳ ತೊಂದರೆ ಆಯಿತು. ಈ ಗಲಾಟೆಯಲ್ಲಿ ೫೦ ಮಂದಿಗೆ ಗಾಯವಾಯಿತು. ಪೋಲೀಸರ ಲಾಠಿ ಪ್ರಯೋಗವೂ ಆಯಿತು

ಬೈಸಿಕಲ್ಲುಗಳ ಮೇಲೆ ಹೆಚ್ಚಿನ ತೆರಿಗೆ

ಇಂಗ್ಲೆಂಡಿನಲ್ಲಿ ತಯಾರಾಗಿ ಭಾರತಕ್ಕೆ [illegible] ಬರುವ ಸೈಕಲ್ಲುಗಳ ಮೇಲಿನ ಸುಂಕವನ್ನು ಶೇ [illegible] ರಿಂದ ೭೦ ಕ್ಕೂ, ಇತರ ದೇಶಗಳಿಂದ ಬರುವಂತಹುಗಳಿಗೆ ಶೇ ೩೦ ರಿಂದ ೭೦ ಕ್ಕೂ ಹೆಚ್ಚಿಸಿ ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಮೈಸೂರಿಗೆ ಬರ್ಮಾ ಅಕ್ಕಿ

ಕಲ್ಕತ್ತೆ ಎಂಬ ಹಡಗಿನಲ್ಲಿ ಕಳೆದ ವಾರ ಬರ್ಮಾದಿಂದ ಮದರಾಸಿಗೆ ಬಂದಿರುವ ೩೫೦೦ ಟನ್ ಅಕ್ಕಿಯ ಪೈಕಿ, ಸಾವಿರ ಟನ್ನನ್ನು ಮೈಸೂರಿಗೆ ಕೊಡಲಾಗುವುದೆಂದು ತಿಳಿದುಬಂದಿದೆ

ನವಾಜ ಸೇನಾ ಶಿಬಿರಕ್ಕೆ ಸರ್ಕಾರದ ಸಹಾಯ

[illegible] ಬೇಸಿಗೆ ರಜದಲ್ಲಿ ವಿಶ್ವ ವಿದ್ಯಾಲಯದವರು [illegible] ಸೇನಾ ಶಿಬಿರಗಳನ್ನು ತೆರೆಯಲು ಸರ್ಕಾರದವರು [illegible] ಸಾವಿರ ರೂ ಗಳನ್ನು ಮಂಜೂರು ಮಾಡಿರುತ್ತಾರೆ

ವಿಶ್ವ ವಿದ್ಯಾಲಯ ಸಮಿತಿಯವರ ಭಾಷಣ

[illegible] ಕಾಲೇಜು ಸಂಘದ ಆಶ್ರಯದಲ್ಲಿ [illegible] ಗಂಟೆಗೆ [illegible] ಕಾಲೇಜಿನಲ್ಲಿ ವಿಶ್ವವಿದ್ಯಾಲಯ ಸುಧಾರಣಾ ಸಮಿತಿಯವರು ಭಾಷಣ ಮಾಡುವರು [illegible] ಎಲ್ಲರಿಗೂ ಆಹ್ವಾನ [illegible]

ಕಾಮನ್‌ವೆಲ್ತ್‌ನಲ್ಲಿ ಭಾರತದ ಸಂಪರ್ಕ

ವಿಶ್ವದಲ್ಲಿ ಶಾಂತಿ ಸ್ಥಾಪನೆಗೆ ಸಹಾಯಕವಾಗಲು ಭಾರತವು ತನ್ನ ಸ್ವಾತಂತ್ರ್ಯಕ್ಕೆ ಚ್ಯುತಿ ಬಾರದಂತೆ ಕಾಮನ್‌ವೆಲ್ತ್‌ನಲ್ಲಿ ಸಂಪರ್ಕವನ್ನಿಟ್ಟುಕೊಂಡಿರಬೇಕೆಂದು ಪಂಡಿತ ನೆಹರೂರವರು ತಿಳಿಸಿರುತ್ತಾರೆ. ಆಕ್ರಮಣ ಉದ್ದೇಶದಿಂದ ಯಾವ ರಾಷ್ಟ್ರಗಳೊಡನೆಯೂ ಭಾರತವು ಮಿಲಿಟರಿ ಒಪ್ಪಂದ ಮಾಡಿಕೊಳ್ಳುವುದಿಲ್ಲವೆಂದೂ ಮತ್ತು ಪ್ರಪಂಚದ ಯಾವ ಪಕ್ಷ ಮತ್ತು ಅಟ್ಲಾಂಟಿಕ್ ಅಥವ ಪೆಸಿಫಿಕ್ ಒಪ್ಪಂದಗಳಿಗೆ ಅದು ಸೇರುವುದಿಲ್ಲವೆಂದೂ ಅವರು ಹೇಳಿರುತ್ತಾರೆ.

ಮಹಾರಾಜರಿಲ್ಲದ ಕರ್ನಾಟಕಕ್ಕೆ ಸಮತಾವಾದಿಗಳ ಬೆಂಬಲ

ಕರ್ನಾಟಕ ಸಮತಾವಾದಿ ಪಕ್ಷದ ಮೈಸೂರು ಶಾಖೆಯ ಸಭೆಯು ನಿನ್ನೆ ಸಂಜೆ ಶ್ರೀ ಕೆ. ಕಾಳಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ನಾಗಭೂಷಣ ಮತ್ತು ಶ್ರೀ ಹೆಚ್. ರಾಮಸ್ವಾಮಿಯವರನ್ನು ಸರ್ಕಾರದವರು ಬಂಧನದಲ್ಲಿಟ್ಟಿರುವುದನ್ನು ಖಂಡಿಸಿ, ಕೂಡಲೇ ಬಿಡುಗಡೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಮಹಾರಾಜರಿಲ್ಲದ ಏಕೀಕೃತ ಕನ್ನಡನಾಡಿನ ಒಕ್ಕೂಟವು ಆಗಬೇಕೆಂದು ಕರ್ನಾಟಕ ಏಕೀಕರಣ ಸಮ್ಮೇಳನದಲ್ಲಿ ಆದ ನಿರ್ಣಯಕ್ಕೆ ಸ್ವಾಗತವನ್ನು ಬಯಸಿ ನಿರ್ಣಯವು ಮಾಡಲಾಯಿತು

ಸ್ಕೌಟ್ ಸಂಸ್ಥೆಯ ಕಾರ್ಯದರ್ಶಿಗಳು

ಶ್ರೀ ಎಂ ಲಿಂಗೇಗೌಡರನ್ನು ಮಾಹೆಯಾನ ೭೦೦ ರೂ ಗೌರವ ಸಂಭಾವನೆಯ ಮೇಲೆ ಸಂಸ್ಥಾನದ ಸ್ಕೌಟ್ ದಳದ ಗೌರವ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಮೈಸೂರು

[illegible]

೭-೪-೪೯	ಶ್ರೀಮಾನ್ ಆಸ್ಥಾನ ವಿದ್ವಾನ್ ಚೆಂತನಹಳ್ಳಿ ರಾಮ ಚಂದ್ರ ರಾವ್ ಪಾರ್ಟಿ
೮-೪-೪೯	ಶ್ರೀಮಾನ್ ಟಿ ಆರ್. ಮಹಲಿಂಗಂ ಮತ್ತು ಪಾರ್ಟಿ ಕೊಳಲು
[illegible]-೪-೪೯	ಆರ್.ಪಿ. ವೀಣಾ ದೊರೆಸ್ವಾಮೈಯ್ಯಂಗಾರ್ಯ ಮತ್ತು ಪಾರ್ಟಿ
೧೦-೪-೪೯	ಕುಂಭಕೋಣ ಶ್ರೀನಿವಾಸ ಅಯ್ಯರ್ ಮತ್ತು ಪಾರ್ಟಿ
೧೧-೪-೪೯	ರಾಮನಾದ್ ಕೃಷ್ಣನ್ ಮತ್ತು ಪಾರ್ಟಿ
೧೨-೪-೪೯	ಮದುರೆ ಮಣಿ ಅಯ್ಯರ್ ಮತ್ತು ಪಾರ್ಟಿ
[illegible]	ಮಗಸರಿ ಸುಬ್ರಹ್ಮಣ್ಯ ಅಯ್ಯರ್ ಮತ್ತು ಪಾರ್ಟಿ
[illegible]	ಆಲತ್ತೂರ್ ಬ್ರದರ್ಸ್ ಮತ್ತು ಪಾರ್ಟಿ
[illegible]	ಶ್ರೀಮತಿ ವಸಂತ ಕುಮಾರಿ ಮತ್ತು ಪಾರ್ಟಿ
೧೬-೪-೪೯	ಕುಮಾರಿ ಪದ್ಮ ಮತ್ತು ಪಾರ್ಟಿ

ನೆಂಟರುಗಳಲ್ಲದವರಿಗೆ ಟಿಕೇಟು ಮೂಲಕ ಪ್ರವೇಶ

ಸೀಸನ್ ಪಾಸು,

[illegible]

ಶ್ರೀ ಗಾಯತ್ರೀ ಟಾಕೀಸ್

[illegible] 3 ದಿನಗಳು ಮಾತ್ರ

[illegible]

[illegible]

ಮೈಸೂರು ಸ್ಟೇಟ್ ರೈಲ್ವೆ

[illegible]

1 [illegible] 2 ರ [illegible] ವತ್ತು ಕೆಳಕಂಡ ಈ ಸ್ಥಳಗಳಲ್ಲಿ [illegible] ಕೆಲಸಗಳನ್ನು ಕೈಗೊಳ್ಳಲು ಮತ್ತು [illegible] ಸ್ಟೇಷನ್ನುಗಳ [illegible] ಭಾಂಗಿ ಮತ್ತು [illegible] ಕಗಳನ್ನು [illegible] ಸೀಲ್ ಮಾಡಿದ ಟೆಂಡರುಗಳನ್ನು ಆಹ್ವಾನಿಸಲಾಗಿದೆ ಈ [illegible]

[illegible] ಸೀಲು ಮಾಡಿದ ಟೆಂಡರುಗಳ [illegible]

[illegible] ಹೆಸರ [illegible]

[illegible] ಭಾಂಗಿಗಳು, ii ಸರಕುಗಳ ದಿನ [illegible] ಸಾಮಾನು [illegible] iii ಹಣ್ಣು [illegible] ತರಕಾರಿ ಇತ್ಯಾದಿ

5 [illegible] ಟೆಂಡರುದಾರರು 25 [illegible] ಕು ಟೆಂಡರುಗಳನ್ನು ಸ್ವೀಕರಿಸಿದ ಕಡೇ ದಿನ 15ನೇ ಏಪ್ರಿಲ್ 1949

ಟೆಂಡರು ಫಾರಂಗಳನ್ನು ಮೈಸೂರು [illegible] ಮ್ಯಾನೇಜರವರಿಂದ [illegible] ಪಡೆಯಬಹುದು

[illegible] ಮತ್ತು [illegible] ಸ್ಟೇಷನ್ನುಗಳು ಈ [illegible]

[illegible]

ಮೈಸೂರು 21 [illegible]

[illegible] ಹುಸೇನ್

[illegible] ಮ್ಯಾನೇಜರ್

ಗಿ. ಅದಿ ಅಗಲದ ಒಲೇಗರಿ

[illegible] ದೆಂದೂ ಹೇಳಲಾಗಿದೆ

ಕೌಟಿಲ್ಯ ಮಂಗಳ

ರಾಜಧಾನಿಯ ಕೌಟಿಲ್ಯ [illegible] ಶ್ರೀ [illegible] ಅಯ್ಯಂಗಾರ್ [illegible] ನಡೆದ [illegible]

ಅಧ್ಯಕ್ಷರು—ಶ್ರೀ ಎ [illegible] ಆರ್ ಮಹಾಲಿಂಗಯ್ಯ [illegible] ಯ್ಯರ್, ಉಪಾಧ್ಯಕ್ಷರುಗಳು —ಶ್ರೀಗಳು [illegible] ಕೆ ಬಸವರಾಜೇ ಅರಸ್ ಮತ್ತು ಎಂ ದೊರೆಸ್ವಾಮಿ ಅಯ್ಯಂಗಾರ್, ಕಾರ್ಯದರ್ಶಿಗಳು—ಶ್ರೀಗಳು ಎಂ ವಿ ಕೃಷ್ಣರಾವ್ ಮತ್ತು ಟಿ ಎಸ್ ರಾಜಗೋಪಾಲಯ್ಯಂಗಾರ್ ಸಹಾಯಕ ಕಾರ್ಯದರ್ಶಿ—ಶ್ರೀ [illegible]

ಪಕ್ಷಿರಾಜಾ ರವರ

[illegible]

[illegible] ರಾಜಕುಮಾರಿ . ವರದ [illegible]

[illegible] ಕೃಷ್ಣನ್ . ಮಧುರಂ

ಡೈರೆಕ್ಷನ್ . ಶ್ರೀ [illegible] ನಾಯುಡು

ನಾರಾಯಣನ್ [illegible] . ರಿಲೀಜ್

* ಪ್ರಭುದೇವಾ ಟಾಕೀಸಿನಲ್ಲಿ *

6—4—49ನೇ ಬುಧವಾರದಿಂದ ದಿನವಹಿ 3 ಆಟಗಳು

[illegible] ರವರ ತೆಲುಗು [illegible] ಚಿತ್ರ

ಗೊಲ್ಲಭಾಮ

ಮುಖ್ಯ ಪಾತ್ರ— ಕೃಷ್ಣವೇಣಿ, ಅಂಜಲಿದೇವಿ, ರಘುರಾಮಯ್ಯ

[illegible] published by V R Nagaraj [illegible] the Sadhvi [illegible] Road, Mysore

ಫೋನ್ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಮಂಗಳವಾರ ೫-೭-೧೯೪೯ [ಸಂಚಿಕೆ ೨೦೪

ಲಾರಿ ಉರುಳಿಕೊಂಡು ಮೂರು ಜನರ ಮರಣ

...ನ್ನೆರಡು ಜಿಲ್ಲೆಗಳಲ್ಲಿ ಪಾನ ನಿರೋಧ

...ಸ ಫೋನ್] ಬೆಂಗಳೂರು ೫

...ರುವ ಜುಲೈ ತಿಂಗಳಿನಿಂದ ಶಿವಮೊ...ವ ತ್ತು ಚಿಕ್ಕಮಗಳೂರು ಜಿಲ್ಲೆಗಳ...ಂ ಸಂಪೂರ್ಣ ಪಾನ ನಿರೋಧವನ್ನು ...ಗೆ ತರುವಂತೆ ಸರ್ಕಾರದವರು ನಿ...ನ್ನಾರೆ ಅಂದಿನಿಂದ ಎಲ್ಲಾ ಸೇಂ...ದಿಗಳನ್ನು ಮುಚ್ಚಿಸಲು ಕಾರ್ಯಕ್ರ...ಮವನ್ನು ಕೈಗೊಳ್ಳುವಂತೆ ಇಲಾಖೆಯ...ರಿಗಳಿಗೆ ಆಜ್ಞೆ ಕೊಡಲಾಗಿದೆ ಪಾ...ನಿರೋಧವು ಜಾರಿಯಲ್ಲಿಲ್ಲದ ಇತರ ಜ...ಗಳ ಎಂದಿನಂತೆ ಸೇಂದಿ ಹರಾಜುಗ...ನಡೆಯುವುವು

○ ...ಲೂಗೆಡ್ಡೆ ರಫ್ತಿನ ಮೇಲಿದ್ದ ನಿ...ಬಂಧವನ್ನು ಮೇ ತಿಂಗಳಿನ ಅತ್ಯಂತದ ...ರೆಗೆ ...ಗೆಯಲಾಗಿದೆ.

○ ನಿನ್ನೆ ದಿನ ನಡೆದ ಬೆಂಗಳೂರು ...ರ ಸಭೆಯಲ್ಲಿ ನಗರಾಭಿವೃದ್ಧಿ ಸಮಿತಿ ...ಶ್ರೀ ...ಳಾದ ಕೆ ನಾರಾಯಣ್, ಜಿ ಎಸ್ ...ವಿ. ...ಸ್, ಬಿ ಆರ್. ಪುಟ್ಟಣ್ಣ ಮತ್ತು ...ನಂತರಾಮರವರುಗಳು ಸದಸ್ಯ...ರಾಗಿ ...ರಿಸಲ್ಪಟ್ಟರು

ಭಾವಚಿತ್ರ ಅನಾವರಣ

ಮೈಸೂರು ೫

...ಸವಿದ್ಯಾಶಾಲೆಯಲ್ಲಿ ನಿನ್ನೆ ಸಂಜೆ ಶಾಲೆ ...ಮ್ಯಾನೇಜರವರಾದ ಧರ್ಮ ಪ್ರವೃತ್ತ ...ಎಸ್ ರಂಗಸ್ವಾಮಿ ಐಯ್ಯಂಗಾರ್ಯರ ...ವಚಿತ್ರವನ್ನು ರಾಜಸೇವಾಸಕ್ತ ಅಂಬಳೆ ...ಬ್ರಹ್ಮಣ್ಯ ಐಯ್ಯರ್‌ರವರು ಅನಾವರಣ ಮಾಡಿದರು. ಶ್ರೀ ರಂಗಸ್ವಾಮಿ ಐಯ್ಯಂಗಾ...ರು ಉಪಾಧ್ಯಾಯರ ಕರ್ತವ್ಯವನ್ನೂ, ...ವಿದ್ಯಾರ್ಥಿಗಳ ಕರ್ತವ್ಯವನ್ನೂ ಕುರಿತು ...ಭಾಷಣ ಮಾಡಿದರು—ಶಾಲೆಯ ಹೆಡ್ ಮಾಸ್ಟರವರು ಉಪಾಧ್ಯಾಯರ ಪರವಾಗಿ ...ಭಿನಂದನಪತ್ರಿಕೆಯನ್ನು ಸಮರ್ಪಿಸಿ ಶ್ರೀ ರಂಗಸ್ವಾಮಿ ಐಯ್ಯಂಗಾರ್‌ರವರು ೩೦ ವರ್ಷ...ಗಳ ಕಾಲ ತಮ್ಮ ಅಮೋಘವಾದ ಸೇವೆಯನ್ನು ಶಾಲೆಗೆ ಸಲ್ಲಿಸಿರುವುದರಿಂದ ಭಗವಂತನು ಇವರಿಗೆ ಸಕಲ ಸನ್ಮಂಗಳವನ್ನುಂಟು ಮಾಡಲೆಂದು ಹಾರೈಸಿ...ದರು. ...ಯನ್ನು ಓದಿದರು ...ವಿದ್ಯಾರ್ಥಿ ಹುಡುಗರಿಂದ ಗಾರ್ಡ್ ...ಆಫ್ ಆನರ್, ದೇವತಾ ಪ್ರಾರ್ಥನೆ, ...ಅ... ಕ್ಷ ಭಾಷಣಗಳಾದನಂತರ ರಾಷ್ಟ್ರ...ಗೀತೆ ಮತ್ತು ಮಹಾರಾಜರವರ ಶ್ರೇಯ...ಸ್ಸಿನ ...ನೆಯೊಡನೆ ಸಭೆ ಮುಕ್ತಾಯ...ವಾಯಿತು ಈ ಸಮಯದಲ್ಲಿ ಸಂಸ್ಥಾನದ ...ಮಂತ್ರಿಗಳಾದ ಶ್ರೀ ಕೆ ಸಿ ರೆಡ್ಡಿ, ...ನ ಮಹಾರಾಜರ ಆಪ್ತ ಕಾರ್ಯದರ್ಶಿ...ಗಳಾದ ಶ್ರೀ ಜಿ ಎಲ್. ನಾಗರಾಜರಾಯರು ...ಷಕ ವಾಸಕ್ತ, ಸಿ ನರಸಿಂಹಯ್ಯನ...ವರು ...ರಸಭಾಧ್ಯಕ್ಷರಾದ ಟಿ ವೆಂಕಟ...ರಮಣಯ್ಯನವರೂ ಶುಭಾಶಯಗಳನ್ನು ...ಕಳುಹಿ...ದ್ದರು.

ತಾಲ್ಲೂಕು ಸಮ್ಮೇಳನ

ಗುಂಡ್ಲುಪೇಟೆ ೩

...ತಾಲ್ಲೂಕು ಸಮ್ಮೇಳನವು ಈ ದಿನ ಶ್ರೀ ...ಶಿವರುದ್ರಪ್ಪನವರ ಅಧ್ಯಕ್ಷತೆ...ಯಲ್ಲಿ ...ಪ್ರಾರಂಭಣೆಯಿಂದ ನಡೆಯಿತು ...ರವರು ವಾರ್ಷಿಕ ವರದಿಯನ್ನು ...ನಂತರ, ತಾಲ್ಲೂಕು ಅಭಿವೃದ್ಧಿಗೆ ...ಪಟ್ಟ ಅನೇಕ ವಿಷಯಗಳ ಮೇ... ...ನಡೆಯಿತು

ಸಂಸ್ಥಾನಕ್ಕೆ ೧೫ ಬುಲ್ ಡೋಜರುಗಳು

ಬೆಂಗಳೂರು ೪

ಗ್ರಾಮಾಭಿವೃದ್ಧಿ ಸಮಿತಿಗಳ ಅಧ್ಯಕ್ಷರುಗಳ ಸಭೆಯು ಬೆಂಗಳೂರಿನಲ್ಲಿ ಮೊನ್ನೆ ದಿನ ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಸ್ಥಾನದಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಲು ಎಲ್ಲರೂ ಶ್ರಮಿಸಬೇಕೆಂದು ಸಚಿವರು ಮನವಿ ಮಾಡಿದರು ಸಂಸ್ಥಾನದಲ್ಲಿ ೩೬೪ ಹೋಬಳಿಗಳೂ ೭೪೭ ಸರ್ಕಲ್ಲುಗಳೂ ಇವೆಯೆಂದೂ, ಈ ಪ್ರತಿಯೊಂದು ಸರ್ಕಲ್ಲಿಗೂ ಒಂದೊಂದು ಸಹಕಾರ ಸಂಘವನ್ನು ಸ್ಥಾಪಿಸಲಾಗುವುದೆಂದೂ ಅವರು ಹೇಳಿದರು

ರೆವಿನ್ಯೂ ಸಚಿವರಾದ ಶ್ರೀ ಹೆಚ್. ಸಿದ್ದಯ್ಯನವರು ಭಾಷಣ ಮಾಡಿ, ಸಂಸ್ಥಾನವು ಆಹಾರದ ಬಗ್ಗೆ ಸ್ವಯಂ ಪರಿಪೂರ್ಣವಾಗಿರಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿ, ಟ್ರಾಕ್ಟರುಗಳನ್ನು ಉಪಯೋಗಿಸಿ ೭,... ಎಕರೆ ಬಂಜರು ಜಮೀನನ್ನು ಸಾಗುವಳಿಗೆ ಬರುವಂತೆ ಮಾಡಲಾಗಿದೆಯೆಂದೂ, ಸಂಸ್ಥಾನಕ್ಕೆ ಈ ತಿಂಗಳಿನಲ್ಲಿ ೧೫ ಬುಲ್ ಡೋಜರ್ ಯಂತ್ರಗಳು ಬರಲಿವೆಯೆಂದೂ ಹೇಳಿದರು

ಸರ್ಕಾರಿ ರೇಷ್ಮೆ ನೆಯ್ಗೆ ಕಾರ್ಖಾನೆ

ಮೈಸೂರು ೫

ರಾಜಧಾನಿಯ ಸರಕಾರಿ ರೇಷ್ಮೆ ನೆಯ್ಗೆ ಕಾರ್ಖಾನೆಯ ಕೆಲಸಗಾರರ ಸಂಘದ ವಾರ್ಷಿಕ ದಿನಾಚರಣೆಯು ಮೊನ್ನೆ ಸಂಜೆ ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ, ಸ್ವಾಗತ ಭಾಷಣ ಮತ್ತು ವಾರ್ಷಿಕ ವರದಿಗಳಾದ ನಂತರ ಅಧ್ಯಕ್ಷರು ಭಾಷಣಮಾಡಿ, ಪ್ರಜಾಪ್ರಭುತ್ವವು ಜಾರಿಯಲ್ಲಿರುವ ಈ ಸಮಯದಲ್ಲಿ ಕೆಲಸಗಾರರಿಗೂ ಪ್ರಭುತ್ವದವರಿಗೂ ಯಾವ ಭಿನ್ನಾಭಿಪ್ರಾಯವೂ ಇರಬಾರದೆಂದೂ, ಇಬ್ಬರೂ ಪರಸ್ಪರ ಸಹಕರಿಸಿ, ದೇಶದ ಸಂಪತ್ತನ್ನು ಬೆಳೆಸಬೇಕೆಂದೂ, ಹೇಳಿದರು ತಮ್ಮ ಕುಂದು ಕೊರತೆಗಳ ಪರಿಹಾರಕ್ಕಾಗಿ, ಕ್ರಮ ಪ್ರಕಾರ ಅವರು ಪ್ರಯತ್ನಪಡಬೇಕೆಂದೂ ಮ... ... ಮುಂತಾದ ಮಾರ್ಗಗಳನ್ನು ಹಿಡಿಯ... ...ರದೆಂದೂ ತಿಳಿಸಿದರು

ಅ॥ಭಾ॥ ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನ

ಸ್ವಂ ಸು ಫೋನ್] ಬೆಂಗಳೂರು ೫

ಮುಂದಿನ ತಿಂಗಳು ೨೦ ನೇ ತಾ॥ ಇಲ್ಲಿ ಅಖಿಲಭಾರತ ವೃತ್ತ ಪತ್ರಿಕಾ ಸಮ್ಮೇಳನವನ್ನು ನಡೆಸುವಂತೆ ಆಹ್ವಾನಿಸಬೇಕೆಂದು ನಿನ್ನೆ ದಿನ ಇಲ್ಲಿ ನಡೆದ ಪತ್ರಿಕಾ ಕರ್ತರುಗಳ ಸಭೆಯಲ್ಲಿ ನಿರ್ಧರಿಸಲಾಯಿತು. ಈ ಸಂಬಂಧದಲ್ಲಿ ಸಿದ್ಧತೆಗಳನ್ನು ಮಾಡಲು ಶ್ರೀ ಡಿ ವಿ ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು

ಅಟ್ಲಾಂಟಿಕ್ ಒಪ್ಪಂದಕ್ಕೆ ರುಜು

ನಿನ್ನೆ ರಾತ್ರಿ ವಾಷಿಂಗ್ಟನ್ ನಗರದಲ್ಲಿ ...ಪಾಶ್ಚಾತ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಸಭೆ ಸೇರಿ ಉತ್ತರ ಅಟ್ಲಾಂಟಿಕ್ ಒಪ್ಪಂದಕ್ಕೆ ರುಜು ಹಾಕಿದರು ಈ ರಾಷ್ಟ್ರಗಳ ಪೈಕಿ ...ರ ಮೇಲೆ ಆಕ್ರಮಣ ನಡೆದರೂ ಉಳಿದ ರಾಷ್ಟ್ರಗಳು, ತಮ್ಮ ಮೇಲೆ ಆಕ್ರಮಣ ನಡೆದಂತೆಯೇ ಭಾವಿಸಿ ಪರಸ್ಪರ ರಕ್ಷಣೆಗೆ ನೆರವು ನೀಡಬೇಕೆಂಬ ತತ್ವವನ್ನು ಅಂಗೀಕರಿಸಲಾಯಿತು.

ದೇಶದ ಏಳಿಗೆಗೆ ಪ್ರತಿಯೊಬ್ಬರ ಸ್ವಯತ್ನವೂ ಇಂದು ಬೇಕಾಗಿರುವುದೆಂದೂ ಎಲ್ಲರೂ ವಿದ್ಯಾವಂತರಾಗಿ ತನ್ಮೂಲಕ ದೇಶ ಸೇವೆ ಮಾಡಬೇಕೆಂದೂ ಶ್ರೀ ಕೆ ಪಟ್ಟಸ್ವಾಮಿಯವರು ಭಾಷಣದಲ್ಲಿ ನುಡಿದರು

ಬಹಿರಂಗ ಸಭೆ

ಕಾಳಸಂತೆಯ ನಿರ್ಮೂಲ, ಅಳತೆ ಮತ್ತು ತೂಕಗಳನ್ನು ಕ್ರಮಪಡಿಸುವುದು, ಬಡಬಗ್ಗರಿಗೆ ಸುಲಭವಾಗಿ ಆಹಾರ ಪದಾರ್ಥಗಳು ದೊರಕುವಂತೆ ಮಾಡುವುದು:- ಇವೇ ಮುಂತಾದ ವಿಚಾರಗಳನ್ನು ಪರಿಶೀಲಿಸಲು. ನಾಳೆ ಸಂಜೆ ಏಳು ಗಂಟೆಗೆ ವಿಶ್ವೇ...ಮೊಹಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಮ. ಹಾಕಿನ್ಸ್ ಪಿಕ್ಚರ್ ಫ್ಯಾಕ್ಟರಿಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ

ವಿದ್ಯುಚ್ಛಕ್ತಿ ಅನಾಹುತ

...ರ್ಕ್ ಮೋಹಿಲ್ಲಾ ಪಕ್ಕದಲ್ಲಿ ಜೈನ ದೇವಾಲಯದ ಎದುರಿಗಿರುವ ಮನೆ. ಚಕ್ರಶ್ರೀ ...ಭದಿಂದ ಈ ದಿನ ಬೆಳಗ್ಗೆ ...ಟ. ಲೀ... ...ತ್ರಿದ್ದ ಪರಿ... ಪಕ್ಕದಲ್ಲಿಯೇ ನಿಲ್ಲಿಸಿದ್ದ ಒಂದು ...ದಿಯ ಎತ್ತಿಗೆ ತಗುಲಿ ... ...ಪಡಲೇ ಮ ತಬ್ಬಿಬ್ಬಾಗಿ ಇನ್ನೊಂದು ... [illegible]

ಬಡವರಿಗಾಗಿ ಗೋಪಾಲ ರಾಯರ ಪರಿತಾಪ

ವಂಚಕರಿಂದ ಅವರಿಗೇ ೫೦ ಲಕ್ಷ ರೂ. ನಷ್ಟವಾಗಿದೆಯಂತೆ

ಸ್ವಂ ಸು. ಫೋನ್] ಬೆಂಗಳೂರು ೫

ಈ ದಿನ ಗೋಪಾಲರಾವ್ ವಿಚಾರಣಾ ಸಮಿತಿ ಮುಂದೆ ಗೋಪಾಲರಾಯರ ಸಾಕ್ಷ್ಯವು ನಡೆಯಿತು. ಮೂವತ್ತು ಪುಟಗಳ ಹೇಳಿಕೆಯನ್ನು ಅವರು ಓದಿ, ಶ್ರೀಗಳಾದ ಎಫ್ ತಂಬೂಚೆಟ್ಟಿ, ಮಿ॥ ಡಾಮಿನಿಕ್, ರೊಸೇರಿಯೋ ಮುಂತಾದ ಪ...ರ ಮೇಲೆ ಆಪಾದನೆಗಳನ್ನು ಮಾಡಿದರು. ತಾವು ಬ್ಯಾಂಕಿನಲ್ಲಿ ಸಣ್ಣ ಗುಮಾಸ್ತರಾಗಿದ್ದ ಕಾಲದ ಚರಿತ್ರೆಯನ್ನು ಹೇಳಿ, ಈಗಲೂ ಧರ್ಮದಿಂದಲೇ ತಾವು ಲೇವಾದೇವಿ ನಡೆಸುತ್ತಿದ್ದುದಾಗಿಯೂ, ವಂಚಕರಾದ ಹಲವು ದೊಡ್ಡ ಮನುಷ್ಯರೆಂದೆನಿಸಿಕೊಂಡವರು ದಳ್ಳಾಳಿಗಳಂತೆ ನಟಿಸಿ, ತಮಗೆ ಹಣವನ್ನೇ ತಂದುಕೊಡದೆ ಅಪಾರವಾಗಿ ಬಡ್ಡಿಯನ್ನು ತೆಗೆದುಕೊಂಡಿರುವರೆಂದೂ ಹೇಳಿದರು. ಈ ವ್ಯವಹಾರದಲ್ಲಿ ತಮ್ಮ ಕೈಯಿಂದಲೇ ಸುಮಾರು ೫೦ ಲಕ್ಷ ರೂ ಹೋಗಿರುವುದೆಂದೂ. ಬಡವರ ಹಣವೂ ಸುಮಾರು ೫೦ ಲಕ್ಷ ಹೋಗಿದೆಯೆಂದೂ ಅವರು ತಿಳಿಸಿರುವರು ತಮ್ಮ ಪಾರಮಾರ್ಥಿಕ ಬುದ್ಧಿಯನ್ನು ದೇವರೇ ನೋಡಬೇಕೆಂದೂ ಅವರು ಹೇಳಿದರು

ಹೇಳಿಕೆಗಳನ್ನು ಕೊಡುವಾಗ ಪ್ರಾಮಾಣಿಕವಾಗಿರಬೇಕೆಂದೂ ಇಲ್ಲದಿದ್ದರೆ ಅದರ ಪರಿಣಾಮವನ್ನು ಅನುಭವಿಸಬೇಕಾದೀತೆಂದೂ ಜಿ॥ ಮೇದಪ್ಪನವರು ಎಚ್ಚರಿಕೆ ಇತ್ತರು ಹಲವು ಕಾಗದ ಪತ್ರಗಳನ್ನು ತೋರಿದಾಗ ಅವಕ್ಕೂ ತಮಗೂ ಸಂಬಂಧವಿಲ್ಲವೆಂದು ಗೋಪಾಲರಾಯರು ನುಡಿದರು.

ಈ ವ್ಯವಹಾರದಲ್ಲಿ ಒಟ್ಟು ೬೦ ಲಕ್ಷ ರೂ. ವರೆಗೆ ಸೇರಿದೆಯೆಂದೂ ಇದುವರೆಗೆ ಸಾಕ್ಷಿ ನುಡಿದಿರುವವರು ಇಪ್ಪತ್ತು ಲಕ್ಷ ರೂ ಕೊಡುವದಾಗಿ ಒಪ್ಪಿರುವರೆಂದೂ ಉಳಿದ ೪೦ ಲಕ್ಷವನ್ನು ಗೋಪಾಲರಾಯರು ಕೊಡಬೇಕೆಂದೂ ಸಮಿತಿಯವರು ಸೂಚಿಸಲು ರಾಯರು ಮೌನದಿಂದಂತೆ ಉತ್ತರವಿತ್ತರು ವಿಚಾರಣೆ ನಾಳೆಗೆ ಮುಂದುವರೆಯಿತು

○ ಕೇಂದ್ರ ಆಹಾರ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಇತ್ತ ಶ್ರೀ ಕೆ. ಹನುಮಂತಯ್ಯನವರ ಸ್ಥಾನದಲ್ಲಿ ಪ್ರ॥ಪ್ರ॥ ಸಭೆಯ ಸದಸ್ಯರಾದ ಶ್ರೀ ಕಾರೇಗೌಡರನ್ನು ನೇಮಿಸಲಾಗಿದೆ

ಲಾರಿ ಮೊಗಚಿ ಬಿದ್ದು ಮೂವರ ಮರಣ

ಮೈಸೂರು ೫

[illegible]

ಶ್ರೀಮನ್ಮಹಾರಾಜರವರ ಸತ್ಕಾರ ಕೂಟ

ಮೈಸೂರು, ೫

ಅಂತರ ರಾಷ್ಟ್ರೀಯ ತರುಣ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ನೆನ್ನೆ ಸಂಜೆ ಚಾಮುಂಡಿ ಜಮಖಾನದಲ್ಲಿ ಶ್ರೀಮನ್ ಮಹಾರಾಜರವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ವಿಶ್ವ ವಿದ್ಯಾಲಯ ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ ಎಸ್ ರಾಧಾಕೃಷ್ಣನ್ ಮತ್ತು ಇತರ ಸದಸ್ಯರು, ಸರ್ ಟಿ. ವಿಜಯರಾಘವಾಚಾರ್, ಸಮ್ಮೇಳನದ ಪ್ರತಿನಿಧಿಗಳು, ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿ, ಶ್ರೀಗಳಾದ ಹೆಚ್ ಸಿ ದಾಸಪ್ಪ, ಮತ್ತು ಆರ್ ಚನ್ನಿಗರಾಮಯ್ಯ ಮತ್ತು ಇತರ ಮಾನ್ಯ ಮಹನೀಯರು ಮತ್ತು ಮಹಿಳೆಯರು ದಯಮಾಡಿಸಿದ್ದರು ಶ್ರೀ ಮನ್ಮಹಾರಾಜರವರು ಅತಿಥಿಗಳ ಬಳಿಗೆ ಬಂದು ಕೆಲವು ಕಾಲ ಕುಶಲ ಸಂಭಾಷಣೆ ನಡೆಸಿದರು. ಡಾ॥ಎಸ್ ರಾಧಾಕೃಷ್ಣನ್ ರವರೂ ಸಹ ತಮ್ಮ ಹಳೆಯ ಮಿತ್ರರ ಪರಿಚಯವನ್ನು ಮುಂದುವರಿಸಿ ಮಾತುಕತೆ ನಡೆಸಿದರು

ನಿಮ್ಮ ಮೈಮೊಕವುಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಸಂಗೀತ ಕಛೇರಿ

ಕೃಷ್ಣರಾಜ ಸೊಸೈಟಿ 'ದೊಡ್ಡರಾಮ ದೇವಸ್ಥಾನದಲ್ಲಿ ಈ ದಿನ ಶ್ರೀ ಮ ತಿ ಲಕ್ಷ್ಮಮ್ಮನವರಿಂದಲೂ ನಾಳೆ ಕುಮಾರಿ ನಾಗಮ್ಮಣ್ಣಿಯವರಿಂದಲೂ ಸಂಗೀತವು ನಡೆಯುತ್ತದೆ

ಗ್ರಾಮ ಪಂಚಾಯಿತಿ ಕಾನೂನು

ಗ್ರಾಮ ಪಂಚಾಯಿತಿಗಳ ಮೇಲಿನ ಅಧಿಕಾರವನ್ನು ರೆವಿನ್ಯೂ ಕಮೀಷನರ್ ರಿಂದ ಡೆವೆಲಪ್‌ಮೆಂಟ್ ಕಮೀಷನರವರಿಗೆ ವರ್ಗಾಯಿಸಲು ಈಗಿರುವ ಕಾನೂನನ್ನು ತಿದ್ದುಪಡಿ ಮಾಡಲಾಗುವುದೆಂದು ತಿಳಿದು ಬಂದಿದೆ

ಧಾನ್ಯಗಳ ರೇಷನ್ ಪ್ರಮಾಣ

ಮುಂದಿನ ವಾರದಿಂದ ರಾಜಧಾನಿಯಲ್ಲಿ ಧಾನ್ಯಗಳ ರೇಷನ್ ಪ್ರಮಾಣವನ್ನು ಕೆಳಗ ಕಂಡಂತೆ ಕೊಡಲಾಗುವುದು.

ಬಿ ತರಗತಿಯವರಿಗೆ ರಾಗಿ ೬ಔನ್ಸ್ ಮುಸುಕಿನ ಜೋಳ ೨ ಔನ್ಸ್ ಜೋಳ ೧॥ ಔನ್ಸ್ ಶ್ರಮಜೀವಿಗಳಿಗೆ-ರಾಗಿ ೬ ಔನ್ಸ್ ಮುಸುಕಿನಜೋಳ ೬ ಔನ್ಸ್ ಜೋಳ ೨। ಔನ್ಸ್ ರಾಗಿಯ ಬದಲು ನುಚ್ಚು ಅಕ್ಕಿಯನ್ನು ಕೊಡಲಾಗುವುದು ಒಂದು ಧಾನ್ಯವು ಇಲ್ಲದಿದ್ದರೆ ಅದಕ್ಕೆ ಪ್ರತಿಯಾಗಿ ಮತ್ತೊಂದನ್ನು ಕೊಡಲಾಗುವುದು

—ಜೈ ಹಿಂದ್—

ಬಿಸಿ ಬಿಸಿ ಸುದ್ದಿಗಳಿಗೂ ವಿಚಾರ ಪೂರ್ಣ ಲೇಖನಗಳಿಗೂ

"ವೀರವಾಣಿ"

—ದಿನ ಪತ್ರಿಕೆಯನ್ನು ಓದಿರಿ—

೪ ಪುಟ ಪೂರ್ಣ ಪತ್ರಿಕೆ ಬೆಲೆ ೦-೦ ೬. ತಿಂಗಳಿಗೆ ಚಂದಾ ೦-೧೪-೦ ಮಾತ್ರ ಮನೆಗೆ ಹಂಚುವ ವ್ಯವಸ್ಥೆ ಮಾಡಿರುತ್ತೆ

—ವಿಚಾರಿಸಿ—

ಮಹಾತ್ಮಾ ನ್ಯೂಸ್ ಏಜನ್ಸಿ

ದೇವರಾಜ ಮಾರ್ಕೆಟ್, ಮೈಸೂರು

ವಿಜಯಲಕ್ಷ್ಮೀ ವಿಲಾಸ,

ಶಿವರಾಂಪೇಟೆ, ಮೈಸೂರು

ನಾನಾ ತರಹ ನವೀನ ಮಾದರಿಯ ಸೀರೆಗಳೂ ಮತ್ತು ಕಾಶ್ಮೀರ ಶಾಲುಗಳೂ ಈಗ ತಾನೆ ಬಂದಿವೆ. ಕಂಟ್ರೋಲ್ ಬೆಲೆಗೆ ಚೀಣಾ ಜವಳಿ ಸಹ ಕೂಡ ಮಾರಲ್ಪಡುತ್ತದೆ. ದೊರೆಯುತ್ತೆ.

೨ ಲಕ್ಷ ರೂ. ಚಿನ್ನದ ಭಾಂಗಿಗಳ ಕಳವು

ಬೊಂಬಾಯಿನಿಂದ ಇತರ ಪ್ರದೇಶಗಳಿಗೆ ರೈಲಿನ ಮೂಲಕ ಕಳುಹಿಸಿದ್ದ ೨ ಲಕ್ಷ ರೂ ಬೆಲೆ ಬಾಳುವ ಚಿನ್ನವು ಕಳುವಾಗಿದೆಯೆಂದು ಹೇಳಲಾಗಿದೆ ಕಾಟ್ನಿ ಮತ್ತು ಗಾದರ್ವಾರಾಗಳಿಗೆ ಕಳುಹಿಸಿದ್ದ ಚಿನ್ನದ ಭಾಂಗಿಗಳಲ್ಲಿ ಕಲ್ಲು ತುಂಬಿತ್ತೆಂದೂ, ಕಾಸಾರಕ್ಕೆ ಕಳುಹಿಸಿದ್ದ ೧,೩೩,೦೦೦ ರೂ ಚಿನ್ನದ ಭಾಂಗಿಯೂ ಸಹ ಕಳುವಾಯಿತೆಂದೂ ವರದಿಯಾಗಿದೆ

ಭಾರತದಲ್ಲಿ ಕ್ಷಯದಿಂದ ನಿಮಿಷಕ್ಕೆ ಇಬ್ಬರ ಮರಣ

ಕ್ಷಯರೋಗದಿಂದ ಒಂದು ನಿಮಿಷಕ್ಕೆ ಇಬ್ಬರಂತೆ ಭಾರತದಲ್ಲಿ ಸಾಯುತ್ತಿದ್ದಾರೆಂದೂ, ಅದರ ಮೂಲೋತ್ಪಾಟನೆಗಾಗಿ ಎಲ್ಲರೂ ಬಿ ಸಿ. ಜಿ ವ್ಯಾಕ್ಸಿನೇಷನ್ನನ್ನು ಮಾಡಿಸಿಕೊಳ್ಳಬೇಕೆಂದೂ ಅಂತರ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಅಧ್ಯಕ್ಷರೂ ಮತ್ತು ಕ್ಷಯ ನಿವಾರಣಾ ನಿಪುಣರೂ ಆದ ಡಾ॥ ಜೋನ್ಸ್‌ರವರು ತಿಳಿಸಿರುತ್ತಾರೆ

ವಿವಾಹ ಮಹೋತ್ಸವ

ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ವೈ ಎಸ್. ವೆಂಕಟರಂಗಯ್ಯಂಗಾರ್ಯರು ತಮ್ಮ ಪುತ್ರಿ ಚಿ॥ಸೌ॥ ಜಯಲಕ್ಷ್ಮಿಯನ್ನು ಕಲ್ಕತ್ತದ ಟೆಕ್ಸ್‌ಟೈಲ್ ಇನ್ಸ್‌ಪೆಕ್ಟರಾದ ಶ್ರೀ ಶ್ರೀನಿವಾಸ ಗೋಪಾಲಾಚಾರ್‌ರವರಿಗೆ ಕೊಟ್ಟು ವಿವಾಹವನ್ನು ಮೊನ್ನೆ ದಿನ ರಾಜಧಾನಿಯಲ್ಲಿ ನೆರವೇರಿಸಿದರು.

ರಾಜಕಮಲ್

ಮೈಸೂರು

1-4-49 ರಿಂದ

ಅಪೋಘವಾದ ೨ ನೇ ವಾರ

ಪ್ರತಿ ದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ:- ವರಲಕ್ಷ್ಮಿ, ಲಕ್ಷ್ಮೀ ರಾಜ್ಯಂ, ಪ್ರಕಾಶ ರಾವ್, ಪ್ರಸಾದ್

ಜರ್ಮನ್ ಯುವತಿಯರ ಮಾರಾಟ

ಜರ್ಮನಿಯ ಯುವತಿಯರಿಗೆ ಪಟ್ಟಣಗಳಲ್ಲಿ ಕೆಲಸ ಕೊಡಿಸುವುದಾಗಿ ತಿಳಿಸಿ ವರುಗಳನ್ನು ದುರ್ವ್ಯಾಪಾರಕ್ಕಾಗಿ ಮಾರಲಾಗುತ್ತಿದೆಯೆಂದು ಹೇಳಲಾಗಿದೆ ಇಂಗ್ಲೆಂಡಿನಲ್ಲಿ ಮನೆ ಕೆಲಸಕ್ಕಾಗಿ ಜರ್ಮನ್ ಯುವತಿಯರನ್ನು ಸೇರಿಸಲು ಕೆಲವು ಸಂಸ್ಥೆಯವರು ಅವರುಗಳಿಂದ ೨೮ ದಿನಗಳ ಸಂಬಳವನ್ನು ಕಮೀಷನ್ ರೂಪದಲ್ಲಿ ಕಿತ್ತುಕೊಳ್ಳುತ್ತಿರುವರೆಂದೂ, ಈ ಬಗ್ಗೆ ಬ್ರಿಟನ್ನಿನ ಕಾರ್ಮಿಕ ಇಲಾಖೆಗೆ ದೂರು ಕೊಡಲಾಗಿದೆಯೆಂದೂ ಹೇಳಲಾಗಿದೆ

ಅಮೇರಿಕದಲ್ಲಿ ಮಹಿಳಾ ಉದ್ಯೋಗಸ್ಥರು

ಕಳೆದ ಜನವರಿ ತಿಂಗಳು ಅಮೇರಿಕದಲ್ಲಿ ೧೬೦ ಲಕ್ಷ ಮಂದಿ ಮಹಿಳೆಯರುಉದ್ಯೋಗದಲ್ಲಿದ್ದರೆಂದೂ, ದೇಶದ ಒಟ್ಟು ಕೆಲಸಗಾರರಲ್ಲಿ ಶೇ॥ ೨೮ ರಷ್ಟು ಮಂದಿ ಹೆಂಗಸರು ಇರುವರೆಂದೂ ಹೇಳಲಾಗಿದೆ

ಬೆಲ್ಜಿಯಂನಲ್ಲಿ ಭೂಕಂಪ

ದಕ್ಷಿಣ ಬೆಲ್ಜಿಯಂನಲ್ಲಿ ಮೊನ್ನೆ ದಿನ ಮೂರು ಬಾರಿ ಭೂಕಂಪವಾಯಿತೆಂದೂ, ಇದರಿಂದ ಅನೇಕ ಮನೆಗಳು ಕುಸಿದು ಬಿದ್ದು ಅಪಾರ ನಷ್ಟವುಂಟಾಗಿದೆಯೆಂದೂ ಹೇಳಲಾಗಿದೆ.

೮೪ ಲಕ್ಷ ಚಂದಾದಾರರಿರುವ ವೃತ್ತ ಪತ್ರಿಕೆ

ಲಂಡನ್ನಿನ "ನ್ಯೂಸ್ ಆಫ್ ದಿ ವರ್ಲ್ಡ್" ಎಂಬ ವಾರ ಪತ್ರಿಕೆಯು ಪ್ರಪಂಚದಲ್ಲೇ ಅತಿ ದೊಡ್ಡದೆಂದೂ ಈಗ ಅದರ ಚಲಾವಣೆಯ ಸಂಖ್ಯೆ ೮೪ ಲಕ್ಷವೆಂದೂ, ೧ ಕೋಟಿಗೆ ಅದು ಸಧ್ಯದಲ್ಲಿಯೇ ಏರುವುದೆಂದೂ ವರದಿಯಾಗಿದೆ.

OPERA TALKIES

Daily 3 Shows

From 6—4—1948

MONSIEUR VERDOUX

—:With:—

Charlie Chaplin

ಪ್ರಭಾ ★ 6-4-49 ರಿಂದ

ಅಮೋಘವಾದ 2ನೇ ವಾರ

ಗೋಕುಲ ದಾಸಿ (ತಮಿಳು)

† ಹೊನ್ನಪ್ಪ ಭಾಗವತರ್, † ಪಿ.ವಿ ರಾಜಮ್ಮ

Morning Shows - -- on Sat 9th & Sun 10th

Paramount's BLUE SKIES (In Technicolour)

॥ಶ್ರೀ॥

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಪ್ರದರ್ಶನಗಳು

6—4—49ರಿಂದ 3 ದಿನಗಳು ಮಾತ್ರ

ಟ್ವೆಂಟಿಯತ್ ಸೆಂಚುರಿ ಫಾಕ್ಸ್‌ರವರ ವರ್ಣರಂಜಿತ ಚಿತ್ರ

ಹರ್ ಜಂಗಲ್ ಲವ್

(HER JUNGLE LOVE)

ಡೊರತಿ ಲಾಮೂರ್ ಮತ್ತು ರೇ ಮಿಲಾಂಡ್

* ಪ್ರಭುದೇವಾ ಟಾಕೀಸಿನಲ್ಲಿ *

6—4—49ನೇ ಬುಧವಾರದಿಂದ ⁘ ದಿನವಹಿ 3 ಆಟಗಳು

ಶೋಭನಾಚಲ ಪಿಕ್ಚರ್ಸ್ ತೆಲುಗು ಚಿತ್ರ

★ ಗೊಲ್ಲಭಾಮ ★

— ಮುಖ್ಯ ಪಾತ್ರ:- ಕೃಷ್ಣವೇಣಿ, ಅಂಜಲಿದೇವಿ, ರಘುರಾಮಯ್ಯ

Edited, printed and published by A R. Nagarajan at the Sadhvi Press D Subbaih Road, Mysore

ರೋ॥ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೭] ಬುಧವಾರ ೭-೪-೧೯೪೮ [ಸಂಚಿಕೆ ೨೦೫

ಮೈಸೂರು ಸಂಸ್ಥಾನವು ಮಾಯವಾಗಬೇಕಂತೆ

ಶೀಲಾಭಿವೃದ್ಧಿಯೇ ದೇಶೋನ್ನತಿಯ ಹೆಗ್ಗುರುತು

ಕಾಲೇಜ್ ಸಂಘದಲ್ಲಿ ರಾಧಾಕೃಷ್ಣನ್‌ರವರ ಭಾಷಣ

ಮೈಸೂರು ೬

ವಿಶ್ವ ವಿದ್ಯಾಲಯ ಸುಧಾರಣಾ ಸಮಿತಿಯ ಅಧ್ಯಕ್ಷರಾದ ಡಾ॥ ಎಸ್. ರಾಧಾಕೃಷ್ಣನ್‌ರವರು ಮತ್ತು ಇತರ ಸದಸ್ಯರು ನಿನ್ನೆ ಸಂಜೆ ಮಹಾರಾಜಾ ಕಾಲೇಜ್ ಸಂಘದ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿದರು. ಮೈಸೂರು ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಆರ್. ಕಸ್ತೂರಿ ರಾಜ ಚೆಟ್ಟಿಯವರು ಅಗ್ರಾಸನವನ್ನು ವಹಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಜೆ. ರಂಗನಾಥರಾಯರು ಸ್ವಾಗತವನ್ನು ಬಯಸಿದರು.

ಡಾ॥ ರಾಧಾಕೃಷ್ಣನ್‌ರವರು ಭಾಷಣ ಮಾಡಿ, ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಿರುವುದರಿಂದ ಈಗ ವಿಶೇಷ ಜವಾಬ್ದಾರಿಯು ಯುವಕರ ಮೇಲೆ ಬಿದ್ದಿರುವುದೆಂದೂ, ವಿದ್ಯಾರ್ಥಿಗಳು ಅದನ್ನು ಅರಿತು ಹೆಚ್ಚು ಶಿಸ್ತು ಮತ್ತು ಒಗ್ಗಟ್ಟಿನಿಂದ ವರ್ತಿಸಬೇಕೆಂದೂ ತಿಳಿಸಿದರು. ವಿಶ್ವ ವಿದ್ಯಾಲಯಗಳ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಮಟ್ಟವು ಹೆಚ್ಚಬೇಕೆಂದೂ ಹೇಳಿದರು. ರಾಜಕೀಯ ಸ್ವಾತಂತ್ರ್ಯವು ರಾಷ್ಟ್ರಾಭ್ಯುದಯಕ್ಕೆ ಕೇವಲ ಮೊದಲನೆಯ ಮೆಟ್ಟಲೆಂದೂ ಅದರ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭ್ಯುದಯವನ್ನು ಸಾಧಿಸುವುದೇ ಪ್ರಜೆಗಳ ಗುರಿಯಾಗಿರಬೇಕೆಂದೂ ಅಭಿಪ್ರಾಯಪಟ್ಟರು. ಒಳ್ಳೆಯ ನಡತೆಯೇ ದೇಶೋನ್ನತಿಯ ಹೆಗ್ಗುರುತೆಂದು ಒತ್ತಿ ಹೇಳಿದರು.

ಡರ್ಹಾಂ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಫ್‌ರವರು ಭಾಷಣ ಮಾಡಿ, ಸ್ವತಂತ್ರ ಭಾರತದಲ್ಲಿ ಯುವಕರ ಪಾತ್ರವು ವಿಶೇಷವಾಗಿರುವುದೆಂದು ತಿಳಿಸಿದರು. ಪರದೇಶಗಳಿಂದ ವಿದ್ಯಾರ್ಥಿಗಳನ್ನು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಭಾರತ ವಿಶ್ವ ವಿದ್ಯಾಲಯಗಳು ಆಹ್ವಾನಿಸಬೇಕೆಂದೂ, ಮೈಸೂರಿನಲ್ಲಿ ಹವಾಗುಣವು ಚೆನ್ನಾಗಿರುವುದರಿಂದ ಮೈಸೂರು ವಿಶ್ವವಿದ್ಯಾಲಯವು ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದೂ ತಿಳಿಸಿದರು.

ಅಮೆರಿಕದ ಫ್ಲಾರಿಡಾ ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಡಾ॥ ಟೈಗರ್ಟ್‌ರವರು ಭಾಷಣ ಮಾಡಿ, ಪ್ರಜಾಪ್ರಭುತ್ವದಲ್ಲಿ ಅಮೆರಿಕದ ವಿದ್ಯಾರ್ಥಿಗಳ ಭಾಗವನ್ನು ವಿವರಿಸಿ, ತಮ್ಮ ವಿದ್ಯಾಲಯದಲ್ಲಿ ಕಳೆದ ೪೦ ವರ್ಷಗಳಿಂದಲೂ ಯಾವ ಮುಷ್ಕರವೂ ನಡೆದಿಲ್ಲವೆಂದೂ, ಭಿನ್ನಾಭಿಪ್ರಾಯ ಮತ್ತು ಇತರ ಸಮಸ್ಯೆಗಳನ್ನು ಬಗೆಹರಿಸಲು ವಿದ್ಯಾರ್ಥಿಗಳ ಒಂದು ವಿಚಾರಣಾ ಕೋರ್ಟನ್ನೂ ಸಹ ವಿಶ್ವ ವಿದ್ಯಾಲಯದಲ್ಲಿ ಸ್ಥಾಪಿಸಲಾಗಿದೆಯೆಂದೂ ತಿಳಿಸಿದರು.

ಅಮೆರಿಕದ ಬಿನೆಸ್ಸಿ ಕಣಿವೆ ಯೋಜನೆ ಸಮಿತಿಯ ಅಧ್ಯಕ್ಷರಾದ ಡಾ॥ ಮಾರ್ಗನ್ ಮತ್ತು ಲಕ್ನೋ ವಿದ್ಯಾಲಯದ ಪ್ರೊ॥ ಸಿದ್ಧಾಂತರವರುಗಳೂ ಭಾಷಣ ಮಾಡಿದರು.

ಶ್ರೀ ರಾಮಸೇವಾ ಸಂಘ

ದೇಶೀರಮ್ಮಣ್ಣಿ ಅಗ್ರಹಾರದ ಶ್ರೀ ರಾಮ ಸೇವಾ ಸಂಘದವರು ಎಂದಿನಂತೆ ನಾಳೆಯಿಂದ ಶ್ರೀರಾಮನವಮಿ ಮತ್ತು ಪಟ್ಟಾಭಿಷೇಕ ಮಹೋತ್ಸವವನ್ನು ಏರ್ಪಡಿಸಿರುತ್ತಾರೆ.

ಲಾರಿ ಅನಾಹುತದ ಪ್ರಕರಣ

ಮೈಸೂರು ೬

ನಿನ್ನೆ ದಿನ ನಡೆದ ಲಾರಿ ಅನಾಹುತದ ವಿವರಗಳು ಈ ಕೆಳಗೆ ಕಂಡಂತೆ ಇರವುದಾಗಿ ತಿಳಿದುಬಂದಿದೆ-ಲಾರಿಯು ಮೈಸೂರು ಸಂತೆಪೇಟೆ ವರ್ತಕರಾದ ಶ್ರೀ ನಾಗಪ್ಪ ಎಂಬುವರಿಗೆ ಸೇರಿದ್ದು ಹೆಗ್ಗಡದೇವನ ಕೋಟೆಯ ಸರ್ಕಾರಿ ಡಿಪೋವಿಗೆ ಅದರಲ್ಲಿ ಕಬ್ಬಿಣದ ಸಾಮಾನುಗಳನ್ನು ಸಾಗಿಸಲಾಗುತ್ತಿತ್ತು. ರಸ್ತೆಯಲ್ಲಿ ನಾಲ್ಕು ಜನ ಪ್ರಯಾಣಿಕರನ್ನು ಕೂರಿಸಿಕೊಳ್ಳಲಾಯಿತು. ರಾಯನಕೆರೆಯಿಂದಾಚೆ, ಎಣ್ಣೆಹೊಳೆ ಸೇತುವೆ ಒಳ ಲಾರಿಯು ಹೋದಾಗ ದುರ್ಘಟನೆಯು ಸಂಭವಿಸಿತು. ಲಾರಿಯಲ್ಲಿದ್ದ ಸಾಮಾನುಗಳು—ಹಿಂದುಗಡೆ—ಜಾರಿದುದರಿಂದ ಹಿಂಭಾಗದ ತೂಕವು ಹೆಚ್ಚಿ, ಮುಂಭಾಗವು ಮೇಲಕ್ಕೆದ್ದಿತು. ಕೂಡಲೇ ಡ್ರೈವರು ಸ್ಟಿಯರಿಂಗ್ ಚಕ್ರವನ್ನು ತಿರುಗಿಸಿ ಬ್ರೇಕ್ ಅನ್ನು ಹಾಕಲು ಯತ್ನಿಸಿದಾಗ ಅದು ಕೆಲಸ ಮಾಡಲಿಲ್ಲ. ಹಿಂದಿನ ಚಕ್ರಗಳ ಮೂಲಕವೇ ಲಾರಿಯು ಹರಿದು ಪಕ್ಕದಲ್ಲಿದ್ದ ಕಬ್ಬಿಣದ ಕಂಬಿಗಳ ಕಟಕಟೆ ಕಲ್ಲಿಗೆ ಢಿಕ್ಕಿ ಹೊಡೆದುದರಿಂದ ಅನಾಮತ್ತಾಗಿ ಮಗುಚಿಕೊಂಡು ಸೇತುವೆಯ ಮಗ್ಗುಲಲ್ಲಿ ರುವ ೨೦ ಅಡಿ ಹಳ್ಳಕ್ಕೆ ತಲೆಕೆಳಗಾಗಿ ಬಿದ್ದಿತು.

ಪ್ರಯಾಣಿಕರ ಪೈಕಿ ಇಬ್ಬರು ಅಲ್ಲಿಯೇ ಸಿಕ್ಕಿಕೊಂಡು ಮರಣಹೊಂದಿದರು. ನೆನ್ನೆ ವರದಿಯಾಗಿರುವಂತೆ ಮೂರು ಜನರು ಮೃತಿಹೊಂದಲಿಲ್ಲ. ಡ್ರೈವರ್ ಮೂರು ಜನ ಪ್ರಯಾಣಿಕರಿಗೂ ತೀವ್ರ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಒಬ್ಬಾತನಿಗೆ ಕಾಲಿನ ಮೂಳೆ ಮುರಿದಿರುತ್ತದೆ. ಎಲ್ಲರೂ ಉತ್ತಮಗೊಳ್ಳುತ್ತಿದ್ದಾರೆ. ಮುಂದಿನ ತನಿಖೆ ಕ್ರಮ ನಡೆಯುತ್ತಿದೆ.

ಹಗಲುಗಳ್ಳನ ದಸ್ತಗಿರಿ

ರಾಜಧಾನಿಯ ಒಂಟಿ ಕೊಪ್ಪಲಿನ ಅನೇಕ ಮನೆಗಳಲ್ಲಿ ಹಗಲಿನಲ್ಲಿಯೇ ಕಳುವು ಮಾಡಿದ್ದ ಮದರಾಸಿನ ಭಾರಿ ಕೇಡಿ ಜಗನ್ನಾಥ್ ಉರುಫ್ ರಂಗನಾಥ ಎಂಬುವನನ್ನು ಪೊಲೀಸರು ಕಳೆದ ೨೦ ನೇ ತಾ॥ ದಸ್ತಗಿರಿ ಮಾಡಿ, ಆತನಿಂದ ಗಡಿಯಾರ ಫೌಂಟನ್‌ಪೆನ್ನು, ಒಟ್ಟೆ ಮತ್ತು ಇತರ ಸಾಮಾನುಗಳನ್ನು ವಶಪಡಿಸಿಕೊಂಡಿರುತ್ತಾರೆ. ಬೆಳ್ಳಿಯ ಪದಾರ್ಥಗಳು ಮಾತ್ರ ಪತ್ತೆ ಆಗಿಲ್ಲ. ಆತನ ಮೇಲೆ ೬ ಮೊಕದ್ದಮೆಗಳನ್ನು ಹೂಡಲಾಗಿದೆ.

ಸೂಚನೆ

ಶ್ರೀರಾಮ ನವಮಿ ಪ್ರಯುಕ್ತ ನಾಳೆ ದಿನ ವೃದ್ಧಿ ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ಚೀಣದಲ್ಲಿ ಯುದ್ಧ ನಿಂತಿತು

ಚೀಣದ ಯಾಂಗ್ಸಿ ನದಿಯ ಭಾಗದಲ್ಲಿರುವ ಕಮ್ಯೂನಿಸ್ಟರು ಕದನ ನಿಲ್ಲಿಸಬೇಕೆಂಬ ಸರ್ಕಾರದ ಸಲಹೆಯನ್ನು ಅವರು ಒಪ್ಪಿ, ನಿನ್ನೆಯಿಂದ ಯುದ್ಧವನ್ನು ನಿಲ್ಲಿಸಿರುತ್ತಾರೆ. ಇದರಿಂದ ಶಾಂತಿಸಂಧಾನಕ್ಕೆ ಅನುಕೂಲವಾಗುವುದೆಂದು ಹೇಳಲಾಗಿದೆ. ಸರ್ಕಾರೀ ಸೈನ್ಯಗಳೂ ಸಹ ಕದನವನ್ನು ನಿಲ್ಲಿಸಿವೆ.

೩ ಆನೆ ಎತ್ತರದ ಆನೆಕಲ್ಲು

ಹೊಳೆ ನರಸೀಪುರ ಮತ್ತು ಅರಕಲಗೂಡು ರಸ್ತೆಯಲ್ಲಿರುವ ಹೇರ ಕೊಪ್ಪಲು ಬಳಿ ಕಳೆದ ಗುರುವಾರ ಭಾರಿ ಆನೆಕಲ್ಲು ಮಳೆ ಒಂದು, ೫೦ ಅಡಿ ಸುತ್ತಳತೆಯ ಒಂದು ಹಳ್ಳದಲ್ಲಿ ಸುಮಾರು ೩ ಆನೆ ಎತ್ತರದ ಮಂಜು ಗೆಡ್ಡೆಯು ಬಿದ್ದು, ಬಲಿಯ ಕಲ್ಲುಗಳಂತೆ ಚೂರು ಚೂರಾಗಿತ್ತೆಂದು ವರದಿಯಾಗಿದೆ. ಅದನ್ನು ಸಾವಿರಾರು ಜನರು ಹೋಗಿ ನೋಡುತ್ತಿದ್ದಾರೆ.

ಆಸ್ತಿಯನ್ನೆಲ್ಲಾ ಒಪ್ಪಿಸಲು ಗೋಪಾಲರಾಯರ ಸಮ್ಮತಿ

ಸ್ವಂ ಸು ಪ್ರೋ॥] ಬೆಂಗಳೂರು ೬

ಶ್ರೀ ಗೋಪಾಲರಾಯರ ವಿಚಾರಣೆ ಈ ದಿನ ಮುಂದುವರೆಯಿತು. ತಮ್ಮೊಡನೆ ಲೇವಾದೇವಿ ಮಾಡಿದ ಬಹು ಜನರ ಹಣವನ್ನು ಅವರಿಗೆ ವಾಪಸು ಕೊಡಲು ಸಹಾಯ ಮಾಡುವುದಕ್ಕಾಗಿ ತಾವು ತಮ್ಮ ಎಲ್ಲಾ ಆಸ್ತಿ ಪಾಸ್ತಿಯನ್ನೂ ಮತ್ತು ಅವಶ್ಯಕವಿದ್ದರೆ ತಮ್ಮ ಪತ್ನಿಯವರ ಒಡವೆ ವಸ್ತುಗಳನ್ನೂ ಸಮಿತಿಯವರ ವಶಕ್ಕೆ ಒಪ್ಪಿಸುವುದಾಗಿ ಅವರು ಹೇಳಿದರು.

ದಿವಾನ್ ಕೃಷ್ಣಪ್ಪನವರ

ರಾಮಮಂದಿರಂ, ಮೈಸೂರು

[ರಾಮನವಮಿ ವಿಶೇಷ ಕಾರ್ಯಕ್ರಮ

7 ೪ ೪೮ ಸೋಮವಾರ ಸಂಜೆ 6 - 30ಕ್ಕೆ

ಚಿಂತನಪಲ್ಲಿ ರಾಮಚಂದ್ರರಾವ್

ಆರ್ ಆರ್ ಕೇಶವ ಮೂರ್ತಿ,

ಮಧುರೆ ಕೃಷ್ಣಯ್ಯಂಗಾರ್,

8 ೪ ೪೮ ಬುಧವಾರ

ಮಹಾಲಿಂಗಮ್, ಚೌಡಯ್ಯ ಮತ್ತು

ಮಧುರೆ ಕೃಷ್ಣಯ್ಯಂಗಾರ್

ಭಾಷಾವಾರು ಪ್ರಾಂತ್ಯ ರಚನೆ ಮುಂದೆ ಹೋಯಿತು

ಮೈಸೂರು ಕರ್ನಾಟಕದಲ್ಲಿ ಐಕ್ಯವಾಗಬೇಕು

ಇನ್ನು ಐದು ವರ್ಷ ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕೆಂದು ಪಂಡಿತ ನೆಹರೂ, ಸರ್ದಾರ್ ಪಟೇಲ್ ಮತ್ತು ಡಾ॥ ಪಟ್ಟಾಭಿ ಸೀತಾರಾಮಯ್ಯನವರನ್ನೊಳಗೊಂಡ ಸಮಿತಿಯವರು ಮಾಡಿದ ಶಿಫಾರಸನ್ನು ನಿನ್ನೆ ದೆಹಲಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರು ಅಂಗೀಕರಿಸಿದ್ದಾರೆ. ಆಂಧ್ರ ಪ್ರಾಂತ್ಯರಚನೆಯಾದ ಪಕ್ಷದಲ್ಲಿ ಆಂಧ್ರರು ಮದರಾಸ್ ನಗರದ ಮೇಲಿನ ಹಕ್ಕನ್ನು ಬಿಡಬೇಕು. ಕೇರಳ ಮತ್ತು ಕರ್ನಾಟಕ ಪ್ರಾಂತ್ಯಗಳ ನಿರ್ಮಾಣವಾಗಬೇಕಾದಲ್ಲಿ ಅವುಗಳಲ್ಲಿರುವ ಸಂಸ್ಥಾನಗಳು ಐಕ್ಯವಾಗಬೇಕು. ಇದು ಕಾರ್ಯರೂಪಕ್ಕೆ ಬರಬೇಕಾದರೆ ಮೈಸೂರು, ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳು ರದ್ದಾಗಬೇಕೇ ಹೊರತು, ಸಂಸ್ಥಾನಗಳಲ್ಲಿ ಇತರ ಪ್ರದೇಶಗಳು ಐಕ್ಯವಾಗಲಾರವು-ಎಂದು ಸಮಿತಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಎ. ಎಗ್. ರಾಘವಾಚಾರ್ಯರು ಹೈದ್ರಾಬಾದ್ ಸಚಿವರೇ?

ಸ್ವಂ ಸು ಪ್ರೋ॥] ಬೆಂಗಳೂರು ೬

ಮೈಸೂರಿನ ಮಾಜಿ ಫೈನಾನ್ಸಿಯಲ್ ಸೆಕ್ರೆಟರಿಗಳಾಗಿದ್ದ ಶ್ರೀ ಎ. ಎಗ್. ರಾಘವಾಚಾರ್ಯರನ್ನು ಹೈದರಾಬಾದಿನ ಹಣಕಾಸಿನ ಮಂತ್ರಿಗಳಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

ಸಂಸ್ಥಾನದಿಂದ ನಾನಾ ಇಲಾಖೆಗಳ ಹಲವು ನೌಕರರುಗಳನ್ನು ಹೈದರಾಬಾದಿಗೆ ಕಳುಹಿಸಿಕೊಡುವಂತೆ ಅಲ್ಲಿನ ಸರ್ಕಾರದಿಂದ ಪ್ರಾರ್ಥನೆ ಬಂದಿರುತ್ತದೆಂದು ತಿಳಿದುಬಂದಿದೆ.

ರಾಮಚಂದ್ರ ದೇವಸ್ಥಾನ

ಶಿವರಾಂಪೇಟೆಯ ಶ್ರೀ ವಿಠಲರಾಯರ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ವಿದ್ವಾನ್ ನಾರಾಯಣಾಚಾರ್ಯರ ಜಲತರಂಗ್ ಮತ್ತು ತಾಳಿದ್ದ ವಿದ್ವಾನ್ ಬಿ ಪಗಡುರಾಂರವರ ಸಂಗೀತವೂ ನಡೆಯುವುವು.

ಆರ್. ಎಸ್. ಎಸ್. ನವರ ಬಿಡುಗಡೆ

ಫಸ್ಟ್ ಗ್ರೇಡ್ ಕಾಲೇಜಿನ ಉಪಾಧ್ಯಾಯರಾಗಿದ್ದ ಶ್ರೀ ಗೋಪಾಲ ಕರ್ಣ್, ಸಂತೆಪೇಟೆ ಅಲೂಗೆಡ್ಡೆ ವರ್ತಕರಾದ ಶ್ರೀನಿವಾಸ್ ಮತ್ತು ಚಾಮರಾಜನಗರದ ವೀರಣ್ಣಾಚಾರ್ ಎಂಬ ಮೂವರು ಆರ್ ಎಸ್ ಎಸ್ ನವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಈ ದಿನ ಜೈಲಿನಿಂದ ಬಿಡುಗಡೆ ಹೊಂದಿರುವರು.

OPERA TALKIES

Daily 3 Shows

From 6-4-1948

MONSIEUR VERDOUX

— WITH —

CHARLIE CHAPLIN

ವಿಮಾನಿನ ಬಲೆಯಲ್ಲಿ ಮೊಸಳೆ

ದುರ್ಗಾಗಂಜ ಎಂಬಲ್ಲಿನ ರೈಲು ನದಿಯಲ್ಲಿ ೩ ಜನ ಬೆಸ್ತರ ಬಲೆಯನ್ನು ಹಿಡಿಯುತ್ತಿದ್ದಾಗ ಅವರ ಬಲೆಯಲ್ಲಿ ಬಂದ ಮೊಸಳೆಯೂ ಬಿದಿತು. ಅದು ಬಲೆಯನ್ನು ಕತ್ತರಿಸಿಕೊಂಡು ದೂರಕ್ಕೆ ಓಡಿತೆಂದೂ, ಆಗ ಅವರಿಗೂ ಮೊಸಳೆಗೂ ಕಾದಾಟವಾಗಿ, ಅದು ಒಬ್ಬನನ್ನು ತೀವ್ರವಾಗಿ ಗಾಯಪಡಿಸಿತೆಂದೂ ಇತರರಿಗೆ ತನ್ನ ಬಾಲದಿಂದ ಹೊಡೆದು, ಬಲೆಯಿಂದ ತಪ್ಪಿಸಿಕೊಂಡು ಹೋಯಿತೆಂದು ತಿಳಿದುಬಂದಿದೆ.

ತಿಂಡಿ ಸಿಕ್ಕುವ ಕಡೆ ಪಂಡಿತ ನೆಹರೂ

ತಿಂಡಿ ಸಿಕ್ಕುವ ಕಡೆ ತಮ್ಮನ್ನು ಯಾರು ಬೇಕಾದರೂ ಕಾಣಬಹುದು, ಎಂದು ಪಂಡಿತ ನೆಹರೂರವರು ಲಕ್ನೋನಿನ ಪ್ರಾಚೀನ ಸಸ್ಯ ಶಾಸ್ತ್ರದ ಸಮಾರಂಭದಲ್ಲಿ ಹಾಸ್ಯಸ್ಪದವಾಗಿ ಹೇಳಿರುತ್ತಾರೆ. ಶ್ರೀಮತಿ ವಜೀರ್ ಹಸನ್‌ರವರು ನೆಹರೂರವರ ಬಳಿ ಹೋಗಿ "ನಾನು ನಿಮಗಾಗಿ ಹುಡುಕುತ್ತಾ ಇದ್ದೆ" ಎಂದು ತಿಳಿಸಿದಾಗ ಅವರು ಮೇಲ್ಕಂಡಂತೆ ಉತ್ತರವನ್ನು ಕೊಟ್ಟಿರುತ್ತಾರೆ.

ವಿವಾಹದ ಸುಧಾರಣೆ ಮಸೂದೆಗಳ ಅಂಗೀಕಾರ

ಹೆಣ್ಣು ಮಕ್ಕಳ ವಿವಾಹದ ಕನಿಷ್ಠ ವಯಸ್ಸನ್ನು ೧೪ ರಿಂದ ೧೬ ಕ್ಕೆ ಹೆಚ್ಚಿಸುವ ಮಸೂದೆಗೆ ಮೊನ್ನೆ ದಿನ ಭಾರತ ಪಾರ್ಲಿಮೆಂಟ್ ಸಭೆಯು ಸಮ್ಮತಿಯಿತ್ತಿತು. ಹಿಂದೂಗಳೂ, ಜೈನರೂ ಮತ್ತು ಸಿಕ್ಕರೂ, ಪರಸ್ಪರ ಅಂತರ್ಜಾತೀಯ ವಿವಾಹವನ್ನು ಮಾಡಿಕೊಳ್ಳಬಹುದಾದ ಮಸೂದೆಗೂ ಒಪ್ಪಿಗೆ ಕೊಡಲಾಯಿತು. ಕನ್ಯಾ ಅಥವಾ ಬಾಲಕರ ಅಪಹಾರದ ಕನಿಷ್ಠ ವಯಸ್ಸನ್ನು ಕ್ರಮವಾಗಿ ೧೪ ರಿಂದ ೧೬ ಕ್ಕೂ ೧೪ ರಿಂದ ೧೬ ಕ್ಕೂ ಹೆಚ್ಚಿಸುವ ಮಸೂದೆಯನ್ನೂ ಸಹ ಮಂಜೂರು ಮಾಡಲಾಯಿತು.

ಕರ್ಣಾಟಕ ವಿಶ್ವವಿದ್ಯಾಲಯ

ಬೊಂಬಾಯಿ ಶಾಸನಸಭೆಯಲ್ಲಿ ಪ್ರಧಾನಿ ಬಿ. ಜಿ. ಖೇರ್ ರವರು ಮೊನ್ನೆ ದಿನ ಕರ್ಣಾಟಕ ವಿಶ್ವವಿದ್ಯಾನಿಲಯದ ಮಸೂದೆಯನ್ನು ಮಂಡಿಸಿದರು. ಬರುವ ವರ್ಷದಿಂದ ವಿದ್ಯಾನಿಲಯವು ಜಾರಿಗೆ ಬರುವುದೆಂದು ಅವರು ತಿಳಿಸಿದರು.

ವನಸ್ಪತಿ ತುಪ್ಪವು ಹಾನಿಕರವೇ?

ಬೆಂಗಳೂರಿನಲ್ಲಿ ನಡೆದ ಸಂಶೋಧನೆಯಿಂದ ವನಸ್ಪತಿ ತುಪ್ಪವು ಹಾನಿಕರವಲ್ಲವೆಂದೂ ಇಜತ್ ನಗರದಲ್ಲಿ ನಡೆಸಿದ ಪ್ರಯೋಗದಿಂದ ಹಾನಿಕರವೆಂದೂ ಅಭಿಪ್ರಾಯ ಪಡಲಾಗಿದೆಯೆಂದು ಕೇಂದ್ರ ಶಾಸನ ಸಭೆಯಲ್ಲಿ ಆಹಾರ ಸಚಿವರು ತಿಳಿಸಿರುತ್ತಾರೆ. ಈ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆಸಲಾಗುತ್ತಿದೆಯೆಂದು ಅವರು ಹೇಳಿರುತ್ತಾರೆ.

ವಿಜಯಲಕ್ಷ್ಮೀ ವಿಲಾಸ

ಬನುಂಪೇಟೆ ಮೈಸೂರು.

ನಾನಾ ರೀತಿ ನವೀನ ಮಾದರಿಯ ಸೀರೆಗಳೂ ಮತ್ತು ಶಾಲು ಬಟ್ಟೆ ಚಾಲುಗಳೂ ಈಗ ತಾನೆ ಬಂದಿವೆ. ಕಂಟ್ರೋಲ್ ಬೆಲೆಗೆ ಚೀಟಿ ಜನರಿಗೆ ಸಹ ಹೂರ್ಣ ಮಾರಲಾಗುತ್ತದೆ.

ರಾಜಕಮಲ್

ಮೈ ಸೂ ರು

1-4-49 ರಿಂದ

ಅಮೋಘವಾದ ೨ ನೇ ವಾರ

ಪ್ರತಿ ದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ - ವರಲಕ್ಷ್ಮಿ, ಲಕ್ಷ್ಮೀ ರಾಜ್ಯಂ, ಪ್ರಕಾಶ ರಾವ್, ಪ್ರಸಾದ್

MORNING SHOWS

From 8-4-49 for 4 days

Red Stallion

With –

Robert Paige

In Cine Colour

First run for Mysore

ಅಮೋಘ ಪ್ರಾರಂಭ

೩

ನೇಯ ಏಪ್ರಿಲ್

ಪಕ್ಷಿರಾಜಾರವರ

ಪವಳಕ್ಕೊಡಿ

ಮಹಾಲಿಂಗಂ. ರಾಜಕುಮಾರಿ

ವರದನ್. ಸರೋಜಿನಿ

ಕೃಷ್ಣನ್. ಮಧುರಂ

ಡೈರಕ್ಟರ್

ಶ್ರೀರಾಮುಲು ನಾಯುಡು

ನಾರಾಯಣನ್ ಕಂಪನೀ ರಿಲೀಜ್

* ಪ್ರಭು ದೇವಾ ಟಾಕೀಸಿನಲ್ಲಿ *

6—4—49ನೇ ಬುಧವಾರದಿಂದ ∷ ದಿನವಹಿ 3 ಆಟಗಳು

ಶೋಭನಾಚಲ ಕ್ಕರ ತೆಲುಗು ಚಿತ್ರ

★ ಗೊಲ್ಲಭಾಮ ★

ಮುಖ್ಯ ಪಾತ್ರ: ಕೃಷ್ಣವೇಣಿ, ಅಂಜಲಿದೇವಿ, ರಘುರಾಮಯ್ಯ

Edited printed and published by V. R. Nagarajan at the Sadhvi Press, D. Subbaiah Road, Mysore

ಫೋ॥ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೨ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೮-೪-೧೯೪೯ [ಸಂಚಿಕೆ ೨೦೬

- ತಂಬೂ ಚೆಟ್ಟಿರಿಂದ - ಲ೫,೦೦೦ ರೂ. ವಸೂಲಿ

ಕೇರ್ಷ ಡಿಪ್ಪೋವಿಗೆ ಮಹಿಳೆಯರ ಮುತ್ತಿಗೆ

ಸರ್ಕಾರ ಮಂತ್ರಿಗಳಲ್ಲಿ ನಿಯೋಗ ಹೋಗುವುದಕ್ಕಾಗಿ ಕೇರ್ಷ ಡಿಪ್ಪೋವನ್ನು ಇದರ ಮಾಲಿಕನು ಮುಚ್ಚಿಕೊಂಡು ಲಕ್ನೋ ನಗರಕ್ಕೆ ಹೋಗಿದ್ದುದರಿಂದ ಎರಡು ದಿನಗಳಿಂದಲೂ ತಾವೂ ತಮ್ಮ ಮಕ್ಕಳು ದನಗಳೂ ಹೊಟ್ಟೆಗಿಲ್ಲದೆ ಉಪವಾಸ ಬೀಳಬೇಕಾಗಿ ಬಂದುದಕ್ಕಾಗಿ ಕೋಪಗೊಂಡ ಅಲಹಾಬಾದಿನ ೪೦ ಜನ ಮಹಿಳೆಯರು ಸದರಿ ಡಿಪ್ಪೋವಿಗೆ ನುಗ್ಗಿ, ಅಲ್ಲಿನ ಸರಕನ್ನು ಮೇಲೆ ಕ್ಕೆ ಮಾಡಿ ಗೋಧಿ ಮುಕ್ತ ವ್ಯಾಪಾರವನ್ನು ಸಾಗಿಸಿದರೆಂದು ವರದಿಯಾಗಿದೆ. ಡಿಪ್ಪೋವನ್ನು ಕೂಡಲೇ ತೆರೆಯದಿದ್ದರೆ ಅದನ್ನು ಬಲತಾರ್ಕವಾಗಿ ತೆರೆದ ರಹದಾರಿಯನ್ನು ರದ್ದುಮಾಡಲೂ ಗುವುದೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾವಸಾರ ಕ್ಷತ್ರಿಯ ಸಮ್ಮೇಳನ

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾ ಸಭೆಯ ೧೩ ನೇ ಸಮ್ಮೇಳನವು ಮುಂದಿನ ತಿಂಗಳು ೧೪, ೧೫ ಮತ್ತು ೧೬ ನೇ ತಾ॥ ಬೊಂಬಾಯಿನಲ್ಲಿ ನಡೆಯುವುದು. ಮೈಸೂರು ಪೌರಸಭಾ ಸದಸ್ಯರಾದ ಶ್ರೀ ಬಿ ಎಲ್ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು ಮತಬಾಂಧವರು ಸಹಕರಿಸಬೇಕಾಗಿ ಕೋರಲಾಗಿದೆ

ಪರೀಕ್ಷೆಯಲ್ಲಿ ಬದಲಿ ವಿದ್ಯಾರ್ಥಿ

ಧಾರವಾಡದಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಇ ಜೆ. ಸುಕಾಳೆ ಎಂಬ ವಿದ್ಯಾರ್ಥಿಯ ಬದಲು ಪೂನದ ಸೂರ್ಯವಂಶಿ ಎಂಬಾತನು ಕುಳಿತು ಉತ್ತರವನ್ನು ಬರೆಯುತ್ತಿದ್ದಾಗ ಪ್ರೊ॥ ಮಾಳವಾಡರಿಂದ ಪತ್ತೆ ಮಾಡಲ್ಪಟ್ಟನು ತನ್ನ ಗುರುತಿನ ಬಗ್ಗೆ ಪ್ರಶ್ನೆಗಳನ್ನು ಹಾಕಿದಾಗ ಅವನು ಸರಿಯಾದ ಉತ್ತರಗಳನ್ನೇ ಕೊಟ್ಟನಾದರೂ ಅವನ ಫೋಟೋ ತೆಗೆದುಕೊಳ್ಳುವಾಗ ತನ್ನ ತಪ್ಪನ್ನು ಒಪ್ಪಿಕೊಂಡನು.

ನಾಯಿ ಮಗುವನ್ನು ತಿಂದಿತು

ಚಿಕ್ಕಮಗಳೂರಿನ ಹೆರಿಗೆ ಆಸ್ಪತ್ರೆಯಲ್ಲಿ ಈಗ ತಾನೆ ಹುಟ್ಟಿದ ಮಗುವೊಂದನ್ನು ಒಂದು ನಾಯಿಯು ಕಚ್ಚಿಕೊಂಡು ಹೋಗಿ ಬೀದಿಯಲ್ಲಿ ತಿನ್ನುತ್ತಿದ್ದುದನ್ನು ನೂರಾರು ಜನರು ನೋಡಿ ದುಃಖಪಟ್ಟ ವರದಿಯೊಂದು ಪ್ರಕಟವಾಗಿರುತ್ತದೆ ಇದು ನಿಜವಿದ್ದಲ್ಲಿ ಆಸ್ಪತ್ರೆಯ ಉಸ್ತುವಾರಿ ಕ್ರಮವನ್ನು ಎಷ್ಟು ಖಂಡಿಸಿದರೂ ಸಾಲದಾಗಿದೆ. ಸರ್ಕಾರದವರು ಈ ವಿಷಯದಲ್ಲಿ ತನಿಖೆ ನಡೆಸಿ ಒಂದು ಪ್ರಕಟಣೆ ಹೊರಡಿಸುವುದು ಅವಶ್ಯವಾಗಿದೆ —ಸಂ

ವಿದ್ಯಾ ಸಮಿತಿ

ಮೈಸೂರು ೮

ಸೆಂಡರಿ ಎಜುಕೇಷನ್ ಸಮಿತಿಗೆ ಶ್ರೀ ಎಂ ಎನ್ ಜೋಯಿಸ್ ಮತ್ತು ಜ॥ ಸೈಯದ್ ಅಬ್ದುಲ್ ರಹಮಾನರವರು ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ

ಕೃಷ್ಣರಾಜ ಮೊಹಲ್ಲಾ ಸಾಲು ಬೀದಿಯಲ್ಲಿನ ದೊಡ್ಡರಾಮ ದೇವಸ್ಥಾನದಲ್ಲಿ ಇಂದಿನ ರಾತ್ರಿ ೭ ಗಂಟೆಗೆ ವಿದ್ವಾನ್ ಟಿ ಚೌಡಯ್ಯನವರ ಗಾಯನ ನಡೆಯುತ್ತದೆ

ಚಿಯಾಂಗ್ ಕೈಷೇಕರು ಪುನಃ ಅಧಿಕಾರಕ್ಕೆ ಬರುವರೇ ?

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕರು ಪುನ ತಮ್ಮ ಅಧಿಕಾರವನ್ನು ವಹಿಸಿಕೊಳ್ಳುವರೇ? - ಎಂಬ ಪ್ರಶ್ನೆಯು ಈಗ ಲಂಡನ್ನಿನ ಆವರಣದಲ್ಲಿ ಏಳುತ್ತಿದೆ ಕಳೆದ ಇಪ್ಪತ್ತೊಂದು ವರ್ಷಗಳಲ್ಲಿ ಅವರು ಎರಡಾವರ್ತಿ ನಿವೃತ್ತರಾಗಿ, ಎರಡಾವರ್ತಿ ಪುನಃ ಅಧಿಕಾರಕ್ಕೆ ಹಿಂದಿರುಗಿದರು. ಈಗ ಅವರು ಚೀಣದ ಕಿಕೌ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಕಮ್ಯೂನಿಸ್ಟರೊಡನೆ ನಡೆಯುತ್ತಿರುವ ಶಾಂತಿ ಸಂಧಾನದ ಮಾತುಕತೆಗಳನ್ನು ರದ್ದುಪಡಿಸಲು ಅವರು ಈಗಲೂ ತಮ್ಮ ಹಿಂದಿನ ಅಧ್ಯಕ್ಷ ಪದವಿಯ ಅಧಿಕಾರವನ್ನು ನಾಕಷ್ಟು ಪ್ರಮಾಣದಲ್ಲಿ ಉಳಿಸಿಕೊಂಡಿದ್ದಾರೆ ಚೀಣದ ರಾಷ್ಟ್ರೀಯ ಪಕ್ಷದ ಸೂತ್ರವು ಇನ್ನೂ ಅವರ ಕೈಯ್ಯಲಿಯೇ ಇದೆ ರಾಷ್ಟ್ರೀಯ ರಕ್ಷಣಾಧಿಕಾರಿಗಳೊಡನೆ ಅವರು ನಿಕಟ ಸಂಪರ್ಕವನ್ನಿಟ್ಟುಕೊಂಡು ಮುಂದಿನ ಕಾರ್ಯಕ್ರಮದ ಬಗ್ಗೆ ಆಜ್ಞೆಗಳನ್ನು ಕೊಡುತ್ತಲೇ ಇದ್ದಾರೆ ಚೀಣದ ಸೆಂಟ್ರಲ್ ಬ್ಯಾಂಕಿನ ಗೌರ್ನರರಿಗೆ ಈಗಲೂ ಅವರು ಸೂಚನೆಗಳನ್ನು ಟೆಲಿಫೋನ್ ಮೂಲಕ ಕೊಡುತ್ತಿದ್ದಾರೆ ಚಿನ್ನ ಬೆಳ್ಳಿಯ ಗಟ್ಟಿಗಳ ನಾಂಗೈ ನಗರದಲ್ಲಿಯೇ ಇರಬೇಕೆಂದು ಹಂಗಾಮಿ ಅಧ್ಯಕ್ಷರಾದ ಲಿ ಸುಂಗ್ ಜೇನರವರು ಕೊಟ್ಟ ಅಪ್ಪಣೆಯನ್ನು ಅವರು ರದ್ದು ಮಾಡಿದ್ದಾರೆ ಶಾಂತಿ ಸಂಧಾನದ ಮಾತುಕತೆಗಳು ನಡೆಯುತ್ತಿರುವಾಗಲೇ ಮಾರ್ಷಲ್ ಚಿಯಾಂಗರು ಹಠಾತ್ತಾಗಿ ಚೀಣದ ರಾಜಕೀಯರಂಗದಲ್ಲಿ ಮೂರನೇ ಬಾರಿ ಮತ್ತೆ ಪ್ರವೇಶಿಸಿ ಅಧಿಕಾರ ಸೂತ್ರಗಳನ್ನು ವಹಿಸಬಹುದೆಂದು ರಾಜಕೀಯ ನಿಪುಣರು ನಿರೀಕ್ಷಿಸುತ್ತಿದ್ದಾರೆ.

ಮೈಸೂರು ಕಾಂಗ್ರೆಸ್ಸಿಗೆ ಪ್ರಾಂತೀಯ ಸ್ಥಾನವಿಲ್ಲ

ಮೈಸೂರು ಕಾಂಗ್ರೆಸ್ಸಿಗೆ ಪ್ರತ್ಯೇಕ ಪ್ರಾಂತೀಯ ಸ್ಥಾನಕ್ಕಾಗಿ ಮೈಸೂರಿನ ಕಾಂಗ್ರೆಸ್ ಮುಖಂಡರು ಮಾಡಿದ್ದ ಪ್ರಯತ್ನವು ಫಲಿಸದೆಹೋಗಿದೆ ಎಂದು ಗೊತ್ತಾಗಿದೆ ಕಾಂಗ್ರೆಸ್ ಅಧ್ಯಕ್ಷ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಈ ವಿಷಯಕ್ಕೆ ತಮ್ಮ ಒಪ್ಪಿಗೆ ... ನಿರಾಕರಿಸಿದ್ದಾರೆ ... ಲಾಗಿದೆ

ಟಿ. ಚೌಡಯ್ಯನವರಿಗೆ ರಾಜಾಜಿಯವರ ಪ್ರಶಸ್ತಿ

ಭಾರತದ ಗೌರ್ನರ್ ಜನರಲ್ ರಾಜಾಜಿಯವರು ಮೈಸೂರು ಆಸ್ಥಾನ ವಿದ್ವಾನ್ ಸಂಗೀತ ರತ್ನ ಟಿ ಚೌಡಯ್ಯನವರಿಗೆ ಒಂದು ಸತ್ಕಾರ ಕೂಟವನ್ನು ಕಳೆದ ತಿಂಗಳು ಡೆಲ್ಲಿಯಲ್ಲಿ ಏರ್ಪಡಿಸಿ, ಅವರ ಪಾಂಡಿತ್ಯವನ್ನು ಮೆಚ್ಚಿ ಅವರಿಗೆ ಒಂದು ಪದಕ ಮತ್ತು ತಮ್ಮ ಅಧಿಕಾರ ಮುದ್ರೆಯುಳ್ಳ ಗಡಿಯಾರಗಳನ್ನು ದಯಪಾಲಿಸಿದರೆಂದು ತಿಳಿದುಬಂದಿದೆ

ಹಿಟ್ಲರ್ ಬಗ್ಗೆ ಹಸ್ತಪತ್ರಿಕೆ ಹಂಚಿದುದಕ್ಕೆ ಶಿಕ್ಷೆ

ಹಿಟ್ಲರ್ ಇನ್ನೂ ಜೀವಂತನಾಗಿದ್ದಾನೆ, ಆತನು ಪುನಃ ಜರ್ಮನಿಯನ್ನು ಉದ್ಧಾರ ಮಾಡುವನು, ಅವನು ಕಟ್ಟಿದ ನಾಜೀ ಪಕ್ಷದ ಧ್ಯೇಯವು ಆರ್ಯ ಸಂಸ್ಕೃತಿಯ ಮಹತ್ವವನ್ನು ಸೂಚಿಸುತ್ತದೆ,- ಜರ್ಮನಿಯ ಸೋಲು ಹಿಟ್ಲರನ ತಪ್ಪಿನಿಂದಲ್ಲ, ಶತ್ರು ವಿಮಾನ ಧಾಳಿಗಳಿಂದ ಆದದ್ದು- ಇನ್ನೇ ಮುಂತಾದ ವಿಷಯಗಳನ್ನೊಳಗೊಂಡ ಹಸ್ತಪತ್ರಿಕೆಯನ್ನು ಹಂಚಿದ ಕಾರಣ ... ನಸೆಲ್ಡಾರ್ಫಿನ ಬ್ರಿಟಿಷ್ ಮಿಲಿಟರಿ ಕೋರ್ಟಿನವರು ಶ್ರೀಮತಿ ಸಾವಿತ್ರಿ ಮುಕರ್ಜಿ ಎಂಬ ೫೦ ವರ್ಷದ ಮಹಿಳೆಗೆ ೩ ವರ್ಷದ ಸಜವನ್ನು ವಿಧಿಸಿದ್ದಾರೆ ಈಕೆಯ ತಂದೆ ಫ್ರೆಂಚರವನು, ತಾಯಿ ಗ್ರೀಸಿನವಳು

ಮೈಸೂರು ತಾಲ್ಲೂಕು ಸಮ್ಮೇಳನ

ಕಳೆದ ೪ ನೇ ತಾ॥ ನಡೆಯಬೇಕಾಗಿದ್ದ ಮೈಸೂರು ತಾಲ್ಲೂಕು ಸಮ್ಮೇಳನವು ಈ ತಿಂಗಳು ೧೦ ನೇ ತಾ॥ ಸೋಮವಾರ ಮಧ್ಯಾಹ್ನ ೧ ಘಂಟೆಗೆ ರಾಜಧಾನಿಯ ಟೌನ್‌ಹಾಲಿನಲ್ಲಿ ನಡೆಯುವಂತೆ ಏರ್ಪಾಡಾಗಿದೆ ಶ್ರೀಮತಿ ಸುನಂದಾದೇವಿಯವರು ಅಧ್ಯಕ್ಷತೆ ವಹಿಸುವರು

ಹೊಸ ಪಕ್ಷ ಪತ್ರಿಕೆ

ಲಕ್ಷ್ಮೀಪುರಂ ಮೊಹಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಂ ಜಿ ವೆಂಕಟಪ್ಪನವರು ಈ ತಿಂಗಳು ... ನೇ ತಾ॥ ನಿಂದ "... ಪತ್ರಿಕೆ" ಎಂಬ ಹೆಸರಿನ ಒಂದು ಕನ್ನಡ ಪಕ್ಷ ಪತ್ರಿಕೆಯನ್ನು ಹೊರಡಿಸುವರು. ... ಜನರ ... ಪ್ರತಿಷ್ಠೆಯನ್ನು ... ಪತ್ರಿಕೆಯ ...

ಗೋಪಾಲರಾವ್ ಸಮಿತಿಗೆ ತಂಬೂಚೆಟ್ಟರ ಕಾಣಿಕೆ

ಸ್ವಂ ಸು ಫೋ॥] ಬೆಂಗಳೂರು ೮

ನಿನ್ನೆ ಸಂಜೆ ಸರ್ ಟಿ ತಂಬೂಚೆಟ್ಟರು ಗೋಪಾಲರಾವ್ ಸಮಿತಿಗೆ ಪತ್ರವೊಂದನ್ನು ಬರೆದು ಗೋಪಾಲರಾಯರಿಂದ ತಾವು ಹೊಂದಿರುವ ೧೧೩೦೦ ರೂ ಲಾಭದ ಸ್ಥಳಕೆ ೮೫,೦೦೦ ರೂ ಅನ್ನು ಸಾಲಗಾರರಿಗೆ ಹಂಚಲು ಕೊಡುವುದಾಗಿ ತಿಳಿಸಿದ್ದಾರೆ ತಮ್ಮ ಮೊಮ್ಮಗಳಿಗೆ ಬರಬೇಕಾದ ೧,೦೫೦೦೦ ರೂ ಗೆ ಸಹ ಬತ್ತಾಯಪಡಿಸುವುದಿಲ್ಲವೆಂದು ಅವರು ತಿಳಿಸಿರುವರು. ಸಮಿತಿಯವರು ಅದನ್ನು ಅಂಗೀಕರಿಸಿದ್ದಾರೆ.

ಈ ದಿನ ಗೋಪಾಲರಾಯರ ವಿಚಾರಣೆ ಮುಂದುವರೆಯಿತು. ಹಲವು ಕಾಗದ ಪತ್ರಗಳನ್ನು ಕೋರಿದಾಗ ತಮಗೇನೂ ಗೊತ್ತಿಲ್ಲನೆಂದು ರಾಯರು ಹೇಳಿದರು ವರ್ಷಕ್ಕೆ ಆರು ಲಕ್ಷದಂತೆ ಹತ್ತು ವರ್ಷದಲ್ಲಿ ಸುಮಾರು ೬೦ ಲಕ್ಷ ರೂ ಅನ್ನು ತಮ್ಮ ಠಕ್ತಿಗಾರರು ಲಾಭ ಪಡೆದಿರುವುದಾಗಿಯೂ ಹೇಳಿದರು. ಸೆಲ್ಫ್ ಎಂಬ ಹೆಸರಿನಲ್ಲಿ ಸ್ವಂತಕ್ಕೆ ೩೪ ಲಕ್ಷ ರೂ ಅನ್ನು ಅವರು ಬ್ಯಾಂಕಿನಿಂದ ತೆಗೆದುಕೊಂಡಿದ್ದ ವಿಚಾರವನ್ನು ತಿಳಿಸಿದಾಗ ಲೆಕ್ಕ ನೋಡಬೇಕೆಂದು ಹೇಳಿದರು

ಆಗ ಶ್ರೀ ಮೋದಪ್ಪನವರು ಹೀಗೆಂದರು ಎನ್ನೀವು ಭಾರಿ ಮೋಸಗಾರರು ಕೃತಕ ಲೆಕ್ಕ ಪತ್ರಗಳಿಟ್ಟು ಪ್ರಪಂಚವನ್ನೇ ಮುಳುಗಿಸಲು ಹೊರಟವರು ಮಾನ ಮರ್ಯಾದೆ ಇಲ್ಲದ ಸುಳ್ಳುಗಾರರು ನಿಮ್ಮಂತಹವರಿಗೆ ಬಿರುದುಬಾವಲಿಗಳು ಬಂದಿರುವುದೊಂದು ದುರಂತ ಇದು ಶುದ್ಧ ನಾಚಿಗೆಗೇಡಿನ ಪ್ರಸಂಗ

● ದಿವಾನರು ಈ ದಿನ ಬರಲಿಲ್ಲ—ನಾಳೆ ಬರುವರು

ಕುಡಿಯುವವರಿಗೆ ಪಟೇಲೀ ಕೆಲಸವಿಲ್ಲ

ಬೊಂಬಾಯಿ ಸರ್ಕಾರದವರು ಇನ್ನು ಮುಂದೆ ಕುಡಿತದ ಅಭ್ಯಾಸವುಳ್ಳ ಗ್ರಾಮಗಳ ಪೋಲೀಸ್ ಮತ್ತು ರೆವಿನ್ಯೂ ಪಟ್ಟೇಲರನ್ನು ಕೆಲಸದಿಂದ ತೆಗೆದುಹಾಕುವುದಾಗಿ ತೀರ್ಮಾನಿಸಿದ್ದಾರೆ ಆ ಸ್ಥಾನಗಳಿಗೆ ಕುಡಿಯುವವರನ್ನು ನೇಮಿಸಲಾಗುವುದಿಲ್ಲ

ಆನೆ ಮರಿಗೆ ವಿಮಾನದ ಸವಾರಿ

ಅಸ್ಸಾಂ ಪ್ರಾಂತದಿಂದ ಲಂಡನ್ನಿನ ಮೃಗಾಲಯಕ್ಕೆ ಒಂದು ಆನೆ ಮರಿಯನ್ನು ವಿಮಾನದಲ್ಲಿ ರವಾನಿಸಲಾಯಿತು. ಅದು ನಾನೂರು ಪೌಂಡ್ ತೂಕವುಳ್ಳದ್ದಾಗಿಯೂ ೩ಅಡಿ ಎತ್ತರವಾಗಿಯೂ ಇತ್ತು.

ಜಾತಿ ಬಹಿಷ್ಕಾರದ ನಿರೋಧ

ಬೊಂಬಾಯಿ ಶಾಸನ ಸಭೆಯು ಮೊನ್ನೆ ದಿನ ಒಮ್ಮತದಿಂದ ಜಾತಿಯಿಂದ ಬಹಿಷ್ಕಾರ ಮಾಡುವುದನ್ನು ನಿರೋಧಿಸುವ ಮಸೂದೆಯನ್ನು ಅಂಗೀಕರಿಸಿತು

ಕುರುಬರ ಸಮ್ಮೇಳನ

ಮೈಸೂರು ಸಂಸ್ಥಾನದ ಕುರುಬರ ಸಮ್ಮೇಳನವು ಸಾಗದ ಚಿತ್ರದುರ್ಗ ಜಿಲ್ಲೆಯ ... ಕಟ್ಟೆಯ ... ನಡೆಯುವದು ಹೊಸ ಪೇಟೆಯ ಶ್ರೀಮತಿ ಸಾವಿತ್ರಿಬಾಯಿ ನಾಗಪ್ಪ ಗೌಡರವರು ಅಧ್ಯಕ್ಷತೆ ವಹಿಸುವರು ... ಸಚಿವರಾದ ಶ್ರೀ ಟಿ ಮರಿಯಪ್ಪನವರು ... ಕೈಗಾರಿಕೆಗಳ ಪ್ರದರ್ಶನ ಮತ್ತು ಗ್ರಾಮಾಭಿವೃದ್ಧಿ ಸಹಕಾರ ಸಂಘದ ಪ್ರಾರಂಭೋತ್ಸವಗಳ ... ನಡೆಯುವವು

ನಗರ ಕಾಂಗ್ರೆಸ್ ಸಮಿತಿಗೆ ಅರ್ಜಿಗಳು

ಮೈಸೂರು ೭

ಸರ್ಕಾರ ಮತ್ತು ಪೌರಸಭೆಗಳಿಂದ ಪರಿಹರಿಸಬಹುದಾದ ಕುಂದುಕೊರತೆಗಳನ್ನು ಮಹಾಜನರು ನಗರ ಕಾಂಗ್ರೆಸ್ ಸಮಿತಿಗೆ ಲಿಖಿತ ಮೂಲಕವಾಗಿ ತಿಳಿಸಬೇಕಾಗಿ ಕೋರಲ್ಪಟ್ಟಿದೆ. ಸಮಿತಿಯು ಅವರಿಗೆ ಪರಿಹಾರವನ್ನು ದೊರಕಿಸಲು ಸಾಧ್ಯವಾದ ಏರ್ಪಾಡುಗಳನ್ನು ಮಾಡುವುದು. ಕಾಂಗ್ರೆಸ್ ಕಛೇರಿಯು ಪ್ರಾತಃಕಾಲ ೧೦ ರಿಂದ ೧೨ ರ ವರೆವಿಗೂ ಸಾಯಂಕಾಲ ೭ ರಿಂದ ೮ ಗಂಟೆ ವರೆವಿಗೂ ತೆರೆದಿರುತ್ತದೆ.

ಕಾಂಗ್ರೆಸ್ ಸೇವಾದಳ

ಕಳೆದ ೩೧ ನೇ ತಾ॥ ನಡೆದ ನಗರ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಒಂದು ಸೇವಾದಳವನ್ನು ಮೈಸೂರು ನಗರದಲ್ಲಿ ಸ್ಥಾಪಿಸುವಂತೆ ತೀರ್ಮಾನವಾಗಿರುತ್ತದೆ. ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸೇವಾದಳಕ್ಕೆ ಸೇರಲು ಇಚ್ಛೆಪಡುವವರು ತಮ್ಮ ಹೆಸರು, ವಿಳಾಸಗಳನ್ನು ಕೂಡಲೇ ತಿಳಿಸಬೇಕೆಂದು ಕೋರಲಾಗಿದೆ.

ಎಸ್. ಕೆ. ಪಾಟೀಲ್ ಬೊಂಬಾಯಿನ ಮೇಯರ್

ಬೊಂಬಾಯಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರವರನ್ನು ಈ ವರ್ಷ ಬೊಂಬಾಯಿ ಮೇಯರಾಗಿ ಚುನಾಯಿಸಲಾಗಿದೆ.

ಅಖಿಲ ಮೈಸೂರು ಬ್ರಾಹ್ಮಣ ಸಮ್ಮೇಳನ

ಇದೇ ೩೦ನೇ ತಾ॥ ಹಾಸನದಲ್ಲಿ ನಡೆಯುವ ಅಖಿಲ ಮೈಸೂರು ಬ್ರಾಹ್ಮಣ ಸಮ್ಮೇಳನಕ್ಕೆ ಠರಾವುಗಳು ಮತ್ತು ಈಗಿರುವ ಕುಂದು ಕೊರತೆಗಳ ಬಗ್ಗೆ ಸೂಚನೆಗಳನ್ನು ಇದೇ ೧೫ನೇ ತಾ॥ ಒಳಗಾಗಿ ಕಳುಹಿಸಬೇಕೆಂದು ತಿಳಿಸಲಾಗಿದೆ.

ಮರಣ ದಂಡನೆ ತಪ್ಪಿಸಲು ೧೨ ಸಾವಿರ ಜನರ ಮನವಿ

ಮ್ಯಾಂಚೆಸ್ಟರಿನ ರೇನಿ ಎಂಬ ಮಹಿಳೆಯು ತನ್ನ ಪತಿಯ ಕ್ರೂರತನವನ್ನು ತಡೆಯಲಾರದೆ ಆತನನ್ನು ಕೊಲೆ ಮಾಡಿದ್ದುದಕ್ಕಾಗಿ ಆಕೆಯು ಮರಣದಂಡನೆಗೆ ಗುರಿಯಾಗಿರುತ್ತಾಳೆ. ಆಕೆಯ ಶಿಕ್ಷೆಯನ್ನು ತಪ್ಪಿಸಬೇಕೆಂದು ೧೨೦೦೦ ಜನರ ರುಜುವುಳ್ಳ ಮನವಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ.

ಗಾಂಧಿ ನಿಧಿಗೆ ಕಾಣಿಕೆ

ಮೈಸೂರು ಜೈಲಿನ ವಾರ್ಡರುಗಳು ಗಾಂಧಿ ಸ್ಮಾರಕ ನಿಧಿಗೆ ರೂ ೫೬–೧೩–೦ ಅನ್ನು ಸಲ್ಲಿಸಿರುತ್ತಾರೆ.

ರೈತರ ಯುವಕ ಸಂಘ

ಕನ್ನೇಗೌಡನ ಕೊಪ್ಪಲಿನಲ್ಲಿರುವ ಮೇಲ್ಖಂಡ ಸಂಘಕ್ಕೆ ಶ್ರೀಮತಿ ಪುಟ್ಟತಾಯಮ್ಮನವರು ಹತ್ತು ರೂ ಮತ್ತು ಶ್ರೀ ಬಳ್ಳನ ಕರಿಯಪ್ಪನವರು ಐದು ರೂ ಅನ್ನು ಕೊಟ್ಟಿರುತ್ತಾರೆ.

ಶ್ರೀ ರಾಮೋತ್ಸವಗಳು

ಸಂತೇಪೇಟೆ ಕುಂಚಿಟಿಗರ ರಾಮಮಂದಿರದಲ್ಲಿ ನಿನ್ನೆಯಿಂದ ಎಂದಿನಂತೆ ಉತ್ಸವಗಳು ಜರುಗುತ್ತಿವೆ.

ಹಳೇ ಅಗ್ರಹಾರದ ಶ್ರೀ ಜಾನಕಿ ರಾಮ ಮಂದಿರದಲ್ಲಿಯೂ ಮಾಮೂಲಿನಂತೆ ಉತ್ಸವವನ್ನು ಏರ್ಪಡಿಸಲಾಗಿದೆ.

ಎಕ್ಕಲರಾಯರ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ನಾಳೆ ಸಂಜೆ ವಿದ್ವಾನ್ ಮಿರ್ಲೆ ಸುಬ್ಬರಾಯರಿಂದ ಹರಿಕಥೆಯೂ ಶ್ರೀ ಚಾಮುಂಡೇಶ್ವರಿ ಮಂಡಲಿಯವರಿಂದ ಯಕ್ಷಗಾನವೂ ನಡೆಯುವುವು.

ಚಾಮರಾಜಪುರಂ ಗೀತಾ ರೋಡಿನಲ್ಲಿರುವ ಶ್ರೀ ಪ್ರಸನ್ನ ಬಾಲಕ ಸೀತಾರಾಮ ಮಂದಿರದಲ್ಲಿ ಈರಾತ್ರಿ ಶ್ರೀ ಸೇತೂಮಾಧವ ದಾಸರವರಿಂದ ಇಂದ್ರಕೀಲ ಎಂಬ ಹರಿಕಥೆಯು ನಡೆಯುತ್ತೆ.

ಇಂಜಿನಿಯರಿಂಗ್ ಕಾಲೆಯ ಪ್ರಶಂಸೆ

ಸರ್ ಟಿ. ವಿಜಯರಾಘವಾಚಾರ್ಯರು ಕಳೆದ ಶನಿವಾರ ರಾಜಧಾನಿಯ ... ಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯ... ಗ್ ಸಂಸ್ಥೆಗೆ ಭೇಟಿ ಇತ್ತು ಅಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳನ್ನು ನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅನೇಕ ವರ್ಷಗಳ ಕಾಲ ... ದ್ಯೋಗ ಮಾಡಿ ವಿಶ್ರಾಂತಿ ದೆಸೆಯಲ್ಲಿ... ಮಹನೀಯರುಗಳು ತಮ್ಮ ಅನುಭವ ಮತ್ತು ಸೇವೆಗಳನ್ನು ಈ ಕಾಲೆಗೆ ಉಪಯೋಗಿಸಿ ದೇಶಕ್ಕೆ ಅತ್ಯಗತ್ಯವಾಗಿ... ಸುಶಿಕ್ಷಿತ ತರುಣರನ್ನು ತರಬೇತು ನೀಡಲು ತೊಡಗಿರುವುದು ಎಲ್ಲರಿಗೂ ... ಪ್ರಾಯವಾಗಿದೆಯೆಂದೂ ಅವರು ... ರುವರು

ಪ್ರ ಭಾ ★ 6-4-49ರಿಂದ

ಅಮೋಘವಾದ 2ನೇ ವಾರ

ಗೋಕುಲ ದಾಸಿ (ತಮಿಳು).

† ಹೊನ್ನಪ್ಪ ಭಾಗವತರ್, † ಎಂ.ವಿ ರಾಜಮ್ಮ

Morning Shows — — on Sat.9th & Sun. 10th

PARAMOUNT's **BLUE SKIES** (In Technicolour)

For Quality Paper & Books Please Call on

* RAO & CO., *

1273. Yelwal Road, Mysore.

(Dharmaparayana Srimati Alamma's Choultry Buildings)

	Rate per Ream	Per Quire
1) Mysore White-ledger Fools-cap 10 lbs.	8-12-9	0-7-10
2) Mysore Buff Fools-cap 10 lbs-	6-4-4	0-5-9
3) Mysore White-ledger D. Crown 26 lbs.	22-13-9 (in reams only)	
4) Mysore White-ledger D. Demy 34 lbs.	29-14-9	
5) Foreign Fools-cap 16 lbs (Double)	14-8-0	0-13-0
6) Foreign Fools-cap 8lbs.	7-6-0	0-6-0
7) Parchment 20×30 (Butter)	17-0-0 (Ream lot)	
8) Manifold Colour 17×23	10-0-0	,,
9) Mechanical Printing 24 lbs. D. Crown	11-8-0	,,
10) Swedish Kraft 22½×35 19 lbs	14-8-0	
11) Wood Free D. Crown 40 lbs.	35-0-0	
14) Wood Free Writing D. Fools-cap 20 lbs.	17-0-0	

Students' Note Books & Exercise Books Etc. at reasonable rates

ಗಣೇಶಾ ಟಾಕೀಸ್

೬-4-49 ರಿಂದ 5 ದಿನಗಳು ಮಾತ್ರ

ಪ್ರತಿ ದಿನ ೩ ಪ್ರದರ್ಶನಗಳು

ಸಾರಥಿಯವರ

★ ಪತ್ನಿ ★

(ತೆಲುಗು)

–ಭೂಮಿಕೆಯಲ್ಲಿ–

ಪುಷ್ಪೇಂದ್ರ ಮಣಿ

॥ಶ್ರೀ॥

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

9-4-49 ರಿಂದ 3 ದಿನಗಳು ಮಾತ್ರ

ಪ್ಯಾರಾಮೌಂಟ್ಸರವರ

ರೋಡ್ ಟು ರಿಯೋ

ROAD TO RIO

ಪಾತ್ರ.-ಬಾಬ್ ಹೋಪ್, ಗೊರೊತಿಲಾಮರ್

ಬೆಳಗಿನ ಪ್ರದರ್ಶನ

9-4-49ರಿಂದ ೨ ದಿನಗಳು ಮಾತ್ರ

ಟಿಪ್ಪಿ ಸ್ಟ್ರೂ ...

ಪಾತ್ರ.-- ಡೊರತಿ ಲಾಮರ್

ಭಾರತೀಯ ನೃತ್ಯಗಳು

ಚಿತ್ರರಂಗದ ಖ್ಯಾತಿವೆತ್ತ ನರ್ತಕಿಯರು

ಲಲಿತಾ - ಪದ್ಮಿನಿ

ರಾಗಿಣಿ

(ತಿರುವಾಂಕೂರು ಸಹೋದರಿಯರು)

10—4—49ನೇ ಭಾನುವಾರ

ಸಂಜೆ 6-30 ಗಂಟೆಗೆ

ಮೈಸೂರು ಟೌನ್‌ಹಾಲಿನಲ್ಲಿ

ಅಮೋಘ ಪ್ರದರ್ಶನ

— ಟಿಕೇಟು ದೊರೆಯುವ ಸ್ಥಳ:—

ಸೌಭಾಗ್ಯ ಸ್ಟೋರ್ಸ್

ದೇವರಾಜ ಮಾರ್ಕೆಟ್, :: ಮೈಸೂರು

[M.P

* ಪ್ರ ಭು ದೇ ವಾ ಟಾ ಕೀ ಸಿ ನ ಲ್ಲಿ *

6—4—49ನೇ ಬುಧವಾರದಿಂದ ⁂ ದಿನವಹಿ 3 ಆಟಗಳು

ಶೋಭನಾಚಲ ಪಿಕ್ಚರ್ಸ್ ತೆಲುಗು ಚಿತ್ರ

★ ಗೊಲ್ಲ ಭಾಮ ★

—:ಮುಖ್ಯ ಪಾತ್ರ:—

ಕೃಷ್ಣವೇಣಿ,

ಅಂಜಲೀದೇವಿ,

ರಘುರಾಮಯ್ಯ

...) V.R. Nagarajan at the Sadhvi Press, D. Subbiah Road, Mysore

ಫೋ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೧-೭-೧೯೪೮ [ಸಂಚಿಕೆ ೬೮

ರಾಜೇಂದ್ರ ಪ್ರಸಾದರು ೨೪ಕ್ಕೆ ಬೆಂಗಳೂರಿಗೆ -

ಸ್ವಿಟ್ಸರ್‌ಲೆಂಡಿನಲ್ಲಿ ಮಹಿಳೆಯರ ಸೈನ್ಯ

ಸರ್ಕಾರಿ ಉದ್ಯೋಗ ಅಥವಾ ಓಟು ಮಾಡುವ ಹಕ್ಕನ್ನು ಪಡೆಯದಿರುವ ಸ್ವಿಟ್ಜರ್‌ಲೆಂಡಿನ ಮಹಿಳೆಯರು ಈಗ ಸೈನ್ಯ ದಳಗಳಲ್ಲಿ ಸೇರಲು ಅವಕಾಶ ಕಲ್ಪಿಸಲಾಗಿದೆ ಪ್ರತ್ಯೇಕವಾಗಿ ಮಹಿಳೆಯರ ಸೈನ್ಯ ತಂಡವನ್ನು ಅಲ್ಲಿ ರಚಿಸಲಾಗುವುದು.

ದಳ್ಳಾಳಿಗಳ ಮೂಲಕ ಗಾಂಧರ್ವ ವಿವಾಹ

ಒಬ್ಬ ಯುವಕನಿಂದ ೩೫೦೦ ರೂಪಾಯಿಗಳನ್ನು ಪಡೆದು ತರುಣಿಯೊಬ್ಬಳನ್ನು ಅವನಿಗೆ ಮದುವೆ ಮಾಡಿಸಿ, ಅನಂತರ ಇನ್ನೂ ಹಣ ಕೊಡಬೇಕೆಂದು ಹೇಳಿ ಒಬ್ಬ ರು ಗೌಡಸರೂ, ಒಬ್ಬ ಹೆಂಗಸೂ ಸದರಿ ಮದುವೆಯಾದ ಹುಡುಗಿಯನ್ನು ಅಪಹರಿಸಿಕೊಂಡು ಹೋದ ಅಂಶವು ಬರೋಡೆಯಿಂದ ವರದಿಯಾಗಿದೆ ಪೋಲೀಸರ ತನಿಖೆ ಕ್ರಮದಲ್ಲಿ ಹುಡುಗಿಯರನ್ನು ಅವರು ಒಂದು ಗ್ರಾಮದಲ್ಲಿ ತಗಡಿನ ಪೆಟ್ಟಿಗೆಯಲ್ಲಿ ಮುಚ್ಚಿಟ್ಟು ಬೀಗ ಹಾಕಿದ್ದರೆಂದು ತಿಳಿದು ಬಂದಿದೆ

ರಾಮೋತ್ಸವಗಳು

ದೇವೀರಮ್ಮಣ್ಣಿ ಅಗ್ರಹಾರದ ರಾಮಮಂದಿರದಲ್ಲಿ ಈ ಸಂಜೆ ಶ್ರೀ ಚಿಕ್ಕಸ್ವಾಮಿಯವರ ಸಂಗೀತ

ರಾಂಪೇಟೆಯ ೩ ರಾಮಚಂದ್ರ ಮಂದಿರದಲ್ಲಿ ನಾಳೆ ಸಂಜೆ ೬-೩೦ಕ್ಕೆ ಶ್ರೀ ... ಗಾನ ಕೋಕಿಲ ರತ್ನಮ್ಮನವರ ಗಾಯನ

ಸಂತೇಪೇಟೆ ಕುಂಚಿಟಿಗರ ರಾಮಮಂದಿರದಲ್ಲಿ ನಾಳೆ ಸಂಜೆ ೬-೩೦ಕ್ಕೆ ಸಂಗೀತ ರತ್ನ ಚೌಡಯ್ಯನವರ ಪಿಟೀಲು, ಡಿ. ಶೇಷಪ್ಪನವರ ಮೃದಂಗ, ವಿದ್ವಾನ್ ಮಂಜುನಾಥರವರ ಘಟಂ.(ಅ|| ವಿ|| ಸಂಗೀತ ಶಾಸ್ತ್ರ ವಿಶಾರದ ಶ್ರೀ ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ)

ಚಾಮರಾಜ ಮೊಹಲ್ಲಾ ಶ್ರೀ ರಾಮ ಪಟ್ಟಾಭಿಷೇಕೋತ್ಸವ ಸಂಬಂಧವಾಗಿ ೭ನೇ ತಾ ನಿಂದ ೧೬ ನೇ ತಾರೀಖಿನವರೆಗೆ ಶ್ರೀ ... ಸರಾಜಸ್ವಾಮಿಗಳ ಮಠದಲ್ಲಿ ನಿತ್ಯವೂ ರಾಮಾಯಣ ಪಾರಾಯಣ ಪೂರ್ವಕವಾಗಿ, ಅಷ್ಟೋತ್ತರ ಪೂಜೆ, ದೀಪಾರಾಧನೆ, ಸಂಗೀತ ಅಥವಾ ಹರಿಕಥೆಗಳನ್ನು ನಡೆಸಿ ... ನೇ ತಾರೀಖು ರಾಮ ಪಟ್ಟಾಭಿಷೇಕೋತ್ಸವವನ್ನೂ, ೧೬ ನೇ ತಾರೀಖು ಹನುಮಂತೋತ್ಸವವನ್ನೂ ನೆರವೇರಿಸಲಾಗುವುದು.

ಕೂಡಲಿ ಜಗದ್ಗುರುಗಳ ವಾರ್ಷಿಕಾರಾಧನೆ

ಶ್ರೀ ಕೂಡಲಿ ಶೃಂಗೇರಿ ಮಠಾಧಿಪತಿಗಳಾಗಿದ್ದ ಶ್ರೀ ವಾಲುಕೇಶ್ವರ ಭಾರತಿಗಳ ವರ ಹದಿಮೂರನೇ ವಾರ್ಷಿಕಾರಾಧನೋತ್ಸವವು ಸಂಸ್ಕೃತ ಮಹಾ ಪಾಠಶಾಲೆಯ ಆವರಣದಲ್ಲಿರುವ ಗುರುಗಳ ದೇವಾಲಯದಲ್ಲಿ ... ನೇ ತಾ|| ನಿಂದ ಮೂರು ದಿನಗಳು ನಡೆಯುತ್ತದೆ ೧೫ ರ ಸಂಜೆ ೭ ಕ್ಕೆ ಶ್ರೀ ಬಿ. ಎಸ್. ವೆಂಕಟರಾಮಯ್ಯನವರಿಂದ ಪ್ರಹ್ಲಾದ ಚರಿತ್ರೆಯ ಹರಿಕಥೋಪದೇಶ ಭಾಗ, ೧೬ ನೇ ತಾ|| ಸಂಜೆ ೭ ಕ್ಕೆ ಅ|| ವಿ|| ಪಾಟಣಕರ ಚಂದ್ರಶೇಖರ ಭಟ್ಟರಿಂದ ಜ್ಞಾನವಹಿಮಾ ಎಂಬ ಉಪನ್ಯಾಸ ... ೧೭ ನೇ ತಾ|| ಸಂಜೆ ... ಕ್ಕೆ ಶ್ರೀ ... ಟಿ ಶಾಮಣ್ಣನವರಿಂದ ಶಬರ ... ಕರಪಿಲಾಸ ಎಂಬ ಹರಿಕಥೆಯೂ ನಡೆಯುತ್ತವೆ.

ಅತ್ತೆಯ ಹಿಂಸೆಯಿಂದ ಸೊಸೆಯ ಆತ್ಮಹತ್ಯ

ತನ್ನ ಸೊಸೆಯನ್ನು ಚಿತ್ರಹಿಂಸೆಗೆ ಗುರಿಪಡಿಸಿ, ಕಡೆಗೆ ನೇಣು ಹಾಕಿಕೊಂಡಾದರೂ ಆಕೆಯು ಸಾಯುವಂತೆ ಮಾಡಿದ ಕಲ್ಕತ್ತೆಯ ಮಿಸರು ಬಾಲಾದೇವಿ ಎಂಬಾಕೆಗೆ ಕಲ್ಕತ್ತಾ ಹೈಕೋರ್ಟಿನವರು ಸಾವಿರ ರೂ ಜುಲ್ಮಾನೆ ತಪ್ಪಿದರೆ ೯ ವರ್ಷ ಕಠಿಣ ಸಜಾ ವಿಧಿಸಿರುವರು

ಕಿವಿಯ ಮಾರಾಟ

ಕ್ಯಾಲಿಫೋರ್ನಿಯದ ಕಲಾವಿದಳೊಬ್ಬಳು ತನ್ನ ಒಂದು ಕಿವಿಯನ್ನು ಮಾರಲು ಸಿದ್ಧಳಾಗಿದ್ದಾಳೆ. ಅದರ ಬೆಲೆ ೬ ಸಾವಿರ ಪೌಂಡೆಂದು ತಿಳಿಸಿದ್ದಾಳೆ. ತನ್ನ ಜೀವನವನ್ನು ನಡೆಸಿಕೊಂಡು, ಚಿತ್ರಕಲೆಯನ್ನು ಮುಂದುವರಿಸಲು ಈ ರೀತಿ ಮಾಡಬೇಕಾಗಿದೆಯೆಂದು ಅವಳು ಹೇಳಿದ್ದಾಳೆ.

ಬಿಡಾರಂ ಕೃಷ್ಣಪ್ಪನವರ
ರಾಮ ಮಂದಿರ
ಈ ದಿನ ಸಂಜೆ ೬॥ ಗಂಟೆಗೆ
ಮಾಸ್ಟರ್ ನಟರಾಜರವರ ಕೊಳಲು,
ಮಧುರೆ ವೇಣು ಪಿಟೀಲು,
ರಾಮ್ನಾಡ್ ಈಶ್ವರಯ್ಯರ್ ಮೃದಂಗ
ದೂ 1-8, 1 ಮತ್ತು ೦ ೬ 8
ನಾಳೆ ಸಂಜೆ ೬॥ ಗಂಟೆಗೆ
ಶೆಮ್ಮಂಗುಡಿ ಶ್ರೀನಿವಾಸಯ್ಯರ್,
ಚೌಡಯ್ಯ ಮತ್ತು
ರಾಮ್ನಾಡ್ ಈಶ್ವರಯ್ಯರ್
ದೂ 3, 2 ಮತ್ತು 1

ಹಾವಿನ ಕಡಿತಕ್ಕೆ ಸ್ಯಾರಘಿ ಔಷಧಿಯೆ?

ಆಫ್ರಿಕದವನೊಬ್ಬನನ್ನು ಒಂದು ವಿಷಪೂರಿತ ಹಳದಿಯ ಹಾವು ಕಚ್ಚಿದಾಗ ಆತನು ಜೀವ ಉಳಿಸಿಕೊಳ್ಳಲು ಅರ್ಧ ಬಟ್ಟಲು ಸ್ಯಾರಘಿ ದ್ರವವನ್ನು ಕುಡಿದನು ಆತನು ಈಗ ಪೂರ್ಣ ಗುಣವಾಗಿದ್ದಾನೆ

ಸರ್ ಅರ್ಕಾಟಿನ ಹಿರಿಯ ಸೋದರರ ನಿಧನ

ಸಂಸ್ಥಾನದ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರ ಅಣ್ಣಂದಿರೂ, ಮದರಾಸಿನ ಮಾಜಿ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರೂ ಆದ ರಾವ್ ಬಹದ್ದೂರ್ ಎ ದೊರೆಸ್ವಾಮಿ ಮೊದಲಿಯಾರರು ನೆನ್ನೆ ರಾತ್ರಿ ಮದ್ರಾಸಿನಲ್ಲಿ ಹೃದಯ ವೇದನೆಯಿಂದ ನಿಧನರಾದರು

ಬರ್ಮಾ ಶಾಂತಿ ಸಂಧಾನ ಮುರಿಯಿತು

ಬರ್ಮಾದ ಇನ್‌ಸೀನ್ ನಗರದಲ್ಲಿ ಬರ್ಮಾ ಸರ್ಕಾರದ ಪ್ರತಿನಿಧಿಗಳಿಗೂ, ದಂಗೆಯೆದ್ದಿರುವ ಕರೇ ಸಂಗಡದವರಿಗೂ ನಡೆಯುತ್ತಿದ್ದ ಶಾಂತಿಯ ಮಾತುಕತೆಗಳು ಮುರಿದವು. ಕರೇ ಗುಂಪಿನವರು ದೇಶದಾದ್ಯಂತವೂ ಕೂಡಲೇ ಯುದ್ಧವು ನಿಲ್ಲಿಸಲ್ಪಟ್ಟು ಎಲ್ಲ ಸ್ಥಳಗಳಲ್ಲಿರುವ ಸೈನ್ಯ ಮತ್ತು ರಾಜಕೀಯ ಮುಖಂಡರುಗಳನ್ನೂ ಮಾತುಕತೆಗಾಗಿ ಕರೆಯಬೇಕೆಂಬ ಬೇಡಿಕೆಯನ್ನು ಸರಕಾರದ ಮುಂದೆ ಹಾಕಿದ್ದರು ಸರಕಾರದವರು ಅದನ್ನು ನಿರಾಕರಿಸಿದರು

"೮೭" ಮಕ್ಕಳ ತಂದೆ

ಮೇರಿಡಸ್ಸೆ ಎಂಬ ಇಟಲಿಯ ವೃದ್ಧನು ತನ್ನ ವಿವಾಹವಾದ ೩೩ ವರ್ಷದಲ್ಲಿ ೧೩ ಅವಳಿಗಳನ್ನೂ, ೬ ತ್ರಿವಳಿಗಳನ್ನೂ, ಸೇರಿಸಿ ಒಟ್ಟು ೪೪ ಮಕ್ಕಳನ್ನು ಪಡೆದಿರುವನೆಂದೂ, ಆತನ ಸಹೋದರಿಯರೀರ್ವರಿಗೆ ೪೧ ಮತ್ತು ೨೬ ಮಂದಿ ಮಕ್ಕಳಾಗಿದ್ದು ಮತ್ತೊಬ್ಬ ರಷ್ಯದ ಬೇಸಾಯಗಾರನಿಗೆ ತನ್ನ ಇಬ್ಬರು ಪತ್ನಿಯರಲ್ಲಿ ಒಟ್ಟು ೮೭ ಮಂದಿ ಮಕ್ಕಳಾಗಿದ್ದವೆಂದೂ ವರದಿಯಾಗಿದೆ.

ಮೈಸೂರಿನಲ್ಲಿ ಕಲಾವಿದರಿಲ್ಲವೇ ?

ಬೆಂಗಳೂರು ಔದ್ಯೋಗಿಕ ಶಿಕ್ಷಣ ಶಾಲೆಯಲ್ಲಿ ಕೆಲವು ದಿನಗಳ ಹಿಂದೆ ಕನ್ನಡ ಸಾಹಿತಿಗಳಾದ ಶ್ರೀ ಅ ನ ಕೃಷ್ಣರಾಯರು ಭಾಷಣ ಮಾಡಿ ಮೈಸೂರಿನಲ್ಲಿ ನಂದಲಾಲ್‌ಬಸು, ಪ್ರಮೋದಬಾಬು ಮುಖರ್ಜಿ ಮುಂತಾದವರೊಡನೆ ಸಮತೂಕವಾಗಿ ತೋಲುವ ಕಲಾವಿದರು ಇಲ್ಲವೆಂದು ಹೇಳಿದುದನ್ನು ಮೈಸೂರು ಚಿತ್ರಕಲಾವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಡೆದ ಸಭೆಯಲ್ಲಿ ಚಿತ್ರಕಲಾವಿದರು ಖಂಡಿಸಿರುವರು

ಹಳೇ ಅಗ್ರಹಾರದ ಜಾನಕೀ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ಲಕ್ಷ್ಮೀಪತಿ ಸೋದರರಿಂದ ಸೀತಾ ಕಲ್ಯಾಣ ಎಂಬ ಹರಿಕಥೆ ಇದೆ.

ವೃತ್ತ ಪತ್ರಿಕಾ ಸಮ್ಮೇಳನ

ಅ|| ಭಾ|| ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನವು ಬರುವ ತಿಂಗಳು ೧೬-೧೭ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವುದು

ರಾಜೇಂದ್ರ ಪ್ರಸಾದರ ಆಗಮನ

ಸ್ವಂ. ವ ಪ್ರೋ] ಬೆಂಗಳೂರು ೧೦ ಗಾಂಧಿ ಸ್ಮಾರಕ ನಿಧಿ ಸಮಿತಿ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರು ನಿಧಿ ಸಂಗ್ರಹಣದ ಸಂಬಂಧವಾಗಿ ಈ ತಿಂಗಳು ೨೪ನೇ ತಾರೀಖು ಬೆಂಗಳೂರಿಗೆ ಆಗಮಿಸಿ ಎರಡು ದಿನಗಳಿರುವರೆಂದು ತಿಳಿದುಬಂದಿದೆ

ಸಧ್ಯದಲ್ಲೇ ಯುದ್ಧವಿಲ್ಲವೆಂದು ಜ್ಯೋತಿಷ್ಯರ ಭವಿಷ್ಯ

ಬೆಂಗಳೂರಿನ ಸುಪ್ರಸಿದ್ಧ ಜ್ಯೋತಿಷ್ಯರಾದ ಶ್ರೀ ಬಿ ವಿ. ರಾಮನ್‌ರವರು ಒಂದು ಹೇಳಿಕೆಯನ್ನಿತ್ತು ಸಧ್ಯದಲ್ಲಿಯೇ ಮತ್ತೊಂದು ಮಹಾಯುದ್ಧವು ನಡೆಯುವುದಿಲ್ಲವೆಂದು ಹೇಳಿದ್ದಾರೆ. ಚೀಣಾ, ಗ್ರೀಸ್ ಮಲಯಾ ಮುಂತಾದ ಕಡೆ ಕಲಹಗಳು ಇದ್ದೇ ಇರುವುವು. ಅಮೆರಿಕಾ ಮತ್ತು ರಷ್ಯಗಳಿಗೆ ಘರ್ಷಣೆಯಾಗುವ ಸಂಭವವಿಲ್ಲ-ಎಂದೂ ಸಹ ಹೇಳಿರುತ್ತಾರೆ

ಭೂಪಾಲ್ ಸಂಸ್ಥಾನ ೧೬ಕ್ಕೆ ಭಾರತ ಸರ್ಕಾರದ ವಶ

ಭೂಪಾಲ್ ಸಂಸ್ಥಾನದ ಆಡಳಿತವನ್ನು ಈ ತಿಂಗಳು ೧೬ನೇ ತಾರೀಖಿನಲ್ಲಿ ಭಾರತ ಸರ್ಕಾರದವರು ವಹಿಸಿಕೊಳ್ಳುವರೆಂದು ತಿಳಿದುಬಂದಿದೆ.

ಶಾಂತಿಸಂಧಾನ ಫಲಿಸದಿದ್ದರೆ ಚಿಯಾಂಗರ ವಾಪಸ್

ಕಮ್ಯೂನಿಸ್ಟರಿಗೆ ಯಾವ ಪರಕ್ಕೂ ಇಲ್ಲದೆ ಚೀಣಾ ಸರ್ಕಾರಿ ಪಡೆಗಳು ಶರಣಾಗತವಾಗುವುದಿಲ್ಲವೆಂದು ಅಲ್ಲಿನ ಪ್ರಧಾನಿಗಳು ಹೇಳಿದ್ದಾರೆ ಪೀಕಿಂಗಿನಲ್ಲಿ ಈಗ ನಡೆಯುತ್ತಿರುವ ಶಾಂತಿ ಸಂಧಾನಗಳು ಸಫಲವಾಗದಿದ್ದರೆ ಮಾ|| ಚಿಯಾಂಗರು ಪುನಃ ರಾಜ್ಯದ ನಾಯಕರಾಗಿ ಸೂತ್ರಗಳನ್ನು ವಹಿಸಿಕೊಳ್ಳುವರೆಂದು ತಿಳಿದು ಬಂದಿದೆ.

ಚಲನ ಚಿತ್ರಗಳ ಮೂಲಕ ವಿದ್ಯಾಭ್ಯಾಸ

ಬೆಂಗಳೂರು ೧೦

ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳಲ್ಲಿ ಚಲನಚಿತ್ರಗಳ ಮೂಲಕ ವಿದ್ಯಾ ಪ್ರಚಾರ ಮಾಡುವ ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಬರುವ ಜುಲೈ ತಿಂಗಳಿಂದ ಇದು ಜಾರಿಗೆ ಬರುವುದು. ೧೫ ಕೇಂದ್ರಗಳಲ್ಲಿ ಇದು ಆರಂಭವಾಗುವುದು ಇದಕ್ಕೆ ೧,೫೫,೦೦೦ ರೂ ಮೂಲ ವೆಚ್ಚವು ತಗಲುವುದು ಸಾಲಿಯಾನ ೫೧,೫೦೦ ರೂ ವೆಚ್ಚವಾಗುವುದು ೬೦೦ ಚಲನ ಚಿತ್ರಗಳನ್ನು ಕೊಂಡುಕೊಳ್ಳಲಾಗುವುದು ಪ್ರತಿ ವರ್ಷವೂ ನೂರರಂತೆ ಹೆಚ್ಚಿಸಲ್ಪಡುವುದು ತಿಂಗಳಿಗೆ ೨೦ ರಂತೆ ನಾಲ್ಕು ನಾತ ಚಿತ್ರಗಳನ್ನು ತೋರಿಸಲಾಗುವುದು ಹೈಸ್ಕೂಲು ವಿದ್ಯಾರ್ಥಿಗಳಿಗೆ ೦-೩-೦ ಮಿಡ್ಲ್ ಸ್ಕೂಲಿನವರಿಗೆ ೦-೧-೦ ಯಂತೆ ಫೀ ವಸೂಲು ಮಾಡಲ್ಪಡುವುದು ಕ್ರಮೇಣ ಸಂಸ್ಥಾನದ ಎಲ್ಲಾ ಶಾಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸಲಾಗುವುದು

ರಷ್ಯದಲ್ಲಿ ಅಣು ಸಂಶೋಧನೆ

ಅಣು ಬಾಂಬು ಮತ್ತು ಶಕ್ತಿಯ ಸಂಬಂಧದ ಸಂಶೋಧನೆಗಾಗಿ ರಷ್ಯದ ಡಾ. ಕೋವ್ ಎಂಬುವರಿಗೆ ಅಲ್ಲಿನ ಸರ್ಕಾರದವರು ಎರಡು ಲಕ್ಷ ರೂಬಲ್ ನಾಣ್ಯವನ್ನು ಬಹುಮಾನವಾಗಿ ಕೊಟ್ಟಿರುವರು

ವಾರ ಭವಿಷ್ಯ

೧೦-೪-೪೯ ರಿಂದ ೧೬-೪-೪೯ ರ ವರೆಗೆ

ಮೇಷ--ಮಾನಸಿಕ ಅಶಾಂತಿ, ಆದರೆ ನೌಕರಿ ಧಂಧೆಗಳಲ್ಲಿ ಪ್ರಾಸಿದ್ಧಿ, ಕುಟುಂಬ ಜೀವನದಲ್ಲಿ ಅತೃಪ್ತಿ, ಪ್ರವಾಸದಲ್ಲಿ ಆಕಸ್ಮಿಕ ಅಡಚಣೆ, ಪದ ಗದಿಗೆ ವಿಘ್ನ ತಾ॥ ೧೧, ೧೩ ಕಣ್ಣಾಪಿ, ಧನನಾಶ ಕಳ್ಳರ ಕಾಟ, ಕಲಹ.

ವೃಷಭ- ಶರೀರ ಸ್ಥಿತಿ ಉತ್ತಮ, ಜನ ಸೇವಾಕಾರ್ಯ ಆಗುವುದು. ವಿದ್ವಜ್ಜನ ಸಹವಾಸ ತಾ॥ ೧೧, ೧೪ ಮನರಂಜನೆ, ಪರೋಪಕಾರ

ಮಿಥುನ ಮಾನ ಸನ್ಮಾನ ದೃಷ್ಟಿಯಿಂದ ಉತ್ತಮಸ್ಥಿತಿ ಆರೋಗ್ಯ, ಸುಖಪ್ರದ ಸ್ವೀಕೃತ ಕಾರ್ಯಗಳ ಸಿದ್ಧಿ ನೌಕರಿ ಧಂಧೆಗಳಲ್ಲಿ ಲಾಭ ಸುಖ ಪ್ರವಾಸ ತಾ॥ ೧೧, ೧೩ ನಿರರ್ಥಕ ವಿವಾದ ಅತಿಥಿಗಳಿಗಾಗಿ ವೆಚ್ಚ

ಕರ್ಕ- ಆರೋಗ್ಯ ನೆಟ್ಟಗೆ ಸ್ತ್ರೀ ಮೂಲಕ ಲಾಭ ಆಪ್ತಜನ, ಮಕ್ಕಳ ಮಂಗಳ ಭೇಟಿ ಪವಿತ್ರ ಸ್ಥಳಕ್ಕೆ ಪ್ರವಾಸ ಆರ್ಥಿಕ ಕ್ಲೇಶವಿರದು. ತಾ॥ ೧೦, ೧೩ ಮಾನ ಸನ್ಮಾನ ಶುಭವಾರ್ತೆ ಮಹತ್ವದ ಪತ್ರಾಗಮನ

ಸಿಂಹ ಮಾನಸಿಕ ಯಾತನೆ ಬಹಳ, ಮೇಲಧಿಕಾರಿ ವರ್ತನೆಯಿಂದ ಖೇದ, ತೃ ಕೆಳಗಿನವರಿಂದ ತೊಂದರೆ ಹೊಸ ವ್ಯವಹಾರಕ್ಕೆ ಉತ್ತಮ. ಕಾಲವಲ್ಲ ದೂರ ಪ್ರವಾಸ ಈ ವಾರ ಬೇಡ ತಾ॥ ೧೦, ೧೫ ವಿಶೇಷ ಖರ್ಚು, ಅಪ್ರಿಯವಾರ್ತೆ ತಾ॥ ೧೨, ೧೬ ಚಿತ್ತ ಶಾಂತಿ, ಮಿತ್ರ ಭೇಟಿ.

ಕನ್ಯಾ- ಯಾವ ದೃಷ್ಟಿಯಿಂದಲೂ ಈ ವಾರ ಒಳಿತಲ್ಲ. ಆರ್ಥಿಕ ನಿಸ್ಸಹಾಯಕತೆ, ನೌಕರಿ ಧಂಧೆಗಳಲ್ಲಿ ಮನಸ್ಸಿಗೆ ಬೇಡವಾದ ಘಟನೆ, ಖರ್ಚು ಹೆಚ್ಚು. ಕೋರ್ಟು ವ್ಯವಹಾರದಲ್ಲಿ ಸಿಘ್ನ ತಾ॥ ೧೪, ೧೫ ಈಶ್ವರ ಸಹಾಯ, ಕ್ಲೇಶ ನಾಶ.

ತುಲಾ---ಪರೋಪಕಾರ ಕಾರ್ಯ ಆರೋಗ್ಯ ನೆಟ್ಟಗೆ ಸತ್ಸಹವಾಸ. ಸರ್ಕಾರಿ ಕಾರ್ಯಗಳಲ್ಲಿ ಯಶ ನೌಕರಿ ಧಂದೆಗಳಲ್ಲಿ ಹಿತದಾಯಕ ಘಟನೆ ತಾ॥ ೧೨, ೧೪, ಶುಭವಾರ್ತೆ, ವ್ಯಾಪಾರದಲ್ಲಿ ಲಾಭ

ವೃಶ್ಚಿಕ -ಆರೋಗ್ಯ ನೆಟ್ಟಗೆ, ಮಕ್ಕಳ ಸಿಸಯದ ಚಿಂತೆ ದೂರವಾಗುವುದು. ನೌಕರಿಧಂಧೆಗಳಲ್ಲಿ ಉತ್ಸಾಹ ಎದುರಾಳಿಗಳು ಮೆತ್ತಗಾಗುವರು ತಾ॥ ೧೧, ೧೩ ಧನಲಾಭ ಪ್ರಿಯಜನರ ಪತ್ರಾಗಮನ

ಧನು ವಾರದ ಘಟನೆಗಳಿಂದ ಸ್ತೋಮ. ಆರೋಗ್ಯ ಚೆನ್ನಾಗಿರದು. ಮನಸ್ಸಿಗೆ ಉಲ್ಲಾಸವಿರದು ವ್ಯಾಪಾರ ಉದ್ಯೋಗಗಳಲ್ಲಿ ಜವಾಬ್ದಾರಿ ಶತ್ರು ಪೀಡೆ. ಹಣಕಾಸಿನ ಸ್ಥಿತಿ ಅಸಮರ್ಪಕ. ತಾ॥ ೧೫, ೧೬, ಪ್ರಿಯಜನ ವಿಯೋಗ, ಅಪಘಾತ

ಮಕರ—ಪರೋಪಕಾರ ಕಾರ್ಯ. ಶರೀರಸ್ಥಿತಿ ಉತ್ತಮ ಆರ್ಥಿಕಲಾಭ ಬಹಳ. ಕುಟುಂಬ ಸ್ಥಿತಿ ಹರ್ಷದಾಯಕ ವ್ಯಾಪಾರಾದಿಗಳಲ್ಲಿ ಜಯ. ತಾ॥ ೧೧, ೧೫, ಆಪ್ತ ಜನ ಭೇಟಿ. ಶುಭವಾರ್ತೆ. ಧನಲಾಭ

ಕುಂಭ—ಆರೋಗ್ಯ ನೆಟ್ಟಗೆ ಹಣಕಾಸಿನ ಲಾಭ ಹೆಚ್ಚಾಗಿರದು. ದೈನಂದಿನ ಕಾರ್ಯಕ್ಕೆ ಭಂಗವಿಲ್ಲ. ಕುಟುಂಬಿಕ ವೆಚ್ಚ. ತಾ॥ ೧೧, ೧೨, ಜುಲ್ಮಾನೆ. ಆಕಸ್ಮಿಕ ಖರ್ಚು.

ಮೀನ—ಅಂಜಬೇಡಿರಿ. ಇದೇ ಈ ವಾರದ ಸಂದೇಶ. ದುಷ್ಟಜನರಿಂದ ಎಷ್ಟೋ ಕಷ್ಟಗಳುಂಟು. ತಾ॥ ೧೩, ೧೪, ತಲೆಗೆ ಪೀಡೆ. ಸಿದ್ಧಾನಾಶ. ವಿಯೋಗ ಅಪ್ರಿಯ ವಾರ್ತೆ

೨೮ ದಿನಗಳ ಉಪವಾಸ

ಬಿಹಾರ್ ಪ್ರಾಂತದಲ್ಲಿ ಕೆಲಸದಿಂದ ತೆಗೆದುಹಾಕಲ್ಪಟ್ಟ ಹಲವು ಕಾರ್ಮಿಕರನ್ನು ಪುನ ಸೇರಿಸಿಕೊಳ್ಳಬೇಕೆಂದು ಒತ್ತಾಯಪಡಿಸುವುದಕ್ಕಾಗಿ ಅಲ್ಲಿನ ಬಸವಾ ಸಿಂಗ್ ಎಂಬುವರು ೨೮ ದಿನಗಳಿಂದ ಉಪವಾಸ ಮಾಡಿ ಈಗತಾನೆ ಅದನ್ನು ಮುಕ್ತಾಯಗೊಳಿಸಿರುವುದಾಗಿ ತಿಳಿದು ಬಂದಿದೆ. ಅವರ ತೂಕದಲ್ಲಿ ೪೮ ಪೌಂಡು ಕಡಿಮೆಯಾಗಿರುವುದಾಗಿ ಹೇಳಲಾಗಿದೆ

ರಾಜರ ಭವಿಷ್ಯ ಮೊದಲು ನಿರ್ಧಾರವಾಗಬೇಕು

ಕರ್ನಾಟಕ ಮತ್ತು ಕೇರಳ ಪ್ರಾಂತಗಳ ರಚನೆಯಾಗುವುದಕ್ಕೆ ಮೊದಲು ಮೈಸೂರು, ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ರಾಜರ ಭವಿಷ್ಯವು ಇತ್ಯರ್ಥವಾಗಬೇಕೆಂದು ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿರುತ್ತಾರೆ.

ಶಾಲಾ ವಾರ್ಷಿಕೋತ್ಸವ

ಸ್ವಂ ವ] ಶ್ರೀರಂಗಪಟ್ಟಣ ಏ

ಇದೇ ತಾಲ್ಲೂಕು ಬಾಬೂರಾಯನ ಕೊಪ್ಪಲಿನ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಎಂ ಎಸ್ ರಾಮಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಕಳೆದ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು.

ಪೋಲೀಸಿನವರ ಜುಲುಂ

ರಾಜಧಾನಿಯ ಹಲವು ರಸ್ತೆಗಳ ಫುಟ್ ಪಾತುಗಳಲ್ಲಿ ಬೈಸಿಕಲ್ ಅಂಗಡಿಯವರು ತಮ್ಮ ಸೈಕಲ್ಲುಗಳನ್ನು ಬಿಟ್ಟಿದ್ದರೆಂಬ ಕಾರಣದ ಮೇಲೆ ಪೋಲೀಸಿನವರು ಹಠಾತ್ತಾಗಿ ಒಂದು ಯಾವ ಎಚ್ಚರಿಕೆಯನ್ನೂ ಕೊಡದೇ ಅಂಗಡಿಯವರನ್ನು ಹೀನಾಮಾನವಾಗಿ ಬೈದು ಸಣ್ಣ ಪುಟ್ಟ ಹುಡುಗರಿದ್ದರೆ ಅವರ ಮೇಲೆ ಕೈ ಮಾಡುವುದಲ್ಲದೆ ಅಂಗಡಿಯಲ್ಲಿದ್ದವರನ್ನು ಬಲಾತ್ಕಾರವಾಗಿ ಪ್ಯಾಸಿನೋಲಕ್ಕೆ ನೂಕಿ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಮನಸ್ಸಿಗೆಬಾಗಿ ಬೈದು ಕಳುಹಿಸುತ್ತಿರುವುದು ಅತ್ಯಂತ ವಿಷಾದಕರವಾದ ಪ್ರಸಂಗವಾಗಿದೆ ಪೋಲೀಸಿನವರು ಪ್ರಜಾ ರಕ್ಷಕರೆಂದೂ,ಜನರ ಸೇವಕರೆಂದೂ ಅರಿತು ಮಹಾಜನರೊಡನೆ ಗೌರವದಿಂದ ವರ್ತಿಸಬೇಕೆಂದು ಬೋಧಿಸುತ್ತಿರುವ ನಮ್ಮ ಪ್ರಜಾಸರಕಾರದ ಮಂತ್ರಿಗಳಿಗೇಯಕ್ಕೆ ಈ ವರ್ತನೆಯು ಎಷ್ಟು ವಿರೋಧವಾಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ಅಂಗಡಿಗಳನ್ನು ನೋಡಿಕೊಳ್ಳಲು ಯಾರೂ ಇಲ್ಲದಿದ್ದರೂ ಇದ್ದವರನ್ನೇ ಹೀಗೆ ಬಲಾತ್ಕಾರದಿಂದ ಎಳೆದುಕೊಂಡು ಹೋಗಿ ಹಲವು ಗಂಟೆಗಳ ನಂತರ ಬಿಟ್ಟು ಬಿಡುವುದು ಯಾವ ನಾಗರಿಕ ಆಡಳಿತಕ್ಕೂ ಸಲ್ಲದ ನೀತಿಯಾಗಿದೆ. ಈ ಕಾಲದಲ್ಲಿ ಅಂಗಡಿಯಲ್ಲಿ ಆಗಬಹುದಾದ ನಷ್ಟಕ್ಕೆ ಯಾರು ಹೊಣೆ? ಇಂತಹ ಅತಿಕ್ರಮ ವರ್ತನೆಯನ್ನು ರಾಜಧಾನಿಯಾದ ಈ ನಗರದಲ್ಲಿ ಇನ್ನು ಮುಂದಾದರೂ ಅಧಿಕಾರಿಗಳ ತಪ್ಪಿಸಿ ಈ ಕಳಂಕದಿಂದ ಪಾರಾಗುವರೆಂದು ನಂಬಿದ್ದೇನೆ -ನಿತ್ಯಪಿ.

ರಾಜರೆಂಬ ಪದದ ಅರ್ಥ

ಸಂಸ್ಥಾನಗಳಿಗೆ ಮಾದರಿ ರಾಜ್ಯಾಂಗವನ್ನು ತಯಾರಿಸಲು ಭಾರತ ಸರ್ಕಾರದಿಂದ ನೇಮಿತರಾಗಿದ್ದ ಸರ್ ಬಿ. ಎನ್. ರಾವ್. ಸಮಿತಿಯವರು ಸಂಸ್ಥಾನ ರಾಜರೆಂದರೆ ಯಾರು ? ಎಂಬ ಅರ್ಥ ವಿವರಣೆಯನ್ನು ತಿಳಿಸಿದ್ದಾರೆ. ಪ್ರಜೆಗಳಿಂದ ತನ್ನ ಅಧಿಕಾರವನ್ನು ಪಡೆದು ರಾಜ್ಯದ ಅಧಿಪತಿಗಳಾಗಿರುವವರೇ ರಾಜರು, ಮತ್ತು ಒಂದು ಸಂಸ್ಥಾನದ ಪ್ರಜೆಯಾಗಿ ಯಾರನ್ನು ರಾಷ್ಟ್ರಪತಿ ಆಯಾ ಕಾಲಕ್ಕೆ ರಾಜರೆಂದು ಅಂಗೀಕರಿಸುತ್ತಾರೋ ಅವರೇ ರಾಜರು ಎಂದು ಹೇಳಿರುತ್ತಾರೆ. ಎಲ್ಲ ಸಂಸ್ಥಾನಗಳೂ ಭಾರತ ಯೂನಿಯನ್ನಿನಲ್ಲಿ ಐಕ್ಯವಾಗುವ ಅಭಿಪ್ರಾಯದ ಮೇಲೆ ಸಮಿತಿಯವರು ಮಾದರೀ ರಾಜ್ಯಾಂಗವನ್ನು ರಚಿಸಿದ್ದಾರೆ.

ಟ್ರಾನ್ಸ್‌ಪೋರ್ಟ್ ಮ್ಯಾನೇಜರ್

ಬೆಂಗಳೂರು

ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನ ಮ್ಯಾನೇಜರಾದ ಎಂ॥ ಡಿ॥ ಶ್ರೀ ಎ. ನರಸಿಂಹಯ್ಯನವರನ್ನು ವಿದ್ಯಾ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ. ಅವರ ಸ್ಥಾನಕ್ಕೆ ಶ್ರೀ ವೆಂಕಟಸ್ವಾಮಿಯವರನ್ನೂ ನೇಮಿಸಲಾಗಿದೆ

ರಾಜಕಮಲ್

ಮೈಸೂರು

8-4-49 ರಿಂದ

ಅಮೋಘವಾದ ೩ನೇ ವಾರ

ಪ್ರತಿ ದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ:- ವರಲಕ್ಷ್ಮೀ, ಲಕ್ಷ್ಮೀ ರಾಜ್ಯಂ, ಪ್ರಕಾಶ ರಾವ್, ಪ್ರಸಾದ್

MORNING SHOWS

From 8-4-49 for 4 days

Red Stallion

-:With:-

Robert Paige

(In Cine Colour)

First run for Mysore

॥ ಶ್ರೀ ॥

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು

9-4-49 ರಿಂದ 3 ದಿನಗಳು ಮಾತ್ರ

ಪ್ಯಾರಾಮೌಂಟ್ಸ್‌ನವರ

ರೋಡ್ ಟು ರಿಯೋ

ROAD TO RIO

ಪಾತ್ರ:-ಬಾಬ್‌ಹೋಪ್, ಡೊರೊತಿಲಾಮರ್

ಎಸ್.ಎ.ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಹೇರ್ ಬಾಮ್

ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ 0-12

ಮಹಾ ಸುಗಂಧರಾಜ ತೈಲ —)

,, ಚಂದನಾದಿ ತೈಲ—)

,, ಭೃಂಗಾ ಮಲಕ ತೈಲ—)

—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗ ತೈಲಗಳು.

ಮಹಾಶೀತಳೀ ತೈಲ—ತಲೆ ಬಳಸಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಶೀಸೆ 3-0

ಪಂಚಾಮೃತ—ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿಕ್ ಫಾರ್ಮಸಿ.

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್

ಮೈಸೂರು

* ಪ್ರಭುದೇವಾ ಟಾಕೀಸಿನಲ್ಲಿ *

6—4—49ನೇ ಬುಧವಾರದಿಂದ ದಿನವಹಿ 3 ಆಟಗಳು

ಶೋಭನಾಚಲ ಪಿಕ್ಚರ್ಸ್ ತೆಲುಗು ಚಿತ್ರ

★ ಗೊಲ್ಲಭಾಮ ★

—:ಮುಖ್ಯ ಪಾತ್ರ:- ಕೃಷ್ಣವೇಣಿ, ಅಂಜಲಿ ದೇವಿ, ರಘುರಾಮಯ್ಯ

Printed and published by A. R. Nagarajan at the Sadhvi Press, D. Subbiah Road Mysore

ಫೋನ್ ನಂ 792 ||ವಂದೇಮಾತರಂ|| ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೧೧-೮-೧೯೪೯ [ಸಂಚಿಕೆ ೩೦೭

ಭೂಪಾಲ್ ನವಾಬರ ಜಮೀನುಗಳು ಸರ್ಕಾರಕ್ಕೆ

ಬೇಸಿಗೆ ವ್ಯಾಯಾಮ ಶಿಕ್ಷಣ

ಬೆಂಗಳೂರು ೧೧

ಈ ತಿಂಗಳು ೧೫ ನೇ ತಾ|| ನಿಂದ ವಿದ್ಯಾ ಇಲಾಖೆಯ ಆಶ್ರಯದಲ್ಲಿ ಬೇಸಿಗೆ ವ್ಯಾಯಾಮಶಿಕ್ಷಣ ಶಾಲೆಯೊಂದನ್ನು ನಡೆಸಲಾಗುವುದು. ಒಲಂಪಿಕ್ ಸ್ಟೇಡಿಯಮ್ಮಿನಲ್ಲಿ ಈ ಶಾಲೆಯು ಮೂರು ತಿಂಗಳ ಕಾಲ ನಡೆಯುವುದು. ಶ್ರೀ ಎ. ಎಸ್. ದಾಸರು ಇದರ ಮೇಲ್ವಿಚಾರಣೆ ನೋಡಿಕೊಳ್ಳುವರು

ಸಂಸ್ಥಾನದಲ್ಲಿ ವರ್ಮಿಕ್ಯುಲೇಟ್ ಲೋಹ

ಕೃಷ್ಣರಾಜನಗರ ತಾಲ್ಲೂಕು ಚುಂಚನಕಟ್ಟೆ ಅರಸೀಕೆರೆ ತಾ|| ನಂದಿ ಹಳ್ಳಿ, ಮತ್ತು ಬಾಗೇಶಪುರ ಮತ್ತು ಚನ್ನರಾಯಪಟ್ಟಣದ ಮಲವನಘಟ್ಟಗಳಲ್ಲಿ ವರ್ಮಿಕ್ಯುಲೇಟ್ ಎಂಬ ಲೋಹವು ಪತ್ತೆ ಆಗಿದೆಯೆಂದೂ, ಇಂತಹ ಲೋಹವು ಸಿಕ್ಕಿರುವುದು ಭಾರತದಲ್ಲಿ ಇದೇ ಪ್ರಥಮವೆಂದೂ, ಇದರಿಂದ ಸಿಮೆಂಟ್ ತಗಡುಗಳನ್ನು ತಯಾರಿಸಲು ಉಪಯೋಗವಾಗುವುದೆಂದೂ ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ.

ನೌಕಾದಳಕ್ಕೆ ಸೇರುವವರಿಗೆ ವೇತನ

ಭಾರತದ ನೌಕಾ ದಳಕ್ಕೆ ಸಂಸ್ಥಾನದಿಂದ [illegible]ರಿಸಲ್ಪಡುವ ಉಮೇದುವಾರರಿಗೆ ಇಂಗ್ಲೆಂಡಿನಲ್ಲಿ ಶಿಕ್ಷಣ ಕೊಡಲು ತಲಾ ೧೫೦ ಪೌಂಡ್ ವೇತನವನ್ನು ಕೊಡಲು ಮೈಸೂರು ಸರ್ಕಾರದವರು ನಿರ್ಧರಿಸಿರುತ್ತಾರೆ.

ಇಂಗ್ಲೆಂಡಿಗೆ ಸರ್ ಮಿರ್ಜಾರವರ ಭೇಟಿ

ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೇಲ್‌ರವರು ಇಂಗ್ಲೆಂಡಿಗೆ ಈ ತಿಂಗಳಿನ ಕೊನೆಯ ವಾರದಲ್ಲಿ ಪ್ರಯಾಣ ಬೆಳೆಸುವರೆಂದೂ, ಅವರು ಸ್ವಿಟ್ಜರ್‌ಲ್ಯಾಂಡಿಗೂ ಭೇಟಿ ಕೊಡುವರೆಂದೂ ತಿಳಿದು ಬಂದಿದೆ.

ಗುಜರಾತ್ ರಾಜರುಗಳಿಗೆ ೨೮ ಲಕ್ಷ ರೂ. ರಾಜಧನ

ಗುಜರಾತಿನ ೩೭ ಸಂಸ್ಥಾನಗಳ ರಾಜರುಗಳಿಗೆ ಒಟ್ಟು ೨೮ ಲಕ್ಷ ರೂ. ರಾಜಧನವನ್ನು ಕೊಡಲು ಭಾರತ ಸರ್ಕಾರದವರು ನಿಗದಿ ಮಾಡಿರುವರು.

ಗಾಂಧೀಜಿಯವರ ಚಿತ್ರದ ದಾನ

ರಾಜಧಾನಿಯ 'ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಕೃಷ್ಣರಾಜನಗರದ ಶ್ರೀ ಕೆ. ಎಲ್. ಪುಟ್ಟಣ್ಣಯ್ಯನವರು ಗಾಂಧೀಜಿಯವರ ತೈಲಚಿತ್ರವನ್ನು ಕೊಟ್ಟಿರುತ್ತಾರೆ ಇದು ಶ್ರೀ ಎಸ್ ಎನ್ ಸ್ವಾಮಿಯವರಿಂದ ತೆರೆಯಲ್ಪಟ್ಟಿದೆ

ರಾಮೋತ್ಸವಗಳು

[illegible] ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಬಾಲಕ ಸೀತಾರಾಮ ಮಂದಿರದಲ್ಲಿ ಈ [illegible] ೮ ಗಂಟೆಗೆ ಶ್ರೀ ಶ್ರೀನಿವಾಸ [illegible]ಂಗಾಚಾರ್ಯರಿಂದ ಶ್ರೀರಾಮ ಜನನ ಎಂಬ ಹರಿಕಥೆ

[illegible]ಳೀ ಅಗ್ರಹಾರದ ಜಾನಕೀ ರಾಮ [illegible] ವಿರದಲ್ಲಿ ಶ್ರೀ ಲಕ್ಷ್ಮೀಪತಿ ಸಹೋದರರಿಂದ ರಾತ್ರಿ ೮ ಗಂಟೆಗೆ ಸೀತಾಕಲ್ಯಾಣ ಎಂಬ ಹರಿಕಥೆ.

[illegible]ರಾಮ ಪೇಟೆಯ ಶ್ರೀರಾಮಚಂದ್ರ [illegible] ವಿರದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ [illegible] ವಿ|| ಎ ಕೆ ಸುಬ್ಬರಾಯರ [illegible]

ಉಪಾಧ್ಯಾಯರುಗಳಿಗೆ ಪರೀಕ್ಷೆಯ ಭೀತಿ

ಹಿಂದಿನ ಕಾಲದಲ್ಲಿ ಪರೀಕ್ಷೆಗಳೆಂದರೆ ವಿದ್ಯಾರ್ಥಿಗಳು ಹೆದರುತ್ತಿದ್ದರು ಆದರೆ ಈಗ ವಿದ್ಯಾರ್ಥಿಗಳ ಕಿರುಕುಳ ಮತ್ತು ಬೆದರಿಕೆಯಿಂದ ಉಪಾಧ್ಯಾಯರುಗಳು ಪರೀಕ್ಷೆಗಳನ್ನು ನಡೆಸಲು ಹೆದರುತ್ತಿರುವರೆಂದೂ, ಉಪಾಧ್ಯಾಯರುಗಳಿಗೆ ತಕ್ಕ ರಕ್ಷಣೆ ಕೊಡಲು ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕಲ್ಕತ್ತದ ಅಮೃತ ಬಜಾರ್ ಪತ್ರಿಕೆಯು ಅಭಿಪ್ರಾಯ ಪಟ್ಟಿರುತ್ತದೆ

ಗಾಂಧಿ ಗ್ರಂಥಕರ್ತರ ಸಮ್ಮೇಳನ

ಮಹಾತ್ಮ ಗಾಂಧೀಜಿಯವರ ಉಪದೇಶಗಳನ್ನು ದೇಶದಲ್ಲಿ ಕಾರ್ಯರೂಪಕ್ಕೆ ತರುವುದಕ್ಕಾಗಿ ಭಾರತದ ಗ್ರಂಥಕರ್ತರುಗಳು ಪುಸ್ತಕಗಳನ್ನು ಪ್ರಕಟಿಸುವ ವಿಚಾರವನ್ನು ಪರಿಶೀಲಿಸಲು ಲಕ್ನೋನಲ್ಲಿ ಈ ತಿಂಗಳಿನ ಕೊನೆಯ ವಾರದಲ್ಲಿ ಗ್ರಂಥಕರ್ತರುಗಳ ಸಮ್ಮೇಳನವು ನಡೆಯಲು ಸಿದ್ಧತೆ ನಡೆಯುತ್ತಿದೆ

ಬಿಹಾರಿನಲ್ಲೂ ಬ್ರಿಟಿಷ್ ಸ್ಮಾರಕಗಳ ರದ್ದು

ಭಾರತದಲ್ಲಿ ಬ್ರಿಟಿಷರು ಗಳಿಸಿದ ಜಯದ ಜ್ಞಾಪಕಾರ್ಥವಾಗಿ ಸ್ಥಾಪಿಸಲಾಗಿರುವ ಅನೇಕ ಸ್ಮಾರಕ ಸ್ತಂಭ, ಭವನ ಇವೇ ಮುಂತಾದುವುಗಳನ್ನು ತೆಗೆದು ಹಾಕುವ ವಿಚಾರವನ್ನು ಸರ್ಕಾರದವರು ಸಂಪ್ರಯೋಜಿಸುತ್ತಿದ್ದಾರೆಂದು ಬಿಹಾರಿನ ಪ್ರಧಾನಿಗಳು ತಿಳಿಸಿರುತ್ತಾರೆ

ಸಹಕಾರ ಶಿಕ್ಷಣ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ಸಹಕಾರ ಶಿಕ್ಷಣ ತರಗತಿಗಳ ಆರಂಭೋತ್ಸವವನ್ನು ಇಲಾಖೆಯ ರಿಜಿಸ್ಟ್ರಾರ್ ಶ್ರೀ ಟಿ ರಂಗಸ್ವಾಮಿಯವರು ನಾಳೆ ಬೆಳಿಗ್ಗೆ [illegible] ಗಂಟೆಗೆ ಚಾಮರಾಜ ರಸ್ತೆಯಲ್ಲಿ ಸಹಕಾರ ಭವನದಲ್ಲಿ ನೆರವೇರಿಸುವರು ಸರ್ವರಿಗೂ ಸ್ವಾಗತವಿದೆ ತರಗತಿಗಳು ನಾಳೆಯಿಂದ ಮೂರು ತಿಂಗಳ ಕಾಲ ಪ್ರತಿದಿನ ಸಂಜೆ ಸಹಕಾರ ಭವನದಲ್ಲಿ ನಡೆಯುವುವು [illegible] ವನ್ನು ಕೊಡಲಾಗುವುದು [illegible]

ಹಾರಾಡುವ ಮೋಟಾರುಗಳು

ಅಮೆರಿಕದಲ್ಲಿ ಆಧುನಿಕ ರಸ್ತೆಯಲ್ಲಿ ಹಾರಾಡಬಲ್ಲ ಮೋಟಾರು ಕಾರುಗಳನ್ನು ತಯಾರಿಸಲು ಅಮೆರಿಕದಲ್ಲಿ ೩೬ ನೂತನ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆಯೆಂದು ಹೇಳಲಾಗಿದೆ

ಸಾವನ್ನು ತಡೆಯುವ ನೂತನ ಯಂತ್ರ

ಮನುಷ್ಯನ ನಾಡಿಯು ನಿಂತ ಮೇಲೆ ದೇಹ ಶರೀರವು ಜೀವಂತವಾಗಿರುವಂತೆ ಮಾಡುವ ನೂತನ ಯಂತ್ರವೊಂದನ್ನು ಫ್ರಾನ್ಸಿನ ವಿಜ್ಞಾನಿಗಳೊಬ್ಬರು ಕಂಡು ಹಿಡಿದಿದ್ದಾರೆಂದು ವರದಿಯಾಗಿದೆ

ಗದಗಿನಲ್ಲಿ ಅಂಧಕಾರ

ಪೌರಸಭೆಗೂ ವಿದ್ಯುಚ್ಛಕ್ತಿ ಸಂಸ್ಥೆಗೂ ವ್ಯಾಜ್ಯವುಂಟಾಗಿ ಗದಗಿನಲ್ಲಿ ದೀಪಗಳೇ ಇಲ್ಲದೆ ಅಂಧಕಾರವುಂಟಾಗಿದೆ. ಕಳ್ಳಕಾಕರ ಉದ್ಯೋಗವು ನಿರಾತಂಕವಾಗಿ ಸಾಗುತ್ತಿದೆ

ಜರ್ಮನಿಯಲ್ಲಿ ಪ್ರಜಾಪ್ರಭುತ್ವ

ಪಶ್ಚಿಮ ಜರ್ಮನಿಯಲ್ಲಿ ಫೆಡರಲ್ ರಿಪಬ್ಲಿಕ್ ಸರ್ಕಾರವನ್ನು ಸ್ಥಾಪಿಸಿ, ಅಲ್ಲಿನ ಜನರಿಗೆ ಹೆಚ್ಚು ಸ್ವಾತಂತ್ರ್ಯ ಕೊಡುವ ಬಗ್ಗೆ ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸ್ ರಾಷ್ಟ್ರಗಳು ಒಪ್ಪಂದಕ್ಕೆ ರುಜು ಹಾಕಿವೆ.

ಧಾನ್ಯ ಸಂಗ್ರಹಕ್ಕಾಗಿ ವಿಶೇಷ ಬಹುಮಾನ

ಪ್ರತಿ ಜಿಲ್ಲೆಯಿಂದಲೂ ವಸೂಲಾಗಬೇಕಾದ ಕ್ಲಪ್ತ ಪ್ರಮಾಣಕ್ಕಿಂತ ಹೆಚ್ಚಾಗಿ ವಸೂಲಾದ ಪ್ರತಿ ಶೇಕಡ ಒಂದರಷ್ಟು ಧಾನ್ಯಕ್ಕೂ ೧೦೦೦ ರೂ ನಂತೆ ಬಹುಮಾನವನ್ನು ಸದರಿ ಜಿಲ್ಲೆಗೆ ಕೊಡುವುದಾಗಿ ಹೊಂಬಾಯಿ ಮಂತ್ರಿ ಶ್ರೀ ದಿನಕರ್ ದೇಸಾಯಿಯವರ [illegible] ಸಂಸ್ಥಾನದಲ್ಲಿ ನಡೆದ ಧಾನ್ಯ ಸಂಗ್ರಹದ ಬಹಿರಂಗ ಸಭೆಯಲ್ಲಿ ತಿಳಿಸಿದರು [illegible] ನದ ರಾಜರೂ [illegible] ಜರಿದ್ದರು. ಸುತ್ತಮುತ್ತಲಿನ ಗ್ರಾಮಗಳ [illegible] ೨೦೦ ಗಾಡಿಗಳಲ್ಲಿ [illegible] ವನ್ನು ತಂದಿದ್ದರು [illegible] ಖಂಡಿ ಧಾನ್ಯವು [illegible] ಮಂತ್ರಿಗ [illegible] ಗಳನ್ನು [illegible]

ಸರ್ಕಾರಕ್ಕೆ ಭೂಪಾಲ್ ನವಾಬರ ಜಮೀನುಗಳು

ಭೂಪಾಲ್ ನವಾಬರಿಗೆ ಸೇರಿದ್ದ ಸ್ವಂತ ಜಮೀನುಗಳನ್ನು ಈ ತಿಂಗಳಿನಿಂದ ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗುವುದೆಂದು ಪ್ರಭುತ್ವ ಆಜ್ಞೆ ಹೊರಟಿದೆ ಇದರಿಂದ ಈ ಸಂಸ್ಥಾನದ ಭೂ ಇಲಾಖಾ ಉತ್ಪತ್ತಿಯು ೬೭ ಲಕ್ಷದಿಂದ ೮೧ ಲಕ್ಷ ರೂ. ಗೆ ಹೆಚ್ಚುವುದು

ಎಲ್ಲಾ ಸಂಸ್ಥಾನಗಳಿಗೂ ಒಂದೇ ರಾಜ್ಯಾಂಗ

ಪ್ರತಿ ಸಂಸ್ಥಾನವೂ ತನ್ನ ರಾಜ್ಯಾಂಗ ಸಭೆಯಲ್ಲಿ ಪ್ರತ್ಯೇಕ ರಾಜ್ಯಾಂಗವನ್ನು ನಿರ್ಮಿಸುವ ಪದ್ಧತಿಯನ್ನು ವಜಾಮಾಡಿ, ಎಲ್ಲ ಸಂಸ್ಥಾನಗಳಿಗೂ ಅನ್ವಯಿಸುವಂತೆ ಒಂದೇ ಮಾದರಿ ರಾಜ್ಯಾಂಗವನ್ನು ನಿರ್ಮಿಸುವ ಬಗ್ಗೆ ಭಾರತ ಸರ್ಕಾರಕ್ಕೂ ಸಂಸ್ಥಾನಗಳ ಪ್ರತಿನಿಧಿಗಳಿಗೂ ಒಪ್ಪಂದವಾಗಿದೆ. ಮುಂದಿನ ಆಗಸ್ಟ್ ತಿಂಗಳಿನಲ್ಲಿ ಅಂಗೀಕೃತವಾಗುವ ಭಾರತದ ರಾಜ್ಯಾಂಗದಲ್ಲಿ ಸಂಸ್ಥಾನಗಳ ರಾಜ್ಯಾಂಗವನ್ನೂ ಸೇರಿಸಲಾಗುವುದೆಂದು ಹೇಳಲಾಗಿದೆ

ಶರೀರದಲ್ಲಿ ಸೂಜಿಯ ಸಂಚಾರ

ಆಸ್ಟ್ರೇಲಿಯಾದ ವಾಟ್ಸನ್ ಎಂಬಾಕೆಯ ದೇಹದಲ್ಲಿ ೩೦ ವರ್ಷಗಳ ಹಿಂದೆ ಚುಚ್ಚಿಕೊಂಡಿದ್ದ ಸೂಜಿಯನ್ನು ವೈದ್ಯರು ಈಗ ಶಸ್ತ್ರಚಿಕಿತ್ಸೆ ಮೂಲಕ ಆಕೆಯ ತೊಡೆಯಿಂದ ತೆಗೆದಿದ್ದಾರೆಂದು ವರದಿಯಾಗಿದೆ. ಸೂಜಿಯು ಆಕೆಯ ಶರೀರದಲ್ಲಿ ಸಂಚರಿಸುತ್ತಿತ್ತೆಂದೂ, ಆಕೆಗೆ ಆಗಾಗ್ಗೆ ನೋವುಂಟಾಗುತ್ತಿತ್ತೆಂದೂ ವರದಿಯಾಗಿದೆ.

ವಿದ್ಯಾರ್ಥಿಗಳಿಗೆ ಮದ್ಯವನ್ನು ಮಾರಲಾಗದು

ಅಜ್ಮೀರ್ ಸಂಸ್ಥಾನದ ವಿದ್ಯಾರ್ಥಿಗಳಿಗೆ ಮದ್ಯವನ್ನು ಮಾರದಂತೆ ಅಲ್ಲಿನ ಅಬ್ಕಾರಿ ಅಧಿಕಾರಿಗಳು ಆಜ್ಞೆಮಾಡಿದ್ದಾರೆ. ಯಾರೊಬ್ಬರಲ್ಲಿಯೂ ಎರಡು ಸೀಸೆಗಿಂತ ಹೆಚ್ಚು ಸಾರಾಯಿ ಇರಕೂಡದೆಂದೂ ಸಹ ಸೂಚಿಸಲಾಗಿದೆ. ಮದ್ಯದ ಮಾರಾಟದ ಕಾಲವನ್ನು ಕ್ಲುಪ್ತ ಮಾಡಿರುವುದಲ್ಲದೆ ಸಂಬಳದ ದಿನಗಳಲ್ಲಿಯೂ ಅದರ ಮಾರಾಟವನ್ನು ನಿಷೇಧಿಸಲಾಗಿದೆ

ಜೀವಸಹಿತ ಸುಟ್ಟರು

ಕಾಶಿಯ ಸ್ಮಶಾನ ಘಟ್ಟದಲ್ಲಿ ಮಲಗಿ ನಿದ್ರಿಸುತ್ತಿದ್ದ ಒಬ್ಬನು ಜೀವಸಹಿತ ಸುಟ್ಟುಹೋದನೆಂದು ಹೇಳಲಾಗಿದೆ. ಅತನನ್ನು ಹಾಸಿಗೆಗೆ ಕಟ್ಟಿ, ಸೀಮೆಣ್ಣೆಯನ್ನು ಎರಚಿ, ಅದಕ್ಕೆ ಬೆಂಕಿ ಹಚ್ಚಲಾಗಿತ್ತೆಂದು ವರದಿಯಾಗಿದೆ

ಬೆರಕೆ ಆಹಾರದ ಮಾರಾಟಕ್ಕೆ ನಿಷೇಧ

ರೇಷನ್ ಡಿಪೋಗಳಲ್ಲಿ ಆಹಾರ ಪದಾರ್ಥಗಳನ್ನು ಬೆರಕೆ ಮಾಡದೆ ಇರುವ ಧಾನ್ಯಗಳನ್ನೆಲ್ಲಾ ರಮಿಂದಾಗಿ ಪ್ರದರ್ಶಿಸಿ, ಅವುಗಳ ಬೆಲೆಯ ಪಟ್ಟಿಯನ್ನು ಹಾಕಬೇಕೆಂದೂ ಮತ್ತು ರದ್ದಿನಾದ ಪದಾರ್ಥಗಳ. ದೋಷವುಂಟಾಗುವಂತೆ ವಸ್ತು ಮಾರಬೇಕೆಂದೂ ನಿಷಿದ್ಧ ಪ್ರಾಂತ್ಯ ಮತ್ತು ಸಂಸ್ಥಾನಗಳ [illegible] ಕರ್ತವ್ಯ[illegible] [illegible]

ವಿವಾಹಿತರು ಹೆಚ್ಚು ಕಾಲ ಬದುಕುವರು

ಮದುವೆಯಾದವರು ಹೆಚ್ಚುಕಾಲ ಬದುಕುವರೆಂದು ಅಮೇರಿಕದ ಇಬ್ಬರು ಸುಪ್ರಸಿದ್ಧ ವೈದ್ಯರು ತಿಳಿಸಿರುತ್ತಾರೆ ವಿವಾಹಿತರು ಕ್ಷಯ, ಮುಂತಾದ ರೋಗಗಳಿಂದ ನರಳುವುದಿಲ್ಲವೆಂದೂ, ಮದುವೆಯಾದವರಿಗಿಂತ ೩ ರಷ್ಟು ಮಂದಿ ಅವಿವಾಹಿತ ಮಹಿಳೆಯರು ಕ್ಷಯದಿಂದ ಸಾಯುತ್ತಿರುವರೆಂದೂ ತಿಳಿಸಲಾಗಿದೆ

ಪ್ರತಿ ದಿನ 3 ಆಟಗಳು
13-4-49 ನೇ ಬುಧವಾರದಿಂದ
ಪ್ರಕಾಶ್ ರವರ

ಫಾಲ್ಸ್ ಫುಟ್

ಪಾತ್ರ: ನಿರ್ಮಲ, ಅರುಣ್, ಮುರ್ನಿದ್, ಜೂನಿಯರ್, ಮುತ್ತಿತರರು

11 12ನೇ ತಾ॥ 2 ದಿನಗಳು ಮಾತ್ರ
ರಣಜಿತ್ ರವರ

ತ್ರಾ ಸೇ ನ್

ಒಲಂಪಿಯಾ ಟಾಕೀಸ್

ನಿಮ್ಮ ಮೈ ಮೊಕಮಲ್ಲಿನಂತೆ
ಹೊಳೆಯಬೇಕೆ? ನೀವು
ಲಾವಣ್ಯಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ ನಿಮಗೂ
ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು.

ಕಪಿಗಳೊಡನೆ ಸಂಭಾಷಣೆ

ಆಸ್ಟ್ರೇಲಿಯದ ಸಿಡ್ನಿಯ ಮೃಗಾಲಯದ ನೌಕರನಾದ ಜೇಮ್ಸ್ ಡಿರ್ಕರ್ ಎಂಬುವನು ಕಪಿಗಳೊಡನೆ ಮಾತನಾಡಬಲ್ಲನೆಂದು ವರದಿಯಾಗಿದೆ ಕಳೆದ ೭ ವರ್ಷಗಳಿಂದಲೂ ತಾನು ಅವುಗಳೊಡನೆ ಸಂಭಾಷಿಸುತ್ತಿರುವುದಾಗಿಯೂ ಒಂದು ಬಗೆಯ ಶಿಳ್ಳೆ ಹಾಕುವುದೇ ಅವುಗಳ ಭಾಷೆಯೆಂದೂ ಆತನು ತಿಳಿಸಿರುತ್ತಾನೆ

ರಸ್ತೆ ದಾಟುವಾಗ ಜನರು ಗಂಟೆ ಬಾರಿಸಬೇಕು

ನಗರಗಳ ರಸ್ತೆಯಲ್ಲಿ ತಿರುಗಾಡುವ ಜನರು ಒಂದು ರಸ್ತೆಯಿಂದ ಮತ್ತೊಂದು ಕಡೆ ದಾಟಬೇಕಾದರೆ ಗಂಟೆಯನ್ನು ಬಾರಿಸಬೇಕೆಂದು ಲಂಡನ್ ರಾಷ್ಟ್ರೀಯ ಸುರಕ್ಷಿತ ಕಾಂಗ್ರೆಸ್ ಸಂಸ್ಥೆಯವರು ಸಲಹೆ ಮಾಡಿರುತ್ತಾರೆ

ಸತ್ತ ಗಂಡ ಹಿಂತಿರುಗಿದ ಪ್ರಸಂಗ

ಕಳೆದ ಯುದ್ಧದಲ್ಲಿ ಭಾಗವಹಿಸಿದ್ದ ರೈಟ್ ಎಂಬುವನು ಸಯಾಮಿನಲ್ಲಿ ಖೈದಿಯಾಗಿ ಬಂಧಿಸಲ್ಪಟ್ಟಿದ್ದನು ಆದರೆ ಆತನು ಸತ್ತುಹೋದನೆಂದು ೧೯೪೪ರಲ್ಲಿ ಆತನ ಹೆಂಡತಿಗೆ ಪತ್ರ ಬಂದಿತ್ತು ಮಾರನೇ ತಿಂಗಳು ಆತನ ಸೇವೆಗಾಗಿ ಪಾರಿತೋಷಕವನ್ನೂ ಕಳುಹಿಸಲಾಗಿತ್ತು ಆದರೆ ೨ ತಿಂಗಳ ನಂತರ ಈಗ ಆತನು ಹಿಂತಿರುಗಿದಾಗ ಅವನ ಪತ್ನಿಯು ಆಶ್ಚರ್ಯ ಚಕಿತಳಾದಳು

ಇಲಿಗಳ ಸ್ಪರ್ಧೆ

ಅಮೇರಿಕದ ಹಾಲಿವುಡ್ಡಿನಲ್ಲಿ ಇಲಿಗಳ ಓಟದ ಸ್ಪರ್ಧೆಯು ಪ್ರಾರಂಭವಾಗಿದೆಯೆಂದೂ, ಸುಪ್ರಸಿದ್ಧ ಸಿನಿಮಾ ನಟನಟಿಯರ ಹೆಸರುಗಳನ್ನು ಅವುಗಳಿಗೆ ಕೊಡಲಾಗುತ್ತಿವೆಯೆಂದೂ ಹೇಳಲಾಗಿದೆ. ಕುದುರೆ ಜೂಜಿಗೆ ವೆಚ್ಚಮಾಡುವ ಹಾಗೆಯೇ ಸಾವಿರಾರು ಡಾಲರುಗಳನ್ನು ಖರ್ಚು ಮಾಡಲಾಗುತ್ತಿದೆಯೆಂದೂ ವರದಿಯಾಗಿದೆ

॥ಶ್ರೀ॥

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಆಟಗಳು
12-4-49 ರಿಂದ 3 ದಿನಗಳು ಮಾತ್ರ
ಪ್ಯಾರಾಮೌಂಟ್ಸ್ ರವರ ವರ್ಣರಂಜಿತ ಚಿತ್ರ

ನಾರ್ತ್ ವೆಸ್ಟ್ ಮೌಂಟೆಡ್ ಪೊಲೀಸ್

North-West Mounted Police

- ನಿರೀಕ್ಷಿಸಿ -
ದಿ ಅಡ್ವೆಂಚರ್ಸ್ ಆಫ್

ರಾಬಿನ್ ಹುಡ್

ಶ್ರೀ ರಾಮ ಯಜ್ಞ

ಪ್ರಪಂಚದಲ್ಲಿ ಶಾಂತಿ, ಸೌಖ್ಯಗಳನ್ನು ಸ್ಥಾಪಿಸುವ ಉದ್ದೇಶದಿಂದ ಮದರಾಸಿನ ಚೆನ್ನಕೇಶವ ದೇವಾಲಯದಲ್ಲಿ ಕಳೆದ ೩೦ ನೇ ತಾ॥ ನಿಂದ ೮ ನೇ ತಾ॥ ವರೆಗೆ ಶ್ರೀ ರಾಮ ಯಜ್ಞವನ್ನು ಅತ್ಯಂತ ವೈಭವದಿಂದ ನಡೆಸಲಾಯಿತು. ನೂರಾರು ಜನ ವಿದ್ವಾಂಸರು ಭಾಗವಹಿಸಿದ್ದರು ರಾಮಾಯಣ, ಮಹಾಭಾರತ, ಭಾಗವತ ನಾಲ್ಕು ವೇದಗಳು ಮತ್ತು ಪ್ರಬಂಧಗಳು ಹಗಲೂ ರಾತ್ರಿ ಪಾರಾಯಣ ಮಾಡಲ್ಪಟ್ಟವು.

ಶಾಸ್ತ್ರೋಕ್ತವಾಗಿ ಹೋಮವೂ ಸಹ ಅಚ್ಚುಕಟ್ಟಾಗಿ ನಡೆಯಿತು. ಸಾವಿರಾರು ಜನ ಭಕ್ತಾದಿಗಳು ಭಾಗವಹಿಸಿ ಸುಮಾರು ೩೫೦೦೦ ರೂ. ನವರೆಗೆ ವಿವಿಧ ರೂಪಗಳಲ್ಲಿ ಕಾಣಿಕೆಯನ್ನು ಸಲ್ಲಿಸಿದರು

ಸೇವಾದಳ

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ರಚಿತವಾಗಲಿರುವ ಸೇವಾದಳಕ್ಕೆ ಪ್ರತಿ ವಾರ್ಡ್ ಮೊಹಲ್ಲಾದಿಂದ ಸೇರಲಿಚ್ಛಿಸುವವರು ಇದೇ ೧೫ನೇ ತಾ॥ ಯೊಳಗಾಗಿ ಪೇಟೆ ಮೊಹಲ್ಲಾ ಕಾಂಗ್ರೆಸ್ ಕಾರ್ಯಾಲಯಕ್ಕೆ ತಿಳಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ.

ಕಾರ್ಮಿಕ ಸಮ್ಮೇಳನ

ಚಾಮರಾಜನಗರ ಕಾರ್ಮಿಕ ಸಮ್ಮೇಳನವು ಇದೇ ೧೪ನೇ ತಾ॥ ಗುರುವಾರ ಮಧ್ಯಾಹ್ನ ೩ ಗಂಟೆಗೆ ಶ್ರೀ ಎಸ್ ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಪ್ರಭಾ * 13-4-49 ರಿಂದ

ಅಮೋಘ ಪ್ರಾರಂಭ
ದಿನವಹಿ ಮೂರು ಆಟಗಳು
೩-೩೦, ೬-೩೦ರುತ್ತ ೯-೩೦ಕ್ಕೆ
ಬಾಂಬೆ ಟಾಕೀಸ್ ರವರ ಹಿಂದಿ ಚಿತ್ರ

ನತೀಜ

ಪಾತ್ರ:- ರೆಹನ, ಹಮೀದ್, ಯಾಕೂಬ್

For Quality Paper & Books Please Call on

* RAO & CO., *

1273. Yelwal Road, Mysore.
(Dharmaparayana Srimati Alamma's Choultry Buildings)

	Rate per Ream	Per Quire
1) Mysore White-ledger Fools-cap 10 lbs.	8-12-9	0-7-10
2) Mysore Buff Fools-cap 10 lbs.	6-4-4	0-5-9
3) Mysore White-ledger D. Crown 26 lbs.	22-13-9 (in reams only)	
4) Mysore White-ledger D. Demy 34 lbs.	29-14-9	"
5) Foreign Fools-cap 16 lbs (Double)	14-8-0	0-13-0
6) Foreign Fools-cap 8lbs.	7-6-0	0-6-0
7) Parchment 20×30 (Butter)	17-0-0 (Ream lot)	
8) Manifold Colour 17×23	10-0-0	"
9) Mechanical Printing 24 lbs. D. Crown	11-8-0	"
10) Swedish Kraft 22½×35 19 lbs	14-8-0	
11) Wood Free D. Crown 40 lbs	35-0-0	
12) Wood Free Writing D. Fools-cap 20 lbs.	17-0-0	

Students' Note Books & Exercise Books Etc. at reasonable rates

* ಪ್ರಭುದೇವಾ ಟಾಕೀಸಿನಲ್ಲಿ *

6—4—49ನೇ ಬುಧವಾರದಿಂದ :: ದಿನವಹಿ 3 ಆಟಗಳು

ಶೋಭನಾಚಲ ಪಿಕ್ಚರ್ಸ್ ತಲುಗು ಚಿತ್ರ

★ ಗೊಲ್ಲಭಾಮ ★

—:ಮುಖ್ಯ ಪಾತ್ರ:—
ಕೃಷ್ಣವೇಣಿ,
ಅಂಜಲಿ ದೇವಿ,
ರಘುರಾಮಯ್ಯ

Printed and published by A. R. Nagarajan at the Sadhvi Press, D. Subbiah Road, Mysore.

ರೇ॥ ನಂ 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೨-೪-೧೯೪೯ [ಸಂಚಿಕೆ ೨೦೮

- ರಾಜರುಗಳಿಗೆ - ಗೌರ್ನರುಗಳ ಸ್ಥಾನ

ಅಸಿಸ್ಟೆಂಟ್ ಕಮೀಷನರುಗಳ ವರ್ಗಾವರ್ಗಿ

ಸ್ವಂ.ಸು.ಫೋ॥] ಬೆಂಗಳೂರು ೧೨

ಮೈಸೂರಿನ ರೆಂಟ್ ಕಂಟ್ರೋಲರಾದ ಶ್ರೀ ಗುಂಡ ಶೆಟ್ಟಿಯವರನ್ನು ಸಕಲೇಶಪುರದ ಸಬ್ ಡಿವಿಜನ್ ಅಧಿಕಾರಿಗಳಾಗಿಯೂ, ಸ್ಟೋರ್ಸ್ ಪರ್ಚೇಸಿಂಗ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಡಿ ಎಸ್. ರಾಘವೇಂದ್ರಾಚಾರ್ರವರನ್ನು ದಾವಣಗೆರೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ದಾವಣಗೆರೆಯ ಮ್ಯಾಜಿಸ್ಟ್ರೇಟರಾದ ಶ್ರೀ ಪಿ ಬಿ. ಶಂಕರಯ್ಯರ್‌ರವರನ್ನು ತುಮಕೂರು ಜಿಲ್ಲಾ ಡೆವಲಪ್‌ಮೆಂಟ್ ಅಧಿಕಾರಿಗಳಾಗಿಯೂ, ಮೈಸೂರು ರೈಲ್ವೆಯ ಅಸಿಸ್ಟೆಂಟ್ ಆಡಿಟರಾದ ಜನಾಬ್ ಸಯ್ಯದ್ ಅಬ್ದುಲ್ ಘನಿಯವರನ್ನು ಮೈಸೂರು ಜಿಲ್ಲಾಧಿಕಾರಿಗಳ ಅಕೌಂಟ್ಸ್ ಅಸಿಸ್ಟೆಂಟರಾಗಿಯೂ, ತುಮಕೂರಿನ ಗ್ರಾಮಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಜಿ. ಸಿದ್ದನಂಜಪ್ಪನವರನ್ನು ಲಕ್ಕವಳ್ಳಿ ಯೋಜನೆ ಸಮಿತಿಯ ವಿಶೇಷ ಅಧಿಕಾರಿಯಾಗಿಯೂ ವರ್ಗಾಯಿಸಲಾಗಿದೆ.

○ ಏಕಾನಮಿ ಅಧಿಕಾರಿಗಳಾದ ಶ್ರೀ ವಿ. ಎಸ್. ರಾಘವೇಂದ್ರರಾಯರಿಗೆ ನಿವೃತ್ತರಾಗುವುದಕ್ಕೆ ಮುಂಚೆ ಇದೇ ೨೨ ನೇ ತಾ॥ನಿಂದ ೬ ತಿಂಗಳು ರಜ ಕೊಡಲಾಗಿದೆ.

○ ಕರಗದ ಪ್ರಯುಕ್ತ ೧೩ ಮತ್ತು ೧೪ ನೇ ತಾ॥ ಗಳಲ್ಲಿ ಬೆಂಗಳೂರಿನ ಹೋಟೇಲುಗಳ ಕಾಲಾವಧಿ ನಿರ್ಬಂಧವನ್ನು ಮನ್ನಾ ಮಾಡಲಾಗಿದೆ.

○ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆಯಲ್ಲಿ ನಿನ್ನೆ ಪ್ರವಾಸ ಮಾಡಿ ೧೦೦೦ ಪಲ್ಲ ಭತ್ತ ಮತ್ತು ೩೦ ಪಲ್ಲ ರಾಗಿಯನ್ನು ಸಂಗ್ರಹಿಸಿರುತ್ತಾರೆ

ರಾಮೋತ್ಸವಗಳು

ಹಳೇ ಅಗ್ರಹಾರದ ಶ್ರೀ ಜಾನಕಿ ರಾಮ ಮಂದಿರದಲ್ಲಿ ಈ ರಾತ್ರಿ ೯ ಘಂಟೆಗೆ ಆ॥ವಿ॥ ವಿ. ದೊರೆಸ್ವಾಮಿ ಅಯ್ಯಂಗಾರ್ಯರಿಂದ ವೀಣೆ.

ಶಿವರಾಮಪೇಟೆಯ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ನಾಳೆ ಸಂಜೆ ವಿದ್ವಾನ್ ಟಿ ಪುಟ್ಟಸ್ವಾಮಯ್ಯನವರ ಸಂಗೀತ

ಸಂತೇಪೇಟೆಯ ಕುಂಚಿಟಿಗರ ಶ್ರೀ ರಾಮಮಂದಿರದಲ್ಲಿ ಇಂದು ಸಂಜೆ ೬-೩೦ ಕ್ಕೆ ಸಂ॥ ಶಾಸ್ತ್ರ ವಿಶಾರದ ಕೆ.ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ ಆ॥ವಿ॥ ಸ್ವರಮೂರ್ತಿ ವಿ. ಎನ್. ರಾಯರ ಗಾಯನ. ನಾಳೆ ಸಂಜೆ ೬-೩೦ ಕ್ಕೆ ಶ್ರೀಮನ್ಮಹಾರಾಜರ ಅಸಿಸ್ಟೆಂಟ್ ಸೆಕ್ರೆಟರಿ ಶ್ರೀ ಕೆ. ನರಸಿಂಹಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಶ್ರೀಮತಿ ಎನ್. ಕೊಕ್ಕಮ್ಮನವರ ವೀಣೆ ಮತ್ತು ಗಾಯನ.

ಬೇಕರಿಯವರ ಸಂಘ

ಹಳೇ ಅಗ್ರಹಾರದಲ್ಲಿರುವ ಮಹಾತ್ಮ ಬಿಸ್ಕತ್ ಫ್ಯಾಕ್ಟರಿಯಲ್ಲಿ ಕಳೆದ ಸೋಮವಾರ ನಗರದ ಬ್ರೆಡ್ ಅಂಗಡಿಗಳ ಮಾಲೀಕರ ಸಭೆಯು ನಡೆದು, ಬೇಕರಿಯವರ ಸಂಘವೊಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು. ಸಂಘಕ್ಕೆ ಶ್ರೀ ಎ. ಎಸ್ ಕೃಷ್ಣಮೂರ್ತಿಯವರು ಅಧ್ಯಕ್ಷರಾಗಿಯೂ, ⓑ ಎದಕಿ ಕೃಷ್ಣಮೂರ್ತಿಯವರು ಖಜಾಂಚಿಗಳಾಗಿಯೂ, ಶ್ರೀ ಶಂಕರಣ್ಣನವರು ಮತ್ತು ಶ್ರೀ ಕೃಷ್ಣಯ್ಯಂಗಾರ್ಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

ಇನ್ನು ೫ ವರ್ಷ ಜಗತ್ತಿಗೆ ಕಷ್ಟ

ಮುಂದಿನ ೫ ವರ್ಷಗಳು ಭಾರತಕ್ಕೂ ಮತ್ತು ವಿಶ್ವಕ್ಕೂ ಬಹಳ ಕಷ್ಟವಾಗುವುದೆಂದು ಪಂ॥ ನೆಹರೂರವರು ತಿಳಿಸಿರುವರು ಈ ಅವಧಿಯಲ್ಲಿ ಯಾವ ದೊಡ್ಡ ಯುದ್ಧ ಸಂಭವಿಸುವುದಿಲ್ಲವಾದರೂ, ಆ ಕಾಲದಲ್ಲಿ ಬಿಕ್ಕಟ್ಟು, ಮತ್ತು ಆರ್ಥಿಕ ಭೀತಿ ಇರುವುವೆಂದೂ ಅವರು ಹೇಳಿರುತ್ತಾರೆ

೪೬೫ ಅಡಿಯ ಶಿಲಾ ಪ್ರತಿಮೆಗಳು

ಪ್ರಪಂಚದಲ್ಲೇ ಅತ್ಯಂತ ಭಾರಿ ಶಿಲಾ ಪ್ರತಿಮೆಗಳನ್ನು ಅಮೆರಿಕದಲ್ಲಿ ಸ್ಥಾಪಿಸಲು ಕಳೆದ ೨೨ ವರ್ಷಗಳಿಂದಲೂ ಪ್ರಯತ್ನ ನಡೆಯುತ್ತಿದೆ ಗುಟ್ಜೆನ್ ಮತ್ತು ಲಿಂಕನ್ ಬೋರ್‌ಗ್ಲಮ್ ಎಂಬ ಸುಪ್ರಸಿದ್ಧ ಶಿಲ್ಪಿಗಳು ಜಾರ್ಜ್ ವಾಷಿಂಗ್‌ಟನ್, ಅಬ್ರಹಾಂ ಲಿಂಕನ್ ಮುಂತಾದವರ ಪ್ರತಿಮೆಗಳನ್ನು ನಿರ್ಮಿಸುತ್ತಿದ್ದಾರೆ ಒಂದೊಂದೂ ೪೬೫ ಅಡಿ ಎತ್ತರವಿರುವುದು

ನೂತನ ಸಹಕಾರ ಯೋಜನೆ

ಪಂಜಾಬಿನಲ್ಲಿರುವ ನಿಲೋಕರಿ ಎಂಬಲ್ಲಿ ಸರ್ಕಾರದವರು ಸಹಕಾರ ತತ್ವದ ಮೇಲೆ ನೂತನ ಪಟ್ಟಣವನ್ನು ನಿರ್ಮಿಸುತ್ತಿದ್ದಾರೆ. ೫ ಮೈಲಿ ಆವರಣದಲ್ಲಿರುವ ಹಳ್ಳಿಗಳ ಮಧ್ಯದಲ್ಲಿರುವ ಈ ಪಟ್ಟಣವು ಗ್ರಾಮನಿವಾಸಿಗಳಿಗೆ ಹೆಚ್ಚು ಅನುಕೂಲವಾಗುವುದು ಮುಂದಿನ ವರ್ಷ ಈ ಯೋಜನೆಯು ಪೂರೈಸುವುದು ಮೈಸೂರು ಸಂಸ್ಥಾನದಲ್ಲಿ ಅದನ್ನು ಕಾರ್ಯರೂಪಕ್ಕೆ ತರಲು ಇಲ್ಲಿನ ಒಬ್ಬ ಅಧಿಕಾರಿಯನ್ನು ಅಲ್ಲಿ ಪರಿಶೀಲನೆ ನಡೆಸಲು ಕಳುಹಿಸಿರುವರೆಂದು ತಿಳಿದುಬಂದಿದೆ

ರಹದಾರಿ ಇಲ್ಲದ ಬಣ್ಣದ ಕಾರ್ಖಾನೆಗೆ ದಂಡ

ರಾಜಧಾನಿಯ ಲಕ್ಷ್ಮೀಪುರದಲ್ಲಿ ವಿ ಎಸ್. ಸಾಲಿಗ್ರಾಮ್ ಎಂಬುವರು ರಹದಾರಿ ಇಲ್ಲದೆ ಬಣ್ಣ ಹಾಕುವ ಕಾರ್ಖಾನೆ ನಡೆಸುತ್ತಿದ್ದುದನ್ನು ಪುರಸಭೆಯ ಆರೋಗ್ಯ ಇಲಾಖಾ ಇನ್ಸ್‌ಪೆಕ್ಟರುಗಳಾದ ಶ್ರೀ ಗಳು ವಿ ಎಸ್ ಕೃಷ್ಣರತ್ನಂ ಮತ್ತು ಕೆ ಎಸ್ ಶ್ರೀನಿವಾಸ ಅಯ್ಯಂಗಾರ್ಯರು ಪತ್ತೆ ಹಚ್ಚಿ ಮೊಕದ್ದಮೆ ಹೂಡಿದ್ದರು ಥರ್ಡ್ ಸಿಟಿ ನ್ಯಾಯಾಧೀಶರು ಅಪಾದಿತರಿಗೆ ೧೦ ರೂ ದಂಡ ವಿಧಿಸಿದ್ದಾರೆ

ಸೂಚನೆ

ಸೌರಮಾನ ಯುಗಾದಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

ಖಾಸಿಂರಜ್ವಿಯ ವಿಚಾರಣೆಗೆ ವಿಶೇಷ ಕೋರ್ಟ್

ಹೈದರಾಬಾದಿನ ರಜಾಕರರ ನಾಯಕನಾದ ಖಾಸಿಂರಜ್ವಿಯ ವಿಚಾರಣೆಗಾಗಿ ಒಂದು ವಿಶೇಷ ಕೋರ್ಟನ್ನು ಏರ್ಪಡಿಸಿ ಅದಕ್ಕೆ ಉಸ್ಮಾನಾಬಾದಿನ ಕಲೆಕ್ಟರಾದ ಶ್ರೀ ಶಾಮರಾವ್ ಬೈತ್‌ಮಂಗಲಕರರನ್ನು ವಿಶೇಷ ನ್ಯಾಯಾಧೀಶರನ್ನಾಗಿ ನೇಮಿಸಲಾಗಿದೆ

ಸಂಸ್ಥಾನಗಳ ಮೇಲ್ವಿಚಾರಣೆ ಭಾರತಕ್ಕೆ

ಸಂಸ್ಥಾನಗಳ ಆಡಳಿತವನ್ನು ಪ್ರಾಂತ್ಯಗಳ ಮಟ್ಟಕ್ಕೆ ತರುವ ಉದ್ದೇಶದಿಂದ, ಅವುಗಳ ಮೇಲ್ವಿಚಾರಣೆಯನ್ನು ಭಾರತ ಸರ್ಕಾರವು ನೋಡಿಕೊಳ್ಳಲು ನಿರ್ಧರಿಸಿದೆಯೆಂದೂ, ಇದಕ್ಕಾಗಿ ಎಲ್ಲ ಸಂಸ್ಥಾನಗಳಿಗೂ ಇಬ್ಬರು ಸಲಹೆಗಾರರನ್ನು ಕಳುಹಿಸಲಾಗುವುದೆಂದೂ ತಿಳಿದುಬಂದಿದೆ.

ಟ್ರಾಫಿಕ್ ಪೋಲೀಸಿನವರ ಅವಾಂತರ

ರಾಜಧಾನಿಯ ಟ್ರಾಫಿಕ್ ಪೋಲೀಸಿನವರು ಕೆಲವು ದಿನಗಳಿಂದ ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ನಮಗೆ ಕೃಷ್ಣಮೂರ್ತಿಪುರಂ ನಿವಾಸಿಗಳ ಪರವಾಗಿ ಪತ್ರ ಒಂದು ಬಂದಿದೆ ನೈಸರಾಯ್ ರಸ್ತೆ, ನಾರಾಯಣರಸ್ತೆ ಮುಂತಾದ ಕಡೆಗಳಲ್ಲಿ ಎಚ್ಚರಿಕೆಯನ್ನೂ ಕೊಡದೆ ಪೋಲೀಸರು ಮನಸ್ಸಿಗೆ ಬಂದಂತೆ ಜನರನ್ನು ವ್ಯಾನಿನೊಳಗೆ ತುಂಬಿಕೊಂಡು ಹೋಗಿ ಜುಲ್ಮಾನೆ ಹಾಕಿಸುವುದು ಮುಂತಾದ ಕಿರುಕುಳ ಕೊಡುವುದೇ ಮುಂತಾದ ವಿಷಯಗಳ ಕಡೆಗೆ ಅಧಿಕಾರಿಗಳ ಗಮನ ಸೆಳೆಯಲಾಗಿದೆ ಮಿಡಲ್ ಸ್ಕೂಲ್ ಪರೀಕ್ಷೆಗಳಿಗೆ ಹೋಗುವ ವಿದ್ಯಾರ್ಥಿಗಳನ್ನೂ ಹಿಡಿದು ಬಲ್ಬು ಹೊತ್ತಿಸದ ಮೇಲೆ ಬಿಟ್ಟು ಅದರಿಂದ ಉಂಟಾದ ತೊಂದರೆಯನ್ನೂ ಸಹ ತಿಳಿಸಲಾಗಿದೆ ಈ ಬಗ್ಗೆ ಅಧಿಕಾರಿಗಳು ಕ್ರಮ ವಹಿಸಿ ಸರಿಯಾದ ಸೂಚನೆಗಳನ್ನು ಪೋಲೀಸಿನವರಿಗೆ ಕೊಡಬೇಕೆಂದು ಕೋರಲಾಗಿದೆ.

ರಾಜ್ಯಾಂಗ ಸಭೆಗಳು ಶಾಸನ ಸಭೆಗಳಾಗುವುವು

ಸಂಸ್ಥಾನಗಳಿಗೆಲ್ಲಾ ಒಂದೇ ಮಾದರಿ ರಾಜ್ಯಾಂಗವನ್ನು ಕೇಂದ್ರ ರಾಜ್ಯಾಂಗ ಸಭೆಯು ನಿರ್ಮಿಸಲಿರುವುದರಿಂದ ಈಗ ಸಂಸ್ಥಾನಗಳಲ್ಲಿ ರಾಜ್ಯಾಂಗ ಸಭೆಗಳ ಅವಶ್ಯಕತೆ ಇರುವುದಿಲ್ಲವೆಂದೂ, ನೂತನ ಚುನಾವಣೆಗಳು ನಡೆಯುವವರೆಗೂ ಅವುಗಳನ್ನು ಶಾಸನ ಸಭೆಗಳಾಗಿ ಪರಿವರ್ತಿಸಲಾಗುವುದೆಂದು ಹೇಳಲಾಗಿದೆ. ವಾಸದಿ ರಾಜ್ಯಾಂಗದ ಪ್ರಕಾರ ಸಂಸ್ಥಾನಗಳಲ್ಲಿ ರಾಜರುಗಳು ಗವರ್ನರು ಅಂತಸ್ತನ್ನು ಹೊಂದಿರುವರು

ಬ್ರಾಹ್ಮಣರ ಸಮ್ಮೇಳನ

ಇದೇ ೨೨ ನೇ ತಾ॥ ಹಾಸನದಲ್ಲಿ ನಡೆಯುವ ಅಖಿಲ ಮೈಸೂರು ಬ್ರಾಹ್ಮಣ ಸಮ್ಮೇಳನದ ಪ್ರಾರಂಭೋತ್ಸವವನ್ನು ಸೋಸಲೆ ಶ್ರೀ ವ್ಯಾಸರಾಜಮಠದ ಸ್ವಾಮಿಗಳಾದ ಶ್ರೀಮದ್ವಿದ್ಯಾ ಪ್ರಸನ್ನ ತೀರ್ಥ ಶ್ರೀ ಪಾದಂಗಳವರು ನೆರವೇರಿಸುವರು.

ಚೀಣಾದ ಪ್ರಧಾನಿಯ ರಾಜೀನಾಮೆಯೇ?

ಕಮ್ಯೂನಿಸ್ಟರೊಡನೆ ಶಾಂತಿ ಸಂಧಾನಕ್ಕೆ ಅಡಚಣೆ ಉಂಟಾಗಿರುವುದರಿಂದ ನಿರಾಶೆಗೊಂಡು ಚೀಣದ ಪ್ರಧಾನಿ ಹೋಯಿಂಗ್ ಚಿನ್‌ರವರು ರಾಜೀನಾಮೆ ಕೊಡುವುದಾಗಿ ತಿಳಿಸಿರುವರೆಂದು ವರದಿಯಾಗಿದೆ.

ಸಂಸ್ಥಾನಕ್ಕೆ ದಿವಾಕರರ ಭೇಟಿ

ಬೆಂಗಳೂರು ೧೨

ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರರು ಇದೇ ೨೭ ನೇ ತಾ॥ನಿಂದ ಮೈಸೂರು, ಬಳ್ಳಾರಿ, ಬೆಳಗಾಂ ಮತ್ತು ಬಿಜಾಪುರಗಳಲ್ಲಿ ಪ್ರವಾಸ ಮಾಡಲಿದ್ದಾರೆ.

ಫುಟ್‌ಬಾಲ್ ಪೂಲಿನಲ್ಲಿ ಹುಡಗಿಗೆ ೧೨೫೦೦ ಪೌಂಡ್

ಇಟಲಿಯ ಮಿಲಾನಿನ ೧೨ ವರ್ಷದ ಅನುಸಿಟಾ ಮಾರಚ ಎಂಬ ಹುಡುಗಿಗೆ ಫುಟ್‌ಬಾಲ್ ಪೂಲಿನಲ್ಲಿ ೧೨,೫೦೦ ಪೌಂಡು ಬಂದಿದೆ ಆಕೆಯು ಕೇವಲ ೬ ಪೆನ್ನಿ (ಆಣೆ) ಗಳನ್ನು ಕೊಟ್ಟು ಸ್ಪರ್ಧೆಯಲ್ಲಿ ಭಾಗ ವಹಿಸಿದ್ದಳು

ಮಹಾವೀರ ಜಯಂತಿ

ರಾಜಧಾನಿಯ ಜೈನ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಶ್ರೀ ಮಹಾವೀರ ಜಯಂತ್ಯುತ್ಸವವು ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಬೆಳಗ್ಗೆ ಮೆರವಣಿಗೆಯೂ ಜರುಗಿತು. ಡಾ॥ ಪುರುಷೋತ್ತಂ ಮತ್ತು ಶ್ರೀ ಎಂ. ಯಾದವನಾಚಾರ್ಯರು ಜೈನ ಮತ ಮತ್ತು ಮಹಾವೀರರ ವಿಚಾರವಾಗಿ ಭಾಷಣ ಮಾಡಿದರು

ಆಯುರ್ವೇದ ಸಮ್ಮೇಳನದ ಅಧ್ಯಕ್ಷರು

ಅಖಿಲ ಕರ್ನಾಟಕ ಆಯುರ್ವೇದ ಮಹಾ ಸಮ್ಮೇಳನದ ಅಧ್ಯಕ್ಷರಾದ ವೈದ್ಯಗುರು ಡಿ ಎ ಪಳದೀಕರ್‌ರವರು ನಿನ್ನೆ ದಿನ ರಾಜಧಾನಿಗೆ ಆಗಮಿಸಿದರು ಆಯುರ್ವೇದ ಪ್ರಗತಿಯ ಬಗ್ಗೆ ಅವರು ಪ್ರಮುಖ ಆಯುರ್ವೇದ ವೈದ್ಯರುಗಳೊಡನೆ ಮಾತುಕತೆ ನಡೆಸಿದರು. ನಾಳೆ ಸಂಜೆ ಅವರು ವಾಪಸು ಪುಣೆಗೆ ತೆರಳುವರು.

ಆಯುರ್ವೇದ ವಿದ್ಯಾಲಯಗಳ ಅವಶ್ಯಕತೆ

[illegible]ದಲ್ಲಿ ನೆನ್ನೆ ಪ್ರಾರಂಭವಾದ [illegible] ಭಾರತ ಆಯುರ್ವೇದ ಸಮ್ಮೇಳನದಲ್ಲಿ ಅಧ್ಯಕ್ಷರಾದ ಶ್ರೀ [illegible] ರಾವ್ [illegible] [illegible] ಭಾಷಣ ಮಾಡಿ, ಆಯುರ್ವೇದವನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಪಡಿಸಲು, ಸಂಶೋಧನೆ ನಡೆಯಬೇಕೆಂದೂ ಸರ್ಕಾರದವರು ಆಯುರ್ವೇದ [illegible] ಗಳನ್ನೂ ಆಸ್ಪತ್ರೆಗಳನ್ನು [illegible]ಬೇಕೆಂದೂ ತಿಳಿಸಿದರು.

ಆಯುರ್ವೇದ [illegible] ನೂತನ [illegible] ಸಂಶೋಧನೆಗಳನ್ನು ನಡೆಸಬೇಕೆಂದು [illegible] ವರಾದ ಶ್ರೀ [illegible] ಪ್ರದರ್ಶನದ [illegible]ವನ್ನು ನೆರವೇರಿಸುತ್ತಾ ತಿಳಿಸಿದರು.

ಅಕ್ಕಿಗೆ ಪಾಲಿಷ್ ಇಲ್ಲ

ಮಧ್ಯ ಪ್ರಾಂತ್ಯದಲ್ಲಿ ಅಕ್ಕಿಗೆ ಪಾಲಿಷ್ ಕೊಡುವುದನ್ನು ಸಂಪೂರ್ಣವಾಗಿ ಸರ್ಕಾರದವರ ನಿಷೇಧಿಸಿರುತ್ತಾರೆ

ಸಮಾಧಿಯಲ್ಲಿ ಸಾಧುವಿನ ಮರಣ

[illegible] ಶಾಶ್ವತವಾದ [illegible]ನ್ನು ಪಡೆಗೊಳಿಸಲು [illegible]ದಲ್ಲಿ ಸಾಧು [illegible] ಕಳೆದ [illegible] ದಿನಗಳಿಂದಲೂ ಸಮಾಧಿ[illegible] [illegible] [illegible]ಯಿಂದ ಹೊರಕ್ಕೆ ತೆಗೆದಾಗ ಮರಣ [illegible]ದನೆಂದೂ ವರದಿಯಾಗಿದೆ

[illegible]

ಪ್ರಕಾಶ್ ರವರ

[illegible]

ಪಾತ್ರ: [illegible]

11 [illegible] ಮಾತ

ರಣಜಿತ್ ರವರ

ತಾನ್ ಸೇನ್

ಒಲಂಪಿಯಾ ಟಾಕೀಸ್

ಸೈಕಲ್ ಹರಾಜು

ಶ್ರೀರಂಗಪಟ್ಟಣದ ಪೋಲೀಸ್ ಸ್ಟೇಷನಲ್ಲಿ ಕಳೆದ ತಿಂಗಳು [illegible] ಸೈಕಲ್ ಇದೆ. ಅದನ್ನು [illegible] ಯಾರೂ [illegible] ಸರಿಯಾದ [illegible] ಕೊಟ್ಟು [illegible]ವನ್ನು ಪಡೆಯಬಹುದು. ಇಲ್ಲವಾದಲ್ಲಿ [illegible]ವಾಗಿ ಹರಾಜು ಮಾಡಲಾಗುತ್ತೆ

ರಾಜತ್ವಕ್ಕೆ ಉಳಿಗಾಲವಿಲ್ಲ

ಡಾ|| ಹರ್ಡೀಕರರ ಹೇಳಿಕೆ

ಬೆಂಗಳೂರು [illegible]

ಮೈಸೂರು ಪ್ರತ್ಯೇಕವಾಗಬೇಕೆಂಬ ಮನೋಭಾವನೆಯನ್ನು ಬಿಡಬೇಕು. ಸ್ವತಂತ್ರ ಭಾರತದಲ್ಲಿ ಕರ್ನಾಟಕ ಪ್ರಾಂತ ರಚನೆಯಾಗಲು ಮೈಸೂರಿನವರು ಸಹಾಯಕರಾಗಬೇಕು. ಹೊಸ ವಿಧಾನದಲ್ಲಿ ಇನ್ನು ಮೇಲೆ ರಾಜತ್ವಕ್ಕೆ ಉಳಿಗಾಲವಿಲ್ಲ. ಏಕಪಕ್ಷದ [illegible]ನಗಳನ್ನು ಬಿಟ್ಟು ಕರ್ನಾಟಕ [illegible]ವನ್ನು [illegible] ಸಲು ಸಾಧವಿಲ್ಲ [illegible] ಡಾ. ಎನ್. ಎಸ್. ಹರ್ಡೀಕರ್‌ರವರು ತಿಳಿಸಿರುತ್ತಾರೆ

ವೈದ್ಯರೂ ಕಾರ್ಮಿಕರಂತೆ

ವೈದ್ಯರನ್ನು ಕಾರ್ಮಿಕರೆಂದು ಪರಿಗಣಿಸಬೇಕೆ[illegible] ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯವನ್ನು ಪ್ರಿಟನ್ನಿನಲ್ಲಿ ನಡೆದ ಡಾಕ್ಟರುಗಳ ಸಮ್ಮೇಳನದಲ್ಲಿ ಮಾಡಲಾಗಿದ

ರೈಲ್ವೆ ಅಪಘಾತದಿಂದ ೧೦ ಜನರ ಮರಣ

ಕಾಶಿಗೆ ಎರಡು ಮೈಲಿ ದೂರದಲ್ಲಿ ಬರುತ್ತಿದ್ದ ಪಂಜಾಬ್ ಎಕ್ಸ್‌ಪ್ರೆಸ್ ರೈಲು ಉರುಳಿ ೧೦ ಜನರು ಸತ್ತರೆಂದೂ, ೪೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ ಒಂದು ಗಾಡಿಯು ನುಚ್ಚುನೂರಾಯಿತು.

ಹೈದರಾಬಾದು ಸೈನ್ಯಕ್ಕೆ ಹೆಚ್ಚು ಹಿಂದೂಗಳು

ಹೈದರಾಬಾದು ಸಂಸ್ಥಾನದಲ್ಲಿ ಶೇಕಡ ೮೦ ರಷ್ಟು ಜನರು ಹಿಂದೂಗಳಿದ್ದರೂ, ಸೈನ್ಯದಲ್ಲಿ ಅವರ ಸಂಖ್ಯೆಯು ಕೇವಲ [illegible]ರಷ್ಟು ಇದೆಯೆಂದೂ ಅವರ ಸಂಖ್ಯೆಯನ್ನು ಹೆಚ್ಚಿಸಲು, ಹೆಚ್ಚಾಗಿ ಹಿಂದೂಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದೂ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಚುನಾವಣಾ ಮೊಕದ್ದಮೆಯಲ್ಲಿ ನೆಹರೂ ಪ್ರತಿವಾದಿ

ಲಕ್ನೋ ವಿಶ್ವ ವಿದ್ಯಾಲಯದ ಕೋರ್ಟಿಗೆ ಚುನಾಯಿತರಾಗಿರುವ ಪಂಡಿತ ನೆಹರೂ ಮತ್ತು ಇತರ ೨೬ ಜನ ಸದಸ್ಯರುಗಳ ಮೇಲೆ ಇಂಜಕ್ಷನ್ ದಾವಾನ್ನು ಆ ಪೆರ ಸದಸ್ಯರಾದ ಪಂಡಿತ ಪ್ರಿಥ್ವಿನಾಥ್ ಭಾಗವತರ್‌ರವರು ಹೂಡಿರುತ್ತಾರೆ. ಕಳೆದ ತಿಂಗಳು ೩೧ನೇ ತಾ|| ನಡೆದ ಸದರಿ ಕೋರ್ಟಿನ ಚುನಾವಣೆಯು ಅಕ್ರಮವೆಂದೂ, ಚುನಾವಣೆಯನ್ನು ವಿಶ್ವ ವಿದ್ಯಾಲಯದವರು ಪುರಸ್ಕರಿಸಕೂಡದೆಂದೂ ಅವರು ಕೋರಿರುತ್ತಾರೆ ೨೬ ಜನ ಸದಸ್ಯರುಗಳಿಗೂ ಕೋರ್ಟಿನವರು ಹಾಜರಾಗಲು ನೋಟೀಸ್ ಕೊಟ್ಟಿರುತ್ತಾರೆ

ಗಾಂಧೀ ನಿಧಿಗೆ ಕಾಣಿಕೆ

ಮೈಸೂರು [illegible]

ಸಂಸ್ಥಾನದ ಎಕ್ಸೈಜ್ ಕಂಟ್ರಾಕ್ಟರುಗಳ ಸಂಘದವರು ಮಹಾತ್ಮರ ಸ್ಮಾರಕ ನಿಧಿಗೆ ೧೫ ಸಾವಿರ ರೂ. ಅನ್ನು ಕೊಟ್ಟಿರುತ್ತಾರೆ.

ಶ್ರೀ ||

ಗಣೇಶಾ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

13-4-49ರಿಂದ : ಅಮೋಘ ಆರಂಭ

ದಿನವಹಿ ಮೂರು ಆಟಗಳು

ಪಕ್ಷಿರಾಜರವರ

ಪವಳಕ್ಕೊಡಿ

(ತಮಿಳು)

— ತಾರಾಗಣ —

ಟಿ. ಆರ್. ಮಹಾಲಿಂಗಂ, ಟಿ. ಆರ್. [illegible], ಟಿ. ಇ. ವರದನ್, ಎ. ಎಸ್. ಸರೋಜಿನಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

ಲಲಿತ ಮತ್ತು ಪದ್ಮಿನಿ

ಪ್ರಭಾ ★ 13-4-49 ರಿಂದ

ಅಮೋಘ ಪ್ರಾರಂಭ

ದಿನವಹಿ ಮೂರು ಆಟಗಳು.

[illegible] ಬಾಂಬೆ ಟಾಕೀಸ್‌ರವರ ಹಿಂದಿ ಚಿತ್ರ



ನತೀಜ

ಪಾತ್ರ:- ರಿಹನ, ಷಮೀಮ್, ಯಾಕೂಬ್

ಶೀಘ್ರದಲ್ಲಿಯೇ ಬರಲಿದೆ ರೋಷಿನಿ (ಹಿಂದಿ)

ಅಪೇರಾ ಟಾಕೀಸ್

13-4-49ರಿಂದ ಪ್ರತಿ ದಿನ 3 ಆಟಗಳು

ಲಕ್ಷ್ಮಿವಿಜಯಂ

ಪಿ. ಎಸ್. ಗೋವಿಂದರ್, ಮಾಧುರಿ ದೇವಿ (ಮೋಹಿನಿ ಪ್ರಖ್ಯಾತಿ) ವಿದ್ವಾನ್ ಶ್ರೀನಿವಾಸನ್, ಎಂ. ಆರ್. ಸಂತಾನಲಕ್ಷ್ಮಿ ಎಂ. ಆರ್. ಸ್ವಾಮಿನಾಥನ್

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.

ಮೈಸೂರು

ಈ ಬ್ಯಾಂಕಿನಲ್ಲಿ ಒಂದು ವರ್ಷ ಮಾಯಿದೆಯ ಫಿಕ್ಸೆಡ್ ಡಿಪಾಜಿಟ್ಟುಗಳನ್ನು ಕೆಳಕಂಡ ಸಾಲಿಯಾನ ರೂ ೩-೦-೦% ಬಡ್ಡಿ ದರದಮೇಲೆ ಸ್ವೀಕರಿಸಲಾಗುವುದು

ಎಚ್. ರಾಮಣ್ಣ,
ಗೌ|| ಕಾರ್ಯದರ್ಶಿ

ರಾಜಕಮಲ್

ಮೈಸೂರು

8-4-49 ರಿಂದ

ಅಮೋಘವಾದ ೩ನೇ ವಾರ

ಪ್ರತಿ ದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ:- ವರಲಕ್ಷ್ಮಿ, ಲಕ್ಷ್ಮೀರಾಜ್ಯಂ, ಪ್ರಕಾಶ ರಾವ್, ಪ್ರಸಾದ್

* ಪ್ರಭುದೇವಾ ಟಾಕೀಸಿನಲ್ಲಿ *

13-4-49ರಿಂದ [ದಿನವಹಿ 3 ಆಟಗಳು] 2 ನೇ ವಾರ

ಶೋಭನಾಚಲ ಪಿಕ್ಚರ್ಸ್‌ರವರ ತೆಲುಗು ಚಿತ್ರ

★ ಗೊಲ್ಲಭಾಮ ★

—ಮುಖ್ಯ ಪಾತ್ರ:— ಕೃಷ್ಣವೇಣಿ, ಅಂಜಲಿ ದೇವಿ, ರಘುರಾಮಯ್ಯ

Printed and published by V. R. Nagarajan at the Sadhvi Press, D Subbiah Road, Mysore.

ಫೋನ್ ನಂ. 792 ॥ವಂದೇಮಾತರಂ॥ ಇಂದಿನ ಪತ್ರಿಕೆ ೧ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೧೮-೮-೧೯೪೯ [ಸಂಚಿಕೆ ೩೧೯

ರಾಮೋತ್ಸವಗಳು

ಕೃಷ್ಣರಾಜೇಂದ್ರ ಆಸ್ಪತ್ರೆ ಬಳಿ ಇರುವ ಶ್ರೀನಿವಾಸಯ್ಯನವರ ರಾಮಮಂದಿರದಲ್ಲಿ ವಿದ್ವಾನ್ ರಂಗಪ್ಪನವರಿಂದ, ಈ ರಾತ್ರಿ ... ಘಂಟೆಗೆ ವೇಣುವಾದನ.

... ಅಗ್ರಹಾರದ ಜಾನಕೀರಾಮ ಮಂದಿರದಲ್ಲಿ ಈ ರಾತ್ರಿ ... ಘಂಟೆಗೆ ಆ॥ ... ರಾಮಾಚಾರ್ ರವರ ಕೊಳಲು.

... ಹನುಮಯ್ಯ ರಸ್ತೆಯಲ್ಲಿರುವ ಕೋಂಚಟಿ ... ಹನುಮಮಂದಿರದಲ್ಲಿ ನಾಳೆ ಸಂಜೆ ... ಘಂಟೆಗೆ ಗಾನವಿಶಾರದ ಚಿಟ್ಟಿ ಕೃಷ್ಣಯ್ಯಂಗಾರ್ಯರ ಸಂಗೀತ.

ಶಿವರಾಂಪೇಟೆಯ ಶ್ರೀ ರಾಮಚಂದ್ರ ಮಂದಿರದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ... ಸದಾಶಿವಯ್ಯನವರ ಸಂಗೀತ.

ಸಮಗ್ರ ಸಹಕಾರ ಸಂಘ

... ಮಧ್ಯಾಹ್ನ ತಾಲ್ಲೂಕು ಕಚೇರಿ ... ಮೈಸೂರು ತಾಲ್ಲೂಕು ಸಮಗ್ರ ಸಹಕಾರ ಸಂಘದ ಪ್ರಾರಂಭೋತ್ಸವವು ಶ್ರೀ ... ಕೆ. ಕುಮಾರಸ್ವಾಮಿಯವರಿಂದ ನೆರವೇರಿಸಲ್ಪಟ್ಟಿತು. ಮೈಸೂರು ಡಿವಿಜನ್ ... ರಾದ ಶ್ರೀ ಕೆ. ನಾರಾಯಣಶೆಟ್ಟರು ಭಾಷಣಮಾಡಿ, ಗ್ರಾಮವಾಸಿಗಳಿಗೆ ... ವಸ್ತುಗಳನ್ನು ಒದಗಿಸಲು ಸರ್ಕಾರದವರು ಕೈಗೊಂಡಿರುವ ಈ ಯೋಜನೆಯನ್ನು ವಿವರಿಸಿ, ಅದಕ್ಕೆ ಸಾರ್ವಜನಿಕರು ಬೆಂಬಲ ನೀಡಬೇಕೆಂದು ಕೋರಿದರು. ಅನಂತರ ಶ್ರೀ ಹೆಚ್. ಕೆ. ... ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು.

ಅಕ್ಕಮಹಾದೇವಿ ಜಯಂತಿ

ರಾಜಧಾನಿಯ ಅಶ್ವದ ಬಳಗದ ಆವರಣದಲ್ಲಿ ಶ್ರೀ ಅಕ್ಕಮಹಾದೇವಿಯವರ ಜಯಂತ್ಯುತ್ಸವವು ಸಹಕಾರ ಭವನದಲ್ಲಿ ನಿನ್ನೆಯಿಂದ ನಾಳೆಯವರೆಗೆ ನಡೆಯುವುದು. ನಾಳೆ ಸಂಜೆ ೬ ಗಂಟೆಗೆ ಶ್ರೀಮತಿ ಟಿ. ... ನವರಿಂದ ವಚನಗಾನ ಮತ್ತು ... ಮತ್ತು ನಾಳೆ ಸಂಜೆ ಶಿವಕಥೆ ನಡೆಯುವುದು.

ಚಿನ್ನಿಕಟ್ಟೆ ಬಂಧಿಗಳ ಬಿಡುಗಡೆ

... ರಲ್ಲಿ ರಾಜಕೀಯ ಚಳುವಳಿಯ ... ಸಾಕ್ಷ್ಯ ನಡೆಸಿದರೆಂದು ಶಿಕ್ಷೆಗೆ ಗುರಿಯಾಗಿದ್ದ ಚಿನ್ನಿಕಟ್ಟೆಯ ಶ್ರೀಗಳು ಜಿನ್ನ ..., ಎಲ್ಲಪ್ಪ, ವೆಂಕಟರಾಮಯ್ಯ, ... ನಾಲಯ್ಯ ಮತ್ತು ಮಹದೇವಪ್ಪನವರನ್ನು ಸೆಂಟ್ರಲ್ ಜೈಲಿನಿಂದ ಮೊನ್ನೆ ಬಿಡುಗಡೆ ಮಾಡಲಾಯಿತು.

ಹಿಂದೀ ತರಗತಿ

ಗುಂಡ್ಲುಪೇಟೆಯ ಗುರುಕುಲದಲ್ಲಿ ... ದ ಹಿಂದೀ ಮಾಧ್ಯಮ ಮತ್ತು ಪ್ರಥಮಿಕ ತರಗತಿಗಳನ್ನು ಏರ್ಪಡಿಸಲಾಗಿದೆ. ಸೇರಬಯಸುವವರು ಇದೇ ... ರೊಳಗಾಗಿ ಸೇರಿಕೊಳ್ಳಬೇಕೆಂದು ... ಲಾಗಿದೆ.

ಟ್ರಾಫಿಕ್ ಉಲ್ಲಂಘನೆಗೆ ಶಿಕ್ಷೆ

... ರಸ್ತೆ ಮೇಲೆ ನಡೆಯದಿದ್ದುದಕ್ಕೂ, ಬ್ರೇಕ್ಸ್ ಇಲ್ಲದೆ ಸೈಕಲ್ ಸವಾರಿಯೂ ಮತ್ತು ಲೈಸೆನ್ಸ್ ಇಲ್ಲದೆ ... ಗಳನ್ನು ನಡೆಸಿದುದಕ್ಕಾಗಿಯೂ ... ಕೋರ್ಟಿನಲ್ಲಿ ಮೊಕದ್ದಮೆ ಹೂಡಿ ... ಮೇಲೆ ೫೯ ಜನರಿಗೆ ತಲಾ ... ರೂ. ವರೆಗೆ ಜುಲ್ಮಾನೆ ವಿಧಿಸಲಾಗಿದೆ.

ಸೆಸ್ ಕಟ್ಟದೆ ಮೋಟಾರು ನಡೆಸಿದುದಕ್ಕೆ ಜುಲ್ಮಾನೆ

ಮೈಸೂರು, ೧೮

ರಾಜಧಾನಿಯ ವಿಶ್ವನಾಥ ಮೋಟಾರ್ ಸರ್ವಿಸಿನ ೭೭೫೭ ನೇ ನಂಬರ್ ಬಸ್ಸಿಗೆ ರೂ. ೪೫೦-೧೧-೭ ಸೆಸ್ಸನ್ನು ಕೊಡದೆ ಓಡಿಸಿದುದಕ್ಕೆ ಡ್ರೈವರ್ ಚಿಕ್ಕಣ್ಣ ಎಂಬುವನಿಗೆ ೫೦ ರೂ. ಜುಲ್ಮಾನೆ ಮತ್ತು ಸೆಸ್ಸಿನ ಮೊಬಲಗನ್ನು ಕೊಡುವಂತೆ ಶಿಕ್ಷೆ ವಿಧಿಸಲಾಗಿದೆ. ಹುಣಸೂರು ಬಸ್ ಸರ್ವಿಸಿನ ಎಂ ವೈ ಎಸ್ ... ನೇ ನಂಬರು ಬಸ್ಸನ್ನು ೩೧೫ ರೂ ತೆರಿಗೆ ಕೊಡದೆ ನಡೆಸಿದುದಕ್ಕೆ ಡ್ರೈವರ್ ಮಹಮ್ಮದ್ ಅಬ್ಬಾಸ್ ಎಂಬುವನಿಗೆ ೧೦ ರೂ. ಜುಲ್ಮಾನೆ ಮತ್ತು ಸೆಸ್ ಮೊಬಲಗನ್ನು ಕೊಡುವಂತೆಯೂ. ಹಾಗೆಯೇ ರೂ. ೩೭೫-೧೦-೦ ತೆರಿಗೆ ಕೊಡದೆ ಲಾರಿ ಓಡಿಸಿದುದಕ್ಕೆ ಡ್ರೈವರ್ ಮಹಮ್ಮದ್ ಗೌಸ್ ಎಂಬುವನಿಗೆ ೧೦ ರೂ ಜುಲ್ಮಾನೆ ಮತ್ತು ಸೆಸ್ ಕಟ್ಟಬೇಕೆಂದೂ ಶಿಕ್ಷೆ ವಿಧಿಸಲಾಗಿದೆ. ನಜೀರ್ ಅಹಮದ್ ಎಂಬ ಡ್ರೈವರನು ಹಿಂಭಾಗದ ದೀಪವನ್ನು ಹಾಕದೆ ಟ್ಯಾಕ್ಸಿಯೊಂದನ್ನು ನಡೆಸಿದನೆಂಬ ಕಾರಣದ ಮೇಲೆ ೫ ರೂ. ಜುಲ್ಮಾನೆ ವಿಧಿಸಲಾಗಿದೆ.

ಬ್ರಾಹ್ಮಣರ ಸಮ್ಮೇಳನ

ಹಾಸನದಲ್ಲಿ ಇದೇ ೨೦ ನೇ ತಾ. ನಡೆಯಲಿರುವ ಅಖಿಲ ಮೈಸೂರು ಬ್ರಾಹ್ಮಣರ ಸಮ್ಮೇಳನಕ್ಕೆ ಶಿವಮೊಗ್ಗದ ವರ್ತಕರಾದ ಶ್ರೀ ಹೊಸೂಡಿ ವೆಂಕಟಶಾಸ್ತ್ರಿಗಳು ಅಧ್ಯಕ್ಷತೆ ವಹಿಸುವರು.

ರಾಜಧಾನಿಗೆ ಭಾರತದ ಸಚಿವರ ಭೇಟಿ

ಭಾರತ ಸರ್ಕಾರದ ರೈಲ್ವೆ ಉಪಮಂತ್ರಿಗಳಾದ ಶ್ರೀ ಕೆ. ಸಂತಾನಂರವರು ರಾಜಧಾನಿಗೆ ಇದೇ ೨೨ ನೇ ತಾ॥ ಕೊಡಗಿನಿಂದ ಆಗಮಿಸಿ, ಮಾರನೇ ದಿನ ಬೆಂಗಳೂರಿಗೆ ತೆರಳುವರು.

ಹುಣಸೆ ಬೀಜದಿಂದ ಬಣ್ಣ

ಡೆಹ್ರಾಡೂನಿನ ಅರಣ್ಯ ಸಂಶೋಧನಾಲಯದಲ್ಲಿ ಹುಣಸೆ ಬೀಜದಿಂದ ಬಣ್ಣವನ್ನು ತಯಾರಿಸುವ ವಿಧಾನವನ್ನು ಕಂಡು ಹಿಡಿಯಲಾಗಿದೆ.

ಚಲಿಸುವ ಕೋರ್ಟು

ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದವರನ್ನು ಶಿಕ್ಷಿಸಲು ಕಲ್ಕತ್ತದಲ್ಲಿ ಚಲಿಸುವ ನ್ಯಾಯಸ್ಥಾನವನ್ನು ಏರ್ಪಡಿಸಲಾಗಿದೆ. ಮೊನ್ನೆ ದಿನ ನಗರದ ರಸ್ತೆಗಳಲ್ಲಿ ಅದು ಸಂಚರಿಸಿ, ೧೫ ಮೊಕದ್ದಮೆಗಳನ್ನು ವಿಚಾರಿಸಿ, ಶಿಕ್ಷೆಯನ್ನು ವಿಧಿಸಿತು. ಇಂತಹ ಕೋರ್ಟನ್ನು ಸ್ಥಾಪಿಸಿರುವುದು ಭಾರತದಲ್ಲಿ ಇದೇ ಪ್ರಥಮ ವೆಂದು ಹೇಳಲಾಗಿದೆ.

ಸಿ. ಹೆಚ್. ಕೃಷ್ಣರಾಯರು ಹೈದ್ರಾಬಾದ್ ಸಚಿವರು

ನಿವೃತ್ತ ಸಿವಿಲ್ ಸರ್ವಿಸ್ ಕಮೀಷನರಾದ ಶ್ರೀ ಸಿ. ಹೆಚ್. ಕೃಷ್ಣರಾಯರನ್ನೂ, ಭಾರತ ಸರ್ಕಾರದವರ ಆರ್ಥಿಕ ಸಾಚಿವ ... ಡೈರೆಕ್ಟರಾಗಿದ್ದ ಮೈಸೂರಿನ ಸಿ. ವಿ. ಎಸ್. ರಾವ್ ರವರನ್ನೂ ಹೈದರಾಬಾದಿನ ಸಚಿವರುಗಳನ್ನಾಗಿ ನೇಮಿಸಲಾಗಿದೆ.

ನರಭಕ್ಷಕನಿಗೆ ಮರಣದಂಡನೆ

ಇಬ್ಬರು ಬಾಲಕರನ್ನು ಕೊಂದು ಒಬ್ಬನ ಶವದ ಕೆಲವು ಭಾಗಗಳನ್ನು ತಿಂದನೆಂಬ ಆಪಾದನೆಯ ಮೇಲೆ ೩೭ ವರ್ಷದ ಜರ್ಮನ್ ನೊಬ್ಬನಿಗೆ ಮರಣ ದಂಡನೆಯನ್ನು ವಿಧಿಸಲಾಗಿದೆ.

ಕ್ಷಾಮದಿಂದ ಜನರು ಹುಲ್ಲು ತಿನ್ನುತ್ತಿದ್ದಾರೆ

ಹೈದರಾಬಾದಿಗೆ ಸೇರಿದ ಬಿದರೆ ಜಿಲ್ಲೆಯಲ್ಲಿ ಘೋರ ಕ್ಷಾಮ ಸಂಭವಿಸಿದೆ. ಈ ಜಿಲ್ಲೆಯಲ್ಲಿ ವಿಪರೀತ ಮಳೆಯಿಂದ ಪೈರುಗಳು ನಾಶವಾಗಿ, ಜನರಿಗೆ ಆಹಾರ ಸಿಕ್ಕದೆ ನೂರಾರು ಜನರು ಪ್ರದೇಶವನ್ನು ಬಿಡುತ್ತಿದ್ದಾರೆಂದೂ, ಅನೇಕರು ಹೊಟ್ಟೆಗಿಲ್ಲದೆ ಹುಲ್ಲಿನ ಗೆಡ್ಡೆಗಳನ್ನು ತಿನ್ನುತ್ತಿದ್ದಾರೆಂದು ವರದಿಯಾಗಿದೆ.

ಮದರಾಸ್ ಗೌರ್ನರ ಸಂಬಳ ಧರ್ಮಕಾರ್ಯಕ್ಕೆ

ಮದರಾಸ್ ಗೌರ್ನರರಾದ ಭಾವನಗರದ ಮಹಾರಾಜರವರು ತಮ್ಮ ೫೫೦೦೦ ರೂ. ಸಂಬಳದಲ್ಲಿ ಒಂದು ... ನ್ನೂ ತಮ್ಮ ಖಾಸಗೀ ಉಪಯೋಗಕ್ಕೆ ತೆಗೆದುಕೊಳ್ಳದೆ, ಸಾರ್ವಜನಿಕ ಕಾರ್ಯಗಳಿಗೆ ಕೊಡುತ್ತಿದ್ದಾರೆಂದು ತಿಳಿದುಬಂದಿದೆ.

ಕೋರ್ಟಿನಲ್ಲಿ ಗೋಪಾಲ ರಾಯನಿಗೆ ಖಾಯಿಲೆ

ಮೊನ್ನೆ ದಿನ ಗೋಪಾಲರಾವ್ ವಿಚಾರಣಾ ಸಮಿತಿಯ ಮುಂದೆ ಶ್ರೀ ಬಿ. ಎಲ್. ಗೋಪಾಲರಾಯರು ಸಾಕ್ಷ್ಯ ಕೊಡುತ್ತಿದ್ದಾಗ ಅವರಿಗೆ ತಲೆ ತಿರುಗಿ, ಹೃದಯ ವೇದನೆಯುಂಟಾಯಿತೆಂದೂ, ಕೂಡಲೇ ವೈದ್ಯರು ಬಂದು ಚಿಕಿತ್ಸೆ ನಡೆಸಿದ ಮೇಲೆ ಅವರಿಗೆ ಜ್ಞಾನ ಬಂದಿತೆಂದೂ, ನಂತರ ಅವರನ್ನು ಮನೆಗೆ ಕಳುಹಿಸಿ ವಿಚಾರಣೆಯನ್ನು ಮುಂದಕ್ಕೆ ಹಾಕಲಾಯಿತೆಂದೂ ಹೇಳಲಾಗಿದೆ.

ರಷ್ಯದ ವಿಮಾನಗಳ ಮೇಲೆ ಪರ್ಷಿಯದ ಗುಂಡು

ಪರ್ಷಿಯಾ ಮತ್ತು ಇರಾಕ್ ಗಡಿ ಪ್ರದೇಶದ ಮೇಲೆ ಹಾರಿಹೋದ ರಷ್ಯದ ವಿಮಾನಗಳ ಮೇಲೆ ಪರ್ಷಿಯವು ಗುಂಡು ಹಾರಿಸಿತೆಂದು ವರದಿಯಾಗಿದೆ.

ಕಮ್ಯೂನಿಸ್ಟ್ ಹಾವಳಿಯಿಂದ ಜನರು ಊರು ಬಿಟ್ಟರು

ಹೈದರಾಬಾದಿನ ನಲಗುಂಡ ಜಿಲ್ಲೆಯ ಬ್ರಾಹ್ಮಣಪಲ್ಲಿ ನಾಯನಪಲ್ಲಿಗಳಲ್ಲಿ ಕಮ್ಯೂನಿಸ್ಟ್ ಹಾವಳಿಯನ್ನು ತಡೆಯಲಾರದೆ, ಜನರು ಆ ಪ್ರದೇಶವನ್ನು ಬಿಡುತ್ತಿದ್ದಾರೆಂದೂ, ಪೋಲೀಸರಿಗೆ ಸಹಾಯ ಮಾಡುವ ಜನರ ಮೇಲೆ ಗುಂಡುಹಾರಿಸಿ, ಕೊಲೆ ನಡೆಸುತ್ತಿರುವರೆಂದೂ ವರದಿಯಾಗಿದೆ.

ಸರ್ಕಾರೀ ನೌಕರರು ಮದ್ಯಪಾನ ಮಾಡಕೂಡದು

ವಿಂಧ್ಯ ಪ್ರದೇಶದ ಸರ್ಕಾರಿ ನೌಕರರುಗಳು ಮದ್ಯ ಪಾನ ಮಾಡಕೂಡದೆಂದೂ, ಅಂತಹವರುಗಳನ್ನು ಶಿಕ್ಷೆಗೆ ಗುರಿಪಡಿಸಲಾಗುವುದೆಂದೂ ಸರ್ಕಾರದವರು ಎಚ್ಚರಿಕೆ ಕೊಟ್ಟಿರುತ್ತಾರೆ.

ಡ್ರೈವರುಗಳಿಗೆ ಧೂಮಪಾನ ಕೂಡದು

ಮೋಟಾರು ಕಾರುಗಳನ್ನು ನಡೆಸುವ ಡ್ರೈವರುಗಳು ಧೂಮಪಾನ ಮಾಡಕೂಡದೆಂದು ನಿರ್ಬಂಧಪಡಿಸಬೇಕೆಂಬ ಸಿಲೋನಿನ ಮೋಟಾರು ಸಂಘದ ಸಲಹೆಯನ್ನು ಅಲ್ಲಿನ ಸರ್ಕಾರವು ಪರ್ಯಾಲೋಚಿಸುತ್ತಿದೆಯೆಂದು ಹೇಳಲಾಗಿದೆ.

ತಿರುವಾಂಕೂರು ಐಕ್ಯಕ್ಕೆ ವಿರೋಧವಾಗಿ ಸತ್ಯಾಗ್ರಹ

ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳ ಐಕ್ಯವನ್ನು ಪ್ರತಿಭಟಿಸಲು ತಿರುವಾಂಕೂರಿನ ತಮಿಳು ನಾಡು ಕಾಂಗ್ರೆಸ್ ಸಮಿತಿಯವರು ಸತ್ಯಾಗ್ರಹವನ್ನು ಹೂಡಿದ್ದಾರೆ.

ಹೈದ್ರಾಬಾದ್ ಮಿಲಿಟರಿ ಗೌರ್ನರರ ಆಗಮನ

ಹೈದರಾಬಾದಿನ ಮಿಲಿಟರಿ ಗೌರ್ನರರಾದ ಮೇ॥ ಚೌಧ್ರಿಯವರು ನಿನ್ನೆ ಬೆಳಗ್ಗೆ ಇಲ್ಲಿಗೆ ಪತ್ನಿ ಸಮೇತ ಆಗಮಿಸಿ, ಕಾರಿನಲ್ಲಿ ಉದಕಮಂಡಲಕ್ಕೆ ತೆರಳಿದರು. ಅವರು ೧೯ ನೇ ತಾ॥ ವಾಪಸು ಇಲ್ಲಿಗೆ ಬಂದು ಹೈದರಾಬಾದಿಗೆ ಹಿಂತಿರುಗುವರು.

ಬರ್ಮಾಕ್ಕೆ ಭಾರತ ಸಹಾಯದ ಅವಶ್ಯಕತೆ

ಬರ್ಮಾ ಪ್ರಧಾನಿ ಥಾಕಿನ್‌ನುರವರು ದೆಹಲಿಯಲ್ಲಿ ಮೊನ್ನೆ ದಿನ ಪಂಡಿತ ನೆಹರೂರವರನ್ನು ಭೇಟಿಮಾಡಿ, ಮಾತುಕತೆ ನಡೆಸಿದರು. ತಮ್ಮ ಸರ್ಕಾರವು ಕಮ್ಯೂನಿಸ್ಟರ ಮುನ್ನಡೆಯನ್ನು ತಡೆದು, ದೇಶದಲ್ಲಿ ಶಾಂತಿ ಮತ್ತು ಶಿಸ್ತನ್ನು ಸ್ಥಾಪಿಸುವುದಾಗಿಯೂ, ಈ ಪರಿಸ್ಥಿತಿಯನ್ನು ಸುಧಾರಿಸಲು ಭಾರತವು ಹಣದ ಸಹಾಯ ಮಾಡಬೇಕೆಂದು, ಪಂಡಿತ ನೆಹರೂರವರನ್ನು ಅವರು ಪ್ರಾರ್ಥಿಸಿಕೊಂಡರೆಂದೂ ತಿಳಿದು ಬಂದಿದೆ.

ಸಚಿವರು ಕ್ಷಮಾಪಣೆ ಬೇಡಿದರು

ಮಧ್ಯ ಭಾರತ ಯೂನಿಯನ್ನಿನ ಉಪಪ್ರಧಾನಿ ಶ್ರೀ ವಿ. ಎಸ್. ಮೋದೆಯವರು ವಿಚಾರಣೆಗೆ ಗುರಿಯಾಗಿದ್ದ ಅಂಡರ್ ಟ್ರಯಲ್ ಖೈದಿಯನ್ನು ಬಿಡುಗಡೆ ಮಾಡಿದರೆಂದು ಅವರ ಮೇಲೆ ಅಲ್ಲಿನ ಹೈಕೋರ್ಟಿನವರು ಕಂಟೆಂಪ್ಟ್ ಕ್ರಮ ತೆಗೆದುಕೊಳ್ಳಲು ಮೊಕದ್ದಮೆ ಹೂಡಿದ್ದರು. ಸಚಿವರು ಕ್ಷಮಾಪಣೆ ಕೊಟ್ಟಿದ್ದರಿಂದ ಅವರನ್ನು ಬಿಡುಗಡೆ ಮಾಡಲಾಯಿತು.

ಲಂಚದ ಆಪಾದನೆ ಮೇಲೆ ಸಚಿವರ ದಸ್ತಗಿರಿ

[illegible]

ಗುಂಡ್ಲುಪೇಟೆಗೆ ವಿದ್ಯುಚ್ಛಕ್ತಿ

[illegible]

ಗಾಯತ್ರೀ ಟಾಕೀಸ್

ದಿ ಅಡ್ವೆಂಚರ್ಸ್ ಆಫ್

ರಾಬಿನ್ ಹುಡ್

ಬೆಳಗಿನ ಪ್ರದರ್ಶನಗಳು

ಬ್ಲಾಕ್ ಸ್ವಾಂಪರ್

ಸೇವಾದಳ

ರಾಜಧಾನಿಯಲ್ಲಿ ನಗರ ಕಾಂಗ್ರೆಸ್ ಸಮಿತಿಯವರು ಏರ್ಪಡಿಸಲಿರುವ ಸೇವಾದಳಕ್ಕೆ ಸೇರಲು ಇಚ್ಛೆಯುಳ್ಳವರು ತಮ್ಮ ಹೆಸರು, ವಿಳಾಸ ಮತ್ತು ವಿಷಯಗಳನ್ನು ಇದೇ ೨೩ ನೇ ತಾ॥ ನೊಳಗಾಗಿ ಮೊಹಲ್ಲಾ ಕಾಂಗ್ರೆಸ್ ಸಮಿತಿಗಳ ಕಾರ್ಯಾಲಯಕ್ಕೆ ತಿಳಿಸಬೇಕೆಂದು ಕೋರಲಾಗಿದೆ

ರಾಜಕಮಲ್
ಮೈಸೂರು

15-4-49 ರಿಂದ
ಅಮೋಘವಾದ ೮ನೇ ವಾರ
ಪ್ರತಿ ದಿನ ಮೂರು ಆಟಗಳು

ದ್ರೋಹಿ
(ತೆಲುಗು)
ಪಾತ್ರ - ವರಲಕ್ಷ್ಮಿ, ಲಕ್ಷ್ಮೀರಾಜ್ಯಂ, ಪ್ರಕಾಶ ರಾವ್, ಪ್ರಸಾದ್

Morning Shows From 15-4-49 for 4 days

A Matter of Life & Death
(In Technicolor)
-With:-
David Niven, Raymond Massey, Roger Liveray

೯ ವರ್ಷದ ಬಾಲಕನ ಕೊಲೆ

ಚಾಮರಾಜನಗರ ತಾಲ್ಲೂಕು ಕಾಗಲ್ವಾಡಿಯ ಶ್ರೀ ಕೆ. ಬಿ ಪುಟ್ಟಣ್ಣನವರ ಮಗ ೯ ವರ್ಷದ ನಾಗಮಲ್ಲೇಶ ಎಂಬುವನನ್ನು ಯಾರೋ ಕೊಲೆ ಮಾಡಿ, ಆವನ ಕಿವಿಯಲ್ಲಿದ್ದ ಹತ್ತು ಕಡಕುಗಳನ್ನು ಅಪಹರಿಸಿದ್ದಾರೆಂದು ವರದಿಯಾಗಿದೆ. ಹಾಕಿಕೊಂಡಿದ್ದ ಷರಟನ್ನು ಹರಿದು ಆದನ್ನು ಅವನ ಕೊರಳಿಗೆ ಸುತ್ತಿ ಕೊಲೆ ಮಾಡಿದ್ದಾರೆಂದು ಹೇಳಲಾಗಿದೆ

Edited printed and published by A R. Nagarajan at the Sadhvi Pres, D Subbiah Road, Mysore.

ದಿವಾನ್ ಕೃಷ್ಣಪ್ಪನವರ
ರಾಮ ಮಂದಿರ, ಮೈಸೂರು

ರಾಮ ನವಮಿ ವಿಶೇಷ ಕಾರ್ಯಕ್ರಮ
ಸಂಜೆ ೬-೩೦ ಗಂಟೆಯಿಂದ
14-4-49ನೇ ಗುರುವಾರ
ಮಹಾಲಿಂಗಂ - ಚೌಡಯ್ಯ
ಮಧುರೆ ಕೃಷ್ಣಯ್ಯಂಗಾರ್
15-4-49ನೇ ಶುಕ್ರವಾರ
ಮುಸಿರಿ ಸುಬ್ರಹ್ಮಣ್ಯ ಅಯ್ಯರ್
ವೆಂಕಟರಾಮಾ ಶಾಸ್ತ್ರಿ ಮತ್ತು
ಮಧುರೆ ಕೃಷ್ಣಯ್ಯಂಗಾರ್
ಟಿಕೇಟು ದರ ರೂ. 2, 1-8-0 ಮತ್ತು

ಮೈಸೂರು ಸ್ಟೇಟ್ ರೈಲ್ವೆ

ನಂ. T P. 31 A. ಟ್ರಾಫಿಕ್ ಮ್ಯಾನೇಜರ್‌ರವರ ಕಛೇರಿ ಮೈ.ಷ.
ತಾ॥ 11ನೇ ಏಪ್ರಿಲ್ 1949

ಪ್ರಕಟಣೆ

1949ನೇ ಏಪ್ರಿಲ್ 15ನೇ ತಾರೀಖಿನಿಂದ ನಂ. 55 ಮತ್ತು 56ನೇ ರೈಲುಗಳು ಅರಸೀಕೆರೆ ಮತ್ತು ಹರಿಹರ ಮಧ್ಯಭಾಗದಲ್ಲಿ ಕೆಳಗೆನಮೂದಿಸಿರುವ ಸುದಾರಿತ ಕಾಲಗಳಲ್ಲಿ ಓಡು[illegible]

ನಂ. 55ನೇ ರೈಲು

		ಹಾಲಿ ಇರುವುದು ಘಂ. ನಿಮಿಷ	ಬದಲಾ[illegible] ಘಂ. ನಿ[illegible]
ಅರಸೀಕೆರೆ	ಹೊರಡುವುದು	7—00	6—00
ಬೀರೂರು	ಸೇರುವುದು	8—33	7—30
	ಹೊರಡುವುದು	8—38	8—10
ಚಿಕ್ಕಜಾಜೂರು	ಸೇರುವುದು	10—46	10—29
ಹರಿಹರ	ಹೊರಡುವುದು	11—12	11—12
	ಸೇರುವುದು	13—05	13—05

ನಂ. 56ನೇ ರೈಲು

ಹರಿಹರ	ಹೊರಡುವುದು	6—25	14—45
ಚಿಕ್ಕಜಾಜೂರು	ಸೇರುವುದು	8—35	16—52
	ಹೊರಡುವುದು	8—45	17—17
ಬೀರೂರು	ಸೇರುವುದು	11—18	19—50
	ಹೊರಡುವುದು	11—25	20—20
ಅರಸೀಕೆರೆ	ಸೇರುವುದು	13—00	21—55

ಈ ಕೆಳಗೆ ನಮೂದಿಸಿರುವ ರೈಲುಗಳನ್ನು 1949ನೇ ಏಪ್ರಿಲ್ 15ನೇ ತಾರೀಖಿನಿಂದ ರದ್ದುಗೊಳಿಸಲಾಗಿದೆ.:—

ನಂ. 60	ಹರಿಹರ	ಹೊರಡುವುದು	....	14—20
	ದಾವಣಗೆರೆ	ಸೇರುವುದು	....	14—47
ನಂ. 59	,,	ಹೊರಡುವುದು	....	15—02
	ಹರಿಹರ	ಸೇರುವುದು	...	15—22
ನಂ 61	ಅರಸಿಕೆರೆ	ಹೊರಡುವುದು	....	6—00
	ಬೀರೂರು	ಸೇರುವುದು	....	7—30
ನಂ. 62	,,	ಹೊರಡುವುದು	....	20—20
	ಅರಸಿಕೆರೆ	ಸೇರುವುದು	....	21—55

(ಸಹಿ) **ಮಿರ್ ಇನಾಯತ್ ಹುಸೇನ್,**
ಟ್ರಾಫಿಕ್ ಮ್ಯಾನೇಜರ್

ಮೈಸೂರು ಸ್ಟೇಟ್ ರೈಲ್ವೆ

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್‌ರವರ ಕಛೇರಿ ಎಂ.ಎಸ್.[illegible]
ಮೈಸೂರು ೪—4—49

ಮೈಸೂರು ಸಿಟಿ ರೈಲ್ವೆ ನಿಲ್ದಾಣದಲ್ಲಿ ಸೈಕಲ್ ಸ್ಟಾಂಡನ್ನು ನಡೆಸುವ ಕಂಟ್ರಾಕ್ಟ್ ಬಗ್ಗೆ ಟೆಂಡರು.

1. 1949ನೇ ಮೇ ತಿಂಗಳು 1ನೇ ತಾ॥ ನಿಂದ 1950ನೇ ಜೂನ್ ತಿಂಗಳು 30ನೇ ತಾ॥ವರೆವಿಗೆ ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಸೈಕಲ್ ಸ್ಟಾಂಡ್ ನಡೆಸುವ ಬಗ್ಗೆ ಟೆಂಡರನ್ನು ಕರೆಯಲಾಗಿದೆ.

2 50 ರೂ. (ಐವತ್ತು ರೂ) ಮೊಬಲಗನ್ನು ಮೈಸೂರು ಎಂ.ಎಸ್. ರೈಲ್ವೆಯ ಚೀಫ್ ಆಡಿಟರವರಲ್ಲಿ ಡಿಪಾಜಿಟ್ ಮಾಡಿ, ಅದರ ರಶೀತಿಯನ್ನು ಟೆಂಡರಿನ ಸಂಗಡ ಕಳುಹಿಸತಕ್ಕದ್ದು.

3 ಕಂಟ್ರಾಕ್ಟಿನ ಕರಾರು ಮತ್ತು ಷರತ್ತುಗಳ ವಿವರಗಳನ್ನು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್, ಎಂ ಎಸ್ ರೈಲ್ವೆ, ಮೈಸೂರುರವರಿಗೆ ಅರ್ಜಿ ಹಾಕಿಕೊಂಡು ಪಡೆಯಬಹುದು.

4. "ಮೈಸೂರು ರೈಲ್ವೆ ಸ್ಟೇಷನ್ನಿನಲ್ಲಿ ಸೈಕಲ್ ಸ್ಟಾಂಡ್ ಕಂಟ್ರಾಕ್ಟಿಗೆ ಟೆಂಡರ್"ಎಂದು ನಮೂದಿಸಿರುವ ಟೆಂಡರನ್ನು 1949ನೇ ಏಪ್ರಿಲ್ 25ನೇ [illegible] ಮಧ್ಯಾಹ್ನ 3 ಗಂಟೆಯವರೆಗೆ ಸ್ವೀಕರಿಸಲಾಗುವುದು.

ಕೆ.ಎಸ್. ಶಂಕರಯ್ಯ,
ಆ॥ ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟ್

✻ ಲಕ್ಷ್ಮೀ ಥಿಯೇಟರ್ ✻
(ನೂರಡಿ ರಸ್ತೆ)
15-4-49 ನೇ ಶುಕ್ರವಾರದಿಂದ ಪ್ರಾರಂಭ



ಪ್ರತಿ ದಿನ ಮೂರು ಆಟಗಳು
ಪ್ರಕಾಶ್‌ರವರ ಪೌರಾಣಿಕ ಹಿಂದಿ ಚಿತ್ರ

ರಾಮ್ ಬಾಣ್
ಭೂಮಿಕೆ:- ಶೋಭನಾ ಸಮರ್ಥ್, ಪ್ರೇಂ ಅದೀಬ್, ಉಮಾಕಾಂತ್, ಮತ್ತು ಚಂದ್ರಮೋಹನ್

ಸೂಚನೆ:- 15ನೇ ಶುಕ್ರವಾರ ರಾತ್ರಿ ೯-೩೦ಕ್ಕೆ ಒಂದು ಪ್ರದರ್ಶನ ಮಾತ್ರ.

ಪ್ರಭಾ ✶ 13-4-49 ರಿಂದ
ಅಮೋಘ ಪ್ರಾರಂಭ
ದಿನವಹಿ ಮೂರು ಆಟಗಳು

ರಂಜಿತ ಟಾಕೀಸ್‌ರವರ ಹಿಂದಿ ಚಿತ್ರ

ನತೀಜ
ಪಾತ್ರ:- ರಿಹನ, ಷಮೀಮ್, ಯಾಕೂಬ್

1[illegible]-4-49ರಿಂದ 4 ದಿನಗಳು ಮಾತ್ರ

ಮಿಸ್ಟರೀಸ್ ಆಫ್ ಡಾ॥ ಸೇರ್ಟ್
(ರಿಪಬ್ಲಿಕ್ ಸೀರಿಯಲ್)

ಸಂಪುಟ ೭] ಶುಕ್ರವಾರ ೧೫-೪-೧೯೪೯ [ಸಂಚಿಕೆ ೩೧೦

ಪಾಕಿಸ್ತಾನದ ಮೇಲೆ ಭಾರತದ ದೂರು

...ತೋರಿಸುವುದಾಗಿ ಗೋಪಾಲರಾಯರ ಸೂಚನೆ

ಸಂ ಸು ಫೋನ್] ಬೆಂಗಳೂರು ೧೫

ನಿನ್ನೆ ಶ್ರೀ ಗೋಪಾಲರಾಯರ ವಿಚಾರಣೆಯು ಮುಂದುವರೆಯಿತು ಶ್ರೀಮತಿ ...ಕಮ್ಮ, ಶ್ರೀಗಳಾದ ಡಿ ಶಾಸ್ತ್ರಿ, ಸರ್ವೋತ್ತಮರಾವ್, ರೆಬೆಲ್ಲೋ, ಸಿ ಪೆರುಮಾಳ್ ... ಮುಂತಾದವರುಗಳಿಂದ ಬಂದಿದ್ದ ...ಬಲಗುಗಳ ಲೆಕ್ಕವನ್ನು ತೋರಿಸಿದಾಗ ರಾಯರು ಮೊದಲು ಹೇಳಿದ್ದು ಸರಿಯಲ್ಲವೆಂದೂ ಈಗ ತೋರಿಸಿರುವ ಲೆಕ್ಕಪತ್ರಗ... ಒಪ್ಪಿಕೊಳ್ಳುವುದಾಗಿಯೂ ಹೇಳಿದ ... ಮೇಲ್ಕಂಡವರಿಗೆ ಪಾವತಿಯಾಗಿ... ಹಣದ ಬಾಕಿ 12॥ ಲಕ್ಷರೂ ... ಇರಬೇಕೆಂದು ಸಮಿತಿಯವರು ...ಚಿಸಿದಾಗ ರಾಯರು ಏನನ್ನೂ ಹೇಳ... ಬರತಕ್ಕ ಹಣವನ್ನೆಲ್ಲಾ ವಸೂಲು ...ಡಿ ಸಾಲಗಾರರಿಗೆ ಕೊಡಲು ಸಾಲದೆ ...ದರೆ ಇನ್ನೂ ಹಣವನ್ನು ಸಮಿತಿಗೆ ...ಡಲು ಸಿದ್ಧವಾಗಿರುವುದಾಗಿ ಗೋಪಾಲ...ಯರು ತಿಳಿಸಿದರು ಮತ್ತು ಹಣವು ...ದೆಯೆಂಬುದನ್ನು ತೋರಿಸುವುದಾಗಿ ... ಹೇಳಿದರು. ವಿಚಾರಣೆಯು ಸೋಮವಾರಕ್ಕೆ ಮುಂದುವರಿಸಲ್ಪಟ್ಟಿತು

○ ಪ್ರಜಾಪ್ರತಿನಿಧಿ ಸಭೆಯಿಂದ ಸಾರ್ವಜನಿಕ ಆರೋಗ್ಯ ಸಮಿತಿಗೆ ಚುನಾವಣೆಯು ಜೂನ್ ೪ ನೇ ತಾ॥ ನಡೆಯುವುದು

○ ಮದರಾಸ್ ಸರ್ಕಾರದ ಕೈಗಾರಿಕಾ ಸಚಿವರಾದ ಶ್ರೀ ಹೆಚ್ ಸೀತಾರಾಮ ರೆಡ್ಡಿಯವರು ಇದೇ ೨೫ ನೇ ತಾ॥ ಬಂದು ...ಸಮಿತಿಯಲ್ಲಿ ಭಾಗವಹಿಸಿ ಆ ದಿನವೇ ಹಿಂತಿರುಗುವರು

ಬಂಗಾಳಿ ಮೇಲೆ ಅರಬ್ಬಿ ಲಿಪಿ ಒತ್ತಾಯ

ಪಾಕಿಸ್ಥಾನದಲ್ಲಿ ಅರಬ್ಬಿ ಲಿಪಿಯನ್ನು ಉಪಯೋಗಿಸುವ ಬಗ್ಗೆ ಪರಿಶೀಲನೆ ನಡೆಸಲು ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿದ್ದಾರೆ ರಾಜಕೀಯ ಕಾರಣದಿಂದ ಈಗಿರುವ ಬಂಗಾಳಿಲಿಪಿಯನ್ನು ...ಲಾಯಿಸುವುದು ಸಾಧುವಲ್ಲವೆಂದು ...ಕಾ ವಿಶ್ವವಿದ್ಯಾಲಯದ ಮಾಜಿ ...ಸ್ಥಾನಪತಿಗಳಾದ ಡಾ॥ ಶಹಿದುಲ್ಲಾ ... ಸಮಿತಿಯಲ್ಲಿರಲು ನಿರಾಕರಿಸಿದ್ದಾರೆ

...ನೆ ಮರಿಗೆ ಡಬ್ಬಗಟ್ಟಲೆ ಹಾಲು

...ಲ್ಕತ್ತೆಯಿಂದ ಲಂಡನ್ನಿನ ಮ್ಯಗಾಲ... ವಿಮಾನದಲ್ಲಿ ಸಾಗಿಸಲಾಗುತ್ತಿದ್ದ ...ಸ್ಟ್ರೀನ್ ತೂಕವುಳ್ಳ ಸಾವಿತ್ರಿ ಎಂಬ ...ಮು ಕರಾಚಿಯಲ್ಲಿ ತನ್ನನ್ನು ಕಟ್ಟಿದ್ದ ...ಗಳಿಂದ ಬಿಚ್ಚಿಕೊಂಡು ಗಲಭೆ ಮಾಡಿದ್ದೂ, ಅದನ್ನು ಸಮಾಧಾನಮಾಡಲು ...ಟ್ಟಲೆ ಹಾಲಿನ ಪುಡಿಯನ್ನು ಅದಕ್ಕೆ ...ಲಾಯಿತೆಂದು ಹೇಳಲಾಗಿದೆ

ಪಾಕಿಸ್ಥಾನದ ಮೇಲೆ ಭಾರತದ ಪ್ರತಿಭಟನೆ

...ಶ್ಮೀರದಲ್ಲಿ ಕದನ ನಿಲ್ಲಿಸುವ ಒಪ್ಪಂದವನ್ನು ಪಾಕೀಸ್ತಾನವು ಮುರಿದಿದೆಯೆಂದು ಭಾರತ ಸರ್ಕಾರವು ವಿಶ್ವಸಂಸ್ಥೆಗೆ ಪ್ರತಿಭಟನೆಯ ದೂರನ್ನು ಕಳುಹಿಸುವುದೆಂದು ತಿಳಿದು ಬಂದಿದೆ ಒಪ್ಪಂದಕ್ಕೆ ವಿರೋಧವಾಗಿ ಉರಿ, ಗುರಿಜ್ ಮತ್ತು ತಿಥ್ವಾಲ್ ...ಗಳನ್ನು ಪಾಕೀಸ್ತಾನದ ಸೈನ್ಯವು ಆಕ್ರಮಿಸಿದೆಯೆಂದು ಹೇಳಲಾಗಿದೆ

ವಿಶ್ವವಿದ್ಯಾಲಯದ ರಿಜಿಸ್ಟ್ರಾರ್

ಮೈಸೂರು ೧೫

ಈಗ ವಿಶ್ವವಿದ್ಯಾಲಯದ ಹಂಗಾಮಿ ರಿಜಿಸ್ಟ್ರಾರರಾಗಿರುವ ಶ್ರೀ ಟಿ ಸಿದ್ದಲಿಂಗದೇವರುರವರನ್ನು ಆಸ್ಥಾನದಲ್ಲಿ ಖಾಯಂ ಮಾಡಿ, ಮ್ಯಾನೇಜರಾಗಿರುವ ಶ್ರೀ ಶ್ರೀನಿವಾಸಮೂರ್ತಿಯವರನ್ನು 'ಆಕ್ಟಿಂಗ್ ಅಸಿಸ್ಟೆಂಟ್ ರಿಜಿಸ್ಟ್ರಾರರಾಗಿಯೂ, ಶ್ರೀ ರಾಘವಾಚಾರ್ಯರನ್ನು ಮ್ಯಾನೇಜರಾಗಿಯೂ ನೇಮಿಸಲಾಗುವುದೆಂದು ತಿಳಿದುಬಂದಿದೆ

ಹಿಂದೀ ತರಗತಿಗಳು

ನಂಜನಗೂಡು ಹಿಂದೀಪ್ರಚಾರಸಭೆಯ ಆಶ್ರಯದಲ್ಲಿ ಈದಿನದಿಂದ ಬೇಸಿಗೆ ಹಿಂದೀ ತರಗತಿಗಳನ್ನು ಗಂಡಸರಿಗೆ ಸಭಾಕಾರ್ಯಾಲಯದಲ್ಲೂ, ಮಹಿಳೆಯರಿಗೆ ಮಹಿಳಾ ಸಮಾಜದಲ್ಲೂ ತೆರೆಯಲಾಗಿದೆ

ಆಸ್ಥಾನ ವಿದ್ವಾಂಸರು

ಶ್ರೀ ನಂಜನಗೂಡು ಸೀತಾರಾಮಶಾಸ್ತ್ರಿಗಳವರನ್ನು ಶ್ರೀಮನ್ಮಹಾರಾಜರವರ ಆಸ್ಥಾನದ ಮೃದಂಗ ವಿದ್ವಾಂಸರನ್ನಾಗಿ ನೇಮಕಮಾಡಲಾಗಿದೆ

ಸಂಸ್ಥಾನದಲ್ಲಿ ನಿಶ್ಶಬ್ದ ಮಲೇರಿಯಾ ಕೇಂದ್ರ

ವಿಶ್ವ ಆರೋಗ್ಯ ಸಂಸ್ಥೆಯವರು ಮಲೇರಿಯಾ ಹತೋಟಿಗಾಗಿ ಭಾರತದಲ್ಲಿ ಏರ್ಪಡಿಸಲಿರುವ ೪ ಕೇಂದ್ರಗಳಲ್ಲಿ ಒಂದನ್ನು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಸ್ಥಾಪಿಸಲಾಗುವುದೆಂದು ತಿಳಿದು ಬಂದಿದೆ

ತಾಲ್ಲೂಕು ಸಮ್ಮೇಳನ

ಯಳಂದೂರು ತಾಲ್ಲೂಕು ಸಮ್ಮೇಳನವು ನಾಳಿದ್ದು ಭಾನುವಾರ ಮಧ್ಯಾಹ್ನ ೩ ಗಂಟೆಗೆ ಶ್ರೀಮಂತ ಜಹಗೀರ್‌ದಾರರ ಬಂಗಲೆಯಲ್ಲಿ ಶ್ರೀ ಜಿಗಳಂ ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು

ಭಾರತ ಸಚಿವರ ಕಛೇರಿಯಲ್ಲಿ ಕಳವು

ಭಾರತ ಸರ್ಕಾರದ ಮರಾಮತ್ತು ಸಚಿವರಾದ ಶ್ರೀ ಸಿ ಗ್ಯಾಡ್ಗಿಲ್ ಮತ್ತು ಆರೋಗ್ಯ ಸಚಿವರಾದ ರಾಜಕುಮಾರಿ ಅಮೃತ ಕೌರ್ ರವರುಗಳ ಕಛೇರಿಗೆ ನಿನ್ನೆ ರಾತ್ರಿ ಕಳ್ಳನೊಬ್ಬನು ನುಗ್ಗಿ ಅಲ್ಲಿ ಏನೂ ಸಿಕ್ಕದ ನಿರಾಶನಾದನೆಂದೂ ಪಾಕಿಸ್ಥಾನದಿಂದ ಬಂದ ಕಳ್ಳ ... ಇದನ್ನು ನಡೆಸಿರಬಹುದೆಂದೂ ...ಲಾಗಿದೆ

ಧನ್ವಂತರಿ ರಸ್ತೆಯ ಜನರ ತೊಂದರೆ

ರಾಜಧಾನಿಯ ಧನ್ವಂತರಿ ರಸ್ತೆಯಲ್ಲಿರುವ ಮನೆಗಳನ್ನು ಆಕ್ವೈರ್ ಮಾಡಕೂಡದೆಂದೂ ಟ್ರಸ್ಟ್ ಬೋರ್ಡಿನ ಪ್ಲಾನಿನಂತೆ ತಾವೇ ಕಟ್ಟಡಗಳನ್ನು ಕಟ್ಟಲು ರಹದಾರಿ ಕೊಡಬೇಕೆಂದೂ ೧೯೪೭ ರಿಂದ ಸರ್ಕಾರಕ್ಕೆ ಮತ್ತು ಟ್ರಸ್ಟ್ ಬೋರ್ಡಿಗೂ ಅರ್ಜಿಯನ್ನು ಸಲ್ಲಿಸಿದ್ದರೂ ಅವಕ್ಕೆ ಗಮನ ಕೊಟ್ಟಿಲ್ಲ ಈ ಬಗ್ಗೆ ಪುರಸಭೆಯ ಕಾಂಗ್ರೆಸ್ ಪಕ್ಷದವರಿಗೂ ಮತ್ತು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಿಗೂ ಅರ್ಜಿಯನ್ನು ಈಗ ಸಲ್ಲಿಸಲಾಗಿದೆ ಕೂಡಲೇ ಬಡಜನರ ಕಷ್ಟಗಳನ್ನು ನಿವಾರಿಸಬೇಕು—ಎಂದು ಅಲ್ಲಿನ ನಿವಾಸಿಗಳು ಪ್ರಾರ್ಥಿಸಿರುತ್ತಾರೆ

ಕಾಮನ್‌ವೆಲ್ತನ್ನು ಪಾಕೀಸ್ಥಾನ ಬಿಡುವುದಿಲ್ಲ

ಪಾಕಿಸ್ತಾನವು ಬ್ರಿಟಿಷ್ ಕಾಮನ್‌ವೆಲ್ತನ್ನು ಬಿಡುವುದಿಲ್ಲವೆಂದು ಆಸ್ಟ್ರೇಲಿಯದಲ್ಲಿರುವ ಪಾಕೀಸ್ಥಾನದ ಟ್ರೇಡ್ ಕಮೀಷನರು ತಿಳಿಸಿರುತ್ತಾರೆ

ವಿಂಧ್ಯ ಪ್ರಾಂತದ ಆಡಳಿತ ಭಾರತಕ್ಕೆ

ವಿಂಧ್ಯ ಪ್ರದೇಶ ಸಂಸ್ಥಾನಗಳ ಆಡಳಿತವನ್ನು ಭಾರತ ಸರ್ಕಾರದ ರೀಜನಲ್ ಕಮೀಷನರು ಈ ದಿನ ವಹಿಸಿಕೊಳ್ಳುವರು ಅಲ್ಲಿನ ಮಂತ್ರಿಮಂಡಲವು ರಾಜೀನಾಮೆ ಇತ್ತಿದೆ ಸಚಿವರುಗಳಲ್ಲೋರ್ವರ ಮೇಲೆ ಇನ್ನೊಬ್ಬರು ಮಾಡಿರುವ ಆರೋಪಣೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಲಾಗಿದೆ ಈ ಪ್ರದೇಶವನ್ನು ಸಂಯುಕ್ತ ಪ್ರಾಂತ್ಯ ಮತ್ತು 'ಮಧ್ಯ ಪ್ರಾಂತ್ಯಕ್ಕೂ ಹಂಚಲಾಗುವುದೆಂದು ತಿಳಿದು ಬಂದಿದೆ

ಮೈಸೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್

ಸ್ವಂತ ಫೋನ್] ಬೆಂಗಳೂರು ೧೫

ಜಿಲ್ಲಾ ಬೋರ್ಡಿನವರ ಕೋರಿಕೆಯಂತೆ ಬರುವ ೭ ನೇ ತಿಂಗಳಿನಿಂದ ಮೈಸೂರು ನಗರದಲ್ಲಿ ಕೆಳಕಂಡ ಪದಾರ್ಥಗಳ ಬಗ್ಗೆ ನಿಗದಿ ಮಾಡುವ ಶಾಸನವನ್ನು ಜಾರಿಗೆ ತರಲಾಗುವುದೆಂದು ಸರ್ಕಾರದ ಪ್ರಕಟಣೆ ಹೊರಟಿದೆ

ನೆಲಗಡಲೆ ಕಾಯಿ, ಎಣ್ಣೆ ಬೀಜಗಳು, ಹರಳು, ಹುರುಳಿ, ಹೆಸರು, ಮೆಣಸಿನ ಕಾಯಿ, ತೆಂಗಿನಕಾಯಿ ಹಣ್ಣುಹಂಪಲು ಇತ್ಯಾದಿ

ಚೀನಾ ಸರ್ಕಾರಿ ಪಡೆಗಳಿಗೆ ಜಯ

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕ್‌ರವರ ಆಜ್ಞೆಯಮೇಲೆ ಸರ್ಕಾರಿ ಭೂ ಮತ್ತು ವಿಮಾನ ಸೈನ್ಯವು ಉತ್ತರ ಯಾಂಗ್ಸಿ ನದಿಯ ಪ್ರದೇಶವನ್ನು ಕಮ್ಯೂನಿಸ್ಟರಿಂದ ಪುನಃ ವಶಪಡಿಸಿಕೊಂಡಿದೆ.

೧೦೦ ವರ್ಷದ ಮುದುಕಿಗೆ ಅಪಘಾತ

ಕಲ್ಕತ್ತದ ೧೦೦ ವರ್ಷದ ಮಹಿಳೆಯೊಬ್ಬಳು ಗಂಗಾ ನದಿಯಲ್ಲಿಸ್ನಾನ ಮಾಡಲು ರಿಕ್ಷಾದಲ್ಲಿ ಹೋಗುತ್ತಿದ್ದಾಗ. ಅದು ಲಾರಿಗೆ ಡಿಕ್ಕಿ ಹೊಡೆದುದರಿಂದ ಆಕೆಯು ಸತ್ತು ಹೋದಳೆಂದು ವರದಿಯಾಗಿದೆ.

ಭೂಕಂಪದಿಂದ ಸಾವಿರಾರು ಮನೆಗಳ ನಾಶ

ವಾಷಿಂಗ್‌ಟನ್ನಿನ ಬಳಿ ಇರುವ ಲಾಂಗ್‌ವ್ಯೂ ಮತ್ತು ಸೀಟಲ್ ಎಂಬಲ್ಲಿ ಮೊನ್ನೆ ದಿನ ಭಾರಿ ಭೂಕಂಪವಾಗಿ, ೫ ಜನರು ಸತ್ತರೆಂದೂ ಸಾವಿರಾರು ಭವನಗಳು ಕುಸಿದು ಬಿದ್ದು, ಲಕ್ಷಾಂತರ ಡಾಲರುಗಳಷ್ಟು ನಷ್ಟ ಸಂಭವಿಸಿದೆಯೆಂದು ವರದಿಯಾಗಿದೆ

ತಿರುವಾಂಕೂರು ತಮಿಳು ಸತ್ಯಾಗ್ರಹಿಗಳ ದಸ್ತಗಿರಿ

ಕೊಚ್ಚಿ ಮತ್ತು ತಿರುವಾಂಕೂರುಗಳ ಏಕವನ್ನು ಪ್ರತಿಭಟಿಸಿ, ತಿರುವಾಂಕೂರಿನಲ್ಲಿರುವ ತಮಿಳು ಪ್ರದೇಶಗಳನ್ನು ಮದರಾಸಿಗೆ ಸೇರಿಸುವಂತೆ ಮಾಡಲು ನಾಗರಕೋವಿಲ್ಲಿನಲ್ಲಿ ತಿರುವಾಂಕೂರಿನ ತಮಿಳುನಾಡು ಕಾಂಗ್ರೆಸ್ಸಿನವರು ಸತ್ಯಾಗ್ರಹ ಹೂಡಿರುವದಕ್ಕೆ ಅದರ ಅಧ್ಯಕ್ಷರು ಮತ್ತು ಇತರ ಮೂರು ಮಂದಿಯನ್ನು ದಸ್ತಗಿರಿ ಮಾಡಲಾಗಿದೆ.

ತಲೆ ಇಲ್ಲದ ಪಕ್ಷಿ

ಅಮೆರಿಕದ ಲಾಸಾಂಜಲೀಸಿನಲ್ಲಿ ತಲೆ ಕತ್ತರಿಸಿದ ಪಕ್ಷಿಯೊಂದು ಬದುಕಿ ಕುಣಿದಾಡುತ್ತಿರುವ ಆಶ್ಚರ್ಯ ಪ್ರಸಂಗವು ವರದಿಯಾಗಿದೆ ಆಹಾರಕ್ಕೋಸ್ಕರ ಆ ಪಕ್ಷಿಯ ತಲೆಯನ್ನು ಕತ್ತರಿಸಿ, ಶರೀರವನ್ನು ಮಂಜಿನ ಗೆಡ್ಡೆಯ ಪೆಟ್ಟಿಗೆಯೊಂದರಲ್ಲಿ ಹಾಕಲಾಗಿತ್ತು ಅದನ್ನು ಒಬ್ಬಾಕೆಯು ಕೊಂಡು ಮನೆಗೆ ತೆಗೆದುಕೊಂಡು ಹೋಗಿ ಹೊರಕ್ಕೆ ತೆಗೆದಾಗ ಅದು ಕುಣಿಯುವುದಕ್ಕೆ ಪ್ರಾರಂಭಿಸಿತು ಆಕೆಯು ಚಕಿತಳಾಗಿ ವೈದ್ಯರ ಸಲಹೆಮೇರೆ ಅದಕ್ಕೆ ಹಾಲನ್ನು ಕೊಟ್ಟಳು ಈಗ ಪ್ರಾಣಿ ಸಂರಕ್ಷಣಾ ಸಂಘದವರು-ಅದನ್ನು ಈ ರೀತಿ ಉಳಿಸುವುದು ಅದಕ್ಕೆ ಹಿಂಸೆ ಕೊಟ್ಟಂತಾಗುವುದರಿಂದ ಅದನ್ನು ಕೊಲೆ ಮಾಡಬೇಕೆಂದು ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ, ತಲೆ ಕತ್ತರಿಸಿದ್ದರೂ ಅದು ಈಗ ಒಂದು ವಾರದಿಂದ ಎಲ್ಲೆಲ್ಲೂ ಕುಣಿದಾಡುತ್ತಿದೆ

ಹೊರನಾಡು ಕನ್ನಡಿಗರ ಸಮ್ಮೇಳನ

ಕರ್ಣಾಟಕದ ಹೊರಗಡೆ ಇರುವ ಕನ್ನಡಿಗರ ಸಮ್ಮೇಳನವು ಜಬ್ಬಲ್‌ಪುರದಲ್ಲಿ ಶ್ರೀ ಎಸ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಾಳೆ ಮತ್ತು ನಾಳಿದ್ದು ನಡೆಯುವುದು. ಮಧ್ಯಪ್ರಾಂತ್ಯದ ಸಚಿವರಾದ ಶ್ರೀ ಡಿ ಪಿ ಮಿಶ್ರಾರವರ ಅವರ ಆರಂಭೋತ್ಸವ ನಡೆಸುವರು

ಗ್ರೀಸಿನ ಮಂತ್ರಿಮಂಡಲದ ರಾಜೀನಾಮೆ

ಗ್ರೀಸಿನ ಪ್ರಧಾನಿ ಶ್ರೀ ಸ್ಯೂಫ್ಲೀಸ್‌ರವರು ತಮ್ಮ ಮಂತ್ರಿಮಂಡಲದ ಸಮೇತ ರಾಜೀನಾಮೆ ಇತ್ತಿದ್ದಾರೆ ಇದನ್ನು ರಾಜರು ಸ್ವೀಕರಿಸಿ, ಪ್ರತ್ಯೇಕ ಮಂತ್ರಿಮಂಡಲವನ್ನು ರಚಿಸುವಂತೆ ಅವರನ್ನೇ ಕೋರಿದ್ದಾರೆ ಮಾಕ ಸೆಸಿಸ್ ಎಂಬ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದ ಮಂತ್ರಿಮಂಡಲದ ಒತ್ತಾಯವನ್ನು ಅವರು ನಿರಾಕರಿಸಿದುದರಿಂದ ಮಂತ್ರಿಮಂಡಲದವರೇ ರಾಜೀನಾಮೆ ಕೊಡಬೇಕಾಯಿತು.

ಭಾರತಕ್ಕೆ ಇಟಲಿಯ ಅಕ್ಕಿ

೬೦ ಸಾವಿರ ಟನ್ ಅಕ್ಕಿಯನ್ನು ಭಾರತಕ್ಕೆ ಸರಬರಾಜು ಮಾಡಲು ಇಟಲಿಯು ಮುಂದೆ ಬಂದಿದೆ ಒಂದು ಟನ್ನಿಗೆ ೬೦೦ ರೂ ನಂತೆ ಮಾರಲು ಅದು ಒಪ್ಪಿದೆ

ದೆಹಲಿಯಲ್ಲಿ ಹುಚ್ಚುನಾಯಿ ಮತ್ತು ನರಿಗಳ ನಾಶ

ದೆಹಲಿ ನಗರದಲ್ಲಿ ಹುಚ್ಚು ರೋಗವನ್ನು ತಡೆಗಟ್ಟುವುದಕ್ಕಾಗಿ ರಸ್ತೆಗಳಲ್ಲಿ ತಿರುಗುತ್ತಿರುವ ನಾಯಿಗಳು ಮತ್ತು ನರಿಗಳನ್ನು ಕೊಂದು ಹಾಕಲು ಡಿಲ್ಲಿನ ಪುರಸಭೆಯವರು ನಿರ್ಧರಿಸಿದ್ದಾರೆ. ಕತ್ತಿಗೆ ಪಟ್ಟಿ ಇಲ್ಲದ ನಾಯಿಗಳನ್ನು ಹಿಡಿಯಲು ನಾಯಿ ಮಾಲೀಕರಿಗೆ ವಿಶೇಷ ವೇತನ ಕೊಡಲಾಗುತ್ತಿದೆ

Edited, printed and published by A R Nagarajan at the Sadhvi Press, D Subbiah Road, Mysore

ಅರಮನೆ ಜಪದಕಟ್ಟೆ ಮಠದ ಪ್ರಸಂಗ

ಅರಮನೆ ಜಪದಕಟ್ಟೆ ಮಠಕ್ಕೆ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳನ್ನು ಶಾಸ್ತ್ರೋಕ್ತವಾಗಿ ಉತ್ತರಾಧಿಕಾರಿಗಳಾಗಿ ನೇಮಿಸಲಾಗಿದ್ದರೂ ಅವರ ಹಿತಕ್ಕೆ ಧಕ್ಕೆ ಬರುವ ರೀತಿಯಲ್ಲಿ ಕೆಲವರು ಅನುಸರಿಸಿ, ಕಳೆದ ೧೦ ನೇ ತಾ॥ ಶ್ರೀ ಎಂ. ಎಲ್. ನಾಗಣ್ಣನವರ ಅಧ್ಯಕ್ಷತೆಯಲ್ಲಿ ಅವರುಗಳು ಒಂದು ಸಭೆ ನಡೆಸಿದರು ನೂತನ ಮಠಾಧಿಪತಿಗಳನ್ನು ತೆಗೆದುಹಾಕಿ ಬೇರೆಯವರನ್ನು ನೇಮಿಸಬೇಕೆಂದು ಚರಂತಿ ಶ್ರೀ ಚಂದ್ರಶೇಖರ ಶಿವಾಚಾರ್ಯರವರು ಸಭೆಯಲ್ಲಿ ತಿಳಿಸಿದರು ಅದಕ್ಕೆ ಕೆಲವರು ವಿರೋಧಿಸಿದಾಗ, ಅದನ್ನು ಅಧ್ಯಕ್ಷರು ತಳ್ಳಿಹಾಕಿದರು ಅದರ ಮೇಲೆ ಸಭೆಯಲ್ಲಿ ಗಲಭೆಯಾಗಿ, ಅಧ್ಯಕ್ಷರ ವರ್ತನೆಯನ್ನು ಖಂಡಿಸಿ, ಅನೇಕರು ಸಭಾಪರಿತ್ಯಾಗ ಮಾಡಿದರು- ಎಂಬುದಾಗಿ ಶ್ರೀಗಳಾದ ಎನ್. ಭೋಗಿಮಲ್ಲಯ್ಯ, ಜ ಸಿ ಶಿವಣ್ಣ, ಎಂ. ವಿ ಮಲ್ಲಪ್ಪ, ಎಂ ಸದಾಶಿವಪ್ಪ, ಮತ್ತು ಗೌಡರ ಸಿದ್ದಪ್ಪನವರುಗಳು ತಿಳಿಸಿದ್ದಾರೆ.

○ ನ್ಯಾಯಾಂಗ ಇಲಾಖೆಯ ಉದ್ಯೋಗಕ್ಕೆ ಮಹಿಳೆಯರೂ ಅರ್ಹರೆಂದು ಸಂಯುಕ್ತ ಪ್ರಾಂತ್ಯ ಸರ್ಕಾರದವರು ಆಜ್ಞೆಮಾಡಿರುತ್ತಾರೆ

ಪ್ರಭುದೇವಾ ಟಾಕೀಸ್ ಬಳಿ
೬೨ನೇ ನಂ. ಹಂಚಿನ ಮನೆ ಬಿಲೆಗಿದೆ.
ಬೆಲೆ ೬೦೦೦ ರೂ.
ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ಬಳಿ : ಮೈಸೂರು

ಕೃತಕ ಮಳೆಗಾಗಿ ಪ್ರಯೋಗ

ಭಾರತದ ಕೆಲವು ಪ್ರದೇಶಗಳಲ್ಲಿ ಮಳೆ ಬರಿಸಲು ಆಸ್ಟ್ರೇಲಿಯದ ವಿಜ್ಞಾನಿಗಳ ಸಹಾಯದಿಂದ ಭಾರತ ಸರ್ಕಾರದವರು ಸಂಶೋಧನೆ ನಡೆಸಲಿದೆಯೆಂದು ಹೇಳಲಾಗಿದೆ

ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಪ್ರದರ್ಶನಗಳು
15-4-49ರಿಂದ 5 ದಿನಗಳು
ವಾರ್ನರ್ಸ್‌ರವರ ಆಕರ್ಷಣೀಯ
ವರ್ಣರಂಜಿತ ಚಿತ್ರ
ದಿ ಅಡ್ವೆಂಚರ್ಸ್ ಆಫ್
ರಾಬಿನ್ ಹುಡ್
ಪಾತ್ರ:- ಎರಾಲ್ ಫ್ಲೈನ್,
ಒಲಿವಿಯಾ ಡಿ ಹೆವಿಲ್ಯಾಂಡ್
ಬೆಳಗಿನ ಪ್ರದರ್ಶನಗಳು
16-4-49ರಿಂದ 2 ದಿನಗಳು
ಬ್ಲಾಕ್ ಪ್ಯಾಂಥರ್

GRAND OPENING
LAKSHMI
THEATRE
100 Feet Road Mysore
Daily 3 Shows
From 15—4—49 with
PRAKASH'S
RAM
BAAN
Cast:- Shobhana Samarth, Prem Adib, Chandra. mohan and others
Note:- On 15th only one Show at 9-30 p. m.
ಸೂಚನೆ:- ಇದರ ಉತ್ಪತ್ತಿಯನ್ನು ಮಹಾತ್ಮ ಗಾಂಧೀಜಿ ಮೆಮೋರಿಯಲ್ ಫಂಡಿಗೆ ಅರ್ಪಿಸಲಾಗುತ್ತದೆ

ಟೆಂಡರ್ ನೋಟಿಫಿಕೇಷನ್

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರ ಆಫೀಸಿನಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಚಾಮರಾಜನಗರದ ತಾಲ್ಲೂಕು ಸಂತೆ ಮರಹಳ್ಳಿಯಲ್ಲಿ ಈ ಕೆಳಗೆ ನಮೂದಿಸಿರುವ ಕಟ್ಟಡಗಳನ್ನು ಕಟ್ಟಿಸಲು ಆಯಾ ಕಟ್ಟಡದ ಮುಂದೆ ನಮೂದಿಸಿರುವ ಮೊಬಲಗಿನ ಅಂದಾಜುಗಳು ಮಂಜೂರಾಗಿರುತ್ತವೆ ಅಲ್ಲದೆ ನಂಜನಗೂಡು ತಾಲ್ಲೂಕು ಮುದಹಳ್ಳಿ ಸಂತೆ ಮೈದಾನದಲ್ಲಿ ೧೩೬೦ ರೂ ಅಂದಾಜಿನಲ್ಲಿ ಮಾಂಸದ ಅಂಗಡಿ ಕಟ್ಟಲು ಅಂದಾಜು ಮಂಜೂರಾಗಿರುತ್ತದೆ.

ಸದರಿ ಕಟ್ಟಡಗಳ ಕೆಲಸವನ್ನು ಕೆಳಗೆ ಕಂಡ ಷರತ್ತುಗಳಿಗೆ ಅನುಸಾರವಾಗಿ ಕಟ್ಟಿಸಲು ಇಷ್ಟಪಡುವವರು ತಾ॥ ೧೮-೪ ನೇ ಸೋಮವಾರ ಸಾಯಂಕಾಲ ೩ ಘಂಟೆಯೊಳಗಾಗಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಆಫೀಸಿಗೆ ಸೀಲಾದ ಕವರಿನಲ್ಲಿ ಟೆಂಡರನ್ನು ಕಳುಹಿಸತಕ್ಕದ್ದು.

ಪ್ಲಾನು ಮತ್ತು ಅಂದಾಜನ್ನು ಜಿಲ್ಲಾ ಬೋರ್ಡು ಆಫೀಸಿನಲ್ಲಿ ರಜಾ ದಿನಗಳ ಹೊರತು ಉಳಿದ ದಿನಗಳಲ್ಲಿ ಪ್ರತಿದಿನ ೧೧ ಘಂಟೆಯಿಂದ ಸಾಯಂಕಾಲ ೫ ಘಂಟೆಯೊಳಗೆ ನೋಡಿ ಅವಶ್ಯಕವಾದ ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ಟೆಂಡರಿನ ಷರತ್ತುಗಳು

೧. ಪ್ರತಿಯೊಂದು ಕೆಲಸದ ಪರಮಾವಧಿ ಅಂದಾಜು ಆಯಾ ಕೆಲಸಕ್ಕೆ ನಮೂದಿಸಿರುವಂತೆ ಇರುತ್ತೆ.

೨. ಪ್ರತಿ ಟೆಂಡರಿನೊಂದಿಗೆ ಡಿಸ್ಟ್ರಿಕ್ಟ್ ಫಂಡಿಗೆ ಮೊದಲನೆಯ ಎರಡು ಕೆಲಸಗಳಿಗೆ ೭೦, ರೂ.ಗಳನ್ನೂ ಮೂರನೆಯ ಕೆಲಸಕ್ಕೆ ೧೦೦ ರೂಪಾಯಿಗಳನ್ನೂ ಜಮಾಮಾಡಿದ ಬಗ್ಗೆ ಚಲನ್ನು ಹಾಜರು ಪಡಿಸತಕ್ಕದ್ದು.

೩. ಟೆಂಡರು ಅಂದಾಜು ಮೊಬಲಗಿನ ಮೇಲೆ ಶೇಕಡಾವಾರು ಹೆಚ್ಚು ಕಡಿಮೆಯನ್ನು ಸೂಚಿಸಿ ಸ್ಪಷ್ಟವಾಗಿ ಬರೆದ ಟೆಂಡರನ್ನು ಕೊಡತಕ್ಕದ್ದು

೪. ಟೆಂಡರು ಮಂಜೂರಾದ ಮೂರು ತಿಂಗಳ ಒಳಗಾಗಿ ಕೆಲಸವನ್ನು ಪೂರೈಸಿ ಮಾಡಿ ಜಿಲ್ಲಾ ಬೋರ್ಡು ಛಾರ್ಜಿಗೆ ವಹಿಸತಕ್ಕದ್ದು.

೫. ಉತ್ತೀರ್ಣವಾದ ಟೆಂಡರುದಾರರು ಸರಿಯಾದ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟು ಕೆಲಸವನ್ನು ಕೈಕೊಳ್ಳತಕ್ಕದ್ದು

೬. ಟೆಂಡರನ್ನೂ ಅಂಗೀಕರಿಸುವ ವಿಷಯದಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಪೂರ್ಣ ಅಧಿಕಾರವಿರುತ್ತೆ

೭. ಕಮ್ಮಿಯಾದ ಟೆಂಡರನ್ನೂ ಅಂಗೀಕರಿಸಬೇಕೆಂಬ ನಿಯಮವಿರುವುದಿಲ್ಲ ಯಾವ ಕಾರಣವನ್ನೂ ತಿಳಿಸದೆ ಟೆಂಡರನ್ನು ನಿರಾಕರಿಸತಕ್ಕ ಅಧಿಕಾರ ಅಧ್ಯಕ್ಷರಿಗೆ ಇರುತ್ತದೆ.

೮. ಉತ್ತೀರ್ಣರಾದ ಟೆಂಡರುದಾರರು ಕೆಲಸವನ್ನು ಮತ್ತಾರಿಗೂ ಕೊಡಬಾರದು

೯. ಒಪ್ಪಿಕೊಂಡ ಕಾಲದಲ್ಲಿ ಕೆಲಸವನ್ನು ಪೂರೈಸದೇ ಇದ್ದರೆ ಟೆಂಡರು ಡಿಪಾಜಿಟ್ಟನ್ನು ಡಿಸ್ಟ್ರಿಕ್ಟ್ ಫಂಡಿಗೆ ದಂಡವಾಗಿ ತೆಗೆದುಕೊಳ್ಳಲಾಗುವುದು

೧೦. ಈ ಸಂದರ್ಭದಲ್ಲಿ ಬರಬಹುದಾದ ಎಲ್ಲಾ ತಕರಾರುಗಳ ವಿಷಯದಲ್ಲಿ ಜಿಲ್ಲಾ ಬೋರ್ಡು ತೀರ್ಮಾನವೇ ಅಧ್ಯಕ್ಷರು ತೀರ್ಮಾನವಾಗಿರತಕ್ಕದ್ದು

೧	ಮಾಂಸದ ಸ್ಟಾಲು ಕಟ್ಟಡ	೧೩೬೦	ಸಂತೆಮರಹಳ್ಳಿ, ಸಂತೆ ಮೈದಾನ
೨	ಟೋಲು ಷೆಡ್ಡು	೧೩೬೦	ಡಿಟೋ
೩	ಹೋಟಲು ಕಟ್ಟಡ	೧೬೫೦	ಡಿಟೋ
೪	ಮಾಂಸದ ಸ್ಟಾಲು ಕಟ್ಟಡ	೧೦೫೦	ಮುದಹಳ್ಳಿ ಸಂತೆ ಮೈದಾನ

ಅಧ್ಯಕ್ಷರು, ಜಿಲ್ಲಾ ಬೋರ್ಡು, ಮೈಸೂರು

ಮೈಸೂರು ಸ್ಟೇಟ್ ರೈಲ್ವೆ

ನಂ T.P 31 A. ಟ್ರಾಫಿಕ್ ಮ್ಯಾನೇಜರ್‌ರವರ ಕಛೇರಿ ಮೈಸೂರು ತಾ॥ 11ನೇ ಏಪ್ರಿಲ್ 1949

ಪ್ರಕಟಣೆ

1949ನೇ ಏಪ್ರಿಲ್ 15ನೇ ತಾರೀಖಿನಿಂದ ನಂ 55 ಮತ್ತು 56ನೇ ರೈಲುಗಳು ಅರಸೀಕೆರೆ ಮತ್ತು ಹರಿಹರ ಮಧ್ಯಭಾಗದಲ್ಲಿ ಕೆಳಗೆನಮೂದಿಸಿರುವ ಸಮಯಕ್ಕೆ ಕಾಲಗಳಲ್ಲಿ ಓಡುವುವು

ನಂ. 55ನೇ ರೈಲು

		ಹಾಲಿ ಇರುವುದು ಘಂ ನಿಮಿಷ	ಬದಲಾವಣೆ ಘಂ. ನಿಮಿಷ
ಅರಸೀಕೆರೆ	ಹೊರಡುವುದು	7 -00	6--00
ಬೀರೂರು	ಸೇರುವುದು	8—33	7--30
	ಹೊರಡುವುದು	8--38	8—10
ಚಿಕ್ಕಜಾಜೂರು	ಸೇರುವುದು	10—46	10- 29
ಹರಿಹರ	ಹೊರಡುವುದು	11- 12	11- 12
	ಸೇರುವುದು	13—05	13—05

ನಂ. 56ನೇ ರೈಲು

ಹರಿಹರ	ಹೊರಡುವುದು	6—25	14—45
ಚಿಕ್ಕಜಾಜೂರು	ಸೇರುವುದು	8—35	16—52
	ಹೊರಡುವುದು	8--45	17- 17
ಬೀರೂರು	ಸೇರುವುದು	11- 18	19- 50
	ಹೊರಡುವುದು	11 25	20 20
ಅರಸೀಕೆರೆ	ಸೇರುವುದು	13 00	21- 35

ಈ ಕೆಳಗೆ ನಮೂದಿಸಿರುವ ರೈಲುಗಳನ್ನು 1949ನೇ ಏಪ್ರಿಲ್ 15ನೇ ತಾರೀಖಿನಿಂದ ರದ್ದುಗೊಳಿಸಲಾಗಿದೆ

ನಂ 49	ಹರಿಹರ	ಹೊರಡುವುದು	14 20
	ದಾವಣಗೆರೆ	ಸೇರುವುದು	14- 47
ನಂ 50	..	ಹೊರಡುವುದು	15- 02
	ಹರಿಹರ	ಸೇರುವುದು	15- 22
ನಂ 61	ಅರಸೀಕೆರೆ	ಹೊರಡುವುದು	6 00
	ಬೀರೂರು	ಸೇರುವುದು	7- 30
ನಂ 62	.	ಹೊರಡುವುದು	20 20
	ಅರಸೀಕೆರೆ	ಸೇರುವುದು	21--35

(ಸಹಿ) ನಿಸಾರ್ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೧೬-೧೯೪೮ [ಸಂಚಿಕೆ ೨೧೧

ಬಂಧುಗಳ ಮೇಲೆ ನಿಜಾಮರ ಕಾರ್ಯಕ್ರಮ

...ದೇರು ಕೊಲೆ ಅಪಾದಿತನ ಖುಲಾಸೆ

...ರಾಜನಗರ ತಾಲ್ಲೂಕು ಕುದೇರಿ ... ೪೯ ನೇ ತಾ॥ ರಾತ್ರಿ ಭೋಗ ...ವರ ಮನೆಯಲ್ಲಿ ಅವರೂ, ಅವ... ಪುಟ್ಟನಂಜಮ್ಮ, ಪುತ್ರಿ ರೇವ... ಸೊಸೆ ರಾಜಮ್ಮ ಎಂಬುವರು ...ಲೆ ಮಾಡಿದರೆಂಬ ಅಪಾದನೆ ... ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ... ಶೆಟ್ಟಿ ಎಂಬುವನನ್ನು ಅಪೀಲಿ... ಹೈಕೋರ್ಟಿನವರು ಖುಲಾಸ...

...ಸ್ಸುಗಳಿಗೆ ಕಾಗದ

...ನದಲ್ಲಿ ೧೯೪೪ ನೇ ಜೂನ್ ೧... ...ಂದೀಚೆಗೆ ಸ್ಥಾಪಿತವಾದ ಫ್ರಿ... ...ಸ್ಸುಗಳು ಪೈಕಿ ಕಾಗದದ ಕೋ... ...ತೆಗೆದುಕೊಳ್ಳದಿರುವುಗಳು ಅದ... ...ಲು ಸಿವಿಲ್ ಸಪ್ಲೈಸ್ ಕಂ... ...ವರಿಗೆ ಇದೇ ೨೧ ನೇ ತಾ॥ ನೊ... ...ಯನ್ನು ಸಲ್ಲಿಸಬಹುದೆಂದು ... ಪ್ರಕಟಣೆ ತಿಳಿಸುತ್ತದೆ.

...ಯಸ್ಕರ ಶಿಕ್ಷಣ ದಿನಾಚರಣೆ

...ರು ಜಿಲ್ಲಾ ಮತ್ತು ನಗರ ವ... ...ಕ ಸಂಘದ ಆಶ್ರಯದಲ್ಲಿ ನಾಳ... ...೬-೩೦ ಗಂಟೆಗೆ ಅದಿಕರ್ನಾಟ... ...ಮಹಾಕಾಳಮ್ಮನವರ ದೇವ... ವಯಸ್ಕರ ಶಿಕ್ಷಣ ದಿನಾಚರಣೆ ...ಶ್ರೀ ಎಸ್. ಚನ್ನಯ್ಯನವರ ಅಧ್ಯ... ನಡೆಯುವುದು.

...ಸೂರಿಗೆ ಜಪಾನಿನ ಕುಶಲ ಕೆಲಸಗಾರರು

...ನದಲ್ಲಿ ಗೃಹ ಕೈಗಾರಿಕೆಯನ್ನು ...ವೃದ್ಧಿ ಪಡಿಸುವುದಕ್ಕಾಗಿ ಜಪಾನಿನಿಂ... ...ಲ ಕೆಲಸಗಾರರ ಸಂಸಾರಗಳ ...ತರಿಸಬೇಕೆಂದು ಸರ್ಕಾರದವನ್ನು ...ವ ನಿರ್ಣಯವು ಆರ್ಥಿಕ ... ...ಕೈಗಾರಿಕಾ ಮತ್ತು ವಾಣಿಜ್ಯ ...ರ ಸಮಿತಿಯಲ್ಲಿ ಅಂಗೀಕೃತ...

ಕೆರೆಯಲ್ಲಿ ಬಿದ್ದು ಮರಣ

...ಸ ಕುಕ್ಕನಹಳ್ಳಿ ಕೆರೆಯಲ್ಲಿ ... ಮೊಹಲ್ಲಾ ನಾಲಬಂದವಾಡಿ ... ವಯ್ಯನವರ ಮಗ ಪಾಪಣ್ಣ ... ವರ್ಷದ ಹುಡುಗನು ಚಟ್ಟೆಂಗೆ ... ಕಾಲುಜಾರಿ ಅಕಸ್ಮಾತ್ತಾಗಿ ... ಮೃತಪಟ್ಟನೆಂದು ತಿಳಿದು...

...ರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳ ಮುಷ್ಕರ

... ಸರ್ಕಾರಿ ಆಯುರ್ವೇದ ...ನಾನಿ ಕಾಲೇಜಿನ ವಿದ್ಯಾರ್ಥಿ... ...ಕುಂದುಕೊರತೆಗಳ ಬಗೆ... ತಿಂಗಳಿನಿಂದಲೂ ಮುಷ್ಕರ ... ಇಷ್ಟು ದಿನಗಳಾದರೂ ...ರು ಅದನ್ನು ನಿವಾರಿಸಲು ...ಕ್ರಮವನ್ನೂ ಕೈಗೊಂಡಿ... ...ಬಹು ವಿಷಾದಕರವೆಂದು ಅವ... ...ರು ತಿಳಿಸಿ ಬಂದು ಪತ್ರ ಒತ್ತೆ...

...ರ್ಮನ್ ಭಾಷೆಯಲ್ಲಿ ಗಾಂಧೀಜಿಯವರ ಆತ್ಮಕತೆ

... ಗಾಂಧೀಜಿಯವರ ಸತ್ಯ... ...ಆತ್ಮ ಕತೆಯನ್ನು ಜರ್ಮ... ...ಭಾಷಾಂತರ ಮಾಡಲು ಜರ್ಮ... ...ವಶೆ ಮಾಡಲಾಗಿದೆ

ಪತ್ರಿಕೆಗಳ ಮೇಲಿನ ಕ್ರಮದ ಬಗ್ಗೆ ಖಂಡನೆ

ಬೆಂಗಳೂರು ೧೬.

ಅಖಿಲ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದ ಸ್ಥಾಯಿ ಸಮಿತಿಯ ಸಭೆಯು ಮೊನ್ನೆ ಸಂಜೆ ಇಲ್ಲಿ ಶ್ರೀ ಎಂ ಎಲ್ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಸರ್ಕಾರದವರು ಪತ್ರಿಕೆಗಳ ಮೇಲೆ ನಡೆಸಿದ ದಬ್ಬಾಳಿಕೆ ಕಾರ್ಯಕ್ರಮವನ್ನು ಸಭೆಯು ಖಂಡಿಸಿ, ಪತ್ರಿಕೆಗಳನ್ನು ನಿಲ್ಲಿಸಿದುದು, ಠೇವಣಿ ಕೇಳಿದುದು ಮತ್ತು ಪತ್ರಿಕೆಗಳ ಸಂಪಾದಕರ ಬಂಧನ ಇವೇ ಮುಂತಾದ ಕ್ರಮಗಳು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುವೆಂದೂ ಈ ಬಗೆಯ ಕಾರ್ಯಕ್ರಮವನ್ನು ನಿಲ್ಲಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡಬೇಕೆಂದೂ ನಿರ್ಣಯ ಮಾಡಲಾಯಿತು

ಪತ್ರಿಕಾ ಸಲಹಾ ಸಮಿತಿಯ ಬಗೆ ಹಿಂದಿನ ಸಮ್ಮೇಳನದಲ್ಲಿ ಮಾಡಿದ ನಿರ್ಣಯಕ್ಕೆ ಸರ್ಕಾರದವರು ಬೆಲೆ ಕೊಡಬೇಕೆಂದೂ ಪ್ರಾರ್ಥಿಸಲಾಯಿತು.

ಸಿಡಬಿನ ಕಲೆ ನಿರ್ಮೂಲ ಮಾಡಲು ಚಿಕಿತ್ಸೆ

ಅಮೇರಿಕದ ಅಟ್ಲಾಂಟದ ಪ್ಲಾಸ್ಟಿಕ್ ವೈದ್ಯರೊಬ್ಬರು ಸಿಡುಬಿನ ಕಲೆಗಳನ್ನು ಮುಖದಿಂದ ತೆಗೆದುಹಾಕಲು ಚಿಕಿತ್ಸೆಯೊಂದನ್ನು ಕಂಡುಹಿಡಿದಿದ್ದಾರೆ

ಕಾರು ರಾಗಿ ಬೆಳೆ ಕಾರ್ಯಕ್ರಮ

ಮಂಡ್ಯ ಜಿಲ್ಲೆಯ ಹಲವು ಭಾಗಗಳಲ್ಲಿ ಕೈಗೊಳ್ಳಲಾಗಿರುವ ಕಾರು ರಾಗಿ ಬೆಳೆಯ ಯೋಜನೆಯ ಅಂಗವಾಗಿ ಈಗಾಗಲೇ ಸುಮಾರು ಹತ್ತು ಸಾವಿರ ಎಕರೆ ಜಮೀನುಗಳಲ್ಲಿ ವ್ಯವಸಾಯ ಕೆಲಸವು ನಡೆಯುತ್ತಿದೆ ಸುಮಾರು ಐವತ್ತು ಸಾವಿರ ಪಲ್ಲಗಳಾಗಿ ಬರುವುದೆಂದು ಸಾಮಾನ್ಯವಾಗಿ ಅಂದಾಜು ಮಾಡಲಾಗಿದೆ

ಶತ್ರು ವಿಮಾನಗಳನ್ನು ನಾಶ ಪಡಿಸುವ ನೂತನ ಯಂತ್ರ

ರಾಡಾರ್ ಯಂತ್ರದಿಂದ ಶತ್ರು ವಿಮಾನಗಳನ್ನು ಪತ್ತೆ ಮಾಡಲು ನೂತನ ಸಾಧನವನ್ನು ಅಮೇರಿಕದಲ್ಲಿ ಕಂಡುಹಿಡಿಯಲಾಗಿದೆ ವಿಮಾನಗಳ ಮೂಲಕ ... ತಿವೇಗವಾಗಿ ... ಶತ್ರು ವಿಮಾನಗಳನ್ನು ನಾಶಪಡಿಸ... ...

ಇನ್ನು ಮುಂದೆ ಮೈಸೂರು ವಿಮಾನದಲ್ಲೇ ಪಟೇಲರ ಪ್ರಯಾಣ

ಇನ್ನು ಮುಂದೆ ಮೈಸೂರು ಡಕೋಟಾ ವಿಮಾನವನ್ನು ಬಿಟ್ಟು ಇನ್ನಾವುದರಲ್ಲೂ ಪ್ರಯಾಣ ಮಾಡುವುದಿಲ್ಲವೆಂದು ಭಾರತದ ಉಪಪ್ರಧಾನಿ ಸರ್ದಾರ್ ಪಟೇಲರು ನಿರ್ಧರಿಸಿರುವುದಾಗಿ ತಮಗೆ ತಿಳಿಸಿದರೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ಧಲಿಂಗಯ್ಯನವರು ದೆಹಲಿಯಿಂದ ಮೊನ್ನೆ ಹಿಂತಿರುಗಿದಾಗ ತಿಳಿಸಿರುತ್ತಾರೆ

ಕಾಲಾತೀತವಾಗಿ ಟೀ ಮಾರಿದ್ದಕ್ಕೆ ದಂಡ

ರಾಜಧಾನಿಯ ಅರೋಕಾ ರಸ್ತೆಯಲ್ಲಿ ... ಟೀ ಅಂಗಡಿಯಲ್ಲಿ ಈ ದಿನ ರಾಮಯ್ಯ ಎಂಬುವರು ಅಕಾಲದಲ್ಲಿ ಟೀ ಕೊಡುತ್ತಿದ್ದರೆಂಬ ಅಪಾದನೆಯ ಮೇಲೆ ಅವರಿಗೆ ... ರೂ ದಂಡವನ್ನು ವಿಧಿಸಲಾಗಿದೆ

ಬಂಗಾಳಾ ಪ್ರಧಾನಿ ಆಗಮನ

ಬಂಗಾಳದ ಪ್ರಧಾನಿ ಡಾ| ಬಿ ಸಿ ರಾಯ್‌ರವರು ನಿನ್ನೆ ಬೆಂಗಳೂರಿಗೆ ವಿಶ್ರಾಂತಿಗಾಗಿ ಆಗಮಿಸಿದರು ಅವರು ನಾಳಿದ್ದು ಕಲ್ಕತ್ತೆಗೆ ವಾಪಸು ತೆರಳುವರು.

ಶ್ರೀರಾಮ ಪಟ್ಟಾಭಿಷೇಕ

ರಾಜಧಾನಿಯ ಲಕ್ಷ್ಮೀಪುರದ ಸೀತಾರಾಮರಾವ್ ರಸ್ತೆಯಲ್ಲಿರುವ ಪ್ರಸನ್ನ ಬಾಲಕ ಶ್ರೀರಾಮ ಮಂದಿರದಲ್ಲಿ ನಾಳೆ ಮಧ್ಯಾಹ್ನ ... ಘಂಟೆಗೆ ಪಟ್ಟಾಭಿಷೇಕ ಮತ್ತು ಸಂಜೆ ... ಘಂಟೆಗೆ ಕುಮಾರಿ ... ಗರವರಿಂದ ಸಂಗೀತವೂ ನಡೆಯುವುವು

ವೃತ್ತಪತ್ರಿಕೆಗಳ ಮೇಲಿನ ಮಾರಾಟ ತೆರಿಗೆ ರದ್ದು

ಸಂಸ್ಥಾನದ ವೃತ್ತಪತ್ರಿಕೆಗಳ ಮೇಲೆ ಹಾಕಿರುವ ಮಾರಾಟದ ತೆರಿಗೆಯನ್ನು ರದ್ದುಗೊಳಿಸಲು ಸರಕಾರವು ನಿರ್ಧರಿಸಿದೆ ... ಅದರ ಬದಲು ... ಮೇಲೆ ತೆರಿಗೆ ಹಾಕುವ ವಿಷಯವನ್ನು ಸರಕಾರದವರು ಪರಿಶೀಲಿಸುತ್ತಿದ್ದಾರೆಂದೂ ತಿಳಿದುಬಂದಿದೆ

೩ ಜನ ಕಮ್ಯೂನಿಸ್ಟರ ಕೊಲೆ

... ಜಿಲ್ಲೆಯ ... ಪ್ರದೇಶದಲ್ಲಿ ... ಕಮ್ಯೂನಿಸ್ಟರನ್ನು ... ಪೊಲೀಸರು ... ಗುಂಡು ಹಾರಿಸಿ ... ಕೊಲ್ಲಲಾಗಿದೆ

ಪೂರ್ವ ಪಂಜಾಬ್ ಪ್ರಧಾನಿಯ ಮೇಲೆ ಕ್ರಮ

೩ ದಿನಗಳ ಹಿಂದೆ ರಚಿತವಾದ ಶ್ರೀ ಭೀಮಸೇನ್ ಸಾಚಾರವರ ಪೂರ್ವ ಪಂಜಾಬ್ ಮಂತ್ರಿ ಮಂಡಲವು ಈಗ ಬದಲಾವಣೆಯಾಗುವ ಸ್ಥಿತಿಗೆ ಬಂದಿದೆ ಶ್ರೀ ಸಾಚಾರವರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಇತ್ತ ಸಲಹೆಯನ್ನು ಉಲ್ಲಂಘಿಸಿದುದಲ್ಲದೆ, ತಾವು ಕೊಟ್ಟ ಭರವಸೆಯನ್ನು ಈಡೇರಿಸಲಿಲ್ಲವೆಂದು ಅವರ ಮೇಲೆ ದೂರು ಹೊರಿಸಿ, ವಿವರಣೆಗಳನ್ನು ಅವರಿಂದ ಕೇಳಲಾಗಿದೆ ಶ್ರೀ ಸಾಚಾರವರು ನೇಮಿಸಿದ್ದ ೭ ಜನ ಉಪಮಂತ್ರಿಗಳು ವಜಾ ಆಗುವುದರಲ್ಲಿದ್ದಾರೆ.

ಪಾಕೀಸ್ಥಾನದಿಂದ ೮೦ ಬಾರಿ ಒಪ್ಪಂದದ ಭಂಗ

ಕಾಶ್ಮೀರದ ಜಮ್ಮು ಪ್ರದೇಶದಲ್ಲಿ ಪಾಕಿಸ್ಥಾನ ಸೈನ್ಯದವರು ಕದನ ನಿಲ್ಲಿಸುವ ಒಪ್ಪಂದವನ್ನು ೮೦ ಬಾರಿ ಮುರಿದಿದ್ದಾರೆಂದು ಹೇಳಲಾಗಿದೆ

ತಮ್ಮ ಮನೆತನದವರ ಮೇಲೆ ನೈಜಾಮರ ಪ್ರತಿಬಂಧಕ

ನೈಜಾಮರ ಮನೆತನಕ್ಕೆ ಸೇರಿದ ೭ ಜನ ಸಾಹೇಬ್ ಜಾದಾರುಗಳು ಅರಮನೆ ಕಛೇರಿಗೆ ಕಾಲಿಡಕೂಡದೆಂದು ನೈಜಾಮರು ಆಜ್ಞೆ ಮಾಡಿರುತ್ತಾರೆ. ನೈಜಾಮರ ಸ್ವಂತ ಜಮೀನುಗಳನ್ನು ಸರಕಾರಕ್ಕೆ ವಹಿಸಿಕೊಟ್ಟಮೇಲೆ, ತಮಗೆ ಹೆಚ್ಚು ವೇತನ ಕೊಡಬೇಕೆಂದು ಅವರುಗಳು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು.

ವಿಂಧ್ಯ ಸಂಸ್ಥಾನದ ಆಡಳಿತ ಭಾರತಕ್ಕೆ

ವಿಂಧ್ಯಪ್ರದೇಶಗಳ ಸಂಸ್ಥಾನದ ಸಚಿವರುಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿ, ಅವರೆಲ್ಲರೂ ರಾಜೀನಾಮೆ ಇತ್ತಿದ್ದಾರೆ ಈಗ ಅದರ ಆಡಳಿತವನ್ನು ಭಾರತ ಸರ್ಕಾರವು ವಹಿಸಿಕೊಂಡಿದೆ.

ಮುಚ್ಚಿಟ್ಟಿದ್ದ ಪೂಜಾರಿಯ ಹಣದ ಮಾಯ

ಬರೋಡಾ ಸಂಸ್ಥಾನದ ಲೂನವಾಡ ಎಂಬ ಗ್ರಾಮದ ಪೂಜಾರಿಯೊಬ್ಬನು ಅನೇಕ ವರ್ಷಗಳ ಹಿಂದೆ ದೇವಸ್ಥಾನದ ಗೋಡೆಯಲ್ಲಿ ರಂಧ್ರ ಮಾಡಿ ೧೩ ಸಾವಿರ ರೂ. ಬೆಲೆಬಾಳುವ ಬಂಗಾರದ ನಾಣ್ಯಗಳನ್ನು ಮುಚ್ಚಿಟ್ಟು ಅವರ ಕೆಳಗೆ ಭಗವದ್ಗೀತೆಯನ್ನು ಇಟ್ಟಿದ್ದನೆಂದೂ, ಈಗ ಪುಸ್ತಕವು ಮಾತ್ರ ಇದ್ದು, ಹಣ ಮಾಯವಾಗಿದೆಯೆಂದೂ, ವರದಿಯಾಗಿದೆ.

೨॥ ಲಕ್ಷ ಎಕರೆ ಬಂಜರು ಜಮೀನು ಸಾಗುವಳಿಗೆ

ಮಧ್ಯಪ್ರಾಂತ್ಯ ಮತ್ತು ಬಿಹಾರಿನ ಸರ್ಕಾರದವರು ಈ ವರ್ಷ ... ಎಕರೆ ಬಂಜರು ಜಮೀನುಗಳನ್ನು ಸಾಗುವಳಿಗೆ ತಂದಿದ್ದಾರೆ

ರಹಸ್ಯ ಮರಣಗಳು

... ಗೋಕರ್ಣ ತೀರದಲ್ಲಿ ಮೊನ್ನೆ ದಿನ ... ಶವವು ತೇಲಿ ಬಂದಿತಂದೂ, ಕಳೆದ ಮೂರು ವಾರಗಳಲ್ಲಿ ಇದೇ ರೀತಿಯಾಗಿ ... ಶವಗಳು ಕಂಡುಬಂದುವೆಂದೂ ವರದಿಯಾಗಿದೆ ಶವಗಳಲ್ಲಿ ... ಜನ ಹೆಂಗಸರು ... ಮಂದಿ ಗಂಡಸರು ಮತ್ತು ... ಈ ರಹಸ್ಯವನ್ನು ಪತ್ತೆಮಾಡಲು ಪೋಲೀಸರು ತರ... ...

ಲಕ್ಷ್ಮೀ ಟಾಕೀಸಿನ ಪ್ರಾರಂಭೋತ್ಸವ

ಮೈಸೂರು ೧೬

ರಾಜಸ್ಥಾನಿ ನಾರಾಯಣ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಲಕ್ಷ್ಮೀ ಟಾಕೀಸಿನ ಪ್ರಾರಂಭೋತ್ಸವವನ್ನು ಕಾರ್ಮಿಕ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ನಿನ್ನೆ ಸಂಜೆ ನೆರವೇರಿಸಿದರು. ಮಾಲೀಕರಾದ ಶ್ರೀ ಎಸ್ ವಿ ಭಾಟಿಯಾರವರು ಎಲ್ಲರನ್ನೂ ಸ್ವಾಗತಿಸಿದರು. ಸಚಿವರು ಪ್ರಾರಂಭೋತ್ಸವವನ್ನು ನೆರವೇರಿಸಿ ಸಂಸ್ಥಾನದಲ್ಲಿ ಸಿನಿಮಾ ಮಂದಿರಗಳು ಹೆಚ್ಚುತ್ತಿರುವ ಬಗೆ ಸಂತೋಷವನ್ನು ವ್ಯಕ್ತಪಡಿಸಿದರು. ಆದರೆ ಪರದೇಶಗಳಿಂದ ಚಿತ್ರಗಳು ಬಂದು ಅವುಗಳ ಬಾಡಿಗೆಯ ರೂಪದಲ್ಲಿ ಹೆಚ್ಚು ಹಣ ಸಾಗಿ ಹೋಗುತ್ತಿದೆ ಇದನ್ನು ನಿಲ್ಲಿಸಲು ಭಾರತದಲ್ಲಿ ಉತ್ತಮವಾದ ಚಿತ್ರಗಳು ತಯಾರಾಗಬೇಕು. ಕಲಾ ದೃಷ್ಟಿಯಿಂದ ನಮ್ಮ ಚಿತ್ರಗಳು ಸಮರ್ಪಕವಾಗಿಲ್ಲದುದರಿಂದ ಅವುಗಳು ಹೊರದೇಶಗಳಿಗೆ ಹೋಗುತ್ತಿಲ್ಲ ಇದನ್ನು ಸರಿಪಡಿಸಬೇಕು ಭಾರತೀಯ ಸಂಸ್ಕೃತಿಗೆ ಕಳಂಕ ಪ್ರಾಯವಾಗುವ ಚಿತ್ರಗಳನ್ನು ತಯಾರಿಸುವುದನ್ನು ನಿಲ್ಲಿಸಬೇಕು ಎಂದು ಅವರು ಹೇಳಿದರು

ರಾಮಬಾಣ ಎಂಬ ಹಿಂದೀ ಚಿತ್ರವನ್ನು ಪ್ರದರ್ಶಿಸಲಾಯಿತು ಅನಂತರ ಆಹ್ವಾನಿತರೆಲ್ಲರನ್ನೂ ಪುಷ್ಪ ತಾಂಬೂಲಗಳಿಂದ ಸತ್ಕರಿಸಲಾಯಿತು. ಮಂದಿರವು ಇಥುನಿಕ ಸೌಕರ್ಯಗಳಿಂದ ಸಜ್ಜುಗೊಳಿಸಲ್ಪಟ್ಟು ಶ್ರೇಷ್ಠ ರೀತಿಯಲ್ಲಿ ಕಟ್ಟಿಸಲ್ಪಟ್ಟಿದೆ

ಪ್ರಾಣಿಗಳಿಗೂ ಬಿಸಿಲಿನ ತಾಪ

ಲಕ್ನೋನಲ್ಲಿ ವಿಪರೀತ ಬಿಸಿ ಇರುವುದರಿಂದ, ಅಲ್ಲಿನ ಮೃಗಾಲಯದಲ್ಲಿರುವ ಕರಡಿ ಮತ್ತು ಇತರ ನಾಲ್ಕು ಪ್ರಾಣಿಗಳನ್ನು ತಣ್ಣಗಿರುವ ಪ್ರದೇಶಕ್ಕೆ ರವಾನಿಸಲಾಗುವುದೆಂದು ಹೇಳಲಾಗಿದೆ

ಮಿಂಚು ಹೊಡೆದು ೩ ಜನರ ಮರಣ

ತಲಿಚೆರಿಯ ಸಮೀಪದಲ್ಲಿರುವ ತಿರುವತೂರು ಎಂಬಲ್ಲಿ ಒಬ್ಬ ಗರ್ಭಿಣಿ ಹೆಂಗಸು, ಆಕೆಯ ಎರಡು ವರ್ಷದ ಮಗು ಮತ್ತು ಇನ್ನೊಬ್ಬ ಮನುಷ್ಯ ಇವರಿಗೆ ಮಿಂಚು ಹೊಡೆದು ಕೂಡಲೇ ಸತ್ತುಹೋದರೆಂದು ವರದಿಯಾಗಿದೆ

ರಷ್ಯದಲ್ಲಿ ೩೯ ಸಾವಿರ ಜನ ೧೦೦ ವರ್ಷಕ್ಕೆ ಮೇಲ್ಪಟ್ಟವರು

ರಷ್ಯದಲ್ಲಿ ೧೦೦ ವಯಸ್ಸಿಗೆ ಮೀರಿದವರು ೩೯ ಸಾವಿರ ಜನರಿರುವರೆಂದು ಹೇಳಲಾಗಿದೆ ಅವರುಗಳ ಜೀವನ ಚರಿತ್ರೆಯ ಬಗ್ಗೆ ಚಲನ ಚಿತ್ರವನ್ನು ತಯಾರಿಸಲಾಗಿದೆ ಅದರಲ್ಲಿ ೧೪೭ ವರ್ಷದ ರಯಿಜ್ ಎಂಬ ರೈತನ ಚಿತ್ರವನ್ನೂ ತೋರಿಸಲಾಗಿದೆ

ಬೆಂಗಳೂರಿನಲ್ಲಿ ಕೆ.ಪಿ.ಸಿ.ಸಿ,

ಇದೇ ೨೦ನೇ ತಾ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಬೆಂಗಳೂರಿನಲ್ಲಿ ನಡೆಯುವುದು

ಮೊದಲನೆ ಮಗುವನ್ನು ನದಿಗೆ ಹಾಕುವುದಾಗಿ ಹರಕೆ!

ಡಾಕಾ ಬಳಿ ಇರುವ ಮುಕ್ತಾಗಚ ಎಂಬಲ್ಲಿನ ಮಹಿಳೆಯೊಬ್ಬಳಿಗೆ ಮಕ್ಕಳಿಲ್ಲದಿದ್ದುದರಿಂದ ತನಗೆ ಹುಟ್ಟುವ ಮೊದಲನೆಯ ಮಗುವನ್ನು ಬ್ರಹ್ಮಪುತ್ರಾನದಿಗೆ ಅರ್ಪಿಸುವುದಾಗಿ ಹರಕೆ ಮಾಡಿಕೊಂಡಿದ್ದಳು ೧೦ ವರ್ಷಗಳಾದನಂತರ ಆಕೆಗೆ ಮಗುವು ಜನನವಾಯಿತು ಅದನ್ನು ೧॥ ವರ್ಷ ಸಲಹಿ ಕೊನೆಯಲ್ಲಿ ಮೊನ್ನೆ ಮಗುವನ್ನು ನದಿಗೆ ಹಾಕಿದಳು ಅಲ್ಲಿದ್ದ ಜನರು ಅದನ್ನು ಸಂರಕ್ಷಿಸಿ ವಾಪಸು ಆಕೆಗೆ ಕೊಡಲು ಬಂದಾಗ ದೇವರಿಗೆ ಅರ್ಪಿಸಿದನಂತರ ಅದನ್ನು ವಾಪಸು ತೆಗೆದುಕೊಳ್ಳುವುದಿಲ್ಲವೆಂದು ನಿರಾಕರಿಸಿದಳು ಆ ಮಗುವನ್ನು ಬೇರೊಬ್ಬ ಹೆಂಗಸು ತೆಗೆದುಕೊಂಡು ಹೋದಳು

ಒಂದು ಮೊಟ್ಟೆಯಲ್ಲಿ ೩ ಮೊಟ್ಟೆ

ಪ್ರಪಂಚದಲ್ಲೇ ಅತ್ಯಂತ ಆಶ್ಚರ್ಯಕರವಾದ ಮೊಟ್ಟೆಯನ್ನು ಅಮೆರಿಕದ ಜಾರ್ಜಿಯದಲ್ಲಿ ಕೋಳಿಯು ಹಾಕಿದೆಯೆಂದೂ ಒಂದರೊಳಗೊಂದರಂತೆ ಅದರಲ್ಲಿ ಮೂರು ಮೊಟ್ಟೆಗಳಿವೆಯೆಂದೂ ವರದಿಯಾಗಿದೆ ಮೊಟ್ಟೆಯ ಹೊರಗಡೆಭಾಗವು ೬ ಅಂಗುಲಗಳ ಸುತ್ತಳತೆ ಇದೆ

ರಾಮೋತ್ಸವಗಳು

ಚಾಮರಾಜ ಮೊಹಲ್ಲ ಗೊಲ್ಲಗೇರಿಯಲ್ಲಿರುವ ಜಾನಕಿ ರಾಮ ಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ಯಂ.ಪಿ ನಾಗಪ್ಪ ಮತ್ತು ಪಾರ್ಟಿಯವರಿಂದ ಸಂಗೀತ.

ವಿವರಾಂಪೇಟೆ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ಬೆಳಗ್ಗೆ ೧೦ ಗಂಟೆಗೆ ಪಟ್ಟಾಭಿಷೇಕ ಮತ್ತು ಸಂಜೆ ೬-೩೦ ಗಂಟೆಗೆ ಆರ್ಕೆಸ್ಟ್ರಾ

ಸಣ್ಣ ವಯಸ್ಸಿನಲ್ಲೇ ವಿವಾಹವಾಗಬೇಕು

ಅಮೆರಿಕದಲ್ಲಿ ವಿಶೇಷವಾಗಿ ಸಂಭವಿಸುತ್ತಿರುವ ವಿವಾಹಚ್ಛೇದನವನ್ನು ತಡೆಗಟ್ಟಲು ಸಣ್ಣವಯಸ್ಸಿನಲ್ಲೇ ವಿವಾಹವಾಗಬೇಕೆಂದು ಅಮೆರಿಕದ ಜನರು ಅಭಿಪ್ರಾಯ ಪಡುತ್ತಿರುವರೆಂದು ಡಾ॥ ದೇಶಮುಖ್‌ರವರು ತಿಳಿಸಿರುತ್ತಾರೆ. ಹೆಚ್ಚಿನ ವಯಸ್ಸಾದ ಮೇಲೆ ಮದುವೆಯಾಗುವುದರಿಂದ ದಂಪತಿಗಳು ತಮ್ಮ ಹಿಂದಿನ ಅನುಭವಗಳನ್ನು ಜ್ಞಾಪಿಸಿಕೊಂಡು ಅದರಿಂದ ಜಗಳ ಉಂಟಾಗಿ ಮನೆಗಳು ಹಾಳಾಗುತ್ತಿವೆ ಎಂಬುದು ಅಮೆರಿಕನರ ಅಭಿಪ್ರಾಯವೆಂದೂ ಅವರು ತಿಳಿಸಿರುತ್ತಾರೆ

ಮೈಸೂರು ಸ್ಟೇಟ್ ರೈಲ್ವೆ

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್‌ರವರ ಕಛೇರಿ ಎಂ.ಎಸ್ ರೈಲ್ವೆ
ಮೈಸೂರು 9—4 -49

ಮೈಸೂರು ಸಿಟಿ ರೈಲ್ವೆ ನಿಲ್ದಾಣದಲ್ಲಿ ಸೈಕಲ್ ಸ್ಟಾಂಡನ್ನು ನಡೆಸುವ ಕಂಟ್ರಾಕ್ಟ್ ಬಗ್ಗೆ ಟೆಂಡರು.

1. 1949ನೇ ಮೇ ತಿಂಗಳು 1ನೇ ತಾ॥ನಿಂದ 1950ನೇ ಏಪ್ರಿಲ್ ತಿಂಗಳು 30ನೇ ತಾ॥ವರೆವಿಗೆ ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಸೈಕಲ್ ಸ್ಟಾಂಡನ್ನು ನಡೆಸುವ ಬಗ್ಗೆ ಟೆಂಡರನ್ನು ಕರೆಯಲಾಗಿದೆ.

2. 50 ರೂ. (ಐವತ್ತು ರೂ) ಮೊಬಲಗನ್ನು ಮೈಸೂರು ಎಂ.ಎಸ್ ರೈಲ್ವೆಯ ಚೀಫ್ ಆಡಿಟರವರಲ್ಲಿ ಡಿಪಾಜಿಟ್ ಮಾಡಿ, ಅದರ ರಶೀತಿಯನ್ನು ಟೆಂಡರ್ ಸಂಗಡ ಕಳುಹಿಸತಕ್ಕದ್ದು.

3. ಕಂಟ್ರಾಕ್ಟಿನ ಕರಾರು ಮತ್ತು ಷರತ್ತುಗಳ ವಿವರಗಳನ್ನು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್, ಎಂ ಎಸ್. ರೈಲ್ವೆ. ಮೈಸೂರುರವರಿಗೆ ಅರ್ಜಿ ಹಾಕಿಕೊಂಡು ಪಡೆಯಬಹುದು.

4. "ಮೈಸೂರು ರೈಲ್ವೆ ಸ್ಟೇಷನ್ನಿನಲ್ಲಿ ಸೈಕಲ್ ಸ್ಟಾಂಡ್ ಕಂಟ್ರಾಕ್ಟಿಗಾಗಿ ಟೆಂಡರ್"ಎಂದು ನಮೂದಿಸಿರುವ ಟೆಂಡರನ್ನು 1949ನೇ ಏಪ್ರಿಲ್ 25ನೇ ತಾ॥ ಮಧ್ಯಾಹ್ನ 3 ಗಂಟೆಯವರೆಗೆ ಸ್ವೀಕರಿಸಲಾಗುವುದು

ಕೆ.ಎಸ್. ಶಂಕರಯ್ಯ,
ಅ॥ ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟ್

ಜಿಲ್ಲಾ ಚಿಕ್ಕಿನಿಂದ ನಡೆಯುವ

ಅಮೋಘವಾದ ಭಾರಿ ಕುಸ್ತಿಗಳು

17- 4- 49ನೇ ಭಾನುವಾರ ದೊಡ್ಡಕೆರೆ ಫುಟ್‌ಬಾಲ್ ಮೈದಾನದಲ್ಲಿ

ಪಂಜಾಬಿ ಪೈ॥ ಧರ್ಮಸಿಂಗಿಗೂ — ಸಿತಾರ ಪೈ॥ ಬಾಪೂಗೂ
ಸ್ಟಾರ್ ಪೈ॥ ರಾಮುಗೂ - ಕೋಲಾರ ಪೈ॥ ಸಣ್ಣಬೋರಯ್ಯನಿಗೂ
ಪೈ॥ ಸಾಬುಲಾಲ್‌ಗೂ, - ಬೆಂಗಳೂರು ಕಂಟೋನ್ಮೆಂಟ್ ಪೈ॥ ಅಕ್ಬರ್‌ಗೂ
ಪಡುವಾರಹಳ್ಳಿ ಪೈ॥ ಕೆಂಚಪ್ಪನಿಗೂ ವೀರನಗೆರೆ ಪೈ॥ ಮಹಾದೇವುಗೂ
ಪೈ॥ ಬುಡ್ಡನಿಗೂ, - ಪೈ॥ ಸಿದ್ದಪ್ಪನಿಗೂ
ತಮಾಷ್ ಮೇಲ್ ಶಿವಪ್ಪನಿಗೂ ಪೈ॥ ಎಕ್ಸ್‌ಪ್ರೆಸ್ ಸೀನಪ್ಪನಿಗೂ
ನಂಜನಗೂಡು ಕೃಷ್ಣಪ್ಪನಿಗೂ — ವೀರನಗೆರೆ ಚಿಕ್ಕರಾಮುಗೂ

ಸೀಟು ೦—೨—೧೧ ಕುರ್ಚಿ ೧—೮—೦ ಬೆಂಚು ೨—೦—೧



ಆರಾಮ ಕುರ್ಚಿಯ ಕ್ಯಾನ್ವಾಸ್ ಬಟ್ಟೆ
ಮತ್ತು ಮಕ್ಕಳ ತೊಟ್ಟಿಲಿಗೆ ಹಾಸುವ
ರಬ್ಬರ್ ಷೀಟ್

ಒಳ್ಳೆ ನಮೂನೆಗಳಲ್ಲಿ ಬಂದಿವೆ

ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು.

ಬರ್ಮಾಕ್ಕೆ ಭಾರತದ ಸಹಾಯ

ಬರ್ಮಾದಲ್ಲಿ ... ಅನ್ನು ತಡೆಗಟ್ಟಲು ... ಗಳನ್ನು ... ತವು ಸಹಾಯ ಮಾಡಬೇಕೆಂದು ... ಪ್ರಧಾನಿ ... ರವರು ... ರೂರವರಲ್ಲಿ ... ತಿಳಿದುಬಂದಿದೆ

ಮೈಸೂರು ಪತ್ರಿಕೋದ್ಯಮಿಗಳ ಸಮ್ಮೇಳನ

ಮೂರು ದಿನ ... ಗಳಲ್ಲಿ ಅಖಿಲ ಮೈಸೂರು ಪತ್ರಿಕೋ... ಗೆ ಸಮ್ಮೇಳನದ ... ಬೆಂಗಳೂರಿನಲ್ಲಿ ನಡೆಯುವ ... ಅ ಧ್ಯಕ್ಷರ ... ದೆಂದು ತಿಳಿಸಲಾಗಿದೆ ... ಮೈಸೂರಿನ ಪತ್ರಿಕೆ ... ಬೇಕಾಗುವವರು ... ನೇ ತಾ॥ ಒಳಗಾಗಿ ಕಳುಹಿಸ... ಕೋರಲಾಗಿದೆ.

ರಾಜಕಮಲ್

ಮೈಸೂರು

15-4-49 ರಿಂದ
ಅಮೋಘವಾದ ೮ನೇ ವಾರ
ಪ್ರತಿದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ:- ವರಲಕ್ಷ್ಮಿ, ಲ...
ರಾಜ್ಯಂ, ಪ್ರಕಾಶರಾವ್,
ಪ್ರಸಾದ್

Morning Shows From
15-4-49 for 4 days

A Matter of Life & Death

(In Technicolor)

-With:-
David Niven, Raymond Massey, Roger Livesey

ಶ್ರೀ

ರಮಣಿ ಹಲ್ಲುಪು...

ಎಲ್ಲಾ ವಿಧವಾದ ಹಲ್ಲಿನ ಬಾಧೆ...
ಸಂಜೀವನ

ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ...
ಮಾರಾಟದ ಏಜೆಂಟರುಗಳು ...

- :ವಿವರಗಳಿಗೆ ಬರೆಯಿರಿ:-

ಶ್ರೀ ರಮಣಿ ಟ್ರೇಡಿಂಗ್ ಕಂ...
924 ಚಾಮುಂಡಿ ಪುರಂ, ಮೈ...

Edited, printed ... published by A R N... rajan at the Sadhvi ... D Subbiah Road, My...

ಫೋ ನಂ 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೧೭ ೪-೧೯೪೯ [ಸಂಚಿಕೆ ೩೪

ಕಾಶ್ಮೀರದಲ್ಲಿ ಪುನಃ ಪಾಕಿಸ್ಥಾನ್ ಧಾಳಿ

ಲಕ್ಕವಳ್ಳಿಗೆ ವಿದ್ಯುಚ್ಛಕ್ತಿ

ಸ್ವ. ಸು. ಫೋ] ಬೆಂಗಳೂರು ೧೭

ಲಕ್ಕವಳ್ಳಿ ಜಲಾಶಯದ ಕೆಲಸಗಳಿಗಾಗಿ ವಿದ್ಯುಚ್ಛಕ್ತಿಯನ್ನೊದಗಿಸಲು ಸರ್ಕಾರದವರು ೨,೭೫,೩೭೦ ರೂ. ಯೋಜನೆಯನ್ನು ಮಂಜೂರು ಮಾಡಿದ್ದಾರೆ

○ ಮುದ್ದೂರು ತಾ॥ ಬೆಸಗರ ಹಳ್ಳಿಯಲ್ಲಿ ಮಾಧ್ಯಮಿಕ ಶಾಲೆಗಾಗಿ ೨೬,೦೦೦ ರೂ. ಮಂಜೂರು ಮಾಡಲಾಗಿದೆ.

○ ಶ್ರೀನಿವಾಸಪುರ ಮೈನರ್ ಮುನಿಸಿಪಾಲಿಟಿಯನ್ನು ಟೌನ್ ಮುನಿಸಿಪಾಲಿಟಿಯನ್ನಾಗಿ ಪರಿವರ್ತಿಸಲು ಸರ್ಕಾರದವರು ನಿರ್ಧರಿಸಿದ್ದಾರೆ

○ ಆರ್ಥಿಕ ಮೈತ್ರೀಳನದ ವ್ಯವಸಾಯದ ಸಮಿತಿಯವರು ನಿರ್ಣಯವೊಂದನ್ನು ಮಾಡಿ ಭಾರತ ಸರ್ಕಾರದ ಸಮಿತಿಯ ಪಂಕ್ತಿಯೇ ಇಲ್ಲಿನ ಸಮಿತಿಯನ್ನೂ ರಚಿಸಿ ಅದಕ್ಕೆ ಸಂಪೂರ್ಣ ಅಧಿಕಾರವನ್ನು ಕೊಡಬೇಕೆಂದು ಸೂಚಿಸಿದ್ದಾರೆ.

○ ಬಂಜರು ಜಮೀನುಗಳಲ್ಲಿ ವ್ಯವಸಾಯ ಮಾಡಲು ಅನುಕೂಲಿಸುವಂತೆ ಸಹಾಯ ಮಾಡಲು ಬಡ್ಡಿಯಿಲ್ಲದೆ ಸಾಲ ಕೊಡುವ ಯೋಜನೆಯೊಂದಕ್ಕೆ ಸರ್ಕಾರದವರು ಒಪ್ಪಿಗೆ ಇತ್ತಿದ್ದಾರೆ.

○ ಬಡ ಮಕ್ಕಳ ಪೋಷಣೆಗಾಗಿ ನೆರವು ನೀಡುವ ಭಾರತ ಸರ್ಕಾರದ ಯೋಜನೆಗೆ ಬೆಂಗಳೂರಿನಲ್ಲಿ ನಡೆದ ಫಲ ಪುಷ್ಪ ಪ್ರದರ್ಶನದಿಂದ ಬಂದ ಉತ್ಪತ್ತಿ ೭,೮೮೮ ರೂ. ಅನ್ನು ಕಳುಹಿಸಿಕೊಡಲಾಗಿದೆ

○ ಪತ್ರಿಯನ್ನು ಕೊಳ್ಳುವುದು ಮತ್ತು ಮಾರುವುದು ಎರಡೂ ಅಪರಾಧವೆಂದು ಸರ್ಕಾರದವರು ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೌರತೆರಿಗೆ ವಿರೋಧಿಸಿ ಕೌನ್ಸಿಲರ ಉಪವಾಸ

ಮಚ್ಛಲಿಪಟ್ಟಣದ ಪೌರಸಭಾ ಸದಸ್ಯರಾದ ಡಾ॥ ಕೊಕಾ ನರಸಿಂಹರಾಯರು ಆ ಸ್ಥಳದ ಪೌರಸಭೆಯು ವಿಧಿಸಿರುವ ಹೊಸ ತೆರಿಗೆಯನ್ನು ವಿರೋಧಿಸಿ ನಾಲ್ಕುದಿನಗಳಿಂದ ಉಪವಾಸ ಮಾಡುತ್ತಿದ್ದಾರೆ ಈ ತೆರಿಗೆಯನ್ನು ಆ ಊರಿನೊಳಗೆ ವ್ಯಾಪಾರಕ್ಕೆ ತರಲಾಗುವ ಪ್ರತಿಯೊಂದು ಪದಾರ್ಥದ ಮೇಲೂ ಹಾಕಲಾಗಿರುವುದು. ಇದರಿಂದ ಎರಡು ವಿಧವಾದ ತೆರಿಗೆ ಹಾಕಿದಂತಾಗಿದೆಯೆಂಬುದು ಅವರ ಅಭಿಪ್ರಾಯ. ಈ ತೆರಿಗೆ ಪಟ್ಟಿಯಲ್ಲಿ ಕಸಾಯಿಖಾನೆಗೆ ಬರುವ ಪ್ರಾಣಿಗಳ ಮೇಲಿನ ತೆರಿಗೆಯೂ ಸೇರಿದೆ

ಭಾರತದಾದ್ಯಂತವೂ ಗಾಂಧಿಜಿ ಸ್ಮಾರಕಗಳ ರೈಲು

ದಿಲ್ಲಿಯಲ್ಲಿರುವ ಗಾಂಧಿ ಸ್ಮಾರಕದ ಪ್ರದರ್ಶನದ ವಸ್ತುಗಳನ್ನು ಹತ್ತು ರೈಲು ಗಾಡಿಗಳಲ್ಲಿಟ್ಟು ಭಾರತದಾದ್ಯಂತವೂ ತೆಗೆದುಕೊಂಡುಹೋಗಿ ಪ್ರದರ್ಶಿಸಲು ಭಾರತ ಸರ್ಕಾರದವರು ಏರ್ಪಾಡುಮಾಡುತ್ತಲಿರುವರು

ಸರ್ಕಾರಿ ನೌಕರರುಗಳಿಗೆ ರಾಜಾಜಿಯವರ ಗೃಹ ಪಾಠ

ಬಹಿರಂಗವಾಗಿ ಮಾಡಲಾಗದ ಕೆಲಸಗಳನ್ನು ಅಂತರಂಗದಲ್ಲಿ ಮಾಡಕೂಡದೆಂಬುದೇ ಇದೇ ಅವರು ಕಲಿಯಬೇಕಾದ ಗೃಹಪಾಠವೆಂದೂ ಗಾ॥ ಜ॥ ರಾಜಾಜಿಯವರು ಸೌರಮಾನ ಯುಗಾದಿ ದಿನ ತಮ್ಮ ನೌಕರರಿಗೆ ಹಿತೋಪದೇಶ ಮಾಡಿದರು

ವೈದ್ಯನಿಂದಲೇ ಶಿಶು ಹತ್ಯ

ಜೋಹಾನ್ಸ್‌ಬರ್ಗಿನ ವೈದ್ಯರೊಬ್ಬರು ತಮ್ಮ ಮಾತನ್ನು ಉಳಿಸಿಕೊಳ್ಳಲು ಭಾರತೀಯ ಶಿಶುವೊಂದನ್ನು ಕೊಲೆ ಮಾಡಿದರೆಂದು ವಿಚಾರಣೆಗೆ ಗುರಿಯಾಗಿದ್ದಾರೆ ೧೯೪೭ ನೇ ಆಗಸ್ಟ್ ೩೦ ನೇ ತಾ॥ ಅವರು ಭಾರತೀಯ ಹೆಂಗಸೊಬ್ಬಳಿಗೆ ಮಗುವೊಂದು ಹುಟ್ಟುವಾಗಲೇ ಅದು ಸತ್ತಿರುವುದೆಂದು ತಿಳಿಸಿದ್ದರು ಆದರೆ ಮಗುವು ಜನನವಾಗಿ ಒದ್ದಾಡುತ್ತಿರುವುದನ್ನು ಕಂಡು ತಾವು ಹೇಳಿದ ಭವಿಷ್ಯ ತಪ್ಪಾಗಬಾರದೆಂದು, ಮಗುವಿನ ಮೇಲೆ ದ್ರಾವಕ ಸುರಿದು, ಅದನ್ನು ಕೊಂದು ಬೂದಿನ ಪೆಟ್ಟಿಗೆಯಲ್ಲಿ ಒಟ್ಟಿದ್ದರೆಂದು ಆಪಾದಿಸಲಾಗಿದೆ

ವಿವಾಹವಾದವನೊಡನೆ ಇರಲು ಹುಡುಗಿ ನಿರಾಕರಣೆ

ಕುಂಭಕೋಣದಲ್ಲಿ ತಂಗವುಣಿ ಎಂಬ ೧೫ ವರ್ಷದ ನೂತನ ವಿವಾಹಿತ ಹುಡುಗಿಯು ತನ್ನ ಗಂಡನ ಸಂಗದ ಇರಲು ನಿರಾಕರಿಸಿರುವಳು ಆತನ ಚಿತ್ರಹಿಂಸೆಯನ್ನು ತಡೆಯಲು ಸಾಧ್ಯವಿಲ್ಲವೆಂದು ಆಕೆಯು ಕೋರ್ಟಿನಲ್ಲಿ ತಿಳಿಸಿದ್ದಾಳೆ

ಚಿನ್ನದ ರೆಕ್ಕೆಯ ಹದ್ದು

ಪಾಟಿಯಾಲದಲ್ಲಿರುವ ಮುಕವಾರ್ಕೆ ಸಾಹೇಬ್ ಎಂಬ ಸಿಕ್ಕ ಗುರುಗಳ ಸಮಾಧಿಯಲ್ಲಿ ನಡೆಯುವ ಪ್ರಾರ್ಥನೆಯಲ್ಲಿ ಭಾಗವಹಿಸಲು ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಚಿನ್ನದ ರೆಕ್ಕೆಗಳಿರುವ ಹದ್ದು ಒಂದು ಬರುತ್ತಿದೆಯೆಂದೂ, ಇದನ್ನು ನೋಡಲು ಸಾವಿರಾರು ಜನರು ಹೋಗುತ್ತಾರೆಂದೂ ಹೇಳಲಾಗಿದೆ, ಹದ್ದುಗಳ ಅಧಿದೇವತೆಯೆಂದು ಕರೆಯಲಾಗಿದ್ದ ಹತ್ತನೇ ಸಿಕ್ಕ ಗುರುಗಳಾದ ಗುರು ಗೋವಿಂದರವರ ಪುನರವತಾರದ ಸೂಚನೆಯೇ ಇದೆಂದು ಜನರು ಭಾವಿಸಿದ್ದಾರೆ

ಕೆಂಡದಂಥ ಅಸ್ತ್ರಿ ದಾನಮಾಡಿದ ನಿಜಾಮರ ವೈಖರಿ

ನಿಜಾಮರ ತಜ್ಞಂದಿರ ಮೊತ್ತ ಎಸ್ಟೇಟನ್ನು ಅವರ ಏಳು ವರು ಮಕ್ಕಳಿಗೆ ತಪ್ಪಿಸಿ ಅಳಿಯನಾದ ನವಾಬ್ ದಸೀದ್ ನವಾಜ್ ಜಂಗರಿಗೆ ನಿಜಾಮರು ಕೊಟ್ಟಿದ್ದಾರೆ ವ್ಯತಿರಿಕ್ತ ಹಿರಿಯ ಮಗನ... ನವರಿಗೆ ... ಇತರರಿಂದಲೂ ... ಬಂದಿವೆ

ಸೇಡು ತೀರಿಸಿಕೊಳ್ಳಲು ಸಾವಿರ ಮೈಲಿ ಪ್ರಯಾಣ

ಪೂರ್ವ ಪಂಜಾಬಿನ ಜಲಂಧರ್ ಜಿಲ್ಲೆಯ ಹಳ್ಳಿಯೊಂದರ ಪಟೇಲನ ಮೇಲೆ ಇದ್ದ ಹಳೆಯ ಸೇಡನ್ನು ತೀರಿಸಿಕೊಳ್ಳಲು ಸಿಕಂದರಾಬಾದಿನಿಂದ ಸಾವಿರ ಮೈಲಿ ಪ್ರಯಾಣ ಮಾಡಿದ ಸಿಪಾಯಿಯ ವಿಚಿತ್ರ ಪ್ರಸಂಗ ಬೆಳಕಿಗೆ ಬಂದಿದೆ. ಆತನು ಸ್ನೇಹಿತನೊಬ್ಬನೊಡನೆ ಹೊರಟು ರೈಲು ಲಾರಿ, ಕಾಲ್ನಡಗೆ ಮೂಲಕ ಊರನ್ನು ಸೇರಿ, ಪಟೇಲನ ಮನೆಗೆ ನುಗ್ಗಿ, ಗುಂಡು ಹಾರಿಸಿದನು ಪೋಲೀಸರಿಗೆ ಇದು ಗೊತ್ತಾಗಿ ಆತನನ್ನೂ ಆತನ ಸ್ನೇಹಿತನನ್ನೂ ೬ ಮೈಲಿ ದೂರ ಅಟ್ಟಿಸಿಕೊಂಡುಹೋಗಿ ದಸ್ತಗಿರಿ ಮಾಡಿದರು

ರಷ್ಯದಲ್ಲಿ ಆಟಂ ಬಾಂಬು ಇಲ್ಲ

ರಷ್ಯವು ಆಟಂ ಬಾಂಬನ್ನು ಹೊಂದಿಲ್ಲವೆಂದ ಮಾಸ್ಕೋ ವಿಶ್ವವಿದ್ಯಾ ಮಾಜಿ ಅಮೆರಿಕ್ ರಾಯಭಾರಿ ಬಿಡೆಲ್ ಸ್ಮಿತ್ತರು ಅಭಿಪ್ರಾಯಪಟ್ಟಿದ್ದಾರೆ ಆದರೆ ಆಟಂಬಾಂಬು ತಯಾರಾಗುವ ವಿಧಾನವನ್ನು ರಷ್ಯನ್ ವೈಜ್ಞಾನಿಕರು ತಿಳಿದುಕೊಂಡಿದ್ದಾರೆಂದು ಅವರು ತಿಳಿಸಿರುವರು.

ಮೈಸೂರಿನ ಹಣಕಾಸಿನ ವ್ಯವಸ್ಥೆ ಭಾರತದಲ್ಲಿ ಐಕ್ಯವೇ

ಬೆಂಗಳೂರು ೧೭

ಸಂಸ್ಥಾನದ ಆಯವ್ಯಯವನ್ನು ಭಾರತದ ಯೂನಿಯನ್ ಆದಾಯ ವ್ಯಯದೊಡನೆ ಐಕ್ಯಗೊಳಿಸುವ ವಿಷಯವು ಮೈಸೂರು ಸರ್ಕಾರದ ಆಲೋಚನೆಯಲ್ಲಿದೆಯೆಂದು ಹೇಳಲಾಗಿದೆ ಕಳೆದ ಶನಿವಾರ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಈ ವಿಷಯ ಚರ್ಚೆಯಾಯಿತೆಂದು ತಿಳಿದುಬಂದಿದೆ, ಭಾರತ ಸರ್ಕಾರದ ಸಂಸ್ಥಾನ ಇಲಾಖೆಯು ಸ್ಥಾಪಿಸಿದ್ದ ಸಂಸ್ಥಾನದ ಹಣಕಾಸಿನ ಸಮಿತಿಯು ಈ ವಿಷಯದಲ್ಲಿ ತನ್ನ ಅಭಿಪ್ರಾಯ ವರದಿಯನ್ನು ಕೊಡಲಿದೆ ಕೆಲವು ದಿನಗಳ ಹಿಂದೆ ಸಂಸ್ಥಾನದ ಹಣಕಾಸಿನ ಮಂತ್ರಿ ಶ್ರೀ ಎಚ್. ಸಿ. ದಾಸಪ್ಪನವರು ದೆಹಲಿಗೆ ಹೋಗಿದ್ದಾಗ ಅವರು ಆ ಸಮಿತಿಯ ... ಸಂಸ್ಥಾನ ... ಈಗ ಸರ್ಕಾರದವರು ... ಪತ್ರಿಕೆ...

ಕಾಶ್ಮೀರದಲ್ಲಿ ಭಾರತೀಯ ಸೈನ್ಯದ ಮೇಲೆ ಗುಂಡು

ಕಾಶ್ಮೀರದ ತಿತ್ವಾಲ್ ಎಂಬಲ್ಲಿಗೆ ಐದು ಮೈಲಿ ಆಗ್ನೇಯದಲ್ಲಿರುವ ಕುಂಜಿಯಹಳ್ಳಿ, ರಕ್ಷಣೆಗಾಗಿ ಇಡಲಾಗಿರುವ ಭಾರತೀಯ ಗಸ್ತು ಪಡೆಗಳ ಮೇಲೆ ಪಾಕಿಸ್ಥಾನ್ ಸೈನ್ಯಗಳು ಹಗುರ ಮಿಷನ್ ಗನ್ ಮತ್ತು ರೈಫಲ್‌ಗಳಿಂದ ಕಳೆದ ಗುರುವಾರ ಗುಂಡು ಹಾರಿಸಿದವೆಂದು ಸುದ್ದಿ ಬಂದಿದೆ ಆದರೆ ಭಾರತೀಯ ಪಡೆಗಳು ಈ ಗುಂಡಿಗೆ ಪ್ರತಿಯಾಗಿ ಗುಂಡು ಹಾರಿಸಲಿಲ್ಲ ಅಲ್ಲದೇ ಅದೇ ಪಾಕಿಸ್ಥಾನ್ ಸೈನ್ಯವು ಕೊಪ್ರಾ ಎಂಬ ಹಳ್ಳಿಯನ್ನೂ ಹಿಡಿಯಿತು ಕಳೆದಜನವರಿ ೧ ರಿಂದ ಏರ್ಪಟ್ಟಿದ್ದ "ಯುದ್ಧ ನಿಲ್ಲಿಸುವ" ಒಪ್ಪಂದವಾದಂದೀಚೆಗೆ ಇದೇ ಮೊದಲು ಗುಂಡುಹಾರಿಸಿರುವುದೆಂದು ಹೇಳಲಾಗಿದೆ.

ಹೂವಿನ ಪಲ್ಲಕ್ಕಿ ಉತ್ಸವ

ರಾಜಧಾನಿಯ ಸಂತೆಪೇಟೆಯಲ್ಲಿರುವ ಕುಂಚಿಟಿಗರ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ಹೂವಿನ ಅಡ್ಡ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಲಾಗಿದೆ. ಈ ಸಂದರ್ಭದಲ್ಲಿ ತಿರುಚನಾಪಳ್ಳಿಯ ಶ್ರೀ ಪಿ. ಎಸ್. ಬಂಗಪ್ಪ ಪಿಳ್ಳೆ ಮತ್ತು ಪಾರ್ಟಿಯವರ ನಾಗಸ್ವರವು ನಡೆಯುವುದು.

○ ಶ್ರೀ ರಾಂ ಪೇಟೆಯ ರಾಮಚಂದ್ರ ಮಂದಿರದಲ್ಲಿ ನಾಳೆ ಸಂಜೆ ೬ ಘಂಟೆಗೆ ಹನುಮಂತೋತ್ಸವವು ನಡೆಯುವುದು.

೨॥ ಕೋಟಿ ಉಳಿತಾಯ, ೩ ಕೋಟಿ ವರಮಾನದ ವರದಿ

ಸರಕಾರದವರು ನೇಮಿಸಿದ ಏಕಾನಮಿ ಅಧಿಕಾರಿಗಳಾದ ಶ್ರೀ ಬಿ ಎಸ್. ರಾಘವೇಂದ್ರರಾಯರು ನಿವೃತ್ತರಾಗುವ ಪೂರ್ವ ಸರಕಾರದ ಹಣಕಾಸಿನ ಸಂಬಂಧವಾಗಿ ವರದಿಯೊಂದನ್ನು ಸಿದ್ಧಗೊಳಿಸಿರುತ್ತಾರೆಂದು ತಿಳಿದುಬಂದಿದೆ. ಇದರ ಪ್ರಕಾರ ಸರಕಾರ ಇಲಾಖೆಗಳಲ್ಲಿ ಹೆಚ್ಚಾಗಿ ಇರುವ ನೌಕರರುಗಳನ್ನು ತೆಗೆಯುವುದರಿಂದ ೨॥ ಕೋಟಿ ಉಳಿತಾಯವಾಗುವುದೆಂದೂ, ಹಲವು ಹೊಸ ತೆರಿಗೆಗಳನ್ನು ವಿಧಿಸುವುದರಿಂದ ಸರಕಾರಕ್ಕೆ ೩ ಕೋಟಿ ರೂ. ಆದಾಯ ಬರುವುದೆಂದೂ ಸೂಚಿಸಿರುವುದಾಗಿ ಗೊತ್ತಾಗಿದೆ.

ಕರಾಚಿಯಲ್ಲಿ ಹೆಲಿಕಾಪ್ಟರ್ ವಿಮಾನ ಸಂಚಾರ

ಪ್ರಪಂಚದಲ್ಲೇ ಮೊದಲನೆಯದಾಗಿ ಹೆಲಿಕಾಪ್ಟರ್ ವಿಮಾನ ಸಂಚಾರವನ್ನು ಕರಾಚಿ ಮತ್ತು ಅದಕ್ಕೆ ಸ್ವಲ್ಪ ದೂರವಿರುವ ಮರಿಪ್ಪುರ ವಿಮಾನ ನಿಲ್ದಾಣಗಳ ಮಧ್ಯೆ ಏರ್ಪಡಿಸಲಾಗುವುದು. ಆವೆರಡು ಸ್ಥಳಗಳಿಗೂ ೧೦ ಮೈಲಿ ಅಂತರವಿದೆ ಪೆಟ್ರೋಲ್ ಇಲ್ಲದೆ ಕೇವಲ ಯಂತ್ರದ ಬೀಸಣಿಗೆ ಸಹಾಯದಿಂದ ಈ ವಿಮಾನವು ಹಾರಬಲ್ಲದು

ಕಾಶ್ಮೀರದ ಬಗ್ಗೆ ವಿಶ್ವ ಸಂಸ್ಥೆಯ ರಾಜಿ ಯೋಜನೆ

ಕಾಶ್ಮೀರದಲ್ಲಿ ರಾಜಿ ಒಪ್ಪಂದವನ್ನು ಜಾರಿಗೆ ತಂದು ಭಾರತ ಮತ್ತು ಪಾಕೀಸ್ತಾನಗಳಿಗೆ ಸೌಹಾರ್ದವೇರ್ಪಡಿಸಲು ಬಂದಿರುವ ವಿಶ್ವ ಸಂಸ್ಥೆಯ ಕಾಶ್ಮೀರ ಸಮಿತಿಯು ಒಂದು ಯೋಜನೆ ತಯಾರಿಸಿ, ಉಭಯ ರಾಷ್ಟ್ರಗಳಿಗೂ ಕೊಟ್ಟಿದೆ ಇದನ್ನು ಉಭಯ ಪಕ್ಷವೂ ಒಪ್ಪಿದರೆ ನಿಷ್ಪಕ್ಷಪಾತವಾದ ಮತಗಣನೆಯು ಕಾಶ್ಮೀರದಲ್ಲಿ ... ವುದೆಂದು ಸಮಿತಿಯವರು ... ತಿಳಿಸಿದ್ದಾರೆ

ವಾರ ಭವಿಷ್ಯ

[illegible] ರಿಂದ [illegible] ರ ವರೆಗೆ

ಮೇಷ- ಹಣ ಕಾಸಿನ ತೊಂದರೆಯುಂಟು ಆರೋಗ್ಯ ಸಿಟ್ಟಿಗೆ ನೌಕರಿ. ದಂಧೆಗಳಲ್ಲಿ ಜಯ

ವೃಷಭ- ಶತ್ರುಗಳ ಮೇಲೆ ಜಯ ಹಣ ಕಾಸಿನ ತೊಂದರೆ ಕಡಿಮೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಉತ್ಸಾಹ ಕೌಟುಂಬಿಕ ಸೌಖ್ಯ

ಮಿಥುನ ಆರೋಗ್ಯ ಉತ್ತಮ ಹಣ ಕಾಸಿನ ಸ್ಥಿತಿ ಸಿಟ್ಟಿಗೆ ಕುಟುಂಬಿಕ ಸ್ಥಿತಿ ಉತ್ತಮ ಪ್ರವಾಸದಲ್ಲಿ ಸೌಖ್ಯ.

ಕರ್ಕ ಆರೋಗ್ಯ ನೆಟ್ಟಗಿರದು ಸಣ್ಣ ಪುಟ್ಟ ತೊಂದರೆ ನೌಕರ, ದಂಧೆಗಳ ಸ್ವಲ್ಪ ಲಾಭ ಪ್ರವಾಸದಲ್ಲಿ ವಿಘ್ನ

ಸಿಂಹ- ಕುಟುಂಬದ ಆರೋಗ್ಯ ಅಷ್ಟು ತೃಪ್ತಿಕರವಾಗಿರುವುದಿಲ್ಲ. ಗೃಹ ಕಲಹ ನೌಕರಿ, ದಂಧೆಗಳಲ್ಲಿ ಕಿರುಕುಳ ವಾಹನಗಳಿಂದ ದೂರ ಇರಿ

ಕನ್ಯಾ- ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಜಯ ವ್ಯಾಪಾರದಲ್ಲಿ ಲಾಭ ಸಾಂಪತ್ತಿಕ ಸ್ಥಿತಿ ಉತ್ತಮ

ತುಲಾ ಶರೀರ ಸ್ಥಿತಿ ಅಷ್ಟಾಗಿ ಉತ್ತಮವಿರದು. ಮಾನಸಿಕ ಕ್ಲೇಶ ಶತ್ರು ಪೀಡೆ ಪ್ರವಾಸದಲ್ಲಿ ತೊಂದರೆ.

ವೃಶ್ಚಿಕ- ಆರೋಗ್ಯದ ಕಡೆ ಹೆಚ್ಚು ಗಮನ ಕೊಡಿರಿ. ಶತ್ರುಗಳ ಕಾಟ. ಶುಭ ಕಾರ್ಯದಲ್ಲಿ ಅಡ್ಡಿ ಆತಂಕ.

ಧನು- ಮಾನಸಿಕ ಮತ್ತು ದೈಹಿಕ ಶ್ರಮ ಕಳೆದ ವಾರಕ್ಕಿಂತ ಕಡಿಮೆ. ಆರೋಗ್ಯ ಸ್ವಲ್ಪ ಉತ್ತಮ ಆಹಾರದಲ್ಲಿ ಮಿತಿ ಇರಲಿ ದುಷ್ಟ ಜನ ಕಾರ್ಯ ಹಾಗೆಯೇ ಉಳಿಯುವುದು ಪ್ರವಾಸದಲ್ಲಿ ಎಚ್ಚರಿಕೆ.

ಮಕರ ವ್ಯಾಪಾರಾದಿಗಳಲ್ಲಿ ಅಧಿಕ ಲಾಭ ಮೇಲಧಿಕಾರಿಗಳ ಮನ್ನಣೆ ಶತ್ರು ನಾಶ ವಿದ್ಯಾರ್ಥಿಗಳ ಉತ್ಸಾಹ ಪ್ರವಾಸದಲ್ಲಿ ಜಯ

ಕುಂಭ- ಆರೋಗ್ಯ ತೃಪ್ತಿಕರ ಶತ್ರುಗಳ ಪರಾಭವ, ಆದರೆ ಪ್ರವಾಸ ಬೇಡ

ಮೀನ- ನೌಕರಿ. ದಂಧೆಗಳಲ್ಲಿ ಸ್ವಲ್ಪ ಆಯಾಸ ಪ್ರವಾಸಕ್ಕೆ ಅಡಚಣೆ ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವವು

ರಾಜಕಮಲ್

ಮೈಸೂರು

ಕಡೇ ವಾರ

ಪ್ರತಿ ದಿನ ಮೂರು ಆಟಗಳು

ದ್ರೋಹಿ

(ತೆಲುಗು)

ಪಾತ್ರ - ವರಲಕ್ಷ್ಮಿ, ಲಕ್ಷ್ಮೀ ರಾಜ್ಯಂ, ಪ್ರಕಾಶ ರಾವ್, ಪ್ರಸಾದ್

Morning Shows From 15-4-49 for 4 days

A Matter of Life & Death

(In Technicolor)

– With –

David Niven, Raymond Massey, Roger Livesay

Edited, printed and published by A. R. Nagarajan at the Sadhvi Press D. Subbiah Road, Mysore.

ಯುದ್ಧ ಸಾಮಾಗ್ರಿಗಳ ತಯಾರಿಕೆಗೆ ನಿಷೇದ

ಕೃತಕ ರಬ್ಬರ್ ಮತ್ತು ಕೃತಕ ಪೆಟ್ರೋಲ್ ಮುಂತಾದ ಅನೇಕ ಯುದ್ಧ ಸಾಮಾಗ್ರಿಗಳನ್ನು ತಯಾರು ಮಾಡಕೂಡದೆಂದು ಪಶ್ಚಿಮ ಜರ್ಮನಿಯಲ್ಲಿರುವ ಮೂರು ರಾಷ್ಟ್ರಗಳ ಗೌರ್ನರುಗಳು ತೀರ್ಮಾನಿಸಿರುವರು

ಕೊಚ್ಚಿ ಸೈನ್ಯಾಧಿಕಾರಿಯ ವಜಾ

ಕೊಚ್ಚಿ ಸಂಸ್ಥಾನದ ಸೈನ್ಯಕ್ಕೆ ಸೇರಿದ ಕ್ಯಾಪ್ಟನ್ ರಾಮವರ್ಮ ತಂಪುರಾನ್ ಎಂಬ ಅಧಿಕಾರಿಯನ್ನು ಕೆಲಸದಿಂದ ವಜಾ ಮಾಡಲಾಗಿದೆ ೪೮ ಗಂಟೆಗಳೊಳಗೆ ಅವರು ತಮ್ಮ ನಿವಾಸವನ್ನು ಬಿಡಬೇಕಾಗಿದೆ ಹಲವು ವಿರೋಧ ಕಾರ್ಯ ಚಟುವಟಿಕೆಗಳಲ್ಲಿ ಅವರ ನಿರತರಾಗಿದ್ದರೆಂದು ಹೇಳಲಾಗಿದೆ

---

* ಲಕ್ಷ್ಮೀ *

ಥಿಯೇಟರ್

ನೂರಡಿ ರಸ್ತೆ ಮೈಸೂರು

ಪ್ರತಿ ದಿನ ಮೂರು ಆಟಗಳು

ಪ್ರಕಾಶರವರ ಪೌರಾಣಿಕ ಹಿಂದಿ ಚಿತ್ರ

ರಾಮ್ ಬಾಣ್

ಭೂಮಿಕೆ:- ಶೋಭನಾ ಸಮರ್ಥ, ಪ್ರೇಂ ಅದೀಬ್, ಉಮಾಕಾಂತ್, ಮತ್ತು ಚಂದ್ರಮೋಹನ್

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ ರವರ ಕೋರ್ಟಿನಲ್ಲಿ

O.S. ನಂ. 23/38-39

ವಾದಿ:—ನಂಜಯ್ಯ ವಗೈರೆ

ಪ್ರತಿವಾದಿ:—ತಿಮ್ಮಯ್ಯ ವಗೈರೆ

ಹಿಯರಿಂಗ್ 16-5-49

ಮೇಲ್ಕಂಡ ನಂಬರ್‌ನಲ್ಲಿ ನೇಮಕವಾಗಿರುವ ಟ್ರಸ್ಟಿಗಳು ಕೋರ್ಟು ಆರ್ಡರ್ ಪ್ರಕಾರ ಪ್ರಚುರಪಡಿಸಿದ ಜಾಹಿರಾತು

ಮೈಸೂರು ಸಿಟಿ ದೇವರಾಜ ಮೊಹಲ್ಲ ಆನೆ ಸಾರೋಟು ಬೀದಿಯಲ್ಲಿದ್ದ "ಸರಸ್ವತಿ ಮಠ"ವನ್ನು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟು ಬೋರ್ಡಿನವರು ಅಕ್ವೈರ್ ಮಾಡಿಕೊಂಡು ಇದರ ಪರಿಹಾರಕ್ಕಾಗಿ ೪೧೯೪-೦-೦ ರೂಪಾಯಿಗಳನ್ನು ಮೇಲ್ಕಂಡ ನಂಬರ್ ಕೇಸಿನಲ್ಲಿ ಡಿಪಾಜಿಟ್ ಮಾಡಿರುತ್ತಾರೆ. ಈ ಮೊಬಲಗನ್ನು ಬೇರೊಂದು ಸ್ಥಳದಲ್ಲಿ ಮಠ, ದೇವಸ್ಥಾನಗಳನ್ನು ಕಟ್ಟಿಸಿ ಧರ್ಮವು ಶಾಶ್ವತವಾಗಿ ನಡೆಯುವಂತೆ ಏರ್ಪಾಟು ಮಾಡಬೇಕೆಂದು ಟ್ರಸ್ಟಿಗಳು ಕೋರ್ಟಿಗೆ ಅರ್ಜಿ ಕೊಟ್ಟಿರುತ್ತಾರೆ ಈ ವಿಚಾರದಲ್ಲಿ ಭಕ್ತಾದಿಗಳು ಯಾರಾದರೂ ಸಲಹೆ ಏನಾದರೂ ಕೊಡಬೇಕಾದ್ದು ಇದ್ದಲ್ಲಿ ಅದನ್ನು ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿಗೆ ೧೬-೫-೧೯೪೯ ನೇ ದಿವಸ ತಲಪುವಂತೆ ಲಿಖಿತ ಮೂಲಕವಾಗಿ ಕಳಿಸಿಕೊಡಬೇಕಾಗಿ ಪ್ರಕಟಪಡಿಸಿದೆ.

ಕೆ. ಕೃಷ್ಣದಾಸ

ಬಿ.ಎ ಎಲ್.ಎಲ್.ಬಿ,

ಟ್ರಸ್ಟಿಗಳವರ ಅಡ್ವೋಕೇಟ್

ಮೈಸೂರು ೧೭-೪-೧೯೪೯

COUNCIL OF SCIENTIFIC AND INDUSTRIAL RESEARCH

Office of the Central Food Technological Research Institute "CHALUVAMBA MANSION" Mysore,

Dated 15—4—1949

NOTIFICATION

Quotations in the prescribed form enclosed in a sealed cover superscribed as QUOTATION FOR Providing and fixing a teak-wood Partition (with pin headed glass for the glazed portion) by the side of the Reception Hall, will be received in the office of the undersigned up to 4 P. M. on 20-4-1949. The Quotatons should be accompanied by a stamped receipt for having credited a sum of Rs. 100/ (One hundred) in cash as earnest money in the above office. No cheques will be accepted. Quotations not accompanied by such receipts will be disqualified

Detailed Estimates, Plans and Agreement Form may be seen in the office on all working days between 10 A M. and 12 Noon, after making an appointment. Prescribed Quotation Forms can be had in the office on payment of a sum of four annas.

Quotations should be on detailed rates to be quoted. Such rates must hold good for a period of two months from the date of Quotation All non-quoted items will be paid for on data including ten per cent profit.

The work should be completed within Twenty days from the date of acceptance of the Quotation.

The undersigned reserves the right to accept or reject any quotation without assigning any reason whatsoever.

M.G. SRINIVASAN,
for Planning Officer. F.T.R.I., Mysore

ಶ್ರೀ ಗಾಯತ್ರೀ ಟಾಕೀಸ್

ಪ್ರತಿದಿನ 3 ಆಟಗಳು

15-4-49 ರಿಂದ

ಪ್ರದರ್ಶನ ಪ್ರಾರಂಭ

5 ದಿನಗಳು ಮಾತ್ರ

ಚಿತ್ರಕಲಾ ಕೌಶಲ್ಯದಿಂದೊಡಗೂಡಿದ ಆಕರ್ಷಣೀಯ ಸ್ವರ್ಣಮಯ ವರ್ಣರಂಜಿತ ಚಿತ್ರ

ವಾರ್ನರ್ಸ್‌ರವರ-

ದಿ ಅಡ್ವೆಂಚರ್ಸ್ ಆಫ್

ರಾಬಿನ್ ಹುಡ್

ಪಾತ್ರ -ಎರಾಲ್ ಫ್ಲಿನ್ ಮತ್ತು ಒಲಿವಿಯಾ ಡಿ ಹೆವಿಲ್ಯಾಂಡ್

NEXT CHANGE

Angels With Dir y Faces

For 2 days



ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೨] ಸೋಮವಾರ ೧೮-೪-೧೯೪೯ [ಸಂಚಿಕೆ ೨೧೮

ನೆನ್ನೆಯಿಂದ ಐರ್ಲೆಂಡ್ ಸ್ವತಂತ್ರವಾಯಿತು

ಐರ್ಲೆಂಡ್ ಸ್ವತಂತ್ರವಾಯಿತು

ನೆನ್ನೆ ರಾತ್ರಿ ಐರ್ಲೆಂಡು ಬ್ರಿಟಿಷ್ ಕಾಮನ್‌ವೆಲ್ತನ್ನು ಬಿಟ್ಟು ಸ್ವತಂತ್ರ ರಿಪಬ್ಲಿಕ್ ಆಯಿತು. ಉತ್ತರ ಐರ್ಲೆಂಡ್ ಮಾತ್ರ ಬ್ರಿಟಿಷ್ ಆಡಳಿತದಲ್ಲೇ ಇರುವುದು. ಬ್ರಿಟನ್ನಿನ ಭಾರತದ ರಾಯಭಾರಿಯಾಗಿರುವ ಶ್ರೀ ವಿ. ಕೆ. ಕೃಷ್ಣಮೆನನ್‌ರವರನ್ನು ಸ್ವತಂತ್ರ ಐರ್ಲೆಂಡಿನ ಭಾರತದ ರಾಯಭಾರಿಯಾಗಿಯೂ ನೇಮಿಸಲಾಗಿದೆ.

ಚಿಯಾಂಗರು ಯುದ್ಧ ಅಪರಾಧಿ ಅಲ್ಲ

ಚಿಯಾಂಗ್‌ಕೈಷೇಕರನ್ನು ಯುದ್ಧ ಅಪರಾಧಿಯೆಂದು ಕಾಣಬೇಕೆಂಬ ಬೇಡಿಕೆಯನ್ನು ಚೀಣೀ ಕಮ್ಯೂನಿಸ್ಟರು ವಾಪಸು ತೆಗೆದುಕೊಂಡಿರುವುದಾಗಿ ಗೊತ್ತಾಗಿದೆ.

ಇ. ವಿ. ರಾಮಸ್ವಾಮಿ ನಾಯ್ಕರರ ದಸ್ತಗಿರಿ

ದ್ರಾವಿಡ ಸಂಘದ ಮುಖಂಡರಾದ ಶ್ರೀ ಇ. ವಿ. ರಾಮಸ್ವಾಮಿನಾಯಕರ್ ಮತ್ತು ಇತರ ಮೂವರನ್ನು ಉಡಮಲ್‌ಪೇಟೆಯಲ್ಲಿ ಜಾರಿಯಾಗಿದ್ದ ಪ್ರತಿಬಂಧಕಾಜ್ಞೆ ಉಲ್ಲಂಘಿಸಿದ ದಕ್ಕಾಗಿ ದಸ್ತಗಿರಿ ಮಾಡಲಾಗಿದೆ.

ಇಡೀ ಭಾರತಕ್ಕೆ ಒಂದೇ ಯುಗಾದಿ

ಭಾರತದ ವಿವಿಧ ಭಾಗಗಳಲ್ಲಿ ಹಲವಾರು ನೂತನ ವರ್ಷದ ಯುಗಾದಿಗಳನ್ನು ಆಚರಿಸುವುದು ಸರಿಯಲ್ಲವೆಂದೂ, ಎಲ್ಲ ಕಡೆಯೂ ಒಂದೇ ಯುಗಾದಿ ಇರಬೇಕೆಂದೂ ಒರಿಸ್ಸಾ ಮುಖ್ಯ ಮಂತ್ರಿ ಶ್ರೀ ಹರಿಕೃಷ್ಣ ಮೆಹತಾಬ್‌ರವರು ಹೇಳಿದ್ದಾರೆ.

ಮದರಾಸಿನಲ್ಲಿ ಸೈಕಲ್ ಕಾರ್ಖಾನೆ

ವರ್ಷಕ್ಕೆ ಒಂದು ಲಕ್ಷ ಸೈಕಲ್ಲುಗಳನ್ನು ತಯಾರಿಸಲು ಮದರಾಸಿನಲ್ಲಿ ಬ್ರಿಟನ್ನಿನ ಟಿ. ಐ. ಎ. ಸೈಕಲ್ ಕಾರ್ಖಾನೆಯ ಶಾಖೆಯೊಂದನ್ನು ಸ್ಥಾಪಿಸಲು ಭಾರತಸರ್ಕಾರದವರು ಅನುಮತಿ ಕೊಟ್ಟಿದ್ದಾರೆ.

ಸಹಕಾರ ನೌಕರರ ಸಮ್ಮೇಳನ

ಮೈಸೂರು ಜಿಲ್ಲಾ ಸಹಕಾರ ನೌಕರರ ಸಮ್ಮೇಳನವು ಮೇ ೨೧ ನೇ ತಾರೀಖು ಸಹಕಾರ ಭವನದಲ್ಲಿ ನಡೆಯುವುದು. ರಿಜಿಸ್ಟ್ರಾರಾದ ಶ್ರೀ ಟಿ. ರಂಗಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಹರಿಕಥೆ

ಇಂದಿನ ರಾತ್ರಿ ೯ ಘಂಟೆ ಶೇಷೀರಮ್ಮನವರ ಛತ್ರದಲ್ಲಿ ವಿ. ಶ್ರೀರಾಮಮಂದಿರದಲ್ಲಿ ಶ್ರೀ ಹೆಚ್. ಟಿ. ರಾಮಣ್ಣನವರಿಂದ ... ರ ಎಂಬ ಹರಿಕಥೆ ನಡೆಯುವುದು.

ರಾಮಾಯಣ ವಾಚನ

ನಾಳೆಯಿಂದ ಪ್ರತಿದಿನ ಸಂಜೆ ೬ ಘಂಟೆಗೆ ರಾಮಕೃಷ್ಣಕೋವಿದ ಶ್ರೀ ವಿರ್ಲೆ ಸುಬ್ರಹ್ಮಣ್ಯಶಾಸ್ತ್ರಿಗಳು ತೊರವೆ ರಾಮಾಯಣದ ಸುಗ್ರೀವ ಸಖ್ಯವೆಂಬ ಭಾಗವನ್ನು ಸೀಲೆ ವಾಚನೋಪನ್ಯಾಸ ಮಾಡುತ್ತಾರೆ.

ಹೋಟೇಲ್ ಕೆಲಸಗಾರರ ಸಂಘ

೨ ಜನಿವಾರಿಯ ಶಿವರಾಂಪೇಟೆ ರಾಜ ವಲ್ ಟಾಕೀಸಿನ ಎದುರಿನಲ್ಲಿದ್ದ ಮೋ... ಸಂಘದ ಕಛೇರಿಯನ್ನು ಲಷ್ಕರ್ ಮೊಹಲ್ಲಾ ಗೋಳೂರು ಸುಬ್ಬಣ್ಣನವರ ಬಿಲ್ಡಿಂಗ್‌ಗೆ ವರ್ಗಾಯಿಸಲಾಗಿದೆಯೆಂದು ತಿಳಿದು ಬಂದಿದೆ.

ತಾಲ್ಲೂಕು ಸಮ್ಮೇಳನ

ಮೈಸೂರು ೧೮

ಮೈಸೂರು ತಾಲ್ಲೂಕು ಸಮ್ಮೇಳನವು ಈ ಮಧ್ಯಾಹ್ನ ೧ ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀಮತಿ ಸುನಂದಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆಯಾದನಂತರ ಅಮಲ್ದಾರ್ ಶ್ರೀ ನರಸಿಂಗರಾಯರು ಕಳೆದ ವರ್ಷದ ವರದಿಯನ್ನು ಓದಿದರು.

ಶ್ರೀಮತಿ ಸರೋಜಿನಿ ದೇವಿಯವರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವನ್ನು ಅಧ್ಯಕ್ಷರು ಮಂಡಿಸಿದರು. ಎಲ್ಲರೂ ೨ ನಿಮಿಷ ಮೌನದಿಂದ ಎದ್ದು ನಿಂತು ಅದನ್ನು ಅಂಗೀಕರಿಸಿದರು.

ಅನಂತರ ತಾಲ್ಲೂಕಿನ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳ ಮೇಲೆ ಚರ್ಚೆ ನಡೆಯಿತು.

ಮಗು ಸಿಕ್ಕಿದೆ

ಸಕ್ಕರೆ ಮತ್ತು ಪರಟ... ಸಾಕಿಕೊಂಡ ಭಗವಾನ್ ಎಂಬ ೪ ವರ್ಷದ ಗಂಡು ಮಗು ಒಂದು ವಾರಸುದಾರರಿಲ್ಲದೆ ಲಕ್ಷ್ಮೀಪುರಂ ಸ್ಟೇಷನ್ನಿನಲ್ಲಿ ನೆನ್ನೆ ಬೆಳಗ್ಗೆ ೧೧-೩೦ ಗಂಟೆಯಿಂದ ಇದೆಯೆಂದೂ, ಸಂಬಂಧಪಟ್ಟವರು ಅದನ್ನು ಪಡೆಯಬಹುದೆಂದೂ ತಿಳಿಸಲಾಗಿದೆ.

ಬಸ್ಸಿಗಾಗಿ ಕಾದಿದ್ದವನಿಗೆ ಅಪಮೃತ್ಯು

ಹೊಳೇನರಸೀಪುರದ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಪತ್ರವೊಂದನ್ನು ರಿಜಿಸ್ಟರ್ ಮಾಡಿಸಲು ಅಲ್ಲಿಗೆ ಹೊರಟು ಬಸ್ಸಿಗಾಗಿ ರಸ್ತೆಯಲ್ಲಿ ಕಳೆದ ಸೋಮವಾರ ಕಾಯುತ್ತಿದ್ದ ವೀರಯ್ಯ ಎಂಬಾತನನ್ನು ಅದೇ ಬಸ್ಸಿಗಾಗಿ ಬಂದಿದ್ದ ಮತ್ತೊಬ್ಬನು ಚೂರಿಯಿಂದ ತಿವಿದು ಓಡಿದನು. ಗಾಯಗೊಂಡವನನ್ನು ಬಸ್ಸಿನಲ್ಲಿ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಆತನು ಅಲ್ಲಿ ಮೃತಪಟ್ಟನು.

ಯಳಂದೂರು ವಿದ್ಯಾರ್ಥಿ ನಿಧಿ

ಯಳಂದೂರು ೧೬

ಮೇಲ್ಕಂಡ ನಿಧಿಯ ಸಮಿತಿಯ ಸಭೆಯು ನೆನ್ನೆ ಇಲ್ಲಿನ ಮಾಧ್ಯಮಿಕ ಶಾಲೆಯಲ್ಲಿ ನಡೆಯಿತು. ಜಮಾಖರ್ಚು ಲೆಕ್ಕಗಳನ್ನು ಪರಿಶೀಲಿಸಲಾಯಿತು. ಇದುವರೆಗೆ ಅಮಲ್ದಾರರಾಗಿದ್ದು ವರ್ಗವಾಗಿರುವ ಶ್ರೀ ಸಿದ್ದೇಗೌಡರ ಸ್ಥಾನದಲ್ಲಿ ಹೊಸ ಅಮಲ್ದಾರರಾದ ಶ್ರೀ ಜಿ. ಪಿ. ಅನಂತರಾಜಯ್ಯನವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಕೆರೆಯಲ್ಲಿ ಕಾಲು ಜಾರಿ ಲೆಕ್ಚರರ ನಿಧನ

ಮೈಸೂರು ೧೮

ಮಹಾರಾಜಾ ಕಾಲೇಜು ಲೆಕ್ಚರರಾದ ಶ್ರೀ ಸಿ. ಜಿ. ಶ್ರೀನಿವಾಸಮೂರ್ತಿಯವರು ಹಲವು ಮಿತ್ರರೊಡನೆ ಹೊಸಬುಘಟ್ಟಕ್ಕೆ ತೆರಳಿ, ಅಲ್ಲಿನ ಕೆರೆಯಲ್ಲಿ ಕಾಲುಜಾರಿಬಿದ್ದು ನೆನ್ನೆ ನಿಧನರಾದರೆಂಬ ವಿಷಾದದ ವಾರ್ತೆ ಬಂದಿರುತ್ತದೆ. ಇವರು ತಮ್ಮ ಕೇವಲ ೩೦ರ ಹರೆಯದವರು. ಕೆಲವು ತಿಂಗಳುಗಳ ಹಿಂದೆ ಇವರಿಗೆ ವಿವಾಹವಾಗಿತ್ತು. ಮೊನ್ನೆ ತಾನೆ ಮೈಸೂರಿಗೆ ಬಂದಿದ್ದ ಬ್ರಿಟಿಷ್ ಡಿಬೇಟಿಂಗ್ ಟೀಮಿನವರೊಡನೆ ಇವರೂ ಸಹ ಭಾಷಣದಲ್ಲಿ ಭಾಗವಹಿಸಿದ್ದರು. ಮೃತರ ಆತ್ಮಕ್ಕೆ ಭಗವಂತನು ಶಾಂತಿಯೀಯಲೆಂದು ಬೇಡುತ್ತೇವೆ. ಅವರ ಮಾತಾಪಿತೃಗಳಿಗೂ ಬಂಧುಮಿತ್ರರಿಗೂ ಹೃತ್ಪೂರ್ವಕವಾದ ಅನುತಾಪವನ್ನು ವ್ಯಕ್ತಪಡಿಸುತ್ತೇವೆ.

ಪಾಕಿಸ್ಥಾನದಲ್ಲಿ ಪ್ಯಾರಿಲಾಲ್

ಮಹಾತ್ಮ ಗಾಂಧೀಜಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಶ್ರೀ ಪ್ಯಾರಿಲಾಲರವರು ಕರಾಚಿಗೆ ತೆರಳಿದ್ದಾರೆ. ಅವರು ಅಲ್ಲಿನ ಗೌವರ್ನರ್ ಜನರಲ್ ಮತ್ತು ಪ್ರಧಾನಿಯವರನ್ನು ಭೇಟಿ ಮಾಡುವರು.

ಷರತ್ತುಗಳನ್ನೊಪ್ಪಿಕೊಳ್ಳಲು ಕಟ್ಟಕಡೇ ವಾಯಿದೆ

ಚೀಣದಲ್ಲಿ ಶಾಂತಿನೆಲೆಸಲು ಕಮ್ಯೂನಿಸ್ಟರಿಗೂ ಸರ್ಕಾರಕ್ಕೂ ಆದ ಮಾತುಕತೆ ಫಲವಾಗಿ ಚೀಣಾ ಸರ್ಕಾರಿ ಪ್ರತಿನಿಧಿಯು ೮ ವಿಷಯಗಳನ್ನೊಳಗೊಂಡ ಷರತ್ತುಗಳನ್ನು ಈಗ ತೆಗೆದುಕೊಂಡು ಹೋಗಿರುವರೆಂದೂ ಅವನ್ನು ರಾಷ್ಟ್ರೀಯ ಸರ್ಕಾರದವರು ಒಪ್ಪಲು ಇದೇ ೨೦ ನೇ ತಾ॥ ಕೊನೆಯ ದಿನವೆಂದೂ ಕಮ್ಯೂನಿಸ್ಟ್ ರೇಡಿಯೋ ತಿಳಿಸಿರುತ್ತದೆ.

ಮಂಟಪದ ಉರುಳಿ ಇಬ್ಬರ ಮರಣ

ಎಟ್ಟಿಯಾಪುರಂನ ಸಮೀಪದಲ್ಲಿರುವ ... ನಲ್ಲಿ ಉತ್ಸವ ನಡೆಯುತ್ತಿದ್ದ ಅಲ್ಲಿನ ಮಂಟಪದ ಕಲ್ಲಿನ ಕಂಬಗಳು ಕುಸಿದು ಬಿದ್ದುದರಿಂದ ಉತ್ಸವಕ್ಕಾಗಿ ಅಲ್ಲಿ ನೆರೆದಿದ್ದ ಜನರ ಪೈಕಿ ಇಬ್ಬರು ಕಂಬಗಳ ಕೆಳಗೆ ಸಿಕ್ಕಿ ಸತ್ತರೆಂದೂ, ನಾಲ್ಕು ಮಂದಿಗೆ ತೀವ್ರ ಗಾಯವಾಯಿತೆಂದೂ ವರದಿ.

ಭಾರತೀಯರ ಮೇಲೆ ಪುನಃ ದಕ್ಷಿಣ ಆಫ್ರಿಕನರ ಧಾಳಿ

ದಕ್ಷಿಣ ಆಫ್ರಿಕದ ಭಾರತೀಯರ ಮೇಲೆ ಕ್ರೂರ ಕೃತ್ಯಗಳನ್ನು ನಡೆಸಲು ಹಲವು ಯೂರೋಪಿಯನ್ನರು ಪ್ರೇರೇಪಿಸಿದರೆಂದೂ, ಮುಯ್ಯಿಗೆ ಮುಯ್ಯಿ ತೀರಿಸುವ ಉದ್ದಿಶ್ಯದಿಂದ ಆಫ್ರಿಕನರು ಪುನಃ ಭಾರತೀಯರ ಮೇಲೆ ಬೀಳಬಹುದೆಂದೂ ದಕ್ಷಿಣ ಆಫ್ರಿಕದ ಡರ್ಬಾನಿನ ಬೊಂಬಿ ಪರಿಶೀಲನಾ ಸಮಿತಿಯವರು ವರದಿ ಮಾಡಿರುತ್ತಾರೆ. ಈ ವರ್ಣ ದ್ವೇಷದ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ಸರ್ಕಾರದವರು ಪರಿಶೀಲಿಸದಿದ್ದಲ್ಲಿ ಅದು ವಿಷಮಗೊಳ್ಳುವುದೆಂದೂ ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ.

ಜೂನ್ ತಿಂಗಳಿನಲ್ಲಿ ಕೇರಳ ಯೂನಿಯನ್

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಐಕ್ಯವಾಗಿ ಕೇರಳ ಯೂನಿಯನ್ನಿನ ಸ್ಥಾಪನೆಯು ಜೂನ್ ತಿಂಗಳಿನಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಪೋಲೀಸ್ ಲಾರಿಯ ಅಪಘಾತದಿಂದ ಒಬ್ಬನ ಮರಣ

೩೦ ಜನ ಸಶಸ್ತ್ರ ಪೋಲೀಸರನ್ನೊಳಗೊಂಡ ಒಂದು ಪೋಲೀಸ್ ಲಾರಿಯು ವಿಜಯವಾಡದ ಹತ್ತಿರ ಮಗುಚಿಕೊಂಡು ಒಬ್ಬನು ಸತ್ತನೆಂದೂ, ಇತರ ೧೯ ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ.

ತಿರುವಾಂಕೂರು ತಮಿಳರ ಸತ್ಯಾಗ್ರಹ ರದ್ದು

ತಿರುವಾಂಕೂರಿನ ತಮಿಳು ಪ್ರದೇಶಗಳನ್ನು ಮದರಾಸಿಗೆ ಸೇರಿಸಬೇಕೆಂದು ಕಳೆದ ೧೩ ನೇ ತಾ॥ ಪ್ರಾರಂಭವಾದ ತಿರುವಾಂಕೂರಿನ ತಮಿಳ್‌ನಾಡು ಕಾಂಗ್ರೆಸ್ಸಿನ ಸತ್ಯಾಗ್ರಹವನ್ನು ಸರ್ದಾರ್ ಪಟೇಲರ ಸಲಹೆ ಮೇಲೆ ನೆನ್ನೆ ನಿಲ್ಲಿಸಲಾಯಿತು.

ಸಹಕಾರ ನೌಕರರ ಸಂತೋಷ ಕೂಟ

ನಂಜನಗೂಡು ೧೮

ಮೈಸೂರು ನಗರದ ಸಹಕಾರಸಂಸ್ಥೆಗಳ ನೌಕರರ ವಾರ್ಷಿಕ ಸಂತೋಷಕೂಟವು ಇಲ್ಲಿನ ರೆಸಿಡೆನ್ಸಿ ಭವನದಲ್ಲಿ ನೆನ್ನೆ ನಡೆಯಿತು. ಮೆಟ್ರೋಪಾಲಿಟನ್ ಕಾಲೇಜು ಅಧ್ಯಕ್ಷರಾದ ಶ್ರೀ ಪಿ. ಸುಬ್ಬರಾಯ ಶಾಸ್ತ್ರಿಗಳು ಅಗ್ರಾಸನವನ್ನು ವಹಿಸಿದ್ದರು. ಆಹುತರು ರಕ್ತಭಾರತಿಯವರಿಂದ ಮಂಗಳಪದ್ಯ ಪಠನವಾದ ನಂತರ ಶ್ರೀಗಳಾದ ಎ. ಕೃಷ್ಣಮೂರ್ತಿರಾವ್, ಹೆಚ್. ರಾಮಣ್ಣ, ಟಿ. ಕೃಷ್ಣರಾವ್, ಎನ್. ರಾಮಣ್ಣನವರೂ, ಅಧ್ಯಕ್ಷರೂ ಭಾಷಣಮಾಡಿ ಸಹಕಾರ ನೌಕರರ ಕರ್ತವ್ಯವನ್ನು ವಿವರಿಸಿದರು.

ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ಸೂಚಿಸಲು ಅಧಿಕಾರ

ಬೆಂಗಳೂರು, ೧೮

ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ಸೂಚನೆಯನ್ನು ಮಂಡಿಸಲು ಈಗಿನ ಶಾಸನ ಸಭೆಗಳಿಗೆ ಅಧಿಕಾರವಿಲ್ಲ. ಆ ರೀತಿ ಅಧಿಕಾರವನ್ನು ಕೊಡಲು ಶಾಸನ ಸಭೆಗಳ ಕಾನೂನನ್ನು ಬದಲಾಯಿಸುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿರುವರೆಂದು ತಿಳಿದು ಬಂದಿದೆ.

ಪ್ರಜಾ ಪ್ರತಿನಿಧಿ ಸಭೆಗೆ ಚುನಾಯಿತ ಅಧ್ಯಕ್ಷರನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಸಹ ಕೊಡಲಾಗುವುದೆಂದು ತಿಳಿದು ಬಂದಿದೆ.

ಯಳಂದೂರು ಕೆರೆಗಳ ಜೀರ್ಣೋದ್ಧಾರ

ತಾಲ್ಲೂಕು ಸಮ್ಮೇಳನದಲ್ಲಿ ಸಮಿತಿಯ ರಚನೆ

ಯಳಂದೂರು ೧೪

ಈ ತಾಲ್ಲೂಕಿನ ೧೨ ನೇ ಸಮ್ಮೇಳನವು ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ಇಲ್ಲಿನ ಶ್ರೀಮಂತ ಜಹಗೀರ್‌ದಾರರವರ ಬಂಗಲೆಯಲ್ಲಿ ನಡೆಯಿತು ಪ್ರಾರಂಭದಲ್ಲಿ ರಾಷ್ಟ್ರೀಯ ಧ್ವಜವನ್ನು ಶ್ರೀ ಅಗರಂ ರಂಗಯ್ಯನವರೂ, ಮೈಸೂರ ಧ್ವಜವನ್ನು ಶ್ರೀ ಎಸ್ ರಂಗರಾಮಯ್ಯನವರೂ ಏರಿಸಿದರು ಸಮ್ಮೇಳನಕ್ಕೆ ಮೈಸೂರಿನಿಂದ ಶ್ರೀಗಳಾದ ತಗಡೂರು ರಾಮಚಂದ್ರರಾಯರು, ಸಿ ಗೋಪಾಲಕೃಷ್ಣಶೆಟ್ಟರು, ಎಂ. ಎಸ್. ಜೋಯಿಸರು, ಅಗರಂ ಸೂರ್ಯನಾರಾಯಣ ಪಂಡಿತರು, ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ರಂಗರಾಮಯ್ಯನವರು, ಸರ್ಕಾರಿ ಉದ್ಯೋಗಿಗಳು ಮತ್ತು ಅಧಿಕಾರಿ ವರ್ಗದವರು ತಾಲ್ಲೂಕಿನ ನೂರಾರು ಜನರು ದಯಮಾಡಿಸಿದ್ದರು. ಸಮ್ಮೇಳನಕ್ಕೆ ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಹೆಚ್ ಸಿ. ದಾಸಪ್ಪ ಮತ್ತು ರಾಜಸೇನಾಸಕ್ತ ವೈ ಕೆ ರಾಮಚಂದ್ರರಾಯರವರುಗಳು ಶುಭವನ್ನು ಕೋರಿ ಬರೆದಿದ್ದ ಸಂದೇಶಗಳನ್ನು ಅಧ್ಯಕ್ಷರು ಓದಿದರು ಬಾಲಕಿಯರಿಂದ ದೇವತಾ ಪ್ರಾರ್ಥನೆಯಾದನಂತರ ಸಿದ್ದಪ್ಪ ಹಿಸಳಂದರುಯರು ಲಾವಣಿಯನ್ನು ಹಾಡಿದರು. ಶ್ರೀ ಕೃಷ್ಣಯ್ಯನವರು ಸ್ವಾಗತ ಪದ್ಯವನ್ನು ಓದಿದರು ಶ್ರೀ ಹರಿಸರ್ವೋತ್ತಮರಾಯರು ಅಧ್ಯಕ್ಷರನ್ನು ಮತ್ತು ಇತರರನ್ನು ಸ್ವಾಗತಿಸಿ ಭಾಷಣಮಾಡಿದರು. ತಾಲ್ಲೂಕಿನ ಅಮಲ್ದಾರರವರಾದ ಶ್ರೀ ಅನಂತರಾಜಯ್ಯನವರು ಕಳೆದ ವರ್ಷದ ವರದಿಯನ್ನು ಒಪ್ಪಿಸಿದರು

ಸಂಯುಕ್ತ ಪ್ರಾಂತದ ಗೌರ್ನರಾಗಿದ್ದ ಶ್ರೀಮತಿ ಸರೋಜಿನಿ ದೇವಿಯವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುವ ನಿರ್ಣಯವನ್ನು ಶ್ರೀ ಅಗರಂ ಸೂರ್ಯನಾರಾಯಣ ಪಂಡಿತರು ಮಂಡಿಸಿದರು ಸಭೆಯು ಎರಡು ನಿಮಿಷ ಮೌನದಿಂದ ಎದ್ದುನಿಂತು ಅದನ್ನು ಅಂಗೀಕರಿಸಿತು. ತಾಲ್ಲೂಕಿನ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹಲವು ವಿಷಯಗಳ ಮೇಲೆ ಸಮ್ಮೇಳನದಲ್ಲಿ ಚರ್ಚೆ ನಡೆಯಿತು. ಯಳಂದೂರು ತಾಲ್ಲೂಕಿನ ಕೆರೆಗಳ ರಿಪೇರಿ ಬಗ್ಗೆ ಸಲಹೆ ಕೊಡಲು ಎಂಟು ಜನರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು ರೈತರಿಗೆ ತಕಾವಿ ಸಾಲ, ಬಾವಿ ತೆಗೆಸಲು ಗ್ರಾಂಟು ಮುಂತಾದವುಗಳನ್ನು ನೀಡಲು ಶಾಸನದಲ್ಲಿ ಸೂಕ್ತ ಬದಲಾವಣೆ ಮಾಡಿಸಬೇಕೆಂಬ ನಿರ್ಣಯವೂ ಸಹ ಮಂಜೂರಾಯಿತು.

ತಾಲ್ಲೂಕಿನಲ್ಲಿ ಸಂಪೂರ್ಣ ಪಾನ ನಿರೋಧ, ಜಹಗೀರು ನೌಕರರನ್ನು ಸರ್ಕಾರಿ ನೌಕರರಂತೆ ಪರಿಗಣಿಸುವುದು, ಮುದರಾಜನಲ್ಲಿರುವ ಕೆರೆ ನಮ್ಮ ದೇವರಲ್ಲಿ ಕಾಲುವೆ ನೀರಿನ ಮೂಲೆಯನ್ನು ತರುವುದು, ಹರಿಗೆ ಆಸ್ಪತ್ರೆಯನ್ನು ಉತ್ತಮಪಡಿಸುವುದು, ಸೋಮಿ ಮೊಳ್ಳಹಳ್ಳಿಯಿಂದ ಕೆಸ್ತೂರ ಹಳ್ಳಿ ಮೂರ್ಗೆವಾಗ ಅಗರಕ್ಕೆ ರಸ್ತೆ ಮಾಡುವುದು, ಯಳಂದೂರಿನಲ್ಲಿ ಹೊಳೆಗೆ ಸೇತುವೆಯನ್ನು ಕಟ್ಟಿಸಿ, ಬೆಟ್ಟದ ರಸ್ತೆ, ಇರಸವಾಡಿ ಮತ್ತು ಮೂಗೂರು ರಸ್ತೆಗಳನ್ನು ಮಾಡಿಸುವುದು ಅಗರ-ಮಾಂಬಳ್ಳಿ ರಸ್ತೆಯ ಸಾಲಿಯಾನ ರಿಪೇರಿ, ಕಿನಕಹಳ್ಳಿಗೆ ಪೈಪ್ಲೈನು ಹಾಕಿಸುವುದು, ಗೌಡಹಳ್ಳಿ ರಸ್ತೆಯ ರಿಪೇರಿ, ಕಿನಕನಹಳ್ಳಿ ಹೊಬಿನಂಪೇರಿ, ಪಶು ವೈದ್ಯಶಾಲೆಯ ಸ್ಥಾಪನೆ, ಹಿಂಬರ್ ಡಿಪೋ ನಿರ್ಮಾಣ, ರಸ್ತೆ ಪಕ್ಕದಲ್ಲಿರುವ ಸೇಂದಿ ಅಂಗಡಿಗಳ ವರ್ಗ, ಪ್ರನಾಯಕ್ಕೆ ಎರಡು ತಿಂಗಳು ಮುಂಚಿತವಾಗಿ ಗೊಬ್ಬರ ಮತ್ತು ಸಾಮಾನುಗಳನ್ನು ಕೊಡಿಸುವುದು. ಯಳಂದೂರಿಗೆ ವಿದ್ಯುಚ್ಛಕ್ತಿ ಸರಬರಾಜು, ಮತ್ತು ಜಹಗೀರ್ ಟ್ರೆಜರಿಯನ್ನು ಸರ್ಕಾರಿ ಟ್ರೆಜರಿಯನ್ನಾಗಿ ಮಾಡುವುದು- ಇವೇ ಮುಂತಾದ ನಿರ್ಣಯಗಳು ಮಂಜೂರಾದುವು

ಮಿಡ್ಲ್ ಸ್ಕೂಲ್ ಮುಂಭಾಗದಲ್ಲಿ ಬಹಿರಂಗ ಸಭೆ ನಡೆಯಿತು. ಶ್ರೀಗಳಾದ ತಗಡೂರ್, ಎಂ ಎಸ್ ಜೋಯಿಸ್, ಅಗರಂ ಸೂರ್ಯನಾರಾಯಣ ಪಂಡಿತ್ ಎಸ್. ರಂಗರಾಮಯ್ಯ ಮತ್ತು ದುಗ್ಗಟ್ಟಿ ಪುಟ್ಟಲಿಂಗಪ್ಪನವರುಗಳು ಭಾಷಣ ಮಾಡಿ ನೂತನ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಸಹಕಾರ ಸಂಘಗಳ ವಿಷಯವನ್ನು ವಿವರಿಸಿದರು ಗ್ರಾಮಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಚೆನ್ನಬಸಪ್ಪನವರು ಲಾವಣೆಯನ್ನು ಹಾಡಿದರು.

ಶಿಶುವಿಹಾರದ ಬಾಲಕಿಯರಿಂದ ಕೃಷ್ಣಲೀಲೆ ಚಾಮರಾಜನಗರದ ಹೈಸ್ಕೂಲು ಉಪಾಧ್ಯಾಯ ವರ್ಗದವರಿಂದ ನಂದಿ ಗ್ರಾಮ ಮತ್ತು ಹಿಂದೂ ಮುಸ್ಲಿಂ ಐಕ್ಯ ಮತ್ಯ ಎಂಬ ನಾಟಕಗಳೂ ಪ್ರದರ್ಶಿಸಲ್ಪಟ್ಟವು. ಜಿಲ್ಲಾಭಿವೃದ್ಧಿ ಸಮಿತಿಯವರು ಚಿತ್ರ ಪ್ರದರ್ಶನ ಮಾಡಿದರು

ಅಮಲ್ದಾರರವರಾದ ಶ್ರೀ ಎಸ್ ಮುರುಳೀಂದ್ರಸ್ವಾಮಿಯವರು ಸರ್ವರಿಗೂ ಧನ್ಯವಾದವನ್ನು ಅರ್ಪಿಸಿದನಂತರ ಸಮ್ಮೇಳನವು ಮುಕ್ತಾಯವಾಯಿತು.

ಸರಸ್ವತಿ ಪೂಜೆ

ರಾಜಧಾನಿಯ ನೂರಡಿ ರಸ್ತೆ ಕಾಶೀಪತಿ ಅಗ್ರಹಾರದಲ್ಲಿರುವ ಶ್ರೀ ವರಲಕ್ಷ್ಮೀ ವಿದ್ಯಾ ಮಂದಿರದಲ್ಲಿ ನಿನ್ನೆ ಸಂಜೆ ಸರಸ್ವತಿ ಪೂಜೆ ನಡೆಯಿತು ಮಂದಿರದ ವಿದ್ಯಾರ್ಥಿನಿಯರಿಂದ ದೇವತಾ ಪ್ರಾರ್ಥನೆ, ಭರತ ನಾಟ್ಯ, ದೇವರ ನಾಮ, ಸಂಗೀತಗಳಾದುವು ಸಂಸ್ಥೆಯ ಅಧ್ಯಾಪಕರೊಬ್ಬರಿಂದ ರಚಿಸಲ್ಪಟ್ಟ 'ಅಕ್ಕನಿಗೆ ಅಟ್ಟರ್' ಮತ್ತು 'ಸಾವಿನ ಚೆಲೆ' ಎಂಬ ಎರಡು ಕಿರು ನಾಟಕಗಳನ್ನು ವಿದ್ಯಾರ್ಥಿನಿಯರು ಬಹಳ ಚೆನ್ನಾಗಿ ಅಭಿನಯಿಸಿದರು. ಅನಂತರ ಈ ಸಮಾರಂಭದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಹಂಚಲಾಯಿತು. ಶಾಲಾ ಪ್ರಿನ್ಸಿಪಾಲರಾದ ಶ್ರೀ ಚಂದ್ರಶೇಖರಯ್ಯನವರು ಭಾಷಣ ಮಾಡಿ ೧೯೪೦ ನೇ ಇಸವಿಯಲ್ಲಿ ಕೇವಲ ೪ ಮಂದಿ ವಿದ್ಯಾರ್ಥಿಗಳಿಂದ ಆರಂಭವಾದ ಈ ಸಂಸ್ಥೆಯು ಈಗ ೧೧೦ ಮಂದಿ ವಿದ್ಯಾರ್ಥಿಗಳನ್ನು ಹೊಂದಿ ಬಹು ಮಟ್ಟಿಗೆ ಅಭಿವೃದ್ಧಿ ಸ್ಥಿತಿಗೆ ಬಂದಿರುವುದನ್ನು ವಿವರಿಸಿದರು ಮಂಗಳಾರತಿ, ಪ್ರಸಾದ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು.

ಶಾಲೆಗೆ ಮಕ್ಕಳನ್ನು ಕಳುಹಿಸದಿದ್ದಕ್ಕೆ ಶಿಕ್ಷೆ

ಚಿಕ್ಕಮಗಳೂರು ಮತ್ತು ನೆಟ್ಟಕೆರೆಗಳ ಪೋಷಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದಿದ್ದುದಕ್ಕೆ ಮೂರು ಜನರಿಗೆ ತಲಾ ೧ ರೂ ದಂಡವನ್ನು ವಿಧಿಸಲಾಗಿದೆ.

Edited, printed and published by A R. Nagarajan at the Sadhvi Press D. Subbiah Road, Mysore.

ಗಾಂಧಿ ವಿಗ್ರಹಕ್ಕೆ 'ಪೆಟ್ಟು'

ಮಚಲೀಪಟ್ಟಣದ ಎರಡು ಕಡೆಗಳಲ್ಲಿ ಇಡಲಾಗಿರುವ ಗಾಂಧಿ ಪ್ರತಿಮೆಗಳನ್ನು ಕೆಲ ದಿನಗಳ ಹಿಂದೆ ಯಾರೋ ಪೆಟ್ಟುಕೊಟ್ಟು ಒಡೆದು ನಷ್ಟವುಂಟುಮಾಡಿದ್ದಾರೆ. ಸಾರ್ವಜನಿಕರು ಈ ಕೃತ್ಯದಿಂದ ಕೋಪಗೊಂಡಿದ್ದಾರೆ. ಪೋಲೀಸರ ತನಿಖೆಯಾಗುತ್ತಿದೆ

೩ ತಿಂಗಳಿಗೊಂದಾವರ್ತಿ ಬಟ್ಟೆ ದರ ಬದಲಾವಣೆ

ಬಟ್ಟೆ ಮತ್ತು ದಾರದ ಬೆಲೆಯನ್ನು ೩ ತಿಂಗಳಿಗೊಂದಾವರ್ತಿ ಪುನರ್ವಿಮರ್ಶಿಸಲು ಭಾರತ ಸರ್ಕಾರವು ನಿರ್ಧರಿಸಿದೆ.

ವಿದ್ಯಾರ್ಥಿಗಳಿಂದ ಗ್ರಾಮಾಭಿವೃದ್ಧಿ ಕೆಲಸ

[ಸ್ವಂ.ಸು] ಚಿಕ್ಕಮಗಳೂರು

ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಈ ತಾಲ್ಲೂಕಿನ ಮತ್ತಾವರದಲ್ಲಿ ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಂದ ಗ್ರಾಮಾಭಿವೃದ್ಧಿ ಕಾರ್ಯಕ್ರಮವು ಈ ದಿನ ಜಿಲ್ಲಾಧಿಕಾರಿಗಳಾದ ಜನಾಬ್ ಕೆ ಮಹಮುದ್ ಅಹಮದ್ ರವರಿಂದ ನೆರವೇರಿಸಲ್ಪಟ್ಟಿತು.

ನೂಲುವ ತರಗತಿ

ಈ ತಾಲ್ಲೂಕಿನ ಕಳಸಾಪುರದಲ್ಲಿ ಜಿಲ್ಲಾ ಖಾದಿ, ಗ್ರಾಮೋದ್ಯೋಗ, ವಿವಿಧೋದ್ದೇಶಗಳ ಸಹಕಾರ ಸಂಘದ ಅಂಗವಾಗಿ ನೂಲುವ ತರಗತಿಯ ಪ್ರಾರಂಭೋತ್ಸವವನ್ನು ನಿನ್ನೆ ಶ್ರೀ ಹುಚ್ಚೇಗೌಡರು ನೆರವೇರಿಸಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ವೆಂಕಟರಮಣಯ್ಯಂಗಾರರು ವರದಿಯನ್ನು ಓದಿದರು. ಸಹಕಾರ ಸಂಘಗಳ ಅಸಿ ರಿಜಿಸ್ಟ್ರಾರರವರು ನೂತನ ಸಮಗ್ರ ಗ್ರಾಮಸೇವಾ ಸಂಘದ ಉದ್ದೇಶವನ್ನು ವಿವರಿಸಿದರು

ಪ್ರಭುದೇವಾ ಟಾಕೀಸಿನಲ್ಲಿ

ಮುಂದಿನ ಬದಲಾವಣೆ

ಮುರುಳಿ ಪಿಕ್ಚರ್ಸ್‌ರವರ

* ಭಕ್ತ ಶಿರಿಯಾಳ *

(ತೆಲುಗು)

ಮುಖ್ಯ ಪಾತ್ರ:-ಸಿ. ಎಸ್. ಆರ್., ಗಗ್ಗಯ್ಯ, ಋಷ್ಯೇಂದ್ರಮಣಿ.

ಮೈಸೂರು ಸ್ಟೇಟ್ ರೈಲ್ವೆ

ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್‌ರವರ ಕಛೇರಿ ಎಂ ಎಸ್. ರೈಲ್ವೆ

ಮೈಸೂರು 9—4—49

ಮೈಸೂರು ಸಿಟಿ ರೈಲ್ವೆ ನಿಲ್ದಾಣದಲ್ಲಿ ಸೈಕಲ್ ಸ್ಟಾಂಡನ್ನು ನಡೆಸುವ ಕಂಟ್ರಾಕ್ಟು ಬಗ್ಗೆ ಟೆಂಡರು

1 1949ನೇ ಮೇ ತಿಂಗಳು 1ನೇ ತಾರೀಖಿನಿಂದ 1950ನೇ ಜೂನ್ ತಿಂಗಳು 30ನೇ ತಾರೀಖಿನವರೆಗೆ ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಸೈಕಲ್ ಸ್ಟಾಂಡನ್ನು ನಡೆಸುವ ಬಗ್ಗೆ ಟೆಂಡರನ್ನು ಕರೆಯಲಾಗಿದೆ

2 50 ರೂ. (ಐವತ್ತು ರೂ) ಮೊಬಲಗನ್ನು ಮೈಸೂರು ಎಂ.ಎಸ್ ರೈಲ್ವೆ ಹೆ. ಚೀಫ್ ಆಡಿಟರವರಲ್ಲಿ ಡಿಪಾಜಿಟ್ ಮಾಡಿ, ಅದರ ರಶೀತಿಯನ್ನು ಟೆಂಡರ್ ಸಂಗಡ ಕಳುಹಿಸತಕ್ಕದ್ದು.

3 ಕಂಟ್ರಾಕ್ಟಿನ ಕರಾರು ಮತ್ತು ಷರತ್ತುಗಳ ವಿವರಗಳನ್ನು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್, ಎಂ ಎಸ್. ರೈಲ್ವೆ, ಮೈಸೂರುರವರಿಗೆ ಅರ್ಜಿ ಹಾಕಿಕೊಂಡು ಪಡೆಯಬಹುದು.

4. "ಮೈಸೂರು ರೈಲ್ವೆ ಸ್ಟೇಷನ್ನಿನಲ್ಲಿ ಸೈಕಲ್ ಸ್ಟಾಂಡ್ ಕಂಟ್ರಾಕ್ಟಿಗಾಗಿ ಟೆಂಡರ್"ಎಂದು ನಮೂದಿಸಿರುವ ಟೆಂಡರನ್ನು 1949ನೇ ಏಪ್ರಿಲ್ ೭೫ನೇ ತಾ|| ಮಧ್ಯಾಹ್ನ 3 ಗಂಟೆಯವರೆಗೆ ಸ್ವೀಕರಿಸಲಾಗುವುದು

ಕೆ. ಎಸ್. ಶಂಕರಯ್ಯ,

ಫಾ|| ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟ್

ನಿಮ್ಮ ಮೈ ಮೊಕಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೩] ಮಂಗಳವಾರ ೧೯ ೪-೧೯೪೮ [ಸಂಚಿಕೆ ೨೧೯

ದಕ್ಷಿಣ ಆಫ್ರಿಕಕ್ಕೆ ಭಾರತ ಧಾಳಿಯ ಭೀತಿ

ಮೈಸೂರು ಐಕ್ಯವಾಗಲೆಂದು ದೆಹಲಿಯ ಅಭಿಪ್ರಾಯ

ಬೆಂಗಳೂರು ೧೯

ಇತ್ತೀಚಿಗೆ ದೆಹಲಿಗೆ ಭೇಟಿ ಕೊಟ್ಟು ಹಿಂತಿರುಗಿದ ಬೆಂಗಳೂರು ಜಿಲ್ಲಾ ಮತ್ತು ನಗರ ಕಾಂಗ್ರೆಸ್ ಸಮಿತಿಯ ಮಾಜಿ ಕಾರ್ಯದರ್ಶಿ ಶ್ರೀ ಜಿ. ಆರ್ ಸ್ವಾಮಿಯವರು ಒಂದು ಹೇಳಿಕೆಯನ್ನಿತ್ತು ಮೈಸೂರಿನ ಪ್ರತ್ಯೇಕತೆ ಮನೋಭಾವನೆಯನ್ನು ದೆಹಲಿಯ ನಾಯಕರುಗಳು ಅಪಹಾಸ್ಯ ಮಾಡುತ್ತಿರುವರೆಂದು ತಿಳಿಸಿದ್ದಾರೆ.

ಸಂಸ್ಥಾನಕ್ಕೆ ಪ್ರತ್ಯೇಕ ಪ್ರಾಂತೀಯ ಕಾಂಗ್ರೆಸ್ ಮತ್ತು ಸರ್ಕಾರವಿರಬೇಕೆಂದು ಮತ್ತು ರಾಜತ್ವವು ಉಳಿಯಬೇಕೆಂದು ಹಲವು ಮೈಸೂರಿನವರು ಹೇಳುತ್ತಿರುವುದು ಪ್ರತಿಗಾಮಿಯಾದ ಮತ್ತು ಅಧಿಕಾರ ಲಾಲಸೆಯ ಪರಿಣಾಮವೆಂದು ಕಿರಸ್ಕಾರಕ್ಕೆ ಕಾರಣವಾಗಿದೆ. ಸಂಸ್ಥಾನವು ಭಾರತದಲ್ಲಿ ಐಕ್ಯವಾಗಿ, ಅದರಿಂದ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದು ಸರ್ದಾರ್ ಪಟೇಲ್ ಮುಂತಾದ ನಾಯಕರ ಅಭಿಪ್ರಾಯಪಟ್ಟಿದ್ದಾರೆ. ಇತರ ಪ್ರಾಂತ್ಯಗಳಲ್ಲಿ ೧೦೦ ಟನ್ನು ಪಡಿತರ ಕೊಡಲಾಗುತ್ತಿದೆ. ಮೈಸೂರು ಐಕ್ಯವಾದಲ್ಲಿ ಇಲ್ಲೂ ಅಷ್ಟೇ ಪಡಿತರ ಸಿಕ್ಕಬಹುದು. ಕರ್ನಾಟಕದ ಏಕೀಕರಣದಬಗ್ಗೆ ಬೀರೂರಿನ ಪಿ. ಎಂ. ಸಿ. ಸಿ. ಸಭೆಯಲ್ಲಿ ಮಾಡಿದ ನಿರ್ಣಯವೂ, ಮೈಸೂರಿಗೆ ಪ್ರತ್ಯೇಕ ಪ್ರಾಂತೀಯ ಕಾಂ॥ ಸಮಿತಿ ಇರಬೇಕೆಂದು ಕೇಳಿರುವುದೂ ಅಸಂಬದ್ಧವೆಂದು ಅಲ್ಲಿ ಭಾವಿಸಲಾಗಿದೆ. ಮೈಸೂರಿನ ನಾಯಕರು ಪದೇ ಪದೇ ದೆಹಲಿಗೆ ಯಾತ್ರೆಮಾಡಿ, ಪ್ರತ್ಯೇಕ ಮನೋಭಾವನೆ ತೋರಿ ಪ್ರತಿಗಾಮಿಗಳೆಂಬ ಅಪಕೀರ್ತಿ ಒರದಂತೆ ಮಾಡಲಿ—ಎಂದು ಅವರು ಹೇಳುತ್ತಾರೆ.

ಗಾಂಧೀ ನಿಧಿಗೆ ಕೈಗಾರಿಕೆಯವರಿಂದ ೫ ಕೋಟಿ ರೂ.

ಭಾರತದ ಕೈಗಾರಿಕೋದ್ಯೋಗಿಗಳ ಸಮಿತಿಯವರು ಮಹಾತ್ಮ ಗಾಂಧೀ ಸ್ಮಾರಕ ನಿಧಿಗೆ ೫,೦೦,೩೫೧,೧೧೧ ರೂ ಚೆಕ್ಕನ್ನು ಕಳೆದ ಶನಿವಾರ ದೆಹಲಿಯಲ್ಲಿ ಅರ್ಪಿಸಿದರು. ಸಮಿತಿಯ ಅಧ್ಯಕ್ಷರಾದ ಶ್ರೀ ಕಸ್ತೂರಿ ಲಾಲ್ ಭಾರ್ಗವರವರು ಅದನ್ನೂ ಕರತಲದಲ್ಲಿ ಇಟ್ಟುಕೊಟ್ಟರು. ಇಷ್ಟು ದೊಡ್ಡ ಹಣದ ಚೆಕ್ಕನ್ನು ತಾವು ನೋಡಲೇ ಇರಲಿಲ್ಲವೆಂದು ಪಂಡಿತ ನೆಹರೂರವರು ಹೇಳಿದರು.

ಜಾಡಮಾಲಿಗಳ ಬೇಡಿಕೆ

ಮೈಸೂರು ೧೯

ರಾಜಧಾನಿಯ ಪುರಸಭೆಯ ಆರೋಗ್ಯ ವಿಭಾಗದ ಜಾಡಮಾಲಿಗಳು ಅಧ್ಯಕ್ಷರಿಗೆ ಒಂದು ಅರ್ಜಿಯನ್ನು ನಿನ್ನೆ ದಿನ ಸಲ್ಲಿಸಿ, ತಮಗೆ ಪ್ರಾವಿಡೆಂಟ್ ಫಂಡ್ ಬೇಕಾಗಿಲ್ಲವೆಂದು ತಿಳಿಸಿರುತ್ತಾರೆ. ತಮಗೆ ಕೊಡುತ್ತಿರುವ ಸಂಬಳವನ್ನು ಹೆಚ್ಚು ಮಾಡದೇ ಇದ್ದರೂ, ಸಂಬಳದಲ್ಲಿ ೧ ರೂ. ಹಿಡಿಯುತ್ತಿರುವುದನ್ನೂ ನಿಲ್ಲಿಸಬೇಕೆಂದೂ ಮತ್ತು ತಮಗೆ ಇನ್ಸ್‌ಪೆಕ್ಟರುಗಳು ಕೊಡುತ್ತಿರುವ ಕಿರುಕುಳಗಳನ್ನು ತಪ್ಪಿಸಬೇಕೆಂದೂ ಕೋರಿದ್ದಾರೆ. ಇವುಗಳನ್ನು ಇನ್ನು ೨೦ ದಿನಗಳಲ್ಲಿ ಈಡೇರಿಸಿಕೊಡಬೇಕೆಂದೂ, ಇಲ್ಲದಿದ್ದಲ್ಲಿ ಈ ಕಿರುಕುಳ ಮತ್ತು ಅವಮಾನವನ್ನು ಸಹಿಸಲಾರದೆ ತಮ್ಮ ಊರುಗಳಿಗೆ ಹೊರಟು ಹೋಗಬೇಕಾಗುವುದೆಂದೂ ಹೇಳಿದ್ದಾರೆ.

ರಾಜೇಂದ್ರ ಪ್ರಸಾದರಿಗೆ ಮಾನಪತ್ರ

ಮೈಸೂರು ೧೯

ಇದೇ ೨೫ ನೇ ತಾ॥ ರಾಜಧಾನಿಗೆ ಭೇಟಿ ಕೊಡಲಿರುವ ಮಹಾತ್ಮಾ ಸ್ಮಾರಕ ನಿಧಿಯ ಅಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದರವರಿಗೆ ಮಾನಪತ್ರವನ್ನು ಅರ್ಪಿಸಬೇಕೆಂದು ಪುರಸಭೆಯವರು ನಿರ್ಧರಿಸಿದ್ದಾರೆ ಮತ್ತು ಅದಕ್ಕಾಗಿ ೧ ಸಾವಿರ ರೂ ಅನ್ನು ಮಂಜೂರು ಮಾಡಿರುತ್ತಾರೆ.

ಸಂಜೆ ೫-೩೦ ಗಂಟೆಗೆ ಟೌನ್‌ಹಾಲಿನಲ್ಲಿ ಸಮಾರಂಭವು ನಡೆಯುವುದು. ಮಾರನೆ ದಿನ ಅವರು ಶಿವಮೊಗ್ಗಕ್ಕೆ ಭೇಟಿಕೊಟ್ಟು ಅಲ್ಲಿ ನ್ಯಾಷನಲ್ ಹೈಸ್ಕೂಲಿನ ಶಂಕುಸ್ಥಾಪನೆಯನ್ನು ನೆರವೇರಿಸುವರು.

ಗ್ರಾಮಾಭಿವೃದ್ಧಿ ಯೋಜನೆಯನ್ನು ವಾಪಸು ತೆಗೆದುಕೊಳ್ಳಬೇಕು

ಜಿಲ್ಲಾ ಬೋರ್ಡು ಅಧ್ಯಕ್ಷರ ಸಮ್ಮೇಳನದಲ್ಲಿ ನಿರ್ಣಯ

ಶಿವಮೊಗ್ಗ ೧೯

ಸಂಸ್ಥಾನದ ಜಿಲ್ಲಾಬೋರ್ಡ್ ಅಧ್ಯಕ್ಷರುಗಳ ಸಮ್ಮೇಳನವು ಶಿವಮೊಗ್ಗದಲ್ಲಿ ಕಳೆದ ಶುಕ್ರವಾರ ಮೈಸೂರು ಜಿಲ್ಲಾಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಎ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾಬೋರ್ಡು ಕಾನೂನನ್ನು ತಿದ್ದಬೇಕೆಂಬ ಸರ್ಕಾರದ ಸೂಚನೆ ವಿಚಾರದಲ್ಲಿ ಚರ್ಚೆ ನಡೆದು, ಶ್ರೀ ಧರ್ಮಪ್ಪನವರಿಂದ ಮುಂಡಿಸಲ್ಪಟ್ಟ ಕೆಳಗೆ ಕಂಡ ನಿರ್ಣಯವು ಅಂಗೀಕೃತವಾಯಿತು. —

ಸರ್ಕಾರದವರು ಇತ್ತೀಚೆಗೆ ಜಾರಿಗೆ ತಂದಿರುವ ಗ್ರಾಮಾಭಿವೃದ್ಧಿ ಯೋಜನೆಯು ಜಿಲ್ಲಾಬೋರ್ಡುಗಳ ಹಕ್ಕು ಮತ್ತು ಕರ್ತವ್ಯಗಳಿಗೆ ಅಡಚಣೆ ಉಂಟುಮಾಡುವುದರಿಂದ ಸದರಿ ಯೋಜನೆಗೆ ಈ ಸಭೆಯು ಸಂಪೂರ್ಣ ಅಸಮ್ಮತಿಯನ್ನು ಸೂಚಿಸುತ್ತದೆ. ಇದೂ ಅಲ್ಲದೆ ನಾಮಕರಣ ಪದ್ಧತಿಯು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿರುತ್ತದೆ. ಮತ್ತು ಈ ಯೋಜನೆಗೆ ಶಾಸನಸಭೆಗಳ ಅನುಮತಿಯೂ ಇರುವುದಿಲ್ಲ. ಆದುದರಿಂದ ಸರ್ಕಾರದವರು ಈ ಯೋಜನೆಯನ್ನು ಕೂಡಲೇ ವಾಪಸು ತೆಗೆದುಕೊಂಡು, ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಎಲ್ಲ ಕಾರ್ಯಕ್ರಮಗಳನ್ನು ಜಿಲ್ಲಾಬೋರ್ಡುಗಳಿಗೆ ವಹಿಸಿ, ಅವುಗಳ ಕೆಲಸ ... ಹೆಚ್ಚು ಅಧಿಕಾರ ಕೊಡಬೇಕು.

ದಕ್ಷಿಣ ಆಫ್ರಿಕದ ಮೇಲೆ ಭಾರತದ ಧಾಳಿಯೆ ?

ಭಾರತವು ದಕ್ಷಿಣ ಆಫ್ರಿಕದ ಮೇಲೆ ಧಾಳಿ ನಡೆಸಬಹುದೆಂಬ ಭೀತಿ ಇರುವುದರಿಂದ ಅದು ಬ್ರಿಟಿಷ್ ಕಾಮನ್‌ವೆಲ್ತನ್ನು ಬಿಟ್ಟು ರಿಪಬ್ಲಿಕ್ ಆಗಬೇಕೆಂದು ಅಲ್ಲಿನ ಪ್ರಧಾನಿ ಡಾ॥ ಮಲಾನ್ ರವರು ಒತ್ತಾಯ ಪಡಿಸುತ್ತಿದ್ದಾರೆಂದು ತಿಳಿದು ಬಂದಿದೆ.

ಮಿಠಾಯಿ ಸಾಕುವುದರಿಂದ ಭತ್ತದ ಬೆಳೆಗೆ ಸಹಾಯ

ಭತ್ತದ ಗದ್ದೆಗಳಲ್ಲಿ ಮೀನುಗಳನ್ನು ಸಾಕಬೇಕೆಂದೂ, ಇದರಿಂದ ಬೆಳೆಯು ಬೇಗನೆ ಬರುವುದೆಂದೂ ಮೈಸೂರು ಆರ್ಥಿಕ ಸಂಶೋಧನದ ವ್ಯವಸಾಯ ಪಾಲಿಸಿ ಸಮಿತಿಯವರು ಸಲಹೆ ಮಾಡಿರುತ್ತಾರೆ. ಗೊಬ್ಬರ ತಯಾರಿಕೆಗೆ ಗುಂಡಿಗಳನ್ನು ತೆಗೆಯುವುದಕ್ಕೆ ಸಂಯುಕ್ತ ಪ್ರಾಂತ್ಯದಲ್ಲಿರುವಂತೆ ಆ್ಯಂಡ ಅಕ್ವಿಜಿಷನ್ ಕಾನೂನನ್ನು ಇಲ್ಲೂ ಜಾರಿಗೆ ತರಬೇಕೆಂದೂ ಸಮಿತಿಯವರು ಸೂಚಿಸಿರುತ್ತಾರೆ.

ಬ್ರಿಟನ್ನಿನಿಂದ ಬರ್ಮಾಕ್ಕೆ ೧೪ ಕೋಟಿ ರೂ ಸಾಲ

ಆಕ್ಯಾಬ್ ಬರ್ಮಾ ಸರ್ಕಾರದವರು ೧೪ ಕೋಟಿ ರೂ ಸಾಲವನ್ನು ಕೊಡಬೇಕೆಂದು ಬ್ರಿಟನ್ನನ್ನು ಕೇಳಿದೆಯೆಂದೂ, ಇದು ಮಂಜೂರಾದಲ್ಲಿ ಭಾರತ ಮತ್ತು ಪಾಕಿಸ್ತಾನಗಳು ಸ್ವಲ್ಪ ಹಣವನ್ನು ಕೊಡಬೇಕಾಗುವುದೆಂದೂ ತಿಳಿದು ಬಂದಿದೆ.

ಅಡಿಕೆ ಸಮ್ಮೇಳನ

ಅಖಿಲ ಭಾರತ ಅಡಿಕೆ ಸಮ್ಮೇಳನವು ಶಿರಸಿಯಲ್ಲಿ ಮುಂದಿನ ತಿಂಗಳು ೭ ನೇ ತಾ॥ ನಡೆಯುವುದು. ಭಾರತ ಸರ್ಕಾರದ ವಾಣಿಜ್ಯ ಸಚಿವರಾದ ಶ್ರೀ ಆರ್ ಕೆ ಷಣ್ಮುಖಂ ಚೆಟ್ಟಿಯವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು.

ಆಯುರ್ವೇದ ಮತ್ತು ಯುನಾನಿ ಪರೀಕ್ಷೆ

ಕಳೆದ ತಿಂಗಳಿಂದ ಮೈಸೂರಿನ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರೂ, ನಿನ್ನೆ ದಿನ ಪ್ರೊಫೆಸರ್ ... ರಿಂದ ಪರೀಕ್ಷೆಯು ನಡೆಯಿತೆಂದು ... ...

ಗೋಪಾಲ ರಾಯರು ೩೭ ಲಕ್ಷ ರೂ. ಕೊಡಬೇಕು

ಬೆಂಗಳೂರು ೧೯

ನಿನ್ನೆ ದಿನ ಗೋಪಾಲರಾಯರ ತನಿಖೆಯು ಮುಂದುವರೆಯಿತು. ಅವರ ಲೇವಾದೇವಿಯಿಂದ ಜನರಿಗೆ ೧ ಕೋಟಿ ರೂ ನಷ್ಟವಾಗಿರುವುದಾಗಿಯೂ, ೩೭ ಲಕ್ಷ ರೂ. ಲೆಕ್ಕ ಸಿಕ್ಕಿಲ್ಲವೆಂದೂ, ಅದನ್ನು ಗೋಪಾಲರಾಯರು ಕೊಡಬೇಕೆಂದು ಸಮಿತಿಯವರು ತಿಳಿಸಿದರು.

ರಾಷ್ಟ್ರಗೀತೆಗೆ ಮನ್ನಣೆಕೊಡಬೇಕು

ಸಿನಿಮಾ ಮಂದಿರಗಳಲ್ಲಿ ಚಿತ್ರದ ಕೊನೆಯಲ್ಲಿ ರಾಷ್ಟ್ರಗೀತೆ ಹಾಡುವಾಗ ಪ್ರೇಕ್ಷಕರು ಹೊರಟುಹೋಗದೆ ಎದ್ದುನಿಂತು ಅದಕ್ಕೆ ಮನ್ನಣೆ ಕೊಡಬೇಕೆಂದು ಸರ್ಕಾರದವರು ಪ್ರಕಟಣೆಯೊಂದರಲ್ಲಿ ಕೋರಿರುತ್ತಾರೆ.

ಭದ್ರಾವತಿಯಲ್ಲಿ ಕೃತಕಗೊಬ್ಬರದ ಕಾರ್ಖಾನೆ

೨॥ ಕೋಟಿ ರೂ ಖರ್ಚಿನಲ್ಲಿ ಕೃತಕ ಗೊಬ್ಬರ ತಯಾರಿಕಾ ಕಾರ್ಖಾನೆಯೊಂದನ್ನು ಭದ್ರಾವತಿಯಲ್ಲಿ ಸರ್ಕಾರದವರು ಸ್ಥಾಪಿಸಲಿದ್ದಾರೆ. ನ್ಯೂಯಾರ್ಕಿನ ಕೆಮಿಕಲ್ ಕನ್‌ಸ್ಟ್ರಕ್ಷನ್ ಕಂಪೆನಿಯವರು ಅದನ್ನು ಎರಡು ವರ್ಷಗಳಲ್ಲಿ ನಿರ್ಮಿಸಲಿದ್ದಾರೆ. ವರ್ಷಕ್ಕೆ ೨೫ ಸಾವಿರ ಟನ್ ಗೊಬ್ಬರವನ್ನು ತಯಾರಿಸಲಾಗುವುದು.

ಮೈಸೂರಿನ ಬಗ್ಗೆ ಹಣಕಾಸಿನ ಪರಿಶೀಲನಾ ಸಮಿತಿಯ ವರದಿ

ಭಾರತ ಸರ್ಕಾರದವರಿಂದ ನೇಮಿಸಲ್ಪಟ್ಟಿರುವ ಸಂಸ್ಥಾನಗಳ ಹಣಕಾಸಿನ ಪರಿಶೀಲನಾ ಸಮಿತಿಯವರಿಂದ ಮೈಸೂರು, ಕೊಚ್ಚಿ ಮತ್ತು ತಿರುವಾಂಕೂರುಗಳ ಬಗ್ಗೆ ವರದಿಯು ಸಿದ್ಧವಾಗಿದೆ ಯೆಂದು, ಮುಂದಿನ ತಿಂಗಳು ನಡೆಯುವ ಕೇಂದ್ರ ರಾಜ್ಯಾಂಗ ಸಭೆಯ ಮುಂದೆ ಅದು ಚರ್ಚೆಗೆ ಬರಲಿರುವುದೆಂದೂ ತಿಳಿದು ಬಂದಿದೆ.

ಸತ್ಕಾರ ಕೂಟ

ಬೊಂಬಾಯಿನ ಇಂಡಿಯನ್ ಪ್ರೆಸ್ ಏಜೆನ್ಸಿನ ಸಂಪಾದಕರಾದ ಶ್ರೀ ಎ. ಸುಬ್ಬರಾಯರು 'ತಾಯಿನಾಡು' ಪತ್ರಿಕೆಯ ಮಾಲೀಕರಾದ ಡಾ॥ ಪಿ. ಆರ್. ರಾಮಯ್ಯನವರ ಗೌರವಾರ್ಥವಾಗಿ ಬೆಂಗಳೂರಿನ ಪತ್ರಿಕೋದ್ಯೋಗಿಗಳ ಪೈಕಿ ನಡೆಸಿದ ಸತ್ಕಾರ ಔತಣಕೂಟವನ್ನು ಏರ್ಪಡಿಸಿದ್ದರು. ಶ್ರೀ ಸುಬ್ಬರಾಯರು ಅವರ ಸೇವೆಯನ್ನು ಪ್ರಶಂಸಿಸಿ, ಮೈಸೂರಿನ ಪತ್ರಿಕೋದ್ಯೋಗಿಗಳು ಪ್ರೆಸ್ ಕೌನ್ಸಿಲ್ ಸ್ಥಾಪನೆಗೆ ಅವರ ಸಹಾಯ ಮಾಡಬೇಕೆಂದು ಕೇಳಿದರು. ಶ್ರೀ ರಾಮಯ್ಯನವರು ಉತ್ತರ ನೀಡಿ, ಮೈಸೂರಿನ ಸ್ವತಂತ್ರ ಪತ್ರಿಕೆಗಳ ಮೇಲೆ ಕಾಂಗ್ರೆಸ್ ನಾಯಕರು ಮಾಡುತ್ತಿರುವ ದಾಳಿಯನ್ನು ಖಂಡಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡಬೇಕೆಂದು ಹೇಳಿದರು.

ನಾರ್ಥ್ ಕಿಂಗಿನ ಹತ್ತಿರದ ದ್ವೀಪಗಳ ಆಕ್ರಮಣ

ಚೀನಾದ ಕಮ್ಯೂನಿಸ್ಟರು ... ನದಿಯ ಭಾಗದಲ್ಲಿ ... ... ನಾನ್‌ಕಿಂಗಿಗೆ ೫೦ ಮೈಲಿ ... ಪೂರ್ವದಲ್ಲಿರುವ ... ದ್ವೀಪಗಳನ್ನು ಆಕ್ರಮಿಸಿಕೊಂಡರು. ... ಹೋರಾಡುತ್ತಿರುವ ರಾಷ್ಟ್ರೀಯ ಸರ್ಕಾರದವರು ... ... ಕೊಡುತ್ತಿದ್ದಾರೆ.

ಸ॥ ಪಟೇಲರ ವಿಮಾನ ಘಟನೆ ವಿಚಾರಣೆ

ಸರದಾರ್ ಪಟೇಲರು ಜಯಪುರಕ್ಕೆ ಹೋಗಿದ್ದಾಗ ವಿಮಾನದ ಅಪಘಾತದ ಸಂಬಂಧವಾಗಿ ಒಂದು ಕಮಿಟಿಯೊಂದನ್ನು ನೇಮಿಸಲಾಗಿದೆ

ಭೂಕಂಪದಿಂದ ೮ ಜನರ ಮರಣ

... ಪ್ರದೇಶದಲ್ಲಿ ಮೊನ್ನೆ ದಿನ ... ಭೂಕಂಪವಾಗಿ ೮ ಜನರು ಸತ್ತರೆಂದೂ, ೪ ಕೋಟಿ ರೂ ... ನಷ್ಟ ... ವರದಿಯಾಗಿದೆ

ನೇಪಾಳದವರು ಷಾ ಅತಿಥಿ

... ಸಮ್ಮೇಳನಕ್ಕೆ ... ಕೆಲವು ದಿನ ... ಅತಿಥಿಗಳಾಗಿ ... ಇರುವರು ... ಹೇಳಿದೆ ಎಂದಿದೆ

ಕಾನೂನು ಬಿಟ್ಟು ಹೋಗಲು ಗೌರ್ನರರ ನಿರಾಕರಣೆ

... ಅಧ್ಯಕ್ಷರಿಗೆ ವಿರುದ್ಧ ... ಅವಿಶ್ವಾಸ ... ಗೌರ್ನರರಾದ ಶ್ರೀ ... ಅವರು, ... ಗೌರವಾರ್ಥವಾಗಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಭಾಗವಹಿಸಲು ನಿರಾಕರಿಸಿ ಹೊರಟಿರೆಂದೂ ಅನೇಕ ಅಧಿಕಾರಿಗಳು ಅ... ಮಾಡಿದರೆಂದೂ ಹೇಳಲಾಗಿದೆ

ಪಾಕಿಸ್ಥಾನದಲ್ಲಿ ಹೊಸ ರಾಜಕೀಯ ಪಕ್ಷ

ಪಶ್ಚಿಮ ಪಂಜಾಬಿನ ಹಲವು ಮುಸ್ಲಿಂ ಲೀಗಿನ ಕೆಲಸಗಾರರು ... ಸೇರಿ ... ಹೊಸ ... ಲೀಗ್ ... ಸಂಸ್ಥೆಯನ್ನು ಸ್ಥಾಪಿಸಿ... ಇದರ ಸದಸ್ಯತನವು ಪಾಕಿಸ್ಥಾನದ್ದವರೆಲ್ಲರಿಗೂ ಉಂಟು.

೩ ವರ್ಷದ ಮಗುವಿನ ಅದ್ಭುತ ಶಕ್ತಿ

ಫ್ರೆಂಚ್ ... ಬಳಿ ... ಎಂಬ ಹಳ್ಳಿಯಲ್ಲಿ ಮೂರುವರ್ಷದ ಕೃಷ್ಣದಾಸ ಎಂಬ ಬಾಲಕನು ಕುರುಡನಾಗಿದ್ದರೂ ದಿವ್ಯ ಜ್ಞಾನಸ್ವರೂಪನಾಗಿ ಅದ್ಭುತಕಾರ್ಯಗಳನ್ನು ಮಾಡುತ್ತಿರುವನೆಂದು ಹೇಳಲಾಗಿದೆ. ... ಕಣ್ಣು ... ಸಾವಿರ ... ಮಾಡಿದ್ದಾನೆ ... ತಗುಲಿದ ... ಕಾಯಿಲೆಗಳನ್ನು ... ಮಾಡಿದ್ದಾನೆ ... ಉಪಕಾರಕ್ಕೆ ... ಆತನು ಸ್ವೀಕರಿಸುತ್ತಿಲ್ಲ ... ಪ್ರತಿ ದಿನವೂ ... ಜನರು ... ಬರುತ್ತಿದ್ದಾರೆ

Edited, printed and published by A.R. Nagarajan at the Sadhvi Press, D. Subbaiah Road, Mysore

ಪಶ್ಚಿಮವಾಹಿನಿಯಲ್ಲಿ ಎಕ್ಸ್‌ಪ್ರೆಸ್ ರೈಲು ನಿಲ್ಲಬೇಕು

ಮೈಸೂರು ಸಂಸ್ಥಾನದಲ್ಲಿ ರೈಲು ಓಡಾಡಲು ಆರಂಭವಾದಾಗಿನಿಂದ ಇದುವರೆಗೆ ಪಶ್ಚಿಮವಾಹಿನಿ ಸ್ಟೇಷನ್ನಿನಲ್ಲಿ ಎಕ್ಸ್‌ಪ್ರೆಸ್ ರೈಲು ನಿಲ್ಲುತ್ತಿತ್ತು. ಈಗ ಅದನ್ನು ತಪ್ಪಿಸಲಾಗಿದೆ ರೈಲುಗಳ ವೇಗವನ್ನು ಹೆಚ್ಚಿಸಿ ಬೇಗನೆ ಮೈಸೂರು ಬೆಂಗಳೂರುಗಳನ್ನು ತಲಪುವಂತೆ ಮಾಡುವುದು ಅಗತ್ಯವೇನೋ ಹೌದು ಆದರೆ ಒಂದು ಜನರಿಗೆ ಅವಶ್ಯಕವಾಗಿರುವ ಕಡೆಗಳಲ್ಲಿ ರೈಲನ್ನು ಸ್ವಲ್ಪಕಾಲ ನಿಲ್ಲಿಸುವುದರಿಂದ ವಿಶೇಷ ತೊಂದರೆಯೇನೂ ಆಗುವುದಿಲ್ಲ

ಪಶ್ಚಿಮವಾಹಿನಿಯಲ್ಲಿ ಮದುವೆ ಕಾಲದಲ್ಲಿ ಪ್ರತಿದಿನವೂ ನೂರಾರು ಮದುವೆಗಳು ನಡೆಯುತ್ತವೆ ಇದಕ್ಕಾಗಿ ಸಾವಿರಾರು ಜನರು ಮೈಸೂರಿನಿಂದ ಅಲ್ಲಿಗೆ ಹೋಗಿ ಅದೇ ದಿನ ಸಂಜೆ ರೈಲಿನಲ್ಲಿ ಹಿಂದಿರುಗುತ್ತಾರೆ ಇದಲ್ಲದೆ ಇನ್ನೂ ಅನೇಕ ವಿಶೇಷ ಸಂದರ್ಭಗಳಲ್ಲೂ ಮತ್ತು ಉತ್ತರಕ್ರಿಯಾದಿಗಳ ಕಾಲದಲ್ಲೂ ಸ್ನಾನಾದಿಗಳಿಗೆ ಅಲ್ಲಿಗೆ ಪ್ರಯಾಣಿಕರು ಹೋಗಿ ಬರುವರು. ಕೇವಲ ಎರಡು ಮೂರು ನಿಮಿಷಗಳ ವರೆಗಾದರೂ ಅಲ್ಲಿ ಎರಡು ಎಕ್ಸ್‌ಪ್ರೆಸ್ ರೈಲುಗಳೂ ನಿಲ್ಲುವಂತೆ ಮಾಡುವುದರಿಂದ ಅನೇಕರಿಗೆ ಉಪಕಾರವಾಗುವುದು ಈ ವಿಷಯಕ್ಕೆ ಅಧಿಕಾರಿಗಳು ಗಮನ ಕೊಟ್ಟು ಅಲ್ಲಿ ಎಕ್ಸ್‌ಪ್ರೆಸ್ ರೈಲು ನಿಲ್ಲಲು ಏರ್ಪಡಿಸಬೇಕೆಂದು ಕೋರುತ್ತೇನೆ

ಪ್ರಯಾಣಿಕ.

ಪೋಲೀಸ್ ಶಿಬಿರಕ್ಕೆ ಬೆಂಕಿ

ಮದರಾಸ್ ನಗರಕ್ಕೆ ೧೫೦ ಮೈಲಿ ದೂರದಲ್ಲಿರುವ ಸೋಮವಾರಪೇಟೆ ಗ್ರಾಮದಲ್ಲಿ ಮೊನ್ನೆದಿನ ಜಾತ್ರೆ ನಡೆಯುತ್ತಿದ್ದಾಗ ಕಾವಲಿದ್ದ ಪೋಲೀಸರ ಪೈಕಿ ಒಬ್ಬನು ಗುಂಪಿನಲ್ಲಿದ್ದವನೊಬ್ಬನ ಮೇಲೆ ಲಾಠಿ ಪ್ರಯೋಗಿಸಿದ್ದನೆಂದೂ ಇದರಿಂದ ಜನರು ಉದ್ರೇಕಗೊಂಡು, ಗಲಭೆ ನಡೆಸಿ, ಪೋಲೀಸ್ ಶಿಬಿರಗಳಿಗೆ ಬೆಂಕಿ ಇಟ್ಟರೆಂದೂ, ಪೋಲೀಸರು ಗುಂಡುಹಾರಿಸಿ ಪರಿಸ್ಥಿತಿಯನ್ನು ತಹಬಂದಿಗೆ ತಂದರೆಂದೂ ವರದಿಯಾಗಿದೆ ಇದರಿಂದ ಒಬ್ಬನು ಸತ್ತನು ಮತ್ತು ಅನೇಕರಿಗೆ ಗಾಯವಾಯಿತು

ಹೆಚ್ಚು ಬೆಳೆಯುವವರಿಗೆ ಬಹುಮಾನ

ಹೆಚ್ಚು ಬೆಳೆ ಬೆಳೆಯುವ ರೈತರಿಗೆ ಬಹುಮಾನ. ಉತ್ಪತ್ತಿ ಹೆಚ್ಚಿಸುವ ಬಗ್ಗೆ ಪ್ರದರ್ಶನಗಳು ಮತ್ತು ಆಹಾರ ಧಾನ್ಯಗಳಿಗಾಗಿ ಹೆಚ್ಚು ಜಮೀನುಗಳ ಮೀಸಲು— ಇವೇ ಮುಂತಾದ ವಿಷಯಗಳನ್ನು ದಿಲ್ಲಿಯಲ್ಲಿ ಮೊನ್ನೆ ದಿನ ನಡೆದ ಪ್ರಾಂತ್ಯ ಮತ್ತು ಸಂಸ್ಥಾನಗಳ ವ್ಯವಸಾಯಾಧಿಕಾರಿಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು.

ಹೊರನಾಡು ಕನ್ನಡಿಗರ ಸಮ್ಮೇಳನ

ಕರ್ನಾಟಕದ ಹೊರಗಡೆ ಇರುವ ಕನ್ನಡಿಗರ ೪ ನೇ ಸಮ್ಮೇಳನವು ಜಬ್ಬಲ್ ಪುರದಲ್ಲಿ ಮೊನ್ನೆ ದಿನ ಶ್ರೀ ನಾಡಿಗ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಧ್ಯಪ್ರಾಂತ್ಯದ ಗೃಹ ಸಚಿವರಾದ ಪಂಡಿತ ದ್ವಾರಕಾ ಪ್ರಸಾದ್ ಮಿಶ್ರಾರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿ ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಭಾರತದ ಏಕಮುಖ್ಯತೆಗೆ ಧಕ್ಕೆ ಬರಕೂಡದೆಂದೂ, ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಸಂಪೂರ್ಣ ಅವಕಾಶವಿರಬೇಕೆಂದೂ ತಿಳಿಸಿದರು

ಮೈಸೂರು ಕೈಪಿಡಿ

ಬೆಂಗಳೂರಿನ ಫೆಡರಲ್ ಇಂಡಿಯ ಮತ್ತು ಇಂಡಿಯನ್ ಸ್ಟೇಟ್ಸ್ ಪತ್ರಿಕೆಯ ಮಾಜಿ ಮ್ಯಾನೇಜರಾದ ಶ್ರೀ ಕೆ ಆರ್ ಶ್ರೀನಿವಾಸರಾಯರು ಪ್ರಕಟಿಸಿರುವ ಮೈಸೂರು ಕೈಪಿಡಿ, ಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ ಸಂಸ್ಥಾನದ ಕೈಗಾರಿಕೆ ವಿದ್ಯಾಭ್ಯಾಸ, ಸಹಕಾರ, ಆಹಾರ, ಕಲೆ ಮತ್ತು ಪ್ರೇಕ್ಷಣೀಯ ಸ್ಥಳ ಇವೇ ಮುಂತಾದ ವಿಷಯಗಳನ್ನು ಅದರಲ್ಲಿ ಪ್ರಕಟಿಸಲಾಗಿದೆ ಬೆಲೆ ೮ ಆಣೆ

ಸಾರ್ವಜನಿಕರಿಂದ ಪುರಸಭಾ ಅಧ್ಯಕ್ಷರ ಆಯ್ಕೆ

ಪುರಸಭೆಯ ಅಧ್ಯಕ್ಷರನ್ನು ಆಯಾ ಪುರಸಭಾ ಸದಸ್ಯರುಗಳಿಂದ ಚುನಾಯಿಸುವ ಪದ್ಧತಿಯನ್ನು ರದ್ದು ಮಾಡಿ,ಓಟರುಗಳೇ ನೇರವಾಗಿ ಚುನಾಯಿಸಲು ಅಧಿಕಾರವನ್ನು ಕೊಡಲಾಗುವುದೆಂದು ಮದರಾಸಿನ ಸ್ಥಳೀಯ ಸಂಸ್ಥೆಯ ಸಚಿವರು ತಿಳಿಸಿರುತ್ತಾರೆ

ಗಣೇಶಾ ಮತ್ತು ಚಾಮುಂಡೇಶ್ವರಿ

ಟಾಕೀಸುಗಳಲ್ಲಿ

20—4—49ರಿಂದ ಜನಭರಿತವಾದ ೨ನೇ ವಾರ

ಪ್ರತಿ ದಿನ ೩ ಆಟಗಳು

ಪವಳಕೊಡಿ

(ತಮಿಳು)

ಪಾತ್ರ ಟಿ ಆರ್. ಮಹಾಲಿಂಗಂ, ಟಿ.ಆರ್ ರಾಜಕುಮಾರಿ. ಎಂ.ಎಸ್. ಸರೋಜಿನಿ. ಎನ್.ಎಸ್ ಕೃಷ್ಣನ್. ಟಿ.ಎ. ಮಧುರಂ

ಪ್ರಭುದೇವಾ ಟಾಕೀಸಿನಲ್ಲಿ

೨೦-೪-೪೯ನೇ ಬುಧವಾರದಿಂದ

ಮುರುಳಿ ಪಿಕ್ಚರ್ಸ್‌ರವರ

* ಭಕ್ತ ಶಿರಿಯಾಳ *

(ತೆಲುಗು)

ಮುಖ್ಯ ಪಾತ್ರ:-ಸಿ.ಎಚ್.ಆರ್., ಗಗ್ಗಯ್ಯ, ಋಷ್ಯೇಂದ್ರಮಣಿ.

೧ ಲಕ್ಷ ಪೌಂಡು ಹೊತ್ತ ವಿಮಾನ

ಪ್ರಪಂಚದಲ್ಲೇ ಅತ್ಯಂತದೊಡ್ಡ ... ಎಂಬ ಅಮೇರಿಕದ ವಿಮಾನ... ಸಾಮಾನುಗಳನ್ನು ಸರಬರಾಜ ... ಉಪಯೋಗಿಸಲಾಗುತ್ತಿದೆ ... ಅದು ಉದ್ದವಿದ್ದು ಗಂಟೆಗೆ ೩೦೦ ... ವೇಗವಾಗಿ ಸಂಚರಿಸುವುದೆಂದೂ, ... ಲ್ಲಿ ೨೧೧೧೬ ಗ್ಯಾಲನ್ ಪೆಟ್ರೋಲು ... ಲು ಅವಕಾಶವಿದೆಯೆಂದೂ, ಒಂದೇ ... ಗೆ ೧ ಲಕ್ಷ ಪೌಂಡ್ ತೂಕವನ್ನು ... ಹೊರಬಲ್ಲುದೆಂದೂ ಹೇಳಲಾಗಿದೆ

ವರ್ಷಕ್ಕೆ ೧ ಲಕ್ಷ ಮನೆಗ...

ಇನ್ನು ೧೦ ವರ್ಷಗಳಲ್ಲಿ ೧೦ ಲಕ್ಷ ... ದರ ಮನೆಗಳನ್ನು ನಿರ್ಮಿಸುವ ಯೋ... ಯನ್ನು ಭಾರತ ಸರ್ಕಾರದವರು ... ರೂಪಕ್ಕೆ ತರಲಿದ್ದಾರೆಂದೂ, ದೊಡ್ಡ ... ಗಳಲ್ಲಿ ಪ್ರತಿ ಮನೆಗೂ ... ಖರ್ಚಾಗುವುದೆಂದೂ ತಿಳಿದುಬಂದಿ...

ರಾಜಕಮಲ್

ಮೈ ಸೂ ರು

22-4-49 ರಿಂದ ಆರೋಪ ...

ಒಂದು ವಾರ ಮಾತ್ರ

ಪ್ರತಿ ದಿನ ಮೂರು ಆಟಗಳು

ಶಾಂತಾರಾಂರವರ

ಶಾಕುಂತಲ

ವರ್ಣರಂಜಿತ ಹಿಂದಿ ಚಿತ್ರ

ಭೂಮಿಕೆ:-ಜಯಶ್ರೀ, ಚಂದ್ರಮೋ...

ಈಗ ನಡೆಯುತ್ತಿದೆ

ದ್ರೋಹಿ

(ತೆಲುಗು)

ಎಸ್.ಎಫ್.ಪಂಡಿತ್ ಅಂ... ಸನ್ಸ್‌ರವರ

ಯೂನಿವರ್ಸಲ್ ಹೇರ್ಆಯಿ... ನೋವು, ಕೀಲು ನೋವು ಮು... ಸಕಲ ಬಾಧೆಗಳಿಗೂ ರಾಮಬಾಣ

ಸೀಸೆ 0-12

ಮಹಾ ಸುಗಂಧರಾಜ ತೈಲ

,, ಚಂದನಾದಿ ತೈಲ—

,, ಭೃಂಗಾ ಮಲಕ ತೈಲ—

—ಬೇಸಿಗೆ ಕಾಲಕ್ಕೆ ಉತ್ತಮ ... ತೈಲಗಳು

ಮಹಾಕೇತಕೀ ತೈಲ—ತಲೆ... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸಬಹುದಾದ ಉತ್ತಮ... ಹೇರ್ ಟಾನಿಕ್ ಸೀಸೆ 2-0

ಪಂಚಾಮೃತ—ಮಕ್ಕಳ ... ಗಳಿಗೆ ಸಿದ್ಧ ಸಂಜೀವನ.

ಮೈಸೂರು ಆಯುರ್ವೇದಿ... ಫಾರ್ಮಸಿ.

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್

ಮೈ ಸೂ ರು

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ೭] ಬುಧವಾರ ೨೦ ೪-೧೯೬೯ [ಸಂಚಿಕೆ ೨೩೦

ಇನ್ನು ೩ ವರ್ಷಗಳಲ್ಲಿ ರಷ್ಯ-ಅಮೆರಿಕ ಯುದ್ಧ?

ಮಲೆನಾಡು ಅಭಿವೃದ್ಧಿ ನಿಧಿ ಸ್ಥಾಪಿಸಬೇಕು

ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಸಮ್ಮೇಳನದಲ್ಲಿ ನಿರ್ಣಯ

ಶಿವಮೊಗ್ಗ ೧೯

ಮಲನಾಡು ಪ್ರದೇಶದ ಜಿಲ್ಲಾ ಬೋರ್ಡ್ ಅಧ್ಯಕ್ಷರುಗಳ ಸಮ್ಮೇಳನವು ಕಳೆದ ಶುಕ್ರವಾರ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆಯಿತು.

ಸರ್ಕಾರದವರಿಂದ ರಚಿಸಲ್ಪಟ್ಟ ಮಲನಾಡು ಅಭಿವೃದ್ಧಿ ಸಮಿತಿಯ ವರದಿಯನ್ನು ಸಭೆಯು ಪರಿಶೀಲಿಸಿತು. ಸಮಿತಿಯವರು ಮಾಡಿರುವ ಸಲಹೆಯು ಸಂಪೂರ್ಣವಾಗಿಲ್ಲವೆಂದೂ, ಆ ಸಮಿತಿಯಲ್ಲಿರುವ ಸಿಫಾರಸ್ಸುಗಳನ್ನು ಕೈಗೊಂಡ ನಂತರ ಇಲ್ಲಿ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದೂ ಹಲವರು ಸೂಚಿಸಿದರು. ಈ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲು ಒಂದು ನಿರ್ದಿಷ್ಟವಾದ ಯೋಜನೆಯನ್ನು ರಚಿಸಿ, ೨೦ ವರ್ಷಗಳಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕೆಂದೂ, ಇದಕ್ಕಾಗಿ ಮಲೆನಾಡು ಅಭಿವೃದ್ಧಿ ನಿಧಿ ಎಂಬ ಪ್ರತ್ಯೇಕ ನಿಧಿಯನ್ನು ನಿರ್ಮಿಸಿ, ರೆವಿನ್ಯೂ ಬಾಬಿನಿಂದ ಅದಕ್ಕೆ ಹಣವನ್ನು ಕೊಟ್ಟು ಈ ಪ್ರದೇಶಗಳಿಗೆ ಮಾತ್ರ ಅದನ್ನು ಖರ್ಚು ಮಾಡಬೇಕೆಂದೂ ಸಮ್ಮೇಳನವು ನಿರ್ಣಯ ಮಾಡಿತು.

ಈ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಲು ಎಲ್ಲಾ ಜಿಲ್ಲಾ ಬೋರ್ಡು ಮತ್ತು ಗ್ರಾಮಾಭಿವೃದ್ಧಿ ಸಮಿತಿಗಳ ಅಧ್ಯಕ್ಷರ ಮತ್ತು ಗ್ರಾಮಾಭಿವೃದ್ಧಿ ಕಮೀಷನರರ ಜಂಟಿ ಸಭೆಯೊಂದನ್ನು ಕರೆಸಬೇಕೆಂದು ನಿರ್ಧರಿಸಲಾಯಿತು.

ರೈತರ ಏಳಿಗೆಗೆ ಪೂರ್ಣ ಗಮನ ಕೊಡಬೇಕು

ಸಂಸ್ಥಾನದಲ್ಲಿ ಪ್ರಜಾ ಸರ್ಕಾರವು ಏರ್ಪಟ್ಟಿದ್ದರೂ ರೈತರ ಸ್ಥಿತಿಯು ದಿನೇ ದಿನೇ ಕೆಳಮಟ್ಟಕ್ಕೆ ಇಳಿಯುತ್ತಿದೆ. ಅವರು ಬಳಕೆ ದಿನಸಿಗೆ ಸರಿಯಾದ ಬೆಲೆದೊರೆಯುತ್ತಿಲ್ಲ. ವ್ಯವಸಾಯಕ್ಕೆ ಬೇಕಾದ ಸಲಕರಣೆ ಮತ್ತು ಕೂಲಿಗಾರರ ಅಭಾವದಿಂದ ಕೃಷಿ ಬೆಳೆಯುವುದು ಅವರಿಗೆ ಸಾಲದಾಗುತ್ತಿದೆ. ಇದರಿಂದ ಅನೇಕರು ವ್ಯವಸಾಯ ಬಿಟ್ಟು ಪಟ್ಟಣಗಳಿಗೆ ಹೋಗುತ್ತಿದ್ದಾರೆ. ಉಪಯೋಗವಿಲ್ಲದ ಯೋಜನೆಗಳಿಗೆ ಲಕ್ಷಾಂತರ ರೂ ಖರ್ಚು ಮಾಡುತ್ತಿದೆ. ರೈತರ ಏಳಿಗೆಗಾಗಿ ದುಡಿಯುತ್ತಿರುವ ರೈತ ಸಂಘಗಳಿಗೆ ಮಾನ್ಯತೆ ಇಲ್ಲ. ಈಗಲಾದರೂ ಸರ್ಕಾರದವರು ರೈತರ ಕಡೆ ಹೆಚ್ಚಿನ ಗಮನಕೊಟ್ಟು ಅವರ ಕ್ಲೇಶಗಳನ್ನು ನಿವಾರಿಸಬೇಕು ಎಂದು [illegible] ಜಿಲ್ಲಾ ರೈತರ ಸಂಘದ ಅಧ್ಯಕ್ಷರಾದ ಕೊಡಗಹಳ್ಳಿ ಶ್ರೀ ರಾಮಸ್ವಾಮಿಯವರು ಒಂದು ಪತ್ರ ಬರೆದು ಪ್ರಾರ್ಥಿಸಿರುತ್ತಾರೆ.

ಮದರಾಸ್ ಬಸ್ ಪ್ರಯಾಣಿಕರಿಗೆ ಬಹುಮಾನ

ಮದರಾಸ್ ನಗರದ ಬಸ್ಸಿನಲ್ಲಿ ಸಂಚರಿಸುವ ಪ್ರಯಾಣಿಕರು ಟಿಕೇಟುಗಳನ್ನು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಲು ಅದೃಷ್ಟ ಟಿಕೇಟು ಹಂಚಿಕೆ ಮೂಲಕ ಬಹುಮಾನ ಕೊಡುವ ವ್ಯವಸ್ಥೆಯನ್ನು ಮದರಾಸ್ ಸರ್ಕಾರದವರು ಮಾಡಿದ್ದಾರೆ. ಇದು [illegible] ತಿಂಗಳಿಗೆ [illegible] ರೂ ವರೆಗೆ [illegible] ಇರಬಹುದು.

ಮದರಾಸಿನಲ್ಲಿ ಬ್ರಿಟಿಷ್ ಪ್ರತಿಮೆ ತೆಗೆಯುವುದಿಲ್ಲ

ಮದರಾಸ್ ನಗರದ ರಸ್ತೆ ಮತ್ತು ಚೌಕಗಳಲ್ಲಿರುವ ಮಾಜಿ ಬ್ರಿಟಿಷ್ ವೈಸರಾಯ್ ಮತ್ತು ಇತರ ಪರ್ದೆ[illegible] ಪ್ರತಿಮೆಗಳನ್ನು ತೆಗೆದುಹಾಕುವ ಆಲೋಚನೆಯು ಸರ್ಕಾರಕ್ಕೆ ಇಲ್ಲವೆಂದು ಅಲ್ಲಿನ ಪ್ರಧಾನಿಯ ಸಚಿವರು ತಿಳಿಸಿರುತ್ತಾರೆ.

ಜಾಹಿರಾತಿನಲ್ಲಿ ನಾಯಕರ ಚಿತ್ರ ಕೂಡದು

ಭಾರತದ ನಾಯಕರ ಚಿತ್ರಗಳನ್ನು ಜಾಹಿರಾತಿಗಾಗಿ ಉಪಯೋಗಿಸಕೂಡದೆಂದೂ ಅಂತಹ ಭಾವಚಿತ್ರವಿರುವ ಬೀಡಿ ಮತ್ತು ಇತರ ಜಾಹಿರಾತುಗಳನ್ನು ರೈಲ್ವೆಯವರು ಅಂಗೀಕರಿಸಕೂಡದೆಂದೂ ಭಾರತ ಸರ್ಕಾರದ ರೈಲ್ವೆಮಂತ್ರಿಗಳಾದ ಶ್ರೀ ಸಂತಾನಂ ರವರು ಸೂಚನೆ ಇತ್ತಿರುತ್ತಾರೆ.

ಗುಡ್ಡದಿಂದ ಬಿದ್ದು ಮರಣ

ಮದರಾಸ್ ಪ್ರಾಂತ್ಯದ ಗೋವಿಂದಾ[illegible] ರೈಲ್ವೆ ವರ್ಕ್‌ಶಾಪಿನ ನೌಕರರಾದ ವಿ. [illegible] ಎಂಬ [illegible] ಗುಡ್ಡಕ್ಕೆ ತನ್ನ ಸ್ನೇಹಿತರ ಜೊತೆಯಲ್ಲಿ ಕಳೆದ ರವಿವಾರ ಹೋಗಿ ಅಲ್ಲಿ ಫೋಟೋ ತೆಗೆಯುತ್ತಿದ್ದಾಗ ಕಾಲು ಜಾರಿ ೨೦೦ ಅಡಿ ಕೆಳಕ್ಕೆ ಬಿದ್ದು ಮರಣಹೊಂದಿದನೆಂದು ವರದಿಯಾಗಿದೆ.

ಪರೀಕ್ಷೆ ನಡೆಸಲು ರಸ್ತೆಗಳ ಬಂದು

ಪರೀಕ್ಷೆಗಳ ಕಾಲದಲ್ಲಿ ವಿದ್ಯಾರ್ಥಿಗಳು ನಕಲು ಮಾಡುವ ಪ್ರಕರಣಗಳನ್ನು ತಪ್ಪಿಸಲು ಬಂಗಾಳದ [illegible] ಜಿಲ್ಲೆಯಲ್ಲಿ ಅಧಿಕಾರಿಗಳು ನವೀನ ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ. ಸ್ಕೂಲ್ ಫೈನಲ್ ಪರೀಕ್ಷೆಯು ನಡೆಯುವ ಸ್ಥಳಕ್ಕೆ ಹೋಗುವ ರಸ್ತೆಗಳನ್ನು ಬೆಳಗ್ಗೆ [illegible] ಘಂಟೆಯಿಂದ ಸಂಜೆ [illegible] ಘಂಟೆವರೆಗೆ ಬಂದು ಮಾಡಲಾಗಿದೆ.

ಆಕ್ರಮಿತ ಪ್ರದೇಶಗಳನ್ನು ಬಿಡಲು ಪಾಕಿಸ್ತಾನದ ಒಪ್ಪಿಗೆ

ಕದನ ನಿಲ್ಲಿಸುವ ಒಪ್ಪಂದಕ್ಕೆ ವಿರುದ್ಧವಾಗಿ ಕಾಶ್ಮೀರದಲ್ಲಿ ಪಾಕಿಸ್ತಾನದ ಸೈನಿಕರು ಆಕ್ರಮಿಸಿಕೊಂಡ ಪ್ರದೇಶಗಳನ್ನು [illegible] ಅಲ್ಲಿಂದ ತನ್ನ ಸೈನಿಕರನ್ನು ವಾಪಸ್ ಕರೆಸಲು ಪಾಕಿಸ್ತಾನ ಸರ್ಕಾರವು ಒಪ್ಪಿದೆ.

೯ ಕೋಟಿ ರೂ ನೀರಾವರಿ ಯೋಜನೆ

ಹೈದರಾಬಾದಿನ ಗೋದಾವರಿ ನದಿಯ ಉತ್ತರ ಭಾಗದಲ್ಲಿ ಜಲಾಶಯವನ್ನು ನಿರ್ಮಿಸಲು ೯೦೦೦೦೦೦೦ ರೂಗಳನ್ನು ಅಲ್ಲಿನ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಕಡಮ್ ಎಂಬ ಉಪನದಿಗೆ ಅಣೆಕಟ್ಟನ್ನು ಕಟ್ಟಿ ಅಲ್ಲಿಂದ ಕಾಲುವೆ ಕಾಲುವೆಯನ್ನು ತೆಗೆಯಲಾಗುವುದೆಂದೂ, ಇದರಿಂದ ೧॥ ಲಕ್ಷ ಎಕರೆ ಜಮೀನು ನೀರಾವರಿಗೆ ಒಳಪಡುವುದೆಂದೂ ಹೇಳಲಾಗಿದೆ.

ಲಂಡನ್ನಿಗೆ ಪಂಡಿತ ನೆಹರೂ ರವರ ಪ್ರಯಾಣ

ಬ್ರಿಟಿಷ್ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸಲು ಪಂಡಿತ ನೆಹರೂರವರು ಸೆಪ್ಟೆಂಬರ್ [illegible] ಬೊಂಬಾಯಿನಿಂದ ಲಂಡನ್ನಿಗೆ ಪ್ರಯಾಣ [illegible] ರು.

ಹೊಟ್ಟೆಯಲ್ಲಿ ಬಚ್ಚಿಟ್ಟಿದ್ದ ಉಂಗುರ

[illegible] ಕೋರ್ಟಿನಲ್ಲಿ [illegible] ಎಂಬುವನು ವಿಚಾರಣೆಯ ಕಾಲದಲ್ಲಿ ತನ್ನ ವಿಚಾರದ [illegible] ರತ್ನಗಳುಳ್ಳ ಉಂಗುರವನ್ನು ನುಂಗಿ ಹೊಟ್ಟೆಯಲ್ಲಿ [illegible] ಹೋಲೀಸರಿಗೆ [illegible]. ಈಗ ವೈದ್ಯರ [illegible] ಉಂಗುರವನ್ನು [illegible].

ಹೈಸ್ಕೂಲು ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣ

[illegible] ಹೈಸ್ಕೂಲು ವಿದ್ಯಾರ್ಥಿಗಳಿಗೆ ಕೊಡಲು [illegible] ನ್ಯಾಷನಲ್ ಕೆಡೆಟ್ ಕೋರಿನ ಜೂನಿಯರ್ [illegible] ಪಡೆಗಳನ್ನು ರಚಿಸಲು [illegible] ಸರ್ಕಾರದವರು [illegible] ಪ್ರತಿ ಪಡೆಯಲ್ಲಿ [illegible] ವಿದ್ಯಾರ್ಥಿಗಳು ಇರುವರು. [illegible] ದಿಂದ ಇದು [illegible] ವುದು.

[illegible]

೧೯೫೩ರ ಒಳಗಾಗಿ ರಷ್ಯದ ಮೇಲೆ ಅಮೆರಿಕದ ಯುದ್ಧವೇ ?

ರಷ್ಯವು ತನ್ನ ನೀತಿಯನ್ನು ಬದಲಾಯಿಸದಿದ್ದಲ್ಲಿ ಅಮೆರಿಕವು ತನ್ನ ರಕ್ಷಣೆಗಾಗಿ ೧೯೫೩ರೊಳಗಾಗಿಯೇ ರಷ್ಯದ ಮೇಲೆ ಅಣುಬಾಂಬನ್ನು ಪ್ರಯೋಗಿಸಬೇಕಾಗುವುದಾಗಿ ಎಚ್ಚರಿಕೆ ಕೊಡಬಹುದೆಂದು ಅಮೆರಿಕದ ಸುಪ್ರಸಿದ್ಧ ಸುಲಿಟಿ[illegible] ಪ್ರಶಸ್ತಿಯ ಜಾನ್ ಸ್ಟೀಲ್ಮನ್ ಎಲಿಯಟ್ ರವರು ತಮ್ಮ ನೂತನ ಪುಸ್ತಕದಲ್ಲಿ ಬರೆದಿರುತ್ತಾರೆ.

ಮೇದಪ್ಪನವರು ಪಬ್ಲಿಕ್ ಸರ್ವಿಸ್ ಕಮೀಷನರ್ ?

ಸ್ವಂ ಸು ವರದಿಗಾರ] ಬೆಂಗಳೂರು ೨೦

ಪ್ರಧಾನ ನ್ಯಾಯಾಧೀಶರಾದ ಶ್ರೀ ಮೇದಪ್ಪನವರನ್ನು ನೂತನವಾಗಿ ರಚಿತವಾಗಲಿರುವ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಅಧ್ಯಕ್ಷರನ್ನಾಗಿ ನೇಮಿಸಿ, ಹೊರಗಿನವರೊಬ್ಬರವರನ್ನು ಶ್ರೇಷ್ಠ ನ್ಯಾಯಾಧೀಶರನ್ನಾಗಿ ನೇಮಿಸಲು ಸರ್ಕಾರದವರು ಆಲೋಚನೆ ಮಾಡುತ್ತಿರುವರೆಂದು ತಿಳಿದು ಬಂದಿದೆ.

ಈ ದಿನ ಬೆಳಿಗ್ಗೆ ಸಚಿವ ಶ್ರೀ [illegible] ರವರ ಅಧ್ಯಕ್ಷತೆಯಲ್ಲಿ ಗ್ರಾಮ ಕೈಗಾರಿಕಾ ಸಮಿತಿಯ ಸಭೆ ನಡೆದು, ಸರ್ಕಾರದಿಂದ [illegible] ವರದಿಂದ [illegible] ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ ಯೋಜನೆಯು ಪರಿಶೀಲಿಸಲ್ಪಟ್ಟಿತು.

ಇಂಜನಿಯರುಗಳ ಸಮ್ಮೇಳನ

ಇದೇ ೨೨ ನೇ ತಾ॥ ಮೈಸೂರಿನ ಇಂಜನಿಯರುಗಳ ಸಂಘದ ೩೭ ನೇ ಅಧಿವೇಶನವು ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ವೃತ್ತಿಶಿಕ್ಷಣಶಾಲೆಯಲ್ಲಿ ನಡೆಯುವುದು. ಭಾರತ ಸರ್ಕಾರದ ಸಲಹಾ ಇಂಜನಿಯರಾದ ರಾಯ್ ಬಹದ್ದೂರ್ [illegible] ರವರು ಸಮ್ಮೇಳನದ ಪ್ರಾರಂಭಭಾಷಣ ಮಾಡುವರು. ಕಾರ್ಮಿಕ ಸಚಿವರಾದ ಶ್ರೀ [illegible] ರವರು ಅದರ ಅಧ್ಯಕ್ಷತೆಯನ್ನು ವಹಿಸುವರು.

ಬೆಂಗಳೂರಿನಲ್ಲಿ ಉಚ್ಚ ಔದ್ಯೋಗಿಕ ಶಿಕ್ಷಣ ಶಾಲೆ

ದಕ್ಷಿಣ ಭಾರತದಲ್ಲಿ ಭಾರತ ಸರ್ಕಾರದವರು ಸ್ಥಾಪಿಸಲಿರುವ ಔದ್ಯೋಗಿಕ ಉಚ್ಚ ಶಿಕ್ಷಣ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು [illegible] ಇದಕ್ಕಾಗಿ [illegible] ಎಕರೆ ಜಮೀನನ್ನು ಕೊಡುವುದಾಗಿ [illegible] ಭಾರತ ಸರ್ಕಾರಕ್ಕೆ ತಿಳಿಸಲಾಗಿದೆ.

ಸಂಗೀತ

ಮೈಸೂರು [illegible] ರವರು [illegible] ಶ್ರೀರಾಮಮಂದಿರದಲ್ಲಿ ಈ [illegible] ರಂದು [illegible] ಸಂಗೀತ [illegible].

[illegible] ರಾಮೋತ್ಸವ [illegible] ಶ್ರೀ [illegible] ದಿಂದ ಸಂಗೀತ ನಡೆಯುವುದು.

[illegible]

ನಾಮಕರಣ ಪದ್ಧತಿ ವಜಾ ಆಗಬೇಕು

ಜಿಲ್ಲಾ ಬೋರ್ಡು ಅಧ್ಯಕ್ಷರ ಸಮ್ಮೇಳನದಲ್ಲಿ ನಿರ್ಣಯ

—

ಶಿವಮೊಗ್ಗ ೧೯

ಕಳೆದ ೮ ಶ್ರವಾರ ಶಿವಮೊಗ್ಗದಲ್ಲಿ ನಡೆದ ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಸಮ್ಮೇಳನದಲ್ಲಿ ಈ ಕೆಳಗೆ ಕಂಡ ನಿರ್ಣಯಗಳು ಅಂಗೀಕಾರವಾದುವು

ಜಿಲ್ಲಾ ಬೋರ್ಡುಗಳಿಗೆ ಸದಸ್ಯರನ್ನು ನಾಮಕರಣ ಮಾಡುವ ಪದ್ಧತಿಯನ್ನು ವಜಾ ಮಾಡಬೇಕು, ಬೋರ್ಡಿನ ಸಭೆಯಲ್ಲಿ ಮತ್ತು ಅಧ್ಯಕ್ಷರ ಚುನಾವಣೆಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು [illegible] ಅಧಿಕಾರವನ್ನು ತೆಗೆದುಹಾಕಬೇಕು. ಕೆಲವು ಬಾಬ್ತಿನಲ್ಲಿ ಜಿಲ್ಲಾಧಿಕಾರಿಗಳಿಗಿರುವ ಅಧಿಕಾರವನ್ನು ರದ್ದು ಮಾಡಬೇಕು, ಜಿಲ್ಲಾ ಬೋರ್ಡುಗಳ ಪ್ರಾತಿನಿಧ್ಯವು ನ್ಯಾಯವಾದ [illegible] ಸಾವಿರ ಜನಕ್ಕೆ ೧ ಮತ್ತು ಮಲೆನಾಡಿನಲ್ಲಿ [illegible] ಸಾವಿರಕ್ಕೆ ೧ ರಂತೆ ಇರಬೇಕು. ಎಲ್ಲಾ ಬೋರ್ಡುಗಳಿಗೂ ಪ್ರತ್ಯೇಕ [illegible] ಮತ್ತು ಅಕೌಂಟ್ಸ್ [illegible] ಅಧಿಕಾರ [illegible] ಸಹಾಯಕ್ಕಾಗಿ [illegible] ಅಧ್ಯಕ್ಷರನ್ನು [illegible] ಬೋರ್ಡಿನ [illegible] ಸರ್ಕಾರದವರು [illegible] ತಕ್ಷಣ ಬರುವ ನ್ಯೂನತೆಗಳಿಗೆ ಬೋರ್ಡಿನವರು ಜವಾಬ್ದಾರರಲ್ಲ. ಪಾನನಿರೋಧದಿಂದ ಉಂಟಾಗುವ ಎಕ್ಸೈಜ್ ಸುಂಕದ ಬಗ್ಗೆ ಸರ್ಕಾರದವರು ಜಿಲ್ಲಾ ಬೋರ್ಡುಗಳಿಗೆ ಪರಿಹಾರ ಕೊಡಬೇಕು. ವರಮಾನ ತೆರಿಗೆಯ ಮೇಲೆ ರೂ ೧ಕ್ಕೆ ಒಂದಾಣೆ ಸುಂಕವನ್ನು ಬೋರ್ಡಿನವರು ವಸೂಲು ಮಾಡಲು ಅನುಮತಿ ಕೊಡಬೇಕು. ಎಲ್ಲಾ ರಾಷ್ಟ್ರಗಳ ಮತೋಟ ಮತ್ತು ಅವಳಿತವನ್ನು ಬೋರ್ಡುಗಳಿಗೆ ವಹಿಸಬೇಕು. ರಸ್ತೆ ನಿಧಿ ಮತ್ತು ಸವಾರಿ [illegible] ಸುಂಕಗಳಲ್ಲಿ ಬೋರ್ಡುಗಳಿಗೆ ಅವುಗಳ [illegible] ಪಾಲನ್ನು ಕೊಡತಕ್ಕದ್ದು.

೭೦೦ ಅಡಿ ಎತ್ತರದಿಂದ ಧುಮಿಕಿದ

[illegible] ವರ್ಷದ [illegible] ೭೦೦ ಅಡಿ ಎತ್ತರದಿಂದ ವ್ಯಾರಾಚೂಟ್ ಮೂಲಕ ವಿಮಾನದಿಂದ [illegible] ಸಮುದ್ರದಲ್ಲಿ ಧುಮಿಕಿದ [illegible] ಅವನನ್ನು ಸುರಕ್ಷಿತವಾಗಿ [illegible] ಕರೆತರಲಾಯಿತೆಂದೂ ವರದಿಯಾಗಿದೆ

ತಿರುವಾಂಕೂರು ನಾಯಕರುಗಳ ಬಿಡುಗಡೆ

ತಿರುವಾಂಕೂರಿನ ತಮಿಳುನಾಡು ಕಾಂಗ್ರೆಸ್ಸಿನವರು, ತಮ್ಮ ಪ್ರದೇಶವನ್ನು ಮದರಾಸಿಗೆ ಸೇರಿಸಬೇಕೆಂದು ಹೂಡಿದ್ದ ಸತ್ಯಾಗ್ರಹವನ್ನು ವಾಪಸು ತೆಗೆದುಕೊಂಡಿರುವುದರಿಂದ ದಸ್ತಗಿರಿಯಾಗಿದ್ದ ಅದರ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಬಿಡುಗಡೆ ಮಾಡಲಾಗಿದೆ

ಉಕ್ಕಿನ ಉತ್ಪತ್ತಿ

ಭಾರತದ ಉಕ್ಕಿನ ಉತ್ಪತ್ತಿಯನ್ನು ಇನ್ನು ೫ ವರ್ಷಗಳಲ್ಲಿ ೨೦ ಲಕ್ಷ ಟನ್ನುಗಳಿಗೆ ಏರಿಸಬೇಕೆಂದು ಸರ್ ಎಂ. ವಿಶ್ವೇಶ್ವರಯ್ಯನವರು ಅಭಿಪ್ರಾಯ ಪಟ್ಟಿರುತ್ತಾರೆ ಉಕ್ಕಿನ ತಯಾರಿಕೆ ಬಗ್ಗೆ ಭಾರತ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮವು ಅತಿ ನಿಧಾನವೂ ಅಲ್ಪವೂ ಆಗಿರುವುದೆಂದು ಅವರು ಹೇಳಿರುತ್ತಾರೆ

ಹೊಸ ನೂರು ರೂ ನೋಟು

ಈಗ ಚಾಲ್ತಿಯಲ್ಲಿರುವ ನೂರು ರೂಪಾಯಿಗಳ ನೋಟುಗಳನ್ನು ಬದಲಾಯಿಸಲಾಗುತ್ತದೆ ನೋಟಿನ ಕಾಗದದಲ್ಲೂ ಸ್ವಲ್ಪ ಬದಲಾವಣೆಯಾಗುವುದಲ್ಲದೆ ದೊರೆಗಳ ಮುಖದ ಬದಲು ಸಿಂಹದ ಚಿತ್ರವು ನೋಟಿನ ಮೇಲಿರುವಂತೆ ಮಾಡಲಾಗುವುದು

ಖಾಸಿಂ ರಜ್ವಿಯ ವಿಚಾರಣೆ

ಹೈದರಾಬಾದಿನ ರಜಾಕರರ ನಾಯಕನಾದ ಖಾಸಿಂ ರಜ್ವಿ ಮತ್ತು ಇತರ ೨೫ ಮಂದಿಗಳು ಗುಲ್ಬರ್ಗ ಹತ್ತಿರ ೯ ಜನರನ್ನು ಕೊಲೆ ಮಾಡಿದರೆಂಬ ಅಪಾದನೆಯ ವಿಚಾರಣೆಯು ಸಧ್ಯದಲ್ಲಿಯೇ ಪ್ರಾರಂಭವಾಗುವುದು

ಹಾಸನ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ರಾಜೀನಾಮೆ

ಹಾಸನದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರಿ ಹೆ ಎ ತಿಮ್ಮಪ್ಪ ಗೌಡರು ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ

ವಿದ್ಯಾರ್ಥಿಗಳಿಗೆ ಮಾನಸಿಕ ಶಿಕ್ಷಣ

ಬೆಂಗಳೂರು ೧೯

ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಮಾನಸಿಕ (ವಿಜುಯಲ್) ಶಿಕ್ಷಣವನ್ನು ಕೊಡಲು ಸರ್ಕಾರದವರು ೩ ಲಕ್ಷ ರೂ ಯೋಜನೆಯನ್ನು ಮಂಜೂರು ಮಾಡಿರುತ್ತಾರೆ ಸಂಸ್ಥಾನದ ಎಲ್ಲ ಜಿಲ್ಲಾ ಕೇಂದ್ರಗಳು, ದಾವಣಗೆರೆ ತಿಪಟೂರು ಮುಂತಾದ ೧೮ ಸ್ಥಳಗಳಲ್ಲಿ ಬರುವ ಜೂನ್ ತಿಂಗಳಿನಿಂದ ಶಿಕ್ಷಣ ಕೊಡಲು ವ್ಯವಸ್ಥೆ ಮಾಡಲಾಗಿದೆ ಚಲನ ಚಿತ್ರಗಳನ್ನು ಪ್ರಚಾರ ಪ್ರವಚನಗಳ ಅಂಗವಾಗಿ ತೋರಿಸಲಾಗುವುದು. ಪ್ರತಿ ಹೈಸ್ಕೂಲು ವಿದ್ಯಾರ್ಥಿಯೂ ವರ್ಷಕ್ಕೆ ೧-೮-೦ ರೂ ಪ್ರತಿ ಮಧ್ಯಮಿಕ ಶಾಲೆ ವಿದ್ಯಾರ್ಥಿಯೂ ವರ್ಷಕ್ಕೆ ೧ ರೂ ಶುಲ್ಕವನ್ನು ಕೊಡಬೇಕಾಗುವುದು. ಪ್ರತಿ ವರ್ಷವೂ ಹತ್ತು ಶಾಲೆಗಳಲ್ಲಿ ಇದನ್ನು ಜಟ್ಟಿಸಲಾಗುವುದು.

ಹೈದರಾಬಾದಿನ ಜಹಗೀರು ದಾರರುಗಳಿಗೆ ಎಚ್ಚರಿಕೆ

ಹೈದರಾಬಾದ್ ಸರ್ಕಾರದವರು ಜಹಗೀರುಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುವುದಾಗಿ ನಿರ್ಧರಿಸಿರುವುದರಿಂದ ಕೆಲವು ಜಹಗೀರುದಾರರು ಜಮೀನುಗಳನ್ನು ಈಗಾಗಲೇ ಮಾರುತ್ತಿರುವರೆಂದು ಆ ರೀತಿ ಮಾಡಬೇಕಾದರೆ ಅನುಮತಿ ಪಡೆಯಬೇಕೆಂದೂ ಸರ್ಕಾರದವರು ಎಚ್ಚರಿಕೆ ಕೊಟ್ಟಿದ್ದಾರೆ

ಬರೋಡದ ಐಕ್ಯದ ಬಗ್ಗೆ ಕೋರ್ಟಿನಲ್ಲಿ ದಾವಾ

ಬರೋಡಾವನ್ನು ಬೊಂಬಾಯಿನಲ್ಲಿ ಐಕ್ಯಮಾಡುವುದನ್ನು ವಿರೋಧಿಸಿ ಅಲ್ಲಿನ ಪ್ರಜಾ ಪರಿಷತ್ತಿನವರು ಬೊಂಬಾಯಿ ಹೈಕೋರ್ಟಿನಲ್ಲಿ ದಾವಾವನ್ನು ಮಾಡಲಿದ್ದಾರೆಂದು ಹೇಳಲಾಗಿದೆ

ಭಾರತಿ

ಬೆಂಗಳೂರಿನಿಂದ ಶ್ರೀ ಡಿ. ಎಸ್. ಶೇಷರಾಘವಾಚಾರ್ಯರವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಭಾರತಿ' ಎಂಬ ಕನ್ನಡ ಪಕ್ಷ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಉತ್ತಮ ವರ್ಗದ ಸಾಹಿತ್ಯ ಪ್ರಚಾರದ ಮೂಲಕವಾಗಿ ನಾಡ ಜೀವನವನ್ನು ಸುಧಾರಿಸಲು ಹೊರಟಿರುವ ಈ ಪತ್ರಿಕೆಯು ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ ವಾರ್ಷಿಕ ಚಂದಾ ರೂ ೨-೮-೦

ನೃತ್ಯ, ಗೀತ ವಾದ್ಯ ಗೋಷ್ಠಿ

ಸುಂದರ್ ಡಾನ್ಸ್ ಟ್ರೂಪ್

ಇವರ ಅಪೋಘ ನೃತ್ಯ

—ಇದರೊದನೆ—

ಶ್ರಿ ಪಿ ಜಿ ವೆಂಕಟೇಶ್ವರರವರ ಸಂಗೀತ

[ಸುಪ್ರಸಿದ್ಧ ಚಲನ ಚಿತ್ರ ಗಾಯಕರು]

ಮತ್ತು ಪ್ರೊ|| ಜ ಜೆ ಗೇಬ್ರಿಲ್‌ರವರ ವಾದ್ಯ ಚಾತುರ್ಯ

ಸ್ಪ[ಸಿತಾರ್ ವೀಣ, ತಬಲಾ, ತರಂಗ್, ಕಾಂಗ, ಶಿನಾಯ್, ಜೈಸೀಸ್ ಸ್ವರ, ಮಂಡಲ್]

ಶ್ರಿ ಸುಂದರ ಮೂರ್ತಿ, ಶ್ರಿಮತಿ ಅನುಸೂಯ, ಮದ್ರಾಸಿನ ಟಿ. ಎಸ್ ಕಮಲ, ಶಕುಂತಲ, ಸೀತಾ, ಬೇಬಿ ಮತ್ತು ಅಂಜನಾ.

ಮೈಸೂರು ಟೌನ್ ಹಾಲಿನಲ್ಲಿ

21-4-49ನೇ ಗುರುವಾರ

ಸಂಜೆ ೬-೩೦ ಗಂಟೆಗೆ

ಶ್ರೀ

ರಮಣಿ ಹಲ್ಲುಪುಡಿ

ಎಲ್ಲಾ ವಿಧವಾದ ಹಲ್ಲಿನ ಬಾಧೆಗಳಿಗೂ ಸಂಜೀವನ

ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಒಟ್ಟಿನ ಮಾರಾಟದ ಏಜೆಂಟರುಗಳು ಬೇಕು

—ವಿವರಗಳಿಗೆ ಬರೆಯಿರಿ:—

ಶ್ರೀ ರಮಣಿ ಟ್ರೇಡಿಂಗ್ ಕಂಪೆನಿ, 924 ಚಾಮುಂಡಿ ಪುರಂ, ಮೈಸೂರು

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು

ದಿ ಅಡ್ವೆಂಚರ್ಸ್ ಆಫ್

ರಾಬಿನ್ ಹುಡ್

ಈ ಚಿತ್ರವು ಇನ್ನು 2 ದಿನಗಳು ಮುಂದುವರಿಸಲ್ಪಟ್ಟಿದೆ

ಪಾತ್ರ:—ಎರಾಲ್ ಫ್ಲೈನ್ ಮತ್ತು ಒಲಿವಿಯಾ ಡಿ ಹೆವಿಲ್ಯಾಂಡ್

ತಾ|| 22—4—49ರಿಂದ

Big Clock

ಬಿಗ್ ಕ್ಲಾಕ್

ಪ್ರಭಾ ★ 20-4-49 ರಿಂದ

ಅಪೋಘವಾದ ೨ನೇ ವಾರ

ಬಾಂಬೆ ಟಾಕೀಸ್‌ರವರ ಹಿಂದಿ ಚಿತ್ರ

★ ನತೀಜ ★

ಪ್ರತಿ ದಿನ ಮೂರು ಆಟಗಳು

ಪಾತ್ರ:- ರೆಹನ, ಷಮೀಮ್, ಯಾಕೂಬ್

Morning Shows From Friday 22nd for 3 days

RKO's **BAD MAN'S TERRITORY**



ಆರಾಮ ಕುರ್ಚಿಯ ಕ್ಯಾನ್ವಾಸ್ ಬಟ್ಟೆ ಮತ್ತು ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಷೀಟ್

ಒಳ್ಳೇ ನಮೂನೆಗಳಲ್ಲಿ ಬಂದಿವೆ

ಬಾಟ್ಲಿವಾಲಾ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು.

Edited printed and published by V R Nag[illegible] [illegible] Sadhvi Press, [illegible] Road Mysore

*** ಪ್ರಭುದೇವಾ ಟಾಕೀಸಿನಲ್ಲಿ ***

20-4-49ನೇ ಬುಧವಾರದಿಂದ ದಿನವಹಿ 3 ಆಟಗಳು

ಮುರುಗ ಪಿಕ್ಚರ್ಸ್‌ರವರ ತೆಲುಗು ಚಿತ್ರ

*** ಭಕ್ತ ಶಿರಿಯಾಳ ***

ಮುಖ್ಯಪಾತ್ರ – ಸಿ. ಎಸ್. ಆರ್. ಗಗ್ಗಯ್ಯ, ಋಷ್ಯೇಂದ್ರಮಣಿ.

ಫೋ|| ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೨೧ ಏಪ್ರಿಲ್ [ಸಂಚಿಕೆ ೬೫

ನ್ಯಾನ್ಕಿಂಗ್ ತ್ಯಜಿಸಲು ಚೀಣಾ ಸರ್ಕಾರದ ಸಿದ್ಧತೆ

ಗಾಂಧೀ ನಿಧಿಗೆ ೧೫೦೧ ರೂ

ವಿ. ನಾರಾಯಣರಾಯರ ದಾನ

ಮೈಸೂರು ೨೧

ರಾಜಧಾನಿಯ ಬರ್ಮಾಷೆಲ್ ಕಂಪೆನಿ ಏಜಂಟರಾದ ಲೋಕಸೇವಾನಿರತ ವಿ. ನಾರಾಯಣರಾಯರು ಶಿವರಾಂಪೇಟೆಯಲ್ಲಿನ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ನೆನ್ನೆ ಸಂಜೆ ನಡೆಸಿದ ವಸಂತೋತ್ಸವದ ಸಂದರ್ಭದಲ್ಲಿ ಗಾಂಧೀನಿಧಿಗೆ ೧೫೦೧ ರೂಗಳನ್ನು ಕೊಟ್ಟರು. ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ, ಸ್ವಾಗತ ಮತ್ತು ವಿದ್ಯಾರ್ಥಿಗಳ ಭಾಷಣ, ಶ್ರೀ ಎಸ್ ಸಿ ಬೇಲೂರ ಅವರಿಂದ ನಾಗಸ್ವರ ಮತ್ತು ವಿದ್ವಾನ್ ಕೇಶವಮೂರ್ತಿಯವರಿಂದ ಸಂಗೀತಗಳು ನಡೆದುವು.

ಅಧ್ಯಕ್ಷರು ಭಾಷಣಮಾಡಿ, ಸಂಸ್ಥಾನದ ಪಂಚವಾರ್ಷಿಕ ಯೋಜನೆಯಲ್ಲಿ ಹಾಲು ಬಾಗದಷ್ಟು ... ೫೦ ಕೋಟಿ ರೂಗಿಂತ ಹೆಚ್ಚಾಗಿ ... ವ್ಯಾಸಕ್ಕೆ ವೆಚ್ಚವಾಗುತ್ತಿದ್ದರೂ ಸಹ ... ದಲ್ಲಿ ಸಾಕಾದಷ್ಟು ಪ್ರಗತಿಯು ನಡೆಯದೆ ಇದುವರೆಗೂ ಇದ್ದಂತೆಯೇ ವರಿ... ಇರುವುದಾಗಿ ತಿಳಿಸಿದರು. ನಿ... ಗಳು ಶ್ರೀರಾಮಚಂದ್ರನ ಪರಮ ... ದ ಗಾಂಧೀಜಿಯವರ ಆದರ್ಶದಂತೆ ... ನಡೆ ಕೊಳ್ಳಬೇಕೆಂದು ಸೂಚಿಸಿದರು.

ಗಾಂಧೀ ಸ್ಮಾರಕ ನಿಧಿಗೆ ಸಹಾಯ ಮಾಡಿರಿ

ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ... ಅನೇ ತಾರೀಖಿನ ದಿನ ಮೈಸೂರು ನಗರಕ್ಕೆ ಆಗಮಿಸುತ್ತಾರೆ. ಅಂದು ... ಲ್ ಮೈದಾನದಲ್ಲಿ ಏರ್ಪಡಿಸಿರುವ ಬಹಿರಂಗ ಸಭೆಯಲ್ಲಿ ಈ ನಗರಕ್ಕೆ ಕೇಂದ್ರಿತ ವಸೂಲಾದ ನಿಧಿಯನ್ನು ಅವರಿಗೆ ಅರ್ಪಿಸಬೇಕಾದುದು ಎಲ್ಲರ ಕರ್ತವ್ಯ. ಈ ರಾಷ್ಟ್ರೀಯ ನಿಧಿಗೆ ಎಲ್ಲರೂ ತಮ್ಮ ತಮ್ಮ ಕಾಣಿಕೆಯನ್ನು ಆ ದಿನದೊಳಗೆ ನಗರದ ಗಾಂಧೀ ನಿಧಿ ವಸೂಲು ಬರಹೆಯ ಸಮಿತಿಗೆ ತಲುಪಿಸಿ ರಸೀತಿ ಪಡೆಯಬೇಕಾಗಿ ಸವಿನಯ ಪ್ರಾರ್ಥನೆ. ಗಾಂಧೀ ಸ್ಮಾರಕ ನಿಧಿಯ ರಸೀತಿ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುವವರು ಆ ದಿನದೊಳಗೆ ಪುಸ್ತಕಗಳನ್ನೂ ಮತ್ತು ವಸೂಲಾದ ಹಣವನ್ನೂ ನಗರದ ಸಮಿತಿಯ ಖಜಾಂಚಿಯವರಿಗೆ ತಲುಪಿಸಬೇಕು.

... ನೇ ತಾರೀಖು ಸಂಜೆ ನಡೆಯುವ ಬಹಿರಂಗ ಸಭೆಗೆ ಎಲ್ಲರೂ ದಯಮಾಡಿಸಬೇಕಾಗಿಯೂ ಅಧ್ಯಕ್ಷರಾದ ಶ್ರೀ ... ಚನ್ನಯ್ಯನವರು ಪ್ರಾರ್ಥಿಸುತ್ತಾರೆ.

ಬ್ರಿಟಿಷ್ ಹಡಗು ಮುಳುಗಿಸಲ್ಪಟ್ಟಿತು

... ಕಿಂಗ್ ನಗರದಿಂದ ಬ್ರಿಟಿಷ್ ಪ್ರಜೆಗಳನ್ನು ಹೊರಕ್ಕೆ ಕರೆತರಲು ಸಹಾಯ ... ದಕ್ಕಾಗಿ ಯಾಂಗ್ಸಿ ನದಿಯಲ್ಲಿ ಹೋಗುತ್ತಿದ್ದ ಅಮೆಥಿಸ್ಟ್ ಎಂಬ ... ಬ್ರಿಟಿಷ್ ಯುದ್ಧನೌಕೆಯು ... ದ ಬಾಂಬು ಹೊಡೆತಕ್ಕೆ ಗುರಿಯಾಗಿ ನದಿಯಲ್ಲಿ ಮುಳುಗಿಹೋಯಿತು ... ರಕ್ಷಿಸಲು ಬಂದ ಮತ್ತೊಂದು ... ಏಟು ಬಿದ್ದು ಹಲವರು ಮಡಿ... ತ್ತು ಬಹಳ ನಷ್ಟವುಂಟಾಯಿತು ... ವ್ಯಾನಿಸ್ಟರ ಕೃತ್ಯವೆಂದು ಹೇಳ...

ಮೈಸೂರಿನ ಭವಿಷ್ಯವನ್ನು ಮೈಸೂರಿನವರೇ ನಿರ್ಧರಿಸಬೇಕು

ತಾಲ್ಲೂಕು ಸಮ್ಮೇಳನದಲ್ಲಿ ನಿರ್ಣಯ

ಮೈಸೂರು ೨೧

ಹೆಗ್ಗಡದೇವನಕೋಟೆ ತಾಲ್ಲೂಕು ಸಮ್ಮೇಳನವು ನೆನ್ನೆ ದಿನ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿಗಳು ಕಳೆದ ವರ್ಷದ ವರದಿಯನ್ನು ಒಪ್ಪಿಸಿದ ನಂತರ, ಕೆಳಗೆ ಕಂಡ ನಿರ್ಣಯವು ಅಧ್ಯಕ್ಷರಿಂದ ಮಂಡಿಸಲ್ಪಟ್ಟು ಅಂಗೀಕೃತವಾಯಿತು.—

ಮೈಸೂರು ರಾಜ್ಯಾಂಗರಚನಾ ಸಭೆಯಲ್ಲಿ ಸಂಸ್ಥಾನದ ಭವಿಷ್ಯದ ಬಗ್ಗೆ ಸಿದ್ಧಾಂತ ಮಾಡಿರುವ ಮಾರ್ಗೋಪಾಯದ ವಿಷಯದಲ್ಲಿ ಮೈಸೂರಿನ ವ್ಯಕ್ತಿತ್ವ, ಸ್ವಾತಂತ್ರ್ಯ ಮತ್ತು ಬಡಾವಣೆಗಳಿಗೆ ಸಂಬಂಧಪಟ್ಟಂತೆ ಆತಂಕವಾಗಿರುವ ತತ್ವಗಳನ್ನು ವಿರೋಧಿಸುವ ರೀತಿಯಲ್ಲಿ ಕೆಲವರು ರಾಜಕೀಯವನ್ನು ರೂಪಿಸಲು ತೊಡಗಿರುವುದು ವಿಷಾದಕರವೂ, ಮತ್ತು ಅನಧಿಕೃತವೂ ಆದದ್ದೆಂದು ಈ ಸಭೆಯ ಅಭಿಪ್ರಾಯ ಪಡುತ್ತದೆ. ಇಂದು ಸಂಸ್ಥಾನದ ರಾಜಕೀಯ ಭವಿಷ್ಯವನ್ನು ನಿರ್ಣಯಿಸಲು ಮೈಸೂರಿನ ಪ್ರಜೆಗಳು, ಅಥವ ಸಂಸ್ಥಾನದ ರಾಜ್ಯಾಂಗ ರಚನಾ ಸಭೆಗೆ ಮಾತ್ರ ಹಕ್ಕು ಇರುವುದೇ ವಿನಃ ಮತ್ತಾರಿಗೂ ಅಧಿಕಾರವಿಲ್ಲ.

ಜಿಲ್ಲಾ ಬೋರ್ಡುಗಳನ್ನು ವಜಾ ಮಾಡಿ ತಾಲ್ಲೂಕು ಬೋರ್ಡುಗಳನ್ನು ಸ್ಥಾಪಿಸಬೇಕೆಂದು ಶ್ರೀ ಪಟೇಲ್ ಸ್ವಾಮಿಯವರು ನಿರ್ಣಯವನ್ನು ಮಂಡಿಸಿದರು. ಇದರಿಂದ ಹೆಚ್ಚು ಉಪಯೋಗವಾಗದೆ ತೊಂದರೆಯಾಗುವುದೆಂದು ಅಧ್ಯಕ್ಷರ ... ಳಿದ ಮೇಲೆ ಸೂಚಕರು ಅದನ್ನು ವಾಪಸು ತೆಗೆದುಕೊಂಡರು.

ತಾಲ್ಲೂಕಿನ ಅಭಿವೃದ್ಧಿಗೆ ಸಂಬಂಧಪಟ್ಟ ಇನ್ನೂ ಅನೇಕ ವಿಷಯಗಳು ಚರ್ಚಿಸಲ್ಪಟ್ಟವು.

ಜಿಲ್ಲಾ ಸಮ್ಮೇಳನ

ಮೈಸೂರು ಜಿಲ್ಲಾ ಸಮ್ಮೇಳನವು ಮುಂದಿನ ತಿಂಗಳು ... ನೇ ತಾರೀಖು ನಡೆಯುವುದು. ... ದ ... ಚಂದ್ರಶೇಖರಯ್ಯನವರು ... ವಹಿಸುವರು.

ಚಾಮರಾಜನಗರ ಕೊಯಮತ್ತೂರು ರೈಲ್ವೆ

ಚಾಮರಾಜನಗರದಿಂದ ಕೊಯಮತ್ತೂರು ರೈಲ್ವೆ ರಸ್ತೆಯ ವಿಚಾರವು ಭಾರತ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದೂ, ಅದರ ಸರ್ವೇ ಕೆಲಸವು ಈಗ ನಡೆಯುತ್ತಿದೆಯೆಂದೂ ಕೇಂದ್ರ ಸರ್ಕಾರದ ರೈಲ್ವೆ ಸಚಿವರಾದ ಶ್ರೀ ಸಂತಾನಂರವರು ತಿಳಿಸುತ್ತಾರೆ.

೧೦ ಸಾವಿರ ಜನ ರೈತರ ಪ್ರದರ್ಶನ

ಸಂಯುಕ್ತ ಪ್ರಾಂತ ಸರ್ಕಾರದವರು ... ಧಾನ್ಯ ಸಂಗ್ರಹವನ್ನು ಪ್ರತಿಭಟಿಸಲು ಲಕ್ನೋ ನಗರದ ಸುತ್ತಮುತ್ತಲಿನ ಗ್ರಾಮಗಳ ೧೦ ಸಾವಿರ ಜನ ರೈತರು ಸೋಮವಾರದಂದು ... ಕಛೇರಿ ಮುಂದೆ ಪ್ರದರ್ಶನ ನಡೆಸಿದರು.

ಅ|| ಮೈ|| ಬ್ರಾಹ್ಮಣರ ಸಮ್ಮೇಳನದ ಕಾರ್ಯಕ್ರಮ

ನಾಳೆ ದಿನ ... ಆರಂಭವಾಗ... ಅಖಿಲ ಮೈಸೂರು ಬ್ರಾಹ್ಮಣ ಮಹಾ ಸಭೆಯ ದ್ವಿತೀಯ ಸಮ್ಮೇಳನದ ಕಾರ್ಯಕ್ರಮದ ಪ್ರಕಾರ ನಾಳೆ ಪ್ರಾತಃಕಾಲ ೬ ರಿಂದ ೮ ರ ವರೆಗೆ ದೇವರ ಅಭಿಷೇಕ ಮತ್ತು ಅರ್ಚನೆ ... ವರೆಗೆ ... ವೇದಘೋಷ ಅನಂತರ ಸಮ್ಮೇಳನದ ಪ್ರಾರಂಭ, ... ಶ್ರೀ ... ಸ್ವಾಗತ ... ಆರಂಭ ... ಅಧ್ಯಕ್ಷರಾದ ಶ್ರೀ ಮಸೂತಿ ವೆಂಕಟಕೃಷ್ಣಯ್ಯಂಗಾರರವರ ಅಧ್ಯಕ್ಷ ಭಾಷಣ, ಸಭಾ ಕಾರ್ಯದರ್ಶಿಗಳ ವರದಿ. ನಂತರ ವಿಷಯಗಳ ಚರ್ಚೆ ಮಾರನೇ ದಿನ ... ನಂತರ ... ಮತ್ತು ...

ಸಂತಾಪ ಸೂಚಕ ನಿರ್ಣಯ

... ಸಭೆಯ ... ಶ್ರೀ ... ಕಾಲೇಜ ... ಶ್ರೀ ... [illegible]

ನಾನ್ಕಿಂಗ್ ನಗರದಲ್ಲಿ ಫಿರಂಗಿ ಶಬ್ದ

ಹೋರಾಡುವುದು ಅಥವ ಹೊರಹೊರಡುವುದು—ಇದೇ ನಾನ್ಕಿಂಗ್ ನಗರದಲ್ಲಿರುವ ಚೀಣಾ ಮಂತ್ರಿಮಂಡಲದ ಪರಿಸ್ಥಿತಿಯಾಗಿದೆ. ಆ ನಗರವನ್ನು ತ್ಯಜಿಸಿ, ದಕ್ಷಿಣ ಕ್ಯಾಂಟನ್ನಿಗೆ ಸರ್ಕಾರವನ್ನು ವರ್ಗಾಯಿಸಲು ಸಿದ್ಧತೆಗಳಾಗಿವೆ. ಸಚಿವರುಗಳನ್ನು ಕೊಂಡೊಯ್ಯಲು ವಿಮಾನಗಳು ಕಾದಿವೆ. ಕಮ್ಯೂನಿಸ್ಟರು ಆ ನಗರದ ಮೇಲೆ ಹೊಡೆದ ಫಿರಂಗಿಗಳ ಶಬ್ದವು ಕೇಳಿ ಬಂದಿದೆ.

ಚಿರತೆ ಮರಿಯ ದಸ್ತಗಿರಿ

ಕಲ್ಕತ್ತೆಯ ರಸ್ತೆಯೊಂದರಲ್ಲಿ ಅಡ್ಡಲಾಗಿ ಹೋಗುತ್ತಿದ್ದ ಒಂದು ಚಿರತೆ ಮರಿಯನ್ನು ಮೊನ್ನೆ ದಿನ ರಿಕ್ಷಾ ಗಾಡಿ ಎಳೆಯುವವನೊಬ್ಬನು ಕಂಡು ಅದನ್ನು ಗಾಡಿಯಲ್ಲಿ ಹಾಕಿಕೊಂಡು ಹೋಗುತ್ತಿದ್ದಾಗ ಪೋಲೀಸಿನವನೊಬ್ಬನು ಗುಮಾನಿಯ ಮೇಲೆ ತಡೆದು ನಿಲ್ಲಿಸಿ ಪೋಲೀಸ್ ಠಾಣೆಗೆ ಕರೆದೊಯ್ದನು. ಗಾಡಿಯವನನ್ನು ಬಿಟ್ಟು ಮರಿಯನ್ನು "ರಕ್ಷಣಾ" ಬಂಧನದಲ್ಲಿಡಲಾಯಿತು. ಅನೇಕ ಜನರು ಠಾಣೆಗೆ ಹೋಗಿ ಮರಿಯನ್ನು ನೋಡಿ ಬರುತ್ತಿದ್ದಾರೆ.

ರಾಜೇಂದ್ರ ಪ್ರಸಾದರಿಂದ ಕಾಂಗ್ರೆಸ್ ಭವನದ ಶಂಕುಸ್ಥಾಪನೆ

... ಬಾಬು ರಾಜೇಂದ್ರ ಪ್ರಸಾದರು ಬೆಂಗಳೂರಿನಲ್ಲಿ ಕಾಂಗ್ರೆಸ್ ಭವನದ ಶಂಕುಸ್ಥಾಪನೆಯನ್ನು ನೆರವೇರಿಸುವರು. ಇದಕ್ಕಾಗಿ ಒಬ್ಬ ಮಹನೀಯರು ಉಚಿತವಾಗಿ ನಿವೇಶನವನ್ನು ಕೊಟ್ಟಿರುವರು. ಕಾಂಗ್ರೆಸ್ ವಸ್ತು ಪ್ರದರ್ಶನದಿಂದ ಬಂದ ಉಳಿತಾಯವಾದ ೧೫೦೦೦ ರೂಗಳನ್ನು ಇದಕ್ಕಾಗಿ ಕೊಡಲಾಗುವುದು.

ಸಮಗ್ರ ಸಹಕಾರ ಸಂಘ

ಮೈಸೂರು ತಾಲ್ಲೂಕು ಇಲವಾಲ ಗ್ರಾಮದಲ್ಲಿ ನೆನ್ನೆ ಸಂಯುಕ್ತ ಆಕಾರನಾಣೆ ಕೈತೆಕ್ಸ್ಟರಾದ ಶ್ರೀ ಬಿ ನಾರಾಯಣಸ್ವಾಮಿಯವರು ಸಮಗ್ರ ಗ್ರಾಮಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಶ್ರೀ ... ಹೆಚ್ ಕೆ ಕುಮಾರಸ್ವಾಮಿ ಮತ್ತು ಎಂ ಎ ಜೋಯಿಸರುಗಳು ಭಾಷಣ ಮಾಡಿ ಸಂಘದ ಉದ್ದೇಶವನ್ನು ವಿವರಿಸಿದರು.

ಗಾಂಧಿ ನಿಧಿಗೆ ಕಾಣಿಕೆ

ಶ್ರೀ ಜಿ ಕೆ ಡಿ ಬಸವಯ್ಯನವರು ... ೨೦. ೩. ... ಚೆಟ್ಟಿಯರ ಮುಕ್ತಾಂ ... ದ ಶ್ರೀ ... ೧೦೦, ಶ್ರೀ ... ೧೦೧, ಕೆ ವಿ ... ಶ್ರೀ ... ೧೦೦ ಈ ರೀತಿ ಈ ದಿನ ಗಾಂಧಿ ಸ್ಮಾರಕನಿಧಿಗೆ ಕಾಣಿಕೆ ಸಲ್ಲಿಸಿರುವರು.

ಮುಕ್ಕಳ ಅಪಹಾರದ ಅನುಮಾನದ ಮೇಲೆ ಕೊಲೆ

... ಕ್ತ ... ನಡೆಯುತ್ತಿರುವ ... ಅಪಹಾರದ ಪ್ರಕರಣಗಳಿಂದ ... ಜನರ ... ನವರು ನೆನ್ನೆ ... ಗಡವರ ... ಪತ್ನಿ ... ತನ್ನ ... ಮನೆ ... [illegible]

ವಿಶ್ವವಿದ್ಯಾಲಯಗಳ ಶಿಕ್ಷಣ ಮಟ್ಟ ಇಳಿಯುತ್ತಿದೆ

ಭಾರತದ ವಿಶ್ವವಿದ್ಯಾಲಯಗಳಲ್ಲಿ ಇತ್ತೀಚೆಗೆ ಶಿಕ್ಷಣದ ಮಟ್ಟ ಇಳಿ ದಿರುವುದು ... ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳೂ ಶಿಕ್ಷಣದ ಮಟ್ಟವನ್ನು ಹೆಚ್ಚಿಸಲು ಯತ್ನಿಸುತ್ತಿಲ್ಲವೆಂದೂ, ಪಂಡಿತ ನೆಹರೂರವರು ... ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ಮಾಡಲು ಶಿಕ್ಷಣಮಟ್ಟವನ್ನು ಇಳಿಸುವುದ ... ದಲ್ಲವೆಂದೂ, ಹಾಗೆ ಮಾಡುವುದರಿಂದ ಅನೋಗತಿಗೆ ... ಅವರು ಎಚ್ಚರಿಕೆ ಕೊಟ್ಟಿರುತ್ತಾರೆ. ವಿದ್ಯಾರ್ಥಿಯು ವೈಯಕ್ತಿಕ ಸಾಮರ್ಥ್ಯ ಮತ್ತು ... ಬುದ್ಧಿಶಕ್ತಿಯನ್ನು ವೃದ್ಧಿಪಡಿಸಲು ಯತ್ನಿಸಬೇಕೇ ಹೊರತು ಪದವಿ ಕೊಡಿಸುವುದರಿಂದಲೇ ಪ್ರಯೋಜನವಾಗುವುದಿಲ್ಲವೆಂದು ಅವರು ಹೇಳಿರುತ್ತಾರೆ

ಪುರಾತನ ಕಂಚಿನ ಪಕ್ಷಿಯ ಪ್ರತಿಮೆ

ಸಿಂಹಳ ದ್ವೀಪಕ್ಕೆ ಸೇರಿದ ಅನುರಾಧಪುರದ ... ಶಿಲಾಯುಗದ ... ಪುರಾತನವಾದ ಕಂಚಿನ ಪಕ್ಷಿಯ ಪ್ರತಿಮೆಯೊಂದು ... ಅದರ ಕೊರಳಿನ ಸುತ್ತಲೂ ಬಂಗಾರದ ... ಇದ್ದುವೆಂದೂ ವರದಿಯಾಗಿದೆ. ಇದು ಅನೇಕ ಶತಮಾನಗಳ ... ದೆಂದು ಹೇಳಲಾಗಿದೆ

ಸ್ಟ್ಯಾಂಪು ಇಲ್ಲದೆ ಕಾಸನ್ನೇ ಅಂಟಿಸಲಾಯಿತು

ಬರೇಲಿಯ ಸಿಪಾಯಿಯೊಬ್ಬನು ಹಿಂದಿನ ಅರು ಕಾಸಿನ ಕಾ ಡಿ ಗೆ ಮೂರುಕಾಸು ಸ್ಟಾಂಪನ್ನು ಹಚ್ಚಿಸಲು ಅಂಚೆ ಕಛೇರಿಯಲ್ಲಿ ಸ್ಟಾಂಪು ಸಿಕ್ಕದಿದ್ದುದರಿಂದ ಮೂರು ಕಾಸಿನ ಬಿಲ್ಲೆಯನ್ನೇ ಅಂಟಿನ ಮೂಲಕ ಕಾರ್ಡಿನ ಮೇಲೆ ಅಂಟಿಸಿ ಪೋಸ್ಟು ಮಾಡಿದನೆಂದೂ, ಅಂಚೆ ಇಲಾಖೆಯವರು ಅದನ್ನು ಕಂಡು ಚಕಿತರಾಗಿ ಅದನ್ನು ತೆಗೆದು ಸ್ಟಾಂಪು ಹಾಕಿ ಕಳುಹಿಸಿದರೆಂದೂ ವರದಿಯಾಗಿದೆ

ಕುರುಡ, ಕಿವುಡರಿಗಾಗಿ ಆಟದ ಪಂದ್ಯ

ಮುಂದಿನ ಆಗಸ್ಟ್ ... ರಿಂದ ... ನೇ ತಾ॥ ವರೆವಿಗೆ ಕೋಪನ್‌ಹೇಗನ್ನಿನಲ್ಲಿ ಕುರುಡರಿಗಾಗಿ ಅಂತರರಾಷ್ಟ್ರೀಯ ಆಟಗಳ ಪಂದ್ಯವು ಏರ್ಪಾಡಾಗಿದೆ. ಇದರಲ್ಲಿ ... ರಾಷ್ಟ್ರಗಳಿಂದ ...೦೦ ಜನ ಪ್ರತಿನಿಧಿಗಳು ಭಾಗವಹಿಸಲಿರುವರು

ಜಪಾನಿನಲ್ಲಿ ಮಿಲಿಟರಿ ಆಡಳಿತ ವಜಾ

ಜಪಾನಿನಲ್ಲಿರುವ ಮಿಲಿಟರಿ ಆಡಳಿತವನ್ನು ತೆಗೆದು ಹಾಕಿ ಅಮೆರಿಕ ಸರ್ಕಾರವು ನೇರವಾಗಿ ಆಡಳಿತವನ್ನು ವಹಿಸಿಕೊಳ್ಳಬಹುದೆಂದು ತಿಳಿದು ಬಂದಿದೆ

ಕಮ್ಯೂನಿಸ್ಟರಿಂದ ೧೩ ಜನ ಕಾಂಗ್ರೆಸ್ಸಿನವರ ಕೊಲೆ

ಕಳೆದ ಒಂದು ವರ್ಷದಲ್ಲಿ ಕಮ್ಯೂನಿಸ್ಟರು ೧೦ ಜನ ಕಾಂಗ್ರೆಸ್ಸಿನವರನ್ನು ಕೃಷ್ಣಾ ಜಿಲ್ಲೆಯಲ್ಲೂ ಮತ್ತು ಒಬ್ಬರನ್ನು ಮಲಬಾರಿನಲ್ಲೂ ಕೊಲೆಮಾಡಿರುವರೆಂದು ಮದರಾಸಿನ ಪ್ರಧಾನಿಯವರು ತಿಳಿಸಿರುತ್ತಾರೆ

ವಿವಿಧ ಅಂತಸ್ತಿನಲ್ಲಿ ಶಿಕ್ಷಣ ಭಾಷೆ

ಬೆಂಗಳೂರು ೨೧

ಸಂಸ್ಥಾನದ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಮಾತೃಭಾಷೆಯ ಮೂಲಕವೇ ಶಿಕ್ಷಣವನ್ನು ಕೊಡಬೇಕು. ಮಾಧ್ಯಮಿಕ ಮತ್ತು ಸೆಕೆಂಡರಿ ಶಿಕ್ಷಣವನ್ನು ಆಯಾ ದೇಶ ಭಾಷೆಗಳಲ್ಲಿಯೇ ಆಡಳಿತ ಸೌಕರ್ಯದ ಸಲುವಾಗಿ ಕೊಡತಕ್ಕದ್ದು ಮತ್ತು ರಾಷ್ಟ್ರಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಬೋಧಿಸಬೇಕು. ಕಾಲೇಜು ಶಿಕ್ಷಣವನ್ನು ರಾಷ್ಟ್ರಭಾಷೆಯಲ್ಲಿಯೇ ಕೊಡಬೇಕು. ಉಚ್ಚ ಶಿಕ್ಷಣವನ್ನು ಅಂತರರಾಷ್ಟ್ರೀಯ ಭಾಷೆಯಲ್ಲಿ ಪಡೆಯಬೇಕು — ಎಂಬ ಸಲಹೆಗಳನ್ನು ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರವರು ಸರ್ಕಾರಕ್ಕೆ ಶಿಫಾರಸು ಮಾಡಿರುವರೆಂದು ತಿಳಿದುಬಂದಿದೆ.

ತಟಸ್ಥವಾಗಿರುವುದೇ ಭಾರತದ ನೀತಿ

ಭಾರತವು ತಟಸ್ಥವಾಗಿರುವುದೇ ಅದರ ವಿದೇಶಾಂಗ ನೀತಿಯೆಂದು ಪಂಡಿತ ನೆಹರೂರವರು ಲಂಡನ್ನಿಗೆ ಪ್ರಯಾಣ ಮಾಡುವ ಮುನ್ನ ತಿಳಿಸಿರುತ್ತಾರೆ. ಪರಸ್ಪರ ವಿರೋಧ ಮನೋಭಾವವಿರುವ ರಾಷ್ಟ್ರಗಳ ಗುಂಪಿಗೆ ಭಾರತವು ಸೇರುವುದಿಲ್ಲವೆಂದೂ, ವಿಶ್ವದ ಶಾಂತಿ ಸ್ಥಾಪನೆ ಮತ್ತು ಇತರ ರಾಷ್ಟ್ರಗಳೊಡನೆ ಪರಸ್ಪರ ಸ್ನೇಹ ಭಾವದಿಂದಿರುವುದೇ ಭಾರತದ ನೀತಿಯೆಂದೂ. ಕಾಮನ್ ವೆಲ್ತ್ ರಾಷ್ಟ್ರಗಳೊಡನೆ ಭಾರತದ ಭವಿಷ್ಯ ಹೇಗಿರಬೇಕೆಂಬುದನ್ನು ನಿರ್ಧರಿಸುವುದೇ ತಮ್ಮ ಲಂಡನ್ನಿನ ಪ್ರವಾಸದ ಉದ್ದೇಶವೆಂದೂ ಅವರು ಹೇಳಿರುತ್ತಾರೆ

ಕಮ್ಯೂನಿಸ್ಟರ ಷರತ್ತುಗಳ ನಿರಾಕರಣೆ

ಚೀಣದ ಕಮ್ಯೂನಿಸ್ಟರು ಶಾಂತಿ ಸಂಧಾನದ ಷರತ್ತುಗಳನ್ನು ಸರ್ಕಾರದವರು ಒಪ್ಪಿಕೊಳ್ಳಲು ಕೊಟ್ಟ ಕಾಲಾವಧಿಯು ನಿನ್ನೆ ರಾತ್ರಿಗೆ ಮುಕ್ತಾಯವಾಯಿತು. ಅದನ್ನು ಸರ್ಕಾರದವರು ತಿರಸ್ಕರಿಸಿ, ಪ್ರತ್ಯೇಕ ಷರತ್ತುಗಳನ್ನು ಕೊಟ್ಟಿರುತ್ತಾರೆ. ಯಾಂಗ್ಟ್ಸಿ ನದಿಯನ್ನು ದಾಟಬೇಕೆಂಬ ಕಮ್ಯೂನಿಸ್ಟರ ಬೇಡಿಕೆಯನ್ನೂ ತಿರಸ್ಕರಿಸಲಾಗಿದೆ

ಜಿಲ್ಲಾ ಬೋರ್ಡುಗಳ ಸಮ್ಮೇಳನ

ಮೈಸೂರು ೨೧

ಮುಂದಿನ ತಿಂಗಳು ಕೊನೆಯ ವಾರದಲ್ಲಿ ಸಂಸ್ಥಾನದ ಜಿಲ್ಲಾಬೋರ್ಡುಗಳ ಸಮ್ಮೇಳನದ ೩ನೇ ಅಧಿವೇಶನವನ್ನು ಮೈಸೂರಿನಲ್ಲಿ ನಡೆಸಬೇಕೆಂದೂ, ಅದರ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ನೆರವೇರಿಸುವಂತೆ ಪ್ರಾರ್ಥಿಸಬೇಕೆಂದೂ ಶಿವಮೊಗ್ಗದಲ್ಲಿ ನಡೆದ ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು

ಮುಸುಕಿನ ಜೋಳ ರೂಗೆ ೫ ಸೇರು

ಹೊರಗಡೆಯಿಂದ ಸಂಸ್ಥಾನಕ್ಕೆ ಬಂದಿರುವ ಮುಸುಕಿನ ಜೋಳವನ್ನು ರೂಗೆ ೫ ಸೇರಿನಂತೆ ಮಾರಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಬೆಟ್ಟದಪುರಕ್ಕೆ ಹೈಸ್ಕೂಲು

ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದಲ್ಲಿ ಜಿಲ್ಲಾ ಬೋರ್ಡಿನ ಹೈಸ್ಕೂಲನ್ನು ಈ ವರ್ಷ ಸ್ಥಾಪಿಸಲಾಗುವುದು. ಈ ಸಂಬಂಧದಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಡಾ. ಎಂ. ಚನ್ನಬಸಪ್ಪನವರು ಅಲ್ಲಿಗೆ ಮೊನ್ನೆ ದಿನ ಭೇಟಿ ಇತ್ತು ಹೈಸ್ಕೂಲಿನ ಕಟ್ಟಡಕ್ಕಾಗಿ ಜನರಿಂದ ... ಸಾವಿರ ರೂ. ಅನ್ನು ವಸೂಲು ಮಾಡಿರುತ್ತಾರೆ.

ಗಾಂಧೀಜಿಯವರ ಬಗ್ಗೆ ಪದ್ಯ

ಮೀರತ್ತಿನ ರಘುವೀರ್ ಶರಣ ಮಿತ್ರ ಎಂಬ ಕವಿಯು 'ಜನ ನಾಯಕ' ಎಂಬ ಶಿರೋನಾಮೆಯಲ್ಲಿ ಮಹಾತ್ಮ ಗಾಂಧೀಜಿಯವರ ಬಗ್ಗೆ ಪದ್ಯವನ್ನು ರಚಿಸಿದ್ದಾರೆ. ಅದರಲ್ಲಿ ೧೦ ಸಾವಿರ ಪಂಕ್ತಿಗಳಿವೆ. ಪುಸ್ತಕ ಗ್ರಂಥವನ್ನು ೩೧ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಸ್ಟಾಲಿನ್ನರು ನಿವೃತ್ತರಾಗುವರೇ ?

ಕೆಲವು ತಿಂಗಳುಗಳಿಂದಲೂ ರಷ್ಯದ ಸ್ಟಾಲಿನ್ನರು ಖಾಯಿಲೆಯಿಂದ ನರಳುತ್ತಿರುವರೆಂದೂ, ಅವರು ಸಂಪೂರ್ಣವಾಗಿ ಗುಣಮುಖರಾಗುವುದು ಅಸಂಭವವೆಂದೂ, ಆದುದರಿಂದ ಅವರು ನಿವೃತ್ತರಾಗಲಿರುವರೆಂದೂ ಜಕೋಸ್ಲವೇಕಿಯಾದ ಕಮ್ಯೂನಿಸ್ಟ್ ಪ್ರಮುಖರೊಬ್ಬರು ತಿಳಿಸಿರುತ್ತಾರೆ

ರಾಜಕಮಲ್
ಮೈಸೂರು

೨೨—4—49 ರಿಂದ
ಅಪೋಘ ಪ್ರಾರಂಭ
ಒಂದು ವಾರ ಮಾತ್ರ
ಪ್ರತಿ ದಿನ ಮೂರು ಆಟಗಳು
ಶಾಂತಾರಾಂರವರ
ಶಾಕುಂತಲ
ವರ್ಣರಂಜಿತ ಹಿಂದಿ ಚಿತ್ರ
ಭೂಮಿಕೆ - ಜಯಶ್ರೀ, ಚಂದ್ರಮೋಹನ್

MORNING SHOWS
From 22-4-49 For 4 days
Tarzan's Desert Mystery
With Johnny Weismeller, Nancy Kelley

MORNING SHOWS
LAKSHMI THEATRE
From 22-4-49
For 3 days at 10-30 a.m.
The Count of Monte Cristo
With Robert Donat and Elissa Landi

PRABHA PICTURE HOUSE
Morning Shows for 3 days
From Friday 22nd
R K O's
BAD MAN'S TERRITORY

ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಪ್ರದರ್ಶನಗಳು
ಕಡೇ ದಿನ
ದಿ ಅಡ್ವೆಂಚರ್ಸ್ ಆಫ್
ರಾಬಿನ್ ಹುಡ್
ತಾ॥ 22—4—49ರಿಂದ
Big Clock
ಬಿಗ್ ಕ್ಲಾಕ್

ಹಸನಾದ ಆಗ್ರಾ ಬೇಳೆ
ರೂಪಾಯಿಗೆ 1½ ಸೇ ½ ಪಾವ
ಶೇಷಾಚಲ ಸ್ಟೋರ್ಸ್
ನಾರಾಯಣ ಶಾಸ್ತ್ರಿ ರೋಡ್, ಮೈಸೂರು
ಇಂದೇ ಭೇಟಿ ಕೊಡಿ

Edited, printed and published by A. R. Nagarjan at the Sadhvi Press, D. Subbiah Road, Mysore

* ಪ್ರಭು ದೇವಾ ಟಾಕೀಸಿನಲ್ಲಿ *
20-4-49ನೇ ಬುಧವಾರದಿಂದ ದಿನವಹಿ 3 ಆಟಗಳು
ಮುರಳಿ ಪಿಕ್ಚರ್ಸ್‌ರವರ ತೆಲುಗು ಚಿತ್ರ * ಭಕ್ತ ಶಿರಿಯಾಳ * ಮುಖ್ಯಪಾತ್ರ:- ಸಿ. ಎಸ್. ಆರ್. ಗಗ್ಗಯ್ಯ, ಋಷ್ಯೇಂದ್ರಮಣಿ.

ಫೋನ್ ನಂ. 792 ॥ವಂದೇ ಮಾತರಂ॥ [illegible]

ಸಾಧ್ವಿ

ಸಂಪುಟ ೭] ಶುಕ್ರವಾರ [illegible] [ಸಂಚಿಕೆ [illegible]

ಅಕ್ರಮ ಭತ್ತ ದಾಸ್ತಾನು ಪತ್ತೆ

ಮೈಸೂರು ೨೨

ರಾಜಧಾನಿ ಅನಸೂಯ ರೋಡ್ ಬೀದಿಯ ಶ್ರೀ ಸಿಂಗಯ್ಯ ಎಂಬುವರ ಮನೆಯಲ್ಲಿ [illegible] ಇಲ್ಲದೆ ಇಟ್ಟಿದ್ದ ೫೫ ಸೇರು ಭತ್ತ [illegible] ಈ ದಿನ ಪುರಸಭೆಯ [illegible] ಪತ್ತೆ ಹಚ್ಚಿ, ವಶಪಡಿಸಿ [illegible]ಕೊಂಡಿದ್ದಾರೆ

ಹಿಂದಿ ಶಿಕ್ಷಣ

[illegible] ೨೫ ನೇ ತಾ॥ ನಿಂದ ರಾಜಧಾನಿ ಗೊಲ್ಲಗೇರಿ ರಾಮ ಮಂದಿರದಲ್ಲಿ ಉಚಿತ, ಪ್ರಾಥಮಿಕ ಹಿಂದಿ ಶಿಕ್ಷಣ ತರಗತಿ[illegible]ನ್ನು ಏರ್ಪಡಿಸಲಾಗಿದೆ. ಪ್ರವೇಶ [illegible] ಕೇವಲ ೪ ಆಣೆ ಮಾತ್ರ

ಸಮಗ್ರ ಸಹಕಾರ ಸಂಘ

ಮೈಸೂರು ತಾಲ್ಲೂಕು ಸಿದ್ದಲಿಂಗಪುರ[illegible]ಯಲ್ಲಿ [illegible] ದಿನ ಸಮಗ್ರ ಗ್ರಾಮಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಶ್ರೀ [illegible] ಚೆನ್ನಯ್ಯನವರು ನೆರವೇರಿಸಿದರು. [illegible] ಜೆ. ಕೆ. ಕುಮಾರಸ್ವಾಮಿ ಮತ್ತು ಪಿ ಮುಕುಂದ ಎಂ ಆರ್ ನರಸಿಂಗರಾವ್ ಭಾಷಣ ಮಾಡಿ ಸಂಘದ ಉದ್ದೇಶವನ್ನು ವಿವರಿಸಿದರು ನೂರಾರು ಮಂದಿ ರೈತರುಗಳು ಸಂಘಕ್ಕೆ ಸದಸ್ಯರಾದರು.

[illegible]ಸ್ಥಾನದಲ್ಲಿ ಇಟ್ಟಿಗೆ ಕಾರ್ಖಾನೆ

ಕಲ್ಲಿದ್ದಿಲು ಸಹಾಯದಿಂದ ಸುಟ್ಟ ಇಟ್ಟಿಗೆಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸರ್ಕಾರವು ಪರ್ಯಾಲೋಚಿಸುತ್ತಿದೆಯೆಂದೂ, ಇದರಿಂದ ದಿನಕ್ಕೆ ೫೦ ಸಾವಿರ ಇಟ್ಟಿಗೆಗಳನ್ನು [illegible]ವಾಗಿ ತಯಾರಿಸಬಹುದೆಂದೂ ಹೇಳಲಾಗಿದೆ

ಚಲಿಸುವ ಆಸ್ಪತ್ರೆ

ಗ್ರಾಮಾಂತರ ಪ್ರದೇಶಗಳ ಜನರಿಗೆ [illegible] ಚಲಿಸುವ ಆಸ್ಪತ್ರೆಯನ್ನು ಮುಂದಿನ ತಿಂಗಳಿನಿಂದ ಸರ್ಕಾರದವರು ಏರ್ಪಡಿಸಿದ್ದಾರೆ ಮೋಟಾರು [illegible]ಸಿನಲ್ಲಿ [illegible] ವೈದ್ಯರು ಮತ್ತು [illegible] ಕಾಂಪೌಂಡರುಗಳು ಇರುವರು

ಮೈಸೂರಿನ ಭವಿಷ್ಯ ಪರಿಶೀಲಿಸಲು ಬಹಿರಂಗ ಸಭೆ

ಮೈಸೂರಿನ ಭವಿಷ್ಯದ ವಿಷಯದಲ್ಲಿ ನಾನಾ ರೀತಿಯ ಅಭಿಪ್ರಾಯಗಳು ಮತ್ತು ಕಾರ್ಯ ಚಟುವಟಿಕೆಗಳು ಕಂಡು ಬರುತ್ತಿರುವ ಈ ಸಮಯದಲ್ಲಿ ಪ್ರಜಾಭಿಪ್ರಾಯವನ್ನು ಪ್ರತಿಬಿಂಬಿಸುವುದು ದೇಶದ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ [illegible] ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ಇದೇ ೨೬ ನೇ ತಾ॥ ಬುಧವಾರ ಸಂಜೆ [illegible] ಸಭೆಗೆ ಪ್ರಭಾವನದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದೆ ಮೈಸೂರು [illegible] ಅಧ್ಯಕ್ಷರಾದ ಶ್ರೀ ಡಾ॥ ಎಂ. ಚನ್ನಬಸಪ್ಪನವರು ಅಧ್ಯಕ್ಷತೆ [illegible] ವಿಷಯದ ಕುರಿತು ಉಪನ್ಯಾಸ [illegible] ಇದೇ ಉಪನ್ಯಾಸವೆಂದು ತಿಳಿದು [illegible] ಸಭೆಗೆ ದಯಮಾಡಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದು [illegible] ಅಧ್ಯಕ್ಷರಾದ ಶ್ರೀ ಎಂ ಎಲ್ ಸು[illegible] ಕೋರಿದ್ದಾರೆ

ನಗರ ಕಾಂಗ್ರೆಸ್ ಸಮಿತಿ

[illegible] ಸಂಜೆಗೆ [illegible] [illegible] ನಡೆಯುವ[illegible] [illegible] [illegible]

ಪ್ರಾ॥ ಪ್ರ ಸಭೆಗೆ ಚುನಾಯಿತ ಅಧ್ಯಕ್ಷರಿರಬೇಕು

ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತೀರ್ಮಾನ

ಬೆಂಗಳೂರು ೨೨

ಪ್ರಜಾ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯಸಮಿತಿಯ ಸಭೆಯು ನಿನ್ನೆ ನಡೆಯಿತು. ಪ್ರಾ॥ ಪ್ರ॥ ಸಭೆಗೆ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಇರಬೇಕೆಂದೂ ಅವರನ್ನು ಚುನಾಯಿಸಿಕೊಳ್ಳುವ ಅಧಿಕಾರವನ್ನು ಸಭೆಗೆ ಕೊಡಬೇಕೆಂದೂ ಸರ್ಕಾರವನ್ನು ಒತ್ತಾಯಪಡಿಸಬೇಕೆಂದು ನಿರ್ಧರಿಸಲಾಯಿತೆಂದು ತಿಳಿದುಬಂದಿದೆ. ಇತರ ಪ್ರಾಂತ್ಯಗಳಲ್ಲಿರುವಂತೆಯೇ ಕಾಂಗ್ರೆಸ್ ಪಕ್ಷದ ನಾಯಕರು ಮಂತ್ರಿಮಂಡಲದ ನಾಯಕರಾಗಿ ಮಂತ್ರಿಮಂಡಲವನ್ನು ರಚಿಸಿಕೊಳ್ಳುವಂತೆ ಮೈಸೂರಿನಲ್ಲೂ ವ್ಯವಸ್ಥೆ ಮಾಡುವುದು, ಮತ್ತು ದಿವಾನರ ಹುದ್ದೆಯನ್ನು ರದ್ದು ಮಾಡುವ ವಿಷಯಗಳೂ ಚರ್ಚೆಗೆ ಬಂದಿದ್ದವೆಂದು ತಿಳಿದುಬಂದಿದೆ

ಯಾಂಗ್ಸೆ ನದಿ ದಾಟಿದರು

ಚೀಣೀ ಕಮ್ಯೂನಿಸ್ಟ್ ಸೈನ್ಯಗಳು ಯಾಂಗ್ಸೆ ನದಿಯನ್ನು ಸರ್ಕಾರಿ ಮುಖ್ಯ ಪಟ್ಟಣವಾದ ನಾನ್‌ಕಿಂಗಿಗೆ ೭೦ ಮೈಲಿ ದೂರ ಇರುವ ಪ್ರದೇಶದಲ್ಲಿ ದಾಟಿ ನಾನ್‌ಕಿಂಗ್ ನಗರವನ್ನು ಮುತ್ತಲು ಮುನ್ನುಗ್ಗುತ್ತಿವೆ

ಆಂಧ್ರ ಪ್ರಾಂತ ರಚನೆಯ ಮೊದಲನೆ ಹಂತ

ಆಂಧ್ರ ಪ್ರಾಂತ ರಚನೆ ಸಂಬಂಧವಾಗಿ ನೆಹ್ರೂ-ಪಟೇಲ್-ಪಟ್ಟಾಭಿ ಸಮಿತಿ ತೀರ್ಮಾನದ ಬಗ್ಗೆ ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಪ್ರಧಾನಿ ಯವರು ನಿ[illegible]ಯವನ್ನು ತಂದು ಆಂಧ್ರ ಪ್ರಾಂತ ರಚನೆಗೆ ಒಪ್ಪಬೇಕೆಂದು ಕೋರು ವರಾಗಿದ್ದಾರೆ

ಬ್ರಿಟಿಷ್ ಯುದ್ಧ ಹಡಗಿಗೆ ಬೆಂಕಿ

ಯಾಂಗ್ಸೆ ನದಿಯಲ್ಲಿದ್ದ ಬ್ರಿಟಿಷ್ ಯುದ್ಧದ ಹಡಗಾದ "ಲಂಡನ್"ನಿಗೆ ಬೆಂಕಿ ಬಿದ್ದು ಅದು ಸುಟ್ಟುಹೋಯಿತು.

ಆಂಧ್ರದವರಿಗೆ ಎಚ್ಚರಿಕೆ

ಆಂಧ್ರ ಪ್ರಾಂತ ರಚನೆಯಾಗಬೇಕಾದರೆ ಮದ್ರಾಸು ನಗರದ ಮೇಲೆ ಇರುವ ಹಕ್ಕನ್ನು ಆಂಧ್ರರು ತೊರೆಯಬೇಕೆಂದೂ, ಹಾಗೆಯೇ ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸಲು ಒಪ್ಪಬೇಕೆಂದೂ ಕಾ॥ ಅಧ್ಯ[illegible] [illegible] ತಿಳಿಸಿದ್ದಾರೆ

ಬಟ್ಟೆ ಗಿರಣಿ ಮಾಲೀಕರಿಗೆ ೧೦೦ ಕೋಟಿ ರೂ. ಲಾಭ

ಕಳೆದ ವರ್ಷ ಬಟ್ಟೆ ಹತೋಟಿಯನ್ನು ತೆಗೆದುಹಾಕಿದುದರಿಂದ ಗಿರಣಿ ಮಾಲೀಕರುಗಳು ೧೦೦ ಕೋಟಿ ರೂ. ಲಾಭ ಗಳಿಸಿದರೆಂದೂ, ಈ ಹಣವನ್ನು ತೆರಿಗೆಯ ರೂಪದಲ್ಲಿ ವಾಪಸು ಪಡೆಯಲು ಸರ್ಕಾರವು ಆಲೋಚಿಸುತ್ತಿದೆಯೆಂದೂ ತಿಳಿದು ಬಂದಿದೆ.

ಕಲ್ಕತ್ತದಲ್ಲಿ ರಷ್ಯನನ ದಸ್ತಗಿರಿ

ಕಲ್ಕತ್ತಾದಲ್ಲಿ ರಕ್ಷಣಾ ಪೋಲೀಸಿನವರು ಪೆಟ್ರೋಸ್ಕಿ ಎಂಬ ರಷ್ಯದ ದೇಶಸ್ಥನೊಬ್ಬನನ್ನು ದಸ್ತಗಿರಿ ಮಾಡಿರುತ್ತಾರೆ ಆಕ್ಷೇಪಣೀಯವಾದ ಕಾರ್ಯ ಚಟುವಟಿಕೆಯಲ್ಲಿ ಆತನು ಇದ್ದನೆಂದು ಹೇಳಲಾಗಿದೆ

ಏಷ್ಯಾರಾಷ್ಟ್ರಗಳ ಕಾರ್ಮಿಕರ ಸಮ್ಮೇಳನ

ಮುಂದಿನ ತಿಂಗಳು ೭ ನೇ ತಾ॥ ಇಂದೂರಿನಲ್ಲಿ ಏಷ್ಯಾ ರಾಷ್ಟ್ರಗಳ ಕಾರ್ಮಿಕರ ಸಮ್ಮೇಳನವು ನಡೆಯುವುದು ಫಿಲಿಪೈನ್ಸ್, ಆಸ್ಟ್ರೇಲಿಯ, ಇಂಡೋನೇಷ್ಯಾ, ಇರಾಕ್, ತುರ್ಕಿ, ಪಾಕೀಸ್ಥಾನ ಮತ್ತು ಇತರ ಏಷ್ಯಾ ರಾಷ್ಟ್ರಗಳು ಇದರಲ್ಲಿ ಭಾಗವಹಿಸಲಿರುವುವು ಇಡೀ ಏಷ್ಯದ ಕಾರ್ಮಿಕರ ಸಂಸ್ಥೆಯನ್ನು ಸ್ಥಾಪಿಸುವುದೇ ಇದರ ಉದ್ದೇಶ. ಅಲ್ಲದೆ ಹೊಸದಾಗಿ ವಿಶ್ವದ ಕಾರ್ಮಿಕ ಸಂಘಗಳ ಫೆಡರೇಷನ್ ಸ್ಥಾಪನೆಯ ವಿಚಾರವನ್ನೂ ಇಲ್ಲಿ ಪರಿಶೀಲಿಸಲಾಗುವುದು

ಯುದ್ಧ ನಿಲ್ಲಿಸಬೇಕೆಂದು ಚೀಣಾ ಅಧ್ಯಕ್ಷರ ಮನವಿ

ಚೀಣಾ ಸರ್ಕಾರದವರು ಕಳುಹಿಸಿರುವ ಮೂರು ಶಾಂತಿ ಸೂಚನೆಗಳನ್ನು ಪರ್ಯಾಲೋಚಿಸಿ ಕೂಡಲೇ ಕದನ ನಿಲ್ಲಿಸುವಂತೆ ಆಜ್ಞೆ ಮಾಡಬೇಕೆಂದು ಚೀಣದ ಅಧ್ಯಕ್ಷ ಮತ್ತು ಪ್ರಧಾನಿಯವರು ಕಮ್ಯೂನಿಸ್ಟ ನಾಯಕರಿಗೆ ಮನವಿ ಮಾಡಿದ್ದಾರೆ ಆದರೆ ಅದನ್ನು ಕಮ್ಯೂನಿಸ್ಟರು ನಿರಾಕರಿಸಿದ್ದಾರೆ

ಸಿಂಧಿನ ಕೋಟ್ಯಾಧೀಶ್ವರನು ಬೀದಿಯ ಭಿಕಾರಿಯಾದನು

ಭಾರತದ ವಿಭಜನೆಗೆ ಮುಂಚೆ ಸಿಂಧಿನಲ್ಲಿ ವಾಸಿಸುತ್ತಿದ್ದ ಭಗವಾನಸಿಂಗ್ ಎಂಬ ೭೦ ವರ್ಷದ ವೃದ್ಧ ಜಮೀನ್ದಾರನೊಬ್ಬನು ತನ್ನ ಮಗನೊದನೆ ಅಜ್ಮೀರದಲ್ಲಿ ಮಾಂಸ ಮಾರಾಟಮಾಡುವ ಉದ್ಯೋಗದಲ್ಲಿ ನಿರತನಾಗಿರುವನೆಂದು ವರದಿಯಾಗಿದೆ ನಿರಾಶ್ರಿತರ ಆಸ್ತಿಯ ಬಗ್ಗೆ ಉಭಯ ರಾಷ್ಟ್ರಗಳೂ ಸರಿಯಾದ ಒಪ್ಪಂದ ಮಾಡಿಕೊಳ್ಳದಿದ್ದುದೇ ಈ ಸ್ಥಿತಿಗೆ ಕಾರಣವೆಂದು ಆತನು ಹೇಳಿದ್ದಾನೆ ಅವನು ೩ ಲಕ್ಷ [illegible] ರೂ[illegible] ಕಂದಾಯ ಕೊಡ[illegible] [illegible]

ಕರ್ನಾಟಕ ಪ್ರಾಂತ್ಯಕ್ಕೆ ಮೈಸೂರು ರಾಜರು ದಾರಿ ಕೊಡಬೇಕು

ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಮೈಸೂರಿನಲ್ಲಿ ಕರ್ನಾಟಕ ಜಿಲ್ಲೆಗಳು ವಿಲೀನವಾಗಬೇಕೇ ಅಥವ ಮೈಸೂರು ಕರ್ನಾಟಕದಲ್ಲಿ ಸೇರಬೇಕೇ ಎಂಬ ಸಮಸ್ಯೆಯು ಮೊದಲು ಇತ್ಯರ್ಥವಾಗಬೇಕು. ಮೈಸೂರು ಸಂಸ್ಥಾನವು ಪ್ರತ್ಯೇಕವಾಗಿರುವಂತೆ ಬಿಟ್ಟು, ರಾಜರ ಅಸ್ತಿತ್ವವನ್ನು ಸಮರ್ಥಿಸುವುದಾದರೆ ರಾಜತ್ವಕ್ಕೆ ಬೆಂಬಲ ಕೊಟ್ಟಂತಾಗುವುದಲ್ಲದೆ ಅವರ ಆಡಳಿತದ ಎಲ್ಲೆಯನ್ನು ಹೆಚ್ಚಿಸಿಕೊಟ್ಟಂತಾಗುವುದು. ಇದು ಪ್ರಕೃತ ಮನೋಭಾವ, ಶಿಕ್ಷಣ ಮತ್ತು ಸಂಸ್ಕೃತಿ ಸಂಪ್ರದಾಯಕ್ಕೆ ವಿರೋಧವಾಗುತ್ತದೆ ಆದುದರಿಂದ ಕೊಲ್ಹಾಪುರ ಮತ್ತು ಬರೋಡಾ ಮಹಾರಾಜರುಗಳು ಮಾಡಿದಂತೆಯೇ ಮೈಸೂರು ಅರಸರೂ ಸಹ ಕರ್ನಾಟಕ ಪ್ರಾಂತ್ಯ ರಚನೆಗೆ ದಾರಿ ಬಿಟ್ಟುಕೊಡುವರೇ ಎಂಬುದನ್ನು ತಿಳಿಯಬೇಕು-ಎಂದು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿರುತ್ತಾರೆ

ಬ್ರಾಹ್ಮಣನು ಸೇವಾವೃತ್ತಿ ಬಿಡಬೇಕು

ಅಖಿಲ ಮೈಸೂರು ಬ್ರಾಹ್ಮಣ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

(ಸ್ವಂ ವಿ ಜಾ ತಂತಿ) ಹಾಸನ ೨೨

ಅಖಿಲ ಮೈಸೂರು ಬ್ರಾಹ್ಮಣ ಮಹಾಸಭೆಯ ೨ ನೇ ಅಧಿವೇಶನವು ಈ ದಿನ ಬೆಳಿಗ್ಗೆ ಇಲ್ಲಿ ಪ್ರಾರಂಭವಾಯಿತು. ಸೋಸಲೆ ಶ್ರೀ ವ್ಯಾಸರಾಜಮಠದ ಶ್ರೀಮದ್ವಿದ್ಯಾಪ್ರಸನ್ನ ತೀರ್ಥ ಶ್ರೀಪಾದಂಗಳವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಬ್ರಾಹ್ಮಣರು ಮಾನವನ ಯೋಗಕ್ಷೇಮಕ್ಕಾಗಿ ದುಡಿಯಬೇಕೆಂದೂ ಮತ್ತು ಬ್ರಾಹ್ಮಣ ತತ್ವಗಳನ್ನು ಬಿಡಕೂಡದೆಂದೂ ಸ್ವಾಮಿಜಿಯವರು ತಿಳಿಸಿದರು. ಅವರನ್ನು ಪ್ರಾರಂಭದಲ್ಲಿ ಮೆರವಣಿಗೆಯಲ್ಲಿ ಕರೆತರಲಾಯಿತು.

ಅಧ್ಯಕ್ಷತೆ ವಹಿಸಿದ್ದ ಶಿವಮೊಗ್ಗದ ಶ್ರೀ ಹಸೂಡಿ ವೆಂಕಟಶಾಸ್ತ್ರಿಗಳು ತಮ್ಮ ಭಾಷಣದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಸಮಾಜವು ತನ್ನ ಅಸ್ತಿತ್ವಕ್ಕಾಗಿಯೂ, ಅಭಿವೃದ್ಧಿಗಾಗಿಯೂ ಸಮ್ಮೇಳನಗಳನ್ನು ನಡೆಸಬೇಕಾಗಿಬಂದಿರುವುದು ಶೋಚನೀಯವೆಂದೂ, ಬ್ರಾಹ್ಮಣನು ವೇದೋಕ್ತ ಕರ್ಮಗಳನ್ನು ಶ್ರದ್ಧೆಯಿಂದ ನಡೆಸಿಕೊಂಡು, ಸೇವಾವೃತ್ತಿಯಲ್ಲಿ ತೊಡಗದೆ ಸ್ವಾತಂತ್ರ್ಯ ಜೀವನವನ್ನು ನಡೆಸಿಕೊಂಡು ಬಂದಲ್ಲಿ ಆತನು ಏಳಿಗೆಗೆ ಬರುವುದರಲ್ಲಿ ಸಂದೇಹವಿಲ್ಲವೆಂದೂ ತಿಳಿಸಿದರು

ಕಡಿಮೆ ತೂಕಕ್ಕಾಗಿ ದಂಡ

ರಾಜಧಾನಿಯ ಶಿವರಾಂಪೇಟೆಯಲ್ಲಿ ಅಡಿಕೆ ಮತ್ತು ಹೊಗೆಸೊಪ್ಪು ವ್ಯಾಪಾರಿಗಳಾದ ಶ್ರೀಗಳು ಕೃಷ್ಣಯ್ಯಶೆಟ್ಟಿ ಮತ್ತು ಫಾಲಾಕ್ಷ ಎಂಬುವರು ಕಡಿಮೆ ತೂಕದ ಬಟ್ಟುಗಳನ್ನು ಉಪಯೋಗಿಸುತ್ತಿದ್ದರೆಂದು ಅಳತೆ ಮತ್ತು ತೂಕದ ಇನ್ಸ್‌ಪೆಕ್ಟರು ಮೊದಲನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಕೃಷ್ಣಶೆಟ್ಟಿಗೆ [illegible] ರೂ. ಮತ್ತು ಫಾಲಾಕ್ಷನಿಗೆ ೫ ರೂ. ದಂಡವನ್ನು ವಿಧಿಸಲಾಯಿತು

ಫೋ|| ನಂ. 792 ||ವಂದೇ ಮಾತರಂ|| ಇಂಡಿಗ ಪತ್ರಿಕೆ ಹ ೬೯೩

ಸಾಧ್ವಿ

ಸಪುಟ ೩] ಶುಕ್ರವಾರ ೩೦ ೪-೧೯೪೯ [ಸಂಚಿಕೆ ೩೩೩

ಅಕ್ರಮ ಭತ್ತ ದಾಸ್ತಾನು ಪತ್ತೆ

ಮೈಸೂರು ೨೭

ರಾಜಧಾನಿ ಆನೆಸಾರೋಟ್ ಬೀದಿಯ ಶ್ರೀ ಸಿಂಗಯ್ಯ ಎಂಬುವರ ಮನೆಯಲ್ಲಿ ರಾರಿ ಇಲ್ಲದೆ ೯ ಪಲ್ಲ ೫೫ ಸೇರು ಭತ್ತ ವನ್ನು ಈ ದಿನ ಪೃಥಾರೇಟಿ ಪಾ ಲೀಸರ ಪತ್ತೆ ಹಚ್ಚಿ ಸೊಕದ್ದಮೆ ಹೂಡಿದ್ದಾರೆ

ಹಿಂದಿ ಶಿಕ್ಷಣ

ಇದೇ ೩೧ ನೇ ತಾ|| ನಿಂದ ರಾಜಧಾನಿ ಗೊಲ್ಲಗೇರಿ ರಾಮ ಮಂದಿರದಲ್ಲಿ ಪ್ರಾಥ, ಮಾಧ್ಯಮಿಕ ಹಿಂದಿ ಶಿಕ್ಷಣ ತರಗತಿಯನ್ನು ಏರ್ಪಡಿಸಲಾಗಿದೆ. ಪ್ರವೇಶ ಶುಲ್ಕ ಕೇವಲ ೪ ಆಣೆ ಮಾತ್ರ

ಸಮಗ್ರ ಸಹಕಾರ ಸಂಘ

ಮೈಸೂರು ತಾಲ್ಲೂಕು ನೆಲ್ಲಹಳ್ಳಿಯಲ್ಲಿ ಈ ದಿನ ಸಮಗ್ರ ಗ್ರಾಮಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಶ್ರೀ ಚನ್ನಯ್ಯನವರು ನೆರವೇರಿಸಿದರು. ಗಳಿದ ಹೆಚ್ ಕೆ ಕುಮಾರಸ್ವಾಮಿ ಮತ್ತು ಆಮಲ್ದಾರ್ ಎಂ ಆರ್ ನರಸಿಂಗ ರಾವ್ ಭಾಷಣಮಾಡಿ ಸಂಘದ ಉದ್ದೇಶವನ್ನು ವಿವರಿಸಿದರು. ನೂರಾರು ಮಂದಿ ರೈತರುಗಳು ಸಂಘಕ್ಕೆ ಸದಸ್ಯರಾದರು

ಬೆಂಗಳೂರಿನಲ್ಲಿ ಇಟ್ಟಿಗೆ ಕಾರ್ಖಾನೆ

ಕಲ್ಲಿದ್ದಲು ಸಹಾಯದಿಂದ ಸುಟ್ಟ ಇಟ್ಟಿಗೆಯನ್ನು ತಯಾರಿಸುವ ಕಾರ್ಖಾನೆಯೊಂದ ನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸರ್ಕಾರವು ಪರ್ಯಾಲೋಚಿಸುತ್ತಿದೆಯೆಂದೂ, ಇದರಿಂದ ದಿನಕ್ಕೆ ೫೦ ಸಾವಿರ ಇಟ್ಟಿಗೆಗಳನ್ನು ಸುಲಭವಾಗಿ ತಯಾರಿಸಬಹುದೆಂದೂ ಹೇಳಲಾಗಿದೆ

ಚಲಿಸುವ ಆಸ್ಪತ್ರೆ

ಗ್ರಾಮಾಂತರ ಪ್ರದೇಶಗಳ ಜನರಿಗೆ ಉಪಯೋಗವಾಗಲು ಚಲಿಸುವ ಆಸ್ಪತ್ರೆಯನ್ನು ಮುಂದಿನ ತಿಂಗಳಿನಿಂದ ಸರ್ಕಾರದವರು ಏರ್ಪಡಿಸಿದ್ದಾರೆ ... ಮೋಟಾರು ... ನಲ್ಲಿ ... ಡಾಕ್ಟರು ಮತ್ತು ... ಕಾಂಪೌಂಡರುಗಳು ಇರುವರು

ಮೈಸೂರಿನ ಭವಿಷ್ಯ ಪರಿಶೀಲಿಸಲು ಬಹಿರಂಗ ಸಭೆ

ಮೈಸೂರಿನ ಭವಿಷ್ಯದ ವಿಷಯದಲ್ಲಿ ನಾನಾರೀತಿಯ ಅಭಿಪ್ರಾಯಗಳು ಮತ್ತು ಕಾರ್ಯ ಚಟುವಟಿಕೆಗಳು ಕಂಡು ಬರುತ್ತಿರುವುದರಿಂದ ಈ ಕಾಲದಲ್ಲಿ ಪ್ರಜಾಭಿಪ್ರಾಯವನ್ನು ಪ್ರಕಟಿಸಿ ಏನು ಮಾಡುವುದು ಬೇರದ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ. ಮೈಸೂರು ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ಇದೇ ೨೮ ನೇ ತಾ|| ಬುಧವಾರ ಸಂಜೆ ... ಗಂಟೆಗೆ ಪುರಭವನದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಿರುತ್ತೆ. ಮೈಸೂರು ... ಬೋರ್ಡ್ ಅಧ್ಯಕ್ಷರಾದ ಶ್ರೀ ... ಎಂ. ಚನ್ನಬಸಪ್ಪನವರು ಅಧ್ಯಕ್ಷತೆ ... ವಹಿಸುವರು. ವೈಯಕ್ತಿಕವಾಗಿ ಆಹ್ವಾನ ಕಳುಹಿಸಲು ... ಸಮಯ ಇಲ್ಲದಿರುವುದರಿಂದ ಇದೇ ಆಹ್ವಾನವೆಂದು ತಿಳಿದು ನೀವೂ ಸಭೆಗೆ ದಯಮಾಡಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಬೇಕೆಂದು ಸಂಘದ ಅಧ್ಯಕ್ಷರಾದ ಶ್ರೀ ಎಂ. ಎಲ್. ... ಗೌಡರವರು ಕೋರಿರುತ್ತಾರೆ

ನಗರ ಕಾಂಗ್ರೆಸ್ ಸಮಿತಿ

... ಸಭೆಗೆ ನಗರ ಕಾಂಗ್ರೆಸ್ ... ಸಮಿತಿಯ ... ... ಏರ್ಪಡಿಸ

ಪ್ರ|| ಪ್ರ ಸಭೆಗೆ ಚುನಾಯಿತ ಅಧ್ಯಕ್ಷರಿರಬೇಕು

ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತೀರ್ಮಾನ

ಬೆಂಗಳೂರು ೨೭

ಪ್ರಜಾ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯಸಮಿತಿಯ ಸಭೆಯು ನಿನ್ನೆ ನಡೆಯಿತು. ಪ್ರ|| ಪ್ರ|| ಸಭೆಗೆ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಇರಬೇಕೆಂದೂ ಅವರನ್ನು ಚುನಾಯಿಸಿಕೊಳ್ಳುವ ಹಕ್ಕನ್ನು ಸಭೆಗೆ ಕೊಡಬೇಕೆಂದೂ ಸರ್ಕಾರವನ್ನು ಒತ್ತಾಯಪಡಿಸಬೇಕೆಂದು ನಿರ್ಧರಿಸಲಾಯಿತೆಂದು ತಿಳಿದುಬಂದಿದೆ. ಇತರ ಪ್ರಾಂತ್ಯಗಳಲ್ಲಿರುವವಂತೆಯೇ ಕಾಂಗ್ರೆಸ್ ಪಕ್ಷದ ನಾಯಕರು ಮಂತ್ರಿಮಂಡಲದ ನಾಯಕರಾಗಿ ಮಂತ್ರಿಮಂಡಲವನ್ನು ರಚಿಸಿಕೊಳ್ಳುವಂತೆ ಮೈಸೂರಿನ ಘಟನೆಯ ವ್ಯವಸ್ಥೆ ಮಾಡುವುದು, ಮತ್ತು ದಿವಾನರ ಹುದ್ದೆಯನ್ನು ರದ್ದು ಮಾಡುವ ವಿಷಯಗಳೂ ಚರ್ಚೆಗೆ ಬಂದಿದ್ದವೆಂದು ತಿಳಿದುಬಂದಿದೆ

ಯಾಂಗ್ಸಿ ನದಿ ದಾಟಿದರು

ಚೀಣೀ ಕಮ್ಯೂನಿಸ್ಟ್ ಸೈನ್ಯಗಳು ಯಾಂಗ್ಟ್ಸಿ ನದಿಯನ್ನು ಶಕಾಂಗಿ ವ ... ಪಟ್ಟಣವಾದ ನಾಂಕಿಂಗಿಗೆ ೮೦ ಮೈಲಿ ದೂರ ಇರುವ ಪ್ರದೇಶದಲ್ಲಿ ದಾಟಿ ಸ್ಹಾಂಗಾಯ್ ನಗರವನ್ನು ಮುತ್ತಲು ಮುನ್ನುಗ್ಗುತ್ತಿವೆ

ಆಂಧ್ರ ಪ್ರಾಂತ ರಚನೆಯ ಮೊದಲನೆ ಹಂತ

ಆಂಧ್ರ ಪ್ರಾಂತ ರಚನೆ ಸಂಬಂಧವಾಗಿ ನೆಹ್ರೂ–ಪಟೇಲ್–ಪಟ್ಟಾಭಿ ಸಮಿತಿ ತೀರ್ಮಾನದ ಬಗ್ಗೆ ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಪ್ರಧಾನಿಯವರು ನಿ ... ಯನ್ನು ತಂದು ಆಂಧ್ರ ಪ್ರಾಂತ ರಚನೆಗೆ ಒಪ್ಪಬೇಕೆಂದು ಕೋರುವವರಾಗಿದ್ದಾರೆ

ಬ್ರಿಟಿಷ್ ಯುದ್ಧ ಹಡಗಿಗೆ ಬೆಂಕಿ

ಯಾಂಗ್ಟ್ಸಿ ನದಿಯಲ್ಲಿದ್ದ ಬ್ರಿಟಿಷ್ ಯುದ್ಧ ಹಡಗಾದ "ಲಂಡನ್"ನಿಗೆ ಬೆಂಕಿ ಬಿದ್ದು ಅದು ಸುಟ್ಟುಹೋಯಿತು.

ಆಂಧ್ರದವರಿಗೆ ಎಚ್ಚರಿಕೆ

ಆಂಧ್ರ ಪ್ರಾಂತ ರಚನೆಯಾಗಬೇಕಾಗರೆ ಮದ್ರಾಸು ನಗರದ ಮೇಲೆ ಇರುವ ಹಕ್ಕುಗಳನ್ನು ಆಂಧ್ರರು ಬಿಡಬೇಕೆಂದೂ, ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸಲು ಒಪ್ಪಬೇಕೆಂದೂ ಕಾಂಗ್ರೆಸ್ ... ದಾ|| ಪಟ್ಟಾಭಿ ... ತಿಳಿಸಿದ್ದಾರೆ

ಬಟ್ಟೆ ಗಿರಣಿ ಮಾಲೀಕರಿಗೆ ೧೦೦ ಕೋಟಿ ರೂ. ಲಾಭ

ಕಳೆದ ವರ್ಷ ಬಟ್ಟೆ ಹತೋಟಿಯನ್ನು ತೆಗೆದುಹಾಕಿದುದರಿಂದ ಗಿರಣಿ ಮಾಲೀಕರುಗಳು ೧೦೦ ಕೋಟಿ ರೂ. ಲಾಭ ಗಳಿಸಿದರೆಂದೂ, ಈ ಹಣವನ್ನು ತೆರಿಗೆಯ ರೂಪದಲ್ಲಿ ವಾಪಸು ಪಡೆಯಲು ಸರ್ಕಾರವು ಆಲೋಚಿಸುತ್ತಿದೆಯೆಂದೂ ತಿಳಿದುಬಂದಿದೆ.

ಕಲ್ಕತ್ತದಲ್ಲಿ ರಷ್ಯನನ ದಸ್ತಗಿರಿ

ಕಲ್ಕತ್ತಾದಲ್ಲಿ ರಕ್ಷಣಾ ಪೋಲೀಸಿನವರು ಶಿಸ್ತಿತಿಜ್ಞಿಯೆಂಬ ರಷ್ಯದ ದೇಶಸ್ಥನೊಬ್ಬನನ್ನು ದಸ್ತಗಿರಿ ಮಾಡಿರುತ್ತಾರೆ. ಆಕ್ಷೇಪಣೀಯವಾದ ಕಾರ್ಯ ಚಟುವಟಿಕೆಯಲ್ಲಿ ಆತನು ಇದ್ದನೆಂದು ಹೇಳಲಾಗಿದೆ.

ಏಷ್ಯಾರಾಷ್ಟ್ರಗಳ ಕಾರ್ಮಿಕರ ಸಮ್ಮೇಳನ

ಮುಂದಿನ ತಿಂಗಳು ೭ನೇ ತಾ|| ಇಂದೂರಿನಲ್ಲಿ ಏಷ್ಯಾ ರಾಷ್ಟ್ರಗಳ ಕಾರ್ಮಿಕರ ಸಮ್ಮೇಳನವು ನಡೆಯುವುದು. ಫಿಲಿಫೈನ್ಸ್, ಆಸ್ಟ್ರೇಲಿಯ, ಇಂಡೋನೇಷ್ಯಾ, ಇರಾನ್, ತುರ್ಕಿ, ಪಾಕೀಸ್ತಾನ ಮತ್ತು ಇತರ ಏಷ್ಯಾ ರಾಷ್ಟ್ರಗಳು ಇದರಲ್ಲಿ ಭಾಗವಹಿಸಲಿರುವುವು. ಏಷ್ಯಾದ ಕಾರ್ಮಿಕರ ಸಂಸ್ಥೆಯನ್ನು ಸ್ಥಾಪಿಸುವುದೇ ಇದರ ಉದ್ದೇಶ. ಅಲ್ಲದೆ ಹೊಸದಾಗಿ ನಿಮ್ಮದ ಕಾರ್ಮಿಕ ಸಂಘಗಳ ಫೆಡರೇಷನ್ ಸ್ಥಾಪನೆಯ ವಿಚಾರವನ್ನೂ ಇಲ್ಲಿ ಪರಿಶೀಲಿಸಲಾಗುವುದು.

ಯುದ್ಧ ನಿಲ್ಲಿಸಬೇಕೆಂದು ಚೀಣಾ ಅಧ್ಯಕ್ಷರ ಮನವಿ

ಚೀಣಾ ಸರ್ಕಾರದವರು ಕಳುಹಿಸಿರುವ ಮೂರು ಶಾಂತಿ ಸೂಚನೆಗಳನ್ನು ಪರ್ಯಾಲೋಚಿಸಿ ಕೂಡಲೇ ಕದನವನ್ನು ನಿಲ್ಲಿಸುವಂತೆ ಆಜ್ಞೆ ಮಾಡಬೇಕೆಂದು ಚೀಣದ ಅಧ್ಯಕ್ಷ ಮತ್ತು ಪ್ರಧಾನಿಯವರು, ಕಮ್ಯೂನಿಸ್ಟ್ ನಾಯಕರಿಗೆ ಮನವಿ ಮಾಡಿದ್ದಾರೆ ಆದರೆ ಅದನ್ನು ಕಮ್ಯೂನಿಸ್ಟರು ನಿರಾಕರಿಸಿದ್ದಾರೆ

ಸಿಂಧಿನ ಕೋಟ್ಯಾಧೀಶ್ವರನು ಬೀದಿಯ ಭಿಕಾರಿಯಾದನು

ಭಾರತದ ವಿಭಜನೆಗೆ ಮುಂಚೆ ಸಿಂಧಿನಲ್ಲಿ ವಾಸಿಸುತ್ತಿದ್ದ ಭಗತ್‌ಸಿಂಗ್ ಎಂಬ ೭೦ ವರ್ಷದ ವೃದ್ಧ ಜಮೀನ್ದಾರನೊಬ್ಬನು ತನ್ನ ಮಗನೊಡನೆ ಅಜ್ಮೀರದಲ್ಲಿ ಮಾಂಸ ಮಾರಾಟಮಾಡುವ ಉದ್ಯೋಗದಲ್ಲಿ ನಿರತನಾಗಿರುವನೆಂದು ವರದಿಯಾಗಿದೆ. ನಿರಾಶ್ರಿತರ ಆಸ್ತಿಯ ಬಗ್ಗೆ ಉಭಯ ರಾಷ್ಟ್ರಗಳೂ ಸರಿಯಾದ ಒಪ್ಪಂದ ಮಾಡಿಕೊಳ್ಳದಿರುವುದೇ ಈ ಸ್ಥಿತಿಗೆ ಕಾರಣವೆಂದು ಆತನು ಹೇಳಿದ್ದಾನೆ. ಆತನು ೩ ಲಕ್ಷ ರೂ ... ಸಂಪಾದನೆ ... ಗಿದೆ

ಕರ್ನಾಟಕ ಪ್ರಾಂತ್ಯಕ್ಕೆ ಮೈಸೂರು ರಾಜರು ದಾರಿ ಕೊಡಬೇಕು

ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಮೈಸೂರಿನಲ್ಲಿ ಕರ್ನಾಟಕ ಜಿಲ್ಲೆಗಳು ವಿಲೀನವಾಗಬೇಕೇ ಅಥವ ಮೈಸೂರು ಕರ್ನಾಟಕದಲ್ಲಿ ಸೇರಬೇಕೇ ಎಂಬ ಸಮಸ್ಯೆಯು ಮೊದಲು ಇತ್ಯರ್ಥವಾಗಬೇಕು. ಮೈಸೂರು ಸಂಸ್ಥಾನವು ಪ್ರತ್ಯೇಕವಾಗಿರುವಂತೆ ಬಿಟ್ಟು, ರಾಜರ ಅಸ್ತಿತ್ವವನ್ನು ಸಮರ್ಥಿಸುವುದಾದರೆ ರಾಜತ್ವಕ್ಕೆ ಬೆಂಬಲ ಕೊಟ್ಟಂತಾಗುವುದಲ್ಲದೆ ಅವರ ಆಡಳಿತದ ಎಲ್ಲೆಯನ್ನು ಹೆಚ್ಚಿಸಿಕೊಟ್ಟಂತಾಗುವುದು. ಇದು ಪ್ರಕೃತ ಮನೋಭಾವ, ಶಿಕ್ಷಣ ಮತ್ತು ಸಂಸ್ಕೃತಿ ಸಂಪ್ರದಾಯಕ್ಕೆ ವಿರೋಧವಾಗುತ್ತದೆ ಆದುದರಿಂದ ಕೊಲ್ಹಾಪುರ ಮತ್ತು ಬರೋಡಾ ಮಹಾರಾಜರುಗಳು ಮಾಡಿದಂತೆಯೇ ಮೈಸೂರು ಅರಸರೂ ಸಹ ಕರ್ನಾಟಕ ಪ್ರಾಂತ್ಯ ರಚನೆಗೆ ದಾರಿ ಬಿಟ್ಟುಕೊಡುವರೇ ಎಂಬುದನ್ನು ತಿಳಿಯಬೇಕು–ಎಂದು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿರುತ್ತಾರೆ

ಬ್ರಾಹ್ಮಣರು ಸೇವಾವೃತ್ತಿ ಬಿಡಬೇಕು

ಅಖಿಲ ಮೈಸೂರು ಬ್ರಾಹ್ಮಣ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

(ಸ್ವಂ ವಿ ಬಾ. ತಂತಿ) ಹಾಸನ ೨೭

ಅಖಿಲ ಮೈಸೂರು ಬ್ರಾಹ್ಮಣ ಮಹಾಸಭೆಯ ೨ ನೇ ಅಧಿವೇಶನವು ಈ ದಿನ ಬೆಳಗ್ಗೆ ಇಲ್ಲಿ ಪ್ರಾರಂಭವಾಯಿತು. ಸೋಸಲೆ ಶ್ರೀ ವ್ಯಾಸರಾಜಮಠದ ಶ್ರೀಮದ್ವಿದ್ಯಾ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಬ್ರಾಹ್ಮಣರು ಮಾನವನ ಯೋಗಕ್ಷೇಮಕ್ಕಾಗಿ ದುಡಿಯಬೇಕೆಂದೂ ಮತ್ತು ಬ್ರಾಹ್ಮಣ ತತ್ವಗಳನ್ನು ಬಿಡಕೂಡದೆಂದೂ ಸ್ವಾಮಿಜಿಯವರು ತಿಳಿಸಿದರು. ಅವರನ್ನು ಪ್ರಾರಂಭದಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಅಧ್ಯಕ್ಷತೆ ವಹಿಸಿದ್ದ ತಿಪಟೂರಿನ ಶ್ರೀ ಹಸೂಡಿ ವೆಂಕಟಶಾಸ್ತ್ರಿಗಳು ತಮ್ಮ ಭಾಷಣದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಸಮಾಜವು ತನ್ನ ಅಸ್ತಿತ್ವಕ್ಕಾಗಿಯೂ, ಅಭಿವೃದ್ಧಿಗಾಗಿಯೂ ಸಮ್ಮೇಳನಗಳನ್ನು ನಡೆಸಬೇಕಾಗಿಬಂದಿರುವುದು ಶೋಚನೀಯವೆಂದೂ, ಬ್ರಾಹ್ಮಣರು ವೇದೋಕ್ತ ಕರ್ಮಗಳನ್ನು ಶ್ರದ್ಧೆಯಿಂದ ನಡೆಸಿಕೊಂಡು, ಸೇವಾವೃತ್ತಿಯಲ್ಲಿ ಆಸೆಯಿಡದೆ ಸ್ವತಂತ್ರ ಜೀವನವನ್ನು ನಡೆಸಿಕೊಂಡು ಬಂದಲ್ಲಿ ಆತನು ಏಳಿಗೆ ಬರುವುದರಲ್ಲಿ ಸಂದೇಹವಿಲ್ಲವೆಂದೂ ತಿಳಿಸಿದರು.

ಕಡಿಮೆ ತೂಕಕ್ಕಾಗಿ ದಂಡ

ರಾಜಧಾನಿಯ ಶಿವರಾಂಪೇಟೆಯಲ್ಲಿ ಅಡಿಕೆ ಮತ್ತು ಹೊಗೆಸೊಪ್ಪು ವ್ಯಾಪಾರಿಗಳಾದ ಶ್ರೀಗಳು ಕೃಷ್ಣಯ್ಯಶೆಟ್ಟಿ ಮತ್ತು ಫಾಲಾಕ್ಷ ಎಂಬುವರು ಕಡಿಮೆ ತೂಕದ ಬಟ್ಟುಗಳನ್ನು ಉಪಯೋಗಿಸುತ್ತಿದ್ದರೆಂದು ಅಳತೆ ಮತ್ತು ತೂಕದ ಇನ್ಸ್‌ಪೆಕ್ಟರು ಮೊದಲನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಕೃಷ್ಣಶೆಟ್ಟಿಗೆ ... ರೂ ಮತ್ತು ಫಾಲಾಕ್ಷನಿಗೆ ... ರೂ. ದಂಡವನ್ನು ವಿಧಿಸಲಾಯಿತು.

ಅಧಿಕಾರಿಗಳ ಮೇಲೆ ನಿರಾಶ್ರಿತರ ಕೈ

ಕೊಲ್ಹಾಪುರಕ್ಕೆ ೪ ಮೈಲಿ ದೂರದಲ್ಲಿರುವ ವಾಲಿವಡೆ ಎಂಬ ನಿರಾಶ್ರಿತ ಶಿಬಿರಕ್ಕೆ ಕೊಡುತ್ತಿದ್ದ ಉಚಿತ ರೇಷನನ್ನು ನಿಲ್ಲಿಸಿ, ಅದಕ್ಕೆ ಬದಲು ಹಣ ಕೊಡುವುದನ್ನು ಪ್ರತಿಭಟಿಸಲು ನಿರಾಶ್ರಿತರು ಪ್ರದರ್ಶನ ನಡೆಸಿ, ಅಲ್ಲಿದ್ದ ಮುಖ್ಯ ಅಧಿಕಾರಿಗಳಾದ ಶ್ರೀ ಬಿ ನಂಜಪ್ಪ ಮತ್ತು ಇತರ ಅಧಿಕಾರಿಗಳ ಮೇಲೆ ಕೈ ಮಾಡಿ, ಕಟ್ಟಿಗೆ ಮತ್ತು ಇಟ್ಟಿಗೆಗಳಿಂದ ಹೊಡೆದು ಗಾಯಪಡಿಸಿದರೆಂದೂ, ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರೆಂದೂ ವರದಿಯಾಗಿದೆ ಇದರಿಂದ ೫ ಜನರಿಗೆ ಗಾಯವಾಗಿದೆ. ೧೦ ಜನ ಪೋಲೀಸರಿಗೂ ಪೆಟ್ಟುಬಿದ್ದಿದೆ

"ಜೀವರತ್ನ"

ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ವೈ ೧ ವೆಂಕಟಪ್ಪನವರ ಸಂಪಾದಕತ್ವದಲ್ಲಿ ಇದೇ ೧೫ನೇ ತಾರೀಖು ಪ್ರಾರಂಭವಾದ ಜೀವರತ್ನ ಎಂಬ ಹೊಸ ಪಕ್ಷ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಕೈಸೇರಿದೆ ಭಾರತದಲ್ಲಿ ಸರ್ವೋದಯ ದಿನಾಚರಣೆ ನಡೆದಾಗ ಕೈಗೊಳ್ಳಲಾದ ಪ್ರತಿಜ್ಞೆಯನ್ನು ಸ್ಮರಣೆಗೆ **ತಂದು ಜನತೆಗಾಗಿ** ದ ಧ್ಯೇಯವೇ ಪತ್ರಿಕೆಯ ಉದ್ದೇಶವಾಗಿದೆ ಈ ಪತ್ರಿಕೆಯನ್ನು ನಾವು ಸುಸ್ವಾಗತಿಸಿ ಅದು ಚಿರಕಾಲ ಸೇವೆ ಸಲ್ಲಿಸಲೆಂದು ಹಾರೈಸುತ್ತೇವೆ ಪತ್ರಿಕೆಯ ವಾರ್ಷಿಕ ಚಂದಾ ರೂ ೩-೦-೦

ಭಗವದ್ಗೀತೆಯ ರಿಕಾರ್ಡು

ಭಗವದ್ಗೀತೆಯ ಎರಡು ಶ್ಲೋಕಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿ, ನ್ಯೂಯಾರ್ಕಿನ ಕಂಪೆನಿಯೊಂದು ಅದನ್ನು ರಿಕಾರ್ಡು ಮಾಡಿದೆ ಭಾರತದ ಶ್ರೀ ಎಂ. ಪಿ ಮಹದೇವನ್‌ರವರು ತರ್ಜುಮೆ ಮಾಡಿದ್ದಾರೆ

ಆಪ್ಟೆ ಅರ್ಜಿಯ ನಿರಾಕರಣೆ

ಗಾಂಧಿ ಕೊಲೆ ಮೊಕದ್ದಮೆಯಲ್ಲಿ ಮರಣ ದಂಡನೆಗೆ ಗುರಿಯಾಗಿರುವ ನಾರಾಯಣ ಆಪ್ಟೆಯು ತಾನೇ ಅಪೀಲಿನಲ್ಲಿ ವಾದಿಸಲು ಅವಕಾಶ ಕೇಳಿದ ದನ್ನು ಪೂರ್ವ ಪಂಜಾಬು ಹೈಕೋರ್ಟು ನಿರಾಕರಿಸಿದೆ.

ಭಾರತದ ನೌಕೆಗೆ ಮೈನು ಪೆಟ್ಟು

ಕಲ್ಕತ್ತದ ಇಂಡಿಯನ್ ಸ್ಟೀಂ ಷಿಪ್ಪಿಂಗ್ ಕಂಪೆನಿಗೆ ಸೇರಿದ 'ಇಂಡಿಯನ್ ಮರ್ಚೆಂಟ್' ಎಂಬ ಹಡಗಿಗೆ ಉತ್ತರ ಸಮುದ್ರದಲ್ಲಿ ಮೈನ್ ಆಸ್ಫೋಟನೆಯಿಂದ ಸ್ವಲ್ಪ ನಷ್ಟ ಆಗಿದೆಯೆಂದು ವರದಿಯಾಗಿದೆ

Edited, printed and published by A R Nagarajan at the Sadhvi Press D. Subbiah Road, Mysore

ಮೋಟಾರು ಕೆಲಸಗಾರರ ಮುಷ್ಕರವೇ?

[illegible]

ಜಿಲ್ಲಾ ಮೋಟಾರು [illegible] ಸಂಘದ ಸಭೆಯು [illegible] ಶ್ರೀ [illegible] ಮುಷ್ಕರ [illegible] ವನ್ನು ಕೈಗೊಳ್ಳುವುದರಿಂದ ಎಲ್ಲ ಕೆಲಸಗಾರರಿಗೆ ಅನುಕೂಲವಾಗುವುದಾಗಿದೆ [illegible] ರಿಂದ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರ ಹೂಡಬೇಕೆಂದು [illegible] ಬಿಟ್ಟನ್ನು ಮುಂದಿನ ತಿಂಗಳ [illegible] ತಾರೀಖಿನೊಳಗಾಗಿ ತೆಗೆದುಕೊಳ್ಳಬೇಕೆಂದು ಲೇಬರ್ ಕಮೀಷನರಿಗೆ ಮನವಿ ಮಾಡಲಾಗಿದೆ [illegible] ಅವರು ನಡೆಸದಿದ್ದಲ್ಲಿ ಸಂಪೂರ್ಣ ಮುಷ್ಕರ ಹೂಡುವುದೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ಮೋಟಾರು ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಡ್ರೈವರುಗಳಿಗೆ ಲೈಸೆನ್ಸ್ ನೀಡುವುದನ್ನು ತಪ್ಪಿಸಿ ಮಾಲೀಕರುಗಳನ್ನು ಶಿಕ್ಷಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಯಿತು.

ಪ್ರಯಾಣಿಕರು ಮತ್ತು ಸ್ತ್ರೀಯರುಗಳ ಸೌಕರ್ಯಕ್ಕಾಗಿ ಶೆಲ್ಟರ್ ನಿಲ್ದಾಣದಲ್ಲಿಯೂ ತಿಯೇಟರ ಬಸ್ ನಿಲ್ದಾಣದಲ್ಲೂ ಹೋಟೆಲುಗಳ ಸೌಕರ್ಯಗಳನ್ನು ಒದಗಿಸಬೇಕೆಂದು ಪ್ರಾರ್ಥಿಸಲಾಯಿತು

ಮೈಸೂರನ್ನು ಬಿಟ್ಟು ಕರ್ನಾಟಕ ಪ್ರಾಂತ್ಯ ರಚನೆಯೇ?

ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತ್ಯಕ್ಕೆ [illegible] ಬದ್ಧ ವಿರೋಧಿಗಳಾಗಿರಬಾರದೆಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಈಗಾಗಲೇ ನಿರ್ಧರಿಸಿದೆಯೆಂದೂ, ಆದರೂ ಮೈಸೂರು ಕರ್ನಾಟಕದೊಂದಿಗೆ ಸೇರಲು ಒಪ್ಪದಿದ್ದಲ್ಲಿ ಉಳಿದ ಕರ್ನಾಟಕದ ಪ್ರದೇಶಗಳನ್ನು ಸೇರಿಸಿ ಒಂದು ಪ್ರಾಂತ್ಯವನ್ನಾಗಿ ರಚಿಸಬೇಕೆಂದು ಕರ್ನಾಟಕ ಏಕೀಕರಣ ಸಮಿತಿಯ ಅಧ್ಯಕ್ಷರಾದ ಶ್ರೀ ಜಿನರಾಜ ಹೆಗ್ಗಡೆಯವರು ತಿಳಿಸುತ್ತಾರೆ

* ಲಕ್ಷ್ಮೀ *
ಥಿಯೇಟರ್
ಯಶಸ್ವೀ 2ನೇ ವಾರ
ತಾ|| 2 [illegible] ರಿಂದ ದಿನಕ್ಕೆ 3 ಆಟಗಳು
ರಾಮ್ ಬಾಣ್
(ಹಿಂದಿ)
ಇದುವರೆಗೂ ನೋಡದಿದ್ದರೆ ಈ ದಿನವೇ
ನೋಡಿ ಆನಂದ ಪಡಿರಿ

ಅಮೆರಿಕದ ಕೆಲವು ಡಿಗ್ರಿಗಳಿಗೆ ಮಾನ್ಯತೆ ಇಲ್ಲ

ಅಮೆರಿಕದ ಡಿಟ್ರಾಯ್ ಅಂತರ ರಾಷ್ಟ್ರೀಯ ವಿಶ್ವ ವಿದ್ಯಾನಿಲಯವು, ಹ್ಯಾರಿಸ್ [illegible] ವಿಶ್ವವಿದ್ಯಾನಿಲಯಗಳು ಕೊಡುವ [illegible] ಪದವಿಗಳಿಗೆ ಭಾರತ ಸರ್ಕಾರವು ಮಾನ್ಯತೆ ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸುತ್ತದೆ

ಮಡಿದ ಕ್ರಾಂತಿಕಾರನ ತಾಯಿಗೆ ಜೀವಾವಧಿ ವರ್ಷಾಸನ

೧೯೩೧ರಲ್ಲಿ ಪೋಲೀಸರೊಡನೆ ಹೋರಾಡಿ ಗುಂಡಿನಿಂದ ಕೊಲ್ಲಲ್ಪಟ್ಟ ಚಂದ್ರಶೇಖರ ಅಜಾದ್ ಎಂಬ ಕ್ರಾಂತಿಕಾರನ ತಾಯಿಗೆ ಮಧ್ಯಭಾರತ ಸರ್ಕಾರದವರು ತಿಂಗಳಿಗೆ ೬೦ ರೂ. ನಂತೆ ಜೀವಾವಧಿ ವರ್ಷಾಸನ ಕೊಡುವುದಾಗಿ ನಿರ್ಧರಿಸಿದ್ದಾರೆ ಅಲ್ಲದೆ ಭಾರತದ ಪ್ರಧಾನಿ ಪಂಡಿತ ನೆಹರೂರವರು ಇತ್ತೀಚೆಗೆ ೫೦೦ ರೂ. ಗಳನ್ನು ಕೊಟ್ಟಿದ್ದರು.

ಕನ್ಯಾಕುಮಾರಿಯಿಂದ ದೆಹಲಿಗೆ ರಸ್ತೆ

ಕನ್ಯಾಕುಮಾರಿಯಿಂದ ಹಿಡಿದು ದೆಹಲಿವರೆಗೂ ಒಂದು ಭಾರಿ ರಸ್ತೆಯನ್ನು ನಿರ್ಮಿಸುವ ವಿಷಯದ ಅಂಗವಾಗಿ ಕೊಚ್ಚಿನ್ ಮಂತ್ರಿಗಳೊಡನೆ ಕೇಂದ್ರ ರೈಲ್ವೆ ಮಂತ್ರಿ ಗೋಪಾಲಸ್ವಾಮಿ ಅಯ್ಯಂಗಾರರು ಮಾತುಕತೆ ನಡೆಸಿದರು.

ಹಿಂದೂ ಧರ್ಮ ಪ್ರಚಾರಕ್ಕಾಗಿ ಸಂಸ್ಥೆ

ಹಿಂದೂ ಧರ್ಮದ ಪ್ರಚಾರವನ್ನು ಕೈಗೊಳ್ಳಲು ತಿರುಪತಿಯ ಶ್ರೀ ವೆಂಕಟೇಶ್ವರ ದೇವಸ್ಥಾನದವರು ಶ್ರೀನಿವಾಸ ಮಿಷನ್ ಎಂಬ ಹೊಸ ಸಂಸ್ಥೆಯನ್ನು ಏರ್ಪಡಿಸಿರುವರು

ಗಾಯತ್ರೀ ಟಾಕೀಸ್
ಪ್ರತಿದಿನ ಮೂರು ಪ್ರದರ್ಶನಗಳು
ತಾ|| 22-4-49ರಿಂದ 2 ದಿನಗಳು
ಪ್ಯಾರಾಮೌಂಟ್ಸ್‌ರವರ
ದಿ ಬಿಗ್ ಕ್ಲಾಕ್
Big Clock
ಪಾತ್ರ - ರೇ ಮಿಲ್ಯಾಂಡ್
ಬೆಳಗಿನ ಪ್ರದರ್ಶನ - -
23-4-49ರಿಂದ 2 ದಿನಗಳು
20th ಸೆಂಚುರಿಯವರ
ಬಿಗ್ ನಾಯ್ಸ್
ಪಾತ್ರ: ಲಾರೆಲ್ ಮತ್ತು ಹಾರ್ಡಿ
COMING
Beginning or the End

ದಂಗೆಕೋರರಿಂದ ೧ ಕೋಟಿ ರೂ. ಅಪಹರಣ

ಬರ್ಮಾದಲ್ಲಿ ೧೯೪೮ ನೇ ಮಾರ್ಚಿಯಿಂದ ಪ್ರಾರಂಭವಾದ ಗಲಭೆಗಳಲ್ಲಿ ದಂಗೆಕೋರರು ಸರ್ಕಾರಿ ಖಜಾನೆಗಳಿಂದ ೧ ಕೋಟಿ ರೂ. ಹಣವನ್ನು ಲೂಟಿಮಾಡಿದ್ದಾರೆಂದೂ ಅಕ್ಕಿ, ಮದ್ದುಗುಂಡು ಮತ್ತು ಸರ್ಕಾರಕ್ಕೆ ಸೇರಿದ ಇತರ ಪದಾರ್ಥಗಳನ್ನು ದೋಚಿದ್ದಾರೆಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

ಬಾಡಿಗೆದಾರರನ್ನು ಹೊಡೆದುದಕ್ಕೆ ಮಾಲೀಕರಿಗೆ ಶಿಕ್ಷೆ

ಬೆಂಗಳೂರಿನ ಕಬ್ಬನ್‌ಪೇಟೆಯ ಶ್ರೀ ಕೃಷ್ಣಮೂರ್ತಿ ಎಂಬ ಮನೆ ಮಾಲೀಕರು ಬಾಡಿಗೆದಾರರನ್ನು ಮನೆಯಿಂದ ಓಡಿಸುವ ಸಂದರ್ಭದಲ್ಲಿ ಅವರನ್ನು ಹೊಡೆದು ಗಾಯಪಡಿಸಿದರೆಂದು ಅವರಿಗೆ ೬ ತಿಂಗಳು ಶಿಕ್ಷೆ ಮತ್ತು ೧೦೦ ರೂ ದಂಡವನ್ನು ವಿಧಿಸಲಾಗಿದೆ ಆಪಾದಿತರ ಸೋದರರಾದ ಶ್ರೀಗಳು ರಾಮಚಂದ್ರಯ್ಯ ಮತ್ತು ನಾರಾಯಣಪ್ಪನವರುಗಳಿಗೂ ೬ ತಿಂಗಳ ಶಿಕ್ಷೆ ವಿಧಿಸಲಾಗಿದೆ

MORNING SHOWS
at
CHAMUNDESHWARI
TALKIES
From 22—4—49
For 3 days only
M G M's Magic Musical
Technicolor
Yolanda and the Thief
Starring:-Fred Astaire,
Lucille Bremer
NEXT CHANGE
Morning Shows
From 29-4-49
For 3 days
Beginning or the End

PRABHA
PICTURE HOUSE
Morning Shows for 3 days
From Friday the 22nd
R.K.O's
BAD MAN'S
TERRITORY

* ಪ್ರಭುದೇವಾ ಟಾಕೀಸಿನಲ್ಲಿ *
೨೦-೪-೪೯ನೇ ಬುಧವಾರದಿಂದ ದಿನವಹಿ ೩ ಆಟಗಳು
ಮುರಳಿ ಪಿಕ್ಚರ್ಸ್ ರವರ * ಭಕ್ತ ಸಿರಿಯಾಳ * (ತೆಲುಗು ಭಾಷೆ)
[illegible] ಸಿ. ಎಸ್. ಆರ್., ನಾಗಯ್ಯ, [illegible]

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೨] [illegible] [ಸಂಚಿಕೆ [illegible]

ಕಡೆತನಕ ಕಾದಾಡಲು ಚಿಯಾಂಗರ ಕಟ್ಟಪ್ಪಣೆ

ಲೋಕ ಕಲ್ಯಾಣವೇ ಬ್ರಾಹ್ಮಣರ ಗುರಿಯಾಗಿರಲಿ

ಬ್ರಾಹ್ಮಣ ಸಮ್ಮೇಳನದಲ್ಲಿ ಹೊಸಳಿ ಸ್ವಾಮಿಗಳ ಸಂದೇಶ

[ಸ್ವಂ. ಬಾ.] ಹಾಸನ ೨೨

ಅಖಿಲ ಮೈಸೂರು ಬ್ರಾಹ್ಮಣ ಮಹಾಸಭೆಯ ದ್ವಿತೀಯ ಸಮ್ಮೇಳನವು ಈ ದಿವಸ ಇಲ್ಲಿನ ಸ್ಕೌಟ್ ಕೇಂದ್ರದ ಭವನದಲ್ಲಿ ಶ್ರೀ [illegible]ರಾಡಿ ವೆಂಕಟಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ೭೦೦ ಜನ ಪ್ರತಿನಿಧಿಗಳು ದಯಮಾಡಿಸಿದ್ದರು.

ಶ್ರೀ ತಿಂಬುಗ ನಾರಾಯಣ ಅಯ್ಯಂಗಾರ್ ಸ್ವಾಗತ ಭಾಷಣ ಮಾಡಿದರು. ಶ್ರೀ [illegible]ಪುರದ ಸ್ವಾಮಿಗಳು ಮತ್ತು ಇತರರಿಂದ ಬಂದ ಸಂದೇಶಗಳನ್ನು ಓದಲಾಯಿತು.

ಹೊಸಳಿ ಮಠದ ಶ್ರೀ ಮದ್ವಿದ್ಯಾ [illegible] ಪಾದಂಗಳವರು ಸಮ್ಮೇಳನದ ಮಹೋತ್ಸವವನ್ನು ನೆರವೇರಿಸಿ [illegible]ವಾದ ಭಾಷಣವನ್ನು ಮಾಡಿದರು. [illegible] ಕಾಲದಿಂದಲೂ ಬ್ರಾಹ್ಮಣರು ಜ್ಞಾನಾರ್ಜನೆ ಮತ್ತು ಲೋಕ ಹಿತ ಸಾಧನೆಯಲ್ಲಿ ತೊಡಗಿದ್ದು ಐಹಿಕ ಮತ್ತು ಆಮುಷ್ಮಿಕ ಸೌಖ್ಯಗಳನ್ನು ಹೊಂದುತ್ತಿದ್ದರೂ, ಕಾಲಕ್ರಮದಲ್ಲಿ ಲೌಕಿಕ ವ್ಯವಹಾರಗಳಲ್ಲಿಯೂ ಹೆಚ್ಚು ಹೆಚ್ಚಾಗಿ ಪಾತ್ರವಹಿಸಬೇಕಾದ ಅವಶ್ಯಕತೆಯು ಒದಗಿ[illegible]. ಇತರರಿಗೆ ಅನನುಮಾಧಾನ [illegible] ಇತ್ತೀಚೆಗೆ ಬ್ರಾಹ್ಮಣರು ಲೌಕಿಕ [illegible] ಸ್ಥಾನಗಳನ್ನು ಕಳೆದುಕೊಂಡು [illegible] ಜ್ಞಾನಾರ್ಜನೆಯಲ್ಲಿಯೇ ತೊಡಗಬೇಕಾಗಿ ಬಂದಿತೆಂದೂ ಶ್ರೀ ಸ್ವಾಮಿಗಳವರು ಅಪ್ಪಣೆ ಕೊಡಿಸಿದರು. ಈ ಜ್ಞಾನಾರ್ಜನೆಗೂ ಸಹ ಇತ್ತೀಚೆಗೆ ಅಡಚಣೆಗಳು ಬಂದೊದಗಿರುವುದರಿಂದ ಬ್ರಾಹ್ಮಣರು ಸಂಘಟಿತರಾಗಿ ಸಮಾಜದ ಐಕ್ಯತೆಯನ್ನು ಸಾಧಿಸಲು ತೊಡಗಬೇಕು. ಬ್ರಾಹ್ಮಣರ ನಿಜವಾದ ಗುರಿಯು ಸ್ವಹಿತ ಸಾಧನೆ ಅಲ್ಲ. [illegible] ಲೋಕ ಕಲ್ಯಾಣವೇ ಅವರ ಮುಖ್ಯ [illegible]ಗಳ ಧ್ಯೇಯವಾಗಿರುತ್ತದೆ. [illegible] ಸಾಧಿಸಲು ಇತ್ತೀಚೆಗೆ ಒಂದಿರುವ [illegible] ತೊಡರುಗಳನ್ನು ಬದಿಗಿಟ್ಟು [illegible] ಇರಬಹುದಾದ ಭಿನ್ನಭಾವ[illegible] ಮರೆತು ಐಕಮತ್ಯದಿಂದ ತನ್ನ [illegible] ಸಾಧಿಸಬೇಕೆಂದು ಶ್ರೀ ಸ್ವಾಮಿಗಳವರು ಸೂಚಿಸಿದರು. ಇತ್ತೀಚೆಗೆ [illegible] ಹಲವು ಸಮ್ಮೇಳನಗಳಿಗೆ [illegible] ಅವರು ಉತ್ತರನಿತ್ತು ಮೂಲ[illegible] ಎಲ್ಲ ಬ್ರಾಹ್ಮಣರಲ್ಲಿಯೂ ತಮ್ಮ [illegible]ನ್ನು ಕೇಂದ್ರೀಕರಿಸಬೇಕೆಂದು [illegible]

ಅಧ್ಯಕ್ಷರ ಭಾಷಣ

ಶ್ರೀ [illegible]ರಾಡಿ ವೆಂಕಟಶಾಸ್ತ್ರಿಗಳವರು ತಮ್ಮ ಭಾಷಣದಲ್ಲಿ ಈ ರೀತಿ ವಿಳಿಸಿದರು:—

ಬ್ರಾಹ್ಮಣನು ತನಗೆ ಉತ್ಕೃಷ್ಟವಾದ ಮತ್ತು ಶ್ರೇಯಸ್ಕರವಾದ ಮಾರ್ಗವನ್ನು [illegible] ಆದರೊಡನೆ, ಜೀವನಕ್ಕಾಗಿ [illegible]ಯನ್ನು ಕೈಕೊಂಡ ದಿವಸವೇ [illegible] ಏಳಿಗೆಗೆ ಕುಂದಕ ಉಂಟಾ[illegible]

ಬ್ರಾಹ್ಮಣನಿಗೆ ವಿಹಿತವಾದ ವೇ[illegible]ಗಳನ್ನು ಶ್ರದ್ಧೆಯಿಂದ, ಲೋಕ[illegible] ಬೆಳೆಸಿಕೊಂಡು, ಬ್ರಹ್ಮವರ್ಚಸ್ಸ[illegible]ಸಿಕೊಂಡು ನೇನಾವ ತ್ರಿಭುವ್ಲ [illegible]

ಆಸೆಯೊಡವೆ, ಸ್ವಾತಂತ್ರ್ಯ ಜೀವನವನ್ನು ನಡೆಸಿಕೊಳ್ಳುತ್ತಾ ಬಂದಲ್ಲಿ ಬ್ರಾಹ್ಮಣನು ಏಳಿಗೆಗ ಒಬ್ಬನ, ಬ್ರಾಹ್ಮಣನು [illegible] ಸೋಷಾಯಕ್ಕೆ ಅವಲಂಬಿಸುವ ಕಸಬಿಗೆ ಧಕ್ಕೆಯುಂಟಾಗದಂತೆಯೆ [illegible] ದೇವತಾ ಪ್ರಾರ್ಥನೆ ಇವುಗಳಿಗೆ ಕುಂದಾಗದಂತೆಯೂ ನಿತ್ಯ ನೈಮಿತ್ತಿಕ ಕರ್ಮಗಳು ನಿರ್ವಹಿಸಬೇಕು. ಇತರ ಜಾತಿಯವರಲ್ಲಿ ಸಮಾಜದ ಬಲವಂತವಿದ್ದರೂ ಕೈಸ್ತರಾಲದ ಪ್ರಾರ್ಥನೆಯನ್ನು ನಡೆಸಬೇಕಾಗುತ್ತದೆ. [illegible] ಬಲವಂತಕ್ಕೆ ನಮ್ಮಲ್ಲಿ ಅವಕಾಶವಿಲ್ಲದಿರುವದರಿಂದ, ದೈನಂದಿನ ಪ್ರಾರ್ಥನೆಗಳಲ್ಲಿ ಶ್ರದ್ಧೆಯುಂಟಾಗಿ [illegible] ಆಸಕ್ತಿಯನ್ನುಂಟು ಮಾಡಬೇಕು.

ಬ್ರಾಹ್ಮಣನಿಗೆ ಕುಚೆಗೆ ನ್ಯಾಯ [illegible] ಯುಕ್ತಿಲ್ಲವೆಂಬುದು [illegible] ಬ್ರಾಹ್ಮಣನು ಮುಂದುವರಿದ ಸಮಾಜದವನೆಂತಲೂ, ಈತನೇ [illegible] ಹಿಂದಕ್ಕೆ ಇಟ್ಟವನೆಂತಲೂ ಆರ್ಜ [illegible]ಗಳನ್ನು ದಿನೇ ದಿನೇ ಕೇಳುತ್ತಿ[illegible] [illegible] ಪೀರೆ ಹಿಡಗಳಲ್ಲಿ [illegible] ಸಾರ್ವಜನಿಕ ಮತ್ತು ನ್ಯಾಯ [illegible] ಪುಗಳನ್ನು ಅನುಸರಿಸಿ [illegible] ಇತರರನ್ನು ಬ್ರಾಹ್ಮಣನು [illegible] ನಸಂಬ [illegible] ಬಹುದಿಲ್ಲ [illegible] ದಲು ಅರ್ಹನೆಯನಾಗಿ ಒಂದು ಸಮಾಜದ ಕಟ್ಟಳೆಗಳನ್ನನುಸರಿಸಿ [illegible] ಮುನ್ನಡೆದವನೂ [illegible] ಉತ್ಕೃಷ್ಟವಾಗಿದ್ದ ಕಸಬಿನಲ್ಲಿ ನಿರತರಾಗಿ [illegible] ತ್ತಾ ಬಂದರು.

ಪ್ರಪಂಚದ ಇತರ ಭಾಗಗಳಲ್ಲಿ ಎಲ್ಲಾ ನಾಗರೀಕತೆಗಳ, ಎಲ್ಲಾ ಧರ್ಮಗಳ ಹುಟ್ಟು, ಬಾಳು, ಅಳಿದು ಹೋದುದು [illegible] ಹ್ಮಣ ಧರ್ಮಕ್ಕೆ [illegible] ಅನ್ಯ ಧರ್ಮಗಳ ಮತ್ತು ಅನ್ಯ ಜನಾಂಗಗಳ ನಾಶದಿಂದಲೇ ತಮ್ಮ ಧರ್ಮಗಳ ಬೆಳೆವು ಮತ್ತು ಹೀಗೆ ಎಂಬಂತೆ ಪ್ರಪಂಚದ ಇನ್ನಿತರ ಧರ್ಮಗಳು ನಡೆದುಕೊಂಡವು. ಬ್ರಾಹ್ಮಣನಾದರೋ 'ಸರ್ವೇಜನಾ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು' ಎಂದು ತ್ರಿಕರಣಶುದ್ಧಿಯಿಂದ ನಡೆದಿದ್ದುದರಿಂದಲೇ ಬ್ರಾಹ್ಮಣನಲ್ಲಿ ಗೌರವವು [illegible] ಸ್ವಾಭಾವಿಕವಾಗಿ [illegible] ಬ್ರಾಹ್ಮಣನು [illegible] ಮಾರ್ಗಗಳು, ಉಪನಿಷತ್ತುಗಳ [illegible]

ರಾಜೇಂದ್ರ ಪ್ರಸಾದರ ಕಾರ್ಯಕ್ರಮ

ಮೈಸೂರು, ೨೨

ಡಾ॥ ರಾಜೇಂದ್ರ ಪ್ರಸಾದರವರು ರಾಜಧಾನಿಗೆ ಮೋಟಾರಿನಲ್ಲಿ ಇದೇ ೨೫ ನೇ ತಾ॥ ಸೋಮವಾರ ಮಧ್ಯಾಹ್ನ [illegible] ಘಂಟೆಗೆ ಆಗಮಿಸುವರು. [illegible] ಘಂಟೆಗೆ [illegible] ಸಭೆಯಲ್ಲಿ ಭಾಗವಹಿಸಿ, ಅದೇ [illegible] ಬೆಂಗಳೂರಿಗೆ ಪ್ರಯಾಣ ಬೆಳಸುವರು.

ಬಿ ಕ್ಲಾಸಿನವರಿಗೆ ಮುನಿಸಿಪಲ್ ತೆರಿಗೆ

[illegible] ಈ ವರ್ಷ ಹಲವು [illegible] ಗಳನ್ನು [illegible] ಮತ್ತು [illegible] ಅಲ್ಪವಾಗಿರುತ್ತವೆ [illegible] ನಿವಾರಿಸಲು [illegible] ಪ್ರತಿಯಾಗಿ [illegible] ಮತ್ತು [illegible] ಕರ್ನಾಟಕ ಸರ್ಕಾರದ [illegible]

ಮಾಗಡೀ [illegible] ನ್ಯಾಯ [illegible]

[illegible] ಮಾಡುವ [illegible] ಕಳೆದ [illegible] ಸರ್ಕಾರದ [illegible] ಆಧ್ಯಕ್ಷರಾದ [illegible] ನಗರವನ್ನು [illegible] ಬೇರೆ [illegible]

[illegible] ಪ್ರಪಂಚದಲ್ಲಿ ಗೌರವನ್ನು [illegible] ಗೌರವವನ್ನು [illegible]

ಶ್ರೀ [illegible] ವೆಂಕಟೇಶವರ [illegible]

ಚುನಾಯಿತ ವೈಸ್‍ಚಾನ್ಸಲರು ಬೇಡ

ಸ್ವ. ಸು. ಪ್ರೋ.] ಬೆಂಗಳೂರು ೨೩

ಮೈಸೂರು ವಿಶ್ವವಿದ್ಯಾಲಯಕ್ಕೆ ಚುನಾಯಿತ ಉಪಸ್ಥಾನಪತಿಗಳು ಇರಬೇಕಾಗಿಲ್ಲವೆಂದು ಡಾ॥ ಸಿ. ಆರ್. ರೆಡ್ಡಿಯವರು ಸಲಹೆ ಮಾಡಿರುವರೆಂದು ತಿಳಿದುಬಂದಿದೆ.

೨ ರೂ. ಬೋನಸ್ಸು

ಈ ತಿಂಗಳಿನೊಳಗಾಗಿ ಕೊಡಬೇಕಾಗಿರುವುದಕ್ಕಾಗಿಯೂ [illegible] ಭತ್ಯ, [illegible] ಸರ್ಕಾರಕ್ಕೆ ಒಪ್ಪಿಸುವವರಿಗೆ [illegible] ೨ ರೂ. ಬೋನಸ್ಸು ಕೊಡಲಾಗುವುದೆಂದು ಸರ್ಕಾರದ ಆಜ್ಞೆಯಾಗಿದೆ.

ದಿವಾಕರರ ಆಗಮನ

ಕೆ. ಪಿ. ಸಿ. ಸಿ. ಸಭೆಯಲ್ಲಿ ಭಾಗವಹಿಸಲು ಇದೇ ೨೮ ನೇ ತಾ॥ ಭಾರತದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರರು ಇಲ್ಲಿಗೆ ಆಗಮಿಸುವರು. ಬೊಂಬಾಯಿನ ನೇಯರಾದ ಶ್ರೀ ಪಾಟೀಲರವರು ಬರಲಿದ್ದಾರೆ.

ಜಿಲ್ಲೆಯಲ್ಲಿ ೮ ನೂತನ ಮಿಡ್ಲ್ ಸ್ಕೂಲು

ಮೈಸೂರು ಜಿಲ್ಲೆಯ ಕೃಷ್ಣರಾಜನಗರ, [illegible] ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ೮ ನೂತನ ಮಿಡ್ಲ್ ಸ್ಕೂಲುಗಳನ್ನು ಸರ್ಕಾರದವರು ಮಂಜೂರು ಮಾಡಿ, ಅವುಗಳ ಕಟ್ಟಡಗಳಿಗಾಗಿ [illegible] ಸಾವಿರ ರೂ. ಅನ್ನು ಕೊಟ್ಟಿರುತ್ತಾರೆ. ಸಾರ್ವಜನಿಕರಿಂದ [illegible] ಸಾವಿರ ರೂ. ವಸೂಲಾಗಿರುತ್ತದೆ. ಜಿಲ್ಲಾ ಬೋರ್ಡಿನವರು ಈ ಕಟ್ಟಡಗಳನ್ನು ಕಟ್ಟಲಿದ್ದಾರೆ.

ರಾಜಧಾನಿಯ ವಿಜಯ, ದೈನಂದಿನ ಪತ್ರಿಕೆಯ ಸಂಪಾದಕರಾದ ಶ್ರೀ ಎ. [illegible]ನವರು [illegible] ನೇ ತಾರೀಖು, ಮಧ್ಯಾಹ್ನ [illegible] ಗಂಟೆಗೆ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಕಾಣಬೇಕೆಂದು ನೋಟೀಸು ಕೊಡಲಾಗಿದೆ.

ಕೊನೆಯವರೆಗೂ ಹೋರಾಡಲು ಆಜ್ಞೆ

ಕಮ್ಯೂನಿಸ್ಟರ ಮುನ್ನಡೆಯನ್ನು ತಡೆಹಿಡಿದು [illegible] ಕೊನೆಯ ವರೆಗೂ ಹೋರಾಡಬೇಕೆಂದು [illegible] ಚಿಯಾಂಗ್ ಕೈಷೇಕರು ಅಪ್ಪಣೆ ಮಾಡಿದ್ದಾರೆ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ [illegible] ಯುದ್ಧ ಮಾಡುವೆಂದು [illegible] ಅಧ್ಯಕ್ಷ [illegible] ಮತ್ತು ಇತರ ನಾಯಕರು ಚಿಯಾಂಗರನ್ನು ಭೇಟಿ ಮಾಡಿದಾಗ [illegible] ಸರ್ಕಾರ [illegible]

ಪ್ರೈವೇಟಸಿಲ್ಲದ ಸಂಚರಿಸಿದ ಬಸ್ಸು

ಕಳೆದ [illegible] ಕೊಣನೂರಿನಿಂದ [illegible] ಬಸ್ಸು [illegible] ಪರ್ಮಿಟ್ ಇಲ್ಲದೆ [illegible] ಮಾಡಿ [illegible] ಸಂಚರಿಸುತ್ತಿದ್ದ [illegible] ಹೊರಟಿಸುವ [illegible] ನಾಗರೀಕರೆಂದೂ [illegible]

ಸಚಿವರುಗಳ ಮೇಲೆ ತಿಪ್ಪಿನ ಕ್ರಮ

ಪಾಟಿಯಾಲಾ ಮತ್ತು ಪೂರ್ವಪಂಜಾಬ ಸಂಸ್ಥಾನದ ಮಂತ್ರಿಮಂಡಲಕ್ಕೆ ಪ್ರಿಗಳಾದ ಜ್ಞಾನಿ ಜೈಲ ಸಿಂಗ್, ನಿಹಾಲ್ ಸಿಂಗ್, ಸರ್ದಾರ್ ಹರಚರಣಸಿಂಗ್ ಮತ್ತು ಸೇರ್ ಜಂಗನಾಗ್‌ರವರುಗಳು ಕಾಂಗ್ರೆಸ್ ಪಕ್ಷದ ಸಲಹೆಗೆ ವಿರೋಧವಾಗಿ ಸೇರಿಕೊಂಡರೆಂದು ಅವರುಗಳ ಮೇಲೆ ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ತಿಪ್ಪಿನ ಕ್ರಮ ತೆಗೆದುಕೊಂಡು ಅವರುಗಳು ೩ ವರ್ಷಗಳಕಾಲ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿರಲು ಅರ್ಹರಲ್ಲವೆಂದು ನಿರ್ಧರಿಸಿರುತ್ತಾರೆ

ವಿದ್ಯಾರ್ಥಿಗಳ ಮೇಲೆ ಲಾಠಿ

ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮುಂದಿನ ತಿಂಗಳು ಆರಂಭವಾಗುವ ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂದು ಪ್ರದರ್ಶನ ನಡೆಸಿದರು ಅವರನ್ನು ಚದುರಿಸಲು ಪೋಲೀಸರು ಮೊದಲು ಅಶ್ರುವಾಯುವನ್ನು ಪ್ರಯೋಗಿಸಿ, ನಂತರ ಲಾಠಿ ಪ್ರಹಾರವನ್ನಾಡಿದರು. ಇದರಿಂದ ೧೭ ಮಂದಿಗೆ ಗಾಯವಾಗಿರುತ್ತದೆ

ಬಾಡಿಗೆದಾರರುಗಳ ಜಗಳ ಸಾವಿನಲ್ಲಿ ಪರ್ಯವಸಾನ

ಕುಂಭಕೋಣದ ಸಬ್ ಕಲೆಕ್ಟರ್ ಆಫೀಸಿನ ನಿವೃತ್ತ ಗುಮಾಸ್ತನೊಬ್ಬನಿಗೂ, ಆತನು ವಾಸಿಸುತ್ತಿರುವ ಬಾಡಿಗೆ ಮನೆಯಲ್ಲಿ ಇರುವ ಇನ್ನೊಬ್ಬ ಬಾಡಿಗೆ ದಾರನಿಗೂ ಇಬ್ಬರಿಗೂ ಸೇರಿದ ಭಾಗಗಳ ಉಪಯೋಗದ ಸಂಬಂಧವಾಗಿ ಘರ್ಷಣೆಯಾಗಿ ಕೊನೆಗೆ ನಿವೃತ್ತ ಗುಮಾಸ್ತನನ್ನು ಮತ್ತೊಬ್ಬನು ಚಾಕುವಿನಿಂದ ಇರಿದುದರ ಪರಿಣಾಮವಾಗಿ ಗುಮಾಸ್ತನು ಸತ್ತನು ಮತ್ತೊಬ್ಬನ ದಸ್ತಗಿರಿಯಾಗಿದೆ

ಗಿಲ್ಗಿತ್ ಕಣಿವೆಯಲ್ಲಿ ಪಾಕ್ ಸೈನ್ಯ ಇರಕೂಡದು

ಕಾಶ್ಮೀರದ ಉತ್ತರದ ಗಡಿಯಲ್ಲಿರುವ ಗಿಲ್ಗಿತ್ ಪ್ರದೇಶದಲ್ಲಿ ಪಾಕಿಸ್ಥಾನ್ ಸೈನ್ಯಗಳನ್ನು ಇಡಕೂಡದೆಂದು ಭಾರತ ಸರ್ಕಾರದವರು ಕಾಶ್ಮೀರ ಪ್ರಶ್ನೆಯನ್ನು ಬಗೆಹರಿಸಲು ಇಲ್ಲಿಗೆ ಬಂದಿರುವ ವಿಶ್ವಸಂಸ್ಥೆಯ ಸಮಿತಿಗೆ ತಿಳಿಸಿದ್ದಾರೆ

ತಾಲ್ಲೂಕು ಸಮ್ಮೇಳನ

ಪಿರಿಯಾಪಟ್ಟಣ ತಾಲ್ಲೂಕು ಸಮ್ಮೇಳನವು ಮೊನ್ನೆ ದಿನ ಡಾ॥ ಸಿ. ಬಂದೀಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಮತಿ ಸರೋಜಿನಿದೇವಿಯವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು. ತಾಲ್ಲೂಕಿನ ಅಭಿವೃದ್ಧಿಗೆ ಸಂಬಂಧಿಸಿದ ಹಲವಾರು ವಿಷಯಗಳು ಚರ್ಚಿಸಲ್ಪಟ್ಟವು

ವಿವಿಧೋದ್ದೇಶ ಸಹಕಾರ ಸಂಘ

ಸ್ವಂ ಸು] ಶ್ರೀರಂಗಪಟ್ಟಣ ೨೧

ಶ್ರೀರಂಗಪಟ್ಟಣ ಮತ್ತು ಸುತ್ತಮುತ್ತಲಿನ ೭ ಕೇಂದ್ರಗಳಲ್ಲಿ ವಿವಿಧೋದ್ದೇಶ ಸಹಕಾರಸಂಘಗಳ ಪ್ರಾರಂಭೋತ್ಸವವನ್ನು ಡಾ॥ ಸಿ. ಬಂದೀಗೌಡರು ನೆರವೇರಿಸಿದರು ಈ ಸಂದರ್ಭದಲ್ಲಿ ೧೪೫ ಸೇರು ಭತ್ತ ಶೇಖರಣೆ ಮಾಡಲಾಯಿತು.

ಟೆಂಡರ್ ನೋಟಿಫಿಕೇಷನ್

—:o:—

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಆಫೀಸಿನಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಈ ಕೆಳಗೆ ನಮೂದಿಸಿರುವ ಕಟ್ಟಡಗಳನ್ನು ಕಟ್ಟಲು ಆಯಾ ಕಟ್ಟಡಗಳ ಮುಂದೆ ನಮೂದಿಸಿರುವ ಮೊಬಲಗಿನ ಅಂದಾಜುಗಳು ಮಂಜೂರಾಗಿರುತ್ತೆ

ಸದರಿ ಕಟ್ಟಡಗಳ ಕೆಲಸವನ್ನು ಕೆಳಕಂಡ ಷರತ್ತುಗಳಿಗೆ ಅನುಸಾರವಾಗಿ ಕಟ್ಟಿಸಲು ಇಷ್ಟವುಳ್ಳವರು ತಾ॥ ೩೦-೪-೪೯ನೇ ಶನಿವಾರ ಸಾಯಂಕಾಲ ೩ ಗಂಟೆಯೊಳಗಾಗಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರವರ ಆಫೀಸಿಗೆ ಸೀಲಾದ ಕವರಿನಲ್ಲಿ ಟೆಂಡರನ್ನು ತಲುಪಿಸತಕ್ಕದ್ದು.

ಪ್ಲಾನು ಮತ್ತು ಅಂದಾಜನ್ನು ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ರಜಾ ದಿನಗಳ ಹೊರತು ಉಳಿದ ದಿನಗಳಲ್ಲಿ ಪ್ರತಿ ದಿನ ೧೧ ಗಂಟೆಯಿಂದ ಸಾಯಂಕಾಲ ೫ ಗಂಟೆ ಒಳಗೆ ನೋಡಿ ಅವಶ್ಯಕವಾದ ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ಟೆಂಡರಿನ ಷರತ್ತುಗಳು

೧. ಪ್ರತಿಯೊಂದು ಕೆಲಸದ ಪರಮಾವಧಿ ಅಂದಾಜು ಆಯಾ ಕೆಲಸಕ್ಕೆ ನಮೂದಿಸಿರುವಂತೆ ಇರುತ್ತೆ

೨. ಪ್ರತಿ ಟೆಂಡರಿನೊಂದಿಗೆ ಡಿಸ್ಟ್ರಿಕ್ಟ್ ಫಂಡಿಗೆ ೬೫ ರೂಪಾಯಿಗಳನ್ನು ಜಮಾಮಾಡಿದ ಬಗ್ಗೆ ಚಲನ್ನು ಹಾಜರು ಮಾಡತಕ್ಕದ್ದು.

೩. ಟೆಂಡರು ಅಂದಾಜ ಮೊಬಲಗಿನ ಮೇಲೆ ಶೇಕಡಾವಾರು ಹೆಚ್ಚು ಕಡಿಮೆಯನ್ನು ಸೂಚಿಸಿ ಸ್ಪುಟವಾಗಿ ಬರೆದು ಟೆಂಡರನ್ನು ಕೊಡತಕ್ಕದ್ದು

೪. ಟೆಂಡರು ಮಂಜೂರಾದ ೩ ತಿಂಗಳೊಳಗಾಗಿ ಕೆಲಸವನ್ನು ಪೂರ್ತಿ ಮಾಡಿ ಜಿಲ್ಲಾ ಬೋರ್ಡ್ ಛಾರ್ಜಿಗೆ ವಹಿಸತಕ್ಕದ್ದು

೫ ಉತ್ತೀರ್ಣರಾದ ಟೆಂಡರುದಾರರು ಸರಿಯಾದ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟು ಕೆಲಸವನ್ನು ಕೈಗೊಳ್ಳತಕ್ಕದ್ದು

೬ ಟೆಂಡರನ್ನು ಅಂಗೀಕರಿಸುವ ವಿಷಯದಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಪೂರ್ಣಾಧಿಕಾರವಿರುತ್ತೆ.

೭ ಕಮ್ಮಿಯಾದ ಟೆಂಡರನ್ನು ಅಂಗೀಕರಿಸಬೇಕೆಂಬ ನಿಯಮ ಇರುವುದಿಲ್ಲ. ಯಾವ ಕಾರಣವನ್ನೂ ತಿಳಿಸದೆ ಟೆಂಡರನ್ನು ನಿರಾಕರಿಸತಕ್ಕ ಅಧಿಕಾರ ಅಧ್ಯಕ್ಷರಿಗೆ ಇರುತ್ತೆ

೮. ಉತ್ತೀರ್ಣರಾದ ಟೆಂಡರುದಾರರು ಕೆಲಸವನ್ನು ಮತ್ತಾರಿಗೂ ಕಿರುಗುತ್ತಿಗೆ ಮಾಡಬಾರದು.

೯ ಒಪ್ಪಿಕೊಂಡ ಕಾಲದಲ್ಲಿ ಕೆಲಸವನ್ನು ಪೂರ್ತಿ ಮಾಡದೇ ಇದ್ದಲ್ಲಿ ಟೆಂಡರು ಡಿಪಾಜಿಟ್ಟನ್ನು ಡಿಸ್ಟ್ರಿಕ್ಟ್ ಫಂಡಿಗೆ ದಂಡವಾಗಿ ತೆಗೆದುಕೊಳ್ಳಲಾಗುತ್ತದೆ

೧೦. ಈ ಸಂದರ್ಭದಲ್ಲಿ ಬರಬಹುದಾದ ಎಲ್ಲಾ ತಕರಾರುಗಳ ವಿಷಯದಲ್ಲಿ ಜಿಲ್ಲಾ ಬೋರ್ಡ್ ತೀರ್ಮಾನವೇ ಅಖೈರು ತೀರ್ಮಾನವಾಗಿರತಕ್ಕದ್ದು

	1. ಕೃಷ್ಣರಾಜನಗರದ ತಾಲ್ಲೂಕು			
೧.	ಹರದನಹಳ್ಳಿ	ಮಿಡಲ್ ಸ್ಕೂಲ್ ಕಟ್ಟಡ	ರೂ	೧೨,೫೦೦
೨	ಕೆಸ್ತೂರು ಕೊಪ್ಪಲು	,,	ರೂ	೧೨,೫೦೦
೩	ಮಾವತ್ತೂರು	,,	ರೂ.	೧೨,೫೦೦
೪	ಹೆಬ್ಬಾಳು	,,	ರೂ	೧೨,೫೦೦
೫	ಅಂಕನಹಳ್ಳಿ	,,	ರೂ,	೧೨,೫೦೦
	2. ತಿ| ನರಸೀಪುರದ ತಾಲ್ಲೂಕು			
೧	ತುರಗನೂರು	,,	ರೂ	೧೨,೫೦೦
	3. ಚಾಮರಾಜನಗರದ ತಾಲ್ಲೂಕು			
೧	ಹರವೆ	,,	ರೂ	೧೨,೫೦೦
	4. ನಂಜನಗೂಡು ತಾಲ್ಲೂಕು			
೧.	ದೇವನೂರು	,,	ರೂ.	೧೨,೫೦೦

ಹೆಚ್. ಎಂ. ಚೆನ್ನಬಸಪ್ಪ
ಅಧ್ಯಕ್ಷರು, ಜಿಲ್ಲಾ ಬೋರ್ಡ್ ಮೈಸೂರು,

೪೨ ಮಂದಿ ಬ್ರಿಟಿಷ್ ನಾವಿಕರ ಮರಣ

ಯಾಂಗ್ಸೆಯಲ್ಲಿದ್ದ ನಾಲ್ಕು ಬ್ರಿಟಿಷ್ ಯುದ್ಧ ಹಡಗುಗಳ ಮೇಲೆ ಕಮ್ಯೂನಿಸ್ಟರು ನಡೆಸಿದ ಫಿರಂಗಿ ಧಾಳಿಯ ಪರಿಣಾಮವಾಗಿ ೪೨ ಜನ ನಾವಿಕರು ಸತ್ತರೆಂದೂ ೬೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ

ನರೋನ್ಹರವರು ೧೫,೬೦೦ ರೂ. ಕೊಟ್ಟರು

ಶ್ರೀ ಬಿ ಎಸ್. ಗೋಪಾಲ ರಾಯರು ತಮಗೆ ಬಡ್ಡಿ ರೂಪದಲ್ಲಿ ಬಂದ ೧೫,೬೦೦ ರೂ ಅನ್ನು ದಂಡಿನ ಶಿವರ್ ... ರ್ ಎಸ್. ನರೋನ್ಹರವರು ... ಸಮಿತಿಗೆ ಕೊಟ್ಟರು.

ರಾಜಕಮಲ್
ಮೈಸೂರು
—:o:—
೨೨—4—49ರಿಂದ
ಅನೋಘ ಪ್ರಾರಂಭ
ಒಂದು ವಾರ ಮಾತ್ರ
ಪ್ರತಿ ದಿನ ಮೂರು ಆಟಗಳು
ಕಾಂತಾರಾಂರವರ
ಶಾಕುಂತಲ
ವರ್ಣರಂಜಿತ ಹಿಂದಿ ಚಿತ್ರ
ಭೂಮಿಕೆ:-ಜಯಶ್ರೀ, ಚಂದ್ರಮೋ...

MORNING SHOWS
From 22-4-49 For 4 days
Tarzan's Desert Mystery
With:-Johnny Weismuller
Nancy Kelley

PRABHA
PICTURE HOUSE
Morning Shows for 3 days
From Friday the 22nd
R.K O's
BAD MAN TERRITORY

Edited, printed and published by A.R N... rajan at the Sadhvi P... D Subbiah Road, Mys...

* ಪ್ರಭುದೇವಾ ಟಾಕೀಸಿನಲ್ಲಿ *
೨೦-೪-೪೯ನೇ ಬುಧವಾರದಿಂದ ದಿನವಹಿ ೩ ಆಟಗಳು
ಮುರಳಿ ಪಿಕ್ಚರ್ಸ್ ರವರ * ಭಕ್ತ ಶಿರಿಯಾಳ *(ತೆಲುಗು ಭಾಷೆ)
ಮುಖ್ಯಪಾತ್ರ - ಸಿ. ಎಸ್. ಆರ್., ಗಗ್ಗಯ್ಯ, ಋಷ್ಯೇಂದ್ರಮಣಿ

ಫೋ೯ ನಂ. 792 WEEKLY EDITION ಇಂದಿನ ಪತ್ರಿಕೆ ೬ ಪಾಸ್

ಸಾಧ್ವಿ

ಸಂಪುಟ ೧೩] ಭಾನುವಾರ ೨೨-೪-೧೯೪೯ [ಸಂಚಿಕೆ ೩೩

ಭಾರತ ಕಾಮನ್‌ವೆಲ್ತಿನಲ್ಲಿರಲು ಷರತ್ತು

ಬ್ರಿಟಿಷ್ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ಮೊನ್ನೆ ಲಂಡನ್ನಿನಲ್ಲಿ ಪ್ರಾರಂಭಿಸಿತು ಪ್ರಾರಂಭ ಭಾಷಣ ಮಾಡುತ್ತಾ, ಬ್ರಿ॥ ಮುಖ್ಯ ಮಂತ್ರಿಗಳು ಭಾರತವು ಕಾಮನ್‌ವೆಲ್ತಿನಲ್ಲಿರಲು ಸಾಧ್ಯವಾಗುವಂತಹ ವಿವರಗಳನ್ನು ಯೋಚಿಸಬೇಕೆಂದು ಪಂಡಿತ ನೆಹರೂರವರನ್ನು ಪ್ರಾರ್ಥಿಸಿದರು ಪಂಡಿತ ನೆಹರೂರವರು ದೀರ್ಘ ಭಾಷಣ ಮಾಡಿ, ಭಾರತದ ರಿಪಬ್ಲಿಕ್ ಸ್ಥಾನಮಾನಕ್ಕೆ ಕುಂದೊದಗದ ರೀತಿಯಲ್ಲಿ ಕಾಮನ್‌ವೆಲ್ತಿನೊಡನೆ ಸಹಕರಿಸುವುದಾಗಿ ಹೇಳಿದುದಾಗಿ ಗೊತ್ತಾಗಿದೆ ಸಮ್ಮೇಳನವು ಗುಪ್ತವಾಗಿ ನಡೆಯುತ್ತಿದೆ

ಭಾರತವು ಸಮ್ಮೇಳನಕ್ಕೆ ಹಾಕಿರುವುದೆಂದು ಹೇಳಲಾದ ಷರತ್ತುಗಳ ಪ್ರಕಾರ, ಬ್ರಿಟಿಷ್ ಕಾಮನ್‌ವೆಲ್ತ್ ಎಂಬ ಪದದ ವಿನ್ಯಾಸದಲ್ಲಿ ಬ್ರಿಟಿಷ್ ಎಂಬುದನ್ನು ತೆಗೆದು ಹಾಕಿ ರಿಪಬ್ಲಿಕ್ ರಾಜ್ಯಗಳು ಕಾಮನ್‌ವೆಲ್ತಿನೊಡನೆ ಸಹಕರಿಸಲು ಶಕ್ಯ ಅಂಗರಚನೆಯಾಗಬೇಕೆಂದು ತಿಳಿಸಲಾಗಿದೆ [illegible] ಡೊಮಿನಿಯನ್ ಎಂಬ ಹೆಸರನ್ನು ತೆಗೆದು ಹಾಕಬೇಕು ಬ್ರಿಟಿಷ್ ದೊರೆಗಳ ಪೌರತನವನ್ನೊಪ್ಪದ ರಾಜ್ಯದಲ್ಲಿ ಬ್ರಿಟಿಷ್ ಪ್ರಜರು ಅಂತಹ ರಾಜ್ಯದ ಪ್ರಜೆಯೆಂದು ಗಣನೆಯಾಗಲು ಅವಕಾಶವಿರಬೇಕು ಎಂದು ಕೇಳಿದುದಾಗಿಯೂ ವರದಿಯಾಗಿದೆ

ಲಂಡನ್ನಿನಲ್ಲಿ ನೆಹರೂ ಕಾರ್ಯಕ್ರಮ

ಪ್ರಧಾನಿ ನೆಹರೂರವರಿಗೆ ಲಂಡನ್ನಿನಲ್ಲಿ [illegible] ಬಿಡುವಿಲ್ಲದಷ್ಟು ಕೆಲಸವಿದೆ ಲಂಡನ್ನಿನಲ್ಲಿ ಶೀತ ವಾತಾವರಣವಿರುವುದರಿಂದ ಅವರ ದೇಹಕ್ಕೆ ತೊಂದರೆ ಯಾಗದ ರೀತಿಯಲ್ಲಿ ಅವರ ಬಿಡಾರದಲ್ಲಿ ತಕ್ಕ [illegible] ವ್ಯವಸ್ಥೆ ಮಾಡಲಾಗಿದೆ ಅನೇಕ ಪತ್ರಿಕಾ ಪ್ರತಿನಿಧಿಗಳು ಅವರನ್ನು [illegible] ಕಾತರಿಸುತ್ತಿದ್ದಾರೆ.

ನೆಹರೂರವರು ಮೌಂಟ್ ಬ್ಯಾಟನ್ ದಂಪತಿಗಳೊಡನೆ ಅವರ [illegible] ವಾದ ಬ್ರಾಡ್‌ಲ್ಯಾಂಡ್ಸಿನಲ್ಲಿ [illegible] ದವರೆಗೆ ಇರುವರು ಅವರ ಲಂಡನ್ [illegible] ದಲ್ಲಿ ಟೆಲಿಫೋನ್ ಏರ್ಪಾಡಾಗಿದೆ

ಮದ್ರಾಸಿಗೆ ಮತ್ತೊಬ್ಬ ಮಂತ್ರಿ

ಮದ್ರಾಸ್ ಮಂತ್ರಿ ಮಂಡಲಕ್ಕೆ [illegible] ಶಾಸಕರಾದ ಶ್ರೀ ಪೆರುಮಾಳ್ [illegible] ರೆಡ್ಡಿಯಾರರನ್ನು ತಗೆದುಕೊಳ್ಳ [illegible] ಇದಲ್ಲದೆ ಇನ್ನು ಮುಂದೆ ಇದಲ್ಲದೆ [illegible] ಮೂವರನ್ನೂ ಸಹ ತೆಗೆದು ಕೊಳ್ಳಲಾಗುವುದು

ಪಾಕಿಸ್ಥಾನಿಯೊಬ್ಬನಿಗೆ ಶಿಕ್ಷೆ

[illegible] ಗಳೂರಿನಲ್ಲಿ ರಹದಾರಿ ಅವಧಿಗಿಂತ [illegible] ಹೆಚ್ಚು ದಿನ ವಾಸಮಾಡಿದ [illegible] ಯುದ್ ಹುಸೇನಿ ಬೇಗ್ ಎಂಬಾತ [illegible] ನಗರ ನ್ಯಾಯಾಧೀಶರು ಒಂದಿಗಳ [illegible] ಸಜ ವಿಧಿಸಿದರು.

ಅರಮನೆ ಸಂಶೋಧನಾ ಕೇಂದ್ರ

ಮೈಸೂರಿನ ಕಡೆಯ [illegible] ವರ್ಷಗಳ ಹಿಂದೆ ಕಟ್ಟಿಸಿದ ಚಿತ್ರ [illegible] ಎಂಬ ಅರಮನೆಯನ್ನು ವೈದ್ಯ [illegible] ಧನಾ ಕೇಂದ್ರವನ್ನಾಗಿ ಮಾಡ [illegible]

ಬ್ರಾಹ್ಮಣ ಸಮ್ಮೇಳನ

ಹಾಸನ ೨೩

ಅಖಿಲ ಮೈಸೂರು ಬ್ರಾಹ್ಮಣ ಸಮ್ಮೇಳನವು ನೆನ್ನೆ ಮುಕ್ತಾಯವಾಯಿತು ಬ್ರಾಹ್ಮಣರ ಕ್ಷೋಭೆಯವರಿಗೆ ಅನ್ವಯಿಸುವಂತಹ 'ಬ್ರಾಹ್ಮಣ' ಎಂಬ ಪತ್ರಿಕೆಯನ್ನು ಹೊರಡಿಸಬೇಕೆಂದು ತೀರ್ಮಾನವಾಯಿತು ಅದಕ್ಕಾಗಿ ೫ ಸಾವಿರ ರೂ ಗಳ ನಿಧಿ ಕೇಳಿರಲು ಮತ್ತು ದಾನ ಮಾಡಲಾಯಿತು ಬ್ರಾಹ್ಮಣ ವಿದ್ಯಾರ್ಥಿಗಳ ವ್ಯಾಸಂಗ ಮಾಡಲು ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಲು ತೀರ್ಮಾನವಾಯಿತು ಅದಕ್ಕಾಗಿ ೫೦ ಸಹಸ್ರ ರೂ ಗಳ ನಿಧಿ ಕೇಳುವಿಕೆಗೆ ಏರ್ಪಾಡು ಮಾಡಲಾಗುವುದು

ಬ್ಲೇಡು ತಯಾರಿಕೆಯಿಂದ ಕೋಟಿ ರೂ. ಉಳಿತಾಯ

ದೇಶದಲ್ಲಿ ಬೇಕಾಗುವ ಸೇಫ್ಟಿ ರೇಜರ್ ಬ್ಲೇಡುಗಳನ್ನು ತಯಾರಿಸಿಕೊಂಡರೆ ಭಾರತದ ವರ್ಷಕ್ಕೆ ೧ ಕೋಟಿ ರೂ ಮಿಗುವುದೆಂದು ಭಾರತದ ಕೈಗಾರಿಕಾ ಮಂತ್ರಿ ಡಾ॥ ಮುಖರ್ಜಿಯವರು ತಿಳಿಸಿದ್ದಾರೆ

ತಿರುವಣ್ಣಾಮಲೆಗೆ ರಾಜಾಜಿ ಭೇಟಿ

ಭಾರತದ ಗೌ॥ ಜ॥ ರಾಜಾಜಿಯವರು ತಿರುವಣ್ಣಾಮಲೆಗೆ ಮುಂದಿನ ೧೨ ನೇ ತಾರೀಖು ಭೇಟಿಯಿತ್ತು, ರಮಣ ಮಹರ್ಷಿಗಳು ಹಿಂದೆ ತಪಸ್ಸು ಮಾಡುತ್ತಿದ್ದ ಗುಹೆಯಲ್ಲಿ ಲಿಂಗಪ್ರತಿಷ್ಠೆ ಮಾಡಲಿರುವರು

ಮೇ ೨ ನೇ ತಾ॥ ಗಾಂಧೀ ಕೊಲೆ ಮೊಕದ್ದಮೆ

ಪೂರ್ವ ಪಂಜಾಬ್ ಹೈಕೋರ್ಟಿನಲ್ಲಿ ಮುಂದಿನ ತಿಂಗಳು ೨ ನೇ ತಾ॥ ಮಹಾತ್ಮರ ಕೊಲೆ ಮೊಕದ್ದಮೆಯ ಅಪೀಲು ಪ್ರಾರಂಭವಾಗುವುದು

ಸಹಕಾರ ಸಮ್ಮೇಳನ

ಮುಂದಿನ ತಿಂಗಳು ೧೨ ಮತ್ತು ೧೩ ನೇ ತಾ॥ ಗಳಲ್ಲಿ ಅಖಿಲ ಭಾರತ ಸಹಕಾರ ಸಮ್ಮೇಳನದ ೮ ನೇ ಅಧಿವೇಶನವು ಬೆಂಗಳೂರಿನಲ್ಲಿ ಪ್ರೊ॥ ವೆಹ್ ಎಲ್ ದಾಂತವಾಲಾ ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಸಮಗ್ರ ಗ್ರಾಮ ಸಹಕಾರ ಸಂಘ

ಮೈಸೂರು ತಾಲ್ಲೂಕು [illegible] ಯಲ್ಲಿ ಸಮಗ್ರ ಗ್ರಾಮ ಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಮೊಸ್ಟ್‌ಟಿ ಇನ್ಸ್‌ಪೆಕ್ಟರಾದ [illegible] ಮೊನ್ನೆ ದಿನ ನೆರವೇರಿಸಿದರು [illegible] ನಾರಾಯಣಸ್ವಾಮಿ [illegible] ಸರಸಿಂಹಯ್ಯನವರು [illegible] ದ ಉದ್ದೇಶವನ್ನು ವಿವರಿಸಿದರು [illegible] ಜನರು ಸದಸ್ಯರಾದರು.

ರಾಜೇಂದ್ರ ಪ್ರಸಾದರ ಭಾಷಣ

ಮೈಸೂರು ೨೪

ನಾಳೆ ನಗರ ರಾಜಧಾನಿಗೆ ಆಗಮಿಸುವ ಬಾಬು ರಾಜೇಂದ್ರ ಪ್ರಸಾದರ ಭಾಷಣವನ್ನು ಸಂಜೆ ೫-೩೦ ಕ್ಕೆ ಟೌನ್‌ಹಾಲಿನ ದಕ್ಷಿಣ ಭಾಗದಲ್ಲಿ ಏರ್ಪಡಿಸಲಾಗಿದೆ ಉತ್ತರ ಭಾಗದಲ್ಲಿ ಬಿಸಿಲಿನ ತಾಪವಿರುವುದರಿಂದ ಈ ರೀತಿ ಮಾರ್ಪಾಡಾಗಿದೆ

ಹನುಮಂತೋತ್ಸವ

[illegible] ಅಗ್ರಹಾರದಲ್ಲಿರುವ ಶ್ರೀರಾಮಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೮ ಗಂಟೆಗೆ ಹನುಮಂತೋತ್ಸವವು ನಡೆಯುವುದು ವಿದ್ವಾನ್ ಶ್ರೀನಿವಾಸ ಮೂರ್ತಿಗಳ ಗಾಯನ ಏರ್ಪಾಡಾಗಿದೆ

ಹರಿಕಥೆ

[illegible] ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಈ ರಾತ್ರಿ ೮ ಗಂಟೆಗೆ [illegible] ಪ್ರಯುಕ್ತ ವಿದ್ವಾನ್ ಎಸ್ ಕೃಷ್ಣಯ್ಯಂಗಾರ್ಯರಿಂದ 'ಸಹಸ್ರ ಕಂಠ ರಾವಣ' ಎಂಬ ಹರಿಕಥೆ ನಡೆಯುವುದು

ಜಾಡಮಾಲಿಗಳ ಮುಷ್ಕರವಿಲ್ಲ

[illegible] ಜಾಡಮಾಲಿಗಳು [illegible] ೨೦ ದಿನಗಳೊಳಗಾಗಿ [illegible] ಮುಷ್ಕರ ಹೂಡುವುದಾಗಿ [illegible] ನೋಟೀಸ್ ಕೊಟ್ಟಿದ್ದರು [illegible] ಪತ್ರಿಕೆಯೊಂದು ಪ್ರಕಟಿಸಿರುವ [illegible] ನಿಜವಾದುದಲ್ಲವೆಂದೂ, [illegible] ಕೆಲಸಗಾರರ [illegible] ಮುಷ್ಕರದ ಬೆದರಿಕೆ ಹಾಕಿಲ್ಲವೆಂದೂ ಸಭಾಧ್ಯಕ್ಷರು ಒಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ

ಚೀನಾ ರಾಜಧಾನಿಗೆ ಕಮ್ಯೂನಿಸ್ಟರ ಪ್ರವೇಶ

ಚೀನಾದ ರಾಜಧಾನಿ ನಾಂಕಿಂಗ್ ನಗರವನ್ನು ಕಮ್ಯೂನಿಸ್ಟ್ ಸೈನ್ಯಗಳು ಪ್ರವೇಶಿಸಿದೆ ಯಾಂಗ್ಟ್ಸಿ ನದಿಯ ಉತ್ತರದಲ್ಲಿ ಚೀನಾ ಸರಕಾರಿ ಸೈನ್ಯಗಳು ಶಕ್ತಿಯುತ ರಕ್ಷಣಾ [illegible] ಕಾಯಿಸುತ್ತದೆಂದು ಹೇಳಲಾಗಿದ್ದ [illegible] ಶಾಂಘಾಯ್ ಎಂಬಲ್ಲಿಗೆ [illegible] ಅಧ್ಯಕ್ಷ [illegible] ಇತರ ಸರಕಾರಿ ಅಧಿಕಾರಿಗಳೊಡನೆ [illegible] ದರು.

ಅಮೆರಿಕದ ಪಾರ್ಲಿಮೆಂಟ್ ಯುದ್ಧ

[illegible] ದೊಡನೆ ಯುದ್ಧವು ಬರುತ್ತದೆಂದು [illegible] [illegible]

ಕೇಂದ್ರ ರೈಲ್ವೆ ಸಚಿವರ ಆಗಮನ

ಮೈಸೂರು ೨೪

ಭಾರತ ಸರಕಾರದ ರೈಲ್ವೆ ಮಂತ್ರಿಗಳಾದ ಶ್ರೀ ಕೆ. ಸಂತಾನಂರವರು ರಾಜಧಾನಿಗೆ ಆಗಮಿಸಿ ಸರಕಾರದ ಅತಿಥಿಗಳಾಗಿದ್ದರು ಅವರ ಗೌರವಾರ್ಥ [illegible] ಈ ದಿನ ಮಧ್ಯಾಹ್ನ [illegible] ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಇದಾದನಂತರ ಸಚಿವರು ನಮ್ಮ ರೈಲ್ವೆ ಮಂತ್ರಿಗಳಾದ ಶ್ರೀ ಟಿ ಮರಿಯಪ್ಪನವರೊಡನೆ ಬೆಂಗಳೂರಿಗೆ ತೆರಳಿದರು.

ಶ್ರೀ ಸಂತಾನಂರವರು [illegible] ಚಾಮುಂಡಿ ಬೆಟ್ಟ, ರೈಲ್ವೆ ವರ್ಕ್‌ಷಾಪ್, ರೈಲ್ವೆ ವಸತಿ, ರೈಲ್ವೆ ಸ್ಟೇಷನ್ನುಗಳಿಗೆ ಭೇಟಿ ಇತ್ತಿದ್ದರು ರೈಲ್ವೆ ಅಧಿಕಾರಿಗಳೊಡನೆ ಕಲೆತು ಮಾತುಕತೆ ನಡೆಸಿದರು ತರುವಾಯ ರೈಲ್ವೆ ಇನ್ಸ್‌ಟಿಟ್ಯೂಟಿನಲ್ಲಿ ಕೆಲಸಗಾರರು ಒಂದು ಮನವಿಯನ್ನು ಸಲ್ಲಿಸಿದರು. ಮೈಸೂರು ರೈಲ್ವೆಯು ಮೊದಲನೇ ತರಗತಿಗೆ ಸೇರಿದ್ದರೂ ಇತರ ರೈಲ್ವೆಗಳಲ್ಲಿ ಕೆಲಸಗಾರರಿಗೆ ದೊರೆಯುವ ಸೌಲಭ್ಯಗಳು ಇಲ್ಲಿ ದೊರೆಯುತ್ತಿಲ್ಲವೆಂದೂ ಅವುಗಳು ತಮಗೂ ದೊರೆಯುವಂತೆ ಮಾಡಬೇಕೆಂದೂ ಮನವಿಯಲ್ಲಿ ಕೇಳಿಕೊಳ್ಳಲಾಗಿತ್ತು. ಮೈಸೂರು ರೈಲ್ವೆಯನ್ನು ಭಾರತ ಸರ್ಕಾರದ ವಶಕ್ಕೆ ತೆಗೆದುಕೊಂಡರೂ ಈಗಿನಂತೆಯೇ ತಾವು ನಿಶ್ಚಯದಿಂದ ಕೆಲಸ ಮಾಡುವುದಾಗಿಯೂ ತಿಳಿಸಲಾಗಿತ್ತು.

ಶ್ರೀ ಸಂತಾನಂರವರು ತಮ್ಮ ಉತ್ತರದಲ್ಲಿ ಉತ್ತರವಿತ್ತು ಭಾರತ ಸರ್ಕಾರದವರು ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದೂ, ಆತುರದಿಂದ ಯಾವ ಕೆಲಸವನ್ನೂ ಮಾಡುವುದಿಲ್ಲವೆಂದೂ, ಮೈಸೂರಿನ ಕೆಲಸಗಾರರ ಅಪೇಕ್ಷೆಯನ್ನು ಅರಿತು, ಅನಂತರವೇ ತೀರ್ಮಾನಕ್ಕೆ ಬರಲಾಗುವುದೆಂದೂ ಹೇಳಿದರು. ಕೆಲಸಗಾರರ ಕಷ್ಟಸುಖಗಳನ್ನು ತಿಳಿದುಕೊಂಡು ಅವರಿಗೆ ನ್ಯಾಯವು ದೊರೆಯುವಂತೆ ಮಾಡಲಾಗುವುದು., ರೈಲ್ವೆ ಆಡಳಿತದಲ್ಲಿ ತಾವೂ ಪ್ರಮುಖ ಭಾಗವೆಂದು ಕೆಲಸಗಾರರು ಮನಗಾಣಬೇಕು, ಈಗಿರುವುದಕ್ಕಿಂತಲೂ ಹೆಚ್ಚು ಕೆಲಸವು ಆಗುವಂತೆ ಪ್ರಯತ್ನಿಸಬೇಕು – ಎಂದು ಸೂಚಿಸಿದರು.

ಗಣಿತ ಶಾಸ್ತ್ರ ನಿಪುಣೆ

ಶಾಕುಂತಲ ಎಂಬ ೧೬ ವರ್ಷದ ತರುಣಿಯು ಮದರಾಸಿನಲ್ಲಿ ತನ್ನ ಅದ್ಭುತವಾದ ಗಣಿತ ಶಾಸ್ತ್ರ ಪ್ರೌಢಿಮೆಯಿಂದ ಜನರನ್ನು ಮುಗ್ಧಗೊಳಿಸುತ್ತಿದ್ದಾಳೆ. ಈ ಕೆಯು ಬೆಂಗಳೂರಿನಲ್ಲಿ ಹುಟ್ಟಿದವಳು ಐದನೆಯ ವಯಸ್ಸಿನಲ್ಲಿಯೇ ತನ್ನ ಪ್ರಭಾವವನ್ನು ತೋರಿ [illegible] ಗಣಿತದ [illegible] ಯನ್ನು ಆಕೆಯು ಬಿಡಿಸಿದಳು. ಈಗ [illegible] ಶಕ್ತಿಗಳ ಸಹಾಯವಿಲ್ಲದೆಯೇ ಕಠಿಣವಾದ ಪ್ರಶ್ನೆಗಳನ್ನು ಬಿಡಿಸುವಳು ಕೂಡುವುದು, ಕಳೆಯುವುದು, ಗುಣಾಕಾರ, ಭಾಗಾಕಾರ, [illegible] ಮುಂತಾದುವನ್ನು [illegible] ಬಾಯಲ್ಲೇ ಹೇಳುವಳು

ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ

[illegible] ೨೪

[illegible] ಶ್ರೀಕಂಠೇಶ್ವರ ಸ್ವಾಮಿಯವರ [illegible] ಗಂಟೆಗೆ [illegible] ಜಾಮೂ [illegible]

ವಾರ ಭವಿಷ್ಯ

ಶ್ರೀ

೨೪ ರಿಂದ ೩೦ರ ವರೆಗೆ

ಮೇಷ —ಅನೇಕ ವಿಚಿತ್ರ ಘಟನೆಗಳ ಸಂಭವ ವ್ಯಾಪಾರಾದಿಗಳಲ್ಲಿ ಪತ್ರ್ಯೂಹಿಡೆ ಪ್ರವಾಸದಲ್ಲಿ ದಕ್ಕೆ ಮಹತ್ವದ ಕಾಗದ ಪತ್ರಗಳ ಕಳವು ಕುಟುಂಬದಲ್ಲಿ ಕಲಹ ತಾ॥ ೨೫ ೨೬ ಪಶ್ಚಿಮ ಅನಿರೀಕ್ಷಿತ ಅನಾರೋಗ್ಯ ಅಗ್ನಿ ಭಯ

ವೃಷಭ ಈ ವಾರ ಅಭಯ ಪದ್ದಲ್ಲಿ ಆದರೂ ಗೋದಲಿಕಾರಿ ಕೆಳಗಿನವರ ತಪ್ಪು ಸಂಭವಿಸುವ ರೀತಿಗೆ ಕೆಲಸ ಮೇಲ್ಪಟ್ಟವರ ಸಿಡುಕು ವ್ಯಾಪಾರಾದಿ ವ್ಯವಹಾರಗಳ ದೂಷ ಕರಾರು ಸಂಬಂಧದಲ್ಲಿ ದೂರ ಇರುವುದು ಉತ್ತಮ ತಾ॥ ೨೬, ೨೭ ವಾಹನಾಘಾತ

ಮಿಥುನ —ಹೊಸ ಕಾರ್ಯ ಕೈಗೊಳ್ಳಬಹುದು, ಸ್ಪರ್ಧೆ ಸುವ್ವವು ಪರೋಪಕಾರಿ ಕಾರ್ಯ ಆರೋಗ್ಯ ನೆಟ್ಟಗೆ ಉದ್ಯೋಗಾದಿಗಳಲ್ಲಿ ಲಾಭ ತಾ॥ ೨೭, ೨೮ ನೌಕರರ ವರ್ಗಗಳಿಗೆ ಅನಪೇಕ್ಷಿತ ಲಾಭ ಕೋರ್ಟು ವ್ಯವಹಾರದಲ್ಲಿ ಜಯ

ಕರ್ಕ ಮನೋಭಾವ ಹಿಡಿ ಆರೋಗ್ಯ ಸ್ಥಿತಿ ಉತ್ತಮ ವ್ಯಾಪಾರಗಳಲ್ಲಿ ಲಾಭ ಸುಖಪ್ರವಾಸ ತಾ॥ ೨೫, ೨೬ ಗುರುವಾರ

ಸಿಂಹ ಪೈಪೋಟಿಗಳೇ ಸ್ನೇಹ ಬೇಡುವ ಕಾಲವಿದ ವ್ಯಾಪಾರಾದಿಗಳಲ್ಲಿ ಲಾಭ ಆರೋಗ್ಯ ಮಾನಸಿಕ ಸ್ಥಿತಿ ಉತ್ತಮ ಪ್ರವಾಸದಲ್ಲಿ ಜಯ ತಾ॥ ೨೫ ೨೬ ಅತಿಥಿ ಅಭ್ಯಾಗತರ ಆಗಮನ

ಕನ್ಯಾ —ಆರೋಗ್ಯ ನೆಟ್ಟಗಿರದು ವ್ಯಾಪಾರಾದಿಗಳಲ್ಲಿ ವಿಸ್ಮಯಕರ ಘಟನೆ ಹಣಕಾಸಿನ ಸ್ಥಿತಿ ಉತ್ತಮವಲ್ಲ ವಿಶ್ವಾಸಘಾತಕತನ ಕಳ್ಳರ ಕಾಟ ತಾ॥ ೨೭, ೨೮ ಅಗ್ನಿಭಯ ಜಯ ದಿನದಾಶಿ

ತುಲಾ ಮನಸ್ಸಿಗೆ ಸ್ವಾಸ್ಥ್ಯ ಇತರಸ್ಥಿತಿ ಇದ್ದುದರಲ್ಲಿ ಉತ್ತಮ ತಾ॥ ೨೫ ೨೬ ಮುಂದುವರಿಯದ ದುಃಖವಾರ್ತೆ ಆಹ್ವಾನ

ವೃಶ್ಚಿಕ ಶರೀರ ಮಾನಸಿಕ ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ಪ್ರಗತಿ ಸುಖಪ್ರವಾಸ ತಾ॥ ೨೫, ೨೮ ಶತ್ರುನಾಶ ಶುಭವಾರ್ತೆ

ಧನು ಎಲ್ಲ ಚಿಂತೆಗಳೂ ದೂರವಾಗುವವು ಆರೋಗ್ಯ ಉತ್ತಮ ಹಣಕಾಸಿನ ಸ್ಥಿತಿ ಸಮರ್ಪಕ ನೌಕರಿ ಇತ್ಯಾದಿಗಳಲ್ಲಿ ಜಯ ತಾ॥ ೨೯, ೩೦ ಕಿರುಕುಳ ಪ್ರವಾಸ

ಮಕರ ಸಮೋಪದ ಇಂಗಿತ ಸಕರಾರದಿಂದ ಅನುಕೂಲ ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ತಕ್ಷಿಸಿ ಪ್ರವಾಸ ತಾ॥ ೨೮, ೨೯ ಕಲಹ ಅಪ್ರಿಯವಾರ್ತೆ ಪ್ರಾಣಭಯ

ಕುಂಭ ಆರೋಗ್ಯ ಮಾನಸಿಕ ಸ್ಥಿತಿ ನೆಟ್ಟಗೆ ಕೋರ್ಟು ವ್ಯವಹಾರಗಳಲ್ಲಿ ಮೇಲ್ಪಟ್ಟವರ ತಪ್ಪು ತಾ॥ ೨೫, ೨೬ ಮುದತ್ತ ವ ಪತ್ರ ಆಗಮನ ಆರ್ಥಿಕ ಲಾಭ

ಮೀನ ನಿಮ್ಮ ಎಲ್ಲ ಸ್ಥಿತಿಗಳ ಸುಧಾರಣೆ ಆರೋಗ್ಯ, ವ್ಯಾಪಾರ ನೌಕರಿ ಸ್ಥಿತಿ ... ತಾ॥ ... ೩೦ ಪ್ರವಾಸ ...

ಮೈಸೂರು ಕರ್ನಾಟಕ ಪ್ರಾಂತ್ಯಕ್ಕೆ ಸೇರಬೇಕು

ಏಕೀಕರಣ ಸಮಿತಿಯ ಸಭೆಯಲ್ಲಿ ನಿರ್ಣಯ

ಶ್ರೀ ಎಸ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಮಹಾಸಮಿತಿಯ ವಿಶೇಷ ಸಭೆಯು ಕಳೆದ ೨ನೇ ತಾ॥ ಹುಬ್ಬಳ್ಳಿಯಲ್ಲಿ ಸೇರಿ, ಯೂನಿಯನ್ ಕರ್ನಾಟಕದ ಭಾಗಗಳನ್ನು ಸೇರಿಸಿ ಕರ್ನಾಟಕ ಪ್ರಾಂತ್ಯವನ್ನು ರಚಿಸಲು ಸರ್ಕಾರದವರು ಪೂರ್ವಭಾವಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಿರ್ಣಯ ಮಾಡಲಾಯಿತು ಅದು ತಡವಾದರೆ ಕನ್ನಡಿಗರಲ್ಲಿ ನಿರಾಶೆಯುಂಟಾಗುವುದೆಂದೂ, ಅದಕ್ಕೆ ನಾಯಕರು ಅವಕಾಶ ಕೊಡಬಾರದೆಂದೂ ಮೈಸೂರನ್ನು ಕರ್ನಾಟಕಕ್ಕೆ ಸೇರಿಸಲು ಶ್ರೀಮನ್ಮಹಾರಾಜರವರೂ ಮತ್ತು ಸಂಸ್ಥಾನದ ಕಾಂಗ್ರೆಸ್ಸೂ ಒಪ್ಪಬೇಕೆಂದೂ ಪ್ರಾರ್ಥಿಸುವ ನಿರ್ಣಯಗಳನ್ನು ಮಾಡಲಾಯಿತು

ಆಹಾರ ಹೆಚ್ಚಿಸಲು ತ್ರೈವಾರ್ಷಿಕ ಯೋಜನೆ

ಗೃಹ ಸಚಿವರಾದ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಬೆಂಗಳೂರಿನಲ್ಲಿ ಕೇಂದ್ರ ಕೋ ಆರ್ಡಿನೇಷನ್ ಸಮಿತಿಯ ಸಭೆಯು ನಡೆದು, ಸಂಸ್ಥಾನದಲ್ಲಿ ಆಹಾರ ಉತ್ಪತ್ತಿ ಹೆಚ್ಚಿಸಲು ತಯಾರಾಗಿರುವ ತ್ರೈವಾರ್ಷಿಕ ಯೋಜನೆಯನ್ನು ಪರಿಶೀಲಿಸಲಾಯಿತು. ರೈತರು ಎತ್ತುಗಳನ್ನು ಕೊಳ್ಳಲು ಕಡಿಮೆ ಬಡ್ಡಿಯ ಸಾಲವನ್ನು ಸರ್ಕಾರದವರು ಕೊಡುವುದು, ಹೆಚ್ಚು ಪ್ರಮಾಣದಲ್ಲಿ ಸೀಮೆ ಗೊಬ್ಬರದ ಸರಬರಾಜು, ವಿದ್ಯುಚ್ಛಕ್ತಿಯ ಲಿಫ್ಟ್ ಇರಿಗೇಷನ್ ಸೌಲಭ್ಯಗಳು ಇವೇ ಮುಂತಾದ ವಿಷಯಗಳು ಚರ್ಚಿಸಲ್ಪಟ್ಟವೆಂದು ತಿಳಿದು ಬಂದಿದೆ ಲಿಫ್ಟ್ ಇರಿಗೇಷನ್ ಬಗ್ಗೆ ಇರುವ ವಿದ್ಯುಚ್ಛಕ್ತಿ ಸಲಕರಣೆಗಳ ಅಭಾವವನ್ನು ನಿವಾರಿಸಲು ಹಲವು ಊರುಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಕಲ್ಪಿಸುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದು ಹಲವರು ಸಲಹೆ ಇತ್ತರೆಂದು ಹೇಳಲಾಗಿದೆ

ಅತ್ಯಂತ ವೇಗವಾದ ಸಬ್‌ಮೆರಿನ್

ವಿಶ್ವದಲ್ಲೇ ಅತ್ಯಂತ ವೇಗವಾಗಿ ಸಂಚರಿಸಬಲ್ಲ ನೆಪ್ಚೂನ್ ಎಂಬ ಸಬ್‌ಮೆರೀನೊಂದನ್ನು ಈಗ ಬ್ರಿಟನ್ನಿನಲ್ಲಿದೆಯೆಂದು ಹೇಳಲಾಗಿದೆ

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು.
ತಾ॥ 24-4-1949ರಿಂದ 3 ದಿನಗಳು
ಸ್ಟಾರವೆಂಟ್ಸರವರ

ಬಿಯಾಂಡ್ ದಿ ಬ್ಲೂ

ಹೊರೈಸ್ಸನ್

(ವರ್ಣರಂಜಿತ ಚಿತ್ರ)

ಪಾತ್ರ —ಡೊರತಿ ಲಾಮೂರ್

ಮುಂದಿನ ಬದಲಾವಣೆ

ದಿ ಬಿಗಿನಿಂಗ್ ಆರ್ ದಿ ಎಂಡ್

ಅಣು ಬಾಂಬಿನ ಚಿತ್ರ

ಅಬ್ದುಲ್ಲಾ ದೊರೆಗಳ ಕೊಲೆ ಪ್ರಯತ್ನ

ಟ್ರಾನ್ಸ್‌ಜೋರ್ಡಾನಿನ ಅರಸರಾದ ಅಬ್ದುಲ್ಲಾರವರನ್ನು ಕೊಲೆ ಮಾಡಲು ಪ್ಯಾಲಸ್ಟೈನಿನ ೬ ಜನ ಪ್ರಮುಖ ಅರಬ್ಬರು ಯುಕ್ತಿ ಸಿದ್ಧರೆಂದೂ, ಅರಸರು ಪ್ರಯಾಣ ಮಾಡಲಿದ್ದ ಒಂದು ರಸ್ತೆಯಲ್ಲಿ ಮೈನುಗಳನ್ನು ಚೆಲ್ಲಿದ್ದರೆಂದೂ ವರದಿಯಾಗಿದೆ ಅವರುಗಳ ಮೇಲೆ ಸರ್ಕಾರದವರು ಕಾರ್ಯಕ್ರಮ ಕೈಗೊಂಡಿದ್ದಾರೆ

೧೯೫೦ ರಿಂದ ಕುದುರೆ ಜೂಜು ರದ್ದು

ಮದರಾಸಿನಲ್ಲಿ ೧೯೫೦ ನೇ ಏಪ್ರಿಲ್ ೧ ನೇ ತಾ॥ ನಿಂದ ಕುದುರೆ ಜೂಜನ್ನು ರದ್ದು ಮಾಡಲಾಗುವುದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಭಾರತ - ಪೋಲೆಂಡ್ ವಾಣಿಜ್ಯ ಒಪ್ಪಂದ

೩೦೦ ಲಕ್ಷ ರೂ ವಾಣಿಜ್ಯ ಒಪ್ಪಂದಕ್ಕೆ ಭಾರತವು ಪೋಲೆಂಡಿನೊಡನೆ ರುಜುಹಾಕಿದೆ ೧೧೦೦ ಲಕ್ಷ ರೂ ನಷ್ಟು ಸೆಣಬು, ಟೀ, ಹತ್ತಿ, ಚರ್ಮ ಮುಂತಾದ ಸಾಮಾನುಗಳನ್ನು ಪೋಲೆಂಡಿಗೆ ಭಾರತವು ಕಳುಹಿಸುವುದಂದೂ, ಅಲ್ಲಿಂದ ಸಿಮೆಂಟ್, ಕಾಗದ, ಯಂತ್ರಗಳು ಫಿಲಂ, ವಿದ್ಯುಚ್ಛಕ್ತಿ ಸಲಕರಣೆಗಳನ್ನು ತರಿಸಿಕೊಳ್ಳಲಾಗುವುದೆಂದೂ ಹೇಳಲಾಗಿದೆ

ಜಪಾನು ಅತ್ಯಂತ ಬಲವಾದ ರಾಷ್ಟ್ರವಾಗುವುದು

ಮುಂದೆ ಮೂರನೆ ಮಹಾಯುದ್ಧ ಸಂಭವಿಸಿದರೆ ಜಪಾನು ಮತ್ತು ಬ್ರಿಟನ್ನನ್ನು ಭಾರಿ ವಿಮಾನ ಕೇಂದ್ರವನ್ನಾಗಿ ಅಮೆರಿಕವು ಉಪಯೋಗಿಸುವುದೆಂದು ಆಸ್ಟ್ರೇಲಿಯದ ಸಚಿವ ಮಿ॥ ಆರ್ಥರ್ ಕಾಲ್‌ವೆಲ್‌ರವರು ತಿಳಿಸಿರುತ್ತಾರೆ ದೂರ ಪ್ರಾಚ್ಯದ ದೇಶಗಳ ಪೈಕಿ ಜಪಾನು ಮುಂದೆ ಅತ್ಯಂತ ಬಲವಾದ ರಾಷ್ಟ್ರವಾಗುವುದೆಂದು ಅವರು ಹೇಳಿರುತ್ತಾರೆ

ರಾಜಕಮಲ್

ಮೈಸೂರು

—o—

22—4—49ರಿಂದ

ಅಮೋಘ ಪ್ರಾರಂಭ

ಒಂದು ವಾರ ಮಾತ್ರ

ಪ್ರತಿ ದಿನ ಮೂರು ಆಟಗಳು

ಶಾಂತಾರಾಂರವರ

ಶಾಕುಂತಲ

ವರ್ಣರಂಜಿತ ಹಿಂದಿ ಚಿತ್ರ

ಭೂಮಿಕೆ —ಜಯಶ್ರೀ, ಚಂದ್ರಮೋಹನ್

MORNING SHOWS

From 22-4-49 For 4 days

Tarzan's Desert Mystery

With - Johnny Weismuller, Nancy Kelley

ಶಿಲಾಂಗಿನಲ್ಲಿ ಪ್ರಚಂಡ ಬಿರುಗಾಳಿ

ಕಳೆದ ಬುಧವಾರ ಶಿಲಾಂಗ್ ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಚಂಡ ಬಿರುಗಾಳಿ ಎದ್ದು ಬಹಳ ಭವನಗಳಿಗೆ ನಷ್ಟ ಉಂಟಾಯಿತೆಂದೂ, ಅನೇಕ ಮರಗಳು, ವಿದ್ಯುಚ್ಛಕ್ತಿ ತಂತಿಗಳು ಬಿದ್ದುಹೋದವೆಂದೂ, ಅದೃಷ್ಟವಶಾತ್ ಯಾರಿಗೂ ಪ್ರಾಣಾಪಾಯವಾಗಲಿಲ್ಲವೆಂದೂ ವರದಿಯಾಗಿದೆ

ಗುಜರಾತ್ ಮತ್ತು ಡೆಕ್ಕನ್ ಸಂಸ್ಥಾನಗಳ ಐಕ್ಯ

ಮುಂದಿನ ತಿಂಗಳು ೧೫ ನೇ ತಾ॥ ಗುಜರಾತ್ ಮತ್ತು ಡೆಕ್ಕನ್ ಸಂಸ್ಥಾನಗಳ ಸಂಪೂರ್ಣವಾಗಿ ಬೊಂಬಾಯಿ ಪ್ರಾಂತ್ಯದಲ್ಲಿ ಐಕ್ಯ ಮಾಡಲಾಗುವುದೆಂದು ಅಧಿಕೃತವಾಗಿ ತಿಳಿಸಲಾಗಿದೆ

ಸಮಗ್ರ ಗ್ರಾಮ ಸಹಕಾರ ಸಂಘ

ಮೈಸೂರು ತಾಲ್ಲೂಕು ಜಯಪುರದಲ್ಲಿ ಮೊನ್ನೆ ಸಬ್ ಡಿವಿಜನ್ ಅಧಿಕಾರಿಗಳಾದ ಜನಾಬ್ ಅಬುಬೇಕರ್‌ರವರು ಸಮಗ್ರ ಗ್ರಾಮಸೇವಾ ಸಹಕಾರ ಸಂಘದ ಉದ್ಘಾಟನೋತ್ಸವವನ್ನು ನೆರವೇರಿಸಿದರು ಆ ದಿನ ೬೦೦ ಷೇರುಗಳು ಅಲ್ಲಿ ಮಾರಾಟವಾದುವು

ವಿವಾಹ ಮಹೋತ್ಸವ

ರಾಜಧಾನಿಯ ವರ್ತಕರಾದ ಶ್ರೀ ಕೃಷ್ಣಸ್ವಾಮಿಯವರು ತಮ್ಮ ಪುತ್ರ ಶ್ರೀ ಸುಬ್ರಹ್ಮಣ್ಯನ್‌ರವರಿಗೆ ಮದರಾಸಿನ ಕೆ. ವೆಂಕಟೇಶ ಅಯ್ಯರ್‌ರವರ ಪುತ್ರಿ ಸೌ॥ ಶಾರದಾರವರನ್ನು ತಂದುಕೊಂಡು ಮೊನ್ನೆ ದಿನ ಮದರಾಸಿನಲ್ಲಿ ವಿವಾಹವ ನಡೆಸಿದರು

ಎಸ್. ಎನ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಹೇರ್ಯಿ ಚಾ... ನೋವು, ಕೀಲು ನೋವು ಮು... ಸಕಲ ಬಾಧೆಗಳಿಗೂ ರಾಮಬಾಣ ಸೀಸೆ 0-1

ಮಹಾ ಸುಗಂಧರಾಜ ತೈಲ -

,, ಚಂದನಾದಿ ತೈಲ -

,, ಭೃಂಗಾ ಮಲಕ ತೈಲ -

— ಬೇಸಿಗೆ ಕಾಲಕ್ಕೆ ಉತ್ತಮ ಅಪ್ರತಿ ತೈಲಗಳು

ಮಹಾಕೇತಕೀ ತೈಲ — ತಲೆ ನೋವು ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಯೋಗಿಸಬಹುದಾದ ಉತ್ತಮ

ಪ್ರೇಟ್ ಟಾನಿಕ್ ಸೀಸೆ 2-

ಪಂಚಾಮೃತ—ಮಲೇರಿಯಾ ಗಳಿಗೆ ಸಿದ್ಧ ಸಂಜೀವನ

ಮೈಸೂರು ಆಯುರ್ವೇದಿಕ ಫಾರ್ಮಸಿ.

90 ಲ್ಯಾನ್ಸ್‌ಡೌನ್ ಬಿಲ್ಡಿಂಗ್

ಮೈಸೂರು

Edited, printed published by A R Na... rajan at the Sadhvi P... D. Subbiah Road Mys...

ಫೋನ್ ನಂ 792 | ವಂದೇ ಮಾತರಂ || ಇಂದಿನ ಪತ್ರಿಕೆ ೭ ಕಾಸು

ವೃದ್ಧಿ

ಸಂಪುಟ ೭] ಸೋಮವಾರ ೩೧ ಆಗಸ್ಟ್ [ಸಂಚಿಕೆ ೩೦೪

ಬಾಬು ರಾಜೇಂದ್ರ ಪ್ರಸಾದರಿಗೆ ಸುಸ್ವಾಗತ

ಸಂಸ್ಥಾನಕ್ಕೆ ಹೆಚ್ಚು ಪೆಟ್ರೋಲ್

ಸತ್ಕಾರ ಕೂಟದಲ್ಲಿ ಕೇಂದ್ರ ಮಂತ್ರಿಗಳ ಭರವಸೆ

ಮೈಸೂರು ೩೦

ಭಾರತ ಸರ್ಕಾರದ ರೈಲ್ವೆ ಉಪ ಮಂತ್ರಿಗಳಾದ ಶ್ರೀ ಕೆ. ಸಂತಾನಂರವರ ಗೌರವಾರ್ಥವಾಗಿ ನಿನ್ನೆ ಮಧ್ಯಾಹ್ನ ಪುರಸಭೆಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಉಪಾಹಾರದ ನಂತರ ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಸ್ವಾಗತ ಭಾಷಣಮಾಡಿ ಪುರ ಸಭೆಯವರು ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿ, ನಗರಕ್ಕೆ ಸೌದೆ ಸರಬರಾಜನ್ನು ಸಮರ್ಪಕವಾಗಿ ಮಾಡಲು, ಸಂಸ್ಥಾನಕ್ಕೆ ಹೆಚ್ಚು ಪೆಟ್ರೋಲನ್ನು ಕೊಡಿಸಬೇಕೆಂದು ಪ್ರಾರ್ಥಿಸಿದರು

ಶ್ರೀ ಸಂತಾನಂರವರು ಪುರಸಭೆಯವರ ಸತ್ಕಾರಕ್ಕಾಗಿ ವಂದನೆಯನ್ನು ಅರ್ಪಿಸಿ ಈಗ ಪೆಟ್ರೋಲಿನ ಪರಿಸ್ಥಿತಿಯು ಉತ್ತಮಗೊಂಡಿರುವುದರಿಂದ ಹೆಚ್ಚು ಪೆಟ್ರೋಲನ್ನು ಸಂಸ್ಥಾನಕ್ಕೆ ಕೊಡಲಾಗುವುದೆಂದು ತಿಳಿಸಿದರು ಚಾಮರಾಜನಗರ ಮತ್ತು ಸತ್ಯಮಂಗಲಂ ರೈಲ್ವೆಯ ವಿಚಾರವನ್ನು ಅವರು ಪ್ರಸ್ತಾಪಿಸಿ, ಅದರ ಸರ್ವೆ ಕೆಲಸವು ಮುಗಿದಿದೆಯೆಂದೂ, ವರದಿಯು ಸರ್ಕಾರದ ಕೈ ಸೇರಿದ ಕೂಡಲೇ ಅದನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಲಾಗುವುದೆಂದೂ ಹೇಳಿದರು ಮೈಸೂರನ್ನು ಪಶ್ಚಿಮ ಕರಾವಳಿಗೆ ಸೇರಿಸುವ ವಿಚಾರವೂ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆಯೆಂದೂ, ಬಂದರು ಸಮಿತಿಯವರು ಮಾರ್ಮಗೋವಾ ಮತ್ತು ಕೊಚ್ಚಿ ಬಂದರುಗಳನ್ನು ಅಭಿವೃದ್ಧಿಗೊಳಿಸಬೇಕೆಂದು ಸಲಹೆ ಮಾಡಿರುವುದರಿಂದ ಅವುಗಳನ್ನು ಮೈಸೂರಿಗೆ ರೈಲು ಮುಖಾಂತರ ಸೇರಿಸುವ ವಿಚಾರವನ್ನು ಪರಿಶೀಲಿಸಲಾಗುವುದೆಂದೂ ತಿಳಿಸಿದರು

ಮೂರನೇ ತರಗತಿಯ ಗಾಡಿಗಳನ್ನು ಸಂಪೂರ್ಣವಾಗಿ ರದ್ದು ಮಾಡುವುದು ತಮ್ಮ ಇಷ್ಟವೆಂದೂ, ಆದರೆ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲವೆಂದೂ ಹೇಳಿದರು. ಮೈಸೂರಿನಲ್ಲಿ ಕೈಗಾರಿಕಾ ಅಭಿವೃದ್ಧಿಯು ಪ್ರಗತಿದಾಯಕವಾಗಿರುವುದರಿಂದ ಸಂಸ್ಥಾನವು ಮೂರನೇ ತರಗತಿ ಗಾಡಿಗಳನ್ನು ಮೊದಲು ರದ್ದು ಮಾಡಿ ಇತರರಿಗೆ ಮೇಲ್ಪಂಕ್ತಿ ಹಾಕಬೇಕೆಂದು ಸಲಹೆ ಇತ್ತರು

ಪುರಸಭೆಯ ಕೆಲಸ ಕಾರ್ಯಗಳ ಬಗ್ಗೆ ತಮ್ಮ ಪ್ರಶಂಸೆಯನ್ನು ತಿಳಿಸಿ, ಈಗಿನ ವೈಜ್ಞಾನಿಕ ಕಾಲದಲ್ಲಿ ಚಾಡಮಾಲಿಗಳ ಕೆಲಸವನ್ನೂ ಆಧುನಿಕ ವಿಜ್ಞಾನ ಸಾಧನೆಗಳ ಮೂಲಕ ನಡೆಸಬೇಕೆಂದು ಸೂಚಿಸಿದರು.

ಸ್ವತಂತ್ರ ಭಾರತವು ಬಲಿಯುತ್ತ ಇತರ ದೇಶಗಳೊಡನೆ ಸೇರಿ ಮುಂದುವರಿಯಬೇಕಾದರೆ ದೇಶದಲ್ಲಿ ಈಗಿರುವ ಜಾತಿ, ಮತ ಮತ್ತು ಪ್ರಾಂತೀಯ ಮನೋಭಾವನೆಯು ನಿರ್ಮೂಲವಾಗಬೇಕೆಂದೂ, ಆರ್ಥಿಕ ಮತ್ತು ರಾಜಕೀಯ ಉನ್ನತಿಯೊಡನೆ ಸಾಮಾಜಿಕ ಉನ್ನತಿಯೂ ಸಾಧಿಸಲ್ಪಡಬೇಕೆಂದೂ ಕೊನೆಯಲ್ಲಿ ತಿಳಿಸಿದರು

ಉದಾರ ಸಹಾಯ

ರಾಜಧಾನಿಯ ಶ್ರೀ ಚಾಮುಂಡೇಶ್ವರಿ ಗಡಿಯಾರದ ಬೀದಿಯಲ್ಲಿರುವ ದಿವಂಗತ ಮುಲ್ಕಾನೆ ಚನ್ನಣ್ಣನವರ ಪತ್ನಿ ಶ್ರೀಮತಿ ವೆಂಕಟಮ್ಮನವರು ಮೈಸೂರು ದೇವಾಂಗ ಸಂಘಕ್ಕೆ ೧೦೦೦ ರೂ. ಅನ್ನು ಕೊಟ್ಟಿರುತ್ತಾರೆ

ಸಂಸ್ಥಾನಕ್ಕೆ ಸ್ಪೆಷಲ್ ರೈಲುಗಳ ಸೌಕರ್ಯ

ಸಂತಾನಂರವರ ಭರವಸೆ

ಸ್ವಂ ಸು ಫೋನ್] ಬೆಂಗಳೂರು ೩೦

ಆಹಾರ ಮತ್ತು ಇತರ ಸಾಮಗ್ರಿಗಳನ್ನು ಬೇಗನೆ ತರಿಸಿಕೊಳ್ಳಲು ಸಂಸ್ಥಾನಕ್ಕೆ ಪ್ರತಿ ತಿಂಗಳಲ್ಲಿಯೂ ಎರಡು ಸ್ಪೆಷಲ್ ರೈಲುಗಳನ್ನು ಕೊಡುವಂತೆ ಎಂ ಎಸ್. ಎಂ ಮತ್ತು ಎಸ್ ಐ ರೈಲ್ವೆಗಳಿಗೆ ತಿಳಿಸಲಾಗಿದೆಯೆಂದು ಭಾರತ ಸರ್ಕಾರದ ಸಚಿವರಾದ ಶ್ರೀ ಸಂತಾನಂರವರು ನಿನ್ನೆ ದಿನ ವಾಣಿಜ್ಯ ಸಂಸ್ಥೆಯವರು ಕೊಟ್ಟ ಸತ್ಕಾರ ಸಮಾರಂಭದಲ್ಲಿ ತಿಳಿಸಿದರು ಇನ್ನು ಮುಂದೆ ರೈಲ್ವೆಗಳಲ್ಲಿ ಪ್ರಯಾಣಿಕರ ಪದ್ಧತಿಗಳನ್ನು ವಜಾ ಮಾಡಿ ಅವಶ್ಯಕ ಸಾಮಗ್ರಿಗಳನ್ನು ರವಾನಿಸಲು ಏರ್ಪಾಡು ಮಾಡಲಾಗುವುದೆಂದು ತಿಳಿಸಿದರು ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಈಗಾಗಲೇ ೧೦೦ ರೈಲ್ವೆ ಗಾಡಿಗಳನ್ನು ತಯಾರಿಸಲಾಗಿದೆಯೆಂದೂ, ಇನ್ನೂ ಹೆಚ್ಚಾಗಿ ತಯಾರಿಸುವುದಾಗಿಯೂ ತಿಳಿಸಿದರು ಹೊರಗಿನ ಪರ‍ಗಳಿಂದ ವ್ಯಾಗನ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ಉಪಯೋಗ ಮಾಡಿಕೊಳ್ಳುವುದಾಗಿಯೂ ಸೂಚಿಸಿದರು

ರಾಜೇಂದ್ರ ಪ್ರಸಾದರ ಆಗಮನ

ಮೈಸೂರು ೩೦

ಡಾ|| ರಾಜೇಂದ್ರ ಪ್ರಸಾದರು ಈ ದಿನ ಬೆಳಿಗ್ಗೆ ೧೧-೩೦ ಘಂಟೆಗೆ ಶ್ರೀಗಳಾದ ಕೆ ಸಿ ರೆಡ್ಡಿ, ಟಿ ಸಿದ್ದಲಿಂಗಯ್ಯ ಮತ್ತು ಎಸ್ ನಿಜಲಿಂಗಪ್ಪನವರುಗಳೊಡನೆ ಮೋಟಾರಿನಲ್ಲಿ ಇಲ್ಲಿಗೆ ಆಗಮಿಸಿದರು ಅವರು ಪ್ರಭುತ್ವ ಭವನದಲ್ಲಿ ಬಿಡಾರ ಮಾಡಿದರು ಮಧ್ಯಾಹ್ನ ೩ ಘಂಟೆಗೆ ಅವರು ಶ್ರೀಮನ್ ಮಹಾರಾಜರವರನ್ನು ಭೇಟಿ ಮಾಡಿದ್ದರು. ಸಂಜೆ ೫ ೩೦ ಘಂಟೆಗೆ ಟೌನ್‌ಹಾಲಿನಲ್ಲಿ ಪುರಸಭೆಯ ಬಿನ್ನವತ್ತಳೆಯನ್ನು ಸ್ವೀಕರಿಸುವರು

ಹಾಂಗ್ಕಾಂಗ್ ನಗರಕ್ಕೆ ಗಂಡಾಂತರ

ಪ್ರಪಂಚದಲ್ಲಿ ನಾಲ್ಕನೇ ದೊಡ್ಡ ನಗರವಾದ ಹಾಂಗ್ಕಾಂಗನ್ನು ಆಕ್ರಮಿಸಲು ಚೀನಾದ ಕಮ್ಯೂನಿಸ್ಟ್ ಸೈನಿಕರು ಮುನ್ನುಗ್ಗುತ್ತಿದ್ದಾರೆ ೨೦ ಲಕ್ಷ ಪ್ರಜಾ ಸಂಖ್ಯೆಯುಳ್ಳ ಆ ನಗರಕ್ಕೆ ಕಮ್ಯೂನಿಸ್ಟರು ಕೇವಲ ೩೦ ಮೈಲಿ ದೂರದಲ್ಲಿದ್ದಾರೆ ಜನರು ನಗರ ಸರ್ಕಾರಿ ಅಧಿಕಾರಿಗಳು ಪಲಾಯನ ಮಾಡಲು ಸಿದ್ಧರಾಗುತ್ತಿದ್ದಾರೆ

ಗಾಂಧಿನಿಧಿಗೆ ಸಂಸ್ಥಾನದಿಂದ ೧೫ ಲಕ್ಷ ರೂ.

ರಾಜೇಂದ್ರ ಪ್ರಸಾದರಿಗೆ ಬೆಂಗಳೂರಿನ ಸ್ವಾಗತ

ಸ್ವಂ ಸು ಫೋನ್] ಬೆಂಗಳೂರು ೩೦

ಮಹಾತ್ಮಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯ ಅಧ್ಯಕ್ಷರಾದ ರಾಜೇಂದ್ರ ಪ್ರಸಾದರು ನಿನ್ನೆ ಮಧ್ಯಾಹ್ನ ನಾಗಪುರದಿಂದ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು ಸಚಿವರುಗಳು, ಕಾಂಗ್ರೆಸ್ ನಾಯಕರೂ, ಇತರ ಪ್ರಮುಖರೂ ಅವರನ್ನು ಸ್ವಾಗತಿಸಿದರು

ಮೊದಲನೆಯದಾಗಿ ಪೌರಸಭೆಯವರು ಡಾ|| ಪ್ರಸಾದರಿಗೆ ಬಿನ್ನವತ್ತಳೆಯನ್ನರ್ಪಿಸಿದರು. ಪೌರಸಭಾ ಸದಸ್ಯರಾದ ಶ್ರೀ ಎಚ್ ಎಸ್ ಸೀತಾರಾಮರವರು ಕೊಟ್ಟ ರಜತ ಪಾತ್ರದ ಛಾಯಾಚಿತ್ರವನ್ನು ರಾಜೇಂದ್ರ ಪ್ರಸಾದರು ಅನಾವರಣ ಮಾಡಿದರು ಅವರು ನಿಧಿಯ ಉದ್ದೇಶವನ್ನು ವಿವರಿಸಿ ನಿಧಿ ಸಂಗ್ರಹವಾಗುವಂತೆಯೂ ಗಾಂಧೀಜಿಯವರ ತತ್ವಪ್ರಕಾರವೇ ತಮ್ಮ ನಡತೆ ಸ್ಥಿರವೆಂದು ಹೇಳಿದರು ಪೌರಜನರು ಇದನ್ನು ಹೆಚ್ಚಿನ ಸೇವೆಗಳಿಗೆ ಪ್ರಥಮ ಸೋಪಾನವೆಂದು ತಿಳಿಸಿದರು

ಎಲ್ಲಕ್ಕೂ ವಿಶೇಷವಾಗಿದ್ದ ಒಂದು ಸಭೆಯಲ್ಲಿ ಭಾಷಣ ಮಾಡಿ ಡಾ|| ಪ್ರಸಾದರು, ನಾಗಪುರ ನಗರಕ್ಕೆ ಹೋಗಿರುವಾಗ ತಾವು ಅಲ್ಲಿ ನಡೆದಿದ್ದ ಒಂದು ಬಹಿರಂಗ ಸಭೆಯಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ ಎಸ್ ರಾಮಯ್ಯಂಗಾರ್ ಅವರಿಗೆ ಬಿನ್ನವತ್ತಳೆಯನ್ನು ಗಂಧದ ಪೆಟ್ಟಿಗೆಯಲ್ಲಿಟ್ಟು ಅರ್ಪಿಸಿದರು. ಇದುವರೆಗೆ ಸಂಸ್ಥಾನದಿಂದ ಗಾಂಧಿ ನಿಧಿಗೆ ಒಟ್ಟು ೧೫ ಲಕ್ಷ ರೂ ವಸೂಲಾಗಿದೆಯೆಂದೂ ಇತ್ತೀಚೆಗೆ ಬೆಂಗಳೂರು ನಗರ ಮತ್ತು ಮಂಡಿಸಿನ ಪ್ರದೇಶಗಳಲ್ಲಿ ಒಟ್ಟು ಒಂದು ಲಕ್ಷ ರೂ. ವಸೂಲಾಗಿದೆಯೆಂದೂ ತಿಳಿಸಲಾಗಿತ್ತು ... ಸಂಗ್ರಹಿಸಲ್ಪಟ್ಟ ... ಬೆಂಗಳೂರು ... ಮುಂತಾದ ... ರಾಜಾಜಿ ... ಮಾಡುವರು

ಡಾ|| ಪ್ರಸಾದರು ಭಾಷಣಮಾಡಿ ... ಕಾಂಗ್ರೆಸ್ ನಾಯಕರುಗಳನ್ನು ... ಕಾರ್ಯ

ಹನುಮಂತಯ್ಯನವರಿಗೆ ಮಂತ್ರಿ ಪದವಿ

ಡಿ. ಎಚ್. ಚಂದ್ರಶೇಖರಯ್ಯನವರು ಪ್ರ|| ಪ್ರ|| ಸಭಾಧ್ಯಕ್ಷರು

(ನಮ್ಮ ರಾಜಕೀಯ ಪ್ರತಿನಿಧಿಗಳಿಂದ)

ಬೆಂಗಳೂರು ೩೦

ಶಾಸನ ಸಭೆ ಮತ್ತು ಪ್ರ|| ಪ್ರ|| ಸಭೆಯ ಜಂಟಿ ಅಧಿವೇಶನವು ಸದ್ಯದಲ್ಲಿಯೇ ಸೇರಿ ಮಂತ್ರಿ ಮಂಡಲದಲ್ಲಿ ಆಗಬೇಕಾದ ಬದಲಾವಣೆಯನ್ನು ಪರಿಶೀಲಿಸುವುದೆಂದು ಹೇಳಲಾಗಿದೆ ಇತ್ತೀಚೆಗೆ ಕಾಂಗ್ರೆಸ್ ಪಕ್ಷದವರು ಸಭೆ ನಡೆಸಿ ಹಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಪ್ರಕಾರ ಪ್ರ|| ಪ್ರ|| ಸಭೆಗೆ ಚುನಾಯಿತ ಅಧ್ಯಕ್ಷರನ್ನು ಈ ಸಾರಿಯ ಅಧಿವೇಶನದಿಂದಲೇ ಕೊಡಲಾಗುವುದೆಂದೂ, ಆ ಸ್ಥಾನಕ್ಕೆ ಈ ವಿಚಾರದಲ್ಲಿ ವಿಶೇಷ ಸಂಪ್ರದಾಯವುಳ್ಳ ಶ್ರೀ ಡಿ ಹೆಚ್. ಚಂದ್ರಶೇಖರಯ್ಯನವರನ್ನು ಚುನಾಯಿಸಲಾಗುವುದೆಂದೂ, ಅಭಿಪ್ರಾಯಪಡಲಾಗಿದೆ. ಹಾಗೆ ಆದಲ್ಲಿ ಖಾಲಿಯಾಗುವ ಸಚಿವ ಸ್ಥಾನಕ್ಕೆ ಶ್ರೀ ಕೆ ಹನುಮಂತಯ್ಯನವರನ್ನು ತೆಗೆದುಕೊಳ್ಳಲಾಗುವುದೆಂದೂ ಸಹ ಸೂಚಿಸಲಾಗಿದೆ

ಹಂಪೆಯ ರಕ್ಷಣೆಗಾಗಿ ತುಂಗಭದ್ರಾ ಕಾಲುವೆಯ ಬದಲಾವಣೆ

ನೂತನವಾಗಿ ನಿರ್ಮಿಸಲಿರುವ ತುಂಗಭದ್ರಾ ಜಲಾಶಯದಿಂದ ಪುರಾತನ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪೆಯು ಮುಳುಗಿಹೋಗುವ ಸಂಭವವಿರುವುದರಿಂದ, ಆಂತರ ರಾಷ್ಟ್ರೀಯ ಸ್ಮಾರಕವನ್ನು ರಕ್ಷಿಸಲು, ತುಂಗಭದ್ರಾ ಕಾಲುವೆಯನ್ನು ಈಗ ಗೊತ್ತುಮಾಡಿರುವ ಸ್ಥಳದಿಂದ ಬೇರೆ ಕಡೆಗೆ ತಿರುಗಿಸುವಂತೆ ಮದರಾಸ್ ಸರ್ಕಾರದವರು ನಿರ್ಧರಿಸಿದ್ದಾರೆ

...ಯೆಂದು ತಿಳಿಸಿದರು ಐಶ್ವರ್ಯವಂತರು ಕೊಡುವ ಕೋಟ್ಯಂತರ ದ್ರವ್ಯಕ್ಕಿಂತಲೂ ಬಡವರು ಕೊಡುವ ಪುಡಿ ಕಾಸುಗಳಿಗೇ ಹೆಚ್ಚು ಬೆಲೆ ಇರುವುದೆಂದು ಹೇಳಿದರು. ಮಹಾತ್ಮರು ಒಬ್ಬರಿಂದಲೇ ಹಣವನ್ನು ಸಂಗ್ರಹಿಸುವುದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದರೆ ಅವರ ನೆನಪನ್ನು ಶಾಶ್ವತವಾಗಿ ಸಿರಿ ಸತ್ಯ ಮತ್ತು ಅಹಿಂಸೆಯಿಂದ ಅವರು ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ಅವೇ ಮಾರ್ಗಗಳಿಂದ ಸಂರಕ್ಷಿಸುವುದು ಭಾರತೀಯರ ಕರ್ತವ್ಯವಾಗಿದೆ ಎಂದು ಅವರು ನುಡಿದರು. ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಡನೆ ನಾವು ಹೋರಾಡಿದ್ದರೂ ಈಗ ಬ್ರಿಟನರೊಡನೆ ನಮಗಿರುವ ಪ್ರೀತಿ ವಿಶ್ವಾಸಗಳು ಎಂದಿಗಿಂತಲೂ ಹೆಚ್ಚಾಗಿವೆಯೆಂದು, ಇದಕ್ಕೆ ಮಹಾತ್ಮರ ಅಹಿಂಸೆಯೇ ಕಾರಣವೆಂದು ತಿಳಿಸಿದರು. ಅವರ ಸಂದೇಶವನ್ನು ಮನೆ ಮನೆಗೂ ಸಾರಬೇಕೆಂದು ಸಲಹೆ ಸೂಚಿಸಿದರು.

ಆಹಾರ ಮತ್ತು ಇತರ ಪದಾರ್ಥಗಳ ಮೇಲೆ ಪರ್ಮಿಟ್ ನಿಯಂತ್ರಣವು ತಪ್ಪಿಸಿ... ದೇಶ ... ಉತ್ಪಾದನೆ... ಆದರೆ ನನ್ನ ... ಪದ್ಧತಿಯಿಂದಲೇ ... ನಮ್ಮಲ್ಲಿರುವ ದೋಷಗಳನ್ನು ತಿದ್ದಿಕೊಳ್ಳಬೇಕು ಎಂದು ಅವರು ಹೇಳಿದರು.

ಸಂಸ್ಥಾನದ ಗಾಂಧಿ ನಿಧಿಯ ಅಧ್ಯಕ್ಷರಾದ ಧರ್ಮಪ್ರಕಾಶ ಎಚ್ ಎಸ್. ವೆಂಕಟರಾಮಯ್ಯನವರು ಸ್ವಾಗತ ನಿಧಿಗಾಗಿ ಸಮಾರಂಭ ... ಸಂಸ್ಥೆಯನ್ನು ... ದಗ.

ವರ್ಣಾಶ್ರಮ ಧರ್ಮದ ಶ್ರೇಷ್ಠತೆ

ಹೊಸಹಳ್ಳಿ ಸ್ವಾಮಿಗಳ ಭಾಷಣ

ಹಾಸನ ೨೩

ನೆನ್ನೆ ದಿನ ರಾತ್ರಿ ಹೊಸಹಳ್ಳಿ ವ್ಯಾಸರಾಯ ಮಠದ ಶ್ರೀ ವಿದ್ಯಾ ತೀರ್ಥ ಶ್ರೀಪಾದಂಗಳವರು, ವರ್ಣಾಶ್ರಮ ಧರ್ಮದ ವಿಚಾರವಾಗಿ ಅನೋಘವಾದ ಭಾಷಣವನ್ನು ಮಾಡಿದರು. ಸಮಾಜದ ಹಿತಸಾಧನೆಗಾಗಿ ಗುಣ ಕರ್ಮಗಳ ಆಧಾರದ ಮೇಲೆ ವರ್ಣಾಶ್ರಮ ಧರ್ಮಗಳನ್ನು ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ಆಚರಿಸುತ್ತಿರುವುದಾಗಿ ಸ್ವಾಮಿಗಳು ಒಪ್ಪಿಗೆ ಕೊಡಿಸಿದರು. ಧರ್ಮಶಾಸ್ತ್ರಗಳಲ್ಲಿ ನಂಬಿಕೆಯೇ ಭಾರತೀಯರ ಜೀವನದ ಹೆಗ್ಗುರುತೆಂದು ತಿಳಿಯಪಡಿಸಿದರು. ಪಂಚೇಂದ್ರಿಯಗಳಿಗೆ ಅತೀತವಾದ ವಿಷಯಗಳು ನಮಗೆ ಗೋಚರವಾಗದ ಮಾತ್ರಕ್ಕೆ ಅವುಗಳ ಅಸ್ತಿತ್ವದಲ್ಲಿ ಸಂಶಯ ಪಡುವುದು ಸಾಧುವಲ್ಲ. ಮನುಷ್ಯನ ಶರೀರದಲ್ಲಿ ಪ್ರಾಣವಿರುವವರೆಗೆ ಪಂಚ ಭೂತಗಳು ತಮ್ಮ ಕಾರ್ಯಗಳನ್ನು ನಡೆಸಿ ಜೀವವು ಹೋದ ಒಡನೆಯೇ ನಿಶ್ಚೇತನವಾಗುವುವು. ಪ್ರಾಣವು ಕಣ್ಣಿಗೆ ಕಾಣದ ವಸ್ತು. ಹಾಗೆಯೇ ಜಗತ್ತನ್ನು ಆವರಿಸಿರುವ ಚೇತನವೂ ಸಹ ಕಣ್ಣಿಗೆ ಕಾಣಿಸುವುದಿಲ್ಲ. ಆದ ಮಾತ್ರಕ್ಕೆ ಅವುಗಳ ಇರವನ್ನು ನಂಬದೇ ಇರಲು ಸಾಧ್ಯವಿಲ್ಲ. ನಮ್ಮ ನಂಬಿಕೆಗೆ ಧರ್ಮಶಾಸ್ತ್ರಗಳೇ ಮೂಲಾಧಾರ. ಭಾರತೀಯರು ಅವುಗಳಲ್ಲಿ ಪೂರ್ಣ ವಿಶ್ವಾಸವಿಟ್ಟು ಕೇವಲ ಐಹಿಕ ಸೌಖ್ಯ ಸಾಧನೆಯಲ್ಲಿಯೇ ತಲ್ಲೀನರಾಗದೇ ಇಹಪರಗಳೆರಡರ ಪ್ರಾಪ್ತಿಗಾಗಿ ಪ್ರಾಚೀನ ಮಹರ್ಷಿಗಳು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಡೆಯಬೇಕು—ಎಂದು ಶ್ರೀ ಸ್ವಾಮಿಗಳವರು ಅಪ್ಪಣೆ ಕೊಡಿಸಿದರು.

— —

ಲಂಡನ್ನಿನಲ್ಲಿ ಮಲಾನರ ವಿರುದ್ಧ ಪ್ರದರ್ಶನ

ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನ್ನಿಗೆ ಆಗಮಿಸಿರುವ ದಕ್ಷಿಣ ಆಫ್ರಿಕದ ಪ್ರಧಾನಿ ಡಾ॥ ಮಲಾನರವರು ಅಲ್ಲಿನ ಒಂದು ಹೋಟೇಲಿನಲ್ಲಿ ಬಿಡಾರ ಮಾಡಿರುತ್ತಾರೆ. ಅವರ ಬಿಡಾರದ ಮುಂದೆ ಭಾರತ, ಆಫ್ರಿಕ ಮತ್ತು ಇತರ ಕಾಲೋನಿಗಳ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ, "ಮಲಾನರು ಕೆಳಗಿಳಿಯಬೇಕು", "ಮಲಾನರು ಮಾನವೀಯತೆಯ ಕಂಟಕ ಪ್ರಾಯರು" ಎಂದು ಘೋಷಣೆ ಮಾಡಿದರು. ಮಲಾನರ ರಕ್ಷಣೆಗಾಗಿ ಒಲಿಸಾದ ಪೋಲೀಸ್ ಕಾವಲನ್ನಿಡಲಾಗಿದೆ.

ಗಾಯತ್ರೀ ಟಾಕೀಸ್

ಹಗಲಿನ ಮೂರು ಪ್ರದರ್ಶನಗಳು
ತಾ॥ 24-4-49ರಿಂದ 3 ದಿನಗಳು
ಎಡ್ವರ್ಡ್ ಸ್ಮಾಲ್‌ರವರ

ಬಿಯಾಂಡ್ ದಿ ಬ್ಲೂ ಹೊರೈಸನ್

(ವರ್ಣ ರಂಜಿತ ಚಿತ್ರ)
ಪಾತ್ರ: ಡೊರೊತಿ ಲಮೂರ್

ಹೃದಯ ರೋಗದ ಪರೀಕ್ಷೆಗೆ ಅಣುಶಕ್ತಿಯ ಯಂತ್ರ

ಹೃದಯ ರೋಗವನ್ನು ಪತ್ತೆ ಮಾಡುವ ಅಣುಶಕ್ತಿಯ ಸಣ್ಣ ಯಂತ್ರವನ್ನು ಅಮೆರಿಕದ ಅಣು ವಿಜ್ಞಾನಿಗಳಾದ ಡಾ॥ ರಾಬರ್ಟ್ ಮಾರ್ಗರವರು ಕಂಡು ಹಿಡಿದಿದ್ದಾರೆ. ಅದನ್ನು ಹೃದಯದೊಳಗೆ ಇಡಲು ಅನುಕೂಲವಾಗುವುದೆಂದು ಹೇಳಲಾಗಿದೆ.

ರಷ್ಯಕ್ಕೆ ಜರ್ಮನ್ ಕಮ್ಯೂನಿಸ್ಟರ ಬೆಂಬಲ

ಪಶ್ಚಿಮ ರಾಷ್ಟ್ರಗಳಿಗೂ ರಷ್ಯಕ್ಕೂ ಯುದ್ಧ ಸಂಭವಿಸಿದರೆ ಜರ್ಮನಿಯ ಕಮ್ಯೂನಿಸ್ಟರು ರಷ್ಯಕ್ಕೆ ಸಹಾಯ ಮಾಡುವುದಾಗಿ ಜರ್ಮನ್ ಕಮ್ಯೂನಿಸ್ಟರ ನಾಯಕರು ತಿಳಿಸಿರುತ್ತಾರೆ.

ಮೋಟಾರು ಕಾರ್ಖಾನೆ ಕೆಲಸ ಭರದಿಂದ ಸಾಗುತ್ತಿದೆ

ಮದರಾಸಿನ ಉತ್ತರದ ಸಮುದ್ರ ತೀರದಲ್ಲಿರುವ ಎನ್ನೋರು ಎಂಬಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸುವ ಕೆಲಸವು ಬಹಳ ಭರದಿಂದ ಸಾಗುತ್ತಿದೆ. ಇನ್ನು ಮೂರು ತಿಂಗಳೊಳಗೆ ಕಾರ್ಖಾನೆಯು ಪೂರೈಸಲ್ಪಟ್ಟು, ಅನಂತರ ಅಲ್ಲಿ ವರ್ಷಂಪ್ರತಿ ೫ ಸಾವಿರಕ್ಕೂ ಮೇಲ್ಪಟ್ಟು ಮೋಟಾರು ವಾಹನಗಳ ಭಾಗಗಳನ್ನು ಜೋಡಿಸಲಾಗುವುದೆಂದು ಹೇಳಲಾಗಿದೆ. ಕಾರ್ಖಾನೆಗೆ ಬೇಕಾದ ಯಂತ್ರೋಪಕರಣಗಳನ್ನು ಬ್ರಿಟನ್ನಿನಿಂದ ತರಿಸಿಕೊಳ್ಳಲಾಗಿದೆ. ಕ್ರಮೇಣ ಈ ಕಾರ್ಖಾನೆಯಲ್ಲಿಯೇ ಮೋಟಾರು ಕಾರುಗಳನ್ನು ತಯಾರಿಸಲಾಗುವುದು.

ತಾಲ್ಲೂಕು ಸಮ್ಮೇಳನ

ಸ್ವಂ. ವ.] ಶ್ರೀರಂಗಪಟ್ಟಣ ೨೩

ಇಲ್ಲಿನ ತಾಲ್ಲೂಕು ಸಮ್ಮೇಳನವು ಶ್ರೀ ಎ. ಜಿ. ಬಂದೀಗೌಡರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಜಯಲಕ್ಷ್ಮೀ ಟಾಕೀಸ್ ಭವನದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವಸ್ತು ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ತಾಲ್ಲೂಕು ಅಮಲ್ದಾರರಾದ ಶ್ರೀ ಎನ್. ಕೃಷ್ಣಮೂರ್ತಿಯವರು ಸ್ವಾಗತ ಭಾಷಣ ಮಾಡಿದ ನಂತರ, ಶ್ರೀಮತಿ ಸರೋಜಿನಿಯವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು. ಸರ್ದಾರ್ ಪಟೇಲರು ವಿಮಾನ ಅಪಘಾತದಿಂದ ಪಾರಾದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಲಾಯಿತು.

ಶ್ರೀಮನ್ಮಹಾರಾಜರ ಸ್ಥಾನಮಾನಕ್ಕೆ ಯಾವ ಚ್ಯುತಿಯೂ ಬಾರದಂತೆ ರಾಜ್ಯಾಂಗವನ್ನು ರಚಿಸಬೇಕೆಂದು ಪ್ರಾರ್ಥಿಸುವ ಶ್ರೀ ಎಂ. ಕೆ. ಬೊಮ್ಮೇಗೌಡರ ನಿರ್ಣಯವು ಅಂಗೀಕೃತವಾಯಿತು. ಅನಂತರ ತಾಲ್ಲೂಕಿನ ಅಭಿವೃದ್ಧಿಗೆ ಸಂಬಂಧಪಟ್ಟ ಇತರ ವಿಷಯಗಳ ಮೇಲೆ ಚರ್ಚೆ ನಡೆಯಿತು. ಅಧ್ಯಕ್ಷರು ಬಹುಮಾನ ವಿನಿಯೋಗಿಸಿದ ನಂತರ ಸಮಾರಂಭವು ಮುಕ್ತಾಯವಾಯಿತು.

Edited, printed and published by A R. Nagarajan at the Sadhvi Press D Subbiah Road Mysore,

ಸಣ್ಣ ಜಗಳದಿಂದ ನಾಲ್ಕು ಜನರ ಕೊಲೆ

ಜಬ್ಬಲ್‌ಪುರದ ಚಾಕಾ ಎಂಬ ಹಳ್ಳಿಯಲ್ಲಿ ಮರಗೆಲಸದವನೊಬ್ಬನು ಜಗಳದಲ್ಲಿ ಮತ್ತೊಬ್ಬನನ್ನು ಕೊಲೆ ಮಾಡಿದನೆಂದೂ, ಇದರಿಂದ ಮೃತನ ಭಾವನಿಗೆ ರೇಗಿ, ಮರಗೆಲಸದವನ ಮನೆಯ ಬಾಗಿಲಿಗೆ ... ಬಂದೂಕದಿಂದ ಮಲಗಿದ್ದ ಮರಗೆಲಸದವನನ್ನೂ ಮತ್ತು ಆತನ ಇಬ್ಬರು ಸಹೋದರರನ್ನೂ ಕೊಂದುಹಾಕಿದನೆಂದೂ ವರದಿಯಾಗಿದೆ.

ವಿಶ್ವಸಂಸ್ಥೆಯ ನೂತನ ಭವನ

ಅಮೆರಿಕದಲ್ಲಿ ವಿಶ್ವಸಂಸ್ಥೆಯ ನೂತನ ಭವನವನ್ನು ಕಟ್ಟಲು ಅಲ್ಲಿನ ಸರ್ಕಾರದವರು ೬॥ ಕೋಟಿ ಡಾಲರುಗಳನ್ನು ಮಂಜೂರು ಮಾಡಿರುತ್ತಾರೆ. ಭವನಕ್ಕೆ ೩೯ ಅಂತಸ್ತುಗಳಿರುವುವೆಂದೂ, ೧೩ ಟನ್ ಉಕ್ಕನ್ನು ಉಪಯೋಗಿಸಲಾಗುವುದೆಂದೂ ಹೇಳಲಾಗಿದೆ. ಮುಂದಿನ ವರ್ಷ ಇದರ ಕೆಲಸ ಪೂರೈಸುವುದು.

ಕಲ್ಕತ್ತ ವಿದ್ಯಾರ್ಥಿಗಳ ಉಪವಾಸ

ಕಲ್ಕತ್ತ ವಿಶ್ವವಿದ್ಯಾಲಯದ ಆವರಣದಲ್ಲಿ ಉಪವಾಸ ಸತ್ಯಾಗ್ರಹ ಮಾಡಿದ ... ಜನ ವಿದ್ಯಾರ್ಥಿನಿಯರನ್ನು ಪೋಲೀಸರು ಮೊನ್ನೆ ದಿನ ದಸ್ತಗಿರಿ ಮಾಡಿದರು. ವಿದ್ಯಾರ್ಥಿಗಳು ಬಹಿರಂಗಸಭೆ ನಡೆಸಿ ತಮ್ಮ ಮೇಲೆ ಪೋಲೀಸರು ನಡೆಸಿದ ಲಾಠಿ ಪ್ರಯೋಗದ ಬಗ್ಗೆ ಪರಿಶೀಲನೆ, ಮತ್ತು ವಿದ್ಯಾರ್ಥಿಗಳ ಬಿಡುಗಡೆ ಇವುಗಳನ್ನು ಸರ್ಕಾರವು ಈಡೇರಿಸಲಿಲ್ಲದಿದ್ದಲ್ಲಿ ಸತ್ಯಾಗ್ರಹವನ್ನು ಮುಂದುವರಿಸುವುದಾಗಿ ನಿರ್ಮಾನಿಸಿದರು.

ನಿಮ್ಮ ಮೈ ಮೊಕಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

* ಪ್ರಭಾ *

27-4-49ರಿಂದ :: ದಿನವಹಿ ೩ ಆಟಗಳು

ರೋಮಿಯೋ ಅಂಡ್ ಜೂಲಿಯಟ್

(ಹಿಂದಿ) ಪಾತ್ರ:- ನರ್ಗಿಸ್ ಮತ್ತು ಸಪ್ರು

Mysore City Municipality

NOTICE

Sealed tenders will be received by the Municipal Engineer for the following works on the date noted against each:—

1	Converting Daily Fees Shop into Permanent shop at Mandi Market, Mandi Mohalla.	30-4-49
2.	Improving the Mutton stall at Yerrekatte, Lashkar Mohalla, Mysore	30-4-49
3	Estimate for sinking Pond in Joohithenginamara Burial ground Mandi Mohalla.	30-4-49

The tender must be accompanied with a Chellan for having remitted Rs 75 50 and 70 in the Municipal Treasury as earnest money for item No, 1, 2 and 3 respectively

For full particulars, please see the office Notice Board.

V. K. MUKUNDAN
Municipal Engineer

ಪೋ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೨೬ ೪-೪೯ [ಸಂಚಿಕೆ ೩೩೫

ಟ್ರಸ್ಟ್ ಬೋರ್ಡಿನ ಪುನರ್ರಚನೆ

ಮೈಸೂರು ೨೬

ಮೈಸೂರು ನಗರಾಭಿವೃದ್ಧಿ ಸಮಿತಿಯನ್ನು ಪುನರ್ರಚನೆ ಮಾಡಿ ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ. ಪೌರಸಭಾ ಸದಸ್ಯರೂ, ವಕೀಲರೂ ಆದ ಶ್ರೀ ಪಿ ಗೋಪಾಲಕೃಷ್ಣಶೆಟ್ಟಿಯವರು ಅದರ ಅಧ್ಯಕ್ಷರಾಗಿ ನೇಮಿತರಾಗಿದ್ದಾರೆ. ಪೌರಸಭಾ ಅಧ್ಯಕ್ಷರೂ, ಆರೋಗ್ಯಾಧಿಕಾರಿಗಳೂ, ಸೂಪರಿಂಟೆಂಡಿಂಗ್ ಇಂಜನಿಯರೂ ಎಕ್ಸ್ ಅಫಿಷಿಯೋ ಸದಸ್ಯರಾಗಿರುವರು. ಪೌರಸಭೆಯ ಪರವಾಗಿ ಶ್ರೀಗಳಾದ ಬಿ ನಾರಾಯಣಸ್ವಾಮಿ, ಎಸ್ ಲಿಂಗಣ್ಣನವರ ಇವರು ಶ್ರೀಗಳಾದ ಎ ವಿ ಸುಬ್ರಹ್ಮಣ್ಯ ರಾವ್ ಅರಸ್, ಡಿ ಬಿ ವಿಶ್ವಂಭರಯ್ಯ ಮತ್ತು ಜನಾಬ್ ಮಹಮದ್ ಸೇಟ್ ರವರು ನಾಮಕರಣ ಸದಸ್ಯರಾಗಿರುವರು.

ಬಹಿರಂಗ ಸಭೆ

ಮೈಸೂರಿನ ಜವಿಸ್ಕದ ಒಗ್ಗೆ ಪ್ರಜಾಭಿಪ್ರಾಯವನ್ನು ಪಡೆಯಲು ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯು ಶ್ರೀ ಹೆಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಭಾರತದಲ್ಲಿ ಪೆನ್ಸಿಲಿನ್ ತಯಾರಿಕೆ

ಭಾರತದಲ್ಲಿ, ಪೆನ್ಸಿಲಿನ್, ಸಲ್ಫಾ ಮತ್ತು ಮಲೇರಿಯಾ ನಿವಾರಣೆ ಔಷಧಿಗಳನ್ನು ತಯಾರಿಸಲು ೩ ಕೋಟಿ ರೂ ಯೋಜನೆಯನ್ನು ಬೊಂಬಾಯಿನಲ್ಲಿ ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಜೂರು ಮಾಡಲಾಯಿತು. ಕಾರ್ಖಾನೆಯನ್ನು ಪೂನಾದ ಬಳಿ ಸ್ಥಾಪಿಸಲಾಗುವುದು.

೭೩ ವರ್ಷದ ಮುದುಕಿಗೆ ಅವಳಿ ಮಕ್ಕಳು

ಮೆಸಿಡೋನಿಯಾ ದೇಶದ ಹಳ್ಳಿಯೊಂದರಲ್ಲಿ ಒಬ್ಬ ಮುದುಕಿಯು ತನ್ನ ೭೩ ನೇ ವಯಸ್ಸಿನಲ್ಲಿ ಅವಳಿ ಮಕ್ಕಳನ್ನು ಹಡದಿರುವದಾಗಿ ವರದಿಬಂದಿದೆ. ಆಕೆಯ ಗಂಡನಿಗೆ ೭೭ ವರ್ಷ ವಯಸ್ಸೆಂದು ಹೇಳಲಾಗಿದೆ.

ಹೈದರಾಬಾದಿನಲ್ಲಿ ನ್ಯಾಪತಿ ಮಾಧವರಾಯರಿಗೆ ಹುದ್ದೆ

ಮೈಸೂರಿನ ಮಾಜಿ ದಿವಾನರಾದ ಪ್ರಜಾ ಶಿರೋಮಣಿ ಎನ್ ಮಾಧವರಾಯರವರು ಹೈದರಾಬಾದಿನ ವ್ಯವಸಾಯ ಸುಧಾರಣಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

ಮಕ್ಕಳ ಕಳುವಿನ ಗುಮಾನಿ ನೇಣಿ ಕೊಲೆ

ಸತ್ಯನಿಕ್ಕೆ ೧೭ ಮೈಲಿ ದೂರದಲ್ಲಿರುವ ಒಂದು ಹಳ್ಳಿಯಲ್ಲಿ ಜನರ ಗುಂಪು ಹೆಂಗಸೊಬ್ಬಳನ್ನು ಹೊಡೆದು ಕೊಲೆಮಾಡಿದರು. ಆಕೆಯು ಮಕ್ಕಳ ಅಪಹರಣ ಮಾಡುವವಳೆಂದೂ ತಿಳಿದು ಈ ರೀತಿ ಮಾಡಿದರೆಂದೂ ಹೇಳಲಾಗಿದೆ. ಇತ್ತೀಚೆಗೆ ಕಲ್ಕತ್ತೆಯಲ್ಲಿ ಮಕ್ಕಳ ಅಪಹರಣವು ವಿಶೇಷವಾಗಿದೆಯೆಂದೂ, ಕಳೆದ ವಾರ ಮಹಿಳೆಯೊಬ್ಬಳನ್ನು ಜನರು ಕಲ್ಲುಗಳಿಂದ ಹೊಡೆದು ಕೊಂದರೆಂದೂ ವರದಿಯಾಗಿದೆ.

ಹೋರಾಟಕ್ಕಿಂತಲೂ ರಚನಾತ್ಮಕ ಕಾರ್ಯವು ಕಠಿಣ

ಬಹಿರಂಗ ಸಭೆಯಲ್ಲಿ ರಾಜೇಂದ್ರ ಪ್ರಸಾದರ ಭಾಷಣ

ಮೈಸೂರು ೨೬

ಮಹಾತ್ಮ ಗಾಂಧಿ ಸ್ಮಾರಕ ನಿಧಿ ಸಮಿತಿಯ ಮತ್ತು ಭಾರತ ರಾಜ್ಯಾಂಗ ಸಭೆಯ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರಿಗೆ ಗಾಂಧಿ ಸ್ಮಾರಕ ನಿಧಿಗಾಗಿ ಮೈಸೂರು ನಗರದ ಪರವಾಗಿ ೬೭,೭೭೭ ರೂಗಳನ್ನು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಅರ್ಪಿಸಲಾಯಿತು.

ಈ ಸಭೆಗೆ ಸಂಸ್ಥಾನದ ಗಾಂಧಿ ನಿಧಿಯ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯ, ಕಾರ್ಯದರ್ಶಿಯವರಾದ ಎಲ್ ಎಸ್ ವೆಂಕಾಜಿರಾಯರು, ಕೆ॥ಪ್ರಾಂ॥ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪ, ಮುಖ್ಯಮಂತ್ರಿಗಳಾದ ಕೆ ಸಿ ರೆಡ್ಡಿಯವರೇ ಮೊದಲಾಗಿ ಸಹಸ್ರಾರು ಜನ ಮಹಿಳಾ ಪುರುಷರು ದಯಮಾಡಿಸಿದ್ದರು.

ಆ॥ವಿ॥ ನಂಜನಗೂಡು ಶ್ರೀಕಂಠಯ್ಯನವರಿಂದ ವಿರಚಿತವಾದ ಸ್ವಾಗತ ಪದ್ಯವನ್ನು ಶ್ರೀಮತಿ ರಾಜಮ್ಮ ಕಲ್ಲೂರ್ ಮಠರವರು ಓದಿದರು.

ಪೌರ ಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಪುರಸಭೆಯ ಪರವಾಗಿ ಮಾನಪತ್ರವನ್ನು ಓದಿ ಅದನ್ನು ಸುಂದರವಾದ ಗಂಧದ ಪೆಟ್ಟಿಗೆಯಲ್ಲಿಟ್ಟು ಕೊಟ್ಟರು. ಗಾಂಧಿ ಸ್ಮಾರಕ ನಿಧಿಯ ನಗರ ಸಮಿತಿಯ ಅಧ್ಯಕ್ಷರಾದ ಶ್ರೀ ಎನ್ ಚನ್ನಯ್ಯನವರು ಡಾ॥ ಪ್ರಸಾದರಿಗೆ ಸ್ವಾಗತವನ್ನು ಕೋರಿ, ನಿಧಿಗೆ ಶ್ರೀಮನ್ಮಹಾರಾಜರವರ ೧೦ ಲಕ್ಷರೂ, ಕೃಷ್ಣರಾಜೇಂದ್ರ ಮಿಲ್ಲಿನವರು ೫೦ ಸಾವಿರ ರೂ ಮತ್ತು ಪುರಸಭೆಯವರು ೧೦ ಸಾವಿರ ರೂಗಳನ್ನು ಕೊಟ್ಟಿರುವರೆಂದು ತಿಳಿಸಿದರು. ವಿದ್ಯಾರ್ಥಿ ಕಾಂಗ್ರೆಸ್ ಪರವಾಗಿ ಶ್ರೀ ಅನಂತರಾಮರವರೂ ಕಾರ್ಮಿಕರ ಪರವಾಗಿ ಶ್ರೀ ರಾಮಾರಾಂ ಪ್ರಸಾದ್‌ರವರೂ ಹಾರವನ್ನು ಅರ್ಪಿಸಿದರು. ಒಡ್ಡರ ಪಾಮಾನಗಳ ಪರವಾಗಿ ಶ್ರೀ ವೆಂಕಟಪತಿ ಶೆಟ್ಟಿಯವರ ಗಂಧದ ಚಿತ್ರವನ್ನು ಅರ್ಪಿಸಿದರು.

ಅನಂತರ ನಿಧಿಗಾಗಿ ಕೊಟ್ಟ ನಾಣ್ಯಗಳ ಭಾವಚಿತ್ರ ಬಳ್ಳಿಯ ಒದಗೆ ಪೊಟ್ಟಣವನ್ನು ಇತರ ಸಾಮಾನುಗಳನ್ನು ಬಹಿರಂಗವಾಗಿ ಹರಾಜು ಹಾಕಿ, ಅದರಿಂದ ಬಂದ ಹಣವನ್ನು ನಿಧಿಗೆ ಸೇರಿಸಲಾಯಿತು. ಶ್ರೀ ಪಿ ನೋಟಿಂಟಿನವರ ಗಂಡಿನ ಮಹಾತ್ಮರ ವಿಗ್ರಹ ಗಾಂಧೀ ಚಿತ್ರ ನೇರ ಪಾವತಿ ತೃಣಗಳನ್ನು ಕ್ರಮವಾಗಿ ೩೦೦, ೧೧ ಮತ್ತು ೫೦ ರೂಗೆ ಕೊಟ್ಟ ತೀರದ ಬಿಹಾರ್ ಬೋಸರು ಗಾಂಧೀ ಚಿತ್ರವನ್ನು ...

ಬಿ ಸಿ ಗೌಡರು ೫೦ ರೂ ಗೆ ಪಡೆದರು. ವಂದ್ಯರ ಶ್ರೀ ವೆಂಕಟಾಚಲಯ್ಯ ಮತ್ತು ಶ್ರೀ ಸತ್ಯನಾರಾಯಣರವರು ೭೫ ರೂ ... ಕೊಟ್ಟರು.

ರಾಜೇಂದ್ರ ಪ್ರಸಾದರವರು ಸಂತಸ ಭಾಷಣ ಮಾಡಿ ಮಹಾತ್ಮ ಗಾಂಧಿಯವರ ನಿಧನದ ನಂತರ ಅವರ ತತ್ವಗಳನ್ನು ಕಾರ್ಯರೂಪಕ್ಕೆ ತರುವ ರಚನಾತ್ಮಕ ಕಾರ್ಯವನ್ನು ಮಾಡುವ ನಿಧಿಯನ್ನು ಸಂಗ್ರಹಿಸುವ ... ಸಂಸ್ಥಾನದಲ್ಲಿ ಪ್ರತಿಯೊಬ್ಬ ಭಾರತೀಯನೂ ತನ್ನ ವರಮಾನದಲ್ಲಿ ಒಂದು ದಿನದ ಆದಾಯವನ್ನು ನಿಧಿಗೆ ಕೊಡುವ ... ಭಾವಿಸಲಾಗಿತ್ತು. ಪ್ರತಿಯೊಬ್ಬರೂ ಹಣವನ್ನು ಉದಾರವಾಗಿ ಕೊಡಲು ಸಿದ್ಧರಾಗಿ ... ತಕ್ಷಣ ಕಾರ್ಯಕರ್ತರಿಲ್ಲದಿರುವುದೂ ಒಂದು ಕೊರತೆ. ಹಣ ಸಂಗ್ರಹಕ್ಕಿಂತ ಗಾಂಧೀಜಿಯವರ ಸಂದೇಶವು ಪ್ರತಿ ಮನೆಗೂ ಸೇರುವುದೇ ಇದರ ಉದ್ದೇಶ ... ಗಾಂಧಿ ಭಕ್ತಿ ಪ್ರದರ್ಶನದ ... ಮಾಡಬೇಕು. ... ಸತ್ಯ ಅಹಿಂಸೆ ಮತ್ತು ಸತ್ಯಾಗ್ರಹದ ... ಗಾಂಧೀಜಿಯವರ ತತ್ವಗಳನ್ನು ಪ್ರಚಾರ ಮಾಡಬೇಕು ... ಹೋರಾಟಕ್ಕಿಂತ ರಚನಾತ್ಮಕ ಕಾರ್ಯವು ಕಠಿಣವಾದದ್ದು ... ಹೇಳಿದರು.

ಬೆಂಗಳೂರಿಗೆ ರಾಜಾಜಿಯವರ ಭೇಟಿ

ಭಾರತದ ಗೌರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ತಿರುವಣ್ಣಾಮಲೆಗೆ ಮುಂದಿನ ತಿಂಗಳು ೧೭ನೇ ತಾ॥ ಭೇಟಿ ಇತ್ತು ಅನಂತರ ಮದರಾಸಿಗೆ ಹಿಂತಿರುಗಿ ಅಲ್ಲಿಂದ ೧೭ನೇ ತಾ॥ ಬೆಂಗಳೂರಿಗೆ ಆಗಮಿಸುವರೆಂದು ತಿಳಿದುಬಂದಿದೆ.

ಷಾಂಗೈ ರಕ್ಷಿಸಲು ಸಂಧಾನ

ಚೀಣದ ಅತ್ಯಂತ ದೊಡ್ಡ ನಗರವಾದ ಷಾಂಗೈಯನ್ನು ಶಾಂತ ರೀತಿಯಲ್ಲಿ ಒಪ್ಪಿಸಿ, ಅದು ನಷ್ಟವಾಗದಂತೆ ನೋಡಿಕೊಳ್ಳಲು ಅಲ್ಲಿನ ಕೈಗಾರಿಕಾ ಪ್ರಮುಖರು ಕಮ್ಯೂನಿಸ್ಟರೊಂದಿಗೆ ಸಂಧಾನ ನಡೆಸುತ್ತಿರುವರೆಂದು ಹೇಳಲಾಗಿದೆ. ಈಗ ಷಾಂಗೈ ನಗರವನ್ನು ಕಮ್ಯೂನಿಸ್ಟರು ಸುತ್ತುಗಟ್ಟಿರುವರೆಂದು ವರದಿಯಾಗಿದೆ.

ಮುದಿ ಗಂಡನಿಗಿಂತ ಜೈಲು ವಾಸ ಲೇಸು

ಬಿಹಾರ್ ಪ್ರಾಂತ್ಯದ ಮೋತಿಹಾರಿ ಎಂಬ ಹಳ್ಳಿಯಲ್ಲಿ ೧೭ ವರ್ಷದ ಯುವತಿಯೊಬ್ಬಳು ೬೦ ವರ್ಷದ ಮುದಿ ಗಂಡನೊಡನೆ ಬಾಳುವುದಕ್ಕಿಂತ ಜೈಲುವಾಸವೇ ಲೇಸೆಂದು ತೀರ್ಮಾನಿಸಿ ... ಜೈಲಿನಲ್ಲಿರಲು ಕಳುಹಿಸಬೇಕೆಂದು ಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾಳೆ.

ಹಂಪೆಯ ವಿರೂಪಾಕ್ಷನ ತೇರು ಭಸ್ಮವಾಯಿತು.

ವಿದ್ಯಾರಣ್ಯ ಸ್ವಾಮಿಗಳವರ ಕಾಲದಲ್ಲಿ ನಿರ್ಮಿಸಲಾಗಿದ್ದ ಹಂಪೆಯ ವಿರೂಪಾಕ್ಷಸ್ವಾಮಿಯ ತೇರಿಗೆ ಕಳೆದ ೧೯ ನೇ ತಾ॥ ಆಕಸ್ಮಾತ್ ಬೆಂಕಿಬಿದ್ದು, ಅದು ಸಂಪೂರ್ಣವಾಗಿ ನಾಶವಾಯಿತೆಂದು ಹೇಳಲಾಗಿದೆ.

ಹರಿಜನ ಬಾಲಕನು ಯೋಗಿಯಾದನು

ಪೂರ್ವ ಗೋದಾವರಿ ಜಿಲ್ಲೆಯ ಮುಮ್ಮಡಿವರಂ ಎಂಬ ಹಳ್ಳಿಯಲ್ಲಿ ೧೩ ವರ್ಷದ ಹರಿಜನ ಬಾಲಕನೊಬ್ಬನು ಯೋಗಿಯಾಗಿ, ಈಗ ಆತನನ್ನು ಶ್ರೀ ಬಾಲಯೋಗಿಯೆಂದು ಕರೆಯಲಾಗುತ್ತಿದೆ. ... ನೇ ಜನವರಿ ೨೬ ನೇ ತಾ॥ ತನ್ನ ಸ್ವಇಚ್ಛೆ ತಾನೇ ಧ್ಯಾನದಲ್ಲಿ ಮಗ್ನನಾದನೆಂದೂ, ಈಗಲೂ ಅತನು ಸಮಾಧಿ ಸ್ಥಿತಿಯಲ್ಲಿರುವನೆಂದೂ ಹೇಳಲಾಗಿದೆ. ಇಲ್ಲಿಯವರೆಗೂ ಆತನು ಆಹಾರ ಏನೂ ಸೇವಿಸದೆ ... ಕೊಂಡಿಲ್ಲ ಆದರೂ ಆತನ ಆರೋಗ್ಯ ಸ್ಥಿರವಾಗಿ ... ಶಿವರಾತ್ರಿ ... ದಿವಸಗಳಲ್ಲಿ ಮಾತ್ರ ಆತನು ... ಮಾತನಾಡುವನೆಂದು ಹೇಳಲಾಗಿದೆ. ... ಈಗಸ್ಥಳ ಸಿದ್ಧವಾಗುತ್ತಿದ್ದು.

ಶಿಕ್ಷೆ

ರಾಜಗಾನ ಸೇತುಪತಿಯವರಿಗೆ ಸ್ತ್ರೀ ... ವಿರುದ್ಧ ... ಶಿಕ್ಷೆ ... ವಿಚಾರಣೆ ನಡೆಯುವುದು.

... ಮನೆಗೂ ಹೋಗಿ ಅವನ್ನು ... ಮಾಡಬೇಕು ಎಂದು ಹೇಳಿದರು.

... ಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಇಂಜನಿಯರುಗಳ ಪಾತ್ರ ಮಹತ್ತರವಾದುದು

ಇಂಜನಿಯರುಗಳ ಸಮ್ಮೇಳನದಲ್ಲಿ ಕಾರ್ಮಿಕ ಸಚಿವರ ಭಾಷಣ

ಬೆಂಗಳೂರು ತಾ

ಸಂಸ್ಥೆಯ ... ನೇ ಸಮ್ಮೇಳನವು ನಿನ್ನೆ ದಿನ ... ಇಂಜನಿಯರಾದ ಶ್ರೀ ... ನರಸಿಂಗರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಕಾರ್ಮಿಕ ಸಚಿವ ... ಸ್ವಾಮಿಯವರು ... ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿ ... ಸ್ವತಂತ್ರ ಭಾರತದಲ್ಲಿ ಇಂಜನಿಯರುಗಳ ಪಾತ್ರವು ಮಹತ್ತರವಾದ ... ಇಂದಿನ ... ದಿನ ಪರಿಸ್ಥಿತಿಯನ್ನು ಸರಿಪಡಿಸಬೇಕೆಂದೂ ... ಜನಜೀವನದ ಮಟ್ಟವನ್ನು ಹೆಚ್ಚಿಸಲು ಇಂಜನಿಯರುಗಳು ನೆರವಾಗಬೇಕೆಂದೂ ಕೋರಿದರು

ಭಾರತ ... ಇಂಜನಿಯರಿಂಗ್ ಸಲಹೆಗಾರರಾದ ... ಭಾಷಣ ಮಾಡಿ ... ಇಂಜನಿಯರುಗಳು ... ಭಾರತದ ... ಇಂಜನಿಯರುಗಳು ... ನಿರ್ಮಾಣ ಕಾರ್ಯದಲ್ಲಿ ತೊಡಗಬೇಕು ... ಇಪ್ಪತ್ತು ... ಭಾರತದ ಇಂಜನಿಯರುಗಳಿಗೆ ... ದೂರೆಯುವಂತಾದರೆ ಅವರುಗಳು ವಿದೇಶೀಯರನ್ನು ಅವಲಂಬಿಸದೆ ಕಾವೇರಿ ... ಭಾರತದಲ್ಲಿ ... ನೀರು ಸಮುದ್ರಕ್ಕೆ ಸೇರಿ ವ್ಯರ್ಥವಾಗುತ್ತಿದೆ ಭಾರತದಲ್ಲಿ ನೀರಿನ ಉಪಯೋಗವನ್ನು ಬಹಳವಾಗಿ ಪಡೆಯಬೇಕಾಗಿದೆ ಏಕೆ ... ಅಮೆರಿಕಕ್ಕಿಂತ ಹತ್ತುಗಿ ... ನಮ್ಮ ದೇಶದಲ್ಲಿ ... ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಬೇಕು ... ಆಹಾರ ಧಾನ್ಯ ... ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ಹೆಚ್ಚು ಜಲಾಶಯಗಳು ನಿರ್ಮಾಣವಾಗಬೇಕು ಇದಕ್ಕೆ ಇಂಜನಿಯರುಗಳು ಶ್ರಮಪಡಬೇಕು ಭಾರತ ಸರ್ಕಾರದವರು ... ಕೋಟಿ ರೂ ... ಆಹಾರದ ... ಪರಿಪೂರ್ಣತೆಯನ್ನು ಸಾಧಿಸಲು ... ಎಂದು ಅವರು ... ದರು

ಅ|| ಭಾ|| ಪತ್ರಿಕಾ ಸಂಪಾದಕರ ಸಮ್ಮೇಳನದ ಅಧ್ಯಕ್ಷರು

ಅಖಿಲ ಭಾರತ ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನದ ಅಧ್ಯಕ್ಷತೆಗೆ ಶ್ರೀ ಪೋಥನ್ ಜೋಸೆಫ್‌ರವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುವುದರಿಂದ ಶ್ರೀ ಸಿ ಆರ್ ಶ್ರೀನಿವಾಸರವರು ಪ್ರತಿ ಸ್ಪರ್ಧೆಯಿಲ್ಲದೆ ಚುನಾಯಿತರಾಗಿದ್ದಾರೆ

ಭಾಷಾವಾರು ಕ್ರಮದಲ್ಲಿ ಹೈದರಾಬಾದಿನ ವಿಭಜನೆ

ಹೈದರಾಬಾದ್ ಸಂಸ್ಥಾನವನ್ನು ವಿಭಾಗಿಸಿ ಭಾಷಾವಾರು ಪ್ರಾಂತ್ಯಗಳಿಗೆ ಸೇರಿಸಬೇಕೆಂದು ... ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರವರು ತಿಳಿಸಿರುತ್ತಾರೆ

ಗಾಂಧೀ ನಿಧಿಗೆ ದ್ರವ್ಯ ಸಹಾಯ

ಡಾ|| ರಾಜೇಂದ್ರ ಪ್ರಸಾದರವರು ನಿನ್ನೆ ಬೆಂಗಳೂರಿನಿಂದ ಮೈಸೂರಿಗೆ ಬಂದಾಗ ಮಾರ್ಗದಲ್ಲಿ ಅನೇಕ ಪ್ರದೇಶಗಳಲ್ಲಿ ಅವರಿಗೆ ಒಟ್ಟು ... ರೂ ಅನ್ನು ಗಾಂಧಿ ನಿಧಿಗಾಗಿ ಅರ್ಪಿಸಲಾಯಿತು ವಿದ್ಯುಚ್ಛಕ್ತಿ ಕಾರ್ಖಾನೆಯವರ ... ರೂ, ಕೆಂಗೇರಿ ... ರೂ ಕ್ಲೋಸ್‌ಪೇಟೆ ..., ಚನ್ನಪಟ್ಟಣ ..., ಮದ್ದೂರು ..., ಮಂಡ್ಯ ... ಮತ್ತು ಶ್ರೀರಂಗಪಟ್ಟಣ ... ರೂ

ನಾಯಿಯು ಮೊಟ್ಟೆ ಇಟ್ಟಿತು

ಲಂಡನ್ನಿನ ವುಡ್‌ವರ್ಡ್ ಎಂಬ ಉಪಾಧ್ಯಾಯನ ನಾಯಿಯೊಂದು ಮೊಟ್ಟೆಯನ್ನು ಇಟ್ಟಿದೆಯೆಂದು ವರದಿಯಾಗಿದೆ

ಪಾಕೀಸ್ತಾನದಲ್ಲಿ ನೂತನ ಚರಿತ್ರೆ ಪಠ್ಯ ಪುಸ್ತಕ

ಬ್ರಿಟಿಷರ ಕಾಲದಲ್ಲಿ ರಚಿಸಲ್ಪಟ್ಟ ಚರಿತ್ರೆ ಪಠ್ಯ ಪುಸ್ತಕಗಳನ್ನು ಬರುವ ಜೂಲೈಯಿಂದ ತೆಗೆದು ಹಾಕಿ ಹೊಸದಾಗಿ ಪ್ರಕಟಿಸಿರುವ ಪಠ್ಯ ಪುಸ್ತಕಗಳನ್ನು ಜಾರಿಗೆ ತರಲಾಗುವುದೆಂದು ಪಾಕಿಸ್ತಾನದ ವಿದ್ಯಾ ಇಲಾಖೆಯವರು ತಿಳಿಸಿರುತ್ತಾರೆ

ಪ್ರಭಾ ಕಲಾವಿದರು

ರಾಜಧಾನಿಯ ಪ್ರಭಾ ಕಲಾವಿದರ ಸಂಘಕ್ಕೆ ಪ್ರಸಕ್ತ ಸಾಲಿಗೆ ಶ್ರೀ ಎಂ ವಿ ಎಸ್ ಮೂರ್ತಿಯವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಂ ಎಸ್ ಕೃಷ್ಣಮೂರ್ತಿಯವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಗಿದೆ

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು
ತಾ|| 27-4-49ರಿಂದ 2 ದಿನಗಳು

ಕಳೆದ ಮಹಾ ಯುದ್ಧದಲ್ಲಿ ವಿಶ್ವವನ್ನೇ ವಿನಾಶಗೊಳಿಸಿದ ಅಟಂ ಬಾಂಬ್ ಎಲ್ಲಿ? ಯಾರು? ಯಾವರೀತಿ ನಿರ್ಮಿಸಿದರೆಂಬ ರಹಸ್ಯವನ್ನೊಳಗೊಂಡ ಚಿತ್ರ

ಎಂ ಜಿ ಎಮ್ಮವರ

ಬಿಗಿನಿಂಗ್ ಆರ್ ದಿ ಎಂಡ್
Beginning or the End

Edited, printed and published by A R Nagarajan at the Sadhvi Press D Subbiah Road Mysore,

---

ಸಕ್ಕರೆ ಕಂಪೆನಿ ಕೆಲಸಗಾರರ ಸಂಘ

ಮಂಡ್ಯ

ಮೇಲ್ಕಂಡ ಸಂಘದ ವ್ಯವಹಾರದ ಬಗ್ಗೆ ಸಚಿವರು ಕೊಟ್ಟ ತೀರ್ಪಿಗೆ ಸ... ಸದೇ ಸಂಘದ ಅಧ್ಯಕ್ಷ ಉಪಾಧ್ಯಕ್ಷ ... ಕಾರ್ಯದರ್ಶಿ ಮತ್ತು ಖಜಾಂಚಿಯವರು ರಾಜೀನಾಮೆ ಇತ್ತಿದ್ದರಷ್ಟೆ ಕಳೆದ ... ತಾ|| ಭಾನುವಾರ ಸಂಘದ ಸಭೆ ... ಸದರಿ ತೀರ್ಪನ್ನು ಅಂಗೀಕರಿಸಿ ... ಮಂಡಳಿಯವರು ತಮ್ಮ ರಾಜೀನಾಮೆ ... ವಾಪಸು ತೆಗೆದುಕೊಳ್ಳಬೇಕೆಂದು ... ಥರಿಸಿದ ಮೇರೆ ಅವರೆಲ್ಲರೂ ಅದನ್ನು ... ದಕ್ಕೆ ತೆಗೆದುಕೊಂಡರೆಂದು ತಿಳಿದು ...

ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕಿನ ವಾರ್ಷಿಕ ಸ...

ನಂಜನಗೂಡಿನ ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕಿನ ... ನೇ ವಾರ್ಷಿಕ ... ಥೆಯು ಮಂದಿನ ತಿಂಗಳು ... ನೇ ... ಮಧ್ಯಾಹ್ನ ... ಗಂಟೆಗೆ ಜಿಲ್ಲಾ ... ಅಧ್ಯಕ್ಷರಾದ ಶ್ರೀ ಹೆಚ್ ಎಂ ... ಪ್ಪನವರ ಅಧ್ಯಕ್ಷತೆಯಲ್ಲಿ ನಡೆಯು...

ಗ್ರಾಮಸೇವಾ ಸಹಕಾರ ಸಂ...

ಮೈಸೂರು ತಾ|| ಮಂಡಕಳ್ಳಿ ... ಶ್ರೀ ಎಂ ಎ ಜೋಯಿಸರೂ, ಕಟಕ... ದಲ್ಲಿ ಶ್ರೀ ಎ ಶ್ರೀನಿವಾಸಮೂರ್ತಿ ... ರೂ ಮೊನ್ನೆ ದಿನ ಗ್ರಾಮಸೇವಾ ಸಹ... ಸಂಘಗಳ ಆರಂಭೋತ್ಸವವನ್ನು ... ರಿಸಿದರು ನಿನ್ನೆದಿನ ಶ್ರೀ ಎಸ್ ... ಮಯ್ಯನವರು ಹಿನಕಲ್‌ನಲ್ಲಿ ... ಪ್ರಾರಂಭೋತ್ಸವವನ್ನು ನೆರವೇರಿಸಿ...

10ಕ್ಕೇ ನಿಮಿಷಗಳಲ್ಲಿ ಕರಿ, ಮೊಸಲಾಗುವ ಅಸಲಿ ಆಗ್ರಾ ...
1 ರೂ ಗೆ 1½ ಸೇ ...
ಶೇಷಾಚಲ ಸ್ಟೋರ್ಸ್
ನಾರಾಯಣಶಾಸ್ತ್ರಿ ರೋಡು, ಮೈಸೂರು
ಇಂದೇ ಭೇಟಿ ಕೊಡಿ

ಎಸ್. ಎ. ಪಂಡಿತ್ ಅಂಡ್ ಸನ್ಸ್‌ರವರ



ಯೂನಿವರ್ಸಲ್ ಹೇರ್ಯ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ 0 12
ಮಹಾ ಸುಗಂಧರಾಜ ತೈಲ -)
,, ಚಂದನಾದಿ ತೈಲ)
,, ಭೃಂಗಾ ಮಲಕ ತೈಲ -)
—ಬೇಸಿಗೆ ಕಾಲಕ್ಕೆ ಉತ್ತಮ ... ತೈಲಗಳು
ಮಹಾಕೇಶಕೇ ತೈಲ— ತಲ... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ... ಯೋಗಿಸಬಹುದಾದ ಉತ್ತಮ ... ಬ್ರೇ ಟಾನಿಕ್ ಸೀಸೆ 2-0
ಪಂಚಾಮೃತ— ಮಕ್ಕಳ ... ಗಳಿಗೆ ಸಿದ್ಧ ಸಂಜೀವನ
ಮೈಸೂರು ಆಯುರ್ವೇದಿಕ್ ಫಾರ್ಮಸಿ.
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್
ಮೈಸೂರು



ಆರಾಮ ಕುರ್ಚಿಯ ಕ್ಯಾನ್‌ವಾಸ್ ಬಟ್ಟೆ ಮತ್ತು ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಷೀಟ್
ಒಳ್ಳೇ ನವ ಮಾದರಿಗಳಲ್ಲಿ ಬಂದಿದೆ
ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್ ಮೈಸೂರ್

ಗಣೇಶ ಮತ್ತು ಚಾಮುಂಡೇಶ್ವರಿ
ಟಾಕೀಸುಗಳಲ್ಲಿ
27—4—49ರಿಂದ ಕಿಕ್ಕಿರಿದ 4ನೇ ವಾರ
ಪ್ರತಿ ದಿನ 3 ಆಟಗಳು
ಪವಳಕ್ಕೊಡಿ
(ತಮಿಳು)
ಪಾತ್ರ —ಟಿ ಆರ್ ಮಹಾಲಿಂಗಂ, ಟಿ ಆರ್ ರಾಜಕುಮಾರಿ, ಎಂ ಎಸ್ ಸರೋಜಿನಿ ಎ ಎಸ್ ಕೃಷ್ಣ, ಟಿ ಎ ಮಧುರಂ

* ಪ್ರಭಾ *
27-4-49ರಿಂದ :: ದಿನವಹಿ 3 ಆಟಗಳು

ರೋಮಿಯೋ ಅಂಡ್ ಜೂಲಿಯಟ್
(ಹಿಂದಿ) ಪಾತ್ರ:-ನರ್ಗೀಸ್‌ಮತ್ತು ಸಪ್ರೂ

ರಾಜಕಮಲ್
ಮೈಸೂರು
2—4—49ರಿಂದ
ಅನೇಕರ ಪ್ರಾರ್ಥನೆ
ಒಂದು ವಾರ ಮಾತ್ರ
ಪ್ರತಿ ದಿನ ... ಆಟಗಳು
... ರಂಗರ
ಶಾಕುಂತಲ
...

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಬುಧವಾರ [illegible] [ಸಂಚಿಕೆ [illegible]

ಭಾರತ ರಿಪಬ್ಲಿಕ್ಕಿಗೆ ಕಾಮನ್‌ವೆಲ್ತಿನಲ್ಲಿ ಸ್ಥಾನ

ವಿಮಾನ ಕಾರ್ಖಾನೆಯಲ್ಲಿ ಹೊಸ ಉದ್ಯಮಗಳು

ಸ್ವಂ ಸು. ಫೋನ್] ಬೆಂಗಳೂರು ೨೭

ಭಾರತ ಸರ್ಕಾರದವರು ಸ್ಥಾಪಿಸಿರುವ ಕೈಗಾರಿಕಾ ಬೋರ್ಡಿನ ಸಭೆಯು ನೆನ್ನೆ ಕೇಂದ್ರ ಸರ್ಕಾರದ ಮಂತ್ರಿಗಳಾದ ಡಾ|| ಶ್ಯಾಮಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ನಡೆಯಿತು ಏರೋ ಇಂಜನ್, ರೈಲ್ವೆ ಗಾಡಿಗಳು, ಬಸ್ಸುಗಳು ಇವೇ ಮುಂತಾದವುಗಳ ತಯಾರಿಕೆಯು ಕಾರ್ಖಾನೆಯಲ್ಲಿ ಆಗುವಂತೆ ಏರ್ಪಡಿಸಬೇಕೆಂದು ಸದಸ್ಯರು ಅಭಿಪ್ರಾಯ ಪಟ್ಟರು, ಹಗುರವಾದ ರೈಲ್ವೆಯ ಗಾಡಿಗಳನ್ನು ತಯಾರಿಸಬೇಕೆಂದೂ ನಿರ್ಧಾರವಾಯಿತು

ಭ್ಯಾ|| ರೇಷ್ಮೆ ಬೋರ್ಡು

ಭಾರತ ಸರ್ಕಾರದವರು ಸ್ಥಾಪಿಸಿರುವ ಕೇಂದ್ರ ರೇಷ್ಮೆಯ ಬೋರ್ಡು ಸಭೆ ನಾಳೆ ಇಲ್ಲಿ ಸೇರಲಿದೆ ಮದ್ರಾಸ್ ಸರ್ಕಾರದ ಮಂತ್ರಿಗಳಾದ ಶ್ರೀ ಎನ್ ಸಂಜೀವರೆಡ್ಡಿಯವರು ಭಾಗವಹಿಸಲಿರುವರು ಕೇಂದ್ರ ಸರ್ಕಾರದ ಮಂತ್ರಿ ಡಾ|| ಮುಖರ್ಜಿಯವರು ಅಧ್ಯಕ್ಷತೆ ವಹಿಸುವರು.

ಶ್ರೀ ಧೀರೇಂದ್ರ ಮುಜುಮುದಾರ್

ಅ|ಭಾ|| ಚರಖಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಧೀರೇಂದ್ರ ಮುಜುಮುದಾರ್ ನಾಳೆ ದಿನ ಅರಸೀಕೆರೆಯಿಂದ ಆಗಮಿಸುವರು ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಮತ್ತು ಖಾದಿ ಕೆಲಸಗಾರರನ್ನು ಕುರಿತು ಭಾಷಣ ಮಾಡುವರು

ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯಕ್ಕೆ ಅವಕಾಶ

ಪ್ರ|| ಪ್ರ|| ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಸದಸ್ಯರು ಮಂತ್ರಿ ಮಂಡಲದಲ್ಲಿ ಅವಿಶ್ವಾಸ ನಿರ್ಣಯವನ್ನು ತರಲು ಸರ್ಕಾರದವರು ಅವಕಾಶ ಕಲ್ಪಿಸಿದ್ದಾರೆ. ಅವಿಶ್ವಾಸ ನಿರ್ಣಯವನ್ನು ತರುವವರು ಮೊದಲು ಆಯಾ ಸಭೆಗಳ ಅನುಮತಿ ಪಡೆಯಬೇಕು ಶಾಸನ ಸಭೆಯ ೩೦ ಮಂದಿ ಸದಸ್ಯರೂ ಪ್ರ|| ಪ್ರ|| ಸಭೆಯ ನೂರು ಮಂದಿ ಸದಸ್ಯರೂ ಅವಿಶ್ವಾಸ ನಿರ್ಣಯವನ್ನು ಚರ್ಚಿಸಲು ಅವಕಾಶ ಕೊಡಬೇಕೆಂದು ಕೇಳಲು ಎದ್ದು ನಿಂತರೆ ಅಗ್ರಾಸನರು ಮೂರನೆ ದಿನವಾಗಲಿ ಇಲ್ಲವೇ ಏಳು ದಿನಗಳೊಳಗಾಗಲಿ ಚರ್ಚೆಗೆ ಒಪ್ಪುವರು ಈ ಸಂಖ್ಯೆಗಿಂತಲೂ ಕಡಿಮೆಯಾದರೆ ನಿರ್ಣಯದ ಚರ್ಚೆಗೆ ಅವಕಾಶ ಸಿಗುವುದಿಲ್ಲ.

ಹೊಸ ಮುನಿಸಿಪಲ್ ಕಮಿಷನರ್

ಮೈಸೂರು ೨೭

ನಗರದ ಪೌರಸಭೆಯ ಕಮಿಷನರ ಸ್ಥಾನಕ್ಕೆ ಹಾಸನದ ಜಿಲ್ಲಾಧಿಕಾರಿಗಳಾದ ಶ್ರೀ ಎಲ್ ಮುನಿಸ್ವಾಮಿಯವರನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ ಈಗ ಇರುವ ಕಮಿಷನರರಾದ ಶ್ರೀ ಸಿ ನರಸಿಂಹಮೂರ್ತಿಯವರನ್ನು ಶಿವಮೊಗ್ಗೆಗೂ ಶ್ರೀ ಡಿ ಕೆ ಶ್ರೀನಿವಾಸಾಚಾರ್ಯರನ್ನು ... ಜಿಲ್ಲಾಧಿಕಾರಿಗಳನ್ನಾಗಿ ವರ್ಗಾಯಿಸಲಾಗುವುದೆಂದೂ ತಿಳಿದಿದೆ

ಕೇಂದ್ರ ಸರ್ಕಾರದ ವಾರ್ತಾ ಮಂತ್ರಿಗಳಾದ ಶ್ರೀ ಆರ್ ಆರ್ ದಿವಾಕರ್‌ರವರು ... ನೇ ತಾರೀಖು ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರುವರು ರಾಜಧಾನಿಗೂ ... ಬರುವ ನಿರೀಕ್ಷೆಯಿದೆ

ರೈಲು ಕಂಬಿ ತಪ್ಪಿತು

ಮೈಸೂರು ೨೭

ಮದ್ರಾಸಿನಿಂದ ಬೆಂಗಳೂರಿಗೆ ಈ ದಿನ ಬೆಳಗ್ಗೆ ಬರಬೇಕಾಗಿದ್ದ ಮೈಲ್ ರೈಲಿನ ಎರಡು ಗಾಡಿಗಳು ಪ್ಲಾಟ್‌ಫಾರಂ ಬಳಿ ಕಂಬಿ ತಪ್ಪಿದುದರಿಂದ ಸವಾರಿ ರೈಲೂ ಮತ್ತು ಮೈಸೂರು ಕಡೆ ಹೊರಡುವ ಮೈಲ್ ರೈಲೂ ತಡವಾಗಿ ಹೊರಟುವು ಯಾವ ನಷ್ಟವೂ ಸಂಭವಿಸಲಿಲ್ಲವೆಂದು ತಿಳಿದುಬಂದಿದೆ

ಹರಿಕಥೆ

ರಾಜಧಾನಿಯ ಸಂಸ್ಕೃತ ಮಹಾ ಪಾಠಶಾಲೆಯಲ್ಲಿರುವ ಶ್ರೀ ಶ್ರೀಗಳವರ ದೇವಾಲಯದಲ್ಲಿ ನಾಳೆ ಸಂಜೆ ೬ ಘಂಟೆಗೆ ಶ್ರೀ ವಿಠಲ ಸುಬ್ಬರಾಯರಿಂದ ಶ್ರೀ ಕೃಷ್ಣಗಾರುಡಿ ಎಂಬ ಹರಿಕಥೆ ನಡೆಯುವುದು

ಷಡ್ಗ್ರಹ ಯೋಗ ಶಾಂತಿ

ನಾಳೆ ಚೈತ್ರ ಬಹುಳ ಅಮಾವಾಸ್ಯೆ ಗುರುವಾರ ಅಶ್ವಿನಿ ನಕ್ಷತ್ರ, ಈ ದಿನ ಮೇಷರಾಶಿಯಲ್ಲಿ ರವಿ, ಚಂದ್ರ, ಕುಜ ಬುಧ, ಶುಕ್ರ, ರಾಹು, ಈ ಷಡ್ಗ್ರಹ ಯೋಗವು ಸಂಭವಿಸುತ್ತಿದ್ದುದರಿಂದ ಮೇಷರಾಶಿಯಲ್ಲಿ ಜನಿಸಿರುವವರು ತತ್ಪರಿಹಾರಾರ್ಥವಾಗಿ ನವಗ್ರಹ ಶಾಂತಿ ಮತ್ತು ನವಗ್ರಹ ಧಾನ್ಯ ದಾನಗಳನ್ನು ನಡೆಸಿ ಪ್ರಸಾದ ಸ್ವೀಕರಿಸತಕ್ಕದ್ದೆಂದು ಜ್ಯೋತಿರ್ವಿದ್ವಾನ್ ಪಂಡಿತ ಶ್ರೀ ಎನ್ ರಂಗನಾಥಾಚಾರ್ಯರು ತಿಳಿಸಿರುತ್ತಾರೆ

ಶ್ರೀ ಶಂಕರ ಜಯಂತಿ ಮಹೋತ್ಸವ

ರಾಜಧಾನಿಯ ಶ್ರೀ ಪ್ರಸನ್ನ ... ಸ್ವಾಮಿ ದೇವಸ್ಥಾನ ಮತ್ತು ಸಂಸ್ಕೃತ ಮಹಾ ಪಾಠಶಾಲೆಗಳಲ್ಲಿ ಇದೇ ೨೯ ನೇ ತಾ|| ನಿಂದ ಮುಂದಿನ ತಿಂಗಳು ೯ ನೇ ತಾ|| ವರೆವಿಗೆ ಶ್ರೀ ಶಂಕರ ಜಯಂತಿ ಪ್ರಯುಕ್ತ ಪ್ರತಿದಿನ ಬೆಳಗ್ಗೆ ೮ ಘಂಟೆಗೆ ಪೂಜೆ ಮತ್ತು ಸಂಜೆ ೬ ಘಂಟೆಗೆ ಸಂಗೀತ, ಉಪನ್ಯಾಸ ಮತ್ತು ಹರಿಕಥೆಗಳು ನಡೆಯುವುವು

ಪ್ರಭುಗಳೊಡನೆ ಭೇಟಿ

ಶ್ರೀಮನ್ಮಹಾರಾಜರವರು ನೆನ್ನೆ ಬೆಳಗ್ಗೆ ದಿವಾನ್ ಪ್ರವರ್ತ ಎ ಎಸ್ ರಂಗಸ್ವಾಮಿ ಅಯ್ಯಂಗಾರ್ಯರಿಗೆ ಭೇಟಿ ದಯಪಾಲಿಸಿದ್ದರು

ಛತ್ರ ಎರಡೇ ರೂಂ

ಇನ್ನುಮೇಲೆಗೂ ಮೂರು ರೂಂ ಛತ್ರ ... ತ್ರವನ್ನು ತನ್ನ ... ನಡೆಸಬೇಕಾಗಿ ... ರವರು ತೀರ್ಮಾನಿಸಿದ್ದಾರೆ

ಹೈಕೋರ್ಟಿಗೆ ಇನ್ನಿಬ್ಬರು ನ್ಯಾಯಾಧೀಶರು

ಸ್ವಂ ಸು ಫೋನ್] ಬೆಂಗಳೂರು ೨೭

ಸಂಸ್ಥಾನದ ಹೈಕೋರ್ಟಿಗೆ ಈಗ ಇರುವ ನ್ಯಾಯಾಧೀಶರ ಜೊತೆಗೆ ಇನ್ನೂ ಇಬ್ಬರನ್ನು ನೇಮಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಗೊತ್ತಾಗಿದೆ

ರಾಮರಾಜಯ್ಯಂಗಾರ್ಯರು ಟ್ರಸ್ಟ್‌ಬೋರ್ಡ್ ಅಧ್ಯಕ್ಷರೆ?

ಬೆಂಗಳೂರು ನಗರದ ಟ್ರಸ್ಟ್‌ಬೋರ್ಡಿನ ಅಧ್ಯಕ್ಷರನ್ನಾಗಿ ಮಾಜಿ ಪುರಸಭಾಧ್ಯಕ್ಷ ಶ್ರೀ ಕೆ ರಾಮರಾಜಯ್ಯಂಗಾರ್ಯರನ್ನು ನೇಮಿಸಲಾಗುವುದು ತಿಳಿದುಬಂದಿದೆ

ರೆವಿನ್ಯೂ ಕೇಸುಗಳಿಗೆ ವಿಶೇಷ ನ್ಯಾಯಾಧೀಶರು

ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ರೆವಿನ್ಯೂ ... ಕೇಸುಗಳನ್ನು ವಿಚಾರಿಸಲು ಸರ್ಕಾರ ... ವಿಶೇಷ ನ್ಯಾಯಾಸ್ಥಾನವನ್ನು ಏರ್ಪಡಿಸಿದ್ದಾರೆ ಮೈಸೂರು ... ಜಡ್ಜರಾದ ಶ್ರೀ ಎಂ ಆರ್. ಜಯರಾಮ್‌ರವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ

ಕೇಂದ್ರ ಹಣಕಾಸಿನ ಪರಿಶೀಲನಾ ಸಮಿತಿ

ಸಂಸ್ಥಾನಗಳ ಹಣಕಾಸು ಪರಿಶೀಲನಾ ಸಮಿತಿಯವರು ಇದೇ ... ನೇ ತಾ|| ಬೆಂಗಳೂರಿಗೆ ಆಗಮಿಸಿ ಸರ್ಕಾರದವರೊಡನೆ ಮಾತುಕತೆ ನಡೆಸುವರು.

ಅಮೆರಿಕದ ರಾಯಭಾರಿ ಭವನಕ್ಕೆ ಕಮ್ಯೂನಿಸ್ಟರು

ನಾನ್‌ಕಿಂಗಿನಲ್ಲಿರುವ ಅಮೆರಿಕದ ರಾಯಭಾರಿ ಭವನಕ್ಕೆ ... ಜನ ಸಶಸ್ತ್ರ ಕಮ್ಯೂನಿಸ್ಟ್ ಸೈನಿಕರು ನುಗ್ಗಿ ಕೆಲವು ಕೊಠಡಿಗಳನ್ನು ಶೋಧಿಸಿದರು ವರದಿಯಾಗಿದೆ

ಮಂಗಾ ತಪ್ಪಿಸಿಕೊಂಡಿದೆ

ಮಂಡಿಪೇಟೆಯಲ್ಲಿ ಒಡೆಯರಯ್ಯನ ಬೀದಿ ... ನಾಗಪ್ಪಶೆಟ್ಟರ ... ಮನೆಯಲ್ಲಿ ... ನಾಗಮ್ಮನವರ ... ಎಂಬ ... ತ್ತು ... ವರ್ಷದ ... ಎರಡು ... ತಿಳಿದ್ದಲ್ಲಿ ... ಕಳೆದಿದೆ ... [illegible]

ಕಾರ್ಮಿಕರ ಮಸೂದೆಯನ್ನು ಮುಂದಕ್ಕೆ ಹಾಕುವಂತೆ ಸೂಚನೆ

ಸ್ವಂ. ಸು ಫೋನ್] ಬೆಂಗಳೂರು ೨೭

ಭಾರತದಾದ್ಯಂತ ಒಂದೇ ಸಮನಾದ ಕಾರ್ಮಿಕ ಶಾಸನವನ್ನು ಸಿದ್ಧಗೊಳಿಸಲು ಕೇಂದ್ರ ಸರ್ಕಾರದವರು ಆಲೋಚಿಸುತ್ತಿರುವುದರಿಂದ, ಕಳೆದ ಶಾಸನ ಸಭೆಯಲ್ಲಿ ಸರ್ಕಾರದವರು ಮಂಡಿಸಿ, ಸ್ಥಾಯಿ ಸಮಿತಿಗೆ ಕಳುಹಿಸಲ್ಪಟ್ಟಿರುವ ಕಾರ್ಮಿಕ ಮಸೂದೆಯನ್ನು ಸದ್ಯಕ್ಕೆ ಮುಂದೆ ಹಾಕಬೇಕೆಂದು ಭಾರತ ಸರ್ಕಾರದವರು ಸೂಚನೆ ಕೊಟ್ಟಿರುವರೆಂದೂ, ಆದುದರಿಂದ ಅದರ ಪರಿಶೀಲನೆಯನ್ನು ಮುಂದುವರಿಸಲಾಗದೆಯೆಂದೂ ತಿಳಿದುಬಂದಿದೆ

ಕೇಂದ್ರದಲ್ಲಿ ಮೈಸೂರು ಹಣಕಾಸಿನ ಐಕ್ಯ

ಸಂಸ್ಥಾನದ ಹಣಕಾಸಿನ ಕೆಲವು ಬಾಬುಗಳನ್ನು ಕೇಂದ್ರ ಸರ್ಕಾರಕ್ಕೆ ಐಕ್ಯ ಮಾಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೆಂದೂ, ಈ ಸಂಬಂಧದಲ್ಲಿ ಹಣಕಾಸಿನ ಇಲಾಖೆಯವರು ಒಂದು ಪಟ್ಟಿಯನ್ನು ತಯಾರಿಸಿರುವರೆಂದೂ ಹೇಳಲಾಗಿದೆ ಅದರ ಪ್ರಕಾರ ೩ ಕೋಟಿ ೭೦ ಲಕ್ಷ ರೂ ಗಳನ್ನು ಕೇಂದ್ರಕ್ಕೆ ಕೊಡಬೇಕಾಗುವುದೆಂದೂ ತಿಳಿದುಬಂದಿದೆ

ಇಂಡೋನೇಷ್ಯದ ಬಗ್ಗೆ ಮಾಜಿ ಗೌರ್ನರರ ಉಪವಾಸ

ಸುಮಾತ್ರ ಪೂರ್ವತೀರದ ಗೌರ್ನರರಾಗಿದ್ದ ೬೪ ವರ್ಷದ ವಾನ್ ಸುರ್‌ವೋರವರು ಹಾಲೆಂಡಿನ ರಾಣಿಯವರಿಗೆ ಒಂದು ತಂತಿಯನ್ನು ಕಳುಹಿಸಿ. ಇಂಡೋನೇಷ್ಯದ ಸಮಸ್ಯೆ ಬಗ್ಗೆ ಹಾಲೆಂಡ್ ಸರ್ಕಾರವು ತನ್ನ ನೀತಿಯನ್ನು ಬದಲಾಯಿಸದಿದ್ದ ಪಕ್ಷದಲ್ಲಿ ತಾವು ಇದೇ ೩೦ನೇ ತಾ|| ನಿಂದ ಉಪವಾಸ ಸತ್ಯಾಗ್ರಹ ಹೂಡುವುದಾಗಿ ತಿಳಿಸಿರುತ್ತಾರೆ ಸ್ವತಂತ್ರ ಇಂಡೋನೇಷ್ಯ ಸರ್ಕಾರವನ್ನು ಕೂಡಲೇ ಸ್ಥಾಪಿಸಬೇಕೆಂದೂ ಅವರು ಒತ್ತಾಯಪಡಿಸಿರುತ್ತಾರೆ

ಆರ್. ಎಸ್. ಎಸ್. ಪುಸ್ತಕಕ್ಕೆ ಪ್ರತಿಬಂಧಕ

"ಗಾಂಧೀಜಿ ಮತ್ತು ಗುರುಜಿ-ಇಬ್ಬರೂ ನ್ಯಾಯವನ್ನು ಬೇಡಿದರು, ಎಂಬ ಇಂಗ್ಲೀಷ್ ಪುಸ್ತಕವನ್ನು ಮುಟ್ಟಗೋಲು ಹಾಕಿಕೊಳ್ಳಬೇಕೆಂದು ದೆಹಲಿಯ ಚೀಫ್ ಕಮೀಷನರು ಆಜ್ಞೆ ಮಾಡಿದ್ದಾರೆ

ಭಾರತವು ಕಾಮನ್‌ವೆಲ್ತಿನಲ್ಲಿರಲು ಒಪ್ಪಂದ

ಭಾರತವು ಸನ್ನದಲ್ಲಿಯೇ ರಿಪಬ್ಲಿಕ್ ರಾಷ್ಟ್ರವಾಗುವುದಾದರೂ ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿರಬೇಕೆಂಬ ನಿಲುವಿಗೆ ಇತರ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನಿಗಳು ಒಪ್ಪಿದ್ದಾರೆಂದೂ ಅವರುಗಳು ಈ ದಿನ ಬಕಿಂಗ್ ... ಅರಮನೆಯಲ್ಲಿ ದೊರೆಗಳನ್ನು ಕಂಡು, ಈ ನಿರ್ಧಾರವನ್ನು ತಿಳಿಸುವರೆಂದೂ ವರದಿಯಾಗಿದೆ

ನೂಲುವ ಸ್ಪರ್ಧೆ

ಮೈಸೂರು ೨೭

ಮಿರ್ಜಾ ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಗಾಂಧೀ ಸೇವಾ ಸಂಘದ ಆಶ್ರಯದಲ್ಲಿ ನೂಲುವ ಸ್ಪರ್ಧೆ ನಡೆಯುವುದು. ಪುರಸಭಾಧ್ಯಕ್ಷರಾದ ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸುವರು

ಪರದೇಶದವರನ್ನು ವಿವಾಹವಾದ ರಷ್ಯರ್ನ ಮಹಿಳೆಯರು

ಪರದೇಶದವರನ್ನು ವಿವಾಹವಾದ ರಷ್ಯದ ಮಹಿಳೆಯರ ತಮ್ಮ ಗಂಡಂದಿರಿರುವ ದೇಶಗಳಿಗೆ ಹೋಗಲು ಇರುವ ಪ್ರತಿಬಂಧಕವನ್ನು ಕೂಡಲೇ ರಷ್ಯದ ಸರ್ಕಾರವು ತೆಗೆದು ಹಾಕಬೇಕೆಂದೂ, ಇಲ್ಲವಿದ್ದರೆ ರಾಷ್ಟ್ರಗಳ ಸ್ವಾತಂತ್ರ್ಯ ... ಗುವುದೆಂದೂ ... ಮಾಡಲಾಗಿದೆ

ಷಾಂಗೈ ನಗರದ ಪತನ

ಚೀಣದ ಅತ್ಯಂತ ದೊಡ್ಡ ನಗರವಾದ ಷಾಂಗೈಯು ಕಮ್ಯೂನಿಸ್ಟರ ವಶವಾಗಿದೆಯೆಂದು ವರದಿಯಾಗಿದೆ

ಭಾರತದ ಮುಸ್ಲಿಂ ಲೀಗಿನ ಮೇಲೆ ದಾವಾ

ಭಾರತದಲ್ಲಿ ಹಿಂದೆ ಇದ್ದ ಮುಸ್ಲಿಂ ಲೀಗಿನ ನಿಧಿಯಿಂದ ... ರೂಪದಲ್ಲಿ ... ಪಾಕಿಸ್ಥಾನ ಮುಸ್ಲಿಂ ಲೀಗಿನವರ ... ದಾವಾ ... ಮುಸ್ಲಿಂ ಲೀಗಿನ ... ವರದಿಯಾಗಿದೆ

ಕಾಮನ್‌ವೆಲ್ತಿನಲ್ಲಿ ಭಾರತದ ಸ್ಥಾನ

ನಿನ್ನೆ ದಿನ ಲಂಡನ್ನಿನಲ್ಲಿ ಬ್ರಿಟಿಷ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ... ಸ್ವತಂತ್ರ ಭಾರತವು ... ಎಂದರೆ ಭಾರತವು ... ಸ್ಥಾನವನ್ನು ... ಒಪ್ಪಂದಕ್ಕೆ ಸಮ್ಮೇಳನವು ಒಪ್ಪಿಗೆ ಕೊಡಬಹುದೆಂದು ತಿಳಿದು ಬಂದಿದೆ

ಮೈಸೂರು ಸಿಟಿ ರೇಷನಿಂಗ್

No M 9 3 18-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ... ಸರ್ಕಾರ ... ವರ್ತಕರ ... ಸಗಟು ... ಸರ್ಕಾರ ... ರೇಷನಿಂಗ್ ... ಕಂಟ್ರೋಲರು ...

ಖಜಾನೆ ಬೀಗದ ಕೈ ಕಳವು

ಫಿರೋಜ್‌ಪುರ ಜಿಲ್ಲೆಯ ಫಜಲಿಕಾ ತಹಸೀಲ್‌ದಾರರಾದ ನಾಯಬ್‌ದಾರರ ಮನೆಗೆ ದರೋಡೆಗಾರರು ನುಗ್ಗಿ ... ಸಾವಿರ ರೂ ಬೆಲೆ ಬಾಳುವ ಹಣ ಮತ್ತು ಆಭರಣಗಳನ್ನು ಕಳವುದಾಡಿ, ಸರ್ಕಾರಿ ಖಜಾನೆಯ ಬೀಗದ ಕೈಯನ್ನು ಅಪಹರಿಸಿಕೊಂಡು ಹೋದರೆಂದು ವರದಿಯಾಗಿದೆ

ಕಾಂಗ್ರೆಸ್ಸಿಗೆ ಅವಿಧೇಯರಾದವರಿಗೆ ಸಹಾಯವಿಲ್ಲ

ರಾಜಕೀಯ ಹೋರಾಟದಲ್ಲಿ ನೊಂದವರಿಗೆ ಈಗ ಮದರಾಸ್ ಸರ್ಕಾರದವರು ಕೊಡುತ್ತಿರುವ ಭೂಮಿಗಳನ್ನು ಕಾಂಗ್ರೆಸ್ಸಿಗೆ ವಿಧೇಯರಲ್ಲದವರಿಗೆ ಕೊಡುವುದಿಲ್ಲವೆಂದು ಸೂಚಿಸಿ ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ

ನೇಪಾಳದಲ್ಲಿ ಸತ್ಯಾಗ್ರಹ

ರಾಜಕೀಯ ಬಂದಿಗಳ ಬಿಡುಗಡೆ, ಸರ್ಕಾರದವರಿಂದ ನಿಷೇಧಿಸಲ್ಪಟ್ಟಿರುವ ರಾಜಕೀಯ ಸಂಸ್ಥೆಗಳ ಒದಲುವಣೆಗಳನ್ನು ಸರ್ಕಾರದವರು ಮಾಡದಿದ್ದಲ್ಲಿ ಜೂನ್ ... ನೇ ತಾ॥ ನಿಂದ ಸತ್ಯಾಗ್ರಹ ಹೂಡಬೇಕೆಂದು ನೇಪಾಳದ ರಾಷ್ಟ್ರೀಯ ಕಾಂಗ್ರೆಸ್ಸಿನವರು ನಿರ್ಧರಿಸಿದ್ದಾರೆ

ಸೂರ್ಯಗ್ರಹಣದ ಆಚರಣೆ ಇಲ್ಲ

ಇದೇ ೨೮ನೇ ತಾ॥ ಗುರುವಾರ ಸಂಭವಿಸುವ ಪಾರ್ಶ್ವ ಸೂರ್ಯಗ್ರಹಣವು ಭಾರತದಲ್ಲಿ ಕಾಣಿಸದ ಪ್ರಯುಕ್ತ ಗ್ರಹಣಾಚರಣೆ ಇಲ್ಲವೆಂದು ಜ್ಯೋತಿಷ ಮತ್ತು ಧರ್ಮಶಾಸ್ತ್ರ ವಿದ್ವಾನ್ ಎಸ್ ಎ ಕೃಷ್ಣಜೋಯಿಸರು ತಿಳಿಸಿರುತ್ತಾರೆ

೮ ಲಕ್ಷ ಟನ್ ಹೆಚ್ಚಿಗೆ ಆಹಾರ ಬೆಳೆಯಲು ಯೋಜನೆ

೧೯೫೦-೫೧ರ ಒಳಗಾಗಿ ಮದರಾಸು ೮,೬೦,೦೦೦ ಟನ್ ಆಹಾರ ಧಾನ್ಯವನ್ನು ಹೆಚ್ಚಿಗೆ ಬೆಳೆಯಲು ಕಾರ್ಯಕ್ರಮ ಕೈಗೊಂಡಿರುವುದಾಗಿ ತಿಳಿಸಲಾಗಿದೆ

Morning Shows at

LAKSHMI

THEATRE

From 29-4-49 for 3 days

LISBON STORY

ಲಿಸ್‌ಬನ್ ಸ್ಟೋರಿ

With-Patricia Burke and David Farrar

ಕೆ. ವಿ. ಪುಟ್ಟಪ್ಪನವರಿಗೆ ಸರ್ಕಾರದ ಎಚ್ಚರಿಕೆ ?

ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ... ಮೈಸೂರು ಫಸ್ಟ್ ಗ್ರೇಡ್ ಕಾಲೇಜಿನ ... ಡ ಹಬ್ಬದ ಸಮಯದಲ್ಲಿ ಅಧ್ಯಕ್ಷರಾಗಿದ್ದ ಪ್ರೊ॥ ಕೆ ವಿ ಪುಟ್ಟಪ್ಪನವರು, ಕರ್ನಾಟಕ ಏಕೀಕರಣವನ್ನು ಸಮರ್ಥಿಸಿ ಭಾಷಣಮಾಡಿದರಷ್ಟೆ ಈಗ ಸರ್ಕಾರದವರು ಅವರ ಗಮನವನ್ನು ಸೆಳೆದು ಅದಕ್ಕಾಗಿ ಎಚ್ಚರಿಕೆ ಕೊಟ್ಟಿದ್ದಾರೆಂದು ಮುಬ್ಬಯಿಯ ... ಕರ್ನಾಟಕ ಪತ್ರಿಕೆ ಪ್ರಕಟಿಸಿದೆ

ಪ್ರಾಂತ್ಯಗಳ ಮಾರಾಟ ತೆರಿಗೆ ಕೇಂದ್ರ ಸರ್ಕಾರಕ್ಕೆ

ಎಲ್ಲ ಪ್ರಾಂತ್ಯಗಳಲ್ಲೂ ಒಂದೇ ಮಾರಾಟ ತೆರಿಗೆಯ ವ್ಯವಸ್ಥೆ ಇರಬೇಕೆಂಬುದಕ್ಕೆ ಮಾನ್ಯತೆ ದೊರೆಯದಿದ್ದುದರಿಂದ ಮಾರಾಟ ತೆರಿಗೆಯನ್ನು ಪ್ರಾಂತ್ಯಗಳ ಆಡಳಿತದಿಂದ ಕೇಂದ್ರಸರ್ಕಾರವು ವಹಿಸಿಕೊಳ್ಳುವ ಯೋಜನೆ ಮಾಡಿದೆಯೆಂದು ತಿಳಿದುಬಂದಿದೆ ಇದು ಪ್ರಾಂತೀಯ ಸರ್ಕಾರಗಳಿಗೆ ... ಅನ್ಯಾಯದ ಬಾಬಾಗಿರುವುದರಿಂದ ಇದನ್ನು ಕೇಂದ್ರಕ್ಕೆ ವಹಿಸಿಕೊಡಲು ಪ್ರಾಂತ್ಯಗಳು ಒಪ್ಪುವುದಿಲ್ಲವೆಂದು ... ಲಾಗಿದೆ

ಭಾರತ ಸರ್ಕಾರಕ್ಕೆ ಆರ್. ಎಸ್. ಎಸ್. ನವ ಅಂಗರಚನೆ

ಆರ್ ಎಸ್. ಎಸ್ ಸಂಸ್ಥೆಯ ... ರಚನೆಯನ್ನು ಅದರ ನಾಯಕರಾದ ಶ್ರೀ ಎಂ ಎಸ್ ಗೋಲ್‌ವಾಲ್ಕರ್‌ರವರು ಭಾರತ ಸರ್ಕಾರಕ್ಕೆ ಕಳುಹಿಸಿರುವರೆಂದೂ ... ನ್ನು ಅಂಗೀಕರಿಸಿ ಸಧ್ಯದಲ್ಲಿಯೇ ಆರ್ ಎಸ್ ಎಸ್ ನವರನ್ನೆಲ್ಲಾ ಬಿಡುಗಡೆ ಮಾಡಲಾಗುವುದೆಂದೂ, ಆ ಸಂಸ್ಥೆಯ ಮೇಲಿನ ಪ್ರತಿಬಂಧಕವನ್ನು ತೆಗೆದು ... ಕಲಾಗುವುದೆಂದೂ ಹೇಳಲಾಗಿದೆ

* ಪ್ರಭಾ *

27-4-49ರಿಂದ :: ದಿನವಹಿ ೩ ಆಟಗಳು

ರೋಮಿಯೋ ಅಂಡ್ ಜೂಲಿಯಟ್

(ಹಿಂದಿ) ಪಾತ್ರ:-ನರ್ಗೀಸ್ ಮತ್ತು ಸಪ್ರೂ

ಪ್ರಕಟಣೆ

ಮೈಸೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ

ಫಿರ್ಯಾದಿ—ಮಂಗಳೂರು ಗಣೇಶ ಬೀಡಿ ವರ್ಕ್ಸ್

ಆರೋಪಿ— ಶ್ರೀ ಕೆ ಆರ್ಮುಗಂ, ಪ್ರೊಪ್ರೈಟರ್

ಕರ್ನಾಟಕ ಪ್ರೆಸ್, ಡೋರ್ ನಂಬರ್ ೧೨೦೫

ಚಿಕ್ಕ ಸಂತೆ ಬೀದಿ, ಮಂಡಿ ಮೊಹಲ್ಲಾ, ಮೈಸೂರು

ಆರೋಪಿಯು ಫಿರ್ಯಾದಿರವರ ಮಂಗಳೂರು ಗಣೇಶ ಬೀಡಿಗಳ ರ್‍ಯಾಪರುಗಳನ್ನು ಹೋಲುವಂತೆ ಕೃತಕವಾದ ಬ್ಲಾಕ್‌ಗಳಿಂದ ರ್‍ಯಾಪರುಗಳನ್ನು ಅಚ್ಚುಹಾಕಿ ಮಾರುತ್ತಿರುವರೆಂತ ಫಿರ್ಯಾದಿರವರು ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿಕೊಟ್ಟು ಸದರಿ ಬ್ಲಾಕ್ ಮತ್ತು ರ್‍ಯಾಪರು ವಗೈರೆ ಸಾಮಾನುಗಳನ್ನು ಪತ್ತೆ ಹಚ್ಚಲು ಸರ್ಚ್ ವಾರಂಟು ಒಗೆ ... ಪ್ರಸ್ತುತ ... ನವರ ... ತಾ॥ ೧೯-೪-೪೯ ರಲ್ಲು ಕೂಡಾ ಪ್ರೆಸ್ಸನ್ನು ... ಶೋಧಿಸಿ ಅಲ್ಲಿ ಸಿಕ್ಕಿದ ಬ್ಲಾಕುಗಳು, ರ್‍ಯಾಪರುಗಳು ಮತ್ತು ಇವುಗಳಿಗೆ ಸಂಬಂಧಪಟ್ಟ ಸಾಮಾನುಗಳನ್ನು ಕೋರ್ಟಿಗೆ ಹಾಜರ್ಮಾಡಿ ... ತಾ॥ ... ರ ... ಕ್ಕೆ ವಿಚಾರಣೆಯು ಹಿಯರಿಂಗ್ ಇರುತ್ತದೆ

ಮಂಗಳೂರು ಗಣೇಶ ಬೀಡಿ ವರ್ಕ್ಸ್

ಶ್ರೀರಾಮಪೇಟೆ, ಮೈಸೂರು

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು ತಾ॥ 27-4-49ರಿಂದ 2 ದಿನಗಳು

ಕಳೆದ ಮಹಾ ಯುದ್ಧದಲ್ಲಿ ವಿಶ್ವವನ್ನೇ ವಿಶಾದಗೊಳಿಸಿ ವಿಶ್ವಕ್ಕೇ ಒಂದಾದ "ಆಟಂ ಬಾಂಬ್" ಎಲ್ಲಿ ಯಾರು? ಯಾವ ರೀತಿ ನಿರ್ಮಿಸಿದರೆಂಬ ರಹಸ್ಯವನ್ನು ತಿಳಿಯಿರಿ

ಎಂ ಜಿ ಎಮ್ಮೂರವರ

ಬಿಗಿನಿಂಗ್ ಆರ್ ದಿ ಎಂಡ್

BEGINNING OR THE END

Edited, printed and published by A R Nagarajan at the Sadhvi Press, D. Subbiah Road Mysore

ಪ್ರಭುದೇವಾ ಟಾಕೀಸಿನಲ್ಲಿ

29 4 49ನೇ ಶುಕ್ರವಾರದಿಂದ :: ಪ್ರತಿ ದಿನ ೩ ಆಟಗಳು

ಜೆಮಿನಿಯವರ ಅತ್ಯುತ್ತಮವಾದ ಸಾಮಾಜಿಕ ತಮಿಳು ಚಿತ್ರ

ಮಿಸ್ ಮಾಲಿನಿ

ಪುಷ್ಪವಲ್ಲಿ ಸುಂದರಿ ಬಾಯಿ, ಕೊತ್ತಮಂಗಲಂ ಸುಬ್ಬು, ಎಲ್ ನಾರಾಯಣರಾವ್ ಮುಂತಾದವರ

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೩೦-೯-೪೯ [ಸಂಚಿಕೆ ೨೨೭

ಶ್ರೀಮನ್ಮಹಾರಾಜರು ಅಖಿಲ ಕರ್ಣಾಟಕದ ಶಾಸನ ಬದ್ಧ ಪ್ರಭುಗಳಾಗಬೇಕು

ಬಹಿರಂಗ ಸಭೆಯಲ್ಲಿ ನಿರ್ಣಯ

ಮೈಸೂರು ೨೯

ಮೈಸೂರಿನ ಭವಿಷ್ಯದ ಬಗ್ಗೆ ಪ್ರಜಾಭಿಪ್ರಾಯವನ್ನು ಪಡೆಯಲು ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯು ಶ್ರೀ ಎಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಎಲ್ಲ ತಾಲ್ಲೂಕಿನ ಪ್ರತಿನಿಧಿಗಳೂ ಮತ್ತು ಹಾಸನದಿಂದ ಶ್ರೀ ಕೆ. ಜಿ. ತಿಮ್ಮಪ್ಪಗೌಡರು ಮತ್ತು ತುಮಕೂರಿನಿಂದ ಶ್ರೀ ಆರ್. ಎಸ್. ಆರಾಧ್ಯರವರು ದಯಮಾಡಿಸಿದ್ದರು.

ಶ್ರೀ ಹೆಜ್ಜಿಗೆ ಲಿಂಗಣ್ಣನವರಿಂದ ಸ್ವಾಗತ ಭಾಷಣವಾದನಂತರ, ಶ್ರೀ ಎಂ. ಎಲ್. ಸುಬ್ಬರಾಜೇ ಅರಸಿನವರು ಭಾಷಣಮಾಡಿ ಸಭೆಯ ಉದ್ದೇಶವನ್ನು ವಿವರಿಸಿದರು.

ಶ್ರೀ ಆರ್. ಎಸ್. ಆರಾಧ್ಯರವರು ಪ್ರಾರಂಭದಲ್ಲಿ ಆಕ್ಷೇಪಣೆ ಎತ್ತಿ, ರಾಜ್ಯಾಂಗದ ವಿಚಾರದಲ್ಲಿ ಚರ್ಚಿಸಲು ರೈತರ ಸಂಘದವರಿಗೆ ಯಾವ ಅಧಿಕಾರವಿಲ್ಲವೆಂದೂ, ಈ ವಿಚಾರದಲ್ಲಿ ರಾಜಕೀಯ ಪ್ರಮುಖರು ಮಾತನಾಡಕೂಡದೆಂದೂ ತಿಳಿಸಿದರು. ಅದನ್ನು ಅಧ್ಯಕ್ಷರು ತಳ್ಳಿಹಾಕಿದರು. ಶ್ರೀಗಳಾದ ಕಾರ್ಲೆ ತಿಮ್ಮಪ್ಪಗೌಡರು, ಎ. ವೆಂಕಟೇಶಯ್ಯ, ಟಿ. ರಾಜಣ್ಣ, ಎಂ. ಪಿ. ಲಿಂಗಪ್ಪಯ್ಯ, ಟಿ. ನಾರಾಯಣ, ಎಂ. ರಾಮಸ್ವಾಮಿ, ಎ. ರಾಮಣ್ಣ, ಹೆಚ್. ಕೆ. ಕುಮಾರಸ್ವಾಮಿ, ಮುಂತಾದವರು ಭಾಷಣ ಮಾಡಿದರು.

ಅಧ್ಯಕ್ಷರು ಕೊನೆಯಲ್ಲಿ ಭಾಷಣಮಾಡಿ ಮೈಸೂರಿನ ಭವಿಷ್ಯವನ್ನು ನಿರ್ಧರಿಸುವಾಗ ಹಿಂದಿನ ಹಿನ್ನೆಲೆಯನ್ನು ಜ್ಞಾಪಕದಲ್ಲಿಡಬೇಕೆಂದು ಹೇಳಿದರು. ಪ್ರಜಾ ಪ್ರಭುತ್ವದಲ್ಲಿ ಶಾಸನ ಬದ್ಧರಾಜರಿರುವುದು ರಾಜ್ಯಾಡಳಿತಕ್ಕೆ ಶ್ರೇಯಸ್ಕರವೂ ಮತ್ತು ಯುಕ್ತವೆಂದೂ, ಇದರಿಂದ ವಿಶೇಷ ರೀತಿಯ ದಕ್ಷತೆಗೆ ಸಹಾಯವಾಗುವುದೆಂದೂ ಅವರು ತಿಳಿಸಿದರು.

ಅನಂತರ ಅಧ್ಯಕ್ಷರಿಂದ ಮಂಡಿಸಲ್ಪಟ್ಟ ಕೆಳಗೆ ಕಂಡ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು:—

'ಅಗಲಿರುವ ಕನ್ನಡನಾಡುಗಳನ್ನು ಒಂದುಗೂಡಿಸಿ ಕರ್ಣಾಟಕ ಪ್ರಾಂತ್ಯ ರಚನೆ ಮಾಡಲು ಉತ್ಸಾಹದಿಂದ ಜರುಗುತ್ತಲಿರುವ ಕಾರ್ಯ ಚಟುವಟಿಕೆಗಳನ್ನು ವಿಶೇಷ ರೀತಿಯ ಸಂಬಂಧ ಮತ್ತು ಆಸಕ್ತಿಗಳಿಂದ ಈ ಸಭೆಯು ಪರಿಶೀಲಿಸಿದೆ. ಇತ್ತೀಚೆಗೆ ಕೆಲವೆಡೆಗಳಿಂದ ಬರುತ್ತಿರುವ ಅಗ್ರಹಿತ ಬಿರುನುಡಿಗಳು ವಿನಯ ಸಂಪನ್ನರಿಗೆ ದೂರವಾಗಿವೆ. ಬಿರುಸುಮಾತುಗಳ ವಾತಾವರಣ ವಿರಸವಾಗುವುದೇ ವಿನಾ ಏಕೀಕರಣ ಕೆಲಸ ಸರಸವಾಗುವುದಿಲ್ಲ. ಇಂತಹ ಮಹತ್ಕಾರ್ಯ ಸಾಧನೆಯು ಬಂಧಬಟ್ಟ ಪ್ರಾಂತ್ಯಗಳ ಪ್ರಜಾಭಿಪ್ರಾಯವನ್ನವಲಂಬಿಸಿದೆಯೇ ವಿನಃ ಕಾರ್ಯದಲ್ಲಿ ತೊಡಗಿರುವವರ ಸ್ವಾಭಿಮಾನಶಕ್ತಿ, ಸ್ಪರ್ಧೆ ಹಂಬಲಗಳಿಂದಲೇ ಸಾಧ್ಯವಾಗುವುದಿಲ್ಲವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

ಮೈಸೂರು ಸಂಸ್ಥಾನದ ರಾಜ್ಯಾಂಗ ರಚನಾ ಸಭೆಯಲ್ಲಿ ಅಂಗೀಕೃತವಾಗಿರುವ ಧ್ಯೇಯೋದ್ದೇಶ ನಿರ್ಣಯದಲ್ಲಿ ಪ್ರಜೆಗಳ ಸ್ವಾಯುವು ಅಡಕವಾಗಿದೆ. ಶಾಸನಬದ್ಧ ರಾಜತ್ವವನ್ನೊಳಗೊಂಡ ಪ್ರಜಾಸತ್ತಾ ರಾಜ್ಯಾಡಳಿತವೇರ್ಪಡಿಸಿ, ಮೈಸೂರಿನ ಪ್ರತಿಷ್ಠೆ, ವೈಶಿಷ್ಟ್ಯ ಮತ್ತು ಸಂಸ್ಕೃತಿಗಳಿಗೆ ಅಸಮಂಜಸವಾಗದ ರೀತಿಯಲ್ಲಿ ನೆರೆಹೊರೆಯ ಪ್ರಾಂತ್ಯಗಳು ಸಂಸ್ಥಾನದೊಡನೆ ಸೇರಲು ಅವಕಾಶ ಕಲ್ಪಿಸಕೊಡಬಹುದೆಂಬುದೇ ಸಂಸ್ಥಾನದ ಪ್ರಜೆಗಳ ಹಾಗೂ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಖಚಿತ ಅಭಿಪ್ರಾಯ. ಇದಕ್ಕೆ ವಿರೋಧ ಬರುವ ರೀತಿಯಲ್ಲಿ ನಡೆದಿರುವ ಅಥವಾ ನಡೆಯಬಹುದಾದ ಮಾತುಕತೆ, ವ್ಯವಹಾರ ಒಪ್ಪಂದಗಳಿಗೆ ಮೈಸೂರು ಪ್ರಜೆಗಳ ಒಪ್ಪಿಗೆಯಿಲ್ಲ. ಭಾರತ ರಾಜ್ಯಾಂಗ ರಚನಾ ಸಭೆಯು ಅಂಗೀಕರಿಸಿರುವ ಧ್ಯೇಯೋದ್ದೇಶ ನಿರ್ಣಯದಲ್ಲಿ ಸಚಿತವಾಗಿರುವ "ಸರಸ್ವಾಮ್ಯ ಸಂಪನ್ನ ಪ್ರಜಾಪ್ರಭುತ್ವ ತತ್ವ" (Sovereign Democratic Republic) ದೊಡನೆ ಸಮನ್ವಯ ಹೊಂದುವ ರೀತಿಯಲ್ಲಿ ಸಂಸ್ಥಾನದ ಏಡಾಳಿತವನ್ನು ರೂಪಿಸುವುದೂ ಮತ್ತು ಭಾಷಾವಾರು ಪ್ರಾಂತ್ಯ ರಚನೆಯ ತನ್ನ ಪಾತ್ರವನ್ನು ನಿರ್ಧರಿಸುವುದೂ ಸಹ ಮೈಸೂರು ಪ್ರಜೆಗಳಿಗೆ ಸೇರಿದ್ದು.

ರಾಜಪ್ರಭುತ್ವವು ಮೈಸೂರು ಸಂಸ್ಥಾನದ ಇತಿಹಾಸ, ಸಂಸ್ಕೃತಿಗಳಿಗೆ ಹೊಂದಿ ಬಂದದ್ದು. ಶಾಸನ ಬದ್ಧ ರಾಜತ್ವವು ಪ್ರಜಾಸ್ವಾಮ್ಯ (Republic) ತತ್ವದಲ್ಲಿ ಸಮನ್ವಯ ಹೊಂದಿ ಪ್ರಜಾಪ್ರಭುತ್ವಕ್ಕೆ ವಿಶೇಷ ರೀತಿಯ ತೇಜಸ್ಸು ಕೊಟ್ಟು ಆಡಳಿತವನ್ನು ಯುಕ್ತ ಮಾಡಬಲ್ಲದೆಂಬುದಕ್ಕೆ ಬ್ರಿಟಿಷ್ ರಾಜ್ಯಾಡಳಿತ ಪದ್ಧತಿಯೇ ಸಾಕ್ಷಿಯಾಗಿದೆ. ಇದನ್ನು ಮನಗಂಡೇ ಮೈಸೂರಿನ ಪ್ರಜೆಗಳು ಶಾಸನಬದ್ಧ ರಾಜತ್ವವನ್ನು ಒಪ್ಪಿ ಅಪ್ಪಿಕೊಂಡಿರುವುದು. ಈ ವಿಷಯದಲ್ಲಿ ಮಾತ್ರ ಯಾವ ವಿಧವಾದ ವ್ಯಕ್ತಿ ಕೇಗೂ ತಲೆಬಾಗಲು ಸಾಧ್ಯವಿಲ್ಲ. ಸರ್ವಾಧಿಕಾರ ಸಾಂಕುಶ ಪ್ರಭುತ್ವದಲ್ಲಿ ಅಖಂಡ ಕರ್ಣಾಟಕವನ್ನು ಕಟ್ಟಲು ಯಾವಕನ್ನಡಿಗರಿಗೆ ಆಸ್ಥಾಪಿಸಿದ ಅದಬಟ್ಟಿ ಮೈಸೂರಿನ ಹಿತಕ್ಕೆ ಧಕ್ಕೆ ಒದಗುವ ರೀತಿಯಲ್ಲಿ ಕೈಗೊಳ್ಳಬಹುದಾದ ಯಾವ ಕಾರ್ಯಕ್ರಮಗಳನ್ನೂ ಸಂಸ್ಥಾನದ ಜನರು ಸಹಿಸುವುದಿಲ್ಲ. ಅವಶ್ಯಬಿದ್ದರೆ ತೀವ್ರವಾಗಿ ಪ್ರತಿಭಟಿಸಲು ಹಿಂಜರಿಯುವುದಿಲ್ಲವೆಂದು ಈ ಸಭೆಯು ಘೋಷಿಸುತ್ತದೆ.

ಮೈಸೂರು ಸಂಸ್ಥಾನದೊಡನೆ ಸಿರಿಕನ್ನಡ ಜಿಲ್ಲೆಗಳನ್ನು ಸೇರಿಸುವುದರ ಮೂಲಕ ಕರ್ಣಾಟಕ ಪ್ರಾಂತ ರಚನೆ ಸಾಧ್ಯವಿಲ್ಲವೆಂಬ ಅರ್ಥ ಬರುವ ರೀತಿಯಲ್ಲಿ ಕೇಂದ್ರ ಕ್ರಿಯಾಶೀಲ ಸಮಿತಿಯ ಚರ್ಚೆಯನ್ನು ಈ ಸಭೆಯು ಒಪ್ಪದಿದ್ದರೂ ಪ್ರತಿಭಟಿಸಿದ್ದ ಯಾವ ಪರಿಹಾರ ಕಾರಣವಾಗುವುದಕ

ಸಂಸ್ಥಾನದಲ್ಲಿ ರಾಷ್ಟ್ರಪತಿಗಳ ಪ್ರವಾಸ

ಮೈಸೂರು ೨೯

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಮುಂದಿನ ತಿಂಗಳು ೧ ನೇ ತಾ॥ ಬೆಂಗಳೂರಿಗೆ ಆಗಮಿಸಿ, ೨ನೇ ತಾರೀಖು ರಾಜಧಾನಿಗೆ ಬರುವರು. ಇಲ್ಲಿಂದ ಕೊಡಗಿಗೆ ಪ್ರಯಾಣ ಬೆಳಸುವರು.

ಕಸ್ತೂರಿಬಾ ಟ್ರಸ್ಟ್ ವ್ಯವಸ್ಥಾಪಕರ ಪ್ರವಾಸ

ಪೇಟ್ಕಿಂದ ಸಂಸ್ಥೆಯ ವ್ಯವಸ್ಥಾಪಕರಾದ ಡಾ॥ ಜೆ. ಸಿ. ಕುಮಾರಪ್ಪ ಮತ್ತು ಶ್ರೀಮತಿ ಸುಶೀಲಾ ನೈರವರುಗಳು ಮುಂದಿನ ತಿಂಗಳು ೧ ನೇ ತಾ॥ ನಿಂದ ಸಂಸ್ಥಾನದಲ್ಲಿ ಪ್ರವಾಸ ಮಾಡುವರು.

ಗಾಂಧೀ ಸ್ಮಾರಕ ಟ್ರಸ್ಟಿಗಳ ಸಭೆ

ಮುಂದಿನ ತಿಂಗಳು ೧೦ ನೇ ತಾ॥ ಡೆಹಲಿಯಲ್ಲಿ ನಡೆಯುವ ಗಾಂಧೀ ಸ್ಮಾರಕ ಟ್ರಸ್ಟಿಗಳ ಸಭೆಗೆ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಹೋಗಲಿದ್ದಾರೆ.

ಹ ರಿ ಕ ಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಾಮ ಲಿಂಗೇಶ್ವರ ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಈ ಸಂಜೆ ೭ ಗಂಟೆಗೆ ಶ್ರೀ ಹಿರಣ್ಣಯ್ಯ ಮತ್ತು ಶ್ರೀ ಮಾಯೀಗೌಡರವರಿಂದ ಭಕ್ತ ಮಯೂರ ಧ್ವಜ ಎಂಬ ಹರಿಕಥೆ ನಡೆಯುವುದು.

ಸೆನೆಟ್ ಸಭೆ

ವಿಶ್ವವಿದ್ಯಾಲಯದ ಸೆನೆಟ್ ಸಭೆಯು ಇದೇ ೩೦ನೇ ತಾ॥ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯಲ್ಲಿ ನಡೆಯುವುದು.

ಸಹಕಾರ ಶಿಕ್ಷಣ ತರಗತಿ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ಮುಂದಿನ ತಿಂಗಳು ೩ನೇ ತಾರೀಖಿನಿಂದ ೨ ತಿಂಗಳ ಕಾಲ ಪ್ರತಿದಿನ ಸಂಜೆ ಸಹಕಾರ ಭವನದಲ್ಲಿ ಉಚಿತ ಸಹಕಾರ ಶಿಕ್ಷಣ ತರಗತಿಗಳು ನಡೆಯುವುವು. ಕೆಲವು ನಿವಾ ವೇತನಗಳನ್ನೂ ಕೊಡಲಾಗುವುದು. ತರಗತಿಗಳಿಗೆ ಸೇರಬಯಸುವವರು ಇದೇ ೩೦ನೇ ತಾರೀಖಿನೊಳಗಾಗಿ ಅರ್ಜಿ ಹಾಕಿಕೊಳ್ಳಬೇಕೆಂದೂ ಪ್ರತಿಯೊಂದು ಸಹಕಾರ ಸಂಘದವರು ಇಬ್ಬರನ್ನು ಕಳುಹಿಸಬೇಕೆಂದೂ ಸಂಘದ ಕಾರ್ಯದರ್ಶಿ ಕೋರಿದ್ದಾರೆ.

ಸಂಸ್ಥಾನದ ರಾಜ್ಯಾಂಗ ಭವಿಷ್ಯದ ಒಪ್ಪಂದದಲ್ಲಿ ರಾಜ್ಯಾಂಗ ರಚನಾ ಸಭೆ ... ಯಾವ ... ಈ ಸಭೆ ...

ರೇಷ್ಮೆ ಅಭಿವೃದ್ಧಿಯ ಯೋಜನೆ

ಸ್ವಂ. ವ. ಫೋ.] ಬೆಂಗಳೂರು ೨೮

ಭಾರತ ಸರ್ಕಾರದ ಕೈಗಾರಿಕಾ ಸಚಿವರಾದ ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಈ ದಿನ ಕೇಂದ್ರ ರೇಷ್ಮೆ ಕೈಗಾರಿಕಾ ಸಲಹಾಸಮಿತಿಯ ಸಭೆಯು ನಡೆಯಿತು. ಸಚಿವರು ಭಾಷಣ ಮಾಡಿ, ಭಾರತದ ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಯಾಗಬೇಕಾದರೆ ಅದರ ಗುಣ ಮತ್ತು ಪ್ರಮಾಣ ಹೆಚ್ಚಬೇಕೆಂದೂ, ಅದಕ್ಕೆ ಒಂದು ಯೋಜನೆಯನ್ನು ತಯಾರಿಸಬೇಕೆಂದೂ ಮತ್ತು ಪರದೇಶಗಳಿಗೆ ಭಾರತದ ಪ್ರವೀಣರನ್ನು ಕಳುಹಿಸಬೇಕೆಂದೂ ತಿಳಿಸಿದರು.

ವಿಮಾನ ಕಾರ್ಖಾನೆ ಕಾರ್ಮಿಕರಿಗೆ ೧೦ ಲಕ್ಷ ರೂ.

ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಡೈರೆಕ್ಟರುಗಳ ಸಭೆಯು ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು ಕಾರ್ಮಿಕರ ಸೌಲಭ್ಯಗಳಿಗಾಗಿ ಈ ವರ್ಷ ೧೦ ಲಕ್ಷ ರೂ. ಮಂಜೂರು ಮಾಡಲಾಯಿತು. ಬಸ್ಸುಗಳ ... ಗಳನ್ನು ಕಟ್ಟಲು ೨॥ ಲಕ್ಷ ರೂ. ಅನ್ನು ಕೊಡಲಾಯಿತು.

ಬಿನ್ನಿ ಮಿಲ್ಲಿನಲ್ಲಿ ಲಾಕ್ ಔಟ್

ಬೆಂಗಳೂರು ಬಿನ್ನಿ ಮಿಲ್ಲಿನ ನೂಲುವ ಶಾಖೆಯ ಕೆಲಸಗಾರರು ಮುಷ್ಕರ ಹೂಡಿರುವುದರಿಂದ ಮಿಲ್ಲಿನ ಅಧಿಕಾರಿಗಳು ಲಾಕ್ ಔಟ್ ಮಾಡಿ, ಕಾರ್ಖಾನೆಯನ್ನು ಮುಚ್ಚಿರುತ್ತಾರೆ.

ಸಚಿವ ಶ್ರೀ ... ಮತ್ತು ಹೆಚ್. ಸಿದ್ದಯ್ಯನವರುಗಳು ಇಲ್ಲಿ ನಿನ್ನೆ ದೆಹಲಿಗೆ ಪ್ರಯಾಣ ಬೆಳಸಿದರು.

ಭಾರತವು ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿರಲು ಅಂಗೀಕಾರ

ಭಾರತವು ರಿಪಬ್ಲಿಕ್ ಆಗಿದ್ದುಕೊಂಡು ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿರಬಹುದೆಂದು ಲಂಡನ್ನಿನಲ್ಲಿ ನಡೆಯುತ್ತಿರುವ ಬ್ರಿಟಿಷ್ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತೆಂದೂ, ಈ ಬಗ್ಗೆ ಇನ್ನು ಕೆಲವು ದಿನಗಳಲ್ಲಿ ಅಧಿಕೃತ ಪ್ರಕಟಣೆ ಹೊರಬೀಳಲಿರುವುದೆಂದು ತಿಳಿದು ಬಂದಿದೆ. ಬ್ರಿಟಿಷ್ ದೊರೆಗಳು ಸಂಕೇತ ರೂಪವಾಗಿ ಮಾತ್ರ ಇರುವರೆಂದೂ, ಅವರಿಗೆ ಭಾರತದ ಮೇಲೆ ಯಾವ ಅಧಿಕಾರವೂ ಇರುವುದಿಲ್ಲವೆಂದೂ, ಭಾರತದ ಅಧ್ಯಕ್ಷರೇ ಸಂಪೂರ್ಣಾಧಿಕಾರಿಗಳಾಗಿರುವರೆಂದೂ, ಭಾರತವು ರಿಪಬ್ಲಿಕ್ ಆದರೂ ಇತರ ಕಾಮನ್‌ವೆಲ್ತ್ ರಾಷ್ಟ್ರಗಳ ಸಂಬಂಧವು ಈಗಿನಂತೆಯೇ ಮುಂದುವರಿಯುವುದೆಂದೂ ಹೇಳಲಾಗಿದೆ.

ಮೂರನೇ ಮಹಾಯುದ್ಧವು ಸನ್ನಿದ್ಧ

ಚೀನಾದ ಪರಿಸ್ಥಿತಿಯು ಈಗಿರುವಂತೆಯೇ ಮುಂದುವರಿದರೆ, ಕಮ್ಯೂನಿಸ್ಟರಿಂದ ಆಕ್ರಮಿತವಾದ ಪೆಸಿಫಿಕ್ ಕ್ಷೇತ್ರದಲ್ಲಿ ಮೂರನೇ ಮಹಾಯುದ್ಧವು ಪ್ರಾರಂಭವಾಗುವುದು ಖಂಡಿತವೆಂದು ಅಮೆರಿಕದ ಜೆನರಲ್ ... ತಿಳಿಸುತ್ತಾರೆ. ಈ ಯುದ್ಧದಲ್ಲಿ ಅಮೆರಿಕ ಪ್ರಥಮ ಏಟು ತಿನ್ನುವುದೆಂದು ಅವರು ಹೇಳಿರುವರು.

ಶಂಕರ ಜಯಂತಿ ಮಹೋತ್ಸವ

ನಂಜನಗೂಡಿನ ಶ್ರೀ ಶಂಕರ ಮಠದಲ್ಲಿ ನಾಳೆಯಿಂದ ಮುಂದಿನ ತಿಂಗಳು ೩ ನೇ ತಾ. ವರೆವಿಗೆ ಶ್ರೀ ಶಂಕರ ಜಯಂತಿ ಮಹೋತ್ಸವವು ನಡೆಯುವುದು. ಪ್ರತಿದಿನ ಬೆಳಿಗ್ಗೆ ೭ ಗಂಟೆಗೆ ಪ್ರಾರ್ಥನೆ, ಮಧ್ಯಾಹ್ನ ೩ ಗಂಟೆಗೆ ಉಪನ್ಯಾಸಗಳು ನಡೆಯುವ

ವಿವಾಹ ಮಹೋತ್ಸವ

ಮೈಸೂರು ಪರಿಷತ್ತಿನ ಸದಸ್ಯರೂ ಮತ್ತು ಒಬ್ಬ ವರ್ತಕರೂ ಆದ ಶ್ರೀ ಕೆ ಎಸ್ ಸತ್ಯನಾರಾಯಣರಾಯರಿಗೆ ... ಅವರ ಪುತ್ರಿ ... ಕೊಟ್ಟು ವಿವಾಹವು ... ವಿಲಾಸ ... ನಡೆಯಿತು

ವಯಸ್ಕರ ಶಿಕ್ಷಣ ದಿನಾಚರಣೆ

... ಕಳೆದ ... ನಗರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ವಯಸ್ಕರ ಶಿಕ್ಷಣ ದಿನಾಚರಣೆಯು ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ... ಅನಂತರ ... ಪ್ರದರ್ಶನವೂ ನಡೆಯಿತು.

ಅಕ್ಕಿ ಎರಡೇ ರಸಾಂ

...

ಬ್ರಿಟನ್ನು ಕಮ್ಯುನಿಸ್ಟರಿಗೆ ಪರಿಹಾರ ಕೊಡಬೇಕು

ಚೀಣದ ಯಾಂಗ್ಟ್ಸಿ ನದಿಗೆ ಬ್ರಿಟನ್ನಿನ ನಾಲ್ಕು ಯುದ್ಧ ಹಡಗುಗಳು ಬಂದುದರಿಂದ ಕಮ್ಯೂನಿಸ್ಟರು ... ಬ್ರಿಟನ್ನು ಪ್ರತಿಭಟನೆಯನ್ನು ... ಕಮ್ಯೂನಿಸ್ಟರಿಗೆ ... ಬ್ರಿಟನ್ನು ತಮಗೆ ಪರಿಹಾರಕೊಡಬೇಕೆಂದು ಕಮ್ಯೂನಿಸ್ಟರು ತಿಳಿಸಿದ್ದಾರೆ

ಬದರೀನಾಥ ಶಿಖರವನ್ನು ಹತ್ತಲು ಯತ್ನ

ಭಾರತದ ಪರ್ವತಾರೋಹಣ ಸಂಘದವರು ಹಿಮಾಲಯ ಪರ್ವತದಲ್ಲಿ ... ಅಡಿ ಎತ್ತರದಲ್ಲಿರುವ ಬದರಿನಾಥ ಶಿಖರವನ್ನು ಹತ್ತಲು ಪ್ರಯತ್ನ ಮಾಡಿದ್ದಾರೆ ಮುಂದಿನ ತಿಂಗಳು ಶ್ರೀ ಅಶೋಕ್ ... ಗಾವಕರ್‌ರವರ ನಾಯಕತ್ವದಲ್ಲಿ ಕೆಲವರು ಈ ಕಾರ್ಯವನ್ನು ಕೈಗೊಳ್ಳುವರು

• PRABHA •

To Night

ROMEO & JULIET

(Hindi) with:—Nargis

Morning Shows

From 29-4-49 For 3 days

R K O's

Song of the South

(In Technicolor)

Walt Disney's

ಮೈಸೂರು ಸಿಟಿ ರೇಷನಿಂಗ್

No M-9-3 48-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ... ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಸಹ ಈ ಕೆಳಗೆ ಕಂಡ ದಿವಸಗಳು ಮುಚ್ಚಲ್ಪಡುತ್ತವೆ.—

... ರವಿವಾರ ... ಸಹಕಾರ ಸಂಘ.

... ಭಾನುವಾರ ... ವಾತ್ರ

[ಸಹಿ] ಎ. ವೆಂಕಟೇಶ್ವರಲು

ರೇಷನಿಂಗ್ ಆಫೀಸರ್

(ಚಾರ್ಜು) ಮೈಸೂರು

ಮೈಸೂರು.

ಜೈಲಿನಲ್ಲಿ ಉಪವಾಸ ಸತ್ಯಾಗ್ರಹಿಯ ಮರಣ

ತಿರುವನಂತಪುರದ ಜೈಲಿನಲ್ಲಿ ... ದಿನಗಳ ಕಾಲ ಉಪವಾಸ ಕೈಗೊಂಡಿದ್ದ ಕಮ್ಯೂನಿಸ್ಟ್ ಬಂದಿಯು ಮರಣ ಹೊಂದಿದನೆಂದೂ, ಇದನ್ನು ಪ್ರತಿಭಟಿಸಲು ಕೆಲವು ಯುವಕರು, ಮತ್ತು ಬಾಲಕರು ನಗರ ಬೀದಿಗಳಲ್ಲಿ ಪ್ರದರ್ಶನ ನಡೆಸಿದರೆಂದೂ ವರದಿಯಾಗಿದೆ

... ಲಕ್ಷ ರೂ. ಚಿನ್ನದ ಪತ್ತೆ

ಕಳೆದ ... ತಿಂಗಳಿನಲ್ಲಿ ಸುಂಕ ಕೊಡದೆ ಕಳ್ಳತನದಲ್ಲಿ ರವಾನಿಸುತ್ತಿದ್ದ ... ಲಕ್ಷ ರೂ ಬೆಲೆ ಬಾಳುವ ಚಿನ್ನವನ್ನು ಬೊಂಬಾಯಿ ಸರ್ಕಾರದವರು ಪತ್ತೆ ಮಾಡಿ ವಶಪಡಿಸಿಕೊಂಡಿರುವರು ... ಸಾವಿರ ರೂ ಬೆಲೆಯ ಚಿನ್ನವನ್ನು ಬೂಡ್ಸಿನೊಳಗೆ ಇಟ್ಟುಕೊಂಡಿದ್ದ ಹೆಂಗಸಿನಿಂದ ವಶಪಡಿಸಿಕೊಳ್ಳಲಾಗಿದೆ

ದೋಣಿಯ ಅಪಘಾತದಲ್ಲಿ ... ಜನರ ಮರಣ

ಪಾಟ್ನಾಕ್ಕೆ ... ಮೈಲಿ ದೂರದಲ್ಲಿರುವ ಗಂಗಾ ನದಿಯಲ್ಲಿ ದೋಣಿಯೊಂದು ಸಾಮಾನು ಮತ್ತು ಜನರನ್ನು ಸಾಗಿಸುತ್ತಿದ್ದಾಗ, ಮುಳುಗಿದುದರಿಂದ, ... ಜನರು ನೀರು ಪಾಲಾದರೆಂದೂ, ... ಜನರನ್ನು ಮಾತ್ರ ರಕ್ಷಿಸಲಾಯಿತೆಂದೂ ವರದಿಯಾಗಿದೆ

ಉದಾರ ಸಹಾಯ

ಕೆಂಗೇರಿ ಗುರುಕುಲಾಶ್ರಮದಲ್ಲಿರುವ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಶ್ರೀ ಸುಬ್ರಯ್ಯ ಶೆಟ್ಟಿ ಮತ್ತು ಅವರ ಪುತ್ರರು ... ರೂ. ಶ್ರೀ ಎಸ್ ಎಂ ರಾಮಕೃಷ್ಣ ರಾಯರು ... ರೂ ಮತ್ತು ಶ್ರೀ ಬಿ. ಕೃಷ್ಣರಾಯರು ... ರೂ ತನ್ನು ಕೊಟ್ಟಿರುತ್ತಾರೆ

CHAMUNDESWARI TALKIES

Morning Shows

From 29-4-49 For 3 days

at 10-30 a m

M G M's

Beginning or the End

(ಬಿಗಿನಿಂಗ್ ಆರ್ ದಿ ಎಂಡ್)

The History of the origin of the Atom Bomb

Starring -Brian, Robert Walker, Danvely & others

Edited, printed and published by A R Nagarajan at the Sadhvi Press D Subbiah Road Mysore

ಚಿಯಾಂಗರ ಮನವಿ

ಕಮ್ಯೂನಿಸ್ಟರನ್ನು ಎದುರಿಸಲು ... ನೆರವಾಗಬೇಕೆಂದೂ, ಇನ್ನು ... ವರ್ಷಗಳಲ್ಲಿ ತಮಗೆ ಜಯ ಉಂಟಾಗುವುದೆಂದೂ ಚೀಣದ ಮಾಜಿ ಅಧ್ಯಕ್ಷ ಚಿಯಾಂಗ್ ಕೈ ಷೇಕ್‌ರವರು ಜನರನ್ನು ಮನವಿ ಮಾಡಿದ್ದಾರೆ ಅವರು ... ಗೆ ಬಂದಿರುವರೆಂದು ವರದಿಯಾಗಿದೆ

ಚೀಣದ ಯುದ್ಧದಲ್ಲಿ ಬ್ರಿಟನ್ನು ಕೈ ಹಾಕುವುದಿಲ್ಲ

ಚೀಣದಲ್ಲಿ ನಡೆಯುತ್ತಿರುವ ... ಯುದ್ಧದಲ್ಲಿ ಬ್ರಿಟನ್ನು ಕೈ ಹಾಕುವುದಿಲ್ಲವೆಂದು ಅದರ ಪ್ರಧಾನಿಯವರು ತಿಳಿಸಿದ್ದಾರೆ

ಸಿಂಹಳದಲ್ಲಿ ಮುಂದಿನ ಕಾಮನ್‌ವೆಲ್ತ್ ಸಮ್ಮೇಳನ

ಈ ದಿನ ಲಂಡನ್ನಿನಲ್ಲಿ ಮುಕ್ತಾಯ... ಬ್ರಿಟಿಷ್ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ಪುನಃ ಸಿಂಹಳ ದ್ವೀಪದಲ್ಲಿ ಈ ವರ್ಷಾಂತ್ಯದಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಕಲ್ಕತ್ತದಲ್ಲಿ ಚೇಳಿನ ಹಾವಳಿ

ಹೆಚ್ಚು ಬಿಸಿಲಿನ ತಾಪದಿಂದ ಕಲ್ಕತ್ತದ ಅನೇಕ ಭಾಗಗಳಲ್ಲಿ ಚೇಳುಗಳ ಹಾವಳಿಯು ಹೆಚ್ಚಾಗಿರುವುದೆಂದೂ, ... ಜನರನ್ನು ಚೇಳಿನ ಕಡಿತಕ್ಕಾಗಿ ಆಸ್ಪತ್ರೆಗೆ ದಾಖಲು ಮಾಡಲಾಯಿತೆಂದು ಹೇಳಲಾಗಿದೆ

ಜಪಾನ್ ರಾಜಧಾನಿಯಲ್ಲಿ ಆತ್ಮಹತ್ಯೆಗಳು

ಕಳೆದ ವರ್ಷ ಟೋಕಿಯೋದಲ್ಲಿ ... ಜನ ಗಂಡಸರು ಮತ್ತು ... ಹೆಂಗಸರು ಆತ್ಮಹತ್ಯ ಮಾಡಿಕೊಂಡರೆಂದೂ, ನಿರುದ್ಯೋಗ, ಪ್ರೇಮ ಭಂಗ ... ಮುಂತಾದವುಗಳೇ ಅದಕ್ಕೆ ಕಾರಣವೆಂದೂ ಹೇಳಲಾಗಿದೆ

ರಾಜಕಮಲ್

ಮೈಸೂರು

27—4—49 ರಿಂದ

ಅನೋಘ ಪ್ರಾರಂಭ

ಬಾಂಬೇ ಟಾಕೀಸಿನವರ

ಕಿಸ್‌ಮತ್

— ಭೂಮಿಕೆ —

ಶ್ರೀ ಮುಮತಾಜ್ ಶಾಂತಿ

ಅಶೋಕ್ ಕುಮಾರ್,

ವಿ. ಹೆಚ್. ದೇಸಾಯಿ

MORNING SHOWS

From 29 4-49 for 4 days

R K O Radio's Picture

HONEYMOON

With Shirley Temple

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು.

ತಾ॥ 29—4—49ರಿಂದ 2 ದಿನಗಳು

... ಅವರ ...

ಚಿತ್ರ

ಬಿಯಾಂಡ್ ಗ್ಲೋರಿ

BEYOND GLORY

ಪಾತ್ರ:—ಅಲನ್ ಲ್ಯಾಡ್, ಡೋನಾ...

Morning Shows

From 30-4-49 For 2 days

M. G M's

EASY TO WED

(In Technicolor)

ಪ್ರಭುದೇವಾ ಟಾಕೀಸಿನಲ್ಲಿ

29 4 49ನೇ ಶುಕ್ರವಾರದಿಂದ :: ಪ್ರತಿ ದಿನ ೩ ಆಟಗಳು

ಜೆಮಿನಿಯವರ ಅತ್ಯುತ್ತಮವಾದ ಸಾಮಾಜಿಕ ತಮಿಳು ಚಿತ್ರ

ಮಿಸ್ ಮಾಲಿನಿ

ಪುಷ್ಪವಲ್ಲಿ, ಸುಂದರಿ ಬಾಯಿ, ಕೊತ್ತಮಂಗಲಂ ಸುಬ್ಬು, ಎಲ್. ನಾರಾಯಣರಾವ್ ಮುಂತಾದವರು

ಇದರ ಜೊತೆಗೆ ಜೆಮಿನಿಯವರ ಕಾರ್ಟೂನ್ ಸಹ ಪ್ರದರ್ಶಿಸಲ್ಪಡುತ್ತವೆ

ಫೋ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೨೯-೪-೪೯ [ಸಂಚಿಕೆ ೨೨೮

ಕಲ್ಕತ್ತಾ ಮಹಿಳೆಯರ ಮೇಲೆ ಗುಂಡಿನೇಟು

ಡಾ॥ ಪಟ್ಟಾಭಿಯವರಿಗೆ ಮಾನ ಪತ್ರ

ಮೈಸೂರು ೨೯

ಮುಂದಿನ ತಿಂಗಳು ೩ ನೇ ತಾ॥ ರಾಜಧಾನಿಗೆ ಆಗಮಿಸುವ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದ ಡಾ॥ ಪಟ್ಟಾಭಿ ಸೀತಾರಾಮಯ್ಯನವರಿಗೆ ಮಾನ ಪತ್ರವನ್ನು ಅರ್ಪಿಸಬೇಕೆಂದು ಪುರಸಭೆಯವರು ನಿರ್ಧರಿಸಿದ್ದಾರೆ

ಪೆನ್ನಾರ್–ಕುಮುದ್ವತಿ ಯೋಜನೆ ಬಗ್ಗೆ ಮಾತುಕತೆ

ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ತಾಲ್ಲೂಕಿನಲ್ಲಿ ಪೆನ್ನಾರ್-ಕುಮುದ್ವತಿ ನದಿಗೆ ಅಣೆಕಟ್ಟನ್ನು ಮದರಾಸ್ ಸರ್ಕಾರದವರು ಕಟ್ಟಲಿರುವುದರಿಂದ ಮೈಸೂರಿನ ಪಾವಗಡ ತಾಲ್ಲೂಕಿನಲ್ಲಿ ೩೭ ಎಕರೆ ಜಮೀನು ಮುಳುಗಿ ಹೋಗುವುದು ಈ ಬಗ್ಗೆ ಮಂತ್ರಿ ಸಚಿವರಾದ ಶ್ರೀಗಳು ಸೀತಾರಾಮರೆಡ್ಡಿ ಮತ್ತು ಸಂಜೀವರೆಡ್ಡಿಗಳು ಮೊನ್ನೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಶ್ರೀ ಹೆಚ್ ಸಿದ್ದಯ್ಯನವರುಗಳೊಡನೆ ಮಾತುಕತೆ ನಡೆಸಿದರು ಈ ಬಗ್ಗೆ ಒಂದು ಒಪ್ಪಂದಕ್ಕೆ ಬರಲಾಯಿತೆಂದು ತಿಳಿದು ಬಂದಿದೆ

ಶ್ರೀ ಬಸವೇಶ್ವರ ಜಯಂತಿ

ರಾಜಧಾನಿಯ ಮಿಲ್ಲ ಮೊಹಲ್ಲಾ ಸೇವಾ ಮಂಡಲಿಯ ಆಶ್ರಯದಲ್ಲಿ ಶ್ರೀ ಬಸವೇಶ್ವರ ಜಯಂತಿ ಮಹೋತ್ಸವವು ನಾಳೆಯಿಂದ ಪ್ರತಿ ದಿನ ಶ್ರೀನಿವಾಸ ಅಗ್ರಹಾರದಲ್ಲಿ ನಡೆಯುವುದು ಬೆಳಿಗ್ಗೆ ೮ ಗಂಟೆಗೆ ಪೂಜೆ ಮತ್ತು ಸಂಜೆ ೭-೩೦ ಗಂಟೆಗೆ ಸಂಗೀತ ಮತ್ತು ಭಾಷಣಗಳು ನಡೆಯುತ್ತವೆ

ಬ್ರಾಹ್ಮಣ ಧರ್ಮ ಸಹಾಯ ಸಭೆ

ಮೈಸೂರು ಬ್ರಾಹ್ಮಣ ಧರ್ಮ ಸಹಾಯ ಸಭೆಯ ಮೂವತ್ತೊಂದನೆಯ ವಾರ್ಷಿಕ ಅಧಿವೇಶನವು ನಾಳಿದ್ದು ಮಧ್ಯಾಹ್ನ ೪ ಗಂಟೆಗೆ ಸಹಕಾರ ಭವನದಲ್ಲಿ ರಾಜಸೇವಾ ಪ್ರಸಕ್ತ ಎ ಸುಬ್ರಹ್ಮಣ್ಯ ಅಯ್ಯರ್ ರವರ ಅಧ್ಯಕ್ಷತೆಯಲ್ಲಿ ನಡೆಯುವುದು

ತಿರುಮಲ ರಾಯರ ಆಗಮನ

ಭಾರತ ಡೊಮಿನಿಯನ್ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಸ್ ತಿರುಮಲರಾಯರು ರಾಜಧಾನಿಗೆ ಆಗಮಿಸಿದ್ದಾರೆ ನಿನ್ನೆ ದಿನ ಶ್ರೀ ಮತಿ ಕಾಮೇಶ್ವರಮ್ಮನವರು ಅವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ನಾಳೆ ದಿನ ಅವರು [illegible]ಗೆ ಭೇಟಿ ಕೊಡುವರು

ಕಡಿಮೆ ಅಳತೆಗಾಗಿ ದಂಡ

ದೇವರಾಜ ಮಾರ್ಕೆಟ್ ಚೌಕದಲ್ಲಿರುವ ಶ್ರೀ ಕೃಷ್ಣ ಸ್ಟೋರ್ಸಿನ ಜವಾನ ಬೋರಯ್ಯ ಕಡಿಮೆ ಅಳತೆ ಸೇರಿನಲ್ಲಿ ವ್ಯಾಪಾರ ಮಾಡಿದನೆಂದು ಆತನಿಗೆ ೨೦ ರೂಪಾಯಿ ಜುಲ್ಮಾನೆಯನ್ನು ವಿಧಿಸಲಾಗಿದೆ

ವಿದ್ಯಾರ್ಥಿಗಳ ಮೇಲೆ ಗುಂಡಿನೇಟು

[illegible] ತ್ರದ ಕಾಲೇಜು ವಿದ್ಯಾರ್ಥಿಗಳಿಗೂ [illegible]ಗೂ ನಿನ್ನೆ ಘರ್ಷಣೆಯಾಗಿ, [illegible] ಗುಂಡು ಹಾರಿಸಲಾಗಿ [illegible] ಮಂದಿಗೆ ಗಾಯವಾಯಿತೆಂದು ತಿಳಿದಿದೆ ಹಿಂದಿನ ದಿನ [illegible] ಮೋ[illegible]ನಲ್ಲಿ ಗುಂಡು ಹಾರಿಸಿದ್ದನ್ನು ಪ್ರತಿಭಟಿಸಲು ವಿದ್ಯಾರ್ಥಿಗಳು [illegible] ನಡೆಸಿ ಬಾಂಬುಗಳನ್ನು ಎಸೆ[illegible] ಮುಗಳಿಗೆ ಬೆಂಕಿಯಿಟ್ಟರೆಂದೂ [illegible] ಕೆಲವು ಪೋಲೀಸರಿಗೂ ಗಾಯವಾಯಿತೆಂದೂ ವರದಿಯಾಗಿದೆ

ಶಿಕ್ಷಣ ಶಿಬಿರಕ್ಕೆ ರಾಜೇಂದ್ರ ಬಾಬು ಭೇಟಿ

ತುಮಕೂರು ಜಿಲ್ಲೆಯ ಸಿದ್ಧಗಂಗೆಯಲ್ಲಿ ನಡೆಯುತ್ತಿರುವ ಸೇವಾ ದಳ ನಾಯಕ ಶಿಕ್ಷಣ ಕೇಂದ್ರಕ್ಕೆ ಡಾ॥ ರಾಜೇಂದ್ರ ಪ್ರಸಾದರವರು ಭೇಟಿ ಕೊಟ್ಟಿದ್ದರು ದಳಪತಿ ಶ್ರೀ ರಾಮರಾಯರ ಮುಖಂಡತ್ವದಲ್ಲಿ ಅವರಿಗೆ ಸೇವಾದಳ ರಕ್ಷಾ ಗೌರವವನ್ನು ಕೊಡಲಾಯಿತು ಅನಂತರ ಕೇಂದ್ರ ಸೇವಾ ದಳ ಸಮಿತಿಯ ಪರವಾಗಿ ಶ್ರೀ ಸಿ. ಮಾಲೆ ಚೆನ್ನಬಸಪ್ಪನವರು ಬಿನ್ನವತ್ತಳೆಯನ್ನು ಅರ್ಪಿಸಿದರು ಡಾ॥ ರಾಜೇಂದ್ರ ಪ್ರಸಾದರವರು ಭಾಷಣಮಾಡಿ ಕರ್ಣಾಟಕವು ಸೇವಾದಳಕ್ಕೆ ಜನ್ಮ ನೀಡಿದ ಸ್ಥಳವೆಂದೂ, ಡಾ॥ ಹರ್ಡೀಕರ್‌ರವರ ಸೇವಾದಳವನ್ನು ಕಟ್ಟಿ ಮಾತೃಭೂಮಿಗೆ ಮಹತ್ವದ ಸೇವೆ ಸಲ್ಲಿಸಿದ್ದಾರೆಂದೂ ಹೇಳಿ, ಕರ್ಣಾಟಕವು ಸೇವಾದಳದ ಸಂಘಟನಾ ಕಾರ್ಯದಲ್ಲಿ ಇತರ ಪ್ರಾಂತ್ಯಗಳಿಗೆ ಸ್ಫೂರ್ತಿ ಕೊಡುವಂತಾಗಲೆಂದೂ ಹಾರೈಸಿದರು ಮೈಸೂರಿನ ಮಠಾಧಿಪತಿಗಳು ದೇಶ ಸೇವಾ ಕಾರ್ಯದಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿರುವುದು ಸಂತೋಷಕರವಾದುದೆಂದೂ, ಕಾಲಗತಿಗೆ ಅನುಸಾರವಾಗಿ ಪುರಾತನ ಸಂಪ್ರದಾಯಗಳೂ, ಅಭಿಪ್ರಾಯಗಳೂ ಮಾರ್ಪಾಡಾಗಿ ಅವರುಗಳು ಇಂದ ಪ್ರಗತಿಯ ಹಾದಿ ಹಿಡಿಯಬೇಕೆಂದೂ, ಯುವಕರ, ಗಾಂಧೀಜಿಯವರ ಸಂದೇಶವನ್ನು ದೇಶದ ಎಲ್ಲ ಭಾಗಗಳಿಗೂ ಪ್ರಚಾರ ಪಡಿಸಬೇಕೆಂದೂ ಅವರು ಹೇಳಿದರು

ಜಿಲ್ಲಾ ಸಮ್ಮೇಳನ

ವಿದ್ಯಾ ಸಚಿವರಾದ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಸಮ್ಮೇಳನವು ಮುಂದಿನ ತಿಂಗಳು ೧೦ ನೇ ತಾ॥ ನಡೆಯುವುದು.

ಪುಸ್ತಕ ವ್ಯಾಪಾರಿಗಳ ಸಮ್ಮೇಳನ

ಸಂಸ್ಥಾನದ ಲೇಖಕರು, ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಮ್ಮೇಳನವು ಮುಂದಿನ ತಿಂಗಳ ಮೊದಲನೆಯ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯುವುದು.

ರಾಮಕೃಷ್ಣ ಆಶ್ರಮದ ಶಂಕುಸ್ಥಾಪನೆ

ಮಳವಳ್ಳಿಯ ರಾಮಕೃಷ್ಣ ಆಶ್ರಮದ ಶಂಕು ಸ್ಥಾಪನೆಯ ಮಹೋತ್ಸವವನ್ನು ಮಾಗಿಲುಕೋಟೆಯ ರಾಮಾನುಜ ಸ್ವಾಮಿಗಳು ಬರುವ [illegible] ನೇ ತಾ॥ [illegible] ನೆರವೇರಿಸುವರು.

ದಿವಾಕರರ ಆಗಮನ

ಸ್ವಂ ಸು ಫೋನ್] ಬೆಂಗಳೂರು ೨೯

ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್ ಆರ್ ದಿವಾಕರರು ಈ ದಿನ ಬೆಳಿಗ್ಗೆ ಹುಬ್ಬಳ್ಳಿಯಿಂದ ಆಗಮಿಸಿದರು. ನಾಳೆ ಅವರು ರಾಜಧಾನಿಗೆ ಭೇಟಿ ಕೊಡುವರು

ಕೇಂದ್ರ ಹಣಕಾಸಿನ ಪರಿಶೀಲನಾ ಸಮಿತಿ

ಸಂಸ್ಥಾನಗಳ ಹಣಕಾಸಿನ ಪರಿಶೀಲನಾ ಸಮಿತಿಯ ಅಧ್ಯಕ್ಷರಾದ ಶ್ರೀ ವಿ ಟಿ ಕೃಷ್ಣಮಾಚಾರಿ, ಸದಸ್ಯರಾದ ಶ್ರೀಗಳು ದಾಂಡೇಕರ್ ಮತ್ತು ಸ್ವಾಮಿನಾಥನ್‌ರವರುಗಳು ನಿನ್ನೆ ಸಂಜೆ ಕೊಚ್ಚಿಯಿಂದ ಇಲ್ಲಿಗೆ ಆಗಮಿಸಿದರು. ಅವರು ಈ ದಿನ ಬೆಳಗ್ಗೆ ಮಂತ್ರಿಮಂಡಲದೊಡನೆ ಮಾತುಕತೆ ನಡೆಸಿದರು.

ಡಾ॥ ಸಿ. ಆರ್. ರೆಡ್ಡಿ

ನಿನ್ನೆ ಸಂಜೆ ಡಾ॥ ಸಿ ಆರ್ ರೆಡ್ಡಿಯವರು ದಿವಾನರು ಮತ್ತು ಇತರ ಸಚಿವರೊಡನೆ ವಿಶ್ವವಿದ್ಯಾನಿಲಯ ಪುನರ್ರಚನಾ ವಿಷಯ ವಿಚಾರ ವಿನಿಮಯ ಮಾಡಿದರು. ಇನ್ನು ೧೦ ದಿನಗಳೊಳಗಾಗಿ ಅವರ ವರದಿಯನ್ನು ಸರ್ಕಾರಕ್ಕೆ ಒಪ್ಪಿಸುವರು

ರೇಷ್ಮೆ ಅಭಿವೃದ್ಧಿ ಸಮಿತಿ

ಕೇಂದ್ರ ಸರ್ಕಾರದ ರೇಷ್ಮೆ ಅಭಿವೃದ್ಧಿ ಸಲಹಾ ಸಮಿತಿಯ ಸಭೆಯು ನಿನ್ನೆ ಇಲ್ಲಿ ಸೇರಿ, ಜಪಾನ್, ಇಟಲಿ ಮತ್ತು ಫ್ರಾನ್ಸ್ ಗಳಲ್ಲಿ ರೇಷ್ಮೆ ಕೈಗಾರಿಕೆ ಬಗ್ಗೆ ಶಿಕ್ಷಣ ಪಡೆಯಲು ಸ್ಕಾಲರ್‌ಶಿಪ್ ಮತ್ತು ಸಂಸ್ಥಾನಗಳ ಅಧಿಕಾರಿಗಳಿಗೆ ವೇತನ ಕೊಡಬೇಕೆಂದು ನಿರ್ಧರಿಸಿತು. ಶ್ರೀ ಸವ ರಕ್ಷಂ ರಾಮಲಿಂಗ ರೆಡ್ಡಿ ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು ರೇಷ್ಮೆ ಅಭಿವೃದ್ಧಿ ವಿಚಾರವಾಗಿ ಒಂದು ಉಪ ಸಮಿತಿಯನ್ನು ರಚಿಸಲಾಯಿತು

○ ದಾವಣಗೆರೆ ಪುರ ಸಭೆಗೆ ಸರ್ಕಾರದವರು ೨ ಲಕ್ಷ ರೂ ಸಾಲವನ್ನು ಮಂಜೂರು ಮಾಡಿದ್ದಾರೆ

○ ಕೃಷ್ಣರಾಜನಗರದಲ್ಲಿ [illegible] ಪ್ರವಸ್ಥೆಗಾಗಿ [illegible] ರೂ [illegible] ಮಂಜೂರು ಮಾಡಿದ್ದಾರೆ

○ ಭಾರತ ಸರ್ಕಾರದ ಕೈಗಾರಿಕಾ [illegible] ಮುಖ್ಯ ಸಾದ್ [illegible] ಬರುವ [illegible] ಕೊಟ್ಟಿ [illegible]

ಕುಂಬಾರ ಕೊಪ್ಪಲಿನ ಕುಂದು ಕೊರತೆಗಳು

ಮೈಸೂರು ೨೯

ನೆನ್ನೆ ಸಂಜೆ ಶ್ರೀ ಬಿ ಬಾಲಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು ಶ್ರೀಗಳಾದ ಸಿ ಜಿ ದೇವನಾಥ್, ಟಿ ಎಸ್. ಸುಬ್ಬಣ್ಣ, ಎ ರಾಮಣ್ಣ ಮತ್ತು ಹೆಚ್ ಎಂ ಚನ್ನಬಸಪ್ಪನವರುಗಳು ಭಾಷಣ ಮಾಡಿ ಗ್ರಾಮಸ್ಥರು ಐಕಮತ್ಯದಿಂದಲೂ ಪರಸ್ಪರ ಸಹಕಾರದಿಂದಲೂ ವರ್ತಿಸಿ ತಮ್ಮ ಊರಿನ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಹೇಳಿದರು ಮೈಸೂರು ಪೌರ ಸಭೆಗೆ ಒಂದು ನಿಯೋಗವನ್ನು ಕಳುಹಿಸಿ ಗ್ರಾಮದ ಕುಂದು ಕೊರತೆಗಳನ್ನು ಪರಿಹರಿಸುವಂತೆ ಪ್ರಾರ್ಥಿಸಬೇಕೆಂದು ತೀರ್ಮಾನವಾಯಿತು ಸಂಸ್ಥಾನದ ಭವಿಷ್ಯದ ಬಗ್ಗೆ ಮೊನ್ನೆ ಮೈಸೂರು ಟೌನ್‌ಹಾಲಿನಲ್ಲಿ ನಡೆದ ಸಭೆಯ ನಿರ್ಣಯಕ್ಕೆ ಬೆಂಬಲ ಕೊಡಲಾಯಿತು ಚಾಮುಂಡಿ ಕಾಫಿ ಕಾರ್ಖಾನೆಯಲ್ಲಿ ಕೆಲಸಗಾರರಿಗೆ ಕೊಡುತ್ತಿರುವ ತೊಂದರೆಯನ್ನು ಖಂಡಿಸಲಾಯಿತು.

ಸಮಗ್ರ ಗ್ರಾಮ ಸಹಕಾರ ಸಂಘ

ಮೈಸೂರು ತಾಲ್ಲೂಕು ನಾಗರಕಟ್ಟೆಯಲ್ಲಿ ನಿನ್ನೆ ದಿನ ಸಮಗ್ರ ಗ್ರಾಮ ಸೇವಾ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಜಿಲ್ಲಾಧಿಕಾರಿಗಳಾದ ಶ್ರೀ ಮ್ಯಾಥ್ಯೂರವರು ನೆರವೇರಿಸಿದರು ಶ್ರೀಗಳಾದ ಹೆಚ್.ಕೆ ಕುಮಾರಸ್ವಾಮಿ ಮತ್ತು ಅಮಲ್ದಾರ್ ಶ್ರೀ ನರಸಿಂಗರಾಯರು ಭಾಷಣ ಮಾಡಿ ಸಂಘದ ಉದ್ದೇಶವನ್ನು ವಿವರಿಸಿದರು ೭೦೦ ರೂ ಷೇರುಗಳು ವಸೂಲಾದವು

ಬೌರಿಂಗ್‌ಪೇಟೆ ಹೆಸರಿನ ಬದಲಾವಣೆ

ಕೋಲಾರ ಜಿಲ್ಲೆಯ ಬೌರಿಂಗ್‌ಪೇಟೆಯ ಹೆಸರನ್ನು ಬಂಗಾರಪೇಟೆಯೆಂದು ಕರೆಯಲಾಗುವುದೆಂದು ತಿಳಿದುಬಂದಿದೆ.

ಎಂ.ಪಿ.ಸಿ.ಸಿ. ಸಭೆ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆಯು ಮುಂದಿನ ತಿಂಗಳು ೧೪ ಮತ್ತು ೧೫ ನೇ ತಾ॥ ಗಳಲ್ಲಿ ನಡೆಯುವುದು ಸ್ಥಳವನ್ನು ಇನ್ನೂ ನಿರ್ಧರಿಸಿಲ್ಲ

ಯುದ್ಧಕ್ಕೆ ಸೇರದಂತೆ ಮಾಡಲು ೧೫ ವರ್ಷ ಮಗನ ಬಂಧನ

ತನ್ನ ಮಗನನ್ನು ಸೈನ್ಯಕ್ಕೆ ಬಲಾತ್ಕಾರವಾಗಿ ಎಳೆದುಕೊಂಡುಹೋಗುವರೆಂಬ ಭೀತಿಯಿಂದ ಆತನ ತಾಯಿಯು ನ್ಯೂಯಾರ್ಕಿನ ಕೊಠಡಿಯಲ್ಲಿ ೧೫ ವರ್ಷಗಳ ಹಿಂದೆ ಆತನನ್ನು ಕೂಡಿ ಬಿಗಿದಿಗೆ ಬೀಗ ಮುದ್ರೆ ಹಾಕಿಟ್ಟಿರುವಳೆಂದೂ, ಒಂದು ಕಿಂಡಿಯ ಮೂಲಕ ಆತನಿಗೆ ಆಹಾರವನ್ನು ಕೊಡುತ್ತಿದ್ದಳೆಂದೂ ಹೇಳಲಾಗಿದೆ.

ಗುಂಡಿನೇಟಿನಿಂದ ೭ ಮಂದಿ ಸ್ತ್ರೀಯರ ಮರಣ

ಕಲ್ಕತ್ತೆಯ ಜೈಲಿನಲ್ಲಿ ಉಪವಾಸ ಮಾಡುತ್ತಿರುವ ಕಮ್ಯೂನಿಸ್ಟ್ ಬಂದಿಗಳ ಸಹಾನುಭೂತಿಗಾಗಿ ನೆನ್ನೆ ದಿನ ಮಹಿಳಾ ಆತ್ಮರಕ್ಷಣಾ ಸಮಿತಿಯ ಆಶ್ರಯದಲ್ಲಿ ಪ್ರತಿಭಟನಾ [illegible] ಹೊರಟ ಮೆರವಣಿಗೆಯನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರೆಂದೂ ಇದರಿಂದ [illegible] ಜನರು ಸತ್ತರೆಂದೂ, ಅವರಲ್ಲಿ ೭ ಮಂದಿ ಹೆಂಗಸರು ಇದ್ದರೆಂದೂ ವರದಿ ಬಂದಿದೆ

ಕೋಮುವಾರು ಸ್ಥಾನಗಳ ವಜಾ

ಪಂಚಾಯಿತಿ ಸಂಸ್ಥೆಗಳಲ್ಲಿ ಕೋಮುವಾರು ತತ್ವದ ಮೇಲೆ ಸ್ಥಾನಗಳನ್ನು ಮೀಸಲಾಗಿಡುವ ಪದ್ಧತಿಯನ್ನು ವಜಾ ಮಾಡಲು ಮದರಾಸ್ ಸರ್ಕಾರದವರು ನಿರ್ಧರಿಸಿದ್ದಾರೆ. ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಇದನ್ನು ಕ್ರಮೇಣ ಜಾರಿಗೆ ತರಲಾಗುವುದೆಂದು ಹೇಳಲಾಗಿದೆ. ಪ್ರತ್ಯೇಕ ಚುನಾವಣಾ ಪದ್ಧತಿಯನ್ನೂ ರದ್ದು ಮಾಡಲಾಗುವುದು

ಉಗಾಂಡದಲ್ಲಿ ಗಲಭೆ

ಬ್ರಿಟಿಷ್ ಪೂರ್ವ ಆಫ್ರಿಕದ ಉಗಾಂಡಾದ ಆಫ್ರಿಕ ಜನಾಂಗದ ರಾಜರಾದ [illegible] ಬಾಕಾರವರ ಅರಮನೆ ಮುಂದೆ ಜನರ ಗುಂಪು ಪ್ರದರ್ಶನ ನಡೆಸಿ, [illegible] ಗಳನ್ನು ವಜಾ ಮಾಡಬೇಕೆಂದು ಗಲಭೆ ನಡೆಸಿದರೆಂದೂ, ಪೋಲೀಸರು ಮದ್ದುಗಳನ್ನು ಪ್ರಯೋಗಿಸಿ [illegible] ರೆಂದೂ, ಕೆಲವು ಅಧಿಕಾರಿಗಳಿಗೆ ಗಾಯವಾಯಿತೆಂದೂ ವರದಿಯಾಗಿದೆ. [illegible] ಯವನ್ನು ಜಾರಿಗೆ ತರಲಾಗಿದೆ

ಪ್ಲಾಸಿ ರಣಕ್ಷೇತ್ರದ ಸ್ಮಾರಕಗಳ ರದ್ದು

ಕಲ್ಕತ್ತದ [illegible] ಪ್ರದೇಶದಲ್ಲಿ [illegible] ಪ್ಲಾಸಿ [illegible] ಬ್ರಿಟಿಷರು ಸ್ಥಾಪಿಸಿದ್ದ ಸ್ಮಾರಕದ [illegible] ಶಾಸನವನ್ನು [illegible] ಭಾರತ ಸರ್ಕಾರದವರು [illegible] ಸ್ಮಾರಕ ಭವನದಲ್ಲಿ ಇಡಲಾಗುವುದು

ದುರ್ನಡತೆಗಾಗಿ ನ್ಯಾಯಾಧೀಶರ ವಜಾ

ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಶಿವಪ್ರಸಾದ ಸಿನ್ಹ ರವರನ್ನು ದುರ್ನಡತೆಗಾಗಿ ಕೆಲಸದಿಂದ ತೆಗೆದು ಹಾಕುವಂತೆ ಭಾರತ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಕಮ್ಯೂನಿಸ್ಟರು ಕಣ್ಣು ಚುಚ್ಚಿದರು

[illegible] ಪಶ್ಚಿಮ [illegible] ನಡೆಯುತ್ತಿರುವ [illegible] ಮೇಲೆ [illegible] ಕಮ್ಯೂನಿಸ್ಟರು ಧಾಳಿ ನಡೆಸಿ, [illegible] ಕಾಂಗ್ರೆಸ್ಸಿನವರನ್ನು [illegible] ಮುಂದಿಗೆ [illegible] ಕಣ್ಣುಗಳನ್ನು ಚುಚ್ಚಿ [illegible] ಮಾಡಲಾಗಿದೆ

ಅಬ್ದುಲ್ಲಾ ಮೊರೆ ಕೊಲೆ ಪಾತಕರಿಗೆ ಮರಣ ದಂಡನೆ

[illegible] ಹೈಕೋರ್ಟಿನ [illegible] ಬೀದಿಯಲ್ಲಿ [illegible] ಗಲಭೆ [illegible] ಕೊಲೆ ನಡೆಸಿದರೆಂದು ಅವರುಗಳಿಗೆ [illegible] ವಿಧಿಸಲಾಗಿದೆ. [illegible] ಮಾಡಿ ಅಧಿಕಾರಿಗಳಿಗೆ [illegible]

ಬೊಂಬಾಯಿನಲ್ಲಿ ಕುಷ್ಠ ರೋಗಿಗಳ ಕೇಂದ್ರ

ಕುಷ್ಠರೋಗಿಗಳನ್ನು ಪ್ರತ್ಯೇಕವಾದ ಒಂದು ಪ್ರದೇಶದಲ್ಲಿ ಇಡಲು ಒಂದು ಕೇಂದ್ರವನ್ನು ಸ್ಥಾಪಿಸಬೇಕೆಂದು ಬೊಂಬಾಯಿನ ಸರ್ಕಾರದವರು ನಿರ್ಧರಿಸಿದ್ದಾರೆ

ಷಾಂಘೈ ಪತನವು ಅಗಾಧ ಸೈನ್ಯ

ಚೀಣದ ಅತ್ಯಂತ ದೊಡ್ಡ ನಗರವಾದ ಷಾಂಘೈಯನ್ನು [illegible] ಲಕ್ಷ [illegible] ಸೈನಿಕರು ಮತ್ತು [illegible] ಯುದ್ಧ [illegible] ಹೇಳಲಾಗಿದೆ

ಲಕ್ಕೋಟೆ ಮೇಲೆ ಪ್ರಾಂತ ಸರ್ಕಾರದ ಹೆಸರಿಲ್ಲ

ಲಕ್ಕೋಟೆಗಳ ಮೇಲೆ ಹಾಕಲಾಗುತ್ತಿದ್ದ ಪ್ರಾಂತೀಯ ಸರ್ಕಾರಗಳ ಹೆಸರುಗಳನ್ನು ತೆಗೆದುಹಾಕಿ "ಭಾರತ ಸರ್ಕಾರದ ಸರ್ವೀಸ್" ಎಂದು ಮಾತ್ರ ಹಾಕಬೇಕೆಂದು ಸೂಚನೆ ಕೊಡಲಾಗಿದೆ.

ಸಮತಾವಾದಿಗಳಿಗೆ ಮಾನಪತ್ರ ಕೊಟ್ಟಿದ್ದಕ್ಕೆ ಶಿಸ್ತಿನ ಕ್ರಮ

[illegible] ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ಕೆಲವು ಜಿಲ್ಲಾಬೋರ್ಡುಗಳು ಸಮತಾವಾದಿ ಪಕ್ಷದ ನಾಯಕರುಗಳಿಗೆ ಮಾನಪತ್ರವನ್ನು ಅರ್ಪಿಸಿದುದರ ಬಗ್ಗೆ ಅವುಗಳ ಮೇಲೆ ಶಿಸ್ತಿನಕ್ರಮ ತೆಗೆದುಕೊಳ್ಳಬೇಕೆಂದು ಜಿಲ್ಲೆಯ ಕಾಂಗ್ರೆಸ್ ಸಮಿತಿಗಳಿಗೆ ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಸೂಚನೆ ಇತ್ತಿದ್ದಾರೆ

ಡಾಕ್ಟರ ಮನೆಯಲ್ಲಿ ಆಶ್ಚರ್ಯಕರ ಬೆಂಕಿ ಜ್ವಾಲೆ

ನೆಲ್ಲೂರಿನ ರಾಜಬೀದಿಯಲ್ಲಿರುವ ವೈದ್ಯರ ಒಂದು ಮನೆಯಲ್ಲಿ ಕಳೆದ [illegible] ದಿನಗಳಿಂದಲೂ ಆಗಾಗ್ಗೆ ಬೆಂಕಿಯು ಜ್ವಾಲೆಯು ಕಂಡುಬರುತ್ತಿದೆಯೆಂದೂ, ಅದು ಹೇಗೆ ಉತ್ಪತ್ತಿಯಾಗುವುದೆಂಬುದು ಪತ್ತೆ ಆಗದ ಆಶ್ಚರ್ಯವನ್ನುಂಟುಮಾಡಿದೆಯೆಂದೂ ವರದಿಯಾಗಿದೆ. ಮೊದಲನೆ ದಿನ ಕಂಡುಬಂದ ಜ್ವಾಲೆಯನ್ನು ಆರಿಸಲಾಯಿತು. ಮಾರನೇ ದಿನಗಳಲ್ಲಿ ಆಗಾಗ್ಗೆ ಅಕಸ್ಮಾತ್ ಬೆಂಕಿಯು ಅನೇಕ ಭಾಗಗಳಲ್ಲಿ ಕಾಣಿಸಿತೆಂದೂ, ಒದ್ದೆ ಬಟ್ಟೆಗೆ ಬೆಂಕಿ ಹತ್ತಿಕೊಂಡಿತೆಂದೂ ಹೇಳಲಾಗಿದೆ

ವಿದ್ಯಾರ್ಥಿಗಳಿಂದ ಗ್ರಾಮಾಭಿವೃದ್ಧಿ ಕಾರ್ಯ

ಕೃಷ್ಣರಾಜನಗರ ಹೈಸ್ಕೂಲಿನ [illegible] ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು [illegible] ಕೊಪ್ಪಲಿನಲ್ಲಿ ಗ್ರಾಮ ಪುನರ್ರಚನಾ [illegible] ವನ್ನು ನಾಳೆಯಿಂದ ಒಂದು ತಿಂಗಳು [illegible] ಕೈಗೊಳ್ಳುವರು

ರಜತ ಮಹೋತ್ಸವ

ರಾಜಧಾನಿಯ ಶ್ರೀ [illegible] ಚೇಂದ್ರ ಸಹಕಾರ ಸಂಘದ ರಜತ ಮಹೋತ್ಸವವು ಮುಂದಿನ ತಿಂಗಳು [illegible] ತಾ॥ ಸಂಜೆ [illegible] ಗಂಟೆಗೆ [illegible] ವನದಲ್ಲಿ ಪುರ ಸಭಾ ಕಮೀಷನರ್ [illegible] ನರಸಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಮೈಸೂರು ಕೋಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ಈ ಕೆಳಗೆ ಕಂಡ ಸಾಮಾನು ಸೊಸೈಟಿಗೆ ಹೊಸದಾಗಿ ಬಂದಿರುತ್ತವೆ [illegible] ಒಂದು ಸಾರಿ ಬಂದು [illegible] ಸುವುದು:-

-: ಸಾಮಾನಿನ ವಿವರ -

ಬಿನ್ನಿ, ಅಹಮದಾಬಾದ್, [illegible] ಮಿಲ್ಸ್, ರಾಜಾಮಿಲ್‌ಗಳಲ್ಲಿ ತಯಾರಾದ ಕೋಟಿಂಗ್, ಷರ್ಟಿಂಗ್, [illegible] ಕಲರ್ಡ್ ಸೀರೆ ಬಟ್ಟೆಗಳು, [illegible] ವಾಯಿಲ್ ಬಟ್ಟೆ, ಉಲ್ಲನ್ ಬಟ್ಟೆ, [illegible] ಸಿಲ್ಕ್ ಜಾಕೆಟಿಂಗ್ ಬಟ್ಟೆಗಳೂ, [illegible] ಲಕ್ಕೆ ಬೇಕಾದ ಉಲ್ಲನ್ ರಗ್ಗುಗಳೂ, [illegible] ವಿಧವಾದ ಟಾಯಿಲೆಟ್ ಸಾಮಾನು [illegible] ಸಹ ದೊರೆಯುತ್ತೆ. ಅಲ್ಲದೆ, [illegible] ರೆ, ಕಾಫಿ ಬೀಜ, ಉದ್ದಿನ ಬೇಳೆ, [illegible] ಬೇಳೆ, ಅಲ್ಲದೆ ೧ ರೂಪಾಯಿಗೆ [illegible] ನಂತೆ ಶುದ್ಧವಾದ ಉಪ್ಪು [illegible] ಯುತ್ತದ

ಗೌ॥ ಕಾರ್ಯ[illegible]

ಮೈಸೂರು ಸಿಟಿ ರೇಷನಿಂಗ್

No M-9-3/48-49

ಮೈಸೂರು ಸಿಟಿಯಲ್ಲಿರುವ [illegible] ಕಾರಿ ಡಿಪೋ ಮೊದಲ್ಗೊಂಡು [illegible] ಡಾರ್, ವರ್ತಕರ ಡಿಪೋ ಮತ್ತು [illegible] ಸಂಘಗಳು ಸಹ ಈ ಕೆಳಗೆ ಕಂಡ [illegible] ದಿನಗಳು ಮುಚ್ಚಲ್ಪಡುತ್ತವೆ:-

[illegible] ಶನಿವಾರ [illegible] ಸ್ಥಾನು ಎಣಿಕೆ [illegible] ರಿ ಡಿಪೋ ವರ್ತಕರ [illegible] ಸಹಕಾರ ಸಂಘ

[illegible] ಭಾನುವಾರ. [illegible] ದಾಸ್ತಾನು ಎಣಿಕೆ [illegible] ಮೊದಲ್ಗೊಂಡು [illegible] ಮಾತ್ರ

[ಸಹಿ] ಎಂ. ವೆಂಕಟೇಶ[illegible]
ರೇಷನಿಂಗ್ ಆಫೀಸ[illegible]
(ಇನ್‌ಚಾರ್ಜ್) ಮೈಸೂ[illegible]

ಮೈಸೂರು
[illegible]

CHAMUNDESWARI TALKIES

Morning Shows
From 29-4-49 For 3 days
at 10-30 a.m.

M.G.M's
Beginning or the End
(ಬಿಗಿನಿಂಗ್ ಆರ್ ದಿ ಎಂಡ್)
The History of the origin of the Atom Bomb
Starring - Brian, Robert Walker, Danvely & others

JAYA & CO.
Sayaji Rao Road Mysore
Buckingham, Carnatic, Binny & other Mills Cloth have arrived

ಗಾಯತ್ರಿ ಟಾಕೀಸ್

[illegible]
ತಾ॥ 29-4-49 ರಿಂದ 2 [illegible]
[illegible]

ಬ್ಯೂ ಗೆಸ್ಟ್
BEAU GESTE
[illegible]

Morning Shows
From 30-4-49 [illegible]
M G M's
EASY TO WED
(In Technicolor)

ಲಕ್ಷ್ಮಿ ಥಿಯೇಟರ್

29-4-49 ರಿಂದ :: ಪ್ರತಿ ದಿನ ೩ ಪ್ರದರ್ಶನ
2 30 6 30 ರಾತ್ರಿ 10ಕ್ಕೆ
[illegible]

ನಲ್ಲ ತಂಬಿ

[illegible] ಭಾನುಮತಿ, N.S. ಕೃಷ್ಣನ್, T.A. ಮಧುರಂ

ಪ್ರಭಾತ್ ಟಾಕೀಸಿನಲ್ಲಿ (ಪ್ರತಿ ದಿನ ೩ ಆಟಗಳು) **29-4-49ನೇ ಶುಕ್ರವಾರ**

[illegible] ಚಿತ್ರ ಪಾತ್ರ - ಪುಷ್ಪವಲ್ಲಿ, ಸುಂದರಿ ಬಾಯಿ, ಕೊತ್ತಮಂಗಲಂ ಸುಬ್ಬು ಎಲ್. ನಾರಾಯಣರಾವ್ ಮುಂತಾದವರು

*** ಮಿಸ್ ಮಾಲಿನಿ ***

[illegible] V. R. Narayan at the Sadhvi Press D. Subbaiah Road, Mysore

ಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೩೦-೪-೪೯ [ಸಂಚಿಕೆ ೨೫೯

ಬ್ರಿಟಿಷ್ ದೊರೆಯೊಡನೆ ನೆಹರೂರವರ ಭೇಟಿ

ರಾಜೇಂದ್ರ ಪ್ರಸಾದರಲ್ಲಿ ಕರ್ನಾಟಕದ ನಿಯೋಗ

ಕರ್ನಾಟಕ ಏಕೀಕರಣ ಸಮಿತಿಯು ನಿಯೋಗವೊಂದು ಶ್ರೀ ಎಸ್. ನಿಜಲಿಂಗಪ್ಪನವರ ನಾಯಕತ್ವದಲ್ಲಿ ಡಾ॥ ರಾಜೇಂದ್ರ ಪ್ರಸಾದರನ್ನು ಹುಬ್ಬಳ್ಳಿಯಲ್ಲಿ ಮೊನ್ನೆ ದಿನ ಭೇಟಿ ಮಾಡಿ, ತ್ರಿಮೂರ್ತಿಗಳ ವರದಿಯಿಂದ ಕನ್ನಡ ಜನತೆಗೆ ಅಸಮಾಧಾನ ಉಂಟಾಗಿದೆಯೆಂದೂ, ಮೈಸೂರಿನಲ್ಲಿ ಕೆಲವು ಸ್ವಾರ್ಥಸಾಧಕ ಪಂಗಡಗಳು ತಮ್ಮ ಸ್ವಾರ್ಥ ಧನೆಯ ದೃಷ್ಟಿಯಿಂದ ಆಡಳಿತ ಸೂತ್ರಗಳು ಈಗಿನಂತೆಯೇ ನಡೆದು ಬರಬೇಕೆಂದು ಹೇಳುತ್ತಿದ್ದಾರೆಂದೂ, ಶೈಕಮಾಂಡಿನವರು ಮೈಸೂರಿನವರಿಗೆ ಸರಿಯಾದ ಸಲಹೆ ಕೊಟ್ಟು ಕರ್ನಾಟಕಕ್ಕೆ ಒಪ್ಪಿಸಬೇಕೆಂದು ಮನವಿ ಮಾಡಿಕೊಂಡರೆಂದು ತಿಳಿದು ಬಂದಿದೆ

ಜಪದ ಕಟ್ಟೆ ಮಠದ ಪೀಠಾಧಿಕಾರ

ಮೈಸೂರು ೨೯

ಈ ಮಠದ ಜಪದಕಟ್ಟೆ ಮಠದ ಪೀಠಾಧಿಕಾರ ವಿಷಯವಾಗಿ ರಾಜಧಾನಿಯ ವೀರಶೈವ ಮಹಾಸಭೆಯು ಕಳೆದ ೨೬ ನೇ ಮಂಗಳವಾರ ಸಹಕಾರ ಭವನದಲ್ಲಿ ಶ್ರೀ ಎಂ. ಪಿ. ಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಒಳಕ ಹೊತ್ತು ಚರ್ಚೆ ನಡೆದ ನಂತರ ಜಪದ ಕಟ್ಟೆ ಮಠದ ವಿಷಯದಲ್ಲಿ ಎರಡು ಪ್ರತ್ಯೇಕ ಪಂಗಡದವರು ಏರ್ಪಟ್ಟು ವೀರಶೈವ ಸಮಾಜಕ್ಕೆ ಧಕ್ಕೆ ಬರುವುದರಿಂದ ಈ ಎರಡು ಸಭೆಗಳ ತೀರ್ಮಾನಗಳನ್ನೂ ಶ್ರೀ ಗುರುಗಳ ಪ್ರಣವಸ್ವರೂಪಿಗಳಾದ ಅರವಿಂದ ಮಠದ ಗೌರೀಶಂಕರ ಸ್ವಾಮಿಗಳಿಗೂ ಮತ್ತು ಶ್ರೀ ಮನ್ನಿರಂಜನ ಪ್ರಣವಸ್ವರೂಪಿಗಳಾದ ಹೊಸ ಮಠದ ಶ್ರೀ ಚಿದಾನಂದಮೂರ್ತಿ ಸ್ವಾಮಿಗಳಿಗೂ ಮತ್ತು ಶ್ರೀ ... ವೀರಸಿಂಹಾಸನದ ರಾಧ್ಯಕ್ಷರಿಗೂ ... ಅವರುಗಳು ಕೊಡುವ ತೀರ್ಪಿಗೆ ಬದ್ಧರಾಗಬೇಕೆಂದು ನಿರ್ಣಯ ಮಾಡಲಾಯಿತು

ಶ್ರೀ ಬಸವ ಜಯಂತಿ

ರಾಜಧಾನಿಯ ಶ್ರೀ ವೀರಶೈವ ತರುಣ ಸಂಘದ ಆಶ್ರಯದಲ್ಲಿ ನಾಳೆ ಬೆಳಗ್ಗೆ ೯ ಗಂಟೆಗೆ ವಾಣೀವಿಲಾಸ ರಸ್ತೆಯಲ್ಲಿರುವ ಸಂಘದ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಬಸವಣ್ಣನವರ ಜಯಂತ್ಯುತ್ಸವವು ನಡೆಯುವುದು

ವಯಸ್ಕರ ಶಿಕ್ಷಣ ತರಗತಿ

ರಾಜಧಾನಿಯ ... ಮೊಹಲ್ಲಾ ಈ ... ಶ್ರೀ ಗಂಗಾಧರೇಶ್ವರ ... ಸಂಘದಲ್ಲಿ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ವಯಸ್ಕರ ಶಿಕ್ಷಣ ತರಗತಿ ಪ್ರಾರಂಭೋತ್ಸವವನ್ನು ಶ್ರೀ ... ಯ್ಯನವರು ನಾಳೆ ಸಂಜೆ ೭ ಘಂಟೆಗೆ ನೆರವೇರಿಸುವರು. ಶ್ರೀಮಾನ್ ... ಮತ್ತು ಶ್ರೀ ಕೆ. ಪುಟ್ಟಸ್ವಾಮಿಗಳು ಭಾಷಣ ಮಾಡುವರು.

ಫುಟ್ ಬಾಲ್ ಪಂದ್ಯ

... ಸ್ಮಾರಕ ಫುಟ್ ಬಾಲ್ ... ನಿನ್ನೆ ದಿನ ಸ್ಪೋರ್ಟಿಂಗ್ ... ನೇತಾಜಿ ಕ್ಲಬ್ಬಿನವರನ್ನು ... ದಿಂದ ಸೋಲಿಸಿದರು. ಆಟ ... ಸಾಗುವುದಕ್ಕೆ ಮೊದಲು ನೇತಾಜಿ ... ನ ನಾಗರಾಜ್ ಎಂಬ ಆಟಗಾರ ... ಗಾಗಿ ಎರಡು ನಿಮಿಷ ಮೌನವ ... ಸಲಾಯಿತು

೪೦ ನಿಮಿಷ ಚಿರತೆಯೊಡನೆ ಮನುಷ್ಯನ ಹೋರಾಟ

ಬೂಪಾಲಿಗೆ ೩೫ ಮೈಲಿ ದೂರದಲ್ಲಿರುವ ನೆಪುರಾ ವಿದ್ಯುಚ್ಛಕ್ತಿ ಕೇಂದ್ರದ ಹತ್ತಿರ ಗಾಯಗೊಂಡು ಕುಂಟುತ್ತಿದ್ದ ಚಿರತೆಯೊಂದು ಚಿಲ್ಲಿನ ಕುಂಟು ಕಾವಲುಗಾರನ ಮೇಲೆ ಬಿದ್ದಿತೆಂದೂ. ಆತನು ಅದರ ಬಾಯೊಳಕ್ಕೆ ತನ್ನ ಎಡಗೈಯನ್ನು ಹಾಕಿ, ಬಲಗೈಯಿಂದ ಹೊಡೆದು, ೪೦ ನಿಮಿಷಗಳ ಕಾಲ ಕಾದಾಡಿದನೆಂದೂ, ಕೊನೆಯಲ್ಲಿ ಜನರು ಒಂದು ಚಿರತೆಯನ್ನು ದೊಣ್ಣೆಗಳಿಂದ ಹೊಡೆದು ಸಾಯಿಸಿದರೆಂದೂ, ವರದಿಯಾಗಿದೆ. ಗಾಯಗೊಂಡವನನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ

ಕಲ್ಕತ್ತೆಯಲ್ಲಿ ಮೂರು ಬಾರಿ ಗುಂಡು

ಕಳೆದ ಎರಡು ದಿನಗಳಲ್ಲಿ ಕಲ್ಕತ್ತೆಯ ಕಮ್ಯೂನಿಸ್ಟರು ಗಲಭೆ ನಡಸಿ, ಅನೇಕ ಸ್ಥಳಗಳಿಗೆ ಬೆಂಕಿ ಇಟ್ಟು ಪೋಲೀಸ್ ವಾಹನಗಳ ಮೇಲೆ ಬಾಂಬು ಮತ್ತು ದ್ರಾವಕಗಳನ್ನು ಎಸೆದರು. ಇದನ್ನು ತಡೆಯಲು ಪೋಲೀಸರು ಮೊನ್ನೆ ದಿನ ಮೂರು ಬಾರಿ ಗುಂಡು ಹಾರಿಸಿದರು. ... ಜನರ ಸತ್ತು ಒಟ್ಟು ... ಮಂದಿಗೆ ಗಾಯವಾಗಿದೆ. ಅನಿಶ್ಚಿತ ಕಾಲದವರೆಗೆ ನಗರದಲ್ಲಿ ಪ್ರತಿಬಂಧಕಾಜ್ಞೆಯನ್ನು ಜಾರಿಗೆ ತರಲಾಗಿದೆ

ಏಕ ಕಾಲದಲ್ಲಿ ೬ ಮಕ್ಕಳ ಜನನ

ಕಾಶಿ ಸಂಸ್ಥಾನದ ಜೆಸ್ಸೆಪುರ ಎಂಬ ಹಳ್ಳಿಯಲ್ಲಿ ಹರಿಜನ ಮಹಿಳೆಯೊಬ್ಬಳು ಏಕ ಕಾಲದಲ್ಲಿ ೬ ಮಕ್ಕಳನ್ನು ಹೆತ್ತಳೆಂದೂ, ಅವುಗಳು ... ನಿಮಿಷಗಳ ಕಾಲ ಬದುಕಿದ್ದು ಅನಂತರ ಸತ್ತು ಹೋದುವೆಂದೂ ವರದಿಯಾಗಿದೆ. ತಾಯಿಯ ಸ್ಥಿತಿಯು ತಂಬಾ ಚಿಂತಾಜನಕವಾಗಿದ್ದು ಈಗ ಚಿಕಿತ್ಸೆ ಕೊಳ್ಳುತ್ತಿದ್ದಾಳೆ

ಪತ್ರಿಕಾ ಸಂಪಾದಕರ ಸಮ್ಮೇಳನ

ಮುಂದಿನ ತಿಂಗಳು ... ಮತ್ತು ... ನೇ ತಾ॥ ಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನದ ಸ್ವಾಗತ ಸಮಿತಿಗೆ ಮೈಸೂರು ನಗರದ ಪತ್ರಿಕೋದ್ಯೋಗಿಗಳು ಸಂಘದ ಸದಸ್ಯರೆಲ್ಲರೂ ಸದಸ್ಯರಾಗಿ ... ತಕರಿಸಬೇಕೆಂದು ಸಂಘದ ಅಧ್ಯಕ್ಷರಾದ ಶ್ರೀ ಎಸ್. ಶ್ರೀನಿವಾಸಮೂರ್ತಿಯವರು ... ತ್ತಾರೆ

ನೆಹರೂರವರಿಗೆ ರಾಜಗೌರವ

ನಿನ್ನೆ ಬ್ರಿಟಿಷ್ ದೊರೆಗಳು ಒಕಿಂಗ್ ಹಾಂ ಅರಮನೆಗೆ ನೆಹರೂರವರನ್ನು ಆಹ್ವಾನಿಸಿ ಸತ್ಕರಿಸಿದರು.

... ವರ್ಷ ವಯಸ್ಸಿನ ಸುಪ್ರಸಿದ್ಧ ಲೇಖಕರಾದ ಜಾರ್ಜ್ ಬರ್ನಾರ್ಡ್ ಷಾರವರನ್ನು ನೆಹರೂರವರು ನಿನ್ನೆ ಭೇಟಿ ಮಾಡಿ ಎರಡು ಗಂಟೆ ಕಾಲ ಮಾತುಕತೆ ನಡೆಸಿದರು.

ಐರ್ಲೆಂಡ್ ಪಾರ್ಲಿಮೆಂಟ್ ಸಭೆಯು ಮೊನ್ನೆ ನೆಹರೂರವರಿಗೆ ಸಭಾ ಭವನದಲ್ಲಿ ಸ್ವಾಗತ ನೀಡಿತು. ಈ ಗೌರವವು ಯಾರಿಗೂ ದೊರೆತಿರಲಿಲ್ಲ

ವಾಡಿಯಾರವರು ಬರೋಡಾ ಉಪಸ್ವಾನಪತಿ

ಮೈಸೂರು ವಿದ್ಯಾ ಇಲಾಖೆ ನಿವೃತ್ತ ಉನ್ನತಾಧಿಕಾರಿಗಳಾದ ಶ್ರೀ ಎ ಆರ್ ವಾಡಿಯಾರವರನ್ನು ನೂತನ ಬರೋಡಾ ವಿಶ್ವವಿದ್ಯಾಲಯದ ಉಪಸ್ವಾನಪತಿಗಳಾಗಿ ನೇಮಿಸಲಾಗಿದೆ

ಹೊಗೆಬತ್ತಿ ಸೇದುವವರಿಗೆ ಪ್ರತ್ಯೇಕ ರೈಲುಗಾಡಿ

ನಿಶ್ಶಂಕ ಮಹಾಸಭೆಯ ಮತೀಯ ಮಂಡಲಿಯು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡು ಅನೇಕ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಈ ದೇಶದಲ್ಲೂ ಸಹ ಹೊಗೆಬತ್ತಿ ಸೇದುವವರಿಗೆ ರೈಲುಗಳಲ್ಲಿ ಪ್ರತ್ಯೇಕ ಗಾಡಿಗಳನ್ನು ಏರ್ಪಡಿಸಬೇಕೆಂದು ಕೋರಿದೆ. ಇದಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಸೇದುವ ಪದ್ಧತಿಯನ್ನು ನಿಷೇಧಿಸುವಂತೆ ಆಜ್ಞೆಯಾಗಬೇಕೆಂದು ಪೂರ್ವ ಪಂಜಾಬು ಮತ್ತು ಪಾಟಿಯಾಲಾ ಸರಕಾರಗಳನ್ನು ಪ್ರಾರ್ಥಿಸಲಾಗಿದೆ

ಮೂರು ರೈಲುಗಳ ಡಿಕ್ಕಿಯಿಂದ ೩೦ ಜನರ ಮರಣ

... ವಿನೋದಾರ್ಥವಾಗಿ ... ಮೈಲಿ ದೂರದಲ್ಲಿರುವ ಬಂದ ಪ್ರೈಸ್ ನಿಲ್ದಾಣದಲ್ಲಿ ... ರೈಲೂ ಹಾಗೂ ... ರೈಲಿಗೂ ಡಿಕ್ಕಿಯಾಗಿ ಮೂರನೇ ರೈಲು ... ಡಬ್ಬಗಳಿಗೆ ಡಿಕ್ಕಿ ಹೊಡೆಯಿತೆಂದೂ ಇದರಿಂದ ೩೦ ಜನರು ಸತ್ತರೆಂದೂ ... ಗಾಯಗೊಂಡರು ...

ಸೆನೆಟ್ ಸಭೆ

ಮೈಸೂರು ೩೦

ಈ ದಿನ ಮಧ್ಯಾಹ್ನ ವಿಶ್ವವಿದ್ಯಾಲಯದ ಸೆನೆಟ್ ಸಭೆಯು ವೈಸ್ ಛಾನ್ಸಲರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯಕಲಾಪಗಳ ಮುನ್ನ ಸಂಯುಕ್ತ ಪ್ರಾಂತ್ಯದ ಗೌರ್ನರವರಾಗಿದ್ದ ಶ್ರೀಮತಿ ಸರೋಜಿನಿ ದೇವಿಯವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿ ನಿರ್ಣಯ ಮಾಡಲಾಯಿತು. ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರ ಪ್ರಶ್ನೆಗೆ ಉತ್ತರವಾಗಿ, ಮುಂದಿನ ವರ್ಷ ಮಹಾರಾಣಿ ಫಸ್ಟ್ ಗ್ರೇಡು ಕಾಲೇಜಿಗೆ ಲ್ಯಾಬೋರೇಟರಿ ಸಾಧನಗಳನ್ನು ಒದಗಿಸಲಾಗುವುದೆಂದು ತಿಳಿಸಲಾಯಿತು

ವಿಶ್ವವಿದ್ಯಾಲಯದ ಬರುವ ವರ್ಷದ ಆದಾಯವು ಒಟ್ಟು ೭೩ ಲಕ್ಷ ರೂ ಎಂದು ಅಂದಾಜಾಗಿದೆ. ಇದರಲ್ಲಿ ೫೭ ಲಕ್ಷವನ್ನು ಸರ್ಕಾರದಿಂದ ನಿರೀಕ್ಷಿಸಲಾಗಿದೆ. ವೆಚ್ಚದ ಬಾಬುಗಳಲ್ಲಿ ನ್ಯಾಷನಲ್ ಅಕ್ಯಾಡೆಮಿ ಆಫ್ ಆರ್ಟ್ಸಿಗೆ ಒಂದು ಲಕ್ಷ ರೂ. ಕನ್ನಡ ನಿಘಂಟಿಗೆ ೨೫೦೦೦ ಟ್ಯುಟೋರಿಯಲ್ ಸಿಸ್ಟಮ್ಗೆ ೧೦೦೦೦ ರೂ ದಾವಣಗೆರೆ ಇಂಜನಿಯರಿಂಗ್ ಕಾಲೇಜಿಗೆ ... ಲಕ್ಷ ರೂ ಒದಗಿಸಲಾಗಿದೆ. ಪತ್ರಿಕೋದ್ಯಮ ಮತ್ತು ಗೃಹ ವಿಜ್ಞಾನಕ್ಕೂ ಏರ್ಪಾಡು ಮಾಡಲಾಗಿದೆ

ದಿವಾಕರರ ಆಗಮನ

ಮೈಸೂರು ೩೦

ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಸಚಿವರಾದ ಶ್ರೀ ಆರ್. ಆರ್. ದಿವಾಕರ್‌ರವರು ಈ ದಿನ ಬೆಳಗ್ಗೆ ೧೧-೩೦ ಘಂಟೆಗೆ ಬೆಂಗಳೂರಿನಿಂದ ಆಗಮಿಸಿ ಪ್ರಭುತ್ವ ಭವನದಲ್ಲಿ ಬಿಡಾರ ಮಾಡಿರುವರು. ಬೆಳಗ್ಗೆ ಅವರು ಶ್ರೀಮನ್ ಮಹಾರಾಜರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ತರುವಾಯ ಮಧ್ಯಾಹ್ನ ಪೌರಸಭೆಗೆ ಭೇಟಿಯಿತ್ತು ಸನ್ಮಾನ ಪತ್ರವನ್ನು ಸ್ವೀಕರಿಸಿದರು. ಈ ಸಂಜೆ ೬-೩೦ ಘಂಟೆಗೆ ಅವರು ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ ಕೊಡುವರು. ಈ ರಾತ್ರಿ ಅವರು ಬೆಂಗಳೂರಿಗೆ ತೆರಳುವರು. ನಾಳೆ ಸಂಜೆ ಅಲ್ಲಿನ ಪತ್ರಿಕೋದ್ಯೋಗಿಗಳ ಸಂಘದಾಶ್ರಯದಲ್ಲಿ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರ ಸ್ಮಾರಕ ಭಾಷಣ ಮಾಡುವರು

ಪ್ರಭುಗಳೊಡನೆ ಜಿ॥ ಬೋರ್ಡ್ ಅಧ್ಯಕ್ಷರ ಭೇಟಿ

ಮೈಸೂರು ಜಿಲ್ಲಾಬೋರ್ಡ್ ಅಧ್ಯಕ್ಷರಾದ ಸೇಠ್ ಎಂ. ಚನ್ನಬಸಪ್ಪನವರು ಈ ದಿನ ಬೆಳಗ್ಗೆ ಅರಮನೆಯಲ್ಲಿ ಶ್ರೀಮನ್ ಮಹಾರಾಜರವರ ಭೇಟಿಯನ್ನು ಪಡೆದರು. ಜಿಲ್ಲಾಬೋರ್ಡಿನ ಆಡಳಿತ, ನೂತನ ಕೆಲವು ನಿರ್ಮಾಣ, ಕರ್ನಾಟಕ ಏಕೀಕರಣ, ಮತ್ತು ಮೈಸೂರಿನ ರಾಜಕೀಯ ... ಮುಂತಾದ ವಿಷಯಗಳ ಮೇಲೆ ಸಂಭಾಷಣೆ ನಡೆಯಿತೆಂದು ತಿಳಿದು ಬಂದಿದೆ

ಬಾಲಕನಿಗೆ ಹಿಂದಿನ ಜನ್ಮದ ನೆನಪು

... ಜಿಲ್ಲೆಯ ... ಗ್ರಾಮದ ... ವರ್ಷದ ಬಾಲಕನೊಬ್ಬನು ತನಗೆ ಹಿಂದಿನ ಜನ್ಮದ ಸ್ಮರಣೆ ಇರುವುದಾಗಿ ಹೇಳುತ್ತಾನೆ. ತನ್ನ ಪೂರ್ವ ಜನ್ಮದ ಹೆಸರು ... ಎಂದೂ ... ವರ್ಷದ ಹಿಂದೆ ಸಾಯುವಾಗ ಇದ್ದ ತನ್ನ ಮನೆಗೆ ಕರೆದುಕೊಂಡು ಹೋಗು ... ಎಲ್ಲಾ ಹೋದಾಗ ... ಹೇಳುತ್ತಾನೆ

ಭವನ ಕುಸಿದು ಬಿದ್ದು ೭ ಜನರ ಮರಣ

ಕೈರೋ...ನ ಹ... ನಗರದಲ್ಲಿ ಐದು ಅಂತಸ್ತಿನ ಒಂದು ಮನೆ... ರಾತ್ರಿ ಕುಸಿದು ಬಿದ್ದು ೭ ಜನರು ಸತ್ತ... ... ಮುಂದಿನ ಗಾಯವಾಯಿತೆಂದೂ ... ಕಟ್ಟಡದಲ್ಲಿ ... ಜನರು ವಾಸಿಸುತ್ತಿದ್ದರು ... ದರ್ಜೆಯ ... ಜನರು ಸತ್ತಿರಬಹುದೆಂದು ...

ಸಂಚರಿಸುವ ಕೋರ್ಟು

ಟ್ರಾಫಿಕ್ ಕಾನೂನನ್ನು ಉಲ್ಲಂಘಿಸಿದವರನ್ನು ... ನಗರದಲ್ಲಿ ಸಂಚರಿಸುವ ಕೋರ್ಟನ್ನು ಸ್ಥಾಪಿಸಲಾಗಿದೆ. ಕಳೆದ ... ಮ್ಯಾಜಿಸ್ಟ್ರೇಟರು ಮತ್ತು ಪೋಲೀಸರು ನಗರವನ್ನು ಸಂಚರಿಸಿ ... ಮೊಕದ್ದಮೆಗಳನ್ನು ಇತ್ಯರ್ಥ ಮಾಡಿದರು.

ಮಹಾತ್ಮರ ಜಾತಕದಲ್ಲಿ ಅವರ ಮರಣದ ಸೂಚನೆ

ಮಹಾತ್ಮ ಗಾಂಧಿಯವರು ತಮ್ಮ ೭೯ನೇ ವಯಸ್ಸಿನಲ್ಲಿ ... ಜಾತಕದಲ್ಲಿ ... ಪ್ರಶ್ನೆ ... ಜಾತಕವನ್ನು ... ಈಗ ... ಪಡಿಸಲಾಗಿದೆ.

ಭಾಷಾವಾರು ಸಂಸ್ಥಾನಗಳಿರಕೂಡದು

ಮದರಾಸ್ ಪ್ರಾಂತ್ಯದಲ್ಲಿರುವ ... ಭಾಷಾವಾರು ತತ್ವದ ಮೇಲೆ ... ಪ್ರಾಂತ್ಯವಿಂಗಡಣೆ ಕೂಡದು ... ಎಂದೂ, ಅದನ್ನು ... ಸರ್ಕಾರದವರ ಅಪ್ಪಣೆ ... ಕೊಟ್ಟಿದ್ದಾರೆ.

ಮಧರಾಸಿನಲ್ಲಿ ಸಾಂಪೂರಿನ ಐಕ್ಯ

ಸಾಂಗ್ಲಿ ಸಂಸ್ಥಾನವನ್ನು ಮದರಾಸ್ ... ಐಕ್ಯ ಮಾಡಲು ... ರಾಜರು ಒಪ್ಪಿರುವರೆಂದೂ ... ತಿಂಗಳಿನಿಂದ ... ಜಾರಿಗೆ ಬರುವುದೆಂದು ಹೇಳಲಾಗಿದೆ.

ಬೆಂಗಳೂರಿನಲ್ಲಿ ೨೫೦ ವಿಮಾನಗಳ ತಯಾರಿ

ಬೆಂಗಳೂರು ವಿಮಾನ ಕಾರ್ಖಾನೆಯಲ್ಲಿ ಈಗ ... ಶಿಕ್ಷಣ ಕೊಡುವ ವಿಮಾನಗಳನ್ನು ತಯಾರಿಸಲಾಗುತ್ತಿದೆಯೆಂದೂ, ಇನ್ನು ... ನರ್ಸರಿಗಳಿಗಾಗಿ ೨೫೦ ದೊಡ್ಡ ವಿಮಾನಗಳನ್ನು ತಯಾರಿಸಲಾಗುವುದೆಂದು ಹೇಳಲಾಗಿದೆ.

ವಿದ್ಯಾರ್ಥಿಗಳಿಂದ ಸಮಾಜ ಸೇವೆ

ಬೆಂಗಳೂರು ಜಿಲ್ಲಾ ದೊಡ್ಡಬಳ್ಳಾಪುರ ತಾಲ್ಲೂಕಿನ ೭ ಗ್ರಾಮಗಳಲ್ಲಿ ಕರ್ನಾಟಕ ಪ್ರಾಂತೀಯ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ೧೦೦ ಜನ ಕಾಲೇಜ್ ವಿದ್ಯಾರ್ಥಿಗಳು ಸಮಾಜ ಸೇವಾ ಕಾರ್ಯವನ್ನು ಮುಂದಿನ ತಿಂಗಳು ೧ ನೇ ತಾ॥ ನಿಂದ ಕೈಗೊಳ್ಳುವರು.

ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಔದ್ಯೋಗಿಕ ಶಾಲೆಯ ಪ್ರೊಫೆಸರ್ ಶ್ರೀ ನಾಗಭೂಷಣರವರನ್ನು ಅದರ ಪ್ರಿನ್ಸಿಪಾಲರಾಗಿ ನೇಮಿಸಲಾಗಿದೆ.

ಕಲ್ಕತ್ತೆಯಲ್ಲಿ ಸುರಂಗದ ರೈಲು

೩೩ ಕೋಟಿ ರೂ ವೆಚ್ಚದಲ್ಲಿ ಕಲ್ಕತ್ತೆಯಲ್ಲಿ ಸುರಂಗದ ರೈಲನ್ನು ಹಾಕುವ ವಿಚಾರವನ್ನು ಪರಿಶೀಲಿಸಲು ಫ್ರಾನ್ಸಿನಿಂದ ೬ ಜನ ಇಂಜನಿಯರುಗಳು ಒಂದಿದ್ದಾರೆ. ಭಾರತ ಸರ್ಕಾರದವರು ಇದಕ್ಕೆ ಮಂಜೂರಾತಿ ಕೊಟ್ಟಿದ್ದಾರೆ.

ತಲೆ ಇಲ್ಲದ ಪಕ್ಷಿ ೨೦ ದಿವಸ ಬದುಕಿತ್ತು

ಅಮೆರಿಕದ ಲಾಸ್ ಎಂಜಲೀಸ್‌ನಲ್ಲಿ ತಲೆ ಇಲ್ಲದ ಹುಂಜವೊಂದು ೨೦ ದಿನಗಳವರೆಗೆ ಬದುಕಿ ಕುಣಿದಾಡುತ್ತಿತ್ತೆಂದೂ, ಈಗ ಅದು ಸತ್ತುಹೋಯಿತೆಂದೂ ವರದಿಯಾಗಿದೆ. ರುಂಡವನ್ನು ಕತ್ತರಿಸಿ, ರಕ್ತಕ್ಕಾಗಿ ಒಂದು ಮಂಜಿನ ಗಡ್ಡೆ ಹಾಕಿದ ಕಟ್ಟೆಗಯಲ್ಲಿ ಅದರ ಶರೀರವನ್ನು ಇಡಲಾಗಿತ್ತೆಂದೂ, ಅದನ್ನು ಕೊಂಡೊಯ್ದು ಮಹಿಳೆಯೊಬ್ಬಳು ಕೊರಕ್ಕೆ ತೆಗೆದಾಗ ಅದು ಕುಣಿದಾಡುವುದಕ್ಕೆ ಆರಂಭಿಸಿತೆಂದೂ ಅದಕ್ಕೆ ಕೊಳವೆ ಮೂಲಕ ಹಾಲು ಮತ್ತು ಇತರ ಆಹಾರವನ್ನು ಕೊಡಲಾಗುತ್ತಿದ್ದಿತೆಂದೂ ಹೇಳಲಾಗಿದೆ.

ಭಾರತವು ಮೂರನೇ ಪಕ್ಷವನ್ನು ಕಟ್ಟಬೇಕು

ವಿಶ್ವದಲ್ಲಿ ಯುದ್ಧವನ್ನು ತಡೆಗಟ್ಟಲು ಭಾರತವು ಮೂರನೇ ಪಕ್ಷವನ್ನು ನಿರ್ಮಿಸಿ ಅದರ ನಾಯಕತ್ವವನ್ನು ವಹಿಸಿಕೊಳ್ಳಬೇಕೆಂದು ಶ್ರೀಮತಿ ಕಮಲಾದೇವಿಯವರು ತಿಳಿಸಿರುತ್ತಾರೆ. ಇಡೀ ಏಷ್ಯಾದಲ್ಲಿ ಭಾರತ ಹೊರತು ಇನ್ನಾವ ದೇಶಕ್ಕೂ ಈ ರೀತಿ ಮಾಡಲು ಅನುಕೂಲ ಮತ್ತು ಅವಕಾಶವಿಲ್ಲವೆಂದು ಅವರು ಹೇಳುತ್ತಾರೆ.

ಬಿಳಿಯ ರಿಗೂ ವರ್ಣ ಜನರಿಗೂ ಮದುವೆ ಕೂಡದು

ಬಿಳಿಯ ಜನರು ಇತರ ವರ್ಣದವರೊಡನೆ ವಿವಾಹವಾಗುವುದನ್ನು ತಡೆಗಟ್ಟಲು ದಕ್ಷಿಣ ಆಫ್ರಿಕಾ ಸರ್ಕಾರದವರು ಒಂದು ಶಾಸನವನ್ನು ಜಾರಿಗೆ ತರಲಿರುವರೆಂದು ಹೇಳಲಾಗಿದೆ.

ಸೂಚೌ ನಗರದ ಪತನ

ಶಾಂಗೈ ನಗರದ ಮಾರ್ಗದಲ್ಲಿರುವ ಸೂಚೌ ನಗರವನ್ನು ಕಮ್ಯೂನಿಸ್ಟರು ಆಕ್ರಮಿಸಿದ್ದಾರೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಸಹಾಯ ನೀಡಿ

ಮೇಲ್ಕಂಡ ನಿಲಯವು ಯಾವ ಜಾತಿ ಮತಗಳ ಭೇದವೂ ಇಲ್ಲದೆ ಕೇವಲ ಬಡ ವಿದ್ಯಾರ್ಥಿಗಳಿಗೋಸ್ಕರ ಮೂರು ವರ್ಷಗಳಿಂದ ನಡೆಯುತ್ತಿದೆ. ಅದಕ್ಕೆ ಯಾವ ಮೂಲ ಧನವೂ ಇಲ್ಲ. ಹಳ್ಳಿಗಳಿಗೆ ಹೋಗಿ ದವಸ ಧಾನ್ಯಗಳನ್ನು ತಂದು ಅದನ್ನು ಉಪಯೋಗಿಸಲಾಗುತ್ತಿದೆ. ಈಗಾಗಲೇ ಎಲ್ಲ ಕೋಮಿನ ೬೫ ಮಂದಿ ವಿದ್ಯಾರ್ಥಿಗಳಿದ್ದಾರೆ. ನಿಲಯದ ವಿದ್ಯಾರ್ಥಿಗಳು ಈ ಬೇಸಗೆ ರಜಾ ಕಾಲದಲ್ಲಿ ಧನಧಾನ್ಯ ಸಂಗ್ರಹಿಸುತ್ತಿದ್ದಾರೆ. ಮಹಾಜನರು ಸಹಾಯ ಮಾಡಬೇಕೆಂದು ನಿಲಯದ ಕಾರ್ಯದರ್ಶಿಗಳಾದ ಶ್ರೀ ಟಿ ಎಸ್ ಸುಬ್ಬಣ್ಣನವರು ಕೋರುತ್ತಾರೆ.

ನೆಹರೂರವರು ೭ ನೇ ತಾ॥ ವಾಪಸು

ಲಂಡನ್ನಿನಲ್ಲಿರುವ ಪಂಡಿತ ನೆಹರೂರವರು ಮುಂದಿನ ತಿಂಗಳು ೩ನೇ ತಾ॥ ನಿಂದ ೫ರ ವರೆಗೆ ಸ್ವಿಟ್ಜರ್‌ಲೆಂಡಿಗೆ ಹೋಗಿ ೭ ನೇ ತಾ॥ ಭಾರತಕ್ಕೆ ಹಿಂದಿರುಗುವರು.

ರಾಜಕಮಲ್
ಮೈ ಸೂ ರು
27—4—49 ರಿಂದ
ಅಮೋಘ ಪ್ರಾರಂಭ
ಬಾಂಬೇ ಟಾಕೀಸಿನವರ
ಕಿಸ್‌ಮತ್
— ಭೂಮಿಕೆ —
ಶ್ರೀ ಮುಮ್ತಾಜ್ ಶಾಂತಿ
ಶ್ರೀ ಅಶೋಕ್ ಕುಮಾರ್,
ಶ್ರೀ ವಿ. ಹೆಚ್. ದೇಸಾಯಿ

MORNING SHOWS
From 29-4-49 for 4 days
R K O Radio's Picture
HONEYMOON
With Shirley Temple

ಎಸ್. ಎಲ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇಯಿನ್ ಬಾಮ್
ನೋವು, ಕೀಲು ನೋವು ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ 0-12-0
ಮಹಾ ಸುಗಂಧರಾಜ ತೈಲ —)
„ ಚಂದನಾದಿ ತೈಲ —)
„ ಭೃಂಗಾ ಮಲಕ ತೈಲ —)
—ಬೇಸಿಗೆ ಕಾಲಕ್ಕೆ ಉತ್ತಮ ಅಭ್ಯಂಗನ ತೈಲಗಳು
ಮಹಾಕೇತಕೀ ತೈಲ—ತಲೆ ಬಾಚಿಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ ಬ್ರೇನ್ ಟಾನಿಕ್ ಸೀಸೆ 2-0-0
ಪಂಚಾಮೃತ—ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವಿನ
ಮೈಸೂರು ಆಯುರ್ವೇದಿಕ್ ಫಾರ್ಮಸಿ.
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈ ಸೂ ರು

CHAMUNDESWARI TALKIES
Morning Shows
From 29-4-49 For 3 days at 10-30 a.m.
Beginning or the End
(ಬಿಗಿನಿಂಗ್ ಆರ್ ದಿ ಎಂಡ್)
The History of the origin of the Atom Bomb
Starring ... Robert Walker ... & others

• PRABHA •
To-Night
ROMEO & JULIET
(Hindi) with—Nargis
Morning Shows
From 29-4-49 For 3 days
RKO's
Song of the South
(In Technicolor)
It is Walt Disney's

ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಪ್ರದರ್ಶನಗಳು
ತಾ॥ 1-5-49ರಿಂದ 3 ದಿನಗಳು
ವಾರ್ನರ್ಸ್‌ರವರ ಹಾಸ್ಯಮಯ
ವರ್ಣರಂಜಿತ ಚಿತ್ರ
ರೊಮ್ಯಾನ್ಸ್ ಆನ್ ದಿ ಹೈ ಸೀಸ್
ROMANCE ON THE HIGH SEAS
ಪಾತ್ರ — ಜಾಕ್ ಕಾರ್ಸನ್
Morning Shows
From 30-4-49 For 2 days
M G M's
EASY TO WED
(In Technicolor)

ಶ್ರೀ ... ವಾ ಟಾಕೀಸಿನಲ್ಲಿ (ಪ್ರತಿ ದಿನ ೩ ಆಟಗಳು) 29-4-49ನೇ ಶುಕ್ರವಾರದಿಂದ
... ಸಾಮಾಜಿಕ ... ಚಿತ್ರ ಪಾತ್ರ ಪುಷ್ಪವಲ್ಲಿ, ಸುಂದರಿಬಾಯಿ, ಕೊತ್ತಮಂಗಲಂ ಸುಬ್ಬು,
* ಮಿಸ್ ಮಾಲಿನಿ * ಎಲ್. ನಾರಾಯಣ ರಾವ್ ಮುಂತಾದವರು.

Printed and Published by A R Nagarajan at the Sadhvi Press, Dhanvantri Road, Mysore.

ಪು ೧೯ ನಂ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೧ [illegible] [ಸಂಚಿಕೆ ೩೬

ಸಮಾಜ ಸೇವೆ ಮಾಡಲು ಮಹಿಳೆಯರಿಗೂ ಅವಕಾಶ ಉಂಟು

ವಿಶ್ವವಿದ್ಯಾನಿಲಯಕ್ಕೆ ಇಂಜನಿಯರಿಂಗ್ ಶಾಖೆ

ಮೈಸೂರು ೧.

ವಿಶ್ವವಿದ್ಯಾನಿಲಯದ ಸನೆಟ್ ಸಭೆಯು ನಿನ್ನೆ ಉಪಸ್ವಾನಪತಿಗಳಾದ ಶ್ರೀ ಬಿಲ್. ಕಸ್ತೂರಿರಾಜ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು

ಲಾ ಕಾಲೇಜಿನಲ್ಲಿ ಓದುತ್ತಿರುವ ಹಿಂದುಳಿದ ವಿದ್ಯಾರ್ಥಿಗಳಿಗೆ ಅದು ವೃತ್ತಿ ಶಿಕ್ಷಣ ಕಾಲೇಜಾದುದರಿಂದ ವಿದ್ಯಾರ್ಥಿ ವೇತನವನ್ನು ಕೊಡಲಾಗುವುದಿಲ್ಲವೆಂದು ಶ್ರೀ ಎಸ್. ಎಂ. ಸಿದ್ದಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮವನ್ನು ಪುನರ್‌ವ್ಯವಸ್ಥೆ ಮಾಡಲು ಸರ್ಕಾರದವರೇ ಶ್ರೀ ಸಿ. ಆರ್. ರೆಡ್ಡಿಯವರನ್ನು ನೇಮಿಸಿದರೆಂದು ಶ್ರೀ ಎಂ ಪಿ ಎಲ್. ಶಾಸ್ತ್ರಿಗಳ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ವಿಶ್ವವಿದ್ಯಾನಿಲಯದ ಅನೇಕ ಕಟ್ಟಡಗಳನ್ನು ನೂತನವಾಗಿ ನಿರ್ಮಿಸಬೇಕಾಗಿರುವುದರಿಂದ ಪ್ರತ್ಯೇಕವಾಗಿ ಇಂಜನಿಯರಿಂಗ್ ಶಾಖೆಯನ್ನು ಹೊಂದಲು ಸರ್ಕಾರದವರೊಡನೆ ವ್ಯವಹರಿಸುವುದಾಗಿ ಶ್ರೀ ಪಿ. ಮರುಡಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಮಾಜ ಸೇವೆಯನ್ನು ಕೈಕೊಳ್ಳಲು ಒಂದು ಯೋಜನೆ ತಯಾರಿಸಲಾಗಿದೆಯೆಂದೂ ಮಹಿಳೆಯರೇ ಪ್ರತ್ಯೇಕವಾಗಿ ಸಮಾಜ ಸೇವೆ ಮಾಡಲು ಅವಕಾಶ ಕಲ್ಪಿಸಲಾಗುವುದೆಂದೂ ಶ್ರೀಮತಿ ಸುನಂದಮ್ಮನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

೧೯೪೯ನೇ ಸಾಲಿನಲ್ಲಿ ತೆರೆಯಲಾಗುವ ಕಾಲೇಜುಗಳಿಗೂ ಸಹ ಲ್ಯಾಬೊರೇಟರಿಗಳಿಗೆ ಬೇಕಾದ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆಯೆಂದು ತಿಳಿಸಲಾಯಿತು.

ಶಿವಮೊಗ್ಗದಲ್ಲಿ ಫಸ್ಟ್‌ಗ್ರೇಡ್ ಕಾಲೇಜನ್ನು ತೆರೆಯಬೇಕೆಂದು ನಿರ್ಧರಿಸಿದ್ದರೂ ಕೂಡ ಸ್ಥಳಾಭಾವ ಮತ್ತು ಲ್ಯಾಬೊರೇಟರಿ ಪೂರ್ಣವಾಗಿಲ್ಲದಿರುವುದರಿಂದ ಸಧ್ಯಕ್ಕೆ ಫಸ್ಟ್‌ಗ್ರೇಡ್ ಕಾಲೇಜ್ ತೆರೆಯಲಾಗುವುದಿಲ್ಲವೆಂದು ತಿಳಿಸಲಾಯಿತು.

೧೯೪೯ನೇ ಸಾಲಿನ ಲೆಕ್ಕವನ್ನು ಆಡಿಟ್ ರಿಪೋರ್ಟ್ ಬಂದನಂತರ ಪರಿಶೀಲಿಸಬೇಕೆಂದು ತೀರ್ಮಾನಿಸಲಾಯಿತು

೧೯೪೯-೫೦ನೇ ಸಾಲಿನ ಬಡ್ಜೆಟ್ಟನ್ನು ಶ್ರೀ ಎಂ ವಿ. ಗೋಪಾಲಸ್ವಾಮಿಯವರು ಮಂಡಿಸಿದರು ೭೩ ಲಕ್ಷರೂ ಗಳು ವಿಶ್ವವಿದ್ಯಾನಿಲಯದ ಆದಾಯ ಇದರಲ್ಲಿ [illegible] ಲಕ್ಷರೂಪಾಯಿ ಫೀಸ್ ಮೂಲಕವೂ, [illegible] ಲಕ್ಷ ರೂ. ಪರೀಕ್ಷೆಯ ಫೀಸಿನ ಮೂಲಕವೂ, ೩೧.೨೫ ಲಕ್ಷ ಸರ್ಕಾರದ ಗ್ರಾಂಟ್ ಮೂಲಕವಾಗಿಯೂ ಬರುವುದೆಂದು ಅವರು ತಿಳಿಸಿದರು

ಖರ್ಚಿನ ಬಾಬಿನಲ್ಲಿ ೫೦.೬ ಲಕ್ಷ ರೂ. ಮ ಸೂಲಿನ ಖರ್ಚಿಗಾಗಿಯೂ, ೧೫.೭ ಲಕ್ಷ ರೂ ಹೊಸ ಗ್ರಾಂಟಿನಿಂದ ತೆಗೆದು ಕೊಳ್ಳಲಾಗುವುದೆಂದೂ ತಿಳಿಸಿದರು.

ವಿಶ್ವ ವಿದ್ಯಾನಿಲಯಕ್ಕೆ ಸೇರಿದ ಕಾಲೇಜುಗಳಿಗೆ ೩ ಲಕ್ಷ ರೂ ಗಳ ಗ್ರಾಂಟು ಹೆಚ್ಚಾಗುವುದಾಗಿಯೂ ಉಪಾಧ್ಯಾಯರುಗಳು ಮತ್ತು ನೌಕರ ವರ್ಗದವರುಗಳಿಗೆ ಸಂಬಳ ಸಾರಿಗೆಗಳಿಗಾಗಿ ೫.೫ ಲಕ್ಷದಿಂದ ೬.೫ ಲಕ್ಷ ರೂ. ಗಳನ್ನೂ, ಇಂಜನಿಯರಿಂಗ್, ಸೆಂಟ್ರಲ್ ಮತ್ತು ಟೀಚರ್ಸ್ ಕಾಲೇಜಿನ ಲ್ಯಾಬೊರೇಟರಿಗೆ ನಾಲ್ಕು ಲಕ್ಷ ರೂ ಗಳನ್ನೂ ಒದಗಿಸಲಾಗಿದೆಯೆಂದೂ ತಿಳಿಸಿದರಲ್ಲದೆ ದಾವಣಗೆರೆಯಲ್ಲಿ ಇಂಜನಿಯರಿಂಗ್ ಕಾಲೇಜ್ ಕಟ್ಟಲು ೧೫ ಲಕ್ಷ ರೂ ಒದಗಿಸಲಾಗುವುದೆಂದು ಹೇಳಿದರು ಕ್ಯಾಂಟೀನಿಗಾಗಿ ೧೫ ಸಾವಿರದಿಂದ ೨೦ ಸಾವಿರಕ್ಕೆ ಗ್ರಾಂಟ್ ಹೆಚ್ಚಿಸಲಾಗಿದೆಯೆಂದರು. ಜನಾಬ್ ಸಯ್ಯದ್ ಅಬ್ದುಲ್ ರಹಮಾನರು ಬಡ್ಜೆಟ್ಟನ್ನು ಸ್ವಾಗತಿಸಿದರು

ಶ್ರೀ ಎ ವೆಂಕಟೇಶಯ್ಯನವರು ಮಾತನಾಡಿ ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳು ಪರದೇಶದ ವಿದ್ಯಾರ್ಥಿಗಳ ಮಟ್ಟಕ್ಕೆ ಏರಬೇಕಾಗಿರುವುದರಿಂದ ಒಳ್ಳೆಯ ವಿದ್ಯಾಭ್ಯಾಸ ಪಡೆಯಲು ಅನೆ ಕೂಲವಾಗುವಂತೆ ಹೆಚ್ಚಿನ ಗ್ರಾಂಟ್ ಕೊಡಬೇಕೆಂದು ಹೇಳಿದರು ಶ್ರೀ ಕೆ. ನಾರಾಯಣ ಶೆಟ್ಟರು ಮಾತನಾಡಿ ವಿದ್ಯಾರ್ಥಿಗಳಿಗೆಲ್ಲರಿಗೂ ಕ್ಯಾಂಟೀನ್ ವ್ಯವಸ್ಥೆ ಮಾಡಬೇಕೆಂದರು ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಉದಕ್ಷರಾದ ಮತ್ತು ಉತ್ತಮ ದರ್ಜೆಯ ವಿದ್ಯಾರ್ಥಿಗಳ ಅವಶ್ಯಕತೆ ಇರುವುದರಿಂದ ವಿಶ್ವವಿದ್ಯಾಲಯಗಳು ಪಾರ್ಲಿಮೆಂಟಿಗೆ ಚುನಾಯಿಸಿದ ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಳ್ಳಬೇಕೆಂದೂ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಲು ಕಾಲೇಜುಗಳನ್ನು ತೆರೆಯಬೇಕೆಂದೂ, ಕಾಲೇಜು ಉಪಾಧ್ಯಾಯರುಗಳಿಗೂ ಸಹ ೨೦೦ ರೂ ಗಳು ಬೇಸಿಗೆ ಸಂಬಳವಾಗಿ ಕೊಡಬೇಕೆಂದೂ ತಿಳಿಸಿದರು

ಶ್ರೀ ಕೆ. ಮಾದೇ ಗೌಡರು ಮಾತನಾಡಿ ಹೊಸ ಕಾಲೇಜುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಬೇಕೆಂದೂ ಹಳ್ಳಿಯವರ ಆರ್ಥಿಕ ಮಟ್ಟ ಹೆಚ್ಚುವಂತಹ ವಿದ್ಯಾಭ್ಯಾಸ ನಡೆಯಬೇಕೆಂದೂ ಹೇಳಿದರು.

ಪ್ರಮುಖ ಕಮ್ಯೂನಿಸ್ಟರ ಬಂಧನ

ಸೆಂಟ್ರಲ್ ಪೋಲೀಸ್ ಸ್ಟೇಷನ್ನಿನ ಸ್ಪೆಷಲ್ ಬ್ರಾಂಚ್ ಪೋಲೀಸರು [illegible] ಪ್ರಮುಖ ಕಮ್ಯೂನಿಸ್ಟರನ್ನು [illegible] ಶ್ರೀ ಎಂ ಟಿ. ಶ್ರೀನಿವಾಸನ್, [illegible] [illegible] ಕಮ್ಯೂನಿಸ್ಟ [illegible]

ಬೆಂಗಳೂರು ಕರ್ಣಾಟಕದ ರಾಜಧಾನಿಯಾಗುವುದು

ಪತ್ರಿಕೋದ್ಯೋಗಿಗಳ ಸಂಘದಲ್ಲಿ ಶ್ರೀ ದಿವಾಕರರ ಭಾಷಣ

ಮೈಸೂರು ೧

ಕೇಂದ್ರ ಸರ್ಕಾರದ ವಾರ್ತಾ ಶಾಖಾ ಸಚಿವರಾದ ಶ್ರೀ ಆರ್ ಆರ್. ದಿವಾಕರರನ್ನು ಪತ್ರಿಕೋದ್ಯೋಗಿ ಸಂಘದವರು ನಿನ್ನೆ ಬರಮಾಡಿಕೊಂಡು ಸತ್ಕರಿಸಿದರು.

ಶ್ರೀ ಎಸ್ ಶ್ರೀನಿವಾಸಮೂರ್ತಿಯವರು ಸಚಿವರನ್ನು ಸ್ವಾಗತಿಸಿ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಮತ್ತು ಕನ್ನಡ ನಾಡಿನ ನಿರ್ಮಾಣಕ್ಕಾಗಿ ಸಲ್ಲಿಸುವ ಸೇವೆಯನ್ನು ಪ್ರಶಂಸಿಸಿದರು.

ಶ್ರೀ ದಿವಾಕರರು ಭಾಷಣ ಮಾಡಿ ರಾಷ್ಟ್ರ ಸಾರ್ವಜನಿಕ ಜೀವನಕ್ಕೆ ಈಗ ಸ್ವತಂತ್ರ ಭಾರತ ಮತ್ತು ಏಕ ತಂತ್ರ ಕರ್ಣಾಟಕ ಎರಡು ಕಾರ್ಯಕ್ಕೆ ಪ್ರತಿಯೊಬ್ಬನೂ ಸಂಕಲ್ಪ ಮಾಡಿದ್ದಾನೆ [illegible] ಸ್ವತಂತ್ರ ಭಾರತದ ನಿರ್ಮಾಣವಾಗಿರುವುದರಿಂದ ಇನ್ನು ಕರ್ಣಾಟಕ ಏಕೀಕರಣವಾಗ [illegible] ಹೇಳಿದರು. ಈಗ ಕರ್ಣಾಟಕ [illegible] ಮೈಸೂರು [illegible] [illegible] ಕರ್ಣಾಟಕದವರು. [illegible] ಕರ್ಣಾಟಕ [illegible] ಬೆಂಗಳೂರು ರಾಜಧಾನಿಯಾಗುವುದೆಂದೂ, ಇಡೀ ಕರ್ಣಾಟಕದ [illegible] ಮೈಸೂರಿನ ನಾಯಕರ [illegible] [illegible] ಕರ್ಣಾಟಕದ ರಚನೆಗೆ [illegible] ಕನ್ನಡಿಗರಲ್ಲಿ ಪರಸ್ಪರ ಸ್ನೇಹ ಸೌಹಾರ್ದ [illegible] ಕರ್ಣಾಟಕವು ಈಗ ಮತ್ತೆ [illegible] [illegible] ಬೇಕೆಂದು ತಿಳಿಸಿದರು.

ವಂದನಾರ್ಪಣೆಯಾದ ನಂತರ ಸಭೆ ಮುಕ್ತಾಯವಾಯಿತು.

ಸಹಕಾರ ಶಿಕ್ಷಣ ತರಗತಿಗಳು

[illegible]

ಬರುವ ಆಗಸ್ಟ್ ೧೫ಕ್ಕೆ ಭಾರತ ರಿಪಬ್ಲಿಕ್ಕಿನ ಘೋಷಣೆ

ಪೌರ ಸತ್ಕಾರ ಕೂಟದಲ್ಲಿ ದಿವಾಕರರ ಸೂಚನೆ

ಮೈಸೂರು ೧

ನಿನ್ನೆ ಸಂಜೆ ಕೇಂದ್ರ ಸರ್ಕಾರದ ವಾರ್ತಾ ಮಂತ್ರಿಗಳಾದ ಶ್ರೀ ಆರ್ ಆರ್ ದಿವಾಕರ ಮತ್ತು ಡೊಮಿನಿಯನ್ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಬಿ ತಿರುಮಲರಾಯರನ್ನೂ ಸಹ ಪೌರ ಸಭೆಗೆ ಬರಮಾಡಿಕೊಂಡು ಸತ್ಕರಿಸಲಾಯಿತು.

ಉಪಾಹಾರವಾದ ನಂತರ ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಅತಿಥಿಗಳನ್ನು ಸ್ವಾಗತಿಸಿದರು ಮತ್ತು ಅವರ ಸೇವೆಯನ್ನು ಪ್ರಶಂಸಿಸಿದರು.

ಶ್ರೀ ದಿವಾಕರರು ಮಾತನಾಡಿ ಮೈಸೂರು ಇಂದ್ರನ ಅಮರಾವತಿಯಂತಿದೆಯೆಂದು ಹೇಳಿದರು

ಆಕಾಶವಾಣಿಯನ್ನು ವಿಸ್ತರಿಸಿ ದಕ್ಷಿಣ ಭಾರತಕ್ಕೆ ಮುಖ್ಯ ಕೇಂದ್ರ ಮಾಡುವ ಯೋಜನೆ ಇದೆಯೆಂದೂ, ಇನ್ನು ಎಂಟು ವರ್ಷಗಳೊಳಗೆ ಈ ಯೋಜನೆ ಪೂರೈಸಬಹುದೆಂದೂ ಹೇಳಿದರು. ಬೆಂಗಳೂರಿನಲ್ಲಿ ಅನೇಕ ಕಾರ್ಯ ಚಟುವಟಿಕೆಗಳ ಕೇಂದ್ರಗಳಿರುವುದರಿಂದ ಅಲ್ಲಿ ಒಂದು ಪ್ರಸಾರ ಕೇಂದ್ರವನ್ನೂ, ಮೈಸೂರಿನಲ್ಲಿ ಸ್ಟುಡಿಯೋವನ್ನೂ ತೆರೆಯುವ ಆಲೋಚನೆಯಿದೆಯೆಂದು ತಿಳಿಸಿದರು. ಕರ್ನಾಟಕ ಏಕೀಕರಣದ ಬಗ್ಗೆ ಪ್ರಸ್ತಾಪಿಸಿ ಈ ಬಗ್ಗೆ ಕೆ. ಪಿ ಸಿ ಸಿ ಸಭೆಯು ಅಧಿಕೃತ ನಿರ್ಣಯ ಮಾಡುವುದೆಂದೂ ಭಾಷಾನುಗುಣ ಪ್ರಾಂತವಾಗಬೇಕಾದುದು ಅತ್ಯವಶ್ಯಕವೆಂದೂ ತಿಳಿಸಿದರು.

ರಾಜ್ಯಾಂಗ ರಚನಾ ಸಭೆಯು ಮೇ [illegible] ಕೆಲಸ ಪೂರೈಸಿ ೧೫ನೇ ಆಗಸ್ಟ್ ನಂತರ ಭಾರತವು ಸರ್ವತಂತ್ರ ಸ್ವತಂತ್ರ ಪ್ರಜಾಪ್ರಭುತ್ವವೆಂದು ಘೋಷಿಸುವುದು.

ಶ್ರೀ ತಿರುಮಲರಾಯರು ಮಾತನಾಡಿ ಮೈಸೂರು ಮುಂತಾದ ಹಲವು ಸಂಸ್ಥಾನಗಳ ಪ್ರಗತಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು ಅಲ್ಲಿನ ರಾಜರುಗಳು ಸಂಸ್ಥಾನಗಳನ್ನು ತಮ್ಮ ಸ್ವಂತ ಸ್ವತ್ತೆಂದು ಭಾವಿಸದೆ ದೇವರ ಸ್ವತ್ತೆಂದು ತಿಳಿದು ತಾವುಗಳು ಕೇವಲ ಪ್ರತಿನಿಧಿಗಳಾಗಿ ರಾಜ್ಯವನ್ನು ಪರಿಪಾಲಿಸುವ ಭಾವನೆ ಹೊಂದಿರುವುದೇ ಇದಕ್ಕೆ ಕಾರಣವೆಂದು ತಿಳಿಸಿದರು ಮೈಸೂರಿನ ಇಂಜನಿಯರುಗಳನ್ನೂ, ಕಲಾವಿದರನ್ನೂ ಪ್ರಶಂಸಿಸಿ ಅವರ ಸಹಕಾರವು ಇಡೀ ಭಾರತಕ್ಕೆ ಬೇಕಾಗಿರುವುದೆಂದು ಹೇಳಿದರು ಕಾಮನ್‌ವೆಲ್ತಿನೊಡನೆ [illegible] ಇಂಗ್ಲೆಂಡಿನಿಂದ ನಮ್ಮ [illegible] [illegible] ಈ ಸಂಬಂಧವು [illegible] ತಿಳಿಸಿದರು. [illegible] ಮಿಲಿಟರಿ [illegible] [illegible]

ವಾರ ಭವಿಷ್ಯ

[illegible] ರ ವರೆಗೆ

ಮೇಷ ಕಳೆದ ವಾರದ [illegible] ಈ ವಾರ ಇರದು. ಆರೋಗ್ಯ ನೋಡಿಕೊಳ್ಳಿ. ಜವಾಬ್ದಾರಿ ಕೆಲಸ ಬೇಡ. ದಂಪತಿಗಳಲ್ಲಿ ಮನಸ್ತಾಪವಾಗಿ [illegible] ಆರಂಭ ವಾರ್ತೆ ಆರ್ಥಿಕ ತೊಂದರೆ ಕಳವು

ವೃಷಭ ಪರ ಪ್ರಯೋಗವಾದುದರಿಂದ ಕೆಲಸಕ್ಕೆ ಅಡಚಣೆ. ಉದ್ಯೋಗ, ನೌಕರಿ ವ್ಯಾಪಾರ ಇವುಗಳಲ್ಲಿ ತಾಪದಾಯಕ ಸ್ಥಿತಿ [illegible] ಆರ್ಥಿಕ ಚಿಂತೆ [illegible] ಉತ್ತಮ

ಮಿಥುನ [illegible] ಗಿರುವುದೆಲ್ಲಾ [illegible] ಕುಟುಂಬ ಕಡೆ ಎಚ್ಚರಿಕೆ [illegible] ವ್ಯಾಪಾರಿಗಳಲ್ಲಿ [illegible] ಸೌಖ್ಯ [illegible] ಪತ್ರ [illegible] ಮಿತ್ರರ ಭೇಟಿ [illegible]

ಕರ್ಕ [illegible] ಕಾರ್ಯೋತ್ಸಾಹ ಪ್ರವಾಸ ಸಂಭವ ಆರೋಗ್ಯ ಆರ್ಥಿಕ [illegible] ಶುಭವಾರ್ತೆ [illegible]

[illegible] ಕಳೆದ ವಾರದಷ್ಟು ತಾಪದಾಯಕ [illegible] ಸಹಕಾರಕ್ಕಾಗಿ [illegible] ಆರ್ಥಿಕ [illegible] ಉತ್ತಮ [illegible] ಮನೋಲ್ಲಾಸ

ತುಲಾ ಈ ವಾರ [illegible] ಪ್ರಯತ್ನ ಪ್ರವಾಸ [illegible] ಯೋಗ್ಯವಾ [illegible]

ಕನ್ಯಾ — [illegible] ಮಿತದಲ್ಲಿರಲಿ, ಇಲ್ಲವೇ [illegible] ಅಲಕ್ಷ್ಯ [illegible] ಕಾಟವಿದೆ. [illegible] ಆರ್ಥಿಕ ಸ್ಥಿತಿ ಸಾಧಾರಣ [illegible] ಮನೋವ್ಯಾಧಿ

ವೃಶ್ಚಿಕ [illegible] ಕಾರ್ಯದಲ್ಲಿ [illegible] ಕೋರ್ಟ್ [illegible] ಖರ್ಚು [illegible]

ಧನು [illegible] ಕಾರ್ಯಗಳಲ್ಲಿ [illegible] ಆರೋಗ್ಯ ಉತ್ತಮ [illegible]

ಮಕರ [illegible] ಕೋರ್ಟು [illegible] ನೌಕರಿ [illegible]

[illegible] ಉತ್ತಮ [illegible]

ರಾಷ್ಟ್ರಪತಿಯವರ ಆಗಮನ

ಕ್ರೈಸ್ತ ನಿಲ್ದಾಣದಲ್ಲಿ ಅಭೂತ ಪೂರ್ವ ಸ್ವಾಗತ

ಸ್ವಂ ಸ. ಪ್ರೋ] ಬೆಂಗಳೂರು ೧

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಈ ದಿನ ಬೆಳಗ್ಗೆ ರೈಲಿನಲ್ಲಿ ಮದರಾಸಿನಿಂದ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಅವರನ್ನು ಪ್ರಧಾನ ಸಚಿವರೂ, ಇತರ ಸಚಿವರುಗಳೂ, ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯನವರೂ ಮತ್ತು ಇತರ ಉನ್ನತ ಅಧಿಕಾರಿಗಳೂ, ಸಾರ್ವಜನಿಕರೂ ಸ್ವಾಗತಿಸಿ ಪುಷ್ಪಹಾರವನ್ನರ್ಪಿಸಿದರು. ಡಾ|| ಪಟ್ಟಾಭಿಯವರು ಪ್ರಭುತ್ವ ಭವನದಲ್ಲಿ ಬಿಡಾರ ಮಾಡಿದ್ದಾರೆ

ಈ ದಿನ ಸಂಜೆ ಸುಭಾಷ ನಗರದಲ್ಲಿ ಡಾ|| ಪಟ್ಟಾಭಿಯವರಿಗೆ ಪೌರ ಸ್ವಾಗತವನ್ನೂ ಮತ್ತು ಬಹಿರಂಗ ಸಭೆಯನ್ನೂ ಏರ್ಪಡಿಸಲಾಗಿದೆ. ನಾಳೆ ಸಂಜೆ ೫ ಗಂಟೆಗೆ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘಕ್ಕೆ ಅವರು ಭೇಟಿ ಕೊಡುವರು. ಸಂಜೆ ೬ ಗಂಟೆಗೆ ದಂಡಿನ ಪ್ರದೇಶದಲ್ಲಿ ಪೌರ ಸ್ವಾಗತವನ್ನೂ ಮತ್ತು ಬಹಿರಂಗ ಸಭೆಯನ್ನೂ ಏರ್ಪಡಿಸಲಾಗಿದೆ. ಮೊದಲೇ ವರದಿಯಾಗಿದ್ದಂತೆ ಅವರು ನಾಳಿದ್ದು ಮೈಸೂರಿಗೆ ಆಗಮಿಸಿ ಅದೇ ತಾರೀಕು ಕೊಡಗಿಗೆ ಪ್ರಯಾಣ ಬೆಳೆಸುವರು

○ ಚಿತ್ರದುರ್ಗದ ವಕೀಲರಾದ ಶ್ರೀ ಎಚ್ ಸಿ ಬೋರಯ್ಯನವರನ್ನು ಪ್ರಾ||ಪ್ರ|| ಸಭೆಗೂ ಮತ್ತು ಶ್ರೀ ಬಿ ವಾಸುದೇವ ಮೂರ್ತಿಯವರನ್ನು ಶಾಸನ ಸಭೆಗೂ ಸರ್ಕಾರದವರು ನಾಮಕರಣ ಮಾಡಿರುತ್ತಾರೆ

○ ಕೇಂದ್ರ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್ ಆರ್ ದಿವಾಕರ್ ರವರು ಈ ದಿನ ಹುಬ್ಬಳ್ಳಿಗೆ ತೆರಳಿದರು

○ ಸಂಸ್ಥಾನದ ಹಣಕಾಸಿನ ಪರಿಶೀಲನಾ ಸಮಿತಿಯವರು ವಿಮಾನದಲ್ಲಿ ಬೊಂಬಾಯಿಗೆ ತೆರಳಿದರು. ಪತ್ರಿಕೋದ್ಯೋಗಿಗಳು ಅವರನ್ನು ಭೇಟಿ ಮಾಡಿದಾಗ ಸಂಸ್ಥಾನಗಳ ಹಣಕಾಸಿನ ಬಾಬನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಳ್ಳುವಾಗ ಮೈಸೂರು ಮೊದಲಾದ ಸಂಸ್ಥಾನಗಳ ಬಗ್ಗೆ ಪಲವು ತಾರತಮ್ಯವನ್ನು ಮಾಡಲಾಗುವುದೆಂದು ಸಮಿತಿಯ ಅಧ್ಯಕ್ಷರಾದ ಶ್ರೀ ವಿ ಟಿ ಕೃಷ್ಣಮಾಚಾರಿಯವರು ತಿಳಿಸಿದರು

○ ಸಂತ ಜಾನ್ಸ್ ಆಂಬುಲೆನ್ಸ್ ಸಂಸ್ಥೆಯ ವಾರ್ಷಿಕ ಬಹುಮಾನ ವಿನಿಯೋಗ ಸಮಾರಂಭವನ್ನು ನೆನ್ನೆ ಸಂಜೆ ಪ್ರಧಾನ ಸಚಿವ ಶ್ರೀ ಕೆ ಸಿ ರೆಡ್ಡಿಯವರು ನೆರ(ವೇರಿಸಿದರು) ...

ವೇರಿಸಿದರು. ಸದರಿ ಸಂಸ್ಥೆಯ ಅಧ್ಯಕ್ಷರಾದ ಡಾ|| ಶೇಷಾಚಲಂ ರವರು ಸ್ವಾಗತ ಭಾಷಣ ಮಾಡಿ ಸರ್ಕಾರದವರು ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಹುಡುಗಿಯರಿಗೆಲ್ಲ ಪ್ರಥಮ ಚಿಕಿತ್ಸೆ ಶಿಕ್ಷಣವನ್ನು ಕೊಡಲು ಏರ್ಪಡಿಸಬೇಕೆಂದು ಕೋರಿದರು. ಶ್ರೀ ರೆಡ್ಡಿಯವರು ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಾಗಿ ಉತ್ತರವಿತ್ತರು

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು
ತಾ|| 1-5-49ರಿಂದ 3 ದಿನಗಳು
ವಾರ್ನರ್ ಬ್ರದರ್ಸ್ ರವರ ಹಾಸ್ಯಮಯ
ವರ್ಣ ರಂಜಿತ ಚಿತ್ರ
ರೊಮಾನ್ಸ್ ಆನ್ ದಿ ಹೈ ಸೀಸ್
ROMANCE ON
THE HIGH SEAS
ಪಾತ್ರ - ಜಾಕ್ ಕಾರ್ಸನ್

ಗಂಟೆಗೆ ಸಾವಿರ ಬೀಡಿ ಕಟ್ಟುವ ಯಂತ್ರ

ನಾಸಿಕದ ಶ್ರೀ ವಿ. ಎಸ್ ಕೃಷ್ಣ ಸಾಗರ ಎಂಬ ಇಂಜನಿಯರು ಗಂಟೆಗೆ ೧ ಸಾವಿರ ಬೀಡಿ ಕಟ್ಟುವ ಯಂತ್ರವೊಂದನ್ನು ತಯಾರಿಸಿದ್ದಾರೆಂದೂ, ಅದು ಟೈಪ್‌ರೈಟರಿಗಿಂತ ಸ್ವಲ್ಪ ದೊಡ್ಡದಾಗಿರುವುದೆಂದೂ ಹೇಳಲಾಗಿದೆ. ಎಲೆ, ತಂಬಾಕು ಮತ್ತು ದಾರಗಳನ್ನು ಈ ಯಂತ್ರಕ್ಕೆ ಕೊಟ್ಟರೆ ಅದು ಬೀಡಿಗಳನ್ನು ತಯಾರಿಸುವುದು

ಪರೀಕ್ಷೆಗಳನ್ನು ರದ್ದು ಮಾಡಲು ಪ್ರಯತ್ನ

೧೧ ವರ್ಷಕ್ಕಿಂತ ಕಮ್ಮಿ ವಯಸ್ಸಿನ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ರದ್ದು ಮಾಡುವ ವಿಚಾರವನ್ನು ಲಂಡನ್ನಿನ ಕೌಂಟಿ ಕೌನ್ಸಿಲ್ಲಿನವರು ಆಲೋಚಿಸುತ್ತಿದ್ದಾರೆ. ಪರೀಕ್ಷೆಗಳ ಬದಲು ವಿದ್ಯಾರ್ಥಿಗಳ ದಕ್ಷತೆಯನ್ನು ಕಂಡುಹಿಡಿಯಲು ಒಂದು ರಿಕಾರ್ಡ್ ಪುಸ್ತಕವನ್ನು ಇಡಲಾಗುವುದು. ೧೯೫೦ರ ಹೊತ್ತಿಗೆ ಇದನ್ನು ಜಾರಿಗೆ ತರಬಹುದೆಂದು ತಿಳಿದುಬಂದಿದೆ

ಹಿಮಾಲಯದಲ್ಲಿ ವೈಜ್ಞಾನಿಕ ಕೇಂದ್ರ

ಹಿಮಾಲಯ ಪರ್ವತದ ಉನ್ನತ ಪ್ರದೇಶದಲ್ಲಿ ವೈಜ್ಞಾನಿಕ ಸಂಶೋಧನಾಲಯವನ್ನು ಸ್ಥಾಪಿಸಲು ಸ್ಥಳವನ್ನು ಪರಿಶೀಲಿಸಲು ಮುಂದಿನ ತಿಂಗಳಿನಲ್ಲಿ ವೈಜ್ಞಾನಿಕ ತಂಡವೊಂದು ಅಲ್ಲಿಗೆ ಹೋಗುವುದು

ರಾಜಕಮಲ್
ಮೈಸೂರು
—:o—
27—4—49 ರಿಂದ
ಅಮೋಘ ಪ್ರಾರಂಭ
ಬಾಂಬೇ ಟಾಕೀಸಿನವರ
ಕಿಸ್‌ಮತ್
- ಭೂಮಿಕೆ —
❀ ಮುಮತಾಜ್ ಶಾಂತಿ
❀ ಅಶೋಕ್ ಕುಮಾರ್,
❀ ವಿ. ಹೆಚ್. ದೇಸಾಯ್
MORNING SHOWS
From 29-4-49 for 4 days
R K O Radio's Picture
HONEYMOON
With Shirley Temple

ಇಸ್ಪೀಟು ಆಟದ ಜಗಳದಲ್ಲಿ ಮೂವರ ಮರಣ

ಸಂಯುಕ್ತ ಪ್ರಾಂತದ ಬಲ್ಲಿಯ ಜಿಲ್ಲೆ ಸೇರಿದ ಒಂದು ಹಳ್ಳಿಯ ಇಬ್ಬರು ಹುಡುಗರು ಕಳೆದ ಗುರುವಾರ ಇಸ್ಪೀಟು ಆಡುತ್ತಿದ್ದು ಇದ್ದಕ್ಕಿದ್ದಂತೆಯೇ ಅವರಲ್ಲೇ ಜಗಳ ಆರಂಭವಾಯಿತು. ಈ ಜಗಳವು ಕ್ರಮೇಣ ಪ್ರಬಲಿಸಿ ಆ ಇಬ್ಬರು ಹುಡುಗರ ಕಡೆಯೂ ಬಹುಮಂದಿ ಜೊತೆಯವರು ಸೇರಿ ಬಂದೂಕ ಮೊದಲಾದ ಆಯುಧಗಳನ್ನೇ ಉಪಯೋಗಿಸಿದರೆಂದೂ, ಇವರಲ್ಲಿ ಮೂವರು ಮಡಿದು ಇಬ್ಬರಿಗೆ ತೀವ್ರ ಗಾಯವಾಗಿ, ಹಲವರು ಸಣ್ಣಾಗಿ ಗಾಯಗೊಂಡವರೆಂದು ವರದಿಯಾಗಿದೆ. ಈ ಸಂದರ್ಭದಲ್ಲಿ ಪೋಲೀಸರು ೫೦ ಮಂದಿಯನ್ನು ದಸ್ತಗಿರಿ ಮಾಡಿದ್ದಾರೆ

ಬರೋಡಾ ಐಕ್ಯವನ್ನು ತಡೆಯುವ ಅರ್ಜಿ ವಜಾ

ಬರೋಡಾ ಸಂಸ್ಥಾನವನ್ನು ಬೊಂಬಾಯಿಯೊಳಗೆ ಐಕ್ಯ ಮಾಡುವುದನ್ನು ತಡೆಯಬೇಕೆಂದು ಅಲ್ಲಿನ ಪ್ರಜಾ ಸಂಘದವರು ಹೂಡಿದ್ದ ಇಂಜಂಕ್ಷನ್ ಅರ್ಜಿಯನ್ನು ಬರೋಡಾ ಜಿಲ್ಲಾ ನ್ಯಾಯಾಧೀಶರು ತಿರಸ್ಕರಿಸಿ, ರಾಜಕೀಯ ವಿಚಾರವನ್ನು ಇತ್ಯರ್ಥಪಡಿಸಲು ಕೋರ್ಟಿಗೆ ಅಧಿಕಾರವಿಲ್ಲವೆಂದು ತಿಳಿಸಿರುತ್ತಾರೆ

ಪ್ರತಿ ಮೂರು ಗ್ರಾಮಕ್ಕೂ ಒಂದು ಸಹಕಾರ ಸಂಘ

ಗ್ರಾಮ ಸಹಕಾರ ಸಂಘಗಳ ವಿಷಯದಲ್ಲಿ ಭಾರತವು ಪ್ರಪಂಚದಲ್ಲೇ ಮುಂದಾಗಿದೆಯೆಂದೂ, ಪ್ರತಿ ಮೂರು ಗ್ರಾಮಕ್ಕೂ ಒಂದು ಸಹಕಾರ ಸಂಘವಿದೆಯೆಂದು ಹೇಳಲಾಗಿದೆ. ಭಾರತದಲ್ಲಿ ಒಟ್ಟು ೧೮೦,೦೦೦ ಸಹಕಾರ ಸಂಘಗಳಿವೆ

ಎಸ್. ಎಸ್. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೇಯ್ನ್ ಬಾಮ್
ನೋವು, ಕೀಲು ನೋವು ಮುಂತಾದ
ಸಕಲ ಬಾಧೆಗಳಿಗೂ ರಾಮಬಾಣ
ಕೀಮ್ತ 0-12
ಮಹಾ ಸುಗಂಧರಾಜ ತೈಲ —)
,, ಚಂದನಾದಿ ತೈಲ —)
,, ಭೃಂಗಾ ಮಲಕ ತೈಲ —)
—ಬೇಸಿಗೆ ಕಾಲಕ್ಕೆ ಉತ್ತಮ [illegible] ತೈಲಗಳು
ಮಹಾಕೇತಕೀ ತೈಲ— ತಲೆ [illegible] ಕೊಳ್ಳುವುದಕ್ಕೂ ಅಭ್ಯಂಜನಕ್ಕೂ [illegible] ಯೋಗಿಸಬಹುದಾದ ಉತ್ತಮ [illegible]
ಬ್ರೇನ್ ಟಾನಿಕ್ ಕೀಮ್ತ 2-0
ಪಂಚಾಮೃತ —ಮಕ್ಕಳ [illegible] ಗಳಿಗೆ ಸಿದ್ಧ ಸಂಜೀವನ
ಮೈಸೂರು ಆಯುರ್ವೇದಿಕ್ ಫಾರ್ಮಸಿ.
90 ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು

Edited, Printed [and] Published by A R Na[...]rayan, at the Sadhvi Pre[ss] D Subbaiah Road Mys[ore]

ಫೋನ್ ನಂ. 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೩-೫-೪೯ [ಸಂಚಿಕೆ ೨೩೨

ರಾಷ್ಟ್ರಪತಿಗೆ ಸುಸ್ವಾಗತ

ಕಾಂಗ್ರೆಸ್ ಕಛೇರಿಗೆ ರಾಷ್ಟ್ರಪತಿಗಳ ಭೇಟಿ

ಮೈಸೂರು ೩

[illegible] ಪಟ್ಟಾಭಿ ಸೀತಾರಾಮಯ್ಯನವ[illegible]ರು ಮಧ್ಯಾಹ್ನ ೩ ಘಂಟೆಗೆ ಕಾಂಗ್ರೆಸ್ ಕಛೇರಿಗೆ ಭೇಟಿ ಕೊಡುವರು. ಕಾಂ[illegible] ಕಾರ್ಯಕರ್ತರುಗಳೆಲ್ಲರೂ ಇದನ್ನೇ [illegible]ಸನೆಂದು ತಿಳಿದು ತಪ್ಪದೆ ದಯ[illegible]ಸಬೇಕೆಂದು ನಗರ ಕಾಂಗ್ರೆಸ್ ಸ[illegible]ಮಿತಿ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

[illegible] ಪಟ್ಟಾಭಿ ಸೀತಾರಾಮಯ್ಯನವ[illegible] ನಿನ್ನೆ ರಾತ್ರಿ ೧೨ ಘಂಟೆಗೆ ಬೆಂಗಳೂರಿನಿಂದ ಆಗಮಿಸಿದರು. ರಾತ್ರಿ ವಿಪರೀತ ಮಳೆ ಇದ್ದು, ಶ್ರೀರಂಗಪಟ್ಟಣದ ಹತ್ತಿರ ಮರವೊಂದು ರಸ್ತೆಗೆ ಅಡ್ಡಲಾಗಿ [illegible]ದುದರಿಂದ ಅವರು ಇಲ್ಲಿಗೆ ಬರುವು[illegible] ತಡವಾಯಿತೆಂದು ತಿಳಿದುಬಂದಿದೆ.

[illegible]ವರು ಈ ಬೆಳಿಗ್ಗೆ ೭ ಘಂಟೆಗೆ ಕಾಂ[illegible] ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗ[illegible]ನವರೊಡನೆ ಹೊಳೇನರಸೀಪುರದ ಹ[illegible] ವ ಗಣಿಗೆ ಭೇಟಿ ಇತ್ತು ಮಧ್ಯಾಹ್ನ [illegible]ಹಿಂತಿರುಗಿದರು. ನಾಳೆ ಅವರು ಕೊ[illegible] ಹೋಗುವುದಿಲ್ಲ. ಬೆಳಿಗ್ಗೆ ೭ ಘಂಟೆ[illegible]ವರು ಶ್ರವಣಬೆಳಗೊಳಕ್ಕೆ ಭೇಟಿ ಕೊ[illegible].

ರಜತ ಮಹೋತ್ಸವ

[illegible] ಪ್ರಧಾನಿಯು ಶ್ರೀ [illegible] [illegible] ಸಹಕಾರ ಸಂಘದ ರಜತ ಮ[illegible]ಹೋತ್ಸವವು ನಿನ್ನೆ ಸಂಜೆ ಸಹಕಾರ ಭವ[illegible]ನದ. ಪುರಸಭಾ ಕವಿಗಾಸನರಾದ ಶ್ರೀ [illegible] [illegible]ಮೂರ್ತಿಯವರ ಅಧ್ಯಕ್ಷತೆಯ[illegible] [illegible]ಡೆಯಿತು. ಪ್ರಾರ್ಥನೆಯಾದನಂತ[illegible] [illegible] ಬಹದ್ದೂರ್ ಎಂ. ರಾಮಸ್ವಾಮಿ[illegible] ಸ್ವಾಗತ ಭಾಷಣ ಮಾಡಿದರು. [illegible]ರ್ಯದರ್ಶಿಗಳಾದ ಶ್ರೀ ಕೆ. ವಿ. ವೆಂಕಟ[illegible] [illegible]ಯ್ಯನವರು ವರದಿಯನ್ನು ಓದಿ ಸ[illegible] [illegible] ಕಾರ್ಯಗಳನ್ನು ವಿವರಿಸಿದರು. ಅ[illegible] [illegible] ಅಧ್ಯಕ್ಷರು ಶ್ರೀಮನ್ಮಹಾರಾಜರ [illegible] ಚಿತ್ರದ ಅನಾವರಣ ಮಾಡಿದರು. [illegible] ವರ್ಷ ಸೇವೆ ಮಾಡಿ ಪ್ರ[illegible] [illegible]ಕ್ಕೆ ಬರುತ್ತಿರುವುದನ್ನು ಅಧ್ಯಕ್ಷ[illegible] [illegible] ಶಂಸಿಸಿ, ಅದು ಇನ್ನೂ ಹೆಚ್ಚಿಗೆ ಅ[illegible] [illegible] ಹೊಂದಲೆಂದು ಹಾರೈಸಿದರು.

ಹಿಂದಿ ಪ್ರಮಾಣ ಪತ್ರ ವಿತರಣೋತ್ಸವ

[illegible] ಭಾರತ ಹಿಂದೀ ಸಾಹಿತ್ಯ ಸ[illegible]ನದ ಅಧ್ಯಕ್ಷರಾದ ಶ್ರೀ [illegible] [illegible]ದಾಸರವರು ನಾಳೆ ಮಧ್ಯಾಹ್ನ [illegible]ಕ್ಕೆ ಆಗಮಿಸುವರು. ಸಹಕಾರ [illegible]ನಲ್ಲಿ ಅವರು ಮಧ್ಯಾಹ್ನ ಹಿಂದೀ ಕೆ[illegible]ರನ್ನು ಭೇಟಿ ಮಾಡುವರು. ನಾ[illegible] ಬೆಳಿಗ್ಗೆ [illegible] ಘಂಟೆಗೆ ಟೌನ್‌ಹಾಲಿನ[illegible] [illegible] ಹಿಂದಿ ಪ್ರಮಾಣ ಪತ್ರ ವಿ[illegible]ತರಣದ ಅಭಿಭಾಷಣ ಮಾಡುವ[illegible] [illegible] ಸುಬ್ರಹ್ಮಣ್ಯ ಅಯ್ಯರ್ [illegible]ಅಧ್ಯಕ್ಷತೆ ವಹಿಸುವರು.

ಶ್ರೀ ಶಂಕರ ಜಯಂತಿ

[illegible] ರಸ್ತೆಯಲ್ಲಿರುವ ಗುರುಕ[illegible] [illegible]ದ ಆಶ್ರಮದಲ್ಲಿ ಇಂದಿನಿಂದ [illegible] ವರೆವಿಗೆ ಶ್ರೀ ಶಂಕರ ಜಯಂ[illegible]ತ್ಯೋತ್ಸವವು ಸಚ್ಚಿದಾನಂದರ [illegible] ಅರಸಿನವರ ಛತ್ರದಲ್ಲಿ [illegible]ವುದು. ಪ್ರತಿನಿತ್ಯ ಬೆಳಿಗ್ಗೆ ಪೂಜೆ [illegible] ಸಂಕೀರ್ತನೆಗಳು ಜರುಗು[illegible]

ಮೈಸೂರು ಜಿಲ್ಲೆಗೆ ೩ ಟ್ರಾಕ್ಟರುಗಳು

ಮೈಸೂರು ಜಿಲ್ಲಾ ಟ್ರಾಕ್ಟರುಗಳ ಸಹಾಯ ಸಮಿತಿಯ ಸಭೆಯು ನಿನ್ನೆ ದಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದು, ಪಿರಿಯಾಪಟ್ಟಣ, ಮೈಸೂರು, ಹೆಗ್ಗಡದೇವನಕೋಟೆ ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ಮೂರು ಟ್ರಾಕ್ಟರುಗಳನ್ನು ಉಪಯೋಗಿಸಬೇಕೆಂದೂ, ಕೆಲವು ಸ[illegible] [illegible] ಇತರ ಅವುಗಳನ್ನು ಬೇರೆ ತಾಲ್ಲೂಕುಗಳಿಗೆ ಕಳುಹಿಸತಕ್ಕದ್ದೆಂದೂ ತೀರ್ಮಾನಿಸಲಾಯಿತು. ಹೊಸ ಜಮೀನುಗಳ ಉಪಯೋಗ ಅವುಗಳನ್ನು ಕೊಡಲು ತೀರ್ಮಾನಿಸಲಾಗುವುದು.

ಬಸವ ಜಯಂತಿ

ಮಾರ್ಕೆಟಿನ [illegible] ರಸ್ತೆಯಲ್ಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಬಸವ ಜಯಂತಿ ಪ್ರಯುಕ್ತ ಈ ಸಂಜೆ ೬-೩೦ ಗಂಟೆಗೆ ಶ್ರೀ [illegible]ಗೌಡರಿಂದ ಶಬರ ಶಂಕರ ವಿಲಾಸ ಎಂಬ ಕಾವ್ಯವಾಚನ ನಡೆಯುವುದು. ನಾಳೆ ಸಂಜೆ ೬-೩೦ ಗಂಟೆಗೆ ಶ್ರೀ ಪೆಟ್ಟಾ ಎಲ್ ದೇವರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಶ್ರೀ ಪಿ ಕೆ ವೆಂಕಟರಾಮಯ್ಯನವರು, ಶ್ರೀ ಬಸವೇಶ್ವರರ ಭಕ್ತಿ ಭಂಡಾರ ವಿಷಯವಾಗಿ ಉಪನ್ಯಾಸ ನೀಡುವರು.

ಸಿಗರೇಟುಗಳಿಗಾಗಿ ಆನೆಗಳ ಮಾರಾಟ

ಬರ್ಮಾದ ಮಿಟ್ಕೀನಾ ಎಂಬಲ್ಲಿನ ವರ್ತಕನೊಬ್ಬನು ಭಾರತದ ಗಡಿಗೆ ೩ ಆನೆಗಳನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಕೊಟ್ಟು ಸಿಗರೇಟು ಪಡೆದು[illegible] ತ[illegible]ಸಿದನೆಂದೂ, ಆದರೆ ಕಳ್ಳತನದಿಂದ ಆ ಪ್ರದೇಶಕ್ಕೆ ಸಿಗರೇಟುಗಳನ್ನು ಕಳುಹಿಸಲು ಪ್ರತಿಬಂಧಕವಿರುವುದರಿಂದ ಆತನು ನಿರಾಶೆಗೊಂಡು ಹಿಂತಿರುಗಿದನೆಂದೂ ವರದಿಯಾಗಿದೆ. ಹಿಂದಿನ ಕಾಲದಲ್ಲಿ ಆ ಪ್ರದೇಶದ ಜನರು ತಮಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಹಣ ಕೊಡುವುದಕ್ಕೆ ಬದಲು ಆನೆಗಳ ದಂತ, ಕಸ್ತೂರಿ ಮತ್ತು ರತ್ನಗಳನ್ನು ತಂದು ಕೊಡುತ್ತಿದ್ದರೆಂದು ಹೇಳಲಾಗಿದೆ.

ನಾಲ್ಕು ಕಾಲು ಮತ್ತು ನಾಲ್ಕು ಕೈಗಳ ಮಗು

ತಿರುಚನಾಪಳ್ಳಿ [illegible] [illegible] ಎಂಬಲ್ಲಿಯ [illegible] ಆಸ್ಪತ್ರೆಯಲ್ಲಿ ಒಬ್ಬ ಮಹಿಳೆಗೆ ನಾಲ್ಕು ಕಾಲು ಮತ್ತು ನಾಲ್ಕು ಕೈಗಳ, ಇದ್ದ ಗಂಡು ಮಗುವು ಜನನವಾಯಿತೆಂದೂ, ಮೂರು ಘಂಟೆಗಳ ನಂತರ ಅದು ಸತ್ತು ಹೋಯಿತೆಂದೂ ಹೇಳಲಾಗಿದೆ. [illegible] [illegible] ತೋರಿತು.

ಭೂಪಾಲ್ ಕೇಂದ್ರ ಸರ್ಕಾರಕ್ಕೆ

ಭಾರತ ಸರ್ಕಾರಕ್ಕೆ ಭೂಪಾಲ್ ಸಂಸ್ಥಾನದ ಆಡಳಿತವನ್ನು ವಹಿಸಿ ಕೊಡಲು ಅಲ್ಲಿನ ನವಾಬರು ಒಪ್ಪಿ, ಸಂಬಂಧಪಟ್ಟ ಪತ್ರಗಳಿಗೆ ರುಜು ಹಾಕಿದ್ದಾರೆಂದೂ, ಸಧ್ಯದಲ್ಲಿಯೇ ಕೇಂದ್ರ ಸರ್ಕಾರದವರು ಅಲ್ಲಿಗೆ ಚೀಫ್ ಕಮೀಷನರನ್ನು ನೇಮಿಸುವರೆಂದೂ ತಿಳಿದು ಬಂದಿದೆ.

ವಿಮಾನದಲ್ಲಿ ಪ್ರಪಂಚ ಪರ್ಯಟನಕ್ಕೆ ಒಂದೇ ಟಿಕೆಟ್ಟು

ಪ್ರಪಂಚದ ಸುತ್ತಲೂ ಒಂದು ಟಿಕೆಟ್ಟಿನ ಸಹಾಯದಿಂದಲೇ ವಿಮಾನದಲ್ಲಿ ಪ್ರಯಾಣ ಮಾಡಲು ಅಮೇರಿಕದ ಟ್ರಾನ್ಸ್ ವರ್ಲ್ಡ್ ಏರ್‌ಲೈನ್ ಕಂಪೆನಿಯು ಏರ್ಪಡಿಸಿದೆ. ಇದಕ್ಕೆ ೧೬೦೦ ಡಾಲರ್ ಆಗುವುದು.

ವನಸ್ಪತಿ ತುಪ್ಪವನ್ನು ನಿಷೇಧಿಸಲು ಸರ್ಕಾರಕ್ಕೆ ಮನವಿ

ವನಸ್ಪತಿ ತುಪ್ಪವನ್ನು ಉಪಯೋಗಿಸುವುದನ್ನು ಸರ್ಕಾರದವರು ನಿಷೇಧಿಸಬೇಕೆಂದು ಅಲಹಾಬಾದಿನ ವೈದ್ಯರು, ಅಧ್ಯಾಪಕರು ಮತ್ತು ವಕೀಲರುಗಳು ಮನವಿ ಮಾಡಿರುತ್ತಾರೆ.

ಕತ್ತಿಗೆ ಹಿಸುಕಿ ಮಹಿಳೆಯ ಕೊಲೆ

ಚಿರಾಲ ಹತ್ತಿರವಿರುವ ಬಾಪಟ್ಲಾ ಬೋರ್ಡ್ ಹೈಸ್ಕೂಲು ಮುಖ್ಯೋಪಾಧ್ಯಾಯರ ಮನೆಗೆ ಹಗಲು ಹೊತ್ತಿನಲ್ಲೇ ಕಳ್ಳರು ನುಗ್ಗಿ, ಯಜಮಾನರು ಅಲ್ಲಿ ಇಲ್ಲದಿರುವುದನ್ನು ಕಂಡು, ಅವರ ಪತ್ನಿಯನ್ನು [illegible] ಕಬ್ಬಿಣದ ಪೆಟ್ಟಿಗೆ[illegible] [illegible]ಯನ್ನು ಬಲಾತ್ಕಾರವಾಗಿ ಪಡೆ[illegible] [illegible] ಯತ್ನಿಸಿ ಆಕೆಯ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಿ ಹಣವನ್ನು ದೋಚಿಕೊಂಡು ಪರಾರಿಯಾದರೆಂದು ವರದಿಯಾಗಿದೆ.

ನೆಲ ಕುಸಿದು ಹರಿಜನನ ಮರಣ

ಮದರಾಸ್ ಪ್ರಾಂತ್ಯದ ಬಲೋವಂ ಹಳ್ಳಿಯಲ್ಲಿ ಹರಿಜನನೊಬ್ಬನು ಗುಂಡಿ ತೆಗೆಯುತ್ತಿದ್ದಾಗ, ನೆಲವು ಕುಸಿದು, ಅದರಲ್ಲಿ ಹೂತುಕೊಂಡು ಸತ್ತುಹೋದನೆಂದು ವರದಿಯಾಗಿದೆ.

ಸರ್ಕಾರಿ ನೌಕರಿಗೆ ಸ್ತ್ರೀಯರ ಅನರ್ಹತೆ ರದ್ದು

ನ್ಯಾಯಾಂಗ, ರಿಜಿಸ್ಟ್ರೇಷನ್, ಅಬಕಾರಿ ಮತ್ತು ರೆವಿನ್ಯೂ ಇಲಾಖೆಗಳಲ್ಲಿ ಮಹಿಳೆಯರು ಕೆಲಸಕ್ಕೆ ಸೇರಲು ಇದ್ದ ಪ್ರತಿಬಂಧಕವನ್ನು ಮದರಾಸ್ ಸರ್ಕಾರದವರು ಈಗ ರದ್ದು ಮಾಡಿರುತ್ತಾರೆ.

ರಾಮೋತ್ಸವ

ಶ್ರೀರಂಗಪಟ್ಟಣದ ನಯನಜ ಕ್ಷತ್ರಿಯರ ಶ್ರೀ ಕೋದಂಡರಾಮ ದೇವರ ಉತ್ಸವವು ಮೊನ್ನೆ ದಿನ ಅತಿ ವಿಜೃಂಭಣೆಯಿಂದ ನಡೆಯಿತು.

ಗಾಂಧೀ ನಿಧಿಗೆ ಸಹಾಯ

ನಂಜನಗೂಡು ಪೌರ ಸಭೆಯವರು ಗಾಂಧೀ ನಿಧಿಗೆ ೫೦೦ ರೂ ಅನ್ನು ಕೊಡಲು ತೀರ್ಮಾನಿಸಿರುತ್ತಾರೆ.

ನಿಜಾಮರ ಸೈನ್ಯ ಕಿರಿದಾಯಿತು

ಹೈದರಾಬಾದಿನ ಸೈನ್ಯವನ್ನು ಯುದ್ಧ ಪೂರ್ವದಲ್ಲಿದ್ದಷ್ಟು ಸಂಖ್ಯೆಗೆ ಇಳಿಸಲಾಗಿದೆ. ಒಟ್ಟಿನ ಅಕ್ಟೋಬರ ೧ ರೊಳಗೆ ಈ ಸೈನ್ಯದ ಒಟ್ಟು ಸಂಖ್ಯೆ ೮ ಸಾವಿರವಿರುವುದು. ಇನ್ನು ಮುಂದೆ ಜನರನ್ನು ಸಂಖ್ಯಾನುಗುಣವಾಗಿ ಸೈನ್ಯಕ್ಕೆ ತೆಗೆದುಕೊಳ್ಳಲಾಗುವುದು. ಈಗ ಹೆಚ್ಚಾಗಿರುವವರನ್ನು ನಿವೃತ್ತಿಗೊಳಿಸಲಾಗುವುದು.

ನಿಜಾಮರ ವರ್ಧಂತಿ

ಹೈದರಾಬಾದಿನ ನಿಜಾಮರ ೬೩ನೇ ವರ್ಷ ವರ್ಧಂತಿ ಉತ್ಸವವು ಕಳೆದ ಶನಿವಾರ ನಡೆಯಿತು. ಆ ದಿನ ಸಾರ್ವಜನಿಕ ರಜಾ ವೆಂದು ತಿಳಿಸಲಾಗಿತ್ತು. ಅನೇಕರು ಬಂದು ನಿಜಾಮರನ್ನು ಕಂಡು ಅಭಿನಂದನ ಸಾಮ್ಯಾನ್ಯನ್ನು ನಜರಾಗಿ ಒಪ್ಪಿಸಿದರು. ವರ್ಧಂತಿಯು ಯಾವ ಆಡಂಬರವೂ ಇಲ್ಲದೆ ಸರಳವಾಗಿ ನಡೆಯಿತು.

೪೩ ವರ್ಷಗಳನಂತರ ಸ್ವದೇಶಕ್ಕೆ ಹಿಂತಿರುಗಿದ ವ್ಯವಸಾಯ ಪ್ರವೀಣರು

೪೩ ವರ್ಷಗಳಿಂದ ಪರದೇಶಗಳಲ್ಲಿ ವಾಸಿಸುತ್ತಿದ್ದ ಈಗ ಮಧ್ಯ ಪ್ರಾಂತ ಸರಕಾರದ ವ್ಯವಸಾಯ ಯೋಜನೆಯಲ್ಲಿ ಸಲಹೆ ಕೊಡಲು ಡಾ|| ಪಾಂಡುರಂಗ ಸದಾಶಿವ ಖಾನಖೋಜೆಯವರು ಸ್ವದೇಶಕ್ಕೆ ಹಿಂತಿರುಗಿದ್ದಾರೆ. ಇವರು ಅಮೆರಿಕಾ ಮತ್ತು ಮೆಕ್ಸಿಕೋಗಳಲ್ಲಿದ್ದು ಅಲ್ಲಿ ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದರು. ಸ್ವದೇಶಕ್ಕೆ ಹಿಂದಿರುಗಬೇಕೆಂದು ಇಚ್ಛೆಪಟ್ಟಾಗ ತಮಗೆ ಹಿಂದಿನ ಭಾರತ ಸರಕಾರದವರು ಅವಕಾಶ ಕೊಡಲಿಲ್ಲ.

ನೂತನ ನೇಗಿಲು

ಒಂದು ಜೋಡಿ ಎತ್ತಿನಿಂದ ಕಟ್ಟಲ್ಪಟ್ಟು ಉಳಲು ಸಹಾಯಕವಾದ ಹಗುರವಾದ ಹೊಸ ನೇಗಿಲನ್ನು ಭಾರತದ ವ್ಯವಸಾಯ ಸಂಶೋಧನಾ ಕೇಂದ್ರದವರು ಕಂಡುಹಿಡಿದಿದ್ದಾರೆ. ಇದರಿಂದ ಹೆಚ್ಚು ಕೆಲಸವಾಗುವುದಲ್ಲದೆ ಉಳುಮೆ ಸುಲಭವಾಗಿರುವುದು. ಹಳೆಯ ನೇಗಿಲಿಗಿಂತಲೂ ಇದರ ದರವು ಹೆಚ್ಚಿಲ್ಲ. ದೇಶೀಯ ಕಮ್ಮಾರರು ತಯಾರಿಸಬಹುದೆಂದು ಹೇಳಲಾಗಿದೆ.

ತಾಳೆ ಬೆಲ್ಲದ ತಯಾರಿಕೆ

[illegible] ತಾಳೆ ಬೆಲ್ಲದ ತಯಾರಿಕೆಯನ್ನು ಅಭಿವೃದ್ಧಿ ಪಡಿಸಲು ಭಾರತ ಸರಕಾರದವರು [illegible] ತಯಾರಿಸಿದ್ದಾರೆ. [illegible] ಆಗಿದೆ.

ಭಾರತದಲ್ಲಿ ೧೫ ನೂತನ ಹತ್ತಿ ಗಿರಣಿಗಳು

[illegible]

ಜುಲೈ ತಿಂಗಳವರೆಗೆ ಗಾಂಧೀ ನಿಧಿ ಸಂಗ್ರಹ

ಕಳೆದ ೧೫ನೇ ತಾ|| ಮುಕ್ತಾಯವಾಗಬೇಕಾಗಿದ್ದ ಗಾಂಧೀ ಸ್ಮಾರಕ ನಿಧಿ ಸಂಗ್ರಹದ ಕಾಲಾವಧಿಯನ್ನು ಬರುವ ಜುಲೈ ತಿಂಗಳ ಅಂತ್ಯದವರೆಗೂ ಮುಂದುವರಿಸಲಾಗಿದೆ.

ನೈಜಾಮರ ಕುಟುಂಬದವರಿಗಾಗಿ ನಿಧಿ

ನೈಜಾಮರು ತಮ್ಮ ಎರಡನೇ ಮಗ ರಾಜಕುಮಾರ ಮೋಜಂ, ಸೊಸೆ ಬಿರಾರಿನ ರಾಜಕುಮಾರಿ ಮತ್ತು ಆಕೆಯ ಎರಡು ಮಕ್ಕಳಿಗಾಗಿ ತಲಾ ೨ ಕೋಟಿ ರೂಗಳ ನಿಧಿಯನ್ನೂ ತಮ್ಮ ಇತರ ಕುಟುಂಬದವರಿಗಾಗಿ ೬ ಕೋಟಿ ರೂ ನಿಧಿಯನ್ನೂ ಸದ್ಯದಲ್ಲಿಯೇ ಸ್ಥಾಪಿಸಲಿರುವರೆಂದು ತಿಳಿದುಬಂದಿದೆ.

ಆರು ವಾರಗಳಲ್ಲಿ ಸಾವಿರ ಮನೆ

ಆರು ವಾರಗಳಲ್ಲಿ ಒಂದು ಸಾವಿರ ಗೃಹಗಳನ್ನು ನಿರ್ಮಾಣ ಮಾಡುವ ಪ್ರಯೋಗವನ್ನು ಕರಾಚಿಯಲ್ಲಿ ಶೀಘ್ರದಲ್ಲಿಯೇ ತೋರಿಸಲಾಗುವುದು. ಇದರಲ್ಲಿ ೨ ವಾಸದ ಕೊಠಡಿ, ಒಂದು ಬಚ್ಚಲು, ಅಡಿಗೆ ಮನೆ, ಕಕ್ಕಸು, ವರಾಂಡಾ ಮತ್ತು ಖಾಲಿ ಜಾಗ ಇಷ್ಟೂ ಇರುವುವು.

ನಿರಾಶ್ರಿತರ ವಾಸಕ್ಕಾಗಿ "ಗಾಂಧೀ ಧಾಮ"

ಸಿಂಧ್ ದೇಶದಿಂದ ಬಂದಿರುವ ೨ ಲಕ್ಷ ನಿರಾಶ್ರಿತರಿಗಾಗಿ ಕಚ್ ದ್ವೀಪದಲ್ಲಿರುವ ಕಾಂಡ್ಲಾ ರೇವಿನ ಹತ್ತಿರ ಇರುವ ಸ್ಥಳದಲ್ಲಿ "ಹೊಸ ಕರಾಚಿ" ಯನ್ನು ನಿರ್ಮಿಸಲಾಗುವುದು. ಇದಕ್ಕೆ ಗಾಂಧೀ ಧಾಮವೆಂದು ಹೆಸರಿಡಲಾಗುವುದು. ಸರ್ದಾರ್ ಪಟೇಲರು ಈ ಪಟ್ಟಣದ ಅಸ್ತಿಭಾರವನ್ನು ಹಾಕುವರು.

ಕಮ್ಮಿ ಮಕ್ಕಳು ಅಧಿಕ ಹೆಚ್ಚು ಮನೆ ಬಾಡಿಗೆ

ಅಮೆರಿಕದಲ್ಲಿ ಮನೆಗಳ ಅಭಾವವಿರುವುದರಿಂದ ಜನರು ಹೆಚ್ಚು ಮಕ್ಕಳನ್ನು ಪಡೆಯಕೂಡದೆಂದೂ, ಅಲ್ಲಿನ ಮಾಜಿ ಸೈನಿಕರು ಸಂತಾನ ನಿರೋಧವನ್ನು ಆಚರಿಸಬೇಕೆಂದೂ ಇಲ್ಲವಾದರೆ ಹೆಚ್ಚು ಮನೆ ಬಾಡಿಗೆ ತೆರಬೇಕಾಗುವುದೆಂದೂ ತಿಳಿಸಲಾಗಿದೆ.

ಹೊಸದಾಗಿ ಕಟ್ಟಿಸಿರತಕ್ಕ

ತಾರಸಿ ಬಂಗಲೆ ಕ್ರಯಕ್ಕಿದೆ

ಮಾರ್ಕೆಟ್ ವಿಲಾಸ ಮೊಹಲ್ಲಾ ಗೋಕುಲಂ [illegible] ರಸ್ತೆ ದೀಪ, ಗ್ಯಾರೇಜ್ ಮತ್ತು ನಾಲ್ಕು ಕಡೆಯಲ್ಲಿಯೂ ಕಾಂಪೌಂಡ್ ಇರತಕ್ಕ ಹೊಸ ತಾರಸಿ ಬಂಗಲೆ ಕ್ರಯಕ್ಕಿದೆ. ತಕ್ಷಣವೇ ಸ್ವಾಧೀನ ಕೊಡಲಾಗುತ್ತೆ.

ರೂ 10,000

[illegible] ಕೊಡಬೇಕಾದ ವಿಳಾಸ:

ಡಾ. ಸುಬ್ಬರಾವ್,

560 ದಿವಾನ್ಸ್ ರೋಡ್, ಮೈಸೂರು

ಅಥವಾ

ಜಿ. ಪಿ. ದೇಶಿಕಾಚಾರ್

[illegible] ಮೈಸೂರು

ಗುಂಡಿನೇಟಿನಿಂದ ಹೂರರ ದೊರೆಯ ಸಾವು

ಸಿಂಧ್ ಹೈದರಾಬಾದಿನ ಹತ್ತಿರ ಗುಪ್ತವಾಗಿದ್ದ ಹೂರ್ ಪಂಗಡದ ದೊರೆಯೆಂದು ಕರೆಯಲ್ಪಟ್ಟಿದ್ದ ಪೀರ್ ನಿಬಾಮಸಿ ಎಂಬುವನನ್ನು ಸಿಂಧ್ ಪೋಲೀಸರು ಗುಂಡಿನಿಂದ ಹೊಡೆದುಕೊಂದಿರುವರು. ಈತನನ್ನು ಹಿಡಿದವರಿಗೆ ೨೦ ಸಾವಿರ ರೂ ಮತ್ತು ೪೦ ಎಕರೆ ಜಮೀನು ಬಹುಮಾನವಾಗಿ ಕೊಡಲಾಗುವುದೆಂದು ತಿಳಿಸಲಾಗಿತ್ತು.

ಆಹಾರ ಕೊರತೆ ನೀಗಲು ಮೀನು

ಭಾರತದಲ್ಲಿರುವ ಆಹಾರ ಕೊರತೆಯನ್ನು ನೀಗಲು ಐದು ವರ್ಷದ ಮೀನು ಹಿಡಿಯುವ ಯೋಜನೆಯನ್ನು ಭಾರತ ಸರ್ಕಾರದವರು ಸಿದ್ಧಗೊಳಿಸಿದ್ದಾರೆ. ಪ್ರತಿ ನಿತ್ಯವೂ ಹತ್ತು ಸಾವಿರ ಟನ್ನಿನಷ್ಟು ಮೀನುಗಳನ್ನು ಹಿಡಿಯಲು ಏರ್ಪಾಡಾಗುವುದು. ಯೂರೋಪ್ ಮತ್ತು ಜಪಾನ್ ರಾಜ್ಯಗಳಲ್ಲಿರುವಂತೆಯೇ ಇಲ್ಲೂ ಸಹ ಮೀನು ಹಿಡಿಯುವ ಆಧುನಿಕ ಉಪಕರಣಗಳನ್ನು ಉಪಯೋಗಿಸಲಾಗುವುದು.

೯೨೨೦ ಜನ ಮಹಿಳೆಯರ ಪತ್ತೆ

ಜನವರಿ ೧೬ನೇ ತಾ|| ನಿಂದ ಇಲ್ಲಿಯವರೆಗೆ ಪೂರ್ವ ಪಂಜಾಬಿನಿಂದ ೯೨೨೦ ಮಂದಿ ಅಪಹೃತ ಮಹಿಳೆಯರನ್ನು ಪತ್ತೆ ಮಾಡಿ ಅವರುಗಳನ್ನು ಮನೆಗಳಿಗೆ ಕಳುಹಿಸಲಾಗಿದೆಯೆಂದೂ, ಲಾಹೋರಿನ ನಿರಾಶ್ರಿತರ ಗೃಹದಲ್ಲಿ ಇನ್ನೂ ೨೨೨ ಜನರು ಇರುವರೆಂದೂ ಹೇಳಲಾಗಿದೆ.

ಮೈಸೂರಿನ ಭವಿಷ್ಯವು ಜನರಿಗೆ ಸೇರಿದ್ದು

ನಂಜನಗೂಡು ೨

ಮೈಸೂರಿನ ರಾಜಕೀಯ ಭವಿಷ್ಯದ ಬಗ್ಗೆ ಹೊರಗಿನವರು ಕೈಹಾಕುತ್ತಿರುವುದನ್ನು ಖಂಡಿಸಿ, ಅದನ್ನು ನಿರ್ಧರಿಸುವುದಕ್ಕೆ ಮೈಸೂರಿನ ಪ್ರಜೆಗಳಿಗೆ ಮಾತ್ರ ಹಕ್ಕಿದೆಯೆಂದು ತಿಳಿಸುವ ನಿರ್ಣಯವು ಇಲ್ಲಿ ನಡೆದ ಪೌರಸಭೆಯ ಅಧಿವೇಶನದಲ್ಲಿ ಅಂಗೀಕೃತವಾಯಿತು. ಮೈಸೂರಿನ ಪ್ರಜೆಗಳ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಮಂತ್ರಿಮಂಡಲದವರು ಭಾರತ ಸರ್ಕಾರಕ್ಕೆ ಯಾವ ಸಲಹೆಯನ್ನೂ ಕೊಡಕೂಡದೆಂದು ಪ್ರಾರ್ಥಿಸಲಾಯಿತು.

ರಾಜಕಮಲ್

ಮೈಸೂರು

27—4—49 ರಿಂದ

ಅಮೋಘ ಪ್ರಾರಂಭ

ಬಾಂಬೇ ಟಾಕೀಸಿನವರ

ಕಿಸಾನ್ ಮತ್ರ

[illegible]

ಮುಖ್ಯ ಪಾತ್ರ [illegible]

[illegible]

ಲಾಯಕ್ ಅಲಿಯಿಂದ ೪೬ ಲಕ್ಷ ರೂ. ದುರುಪಯೋಗ

ಹೈದರಾಬಾದಿನ ಮಾಜಿ ಲಾಯಕ್ ಅಲಿ ಮಂತ್ರಿಮಂಡಲದವರು ರಜಾಕರು ಚಳುವಳಿಗಾಗಿ ೪ ಲಕ್ಷ ರೂ ಅನ್ನು ನಿಜಾಮರ ನಿಧಿ [illegible] ರಜ್ವಿಗೆ ಕೊಟ್ಟರೆಂದೂ, ೨೧ ಲಕ್ಷ ರೂ ಅನ್ನು ಅಲ್ಲಿನ ಮಂತ್ರಿಯು ಒಬ್ಬ ಬಂಧುವಿಗೂ, ತಲಾ ೮೦ ಸಾವಿರ ರೂ ಅನ್ನು ಸಂಸ್ಥಾನದ ಇಬ್ಬರು ಸಚಿವರುಗಳಿಗೂ ಕೊಡಲಾಗಿತ್ತೆಂದೂ ಈಗ ಪತ್ತೆ ಮಾಡಲಾಗಿದೆ.

ಸಮತಾವಾದಿ ಮುಖಂಡರ ಬಿಡುಗಡೆ

ಬೆಂಗಳೂರು ಜೈಲಿನಲ್ಲಿ ಬಂಧಿತರಾಗಿದ್ದ ಕರ್ನಾಟಕ ಪ್ರಾಂತ್ಯ ಸಮತಾವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ನಾಗಭೂಷಣ ಮತ್ತು ಶ್ರೀ ಹೆಚ್.[illegible] ಸ್ವಾಮಿ ಯವರನ್ನು ಮೊನ್ನೆ ದಿನ ಬಿಡುಗಡೆ ಮಾಡಲಾಯಿತು.

ಕಾರ್ಮಿಕ ಸಮ್ಮೇಳನಕ್ಕೆ ಪ್ರತಿನಿಧಿಗಳು

ಇಂದೂರಿನಲ್ಲಿ ಮುಂದಿನ ವಾರ ನಡೆಯುವ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧಿವೇಶನಕ್ಕೆ ಮೈಸೂರಿನ ಪ್ರತಿನಿಧಿಗಳಾದ ಕೆ. ಪುಟ್ಟಸ್ವಾಮಿ, ಎ. [illegible] ಸುಬ್ಬಣ್ಣ, ಕೆ. [illegible] ರಾವ್, [illegible] ಬಾಲಯ್ಯ, ಪ್ರಸಾದ್ ಮತ್ತು ಹಚ್. ಕೃಷ್ಣಸ್ವಾಮಿಯವರು ನಿನ್ನೆ ದಿನ ಪ್ರಯಾಣ ಬೆಳೆಸಿದರು.

ಗಾಂಧೀ ನಿಧಿಗೆ ಸಹಾಯ

ರಾಜಧಾನಿಯ ಬೇಕರ್ಸ್ ಸಂಘದವರು ಗಾಂಧೀ ನಿಧಿಗೆ [illegible] ರೂ ಮತ್ತು [illegible] ಆದ ಮಾಗಡಿ ಗೋಪಾಲರಾಯರು ಮತ್ತು ಯಂ. ಸೀತಾರಾಮರಾಯರು [illegible] ರೂ ಅನ್ನು ಕಿಲ್ಲೆ ಮೊಹಲ್ಲಾ [illegible] ಸಮಿತಿಯ ಮೂಲಾಂತರ ಕೊಟ್ಟಿದ್ದಾರೆ.

ಹರಿಕಥೆ

ರಾಜಧಾನಿಯ ವಿದ್ಯಾ ಮೊಹಲ್ಲಾ ಶ್ರೀನಿವಾಸ ರಾಘವೇಂದ್ರ ಮತ್ತು [illegible] ರಾಯಣ ಸೇವಾ ಮಂದಿರದಲ್ಲಿ ನಾಳೆ ಗುರುವಾರ ಶ್ರೀ ರಾಮ ಹಬ್ಬದ ಪ್ರಯುಕ್ತ ರಾತ್ರಿ ೧೦ ಗಂಟೆಗೆ ಶ್ರೀ [illegible] ಸುಬ್ಬರಾಯರಿಂದ ಶ್ರೀ ರಾಮ ಪಟ್ಟಾಭಿಷೇಕ ಎಂಬ ಹರಿಕಥೆ ನಡೆಯುವುದು.

|| ಶ್ರೀ ||

ಗಣೇಶ ಟಾಕೀಸ್

4-5-1949ರಿಂದ [illegible]

ಪ್ರತಿದಿನ 3 ಪ್ರದರ್ಶನಗಳು.

ವಾಹಿನಿಯವರ ತೆಲುಗು ಚಿತ್ರ

ದೇವತ

ಭೂಮಿಕೆ: ನಾಗಯ್ಯ, ಸೂರ್ಯ [illegible] ಕುಮಾರಿ ಮತ್ತು ಲಕ್ಷ್ಮಿ ರಾಜಂ

Edited, Printed, Published by A R N[illegible] [illegible] the Sadhvi Pr[illegible] D[illegible] Road, My[illegible]

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಚಿಕೆ ೭] ಬುಧವಾರ [illegible] [ಸಂಪುಟ [illegible]

ಕೆಲವು ತಿಂಗಳಲ್ಲೇ ಭಾರತದ ರಿಪಬ್ಲಿಕ್

ಸ್ವತಂತ್ರ ಭಾರತದಲ್ಲಿ ಸ್ಥಳೀಯ ಸಂಸ್ಥೆಗಳ ಅಗತ್ಯವಿಲ್ಲ

ಬಹಿರಂಗ ಸಭೆಯಲ್ಲಿ ಡಾ॥ ಪಟ್ಟಾಭಿಯವರ ಭಾಷಣ

ಮೈಸೂರು ೪

[illegible]ಜೆಗಳಿಗೆ ಅಧಿಕಾರವನ್ನು ಸ್ವಲ್ಪ ಸ್ವಲ್ಪವಾಗಿ ವರ್ಗಾಯಿಸುವೆವೆಂಬ ತೋರಿ[illegible] ಬ್ರಿಟಿಷರು ಕಲ್ಪಿಸಿದ ಸಭೆಗಳೇ[illegible]ಯ ಸಂಸ್ಥೆಗಳು ದೇಶಕ್ಕೆ ಸಂಪೂ[illegible] ಸ್ವಾತಂತ್ರ್ಯವು ಬಂದಿರುವಾಗ ಈ[illegible]ಗಳ ಅಗತ್ಯವು ಇರುವುದಿಲ್ಲ, ಅವುಗ[illegible]ಸವನ್ನು ಸರ್ಕಾರದ ಇಲಾಖೆಗಳೇ ನಡೆ[illegible] ಬಹುದು—ಎಂಬ ಅಭಿಪ್ರಾಯವ[illegible] ಕಾಂಗ್ರೆಸ್ ಅಧ್ಯಕ್ಷ ಡಾ॥ ಪಟ್ಟಾಭಿ ಸೀತಾರಾ[illegible]ಯನವರು ನಿನ್ನೆ ಸಂಜೆ ಟೌನ್‌ಹಾಲಿ[illegible]ನದಲ್ಲಿ ಏರ್ಪಡಿಸಿದ್ದ ಪೌರಸಭಾ ಸತ್ಕಾರ ಸಮಾರಂಭದಲ್ಲಿ ವ್ಯಕ್ತಪಡಿಸಿದ[illegible] ಸುಮಾರು ೧೦ ಸಾವಿರ ಜನರು ನೆರೆ[illegible]ದ್ದರು

ಶ್ರೀಮತಿ ಎಸ್ ರತ್ನಮ್ಮನವರು ಸ್ವಾಗ[illegible]ತ ಪದ್ಯವನ್ನು ಹಾಡಿದನಂತರ ಪೌರ ಸ[illegible]ಭಾ [illegible]ಕ್ಷರಾದ ಶ್ರೀ ಟಿ ವೆಂಕಟರಮಣ[illegible]ಯನವರು ಬಿನ್ನವತ್ತಳೆಯನ್ನು ಓದಿ[illegible] ತರವಾದ ಗಂಧದ ಪೆಟ್ಟಿಗೆಯಲ್ಲಿ [illegible] ದರು ನಗರ ಕಾಂಗ್ರೆಸ್ ಸಮಿತಿಯ ಪರವಾಗಿ ಶ್ರೀ ಚೆನ್ನಯ್ಯನವರು ರಾಷ್ಟ್ರಪತಿ[illegible] ಸ್ವಾಗತವನ್ನು ಸಲ್ಲಿಸಿದರು ವಿದ್ಯಾರ್ಥಿ [illegible] ಕಾಂಗ್ರೆಸ್ಸಿನ ಪರವಾಗಿ ಶ್ರೀ ಶಾಂತರಾಜ ರವರು ಬಿನ್ನವತ್ತಳೆಯನ್ನು ಅರ್ಪಿಸಿದರು [illegible] ಸೇವಾ ಸಂಘ, ಹರಿಜನ ಸೇವಾ ಸಂಘ ಮಹಿಳಾ ಸಂಘ, ದೇಶ ಪ್ರೇಮಿ ಸಂ[illegible] ಗ್ರಾಮಾಭಿವೃದ್ಧಿ ಸಮಿತಿ ಮುಂತಾ[illegible] ಪ್ಪುಗಳ ಪರವಾಗಿ ಹಾರವನ್ನು ಒಪ್ಪಿಸಿ[illegible] [illegible]ಮಿತು ಬಣ್ಣದ ಸಾಮಾನು ವರ್ತಕ[illegible] ಶ್ರೀ ವೆಂಕಟಸುಬ್ಬಯ್ಯ ಶೆಟ್ಟರು ಗಂ[illegible] ಮರದ ಚಿತ್ರವೊಂದನ್ನು ಅವರಿಗೆ ಕೊಟ್ಟರು.

ಡಾ॥ ಪಟ್ಟಾಭಿಯವರು ೧॥ ಗಂಟೆ ಕಾ[illegible] ಭಾಷಣ ಮಾಡಿ, ಭಾರತ ಸ್ವಾತಂತ್ರ್ಯ[illegible]ನೆಯ ಇತಿಹಾಸವನ್ನೂ ಇಂದು [illegible]ದ ಮುಂದೆ ಇರುವ ಸಮಸ್ಯೆಗಳನ್ನೂ [illegible], ಭವಿಷ್ಯ ಭಾರತದ ಭವ್ಯವಾದ ಚಿತ್ರವನ್ನು ಬಣ್ಣಿಸಿದರು. ಅವರು ತ[illegible] ಭಾಷಣದಲ್ಲಿ ಈ ರೀತಿ ನುಡಿದರು –

ಹಿಂದೀ ಭಾಷೆಯ ಆವಶ್ಯಕತೆ

[illegible]ದಿಯು ರಾಷ್ಟ್ರ ಭಾಷೆಯಾಗುವು[illegible] [illegible] ೧೯೩೧ರಲ್ಲೇ ಎಚ್ಚರಿಕೆ ಕೊಡ[illegible] ತ್ತು. ಇನ್ನೂ ಅದನ್ನು ಯಾರಾದ[illegible] ಕಲಿಯದಿದ್ದರೆ ಅವರದೇ ತಪ್ಪು ಸ[illegible] ಭೆಯವರು ಕನ್ನಡದಲ್ಲಿ ಬಿನ್ನವತ್ತಳೆ[illegible] ಕೊಟ್ಟಿರುವುದು ಅಭಿನಂದನೀ[illegible] ವಿಚಾರ ವಿದ್ಯಾರ್ಥಿ ಕಾಂಗ್ರೆಸ್ಸಿನವ[illegible] [illegible]ಂಗ್ಲ ಭಾಷೆಯಲ್ಲಿ ಕೊಟ್ಟಿರುವುದು [illegible] ಇನ್ನೂ ಪರಕೀಯ ಭಾಷಾ ವ್ಯಾ[illegible] [illegible]ಸಹರಿಸುವುದನ್ನು ಸೂಚಿಸುತ್ತದೆ

[illegible]ನ್ನವತ್ತಳೆಯಲ್ಲಿ ನಾನು ಹಿಂದೆ ಮಾ[illegible] [illegible] ಕಾರ್ಯಸಾಧನೆಗಳನ್ನು ಹೊಗಳಲಾ[illegible]ದೆ ಇವೆಲ್ಲವೂ ಸಂಸ್ಥಾನದ ಪೂರ್ವಾಪ[illegible]ರವನ್ನು ವಿಚಾರಿಸಿದಂತೆಯೂ, ಪಾನ[illegible] [illegible]ಥ ಪ್ರದೇಶದಲ್ಲಿ ಹೆಂಡ ಕುಡಕನನ್ನು[illegible] ದ ವಿಚಾರವಾಗಿ ಪ್ರಸ್ತಾಪಿಸಿದಂತೆ[illegible] ಇವೆ

ಮೈಸೂರಿನ ಪ್ರಶಂಸೆ

ಪೌರಸಭೆಗಳಿಗೆ ಸ್ವಾತಂತ್ರ್ಯಗಳು ಓಟ[illegible]ನ್ನು ಪಡೆಯುವುದಕ್ಕೆ ಎಷ್ಟು ಆಸಕ್ತಿ ವಹಿಸಲಾಗುವುದೋ ಅಷ್ಟೇ ಶ್ರದ್ಧೆಯಿಂದ ಪ[illegible]ರನಿವಾಸಿಗಳ ಹಿತಸಾಧನೆಯನ್ನೂ ಮಾಡಬೇಕು ಮೈಸೂರು ಪೇಟೆಯು ಮೊದಲಿನಿಂದಲೂ ಒಳ್ಳೆಯ ದಿವಾನರುಗಳನ್ನು ಹೊಂದಿ ಆಡಳಿತ ವಿಚಕ್ಷಣೆಯಲ್ಲಿ ಪ್ರಖ್ಯಾತಿಯನ್ನು ಪಡೆದಿದೆ ಮೈಸೂರು ನಗರವು ವಿಶೇಷ ಸೌಂದರ್ಯದಿಂದ ಮೆರೆಯುತ್ತಿದೆ ಇದನ್ನು ಪೌರಸಭೆಯವರು ಕಾಪಾಡಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ. ಉತ್ತಮ ಆಡಳಿತದ ಪರಿಣಾಮವಾಗಿ ಮಹಾರಾಜರು ಈಗ ಪ್ರಜೆಗಳಿಗೆ ಪೂರ್ಣಾಧಿಕಾರವನ್ನು ವಹಿಸಿಕೊಟ್ಟಿರುತ್ತಾರೆ

ಮಹಿಳೆಯರ ಹಕ್ಕುಗಳು

ಬ್ರಿಟಿಷರ ಕಾಲದಲ್ಲಿ ಭರತಖಂಡದ ೩೦ ಕೋಟಿ ಜನರ ಪೈಕಿ, ೩॥ ಕೋಟಿ ಜನರಿಗೆ ಮಾತ್ರ ಓಟುಕೊಡುವ ಹಕ್ಕು ಇತ್ತು ಈಗ ೧೭ ಕೋಟಿ ಜನರಿಗೆ ಈ ಅಧಿಕಾರವು ಒದಗುತ್ತದೆ ಜನಾಂಗದ ಅರ್ಧ ಭಾಗವಾದ ಮಹಿಳೆಯರಿಗೂ ಸಹ ಈ ಅವಕಾಶವು ದೊರೆಯುತ್ತದೆ ಸ್ತ್ರೀಯರನ್ನು ಹಿಂದಕ್ಕೆ ತಳ್ಳುವ ಕಾಲವು ಕಳೆದುಹೋಯಿತು ಹಿಂದೂ ಕೋಡ್ ಮುಂತಾದ ಶಾಸನಗಳು ಜಾರಿಗೆ ಬರಲಿವೆ ತಂದೆಯ ಆಸ್ತಿಯಲ್ಲಿ ಮಗಳಿಗೂ ಭಾಗವನ್ನು ಕೇಳಲಾಗುತ್ತಿದೆ ವಿವಾಹವಿಚ್ಛೇದನವಕ್ಕನ್ನು ಕೋರಲಾಗುತ್ತಿದೆ ಈ ಹಕ್ಕನ್ನು ಬ್ರಾಂತಿ[illegible] ಕರೆಂಟ್ ದಿಮಾಚಿಟ್ಟಿನಂತೆ ಉಪಯೋಗಿಸಬಾರದು. ರಿಜರ್ವ್ ನಂತಿನಂತೆ ಅದು ಕೇವಲ ಆಪದ್ಧನವಾಗಿರಬೇಕು ಮಹಿಳೆಯರೇ ಇಂತಹ ಪ್ರಶ್ನೆಗಳನ್ನು ಪರಿಶೀಲಿಸಿ ನಿರ್ಧಾರಕ್ಕೆ ಬರಬೇಕು ಒಮ್ಮತಕ್ಕೆ ಕ್ಷಿಪ್ರವನ್ನು ನಿವೇದಿಸುವ ಮಸೂದೆಯು ಮದ್ರಾಸಿನಲ್ಲಿ ಜಾರಿಗೆ ಬಂದಿರುತ್ತದೆ ಮೈಸೂರಿನಲ್ಲಿ ಅದು ಇನ್ನೂ ಬಂದಿಲ್ಲದಿದ್ದರೆ ಬೇಗನೆ ಜಾರಿಗೆ ತರುವುದು ಸೂಕ್ತ

ರಾಜರುಗಳ ಪಿತೂರಿ

ಭಾರತಕ್ಕೆ ಸ್ವಾತಂತ್ರ್ಯವು ಬಂದನಂತರ ಸರ್ಕಾರವು ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು ರಾಷ್ಟ್ರ ವಿಭಜನೆ[illegible] [illegible]ದ ಪಾಕಿಸ್ತಾನವು ಸ್ಥಾಪಿತವಾಗುವುದರ[illegible] [illegible] ನಿರ್ವಸಿತ[illegible] [illegible] [illegible]

ಗಳು ಆಗುತ್ತಲೇ ಇವೆ ಇವು ಇನ್ನೂ ಘೋರ ಪರಿಣಾಮವನ್ನು ಉಂಟುಮಾಡುವ ಶಂಕೆ ಇದ್ದು ಶೀಘ್ರವಾಗಿ ನೈಜಾಮನ ಸೈನ್ಯವನ್ನೂ ಎದುರಿಸಬೇಕಾಯಿತು.

ಇವುಗಳ ಜೊತೆಗೆ ಹಲವು ರಾಜರುಗಳಿಂದಲೂ ಘಾತಿ ನಡೆಯುವ ಸೂಚನೆಗಳಿದ್ದವು ಬ್ರಿಟಿಷರು ಹೋಗುವಾಗ ಮುಂದಿನ ಬಾಗಿಲಿನಿಂದ ಹೊರಟು ಹಿಂದಿನ ಬಾಗಿಲಿನಿಂದ ಪುನಃ ಬರುವ ಆಲೋಚನೆ ಮಾಡಿದ್ದರು ತಾವು ಹೋದನಂತರ ರಾಜರುಗಳೆಲ್ಲರೂ ಸ್ವತಂತ್ರರಾಗುವರೆಂದು ಗುಪ್ತವಾಗಿ ಅವರುಗಳಿಗೆ ತಿಳಿಸಿದ್ದರು ಇದರ ಧೈರ್ಯಗೊಂಡ ಹಲವು ರಜಪೂತ, ಜಾಟ ಮತ್ತು ಮುಸ್ಲಿಂ ರಾಜರುಗಳು ಪಿತೂರಿ ನಡೆಸಿ ದೆಹಲಿಯನ್ನು ಆಕ್ರಮಿಸುವ ಪ್ರಯತ್ನವನ್ನೂ ನಡೆಸಿದ್ದರು ಆದರೆ ಭಾರತ ಸರ್ಕಾರದವರು ಸಕಾಲದಲ್ಲಿ ಇದನ್ನು ಅರಿತು ಬೇಗನೆ ಹೊರಬಿದ್ದ[illegible] [illegible] ಸಂಸ್ಥಾನಗಳನ್ನು ಉಪಾಯವಾಗಿ ಭಾರತದೊಳಗೆ ಸೇರಿಸಿದರು. ಈಗ ಸಂಸ್ಥಾನಗಳೆಲ್ಲವೂ ಹತೋಟಿಗೆ ಬಂದಿವೆ ಅನೇಕ ಸಂಸ್ಥಾನಗಳು ಭಾರತದೊಡನೆ ಐಕ್ಯವಾಗಿವೆ

ಕಮ್ಯೂನಿಸ್ಟರನ್ನು ದೂರ ಇಡಬೇಕು

[illegible] ಲಕ್ಷ ನಿರ್ವಸಿತರಿಗಾಗಿ ಭಾರತ ಸರ್ಕಾರವು ದಿನವೊಂದಕ್ಕೆ [illegible] ಲಕ್ಷ ರೂ ವೆಚ್ಚ ಮಾಡಬೇಕಾಗಿದೆ ಈ ಮಧ್ಯೆ ಕಮ್ಯೂನಿಸ್ಟರ ಹಾವಳಿಯು ವಿಶೇಷವಾಗಿ ನಡೆಯುತ್ತಿದೆ [illegible] ಜೊತೆ ಬಿದ್ದಾಗ ಲೂಟಿಕೋರರ [illegible] ಕಮ್ಯೂನಿಸ್ಟರು ದೇವರ, ಧರ್ಮ, ವರ್ಣ ಬಾಂಧವ್ಯ, ದಯೆ, ದಾಕ್ಷಿಣ್ಯ ನೀತಿ ಮುಂತಾದವುಗಳನ್ನೆಲ್ಲಾ [illegible] [illegible]ರವನ್ನು [illegible] ಇದು ಮಾನವ[illegible] [illegible]ರಾಗಿದ್ದಾರೆ ಪ್ರತಿಯೊಂದು [illegible] [illegible] ಸ್ವಯಂಸೇವಕ ದಳಗಳನ್ನು [illegible] ಕಮ್ಯೂನಿಸ್ಟರಿಗೆ [illegible] ದಯೆ ತೋರಿಸದೆ ಸ್ವಸಂರಕ್ಷಣೆಗೆ ಸಕಲರೂ ಸಿದ್ಧರಾಗಬೇಕು

[illegible] ಸರ್ಕಾರದ ಸಮ[illegible] [illegible] ದೇಶದಿಂದ ಪ್ರಬಲ ಸಮ[illegible] [illegible], ಪೆಟ್ರೋಲ್ ವಿಷಯ [illegible] [illegible] [illegible]

ಇನ್ನು ಕೆಲವು ತಿಂಗಳಲ್ಲಿಯೇ ಭಾರತ ರಿಪಬ್ಲಿಕ್ ಆಗುವುದು

ಭಾರತದ ರಾಜ್ಯಾಂಗ ಸಭೆಯು ಅಂಗ ರಚನೆಯನ್ನು ಒಪ್ಪಿದ ಕೂಡಲೇ ಸ್ವತಂತ್ರ ಭಾರತ ರಿಪಬ್ಲಿಕ್ಕನ್ನು ಘೋಷಿಸಲಾಗುವುದೆಂದೂ, ಹೊಸ ಪಾರ್ಲಿಮೆಂಟ್ ಮತ್ತು ಸಾರ್ವತ್ರಿಕ ಚುನಾವಣೆಗಳು ನಡೆಯುವವರೆಗೂ ತಾತ್ಕಾಲಿಕವಾಗಿ ಅಧ್ಯಕ್ಷರೊಬ್ಬರನ್ನು ನೇಮಿಸಲಾಗುವುದೆಂದೂ ತಿಳಿದು ಬಂದಿದೆ ಇನ್ನು ಕೆಲವು ತಿಂಗಳಲ್ಲೇ ಭಾರತವು ರಿಪಬ್ಲಿಕ್ ಆಗುವುದೆಂದು ಪಂಡಿತ ನೆಹರೂರವರು ಲಂಡನ್ನಿನಲ್ಲಿ ತಿಳಿಸಿರುತ್ತಾರೆ

ಬರ್ಮಾಕ್ಕೆ ಕಾಮನ್‌ವೆಲ್ತ್ ರಾಷ್ಟ್ರಗಳ ಸಹಾಯ

ಕಮ್ಯೂನಿಸ್ಟರ ಮುನ್ನಡೆಯನ್ನು ತಡೆಗಟ್ಟಲು ಬರ್ಮಾ ಸರ್ಕಾರಕ್ಕೆ ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳು ಶಸ್ತ್ರಾಸ್ತ್ರ ಮತ್ತು ಹಣದ ಸಹಾಯ ಮಾಡಬೇಕೆಂದು ಲಂಡನ್ನಿನಲ್ಲಿ ಕಳೆದ ವಾರ ನಡೆದ ಕಾಮನ್‌ವೆಲ್ತ್ ಪ್ರಧಾನಿಗಳ ಸಭೆಯಲ್ಲಿ ತೀರ್ಮಾನಿಸಲಾಯಿತೆಂದು ತಿಳಿದುಬಂದಿದೆ

ಸ್ವಿಟ್ಜರ್ಲೆಂಡಿನಲ್ಲಿ ನೆಹರೂರವರಿಗೆ ರಾಜ ವೈಭವದ ಸ್ವಾಗತ

ಪಂಡಿತ ನೆಹರೂರವರು ಲಂಡನ್ನನ್ನು ಬಿಟ್ಟು ನಿನ್ನೆ ದಿನ ಸ್ವಿಟ್ಜರ್ಲೆಂಡಿಗೆ ಆಗಮಿಸಿದಾಗ, ಅವರಿಗೆ ಜನಿವಾ ವಿಮಾನ ನಿಲ್ದಾಣದಲ್ಲಿ ಮತ್ತು ಸ್ವಿಸ್ ಪಾರ್ಲಿಮೆಂಟ್ ಸಭೆಯಲ್ಲಿ ಅಭೂತ ಪೂರ್ವ ಸ್ವಾಗತವನ್ನು ಅಲ್ಲಿನ ಜನರು ಕೊಟ್ಟರು. ನಗರ ಮತ್ತು ಪಾರ್ಲಿಮೆಂಟ್ ಸಭೆಗಳಲ್ಲಿ ಭಾರತ ಮತ್ತು ಸ್ವಿಸ್ ರಾಷ್ಟ್ರಧ್ವಜಗಳನ್ನು ಹಾರಿಸಲಾಗಿತ್ತು ನೆಹರೂರವರು ಸಭೆಗೆ ಆಗಮಿಸಿದ ಕೂಡಲೇ ಅವರಿಗೆ ರಾಜಮರ್ಯಾದೆಗಳೊಡನೆ ಸ್ವಾಗತ ನೀಡಲಾಯಿತು

ಮುಂತಾದ ಕಾರ್ಯಗಳೂ ಸಹ ಕಷ್ಟಸಾಧ್ಯವಾಗಿವೆ ಈ ಕಾರಣಗಳಿಂದ ಕಾಂಗ್ರೆಸ್ ಮಂತ್ರಿಮಂಡಲಗಳ ಮೇಲೆ ಜನರಿಗೆ ಅಸಮಾಧಾನವುಂಟಾಗಿರುವುದು ಸಹಜ ಆದರೆ ಕಾಲದ ಸ್ಥಿತಿಯನ್ನು ಅನುಸರಿಸಿ ಸರ್ಕಾರದವರು ವರ್ತಿಸಬೇಕಾಗಿದೆ

ವಿಶ್ವಶಾಂತಿಯಲ್ಲಿ ಭಾರತದ ಪಾತ್ರ

ಪ್ರಪಂಚವೆಲ್ಲವೂ ಸಮಾಧಾನಕ್ಕೆ[illegible]ಗಳಿಗಾಗಿ ಭಾರತದ ಕಡೆ ನೋಡುತ್ತಿದೆ ಮಾನವ ಸೇವೆಯತ್ತ [illegible] ವಿಶ್ವ ಕುಟುಂಬದ [illegible] ಸಾಧನೆಯ[illegible] ಜಗತ್ತಿನ ಮತ, [illegible] ಮತ್ತು [illegible] ಸಂಸ್ಕೃತಿ [illegible] [illegible] ಸಾಧನೆಯಲ್ಲಿ ಭಾರತವು [illegible]ನ್ನು ವಹಿಸುವ ಸಮಯ[illegible] ಈಗ ಬೊ[illegible] [illegible] ೧೦ ವರ್ಷಗಳೊಳಗೆ ಭಾರತದ ಶಕ್ತಿಯು [illegible]ವಾಗಿ [illegible] [illegible] [illegible] ನಾವೆಲ್ಲರೂ [illegible] ಸಿದ್ಧರಾಗೋಣ

ಸತ್ಕಾರ ಕೂಟ

ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರ ಗೌರವಾರ್ಥವಾಗಿ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಚ್ ಚೆನ್ನಯ್ಯನವರು ನಿನ್ನೆ ಸಂಜೆ ತಮ್ಮ ಭವನದಲ್ಲಿ ಒಂದು ಸತ್ಕಾರ ಕೂಟವನ್ನು [illegible] ಅನೇಕ [illegible]

ಅಕ್ಯಾಬಿನಲ್ಲಿ ಮುಸ್ಲಿಮರ ದಂಗೆ

ಒಮರ್ಾದ ಅಕ್ಯಾಬ್ ಪ್ರದೇಶದಲ್ಲಿ ಕಾಂಚಿರಖಾನ್ ಮುಸ್ಲಿಂ ಗಲಭೆಕೋರರು ಅಲ್ಲಿನ ಶೀರ ಪ್ರದೇಶದ ಒಂದು ನಗರದ ಮೇಲೆ ದಾಳಿ ನಡೆಸಿದರೆಂದೂ, ಅದನ್ನು ತಡೆಗಟ್ಟಲು ಸರ್ಕಾರದವರು ಸೈನ್ಯವನ್ನು ಕಳುಹಿಸಿದ್ದಾರೆಂದು ವರದಿಯಾಗಿದೆ

ಸ್ಪೆಶಲ್ ಟ್ರ್ಯೂಬಿನಲ್ಲಿ ಸೇಂದಿ

ಸ್ಪೆಶಲ್ ಟ್ರ್ಯೂಬಿನಲ್ಲಿ ಸೇಂದಿಯನ್ನು ತುಂಬಿ ... ತನ್ನ ಮನೆಗೆ ... ಪೋಲೀಸರ ಪತ್ತೆ ಮಾಡಿ ಅವರ ಮೇಲೆ ಮೊಕದ್ದಮೆ ಹೂಡಿದ್ದರು ಅವರಿಗೆ ಆರು ತಿಂಗಳು ಶಿಕ್ಷೆಯನ್ನು ವಿಧಿಸಲಾಯಿತು

ನೂರು ವರ್ಷಕ್ಕೆ ಗಂಟೆಯಲ್ಲಿ ಮೂರು ಸೆಕೆಂಡು ಕಡಿಮೆ

ಗಡಿಯಾರದ ಗಂಟೆಯ ತಪ್ಪುಗಳಿಂದ ತಪ್ಪಿಸಿಕೊಳ್ಳಲು ವಿಜ್ಞಾನಿಗಳು ಒಂದು ನೂತನ ಕೇಂದ್ರವನ್ನು ಅಮೆರಿಕದ ಸರ್ಕಾರದವರು ಸ್ಥಾಪಿಸಿದ್ದಾರೆಂದೂ, ನೂರು ವರ್ಷಕ್ಕೆ ಮೂರು ಸೆಕೆಂಡುಗಳಿಗಿಂತ ಕಡಿಮೆ ತಪ್ಪು ... ಯೆಂದೂ ವಿಜ್ಞಾನಿಗಳು ತಿಳಿಸಿದ್ದಾರೆ

ಪ್ರವಾಹದಿಂದ ಹಳ್ಳಿಗಳ ನಾಶ

ಅರ್ಜೆಂಟೈನಾದಲ್ಲಿರುವ ಪರಾನಾ ನದಿಯಲ್ಲಿ ವಿಪರೀತ ಪ್ರವಾಹ ಬಂದು ಅನೇಕ ಬಡವರು ನಾಶವಾಗಿವೆ ... ಪ್ರದೇಶದ ವಿಸ್ತಾರವಾದ ಭಾಗ ನೀರು ನುಗ್ಗಿ ... ಅನೇಕ ಹಳ್ಳಿಗಳು ಮುಳುಗಿ ಹೋಗಿ ... ಜನರು ಸತ್ತು, ಬೆಳೆಗೆ ವಿಪರೀತ ನಷ್ಟ ಉಂಟಾಗಿದೆ

ರಷ್ಯಕ್ಕೆ ಭಾರತ ವಿದ್ಯಾರ್ಥಿಗಳ ನಿಯೋಗ

ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ನಿನವರ ... ಪ್ರತಿನಿಧಿಗಳನ್ನು ರಷ್ಯಕ್ಕೆ ಕಳುಹಿಸಬೇಕೆಂದು ... ರಷ್ಯನ್ ಸರ್ಕಾರದವರಿಂದ ... ಒಪ್ಪಿಕೊಂಡಿದ್ದಾರೆಂದು ಹೇಳಲಾಗಿದೆ

ವಿದೇಶ ಭಾಷೆಗಳ ಶಾಲೆ

ಫ್ರೆಂಚ್, ಚೀಣಾ, ರಷ್ಯನ್, ... ಮುಂತಾದ ಭಾಷೆಗಳಲ್ಲಿ ಶಿಕ್ಷಣ ಕೊಡುವ ಶಾಲೆಯೊಂದನ್ನು ... ಭಾರತ ಸರ್ಕಾರದ ರಕ್ಷಣಾ ... ತೆರೆಯಲಿದ್ದಾರೆ ... ಶಿಕ್ಷಣ ಕೊಡಲಾಗುವುದು

ಗಾಯತ್ರಿ ಟಾಕೀಸ್

ಪ್ರತಿದಿನ ಎರಡು ಪ್ರದರ್ಶನಗಳು. ... 4-3-49 ರಿಂದ ಎರಡು ದಿನಗಳ

Paramounts Love Story

ಬಿಯಾಂಡ್ ಗ್ಲೋರಿ

Beyond Glory

Starring Alan Ladd &

Donna Reed

ಗಂಡಿಗೆ ಹೆಣ್ಣು ಕೊಡಬೇಕೇ ಅಥವ ಹೆಣ್ಣಿಗೆ ಗಂಡು ಕೊಡಬೇಕೇ ?

ಕರ್ನಾಟಕ ಪ್ರಾಂತದ ಬಗ್ಗೆ ಡಾ|| ಪಟ್ಟಾಭಿ

ಬೆಂಗಳೂರು ೩

ಮೈಸೂರಿಗೆ ಕರ್ನಾಟಕ ಪ್ರಾಂತ್ಯದ ಇತರ ಭಾಗಗಳು ಸೇರಬೇಕೇ ಅಥವ ಪ್ರಾಂತ್ಯಗಳಿಗೆ ಮೈಸೂರು ಸೇರಬೇಕೇ ಎಂಬುದು ಮದುವೆಯಲ್ಲಿ ವರನಿಗೆ ವಧುವನ್ನು ಕೊಡಬೇಕೆ ಅಥವಾ ವಧುವಿಗೆ ವರನನ್ನು ಕೊಡಬೇಕೆ ಎಂಬ ಸಮಸ್ಯೆಯಂತಿದೆ ... ಎಂದು ರಾಷ್ಟ್ರಪತಿ ಡಾ|| ಪಟ್ಟಾಭಿಯವರು ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರುಗಳ ಸಭೆಯಲ್ಲಿ ತಿಳಿಸುತ್ತಾರೆ ಕರ್ನಾಟಕದ ಹಿತಕ್ಕಾಗಿ ಕನ್ನಡಿಗರಿಂದ ಪ್ರಮುಖ ... ಸೂಕ್ತ ಕಂಡ ರೀತಿ ವರ್ತಿಸಬೇಕೆಂದೂ ಅವರು ಹೇಳಿದರು

ನ್ಯಾಯಾಂಗ ಶಾಖೆಯಲ್ಲಿ ವರ್ಗಾ ವರ್ಗಿ

ಮೈಸೂರಿನ ಮುನ್ಸೀಫರಾದ ಶ್ರೀ ... ಕೃಷ್ಣಶೆಟ್ಟಿಯವರನ್ನು ಶ್ರೀರಂಗಪಟ್ಟಣದ ಮುನ್ಸೀಫರಾಗಿಯೂ, ಬೆಂಗಳೂರು ದಂಡನ ಅಡಿಷನಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಜಿ ಚನ್ನರಾಯ ರಡ್ಡಿಯವರನ್ನು ಮೈಸೂರು ಮುನ್ಸೀಫರಾಗಿಯೂ, ಶ್ರೀರಂಗಪಟ್ಟಣದ ಮುನ್ಸೀಫರಾದ ಶ್ರೀ ಎಂ ಸಿ ನಂಜರಾಜ ಅರಸಿನವರನ್ನು ಮಂಡ್ಯದ ಸ್ಪೆಷಲ್ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ, ಮೈಸೂರು ಸೆಕೆಂಡ್ ಮುನ್ಸಿಫ್ ಮ್ಯಾಜಿಸ್ಟ್ರೇಟರಾದ ಶ್ರೀ ಟಿ ರಾಮಸ್ವಾಮಿಯವರನ್ನು ಕೋಲಾರದ ಮುನ್ಸೀಫರಾಗಿಯೂ, ವರ್ಗಾಯಿಸಲಾಗಿದೆ

ಬಿಳಿಗಿರಿ ರಂಗನ ಬೆಟ್ಟದಲ್ಲಿ ರಥೋತ್ಸವ

... ಬಿಳಿಗಿರಿ ರಂಗನ ಬೆಟ್ಟದಲ್ಲಿ ಇದೇ ... ಬಿಳಿಗಿರಿ ರಂಗನ ಮಹಾ ರಥೋತ್ಸವವು ನಡೆಯುವುದು ... ರಿಂದ ... ಪ್ರತಿ ದಿನವೂ ಉತ್ಸವಗಳು ಜರುಗುವುವು

ಮಕ್ಕಳ ಆಭರಣದ ಕಳುವಿಗಾಗಿ ದಸ್ತಗಿರಿ

ಮಕ್ಕಳಿಗೆ ... ಆಭರಣಗಳನ್ನು ಕಳಚುತ್ತಿದ್ದ ... ನನ್ನು ... ಪೋಲೀಸಿನವರು ... ದಸ್ತಗಿರಿ ಮಾಡಿ ... ಕ್ರಮ ನಡೆಸುತ್ತಿದ್ದಾರೆ

|| ಶ್ರೀ ||

ಗಣೇಶ ಟಾಕೀಸ್

4-3-49 ರಿಂದ ಅಪೋಲೋ ಪ್ರಾರಂಭ ಪ್ರತಿದಿನ 3 ಪ್ರದರ್ಶನಗಳು ವಾಹಿನಿಯವರ ತೆಲುಗು ಚಿತ್ರ

ದೇವತ

ಭಾಗವತ ನಾಗಯ್ಯ ಸೂರ್ಯಕುಮಾರಿ ಕುಮಾರಿ ... ರಾಜರತ್ನಂ

ಕುಡಿಯಲು ಸಮುದ್ರದ ನೀರು

ಮದರಾಸ ನಗರದಲ್ಲಿ ನೀರಿನ ಅಭಾವವನ್ನು ನಿವಾರಿಸಲು ಅಲ್ಲಿಂದ ಹೆಚ್ಚು ಜನರನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಮದರಾಸ್ ಶಾಸನ ಸಭೆಯ ... ಸ್ಥರಾದ ಜನಾಬ್ ... ಸಾಹೇಬರವರು ಮೊನ್ನೆ ಮದರಾಸಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ತಿಳಿಸಿದ ಬಳಿಕ ಸಮುದ್ರದ ನೀರನ್ನು ... ಉಪಯೋಗಿಸ ... ಶ್ರೀ ... ಮೂರ್ತಿಯವರು ... ಸೂಚಿಸಿರುವರು.

ಭಾರತದ ಹಡಗಿಗೆ ಡಿಕ್ಕಿ

ನ್ಯೂಯಾರ್ಕಿನ ಬಂದರಿನಲ್ಲಿ ... ಕೇತು ಎಂಬ ಭಾರತದ ಹಡಗಿಗೆ ... ಲೀಡರ್ ಎಂಬ ... ಹಡಗು ಡಿಕ್ಕಿ ಹೊಡೆಯಿತೆಂದೂ, ಭಾರತದ ಹಡಗಿಗೆ ಸ್ವಲ್ಪ ನಷ್ಟ ಉಂಟಾಗಿದೆಯೆಂದೂ, ಆದರೆ ಯಾವ ಸಾವು ನೋವೂ ಉಂಟಾಗಿಲ್ಲವೆಂದೂ ವರದಿಯಾಗಿದೆ ಹೆಚ್ಚು ಮಂಜು ಕವಿದು ಕೊಂಡಿದ್ದರಿಂದ ಈ ಅಪಘಾತ ನಡೆಯಿತೆಂದು ಹೇಳಲಾಗಿದೆ

ಮಹಿಳೆಯರ ಸೈನ್ಯ ಪಡೆ

ದೇಶದಲ್ಲಿ ವಿಶೇಷ ಪ್ರಸಂಗಗಳು ಒದಗಿದಾಗ ಸೇವೆ ಸಲ್ಲಿಸಲು ಭಾರತದಲ್ಲಿ ಮಹಿಳಾ ಸೈನ್ಯ ಪಡೆಯೊಂದನ್ನು ಸ್ಥಾಪಿಸಲಾಗುವುದು. ದೆಹಲಿಯಲ್ಲಿ ಮಹಿಳೆಯರನ್ನು ತರಬೇತು ಮಾಡಲು ... ಮಹಿಳಾ ಪ್ರೊಫೆಸರುಗಳಿಗೆ ಶಿಕ್ಷಣ ಕೊಡಲಾಗುತ್ತಿದೆ

೫೦ ಲಕ್ಷ ಜನರು ಬೀದಿಯಲ್ಲಿ

ಬೊಂಬಾಯಿ ನಗರದಲ್ಲಿ ಮನೆಗಳ ಅಭಾವವು ವಿಶೇಷವಾಗಿ, ಅಲ್ಲಿನ ೫೦ ಲಕ್ಷ ಜನಸಂಖ್ಯೆಯ ಪೈಕಿ ... ಲಕ್ಷ ಮಂದಿ ಮನೆಗಳಿಲ್ಲದೆ ಕಷ್ಟ ಪಡುತ್ತಿದ್ದಾರೆಂದೂ ... ಲಕ್ಷ ಜನರು ಬೀದಿಗಳಲ್ಲಿ ಮಲಗುತ್ತಿದ್ದಾರೆಂದೂ ಹೇಳಲಾಗಿದೆ ಕಳೆದ ... ವರ್ಷಗಳಲ್ಲಿ ಜನಸಂಖ್ಯೆ ... ರಿಂದ ... ಲಕ್ಷಕ್ಕೆ ಹೆಚ್ಚಿದೆ ... ಸಾವಿರ ಮನೆಗಳು ಮಾತ್ರ ಕಟ್ಟಲ್ಪಟ್ಟಿವೆಯೆಂದು ಹೇಳಲಾಗಿದೆ

ಯೂರೋಪಿನ ಪಾರ್ಲಿಮೆಂಟ್

ಯೂರೋಪಿನಲ್ಲಿ ಪ್ರಥಮ ಪಾರ್ಲಿಮೆಂಟನ್ನು ಸ್ಥಾಪಿಸುವ ವಿಚಾರವನ್ನು ಚರ್ಚಿಸಲು ಲಂಡನ್ನಿನಲ್ಲಿ ಫ್ರಾನ್ಸ್, ಬ್ರಿಟನ್, ಇಟಲಿ, ನಾರ್ವೆ, ಸ್ವೀಡನ್, ಡೆನ್ಮಾರ್ಕ್ ... ಮುಂತಾದ ವಿದೇಶಾಂಗ ಮಂತ್ರಿಗಳ ಸಭೆಯು ನಿನ್ನೆ ದಿನ ... ಯವರ ... ಮತ್ತು ತುರ್ಕಿಯನ್ನು ಈ ಯೋಜನೆಗೆ ಸೇರಿಸುವುದನ್ನು ... ಯೆಂದು ಹೇಳಲಾಗಿದೆ

ಪ್ರಕಟಣೆ

ಮೈಸೂರು ... ರಾಜ ... ಸ್ಟೇಷನ್ ಕ್ವೋಟ್ರೆಸ್ ... ಅಪೇಕ್ಷಿಸಿದ ... ಕೆರಂದರು ನವರು ... ನಂ 190 73 c ... ಟಿಕೆಟ್ ... ಅರ್ಜಿ ಹಾಕಿದ್ದಾರೆ ಈ ... ಗಾಯವು ... ತಿಂಗಳ ... ಗೆ ತಕರಾರಿದ್ದರೆ ಪಲ್ಲಿಸಬೇಕು

ಎಸ್ ... ಶೆಟ್ಟಿ

... ಶ್ರೇಷ್ಠಿ

ಡಾ|| ಪಟ್ಟಾಭಿ ಯವರ ಪ್ರಯಾಣ

ಮೈಸೂರು

ರಾಷ್ಟ್ರಪತಿ ಡಾ|| ಪಟ್ಟಾಭಿಯವರು ... ದಿನ ಬೆಳಗ್ಗೆ ಶ್ರವಣ ಬೆಳಗೊಳಕ್ಕೆ ಪ್ರಯಾಣ ಬೆಳೆಸಿದರು ಅಲ್ಲಿಂದ ನೇರವಾಗಿ ಮೈಸೂರಿಗೆ ಹಿಂತಿರುಗಿ ರಾತ್ರಿ ದರ್ಬಾರಿಗೆ ... ಪ್ರಯಾಣ ಬೆಳೆಸಿದರು, ಕಾಂಗ್ರೆಸ್ ... ಅವರು ಈ ... ಗಂಟೆಗೆ ... ಕೂಡದೆ, ... ನಗರ ಕಾಂಗ್ರೆಸ್ ... ಸಂಭ್ರಮದಿಂದ ... ಏರ್ಪಾಡಿಸಿದ್ದಾರೆ

ವಿಮಾನದಲ್ಲಿ ಋಗ್ವೇದ ಪುಸ್ತಕ

ಶ್ರೀ ... ಸಂಜರವರ ನಾಮಾಂಕದಲ್ಲಿ ಪ್ರಕಟವಾಗುತ್ತಿರುವ ಕನ್ನಡ ಋಗ್ವೇದದ ಮೊದಲನೇ ಸಂಪುಟವನ್ನು ... ಸಂಪಾದಕರೂ ... ಅನುವಾದಕರೂ ಆದ ಡಾ|| ... ವೆಂಕಟರಾಯರು ... ಕೇಂದ್ರ ಸರ್ಕಾರದ ... ಶ್ರೀ ... ವಿಮಾನದ ... ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಮುಂದಿನ ಸಂಪುಟಗಳನ್ನು ತಮಗೆ ಕಳುಹಿಸಬೇಕೆಂದು ತಿಳಿಸಿದರು

ಪಂಡಿತಪುರದಹಳ್ಳಿ ರೈತರ ಸಂಘ

ಚಾಮರಾಜ ನಗರದ ತಾಲ್ಲೂಕ ... ಹಳ್ಳಿಯ ರೈತರ ಸಂಘದ ಪ್ರಾರಂಭೋತ್ಸವವನ್ನು ಇದೇ ... ನೇ ... ಭಾನುವಾರ ... ಗಂಟೆಗೆ ... ಬೋರ್ಡ್ ಅಧ್ಯಕ್ಷರಾದ ಶ್ರೀ ... ಚನ್ನಬಸಪ್ಪನವರು ನೆರವೇರಿಸುವರು

ಎಸ್. ಎಸ್. ಪಂಡಿತ್ ಅಂಡ ಸನ್ಸ್ ರವರ



ಯೂನಿವರ್ಸಲ್ ಹೇರ್ ಆಯಿಲ್

... ನೋವು ... ಮುಂತಾದ ಸಕಲ ಬಾಧೆಗಳಿಗೂ ರಾಮಬಾಣ

... ಪಂಚಗವ್ಯ ತೈಲ

ಚಂದನ ದಿ ತೈಲ

... ಲಕ್ಷ ತೈಲ

... ಅಂತ್ರಗ ... ತೈಲಗಳು

ಮಹಾಕೇಶವರ್ಧನ ತೈಲ ... ಉಪಯೋಗಿಸಬಹುದಾದ ಉತ್ತಮ ...

ಪಂಚಾಮೃತ ... ಸಂಜೀವನ

ಮೈಸೂರು ಆಯುರ್ವೇದಿಕ್ ಫಾರ್ಮಸಿ

Edited Printed and Published by A R Nag... at the S... Press D... Road My...

ಪು ೧೧ ಸಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಚಿಕೆ ೭] ಗುರುವಾರ ೫-೫-೪೯ [ಸಂಪುಟ ೩೦೪

- ವಿಶ್ವೇಶ್ವರಯ್ಯನವರ - ಹೆಸರು ಇರ್ವಿನ್ ನಾಲೆಗೆ

ಇರ್ವಿನ್ ನಾಲೆಗೆ ವಿಶ್ವೇಶ್ವರಯ್ಯನವರ ಹೆಸರು

[ಸ್ವಂ. ವ. ಫೋನ್] ಬೆಂಗಳೂರು ೫

ಇರ್ವಿನ್ ನಾಲೆಯ ಹೆಸರನ್ನು ಬದಲಾಯಿಸಿ ಅದನ್ನು ವಿಶ್ವೇಶ್ವರಯ್ಯ ನಾಲೆ ಎಂದು ಕರೆಯಬೇಕೆಂದು ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ.

○ ಹರಿಹರದ ಕೈಗಾರಿಕಾ ಟ್ರೇನಿಂಗ್ ಬೋರ್ಡಿಗೆ ೧ ಲಕ್ಷ ರೂ ಗ್ರಾಂಟನ್ನು ಕೊಡಲಾಗಿದೆ

○ ಮೈಸೂರು ತಂಬಾಕು ಕಂಪೆನಿಗೆ ೧,೫೧,೦೦೦ ರೂ. ಸಾಲವನ್ನು ಸರ್ಕಾರದವರು ಕೊಟ್ಟಿರುತ್ತಾರೆ

○ ಇದೇ ೧೮ ಮತ್ತು ೧೯ನೇ ತಾ|| ಗಳಲ್ಲಿ ಭಾರತ ಸರ್ಕಾರದವರು ನೇಮಿಸಿರುವ ಕೊಬ್ಬರಿ ಅಭಿವೃದ್ಧಿ ಸಮಿತಿಯ ಸಭೆಯು ನಡೆಯುವುದು

○ ಚಾಮರಾಜ ಕಾಲುವೆಯ ಬಲ ... ಲ್ಲಿರುವ ಪ್ರದೇಶಕ್ಕೆ ನೀರು ಸರಬರಾಜಿಗಾಗಿ ೪೫ ಸಾವಿರ ರೂ. ಅಂದಾಜು ... ಮಂಜೂರು ಮಾಡಲಾಗಿದೆ.

ಕರ್ನಾಟಕ ಪ್ರಾಂತ್ಯಕ್ಕೆ ಮೈಸೂರು ಸೇರಬೇಕು

... ಬ್ಬಳ್ಳಿಯಲ್ಲಿ ಕಳೆದ ... ನೇ ತಾ|| ... ಯವರ ಸಭೆಯು ನಡೆದು ಮೈ... ... ಒಳಗೊಂಡ ಕರ್ನಾಟಕ ಪ್ರಾಂತ್ಯ ... ಕೂಡಲೇ ನಿರ್ಮಾಣವಾಗಬೇಕೆಂಬ ... ಯವನ್ನು ಮಾಡಲಾಯಿತು. ಕೇಂದ್ರ ಸರ್ಕಾರದ ಒತ್ತಾಯದಿಂದ ಕರ್ನಾಟಕದಲ್ಲಿ ಸೇರುವಂತಾಗುವುದು ಯೋಗ್ಯವಲ್ಲವೆಂದೂ, ಮೈಸೂರು ತಾನಾಗಿ ಮೊದಲು ಅದಕ್ಕೆ ಸೇರಬೇಕೆಂದೂ, ಮೈಸೂರು ನಾಯಕರುಗಳು ಈ ಬಗ್ಗೆ ಸ್ಪಷ್ಟ ... ಮಾಡಿ, ಮೈಸೂರು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯು ಅದನ್ನು ಒಪ್ಪಬೇಕೆಂದೂ ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಒಂದು ಕ್ಷೌರಕ್ಕೆ ೩೦ ಲಕ್ಷ ಚಿನ್ನದ ನಾಣ್ಯ

... ಚೀಣದ ದೊಡ್ಡ ನಗರವಾದ ಶಾಂಘೈ ... ಈಗ ಹಣದ ಉಬ್ಬರವು ವಿಪರೀತ ... ಗಿರುವುದೆಂದೂ, ಹಿಂದೆ ೩೦ ಲಕ್ಷ ಚಿ... ದ ಯೆನ್ನುಗಳ ಬೆಲೆಯು ೧೮೭೭೦೦೦ ... ಗಳು ಇದ್ದು, ಈಗ ಕೇವಲ ೫ ... ಆಗಿವೆಯೆಂದೂ ಹೇಳಲಾಗಿದೆ. ... ಕ್ಷೌರಕ್ಕೆ ೩೦ ಲಕ್ಷಯನ್ನು, ೩೦ ... ಹೋಟಲ ಕಾಫಿಗೆ ... ಲಕ್ಷಯನ್ನು, ... ದೂರದ ಟ್ಯಾಕ್ಸಿ ಸಂಚಾರಕ್ಕೆ ... ಯನ್ನುಗಳು ಆಗುವುದೆಂದು ವರದಿ ... ದೆ

ಇಟಲಿಯಲ್ಲಿ ಜನರಿಗೆ ಜಮೀನು

... ಮೀನು ಇಲ್ಲದ ಸುಮಾರು ೩ ಲಕ್ಷ ... ಸಂಸಾರಗಳಿಗೆ ತಲಾ ೧೫ ಎಕರೆ ಜಮೀನು ಕೊಡಬೇಕೆಂದು ಇಟಲಿಯ ಮಂತ್ರಿಗಳು ಸೂಚಿಸಿದ್ದಾರೆ

ಹಂಪೆಯಲ್ಲಿ ಭೂ ಸಂಶೋಧನೆ

... ರತ ಸರ್ಕಾರದ ಭೂ ಸಂಶೋಧನೆ ... ಶಾಖೆಯವರು ವಿಜಯನಗರದ ರಾಜಧಾನಿಯಾಗಿದ್ದ ಹಂಪೆಯ ಪಾಳು ಜಾಗ ... ಸಂಶೋಧನೆ ನಡೆಸುವರೆಂದು ತಿಳಿದುಬಂದಿದೆ.

ಡವೇಜರ್ ಮಹಾರಾಣಿಯವರ ಬದರಿ ಯಾತ್ರೆ

ಮೈಸೂರು ೫

ಡವೇಜರ್ ಮಹಾರಾಣಿಯವರಾದ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರು ಬದರೀ ನಾರಾಯಣ ಯಾತ್ರೆಯ ನಿಮಿತ್ತ ಈ ದಿನ ಬೆಳಿಗ್ಗೆ ೮ ಘಂಟೆಗೆ ಮೈಸೂರು ಡಕೋಟಾ ವಿಮಾನದಲ್ಲಿ ಮುಂಬಯಿಗೆ, ವಿಮಾನ ನಿಲ್ದಾಣದಿಂದ ಪಯಣ ... ಪ್ರಯಾಣ ಬೆಳೆಸಿದರು. ಅಲ್ಲಿಂದ ನಾ... ಬದರಿಗೆ ತೆರಳುವರು ೧ ತಿಂಗಳು ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಅವರು ಹಿಂತಿರುಗುವರೆಂದು ಗೊತ್ತಾಗಿದೆ.

ಹಿಂದೀ ತರಗತಿ

ರಾಜಧಾನಿಯ ಬಾಲ ಸೇವಾ ಸಮಾಜದ ಆಶ್ರಯದಲ್ಲಿ ಮಧ್ವಾಚಾರ್ ಚೌಕದಲ್ಲಿರುವ ಲಕ್ಷ್ಮೀಪುರಂ ಪ್ರೆಸಿಡೆನ್ಸಿ ... ಮಿಡಲ್ ಸ್ಕೂಲಿನಲ್ಲಿ ಪ್ರತಿ ದಿನ ಸಂಜೆ ೫-೩೦ ಗಂಟೆಗೆ ಉಚಿತ ಹಿಂದೀ ತರಗತಿಗಳು ನಡೆಯುವುವು.

ಅರಮನೆ ಜಪದಕಟ್ಟೆ ಮಠ

ಮೇಲ್ಕಂಡ ಮಠದ ಉತ್ತರಾಧಿಕಾರವು ವಿವಾದಗ್ರಸ್ತವಾಗಿದ್ದುದರಿಂದ ಅದನ್ನು ವಿಚಾರ ಮಾಡಿ ವರದಿಯನ್ನು ಒಪ್ಪಿಸುವುದಕ್ಕಾಗಿ ಮೈಸೂರು ಪಟ್ಟಣದಲ್ಲಿರುವ ವೀರಶೈವ ಮಹಾಜನಗಳು ೧೦-೪-೪೯ ರಲ್ಲಿ ನಡೆದ ತಮ್ಮ ಸಭೆಯಲ್ಲಿ ಏರ್ಪಡಿಸಿದ ಕಮಿಟಿಯು ೧೭-೪-೪೯ ಮತ್ತು ೨೪-೪-೪೯ ರಲ್ಲಿ ಸೇರಿ ವಿಚಾರಣೆಯನ್ನು ನಡೆಸಿರುವುದರಿಂದ ತಮ್ಮ ವರದಿಯನ್ನು ಇದೇ ಅನೇ ತಾ|| ಭಾನುವಾರ ಸಾಯಂಕಾಲ ೬|| ಗಂಟೆಗೆ ಸರಿಯಾಗಿ ಮೇಲ್ಕಂಡ ಮಠದಲ್ಲಿ ನಡೆಯುವ ವೀರಶೈವ ಮಹಾಜನಗಳ ಸಭೆಗೆ ಅವರ ಪರ್ಯಾಲೋಚನೆ ಬಗ್ಗೆ ಒಪ್ಪಿಸುತ್ತದೆ. ವರದಿಯಲ್ಲಿ ಕಂಡಂತೆ ಉತ್ತರಾಧಿಕಾರವಾಗಿದೆ ಎನ್ನುವವರಿಗೆ ಉತ್ತರಾಧಿಕಾರವಾಗಿಲ್ಲವೆಂದೂ ಮತ್ತು ಮಠಾಧಿಪತಿಯಾಗಿರುವುದಕ್ಕೆ ತಕ್ಕ ಯೋಗ್ಯತೆಯು ಇಲ್ಲವೆಂದೂ ಕಮಿಟಿಯು ಅಭಿಪ್ರಾಯ ಪಟ್ಟಿರುತ್ತದೆ ಎಂದು ಅಧ್ಯಕ್ಷರಾದ ಶ್ರೀ ಎಂ ಎಸ್ ... ನವರು ತಿಳಿಸಿರುತ್ತಾರೆ

ಸಂಗೀತ ಕಛೇರಿ

ರಾಜಧಾನಿಯ ನಾಗೇಶ್ವರ ... ಲ್ಲಿರುವ ... ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ವಸಂತ ... ಈ ರಾತ್ರಿ ೭-೩೦ ಗಂಟೆಗೆ ವಿದ್ವಾನ್ ... ಸ್ವಾಮಿಯವರ ಸಂಗೀತ ನಡೆಯುವುದು.

ರಾಷ್ಟ್ರೀಯ ಭಾಷೆಯು ಒಂದೇ ಆಗಿರಬೇಕು

ಪ್ರಮಾಣ ವಿತರಣೋತ್ಸವದಲ್ಲಿ ಗೋವಿಂದ ದಾಸರ ಭಾಷಣ

ಮೈಸೂರು ೫

ಈ ದಿನ ಬೆಳಿಗ್ಗೆ ಟೌನ್ ಹಾಲಿನಲ್ಲಿ ಹಿಂದೀ ಪ್ರಮಾಣ ಪತ್ರ ವಿತರಣೋತ್ಸವವು ಶ್ರೀ ... ಸುಬ್ರಹ್ಮಣ್ಯ ಅಯ್ಯರ್ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ, ಭಾರತ ರಾಜ್ಯಾಂಗ ಸಭೆಯ ಸದಸ್ಯರೂ ಆದ ಸೇಠ್ ಗೋವಿಂದ ದಾಸರು ಪ್ರಶಸ್ತಿ ಪತ್ರ ಮತ್ತು ಪುರಸ್ಕಾರಗಳನ್ನು ವಿನಿಯೋಗಿಸಿ ಭಾಷಣ ಮಾಡಿದರು.

ಶ್ರೀಮತಿ ಲಕ್ಷ್ಮೀನರಸಮ್ಮನವರಿಂದ ಪ್ರಾರ್ಥನೆಯಾದ ನಂತರ, ಶ್ರೀ ಎಸ್. ಶ್ರೀರಂಗಾಚಾರ್ ರವರು ಸ್ವಾಗತವನ್ನು ಬಯಸಿದರು. ಶ್ರೀ ವಿಶ್ವಾಮಿತ್ರರವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ವ್ಯವಸ್ಥಾಪಕರಾದ ಶ್ರೀ ರಾಜಗೋಪಾಲ್ ರವರು ವರದಿಯನ್ನು ಒಪ್ಪಿಸಿದರು. ಅಧ್ಯಕ್ಷರು ಹಿಂದೀ ಭಾಷೆಯಲ್ಲಿ ಮಾನಪತ್ರವನ್ನು ಓದಿ, ಶ್ರೀ ಸೇಠರಿಗೆ ಸಮರ್ಪಿಸಿದರು.

ಶ್ರೀ ಗೋವಿಂದ ದಾಸರ ಭಾಷಣ ಮಾಡಿ ಹಿಂದೀ ಭಾಷೆಗಿಂತಲೂ ಇತರ ಅನೇಕ ಭಾಷೆಗಳ ಸಾಹಿತ್ಯವು ವಿಶೇಷವಾಗಿ ಬೆಳೆದಿರುವುದಾದರೂ ಭಾರತ ಖಂಡದ ೩೦ ಕೋಟಿ ಪ್ರಜೆಗಳ ಪೈಕಿ ೧೫ ಕೋಟಿ ಜನರು ಹಿಂದಿಯನ್ನೇ ಆಡುತ್ತಿರುವುದರಿಂದ ಅದೇ ನಮ್ಮ ರಾಷ್ಟ್ರ ಭಾಷೆಯಾಗಬೇಕಾಗಿದೆಯೆಂದು ಹೇಳಿದರು. ದೇಶಕ್ಕೆಲ್ಲಾ ಒಂದೇ ರಾಷ್ಟ್ರ ಭಾಷೆಯಂತೆಯೇ ಲಿಪಿಯು ಸಹ ಒಂದೇ ಆಗಿರಬೇಕೆಂದೂ ತಿಳಿಸಿದರು. ರಾಷ್ಟ್ರ ಭಾಷೆಯು ಕೇಂದ್ರ ಮತ್ತು ಅಂತರ ಪ್ರಾಂತೀಯ ವ್ಯವಹಾರಗಳಿಗೆ ಮಾತ್ರ ಉಪಯೋಗಿಸಲ್ಪಡುವುದು. ಇದುವರೆಗೆ ಇಂಗ್ಲಿಷ್ ಭಾಷೆಯು ಇದ್ದಂತೆ ಹಿಂದಿಯು ನಮ್ಮ ಪ್ರಾಂತೀಯ ಭಾಷೆಗಳ ಪ್ರಾಧಾನ್ಯವನ್ನು ... ಪ್ರಾಂತೀಯ ಆಡಳಿತ ... , ... ಸಾರ್ವಜನಿಕ ವ್ಯವಹಾರಗಳ ... ಭಾಷೆಯಾಗುವುದಿಲ್ಲ ... ಪ್ರತಿ ಪ್ರಾಂತ್ಯದಲ್ಲಿಯೂ ... ಪ್ರಾಂತೀಯ ಭಾಷೆಗಳೇ ... ವುದು ... ಎಂದು ಹೇಳಿದರು

ರಾಜ್ಯಾಂಗಸಭೆಗೆ ಗುರುದತ್ ರವರ ರಾಜೀನಾಮೆ

ಬೆಂಗಳೂರು ೫

ಸಂಸ್ಥಾನಗಳಿಗೆಲ್ಲಾ ಮಾದರಿ ರಾಜ್ಯಾಂಗವನ್ನು ರೂಪಿಸಲು ಸಮಿತಿಯೊಂದನ್ನು ರಚಿಸಿರುವುದರಿಂದ ಮೈಸೂರು ರಾಜ್ಯಾಂಗ ಸಭೆಯ ಕಾರ್ಯಕಲಾಪಗಳನ್ನು ಸಧ್ಯಕ್ಕೆ ನಿಲ್ಲಿಸಬೇಕೆಂದು ಕೇಂದ್ರ ಸರ್ಕಾರದವರು ಸೂಚನೆ ಇತ್ತಿರುವುದರಿಂದ ಆ ಸಭೆಯ ಕಾರ್ಯದರ್ಶಿ ಸ್ಥಾನಕ್ಕೆ ಅವಶ್ಯಕತೆ ಇಲ್ಲವೆಂದು ಶ್ರೀ ಗುರುದತ್ತರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ. ಅನವಶ್ಯಕವಾದ ಹೆಚ್ಚಿಗೆ ಸಿಬ್ಬಂದಿಯನ್ನೂ ಬೇರೆ ಕಡೆಗೆ ವರ್ಗಾಯಿಸಲಾಗುವುದೆಂದು ತಿಳಿದುಬಂದಿದೆ.

ಜಬ್ಬಲ್ಪುರದಲ್ಲಿ ಸಹಗಮನ

ಜಬ್ಬಲ್ಪುರದ ಬಳಿ ಇರುವ ಕಿಸರೋಡು ಎಂಬ ಗ್ರಾಮದಲ್ಲಿ ೭೦ ವರ್ಷದ ವೃದ್ಧ ಮಹಿಳೆಯೊಬ್ಬಳು ಮೃತನಾದ ತನ್ನ ೧೦೦ ವರ್ಷದ ಪತಿಯ ಚಿತೆಯ ಮೇಲೆ ಹಾರಿ ಅಗ್ನಿಗೆ ಆಹುತಿಯಾದಳೆಂದು ತಿಳಿದುಬಂದಿದೆ

ಮಲೆಯಾದಲ್ಲಿ ಭಾರತೀಯನಿಗೆ ಗಲ್ಲು

ಮಲೆಯಾ ಕಾರ್ಮಿಕ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ಆರ್ ಗಣಪತಿಯವರು ಬಂದೂಕ ಮತ್ತು ಮದ್ದುಗುಂಡುಗಳನ್ನು ನಿಷೇಧ ಶಾಸನಕ್ಕೆ ವಿರೋಧವಾಗಿ ಇಟ್ಟುಕೊಂಡು ತಿರುಗಾಡುತ್ತಿದ್ದ ರೆಂಬ ಅಪಾದನೆಯ ಮೇಲೆ ಮರಣ ದಂಡನೆಗೆ ಗುರಿಯಾಗಿ, ನಿನ್ನೆ ಅವರು ಗಲ್ಲಿಗೇರಿಸಲ್ಪಟ್ಟರು. ಮಲೆಯದಲ್ಲಿ ಮರಣ ದಂಡನೆ ಹೊಂದಿದವರಲ್ಲಿ ಇವರೇ ಪ್ರಥಮ ಭಾರತೀಯರು. ಅವರಿಗೆ ಕೇವಲ ೩೪ ವರ್ಷ ವಯಸ್ಸಾಗಿತ್ತು.

ಫಾರ್ಮೋಸಾದಲ್ಲಿ ಚಿಯಾಂಗರು

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕ್ ರವರು ಫಾರ್ಮೋಸಾಕ್ಕೆ ಹೋಗಿ, ಅಲ್ಲಿ ಸರ್ಕಾರಿ ಉನ್ನತಾಧಿಕಾರಿಗಳೊಡನೆ ತರಾತುರಿ ಸಭೆಯೊಂದರಲ್ಲಿ ಸಮಾಲೋಚನೆ ನಡೆಸುತ್ತಿರುವರೆಂದು ವರದಿಯಾಗಿದೆ

○ ಸ್ವಿಟ್ಜರ್ಲೆಂಡಿನಲ್ಲಿರುವ ಭಾರತದ ವ... ಪ್ರಧಾನಿ ಪಂಡಿತ ನೆಹರೂರವರು ಈ ದಿನ ಅಲ್ಲಿನ ... ಮಂತ್ರಿಗಳನ್ನು ಭೇಟಿ ಮಾಡಿ, ಎರಡು ರಾಷ್ಟ್ರಗಳಿಗೂ ಇರುವ ... ಶಾಂತಿ ಮತ್ತು ... ಒಪ್ಪಂದಕ್ಕೆ ... ಹಾಕಿದರು.

ಮಹಿಳೆಯರು ಸಕಲ ವಿಧದಲ್ಲಿಯೂ ಪುರುಷರಿಗೆ ಸಮಾನವಾದ ಹಕ್ಕುಗಳನ್ನು ಕೋರುವುದೇನೋ ಸಹಜವಾಗಿಯೇ ಇದೆ. ಅವರ ... ದಿಂದ ಅವರಲ್ಲಿ ... ಸ್ವಭಾವ ಗುಣ ಧರ್ಮಗಳಿಗೆ ಅನುಸಾರವಾಗಿ ... ದರು ... ಶ್ರೀ ರಾಮ ಕೃಷ್ಣ ... ಆದರ್ಶ ಪುರುಷರನ್ನೂ ಸೀತೆ, ಸಾವಿತ್ರಿ ... ಮಹಿಳೆಯರನ್ನೂ ಪಡೆಯುವ ಸೌಭಾಗ್ಯವು ... ನಮ್ಮ ಸಂಸ್ಕೃತಿಯ ಉದಾತ್ತ ಧ್ಯೇಯಗಳನ್ನು ಮಹಿಳೆಯರು ಪ್ರತಿಬಿಂಬಿಸಿ ... ಸಾಧಿಸಬೇಕು ... ಮೇ ದರ

ಪಾಕೀಸ್ತಾನದಲ್ಲಿ ವಿಶೇಷ ಕನ್ಯಾಪಹಾರ

ಪಾಕೀಸ್ತಾನದಲ್ಲಿ ವಿವಾಹಿತ ಮತ್ತು ಅವಿವಾಹಿತ ಬಾಲಕಿಯರ ಅಪಹರಣವು ವಿಶೇಷವಾಗಿ ನಡೆಯುತ್ತಿದೆಯೆಂದೂ, ಸಿಂಧಿನ ನವಾಬ್‌ಷಾ ಜಿಲ್ಲೆ ಒಂದರಲ್ಲಿಯೇ ಕಳೆದ ತಿಂಗಳಿನಲ್ಲಿ ೧ ಸಾವಿರ ಕನ್ಯಾಪಹಾರಗಳು ನಡೆದಿರುವುವೆಂದೂ ಹೇಳಲಾಗಿದೆ. ಹೊರಗಿನವರು ಈ ಕೃತ್ಯವನ್ನು ನಡೆಸುತ್ತಿರುವರೆಂದೂ, ಪೋಲೀಸರು ಈ ಬಗ್ಗೆ ಅಲಕ್ಷ್ಯರಾಗಿದ್ದಾರೆಂದೂ ಹೇಳಲಾಗಿದೆ

ಗಾಂಧೀ ಸ್ಮಾರಕ ವಸ್ತು ಪ್ರದರ್ಶನ

ದೆಹಲಿಯ ರಾಜಘಾಟಿನಲ್ಲಿ ಇತ್ತೀಚೆಗೆ ನಡೆದಂತೆ ಬೊಂಬಾಯಿನ ಮೈದಾನದಲ್ಲಿ ಗಾಂಧೀ ಸ್ಮಾರಕ ವಸ್ತು ಪ್ರದರ್ಶನವನ್ನು ನಡೆಸಲು ಅಲ್ಲಿನ ಗಾಂಧೀ ಸ್ಮಾರಕ ಸಂಘದವರು ವ್ಯವಸ್ಥೆ ಮಾಡುತ್ತಿರುವರು. ಪಂಡಿತ ನೆಹರೂರವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಲಂಚಕ್ಕಾಗಿ ಪೊಲೀಸ್ ಅಧಿಕಾರಿಗಳ ವಜಾ

೬೨೫ ರೂಪಾಯಿನ ಅಪಾದನೆಯ ಮೇಲೆ ಬೊಂಬಾಯಿನ ಒಬ್ಬ ಡೆಪ್ಯುಟಿ ಪೊಲೀಸ್ ಇನ್ಸ್‌ಪೆಕ್ಟರು, ಇಬ್ಬರು ಸಬ್ ಇನ್ಸ್‌ಪೆಕ್ಟರು, ಇಬ್ಬರು ಹೆಡ್ ಕಾನ್ಸ್‌ಟೇಬಲರು ಮತ್ತು ಇಬ್ಬರು ಪೋಲೀಸರನ್ನು ಕೆಲಸದಿಂದ ವಜಾ ಮಾಡಲಾಗಿದೆಯೆಂದು ಗೊತ್ತಾಗಿದೆ

ನಿಮ್ಮ ಮೈ ಹೊಳಪುಳ್ಳಿನಂತೆ

ಹೊಳೆಯಬೇಕೆ? ನೀವು

ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

[illegible]

Edited, printed and Published by V. K. Nagarajan at the Sadhvi Press, D. Subbiah Road, Mysore.

ದೆಹಲಿಗೆ ಕಾಶ್ಮೀರದ ಬೌದ್ಧರ ನಿಯೋಗ

ಕಾಶ್ಮೀರದಲ್ಲಿರುವ ಲಡಕ್ ಪ್ರದೇಶವು ಪಾಕೀಸ್ತಾನಕ್ಕೆ ಸೇರದೆ ಭಾರತದಲ್ಲಿ ಇರಬೇಕೆಂಬುದನ್ನು ತಿಳಿಸಲು ದೆಹಲಿಗೆ ಅಲ್ಲಿನ ಬೌದ್ಧರ ನಿಯೋಗವೊಂದು ಹೋಗಿದೆಯೆಂದು ಹೇಳಲಾಗಿದೆ. ಪಾಕೀಸ್ತಾನದವರು ಆ ಪ್ರದೇಶದಲ್ಲಿ ನಡೆಸಿದ ಹಿಂಸಾ ಕೃತ್ಯಗಳನ್ನು ನಿಯೋಗದ ನಾಯಕರು ವಿವರಿಸಿ, ಜನಾಭಿಪ್ರಾಯ ನಿರ್ಧಾರವೇನೇ ಆದರೂ ಅವರು ಭಾರತವನ್ನು ಬಿಡುವುದಿಲ್ಲವೆಂದು ತಿಳಿಸುತ್ತಾರೆ.

ಚೀಣಾ ಕಮ್ಯೂನಿಸ್ಟರಿಗೆ ರಷ್ಯದ ಸಹಾಯ

ರಷ್ಯದ ಸೈನ್ಯ ಇಲಾಖೆಯವರು ಚೀಣಾ ಕಮ್ಯೂನಿಸ್ಟರಿಗೆ ಸಹಾಯ ಮಾಡುತ್ತಿರುವರೆಂಬ ಅಂಶವನ್ನು ಚೀಣಾ ಕಮ್ಯೂನಿಸ್ಟರೇ ಬಹಿರಂಗ ಪಡಿಸಿದ್ದಾರೆ

೮೫ ವರ್ಷದ ವರನಿಗೆ ೭೬ ವರ್ಷದ ವಧು

ಇಂಗ್ಲೆಂಡಿನ ಸಸ್ಸೆಕ್ಸ್‌ನಲ್ಲಿರುವ ಆಲ್ಫ್ರೆಡ ನೆಟ್ ಎಂಬ ೮೫ ವರ್ಷದ ಮುದುಕನು ೭೬ ವರ್ಷದ ಲೂಸಿ ಕ್ಯಾಂಪ್‌ಬೆಲ್ ಎಂಬಾಕೆಯನ್ನು ಮದುವೆಯಾಗಿರುವನು

- ಸ್ಪೆಷಲ್ ತಯಾರಿ -

ನಮ್ಮ ಸ್ವಂತ ಮಗ್ಗದ ಮೈಸೂರು ಸಿಲ್ಕ್ ನಕ್ಷೆ ಕ್ರೇಪ್, ಬೆಂಗಳೂರು, ಧರ್ಮಾವರಂ. ಆರ್ಟ್ ಸೀರೆಗಳು [illegible] ದೊರೆಯುತ್ತವೆ ದಯವಿಟ್ಟು ಒಂದೇ ಭೇಟಿ ಕೊಡಿ

ಗುರುದೇವಾ ಹಾಲ್

ಶಿವರಾಂಪೇಟೆ, ಮೈಸೂರು

ಶ್ರೀಕಂಠೇಶ್ವರ ಪ್ರಾವಿಷನ್ ಸ್ಟೋರ್ಸ್

ಡಿ. ಸುಬ್ಬಯ್ಯ ರಸ್ತೆ, ಮೈಸೂರು

ಕಾಫಿ ಪುಡಿ, ಸಕ್ಕರೆ ಮೊದಲ್ಗೊಂಡು ಎಲ್ಲ ವಿಧವಾದ ಚಿಲ್ಲರೆ ಸಾಮಾನುಗಳಿಗೂ ಡಿ. ಸುಬ್ಬಯ್ಯ ರಸ್ತೆಯಲ್ಲಿ ಹೊಸದಾಗಿ ತೆರೆಯಲಾಗಿರುವ ಮೇಲ್ಕಂಡ ಸ್ಟೋರ್ಸಿಗೆ ಭೇಟಿ ಕೊಡಿ ಸೊಗಸಾದ ತೊಗರಿಬೇಳೆ ಸಹ ಸಿಗುತ್ತೆ

ಎಂ. ಎನ್. ಶ್ರೀಕಂಠಸ್ವಾಮಿ,

ಪ್ರೊಪ್ರೈಟರ್

ಶಿವಮೊಗ್ಗದಲ್ಲಿ ಭತ್ತ ಸಂಗ್ರಹ

ಶಿವಮೊಗ್ಗ ಜಿಲ್ಲೆಯಲ್ಲಿ ೬ ಲಕ್ಷ ಪಲ್ಲ ಭತ್ತವನ್ನು ಸಂಗ್ರಹಿಸಲಾಗಿದೆಯೆಂದೂ, ಇನ್ನೂ ೧ ಲಕ್ಷ ಪಲ್ಲಾ ಹೆಚ್ಚು ಭತ್ತವನ್ನು ಕೊಡಲು ವಾಗ್ದಾನ ಬಂದಿದೆಯೆಂದೂ ಅಲ್ಲಿನ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ

ಪಾಕಿಸ್ತಾನದವರಿಂದ ಕಾಶ್ಮೀರ್ ಹಳ್ಳಿಗಳ ಆಕ್ರಮಣ

ಕಾಶ್ಮೀರ ರಣಕ್ಷೇತ್ರದಲ್ಲಿ ಯುದ್ಧ ನಿಂತ ಮೇಲೆ ೩೦ ಹಳ್ಳಿಗಳನ್ನು ಪಾಕಿಸ್ತಾನ್ ಸೈನ್ಯಗಳು ಆಕ್ರಮಿಸಿವೆ ಈ ವಿಷಯವನ್ನು ಸಂಯುಕ್ತರಾಷ್ಟ್ರ ಸಂಸ್ಥೆ ಗಮನಕ್ಕೆ ತರಲಾಗಿದೆ

ಬರ್ನಾರ್ಡ್ ಷಾರವರಿಗೆ ಭಾರತದ ಮಾವಿನ ಹಣ್ಣು

ಭಾರತದಿಂದ ವಿಮಾನದಲ್ಲಿ ತರಿಸಲಾಗಿದ್ದ ಮಾವಿನ ಹಣ್ಣನ್ನು ಪಂಡಿತ ನೆಹರೂರವರು ಲಂಡನ್ನಿನಲ್ಲಿ ಜಾರ್ಜ್ ಬರ್ನಾರ್ಡ್ ಷಾರವರನ್ನು ಭೇಟಿ ಮಾಡಿದಾಗ ಅವರಿಗೆ ಕೊಟ್ಟರೆಂದೂ, ಷಾರವರು ತಮ್ಮ ಗ್ರಂಥಗಳಲ್ಲಿ ಒಂದನ್ನು ತಮ್ಮ ಹಸ್ತಾಕ್ಷರದೊಡನೆ ನೆಹರೂರವರಿಗೆ ಅರ್ಪಿಸಿದರೆಂದೂ ಹೇಳಲಾಗಿದೆ

NEW

OPERA TALKIES,

From 7- 5 - 1949

Daily 3 Shows

Leave Her to Heaven

(In Technicolor)

With:- Gene Tierney, Cornel Wilde, Jeanne Craine, Vincent Price

—:Next Change:—

Clunny Brown

With:- Jennifer Jones, Charles Boyer.

Coming Shortly:-

WILSON

(Technicolor)

ಪ್ರಸಿದ್ಧ ಪತ್ರಿಕೆ

ನಮ್ಮ ಕಕ್ಷಿಗಾರರಾದ ನಂಜನಗೂಡು ಟವನಿನಲ್ಲಿರುವ ಕಿರುಗಾಣಿಗ ಶೆಟ್ಟಿಗಳ [illegible] ತದ ಮಿಠಾಯಿ ಅಂಗಡಿ ಮರಿ ಶೆಟ್ಟರ [illegible] ವಾಗಿ ಈ ಮೂಲಕ ಕಿರುಗಾಣಿಗ ಶೆಟ್ಟಿ [illegible] ಕೋಮಿನವರೆಲ್ಲರಿಗೂ ತಿಳಿಯಪಡಿಸ [illegible] ದೇನೆಂದರೆ:--

ನಮ್ಮ ಕಕ್ಷಿಗಾರರ ಹಿರಿಯ ಮಗ [illegible] ಮಣ್ಣಿಗೆ ಪಟ್ಟಣದಲ್ಲಿರುವ ಕಿರು [illegible] ಣಿಗ ಶೆಟ್ಟಿಗಳ ಮತದ ಮಾದಶೆಟ್ಟಿ [illegible] ಸ್ ಕುಂಟಪ್ಪನವರ ಮಗಳು ಸಿದ್ಧ [illegible] ಉರುಫ್ ಚಿನ್ನಣ್ಣಮ್ಮನನ್ನ ಕೊಟ್ಟು [illegible] ಗ್ನ ಮಾಡುವ ಮಾತುಕತೆಗಳು ಮತ್ತು [illegible] ಸ್ಪಂದ ಸಹ ಹೆಣ್ಣು ಮತ್ತು ಗಂಡಿನ [illegible] ಕಡೆಯವರಿಬ್ಬರಿಗೂ ನಡೆದದ್ದರ ಮೇಲೆ ಹೆಣ್ಣಿನ ತಂದೆ ಮತ್ತು ಹೆಣ್ಣಿನ ಅಣ್ಣ [illegible] ಟ್ಟಸ್ವಾಮಿಯೂ ಸಹ ಗಂಡನ್ನೂ ಗಂಡಿನ [illegible] ದೆ ಜನಗಳನ್ನೂ ಮತ್ತು ಇವರ ಊರಿನ [illegible] ಜಾತಿಯ ಮುಖ್ಯಸ್ಥರನ್ನೂ ತಮ್ಮ ಊರಿಗೆ [illegible] ಕರೆಸಿಕೊಂಡು ೧೫-೪-೪೯ನೇ ತಾರೀ [illegible] ಲ್ಲಿ ಸದರಿಯವರ ಮತ್ತು ಹುಣಸೂರಿ [illegible] ರುವ ಇವರ ಜಾತಿಯ ಮುಖ್ಯಸ್ಥರ ಸ [illegible] ಕ್ಷಮ ಅರಿಶಿನ ಬಾಳೆಹಣ್ಣಿನ ಶಾಸ್ತ್ರ [illegible] (ನಿಶ್ಚಿತಾರ್ಥವು) ಹೆಣ್ಣಿನ ಮನೆಯಲ್ಲಿ [illegible] ಸ್ತ್ರೋಕ್ತವಾಗಿ ನಡೆದಿರುತ್ತೆ. ಅನಂತ [illegible] ಲಗ್ನ ಕಟ್ಟುವ ಸಲುವಾಗಿ ಹೆಣ್ಣಿನ ತಂದೆ ಮ [illegible] ತ್ತು ಅಣ್ಣನ ಕೋರಿಕೆ ಮೇರೆ ನಮ್ಮ ಕ [illegible] ಗಾರರು ೧-೫-೧೯೪೯ರಲ್ಲಿ ಹುಣಸೂರಿ [illegible] ಹೆಣ್ಣಿನ ಮನೆಗೆ ಹೋದರು. ಆದರೆ [illegible] ಮಧ್ಯೆ ಹೆಣ್ಣಿನ ತಂದೆ ಮತ್ತು ಅಣ್ಣನ [illegible] ಸಹ ಬೇರೆಯವರ ಪುಸಲಾವಣೆಯಿಂದ [illegible] ಹೆಚ್ಚು ಆಶೋತ್ತರ ಪಟ್ಟವರಾಗಿ ಹೆಣ್ಣ [illegible] ನ್ನು ನಮ್ಮ ಕಕ್ಷಿಗಾರನ ಮಗನಿಗೆ ಕೊ [illegible] ಟ್ಟು ಲಗ್ನ ಬೆಳೆಸುವುದಿಲ್ಲವೆಂದು ಉತ್ತರ [illegible] ಕೊಟ್ಟರು. ಈರೀತಿ ಹೆಣ್ಣಿನ ತಂದೆ ಮತ್ತು ಅಣ್ಣ ಸಹ ಏಕಾಏಕಿ, ನಡೆಸಿರುವ ನಡ [illegible] ತೆಯು ನ್ಯಾಯಕ್ಕೂ, ಧರ್ಮಕ್ಕೂ ಬಾ [illegible] ರವಾಗಿರುತ್ತಲ್ಲದೆ ಕಿರುಗಾಣಿಗ ಶೆಟ್ಟಿ [illegible] ಮತಕ್ಕೇನೇ ಕಳಂಕ ತರುವ ಪ್ರಸಂಗ [illegible] ಗಿರುತ್ತೆ. ಅಲ್ಲದೆ ನಮ್ಮ ಕಕ್ಷಿಗಾರನು ಹ [illegible] ಅರಿಶಿನ ಬಾಳೆಹಣ್ಣಿನ ಶಾಸ್ತ್ರವಾದಾಗ [illegible] ಣ್ಣಿಗೆ ೫೦ ರೂ ಬೆಲೆ ಬಾಳುವ ಬೆಳ್ಳಿಗೆ [illegible] ಡಾಬನ್ನೂ, ೧೫ ರೂ. ಬೆಲೆ ಬಾಳುವ ಸೀ [illegible] ಯನ್ನೂ ತೊಡಿಸಿ ಉಡಿಸಿರುತ್ತಾನೆ. ಮ [illegible] ಈ ಶಾಸ್ತ್ರಕ್ಕಾಗಿ ನಮ್ಮ ಕಕ್ಷಿಗಾರನಿಗೆ [illegible] ರೂ ನ ವರೆವಿಗೂ ಮೇಲು ಖರ್ಚು ಸ [illegible] ಆಗಿರುತ್ತೆ. ಈ ರೀತಿ ಮೇಲ್ಕಂಡ ಮಾದ [illegible] ಟ್ಟಿ ಉರುಫ್ ಕುಂಟಪ್ಪನು ನಮ್ಮ ಕ [illegible] ಗಾರರಿಗೆ ಮೋಸ ಮತ್ತು ನಷ್ಟಪಡಿಸಿದ [illegible] ಪ್ರಯುಕ್ತ ಈ ವಿಷಯವು ಇವರ ಜಾ [illegible] ನ್ಯಾಯಸ್ಥದಲ್ಲಿ ತೀರ್ಮಾನವಾಗುವವರೆವಿಗೆ ಕೂಡ ಹಿಡಿದ ಜಾತಿಯವರ್‍ಯಾರೂ ಕೂ [illegible] ಹೆಣ್ಣನ್ನು ಮದುವೆ ಮಾಡಿಕೊಂಡು [illegible] ಒಂಧ ಬೆಳೆಸಬಾರದು. ಹಾಗೆ ಬೆಳೆಸಿದಲ್ಲಿ [illegible] ಧಾವರು ನಮ್ಮ ಕಕ್ಷಿಗಾರನ ಮಾನ ನ [illegible] ನಮುಸಾರ ದ್ರವ್ಯದ ೩೦೦ ರೂಪಾಯಿಗ [illegible] ನ್ನೂ ಮತ್ತು ದಿಟೋ ನಿಶ್ಚಿತಾರ್ಥಕ್ಕೆ [illegible] ಲಿರುವ ೨೦೦ ರೂ ಗಳನ್ನೂ ನಮ್ಮ ಕ [illegible] ಗಾರರಿಗೆ ಕಟ್ಟಿಕೊಡಬೇಕಾಗುತ್ತೆಂದ [illegible] ಮೂಲಕ ಸರ್ವರಿಗೂ ಎಚ್ಚರಿಕೆ ಕೊ [illegible] ರುತ್ತೆ

ಎಂ. ಎಲ್. ರಂಗಸ್ವಾಮಿ ಅಯ್ಯಂಗಾರ್

ಬಿ.ಎ., ಬಿ.ಎಲ್.,

ಅಡ್ವೊಕೇಟ್, ನಂಜನಗೂಡು.

--೫--೪೯

ರಾಜಕಮಲ್, ಮೈಸೂರು

6-5-49 ರಿಂದ ಆರಂಭ

ಫಿಲಂಸ್ತಾನರವರ ಹಿಂದಿ ಚಿತ್ರ

ಷಹೀದ್

--ಭೂಮಿಕೆ--

• ಕಾಮಿನಿ ಕೌಶಲ್ಯ

• ದಿಲೀಪ್ ಕುಮಾರ್

• ವಿ. ಎಚ್. ದೇಸಾಯಿ

MORNING SHOWS

From 6-5-49 for 4 days

Calendar Girl

With Jane Frazee William Marshall Gail Patrick

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಚಿಕೆ ೭] ಶುಕ್ರವಾರ ೬-೫-೪೯ [ಸಂಪುಟ ೩೩

ಸಂಯುಕ್ತ ಪ್ರಾಂತ್ಯದಲ್ಲಿ ಹಾವುಗಳ ಸಾವು

ಬೆಂಗಳೂರಿನ ಬಳಿ ಕುಷ್ಠ ರೋಗಿಗಳ ಕೇಂದ್ರ

ಬೆಂಗಳೂರು ೬

ಬೆಂಗಳೂರಿನ ಬಳಿ ಹೆಸರಘಟ್ಟ ಅಥವ ಇನ್ನಾವ ಪ್ರದೇಶದಲ್ಲಾದರೂ ಕುಷ್ಠ ರೋಗಿಗಳ ಚಿಕಿತ್ಸೆ ಮತ್ತು ಅವರು ವಾಸಿಸಲು ಒಂದು ಕೇಂದ್ರವನ್ನು ಸ್ಥಾಪಿಸಬೇಕೆಂದು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ತಿಳಿದು ಬಂದಿದೆ. ಮೈಸೂರು ಜಿಲ್ಲೆಯ ಉತ್ತನಹಳ್ಳಿ, ಮಂಡ್ಯದ ಮಳವಳ್ಳಿ, ಚಿತ್ರದುರ್ಗದಲ್ಲಿ ಚಳ್ಳಕೆರೆ ಕೋಲಾರದಲ್ಲಿ ಗೋರಿಬಿದನೂರು ಗಳಲ್ಲಿ ಹೆಚ್ಚು ಕುಷ್ಠರೋಗವು ಇದೆಯೆಂದೂ ಈ ಸ್ಥಳಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದೂ ತಿಳಿಸಲಾಗಿದೆ

ಹಳ್ಳಿಗಳಿಗೆ ವಿದ್ಯುಚ್ಛಕ್ತಿ

ಮೈಸೂರು ಜಿಲ್ಲೆಯ ಬೀರವಾಳನಲ್ಲಿ ... ಜಲಾಶಯ ಮತ್ತು ಇ... ಜಯಪುರ, ಹೆಗ್ಗಡದೇವನಕೋಟೆ, ಸರಗೂರು ಮತ್ತು ಇತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಸರ್ಕಾರದವರು ೫,೧೮,೦೦೦ ರೂ ... ಮಂಜೂರು ಮಾಡಿದ್ದಾರೆ

ಕರಗದ ಉತ್ಸವ

... ರಾಜಧಾನಿಯ ಇಟ್ಟಿಗೆಗೂಡಿನಲ್ಲಿರುವ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ ಕರಗ ಮಹೋತ್ಸವವು ಈ ದಿನದಿಂದ ಪ್ರಾರಂಭವಾಗಿ ನಾಳೆ ಸಂಜೆ ೭ ಗಂಟೆಗೆ ಅರಮನೆ ಕಛೇರಿ ರಸ್ತೆ, ಸಂತೇಪೇಟೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಅಶೋಕಾ ರಸ್ತೆ ಮತ್ತು ನಜರ್‌ಬಾದ್ ಮಾರ್ಗವಾಗಿ ಉತ್ಸವವು ದೇವಸ್ಥಾನಕ್ಕೆ ಹಿಂತಿರುಗುವುದು.

ಗ್ರಾಮ ಸಮಾಜ ಸೇವೆ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನವರು ಮುಂದಿನ ತಿಂಗಳಿನಲ್ಲಿ ಮೈಸೂರು ತಾಲ್ಲೂಕು ಉದ್ಬೂರು ಗ್ರಾಮದಲ್ಲಿ ಮೂರು ವಾರಗಳ ಕಾಲ ಗ್ರಾಮ ಸೇವಾ ಸಮಾಜ ಕಾರ್ಯವನ್ನು ಕೈಗೊಳ್ಳಲಾಗುವುದು ಇದಕ್ಕಾಗಿ ಶ್ರೀಗಳಾದ ಎಸ್. ... ಶರ್ಮ ಮತ್ತು ಜಿ. ಆರ್. ನಾ... ಅವರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ. ಸೇರಲಿಚ್ಛಿಸುವವರು ... ವಿಲಾಸ ಅಗ್ರಹಾರದಲ್ಲಿ ಮಾದರಿ ... ಯಲ್ಲಿರುವ ಕಾರ್ಯಾಲಯಕ್ಕೆ ತಿಳಿಸಬೇಕೆಂದು ಕೋರಲಾಗಿದೆ

ಉಪನ್ಯಾಸ

... ರಾಜಧಾನಿಯ ವಾಣೀವಿಲಾಸ ರಸ್ತೆಯ ... ಸಂಸ್ಕೃತ ಪಾಠಶಾಲೆಯಲ್ಲಿ ಈ ... ೬-೩೦ ಗಂಟೆಗೆ ಶ್ರೀ ಎಂ. ... ಯವರು 'ಅನುಭಾವಿ ಬಸವೇಶ್ವರರು' ... ವಿಷಯವಾಗಿ ಉಪನ್ಯಾಸ ಮಾಡುವರು

... ಉಪಾಧ್ಯಾಯರುಗಳು ಸೇವಾದಳ ಶಿಕ್ಷಣ ಪಡೆಯಬಹುದು

... ಸ್ಥಾನದ ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲು ಉಪಾಧ್ಯಾಯರು ... ಕಾಂಗ್ರೆಸ್ ಸೇವಾದಳ ಶಿಕ್ಷಣ ಶಿಬಿರದಲ್ಲಿ ಈ ಬೇಸಿಗೆಯಲ್ಲಿ ಶಿಕ್ಷಣ ಪಡೆಯ... ಮ ಸರ್ಕಾರದವರು ಇಚ್ಛೆ ... ದ್ದಾರೆ

ಸಂಯುಕ್ತ ಪ್ರಾಂತ್ಯದಲ್ಲಿ ೧೦ ಸಾವಿರ ಹಾವುಗಳ ಸಾವು

ಪೂರ್ವ ಸಂಯುಕ್ತ ಪ್ರಾಂತ್ಯದ ಬಾಲಿಯ ಎಂಬ ಪ್ರದೇಶದ ೬ ಹಳ್ಳಿಗಳಲ್ಲಿ ಸಾವಿರಾರು ಹಾವುಗಳು ಸಾಯುತ್ತಿವೆಯೆಂದೂ, ಇಲ್ಲಿಯವರೆಗೆ ೧೦ ಸಾವಿರ ಹಾವುಗಳು ಸತ್ತಿರಬಹುದೆಂದೂ ಹೇಳಲಾಗಿದೆ ಯಾವುದೋ ಉಪದ್ರವದಿಂದ ಅವುಗಳು ಗಂಟುಹಾಕಿಕೊಂಡುಬಿಟ್ಟಿರುವುದನ್ನು ... ನೂರಾರು ... ಗಳು ಈ ಪ್ರದೇಶದಲ್ಲಿ ಮುತ್ತಿಕೊಂಡು ಸತ್ತ ಹಾವುಗಳನ್ನು ತಿನ್ನುತ್ತಿವೆ ಈ ಸಾವಿಗೆ ಕಾರಣವೇನೆಂಬುದನ್ನು ಕಂಡುಹಿಡಿದಿಲ್ಲ. ಮಹಾಭಾರತದ ಜನಮೇಜಯ ರಾಜನ ಸರ್ಪಯಾಗ ಕಾಲದಿಂದೀಚೆಗೆ ಇಷ್ಟುಭಾರಿ ಸಂಖ್ಯೆಯಲ್ಲಿ ಸರ್ಪಗಳ ಮರಣ ಸಂಭವಿಸಿರಲಿಲ್ಲವೆಂದು ಹೇಳಲಾಗಿದೆ

ಪಾಕೀಸ್ತಾನವೂ ರಿಪಬ್ಲಿಕ್ ಆಗುವುದೇ ?

ಭಾರತದ ಮೇಲ್ಪಂಕ್ತಿಯನ್ನನುಸರಿಸಿ ಪಾಕಿಸ್ತಾನವು ರಿಪಬ್ಲಿಕ್ ಆಗಬಹುದೆಂದು ಅದರ ರಾಜ್ಯಾಂಗ ಸಭೆಯ ಅಧ್ಯಕ್ಷರು ತಿಳಿಸಿರುತ್ತಾರೆ

ಷಾಂಗೈ ಹೊರ ಭಾಗದಲ್ಲಿ ಕಮ್ಯೂನಿಸ್ಟರು

ಚೀಣದ ಅತ್ಯಂತ ಪ್ರಮುಖ ನಗರವಾದ ಷಾಂಗೈ ಹೊರ ಭಾಗದಲ್ಲಿ ಕಮ್ಯೂನಿಸ್ಟ್ ಸೈನ್ಯಗಳು ಮುತ್ತಿಗೆ ಹಾಕಿ ಧಾಳಿಯನ್ನಾರಂಭಿಸಿವೆಯೆಂದು ಹೇಳಲಾಗಿದೆ ... ಪ್ರಾಂತ್ಯದಲ್ಲಿ ಕಮ್ಯೂನಿಸ್ಟರು ೭ ಪಟ್ಟಣಗಳನ್ನು ವಶಪಡಿಸಿಕೊಂಡಿರುತ್ತಾರೆ ೫೦೦೦ ಸರ್ಕಾರಿ ಸೈನಿಕರು ಹತರಾಗಿದ್ದಾರೆಂದೂ, ೭ ಸಾವಿರ ಸೈನಿಕರು ಕಮ್ಯೂನಿಸ್ಟರ ಕಡೆ ಸೇರಿದ್ದಾರೆಂದೂ ವರದಿಯಾಗಿದೆ

ಆಕ್ಸ್‌ಫರ್ಡಿನಲ್ಲಿ ರಾಧಾಕೃಷ್ಣನ್‌ರವರು ಖಾಯಂ ಪ್ರೊಫೆಸರ್

ಡಾ|| ಎಸ್. ರಾಧಾಕೃಷ್ಣನ್‌ರವರನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಪೌರ್ವಾತ್ಯ ಧರ್ಮಗಳ ಖಾಯಂ ಪ್ರೊಫೆಸರನ್ನಾಗಿ ನೇಮಿಸಲಾಗುವುದೆಂದು ತಿಳಿದು ಬಂದಿದೆ ೧೯೩೬ರಲ್ಲಿ ಅವರನ್ನು ತಾತ್ಕಾಲಿಕ ಪ್ರೊಫೆಸರನ್ನಾಗಿ ನೇಮಿಸಲಾಗಿತ್ತು

ಜೂನ್ ೧ ರಿಂದ ಭೂಪಾಲ್ ಭಾರತಕ್ಕೆ

ಮುಂದಿನ ತಿಂಗಳು ೧ನೇ ತಾ|| ಯಿಂದ ಭೂಪಾಲ್ ಸಂಸ್ಥಾನದ ಆಡಳಿತವನ್ನು ಭಾರತ ಸರ್ಕಾರದವರು ವಹಿಸಿಕೊಳ್ಳುವರು

ಭಾರತದಲ್ಲಿ ವಿದೇಶಿಯರಿಗೆ ವಿದ್ಯಾರ್ಥಿ ವೇತನ

ಏಷ್ಯ ಮತ್ತು ಆಫ್ರಿಕಾ ರಾಷ್ಟ್ರಗಳ ವಿದ್ಯಾರ್ಥಿಗಳು ಭಾರತಕ್ಕೆ ಬಂದು ವಿದ್ಯಾಭ್ಯಾಸ ಮಾಡಲು ಅನುಕೂಲವಾಗಿರುವಂತೆ ೫೦ ಜನರಿಗೆ ವೇತನ ಕೊಡಲು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ. ಪರದೇಶದಲ್ಲಿರುವ ೩೦ ಜನ ಭಾರತೀಯರಿಗೂ ವೇತನ ಕೊಡಲಾಗುವುದು

ಚೀನಾದಲ್ಲಿ ಪುನಃ ಸಂಧಾನವೇ ?

ಕಮ್ಯೂನಿಸ್ಟರೊಡನೆ ಶಾಂತಿ ಮಾಡಿಕೊಳ್ಳಲು ಚೀಣದ ಅಧ್ಯಕ್ಷ ಲೀ ಯವರು ಪುನಃ ಸಂಧಾನದ ಮಾತುಕತೆ ನಡೆಸುವರೆಂದು ತಿಳಿದುಬಂದಿದೆ ಚೀಣಾ ಸರ್ಕಾರಕ್ಕೆ ಅಮೆರಿಕನ್ನ ವಿಶೇಷ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದೆಯೆಂದೂ, ಕಮ್ಯೂನಿಸ್ಟರಿಗೂ ಸಹ ಅಮೆರಿಕದಿಂದ ಶಸ್ತ್ರಗಳು ದೊರಗುತ್ತಿವೆಯೆಂದೂ ಹೇಳಲಾಗಿದೆ ಸರ್ಕಾರಿ ... ೩೦ ಕೋಟಿ ಡಾಲರುಗಳನ್ನು ಟ್ರೂಮನ್ ... ಕ್ಕೆ ನೀಡಲಾಗಿದೆಯೆಂದೂ ವರದಿಯಾಗಿದೆ

ಮೈಸೂರಿನ ಬಕ್ಕ ಪತ್ರಿಕಾ ಏಜೆಂಟರ ದಸ್ತಗಿರಿ

ವಿದೇಶೀ ಪತ್ರಿಕೆಗಳ ಏಜೆಂಟರೆಂದು ಹೇಳಿಕೊಂಡು ಮುಂಬಯಿನಲ್ಲಿ ೧೫,೦೦೦ ರೂಪಾಯಿಗಳ ಬ್ಯಾಂಕಿನ ಚೆಕ್ಕನ್ನು ... ಮಾಡಿದರೆಂದು ... ಮೋಸ ... ಮೈಸೂರಿನ ಶ್ರೀ ... ಎಂಬುವರನ್ನು ಮುಂಬಯಿನ ಪೊಲೀಸರು ನಿನ್ನೆ ದಿನ ದಸ್ತಗಿರಿ ಮಾಡಿರುತ್ತಾರೆ ಇವರು ಮೈಸೂರು ಸರ್ಕಾರದ ಉನ್ನತಾಧಿಕಾರಿಗಳಾದ ಶ್ರೀ ... ರವರ ... ಎಂದು ತಿಳಿದುಬಂದಿದೆ

ಪರೀಕ್ಷೆಯಲ್ಲಿ ಕಾಪಿ ಮಾಡಲು ಬಂದೂಕದ ಸಹಾಯ

ಲಾಹೋರ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯೊಬ್ಬನು ಪರೀಕ್ಷಾ ಭವನಕ್ಕೆ ಒಂದು ಬಂದೂಕ ಮತ್ತು ಎರಡು ಬಾಕುಗಳನ್ನು ತೆಗೆದುಕೊಂಡು ಹೋಗಿ ಮೇಜಿನ ಮೇಲೆ ಅವುಗಳನ್ನು ಇಟ್ಟುಕೊಂಡು, ತಾನು ಕಾಪಿ ಮಾಡುವುದಾಗಿ ಮೊದಲೇ ಎಚ್ಚರಿಕೆ ಕೊಟ್ಟು, ಮನೆಯಿಂದ ಬರೆದುಕೊಂಡುಬಂದಿದ್ದ ಉತ್ತರಗಳನ್ನೇ ಬರೆದನೆಂದು ಹೇಳಲಾಗಿದೆ. ಈಗ ವಿಶ್ವವಿದ್ಯಾಲಯದವರು ಆತನ ಮೇಲೆ ಕ್ರಮ ತೆಗೆದುಕೊಂಡಿರುತ್ತಾರೆ

೧೦ ಬಾರಿ ಮೆಟ್ರಿಕ್ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿ

ಸಿಲೆಟ್ಟಿನ ೩೦ ವರ್ಷದ ವಿದ್ಯಾರ್ಥಿಯೊಬ್ಬನು ಸ್ಕೂಲ್ ಫೈನಲ್ ಪರೀಕ್ಷೆಗೆ ೯ ಬಾರಿ ಕುಳಿತು ತೇರ್ಗಡೆಯಾಗದಿದ್ದರೂ, ನಿರಾಶೆಗೊಳ್ಳದೆ ಈ ಸಾರಿಯೂ ಕುಳಿತಿದ್ದಾನೆಂದು ವರದಿಯಾಗಿದೆ

ಮುಂಬಾಯಿನಲ್ಲಿ ಅತ್ಯಂತ ಎತ್ತರವಾದ ಭವನ

೧೫ ಅಡಿ ಎತ್ತರದ ೨೨ ಅಂತಸ್ತಿನ ಭವನವೊಂದನ್ನು ಮುಂಬಾಯಿನಲ್ಲಿ ಕಟ್ಟಲಾಗುತ್ತಿದೆಯೆಂದೂ, ಇದು ನಗರದಲ್ಲೇ ಅತ್ಯಂತ ಎತ್ತರವಾದ ಭವನವೆಂದೂ, ಅದಕ್ಕೆ ೧೪ ಲಕ್ಷರೂ ಖರ್ಚಾಗುವುದೆಂದೂ ಹೇಳಲಾಗಿದೆ.

ಇನ್ನು ಆರು ತಿಂಗಳಿನಲ್ಲಿ ಭಾರತವು ರಿಪಬ್ಲಿಕ್

ಇನ್ನು ನಾಲ್ಕು, ಐದು ಅಥವ ಆರು ತಿಂಗಳೊಳಗಾಗಿ ಭಾರತವು ರಿಪಬ್ಲಿಕ್ ಎಂದು ಘೋಷಿಸಲಾಗುವುದೆಂದು ಪಂಡಿತ ನೆಹರೂರವರು ತಿಳಿಸಿರುತ್ತಾರೆ.

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉರ್ದು ಬದಲು ಹಿಂದೂಸ್ಥಾನಿ

ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಬೋಧಕ ಭಾಷೆಯಾಗಿದ್ದ ಉರ್ದುವನ್ನು ತೆಗೆದು ಹಾಕಿ, ಹಿಂದೂಸ್ಥಾನಿಯನ್ನು ಜಾರಿಗೆ ತರಲಾಗಿದೆಯೆಂದೂ, ಪರ್ಷಿಯನ್ ಮತ್ತು ದೇವನಾಗರಿಗಳ ಲಿಪಿ ಜಾರಿಗೆ ಬರುವುದೆಂದೂ ಹೇಳಲಾಗಿದೆ

ದಿವ್ಯ ಜೀವನ

ದಿವ್ಯ ಜೀವನ ಸಂಘದ ಸ್ಥಾಪಕರಾದ ಹೃಷಿಕೇಶದ ಶ್ರೀ ಸ್ವಾಮಿ ಶಿವಾನಂದ ಸರಸ್ವತಿಗಳ ಅಮೂಲ್ಯ ಬೋಧನೆಗಳನ್ನು ಕನ್ನಡಿಗರಿಗೆ ... ಉದ್ದೇಶದಿಂದ ಬೆಂಗಳೂರು, ... ಮಂದಿರದಿಂದ ಪ್ರಕಟವಾಗಿರುವ 'ದಿವ್ಯ ಜೀವನ' ಎಂಬ ಕನ್ನಡ ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ ವಾರ್ಷಿಕ ಚಂದಾ ೩ ರೂ

ಜಿಲ್ಲಾ ಸಮ್ಮೇಳನ

ಮೈಸೂರು ಜಿಲ್ಲಾ ಸಮ್ಮೇಳನವು ಇದೇ ೧೦ ನೇ ತಾ|| ಮಂಗಳವಾರ ಮಧ್ಯಾಹ್ನ ... ಗಂಟೆಗೆ ... ಹಾಲಿನಲ್ಲಿ ವಿದ್ವಾಂಸರಾದ ಶ್ರೀ ಡಿ. ... ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಬರ್ಲಿನ್ ಪೋಲಿಸ ದಿಗ್ಬಂಧನ ತೆಗೆಯಲು ರಷ್ಯದ ಒಪ್ಪಿಗೆ

ಜರ್ಮನಿಯ ರಾಜಧಾನಿಯಾದ ಬರ್ಲಿನ್ ನಗರದ ಮೇಲೆ ಕಳೆದ ೧೦ ತಿಂಗಳಿನಿಂದಲೂ ಹಾಕಿದ್ದ ದಿಗ್ಬಂಧನವನ್ನು ತೆಗೆಯ ಹಾಕಲು ರಷ್ಯವು ಒಪ್ಪಿದೆಯೆಂದೂ, ಇನ್ನೊಂದು ವಾರದಲ್ಲಿ ಅದನ್ನು ಜಾರಿಗೆ ತರಬಹುದೆಂದೂ ಗೊತ್ತಾಗಿದೆ. ಜರ್ಮನಿಯ ಬಗ್ಗೆ ಚರ್ಚಿಸಲು ಪ್ರರಾಷ್ಟ್ರಗಳ ಸಭೆಯೊಂದು ಇದೇ ೨೩ನೇ ತಾ|| ಪ್ಯಾರಿಸ್ಸಿನಲ್ಲಿ ಸೇರುವುದು.

ಆಲ್ಪ್ಸ್ ಪರ್ವತಕ್ಕೆ ಪಂಡಿತ ನೆಹರೂ

ಪಂಡಿತ ನೆಹರೂರವರು ಸ್ವಿಟ್ಜರ್ಲೆಂಡಿನಲ್ಲಿ ವಾಪಸಿನಿಂದ ಕರೆದುಕೊಂಡಿದ್ದ ಆಲ್ಪ್ಸ್ ಪರ್ವತದ ೧೩ ಸಾವಿರ ಅಡಿ ಎತ್ತರದಲ್ಲಿರುವ ಜಂಗ್‌ಫ್ರಾ ಎಂಬ ಉನ್ನತ ಶಿಖರವನ್ನು ವಿಮಾನದಲ್ಲಿ ಹೋಗಿ ನೋಡಿದರು.

ತಿರುವಾಂಕೂರಿನಲ್ಲಿ ಕನಿಷ್ಠ ಸಂಬಳ ೨೦ ರೂ.

ತಿರುವಾಂಕೂರು ಸರ್ಕಾರಿ ನೌಕರರ ಕನಿಷ್ಠ ಸಂಬಳವನ್ನು ೯ ರಿಂದ ೨೦ ರೂ ಗೆ ಏರಿಸಲಾಗಿದೆ. ತುಟ್ಟಿ ಭತ್ಯವನ್ನೂ ೨೦ ರೂ ಗೆ ಹೆಚ್ಚಿಸಲಾಗಿದೆ

ವಿಮಾನ ಅಪಘಾತದಲ್ಲಿ ಆಟಗಾರರ ಮರಣ

ಇಟಲಿಯಲ್ಲಿ ವಿಮಾನವೊಂದು ಅಪಘಾತಕ್ಕೆ ಒಳಗಾಗಿ, ಅದರಲ್ಲಿ ಪ್ರಯಾಣ ಮಾಡುತ್ತಿದ್ದ ಫುಟ್‌ಬಾಲ್ ಆಟಗಾರರೇ ಅಧಿಯಾಗಿ ೩೧ ಜನರು ಮರಣಹೊಂದಿದರು

ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಜಂಟಿ ಸಭೆ

ಮೈಸೂರು ಶಾಸನ ಮತ್ತು ಪ್ರಜಾ ಪ್ರತಿನಿಧಿ ಸಭೆಗಳ ಕಾಂಗ್ರೆಸ್ ಪಕ್ಷದ ಸದಸ್ಯರುಗಳ ಜಂಟಿ ಸಭೆಯು ಇದೇ ತಿಂಗಳ ಕೊನೆಯ ವಾರದಲ್ಲಿ ನಡೆದು ಅದರ ನಾಯಕರ ಚುನಾವಣೆಯು ಆಗುವದೆಂದೂ ಮತ್ತು ಇತರ ಪ್ರಾಂತ್ಯದಲ್ಲಿರುವಂತೆ ಚುನಾಯಿತ ನಾಯಕರೇ ಮಂತ್ರಿ ಮಂಡಲದ ರಚನೆ ಮಾಡಬಹುದೆಂದೂ ತಿಳಿದು ಬಂದಿದೆ

ಶ್ರೀ

ಅರಮನೆ ಜಪದ ಕಟ್ಟೆ ಮಠ

ಮೈಸೂರು

ಆಹ್ವಾನ

ಮೇಲ್ಕಂಡ ಮಠದ ವಿವಾದಾಸ್ಪದವಾಗಿದ್ದ ಉತ್ತರಾಧಿಕಾರದ ವಿಷಯದಲ್ಲಿ ಮೈಸೂರು ಒಡೆಯರ್‌ರವರ ವೀರಶೈವ ಮಹಾಜನಗಳಿಂದ ೧೯-೪-೪೯ರಲ್ಲಿ ನಿರ್ಣಯಿಸಲ್ಪಟ್ಟಿದ್ದ ಕಮಿಟಿಯು ಮಾಡಿರತಕ್ಕ ವರದಿಯನ್ನು ಪರ್ಯಾಲೋಚಿಸುವ ಬಗ್ಗೆ ೧೯೪೯ನೇ ಇಸವಿ ಮೇ ತಾರೀಖು ೮ನೇ ಭಾನುವಾರ ಸಾಯಂಕಾಲ ೪ ಗಂಟೆಗೆ ಸರಿಯಾಗಿ ಮೇಲ್ಕಂಡ ಮಠದಲ್ಲಿ ಮೈಸೂರು ಒಡೆಯರ್‌ರವರ ವೀರಶೈವ ಮಹಾಜನಗಳ ಸಭೆಯು ಸೇರುವುದರಿಂದ ಆ ಕಾಲಕ್ಕೆ ಸರಿಯಾಗಿ ವೀರಶೈವ ಮಹಾಜನಗಳು ದಯಮಾಡಿಸಬೇಕಾಗಿ ಪ್ರಾರ್ಥನೆ

ಎಂ. ಎಲ್. ನಾಗಣ್ಣ.

ಮಗನಲಾಲ್ ಷಾ

ಬ್ರಸೆಲ್ಸಿನಲ್ಲಿ ಇದೇ ೧೭ನೇ ತಾ|| ನಡೆಯಲಿರುವ ಅಂತರ ರಾಷ್ಟ್ರೀಯ ಸಂಚಾರ ಮಾರ್ಗಗಳ ಸಮ್ಮೇಳನಕ್ಕೆ ಶ್ರೀ ಮಗನಲಾಲ್ ಹೀರಾಚಂದ್ ಷಾರವರನ್ನು ಪ್ರತಿನಿಧಿಯನ್ನಾಗಿ ಭಾರತ ಸರ್ಕಾರದವರು ನೇಮಿಸಿದ್ದಾರೆ. ಅವರು ೧೩ನೇ ತಾ|| ಬೊಂಬಾಯಿನಿಂದ ಅಲ್ಲಿಗೆ ಪ್ರಯಾಣ ಬೆಳೆಸುವರು. ಇಂತಹ ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ಕರ್ನಾಟಕದವರನ್ನು ಚುನಾಯಿಸಿರುವುದು ಇದೇ ಮೊದಲು. ಶ್ರೀ ಷಾ ರವರು ಪ್ರಮುಖ ಕಾಂಗ್ರೆಸ್ ನಾಯಕರೂ ಮತ್ತು ಬೊಂಬಾಯಿನ ಪ್ರಮುಖ ಇಂಜನಿಯರಿಂಗ್ ಕಂಪೆನಿಯ ಡೆಪ್ಯುಟಿ ಮ್ಯಾನೇಜರೂ ಆಗಿದ್ದಾರೆ

ಬಿರುಗಾಳಿಯಿಂದ ೫೦೦೦೦ ಜನರು ನಿರ್ಗತಿಕರು

ಬರ್ದ್‌ವಾನ್ ಜಿಲ್ಲೆಯಲ್ಲಿ ಕಳೆದ ಸೋಮವಾರ ಪ್ರಚಂಡ ಬಿರುಗಾಳಿ ಎದ್ದು, ಅನೇಕ ಮನೆಗಳು ನಾಶವಾಗಿ, ವಿಶೇಷ ನಷ್ಟ ಉಂಟಾಗಿದೆಯೆಂದೂ, ೫೦ ಸಾವಿರ ಜನರು ನಿರ್ಗತಿಕರಾಗಿದ್ದಾರೆಂದೂ ವರದಿಯಾಗಿದೆ

ತುಂಬಸೋಗೆಯಲ್ಲಿ ಹೈಸ್ಕೂಲು

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಹೈಸ್ಕೂಲು ಸ್ಥಾಪಿಸುವ ವಿಚಾರದಲ್ಲಿ ರಚಿಸಲಾಗಿದ್ದ ಸಮಿತಿಯ ಸಭೆಯು ಶ್ರೀ ಹೆಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸರಗೂರಿನಲ್ಲಿ ಮೊನ್ನೆ ದಿನ ನಡೆಯಿತು. ದೀರ್ಘ ಚರ್ಚೆಯಾದನಂತರ ತಾಲ್ಲೂಕಿನ ಎಲ್ಲ ಪ್ರಾಂತ್ಯದ ಜನರಿಗೂ ಅನುಕೂಲವಾಗುವಂತೆ ತುಂಬಸೋಗೆ ಬಳಿ ರೆಸಿಡೆನ್ಸಿಯಲ್ ಹೈಸ್ಕೂಲನ್ನು ಈ ವರ್ಷವೇ ಸ್ಥಾಪಿಸಬೇಕೆಂದೂ, ಅದಕ್ಕಾಗಿ ೫೪ ಸಾವಿರ ರೂ ಚಂದಾ ವಸೂಲ್ಮಾಡಬೇಕೆಂದೂ ತೀರ್ಮಾನಿಸಲಾಯಿತು. ನೂತನ ಕಟ್ಟಡವು ಆಗುವ ವರೆಗೂ ಹೈಸ್ಕೂಲನ್ನು ಸರಗೂರಿನಲ್ಲಿ ನಡೆಸಬೇಕೆಂದೂ ನಿರ್ಧರಿಸಲಾಯಿತು.

ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರ ಮೇಲೆ ಕ್ರಮವೇ?

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಸಂಪ್ರದಾಯಕ್ಕೆ ವಿರುದ್ಧವಾಗಿ ಅಧ್ಯಕ್ಷರಾದ ಶ್ರೀ ಶಾಂತರಾಜ್‌ರವರು ಸ್ವೇಚ್ಛೆಯಾಗಿ ರಾಷ್ಟ್ರಪತಿ ಡಾ|| ಪಟ್ಟಾಭಿ ಸೀತಾರಾಮಯ್ಯನವರಿಗೆ ಬಿನ್ನವತ್ತಳೆಯನ್ನು ಇಂಗ್ಲೀಷಿನಲ್ಲಿ ಅರ್ಪಿಸಿದುದಕ್ಕಾಗಿ ಮಹಾಜನರಲ್ಲಿ ಕ್ಷಮೆ ಬೇಡಿ, ಕಾರ್ಯಕಾರೀ ಸಮಿತಿಯವರು ಅಧ್ಯಕ್ಷರ ಮೇಲೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸೂಚಿಸಿ ಸಂಘದ ಸದಸ್ಯರಾದ ಶ್ರೀ ಎ. ವೆಂಕಟಪ್ಪ ಮತ್ತು ಇತರ ೫ ಮಂದಿ ಒಂದು ಪತ್ರ ಬರೆದಿದ್ದಾರೆ

೧೪ ಜನ ಮಹಿಳೆಯರು ಅಗ್ನಿಗೆ ಆಹುತಿ

ಬ್ರಿಟನ್ನಿಗೆ ಸೇರಿದ ಗ್ಲಾಸ್‌ಗೋದಲ್ಲಿ ಮೂರು ಅಂತಸ್ತಿನ ಭವನಕ್ಕೆ ಬೆಂಕಿಬಿದ್ದು ಉಡುಪು ತಯಾರಿಸುವ ಕೋಣೆಯೊಳಗೆ ಕೆಲಸ ಮಾಡುತ್ತಿದ್ದ ೧೪ ಜನರು ಅಗ್ನಿಗೆ ಆಹುತಿಯಾದರು. ೫೦ ಅಡಿ ಕೆಳಕ್ಕೆ ಇಬ್ಬರು ಹಾರಿ ಮೃತಪಟ್ಟರು. ಮೂರು ಜನರನ್ನು ಮಾತ್ರ ರಕ್ಷಿಸಲಾಯಿತು.

ದೆಹಲಿ ಮತ್ತು ಬೊಂಬಾಯಿಯಲ್ಲಿ ಕ್ರೀಡಾ ಸ್ಟೇಡಿಯಂ

ಪಂಡಿತ ನೆಹರೂರವರ ಹೆಸರಿನಲ್ಲಿ ಕ್ರೀಡಾ ಸ್ಟೇಡಿಯಂನನ್ನು ದೆಹಲಿಯಲ್ಲಿ ಕಟ್ಟಬೇಕೆಂದೂ, ೧೯೫೦ ನೇ ನವಂಬರ್ ತಿಂಗಳಲ್ಲಿ ಜರುಗುವ ಏಷ್ಯಾ ರಾಷ್ಟ್ರಗಳ ಒಲಿಂಪಿಕ್ ಕ್ರೀಡಾ ಸ್ಪರ್ಧೆಗಳನ್ನು ನೂತನ ಸ್ಟೇಡಿಯಂನಲ್ಲೇ ನಡೆಸಬೇಕೆಂದೂ ಅಖಿಲ ಭಾರತ ರಾಷ್ಟ್ರೀಯ ಕ್ರೀಡಾ ಕ್ಲಬ್ಬಿನವರು ನಿರ್ಧರಿಸಿದ್ದಾರೆ. ಕ್ರಿಕೆಟ್, ಫುಟ್‌ಬಾಲ್, ಹಾಕಿ, ಟೆನ್ನಿಸ್, ಈಜಾಟ, ಸೈಕಲಿಂಗ್, ಕುಸ್ತಿ ಮುಂತಾದ ಕ್ರೀಡೆಗಳಿಗೆ ಈ ಸ್ಟೇಡಿಯಂನಲ್ಲಿ ಸೌಲಭ್ಯ ಕಲ್ಪಿಸಲಾಗುವುದು. ಬೊಂಬಾಯಿನಲ್ಲೂ ಸರ್ದಾರ್ ಪಟೇಲರ ನಾಮಾಂಕಿತದಲ್ಲಿ ಮತ್ತೊಂದು ಕ್ರೀಡಾ ಸ್ಟೇಡಿಯಂ ನಿರ್ಮಿಸಬೇಕೆಂದೂ ತೀರ್ಮಾನಿಸಲಾಗಿದೆ.

೧೨ ಗಂಟೆಗಳ ಸಮಾಧಿ

ಕಟಕ್ಕಿನ ಬಾಲಸೋರ್‌ದಲ್ಲಿ ಸಾಧುವೊಬ್ಬನು ೧೨ ಗಂಟೆ ಕಾಲ ಗುಂಡಿಯ ಸಮಾಧಿಯಲ್ಲಿದ್ದುದನ್ನು ಜನ ನೋಡಿದರು

ಕ್ಯಾಲೆಂಡರ್ ಸ್ವೀಕಾರ

ಬೆಂಗಳೂರು ಸೋಪ್ ಫ್ಯಾಕ್ಟರಿಯವರು ಕಳುಹಿಸಿದ ಸುಂದರವಾದ ೧೯೪೯ನೇ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

Morning Shows at
CHAMUNDESHWARI TALKIES
From 30-4-49 For 3 days
at 10—30 a.m.
EAGLE LION's a Two Cities Film
HUNGRY HILL
(ಹಂಗ್ರಿ ಹಿಲ್)
-:Starring:
Margaret Lockwood,
Dennis Price

ಪ್ರಭುದೇವಾ ಟಾಕೀಸಿನಲ್ಲಿ
6-5-49ನೇ ಶುಕ್ರವಾರದಿಂದ
ಅಮೋಘವಾದ **2ನೇ ವಾರ**
ಪ್ರತಿ ದಿನ ೩ ಆಟಗಳು
- ಮಿಸ್ ಮಾಲಿನಿ -
ಪಾತ್ರ:- ಪುಷ್ಪವಲ್ಲಿ, ಸುಂದರಿ ಬಾಯಿ, ಕೊತ್ತಮಂಗಲಂ ಸುಬ್ಬು, ಎಲ್. ನಾರಾಯಣ ರಾವ್ ಮುಂತಾದವರು.
ಮದರಾಸಿನಲ್ಲಿ ೩೩ ವಾರ ನಡೆದಿರುವ ಜೆಮಿನಿಯವರ ಅತ್ಯುತ್ತಮ ಸಾಮಾಜಿಕ ಚಿತ್ರ

ಲಕ್ಷ್ಮೀ ಥಿಯೇಟರ್
6-5-49ರಿಂದ ಜನಭರಿತ **2ನೆಯ ವಾರ**
ಪ್ರತಿ ದಿನ 3 ಪ್ರದರ್ಶನ ಮಧ್ಯಾಹ್ನ 2-45, 6-30 ಮತ್ತು 9-45 ಕ್ಕೆ
ಸಾವಿರಾರು ಜನರು ಪದೇ ಪದೇ ನೋಡಿ ಆನಂದಪಡುತ್ತಿರುವ ಹಾಸ್ಯಮಯ ತಮಿಳು ಚಿತ್ರ
★ ನಲ್ಲ ತಂಬಿ ★
ಭೂಮಿಕೆ:-ಭಾನುಮತಿ, N.S. ಕೃಷ್ಣನ್, ಮತ್ತು T.A. ಮಧುರಂ

-:ಸ್ಪೆಶಲ್ ತಯಾರಿ:-
ನಮ್ಮ ಸ್ವಂತ ಮಗ್ಗದಿಂದ ಮೈಸೂರು ಸಿಲ್ಕ್ ಕ್ರೇಪ್, ಬೆಂಗಳೂರು, ಧರ್ಮಾವರಂ ಅಂಚಿನ ಸೀರೆಗಳು ಗ್ಯಾರಂಟಿಯಾಗಿ ಉತ್ತಮವಾದ ... ದಯವಿಟ್ಟು ಇಂದೇ ಭೇಟಿ ಕೊಡಿ.
ಗುರುದೇವಾ ಹಾಲ್
ಶಿವರಾಂಪೇಟೆ, ಮೈಸೂರು.

ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಪ್ರದರ್ಶನಗಳು
6-5-49 ರಿಂದ 4 ದಿನಗಳು ಮಾತ್ರ
ಆಶ್ಚರ್ಯ ಚಿತ್ರ.
ದಿ ನೇಕೆಡ್ ಸಿಟಿ
ಪಾತ್ರ:- ಬ್ಯಾರಿ ಫಿಟ್ಜ್ ಗೆರಾಲ್ಡ್ ಮತ್ತು ಡೊರೊಥಿ ಹಾರ್ಟ್
ಬೆಳಗಿನ ಪ್ರದರ್ಶನ ೧೦-೩೦ ಕ್ಕೆ ೭ನೇ ಶನಿವಾರ ಮತ್ತು ೮ನೇ ಭಾನುವಾರ ಮಾತ್ರ
ಕಾಲ್ ಆಫ್ ದಿ ವೈಲ್ಡ್

ಕುಷ್ಕಿ ಜಮೀನು ಬಿಕರಿಗೆ ಸಿದ್ಧವಾಗಿದೆ.
ವಿವರಗಳು—

ಹಳ್ಳಿ	ಸ ನಂ.	ವಿಸ್ತೀರ್ಣ ಎ ಗುಂ
೧. ಹೂಟಗಳ್ಳಿ	೬೭	[illegible]
೨ ಬೆಳವಾಡಿ	೭೯	[illegible]
	೮೦	[illegible]
	೩೧	[illegible]
೩ ಬಸವನ ಹಳ್ಳಿ	೧೧	[illegible]
೪	೧೨	[illegible]
೫	೧೬	[illegible]

ಈ ಕೆಳಗಿನ ವಿಳಾಸಕ್ಕೆ ವಿವರಗಳಿಗೆ ಬರೆಯಿರಿ.- ಎಸ್. ಕೆ. ರಾಜಾರಾಮನ್, ಮುನಿಮಂದಿರಂ. ನಾಲ್ಕನೆ ಮೇನ್ ರಸ್ತೆ, ಒಂಟಿಕೊಪ್ಪಲು ಪೋಸ್ಟ್, ಮೈಸೂರು.

Edited, printed, and Published by A.R. Nagarajan at the Sadhvi Press, D. Subbiah Road, Mys.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಚಿಕೆ ೭] ಶನಿವಾರ ೭-೭-೫೧ [ಸಂಪುಟ ೨೩೪

ಮಂತ್ರಿ ಮಂಡಲದಲ್ಲಿ ಬದಲಾವಣೆ ಇಲ್ಲ

ಗಾಂಧಿ ಆಶ್ರಮಗಳು

ಈ ವರ್ಷ ಭಾರತದಲ್ಲಿ ನಡೆಯಲಿರುವ ಪ್ರಪಂಚದ ಶಾಂತಿವಾದಿಗಳ ಸಭೆಗೆ ಸಮರ್ಪಿಸುವ ಸಲುವಾಗಿ ಅ॥ಭಾ॥ ಕಾಂಗ್ರೆಸ್ ಸಮಿತಿಯು ಪ್ರಾಂತಿಯ ಕಾಂಗ್ರೆಸ್ ಸಮಿತಿಗಳಿಗೆ ಒಂದು ಸೂಚನೆ ಕಳುಹಿಸಿ, ದೇಶದಲ್ಲಿ ಗಾಂಧೀಜಿಯವರ ಧ್ಯೇಯಗಳನ್ನು ಅನುಸರಣೆ ಮಾಡಿಕೊಂಡು ಬರುತ್ತಿರುವ ಆಶ್ರಮಗಳು ಸ್ಥಳ, ಸಂಖ್ಯೆ ಮುಂತಾದವನ್ನು ತಿಳಿಸಬೇಕೆಂದು ಕೋರಿದೆ.

ಒಲೆ ಹೊತ್ತಿಸಲು ಹೋದಾಗ ಮನೆ ಹತ್ತಿ ಉರಿಯಿತು

ಅಹಮದಾಬಾದಿನ ಹತ್ತಿರ ಇರುವ ಬನ್ನಾದಿನ ಮನೆಯೊಂದರಲ್ಲಿ ಅಗ್ಗಿಷ್ಟಿಗೆ ಹೊತ್ತಿಸಲು ಹೋದಾಗ ಮನೆಗೆ ಬೆಂಕಿ ತಗುಲಿ ಮನೆಯಲ್ಲಿದ್ದ ಆರು ಜನರ ಪೈಕಿ ಒಬ್ಬಳು ಮಾತ್ರ ಉಳಿದ ಸಂಗತಿ ಮೊನ್ನೆ ದು ತಿಳಿದುಬಂದಿದೆ

ರಾಮಸ್ವಾಮಿ ನಾಯಕರಿಗೆ ರಾಜಾಜಿ ಭೇಟಿ

ರಾಜಾಜಿಯವರು ತಿರುವಣ್ಣಾಮಲೆಗೆ ಭೇಟಿ ಕೊಡುವ ಕಾಲದಲ್ಲಿ ತಮ್ಮನ್ನು ಕಾಣಲು ಮದ್ರಾಸಿನ ದ್ರಾವಿಡ ಸಂಘದ ನಾಯಕರಾದ ಇ. ವಿ ರಾಮಸ್ವಾಮಿ ನಾಯಕರಿಗೆ ಆಹ್ವಾನವಿತ್ತಿದ್ದಾರೆಂದು ತಿಳಿದು ಬಂದಿದೆ

ಮದರಾಸ್ ಸಚಿವರುಗಳ ಮೇಲೆ ಆಪಾದನೆ

ಮದರಾಸಿನ ಕೆಲವು ಮಾಜಿ ಸಚಿವರುಗಳ ಮೇಲೆ ಬಂದಿರುವ ಆಪಾದನೆಗಳ ಬಗ್ಗೆ ಸಭ್ಯದಲ್ಲಿಯೇ ವಿಚಾರಣೆ ನಡೆಸಲಾಗುವದೆಂದು ರಾಷ್ಟ್ರಪತಿ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿದ್ದಾರೆ

ಹರಿಕಥೆ

ರಾಜಧಾನಿಯ ಹಳ್ಳದ ಕೇರಿಯಲ್ಲಿರುವ ಒಡೆಯಸ್ವಾಮಿ ದೇವಸ್ಥಾನದ ಶ್ರೀ ಪ್ರಸನ್ನನವರ ಮನೆಯಲ್ಲಿ ಇದೇ ೧೩ನೇ [illegible] ಸಿದ ಶ್ರೀಮತಿ ಟಿ ಕೆ ವೇಣು [illegible]ಲದಾಸರಿಂದ ಹರಿಕಥಾ ಕಾಲಕ್ಷೇಪ ನಡೆಯುತ್ತದೆ

ಕೃಷ್ಣರಾಜೇಂದ್ರ ಆಸ್ಪತ್ರೆಯ ವೈದ್ಯರ ವರ್ತನೆ

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಒಂದೆರಡು ಡಾಕ್ಟರುಗಳ ವರ್ತನೆ [illegible]ಹಿಸಲು ಸಾಧ್ಯವಿಲ್ಲದ್ದಾಗಿದೆ ಮಾ[illegible] ದ ಹೆಂಗಸರನ್ನು ಸಹ ಅತ್ಯಂತ ಅವಮಾನಕರವಾಗಿಯೂ, ಹೀನಾಯವಾಗಿಯೂ ಕಂಡಿರುವ ನಿದರ್ಶನವಿದೆ ಈ ವಿಷಯವನ್ನು ಮೆಡಿಕಲ್ ಆಫೀಸರಿಗೆ ೨-೭-೫೧ ರ ಪತ್ರದಲ್ಲಿ ತಿಳಿಸಿರುತ್ತೇವೆ ಸೂಕ್ತವಾದ ವಿಚಾರಣೆ ನಡೆಸುವುದಾಗಿ ಭರವಸೆ ಕೊಟ್ಟಿದ್ದಾರೆ ರಾಜಧಾನಿಯಾದ ಮತ್ತು [illegible] ಮಹಾರಾಜರಿರತಕ್ಕ ಮೈಸೂರು [illegible]ಯಲ್ಲಿ ಈ ಡಾಕ್ಟರ ದುರ್ವರ್ತನೆ [illegible] ತಡೆಗಟ್ಟಬೇಕಾದ್ದು ಅಧಿಕಾರಿಗಳ ಕರ್ತವ್ಯವಾಗಿದೆ ರೋಗಿಗಳಿಗೆ [illegible] ಮಾತಾಡುವುದಕ್ಕೆ ಬದಲಾಗಿ [illegible]ವುದು, ಹೀನವಾದ ಮಾತಾಡು[illegible]ರವವಲ್ಲ ಕ್ರಮವಾದ ವಿಚಾರಣೆ [illegible] ಇನ್ನು ಮುಂದೆ ಹೀಗೆ ನಡೆಯು[illegible] ಸಂಬಂಧಪಟ್ಟ ಅಧಿಕಾರಿಗಳಿಗೆ [illegible]ಬಸ್ತು ಮಾಡಬೇಕಾಗಿ[illegible]ಾಗಿದೆ

ನೊಂದವರು.

ಮಂತ್ರಿ ಮಂಡಲದಲ್ಲಿ ಬದಲಾವಣೆ ಇಲ್ಲ

ಸ್ವಂ ಸು ವರದಿ] ಬೆಂಗಳೂರು ೭

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಜಂಟಿ ಸಭೆಯು ಸೇರಿ ನೂತನ ನಾಯಕರ ಚುನಾವಣೆಯು ನಡೆಯುವುದೆಂದೂ, ಈಗಿನ ಮಂತ್ರಿಮಂಡಲವು ರದ್ದಾಗಿ, ನಾಯಕರು ಹೊಸ ಮಂತ್ರಿ ಮಂಡಲವನ್ನು ರಚಿಸುವರೆಂದೂ ಪ್ರಕಟವಾಗಿರುವ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದು ತಿಳಿದು ಬಂದಿದೆ ಶ್ರೀಮನ್ಮಹಾರಾಜರವರಿಗೂ ಮತ್ತು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಗೂ ಆದ ಒಪ್ಪಂದದ ಪ್ರಕಾರ ಈಗಿನ ಮಂತ್ರಿ ಮಂಡಲವು ರಚಿಸಲ್ಪಟ್ಟಿದೆಯೆಂದೂ, ಆದುದರಿಂದ ಈಗ ಅದರಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲವೆಂದೂ ಖಚಿತವಾಗಿ ಹೇಳಲಾಗಿದೆ ಆದರೆ ಪ್ರ॥ಪ್ರ॥ ಸಭೆಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಚುನಾಯಿಸುವ ಬಗ್ಗೆ ಸಧ್ಯದಲ್ಲಿಯೇ ತಕ್ಕ ಏರ್ಪಾಡು ಮಾಡಲಾಗುವುದೆಂದು ಗೊತ್ತಾಗಿದೆ

ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನ

ಇದೇ ೧೪ ನೇ ತಾ॥ ಇಲ್ಲಿಗೆ ಆಗಮಿಸುವ ಗೌರ್ನರ್ ಜನರಲ್ ಶ್ರೀ ಸಿ ರಾಜಗೋಪಾಲಾಚಾರಿಯವರನ್ನು ೧೫ನೇ ತಾ॥ ನಡೆಯಲಿರುವರು ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಬೇಕೆಂದು ಪ್ರಾರ್ಥಿಸಲಾಗುವುದೆಂದು ತಿಳಿದು ಬಂದಿದೆ

○ ಹೈದರಾಬಾದಿನ ಮಿಲಿಟರಿ ಗೌರ್ನರ್ ರಾದ ಮೇ॥ಚೌಧುರಿಯವರು ನಿನ್ನೆ ಸಂಜೆ ಇಲ್ಲಿಂದ ಮೈಸೂರಿನ ಮಾರ್ಗವಾಗಿ ಉದಕಮಂಡಲಕ್ಕೆ ಪ್ರಯಾಣ ಬೆಳೆಸಿದರು

ಮದರಾಸ್ ಕಮ್ಯೂನಿಸ್ಟ್ ನಾಯಕರ ದಸ್ತಗಿರಿ

ಕಳೆದ ಒಂದು ವರ್ಷದಿಂದಲೂ ತಲೆ ಮರೆಸಿಕೊಂಡಿದ್ದ ಮದರಾಸ್ ಶಾಸನ ಸಭೆಯ ಸದಸ್ಯರೂ ಮತ್ತು ಕಮ್ಯೂನಿಸ್ಟ್ ನಾಯಕರೂ ಆದ ಶ್ರೀ ಕೆ ಆನಂದ ನಂಬಿಯಾರ್‌ರವರನ್ನು ಬೆಂಗಲ್ ಪೇಟೆಗೆ ಹತ್ತಿರವಿರುವ ತಿರ್ವಾನ್ಮಯಂ ಎಂಬ ಹಳ್ಳಿಯಲ್ಲಿ ದಸ್ತಗಿರಿ ಮಾಡಲಾಗಿದೆ

೧೯೫೦ ರ ಕೊನೆಯಲ್ಲಿ ಸಾರ್ವತ್ರಿಕ ಚುನಾವಣೆ

ಭಾರತದಲ್ಲಿ ಸಾರ್ವತ್ರಿಕ ಚುನಾವಣೆಯು ೧೯೫೦ ರೊಳಗೆ ನಡೆಯಬಹುದೆಂದು ಕೇಂದ್ರ ಸರಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ ಈ ಸಂಬಂಧವಾಗಿ ಎಲ್ಲಾ ಪ್ರಾಂತಗಳಲ್ಲೂ ಮತದಾರರ ಪಟ್ಟಿಗಳು ಸಿದ್ಧವಾಗಿವೆ ಆದರೆ ಸಂಸ್ಥಾನಗಳಲ್ಲಿ ಮಾತ್ರ ಹೆಚ್ಚು ಕೆಲಸವಾಗಿಲ್ಲ

ನ್ಯಾಯಾಧೀಶರ ಮೇಲೆ ಪಾದರಕ್ಷೆ

ಅಹಮದಾಬಾದಿನ ನಾಸಿಕ್‌ನ ಅಡಿಷನಲ್ ನ್ಯಾಯಾಧೀಶರ ಕೋರ್ಟಿನಲ್ಲಿ ಆಪಾದಿತನೊಬ್ಬನಿಗೆ ೩ ತಿಂಗಳ ಶಿಕ್ಷೆಯನ್ನು ವಿಧಿಸಿದಾಗ ಆತನು ಪಾದರಕ್ಷೆಯನ್ನು ನ್ಯಾಯಾಧೀಶರ ಮೇಲೆ ಎಸೆದನೆಂದೂ, ಆದರೆ ಅವರಿಗೆ ಅದು ತಗಲಲಿಲ್ಲವೆಂದೂ ಹೇಳಲಾಗಿದೆ

ಕಾಲ ಮೀರಿ ಟೀ ಕೊಟ್ಟುದುದಕ್ಕೆ ದಂಡ

ಮೈಸೂರು ಶಿವರಾಂಪೇಟೆಯ ಟೀ ಶಾಪಿನಲ್ಲಿ ಕಾಲನಿಗದಿಯನ್ನು ಉಲ್ಲಂಘಿಸಿ ಟೀ ಕೊಡುತ್ತಿದ್ದರೆಂಬ ಆಪಾದನೆಯ ಮೇಲೆ ಸಣ್ಣಪ್ಪ ಎಂಬುವರಿಗೆ ನಗರ ನ್ಯಾಯಾಧೀಶರು ಈ ದಿನ ೨೦ ರೂ ದಂಡವನ್ನು ವಿಧಿಸಿದರು

ಸಂಗೀತ

ವಾಣೀವಿಲಾಸ ರಸ್ತೆಯಲ್ಲಿರುವ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿ ಸಂಜೆ ೬-೩೦ ಗಂಟೆಗೆ ಚಿ॥ ವಿ॥ ಬಿ ಎಂ ಶಿವಪ್ಪನವರಿಂದ ಸಂಗೀತ ನಡೆಯುವುದು

ಆಕಾಶವಾಣಿಯಲ್ಲಿ ಭಾಷಣ

ಈ ರಾತ್ರಿ ೮-೩೦ ಗಂಟೆಗೆ ಶ್ರೀ ಆರ್ ರಾಜಪ್ಪ ಶೆಟ್ಟಿಯವರು ಉತ್ತರ ಎಕ್ಸ್ಟೆಂಟ್ ಶನ್ ರಕ್ಷಣಾ ಒಪ್ಪಂದ ಎಂಬ ವಿಷಯವಾಗಿ ಆಕಾಶವಾಣಿಯಲ್ಲಿ ಪ್ರಸಾರ ಭಾಷಣ ಮಾಡುವರು

ಸಂಗೀತ ಮತ್ತು ಹರಿಕಥೆ

ಶ್ರೀ ಶಂಕರ ಜಯಂತಿ ಮಹೋತ್ಸವದ ಅಂಗವಾಗಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಈ ಸಂಜೆ ೬ ಘಂಟೆಗೆ ವಿದ್ವಾನ್ ಎಸ್. ಪಟ್ಟಿಕೃಷ್ಣಯ್ಯನವರ ಸಂಗೀತವೂ ನಾಳೆ ಸಂಜೆ ೬॥ ಘಂಟೆಗೆ ವಿದ್ವಾನ್ ಕೀರ್ತನರತ್ನ ಕೋಣನೂರು ಸೀತಾರಾಮಶಾಸ್ತ್ರಿಗಳಿಂದ "ಗಿರಿಜಾ ಕಲ್ಯಾಣ" ಎಂಬ ಹರಿಕಥೆಯೂ ನಡೆಯುವುವು

ಜಿಲ್ಲಾ ಪೋಲೀಸ್ ಅಧಿಕಾರಿಗಳ ವರ್ಗಾವರ್ಗಿ

ಸ್ವಂ.ಸು. ವರದಿ] ಬೆಂಗಳೂರು ೭

ಜಿಲ್ಲಾ ಪೋಲೀಸ್ ಅಧಿಕಾರಿಗಳ ವರ್ಗಾವರ್ಗಿಯು ಈ ರೀತಿ ಆಗಿದೆ—

ಶ್ರೀ ಎಂ. ಜಿ ಹೆಬ್ಳೀಕರ್‌ರವರನ್ನು ಮೈಸೂರಿನಿಂದ ತುಮಕೂರಿಗೆ, ಶ್ರೀ ಕೆ ಎಸ್. ಕೃಷ್ಣಮೂರ್ತಿಯವರನ್ನು ಶಿವಮೊಗ್ಗದಿಂದ ಮೈಸೂರಿಗೆ, ಶ್ರೀ ಎಂ ಜಯಸಿಂಗರನ್ನು ಚಿತ್ರದುರ್ಗದಿಂದ ಹಾಸನಕ್ಕೆ, ಶ್ರೀ ಬಿ. ಎಸ್ ನಂಜುಂಡಯ್ಯನವರನ್ನು ಹಾಸನದಿಂದ ಚಿತ್ರದುರ್ಗಕ್ಕೆ, ಟ್ರೈನಿಂಗ್ ಸ್ಕೂಲಿನ ಶ್ರೀ ಆಲ್ಬುಕರ್ಕ್ ಮನೋರಾಜ್‌ರವರನ್ನು ಶಿವಮೊಗ್ಗಕ್ಕೆ, ಸಿ ಐ. ಡಿ. ಇಲಾಖೆಯ ಜನಾಬ್ ದಸ್ತಗೀರ್‌ರವರನ್ನು ಟ್ರೈನಿಂಗ್ ಸ್ಕೂಲಿಗೆ

ಭತ್ತದ ಬದಲು ಅಕ್ಕಿ ಕೊಡಬಹುದು

ಜಮೀನುದಾರರುಗಳ ಆಹಾರ ಧಾನ್ಯಗಳನ್ನು ಸರ್ಕಾರಕ್ಕೆ ಒಪ್ಪಿಸುವಾಗ, ಭತ್ತದ ಬದಲು ಅಕ್ಕಿಯನ್ನು ಕೊಡಬಹುದೆಂದು ಸರ್ಕಾರದ ಪ್ರಕಟಣೆ ತಿಳಿಸಿರತ್ತದೆ ಅಕ್ಕಿಯನ್ನು ಕೊಳ್ಳುವ ಬೆಲೆಯು ಮೊದಲನೆ ತರಗತಿಗೆ ೪೭ ರೂ. ಮತ್ತು ಎರಡನೇ ದರ್ಜೆಗೆ ೩೮ ರೂ. ಇರುವುದೆಂದೂ ತಿಳಿಸಲಾಗಿದೆ.

ಪಂಡಿತ ನೆಹರೂರವರು ಹಿಂತಿರುಗಿದರು

ಲಂಡನ್ ಮತ್ತು ಯೂರೋಪಿನ ಪ್ರವಾಸವನ್ನು ಮುಗಿಸಿಕೊಂಡು ಪಂಡಿತ ನೆಹರೂರವರು ನಿನ್ನೆ ರಾತ್ರಿ ೧೧-೩೦ ಗಂಟೆಗೆ ಬೊಂಬಾಯಿಗೆ ಆಗಮಿಸಿದರು

ಈಜಿಪ್ಟ್ ಶಾಸನ ಸಭಾಧ್ಯಕ್ಷರ ಕೊಲೆ ಪ್ರಯತ್ನ

ಮೊನ್ನೆ ದಿನ ಈಜಿಪ್ಟಿನ ಶಾಸನಸಭೆಯ ಅಧ್ಯಕ್ಷರು ಮೋಟಾರಿನಲ್ಲಿ ಕೈರೋವಿನಿಂದ ತಮ್ಮ ಮನೆಗೆ ಹಿಂತಿರುಗುತ್ತಿದ್ದಾಗ ಅವರ ಮೇಲೆ ಯಾರೋ ೩ ನಾಡ ಬಾಂಬುಗಳನ್ನು ಎಸೆದರೆಂದೂ, ಆದರೆ ಅವರಿಗೆ ಅದರಿಂದ ಯಾವ ಅಪಾಯವೂ ಸಂಭವಿಸಲಿಲ್ಲವೆಂದೂ ಹೇಳಲಾಗಿದೆ ಮತ್ತೊಂದು ಕಾರಿನಲ್ಲಿದ್ದವರಿಗೆ ಸ್ವಲ್ಪ ಗಾಯವಾಯಿತು ಈ ಸಂದರ್ಭದಲ್ಲಿ ೩ ಜನರನ್ನು ದಸ್ತಗಿರಿ ಮಾಡಲಾಗಿದೆ

ಪೆಪ್ಪರ್‌ಮೆಂಟ್ ವ್ಯಾಪಾರಿಗಳ ತೊಂದರೆ

ರಾಜಧಾನಿಯ ಪುರಸಭೆ, ಪೆಪರ್‌ಮೆಂಟ್ ವ್ಯಾಪಾರಿಗಳ ಮೇಲೆ ೧೦ ರೂ ಲೈಸೆನ್ಸ್ ಫೀಯನ್ನು ಪುರಸಭೆಯವರು ಹಾಕಿರುವುದು ತುಂಬಾ ಅನ್ಯಾಯವೆಂದೂ, ಕೇವಲ ೫ ರೂ ಬೆಲೆ ಬಾಳುವ ಪೆಪ್ಪರ್‌ಮೆಂಟನ್ನು ಸಣ್ಣ ವ್ಯಾಪಾರಿಗಳಾದ ಹುಡುಗರಿಗೆ ಇದರಿಂದ ಅತಿ ನಷ್ಟ ಉಂಟಾಗುತ್ತದೆ ಯೆಂದೂ, ಒಟ್ಟಿನ ವ್ಯಾಪಾರಿಗಳಮೇಲೆ ಇದನ್ನು ಹಾಕಬೇಕೆಂದೂ ಕೋರಿ ನಗರದ ಪೆಪ್ಪರ್‌ಮೆಂಟ್ ವ್ಯಾಪಾರಿಗಳು ಪುರಸಭೆಗೆ ಅರ್ಜಿ ಸಲ್ಲಿಸಿರುತ್ತಾರೆ.

○ ಸಂಸ್ಥಾನದ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳ ಸಮ್ಮೇಳನವು ಇದೇ ೮ನೇ ತಾ॥ ಭಾನುವಾರ ಸಂಜೆ ೫ ಗಂಟೆಗೆ ಬೆಂಗಳೂರು ಚೇಂಬರ್ ಆಫ್ ಕಾಮರ್ಸ್ ಭವನದಲ್ಲಿ ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ

ಆಕಾಶವಾಣಿಯಲ್ಲಿ ವಂದೇ ಮಾತರಂ

ವಂದೇ ಮಾತರಂ ಗೀತೆಯನ್ನು ಹಾಡುವ ಬಗ್ಗೆ ಇರುವ ವಿಧಿನಿಯಮಗಳು ಎಲ್ಲರಿಗೂ ಗೊತ್ತೇ ಇದೆ. ಸರ್ಕಾರದವರೂ ಸಹ ಈ ಬಗ್ಗೆ ತಿಳುವಳಿಕೆ ಕೊಟ್ಟು ಪ್ರಕಟಣೆ ಹೊರಡಿಸುತ್ತಾರೆ. ಆದರೆ ಈ ಗೀತೆಯನ್ನು ಹಾಡುವ ಅನೇಕ ಸಂದರ್ಭಗಳಲ್ಲಿ ಈ ನಿಯಮಗಳು ಉಲ್ಲಂಘಿಸಲ್ಪಡುವ ನಿದರ್ಶನಗಳು ಹೆಚ್ಚಾಗುತ್ತಿವೆ. ಮುಖ್ಯವಾಗಿ ಆಕಾಶವಾಣಿಯಲ್ಲಿ ಈ ಅಶಿಸ್ತು ಎದ್ದು ಕಾಣುತ್ತಿದೆ. ಆಕಾಶವಾಣಿ ಸಮಿತಿಯ ಸದಸ್ಯರೂ ಕಾರ್ಯಕರ್ತರುಗಳೂ ಇದನ್ನು ಗಮನಿಸಿದೇ ಇರುವುದು ಆಶ್ಚರ್ಯಕರ.

ವಂದೇ ಮಾತರಂ ಗೀತೆಯನ್ನು ಒಂದು ಕಾರ್ಯಕ್ರಮದ ಅಂತ್ಯದಲ್ಲಿ ಹಾಡಬೇಕೆಂದು ನಿಯಮ ಇರುವಾಗಿದೆ. ಆದರೆ ಆಕಾಶವಾಣಿಯಲ್ಲಿ ಇದನ್ನು ಬೇಗ ಎದ್ದೋಡಿ ಸಮಯ ಮೊದಲು ಹಾಡಿಸುತ್ತಾರೆ. ಸಾಲದುದಕ್ಕೆ ಅನೇಕ ವೇಳೆ ಜನಗಣಮನ ವಂದೇ ಮಾತರಂ ಉದಯವಾಗಲಿ ನಮ್ಮ ಚಲುವ ಕನ್ನಡನಾಡು ಮತ್ತು ಇನ್ನೂ ಇತರ ಗೀತೆಗಳನ್ನು ಒಟ್ಟಿಗೇ ಹಾಡಿಸುತ್ತಾರೆ. ಇದು ಒಂದಕ್ಕೊಂದು ಪರಸ್ಪರ ವಿರೋಧವಿರುವ ಸಂಗತಿಯಲ್ಲಿ ಸಂದೇಹವಿಲ್ಲ. ಕಾಮಾ ಶ್ರೀ ಗೌರಿಯನ್ನೂ ಇದರೊಡನೆ ಸೇರಿಸಿಬಿಟ್ಟಿದ್ದರೆ ಈ ಆಭಾಸವು ಪರಿಪೂರ್ಣವಾಗುವುದು.

ಒಂದು ರಾಷ್ಟ್ರಗೀತೆಯೊಡನೆ ಆದೇ ಮಟ್ಟದ ಮತ್ತೊಂದು ಗೀತೆಯನ್ನು ಹಾಡಿಸಬಾರದೆಂಬ ವಿಷಯಕ್ಕೆ ಆಕಾಶವಾಣಿಯವರು ಗಮನ ಕೊಡದಿರುವುದಕ್ಕೆ ವಿಷಾದವಾಗಿದೆ. ಸರ್ಕಾರದ ಪ್ರಕಟಣೆಯಲ್ಲಿ ಜನಗಣಮನ ಗೀತೆಯೊಡನೆ ವಂದೇ ಮಾತರಂ ಗೀತೆಯನ್ನು ಹಾಡಿಸಬಾರದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಆದರೆ ಆಕಾಶವಾಣಿಯಲ್ಲಿ ಈ ಆಜ್ಞೆಯು ಉಲ್ಲಂಘಿಸಲ್ಪಡುತ್ತಲೇ ಇದೆ. ಇದನ್ನು ಕೂಡಲೇ ತಪ್ಪಿಸಿ ಕಟ್ಟಕಡೆಯಲ್ಲಿ ಮಾತ್ರ ವಂದೇ ಮಾತರಂ ಹಾಡಲು ವ್ಯವಸ್ಥೆ ಮಾಡಬೇಕು.

ಇದಕ್ಕಿಂತಲೂ ಮುಖ್ಯವಾದ ವಿಷಯವೆಂದರೆ ವಂದೇ ಮಾತರಂ ಗೀತೆಯ ಹಾಡಲ್ಪಡುತ್ತಿರುವ ರಾಗದ ವಿಚಾರ. ಇದು ಅತ್ಯಂತ ಕಠೋರವಾಗಿಯೂ ಅಶಿಕ್ಷಿತರಿಗೆ ಅಸ್ತವ್ಯಸ್ತವಾಗಿಯೂ ಇದೆ. [illegible] ರಾಗದಲ್ಲಿ ಗೀತೆಗಳನ್ನು ಕೇಳಿ ಒಯಸುವವರಿಗೆ ಇದು ಸಿಟ್ಟು ಬರಿಸುವಂತಾಗಿಯೂ ಕರ್ಕಶವಾಗಿ ಪರಿಣಮಿಸುತ್ತಿದೆ. ರಾಷ್ಟ್ರಗೀತೆಗಳನ್ನು ಎಲ್ಲರೂ ಒಟ್ಟಾಗಿ ಒಂದೊಂದು ರೀತಿಯಲ್ಲಿ ಹಾಡಿದರೆ ಏನೂ ಸಿದ್ಧಿ ಆದೀತು? ಆದರ ಇಂಪು ಮತ್ತು ಮಾಧುರ್ಯದ ಕಡೆಗೆ ಪ್ರಸಾರ ಕೇಂದ್ರದವರು ಗಮನ ಕೊಡುವುದು ಅತ್ಯಾವಶ್ಯಕ. ಈಗ ಹಾಡುತ್ತಿರುವ ಗೀತೆಯ ರಾಗವು ಗೊಲ್ಲಾಪುರ ಕುಸ್ತಿ ಪರಿಷತ್ತಿನಂತೆ ಭಾಸವಾಗುತ್ತಿದೆ. ಅಲ್ಲದೆ ಅದು ಬಹಳ ದೀರ್ಘವಾಗಿಯೂ ಇರುತ್ತದೆ. ಅದರಲ್ಲಿನ ಹಿಂದಲೇ ಚರಣವನ್ನು ಬಿಟ್ಟು ಉಳಿದ ಚರಣಗಳನ್ನು ರದ್ದುಮಾಡಿ ಒಳ್ಳೆ ರಾಗದಲ್ಲಿ ಹಾಡಲು ದೇಶದ ಇಂದಿನ ಪರಿಸ್ಥಿತಿ [illegible]

ಈಜುವುದಕ್ಕೆ ಹೋಗಿ ಮರಣ

ಕಾಶ್ಮೀರದಲ್ಲಿರುವ ಭಾರತ ಸೈನ್ಯಾಧಿಕಾರಿ ಲೆ॥ ಕ॥ ಸಿ ಕೆ ಅಯ್ಯಂಗಾರರವರು ಜಂಘರ್ ಬಳಿ ಕೊಳವೊಂದರಲ್ಲಿ ಈಜಲು ಧುಮುಕಿದಾಗ ಬಂಡೆಯೊಂದಕ್ಕೆ ಅವರ ತಲೆಯು ಬಡಿದು ತೀವ್ರ ಗಾಯಗಳಾಗಿ ಮರಣ ಹೊಂದಿದರೆಂದು ವರದಿಯಾಗಿದೆ.

ರೂ ಅವುಗಳನ್ನು ಹಾಡಿಸುತ್ತಿರುವುದು ಒರ್ದವಿಲ್ಲದ ವಿಚಾರ.

ಈಗ ಹಾಕುತ್ತಿರುವುದಕ್ಕಿಂತಲೂ ಉತ್ತಮವಾದ ಪ್ಲೇಟುಗಳು ಇಲ್ಲವೇ ಇಲ್ಲ. ಅವುಗಳನ್ನು ವ್ಯವಸ್ಥಾಪಕರು ಜುನಾಯಿಸಿ ಇನ್ನು ಮುಂದೆ ಶ್ರೋತೃಗಳ ಈ ಸಂಕಟವನ್ನು ಪರಿಹರಿಸುವುದಲ್ಲದೆ ರಾಷ್ಟ್ರಗೀತೆಗೆ ಆಗುತ್ತಿರುವ ಅಪಚಾರವನ್ನೂ ಸಹ ನಿವಾರಿಸುವರೆಂದು ನಂಬಿದ್ದೇನೆ –

ರಾಷ್ಟ್ರಪ್ರೇಮಿ,

ಟೆಂಡರ್ ನೋಟೀಸ್

ನೋಟೀಫಿಕೇಷನ್ ನಂ C/8 P R 75/48 49

ಮುನಿಸಿಪಲ್ ಆಫೀಸ್
ಮೈಸೂರು ತಾ– ೨ ೪೯

೧೯೪೯–೫೦ನೇ ಸಾಲಿಗೆ ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಮಾಡಿಸುವ ಮುದ್ರಣ ಕಾರ್ಯಗಳನ್ನು ಮುದ್ರಿಸಲು ಸೋಮವಾರ, ಮೇ, ೧೬ನೇ ತಾರೀಖು ೪ ಘಂಟೆವರಗೆ ಟೆಂಡರುಗಳನ್ನು ಸ್ವೀಕರಿಸಲಾಗುವುದು. ಈ ಟೆಂಡರುಗಳನ್ನು ಕೊಡಲು ೧೦೦ ರೂಪಾಯಿಗಳನ್ನು ಮುನಿಸಿಪಲ್ ಖಜಾನೆಗೆ ಇರಸಾಲ್ ಮಾಡಿ ರಶೀತಿಯನ್ನು ಟೆಂಡರು ಜೊತೆಯಲ್ಲಿ ಹಾಜರುಮಾಡಿ ಸೀಲುಂದ ಕವರನ್ನು ಆಪೀಸಿಗೆ ಕೊಡತಕ್ಕದ್ದು. ಇತರ ವಿಷಯಗಳನ್ನು ಸದರಿ ಆಫೀಸಿನಲ್ಲಿ ತಿಳಿಯತಕ್ಕದ್ದು.

(ಸಹಿ) ಸಿ ನರಸಿಂಹ ಮೂರ್ತಿ
ಮುನಿಸಿಪಲ್ ಕಮೀಷನರ್
ಮೈಸೂರು ಸಿಟಿ

ಮಂಗಳೂರಿನಲ್ಲಿ ವಿಮಾನ ನಿಲ್ದಾಣ

ಸಧ್ಯದಲ್ಲಿಯೇ ಮಂಗಳೂರಿನಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಲಾಗುವುದೆಂದು ಭಾರತ ಸರ್ಕಾರದವರು ತಿಳಿಸಿರುತ್ತಾರೆ.

ಜತೀಂದ್ರ ದಾಸರಿಗೆ ಸ್ಮಾರಕ

೧೯೨೯ರಲ್ಲಿ ಲಾಹೋರಿನ ಜೈಲಿನಲ್ಲಿ ೬೩ ದಿನಗಳ ಉಪವಾಸ ಮಾಡಿ ಮರಣ ಹೊಂದಿದ ಜತೀಂದ್ರ ದಾಸರ ಜ್ಞಾಪಕಾರ್ಥವಾಗಿ ಕಲ್ಕತ್ತದಲ್ಲಿರುವ ಹಜಾರಾ ಪಾರ್ಕಿನಲ್ಲಿ ಅವರ ಪ್ರತಿಮೆಯನ್ನು ಇಡಲು ಅಲ್ಲಿನ ಪುರಸಭೆಯು ನಿರ್ಧರಿಸಿದೆ.

ನೀಲಗಿರಿ ಪ್ರೇಕ್ಷಣೀಯ ಸ್ಥಳ

ಭಾರತದಲ್ಲಿರುವ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಹೆಚ್ಚು ಆಕರ್ಷಣೀಯವಾಗುವಂತೆ ಮಾಡಲು ಕೇಂದ್ರ ಸರ್ಕಾರದವರು ಕೈಗೊಂಡಿರುವ ಯೋಜನೆಯಲ್ಲಿ ಉದಕಮಂಡಲವನ್ನು ಸೇರಿಸಲಾಗಿದೆಯೆಂದು ತಿಳಿದುಬಂದಿದೆ.

ಅರಮನೆ ಜಪದ ಕಟ್ಟೆ ಮಠ

ಮೈಸೂರು

ಆಹ್ವಾನ

ಮೇಲ್ಕಂಡ ಮಠದ ವಿವಾದಾಸ್ಪದವಾಗಿದ್ದ ಉತ್ತರಾಧಿಕಾರದ ವಿಷಯದಲ್ಲಿ ಮೈಸೂರು ಸಿಟಿಯಲ್ಲಿರತಕ್ಕ ವೀರಶೈವ ಮಹಾಜನಗಳಿಂದ ೧೦ ೪–೪೯ರಲ್ಲಿ ನಿರ್ಣಯಿಸಲ್ಪಟ್ಟಿದ್ದ ಕಮಿಟಿಯು ಮಾಡಿರತಕ್ಕ ವರದಿಯನ್ನು ಪರ್ಯಾಲೋಚಿಸುವ ಬಗ್ಗೆ ೧೯೪೯ನೇ ಇಸವಿ ಮೇ ತಾರೀಖು ೮ನೇ ಭಾನುವಾರ ಸಾಯಂಕಾಲ ೬॥ ಗಂಟೆಗೆ ಸರಿಯಾಗಿ ಮೇಲ್ಕಂಡ ಮಠದಲ್ಲಿ ಮೈಸೂರು ಸಿಟಿಯಲ್ಲಿರತಕ್ಕ ವೀರಶೈವ ಮಹಾಜನಗಳ ಸಭೆಯು ಸೇರುವುದರಿಂದ ಆ ಕಾಲಕ್ಕೆ ಸರಿಯಾಗಿ ವೀರಶೈವ ಮಹಾಜನಗಳು ದಯಮಾಡಿಸಬೇಕಾಗಿ ಪ್ರಾರ್ಥನೆ.

ಎಂ ಎಲ್. ನಾಗಣ್ಣ
ಅಧ್ಯಕ್ಷ

೫೦೦ ಪಕ್ಷಿಗಳು ಬೆಂಕಿಗೆ ಆಹುತಿ

ಹಾಲೆಂಡಿಗೆ ಕಳುಹಿಸಬೇಕೆಂದು ಸಂಗ್ರಹಿಸಲಾಗಿದ್ದ ೫೦೦ ವಿವಿಧ ಪಕ್ಷಿಗಳು ಬೊಂಬಾಯಿನ ಭವನವೊಂದರಲ್ಲಿ ಬೆಂಕಿ ಬಿದ್ದು ಭಸ್ಮವಾದವೆಂದು ಹೇಳಲಾಗಿದೆ.

ಸಮಿತಿಗೆ ಹೈದರಾಬಾದ್ ಕಾಂಗ್ರೆಸ್ಸಿನ ವಿರೋಧ

ಹೈದರಾಬಾದಿನ ಮಿಲಿಟರಿ ಸರ್ಕಾರದ ಆಡಳಿತಕ್ಕೆ ಸಹಾಯಕವಾಗಲು ಸಲಹಾ ಸಮಿತಿಗಳನ್ನು ನೇಮಕ ಮಾಡಲಾಗುವುದೆಂಬ ಸರ್ಕಾರದ ಯೋಚನೆಯನ್ನು ಅಲ್ಲಿನ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರು ತಿರಸ್ಕರಿಸಿದ್ದಾರೆ. ಇಂತಹ ಸಲಹಾ ಸಮಿತಿಗಳಿಂದ ಪ್ರಯೋಜನವಿಲ್ಲವೆಂದೂ, ಪ್ರಜಾ ಸರ್ಕಾರವನ್ನು ಕೂಡಲೇ ಸ್ಥಾಪಿಸಬೇಕೆಂದೂ ಅವರು ಸಲಹೆ ಮಾಡಿರುತ್ತಾರೆ.

ಸುಬ್ಬರಾಯನ್‌ರವರ ಮೇಲೆ ಕೈಮಾಡಿದವನಿಗೆ ಶಿಕ್ಷೆ

ಮದರಾಸಿನ ಮಾಜಿ ಮಂತ್ರಿ ಡಾ॥ ಸುಬ್ಬರಾಯನ್‌ರವರನ್ನು ಹೀನಾಮಾನವಾಗಿ ಬೈದು, ಹೊಡೆಯುವುದಕ್ಕೆ ಹೋದನೆಂಬ ಆಪಾದನೆಯ ಮೇಲೆ ಸೇಲಂ ಜಿಲ್ಲೆಯ ಮಣಿಯೂರ್ ಹಳ್ಳಿಯ ರಾಜನ್ ಡರ್ ಎಂಬುವನಿಗೆ ೧ ತಿಂಗಳು ಕಠಿಣ ಶಿಕ್ಷೆ ಮತ್ತು ೫೦ ರೂ ದಂಡವನ್ನು ವಿಧಿಸಲಾಗಿದೆ. ಮಂತ್ರಿಪದವಿಗೆ ರಾಜೀನಾಮೆ ಕೊಟ್ಟ ಮೇಲೂ ಸರ್ಕಾರೀ ಭವನದಲ್ಲಿಯೇ ಡಾ॥ ಸುಬ್ಬರಾಯನ್‌ರವರು ಇದ್ದುದಕ್ಕಾಗಿ ಪ್ರತಿಭಟಿಸಿ ಗೌಂಡನು ಪ್ರದರ್ಶನ ಮಾಡಿದ್ದನು.

ರಾಜಕಮಲ್, ಮೈಸೂರು

6-5-49 ರಿಂದ ಆರಂಭ

ಫಿಲಂಸ್ತಾನರವರ ಹಿಂದಿ ಚಿತ್ರ

ಷಹೀದ್

— ಭೂಮಿಕೆ —

- ಕಾಮಿನಿ ಕೌಶಲ್ಯ
- ದಿಲೀಪ್ ಕುಮಾರ್
- ವಿ. ಎಚ್. ದೇಸಾಯಿ

ದೇಶ ಮಾತೆಯ ದಾಸ್ಯವನ್ನು ಕೊನೆಗಾಣಿಸುವ ಹೋರಾಟದಲ್ಲಿ ಭಾರತ ಪುತ್ರ ಪುತ್ರಿಯರು ಮಾಡಿದ ಅಮೋಘ ತ್ಯಾಗದ ಸ್ಮಾರಕವಾದ ಕಥೆ



MORNING SHOWS From 6-5-49 for 4 days

CALENDAR GIRL

With -Jane Frazee William, Marshall, Gail Patrick

ಬಿಳಿ ಉಪ್ಪು

ರೂಪಾಯಿಗೆ 14 ಸೇರು

ಮೈಸೂರು ಕೋ- ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

- ಸ್ಪೆಷಲ್ ತಯಾರಿ -

ನಮ್ಮ ಸ್ವಂತ ಮಗ್ಗದಿಂದ ಮೈಸೂರು [illegible] ನಲ್ಲಿ ಕ್ರೇಪ್, ಬೆಂಗಳೂರು, ಧರ್ಮಾವರ ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ. ದಯವಿಟ್ಟು ಇಂದೇ ಭೇಟಿ ಕೊಡಿ.

ಗುರು ದೇವಾ ಹಾಲ್
ಶಿವರಾಂಪೇಟೆ, ಮೈಸೂರು

Morning Shows at
CHAMUNDESHWARI TALKIES
From 30-4-49 For 3 days
at 10-30 a.m.
EAGLE LION's a Two CITIES FILM
HUNGRY HILL
(ಹಂಗ್ರಿ ಹಿಲ್)
- Starring -
Margaret Lockwood
Dennis Price

Edited printed and Published by A R Nagarajan at the Sadhvi Press D Subbiah Road, Mysore

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ವೃದ್ಧಿ

ಸಂಪುಟ ೧೩] ಭಾನುವಾರ ೮-೨-೪೮ [ಸಂಚಿಕೆ ೩೫

ತಂಬೂಚೆಟ್ಟಿ ರಸ್ತೆಯ ಹೆಸರಿನ ಬದಲಾವಣೆ

ಮಾವಿನ ಹಣ್ಣುಗಳನ್ನೇ ಕಾಣದ ಬ್ರಿಟಿಷರು

ಪಂಡಿತ ನೆಹರೂರವರು ಲಂಡನ್ನಿಗೆ ...ಗಿದ್ದಾಗ ತಮ್ಮೊಡನೆ ಭಾರತದ ಮಾ... ಹಣ್ಣುಗಳನ್ನು ಕೊಂಡೊಯ್ದಿದ್ದರು. ...ಗಳನ್ನು ಅವರ ಲಂಡನ್ ಸ್ನೇಹಿತರಿಗೆ ...ಲಾಯಿತು. ಅವರುಗಳು ಹಿಂದೆಂ... ಮಾವಿನ ಹಣ್ಣನ್ನೇ ಕಂಡಿರಲಿಲ್ಲವೆಂ... ಪಂಡಿತರು ತಿಳಿಸಿದರು.

...ಸಿನ ಹಣ್ಣಿನಲ್ಲಿ ಬ್ರಾಂದಿ ಬಾಟಲ್

...ಕೋಟೆಯ ಸಮೀಪದಲ್ಲಿ ಹಲಸಿನ ...ಸ ೧೦ ಸಣ್ಣ ಬ್ರಾಂದಿ ಬಾಟಲ್ಲು... ಬಚ್ಚಿಟ್ಟು ಇಬ್ಬರು ಅದನ್ನು ಸಾಗಿ... ದನ್ನು ಅಲ್ಲಿನ ರೈಲ್ವೆ ಸ್ಟೇಷನ್ ... ಪತ್ತೆ ಮಾಡಿರುತ್ತಾರೆ.

ಮಹಿಳಾ ಗುಂಪನ್ನು ಚದುರಿಸಲು ಮಹಿಳಾ ಪೋಲೀಸರು

...ನದಲ್ಲಿರುವ ಕಮ್ಯೂನಿಸ್ಟ್ ... ...ಗಳು ಬೊಂಬಾಯಿನ ಅಸೆಂಬ್ಲಿ ...ಮುಂದೆ ವೆ... ದಿನ ಗುಂಪು ...ಅವರನ್ನು ಬಿಡುಗಡೆ ಮಾಡಬೇಕೆಂ... ...ರ್ಶನ ನಡೆಸಿದರೆಂದೂ, ಅವರ ...ಚದುರಿಸಲು ಪ್ರಥಮ ಬಾರಿ ಮಹಿ... ...ಪೋಲೀಸರನ್ನು ಉಪಯೋಗಿಸಲಾ...ಕೆಂದೂ ಹೇಳಲಾಗಿದೆ

ಎರಡು ಶತಮಾನಗಳ ಹಿಂದಿನ ದೇವಾಲಯ

...ಯ ಹತ್ತಿರವಿರುವ ಪಾರ್ವತಿ ಬೆ...ಟ್ಟದಲ್ಲಿ ೨೦೦ ವರ್ಷಗಳ ಹಿಂದೆ ಬಾಲಾ ...ಜರಾಯರಿಂದ ಸ್ಥಾಪಿಸಲ್ಪಟ್ಟ ದೇ...ವೇಶ್ವರ ದೇವಾಲಯದಲ್ಲಿ ಮೊನ್ನೆ ದಿ... ...ಷ್ಠ ಉತ್ಸವವು ನಡೆಯಿತು ಅವರ ... ವಿಗ್ರಹವು ೩ ಮಣ ತೂಕವಿರು... ಮತ್ತು ಪಾರ್ವತಿ ಗಣೇಶರ ಎರ... ಭಂಗಾರದ ವಿಗ್ರಹಗಳು ೧೪೪ ತೊ... ...ವಿರುವುದು ಅವುಗಳು ೧೯೩೧ ರ ...ವಾಗಿ ಇಲ್ಲಿಯವರೆಗೂ ಪತ್ತೆಯಾ...

...ಹಿಳಾ ಉಪ ಸ್ಥಾನಪತಿ

...ಬರೋಡಾ ವಿಶ್ವವಿದ್ಯಾಲಯದ ಪ್ರಥ... ...ಸ್ಥಾನಪತಿಗಳಾಗಿ ಶ್ರೀಮತಿ ಹಂ... ...ಮೆಹತಾರವರನ್ನು ನೇಮಿಸಲಾಗಿದೆ.

...ದ ಸ್ವಾಮಿಗಳ ಮೇಲೆ ...ಸ್ತ್ರೀಯ ಆಪಾದನೆ

... ಭ ಕೊ ... ದ ದರ್ಮಸ್ಥ... ...ದ ಸಂಪಾದರ ಸನ್ನಿಧಿ ಸ್ವಾಮಿಗಳು ...ಡಿಗೆಯವನ ಪತ್ನಿಯಾದ ...ರ ... ಎಂಬಾಕೆಯೊಡನೆ ದು... ...ಸಿದರೆಂದು, ಆಕೆಯ ಪತಿ ...೦ ಚೆಟ್ಟಿಯಾರ್ ಎಂಬುವರು ...ಲ್ಲಿ ಸ್ವಾಮಿಗಳ ಮೇಲೆ ಮೊಕ... ...ಡಿರುತ್ತಾರೆ ಕಳೆದ ಫೆಬ್ರವರಿ... ತನ್ನ ಪತ್ನಿಯು ಮನೆಯನ್ನು ...ದವಳು ವಾಪಸು ಬರಲಿಲ್ಲ ಮೂರು ದಿನಗಳ ಮೇಲೆ ಆಕೆ ...ಬಾತ್ಕಾರವಾಗಿ ಸ್ವಾಮಿಗಳು ... ಇರಿಸಿಕೊಂಡಿದ್ದುದು ಪತ್ತೆ ...ತೂ ಪಿರ್ಯಾದಿಯು ತಿಳಿಸಿ...

ಕರ್ನಾಟಕ ಯುವಕ. ಪರಿಷತ್ತು

ಕರ್ನಾಟಕದ ಯುವಕ ಪರಿಷತ್ತಿನ ತ್ರೈಮಾಸಿಕ ಅಧಿವೇಶನವು ಈ ತಿಂಗಳು ದಾವಣಗೆರೆಯಲ್ಲಿ ನಡೆಯುವುದು ಈ ಅಧಿವೇಶನದ ಪ್ರಾರಂಭೋತ್ಸವವನ್ನು ನೆರವೇರಿಸಲು ಕಾಶ್ಮೀರದ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲಾ, ಶರತ್ ಚಂದ್ರಬೋಸ್, ಡಾ|| ಅಂಬೇಡ್ಕರ್, ಷಣ್ಮುಗಂ ಚೆಟ್ಟಿ ಮತ್ತು ಡಾ|| ಪಿ ಕೆ ಆರ್ ವಿ ರಾವ್ ಇವರುಗಳಿಗೆ ಆಹ್ವಾನ ಕೊಡಲಾಗಿದೆ ಕನ್ನಡ ಪ್ರಾಂತವು ರೂಪಗೊಳ್ಳುವ ಸಮಯದಲ್ಲಿ ಕನ್ನಡ ನಾಡಿನ ಯುವಕ ಯುವತಿಯರೆಲ್ಲರೂ ಸಹಕರಿಸಿ, ಸಮ್ಮೇಳನವು ಯಶಸ್ವಿಯಾಗುವಂತೆ ಮಾಡಬೇಕೆಂದು ಪರಿಷತ್ತಿನ ಸ್ವಾಗತ ಸಮಿತಿಯವರು ಕೋರಿರುತ್ತಾರೆ.

ಅಮೇರಿಕಾಕ್ಕೆ ನೆಹರೂರವರ ಭೇಟಿ

ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಟ್ರೂಮನ್‌ರವರ ಆಹ್ವಾನವನ್ನು ಮನ್ನಿಸಿ ಭಾರತದ ಪ್ರಧಾನಿ ಪಂಡಿತ ನೆಹರೂರವರು ಅಮೇರಿಕಾಕ್ಕೆ ಬರುವ ಅಕ್ಟೋಬರ್ ತಿಂಗಳಲ್ಲಿ ಭೇಟಿ ಕೊಟ್ಟು ಅಲ್ಲಿ ಮೂರು ವಾರಗಳ ಕಾಲ ಸಂಚರಿಸುವರು. ಮೊದಲು ಅವರು ವಾಷಿಂಗ್‌ಟನ್ನಿಗೆ ಭೇಟಿ ಇತ್ತು ನಂತರ ಸಂಸ್ಥಾನಗಳಲ್ಲಿ ಪ್ರವಾಸ ಮಾಡುವರು

ಬೆಲ್ಜಿಯಂ ದೊರೆಗಳೊಡನೆ ನೆಹರೂರವರ ಭೇಟಿ

ಪಂಡಿತ್ ನೆಹರೂರವರು ಮೊನ್ನೆ ದಿನ ಬೆಲ್ಜಿಯಂ ದೊರೆಗಳಾದ ಲಿಯೋಪಾಲ್ಡರನ್ನು ಜಿನೀವಾದಲ್ಲಿ ಭೇಟಿ ಮಾಡಿ ೧೦ ನಿಮಿಷಗಳ ಕಾಲ ಸಂಭಾಷಣೆ ನಡೆಸಿದರು

ಸಂತತಿನ ನಿರೋಧದ ಬಗ್ಗೆ ಪುರಸಭೆಯಲ್ಲಿ ಚರ್ಚೆ

ಸಂತಾನ ನಿರೋಧದ ವಿಚಾರವಾಗಿ ಬೊಂಬಾಯಿನ ಪುರಸಭೆಯಲ್ಲಿ ೧|| ಗಂಟೆ ಕಾಲ ದೀರ್ಘ ಚರ್ಚೆಯಾಗಿ, ಸಂತತಿ ಸಂಯಮದ ವಿಧಾನಗಳ ಬಗ್ಗೆ ಸೂಕ್ತ ಶಿಕ್ಷಣವನ್ನು ಸಾರ್ವಜನಿಕರಿಗೆ ಕೊಡಬೇಕೆಂದು ಸೂಚಿಸುವ ನಿರ್ಣಯವನ್ನು ಆರೋಗ್ಯ ಸಮಿತಿಯ ಪರಿಶೀಲನೆಗೆ ಕಳುಹಿಸಲಾಯಿತು ೧೩ ಜನ ಮಹಿಳಾ ಸದಸ್ಯರೂ ಮತ್ತು ಪುರುಷರೂ ಚರ್ಚೆಯಲ್ಲಿ ಭಾಗವಹಿಸಿದ್ದರು.

ತಂಬೂಚೆಟ್ಟಿ ರಸ್ತೆ ಹೆಸರು ಬದಲಾವಣೆ

ಪೌರಸಭೆಯಲ್ಲಿ ನಿರ್ಣಯ

ಮೈಸೂರು. ೮

ರಾಜಧಾನಿಯ ಚರ್ಚ್ ರಸ್ತೆಯ ಹೆಸರನ್ನು ಕೆಲವು ದಿನಗಳ ಹಿಂದೆ ಹಿಂದಿನ ಸರಕಾರದವರ ಸೂಚನೆಯಂತೆ ತಂಬೂಚೆಟ್ಟಿ ರಸ್ತೆಯೆಂದು ಪೌರಸಭೆಯವರು ಬದಲಾಯಿಸಿದ್ದರು ಇತಿಹಾಸ ಪ್ರಸಿದ್ಧರಾದ ವ್ಯಕ್ತಿಗಳ ಹೆಸರುಗಳನ್ನು ಸಾರ್ವಜನಿಕ ಸ್ಥಳಗಳಿಗೆ ಇಡುವುದು ಸರಿಯಲ್ಲವೆಂಬ ತತ್ವದ ಮೇಲೆ ಮೇಲ್ಕಂಡ ರಸ್ತೆಯ ಹೊಸ ಹೆಸರನ್ನು ರದ್ದುಮಾಡಿ ಹಿಂದಿನಂತೆ ಚರ್ಚ್ ರಸ್ತೆ ಎಂಬುದಾಗಿಯೇ ಕರೆಯತಕ್ಕದ್ದೆಂದು ಪೌರಸಭೆಯವರು ನೆನ್ನೆ ದಿನ ನಡೆದ ಮುಂದುವರೆದ ಅಧಿವೇಶನದಲ್ಲಿ ನಿರ್ಣಯ ಮಾಡಿದರು

ಅದರಂತೆಯೇ ಕಬೀರ್ ರಸ್ತೆಗೆ ಹುಚ್ಚೇಗೌಡ ರಸ್ತೆ ಎಂಬುದಾಗಿ ಬದಲಾಯಿಸಬೇಕೆಂದು ಬಂದಿದ್ದ ಸಲಹೆಯನ್ನೂ ಸಹ ನಿರಾಕರಿಸಲಾಯಿತು.

ನಗರದಲ್ಲಿರುವ ಸಾರ್ವಜನಿಕ ಸ್ನಾನಗೃಹಗಳನ್ನು ಕಂಟ್ರಾಕ್ಟದಾರರಿಗೆ ವಹಿಸಿ ಅವುಗಳಲ್ಲಿ ಸುಲಭದರದಲ್ಲಿ ತಣ್ಣೀರು ಮತ್ತು ಬಿಸಿನೀರಿನ ಸ್ನಾನಕ್ಕೆ ಅನುಕೂಲ ಪಡಿಸಬೇಕೆಂಬ ನಿರ್ಣಯವೂ ಸಹ ಅಂಗೀಕರಿಸುವುದು

ಈಗ ಇರುವ ಒಳಚರಂಡಿ ವ್ಯವಸ್ಥೆಯು ದಿನೇ ದಿನೇ ಬೆಳೆಯುತ್ತಿರುವ ನಗರದ ಆವಶ್ಯಕತೆಗೆ ತಕ್ಕಷ್ಟು ಪ್ರಮಾಣದಲ್ಲಿಲ್ಲದ ಅವುಗಳಲ್ಲಿ ಕಶ್ಮಲವು ತುಂಬಿ ಮೇಲಕ್ಕೆ ಬಂದು ದುರ್ವಾಸನೆಯುಂಟಾಗುತ್ತಿರುವುದರಿಂದ ಪೈಪ್ ಲೈನುಗಳನ್ನು ದೊಡ್ಡದು ಮಾಡಿ ಈ ಅನಾನುಕೂಲವನ್ನು ತಪ್ಪಿಸುವಂತೆ ನಗರಾಭಿವೃದ್ಧಿ ಸಮಿತಿಗೆ ... ಮಾಡುವುದು

ಧನ್ವಂತರಿ ರಸ್ತೆಯಲ್ಲಿ ಅಕ್ಕಿಯ ಮಾ... ... ಗೋಡೌನ್‌ಗಳು ... ... ಯೋಜನೆಯಂತೆ ಇನ್ನು ... ಅಂಗಡಿಗಳನ್ನು ಕಟ್ಟುವುದಾದರೆ ಅಕ್ಕಿಯ ಮಾರುವ ಕಾರ್ಯಕ್ರಮವನ್ನು ನಿಲ್ಲಿಸುವುದು

ತ್ಯಾಗರಾಜ ಮತ್ತು ಮೌಂಟ್‌ಜಾಯ್ ರಸ್ತೆಗಳು ಸೇರುವ ಕಡೆ ಇರುವ ಸ್ಥಳಕ್ಕೆ ತ್ಯಾಗರಾಜ ಸರ್ಕಲ್ ಎಂದು ಹೆಸರಿಡ...

ವಿಶ್ವವಿದ್ಯಾನಿಲಯದ ಪರೀಕ್ಷೆ ಫಲಿತಾಂಶ

ಮೈಸೂರು ೮

ನಮ್ಮ ವಿಶ್ವವಿದ್ಯಾಲಯದ ಪರೀಕ್ಷೆಗಳ ಫಲಿತಾಂಶಗಳು ಇದೇ ೧೧ನೇ ತಾ|| ಬುಧವಾರ ಬೆಳಿಗ್ಗೆ ೯ ಗಂಟೆಗೆ ಪ್ರಕಟಿಸಲ್ಪಡುವುವು.

ಹರಿಕಥಾ ಸಪ್ತಾಹ

ಮೈಸೂರು ಸುಣ್ಣದಕೇರಿ ನಾಲಾ ಬೀದಿಯಲ್ಲಿರುವ ಶ್ರೀ ದಶರಥ ರಾಮ ಮಂದಿರದಲ್ಲಿ ಇಂದಿನಿಂದ ಒಂದು ವಾರ ಪ್ರತಿದಿನವೂ ರಾತ್ರಿ ೯ ಘಂಟೆಗೆ ವೇ|| ಹರಿಕಥಾ ವಿದ್ವಾನ್ ನರಸೀಪುರಂ ಶ್ರೀನಿವಾಸ ರಂಗಾಚಾರ್ಯರವರಿಂದ ಹರಿಕಥೆಗಳು ನಡೆಯುತ್ತವೆ ಆಸ್ತಿಕ ಮಹಾಶಯರು ದಯಮಾಡಿಸಬೇಕಾಗಿ ಪ್ರಾರ್ಥಿಸಲಾಗಿದೆ

ಪಠಾಣಿಸ್ತಾನ್ ಧ್ವಜ ಹಾರಿತು

ಪಾಕಿಸ್ಥಾನ-ಅಫ್ಘಾನಿಸ್ಥಾನಗಳ ನಡುವೆ ಇರುವ ಗುಡ್ಡಗಾಡು ಪ್ರದೇಶದಲ್ಲಿ ಪಠಾಣಿಸ್ಥಾನದ ಕೆಂಪು ಧ್ವಜವನ್ನು ಏರಿಸಲಾಯಿತೆಂದು ಗೊತ್ತಾಗಿದೆ. ಅಲ್ಲಿ ಪಠಾಣಿಸ್ಥಾನದ ಸ್ಥಾಪನೆಯನ್ನು ಘೋಷಿಸಲಾಯಿತೆಂದೂ, ಪಾಕಿಸ್ಥಾನವು ಅನುಸರಿಸುತ್ತಿರುವ ಆಕ್ರಮಣ ನೀತಿಯನ್ನು ಖಂಡಿಸಲಾಯಿತೆಂದೂ ಹೇಳಲಾಗಿದೆ.

ಸಿಮ್ಲಾದಲ್ಲಿ ನೀರಿಗೂ ರೇಷನ್

ವಿದ್ಯುಚ್ಛಕ್ತಿಯನ್ನು ತಯಾರಿಸುವ ಯಂತ್ರಗಳ ಪೈಕಿ ಒಂದಕ್ಕೆ ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟು ಹೋದುದರಿಂದ ಭಾರತದ ಬೇಸಿಗೆ ರಾಜಧಾನಿಯಾಗಿದ್ದ ಸಿಮ್ಲಾ ನಗರದಲ್ಲಿ ಈಗ ನೀರು ಮತ್ತು ವಿದ್ಯುಚ್ಛಕ್ತಿಗಳನ್ನು ಅಲ್ಲಿನ ನಿವಾಸಿಗಳಿಗೆ ರೇಷನ್ ಮೂಲಕ ಕೊಡಲಾಗುತ್ತಿ...

ಡಚ್ ಮತ್ತು ಇಂಡೋನೇಷ್ಯನ್ನರ ಸಂಧಾನ ಫಲಿಸಿತೇ?

ಡಚ್ ಮತ್ತು ಇಂಡೋನೇಷ್ಯದ ಪ್ರತಿನಿಧಿಗಳಿಗೆ ಉಂಟಾಗಿದ್ದ ವಾದ ವಿವಾದಗಳು ಬಗೆಹರಿದು ಉಭಯರಿಗೂ ಒಪ್ಪಂದವಾಗುವ ಸ್ಥಿತಿ ಏರ್ಪಟ್ಟಿದೆಯೆಂದು ಹೇಳಲಾಗಿದೆ

ಸಂಸ್ಥಾನಗಳ ನಾಯಕರಿಗೆ ಎಚ್ಚರಿಕೆ

ದೇಶದ ಹಿತವನ್ನು ಬಿಟ್ಟು ಅಧಿಕಾರ ಲಾಲಸೆ ಮತ್ತು ಸ್ವಾರ್ಥಸಾಧನೆಯಲ್ಲಿ ಸಂಸ್ಥಾನಗಳ ಮಂತ್ರಿಗಳು ನಿರತರಾದರೆ ಸದರಿ ಮಂತ್ರಿಮಂಡಲಗಳನ್ನೇ ರದ್ದು ಮಾಡಿ ಕೇಂದ್ರ ಸರ್ಕಾರದ ಮೂಲಕವೇ ಅಲ್ಲಿ ನೇರವಾಗಿ ಆಡಳಿತ ನಡೆಸುವುದಾಗಿ ಸರ್ದಾರ್ ಪಟೇಲರು ಎಚ್ಚರಿಕೆ ಕೊಟ್ಟಿದ್ದಾರೆ

...ಬೆಂಬಲ ...ಮೋದಿಸಲಾಯಿತು

ನಗರದ ಮಾರ್ಕೆಟ್ಟುಗಳನ್ನು ರಾತ್ರಿ ೮ ಗಂಟೆಯ ... ... ಗಂಟೆವರೆಗೆ ತೆಗೆದಿರತಕ್ಕದ್ದು ... ಮಂಡಿಸಿದ ನಿರ್ಣಯಗಳು ಅಂಗೀಕೃತವಾದುವು

ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ನೇಮಿತರಾಗಿರುವ ಪೌರಸಭಾ ಸದಸ್ಯರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರನ್ನು ಅಭಿನಂದಿಸುವ ನಿರ್ಣಯವೂ ಮಾಡಲ್ಪಟ್ಟಿತು ಅವರ ಈ ನೇಮಕವನ್ನು ಮಾಡುವಾಗ ಸರ್ಕಾರದವರು ಪೌರಸಭೆಯ ಸಲಹೆಯನ್ನು ತೆಗೆದುಕೊಳ್ಳಬೇಕಾಗಿತ್ತೆಂದೂ ಸಹ ಸೂಚಿಸಲಾಯಿತು

ವಾರ ಭವಿಷ್ಯ

೩-೫-೪೯ ರಿಂದ ೧೦-೫-೪೯ರ ವರೆಗೆ

ಮೇಷ — ಈ ವಾರ ಮೊದಲಿನ ದಿನಗಳ ಸಂಭವ ನಡೆಯುವ ವಿಚಾರಗಳು ಜರುಗುವುದರಿಂದ ಮನಸ್ಸು ತಳಮಳಗೊಳ್ಳುವುದು ಆದರೂ ಶಾಂತಿ ತಾಳಿರಿ ನೌಕರಿ ಸ್ಥಿತಿ ಮೇಲ್ಪಟ್ಟವರಿಂದ ಅಪವಾದ ಪ್ರತ್ಯುತ್ತರ ಬೇಡ ವ್ಯಾಪಾರಾದಿಗಳಲ್ಲಿ ಸಾಹಸಾದಿಗಳಿಂದ ಅಪಘಾತ ಸಂಭವ ತಾ॥ ೩, ೯, ೧೩ ಸಿದ್ಧಾ ನಾಶ

ವೃಷಭ ಈ ವಾರ ತಾಪದಾಯಕ ಆರ್ಥಿಕ ಸ್ಥಿತಿ ನೌಕರಿಸ್ಥಿತಿ ಚಿಂತಾ ಜನಕ. ರಾಜೀನಾಮೆ ಕೊಡಬೇಕೆನ್ನಿಸುವುದು ವ್ಯಾಪಾರಾದಿಗಳಲ್ಲಿ ಬಂಧು ಮಿತ್ರ ವಿರೋಧ ತಾ॥ ... ಕಲಹ ಕಾಲಿಗ ಗಾಯ

ಮಿಥುನ- ಯಾರಿಗೂ ಉಪದೇಶ ಬೇಡ ನಿಮ್ಮ ... ಸಂಪತ್ತಿಕ ಸ್ಥಿತಿ ... ಪ್ರವಾಸದಲ್ಲಿ ಜಯ ತಾ॥ ... ಸಾಧು ಸಂತರ ದರ್ಶನ

ಕರ್ಕ- ಸದ್ಯದ ಪರಿಸ್ಥಿತಿ ನಿಮಗೆ ಅನುಕೂಲ ... ಇತರ ಗ್ರಹಗಳು ... ಸಾಧ್ಯ ಸಾಧನವಾಗುತ್ತದೆ ಮನೋತ್ಸಾಹ ಕೋರ್ಟು ವ್ಯವಹಾರದಲ್ಲಿ ಜಯ ತಾ॥ ... ಕಿರುಕುಳ ಪ್ರವಾಸ ಮಹತ್ವ ಪತ್ರ ಆಗಮನ

ಸಿಂಹ— ಈ ವಾರದಲ್ಲಿ ಆಗುವ ಅಲ್ಪ ತಕ್ಕರಾರಿಗೆ ಉಗ್ರ ... ವಾರದ ಸಾಂಪತ್ತಿಕ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ಲಾಭ ... ಹಾನಿಯಿಲ್ಲ ಆರೋಗ್ಯ ... ಮನಸ್ಸಿನ ಚಾಂಚಲ್ಯ ವೃತ್ತಿ ಪ್ರವಾಸ ಬೇಡ ತಾ॥ ... ಶುಭವಾರ್ತೆ ದಮ್ಮನಾಶ.

ಕನ್ಯಾ- ಭಯಾನಕ ಕಠಿಣ ಪ್ರಸಂಗಗಳು ... ಆದರೆ ಗುರು ... ವ್ಯಾಪಾರೋದ್ಯೋಗ ನೌಕರಿ ಪ್ರವಾಸ ... ಸ್ಥಿತಿ ಸಾಧಾರಣ ತಾ॥ ... ಮಿತ್ರ ಸಹಾಯ

ತುಲಾ—ಪ್ರತಿ ಸ್ಪರ್ಧಿಗಳ ಉಪಟಲ ಧೈರ್ಯಗೆಡದೆ ನಡೆಯಿರಿ ಈ ವಾರ ಪತ್ನಿ ಆರೋಗ್ಯದ ಕಡೆ ಗಮನವಿರಲಿ ಸಾಂಪತ್ತಿಕ ಸ್ಥಿತಿ ಚೆನ್ನಾಗಿದೆ ಮನಸ್ಸಿನ ಸ್ಥಿತಿ ಸಾಗಿಲ್ಲ ವ್ಯಾಪಾರಾದಿಗಳ ಹಾನಿಯಾಗದಿದ್ದರೂ ತೊಂದರೆವುಂಟು ತಾ॥ ೪, ೯, ೧೦ ಇತರರು ತಪ್ಪು ತಿಳಿದುಕೊಳ್ಳುವರು ಹಾಲುಗಾರರಿಂದ ವಂಚನೆ, ಪ್ರಿಯವ್ಯಕ್ತಿ ವಿಯೋಗ

ವೃಶ್ಚಿಕ— ನಿಮ್ಮ ಪ್ರತಿ ಸ್ಪರ್ಧಿಗಳು ... ಬಗಾಗಿ ಒರುವ ಪ್ರಸಂಗ ವ್ಯಾಪಾರಾದಿಗಳಲ್ಲಿ ತೊಂದರೆ ದೂರವಾಗುವುದು ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು, ತಾ॥ ... ಪ್ರಿಯವಾರ್ತೆ ಕೋರ್ಟು ಕಾರ್ಯದಲ್ಲಿ ಜಯ

ಧನು — ನಿಮ್ಮ ಮತ್ತು ಪತ್ನಿಯ ಆರೋಗ್ಯ ... ಮಕ್ಕಳ ಆರೋಗ್ಯ ಚಿಂತಾಜನಕವಾಗುವುದು ಆರ್ಥಿಕ ವಿಚಾರ ಸಾಧಾರಣ ತಾ॥ ... ಅಲ್ಪ ಧನ ಲಾಭ ... ಮಿತ್ರರ ಭೇಟಿ

ಮಕರ ಸಂಸಾರ ದೃಷ್ಟಿಯಿಂದ ಚಮತ್ಕಾರವಿಷಯ ನಡೆಯುವುದು ಆರೋಗ್ಯ ಚನ್ನಾಗಿರದು ವ್ಯವಹಾರೋದ್ಯೋಗ ಸ್ಥಿತಿ ... ತಾ॥ ... ಪ್ರಕ್ಷುಬ್ಧ ಸ್ಥಿತಿ ಶಾಂತವಾಗುವುದು. ನದಿಗಳಿಂದ ಅಪಘಾತ

ಕುಂಭ ಉದ್ಯೋಗ, ಸಾಹಸ ಧೈರ್ಯ, ಪರಾಕ್ರಮ ಇವು ಇದ್ದವರಿಗೆ ದೈವ ಸಹಾಯವುಂಟು ಇದನ್ನರಿತು ವರ್ತಿಸಿರಿ ಈ ವಾರ ಆಲಸ್ಯದಿಂದ ಹಾನಿ ಸಂಭವ ಸಾಂಪತ್ತಿಕ ಸ್ಥಿತಿ ತಕ್ಕಮಟ್ಟಿಗೆ ಉತ್ತಮ ತಾ॥ ... ಧರ್ಮ ಕಾರ್ಯಕ್ಕಾಗಿ ಖರ್ಚು

ಮೀನ—ಮನಸ್ಸು ಬಿಗಿ ಹಿಡಿಯಿರಿ ಚಿತ್ತ ಚಾಂಚಲ್ಯ ಬೇಡ ಆರೋಗ್ಯ ಆರ್ಥಿಕ ಸ್ಥಿತಿಗಳು ಸಾಧಾರಣ ವ್ಯಾಪಾರಾದಿಗಳಲ್ಲಿ ನಿಮ್ಮ ಆಲಸ್ಯದಿಂದಲೇ ಹಾನಿ ಸಂಭವ ಪ್ರವಾಸ ಅನಿವಾರ್ಯವಾದರೆ ಕೈಗೊಳ್ಳಿರಿ ತಾ॥ ೧೦, ೧೧, ೧೨ ಆಕಸ್ಮಿಕ ಖರ್ಚು ಮನೋವ್ಯಥೆ

ಕಾರ್ಮಿಕರು ವಿನಾಶ ಕೃತ್ಯಗಳಲ್ಲಿ ತೊಡಗಬಾರದು

ಇಂದೂರಿನಲ್ಲಿ ಮೊನ್ನೆ ಪ್ರಾರಂಭವಾದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧಿವೇಶನದ ಆರಂಭೋತ್ಸವವನ್ನು ಸರ್ದಾರ್ ಪಟೇಲರು ನೆರವೇರಿಸಿ, ಕಾರ್ಮಿಕರು ವಿನಾಶ ಕೃತ್ಯಗಳಲ್ಲಿ ತೊಡಗದೇ ಮಹಾತ್ಮರ ಅಹಿಂಸಾ ತತ್ವವನ್ನು ಅನುಸರಿಸಬೇಕೆಂದು ತಿಳಿಸಿದರು ಕಾರ್ಮಿಕರ ಹಿತ ರಕ್ಷಣೆಯ ಒಂದಲ್ಲೇ ಪ್ರಪಂಚದಲ್ಲಿ ಶಾಂತಿ ನೆಲೆಸುವುದೆಂದೂ, ಕಮ್ಯೂನಿಸ್ಟರು ಕಾರ್ಮಿಕರ ಶತ್ರುಗಳೆಂದೂ, ಅವರನ್ನು ನಿರ್ಮೂಲ ಮಾಡಬೇಕೆಂದೂ ಅವರು ಹೇಳಿದರು

ಗಣಪತಿ ಅನುಯಾಯಿಗಳ ಕೊಲೆ

ಗಲ್ಲಿಗೇರಿಸಲ್ಪಟ್ಟ ಮಲೆಯಾ ಕಾರ್ಮಿಕರ ನಾಯಕರಾದ ಶ್ರೀ ಗಣಪತಿಯವರ ಸ್ಥಾನಕ್ಕೆ ಬಂದ ಶ್ರೀ ಪಿ ವೀರಸೇನನ್‌ರವರನ್ನು ಗೂರ್ಖಾ ಸೈನಿಕರು ಗುಂಡಿನಿಂದ ಹೊಡೆದು ಸಾಯಿಸಿದರೆಂದು ಹೇಳಲಾಗಿದೆ ಗೊರಿಲ್ಲಾ ಕೇಂದ್ರದಿಂದ ಪರಾರಿಯಾಗುತ್ತಿದ್ದಾಗ ಅವರನ್ನು ಕೊಲೆ ಮಾಡಲಾಯಿತೆಂದು ವರದಿಯಾಗಿದೆ

Edited, printed, and Published by A R Nagarajan at the Sadhvi Press D Subbiah Road, Mysore

ರಷ್ಯದ ಸ್ಟಾಲಿನ್ ರವರು ಅತ್ಯಂತ ಐಶ್ವರ್ಯವಂತರ

ರಷ್ಯದ ಸ್ಟಾಲಿನ್ ರವರು ಪ್ರಪಂಚದ ಅತ್ಯಂತ ದೊಡ್ಡ ಐಶ್ವರ್ಯವಂತರೆಂದೂ, ವರಿಗೆ ಕಳೆದ ೧೦-೧೫ ವರ್ಷಗಳಿಂದ ರದಾದ್ಯಂತ ಬಂದಿರುವ ಮರ್ಯಾದೆಗಳ ಲೆಯು ಅಗಾಧವಾಗಿರುವುದೆಂದೂ ... ಪತ್ರಿಕೆಯೊಂದು ಪ್ರಕಟಿಸಿದೆ

ದೇಶಾದ್ಯಂತ ಆಹಾರ ಸಚಿವರ ಪ್ರವಾಸ

ದೇಶದಲ್ಲಿ ಆಹಾರ ಪರಿಸ್ಥಿತಿಯ ... ಪರಿಶೀಲಿಸಲು, ಕೇಂದ್ರ ... ರದ ಆಹಾರ ಸಚಿವರಾದ ಶ್ರೀ ಜಂ ದಾಸ್ ದೌಲತ ರಾಂರವರು ... ದ್ಯಾಂತ ಪ್ರವಾಸ ಮಾಡುವರೆಂದು ... ಒಂದಿದೆ

ಜಯ ಹಿಂದ್ ಕೆ...

ಹೊಸ ಡಿಸೈನ್ಸ್ ಪಂಚೆಗಳೂ, ಸೀರೆ... ದ ವಾಯಿಲ್‌ಗಳೂ ಮತ್ತು ಬಣ್ಣ... ದ ಸೀರೆಗಳೂ ಬಂದಿರುತ್ತವೆ

- ಸ್ಪೆಷಲ್ ತಯಾರಿ -

ನಮ್ಮ ಸ್ವಂತ ಮಗ್ಗದಿಂದ ಮೈಸೂರಿನಲ್ಲಿ ಕ್ರೇಪ್, ಬೆಂಗಳೂರು, ಧರ್ಮಾವರದ ಸೀರೆಗಳು ಗ್ಯಾರಂಟಿಯಾಗಿ ... ಯುತ್ತವೆ ದಯವಿಟ್ಟು ಇಂದೇ ... ಕೊಡಿ

ಗುರುದೇವಾ ಹಾಲ್

ಶಿವರಾಂಪೇಟೆ, ಮೈಸೂರು

ರಾಜಕಮಲ್, ಮೈಸೂರು

6-5-49ರಿಂದ ಆರಂಭ

ಫಿಲಂಸ್ತಾನರವರ ಹಿಂದಿ ಚಿತ್ರ

ಷಹೀದ್

ತಾರೆ
ದಿಲೀಪ್ ಕುಮಾರ್
ಕಾಮಿನಿ ಕೌಶಲ್
ಚಂದ್ರಮೋಹನ್

ದೇಶ ಸ್ವಾತಂತ್ರ್ಯಕ್ಕಾಗಿ ... ಭಾರತ ಸ್ವಾತಂತ್ರ್ಯದ ... ತ್ಯಾಗ ...



MORNING SHOWS From 6-5-49 for 4 days

CALENDAR GIRL

With Jane Frazee William Marshall Gail Patrick

ಪೂರ್ಣ ಚಂದ್ರನ ವರಪ್ರಸಾದ!

... ಆಯುರ್ವೇದ ... ಭಾರತೀಯ ಆಯುರ್ವೇದ ವಿಜ್ಞಾನ ... ಪೂರ್ಣ ಚಂದ್ರನ ... ಆಯುರ್ವೇದಾಶ್ರಮ ಫಾರ್ಮಸಿ ...

AYURVEDASHRAM

PHARMACY LTD. AHMEDNAG...

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೭] ಸೋಮವಾರ ೯-೫-೪೯ [ಸಂಚಿಕೆ ೩೨೫

ಮೈಸೂರಿನಲ್ಲಿ ಸ್ಥಳೀಯ ಸಂಸ್ಥೆಗಳ ಒಕ್ಕೂಟವೇ?

ಮಳೆ ಗಾಳಿಗೆ ಸಿಕ್ಕಿ ಹುಡುಗ ಕೊಚ್ಚಿಹೋದನು

ಮೈಸೂರು ೯

ಮೊನ್ನೆ ಸಂಜೆ ವಿಪರೀತ ಮಳೆ ಮತ್ತು ಗಾಳಿ ಉಂಟಾಗಿ, ಅನೇಕ ಮರಗಳು ಬಿದ್ದುಹೋಗಿ, ಸಂಚಾರಕ್ಕೆ ಅನಾನುಕೂಲವಾಯಿತು. ವಿದ್ಯುಚ್ಛಕ್ತಿ ತಂತಿಗಳು ಕತ್ತರಿಸಿ ಹೋಗಿ, ೩ ಗಂಟೆ ಕಾಲ ನಗರದಲ್ಲಿ ದೀಪವಿರದೆ ಕಗ್ಗತ್ತಲೆ ಕವಿದುಕೊಂಡಿತ್ತು.

ಚಾಮುಂಡಿ ಬಡಾವಣೆಯಲ್ಲಿರುವ ರಾಜ ಪದ್ಮನಾಭ ಮೊದಲಿಯಾರ್ ಎಂಬುವರ ೧೦ ವರ್ಷದ ಮಗ ಗೋಪಾಲ್ ಎಂಬ ಹುಡುಗನು ತನ್ನ ತಮ್ಮನೊಡನೆ ಇಟ್ಟಿಗೆ ಗೂಡಿನಲ್ಲಿರುವ ಸಂಬಂಧೀಕರ ಮನೆಗೆ ಮೊನ್ನೆ ಸಂಜೆ ಹೋಗುತ್ತಿರುವಾಗ, ಮಳೆಗಾಳಿಗೆ ಸಿಕ್ಕಿಕೊಂಡು ಆತನು ಸಮೀಪದ ಹಳ್ಳ ಬಚ್ಚಲಿಗೆ ಬಿದ್ದು ಕೊಚ್ಚಿಕೊಂಡು ಹೋದನೆಂದೂ, ನಂಜನಗೂಡು ಟೋಲ್‌ಗೇಟ್ ಹತ್ತಿರವಿರುವ ನಾಲೆಯಲ್ಲಿ ಆತನ ಶವವು ಪತ್ತೆ ಆಯಿತೆಂದೂ ತಿಳಿದುಬಂದಿದೆ.

ಸಂಗೀತ ಕಛೇರಿ

ಬಸವೇಶ್ವರ ಜಯಂತಿ ಪ್ರಯುಕ್ತ ಈ ದಿನ ಸಂಜೆ ೭ ಗಂಟೆಯಿಂದ ವಾಣೀವಿಲಾಸ ರಸ್ತೆಯ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿ ಆ॥ ಪಿ॥ ದೇವೇಂದ್ರಪ್ಪನವರ ಸಂಗೀತವು ನಡೆಯುವುದು.

ಚೌಧುರಿಯವರ ಆಗಮನ

ಹೈದರಾಬಾದು ಮಿಲಿಟರಿ ಗವರ್ನರ್ ಮೇಜರ್ ಜ॥ ಚೌಧುರಿಯವರು ಈ ದಿನ ಬೆಳಿಗ್ಗೆ ನೀಲಗಿರಿಯಿಂದ ರಾಜಧಾನಿಗೆ ಆಗಮಿಸಿ ವಿಶೇಷ ವಿಮಾನದಲ್ಲಿ ಹೈದರಾಬಾದಿಗೆ ತೆರಳಿದರು.

ವಾರ್ಷಿಕೋತ್ಸವ

ಸರ್ಕಾರಿ ಮುದ್ರಣಾಲಯದ ಮೈಸೂರು ಶಾಖೆಯ ಕೆಲಸಗಾರರ ಸಂಘದ ವಾರ್ಷಿಕೋತ್ಸವವು ಇದೇ ತಿಂಗಳಿನ ಕೊನೆಯ ವಾರದಲ್ಲಿ ಅಥವ ಮುಂದಿನ ತಿಂಗಳು ಮೊದಲನೆ ವಾರದಲ್ಲಿ ನಡೆಯುವುದೆಂದೂ ದಿವಾನರಾದ ಸರ್. ಎ. ರಾಮಸ್ವಾಮಿ ಮೊದಲಿಯಾರ್‌ರವರು ಅಧ್ಯಕ್ಷತೆ ವಹಿಸಲೊಪ್ಪಿರುವರೆಂದೂ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ.

ಎಕ್ಕಾ ಗಾಡಿಗಳ ರದ್ದು

ಮುಂದಿನ ವರ್ಷದ ಏಪ್ರಿಲ್ ತಿಂಗಳಿನಿಂದ ಎಕ್ಕಾ ಗಾಡಿಗಳನ್ನು ರದ್ದು ಮಾಡಲು ಕಾನಪುರದ ಪುರಸಭೆಯವರು ನಿರ್ಧರಿಸಿದ್ದಾರೆ. ಆಧುನಿಕ ವಾಹನಗಳ ವ್ಯವಸ್ಥೆ ಮಾಡುವುದೇ ಇದರ ಉದ್ದೇಶವೆಂದು ಹೇಳಲಾಗಿದೆ.

ಚಿತ್ತಗಾಂಗ್ ಕಣಿವೆಯ ಅಭಿವೃದ್ಧಿ

ಮೆಂಕರ ಟಿನ್ನಿಸ್ಸ ಕಣಿವೆ ಯೋಜನೆಯಂತೆ ಚಿತ್ತಗಾಂಗಿನ ಕಣಿವೆಯನ್ನು ಅಭಿವೃದ್ಧಿಪಡಿಸಿ, ಅದನ್ನು ಪೂರ್ವ ರಾಷ್ಟ್ರದ ಪ್ರಮುಖ ಬಂದರನ್ನಾಗಿ ಮಾಡಲು ಪಾಕಿಸ್ತಾನ ಸರ್ಕಾರದವರು ಆಲೋಚಿಸುತ್ತಿದ್ದಾರೆ.

ಕೋರ್ಟಿನಲ್ಲಿ ಅರವಿಂದರ ಭಾವಚಿತ್ರ

ಕಲ್ಕತ್ತದ ಅಲಿಪುರದ ನ್ಯಾಯಾಧೀಶರ ಕೋರ್ಟಿನಲ್ಲಿ ಶ್ರೀ ಅರವಿಂದ ಘೋಷರ ಭಾವಚಿತ್ರದ ಅನಾವರಣ ಮಾಡಲಾಗಿದೆ.

ಕೋರ್ಟಿನಲ್ಲಿ ೪೦ ವರ್ಷಗಳ ಹಿಂದೆ ಶ್ರೀ ಅರವಿಂದರು ಬಾಂಬು ಮೊಕದ್ದಮೆಯಲ್ಲಿ ವಿಚಾರಣೆಗೆ ಗುರಿಯಾಗಿದ್ದರು.

ಖಾಸಗಿಯವರಿಂದ ಪಠ್ಯ ಪುಸ್ತಕಗಳ ಪ್ರಕಟಣೆ

ಬೆಂಗಳೂರು ೯

ನೆನ್ನೆ ಇಲ್ಲಿ ನಡೆದ ಸಂಸ್ಥಾನದ ಪುಸ್ತಕ ವ್ಯಾಪಾರಿಗಳ ಮತ್ತು ಪ್ರಕಾಶಕರ ಸಮ್ಮೇಳನದ ಪ್ರಾರಂಭೋತ್ಸವವನ್ನು ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನೆರವೇರಿಸಿ, ದೇಶದಲ್ಲಿರುವ ಅನಕ್ಷರತೆಯನ್ನು ನಿರ್ಮೂಲ ಮಾಡಬೇಕೆಂದೂ, ಇನ್ನು ೫-೧೦ ವರ್ಷಗಳಲ್ಲಿ ಓದುವ ಪುಸ್ತಕಗಳ ಅವಶ್ಯಕತೆ ಹೆಚ್ಚುವುದೆಂದೂ, ಅದಕ್ಕೆ ಪುಸ್ತಕ ವ್ಯಾಪಾರಿಗಳೂ ಮತ್ತು ಪ್ರಕಾಶಕರೂ ಸಹಾಯ ಮಾಡಬೇಕೆಂದೂ ತಿಳಿಸಿದರು. ಈಗ ಪಠ್ಯಪುಸ್ತಕಗಳನ್ನು ಸರ್ಕಾರದವರು ಮುದ್ರಿಸುತ್ತಿರುವ ಕಾರ್ಯವನ್ನು ಖಾಸಗೀಯವರು ಮಾಡುವುದಾದರೆ ಅದನ್ನು ವಹಿಸಿಕೊಡಲು ಸರ್ಕಾರದವರು ಸಿದ್ಧರಾಗಿರುವರೆಂದೂ ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರವರು ಭಾಷಣಮಾಡಿ, ಕೇವಲ ಲಾಭದ ಆಸೆಗಾಗಿ ಪುಸ್ತಕಗಳನ್ನು ಪ್ರಕಟಿಸಬಾರದೆಂದು ಹೇಳಿದರು.

೨೪ ಸಾವಿರ ಟನ್ ಧಾನ್ಯಕ್ಕೆ ೧ ಕೋಟಿ ರೂ. ವೆಚ್ಚ

ಪರದೇಶಗಳಿಂದ ೨೪ ಸಾವಿರ ಟನ್ ಆಹಾರ ಧಾನ್ಯಗಳನ್ನು ಪಡೆಯಲು ೧ ಕೋಟಿ ರೂ ವೆಚ್ಚವಾಗಿರುವುದೆಂದು ಕೇಂದ್ರ ಸರ್ಕಾರದವರು ತಿಳಿಸಿರುತ್ತಾರೆ.

ಗುಜರಾತಿನಲ್ಲಿ ಕ್ಷಾಮ

ಗುಜರಾತ್ ಮತ್ತು ಸೌರಾಷ್ಟ್ರಗಳಲ್ಲಿ ಘೋರ ಕ್ಷಾಮವು ತಲೆದೋರಿದೆಯೆಂದೂ, ಆಹಾರ ಪದಾರ್ಥಗಳನ್ನು ಕೂಡಲೇ ಅಲ್ಲಿಗೆ ಕಳುಹಿಸಬೇಕೆಂದೂ ಅಹಮದಾಬಾದಿನ ಗಿರಣಿ ಮಾಲೀಕರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಹಳ್ಳಿಗಳಿಗೆ ಹುತಾತ್ಮರ ಹೆಸರು

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಹುತಾತ್ಮರ ಜ್ಞಾಪಕಾರ್ಥವಾಗಿ ಈಗಿರುವ ಹಳ್ಳಿಗಳ ಹೆಸರನ್ನು ಬದಲಾಯಿಸಿ ಹುತಾತ್ಮರ ಹೆಸರುಗಳನ್ನಿಡಬೇಕೆಂದು ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸಮಿತಿಯು ನಿರ್ಣಯಮಾಡಿದೆ.

ಬಿರುಗಾಳಿಯಿಂದ ಇಬ್ಬರ ಮರಣ

ಕಲ್ಕತ್ತದಲ್ಲಿ ಮೊನ್ನೆ ದಿನ ಗಂಟೆಗೆ ೭೨ ಮೈಲಿ ವೇಗದ ಪ್ರಚಂಡಮಾರುತವು ಸಂಭವಿಸಿ, ಇಬ್ಬರು ಸತ್ತರೆಂದೂ, ಮತ್ತೊಬ್ಬರಿಗೆ ತೀವ್ರ ಗಾಯವಾಗಿದೆಯೆಂದು ಹೇಳಲಾಗಿದೆ ೨॥ ಗಂಟೆಕಾಲ ಎಲ್ಲ ವಾಹನಗಳೂ ನಿಂತಿದ್ದವು. ಅನೇಕ ಮರಗಳು ಮತ್ತು ಮನೆಗಳು ಬಿದ್ದುಹೋದವು.

ಧಾರವಾಡದಲ್ಲಿ ರೇಡಿಯೋ ಕೇಂದ್ರ

ಇನ್ನು ೩॥ ತಿಂಗಳೊಳಗಾಗಿ ಧಾರವಾಡದಲ್ಲಿ ರೇಡಿಯೋ ಕೇಂದ್ರವೊಂದನ್ನು ಸ್ಥಾಪಿಸಲಾಗುವುದೆಂದು ತಿಳಿಸಲಾಗಿದೆ.

ರಂಗೂನ್ ದೇವಾಲಯದ ಮೇಲೆ ಧಾಳಿ

ರಂಗೂನ್ ನಗರದಲ್ಲಿರುವ ಚೆಟ್ಟಿಯಾರ್‌ರವರಿಗೆ ಸೇರಿದ ಹಿಂದೂ ದೇವಾಲಯ ಪ್ರಾಂತದ ಮೇಲೆ ದಂಗೆಕೋರರು ಧಾಳಿ ನಡೆಸಿ ಅಲ್ಲಿದ್ದ ವಸ್ತ್ರ ಮತ್ತು ಇತರ ಅಮೂಲ್ಯ ಆಭರಣಗಳನ್ನು ಅಪಹರಿಸಿಕೊಂಡು ಹೋದರೆಂದು ಹೇಳಲಾಗಿದೆ.

ಕಳ್ಳರ ಹಳ್ಳಿ

ಸಿಂಧ್ ಕರಾಚಿಯ ಟಾಟಾ ಎಂಬ ಜಿಲ್ಲೆಗೆ ಸೇರಿದ ಗಮು ಹಳ್ಳಿಯ ಜನರೆಲ್ಲರೂ ಕಳ್ಳರೆಂದೂ, ಅವರು ಗಳು ಸೋದ ಜನಾಂಗಕ್ಕೆ ಸೇರಿದವರೆಂದೂ, ಲೂಟಿ ಮಾಡಿ ಜೀವಿಸುವುದೇ ಅವರ ಕಸುಬೆಂದು ಹೇಳಲಾಗಿದೆ. ಈಗ ಪೋಲೀಸರು ತಕ್ಕ ಕಾರ್ಯಕ್ರಮ ಕೈಗೊಳ್ಳುತ್ತಿದ್ದಾರೆ.

ಕ್ಯಾಥೋಲಿಕ್ ಯುವಕ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಕ್ಯಾಥೋಲಿಕ್ ಯುವಕರ ಸಂಘದ ನಾಲ್ಕನೆ ವಾರ್ಷಿಕೋತ್ಸವವು ನೆನ್ನೆ ಫಿಲೋಮಿನಾ ದೇವಾಲಯದಲ್ಲಿ ನಡೆಯಿತು. ರೋಮಿನಿಂದ ಪೋಪರ ಪ್ರತಿನಿಧಿಯಾಗಿ ಭಾರತಕ್ಕೆ ಬಂದಿರುವ ಚಾರ್ಲೆಸ್ ಲಿವೆರ ಅವರ ನೇತೃತ್ವದಿಂದ ಬೆಳಿಗ್ಗೆ ಪ್ರಾರ್ಥನಾ ಪೂಜೆ ಜರುಗಿತು. ಸಂಜೆ ಬೋಗಾದಿ ಮೆರವಣಿಗೆಯೂ, ಮೈಸೂರಿನ ಬಿಷಪ್ ರ ಅಧ್ಯಕ್ಷತೆಯಲ್ಲಿ ಸಭೆಯೂ ನಡೆದವು.

ಹೊಸ ಸಂಯುಕ್ತ ಸ್ಥಳೀಯ ಸಂಸ್ಥೆಯ ರಚನೆಯೋ?

ಸ್ವಂ. ಸು ಫೋ॥] ಬೆಂಗಳೂರು ೯

ಸಂಸ್ಥಾನದಲ್ಲಿ ಈಗಿರುವ ಜಿಲ್ಲಾ ಬೋರ್ಡು, ಗ್ರಾಮಾಭಿವೃದ್ಧಿ ಸಮಿತಿ, ಮತ್ತು ಗ್ರಾಮ ಪಂಚಾಯಿತಿಗಳು ನಡೆಸುತ್ತಿರುವ ಕಾರ್ಯಗಳನ್ನು ಒಟ್ಟುಗೂಡಿಸಿ ಒಂದು ಹೊಸ ಸಂಯುಕ್ತ ಸ್ಥಳೀಯ ಸಂಸ್ಥೆಯನ್ನು ರಚಿಸಲು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ಸ್ಥಳೀಯ ಸಂಸ್ಥೆಯ ಸಚಿವರಾದ ಶ್ರೀ ಆರ್. ಚೆನ್ನಿಗರಾಮಯ್ಯನವರು ತುಮಕೂರು ಜಿಲ್ಲಾ ಬೋರ್ಡಿನವರು ಮೊನ್ನೆ ದಿನ ಅವರಿಗೆ ಅರ್ಪಿಸಿದ ಮಾನ ಪತ್ರದ ಸಮಯದಲ್ಲಿ ತಿಳಿಸಿರುತ್ತಾರೆ.

ಜಿನೀವಾಕ್ಕೆ ಭಾಷ್ಯಂರವರು

ಮುಂದಿನ ತಿಂಗಳು ೧೫ನೇ ತಾ॥ ಜಿನೀವಾದಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾರತ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಲು ಕಾರ್ಮಿಕ ಸಚಿವರಾದ ಶ್ರೀ ಕೆ.ಟಿ ಭಾಷ್ಯಂರವರು ಬರುವ ತಿಂಗಳು ಮೊದಲನೇ ವಾರದಲ್ಲಿ ಅಲ್ಲಿಗೆ ಪ್ರಯಾಣ ಬೆಳೆಸುವರೆಂದು ತಿಳಿದುಬಂದಿದೆ.

ದೇವರನ್ನು ಸೇರಲು ೩೩ ದಿನಗಳ ಉಪವಾಸ

ಸಿಂಹಳ ದ್ವೀಪದ ಸುಪ್ರಸಿದ್ಧ ಕಾಟರಾಮನ ದೇವಾಲಯದಲ್ಲಿ ಪರಮಾತ್ಮನನ್ನು ಸೇರುವ ಉದ್ದೇಶದಿಂದ ೪೫ ವರ್ಷದ ಸ್ವಾಮಿ ರಾಮಸಿಕ್ಕಿ ಎಂಬುವರು ಕಳೆದ ೩೩ ದಿನಗಳಿಂದಲೂ ಉಪವಾಸ ಮಾಡುತ್ತಾ ಧ್ಯಾನದಲ್ಲಿ ಮಗ್ನರಾಗಿದ್ದರು. ಪರಲೋಕವನ್ನು ಸೇರಲು ಇನ್ನೂ ಕಾಲಾವಕಾಶವಿರುವುದರಿಂದ ಆಹಾರವನ್ನು ಸೇವಿಸುವಂತೆ ಹೊಸ ವರ್ಷದ ದಿನ ಅವರಿಗೆ ಕಾಟರಾಮನು ಸ್ವಪ್ನದಲ್ಲಿ ತಿಳಿಸಿದನೆಂದೂ ಅನಂತರ ಅವರು ಊಟ ಮಾಡಿದರೆಂದೂ ವರದಿಯಾಗಿದೆ.

ಹಿಂದೂ ಮಹಾಸಭೆಗೆ ಪುನಃ ರಾಜಕೀಯ

ಹಿಂದೂ ಮಹಾಸಭೆಯು ಪುನಃ ರಾಜಕೀಯ ಚಟುವಟಿಕೆಗಳನ್ನು ಕೈಗೊಳ್ಳಬೇಕೆಂದು ದೆಹಲಿಯಲ್ಲಿ ನೆನ್ನೆ ನಡೆದ ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯಕಾರೀ ಮಂಡಲಿಯಲ್ಲಿ ನಿರ್ಣಯ ಮಾಡಲಾಗಿದ. ಯಾವ ಪಕ್ಷ ಅಥವ ಖಾಸಗೀಯವರ, ಸಭೆ ಸಂಘ ಕಾರ್ಯಗಳಲ್ಲಿ ಭಾಗವಹಿಸಬಹುದೆಂದೂ ತಿಳಿಸಲಾಗಿದೆ.

ಅಕ್ರಮ ತೂಕದ ಬಟ್ಟುಗಳಿದ್ದುದಕ್ಕೆ ದಂಡ

ರಾಜಧಾನಿಯ ಮಾನಂದವಾಡಿ ರಸ್ತೆಯಲ್ಲಿರುವ ಚಿಲ್ಲರೆ ಅಂಗಡಿ ಮಾಲೀಕರಾದ ಶ್ರೀ ಬಿ ಎಸ್ ನಾಗಪ್ಪನವರು ಸರ್ಕಾರಿ ಮುದ್ರೆಯಿಲ್ಲದ ತೂಕದ ಬಟ್ಟುಗಳನ್ನು ಉಪಯೋಗಿಸುತ್ತಿದ್ದರೆಂದು ಅವರಿಗೆ ನಗರ ನ್ಯಾಯಾಧೀಶರು ಈ ದಿನ ೨೦ ರೂ. ದಂಡ ವಿಧಿಸಿರುತ್ತಾರೆ.

○ ಗುಜರಾತಿನಲ್ಲಿ ೩ ಲಕ್ಷ ಜಾನುವಾರುಗಳಿಗೆ ಆಹಾರ ಸಿಕ್ಕದೆ ಸಾಯುವ ಸ್ಥಿತಿ ಒದಗಿದೆಯೆಂದೂ, ಹೊರಗಿನಿಂದ ಹುಲ್ಲನ್ನು ತರಿಸಲು ರೈಲ್ವೆ ವಾಗನ್ನುಗಳ ಅಭಾವವೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಭೂ ಕಂದಾಯ ರದ್ದಾಗಬೇಕು

ರೈತರ ಸಭೆಯಲ್ಲಿ ನಿರ್ಧಾರ

ಮೈಸೂರು,

ಚಾಮರಾಜನಗರ ತಾಲ್ಲೂಕು ಸಂತೇಮರಹಳ್ಳಿ ಹೋಬಳಿ ರೈತರ ಸಂಘದ ಪ್ರಾರಂಭೋತ್ಸವವನ್ನು ..... ಬೋರ್ಡು ಅಧ್ಯಕ್ಷರಾದ ಶ್ರೀ ..... ಬಸಪ್ಪನವರು ನಿನ್ನೆ ..... ನೆರವೇರಿಸಿದರು

ಶ್ರೀ ಕೆ ಪಿ ಕುಮಾರಸ್ವಾಮಿಯವರಿಂದ ಪ್ರಾರ್ಥನೆಯಾದನಂತರ ..... ಶ್ರೀ ಕೆ ಎಸ್ ..... ಸಿದ್ದಪ್ಪನವರ ಸ್ವಾಗತ ..... ಮಾಡಿದರು

ರಾಜ್ಯ ..... ಸಭಾ ಸದಸ್ಯರಾದ ಶ್ರೀ ಬಿ ಎಂ ..... ಶ್ರೀ ರೇವಣ್ಣ, ... ಶ್ರೀ ಶಿವಪ್ಪ ..... ಶ್ರೀ ..... ಮತ್ತು ಇತರರು ಭಾಷಣ ಮಾಡಿ ರೈತರ ಸಂಘಟನೆಯ ಆವಶ್ಯಕತೆ, ಪ್ರ..... ಪ್ರಭುತ್ವದಲ್ಲಿ ರೈತರ ಕರ್ತವ್ಯ ಮತ್ತು ಕರ್ನಾಟಕದಲ್ಲಿ ಶಾಸನಬದ್ಧ ರಾಜತ್ವದ ಆವಶ್ಯಕತೆಗಳನ್ನು ವಿವರಿಸಿದರು

ಅಧ್ಯಕ್ಷರು ಭಾಷಣ ಮಾಡಿ, ಇಂದಿನ ರಾಜಕೀಯ ಪರಿಸ್ಥಿತಿ, ರೈತರ ಕುಂದುಕೊರತೆಗಳು, ಪ್ರಜಾ ಸರ್ಕಾರದಲ್ಲಿ ರೈತರ ಕರ್ತವ್ಯ, ರಾಜ್ಯಾಂಗ ರಚನೆಯಲ್ಲಿ ರೈತರು ಅನುಸರಿಸಬೇಕಾದ ನೀತಿ, ಭೂಕಂದಾಯದ ಲೋಪದೋಷಗಳು, ಮುಂತಾದುವುಗಳನ್ನು ವಿವರಿಸಿದರು ಕರ್ನಾಟಕ ಪ್ರಾಂತ್ಯ ರಚನೆಯಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸ್ಥಾನಮಾನಗಳಿಗೆ ಚ್ಯುತಿ ಬಾರದಂತೆ ಶಾಸನಬದ್ಧ ರಾಜತ್ವವು ಇರಬೇಕಾದ ವಿಚಾರವನ್ನೂ ಅವರು ಪ್ರಸ್ತಾಪಿಸಿದರು

ಅನಂತರ ಕೆಳಗೆಕಂಡ ನಿರ್ಣಯಗಳು ಅಂಗೀಕೃತವಾದುವು

ಇಂದಿನ ಭೂಕಂದಾಯದ ನೀತಿಯು ನ್ಯಾಯ ಮತ್ತು ಧರ್ಮಕ್ಕೆ ದೂರವಾಗಿದೆ ಕೇವಲ ಭೂಸ್ವಾಮ್ಯದ ಆಧಾರದ ಮೇಲೆ ಕಂದಾಯ ನಿರ್ಧಾರದ ಮಾಡುವ ನೀತಿ ನ್ಯಾಯ ಬಾಹಿರವಾದದು ಉತ್ಪತ್ತಿಯ ಮೇಲೆಯೇ ಕಂದಾಯವನ್ನು ಹಾಕಬೇಕು ಆದುದರಿಂದ ಭೂಕಂದಾಯವು ಸಂಪೂರ್ಣವಾಗಿ ರದ್ದಾಗಬೇಕು

ಇಂದಿನ ಆಹಾರ ನೀತಿಯಿಂದ ಗ್ರಾಮಾಂತರ ಜನರಿಗೆ ಕಷ್ಟಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಪರ್ಮಿಟ್ ಆಜ್ಞೆಗಳು ಕೂಡಲೇ ರದ್ದಾಗಬೇಕು

ಮೈಸೂರಿನ ಭವಿಷ್ಯವನ್ನು ನಿರ್ಧಾರ ಮಾಡತಕ್ಕ ಸಂಪೂರ್ಣ ಅಧಿಕಾರವು ಮೈಸೂರಿನವರಿಗೇ ಸೇರಿದ್ದು ಮೈಸೂರಿನಲ್ಲಿ ಶಾಸನಬದ್ಧ ರಾಜತ್ವವನ್ನೊಳಗೊಂಡ ಪ್ರಜಾ ಸರ್ಕಾರವೇ ಇರತಕ್ಕದ್ದು ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕಾದಲ್ಲಿ ಮೈಸೂರಿನ ವೈಶಿಷ್ಟ್ಯ ಮತ್ತು ವ್ಯಕ್ತಿತ್ವಕ್ಕೆ ವಿರೋಧವಾಗದ ರೀತಿಯಲ್ಲಿ ಮೈಸೂರಿನ ಜೊತೆಗೆ ಇತರ ಪ್ರಾಂತ್ಯಗಳಲ್ಲಿ ಸೇರಬಹುದೇ ವಿನಾ ಮೈಸೂರು ಇತರ ಪ್ರಾಂತ್ಯಗಳಲ್ಲಿ ಸೇರಲು ಸಾಧ್ಯವಿಲ್ಲ

ಬ್ರಾಹ್ಮಣರ ಸಭೆ

..... ಮೈಸೂರು ಬ್ರಾಹ್ಮಣರ ಮಹಾಸಭಾ ನಗರಶಾಖೆಯ ಶ್ರೀಮತಸ್ಥ ಬ್ರಾಹ್ಮಣ ಮಹಾಶಯರ ಸಾಧಾರಣ ಸಭೆಯು ೧೦-೫-೪೯ ನೇ ಮಂಗಳವಾರ ಸಾಯಂಕಾಲ ೬-೩೦ ಗಂಟೆಗೆ ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನ(ಪಾಠಶಾಲೆ)ಲ್ಲಿ ಏರ್ಪಡಿಸಿದ ಶ್ರೀಮತಸ್ಥ ಬ್ರಾಹ್ಮಣ ಮಹಾಶಯರೂ ದಯಮಾಡಿಸಬೇಕಾಗಿ ಕಾರ್ಯದರ್ಶಿಗಳಾದ ಶ್ರೀ ವಿ ಲಿಂಗಪ್ಪಯ್ಯನವರು ಕೋರಿರುತ್ತಾರೆ

ಹರಿಕಥೆ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿ ದಾಸರ ಗುಡಿಯ ಹತ್ತಿರ ಹಾಕಿರುವ ಚಪ್ಪರದಲ್ಲಿ ಈ ದಿನ ರಾತ್ರಿ ೯-೩೦ ಗಂಟೆಗೆ ವೇ॥ ಬ್ರ॥ ನಾರಾಯಣ ದಾಸರಿಂದ ಶತಕಂಠ ರಾವಣ ಎಂಬ ಹರಿಕಥೆಯು ನಡೆಯುತ್ತದೆ

ಪೆಟ್ರೋಲ್ ಹಂಚಿಕೆ

ಮೈದಾನ ಪ್ರದೇಶದ ಮೋಟಾರುಗಳಿಗೆ ತಿಂಗಳಿಗೆ ೨೦ ದಿನಕ್ಕೂ ಮಲೆನಾಡಿನಲ್ಲಿ ೧೮ ದಿನಕ್ಕೂ ಮೇಲ್ ಮೋಟಾರುಗಳಿಗೆ ೩೦ ದಿನಕ್ಕೂ ಪೆಟ್ರೋಲನ್ನು ಒದಗಿಸುವುದಾಗಿ ಸರ್ಕಾರದವರು ತಿಳಿಸಿದ್ದಾರೆ

ಸಂಸ್ಥಾನದಿಂದ ಗಡೀಪಾರು

ಕೋಲಾರದ ಕಾರ್ಮಿಕ ನಾಯಕರಾದ ಶ್ರೀ ಕೆ ಸರ್ವಜ್ಞಮೂರ್ತಿಯವರನ್ನು ಸರ್ಕಾರದವರು ಸಂಸ್ಥಾನದಿಂದಾಚೆಗೆ ಗಡೀಪಾರು ಮಾಡಿದ್ದಾರೆ

ರಾಜಾಜಿ ಒಪ್ಪಿಗೆ

ಈ ತಿಂಗಳು ೧೬ನೇ ತಾ॥ ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ವೃತ್ತಪತ್ರಿಕಾ ಕರ್ತರ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಲು ಗೌರ್ನರ್ ಜನರಲ್ ರಾಜಾಜಿಯವರು ಒಪ್ಪಿದ್ದಾರೆ

ಪ್ರಭಾ ★

ದಿನ ಮೂರು ಆಟಗಳು
ಆಲ್ ಇಂಡಿಯಾ ಪಿಕ್ಚರ್ಸ್‌ರವರ

— ಪಗರಿ — (ಹಿಂದಿ)

: ಕಾಮಿನಿ ಕೌಶಲ್ : ಶಂಲೇಖ ..... ವಾಸ್ತಿ
..... ಗೋಪ್

(.....)

13-5-49 ರಿಂದ
ಅಪೋಲೋ ಪ್ರಾರಂಭ



Morning Show ..... 4 days
From 13 5 49

THE HURRICANE

With Dorothy Lamour and John Hall

ಮಗಳ ಕೊಲೆ

ಜಬ್ಬಲಪುರದಲ್ಲಿ ತರಕಾರಿ ಮಾರುವನೊಬ್ಬನು ತನ್ನ ೧೭ ವರ್ಷದ ಮಗಳನ್ನೂ ಮತ್ತು ಆಕೆಯ ಸ್ನೇಹಿತಳನ್ನೂ ಚಾಕುವಿನಿಂದ ತಿವಿದು ಕೊಲೆ ಮಾಡಿದನೆಂದು ವರದಿಯಾಗಿದೆ ತನ್ನ ಮಗಳು ಸ್ನೇಹಿತಳ ಸಹಾಯದಿಂದ ಅನೀತಿ ಮಾರ್ಗದಲ್ಲಿ ನಡೆಯುತ್ತಿರಬಹುದೆಂಬ ಶಂಕೆಯಿಂದ ಅವರಿಬ್ಬರನ್ನೂ ಯಾರೂ ಇಲ್ಲದ ಕಡೆಗೆ ಕರೆದುಕೊಂಡು ಹೋಗಿ ಕೊಲೆ ಮಾಡಿದನೆಂದು ಹೇಳಲಾಗಿದೆ

ಭಾರತ ಸಿನಿಮಾ ಮಂದಿರಗಳ ಮುಷ್ಕರ

ಭಾರತದ ಎಲ್ಲಾ ಸಿನಿಮಾ ಪ್ರದರ್ಶನಕಾರರೂ ತಮ್ಮ ಮಂದಿರಗಳನ್ನು ಒಂದು ದಿನ ಮುಚ್ಚಿ ಮುಷ್ಕರ ಹೂಡುವ ಸಂಭವವಿದೆ ಪ್ರಾಂತ ಸರಕಾರಗಳು ವಿಧಿಸಿರುವ ತೆರಿಗೆಗಳನ್ನು ಖಂಡಿಸುವುದೇ ಮುಷ್ಕರದ ಉದ್ದೇಶ

೧೭ ಜನ ಪುರಸಭಾ ಸದಸ್ಯರ ರಾಜೀನಾಮೆ

ಇಂದೂರು ಪುರಸಭೆಯವರು ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣ್‌ರವರಿಗೆ ಮಾನಪತ್ರವನ್ನು ಅರ್ಪಿಸಿದುದಕ್ಕಾಗಿ ಅಲ್ಲಿನ ಕಾಂಗ್ರೆಸ್ ಪಕ್ಷದ ಸದಸ್ಯರುಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಾಗಿ ಕಾಂಗ್ರೆಸ್ ಸಮಿತಿಯವರು ನಿರ್ಧರಿಸಿದುದರಿಂದ ೧೭ ಜನ ಪುರಸಭಾ ಸದಸ್ಯರು ರಾಜೀನಾಮೆ ಇತ್ತಿದ್ದಾರೆ

—: ಸುಸಮಯ :—

ಮೈಸೂರು ಜಿಲ್ಲೆಯ ಎಲ್ಲಾ ಲೈಸೆನ್ಸ್‌ದಾರರಿಗೂ ೧೯೪೯ರ ಗಜ ಬಟ್ಟೆ ಮತ್ತು ಇತರೆ ಮಿಲ್ಲು ಬಟ್ಟೆಗಳನ್ನು ಕೊಡಲಾಗುತ್ತೆ ಹೆಚ್ಚಿನ ವಿಚಾರಗಳಿಗೆ ಇವರಲ್ಲಿ ವಿಚಾರಿಸಿರಿ—

ಮೆಸರ್ಸ್ K ವಾಸುದೇವ ಮೂರ್ತಿ ಮತ್ತು ಕಂಪೆನಿ

ಪ್ರಭಾ ಟಾಕೀಸ್ ಎದುರು ಮೈಸೂರು

ಪ್ರಕಟಣೆ

ಮೈಸೂರು ಸಿಟಿ ಚಾಮುಂಡಿ ಎಕ್ಸ್‌ಟೆನ್‌ಷನ್ ಮಾನಂದವಾಗಿ ರೋಡಿನ ಬಳಿಯಲ್ಲಿರುವ ೨೩೬೭, ೨೩೬೮ ಮತ್ತು ೨೩೬೯ನೇ ನಂಬರಿನ ಮನೆ ಮಳಿಗೆಗಳು ಇದರ ಪೂರ್ವಕ್ಕೆ ನೆನ್ನೆ ಸಾಬರವರ ಔಟ್ ಹೌಸ್ ಪಶ್ಚಿಮಕ್ಕೆ ಮಾನಂದವಾಡಿ ರೋಡು ದಕ್ಷಿಣಕ್ಕೆ ಕನ್ಸರ್ವೆನ್ಸಿ ಗಲ್ಲಿ ಉತ್ತರಕ್ಕೆ ಗಾಡಿ ಚೌಕ ಈ ಮಧ್ಯೆ ಇರತಕ್ಕ ಡಿಟೋ ನಂಬರಿನ ಮನೆ ಮಳಿಗೆಗಳನ್ನು ಜಲತರಂಗ ವಿದ್ವಾನ್ ಯಮ ನಾರಾಯಣಾಚಾರ್ಯರಿಗೆ ಖರೀದಿ ಪತ್ರವು ರಿಜಿಸ್ಟರ್ ಆಗಿರುತ್ತದೆ ಸದರಿ ಮನೆ ಮಳಿಗೆಗಳನ್ನು ನ್ಯಾಯವಿಲ್ಲದೆ ಶ್ರೀ ..... ನಂಜಪ್ಪನವರು ಎರಡನೇ ಖರೀದಿ ಪತ್ರ ಬರೆಸಿಕೊಂಡು ಅದನ್ನೇ ಬೇರೆಯವರಿಗೆ ಖರೀದಿಗೆ ಕೊಡುವರೆಂದು ತಿಳಿದುಬಂದುದರಿಂದ ತೆಗೆದುಕೊಳ್ಳತಕ್ಕವರಿಗೆ ಖರೀದಿ ಪತ್ರವು ಊರ್ಜಿತವಾಗತಕ್ಕದ್ದಲ್ಲವೆಂದು ಈ ಮೂಲಕ ತಿಳಿಸಲಾಗಿದೆ

ಜಲತರಂಗ ವಿದ್ವಾನ್

ಯಮ. ನಾರಾಯಣಾಚಾರ್ಯ

ಮಂತ್ರಿ ಮಂಡಲದಲ್ಲಿ ಅವಿಶ್ವಾಸವೇ ?

ಬೆಂಗಳೂರು

ಶ್ರೀಗಳಾದ ಎಸ್ ಜಿ. ರುದ್ರಪ್ಪ, ... ಪಾದಪ್ಪ, ರಂಗಪ್ಪ, ಬಂಗಾರಪ್ಪ, ... ಕಾರ್ಜುನಪ್ಪ ಮುಂತಾದವರು ಒಂದು ..... ರ್ಣಯವನ್ನು ಸಭಾ ನಾಯಕರಿಗೆ ..... ಹಿಸಿ ಶಾಸನ ಸಭಾ ಜಂಟಿ ಅಧಿವೇಶನದಲ್ಲಿ ಇಂದಿನ ಮಂತ್ರಿ ಮಂಡಲದ ..... ಅವಿಶ್ವಾಸವನ್ನು ಸೂಚಿಸಲು ಅವಕಾಶ ಕೊಡಬೇಕೆಂದು ಕೋರಿದ್ದಾರೆಂದು ..... ದು ಪತ್ರಿಕಾ ವರದಿ ತಿಳಿಸುತ್ತದೆ.

— ಸ್ಪೆಷಲ್ ತಯಾರಿ —

ನಮ್ಮ ಸ್ವಂತ ಮಗ್ಗದಿಂದ ಮೈಸೂರು ..... ಕ್ರೇಪ್, ಬೆಂಗಳೂರು, ಧರ್ಮಾವರ ..... ಸೀರೆಗಳು ಗ್ಯಾರಂಟಿಯಾಗಿ ..... ಯುತ್ತವೆ ದಯವಿಟ್ಟು ಇಂದೇ ..... ಕೊಡಿ.

ಗುರುದೇವಾ ಹಾಲ್
ಶಿವರಾಂಪೇಟೆ, ಮೈಸೂರು

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು
9-5-49 ರಿಂದ 2 ದಿನಗಳು ಮಾತ್ರ
ಕೊಲಂಬಿಯಾರವರ ಅದ್ಭುತ
ಅಡ್ವೆಂಚರ್ ಚಿತ್ರ

ಟೆಕ್ಸಾಸ್ TEXAS

ಪಾತ್ರ,—ಗ್ಲೆನ್ ಫೋರ್ಡ್, ವಿಲಿಯಂ ಹೋಲ್ಡನ್

ಎಸ್. ಎ. ಪಂಡಿತ್ ಅಂಡ್ ಸನ್ಸ್‌ರವರ

ಯೂನಿವರ್ಸಲ್ ಪೆಯಿನ್ ಬಾಮ್
ನೋವು ಕೀಲು ನೋವು ಮುಂತಾದ
ಸಕಲ ಬಾಧೆಗಳಿಗೂ ರಾಮಬಾಣ
ಸೀಸೆ 0-..
ಮಹಾ ಸುಗಂಧರಾಜ ತೈಲ —
,, ಚಂದನಾದಿ ತೈಲ —
,, ಭೃಂಗಾಮಲಕ ತೈಲ —
—ಬೇಸಿಗೆ ಕಾಲಕ್ಕೆ ಉತ್ತಮ ಅಪ್ಯಾಯಕ ತೈಲಗಳು
ಮಹಾಕೇತಕೀ ತೈಲ—ತಲೆ ಬಾ..... ಕೊಳ್ಳುವುದಕ್ಕೂ ಅಭ್ಯಂಜನಕ್ಕೂ ಉಪಯೋಗಿಸಬಹುದಾದ ಉತ್ತಮವಾದ .....
ಬ್ರೈನ್ ಟಾನಿಕ್ ಸೀಸೆ ೨-..
ಪಂಚಾಮೃತ—ಮಲೇರಿಯಾ ಜ್ವರಗಳಿಗೆ ಸಿದ್ಧ ಸಂಜೀವನ
ಮೈಸೂರು ಆಯುರ್ವೇದಿಕ್ ಫಾರ್ಮಸಿ

Edited, printed, Published by A.R Na..rajan at the Sadhvi Pre.. D Subbiah Road, Mys..

ಫೋನ್ ನಂ 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೦-೨-೪೮ [ಸಂಚಿಕೆ ೨೨೬

ಮೈಸೂರಿನ ಸ್ತ್ರೀಯರಿಗೆ ಸರ್ಕಾರದಲ್ಲಿ ಉದ್ಯೋಗ

ಮೈಸೂರು ಪೋಲೀಸರ ಮೇಲೆ ಕಮ್ಯೂನಿಸ್ಟರ ಧಾಳಿ

ಹೈದರಾಬಾದಿನ ವಾರಂಗಲ್ ಜಿಲ್ಲೆಯ ಎಳ್ಳಂದೂ ತಾಲ್ಲೂಕು ಇಮ್ಮರಾನ್ ಪೇಟೆಯ ಕಾಡಿನ ಪ್ರದೇಶದಲ್ಲಿದ್ದ ಮೈಸೂರು ಪೋಲೀಸರ ಮೇಲೆ ಕಮ್ಯೂನಿಸ್ಟರು ಧಾಳಿ ನಡೆಸಿದರೆಂದೂ, ಆದರೆ ಅವರನ್ನು ಪೋಲೀಸರು ಹಿಂದಕ್ಕೆ ಅಟ್ಟಿದರೆಂದೂ ವರದಿಯಾಗಿದೆ

ಜನತಾ ಸಂಪಾದಕರ ಬಿಡುಗಡೆ

ಮೈಸೂರು ಸಬ್ ಜೈಲಿನಲ್ಲಿ ಬಂಧಿತರಾಗಿದ್ದ 'ಜನತಾ' ಪತ್ರಿಕೆಯ ಸಂಪಾದಕರಾದ ಶ್ರೀ ಎ ಕೇಶವರಾವರವರನ್ನು ಬಿಡುಗಡೆ ಮಾಡಲಾಗಿದೆ,

ಆಗುಂಬೆ ಘಾಟಿ ರಸ್ತೆಗೆ ಸಿಮೆಂಟ್ ಕಾಂಕ್ರೀಟ್

ಶಿವಮೊಗ್ಗ ಜಿಲ್ಲಾ ತೀರ್ಥಹಳ್ಳಿಯ ಹತ್ತಿರವಿರುವ ಆಗುಂಬೆ ಘಾಟಿನ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಮಾಡಲು ೬೫೭೦೦ ರೂ ಅಂದಾಜನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ

ಮಠ ಸ್ಥಾಪಕರ ಜಯಂತಿ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ಶನಿವಾರ ಮಠಸ್ಥಾಪಕರ ದಿನಾಚರಣೆಯು ಶ್ರೀ ಎಂ ಎ ನಾರಾಯಣ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆಯಾದನಂತರ ಶ್ರೀಮತಿ ಸುಭಾದ್ರಾರವರಿಂದ ಸುಶ್ರಾವ್ಯವಾದ ವೀಣಾ ವಾದನ ಜರುಗಿತು ಶ್ರೀ ಪಿ ಟಿ ತಿರುನಾರಾಯಣಯ್ಯಂಗಾರ್‌ರವರು ಮತ್ತು ಅಧ್ಯಕ್ಷರು ಭಾಷಣ ಮಾಡಿ, ಮಹಾ ವ್ಯಕ್ತಿಗಳ ಸೇವೆಯನ್ನು ಕೊಂಡಾಡಿ ಅವರುಗಳ ಉತ್ಸವವನ್ನು ಆಚರಿಸುವುದು ಅಗತ್ಯವೆಂದು ತಿಳಿಸಿದರು

ಬೊಂಬಾಯಿನ ಸಚಿವರು ರಸ್ತೆಯ ದೀಪದಲ್ಲಿ ಓದಿದವರು

ಬೊಂಬಾಯಿನ ಗೃಹ ಸಚಿವರಾದ ಶ್ರೀ ಎಂ ಆರ್ ದೇಸಾಯಿಯವರು ತಾವು ವಿದ್ಯಾರ್ಥಿಯಾಗಿದ್ದಾಗ ರಸ್ತೆಯ ದೀಪದ ಕೆಳಗಿನ ಬೆಳಕಿನಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿದ್ದರೆಂಬ ವಿಷಯವನ್ನು ಅವರೇ ಸೂರತ್ತಿನ ವಿದ್ಯಾರ್ಥಿಗಳ ಸಭೆಯಲ್ಲಿ ಬಹಿರಂಗ ಪಡಿಸಿರುತ್ತಾರೆ

ಕಮ್ಯೂನಿಸ್ಟರಿಗೆ ಚೀಣಾ ಅಧ್ಯಕ್ಷರ ಮನವಿ

ಕದನ ನಿಲ್ಲಿಸಿ ಶಾಂತಿ ಸಂಧಾನಕ್ಕೆ ಒಪ್ಪಬೇಕೆಂದು ಕಮ್ಯೂನಿಸ್ಟರಿಗೆ ಚೀಣಾದ ಅಧ್ಯಕ್ಷ ಲೀ ರವರು ಪುನಃ ಮನವಿ ಮಾಡಿದ್ದಾರೆ ಯಾಂಗ್ಸೆಗೆ ಸ್ವಲ್ಪ ದಕ್ಷಿಣದ ೬೦ ಮೈಲಿ ದೂರದಲ್ಲಿರುವ ಕಾಲಿಂಗ್ ಎಂಬ ಮುಖ್ಯ ನಗರವನ್ನು ಚೀಣಾ ಸರ್ಕಾರಿ ಸೈನ್ಯಗಳು ತೆರವಿವೆ

ಭಾರತವು ಕಾಮನ್‌ವೆಲ್ತಿಗೆ ಸೇರಿದುದು ತಪ್ಪು

ಭಾರತವು ಕಾಮನ್ ವೆಲ್ತಿನಲ್ಲಿ ಸೇರುವುದರಿಂದ ದೇಶದ ಶಾಂತಿ ಮತ್ತು ಪ್ರಗತಿಗೆ ಧಕ್ಕೆ ಉಂಟಾಗುವುದೆಂದೂ, ಭಾರತವು ಯಾವಾಗ ಬೇಕಾದರೂ ಕಾಮನ್ ವೆಲ್ತನ್ನು ಬಿಡಬಹುದೆಂಬುದು ಬರಿ ಕಣ್ಣೊರೆಸುವ ಮಾತೆಂದೂ ಸೂಚಿಸುವ ನಿರ್ಣಯವನ್ನು ಬೊಂಬಾಯಿನಲ್ಲಿ ಸಿ ಎಂ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಕಮ್ಯೂನಿಸ್ಟರ ಸಂಘದಲ್ಲಿ ಮಾಡಲಾಯಿತು

ನೂತನ ಹೈದರಾಬಾದ್ ಜಿಲ್ಲೆ

ಹೈದರಾಬಾದಿನ ನೈಜಾಮರಿಗೆ ಸೇರಿದ್ದ ಜಹಗೀರುಗಳನ್ನು ಸರ್ಕಾರಕ್ಕೆ ವಶಪಡಿಸಿಕೊಂಡಿರುವುದರಿಂದ ಈಗಿರುವ ಅತ್ರಾಫ್ ಇಬಲ್ದಾ ಮತ್ತು ಬಾಸಿತ್ ಜಿಲ್ಲೆಗಳನ್ನು ರದ್ದುಮಾಡಿ, ಜಹಗೀರಿನ ೬೫೭ ಗ್ರಾಮಗಳನ್ನು ಹೈದರಾಬಾದಿಗೆ ಸೇರಿಸಿ, ಒಂದು ನೂತನ ಹೈದರಾಬಾದ್ ಜಿಲ್ಲೆಯನ್ನು ನಿರ್ಮಿಸಲಾಗುವುದೆಂದೂ, ಉಳಿದ ೩೬೩ ಗ್ರಾಮಗಳನ್ನು ಇತರ ಜಿಲ್ಲೆಗಳಿಗೆ ಸೇರಿಸಲಾಗುವುದೆಂದೂ ತಿಳಿದುಬಂದಿದೆ

ಮ್ಯಾಡಗಾಸ್ಕರಿನಿಂದ ಭಾರತೀಯರ ಹೊರದೂಡುವಿಕೆ

ಮ್ಯಾಡಗಾಸ್ಕರಿನಲ್ಲಿರುವ ಭಾರತೀಯರನ್ನು ಅಲ್ಲಿನ ಫ್ರೆಂಚ್ ಸರ್ಕಾರದವರು ಬಲಾತ್ಕಾರವಾಗಿ ಹೊರಕ್ಕೆ ಕಳುಹಿಸುತ್ತಿರುವರೆಂದೂ, ಈಗಾಗಲೇ ೨೦ ಜನ ಭಾರತೀಯ ವ್ಯಾಪಾರಗಾರರನ್ನು ಅಲ್ಲಿಂದ ಕಳುಹಿಸಿ, ಅವರ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೆಂದೂ ಹೇಳಲಾಗಿದೆ ಅಲ್ಲಿ ೨೦ ಸಾವಿರ ಭಾರತೀಯರು ಇದ್ದಾರೆ

ವಿಶ್ವ ಕಾರ್ಮಿಕ ಸಂಸ್ಥೆ

ಮುಂದಿನ ತಿಂಗಳು ಜಿನೀವಾದಲ್ಲಿ ನಡೆಯುವ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ ಕಾಲದಲ್ಲಿ ವಿಶ್ವ ರಾಷ್ಟ್ರಗಳ ಕಾರ್ಮಿಕ ಸಂಸ್ಥೆಯನ್ನು ಸ್ಥಾಪಿಸುವ ಕಾರ್ಯವನ್ನು ಕೈಗೊಳ್ಳಬೇಕೆಂದು ಇಂದೂರಿನಲ್ಲಿ ನಡೆದ ಅಖಿಲ ಭಾರತ ಕಾರ್ಮಿಕ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು

ಅಟ್ಲಾಸ್ ಪರ್ವತದಲ್ಲಿ ಯೂರೇನಿಯಂ

ಅಟ್ಲಾಸ್ ಪರ್ವತದಲ್ಲಿ ಯೂರೇನಿಯಂ ಲೋಹವನ್ನು ಫ್ರೆಂಚ್ ಸರ್ಕಾರದವರು ಕಂಡುಹಿಡಿದಿದ್ದಾರೆ ಆ ಪ್ರದೇಶಕ್ಕೆ ಜನರು ಹೋಗದಂತೆ ಬಲವಾದ ಕಾವಲನ್ನು ಹಾಕಲಾಗಿದೆ

ಹೊಸ ಉಪ್ಪಿನ ಗಣಿಗಳು

೩೦ ಲಕ್ಷ ರೂಪಾಯಿ ಬೆಲೆಬಾಳುವ ಉಪ್ಪಿನ ಗಣಿಗಳನ್ನು ಹಿಮಾಚಲ ಪ್ರದೇಶದ ಮಂಡಿ ಎಂಬಲ್ಲಿ [illegible] ಭಾರತ ಸರ್ಕಾರದವರು ಪತ್ತೆ ಹಚ್ಚಿದ್ದಾರೆ

ಭದ್ರಾವತಿ ಕಾರ್ಖಾನೆ ನೂತನ ಡೈರೆಕ್ಟರು

ಶಿವಮೊಗ್ಗ ಜಿಲ್ಲಾಧಿಕಾರಿಗಳಾದ ಶ್ರೀ ಎಸ್ ಮುನಿಸಂಜಪ್ಪನವರನ್ನು ಭದ್ರಾವತಿ ಉಕ್ಕಿನ ಕಾರ್ಖಾನೆಯ ಡೈರೆಕ್ಟರನ್ನಾಗಿ ಸರ್ಕಾರದವರು ನೇಮಿಸಿದ್ದಾರೆ ಅವರ ಅಸಿಸ್ಟೆಂಟರಾದ ಶ್ರೀ ಸುಬ್ರಹ್ಮಣ್ಯಂರವರನ್ನು ತಾತ್ಕಾಲಿಕವಾಗಿ ಜಿಲ್ಲಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ

ಶಿವಮೊಗ್ಗ ಜಿಲ್ಲಾ ಪಾರೆಸ್ಟ್ ಅಧಿಕಾರಿಗಳಾದ ಶ್ರೀ ಹೆಚ್ ಎಸ್ ರಂಗಾಚಾರ್ಯರನ್ನು ಸಬ್ ಪ್ರೋಟೆಂ ಕನ್ಸರ್ವೇಟರಾಗಿ ನೇಮಿಸಲಾಗಿದೆ

ಟ್ರೂಮನ್ನರಿಗೆ ಸ್ಟಾಲಿನ್ನರ ಆಹ್ವಾನವೇ ?

ಅಮೆರಿಕ ಮತ್ತು ರಷ್ಯಗಳಿಗಿರುವ ಭಿನ್ನತೆಗಳನ್ನು ಬಗೆಹರಿಸಲು ಟ್ರೂಮನ್ ಮತ್ತು ಸ್ಟಾಲಿನ್ನರ ಭೇಟಿ ನಡೆಯಬೇಕೆಂದು ಸ್ಟಾಲಿನ್ನರೇ ಸೂಚನೆ ಇತ್ತು ಆಹ್ವಾನ ಕೊಟ್ಟಿರುವರೆಂದು ಲಂಡನ್ ಪತ್ರಿಕೆಯೊಂದು ವರದಿಮಾಡಿದೆ

ದೆಹಲಿಯಲ್ಲಿ ರಾಜರುಗಳ ಅರಮನೆ ಸರ್ಕಾರಕ್ಕೆ

ದೆಹಲಿಯಲ್ಲಿರುವ ೩೨ ರಾಜರುಗಳ ಅರಮನೆಗಳನ್ನು ಭಾರತ ಸರ್ಕಾರದವರು ವಶಪಡಿಸಿಕೊಂಡು, ಅವುಗಳನ್ನು ಕಛೇರಿ ಮತ್ತು ವಾಸದ ಭವನಗಳಿಗಾಗಿ ಉಪಯೋಗಿಸುವರೆಂದು ತಿಳಿದು ಬಂದಿದೆ ಹೈದರಾಬಾದ್, ಕಾಶ್ಮೀರ, ಬರೋಡಾ, ಜಯಪುರ, ಪಾಟಿಯಾಲ, ಉದಯಪುರ, ನಾಭಾ, ಬಿಕಾನೀರ್, ಕಪೂರ್ ತಾಲ್, ಇಂದೂರ್, ಗ್ವಾಲಿಯರ್, ಕೋಟಾ, ಭಾವನಗರ, ಪಟೌಡಿ, ಮಂಡಿ ಬಹಾವಲ್ಪುರ ಮತ್ತು ಜಿಂದ್ ರಾಜರುಗಳಿಗೆ ಅರಮನೆಗಳು ದೆಹಲಿಯಲ್ಲಿ ಇವೆ

ಬಸವೇಶ್ವರರ ಉತ್ಸವ

ರಾಜಧಾನಿಯ [illegible] ರಸ್ತೆಯಲ್ಲಿರುವ [illegible] ಬಸವೇಶ್ವರ ಉತ್ಸವವನ್ನು [illegible] [illegible] ನಡೆಸಲಾಗುವುದು [illegible]

ಸರ್ಕಾರಿ ಉದ್ಯೋಗಕ್ಕೆ ಮಹಿಳೆಯರು

ಸ್ವಂ ಸು ಫೋ] ಬೆಂಗಳೂರು ೧೦

ಸಂಸ್ಥಾನದ ಸೆಕ್ರೆಟೇರಿಯೆಟ್, ಮತ್ತು ಕಂಟ್ರೋಲರ ಕಛೇರಿಗಳಲ್ಲಿ ಮಹಿಳೆಯರನ್ನು ಉದ್ಯೋಗಕ್ಕೆ ತೆಗೆದುಕೊಳ್ಳಬಹುದೆಂದೂ, ಮತ್ತು ಎಲ್ಲಾ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಲ್ಲಿ ಸ್ತ್ರೀಯರನ್ನು ಕೆಲಸಕ್ಕೆ ಸೇರಿಸಿಕೊಳ್ಳಬಹುದೆಂದು ಸರ್ಕಾರದ ಆಜ್ಞೆಯಾಗಿದೆಯೆಂದೂ ತಿಳಿದುಬಂದಿದೆ.

ಕಮ್ಯೂನಿಸ್ಟ್ ಮೆರವಣಿಗೆ ಮೇಲೆ ಗುಂಡು

ಬೊಂಬಾಯಿ ಜೈಲಿನಲ್ಲಿ ಬಂಧನದಲ್ಲಿರುವ ೩೦೦ ಜನ ಕಮ್ಯೂನಿಸ್ಟರ ಪೈಕಿ ೧೬೫ ಮಂದಿ ತಮಗೆ ಹೆಚ್ಚಿನ ಸೌಲಭ್ಯ ಬೇಕೆಂದು ಉಪವಾಸ ಹೂಡಿರುತ್ತಾರೆ. ಅವರ ಸಹಾನುಭೂತಿಗಾಗಿ ೫೦೦ ಮಂದಿ ಮಹಿಳೆಯರು ಮತ್ತು ಗಂಡಸರು ಪ್ರತಿಬಂಧಾಜ್ಞೆಯನ್ನು ಉಲ್ಲಂಘಿಸಿ ಮೊನ್ನೆ ದಿನ ಮೆರವಣಿಗೆ ನಡೆಸಿದರು. ಪೋಲೀಸರು ಅವರನ್ನು ಚದುರಿಸಲು ಯತ್ನಿಸಿದಾಗ ಅವರ ಮೇಲೆ ಕಲ್ಲಿನ ಮಳೆ ಕರೆದು, ಕಲ್ಲುಗಳು ಮತ್ತು ಪ್ರಾವಳದ ಬಲ್ಬುಗಳನ್ನು ಪ್ರದರ್ಶನಕಾರರು ಎಸೆದರು ಒಬ್ಬ ಪೋಲೀಸ್ ಅಧಿಕಾರಿಯ ಬಂದೂಕವನ್ನು ಕಿತ್ತು ಮುರಿದುಹಾಕಿದರು ನಂತರ ಪೋಲೀಸರು ಗುಂಡುಹಾರಿಸಿದರು ಇದರಿಂದ ಒಟ್ಟು ೭ ಜನಕ್ಕೆ ಗಾಯವಾಯಿತು ಈ ಸಂದರ್ಭದಲ್ಲಿ ೪೭ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ

ಕರ್ಣಾಟಕ ಪ್ರಾಂತ್ಯದ ಬಗ್ಗೆ ನಿಯೋಗ

ಹುಬ್ಬಳ್ಳಿಯಲ್ಲಿ ಮೊನ್ನೆ ರಾತ್ರಿ ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆ ಸೇರಿ, ಕರ್ಣಾಟಕ ಪ್ರಾಂತರಚನೆಯ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯವರಲ್ಲಿಗೆ ೭ ಜನ ಸದಸ್ಯರನ್ನೊಳಗೊಂಡ ಒಂದು ನಿಯೋಗವನ್ನು ಕಳುಹಿಸಬೇಕೆಂದು ನಿರ್ಧರಿಸಲಾಯಿತು

ತ್ರಿಮೂರ್ತಿಗಳ ಭಾಷಾವಾರ ಪ್ರಾಂತ್ಯದ ವರದಿಯ ಬಗ್ಗೆ ಅಸಮ್ಮತಿಯನ್ನು ಸೂಚಿಸುವ ನಿರ್ಣಯದ ಮೇಲೆ ಚರ್ಚೆಯಾಗಿ ಅದನ್ನು ಮುಂದಿನ ತಿಂಗಳು ೧೦ ನೇ ತಾ॥ ಗೆ ಮುಂದುವರಿಸಲಾಯಿತು.

ಜಿಲ್ಲಾ ಸಮ್ಮೇಳನ

ಮೈಸೂರು ೧೦

ಮೈಸೂರು ಜಿಲ್ಲಾ ಸಮ್ಮೇಳನವು ಈ ಮಧ್ಯಾಹ್ನ ವಿದ್ಯಾಸಚಿವ ಶ್ರೀ ಡಿ ಎಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಹೆಚ್. ಎಂ ಚನ್ನಬಸಪ್ಪ, ಕೆ. ಪಿ ಪುಟ್ಟಣ್ಣಶೆಟ್ಟಿ ಮತ್ತು ಎಸ್ ರಂಗರಾಮಯ್ಯನವರು ಸ್ವಾಗತ ಭಾಷಣ ಮಾಡಿದ ಮೇಲೆ ಗ್ರಾಮಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಚನ್ನಬಸಪ್ಪನವರು ವರದಿಯನ್ನು ಒಪ್ಪಿಸಿದರು ಸಮ್ಮೇಳನದಲ್ಲಿರುವಂತೆ ಇಲ್ಲಿಯೂ ಸಾಲ ತೀರ್ಮಾನ ಮಸೂದೆಯನ್ನು ಜಾರಿಗೆ ತರಬೇಕೆಂಬ ನಿರ್ಣಯವು ಅಂಗೀಕರಿಸಲ್ಪಟ್ಟಿತು. ಮೈಸೂರಿನ ಚರಿತ್ರೆಯ ಬಗ್ಗೆ, ಶ್ರೀ ಡಿ. ಎಂ ಸಿದ್ದಯ್ಯನವರ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದೆ

ಎರಡನೇ ರಾಜ್ಯಕ್ಕೆ ಪಾಕಿಸ್ತಾನದ ಪ್ರತಿಬಂಧಕ

ಬರುವ ಜುಲೈ ೧ನೇ ತಾರೀಖಿನಿಂದ ಭಾರತದ ತಿ ಆನೆಯು ತನ್ನ ರಾಜ್ಯದಲ್ಲಿ [illegible] ಬದ್ಧವಾದ [illegible] ಪಾಕಿಸ್ತಾನದ [illegible] ಪ್ರಕಟಣೆ ತಿಳಿಸುತ್ತವೆ. ಈ ತರಹೆಯ [illegible] ನಾಣ್ಯಗಳು [illegible] ಇದ [illegible] ಈ ರೀತಿಯ ಪ್ರತಿಬಂಧಕವು ಪಾಕಿಸ್ತಾನ

ಕರಾಚಿ ರಸ್ತೆಗಳ ಹೆಸರು ಬದಲಾವಣೆ

ಪಾಕಿಸ್ತಾನದ ರಾಜಧಾನಿಯಾದ ಕರಾಚಿಯ ರಸ್ತೆಗಳಿಗೆ ಈಗಿರುವ ಹೆಸರುಗಳನ್ನು ತೆಗೆದು ಪಾಕಿ ಮುಸ್ಲಿಂ ಹೆಸರುಗಳನ್ನು ಇಡಬೇಕೆಂದು ಅಲ್ಲಿನ ಪುರ ಸಭೆಯವರು ಆಲೋಚಿಸುತ್ತಿದ್ದಾರೆ. ಮಹಾತ್ಮ ಗಾಂಧಿಯವರ ರಸ್ತೆಗೆ ಜಿನ್ನಾ ರವರ ಹೆಸರನ್ನಿಡಲಾಗುವುದೆಂದೂ ಹೇಳಲಾಗಿದೆ

ಗಣಪತಿಯವರನ್ನು ಗಲ್ಲಿಗೇರಿಸಿದುದಕ್ಕೆ ಪ್ರತಿಭಟನೆ

ಮಲಯಾ ಕಾರ್ಮಿಕ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಗಣಪತಿಯವರನ್ನು ಅಲ್ಲಿನ ಸರ್ಕಾರವು ಗಲ್ಲಿಗೇರಿಸಿದುದನ್ನು ಪ್ರಸಿದ್ಧ ಕಾರ್ಮಿಕ ಸಂಘದವರು ಪ್ರತಿಭಟಿಸಿ, ವಿಶ್ವ ಸಂಸ್ಥೆಗೆ ತಿಳಿಸಿರುತ್ತಾರೆ

ಕರೆನ್ಸಿ ನೋಟುಗಳಲ್ಲಿ ಕಾಳಸಂತೆ

ನಾಣ್ಯಗಳ ಮೇಲೆ ಬರ್ಮಾ ಸರ್ಕಾರವು ಪ್ರತಿಬಂಧಾಜ್ಞೆಯನ್ನು ವಿಧಿಸಿರುವುದರಿಂದ, ರಂಗೂನಿನಲ್ಲಿ ಭಾರತದ ಕರೆನ್ಸಿ ನೋಟುಗಳಲ್ಲಿ ಕಾಳಸಂತೆ ನಡೆಯುತ್ತಿದೆಯೆಂದೂ, ಭಾರತದ ೧೦೦ ರೂ. ಕರೆನ್ಸಿ ನೋಟುಗಳನ್ನು ೧೩೦ ರೂ.ಗೆ ಮಾರಾಟ ಮಾಡಲಾಗುತ್ತಿದೆಯೆಂದೂ ಹೇಳಲಾಗಿದೆ.

ಪ್ರಕಟಣೆ

ಮೈಸೂರು ಸಿಟಿ ಚಾಮುಂಡಿ ಎಕ್ಸ್‌ಟೆನ್‌ಷನ್ ನಂದನವಾಡಿ ರೋಡಿನ ಬಳಿಯಲ್ಲಿರುವ [illegible] ಮತ್ತು [illegible] ನಂಬರಿನ [illegible] ಮಳಿಗೆಗಳು [illegible] ನಂದನವಾಡಿ ರೋಡು [illegible] ಗಲ್ಲಿ ಉತ್ತರಕ್ಕೆ [illegible] ಈ ಮನೆ [illegible] ಮಳಿಗೆಗಳನ್ನು [illegible] [illegible] ಆಗಿದ್ದು [illegible] ಮಳಿಗೆಗಳನ್ನು [illegible] [illegible] ಬರೆಸಿಕೊಂಡು [illegible] ಕೊಡ [illegible] ಈ ಮಾರಿಕೆ [illegible]

[illegible]

[illegible] ರಾಮಾನುಜಾಚಾರ್ಯ

ಮುಂಬರುವ ಯುದ್ಧದಲ್ಲಿ ಹಂಗೆರಿ ಮುಖ್ಯ ಕೇಂದ್ರ

ರಷ್ಯ ಕಮ್ಯೂನಿಸ್ಟ್ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಮುಂದೆ ಘರ್ಷಣೆಯಾದಲ್ಲಿ ಹಂಗೇರಿಯನ್ನು ಪ್ರಮುಖ ಕೇಂದ್ರವನ್ನಾಗಿ ರಷ್ಯ ಉಪಯೋಗಿಸುವುದೆಂದು ಹೇಳಲಾಗಿದೆ. ಈಗಾಗಲೇ ಹಂಗೇರಿಯ ರಕ್ಷಣಾ ವ್ಯವಸ್ಥೆಯ ಬಗ್ಗೆ ರಷ್ಯವು ಕಾರ್ಯಕ್ರಮ ಕೈಗೊಂಡಿದೆ. ೫೦ ಸಾವಿರ ರಷ್ಯದ ಸೈನಿಕರನ್ನು ಇದಲು ಹಂಗೇರಿಯದಲ್ಲಿ ಸ್ಥಳವಸತಿ ಏರ್ಪಡಿಸಲಾಗಿದೆ. ನೂತನ ವಿಮಾನ ನಿಲ್ದಾಣಗಳು ಮತ್ತು ರೈಲ್ವೆ ಮಾರ್ಗಗಳನ್ನು ನಿರ್ಮಿಸಲಾಗುತ್ತಿದೆ. ಹಂಗೇರಿಯದ ಸೇನಾಧಿಕಾರಿಗಳೆಲ್ಲರೂ ರಷ್ಯನ್ ಭಾಷೆಯನ್ನು ಕಲಿಯಬೇಕೆಂದು ಆಜ್ಞೆಮಾಡಲಾಗಿದೆ. ರಷ್ಯದ ವ್ಯಾಪ್ತಿಗೆ ಒಳಗಾಗಿರುವ ಪೂರ್ವ ಯೂರೋಪಿನ ರಾಷ್ಟ್ರಗಳಲ್ಲೆಲ್ಲಾ ೩ ವರ್ಷಗಳ ಮಿಲಿಟರಿ ಯೋಜನೆಯನ್ನು ಕೈಗೊಳ್ಳಲಾಗಿದೆ. ಯುದ್ಧ ಸಂಭವಿಸುವಾದರೆ ೬೦೦ ಡಿವಿಜನ್ ಸೈನ್ಯವನ್ನು ಪೂರ್ವ ಯೂರೋಪ್ ರಾಷ್ಟ್ರಗಳಿಂದ ಪಡೆಯಲು ರಷ್ಯ ಸಿದ್ಧತೆ ನಡೆಸುತ್ತಿದೆ.

ದೇಶಾದ್ಯಂತ ಗಾಂಧೀ ಪ್ರಚಾರ ಸಂಘಗಳು

ಭಾರತದಾದ್ಯಂತ ಗಾಂಧೀ ಪ್ರಚಾರ ಸಂಘಗಳನ್ನು ಸ್ಥಾಪಿಸಲು ಬೊಂಬಾಯಿನಲ್ಲಿರುವ ಅಖಿಲ ಭಾರತ ಸ್ಮಾರಕ ಸಂಘದವರು ವ್ಯವಸ್ಥೆ ಮಾಡಿದ್ದಾರೆ. ಈ ಸಂಸ್ಥೆಗಳಲ್ಲಿ ಗಾಂಧಿ ಪುಸ್ತಕ ಭಂಡಾರಗಳನ್ನು ಸ್ಥಾಪಿಸಿ ಅವರ ತತ್ವಗಳನ್ನು ಪ್ರಚಾರ ಮಾಡಲಾಗುವುದು. ಇಂತಹ ಸಂಘಗಳನ್ನು ಬ್ರಿಟನ್, ಅಮೆರಿಕ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾಗಳಲ್ಲೂ ಸ್ಥಾಪಿಸಲಾಗುವುದು.

ರಾಜಕಮಲ್,

6—5—49ರಿಂದ ಪ್ರಾರಂಭ

ಫಿಲಂಸ್ಥಾನದವರ ಹಿಂದಿ ಚಿತ್ರ

ಷಹೀದ್

—:ಭೂಮಿಕೆ:—

* ಕಾಮಿನಿ ಕೌಸಲ್ಯ
* ದಿಲೀಪ್ ಕುಮಾರ್
* ವಿ. ಎಚ್. ದೇಸಾಯಿ

ದೇಶ ಮಾತೆಯ ದಾಸ್ಯವನ್ನು ಕೊನೆಗಾಣಿಸುವ ಹೋರಾಟದಲ್ಲಿ ಭಾರತ ಪುತ್ರ ಪುತ್ರಿಯರು ಮಾಡಿದ ಅಮೋಘ ತ್ಯಾಗದ ಸ್ಮಾರಕದ ಕತೆ

—: [illegible] :—

ಮೈಸೂರು [illegible] [illegible] [illegible] [illegible] [illegible] ಇವರಲ್ಲಿ ವಿಚಾರಿಸಿ —

ಮೆಸರ್ಸ್ R. ವಾಸುದೇವ ಮೂರ್ತಿ ಮತ್ತು ಕಂಪೆನಿ

[illegible] : ಮೈಸೂರು

Edited, printed, and published by A.R Nagarajan at the Sadhvi Press D. Subbiah Road, Mysore

ಅರಮನೆ ಜಪದ ಕಟ್ಟೆ ಮಠ

ಮೈಸೂರು ೧೦

ರಾಜಧಾನಿಯ ವೀರಶೈವ ಮಹಾಜನಗಳ ಸಭೆಯು ಮೊನ್ನೆ ಸಂಜೆ ಶ್ರೀ ಕಪಿಲ ಮಲ್ಲಿಕಾರ್ಜುನಸ್ವಾಮಿ ಮಠದಲ್ಲಿ ಸೇರಿ ಅರಮನೆ ಜಪದಕಟ್ಟೆ ಮಠದ ಉತ್ತರಾಧಿಕಾರದ ವಿಷಯವಾಗಿ ಒಂದು ತೀರ್ಮಾನಕ್ಕೆ ಬರಲಾಯಿತು. ಮಠದ ಉತ್ತರಾಧಿಕಾರವನ್ನು ಹೊಂದಿರುವರೆಂದು ಹೇಳುವ ಶ್ರೀ ಗುರುಪಾದಪ್ಪನವರಿಗೆ ತಕ್ಕ ಯೋಗ್ಯತೆ ಇಲ್ಲದಿರುವುದರಿಂದ ಅವರಿಗೆ ಆ ಸ್ಥಾನವನ್ನು ಕೊಡಕೂಡದೆಂದೂ, ಶ್ರೀ ಮಹದೇವಪ್ಪ ಎಂಬ ವಟುವಿಗೆ ವಿದ್ಯಾಭ್ಯಾಸ ಮಾಡಿಸಿ, ಅನಂತರ ಉತ್ತರಾಧಿಕಾರವನ್ನು ಕೊಡತಕ್ಕದ್ದೆಂದೂ, ಅಲ್ಲಿಯವರಿಗೆ ಈಗಿನ ಚರಪಟ್ಟಾಧ್ಯಕ್ಷ ಸ್ವಾಮಿಗಳೇ ಮಠದ ಮೇಲ್ವಿಚಾರಣೆ ನೋಡಿಕೊಳ್ಳಬೇಕೆಂದೂ ಮತ್ತು ಆಡಳಿತ ವಿಚಾರವಾಗಿ ಒಂದು ಸಮಿತಿಯನ್ನು ಅರಮನೆ ಅಧಿಕಾರಿಗಳೊಬ್ಬರ ಅಧ್ಯಕ್ಷತೆಯಲ್ಲಿ ರಚಿಸಬೇಕೆಂದೂ ನಿರ್ಧರಿಸಲಾಯಿತು.—ಎಂದು ಅಧ್ಯಕ್ಷರಾದ ಶ್ರೀ ಎಂ. ಎಲ್. ನಾಗಣ್ಣನವರು ತಿಳಿಸಿರುತ್ತಾರೆ

ಚಂಚನಕಟ್ಟೆ ಬಳಿ ಸೇತುವೆ

ಕೃಷ್ಣರಾಜನಗರ ತಾಲ್ಲೂಕು ಚಂಚನಕಟ್ಟೆ ಬಳಿ ಕಾವೇರಿನದಿಗೆ ಸೇತುವೆಯನ್ನು ಕಟ್ಟಲು ಸರ್ಕಾರದವರು ೩,೩೦,೦೦೦ ರೂ. ಅಂದಾಜನ್ನು ಮಂಜೂರು ಮಾಡಿರುತ್ತಾರೆ.

ತಿರುಪತಿ ದೇವಸ್ಥಾನಕ್ಕೆ ೩ ಲಕ್ಷ ರೂ. ಹೆಚ್ಚು ವರಮಾನ

ತಿರುಪತಿ ದೇವಸ್ಥಾನದ ಒಟ್ಟು ಉತ್ಪತ್ತಿಯು ಈ ವರ್ಷ ೬೩.೭೮ ಲಕ್ಷ ರೂ ಮತ್ತು ಖರ್ಚು ೬೦.೪೫ ಲಕ್ಷ ರೂ ವಿದ್ದು, ೩ ಲಕ್ಷ ರೂ ಉಳಿತಾಯವಾಗಿದೆಯೆಂದು ಅಂದಾಜು ಮಾಡಲಾಗಿದೆ.

ಗಡಿನಾಡಿನಲ್ಲಿ ಕೆಂಪುಷರಟಿನವರ ಬಿಡುಗಡೆ

ಗಡಿನಾಡಿನ ಪ್ರಧಾನಿಗಳನ್ನು ಕೊಲೆಮಾಡಿ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸಿದರೆಂಬ ಆಪಾದನೆಯ ಮೇಲೆ ದಸ್ತಗಿರಿಯಾಗಿದ್ದ ೬೪ಜನ ಕೆಂಪು ಷರಟಿನವರ ಮೇಲಿನ ಆಪಾದನೆಯು ಸ್ಥಿರಪಟ್ಟಿಲ್ಲವೆಂದು ಬೆನಿಫಿಟ್ ಆಫ್ ಡೌಟ್ ಕೊಟ್ಟು ಬಿಡುಗಡೆ ಮಾಡಲಾಗಿದೆ.

ಅವಳಿ ಹುಡುಗಿಯರಿಗೆ ಒಂದೇ ಬಗೆಯ ಕಾಹಿಲೆ

ಆಸ್ಟ್ರೇಲಿಯಾದ ೧೯ ವರ್ಷದ ಅವಳಿ ಜವಳಿಯ ಇಬ್ಬರು ಹುಡುಗಿಯರಿಗೆ ಬಾಲ್ಯದಿಂದ ಒಂದೇ ತರಹ ಕಾಹಿಲೆಯು ಬಂದಿತ್ತೆಂದೂ, ಕೆಮ್ಮು ಒಂದು ದಿನ ಇಬ್ಬರಿಗೂ ಒಂದೇ ಸಮಯದಲ್ಲಿ ಬಂದು ಸಿಡುಬೂ ಸಹ ಬಂದಿತ್ತೆಂದೂ, ಒಂದು ವಾರದ ನಂತರ ಇಬ್ಬರಿಗೂ ಅಪೆಂಡಿಸೈಟೀಸ್ ಉಂಟಾಯಿತೆಂದೂ ಹೇಳಲಾಗಿದೆ

ಮನೆಯೊಳಗೆ ಹುಲಿ

ಪಾಲಘಾಟಿನ ತಾಲ್ಲೂಕು ಕೋಲ್ಲಂಗೋಡಿನಲ್ಲಿ ಹುಲಿಯೊಂದು ಪಕ್ಕದ ಕಾಡಿನಿಂದ ಬಂದು ಊರಿಗೆ ಹಿಂತಿರುಗುತ್ತಿದ್ದ ಹೆಂಗಸಿನ ಮೇಲೆ ಹಾರಿ ಆಕೆಯ ಮುಖವನ್ನು ಪರಚಿತೆಂದೂ, ಆಕೆಯ ಕೂಗಾಟದಿಂದ ಜನರು ಬಂದರೆಂದೂ, ಆಗ ಹುಲಿಯು ಓಡಿಹೋಗಿ ಪಕ್ಕದ ಮನೆಯಲ್ಲಿ ಅಡಗಿಕೊಂಡಿತೆಂದೂ ವರದಿಯಾಗಿದೆ. ಗುಂಪಿನಲ್ಲಿದ್ದವನೊಬ್ಬನು ಮೇಲ್ಛಾವಣಿಗೆ ಹತ್ತಿ ಬಂದೂಕದಿಂದ ಅದನ್ನು ಹೊಡೆದು ಕೊಂದನೆಂದೂ ಹೇಳಲಾಗಿದೆ.

ಐರ್ಲೆಂಡಿನಲ್ಲಿ ವಾಹನಗಳ ರಾಷ್ಟ್ರೀಕರಣ

ದೇಶದ ಎಲ್ಲ ಸಂಚಾರ ವ್ಯವಸ್ಥೆಗಳನ್ನು ರಾಷ್ಟ್ರೀಕರಣ ಮಾಡಲು ಐರ್ಲೆಂಡ್ ಸರ್ಕಾರದವರು ನಿರ್ಧರಿಸಿದ್ದಾರೆ. ಕೇಂದ್ರ ವಾಹನ ಸಂಸ್ಥೆಯೊಂದನ್ನು ಸ್ಥಾಪಿಸಿ ಖಾಸಗಿಯವರಿಗೆ ಪರಿಹಾರವನ್ನು ಕೊಡಲಾಗುವುದು.

ರಾಜರ ಪ್ರಭುತ್ವಕ್ಕೆ ಧಕ್ಕೆ ಬರುವುದಿಲ್ಲವೆಂದು ಸಚಿವರ ಭರವಸೆ

ಚಿಕ್ಕಮಗಳೂರು ೯

ಮೈಸೂರು ಮತ್ತು ಕರ್ನಾಟಕದ ಭಾಗಗಳು ಒಂದಾಗಿ ಕರ್ನಾಟಕ ಪ್ರಾಂತ್ಯ ರಚನೆಯಾದರೂ ಶ್ರೀಮನ್ಮಹಾರಾಜರವರ ಪ್ರಭುತ್ವಕ್ಕೆ ಧಕ್ಕೆ ಬರುವುದಿಲ್ಲವೆಂದು ಮುನಿಸಿಪಲ್ ರಾಯಿ ಸಚಿವರಾದ ಶ್ರೀ ಸುಬ್ಬರಾಮಶೆಟ್ಟಿಯವರು ಇಲ್ಲಿ ನಿನ್ನೆ ನಡೆದ ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆ ವಹಿಸಿ, ತಿಳಿಸಿದ್ದಾರೆ

ಪ್ರಭುದೇವಾ

ಟಾಕೀಸ್

ಪ್ರತಿ ದಿನ ೩ ಆಟಗಳು

ಮಿಸ್ ಮಾಲಿನಿ

ಮುಂದಿನ ಬದಲಾವಣೆ

ವೀರ ವನಿತೆ

ಪಾತ್ರ:—ಲಕ್ಷ್ಮೀ ದೇವಿ, ಶ್ರೀನಿವಾಸ್ ಬಿ. ಎ ಮುಂತಾದವರು

—:ಸ್ಪೆಷಲ್ ತಯಾರಿ:—

ನಮ್ಮ ಸ್ವಂತ ಮಗ್ಗದಿಂದ ಮೈಸೂರು [illegible] ಬೆಂಗಳೂರು, ಧರ್ಮಾವರ ಆರದ ಸೀರೆಗಳು ಗ್ಯಾರಂಟಿಯಾಗಿ [illegible] ದಯಮಾಡಿ ಇಂದೇ [illegible]

ಗುರುದೇವಾ ಹಾಲ್

ಶಿವರಾಂಪೇಟೆ, ಮೈಸೂರು.



ಆರಾಮ ಕುರ್ಚಿಯ ಕ್ಯಾನ್ವಾಸ್ ಬಟ್ಟೆ ಮತ್ತು ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಷೀಟ್

ಒಳ್ಳೆ ನಮೂನೆಗಳಲ್ಲಿ ಬಂದಿವೆ

[illegible] ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್: ಮೈಸೂರು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೬] ಬುಧವಾರ ೧೧-೨-೪೮ [ಸಂಚಿಕೆ ೨೨೭

೩ನೇ ತಾ|| ಪ್ರ|| ಪ್ರ|| ಸಭೆಗೆ ಅಧ್ಯಕ್ಷರ ಚುನಾವಣೆ

ರೇಷ್ಮೆ ಕೈಗಾರಿಕೆಯು ರಾಷ್ಟ್ರೀಕರಣ

ಜಿಲ್ಲಾ ಸಮ್ಮೇಳನದಲ್ಲಿ ನಿರ್ಣಯ

ಮೈಸೂರು ೧೧

ಜಿಲ್ಲಾ ಸಮ್ಮೇಳನವು ಈ ದಿನ ವಿದ್ಯಾ ಬ್ಯಾಂಕಿನ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಮುಂದುವರಿಯಿತು

ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯುವ ನ್ನು ಅಭಿವೃದ್ಧಿ ಪಡಿಸಲು ಈಗಿರುವ ಸ್ಪಿನ್ನಿಂಗ್ ಸಿಲ್ಕ್ ಬರ್ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ಶ್ರೀ ಪುಟ್ಟಪ್ಪನವರ ನಿರ್ಣಯದ ಮೇಲೆ ಚರ್ಚೆ ನಡೆದು, ಅದನ್ನು ಸರ್ಕಾರದ ಪರಿಶೀಲನೆಗೆ ಕಳುಹಿಸಬೇಕೆಂದು ನಿರ್ಧರಿಸಲಾಯಿತು

ನಾಳಂದೂರು ಜಹಗೀರಿಯನ್ನು ಸರ್ಕಾರಕ್ಕೆ ಸೇರಿಸುವುದು, ಚುಂಚನಕಟ್ಟೆ, ಚಿಟ್ಟದಪುರ, ರಾವಂದೂರು, ಪಿರಿಯಾಪಟ್ಟಣ, ಮತ್ತು ಸರಗೂರುಗಳಿಗೆ ಪ್ರೈಮರಿ ಗೋವಶಾಲೆಗಳ ಏರ್ಪಾಡಿಯನ್ನು ಹುಗಟ್ಟುವುದು, ಹಳ್ಳಿಗಳಿಗೆ ಶಾಲಾ ಕಟ್ಟಡಗಳು, ಪ್ರತಿ ತಾಲ್ಲೂಕಿನಲ್ಲೂ ಗೋರಕ್ಷಣಾ ಕೇಂದ್ರಗಳು—ಇವೇ ಮುಂತಾದ ವಿಷಯಗಳೂ ಚರ್ಚಿಸಲ್ಪಟ್ಟವು

ಮೈಸೂರು ಜಿಲ್ಲೆಯಲ್ಲಿ ಮುಂದಿನ ವರ್ಷದಿಂದ ಶರಾಬು, ಬ್ರ್ಯಾಂಡಿಗಳ ಮಾರಾಟವನ್ನು ನಿಷೇಧಿಸಬೇಕೆಂದು ಶ್ರೀ ಲಿಂಗಪ್ಪನವರು ನಿರ್ಣಯವನ್ನು ತಂದರು. ಅಧ್ಯಕ್ಷರು ಉತ್ತರವಿತ್ತು, ಸಂಸ್ಥಾನಾದ್ಯಂತ ಪಾನ ನಿರೋಧವನ್ನು ಜಾರಿಗೆ ತರಬೇಕೆಂಬುದೇ ಸರ್ಕಾರದ ನೀತಿಯೆಂದೂ, ಆದರೆ ಎಲ್ಲ ಕಡೆಗಳಲ್ಲೂ ಒಂದೇ ಸಾರಿ ಇದನ್ನು ತರಲು ಸಾಧ್ಯವಿಲ್ಲವೆಂದೂ ತಿಳಿಸಿದರು

ಗ್ರಾಮಾಂತರಗಳಲ್ಲಿ ಆಹಾರ ಡಿಪೋಗಳನ್ನು ಹೆಚ್ಚಾಗಿ ತೆರೆಯಬೇಕೆಂದು ಶ್ರೀ ಕೆ ಎಸ್. ಕುಮಾರಸ್ವಾಮಿಯವರು ನಿರ್ಣಯವನ್ನು ಮಂಡಿಸಿದರು ಈ ವಿಚಾರದಲ್ಲಿ ಅನೇಕರು ಮಾತನಾಡಿ, ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಸರಿಯಾಗಿ ಆಹಾರ ಪದಾರ್ಥಗಳು ಸಿಕ್ಕದೆ ಕಷ್ಟ ಪಡುತ್ತಿದ್ದಾರೆ ರೇಷನ್ ಇಲ್ಲದ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳ ಮೇಲೆ ಹಾಕಲಾಗಿರುವ ಕಂಟ್ರೋಲ್ ಅನ್ನು ತೆಗೆಯಬೇಕು—ಎಂದು ತಿಳಿಸಿದರು. ಅಧ್ಯಕ್ಷರು ಉತ್ತರವಿತ್ತು, ಜನರಿಗೆ ಸಾಕಷ್ಟು ಆಹಾರ ದೊರೆಯುವಂತೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಾರೆ, ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಹೆಚ್ಚು ಡಿಪೋಗಳನ್ನು ತೆಗೆಯಲಾಗುವುದು ಸಮಗ್ರ ಗ್ರಾಮ ಸಹಕಾರ ಸಂಘಗಳ ಮೂಲಕ ಆಹಾರ ಹಂಚಲು ಏರ್ಪಾಡು ಮಾಡಲಾಗುವುದು. ರೇಷನ್ ಇಲ್ಲದ ಪ್ರದೇಶಗಳಲ್ಲಿ ಆಹಾರ ಸಾಗಿಸುವುದರ ಮೇಲಿನ ಪ್ರತಿಬಂಧಕವನ್ನು ತೆಗೆಯಲು ಸಾಧ್ಯವಿಲ್ಲವೆಂದು ತಿಳಿಸಿದರು

ಮಿಲ್ಲು ಬಟ್ಟೆಗಳಿಗೆ ಎಕ್ಸೈಸ್ ದರವನ್ನು ಲಾಭ ಸೇರಿ ಹಿಂದೆ ಹಾಕುತ್ತಿದ್ದ ದರಕ್ಕಿಂತ ಎರಡರಷ್ಟಾಗಿರುವುದರಿಂದ ಅದನ್ನು ೧ ಭಾಗಕ್ಕೆ ಕಮ್ಮಿಯಿಲ್ಲದಂತೆ ತಗ್ಗಿಸಬೇಕೆಂಬ ವಿಷಯದ ಮೇಲೆ ಅಧ್ಯಕ್ಷರು ಉತ್ತರವಿತ್ತು, ದರ ನಿಗದಿ ಮಾಡುವುದು ಭಾರತ ಸರ್ಕಾರಕ್ಕೆ ಸೇರಿದ್ದೆಂದೂ, ತಾವು ಈ ವಿಷಯದಲ್ಲಿ ಏನೂ ಮಾಡಲೂ ಸಾಧ್ಯವಿಲ್ಲವೆಂದೂ ತಿಳಿಸಿದರು.

ಅಧ್ಯಕ್ಷರ ಭಾಷಣ

ಶ್ರೀ ಡಿ ಎಚ್ ಚಂದ್ರಶೇಖರಯ್ಯನವರು ಮುಕ್ತಾಯ ಭಾಷಣ ಮಾಡಿ, ಪ್ರಜಾ ಸರ್ಕಾರದಲ್ಲಿ ಪ್ರಜೆಗಳ ಜವಾಬ್ದಾರಿಯು ಗುರುತರವಾದುದೆಂದೂ, ಮಂತ್ರಿಗಳೂ ಅಧಿಕಾರಿಗಳೂ ಮತ್ತು ಜನರು ಎಲ್ಲ ಸೇರಿ ಸೇವಾದೃಷ್ಟಿಯಿಂದ ದೇಶದ ಪ್ರಗತಿಗಾಗಿ ದುಡಿಯಬೇಕೆಂದೂ ತಿಳಿಸಿದರು ವಿದ್ಯಾಭ್ಯಾಸದ ಸುಧಾರಣೆ ವಿಷಯವನ್ನು ಪ್ರಸ್ತಾಪಿಸಿ, ಸರ್ಕಾರದವರು ಡಾ|| ಸಿ. ಆರ್ ರೆಡ್ಡಿಯವರ ವರದಿಯನ್ನು ನಿರೀಕ್ಷಿಸುತ್ತಿದ್ದಾರೆಂದೂ, ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆದ ಉಪಾಧ್ಯಾಯರುಗಳ ಆವಶ್ಯಕತೆಯಿರುವುದರಿಂದ ಬೆಂಗಳೂರಿನಲ್ಲಿ ಒಂದು ವಿಶೇಷ ಉಪಾಧ್ಯಾಯರುಗಳ ಶಿಕ್ಷಣ ಶಿಬಿರವನ್ನು ತೆರೆಯಲಾಗುವುದೆಂದೂ ಅವರು ಹೇಳಿದರು ವಂದನಾರ್ಪಣೆಯೊಡನೆ ಸಮ್ಮೇಳನವು ಮುಕ್ತಾಯವಾಯಿತು

ಬಹುಮಾನ ವಿನಿಯೋಗ

ರಾಜಧಾನಿಯ ಕೃಷ್ಣ ಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಜೂನಿಯರ್ ಬ್ಯಾಡ್ ಮಿಂಟನ್ ಟೂರ್ನಮೆಂಟಿನಲ್ಲಿ ಚಾಮರಾಜನಗರದ ಎಂ ಎಸ್.ಸಿ ಟೀಮಿನ ಐದು ಜನರ ಮೇಲೂ, ಬೆಂಗಳೂರಿನ ಎಕ್ಸೆಲ್ಸಿಯರ್ ಟೀಮಿನ ಎರಡು ಜನರ ಮೇಲೂ ಗೆದ್ದ ಮೈಸೂರಿನ ಯಂಗ್ ಅಡ್ವೆಂಚರರ್ಸ್‌ಗೂ ಮತ್ತು ಮೋಕ್ಷಂಡ ಎರಡು ಟೀಮುಗಳಿಗೂ ಶ್ರೀ ಮನ್ಮಹಾರಾಜರ ಅಸಿಸ್ಟೆಂಟ್ ಸೆಕ್ರೆಟರಿ ಶ್ರೀ ಕೆ ನರಸಿಂಹೈಯ್ಯಂಗಾರ್ಯರು ಪಾರಿತೋಷಕವನ್ನೂ, ಬೆಳ್ಳಿಯ ಬಟ್ಟಲುಗಳನ್ನೂ ಬಹುಮಾನವಾಗಿ ಹಂಚಿದರು

ಹೋಂ ಗಾರ್ಡ್ ಪರಿಶೀಲನೆ

ನಾಳೆ ಬೆಳಗ್ಗೆ ೭ ಗಂಟೆಗೆ ಸಂಸ್ಥಾನದ ಪೋಲೀಸ್ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಸಿ ಎಂ ಎಚ್ ರಣಜೋಧಸಿಂಗರು ಅರಮನೆ ಕಛೇರಿ ಮೈದಾನದಲ್ಲಿ ನಗರದ ಹೋಂ ಗಾರ್ಡು ದಳಗಳನ್ನು ಪರಿಶೀಲಿಸುವರು

ಬಿಸಿಲಿನಿಂದ ೮ ಜನರ ಮರಣ

ಅಹಮದಾಬಾದಿನಲ್ಲಿ ಕಳೆದ ನಾಲ್ಕು ದಿನಗಳಿಂದಲೂ ವಿಪರೀತ ಬಿಸಿಲು ಉಂಟಾಗಿ, ೨ ಜನರು ಸತ್ತರೆಂದು ವರದಿಯಾಗಿದೆ

ಗೋಪಾಲರಾಯರ ವಜ್ರದ ಉಂಗುರದ ಹರಾಜು

ಸ್ವಂ ಸು ವ|] ಬೆಂಗಳೂರು ೧೧

ಧರ್ಮರಕ್ಷಾಕರ ಗೋಪಾಲರಾಯರ ಆಸ್ತಿಗಳ ಬಗ್ಗೆ ನೇಮಿಸಲಾಗಿದ್ದ ಸರ್ಕಾರೀ ರಿಸೀವರ್ ಶ್ರೀ ಸಿ ಕೆ ಗೋವಿಂದರಾಜಅರಸರವರು, ಈ ದಿನ ಸಾಕ್ಷ್ಯವಿತ್ತು ರಾಯರ ಆಸ್ತಿಗಳ ಮಾರಾಟದಿಂದ ಇದುವರೆಗೆ ೩,೩೯,೪೦೦ ರೂ ವಸೂಲಾಗಿದೆಯೆಂದು ಹೇಳಿದರು. ಗೋಪಾಲರಾಯರ ವಜ್ರದ ಉಂಗುರವನ್ನು ಹರಾಜಿನಲ್ಲಿ ಮೊದಲು ಶ್ರೀ ಗಂಟೆಕೆಪ್ಪರು ೫೦,೫೦೦ ರೂಗೆ ಕೊಂಡರೆಂದೂ, ಈ ಹರಾಜನ್ನು ಕೋರ್ಟಿನವರು ಮಂಜೂರು ಮಾಡದಿದ್ದುದರಿಂದ ಬೇರೆ ಹರಾಜಿನಲ್ಲಿ ಶ್ರೀ ಗಂಜಾಂ ನಾಗಪ್ಪನವರು ಕೊಂಡುಕೊಂಡರೆಂದು ತಿಳಿಸಿದರು ಶ್ರೀ ಟಿ ಜಿ ರಾಮ ಅಯ್ಯಂಗಾರರವರಿಂದ ಗೋಪಾಲರಾಯರು ಕೊಂಡುಕೊಂಡಿದ್ದ ಮನೆಯನ್ನು ೮೩ ಸಾವಿರ ರೂ ಗೂ, ವಿತ್ತೆಂದು ಮನೆಯನ್ನು ೨೬,೫೦೦ ರೂ ಗೂ ಮಾರಲಾಯಿತೆಂದೂ ಸಹ ಅವರು ಹೇಳಿದರು.

ವ್ಯವಸಾಯಕ್ಕೆ ಈಚಲ ವನಗಳು

ಸಂಸ್ಥಾನದಲ್ಲಿ ಪಾನ ನಿರೋಧ ಜಾರಿಗೆ ತಂದಿರುವುದರಿಂದ ಈಚಲ ವನಗಳನ್ನು ವ್ಯವಸಾಯಕ್ಕಾಗಿ ಉಪಯೋಗಿಸುವ ಬಗ್ಗೆ ಪರಿಶೀಲನೆ ನಡೆಸಲು ಶ್ರೀನಿವಾಸ ಕಮೀಷನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿದ್ದಾರೆ ೨೦ ಸಾವಿರ ಎಕರೆ ಈಚಲ ವನಗಳನ್ನು ವ್ಯವಸಾಯಕ್ಕೆ ಕೊಡಬೇಕೆಂದು ಸಮಿತಿಯವರು ಈಗಾಗಲೇ ಸಲಹೆ ಮಾಡಿರುತ್ತಾರೆ

○ ಹೆಬ್ಬಾಳಿನ ತೋಟವೊಂದರಲ್ಲಿ ಕೆಲವು ಬಾಲಕರು ಆಟವಾಡುತ್ತಿದ್ದಾಗ, ಅಲ್ಲಿ ಬಿದ್ದಿದ್ದ ಯಾವುದೋ ಪದಾರ್ಥವನ್ನು ಇಬ್ಬರು ತಿಂದರೆಂದೂ, ಅದರಿಂದ ಮಂತ್ರಿಯಾಗಿ ಆಸ್ಪತ್ರೆಯಲ್ಲಿ ಸತ್ತುಹೋದರೆಂದೂ ಹೇಳಲಾಗಿದೆ

ಮೈಸೂರಿನಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಭೆ

ಬರುವ ಡಿಸೆಂಬರ್ ತಿಂಗಳಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಆದರ ಏಷಿಯಾ ಪ್ರಾಂತೀಯ ಸಭೆಯು ಮೈಸೂರಿನಲ್ಲಿ ನಡೆಸುವುದೆಂದು ತಿಳಿದುಬಂದಿದೆ

೩ನೇ ತಾ|| ಪ್ರ|| ಪ್ರ|| ಸಭಾಧ್ಯಕ್ಷರ ಚುನಾವಣೆ

ಬೆಂಗಳೂರು ೧೧

ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಇದೇ ೩ನೇ ತಾ|| ಪ್ರಾರಂಭವಾಗುವ ಅಧಿವೇಶನದ ಮೊದಲನೆಯ ದಿನವೇ ಚುನಾಯಿಸಲಾಗುವುದೆಂದೂ, ಈ ಬಗ್ಗೆ ಶಾಸನದ ತಿದ್ದುಪಡಿಯು ಸಧ್ಯದಲ್ಲಿಯೇ ಹೊರಬೀಳಲಿದೆಯೆಂದೂ ತಿಳಿದುಬಂದಿದೆ

ನಾಲ್ಕು ಆಣೆಗಾಗಿ ಗರ್ಭಿಣಿ ಹೆಂಡತಿಯ ಕೊಲೆ

ಅಹಮದಾಬಾದಿನ ಗಿರಣಿ ಕೆಲಸಗಾರನಾದ ಇಬ್ರಾಹಿಂ ಎಂಬಾತನ ಗರ್ಭಿಣಿ ಹೆಂಡತಿಯು ೪ ಆಣೆ ಖರ್ಚುಮಾಡಿದುದರ ಬಗ್ಗೆ ವಿವರಣೆ ಕೊಡಲಿಲ್ಲವೆಂದು ಆಕೆಯ ಗಂಡನು ರೇಗಿ ಆಕೆಯನ್ನು ಕಾಲಿನಿಂದ ಒದ್ದನೆಂದೂ, ಅದರಿಂದ ಆಕೆಯು ಸತ್ತುಹೋದಳೆಂದೂ ವರದಿಯಾಗಿದೆ ಆತನನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ.

ಪಾನನಿರೋಧವನ್ನು ಎಚ್ಚರಿಕೆಯಿಂದ ತರಬೇಕು

ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಅದರಲ್ಲೂ ಮಲೆನಾಡಿನಲ್ಲಿ ಪಾನ ನಿರೋಧವನ್ನು ಜಾರಿಗೆ ತಂದಮೇಲೆ ಅಕ್ರಮ ಶೇಂದಿ ತಯಾರಿಕೆ ಹೆಚ್ಚಿದೆಯೆಂದೂ, ಪಾನ ನಿರೋಧ ಯೋಜನೆಯಿಂದ ಸಂಸ್ಥಾನಕ್ಕೆ ಹೆಚ್ಚು ನಷ್ಟ ಉಂಟಾಗುತ್ತಿರುವುದರಿಂದ ಈ ವಿಚಾರದಲ್ಲಿ ಎಚ್ಚರಿಕೆಯಿಂದಲೂ ಮತ್ತು ನಿಧಾನವಾಗಿಯೂ ಹೋಗಬೇಕೆಂದೂ ಗೃಹಸಚಿವ ಶ್ರೀ ಟಿ ಮರಿಯಪ್ಪನವರು ಹಾಸನದ ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆ ವಹಿಸಿ, ತಿಳಿಸಿರುತ್ತಾರೆ.

ಉಸಿರು ನಿಂತ ಮಗುವನ್ನು ಬದುಕಿಸಲಾಯಿತು

ಆರು ಬಾರಿ ಉಸಿರಾಡುವುದು ನಿಂತುಹೋಗಿದ್ದ ೫|| ವರ್ಷದ ಮಗುವನ್ನು ಕಲ್ಕತ್ತದ ಡಾ|| ಕೋನ್‌ಲೆಂಡ್ ಎಂಬ ವೈದ್ಯರು ಶಸ್ತ್ರ ಚಿಕಿತ್ಸೆ ಮಾಡಿ ಬದುಕಿಸಿದರೆಂದೂ, ಆ ಮಗುವು ಈಗ ಆಡಿಕೊಂಡು ಇದೆಯೆಂದೂ ವರದಿಯಾಗಿದೆ.

ಕಟ್ಟಡ ಬಿದ್ದು ೭ ಜನರ ಮರಣ

ಪಾಟ್ನಾದ ಬಳಿ ದೇವಿಪೂರ್ ಎಂಬಲ್ಲಿ ವಿಪರೀತ ಮಳೆ ಬಂದು ಹೊಸದಾಗಿ ಕಟ್ಟಲಾಗುತ್ತಿರುವ ಭವನವೊಂದು ಕುಸಿದು ಬಿದ್ದಿತೆಂದೂ, ೭ ಜನರು ಸತ್ತು ಹೋದರೆಂದೂ ಕೆಲವು ದನಗಳು ಮಣ್ಣಿನಲ್ಲಿ ಹೂತು ಹೋದವೆಂದೂ ಹೇಳಲಾಗಿದೆ ನಾಲ್ಕು ಮಂದಿಗೆ ಗಾಯವಾಗಿದೆ

ಗ್ರಾಮಗಳಲ್ಲಿ ಗಾಂಧೀ ಸಂಸ್ಥೆಗಳು

ಗ್ರಾಮಾಂತರಗಳಲ್ಲಿ ಗಾಂಧೀ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ದೆಹಲಿಯಲ್ಲಿ ನಿನ್ನೆ ನಡೆದ ಗಾಂಧೀ ಸ್ಮಾರಕ ನಿಧಿ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಯಿತು.

ರಾಧಾಕೃಷ್ಣನ್‌ರವರು ರಷ್ಯದಲ್ಲಿ ರಾಯಭಾರಿ

ಡಾ|| ರಾಧಾಕೃಷ್ಣನ್‌ರವರನ್ನು ರಷ್ಯದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗುವುದೆಂದು ದೆಹಲಿಯ ಅಧಿಕೃತ ವಲಯಗಳಲ್ಲಿ ಹೇಳಲಾಗುತ್ತಿದೆ

ಇಟಲಿಯಲ್ಲಿ ಅಣು ಸಂಶೋಧನಾ ಕೇಂದ್ರ ರದ್ದು

ಹಣ ಖರ್ಚು ಮಾಡಲು ಸಾಧ್ಯವಿಲ್ಲವೆಂದು ಇಟಲಿಯು ತನ್ನ ಅಣು ಸಂಶೋಧನಾ ಕೇಂದ್ರವನ್ನು ಮುಚ್ಚಲು ನಿರ್ಧರಿಸಿದೆ

೧೨ ಕೋಟಿ ಮನೆಗಳ ಅಭಾವ

ಪ್ರಪಂಚದಲ್ಲಿ ಈಗ ೧೨ ಕೋಟಿ ಮನೆಗಳ ಅಭಾವವಿರುವುದೆಂದೂ, ಇದಲ್ಲದೆ ಲಕ್ಷಾಂತರ ಹಳೇ ಮನೆಗಳು ವಾಸಕ್ಕೆ ಯೋಗ್ಯವಾಗಿಲ್ಲವೆಂದೂ ಹೇಳಲಾಗಿದೆ

ರೇಡಿಯೋ ಪ್ರಸಾರದಿಂದ ಬೆಕ್ಕುಗಳಿಗೆ ಭ್ರಾಂತಿ

ಲಂಡನ್ನಿನ ಬಿ ಬಿ ಸಿ. ರೇಡಿಯೋ ಕೇಂದ್ರದಿಂದ ಬೆಕ್ಕುಗಳ ಭಾಷೆಯನ್ನು ಪ್ರಸಾರ ಮಾಡಿದುದರಿಂದ, ಖಾಸಗೀ ಮನೆಗಳ ಅನೇಕ ಬೆಕ್ಕುಗಳು ಅದನ್ನು ಕೇಳಿ ಗಾಬರಿಗೊಂಡುವೆಂದು ವರದಿಯಾಗಿದೆ

ಯಂತ್ರಗಳ ಮೂಲಕ ವಿವಾಹ ವಿಚ್ಛೇದನ

ಯಂತ್ರಗಳ ಮೂಲಕ ವಿವಾಹ ವಿಚ್ಛೇದನವನ್ನು ಪಡೆಯುವ ವಿಧಾನವನ್ನು ಜಾರಿಗೆ ತರಬೇಕೆಂದು ಅಮೆರಿಕದ ನವೇಡಾ ಶಾಸನ ಸಭಾ ಸದಸ್ಯರಾದ ಬಿಲ್ ಬಂಕರವರು ಒಂದು ಮಸೂದೆಯನ್ನು ತಂದಿದ್ದಾರೆ ತಮ್ಮ ದಾಂಪತ್ಯವನ್ನು ಸ್ಥಿರಪಡಿಸಿಕೊಳ್ಳಲು ವಿವಾಹ ವಿಚ್ಛೇದನ ಪಡೆಯುವವನು ೬೦ ದಿನಗಳ ಕಾಲ ಯಂತ್ರವನ್ನು ಪ್ರತಿ ದಿನವೂ ಒತ್ತಿ, ಅನಂತರ ೫೦೦ ಡಾಲರುಗಳನ್ನು ಅದರೊಳಗೆ ಹಾಕುವುದರಿಂದ ವಿಚ್ಛೇದನ ರಹದಾರಿ ಚೀಟಿಯನ್ನು ಪಡೆಯಬಹುದೆಂದು ಹೇಳಲಾಗಿದೆ

ಮೈಸೂರಿನ ಭವಿಷ್ಯ ನಿರ್ಧರಿಸುವುದು ಜನರಿಗೆ ಸೇರಿದ್ದು

ಜಿಲ್ಲಾ ಸಮ್ಮೇಳನದಲ್ಲಿ ನಿರ್ಣಯ

ಮೈಸೂರು ೧೧

ಅಖಿಲ ಭಾರತ ಒತ್ತಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಮೈಸೂರಿನ ಭವಿಷ್ಯ ರಾಜ್ಯಾಂಗವನ್ನು ರೂಪಿಸಿ ಕೊಳ್ಳುವುದೂ ಮತ್ತು ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ತನ್ನ ಪಾತ್ರವನ್ನು ನಿರ್ಧರಿಸುವುದೂ, ಮೈಸೂರಿನ ಪ್ರಜೆಗಳ ಜನ್ಮಸಿದ್ಧ ಹಕ್ಕು ಈ ಬಗ್ಗೆ ಮೈಸೂರು ಪ್ರಜೆಗಳ ಪರವಾಗಿ ಮಾತನಾಡಲು ಅಥವ ವ್ಯವಹರಿಸಲು ರಾಜ್ಯಾಂಗ ರಚನಾಸಭೆಗೆ ಮಾತ್ರ ಅಧಿಕಾರವಿರುವುದೇ ಹೊರತು ಆ ಸಭೆಯು ಅಂಗೀಕರಿಸುವ ಧ್ಯೇಯೋದ್ದೇಶಗಳ ನಿರ್ಣಯಕ್ಕೆ ವಿರೋಧ ಬರುವ ರೀತಿಯಲ್ಲಿ ನಡೆಸುವ ಕಾರ್ಯ ಚಟುವಟಿಕೆಗಳನ್ನು ಈ ಸಭೆಯು ಖಂಡಿಸುತ್ತದೆ-ಎಂಬ ನಿರ್ಣಯವು ಸರ್ವಾನುಮತದಿಂದ ನಿನ್ನೆ ಟೌನ್ ಹಾಲಿನಲ್ಲಿ ನಡೆದ ಜಿಲ್ಲಾ ಸಮ್ಮೇಳನದಲ್ಲಿ ಅಂಗೀಕೃತವಾಯಿತು.

ನಿರ್ಣಯದ ಮೇಲೆ ಒಂದು ಗಂಟೆ ಕಾಲ ಚರ್ಚೆ ನಡೆಯಿತು ಶ್ರೀ ಡಿ ಎಂ ಸಿದ್ದಯ್ಯನವರು ನಿರ್ಣಯವನ್ನು ಮಂಡಿಸಿ ಕೆಲವು ನಾಯಕರುಗಳು ಮೈಸೂರಿನ ಭವಿಷ್ಯದ ಬಗ್ಗೆ ಮಾಡುತ್ತಿರುವ ಪ್ರಚಾರವನ್ನು ಖಂಡಿಸಿದರು ಶಾಸನಬದ್ಧ ರಾಜತ್ವವು ಮೈಸೂರಿನಲ್ಲಿರಬೇಕೆಂದು ಪ್ರಮಾಣ ವಚನ ತೆಗೆದುಕೊಂಡಿರುವಾಗ್ಯೆ, ಮಹಾರಾಜರನ್ನು ಗೌರ್ನರರಾಗಿ ಮಾಡಬೇಕೆಂದೂ ಮತ್ತು ಮೈಸೂರನ್ನು ಕರ್ನಾಟಕ ಭಾಗಗಳಿಗೆ ಸೇರಿಸಬೇಕೆಂದೂ ಹೇಳುವ ವಾದವನ್ನು ಹೇಗೆ ಒಪ್ಪಲು ಸಾಧ್ಯ? ರಾಜತ್ವವಿರುವ ಕರ್ನಾಟಕ ಪ್ರಾಂತ್ಯ ರಚನೆಗೆ ಯಾರೂ ಅಡ್ಡಿ ಬರುವುದಿಲ್ಲ-ಎಂದು ಹೇಳಿದರು

ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮಾತನಾಡಿ, ಭವಿಷ್ಯ ಭಾರತದ ರಿಪಬ್ಲಿಕ್ಕಿನಲ್ಲಿ ರಾಜರುಗಳು ಇರಬೇಕೆಂದು ಪ್ರಜೆಗಳು ಅಭಿಪ್ರಾಯಪಟ್ಟರೆ ಈ ರೀತಿ ಇರಲು ಅವಕಾಶವನ್ನು ಭಾರತ ರಾಜ್ಯಾಂಗದಲ್ಲಿ ಕಲ್ಪಿಸಿರುವಾಗ, ಕೆಲವರು ಇದಕ್ಕೆ ವಿರೋಧವಾಗಿ ಪ್ರಚಾರ ಮಾಡುತ್ತಿರುವುದು ಖಂಡನೀಯವೆಂದು ತಿಳಿಸಿದರು ೮೦ ಲಕ್ಷ ಜನರ ಅಭಿಪ್ರಾಯಕ್ಕೆ ವಿರೋಧವಾಗಿ ವರ್ತಿಸುವವರು ದೇಶದ್ರೋಹಿಗಳು ಕೆಲವರು ಮೈಸೂರು ರಾಜ್ಯಾಂಗ ಸಭೆಯ ಸದಸ್ಯರೂ ಮತ್ತು ಕಾಂಗ್ರೆಸ್ಸಿನವರೂ ಆಗಿದ್ದುಕೊಂಡು, ಹೊರ ಪ್ರದೇಶದಲ್ಲಿ ರಾಜ್ಯಾಂಗ ಸಭೆಯ ನಿರ್ಣಯಕ್ಕೆ ಧಕ್ಕೆ ತರುವಂತೆ ವರ್ತಿಸುತ್ತಿದ್ದಾರೆ ಅಂತಹವರನ್ನು ವಿಶೇಷ ಕೋರ್ಟಿನ ಮುಂದೆ ವಿಚಾರಣೆಗೆ ಗುರಿಪಡಿಸಿ,ಅವರ ಮೇಲೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು-ಎಂದು ಹೇಳಿದರು.

ಶ್ರೀಗಳಾದ ಎಂ ಎಲ್. ನಂಜರಾಜೇ ಅರಸ್, ಎ. ಭೋಗಿಮಲ್ಲಯ್ಯ ಮತ್ತು ಇತರರು ಅದನ್ನು ಅನುಮೋದಿಸಿದರು.

ಶ್ರೀ ಎಸ್ ರಂಗರಾಮಯ್ಯನವರು ನಿರ್ಣಯವನ್ನು ವಿರೋಧಿಸಿ, ಮೈಸೂರಿನ ರಾಜ್ಯಾಂಗವು ಇನ್ನೂ ನಿರ್ಧರವಾಗದಿರುವಾಗ ರಾಜತ್ವ ಇರಬೇಕೇಕೆಂದು ಈಗ ತಂದಿರುವ ವಾದವು ಸರಿಯಾದುದಲ್ಲವೆಂದೂ, ಯಾರೋ ಕೆಲವರು ವಿರೋಧಿಸುವರೆಂದು ಹೇಳವುದು ಸರಿಯಲ್ಲವೆಂದೂ ತಿಳಿಸಿದರು

ಶ್ರೀ ಶಂಕರಯ್ಯನವರು ನಿರ್ಣಯವನ್ನು ವಿರೋಧಿಸಿ, ಸಂಸ್ಥಾನಗಳಿಗೆಲ್ಲಾ ಒಂದೇ ಮಾದರಿ ರಾಜ್ಯಾಂಗವು ಇರಬೇಕೆಂದು ಭಾರತ ಸರ್ಕಾರದವರು ಸೂಚಿಸಿರುವಾಗ ಮೈಸೂರಿಗೆ ಪ್ರತ್ಯೇಕತೆ ಇರಬೇಕೆಂದು ತಿಳಿಸುವುದು ಸರಿಯಾದುದಲ್ಲವೆಂದು ಹೇಳಿದರು

ಗ್ರಾಮಾಭಿವೃದ್ಧಿ ಯೋಜನೆಗೆ ವಿರೋಧ

ಸರ್ಕಾರದವರು ಈಗ ಜಾರಿಗೆ ತಂದಿರುವ ಗ್ರಾಮಾಭಿವೃದ್ಧಿಯೋಜನೆ ಮತ್ತು ಸಮಗ್ರ ಗ್ರಾಮ ಸೇವಾ ಸಹಕಾರ ಸಂಘಗಳ ಸ್ಥಾಪನೆ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯವನ್ನು ಶ್ರೀ ಹೆಚ್ ಕೆ. ಕುಮಾರಸ್ವಾಮಿಯವರು ಮಂಡಿಸಿದರು. ಶ್ರೀ ಡಿ ಎಂ ಸಿದ್ದಯ್ಯ ಮತ್ತ ಇನ್ನೂ ಇತರರು ಅದನ್ನು ವಿರೋಧಿಸಿ, ಪ್ರಜಾ ಸರ್ಕಾರದಲ್ಲೂ ನಾಮಕರಣ ಪದ್ಧತಿ ಇರುವುದು ಖಂಡನೀಯವೆಂದೂ, ಒಂದು ಸಂಸ್ಥೆಗೆ ೭೮ ಜನರನ್ನು ನಾಮಕರಣ ಮಾಡುವುದು ಪ್ರಜಾಪ್ರಭುತ್ವಕ್ಕೆ ವಿರೋಧವೆಂದೂ ತಿಳಿಸಿದರು ಇದು ಚರ್ಚಾಸ್ಪದವಾದ ವಿಚಾರವೆಂದು ಅಧ್ಯಕ್ಷರು ಸೂಚಿಸಿದ ಮೇಲೆ, ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಒಂದೇ ಸಿನಿಮಾ ಪ್ರದರ್ಶನ

ನಗರ ಮತ್ತು ಟೌನುಗಳಲ್ಲಿ ದಿನಕ್ಕೆ ಒಂದೇ ಒಂದು ಸಿನಿಮಾ ಪ್ರದರ್ಶನಗಳಿರಬೇಕೆಂಬ ಶ್ರೀ ಕೆ. ಸಿದ್ದಯ್ಯನವರ ನಿರ್ಣಯವು ಅಂಗೀಕೃತವಾಯಿತು

ಒಂದೇ ಪದಾರ್ಥಕ್ಕೆ ೩ ಅಥವ ೪ ಬಾರಿ ಮಾರಾಟ ತೆರಿಗೆ ಹಾಕುವುದನ್ನು ನಿಲ್ಲಿಸಬೇಕು, ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ರೈಲ್ವೆ ಸರ್ವೆ ರದ್ದು, ಹುಣಸೂರಿನಲ್ಲಿರುವ ಕೋರ್ಟನ್ನು ವಜಾಮಾಡಿ, ಅದನ್ನು ಮೈಸೂರಿಗೆ ವರ್ಗಾಯಿಸುವುದು— ಇವೇ ಮುಂತಾದ ನಿರ್ಣಯಗಳನ್ನು ಸರ್ಕಾರದ ಪರಿಶೀಲನೆಗೆ ಕಳುಹಿಸಬೇಕೆಂದು ನಿರ್ಧರಿಸಲಾಯಿತು.

ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಪಟ್ಟ ಇನ್ನೂ ೩೦ ವಿಷಯಗಳ ಮೇಲೆ ಚರ್ಚೆ ನಡೆದು, ಈ ದಿನಕ್ಕೆ ಸಭೆಯನ್ನು ಮುಂದುವರಿಸಲಾಯಿತು

ಕಡಿಮೆ ತೂಕಕ್ಕಾಗಿ ದಂಡ

ಸರ್ಕಾರಿ ಸೀಲು ಇಲ್ಲದ ಮತ್ತು ಕಡಿಮೆ ತೂಕದ ಬಟ್ಟುಗಳನ್ನು ಇಟ್ಟುಕೊಂಡಿದ್ದರೆಂದು ಶ್ರೀರಂಗಪಟ್ಟಣದ ವ್ಯಾಪಾರಿಗಳಾದ ಬಾದರ ತಿಮ್ಮಯ್ಯನವರಿಗೆ ೫೦ ರೂ ದಂಡವನ್ನು ಅಲ್ಲಿನ ನ್ಯಾಯಾಧೀಶರು ವಿಧಿಸಿರುತ್ತಾರೆ.

GOLDEN OPPORTUNITY

All license-holders of Mysore District will be given 1500 yards of Binny and other Mill Cloths. For further details please apply to.— Messis

R. VASUDEVA MURTHY and Co.,
Opposite to Prabha Talkies, Mysore.

Edited, printed, and published by A R. Nagarajan at the Sadhvi Press. D Subbiah Road, Mysore.

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು
11-5-49 ರಿಂದ 3 ದಿನಗಳು ಮಾತ್ರ
ಎಂ ಜಿ ಎಂ ರವರ ಆಕರ್ಷಣೀಯ
ವರ್ಣರಂಜಿತ ಚಿತ್ರ
FIESTA ಫಿಯೆಸ್ಟಾ
ಪಾತ್ರ - ಎಸ್ತರ್ ವಿಲಿಯಮ್ಸ್

ಬೆಳಗಿನ ಪ್ರದರ್ಶನ
14-5-49ರಿಂದ 2 ದಿನಗಳು
ಎಂ ಜಿ ಎಂ ರವರ
Countr Vellie Ghost
ಕೌಂಟರ್ ವೆಲ್ಲಿ ಘೋಸ್ಟ್

NEW
OPERA TALKIES,
MYSORE
From 11-5-49
Daily 3 Shows
CLUNY BROWN
With Jennifer Jone
Charles Boyer

ಗಣೇಶಾ ಟಾಕೀಸ್

12-5-49ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು
ವಾಹಿನಿಯವರ ತೆಲುಗು ಚಿತ್ರ
ವಂದೇ ಮಾತರಂ
ಭೂಮಿಕೆ - ನಾಗಯ್ಯ, ಕಾಂಚನಮಾಲಾ

- ಸ್ಪೆಷಲ್ ತಯಾರಿ:
ನಮ್ಮ ಸ್ವಂತ ಮಗ್ಗದಿಂದ ಮೈಸೂರು [illegible] ಕ್ರೇಪ್, ಜಂಗಳಿ, ಧರ್ಮಾವರಂ [illegible] ಗ್ಯಾರಂಟಿಯಾಗಿ [illegible] ಇಂದೇ ಭೇಟಿ ಕೊಡಿ
ಗುರು ಟೆಕ್ಸ್‌ಟೈಲ್ [illegible]
[illegible], ಮೈಸೂರು

ಪ್ರಭಾ ★ 13-5-49ರಿಂದ

ಅಮೋಘ ಪ್ರಾರಂಭ
ದಿನವಹಿ 3 ಆಟಗಳು
ಆಲ್ ಇಂಡಿಯಾ ಪಿಕ್ಚರ್ಸ್‌ರವರ
- ಪಗರಿ - (ಹಿಂದಿ)
❋ ಕಾಮಿನಿ ಕೌಶಲ್ಯ, ❋ ಶರಿಲೇಖ ❋ ನಾಸ್ತಿಕ್ ಗೋಪ್
(ಎಲ್ಲಾ ವಿಧವಾದ ಕಾಂಪ್ಲಿಮೆಂಟುಗಳನ್ನೂ 2 ವಾರ ಮುನ್ನಾಗಾಡಿರುತ್ತೆ)

Morning Shows for 4 days From 13—5—49
THE HURRICANE
With.-Dorothy Lamour and John Hall

ಪ್ರಭುದೇವಾ ಟಾಕೀಸಿನಲ್ಲಿ

11—5 49ನೇ ಬುಧವಾರದಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ರಾಜಕುಮಾರ ಪ್ರೊಡಕ್ಷನ್ಸ್‌ರವರ
★ ವೀರ ವನಿತೆ ★ [ತಮಿಳು]
ಪಾತ್ರ - ಲಕ್ಷ್ಮೀ ದೇವಿ, ಶ್ರೀನಿವಾಸರ್ ಬಿ. ಎ ಮುಂತಾದವರು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೬]   ಗುರುವಾರ ೧೩-೫-೪೮   [ಸಂಚಿಕೆ ೩೬೮

ಹೈದರಾಬಾದಿಗೆ - ಪಟೇಲರ ಹೆಸರು -

ಮಾನಪತ್ರ ಕೊಡದಿದ್ದುದಕ್ಕೆ ಮಾಜಿ ಮಂತ್ರಿ ಪರಿತಾಪ

ಮದ್ರಾಸಿನ ಮಾಜಿ ಕಾಂಗ್ರೆಸ್ ಹರಿಜನ ಮಂತ್ರಿಯಾದ ಶ್ರೀ ವಿ. ಕೂರ್ಮಯ್ಯನವರು ವಿಶಾಖ ಪಟ್ಟಣದಲ್ಲಿ ಸೇರಿದ್ದ ಆಂಧ್ರ ಹರಿಜನ ಸಂಘದ ವಾರ್ಷಿಕ ಅಧಿವೇಶನದಲ್ಲಿ ಮಾತನಾಡುತ್ತಾ ಕಾಂಗ್ರೆಸ್ ಹರಿಜನರನ್ನು ಮರೆತಿದೆಯೆಂದೂ ತಾವು ಮೂರು ವರ್ಷಗಳ ಕಾಲ ಮಂತ್ರಿಯಾಗಿದ್ದಾಗ್ಯೂ ಯಾವುದೇ ಕಾಂಗ್ರೆಸ್ ಸಮಿತಿಯೂ ಸಹ ತಮಗೆ ಮಾನ ಪತ್ರವನ್ನು ಸಮರ್ಪಿಸಲಿಲ್ಲವೆಂದೂ, ಆದರೆ ಕಾಂಗ್ರೆಸ್ಸಿನ ಸವರ್ಣ ಹಿಂದೂ ಮಂತ್ರಿಗಳಿಗೆ ಅನೇಕ ಮಾನ ಪತ್ರಗಳನ್ನು ಮನಸ್ಸು ಬಂದಂತೆ ಕೊಡಲಾಯಿತೆಂದೂ ತಿಳಿಸಿದ್ದಾರೆ

ಸಿಪಾಯಿ ದಂಗೆ ಸ್ಮಾರಕಗಳ ಹೆಸರಿನ ಬದಲಾವಣೆ

ಕಾನ್ಪುರದಲ್ಲಿರುವ ಸಿಪಾಯಿದಂಗೆ ಸ್ಮಾರಕ ಗೋಡೆ ಮತ್ತು ಕೊಳೆಘಟ್ಟಗಳ ಹೆಸರನ್ನು ಬದಲಾಯಿಸಿ, ಷಾಹೀದ್ ಪಾರ್ಕ್ ಮತ್ತು ನಾನಾ ಸಾಹೇಬ್ ಪಾರ್ಕ್ ಎಂದು ಕರೆಯಬೇಕೆಂದು ಅಲ್ಲಿನ ಜನರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಆರು ಸಾವಿರ ಉಪಾಧ್ಯಾಯರ ಮುಷ್ಕರ ?

ತಿರುವಾಂಕೂರಿನ ೬ ಸಾವಿರ ಮಾಧ್ಯಮಿಕ ಶಾಲಾ ಉಪಾಧ್ಯಾಯರುಗಳು ತಮ್ಮ ಸಂಬಳ ಸಾರಿಗೆ ಬಗ್ಗೆ ಮುಷ್ಕರಹೂಡುವುದಾಗಿ ಸರ್ಕಾರಕ್ಕೆ ನೋಟೀಸ್ ಕೊಟ್ಟಿರುವರೆಂದೂ, ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದೂ ಅಲ್ಲಿನ ವಿದ್ಯಾ ಸಚಿವರು ತಿಳಿಸಿರುತ್ತಾರೆ

ಟೀ ಕುಡಿದು ಲಾಕಪ್ಪಿನಲ್ಲಿ ಮರಣ

ತಿರುವಣ್ಣಾಮಲೆಯ ಷಣ್ಮುಗಂ ಎಂಬಾತನು ಮೊನ್ನೆ ರಾತ್ರಿ ಕ್ಷೌರದ ಸಾಮಾನುಗಳನ್ನು ಮಾರುತ್ತಿದ್ದಾಗ ಅವನ ನಡತೆಯ ಬಗ್ಗೆ ಸಂಶಯವುಂಟಾಗಿ ದಸ್ತಗಿರಿ ಮಾಡಿದನು ಆತನನ್ನು ಲಾಕಪ್ಪಿನಲ್ಲಿಟ್ಟಿದ್ದಾಗ ಟೀಯನ್ನು ಸೇವನೆ ಮಾಡಿ ಕೂಡಲೇ ಮೃತಪಟ್ಟನು.

ಗೋವಾ ನಗರವು ಪೋರ್ಚುಗಲ್ ಭಾಗವೇ ?

ಗೋವಾ ನಗರವು ಪೋರ್ಚುಗಲ್ ದೇಶಕ್ಕೆ ಸೇರಿದ ಭಾಗವೆಂದೂ, ಅಲ್ಲಿನ ನಿವಾಸಿಗಳೆಲ್ಲರೂ ಪೋರ್ಚುಗೀಸರೆಂದೇ ಭಾವಿಸಲ್ಪಡುವರೆಂದೂ ಪೋರ್ಚುಗಲ್ಲಿನ ರಾಜಕಾರಣಿಗಳು ಮತ್ತು ಜನರು ಸಾರಿದ್ದಾರೆ ಈ ಬಗ್ಗೆ ಭಾರತದಲ್ಲಿರುವ ಪೋರ್ಚುಗೀಸ್ ಸ್ವಾಸ್ತ್ಯವನ್ನೆಲ್ಲಾ ಪೋರ್ಚುಗಲ್ ದೇಶದ ಎಲ್ಲೆಕಟ್ಟಿನಲ್ಲಿರುವುದೆಂಬ ಶಾಸನವನ್ನೂ ಸಹ ಮಂಡಿಸಲಿದ್ದಾರೆಂದು ಹೇಳಲಾಗಿದೆ

ಬಸವ ಜಯಂತಿ ಸಂಗೀತ

ವಿಲ್ಸೀ ಮೊಹಲ್ಲಾ ಸೇವಾಮಂಡಲಿಯ ಆಶ್ರಯದಲ್ಲಿ ೫ ದಿನ ಸಂಜೆ ೬||| ಎಂ ಆರ್ ಚಂದ್ರಶೇಖರಯ್ಯನವರ ಸಂಗೀತ ನಡೆಯುವುದು.

ಬಂಗಾಳದ ಈಸ್ಟ್ ಇಂಡಿಯನ್ ರೈಲ್ವೆ ಎಲ್ಲ ನಿಲ್ದಾಣಗಳಲ್ಲೂ ೩ನೇ ತರಗತಿ ಪ್ರಯಾಣಿಕರು ಕುಳಿತುಕೊಳ್ಳುವ ಸ್ಥಳ ... ಗೆ ವಿದ್ಯುಚ್ಛಕ್ತಿ ಫ್ಯಾನುಗಳನ್ನು ಹಾಕ...

ಹೈದರಾಬಾದಿಗೆ ಪಟೇಲರ ಹೆಸರಿನ ಸೂಚನೆ

ಹೈದರಾಬಾದ್ ಸಂಸ್ಥಾನಕ್ಕೆ ಸರ್ದಾರ್ ಪಟೇಲರು ಸಲ್ಲಿಸಿರುವ ಸೇವೆಯ ಜ್ಞಾಪಕಾರ್ಥವಾಗಿ ಆ ಸಂಸ್ಥಾನದ ಹೆಸರನ್ನು ವಲ್ಲಭನಗರ ಅಥವ ವಲ್ಲಭ ಸಂಸ್ಥಾನ ಎಂದು ಕರೆಯಬೇಕೆಂದು ಪ್ರೊ|| ಎನ್. ಜಿ. ರಂಗಾರವರು ಸೂಚಿಸಿದ್ದಾರೆ

ಮದ್ರಾಸಿನಲ್ಲಿ ಇಂಗ್ಲೀಷ್ ಭಾಷೆಯ ಪಾಠ

ಬರುವ ವರ್ಷದಿಂದ ಮದರಾಸು ಪ್ರಾಂತದಲ್ಲಿ ಈಗ ಜಾರಿಯಲ್ಲಿರುವ ಎರಡನೇ ಫಾರಂನಿಂದ ಇಂಗ್ಲೀಷು ಭಾಷೆಯನ್ನು ಹೇಳಿಕೊಡುವುದನ್ನು ಬದಲಾಯಿಸಿ ಮೊದಲನೇ ಫಾರಂನಿಂದಲೇ ಹೇಳಿಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ

೧೨೦ಕೋಟಿ ರೂ. ಅಭಿವೃದ್ಧಿ ಯೋಜನೆ

ಬೊಂಬಾಯಿ ಪ್ರಾಂತ್ಯವು ೧೫ ವರ್ಷಗಳಲ್ಲಿ ಸ್ವಯಂ ಪರಿಪೂರ್ಣತೆ ಹೊಂದಲು ೧೨೦ ಕೋಟಿ ರೂ ಯೋಜನೆಯನ್ನು ಸರ್ಕಾರದವರು ತಯಾರಿಸಿದ್ದಾರೆ. ೧೫ ಲಕ್ಷ ಎಕರೆ ಜಮೀನುಗಳನ್ನು ಸಾಗುವಳಿಗೆ ತರಲು ಜಲಾಶಯಗಳನ್ನು ನಿರ್ಮಿಸಲಾಗುವುದು ಇದರಿಂದ ವರ್ಷಕ್ಕೆ ೪೧೨ ಸಾವಿರ ಟನ್ ಆಹಾರ ಧಾನ್ಯಗಳನ್ನು ಬೆಳೆಯಬಹುದು ೩,೪೦,೦೦೦ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬಹುದೆಂದೂ ಹೇಳಲಾಗಿದೆ

ಅಧಿಕಾರಿಗಳುಬಹಿರಂಗವಲ್ಲಿ ಪಾನ ಮಾಡಕೂಡದು

ಪಶ್ಚಿಮ ಬಂಗಾಳ ಸರಕಾರದ ನೌಕರರು ಬಹಿರಂಗ ಸ್ಥಳಗಳಲ್ಲಿ ಪಾನ ಮಾಡಕೂಡದೆಂದು ಆಜ್ಞೆ ಮಾಡಲಾಗಿದೆ ಅಧಿಕಾರಿಯುತ ಮತ್ತು ಇತರ ಸಮಾರಂಭಗಳಲ್ಲಿ ಪಾನಗಳನ್ನು ಕೊಡಕೂಡದೆಂದೂ ಸೂಚಿಸಲಾಗಿದೆ

ಸಹಕಾರ ಸಂಘಗಳ ನೌಕರರ ಸಮ್ಮೇಳನ

ಮೈಸೂರು ಜಿಲ್ಲಾ ಸಹಕಾರ ಸಂಘಗಳ ನೌಕರರ ದ್ವಿತೀಯ ಸಮ್ಮೇಳನವು ಇದೇ ೩೦ನೇ ತಾ|| ಸಹಕಾರ ಭವನದಲ್ಲಿ ರಿಜಿಸ್ಟ್ರಾರ್ ಶ್ರೀ ರಂಗಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ನಿಜಲಿಂಗಪ್ಪನವರ ಮೇಲೆ ಕಾರ್ಯಕ್ರಮ?

ಮೈಸೂರು ೧೨

ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಕಳೆದ ೮ನೇ ತಾ|| ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಹೇಳಿರುವ ಅಂಶಗಳು ಮೈಸೂರು ಕಾಂಗ್ರೆಸ್ ಮತ್ತು ರಾಜ್ಯಾಂಗ ಸಭೆಯ ತತ್ವಗಳಿಗೆ ವಿರೋಧವಾಗಿರುವುದಲ್ಲದೆ ಮೈಸೂರಿನ ಪ್ರಜೆಗಳ ಘನತೆ ಮತ್ತು ಗೌರವಗಳಿಗೆ ಕುಂದುಕವನ್ನು ತರುವುದರಿಂದ ಅವರ ಈ ವರ್ತನೆಯು ನಿಜವಾಗಿದ್ದರೆ ಅವರ ಬಗ್ಗೆ ವಿವರಣೆ ಕೊಡುವಂತೆ ಅವರನ್ನು ಕೇಳಬೇಕೆಂದೂ, ಅವರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕೆಂದೂ ಸೂಚಿಸಿ ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಎಂ ಚನ್ನಬಸಪ್ಪನವರು ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯನವರಿಗೆ ಪತ್ರ ಒಂದನ್ನು ಬರೆದಿರುತ್ತಾರೆ

ರಷ್ಯ ಮತ್ತು ಪರ್ಷಿಯಾ ಸೈನಿಕರಿಗೆ ಘರ್ಷಣೆ

ಕಾಸ್ಪಿಯನ್ ಸಮುದ್ರ ತೀರದಲ್ಲಿರುವ ಅಸ್ತಾರಾ ಎಂಬ ಪ್ರದೇಶದಲ್ಲಿ ರಷ್ಯ ಮತ್ತು ಪರ್ಷಿಯಾದ ಸೈನಿಕರಿಗೆ ಘರ್ಷಣೆ ಆಗಿ ರಷ್ಯ ಸೈನಿಕರು ಗಡಿದಾಟಿ ಬಂದುದಾಗಿ ಹೇಳಲಾಗಿದೆಯೆಂದೂ, ಇದರಿಂದ ಹಲವರಿಗೆ ಗಾಯವಾಗಿ ಒಬ್ಬ ಪರ್ಷಿಯಾದ ಸೈನಿಕನು ಸತ್ತಿರುವನೆಂದೂ ವರದಿಯಾಗಿದೆ

ವರಮಾನ ತೆರಿಗೆಯ ಪರಿಶೀಲನೆಗೆ ವಿಶೇಷ ಶಾಸನ

ಬೆಂಗಳೂರು ೧೨

ಭಾರತದ ವರಮಾನ ತೆರಿಗೆ ವಿಚಾರಣಾ ಸಮಿತಿಯವರು ಸಂಸ್ಥಾನದಲ್ಲಿ ತಮ್ಮ ಕಾರ್ಯವನ್ನು ರಹಸ್ಯವಾಗಿ ನಡೆಸಲು ಅನುಕೂಲವಾಗುವಂತೆ ಮೈಸೂರಿನಲ್ಲಿ ಒಂದು ವಿಶೇಷ ಶಾಸನವನ್ನು ಸರ್ಕಾರದವರು ನಿನ್ನೆ ದಿನ ಜಾರಿಗೆ ತಂದಿದ್ದಾರೆ ಸಂಸ್ಥಾನದಲ್ಲಿ ವ್ಯಾಪಾರ ವಾಣಿಜ್ಯದವರು, ಬ್ಯಾಂಕು ಮತ್ತು ಇತರ ಸಂಸ್ಥೆಯ ಲೆಕ್ಕದ ಪುಸ್ತಕ ... ಗಳ ವಿಚಾರ ... ಕಾಗದಪತ್ರ ...

ನಗರದಲ್ಲಿ ಭಿಕ್ಷುಕರ ಕಾನೂನು ಜಾರಿ

ಮೈಸೂರು ೧೨

ಭಿಕ್ಷುಕರ ಕಾನೂನಿನ ರೀತ್ಯಾ ನಗರದಲ್ಲಿ ಭಿಕ್ಷುಕರ ವಸತಿ ಗೃಹವನ್ನು ತಾತ್ಕಾಲಿಕವಾಗಿ ನಂಜರಾಜ ಬಹದ್ದೂರ್ ಛತ್ರದಲ್ಲಿ ತೆರೆಯಲಾಗಿದೆಯೆಂದೂ, ಕಾನೂನಿನ ಪ್ರಕಾರ ರಸ್ತೆಗಳು ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಯಾರೂ ಭಿಕ್ಷೆಯನ್ನು ಬೇಡಕೂಡದೆಂದೂ ಆ ರೀತಿ ಮಾಡಿದವರ ಮೇಲೆ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ, ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ತಿಳಿಸಿರುತ್ತಾರೆ

ವಿದ್ಯಾರ್ಥಿಗಳ ಬೇಸಿಗೆ ಶಿಬಿರ

ಮೈಸೂರು ೧೨

ಟಿ ನರಸೀಪುರ ತಾಲ್ಲೂಕು ಹೊಸಪುರ ಗ್ರಾಮದಲ್ಲಿ ಕಳೆದ ೬ನೇ ತಾ|| ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಶಿಕ್ಷಣ ಶಿಬಿರದ ಆರಂಭೋತ್ಸವವನ್ನು ಶ್ರೀ ಎಸ್. ರಂಗರಾಮಯ್ಯನವರು ನೆರವೇರಿಸಿದರು. ಕಾರ್ಯದರ್ಶಿಗಳಾದ ಶ್ರೀ ನ ಭದ್ರಯ್ಯನವರು ಶಿಬಿರದ ಉದ್ದೇಶವನ್ನು ವಿವರಿಸಿದರು

ಕೃಷ್ಣರಾಜನಗರ ತಾಲ್ಲೂಕು ಚಿಕ್ಕ ಕೊಪ್ಪಲಿನಲ್ಲಿ ವಿದ್ಯಾರ್ಥಿಗಳ ಬೇಸಿಗೆ ಶಿಬಿರವನ್ನು ವಿಶ್ವವಿದ್ಯಾಲಯದ ಉಪಸ್ಥಾನ ಪತಿಗಳಾದ ಶ್ರೀ ಆರ್. ಕಸ್ತೂರಿ ರಾಜಚೆಟ್ಟಿಯವರು ಕಳೆದ ೧ನೇ ತಾ|| ನೆರವೇರಿಸಿದರು ಶ್ರೀಗಳಾದ ಎಂ. ಎಲ್. ನಂಜರಾಜೇ ಅರಸ್, ಸಿ ನರಸಿಂಹಯ್ಯ, ಲಿಂಗೇಗೌಡರು, ಮುಂತಾದವರು ಭಾಷಣ ಮಾಡಿದರು

ಅರಮನೆ ಜಪದ ಕಟ್ಟೆ ಮಠ

ಮೈಸೂರು ೧೨

ನಗರದ ಮತ್ತು ಹೊರಗಿನ ವೀರಶೈವ ಮುಖಂಡರ ಸಭೆಯು ಕಳೆದ ೮ನೇ ತಾ|| ದೊಡ್ಡಪೇಟೆಯ ಮನೋರಮಾ ಪ್ರಸಾದದಲ್ಲಿ ಶ್ರೀದೇಶಿಕೇಂದ್ರ ವರ್ಮಾ ವೈ ವಿರೂಪಾಕ್ಷಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಅರಮನೆ ಜಪದಕಟ್ಟೆ ಮಠದ ಲಿಂಗೈಕ್ಯರಾದ ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಯವರ ಉತ್ತರಾಧಿಕಾರಿಗಳಾದ ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಯವರಿಗೆ ವಿರೋಧವಾಗಿ ಶ್ರೀಗಳಾದ ಎಸ್. ಶಿವಣ್ಣ, ಎಂ. ಎಲ್. ನಾಗಣ್ಣ ಮುಂತಾದವರು ಚಳುವಳಿ ನಡೆಸುತ್ತಿರುವುದನ್ನು ಖಂಡಿಸಿ ಹಿಂದಿನ ಸ್ವಾಮಿಗಳು ಬರೆಸಿಟ್ಟಿರುವ ಉಯಿಲಿನಿಂದ ಅಧಿಕಾರವನ್ನು ಪಡೆದ ಶ್ರೀ ಗಂಗಾಧರ ಶಿವಾಚಾರ್ಯರೇ ಸದರಿ ಮಠಕ್ಕೆ ನ್ಯಾಯವಾದ ಅಧಿಪತಿಗಳೆಂದು ತೀರ್ಮಾನಿಸಲಾಯಿತು-ಎಂದು ಅಧ್ಯಕ್ಷರು ತಿಳಿಸಿರುತ್ತಾರೆ

ವಿಶ್ವ ವಿದ್ಯಾಲಯದ ರಿಜಿಸ್ಟ್ರಾರ್

[ಸ್ವಂತ ವರದಿ]   ಬೆಂಗಳೂರು ೧೨

ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಸಿ ರಂಗನಾಥಾಚಾರರನ್ನು ಪ್ರೊಫೆಸರನ್ನಾಗಿ ನೇಮಕ ಮಾಡಿ,ಅವರನ್ನು ವಿಶ್ವ ವಿದ್ಯಾಲಯದ ರಿಜಿಸ್ಟ್ರಾರರಾಗಿ ನಿಯಮಿಸಲಾಗಿದೆ.

○ ಡಾ|| ಸಾಲ್‍ವಾಸನವರು ತಮಗೆ ... ಬಾಧೆಯಿಂದ ... ಸಮಿತಿಗೆ ಕೊಡ ... ಈ ದಿನ ...

ಶ್ರೀ

ಜಗದಾಂಬಾ ಶಿಶುವಿಹಾರ,

ದಿವಾನ್ಸ್ ರೋಡ್ ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ೧೯-೫-೪೯ನೇ ಗುರುವಾರದಿಂದ ತೆರೆಯಲಾಗಿದೆ. ಕಿಂಡರ್‌ಗಾರ್ಟನ್ ಮತ್ತು ಆಧುನಿಕ ಶಿಶುವಿದ್ಯಾಭ್ಯಾಸಕ್ಕೆ ಈ ಶಾಲೆಯು ಆದರ್ಶಪ್ರಾಯವಾಗಿದೆ ಎಂದು ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಂದಲೂ ಶಿಶುವಿದ್ಯಾಭ್ಯಾಸ ಪ್ರವೀಣರಿಂದಲೂ ಪುರಸ್ಕರಿಸಲ್ಪಟ್ಟಿದೆ. ಇಲ್ಲಿ ವ್ಯಾಸಂಗ ಮಾಡುವ ೭ ವರ್ಷದ ವಯಸ್ಸಿನ ಮಕ್ಕಳನ್ನು ನೇರವಾಗಿ ವಿದ್ಯಾ ಸಸ್ಯ ಇಯರ್ ಪರೀಕ್ಷೆಗೆ ಖಾಸಗಿಯಾಗಿ ತಯಾರು ಮಾಡಲಾಗುತ್ತದೆ. ಈ ರೀತಿ ಪ್ರತಿ ವರ್ಷವೂ ಅನೇಕ ಮಕ್ಕಳು ಉತ್ತೀರ್ಣರಾಗಿ ಬೇರೆ ಶಾಲೆಗಳಿಗೆ ಸೇರುತ್ತಿದ್ದಾರೆ. ಆದ್ದರಿಂದ ಶಿಶುವಿದ್ಯಾಭ್ಯಾಸದಲ್ಲಿ ಆಸಕ್ತರಾಗಿರುವ ಮಾತಾಪಿತೃಗಳು ತಮ್ಮ ಮಕ್ಕಳನ್ನು ಕಾಲವಿಳಂಬ ಮಾಡದೆ ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಈ ಶಾಲೆಯ ವ್ಯವಸ್ಥಾಪಕರ ಸದುದ್ದೇಶಕ್ಕೆ ಪ್ರೋತ್ಸಾಹವನ್ನು ನೀಡುವರೆಂದು ಕೋರಲಾಗಿದೆ. ನಿಯಮಗಳಿಗೆ ಮೊಖ್ತಾ ವಿಚಾರ ಮಾಡಬಹುದು.

ಡಿ ಕೃಷ್ಣಮೂರ್ತಿ
ವ್ಯವಸ್ಥಾಪಕ

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿ
ನಯವಾಗಿ ಭೇಟಿ ಕೊಡಿ
ಶಿವರಾಂಪೇಟೆ, ಮೈಸೂರು.

ನಿಮ್ಮ ಮೈ ಮೊಗವಲ್ಲಿನಂತೆ
ಹೊಳೆಯಬೇಕೆ? ನೀವು
ಲಾವಣ್ಯಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು
ಸ್ಯಾಂಡಲ್
ಸೋಪ್

ತ್ವಚೆಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ ನಿಮಗೂ
ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು.

ಸರ್ಕಾರಕ್ಕೆ ಅಂಚೆ ನೌಕರರ ಎಚ್ಚರಿಕೆ

ಕಳೆದ ಫೆಬ್ರವರಿ ತಿಂಗಳಿನಲ್ಲಿ ಸರ್ಕಾರದವರು ವಾಗ್ದಾನ ಮಾಡಿದ್ದ ರಿಯಾಯಿತಿಗಳನ್ನು ಈಡೇರಿಸ ಕೊಡದಿದ್ದಲ್ಲಿ, ಮುಂದಿನ ತಿಂಗಳು ಲಕ್ನೋವಿನಲ್ಲಿ ನಡೆಯುವ ಸಭೆಯಲ್ಲಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಾಗಿ ಅಖಿಲ ಭಾರತ ಅಂಚೆ ನೌಕರರ ಸಂಘದ ಕಾರ್ಯದರ್ಶಿಗಳು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿರುತ್ತಾರೆ

೧೦೨ ವರ್ಷಗಳ ನಂತರ ದಾವಾ ತೀರ್ಮಾನ

ರಾಜಕೋಟೆಗೆ ಸೇರಿದ ಜಮೀನು ವಾರಸುದಾರರ ಸ್ವತ್ತುಗಳ ವಿಭಾಗದ ಬಗ್ಗೆ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯು ೧೦೨ ವರ್ಷಗಳ ಕಾಲ ನಡೆದು ಈಗ ಇತ್ಯರ್ಥವಾಗಿದೆಯೆಂದು ಹೇಳಲಾಗಿದೆ. ಎರಡು ಪಕ್ಷದವರೂ ಆಸ್ತಿಗಿಂತ ಎರಡರಷ್ಟು ಹಣವನ್ನು ಕೋರ್ಟಿನ ವ್ಯಾಜ್ಯದಲ್ಲಿ ಖರ್ಚುಮಾಡಿದ್ದಾರೆಂದು ವರದಿಯಾಗಿದೆ

ಮಾಜಿ ಗೌರ್ನರರ ಉಪವಾಸ ಮುಕ್ತಾಯ

ಇಂಡೋನೇಷ್ಯಾದಲ್ಲಿ ಉಂಟಾಗಿದ್ದ ರಾಜಕೀಯ ಚಲನವಲನಗಳ ಬಗ್ಗೆ ಸುಮಾತ್ರ ದ್ವೀಪದ ಪೂರ್ವ ತೀರದ ಮಾಜಿ ಗೌರ್ನರರು ಕಳೆದ ಒಂಬತ್ತು ದಿನಗಳಿಂದಲೂ ನಡೆಸುತ್ತಿದ್ದ ಉಪವಾಸವನ್ನು ಮುಕ್ತಾಯಗೊಳಿಸಿದರು

ಗಣೇಶಾ ಟಾಕೀಸ್
೧೩-೫-೪೯ರಿಂದ ಅವೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು
ವಾಹಿನಿಯವರ ತೆಲುಗು ಚಿತ್ರ
ವಂದೇ ಮಾತರಂ
ಭೂಮಿಕೆ - ನಾಗಯ್ಯ, ಕಾಂಚನಮಾಲಾ

Edited, printed, and published by A R Nagarajan at the Sadhvi Press D Subbiah Road, Mysore

ದ. ಆಫ್ರಿಕಾದ ಮೇಲಿನ ಚರ್ಚೆಗೆ ಅವಕಾಶ

ದಕ್ಷಿಣ ಆಫ್ರಿಕಾದ ಮೇಲೆ ಭಾರತವು ವಿಶ್ವ ಸಂಸ್ಥೆಗೆ ಕೊಟ್ಟ ದೂರನ್ನು ಚರ್ಚೆ ಮಾಡಲು ವಿಶ್ವಸಂಸ್ಥೆಯ ರಾಜಕೀಯ ಸಮಿತಿಗೆ ಅರ್ಹತೆಯುಂಟೇ ಎಂಬುದು ತೀರ್ಮಾನವಾಗುವುದಕ್ಕಿಂತ ಮುಂಚೆಯೇ ಭಾರತವು ಸಲ್ಲಿಸಿರುವ ದೂರಿನ ಮೂಲವನ್ನು ಚರ್ಚಿಸಬಹುದೆಂದು ಬಹುಮತದಿಂದ ತೀರ್ಮಾನವಾಗಿದೆ

Morning Show
At LAKSH[MI]
Theatre
From 13 5-49 for 3
20th Century's
BOOMERA[NG]
With - Dana Andrews
Jane Wyatt

ರಾಜಕಮಲ್, ಮೈಸೂರು
13-5-49ರಿಂದ 2ನೇ ವಾರ ಪ್ರಾ[ರಂಭ]
ಪ್ರತಿ ದಿನ ೩ ಆಟಗಳು
ಸ್ವಾತಂತ್ರ್ಯ ಯುಗದ ಪ್ರಥಮ ಚಿತ್ರ
ಫಿಲಿಂಸ್ತಾನ್‌ರವರ
ಷಹೀದ್
ಭರತ ಖಂಡದ 40 ಕೋಟಿ ಪ್ರಜೆಗಳ ಸ್ವಾತಂತ್ರ್ಯ ಸಾಧನೆಯ ಆಂದೋ[ಲನದ]
ಇತಿಹಾಸವನ್ನು ವರ್ಣಿಸುವ ದೃಶ್ಯ
ಪಾತ್ರ:- ಕಾಮಿನಿ ಕೌಶಲ್ಯ, ದಿಲೀಪ್ ಕುಮಾರ್
ಚಂದ್ರ ಮೋಹನ್, ವಿ. ಎಚ್. ದೇಸಾಯ್

MORNING SHOWS
From 13—5—49 for 4 days
J Arthur Rank presents
* BLANCHE FURY *
(In Glorious Technicolor)
Starring - Stewart Granger and Valerie Hobson

ಪ್ರಭುದೇವಾ ಟಾಕೀಸಿನಲ್ಲಿ
11—5—49ನೇ ಬುಧವಾರದಿಂದ ಅವೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ರಾಜಕುಮಾರ ಪ್ರೊಡಕ್ಷನ್ಸ್‌ರವರ
ವೀರ ವನಿತೆ
ಪಾತ್ರ - ಲಕ್ಷ್ಮೀ ದೇವಿ, ಶ್ರೀನಿವಾಸರ್ ಬಿ. ಎ ಮುಂತಾದವರು

ಮೈಸೂರು ಸಂಸ್ಥಾನದ ರೈಲ್ವೆ

ಹರಾಜು ನೋಟೀಸು

೧೮೯೦ನೇ ಇಸ್ವಿಯ ೭ನೇ ಮೈಸೂರು ಸಂಸ್ಥಾನದ ರೈಲ್ವೆ ಶಾಸನದ ೪೦ನೇ ಸೆಕ್ಷನ್ ಪ್ರಕಾರದ ಹರಾಜು ನೋಟೀಸು

ಕ್ರಮ ನಂ	ಸಾಮಾನುಗಳ ವಿವರ	ಹರಾಜು ನಡೆಯುವ ಸ್ಥಳ	ವೇಳೆ ಮತ್ತು ತಾರೀಖು
೧	ಎರಡು ವ್ಯಾಗನ್ ಚರ್ಚ್ ಕಡಲೆ	ಮೈಸೂರು	ಬೆಳಿಗ್ಗೆ ೧೧-೩೦ ಗುರುವಾರ ೨೬ನೇ ಮೇ ೧೯೪೯
೨	ಎರಡು ವ್ಯಾಗನ್ ಭರ್ತಿ ಕಡಲೆ	ಮೈಸೂರು	ಬೆಳಿಗ್ಗೆ ೧೧-೩೦ ಗುರುವಾರ ೨೬ನೇ ಮೇ ೧೯೪೯
೩	ಒಂದು ವ್ಯಾಗನ್ ಸುಣ್ಣ ಕಲ್ಲು (ಇನ್‌ವಾಯ್ಸ್ ನಂ ೪೩/೨೯-೧-೪೯) ನರಸಾಂಬುಧಿಯಿಂದ ಬೆಂಗಳೂರಿಗೆ	ಬೆಂಗಳೂರು ನಗರದ ಗೂಡ್ಸ್‌ಷೆಡ್ಡು	ಬೆಳಿಗ್ಗೆ ೧೧-೩೦ ಶುಕ್ರವಾರ ೨೭ನೇ ಮೇ ೧೯೪೯
೪	ಒಂದು ವ್ಯಾಗನ್ ಸುಣ್ಣ ಕಲ್ಲು (ಇನ್‌ವಾಯ್ಸ್ ನಂ ೬೦ ೧೩-೧೨-೪೮) ಕಡಕೊಳದಿಂದ ಬೆಂಗಳೂರಿಗೆ	ಬೆಂಗಳೂರು ನಗರದ ಗೂಡ್ಸ್‌ಷೆಡ್ಡು	ಬೆಳಿಗ್ಗೆ ೧೧-೩೦ ಶುಕ್ರವಾರ ೨೭ನೇ ಮೇ ೧೯೪೯

ಮೀರ್ ಇನಾಯತ್ ಹುಸೇನ್
ಟ್ರಾಫಿಕ್ ಮ್ಯಾನೇಜರ್, ಮೈಸೂರು.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೧೩-೫-೪೯ [ಸಂಚಿಕೆ ೩೫

ಮೈಸೂರಿನ ಕೆಲವು ಭಾಗಗಳು ಆಂಧ್ರಕ್ಕೆ!

ವೀಣಾ ವಾದನ

ಮೈಸೂರು ೧೨

ಈ ದಿನ ರಾತ್ರಿ ೮-೩೦ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿ ಮಹಡಿ ಮೇಲೆ ವರಲಕ್ಷ್ಮೀ ಸಂಗೀತ ಮಂದಿರದ ವಿದ್ವಾನ್ ಆರ್. ವಿಶ್ವೇಶ್ವರನ್‌ರವರಿಂದ ವೀಣಾ ವಾದನವು ವಿ... ಎಸ್. ಆರ್. ಪಾರ್ಥಸಾರಥಿಯವರ ದಂಗಡೊಡನೆ ನಡೆಯುವುದು ಸ... ಗೂ ಸ್ವಾಗತವುಂಟು

ನೃತ್ಯ ಪ್ರದರ್ಶನ

...ದ್ದು ಭಾನುವಾರ ೬-೩೦ ಗಂಟೆಗೆ ...ಲಿನಲ್ಲಿ ರಾಜಧಾನಿಯ ಶ್ರೀ ಶ್ರೀ ಕೃ... ಲಿತ ಮಂದಿರದ ಆಶ್ರಯದಲ್ಲಿ ಮಧು... ಕುಮಾರಿ ನಲಿನಿ, ಮತ್ತು ಚಿತ್ರ... ರವರಿಂದ ನೃತ್ಯ ಪ್ರದರ್ಶನವು ಕಾ... ಸಚಿವ ಶ್ರೀ ಕೆ ಟಿ ಭಾಷ್ಯಂರವರ ...ಕ್ಷತೆಯಲ್ಲಿ ನಡೆಯುವುದು

ಶಂಕರ ಜಯಂತಿ ಮಹೋತ್ಸವ ಸಭೆ

ರಾಜಧಾನಿಯ ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ವಾರ್ಷಿಕ ಅಧಿವೇಶನವು ನಾಳಿದ್ದು ಸಂಜೆ ೬-೩೦ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ...ಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅ...ಕ್ಷತೆಯಲ್ಲಿ ನಡೆಯುವುದು

ಮುಷ್ಕರದ ಮುಕ್ತಾಯ

...ಪಟ್ಟಣದಲ್ಲಿರುವ ವ್ಯಾಪಿಂಗ್ ಕಂಪೆನಿ ಕೆಲಸಗಾರರು ೨ ತಿಂಗಳಿನಿಂದಲೂ ...ಸಿದ್ಧ ಮುಷ್ಕರವು ಮುಕ್ತಾಯವಾ... ...ದೆ ಕೃಷ್ಣರಾಜೇಂದ್ರ ಗಿರಣಿ ಜ... ಮ್ಯಾನೇಜರ್ ಶ್ರೀ ಎಂ ಆರ್ ...ನಿವಾಸ ಅಯ್ಯಂಗಾರ್ಯರ ಮಧ್ಯಸ್ಥಿಕೆ... ಕಂಪೆನಿಯವರಿಗೂ ಕೆಲಸಗಾರರ ...ನವ ಅಧ್ಯಕ್ಷರಾದ ಶ್ರೀ ಟಿ ಪಿ ರಾ...ರವರಿಗೂ ಒಪ್ಪಂದವಾಗಿರುತ್ತದೆ ...ಟರ್ ಪಂಡ್, ರಜ, ಬೋನಸ್ಸು ... ಜಡ್ತಿಗಳನ್ನು ಕೊಡಲು ಸಂಸ್ಥೆಯ... ಒಪ್ಪಿದ್ದಾರೆ

ವಿದ್ಯಾರ್ಥಿಗಳ ಗ್ರಾಮ ಸೇವಾ ಶಿಬಿರ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಆ...ವಲ್ಲಿ ಮೈಸೂರು ತಾಲ್ಲೂಕು ಉ... ಗ್ರಾಮದಲ್ಲಿ ವಿದ್ಯಾರ್ಥಿಗಳ ಗ್ರಾ... ...ವಾ ಶಿಬಿರದ ಪ್ರಾರಂಭೋತ್ಸವವ... ...ದ್ಯಾಸಚಿವ ಶ್ರೀ ಡಿ ಹೆಚ್ ಚಂ...ದ್ರಯ್ಯನವರು ನೆರವೇರಿಸಿದ ...ಸರ್ಕಾರದವರ ಜಾರಿಗೆ ತಂದಿರುವ ...ಗ್ರಾಮಾಭಿವೃದ್ಧಿ ಯೋಜನೆಯನ್ನು ...ರಿಯಾಗಿ ಉಪಯೋಗಿಸಕೊ...ಕೆಂದು ಅವರು ತಿಳಿಸಿದರು ಶ್ರೀ ...ಕೆ ಕುಮಾರಸ್ವಾಮಿಯವರು ಭಾ... ಮಾಡಿ ಶಿಬಿರದ ಉದ್ದೇಶವನ್ನು ಮ... ಗ್ರಾಮಾಭಿವೃದ್ಧಿ ಯೋಜನೆಯ ವರ... ...ನ್ನು ವಿವರಿಸಿದರು

...ಹಳ್ಳಿ ವೈಮಾನಿಕ ಶಿಕ್ಷಣ ಶಾಲೆ ಜು

...ಗಳೂರಿನ ಹತ್ತಿರದಲ್ಲಿರುವ ಜಾಲಹ...ಲ್ಲಿ ಒಂದು ವೈಮಾನಿಕ ಶಿಕ್ಷಣ ಶಾ... ...ನ್ನು ಸಧ್ಯದಲ್ಲಿಯೇ ಭಾರತ ಸರ್ಕಾ... ...ಸ್ಥಾಪಿಸುವರೆಂದು ತಿಳಿದು ಬಂದಿ... ...ತಿಂದೆಗೆ ವರ್ಷದೊಳಗಿರುವ ಯ... ...ವೈಮಾನಿಕ ಇಂಜನೀಯರಿಂಗ್ ...ನ್ನು ಎರಡು ವರ್ಷ ಕಾಲ ಕೊಡ...ವುದು

ಅಮೆರಿಕಕ್ಕೆ ಡಾ॥ ಮೋದಿಯವರು

ಬೆಳಗಾವಿಯ ಸುಪ್ರಸಿದ್ಧ ನೇತ್ರ ಚಿಕಿತ್ಸಾ ವೈದ್ಯರಾದ ಡಾ॥ ಎಂ ಸಿ ಮೋದಿಯವರು ಅಮೇರಿಕಕ್ಕೆ ಇದೇ ೨ನೇ ತಾ॥

ಕೊಲಂಬೋದಿಂದ ಪ್ರಯಾಣ ಬೆಳಸುವರು ಅವರನ್ನು ಬೀಳ್ಕೊಡಲು ಬೆಳಗಾವಿಯ ಕರ್ನಾಟಕ ಆಯುರ್ವೇದ ವಿದ್ಯಾಪೀಠದವರು ಮೊನ್ನೆ ದಿನ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು

ಅರಮನೆ ಜಪದ ಕಟ್ಟೆ ಮಠ

ಮೇಲ್ಕಂಡ ಮಠದ ಉತ್ತರಾಧಿಕಾರಿಗಳ ವಿಷಯದಲ್ಲಿ ಆತ್ಮವಿಚಾರ ಮಂದಿರದ ಅಧ್ಯಕ್ಷರಾದ ಶ್ರೀ ಎಂ ಎಲ್ ನಾಗಣ್ಣ ಮತ್ತು ಅವರ ಅನುಯಾಯಿ ಶ್ರೀ ರಾಚಪ್ಪನವರುಗಳು ಶ್ರೀ ಶಿವರುದ್ರಪ್ಪ ಎಂಬುವರಿಂದ ಖಾವಿ ಪ್ರಸ್ತುತಕ್ಕೆ ಆಹ್ವಾನ ಪತ್ರಿಕೆ ತಲುಪಿದುದಕ್ಕೆ ರಜು ತೆಗೆದುಕೊಂಡು ಹೋದ ಮೇಲೆ ಏನೋ ಬರದುಕೊಂಡ ರೀತಿ ಸಂದೇಹದ ಮೇಲೆ ಶ್ರೀಗಳಾದ ನಾಗಣ್ಣ ಮತ್ತು ರಾಚಪ್ಪನವರ ಮೇಲೆ ಶ್ರೀ ಶಿವರುದ್ರಪ್ಪನವರು ಪೊಲೀಸರಿಗೆ ಪಿರ್ಯಾದು ಕೊಟ್ಟಿದ್ದಾರೆ ಆದರ ಮೇಲೆ ಕೃಷ್ಣರಾಜ ಪೊಲೀಸರು ಅವರನ್ನು ಕರೆಸಿಕೊಂಡು ಹೇಳಿಕೆಯನ್ನು ತೆಗೆದುಕೊಂಡು ಮರು ದಿನ ತನಿಖೆ ನಡೆಸುತ್ತಾರೆಂದು ತಿಳಿದುಬಂದಿದೆ

ಬೊಂಬಾಯಿ ಬಳಿ ಎಣ್ಣೆ ಪತ್ತೆ

೧ ಲಕ್ಷ ಇಂಪೀರಿಯಲ್ ಗ್ಯಾಲನ್ ಪೆಟ್ರೋಲು ಎಣ್ಣೆಯು ಬೊಂಬಾಯಿಯ ಹತ್ತಿರ ಇರುವ ಶೇಖಿನಲ್ಲಿ ಇದ್ದಿತೆಂದೂ ಇದನ್ನು ನಂಟ್ಕ್ ... ತಂದಿ ಕೊಳ್ಳುವರೆಂದೂ ಹೇಳಲಾಗಿದೆ

ಗೋಪಾಲರಾಯರ ದೇಣಿದಾರರಿಗೆ ರೂ. ೧೯ ಆಣೆ

ಸ್ವಂ ಸು ವರದಿ] ಬೆಂಗಳೂರು ೧೨

ಈ ದಿನ ಪಾತಃಕಾಲ ಗೋಪಾಲರಾಯರ ವಿಚಾರಣಾ ಸಮಿತಿಯು ಸೇರಿದ್ದಾಗ ಶ್ರೀ ಎಫ್ ತಂಜೂಟೀಟ್ಟರು ಗುಟ್ಟಾಗಿ ಸಾಕ್ಷಿ ನಿತ್ತರು

ಈಗ ೪೦ ಲಕ್ಷ ರೂ ಗಳ ಆಸ್ತಿಯು ಗೋಪಾಲರಾಯರಿಂದ ದೊರಕಿದೆಯೆಂದೂ, ಅವರ ಸಾಲಗಾರರು ಒಟ್ಟು ೧ ಕೋಟಿ, ೧೦ ಲಕ್ಷ ರೂ ಗಳಿಗೆ ಬೇಡಿಕೆ ಸಲ್ಲಿಸಿರುವುದನ್ನ ಈಗ ೮೦ ಲಕ್ಷ ರೂ ಗೆ ಇಳಿಸಿಕೊಂಡಿರುವರೆಂದೂ ತಿಳಿದು ಬಂದಿದೆ ರೂ ೧೯ ಆಣೆ ಯಂತೆ ಸಾಲಗಾರರ ಹಣವನ್ನು ತೀರ್ಮೆ ಮಾಡಬಹುದೆಂದು ನಿರೀಕ್ಷಿಸಲಾಗಿದೆ

§ ವಿಶ್ವ ವಿದ್ಯಾಲಯದ ಅಸಿಸ್ಟೆಂಟ್ ರಿಜಿಸ್ಟ್ರಾರಾದ ಶ್ರೀ ಟಿ ಸಿದ್ದಲಿಂಗ ದೇವರಿಗೆ ಒಂದು ತಿಂಗಳಕಾಲ ರಜಾ ಕೊಡಲಾಗಿದೆ ಅನಂತರ ಅವರು ರೆವಿನ್ಯೂ ಇಲಾಖೆಗೆ ಹಾಕಲಾಗುವರು

ದಕ್ಷಿಣ ಆಫ್ರಿಕದ ಬಗ್ಗೆ ವಿಶ್ವಸಂಸ್ಥೆಯ ನಿಯೋಗ

ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯರ ಮೇಲೆ ಅಲ್ಲಿನ ಸರ್ಕಾರದವರು ನಡಸುತ್ತಿರುವ ವರ್ತನೆ ಮತ್ತು ಅನ್ಯಾಯಗಳನ್ನು ಪರಿಶೀಲಿಸಲು ವಿಶ್ವಸಂಸ್ಥೆಯ ೩ ಜನ ಸದಸ್ಯರುಗಳನ್ನೊಳಗೊಂಡ ಒಂದು ನಿಯೋಗವನ್ನು ಕಳುಹಬೇಕೆಂದು ಮೊನ್ನೆ ದಿನ ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ನಿರ್ಧರಿಸಲಾಯಿತು

ಬರ್ಲಿನ್ ದಿಗ್ಬಂಧನ ರದ್ದು

ಜರ್ಮನಿಯ ಬರ್ಲಿನ್ ನಗರದ ಮೇಲೆ ಹತ್ತು ತಿಂಗಳಿನಿಂದಲೂ ರಷ್ಯರು ಹಾಕಿದ್ದ ದಿಗ್ಬಂಧನವನ್ನು ಮೊನ್ನೆ ರಾತ್ರಿ ತೆಗೆಯಲಾಯಿತು

ಕೃತಕ ಮಳೆಯ ಯೋಜನೆ

ಮಳೆಯು ಅಭಾವವಿರುವ ಪ್ರದೇಶಗಳಲ್ಲಿ ಕೃತಕ ಮಳೆಯನ್ನು ಸುರಿಸಲು ಭಾರತದ ವಾತಾವರಣ ಶಾಖೆಯವರು ಯೋಜನೆ ತಯಾರಿಸಿದಾರೆಂದೂ ಅದರ ಪ್ರಕಾರ ವಿಮಾನಗಳ ಮೂಲಕ ಇಂಗಾಲಾಮ್ಲ ... ಪ್ರದೇಶ ...

ಆಂಧ್ರಕ್ಕೆ ಬೆಂಗಳೂರು, ತುಮಕೂರು ಕೋಲಾರಗಳು ಸೇರಬೇಕಂತೆ

ಆಂಧ್ರ ಪ್ರಾಂತ್ಯಕ್ಕೆ ಬೆಂಗಳೂರು, ತುಮಕೂರು ಜಿಲ್ಲೆಯಲ್ಲಿ ಅರ್ಧ ಭಾಗ ಮತ್ತು ಕೋಲಾರ ತಾಲ್ಲೂಕುಗಳು ಸೇರಬೇಕೆಂದು ರಾಷ್ಟ್ರಪತಿ ಡಾ॥ಪಟ್ಟಾಭಿ ಸೀತಾರಾಮಯ್ಯನವರು ಒಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ

ನೀರಾವರಿ ಮತ್ತು ವಿದ್ಯುದ್ಯೋಜನೆಯ ಸಮಿತಿ

ಸರಕಾರದವರು ಸಂಸ್ಥಾನದ ನೀರಾವರಿ ಮತ್ತು ವಿದ್ಯುದ್ಯೋಜನೆಗಳ ಸಂಬಂಧದ ಸಮಿತಿಯನ್ನು ಪುನರ್ರಚಿಸಿದ್ದಾರೆ ಚೀಫ್ ಇಂಜನಿಯರ್ ಇದರ ಅಧ್ಯಕ್ಷರು ಮತ್ತು ಮರಾಮತ್ತು ಇಲಾಖೆ ಉಪಕಾರ್ಯದರ್ಶಿಗಳು ಕಾರ್ಯದರ್ಶಿಗಳು ರಾ॥ ಪ್ರ॥ ಎಂ ಜಿ ರಂಗಯ್ಯ, ಎಸ್ ಶ್ರೀನಿವಾಸಯ್ಯ, ಎಂ ಎ, ಎಚ್ ಸಿಂಕ್ಲೇರ್, ರಾ। ಪ್ರ॥ ಎಂ ನರಸಿಂಹಯ್ಯ, ಪಿ. ವಿ ಕರ್ವೆ, ಎ ಗಣೇಶಅಯ್ಯರ್, ಬಿ, ಕೃಷ್ಣರಾವ್, ರಸ್ತೆ ಮತ್ತು ಕಟ್ಟಡಗಳ ಚೀಫ್ ಇಂಜನಿಯರ್, ಮತ್ತು ಸಿ ಆರ್ ಐಯ್ಯಂಗಾರ್ ಇವರುಗಳು ಸಮಿತಿಯಲ್ಲಿದ್ದಾರೆ

ನ್ಯಾಯಾಧೀಶರುಗಳ ವರ್ಗಾವರ್ಗಿ

ಶ್ರೀ ಎಸ್ ಗಣಪತಿ ಸುಂದರಂರವರನ್ನು ಮೈಸೂರಿನ ಪ್ರಿನ್ಸಿಪಲ್ ಜಿಲ್ಲಾ ನ್ಯಾಯಾಧೀಶರಾಗಿಯೂ, ಚಿಕ್ಕಮಗಳೂರಿನ ಸಬ್ ಜಡ್ಜರಾದ ಶ್ರೀ ಡಿ ರಾಮಸ್ವಾಮಿ ಅಯ್ಯಂಗಾರ್ಯರನ್ನು ಕೋಲಾರಕ್ಕೂ, ರಜದ ಮೇಲಿರುವ ಶ್ರೀ ಎಸ್ ವಿ ರಂಗರಾಯರನ್ನು ಬೆಂಗಳೂರಿನ ದಂಡಿನ ಸಬಾರ್ಡಿನೇಟ್ ಜಡ್ಜರಾಗಿಯೂ ವರ್ಗಾಯಿಸಲಾಗಿದೆ

ಶಿವಮೊಗ್ಗದ ಸೆಕೆಂಡ್ ಮ್ಯಾಜಿಸ್ಟ್ರೇಟರಾದ ಶ್ರೀ ಬಿ ಎಸ್ ಜಯದೇವಪ್ಪನವರನ್ನು ಮೈಸೂರಿನ ಎರಡನೇ ಮುನಸೀಫರಾಗಿಯೂ, ಮೈಸೂರಿನ ೩ನೇ ಮುನಸೀಫರಾದ ಶ್ರೀ ಸಿ ಎಸ್ ನಂಜುಂಡಯ್ಯನವರನ್ನು ಚಿತ್ರದುರ್ಗದ ಮುನಸೀಫರಾಗಿಯೂ, ಸಾಗರದ ಸ್ಪೆಷಲ್ ಫಸ್ಟ್ ಮ್ಯಾಜಿಸ್ಟ್ರೇಟರಾದ ಶ್ರೀ ಟಿ ಡಿ ರಾಮನಾಥರವರನ್ನು ಶಿವಮೊಗ್ಗಾ ಎರಡನೇ ಮ್ಯಾಜಿಸ್ಟ್ರೇಟರಾಗಿಯೂ, ಮಂಡ್ಯದ ಶ್ರೀ ಪಿ ಸುಬ್ರಹ್ಮಣ್ಯಂರವರನ್ನು ಮೈಸೂರಿನ ಅಡಿಷನಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ವರ್ಗಾಯಿಸಲಾಗಿದೆ.

ಸತ್ಕಾರ ಕೂಟ

ಶ್ರೀಗಳಾದ ಎಸ್ ರಂಗರಾಮಯ್ಯ ಮತ್ತು ಎಂ ರಾಮಕನಯ್ಯನವರುಗಳ ಗೌರವಾರ್ಥವಾಗಿ ಶ್ರೀ ಬಿ ಎಸ್ ಸುಬ್ಬರಾಯರು ನಿನ್ನೆ ರಾತ್ರಿ ತಮ್ಮ ಗೃಹದಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದರು

ಪೋಲೀಸ್ ಇನ್ಸ್‌ಪೆಕ್ಟರ ಸಸ್ಪೆಂಡ್

ಬೆಂಗಳೂರ ಸಿ ಆರ್ ... ಡಿವಿಷನಲ್ಲಿದ್ದ ಪೋಲೀಸ್ ಇನ್ಸ್‌ಪೆಕ್ಟರೊಬ್ಬರು, ರೂ ೪೦,೦೦೦ ರೂ ಅನ್ನ ದುರುಪಯೋಗ ಪಡಿಸಿಕೊಂಡರೆಂಬ ಆಪಾದನೆಯ ಮೇಲೆ ಅವರನ್ನು ಸಸ್ಪೆಂಡ್ ಮಾಡಲಾಗಿದೆ

ಷಾಂಗೈ ಹತ್ತಿರ ಕಮ್ಯೂನಿಸ್ಟರು

ಚೀಣದ ಅತ್ಯಂತ ದೊಡ್ಡ ನಗರವಾದ ಷಾಂಗೈಗೆ ೨೫ ಮೈಲಿ ದೂರದಲ್ಲಿರುವ ಮು... ಪ್ರದೇಶವನ್ನು ಕಮ್ಯೂನಿಸ್ಟರು ... ವರ್ತಮಾನ

ಹೈದರಾಬಾದ್ ಸಚಿವರ ಮೇಲೆ ಫೋರ್ಜರಿ ಆಪಾದನೆ

ಹೈದರಾಬಾದಿನ ಮಾಜಿ ಹಂಚಿಕೆ ಸಚಿವರಾದ ಶ್ರೀ ಬಿ ಎಸ್. ವೆಂಕಟರಾಯರು ಆಗಿನ ಸರ್ಕಾರದವರು ಹಿಂದುಳಿದ ವರ್ಗದವರ ಸಂಸ್ಥೆಗೆ ಕೊಟ್ಟಿದ್ದ ೫ ಸಾವಿರ ರೂ. ಚೆಕ್ಕಿನಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ನರಸಿಂಹರಾವ್ ರವರ ಹೆಸರನ್ನು ಫೋರ್ಜರಿ ಮಾಡಿ, ತಾವೇ ಹಣವನ್ನು ತೆಗೆದುಕೊಂಡರೆಂದೂ, ಈಗ ಅವರ ಮೇಲೆ ಈ ಬಗ್ಗೆ ಮೊಕದ್ದಮೆ ಹೂಡಲಾಗುತ್ತದೆಂದು ಹೇಳಲಾಗಿದೆ.

ಲಾರಿ ಅಪಘಾತದಿಂದ ೧೫ ಜನರ ಮರಣ

ಅನ್ನಾಮಲೈ ಜೋರಾತ ಎಂಬಲ್ಲಿ ಮದುವೆ ಮುಗಿಸಿಕೊಂಡು ಹಿಂತಿರುಗುತ್ತಿದ್ದ ೩೭ ಜನರನ್ನೊಳಗೊಂಡ ಲಾರಿಯು ಅಪಘಾತಕ್ಕೆ ಒಳಗಾಗಿ, ಗುಂಡಿಗೆ ಉರುಳಿತೆಂದೂ, ೧೫ ಜನರು ಮರಣ ಹೊಂದಿ ಇತರರಿಗೆ ಗಾಯವಾಯಿತೆಂದೂ ಹೇಳಲಾಗಿದೆ. ವಧೂವರರಿಗೆ ಯಾವ ಅಪಾಯವೂ ಸಂಭವಿಸಲಿಲ್ಲವೆಂದು ವರದಿಯಾಗಿದೆ.

ಮೀನುಗಳೇ ಸಿಕ್ಕದ ಕೆರೆ

ಅಸ್ಸಾಮಿನ ಡಾಲ್ ಹೌಸಿ ರಸ್ತೆಯಲ್ಲಿ ಅನೇಕ ಶತಮಾನದಲ್ಲಿ ನಿರ್ಮಿಸಲಾಗಿದ್ದ ಕೆರೆಯಲ್ಲಿ ಇಲ್ಲಿಯವರೆಗೆ ಯಾರೂ ಮೀನು ಹಿಡಿಯಲು ಸಾಧ್ಯವಾಗಿಲ್ಲವೆಂದು ಹೇಳಲಾಗಿದೆ. ಅನೇಕ ಬಾರಿ ಅಲ್ಲಿ ಮೀನು ಹಿಡಿಯಲು ಹೋದವರು ವಿಫಲರಾಗಿ ವಾಪಸು ಬಂದಿದ್ದಾರೆಂದೂ, ಮೊನ್ನೆ ದಿನ ಬಲೆಯು ಬೆಸ್ತರು ಹೋಗಿ, ಏನೂ ಸಿಕ್ಕದೆ ವಾಪಸು ಬಂದರೆಂದೂ ಕೆರೆಯಲ್ಲೆಲ್ಲಾ ಜೊಂಡು ಬೆಳೆದು ಕೊಂಡಿತ್ತೆಂದೂ ಹೇಳಲಾಗಿದೆ.

ಶಾಸನದಿಂದ ಜಾತಿ ಮತ ತೊಡೆಯಲು ಸಾಧ್ಯವಿಲ್ಲ

ಸರಕಾರದವರು ಶಾಸನವೊಂದನ್ನು ಮಾಡಿ ದೇಶದಲ್ಲಿ ಜಾತಿ ಮತ ಮತ್ತು ವರ್ಗರಹಿತ ಸಮಾಜವನ್ನು ಏರ್ಪಡಿಸಬೇಕೆಂದು ಆಚಾರ್ಯ ಕೃಪಾಲಿನಿಯವರು ಕೊಟ್ಟಿದ್ದ ಹೇಳಿಕೆಯನ್ನು ಶ್ರೀ ವಿನೋಬಾ ಭಾವೆಯವರು ವಿರೋಧಿಸಿ ಇಂತಹ ಶಾಸನದಿಂದ ಮತಗಳನ್ನು ತೊಡೆದು ಹಾಕಲು ಸಾಧ್ಯವಿಲ್ಲವೆಂದೂ ಅದರ ಬದಲು ಶಂಕರಾಚಾರ್ಯರಂತೆ ಜನರ ಮನಸನ್ನು ಪರಿವರ್ತನಗೊಳಿಸುವವರಲ್ಲಿ ನಂಬಿಕೆ ಇಡಬೇಕೆಂದರು.

ಬ್ರಿಟನ್ನಿನಲ್ಲಿ ಜಪಾನ್ ಸಾಮಾನುಗಳು ತುಂಬುತ್ತಿವೆ

ಜಪಾನು ತನ್ನ ಕೈಗಾರಿಕಾ ಸಾಮಾನುಗಳನ್ನು ಹೆಚ್ಚಿಗೆ ಸಂಖ್ಯೆಯಲ್ಲಿ ಬ್ರಿಟಿಷ್ ಮಾರ್ಕೆಟ್ಟಿಗೆ ಕಡಿಮೆ ಬೆಲೆಗೆ ಕಳುಹಿಸುತ್ತಿರುವುದರಿಂದ ಈ ಸ್ಪರ್ಧೆಯನ್ನು ತಡೆಗಟ್ಟಲು ಬೆಲೆಯ ಮೇಲೆ ಹತೋಟಿ ಹಾಕಬೇಕೆಂದು ಬ್ರಿಟನ್ನಿನ ಕೈಗಾರಿಕೆಯವರು ಜಪಾನ್ ಆರ್ಥರ್ ರವರಿಗೆ ಮನವಿ ಮಾಡಿದ್ದಾರೆ.

ತಾನೆ ಮಹಾತ್ಮರ ಕೊಲೆಗೆ ಕಾರಣನೆಂದು ಗೋಡ್ಸೆ

ಗಾಂಧೀಜಿ ಕೊಲೆಯ ಹೊಣೆಗಾರಿಕೆಯೆಲ್ಲಾ ಸಂಪೂರ್ಣವಾಗಿ ತನಗೆ ಸೇರಿದುದೆಂದೂ, ಇತರ ಆಪಾದಿತರಿಗೆ ಅದು ಸಂಬಂಧಿಸಿಲ್ಲವೆಂದೂ ನಾಥೂರಾಂ ಗೋಡ್ಸೆ ಪೂರ್ವ ಪಂಜಾಬ್ ಹೈಕೋರ್ಟಿನಲ್ಲಿ ತಿಳಿಸಿರುತ್ತಾನೆ.

ನ್ಯಾಯಸ್ಥಾನದಲ್ಲಿ ಮದರಾಸ್ ಮಂತ್ರಿಗಳ ವಿಚಾರಣೆಯೇ ?

ಮದ್ರಾಸು ಮಂತ್ರಿಗಳ ಮೇಲೆ ಹಲವು ಶಾಸನ ಸಭಾ ಸದಸ್ಯರು ಮಾಡಿರುವ ಆಪಾದನೆಗಳನ್ನು ನ್ಯಾಯಸ್ಥಾನದ ಮುಂದೆ ವಿಚಾರಿಸುವಂತೆ ಏರ್ಪಡಿಸಬೇಕೆಂದು ಆಂಧ್ರ ಪ್ರಾಂತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕಾಂಗ್ರೆಸ್ ಅಧ್ಯಕ್ಷರಿಗೆ ಸೂಚನೆ ಮಾಡಿದೆ.

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿ
ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ. :: ಮೈಸೂರು

Edited, printed, and published by A.R. Nagarajan at the Sadhvi Press. D. Subbiah Road, Mysore.

ಮನೆಯವರನ್ನೆಲ್ಲಾ ಬೆಂಕಿ ಇಟ್ಟು ಸುಟ್ಟರು

ಪೂರ್ವ ಬಂಗಾಳದ ರಾಜಶಾಹಿ ಎಂಬಲ್ಲಿ ಡಕಾಯಿತರ ಗುಂಪು ಒಂದು ಮನೆಗೆ ನುಗ್ಗಿದಾಗ ಮನೆಯಲ್ಲಿದ್ದ ಹೆಂಗಸರೂ ಮಕ್ಕಳೂ ಆದಿಯಾಗಿ ೫ ಜನರು ಒಂದು ಕೋಣೆಯೊಳಗೆ ಸೇರಿ ಕೊಂಡು ಅಗಳಿ ಹಾಕಿ ಕೊಂಡಿದ್ದುದರಿಂದ ಡಕಾಯಿತರು ಆ ಕೋಣೆಗೆ ಬೆಂಕಿ ಇಟ್ಟು ಅವರನ್ನೆಲ್ಲಾ ಸುಟ್ಟರೆಂದೂ, ಮನೆಯಲ್ಲಿದ್ದುದನ್ನು ದೋಚಿಕೊಂಡು ಹೋದರೆಂದೂ ಹೇಳಲಾಗಿದೆ.

ಹೈದರಾಬಾದ್ ಇಂಜನಿಯರುಗಳ ೨ ಗಂಟೆ ಮುಷ್ಕರ

ತಮ್ಮ ಹೆಚ್ಚಿನ ಸಂಬಳ ಮತ್ತು ತುಟ್ಟಿ ಭತ್ಯವನ್ನು ಕೊಡಬೇಕೆಂದು ಹೈದರಾಬಾದಿನ ಒಂದು ಸಾವಿರ ಜನ ಕೆಳ ದರ್ಜೆಯ ಇಂಜನಿಯರುಗಳು ಮೊನ್ನೆ ದಿನ ೨ ಗಂಟೆಗಳ ಕಾಲ ಕಛೇರಿಯಲ್ಲಿ ಕೆಲಸ ಮಾಡದೇ ಅಲ್ಲೇ ಮುಷ್ಕರ ಹೂಡಿದ್ದರು.

೫ ಜನ ಕಮ್ಯೂನಿಸ್ಟರ ಗಡಿಪಾರು

ಕಮ್ಯೂನಿಸ್ಟ ನಾಯಕರಾದ ಅಬ್ದುಲ್ ಖಾದರ್, ಬಿ ರಾಜಮಾಣಿಕ್ಯಂ, ಎನ್ ಮುನಿಸ್ವಾಮಿ, ಸುಬ್ರಹ್ಮಣ್ಯಂ ಮತ್ತು ಎಂ ಕೆ. ಪೆರುಮಾಳ್ ರವರುಗಳನ್ನು ಸಂಸ್ಥಾನದಿಂದ ಗಡೀಪಾರು ಮಾಡಲಾಗಿದೆ.

ಲಕ್ಷ್ಮೀ ಥಿಯೇಟರ್
13-5-49ರಿಂದ ಯಶಸ್ವೀ 3ನೇ ವಾರ
ಪ್ರತಿ ದಿನ ಮೂರು ಆಟಗಳು
ಇಂಪಾದ ಗಾನ, ನೃತ್ಯಗಳಿಂದ ಕೂಡಿದ
ಹಾಸ್ಯಮಯ ತಮಿಳು ಚಿತ್ರ
ನಲ್ಲ ತಂಬಿ
ಭೂಮಿಕೆ.-ಭಾನುಮತಿ,
N.S. ಕೃಷ್ಣನ್, T.A ಮಧುರಂ
ಮುಂದಿನ ಬದಲಾವಣೆ—
• ಸತಿ ತುಳಸಿ •

ಪಾಕೀಸ್ತಾನವು ಕ್ಷಮಾಪಣೆ ಕೊಡಬೇಕೆಂದು ಒತ್ತಾಯ

ಗಡಿನಾಡು ಸರ್ಕಾರವನ್ನು ಉರುಳಿಸುವ ಪಿತೂರಿಯಲ್ಲಿ ಭಾರತ ಸರ್ಕಾರದವರು ಕೈವಾಡವಿದ್ದಿತೆಂದು ಗಡಿನಾಡಿನ ಪ್ರಧಾನಿಯವರು ಇತ್ತೀಚೆಗೆ ತಿಳಿಸಿದುದನ್ನು ಪ್ರಕಟಿಸಿ, ಪಾಕಿಸ್ತಾನ ಸರ್ಕಾರದವರು ಅದಕ್ಕಾಗಿ ಕ್ಷಮಾಪಣೆ ಕೊಡಬೇಕೆಂದು ಭಾರತ ಸರ್ಕಾರದವರು ಒತ್ತಾಯ ಪಡಿಸಿರುತ್ತಾರೆ

ಲಂಚ ರುಷುವತ್ತು ನಿರ್ಮೂಲ ಮಾಡಲು ಕಾರ್ಯಕ್ರಮ

ಪ್ರಾಮಾಣಿಕತನವಿಲ್ಲದ ಸರ್ಕಾರಿ ನೌಕರರುಗಳನ್ನು ನಿವೃತ್ತಿಮಾಡಲು ಪೂರ್ವ ಪಂಜಾಬ್ ಸರ್ಕಾರದವರು ನಿರ್ಧರಿಸಿದ್ದಾರೆ. ಸರ್ಕಾರಿ ನೌಕರರುಗಳು ಮತ್ತು ಜನಸಾಮಾನ್ಯರಲ್ಲಿ ಲಂಚ ರುಷುವತ್ತನ್ನು ನಿರ್ಮೂಲವಮಾಡಲು ತಕ್ಕ ಕಾರ್ಯ ಕ್ರಮಗಳನ್ನೂ ಸರ್ಕಾರದವರು ಕೈಗೊಂಡಿದ್ದಾರೆ

ಮದ್ರಾಸ್ ಮಂತ್ರಿಮಂಡಲ ರದ್ದಾಗಬೇಕು

ಈಗಿರುವ ಮದ್ರಾಸ್ ಮಂತ್ರಿಮಂಡಲವನ್ನು ರದ್ದುಗೊಳಿಸಿ, ವಿಶಾಲವಾದ ಶಕ್ತಿಗಳನ್ನೊಳಗೊಂಡ ನೂತನ ಮಂತ್ರಿಮಂಡಲವನ್ನು ರಚಿಸಬೇಕೆಂದು ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿಗೆ ಒತ್ತಾಯ ಪಡಿಸುವ ನಿರ್ಣಯವನ್ನು ಮಾಡಿದೆ

॥ಶ್ರೀ॥

ಜಗದಾಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು.

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವು ೧೨-೫-೪೯ನೇ ಗುರುವಾರದಿಂದ ತೆರೆಯಲಾಗಿದೆ ಕಿಂಡರ್‌ಗಾರ್ಟನ್ ಮತ್ತು ಆಧುನಿಕ ಶಿಶುವಿದ್ಯಾಭ್ಯಾಸಕ್ಕೆ ಈ ಶಾಲೆಯು ಆದರ್ಶಪ್ರಾಯವಾಗಿದೆ ಎಂದು ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಂದಲೂ ಶಿಶುವಿದ್ಯಾಭ್ಯಾಸ ಪ್ರವೀಣರಿಂದಲೂ ಪುರಸ್ಕರಿಸಲ್ಪಟ್ಟಿದೆ ಇಲ್ಲಿ ವ್ಯಾಸಂಗ ಮಾಡುವ ೬ ವರ್ಷದ ವಯಸ್ಸಿನ ಮಕ್ಕಳನ್ನು ನೇರವಾಗಿ ಮಿಡ್ಲ್ ಫಸ್ಟ್ ಇಯರ್ ಪರೀಕ್ಷೆಗೆ ಸುಲಭವಾಗಿ ತರಬೇತು ಮಾಡಲಾಗುವುದು. ಈ ರೀತಿ ಪ್ರತಿ ವರ್ಷವೂ ಅನೇಕ ಮಕ್ಕಳು ಉತ್ತೀರ್ಣವಾಗಿ ಬೇರೆ ಶಾಲೆಗಳಿಗೆ ಸೇರುತ್ತಲಿದ್ದಾರೆ. ಆದ್ದರಿಂದ ಶಿಶುವಿದ್ಯಾಭ್ಯಾಸದಲ್ಲಿ ಆಸಕ್ತರಾಗಿರುವ ಮಾತಾಪಿತೃಗಳು ತಮ್ಮ ಮಕ್ಕಳನ್ನು ವಿಳಂಬ ಮಾಡದೆ ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯ ವ್ಯವಸ್ಥಾಪಕರ ಸದುದ್ದೇಶಕ್ಕೆ ಪ್ರೋತ್ಸಾಹವನ್ನು ನೀಡುವರೆಂದು ನಂಬಲಾಗಿದೆ. ವಿಷಯಗಳಿಗೆ ಮೊಖ್ತಾ ವಿಚಾರ ಮಾಡಬಹುದು.

ಡಿ ಕೃಷ್ಣಮೂರ್ತಿ
ವ್ಯವಸ್ಥಾಪಕ

ಗಾಯತ್ರೀ ಟಾಕೀಸ್
ಪ್ರತಿ ದಿನ ಮೂರು ಪ್ರದರ್ಶನಗಳು
ಕಡೇ ದಿನ ಪಿಯಾಸಾ
14-5-49 ರಿಂದ 3 ದಿನಗಳು ಮಾತ್ರ
ಯೂನಿವರ್ಸಲ್‌ರವರ ವರ್ಣರಂಜಿತ ಚಿತ್ರ
ರಿವರ್ ಲೇಡಿ
RIVER LADY

Morning Shows at 10-30
on 14th and 15th only
The Cantervelle Ghost

ಪ್ರಭಾ ★ 13-5-49 ರಿಂದ
ಅನೋಘ ಪ್ರಾರಂಭ
ದಿನವಹಿ ೩ ಆಟಗಳು
ಆಲ್ ಇಂಡಿಯಾ ಪಿಕ್ಚರ್ಸ್‌ರವರ ಹಿಂದಿ ಚಿತ್ರ
ಪಗಡಿ
⁂ ಕಾಮಿನಿ ಕೌಶಲ್ಯ, ⁂ ಶರೀಲೇಖ ⁂ ವಾಸ್ತಿ ⁂ ಗೋಪ್
(ಎಲ್ಲಾ ವಿಧವಾದ ಕಾಂಪ್ಲಿಮೆಂಟರಿಗಳನ್ನೂ 2 ವಾರ ಮನ್ನಾ ಮಾಡಿದೆ)

Morning Shows for 4 days
From 13—5—49
THE HURRICANE
With Dorothy Lamour and John Hall

ಪ್ರಭುದೇವಾ ಟಾಕೀಸಿನಲ್ಲಿ
11 5 49ನೇ ಬುಧವಾರದಿಂದ ಅನೋಘ ಪ್ರಾರಂಭ
ಪ್ರತಿ ದಿನ ೩ ಆಟಗಳ.
ರಾಜಕುಮಾರ ಫಿಲಂಸ್‌ರವರ
✦ ವೀರ ವನಿತೆ ✦ (ತಮಿಳು)
ಪಾತ್ರ ಲಕ್ಷ್ಮೀದೇವಿ, ಶ್ರೀನಿವಾಸ ಬಿ. ಎ ಮುಂತಾದವರು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೧೪-೩-೪೯ [ಸಂಚಿಕೆ ೫೩೦

ಸಂಸ್ಥಾನಗಳ ಆಡಳಿತ ರದ್ದುಮಾಡಲು ಶಾಸನ

ಭಿಕ್ಷುಕರ ಬಂಧನ

ಮೈಸೂರು ೧೪

ನಗರದಲ್ಲಿ ಜಾರಿಯಲ್ಲಿರುವ ಭಿಕ್ಷುಕರ ಕಾನೂನಿಗೆ ವಿರುದ್ಧವಾಗಿ ಭಿಕ್ಷೆ ಎತ್ತುತ್ತಿದ್ದ ನಾಲ್ಕು ಜನರನ್ನು ದೇವರಾಜ ಪೊಲೀಸರು ಪೌರಸಭಾ ಉಪಾಧ್ಯಕ್ಷರ ಮುಂದೆ ಹಾಜರು ಮಾಡಿದರು ಸದರಿ ಭಿಕ್ಷುಕರು ತಮ್ಮ ಊರುಗಳಿಗೆ ವಾಪಸು ಹೋಗುವುದಾಗಿ ಭರವಸೆಯಿತ್ತ ಮೇಲೆ ಅವರುಗಳನ್ನು ಅವರ ಸ್ಥಳಗಳಿಗೆ ಕಳುಹಿಸಲಾಯಿತು. ಈ ರೀತಿ ೩೦ ಮಂದಿ ಭಿಕ್ಷುಕರನ್ನು ರವಾನಿಸಲಾಗಿದೆ

ಜಿಲ್ಲಾಧಿಕಾರಿಗಳಿಗೆ ರಜಾ

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಜಾರ್ಜ್ ಮ್ಯಾಥ್ಯೂರವರಿಗೆ ಇದೇ ೧೧ ರವರೆಗೆ ಉಪಯೋಗಿಸಿಕೊಳ್ಳುವ ದಿನದಿಂದ ೧೦ ದಿನ ರಜಾ ಕೊಡಲಾಗಿದೆ ನಗರ ನ್ಯಾಯಾಧೀಶರಾದ ಶ್ರೀ ಕೆ ಗೋವಿಂದರಾಜ ಅರಸಿನವರು ಆ ಕಾಲದಲ್ಲಿ ಅವರ ಕೆಲಸವನ್ನು ನೋಡಿಕೊಳ್ಳುವರು.

ನಗರದ ಆಹಾರ ಸಮಿತಿ

ಮೈಸೂರು ನಗರದ ಆಹಾರ ಸಲಹಾ ಸಮಿತಿಗೆ ಶ್ರೀ ಲಿಂಗಯ್ಯ ಮತ್ತು ರೇಷ್ಮೆ ಡಿಪ್ಪೋ ವ್ಯಾಪಾರಗಾರರ ಸಂಘದ ಅಧ್ಯಕ್ಷರನ್ನು ಸದಸ್ಯರನ್ನಾಗಿ ಸರ್ಕಾರದವರು ನೇಮಿಸಿದ್ದಾರೆ

ಪ್ರಭುಗಳೊಡನೆ ಭೇಟಿ

ಬೆಂಗಳೂರಿನಿಂದ ಪ್ರಕಟವಾಗುವ ಸಿಂಹವಾಣಿ, ವಾರಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎಸ್ ಗೋಪಾಲರವರಿಗೆ ಮಹಾಸ್ವಾಮಿಯವರು ಈ ದಿನ ಬೆಳಗ್ಗೆ ಭೇಟಿಯನ್ನು ದಯಪಾಲಿಸಿದ್ದರು.

ಸಹಕಾರ ಸಂಘಗಳ ನೌಕರರ ಸಮ್ಮೇಳನ

ಮೈಸೂರು ಜಿಲ್ಲಾ ಸಹಕಾರ ಸಂಘಗಳ ನೌಕರರ ಸಮ್ಮೇಳನವು ಇದೇ ಏಪ್ರಿಲ್ ೩ನೇ ಸೋಮವಾರ ನಡೆಯುವುದು ಹಿಂದೆ ಪ್ರಕಟಿಸಿದಂತೆ ಏಪ್ರಿಲ್ ೩ನೇ ತಾ|| ಅಲ್ಲ

ಭಾರತ ಕಾರ್ಮಿಕ ಕೌನ್ಸಿಲ್ಲಿಗೆ ಎ. ರಾಮಣ್ಣನವರು

ಮಂಡ್ಯದ ಸಕ್ಕರೆ ಕಂಪೆನಿ ಕಾರ್ಮಿಕರ ಸಂಘದ ಕಾರ್ಯದರ್ಶಿಯಾದ ಶ್ರೀ ಎ ರಾಮಣ್ಣನವರ ಇಂದೂರಿನಲ್ಲಿ ನಡೆದ ಅಖಿಲ ಭಾರತ ಕಾರ್ಮಿಕ ಸಮ್ಮೇಳನದ ಕಾರ್ಯ ... ಸಮಿತಿಯ ... ಗಿ ಚುನಾಯಿತರಾಗಿದ್ದಾರೆ

ಆಹಾರ ಹೆಚ್ಚಿಸಲು ೩ ವರ್ಷಗಳ ಯೋಜನೆ

ಸಂಸ್ಥಾನದಲ್ಲಿ ವರ್ಷಕ್ಕೆ ೧ ಲಕ್ಷ ಟನ್ ಆಹಾರ ಧಾನ್ಯಗಳ ಅಭಾವವನ್ನು ನಿವಾರಿಸಲು ೩ ವರ್ಷಗಳ ಯೋಜನೆಯೊಂದು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ತಿಳಿದುಬಂದಿದೆ ಆ ಯೋಜನೆ ಪ್ರಕಾರ ನೀರಾವರಿ ಸೌಲಭ್ಯವಿರುವ ಪ್ರದೇಶಗಳಲ್ಲೆಲ್ಲಾ ಹೆಚ್ಚಾಗಿ ಧಾನ್ಯ ಬೆಳೆಯಲು ಪ್ರೋತ್ಸಾಹಕೊಡಲಾಗುವುದೆಂದೂ, ಇದರಿಂದ ೧೯೫೧-೫೨ ರ ವರೆಗೆ ೪೦ ಸಾವಿರ ಎಕರೆ ಜಮೀನು ಸಾಗುವಳಿಗೆ ಬರುವುದೆಂದೂ, ೨೦ ಸಾವಿರ ಎಕರೆ ಬಂಜರು ಜಮೀನನ್ನು ಸಾಗುವಳಿಗೆ ತರಲಾಗುವುದೆಂದೂ ಹೇಳಲಾಗಿದೆ

ಇಂಡಿಯಾ ಬದಲು ಭಾರತ

ಇಂಡಿಯಾ ಎಂಬ ಹೆಸರನ್ನು ವಿದೇಶಿಯರು ಕೊಟ್ಟಿರುವುದರಿಂದಲೂ ಮತ್ತು 'ಇಂಡು' ಎಂಬುದರಿಂದ ಆ ಹೆಸರು ಉದ್ಭವವಾಗಿ ಈಗ ಆ ನದಿ ಪ್ರದೇಶವು ಭಾರತಕ್ಕೆ ಸೇರಿಲ್ಲದುದರಿಂದಲೂ, ಇಂಡಿಯಾ ಎಂಬ ಹೆಸರನ್ನು ಬದಲಾಯಿಸಿ, ಅದಕ್ಕೆ ಭಾರತ ಎಂದು ಇಡಬೇಕೆಂದು ಕಾಶಿಯಲ್ಲಿ ನಡೆದ ಅಖಿಲ ಭಾರತ ಸಂಸ್ಕೃತಿಕ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ

ಅಣುಶಕ್ತಿಯಿಂದ ಮೋಟಾರು ನಡೆಸಲು ೭|| ಲಕ್ಷ ಪೌಂಡು

ಒಂದು ಮೋಟಾರು ಕಾರನ್ನು ಅಣುಶಕ್ತಿಯಿಂದ ನಡೆಸಲು ೭|| ಲಕ್ಷ ಪೌಂಡುಗಳು ಖರ್ಚಾಗುವುದೆಂದು ಅಮೆರಿಕದ ಅಣುಶಕ್ತಿ ತನಿಖಾ ಸಮಿತಿಯ ಸದಸ್ಯರಾದ ಮಿ|| ಸಮ್ನರ್ ಪೈಕ್‌ರವರು ತಿಳಿಸಿರುತ್ತಾರೆ

ಕಮ್ಯೂನಿಸ್ಟರನ್ನು ಎದುರಿಸಲು ಸಿದ್ಧತೆ

ಆರಕಾನಿನಲ್ಲಿ ಕಮ್ಯೂನಿಸ್ಟರ ಚಟುವಟಿಕೆಯು ಹೆಚ್ಚಾಗಿರುವುದರಿಂದಲೂ ಮತ್ತು ಚೀನಾ ಕಮ್ಯೂನಿಸ್ಟರು ಬರ್ಮಾದ ಮೇಲೆ ಬೀಳಬಹುದೆಂಬ ಭಯದಿಂದಲೂ ಪಾಕಿಸ್ತಾನವು ತನ್ನ ಪೂರ್ವ ಗಡಿ ಪ್ರದೇಶಗಳನ್ನು ಬಲಪಡಿಸುತ್ತಿದೆಯೆಂದೂ ... ಗಿಂದ ... ನೌಕಾ ... ಬ್ರಿಟಿಷ್ ... ಕಳುಹಿಸಲಾಗುವುದೆಂದೂ ವರದಿಯಾಗಿದೆ

ಕೊಡಗಿನ ಬಗ್ಗೆ ರಾಜಾಜಿಯವರ ಮಾತುಕತೆಯೇ ?

ಸ್ವ ಸು ಫೋ] ಬೆಂಗಳೂರು ೧೪

ಭಾರತದ ಗೌರ್ನರ್ ಜನರಲ್ ಶ್ರೀ ರಾಜಗೋಪಾಲಾಚಾರಿಯರು ಬೆಂಗಳೂರಿಗೆ ನೀಡಿದ್ದ ಆಗಮಿಸುವುದು ಕೇವಲ ಖಾಸಗೀ ಯಾಗಿದ್ದರೂ, ಅವರು ಕೊಡಗು ಮೈಸೂರು ಸಂಸ್ಥಾನದೊಡನೆ ಸೇರುವ ವಿಚಾರದ ಬಗ್ಗೆ ಮಾತುಕತೆ ನಡೆಸುವರೆಂದು ತಿಳಿದುಬಂದಿದೆ

ಶಿಕ್ಷೆ ಕಡಿಮೆಮಾಡಬೇಕೆಂದು ಖೈದಿಗಳ ಉಪವಾಸ

ಬರೋಡಾ ಸಂಸ್ಥಾನವು ಬೊಂಬಾಯಿಯಲ್ಲಿ ಐಕ್ಯವಾದ ಸಂಬಂಧದಲ್ಲಿ ತಮಗೆ ಪ್ರತಿ ವರ್ಷದಲ್ಲೂ ಒಂದು ತಿಂಗಳ ಶಿಕ್ಷೆ ಕಡಿಮೆ ಮಾಡುವುದು ಮತ್ತು ತಮ್ಮ ಶಿಕ್ಷೆಯ ಅವಧಿಯಲ್ಲಿ ಮೂರನೇ ಒಂದು ಭಾಗ ಮುಗಿಸಿದ್ದವರನ್ನು ಬಿಡುಗಡೆ ಮಾಡುವುದು—ಇವೇ ಮುಂತಾದ ಬೇಡಿಕೆಗಳಿಗಾಗಿ ಅಲ್ಲಿನ ೭೩ ಜನ ಖೈದಿಗಳು ಉಪವಾಸ ಮುಷ್ಕರ ನಡೆಸಿದ್ದರೆಂದೂ, ಅವು ಸಾಧ್ಯವಿಲ್ಲದ ಬೇಡಿಕೆಗಳೆಂದು ಅಧಿಕಾರಿಗಳು ತಿಳಿಸಿದನಂತರ, ಮುಷ್ಕರವನ್ನು ಮುಕ್ತಾಯಗೊಳಿಸಿದರೆಂದೂ ಹೇಳಲಾಗಿದೆ

ಸರ್ಪಗಳ ಸಾವಿನ ಬಗ್ಗೆ ಸಂಶೋಧನೆ

ಸಂಯುಕ್ತ ಪ್ರಾಂತ್ಯದ ಕೆಲವು ಹಳ್ಳಿಗಳಲ್ಲಿ ಸಾವಿರಾರು ಹಾವುಗಳು ಒಟ್ಟೊಟ್ಟಿಗೆ ಸಾಯುತ್ತಿರುವುದಕ್ಕೆ ಕಾರಣವನ್ನು ಕಂಡುಹಿಡಿಯಲು ಅಲ್ಲಿಗೆ ಕಲ್ಕತ್ತದಿಂದ ನಾಲ್ಕು ಜನ ಪ್ರಾಣಿ ವೈಜ್ಞಾನಿಕರು ಹೋಗಿ, ಅಲ್ಲಿಂದ ಜೀವವಿರುವ ಹಾವುಗಳನ್ನು ತಂದು ಸಂಶೋಧನೆ ನಡೆಸುವರೆಂದು ಹೇಳಲಾಗಿದೆ ಒಟ್ಟೊಟ್ಟಿಗೆ ಮೀನಗಳು ಸತ್ತಿರುವುದು ಪುಸ್ತಕಗಳಲ್ಲಿ ವರದಿಯಾಗಿದೆಯೇ ಹೊರತು ಹಾವುಗಳು ಸಾಯುವುದನ್ನು ಎಲ್ಲಿಯೂ ಕೇಳಲಿಲ್ಲವೆಂದು ಅವರು ತಿಳಿಸಿರುತ್ತಾರೆ

ನೇಗಿಲನ್ನು ಹಲ್ಲಿನಿಂದ ಎತ್ತಿದವನು

ಪ್ರಪಂಚದ ಅತ್ಯಂತ ಬಲವಾದ ಮನುಷ್ಯ ಆಲಿಗಾಲಿ ಎಂಬುವನು ೩೦ ಒಡಿ ಉದ್ದದ ನೇಗಿಲನ್ನು ತನ್ನ ಹಲ್ಲಿನಿಂದ ಎತ್ತಿದನೆಂದು ವರದಿಯಾಗಿದೆ

೧|| ರೂ. ವೆಚ್ಚದಲ್ಲಿ ಒಂದು ಎಕರೆ ಭೂಮಿಗೆ ನೀರು

ಕೇವಲ ೧|| ರೂ ಖರ್ಚಿನಿಂದ ಪ್ರತಿ ಎಕರೆ ಜಮೀನಿಗೆ ನೀರು ಸರಬರಾಜು ಮಾಡುವ ನೂತನ ಸಾಧನವನ್ನು ಆಸ್ಟ್ರಿಯಾದ ಇಂಜನಿಯರೊಬ್ಬರು ಕಂಡುಹಿಡಿದಿರುವರೆಂದೂ' ಅದನ್ನು ಭಾರತದ ವ್ಯವಸಾಯಕ್ಕೆ ಉಪಯೋಗಿಸಿ ಕೊಳ್ಳುವುದನ್ನು ಕೇಂದ್ರ ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆಂದೂ ಹೇಳಲಾಗಿದೆ. ನದಿ ಕಾಲುವೆ ಮುಂತಾದ ಪ್ರದೇಶಗಳಲ್ಲಿ ಈ ನೂತನ ಯಂತ್ರವನ್ನು ಇಡುವುದರಿಂದ ಅದು ಜಮೀನಿಗೆ ಎಷ್ಟು ಬೇಕೋ ಅಷ್ಟು ನೀರನ್ನು ಮಾತ್ರ ಎರಚುವುದೆಂದೂ ಅನಂತರ ಅದು ತಾನಾಗಿಯೇ ನಿಂತು ಹೋಗುವುದೆಂದೂ ಹೇಳಲಾಗಿದೆ ನೀರಿನೊಳಗೆ ಗೊಬ್ಬರವನ್ನು ಸೇರಿಸಿ, ಭೂಮಿ ... ಇದರಿಂದ ಸಾಧ್ಯವಾಗುವುದೆಂದೂ ಹೇಳಲಾಗಿದೆ

ರಾಷ್ಟ್ರ ಪುನರ್ರಚನೆಯಲ್ಲಿ ಸಹಕಾರದ ಪಾತ್ರ

ಅ|| ಭಾ|| ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

ಸ್ವಂ ಸು ಫೋ.] ಬೆಂಗಳೂರು ೧೪

೮ನೇ ಅಖಿಲ ಭಾರತ ಸಹಕಾರ ಸಮ್ಮೇಳನವು ಈ ದಿನ ಬೆಳಗ್ಗೆ ಭಾರತದ ಸಹಕಾರ ಸಂಸ್ಥೆಗಳ ಸಂಘದ ಅಧ್ಯಕ್ಷರಾದ ದಿವಾನ್ ಬಹದ್ದೂರ್ ಹೀರಾಲಾಲ್ ಕಾಜಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಶ್ರೀಮನ್ಮಹಾರಾಜರವರಿಂದ ಸಮ್ಮೇಳನಕ್ಕೆ ಯಶಸ್ಸನ್ನು ಕೋರಿ ಬಂದಿದ್ದ ಸಂದೇಶವನ್ನು ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಶ್ರೀನಿವಾಸ್‌ರವರು ಓದಿದರು ಮೈಸೂರು ಸಂಸ್ಥಾನದಲ್ಲಿ ಇತ್ತೀಚೆಗೆ ಅನೇಕ ಸಮ್ಮೇಳನಗಳು ನಡೆದಿರುತ್ತವೆ ದೇಶದ ಅಭ್ಯುದಯ ಮತ್ತು ಪ್ರಜೆಗಳ ಸೌಖ್ಯ ಸಾಧನೆಗೆ ಅನುಕೂಲವಾದ ಉದ್ಯಮಗಳಲ್ಲಿ ಉತ್ತಮವಾದುದು ಸಹಕಾರಕ್ಕಿಂತಲೂ ಬೇರೊಂದಿಲ್ಲ ನಮ್ಮ ಜನರ ನೈತಿಕ ಮಟ್ಟವನ್ನು ಹೆಚ್ಚಿಸಿ ಇತರ ರಾಷ್ಟ್ರಗಳ ಮನ್ನಣೆಯನ್ನು ಪಡೆಯಲು ಸಹಕಾರ ತತ್ವಗಳ ಸಂಪೂರ್ಣ ಪ್ರಯೋಜನವನ್ನು ನಾವು ಪಡೆದುಕೊಳ್ಳಬೇಕು— ಎಂಬುದಾಗಿ ಪ್ರಭುಗಳು ಸಂದೇಶದಲ್ಲಿ ಸೂಚಿಸಿದ್ದರು

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ವರ್ತಕರ ಮತ್ತು ದಳ್ಳಾಳಿಗಳ ದುಂಡಾಟಿಕೆಯಿಂದ ಒಡಜನರನ್ನು ಪಾರುಮಾಡಿ ಸಕಲರಿಗೂ ಸುಲಭ ರೀತಿಯಲ್ಲಿ ಸಾಮಗ್ರಿಗಳು ದೊರಕುವಂತೆ ಮಾಡಲು ಸಹಕಾರ ಸಂಘಗಳ ಪಾತ್ರವನ್ನು ವಿವರಿಸಿದರು

ಅಧ್ಯಕ್ಷರಾದ ಶ್ರೀ ಕಾಜಿಯವರು ತಮ್ಮ ಭಾಷಣದಲ್ಲಿ ರಾಷ್ಟ್ರ ರಚನೆಗೆ ಸಹಕಾರ ತತ್ವದ ವಿಸ್ತರಣೆಯ ಆಗತ್ಯವನ್ನು ಒತ್ತಿ ಹೇಳಿದರು ಮುಂದೆ ಆಗಬೇಕಾಗಿರುವ ಪುನರ್ರಚನೆಯ ಕಾರ್ಯದಲ್ಲಿ ಸಹಕಾರ ಇಲಾಖೆಗೆ ಒಬ್ಬರ ರಿಜಿಸ್ಟ್ರಾರರು ಇದ್ದರೆ ಸಾಲದೆಂದೂ ಒಂದೊಂದು ಶಾಖೆಗೂ ಒಬ್ಬೊಬ್ಬ ರಿಜಿಸ್ಟ್ರಾರ್ ಇರಬೇಕೆಂದೂ ತಿಳಿಸಿದರು ಭರತ ಖಂಡದಲ್ಲಿ ನಿಜವಾದ ಸಮಾಜವಾದಿ ಸಹಕಾರ ತತ್ವಗಳ ಮೇಲೆಯೇ ನಿರ್ಮಾಣವಾಗಬೇಕೆಂದು ಹೇಳಿದರು.

ಸಂಸ್ಥಾನಗಳ ಮಂತ್ರಿಮಂಡಲ ರದ್ದುಮಾಡಲು ವಿಶೇಷ ಶಾಸನ

ಅದಲಿತವು ಹೊಸದಾಗಿ ಕೂಡಿಕೊಂಡಿರುವ ಸಂಸ್ಥಾನ, ಯೂನಿಯನ್ ಮತ್ತು ಪ್ರಾಂತ್ಯಗಳ ಮಂತ್ರಿಮಂಡಲಗಳನ್ನು ರದ್ದುಮಾಡಿ ಅವುಗಳನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ಒಪ್ಪಿಸಿಕೊಂಡು ಅನಂತರ ಹೊಸ ಚುನಾವಣೆ ... ಪ್ರಭುತ್ವವನ್ನು ಅಲ್ಲಿ ನಡೆಸುವ ಒಂದು ವಿಶೇಷ ಶಾಸನವನ್ನು ಜಾರಿಗೆ ತರುವ ಬಗ್ಗೆ ಭಾರತ ಸರ್ಕಾರದವರ ತೀವ್ರವಾದ ಪರ್ಯಾಲೋಚನೆಯಲ್ಲಿ ಇರುವುದು ತಿಳಿದುಬಂದಿದೆ ಈ ಬಗೆ ಸರ್ಕಾರದ ಸಚಿವರು ಕೆಲವು ದಿನಗಳ ಮುಂಚೆಯೇ ... ಪ್ರಾಂತ್ಯದಲ್ಲಿ ಒಬ್ಬ ಸಚಿವರ ... ಮಾಡಲಾಗಿದೆ

ಮೋಟಾರು ಅಪಘಾತದಲ್ಲಿ ಚಲನ ಚಿತ್ರ ತಾರೆ

ಮದ್ರಾಸಿನಿಂದ ಸೇಲಂಗೆ ಮೋಟಾರಿನ ಲ್ಲಿ ಹೋಗುತ್ತಿದ್ದ ೧೧ ಜನರ [illegible] ದಕ್ಕೆ [illegible] ಕ ಬಂದು [illegible] ಸಿನಿಮಾ ನಟಿ [illegible] ತೀವ್ರ ಗಾಯಗೊಂಡು ಆಸ್ಪತ್ರೆಗೆ ಸೇರಿಸ ಲ್ಪಟ್ಟಿರುವಳು

ಯುದ್ಧ ದೂರವಾಯಿತು

[illegible] ಅಮೇರಿಕಾ, ಫ್ರಾನ್ಸ್ ಮೊದಲಾದ [illegible] ರಷ್ಯಕ್ಕೆ ಯುದ್ಧ ಬೇಡವಾಗಿದೆ ಯೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ

ಶಾಲೆಗಳಿಗೆ ಬ್ಯಾಂಕು

ಮದ್ರಾಸು ಪ್ರಾಂತದಲ್ಲಿರುವ ಅಧಿಕಾರ ವರ್ಗ ನೀಡಿರುವ ಪ್ರತಿಯೊಂದು ಶಾಲೆಗೂ ಒಂದೊಂದು ಬ್ಯಾಂಕನ್ನು ಸ್ಥಾಪಿಸಲಾಗು ವುದು. ಈ ಬ್ಯಾಂಕಿಗೆ ಶಾಲೆಯ ಚುನಾ ಯಿತ ಉಪಾಧ್ಯಾಯರೊಬ್ಬರು ಅಧ್ಯಕ್ಷರಾ ಗುವರು. ವಿದ್ಯಾರ್ಥಿಗಳು ತಮಗೆ ಬರುವ ಎಲ್ಲ ವಿಧವಾದ ಹಣವನ್ನೂ ಈ ಬ್ಯಾಂಕಿನ ಲ್ಲಿಡಲು ಅವಕಾಶವಿದೆ. ಶಾಲೆಗೆ ಬೇಕಾಗು ವುದಕ್ಕೆ ಒಂದು ಅಂಗಡಿಯೂ ಇರುತ್ತ ದೆ. ಅದರಲ್ಲಿ ಬಂದ ಲಾಭವನ್ನು ಬ್ಯಾಂ ಕಿನ ಸದಸ್ಯರಿಗೆ ಹಂಚಲಾಗುವುದು

City Municipal Office,
Mysore, Dated:10-5-49

NOTIFICATION

—:o:—

Notice is hereby given to the inhabitants of the Mysore City that the Municipal Council have resolved to frame the bye-laws relating to the regulation & control of Surveyors under section 51 (i) of the City Municipalities Act. Copies of the rules framed in this behalf are availabe in the Municipal Office on all working days during the office hours. Any person having any objection to the above rules in question may prefer the same in writing to the undersigned before one month from the date of this notification, after which no objection will be considered

C. Narasimha Moorthy,
Municipal Commissioner.

Edited printed and published by A R Nagaraj at the Sadhvi Press, D. Subbiah Road Mysore

ಕಬಿನಾ ತೊಟ್ಟಿಯಲ್ಲಿ ಬಾಂಬು

ಕಲ್ಕತ್ತಾದ ಲಾಲ್ ಬಜಾರ್ ಪೋಲೀಸು ಸ್ಟೇಷನ್ ಬಳಿ ಇದ್ದ ಕಬಿನಾ ತೊ ಟ್ಟಿಯಲ್ಲಿ ಬಾಂಬು ಇಡಲಾಗಿದ್ದು, ಓರ್ವ ಜಾಡಮಾಲಿ ತೊಟ್ಟಿಯೊಳಗೆ ಕಾಗದದ ಚೂರನ್ನು ತೆಗೆದುಕೊಳ್ಳಲು ಕೈ ಹಾಕಿದಾ ಗ ಅವನ ಬಲಗೈ ಸಿಡಿದು ಹೋಯಿತು. ಅವನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

ನೂರದಿಂದಲೇ ಮನೆ

ಸರಕಾರದ ಮನೆ ಕಟ್ಟುವ ಯೋಜನೆ ಯನ್ನು ಹೆಚ್ಚು ಉಪಯೋಗಕ್ಕೆ ತರಲು ಹಾಕಿರುವ ಯೋಜನೆಗೆ ಒತ್ತಾಸೆಯಾಗು ವಂತೆ ನೂರದಿಂದಲೇ ಮನೆಗಳನ್ನು ನಿರ್ಮಿ ಸಲು ಒಂದು ಕಾರ್ಖಾನೆಯನ್ನು ಬೊಂ ಬಾಯಿಯ ಹತ್ತಿರ ಇರುವ ಥಾನದಲ್ಲಿ ಸ್ಥಾ ಪಿಸಲು ಭಾರತ ಸರಕಾರದವರು ಸ್ವೀಡನ್ನಿ ನ ಕಂಪೆನಿಯೊಡನೆ ವ್ಯವಹರಿಸುತ್ತಿದ್ದಾರೆ

ವಿಮಾನ ಮೂಲಕ ಬಿತ್ತನೆ

ಬಂಜರು ಜಮೀನುಗಳಲ್ಲಿ ಪೈರುಗಳ ನ್ನು ಬೆಳೆಯಲು ಆಸ್ಟ್ರೇಲಿಯದಲ್ಲಿ ನೂತ ನ ಯೋಜನೆಯನ್ನು ಕೈಗೊಳ್ಳಲಾಗಿದೆ ಯೆಂದೂ, ವಿಮಾನಗಳ ಮೂಲಕ ಗೊಬ್ಬ ರ ಮತ್ತು ಬಿತ್ತನೆ ಸಲಕರಣೆಗಳನ್ನು ನುಸರಿ ಸಲಾಗುವುವೆಂದೂ, ಇದರಿಂದ ಶೇಖಡ ೫೦ ರಷ್ಟು ಹೆಚ್ಚು ಬೆಳೆ ಬೆಳೆಯಲು ಅನು ಕೂಲವಾಗುವುದೆಂದೂ ಹೇಳಲಾಗಿದೆ

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿ
ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ, :: ಮೈಸೂರು

॥ಶ್ರೀ॥

ಜಗದಾಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ೧೨-೫-೪೯ನೇ ಗುರುವಾರದಿಂದ ತೆರೆಯ ಲಾಗಿದೆ. ಕಿಂಡರ್‌ಗಾರ್ಟನ್ ಮತ್ತು ಆಧು ನಿಕ ಶಿಶುವಿದ್ಯಾಭ್ಯಾಸಕ್ಕೆ ಈ ಶಾಲೆಯು ಆದರ್ಶಪ್ರಾಯವಾಗಿದೆ ಎಂದು ವಿದ್ಯಾಭ್ಯಾ ಸದ ಇಲಾಖೆಯ ಅಧಿಕಾರಿಗಳಿಂದಲೂ ಶಿ ಶು ವಿದ್ಯಾಭ್ಯಾಸ ಪ್ರವೀಣರಿಂದಲೂ ಪುರ ಸ್ಕರಿಸಲ್ಪಟ್ಟಿದೆ. ಇಲ್ಲಿ ವ್ಯಾಸಂಗ ಮಾಡುವ [illegible] ವರ್ಷದ ವಯಸ್ಸಿನ ಮಕ್ಕಳನ್ನು [illegible] ಪರೀಕ್ಷೆಗೆ [illegible] ಈ ರೀತಿ ಪ್ರತಿ ವರ್ಷವೂ ಅನೇಕ ಮಕ್ಕಳು [illegible] ಸೇರಿಸಲ್ಪಟ್ಟಿದ್ದಾರೆ. [illegible] ವಿದ್ಯಾಭ್ಯಾಸದಲ್ಲಿ [illegible] ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರ ಯೋಜನವನ್ನು ಪಡೆಯುವುದರ [illegible] [illegible] ದಯವಿಟ್ಟು [illegible] ಶಿಕ್ಷಕರನ್ನು [illegible] ವಿಚಾರ ಮಾಡಬಹುದು.

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ

ಲಂಚ ಕೊಟ್ಟುದಕ್ಕೆ ಕೋಟ್ಯಾಧೀಶರಿಗೆ ಸಜಾ

ಬೊಂಬಾಯಿ ಸರ್ಕಾರದ ಲಂಚನಿರೋ ಧಾಧಿಕಾರಿಗಳಿಗೆ ೧ ಲಕ್ಷ ರೂ. ಲಂಚ ಕೊ ಡಲು ಯತ್ನಿಸಿದರೆಂದು ಅಲ್ಲಿನ ಕೋಟ್ಯಾಧೀ ಶರಾದ ಶ್ರೀ ಗೋಪೀಚಂದನೊರಾಕರರಿಗೆ ೬ ತಿಂಗಳು ಕಠಿಣ ಶಿಕ್ಷೆ ಮತ್ತು ಸಾವಿರ ರೂ. ಜುಲ್ಮಾನೆಯನ್ನೂ, ಅವರಿಗೆ ಸಹಾಯ ಕರಾಗಿದ್ದ ಪುರಸಭಾ ಸದಸ್ಯರಾದ ಶ್ರೀ ಧನಂಜಯ [illegible] ಆಚಾರ್ಯರವರಿಗೆ ೩ ತಿಂಗಳು ಕಠಿಣ ಶಿಕ್ಷೆ ಮತ್ತು ಸಾವಿರ ರೂ. ದಂಡವನ್ನು ವಿಧಿಸಲಾಗಿದೆ

ಕ್ಷಮಾಭಿಕ್ಷೆ ಬೇಡುವುದಿಲ್ಲ ವೆಂದು ಗೋಡ್ಸೆಯ ವಾದ

ಮಹಾತ್ಮರ ಕೊಲೆಗಾಗಿ ಪಶ್ಚಾತ್ತಾಪ ಪಡು ವುದಿಲ್ಲ ನಾನು ಕೊಂದವರ ಬಗ್ಗೆ ದಯ ತೋರಿಲ್ಲ ಆದುದರಿಂದ ದಯೆ ತೋರಿ ಎಂದು ಕೇಳುವುದಕ್ಕೆ ನನಗೆ ಹಕ್ಕು ಇಲ್ಲ ಮತ್ತು ಕ್ಷಮಾಭಿಕ್ಷೆ ಬೇಡುವುದು ನ ನ್ನ ಮನೋಧರ್ಮಕ್ಕೆ ವಿರುದ್ಧವಾದುದು. ಈ ಕೋರ್ಟಿನಿಂದ ನ್ಯಾಯವನ್ನು ಮಾತ್ರ ನಿರೀಕ್ಷಿಸುತ್ತಿದ್ದೇನೆ–ಎಂದು ಹೇಳಿ ಮ ಹಾತ್ಮರ ಕೊಲೆ ಅಪಾದಿತನಾದ ನಾಥೂ ರಾಂ ಗೋಡ್ಸೆಯು ಪೂರ್ವ ಪಂಜಾಬ್ ಹೈ ಕೋರ್ಟಿನಲ್ಲಿ ೬ ದಿನಗಳ ವಾದವ ನ್ನು ನೊನ್ನೆಗೆ ಮುಕ್ತಾಯಗೊಳಿಸಿದನು.

ನೀರಿಗಾಗಿ ವೈನು

ಫ್ರಾನ್ಸಿನ ಟೂರ್ರಿ ಪ್ರದೇಶದಲ್ಲಿ ನೀರಿನ ಅಭಾವವು ವಿಶೇಷವಾಗಿರುವುದರಿಂದ ವೈ ನನ್ನು ಕೊಟ್ಟು 'ನೀರನ್ನು ಅಲ್ಲಿನ ಜನರು ಪಡೆಯುತ್ತಿದ್ದಾರೆಂದು ಹೇಳಲಾಗಿದೆ.

ಜೈಲಿನಲ್ಲಿ ಪಂಚಾಯಿತಿ ಪದ್ಧತಿ

ಮೀರತ್ ಜೈಲಿನಲ್ಲಿ ಪಂಚಾಯಿತಿ ಪದ್ಧತಿಯನ್ನು ಜಾರಿಗೆ ತರಲಾಗಿದೆಯೆಂ ದು ಹೇಳಲಾಗಿದೆ. ಅಲ್ಲಿರುವ ೧೫೦೦ ಜನ ಖೈದಿಗಳು ೭೨ ಮಂದಿ ಸದಸ್ಯರನ್ನು ಳನ್ನೊಳಗೊಂಡ ಒಂದು ಪಂಚಾಯಿತಿ ಯನ್ನು ಚುನಾಯಿಸಿದ್ದಾರೆ. ಅವರ ಪೈಕಿ ೫ ಜನರ ಒಂದು ಕಾರ್ಯ ನಿರ್ವಾಹಕ ಸಮಿ ತಿಯನ್ನು ನಿರ್ಮಿಸಲಾಗಿದೆ. ಇದರಿಂ ದ ಖೈದಿಗಳಿಗೂ ಮತ್ತು ಆಡಳಿತ ವರ್ಗ ದವರಿಗೂ ಹೆಚ್ಚು ಸೌಹಾರ್ದ ಉಂಟಾ ಗಿದೆ

ಹೊಸ ಮನೆಗಳು ಬೇಕೋ

ಸೈಟುಗಳಿಗೂ ಕಷ್ಟಪಡದೆ, ಕಬ್ಬಿಣ [illegible] ಸಿಮೆಂಟಿಗೂ ಕಾಯದೆ ಹೊಸಾ ಹೊಸ ತಾರಸಿ ಮನೆಗಳನ್ನು ದೊರಕಿಸಿ ಕೊಡಬಲ್ಲೆವು.
ಪಾರ್ಕಿನ ಎದುರು [illegible]
ವಿವರಗಳಿಗೆ.–
Emeys, "Srikripa"
3077 Vanivilas Mohalla [illegible]

॥ಶ್ರೀ॥

ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ

16-5-49 ನೇ ಸೋಮವಾರ
ಸಂಜೆ ೬ ಗಂಟೆಗೆ
ಶ್ರೀಮತಿ ಎಸ್. ಚೊಕ್ಕಮ್ಮ
ಮತ್ತು ಪಾರ್ಟಿ
ಕೋ–ಆಪರೇಟರ್ಸ್ ಹೋಂನಲ್ಲಿ
ಗಂಡಸರಿಗೆ ೧ ರೂ. ಹೆಂಗಸರಿಗೆ [illegible]

ಮೈಸೂರು ವಿಶ್ವ ವಿದ್ಯಾಲಯ

ನಂ. ಎಕ್ಸ್ ೧–೧೦೫೧/೪೮-೪೯
ಮೈಸೂರು ವಿಶ್ವ ವಿದ್ಯಾಲಯದ ಕಛೇರಿ
ಮೈಸೂರು: ತಾ॥ ೯ ಮೇ ೧೯೪೯

ನಂ. ಎಕ್ಸ್ ೧–೧೦೫೧/೪೮-೪೯

ಪ್ರಕಟಣೆ

ವಿಶ್ವ ವಿದ್ಯಾಲಯದ ಸಂಸ್ಥೆಗಳಲ್ಲಿ ಡಿಗ್ರಿ ಕೋರ್ಸುಗಳ ತರಗತಿಗಳಿಗೆ ಸೇರ ಬಯಸುವವರಿಂದ ಇದೇ ೩೧ನೇ ತಾ॥ ವರೆಗೂ ಇಂಟರ್ ಮೀಡಿಯೆಟ್ ಕೋರ್ಸುಗಳು ಮತ್ತು ಮೆಡಿಕಲ್ ಸ್ಕೂಲಿನ ಬಗ್ಗೆ ೧೯೪೯ನೇ ಜೂನ್ ೧೫ನೇ ತಾ॥ ವರೆಗೂ ಆಯಾ ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

ಅರ್ಜಿಗಳ ಜೊತೆಯಲ್ಲಿ ಲೀವಿಂಗ್ ಸರ್ಟಿಫಿಕೇಟ್ ಮತ್ತು ಇತರ ಸರ್ಟಿಫಿ ಕೇಟುಗಳೂ, ಅಲ್ಲದೆ ತೇರ್ಗಡೆಯಾದ ಪರೀಕ್ಷೆಯಲ್ಲಿ ಪಡೆದ ಸಂಖ್ಯೆಗಳ [illegible] ತೇರ್ಗಡೆಯಾದ ವರ್ಷ ಅಥವಾ ವರ್ಷಗಳನ್ನು ತೋರಿಸುವ ಸರ್ಟಿಫಿಕೇಟ್ ಪಡೆ ಪಟ್ಟಿಯು ಇರತಕ್ಕದ್ದು

ಒಂದು ಕಾಲೇಜು ಅಲ್ಲದೇ ಇತರ ಸಂಸ್ಥೆಗಳಿಗೂ ಅರ್ಜಿಗಳನ್ನು ಕಳುಹಿಸು ವ ವಿದ್ಯಾರ್ಥಿಗಳು ಗೆಜೆಟೆಡ್ ಅಧಿಕಾರಿಗಳಿಂದ ರುಜು ಹಾಕಿದ ತಮ್ಮ ಮಾರ್ಕ್ಸ್ ಕಾರ್ಡಿನ ಪ್ರತಿಗಳನ್ನು ಅರ್ಜಿ ಸಮೇತ ಕಳುಹಿಸಬಹುದು.

ಮೈಸೂರು ವಿಶ್ವ ವಿದ್ಯಾಲಯಕ್ಕೆ ಸೇರದ ಹೊರಗಿನ ವಿಶ್ವ ವಿದ್ಯಾಲಯಗಳಿಂದ ಬರುವ ಉಮೇದುವಾರರು ಈ ಮೇಲ್ಕಂಡ ಸರ್ಟಿಫಿಕೇಟುಗಳ ಜೊತೆಗೆ ಮೈಗ್ರೇಷನ್ ಸರ್ಟಿಫಿಕೇಟನ್ನೂ ಸಹ ಹಾಜರು ಮಾಡಬೇಕು

ಅರ್ಜಿಗಳ ನಮೂನೆಗಳನ್ನು ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಪಡೆಯ ಬಹುದು ಕಾಲೇಜಿಗೆ ಸೇರಲಿಚ್ಛೆಯಿಂದ ಬಂದ ಪ್ರತಿಯೊಂದು ಅರ್ಜಿಯ ಸಂಗಡ ಒಂದು ರೂಪಾಯಿ ಫೀಜು ಕೊಡಬೇಕು. ಈ ಫೀಜನ್ನು ಯಾವುದೇ ಸಂದರ್ಭ ದಲ್ಲೂ ವಾಪಸು ಮಾಡಲಾಗುವದಿಲ್ಲ

ಅರ್ಜಿಗಳನ್ನು ಕೊಟ್ಟ ಒಂದು ವಾರದ ನಂತರ ಆಯಾ ಸಂಸ್ಥೆಗಳ ನೋಟೀ ಸ್ ಬೋರ್ಡಿನ ಮೇಲೆ ಚುನಾಯಿಸಲ್ಪಟ್ಟ ಉಮೇದುವಾರರ ಹೆಸರುಗಳನ್ನು ಪ್ರಕ ಟಿಸಲಾಗುವುದು. ಹೀಗೆ ಚುನಾಯಿಸಲ್ಪಟ್ಟ ಉಮೇದುವಾರನು ಪ್ರಕಟಣೆಯಾದ ಒಂದು ವಾರದೊಳಗೆ ಸಂಸ್ಥೆಗೆ ಸೇರದಿದ್ದರೆ ಆತನು ತನ್ನ ಹಕ್ಕನ್ನು ಕಳೆದು ಕೊಳ್ಳುವನು

ಅಪ್ಪಣೆ ಪ್ರಕಾರ
ಟಿ. ಸಿದ್ಧಲಿಂಗ ದೇವರು
ರಿಜಿಸ್ಟ್ರಾರ್ (ಐ.ಸಿ)

ಫೋ।। ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ [illegible]] ಭಾನುವಾರ [illegible] [ಸಂಚಿಕೆ [illegible]

ಫಾರ್ಮೋಸಾ ದ್ವೀಪಕ್ಕೆ ಚೀಣಾ ಸರ್ಕಾರದ ವರ್ಗ

ದಸರಾ ವಸ್ತು ಪ್ರದರ್ಶನ

ಮೈಸೂರು ೧೫

ಈ ಸಲ ನವರಾತ್ರಿ ಸಮಯದಲ್ಲಿ ಎಂ ದಿನಂಕೆ ವಸ್ತು ಪ್ರದರ್ಶನವನ್ನು ನಡೆಸಲು ಸರಕಾರದವರು ನಿರ್ಧರಿಸಿರುತ್ತಾರೆ. ವಿದ್ಯಾ ಇಲಾಖೆಯಿಂದ ಶ್ರೀ ಡಿ ಎಚ್. ಚಂದ್ರಶೇಖ ರಯ್ಯನವರ ಅಧ್ಯಕ್ಷತೆಯಲ್ಲಿ [illegible] ಜನ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ

ಹರಿಕಥೆ

ಕೊತ್ವಾಲ ರಾಮಯ್ಯನ ಬೀದಿಯಲ್ಲಿ ಶ್ರೀ ಕಮಲಾಂಬಾ ನಿಲಯದ ಎದುರಿನಲ್ಲಿ ಹಾಕಲಾಗಿರುವ ಚಪ್ಪರದಲ್ಲಿ ಮುಳಬಾಗಿ [illegible] ಶ್ರೀ ನಾರಾಯಣ ದಾಸರಿಂದ ನಾಳೆ ದಿನ ಭದ್ರಾಚಲ ರಾಮದಾಸ ಎಂಬ ಹರಿಕಥೆ ನಡೆಯುವುದು.

ಪ್ರಭುಗಳೊಡನೆ ಭೇಟಿ

ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ [illegible] ವೆಂಕಟಸುಬ್ಬಯ್ಯನವರಿಗೆ ನೆನ್ನೆ ದಿನ ಪ್ರಭುಗಳು ಭೇಟಿ ದಯಪಾಲಿಸಿದ್ದರು [illegible] ಪಟ್ಟಣದ ತಾಲ್ಲೂಕಿನ ಅಭಿವೃದ್ಧಿ ಮುಂತಾದ ವಿಚಾರವಾಗಿ ಸಂಭಾಷಣೆ ನಡೆಯಿತು

ಸಂಗೀತ

[illegible] ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಪ್ರಜ್ಞಾನಂದ ಸ್ವಾಮಿಗಳ ಔಷಧಾಲಯದಲ್ಲಿ ಈ ಸಂಜೆ [illegible] ಘಂಟೆಗೆ ಅ।। ಪಿ।। [illegible]ನವಿದಾರದ ಬಿ ದೇವೇಂದ್ರಪ್ಪನವರ ಗಾಯನವು ವಿದ್ವಾನ್ ಬಿ ಕೇಶವಮೂರ್ತಿಯವರ ಪಿಟೀಲು, ಅ।।ವಿ।। ಶೇಷಪ್ಪನವರ ಕೊಳಲದ ಸಮೇತ ನಡೆಯುವುದು.

ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣ ಮಹೋತ್ಸವ

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣಮಹೋತ್ಸವವನ್ನು ಬರುವ ವರ್ಷದಲ್ಲಿ ಬಹು ವೈಭವದಿಂದ ನಡೆಸಲು ನಿರ್ಧಾರವಾಗಿದೆ

ಪಾತಾಳ ಲಿಂಗ ದೇವಾಲಯದ ಆರಂಭೋತ್ಸವ

ತಿರುವಣ್ಣಾಮಲೆಯಲ್ಲಿ ಶ್ರೀ ರಮಣ ಮಹರ್ಷಿಗಳು ತಪಶ್ಚರ್ಯವನ್ನು ಪ್ರಾರಂಭಿಸಿದ ಗುಹೆಯಲ್ಲಿದ್ದ ಪಾತಾಳ ಲಿಂಗ ದೇವಾಲಯದ ಪ್ರಾರಂಭೋತ್ಸವವನ್ನು ಗವರ್ನರ್ ಜನರಲ್ ರಾಜಾಜಿಯವರು ನೆನ್ನೆ ನೆರವೇರಿಸಿದರು ರಮಣ ಮಹರ್ಷಿಗಳು [illegible] ಪರಮಹಂಸರಂತಹ ಮಹಾ [illegible] ರಾಜಾಜಿಯವರು ತಿಳಿಸಿದರು.

ಮೂರನೆ ಯುದ್ಧ ತಪ್ಪಿಸಲು ಯೂರೋಪಿಗೆ ಸಹಾಯ

ಮೂರನೇ ಮಹಾಯುದ್ಧದ ಭೀತಿಯು [illegible] ವರೆಗೂ ಸಂಯುಕ್ತ ಸಂಸ್ಥಾನವು ಯೂರೋಪಿಗೆ ಮಿಲಿಟರಿ ಸಹಾಯವನ್ನು ಕೊಡುತ್ತಲೇ ಇರುವುದೆಂದು ಅಮೆರಿಕದ [illegible] ಇಲಾಖೆಯು ಪ್ರಕಟಣೆಯೊಂದು [illegible]

ಭಾರತಕ್ಕೆ ಸ್ವಿಟ್ಜರ್ಲೆಂಡಿನಿಂದ ಯಂತ್ರ ಸಲಕರಣೆ

ಈ ವರ್ಷದೊಳಗಾಗಿ ಸ್ವಿಟ್ಜರ್ಲೆಂಡಿನ [illegible] ಭಾರತಕ್ಕೆ ೧೬೦ ಲಕ್ಷ ರೂ. ಬೆಲೆಯ [illegible] ಯಂತ್ರ ಸಲಕರಣೆ, ಕೈಗಡಿಯಾರ ಮತ್ತು ರಸಾಯನ ವಸ್ತುಗಳನ್ನು [illegible] ಕಳುಹಿಸಲಾಗುವುದೆಂದು ಹೇಳಲಾ[illegible]

ಚೀಣಾ ಸರಕಾರ ಫಾರ್ಮೋಸಾಕ್ಕೆ

ಷಾಂಗ್ಹೈ ನಗರದ ಮೇಲೆ ಕಮ್ಯೂನಿಸ್ಟರ ಒತ್ತಡವು ಮಿತಿಮೀರುತ್ತಿದೆ ಸಮುದ್ರ ಸಂಪರ್ಕದಿಂದ ನಗರವನ್ನು ಈಗ ಬೇರ್ಪಡಿಸಲಾಗಿದೆ ಚೀಣಾ ಸರಕಾರದ ಕಾಗದ ಪತ್ರಗಳನ್ನೂ ಹಣಕಾಸುಗಳನ್ನೂ ಫಾರ್ಮೋಸಾ ದ್ವೀಪಕ್ಕೆ ವರ್ಗಾಯಿಸಲಾಗಿದೆ.

ಸಯಾಮಿನ ಹೆಸರು ಬದಲಾವಣೆ

ಸಯಾಂ ದೇಶವನ್ನು ಮೊದಲಿನಂತೆಯೇ ತಾಯ್ ಲ್ಯಾಂಡ್ ಎಂದೂ ಅಲ್ಲಿನ ಜನರನ್ನು ತಾಯ್ ಜನರೆಂದೂ ಇನ್ನು ಮುಂದೆ ಕರೆಯಲಾಗುವುದೆಂದು ಅಲ್ಲಿನ ಸರ್ಕಾರದವರು ತೀರ್ಮಾನಿಸಿದ್ದಾರೆ

೧೫ ಗಂಟೆಗಳಲ್ಲಿ ಲಂಡನ್ನಿನಿಂದ ಕರಾಚಿಗೆ

ಹಾರ್ನೆಟ್ ಎಂಬ ವಿಮಾನದಲ್ಲಿ ನೆವಿಲ್ ಡ್ಯೂಕ್ ಎಂಬ ಬ್ರಿಟಿಷ್ ವೈಮಾನಿಕನು ಕೇವಲ ೧೫ ಗಂಟೆ [illegible] ನಿಮಿಷಗಳಲ್ಲಿ ಲಂಡನ್ನಿನಿಂದ ಕರಾಚಿಯನ್ನು ತಲುಪಿದ್ದಾನೆಂದೂ, ಆ ವಿಮಾನವನ್ನು ಪಾಕಿಸ್ತಾನಕ್ಕೆ ಕೊಡಲಾಗುವುದೆಂದೂ ಹೇಳಲಾಗಿದೆ

ಮದ್ರಾಸಿನಲ್ಲಿ ಲಿಯಸಾನ್ ಸಮಿತಿಗಳು

ಸರ್ಕಾರಕ್ಕೂ ಮತ್ತು ಶಾಸಕರಿಗೂ ಹೆಚ್ಚು ಸಂಪರ್ಕವುಂಟಾಗಿ, ಆಡಳಿತವು ಸುಗಮವಾಗಿ ನಡೆಯಲು ಕಾಂಗ್ರೆಸ್ ಸದಸ್ಯರ ಮತ್ತು ಜಿಲ್ಲಾಧಿಕಾರಿಗಳನ್ನೊಳಗೊಂಡ ಜಿಲ್ಲಾ ಲಿಯಸಾನ್ ಸಮಿತಿಗಳನ್ನು ರಚಿಸಲಾಗುವುದೆಂದು ಮದರಾಸಿನ ಪ್ರಧಾನಿಗಳು ತಿಳಿಸಿರುತ್ತಾರೆ

ಭಾರತದ ರಾಜಮುದ್ರೆಯಲ್ಲಿ ಸತ್ಯಮೇವ ಜಯತೆ

ಹಿಂದೆ ಬ್ರಿಟಿಷ್ ಸರ್ಕಾರದವರು [illegible] ಪಯೋಗಿಸುತ್ತಿದ್ದ, 'ದೇವ ಮತ್ತು ನನ್ನ ಹಕ್ಕು' ಎಂಬ ವಾಕ್ಯವನ್ನು ಭಾರತದ ರಾಜಮುದ್ರೆಯಿಂದ ತೆಗೆದು. ಹಾಕಿ 'ಸತ್ಯಮೇವ ಜಯತೆ' ಎಂಬುದನ್ನು ದೇವನಾಗರಿ ಲಿಪಿಯಲ್ಲಿ ಸೇರಿಸಲಾಗುವುದೆಂದು [illegible] [illegible]

ರಾಜರುಗಳಿಗೆ ಕೆಲಸ

ಭಾರತದಲ್ಲಿರುವ ಐನೂರಕ್ಕೆ ಮೇಲ್ಪಟ್ಟ ಸಂಸ್ಥಾನಗಳ ರಾಜರು ತಮ್ಮ ರಾಜ್ಯಗಳನ್ನು ವಿಲೀನೀಕರಣ ಮಾಡಿರುವುದರಿಂದ, ಅವರುಗಳಿಗೆ ಭಾರತ ಸರಕಾರದ ಇಲಾಖೆಗಳಲ್ಲಿ ಉನ್ನತ ಹುದ್ದೆಗಳನ್ನು ಕಲ್ಪಿಸಲು ಭಾರತ ಸರಕಾರದವರು ನಿರ್ಧರಿಸುವವರಾಗಿದ್ದಾರೆ ವಿದ್ಯಾವಂತರೂ, ಅನುಭವಸ್ಥರೂ ಆದಂತಹವರ ಪಟ್ಟಿಗಳು ತಯಾರಾಗುತ್ತಿವೆ. ಅಂತಹವರುಗಳಿಗೆ ಗಾರ್ಡ್ ಪದವಿ, ಸೈನ್ಯದಲ್ಲಿ ಹುದ್ದೆ ಮತ್ತು ವಿದೇಶೀ ರಾಯಭಾರಿ ಪದವಿಗಳನ್ನು ಕೊಡಲಾಗುವುದು

ಗಾಂಧೀಜಿ ಗ್ರಂಥಗಳಿಗಾಗಿ ಪ್ರದರ್ಶನ ಶಾಲೆ

ಮಹಾತ್ಮಾ ಗಾಂಧಿಯವರ ಆಪತ್ಕಾಲ ಪತ್ರ ಗ್ರಂಥಗಳಿಗೆ ಸಂಬಂಧಿಸಿದಂತೆ ಒಂದು ಪ್ರದರ್ಶನ ಶಾಲೆಯನ್ನು ಸ್ಥಾಪಿಸಲು ಗಾಂಧಿ ರಾಷ್ಟ್ರೀಯ ನಿಧಿ ಧರ್ಮದರ್ಶಿಗಳು ವಿಚಾರಿಸು ಮಾಡಬೇಕೆಂದು ಸೂಚನೆ ಕೊಡಲಾಗಿದೆ

ಬೊಂಬಾಯಿನಲ್ಲಿ ಗುಡಿಸುವವರ ಮುಷ್ಕರ

ಹದಿನೆಂಟು ಸಾವಿರ ಜನರ ಪೈಕಿ ಒಟ್ಟು [illegible] ಸಾವಿರ ಗುಡಿಸುವವರು ಬೊಂಬಾಯಿನಲ್ಲಿ ಮೊನ್ನೆಯಿಂದ ಮುಷ್ಕರ ಹೂಡಿರುವರು ಈ ಮುಷ್ಕರವು ನ್ಯಾಯಬಾಹಿರವೆಂದು ಸರ್ಕಾರದವರು ಘೋಷಿಸಿರುವರು ಇದರ ಮೇಲೆ ನೆನ್ನೆ ಮೂರು ಸಾವಿರ ಜನರು ಕೆಲಸಕ್ಕೆ ಹಿಂತಿರುಗಿದರು. ಸುಮಾರು ನೂರು ಜನರನ್ನು ದಸ್ತಗಿರಿ ಮಾಡಿ ತಲಾ [illegible] ತಿಂಗಳ ಶಿಕ್ಷೆ ವಿಧಿಸಲಾಯಿತು.

ಕರ್ಣಾಟಕ ಯುವಕ ಪರಿಷತ್ತು

ದಾವಣಗೆರೆಯಲ್ಲಿ ಈ ತಿಂಗಳ ಕೊನೆಯ ಭಾಗದಲ್ಲಿ ಕರ್ನಾಟಕ ಯುವಕ ಪರಿಷತ್ತು ಪ್ರಚಲಿತ ರಾಜಕೀಯ ಮತ್ತು ಇತರ ವಿಷಯಗಳನ್ನು ಚರ್ಚಿಸಿ ಸೂಕ್ತ ನಿರ್ಧಾರಗಳನ್ನು ಕೈಕೊಳ್ಳುವುದಕ್ಕಾಗಿ ಸೇರುವುದಿದೆ ತಾರೀಖು ಮುಂತಾದ ವಿವರಗಳನ್ನು ಮುಂದೆ ತಿಳಿಸಲಾಗುವುದು ಪ್ರತಿನಿಧಿಗಳಾಗ ಬಯಸುವವರು ವೈಯಕ್ತಿಕವಾಗಿಯಾಗಲಿ [illegible] ಸಮನಾಗಿಯಾ [illegible] [illegible]

ಭಾರತದ ಹಣಕಾಸಿನ ಭದ್ರತೆ

ಆರ್ಥಿಕ ತಳಹದಿಯು ಬದಲು ರಾಜಕೀಯ ಅಥವ ಭಾವನಾತರಂಗಗಳ ಆಧಾರದ ಮೇಲೆ ಭಾರತದ ಕೇಂದ್ರ ಮತ್ತು ಪ್ರಾಂತಗಳ ಹಣಕಾಸಿನ ನೀತಿಯು ರೂಪಿಸಲ್ಪಟ್ಟಿರುವುದರಿಂದ ಅದರ ಭದ್ರತೆಯು ಸಂಶಯಾಸ್ಪದವಾಗಿದೆಯೆಂದೂ ಕಂದಾಯದ ನೀತಿಯನ್ನು ಪುನರ್ವಿಮರ್ಶೆ ಮಾಡಬೇಕೆಂದೂ ಮೊನ್ನೆ ಇಲ್ಲಿಗೆ ಭೇಟಿ ಇತ್ತ ಅಂತರ ರಾಷ್ಟ್ರೀಯ ಬ್ಯಾಂಕಿನ ನಿಯೋಗದವರು ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ

ಪುನಃ ಚಿಯಾಂಗ್ ಕೈಷೇಕರಿಗೆ ಮುಖಂಡತ್ವ

ಕಮ್ಯೂನಿಸ್ಟರ ಧಾಳಿಯನ್ನು ಎದುರಿಸಲು ಚಿಯಾಂಗ್ ಕೈಷೇಕರು ಪುನಃ ಚೀಣದ ನಾಯಕತ್ವವನ್ನು ವಹಿಸಬೇಕೆಂದು ಕೋರುವ ನಿರ್ಣಯವು ಅಲ್ಲಿನ ಕೌಮಿಂಗ್ ಟಾಂಗ್ ಎಂಬ ರಾಷ್ಟ್ರೀಯ ಪಕ್ಷದಲ್ಲಿ ಮಂಜೂರಾಗಿರುತ್ತದೆ. ಇದಕ್ಕಾಗಿ ಏಳು ಜನರ ನಿಯೋಗವೊಂದು ಚಿಯಾಂಗರ ಬಳಿಗೆ ಹೋಗುವುದು

ರಾಜಾಜಿ-ಪೆರಿಯಾರ್ ಭೇಟಿ

ಗೌರ್ನರ್ ಜನರಲ್ ರಾಜಾಜಿಯವರು ದ್ರಾವಿಡ ಸಂಘದ ಮುಖಂಡರಾದ ಇ ವಿ. ರಾಮಸ್ವಾಮಿ ನಾಯಕರಿಗೆ ನೆನ್ನೆ ತಿರುವಣ್ಣಾಮಲೆಯಲ್ಲಿ ಭೇಟಿ ಕೊಟ್ಟಿದ್ದರು. ತಮಗೂ, ನಾಯಕರಿಗೂ ರಾಜಕೀಯದಲ್ಲಿ ಭಿನ್ನಾಭಿಪ್ರಾಯವಿದ್ದರೂ ಅದರಿಂದ ಸ್ನೇಹಕ್ಕೆ ಯಾವ ತಡಚಣೆಯೂ ಉಂಟಾಗಿಲ್ಲವೆಂದೂ, ಇದೇರೀತಿ ಎಲ್ಲರೂ ಆಚರಿಸಬೇಕೆಂದೂ ರಾಜಾಜಿಯವರು ಹೇಳಿರುತ್ತಾರೆ

ಪೆರೋಲಿನ ಮೇಲೆ ಎ. ಡಿ. ಶಂಕರರ ಬಿಡುಗಡೆ

ಹದಿನಾಲ್ಕು ದಿನಗಳ ಪೆರೋಲಿನ ಮೇಲೆ ಕಮ್ಯೂನಿಸ್ಟ ಬಂದಿಗಳಾದ ಶ್ರೀ ಎ. ಡಿ ಶಂಕರರನ್ನು ಈ ದಿನ ಮೈಸೂರು ಜೈಲಿನಿಂದ ಬಿಡುಗಡೆ ಮಾಡಲಾಯಿತು.

ತಿರುವಾಂಕೂರು ನಾಣ್ಯ ರದ್ದು

ಕೊಚ್ಚಿ ಸಂಸ್ಥಾನದೊಡನೆ ತಿರುವಾಂಕೂರು ಐಕ್ಯವಾಗಲಿರುವುದರಿಂದ ಇದುವರೆಗೆ ಅಲ್ಲಿ ಜಾರಿಯಲ್ಲಿದ್ದ ಚಕ್ರಂ ಎಂಬ ನಾಣ್ಯವನ್ನು ರದ್ದು ಮಾಡಲಾಗುವುದು ಇನ್ನು ಮುಂದೆ ಅದನ್ನು ತಯಾರಿಸುವುದಿಲ್ಲ

ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸಭೆ

ಬೆಂಗಳೂರು ೧೫

ನೆನ್ನೆ ಮತ್ತು ಈ ದಿನ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸಭೆ ಸೇರಿ ಪ್ರಚಲಿತ ವಿಷಯಗಳನ್ನು ಪರಿಶೀಲಿಸಿತು ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕ ಕಾಂಗ್ರೆಸ್ ಪ್ರಾಂತ್ಯದ ಸ್ಥಾನವಿರಬೇಕೆಂಬ ವಿಷಯವನ್ನು ಚರ್ಚಿಸಿ ಅದನ್ನು ಪ್ರತಿಪಾದಿಸುವಂತೆ ಇತ್ಯರ್ಥವಾಯಿತೆಂದು ಹೇಳಲಾಗಿದೆ

ಶ್ರೀ ನಿಜಲಿಂಗಪ್ಪನವರ ಮೇಲೆ ಶಿಸ್ತಿನ ಕ್ರಮದ ಬಗ್ಗೆ ಬಂದಿದ್ದ ಪತ್ರವನ್ನು ಪರಿಶೀಲಿಸಿ ಇಂದಿನ [illegible] ಅನೇಕರು ಬಗೆಬಗೆಯ ಅಭಿಪ್ರಾಯ [illegible] [illegible]

ವಾರ ಭವಿಷ್ಯ

ತಾ|| ೧೫-೫-೪೯ ರಿಂದ ೨೧-೫-೪೯ರ ವರೆಗೆ

ಮೇಷ—ಗ್ರಹಮಾನ ಚೆನ್ನಾಗಿಲ್ಲ ಚಿಕ್ಕಮಾಂಚಿತ್ತ ದುಡುಕ ಬೇಡಿ ವ್ಯಾಪಾರೋದ್ಯೋಗ ನೌಕರಿಗಳ ಸ್ಥಿತಿ ಅಷ್ಟೊಂದು ಸಮರ್ಪಕವಿಲ್ಲ ಮನಸ್ಸಿನಿಂದ ಕಿರುಕುಳ ಆರೋಗ್ಯವೂ ಅಷ್ಟಾಗಿ ಉತ್ತಮವಿಲ್ಲ. [illegible] ತಾ|| [illegible] ವಿಚಿತ್ರವಾದ ಸಂಕಟ [illegible]

[illegible]

[illegible]

ಕರ್ಕ—ಮಹತ್ವ ಕಾರ್ಯವಲ್ಲಿ ಯಶಸ್ಸು ಲಭ್ಯ. ಆರೋಗ್ಯ ಉತ್ತಮ ಸಾಂಪತ್ತಿಕ ಸ್ಥಿತಿ ಸರಿಯಾಗಿರುತ್ತೆ. ವ್ಯಾಪಾರೋದ್ಯೋಗ ನೌಕರಿಗಳಲ್ಲಿ ಲಾಭ ಆಕಸ್ಮಿಕ ಪ್ರವಾಸ ತಾ|| ೧೯, ೨೦ ಬಂಧುಗಳ ಆಗಮನ.

ಸಿಂಹ—ಉಪಕಾರಿಗೆ ಪ್ರತ್ಯುಪಕಾರ ಮಾಡಿ ಆರೋಗ್ಯ ಸಮಾಧಾನಕರ. ಮನಸ್ಸಿನ ಸ್ಥಿತಿ ಸಾಗಿಲ್ಲ ವ್ಯಾಪಾರೋದ್ಯೋಗ ನೌಕರಿಗಳಲ್ಲಿ ತೊಂದರೆ ದೂರವಾಗಿ ಪ್ರತಿಸ್ಪರ್ಧಿಗಳ ಗರ್ವಭಂಗ ಸನ್ಮಿತ್ರರಿಗಾಗಿ ಪ್ರವಾಸ ತಾ|| ೧೭, ೧೮ ಅತಿಥಿಗಳಿಗಾಗಿ ಖರ್ಚು

ಕನ್ಯಾ—ಸಹನೆಯಿರಲಿ. ಸುಖದುಃಖಗಳು ಒಂದಾಗುತ್ತಲೊಂದು ಬರುತ್ತಿವೆ. ಈ ವಾರವೆಲ್ಲಾ ವ್ಯಾಪಾರೋದ್ಯೋಗ ನೌಕರಿಗಳಲ್ಲಿ ಜಾಗರೂಕರಾಗಿರಿ. ತಾ|| ೧೫, ೧೬ ಆರೋಗ್ಯಕ್ಕೆ ಕ್ಷೇಮ [illegible] ಸಂಭವ

ತುಲಾ—ಪತ್ನಿ ಆರೋಗ್ಯದ ಕಡೆ ಲಕ್ಷ್ಯವಿರಲಿ ಸ್ವೀಕೃತ ಕಾರ್ಯ ಅರ್ಧಾಂತಕವಾಗುವುದು, ಸಾಂಪತ್ತಿಕಸ್ಥಿತಿ ಉತ್ತಮವಿದ್ದರೂ, ಖರ್ಚು ಹೆಚ್ಚಾಗಿರುವುದು. ವ್ಯಾಪಾರಾದಿಗಳಲ್ಲಿ ವಿಘ್ನ. ತಾ|| ೧೭, ೧೮ ಅಪಮಾನ, ದುಸ್ವಪ್ನದರ್ಶನ.

ವೃಶ್ಚಿಕ—ವ್ಯಾಪಾರೋದ್ಯೋಗ ನೌಕರಿಗಳಲ್ಲಿ ಪರಿಸ್ಥಿತಿ ಉತ್ತಮ ತಾ|| ೧೭, ೧೮ ಪ್ರವಾಸ, ಮಹತ್ವ ಕಾರ್ಯಗಳಿಗಾಗಿ ದನಲಾಭ

ಧನು—ಈ ವಾರ ಸುಖ ದುಃಖ ಉಭಯ. ವ್ಯಾಪಾರೋದ್ಯೋಗ ನೌಕರಿಗಳಲ್ಲಿ ತೊಂದರೆ ದೂರಾಗಿ, ಆರೋಗ್ಯ ಮಾನಸಿಕ ಸ್ಥಿತಿ ಉತ್ತಮವಾಗಿ ಇದ್ದು ಆದರೆ ಸಂತತಿಗೆ ಮಾತ್ರ ಕ್ಲೇಶವುಂಟು. ತಾ|| ೧೯, ೨೦ ಧನಲಾಭ, ಸತ್ಪಾತ್ರಗಮನ.

ಮಕರ—ಮಾನಸಿಕ ಸ್ಥಿತಿ ತೃಪ್ತಿಕರ ಆರೋಗ್ಯದ ಕಡೆ ಗಮನ ಕೊಡಿ ದೂರ ಪ್ರವಾಸ ಬೇಡ ವ್ಯಾಪಾರೋ[illegible] ನೌಕರಿಗಳಲ್ಲಿ ಪ್ರತಿಸ್ಪರ್ಧಿಗಳಿಂದ

ಜಾಸ್ತಿ. ತಾ|| ೧೫, ೧೬ ಸಂಸಾರ ಕಲಹ. ಮನಸ್ತಾಪ

ಕುಂಭ—ವ್ಯಾಪಾರೋದ್ಯೋಗ ನೌಕರಿಗಳಲ್ಲಿ ಲಾಭ. ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ ಮಾನಸಿಕ ಸ್ಥಿತಿ ಅಸಮಾಧಾನಕರ ವಿಷಯಾದಿ ವ್ಯಾಮೋಹದ ಕಡೆಗೆ ಸಿಲುಕಿ ತೊಂದರೆಗೆ ಈಡಾಗುವ ಸಂಭವ. ತಾ|| ೧೭, ೧೮, ೧೯ ಶುಭಕಾರ್ಯಕ್ಕೆ ವೆಚ್ಚ. ಸತ್ಸಹವಾಸ

ಮೀನ—ಆರೋಗ್ಯ ಆರ್ಥಿಕ ಮಾನಸಿಕ ಸ್ಥಿತಿ ಚೆನ್ನಾಗಿದೆ ವ್ಯಾಪಾರೋದ್ಯೋಗಗಳಲ್ಲಿ ಲಾಭ ಆದರೆ ಆಲಸ್ಯ ತೋರಿಯಿರಿ ಕಾರ್ಯ ತತ್ಪರರಾಗಿರಿ ತಾ|| ೧೯, ೨೦ ಆಕಸ್ಮಿಕ ಖರ್ಚು, ಅನುಕೂಲ್ಯ ವಸ್ತು ಕಳೆಯ ಹೋಗುವ ಸಂಭವ

ಕೊಯಮುತ್ತೂರು ಗಿರಣಿಗಳಿಗೆ ೧೦ ದಿನ ರಜಾ

ಪೈಕಾರ ಆಣೆಕಟ್ಟಿನಲ್ಲಿ ನೀರಿನ ಮಟ್ಟವು ಬಹವಾಗಿ ತಗ್ಗುತ್ತಿರುವುದರಿಂದ ವಿದ್ಯುಚ್ಛಕ್ತಿಯು ಸರಬರಾಜು ಕಡಿಮೆಯಾಗಬಹುದೆಂದು ಅಲ್ಲಿನ ಇಂಜನಿಯರು ಎಚ್ಚರಿಕೆ ಕೊಟ್ಟಿರುತ್ತಾರಾಗಿ ಕೊಯಮುತ್ತೂರು ಜಿಲ್ಲೆಯಲ್ಲಿರುವ ೩೧ ಗಿರಣಿಗಳು ಇದೇ ೧೬ನೇ ತಾ|| ನೊಳಗಾಗಿ ೧೦ ದಿನ ಮುಚ್ಚಬೇಕೆಂದು ಗಿರಣಿ ಮಾಲೀಕ ಸಂಘದವರು ನಿರ್ಧರಿಸಿದ್ದಾರೆ.

ಕಾಶ್ಮೀರ ಸ್ವತಂತ್ರವಾಗಿರಬೇಕೆಂದು ಷೇಕ್ ಅಬ್ದುಲ್ಲ ?

ಕಾಶ್ಮೀರ ಸಂಸ್ಥಾನವು ಯಾವ ಪಕ್ಷಕ್ಕೂ ಸೇರದೆ ಸ್ವತಂತ್ರ ರಾಷ್ಟ್ರವಾಗಿರಬೇಕೆಂದು ಅದರ ಪ್ರಧಾನಿ ಷೇಕ್ ಅಬ್ದುಲ್ಲಾ ರವರು ಲಂಡನ್ನಿನ ಅಬ್ಸರ್‌ವರ್ ಪತ್ರಿಕೆಯ ಬಾತ್ಮೀದಾರರಿಗೆ ತಿಳಿಸಿದ್ದಾರೆಂದು ಆ ಪತ್ರಿಕೆಯು ಪ್ರಕಟಿಸಿದೆ. ಭಾರತ ಅಥವ ಪಾಕೀಸ್ಥಾನಗಳಿಗೆ ಅದು ಸೇರದೆ ಎರಡು ರಾಷ್ಟ್ರಗಳಲ್ಲೂ ಮೈತ್ರಿಯಿಂದ ಕೂಡಿರಲು ಬಯಸುತ್ತದೆ ಕಾಶ್ಮೀರದ ಸ್ವಾತಂತ್ರ್ಯದ ಬಗ್ಗೆ ಭಾರತ, ಪಾಕೀಸ್ಥಾನ ಮತ್ತು ಇತರ ರಾಷ್ಟ್ರಗಳು ಬರವಸೆ ಕೊಡಬೇಕು ಎಂದು ಅವರು ಹೇಳಿರುತ್ತಾರೆಂದೂ ಸಹ ವರದಿಯಾಗಿದೆ.

ತಿರುವಾಂಕೂರು ಭಾಗ ತಮಿಳು ನಾಡಿಗೆ ?

ಕೇರಳ ಪ್ರಾಂತ್ಯ ರಚನೆಯಾದಲ್ಲಿ, ತಿರುವಾಂಕೂರಿನ ತಮಿಳು ಪ್ರದೇಶವನ್ನು ತಮಿಳುನಾಡಿಗೆ ಸೇರಿಸಿಕೊಳ್ಳಲು ಪ್ರಯತ್ನ ನಡೆಸುವುದಾಗಿ ಅಧ್ಯಕ್ಷರಾದ ಶ್ರೀ ಕಾಮರಾಜ ನಾಡಾರವರು ಅಲ್ಲಿನ ಕಾಂಗ್ರೆಸ್ಸಿಗೆ ಕೊಟ್ಟ ಭರವಸೆಯನ್ನು ಕೇರಳ ಪ್ರಾಂತ್ಯ ಕಾಂಗ್ರೆಸ್ ಸಮಿತಿಯವರು ಪ್ರತಿಭಟಿಸಿದ್ದಾರೆ.

ಹಿಂದಿಯಲ್ಲಿ ತಂತಿ

ಬರುವ ೧ನೇ ತಾ|| ನಿಂದ ಹಿಂದಿ ಮತ್ತು ದೇವನಾಗರಿ ಲಿಪಿಗಳಲ್ಲಿ ತಂತಿಯನ್ನು ಸಾರ್ವಜನಿಕರು ಅಗ್ರಾದಿಂದ ಅಲಹಾಬಾದಿಗೂ, ಪಾಟ್ನಾದಿಂದ ಗಯಾಕ್ಕೂ, ನಾಗಪುರದಿಂದ ಜಬ್ಬಲಪುರಕ್ಕೂ, ಅಲಹಾಬಾದಿನಿಂದ ಕಾಶಿಗೂ, ಲಕ್ನೋದಿಂದ ಕಾನ್ಪುರಕ್ಕೂ ಕಳುಹಿಸಬಹುದೆಂದು ಅಂಚೆ ಇಲಾಖೆಯವರು ತಿಳಿಸಿರುತ್ತಾರೆ.

ಸಮತವಾದಿ ಸಮ್ಮೇಳನ

ಕರ್ನಾಟಕ ಪ್ರಾಂತ್ಯ ಸಮತಾವಾದಿ ಪಕ್ಷದ ೩ನೇ ವಾರ್ಷಿಕ ಅಧಿವೇಶನವು ಶಿವಮೊಗ್ಗದಲ್ಲಿ ಇದೇ ೨೮ ಮತ್ತು ೨೯ನೇ ತಾ|| ನಡೆಯಲು ಏರ್ಪಾಡಾಗಿ ನಿರ್ಧಾರವಾಗಿದೆ ಶ್ರೀ ಅಶೋಕ ಮೆಹ್ತಾರವರು ಅಧ್ಯಕ್ಷತೆ ವಹಿಸುವರು

ಟೆಂಡರ್ ನೋಟೀಸು

—:o:—

ಮೈಸೂರು ಅರಮನೆ ಗಜಶಾಲಾ ಇಲಾಖೆಗೆ ೧೯೪೯-೫೦ನೇ ಸಾಲಿನಲ್ಲಿ ಸೌದೆ ಸಪ್ಲೈ ಮಾಡಲು ಅಪೇಕ್ಷೆಯುಳ್ಳವರು ಸೀಲ್ಡ್ ಟೆಂಡರ್‌ಗಳನ್ನು ತಾರೀಖು ೨೫-೫-೪೯ನೇ ಮಧ್ಯಾಹ್ನ ೧೨ ಘಂಟೆಯೊಳಗಾಗಿ ಗಜಶಾಲ ಇನ್‌ಚಾರ್ಜ್ ಆಫೀಸರವರಿಗೆ ಕೊಡತಕ್ಕದ್ದು ಹೆಚ್ಚಿನ ವಿಷಯಗಳನ್ನು ಗಜಶಾಲೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

(ಸಹಿ) ಡಿ.ಎನ್. ನೀಲಕಂಠ ರಾವ್,
ಆಫೀಸರ್ ಇನ್ ಚಾರ್ಜ್
ಅರಮನೆ ಗಜಶಾಲಾ, ಮೈಸೂರು.

ಹಾಂಕಾಂಗ್ ಮೇಲೆ ಧಾಳಿ ಯೇ ?

ಚೀಣಾ ಕಮ್ಯೂನಿಸ್ಟರು ಶಾಂಘೈ ನಗರವನ್ನು ಆಕ್ರಮಿಸಿದನಂತರ ಹಾಂಕಾಂಗ್ ಮೇಲೆ ಧಾಳಿ ಮಾಡಬಹುದೆಂದೂ, ಅದಕ್ಕಾಗಿ ಬ್ರಿಟನ್ ಮತ್ತು ಅಮೆರಿಕದ ಸೈನ್ಯಗಳು ಸಜ್ಜಿತವಾಗುತ್ತಿವೆಯೆಂದೂ ಹೇಳಲಾಗಿದೆ.

ಭಾರತದ ಮೇಲೆ ರಷ್ಯ ಬೀಳುವುದೇ ?

ಅಫ್ಘಾನಿಸ್ತಾನದ ಮೂಲಕ ಭಾರತದ ಮೇಲೆ ಧಾಳಿ ನಡೆಸಲು ರಷ್ಯವು ಒಳಸಂಚು ನಡೆಸುತ್ತಿದೆಯೆಂದು ಲಂಡನ್ನಿನ ಪತ್ರಿಕೆಯೊಂದು ಸುದ್ದಿಯನ್ನು ಪ್ರಕಟಿಸಿದೆ

||ಶ್ರೀ||

ಜಗದಾಂಬಾ ಶಿಶುವಿಹಾ

ದಿವಾನ್ಸ್ ರೋಡ್, ಮೈಸೂರು.

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ೧೨-೫-೪೯ನೇ ಗುರುವಾರದಿಂದ ತೆರೆ[illegible] ಲಾಗಿದೆ ಕಿಂಡ್ರಗಾರ್ಟನ್ ಮತ್ತು ಆಧ[illegible]ನಿಕ ಶಿಶುವಿದ್ಯಾಭ್ಯಾಸಕ್ಕೆ ಈ ಶಾಲೆಯು ಆದರ್ಶಪ್ರಾಯವಾಗಿದೆ ಎಂದು ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಂದಲೂ [illegible]ರು ವಿದ್ಯಾಭ್ಯಾಸ ಪ್ರವೀಣರಿಂದಲೂ ಪುರಸ್ಕರಿಸಲ್ಪಟ್ಟಿದೆ ಇಲ್ಲಿ ವ್ಯಾಸಂಗ ಮಾಡು[illegible] ೭ ವರ್ಷದ ವಯಸ್ಸಿನ ಮಕ್ಕಳನ್ನು ನೇ[illegible]ವಾಗಿ ಮಿಡ್ಲ್ ಫಸ್ಟ್ ಇಯರ್ ಪರೀಕ್ಷೆ[illegible] ಖಾಸಗಿಯಾಗಿ ತರಪೇತು ಮಾಡಲಾಗು[illegible]ವುದು. ಈ ರೀತಿ ಪ್ರತಿ ವರ್ಷವೂ ಅನೇ[illegible] ಮಕ್ಕಳು ಉತ್ತೀರ್ಣವಾಗಿ ಬೇರೆ ಶಾಲೆ[illegible]ಳಿಗೆ ಸೇರುತ್ತಲಿದ್ದಾರೆ ಆದ್ದರಿಂದ ಶಿ[illegible] ವಿದ್ಯಾಭ್ಯಾಸದಲ್ಲಿ ಆಸಕ್ತರಾಗಿರುವ ಮಾ[illegible]ತಾಪಿತೃಗಳು ತಮ್ಮ ಮಕ್ಕಳನ್ನು ಕಾ[illegible] ವಿಳಂಬ ಮಾಡದೆ ಈ ಶಾಲೆಗೆ ಸೇರಿಸಿ ಪ್ರ[illegible]ಯೋಜನವನ್ನು ಪಡೆಯುವುದರ ಮೂ[illegible]ಕ ಶಾಲೆಯ ವ್ಯವಸ್ಥಾಪಕರ ಸದುದ್ದೇ[illegible] ಪ್ರೋತ್ಸಾಹವನ್ನು ನೀಡುವರೆಂದು ಕೋ[illegible]ಲಾಗಿದೆ. ವಿಷಯಗಳಿಗೆ ಮೊಖ್ತಾ ವಿಚಾ[illegible]ರ ಮಾಡಬಹುದು.

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ

ಅನ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ

ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ, : ಮೈಸೂರು

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು

15-5-49 ರಿಂದ 2 ದಿನಗಳು ಮಾತ್ರ

20ನೇ ಸೆಂಚುರಿಯವರ ಆದರ್ಶ ಚಿತ್ರ

ಫಾಕ್ಸಸ್ ಆಫ್ ಹ್ಯಾರೊ

(The Foxes of Harrow)

—:ಪಾತ್ರ:—

ರೆಕ್ಸ್ ಹ್ಯಾರಿಸನ್ ಮತ್ತು ಮೌರೀನ್ ಓ ಹಾರ

ರಾಜಕಮಲ್, ಮೈಸೂರು

13-5-49 ರಿಂದ **2**ನೇ ವಾರ ಪ್ರಾರಂಭ

ಪ್ರತಿ ದಿನ ೩ ಆಟಗಳು

ಸ್ವಾತಂತ್ರ್ಯ ಯುಗದ ಪ್ರಥಮ ಚಿತ್ರ

ಫಿಲಿಂಸ್ತಾನ್‌ರವರ

ಷಹೀದ್

ಭರತ ಖಂಡದ 40 ಕೋಟಿ ಪ್ರಜೆಗಳ ಸ್ವಾತಂತ್ರ್ಯ ಸಾಧನೆಯ ಆಂದೋಲನದ ಇತಿಹಾಸವನ್ನು ವರ್ಣಿಸುವ ದೃಶ್ಯ

ಪಾತ್ರ:- ಕಾಮಿನಿ ಕೌಶಲ್ಯ, ದಿಲೀಪ್ ಕುಮಾರ್, ಚಂದ್ರ ಮೋಹನ್, ವಿ.ಎಚ್. ದೇಸಾಯಿ

Edited, printed, and published by A.R Nagarajan at the Sadhvi Press, D. Subbiah Road, Mysore

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೧೭-೫-೪೮ [ಸಂಚಿಕೆ ೨೩೪

ಈಗಿನ ಮಂತ್ರಿಮಂಡಲ -ರದ್ದಾಗುವುದಿಲ್ಲ-

ರಾಜಾಜಿಯವರ ಆಗಮನ

ಸ್ವ. ಸು. ಫೋ.] ಬೆಂಗಳೂರು ೧೬

ಭಾರತದ ಗೌರ್ನರ್ ಜನರಲ್ಲರಾದ ಶ್ರೀ ರಾಜಗೋಪಾಲಾಚಾರಿಯವರು ಈ ದಿನ ೧೧-೩೦ ಗಂಟೆಗೆ ಮದರಾಸಿನಿಂದ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು. ಹಿಂದೂಸ್ಥಾನ ವಿಮಾನ ನಿಲ್ದಾಣದಲ್ಲಿ ಅವರನ್ನು ದಿವಾನರು, ಮುಖ್ಯ ಮಂತ್ರಿ, ಇತರ ಸಚಿವರುಗಳು, ಉನ್ನತಾಧಿಕಾರಿಗಳು, ಮತ್ತು ಖಾಸಗೀ ಮಹನೀಯರುಗಳು ಸ್ವಾಗತಿಸಿದರು. ಆರ್. ಐ. ಎ. ಎಫ್.ನವರಿಂದ ಗಾರ್ಡ್ ಆಫ್ ಆನರ್ ಸ್ವೀಕರಿಸಿ, ರಾಜಾಜಿಯವರು ರೆಸಿಡೆನ್ಸಿಗೆ ದಿವಾನರೊಡನೆ ತೆರಳಿದರು. ದಾರಿ ಉದ್ದಕ್ಕೂ ಸಾವಿರಾರು ಜನರು ನಿಂತು ಅವರ ದರ್ಶನವನ್ನು ಪಡೆದರು. ಶ್ರೀ ರಾಜಾಜಿಯವರು ೩ ದಿನಗಳು ಇಲ್ಲಿ ವಿಶ್ರಾಂತಿಗಾಗಿ ಇರುವರು.

ಇದೇ ೧೮ನೇ ತಾ|| ಶ್ರೀಮನ್ಮಹಾರಾಜರವರು ಇಲ್ಲಿ ಗೌರ್ನರ್ ಜನರಲ್ಲರನ್ನು ಭೇಟಿ ಮಾಡುವರು.

ಭಾರತ ಸರ್ಕಾರದ ಸಂಸ್ಥಾನ ಶಾಖೆಯ ಕಾರ್ಯದರ್ಶಿಯಾದ ಶ್ರೀ ವಿ. ಪಿ. ಮೇನನ್‌ರವರು ಇದೇ ೧೮ನೇ ತಾ|| ಇಲ್ಲಿಗೆ ಆಗಮಿಸುವರು.

ತುಮಕೂರು, ಹಾಸನಗಳಲ್ಲಿ ಹೊಸ ಖನಿಜ

ವ್ಯಾಪಾರದ ದೃಷ್ಟಿಯಿಂದ ಅಮೂಲ್ಯವಾದಂತಹ ಹೊಸ ಖನಿಜವು ತುಮಕೂರ ಮತ್ತು ಹಾಸನ ಜಿಲ್ಲೆಗಳಲ್ಲಿ ದೊರೆತಿದೆ. ಮನೆ ಕಟ್ಟುವುದು, ವಿಮಾನ ಯಾನ, ಮತ್ತು ರಿಫ್ರಿಜರೇಟರ್ ಇವುಗಳಿಗೆ ಅತಿ ಮುಖ್ಯವಾಗಿ ಈ ವಸ್ತು ಬೇಕಾಗುವುದಾಗಿದೆ. ಈ ಖನಿಜವು ಬೆಂಕಿಗಾಗಲಿ, ಕಾವಿಗಾಗಲಿ ಮತ್ತು ಶಬ್ದಕ್ಕಾಗಲಿ ಕೆಂದುವುದಿಲ್ಲ. ಮತ್ತು ಬಹು ಹಗುರವಾದುದಾಗಿರುತ್ತದೆ.

ಗೌರ್ನರ್ ಜನರಲ್ ಪದವಿ ಮೇಲೆ ರಾಜಾಜಿಯ ವಿನೋದ

ಮೊನ್ನೆ ತಿರುವಣ್ಣಾಮಲೆಯ ಪಾತಾಳಲಿಂಗ ದೇವಾಲಯದ ಆರಂಭೋತ್ಸವವನ್ನು ನೆರವೇರಿಸುವಾಗ ರಾಜಾಜಿಯವರು ಈ ಕೆಳಗೆ ಕಂಡ ವಿನೋದದ ಮಾತುಗಳನ್ನು ಹೇಳಿದರು:-

"ನನ್ನ ವಿಚಾರವಾಗಿ ನೀವು ಹೇಳಿರುವ ಮಾತುಗಳಿಗೆ ವಂದನೆ. ಗೌರ್ನರ್ ಜನರಲ್ ಎಂದು ನನ್ನನ್ನು ಸಂಬೋಧಿಸಿದ್ದೀರಿ. ಗೋಪುರದ್ವಾರವನ್ನು ಪ್ರವೇಶಿಸುವಾಗ ನಾವುಗಳು ಪಾದರಕ್ಷೆಗಳನ್ನು ಹೊರಗಡೆಯೇ ಬಿಡುತ್ತೇವೆ. ಹಾಗೆಯೇ ನಾನೂ ಈ ಪವಿತ್ರ ಸ್ಥಳವನ್ನು ಪ್ರವೇಶಿಸುವಾಗ ನನ್ನ ಅಧಿಕಾರಸ್ಥಾನವನ್ನು ಗೋಪುರದ್ವಾರದ ಬಳಿಯೇ ಬಿಟ್ಟು ಬಂದಿದ್ದೇನೆ. ನಾವೆಲ್ಲರೂ ಇಲ್ಲಿ ಪೂಜಿಸುತ್ತೇವೆ. ಆತನು ಒಡೆಯನಾಗಿರುವ ಆ ಮಹಾಸಾಮ್ರಾಜ್ಯದ ಅತ್ಯಂತ ದೀನ ಪ್ರಜೆಯು ನಾನಾಗಿರುತ್ತೇನೆ."

ವಿದ್ಯುಚ್ಛಕ್ತಿಗೆ ಸಿಕ್ಕಿ ಬಾಲಕ ಮರಣ

ಶ್ರೀರಂಗಪಟ್ಟಣ ೧೬

ಕಳೆದ ಭಾನುವಾರ ಕೆಂಪರಾಮಪ್ಪ ಎಂಬ ಆರು ವರ್ಷದ ಬಾಲಕನು ವಿದ್ಯುಚ್ಛಕ್ತಿಗೆ ಸಿಕ್ಕಿ ಮರಣ ಹೊಂದಿದನೆಂದು ತಿಳಿದು ಬಂದಿದೆ. ಪೋಲೀಸರು ತನಿಖೆ ಕ್ರಮ ನಡೆಸಿದ್ದಾರೆ.

ಶ್ರೀ ಚನ್ನಯ್ಯನವರ ವಿದೇಶ ಪ್ರವಾಸ

ಮೈಸೂರು ೧೬

ಮೈಸೂರು ಕಾಂಗ್ರೆಸ್ ಮುಖಂಡರಾದ ಶ್ರೀ ಎಸ್. ಚನ್ನಯ್ಯನವರು ಬರುವ ತಿಂಗಳು ೧೦ ನೇ ತಾರೀಖು ಇಲ್ಲಿಂದ ಬೊಂಬಾಯಿಗೆ ತೆರಳಿ, ಅಲ್ಲಿಂದ ಯೂರೋಪು ಮತ್ತು ಅಮೇರಿಕ ಪ್ರವಾಸ ಕೈಗೊಳ್ಳುವರು. ಮೊದಲು ಜಿನೀವಾ ನಗರಕ್ಕೆ ಹೋಗಲಿರುವರು. ಇವರೊಡನೆ ಡಾ|| ವಿ. ಆರ್. ನಾಯುಡುರವರು ಹೋಗಲಿರುವರು.

ಪ್ರಭುಗಳೊಡನೆ ಭೇಟಿ

ಶ್ರೀಮನ್ ಮಹಾರಾಜರು ಈ ಪ್ರಾತಃಕಾಲ ೧೧-೧೫ ಗಂಟೆಗೆ ಬೆಂಗಳೂರಿನ ಮಾಜಿ ಪೌರಸಭಾ ಸದಸ್ಯರಾದ ಡಿ. ವೆಂಕಟರಮಣಪ್ಪ ಮತ್ತು ಸಂತೇಪೇಟೆಯ ಲಿಲಿ ಇಂಡಸ್ಟ್ರೀಸಿನ ಮಾಲೀಕರಾದ ಪಿ. ಪುಟ್ಟಯ್ಯನವರುಗಳಿಗೆ ಭೇಟಿ ದಯಪಾಲಿಸಿದ್ದರು.

ಸೈನ್ಯದಿಂದ ಪರಾರಿಯಾದ ಸಿಪಾಯಿಯ ಪತ್ತೆ

ಮೈಸೂರು ಪದಾತಿ ದಳದ ೩ ನೇ ಬ್ಯಾಟಲಿಯನ್ನಿಗೆ ಸೇರಿದ ನಂಜಪ್ಪ ಎಂಬ ಸಿಪಾಯಿಯು ಸೈನ್ಯ ಬಿಟ್ಟು ಪರಾರಿಯಾಗಿದ್ದವನನ್ನು ದಸ್ತಗಿರಿ ಮಾಡಿ ನಗರ ನ್ಯಾಯಾಧೀಶರ ಮುಂದೆ ಈ ದಿನ ಹಾಜರ್ಪಡಿಸಲಾಗಿತ್ತು. ಅವನನ್ನು ಸೈನ್ಯದ ಜೈಲಿಗೆ ರಿಮ್ಯಾಂಡ್ ಮಾಡಲಾಯಿತು.

ಸಂಗೀತ ಕಛೇರಿ

ಕೃಷ್ಣರಾಜನಗರ ನಾಲಾಬೀದಿಯಲ್ಲಿರುವ ತಿಪ್ಪಯ್ಯನವರ ಶ್ರೀರಾಮಮಂದಿರದಲ್ಲಿ ನಾಳೆ ಸಂಜೆ ೭-೩೦ ಗಂಟೆಗೆ ಸಂಗೀತ ವಿದ್ವಾನ್ ಟಿ. ಪುಟ್ಟಸ್ವಾಮಯ್ಯನವರ ಸಂಗೀತವು ನಡೆಯುವುದು.

ಬಹಿರಂಗ ಸಭೆ

ನಗರದ ರೇಷ್ಮೆಕಾಡು ಹೋಟೆಲ್ದಾರರ ಸಂಘದ ಸಭೆಯು ನಾಳಿದ್ದು ಬುಧವಾರ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀ ಅಂಬಳೆ ಸುಬ್ರಹ್ಮಣ್ಯಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಕಮ್ಯೂನಿಸ್ಟರ ಉಪವಾಸ ಮುಕ್ತಾಯ

ಬೊಂಬಾಯಿ ಪ್ರಾಂತ್ಯದ ನಾನಾ ಜೈಲುಗಳಲ್ಲಿರುವ ೨೧೬ ಜನ ಕಮ್ಯೂನಿಸ್ಟ್ ಖೈದಿಗಳ ಪೈಕಿ ಈಗ ೫೦ ಜನರು ಉಪವಾಸ ಮುಕ್ತಾಯವನ್ನು ನಿಲ್ಲಿಸಿರುತ್ತಾರೆ.

ಮಂತ್ರಿಮಂಡಲದ ಪುನರ್ರಚನೆ ಇಲ್ಲ

ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ತೀರ್ಮಾನ

ಸ್ವಂ. ಸು. ಫೋ.] ಬೆಂಗಳೂರು ೧೬

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಜಂಟಿ ಸಭೆಯಲ್ಲಿ ನಾಯಕರೊಬ್ಬರನ್ನು ಚುನಾಯಿಸಿ, ಅವರು ಮಂತ್ರಿಮಂಡಲವನ್ನು ರಚಿಸಬೇಕೆಂಬ ವಿಷಯವು ನಿನ್ನೆ ನಡೆದ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಭೆಯಲ್ಲಿ ಪರಿಶೀಲನೆಗೆ ಬಂದು ಈಗಿನ ಮಂತ್ರಿಮಂಡಲವು ಮಹಾರಾಜರಿಗೂ ಮತ್ತು ಕಾಂಗ್ರೆಸ್ ಕಾರ್ಯಕಾರೀ ಮಂಡಲಿಗೂ ಆದ ಒಪ್ಪಂದಕ್ಕೆ ಅನುಗುಣವಾಗಿ, ವರ್ಕಿಂಗ್ ಕಮಿಟಿಯಿಂದ ನೇಮಕನಾಗಿರುವುದರಿಂದಲೂ ಮತ್ತು ನೂತನ ರಾಜ್ಯಾಂಗವು ನಿರ್ಮಾಣವಾಗದಿರುವುದರಿಂದಲೂ, ಈಗಿನ ಮಂತ್ರಿಮಂಡಲವನ್ನು ಪುನರ್ರಚಿಸುವುದು ಸಾಧುವಲ್ಲವೆಂದು ತೀರ್ಮಾನಿಸಲಾಯಿತೆಂದೂ, ಮತ್ತು ಸಧ್ಯದಲ್ಲಿಯೇ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಜಂಟಿ ಸಭೆಯನ್ನು ನಡೆಸಿ, ಈ ತೀರ್ಮಾನವನ್ನು ಅದರ ಮುಂದೆ ಇಡಬೇಕೆಂದೂ ನಿರ್ಧರಿಸಲಾಯಿತೆಂದು ತಿಳಿದುಬಂದಿದೆ.

ಕರ್ನಾಟಕ ಪ್ರಾಂತ್ಯ ರಚನೆ

ಬೇರೂರಿನ ಎ. ಎಂ. ಸಿ. ಸಿ. ಮತ್ತು ರಾಜ್ಯಾಂಗ ಸಭೆಗಳಲ್ಲಿ ಕರ್ನಾಟಕ ಪ್ರಾಂತ್ಯದ ಬಗ್ಗೆ ಮಾಡಿರುವ ನಿರ್ಣಯಕ್ಕೆ ವಿರುದ್ಧವಾಗಿ ಯಾರೂ ಅಭಿಪ್ರಾಯವನ್ನು ವ್ಯಕ್ತಪಡಿಸಬಾರದೆಂದೂ ಸಭೆಯು ನಿರ್ಣಯ ಮಾಡಿತು.

ಎ. ಎಂ. ಸಿ. ಸಿ. ಸಭೆ

ಮುಂದಿನ ತಿಂಗಳು ೧೫ನೇ ತಾ|| ತುಮಕೂರಿನಲ್ಲಿ ಎ. ಎಂ. ಸಿ. ಸಿ. ಸಭೆಯನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

ಮೈಸೂರು ಕಾಂಗ್ರೆಸ್ ಪ್ರತ್ಯೇಕವಾಗಬೇಕು

ಮೈಸೂರು ಕಾಂಗ್ರೆಸ್ಸು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನೊಳಗಿರದೆ, ಪ್ರತ್ಯೇಕ ಪ್ರಾಂತೀಯ ಸಂಸ್ಥೆಯಾಗಿರಬೇಕೆಂದು ಅಖಿಲ ಭಾರತ ಕಾಂಗ್ರೆಸ್ಸನ್ನು ಒತ್ತಾಯಪಡಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು.

ಅ|| ಭಾ|| ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನ

ಸ್ವಂ. ಸು. ಫೋ.] ಬೆಂಗಳೂರು ೧೬

ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರ ಸಮ್ಮೇಳನವು ಈ ದಿನ ಮಧ್ಯಾಹ್ನ ೪ ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀ ಸಿ. ಆರ್. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಭಾರತದ ಅನೇಕ ಭಾಗಗಳಿಂದ ಸುಮಾರು ೪೦ ಜನ ಸಂಪಾದಕರುಗಳು ದಯಮಾಡಿಸಿದ್ದರು. ಗೌರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ವೃತ್ತ ಪತ್ರಿಕೆಯು ಒಂದು ದೊಡ್ಡ ವಿಶ್ವವಿದ್ಯಾಲಯವೆಂದೂ, ಈಗ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಪತ್ರಿಕೆಗಳ ಜವಾಬ್ದಾರಿಯು ಹೆಚ್ಚಿದೆಯೆಂದೂ, ಅದು ಘನವಾದ ಉದ್ಯಮವೆಂದೂ ಶ್ರೀ ರಾಜಾಜಿಯವರು ತಿಳಿಸಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ. ವಿ. ಗುಂಡಪ್ಪನವರು ಪ್ರಾರಂಭದಲ್ಲಿ ಎಲ್ಲರಿಗೂ ಸ್ವಾಗತವಿತ್ತು ಭಾಷಣ ಮಾಡಿದರು.

ಗಡಿನಾಡಿನ ಗೌರ್ನರ್ ಆಗಿ ಸರ್ ಆರ್ಕಿನ್‌ಲೆಕ್?

ಹಿಂದೆ ಭಾರತದ ಪ್ರಧಾನ ಸೇನಾಪತಿಯಾಗಿದ್ದ ಸರ್ ಕ್ಲಾಡ್ ಆರ್ಕಿನ್‌ಲೆಕ್ಕರನ್ನು ಗಡಿನಾಡಿನ ಗೌರ್ನರ್ ಆಗಿ ನೇಮಿಸಲು ಪಾಕಿಸ್ಥಾನ ಸರಕಾರವು ಪರ್ಯಾಲೋಚಿಸುತ್ತಿದೆಯೆಂದು ಹೇಳಲಾಗಿದೆ. ಆದರೆ ಅವರು ಒಪ್ಪಿರುವರೋ ಇಲ್ಲವೋ ಎಂಬುದಿನ್ನೂ ವ್ಯಕ್ತವಾಗಿಲ್ಲ.

ಮುಸ್ಲಿಮರಿಗೆ ಮೀಸಲು ಸ್ಥಾನ ಬೇಡ

ಭಾರತದ ಮುಸಲ್ಮಾನರಿಗೆ ಸ್ಥಾನಗಳನ್ನು ಮೀಸಲಾಗಿಡಬೇಕಾಗಿಲ್ಲವೆಂದು ಅ|| ಭಾ|| ಷಿಯಾ ಸಮ್ಮೇಳನದ ಅಧ್ಯಕ್ಷರಾದ ಸರ್ ಸುಲ್ತಾನ್ ಅಹಮದ್‌ರವರು ಭಾರತದ ಪ್ರಧಾನಿ ಮತ್ತು ಉಪಪ್ರಧಾನಿಗಳಿಗೆ ತಂತಿ ಕಳುಹಿಸಿದ್ದಾರೆ.

ಟಿ. ಸುಬ್ರಹ್ಮಣ್ಯಂ ಮತ್ತು ನಿಜಲಿಂಗಪ್ಪನವರುಗಳ ಮೇಲೆ ಶಿಸ್ತಿನ ಕ್ರಮ

ಮೈಸೂರು ರಾಜ್ಯಾಂಗ ಸಭೆಯ ಮೂಲೋದ್ದೇಶ ನಿರ್ಣಯಕ್ಕೆ ವಿರುದ್ಧವಾಗಿ ಶ್ರೀಗಳಾದ ಟಿ. ಸುಬ್ರಹ್ಮಣ್ಯಂ ಮತ್ತು ಎಸ್. ನಿಜಲಿಂಗಪ್ಪನವರುಗಳು ವರ್ತಿಸುತ್ತಿರುವುದರಿಂದ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ವಿಚಾರವನ್ನು ಪರಿಶೀಲಿಸಲು ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯನ್ನು ಕೂಡಲೇ ಸೇರಿಸಬೇಕೆಂದು ಶ್ರೀಗಳಾದ ಭೀಮಪ್ಪನಾಯಕ್, ಎಂ. ಗೋವಿಂದರೆಡ್ಡಿ ಮತ್ತು ಹೆಚ್. ಎಂ. ಚನ್ನಬಸಪ್ಪನವರು ಪಕ್ಷದ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುತ್ತಾರೆ.

ದಿವಾನರ ಹುದ್ದೆ ರದ್ದು

ದಿವಾನರ ಪದವಿಯನ್ನು ಕೂಡಲೇ ರದ್ದುಮಾಡಬೇಕೆಂದು ತೀರ್ಮಾನಿಸಲಾಯಿತೆಂದು ತಿಳಿದುಬಂದಿದೆ. ದಿವಾನ್ ಸರ್ ರಾಮಸ್ವಾಮಿ ಮೊದಲಿಯಾರ್‌ರವರು ಮುಂದಿನ ತಿಂಗಳಿನಿಂದ ಆಗಸ್ಟ್ ೭ನೇ ತಾ|| ವರೆಗೆ ರಜಾ ಪಡೆದು, ಅನಂತರ ನಿವೃತ್ತರಾಗುವರೆಂದು ಗೊತ್ತಾಗಿದೆ.

ಮತ್ತೊಬ್ಬ ಭಾರತೀಯನಿಗೆ ಗಲ್ಲು

ಮಲಯದ ಜೊಹೋರ್ ಸಂಸ್ಥಾನದ ಶ್ರೀ ಸಾಂಬಶಿವಮ್ ಎಂಬ ಮತ್ತೊಬ್ಬ ಭಾರತೀಯನನ್ನು ಈ ದಿನ ಗಲ್ಲಿಗೆ ಏರಿಸಲಾಗುವುದು. ಈ ಸಂಬಂಧವಾಗಿ ಬ್ರಿಟಿಷ್ ಸರಕಾರವು ತನ್ನ ಅಧಿಕಾರವೇನೂ ಜೊಹೋರ್ ಸಂಸ್ಥಾನದ ಮೇಲೆ ನಡೆಯ ಪ್ರವಿಲ್ಲವೆಂದು ಭಾರತ ಸರಕಾರಕ್ಕೆ ತಿಳಿಸಿದೆ

ಮುಚ್ಚು ಅಕ್ಕಿಯ ಬೆಲೆ

ಮುಚ್ಚು ಅಕ್ಕಿಯನ್ನು ಇನ್ನು ಮುಂದೆ ... ಮಾರಲಾಗುವುದು - ಸ್ವದೇಶಿ ... ತರಿಸಿದ ಹಿಟ್ಟು ರೂ ... ಸೇರು ... ಸಿದ್ದ ಅಕ್ಕಿ ರೂ ... ಸೇರು ... ರೂ ... ಮಾರಬೇಕೆಂದು ನಿರ್ಧರಿಸಲಾಗಿತ್ತು

ಇನ್ನೆರಡು ವರ್ಷಗಳಲ್ಲಿ ರಷ್ಯವು ಯುದ್ಧಕ್ಕೆ ಸಿದ್ಧ

... ರಷ್ಯವು ಯಾವ ... ಯುದ್ಧಕ್ಕಾದರೂ ಸಿದ್ಧವಾಗಿರುವುದೆಂದು ... ಪ್ರವೀಣರು ಅಧ್ಯ... ಎಚ್ಚರಿಕೆ ಕೊಟ್ಟಿರು ... ಬಲ್ಲಿಯವರಿಗೆ ರಷ್ಯ ಯುದ್ಧದ ಗೋಜಿಗೆ ಹೋಗುವುದಿಲ್ಲವೆಂದೂ ಅವರು ... ಪಟ್ಟಿರುತ್ತಾರೆ

ಬ್ರಿಟನ್ನಿಗೆ ೧೦ ಸಾವಿರ ಜರ್ಮನ್ ಮಹಿಳಾ ಕಾರ್ಮಿಕರು

ಬ್ರಿಟನ್ನಿನ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸ ಮಾಡಲು ೧೦ ಸಾವಿರ ಜರ್ಮನಿಯ ಮಹಿಳೆಯರನ್ನು ಅಲ್ಲಿಂದ ಕರೆಕಲು ಪ್ರಯತ್ನ ನಡೆಸುತ್ತಿದೆಯೆಂದೂ, ಅವರುಗಳು ... ವರ್ಷ ಕೆಲಸ ಮಾಡಿದನಂತರ ಬ್ರಿಟಿಷ್ ಪ್ರಜೆಗಳಾಗುವರೆಂದು ಪ್ರಚಾರ ಮಾಡಲಾಗುತ್ತಿದೆಯೆಂದೂ ಹೇಳಲಾಗಿದೆ

ಜೆಕೋಸ್ಲವೇಕಿಯದಲ್ಲಿ ಯುರೇನಿಯಂ

ಸ್ಲವೇಕಿಯಾ ಮತ್ತು ಮರಾವಿಯಾಗಳಲ್ಲಿ ಯುರೇನಿಯಂ ... ದೊರೆತಿರುವುದಾಗಿಯೆಂದೂ ರಷ್ಯದ ಪತ್ರಿಕೆಯೊಂದು ವರದಿ ಮಾಡಿದೆ

ಉಗ್ರದ ಜನರಿಗಾಗಿ
ಗುರುದೇವ ಹಾಲ್
... ಬರಲಿರುವ ...
... ಭೇಟಿ ...
ಶಿವರಾಂಪೇಟೆ, ಮೈಸೂರು

ಗಾಯತ್ರೀ ಟಾಕೀಸ್

ಪ್ರತಿ ದಿನ ಮೂರು ಪ್ರದರ್ಶನಗಳು
16-5-49 ರಿಂದ 3 ದಿನಗಳು ಮಾತ್ರ
20ನೇ ಸಂಚುರಿಯವರ ಅದ್ಭುತ ಚಿತ್ರ

ಫಾಕ್ಸಸ್ ಆಫ್ ಹ್ಯಾರೊ

The Foxes of Harrow

ಪಾತ್ರ -
ರೆಕ್ಸ್ ಹ್ಯಾರಿಸನ್ ಮತ್ತು
ಮಾರೀನ್ ಓ ಹಾರ

Edited printed, and published by A R Naga... ... the Sadhvi Press, D... Road Mysore

ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನ

ಮೈಸೂರು ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನವು ಕಡೂರಿನಲ್ಲಿ ಈ ತಿಂಗಳು ...ನೇ ತಾ॥ ನಡೆಯುವುದು.

ಅಶೋಕ ಮೆಹತಾರವರ ಆಗಮನ

ಅಖಿಲ ಭಾರತ ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಅಶೋಕ ಮೆಹತಾರವರು ನಾಳೆ ದಿನ ... ಗಂಟೆಗೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸುವರು ಅವರು ಕೆಲವು ದಿನಗಳು ಕೃಷ್ಣರಾಜಸಾಗರದಲ್ಲಿ ವಿಶ್ರಾಂತಿ ಪಡೆದು ಅನಂತರ ಶಿವಮೊಗ್ಗಕ್ಕೆ ಪ್ರಯಾಣ ಬೆಳೆಸುವರು.

ಮೈಸೂರಿನವರಿಗೆ ಭಾರಿ ಹುದ್ದೆ

ತಿ.ಮ. ಕೂಡು ... ಕಾಲೇಜಿನ ಅಧ್ಯಾಪಕರಾಗಿದ್ದು ಅನಂತರ ಭಾರತದ ರಿಜರ್ವ್ ಬ್ಯಾಂಕಿನ ರಿಸರ್ಚ್ ಡೈರೆಕ್ಟರಾದ ಮೈಸೂರಿನ ಶ್ರೀ ಎಸ್ ಲಕ್ಷ್ಮೀನರಸಿಂಹರವರನ್ನು ವಾಷಿಂಗ್‌ಟನ್ನಿನಲ್ಲಿರುವ ಅಂತರ ರಾಷ್ಟ್ರೀಯ ಹಣಕಾಸಿನ ಸಂಸ್ಥೆಯ ಭಾರತದ ಪ್ರತಿನಿಧಿಯಾಗಿ ...೦೦ ರೂ ಸಂಬಳದ ಮೇಲೆ ಕೇಂದ್ರ ಸರ್ಕಾರದವರು ನೇಮಿಸಿದ್ದಾರೆ. ಅವರು ಇದೇ ... ನೇ ತಾ॥ ಅಮೆರಿಕಕ್ಕೆ ಪ್ರಯಾಣ ಬೆಳೆಸುವರು

ರಾಜರು ರಾಜಕೀಯಕ್ಕೆ ಇಳಿಯಬಹುದು

ಭಾರತದ ರಾಜರುಗಳು ಸ್ವತಂತ್ರ ಭಾರತದ ರಾಜಕೀಯದಲ್ಲಿ ಪ್ರವೇಶಿಸಬಹುದೆಂದೂ, ಯಾವುದಾದರೂ ಪಕ್ಷಕ್ಕೆ ಸೇರಿ, ಪ್ರಾಂತ ಮತ್ತು ಕೇಂದ್ರ ಶಾಸನ ಸಭೆಗಳ ಚುನಾವಣೆಯಲ್ಲಿ ಸ್ಪರ್ಧಿಸಬಹುದೆಂದೂ ತಿಳಿಸಲಾಗಿದೆ

ನೃತ್ಯ ಪ್ರದರ್ಶನ

ರಾಜಧಾನಿಯ ಶ್ರೀ ಕೃಷ್ಣ ಲಲಿತ ಕಲಾ ಮಂದಿರದ ಕಟ್ಟಡದ ಸಹಾಯಾರ್ಥವಾಗಿ ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಮದರಾಸಿನ ಕುಮಾರಿ ನಳಿನಿ ಮತ್ತು ಚಿತ್ರಲೇಖಾರವರ ನೃತ್ಯ ಪ್ರದರ್ಶನವು ನಡೆಯಿತು ಆರ್ಥಿಕ ಸಚಿವರಾದ ಶ್ರೀ ಕೆ. ಟಿ ಭಾಷ್ಯಂರವರು ಅಧ್ಯಕ್ಷತೆ ವಹಿಸಿದ್ದರು

ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರು ಸ್ವಾಗತ ಭಾಷಣ ಮಾಡಿದ ನಂತರ, ಮಂದಿರದ ಪರವಾಗಿ ... ಚಿನ್ನದ ಪಾರಿತೋಷಕವನ್ನು ಕುಮಾರಿ ನಳಿನಿ ಮತ್ತು ಚಿತ್ರಲೇಖಾರವರಿಗೆ ಅಧ್ಯಕ್ಷರು ಹಂಚಿ, ಇಂತಹ ಕಲೆಗಳು ದೇಶದಲ್ಲಿ ಅಭಿವೃದ್ಧಿಗೊಳ್ಳಬೇಕೆಂದೂ, ಜನರು ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದೂ ತಿಳಿಸಿದರು

ಕಾರ್ಯದರ್ಶಿನಿಯವರಾದ ಶ್ರೀಮತಿ ಜಾನಕಮ್ಮ ಕೃಷ್ಣಸ್ವಾಮಿಯವರು ವಂದನೆಯನ್ನು ಅರ್ಪಿಸಿ, ಮಂದಿರದ ಕಟ್ಟಡಕ್ಕಾಗಿ ಸರ್ಕಾರದವರೂ ಮತ್ತು ಮಹಾಜನರೂ ಸಹಾಯ ಮಾಡಬೇಕೆಂದು ಕೋರಿದರು.

ತಿರುನಕ್ಷತ್ರ ಮಹೋತ್ಸವ

ಮಂಡಿಮೊಹಲ್ಲಾ ಈದಿಗಾದಲ್ಲಿರುವ ಶ್ರೀ ಶ್ರೀನಿವಾಸ ಸ್ವಾಮಿ ದೇವಸ್ಥಾನದಲ್ಲಿ ತಿರುನಕ್ಷತ್ರ ಮಹೋತ್ಸವವು ಇಂದಿನಿಂದ ೧೮ ನೇ ತಾ॥ ವರೆವಿಗೆ ನಡೆಯುವುದು ಈ ದಿನ ಸಂಜೆ ಅಂಕುರಾರ್ಪಣ, ನಾಳೆ ಸಂಜೆ ಕಲ್ಯಾಣೋತ್ಸವ ಮತ್ತು ನಾಳಿದ್ದು ತಿರುನಕ್ಷತ್ರ ಮಹೋತ್ಸವಗಳು ಜರುಗುವುವು.

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೂತಿಕಾನಾಶಕ್ಕೆ [ಬಾಣಂತಿ ನಂಜಿಗೆ] ಉತ್ತಮ ಗುಣಕಾರಿ

ಕಣ್ಣು ಕೆಂಪಾಗಿ, ... ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರ.

ವಿಳಾಸ.—

ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

BANGALORE RACES 1949

ಮೇ 21, 25, 28. ಜೂನ್ 1, 4, 8, 11 18, 22. 25, 29
ಮತ್ತು ಜುಲೈ 2 ರಲ್ಲೂ

ಜಾಕ್‌ಪಾಟ್ ... ಟೋಟಲೈಜೇಟರ್

ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ. 2 ಸ್ವೀಪ್

ಪ್ರವೇಶ:
ಮೊದಲನೇ ತರಗತಿ.- ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ
ಎರಡನೇ ತರಗತಿ ಪುರುಷರು ಅಥವಾ ಸ್ತ್ರೀಯರು ರೂ 2 ,,
ಸೀಸನ್ ಟಿಕೆಟ್. ಪುರುಷರು ರೂ 60, ಸ್ತ್ರೀಯರು ರೂ 35



ಮಜಭೂತಾದ

ಕಬ್ಬಿಣದ ಪೆಟ್ಟಿಗೆಗಳು

(ಬೀರು, ಕ್ಯಾಷ್ ಬಾಕ್ಸ್ ಸುಲಭ ಬೆಲೆಗೆ ದೊರೆಯುತ್ತವೆ)
ರಿಪೇರಿ ಮತ್ತು ಪೇಂಟಿಂಗ್ ಮಾಡಲಾಗುತ್ತೆ.
ಬೇಕಾದವರು ಭೇಟಿ ಕೊಡಿ

ದಿ ಸಿಟಿ ಇಂಪ್ಲಿಮೆಂಟ್ಸ್ ವರ್ಕ್ಸ್,
2767, ಹಳ್ಳದ ಕೇರಿ, ಮೈಸೂರು.

ಡೈರೆಕ್ಟರುಗಳ ಚುನಾವಣೆ

ರಾಜಧಾನಿಯ ಜಯಚಾಮರಾಜೇಂದ್ರ ಸಹಕಾರ ಸಂಘದ ವಾರ್ಷಿಕ ಸಭೆಯು ನಿನ್ನೆ ಸಂಜೆ ಬನುಮಯ್ಯ ಹೈಸ್ಕೂಲಿನಲ್ಲಿ ನಡೆದು ಕೆಳಕಂಡವರು ಡೈರೆಕ್ಟರಾಗಿ ಚುನಾಯಿಸಲಾಯಿತು

ಶ್ರೀಗಳಾದ ಎಂ. ರಾಮಸ್ವಾಮಿ, ... ಕೃಷ್ಣಪ್ಪ, ಬಿ. ಎಲ್. ರಾಮಸ್ವಾಮಿ, ವಿ ವೆಂಕಟಸುಬ್ಬಯ್ಯ, ಕೆ ಎಲ್. ನಾರಾಯಣರಾವ್, ಆರ್ ಕೃಷ್ಣಮೂರ್ತಿ, ಹೆಚ್. ಎಸ್ ವೆಂಕಟನಾರಣಪ್ಪ, ಎಸ್. ನಾಗರಾಜಯ್ಯ, ಹೆಚ್ ಎಸ್ ಸಿಂಹಮೂರ್ತಿ, ಎಂ ಎಸ್ ಶಂಕರದಾಸ್, ಕೆ. ರಾಮಸ್ವಾಮಿ, ... ಎಸ್ ಎಸ್. ನಾರಾಯಣರಾವ್, ... ಸಿಂಗರಾವ್ ಮತ್ತು ಎಂ ... ಅಯ್ಯಂಗಾರ್.

ನಾಗಮಂಗಲದ ತಾ॥ ಸಿಂಗರಕೆರೆ ಹಿಂದಿನ ಜಮೀನನ್ನು ಯಾರೂ ಕೊಳ್ಳಕೂಡದು

ಪ್ರಸಿದ್ಧ ಪತ್ರಿಕೆ

ಇದರಿಂದ ಸಮಸ್ತ ಜನಗಳಿಗೂ ... ಡಿಸುವುದೇನೆಂದರೆ :—

ನಾಗಮಂಗಲದ ತಾ॥ ಸಿಂಗರಕೆರೆ ... ಭಾಗದ ಸರ್ವೆ ... ಮತ್ತು ... ಬರ್ ಜಮೀನುಗಳನ್ನು ಅದರ ಮಾಲೀಕರಾದ ... ವೆಂಕಟಾಚಾರ್ಯ ... ರು ನನಗೆ ಹಿಂದಿನ ಪೂರ್ವಾದಿ ... ರು ಸಾವಿರ ರೂ. ಗಳಿಗೆ ... ಮಾಡಿಕೊಡಲೊಪ್ಪಿ ... ರೂ ಗಳನ್ನು ... ಪಡೆದಿರುತ್ತಾರೆ. ಅವರು ...ನೇ ... ಕ್ಕೆ ಬರೆದುಕೊಟ್ಟಿರುವ ಭಾಷಾ ಕರಾರು ... ನಾನು ಆ ಲಾಗಾಯ್ತು ಎರಡು ತಿಂಗಳಿ... ಗಿ ಕ್ರಯ ಮಾಡಿಸಿಕೊಳ್ಳಲು ಸಿದ್ಧನಾಗಿ... ನೆ. ಈಚೆಗೆ ಸದರಿಯವರು ... ಮೀರಿ ಬೇರೆಯವರಿಗೆ ಕ್ರಯ ಮಾಡ... ದೂದಿನಲ್ಲಿ ಪ್ರಾಲೆಂದು ತಿಳಿಯುತ್ತದೆ. ... ವರು ಮಾಡಿದರಾಗಲೀ, ಇನ್ಯಾರಾದರೂ ... ಕ್ಕೆ ಪಡೆದರಾಗಲೀ ಅದು ಅಸಿದ್ಧವಾಗಿ... ದೂ, ಮುಂದೆ ನನಗಾಗುವ ಖರ್ಚು ... ಗೂ ಅವರೂ, ಸ್ವತ್ತುಗಳ ಸಮೇತ ... ರರಾಗಬೇಕಾಗುತ್ತೆಂದು ಈ ಮೂಲಕ ... ರುತ್ತೆ.

ನಾಗಮಂಗಲದ ಯಜಮಾನ್
ಶ್ರೀಕಂಠಾಚಾರ್ಯರ ಮಗ ...

ಟೆಂಡರ್ ನೋಟೀಸ್

—:o:—

ಮೈಸೂರು ಅರಮನೆ ಗಜಶಾಲಾ ಇಲಾಖೆಗೆ ೧೯೪... ೫೦ನೇ ಸಾಲಿನಲ್ಲಿ ಸಾಪ್ ... ಮಾಡಲು ಅಪೇಕ್ಷೆಯುಳ್ಳವರು ಸೀಲ್ಡ್ ಟೆಂಡರ್‌ಗಳನ್ನು ತಾರೀಖು ... ನೇ ... ಧ್ಯಾಹ್ನ ೧೨ ಘಂಟೆಯೊಳಗಾಗಿ ಗಜಶಾಲ ಇನ್‌ಚಾರ್ಜ್ ಆಫೀಸರವರಿಗೆ ಕೊಡತಕ್ಕದ್ದು ಹೆಚ್ಚಿನ ವಿಷಯಗಳನ್ನು ಗಜಶಾಲೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

(ಸಹಿ) ಬಿ. ಎಸ್. ನೀಲಕಂಠ ರಾವ್
ಆಫೀಸರ್ ಇನ್ ಚಾರ್ಜ್
ಅರಮನೆ ಗಜಶಾಲಾ, ಮೈಸೂರು

ಫೋನ್ ನಂ. 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೭-೫-೪೯ [ಸಂಚಿಕೆ ೨೩೩

ರತ್ನ ಕಂಬಳಿ ಕೈಗಾರಿಕೆ

ಬೆಂಗಳೂರು ೧೭

ಸಂಸ್ಥಾನದ ರತ್ನ ಕಂಬಳಿ ತಯಾರಿಕೆಗಾರರ ಸಭೆಯೊಂದು ಕೈಗಾರಿಕಾ ಸಚಿವರಾದ ಶ್ರೀ ಹೆಚ್.ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆದು, ರತ್ನ ಕಂಬಳಿ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸಬೇಕೆಂದೂ, ಇದಕ್ಕಾಗಿ ಒಂದು ಉತ್ಪಾದನೆ ಮಾಡುವ ಕೇಂದ್ರವನ್ನು ಕೂಡಲೇ ಸ್ಥಾಪಿಸಬೇಕೆಂದೂ ನಿರ್ಧರಿಸಲಾಯಿತು. ಇದಕ್ಕಾಗಿ ಸಭೆಯಲ್ಲಿ ೪೦ ಸಾವಿರ ರೂ. ಚಂದಾ ವಸೂಲಾಯಿತು. ಉತ್ತಮ ತರಹ ರತ್ನ ಕಂಬಳಿಗಳಿಗೆ ಅಮೇರಿಕದಲ್ಲಿ ಹೆಚ್ಚು ಗಿರಾಕಿ ಇದೆಯೆಂದೂ ಅದರಿಂದ ೧೦ ಲಕ್ಷ ಡಾಲರುಗಳ ವ್ಯಾಪಾರ ನಡೆಸಬಹುದೆಂದೂ ಹೇಳಲಾಗಿದೆ.

ತಿರುವಾಂಕೂರಿಗೆ ಹೊಸ ಮಂತ್ರಿ

ತಿರುವಾಂಕೂರು ಸರಕಾರಕ್ಕೆ ಟಿ ಎ ಅಬ್ದುಲ್ಲಾ ಎಂಬುವರನ್ನು ಮಂತ್ರಿಯನ್ನಾಗಿ ತೆಗೆದುಕೊಳ್ಳಲಾಗಿದೆ

ಕಲ್ಕತ್ತಾದಲ್ಲಿ ಸ್ತ್ರೀ ಪೋಲೀಸ್ ಅಧಿಕಾರಿಣಿಯರು

ಕಲ್ಕತ್ತದಲ್ಲಿ ಪೋಲೀಸ್ ಅಧಿಕಾರಿಣಿಯರನ್ನಾಗಿ ೨೪ ಜನ ಸ್ತ್ರೀಯರನ್ನು ತೆಗೆದುಕೊಳ್ಳಲಾಗಿದೆ ಇವರ ಪೈಕಿ ೭ ಜನ ಬಿ.ಎ. ಒಬ್ಬಳು ಎಂ.ಎ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವರು.

ಬರ್ನಾರ್ಡ್ ಷಾರವರಿಂದ ನೆಹರೂರವರ ಪ್ರಶಂಸೆ

ಯೂರೋಪಿನಲ್ಲಿ ಸ್ಟಾಲಿನ್ನರು ಹೇಗೋ ಹಾಗೆಯೇ ಏಷ್ಯಾದಲ್ಲಿ ಪಂಡಿತ ನೆಹರೂರವರು ಅತ್ಯಂತ ಸಮರ್ಥರೂ ವಿವೇಕಶಾಲಿಗಳೂ ಮತ್ತು ಜ್ಞಾನವಂತ ರಾಜಕಾರಣಿಯೂ ಆಗಿದ್ದಾರೆ-ಎಂದು ಜಾರ್ಜ್ ಬರ್ನಾರ್ಡ್ ಷಾರವರು ಹೇಳಿದ್ದಾರೆ

ಈಜಿಪ್ಟ್ ಪ್ರಧಾನಿ ಕೊಲೆಗಾರನ ದಸ್ತಗಿರಿ

ಕಳೆದ ಡಿಸಂಬರ್ ತಿಂಗಳಲ್ಲಿ ಈಜಿಪ್ಟಿನ ಪ್ರಧಾನಿ ನೊಕ್ರೇಷಿ ಪಾಷಾರವರನ್ನು ಗುಂಡಿನಿಂದ ಹೊಡೆದು ಕೊಂದನೆಂದು ಹೇಳಲಾದ ಮಹಮದ್ ವ ಲಿಕ್ ಎಂಬ [illegible]ದರ ತರುಣನನ್ನು ಶನಿವಾರ ಮುಂಜಾನೆ ಅಲೆಕ್ಸಾಂಡ್ರಿಯಾ ರೇವಿನ ಬಳಿ ಇರುವ ದ್ವೀಪವೊಂದರಲ್ಲಿ ಹಿಡಿಯಲಾಯಿತು. ಆಗ ಆತನ ಕೈಯ್ಯಲ್ಲಿ ಒಂದು ಸ್ವಯಂಚಾಲಿತವಾದ ಬಂದೂಕವು ಇತ್ತು. ಆತನನ್ನು ಹಿಡಿಯಲು ೧೦೦೦ ಈ ಜಿಪ್ಟ್ ಪೌಂಡುಗಳ ಬಹುಮಾನವಿಡಲಾಗಿತ್ತು.

ಹಿಮಾಲಯದ ಮಂಜಿನ ಗೆಡ್ಡೆಯ ಸರ್ವೆ

ಹಿಮಾಲಯ ಪರ್ವತ ಶ್ರೇಣಿಗಳಲ್ಲಿರುವ ಕಾಂಚನಗಂಗಾ ಮತ್ತು ಜಂಗ್ಸ್ ಗ್ ಬಳಿ ಕೋಶಿ ನದಿಯ ಮೂಲವನ್ನು ಹುಡುಕಲು ಹೋಗಿದ್ದ ಭಾರತ ಸರಕಾರದ ಮಂಜಿನ ಗೆಡ್ಡೆಯ ಸರ್ವೆ ಪಾರ್ಟಿಯವರು ತಮ್ಮ ಕೆಲಸ ಮುಗಿಸಿಕೊಂಡು ವಾಪಸು ಬಂದಿರುತ್ತಾರೆ ಅವರು [illegible] ಸಾವಿರ ಅಡಿ ಎತ್ತರದ ವರೆಗೂ ಪತ್ತೆ [illegible] ಅವರು ಹೀಗೆ ಪತ್ತೆ ಸರ್ವೆ ಮಾಡಿ[illegible] ಎರಡನೇ ಬಾರಿಯೆಂದು ಹೇಳ[illegible]

ರಾಜ್ಯಾಂಗ ಸಭೆಯ ಕೊನೆಯ ಅಧಿವೇಶನ

ದೆಹಲಿಯಲ್ಲಿ ನೆನ್ನೆ ದಿನ ಪ್ರಾರಂಭವಾದ ಭಾರತ ರಾಜ್ಯಾಂಗ ಸಭೆಯ ಅಧಿವೇಶನವೇ ಕೊನೆಯದೆಂದೂ, ಅದು ೧೦ ವಾರಗಳ ಕಾಲ ನಡೆದು ಆಗಸ್ಟ್ ೧೫ನೇ ತಾ॥ ಹೊತ್ತಿಗೆ ಭಾರತವು ರಿಪಬ್ಲಿಕ್ ಎಂದು ಘೋಷಿಸುವ ನಿರ್ಣಯವನ್ನು ಅಂಗೀಕರಿಸಲಾಗುವುದೆಂದೂ ಗೊತ್ತಾಗಿದೆ ಭಾರತವು ಕಾಮನ್‌ವೆಲ್ತಿನಲ್ಲಿ ಇರಬೇಕೆಂಬ ಒಪ್ಪಂದದ ವಿಷಯವನ್ನು ಪಂಡಿತ ನೆಹರೂರವರು ವಿವರಿಸಿದರು ಅದರ ಮೇಲೆ ಎರಡು ದಿನಗಳು ಚರ್ಚೆಯಾಗಿ, ಅದನ್ನು ಸಭೆಯು ಸಂಪೂರ್ಣವಾಗಿ ಅನುಮೋದಿಸುವುದೆಂದು ತಿಳಿದುಬಂದಿದೆ

೧೨ ಕೋಟಿ ಗೊಡ್ಡು ಜಾನುವಾರಿನಿಂದ ೨೧೦೦ ಕೋಟಿ ರೂ. ನಷ್ಟ

ಭಾರತದಲ್ಲಿರುವ ೧೨ ಕೋಟಿ ಗೊಡ್ಡು ಜಾನುವಾರುಗಳು ಸುಮಾರು ೨,೧೦೦ ಕೋಟಿ ರೂ.ಗಳಷ್ಟು ನಷ್ಟವನ್ನು ಉಂಟುಮಾಡುತ್ತಿರುವುದಾಗಿ ಸಂಯುಕ್ತ ಪ್ರಾಂತ್ಯದ ಮಂತ್ರಿ ನಿಸಾರ್ ಅಹಮದ್ ಶೆರ್ವಾನಿಯವರ ತಿಳಿಸಿದ್ದಾರೆ ಪ್ರಪಂಚದಲ್ಲಿ ಈಗ ಒಟ್ಟು ಜಾನುವಾರು ಸಂಪತ್ತಿನಲ್ಲಿ ಮೂರನೇ ಒಂದು ಭಾಗವು ಭಾರತದಲ್ಲಿ ಇದೆಯೆಂದೂ ಈಗ ಸುಮಾರು ೨೧ ಕೋಟಿ ೩೦ ಲಕ್ಷ ಜಾನುವಾರು ಇರುವುದಾಗಿಯೂ ಅವರು ತಿಳಿಸಿರುವರು

ದಕ್ಷಿಣ ಆಫ್ರಿಕದ ಬಗ್ಗೆ ದುಂಡು ಮೇಜಿನ ಪರಿಷತ್ತು

ಭಾರತಕ್ಕೂ ಮತ್ತು ದಕ್ಷಿಣ ಆಫ್ರಿಕಕ್ಕೂ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ಒಂದು ದುಂಡು ಮೇಜಿನ ಪರಿಷತ್ತನ್ನು ನಡೆಸಿ, ಅಲ್ಲಿ ಭಾರತ, ಪಾಕೀಸ್ತಾನ ಮತ್ತು ದಕ್ಷಿಣ ಆಫ್ರಿಕಗಳು ಕಲೆತು ಮಾತುಕತೆ ನಡೆಸಬೇಕೆಂದು ಮೊನ್ನೆ ವಿಶ್ವ ಸಂಸ್ಥೆಯು ನಿರ್ಣಯ ಮಾಡಿತು.

ರೀಟ ಹೇವರ್ತ್-ಅಲಿಖಾನ್ ವಿವಾಹ

ಆಗಾ ಖಾನ ರವರ ಪುತ್ರ ಅಲಿಖಾನರವರು ಹಾಲಿವುಡ್ಡಿನ ಸುಪ್ರಸಿದ್ಧ ನಟಿ ರೀಟಾ ಹೇವರ್ತಳನ್ನು ಇದೇ ೨೭ನೇ ತಾ॥ ರೋಮಿನಲ್ಲಿ ವಿವಾಹ ವಾಗುವರು

ಕರೆನ್ನರಿಗೆ ಭಾರಿ ಸೆಟ್ಟು

ಜರ್ಮನ್ ಇನ್ಸ್‌ಪೆಕ್ಟರ್ ಸುತ್ತಮುತ್ತಲೂ ಸರಕಾರಿ ಪಡೆಗಳು ಕಾದಾಡುತ್ತಾ ಕರೆನ್ನರ ಅಭೇದ್ಯ ಸ್ಥಾನದೊಳಗೆ ನುಗ್ಗಿ ಅವರಿಗೆ ಒ ಪ್ಪ ವಾ ಗಿ ನಷ್ಟಪಡಿಸಿವೆಯೆಂದು ಹೇಳಲಾಗಿದೆ

ಕುಕ್ಕರ ಹಳ್ಳಿ ಕೆರೆಯಲ್ಲಿ ಶವದ ಪತ್ತೆ

ಮೈಸೂರು ೧೭

ಈ ದಿನ ಬೆಳಗ್ಗೆ ೧೦-೪೫ ಗಂಟೆಗೆ ೩೫ ಅಥವ ೪೦ ವರ್ಷದ ಕಣ್ಣಿಗೆ ಬಟ್ಟೆ ಕಟ್ಟಿದ್ದ ಶವವೊಂದು ಕುಕ್ಕರ ಹಳ್ಳಿ ಕೆರೆಯಲ್ಲಿ ಪತ್ತೆಯಾಯಿತು ಲಕ್ಷ್ಮೀಪುರಂ ಪೋಲೀಸರು ಆ ಅಪರಿಚಿತ ಶವವನ್ನು ಪೋಸ್ಟ್ ಮಾರ್ಟಂಗಾಗಿ ಕಳುಹಿಸಿರುತ್ತಾರೆ. ವಾರಸುದಾರರಿದ್ದ ಪಕ್ಷದಲ್ಲಿ ಅವರು ಲಕ್ಷ್ಮೀಪುರಂ ಸ್ಟೇಷನ್ನಿಗೆ ತಿಳಿಸಬೇಕೆಂದು ಕೋರಲಾಗಿದೆ

ಪಾರಿತೋಷಿಕ ಸಭೆ

ರಾಜಧಾನಿಯ ಶ್ರೀಮದ್ವೇದಾಂತ ದೇಶಿಕ ವಿಹಾರ ಸಭೆಯ ೧೨ ನೇ ವರ್ಷದ ಪಾರಿತೋಷಿಕ ಸಭೆಯು ನಾಳೆ ಮಧ್ಯಾಹ್ನ ೬-೩೦ ಗಂಟೆಗೆ ಶ್ರೀ ಪರಕಾಲ ಮಠದಲ್ಲಿ ಶ್ರೀ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆಯುವುದು

ಅಶೋಕ ಮೆಹ್ತಾರ ಆಗಮನ

ಭಾರತ ಸೋಷಲಿಸ್ಟ ಪ್ರಮುಖರಾದ ಶ್ರೀ ಅಶೋಕ ಮೆಹ್ತಾರವರು ತಮ್ಮ ಸಹೋದರಿ ಶ್ರೀಮತಿ ವಾಸಂತಿಪಟ್ವರ್ಧನರೊಡನೆ ಈ ದಿನ ಬೆಂಗಳೂರಿನಿಂದ ರೈಲಿನಲ್ಲಿ ಆಗಮಿಸಿದರು. ಅವರನ್ನು ನಗರದ ಕೂಲಿಗಾರರ ಸಂಘಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳೂ, ಸೋಷಲಿಸ್ಟ ಕಾರ್ಯಕರ್ತರೂ ಎದುರುಗೊಂಡರು ಶ್ರೀ ಮೆಹತಾರವರು ಕಾರಿನಲ್ಲಿ ಕೃಷ್ಣರಾಜಸಾಗರಕ್ಕೆ ದಯಮಾಡಿಸಿದರು ಅಲ್ಲಿ ಅವರು ಎರಡು ವಾರಗಳ ಕಾಲ ವಿಶ್ರಾಂತಿ ಪಡೆಯುವರು

ಆಯುರ್ವೇದ, ಯುನಾನಿ ವೈದ್ಯರುಗಳ ಸಂಬಳ

ಜಿಲ್ಲಾ ಬೋರ್ಡುಗಳ ಆಶ್ರಯದಲ್ಲಿರುವ ಆಯುರ್ವೇದ ಮತ್ತು ಯುನಾನಿ ವೈದ್ಯರುಗಳ ಸಂಬಳವನ್ನು ಸರ್ಕಾರದವರು ಪುನರ್ವಿಮರ್ಶಿಸಿ ೫೦-೫ ೧೦೦ ರೂ ನಿಗದಿ ಮಾಡಿರುತ್ತಾರೆ ಇದರ ಜೊತೆಗೆ ವೈದ್ಯಕೀಯ ಭತ್ಯ ೨೦ ರೂ ಮತ್ತು ತುಟ್ಟಿ ಭತ್ಯ ೨೦ ರೂ ಅನ್ನೂ ಕೊಡಲಾಗುವುದು

ಕಾವೇರಿನದಿಗೆ ಸೇತುವೆ

ಕೃಷ್ಣರಾಜನಗರ ತಾಲ್ಲೂಕ. ಚುಂಚನಕಟ್ಟೆ ಬಳಿ ಕಾವೇರಿನದಿಗೆ ಸೇತುವೆಯನ್ನು ಕಟ್ಟಲು ೩,೩೦,೦೦೦ ರೂ ಅಂದಾಜನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ

ಚೀನಾ ಕಮ್ಯೂನಿಸ್ಟರಿಗೆ ಬ್ರಿಟನ್ನಿನ ಮನ್ನಣೆ

ಕಿನ ಕಮ್ಯೂನಿಸ್ಟ ರ [illegible] ಚೀನಾದ [illegible]

ರಾಜಾಜಿಯವರೊಡನೆ ಭೇಟಿ

ಸ್ವಂತ.ಫೋನ್] ಬೆಂಗಳೂರು ೧೭

ಗೌರ್ನರ್ ಜನರಲ್ಲರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಈ ದಿನ ಶ್ರೀ ಕೆ. ಹನುಮಂತಯ್ಯ ಮತ್ತು ಇತರ ಮೂರು ಖಾಸಗೀ ಪ್ರಮುಖರಿಗೆ ಭೇಟಿ ದಯಪಾಲಿಸಿದ್ದರು.

○ ಶ್ರೀ ಸಿ ರಂಗಾಚಾರ್ಯರವರನ್ನು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿ ನೇಮಿಸಲಾಗಿದೆ ಶ್ರೀ ಎ ಸಿ ದೇವೇಗೌಡರನ್ನು ಮೈಸೂರು ಉಪಾಧ್ಯಾಯರ ಕಾಲೇಜಿನ ಪ್ರೊಫೆಸರನ್ನಾಗಿ ನೇಮಿಸಲಾಗಿದೆ

ಸಂಸ್ಥಾನದ ಪತ್ರಿಕೆಗಳಿಗೆ ಪ್ರಾತಿನಿಧ್ಯ

ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದ ಸಭೆಯು ಈ ದಿನ ಮುಂದುವರಿದು, ಸಂಸ್ಥಾನದ-ಪತ್ರಿಕಾ ಸಂಪಾದಕರುಗಳಿಗೆ ಸಮ್ಮೇಳನದಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ತೀರ್ಮಾನಿಸಲಾಯಿತು.

ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಜಂಟಿ ಸಭೆ

ನ್ಯಾಯ ವಿಧಾಯಕ ಮತ್ತು ಪ್ರಜಾ ಪ್ರತಿನಿಧಿ ಸಭೆಗಳ ಕಾಂಗ್ರೆಸ್ ಪಕ್ಷದ ಜಂಟಿ ಸಭೆಯು ಇದೇ ೨೪ನೇ ತಾ॥ ಮಧ್ಯಾಹ್ನ ೩ ಗಂಟೆಗೆ ಬೆಂಗಳೂರಿನ ಕುಮಾರಾ ಪಾರ್ಕಿನಲ್ಲಿ ನಡೆಯುವುದು.

ರಾಜ್ಯಾಂಗ ಸಭೆಯ ಮುಂದೆ ಪ್ರದರ್ಶನ

ಭಾರತವು ಕಾಮನ್ ವೆಲ್ತಿನಲ್ಲಿರಬೇಕೆಂದು ನಿರ್ಧರಿಸಿರುವುದನ್ನು ಪ್ರತಿಭಟಿಸಲು ೨೦೦ ಜನ ಸಮತಾವಾದಿಗಳು ನಿನ್ನೆ ದಿನ ದೆಹಲಿಯಲ್ಲಿ ರಾಜ್ಯಾಂಗ ಸಭೆಯ ಮುಂದೆ ಪ್ರದರ್ಶನ ನಡೆಸಿದರು. ಭಾರತವು ಕಾಮನ್ವೆಲ್ತನ್ನು ಬಿಟ್ಟು ಸಂಪೂರ್ಣವಾಗಿ ಸ್ವಾತಂತ್ರ್ಯ ರಾಷ್ಟ್ರವಾಗಬೇಕೆಂದು ಸೂಚಿಸುವ ಕರ ಪತ್ರಿಕೆಗಳನ್ನು ಅವರು ಹಂಚಿದರು.

ಸಂಸ್ಕೃತಪರೀಕ್ಷೆಗಳ ಫಲಿತಾಂಶ

ಮೈಸೂರು ೧೭

ಕಳೆದ ಮಾರ್ಚಿ ತಿಂಗಳಿನಲ್ಲಿ ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಡೆದ ಪರೀಕ್ಷೆಗಳ ಫಲಿತಾಂಶಗಳು ಈ ರೀತಿ ಇವೆ —

ಕಾವ್ಯ- ಮೊದಲನೇ ತರಗತಿ — ೧, ೨, ೩, ೪, ೫, ೬ ೮, ೧೪, ೧೫, ೧೭, ೧೭ ೨ ನಂ ೨೨ ರ್ನ ಪರೀಕ್ಷಾರ್ಥಿ ಮಾತ್ರ ತೇರ್ಗಡೆಯಾಗಿದೆ.

[illegible] (ಶಾಸ್ತ್ರಗಳು).— ಮೊದಲನೇ ತರಗತಿ ೨೪ ಎರಡನೇ ತರಗತಿ ೧೯, ೨೨, ೨೧, ೨೫, ೨೭, ೩೧, ೩೨,

ಅನ್ನೈದ ಪರೀಕ್ಷೆ (ಶಾಸ್ತ್ರಗಳು): ಮೊದಲನೇ ತರಗತಿ ೩೭, ೪೬; ಎರಡನೇ ತರಗತಿ— [illegible]

[illegible]

[illegible] ಪರೀಕ್ಷೆ (ವೇದ [illegible] ಮೊದಲನೇ ತರಗತಿ— [illegible] ಉಳಿದ [illegible] ಮಾತ್ರ ತೇರ್ಗಡೆಯಾಗಿವೆ.

[illegible] ಪರೀಕ್ಷೆ (ವೇದಗಳು):— ಮೊದಲನೇ ತರಗತಿ— [illegible] ಎರಡನೇ ತರಗತಿ [illegible]

[illegible] ಪರೀಕ್ಷೆ ಮೊದಲನೇ ತರಗತಿ ೧, [illegible] ಭಾಗದಲ್ಲಿ ಮಾತ್ರ ತೇರ್ಗ[illegible]

ಸ್ವತಂತ್ರ ಭಾರತದಲ್ಲಿ ಪತ್ರಿಕೆಗಳ ಭವಿಷ್ಯ

ಅ॥ ಭಾ॥ ಪತ್ರಿಕಾ ಸಂಪಾದಕರ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

ಬೆಂಗಳೂರು ೧೬

[illegible] ಭಾರತ ಪತ್ರಿಕಾ ಸಂಪಾದಕರ ೪ನೇ ಸಮ್ಮೇಳನವು [illegible] ಪುಷ್ಪ [illegible] ಭವನದಲ್ಲಿ [illegible] ಪತ್ರಿಕೆಯ ಸಂಪಾದಕರಾದ ಶ್ರೀ ಅರ್. [illegible] ಶ್ರೀನಿವಾಸನ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ [illegible] ಗುಂಡಪ್ಪನವರು ಭಾಷಣ ಮಾಡಿ, [illegible] ಸಮ್ಮೇಳನವನ್ನು [illegible] ವಹಿಸಿದ [illegible] ಪತ್ರಿಕೋದ್ಯಮವು [illegible] ಕಠಿಯಾದ ಸಮಸ್ಯೆಗಳು. ಇವ [illegible] ಶಿಕ್ಷಣ [illegible] ಈ ಸಮ್ಮೇಳನದವರು ತೆರೆಯಬೇಕು. ಸರ್ಕಾರದವರು ಪತ್ರಿಕೆಗಳ ಮೇಲೆ ಕಾರ್ಯಕ್ರಮ [illegible] ಅವನ್ನು ಪರಿಶೀಲಿಸಲು [illegible] ಮತ್ತು ಸಂಸ್ಥಾನದಲ್ಲೂ [illegible] ನೇಮಕವಾಗಬೇಕು ಎಂದು ಅವರು ಹೇಳಿದರು.

ರಾಜಾಜಿಯವರ ಭಾಷಣ

ಅನಂತರ ಗವರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಸ್ವತಂತ್ರ ಭಾರತದಲ್ಲಿ ಪತ್ರಿಕೆಗಳ ಜವಾಬ್ದಾರಿಯು ಹೆಚ್ಚಾಗಿದೆ. ಅನಾ[illegible]ಕರವಾದ ಪರಿಣಾಮಗಳಿಗೆ ಕಾರಣವಾಗುವಂತಹ ಮಾರ್ಗಗಳನ್ನು ಪತ್ರಿಕೆಗಳು [illegible]ಬೇಕು. ವಿಚಾರಪರರಾದ ಮತ್ತು ಉತ್ತಮ ಯೋಗ್ಯತೆ ಹೊಂದಿರುವವರು ಪತ್ರಿಕಾ ವೃತ್ತಿಯ ಮಟ್ಟವನ್ನು ಕಾಪಾಡಿಕೊಂಡು ಬರಬೇಕು. ಭಾರತದಲ್ಲಿ ಪತ್ರಿಕೆಗಳು [illegible] ಸ್ವಾತಂತ್ರ್ಯ ಅನುಭವಿಸುತ್ತಿವೆ [illegible] ಪತ್ರಿಕೆಗಳು [illegible] ಎಂದು [illegible]

ಅಧ್ಯಕ್ಷರ ಭಾಷಣ

ಶ್ರೀ [illegible] ಶ್ರೀನಿವಾಸನ್‌ರವರು ತ[illegible] ಈ [illegible] ತಿಳಿಸಿದ[illegible]

ಸ್ವತಂತ್ರ ಭಾರತದಲ್ಲಿ ಪತ್ರಿಕೆಗಳಿಗೆ [illegible] ಭವಿಷ್ಯವಿದೆ. ಸ್ವಾತಂತ್ರ್ಯ [illegible] ಪತ್ರಿಕೆಗಳು ಸರ್ಕಾರದ [illegible] ಹೊಣೆಗಳು. ಆದರೆ [illegible] ಪತ್ರಿಕೆಗಳ ಮತ್ತು ಸರ್ಕಾರದ [illegible] ಜನರ ಸೇವೆಯೇ [illegible] ಪ್ರಧಾನ ಧ್ಯೇಯವಾಗಿದೆ. ಭಾರತದ ಪತ್ರಿಕೆಗಳನ್ನು [illegible] ಕಠಿಣವಾಗಿದೆ. [illegible] ಪ್ರಭಾವ [illegible] ಭಾರತದ [illegible] ಪತ್ರಿಕೆಗಳು [illegible] ಆದರೆ ಭಾರತದ [illegible] ಪತ್ರಿಕೆಗಳ [illegible] ಜನ ಸಾಮಾನ್ಯರಲ್ಲಿ [illegible] ಮಾಡಿ ಅವರಿಗೆ [illegible] ಸುದ್ದಿಗಳನ್ನು ಪ್ರಕ[illegible] ಸಂಸ್ಥೆ[illegible]

[illegible] ಕೇವಲ ಸಂಖ್ಯೆಗೆ [illegible] ಅನುಮಾನ[illegible] ಪತ್ರಿಕೆಗಳ ಪ್ರಕಟವಾಗಬೇಕು.

[illegible] ಕಮ್ಯೂನಿಸ್ಟ್ ಕೋಮು [illegible] ಪತ್ರಿಕೆಗಳ ಅಭಿವೃದ್ಧಿ [illegible] ತಡೆಗಟ್ಟಬೇಕು. ಪತ್ರಿಕಾ ಕ್ಷೇತ್ರದಲ್ಲಿ ದುಡಿಯುವವರ [illegible] ಮತ್ತು ಇತರ ಸೌಲಭ್ಯಗಳು ಉತ್ತಮವಾದ ಹೊರತು [illegible] ಜನರು ಈ ಕ್ಷೇತ್ರಕ್ಕೆ ಕಾಲಿಡಲು ಅವಕಾಶವಿರುವುದಿಲ್ಲ. ಆದುದರಿಂದ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು.

ಈಗಿರುವ ಸರ್ಕಾರಕ್ಕೂ ಪತ್ರಿಕೆಗಳಿಗೂ [illegible] ಆದರೆ ಸರ್ಕಾರದವರು ಏನುಮಾಡಿದರೂ ಅದಕ್ಕೆಲ್ಲಾ ತಾವು ಅನುಮೋದಿಸುವೆವೆಂದು ಭಾವಿಸುವುದು ತಪ್ಪಿಲ್ಲ. ಸರ್ಕಾರವು ತಪ್ಪು ಹೆಜ್ಜೆ ಇಟ್ಟಾಗ, ಅದಕ್ಕೆ ಸರಿಯಾದ ದಾರಿ ತೋರಿಸುವುದು ಪತ್ರಿಕೆಗಳ ಧರ್ಮ ಮತ್ತು ಅವುಗಳ ವಿಶೇಷವಾದ ಹಕ್ಕು.

ಸರ್ಕಾರಕ್ಕೂ ಪತ್ರಿಕೆಗಳಿಗೂ ಹೆಚ್ಚು ಸೌಹಾರ್ದ ಉಂಟಾಗಬೇಕಾದರೆ ಪತ್ರಿಕೆಗಳ ಮೇಲೆ ಹಾಕಿರುವ ಮೊರಾಟ ತೆಗೆಯು ಹೋಗಬೇಕು. ಯಾವ ನಾಗರೀಕ ಸರ್ಕಾರವೂ ಸಹ ಜ್ಞಾನ ಪ್ರಸಾರದ ಮೇಲೆ ತೆರಿಗೆ ಹಾಕಬಾರದು. ಪಾವ್ ಅಸಿಸ್ಟಂಟ್ ಕಾನೂನನ್ನು ಪತ್ರಿಕೆಗಳಿಗೆ ಅನ್ವಯಿಸುವುದು ಅದರ ವೃತ್ತಿಯ ಘನತೆಗೆ ಕುಂದಕ ತಂದಂತಾಗಿದೆ. ಇದು ಸರಿಯಾದ ಮಾರ್ಗವಲ್ಲ.

ವಿಮಾನ ಬಿದ್ದು ಅನೇಕ ಜನರ ಮರಣ

ಕೈರೋವಿನ ಅಲಿಪ್ರೋ ಎಂಬಲ್ಲಿ ಆಟ ಪಾಟಗಳ ಸ್ಪರ್ಧೆಯನ್ನು ನೋಡಲು ನೆರೆದಿದ್ದ ೩೦ ಸಾವಿರ ಜನರ ಗುಂಪಿನಮೇಲೆ ಒಂದು ವಿಮಾನವು ಬಿದ್ದು, ಅನೇಕ ಜನರು ಸತ್ತರೆಂದೂ, ಹಲವರಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಟೆಂಡರ್ ನೋಟೀಸು

ಮೈಸೂರು ಅರಮನೆ ಗಜಶಾಲಾ ಇಲಾಖೆಗೆ ೧೯೪೯-೫೦ನೇ ಸಾಲಿನಲ್ಲಿ ಸೌದೆ ಸಪ್ಲೈ ಮಾಡಲು ಅಪೇಕ್ಷೆಯುಳ್ಳವರು ಸೀಲ್ಡ್ ಟೆಂಡರ್‌ಗಳನ್ನು ತಾರೀಖು ೩೧-೫-೪೯ನೇ ಮಧ್ಯಾಹ್ನ ೧೨ ಘಂಟೆಯೊಳಗಾಗಿ ಗಜಶಾಲೆ ಇನ್‌ಚಾರ್ಜ್ ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿನ ವಿಷಯಗಳನ್ನು ಗಜಶಾಲೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

(ಸಹಿ) ಡಿ. ಆರ್. ನೀಲಕಂಠ ರಾವ್,
ಆಫೀಸರ್ ಇನ್ ಚಾರ್ಜ್
ಅರಮನೆ ಗಜಶಾಲಾ, ಮೈಸೂರು

ಹಿಮಾಲಯದಲ್ಲಿ ಸಂಶೋಧನಾ ಕೇಂದ್ರ

ವಿವಿಧ ಉದ್ದೇಶಗಳನ್ನು ಸಾಧಿಸುವಾಗುವ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದಕ್ಕಾಗಿ ಹಿಮಾಲಯ ಪರ್ವತದಲ್ಲಿ ಪ್ರಾರಂಭಿಕ ತನಿಖೆಯಾಗುತ್ತಿದೆ. ಭೂಮಟ್ಟಕ್ಕಿಂತ ೧೪ ಸಾವಿರ ಅಡಿ ಎತ್ತರದಲ್ಲಿ ಈ ಕೇಂದ್ರವು ಇರುವುದು. ಇಲ್ಲಿ "ಕಾಸ್ಮಿಕ್" ಕಿರಣಗಳನ್ನೂ ಸಹ ಪರಿಶೀಲಿಸಲಾಗುವುದು.

ಸಕ್ಕರ್ ಅಣೆಕಟ್ಟು ಉರುಳದಿರಲು ಕಾರ್ಯಕ್ರಮ

ಪ್ರಪಂಚದ ಅತ್ಯಂತ ದೊಡ್ಡ ಅಣೆಕಟ್ಟುಗಳಲ್ಲಿ ಒಂದಾದ ಸಕ್ಕರ್ ಅಣೆಕಟ್ಟು ಉರುಳದಂತೆ ಮಾಡಲು ಪಾಕಿಸ್ಥಾನ ಸರಕಾರವು ಯಥೇಚ್ಛ ಹಣ ವ್ಯಯಮಾಡಲು ನಿರ್ಧರಿಸಿದೆ. ಈ ಅಣೆಕಟ್ಟು ಕಟ್ಟಲು ೧ ಕೋಟಿ ೫೦ ಲಕ್ಷ ಪೌಂಡುಗಳನ್ನು ಹಣ ಖರ್ಚಾಗಿದ್ದಿತು.

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ತಂಗಡ
ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ, ಮೈಸೂರು

Edited, printed, and published by A.R. Nagarajan at the Sadhvi Press, D. Subbiah Road, Mysore

॥ಶ್ರೀ॥
ಜಗದಾಂಬಾ ಶಿಶುವಿಹಾರ
ದಿವಾನ್ಸ್ ರೋಡ್, ಮೈಸೂರು.

ಬೇಸಿಗೆ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವನ್ನು ೧೨-೫-೪೯ನೇ ಗುರುವಾರದಿಂದ ತೆರೆಯಲಾಗಿದೆ. ಕಿಂಡ್ರಗಾರ್ಟನ್ ಮತ್ತು ಆಧುನಿಕ ಶಿಶುವಿದ್ಯಾಭ್ಯಾಸಕ್ಕೆ ಈ ಶಾಲೆಯು ಆದರ್ಶಪ್ರಾಯವಾಗಿದೆ ಎಂದು ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಂದಲೂ [illegible] ವಿದ್ಯಾಭ್ಯಾಸ ಪ್ರವೀಣರಿಂದಲೂ ಪ್ರಶಂಸಿಸಲ್ಪಟ್ಟಿದೆ. ಇಲ್ಲಿ ವ್ಯಾಸಂಗ ಮಾಡುವ ೭ ವರ್ಷದ ವಯಸ್ಸಿನ ಮಕ್ಕಳನ್ನು ನೇರವಾಗಿ ಮಿಡ್ಲ್ ಫಸ್ಟ್ ಇಯರ್ ಪರೀಕ್ಷೆಗೆ ಖಾಸಗಿಯಾಗಿ ತಯಾರು ಮಾಡಲಾಗುವುದು. ಈ ರೀತಿ ಪ್ರತಿ ವರ್ಷವೂ ಅನೇಕ ಮಕ್ಕಳು ಉತ್ತೀರ್ಣವಾಗಿ [illegible] ಶಾಲೆಗಳಿಗೆ ಸೇರುತ್ತಲಿದ್ದಾರೆ. ಆದ್ದರಿಂದ ಶಿಶು ವಿದ್ಯಾಭ್ಯಾಸದಲ್ಲಿ ಆಸಕ್ತರಾಗಿರುವ ಮಾತಾಪಿತೃಗಳು ತಮ್ಮ ಮಕ್ಕಳನ್ನು ಕಾಲವಿಳಂಬ ಮಾಡದೆ ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯ ವ್ಯವಸ್ಥಾಪಕರ ಸದುದ್ದೇಶಕ್ಕೆ ಪ್ರೋತ್ಸಾಹವನ್ನು ನೀಡುವರೆಂದು ಕೋರಲಾಗಿದೆ. ವಿಷಯಗಳಿಗೆ ಮೊಖ್ತಾ ವಿಚಾರ ಮಾಡಬಹುದು.

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ

ರಾಜಕಮಲ್, ಮೈಸೂರು
13-5-49 ರಿಂದ 2ನೇ ವಾರ ಪ್ರಾರಂಭ
ಪ್ರತಿ ದಿನ ೩ ಆಟಗಳು
ಸ್ವಾತಂತ್ರ್ಯ ಯುಗದ ಪ್ರಥಮ ಚಿತ್ರ
ಫಿಲಿಂಸ್ತಾನ್‌ರವರ
ಷಹೀದ್
ಭರತ ಖಂಡದ 40 ಕೋಟಿ ಪ್ರಜೆಗಳ ಸ್ವಾತಂತ್ರ್ಯ ಸಾಧನೆಯ ಆಂದೋಳನದ ಇತಿಹಾಸವನ್ನು ವರ್ಣಿಸುವ ದೃಶ್ಯ
ಪಾತ್ರ:- ಕಾಮಿನಿ ಕೌಶಲ್ಯ, ದಿಲೀಪ್ ಕುಮಾರ್, ಚಂದ್ರ ಮೋಹನ್, ವಿ. ಎಚ್. ದೇಸಾಯಿ

॥ ಶ್ರೀ ಸೀತಾರಾಘವಾಯನಮಃ ॥
ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ಕಾಮಿಜ
ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ. ಮುಟ್ಟಿನ ಹೆಚ್ಚು ಕಮ್ಮಿ, ಮುಟ್ಟಿನ ಕಾಲದ ಹೊಟ್ಟೆ, ಸೊಂಟ ನೋವು, ಮೊದಲಾಗಿ ಗುಣವಾಗುತ್ತದೆ
ವಿಳಾಸ.—
ಬೆಲೆ ಶೀಸೆ 1ಕ್ಕೆ 2-0-0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಆರಾಮ ಕುರ್ಚಿಯ ಕ್ಯಾನ್‌ವಾಸ್ ಬಟ್ಟೆ ಮತ್ತು ಮಕ್ಕಳ ತೊಟ್ಟಲಿಗೆ ಹಾಸುವ ರಬ್ಬರ್ ಷೀಟ್
ಒಳ್ಳೆ ನಮೂನೆಗಳಲ್ಲಿ ಬಂದಿವೆ
ಬಾಬುಸಾಬ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ವೃದ್ಧಿ

ಸಂಪುಟ ೭] ಬುಧವಾರ ೧೮-೧೧-೪೯ [ಸಂಚಿಕೆ ೨೩೭

ಕಾಶ್ಮೀರವು ಭಾರತವನ್ನು - ಬಿಡುವುದಿಲ್ಲ -

ಕೈಗಾರಿಕೆ ಮತ್ತು ಇತರ ಬಾಬುಗಳು ಭಾರತ ಸರ್ಕಾರಕ್ಕೆ ಸೇರುವುವೇ?

ಸ್ವಂ.ಸು.ಫೋ॥] ಬೆಂಗಳೂರು ೧೭

ಭಾರತ ಸರ್ಕಾರದ ಸಂಸ್ಥಾನಗಳ ಇಲಾಖಾ ಸಲಹೆಗಾರರಾದ ಶ್ರೀ ವಿ.ಪಿ. ಮೆನನ್‌ರವರು ಈ ದಿನ ಸಂಜೆ ಇಲ್ಲಿಗೆ ಆಗಮಿಸುವರು. ಇವರ ಭೇಟಿಯು ರಾಜಕೀಯ ಮಹತ್ವದ್ದೆಂದು ಹೇಳಲಾಗಿದೆ. ಸಂಸ್ಥಾನದ ರೈಲ್ವೆ, ಟೆಲಿಫೋನ್, ರೇಡಿಯೋ, ವರಮಾನ ತೆರಿಗೆ, ತಂಬಾಕು ಇವೇ ಮುಂತಾದ ಬಾಬುಗಳನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳುವ ವಿಚಾರದಲ್ಲಿ ಅವರು ಮಾತುಕತೆ ನಡೆಸುವರೆಂದೂ, ಮಿಲಟರಿ ಆಡಳಿತವನ್ನು ಸಹ ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವರೆಂದೂ ತಿಳಿದುಬಂದಿದೆ. ಈ ಇಲಾಖೆಗಳನ್ನು ಭಾರತ ಸರ್ಕಾರಕ್ಕೆ ವಹಿಸಿಕೊಡುವ ಬಗ್ಗೆ ಶ್ರೀಮನ್ಮಹಾರಾಜರವರು ನೂತನ ಒಪ್ಪಂದಕ್ಕೆ ರುಜು ಹಾಕುವರೆಂದೂ ತಿಳಿದುಬಂದಿದೆ. ಕೊಡಗನ್ನು ಮೈಸೂರಿಗೆ ಸೇರಿಸುವ ಬಗ್ಗೆ ಶ್ರೀ ಮೆನನ್‌ರವರು ಮಾತುಕತೆ ನಡೆಸುವರೆಂದೂ, ಸಧ್ಯದಲ್ಲಿಯೇ ಕೊಡಗು ಮೈಸೂರಿಗೆ ಸೇರಿಸಲ್ಪಡುವುದೆಂದೂ ತಿಳಿದುಬಂದಿದೆ.

ಶ್ರೀಮನ್ಮಹಾರಾಜರವರು ಈ ದಿನ ಸಂಜೆ ಗೌರ್ನರ್ ಜನರಲ್ಲರನ್ನು ಭೇಟಿ ಮಾಡಲಿರುವರು.

ನಾಗರೀಕರು ಕಸ ಗುಡಿಸಿದರು

ಬೊಂಬಾಯಿನಲ್ಲಿ ಕಳೆದ ನಾಲ್ಕು ದಿನಗಳಿಂದಲೂ ೯ ಸಾವಿರ ಮಂದಿ ಝಾಡಮಾಲಿಗಳು ಮುಷ್ಕರ ಹೂಡಿರುವುದರಿಂದ ಬೀದಿಗಳಲ್ಲಿ ಗಲೀಜು ಹೆಚ್ಚಾಗಿರುತ್ತದೆ. ಆಯಾ ಸ್ಥಳದ ನಿವಾಸಿಗಳು ತಮ್ಮ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಂಡಿರಲು ತಾವುಗಳೇ ಗುಡಿಸಿ ಚೊಕ್ಕಟ ಮಾಡುತ್ತಾರೆ.

ಪ್ಯಾರಿಸ್ಸಿನಲ್ಲಿ ೨೫ ಸಾವಿರ ಜನ ಪೋಲೀಸ್

ಪ್ಯಾರಿಸ್ ನಗರವೊಂದರಲ್ಲೇ ೨೫ ಸಾವಿರ ಜನ ಪೋಲೀಸರು ಇದ್ದಾರೆಂದೂ, ಅದೇ ವಿಸ್ತೀರ್ಣವುಳ್ಳ ಬೊಂಬಾಯಿನಲ್ಲಿ ೧೧ ಸಾವಿರ ಮಂದಿ ಪೋಲೀಸರು ಇದ್ದಾರೆಂದೂ ಯೂರೋಪಿನಲ್ಲಿ ಪ್ರವಾಸ ಮಾಡುತ್ತಿರುವ ಬೊಂಬಾಯಿನ ಮೇಯರಾದ ಶ್ರೀ ಎಸ್. ಕೆ. ಪಾಟೀಲರವರು ತಿಳಿಸಿದ್ದಾರೆ.

ಕಾಮನ್‌ವೆಲ್ತ್ ಒಪ್ಪಂದಕ್ಕೆ ರಾಜ್ಯಾಂಗ ಸಭೆಯ ಸಮ್ಮತಿ

ಭಾರತವು ಕಾಮನ್‌ವೆಲ್ತಿನಲ್ಲಿರಬೇಕೆಂದು ಲಂಡನ್ನಿನಲ್ಲಿ ಆದ ತೀರ್ಮಾನವನ್ನು ಅಂಗೀಕರಿಸಬೇಕೆಂಬ ಪಂಡಿತ ನೆಹರೂರವರ ನಿರ್ಣಯವು ಕೇಂದ್ರ ರಾಜ್ಯಾಂಗ ಸಭೆಯಲ್ಲಿ ನಿನ್ನೆ ದಿನ ಅಂಗೀಕೃತವಾಯಿತು.

ರಾಮಪುರ ಆಡಳಿತ ಭಾರತ ಸರ್ಕಾರಕ್ಕೆ

ಮುಂದಿನ ಜುಲೈ ತಿಂಗಳಿನಿಂದ ರಾಮಪುರದ ಆಡಳಿತವನ್ನು ಭಾರತ ಸರ್ಕಾರದವರು ವಹಿಸಿಕೊಳ್ಳುವರು. ಅನಂತರ ಅದನ್ನು ಸಂಯುಕ್ತ ಪ್ರಾಂತ್ಯದಲ್ಲಿ ಐಕ್ಯ ಮಾಡಿ ಒಂದು ಜಿಲ್ಲೆಯಾಗಿ ಪರಿವರ್ತಿಸಲಾಗುವುದೆಂದು ಹೇಳಲಾಗಿದೆ.

ಸಂಪಾದಕರ ಸಮ್ಮೇಳನದಲ್ಲಿ ನಿರ್ಣಯಗಳು

ಬೆಂಗಳೂರು ೧೭

ಪತ್ರಿಕೋದ್ಯಮದ ಬಗ್ಗೆ ಉಚ್ಚ ಶಿಕ್ಷಣ ಕೊಡುವ ಬಗ್ಗೆ ಯೋಜನೆ ತಯಾರಿಸಲು ಒಂದು ಸಮಿತಿಯ ನೇಮಕ, ಪತ್ರಿಕೆಗಳ ಮೂಲಭೂತ ಹಕ್ಕುಗಳ ಬಗ್ಗೆ ಧಕ್ಕೆ ಬಾರದ ರೀತಿಯಲ್ಲಿ ನಿಯಮಗಳನ್ನು ಭಾರತ ರಾಜ್ಯಾಂಗದಲ್ಲಿ ಸೇರಿಸುವುದು, ಪತ್ರಿಕೆಗಳ ಮೇಲೆ ವಿಧಿಸಿರುವ ಮುಚ್ಚಳಿಕೆ ಮತ್ತು ಜಾಹಿರಾತು ತೆರಿಗೆಗಳನ್ನು ವಜಾ ಮಾಡುವುದು, ಪತ್ರಿಕಾ ವೃತ್ತಿ ನಿರ್ವಹಣ ನೀತಿಯನ್ನು ರಚಿಸಿ ಅದನ್ನು ಆಚರಣೆಗೆ ತರುವಂತೆ ವ್ಯವಸ್ಥೆ ಮಾಡಲು ಒಂದು ಸಮಿತಿಯ ನೇಮಕ, ಹೀನವಾದ ಭಾಷೆಯನ್ನು ಉಪಯೋಗಿಸದಂತೆ ಪತ್ರಿಕೆಗಳ ಮೇಲೆ ಕ್ರಮ ಕೈಗೊಳ್ಳುವುದು, ಪತ್ರಿಕಾ ಕೆಲಸಗಾರರ ಸ್ಥಿತಿಗತಿಗಳನ್ನು ಅಭಿವೃದ್ಧಿ ಪಡಿಸುವುದು. ಇವೇ ಮುಂತಾದ ನಿರ್ಣಯಗಳು ಸಮ್ಮೇಳನದಲ್ಲಿ ಅಂಗೀಕೃತವಾದುವು.

ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರುಗಳ ಸಮ್ಮೇಳನದ ಸ್ಥಾಯಿ ಸಮಿತಿಗೆ ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ.--

ಶ್ರೀಗಳಾದ ಜೋಕಿಂ ಆಳ್ವ, ಫೋರಂ, ಹೆಚ್. ಆರ್. ಮೊಹರೆ, ಸಂಯುಕ್ತ ಕರ್ನಾಟಕ, ರಾಮನಾಥಗೋಯೆಂಕ, ಇಂಡಿಯನ್ ಎಕ್ಸ್‌ಪ್ರೆಸ್. ದೇಶಬಂಧು ಗುಪ್ತ, ತೇಜ್, ದೇವದಾಸ ಗಾಂಧಿ. ಹಿಂದೂಸ್ಥಾನ್ ಟೈಮ್ಸ್. ಎಸ್. ಸದಾನಂದ, ಫ್ರೀಪ್ರೆಸ್ ಜರ್ನಲ್, ತುಷಾರ ಕಾಂತಿ ಘೋಷ್, ಅಮೃತ ಬಜಾರ್ ಪತ್ರಿಕೆ, ಎ. ಡಿ. ಮಣಿ, ಹಿತವಾದ, ಬಿ. ಸೇನಗುಪ್ತ, ಯು. ಪಿ. ಐ., ರಂಗೋಪ್ರಸಾದ್, ಆಂಧ್ರ ಪತ್ರಿಕೆ, ಕಸ್ತೂರಿ ಶ್ರೀನಿವಾಸ್, ಹಿಂದೂ, ತೆ. ಶ್ರೀನಿವಾಸನ್, ಇಂಡಿಯನ್ ಪಾರ್ಲಿಮೆಂಟ್, ಪಿ. ಡಿ. ಧವಳೆ, ಮಹಾರಾಷ್ಟ್ರ, ಸುರೇಶ್ ಮಜುಂದಾರ್, ಹಿಂದೂಸ್ಥಾನ್ ಸ್ಟ್ಯಾಂಡರ್ಡ್, ಜೆ. ಎ. ಶಿವಾನಂದ, ಇಂಡಿಯನ್ ನ್ಯೂಸ್ ಕ್ರಾನಿಕಲ್, ವಿ. ಟಿ. ಸಿಕ್ಕ, ಭಾರತ್, ಎಸ್. ಶಿವರಾಮ್, ದಿನಮಣಿ, ಹೆಚ್. ಎಂ. ಜೋಶಿ ಲೋಕಶಕ್ತಿ, ಡಾ॥ ಸಚ್ಚಿನ್ ಸೇನ್, ಇಂಡಿಯಾ ನೇಷನ್ ಪಾಟ್ನ, ಆಜಮಲ್, ಮತ್ತು ಕಾಸಿಂ ಭಾಕರ್, ಆಯಾರವರ್ತ

ಜಾಸ್ತಿ ಭತ್ಯಕ್ಕಾಗಿ ಶಾಸನ ಸಭಾಸದಸ್ಯರ ಬೇಡಿಕೆ

ಬೊಂಬಾಯಿ ಶಾಸನ ಸಭೆಯ ಸುಮಾರು ೬೦ ಮಂದಿ ಸದಸ್ಯರು, ಮುಖ್ಯಮಂತ್ರಿ ಶ್ರೀ ಬಿ. ಜಿ. ಖೇರರಿಗೆ ಮನವಿಯೊಂದನ್ನು ಕಳುಹಿಸಿ ಶಾಸನ ಸಭೆಯ ಅಧಿವೇಶನದ ದಿನ ಭತ್ಯವನ್ನು ಹೆಚ್ಚಿಸಬೇಕೆಂದು ಕೋರಿದ್ದಾರೆ. ಮದರಾಸು ಮತ್ತು ಇತರ ಕಡೆಗಳಲ್ಲಿ ಹೆಚ್ಚಾಗಿ ಭತ್ಯ ಕೊಡಲಾಗುತ್ತಿದೆಯೆಂದೂ, ಬೊಂಬಾಯಿಯಲ್ಲಿ ದಿನಕ್ಕೆ ೨೦ ರೂ. ಗಳ ಭತ್ಯವು ತಮ್ಮ ಊಟ ವಸತಿಗೆ ಸಾಲದೆಂದೂ ತಿಳಿಸಿದ್ದಾರೆ.

ಎಂ. ಎಸ್. ಸುಬ್ಬಲಕ್ಷ್ಮಿಗೆ ಗಾಂಧೀ ಬೆಳ್ಳಿಯ ಪ್ರತಿಮೆ

ಕಳೆದ ತಿಂಗಳು ೨೦ನೇ ತಾ॥ ಬೊಂಬಾಯಿನಲ್ಲಿ ಗಾಂಧಿ ಸ್ಮಾರಕ ನಿಧಿಯ ಸಹಾಯಾರ್ಥವಾಗಿ ಸಂಗೀತ ಕಛೇರಿ ನಡೆಸಿದ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿಯವರಿಗೆ ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಮಹಾತ್ಮರ ಬೆಳ್ಳಿಯ ಪ್ರತಿಮೆಯೊಂದನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ.

ರೈಲು ಆಸ್ಫೋಟನೆಯಿಂದ ಅನೇಕರ ಮರಣ

ರಷ್ಯ ಆಕ್ರಮಿತ ಜರ್ಮನಿಯಲ್ಲಿ ಮೊನ್ನೆ ದಿನ ಮದ್ದು ಗುಂಡುಗಳನ್ನು ತುಂಬಿದ್ದ ಒಂದು ರೈಲು ಆಸ್ಫೋಟನೆಯಾಗಿ ಅನೇಕ ರೈಲ್ವೆ ಕೆಲಸಗಾರರು ಸತ್ತರೆಂದೂ, ಮನೆಗಳೂ ಮತ್ತು ಇತರ ಕಟ್ಟಡಗಳೂ ನಾಶವಾದುವೆಂದೂ, ಮತ್ತು ಅಕ್ಕಪಕ್ಕದಲ್ಲಿದ್ದ ಅನೇಕ ಮನೆಗಳೂ ನಾಶವಾದುವೆಂದೂ ವರದಿಯಾಗಿದೆ.

ಕಾಶ್ಮೀರವು ಸ್ವತಂತ್ರವಾಗಿರಲು ಅಸಾಧ್ಯ

ಕಾಶ್ಮೀರವು ಸ್ವತಂತ್ರವಾಗಿರುವುದೆಂದು ಹೇಳುವುದು ಅರ್ಥವಿಲ್ಲದ್ದು. ಕಾಶ್ಮೀರದ ವಿಭಜನೆಯು ಸಹ ಅಸಂಭವವಾದುದು. ಅದು ಭಾರತಕ್ಕೆ ಸೇರದೆ ಗತ್ಯಂತರವೇ ಇಲ್ಲ ಎಂದು ಪ್ರಧಾನಿ ಷೇಖ್ ಅಬ್ದುಲ್ಲಾರವರು ದಹಲಿಯಲ್ಲಿ ತಿಳಿಸಿರುತ್ತಾರೆ. ಮಾನವ ನಾಗರಿಕತೆಯ ಪ್ರಗತಿಗೆ ನಡೆಸುವುದನ್ನು ವಿರೋಧಿಸುವುದೇ ತಮ್ಮ ಧ್ಯೇಯವೆಂದೂ ಎಂದೆಂದಿಗೂ ಕಾಶ್ಮೀರವು ಭಾರತವನ್ನು ಬಿಡುವುದಿಲ್ಲವೆಂದೂ ತಿಳಿಸುತ್ತಾರೆ.

ಒಂದು ಗಂಟೆ ಕಾಲ ಸ್ತ್ರೀ ಕೂಲಿಗಾರರ ಸತ್ಯಾಗ್ರಹ

ಮೈಸೂರು ೧೭

ಕೃಷ್ಣರಾಜೇಂದ್ರ ಗಿರಣಿಯ ರೀಲಿಂಗ್ ಶಾಖೆಯ ಸ್ತ್ರೀ ಕೂಲಿಗಾರರಿಗೆ ಸುಮಾರು ೩-೪ ತಿಂಗಳಿನಿಂದಲೂ ಮ್ಯಾನೇಜ್‌ಮೆಂಟಿನವರು ಸರಿಯಾಗಿ ಕೆಲಸ ಕೊಡದೆ ಅನೇಕ ದಿನಗಳು ಕೆಲಸವಿಲ್ಲವೆಂದು ಹೇಳಿ ಅವರನ್ನು ಮನೆಗೆ ಕಳುಹಿಸುತ್ತಿರುವುದನ್ನು ಪ್ರತಿಭಟಿಸಲು, ಸುಮಾರು ೩೦೦ ಮಂದಿ ಸ್ತ್ರೀ ಕಾರ್ಮಿಕರು ಗಿರಣಿಯ ಕಛೇರಿಯ ಮುಂದೆ ನಿನ್ನೆ ದಿನ ಒಂದು ಗಂಟೆ ಕಾಲ ಸತ್ಯಾಗ್ರಹವನ್ನು ಹೂಡಿದ್ದರೆಂದು ತಿಳಿದುಬಂದಿದೆ.

ಸತ್ಕಾರ ಕೂಟ

ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿಯವರ ಗೌರವಾರ್ಥವಾಗಿ ಮೊನ್ನೆ ದಿನ ಶ್ರೀ ಕನ್ನಿ ಕಾಪರಮೇಶ್ವರಿ ದೇವಸ್ಥಾನದವರು ಚಾಮುಂಡೇಶ್ವರಿ ಭವನದಲ್ಲಿ ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಮೈಸೂರು ರೈಲ್ವೆ ಚೀಫ್ ಇಂಜನಿಯರಾದ ಶ್ರೀ ಸಿ. ನಾರಾಯಣಸ್ವಾಮಿ ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಉಪಾಹಾರದನಂತರ ಶ್ರೀ ಪುಟ್ಟವೆಂಕಟರಾಮ ಶೆಟ್ಟಿಯವರು ಸ್ವಾಗತ ಭಾಷಣಮಾಡಿ, ಅವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ಅಧ್ಯಕ್ಷರು ಭಾಷಣ ಮಾಡಿ, ಶ್ರೀ ಗೋಪಾಲಕೃಷ್ಣ ಶೆಟ್ಟಿಯವರ ಸೇವೆಯನ್ನು ಕೊಂಡಾಡಿದರು. ಅತಿಥಿಗಳು ತಮ್ಮ ವಂದನೆಯನ್ನು ಅರ್ಪಿಸಿದರು.

ಶಿವಾಜಿ ಜಯಂತಿ

ರಾಜಧಾನಿಯ ಮರಾಠಾ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ಚಾಮುಂಡಿಪುರದ ೨೧೩ನೇ ಮನೆಯಲ್ಲಿ ಛತ್ರಪತಿ ಮಹಾರಾಜರವರ ಜಯಂತಿ ಉತ್ಸವದ ಪ್ರಯುಕ್ತ, ವಿದ್ವಾನ್ ಜಿ. ಆರ್. ದಾಸಪ್ಪನವರ ಸಂಗೀತ ನಡೆಯುವುದು.

ರೈತರ ಸಭೆ

ಮೈಸೂರು ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ಬನ್ನೂರು ಹೋಬಳಿ ಶೀಗಟ ಯಲ್ಲಿ ರೈತರ ಸಭೆಯು ೨೨ನೇ ತಾ॥ ಸೋಮವಾರ ಸಂಜೆ ೫ ಗಂಟೆಗೆ ಶ್ರೀ ಕೆ. ಲಕ್ಕಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆಯುವುದು.

ಮುಷ್ಕರ ಮುಂದೆ ಹೋಯಿತು

ಇದೇ ೨೦ನೇ ತಾ॥ ನಿಂದ ಆರಂಭವಾಗಬೇಕಾಗಿದ್ದ ಮದ್ರಾಸ್ ಮೋಟಾರ್ ಸರ್ವಿಸ್ ಕೆಲಸಗಾರರ ಮುಷ್ಕರವು, ಅಸಿಸ್ಟೆಂಟ್ ಲೇಬರ್ ಕಮೀಷನರು ಮೋಟಾರು ಕೆಲಸಗಾರರ ಸಂಘಕ್ಕೆ ಭೇಟಿ ಇತ್ತು ಇನ್ನು ಕೆಲವು ದಿನಗಳ ಕಾಲಾವಕಾಶ ಕೊಡಬೇಕೆಂದು ಸೂಚಿಸಿದ್ದರ ಮೇರೆ ಮುಂದೆ ಹಾಕಲ್ಪಟ್ಟಿದೆ.

ಅಕ್ಕನ ಬಳಗ

ರಾಜಧಾನಿಯ ಅಕ್ಕನ ಬಳಗದ ಆಶ್ರಯದಲ್ಲಿ ಇದೇ ೨೦ನೇ ತಾ॥ ರವಿವಾರ ಸಂಜೆ ೬-೩೦ ಗಂಟೆಗೆ ನಾಲೆ ಬೀದಿಯಲ್ಲಿರುವ ವಿದ್ಯಾಶಾಲೆ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಚೆನ್ನಪ್ಪ ಉತ್ತಂಗಿಯವರು [illegible] ಕಾವ್ಯ ಅಕ್ಕನ ವಾಣಿ ಸಂಪಾದನೆ [illegible] ವಿಷಯವಾಗಿ ಭಾಷಣ ಮಾಡುವರು.

ಬಿಳಿಗಿರಿ ರಂಗ ಸ್ವಾಮಿ ರಥೋತ್ಸವದಲ್ಲಿ ಅವ್ಯವಸ್ಥೆ

ಕಳೆದ ೧೦ನೇ ತಾರೀಖು ನಡೆದ ಶ್ರೀ ಬಿಳಿಗಿರಿರಂಗ ಸ್ವಾಮಿ ರಥೋತ್ಸವದ ಸಂದರ್ಭದಲ್ಲಿ ಕೆಲವು ಸ್ವಾನಾತಿರಿಕ್ತಗಳು ಸಂಭವಿಸಿ ಭಕ್ತಾದಿಗಳಿಗೆ ಅವಮಾನವಾಸವ್ರಂಟಾಯಿತೆಂದು ವರದಿಯಾಗಿದೆ. ರಥೋತ್ಸವಕ್ಕೆ ಜನರನ್ನು ಬಿಜಮಾಡಿಸ ದ್ದರು. ಕಾಲಾತೀತವಾಗಿ ಪಣಾವನೂಲು ನೇತೆ ದಪಾಸೋಪಣಕ್ಕೆ ಮುಂಚೆ ನಡೆಯಬೇಕಾಗಿದ್ದ ಅನೇಕ ಮಂಟಪೋತ್ಸವಗಳು ನಡೆಯಲಿಲ್ಲ. ಛತ್ರದಲ್ಲಿ ಊಟದ ವ್ಯವಸ್ಥೆಯೂ ತೃಪ್ತಿಕರವಾಗಿರಲಿಲ್ಲ. ಕೆಲವು ದಿವಸಗಳ ಹಿಂದೆ ಸಂಸ್ಥಾನದ ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು ಬೆಟ್ಟಕ್ಕೆ ಭೇಟಿ ಇತ್ತಾಗ ದೇವಸ್ಥಾನದ ನೌಕರವರ್ಗದವರುಗಳು ತಮ್ಮ ಕುಂದುಕೊರತೆಗಳ ಬಗ್ಗೆ ಸಲ್ಲಿಸಿದ ಅಹವಾಲುಗಳಿಗೆ ಯಾವ ಪರಿಹಾರವನ್ನೂ ಕಲ್ಪಿಸದಿರುವುದೇ ಆ ಅವರುಗಳಿಗೆ ಬಹಳ ಅಸಮಾಧಾನವುಂಟಾಗಿದೆ. ರಥೋತ್ಸವಕ್ಕೆ ... ... ಅವರುಗಳೆಲ್ಲರೂ ... ... ತೆಗಳೂ ನಡೆ ... ... ಪ್ರಸಂಗವೂ ನಡೆಯಿತು.

ಕಾಡು ಪ್ರದೇಶದಲ್ಲಿ ವಾಸಿಸುತ್ತಿರುವ ಪ್ರೆಬ್ಯಂಸ ದೇವಾಲಯದ ನೌಕರರ ಬಗ್ಗೆ ಸರ್ಕಾರದವರು ಸಹಾನುಭೂತಿ ತೋರಿಸುವುದು ಅತ್ಯಗತ್ಯವಾಗಿದೆ. ಇಲ್ಲಿ ಇತ್ತೀಚೆಗೆ ಸ್ಥಾಪಿತವಾಗಿರುವ ರೇಷ್ಮೆ ಇಲಾಖೆಯ ನೌಕರರಿಗೆ ತಕ್ಕ ಭತ್ಯ ಮತ್ತು ಮಲೆನಾಡು ಭತ್ಯವನ್ನು ಕೊಡಲಾಗುತ್ತಿದೆ. ಕೇವಲ ಅಲ್ಪ ಸಂಬಳ ಪಡೆಯುತ್ತಿರುವ ದೇವಾಲಯದ ನೌಕರರಿಗೆ ಈ ಯಾವ ಸೌಕರ್ಯಗಳೂ ಇಲ್ಲದೆ ಅವರ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿದೆ. ಆದ್ದರಿಂದ ಘನ ಸರ್ಕಾರದವರು ಸದರಿ ನೌಕರರ ಕುಂದುಕೊರತೆಗಳನ್ನು ನಿವಾರಿಸಿ ದೇವರ ಆರಾಧನೆಯು ಸುಗಮವಾಗಿ ನಡೆಯುವಂತೆ ಏರ್ಪಡಿಸುವರೆಂದು ಅಪೇಕ್ಷಿಸಲಾಗಿದೆ. ಯಾತ್ರಿಕ

ಅಧಿಕಾರಿಗಳ ಮೇಲೆ ಗುಂಪಿನ ಕೈ

ನಾಸಿಕಕ್ಕೆ ನಾಲ್ಕು ಮೈಲಿ ದೂರ ಇರುವ ಹಳ್ಳಿಯಲ್ಲಿ ಕಳೆದ ವಾರಾಂತ್ಯದಲ್ಲಿ ಹಳ್ಳಿಗರ ಗುಂಪೊಂದು ರೆವಿನ್ಯೂ ಮತ್ತು ಪೊಲೀಸ್ ಅಧಿಕಾರಿಗಳ ಮೇಲೆ ಕೈ ಮಾಡಿದುದರ ಫಲವಾಗಿ ೧೦ ಜನ ಅಧಿಕಾರಿಗಳಿಗೆ ಗಾಯಗಳಾಗಿವೆ. ಅಧಿಕಾರಿಗಳು ಧಾನ್ಯ ಸಂಗ್ರಹಣೆಗಾಗಿ ಹೋಗಿದ್ದಾಗ ಅವರನ್ನು ಹಳ್ಳಿಗರು ಸುತ್ತುಗಟ್ಟಿ ಹೊಡೆದರೆಂದು ಹೇಳಲಾಗಿದೆ. ೩ ಜನರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ೭೩ ಜನ ಸ್ತ್ರೀಪುರುಷರನ್ನು ಈ ಸಂಬಂಧವಾಗಿ ಹಿಡಿಯಲಾಗಿದೆ.

ದೇವಾಲಯದ ಕಂಬಗಳು ಉರುಳಿದುವು

ಆಗರ-ಮ್ಯಾಂಟಳ್ಳಿ, ೧೫

ಆಗರದಲ್ಲಿರುವ ಪುರಾತನವಾದ ಶ್ರೀ ರಾಮೇಶ್ವರ ಸ್ವಾಮಿಯವರ ದೇವಾಲಯದ ಮಹಾದ್ವಾರದ ಬಳಿ ಇದ್ದ ಮುಂಭಾಗದ ಒಂದು ಕಲ್ಲು ಕಂಭವು ಕಳೆದ ಬುಧವಾರರಾತ್ರಿ ಗಾಳಿಯ ದೆಸೆಯಿಂದ ಉರುಳಿ ಎದುರಿಗಿದ್ದ ಇನ್ನೊಂದು ಕಂಬದ ಮೇಲೆ ಬಿದ್ದು ಅದನ್ನೂ ಕೆಳಕ್ಕೆ ಕೆಡವಿತು. ಈ ದೇವಾಲಯವು ಬಹಳ ಪುರಾತನವಾದುದನ್ನೂ, ಇಲ್ಲಿನ ಈಶ್ವರ ವಿಗ್ರಹವು ಪರಶುರಾಮ ಪ್ರತಿಷ್ಠಿತವಾದುದೆಂದೂ ಪ್ರತೀತಿಯಿದೆ.

ಶ್ರೀ ರಾಮೇಶ್ವರ ದೇವಾಲಯವು ಬಹಳ ಶಿಥಿಲವಾಗಿ, ಪ್ರಾಕಾರದ ಗೋಡೆಗಳ ಕಲ್ಲುಗಳೂ ಮತ್ತು ಒಳಗಿನ ಅಂಕಣಗಳ ಗೋಡೆ ಕಲ್ಲುಗಳೂ ಕಳಚಿ ಬಿದ್ದುಹೋಗಿವೆ. ದೇವಸ್ಥಾನದ ಗೋಪುರವು ಈಗಲೋ, ಇನ್ನೊಂದು ಘಳಿಗೆಗೋ ದೇವರ ವಿಗ್ರಹದ ಮೇಲೆ ಕಳಚಿ ಬೀಳುವಂತಿದೆ. ದೇವಸ್ಥಾನದೊಳಕ್ಕೆ ಪ್ರವೇಶಿಸುವದೇ ಬಹಳ ಅಪಾಯಕರವಾಗಿದೆ. ಈ ದೇವಸ್ಥಾನವನ್ನು ಜೀರ್ಣೋದ್ಧಾರ ಪಡಿಸುವ ಬಗ್ಗೆ ಮುಜರಾಯಿ ಅಧಿಕಾರಿಗಳು ಕೆಲವು ದಿವಸಗಳಹಿಂದೆ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಒಂದು ಅಂದಾಜನ್ನು ತಯಾರಿಸಿರುವರೆಂದು ಗೊತ್ತಾಗಿದೆ. ಆದರೆ ಕೆಲಸ ಮಾತ್ರ ಆರಂಭವಾಗದೆ ದೇವಾಲಯವು ನೆಲಸಮವಾಗುತ್ತಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಇದರ ಬಗ್ಗೆ ಗಮನ ಕೊಟ್ಟು ದೇವಾಲಯದ ಜೀರ್ಣೋದ್ಧಾರ ಮಾಡುವುದು ಅತ್ಯಗತ್ಯವಾಗಿದೆ.

ಜಹಗೀರ್‌ದಾರರ ಕುಟುಂಬದವರ ಭೇಟಿ

ಶ್ರೀಮಂತ ಜಹಗೀರ್‌ದಾರ್ರವರ ಕುಟುಂಬ ವರ್ಗದವರುಕಳೆದ ವಾರ ಯಳಂದೂರು ತಾಲ್ಲೂಕಿಗೆ ಭೇಟಿಕೊಟ್ಟು ಶ್ರೀ ಬಿಳಿಗಿರಿ ರಂಗನ ಬೆಟ್ಟ ಮತ್ತು ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಪ್ರವಾಸ ಮಾಡಿದರು.

ಸೇಂದಿ ವ್ಯಾಪಾರ ನಿಂತಿಲ್ಲ

ಈ ಪ್ರಾಂತ್ಯದಲ್ಲಿ ಸೇಂದಿ ಮಾರಾಟವನ್ನು ನಿಷೇಧಿಸಿ ಸರ್ಕಾರದವರು ಆಜ್ಞೆ ಜಾರಿಮಾಡಿರುತ್ತಾರೆ. ಆದರೆ ಕಳ್ಳತನದಲ್ಲಿ ಬೈಸಿಕಲ್ಲಿನಮೇಲೆ ಸೇಂದಿಯನ್ನು ತಂದು ದಿನವಹಿ ಮಾರಾಟ ನಡೆಯುತ್ತಿದೆ.

ಹಸಿದ ಗುಂಪಿನವರಿಂದ ತಾಲ್ಲೂಕುಸಮ್ಮೇಳನಕ್ಕೆ ಅಡ್ಡಿ

ಕೈಲಾಸಿನಲ್ಲಿ ಕಳೆದ ೧೩ನೇ ತಾ॥ ಪ್ರಾರಂಭವಾದ ತಾಲ್ಲೂಕು ಸಹಕಾರ ಸಂಘಗಳ ಸಮ್ಮೇಳನವು ಗಲಭೆಯಲ್ಲಿ ಮುಕ್ತಾಯವಾಯಿತೆಂದು ಹೇಳಲಾಗಿದೆ. ಸಮ್ಮೇಳನದ ಸದಸ್ಯರುಗಳು ಉಪಾಹಾರಕ್ಕಾಗಿ ಪಕ್ಕದ ಭವನಕ್ಕೆ ಹೋದಾಗ ಹೊರಗಡೆ ಹೊಟ್ಟೆಗಿಲ್ಲದ ಜನರ ಗುಂಪು ಒಳಕ್ಕೆ ನುಗ್ಗಿತೆಂದೂ ಆಗ ತಿಂಡಿಯನ್ನು ಅವರಿಗೂ ಕೊಡಬೇಕೆಂದು ಕೆಲವು ಸದಸ್ಯರೂ, ಬೇಡವೆಂದು ಇನ್ನೂ ಕೆಲವರೂ ಜಿಜ್ಞಾಸೆ ಮಾಡುತ್ತಿರುವಾಗ, ಗುಂಪಿನವರು ಅಲ್ಲಿದ್ದ ತಿಂಡಿಯನ್ನು ತಿಂದು ಪರಾರಿಯಾದರೆಂದು ವರದಿಯಾಗಿದೆ.

ಭಾರತಕ್ಕೆ ಮೋಟಾರು ರಿಕ್ಷಾಗಳು

ಬರ್ಮಿಂಗ್‌ಹ್ಯಾಮಿನಲ್ಲಿ ಭಾರತಕ್ಕಾಗಿ ಮೋಟಾರು ರಿಕ್ಷಾಗಳು ತಯಾರಾಗುತ್ತಿವೆ. ಅವುಗಳ ಪರೀಕ್ಷಾ ಪ್ರಯೋಗವು ಇತ್ತೀಚೆಗೆ ನಡೆದು ಅವು ೧೫ ಗಂಟೆಗಳಲ್ಲಿ ೪೮೫ ಮೈಲಿಗಳನ್ನು ಓಡಬಲ್ಲವೆಂದು ಹೇಳಲಾಗಿದೆ.

ದರ್ಬಾನಿನ ಭಾರತೀಯರ ಮೇಲೆ ಧಾಳಿ

ದಕ್ಷಿಣ ಆಫ್ರಿಕದ ದರ್ಬಾನಿನಲ್ಲಿ ಭಾರತೀಯರ ಬಸ್ಸಿನ ಮೇಲೆ ಅಲ್ಲಿನ ಕಪ್ಪು ಜನರು ಕಲ್ಲುಗಳನ್ನು ಎಸೆದು ಗಲಭೆ ನಡೆಸಿದರೆಂದು ವರದಿಯಾಗಿದೆ.

ಗಾಯತ್ರೀ ಟಾಕೀಸ್

ಪ್ರತಿದಿನ 3 ಪ್ರದರ್ಶನಗಳು

19-5-49 ರಿಂದ 2 ದಿನಗಳು ಮಾತ್ರ

ಪ್ಯಾರಾಮೌಂಟ್ಸ್‌ರವರ ಆದರ್ಶ ಚಿತ್ರ

ಹಜಾರ್ಡ್

HAZARD

ಮುಂದಿನ ಬದಲಾವಣೆ

ಬ್ಲಾಕ್ ಬಾರ್ಟ್

ಷಾಂಗೈ ಬಳಿ ಕದನ

ಚೀಣದ ಅತ್ಯಂತ ಪ್ರಮುಖನಗರ ಷಾಂಗೈಗೆ ಗಂಡಾಂತರ ಒದಗಿದೆ. ಅಲ್ಲಿ ಮಾಪದಲ್ಲಿರುವ ಹಂಗೆಜೋ ವಿಮಾ... ಲ್ಯಾಣದ ಬಳಿ ಕಮ್ಯೂನಿಸ್ಟರಿಗೂ ... ರಿ ಪಡೆಗಳಿಗೂ ಭೀಕರ ಕದನ ನ... ತ್ತಿದೆಯೆಂದು ವರದಿಯಾಗಿದೆ. ... ನ್ನು ರಕ್ಷಿಸಲು ಸರ್ಕಾರಿ ಸೈನ್ಯಗಳು ಸಿದ್ಧತೆ ಮಾಡಿವೆಯೆಂದೂ, ... ಶೀಘ್ರದಲ್ಲಿಯೇ ಅದು ಕಮ್ಯೂನಿಸ್ಟ... ರವಾಗುವುದರಲ್ಲಿ ಸಂದೇಹವಿಲ್ಲ... ಹೇಳಲಾಗಿದೆ. ಈಗಾಗಲೇ ಜನರು... ರವನ್ನು ಬಿಡುತ್ತಿದ್ದಾರೆ.

ಲಗ್ನದ ಜವಳಿಗಾಗಿ

ಗುರುದೇವಾ ಹಾ...

ಬೆಂಗಳೂರು ಜವಳಿ ಅಂಗಡಿ

ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ, :: ಮೈ...

॥ಶ್ರೀ॥

ಜಗದಾಂಬಾ ಶಿಶುವಿಹಾ...

ದಿವಾನ್ಸ್ ರೋಡ್, ಮೈಸೂರು.

ಬೇಸಿಗೆ ರಜಕ್ಕಾಗಿ ಮುಚ್ಚಲ್ಪಟ್ಟ ಜಗದಂಬಾ ಶಿಶುವಿಹಾರವ... ೧೩-೫-೪೯ನೇ ಗುರುವಾರದಿಂದ ತೆ... ಲಾಗಿದೆ. ಕಿಂಡ್ರಗಾರ್ಟನ್ ಮತ್ತು ... ನಿಕ ಶಿಶುವಿದ್ಯಾಭ್ಯಾಸಕ್ಕೆ ಈ ಶಾಲೆ... ಆದರ್ಶಪ್ರಾಯವಾಗಿದೆ ಎಂದು ವಿದ್ಯಾ... ಸದ ಇಲಾಖೆಯ ಅಧಿಕಾರಿಗಳಿಂದಲೂ ... ಶು ವಿದ್ಯಾಭ್ಯಾಸ ಪ್ರವೀಣರಿಂದಲೂ ... ಸ್ಕರಿಸಲ್ಪಟ್ಟಿದೆ. ಇಲ್ಲಿ ಪ್ಯಾಸಂಗ ಮಾ... ೭ ವರ್ಷದ ವಯಸ್ಸಿನ ಮಕ್ಕಳನ್ನು ... ವಾಗಿ ಮಿಡ್ಲ್ ಫಸ್ಟ್ ಇಯರ್ ಪರೀ... ಖಾಸಗಿಯಾಗಿ ತರಪೇತು ಮಾಡಲಾ... ವುದು. ಈ ರೀತಿ ಪ್ರತಿ ವರ್ಷವೂ ಅನೇ... ಮಕ್ಕಳು ಉತ್ತೀರ್ಣವಾಗಿ ಬೇರೆ ಶಾ... ಳಗೆ ಸೇರುತ್ತಲಿದ್ದಾರೆ. ಆದ್ದರಿಂದ ... ವಿದ್ಯಾಭ್ಯಾಸದಲ್ಲಿ ಆಸಕ್ತರಾಗಿರುವ ... ತಾಪಿತೃಗಳು ತಮ್ಮ ಮಕ್ಕಳನ್ನು ... ವಿಳಂಬ ಮಾಡದೆ ಈ ಶಾಲೆಗೆ ಸೇರಿಸಿ ... ಯೋಜನವನ್ನು ಪಡೆಯುವುದರ ಮೂ... ಕ ಶಾಲೆಯ ವ್ಯವಸ್ಥಾಪಕರ ಸದುದ್ದೇ... ಪ್ರೋತ್ಸಾಹವನ್ನು ನೀಡುವರೆಂದು ... ಲಾಗಿದೆ. ವಿಷಯಗಳಿಗೆ ಮೊಖ್ತಾ ... ರ ಮಾಡಬಹುದು.

ಡಿ. ಕೃಷ್ಣಮೂರ್ತಿ

ವ್ಯವಸ್ಥಾಪಕ

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಸಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೂರ್ಯಕಲಾ

ಗಂಡಸರ ಮಾತ್ರ ಕೋಶದ ಬಿಳುಪು, ಕೆಂಪು ಮೈ ಮೇಲೆ ಮೇಹದ ಮಚ್ಚೆಗಳು, ಮೇಹ ವ್ರಣಗಳು ಇವುಗಳ ಪರಿಹಾರ. ಪಥ್ಯವಿಲ್ಲದೆ ಸೇವಿಸುವ ಔಷಧಿ.

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ :—

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Edited, printed, and published by A.R. Nagarajan at the Sadhvi Press, D. Subbiah Road, Mysore.

* ಪ್ರಭುದೇವಾ ಟಾಕೀಸಿನಲ್ಲಿ *

19-5-49ನೇ ಗುರುವಾರದಿಂದ ದಿನವಹಿ 3 ಆಟಗಳು

ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ → # ಉತ್ತಮ ಪುತ್ರ

ತಾರಾಗಣ: ಪಿ. ಯು. ಚಿನ್ನಪ್ಪ, ಎಂ. ವಿ. ರಾಜಮ್ಮ, ಟಿ. ಎಸ್. ಬಾಲಯ್ಯ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ, ಕಾಳಿ ಎನ್. ರತ್ನಂ

ಫೋ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೧೯-೫-೪೯ [ಸಂಚಿಕೆ ೨೨೭

ಕಾಶ್ಮೀರದ ರಾಜರಿಗೆ ೭ ತಿಂಗಳ ವಿದೇಶವಾಸ

ಕ್ಷಯರೋಗ ನಿವಾರಣಾ ಕ್ರಮ

ನೂತನ ಯಂತ್ರದ ಸ್ಥಾಪನೆ

ಸ್ವಂ ಸು. ಫೋ] ಬೆಂಗಳೂರು ೧೮

ಸಂಸ್ಥಾನದಲ್ಲಿ ಕ್ಷಯ ರೋಗವನ್ನು ನಿವಾರಿಸುವ ಸಲುವಾಗಿ ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮದ ಅಂಗವಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೊಸದಾಗಿ ಸಾಮೂಹಿಕ ರೇಡಿಯೋಗ್ರಫಿ ಯಂತ್ರೋಪಕರಣಗಳನ್ನು ಸ್ಥಾಪಿಸಲಾಗಿದೆ. ಇದರಿಂದ ಕ್ಷಯ ರೋಗವು ಇರಲಿ, ಇಲ್ಲದಿರಲಿ ಪ್ರತಿಯೊಬ್ಬ ಮನುಷ್ಯನ ಶ್ವಾಸಕೋಶಗಳ ಚಿತ್ರವನ್ನು ತೆಗೆದು ಕೂಲಂಕಷವಾಗಿ ಪರಿಶೀಲಿಸಿ ರೋಗದ ಚಿಹ್ನೆಗಳೇನಾದರೂ ಇದ್ದರೆ ಅದಕ್ಕೆ ಚಿಕಿತ್ಸೆ ನಡೆಸಲು ಅನುಕೂಲವಾಗುವುದು. ಈ ಯಂತ್ರದಿಂದ ಸಾರ್ವಜನಿಕರ ಶ್ವಾಸಕೋಶಗಳ ಪರೀಕ್ಷೆಯನ್ನು ನಡಸಿ ಅಗತ್ಯವಾದ ಚಿಕಿತ್ಸೆಯನ್ನು ಉಚಿತವಾಗಿ ಮಾಡಲಾಗುವುದು. ಆದ್ದರಿಂದ ಈ ನೂತನ ಯಂತ್ರದ ಪ್ರಯೋಜನವನ್ನು ಪ್ರತಿಯೊಬ್ಬರೂ ಪಡೆದು ಕ್ಷಯರೋಗ ನಿವಾರಣಾ ಕಾರ್ಯದಲ್ಲಿ ಸಹಕಾರಿಗಳಾಗಬೇಕೆಂದು ಪ್ರಾರ್ಥಿಸಿ ಸರ್ಕಾರದ ಪ್ರಕಟಣೆಯೊಂದು ಹೊರಟಿದೆ.

ಮಿಷನ್ನಿನಲ್ಲಿ ಭತ್ತ ಕುಟ್ಟಿಸಲು ಸೌಕರ್ಯ

ಗ್ರಾಮಾಂತರ ಪ್ರದೇಶಗಳಲ್ಲಿ ಭತ್ತವನ್ನು ಹಲ್ಲರುಗಳಲ್ಲಿ ಕುಟ್ಟಿಸಲು ರಹದಾರಿ ಇಲ್ಲದೆ ಜನರಿಗೆ ತೊಂದರೆಯಾಗಿರುವುದರಿಂದ ಸರ್ಕಾರದವರು ಈ ಅಂಶವನ್ನು ಪರಿಶೀಲಿಸಿ ಇನ್ನು ಮುಂದೆ ಗ್ರಾಮಾಂತರ ಪ್ರದೇಶಗಳಲ್ಲಿ ರಹದಾರಿ ಪಡೆಯದೆ ೩೦ ಸೇರಿನಷ್ಟು ಭತ್ತವನ್ನು ಹಲ್ಲರುಗಳಲ್ಲಿ ಕುಟ್ಟಿಸಲು ವಿನಾಯಿತಿ ಕೊಟ್ಟಿರುತ್ತಾರೆ.

ಲಂಚದ ಆಪಾದನೆಗಾಗಿ ರೈಲ್ವೆ ನೌಕರರಿಗೆ ಶಿಕ್ಷೆ

ಸಂಸ್ಥಾನದ ಲಂಚ ನಿರೋಧ ಶಾಖೆಯವರು ಅರಸೀಕೆರೆ ಮತ್ತು ಇತರ ರೈಲ್ವೆ ಸ್ಟೇಷನ್ನುಗಳಲ್ಲಿ ಪರಿಶೀಲನೆ ನಡೆಸಿದ ದರ ಫಲವಾಗಿ, ಇಬ್ಬರು ಸ್ಟೇಷನ್ ಮಾಸ್ಟರುಗಳನ್ನು ಕೆಳ ದರ್ಜೆಗೆ ಇಳಿಸಲಾಯಿತೆಂದೂ, ೯ ಮಂದಿ ಸ್ಟೇಷನ್ ಮಾಸ್ಟರುಗಳು, ೩ ಜನ ಅಸಿಸ್ಟೆಂಟ್ ಮಾಸ್ಟರುಗಳು ಮತ್ತು ಇಬ್ಬರು ಗುಮಾಸ್ತರುಗಳ ಬಡ್ತಿಯನ್ನು ೨ ವರ್ಷಗಳ ಕಾಲ ನಿಲ್ಲಿಸಲಾಗಿದೆಯೆಂದೂ ಸರ್ಕಾರದ ಪ್ರಕಟಣೆಯಿಂದ ತಿಳಿದುಬಂದಿದೆ.

ಹೆಸರುಘಟ್ಟದಲ್ಲಿ ಹಾಲಿನ ಕೇಂದ್ರ

ಹೆಸರುಘಟ್ಟದಲ್ಲಿ ೩ ಲಕ್ಷ ರೂ. ಖರ್ಚಿನಿಂದ ಒಂದು ಹಾಲು ಸರಬರಾಜು ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿದ್ದಾರೆ. ಕೆಲವು ಸಿಂಧೀ ಹಸುಗಳನ್ನು ಹೆಸರಘಟ್ಟಕ್ಕೆ ಕಳುಹಿಸಿಕೊಡಲು ಭಾರತ ಸರ್ಕಾರದವರು ಒಪ್ಪಿದ್ದಾರೆ.

ಬೆಂಕಿ ತಗುಲಿ ಉಡುಪಿ ದೇವಾಲಯಕ್ಕೆ ೧॥ ಲಕ್ಷ ರೂ. ನಷ್ಟ

ಉಡುಪಿಯ ಶ್ರೀಕೃಷ್ಣ ದೇವಾಲಯದ ಭೋಜನ ಶಾಲೆಗೆ ಕಳೆದ ಬುಧವಾರ ಬೆಂಕಿ ಬಿದ್ದು ಶಾಲೆಯು ಪೂರ್ಣವಾಗಿ ಭಸ್ಮವಾಯಿತು. ದಿನವಹಿ ಸಾವಿರ ಜನ ಇಲ್ಲಿ ಭೋಜನ ಮಾಡುತ್ತಿದ್ದರು. ... ೧॥ ಲಕ್ಷ ರೂ.ಗಳ ನಷ್ಟವಾಗಿದೆಯೆಂದು ಅಂದಾಜಾಗಿದೆ.

ರೂರಲ್ ಹೈ ಸ್ಕೂಲಿಗೆ ಸರ್ಕಾರದ ಸಹಾಯ

ಟಿ. ನರಸೀಪುರದ ಗ್ರಾಮ ವಿದ್ಯೋದಯ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ರೂರಲ್ ಹೈ ಸ್ಕೂಲಿನ ಕಟ್ಟಡಕ್ಕೆ ಸರ್ಕಾರದವರು ೫೫,೩೦೦ ರೂ. ಗ್ರಾಂಟನ್ನು ಕೊಟ್ಟಿರುತ್ತಾರೆ. ಖಾಸಗೀಯವರಿಂದಲೂ ೫೦ ಸಾವಿರ ರೂ. ಸಂಗ್ರಹವಾಗಿದೆ. ಈ ಸಂಘದ ಆಶ್ರಯದಲ್ಲಿ ಒಂದು ವ್ಯವಸಾಯ ಶಿಕ್ಷಣ ಶಾಲೆಯನ್ನು ತೆರೆಯಬೇಕೆಂದು ನಿರ್ಧರಿಸಲಾಗಿದೆ. ಅದಕ್ಕೆ ಸರ್ಕಾರದವರು ಸಹಾಯ ಮಾಡಬೇಕು— ಎಂದು ಅದರ ಕಾರ್ಯದರ್ಶಿಗಳು ಕೋರಿರುತ್ತಾರೆ.

ಸೋಷಲಿಸ್ಟ್ ಪಾರ್ಟಿಯನ್ನು ಹೊರದೂಡಲಾಯಿತು

ಪ್ರಪಂಚದ ಸೋಷಲಿಸ್ಟ್ ಸಮ್ಮೇಳನವು ಇಟಲಿಯ ಸೋಷಲಿಸ್ಟ್ ಪಂಗಡವನ್ನು ಹೊರದೂಡಲು ಸರ್ವಾನುಮತದಿಂದ ಕಳೆದ ಸೋಮವಾರ ತೀರ್ಮಾನಿಸಿತು.

ಮದರಾಸು ನಾಗರಿಕರಿಗೆ ಸೈನಿಕ ಶಿಕ್ಷಣ

ದೇಶದ ಶಾಂತಿಯು ಕದಡಿದ ಸಮಯದಲ್ಲಿ ಗೊಂದಲ ಮಾಡುವ ಜನರನ್ನು ಇತರ ಸಭ್ಯ ಪ್ರಜೆಗಳಿಂದ ಸುಲಭವಾಗಿ ಬೇರ್ಪಡಿಸಲು ಸಹಾಯಕವಾಗುವಂತೆ ಯೋಜನೆಯನ್ನು ಮದರಾಸು ಸರ್ಕಾರದವರು ತಯಾರಿಸಿದ್ದಾರೆ. ನಾಗರಿಕ ಪ್ರಜೆಗಳಿಗೆ ಸೈನಿಕ ಶಿಕ್ಷಣವನ್ನು ಕೊಡಲಾಗುವುದೆಂದೂ, ಅದನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದೆಂದೂ, ಇದರಿಂದ ಅಧಿಕಾರಿಗಳಿಗೆ ಗುಂಪುಗಳನ್ನು ಹತೋಟಿಗೆ ತರಲು ಸುಲಭವಾಗುತ್ತದೆಂದೂ ಹೇಳಲಾಗಿದೆ.

ದೆಹಲಿಗೆ ಕರ್ನಾಟಕ ನಿಯೋಗ

ಶ್ರೀಗಳಾದ ಎಸ್. ನಿಜಲಿಂಗಪ್ಪ, ಆರ್. ಆರ್. ದಿವಾಕರ್, ಎಂ. ಪಿ. ಪಾಟೀಲ್, ಕೆ. ಆರ್. ಕಾರಂತ್ ಮತ್ತು ಇತರ ನಾಲ್ವರು ಮಂದಿಯನ್ನೊಳಗೊಂಡ ಕರ್ನಾಟಕದ ನಿಯೋಗವು ಈ ದಿನ ದೆಹಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರನ್ನು ಭೇಟಿ ಮಾಡಿ, ಕರ್ನಾಟಕ ಪ್ರಾಂತ ರಚನೆಯ ವಿಚಾರವಾಗಿ ಮಾತುಕತೆ ನಡೆಸುವುದು.

ಹೋಟೇಲುಗಳನ್ನು ಮುಚ್ಚಬೇಕು

ರೇಷನ್ ಕಾರ್ಡು ಹೋಲ್ಡರುಗಳ ಸಭೆಯಲ್ಲಿ ನಿರ್ಣಯ

ಮೈಸೂರು ೧೯

ನಿನ್ನೆ ದಿನ ಸಂಜೆ ರಾಜಸೇವಾಸಕ್ತ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ರೇಷನ್ ಕಾರ್ಡ್ ಹೋಲ್ಡರುಗಳ ಸಭೆಯು ಸೇರಿ ತಮ್ಮ ಕುಂದು ಕೊರತೆಗಳನ್ನು ನಿವಾರಿಸಲು ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಲಾಯಿತು.

ಪಡಿತರ ಪ್ರಮಾಣವನ್ನು ಹೆಚ್ಚಿಸುವುದು, ಆಹಾರ ಧಾನ್ಯಗಳ ಬೆಲೆಯನ್ನು ಇಳಿಸುವುದು, ಹೋಟೇಲುಗಳನ್ನು ಮುಚ್ಚಿಸುವುದು, ಆಹಾರ ಸಮಿತಿಗಳಲ್ಲಿ ಸರ್ಕಾರದವರೇ ಸದಸ್ಯರುಗಳನ್ನು ನೇಮಿಸುವುದು ಮತ್ತು ಆಹಾರ ಸಲಹಾ ಸಮಿತಿಯಲ್ಲಿ ರೇಷನ್ ಕಾರ್ಡು ಹೋಲ್ಡರುಗಳಿಗೆ ಪ್ರಾತಿನಿಧ್ಯ ಕೊಡುವುದು— ಈ ವಿಷಯಗಳ ಬಗ್ಗೆ ನಿರ್ಣಯಗಳನ್ನು ಮಾಡಲಾಯಿತು.

ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಸಿ. ಬಿ. ಜಡ್ ತರಗತಿ

ಮೈಸೂರು ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಸಿ. ಬಿ. ಜಡ್ ತರಗತಿಯು ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ತುಂಬ ಕಷ್ಟವಾಗಿರುವುದನ್ನು ಅಧಿಕಾರಿಗಳಿಗೆ ಮನವಿ ಮಾಡಿಕೊಳ್ಳಬೇಕೆಂದು ನಿಯೋಗವನ್ನು ನೇಮಿಸುವುದಕ್ಕಾಗಿ ನಾಳೆ ಸಂಜೆ ೫-೩೦ ಗಂಟೆಗೆ ಮಹಾರಾಜಾ ಕಾಲೇಜಿನ ಬಳಿ ಇಂಟರ್ ಕಾಲೇಜ್ ವಿದ್ಯಾರ್ಥಿಗಳ ಸಭೆಯು ನಡೆಯುವುದೆಂದೂ, ವಿದ್ಯಾರ್ಥಿಗಳೆಲ್ಲರೂ ಬರಬೇಕೆಂದೂ ಕೋರಲಾಗಿದೆ.

ಶಿಶು ಹತ್ಯವೇ?

ಸಾರಿಗೆ ರಸ್ತೆಯಲ್ಲಿ ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹತ್ತಿರ ಇರುವ ಚರಂಡಿಯಲ್ಲಿ ಈ ದಿನ ಬೆಳಿಗ್ಗೆ ಆಗತಾನೇ ಹುಟ್ಟಿದ ಹೆಣ್ಣು ಶಿಶುವೊಂದು ಸತ್ತು ಬಿದ್ದುದು ಕಂಡುಬಂದಿತು. ಕೃಷ್ಣರಾಜ ಪೊಲೀಸ್ ಸಬ್ ಇನ್ಸ್‌ಪೆಕ್ಟರವರು ಸ್ಥಳಕ್ಕೆ ಹೋಗಿ ಮಹಜರ್ ಕ್ರಮ ನಡೆಸಿದರು ... ರು.

ಗವರ್ನರ್ ಜನರಲ್ಲರೊಡನೆ ಪ್ರಭುಗಳ ಭೇಟಿ

ಸ್ವಂ ಸು ಫೋ] ಬೆಂಗಳೂರು ೧೯

ನಿನ್ನೆ ದಿನ ಶ್ರೀಮನ್ಮಹಾರಾಜರವರು ರಾಜಧಾನಿಯಿಂದ ಬೆಂಗಳೂರಿಗೆ ಆಗಮಿಸಿ ಗವರ್ನರ್ ಜನರಲ್ ರಾಜಾಜಿಯವರನ್ನು ಭೇಟಿ ಮಾಡಿದರೆಂದೂ ಮತ್ತು ಅವರೊಡನೆ ಭೋಜನ ಮಾಡಿದರೆಂದೂ ವರದಿಯಾಗಿದೆ.

○ ಕೇಂದ್ರ ಸರ್ಕಾರದ ಸಂಸ್ಥಾನಗಳ ಖಾತಾ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್ನರು ಇಂದು ಬೆಂಗಳೂರಿಗೆ ಆಗಮಿಸುವರು.

ಜಾಮೀನು ಮೇಲೆ ಬಿಡುಗಡೆ

ಶಿರಾದಲ್ಲಿ ನಡೆದ ಕೋಮುವಾರು ಗಲಭೆಯಲ್ಲಿ ಆಪಾದಿತರಾದ ಜನಾಬ್ ಷೇಕ್ ಮೊಹಿದ್ದೀನರವರನ್ನು ೨೧ ಸಾವಿರ ರೂ. ಸ್ವಂತ ಜಾಮೀನು ಮತ್ತು ಅದೇ ಮೊಬಲಗಿನ ಇನ್ನೆರಡು ಜಾಮೀನುಗಳ ಮೇಲೆ ಹೈಕೋರ್ಟಿನವರು ಖುಲಾಸೆ ಮಾಡಿರುತ್ತಾರೆ.

ಪೌರಸಭಾಧ್ಯಕ್ಷರ ಚುನಾವಣೆ

ಶ್ರೀರಂಗಪಟ್ಟಣ ೧೯

ಇಲ್ಲಿನ ಪೌರಸಭಾಧ್ಯಕ್ಷ ಸ್ಥಾನಕ್ಕೆ ಚುನಾವಣೆಯು ನಿನ್ನೆ ನಡೆಯಿತು. ಡಾ॥ ಸಿ. ಬಂದೀಗೌಡರವರು ಮತ್ತು ಶ್ರೀ॥ ಎಚ್. ದೇವಯ್ಯನವರೂ ಸ್ಪರ್ಧಿಸಿದ್ದರು. ಶ್ರೀ॥ ದೇವಯ್ಯನವರು ಕೊನೇ ಘಳಿಗೆಯಲ್ಲಿ ತಮ್ಮ ಉಮೇದುವಾರಿಕೆ ಅರ್ಜಿಯನ್ನು ವಾಪಸು ತೆಗೆದುಕೊಂಡುದರಿಂದ ಡಾ॥ ಸಿ. ಬಂದೀಗೌಡರು ಅವಿರೋಧವಾಗಿ ಚುನಾಯಿತರಾದರು.

ಮಾರ್ಷಲ್ ಚಿಯಾಂಗರ ರಹಸ್ಯ ಯುದ್ಧ ಸೂತ್ರ

ಹಾಂಕಾಂಗಿನಲ್ಲಿ ಚೀಣೀ ಸರ್ಕಾರೀ ಪಡೆಗಳಿಗೆ ಮಾರ್ಷಲ್ ಚಿಯಾಂಗ್ ಕೈಷೇಕರು ರಹಸ್ಯವಾಗಿ ಯುದ್ಧ ಸಲಹೆಗಳನ್ನು ಕೊಡುತ್ತಿರುವರೆಂದೂ ಅವರೇ ಮುಖ್ಯ ಯುದ್ಧ ಸೂತ್ರಧಾರಿಗಳಾಗಿರುವರೆಂದೂ ವರದಿಯಾಗಿದೆ.

ಕಾಶ್ಮೀರದ ಅರಸರಿಗೆ ವಿದೇಶ ವಾಸ

ಸರ್ದಾರ್ ಪಟೇಲರಿಗೂ ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾ ಮತ್ತು ಅವರ ಪರಿವಾರದವರಿಗೂ ದೆಹಲಿಯಲ್ಲಿ ನಡೆದ ಮಾತುಕತೆಗಳ ಫಲವಾಗಿ ಮಹತ್ವದ ಘಟನೆಗಳು ನಡೆಯಲಿರುವುವೆಂದು ಹೇಳಲಾಗಿದೆ. ಅನಧಿಕೃತ ವಲಯಗಳ ಸುದ್ದಿ ಪ್ರಕಾರ ಕಾಶ್ಮೀರದ ಅರಸರಾದ ಹರಿಸಿಂಗರು ೭ ತಿಂಗಳ ಕಾಲ ಸಂಸ್ಥಾನವನ್ನು ಪ್ರವೇಶಿಸದೆ ಭಾರತದಲ್ಲೋ ಅಥವಾ ವಿದೇಶಗಳಲ್ಲೋ ಇರಬೇಕೆಂದೂ ಆ ಕಾಲದಲ್ಲಿ ಅವರ ಪುತ್ರರು, ಯುವರಾಜರಾಗಿರುವ ಕರಣ ಸಿಂಗರು ರಾಜ ಪ್ರತಿನಿಧಿಯಾಗಿ ... ಉತ್ತರಾಧಿಕಾರದ ಬಗ್ಗೆ ಆ ಸಂಸ್ಥಾನದ ರಾಜ್ಯಾಂಗ ಸಭೆಯು ರಚನೆಯಾದನಂತರ ನಿರ್ಧಾರ ಮಾಡಲಾಗುವುದೆಂದೂ ವರದಿಯಾಗಿದೆ.

○ ... ... ಕಳೆದ ... ...

ಹಕ್ಕಿಯ ಗೂಡಿನಲ್ಲಿ ಭಂಗಾರದ ಪತ್ತೆ

ಬೊಂಬಾಯಿನ ಒಂದೆಡೆಯಲ್ಲಿ ಸರ್ಕಾರಿಯ ದ ಕೊಲ್ಲಿಗೆ ಪ್ರಯಾಣ ಹೊರಟಿದ್ದ ಆರಪ್ಪಿಯವನು ತನ್ನ ಪಕ್ಷಿಯನ್ನ ಪಕ್ಷಿಯ ಗೂಡಿನೊಳಗೆ ಸಾವಿರ ರೂ ಬೆಲೆಬಾಳುವ ಬಂಗಾರ ಮತ್ತು ಸಾವಿರ ರೂ ನೋಟುಗಳನ್ನು ಇಟ್ಟು ಅಕ್ರಮವಾಗಿ ಸಾಗಿಸುತ್ತಿದ್ದುದನ್ನು ಪೋಲೀಸರು ಪತ್ತೆ ಮಾಡಿ, ಅವನನ್ನು ವಶಗೊ ಮಾಡಿರುತ್ತಾರೆ

ಪ್ರಾಣಿಮೂಲಿಗಳ ಮುಷ್ಕರ

ದಿಂಬುನಾದ್ ಪ್ರದೇಶದಿಯ ಲಕ್ಷಾಂತರ ಜನ ದುಡಿಮೆಗಾರರುಗಳು ತಮಗೆ ಹೊಟ್ಟೆನ ಹೊಟ್ಟೆ ಬಟ್ಟೆ ಮತ್ತು ಮನೆ ಬಾಡಿಗೆ ಕೊಡಬೇಕೆಂದು ಮೊನ್ನೆಯಿಂದ ಮುಷ್ಕರ ಹೂಡಿರುತ್ತಾರೆ

ಸಿಡ್ನಿ ಕಾಟನ್ನನಿಗೆ ಶಿಕ್ಷೆ

ಹೈದರಾಬಾದಿಗೆ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿದನೆಂದು ಆಸ್ಟ್ರೇಲಿಯದ ಸಿಡ್ನಿ ಕಾಟನ್ನನಿಗೆ ಲಂಡನ್ನಿನ ಬೋ ಸ್ಟ್ರೀಟ್ ನ್ಯಾಯಾಧೀಶರು ೨೦೦ ಪೌಂಡುಗಳ ದಂಡವನ್ನು ವಿಧಿಸಿರುವರಲ್ಲದೆ, ೩೦೦ ಪೌಂಡ್ ಕೋರ್ಟು ಖರ್ಚನ್ನು ಸಹ ಕೊಡಬೇಕೆಂದು ಆಜ್ಞೆ ಮಾಡಿರುತ್ತಾರೆ.

ಲಗ್ನದ ಜವಳಿಗಾಗಿ
ಗು ರು ದೇ ವಾ ಹಾ ಲ್
ಬೆಂಗಳೂರು ಜವಳಿ ಅಂಗಡಿ
ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ, :: ಮೈಸೂರು

Edited, printed, and published by A R Nagarajan at the Sadhvi Press, D. Subbiah Road, Mysore

ಗಣೇಶಾ ಟಾಕೀಸ್

20-5-49ರಿಂದ 3 ದಿನಗಳು ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಕೊಲಂಬಿಯಾ ಪಿಕ್ಚರ್ಸ್‌ರವರ -

ಡೌನ್ ಟು ಅರ್ತ್

DOWN TO EARTH
(ಪೂರ್ತಿ ವರ್ಣರಂಜಿತ ಚಿತ್ರ)
ಪಾತ್ರ - ರಿಟಾ ಹೇವರ್ತ್ ಮತ್ತು ಲಾರಿ ಪಾರ್ಕ್ಸ್
ಮುಂದಿನ ಬದಲಾವಣೆ. —
23—5—49 ರಿಂದ

ಗನ್ ಫೈಟರ್ಸ್

(Cine Colour)

ಗಾಯತ್ರೀ ಟಾಕೀಸ್

ಪ್ರತಿ ದಿನ 3 ಪ್ರದರ್ಶನಗಳು
19-5-49 ರಿಂದ 2 ದಿನಗಳು ಮಾತ್ರ
ಪ್ಯಾರಾಮೌಂಟ್ಸ್‌ರವರ ಆದರ್ಶ ಚಿತ್ರ

ಹಜಾರ್ಡ್

HAZARD
ಮುಂದಿನ ಬದಲಾವಣೆ

ಬ್ಲಾಕ್ ಬಾರ್ಟ್

ಲಕ್ಷ್ಮಿ ಥಿಯೇಟರ್

ಚೆಳಗಿನ ಪ್ರದರ್ಶನ
20-5-49 ರಿಂದ 3 ದಿನಗಳು ಮಾತ್ರ
ಬಾಂಬೆ ಟಾಕೀಸ್ ರವರ

ಪುನರ್ಮಿಲನ್ (ಹಿಂದಿ)

ಪಾತ್ರ—ಕಿಶೋರ್ ಸಾಹು
ಸ್ನೇಹ ಪ್ರಭಾ.

ಭೈಷಜ್ಯರತ್ನ ಪಾಳ್ಯದ ವೆಂಕಟಾಚಲ ಪಂಡಿತರ

॥ ಶ್ರೀ ಸೀತಾರಾಮಾಯನಮಃ ॥
ಆಯುರ್ವೇದೀಯ ಸಿದ್ಧೌಷಧಗಳು

ಹೃದಯೋಪಾಸಕ

ಸೂತಿಕಾವಾತಕ್ಕೆ [ಬಾಣಂತಿ ನಂಜಿಗೆ] ಉತ್ತಮ ಗುಣಕಾರಿ

ಕಣ್ಣು ಕೈಕಾಲುರಿ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರ

ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

BANGALORE RACES 1949

ಮೇ 21, 25, 28, ಜೂನ್ 1, 4, 8, 11, 18, 22, 25, 29
ಮತ್ತು ಜುಲೈ 2 ರಲ್ಲೂ
ಬುಕ್ ಮೇಕರ್ಸ್ .... ಟೋಟಲೈಜೇಟರ್ಸ್
ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ. 2 ಸ್ವೀಪ್
ಪ್ರವೇಶ { ಮೊದಲನೇ ತರಗತಿ:- ಪುರುಷರು ರೂ. 6, ಸ್ತ್ರೀಯರು ರೂ 4 ದಿನಕ್ಕೆ
ಎರಡನೇ ತರಗತಿ:- ಪುರುಷರು ಅಥವಾ ಸ್ತ್ರೀಯರು ರೂ 2 ,,
ಸೀಸನ್ ಟಿಕೆಟ್:- ಪುರುಷರು ರೂ 60, ಸ್ತ್ರೀಯರು ರೂ. 35.

The National Institute

Of Engineering, Mysore.
(Registered)

The Institute re-opens on 24th June 1949.

Applications for admission to A. M. I. E. (Civi and diploma (Civil) courses should reach the Principal on or before 1st June 1949, together with a Registration Fee of Rupees Two, not refundable in any case.

The minimum qualification for admission to the (three-year) A. M. I. E. course is B Sc., (P. C. M optionals) and to the (two-year) Diploma Course is S. S. L. C. (P. C. M. optionasls) or an equivalent examinaton.

List of candidates selected will be put up on the Notice Board of the Institute on 10th June 49 and intimation sent by post only to Mofussil candidates.

The selected candidates must interview the Principal on the date noted in the Application Form to be issued The last date for joining the Institute is 1st July 1949, failing which seats will be forfeited.

Requisitions for printed application forms should be addressed to the Principal, enclosing Four annas postage stamps.

944, Laxmipuram, Mysore, 14-5-1949. S Ramaswamy, Principal.

ನಿಮ್ಮ ಮೈ ಮೊಕಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

ರಾಜಕಮಲ್

ಮೈ ಸೂ ರು
20-5-49ರಿಂದ
ಅಮೋಘವಾದ 4ನೇ ವಾರ
ಪ್ರತಿದಿನ 3 ಆಟಗಳು
ಫಿಲ್ಮಿಸ್ತಾನ್‌ರವರ

ಷಹೀದ್

—ಮುಖ್ಯ ಪಾತ್ರ—
- ಕಾಮಿನಿ ಕೌಶಲ್ಯ,
- ದಿಲೀಪ್ ಕುಮಾರ್,
- ಚಂದ್ರ ಮೋಹನ್,
- ವಿ. ಎಚ್. ದೇಸಾಯಿ

Morning Shows
From 20-5-49 for 4 days

Lover Come Back

With George Brent, Lucille Ball, Vera Jorina.

* ಪ್ರ ಭು ದೇ ವಾ ಟಾ ಕೀ ಸಿ ನ ಲ್ಲಿ *

19-5-49ನೇ ಗುರುವಾರದಿಂದ ದಿನವಹಿ 3 ಆಟಗಳು
ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ → ಉ ತ್ತ ಮ ಪು ತ್ರ ನ್
ಪಾತ್ರ ಪಿ.ಯು. ಚಿನ್ನಪ್ಪ, ಎಂ.ವಿ. ರಾಜಮ್ಮ, ಟಿ.ಎಸ್. ಬಾಲಯ್ಯ, ಎನ್.ಎಸ್. ಕೃಷ್ಣನ್, ಟಿ.ಎ.ಮಧುರಂ, ಕಾಳಿ ಎನ್. ರತ್ನಂ

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೨೦-೫-೪೯ [ಸಂಚಿಕೆ ೨೩೮

ಮೈಸೂರು-ಭಾರತಗಳ - ನೂತನ ಕರಾರು -

ಪ್ರ|| ಪ್ರ|| ಸಭೆಯಲ್ಲಿ ದಿವಾನರ ಭಾಷಣವಿಲ್ಲ

ಸ್ವಂ ಸು. ಫೋ] ಬೆಂಗಳೂರು ೨೦

ಈ ತಿಂಗಳು ೩೦ನೇ ತಾ||ನಿಂದ ಆರಂಭವಾಗಲಿರುವ ಪ್ರಜಾ ಪ್ರತಿನಿಧಿ ಸಭೆಯ ಕಾರ್ಯಕ್ರಮದ ಪಟ್ಟಿಯು ಪ್ರಕಟವಾಗಿರುತ್ತದೆ ಅಧಿವೇಶನವು ಒಟ್ಟು ೧೩ ದಿವಸ ನಡೆಯುತ್ತದೆ

ಸಭೆಯು ಹುಟ್ಟಿದಂದಿನಿಂದ ಇದುವರೆಗೆ ದಿವಾನರು ಮಾಡುತ್ತಿದ್ದ ಆರಂಭ ಭಾಷಣವು ಈ ಸಾರಿ ನಡೆಯುವುದಿಲ್ಲವೆಂದು ತಿಳಿದುಬಂದಿದೆ ಮೊದಲನೇ ದಿನ ದಿವಾನರ ಸಭೆಗೆ ಚುನಾಯಿತ ಅಧ್ಯಕ್ಷರನ್ನು ಉಪಾಧ್ಯಕ್ಷರನ್ನು ಕೊಟ್ಟಿರುವ ಬಗ್ಗೆ ಶ್ರೀಮನ್ಮಹಾರಾಜರವರ ಘೋಷಣೆಯನ್ನು ಓದಿ ಹರಿಸುವರು ಅನಂತರ ಸದರಿ ಚುನಾವಣೆಗಳು ನಡೆಯುವುವು ಮೂರನೇ ದಿನದಿಂದ ಚುನಾಯಿತ ಅಧ್ಯಕ್ಷರ ನೇತೃತ್ವದಲ್ಲಿ ಕಾರ್ಯಕ್ರಮಗಳು ಮುಂದು ನಡೆಯುವುವು

ಒಟ್ಟು ೨೪ ಮಸೂದೆಗಳು ಚರ್ಚೆಗೆ ಬರುವುವು. ಸಂಸ್ಥಾನದಲ್ಲಿ ವಯಸ್ಕರಿಗೆ ಬಲಾತ್ಕಾರವಾಗಿ ಅಕ್ಷರ ಪ್ರಚಾರ ಮಾಡುವ ಬಗ್ಗೆ ಶ್ರೀ ಟಿ ಮಾದಯ್ಯ ಗೌಡರಿಂದ ಬಂದಿರುವ ಖಾಸಗೀ ನಿರ್ಣಯವೂ ಚರ್ಚೆಗೆ ಬರುವುದು ೧೬೭ ಪ್ರಶ್ನೆಗಳೂ, ೪೨ ನಿರ್ಣಯಗಳೂ, ೯೧ ಅರಿಕೆಗಳೂ ಕಳುಹಿಸಲ್ಪಟ್ಟಿವೆ. ಕರ್ಣಾಟಕ ಏಕೀಕರಣದ ಬಗ್ಗೆ ಶ್ರೀ ಭೂಪಾಳಂ ಮುಂತಾದವರು ನಿರ್ಣಯಗಳನ್ನು ಮುಂದಿಟ್ಟಿದ್ದಾರೆ

ಕೊಡಗಿನ ಐರೋಪ್ಯರಿಗೆ ಪ್ರಾತಿನಿಧ್ಯವಿಲ್ಲ

ಕೊಡಗಿನ ಶಾಸನ ಸಭೆಯಲ್ಲಿರುವ ಐರೋಪ್ಯರಿಗೆ ಪ್ರಾತಿನಿಧ್ಯವನ್ನು ಭಾರತದ ಗವರ್ನರ್ ಜನರಲ್ಲರು ತಪ್ಪಿಸಲು ಅವಕಾಶ ಕಲ್ಪಿಸಿ ಒಂದು ಶಾಸನವನ್ನು ಭಾರತ ಶಾಸನಾಂಗ ಸಭೆ ಮಾಡಿರುತ್ತದೆ

ಪಶ್ಚಿಮ ಬಂಗಾಳದಲ್ಲಿ ೧ ಕೋಟಿ ಮತದಾರರು

ಪಶ್ಚಿಮ ಬಂಗಾಳದಲ್ಲಿ ವಯಸ್ಕರ ಮತದಾನದ ಪಟ್ಟಿ ಪ್ರಕಾರ ೧ ಕೋಟಿ ಜನರು ಮತದಾನ ಮಾಡಲು ಅರ್ಹರಾಗಿದ್ದಾರೆ

ಮ್ಯಾಜಿಸ್ಟ್ರೇಟರ ಮೇಲೆ ಮಸಿ ಪ್ಯಾಡ್

ಮುಂಬಾಯಿನ ಗಿರ್ಗಾಂ ಪೋಲೀಸು ಮ್ಯಾಜಿಸ್ಟ್ರೇಟರ ಮೇಲೆ ೨೫ ವರ್ಷದ ಕೇಶವ ಬಾಬುರಾವ ಎಂಬುವನು ಟೇಬಲ್ ಮೇಲಿನ ಮಸಿ ಪ್ಯಾಡನ್ನು ಎಸೆದನೆಂದೂ ಅದು ಗುರಿ ತಪ್ಪಿ ಮ್ಯಾ|| ರ ಮೇಜಿನ ಮುಂದೆ ಇದ್ದ ಬೆಂಚಿಗೆ ಬಿದ್ದಿತೆಂದು ಹೇಳಲಾಗಿದೆ ಆತನಿಗೆ ಈ ವಿಚಾರವಾಗಿ ೩ ವರ್ಷ ಶಿಕ್ಷೆ ವಿಧಿಸಿದುದು ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಅಂಜನೇಯ ಸ್ವಾಮಿಯ ವಸಂತೋತ್ಸವ

ಗು ಡ್ಲುಪೇಟೆ ೧೭

ಈ ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ಶ್ರೀ ಆಂಜನೇಯ ಸ್ವಾಮಿಯ ವಸಂತೋತ್ಸವ ಕೆಲವು ಜನರ ಪ್ರತಿಭಟನೆ ಇದ್ದರೂ, ಎಮಲ್ದಾರರ ಮತ್ತು ಪೋಲೀಸ್ ಇನ್ಸ್‌ಪೆಕ್ಟರುಗಳ ಬಂದೋಬಸ್ತಿನಿಂದ ಯಾವ ಗಲಾಟೆಯೂ ಆಗದೇ ಮೊನ್ನೆ ರಾತ್ರಿ ವಿಜೃಂಭಣೆಯಿಂದ ನಡೆಯಿತು

ಪ್ರಭುಗಳೊಡನೆ ಗೌರ್ನರ್ ಜನರಲ್ಲರ ಭೇಟಿ

ಸ್ವಂ ಸು ಫೋ] ಬೆಂಗಳೂರು ೨೦

ನಿನ್ನೆ ಮಧ್ಯಾಹ್ನ ಗೌರ್ನರ್ ಜನರಲ್ ಶ್ರೀ ರಾಜಾಜಿಯವರು ಇಲ್ಲಿನ ಅರಮನೆಯಲ್ಲಿ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿದ್ದರು ಶ್ರೀಮನ್ಮಹಾರಾಜರವರು ನಿನ್ನೆ ಸಂಜೆ ರಾಜಧಾನಿಗೆ ಹಿಂತಿರುಗಿದರು

ಕೊಬ್ಬರಿ ಬೆಳೆಗೆ ಉತ್ತೇಜನ

ಕೊಬ್ಬರಿ ಬೆಳೆಗೆ ಸಹಾಯವಾಗಲು ರತ್ನಗಿರಿ, ಮದರಾಸ್ ಮತ್ತು ತುಮಕೂರುಗಳಲ್ಲಿ ಬಿತ್ತನೆ ತೋಟಗಳನ್ನು ಏರ್ಪಡಿಸುವಂತೆಯೂ, ಅಲ್ಲಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಸ್ಥಾಪಿಸುವಂತೆಯೂ ಅಖಿಲ ಭಾರತ ಕೊಬ್ಬರಿ ಸಮಿತಿಯವರು ಇಲ್ಲಿ ಸಭೆ ಸೇರಿ ತೀರ್ಮಾನ ಮಾಡಿರುತ್ತಾರೆ

ಚಲನ ಚಿತ್ರದ ಮೂಲಕ ವಿದ್ಯಾಭ್ಯಾಸ

ಸಂಸ್ಥಾನದ ಶಾಲೆಗಳಲ್ಲಿ ಚಲನ ಚಿತ್ರದ ಮೂಲಕ ವಿದ್ಯಾಭ್ಯಾಸ ನಡೆಸುವ ಯೋಜನೆಗೆ ಸರ್ಕಾರದವರು ೧,೨೫,೦೦೦ ರೂ ಅನ್ನು ಮಂಜೂರು ಮಾಡಿದ್ದಾರೆ ವಿದ್ಯಾರ್ಥಿಗಳಿಂದ ತಲಾ ೧|| ರೂ ನಂತೆ ೫ ವರ್ಷಕ್ಕೆ ೫೧,೫೦೦ ರೂ ಬರುವುದೆಂದು ನಿರೀಕ್ಷಿಸಲಾಗಿದೆ ಪ್ರತಿ ವರ್ಷವೂ ೧೫ ಕೇಂದ್ರಗಳನ್ನು ತೆರೆಯಲು ಏರ್ಪಾಡಾಗಿದೆ

ಪಾಕಿಸ್ಥಾನದ ಮೇಲೆ ಆಫ್ಘಾನಿಸ್ತಾನದ ದೂರು

ಪಾಕಿಸ್ತಾನವು ಆಫ್ಘಾನಿಸ್ತಾನದ ಗಡಿಯನ್ನು ಉಲ್ಲಂಘಿಸಿರುವ ಸಂಬಂಧವಾಗಿ ಬ್ರಿಟನ್ನಿಗೆ ಆಫ್ಘಾನಿಸ್ಥಾನವು ದೂರು ಕೊಡಲಿರುವುದಾಗಿ ಹೇಳಲಾಗಿದೆ ಈ ಉಲ್ಲಂಘನೆಯಿಂದ ಸಾವು ಮತ್ತು ನಾಶವುಂಟಾಗಿದೆಯೆಂದು ತಿಳಿದು ಬಂದಿದೆ

ಭಾರತದ ರಾಜಧಾನಿಗೆ ಗಾಂಧಿಪುರವೆಂಬ ಹೆಸರು

ಭಾರತದ ರಾಜ್ಯಾಂಗ ಸಭೆಯ ದಕ್ಷಿಣ ಭಾರತದ ಸದಸ್ಯರಲ್ಲಿ ಹಲವು ಮಂದಿ ಭಾರತದ ರಾಜಧಾನಿಯನ್ನು ದೇಶದ ಮಧ್ಯಭಾಗಕ್ಕೆ ಬದಲಾಯಿಸಿ, ಅದನ್ನು ಗಾಂಧಿಪುರವೆಂದು ಕರೆಯಬೇಕೆಂದೂ ಸಂವಿಧಾನ ಶಾಸನದಲ್ಲಿ ಸೇರಿಸಬೇಕೆಂದೂ ಸೂಚನೆ ಕೊಡುತ್ತಿರುವರು

ಮೈಸೂರಿನ ಐಕ್ಯಕ್ಕೆ ಭಾರತ ಸರ್ಕಾರದ ಸೂಚನೆ ಇಲ್ಲ

ಜಿಲ್ಲಾ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಬೆಂಗಳೂರು ೨೦

ಇತರ ಕರ್ಣಾಟಕ ಭಾಗಗಳಲ್ಲಿ ಮೈಸೂರು ಲೀನವಾಗಬೇಕೆಂಬ ಸೂಚನೆಯನ್ನು ಭಾರತ ಸರ್ಕಾರದವರು, ಮೈಸೂರು ಸರ್ಕಾರಕ್ಕೆ ಮಾಡಿಲ್ಲ ಈ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವನ್ನು ಭಾರತ ಸರ್ಕಾರದವರು ಕೇಳಿಲ್ಲ. ಬಲಾತ್ಕಾರವಾಗಿ ಏಕೀಕರಣ ಮಾಡುವ ಸೂಚನೆ ಯಾವುದೂ ಬಂದಿಲ್ಲ ಪ್ರಜೆಗಳ ಅಭಿಪ್ರಾಯದಂತೆ ಮೈಸೂರು ಮತ್ತು ಇತರ ಕರ್ಣಾಟಕ ಪ್ರದೇಶಗಳು ಒಂದಾಗಬೇಕೆಂಬುದೇ ಭಾರತದ ನಾಯಕರ ಅಭಿಪ್ರಾಯ ಶ್ರೀಮನ್ಮಹಾರಾಜರವರ ಅಭಿಪ್ರಾಯವೂ ಇದೇ ಎಂದು ನಂಬಿದ್ದೇನೆ-ಎಂದು ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಿನ್ನೆ ಬೆಂಗಳೂರು ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆ ವಹಿಸಿ ತಿಳಿಸಿರುತ್ತಾರೆ

ಸಶಸ್ತ್ರ ಗುಂಪಿನವರಿಂದ ಮದುವೆಗೆ ಅಡಚಣೆ

ಬೊಂಬಾಯಿನ ಬೈಕುಲ್ಲಾದಲ್ಲಿ ಒಂದು ಮದುವೆ ನಡೆಯುತ್ತಿದ್ದ ಸಂದರ್ಭದಲ್ಲಿ ವಧುವಿನ ಹಿತಚಿಂತಕರೆಂದು ಹೇಳಲ್ಪಟ್ಟ ಹಲವು ಮಂದಿ ಆಯುಧಧಾರಿಗಳಾಗಿ ಮದುವೆ ಮನೆಯೊಳಕ್ಕೆ ನುಗ್ಗಿದುದರಿಂದ ಎಲ್ಲರಿಗೂ ಗಾಬರಿಯಾಯಿತು ವಧೂವರರ ಈ ಸಂಬಂಧಕ್ಕೆ ಸದರಿ ಗುಂಪಿನವರ ಸಮ್ಮತಿಯಿರಲಿಲ್ಲವೆಂದು ಹೇಳಲಾಗಿದೆ ಗೊಂದಲದ ಮಧ್ಯೆ ವಧೂವರರಿಬ್ಬರೂ ಆತ್ಮರಕ್ಷಣೆಗಾಗಿ ಲಗ್ನಮಂಟಪವನ್ನು ಬಿಟ್ಟು ಓಡಿದರು ದೂ, ಮಾರನೇ ದಿನ ಹಲವು ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ಪುಂಡರನ್ನು ತಡೆಗಟ್ಟಿದ ನಂತರ ಮದುವೆಯು ಸಾಂಗವಾಗಿ ನೆರವೇರಿತೆಂದೂ ವರದಿಯಾಗಿದೆ

ಕರು ತಪ್ಪಿಸಿಕೊಂಡಿದೆ

ಎರಡು ತಿಂಗಳು ವಯಸ್ಸು, ಮುದ್ದಾಗಿದೆ, ಬಣ್ಣ ಬಿಳುಪು ಕೋರಿಗರು ಇದನ್ನು ತಲುಪಿಸಿದವರಿಗಾಗಲಿ ಅಥವಾ ವರ್ತಮಾನ ಕೊಟ್ಟವರಿಗಾಗಲಿ ರೂ ೨೦ ಬಹುಮಾನ ಕೊಡಲಾಗುವುದು.

ರಂಗಸ್ವಾಮಿ ಡಿಪ್ಪೋ,
ಸರಸ್ವತೀಪುರಂ, ಮೈಸೂರು

ಭಾರತದೊಡನೆ ಸಂಸ್ಥಾನಗಳ ನೂತನ ಕರಾರು

ವಿ. ಪಿ. ಮೆನನ್‌ರವರ ಸೂಚನೆ

ಮೈಸೂರು ೨೦

ಭಾರತ ಸರ್ಕಾರದ ಸಂಸ್ಥಾನ ಶಾಖಾ ಸಲಹೆಗಾರರಾದ ಶ್ರೀ ವಿ ಪಿ ಮೆನನ್ನರು ಈ ದಿನ ಬೆಳಿಗ್ಗೆ ವಿಮಾನದಲ್ಲಿ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು ಶ್ರೀಮನ್ಮಹಾರಾಜರವರ ಅ|| ಸೆಕ್ರೆಟರಿ ಶ್ರೀ ಕೆ. ನರಸಿಂಹೈಯ್ಯಂಗಾರ್ಯರು ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಿದರು ಬೆಳಿಗ್ಗೆ ೧೦ ಘಂಟೆಯಲ್ಲಿ ಶ್ರೀ ಮೆನನ್ನರು ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದರು ಈ ಮಧ್ಯಾಹ್ನ ಅವರು ತಿರುವಾಂಕೂರಿಗೆ ತೆರಳಿದರು

ಸಂಸ್ಥಾನದ ಬಗ್ಗೆ ಹರಡಿರುವ ಹಲವಾರು ಸುದ್ದಿಗಳ ವಿಚಾರವಾಗಿ ಪತ್ರಿಕಾ ಪ್ರತಿನಿಧಿಗಳು ಈ ದಿನ ಶ್ರೀ ಮೆನನ್‌ರವರನ್ನು ಭೇಟಿ ಮಾಡಿ ಪ್ರಶ್ನಿಸಿದಾಗ ಅವರು ಈ ರೀತಿ ತಿಳಿಸಿದರು —

ಹಣ ಕಾಸು, ಆಡಳಿತ ಮತ್ತು ಶಾಸನಗಳ ಬಗ್ಗೆ ಭಾರತ ಸರ್ಕಾರಕ್ಕೂ ಮತ್ತು ಸಂಸ್ಥಾನಗಳಿಗೂ ನೂತನ ಕರಾರನ್ನು ತಯಾರಿಸಲಾಗಿದೆ. (ರಿವೈಸ್ಡ್ ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್) ಅದಕ್ಕೆ ಕೆಲವು ಸಂಸ್ಥಾನಗಳು ಈಗಾಗಲೇ ರುಜು ಹಾಕಿವೆ ಮೈಸೂರು ಸಂಸ್ಥಾನವೂ ಅದಕ್ಕೆ ಒಪ್ಪುವ ಬಗ್ಗೆ ನಾನು ಮಹಾರಾಜರವರೊಡನೆ ಮಾತುಕತೆ ನಡೆಸಿದೆನು ಹಣಕಾಸಿನ ವಿಚಾರವಾಗಿ ಕೃಷ್ಣಮಾಚಾರಿ ಸಮಿತಿಯ ವರದಿಯು ಮುಂದಿನ ತಿಂಗಳು ಅದ್ದರು ಜೊತ್ತಿಗೆ ಸರ್ಕಾರದ ಕೈ ಸೇರುವುದು ಮೈಸೂರಿನಲ್ಲಿ ಒಳ್ಳೆಯ ಆಡಳಿತವಿರುವುದರಿಂದ. ಅದರ ಬದಲಾವಣೆಯ ಆವಶ್ಯಕವಿಲ್ಲ ಇಡೀ ಭಾರತದಲ್ಲಿ ಒಂದೇ ತರದ ಶಾಸನವಿರಬೇಕು. ಈ ಬಗ್ಗೆ ಕೇಂದ್ರ ಸರ್ಕಾರದವರು ಕಾರ್ಯಕ್ರಮ ಕೈಗೊಂಡಿದ್ದಾರೆ

ಮೈಸೂರು ಸಂಸ್ಥಾನದ ರೈಲ್ವೆ, ಮಿಲಿಟರಿ ಮತ್ತು ಇತರ ಕೆಲವು ಬಾಬುಗಳನ್ನು ಕೇಂದ್ರ ಸರ್ಕಾರಕ್ಕೆ ವಹಿಸಿ ಕೊಳ್ಳುವ ವಿಚಾರವಾಗಿ ನಾನು ಇಲ್ಲಿಗೆ ಬಂದಿಲ್ಲ ಅಂತಹ ವರದಿಗಳು ನಿರಾಧಾರವಾದುವು ಮೈಸೂರಿನ ಭವಿಷ್ಯವು ಕೇಂದ್ರ ಸರ್ಕಾರದ ಮತ್ತು ಭಾಷಾವಾರು ಪ್ರಾಂತ್ಯ ನೀತಿಯ ಮೇಲೆ ಅವಲಂಬಿಸುವುದು ಈಗ ಆ ಬಗ್ಗೆ ಖಚಿತವಾಗಿ ಏನನ್ನೂ ಹೇಳಬಾರದು

ಭಗಿನೀ ಸೇವಾ ಸಮಾಜ

ರಾಜಧಾನಿಯ ಭಗಿನೀ ಸೇವಾ ಸಮಾಜ ಮತ್ತು ಸಮಾಜದ ಶಿಶು ವಿಹಾರವನ್ನು ಗೀತಾ ರೋಡಿನಿಂದ ಲಕ್ಷ್ಮೀಪುರಂ ಬಡಾವಣೆಯಲ್ಲಿರುವ ಗ್ರಾಂಟೆಸ್ ಸ್ಕೂಲು ಬಂಗಲೆಗೆ ಇದೇ ಮಾಹೆ ೨೬ನೆಯ ತಾ|| ನಿಂದ ಬದಲಾಯಿಸಲಾಗುವುದು ಮಹಿಳೆಯರು ಸಮಾಜಕ್ಕೆ ಸೇರುವುದಲ್ಲದೆ, ತಮ್ಮ ಮಕ್ಕಳನ್ನೂ ಶಿಶು ವಿಹಾರಕ್ಕೆ ಸೇರಿಸಬೇಕಾಗಿ ಕೋರಿದೆ

ಪೂನಾ-ರಾಮೇಶ್ವರ ರೈಲು

ಚಾಮರಾಜನಗರ, ಸತ್ಯಮಂಗಲ, ಪೆಟ್ಟೈಕೋಟ್ಟೈ ಸ್ಥಳಗಳ ಮೂಲಕ ಪೂನಾದಿಂದ ರಾಮೇಶ್ವರಕ್ಕೆ ಸೇರುವ ಮೀಟರ್ ಗೇಜ್ ರೈಲನ್ನು ಹಾಕುವ ವಿಷಯವು ಭಾರತದ ಕೇಂದ್ರ ಸಂಚಾರ ಸಮಿತಿಯ ಪರ್ಯಾಲೋಚನೆಯಲ್ಲಿದೆ ಇದರಿಂದ ೨೦೦ ಮೈಲಿ ಹೆಚ್ಚು ದೂರ ಕಡಿಮೆಯಾಗುವುದು.

ಪಾಕೀಸ್ತಾನದಲ್ಲಿ ಬಲಾತ್ಕಾರದ ಮತಾಂತರ

ಪಾಕಿಸ್ತಾನದಲ್ಲಿ ಅನೇಕ ಹಿಂದೂಗಳನ್ನು ಬಲಾತ್ಕಾರವಾಗಿ ಮುಸ್ಲಿಂ ಜಾತಿಗೆ ಸೇರಿಸಿಕೊಳ್ಳಲಾಗುತ್ತಿದೆಯೆಂದೂ ಸಿಂಧ್ ಹೈದರಾಬಾದಿನ ಭಾರಿ ಜಮೀನ್ದಾರರಾದ ಶ್ರೀ ಚತ್ರೇರವರನ್ನು ಮತ್ತು ಅವರ ಇಬ್ಬರು ಹೆಣ್ಣು ಮತ್ತು ಗಂಡುಮಕ್ಕಳನ್ನು ಬಲಾತ್ಕಾರವಾಗಿ ಮತಾಂತರಗೊಳಿಸಲಾಯಿತೆಂದೂ ವರದಿಯಾಗಿದೆ ಇದಕ್ಕೆ ಒಪ್ಪದಿದ್ದವರ ಆಸ್ತಿ ಪಾಸ್ತಿಗಳನ್ನು ಕಿತ್ತುಕೊಂಡು ಮುಸ್ಲಿಂ ನಿರಾಶ್ರಿತರಿಗೆ ಹಂಚಲಾಗುತ್ತಿದೆಯೆಂದೂ ಹೇಳಲಾಗಿದೆ

ರಾಮಸ್ವಾಮಿ ನಾಯಕರಿಗೆ ಮಾನಪತ್ರವಿಲ್ಲ

ದ್ರಾವಿಡಸ್ಥಾನದ ಸ್ಥಾಪನೆಗಾಗಿ ಪ್ರತಿಪಾದಿಸುತ್ತಿರುವ ಮದರಾಸಿನ ಶ್ರೀ|| ಇ ವಿ ರಾಮಸ್ವಾಮಿ ನಾಯಕರು ಕೊಯಮತ್ತೂರಿಗೆ ಭೇಟಿ ಕೊಡುವಾಗ ಅವರಿಗೆ ಮಾನಪತ್ರವನ್ನು ಅರ್ಪಿಸಬೇಕೆಂದು ಬಂದಿದ್ದ ನಿರ್ಣಯವು ಅಲ್ಲಿನ ಪೌರಸಭೆಯಲ್ಲಿ ಬಹುಮತದಿಂದ ತಿರಸ್ಕರಿಸಲ್ಪಟ್ಟಿತು

ಲಿಬಿಯಾಕ್ಕೆ ಸ್ವಾತಂತ್ರ್ಯ

ಮೊದಲು ಇಟಲಿಗೆ ಸೇರಿದ್ದು ಈಗ ಬ್ರಿಟಿಷರ ಕೈಕೆಳಗಿರುವ ಲಿಬಿಯಾ ದೇಶಕ್ಕೆ ಇನ್ನು ಹತ್ತು ವರ್ಷಗಳಲ್ಲಿ ಸ್ವಾತಂತ್ರ್ಯ ನೀಡಬೇಕೆಂದು ವಿಶ್ವಸಂಸ್ಥೆಯಲ್ಲಿ ನಿರ್ಣಯ ಮಾಡಲಾಗಿದೆ ಅದರ ಪಕ್ಕದಲ್ಲಿರುವ ಸಿರೆನೈಕ ಎಂಬ ಪ್ರದೇಶವನ್ನು ಮಾತ್ರ ಬ್ರಿಟಿಷರ ಧರ್ಮದರ್ಶಿತ್ವದ ಆಡಳಿತಕ್ಕೆ ಒಳಪಡಿಸಲಾಗುವುದು

ಗಣೇಶಾ ಟಾಕೀಸ್

20-5-49ರಿಂದ 3 ದಿನಗಳು ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

ಕೊಲಂಬಿಯ ಪಿಕ್ಚರ್ಸ್‌ರವರ -

ಡೌನ್ ಟು ಅರ್ತ್

DOWN TO EARTH

(ಪೂರ್ಣ ವರ್ಣರಂಜಿತ ಚಿತ್ರ)

ಪಾತ್ರ- ರಿಟಾ ಹೇವರ್ತ್ ಮತ್ತು ಲಾರಿ ಪಾರ್ಕ್ಸ್

ಮುಂದಿನ ಬದಲಾವಣೆ —

23-5-49 ರಿಂದ

ಗನ್ ಫೈಟರ್ಸ್

(Cine Colour)

ನ್ಯೂಯಾರ್ಕಿನಲ್ಲಿ ಪುನಃ ಭಾರತ ವಿರುದ್ಧ ಚಿತ್ರ

"ಬಾರತವು ಮಾತನಾಡುತ್ತದೆ" ಎಂಬ ಸಿನಿಮಾ ಚಿತ್ರವನ್ನು ನ್ಯೂಯಾರ್ಕಿನ ಸಿನಿಮಾ ಮಂದಿರಗಳಲ್ಲಿ ಪುನಃ ತೋರಿಸಲು ಪ್ರಾರಂಭವಾಗಿದೆ ಹಿಂದೆ ಭಾರತ ಸರಕಾರದ ಪ್ರತಿಭಟನೆ ಮೇರೆ ಅಮೆರಿಕಾ ಸರಕಾರದವರು ಈ ಚಿತ್ರವನ್ನು ನಿಷೇಧಿಸಿದ್ದರು

ಪ್ರಾರಂಭ ದಿನ ಭಾನುವಾರ

22-5-49

ಮಾಡರ್ನ್ ಮೈಸೂರಿನಲ್ಲಿ ನೂತನ ಯಂತ್ರೋಪಕರಣದಿಂದ ಸಜ್ಜುಗೊಳಿಸಿರುವ

ಮುರುಗರ್ ಅಂಡ್ ಕೋ.,

(ಫೋಟೋಗ್ರಾಫರ್ಸ್)

ಶಿವರಾಮಪೇಟೆ — ಮೈಸೂರು

ದಯವಿಟ್ಟು ಗಮನಿಸಿ

ಸೋಮವಾರ 23—5—49 ಬೆಳಿಗ್ಗೆ 9ರಿಂದ 11ರ ವರೆಗೂ ಮಧ್ಯಾಹ್ನ 4ರಿಂದ 6ರ ವರೆಗೂ ನಗರದ ಮೂರು ವರ್ಷಕ್ಕೆ ಒಳಪಟ್ಟ ಪುಟ್ಟ ಮಕ್ಕಳಿಗೆ ಉಚಿತವಾಗಿ ಫೋಟೋ ತೆಗೆಯಲಾಗುವುದು

ಪ್ರೊಪ್ರೈಟರ್ಸ್ ಮುರುಗರ್ ಅಂಡ್ ಕೋ.,

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಕೌಟಜಿ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು, ಮೊದಲಾಗಿ ಗುಣವಾಗುತ್ತದೆ.

ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

MYSORE CITY MUNICIPALITY

Tender for Supply of stationary articles required for the Mysore City Municipality, for 49-50

1 Sealed tenders for supply of Stationary articles for Municipal Offices, Mysore, for the year 1949-50 viz., from 1st July 1949 to 30th June 1950 are received by the undersigned on or before the 31st May 1949 at 4 p m.

2 Each tender must be accompanied by the Municipal Treasury chellan for having credited Rs 100 as earnest money

3 The tender conditions and the details of articles required may be had in the Municipal Offices during office hours

C Narasimha Murthy,
Municipal Commissioner.

ಶಾಸನ ಸಭಾಸದಸ್ಯರ ಕನಿಷ್ಠ ವಯಸ್ಸು

ಭಾರತ ಸರ್ಕಾರದ ಶಾಸನ ಸಭೆಗಳಿಗೆ ಚುನಾಯಿತರಾಗುವವರ ವಯಸ್ಸು ೨೫ಕ್ಕೆ ಕಡಿಮೆ ಇರಕೂಡದೆಂದು ನಿರ್ಧರಿಸಲಾಗಿದೆ

ಪಾಕಿಸ್ತಾನಕ್ಕೆ ಬ್ರಿಟನ್ನಿನ ಶಸ್ತ್ರಾಸ್ತ್ರ

ಪಾಕಿಸ್ತಾನಕ್ಕೆ ವಿಶೇಷವಾಗಿ ರಕ್ಷಣಾ ಸಾಮಗ್ರಿಗಳನ್ನು ಬ್ರಿಟನ್ನು ಕೊಡುವುದೆಂದು ಅಲ್ಲಿನ ರಕ್ಷಣಾ ಮಂತ್ರಿಗಳು ಹೇಳಿದ್ದಾರೆ.

Morning Shows at

CHAMUNDESHWARI TALKIES

From 20-5-49 for 3 days

Unceasing Excitement Relentless Suspense

R.K.O's

NOTORIOUS

(ನೊಟೋರಿಯಸ್)

Starring -Ingrid Bergman, Gary Grant

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ

ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ, :: ಮೈಸೂರು

ಘನನಾದ ಸಂಗೀತ ಕಛೇರಿ

ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂದಿರ

22-5-49ನೇ ಭಾನುವಾರ

ಸಂಜೆ ಆರು ಗಂಟೆಗೆ

ತಿರುವಾಂಕೂರು ಆಸ್ಥಾನ ವಿದ್ವಾನ್

ಜಿ.ಎನ್. ಬಾಲಸುಬ್ರಹ್ಮಣ್ಯಂ

ರವರ ಗಾನ

ಸಂಗೀತ ರತ್ನ ಆ|| ವಿದ್ವಾನ್

ಟಿ. ಚೌಡಯ್ಯನವರ ಪಿಟೀಲು

ಮದುರೆ ವಿದ್ವಾನ್

ಮುರುಗ ಭೂಪತಿಯವರ ಮೃದಂಗ

— ಟಿಕೀಟು ದರ —

ಗಂಡಸರಿಗೆ ರೂ ೨ ೧, ಹೆಂಗಸರಿಗೆ ೧ ೦ ಮಕ್ಕಳಿಗೆ ೧ ರೂ.

Edited, printed, and published by A.R Nagarajan at the Sadhvi Press, D Subbiah Road, Mysore

* **ಪ್ರಭುದೇವಾ ಟಾಕೀಸಿನಲ್ಲಿ** *

19-5-49ನೇ ಗುರುವಾರದಿಂದ — ದಿನವಹಿ 3 ಆಟಗಳು

ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ → **ಉತ್ತಮ ಪುತ್ರನ್**

ಪಾತ್ರ — ಪಿ.ಯು. ಚಿನ್ನಪ್ಪ, ಎಂ.ವಿ. ರಾಜಮ್ಮ, ಟಿ ಎಸ್ ಬಾಲಯ್ಯ, ಎನ್.ಎಸ್. ಕೃಷ್ಣನ್, ಟಿ.ಎ.ಮಧುರಂ, ಕಾಳಿ ಎನ್. ರತ್ನಂ



ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು

ಬೀರು, ಕಾಫರ್ (ಕ್ಯಾಷ್ ಬಾಕ್ಸ್ 1 ಅಂಗುಲ ರೂ. 3-8-0)

ಸುಲಭ ಬೆಲೆಯಲ್ಲಿ ದೊರೆಯುತ್ತವೆ

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್

2767, ಹಳ್ಳದಕೇರಿ — ಮೈಸೂರು



ಫೋ: ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೨೧-೫-೪೯ [ಸಂಚಿಕೆ ೨೩೮

ಷಾಂಗೈನಗರದ ಮೇಲೆ ಕಮ್ಯೂನಿಸ್ಟರ ಪಿರಂಗಿ

ರೈಲ್ವೆ ನೌಕರರಿಗೆ ಹೆಚ್ಚು ಸೌಲಭ್ಯ

ಮೈಸೂರು ೨೦

ಮೈಸೂರು ರೈಲ್ವೆ ನೌಕರರ ಸಂಘದ ಸಭೆಯು ಕಳೆದ ೧೬ನೇ ತಾ|| ರಾಜಧಾನಿಯಲ್ಲಿ ನಡೆದು ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು —

ಮೈಸೂರು ರೈಲನ್ನು ಭಾರತ ಸರ್ಕಾರದ ಆಡಳಿತಕ್ಕೆ ಸೇರಿಸಿಕೊಳ್ಳಲಾಗುವುದು ಎಂದು ವದಂತಿ ಹರಡಿರುವುದರಿಂದ ಇಲ್ಲಿ ನೌಕರರಿಗೆ ಇತರ ರೈಲ್ವೆಗಳಂತೆ ಸಂಬಳ ದರಗಳನ್ನು ಕೊಡಬೇಕು, ಜೀವನದ ಮಟ್ಟವು ಅತಿ ದುಬಾರಿಯಾಗಿರುವುದರಿಂದ ಕೆಲಸಗಾರರಿಗೆ ೨ ತಿಂಗಳ ಬೋನಸ್ ಕೊಡಬೇಕು ಈಗಿರುವ ಸ್ಟ್ಯಾಂಡಿಂಗ್ ಆರ್ಡರ್‌ಗಳು ಕಾರ್ಮಿಕ ಕಾನೂನಿಗೆ ವಿರುದ್ಧವಾಗಿರುವುದರಿಂದ ಅವನ್ನು ರದ್ದು ಮಾಡಬೇಕು ೧೯೪೫ರಲ್ಲಿ ಬರಬೇಕಾದ ಬಡ್ತಿಗಳನ್ನು ಇಲ್ಲಿಯ ವರೆಗೂ ನಿಲ್ಲಿಸಿರುವುದರ ಬಗ್ಗೆ ಪ್ರತಿಭಟನೆ ಸೂಚಿಸಿ ಅವನ್ನು ಕೂಡಲೇ ಕೊಡಬೇಕೆಂದು ಒತ್ತಾಯಪಡಿಸುವುದು. ಸತ್ಯಾಗ್ರಹ ಕಾಲದಲ್ಲಿ ಕಾಯಮಿಯಾಗಿ ಕೆಲಸಕ್ಕೆ ತೆಗೆದುಕೊಂಡವನ್ನು ಖಾಯಂ ಸಿಬ್ಬಂದಿಯು ಮೇಲೆ ಬಿಡುವುದನ್ನು ನಿಲ್ಲಿಸತಕ್ಕದ್ದು. ಸಂಘದ ಅಧಿಕಾರ ವರ್ಗದಲ್ಲಿದ್ದ ಶ್ರೀ ಹೆಚ್. ಡಿ. ... ಮತ್ತು ಇತರ ನಾಲ್ಕು ಮಂದಿಗಳ ... ಕೈಗೊಂಡಿರುವ ಕ್ರಮವನ್ನು ... ಮಾಡಿ, ಅವರನ್ನು ಕೆಲಸಕ್ಕೆ ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುವುದು ಇತರ ಆಸ್ಪತ್ರೆಗಳಲ್ಲಿರುವಂತೆಯೇ ... ಕಾಂಪೌಂಡರುಗಳು ಮತ್ತು ನರ್ಸುಗಳಿಗೆ ಸಂಬಳಸಾರಿಗೆ ಕೊಡಬೇಕು

ಅಶೋಕ ಮೆಹ್ತಾರವರ ಭಾಷಣ

ನಾಳಿದ್ದು ಸೋಮವಾರ ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ ನಗರದ ಸಮಾಜವಾದಿ ಪಕ್ಷದ ಆಶ್ರಯದಲ್ಲಿ ಅಖಿಲ ಭಾರತ ಸಮಾಜವಾದಿ ನಾಯಕರಾದ ಶ್ರೀ ಅಶೋಕ ಮೆಹತಾರವರು ಭಾಷಣ ಮಾಡುವರು ... ನಾಗಭೂಷಣರವರು ಅಧ್ಯಕ್ಷತೆ ವಹಿಸುವರು ಅದೇ ರಾತ್ರಿ ೮ ಗಂಟೆಗೆ ... ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರುಗಳ ಸಭೆ ನಡೆಯುವುದು

ಕಳ್ಳನ ದಸ್ತಗಿರಿ

... ರಾಜಧಾನಿಯ ಸೋನಾರ್ ರಸ್ತೆಯಲ್ಲಿ ... ಶ್ರೀ ರಾಜಶೇಖರ್ ಎಂಬುವರ ಮನೆಗೆ ... ನಿನ್ನೆ ದಿನ ಬೆಳಿಗ್ಗೆ ಸುಣ್ಣದಕೇರಿ ... ದೇವೇಂದ್ರ ... ಎಂಬಾತನು ನುಗ್ಗಿ, ಮಡಿ ಮೇಲೆ ... ಒಡವೆಗಳನ್ನು ... ಕದಿಯುತ್ತಿದ್ದಾಗ ... ಪೋಲೀಸರು ಪತ್ತೆ ಮಾಡಿ, ... ಮಾಡಿರುತ್ತಾರೆ

ಸತ್ಕಾರ ಕೂಟ

... ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯ ... ಯುರೋಪಿನ ಪ್ರವಾಸವನ್ನು ಕೈಗೊಂಡಿರುವುದರಿಂದ ಅವರನ್ನು ಬೀಳ್ಕೊಡಲು ... ಎಂ ವಿ ರಾಮರಾಜುರವರು ... ರಾತ್ರಿ ಇಂದ್ರ ಭವನದಲ್ಲಿ ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದರು ... ಎಂ ಪಿ ಲಿಂಗಪ್ಪಯ್ಯ ಮತ್ತು ... ರಾಜುರವರು ಭಾಷಣ ಮಾಡಿದರು ... ಚನ್ನಯ್ಯನವರು ಸತ್ಕಾರಕ್ಕಾಗಿ ವಂದನಾರ್ಪಣವನ್ನು ಅರ್ಪಿಸಿದರು

ವಿ. ಪಿ. ಮೆನನ್‌ರವರ ಪ್ರಯಾಣ

ಮೈಸೂರು ೨೧

ಭಾರತ ಸರ್ಕಾರದ ಸಂಸ್ಥಾನ ಶಾಖಾ ಸಲಹೆಗಾರರಾದ ಶ್ರೀ ವಿ ಪಿ ಮೆನನ್‌ರವರು ಈ ದಿನ ಬೆಳಿಗ್ಗೆ ೮-೩೦ ಗಂಟೆಗೆ ವಿಮಾನದಲ್ಲಿ ತಿರುವಾಂಕೂರಿಗೆ ಪ್ರಯಾಣ ಬೆಳೆಸಿದರು ನಿನ್ನೆ ಮಧ್ಯಾಹ್ನ ಅವರು ಕೂರಬೇಕಿದ್ದ ವಿಮಾನದ ಅಂತರ್ ಕ್ಯಾರೇಜು ಕೆಟ್ಟುಹೋದುದರಿಂದ, ವಿಮಾನವನ್ನು ಮದರಾಸಿಗೆ ರಿಪೇರಿಗಾಗಿ ಕಳುಹಿಸಿ ಅದನ್ನು ಈ ಬೆಳಿಗ್ಗೆ ಇಲ್ಲಿಗೆ ತರಿಸಿಕೊಳ್ಳಲಾಯಿತು ಶ್ರೀ ಮೆನನ್‌ರವರು ನಿನ್ನೆ ರಾತ್ರಿ ಕೃಷ್ಣರಾಜಸಾಗರದಲ್ಲಿ ಬಿಡಾರ ಮಾಡಿದ್ದರು

ಸಂಗೀತ

೩ ನೆ ಬ್ಲಾಕು ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ಈ ಸಂಜೆ ೬ ಗಂಟೆಗೆ ಆಸ್ಥಾನ ವಿದ್ವಾನ್ ಸ್ವರಮೂರ್ತಿಯವರ ಹಾಡುಗಾರಿಕೆ, ವಿದ್ವಾನ್ ಬಿ ಕೇಶವ ಮೂರ್ತಿಯವರ ಪಿಟೀಲು, ಮಿ|| ವಿ ವಿ ರಂಗನಾಥರವರ ಮೃದಂಗ ಕಛೇರಿ ಏರ್ಪಡಿಸಿರುತ್ತೆ

೧೮೦೦ ರೂ. ಸ್ವತ್ತಿನ ಕಳುವು

ಚಲುವಾಂಬಾ ಆಸ್ಪತ್ರೆಯ ಸರ್ಜನ್ ಆಸಿಸ್ಟೆಂಟ್ ಸರ್ಜನರಾದ ಶ್ರೀಮತಿ ಸುಂದರರಾಜುರವರ ಮನೆಯಲ್ಲಿ ಕಳೆದ ೭ನೇ ತಾ|| ರಾತ್ರಿ ಕನ್ನ ಹಾಕಿ ೧೮೦೦ ರೂ ಬೆಲೆ ಬಾಳುವ ಸ್ವತ್ತುಗಳನ್ನು ಅಪಹರಿಸಿಕೊಂಡು ಹೋದರೆಂದು ಪೋಲೀಸರಿಗೆ ದೂರು ಬಂದಿದೆ

ಷಾಂಗೈ ಮೇಲೆ ಫಿರಂಗಿ ಹೊಡೆತ

ಷಾಂಗೈ ನಗರದ ಪೂರ್ವ ಜಿಲ್ಲೆಯ ಯಾಂಗ್‌ಟ್ಸೆಪೂ ಎಂಬ ಪ್ರದೇಶದ ಮೇಲೆ ಪ್ರಥಮ ಬಾರಿ ಕಮ್ಯೂನಿಸ್ಟರು ಫಿರಂಗಿಗಳನ್ನು ಹೂಡಿದರೆಂದು ಹೇಳಲಾಗಿದೆ ಷಾಂಗೈ ನಗರವನ್ನು ವಶಪಡಿಸಿಕೊಳ್ಳಲು ಕಮ್ಯೂನಿಸ್ಟರು ೨೦ ಲಕ್ಷ ಸೈನಿಕರನ್ನು ಕಳುಹಿಸಿದ್ದಾರೆ ಎರಡು ಪಕ್ಷದವರಿಗೂ ಘೋರ ಕದನ ನಡೆಯುತ್ತಿದೆ ಕಮ್ಯೂನಿಸ್ಟರೊಡನೆ ಶಾಂತಿಸಂಧಾನಕ್ಕಾಗಿ ಸಂತ್ರ ಪರಿಷತ್ತು ಮಧ್ಯಸ್ಥಿಕೆ ವಹಿಸಬೇಕೆಂದು ಚೀಣ ಶಾಸನ ಸಭೆಯು ನಿರ್ಣಯ ಮಾಡಿದೆ

ಇನ್ನು ಮೂರು ದಿನಗಳೊಳಗಾಗಿ ಶರಣಾಗತವಾಗಬೇಕೆಂದು ಕಮ್ಯೂನಿಸ್ಟರು ಚೀಣಾ ಸರ್ಕಾರಕ್ಕೆ ಅಂತ್ಯ ಎಚ್ಚರಿಕೆ ಕೊಟ್ಟಿರುತ್ತಾರೆ

ಹಾಂಕಾಂಗಿನಿಂದ ಬ್ರಿಟಿಷರನ್ನು ಓಡಿಸಲು ಕಮ್ಯೂನಿಸ್ಟರು ನಿರ್ಧರಿಸಿರುವರೆಂದು ಹೇಳಲಾಗಿದೆ

ಸಿಡಿಲಿನಿಂದ ೩ ಜನರ ಜ್ಞಾನ ತಪ್ಪಿತು

ನಂಜನಗೂಡು "ಕೋಟೆ ... ಭವನಕ್ಕೆ ಕಳೆದ ೧೬ನೇ ತಾ|| ಮಳೆ ಬರುವಕಾಲದಲ್ಲಿ ಸಿಡಿಲು ಬಿದ್ದು ... ಮೂರು ಜನರಿಗೆ ಜ್ಞಾನ ತಪ್ಪಿ ... ನಂತರ ಅವರಿಗೆ ಜ್ಞಾನ ಬಂದಿತೆಂದು ವರದಿಯಾಗಿದೆ

ಗಾಯಿತ್ರೀ ಯಾಗ

ಹರಿಹರ ೧೮

ಇಲ್ಲಿನ ಮಹಾಜನರ ಪ್ರೋತ್ಸಾಹದಿಂದ ಗಾಯಿತ್ರೀ ಯಾಗವು ಕಳೆದ ೧೦ನೇ ತಾರೀಖಿನಿಂದ ಪ್ರಾರಂಭವಾಗಿ ೧೬ ನೇ ತಾ|| ಪೂರ್ಣಾಹುತಿಯೊಡನೆ ಮುಕ್ತಾಯವಾಯಿತು ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳೂ ನಿತ್ಯ ... ದಯಮಾಡಿಸಿದ್ದರು ... ಶ್ರೀ ರಾಮಕೃಷ್ಣ ... ಗಳವರ ನೇತೃತ್ವದಲ್ಲಿ ಯಾಗವು ಯಶಸ್ವಿಯಾಗಿ ನೆರವೇರಿತು

ಸ್ಕೂಲ್ ಫೈನಲ್ ಪರೀಕ್ಷೆ ಫಲಿತಾಂಶ

ಬೆಂಗಳೂರು ೨೧

ಇದೇ ೨೭ ನೇ ತಾ ಸ್ಕೂಲ್ ಫೈನ... ... ಪ್ರಕಟವಾಗುವುದು ...

ಘನವಾದ ಸಂಗೀತ ಕಛೇರಿ

ಗಾನವಿಹಾರದ ಬಿ ... ಕೃಷ್ಣಪ್ಪನವರ

ಶ್ರೀ ಪ್ರಸನ್ನ ಸೀತಾರಾಮ ಮಂದಿರ

22-5-49ನೇ ಭಾನುವಾರ

ಸಂಜೆ ೬ ಗಂಟೆಗೆ

ತಿರುವಾಂಕೂರು ಆಸ್ಥಾನ ವಿದ್ವಾನ್

ಜಿ ಎನ್. ಬಾಲಸುಬ್ರಹ್ಮಣ್ಯಂ

ರವರ ಗಾನ

ತಂಜಾವೂರ್ ಮಾಸ್ಟರ್

ಕೃಷ್ಣರವರ ಪಿಟೀಲು

ಮಧುರೆ ಕೃಷ್ಣಯ್ಯಂಗಾರ್ರವರ

ಮೃದಂಗ

- ಟಿಕೇಟು ದರ -

ಗಂಡಸರಿಗೆ ರೂ ... ಹೆಂಗಸರಿಗೆ ...

ಮಕ್ಕಳಿಗೆ ...

ಸರ್ಕಾರಕ್ಕೆ ಸಿ. ಆರ್. ರೆಡ್ಡಿಯವರ ವರದಿ

ಸ್ವಂ ಸ. ಫೋ.] ಬೆಂಗಳೂರು ೨೧

ಮೈಸೂರು ವಿಶ್ವ ವಿದ್ಯಾಲಯದ ಸುಧಾರಣೆ ಬಗ್ಗೆ ಡಾ|| ಸಿ ಆರ್ ರೆಡ್ಡಿಯವರು ತಮ್ಮ ವರದಿಯನ್ನು ಎರಡು ದಿನಗಳ ಹಿಂದೆ ಸರ್ಕಾರಕ್ಕೆ ಒಪ್ಪಿಸಿದರೆಂದೂ, ಅದನ್ನು ಈ ದಿನ ನಡೆದ ಮಂತ್ರಿ ಮಂಡಲದ ಸಭೆಯಲ್ಲಿ ಪರಿಶೀಲಿಸಲಾಯಿತೆಂದೂ ತಿಳಿದು ಬಂದಿದೆ

ಪ್ರ. ಪ್ರ. ಸಭೆಗೆ ಚುನಾಯಿತ ಅಧ್ಯಕ್ಷರು

ಪ್ರಜಾ ಪ್ರತಿನಿಧಿ ಸಭೆಗೆ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕನ್ನು ಕೊಡಲು ಈಗಿರುವ ಶಾಸನವನ್ನು ತಿದ್ದುಪಡಿ ಮಾಡಿ ಶ್ರೀಮನ್ಮಹಾರಾಜರವರು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ

ಕುದುರೆ ಜೂಜಿನ ತೆರಿಗೆ ಹೆಚ್ಚಳ

ಈ ದಿನದಿಂದ ಬೆಂಗಳೂರಿನಲ್ಲಿ ಪ್ರಾರಂಭವಾಗುವ ಕುದುರೆ ಜೂಜಿನ ಬೆಟ್ಟಿಂಗ್ ತೆರಿಗೆಯನ್ನು ಸರ್ಕಾರದವರು ಶೇಕಡ ೮ ರಿಂದ ೧೨|| ಗೆ ಹೆಚ್ಚಿಸಿರುತ್ತಾರೆ

ಸ್ಕೂಲ್ ಫೈನಲ್ ಪರೀಕ್ಷೆ ಸೆಲೆಕ್ಷನ್ ರದ್ದು

ಸಂಸ್ಥಾನದ ಸ್ಕೂಲ್ ಫೈನಲ್ಲಿನ ಸೆಲೆಕ್ಷನ್ ಪರೀಕ್ಷೆಯನ್ನು ರದ್ದು ಮಾಡಬೇಕೆಂದು ಸೆಕೆಂಡರಿ ವಿದ್ಯಾಭ್ಯಾಸದ ಸಮಿತಿಯವರು ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ

ಗೌರ್ನರ್ ಜನರಲ್ಲರ ನಿರ್ಗಮನ

ನಾಳೆ ಬೆಳಿಗ್ಗೆ ಗೌರ್ನರ್ ಜನರಲ್ ರಾಜಾಜಿಯವರು ದೆಹಲಿಗೆ ಪ್ರಯಾಣ ಬೆಳೆಸುವರು ಈ ದಿನ ಅವರು ಜಯನಗರ, ಕುಮಾರಾ ಪಾರ್ಕ್ ಬಡಾವಣೆ, ಕೈಗಾರಿಕಾ ಕಾಲೋನಿ ಮುಂತಾದ ಪ್ರದೇಶಗಳನ್ನು ಪರಿಶೀಲಿಸಿ, ಪ್ರಜೆ ಸಭೆಯವರು ಕೈಗೊಂಡಿರುವ ಅಭಿವೃದ್ಧಿ ಕಾರ್ಯವನ್ನು ಪ್ರಶಂಸಿಸಿದರು.

ಕೋಟಾ ಸಂಗಾಣಿ ರಾಜರಿಗೆ ಹುದ್ದೆ

ಮೈಸೂರು ಶ್ರೀಮನ್ಮಹಾರಾಜರವರ ಭಾವನವರಾದ ಕೋಟಾ ಸಂಗಾಣಿಯ ರಾಜರು ಶ್ರೀ ಪ್ರದ್ಯುಮ್ನ ಸಿಂಹಜಿರವರನ್ನು ನ್ಯೂಯಾರ್ಕಿನಲ್ಲಿ ಭಾರತದ ವೈಸ್-ಕಾನ್ಸಲರಾಗಿ ಕೇಂದ್ರ ಸರ್ಕಾರದವರು ನೇಮಿಸಿದ್ದಾರೆ

ಕರೆನ್ನರ ಸ್ವತಂತ್ರ ರಾಜ್ಯದ ಘೋಷಣೆ

ಮಧ್ಯ ಬರ್ಮಾ ಪ್ರದೇಶದಲ್ಲಿ ಕರೆನ್ ದಂಗೆಕೋರರು ತಮ್ಮದೇ ಒಂದು ಸ್ವತಂತ್ರ ಸಂಸ್ಥಾನವನ್ನು ಸ್ಥಾಪಿಸಿರುವ ಬಗ್ಗೆ ... ಹೊರಡಿಸಿರುತ್ತಾರೆ ಈ ಪ್ರದೇಶವು ರಂಗೂನಿಗೆ ... ಮೈಲಿ ದೂರದಲ್ಲಿದೆ

ಪ್ರಭಾ 20-5-49ರಿಂದ ಜಯಭೇರಿ 2 ನೆಯವಾರ

✻ ನಗರಿ ✻

ಶಾಮಿನಿ ... ಗೀತಾ, ದೀಕ್ಷಿತ್, ನಟಿಸಿರುವ ಹಿಂದಿ ಚಿತ್ರ

Morning Shows

on 21st & 22nd May 1949

... Bachelor & the Bobby Soxer

Morning Shows at
CHAMUNDESHWARI TALKIES
From 20-5-49 for 4 days
Unceasing Excitement
Relentless Suspense
R.K.O's
NOTORIOUS
(ನೊಟೋರಿಯಸ್)
Starring Ingrid Bergman
Gary Grant

ಗಣೇಶಾ ಟಾಕೀಸ್
20-5-49ರಿಂದ 3 ದಿನಗಳ ಮಾತ್ರ
ಪ್ರತಿ ದಿನ 3 ಪ್ರದರ್ಶನಗಳು
ಕೊಲಂಬಿಯಾ ಪಿಕ್ಚರ್ಸ್ರವರ –
ಡೌನ್ ಟು ಅರ್ಥ್
DOWN TO EARTH
(ಪೂರ್ತಿ ವರ್ಣರಂಜಿತ ಚಿತ್ರ)
ಪಾತ್ರ—ರಿಟಾ ಹೇವರ್ತ್ ಮತ್ತು ಲಾರಿ ಪಾರ್ಕ್ಸ್
ಮುಂದಿನ ಬದಲಾವಣೆ: -
23—5—49 ರಿಂದ
ಗನ್ ಫೈಟರ್ಸ್
(Cine Colour)

Edited, printed, and published by A.R Nagarajan at the Sadhvi Press, D. Subbiah Road, Mysore.

ಶಾಸನಸಭೆಗಳಿಗೆ ಮಹಿಳೆಯನ್ನು ಕಳುಹಬೇಕು

[illegible] ಅಧಿಕಾರಿಗಳಿಗೆ [illegible] ಕೊಡಬೇಕೆಂದು [illegible] ಸರ್ಕಾರ [illegible]

ರಾಜಕಮಲ್
ಮೈಸೂರು
20-5-49ರಿಂದ
ಅಮೋಘವಾದ 4ನೇ ವಾರ
ಪ್ರತಿದಿನ 3 ಆಟಗಳು
ಫಿಲ್ಮಿಸ್ತಾನ್ರವರ
ಷಹೀದ್
—:ಮುಖ್ಯ ಪಾತ್ರ:—
• ಕಾಮಿನಿ ಕೌಶಲ್ಯ,
• ದಿಲೀಪ್ ಕುಮಾರ್,
• ಚಂದ್ರ ಮೋಹನ್,
• ವಿ. ಎಚ್. ದೇಸಾಯಿ

Morning Shows
From 20-5-49 for 4 days
Lover Come Back
With:-George Brent, Lucille Ball, Veera Jorina.

ಪ್ರಾಂತೀಯ ಭಾಷೆಯಲ್ಲಿ ಪಾಠ ಪ್ರವಚನ

ಮದರಾಸ್ ಪ್ರಾಂತ್ಯದ ಎಲ್ಲ ಶಾಲೆಗಳಲ್ಲಿಯೂ ಪ್ರಾದೇಶಿಕ ಅಥವಾ ಮಾತೃ ಭಾಷೆಗಳಲ್ಲೇ ಪಾಠ ಪ್ರವಚನಗಳನ್ನು ಹೇಳಿಕೊಡಬೇಕೆಂದು ಅಲ್ಲಿನ ಮಂತ್ರಿಮಂಡಲದ ಉಪಸಮಿತಿಯು ಸಲಹೆ ಮಾಡಿರುತ್ತದೆ. ಇತರ ಮಾತೃಭಾಷಾ ವಿದ್ಯಾರ್ಥಿಗಳು ಶಿವರಾಂಶೆಟ್ಟಿ, ಹತ್ತು ಮಂದಿಗಿಂತಲೂ ಹೆಚ್ಚಾಗಿದ್ದರೆ ವಿದ್ಯಾರ್ಥಿಗಳ ಮಾತೃ ಭಾಷೆಯಲ್ಲೇ ಪಾಠವನ್ನು ಹೇಳಿಕೊಡಬೇಕೆಂದೂ ಅವರು ಶಿಫಾರಸು ಮಾಡಿರುತ್ತಾರೆ.

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿ
ದಯವಿಟ್ಟು ಭೇಟಿ ಕೊಡಿ
ಶಿವರಾಂಶೆಟ್ಟಿ, :: ಮೈಸೂರು

—‡ ಶೀಘ್ರದಲ್ಲಿಯೇ ನಿರೀಕ್ಷಿಸಿ ‡—
ಶ್ರೀ ಗಣೇಶಾ ಮತ್ತು ನ್ಯೂ ಅಪೆರಾ
ಟಾಕೀಸುಗಳಲ್ಲಿ
ಜ್ಯೂಪಿಟರ್ರವರ ಅಮೋಘವಾದ ಕಲಾಕೃತಿ
★ ವೇಲೈಕಾರಿ ★ [ತಮಿಳು]
—: ಭೂಮಿಕೆ :—
ಎಂ. ವಿ. ರಾಜಮ್ಮ, | ಟಿ. ಎಸ್. ಬಾಲಯ್ಯ,
ವಿ. ಎನ್. ಜಾನಕಿ, | ದೊರೆ ರಾಜ್

॥ ಶ್ರೀ ಸೀತಾರಾಮಾಯನಮಃ ॥
ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ಸೌಭಾಗ್ಯಕಲಾ
ಗಂಡಸರ ಮೂತ್ರ ಕೋಶದ ಬಿಳುಪು, ಕೆಂಪು ಮೈ ಮೇಲೆ ಮೇಹದ ಮಚ್ಚೆಗಳು, ಮೇಹ ವ್ರಣಗಳು ಸಹಾ ಪಂಹಾರ ಪಥ್ಯವಿಲ್ಲದೆ ಸೇವಿಸುವ ಔಷಧಿ
ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

MYSORE CITY MUNICIPALITY
NOTICE

Sealed tenders will be received by the Municipal Engineer for the following works on the dates noted against each —

1. Constructing "L" shaped burnt stone slab drain behind door No 4368, Narasimharaja Mohalla.	28-5-49
2. Constructing "L" shaped slab drain in the South end street parallel to Kantharaja Urs Road in Kannegowdana Koppal, Chamaraja Mohalla.	28-5-49
3 Widening the foot bridge across main storm water drain running to Subbarayanakere in College Road, Chamaraja Mohalla	28-5-49
4 Improvements to Sunnadakeri Market K R Mohalla	30-5-49
5 Construction of bus shelter for the [illegible] Grove in the Bus Terminus, [illegible] Mohalla.	30-5-49
6 [illegible] Repairs of V D Rajaram [illegible]	30-5-49

Each tender must be accompanied with a challan for having remitted Rs 133, Rs 73, Rs. 40, Rs 50 Rs. 200 and Rs 40. in the Municipal Treasury as earnest money for item Nos 1,2,3,4,5, and 6 respectively For full particulars please see the Office Notice Board.

(Sd). **V K Mukundan**,
Municipal Engineer.

ಮೈಸೂರು ವಿಶ್ವ ವಿದ್ಯಾಲಯ

ನಂ. ಎಕ್ಸ್ ೧–೧೦೫೧/೪೮-೪೯
ಮೈಸೂರು ವಿಶ್ವ ವಿದ್ಯಾಲಯದ ಕಛೇರಿ
ಮೈಸೂರು: ತಾ॥ ೯ ಮೇ ೧೯೪೯
ನಂ ಎಕ್ಸ್ ೧–೧೦೫೧/೪೮ ೪೯೦

ಪ್ರಕಟಣೆ

ವಿಶ್ವ ವಿದ್ಯಾಲಯದ ಸಂಸ್ಥೆಗಳಲ್ಲಿ ಡಿಗ್ರಿ ಕೋರ್ಸುಗಳ ತರಗತಿಗಳಿಗೆ ಸೇರುವವರಿಂದ ಇದೇ ೩೧ನೇ ತಾ॥ ವರೆಗೂ ಇಂಟರ್ ಮೀಡಿಯೆಟ್ ಕೋರ್ಸುಗಳು ಮತ್ತು ಮೆಡಿಕಲ್ ಸ್ಕೂಲಿನ ಬಗ್ಗೆ ೧೯೪೯ನೇ ಜೂನ್ ೧೫ನೇ ತಾ॥ ವರೆಗೂ ಸದರಿ ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ

ಅರ್ಜಿಗಳ ಜೊತೆಯಲ್ಲಿ ಲೀವಿಂಗ್ ಸರ್ಟಿಫಿಕೇಟ್ ಮತ್ತು ಇತರ ಸರ್ಟಿಫಿಕೇಟುಗಳು, ಅಲ್ಲದೆ ತೇರ್ಗಡೆಯಾದ ಪರೀಕ್ಷೆಯಲ್ಲಿ ಪಡೆದ ಸಂಖ್ಯೆಗಳ ಮತ್ತು ತೇರ್ಗಡೆಯಾದ ವರ್ಷ ಅಥವಾ ವರ್ಷಗಳನ್ನು ತೋರಿಸುವ ಸರ್ಟಿಫಿಕೇಟ್ ಪಡೆದ ಪಟ್ಟಿಯು ಇರತಕ್ಕದ್ದು.

ಒಂದು ಕಾಲೇಜು ಅಲ್ಲದೇ ಇತರ ಸಂಸ್ಥೆಗಳಿಗೂ ಅರ್ಜಿಗಳನ್ನು ಕಳುಹಿಸುವ ವಿದ್ಯಾರ್ಥಿಗಳು ಗೆಜೆಟೆಡ್ ಅಧಿಕಾರಿಗಳಿಂದ ರುಜು ಹಾಕಿದ ತಮ್ಮ ಮಾರ್ಕ್ಸ್ ಕಾರ್ಡಿನ ಪ್ರತಿಗಳನ್ನು ಅರ್ಜಿ ಸಮೇತ ಕಳುಹಿಸಬಹುದು.

ಮೈಸೂರು ವಿಶ್ವ ವಿದ್ಯಾಲಯಕ್ಕೆ ಸೇರದ ಹೊರಗಿನ ವಿಶ್ವ ವಿದ್ಯಾಲಯದಿಂದ ಬರುವ ಉಮೇದುವಾರರು ಈ ಮೇಲ್ಕಂಡ ಸರ್ಟಿಫಿಕೇಟುಗಳ ಜೊತೆಗೆ ವಲಸೆಯ ಸರ್ಟಿಫಿಕೇಟನ್ನೂ ಸಹ ಹಾಜರು ಮಾಡಬೇಕು

ಅರ್ಜಿಗಳ ನಮೂನೆಗಳನ್ನು ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಪಡೆಯಬಹುದು. ಕಾಲೇಜಿಗೆ ಸೇರಲಿಚ್ಛೆಯಿಂದ ಬಂದ ಪ್ರತಿಯೊಂದು ಅರ್ಜಿಯ ಸಂಗಡ ಒಂದು ರೂಪಾಯಿ ಫೀಜು ಕೊಡಬೇಕು ಈ ಫೀಜನ್ನು ಯಾವುದೇ ಸಂದರ್ಭದಲ್ಲೂ ವಾಪಸು ಮಾಡಲಾಗುವುದಿಲ್ಲ

ಅರ್ಜಿಗಳನ್ನು ಕೊಟ್ಟ ಒಂದು ವಾರದ ನಂತರ ಆಯಾ ಸಂಸ್ಥೆಗಳ ನೋಟೀಸ್ ಬೋರ್ಡಿನ ಮೇಲೆ ಚುನಾಯಿಸಲ್ಪಟ್ಟ ಉಮೇದುವಾರರ ಹೆಸರುಗಳನ್ನು ಪ್ರಕಟಿಸಲಾಗುವುದು ಹೀಗೆ ಚುನಾಯಿಸಲ್ಪಟ್ಟ ಉಮೇದುವಾರನು ಪ್ರಕಟಣೆಯಾದ ಒಂದು ವಾರದೊಳಗೆ ಸಂಸ್ಥೆಗೆ ಸೇರದಿದ್ದರೆ ಅತನು ತನ್ನ ಹಕ್ಕನ್ನು ಕಳೆದುಕೊಳ್ಳುವನು.

ಅಪ್ಪಣೆ ಪ್ರಕಾರ
ಟಿ. ಸಿದ್ಧಲಿಂಗ ದೇವರು
ರಿಜಿಸ್ಟ್ರಾರ್ (ಐ.ಸಿ)

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೩] ಬಾನುವಾರ ೨೨-೫-೪೯ [ಸಂಚಿಕೆ ೩೮

ಟಾಗೂರರ ದಿನಾಚರಣೆ

ಮೈಸೂರು ೨೨

ರಾಜಧಾನಿಯ ಭಾರತ ಸೇವಾ ಸಮಾಜದ ಆಶ್ರಯದಲ್ಲಿ ಮೊನ್ನೆ ಸಂಜೆ ಲಕ್ಷ್ಮೀಪುರಂ ಬಾಲಕಿಯರ ಮಿಡಲ್ ಸ್ಕೂಲಿನಲ್ಲಿ ರವೀಂದ್ರನಾಥ ಟಾಗೋರ್‌ರವರ ದಿನಾಚರಣೆಯು ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಾಲಕ ಬಾಲಕಿಯರಿಂದ ಕವಾತು ಪ್ರದರ್ಶನ, ಪ್ರಾರ್ಥನೆ, ಸ್ವಾಗತಗಳಾದನಂತರ, ಶ್ರೀ ... ದ ಯಾಮುನಾಚಾರ್ಯ, ಎಸ್. ಜಿ. ... ಮತ್ತು ಆರ್. ಎಸ್. ರಾವ್ ಮತ್ತು ... ರು ಭಾಷಣ ಮಾಡಿ, ಕವಿ ಟಾಗೂರರವರ ಚರಿತ್ರೆಯನ್ನು ವಿವರಿಸಿದರು.

... ರವಾನೆ ಬಸದ ಕಟ್ಟೆ ಮಠ

... ಯಿಂದ ಮಠದ ಉತ್ತರಾಧಿಕಾರದ ... ವಾಗಿ ಕಳೆದ ೮ನೇ ತಾ|| ದಿನ ... ಯಬೇಕಾಗಿದ್ದ ನಗರದ ವೀರಶೈವ ... ವರ ಸಭೆಗೆ ಆಹ್ವಾನವನ್ನು ಎಲ್ಲ ... ಶ್ರೀ ರಾಚಪ್ಪ ಎಂಬುವರ ಮೂಲಕ ... ಹಿಸಿದ್ದರಿಂದ ಎಲ್ಲರಂತೆ ಶ್ರೀ ಶಿವರು ... ಎಂಬುವರು ಆಹ್ವಾನ ಪತ್ರಿಕೆಯ ... ಸ್ತಕಕ್ಕೆ ರುಜು ಹಾಕಿ, ಖಾಲಿ ಪುಸ್ತಕಕ್ಕೆ ರುಜು ಹಾಕಿದೆ ಎಂಬ ಸುಳ್ಳು ಫಿರ್ಯಾದನ್ನು ಪೋಲೀಸರಿಗೆ ಕೊಟ್ಟಿದ್ದರ ಮೇಲೆ ಇನ್ಸ್‌ಪೆಕ್ಟರು ಅದನ್ನು ಪರಿಶೀಲಿಸಿ, ಫಿರ್ಯಾದು ಸುಳ್ಳು ಎಂಬುದಾಗಿ ತಿಳಿದುಬಂದುದರಿಂದ ಅದನ್ನು ವಜಾ ಮಾಡಿದ್ದಾರೆ—ಎಂದು ಅಧ್ಯಕ್ಷ ಶ್ರೀ ಎಂ. ಎಲ್. ನಾಗಣ್ಣನವರು ತಿಳಿಸಿರುತ್ತಾರೆ.

ಮೇಟಿಗಹಳ್ಳಿಬಳಿ ರೈಲುನಿಲ್ಲಬೇಕು

ನಗರದಿಂದ ಕ್ಷಯದ ಆಸ್ಪತ್ರೆಗೆ ಹೋಗುವುದಕ್ಕೆ ಸಿಟಿ ಬಸ್ಸಿನಲ್ಲಿ ಸ್ಥಳ ಸಿಕ್ಕದೆ ಜನರು ನಡೆದುಕೊಂಡು ಹೋಗಬೇಕಾಗುವುದರಿಂದ ಅರಸೀಕೆರೆ ಕಡೆಗೆ ಹೋಗಿ ಬರುವ ಎಲ್ಲ ರೈಲುಗಳನ್ನೂ ಮೇಟಿಗಹಳ್ಳಿ ಬಳಿ ನಿಲ್ಲಿಸುವಂತೆ ಏರ್ಪಾಡು ಮಾಡಬೇಕೆಂದು ಪ್ರಯಾಣಿಕರೊಬ್ಬರು ... ಸಿರುತ್ತಾರೆ.

ಕುಕ್ಕರಹಳ್ಳಿ ಕೆರೆಯಲ್ಲಿ ಮೊಸಳೆ

ರಾಜಧಾನಿಯ ಕುಕ್ಕರಹಳ್ಳಿ ಕೆರೆಯಲ್ಲಿ ... ಮುಪ್ಪಾದ ಮೊಸಳೆಯೊಂದು ದಡ ... ಕ್ಕೆ ಬರುತ್ತಿದ್ದುದನ್ನು ನೋಡಲಾಗಿದೆ, ಆದುದರಿಂದ ಅಲ್ಲಿಗೆ ಹೋಗುವವರು ಎಚ್ಚರಿಕೆಯಿಂದ ಇರಬೇಕೆಂದು ... ರೊಬ್ಬರು ತಿಳಿಸಿರುತ್ತಾರೆ

ಮೈಸೂರಿನಲ್ಲಿ ಸಕ್ಕರೆ ಅಭಾವ

... ಸೂರು ನಗರದಲ್ಲಿ ಮಂಡ್ಯ ಸಕ್ಕರೆ ... ನಿಯವರೇ ಸಕ್ಕರೆ ಬಿಕರಿಗಾಗಿ ... ಒಂದನ್ನು ಇಟ್ಟಿದ್ದಾರೆ ಈ ಡಿಪೋ ... ದ ಒಂದು ತಿಂಗಳಿನಿಂದ ಕೇವಲ ... ಮೂಟೆ ಸಕ್ಕರೆಯು ಕಾರ್ಖಾನೆಯಿಂದ ... ಬರುತ್ತಾಗಿ, ಅದು ಕೇವಲ ಒಂದೆರಡು ... ಗಂಟೆಗಳೊಳಗೇ ಮಾರಾಟವಾಗಿ ... ಯಿತು. ಈಗ ಈ ಕಂಪೆನಿ ಡಿಪೋವಿನ ... ದಾಸ್ತಾನಿಲ್ಲ ಹೋಲ್‌ಸೇಲ್ ... ಗಳು ಈ ಅಂಶ ತಿಳಿದು, ಸಕ್ಕರೆ ... ಬೆಲೆಯನ್ನು ನೂರುರೂಪಾಯಿ ... ತ್ತಾರೆ (ಸಕ್ಕರೆ ಮೂಟೆಯ ... ಬೆಲೆ ಸುಮಾರು ೯೦ ರೂಪಾಯಿ) ... ಪರಿಣಾಮವಾಗಿ ಸಕ್ಕರೆಯ ಚಿಲ್ಲರೆ ... ದ ಬೆಲೆ ಸಹ ಏರಿದೆ ಈ ತೊಂದರೆ ತಪ್ಪಿಸಲು ಸಕ್ಕರೆ ಕಂಪೆನಿಯ ಅಧಿಕಾರಿಗಳು, ಸರ್ಕಾರದವರೂ ಕೂಡಲೆ ... ಕೊಡಬೇಕೆಂದು ಪ್ರಾರ್ಥನೆ

ಓರ್ವ ಪ್ರಜೆ

ಮೈಸೂರು ಲೇಬರ್ ಗೆಜೆಟ್

ಮೈಸೂರು ಸರ್ಕಾರದ ಕಾರ್ಮಿಕ ಇಲಾಖೆಯವರಿಂದ ಪ್ರಕಟವಾಗಿರುವ ಮೈಸೂರು ಲೇಬರ್ ಗೆಜೆಟ್ ಎಂಬ ಕನ್ನಡ ಪಕ್ಷ ಪತ್ರಿಕೆಯ ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಕಾರ್ಮಿಕರ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿರುವ ಕಾನೂನು, ಮತ್ತು ಇತರ ಕಾರ್ಯಗಳು, ಮತ್ತು ಕಾರ್ಮಿಕರಿಗೆ, ಸಂಬಂಧಪಟ್ಟ ಅನೇಕ ವಿಷಯಗಳು, ಇದರಲ್ಲಿ ಪ್ರಕಟವಾಗಿವೆ. ಕಾರ್ಮಿಕರಲ್ಲಿ ತಿಳುವಳಿಕೆಯನ್ನೂ ಸದ್ಭಾವನೆಯನ್ನೂ ವಸ್ತುಸ್ಥಿತಿ ಜ್ಞಾನವನ್ನೂ ಪ್ರಸಾರ ಮಾಡುವುದಕ್ಕಾಗಿ ಹೊರಟಿರುವ ಈ ಪತ್ರಿಕೆಯು ಚಿರಕಾಲ ಬಾಳಲೆಂದು ಹಾರೈಸುತ್ತೇವೆ ವಾರ್ಷಿಕ ಚಂದಾ ೬ ರೂ ಮತ್ತು ಬಿಡಿ ಪತ್ರಿಕೆ ೮ ಆಣೆ

ಖಾಸಗೀ ಕೆಲಸಕ್ಕೆ ನೌಕರರನ್ನು ಉಪಯೋಗಿಸಬಾರದು

ಯಾವುದಾದರೂ ಸಮಾರಂಭಕ್ಕೆ ಅಧಿಕಾರಿಗಳು ಅಧ್ಯಕ್ಷತೆ ವಹಿಸಿದರೆ ತಮ್ಮ ಕೈಕೆಳಗಿನ ನೌಕರರನ್ನು ಚಂದಾ ವಸೂಲಿ ಟಿಕೆಟ್ಟುಗಳನ್ನು ಮಾರುವುದು—ಇನ್ನೇ ಮುಂತಾದ ಕೆಲಸಗಳಿಗೆ ಬಲಾತ್ಕಾರವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಅಧಿಕಾರ ಬಲದಿಂದ ಬಡ ನೌಕರರನ್ನು ಈ ರೀತಿ ಕಷ್ಟಪಡಿಸುವುದನ್ನು ಕೂಡಲೇ ನಿಲ್ಲಿಸಬೇಕು—ಎಂದು ರಾಜಧಾನಿಯ ಶ್ರೀ ಹಿ ಕ ಸುಬ್ಬರಾಯರು ತಿಳಿಸಿರುತ್ತಾರೆ

೧೫ ವರ್ಷಗಳ ಹಿಂದೆ ಬಚ್ಚಿಟ್ಟಿದ್ದ ಚಿನ್ನದ ಪತ್ತೆ

ಲಾಹೋರಿನಿಂದ ಅಮೃತಸರಕ್ಕೆ ೧೬ ತಿಂಗಳ ನಂತರ ಹಿಂತಿರುಗಿದ ಪ ... ನಿರಾಶ್ರಿತನೊಬ್ಬನಿಗೆ ಗಲಭೆಯಲ್ಲಿ ನಾಶವಾದ ತನ್ನ ಮನೆಯಲ್ಲಿ ೧೫ ವರ್ಷಗಳ ಹಿಂದೆ ಬಚ್ಚಿಟ್ಟಿದ್ದ ೨೭ ಸಾವಿರ ರೂ ಬೆಲೆ ಬಾಳುವ ೧೬ ಬಾರುಗಳ ಚಿನ್ನ ಪತ್ತೆಯಾಯಿತೆಂದು ಹೇಳಲಾಗಿದೆ.

೧೬ ಬಾರಿ ಗಲ್ಲಿನಿಂದ ಪಾರಾದ ನೀಗ್ರೊ

ಅಮೆರಿಕದಲ್ಲಿರುವ ಮಾಂಟ್‌ಗೋಮರಿಯಲ್ಲಿನ ೨೨ ವರ್ಷದ ಟೇಲರ್ ಎಂಬ ನೀಗ್ರೊ ಯುವಕನು ಬಿಳಿಯ ಹೆಂಗಸಿನ ಮೇಲೆ ಕೈ ಮಾಡಿದನೆಂದು ಫಾಸಿ ಶಿಕ್ಷೆ ವಿಧಿಸಲಾಗಿತ್ತು ಆದರೆ ಅದನ್ನು ಕಾರ್ಯರೂಪಕ್ಕೆ ತರದಂತೆ ಆತನ ವಕೀಲರು ಪ್ರಯತ್ನಪಟ್ಟು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸುವಂತೆ ಮಾಡಿದರು ಈತನಿಗೆ ಇದೇ ರೀತಿ ಹದಿನೈದು ಸಲ ಮರಣ ದಂಡನೆ ವಿಧಿಸಲ್ಪಟ್ಟು, ಜೀವಾವಧಿ ಶಿಕ್ಷೆಗೆ ಇಳಿಸಲ್ಪಟ್ಟಿತ್ತು

ಚಲಿಸುವ ದಂತ ವೈದ್ಯದ ಮೋಟಾರು

ಹಳ್ಳಿ ಜನರ ಗಮನವನ್ನು ಹಲ್ಲಿನ ರಕ್ಷಣೆಯ ಆವಶ್ಯಕತೆಯ ಕಡೆಗೆ ಎಳೆಯಲು ಶೀಘ್ರದಲ್ಲಿಯೇ ಹಲ್ಲಿನ ವೈದ್ಯಕ್ಕೆ ಸಂಬಂಧಿಸಿದ ಮೋಟಾರು ಗಾಡಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಓಡಾಡಿಸಲು ಭಾರತ ಸರಕಾರದವರು ನಿಷ್ಕರ್ಷಿಸಿದ್ದಾರೆ.

ರಾಜ್ಯಾಂಗ ಸಭೆಯಲ್ಲಿ ಕಾಶ್ಮೀರಕ್ಕೆ ಪ್ರಾತಿನಿಧ್ಯ

ಭಾರತದ ರಾಜ್ಯಾಂಗ ಸಭೆಯಲ್ಲಿ ಕಾಶ್ಮೀರ ಸಂಸ್ಥಾನಕ್ಕೆ ಪ್ರಾತಿನಿಧ್ಯ ಕೊಡುವ ಬಗ್ಗೆ ಒಂದು ನಿರ್ಣಯವನ್ನು ಸಚಿವ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಮುಂದಿನ ವಾರ ಸಭೆಯಲ್ಲಿ ಮಂಡಿಸಲಿದ್ದಾರೆಂದು ತಿಳಿದು ಬಂದಿದೆ

ಗಣೇಶ ಟಾಕೀಸ್

23-5-49ನೇ ಸೋಮವಾರದಿಂದ

ಪ್ರತಿ ದಿನ 3 ಪ್ರದರ್ಶನಗಳು

ಕೊಲಂಬಿಯಾ ಪಿಕ್ಚರ್ಸ್‌ರವರ

(ಪೂರ್ಣ ವರ್ಣರಂಜಿತ ಚಿತ್ರ)

ಗನ್ ಫೈಟರ್ಸ್

GUN FIGHTERS

(Cine Colour)

ಪಾತ್ರ:—ರಾಂಡಾಲ್ಫ್ ಸ್ಕಾಟ್.

... ಬ್ರಿಟನ್

ರಾಜಕಮಲ್

ಮೈಸೂರು

೨೦-೫-೪೯ ರಿಂದ

ಅಮೋಘವಾದ 3ನೇ ವಾರ

ಪ್ರತಿದಿನ ... ಆಟಗಳು

ಫಿಲ್ಮಿಸ್ತಾನ್‌ರವರ

ಷಹೀದ್

—ಮುಖ್ಯ ಪಾತ್ರ—

ಕಾಮಿನಿ ಕೌಶಲ್ಯ, ದಿಲೀಪ್ ಕುಮಾರ್, ಚಂದ್ರಮೋಹನ್, ವಿ ಎಚ್ ದೇಸಾಯಿ

Morning Shows

From 20-5-49 for 4 days

Lover Come Back

With George Brent, Lucille Ball, Vera Jorint

ಅಕ್ಷರದ ಜಾಹೀರಾತಿಗಾಗಿ

ಗುರು ದೇವಾ ಹಾಲ್

... ಮೈಸೂರು

ಪರೀಕ್ಷೆ ಪಾಸಾದುದನ್ನು ರದ್ದು ಮಾಡಬೇಕೆಂದು ಉಪವಾಸ

ಪರೀಕ್ಷೆಯಲ್ಲಿ ೩ನೇ ದರ್ಜೆಯಲ್ಲಿ ಉತ್ತೀರ್ಣನಾಗಿದ್ದುದನ್ನು ವಜಾ ಮಾಡಬೇಕೆಂದು ಅಲಹಾಬಾದ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೊಬ್ಬನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾನೆಂದು ವರದಿಯಾಗಿದೆ ಆತನು ಬಿ.ಎ. ಪರೀಕ್ಷೆಗೆ ಕುಳಿತು ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರೆದು, ಕೊನೆಯ ದಿನ ಪತ್ರಿಕೆಗಳಿಗೆ ಉತ್ತರ ಬರೆಯುತ್ತಿದ್ದಾಗ ತಾನು ಮೂರನೇ ದರ್ಜೆಯಲ್ಲಿ ಮಾತ್ರ ಪಾಸಾಗಬಹುದೆಂದು ತಿಳಿದು ಉತ್ತರ ಪತ್ರಿಕೆಗಳನ್ನು ಕೊಡಲು ನಿರಾಕರಿಸಿದನು ಆದರೆ ಉಪಾಧ್ಯಾಯರ ಬಲವಂತದಿಂದ ಅದನ್ನು ಕೊಟ್ಟನು ಬಾಯಿ ಪ್ರಶ್ನೆ ಪರೀಕ್ಷೆಗೆ ಆತನು ಕೂಡಲಿಲ್ಲ ಬಲಾತ್ಕಾರವಾಗಿ ಕೊನೆಯ ಉತ್ತರ ಪತ್ರಿಕೆಗಳನ್ನು ಕೊಟ್ಟುದರಿಂದ ಅವನ್ನು ವಜಾ ಮಾಡಬೇಕೆಂದು ಅರ್ಜಿಯನ್ನೂ ಹಾಕಿದ್ದನು. ಆದರೂ ಆತನು ಮೂರನೇ ದರ್ಜೆಯಲ್ಲಿ ಪಾಸಾದನೆಂದು ಪ್ರಕಟಣೆ ಆಯಿತು ಅದನ್ನು ವಜಾ ಮಾಡಬೇಕೆಂದು ಪ್ರಿನ್ಸಿಪಾಲರ ಮನೆ ಮುಂದೆ ಈಗ ಉಪವಾಸ ಪ್ರಾರಂಭಿಸಿದ್ದಾನೆ ಪಾಸಾಗಿದ್ದರೂ ಫೇಲ್ ಮಾಡಿಸುವುದು ಹೇಗೆ ಎಂಬ ಸಮಸ್ಯೆಯು ವಿಶ್ವವಿದ್ಯಾನಿಲಯ ಅಧಿಕಾರಿಗಳಿಗೆ ಈಗ ಒದಗಿದೆ.

ಶ್ರೀ ಚೆನ್ನಯ್ಯನವರಿಗೆ ಸತ್ಕಾರ

ಮೈಸೂರು ೨೨

ಯೂರೋಪ್ ಮತ್ತು ಅಮೆರಿಕಾಪ್ರವಾಸವನ್ನು ಕೈಗೊಳ್ಳಲಿರುವ ಮೈಸೂರು ಕಾಂಗ್ರೆಸ್ ಮುಂದಾಳುಗಳಾದ ಶ್ರೀ ಎಸ್. ಚನ್ನಯ್ಯನವರಿಗೆ ಪೌರ ಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ನೆನ್ನೆ ಸಂಜೆ ಟೌನ್‌ಹಾಲಿನ ಮಹಡಿಯ ಮೇಲೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ನೂರಾರು ಜನ ಗಣ್ಯಮಹನೀಯರೂ, ಮಹಿಳೆಯರೂ ಭಾಗವಹಿಸಿದ್ದರು ... ವರ ... , ಸಂಗೀತ ಮತ್ತು ಉಪಾಹಾರವಾದ ನಂತರ ಶ್ರೀ ವೆಂಕಟರಮಣಯ್ಯನವರು ಮುಖ್ಯ ಅತಿಥಿಗಳ ಸೇವಾಕಾಂಕ್ಷೆ, ಕರ್ತವ್ಯ ಪ್ರಿಯತೆ ಮತ್ತು ತ್ಯಾಗಬುದ್ಧಿ ಇವುಗಳನ್ನು ಕುರಿತು ಪ್ರಶಂಸಿಸಿ ಭಾಷಣ ಮಾಡಿದರು ಶ್ರೀ ಎಂ. ಪಿ ಲಿಂಗಪ್ಪನವರೂ ಸಹ ಹಲವು ಸಮಯೋಚಿತ ಮಾತುಗಳನ್ನಾಡಿದರು.

ಶ್ರೀ ಚೆನ್ನಯ್ಯನವರು ಉತ್ತರ ಕೊಡುತ್ತಾ, ತಮಗೆ ಮೈಸೂರಿನ ರಾಜಕೀಯದ ಸಂದರ್ಭದ ... ವಿವರಿಸಿ, ಹಿಂದಿನ ಅನೇಕ ವರ್ಷಗಳ ಅನುಭವವನ್ನು ತಿಳಿಸಿದರು ತಮ್ಮನ್ನು ಹಲವರು ಸೈತಾನರು, ನವಾಬರು, ಹಿಟ್ಲರ್ ಎಂದು ಸಂಬೋಧಿಸುತ್ತಿರುವರೆಂದೂ ನವಾಬತನ್ನೂ ಹಿಟ್ಲರ್ ... ವರನ್ನೂ ಮನೆಗೆ ಕಳುಹಿಸುವ ಈ ಕಾಲದಲ್ಲಿ ಹೊಸ ನವಾಬರನ್ನು ಸೃಷ್ಟಿಸುವುದು ಅನುಚಿತವೆಂದೂ ತಿಳಿಸಿದರು. ಈಗ ಕೈಗೊಳ್ಳಲಿರುವ ಪ್ರವಾಸದ ... ದೇಶಗಳ ... ಸಮಾರಂಭವು ಮುಕ್ತಾಯವಾಯಿತು

○ ಸಂತೇಪೇಟೆ ಸಂಗಮೇಶ್ವರ ದೇವಸ್ಥಾನದಲ್ಲಿ ... ಮತ್ತು ... ನಡೆಯುವುದು

ವಾರ ಭವಿಷ್ಯ

[illegible]

ಮೇಷ [illegible] ಹಾನಿವಾಗಿ [illegible]

ವೃಷಭ [illegible]

[illegible] ಕಳೆದ ವಾರದಷ್ಟು ಲಾಭದಾಯಕವಲ್ಲ ಆರೋಗ್ಯ ನೆಟ್ಟಗೆ, ವ್ಯಾಪಾರ, ಉದ್ಯೋಗಾದಿಗಳಲ್ಲಿ ಶುಭ ವಾರ್ತೆ ಪ್ರತ ವಧೂವರರ ವಿವಾಹ ತಾ|| ೨೪, ೨೫, ೨೬ ಮಹತ್ವದ ನಿರ್ಣಯ ಧನ ಪ್ರಾಪ್ತಿ

ಕರ್ಕ— ಮಂಗಳ [illegible] ಉತ್ತಮ [illegible] ಮನಸ್ಸಿನಂತೆ ನಡೆಯುವುದು ಧನ ಲಾಭ ತಾ|| ೨೨ ೨೩ ಪ್ರವಾಸ

ಸಿಂಹ ಆರೋಗ್ಯ ನೆಟ್ಟಗೆ ನೌಕರಿ ಜಂಜೆಗಳಲ್ಲಿ ಪ್ರಗತಿ ಅಪ್ರಿಯ ಮೇಲಧಿಕಾರಿಗಳಿಗೆ ವರ್ಗ ತಾ|| ೨೩, ೨೧ ಮಂಗಳ ಕಾರ್ಯಕ್ಕೆ ಧನ ವ್ಯಯ

ಕನ್ಯಾ ಎಚ್ಚರಿಕೆಯಿಂದ ವರ್ತಿಸಿರಿ ಆರೋಗ್ಯದ ಕಡೆಗೆ ಗಮನ ಕೊಡಿ ಅಪಘಾತಪ್ರಸಂಗವನ್ನು ಎದುರಿಸಬೇಕಾಗಬಹುದು ತಾ|| ೨೦, ೨೫, ೨೬ ಕಲಹ, ಶಸ್ತ್ರ ಭಯ

ತುಲಾ—ಚಿಂತೆ ಮನಸ್ಸಿನಲ್ಲಿ ವಿಚಾರಗಳ ಸಂಘರ್ಷ ಪ್ರಿಯ ಮಿತ್ರರ ವಿಯೋಗ ತಾ|| ೨೨, ೨೫, ೨೬ [illegible]

[illegible] ವ್ಯಾಪಾರದಲ್ಲಿ ಪ್ರಗತಿ [illegible] ಸೋಂದಲ.

[illegible] ಮೇಲಧಿಕಾರಿಗಳಿಂದ [illegible]

ಕುಂಭ—ಮನಸ್ಸಿನ ಅಶಾಂತಿ ಅತ್ಯ[illegible] ವ್ಯಾಪಾರಗಳಲ್ಲಿ ಧನಿಕರ ಸಹಾಯ ತಾ|| ೨೪, [illegible] ವಿವಾದಗಳಲ್ಲಿ ಜಯ ಪರಾಕ್ರಮ ಕಾರ್ಯ

ಮೀನ—ಈ ವಾರ ಅಪಯಶದಾಯಕರವಾಗಿರದಿದ್ದರೂ, ಕೋಲಾಹಲಕರ ಹಣಕಾಸಿನ ವ್ಯವಹಾರದಲ್ಲಿ ಎಚ್ಚರಿಕೆಯಿರಲಿ ಮಂಗಳ ಕಾರ್ಯ ತಾ|| ೨೫, ೨೬ ಮಿತ್ರ ಸಹಾಯ ಧನ, ಚಿಂತ ನಾಶ

RUNNING TO CROWDED HOUSE AT

SRI GAYATHRI

Daily 3 Shows
From 21 5 49 for 3 days

UNIVERSAL'S ACTION PACKED

BLACK BART

ಬ್ಲಾಕ್ ಬಾರ್ಟ್
ವರ್ಣರಂಜಿತ ಚಿತ್ರ

With Yvonne De Carlo and Duryea

The National Institute
Of Engineering, Mysore
(Registered)

The Institute re opens on 24th June 1949

Applications for admission to A M I E (Civil and diploma (Civil) courses should reach the Principal on or before 1st June 1949, together with a Registration Fee of Rupees Two, not refundable in any case

The minimum qualification for admission to the (three-year) A M I E course is B Sc, (P C M optionals) and to the (two-year) Diploma Course is S S L C (P C M optionals) or an equivalent examination

List of candidates selected will be put up on the Notice Board of the Institute on 10th June 49 and [illegible] sent by post only to Mofussil candidates

[illegible] selected candidates must interview the [illegible] on the date noted in the Application Form [illegible] The last date for joining the Institute is [illegible] 1949 failing which seats will be forfeited

[illegible] for printed application forms should be addressed to the Principal enclosing Four annas postage stamps

044 Laxmipuram
Mysore 14-5-1949

S Rameswamy,
Principal

Edited printed and published by A R Nagaraja at the Sadhvi Press, D Subbiah Road, Mysore

27—5—49ರಿಂದ ಪ್ರತಿ ದಿನ 3 ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಅಪೆರಾ

ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ಚಿತ್ರ

★ ವೇಲೆಕಾರಿ ★

— ಭೂಮಿಕೆ —

ಎಂ.ವಿ. ರಾಜಮ್ಮ, | ಟಿ. ಎಸ್. ಬಾಲಯ್ಯ,
ವಿ.ಎನ್. ಜಾನಕಿ, | ದೊರೆ ರಾಜ್
ಲಲಿತ : ಪದ್ಮಿನಿ

|| ಶ್ರೀ ಸೀತಾರಾಮಾಯ ನಮಃ ||

ಭಿಷಗ್ರತ್ನ ಸಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು

ವೈದ್ಯೋಪಾಸಕ ಸೂತಿಕಾವಾತಕ್ಕೆ [ಬಾಣಂತಿ ಸಂಜಗೆ ಉತ್ತಮ ಗುಣಕಾರಿ]

ಕಣ್ಣು ಕೈಕಾಲುರಿ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರ ವಿಳಾಸ — ಬೆಲೆ ಶೀಸೆ 1ಕ್ಕೆ 2-0 0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಭಾರತದ ಹೆಮ್ಮೆ

ಹೆಮ್ಮೆ ಪಡುವ ವಿಚಾರವು ಇದೋ ಇಲ್ಲಿದೆ ನೋಡಿ! ಇತರ ಯಾವುದೇ ದೇಶವು ವೈದ್ಯ ವಿಜ್ಞಾನವೇನೆಂಬುದನ್ನು ತಿಳಿಯುವ ದಕ್ಕಿಂತ ಎಷ್ಟೋ ಮುಂಚೆ ಭಾರತವು ಈ ಶಾಸ್ತ್ರದಲ್ಲಿ ಪ್ರಗತಿಯನ್ನು ಪಡೆದಿತ್ತು ಪ್ರಪಂಚದ ಬಹು ಹಳೆಯ ವೈದ್ಯ ಪದ್ಧತಿಯಾದ ಆಯುರ್ವೇದದ ತೌರು ಮನೆ-ಭಾರತ ಈ ದೇಶವಲ್ಲೆಲ್ಲಾ ಹೆಸರುವಾಸಿಯಾದ ಆಯುರ್ವೇದದ ಔಷಧಿಗಳಿಗೆ ತೌರುಮನೆ-ಅಹಮದ್ ನಗರದ ಆಯುರ್ವೇದಾಶ್ರಮಂ ಫಾರ್ಮಸಿ [illegible] ಫಾರ್ಮಸಿಯ ಗುರುತನ್ನು ತೋರಿಸುವ ಈ ಮುದ್ರೆಯನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಒಳಿತು

AYURVEDASHRAM PHARMACY LTD., (APHALI), AHMEDNAGAR

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೨೭-೫-೪೯ [ಸಂಚಿಕೆ ೨೪೦

ಬರ್ಮಾದ ಮೇಲೆ ಚೀಣಾ ಕಮ್ಯೂನಿಸ್ಟರ ಧಾಳಿಯೆ

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ

ಮೈಸೂರು ೨೯

ಇದೇ ೨೮ ನೇ ತಾ॥ ಶನಿವಾರ ಬೆಳಗ್ಗೆ ಗಂಟೆಗೆ ಸ್ಕೂಲ್ ಫೈನಲ್, ಇಂಜನಿಯ ರಿಂಗ್ ಮತ್ತು ಲಾ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಲಾಗುವುದೆಂದು ವಿಶ್ವ ವಿದ್ಯಾನಿಲಯದ ರಿಜಿಸ್ಟ್ರಾರರು ತಿಳಿಸಿರುತ್ತಾರೆ

ಹ ರಿ ಕ ಥೆ

ರಾಜಧಾನಿಯ ಕೊತ್ವಾಲ ರಾಮಣ್ಣನವರ ಬೀದಿಯಲ್ಲಿರುವ ಶ್ರೀ ಶ್ರೀನಿವಾಸದಾಸ ದೇವಸ್ಥಾನದ ವತಿಯಿಂದ ಈ ದಿನ ರಾತ್ರಿ ೬-೩೦ ಗಂಟೆಗೆ ಮುಳಬಾಗಿಲು ಶ್ರೀ ನಾರಾಯಣದಾಸರಿಂದ ಗೋರ ಕುಂಬಾರನ ಕಥೆ ಹರಿಕಥೆ ನಡೆಯುವುದು.

ಉ ಪ ನ ಯ ನ

ನಂಜನಗೂಡಿನಲ್ಲಿರುವ ವಕೀಲ್ ಶ್ರೀ ನಾರಾಯಣರಾಯರು ತಮ್ಮ ಪುತ್ರ ಶ್ರೀಧರಮೂರ್ತಿ ಮತ್ತು ಧಾರವಾಡದಲ್ಲಿ ರುವ ಶ್ರೀ ಸಂಪಿಗೆ ವೆಂಕಟೇಶಯ್ಯನವರ ಪುತ್ರ ವೆಂಕಟಪತಯ್ಯನವರುಗಳಿಗೆ ಬ್ರಹ್ಮೋಪದೇಶವನ್ನು ನಿನ್ನೆ ದಿನ ನಂಜನಗೂಡಿನಲ್ಲಿ ನೆರವೇರಿಸಿದರು

ಮಾ ದ ರಿ ಶಾ ಲೆ

ರಾಜಧಾನಿಯ ಜಗನ್ಮೋಹನ ಬಂಗಲೆ ಯಲ್ಲಿರುವ ಮಾದರಿಶಾಲಾ ಮಿಡಲ್ ಸ್ಕೂಲು ಈ ದಿನದಿಂದ ಪ್ರಾರಂಭವಾಗಿರುತ್ತದೆ ಬಾಲಕರ ನಡೆ ನುಡಿ ಆಚಾರ ವ್ಯವಹಾರಗಳನ್ನು ತಂದೆ ತಾಯಿ ಅಥವ ಪೋಷಕರ ಪೂರ್ಣ ಬೆಂಬಲದಿಂದ ಶಾಲೆಯ ಹೊರಗೂ ಒಳಗೂ ತಿದ್ದಲು ಶಾಲೆಯು ಟೊಂಕ ಕಟ್ಟಿ ನಿಂತಿದೆಯೆಂದೂ, ಇನ್ನೂ ಕೆಲವು ಸ್ಥಾನಗಳು ಮಾತ್ರ ಇರುವುದರಿಂದ ವಿದ್ಯಾರ್ಥಿಗಳು ಕೂಡಲೇ ಸೇರಬೇಕೆಂದೂ ಅದರ ಕಾರ್ಯದರ್ಶಿಗಳು ಕೋರಿರುತ್ತಾರೆ

ವಿವಾಹ ಮಹೋತ್ಸವಗಳು

ರಾಜಧಾನಿಯ ಚಾಮುಂಡಿಪುರದಲ್ಲಿರುವ ಗಣಪತಿಹಳ್ಳಿ ಶ್ರೀ ಜಿ ವೆಂಕಟರಾಯರವರ ಮೊಮ್ಮಗ ಶ್ರೀ ಜಿ ಎನ್ ರಾಮ ಮೂರ್ತಿಗೂ ಬಿಡದಿಯ ಶ್ರೀ ಡಿ ವಿ ವೆಂಕಟರಾಮಯ್ಯನವರ ಪುತ್ರಿ ಚಿ॥ ಸೌ॥ ರತ್ನಮ್ಮನಿಗೂ,

ಮೈಸೂರು ಚಾಮುಂಡಿಪುರದಲ್ಲಿರುವ ಶ್ರೀ ಪಿ ಪುಟ್ಟಪ್ಪನವರ ಪುತ್ರಿ ಚಿ॥ ಸೌ॥ ಚಿಕ್ಕ ಬೀರಮ್ಮನವರಿಗೂ ಗೌಡರ ಪುತ್ರ ಶ್ರೀ ನಂಜಯ್ಯನವರಿಗೂ,

ಶ್ರೀ ಯು ಎಲ್ ನರಸಿಂಹ ಯ್ಯನವರ ತಮ್ಮ ಶ್ರೀ ರಾಮಕೃಷ್ಣಯ್ಯನಿಗೂ ಎ ಲಿಬರಿ ಅಕೌಂಟ್ಸ್ ಆಡಿಟರ್ ಶ್ರೀ ದೀಕ್ಷಿತರವರ ಅಣ್ಣನ ಮಗಳು ಸೌ॥ ಗಂಗಮ್ಮನವರಿಗೂ,

ಸೂರು ಜಿಲ್ಲಾ ಕಚೇರಿಯ ಹೆಡ್ ಕ್ಲಾರ್ಕ್ ಆದ ಶ್ರೀ ಆರ್ ಸದಾಶಿವಯ್ಯನವರ ಪುತ್ರಿ ಚಿ॥ ಸೌ॥ ಜಲಪ್ರಿಯವಿಗೂ ಶ್ರೀ ಶ್ರೀನಿವಾಸಮೂರ್ತಿಯವರ ಪುತ್ರ ಟಿ ಸತ್ಯನಾರಾಯಣರವರಿಗೂ, ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಎಸ್ ಎಂ ಅಬ್ದುಲ್ ರಹೀಂ ರವರ ಸೋದರ ಸೊಸೆಗೂ ಚನ್ನಗಿರಿ ಮಹಮದ್ ಖಾಸಿಂ ಸಾಹೇಬರ ಜನಾಬ್ ಅಬ್ದುಲ್ ಮಜೀದರಿಗೂ, ವಿವಾಹ ಮಹೋತ್ಸವಗಳು ನಿನ್ನೆ ಜರುಗಿದುವು

ಬರ್ಮಾದ ಮೇಲೆ ಚೀಣಾ ಕಮ್ಯೂನಿಸ್ಟರ ಧಾಳಿ

ಬರ್ಮಾದ ಮೇಲೆ ಧಾಳಿ ನಡೆಸಲು ಯುನಾನ್ ಪ್ರಾಂತ್ಯದ ಗಡಿ ಪ್ರದೇಶದಲ್ಲಿ ೮ ಸಾವಿರ ಕಮ್ಯೂನಿಸ್ಟ್ ಸೈನಿಕರೂ ಮತ್ತು ಚೀಣಾ ಸರ್ಕಾರೀ ಪಡೆಯನ್ನು ತ್ಯಜಿಸಿದ ಕೆಲವು ಸೈನಿಕರೂ ಸಜ್ಜುಗೊಳಿಸುತ್ತಿರುವರೆಂದು ಹೇಳಲಾಗಿದೆ

ಏಕ ಕಾಲದಲ್ಲಿ ೪ ಮಕ್ಕಳ ಜ ನ ನ

ಚನ್ನಗಿರಿ ತಾಲ್ಲೂಕಿನ ಗಡ್ಡಿಹಳ್ಳಿ ಗ್ರಾಮದಲ್ಲಿ ಶ್ರೀ ಶಾಂತಪ್ಪನವರ ಪತ್ನಿ ಶ್ರೀಮತಿ ಶಿವಲಿಂಗಮ್ಮ ಎಂಬಾಕೆಯು ಏಕ ಕಾಲದಲ್ಲಿ ೩ ಹೆಣ್ಣು ಮತ್ತು ೧ ಗಂಡು, ಮೂರು ಮಕ್ಕಳನ್ನು ಹೆತ್ತಿರುವರೆಂದೂ ಅವು ಗಳೆಲ್ಲವೂ ಆರೋಗ್ಯವಾಗಿರುವುವೆಂದೂ ವರದಿಯಾಗಿದೆ

ಅಮೆರಿಕದ ಅಧಿಕಾರಿಗಳ ಆತ್ಮಹತ್ಯೆ

ಅಮೆರಿಕದ ರಕ್ಷಣಾ ಶಾಖೆಯ ಮಾಜಿ ಕಾರ್ಯದರ್ಶಿಯಾದ ಮಿ॥ ಜೇಂಸ್ ಫಾರಸ್ಟಲ್ ಎಂಬುವರು ನೌಕಾ ಆಸ್ಪತ್ರೆಯ ೧೬ ನೇ ಅಂತಸ್ತಿನಿಂದ ಕೆಳಕ್ಕೆ ಹಾರಿ ನಿನ್ನೆ ದಿನ ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ ಕೆಲವು ವಾರಗಳಿಂದ ಇವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಸರ್ಕಾರಿ ನೌಕರರಿಗೆ ಉಡುಪಿನ ನಿರ್ಬಂಧವಿಲ್ಲ

ಮದರಾಸು ಸರಕಾರದವರು ತಮ್ಮ ನೌಕರರಿಗೆ ಸೂಚನೆಯಿತ್ತು ಅವರುಗಳು ಯಾವುದೇ ಉಡುಪನ್ನು ಬೇಕಾದರೂ ಧರಿಸಬಹುದೆಂದೂ, ಆದರೆ ಹಾಕುವ ಉಡುಪುಗಳು ಶುಭ್ರವಾಗಿಯೂ ಮತ್ತು ಅಚ್ಚುಕಟ್ಟಾಗಿಯೂ ಇರಬೇಕೆಂದು ತಿಳಿಸಿರುತ್ತಾರೆ

ಪ್ರಚಂಡ ಮಾರುತದಿಂದ ೨೨ ಜನರ ಮರಣ

ಅಮೆರಿಕದ ಮಿಸ್ಸೌರಿ, ಇಲಿನಾಯ್ ಮತ್ತು ಇತರ ಪ್ರದೇಶಗಳಲ್ಲಿ ಪ್ರಚಂಡ ಬಿರುಗಾಳಿ ಎದ್ದು, ೨೨ ಜನರು ಸತ್ತಿರುವರು, ೩೦೦ ಮಂದಿಗೆ ಗಾಯವಾಯಿತೆಂದೂ ಅನೇಕ ಮನೆಗಳು ನಾಶವಾದವೆಂದೂ ವರದಿಯಾಗಿದೆ

ಸ್ವತ್ತು ಮುಟ್ಟುಗೋಲು ಹಾಕಲು ಗೋಪಾಲರಾವ್ ಸಮಿತಿಗೆ ಅಧಿಕಾರ

ಸ್ವಂ ಸು ಫೋನ್] ಬೆಂಗಳೂರು ೨೯

ಗೋಪಾಲರಾಯರ ಸಮಿತಿಯ ಹತ್ತಿರ ವ್ಯವಹಾರ ನಡೆಸಿ, ಹಣ ಪಡೆದವರಿಂದ ವಾಪಸು ಹಣ ಪಡೆಯಲು, ಅವರ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ಗೋಪಾಲರಾವ್ ಸಮಿತಿಗೆ ಕೊಡುವ ಆಜ್ಞೆಯು ಈ ಸಂಜೆ ಹೊರಬೀಳುವ ನಿರೀಕ್ಷಣೆಇದೆ

○ ಬೆಂಗಳೂರು ಕಾರ್ಪೋರೇಷನ್ ಮಸೂದೆಯ ಸೆಲೆಕ್ಟ್ ಕಮಿಟಿಯು ಈ ದಿನ ಸೇರಿ, ಮಸೂದೆಯನ್ನು ಪರಿಶೀಲಿಸಿತು ಇದನ್ನು ಪ್ರ॥ಪ್ರ॥ ಸಭೆಯ ಮುಂದೆ ಇಡಲಾಗುವುದು

ಗವರ್ನರ್ ಜನರಲ್ಲರ ಪ್ರಯಾಣ

ಗವರ್ನರ್ ಜನರಲ್ ರಾಜಾಜಿಯವರು ನಿನ್ನೆ ದಿನ ಮಧ್ಯಾಹ್ನ ದೆಹಲಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರು ಅವರನ್ನು ವಿಮಾನ ನಿಲ್ದಾಣದಲ್ಲಿ ದಿವಾನರೂ ಮಂತ್ರಿಗಳೂ ಮತ್ತು ಇತರ ಸಚಿವರುಗಳೂ ಬೀಳ್ಕೊಟ್ಟರು ಹೊರಡುವ ಮುನ್ನ ರಾಜಾಜಿಯವರು ಸೈನ್ಯದಳದವರ ಗೌರವ ರಕ್ಷೆಯನ್ನು ಸ್ವೀಕರಿಸಿದರು.

ಕರ್ಣಾಟಕದ ನಿಯೋಗ

ಡೆಹರಾಡೂನಿನಲ್ಲಿ ನಿನ್ನೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಕರ್ಣಾಟಕದ ನಿಯೋಗದವರ ಪ್ರಾರ್ಥನೆಯನ್ನು ಪ್ರತಿನಿಧಿಸಿ ಅದರ ಮಾತುಕತೆಯನ್ನು ಆಲಿಸುವ ಒಗ್ಗೆ ನಿಯೋಗಗಳಿಗೆ ಭೇಟಿ ಕೊಟ್ಟಿತ್ತು

ಮೈಸೂರಿನ ವಿಲೀನಕರಣಕ್ಕೆ ವಿ ರೋ ಧ

ದೊಡ್ಡಬಳ್ಳಾಪುರದಲ್ಲಿ ಕಳೆದ ೨೭ನೇ ತಾ॥ ಶ್ರೀ ಎಂ ಶಂಕರಲಿಂಗೇಗೌಡರ ಅಧ್ಯಕ್ಷತೆಯಲ್ಲಿ ಭಾರಿ ಬಹಿರಂಗ ಸಭೆಯು ನಡೆದು, ಮೈಸೂರಿನ ವಿಲೀನಕರಣಕ್ಕೆ ವಿರೋಧವನ್ನು ವ್ಯಕ್ತಪಡಿಸುವ ನಿರ್ಣಯ ಮಾಡಲಾಯಿತು ಲೋಕಸೇವಾನಿರತ ಡಿ ಎಸ್ ಕೃಷ್ಣಯ್ಯಶೆಟ್ಟರು ಭಾಷಣ ಮಾಡಿ, ಆ ಊರಿನ ೫ ಸಾವಿರ ಜನರು ಮೈಸೂರಿನ ಏಳಿಗೆಗೆ ವಿರೋಧವಾಗಿ ರಾಜ ಪ್ರಮುಖರನ್ನು ಕೇಳಿ ಸದ

ಇನ್ನು ಒಂದೆರಡು ವರ್ಷಗಳಲ್ಲಿ ಕರ್ಣಾಟಕ ಪ್ರಾಂತ್ಯ

ನಿಯೋಗದವರಿಗೆ ನೆಹರೂರವರ ಸೂ ಚ ನೆ

ಕರ್ಣಾಟಕ ಪ್ರಾಂತ್ಯ ರಚನೆ ಆಗುವುದು ಖಂಡಿತ ಆದರೆ ಈ ಕೂಡಲೇ ಪ್ರಾಂತ ನಿರ್ಮಾಣ ಮಾಡುವುದಕ್ಕೆ ಕೆಲವು ಅಡಚಣೆಗಳಿವೆ ಅದಕ್ಕೆ ಅಗತ್ಯವಾದ ಪರಿಶೀಲನೆಗಳು ನಡೆಯಬೇಕು ಅಲ್ಲಿಯವರೆಗೆ ಕಾಯಬೇಕು ಪ್ರಾಯಶಃ ಇನ್ನು ಒಂದೆರಡು ವರ್ಷಗಳಲ್ಲಿ ಕರ್ಣಾಟಕ ಪ್ರಾಂತ ರಚನೆಯಾಗುವುದು ಕರ್ಣಾಟಕ ಪ್ರಾಂತ್ಯದಲ್ಲಿ ಮೈಸೂರನ್ನು ಸೇರಿಸಿಕೊಳ್ಳಲಾಗುವುದು ಆದರೆ ಮೈಸೂರು ಅದಕ್ಕೆ ಯಾವಾಗ ಸೇರುವುದೆಂಬುದನ್ನು ಈಗ ಹೇಳಲು ಸಾಧ್ಯವಿಲ್ಲ—ಎಂದು ಮುಖ್ಯ ಪ್ರಧಾನಿ ಪಂಡಿತ ನೆಹರೂರವರು ಕರ್ಣಾಟಕ ನಿಯೋಗದವರು ತಮ್ಮನ್ನು ಕಳೆದ ೨೦ನೇ ತಾ॥ ದಹಲಿಯಲ್ಲಿ ಭೇಟಿ ಮಾಡಿದಾಗ ತಿಳಿಸಿರುತ್ತಾರೆ

೭೨ನೇ ವಯಸ್ಸಿನಲ್ಲಿ ಎಂ. ಎ. ಪರೀಕ್ಷೆ

ನಾಗಪುರದ 'ಉಪಾಧ್ಯಾಯ'ರಾದ ಶ್ರೀ ಗಣೇಶಗಂಗಾಧರವೇಶಿಕಾಚಾರ್ ಎಂಬುವರು ತಮ್ಮ ೭೨ನೇ ವಯಸ್ಸಿನಲ್ಲಿ ಎಂ ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ೧೯೧೦ ರಲ್ಲಿ ಅವರು ಬಿ ಎ ಪರೀಕ್ಷೆಯಲ್ಲಿ ಪಾಸಾಗಿದ್ದರು

ಒಂದು ಹಣ್ಣಿನ ದರಕ್ಕಾಗಿ ಗ ಲ ಭೆ

ಒಂದು ಹಣ್ಣಿನ ದರದ ಬಗ್ಗೆ ನಾಗಪುರದ ಹತ್ತಿರವಿರುವ ಚಿ ದನಾದ ಮಾರ್ಕೆಟ್ಟಿನಲ್ಲಿ ಪೋಲೀಸರಿಗೂ ವರ್ತಕರಿಗೂ ವ್ಯಾಜ್ಯ ನಡೆದು, ದೊಡ್ಡ ಗಲಭೆ ಉಂಟಾಯಿತೆಂದೂ, ೩೦ ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ

ಫುಟ್ ಬಾಲಿನಲ್ಲಿ ಸೋಲಿಗಾಗಿ ಆತ್ಮ ಹತ್ಯ

ಗ್ರೀಸಿಗೂ ಮತ್ತು ತುರ್ಕಿಗೂ ನಡೆದ ಫುಟ್ ಬಾಲ್ ಪಂದ್ಯದಲ್ಲಿ ಗ್ರೀಸಿನವರು ಅಪಜಯ ಹೊಂದಿದರೆಂದು, ಪಿಡುಬೇನಿಯನೊಬ್ಬನು ಆತ್ಮಹತ್ಯ ಮಾಡಿಕೊಂಡನೆಂದು ವರದಿಯಾಗಿದೆ

ಮರಕ್ಕೆ ನೇಣು ಹಾಕಿ ಮೂವರ ಕೊಲೆ

ಉ ಭಾರತದ ರಸ್ತೆ ಒಂದು ಒಳ್ಳೆ ಮಕ್ಕಳ ನ, ಕದ್ದುಕೊಂಡು ಹೋಗುವವನೆಂಬ ಶಂಕೆಯಿಂದ ಮೂವರನ್ನು ಹಳ್ಳಿಯ ಜನರು ಹಿಡಿದು ನಿರ್ದಯವಾಗಿ ಹೊಡೆದನುಕೊಂಡು ಗೆ ಮರಕ್ಕೆ ಕಟ್ಟಿ ನೇಣು ಹಾಕಿ ಕೊಂದ ಸುದ್ದಿ ವರದಿಯಾಗಿದೆ

ಮರ ಬಿದ್ದು ೮ ಜನರ ಮರಣ

ಬಿರುಗಾಳಿಯ ಸ್ಥಿತಿ ವಿದ ವೇಗಾಗಿ ಬೀಸಿ ಮೇಲೆ ಹೋಗುತ್ತಿದ್ದವರ ಮೇಲೆ ಭಾರಿ ಗಾಳಿಯಿಂದ ಮರವೊಂದು ಬಿದ್ದು, ೮ ಜನರು ಸತ್ತರೆಂದೂ, ಇನ್ನಿಬ್ಬರಿಗೆ ತೀವ್ರ ಗಾಯವಾಯಿತೆಂದೂ ವರದಿಯಾಗಿದೆ

○ ನಾಸಿಕದಲ್ಲಿರುವ ಪೊಲೀಸ ಶಿಕ್ಷಣ ಶಾಲೆಯ ಕೈದಿ ಚೋಂಬಾಯಿಯಲ್ಲಿ ಒಂದು ಹೋಗ ಗಾರ್ ಗಳ ಶಿಕ್ಷಣ ಶಾಲೆಯನ್ನು ಆಧ್ಯಯೇ ನಡೆಸಲಾಗುವುದೆಂದು ಹೇಳಲಾಗಿದೆ

ವಿವಾಹ ಮಹೋತ್ಸವ

ಮೈಸೂರು ಬ್ರಾಹ್ಮಣ ಸಂಘದ ಅಧ್ಯಕ್ಷರು ಶ್ರೀ ... ವರ ಪುತ್ರಿ ... ವರಿಗೂ ... ಶ್ರೀ ... ವರ ಪುತ್ರ ... ರವರಿಗೂ ವಿವಾಹವು ನಿಶ್ಚಯವಾಗಿದೆ.

ಲಗ್ನದ ಜವಳಿಗಾಗಿ
ಗುರುದೇವ ಸ್ಟೋರ್
ಬೆಂಗಳೂರು ಬಾಳೆ ಪೇಟೆ
ವಿಶ್ವೇಶ್ವರ ವಿದ್ಯಾ ...
ಶಿವರಾಂಪೇಟೆ, ಮೈಸೂರು

UNIVERSITY OF MYSORE

Office of the University of Mysore,

Mysore, dated the 18th May 1949.

No. Ex-3-1083 48-49.

CIRCULAR

Subject:-Production of Intermediate Marks cards at the time of admission to Colleges.

In respect of candidates applying for admission to University Institutions, Heads of Colleges are authorised to accept copies of marks cards certified by Gazetted Officers. These may be verified with the originals when the admissions are finally made.

By order,
(Sd) T. Siddalingadevaru
Registrar I/C.

UNIVERSITY OF MYSORE

Office of the University of Mysore

Mysore Dated 18th May 1949

No. Ex-3-1083 48-49.

NOTIFICATION

Sub:- Marks Cards of the Intermediate Examination March April 1949.

It is hereby notified for the information of candidates who had appeared for the Intermediate Examination of March-April 1949, that the Intermediate Marks Cards have been forwarded to the Heads of Colleges from which the candidates appeared for the Examination for distribution.

Candidates may apply for the marks cards to the Heads of the Colleges.

By Order,
C. Rangachar,
Ag. Registrar.

ಗಣೇಶಾ ಟಾಕೀಸ್

23-5-49ನೇ ಸೋಮವಾರದಿಂದ
ಪ್ರತಿ ದಿನ 3 ಪ್ರದರ್ಶನಗಳು
ಕೊಲಂಬಿಯಾ ಪಿಕ್ಚರ್ಸ್‌ರವರ
(ಪೂರ್ತಿ ವರ್ಣರಂಜಿತ ಚಿತ್ರ)

ಗನ್ ಫೈಟರ್ಸ್

GUN FIGHTERS

(Cine Colour)
ಪಾತ್ರ:—ರಾಂಡಾಲ್ಫ್ ಸ್ಕಾಟ್,
ಬಾರ್ಬರಾ ಬ್ರಿಟನ್

ಶ್ರೀ ಗಾಯತ್ರೀ ಟಾಕೀಸ್

ಪ್ರತಿ ದಿನ 3 ಪ್ರದರ್ಶನಗಳು
24-5-49 ರಿಂದ 2 ದಿನಗಳು ಮಾತ್ರ
ಯೂನಿವರ್ಸಲ್‌ರವರ

Ride the Pink Horse

ರೈಡ್ ದಿ ಪಿಂಕ್ ಹಾರ್ಸ್
ಪಾತ್ರ:— ರಾಬರ್ಟ್ ಮಾಂಟಿಗೊಮರಿ
ಮುಂದಿನ ಬದಲಾವಣೆ:—
ಲೇಡಿ ಅಬ್ಬಕ್ಕ್ ...

ಲಕ್ಷ್ಮಿ ಥಿಯೇಟರ್

27-5-49 ರಿಂದ ಅಮೋಘ ಪ್ರಾರಂಭ
ಅಯ್ಯನಾರ್ ಪಾಂಡುರಂಗ
ಪಿಕ್ಚರ್ಸ್‌ರವರ

ಸತೀ ತುಲಸಿ

ಕನ್ನಡ ಪೌರಾಣಿಕ ಚಿತ್ರ

ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸು

ಪ್ರಕಟಣೆ

ಲಾಲ್‌ಬಾಗಿನ ದಕ್ಷಿಣ ಭಾಗದಲ್ಲಿರುವ ಜಯನಗರದ ಬಡಾವಣೆಯಲ್ಲಿ ಕನಿಷ್ಟ ಕ್ರಯ [Upset Price] ವಾರದ ಮನೆಗಳ ಸೈಟುಗಳ ವಿಲೇವಾರಿ ವಿಷಯದಲ್ಲಿ ಸಮಸ್ತ ಜನರಿಗೂ ತಿಳಿಸುವುದೇನೆಂದರೆ—

ಮೇಲ್ಕಂಡ ಬಡಾವಣೆಯಲ್ಲಿ ಸೈಟುಗಳಿಗಾಗಿ ಅಪ್ಲಿಕೇಷನ್ ಫಾರಂಗಳು ಫಾರಂ ಒಂದಕ್ಕೆ ಎರಡಾಣೆಯಂತೆ, ಲೇಪಾಕ್ಷಿ ರೋಡು, ರಂಗವಿಲಾಸದಲ್ಲಿರುವ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸಿನಲ್ಲಿ ತಾರೀಖು ೨೫-೫-೧೯೪೯ರ ಲಾಗಾಯ್ತು ದೊರೆಯುತ್ತವೆ ದರಖಾಸ್ತು ದಾರರು ಮೈಸೂರಿನವರಾಗಿ ಇರಬೇಕು.

ಈ ಹಿಂದೆ ಸೈಟುಗಳಿಗೆ ಅಪ್ಲಿಕೇಷನ್‌ಗಳನ್ನು ಹಾಕಿರತಕ್ಕ ಮಹಾಜನರೂ ಕೂಡ ಪ್ರಸ್ತು ಈ ಹೊಸ ಫಾರಂನಲ್ಲಿ ಅಪ್ಲಿಕೇಷನ್ ಹಾಕಿಕೊಳ್ಳಬೇಕಾಗಿ ಕೋರಿದೆ.

ಮೇಲ್ಕಂಡ ಅಪ್ಲಿಕೇಷನ್‌ಗಳು ತಾರೀಖು ೨೫-೬-೧೯೪೯ರ ಒಳಗಾಗಿ ಈ ಆಫೀಸಿಗೆ ತಲುಪಬೇಕು. ಅಪ್ಲಿಕೇಷನ್ ಜೊತೆಯಲ್ಲಿ ಸೈಟು ಬೆಲೆಯ ಶೇಕಡಾ ೧೦॥ ಭಾಗ ಮೊಬಲಗನ್ನು ಡಿಪಾಜಿಟ್ಟಾಗಿ ಕೊಡತಕ್ಕದ್ದು.— ಸೈಟು ಮಂಜೂರಾದ ನಂತರ ಸದರಿ ಸೈಟು ಬೆಲೆಯ ಪೈಕಿ ಶೇ 12½ ಮೊಬಲಗನ್ನು ಕೂಡಲೇ ಪಾವತಿ ಮಾಡಿ ಉಳಿದ ಮೊಬಲಗನ್ನು ಆರು ತಿಂಗಳ ಒಳಗಾಗಿ ಪೂರ್ತಿ ಪಾವತಿ ಮಾಡತಕ್ಕದ್ದು.

80' X 120' ಮತ್ತು 100' X 150' ಅಳತೆಯುಳ್ಳ ಸೈಟುಗಳನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಮತ್ತು ಹರಾಜು ತಾರೀಖನ್ನು ಆಲಾಯಿದ ತಿಳಿಸಲಾಗುತ್ತೆ.

ಕೆಲವು ಸಂಸ್ಥೆಗಳಿಗೆ ಮೀಸಲಾಗಿರುವ ಸೈಟುಗಳ ಜಾತ ಬಾಕಿ ಸೈಟುಗಳು ದರಖಾಸ್ತು ದಾರರಿಗೆ ನಿಗದಿ ಮಾಡಿಸುವ ಲಾಟ್ಸ್ ಮೂಲಕ ಹಂಚಲಾಗುತ್ತೆ.

45' X 90', 40' X 60', 30' X 50' ಸುಮಾರು [Approximate] ಅಳತೆಯುಳ್ಳ ಸೈಟುಗಳನ್ನು ಲಾಟ್ಸ್ ಮೂಲಕ ವಿಲೇವಾರಿ ಮಾಡಲಾಗುತ್ತೆ.

ಸೈಟು ಮಂಜೂರಿ ಷರತ್ತುಗಳನ್ನು ಅಪ್ಲಿಕೇಷನ್‌ನಲ್ಲಿ ವಿಶದಪಡಿಸಿರುತ್ತೆ.

ಹೆಚ್ಚಿಗೆ ವಿವರಗಳನ್ನು ಆಫೀಸು ವೇಳೆಯಲ್ಲಿ ಟ್ರಸ್ಟ್ ಬೋರ್ಡ್ ಆಫೀಸಿನಲ್ಲಿಯೂ ಮತ್ತು ಟ್ರ. ಬೋ. ಇಂಜನಿಯರ್ ಆಫೀಸರ್ ಅವರಿಂದಲೂ ತಿಳಿಯಬಹುದು.

ಬೆಂಗಳೂರು
ತಾ॥ ೨೦-೫-೪೯

ಸಿ ಎನ್ ನರಸಿಂಗರಾವ್,
ಛೇರ್ಮನ್

ಮೈಸೂರು ಸ್ಟೇಟ್ ರೈಲ್ವೆ-

ಟೆಂಡರ್ ನೋಟಿಫಿಕೇಷನ್ ನಂ. ೧

ಪ್ಲಾಟ್‌ಫಾರಂ ಕಂಟ್ರಾಕ್ಟುಗಳು

೧ ೧೯೪೯-೫೦ ನೇ ಇಸವಿಗಾಗಿ ಮೈಸೂರು ಸಂಸ್ಥಾನದ ರೈಲ್ವೆಯ ಎಲ್ಲಾ ಸ್ಟೇಷನ್ನುಗಳ ಪ್ಲಾಟ್‌ಫಾರಂಗಳ ಮೇಲೆ ಹಣ್ಣು, ಸಿಗರೇಟು ವಗೈರೆಗಳನ್ನು ಮಾರುವ ಹಕ್ಕಿಗಾಗಿ ೧೯೪೯ ನೇ ಜೂನ್ ೬ ನೇ ತಾರೀಖು ಮಧ್ಯಾಹ್ನ ೩ ಘಂಟೆವರೆಗೆ ಮೊಹರಾದ ಟೆಂಡರುಗಳನ್ನು ಸ್ವೀಕರಿಸಲಾಗುತ್ತದೆ.

೨. ಕೆಳಗೆ ಕಂಡ ಏಳು ಸ್ಟೇಷನ್ನುಗಳು ವಿನಹ ಇತರ ಎಲ್ಲಾ ಸ್ಟೇಷನ್ನುಗಳಿಗೂ ಕಂಟ್ರಾಕ್ಟಿನ ಅವಧಿಯು ೧೯೪೯ ನೇ ಜೂಲೈ ೧ ನೇ ತಾರೀಖಿನಿಂದ ೧೯೫೦ ನೇ ಜೂನ್ ೩೦ ರವರೆಗೆ ಇರುತ್ತದೆ ಕೆಳಗೆ ಕಂಡ ಏಳು ಸ್ಟೇಷನ್ನುಗಳಿಗೆ ಕಂಟ್ರಾಕ್ಟ್ ಅವಧಿಯು ೧೯೪೯ನೇ ಜುಲೈ ೧ರಿಂದ ೧೯೫೨ನೇ ಜೂನ್ ೩೦ ರವರೆಗೆ ಇರುವುದು

೧. ಮೈಸೂರು
೨. ಬೆಂಗಳೂರು ನಗರ.
೩. ತುಮಕೂರು.
೪. ಬೀರೂರು
೫. ಚಿತ್ರದುರ್ಗ.
೬. ಶಿವಮೊಗ್ಗ ಟೌನ್.
೭. ತರೀಕೆರೆ.

೩. ಟೆಂಡರುಗಳು ಪ್ರತಿಯೊಂದು ಸ್ಟೇಷನ್ನಿಗೂ ಪ್ರತ್ಯೇಕವಾದುದಾಗಿರಬೇಕು. ಮತ್ತು "೧೯೪೯-೫೦ರ .... ಸ್ಟೇಷನ್ನಿನ ಪ್ಲಾಟ್‌ಫಾರಂ ಕಂಟ್ರಾಕ್ಟಿನ ಟೆಂಡರು" ಎಂದು ಬರೆಯಲ್ಪಟ್ಟ ಮೊಹರಾದ ಕವರಿನಲ್ಲಿರಬೇಕು ಹಾಗೆ ಮೊಹರಾದ ಕವರಿನ ಮೇಲೆ ಟ್ರಾಫಿಕ್ ಮ್ಯಾನೇಜರ್, ಮೈಸೂರು ಸ್ಟೇಟ್ ರೈಲ್ವೆ, ಮೈಸೂರು ಎಂಬ ವಿಳಾಸವನ್ನು ಬರೆಯಬೇಕು

೪ ಮೈಸೂರು ಸಂಸ್ಥಾನದ ರೈಲ್ವೆಯ ಛೀಫ್ ಆಡಿಟರವರಲ್ಲಿ ಪ್ರತಿಯೊಂದು ಟೆಂಡರಿಗಾಗಿ (ಐವತ್ತು ರೂಪಾಯಿಗಳು) ೫೦/— ಡಿಪಾಜಿಟ್ ಆಗಿ ಇಡಬೇಕು ಮತ್ತು ಡಿಪಾಜಿಟ್ ಮಾಡಿದ ಬಗ್ಗೆ ರಶೀತಿಯನ್ನು ಟೆಂಡರಿನ ಜೊತೆಗೆ ಕಳುಹಿಸಬೇಕು ಇಂತಹ ರಶೀತಿಯು ಇರದ ಟೆಂಡರನ್ನು ಪರಿಶೀಲಿಸಲಾಗುವುದಿಲ್ಲ.

೫. ಯಾವುದೇ ಟೆಂಡರನ್ನು ಒಪ್ಪಿಕೊಳ್ಳಲು ಕೆಳಗೆ ರುಜು ಮಾಡಿರುವವರು ಬದ್ಧರಾಗಿರುವುದಿಲ್ಲ ಅಥವಾ ಯಾವುದೇ, ಅಥವಾ ಎಲ್ಲಾ ಟೆಂಡರುಗಳನ್ನೂ ತಿರಸ್ಕರಿಸುದುದಕ್ಕೆ ಕಾರಣಗಳನ್ನು ಕೊಡಲೂ ಬದ್ಧರಾಗಿರುವುದಿಲ್ಲ

೬. ಕಂಟ್ರಾಕ್ಟಿನ ಷರತ್ತು ಮುಂತಾದವುಗಳನ್ನು ಟ್ರಾಫಿಕ್ ಮ್ಯಾನೇಜರ್ ಮೈಸೂರು ಸಂಸ್ಥಾನದ ರೈಲ್ವೆ, ಮೈಸೂರುರವರಿಗೆ ಅರ್ಜಿ ಹಾಕಿ ಪಡೆಯಬಹುದು.

ಟ್ರಾಫಿಕ್ ಮ್ಯಾನೇಜರ್‌ರವರ ಕಛೇರಿ,
ಮೈಸೂರು ತಾ॥ ೧೯ ಮೇ ೧೯೪೯

ಮೀರ್ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದ ಮುಟ್ಟಿನ ಪಿತ್ತ ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು, ಮೊದಲಾಗಿ ಗುಣವಾಗುತ್ತದೆ

ವಿಳಾಸ:—

ಬೆಲೆ ಶೀಸ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

BANGALORE RACES 1949

ಮೇ 25, 28, ಜೂನ್ 1, 4, 8, 11, 18, 22, 25, 29
ಮ. ಪ. ಬುಕ್ಕೆ 2 ಘಂಟೆ
ಬುಕ್ ಮೇಕರ್ಸ್ .. .. ಟೋಟಲೈಜೇಟರ್ಸ್
ಟ್ರಬಲ್ ಈವೆಂಟ್, ಟೋಟ್ ಪ ಕ್ಕ ರೂ. 2 ಟಿಕೇಟ್

ಪ್ರವೇಶ:
- ಮೊದಲನೇ ತರಗತಿ:- ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ
- ಎರಡನೇ ತರಗತಿ - ಪುರುಷರು ಅಥವಾ ಸ್ತ್ರೀಯರು ರೂ 2 ,,

ಸೀಸನ್ ಟಿಕೆಟ್ - ಪುರುಷರು ರೂ 60 ಸ್ತ್ರೀಯರು ರೂ. 35

Edited, printed, and published by A R Nagaraj, in at the Sadhvi Press, D Subbiah Road, Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೨೬-೪-೪೯ [ಸಂಚಿಕೆ ೨೪೧

ಕಮ್ಯೂನಿಸ್ಟ್ ಬರ್ಮಾದಲ್ಲಿ 'ಪ್ರಜೆಗಳ ಕೋರ್ಟು'

ಸಮತಾವಾದದಿಂದಲೇ ಸಮಾಜದ ಪುನರುದ್ಧಾರ

ಅಶೋಕ ಮೆಹತಾರವರ ಭಾಷಣ

ಮೈಸೂರು ೨೪

ಕರ್ನಾಟಕ ಪ್ರಾಂತದ ಸಮಾಜವಾದೀ ಪಕ್ಷದಾಶ್ರಯದಲ್ಲಿ ನಿನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಸಮತಾವಾದಿ ನಾಯಕರಾದ ಶ್ರೀ ಅಶೋಕ ಮೆಹತಾರವರು ಭಾಷಣ ಮಾಡಿದರು. ಶ್ರೀ ಎಸ್. ನಾಗಭೂಷಣರವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಅಶೋಕ ಮೆಹತಾರವರು ಭಾಷಣ ಮಾಡುತ್ತಾ- ಮೈಸೂರು ಅನೇಕ ಸಂಸ್ಥಾನಗಳಿಂದಲೂ ತನ್ನ ಕಲೆ, ಪ್ರಕೃತಿ ಸೌಂದರ್ಯ, ನಾಗರೀಕತೆ ಮುಂತಾದುವುಗಳ ವೈಶಿಷ್ಟ್ಯತೆಗೆ ಪ್ರಸಿದ್ಧಿಯಾಗಿದೆಯೆಂದೂ, ಮೈಸೂರಿನ ಜನರು ಅಖಿಲ ಭಾರತದಲ್ಲಿ ಒಂದು ಗಣ್ಯ ಸ್ಥಾನ ಪಡೆದಿರುವರೆಂದೂ, ಇವೆಲ್ಲವೂ ಅರಿತು-ನುರಿತ ಜನರ ಪ್ರಗತಿಯ ಫಲದಿಂದ ನಡೆದ ಬಂದಿದೆಯೆಂದೂ ತಿಳಿಸಿದರು. ಆದರೆ ಇಂಗ್ಲೆಂಡ್ ದೇಶದಲ್ಲಿ ಇತರೇ ರಾಜಕೀಯ ಪಕ್ಷದವರಿಗೆ ಇರುವಷ್ಟು ಸೌಲಭ್ಯವನ್ನು ಇಲ್ಲಿನ ಸರ್ಕಾರ ಕೊಡದಿರುವುದಕ್ಕೆ ವಿಷಾದಿಸಿ, ಮೈಸೂರಿನಲ್ಲೂ ಸಹ ಕಾಂಗ್ರೆಸ್ ಸರ್ಕಾರವು ರಚನಾತ್ಮಕವಾದ ಕೆಲಸವನ್ನು ಮಾಡದಿರುವುದನ್ನು ಕಟುವಾಗಿ ಟೀಕಿಸಿದರು. ರಷ್ಯಾ ದೇಶದಂತೆ ಮೈಸೂರು ಸಹ ಒಂದು ಯೋಜನೆ ಹಾಕಬೇಕಾಗಿತ್ತೆಂದೂ, ಆದರೆ ಇಂದಿನ ಪ್ರಜಾ ಸರ್ಕಾರವು ಹಿಂದಿನ ಸರ್ಕಾರಕ್ಕಿಂತ ಕೀಳಾಗಿದೆಯೆಂದೂ ಹೇಳಿದರು.

ಕಾಂಗ್ರೆಸ್ಸಿನವರು ಸ್ವರಾಜ್ಯ ಬಂದನಂತರ ಸರ್ವರಿಗೂ ಸಮಾನಾವಕಾಶ ಕೊಡುತ್ತೇವೆಂದು ತಿಳಿಸಿ, ಕೂಲಿಗಾರರಿಗೆ ರಾಜಕೀಯ ಹಕ್ಕುಬಾಧ್ಯತೆಗಳನ್ನು ಕೊಡದೆ ಬರೀ ಉಪದೇಶ ಮಾಡುವುದು ಸರಿಯಲ್ಲವೆಂದೂ ಹೇಳಿದರು.-

ಕಾಂಗ್ರೆಸ್ ಕೆಲಸಗಾರರಲ್ಲಿ ಹಿಂದಿನ ಸೇವಾ ಮನೋಭಾವವು ಕಾಣುತ್ತಿಲ್ಲ. ಕಾಮನ್‌ವೆಲ್ತ್ ಒಪ್ಪಂದಕ್ಕೆ ನೆಹರೂರವರು ಸಮ್ಮತಿಸಿರುವುದು ಮುಂದಿನ ಯುದ್ಧಕ್ಕೆ ಭಾರತೀಯರ ರಕ್ತವನ್ನು ಸುರಿಸುವ ಒಪ್ಪಂದ ಮಾಡಿಕೊಂಡಂತಾಗಿದೆ. ಇದರಿಂದ ಯಾವತ್ತಿಗೂ ಭಾರತವು ಸುಖಶಾಂತಿಯಿಂದ ಇರಲು ಸಾಧ್ಯವಿಲ್ಲ. ಹೊಸ ಪ್ರಾಂತಗಳ ಮತ್ತು ಸಂಸ್ಥಾನಗಳ ವಿಲೀನೀಕರಣಕ್ಕೆ ಸಮತಾವಾದಿ ಪಕ್ಷವು ಯಾವತ್ತೂ ಸಿದ್ಧ. ಆದರೆ ಹೊಸ ಪ್ರಾಂತ್ಯ ಮತ್ತು ಸಂಸ್ಥಾನಗಳು ವಿಲೀನವಾಗುವಾಗ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುವುದು ಅವಶ್ಯಕ- ಎಂದು ಅವರು ತಿಳಿಸಿದರು.

ಪ್ರಜಾ ಸರ್ಕಾರವು ರಾಜಕೀಯ ಪಕ್ಷಗಳ ವಿಷಯದಲ್ಲಿ ಪ್ರತಿ ದಿನವೂ ಹೊಸ ಆರ್ಡಿನೆನ್ಸು ಮತ್ತು ಕಾನೂನುಗಳ ಜಾರಿ ಮಾಡುತ್ತಿರುವುದರ ಬಗ್ಗೆ ಆಕ್ಷೇಪಿಸಿ, ಹಿಂದೂಸ್ಥಾನ ವಿಮಾನ ಕಾರ್ಖಾನೆ ಚುನಾವಣೆ ಬಗ್ಗೆ ಸರ್ಕಾರವು ಅನುಸರಿಸಿದ ನೀತಿಯನ್ನು ಖಂಡಿಸಿದರು.

ಪ್ರಜಾ ಸರ್ಕಾರ ಬಂದಮೇಲೆ ನಿತ್ಯಜೀವನಕ್ಕೆ ಬೇಕಾದ ಸಾಮಗ್ರಿಗಳಿಗೆ ಸುಂಕವು ಹೆಚ್ಚಾಯಿತೆಂದೂ, ಮೂರನೇ ದರ್ಜೆ ರೈಲ್ವೆ ದರವನ್ನೂ ಸಹ ಹೆಚ್ಚಿಸಲಾಯಿತೆಂದೂ, ಶ್ರಮಜೀವಿಗಳ ಏಳಿಗೆಯನ್ನು ಗಮನದಲ್ಲಿಟ್ಟು ಸರ್ಕಾರವು ದುಡಿಯುತ್ತಿಲ್ಲವೆಂದೂ, ಬಡವರಿಗಾಗಿ ಯಾವ ಸಾಲವನ್ನೂ ಸಹ ಸರ್ಕಾರವು ದೊರಕಿಸಿಲ್ಲವೆಂದೂ ತಿಳಿಸಿದರು.

ಕೇಂದ್ರ ಸರ್ಕಾರವು ಯಾವ ವಿಧದಲ್ಲೂ ಬಡವರಿಗೆ ಉಪಕಾರ ಮಾಡಿಲ್ಲವೆಂದೂ ಆದರೆ ಬಿರ್ಲಾ, ಟಾಟಾ ಮುಂತಾದವರಿಗೆ ವರ್ಷಕ್ಕೆ ೩೦ ಕೋಟಿ ರೂ ಗಳು ಬರುವ ಯೋಜನೆಗಳು ತಯಾರಾಗುತ್ತಿವೆಯೆಂದೂ ವಿಲೀನವಾದ ರಾಜರಿಗೆ ಕೇಂದ್ರ ಸರ್ಕಾರವು ಕೆಲಸ ಕೊಡಿಸಲು ಯೋಚಿಸುತ್ತಿದೆಯೇ ಹೊರತು ಬರೋಡ ಮತ್ತು ಮದ್ರಾಸ್ ಸರ್ಕಾರಗಳಲ್ಲಿ ವಿಸರ್ಜಿತವಾದ ಬಡ ನೌಕರರನ್ನು ಕೇಳುವವರೇ ಇಲ್ಲವೆಂದೂ ಹೇಳಿದರು.

ಬಡವರ ಸೇವೆ ಮಾಡಿ ಪಟೇಲ್ ನೆಹರೂರವರುಗಳು ತಿಂಗಳಿಗೆ ೩೦೦೦ ರೂ ತೆಗೆದುಕೊಳ್ಳುತ್ತಿದ್ದರೂ ಬರೋಡ ಮಹಾರಾಜರಿಗೆ ಜನರ ಹಣವಾದ ೩ ಕೋಟಿ ರೂ. ಸಂಭಾವನೆ ಕೊಡಬೇಕೆಂದು ನಿರ್ಧರಿಸಿರುವುದಕ್ಕೆ ಸರ್ಕಾರವನ್ನು ತೀವ್ರವಾಗಿ ಖಂಡಿಸಿದರು. ಕಾಂಗ್ರೆಸ್ ಮಂತ್ರಿ ಮಂಡಲಿಗಳು ಸಾಹುಕಾರರ ಅಥವ ಬಂಡವಾಳಶಾಹಿಗಳಿಗೆ ಬೆಂಬಲ ಕೊಡುತ್ತಿವೆಯೆಂದೂ ಸ್ವರಾಜ್ಯ ಬಂದೂ ಜನರ ಸ್ಥಿತಿಗತಿಗಳು ಉತ್ತಮಗೊಳ್ಳುವ ಯೋಜನೆ ಮಾಯವಾಗಿದೆಯೆಂದೂ ಹೇಳಿದರು. ಬಡಜನರ ಮತ್ತು ಕೂಲಿಗಾರರ ಹಿತ ಚಿಂತನೆಯಾಗಬೇಕಾದರೆ ಎಲ್ಲರೂ ಸಮತಾವಾದೀ ಪಕ್ಷಕ್ಕೆ ಸದಸ್ಯರಾಗಬೇಕೆಂದೂ ಸಮತಾವಾದವು ಸಮಾಜದಲ್ಲಿನ ಲೋಪದೋಷಗಳನ್ನು ತೆಗೆದು ಬಡವ ಬಲ್ಲಿದ ಎಂಬ ಭೇದ ಭಾವನೆಯನ್ನು ನಿರ್ಮೂಲಗೊಳಿಸುವುದೆಂದೂ ಪ್ರತಿಯೊಬ್ಬರೂ ಸಮತಾವಾದಿ ಪಕ್ಷಕ್ಕೆ ಸದಸ್ಯರಾಗಬೇಕೆಂದೂ ಕೋರಿದರು.

ಕುಸ್ತಿಯಲ್ಲಿ ಮೈಸೂರಿನವರಿಗೆ ಜಯ

ಬಂಗೋಲಿನಲ್ಲಿ ನಡೆದ ಕುಸ್ತಿ ಪಂದ್ಯದಲ್ಲಿ ಮೈಸೂರು ಮಹಾರಾಜ ಕಾಲೇಜಿನ ಶ್ರೀ॥ ಎನ್. ದ್ವಾರಕಾನಾಥ್‌ರವರು ಎರಡು ದರ್ಜೆಗಳಲ್ಲಿಯೂ ಗೆದ್ದು, ಒಂದು ದೊಡ್ಡ ಬೆಳ್ಳಿ ಗದೆ ಒಂದು ದೊಡ್ಡ ಬೆಳ್ಳಿ ಬಟ್ಟಲು, ಮತ್ತು ಪಾರಿತೋಷಕಗಳನ್ನು ಪಡೆದಿದ್ದಾರೆ.

ಇಟಲಿಯ ವ್ಯವಸಾಯ ಕೆಲಸಗಾರರ ಮುಷ್ಕರ

ಸುಮಾರು ೧೦ ಲಕ್ಷ ಜನ ಇಟಲಿಯ ವ್ಯವಸಾಯ ಕೆಲಸಗಾರರು ಮೊನ್ನೆಯಿಂದ ಹೆಚ್ಚು ವೇತನಕ್ಕಾಗಿ ಮುಷ್ಕರ ಪ್ರಾರಂಭಿಸಿದ್ದಾರೆ.

ಸಹಕಾರ ನೌಕರರ ಸಮ್ಮೇಳನ

ಮೈಸೂರು ೨೪

ಮೈಸೂರು ಜಿಲ್ಲೆಯ ಸಹಕಾರ ಸಂಘಗಳ ನೌಕರರ ಎರಡನೇ ಸಮ್ಮೇಳನವು ನಿನ್ನೆ ಸಹಕಾರ ಭವನದಲ್ಲಿ ನಡೆಯಿತು. ಸಹಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಟಿ ರಂಗಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ ಮತ್ತು ಸ್ವಾಗತ ಭಾಷಣಗಳಾದನಂತರ ಅಧ್ಯಕ್ಷರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಸಹಕಾರ ಸಂಘಗಳ ನೌಕರರಿಗೂ ಸದಸ್ಯರಿಗೂ ಇರಬೇಕಾದ ಸಂಬಂಧ ಮತ್ತು ಅವರ ಕರ್ತವ್ಯ ಮತ್ತು ಸಂಸ್ಥೆಗಳ ಏಳಿಗೆಗೆ ಮಾಡಬೇಕಾದ ಕಾರ್ಯಕ್ರಮಗಳನ್ನು ಕುರಿತು ಅಧ್ಯಕ್ಷರು ಭಾಷಣ ಮಾಡಿದರು. ನೌಕರರ ಹಿತಸಾಧನೆಗೆ ಸಂಬಂಧಪಟ್ಟ ಅನೇಕ ವಿಷಯಗಳ ಚರ್ಚೆ ನಡೆಯಿತು.

ವಿವಾಹ ಮಹೋತ್ಸವ

ಮೈಸೂರು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ತಮ್ಮ ಪುತ್ರ ಶ್ರೀ ಹೆಚ್. ಸಿ. ವಿಶ್ವನಾಥ್‌ರವರಿಗೆ ಕೃಷ್ಣರಾಜನಗರದ ಶ್ರೀ ಮೈ. ಬಿ. ಭದ್ರಪ್ಪನವರ ಪುತ್ರಿ ಚಿ॥ ಸೌ॥ ಶಾರದಮ್ಮನನ್ನು ತಂದು ಕೊಂಡು ವಿವಾಹವನ್ನು ನಿನ್ನೆ ಕೃಷ್ಣರಾಜನಗರದಲ್ಲಿ ವೈಭವದಿಂದ ನೆರವೇರಿಸಿದರು. ಸಾವಿರಾರು ಜನ ಬಂಧುಮಿತ್ರರು ಬಂದು ವಧೂವರರನ್ನು ಹರಸಿದರು.

ರಾಜಲಕ್ಷ್ಮಿ ನೃತ್ಯಕಲಾ ಮಂದಿರ

ಹೋದ ವಾರ್ಷಿಕೋತ್ಸವವು, ಸತ್ಯನಾರಾಯಣ ಪೂಜೆಯೂ ನಿನ್ನೆ ಹಳೆ ಬಂಡಿಕೇರಿಯಲ್ಲಿ ಜರುಗಿದವು. ಶ್ರೀ ಎಂ.ಪಿ. ನಾಗಮುತ್ತು, ಮತ್ತು ಮಂಡಲಿಯವರ ಹಿಂದೂಸ್ಥಾನಿ ಗಾನ, ಮಂದಿರದ ವಿದ್ಯಾರ್ಥಿಗಳ ನೃತ್ಯಗಳಾದನಂತರ ಅಧ್ಯಕ್ಷರಾದ ಶ್ರೀ ಎ. ಶ್ರೀನಿವಾಸ ಮೂರ್ತಿಯವರು ಭಾಷಣ ಮಾಡಿ ನೃತ್ಯಕಲೆಯು ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ನಂಜನಗೂಡಿನ ಬಳಿ ಕಸ್ತೂರಿ ಬಾ ಶಿಬಿರ

ನಂಜನಗೂಡು ಮತ್ತು ಕೋಣನೂರು ಬಳಿ ಕಸ್ತೂರಿ ಬಾ ಶಿಬಿರಗಳನ್ನು ತೆರೆಯಬೇಕೆಂದು ಅವರ ಸಮಿತಿಯವರು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ.

ಪ್ರ॥ ಪ್ರ॥ ಸಭೆಯ ಅಧ್ಯಕ್ಷರ ಚುನಾವಣೆ

ಸ್ವಂ. ಸು. ಫೋನ್] ಬೆಂಗಳೂರು ೨೪

ಪ್ರಜಾ ಪ್ರತಿನಿಧಿ ಸಭೆಯ ಖಾಸಗೀ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆ ಕಾರ್ಯಕ್ರಮದ ಸಂಬಂಧದಲ್ಲಿ ಒಂದು ವಿಶೇಷ ಗೆಜೆಟ್ ಪ್ರಕಟಣೆ ಹೊರಟಿದೆ. ಚುನಾವಣಾ ತಾರೀಖನ್ನೂ ವೇಳಾಪಟ್ಟಿಯನ್ನೂ ದಿವಾನರು ಗೊತ್ತು ಮಾಡುವರು. ಹೊಸದಾಗಿ ಚುನಾಯಿತರಾದ ಅಧ್ಯಕ್ಷರು ತಮ್ಮ ಗೈರುಹಾಜರಿನಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಲು ೪ ಜನರ ಒಂದು ಪಟ್ಟಿಯನ್ನು ಪ್ರಕಟಿಸುವರು.

ನಾನ್‌ಕಿಂಗ್ ಕಮ್ಯೂನಿಸ್ಟರ ವಶ

ಚೀಣಾ ಸರ್ಕಾರದ ರಾಜಧಾನಿಯಾಗಿದ್ದ ನಾನ್‌ಕಿಂಗ್ ನಗರವು ಕಮ್ಯೂನಿಸ್ಟರ ವಶವಾಯಿತೆಂದೂ, ಅಲ್ಲಿದ್ದ ಸರ್ಕಾರಿ ಸೈನ್ಯಗಳು ಪಶ್ಚಿಮಕ್ಕೆ ಪರಾರಿಯಾದುವೆಂದೂ ವರದಿಯಾಗಿದೆ.

ನಾಲ್ಕು ಆಣೆ ಕಾಂಗ್ರೆಸ್ ಸದಸ್ಯತ್ವ

ಅಖಿಲ ಭಾರತ ಕಾಂಗ್ರೆಸ್ಸಿನ ನೂತನ ಅಂಗರಚನೆಯ ಪ್ರಕಾರ, ಪ್ರತಿ ಪ್ರಾಪ್ತವಯಸ್ಕನೂ ಅದಕ್ಕೆ ಸದಸ್ಯನಾಗಬಹುದಾಗಿತ್ತು. ನಾಲ್ಕು ಆಣೆ ಶುಲ್ಕ ಕೊಟ್ಟು ಸದಸ್ಯನಾಗಬೇಕೆಂಬ ಹಿಂದಿನ ಪದ್ಧತಿಯನ್ನೇ ಇನ್ನು ಮುಂದೆ ಜಾರಿಗೆ ತರಬೇಕೆಂದು ಡೆಹರಾಡೂನಿನಲ್ಲಿ ನಡೆದ ರಹಸ್ಯ ಎ. ಐ. ಸಿ. ಸಿ. ಸಭೆಯಲ್ಲಿ ನಿರ್ಧರಿಸಲಾಗಿದೆಯೆಂದು ಹೇಳಲಾಗಿದೆ.

ನಲ್ಲಿ ಪೈಪು ಕಳ್ಳನ ದಸ್ತಗಿರಿ

ರಾಜಧಾನಿಯ ವಾಣಿವಿಲಾಸ ನೀರು ಸರಬರಾಜು ಕೇಂದ್ರದ ನೌಕರನಾದ ದಾಸಿ ಎಂಬುವನು ನಲ್ಲಿ ಪೈಪುಗಳನ್ನು ಕಳವು ಮಾಡಿದನೆಂಬ ಆಪಾದನೆಯಮೇಲೆ ಲಕ್ಷ್ಮೀಪುರಂ ಪೋಲೀಸರು ಅತನನ್ನು ಮೊನ್ನೆ ದಿನ ದಸ್ತಗಿರಿ ಮಾಡಿರುತ್ತಾರೆ.

ಬರ್ಮಾದಲ್ಲಿ ಕಮ್ಯೂನಿಸ್ಟರ ಪ್ರಜಾ ಕೋರ್ಟುಗಳು

ಪ್ರಜೆಗಳಿಗೆ ವಿರುದ್ಧವಾಗಿರುವವರ ಮತ್ತು ಇತರ ನಿರಂಕುಶಾಧಿಕಾರಿಗಳ ವಿಚಾರಣೆ ನಡೆಸಲು ಪ್ರಜೆಗಳ ಬಹಿರಂಗ ಕೋರ್ಟುಗಳನ್ನು ಬರ್ಮಾ ಕಮ್ಯೂನಿಸ್ಟರು ಐರಾವತಿ ಕ್ಷೇತ್ರದಲ್ಲಿ ಸ್ಥಾಪಿಸಿದ್ದಾರೆಂದು ಹೇಳಲಾಗಿದ ಈ ಗಾನಗರೀ ಕೆಲವು ವಿಚಾರಣೆಗಳು ನಡೆದು ತೀರ್ಪು ನೀಡಲಾದವರನ್ನು ಮರಣದಂಡನೆಯನ್ನು ವಿಧಿಸಲಾಗಿದೆ. ವಿಚಾರಣೆ ಪ್ರಾರಂಭವಾಗುವುದು ಒಟ್ಟು ದನ್ನು ನಗರದಲ್ಲೆಲ್ಲಾ ಮೊದಲು ಸಾರಲಾಗುವುದು. ಅನಂತರ ಕೋರ್ಟಿನವರು ಆಪಾದಿತರ ವಿಚಾರಣೆ ನಡೆಸಿ, ಅವರು ತಪ್ಪಿತಸ್ಥರೆಂದು ತೀರ್ಮಾನಿಸಿ, ಮರಣ ದಂಡನೆ ಶಿಕ್ಷೆಯನ್ನು ಶಿಫಾರಸು ಮಾಡಿ, ಜನರ ಗುಂಪಿಗೆ ಅವನ್ನು ತಿಳಿಸುವರು. ಆಗ ಜನರು ಇದಕ್ಕೆ ತಮ್ಮ ಕೂಗಿನಿಂದ ಸಮ್ಮತಿ ಕೊಡುವರು. ಜನರ ತೀರ್ಮಾನದಂತೆ ಅಪರಾಧಿಗಳ ಕೊಲ್ಲಬೇಕೆಂದು ಕೋರ್ಟು ಆಜ್ಞೆ ಮಾಡುವುದು. ಶಿಕ್ಷೆಯನ್ನು ಜಾರಿಗೆ ತರುವುದಕ್ಕೆ ಮುಂಚೆ ಅಪರಾಧಿಗಳನ್ನು ಜನರ ಗುಂಪಿನಲ್ಲಿ ಎಳೆದೊಯ್ಯಲಾಗುವುದು. ಜನರು ಅವರನ್ನು ಹಿಂಸಿಸುವುದನ್ನಲ್ಲದೆ ಹೆಂಗಸರು ತಮ್ಮ ಪಾದರಕ್ಷೆಗಳಿಂದ ಅವರ ಮುಖಕ್ಕೆ ಹೊಡೆಯುವರು.

ದೋಣಿ ಮುಳುಗಿ ೫೦ ಜನರ ಮರಣ

ನೌಕಾಲಿಗೆ ಬರುತ್ತಿದ್ದ ದೋಣಿಯೊಂದು ನೀರಿನಲ್ಲಿ ಮುಳುಗಿ ೫೦ ಜನರು ಸತ್ತರೆಂದೂ. ೧೦೦ ಜನರು ಈಜಿಕೊಂಡು ದಡವನ್ನು ಸೇರಿದರೆಂದೂ ವರದಿಯಾಗಿದೆ

ನೀರಾ ತಯಾರಿಕೆಯ ಯೋಜನೆ

ಮುಂಬಾಯಿ. ಪ್ರಾಂತದಲ್ಲಿ ಪಾನ ನಿರೋಧವನ್ನು ಜಾರಿಗೆ ತಂದಿರುವುದರಿಂದ ಮದ್ಯದ ಬದಲು 'ನೀರಾ' ಕುಡಿಯುವುದನ್ನು ಪ್ರೋತ್ಸಾಹಿಸಲು ಅಲ್ಲಿನ ಸರ್ಕಾರದವರು ಅದರ ತಯಾರಿಕೆ ಮತ್ತು ಮಾರಾಟದ ಬಗ್ಗೆ ಹೊಸದೊಂದು ಯೋಜನೆ ತಯಾರಿಸಿದ್ದಾರೆಂದೂ, ಅದನ್ನು ಮುಂದಿನ ಜುಲೈ ತಿಂಗಳಿನಿಂದ ಜಾರಿಗೆ ತರಲಾಗುವುದೆಂದೂ ಹೇಳಲಾಗಿದೆ. ಅದಕ್ಕೆ ೪ ಲಕ್ಷ ರೂ ವೆಚ್ಚವಾಗುವುದು

ದೆಹಲಿಯಲ್ಲಿ ಕೇಂದ್ರ ಪುಸ್ತಕ ಭಂಡಾರ

ದಹಲಿಯಲ್ಲಿ ಒಂದು ರಾಷ್ಟ್ರೀಯ ಕೇಂದ್ರ ಪುಸ್ತಕ ಭಂಡಾರವನ್ನು ಸ್ಥಾಪಿಸಲು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ

ಮಂತ್ರಿಗಳ ಮೇಲಿನ ಆರೋಪಣೆಗೆ ನೆಹರೂರವರ ಉತ್ತರ

ಮೊನ್ನೆ ದಿನ ಡೆಹರಾಡೂನಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ರಹಸ್ಯ ಸಭೆಯು ನಡೆಯಿತು ಕಾಂಗ್ರೆಸ್ ಮಂತ್ರಿಗಳ ಮೇಲೆ ಆಚಾರ್ಯ ಕೃಪಲಾನಿಯವರು ಮಾಡಿದ ಆರೋಪಣೆಯನ್ನು ತೀವ್ರವಾಗಿ ಟೀಕಿಸಿ, ಮಂತ್ರಿಗಳ ಕೆಲಸಕಾರ್ಯಗಳಿಗೆ ಬೆಂಬಲವಿತ್ತು ಪಂಡಿತ ನೆಹರೂರವರು ಭಾಷಣ ಮಾಡಿದರೆಂದು ತಿಳಿದು ಬಂದಿದೆ.

ಗಣೇಶಾ ಟಾಕೀಸ್

23-5-49ನೇ ಸೋಮವಾರದಿಂದ

ಪ್ರತಿ ದಿನ 3 ಪ್ರದರ್ಶನಗಳು

ಕೊಲಂಬಿಯಾ ಪಿಕ್ಚರ್ಸ್ಸರವರ

(ಪೂರ್ತಿ ವರ್ಣರಂಜಿತ ಚಿತ್ರ)

ಗನ್ ಫೈಟರ್ಸ್

GUN FIGHTERS

(Cine Colour)

ಪಾತ್ರ — ರಾಂಡಾಲ್ಫ್ ಸ್ಕಾಟ್,

ಬಾರ್ಬರಾ ಬ್ರಿಟನ್

ಕಂಟ್ರೋಲ್ ಬೆಲೆಗೆ ಮಾರಾಟ

ನಮ್ಮಲ್ಲಿ ಕಡಲೆ, ಕಡಲೆ ಹಿಟ್ಟು, ಮತ್ತು ಕಡಲೆ ಬೇಳೆ ಕಂಟ್ರೋಲ್ ಬೆಲೆಗೆ ದೊರೆಯುತ್ತವೆ. ಪರ್ಮಿಟ್ ಕಾರ್ಡಿನ ಮೇರೆ ಕೊಡಲಾಗುವುದು ಮಹಾ ಜನರು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ

ಎಸ್. ಎಸ್. ನಾಗರಾಜ,

ಲೈಸೆನ್ಸ್‌ದಾರ್, ೧೦೩ ಒಸ್ತಾದ್

ನವರ ಪೈ ಸ್ಟ್ರೀಟ್, ಲಿಂಗಾಗ,

ಮೈ ಸೂ ರು

ಮಕ್ಕಳ ಕಳ್ಳನೆಂದು ಜವಾನನ ಕೊಲೆ

ಕಲ್ಕತ್ತಾದಲ್ಲಿ ಮೊನ್ನೆ ದಿನ ಜವಾನನೊಬ್ಬನು ತನ್ನ ಮಾಲೀಕರ ಮನೆಗೆ ಹಿಂತಿರುಗಿದಾಗ, ಆತನು ಮಕ್ಕಳ ಕಳ್ಳನೆಂದು ಜನರು ಅವನನ್ನು ಹೊಡೆದು ಕೊಲೆ ಮಾಡಿದರೆಂದೂ, ಈ ಸಂಬಂಧದಲ್ಲಿ ಪೌರಸಭೆಯ ಒಬ್ಬ ಕೌನ್ಸಿಲರ ಉಪಾಧ್ಯಕ್ಷ ಮತ್ತು ಇತರ ೧೧ ಜನರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆಂದೂ ವರದಿಯಾಗಿದೆ

೧೫೦೦ ರೂ.ಗೆ ಮೂರು ಕೊಠಡಿಗಳ ಮನೆ

ಕೇವಲ ೧೫೦೦ ರೂ ಗೆ ಮೂರು ಕೊಠಡಿಗಳ ಮನೆಯನ್ನು ಬೆಂಗಳೂರಿನ ಇಂಜನಿಯರಾದ ಶ್ರೀ ಪಿ ಮಾದವರಾಯರು ತಯಾರಿಸಿದ್ದಾರೆ ಎಲ್ಲ ಪ್ರಾಂತ್ಯ ಸರಕಾರದವರೂ ಈ ಯೋಜನೆಯನ್ನು ಪರಿಶೀಲಿಸುತ್ತಿದ್ದಾರೆ

ರಾಜಕಮಲ್

ಮೈ ಸೂ ರು

೨೫-೫-೪೯ ರಿಂದ

ಅಮೋಘವಾದ 3ನೇ ವಾರ

ಪ್ರತಿದಿನ 3 ಆಟಗಳು

ಫಿಲ್ಮಿಸ್ತಾನರವರ

ಷಹೀದ್

—:ಮುಖ್ಯ ಪಾತ್ರ:—

ಕಾಮಿನಿ ಕೌಶಲ್ಯ, ದಿಲೀಪ್ ಕುಮಾರ್,

ಚಂದ್ರಮೋಹನ್, ವಿ.ಎಚ್. ದೇಸಾಯಿ

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ

ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ, :: ಮೈಸೂರು

VANITHA SADAN,

Mysore.

Coaching classes for M. S., S. S. L. C. and Intermediate (English only) courses will start work on 10th June. Fees for both terms for M. S. will be Rs. 30, for S. S. L. C Rs. 50 and for Intermediate (English only) Rs. 50. Students desiring to join the classes may apply for seats to the Secretary before the 5th June 1949.

Praphulla Krishna Iyengar

Hon. Secretary.

If you need the services of an expert Kindergarten or Child-educationist for your children, please write to the Director, Sri Jagadamba Sisu-vihar, Dewan's Road, Mysore.

ಸ್ವತಂತ್ರ ಭಾರತದಲ್ಲಿ ರಚನಾತ್ಮಕ ಕಾರ್ಯಕರ್ತರ ಅವಶ್ಯಕತೆ

ಸಮ್ಮೇಳನದಲ್ಲಿ ಸರ್ದಾರ್ ವೆಂಕಟರಾಮಯ್ಯನವರ ಭಾಷಣ

ಮಂಗಳೂರು ೨೩.

ಕರ್ನಾಟಕದ ಪ್ರಮುಖ ನಾಯಕರಾದ ಸರ್ದಾರ್ ಕೆ. ಎ ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಮಂಗಳೂರು ಜಿಲ್ಲಾ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನವು ಈ ದಿನ ನಡೆಯಿತು

ಶ್ರೀ ವೆಂಕಟರಾಮಯ್ಯನವರು ಭಾಷಣಮಾಡಿ, ಸ್ವತಂತ್ರ ಭಾರತವು ಇಂದು ಬಲಿಷ್ಠವಾಗಲು ಸಹಸ್ರ ಮುಖದಿಂದ ರಚನಾತ್ಮಕ ಕಾರ್ಯವು ನಡೆಯಬೇಕಾಗಿದೆಯೆಂದೂ, ರಚನಾತ್ಮಕ ದೃಷ್ಟಿಯು ರಾಜಕೀಯದಲ್ಲಿ ನೆಲೆಯೂರಬೇಕಾದರೆ ರಾಜಕೀಯದ ಹೊರಗೆ ಅಲಿಪ್ತರಾಗಿ ಬಹುಸಂಖ್ಯೆ ರಚನಾತ್ಮಕ ಕಾರ್ಯಕರ್ತರಿದ್ದು ರಾಷ್ಟ್ರದಲ್ಲೆಲ್ಲಾ ರಚನಾತ್ಮಕ ಕಾರ್ಯಗಳ ನರನಾಳಿಯೂ ಆರೋಗ್ಯಪೂರ್ಣ ವಾತಾವರಣವೂ ಬೆಳೆಯಬೇಕಾದರೆ ರಚನಾತ್ಮಕ ಕಾರ್ಯಕರ್ತರ ಸೈನ್ಯವು ಹೆಚ್ಚಬೇಕೆಂದೂ ತಿಳಿಸಿದರು

ಕರ್ನಾಟಕ ಪ್ರಾಂತ್ಯ ನಿರ್ಮಾಣದ ವಿಚಾರವನ್ನು ಅವರು ಪ್ರಸ್ತಾಪಿಸುತ್ತಾ, ಕನ್ನಡ ಮಾತಾಡುವ ಜನರೆಲ್ಲರೂ ಒಟ್ಟಾಗಿ ಪ್ರಾಂತ ರಚನೆಗೆ ಸಹಾಯಕರಾಗಬೇಕೆಂದೂ, ಇದಕ್ಕೆ ಮೈಸೂರಿನ ರಾಷ್ಟ್ರಸೇವಕರು ಬೆಂಬಲ ನೀಡಬೇಕೆಂದೂ ತಿಳಿಸಿದರು. ಮೈಸೂರು ಮುಂದಾಳುಗಳನ್ನು ಹಿಂದೂಡಿ, ಅವರನ್ನು ಸುತ್ತುವರಿದು ಕಾರ್ಯ ಸಾಧಿಸಲು ಹತ್ತಾರು ಸಹಸ್ರ ಸತ್ಯಾಗ್ರಹಿಗಳು ದಂಡಯಾತ್ರೆ ಮಾಡಿ ಜಯ ಸಾಧಿಸಬೇಕೆಂಬ ಮಾತುಗಳು ಕೇಳಬರುತ್ತಿವೆ. ಅದಕ್ಕೆ ಪುರಸ್ಕಾರ ದೊರೆಯುವುದಿಲ್ಲ ಆದರೆ ಸಮಗ್ರ ಕರ್ನಾಟಕ ನಿರ್ಮಾಣಕ್ಕೆ ಮೈಸೂರಿನವರು ಕಾಲ ವಿಳಂಬ ಮಾಡದೆ ಮುಂದೆ ಬರಬೇಕು —ಎಂದು ಹೇಳಿದರು

ಲಕ್ಷ್ಮೀ ಥಿಯೇಟರ್

27-5-49 ರಿಂದ ಅಮೋಘ ಪ್ರಾರಂಭ

ಅಯ್ಯನಾರ್ ಪಾಂಡುರಂಗ

ಪಿಕ್ಚರ್ಸ್‌ರವರ

ಸತೀ ತುಲಸಿ

ಕನ್ನಡ ಪೌರಾಣಿಕ ಚಿತ್ರ

27—5—49ರಿಂದ ಪ್ರತಿ ದಿನ 3 ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಒಪೆರಾ

ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ವಾಕ್ಚಿತ್ರ

★ ವೇಲೆಕಾರಿ ★

—: ಭೂಮಿಕೆ :—

ಎಂ. ವಿ. ರಾಜಮ್ಮ,	ಟಿ. ಎಸ್. ಬಾಲಯ್ಯ,
ವಿ. ಎನ್. ಜಾನಕಿ,	ದೊರೆ ರಾಜ್
ಲಲಿತ	ಪದ್ಮಿನಿ

[R.V. Pictures' Release



ಆರಾಮ ಕುರ್ಚಿಯ ಕ್ಯಾನ್‌ವಾಸ್ ಬಟ್ಟೆ

ಮತ್ತು ಮಕ್ಕಳ ತೊಟ್ಟಿಲಿಗೆ

ಹಾಸುವ ರಬ್ಬರ್ ಷೀಟ್

ಒಳ್ಳೆ ನಮೂನೆಗಳಲ್ಲಿ ಬಂದಿವೆ

ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಸಾಳ್ವದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಗಂಡಸರ ಮೂತ್ರ ಕೋಶದ ಬಿಗುವು, ಕೆಂಪು ಬಿಳಿ ಮೇಹದ ಮೇಹದ ಪುಟ್ಟಿಗಳು, ಮೇಹದ ವ್ರಣಗಳು ಸಹಾ ಪರಿಹಾರ ವ್ಯತ್ಯಾಸವಿಲ್ಲದೆ ಸೇವಿಸುವ ಔಷಧಿ

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Edited, printed, and published by A.R. Nagarajan at the Sadhvi Press, D. Subbiah Road, Mysore.

ಫೋನ್ ನಂ. 792, ॥ವಂದೇ ಮಾತರಂ॥ ಇಂದಿನ ಪತ್ರಿಕೆ ೨ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೨೫-೫-೪೮ [ಸಂಚಿಕೆ ೪೪೨

ಚಿಯಾಂಗ್‌ಕೈಷೇಕರಿಗೆ ಅಮೆರಿಕದಲ್ಲಿ ನಿವಾಸ

ಬೆಂಗಳೂರಿನಲ್ಲಿ ಸೈಕಲ್ ಕಾರ್ಖಾನೆ

ಬ್ರಿಟನ್ನಿನ ಕಂಪೆನಿಯೊಂದು ಬೆಂಗಳೂರಿನಲ್ಲಿ ಸೈಕಲ್ ಕಾರ್ಖಾನೆಯನ್ನು ಸ್ಥಾಪಿಸಲಿದೆ ಭಾರತೀಯ ಉದ್ಯಮಿಗಳೊಂದಿಗೆ ಸೇರಿ ಪಾಲುಗಾರಿಕೆ ವಿಧಾನದಲ್ಲಿ ಇದನ್ನು ನಡೆಸಲಾಗುವುದೆಂದೂ, ಕೆಲವು ವರ್ಷಗಳನಂತರ ಅದು ಭಾರತದ ಆಡಳಿತಕ್ಕೆ ಒಪ್ಪುವುದೆಂದೂ ಹೇಳಲಾಗಿದೆ

ಮಲೆನಾಡು ಅಭಿವೃದ್ಧಿ ಸಮ್ಮೇಳನ

ಮಲೆನಾಡು ಪ್ರದೇಶವನ್ನು ಅಭಿವೃದ್ಧಿಪಡಿಸುವ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲು ಮುಂದಿನ ತಿಂಗಳು ಬೆಂಗಳೂರಿನಲ್ಲಿ ಸಮ್ಮೇಳನವೊಂದು ನಡೆಯುವುದು. ಬೊಂಬಾಯಿ, ಮದರಾಸ್, ಕೊಡಗು ಮತ್ತು ಮೈಸೂರು ಸರ್ಕಾರಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸುವರು.

ಆಸ್ಪತ್ರೆಗಳ ಬಳಿ ಶಾಂತಿ

ಆಸ್ಪತ್ರೆಯ ರೋಗಿಗಳಿಗೆ ಗದ್ದಲದಿಂದ ತೊಂದರೆಯಾಗದಂತಿರಲು ಬೆಂಗಳೂರಿನ ಕೋಟೆ ಪ್ರದೇಶದಲ್ಲಿರುವ ಆಸ್ಪತ್ರೆಗಳ ಸುತ್ತಲಿರುವ ರಸ್ತೆಗಳಲ್ಲಿ ಮೋಟಾರು ಹಾರ್ನ ಇತ್ಯಾದಿ ಶಬ್ದಗಳನ್ನು ಮಾಡಕೂಡದೆಂದು ಸರ್ಕಾರದವರು ಪ್ರತಿಬಂಧಕಾಜ್ಞೆ ಹಾಕಿದ್ದಾರೆ

ಉಣ್ಣೆ ನೂಲುವ ಕೇಂದ್ರಗಳು

ಸಂಸ್ಥಾನದ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಉಣ್ಣೆ ನೂಲುವ ಮತ್ತು ನೆಯ್ಗೆಯ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿದ್ದಾರೆ ಈ ಕಂಬಳದ ಕೈಗಾರಿಕೆಯು ಕ್ಷೀಣದೆಸೆಗೆ ಬಂದಿರುವುದರಿಂದ ಅದನ್ನು ಅಭಿವೃದ್ಧಿ ಪಡಿಸಲು ಈ ಯೋಜನೆಯನ್ನು ಕೈಕೊಳ್ಳಲಾಗಿದೆ

ಕಾರ್ಮಿಕ ಪ್ರತಿನಿಧಿಗಳ ಸಭೆ

ಮೈಸೂರು ಮಜ್ದೂರ್ ಸಭೆಯ ಆಶ್ರಯದಲ್ಲಿ ಸಂಸ್ಥಾನದ ಕಾರ್ಮಿಕರ ಪ್ರತಿನಿಧಿಗಳ ಸಭೆಯು ಇದೇ ೩೦ನೇ ತಾ॥ ಭದ್ರಾವತಿಯಲ್ಲಿ ಶ್ರೀ ಅಶೋಕ ಮೆಹತಾರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಭಾರತೀಯ ಮಹಿಳೆಯ ಭೀಕರ ಕೊಲೆ

ಮಧ್ಯ ಮಲಯಾದ ಮಹಾಂಗ್ ಸಂಸ್ಥಾನದ ಜೆರ್ಕಾ ಸಾಂಗ್ ಎಂಬಲ್ಲಿ ಭಯೋತ್ಪಾದಕರು ಒಬ್ಬ ಭಾರತೀಯ ಕಾರ್ಮಿಕನ ಪತ್ನಿಯನ್ನು ಕತ್ತರಿಸಿ ಆಕೆಯನ್ನು ಮರಕ್ಕೆ ಕಟ್ಟಿಹಾಕಿದ್ದು [illegible] ವರದಿಯಾಗಿದೆ ಮತ್ತೊಂದು [illegible]ಯಲ್ಲಿ ಭಾರತೀಯ ಮಹಿಳೆ ಮತ್ತು [illegible] ಪತಿಯನ್ನೂ ಗುಂಡಿನಿಂದ ಹೊಡೆದು ಕೊಲೆ ಮಾಡಲಾಗಿದೆ

ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ನಿಲಯ

ರಾಜಧಾನಿಯಲ್ಲಿರುವ ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ನಿಲಯವನ್ನು ಮುಂದಿನ ತಿಂಗಳಿನಿಂದ ತೆರೆಯಲಾಗುವುದು ಪ್ರವೇಶ ಸೇರಲಿಚ್ಛಿಸುವ ಹೈಸ್ಕೂಲು ಮತ್ತು ಕಾಲೇಜುಗಳ [illegible] ಭಾವಸಾರ ಕ್ಷತ್ರಿಯ ವಿದ್ಯಾರ್ಥಿಗಳು ಮುಂದಿನ ತಿಂಗಳು [illegible]ನೇ ತಾ॥ ಒಳಗಾಗಿ ವಿಧಾಯಕವಾದ [illegible]ದಲ್ಲಿ ಅಧ್ಯಕ್ಷರಾದ ಶ್ರೀ ಯು.ಎಚ್. [illegible]ಜಂಪ್ಪರಾಯರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು ತಿಳಿಸಲಾಗಿದೆ

ಚಿಯಾಂಗರು ಅಮೆರಿಕದಲ್ಲಿ ನೆಲೆಸುವರೇ ?

ಚೀಣವು ಸಂಪೂರ್ಣವಾಗಿ ಕಮ್ಯೂನಿಸ್ಟರ ವಶವಾದ ಮೇಲೆ ಅಲ್ಲಿನ ಮಾಜಿ ಅಧ್ಯಕ್ಷ ಚಿಯಾಂಗ್ ಕೈಷೇಕ್‌ರವರು ಅಮೆರಿಕಕ್ಕೆ ಹೋಗಿ ಅಲ್ಲಿ ಖಾಯಂ ಆಗಿ ನೆಲೆಸುವರೆಂದೂ, ಈಗಾಗಲೇ ಸತಿ ಚಿಯಾಂಗರು ಮನೆ ಮತ್ತು ಇತರ ಸ್ವತ್ತುಗಳನ್ನು ಅಮೆರಿಕದಲ್ಲಿ ಕೊಂಡಿದ್ದಾರೆಂದು ಹೇಳಲಾಗಿದೆ

ಹೆಚ್ಚು ಬೆಳೆ ಬೆಳೆಯಲು ೮ ಕೋಟಿ ರೂ. ಗ್ರಾಂಟು

ದೇಶದಲ್ಲಿ ಹೆಚ್ಚು ಆಹಾರ ಬೆಳೆಯನ್ನು ಬೆಳೆಯಲು ಭಾರತ ಸರ್ಕಾರದವರು ಈ ವರ್ಷ ೮ ಕೋಟಿ ರೂ ಗ್ರಾಂಟನ್ನು ಮಂಜೂರು ಮಾಡಿರುತ್ತಾರೆ ೪೦ ಲಕ್ಷ ಪಾಳು ಜಮೀನನ್ನು ಸಾಗುವಳಿಗೆ ತರಲಾಗುವುದೆಂದು ಹೇಳಲಾಗಿದೆ

ಕೊಡಗಿನಲ್ಲಿ ಕಾಲೇಜು

ಮುಂದಿನ ತಿಂಗಳಿನಿಂದ ಕೊಡಗು ಮತ್ತು ಉಡುಪಿಗಳಲ್ಲಿ ಇಂಟರ್ ಮೀಡಿಯಟ್ ಕಾಲೇಜನ್ನು ಸ್ಥಾಪಿಸಲು ಮದರಾಸ್ ವಿಶ್ವವಿದ್ಯಾನಿಲಯದವರು ನಿರ್ಧರಿಸಿದ್ದಾರೆ

ಕೆ. ಸಿ. ರೆಡ್ಡಿಯವರು ಜಿನೀವಾಕ್ಕೆ

ಸ್ವಂ ಸು ಫೋ॥] ಬೆಂಗಳೂರು ೨೫

ಶ್ರೀ ಕೆ ಟಿ ಭಾಷ್ಯಂರವರ ಬದಲು ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರೇ ಜಿನೀವಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಗಳಲ್ಲೊಬ್ಬರಾಗಿ ತೆರಳಲಿರುವರೆಂದು ಇತ್ತೀಚಿನ ಸುದ್ದಿ ಪ್ರಕಾರ ತಿಳಿದು ಬಂದಿದೆ ಈ ಬಗ್ಗೆ ಭಾರತ ಸರಕಾರದೊಡನೆ ಮೈಸೂರು ಸರ್ಕಾರದವರು ಪತ್ರವ್ಯವಹಾರ ಬೆಳೆಸಿದ್ದಾರೆ ಜೂನ್ ೩ನೇ ತಾರೀಖು ರೆಡ್ಡಿಯವರು ಪ್ರಯಾಣ ಬೆಳೆಸುವರು

○ ಮುಂದಿನ ತಿಂಗಳು ೧೯ನೇ ತಾ॥ ಪ್ರಾಂಡುಚೇರಿಯು ಭಾರತಕ್ಕೆ ಸೇರಬೇಕೇ ಅಥವಾ ಫ್ರೆಂಚ್ ಸರ್ಕಾರದಲ್ಲಿರಬೇಕೇ ಎಂಬುದನ್ನು ನಿರ್ಧರಿಸಲು ಜನಾಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದೆಂದು ಹೇಳಲಾಗಿದೆ

ಅಜಂತಾ ಮತ್ತು ಎಲ್ಲೋರ ಗುಹೆಗಳ ರಕ್ಷಣೆ

ಹೈದರಾಬಾದ್ ಸಂಸ್ಥಾನದಲ್ಲಿರುವ ಸುಪ್ರಸಿದ್ಧ ಅಜಂತಾ ಮತ್ತು ಎಲ್ಲೋರ ಗುಹೆಗಳಲ್ಲಿರುವ ಕಲಾಕೃತಿಗಳಿಗೆ ನಷ್ಟ ಉಂಟಾಗದಂತೆ ತಕ್ಕ ವ್ಯವಸ್ಥೆ ಮಾಡುವ ಬಗ್ಗೆ ಅಲ್ಲಿನ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿದ್ದಾರೆ.

ಮನೆ ಜಗಳದಲ್ಲಿ ಅಣ್ಣನ ಕೊಲೆ

ಚತ್ರಪುರದಲ್ಲಿ ಇಬ್ಬರು ಅಣ್ಣತಮ್ಮಂದಿರುಗಳಿಗೆ ಸಂಸಾರದ ವಿಚಾರವಾಗಿ ಜಗಳ ಉಂಟಾಗಿ ತಮ್ಮನಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟನು ಆತನು ಆಸ್ಪತ್ರೆಯಿಂದ ಹೊರಬಿದ್ದು ಅಣ್ಣನ ಮನೆಗೆ ಹೋಗಿ ಆತನನ್ನೂ ಅವನ ಹೆಂಡತಿಯನ್ನೂ ಕೊಲೆ ಮಾಡಿದನೆಂದು ವರದಿಯಾಗಿದೆ

ಕಸ ಗುಡಿಸುವ ಯಂತ್ರ

ನಗರದ ಬೀದಿಗಳಲ್ಲಿ ಬಿದ್ದಿರುವ ಕಸವನ್ನು ಗುಡಿಸಿ ಒಂದುಕಡೆ ಕೂಡಿಸುವ ಯಂತ್ರವನ್ನು ಉಪಯೋಗಿಸಲು ಬೊಂಬಾಯಿ ನಗರ ಸಭೆಯವರು ೧ ಕೋಟಿ ರೂ ಯೋಜನೆಯನ್ನು ಮಂಜೂರು ಮಾಡಿದ್ದಾರೆ ಇಲ್ಲಿ ಜಾಡಮಾಲಿಗಳು ಮುಷ್ಕರ ಹೂಡುತ್ತಿರುವುದೇ ಇದಕ್ಕೆ ಕಾರಣ ವೆಂದು ಹೇಳಲಾಗಿದೆ

ಉತ್ತಂಗಿ ಚೆನ್ನಪ್ಪನವರ ಭೇಟಿ

ಮೈಸೂರು ೨೫

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರೆ॥ ಉತ್ತಂಗಿ ಚೆನ್ನಪ್ಪನವರು ಮೊನ್ನೆ ದಿನ ಮಕ್ಕಳ ಕೂಟ, ತಕ್ಷಣ ಬಳಗ ಮತ್ತು ದಿವಾನರ ಆಗ್ರಹಾರದಲ್ಲಿ ಮಹಿಳಾ ಸದನಗಳಿಗೆ ಭೇಟಿ ಇತ್ತು ಅಲ್ಲಿನ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು.

ಕೈ ಮಗ್ಗದ ಬಟ್ಟೆ ರಫ್ತಿಗೆ ಅವಕಾಶ

ಸಂಸ್ಥಾನದಲ್ಲಿ ಕೈ ಮಗ್ಗದ ಬಟ್ಟೆಗಳು ಹಾಸ್ತಾನು ವಿಶೇಷವಾಗಿರುವುದರಿಂದ ಅದನ್ನು ಪರದೇಶಗಳಿಗೆ ರಫ್ತುಮಾಡಲು ಮುಂದಿನ ತಿಂಗಳ ಅಂತ್ಯದವರೆಗೆ ಅನುಮತಿಯನ್ನು ಭಾರತ ಸರ್ಕಾರದವರು ಕೊಟ್ಟಿರುತ್ತಾರೆ ಈ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವವರು ಬೊಂಬಾಯಿನ ಡೆಪ್ಯುಟಿ ಚೀಫ್ ಕಂಟ್ರೋಲರಿಂದ ಉಚಿತವಾಗಿ ರಹದಾರಿ ಪಡೆಯಬಹುದೆಂದು ಸರ್ಕಾರದ ಪ್ರಕಟನೆ ತಿಳಿಸಿರುತ್ತದೆ

ಮದರಾಸ್ ಅಂಗಡಿಗಳ ಕಾಲದ ನಿಗದಿ

ಬರುವ ಜುಲೈ ತಿಂಗಳಿನಿಂದ ಯಾವ ಅಂಗಡಿಯನ್ನೂ ಬೆಳಗ್ಗೆ ೭ ಗಂಟೆಗೆ ಮುಂಚೆಯೂ, ರಾತ್ರಿ ೧೦ ಗಂಟೆ ನಂತರವೂ ತೆರೆದಿರಕೂಡದೆಂದು ಮದರಾಸ್ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಹೋಟೇಲುಗಳು ಬೆಳಗ್ಗೆ ೫ ಗಂಟೆಗೆ ಮುಂಚೆಯೂ ರಾತ್ರಿ ೧೦ ಗಂಟೆ ನಂತರವೂ, ತೆರೆದಿರಕೂಡದು ಸಿನಿಮಾ ಮತ್ತು ನಾಟಕ ಮಂದಿರಗಳು ಭಾನುವಾರ ಬೆಳಗ್ಗೆ ೯ ಗಂಟೆಗೆ ಮುಂಚೆಯೂ, ಮಿಕ್ಕ ದಿನಗಳು ಮಧ್ಯಾಹ್ನ ೧ ಗಂಟೆಗೆ ಮುಂಚೆಯೂ, ರಾತ್ರಿ ೧-೩೦ ಗಂಟೆ ನಂತರವೂ ತೆರೆದಿರಕೂಡದೆಂದೂ ಆಜ್ಞೆ ಮಾಡಲಾಗಿದೆ.

ಮದರಾಸ್ ಮಂತ್ರಿಗಳ ಮೇಲೆ ಆರೋಪಣೆಯ ತನಿಖೆ

ಮದರಾಸಿನ ಮಂತ್ರಿಗಳ ಮೇಲೆ ಕೆಲವು ಶಾಸನ ಸಭಾ ಸದಸ್ಯರುಗಳು ಮಾಡಿರುವ ಆರೋಪಣೆಗಳ ಬಗ್ಗೆ ವಿಚಾರಣೆ ನಡೆಸಲು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರನ್ನು ನೇಮಿಸಲಾಗಿದೆ.

ಭೂಪಾಲ್ ನವಾಬರಿಗೆ ತಿರುವಾಂಕೂರಿನಿಂದ ೪೦ ಲಕ್ಷ ರೂ.

ಸರ್. ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ತಿರುವಾಂಕೂರಿನಲ್ಲಿ ದಿವಾನರಾಗಿದ್ದಾಗ ಭೂಪಾಲ್ ನವಾಬರಿಗೆ ೪೦ ಲಕ್ಷ ರೂ. ಸಾಲವನ್ನು ಕೊಡಿಸಿದ್ದ ವಿಷಯವನ್ನು ತಿರುವಾಂಕೂರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ಸಭೆಯಲ್ಲಿ ಪರಿಶೀಲಿಸಲಾಯಿತೆಂದೂ, ಆ ಹಣದ ಪೈಕಿ, ಬಾಕಿ ಉಳಿದಿರುವ ೩೦ ಲಕ್ಷ ರೂ ಅನ್ನು ವಾಪಸು ಕೊಡಿಸಲು ಭಾರತ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತೆಂದೂ ವರದಿಯಾಗಿದೆ

ಬಿಳಿಗಿರಿ ರಂಗನ ಬೆಟ್ಟದಲ್ಲಿ ಸಂಶೋಧನಾಲಯ

ಜಿಲ್ಲಾ ಬೋರ್ಡಿನ ನಿರ್ಣಯ

ಮೈಸೂರು ೨೫

ಈ ದಿನ ಜಿಲ್ಲಾಬೋರ್ಡಿನ ಅಧಿವೇಶನವು ಶ್ರೀ ಹೆಚ್. ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಈ ಕೆಳಗೆ ಕಂಡ ನಿರ್ಣಯಗಳು ಮಂಜೂರಾದುವು:-

ಬಿಳಿಗಿರಿರಂಗನ ಬೆಟ್ಟದಲ್ಲಿ ಗಿಡಮೂಲಿಕೆಗಳ ತೋಟ ಮತ್ತು ಸಂಶೋಧನಾಲಯವನ್ನು ಸ್ಥಾಪಿಸುವುದು.

ಬೆಟ್ಟದಪುರ, ಚಪ್ಪರದಹಳ್ಳಿ, ರಾಮದುರ್ಗ, ಕಂಬಾಗಾಲ ಮತ್ತು ಸೋಮ ಪಟ್ಟಣಗಳಲ್ಲಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು

ಹೊಸ ಅಗ್ರಹಾರದಲ್ಲಿ ಮಲೇರಿಯಾ ನಿವಾರಣೆಗಾಗಿ ಆಸ್ಪತ್ರೆ ತೆರೆಯುವುದು

ಅರಮನೆ ಜನರ ಕಟ್ಟೆ ಮಾತು

ಶ್ರೀ ಎಂ ಎಲ್ ನಾಗಣ್ಣನವರು [illegible]ನೇ ಮೈಸೂರು ಸಾಪ್ತಾಹಿಕ ಪತ್ರಿಕೆಯಲ್ಲಿ ಮೈಸೂರಿನ ಅರಮನೆ ವಿಷಯವಾಗಿ ಕೊಟ್ಟಿರತಕ್ಕ ಹೇಳಿಕೆ ಬಿದ್ದ ಸುಳ್ಳು ಮತ್ತು ಅಪಪ್ರಚಾರ ಆ ಹೇಳಿಕೆ ಸತ್ಯ, ಧರ್ಮ, ನ್ಯಾಯ ಇವುಗಳಿಂದ ದೂರದಲ್ಲಿದೆ. ಇವರು ಪೋಲೀಸ್ ಸ್ಪರ್ಶನಿಸ್ಟ್‌, ಕೊಟ್ಟಿರತಕ್ಕ ಹೇಳಿಕೆಯನ್ನು ಮರೆಸಿದ್ದಾರೆ. ಇವರ ಮೇಲೆ ಸಹ ಮುಂದಿನ ಕ್ರಮ ಜರುಗಿಸಲಾಗುತ್ತದೆ-ಎಂದು, ಶ್ರೀ ಶಿವರಪ್ಪನವರು ತಿಳಿಸಿದ್ದಾರೆ

೩ ನೂರ ಕಾಲ ಮದುವೆ ಸಮಾರಂಭ

ಮೊರಾಕೊ ಸುಲ್ತಾನರ ನಾದಿನಿ ರಾಜಕುಮಾರಿ ಲಾಲ್ಲಾ ಸಾಕಿನಾ ಬೊಹಾರಾ ಮತ್ತು ಟೆಟುಯ ಊರಿನ ಪೊಲೀಸ್ ಮುಲಾಯಿ ಎಲ ಪರ್ಸ ರವರ ವಿವಾಹಕ್ಕೆ ೭ ಲಕ್ಷ ರೂ ಖರ್ಚು ಮಾಡಲಾಗುವುದೆಂದೂ, ಮದುವೆಯು ೩ ವಾರ ಕಾಲ ನಡೆಯುವುದೆಂದೂ ಹೇಳಲಾಗಿದೆ ಭೋಜನ ಕೂಟ, ಸಂಗೀತ ನರ್ತನ ಮತ್ತು ಕ್ರೀಡೆಗಳೂ, ಪಟಾಕಿಸಳ್ಳ ಓಟ ಬೀದಿಗಳಲ್ಲಿ ರಾತ್ರಿ ರಾಗ ಲೂಲ ದನ್ನ ಬಾಗಿಲಾಗುವುದು

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ

ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ಪಾಕೀಸ್ಥಾನದಲ್ಲಿ ಖಾಸಿಂ ರಜ್ವಿಯ ಪತ್ನಿ

ಹೈದರಾಬಾದಿನ ರಜಾಕರರ ಮಾಜಿ ನಾಯಕರಾದ ಖಾಸಿಂ ರಜ್ವಿಯ ಪತ್ನಿಯು ಕರಾಚಿಗೆ ಹೋಗಿದ್ದಾರೆ ತನ್ನ ಪತಿಯ ಮೇಲಿನ ಮೊಕದ್ದಮೆಯು ಸಧ್ಯದಲ್ಲಿಯೇ ಪ್ರಾರಂಭವಾಗಲಿರುವುದರಿಂದ ಆವರ ಪರ ವಕೀಲರನ್ನು ಏರ್ಪಡಿಸುವ ಒಗ್ಗೆ ವ್ಯವಸ್ಥೆ ಮಾಡಲು ಪಾಕೀಸ್ಥಾನಕ್ಕೆ ಬಂದಿರುವುದಾಗಿ ಆಕೆಯು ತಿಳಿಸಿರುತ್ತಾಳೆ

ಗಣೇಶ ಟಾಕೀಸ್

ಇದೇ 25 ಮತ್ತು 26ನೇ ತಾ॥

2 ದಿನಗಳು ಮಾತ್ರ

ಪ್ರತಿ ದಿನ 3 ಪ್ರದರ್ಶನಗಳು

Tarzan's Adventures

ಟಾರ್ಜಾನ್ಸ್ ಅಡ್ವೆಂಚರ್ಸ್

ಪಾತ್ರ - ಹೆರ್ಮನ್ ಬ್ರಿಕ್ಸ್

ಶ್ರೀ ಗಾಯತ್ರೀ

ಪ್ರತಿ ದಿನ 3 ಪ್ರದರ್ಶನಗಳು

26-5-49 ರಿಂದ 3 ದಿನಗಳು ಮಾತ್ರ

ಮಾನವನು ತನ್ನ ಜೀವಿತದಲ್ಲಿ ಅನುಭವಿಸಬೇಕಾದ ಶೋಕ ಹಾಗೂ ಸಂತೋಷವನ್ನೊಳಗೊಂಡ ಚಿತ್ರ

ಯೂನಿವರ್ಸಲ್‌ರವರ

ಎ ಡಬ್ಬಲ್ ಲೈಫ್

ಪಾತ್ರ ರೋನಾಲ್ಡ್ ಕಾಲ್ಮನ್

ಬೆಳಗಿನ ಪ್ರದರ್ಶನ—

28-5-49ರಿಂದ 2 ದಿನಗಳು

ವಾರ್ನರ್ಸ್

ಜ್ವಾರಸ್

ಪಾತ್ರ - ಪಾಲ್ ಮುನಿ, ಬೆಟ್ಟೆ ಡೇವಿಸ್

SARADAVILAS COLLEGE, Mysore

TUTORIAL CLASS

Tutorial Class for students sitting for the Intermediate Examination of September 1949 will be held from 6-6-49 For particulars please enquire in the College

HON SECRETARY

ಮೈಸೂರು ಸ್ಟೇಟ್ ರೈಲ್ವೆ
ಟೆಂಡರ್ ನೋಟಿಫಿಕೇಷನ್ ನಂ. ೧
ಪ್ಲಾಟ್‌ಫಾರಂ ಕಂಟ್ರಾಕ್ಟುಗಳು

೧ ೧೯೪ ೫೦ ನೇ ಇಸವಿಗಾಗಿ ಮೈಸೂರು ಸಂಸ್ಥಾನದ ರೈಲ್ವೆಯ ಎಲ್ಲಾ ಸ್ಟೇಷನ್ನುಗಳ ಪ್ಲಾಟ್‌ಫಾರಂಗಳ ಮೇಲೆ ಹಣ್ಣು ಸಿಗರೇಟ ವಗೈರೆಗಳನ್ನು ಮಾರುವ ಹಕ್ಕುಗಳಿಗಾಗಿ ಜೂನ್ ೬ ನೇ ತಾರೀಖು ಮಧ್ಯಾಹ್ನ ೧ ಘಂಟೆವರೆಗೆ ಮೊಹರಾದ ಟೆಂಡರುಗಳನ್ನು ಸ್ವೀಕರಿಸಲಾಗುತ್ತದೆ

೨ ಕೆಳಗೆ ಕಂಡ ೪ ಸ್ಟೇಷನ್ನುಗಳು ವಿನಹ ಇತರ ಎಲ್ಲಾ ಸ್ಟೇಷನ್ನುಗಳಿಗೂ ಕಂಟ್ರಾಕ್ಟಿನ ಅವಧಿಯು ... ನೇ ಜೂಲೈ ೧ ನೇ ತಾರೀಖಿನಿಂದ ೧೯೫೦ ನೇ ಜೂನ್ ೩೦ ರವರೆಗೆ ಇರುತ್ತದೆ ಕೆಳಗೆ ಕಂಡ ೪ ಸ್ಟೇಷನ್ನುಗಳಿಗೆ ಕಂಟ್ರಾಕ್ಟು ಅವಧಿಯು ... ೧೯೫೦ ... ರವರೆಗೆ ಇರುವುದು

೧ ಮೈಸೂರು — ಚಿತ್ರದುರ್ಗ

೨ ಬೆಂಗಳೂರು ನಗರ — ೬ ಶಿವಮೊಗ್ಗ ಟೌನ್

೩ ತುಮಕೂರು — ೭ ಅರಸೀಕೆರೆ

೪ ಬೀರೂರು

೩ ಟೆಂಡರುಗಳು ಪ್ರತಿಯೊಂದು ಸ್ಟೇಷನ್ನಿಗೂ ಪ್ರತ್ಯೇಕವಾಗಿರಬೇಕು ಮತ್ತು ... ಸ್ಟೇಷನ್ನಿನ ಪ್ಲಾಟ್‌ಫಾರಂ ಕಂಟ್ರಾಕ್ಟಿನ ಟೆಂಡರು ಎಂದು ಬರೆಯಲ್ಪಟ್ಟ ಲಕೋಟೆಯಲ್ಲಿ ... ಹಾಗೆ ಮೊಹರಾದ ಕವರಿನ ಮೇಲೆ ಟ್ರಾಫಿಕ್ ಮ್ಯಾನೇಜರ್ ಮೈಸೂರು ಸ್ಟೇಟ್ ರೈಲ್ವೆ ಮೈಸೂರು ಎಂಬ ವಿಳಾಸವನ್ನು ಬರೆಯಬೇಕು

೪ ಮೈಸೂರು ಸಂಸ್ಥಾನದ ರೈಲ್ವೆಯ ಕ್ಯಾಷ್ ಆಫೀಸರವರಲ್ಲಿ ಪ್ರತಿಯೊಂದು ಟೆಂಡರಿಗೆ (ಐವತ್ತು ರೂಪಾಯಿಗಳು) ೫೦ ಡಿಪಾಜಿಟ್ ಆಗಿ ಇಡಬೇಕು ಮತ್ತು ಜಮಾ ಮಾಡಿದ ಒಗ್ಗೆ ರಶೀತಿಯನ್ನು ಟೆಂಡರಿನ ಜೊತೆಗೆ ಕಳುಹಿಸಬೇಕು ಇಂತಹ ರಶೀತಿಯು ಇರದ ಟೆಂಡರನ್ನು ಪರಿಶೀಲಿಸಲಾಗುವುದಿಲ್ಲ

೫ ಯಾವುದೇ ಟೆಂಡರನ್ನು ಒಪ್ಪಿಕೊಳ್ಳಲು ಕೆಳಗೆ ರುಜು ಮಾಡಿರುವವರು ಒದ್ಧರಾಗಿರುವುದಿಲ್ಲ ಅಥವಾ ಯಾವುದೇ ಅಥವಾ ಎಲ್ಲಾ ಟೆಂಡರುಗಳನ್ನೂ ತಿರಸ್ಕರಿಸಿದರೆ ಕಾರಣಗಳನ್ನು ಕೊಡಲೂ ಒದ್ಧರಾಗಿರುವುದಿಲ್ಲ

೬ ಕಂಟ್ರಾಕ್ಟಿನ ಷರತ್ತು ಮುಂತಾದವುಗಳನ್ನು ಟ್ರಾಫಿಕ್ ಮ್ಯಾನೇಜರ್, ಮೈಸೂರು ಸಂಸ್ಥಾನದ ರೈಲ್ವೆ ಮೈಸೂರುರವರಿಗೆ ಅರ್ಜಿ ಹಾಕಿ ಪಡೆಯಬಹುದು

ಟ್ರಾಫಿಕ್ ಮ್ಯಾನೇಜರವರ ಕಛೇರಿ — ಮೀರ್ ಇನಾಯತ್ ಹುಸೇನ್,

ಮೈಸೂರು ೩೦॥ ೧೯ ಮೇ ೧೯೪೯ — ಟ್ರಾಫಿಕ್ ಮ್ಯಾನೇಜರ್

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಹೃದಯೋಷ್ಣಾನಕ

ಸೂತಿಕಾವಾತಕ್ಕೆ [ಬಾಣಂತಿ ನಂಜಿಗೆ ಉತ್ತಮ ಗುಣಕಾರಿ

ಕಣ್ಣು ಕೈಕಾಲುಗಳು ನೆತ್ತಿ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರವಾಗುವ

ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

27 5 49ರಿಂದ — ಪ್ರತಿ ದಿನ 3 ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಅಪೆರಾ ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ಸಾಕ್ಷಿಚಿತ್ರ

ವೇಲೈಕಾರಿ

— ಭೂಮಿಕೆ —

ಎಂ. ವಿ. ರಾಜಮ್ಮ,	ಟಿ ಎಸ್. ಬಾಲಯ್ಯ,
ವಿ. ಎನ್. ಜಾನಕಿ,	ದೊರೆ ರಾಜ್,
ಲಲಿತ	ಪದ್ಮಿನಿ.

[R V Pictures Release

ಲಕ್ಷ್ಮೀ ಥಿಯೇಟರ್

27-5-49ರಿಂದ

ಅನೋಘ ಪ್ರಾರಂಭ

ಅಯ್ಯನಾರ್ ಪಾಂಡುರಂಗ ಪಿಕ್ಚರ್ಸ್‌ರವರ

ಸತೀ ಸುಕನ್ಯ

ಕನ್ನಡ ಪೌರಾಣಿಕ ಚಿತ್ರ

ಪಾತ್ರ —

ಬಿ. ಎಸ್. ರಾಜಯ್ಯಂಗಾರ್

ಜಿ ಆರ್ ಸ್ಯಾಂಡೋ

ಸುಶೀಲಾದೇವಿ

ಜಯಶ್ರೀ

ಸಂಗೀತ ನಿರ್ದೇಶಕರು

ಅರಕೆರ ನಾರಾಯಣರಾವ್

ಹಿನ್ನೆಲೆ ಸಂಗೀತ

ಶ್ರೀಮತಿ ನೀಲಮ್ಮ ಕಡಾಂಬಿ

- Distributors -

N S Films Corporation

Edited, printed and published by A R Nagarajan at the Sadhvi Press D Subbiah Road, Mysore

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೧ ಕಾಸು

ಸಾಧ್ವಿ

ಸಂಪುಟ ೬] ಗುರುವಾರ ೨೬-೫-೪೯ [ಸಂಚಿಕೆ ೨೫

ಕಾಶ್ಮೀರದ ಸಿಂಹಾಸನ ಅಲ್ಲಿನ ಯುವರಾಜರಿಗೆ

ಪ್ರ॥ ಪ್ರ॥ ಸಭಾಧ್ಯಕ್ಷರ ಚುನಾವಣೆ

[ಸು ಫೋ॥] ಬೆಂಗಳೂರು ೨೬

ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆಯು ಜೂನ್ ೩ನೇ ತಾ॥ ನಡೆಯಬೇಕೆಂದು ದಿವಾನರು ನಿರ್ಧರಿಸಿರುತ್ತಾರೆ.

○ ಕ್ಲೋಸ್ ಪೇಟೆಗೆ ರಾಮನಗರ ಎಂದು ಹೆಸರನ್ನು ಬದಲಾಯಿಸಿದ್ದುದನ್ನು ಪುನ ನಗರಂ ಎಂದು ಕರೆಯಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

○ ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಹೆಚ್ ಎಸ್ ಸಂಗಿ ರಾಮಯ್ಯನವರನ್ನು ಮೆಡಿಕಲ್ ಸ್ಟೋರ್ಸ್ ಸಮಿತಿಯ ಕಾರ್ಯದರ್ಶಿಗಳಾಗಿ ನಿರ್ಧರಿಸಲಾಗಿದೆ

○ ೪ ಲಕ್ಷ ರೂ ವೆಚ್ಚದಲ್ಲಿ ಶಿವಮೊಗ್ಗ ಜಿಲ್ಲೆಯ ಸೂಳೆಕೆರೆಯಲ್ಲಿ ಪ್ರಾಯೋಗಿಕ ವ್ಯವಸಾಯ ಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿದ್ದಾರೆ

○ ಸಂಸ್ಥಾನದಲ್ಲಿ ಸ್ಕೌಟ್ ಚಳುವಳಿ ಸುಧಾರಣೆ ಬಗ್ಗೆ ಶ್ರೀ ಕಸ್ತೂರಿ ರಾಜಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರವು ನೇಮಿಸಿದೆ

○ ಡಾ॥ ಸಿ ಆರ್. ರೆಡ್ಡಿಯವರು ಪ್ರಗತಿಗಳಿಸಲ್ಲಿ ಪುನಃ ಸಂಸ್ಥಾನಕ್ಕೆ ಬರಬೇಕೆಂದು ಸರ್ಕಾರದವರು ಆಹ್ವಾನ ಕೊಟ್ಟಿದ್ದಾರೆಂದು ತಿಳಿದು ಬಂದಿದೆ

ಯುವಕರಿಗೆ ಆರ್ಯ ಸಂಸ್ಕೃತಿಯ ತಿಳಿವಳಿಕೆ

ಯುವಕರಿಗೆ ಆರ್ಯ ಸಂಸ್ಕೃತಿ ಮತ್ತು ಧರ್ಮವನ್ನು ಬೋಧಿಸಬೇಕಾದುದು ಅವಶ್ಯವೆಂದು ಬೆಂಗಳೂರಿನಲ್ಲಿ ಬಜಾರ ಮಾರುವ ಪತ್ರಿಕೆಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಸ್ವಾಮಿಗಳು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ ಬೆಂಗಳೂರಿನಲ್ಲಿ ಆಗು ಆಯುರ್ವೇದ ಕಾಲೇಜು ಮತ್ತು ವಿದ್ಯಾರ್ಥಿ ನಿಲಯಗಳನ್ನು ಮಠದವರು ಸ್ಥಾಪಿಸಲು ೧॥ ಲಕ್ಷ ರೂ ಅನ್ನು ಕೊಡಲು ನಿರ್ಧರಿಸಿರುವುದಾಗಿಯೂ, ಅದಕ್ಕೆ ನಿವೇಶನವನ್ನು ಸರ್ಕಾರದವರು ಕೊಡಬೇಕೆಂದೂ ಪ್ರಾರ್ಥಿಸಿದ್ದಾರೆ

ಮೈಸೂರು ಸಾಬುವಿನ ಮೇಲೆ ಸಿನಿಮಾ ತಾರೆಯ ಮೊಕದ್ದಮೆ

ಲಂಡನ್ನಿನ ಸಿನಿಮಾ ತಾರೆಯಾದ ಕುಮಾರಿ ಮೇರಿಯನ್ ಜುಲಿಯನ್ ಎಂಬುವರು ಲಾಸಾಂಜಲೀಸ್ ಕೋರ್ಟಿನಲ್ಲಿ ಮೈಸೂರು ಸಾಬುವಿನ ಮೇಲೆ ಒಂದು ಮೊಕದ್ದಮೆ ಹೂಡಿ ಕಳೆದ ವರ್ಷ ಸೆಪ್ಟೆಂಬರ್ ೧೫ನೇ ತಾ॥ ಹುಟ್ಟಿದ ಮಗುವಿಗೆ ತಂದೆಯು ಸಾಬುವೆಂದೂ, ಅದನ್ನು ರಕ್ಷಿಸಲು ಹಣ ಕೊಡಲು ಆತನು ನಿರಾಕರಿಸಿರುವುದಾಗಿಯೂ, ಆದ್ದರಿಂದ ಆಗ ೫೦೦ ಡಾಲರುಗಳನ್ನು ಅತನು ಕೊಡಬೇಕೆಂದೂ ಕೋರಿರುತ್ತಾಳೆ ಸಾಬುವು ೩॥ ಲಕ್ಷ ಡಾಲರುಗಳಿಗಿಂತ ಹೆಚ್ಚು ಹಣವನ್ನು ಇಟ್ಟಿರುವುದಾಗಿಯೂ ವರ್ಷಕ್ಕೆ ೫೦ ಸಾವಿರ ಡಾಲರುಗಳನ್ನು ಸಂಪಾದಿಸುತ್ತಿರುವುದಾಗಿಯೂ ತಿಳಿಸಿ, ಮಗುವಿಗಾಗಿ ಇಲ್ಲಿಯವರೆಗೆ ವೆಚ್ಚ ಮಾಡಿರುವ ಏಳ ಡಾಲರುಗಳನ್ನೂ ಕೊಡಬೇಕೆಂದು ತಿಳಿಸಿರುತ್ತಾಳೆ ಆಪಾದನೆಯು ನಿರಾಧಾರವಾದುದೆಂದು ಸಾಬುವು ತಿಳಿಸಿರು

ನಂಜನಗೂಡು-ಚಾಮರಾಜನಗರ ರೈಲು ಸರ್ಕಾರಕ್ಕೆ

ಜಿಲ್ಲಾ ಬೋರ್ಡು ಸಭೆಯಲ್ಲಿ ಪರಿಶೀಲನೆ

ಮೈಸೂರು ೨೬

ಮೈಸೂರು ಜಿಲ್ಲಾ ಬೋರ್ಡ ಸಭೆಯು ನಿನ್ನೆ ಶ್ರೀ ಹೆಚ್ ಎಂ ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು

ನಾಗೇನಹಳ್ಳಿಯಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಲು ಶ್ರೀ ಪಿ ನಂಜೇಗೌಡರು ಉದಾರವಾಗಿ ಕೊಟ್ಟಿರುವ ೩ ಸಾವಿರ ರೂ ಅನ್ನು ಸ್ವೀಕರಿಸಿ, ಅಲ್ಲಿ ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು

ಹೊಸ ಅಗ್ರಹಾರ ಮತ್ತು ಚಿಕ್ಕ ಪಡೆರಗುಡಿ ಪ್ರಾಂತ್ಯದಲ್ಲಿ ಆಯುರ್ವೇದ ಫಾರ್ಮಸಿಯವರು ನಡೆಸುತ್ತಿರುವ ಮಲೇರಿಯಾ ನಿವಾರಣಾ ಕೇಂದ್ರಕ್ಕೆ ಕೊಡುತ್ತಿದ್ದ ಮಾಹೆಯಾನ ೧೫೦ ರೂ ಗ್ರಾಂಟನ್ನು ನಿಲ್ಲಿಸಬೇಕೆಂದು ತೀರ್ಮಾನವಾಯಿತು

ಬೋರ್ಡಿಗೆ ಸೇರಿದ ನಂಜನಗೂಡು-ಚಾಮರಾಜನಗರದ ರೈಲನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದವರು ಒಪ್ಪಿ ಅದಕ್ಕಾಗಿ ೧೧೦ ಲಕ್ಷರೂ ಕೊಡುವುದನ್ನು ಮುಂದಕ್ಕೆ ಹಾಕಲಾಗಿರುವ ವಿಷಯವು ಚರ್ಚೆಗೆ ಬಂದು ಈ ವಿಷಯದಲ್ಲಿ ಅಧ್ಯಕ್ಷರು ಸರ್ಕಾರದೊಡನೆ ಮಾತುಕತೆ ನಡೆಸಬೇಕೆಂದು ತೀರ್ಮಾನವಾಯಿತು

ಚಾಮರಾಜನಗರ ತಾಲ್ಲೂಕು ಕಾಂಗ್ರೆಸ್ ಸಮಿತಿಯವರಿಗೆ ಮುನಿಸಿಪಾಲಿಟಿಯ ಬಳಿ ಕಟ್ಟಡ ಕಟ್ಟಲು ನಿವೇಶನವನ್ನು ಕೊಡಬೇಕೆಂದೂ ತುಂಬಸೋಗೆ, ಚಿಕ್ಕಹಳ್ಳ, ಕಬ್ಬಳ್ಳಿ, ಒಡ್ಡೂರು ಮತ್ತು ಪೆರಿಯಾಪಟ್ಟಣಗಳಲ್ಲಿ ಸ್ಕೂಲುಗಳನ್ನು ತೆರೆಯಬೇಕೆಂದು ತೀರ್ಮಾನವಾಯಿತು ಸರ್ಕಾರದವರು ಪೆರಿಯಾಪಟ್ಟಣಕ್ಕೆ ಈ ವರ್ಷದಿಂದ ಹೈಸ್ಕೂಲು ಕೊಡಲು ಸಿದ್ಧರಾಗಿದ್ದರೂ, ಮತ್ತು ಅಲ್ಲಿನ ಜನರು ೧೦ ಸಾವಿರ ರೂ ಹಣ ಕೊಟ್ಟಿದ್ದರೂ, ಬೋರ್ಡಿನವರು ಹೈಸ್ಕೂಲನ್ನು ಕೊನೆಯಲ್ಲಿ ಕೊಡಲು ನಿರ್ಧರಿಸಿರುವುದನ್ನು ಪ್ರತಿಭಟಿಸಿ, ಶ್ರೀ ವೆಂಕಟಸುಬ್ಬಯ್ಯನವರ ಸಭಾ ಪರಿತ್ಯಾಗ ಮಾಡಿದರು

○ ಕೊಯಮತ್ತೂರ್ ಜಿಲ್ಲಾ ಬೋರ್ಡಿನ ಗವರ್ನಮೆಂಟ್ ತಿರುವಾಂಕೂರು ವಿದ್ಯಾ ಸಚಿವರ ಮೋಟಾರನ್ನು ಹಿಡಿದುದಕ್ಕಾಗಿ ಆತನನ್ನು ಕೆಲಸದಿಂದ ವಜಾ ಮಾಡಲಾಗಿದೆ

ನಿಮ್ನ ವರ್ಗದವರಿಗೆ ಮೀಸಲು ಸ್ಥಾನ

ನಿಮ್ನ ವರ್ಗ, ಗುಡ್ಡಗಾಡು ಮತ್ತು ಹಿಂದುಳಿದ ಪಂಗಡದ ಜನರಿಗೆ ಇನ್ನು ೧೦ ವರ್ಷಗಳ ಕಾಲ ಸ್ಥಾನಗಳನ್ನು ಮೀಸಲಾಗಿಡಲು ಭಾರತ ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದವರು ನಿರ್ಧರಿಸಿದ್ದಾರೆಂದು ತಿಳಿದು ಬಂದಿದೆ ಮುಸ್ಲಿಮರಿಗೆ ಸ್ಥಾನಗಳನ್ನು ಮೀಸಲಾಗಿಡುವುದಿಲ್ಲ

ಖಾಸಿಂ ರಜ್ವಿಯ ವಿಚಾರಣೆ

ರಜಾಕರರ ಮಾಜಿ ನಾಯಕ ಖಾಸಿಂ ರಜ್ವಿ ಮತ್ತು ಇತರ ೫೫ ಮಂದಿಗಳು ೯ ಜನರನ್ನು ಕೊಲೆ ಮಾಡಿದರೆಂಬ ಆಪಾದನೆಯ ಮೇಲೆ ಗುಲ್ಬರ್ಗಾ ಜಿಲ್ಲಾ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಲಾಗುವುದೆಂದು ಹೇಳಲಾಗಿದೆ

○ ಮೈಸೂರು ಜಿಲ್ಲಾ ವಿದ್ಯಾಭ್ಯಾಸ ಸಮಿತಿಗೆ ಶ್ರೀ ಎಂ ಎ ಜೋಯಿಸರು ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾಗಿದ್ದಾರೆ

○ ಆರ್ ಎಸ್ ಎಸ್ ಸಂಸ್ಥೆಯು ರಾಜಕೀಯದಲ್ಲಿ ಕೈಹಾಕದೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತ್ರ ತೊಡಗಿರುವುದೆಂದು ಅದರ ನೂತನ ಅಂಗರಚನೆಯಲ್ಲಿ ನಮೂದಿಸಲಾಗಿದೆ

ಸಕ್ಕರೆ ಸರಬರಾಜು

ರಾಶನಿಂಗ್ ನಲ್ಲಿ ಸಕ್ಕರೆ ಕಡಿಮೆಯಿರುವುದೆಂದು 'ಸಾಧ್ವಿ' ಪತ್ರಿಕೆಯಲ್ಲಿ ೨೦ನೇ ತಾ ಪ್ರಕಟವಾಗಿರುವುದನ್ನು ನಗರಕ್ಕೆ ಬೇಕಾಗುವಷ್ಟು ಸಕ್ಕರೆ ಸರಬರಾಜನ್ನು ಕಮಿಷನರವರ ಹೋಲ್ ಸೇಲ್ ವರ್ತಕರುಗಳಿಗೆ ಪ್ರತಿ ತಿಂಗಳೂ ಮಾಡುತ್ತಿರುವುದಾಗಿ ಸಕ್ಕರೆ ಬೆಲೆಯು ಹೆಚ್ಚಿರುವುದರಿಂದ ಇಲ್ಲಿನ ಹೋಲ್ ಸೇಲ್ ವರ್ತಕರುಗಳು ನಮ್ಮಲ್ಲಿ ಕೊಂಡು ಸಣ್ಣ ವ್ಯಾಪಾರಿಗಳಿಗೆ ಅದನ್ನು ಬೇರೆಡೆ ಮಾರಲು ಕಳುಹಿಸುತ್ತಿದ್ದಾರೆ ಇದರಿಂದ ಸಕ್ಕರೆ ಅಭಾವವಾಗಿದೆ ಸಮರ್ಪಕವಾಗಿ ಸಕ್ಕರೆ ಹಂಚುವುದರಿಂದ ಸಣ್ಣ ವ್ಯಾಪಾರಿಗಳು ಬಂದು ಕೊಂಡುಕೊಳ್ಳಬಹುದೆಂದು ಈ ಮೂಲಕ ತಿಳಿಸಲಾಗಿದೆ

ಎಸ್. ಕಾಳಯ್ಯ,
ಸೇಲ್ಸ್ ಆಫೀಸರ್
ಕೈ ... ...,
... ..., ಮೈಸೂರು

ಅದ್ಭುತ ಜ್ಞಾಪಕ ಶಕ್ತಿ ಪ್ರದರ್ಶನ

ಮೈಸೂರು ೨೬

ಬೆಂಗಳೂರಿನ ಅಷ್ಟಾವಧಾನಿ ಶ್ರೀ ಸಿ. ವಿ ಸುಂದರರಾಜಾಚಾರ್ಯರ ೧೫ ವರ್ಷದ ಕುಮಾರ ಚಿ॥ ರಾಮಕೃಷ್ಣನು ನಿನ್ನೆ ದಿವಾನರ ಅಗ್ರಹಾರದಲ್ಲಿರುವ ಶ್ರೀನಿವಾಸಾ ಪ್ರಿಂಟಿಂಗ್ ವರ್ಕ್ಸಿನಲ್ಲಿ ತನ್ನ ಅದ್ಭುತವಾದ ಗಣಿತ ಮತ್ತು ಜ್ಞಾಪಕ ಶಕ್ತಿಯ ಪ್ರದರ್ಶನಗಳನ್ನು ನಡೆಸಿದನು ಶ್ರೀ ಸುಂದರರಾಜಾಚಾರ್ಯರು ಮೊದಲು ತಮ್ಮ ಕೈಚಳಕದ ಯಕ್ಷಿಣಿ ಪ್ರದರ್ಶನಗಳನ್ನು ತೋರಿಸಿದರು ವರ್ಷ ಮತ್ತು ತಿಂಗಳನ್ನು ಹೇಳಿದರೆ ವಾರವನ್ನು ಹೇಳುವುದು, ಮತ್ತು ಹಲವು ಬಗೆಯ ಗಣಿತದ ಚಮತ್ಕಾರ ಮತ್ತು ಮತ್ತೊಬ್ಬರ ಮನಸ್ಸಿನಲ್ಲಿರುವ ಅಭಿಪ್ರಾಯಗಳನ್ನು ಅರಿಯುವುದೇ ಮುಂತಾದ ತಂತ್ರಗಳನ್ನು ಮೇಲ್ಕಂಡ ಬಾಲಕನು ಹೃದಯಂಗಮವಾಗಿ ತೋರಿಸಿದನು ಈತನೂ ಇವನ ತಂದೆಯವರೂ ಸಧ್ಯದಲ್ಲಿಯೇ ಭಾರತದ ಪ್ರವಾಸ ಕೈಗೊಂಡು ತಮ್ಮ ವಿದ್ಯೆಯನ್ನು ಪ್ರಕಾಶಪಡಿಸಲಿರುವರು ಮಹಾರಾಣಿ ಕಾಲೇಜಿನಲ್ಲಿ ಓದುತ್ತಿರುವ ಈ ಬಾಲಕನ ಸೋದರಿಯರಾದ ಶಕುಂತಲಾ ಮತ್ತು ಶಾಂತಾರವರು ಇದೇ ವಿದ್ಯೆಯಲ್ಲಿ ಈಗಾಗಲೇ ಪ್ರಖ್ಯಾತಿ ಪಡೆದಿದ್ದಾರೆ

ಬಲಾತ್ಕಾರದ ಸೇವೆಯ ವಜಾ

ಸರ್ಕಾರಿ ಅಧಿಕಾರಿಗಳು ಮತ್ತು ಇತರ ಪ್ರಮುಖರು ಯಾವ ಪ್ರತಿ ಫಲವೂ ಇಲ್ಲದೆ ಬಲಾತ್ಕಾರವಾಗಿ ಜನರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದ ಪದ್ಧತಿಯನ್ನು ನಿಷೇಧಿಸಿ, ಹೈದರಾಬಾದ್ ಸರ್ಕಾರದವರು ಒಂದು ಆಜ್ಞೆ ಹೊರಡಿಸಿರುತ್ತಾರೆ.

ಷಾಂಗೈ ನಗರದ ಪತನ

ಏಷ್ಯಾ ಖಂಡದಲ್ಲೇ ಅತ್ಯಂತ ದೊಡ್ಡ ನಗರವಾದ ಷಾಂಗೈ ನಿನ್ನೆ ದಿನ ಕಮ್ಯೂನಿಸ್ಟರ ವಶವಾಯಿತೆಂದೂ, ಅಲ್ಲಿ ಸರ್ಕಾರಿ ಸೈನಿಕರ ಪ್ರತಿಭಟನೆಯೇ ಇರಲಿಲ್ಲವೆಂದೂ ವರದಿಯಾಗಿದೆ ಈಗಾಗಲೇ ಅದರ ಆಡಳಿತದ ವ್ಯವಸ್ಥೆಯನ್ನು ಕಮ್ಯೂನಿಸ್ಟರು ಕೈಗೊಂಡಿದ್ದಾರೆ

ಕಾಶ್ಮೀರದ ಯುವರಾಜರು ಸಿಂಹಾಸನಾಧೀಶರು

ಇನ್ನು ೩ ಅಥವ ೪ ದಿನಗಳಲ್ಲಿ ಕಾಶ್ಮೀರದ ಯುವರಾಜರನ್ನು ಅಲ್ಲಿನ ಸಿಂಹಾಸನಕ್ಕೆ ಏರಿಸಲಾಗುವುದೆಂದೂ, ಮಹಾರಾಜಾ ಹರಿಸಿಂಗರವರ ಗೈರು ಹಾಜರಿನಲ್ಲಿ ಯುವರಾಜರು ರಾಜಪ್ರತಿನಿಧಿಯಾಗಿ ಆಡಳಿತವನ್ನು ನೋಡಿಕೊಂಡು, ಅನಂತರ ಮಹಾರಾಜರಾಗುವರೆಂದೂ ತಿಳಿದು ಬಂದಿದೆ ಈ ಸಮಾಚಾರವನ್ನು ಅಧಿಕೃತ ಮೂಲದವರು ಹೇಳಿರುವರೆಂದು ವರದಿಯಾಗಿದೆ

MORNING SHOWS
AT
CHAMUNDESWARI TALKIES
From 27-5-49 For 3 days
at 9-30 a.m
M G M's Super hit
Gallant Bess
In Cine Colour

ಪ್ರಭಾ 27-5-49ರಿಂದ 3ನೇ ವಾರ

ಪ ಗ ರಿ

ಕಾಮಿನಿ ಕೌಸಲ್ಯ, ಪ್ರಾಣ್ ಮತ್ತು ಗೋಪ್ ಪಾತ್ರ ವಹಿಸಿರುವ ಹಿಂದಿ ಚಿತ್ರ.

Morning Shows
From 27-5-49 for 3 days

Fort Apache

ರಾಜಕಮಲ್

ಮೈ ಸೂ ರು

27-5-49 ರಿಂದ
ಅಮೋಘವಾದ 4ನೇ ವಾರ
ಪ್ರತಿ ದಿನ 3 ಆಟಗಳು
ಫಿಲ್ಮಿಸ್ತಾನ್‌ರವರ

ಷ ಹೀ ದ್

—:ಮುಖ್ಯ ಪಾತ್ರ:—
ಕಾಮಿನಿ ಕೌಸಲ್ಯ, ದಿಲೀಪ್ ಕುಮಾರ್, ಚಂದ್ರಮೋಹನ್, ವಿ ಎಚ್ ದೇಸಾಯಿ.

Morning Shows
From 27-5-49 for 4 days

BRUTE FORCE

With-Burt Lancaster,
Yvonne De Carlo,
Charles Bickford.

ಶ್ರೀ ಗಾಯತ್ರೀ

ಪ್ರತಿ ದಿನ 3 ಪ್ರದರ್ಶನಗಳು
26-5-49 ರಿಂದ 3 ದಿನಗಳು ಮಾತ್ರ
ಯೂನಿವರ್ಸಲ್‌ರವರ

ಎ ಡಬ್ಬಲ್ ಲೈಫ್

ಪಾತ್ರ:—ರೋನಾಲ್ಡ್ ಕಾಲ್ಮನ್
—:ಬೆಳಗಿನ ಪ್ರದರ್ಶನ:—
28-5-49ರಿಂದ 2 ದಿನಗಳು
ವಾರ್ನರ್ಸ್

ಜ್ವಾ ರ ಸ್

ಪಾತ್ರ-ಪಾಲ್ ಮುನಿ, ಬೆಟ್ಟಿ ಡೇವಿಸ್

ಲಗ್ನದ ಜವಳಿಗಾಗಿ
ಗು ರು ದೇ ವಾ ಹಾ ಲ್
ಬೆಂಗಳೂರು ಜವಳಿ ಅಂಗಡಿ
ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ, :: ಮೈಸೂರು

ಚಾಮುಂಡೇಶ್ವರಿ ಟಾಕೀಸ್

27-5-49ರಿಂದ ಒಂದು ವಾರ ಮಾತ್ರ
ಪ್ರತಿ ದಿನ 3 ಆಟಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಕೊಲಂಬಿಯಾ ಪಿಕ್ಚರ್ಸ್‌ರವರ ಅದ್ಭುತ ವರ್ಣರಂಜಿತ ಚಿತ್ರ

ಒನ್ ಥೌಸಂಡ್ ಅಂಡ್ ಒನ್ ನೈಟ್

ONE THOUSAND AND ONE NIGHT
Featuring.-Evelyn Keyes,
Philsilvers

ಲಕ್ಷ್ಮೀ ಥಿಯೇಟರ್

27-5-49 ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು
ಅಯ್ಯನಾರ್ ಪಾಂಡುರಂಗ
ಪಿಕ್ಚರ್ಸ್‌ರವರ

ಸತೀ ತುಳಸಿ

ಕನ್ನಡ ಪೌರಾಣಿಕ ಚಿತ್ರ

27-5-49ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 4 ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಅಪೆರಾ ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ಚಿತ್ರ

★ ವೇಲೈಕಾರಿ ★

—: ಭೂ ಮಿ ಕೆ :—

ಎಂ. ವಿ. ರಾಜಮ್ಮ,	ಟಿ. ಎಸ್. ಬಾಲಯ್ಯ,
ವಿ. ಎನ್. ಜಾನಕಿ,	ದೊರೆ ರಾಜ್,
ಲಲಿತ	ಪದ್ಮಿನಿ

ಮೊದಲು ಮೂರು ವಾರಗಳಲ್ಲಿ ಎಲ್ಲಾ ತರಹೆಯ ಕಾಂಪ್ಲಿಮೆಂಟರಿ, ಫ್ರೀ ಪಾಸುಗಳು ಮತ್ತು ರಿಯಾಯಿತಿಗಳನ್ನೂ ಮನ್ನಾ ಮಾಡಿರುತ್ತೆ.

[R.V. Pictures' Release

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಕೌಟಜ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ. ಮುಟ್ಟಿನ ಹೆಚ್ಚು ಕಮ್ಮಿ, ಮುಟ್ಟಿನ ಕಾಲದ ಹೊಟ್ಟೆ, ನಡುಗಿ ನೋವು, ಮೊದಲಾಗಿ ಗುಣವಾಗುತ್ತದೆ.

ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

UNIVERSITY OF MYSORE

Office of the University of Mysore,
Mysore, dated the 18th May 1949.
No. Ex-3-1083/48-49.

CIRCULAR

SUBJECT:-Production of Intermediate Marks cards at the time of admission to Colleges.

In respect of candidates applying for admission to University Institutions, Heads of Colleges are authorised to accept copies of marks cards certified by Gazetted Officers. These may be verified with the originals when the admissions are finally made.

By order,
(Sd) T Siddalingadevaru
Registrar I C.

ಮೈಸೂರು ವಿಶ್ವ ವಿದ್ಯಾನಿಲಯ

ನಂ. ಎಕ್ಸ್ ೩-೧೦೮೩/೪೮-೪೯
ಮೈಸೂರು ವಿಶ್ವ ವಿದ್ಯಾಲಯದ ಕಛೇರಿ
ಮೈಸೂರು:: ತಾ|| ೧೮ ಮೇ ೧೯೪೯
ನಂ. ಎಕ್ಸ್ ೩-೧೦೮೩/೪೮ ೪೯ರ

ಪ್ರ ಕ ಟ ಣೆ

ವಿಶ್ವ ವಿದ್ಯಾಲಯದ ಸಂಸ್ಥೆಗಳಲ್ಲಿ ಡಿಗ್ರಿ ಕೋರ್ಸುಗಳ ತರಗತಿಗಳಿಗೆ ಸೇರುವವರಿಂದ ಇದೇ ೩೧ನೇ ತಾ|| ವರೆಗೂ ಇಂಟರ್‌ಮೀಡಿಯೆಟ್ ಕೋರ್ಸುಗಳು ಮತ್ತು ಮೆಡಿಕಲ್ ಸ್ಕೂಲಿನ ಬಗ್ಗೆ ೧೯೪೯ನೇ ಜೂನ್ ೧೫ನೇ ತಾ|| ವರೆಗೂ ಸದರಿ ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.

ಅರ್ಜಿಗಳ ಜೊತೆಯಲ್ಲಿ ಲೀವಿಂಗ್ ಸರ್ಟಿಫಿಕೇಟ್ ಮತ್ತು ಇತರ ಸರ್ಟಿಫಿಕೇಟುಗಳೂ, ಅಲ್ಲದೆ ತೇರ್ಗಡೆಯಾದ ಪರೀಕ್ಷೆಯಲ್ಲಿ ಪಡೆದ ಸಂಖ್ಯೆಗಳ ಮತ್ತು ತೇರ್ಗಡೆಯಾದ ವರ್ಷ ಅಥವಾ ವರ್ಷಗಳನ್ನು ತೋರಿಸುವ ಸರ್ಟಿಫಿಕೇಟ್ ಪಟ್ಟಿಯೂ ಇರತಕ್ಕದ್ದು.

ಒಂದು ಕಾಲೇಜು ಅಲ್ಲದೇ ಇತರ ಸಂಸ್ಥೆಗಳಿಗೂ ಅರ್ಜಿಗಳನ್ನು ಕಳುಹಿಸುವ ವಿದ್ಯಾರ್ಥಿಗಳು ಗೆಜೆಟೆಡ್ ಅಧಿಕಾರಿಗಳಿಂದ ರುಜು ಹಾಕಿದ ತಮ್ಮ ಮಾರ್ಕ್ಸ್ ಕಾರ್ಡಿನ ಪ್ರತಿಗಳನ್ನು ಅರ್ಜಿ ಸಮೇತ ಕಳುಹಿಸಬಹುದು.

ಮೈಸೂರು ವಿಶ್ವ ವಿದ್ಯಾಲಯಕ್ಕೆ ಸೇರದ ಹೊರಗಿನ ವಿಶ್ವ ವಿದ್ಯಾಲಯದಿಂದ ಬರುವ ಉಮೇದುವಾರರು ಈ ಮೇಲ್ಕಂಡ ಸರ್ಟಿಫಿಕೇಟುಗಳ ಜೊತೆಗೆ ವಲಸೆ ಸರ್ಟಿಫಿಕೇಟನ್ನೂ ಸಹ ಹಾಜರು ಮಾಡಬೇಕು

ಅರ್ಜಿಗಳ ನಮೂನೆಗಳನ್ನು ಸಂಸ್ಥೆಗಳ ಮುಖ್ಯಾಧಿಕಾರಿಗಳಿಂದ ಪಡೆಯಬಹುದು ಕಾಲೇಜಿಗೆ ಸೇರಲಿಚ್ಛೆಯಿಂದ ಬಂದ ಪ್ರತಿಯೊಂದು ಅರ್ಜಿಯು ಸಂಗಡ ಒಂದು ರೂಪಾಯಿ ಫೀಜು ಕೊಡಬೇಕು ಈ ಫೀಜನ್ನು ಯಾವುದೇ ಸಂದರ್ಭದಲ್ಲೂ ವಾಪಸು ಮಾಡಲಾಗುವುದಿಲ್ಲ

ಅರ್ಜಿಗಳನ್ನು ಕೊಟ್ಟ ಒಂದು ವಾರದ ನಂತರ ಆಯಾ ಸಂಸ್ಥೆಗಳ ನೋಟೀಸ್ ಬೋರ್ಡಿನ ಮೇಲೆ ಚುನಾಯಿಸಲ್ಪಟ್ಟ ಉಮೇದುವಾರರ ಹೆಸರುಗಳನ್ನು ಪ್ರಕಟಿಸಲಾಗುವುದು. ಹೀಗೆ ಚುನಾಯಿಸಲ್ಪಟ್ಟ ಉಮೇದುವಾರನು ಪ್ರಕಟಣೆಯಾದ ಒಂದು ವಾರದೊಳಗೆ ಸಂಸ್ಥೆಗೆ ಸೇರದಿದ್ದರೆ ಆತನು ತನ್ನ ಹಕ್ಕನ್ನು ಕಳೆದುಕೊಳ್ಳುವನು.

ಅಪ್ಪಣೆ ಪ್ರಕಾರ
ಟಿ. ಸಿದ್ಧಲಿಂಗ ದೇವರು
(ರಿಜಿಸ್ಟ್ರಾರ್ ಐ.ಸಿ.)

VANITHA SADAN,

MYSORE.

Coaching classes for M. S , S. S. L. C. and Intermediate (English only) courses will start work on 10th June. Fees for both terms for M. S. will be Rs. 30, for S. S. L. C. Rs. 50 and for Intermediate (English only) Rs 50. Students desiring to join the classes may apply for seats to the Secretary before the 5th June 1945.

Praphulla Krishna Iyengar
Hon Secretary.

BANGALORE RACES 1949

ಮೇ 28. ಜೂನ್ 1, 4, 8. 11, 18, 22, 25, 29
ಮತ್ತು ಜುಲೈ 2 ರಲ್ಲೂ

ಬುಕ್ ಮೇಕರ್ಸ್ .... .. ಟೋಟಲೈಜೇಟರ್ಸ್
ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ. 2 ಸ್ವೀಪ್

ಪ್ರವೇಶ:
ಮೊದಲನೇ ತರಗತಿ:- ಪುರುಷರು ರೂ. 6, ಸ್ತ್ರೀಯರು ರೂ 4 ದಿನಕ್ಕೆ
ಎರಡನೇ ತರಗತಿ:- ಪುರುಷರು ಅಥವಾ ಸ್ತ್ರೀಯರು ರೂ 2 ,,
ಸೀಸನ್ ಟಿಕೆಟ್- ಪುರುಷರು ರೂ 60, ಸ್ತ್ರೀಯರು ರೂ 35.

Edited, printed, and published by A.R. Nagarajan at the Sadhvi Press, D. Subbiah Road, Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಶುಕ್ರವಾರ ೨೭-೫-೪೯ [ಸಂಚಿಕೆ ೨೪೪

ನಗರನೈರ್ಮಲ್ಯದ ಬಗ್ಗೆ ಪುರಸಭೆಮೇಲೆ ದಾವಾ

ನಗರದಲ್ಲಿ ಹೊಸ ತೆರಿಗೆ ಹಾಕುವ ಸಂಭವ

ಪುರಸಭಾ ಬಡ್ಜೆಟ್ ಅಧಿವೇಶನದಲ್ಲಿ ಪರಿಶೀಲನೆ

ಮೈಸೂರು. ೨೭

ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆ ಮಧ್ಯಾಹ್ನ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ೪೯-೫೦ನೇ ಸಾಲಿಗೆ ಮ್ಯಾನೇಜಿಂಗ್ ಸಮಿತಿಯಿಂದ ಬಂದಿದ್ದ ಆಯ ವ್ಯಯದ ಅಂದಾಜನ್ನು ಪರಿಶೀಲಿಸಿತು.

ಅಧ್ಯಕ್ಷರು ಬಡ್ಜೆಟ್ಟಿನ ಅಂದಾಜನ್ನು ವಿವರಿಸಿ, ಮುಂದಿನ ಸಾಲಿಗೆ ಕಡಿಮೆಯಾಗಲಿರುವ ೧,೧೧,೫೫೩ ರೂ ಅನ್ನು ಸಮತೂಗಿಸಲು ಸಮಿತಿಯವರು ಸೂಚಿಸಿರುವ ಹೊಸ ತೆರಿಗೆಗಳನ್ನು ತಿಳಿಸಿದರು. ನಗರದ ಅಚ್ಚುಕಟ್ಟು, ಮತ್ತು ಅಂದಚಂದಗಳಿಗಾಗಿ ಮಾಡಬೇಕಾದ ಮಾಮೂಲು ಕೆಲಸ ಕಾರ್ಯಗಳಿಗೇ ಇಂದಿನ ಪೌರಸಭೆಯ ವರಮಾನವು ಸಾಲದಿರುವುದರಿಂದ ಪುರ ನಿವಾಸಿಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದು ಅಸಾಧ್ಯವಾಗಿರುವುದೆಂದೂ ಪ್ರಜೆಗಳ ಮೇಲೆ ಹೊಸ ತೆರಿಗೆಯ ಹೊರೆಯನ್ನು ಹಾಕದೆ ವಿಧಿಯಿಲ್ಲವೆಂದೂ, ಈಗಿನ ಪರಿಸ್ಥಿತಿಯಲ್ಲಿ ಪುರನಿವಾಸಿಗಳು ಪೌರಸಭೆಯೊಡನೆ ಸಹಕರಿಸಿ ನಗರದ ಅಭಿವೃದ್ಧಿಗಾಗಿ ಪೂರ್ಣ ಸಹಕಾರ ನೀಡಬೇಕೆಂದೂ ಕೋರಿದರು.

೪೯-೫೦ನೇ ಸಾಲಿಗೆ ೨೩ ಲಕ್ಷ ಚಿಲ್ಲರೆ ರೂ ಗಳ ಆದಾಯ ಮತ್ತು ೨೪ ಲಕ್ಷ ಚಿಲ್ಲರೆ ಖರ್ಚನ್ನು ಅಂದಾಜು ಮಾಡಲಾಗಿದೆ. ಕೋತಾವನ್ನು ಸರಿತೂಗಿಸಲು ಮತ್ತು ನಗರದ ಸೌಂದರ್ಯ, ರಸ್ತೆಗಳ ರಿಪೇರಿ, ನೀರು ಸರಬರಾಜನ್ನು ಉತ್ತಮಪಡಿಸುವುದು, ಪೌರಸಭೆಯು ಸಾಲವನ್ನು ತೀರಿಸುವುದು, ಮತ್ತು ಪೌರರಿಗೆ ಹೆಚ್ಚಿನ ಸೌಲಭ್ಯ ಒದಗಿಸುವುದು-ಇವೇ ಮುಂತಾದ ಕಾರ್ಯಗಳಿಗಾಗಿ ದೀಪದ ತೆರಿಗೆಯನ್ನು ಶೇ. ... ರಷ್ಟು ಹೆಚ್ಚಿಸುವುದು, ಖಾಲಿ ನಿವೇಶನದ ತೆರಿಗೆಯನ್ನು ನೂರು ಚದುರ ಗಜ ... ಆಳತೆಯಿಂದ ೮ ಆಣೆಗೆ ಏರಿಸುವುದು, ... ಇರುವ ಸ್ಯಾನಿಟರಿ ತೆರಿಗೆಯನ್ನು ... ಯಿಂದ ಇಕ್ಕೆ ಹೆಚ್ಚಿಸುವುದು, ... ಆದಾಯವನ್ನು ಶೇಕಡ ... ದ ... ಬದಲಾಯಿಸುವುದು, ಸೈಕಲ್ ತೆರಿಗೆಯನ್ನು ೨ ರೂ ನಿಂದ ೩ ರೂಗೆ ಏರಿಸುವುದು, ಅಂಗಡಿ ಮತ್ತು ವ್ಯಾಪಾರ ... ಗಳಿಗೆ ಹೊಸ ಕರವಾದ ... ಗಳ ಮನೆ ಬಾಡಿಗೆಯ ಮೇಲೆ ... ವಿಧಿಸುತ್ತಿರುವ ಹೊಸತ ... ವನ್ನು ಹತ್ತು ತಿಂಗಳಿಗೆ ... ಉದ್ಯೋಗ ತೆರಿಗೆ ... ವಿಧಿಸುವುದು-ಇವೇ ಮುಂತಾದ ... ಂದ ೧,೪೩,೭೦೦ ರೂ ಗಳ ಆ ... ವನ್ನು ನಿರೀಕ್ಷಿಸಲಾಗಿದೆಯೆಂದು ... ಸ್ವರು ತಿಳಿಸಿದರು

... ನಂತರ ಬಡ್ಜೆಟ್ಟಿನ ಮೇಲೆ ಚರ್ಚೆ ... ಸಿತು. ಶ್ರೀ ಬಿ ನಾರಾಯಣಸ್ವಾಮಿ ... ನವರು ಸರ್ಕಾರದವರು ಪೌರಸಭೆ ... ವಿಧಿಸಬೇಕೆಂದಿರುವ ನೂತನ ತೆರಿಗೆ ... ಯನ್ನು ಕೂಡಲೇ ಮಂಜೂರು ಮಾಡ ... ಂದೂ ಸಾರ್ವಜನಿಕರು ಈ ಆಸಿವಾರ್ಯ ... ವನ್ನು ಅರಿತು ಸಹಾಯಕ್ಕೆ ಬರಬೇಕೆಂದು ತಿಳಿಸಿದರು

... ಎಸ್. ಸಿ ದೇವರಾಜೆ ಅರಸಿನವರು ಮಾತಾಡಿ ಬಡ್ಜೆಟ್ಟನ್ನು ಸ್ವಾಗತಿಸಿ ನೀರಿನ ಸರಬರಾಜನ್ನು ಉತ್ತಮ ಪಡಿಸಬೇಕೆಂದು ತಿಳಿಸಿದರು

ಶ್ರೀ ಪಿ ಗೋಪಾಲ ಕೃಷ್ಣಶೆಟ್ಟರು ಬೊಂಬಾಯಿಯಲ್ಲಿ ತಲೆ ಒಂದಕ್ಕೆ ೨೩ ರೂಗಳು ಕಂದಾಯ ಬೀಳುವುದೆಂದೂ ಮೈಸೂರಿನಲ್ಲಿ ಹಾಲಿ ೪-೨-೧೦ ರೂ ಮಾತ್ರ ಇರುವುದೆಂದೂ, ಆದಾಯವನ್ನು ಸರಿತೂಗಿಸಲು ಹಾಕುವ ತೆರಿಗೆಯಿಂದ ತಲೆ ಒಂದಕ್ಕೆ ೪-೧೩-೧೦ ರೂ. ಆಗುವುದೆಂದೂ ತಿಳಿಸಿದರು ನಗರದಲ್ಲಿರುವ ಲೇವಾದೇವಿಯವರ ಮೇಲೆ ತೆರಿಗೆ ಹಾಕಬೇಕೆಂದೂ ಹೇಳಿದರು

ಶ್ರೀ ಎ ವೆಂಕಟೇಶಯ್ಯನವರು ಹೆಚ್ಚಿನ ತೆರಿಗೆ ಹಾಕಬೇಕೆಂಬುದನ್ನು ವಿರೋಧಿಸಿದರು ಸ್ಯೂಯೇಜ್ ಫಾರಮ್ಮಿನ ಆ ವ್ಯವಸ್ಥೆ ಸರಿಪಡಿಸಬೇಕೆಂದೂ, ಇಂಜನಿಯರಿಂಗ್ ಶಾಖೆಯವರು ಗೊತ್ತಾದ ಯೋಜನೆಯನ್ನಿಟ್ಟುಕೊಂಡು ಕೆಲಸ ನಡೆಸಬೇಕೆಂದೂ ತಿಳಿಸಿದರು

ಶ್ರೀಗಳಾದ ವಿ ಎನ್ ದಾಸಪ್ಪ ಮತ್ತು ಕೆ ... ಪ್ಪಯ್ಯನವರು ಮಾತಾಡಿದನಂತರ ಸಭೆಯನ್ನು ಇಂದಿನ ತಾರೀಖಿಗೆ ಮುಂದುವರಿಸಲಾಯಿತು

ವಿವಾಹ ಮಹೋತ್ಸವ

ಮೈಸೂರಿನ ಮಹಾತ್ಮ ನರ್ಸಿಂಗ್ ಎಜನ್ಸಿಯ ಶ್ರೀ ಎ ಎಂ ರುದ್ರಪ್ಪನಿಗೆ ಯಸಳೂರು ಪೇಟೆಯ ಶ್ರೀ ನಿವಾ-ಣಪ್ಪನವರ ಪುತ್ರಿ ಚಿ॥ ಸೌ॥ ಸರ್ವಮಂಗಳಮ್ಮನನ್ನು ಕೊಟ್ಟು ಯಸಳೂರು ಪೇಟೆಯಲ್ಲಿ ನಾಳಿದ್ದು ವಿವಾಹ ಮಹೋತ್ಸವವು ನಡೆಯುವುದು.

ಹರಿಕಥೆ

ರಾಜಧಾನಿಯ ಮಂಡಿಮೊಹಲ್ಲಾ ... ಲಷ್ಕರ್ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಈ ರಾತ್ರಿ ೭ ಗಂಟೆಗೆ ಬೆಂಗಳೂರಿನ ಶ್ರೀ ಕೆ ಸುಬ್ಬರಾಯರಿಂದ 'ಗಂಡರ ಮಹಾತ್ಮೆ' ಎಂಬ ಹರಿಕಥೆ ನಡೆಯುವುದು

ಉದಾರ ಸಹಾಯ

ಮೈಸೂರು ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಜಿಲ್ಲಾಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚೆನ್ನಬಸಪ್ಪನವರು ತಮ್ಮ ಕುಮಾರರ ವಿವಾಹದ ಸಂಬಂಧವಾಗಿ ೨೫ ರೂ ಅನ್ನು ಕೊಟ್ಟಿರುತ್ತಾರೆ

೪೪೦ ಅಂತಸ್ತಿನ ಮನೆ

೪ ಲಕ್ಷ ಜನರು ವಾಸಮಾಡಬಹುದಾದ ೪೪೦ ಅಂತಸ್ತುಗಳ ಭವನವೊಂದನ್ನು ನಿರ್ಮಿಸಲು ಸ್ಯಾನ್‌ಫ್ರಾನ್ಸಿಸ್ಕೋವಿನ ಶಿಲ್ಪಿಯೊಬ್ಬನು ನಕಾಶೆಯನ್ನು ತಯಾರಿಸಿದ್ದಾನೆ ಇದರ ಪ್ರಕಾರ ಭವನಕ್ಕೆ ೩೦೦ ಲಿಫ್ಟುಗಳು, ೭೨ ಚರ್ಚುಗಳು ೫೦ ರಾತ್ರಿ ಕಾಲದ ಕ್ಲಬ್ಬುಗಳು, ೧೦ ಆಸ್ಪತ್ರೆಗಳು ಸಾವಿರ ಅಂಗಡಿಗಳು ಮತ್ತು ೮೦ ಸಾವಿರ ಮೋಟಾರು ವಾಹನಗಳಿಗೆ ಅನುಕೂಲವಾದ ರಾಮಗಳವೆ ಸತ್ತವರನ್ನು ಹೂಳುವುದಕ್ಕೆ ಮಾತ್ರ ಅಲ್ಲಿ ಸ್ಥಳವಿಲ್ಲ

ಪಶ್ಚಿಮ ತೀರದಲ್ಲಿ ಎರಡನೇ ಭಾರಿ ರೇವು

ಪಶ್ಚಿಮ ತೀರದ ರೇವುಗಳ ಅಭಿವೃದ್ಧಿ ಸಮಿತಿಯವರು ಮರ್ಮಗೋವಾ-ಕೊಚ್ಚಿ ಮಧ್ಯೆ ಇರುವ ಮಂಗಳೂರು, ಕಾರವಾರ್, ಭಟ್ಕಳ್ ಮತ್ತು ಮಲ್ಪೆಗಳಲ್ಲಿ ಯಾವುದಾದರೂ ಒಂದನ್ನು ಭಾರಿ ರೇವಾಗಿ ಮಾಡಲು ಶಿಫಾರಸು ಮಾಡಲಿರುವರು ಈಗಾಗಲೇ ಕಚ್‌ನಲ್ಲಿರುವ ಕಾಂಡ್ಲಾ ಎಂಬಲ್ಲಿ ೧೭ ಕೋಟಿ ರೂ ವೆಚ್ಚದಿಂದ ಒಂದು ಭಾರಿ ರೇವನ್ನು ಕಟ್ಟಲು ಶಿಫಾರಸು ಮಾಡಲಾಗಿದೆ

ಮಹಾತ್ಮರ ಕುರಿತ ಬಗ್ಗೆ ಪ್ರಶ್ನೆ ಪತ್ರಿಕೆಗಾಗಿ ಉಪಾಧ್ಯಾಯರ ವಜಾ

... ನಲ್ಲಿರುವ ಹೈಸ್ಕೂಲಿನ ಉಪಾಧ್ಯಾಯರೊಬ್ಬರು ಮಹಾತ್ಮಾ ಗಾಂಧೀಜಿಯವರನ್ನು ಯಾರು ಗೊಲ್ಲೆಯು ಕೊಲೆ ಮಾಡಿದರು. ಉಚಿತವೇ ಎಂಬ ಪ್ರಶ್ನೆಯನ್ನು ಪರೀಕ್ಷೆಗೆ ಕೊಟ್ಟಿದ್ದರೆಂಬ ಆಪಾದನೆಯ ಮೇಲೆ ಅವರನ್ನು ರಾಜಿಯ ಅಧಿಕಾರದವರು ಕೆಲಸದಿಂದ ತೆಗೆದುಹಾಕಿದ್ದಾರೆ

ಮಾಲದಿವ್ ದ್ವೀಪದ ಸ್ವಾಗವಿ ರದ್ದು

ಮಾಲದಿವ್ ದ್ವೀಪದ ... ಬ್ರಿಟನ್ನಿಗೆ ಕೊಡುತ್ತಿದ್ದ ... ಕ ಪ್ರಾಣಿ ... ವನ್ನು ಕಳೆದ ವರ್ಷದಿಂದ ರದ್ದುಮಾಡಿದ್ದಾರೆ ... ಗಳಿಗೆ ಆಗಿರುವ ನೂತನ ಒಪ್ಪಂದದಂತೆ, ದ್ವೀಪದಲ್ಲಿ ವಿಮಾನ ಕೇಂದ್ರಗಳನ್ನು ಸ್ಥಾಪಿಸಲು ಬ್ರಿಟನ್ನಿಗೆ ಅವಕಾಶ ಕೊಡಲಾಗಿದೆ ಆ ... ಮೇಲೆ ಆಕ್ರಮಣ ನಡೆದರೆ, ಅದನ್ನು ರಕ್ಷಿಸಿ ... ನ್ನು ... ವೆ

ವಿಶ್ವವಿದ್ಯಾಲಯಕ್ಕೆ ಪ್ರೋ-ಚಾನ್ಸಲರು

ಸ್ವಂ ಸು ಫೋ॥] ಬೆಂಗಳೂರು ೨೭

ಮೈಸೂರು ವಿಶ್ವವಿದ್ಯಾಲಯದ ಸುಧಾರಣೆ ಬಗ್ಗೆ ಡಾ॥ ಸಿ ಆರ್. ರೆಡ್ಡಿಯವರು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿರುವರಷ್ಟೆ. ೨ಸಾವಿರರೂಸಂಬಳದ ಮೇಲೆ ಪ್ರೋ ಚಾನ್ಸಲರನ್ನು ನೇಮಿಸಬೇಕು; ಚುನಾಯಿತ ವೈಸ್ ಚಾನ್ಸಲರು ಇರಬೇಕಾಗಿಲ್ಲ; ವಿಶ್ವವಿದ್ಯಾಲಯದ ಆಡಳಿತವು ರಾಜಕೀಯ ಮತ್ತು ಸರ್ಕಾರದ ಹಸ್ತಕ್ಷೇಪದಿಂದ ದೂರವಾಗಿರಬೇಕು, ವಿಶ್ವವಿದ್ಯಾಲಯ ಸಮಿತಿಯನ್ನು ಸಿಂಡಿಕೇಟ್ ಎಂದು ಕರೆಯಬೇಕು-ಇವೇ ಮುಂತಾದ ಸಲಹೆಗಳನ್ನು ಅವರು ಮಾಡಿರುತ್ತಾರೆಂದು ತಿಳಿದು ಬಂದಿದೆ.

○ ಸಂಸ್ಥಾನದಲ್ಲಿರುವ ಬ್ಯಾಂಕುಗಳ ನೌಕರರಿಗೂ ಕನಿಷ್ಠ ವೇತನದ ಶಾಸನವು ಅನ್ವಯಿಸುವುದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

○ ರಾಜ್ಯಾಂಗ ಸಭೆಯ ಉಪ ಕಾರ್ಯದರ್ಶಿಯ ಸ್ಥಾನವನ್ನು ರದ್ದು ಮಾಡಿ, ಶ್ರೀ ಜಿ ಎಸ್ ವೆಂಕಟರಮಣಯ್ಯಂಗಾರ್ ರವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ

ಮಹಾರಾಜಾ ಹೈಸ್ಕೂಲ್ ಸ್ಕೌಟ್ ದಳಕ್ಕೆ ಪಾರಿತೋಷಕ

ರಾಜಧಾನಿಯ ಮಹಾರಾಜಾ ಹೈಸ್ಕೂಲ್ ಸ್ಕೌಟ್ ದಳಕ್ಕೆ ಅತ್ಯಂತ ... ರವ ಯುತವಾದ ಮಹಾರಾಜರ ಧ್ವಜ ಮತ್ತು ರೆಡ್ಡಿ ಸಾರ್ವಜನಿಕ ಸೇವಾ ಷೀಲ್ಡುಗಳನ್ನು ಕೇಂದ್ರ ಸ್ಕೌಟ್ ಸಂಸ್ಥೆಯವರು ಬಹುಮಾನವಾಗಿ ಕೊಟ್ಟಿರುತ್ತಾರೆ

ಭಾರತದ ನಾಣ್ಯಗಳಲ್ಲಿ ಅಶೋಕ ಸ್ತಂಭ

ಭಾರತದ ನೂತನ ನಾಣ್ಯಗಳ ಮೇಲೆ ಅಶೋಕ ಸ್ತಂಭದ ಚಿಹ್ನೆಗಳನ್ನು ಹಾಕಬೇಕೆಂದು ಕೇಂದ್ರ ಸರ್ಕಾರದ ನಾಣ್ಯಗಳ ಸಮಿತಿಯವರು ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ.

ಜುಲೈ ೧ರಿಂದ ತಿರುವಾಂಕೂರು-ಕೊಚ್ಚಿ ಒಕ್ಕೂಟ

ಜುಲೈ ತಿಂಗಳು ೧ನೇ ತಾ॥ ನಿಂದ ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳು ಐಕ್ಯವಾಗಿ ಅವುಗಳ ಯೂನಿಯನ್ ಸ್ಥಾಪಿಸಲಾಗುವುದೆಂದೂ ಅದಕ್ಕೆ ತಿರುವಾಂಕೂರು ಮಹಾರಾಜರು ರಾಜಪ್ರಮುಖರಾಗಿರುವರೆಂದೂ ತಿಳಿದು ಬಂದಿದೆ

ಸ್ವಚ್ಛವಾಗಿ ಇಡದಿದ್ದುದಕ್ಕೆ ಪುರಸಭೆಯ ಮೇಲೆ ದಾವಾ

ಪುರಸಭೆಯವರು ನಗರವನ್ನು ಸ್ವಚ್ಛವಾಗಿ ಇಡಲಿಲ್ಲವೆಂದು ಅವರ ಮೇಲೆ ಕೋರ್ಟಿನಲ್ಲಿ ದಾವಾ ಹೂಡಲು ಜನರು ... ಸರ್ಕಾರದ ಅನುಮತಿಯನ್ನು ಕೇಳಿದ್ದಾರೆಂದು ವರದಿಯಾಗಿದೆ

○ ಜಪಾನಿನ ರಾಜಧಾನಿಯಾದ ಟೋಕಿಯೋ ನಗರದಲ್ಲಿ ಸ್ಥಾಪಿಸಲಾಗಿರುವ ಗಾಂಧೀ ಸೇವಾ ಸಂಸ್ಥೆಗೆ ೫೦ ಸಾವಿರ ಮಂದಿ ಸದಸ್ಯರಾಗಿದ್ದಾರೆಂದು ತಿಳಿದು ಬಂದಿದೆ

ಅಸ್ವಾದ ಜನರಿಗಾಗಿ
ಗುರುದೇವಾ ... ಲ್
...
...
ಶಿವರಾಂಪೇಟೆ, ಮೈಸೂರು

ಪ್ರಭಾ 27-5-49ರಿಂದ
3ನೇ ವಾರ

ಪಗರಿ

ಕಾಮಿನಿ ಕೌಶಲ್ಯ, ಶಾಸ್ತ್ರಿ, ಮತ್ತು ಗೋಪ್ ಪಾತ್ರ ವಹಿಸಿರುವ ಹಿಂದಿ ಚಿತ್ರ

Morning Shows
From 27-5-49 for 3 days

Fort Apache

Sarada Vilas College, Mysore

TUTORIAL CLASS

Tutorial Class for students sitting for the Intermediate Examination of September 1949 will be held from 6-6-49. For particulars please enquire in the College

HON SECRETARY

✻ ಪ್ರಭುದೇವಾ ಟಾಕೀಸ್ ✻

28—5—49ನೇ ಶನಿವಾರದಿಂದ
ಸರಸ್ವತಿ ಟಾಕೀಸಿನವರ

ದ್ರೌಪದಿ ವಸ್ತ್ರಾಪಹರಣ

(ತೆಲುಗು)

ಪ್ರತಿ ದಿನ 4 ಆಟಗಳು
ಪಾತ್ರ - ಗಗ್ಗಯ್ಯ, ಕನ್ನಾಂಬ, ರಾಮತಿಲಕಂ, ಸಿ. ಎಸ್. ಆರ್. ಮುಂತಾದವರು

ಚಾಮುಂಡೇಶ್ವರಿ ಟಾಕೀಸ್

27-5-49ರಿಂದ (ಒಂದು ವಾರ ಮಾತ್ರ) ಪ್ರತಿ ದಿನ 3 ಆಟಗಳು
ಬಾಗ್ದಾದಿನ ... ಕೊಲಂಬಿಯಾ ಪಿಕ್ಚರ್ಸ್‌ರವರ ... ವರ್ಣರಂಜಿತ ಚಿತ್ರ

ಒನ್ ಥೌಸಂಡ್ ಅಂಡ್ ಒನ್ ನೈಟ್

ONE THOUSAND AND ONE NIGHT
Featuring -Evelyn Keyes, Philsilvers

MORNING SHOWS From 27-5-49 For 3 days
at 10 30 a m.
M G.M's Super-hit (In Cine Color) **GALLANT BESS**

27-5-49ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 4 ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಅಪೆರಾ ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ಚಿತ್ರ

✶ ವೇಲೈಕಾರಿ ✶

—. ಭೂಮಿಕೆ.—

ಎಂ. ವಿ. ರಾಜಮ್ಮ, ಟಿ. ಎಸ್. ಬಾಲಯ್ಯ,
ವಿ. ಎನ್. ಜಾನಕಿ, ದೊರೆ ರಾಜ್,
ಲಲಿತ : ಪದ್ಮಿನಿ

ಮೊದಲು ಮೂರು ವಾರಗಳಲ್ಲಿ ಎಲ್ಲಾ ತರಹೆಯ ಕಾಂಪ್ಲಿಮೆಂಟರಿ, ಫ್ರೀ ಪಾಸುಗಳು ಮತ್ತು ರಿಯಾಯಿತಿಗಳನ್ನೂ ಮನ್ನಾಮಾಡಿರುತ್ತೆ

[R.V. Pictures' Release

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು

ಸೋಮಕಲಾ

ಗಂಡಸರ ಮೂತ್ರ ಕೋಶದ ಬಿಸುಪು, ಕೆಂಪು ವೈಮೇಹ ಮೇಹದ ಮಚ್ಚೆಗಳು, ಮೇಲೆ ವ್ರಣಗಳು ಸಹಾ ಪರಿಹಾರ ಪಥ್ಯವಿಲ್ಲದೆ ಸೇವಿಸುವ ಔಷಧಿ
ಬೆಲೆ ಶೀಸೆ 1ಕ್ಕೆ 2-0-0

ವಿಳಾಸ:—
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Edited, printed, and published by A.R Nagarajan at the Sadhvi Press, D. Subbiah Road, Mysore

ಲಕ್ಷ್ಮೀ ಥಿಯೇಟರ್ : 27-5-49ರಿಂದ

✻

ಅಮೋಘ ಪ್ರಾರಂಭ
ದಿನವಹಿ 3 ಆಟಗಳು
ಅಯ್ಯನಾರ್
ಪಾಂಡುರಂಗ
ಪಿಕ್ಚರ್ಸ್
- ಪಾತ್ರ
ಬಿ. ಎಸ್.
ರಾಜಯ್ಯಂಗಾರ್
ಜಿ ಆರ್.
ಸ್ವಾಮಿ ಜೋಯಿ
ಸುಶೀಲಾದೇವಿ
ಜಯಶ್ರೀ
ನೃತ್ಯ ಪ್ರದರ್ಶಕರು -
ಅರಕೆರೆ ನಾರಾ
ಯಣರಾವ್
ಸಂಸ್ಕೃತ ಸಂಗೀತ
ಶ್ರೀಮತಿ
ಸೀಲಮ್ಮ
ಕಡಾಂಬಿ

✻

- Distributors -
N S Films Corporation

UNIVERSITY OF MYSORE

Office of the University of Mysore
Mysore Dated 19th May 1949

Ex 3-1090/48-49

NOTIFICATION

Subject:—Marks Cards of the Intermediate Examination March-April 1949.

It is hereby notified for the information of candidates who had appeared for the Intermediate Examination of March-April 1949, that the Intermediate Marks Cards have been forwarded to the Heads of Colleges from which the candidates appeared for the Examination for distribution

Candidates may apply for the marks cards to the Heads of the Colleges.

By Order
C. Rangachari
Ag Registrar

ಫೋ|| ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೨೮-೫-೪೯ [ಸಂಚಿಕೆ ೪೭೫

- ತಿರುವಾಂಕೂರು - ರಾಜರ ಜಮೀನು ತ್ಯಾಗ

ದಿವಾನರ ಹುದ್ದೆಯನ್ನು ಕೂಡಲೇ ರದ್ದು ಮಾಡಬೇಕು

ಶಾಸನ ಸಭೆಯ ಕಾಂ|| ಪಕ್ಷದ ಸಭೆಯಲ್ಲಿ ನಿರ್ಣಯ

ಸ್ವಂ. ಸು. ಫೋ|] ಬೆಂಗಳೂರು ೨೮

ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ನೆನ್ನೆ ಮಧ್ಯಾಹ್ನ ಮಹಾರಾಣಿ ಕಾಲೇಜಿನಲ್ಲಿ ಸೇರಿದ್ದಿತು. ಕಾಂಗ್ರೆಸ್ ಅಧ್ಯಕ್ಷರೂ, ಸಚಿವರುಗಳೂ ಸಭೆಯಲ್ಲಿ ಹಾಜರಿದ್ದರು. ಈ ಕೆಳಗೆ ಕಂಡ ನಾಲ್ಕಾರು ಮುಖ್ಯ ನಿರ್ಣಯಗಳ ಬಗ್ಗೆ ಚರ್ಚೆ ನಡೆಸಲಾಯಿತೆಂದು ತಿಳಿದುಬಂದಿದೆ:-

ದಿವಾನರ ಹುದ್ದೆಯನ್ನು ಕೂಡಲೇ ರದ್ದು ಮಾಡುವುದು, ಪ್ರಜಾಪ್ರತಿನಿಧಿ ಸಭೆಯ ನಾಯಕರ, ಅಧ್ಯಕ್ಷರ ಚುನಾವಣೆ ವಿಷಯವನ್ನು ಪ್ರತಿನಿಧಿ ಸಭೆಗೇ ಬಿಡುವುದು ಮತ್ತು ಶಾಸನ ಸಭೆಗಳಿಗೆ ಮಂತ್ರಿಗಳು ಜವಾಬ್ದಾರರಾಗಿರತಕ್ಕದ್ದು.

ಈ ಮಧ್ಯಾಹ್ನ ಪ್ರಭುತ್ವ ಭವನದಲ್ಲಿ ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಮತ್ತು ಶಾಸಗೀ ಸದಸ್ಯರ ಸಭೆಯು ನಡೆಯುವುದು. ಶ್ರೀ ಟಿ ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು. ಈ ಸಭೆಯಲ್ಲೂ ಎಲ್ಲ ಸಚಿವರುಗಳೂ ಭಾಗವಹಿಸುವರು

ದಿವಾನರ ಹುದ್ದೆಯನ್ನು ರದ್ದುಪಡಿಸುವ ಬಗ್ಗೆ ಪ್ರಜೆಗಳೊಡನೆ ಸಮಾಲೋಚನೆ ನಡೆಸಲು ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನೆನ್ನೆ ರಾತ್ರಿ ರಾಜಧಾನಿಗೆ ತೆರಳಿದರು. ಅವರು ಈ ದಿನ ಹಿಂದಿರುಗಿದರು.

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಟಿ ಸಿದ್ದಲಿಂಗಯ್ಯನವರು ಮೊನ್ನೆ ದಿನ ವಿಮಾನದಲ್ಲಿ ಬೆಂಗಳೂರಿಗೆ ಹಿಂದಿರುಗಿದರು. ನೆನ್ನೆ ಮಧ್ಯಾಹ್ನ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕಾರೀ ಸಭೆಯು ಸೇರಿ ಅನೇಕ ಮುಖ್ಯ ಅಂಶಗಳನ್ನು ಪರಿಶೀಲಿಸಿತು

ಗ್ರಾಮ ಕೈಗಾರಿಕಾ ಯೋಜನೆ

ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ಕಳೆದ ೨೬ ನೇ ತಾ|| ಸಭೆಯು ನಡೆದು, ಸಂಸ್ಥಾನದಲ್ಲಿ ಗ್ರಾಮ ಕೈಗಾರಿಕಾ ಅಭಿವೃದ್ಧಿ ಬಗ್ಗೆ ಸರ್ ಎಂ ವಿಶ್ವೇಶ್ವರಯ್ಯನವರ ಯೋಜನೆಯನ್ನು ಪರಿಶೀಲಿಸಿ, ಅಂತ್ಯ ತೀರ್ಮಾನವನ್ನು ಮುಂದಿನ ಸಭೆಯಲ್ಲಿ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಯಿತು.

ವಕೀಲರ ಸಮ್ಮೇಳನ

ಮುಂದಿನ ತಿಂಗಳು ೨೫ನೇ ತಾ|| ನಾಗಪುರದಲ್ಲಿ ನಡೆಯಲಿರುವ ಅಖಿಲ ಭಾರತ ವಕೀಲರುಗಳ ಸಮ್ಮೇಳನದಲ್ಲಿ ದಕ್ಷಿಣ ಭಾರತದಲ್ಲಿ ೬ ತಿಂಗಳು ಕಾಲ ನಡೆಸುವ ಫೆಡರಲ್ ಕೋರ್ಟನ್ನು ಬೆಂಗಳೂರಿನಲ್ಲಿ ನಡೆಸಬೇಕೆಂದೂ ಮತ್ತು ಹೈಕೋರ್ಟಿನ ತೀರ್ಮಾನದ ಬಗ್ಗೆ ಫೆಡರಲ್ ಕೋರ್ಟಿಗೆ ಅಪೀಲು ಹೋಗಲು ಅವಕಾಶ ಕೊಡಬೇಕೆಂದು ಕೋರುವ ನಿರ್ಣಯಗಳನ್ನು ಇಲ್ಲಿನ ವಕೀಲರ ಸಂಘದವರು ಮಂಡಿಸಲಿದ್ದಾರೆ.

[illegible] ಜಮಷೆಡ್‌ಪುರದಲ್ಲಿ ನಡೆಯಲಿರುವ ಅಂತರ ... ಯ ಕಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಲು ಸಚಿವ ಶ್ರೀ ಕೆ ಟಿ. ಭಾಷ್ಯಂ ರವರು ಮುಂದಿನ ತಿಂಗಳು ೧ನೇ ... ಪ್ರಯಾಣ ಬೆಳೆಸುವರು

ಮೈಸೂರು ಪ್ರತ್ಯೇಕ ಪ್ರಾಂತವಾಗಿರಬೇಕು

ರೈತರ ಸಮ್ಮೇಳನದಲ್ಲಿ ನಿರ್ಣಯ

ಮೈಸೂರು ೨೭

ಬನ್ನೂರು ಹೋಬಳಿ ಕೀಳನಪುರದಲ್ಲಿ ಕಳೆದ ೨೬ನೇ ತಾ|| ಶ್ರೀ ಕೆ ಲಕ್ಕಪ್ಪಗೌಡರ ಅಧ್ಯಕ್ಷತೆಯಲ್ಲಿ ರೈತರ ಸಮ್ಮೇಳನವು ನಡೆಯಿತು ಮೈಸೂರು ಜಿಲ್ಲಾ ರೈತರ ಸಮ್ಮೇಳನದ ಉಪಾಧ್ಯಕ್ಷರಾದ ಕೊಡಗಹಳ್ಳಿ ಶ್ರೀ ರಾಮಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು ಶ್ರೀಗಳಾದ ಸಿ ಜೆ ದೇವನಾಥ್, ನಂಜುಂಡೇಗೌಡ ಎಸ್ ಸಿದ್ದೇಗೌಡ, ಮತ್ತು ಅಧ್ಯಕ್ಷರು ಭಾಷಣ ಮಾಡಿ ಆಹಾರದ ಅಭಾವಕ್ಕೆ ರೈತರ ಜಡತ್ವ, ಆಲಸ್ಯ ಭಾವನೆ ಮತ್ತು ಸಾಂಪ್ರದಾಯಿಕತನಗಳೇ ಕಾರಣಗಳೆಂದೂ, ಆಧುನಿಕ ರೀತಿಯಲ್ಲಿ ವ್ಯವಸಾಯವನ್ನು ಮಾಡಿ ರೈತರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬೇಕೆಂದೂ ತಿಳಿಸಿದರು

ಮೈಸೂರಿನ ಆರ್ಥಿಕ, ಆಡಳಿತ, ವಿಸ್ತೀರ್ಣ ದೃಷ್ಟಿಗಳಿಂದ ಒಂದು ಪ್ರತ್ಯೇಕ ಪ್ರಾಂತ್ಯವಾಗಿರಬಲ್ಲ ಅರ್ಹತೆಯನ್ನು ಪಡೆದಿರುವುದರಿಂದ ಮೈಸೂರು ಭಾರತದ ಒಂದು ಪ್ರಾಂತವಾಗಿ ಉಳಿಯಬೇಕೆಂದು ಕೊಡಗಹಳ್ಳಿ ಶ್ರೀ ರಾಮಸ್ವಾಮಿಯವರು ಮಂಡಿಸಿದ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಸಿಟಿ ಇಂಪ್ಲಿಮೆಂಟ್ ವರ್ಕ್ಸ್,

ಹಳ್ಳದಕೇರಿ, ಮೈಸೂರು

ತಾ|| ೬-೫-೪೯ಕ್ಕೆ ಹಿಂದೆ ನಮ್ಮಲ್ಲಿ ಮಾಲನ್ನು ತೆಗೆದುಕೊಳ್ಳಲು ಅಡ್ವಾನ್ಸ್ ಕೊಟ್ಟು ೨೧-೩ ದಿನಗಳ ಅವಧಿಯನ್ನು ತೆಗೆದುಕೊಂಡುಹೋದ ಹಲವು ಗಿರಾಕಿಗಳು ಇದು ವರೆಗೂ ಬಂದು ಮಾಲನ್ನು ತೆಗೆದುಕೊಂಡಿರುವುದಿಲ್ಲ ಅಂತಹವರು ಇದೇ ತಿಂಗಳು ೩೧ನೇ ತಾ|| ನೊಳಗಾಗಿ ಬಂದರೆ ಮಾಲನ್ನು ಅವರಿಗೆ ಕೊಡಲಾಗುತ್ತದೆ ಹಾಗೆ ಬರದಿದ್ದ ಪಕ್ಷದಲ್ಲಿ ಅಂತಹವರ ಬಿಲ್ಲನ್ನು ರದ್ದು ಮಾಡಲಾಗುತ್ತದೆ ಅವರು ಕೊಟ್ಟಿರುವ ಹಣವನ್ನೂ ಸಹ ವಾಪಸು ಮಾಡಲಾಗುವುದಿಲ್ಲವೆಂಬ ಅಂಶವನ್ನು ಈ ಮೂಲಕ ಪ್ರಕಟಿಸಲಾಗಿದೆ

ಎಚ್. ಎಸ್. ಪಾಟೀಲ್,

ವ್ಯವಸ್ಥಾಪಕ

ತಿರುವಾಂಕೂರು ಅರಸರಿಂದ ೨೦ ಸಾವಿರ ಎಕರೆ ಜಮೀನು ತ್ಯಾಗ

ತಿರುವಾಂಕೂರು ಮಹಾರಾಜರು ತಮ್ಮ ೨೦ ಸಾವಿರ ಎಕರೆ ಸ್ವಂತ ಜಮೀನನ್ನು ಸರ್ಕಾರಕ್ಕೆ ವಹಿಸಿಕೊಟ್ಟಿರುತ್ತಾರೆ. ಇದರಿಂದ ಅವುಗಳಲ್ಲಿ ವ್ಯವಸಾಯ ಮಾಡುತ್ತಿದ್ದ ರೈತರಿಗೆ, ಈ ಜಮೀನುಗಳ ಎಲ್ಲ ಹಕ್ಕು ಬಾಧ್ಯತೆಗಳೂ ದೊರೆಯುವುವು

ಕೊಚ್ಚಿ ಮತ್ತು ತಿರುವಾಂಕೂರು ಸಂಸ್ಥಾನಗಳ ಒಕ್ಕೂಟದ ಒಪ್ಪಂದಕ್ಕೆ ತಿರುವಾಂಕೂರು ರಾಜರು ನಿನ್ನೆ ದಿನ ರುಜು ಹಾಕಿದ್ದಾರೆ

ಸಿಡಿಲಿನಿಂದ ೮ ಜನರ ಮರಣ

ಪಶ್ಚಿಮ ಬಂಗಾಳದ ಅಸನ್‌ಸಾಲಿನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ೮ ಜನರು ವಿಪರೀತ ಮಳೆ ಬಂದುದರಿಂದ ಮರದ ಕೆಳಗೆ ನಿಂತಿದ್ದರೆಂದೂ, ಆಗ ಭಾರಿ ಸಿಡಿಲು ಹೊಡೆದು ಅವರೆಲ್ಲರೂ ಮೃತಪಟ್ಟರೆಂದೂ ವರದಿಯಾಗಿದೆ

ಸತ್ಯಮಂಗಲದ ರೈಲ್ವೆ

ಭಾರತ ಸರ್ಕಾರದ ಟ್ರಾನ್ಸ್‌ಪೋರ್ಟ್ ಬೋರ್ಡಿನ ಸಭೆಯು ಕಳೆದ ೨೫ನೇ ತಾ|| ರೈಲ್ವೆ ಸಚಿವ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆದು, ಚಾಮರಾಜನಗರದಿಂದ ಕೊಯಮತ್ತೂರಿಗೆ ರೈಲನ್ನು ಹಾಕುವ ಬಗ್ಗೆ ಸರ್ವೆ ನಡೆಸಬೇಕೆಂದೂ, ಮಂಗಳೂರಿನಿಂದ ... ರವರೆಗಿನ ರೈಲ್ವೆಗಳ ರೈಲು ಮಾರ್ಗವನ್ನು ಹಾಕುವ ವಿಷಯವಾಗಿ ದೊಡ್ಡ ಬಂದರುಗಳ ನಿರ್ಮಾಣವಾದನಂತರ ಅದನ್ನು ಪರಿಶೀಲಿಸಬೇಕೆಂದೂ ತೀರ್ಮಾನಿಸಲಾಯಿತು

ಉಪನ್ಯಾಸ

ವಾಣೀ ವಿಲಾಸ ಮೊಹಲ್ಲಾದಲ್ಲಿರುವ ಶ್ರೀ ರಾಮ ಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಸ್ವಾಮಿ ಸೋಮನಾಥಾನಂದರವರ ಉಪನ್ಯಾಸದ ವಿಷಯವಾಗಿ ಭಾಷಣ ಮಾಡುವರು.

ಸತ್ಕಾರ ಕೂಟ

ವಾಸ್ತ್ರಿ ಮತ್ತು ವೇದಗಳಿಗೆ ಪ್ರಮಾಣ ಹೊಂದಲಿರುವ ಶ್ರೀ ಎಸ್ ಚನ್ನಯ್ಯನವರ ಗೌರವಾರ್ಥವಾಗಿ ಪರ್ತಕರಾದ ಶ್ರೀ ಕೆ ಚಾಮುಂಡಯ್ಯನವರು ಮೊನ್ನೆ ಸಂಜೆ ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು

ಹುಚ್ಚನಿಂದ ಬೀದಿಯ ಮಕ್ಕಳ ಕೊಲೆ

ಕೋಳಂದೈ ದೇವರ್ ಎಂಬ ಮಾಜಿ ಸೈನಿಕನು, ಪೆಹಲಿಯಿಂದ ವಾಪಸು ಬಂದ ಮೇಲೆ ಉದ್ಯೋಗವೆಲ್ಲಿಯೂ ಸಿಕ್ಕದುದಕ್ಕಾಗಿ ಜೀವನದಲ್ಲಿ ಜಿಗುಪ್ಸೆಯುಂಟಾದ್ದರಿಂದ, ಬುದ್ಧಿಗೆಟ್ಟು ಇದ್ದಕ್ಕಿದ್ದಹಾಗೆಯೇ ರಾಮನಾಡಿನಲ್ಲಿ ಕಳೆದ ಮಂಗಳವಾರ ಬೀದಿಯಲ್ಲಿ ಆಡುತ್ತಿದ್ದ ೪ ಮಕ್ಕಳನ್ನು ಕುಡುಗೋಲಿನಿಂದ ಹೊಡೆದುಕೊಂದುದಲ್ಲದೆ ಬೀದಿಯಲ್ಲಿ ಓಡಾಡುತ್ತಿದ್ದ ಇತರ ಎಂಟು ಜನರಿಗೆ ಗಾಯಪಡಿಸಿದನೆಂದೂ, ತಿಳಿದು ಬಂದಿದೆ. ಜನರ ಗುಂಪು ನೇರಿ ಇವನನ್ನು ಅಟ್ಟಿಸಿಕೊಂಡು ಬಂದಾಗ, ತಾನಾಗಿ ಅಲ್ಲಿದ್ದ ಸಬ್ ಇನ್ಸ್‌ಪೆಕ್ಟರರ ಹತ್ತಿರ ಶರಣು ಹೋಗಿ ತನ್ನನ್ನು ಉಳಿಸಬೇಕೆಂದು ಪ್ರಾರ್ಥಿಸಿದನೆಂದು ಹೇಳಲಾಗಿದೆ

ಕಾಲೇಜುಗಳಿಗೆ ಸೇರಲು ಕಾಲಾವಧಿ

ಗ್ರಾಮ ಸೇವಾ ಶಿಕ್ಷಣ ಶಿಬಿರಗಳಲ್ಲಿ ಅನೇಕ ವಿದ್ಯಾರ್ಥಿಗಳು ಭಾಗವಹಿಸುತ್ತಿರುವುದರಿಂದ ಇದೇ ೩೧ನೇ ತಾ|| ನೊಳಗಾಗಿ ಕಾಲೇಜುಗಳಿಗೆ ಸೇರಲು ಅರ್ಜಿಗಳನ್ನು ಹಾಕಿಕೊಳ್ಳಲು ಸಾಧ್ಯವಿಲ್ಲವೆಂದು ಉಪಾಧ್ಯಾಪಕರುಗಳಿಗೆ ಅರಿಕೆ ಮಾಡಿಕೊಂಡ ಮೇಲೆ, ಅದನ್ನು ಮುಂದಿನ ತಿಂಗಳು ೪ನೇ ತಾ|| ವರೆಗೂ ಮುಂದುವರಿಸಲು ಅವರು ಅನುಮತಿ ಕೊಟ್ಟಿದ್ದಾರೆ.

ಚಿಕ್ಕದಪುರದ ಸಂಕೇತಿ ಸಂಘ

ಈ ಸಂಘದ ವಾರ್ಷಿಕ ಸಭೆಯು ನಾಳೆ ರುದ್ರಪಟ್ಟದಲ್ಲಿ ನಡೆಯಲು ಏರ್ಪಾಡಾಗಿದೆ; ದಯವಿಟ್ಟು ಸದಸ್ಯರುಗಳೆಲ್ಲರೂ ಬರಬೇಕಾಗಿ ಶ್ರೀ ಆರ್. ವೈ ಸುಬ್ರಹ್ಮಣ್ಯ ದೀಕ್ಷಿತರು ಪ್ರಾರ್ಥಿಸಿರುತ್ತಾರೆ.-

ಅಗಸರ ಮುಷ್ಕರ

ಸಂಯುಕ್ತ ಪ್ರಾಂತ್ಯದ ಬುಲಂದ್ ಪ್ರದೇಶದಲ್ಲಿರುವ ಅಗಸರುಗಳು ಬಟ್ಟೆ ಒಗೆಯುವುದನ್ನು ನಿಲ್ಲಿಸಿ ಮುಷ್ಕರ ಹೂಡಿದ್ದಾರೆ ಅಲ್ಲಿರುವ ಜಾಟವಾಸ್ ಎಂಬ ಹಿಂದುಳಿದ ವರ್ಗದವರ ಬಟ್ಟೆಗಳನ್ನು ಒಗೆಯಲು ಅಗಸರು ನಿರಾಕರಿಸಿದುದರ ಬಗ್ಗೆ ಅವರ ಮೇಲೆ ಜಾಟವಾಸರುಗಳು ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ ಅದು ಇತ್ಯರ್ಥವಾಗುವವರೆಗೆ ಅಗಸರು ಯಾರ ಬಟ್ಟೆಗಳನ್ನೂ ಒಗೆಯುವುದಿಲ್ಲವೆಂದು ತಿಳಿಸಿರುತ್ತಾರೆ

ಅರಮನೆ ಕೆಳಗೆ ೧೬ ಮೈಲಿ ಸುರಂಗ ಮಾರ್ಗ

ಲಕ್ನೋ(ಪ್ರಯಾ)ದ ಕಟ್ಟಕಡೆಯ ನವಾಬರಾದ ವಜೀದ್ ಅಲಿ ಷಾರವರ ಚತ್ತರ್ ಮಂಜಿಲ್ ಅರಮನೆಯಿಂದ ಜಾನ್ಸಿಗೆ ಇದ್ದ ೧೬ ಮೈಲಿ ಉದ್ದದ ಸುರಂಗ ಮಾರ್ಗ ಮತ್ತು ಅರಮನೆಯೊಳಗೆ ... ಸಾವಿರ ಚದುರ ಅಡಿಯ ಕೋಣೆಗಳು ಇದ್ದುದನ್ನು ಭೂಸಂಶೋಧನಾ ಇಲಾಖೆಯವರು ಕಂಡುಹಿಡಿದಿರುತ್ತಾರೆ ... ಮಟ್ಟಕ್ಕೆ ಹರಿಯುತ್ತಿರುವ ನೀರನ್ನು ... ಸಹಾಯದಿಂದ ತೆಗೆದು ಹಾಕಲಾಗುತ್ತಿದೆ

ಉತ್ತರ ಕಲ್ಕತ್ತದಲ್ಲಿರುವ ... ಮೊನ್ನೆ ರಾತ್ರಿ ಬೆಂಕಿ ಬಿದ್ದು ... [illegible]

ಲಕ್ಷ್ಮೀ ಥಿಯೇಟರ್

27-5-49 ರಿಂದ ಅನೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ಅಯ್ಯನಾರ್ ಪಾಂಡುರಂಗ

ಪಿಕ್ಚರ್ಸ್‌ರವರ

ಸತೀ ತುಳಸಿ

ಕನ್ನಡ ಪೌರಾಣಿಕ ಚಿತ್ರ

ನಿಮ್ಮ ಮೈ ನೋಕವುಳ್ಳಿನಂತೆ

ಹೊಳೆಯಬೇಕೆ? ನೀವು

ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಚರ್ಮಕ್ಕೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಶ್ರೀ ಗಾಯತ್ರೀ

ದಿನವಹಿ 3 ಪ್ರದರ್ಶನಗಳು

29—5—49ನೇ ಭಾನುವಾರದಿಂದ

ಮೂರು ದಿನಗಳು ಮಾತ್ರ

ಯೂನಿವರ್ಸಲ್‌ರವರ

ಆಲ್ ಮೈ ಸನ್ಸ್
ALL MY SONS

ಪಾತ್ರ:-ಎಡ್ವರ್ಡ್ ಜಿ. ರಾಬಿನ್‌ಸನ್

Morning Shows

on 28th & 29th

WARNER'S

JUAREZ
(ಜ್ವಾರೆಸ್)

ಪಾತ್ರ: ಪಾಲ್ ಮುನಿ, ಬೆಟ್ಟಿ ಡೇವಿಸ್

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ

ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ, :: ಮೈಸೂರು

ರಾಜಕಮಲ್
ಮೈ ಸೂ ರು

27-5-49 ರಿಂದ

ಅಮೋಘವಾದ 4ನೇ ವಾರ

ಪ್ರತಿ ದಿನ 3 ಆಟಗಳು

ಫಿಲ್ಮಿಸ್ತಾನ್‌ರವರ

ಷಹೀದ್

—:ಮುಖ್ಯ ಪಾತ್ರ:—

ಕಾಮಿನಿ ಕೌಶಲ್ಯ, ದಿಲೀಪ್ ಕುಮಾರ್,

ಚಂದ್ರಮೋಹನ್, ವಿ ಎಚ್ ದೇಸಾಯಿ.

Morning Shows

From 27-5-49 for 4 days

BRUTE FORCE

With:-Burt Lancaster,

Vyonne De Carlo,

Charles Bickford.

27-5-49 ರಿಂದ ಅನೋಘ ಪ್ರಾರಂಭ

ಪ್ರತಿ ದಿನ ೪ ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಅಪೆರಾ

ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ಪಾಕ್ಚಿತ್ರ

* ವೇಲೈಕಾರಿ *

—: ಭೂಮಿಕೆ :—

ಎಂ. ವಿ. ರಾಜಮ್ಮ,	ಟಿ. ಎಸ್. ಬಾಲಯ್ಯ,
ವಿ. ಎನ್. ಜಾನಕಿ,	ದೊರೆ ರಾಜ್,
ಲಲಿತ :	ಪದ್ಮಿನಿ.

ಮೊದಲು ಮೂರು ವಾರಗಳಲ್ಲಿ ಎಲ್ಲಾ ತರಹೆಯ ಕಾಂಪ್ಲಿಮೆಂಟರಿ, ಫ್ರೀ

ಪಾಸುಗಳು ಮತ್ತು ರಿಯಾಯಿತಿಗಳನ್ನೂ ಮನ್ನಾ ಮಾಡಿರುತ್ತೆ

| R.V. Pictures' Release

ಮೈಸೂರು ಅಡಿಷನಲ್

ಸಬಾರ್ಡಿನೇಟ್ ಜಡ್ಜರವರ

ಕೋರ್ಟಿನಲ್ಲಿ

S. C. No. 150 of 48-49

ವಾದಿ-ಕಂಟ್ರಾಕ್ಟರ್ ನಂಜಪ್ಪ.

V/s

ಪ್ರತಿವಾದಿ-N. ಶ್ರೀನಿವಾಸರಾವ್.

ಮೇಲ್ಕಂಡ ಮೊಕದ್ದಮಾದಲ್ಲಿ ತಳೂರಿನ ಕಂಟ್ರಾಕ್ಟರ್ ನಂಜಪ್ಪನವರು ಸಿಪಾಯಿ ವೆಂಕೋಜರಾಯರ ಮಕ್ಕಳು N ಶ್ರೀನಿವಾಸರಾಯರ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ೬೭-೮-೦ ರೂಪಾಯಿಗಳನ್ನು ಮತ್ತು ಕೋರ್ಟು ಖರ್ಚನ್ನು ಬರಮಾಡಿಕೊಳ್ಳಲು ದಾವಾ ಮಾಡಿರುತ್ತಾರೆ ಡಿಟೋ ಮೊಕದ್ದಮೆಯು ಮೇಲ್ಕಂಡ

ಶ್ರೀನಿವಾಸರಾಯರ ಹಾಜರಾತಿ ಬಗ್ಗೆ ೩೦-೫-೧೯೪೯ನೇ ತಾರೀಖಿಗೆ ಒಯ್ದಿರಿಂಗು ಇರುವುದೆಂದು ಈ ಮೂಲಕ ಪ್ರಸಿದ್ಧ ಪಡಿಸಿರುತ್ತೆ.

ಮೈಸೂರು ಟಿ. ಎನ್. ಸುಬ್ಬರಾವ್,

೨೩-೫-೧೯೪೯ ವಾದಿ ಪರ ಲಾಯರು.

ಗಂಡಸರಿಗೆ ಮನೆ ಕೆಲಸದ ಶಿಕ್ಷಣ

ಮಹಿಳೆಯರು ತಮ್ಮ ಮನೆ ಕೆಲಸದ ಜೊತೆಗೆ ಸಾರ್ವಜನಿಕ ಸೇವೆಯಲ್ಲೂ ನಿರತರಾಗಿರಬೇಕಾದರೆ, ಗಂಡಸರಿಗೆ ಮನೆ ಕೆಲಸಗಳ ಬಗ್ಗೆ ಶಿಕ್ಷಣ ಕೊಡಬೇಕಾದ ಅಗತ್ಯವಿರ ವುದೆಂದು ರಾಜಾಸ್ಥಾನದ ಗೃಹ ಸಚಿವರು ತಿಳಿಸಿರುತ್ತಾರೆ.

---

* ಪ್ರಭುದೇವಾ ಟಾಕೀಸ್ *

28—5—49ನೇ ಶನಿವಾರದಿಂದ

ಸರಸ್ವತಿ ಟಾಕೀಸಿನವರ

ದ್ರೌಪದಿ ವಸ್ತ್ರಾಪಹರಣ
(ತೆಲುಗು)

ಪ್ರತಿ ದಿನ 3 ಆಟಗಳು

ಪಾತ್ರ:—ಗಗ್ಗಯ್ಯ, ಕನ್ನಾಂಬ, ರಾಮತಿಲಕಂ, ಸಿ. ಎಸ್. ಆರ್, ಮುಂತಾದವರು

ಪ್ರಭಾ → ★ 29-5-49 ರಿಂದ

ಅನೋಘ ಪ್ರಾರಂಭ

ದಿನವಹಿ 3 ಆಟಗಳು

* ಪಹಿಲಾ ಪ್ಯಾರ್ *
(ಹಿಂದಿ)

ಪಾತ್ರ:—ಸುಲೋಚನ ಚಟರ್ಜಿ, ವನಮಾಲ, ಡೇವಿಡ್.

Morning Shows on 29th Sun.

R.K.O's **FORT APPACHE**

ಚಾಮುಂಡೇಶ್ವರಿ ಟಾಕೀಸ್

27-5-49ರಿಂದ (ಒಂದು ವಾರ ಮಾತ್ರ) ಪ್ರತಿ ದಿನ 3 ಆಟಗಳು

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಕೊಲಂಬಿಯಾ ಪಿಕ್ಚರ್ಸ್‌ರವರ

ಅದ್ಭುತ ವರ್ಣರಂಜಿತ ಚಿತ್ರ

ಒನ್ ಥೌಸಂಡ್ ಅಂಡ್ ಒನ್ ನೈಟ್

ONE THOUSAND AND ONE NIGHT

Featuring:-Evelyn Keyes, Philsilvers

MORNING SHOWS From 27-5-49 For 3 days at 10-30 a.m.

M.G.M's Super-hit (In Cine Color) **GALLANT BESS**

॥ ಶ್ರೀ ಸೀತಾರಾಮಾಯ ನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ನೇತ್ರೋಪಾನಕ

ನೂತನಾವಿಷ್ಕಾರ [ಬಾಣಂತಿ ನಂಜಿಗೆ ಉತ್ತಮ ಗುಣಕಾರಿ

ಕಣ್ಣು ಕೈಕಾಲುರಿ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಇವು ಪರಿಹಾರ

ವಿಳಾಸ:— ಬೆಲೆ ಶೀಸೆ 1ಕ್ಕೆ 3-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Edited, printed, and published by A.R Nagarajan at the Sadhvi Press, D. Subbiah Road, Mysore

ಫೋ॥ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೨೯-೫-೪೯ [ಸಂಚಿಕೆ ೩೯

ಪ್ರ॥ ಪ್ರ॥ ಸಭಾಧ್ಯಕ್ಷತೆಗೆ ವಿ. ವೆಂಕಟಪ್ಪನವರು

ನಗರಕ್ಕೆ ಬರುವವರ ಮೇಲೆ ತೆರಿಗೆ

ಪೌರಸಭೆಯಲ್ಲಿ ಪರಿಶೀಲನೆ

ಮೈಸೂರು ೨೯

ನಗರದ ಪೌರಸಭೆಯ ಅಧಿವೇಶನವು ನೆನ್ನೆ ದಿನ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪೌರಸಭೆಯ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸಲು ಹತ್ತು ಮೈಲಿ ಹೊರಗಿನಿಂದ ರೈಲು ಮೂಲಕ ನಗರಕ್ಕೆ ಬರುವವರ ಮೇಲೆ ತಲೆಗಂದಾಯದಂತೆ ತೆರಿಗೆ ಹಾಕಬೇಕೆಂದು ಪೌರಸಭೆಯವರು ಹಿಂದೆ ಮಾಡಿದ್ದ ನಿರ್ಣಯವನ್ನು ಸರ್ಕಾರದವರು ಒಪ್ಪದೆ ಇರುವ ವಿಚಾರವು ಚರ್ಚೆಗೆ ಬಂದು ಇಂದಿನ ಹಣಕಾಸಿನ ಮುಗ್ಗಟ್ಟಿನ ಸ್ಥಿತಿಯಲ್ಲಿ ಪೌರಸಭೆಯ ವರಮಾನವನ್ನು ಹೆಚ್ಚಿಸಬೇಕಾಗಿದೆಯೆಂದೂ, ಈ ತೆರಿಗೆಯನ್ನು ಹಾಕುವ ಬಗ್ಗೆ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಪುನರ್ವಿಮರ್ಶೆ ಮಾಡಬೇಕೆಂದೂ, ಕೋರುವ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಮನೆ ಅಭಾವವನ್ನು ತಪ್ಪಿಸಲು ಕೃಷ್ಣರಾಜ ಮೊಹಲ್ಲಾದಲ್ಲಿ ೧,೪೪,೦೦೦ ರೂ. ಗಳ ವೆಚ್ಚದಿಂದ ಕಟ್ಟಬೇಕೆಂದಿರುವ ೩೨ ಫ್ಲಾಟುಗಳ ಬಗ್ಗೆ ಟ್ರಸ್ಟ್ ಬೋರ್ಡಿನವರ ಸಲಹೆಯನ್ನು ಒಪ್ಪಲಾಯಿತು.

ಜವಳಿ ವ್ಯಾಪಾರಿಗಳಾದ ಶ್ರೀ ಎ ಶಂಕರ ಶೆಟ್ಟರು ವಾಣೀವಿಲಾಸ ಮೊಹಲ್ಲಾದಲ್ಲಿ ಒಂದು ಹೆರಿಗೆ ಆಸ್ಪತ್ರೆ ಕಟ್ಟಲು ಕೊಟ್ಟಿರುವ ೫೦ ಸಹಸ್ರ ರೂ ಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಯಿತು.

ಪಂಚಾಯತನ ಪ್ರತಿಷ್ಠಾಪನೆ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಗಣಪತಿ ಶಾಸ್ತ್ರಿಗಳ ಛತ್ರದಲ್ಲಿ ಇದೇ ೩೦ನೇ ತಾ॥ ನಡೆಯಬೇಕಾಗಿದ್ದ ಪಂಚಾಯತನ ಪ್ರತಿಷ್ಠಾಕಾರ್ಯವನ್ನು ಅನಿವಾರ್ಯದ ಪ್ರಯುಕ್ತ ಮುಂದಿನ ತಿಂಗಳು ೮ನೇ ತಾ॥ಗೆ ಮುಂದುವರಿಸಲಾಗಿದೆ.

ವೇಣುನಾದನ

ಮೈಸೂರು ವಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ಈ ಸಂಜೆ ೭ ಘಂಟೆಗೆ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ವಿದ್ವಾನ್ ಶಿವಚಿದಂಬರ ಅಯ್ಯರ್‌ರವರ ವೇಣುನಾದನವು ಸೂಕ್ತ ಪಕ್ಕವಾದ್ಯಗಳೊಂದನೆ ನಡೆಯುವುದು.

ವಯಸ್ಕರ ಶಿಕ್ಷಣ ತರಗತಿಗಳು

ರಾಜಧಾನಿಯ ಬಲಪುರಿ ಮತ್ತು ಆನಿಕೆರೆ ಕರ್ನಾಟಕ ಪುರಗಳಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರಿಂದ ಏರ್ಪಟ್ಟಿರುವ ಎರಡು ತರಗತಿಗಳ ಪ್ರಾರಂಭೋತ್ಸವವನ್ನು ಕಳೆದ ಬುಧವಾರ ಸಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾದ ಶ್ರೀ ಟಿ. ಮಾದಯ್ಯಗೌಡರು ನೆರವೇರಿಸಿದರು ಶ್ರೀ ಬಸವಣ್ಣನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ ಆರ್. ಲಿಂಗಪ್ಪನವರು ಉಪನ್ಯಾಸ ಮಾಡಿದರು ಬೆಂಗಳೂರು ಜಿಲ್ಲೆ ಸಮಿತಿಯ ಕಾರ್ಯದರ್ಶಿ ಶ್ರೀ ಕೆ ಆರ್ ಮರುಲಿಂಗಯ್ಯನವರು ಶಿಕ್ಷಣದ ಆವಶ್ಯಕತೆಯ ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ಮಾತನಾಡುತ್ತಾ ಇನ್ನೆರಡು ವರ್ಷಗಳಲ್ಲಿ ನಮ್ಮ ಸಂಸ್ಥಾನದಲ್ಲಿ ಅವಿದ್ಯಾವಂತರಿಲ್ಲದಂತೆ ಮಾಡುವುದರ ಮೂಲಕ ರಾಮರಾಜ್ಯವನ್ನು ಸ್ಥಾಪಿಸಬೇಕೆಂದು ಹೇಳಿದರು

ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರ ಆಯ್ಕೆ

ಬೆಂಗಳೂರು ೨೯

ನೆನ್ನೆ ದಿನ ಇಲ್ಲಿ ಸೇರಿದ್ದ ಶಾಸನ ಮತ್ತು ಪ್ರ॥ ಪ್ರ॥ ಸಭಾ ಕಾಂಗ್ರೆಸ್ ಪಕ್ಷಗಳ ಸಂಯುಕ್ತ ಸಭೆಯು ಮೈ॥ ಕಾಂ॥ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು ಮುಖ್ಯ ಮಂತ್ರಿ ಶ್ರೀ ಕೆ. ಚಂಗಲರಾಯ ರೆಡ್ಡಿಯವರನ್ನು ಸಂಯುಕ್ತ ಪಕ್ಷದ ಮುಖಂಡರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು ನಾಯಕರ ಆಯ್ಕೆಗೆ ಸ್ಪರ್ಧಿಸಿದ್ದ ಶ್ರೀ ಕೆ. ಹನುಮಂತಯ್ಯನವರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡರು. ಅವರು ಪಕ್ಷದ ಉಪನಾಯಕರಾಗಿ ಆರಿಸಲ್ಪಟ್ಟರು.

ದಿವಾನರ ಹುದ್ದೆ ರದ್ದು ಮಾಡುವುದು, ಪಕ್ಷದ ನಾಯಕರೇ ಮಂತ್ರಿಮಂಡಲವನ್ನು ರಚಿಸುವುದು, ಮಂತ್ರಿಮಂಡಲವು ಶಾಸನ ಸಭೆಗಳಿಗೆ ಜವಾಬುದಾರಿಯಾಗಿರುವುದು, ಇವೇ ಮಂತಾದ ವಿಷಯಗಳು ಸಭೆಯಲ್ಲಿ ಚರ್ಚಿಸಲ್ಪಟ್ಟವೆಂದು ತಿಳಿದುಬಂದಿದೆ

○ ಸಕ್ಕರೆ ಮೇಲಿನ ತೆರಿಗೆಯನ್ನು ಸರ್ಕಾರದವರು ಮಣ ಒಂದಕ್ಕೆ ಆರು ರೂಪಾಯಿನಂತೆ ನಿಗದಿ ಮಾಡಿದ್ದಾರೆ.

ವಿವಾಹ ಮಹೋತ್ಸವಗಳು

ರಾಜಧಾನಿಯ ಪತ್ರಿಕೋದ್ಯೋಗಿಗಳೂ ಮತ್ತು ಸಮಾಜವಾದಿ ನಾಯಕರಲ್ಲಿ ಒಬ್ಬರಾದ ಶ್ರೀ ಕೆ. ಕಾಳಯ್ಯನವರು ಮತ್ತು ಹೊನ್ನಾವಾರದ ಶ್ರೀ ಚಿಕ್ಕೇಗೌಡರ ಪುತ್ರಿ ಚಿ॥ ಸೌ॥ ಚನ್ನಮ್ಮ,

ಮೈಸೂರಿನ ವರ್ತಕರಾದ ಶ್ರೀ ಬಿ ವೆಂಕಟರಾಮಯ್ಯಶೆಟ್ಟಿಯವರ ಪುತ್ರ ಶ್ರೀ ಬಿ ಜೆ ರಾಮಯ್ಯ ಶೆಟ್ಟಿ ಮತ್ತು ಬೆಂಗಳೂರಿನ ಡಾ॥ ಸಿ. ಎಂ ನಂಜುಂಡಶೆಟ್ಟಿಯವರ ಪುತ್ರಿ ಚಿ॥ ಸೌ॥ ಸಾವಿತ್ರಮ್ಮ,

ಮೈಸೂರಿನ ವಕೀಲರಾದ ಶ್ರೀ ಡಿ ಕೆ. ವಾಸುದೇವರಾಯರ ಮೊಮ್ಮಗಳು ಚಿ॥ ಸೌ॥ ಭಾರತೀದೇವಿ ಮತ್ತು ಕ್ರೋಸ್‌ಪೇಟೆಯ ಶ್ರೀ ಬಿ.ಆರ್ ಸುಬ್ಬರಾಯರ ಪುತ್ರ ಶ್ರೀ ವಾಸುದೇವರಾವ್,

ಟಿ. ನರಸೀಪುರದ ಶ್ರೀ ಎಸ್ ರಾಜಯ್ಯನವರ ತಂಗಿ ಚಿ॥ ಸೌ॥ ಕೃಷ್ಣವೇಣಮ್ಮ ಮತ್ತು ಬೆಂಗಳೂರಿನ ಶ್ರೀ ಯಲ್ಲಪ್ಪನವರ ಪುತ್ರ ಶ್ರೀ ವೈ ರಾಮಕೃಷ್ಣ, ಇವರುಗಳ ವಿವಾಹ ಮಹೋತ್ಸವಗಳು ಕಳೆದ ವಾರ ಜರುಗಿದವು

ಕಮ್ಯೂನಿಸ್ಟರಿಂದ ೪೫ ದಿನಗಳಲ್ಲಿ ೭೫ ಕೊಲೆ

ಹೈದರಾಬಾದಿನ ತೆಲುಗಾಣ್ಯ ಜಿಲ್ಲೆಯಲ್ಲಿ ಏಪ್ರಿಲ್ ೧ರಿಂದ ಮೇ ೧೬ನೇ ತಾ॥ವರೆಗೆ ಕಮ್ಯೂನಿಸ್ಟರು ೭೫ ಕೊಲೆಗಳನ್ನು ನಡೆಸಿರುವರೆಂದೂ, ೨೫ ಎಕರೆ ಜಮೀನುಗಳುಳ್ಳ ಇಬ್ಬರನ್ನು ಮನೆಯಿಂದ ಹೊರಕ್ಕೆ ಎಳೆದು ತಂದು ಅವರನ್ನು ಗುಂಡಿನಿಂ ಹೊಡೆದು ಸಾಯಿಸಿದರೆಂದೂ ವರದಿಯಾಗಿದೆ

ವಿದ್ಯಾರ್ಥಿಗಳ ಶಿಕ್ಷಣ ಶಿಬಿರ

ಚಾಮರಾಜನಗರ ತಾಲ್ಲೂಕು ವೆಂಕಟಯ್ಯನ ಛತ್ರದ ಹಳ್ಳಿಯಲ್ಲಿ ವಿದ್ಯಾರ್ಥಿಗಳ ಬೇಸಿಗೆ ಶಿಕ್ಷಣ ಶಿಬಿರದ ಪ್ರಾರಂಭೋತ್ಸವವನ್ನು ಕಳೆದ ೬ನೇ ತಾ॥ ಚಾಮರಾಜನಗರದ ಪುರಸಭಾಧ್ಯಕ್ಷರಾದ ಶ್ರೀ ಬಿ. ನಾರಾಯಣರವರು ನೆರವೇರಿಸಿದರು. ಶ್ರೀ ಜಿ ಎಸ್ ರಾಮಣ್ಣನವರು ಶಿಬಿರದ ಕಾರ್ಯಕ್ರಮವನ್ನು ವಿವರಿಸಿದರು ಶ್ರೀಗಳಾದ ಬಿ ಶ್ರೀಕಂಠಯ್ಯ, ವೆಂಕಟಸುಬ್ಬಶೆಟ್ಟಿ, ಮಂಕರಾಜ ರ್ ಮತ್ತು ಹೆಚ್. ಎ ಕೃಷ್ಣಮೂರ್ತಿ ಮುಂತಾದವರುಗಳು ಭಾಷಣ ಮಾಡಿದರು

ಮಧುರ ಕಲಾ ಮಂದಿರ

ರಾಜಧಾನಿಯ ಮಧುರ ಕಲಾಮಂದಿರದ ಪ್ರಥಮ ವಾರ್ಷಿಕೋತ್ಸವವು ಮೊನ್ನೆ ಸಂಜೆ ಟೌನ್‌ಹಾಲಿನಲ್ಲಿ ಶ್ರೀ ವಿ. ಸುಬ್ಬರಾಯ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು ನೃತ್ಯ, ಸಂಗೀತ ಮತ್ತು ನಾಟಕಗಳು ಜರುಗಿದುವು. ಸಂಘದ ಡೈರೆಕ್ಟರಾದ ಶ್ರೀ ನಟರಾಜರವರು ಸ್ವಾಗತ ಬಯಸಿ, ಸಂಸ್ಥೆಯ ಉದ್ದೇಶವನ್ನು ವಿವರಿಸಿದರು ದೇಶದಲ್ಲಿ ನೃತ್ಯ ಕಲೆಯು ಅಭಿವೃದ್ಧಿಗೊಂಡು ಇಂತಹ ಸಂಸ್ಥೆಗಳಿಗೆ ಮಹಾಜನರು ನೆರವು ನೀಡಬೇಕೆಂದು ಅಧ್ಯಕ್ಷರು ತಿಳಿಸಿದರು

ಸಂಸ್ಥಾನದ ಆದಾಯ ಹನ್ನೊಂದು ಕೋಟಿ ರೂ.

ಈ ಸಾರಿ ಸಮತೋಲದ ಬಜೆಟ್

ಸ್ವಂ.ಸು ಪ್ರೋ॥] ಬೆಂಗಳೂರು ೨೯

ಈ ಸಾರಿ ಪ್ರ॥ ಪ್ರ॥ ಸಭೆಯಲ್ಲಿ ಸರ್ಕಾರದವರು ಸಮತೋಲದ ಬಜೆಟ್ಟನ್ನು ಮಂಡಿಸಲಿರುವರೆಂದು ಹೇಳಲಾಗಿದೆ ಒಟ್ಟು ಆದಾಯವು ೧೧ ಕೋಟಿ ರೂ. ಮತ್ತು ಅಷ್ಟೇ ವೆಚ್ಚವು ತಗಲಬಹುದೆಂದು ನಿರೀಕ್ಷಿಸಲಾಗಿದೆ ಪತ್ರಗಳ ಮೇಲೆ ಸ್ಟಾಂಪು ತೆರಿಗೆ...

ವಿ. ವೆಂಕಟಪ್ಪನವರಿಗೆ ಪ್ರ॥ ಪ್ರ॥ ಸಭಾಧ್ಯಕ್ಷತೆ

ಕಾಂಗ್ರೆಸ್ ಪಕ್ಷದ ನಿರ್ಧಾರ

ಸ್ವಂ.ಸು.ಪ್ರೋ॥] ಬೆಂಗಳೂರು ೨೯

ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷಸ್ಥಾನಕ್ಕೆ ಶ್ರೀ ವಿ ವೆಂಕಟಪ್ಪನವರನ್ನು ನಿಲ್ಲಿಸುವಂತೆ ಕಾಂಗ್ರೆಸ್ ಪಕ್ಷದವರು ನಿರ್ಧರಿಸಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ಸಿನವರನ್ನು ನಿಲ್ಲಿಸುವುದಿಲ್ಲವೆಂದೂ ತೀರ್ಮಾನವಾಗಿದೆ. ಸ್ವತಂತ್ರವಾಗಿ ಶ್ರೀಗಳಾದ ಶಂಕರಲಿಂಗೇಗೌಡ ಮತ್ತು ಶಿವಮೊಗ್ಗದ ಹೆಚ್. ಲಿಂಗಪ್ಪನವರೂ ಸಹ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುವರು.

ದಿವಾನರ ಹುದ್ದೆ ರದ್ದಿಗೆ ಪ್ರಭುಗಳ ಸಮ್ಮತಿ

ದಿವಾನರ ಹುದ್ದೆಯನ್ನು ರದ್ದುಗೊಳಿಸಬೇಕೆಂಬ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಅಭಿಪ್ರಾಯವನ್ನು ಮುಖ್ಯ ಮಂತ್ರಿ ಶ್ರೀ ರೆಡ್ಡಿಯವರು ನೆನ್ನೆ ಪ್ರಭುಗಳಿಗೆ ಅರಿಕೆ ಮಾಡಿದರೆಂದೂ ಅವರು ಈ ಅಭಿಪ್ರಾಯಕ್ಕೆ ಒಪ್ಪಿಗೆ ಕೊಟ್ಟರೆಂದೂ ತಿಳಿದುಬಂದಿದೆ. ಈಗಿನ ದಿವಾನರ ೩ ವರ್ಷದ ಅವಧಿಯು ಬರುವ ಆಗಸ್ಟ್ ೭ರ ಹೊತ್ತಿಗೆ ಮುಗಿಯುವುದರಿಂದ, ನಿವೃತ್ತರಾಗುವ ಮುನ್ನ ಅವರಿಗೆ ರಜವನ್ನು ಕೊಡಲಾಗುವುದೆಂದೂ ಅನಂತರ ಹುದ್ದೆಯು ರದ್ದಾಗುವುದೆಂದೂ ಹೇಳಲಾಗಿದೆ ತಮ್ಮನ್ನು ತಮ್ಮ ಹುದ್ದೆಯಿಂದ ನಿವೃತ್ತಿಗೊಳಿಸಬೇಕೆಂದು ದಿವಾನರೂ ಕೇಳಿಕೊಂಡಿರುವುದಾಗಿ ವರದಿಯಾಗಿದೆ

ಮಂತ್ರಿಮಂಡಲದ ಪುನರ್ರಚನೆಯಿಲ್ಲವೇ ?

ಶಾಸನ ಸಭಾ ಕಾಂಗ್ರೆಸ್ ಪಕ್ಷಗಳ ಜಂಟಿ ಅಧಿವೇಶನದಲ್ಲಿ ಹಲವು ಸದಸ್ಯರು ಇಂದಿನ ಮಂತ್ರಿಮಂಡಲದ ಮೇಲೆ ತೀವ್ರವಾದ ಟೀಕೆಗಳನ್ನು ಮಾಡಿದರೆಂದೂ, ಸಚಿವ ಸ್ಥಾನಕ್ಕೆ 'ಹೊಸ ರಕ್ತವು' ಬರಬೇಕೆಂದು ಸೂಚಿಸಿದರೆಂದೂ ಹೇಳಲಾಗಿದೆ. ಮಂತ್ರಿಮಂಡಲದಲ್ಲಿ ಬದಲಾವಣೆಯೇನಾದರೂ ಆಗುತ್ತದೇ? ಎಂದು ಕೇಳಿದಾಗ ಈಗಾಗಲೇ ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ಶ್ರೀ॥ ರೆಡ್ಡಿಯವರು ಹೇಳಿದರು.

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದವರು

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ರ್‍ಯಾಂಕುಗಳನ್ನು ಪಡೆದವರ ಹೆಸರುಗಳು ಈ ರೀತಿ ಇವೆ.–

1 ಸಿ ಆರ್. ನಾಗರಾಜರಾವ್, ಸರಕಾರಿ ಹೈಸ್ಕೂಲು. ಚನ್ನಪಟ್ಟಣ 2 ಕೃ ಮಾರಿ ಕೆ ಶಾರದ, ಮಹಾರಾಣಿ ಹೈಸ್ಕೂಲು, ಮೈಸೂರು. 3 ಜಿ ಅಶ್ವತ್ಥನಾರಾಯಣ, ಬನುಮಯ್ಯ ಹೈಸ್ಕೂಲು ಮೈಸೂರು 4 ಎಂ ಜಿ ವೆಂಕಟಾಚಲ ಸರ್ಕಾರಿ ಹೈಸ್ಕೂಲು ಶಿವಮೊಗ್ಗ 5 ಎ ೭ ನರಸಪ್ಪ ಮುನಿಸಿಪಲ್ ಹೈಸ್ಕೂಲು ಶ್ರೀರಂಗಪಟ್ಟಣ " ಶ್ರೀ ಕೆ ಅನಿಲೇಶ ಸರ್ಕಾರಿ ಹೈಸ್ಕೂಲು, ನಂಜನಗೂಡು.

○ ಮೈಸೂರು, ಶ್ರೀ ಸಾಲಕ್ಷ್ಮೀ ಸಂಗೀತ ವಿದ್ಯಾಮಂದಿರಕ್ಕೆ ಮೊನ್ನೆ ದಿನ ತಾಯಿನಾಡು ಪತ್ರಿಕೆಯ ಮಾಲೀಕರಾದ ಶ್ರೀ ಪಿ ಆರ್ ರಾಮಯ್ಯನವರು ಭೇಟಿ ಕೊಟ್ಟು ಅಲ್ಲಿನ ಕೆಲಸ ಕಾರ್ಯಗಳ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು

ನ್ನು ಹೆಚ್ಚಿಸಲಾಗುವುದು. ಬಜೆಟ್ ಮೇಲಿನ ಚರ್ಚೆಯನ್ನು ಈಗಾಗಲೇ ಏರ್ಪಡಿಸಲಾಗಿದೆ

ವಾರ ಭವಿಷ್ಯ

೨೯-೫-೪೯ ರಿಂದ ೪-೬-೪೯ರ ವರೆಗೆ

ಮೇಷ—ಶಾಂತಿಯಿಂದ ವರ್ತಿಸುವು ದು ಉತ್ತಮ. ಎದುರಾಳಿಗಳ ಹೀನ ಯುಕ್ತಿ ಫಲಿಸದು. ವ್ಯಾಪಾರಾದಿಗಳಲ್ಲಿ ಗೊಂದಲದಿಂದ ನಷ್ಟವಾಗುವುದು. ಆದಾಯಕ್ಕಿಂತ ವೆಚ್ಚ ಜಾಸ್ತಿ. ಸ್ತ್ರೀ ಆರೋಗ್ಯ ಗುಣಮುಖವಾಗುವುದು. ತಾ|| ೩೧, ೩೦ ಅಸ್ಥಿರ ಭೇಟಿ ಮಹತ್ವ ಪತ್ರಾಗಮನ

ವೃಷಭ—ಆರೋಗ್ಯ ನೆಟ್ಟಗಿರದು. ಪವಾಡ್ಕಾರಿ ಕೆಲಸಗಳು ಬಿ [illegible] ರಂಗಾಂಗಗಳಲ್ಲಿ ಬಾಡಿ ಮೇಲಧಿಕಾರಿಗಳ ವಿರೋಧ, ವಿ [illegible], ವ್ಯಾಪಾರಾದಿಗಳಲ್ಲಿ ಮೋಸವಾಗುವುದು. ಪತ್ನಿಯ ಅನಾರೋಗ್ಯ. ತಾ||೩೦, ೧ ಸ್ಥಿತಿ ಉತ್ತಮ. ಸಜ್ಜನರ ಸಹಾಯ.

ಮಿಥುನ—ಅವಿಶ್ರಾಂತ ಶ್ರಮದ ವಾರ ವಿದು. ಶಾಂತಿ ಸಮಾಧಾನಸಿಕ್ಕವು. ಕಾಲು ನೋವು. ಹಣದ ಮುಗ್ಗಟ್ಟಿನಿಂದ ವ್ಯಥೆ. ಅತಿಥಿಗಳ ಆಗಮನ. ಹಿಮಗರಿಗೆ ಆಲಸ್ಯ. ಪತ್ನಿಯ ಸ್ವಭಾವ ವಿಚಿತ್ರವಾಗುವುದು. ತಾ|| ೧, ೨ ಉತ್ತಮ, ಶುಭ ವಾರ್ತೆ.

ಕರ್ಕ—ಆರೋಗ್ಯ ಮಾನಸಿಕ ಸ್ಥಿತಿಗಳು ನೆಟ್ಟಗೆ ಇರುವುವು. ಮಂಗಳ ಕಾರ್ಯ. ನೌಕರಿ ದಂಧೆಗಳಲ್ಲಿ ಉತ್ತಮ. ಮಿತ್ರರಿಂದ ಲಾಭ. ವಿವಾಹೋತ್ಸವದ ಇಚ್ಛೆ ಫಲಿಸುವದು. ಪ್ರವಾಸದಲ್ಲಿ ಸಿದ್ಧಿ. ತಾ|| ೨೯, ೩೦ ಗೊಂದಲ. ಮನಸ್ಸಿಗೆ ಉಲ್ಲಾಸ

ಸಿಂಹ—ಆರೋಗ್ಯ ನೆಟ್ಟಗೆ. ಮನಸ್ಸು ಸಂತುಷ್ಟವಾಗುವುದು. ವ್ಯಾಪಾರಾದಿಗಳಲ್ಲಿ ನಿರೀಕ್ಷಣೆಗೆ ಅಪ್ರಿಯ ಘಟನೆಗಳಾಗಬಹುದು. ಹೆಣ್ಣು ಹಿಂದೆ ಒಳಸಂಚು ನಡೆಯುವುವು. ತಾ|| ೨೯, ೩೦ ಅಸ್ಥಿರ ಭೇಟಿ, ಧನ ಲಾಭ

ಕನ್ಯಾ—ಆರೋಗ್ಯದಲ್ಲಿ ಸುಧಾರಣೆ, ನೌಕರಿ, ವ್ಯಾಪಾರಾದಿಗಳ ಸ್ಥಿತಿ ಸರಳವಾಗುವುದು. ಧನಾದಾಯ ಪತ್ನಿಯೊಡನೆ ಇದ್ದ ವಿವಾದ ದೂರವಾಗುವುದು. ತಾ|| ೩೧, ೧ ಶುಭ ವಾರ್ತೆ, ಧನ ಲಾಭ, ಮಿತ್ರರಿಂದ ಚಿಂತೆ

ತುಲ—ಶರೀರ ಸ್ಥಿತಿ ಇದ್ದಕ್ಕಿದ್ದ ಹಾಗೆಯೇ ಕೆಡಬಹುದು. ಜ್ವರ ಭಯ. ಅಗ್ನಿ ವಾಹನಾದಿಗಳಿಂದ ಅಪಘಾತ ಸಂಭವ. ಪ್ರವಾಸಕ್ಕೆ ಯೋಗ್ಯವಲ್ಲ. ನೌಕರಿಯಲ್ಲಿ ಉಪದ್ರವ. ವ್ಯಾಪಾರಾದಿಗಳಲ್ಲಿ ಸ್ಪರ್ಧೆ. ಪತ್ನಿಯೊಡನೆ ಭಿನ್ನತೆ. ಮಕ್ಕಳ ಅನಾರೋಗ್ಯ. ತಾ|| ೩೦, ೩೧ ಚಿತ್ತಶಾಂತಿ. ಆರ್ಥಿಕ ಪರಿಸ್ಥಿತಿ ಸುಧಾರಣೆ

ವೃಶ್ಚಿಕ—ಶರೀರ ಸ್ಥಿತಿ ಉತ್ತಮ. ಆದರೆ ಚಿತ್ತ ಚಾಂಚಲ್ಯ ನಿಮಗೆ ಮೇಲ್ಪಟ್ಟ ಅಧಿಕಾರಿಯಿಂದ ನಿಮಗೆ ದೊರೆಯಬೇಕಾಗಿದ್ದ ಸ್ಥಾನವನ್ನು ಮತ್ತೊಬ್ಬರಿಗೆ ಕೊಡಿಸಲು ತಂತ್ರ. ವಿಶ್ವಾಸಘಾತಕತನ, ಪ್ರವಾಸದಲ್ಲಿ ಕೊನೇ ಘಳಿಗೆಯಲ್ಲಿ ವಿಘ್ನ. ತಾ|| ೨೯, ೩೦ ಅಪ್ರಿಯ ವಾರ್ತೆ. ಶತ್ರುಗಳಿಂದ ತೊಂದರೆ

ಧನು—ಸಪ್ತಾಹವಾದ ಆರೋಗ್ಯ ಸ್ಥಿತಿ ಉತ್ತಮ. ವಿದ್ಯಾರ್ಥಿಗಳಿಗೆ ತೇರ್ಗಡೆ. ಲೇಖಕರ ಕೀರ್ತಿ ಬೆಳಗುವುದು. ತಾ|| ೩೧, ೧ ವಿಶೇಷ ಖರ್ಚು, ಕಾರ್ಯದಲ್ಲಿ ಗೊಂದಲ

ಮಕರ—ಆರೋಗ್ಯ ಕ್ರಮವಾಗಿ ಸುಧಾರಣೆಯಾಗುವುದು. ಮೇಲಧಿಕಾರಿಗಳ ತಂತ್ರವು ಸಾಗದೆ ನಿಮಗೆ ಹೆಚ್ಚಿನ ಅಧಿಕಾರ ಲಭಿಸುವುದು. ತಾ|| ೨೯, ೩೦ ಅತಿಥಿಗಳ ಆಗಮನ. ಚಿತ್ತ ಕ್ಷೋಭೆ.

ಕುಂಭ—ಚಿತ್ತವೃತ್ತಿಯಲ್ಲಿ ಅತ್ಯಂತ ಸಂಶಯ. ನೌಕರಿಯಲ್ಲಿ ಆಕಸ್ಮಿಕ ಸ್ಥಳಾಂತರ. ವ್ಯಾಪಾರ ಉದ್ಯೋಗಗಳಲ್ಲಿ ಶತ್ರು ಪೀಡೆ. ತಾ|| ೩೧, ೧, ೨ ಕುಟುಂಬದಲ್ಲಿ ಕಲಹ, ತಾಯಿಗೆ ಅನಾರೋಗ್ಯ.

ಮೀನ—ಆರೋಗ್ಯ ನೆಟ್ಟಗಿರುವುದು. ಹಣಕಾಸಿನ ಆದಾಯ ಸಮರ್ಪಕ. ಮನಸ್ಸಿನ ಸುಪ್ರಸನ್ನತೆ. ವ್ಯಾಪಾರಾದಿಗಳ ಲಾಭ. ನೌಕರಿಯಲ್ಲಿ ಮೇಲ್ಪಟ್ಟವರಿಂದ ಪ್ರಶಂಸೆ. ಕೈಕೆಳಗಿನವರ ಭಕ್ತಿ. ಪ್ರವಾಸದಲ್ಲಿ ಸುಖ. ತಾ|| ೩೧, ೧ ಶುಭಕಾರ್ಯಗಳು ಜರುಗುವುವು.

ಲಗ್ನದ ಜವಳಿಗಾಗಿ

ಗುರುದೇವಾ ಹಾಲ್

ಬೆಂಗಳೂರು ಜವಳಿ ಅಂಗಡಿ

ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ, :: ಮೈಸೂರು

ಶ್ರೀ ಗಾಯತ್ರೀ

ದಿನವೂ 3 ಪ್ರದರ್ಶನಗಳು

29—5—49ನೇ ಭಾನುವಾರದಿಂದ

ಮೂರು ದಿನಗಳು ಮಾತ್ರ

ಯೂನಿವರ್ಸಲ್‌ರವರ

ಆಲ್ ಮೈ ಸನ್ಸ್

ALL MY SONS

ಪಾತ್ರ—ಎಡ್ವರ್ಡ್ ಜಿ. ರಾಬಿನ್ಸನ್

Office of the University of Mysore,
Camp, Bangalore,
Date 26th May 1949.

NOTIFICATION

Subject: Last date for submitting applications for admission to Degree courses

In partial modification of this office Notification No. Ex 1-1501 48-49 dated 9th May 1949 it is hereby notified that applications for admisson to the University Institutions in respect of Degree Courses has been extended up to 4th June 1949 (inclusive)

By order,
Sd. C. Rangachar,
Ag. Registrar.

NOTIFICATION

Dated 28th May 1949.

It is proposed to start Junior I.Com. class in the D. Banumiah's Institution in Mysore City. Every attempt is being made to procure highly qualified staff. The public are requested to extend their kind co-operation. Further particulars will be notified later on.

B. V. Banumiah,
Organiser.

THE NATIONAL INSTITUTE OF ENGINEERING, MYSORE

NOTIFICATION

The following modifications in dates are made, in the case of the two-year Diploma in Civil Engineering.

1. Last date for receiving applications is changed to 10th June 1949.
2. Date of putting up selection is changed to 13th June 1949.
3. Last date for joining 1st July 1949.

S. Ramaswamy,
Principal.

944, Laxmipuram,
Mysore, 28-5-49.

ರಾಜಕಮಲ್

ಮೈಸೂರು

27-5-49 ರಿಂದ

ಅಮೋಘವಾದ 4ನೇ ವಾರ

ಪ್ರತಿ ದಿನ 3 ಆಟಗಳು

ಫಿಲ್ಮಿಸ್ತಾನ್‌ರವರ

ಷಹೀದ್

—:ಮುಖ್ಯ ಪಾತ್ರ:—

ಕಾಮಿನಿ ಕೌಶಲ್ಯ, ದಿಲೀಪ್ ಕುಮಾರ್, ಚಂದ್ರಮೋಹನ್, ವಿ ಎಚ್ ದೇಸಾಯಿ

Morning Shows

From 27-5-49 for 4 days

BRUTE FORCE

With:-Burt Lancaster, Vyonne De Carlo, Charles Bickford

SARADAVILAS COLLEGE, Mysore

TUTORIAL CLASS

Tutorial Class for students sitting for the Intermediate Examination of September 1949 will be held from 6-6-49. For particulars please enquire in the College.

HON. SECRETARY

VANITHA SADAN,
MYSORE.

Coaching classes for M. S., S. S. L. C. and Intermediate (English only) courses will start work on 10th June. Fees for both terms for M. S. will be Rs. 30, for S. S. L. C. Rs. 50 and for Intermediate (English only) Rs 50. Students desiring to join the classes may apply for seats to the Secretary before the 5th June 1949.

Praphulla Krishna Iyengar,
Hon. Secretary.

ಶುಭಮಸ್ತು

|| ಸಮಸ್ತ ಸನ್ಮಂಗಳಾನಿ ಭವಂತು ||

ಮದುವೆ ಜವಳಿಗಳಿಗೆ

ಹೆಸರುವಾಸಿಯಾದ ಅಂಗಡಿ

ನ್ಯಾಯವಾದ ಬೆಲೆ, ನಾಣ್ಯವಾದ ಮಾಲು.

ಬಾಪೂಸಾಬ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

|| ಶ್ರೀ ಲಕ್ಷ್ಮೀನಾರಾಯಣಸ್ತು ||

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಕೌಟಜ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ. ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು, ಮೊದಲಾಗಿ ಗುಣವಾಗುತ್ತದೆ

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ.— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

* ಪ್ರಭುದೇವಾ ಟಾಕೀಸ್ : : 28—5—49ನೇ ಶನಿವಾರದಿಂದ *

ಪ್ರತಿ ದಿನ 3 ಆಟಗಳು

ನಗ್ಗಯ್ಯ, ಕನ್ನಾಂಬ, ರಾಮತಿಲಕಂ, ಸಿ. ಎಸ್. ಆರ್. ಮುಂತಾದವರು ಪಾತ್ರ ವಹಿಸಿರುವ

ದ್ರೌಪದಿ ವಸ್ತ್ರಾಪಹರಣ

(ತೆಲುಗು)

ಸರಸ್ವತಿ ಟಾಕೀಸಿನವರ ಮಹೋನ್ನತ ಚಿತ್ರ

Edited, printed, and published by A.R. Nagarajan at the Sadhvi Press, D. Subbiah Road, Mysore.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೩೦-೫-೪೯ [ಸಂಚಿಕೆ ೭೭೯

ಜೂನ್ ೭ನೇ ತಾ॥ ನಿಂದ - ದಿವಾನರ ನಿವೃತ್ತಿ -

ಬರುವ ವಾರದಿಂದ ಆರ್ಕಾಟರು ನಿವೃತ್ತರಾಗುವರು

ಪ್ರ॥ ಪ್ರ॥ ಸಭೆಯಲ್ಲಿ ಹೇಳಿಕೆ

ಸ್ವಂ ಸು.ಫೋ.] ಬೆಂಗಳೂರು ೩೦

ಈ ಮಧ್ಯಾಹ್ನ ೧-೩೦ ಗಂಟೆಗೆ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನವು ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಸನ್ಮಾನ್ಯ ಅತಿಥಿಗಳಿಗಾಗಿ ಮೀಸಲಾಗಿದ್ದ ಎತ್ತರದ ವೇದಿಕೆಯ ಮೇಲೆ ದಿವಾನರು ಮಂಡಿಸಿದ್ದರು. ಸಭಾಂಗಣದಲ್ಲಿ ಸದಸ್ಯರುಗಳು ತಮ್ಮ ತಮ್ಮ ಪಕ್ಷಗಳಿಗೆ ಅನುಸಾರವಾಗಿ ಪ್ರತ್ಯೇಕವಾದ ಸ್ಥಾನಗಳನ್ನು ಪಡೆದಿದ್ದರು. ಮಂತ್ರಿಗಳೆಲ್ಲರೂ ಕಾಂಗ್ರೆಸ್ ಪಕ್ಷದ ಮುಂಭಾಗದಲ್ಲಿ ಮಂಡಿಸಿದ್ದರು

ಸಭೆಯು ಹುಟ್ಟಿದಂದಿನಿಂದ ಪ್ರತಿ ವರ್ಷವೂ ನಡೆಯುತ್ತಿದ್ದಂತೆ ಈ ಸಾರಿ ದಿವಾನರ ಮುದ್ರಣವಾದ ಆರಂಭ ಭಾಷಣವು ನಡೆಯಲಿಲ್ಲ. ಆ ಸಿವಿ ಪಗಳ ಕಾಲ ದಿವಾನರು ಮಾತನಾಡಿದರು. ಅದು ಮುಖ್ಯವಾಗಿ ಬೀಳ್ಕೊಡುವ [ಅಪ್ಪಣೆ ತೆಗೆದುಕೊಳ್ಳುವ] ಭಾಷಣವಾಗಿದ್ದಿತು ಅವರು ಈ ಕೆಳಗಿನಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು:-

ದಿವಾನ ಪದವಿಯಿಂದ ಈ ಸಭೆಯಲ್ಲಿ ಮಾಡಲಾಗುತ್ತಿರುವ ಭಾಷಣಗಳಲ್ಲಿ ಇದೇ ಕಟ್ಟಕಡೆಯದು ಸಂಸ್ಥಾನದಲ್ಲಿ ದಿವಾನಗಿರಿಯನ್ನು ರದ್ದುಮಾಡುವಂತೆ ಶ್ರೀಮನ್ಮಹಾರಾಜರವರು ಅಪ್ಪಣೆ ಮಾಡಿದ್ದಾರೆ. ನಾನು ಈ ಸ್ಥಾನಕ್ಕೆ ಬಂದು ಮೂರು ವರ್ಷಗಳಾಗುತ್ತಾ ಬಂತು ಮುಂದಿನ ತಿಂಗಳು ೭ನೇ ತಾ॥ ನಾನು ನನ್ನ ಅಧಿಕಾರವನ್ನು ಬಿಟ್ಟು ಕೊಟ್ಟು ವಿಶ್ರಾಂತಿ ಪಡೆಯುತ್ತೇನೆ ಕಳೆದ ೩ ವರ್ಷಗಳಿಂದ ಸಂಸ್ಥಾನದೊಡನೆ ನಾನು ಹೊಂದಿದ್ದ ಸಂಬಂಧದ ವಿಷಯವಾಗಿ ಬಹುಮಯವಾದ ನೆನಪುಗಳು ನನ್ನ ಮುಂದೆ ಈಗ ಬರುತ್ತಿವೆ ಅನೇಕ ಸಂಸ್ಥೆಗಳಲ್ಲಿ ನಾನು ಕೆಲಸ ಮಾಡಿರುತ್ತೇನೆ ಮೈಸೂರಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ನನಗೆ ಉಂಟಾದ ಅನುಭವವು ಅಮೂಲ್ಯವಾದದು ಮೈಸೂರಿನ ಸಿವಿಲ್ ಸರ್ವೀಸ್ ಅತ್ಯಂತ ಶ್ಲಾಘನೀಯವಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ ದಿವಾನ್ ಸರ್ ಶೇಷಾದ್ರಿ ಅಯ್ಯರ್‌ರವರ ಕಾಲದಿಂದ ಇದುವರೆಗೆ ಅಧಿಕಾರಿ ಮತ್ತು ಪ್ರಾಸಗೀ ಮನಸ್ಸೀಯರುಗಳ ಪ್ರಯತ್ನದಿಂದ ಸಂಸ್ಥಾನದ ಸರ್ವತೋಮುಖವಾದ ಪ್ರಗತಿಯನ್ನು ಹೊಂದಿರುತ್ತದೆ. ಇನ್ನು ಮುಂದೆಯೂ ಸಹ ಸಂಸ್ಥಾನಕ್ಕೆ ಇತೋಪ್ಯತಿಶಯವಾದ ಶ್ರೇಯಸ್ಸು ಉಂಟಾಗಲೆಂದೂ ಶ್ರೀಮನ್ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಸಕಲ ಸನ್ಮಂಗಳಗಳುಂಟಾಗಲೆಂದೂ ಪ್ರಾರ್ಥಿಸುತ್ತೇನೆ

ದಿವಾನರು ತಮ್ಮ ಭಾಷಣದಲ್ಲಿ ಮುಂದಿನ ವರ್ಷದ ಆಯವ್ಯಯದ ಅಂದಾಜುಗಳ ವಿಮರ್ಶೆಯನ್ನು ಸಹ ಮಾಡಿದರು. ಹೊರಗಿನಿಂದ ಬರುತ್ತಿರುವ ಆಹಾರಕ್ಕಾಗಿ ಸರ್ಕಾರದವರು ಕೊಡುತ್ತಿರುವ ೪೧.೫೫ ಲಕ್ಷ ರೂ. ಹೆಚ್ಚಿನ ವೆಚ್ಚವನ್ನು ತಪ್ಪಿಸಿ ಹೆಚ್ಚು ಬೆಳೆಯ ಕಾರ್ಯಕ್ರಮದಿಂದ ಸಂಸ್ಥಾನವು ಸ್ವಯಂ ಪರಿಪೂರ್ಣವಾಗುವಂತೆ ಆಲೋಚಿಸಲಾಗಿದೆಯೆಂದು ತಿಳಿಸಿದರು.

ದಿವಾನರ ಭಾಷಣವಾದ ನಂತರ ಶ್ರೀ ಭೂಪಾಳಂರವರು ಎದ್ದು, ದಿವಾನಗಿರಿ ರದ್ದಿನ ವಿಷಯವಾಗಿ ಪ್ರಸ್ತಾಪಮಾಡಲು ತೊಡಗಿದರು ನಾಳೆಯೂ ಸಹ ಆವು ಸಭೆಗೆ ಬಂದು ಅಧ್ಯಕ್ಷ ಚುನಾವಣೆಯ ಫಲಿತಾಂಶವನ್ನು ಪ್ರಕಟ ಪಡಿಸಿ ಕೆಲವು ನಿಮಿಷ ಕಾಲ ಸಭೆಯಲ್ಲಿರುವುದಾಗಿ ದಿವಾನರು ಹೇಳಿದರು

ಮಂತ್ರಿಗಳ ಪ್ರಮಾಣ ವಚನ

ಇದುವರೆಗೆ ಕೇವಲ ಶಾಸನ ಸಭೆಗಳಲ್ಲಿ ಮಾತ್ರ ಸದಸ್ಯರಾಗಿದ್ದ ಶ್ರೀಮನ್ಮಹಾರಾಜರ ಇತ್ತೀಚಿನ ಘೋಷಣೆಯಂತೆ ಪ್ರ॥ ಪ್ರ॥ ಸಭೆಯ ಸದಸ್ಯತನವನ್ನು ಪಡೆದರು ಜನ ಮಂತ್ರಿಗಳೂ ರಾಜಭಕ್ತಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಅಧ್ಯಕ್ಷತೆಗೆ ಉಮೇದುವಾರರು

ಪ್ರ॥ ಪ್ರ॥ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ಸಿನ ಪರವಾಗಿ ಶ್ರೀ ವಿ. ವೆಂಕಟಪ್ಪನವರೂ, ಸ್ವತಂತ್ರವಾಗಿ ಶ್ರೀ ಎಸ್. ಮಲ್ಲಯ್ಯನವರೂ ಸ್ಪರ್ಧಿಸಿದ್ದಾರೆ ಶ್ರೀಗಳಾದ ಎಂ. ಶಂಕರಲಿಂಗೇಗೌಡರು ಮತ್ತು ಎಂ. ಲಿಂಗೇಗೌಡರು ತಮ್ಮ ಉಮೇದುವಾರಿಕೆಗಳನ್ನು ಈ ದಿನ ವಾಪಸು ತೆಗೆದುಕೊಂಡರು. ಚುನಾವಣೆಯು ಈ ಮಧ್ಯಾಹ್ನ ೩ ರಿಂದ ೫ ಗಂಟೆವರೆಗೆ ನಡೆಯುತ್ತದೆ.

ಭಾರತದಲ್ಲಿ ಮೈಸೂರು ರೈಲ್ವೆ ಐಕ್ಯವಾಗಬೇಕು

ಮೈಸೂರು ರೈಲ್ವೆಯನ್ನು ಭಾರತದ ರೈಲ್ವೆಯಲ್ಲಿ ಐಕ್ಯಮಾಡಬೇಕೆಂದು ಕಳೆದ ೨೭ನೇ ತಾ॥ ಬೆಂಗಳೂರಿನಲ್ಲಿ ನಡೆದ ರೈಲ್ವೆ ಕೆಲಸಗಾರರ ಸಭೆಯಲ್ಲಿ ನಿರ್ಣಯ ಮಾಡಲಾಯಿತು

ಮಂತ್ರಿ ಮಂಡಲದ ಪುನರ್ವ್ಯವಸ್ಥೆಯೇ?

ಸ್ವ. ಫೋ.] ಬೆಂಗಳೂರು ೩೦

[ಶಾ]ಸನ ಸಭೆಗಳ ಅಧಿವೇಶನವು ಮುಗಿ[ದ ನಂ]ತರ, ಪಕ್ಷದ ಸದಸ್ಯರ ಅಭಿಪ್ರಾಯ[ವನ್ನು ಪ]ಡೆದು, ಮಂತ್ರಿ ಮಂಡಲದ ಪುನರ್ವ್ಯ[ವಸ್ಥೆಯ]ನ್ನು ಮಾಡಲಾಗುವುದೆಂಬದೂ, ಅಲ್ಲಿಯ[ವರೆಗೆ] ಈ ಮಂತ್ರಿ ಮಂಡಲವೇ ಇರುವು[ದೆಂದು] ನಂಬಲರ್ಹವಾದ ಕಡೆಯಿಂದ ತಿ[ಳಿದು] ಬಂದಿದೆ. ಈಗಿನ ಮುಖ್ಯ ಮಂತ್ರಿಗ[ಳಾದ] ಶ್ರೀ ಚೆಂಗಲರಾಯರೆಡ್ಡಿಯವರು ನಾಯಕರಾಗಿ ಚು[ನಾಯಿ]ತರಾಗಿದ್ದರೆ ಈ ಮಂತ್ರಿ ಮಂಡಲ[ವು ತ]ನ್ನ ರಾಜೀನಾಮೆ ಕೊಡಬೇಕಾಗಿ[ಲ್ಲ]

ಮಂತ್ರಿ ಮಂಡಲವು ಶಾಸನ ಸಭೆಗಳಿಗೆ ಅಧೀನ

ದಿವಾನರ ಹುದ್ದೆಯು ರದ್ದಾಗಿ, ಪ್ರಜಾ[ಪ್ರ]ತಿನಿಧಿ ಸಭೆಗೆ ಚುನಾಯಿತ ಅಧ್ಯಕ್ಷರು [ಬಂದ]ಮೇಲೆ, ಕಾಂಗ್ರೆಸ್ ಪಕ್ಷಗಳಿಂದ ನಾಯಕ[ರು] ಹೊಸದಾಗಿ ಆರಿಸಲ್ಪಟ್ಟಿರುವುದರಿಂದ [ಇ]ನ್ನು ಮುಂದೆ ಮಂತ್ರಿ ಮಂಡಲವು ಶಾ[ಸನ] ಸಭೆಗಳಿಗೆ ಉತ್ತರವಾದಿಯಾಗಿರು[ವುದೆಂದು ಸಂಸ್ಥಾನ]ದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. [ಸಿದ್ಧ]ಲಿಂಗಯ್ಯನವರು ತಿಳಿಸಿರುತ್ತಾರೆ

[ರ]ಜ್ವಿ ವಿಚಾರಣೆ ವಕಾಲತ್ತಿಗೆ [ಪಾಕಿಸ್ತಾ]ನರ ಪತ್ನಿಯ ಏರ್ಪಾಡು

[ಹೈದರಾ]ಬಾದಿಗೆ ಹೋಗಿರುವ ಖಾಸಿಂ ರಜ್ವಿ[ಯವರ] ಪತ್ನಿ ಬೇಗಂ ರಜ್ವಿಯವರು ತನ್ನ [ಗಂಡ]ನ ಮೇಲೆ ಹೂಡಲಾಗಿರುವ ಮೊಕ[ದ್ದಮೆ]ಯಲ್ಲಿ ರಜ್ವಿಯ ಕಡೆ ವಾದಿಸಲು [ವಕೀಲ]ರನ್ನು ಇಟ್ಟುಕೊಳ್ಳಲು ಅವಕಾಶ [ಕಲ್]ಪಿಸುವುದಕ್ಕಾಗಿ ಪಾಕಿಸ್ತಾನದ ರಾಜ[ತಾಂ]ತ್ರಿಕ ಮಾರ್ಗಗಳ ಮೂಲಕ ಪ್ರಯ[ತ್ನಿ]ಸುತ್ತಿದ್ದಾರೆ ಅವರು ಗೊತ್ತು ಪ[ಡಿಸಿ]ರುವ ಸರ್. ಎ ರಹಮಾನ್ ಎಂಬ ಪಾಕಿ[ಸ್ತಾ]ನದ ಲಾಯರನ್ನು ಹೈದರಾಬಾದು ಸ[ರ್ಕಾ]ರದವರು ಅಂಗೀಕರಿಸಲಿಲ್ಲ ಈಗ ಹೈ[ದರಾ]ಬಾದಿನಲ್ಲಿರುವ ಸ್ಥಿತಿಯಲ್ಲಿ ಅಲ್ಲಿಯ [ಯಾ]ರೂ ವಕಾಲತ್ತು ವಹಿಸುವುದಿಲ್ಲವೆಂ[ದು] ಬೇಗಂ ರಜ್ವಿಯವರು ಹೇಳಿರುತ್ತಾರೆ. [ಇದ]ಕ್ಕಾಗಿ ಹಣ ಶೇಖರಣೆಯೂ [ನಡೆಯು]ತ್ತಿದೆ.

ಪಾಕಿಸ್ತಾನ್ ರೇಡಿಯೋ ಕೇಳಕೂಡದು

[ಅ]ಲಹಾಬಾದಿನಲ್ಲಿ ಮೆರವಣಿಗೆ, ಸಭೆ, [ಪ್ರ]ದರ್ಶನ ನಡೆಸುವುದು, ಆಯುಧಗ[ಳ]ನ್ನು ಹಿಡಿದು ತಿರುಗುವುದು, ಧ್ವನಿವರ್ಧಕ [ಮ]ತ್ತು ಇತರ ಅಪಾಯಕರ ವಸ್ತುಗಳನ್ನು [ಇ]ಟ್ಟುಕೊಳ್ಳುವುದು, ಪಾಕಿಸ್ತಾನದ ರೇಡಿ[ಯೋ]ವನ್ನು ಕೇಳುವುದು ಇವೇ ಮುಂತಾ[ದವ]ುಗಳನ್ನು ಅಲ್ಲಿನ ಜಿಲ್ಲಾಧಿಕಾರಿಗಳು ಪ್ರ[ತಿಬಂ]ಧಿಸಿ ಆಜ್ಞೆ ಹೊರಡಿಸಿದ್ದಾರೆ

ಸಂಸ್ಥಾನಗಳ ಹಣಕಾಸಿನ ಮೇಲೆ ಕೇಂದ್ರದ ಹತೋಟಿ

[ಬ]ರುವ ವರ್ಷ ಏಪ್ರಿಲ್ ೧ನೇ ತಾರೀಖಿ[ನಿಂ]ದ ಭಾರತದ ಸಂಸ್ಥಾನಗಳ ಹಣಕಾಸಿ[ನ ಮ]ೇಲೆ ಕೇಂದ್ರ ಸರಕಾರವು ಕೇಂದ್ರಕ್ಕೆ [ಸಂ]ಬಂಧಿಸಿದ ವಿಷಯಗಳಲ್ಲಿ ಹತೋಟಿ [ಇ]ಟ್ಟುಕೊಳ್ಳುವುದೆಂದು ಹೇಳಲಾಗಿದೆ [ಸಂಸ್ಥಾ]ನಗಳ ಆಬ್ಕಾರಿ, ಆದಾಯ ತೆರಿಗೆ, [ಮತ್ತು] ಇತರ ಕೇಂದ್ರದ ತೆರಿಗೆಗಳನ್ನು [ಕೇಂದ್ರ] ಸರಕಾರವೇ ವಸೂಲು ಮಾಡುವು[ದು]. ರಕ್ಷಣೆ, ರೈಲ್ವೆ, ಅಂಚೆ, ಮುಂತಾದು[ವು ಏ]. ೧ ರಿಂದ ಕೇಂದ್ರದ ಹತೋಟಿ[ಗೆ ಬರು]ವುವು.

ಸಿ. ಆರ್. ರೆಡ್ಡಿಯವರು ಪ್ರೋ-ಚಾನ್ಸಿಲರ್?

ಮೈಸೂರು ೩೦

ಮೈಸೂರು ವಿಶ್ವ ವಿದ್ಯಾಲಯಕ್ಕೆ ಪ್ರೋ ಚಾನ್ಸಿಲರನ್ನು ನೇಮಕ ಮಾಡಬೇಕೆಂಬ ಸಲಹೆಯನ್ನು ಶ್ರೀಮನ್ಮಹಾರಾಜರವರು ಒಪ್ಪುವುದಾದರೆ, ಆಂಧ್ರ ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಡಾ॥ ಸಿ. ಆರ್. ರೆಡ್ಡಿಯವರನ್ನು ಆ ಸ್ಥಾನಕ್ಕೆ ನೇಮಿಸಬಹುದೆಂದು ತಿಳಿದು ಬಂದಿದೆ

ಶ್ರೀಮನ್ಮಹಾರಾಜರು ನೀಲಗಿರಿಗೆ

ಉದಕಮಂಡಲಕ್ಕೆ ಶ್ರೀಮನ್ಮಹಾರಾಜರವರು ಪಕ್ಷೀ ಪರಿವಾರ ಸಮೇತರಾಗಿ ನಿನ್ನೆ ಮಧ್ಯಾಹ್ನ ಪ್ರಯಾಣ ಬೆಳೆಸಿದರು. ಅವರು ೨ ವಾರ ಕಾಲ ಅಲ್ಲಿ ಇರುವರು.

ಮಹಾತ್ಮರ ಸ್ಮರಣಾ ದಿನಾಚರಣೆ

ರಾಜಧಾನಿಯ ಗೊಲ್ಲಗೇರಿಯ ಶ್ರೀ ರಾಮ ಸಹಾಯ ಸಂಘದಲ್ಲಿ ನಾಳೆ ಸಂಜೆ ೫ ಗಂಟೆಗೆ ಬಾಪೂಜಿ ಸ್ಮರಣಾ ದಿನಾಚರಣೆಯು ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀ ಹೆಚ್. ಟಿ. ಸಹೋದರರಿಂದ ಗಾನ ವಿಹಾರವೂ ಜರುಗುವುದು

ಅಗರದ ಶ್ರೀ ಎ ಆರ್. ಸುಂದರ ಅಯ್ಯಂಗಾರ್‌ರವರ ಪುತ್ರಿ ಚಿ॥ ಸೌ॥ ಶಾರದಾ ಮತ್ತು ಶ್ರೀ ಜಿ ಇ ವೆಂಕಟೇಶ ಅಯ್ಯಂಗಾರ್‌ರವರ ಪುತ್ರ ಶ್ರೀ ಜಿ.ವಿ. ಶ್ರೀನಿವಾಸರವರ ವಿವಾಹವು ರಾಜಧಾನಿಯಲ್ಲಿ ನೆರವೇರಿತು.

ಕೊಚ್ಚಿಯಲ್ಲಿ ೧೨ ಔನ್ಸ್ ಪಡಿತರ

ನಿನ್ನೆಯಿಂದ ಕೊಚ್ಚಿಯಲ್ಲಿ ೧೨ ಔನ್ಸ್ ಪಡಿತರವನ್ನು ಕೊಡುವಂತೆ ಸರ್ಕಾರವು ಆಜ್ಞೆ ಮಾಡಿದೆ -೧೦ ಔನ್ಸ್ ಅಕ್ಕಿ ಮತ್ತು ೨ ಔನ್ಸ್ ಗೋಧಿ ಕೊಡಲಾಗುವುದು

ರಾಂಪುರದ ನವಾಬರಿಗೆ ೮ ಲಕ್ಷ ರೂ. ವರ್ಷಾಶನ

ಬರುವ ಜುಲೈ ೧ನೇ ತಾ ರಾಂಪುರ ಸಂಸ್ಥಾನವನ್ನು ಭಾರತ ಸರಕಾರದವರು ವಹಿಸಿಕೊಳ್ಳುವುದರಿಂದ, ಅಲ್ಲಿ ಹಂಗಾಮಿ ಮುಖ್ಯಮಂತ್ರಿ ಶ್ರೀ ಹೋರ್ಕರವರನ್ನೇ ಮುಖ್ಯ ಆಡಳಿತಗಾರರಾಗಿ ನೇಮಿಸಲಾಗುವುದೆಂದು ಹೇಳಲಾಗಿದೆ ನವಾಬರಿಗೆ ವರ್ಷಕ್ಕೆ ೮ ಲಕ್ಷ ರೂ. ಗಳ ಭತ್ಯವನ್ನು ಕೊಡಲಾಗುವುದು

ಕಮ್ಯೂನಿಸ್ಟನ ಶಿರಚ್ಛೇದನ

ಹೈದರಾಬಾದು ಕಮ್ಯೂನಿಸ್ಟ್ ಪಾರ್ಟಿ ಸದಸ್ಯನಾಗಿದ್ದು, ಅದಕ್ಕೆ ಸೇರಿದ ಹಣಕಾಸುಗಳನ್ನು ಹಿಂದಿರುಗಿಸಿದನೆಂಬ ಆಪಾದನೆ ಮೇಲೆ ಒಬ್ಬ ಕಮ್ಯೂನಿಸ್ಟ್ ಸದಸ್ಯನನ್ನು ಅದೇ ಸಂಗಡದವರು ವಿಚಾರಣೆಗೆ ಗುರಿಪಡಿಸಿ ಮರಣ ದಂಡನೆ ಶಿಕ್ಷೆಯನ್ನು ವಿಧಿಸಿ ಆತನ ಶಿರಚ್ಛೇದನ ಮಾಡಿದರೆಂದೂ, ವರದಿಯಾಗಿದೆ ಖೂನಿ ಆಪಾದನೆ ಮೇಲೆ ಪೋಲೀಸರು ಏಳು ಜನರನ್ನು ದಸ್ತಗಿರಿ ಮಾಡಿರುತ್ತಾರೆ

ನಷ್ಟದ ಬಡ್ಜೆಟ್

ಸ್ವಂ.ಸು ಫೋ.] ಬೆಂಗಳೂರು ೩೦

ಈ ಸಾರಿ ಪ್ರ॥ ಪ್ರ॥ ಸಭೆಯಲ್ಲಿ ಮಂಡಿಸಲ್ಪಡುವ ಆಯವ್ಯಯ ಪಟ್ಟಿಯು ರೂ ೧,೯೭,೧೧,೦೦೦ ನಷ್ಟವನ್ನು ಸೂಚಿಸುತ್ತದೆ ಸಂಸ್ಥಾನದ ಒಟ್ಟು ವರಮಾನ ರೂ ೧೩,೪೯,೯೧,೦೦೦, ವೆಚ್ಚ ೧೫,೪೭,೦೨,೦೦೦

ಸ್ಕೂಲ್ ಫೈನಲ್ ಪರೀಕ್ಷೆ ಯಲ್ಲಿ ಉತ್ತೀರ್ಣರಾದ ಫಲಿತಾಂಶ

[illegible] ಬೆಂಗಳೂರಿನ [illegible] ಕಾಲೇಜು [illegible] ಫೈನಲ್ [illegible] ಲ್ ಪರೀಕ್ಷೆಯ [illegible] ಬೇಕೆಂದಿದ್ದಾರೆ. [illegible] ಪರೀಕ್ಷೆಯಲ್ಲಿ [illegible] ತೇರ್ಗಡೆಯಾದವರು [illegible] ವಿದ್ಯಾರ್ಥಿಗಳು [illegible] ರುವರು [illegible] ತರಗತಿಯಲ್ಲಿ [illegible] ಗಾಗಿಯಾಗಿ ಎಲ್ಲರಲ್ಲಿಯೂ [illegible] ವಯಸ್ಸಿನ [illegible] ವಯಸ್ಸಿನ ವರಾದುದರಿಂದ ಕಾಲೇಜಿನ [illegible] ಪ್ರವೇಶವನ್ನು ಹೊಂದಿರುವುದಿಲ್ಲ ಈ [illegible] ವಿದ್ಯಾರ್ಥಿಗಳೂ ಮತ್ತು ಶಿಕ್ಷಣ ಕ್ರಮವೂ ಇರುವ ಶಾಲೆಗೆ ಅಲ್ಲಿನ ಸರ್ಕಾರದವರು ಒಂದು ಶಾಶ್ವತವಾದ ಪಾರಿತೋಷಕವನ್ನು ಕೊಡ ಬೇಕಾಗಿ ನಿರ್ಧರಿಸಿದ್ದಾರೆ

ಚಕ್ರವರ್ತಿಗಳ ವರ್ಧಂತಿ ರಜಾ ಇದೇ ಕಡೆಯ ಬಾರಿ

ಈ ಸಾರಿ ಬ್ರಿಟಿಷ್ ದೊರೆಗಳ ವರ್ಧಂತಿ ದಿನ ಕೇಂದ್ರದಲ್ಲಿ ರಜವೇ ಕಟ್ಟಕಡೆಯದೆಂದು ಘೋಷಿಸಿದೆ. ಮುಂದೆ ಭಾರತವು ರಿಪಬ್ಲಿಕ್ ಆಗುವುದರಿಂದ ಬ್ರಿಟಿಷ್ ದೊರೆಗಳ ವರ್ಧಂತಿಯನ್ನು ನಮ್ಮ ದೇಶದಲ್ಲಿ ಆಚರಿಸಲಾಗುವುದಿಲ್ಲ

ಚಿಯಾಂಗ್ ಕೈಷೇಕರು ಜಪಾನಿನಲ್ಲಿ?

ಚೀಣದ ನಾಯಕರಾದ ಮಾರ್ಷಲ್ ಚಿಯಾಂಗ್ ಕೈಷೇಕರು ಗುಪ್ತ ವಿಮಾನದಲ್ಲಿ ಜಪಾನಿಗೆ ತೆರಳಿದರೆಂದೂ, ಅಲ್ಲಿ ಜಪಾನಿನ ಸೇನೆಗಳನ್ನು ಸಂಗ್ರಹಿಸಿ ಚೀಣದಲ್ಲಿ ಕಮ್ಯೂನಿಸ್ಟರಮೇಲೆ ಕಾದಾಡಲು ಅವುಗಳನ್ನು ತರುವುದಕ್ಕಾಗಿ ಪ್ರಯತ್ನಿಸುತ್ತಿರುವರೆಂದೂ ವದಂತಿ ಹರಡಿದೆ

NOTIFICATION

Dated 28th May 1949.

It is proposed to start Junior I Com class in the D. Banumiah's Institution in Mysore City. Every attempt is being made to procure highly qualified staff. The public are requested to [illegible] their kind co-operation. Further particulars will be notified later on.

B. V. Banumiah
Organiser

ನರಿಯು ಮಗುವನ್ನು ಕೊಂಡುಹೋಯಿತು

[illegible] ಜಿಲ್ಲೆಯ [illegible] ಹೋಬಳಿಯ [illegible] ಒಬ್ಬ [illegible] ಮಗನನ್ನು [illegible] ತಿಂಗಳ ಮಗನನ್ನು [illegible] ಅದು [illegible] ಹೊರಗೆ ಹೋಗಿ [illegible] ಸಮಯದಲ್ಲಿ [illegible] ಮಗುವನ್ನು [illegible] ಹೋಯಿತೆಂದು [illegible] ಹುಡುಕಿ [illegible] ಹಳ್ಳಿಯ [illegible] ಮಗುವನ್ನು [illegible] ಜನರು ನರಿಯನ್ನು [illegible] ಹೋಗಲು, [illegible] ಅರ್ಧ ತಿಂದ ಮಗುವನ್ನು ಅಲ್ಲಿಯೇ ಬಿಟ್ಟು ಓಡಿತು ಆದರೆ ಅಷ್ಟು ಹೊತ್ತಿಗೆ ಮಗುವಿನ ತಲೆಯು ಅರ್ಧ ಭಾಗವು ತಿನ್ನಲ್ಪಟ್ಟು ಅದು ಮೃತಿಹೊಂದಿತ್ತೆಂದು ವರದಿಯಾಗಿದೆ

ಜೈನರು ಹಿಂದುಗಳಲ್ಲ

ಈ ನಾಂ ಪ್ರಜಾಪ್ರತಿನಿಧಿ ಸಭೆಯಲ್ಲಿ ದೇವಾಲಯ ಪ್ರವೇಶದ [illegible] ಮಸೂದೆಯನ್ನು ಸರ್ಕಾರದವರು ಮಂಡಿಸಿ, ಅದರಲ್ಲಿ ಜೈನರು ಹಿಂದೂಗಳೆಂದು ನಮೂದಿಸಲಿದ್ದಾರೆ ಇದು ಜೈನ ಜನಾಂಗದವರಿಗೆ ಕಳವಳವನ್ನುಂಟುಮಾಡಿದೆ ಜೈನರು ಹಿಂದೂಗಳಲ್ಲವಾದುದರಿಂದ ಆ ವರ ಧರ್ಮದ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ ಆದುದರಿಂದ ಮಸೂದೆಯನ್ನು ಸರ್ಕಾರದವರು ವಾಪಸು ತೆಗೆದುಕೊಂಡು ಜೈನ ಜನಾಂಗದಲ್ಲಿ ಶಾಂತಿ ನೆಲೆಸುವಂತೆ ಮಾಡಬೇಕು ಎಂದು ಶ್ರೀ ಎಸ್. ಧನ್ಯಕುಮಾರ್‌ರವರು ಪ್ರಾರ್ಥಿಸುತ್ತಾರೆ.

ಕಮ್ಯೂನಿಸ್ಟರಿಂದ ಕಾಂಗ್ರೆಸ್ಸಿನವರ ಅಪಹರಣ

ಹೈದರಾಬಾದಿನ ಹಲವು ಕಾಂಗ್ರೆಸ್ ಸದಸ್ಯರನ್ನು ಅಲ್ಲಿನ ಕಮ್ಯೂನಿಸ್ಟ್ ಪಂಗಡದವರು ಅಪಹರಿಸಿ ಅವರನ್ನು ಸುತ್ತಮುತ್ತಲೂ ಇರುವ ಬೆಟ್ಟ ಗುಡ್ಡಗಳಿಗೆ ಸಾಗಿಸುತ್ತಿರುವರೆಂದೂ, ಅಂತಹವರನ್ನು ಪತ್ತೆ ಹಚ್ಚಲು ಪೋಲೀಸಿನವರು ತೀವ್ರ ಕಾರ್ಯಕ್ರಮ ಕೈಗೊಂಡಿರುವರೆಂದೂ ವರದಿಯಾಗಿದೆ.

ಗಾಂಧಿ ನಿಧಿಗೆ ೮ ಕೋಟಿ ರೂ

ಮಹಾತ್ಮಾ ಗಾಂಧಿಯವರ ಸ್ಮಾರಕ ನಿಧಿಗೆ ಏಪ್ರಿಲ್ ತಿಂಗಳ ಕೊನೆಯ ವರೆಗೆ [illegible] ರೂಪಾಯಿ ಸಂಗ್ರಹವಾಗಿದೆ.

ಬೆಂಗಳೂರಿನಲ್ಲಿ

ಶ್ರೀ ರಾಮಪುರದಲ್ಲೊಂದು ಸೈಟು
ಅಳತೆ 60'×40' ಬೆಲೆ 3500
ತಾರಸಿ, ಮಂಗಳೂರು ಹೆಂಚು, ನಲ್ಲಿ, ದೀಪ [illegible] ಇದ್ದು ನರಸಿಂಹರಾಜ ಕಾಲೋನಿಯ [illegible] ರಸ್ತೆಯಲ್ಲಿ ಹೊಸದಾಗಿರುವ [illegible] ಹೌಸ್ ಇರುವ ಮನೆ ರೂ 20,000

ಮೈಸೂರಲ್ಲಿ

Ford Mercury Car
Condition New. Rs 12500
ರಾಜಧಾನಿಗೆ 1 ಮೈಲಿ ದೂರದಲ್ಲಿ ಒಂದೇ ತಾಕಿನಲ್ಲಿ 42 ಎಕ್ರೆ ಭೂಮಿ 15000 ರೂ
ಲಕ್ಷ್ಮೀಪುರಂನಲ್ಲಿ ಬಂಗ್ಲೆ ಸೈಟು
ಅಳತೆ 90'x60' ರೂ. 5000
ಕೆಂಪು ನಂಜಂಬಾ ಅಗ್ರಹಾರದಲ್ಲಿ
100'x25' ಜಾಗದಲ್ಲಿ ಮನೆ ರೂ 16,000
ಲಕ್ಷ್ಮೀಪುರಂನಲ್ಲಿ ಮನೆ ಸೈಟು
ಅಳತೆ 60'x40' ಬೆಲೆ 2500 ರೂ.
ಸಿಮೆಂಟ್ ಹೌಸ್ ಸಿಲ್ಕ್‌ಫ್ಯಾಕ್ಟರಿರಸ್ತೆಯಲ್ಲಿ
40'X60 ಸೈಟು ಬೆಲೆ 980ರೂ.

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ಬಳಿ : ಮೈಸೂರು

ವಿವಾಹ ಮಹೋತ್ಸವಗಳು

'ಮೈಸೂರು ಪತ್ರಿಕೆ'ಯ ಸಂಪಾದಕರಾದ ಶ್ರೀ ಟಿ. ನಾರಾಯಣರವರು ತಮ್ಮ [illegible] ಶ್ರೀ ಚಿ॥ ಸೌ॥ ಜಯಲಕ್ಷ್ಮಮ್ಮನನ್ನು [illegible] ಫಾರೆಸ್ಟ್ ರೇಂಜರಾದ ಶ್ರೀ [illegible] ಗೋಪಾಲಯ್ಯನವರ ಪುತ್ರ ಶ್ರೀ [illegible] ರಾಮರಾಯರಿಗೆ ಕೊಟ್ಟು ವಿವಾಹವನ್ನು ನಿನ್ನೆ ದಿನ ರಾಜಧಾನಿಯಲ್ಲಿ ನೆರವೇರಿಸಿದರು

ಉದಕಮಂಡಲದ ರೇಡಿಯೋ [illegible] ನಿಯರಾದ ಶ್ರೀ ವಿ. ಎಸ್. ರಾಮ[illegible]ರವರ ಸೋದರಳಿಯ ಶ್ರೀ ಪಿ [illegible] ಶಂಕರನಾರಾಯಣ ಮತ್ತು ಆಗರದ [illegible] ಎ. ಆರ್. ಸುಂದರ ಅಯ್ಯಂಗಾರರವರ [illegible] ಚಿ॥ ಸೌ॥ ಜಯಮ್ಮ,

ಮೈಸೂರು ಶ್ರೀ ಕೃಷ್ಣಾ [illegible] ಮಾರ್ಟ್ ಮಾಲೀಕರಾದ ಶ್ರೀ ಕೆ [illegible] ಶ್ರೀಕಂಠಶೆಟ್ಟರ ಪುತ್ರ ಶ್ರೀ ಕೆ. [illegible] ಬ್ಬರಾಯಶೆಟ್ಟಿ ಮತ್ತು ಬೆಂಗಳೂರಿನ [illegible] ದೇವಯ್ಯ ಶೆಟ್ಟರ ಪುತ್ರಿ ಚಿ॥ [illegible] ಲಕ್ಷ್ಮೀಕಾಂತಮ್ಮ,

ಮೈಸೂರು ವೆಲ್‌ಕಮ್ ಲಾಡ್ಜಿನ [illegible] ಲೀಕರಾದ ಶ್ರೀ ಪಿ 'ಮಂಜನಾಥಯ್ಯನವರ ಪುತ್ರಿ ಚಿ॥ ಸೌ॥ ನಾಗರತ್ನಮ್ಮ [illegible] ಕುಪ್ಪಗುಡ್ಡೆಯ ಶ್ರೀ ಅನಂತರಾಯರ [illegible] ತ್ರ ಶ್ರೀ ಎಲ್ ಬಂಗಾರಸ್ವಾಮಿರಾವ್,

ಇವರುಗಳ ವಿವಾಹ ಮಹೋತ್ಸವಗಳು ಮೈಸೂರಿನಲ್ಲಿ ಜರುಗಿದುವು

ಲಗ್ನದ ಔತಣಗಳಿಗಾಗಿ
ಗುರುದೇವಾ ಹಾಲ್
[illegible]
[illegible]
[illegible], :: ಮೈಸೂ[illegible]

Office of the University of Mysore
Camp: Bangalore,
Dated 28th May 1949.

NOTIFICATION

Leaving Certificates to be attached to Application Forms

Candidates who app[ly] for admission to more th[an] one College may attach [a] copy of the Leavin[g] Certificate certified by [a] Gazetted Officer. Th[e] original leaving certifica[te] must be produced [at] admission to the College.

By order,
Sd C. Rangach[ari]
Ag Registra[r]

Edited, printed, [and] published by A.R Nag[a]rajan at the Sadhvi Pre[ss] D. Subbiah Road, Myso[re]

BANGALORE RACES 1949

ಜೂನ್ 1, 4, 8, 11, 18, 22, 25, 29 ಮತ್ತು ಜುಲೈ 2 ರಲ್ಲೂ
ಬಾರ್ ಮೇಕರ್ಸ್ .. . ಟೋಟಲೈಜೇಟರ್ಸ್
ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ. 2 ಸ್ವೀಪ್

ಪ್ರವೇಶ:
- ಮೊದಲನೇ ತರಗತಿ.- ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ
- ಎರಡನೇ ತರಗತಿ.- ಪುರುಷರ, ಅಥವಾ ಸ್ತ್ರೀಯರು ರೂ 2 ,,

ಸೀಸನ್ ಟಿಕೆಟ್:- ಪುರುಷರು ರೂ. 60, ಸ್ತ್ರೀಯರ, ರೂ 35.

[illegible]

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೋಮಕಲಾ

ಗಂಡಸರ ಮೂತ್ರ ಕೋಶದ ಬಾವು, ಕೆಂಪು ಮೈ ಮೇಹ ಮೇಹದ ಹುಣ್ಣುಗಳು, ಮೇಲೆ ವ್ರಣಗಳು [illegible]. ಪಥ್ಯವಿಲ್ಲದೆ ಸೇವಿಸುವ ಔಷಧಿ

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ.--
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು

ಬೀರು, ಕಾಫರ್ (ಕ್ಯಾಷ್ ಬಾಕ್ಸ್ 1 ಅಂಗುಲ ರೂ. 3-8-0)
[illegible] ಕಳ್ಳರ ಭಯವಿಲ್ಲ
ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್
2767 ಹಳ್ಳದಕೇರಿ :.. ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೩೧-೮-೪೯ [ಸಂಚಿಕೆ ೨೩೦

ಹನುಮಂತಯ್ಯನವರು ಉಪ ಮುಖ್ಯ ಮಂತ್ರಿ ?

ಪ್ರ॥ ಪ್ರ॥ ಸಭಾಧ್ಯಕ್ಷತೆಗೆ ವೆಂಕಟಪ್ಪನವರ ಆಯ್ಕೆ

ಬೆಂಗಳೂರು ೩೧

ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷ ಚು ನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಶ್ರೀ ವಿ ವೆಂಕಟಪ್ಪನವರಿಗೆಬಹುಮತಬಂದು ಅವ ರು ಚುನಾಯಿತರಾದರು ಅವರಿಗೆ ೫೦ ಓಟುಗಳೂ ಸ್ವತಂತ್ರ ಉಮೇದುವಾರರಾ ದ ಶ್ರೀ ಎಸ್. ಸಿ. ಮಲ್ಲಯ್ಯನವರಿಗೆ ೨೦ ಓಟುಗಳೂ ಬಂದುವು

ರಿಕ್ಷಾವಾಲಾ ವೇಷದಲ್ಲಿ ಪೊಲೀಸ್ ಅಧಿಕಾರಿ

ಮೀರತ್ತಿನ ಪೊಲೀಸ್ ಸಬ್ ಇನ್ಸ್‌ಪೆಕ್ಟ ರೊಬ್ಬರು ರಿಕ್ಷಾ ಗಾಡಿ ಎಳೆಯುವವನವೇ ಷವನ್ನು ಧರಿಸಿ, ಅಲ್ಲಿನಕಾಳಸಂತೆ ವರ್ತಕ ರ ಹತ್ತಿರ ಹೋಗಿ, ರಿಕ್ಷಾದಲ್ಲಿ ಇಜ್ಜಲ ನ್ನು ತುಂಬಿಸಿ, ಕಾಳಸಂತೆ ದರದಲ್ಲಿ ಅದ ಕ್ಕೆ ಹಣ ಕೊಟ್ಟು, ಅನಂತರ ಅವ್ಯಾಪಾರಿ ಯನ್ನು ದಸ್ತಗಿರಿ ಮಾಡಿದರೆಂದು ವರದಿ ಯಾಗಿದೆ.

ಗ್ರೀಸಿನಲ್ಲಿ ೨೮ ಸಾವಿರ ಮಕ್ಕಳ ಅಪಹರಣ

ಗ್ರೀಸಿನ್ನಗೆರಿಲ್ಲಾ ಪಡೆಯವರು ಇಲ್ಲಿ ಯವರೆಗೆ ೨೮ ಸಾವಿರ ಮಕ್ಕಳನ್ನು ಅಪ ಹರಿಸಿದ್ದಾರೆಂದೂ ಹೇಳಲಾಗಿದೆ. ಅಪಹೃ ತ ಮಕ್ಕಳನ್ನು ವಾಪಸ ಮಾಡಬೇಕೆಂದು ದೇವರಲ್ಲಿ ಮೊರೆ ಇಡಲು ಅಲ್ಲಿನ ಅರಸರ ನೇತೃತ್ವದಲ್ಲಿ ಪ್ರಾರ್ಥನೆಯನ್ನು ನಡೆಸ ಲಾಯಿತು.

ವಿಶ್ವದ ಬ್ಯಾಂಕಿನಿಂದ ಭಾರತಕ್ಕೆ ಸಾಲ

ಅಂತರ ರಾಷ್ಟ್ರೀಯ ಬ್ಯಾಂಕಿನಿಂದ ಭಾ ರತವು ೩೪ ಕೋಟಿ ರೂ. ಸಾಲ ಪಡೆಯು ವುದೆಂದೂ,ಅದನ್ನು ರೈಲ್ವೆ ಇಂಜನ್ನು ಮ ತ್ತು ಟ್ರಾಕ್ಟರುಗಳನ್ನು ಕೊಳ್ಳಲು ಉಪ ಯೋಗಿಸಲಾಗುವುದೆಂದೂ ತಿಳಿದು ಬಂದಿದೆ.

ಗಣಿ ಇಂಜನಿಯರುಗಳ ಕೊಲೆ

ಬೊಲಿವಿಯಾದ ತವರದ ಗಣಿ ಪ್ರದೇ ಶದ ಕಟಾವಿಯಲ್ಲಿ ಅಲ್ಲಿನ ಕಾರ್ಮಿಕರು ಮೊನ್ನೆ ದಿನ ಗಲಭೆ ನಡೆಸಿ, ೧೫ ಜನ ಇಂಜನಿಯರುಗಳನ್ನು ಕೊಲೆ ಮಾಡಿದ ರೆಂದು ವರದಿಯಾಗಿದೆ. ಬೊಲಿವಿಯಾದಲ್ಲಿ ಸರ್ವತ್ರಿಕ ಮುಷ್ಕರ ನಡೆಸಲು ಪಿತೂರಿ ನಡೆಸುತ್ತಿದ್ದಾರೆಂದು ಆ ಗಣಿಯ ಕೆಲಸ ಗಾರರ ಸಂಘದ ಅಧಿಕಾರೀ ವರ್ಗದವರ ನ್ನು ದಸ್ತಗಿರಿ ಮಾಡಿ ಗಡಿಪಾರು ಮಾಡಿ ದರೆಂದೂ, ಇದರಿಂದ ಕಾರ್ಮಿಕರು ರೇಗಿ ಸಾಮೂಹಿಕ ಕೊಲೆ ನಡೆಸಿದರೆಂದೂ, ಹೇ ಳಲಾಗಿದೆ

ಅಬಿಸೀನಿಯಾದಲ್ಲಿ ದಂಗೆ

ಅಬಿಸೀನಿಯಾದ ರಾಜಕುಮಾರರನ್ನು ಸೆರೆಹಿಡಿಯಲು ಕೆಲವರು ಯತ್ನಿಸಿದ ರೆಂದೂ, ಇದರಿಂದ ಬಂದ ಗಲಭೆ ನಡೆದು, ೨೦ ಜನರು ಸತ್ತರೆಂದೂ ವರದಿಯಾಗಿದೆ

ಉಪನಯನ

ಮೈಸೂರು ೩೧

ನಿವೃತ್ತ ಅಸಿಸ್ಟೆಂಟ್ ಕಂಟ್ರೋಲರಾದ ರಾ ವಿ ಎಸ್ ಸುಬ್ಬರಾಯರು ತಮ್ಮ ಕು ಮಾರ ಚಿ॥ ಪ್ರಭಾಕರ ಮತ್ತು ತಮ್ಮ ಮೊಮ್ಮಗ ಚಿ॥ ಗೋಪಾಲಕೃಷ್ಣರವರುಗ ಳ ಉಪನಯನವನ್ನು ನಿನ್ನೆ ರಾಜಧಾನಿ ಯಲ್ಲಿ ನೆರವೇರಿಸಿದರು

ತಿರುವಾಂಕೂರು ಮತ್ತು ಕೊಚ್ಚಿ ಒಕ್ಕೂಟ

ತಿರುವಾಂಕೂರು ಮತ್ತು ಕೊಚ್ಚಿ ಸಂ ಸ್ಥಾನಗಳ ಒಕ್ಕೂಟದ ಆರಂಭೋತ್ಸವವ ನ್ನು ಮುಂದಿನ ಜುಲೈ ೧ ನೇ ತಾ॥ ನ ಡೆಸಬೇಕೆಂದು ಸರ್ದಾರ್ ಪಟೇಲರನ್ನು ಆಹ್ವಾನಿಸಲು ತಿರುವಾಂಕೂರು ಮಹಾರಾ ಜರು ದೆಹಲಿಗೆ ಸಧ್ಯದಲ್ಲಿಯೇ ಭೇಟಿ ಕೊ ಡುವರೆಂದು ಹೇಳಲಾಗಿದೆ

ಭೂಪಾಲ್ ಅಧಿಕಾರಿಗಳ ಅಕ್ರಮ ವರ್ತನೆ

ಭೂಪಾಲ್ ಸಂಸ್ಥಾನವು ಭಾರತದಲ್ಲಿ ಐಕ್ಯವಾಗುವೆಂದು ತೀರದು ಅಲ್ಲಿನ ಅನೇಕ ಉನ್ನತಾಧಿಕಾರಿಗಳು ಅಕ್ರಮ ರೀತಿಯಲ್ಲಿ ವರ್ತಿಸುತಿದ್ದಾರೆಂದು ವರದಿಯಾಗಿದೆ ಅ ವರುಗಳಲ್ಲಿ ಅಂತ ರುಸುವತ್ತುಗಳು ಹೆ ಚ್ಚಾಗಿ, ಅನೇಕರಿಗೆ ಕಾನೂನಿಗೆ ವಿರುದ್ಧ ವಾಗಿ ಪೆನ್‌ಷನ್ನು, ಸಾಲ ಮತ್ತು ಭೂಮಿ ಗಳನ್ನು ಕೊಡುತ್ತಿದ್ದಾರೆ ರವಿನ್ಯೂ ಅಧಿ ಕಾರಿಗಳು ಕಂದಾಯ ವಸೂಲಿಯ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಮತ್ತು ಆಡಳಿತ ಶೀಘರನಿಯ ೩ ನಡೆದಿಲ್ಲ. ಒಂದು ಕೋಮಿನ ರೈತರುಗಳಿಂದ ಭೂ ಮಿಗಳನ್ನು ಕಿತ್ತುಗೊಳ್ಳಲಾಗಿದೆ ಸಂಸ್ಥಾ ನದ ಐಕ್ಯದ ಬಗ್ಗೆ ಸಹಾನುಭೂತಿ ತೋರಿ ಸಿದ ಹಲವು ಸರ್ಕಾರಿ ಅಧಿಕಾರಿಗಳನ್ನು ಕೆಲಸದಿಂದ ವಜಾ ಮಾಡಲಾಗಿದೆ.

ಗವರ್ನರುಗಳ ಚುನಾವಣೆ ಇಲ್ಲ

ಭಾರತದ ಗವರ್ನರುಗಳನ್ನು ಪ್ರಜೆಗ ಳೇ ಚುನಾಯಿಸಬೇಕೆಂದು ಹಿಂದೆ ತೀ ರ್ಮಾನ ಮಾಡಿದ್ದುದನ್ನು ಬದಲಾಯಿಸಿ, ಅಧ್ಯಕ್ಷರೇ ಅವರುಗಳನ್ನು ನೇಮಿಸಲು ಅ ಧಿಕಾರ ಕೊಡುವ ತಿದ್ದುಪಡಿಯನ್ನು ಕೇಂದ್ರ ರಾಜ್ಯಾಂಗ ಸಭೆಯಲ್ಲಿ ಮಂಡಿಸ ಲಾಗುವುದೆಂದು ತಿಳಿದುಬಂದಿದೆ,

ತಿರುವಾಂಕೂರಿನಲ್ಲಿ ಸೆಣಬು ಕೈಗಾರಿಕೆ

ತಿರುವಾಂಕೂರಿನಲ್ಲಿ ಸೆಣಬು ಬೆಳೆಯು ವ ಯೋಜನೆಯನ್ನು ಭಾರತ ಸರ್ಕಾರದ ವ್ಯವಸಾಯ ಇಲಾಖೆಯವರು ಕೈಗೊಂಡಿ ದ್ದಾರೆ ಪಶ್ಚಿಮ ಬಂಗಾಳ, ಒರಿಸ್ಸಾ, ಅ ಸ್ಸಾಂ ಮತ್ತು ಬಿಹಾರ್‌ಗಳಲ್ಲೂ ಈ ಕೈ ಗಾರಿಕೆಯನ್ನು ಅಭಿವೃದ್ಧಿಗೊಳಿಸಲಾಗು ವುದು

ವಿ. ವೆಂಕಟಪ್ಪನವರಿಗೆ ಸುಸ್ವಾಗತ

ಪ್ರ. ಪ್ರ. ಸಭೆಯಲ್ಲಿ ಭಾಷಣಗಳು

ಸ್ವಂ ಸು.ಫೋ.] ಬೆಂಗಳೂರು ೩೧

ಈ ದಿನ ಪ್ರಜಾ ಪ್ರತಿನಿಧಿ ಸಭೆಯು ೧೧ ಗಂಟೆಗೆ ಪ್ರಾರಂಭವಾದ ಕೂಡಲೇ, ಶ್ರೀ ವೆಂಕಟಪ್ಪನವರು ಅಧ್ಯಕ್ಷರಾಗಿ ಚು ನಾಯಿತರಾಗಿರುವುದನ್ನು ಶ್ರೀಮನ್ಮಹಾರಾ ಜರವರು ಅಂಗೀಕರಿಸಿರುವರೆಂದು ದಿವಾನ ರು ತಿಳಿಸಿ, ಶ್ರೀ ವೆಂಕಟಪ್ಪನವರನ್ನು ಅಧ್ಯ ಕ್ಷವೇದಿಕೆಯ ಮೇಲೆ ಕುಳ್ಳಿರಿಸಿದರು. ಅ ನಂತರ ಸಭೆಯ ಎಲ್ಲ ಪಕ್ಷದವರೂ ನೂತ ನ ಅಧ್ಯಕ್ಷರಿಗೆ ಸುಸ್ವಾಗತವನ್ನು ಬಯಸಿ ದರು ಶ್ರೀ ಕೆ ಸಿ. ರೆಡ್ಡಿಯವರು ಮೊದ ಲು ಅವರಿಗೆ ಸ್ವಾಗತವನ್ನು ಬಯಸಿ, ಅವ ರ ಗುಣ ಕಥನವನ್ನು ಮಾಡಿ, ಸರ್ಕಾರದ ಸಂಪೂರ್ಣ ಸಹಕಾರವನ್ನು ಅವರಿಗೆ ನೀ ಡುವುದಾಗಿ ತಿಳಿಸಿದರು.

ಈ ಸಂಬಂಧದಲ್ಲಿ ನಿವೃತ್ತರಾಗುವ ದಿವಾನರ ಗುಣಕಥನವನ್ನೂ ಮುಖ್ಯ ಮಂತ್ರಿಗಳು ಮಾಡಿ, ಮೈಸೂರಿನಲ್ಲಿ ಜ ವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ದಿವಾನರು ವಿಶೇಷವಾಗಿ ಸಹಾಯವಾಗಿ ದ್ದಾರೆಂದೂ, ಅವರು ನಿಜವಾಗಿ ದೇಶ ಸೇವೆಯನ್ನು ಮಾಡಿದ್ದಾರೆಂದೂ ತಿಳಿಸಿ ದರು ಅವರಿಗೆ ಮುಂದೆ ಸಿಕ್ಕಬಹುದಾ ದ ಹುದ್ದೆಯಲ್ಲಿ ಮೈಸೂರನ್ನು ಯಾವಾ ಗಲೂ ಜ್ಞಾಪಕದಲ್ಲಿಟ್ಟುಕೊಂಡಿರಬೇಕೆಂ ದು ಕೋರಿದರು.

ಶ್ರೀಗಳಾದ ಹಚ್ ಲಿಂಗಪ್ಪ, ಜಾ ಪಾಲ್, ಜಿ ಮರುಳಪ್ಪ, ಕೆಂಕರಲಿಂ ಗೇಗೌಡ, ಖಲೀಲ್ ಇವರೇ ಮೊದಲಾ ದವರು ಭಾಷಣ ಮಾಡಿ ಅಧ್ಯಕ್ಷರಿಗೆ ಸ್ವಾ ಗತವನ್ನು ಬಯಸಿದರು. ಶ್ರೀ ವೆಂಕ ಟಪ್ಪನವರು ತಮ್ಮನ್ನು ಅಧ್ಯಕ್ಷರನ್ನಾಗಿ ಚುನಾಯಿಸಿ ಗೌರವಿಸಿದ,ದಕ್ಕಾಗಿ ಸಭೆ ಯ ಸದಸ್ಯರೆಲ್ಲರಿಗೂ ವಂದನೆಯನ್ನು ಅರ್ಪಿಸಿದರು.

ಸಂಸ್ಥಾನದ ಮುಂಗಡ ಬಜೆಟ್

೧೯೪೯-೫೦ನೇ ವರ್ಷದ ಆಯವ್ಯಯ ಅಂದಾಜನ್ನು ನಿನ್ನೆ ದಿನ ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪ ನವರು ಪ್ರಜಾಪ್ರತಿನಿಧಿ ಸಭೆಯ ಮುಂ ದೆ ಮಂಡಿಸಿದರು ಸಂಸ್ಥಾನದ ಒಟ್ಟು ಉತ್ಪತ್ತಿ [illegible] ರೂ ವೆಚ್ಚ [illegible] ರೂ

ಹನುಮಂತಯ್ಯನವರು ಉಪ ಮುಖ್ಯ ಮಂತ್ರಿಗಳೇ ?

ಸ್ವಂ.ಸು ಫೋ.] ಬೆಂಗಳೂರು ೩೧

ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಉಪ ನಾಯಕರಾದ ಶ್ರೀ ಕೆ. ಹನುಮಂತ ಯ್ಯನವರನ್ನು ಉಪ ಮುಖ್ಯ ಮಂತ್ರಿಗಳ ನ್ನಾಗಿ ನೇಮಿಸುವ ವಿಚಾರವಾಗಿ ಸರ್ಕಾರ ದವರು ಆಲೋಚಿಸುತ್ತಿದ್ದಾರೆಂದು ತಿಳಿದು ಬಂದಿದೆ.

೦ ಆಗಸ್ಟು ೩ನೇ ತಾ॥ ವರೆಗೆ ದಿವಾನ ರು ತಮ್ಮ ಹುದ್ದೆಯಲ್ಲಿರುವರೆಂದು ತಿಳಿದು ಬಂದಿದೆ.

ಭಾರತ ನಿಯೋಗಕ್ಕೆ ಭಾಷ್ಯಂ ಉಪ ನಾಯಕರು

ಜಿನೀವಾದಲ್ಲಿ ನಡೆಯಲಿರುವ ಅಂತ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ೩ನೇ ಅಧಿವೇಶನದಲ್ಲಿ ಭಾರತದ ಪ್ರತಿನಿಧಿಯಾಗಿ ಹೋಗಲಿರುವ ಶ್ರೀ ಕೆ. ಟಿ. ಭಾಷ್ಯಂರವ ರನ್ನು ಭಾರತದ ನಿಯೋಗದ ಸಲಹೆಗಾರ ರಾಗಿಯೂ ಮತ್ತು ಉಪ ನಾಯಕರಾಗಿ ಯೂ ನೇಮಿಸಲಾಗಿದೆ.

ಒಂದೇ ಮನೆಯಲ್ಲಿ ಏಕ ಕಾಲದಲ್ಲಿ ಇಬ್ಬರು ಮುದುಕಿಯರ ಮರಣ

ಮೈಸೂರು ೩೧

ಡಿ. ಸುಬ್ಬಯ್ಯ ಶ್ರಾಫ್ ರಸ್ತೆಯ ಒಂ ದು ಮನೆಯಲ್ಲಿ ನಿನ್ನೆ ದಿನ ಸುಮಾರು ೧೦೦ ವರ್ಷ ವಯಸ್ಸಿನ ಹೊಂಬಾಳಮ್ಮ ಮತ್ತು ಹುಚ್ಚಮ್ಮ ಎಂಬ ಮುದುಕಿಯರಿ ಬ್ಬರು ಮೃತಪಟ್ಟರು ಒಬ್ಬರಿಗೊಬ್ಬರು ಸುಮಾರು ನಾಲ್ಕು ಗಂಟೆ ಅಂತರದಲ್ಲಿ ಮ ರಣ ಹೊಂದಿದರು. ಅವರಿಗೆ ಯಾವ ಖಾ ಯಿಲೆಯೂ ಇರಲಿಲ್ಲವೆಂದು ಹೇಳಲಾಗಿದೆ.

೦ ಚೀನಾದ ಪ್ರಧಾನಿ ಹೋಯ್ ಟಿನ್ ರವರು ತಮ್ಮ ಮಂತ್ರಿಮಂಡಲದವರೊಡ ನೆ ರಾಜೀನಾಮೆ ಸಲ್ಲಿಸಿದ್ದಾರೆ ಜ॥ ಚಾಂಗ್ ಕೈ ಷೇಕರವರನ್ನು ನೂತನ ಪ್ರಧಾನಿಗಳನ್ನಾಗಿ ಅಧ್ಯಕ್ಷರು ನೇಮಿಸಿದ್ದಾರೆ.

ಇದ್ದ [illegible] ರೂ [illegible] ಮಾಗಿರುವುದರಿಂದ, ಪೆಟ್ರೋಲ್ ಮತ್ತು ಇತರ ಮೋಟಾರು ಸ್ಪಿರಿಟ್‌ಗಳ ಮೇಲೆ ಮತ್ತು ಮೋಟಾರು ವಾಹನಗಳ ಮೇ ಲೂ ತೆರಿಗೆಯನ್ನು ಹೆಚ್ಚಿಸಬೇಕೆಂದೂ ನಿರ್ಧರಿಸಲಾಗಿದೆ ಭಂಗಾರದ ಮೇಲಿನ ತೆರಿಗೆಯನ್ನು ವಜಾ ಮಾಡಲಾಗಿದೆ. ಕ್ಯಾಪಿಟಲ್ ಖರ್ಚಿನ ಬಾಬಿಗೆ ೧೮೫-೫೦ ಲಕ್ಷ ರೂ ಗಳನ್ನು ವೆಚ್ಚಮಾಡಬೇಕೆಂದು ನಿರ್ಧರಿಸಿ ೯ ಕೋಟಿ ರೂಗಳ ಸೆಕ್ಯೂರಿ ಟಿಗಳನ್ನು ಮಾರಬೇಕೆಂದು ಆಲೋಚಿಸ ಲಾಗಿದೆ ವಿದ್ಯಾಭ್ಯಾಸಕ್ಕೆ ೪೮೭.೪೦ ಲಕ್ಷ, ಕೂಲಿಗಾರರ ಹಿತರಕ್ಷಣೆಗೆ ೩ ಲಕ್ಷ ಲಕ್ಷ, ಗ್ರಾಮಾಂತರ ಪ್ರದೇಶಗಳಿಗೆ ವಿದ್ಯು ಚ್ಛಕ್ತಿ ಸರಬರಾಜಿಗೆ ೪೯ ಲಕ್ಷ, ರೈ ಲ್ವೆ ಅಭಿವೃದ್ಧಿಗೆ [illegible] ಲಕ್ಷ ಮತ್ತು ಕೈಗಾರಿಕೆಗೆ [illegible] ಲಕ್ಷರೂ. ಮೀಸ ಲಾಗಿಡಲಾಗಿದೆ

ಸಂಸ್ಥಾನದ ಹಲವು ಪ್ರದೇಶಗಳಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತಂದಿದ್ದರೂ ಎಕ್ಸೈಜ್‌ನಿಂದಾಯ ಮಾತ್ರ ಹೆಚ್ಚಿದೆಯೆಂದೂ, ೧೯೪೯-೫೦ ರಲ್ಲಿ ೫ ಜಿ ಲ್ಲೆಗಳಲ್ಲಿ ಪಾನ ನಿರೋಧವನ್ನು ಜಾರಿಗೆ ತಂದರೂ, ೫೦೯.೭೪ ಲಕ್ಷ ರೂ ವರಮಾ ನ ನಿರೀಕ್ಷಿಸಲಾಗಿದೆಯೆಂದೂ, [illegible] ಮಾಡಲಾಗಿದೆ

ಕೃಷ್ಣರಾಜಸಾಗರದಲ್ಲಿ ನೌಕಾ ಶಿಕ್ಷಣ ಶಾಲೆ

ಮೈಸೂರು ೩೧

ಭಾರತ ಸರ್ಕಾರದವರಿಂದ ನೇಮಿಸಲ್ಪಟ್ಟಿರುವ ನೌಕಾ ಶಿಕ್ಷಣ ಸಮಿತಿಯವರು ಕೃಷ್ಣರಾಜಸಾಗರದಲ್ಲಿ ಭೇಟಿ ನೀಡಿ, ಕೃಷ್ಣರಾಜಸಾಗರವು ನೌಕಾ ಶಿಕ್ಷಣ ಶಾಲೆಗೆ ಅನುಕೂಲವಾಗಿದೆ ಎಂದು ಅಭಿಪ್ರಾಯಪಟ್ಟು ಅವರ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವರೆಂದು ತಿಳಿದುಬಂದಿದೆ. ಇನ್ನು ೨-೩ ತಿಂಗಳಲ್ಲೇ ಇಲ್ಲಿ ಕೆಲಸವು ಆರಂಭವಾಗುವ ನಿರೀಕ್ಷೆ ಇದೆ. ೧೦೦ ಜನ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ವ್ಯವಸ್ಥೆ ಮಾಡಲಾಗುವುದು.

ಮೋಟಾರು ಅಪಘಾತದಲ್ಲಿ ಡ್ರೈವರನ ಮರಣ

ಮದರಾಸಿನ ಇಂಪೀರಿಯಲ್ ಬ್ಯಾಂಕ್ ಕಛೇರಿಯವರಾದ ಶ್ರೀ ಒಡೆಯರವರು ನಿನ್ನೆ ಬೆಂಗಳೂರಿನಿಂದ ಮೈಸೂರಿಗೆ ಮೋಟಾರಿನಲ್ಲಿ ಹೋಗುತ್ತಿದ್ದಾಗ ಕೆಂಗೇರಿ ಹತ್ತಿರ ಕಾರು ಒಂದು ಮರಕ್ಕೆ ಡಿಕ್ಕಿ ಹೊಡೆಯಿತೆಂದೂ ಇದರಿಂದ ಡ್ರೈವರನು ಅಲ್ಲೇ ಮೃತಪಟ್ಟನೆಂದೂ, ಶ್ರೀ ಒಡೆಯರವರ ಪತ್ನಿ ಮತ್ತು ಮಗನಿಗೆ ತೀವ್ರ ಗಾಯವಾಗಿದೆಯೆಂದೂ ವರದಿಯಾಗಿದೆ.

ಉಪನಯನ

ಮೈಸೂರು ಬ್ಯಾಂಕಿನ ಶ್ರೀ ಬಿ. ಎ. ವೆಂಕಟರಾಮಯ್ಯನವರ ತಮ್ಮ ಕುಮಾರ ಬಿ. ಎಸ್. ದೇವು ಮತ್ತು ತಮ್ಮ ಸಹೋದರರಾದ ಶ್ರೀ ನಾರಾಯಣರವರ ಕುಮಾರ ಚಿ॥ ಶಂಕರರವರುಗಳ ಉಪನಯನವು ನೆನ್ನೆ ನೆರವೇರಿಸಿದರು.

ವಿಶ್ವೇಶ್ವರಾಶ್ರಮ-ಕೇಶವಣ್ಣನವರ ವಿದ್ಯಾರ್ಥಿ ನಿಲಯ

ಮೇಲ್ಕಂಡ ವಿದ್ಯಾರ್ಥಿ ನಿಲಯಕ್ಕೆ ೧೯೪೯-೫೦ನೇ ಸಾಲಿನಲ್ಲಿ ಸೇರಲಿಚ್ಛಿಸುವ ಬ್ರಾಹ್ಮಣ ಬಡ ವಿದ್ಯಾರ್ಥಿಗಳು ಜೂನ್ ೧೫ನೇ ತಾರೀಖಿನವರೆಗೆ ಅರ್ಜಿಗಳನ್ನು ಕಳುಹಿಸಬೇಕು. ಅನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅರ್ಜಿ ಫಾರಂಗಳನ್ನು ನಿಲಯದ ಆಫೀಸಿನಲ್ಲಿ ... ನೇ ತಾರೀಖಿನಿಂದ ಕೊಡಲಾಗುವುದು.

ಶ್ರೀರಾಮ ವಸ್ತ್ರಾಲಯಕ್ಕೆ

ಖಾದಿ ... ಜನರು ... ಪ್ರಸಾದದ ... ಶ್ರೀ ... ವಸ್ತ್ರ, ... ಯವುದು ... ಪ್ರದ

ಲಗ್ನದ ಜವಳಿಗೆ
ಗುರು ... ಹಾಲ್

... ಮೈಸೂರು

Edited printed and published by R. Nagarajan at the Sadhvi Press, D. Subbiah Road, Mysore

ಲಾಯಕ್ ಆಲಿ ಮಂತ್ರಿ ಮಂಡಲದ ವಿಚಾರಣೆ

ಗೃಹ ಬಂಧನದಲ್ಲಿರುವ ಹೈದರಾಬಾದಿನ ಮಾಜಿ ಸರಕಾರದ ಮಂತ್ರಿಗಳಾದ ಲಾಯಕ್ ಅಲಿ ಮುಂತಾದವರ ವಿಚಾರಣೆಗೆ ಎಲ್ಲಾ ಸಿದ್ಧತೆಗಳೂ ಸಂಪೂರ್ಣವಾಗಿರುತ್ತವೆ. ಅವರೆಲ್ಲರನ್ನೂ ಈಗ ಕ್ರಮಪ್ರಕಾರ ಬಂಧಿಸಿ ಜೈಲಿನಲ್ಲಿಡಲು ರಿಮ್ಯಾಂಡು ಪಡೆಯುವುದಕ್ಕಾಗಿ ಕೋರ್ಟಿನ ಮುಂದೆ ಹಾಜರು ಮಾಡಲಾಗುವುದೆಂದು ತಿಳಿದುಬಂದಿದೆ.

ಕಾಶೀಯಲ್ಲಿ ಚಂಡಮಾರುತ

ಕಾಶಿಯಲ್ಲಿ ಮೊನ್ನೆ ದಿನ ವಿಪರೀತ ಮಳೆ ಮತ್ತು ಪ್ರಚಂಡ ಮಾರುತವುಂಟಾಯಿತೆಂದೂ, ಇದರಿಂದ ಸಾವಿರಾರು ಮರಗಳು ಬಿದ್ದು, ಅನೇಕ ಮನೆಗಳು ನಾಶವಾದುವೆಂದೂ, ವಿದ್ಯುಚ್ಛಕ್ತಿ ತಂತಿಗಳು ಕತ್ತರಿಸಿ, ದೀಪ ಇಲ್ಲದೆ ಕಗ್ಗತ್ತಲು ಕವಿದಿತ್ತೆಂದೂ ವರದಿಯಾಗಿದೆ.

ನೇಯ್ಗೆ ಶಿಕ್ಷಣ ಶಾಲೆ

ಹುಬ್ಬಳ್ಳಿಯಲ್ಲಿ ಇರುವ ಗೋಪನಕೊಪ್ಪದಲ್ಲಿ ಕರ್ಣಾಟಕ ಚರಖಾ ಸಂಘದವರು ನೇಯ್ಗೆ ಶಿಕ್ಷಣ ಶಾಲೆಯೊಂದನ್ನು ಇದೇ ೧ನೇ ತಾರೀಖಿನಿಂದ ತೆರೆವಿದ್ದಾರೆ. ಶಿಕ್ಷಣದ ಅವಧಿ ಒಂದು ವರ್ಷ. ಸಂಘದ ಕೆಲಸಗಾರರನ್ನು ಬಿಟ್ಟು ಹೊರಗಿನ ವಿದ್ಯಾರ್ಥಿಗಳಿಗೆ ಮಾಹೆಯಾನಾ ೧೫ ರೂ ವೇತನ ಕೊಡಲಾಗುವುದು. ಊಟ ಮತ್ತು ಇತರ ಖರ್ಚನ್ನು ವಿದ್ಯಾರ್ಥಿಗಳೇ ವಹಿಸಬೇಕು. ಶಿಕ್ಷಣ ಪಡೆಯಲಿಚ್ಛಿಸುವವರು ಮುಂದಿನ ತಿಂಗಳು ೧೫ನೇ ತಾರೀಖಿನೊಳಗಾಗಿ ಅರ್ಜಿಯನ್ನು ಹುಬ್ಬಳ್ಳಿಯ ಕರ್ಣಾಟಕ ಚರಖಾ ಸಂಘಕ್ಕೆ ಕಳುಹಿಸಬೇಕೆಂದು ತಿಳಿಸಲಾಗಿದೆ.

ನಂಬರಿನ ಲಾಟರಿಗಳಿಗೆ ಬೊಂಬಾಯಿನಲ್ಲಿ ನಿಷೇಧ

ವೃತ್ತ ಪತ್ರಿಕೆಗಳು ತಮ್ಮ ಅದೃಷ್ಟ ಪತ್ರಿಕೆ ನಂಬರುಗಳಿಗೆ ಬಹುಮಾನ ಕೊಡುವುದು ಮತ್ತು ಹೋಟೆಲಿನವರು ಮತ್ತು ಇತರ ಸಾರ್ವಜನಿಕ ಸಮಾರಂಭದ ವ್ಯವಸ್ಥಾಪಕರು ಅದೃಷ್ಟ ಕಾರ್ಯಕ್ರಮಗಳಿಗೆ ಬಹುಮಾನ ಕೊಡುವುದು ಇವೇ ಮುಂತಾದ ಪ್ರಕಾರ ಕಾನೂನಿಗೆ ವಿರೋಧವೆಂದೂ ಇಂತಹವುಗಳನ್ನು ಕೈಗೊಳ್ಳುವವರು ಸರ್ಕಾರದ ಅನುಮತಿ ಪಡೆಯಬೇಕೆಂದೂ ಬೊಂಬಾಯಿ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಗುಲ್ಬರ್ಗಾ ಅರಮನೆಯಲ್ಲಿ ಖಾಸಿಂ ರಜ್ವಿ ವಿಚಾರಣೆ

ಹೈದರಾಬಾದಿನ ಹಲವು ಹಿಂದೂಗಳನ್ನು ಕೊಲೆ ಮಾಡಿದ ಆಪಾದನೆ ಮೇಲೆ ರಜಾಕರ ನಾಯಕನಾದ ಖಾಸಿಂ ರಜ್ವಿ ಮತ್ತು ಅವನ ಅನುಯಾಯಿಗಳ ವಿಚಾರಣೆಯು ಗುಲ್ಬರ್ಗದಲ್ಲಿರುವ ನೈಜಾಮರ ಅರಮನೆಯಲ್ಲಿ ನಡೆಯುವಂತೆ ಏರ್ಪಾಡಾಗಿದೆ.

ಪ್ರಾಚೀನ ನಾಣ್ಯಗಳ ಪತ್ತೆ

ಮೊಗಲ್ ಚಕ್ರವರ್ತಿ ಷಾ ಆಲಂ ಮತ್ತು ಬ್ರಿಟಿಷ್ ದೊರೆಗಳಾದ ೪ನೇ ವಿಲಿಯಂ ಮತ್ತು ವಿಕ್ಟೋರಿಯಾರವರುಗಳ ನಾಣ್ಯ ೧೮೦ ಲಕ್ನೋ ಬಳಿ ಸರ್ಕಾರದ ಆಹಾರದ ಗಡಂಗನ್ನು ಕೆಡಹುತ್ತಿದ್ದಾಗ ಪತ್ತೆಯಾದುವೆಂದು ವರದಿಯಾಗಿದೆ. ಸಿಪಾಯಿ ದಂಗೆಯ ಕಾಲದಲ್ಲಿ ಅವುಗಳನ್ನು ನೆಲದಲ್ಲಿ ಹೂತಿಡಲಾಗಿತ್ತೆಂದು ಹೇಳಲಾಗಿದೆ.

ಅಂತರ ರಾಷ್ಟ್ರೀಯ ಅಣೆಕಟ್ಟುಗಳ ಸಮ್ಮೇಳನ

ಅಂತರ ರಾಷ್ಟ್ರೀಯ ದೊಡ್ಡ ಅಣೆಕಟ್ಟುಗಳ ಸಮ್ಮೇಳನವು ದೆಹಲಿಯಲ್ಲಿ ೧೯೫೧ರಲ್ಲಿ ನಡೆಯುವುದು. ಅದರ ಸಭಾ ಸಮಿತಿಗೆ ಪಂಡಿತ್ ನೆಹರೂರವರು ಪೋಷಕರಾಗಲು ಒಪ್ಪಿರುವರು. ವಿಶ್ವದ ನಾನಾ ಕಡೆಗಳ ೩೦೦ ಅದನ ೪೦೦ ಪ್ರಖ್ಯಾತ ಇಂಜನಿಯರುಗಳು ಅದರಲ್ಲಿ ಭಾಗವಹಿಸುವರು.

ಚೀಣಾದ ಬಗ್ಗೆ ಸ್ಟಾಲಿನ್‌ರವರ ಆಸಕ್ತಿ

ಚೀಣಾದ ಪರಿಸ್ಥಿತಿಯ ಬಗ್ಗೆ ರಷ್ಯದ ಸ್ಟಾಲಿನ್‌ರವರು ಹೆಚ್ಚು ಆಸಕ್ತಿ ವಹಿಸಿದ್ದಾರೆಂದೂ ಚೀಣಾದ ಕಮ್ಯೂನಿಸ್ಟರು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು ರಾಷ್ಟ್ರೀಯ ನಾಯಕರೊಂದಿಗೆ ವ್ಯವಹಾರ ನಡೆಸಿ, ಮಿತ್ರತ್ವವನ್ನು ಆಚರಣೆಗೆ ತರಬೇಕೆಂದು ಸ್ಟಾಲಿನ್‌ರವರು ಬಯಸಿದ್ದಾರೆಂದೂ ವರದಿಯಾಗಿದೆ.

If you need the services of an expert Kindergarten or Child educationist for your children, please write to the Director, Sri Jagadamba Sisu vihar, Dewan's Road, Mysore

ಈಗಿನ ಮಂತ್ರಿ ಮಂಡಲವನ್ನು ರದ್ದುಮಾಡಬೇಕು

ಪ್ರಭುಗಳಿಗೆ ಶಂಕರಲಿಂಗೇಗೌಡರ ಮನವಿ

ಈಗಿನ ಮಂತ್ರಿಮಂಡಲದವರುಗಳು ಶಾಸನದ ಕಲಂಗಳನುಗುಣವಾಗಿ ನಡೆದುಕೊಂಡಿಲ್ಲವಾದುದರಿಂದ ಅದನ್ನು ರದ್ದುಮಾಡಿ, ನೂತನ ಮಂತ್ರಿಮಂಡಲವನ್ನು ರಚಿಸಬೇಕೆಂದು ಕೋರಿ ಶ್ರೀಮನ್ಮಹಾರಾಜರವರಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಶಂಕರ ಲಿಂಗೇಗೌಡರು ಒಂದು ಮನವಿಯನ್ನು ಸಲ್ಲಿಸಿರುತ್ತಾರೆ.

೧೯೪೭ರಲ್ಲಿ ಆದ ರಾಜ ಶಾಸನದ ಪ್ರಕಾರ ಮಂತ್ರಿಮಂಡಲವನ್ನು ಆ ಶಾಸನದ ಕಲಂಗೆ ವಿರುದ್ಧವಾಗಿ ಅದನ್ನು ರಚಿಸಿದ್ದು, ೧೯೪೭ನೇ ಜುಲೈ ಹೊತ್ತಿಗೆ ಹೊಸ ಮಂತ್ರಿಮಂಡಲವನ್ನು ರಚಿಸದೆ ಇದ್ದದ್ದು ಮತ್ತು ಶ್ರೀಮನ್ಮಹಾರಾಜರಿಗೆ ಮಾಡಿದ ಪ್ರಮಾಣವನ್ನು ತಪ್ಪಿಸಿ, ಹೊಸದು ರಾಜ್ಯಾಂಗ ರಚನೆಯನ್ನು ತಂದು ಶ್ರೀಮನ್ಮಹಾರಾಜ ಸರ್ಕಾರವೆಂಬುದನ್ನು ತೆಗೆದುಹಾಕಿ ಮೈಸೂರು ಸರ್ಕಾರವೆಂದು ಕರೆಯುತ್ತಿರುವುದು ಇವುಗಳು ಪ್ರಜೆಗಳಿಗೂ ಮಹಾರಾಜರಿಗೂ ದ್ರೋಹ ಮಾಡಿದಂತಾಗಿದೆ-ಎಂದು ಅವರು ಅರ್ಜಿಯಲ್ಲಿ ತಿಳಿಸಿರುತ್ತಾರೆ.

ಪ್ರವಾಹದಿಂದ ಬಾಲಕಿಯು ಕೊಚ್ಚಿಹೋದಳು

ಶಿವಮೊಗ್ಗಾ ಜಿಲ್ಲೆಯ ನ್ಯಾಮತಿ ಮತ್ತು ಜೇನ ಹಳ್ಳಿ ಮಧ್ಯೆ ಇರುವ ಅರುಂಡಿ ಹಳ್ಳಿಯಲ್ಲಿ ವಿಶೇಷ ಮಳೆಯಿಂದ ಪ್ರವಾಹ ಬಂದು ಒಬ್ಬ ಲಂಬಾಣಿ ಹುಡುಗಿಯು ಕೊಚ್ಚಿ ಹೋದಳೆಂದು ವರದಿಯಾಗಿದೆ.

ಮಹಿಳಾ ರೈಲ್ವೆ ಟಿಕೆಟ್ ಕಲೆಕ್ಟರುಗಳು

ಬೊಂಬಾಯಿನ ವಿಕ್ಟೋರಿಯಾ ಟರ್ಮಿನಸ್ ರೈಲ್ವೆ ನಿಲ್ದಾಣದಲ್ಲಿ ಟಿಕೆಟ್ ಕಲೆಕ್ಟರಾಗಿ ಕೆಲಸ ಮಾಡುತ್ತಿದ್ದ ಮಹಿಳೆಯರನ್ನು ಆ ಕೆಲಸದಿಂದ ಬೇರೆ ಕಡೆಗೆ ವರ್ಗಾಯಿಸಲಾಗಿದೆ. ಅವರುಗಳಿಗೆ ದಿನಕ್ಕೆ ... ಗಂಟೆ ಕಾಲ ಕೆಲಸ ಮಾಡಲು ಅಸಾಧ್ಯವಾಯಿತೆಂದೂ ಮತ್ತು ಈ ಮಹಿಳೆಯರನ್ನು ನೋಡಲು ಅಸಂಖ್ಯಾತ ಜನರ ನೂಕು ನುಗ್ಗಲು ಪ್ರತಿದಿನವೂ ಹೆಚ್ಚುತ್ತಿತ್ತೆಂದೂ ಹೇಳಲಾಗಿದೆ.

ರಾಜಕಮಲ್
ಮೈಸೂರು
3-6-49 ರಿಂದ
ಪ್ರತಿ ದಿನ 3 ಆಟಗಳು
ಕಿದಾರ್‌ಶರ್ಮರವರ ಹಿಂದಿ ಚಿತ್ರ
ನಾಟಿಕ್
-- ಮುಖ್ಯ ಪಾತ್ರ --
ಸುರಯ್ಯಾ, ಅನ್ವರ್

31-5-49ರಿಂದ ಕಡೇ 3 ದಿನಗಳು
ಷಹೀದ್
(ಹಿಂದಿ)

... ವರ್ಷದ ಅನುಭವ
ಭಿಷಗ್ರತ್ನ ಸಾಹಿತ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ಬ್ರಾಹ್ಮೀಕೇಶವರ್ಧಿನೀ ತೈಲ
ಸೂತಿಕಾವಾತಕ್ಕೆ
[ಬಾಣಂತಿ ಸಂಜೀವಿನಿ ಕುತ್ತದ ಗುಣಕಾರಿ]
... ಕೂದಲು ಉದುರುವುದು, ನಿದ್ದೆ ಬಾರದಿರುವುದು, ... ಶಕ್ತಿ ಹೀನವಾಗಿಲ್ಲದಿರುವುದು ಸಹ ಪರಿಹಾರವಾಗುವದು
ಬೆಲೆ ಶೀಸೆ 1ಕ್ಕೆ 2-0-0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

✻ ಬೆಂಗಾಳ್, ಬನಾರಸ್, ಮೈಸೂರು ಸಿಲ್ಕ್ ಸೀರೆಗಳು ✻
ಮದುವೆ ಮುಂತಾದ ಸಮಾರಂಭಗಳಿಗೆ ಬೇಕಾಗುವ ಬಟ್ಟೆಗಳಿಗೆ ನ್ಯಾಯವಾದ ಬೆಲೆ ನಾಣ್ಯವಾದ ನೂಲು ಬಾಬುಸಾಬ್ ಕಂಪೆನಿ, ಮೈಸೂರು.

ಫೋ೯ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೧-೬-೪೯ [ಸಂಚಿಕೆ ೩೪೮

ಪ್ರ॥ ಪ್ರ॥ ಸಭೆಯಲ್ಲಿ - ಸಭಾ ಪರಿತ್ಯಾಗ -

...ರಸಭೆಯ ಆಯವ್ಯಯ

—:o:—

ಅಂಗಡಿಗಳ ಮೇಲೆ ತೆರಿಗೆ

ಮೈಸೂರು ೧

...ನ್ನೆ ಮಧ್ಯಾಹ್ನ ಮುಂದುವರಿದ ಪುರ...ಯ ವಿಶೇಷ ಅಧಿವೇಶನವು ನಡೆದು, ...ನೇಜಿಂಗ್ ಸಮಿತಿಯವರು ಮಂಡಿ...೧೯೪೯-೫೦ನೇ ವರ್ಷದ ಆಯವ್ಯ...ದ ಪಟ್ಟಿಯನ್ನು ಪರಿಶೀಲಿಸಿ, ಕೆಲವು ...ಪಡಿಗಳೊಡನೆ ಅದನ್ನು ಅಂಗೀ...ಸಲಾಯಿತು. ಅದರ ಪ್ರಕಾರ, ಒಟ್ಟು ...ವತ್ತಿಯು ೩೩,೩೧,೭೧೫ ರೂ., ಖ...೩೩,೯೯,೭೫೨ ರೂ. ಇದ್ದು, ...೬೩ ರೂ. ಉಳಿತಾಯ ಬರುವುದು.

...ವರಮಾನದ ಬಾಬಿನಲ್ಲಿ ಈ ಕೆಳಗೆ...ದ ಸಲಹೆಗಳನ್ನು ಅಂಗೀಕರಿಸ...ಯಿತು:—

...ರಾಜಧಾನಿಗೆ ವಿದ್ಯುಚ್ಛಕ್ತಿ ಇಲಾಖೆಯು ...ಕಳುಹಿಸುವ ವಿದ್ಯುಚ್ಛಕ್ತಿ ಸಾಮಾ...ಗಳ ಮೇಲೆ ಸುಂಕವನ್ನು ಹಾಕುವುದು ...ವಾಹನಗಳ ಮೇಲಿನ ತೆರಿಗೆ ಒಗ್ಗೈ...ವ ಪರಿಹಾರವನ್ನು ಸರ್ಕಾರದವರು ...ರ್ಣಯಿಸಬೇಕು. ೩. ಅಂಗಡಿ...ಮೇಲಿನ ತೆರಿಗೆಯನ್ನು ಶೇಕಡ ೭೦ ...ಕ್ಕೆ ಏರಿಸುವುದು ೪ ರೈಲಿನಲ್ಲಿ ...ಮೈಲಿಗಳಿಂದ ಆಚೆ ಬರುವ ಪ್ರ...ಣಿಕರ ಮೇಲೆ ತೆರಿಗೆ ಹಾಕುವುದು. ...ಜಾಹಿರಾತಿನ ಪೋಸ್ಟರುಗಳು ಮತ್ತು ...ಮಾ ಮತ್ತು ಇತರ ಮನರಂಜನ ಪ್ರ...ಗಳ ಮೇಲೆ ತೆರಿಗೆ ಹಾಕುವುದು ...ವ್ಯಾಖ್ಯಾನ ತೆರಿಗೆಯನ್ನು ವಸೂಲು ...ಸುವ ಬಗ್ಗೆ ಪುರಸಭೆಗೆ ಸರ್ಕಾರದವ...ಶೇಕಡ ೧೨॥ ರಷ್ಟು ವಸೂಲಿ ಹಣವ...ಕೊಡತಕ್ಕದ್ದು ೭ ಮೈಸೂರು ...ನ ಬಸ್ ಸರ್ವೀಸನ್ನು ರಾಷ್ಟ್ರೀಕರಣ...ಸಿ, ಸರ್ಕಾರದವರೇ ಜುಲೈ ೧ನೇ ...೨೪ ಬಸ್ಸುಗಳನ್ನು ನಡೆಸಬೇಕೆಂದು ...ರುವುದು. ೮. ಒಳ ಚರಂಡಿ ...ಯೋಜನೆಗಾಗಿ ಸರ್ಕಾರದವರು ೩ ಲಕ್ಷ ...ಸಾಲ ಕೊಡಬೇಕೆಂದು ಕೋ...ವುದು.

...ಕಲ್ ತೆರಿಗೆಯನ್ನು ೨ರಿಂದ ೩ ರೂ. ...ರಿಸುವುದು ದೀಪ, ಮತ್ತು ಸ್ಯಾನಿಟ...ತೆರಿಗೆಗಳನ್ನು ಹೆಚ್ಚಿಸುವುದು ಮತ್ತು ...ತೆರಿಗೆಯನ್ನು ವಿಧಾಯಕ ಮಾಡು...-೯ ಸಲಹೆಗಳನ್ನು ಸಭೆಯು ...ಕರಿಸಲಿಲ್ಲ

...ರ್ಚಿನ ಬಾಬನಲ್ಲಿ, ಆರೋಗ್ಯ ಪ್ರಚಾ...ಗೆ ೨೩,೫೭೦ ರೂ., ಅಧ್ಯಕ್ಷರ ಭತ್ಯ...ರಿಂದ ೬೦೦ ರೂ.; ಮುನಿಸಿಪಲ್ ನೌ...ರಿಗೂ ಗುಮಾಸ್ತರ ಬ್ಯಾಡ್ಜುಗಳು, ...ವ ಬಡ ವಿದ್ಯಾರ್ಥಿಗಳ ಉಚಿತ ಊ...ವ್ಯವಸ್ಥೆಗೆ ಮಾಹೇಯಾನ ೨೫೦೦ ರೂ.; ...ಲಾಗಿದೆ

...ನಿವಾಸಿಗಳಿಗೆ ಉಚಿತ ಹೆಚ್ಚು ನೀರು ಸರಬರಾಜು

...ನಗರದ ನಾಗರೀಕರಿಗೆ ಮನೆ...ದಕ್ಕೆ ತಿಂಗಳಿಗೆ ಉಚಿತವಾಗಿ ಕೊ...ವ ನೀರಿನ ಪ್ರಮಾಣವನ್ನು ೩ ಸಾ...ದ ೪ ಸಾವಿರ ಗ್ಯಾಲನ್ನಿಗೆ ಏರಿಸ...ಲು, ಬೈಸಿಕಲ್ ಮೇಲಿನ ತೆರಿಗೆ...೨ ರಿಂದ ೩ ರೂ ಗೆ ಇಳಿಸಬೇಕೆಂ...ನ ಪುರಸಭೆಯವರು ನಿರ್ಧರಿ...ದ್ದಾರೆ

ಸಂಸ್ಥಾನದ ಜೈಲುಗಳಲ್ಲಿ ೪೪ ಜನ ಕಮ್ಯೂನಿಸ್ಟರು

ಬೆಂಗಳೂರು ೧

ಸಂಸ್ಥಾನದ ಜೈಲುಗಳಲ್ಲಿ ಒಟ್ಟು ೪೪ ಜನ ಕಮ್ಯೂನಿಸ್ಟರುಗಳಿದ್ದಾರೆಂದೂ, ಅವರ ಪೈಕಿ ೨೯ ಜನರು ಸ್ಥಾನಬದ್ಧರಾಗಿರುವರೆಂದೂ, ೧೫ ಜನರ ಮೇಲೆ ಮೊಕದ್ದಮೆ ಹೂಡಲಾಗಿದೆಯೆಂದೂ, ೩ ಮಂದಿಗೆ ಈಗಾಗಲೇ ಶಿಕ್ಷೆ ವಿಧಿಸಲಾಗಿದೆಯೆಂದೂ, ಸಮತಾವಾದಿ ಪಕ್ಷಕ್ಕೆ ಸೇರಿದವರಾರು ಜೈಲಿನಲ್ಲಿಲ್ಲವೆಂದೂ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳು ಶ್ರೀ ಎಂ ಸುಬ್ಬಯ್ಯನವರ ಪ್ರಶ್ನೆಗೆ ಉತ್ತರವಾಗಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ತಿಳಿಸಿರುತ್ತಾರೆ

ಯಳಂದೂರು ವಿದ್ಯಾರ್ಥಿ ನಿಧಿ

ಯಳಂದೂರಿನ ಬಡ ವಿದ್ಯಾರ್ಥಿಗಳಿಗೆ ಸಹಾಯಮಾಡಲು ೧೯೨೮ ರಲ್ಲಿ ಸ್ಥಾಪಿತವಾದ ನರಸಿಂಗರಾವ್ ಪೂರ್ಣಯ್ಯನವರ ಸ್ಮಾರಕ ಯಳಂದೂರು ವಿದ್ಯಾರ್ಥಿ ನಿಧಿಯಿಂದ ಇಲ್ಲಿಯವರೆಗೆ ೪೦೪ ವಿದ್ಯಾರ್ಥಿಗಳಿಗೆ ೨೫೬೫೬ ರೂ. ಅನ್ನು ಹಂಚಲಾಗಿದೆ. ಹಣದ ಅಭಾವದಿಂದ ಇಂಟರ್ ಮತ್ತು ಬಿ. ಎ ವಿದ್ಯಾರ್ಥಿಗಳಿಗೆ ಸಹಾಯಮಾಡಲು ಅವಕಾಶವಿಲ್ಲವಾಗಿದೆ ಬಡ ವಿದ್ಯಾರ್ಥಿಗಳ ಸಂಖ್ಯೆಯು ದಿನ ದಿನಕ್ಕೆ ಹೆಚ್ಚುತ್ತಿರುವುದರಿಂದ ಈ ನಿಧಿಗೆ ಮಹಾಜನರು ಸಹಾಯ ಮಾಡಬೇಕೆಂದು, ಕಾರ್ಯದರ್ಶಿಗಳಾದ ಶ್ರೀ ಕೆ.ಎಸ್ ಸುಬ್ಬಭಟ್ಟರು ಕೋರಿರುತ್ತಾರೆ.

ರೋಡ್ ಟ್ರಾನ್ಸ್‌ಪೋರ್ಟ್ ಕೆಲಸಗಾರರ ಸಂಘ

ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಕೆಲಸಗಾರರ ಸಭೆಯು ಶ್ರೀ ಸಿ. ಜೆ ದೇವನಾಥರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆಯಿತು ಶ್ರೀ ಟಿ. ಎಸ್ ಸುಬ್ಬಣ್ಣನವರು ಭಾಷಣ ಮಾಡಿ, ಸಂಘದ ಅವಶ್ಯಕತೆಯನ್ನು ತಿಳಿಸಿದರು ಅನಂತರ ಮೇಲ್ಕಂಡ ಕೆಲಸಗಾರರ ಸಂಘವನ್ನು ಸ್ಥಾಪಿಸಿ ಅವಕ್ಕೆ ಶ್ರೀ ಸಿ. ಎಸ್ ಹನುಮಂತಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೆ ಆರ್. ರಂಗಸ್ವಾಮಿಯವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎಂ ಕೆ ನಂಜುಂಡಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು

ಪ್ರಜಾ ಮಂಡಲದವರ ಸಭಾ ಪರಿತ್ಯಾಗ

ಪ್ರ॥ ಪ್ರ॥ ಸಭೆಯಲ್ಲಿ ಪ್ರಸಂಗ

ಸ್ವಂ. ಸು ಫೋ೯] ಬೆಂಗಳೂರು ೧

ಈ ದಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಪ್ರಶ್ನೋತ್ತರಗಳಾದನಂತರ, ಶ್ರೀ ಹೆಚ್ ಲಿಂಗಪ್ಪ ಮತ್ತು ೨೨ ಜನ ಪ್ರಜಾ ಮಂಡಲದ ಸದಸ್ಯರುಗಳು ಅಧ್ಯಕ್ಷರ ಚುನಾವಣೆ ಬಗ್ಗೆ ಸದಸ್ಯರುಗಳಿಗೆ ಸಾಕಷ್ಟು ನೋಟೀಸ್ ಕೊಟ್ಟಿಲ್ಲವೆಂಬ ವಿಷಯವಾಗಿ ಕಳುಹಿಸಿದ್ದ ಅವಸರದ ಠರಾವನ್ನು ಅಧ್ಯಕ್ಷರು ತಳ್ಳಿಹಾಕಿದರು. ಮೊದಲನೆಯ ದಿನವೇ ಈ ವಿಷಯವು ಸಭೆಯ ಮುಂದೆ, ಬಂದು ದಿವಾ೯—ಅಧ್ಯಕ್ಷರು ಅದನ್ನು ತಳ್ಳಿಹಾಕಿರುವಾಗ ಪುನಃ ಅದನ್ನು ತರಲು ಅವಕಾಶವಿಲ್ಲವೆಂದು ಅಧ್ಯಕ್ಷರು ಹೇಳಿದರು. ಅಧ್ಯಕ್ಷರಿಗೆ ಸಂಬಂಧಪಟ್ಟ ವಿಷಯವನ್ನು ಅವರೇ ಇತ್ಯರ್ಥ ಮಾಡುವುದು ಸರಿಯಾದುದಲ್ಲವೆಂದೂ, ಅದನ್ನು ಸಭೆಯ ತೀರ್ಮಾನಕ್ಕೆ ಬಿಡಬೇಕಾಗಿತ್ತೆಂದೂ ಸೂಚಕರು ತಿಳಿಸಿ, ತಮ್ಮ ಪಕ್ಷದ ಅಸಮಾಧಾನವನ್ನು ವ್ಯಕ್ತಪಡಿಸಲು, ೨೨ ಜನರು ಸಭಾ ಪರಿತ್ಯಾಗ ಮಾಡಿ, ೫ ನಿಮಿಷಗಳನಂತರ ವಾಪಸು ಬಂದರು.

ಪ್ರಶ್ನೋತ್ತರ

ಪ್ರತಿಯೊಂದು ಜಿಲ್ಲೆಗೂ ೧೪-೧೫ ಟ್ರಾಕ್ಟರುಗಳನ್ನು ಒದಗಿಸಲಾಗಿದೆಯೆಂದೂ, ಯಾವ ತಾಲ್ಲೂಕಿಗೂ ಪ್ರತ್ಯೇಕವಾಗಿ ಅದನ್ನು ಕಳುಹಿಸುವುದಿಲ್ಲವೆಂದೂ, ಪ್ರತಿ ಜಿಲ್ಲೆಯನ್ನೂ ಒಂದು ಯೂನಿಟ್ ಆಗಿ ಪರಿಗಣಿಸಲಾಗಿದೆಯೆಂದೂ, ಇತ್ತಗಿಂದ ಕಳೆದ ೧೧ ತಿಂಗಳುಗಳಲ್ಲಿ ೧೨ ಸಾವಿರ ಎಕರೆ ಜಮೀನು ಸಾಗುವಳಿಗೆ ಬಂದಿರುವುದಾಗಿಯೂ, ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಶ್ರೀ ಕರಿಬಸಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ಟ್ರಾಕ್ಟರುಗಳ ಉಪಕರಣಗಳನ್ನು ತಯಾರಿಸಲು ಸಂಚರಿಸುವ ವರ್ಕ್ ಷಾಪುಗಳನ್ನು ತರೆಯುವ ಬಗ್ಗೆ ಸರ್ಕಾರದವರು ಆಲೋಚಿಸುತ್ತಿದ್ದಾರೆಂದೂ ತಿಳಿಸಲಾಯಿತು

೫೦೦ ಮತ್ತು ಅದಕ್ಕೆ ಮೇಲ್ಪಟ್ಟ ಪ್ರಜಾ ಸಂಖ್ಯೆಯುಳ್ಳ ಪ್ರತಿಯೊಂದು ಗ್ರಾಮದಲ್ಲಿಯೂ ಸಹಕಾರ ಸಂಘವನ್ನು ಏರ್ಪಡಿಸಲಾಗುವುದೆಂದೂ, ಈಗಳ ಸಾವಿರ ಸಂಘಗಳು ಸಂಸ್ಥಾನದಲ್ಲಿವೆಯೆಂದೂ ರೈತರಿಗೆ ಬೇಕಾದ ಸಾಮಗ್ರಿಗಳನ್ನು

ಮಂತ್ರಿ ಮಂಡಲದಲ್ಲಿ ಬದಲಾವಣೆ ಆಗಬೇಕು

ಕಾಂಗ್ರೆಸ್ ಪಕ್ಷದವರ ಒತ್ತಾಯ

ಬೆಂಗಳೂರು ೧

ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ೬೦ ಜನ ಸದಸ್ಯರು ನಾಯಕರಾದ ಶ್ರೀ ಕೆ.ಸಿ ರೆಡ್ಡಿಯವರಿಗೆ ಒಂದು ಪತ್ರ ಬರೆದು, ಹೊಸ ನಾಯಕರು ಚುನಾಯಿತರಾಗಿರುವುದರಿಂದ, ಈಗಿನ ಮಂತ್ರಿಮಂಡಲವನ್ನು ಪುನರ್ರಚನೆ ಮಾಡಬೇಕೆಂದು ಒತ್ತಾಯಮಾಡಿರುತ್ತಾರೆ. ಮಂತ್ರಿಗಳೂ ಮತ್ತು ಪ್ರಮುಖ ಕಾಂಗ್ರೆಸ್ ನಾಯಕರುಗಳೂ ಈ ವಿಚಾರವಾಗಿ ಆಲೋಚನೆ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ

ಅಕ್ರಮ ಗಾಂಜಾ ಗಿಡಗಳ ಪತ್ತೆ

ಮೈಸೂರು ೧

ಈದಿಗಾ ಬಡಾವಣೆಯಲ್ಲಿರುವ ಜಾಡಮಾಲಿಗಳ ಕಾಲೊನಿಯಲ್ಲಿ ತಿಮ್ಮ ಎಂಬುವನು ತನ್ನ ಕೈ ತೋಟದಲ್ಲಿ ೭ ಅಡಿ ಎತ್ತರದ ೨ ಗಾಂಜಾ ಗಿಡಗಳನ್ನು ಅಕ್ರಮವಾಗಿ ಬೆಳೆಸುತ್ತಿದ್ದುದನ್ನು ಎಕ್ಸೈಜ್ ಇನ್ಸ್‌ಪೆಕ್ಟರಾದ ಜನಾಬ್ .ಬಿ ಎಸ್ ಮಹಮದ್‌ರವರು ನಿನ್ನೆ ಪತ್ತೆ ಮಾಡಿ, ಅವನ್ನು ವಶಪಡಿಸಿಕೊಂಡು ಆತನನ್ನು ವಸ್ತಗಿರಿ ಮಾಡಿರುತ್ತಾರೆ

ಅಕಾಲದಲ್ಲಿ ಪಲಾವು

ಮಾಡಿದುದಕ್ಕೆ ದಂಡ

ಮಂಡಿ ಮೊಹಲ್ಲಾದಲ್ಲಿರುವ ಉಸ್ಮಾನಿಯ ಹೋಟೇಲಿನಲ್ಲಿ ಈ ದಿನ ಬೆಳಿಗ್ಗೆ ೬-೪೫ ಗಂಟೆಯಲ್ಲಿ ಪಲಾವನ್ನು ಮಾಡುತ್ತಿದ್ದುದನ್ನು ನಗರದ ಫುಡ್ ರೇಷ್ನಾಫೀಸಿನವರು ಪತ್ತೆ ಮಾಡಿ, ಅದರ ಮಾಲೀಕರಾದ ಮಹಮದ್ ಜಾಫರ್‌ರವರ ಮೇಲೆ ಮೊಕದ್ದಮೆ ಹೂಡಿದ್ದರು. ಅಪಾದಿತರಿಗೆ ೭೦ ರೂ. ದಂಡವನ್ನು ನಗರ ನ್ಯಾಯಾಧೀಶರು ವಿಧಿಸಿದರು.

ಅವುಗಳ ಮೂಲಕ ಒದಗಿಸಲಾಗುವುದೆಂದೂ ಸರ್ಕಾರ ಜನರಲ್ ಕಾರ್ಯದರ್ಶಿಗಳು ಶ್ರೀ ಎಂ. ಬಿ. ಮಹದೇವಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಭಾರತ ಸರ್ಕಾರದವರು ಈ ವರ್ಷ ಸಂಸ್ಥಾನಕ್ಕೆ ೧ ಸಾವಿರ ಟನ್ ಕಬ್ಬಿಣವನ್ನು ಹೆಚ್ಚಾಗಿ ಸರಬರಾಜು ಮಾಡಲು ಒಪ್ಪಿರುವುದಾಗಿ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಒಂದು ಉಪ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

೪೫೦೦ ಸ್ಮಾಲ್ ಕೆರೆಗಳ ಜೀರ್ಣೋದ್ಧಾರ

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಯೋಜನೆಯ ಅಂಗವಾಗಿ ೪೫೦೦ ಸ್ಮಾಲ್ ಕೆರೆಗಳನ್ನು ೧೦ ವರ್ಷಗಳಲ್ಲಿ ಜೀರ್ಣೋದ್ಧಾರ ಮಾಡುವ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಂಡಿದ್ದಾರೆ. ಕೆರೆಗಳಲ್ಲಿರುವ ಕೆಸರನ್ನು ತೆಗೆದುಹಾಕಲು, ೬೦ ಸಾವಿರ ರೂ. ಬೆಲೆಯಿಂದ ಟ್ರಾಕ್ಸ್ ಕಾವೇಟರ್ ಎಂಬ ಯಂತ್ರವನ್ನು ತರಿಸಲಾಗಿದೆ ಈ ಯಂತ್ರವು ಕೆಸರನ್ನು ತೆಗೆಯುವುದಲ್ಲದೆ, ಅದನ್ನು ಭೂಮಿ ಮೇಲಕ್ಕೆ ತೆಗೆದುಹಾಕುವುದು ಕಷ್ಟಗಳನ್ನು ನಿವಾರಿಸುವುದಲ್ಲದೆ ಇದನ್ನು ಉಪಯೋಗಿಸಬಹುದು. ೨೦೦ ಜನರು ಮಾಡುವ ಕೆಲಸವನ್ನು ಈ ಒಂದು ಯಂತ್ರವು ಮಾಡುವುದೆಂದೂ. ಒಂದು ವಾರದಲ್ಲಿ ಒಂದು ದೊಡ್ಡ ಕೆರೆಯ ಕೆಸರನ್ನು ತೆಗೆದುಹಾಕುವುದೆಂದೂ ಹೇಳಲಾಗಿದೆ

[illegible] ವಿದ್ಯಾರ್ಥಿಗಳ [illegible] ಗಲಭೆ

[illegible] ಗಾಯವಾಯಿತೆಂದೂ, [illegible] ಪೋಲೀಸರು [illegible] ಹೇಳಲಾಗಿದೆ

[illegible] ಐಕ್ಯತೆಗೆ ಅಂತರ್ವಿವಾಹ

[illegible] ಅಧ್ಯಕ್ಷರಾದ [illegible] ಅಧ್ಯಕ್ಷತೆ [illegible] ಐಕ್ಯತೆಯ ಸಮ್ಮೇಳ [illegible] ನಡೆಯಿತು [illegible] ಸಾಧಿಸಲು ಅಂತರ್ ಜಾ[illegible] ಮತ್ತು ಅಂತರ್ ಪ್ರಾಂತೀಯ ವಿ[illegible]ಗಳನ್ನು ನಡೆಸಬೇಕೆಂದೂ, ಹಿಂದೂ [illegible] ರಾಷ್ಟ್ರ ಭಾಷೆಯನ್ನಾಗಿ [illegible]ಬೇಕೆಂದೂ, ವಿದ್ಯಾ ಇಲಾಖೆಗಳಲ್ಲಿ [illegible] ಸಂಸ್ಥೆಗಳನ್ನು ನಿರ್ಮೂ[illegible]ಬೇಕೆಂದೂ, ನಿರ್ಣಯ ಮಾ[illegible].

[illegible] ಕುಸಿದು ಬಿದ್ದು [illegible] ಜನರ ಮರಣ

[illegible]ಯಲ್ಲಿ ಮೂರಂತ[illegible] ಮನೆಯೊಂದು ಕುಸಿದು ಬಿದ್ದು, [illegible] ಮಹಿಳೆಯರು ಮೃತಪಟ್ಟರೆಂ[illegible] ಜನರಿಗೆ ಗಾಯವಾಯಿತೆಂದೂ [illegible]

[illegible] ಚೀಟಿ ಬದಲಾವಣೆ

[illegible] ಕೋ-ಆಪರೇಟಿವ್ ಸೊ[illegible] ಜಿಲ್ಲಾ ಮೋ[illegible] ಸಂಘವನ್ನು ಹಳೇ [illegible] ರಸ್ತೆಯಲ್ಲಿರುವ [illegible] ಮನೆಯ ಮಹಡಿಗೆ ಬದ[illegible]

[illegible] the University of Mysore [illegible] Bangalore, [illegible] 26th May 1949.

[illegible]IFICATION

Subject-Last date for [illegible] applications for [illegible] to Degree [illegible]

In partial modification [illegible] office Notification [illegible] 1-1501 48-49 [illegible] May 1949 it is [illegible] notified that appli[illegible] for [illegible] to the University Institutions [illegible] of Degree [illegible]

By order
[illegible] Rangachar,
[illegible] Registrar

ರಾಷ್ಟ್ರ ಸಮಿತಿಯಲ್ಲಿ 'ಕನ್ನಡದ ಜಯಂತಿ'

[illegible]

ಭಾರತದ ಎಕ್ಸ್‌ಚೇಂಜ್ ಬ್ಯಾಂಕಿನ ಡೈರೆಕ್ಟರ ದಸ್ತಗಿರಿ

ಲಕ್ಷ್ಮೀನಗರದಲ್ಲಿರುವ ಭಾರತ ಮತ್ತು ಆಫ್ರಿಕಾ ಎಕ್ಸ್‌ಚೇಂಜ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರಾದ ಮಿ॥ ಜೆ ಎಂ [illegible]ಯವರು ಬ್ಯಾಂಕಿನಲ್ಲಿದ್ದ ಸರ್ಕಾರದ ೩॥ ಲಕ್ಷ ರೂ ಸೆಕ್ಯೂರಿಟಿ ಹಣವನ್ನು ದುರುಪಯೋಗಪಡಿಸಿಕೊಂಡರೆಂಬ ಆಪಾದನೆಯ ಮೇಲೆ ಪೋಲೀಸರು ಅವರನ್ನು ದಸ್ತಗಿರಿ ಮಾಡಿದ್ದಾರೆ

ಖೈದಿಯನ್ನು ಬಿಡಿಸಲು ಪೋಲೀಸರ ಮೇಲೆ ಧಾಳಿ

ಮುಜಫರ್ ಪುರದಲ್ಲಿ ಕೊಲೆಯ ಆಪಾದನೆಗಾಗಿ ಕಮ್ಯೂನಿಸ್ಟರೊಬ್ಬರನ್ನು ಪೋಲೀಸರು ದಸ್ತಗಿರಿ ಮಾಡಿದುದನ್ನು ಪ್ರತಿಭಟಿಸಿ, ಆತನನ್ನು ಬಂಧ ವಿಮೋಚನೆ ಮಾಡಲು ಪೋಲೀಸರ ಮೇಲೆ ಸಶಸ್ತ್ರ ಜನರ ಗುಂಪು ಬಿದ್ದಿತೆಂದೂ, ಎರಡು ಪಕ್ಷದವರೂ ಗುಂಡುಹಾರಿಸಿದರೆಂದೂ, ಅನೇಕರಿಗೆ ಗಾಯವಾಯಿತೆಂದೂ ಹೇಳಲಾಗಿದೆ.

ಕರ್ಣಾಟಕ ಯುವಕ ಪರಿಷತ್ತು

ಕರ್ಣಾಟಕ ಪ್ರಾಂತ ರಚನೆಯಾಗಬೇಕಾಗಿರುವ ಈ ಕಾಲದಲ್ಲಿ ಕನ್ನಡ ನಾಡಿನ ಯುವಕರೆಲ್ಲರೂ ಒಂದೆಡೆ ಕೂಡಿ ವಿಚಾರ ವಿನಿಮಯ ಮಾಡುವುದಕ್ಕೋಸ್ಕರ ದಾವಣಗೆರೆಯಲ್ಲಿ ಮುಂದಿನ ತಿಂಗಳು ಕರ್ಣಾಟಕ ಯುವಕ ಪರಿಷತ್ತನ್ನು ಏರ್ಪಡಿಸಲಾಗಿದೆ ಕರ್ಣಾಟಕದ ಯುವಕರೆಲ್ಲರೂ ಇದರಲ್ಲಿ ಸಹಕರಿಸಿ ಭಾಗವಹಿಸಬೇಕೆಂದು ಸ್ವಾಗತ ಸಮಿತಿಯವರು ಕೋರಿರುತ್ತಾರೆ.

Edited, printed, and published by A.R. Nagarajan at the Sadhvi Press, D. Subbiah Road, Mysore

ಸಂಯುಕ್ತ ಪ್ರಾಂತ್ಯದಲ್ಲಿ ಗ್ರಾಮ ಪಂಚಾಯತಿ ರಾಜ್ಯ

ಕೇಂದ್ರ ಸರ್ಕಾರದ ಆಡಳಿತವನ್ನು ವಿಕೇಂದ್ರೀಕರಣ ಮಾಡಿ ಗ್ರಾಮಪಂಚಾಯತಿಗಳಿಗೆ ಸಂಪೂರ್ಣವಾದ ಆಡಳಿತಾಧಿಕಾರವನ್ನು ವಹಿಸುವ ಕಾರ್ಯಕ್ರಮದ ಅಂಗವಾಗಿ ಸಂಯುಕ್ತ ಪ್ರಾಂತ್ಯದಲ್ಲಿ ೩೫ ಸಾವಿರ ಗ್ರಾಮಪಂಚಾಯಿತಿಗಳನ್ನೂ, ೮ ಸಾವಿರ ಅದಾಲತ್ ಸಂಸ್ಥೆಗಳನ್ನೂ ಸರ್ಕಾರದವರು ಸ್ಥಾಪಿಸಿದ್ದಾರೆ. ಗ್ರಾಮದ ಪ್ರಜೆಗಳಿಗೆ ಅಧಿಕಾರವನ್ನು ವರ್ಗಾಯಿಸುವ ಪ್ರಕರಣದಲ್ಲೇ ಇದು ಭಾರಿ ಪ್ರಯತ್ನವೆಂದು ಹೇಳಲಾಗಿದೆ.

ಜಾತಿ ನಿರ್ಮೂಲನ ಸಂಸ್ಥೆ

ಮಹಾರಾಷ್ಟ್ರದ ಕೆಲವು ಜನ ಸಮಾಜ ಸುಧಾರಣಾ ನಾಯಕರುಗಳು ಸೇರಿ ಜಾತಿ ನಿರ್ಮೂಲನಾ ಸಂಸ್ಥೆಯೊಂದನ್ನು ಸ್ಥಾಪಿಸಿರುತ್ತಾರೆ. ಅಂತರ್ ಜಾತಿಯ ವಿವಾಹ ಮತ್ತು ವ್ಯವಹಾರಗಳನ್ನು ಹೆಚ್ಚಿಸಲು ಇವರು ಪ್ರಚಾರ ಮತ್ತು ಸಮ್ಮೇಳನಗಳನ್ನು ನಡೆಸಲಿರುವರು.

ಜಕ್ಕೂರಿನಲ್ಲಿ ವೈಮಾನಿಕ ಶಿಕ್ಷಣ ಶಾಲೆ

ಬೆಂಗಳೂರಿನ ಹತ್ತಿರವಿರುವ ಜಕ್ಕೂರಿನಲ್ಲಿ ವೈಮಾನಿಕ ಶಿಕ್ಷಣ ಶಾಲೆಯನ್ನು ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆ, ಇದಕ್ಕೆ ೩,೩೦,೦೦೦ ರೂ. ಖರ್ಚಾಗುವುದು

ಕೃಷ್ಣರಾಜಸಾಗರದಲ್ಲಿ ಪವರ್ ಇಂಜನಿಯರಿಂಗ್ ಸಂಶೋಧನೆ

ಕೃಷ್ಣರಾಜಸಾಗರದಲ್ಲಿ ಪ್ರಮುಖ ಪವರ್ ಇಂಜನಿಯರಿಂಗ್ ಮತ್ತು ಹೈಡ್ರಾಲಿಕ್ ಸಂಶೋಧನಾ ಕೇಂದ್ರವನ್ನು ತೆರೆಯುವ ಬಗ್ಗೆ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿದ್ದಾರೆ

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ಮಾದರಿ ಮನೆ. ನಂಬರ್ ೬೫ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

'ಸಾಧ್ವಿ' ಆಫೀಸ್,
ಮೈಸೂರು

ತಕ್ಕು ಗಾಂಧೀ ನಿಧಿ ಟಿಕೆ[illegible] ಮಾರಾಟಗಾರನ ದಸ್ತ[illegible]

ಗ್ವಾಲಿಯರಿನ ಸುವಲಾಲ್ ಎಂ[illegible] ಖಾದಿ ಬಟ್ಟೆಯನ್ನು ಧರಿಸಿ ತಕ್ಕು [illegible] ಸ್ಮಾರಕ ನಿಧಿಯ ಟಿಕೆಟುಗಳನ್ನು [illegible]ಯವರಿಗೆ ಮಾರಿ ಹಣವನ್ನು [illegible]ಯೋಗ ಪಡಿಸುತ್ತಿದ್ದುದನ್ನು ಪೋ[illegible] ಪತ್ತೆ ಮಾಡಿ ಆತನನ್ನು ದಸ್ತಗಿ[illegible]ಡಿರುತ್ತಾರೆ

ಕೈರೋ ಮೃಗಾಲಯ[illegible] ಭಾರತದಿಂದ ಖಡ್ಗ ಮೃ[illegible]

ಅಸ್ಸಾಮಿನ ಕಾಡಿನಲ್ಲಿ ಹಿಡಿದ [illegible] ಖಡ್ಗ ಮೃಗಗಳನ್ನು ತಲಾ ೨೦ [illegible] ರೂ.ಗೆ ಕೈರೋ ಮೃಗಾಲಯಕ್ಕೆ [illegible]ಲಾಗಿದೆ

೫೫ ವರ್ಷಕ್ಕೆ ನಿವೃತ್ತಿ

ಸಂಯುಕ್ತ ಪ್ರಾಂತ್ಯದ ಎಲ್ಲ ಸ[illegible] ನೌಕರರೂ ೫೫ ವರ್ಷಕ್ಕೆ ನಿವೃತ್ತ[illegible]ಬೇಕೆಂದೂ, ಅನಂತರ ಜೀವದಾನ[illegible] ಕೊಡಲಾಗುವುದಿಲ್ಲವೆಂದೂ ಅಲ್ಲಿನ ಸ[illegible]ರದವರು ಆಜ್ಞೆ ಮಾಡಿರುತ್ತಾರೆ.

ಗ್ರಾಮ ವೈದ್ಯರುಗಳ ಶಿ[illegible] ಯೋಜನೆ

ಸರ್ಕಾರದ ವೆಚ್ಚದಲ್ಲಿ ೫೦೦ [illegible] ಗ್ರಾಮ ವೈದ್ಯರುಗಳನ್ನು ತರಬೇತು[illegible]ಡಲು ನಾಲ್ಕು ಕೇಂದ್ರಗಳನ್ನು ಸ್ಥ[illegible]ಯೇ ಮದರಾಸ್ ಸರ್ಕಾರದವರು [illegible]ಯಲಿದ್ದಾರೆ.

ಪಾಕೀಸ್ಥಾನಕ್ಕೆ ೧ ಸಾವಿ[illegible] ಜೀಪುಗಳು

ಅಮೇರಿಕದಿಂದ ೧ ಸಾವಿರ ಜೀ[illegible]ನ್ನು ತರಿಸಲು ಪಾಕೀಸ್ಥಾನ ಸರ್ಕಾ[illegible]ರು ನಿರ್ಧರಿಸಿದ್ದಾರೆ.

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿ
ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ, :: ಮೈ[illegible]

ಶ್ರೀ ಗಾಯತ್ರೀ
ದಿನವಹಿ 3 ಪ್ರದರ್ಶನಗಳು
1-6-49ರಿಂದ 4 ದಿನಗಳು [illegible]
The Charge [illegible]
the Light Briga[illegible]
ದಿ ಚಾರ್ಜ್ ಆಫ್ ದಿ ಲೈ[illegible]
ಬ್ರಿಗೇಡ್
With:-Errol Flynn [illegible]
Olivia De Havila[illegible]
—:ಬೆಳಗಿನ ಪ್ರದರ್ಶನ:—
4—6—49ರಿಂದ 2 ದಿನಗಳು [illegible]
If I Were Kin[illegible]
With:-Ronald Colma[illegible]

If you need the serv[illegible] of an expert Kindergart[illegible]er & Child-educationist [illegible] your children, please [illegible] to the Director, Sri Ja[illegible]damba Sisu-vihar, Dew[illegible] Road, Mysore.

ಶುಭಮಸ್ತು
॥ ಸಮಸ್ತ ಸನ್ಮಂಗಳಾನಿ ಭವಂತು ॥

ಮದುವೆ ಜವಳಿಗಳಿಗೆ
ಹೆಸರುವಾಸಿಯಾದ ಅಂಗಡಿ
ನ್ಯಾಯವಾದ ಬೆಲೆ, ನಾಣ್ಯವಾದ ಮಾಲು.
[illegible] ಕಂಪೆನಿ, [illegible] ಮೈಸೂರು ಬ್ಯಾಂಕ್ ರೋಡ್, ಮೈಸೂರು.

॥ ಶ್ರೀ ಲಕ್ಷ್ಮೀನಾರಾಯಣನಮಃ ॥
ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
[illegible]
ಸ್ತ್ರೀಯರ ಗರ್ಭಕೋಶದ ವ್ಯಾಧಿಗಳನ್ನು ಗುಣಪಡಿಸತಕ್ಕದ್ದು ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ಸೊಂಟಗಳ ನೋವು, ಮೊದಲಾಗಿ ಗುಣವಾಗುತ್ತವೆ.
[illegible] ಬೆಲೆ ಶೀಸ 1ಕ್ಕೆ 2-0-0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಫೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಬುಧವಾರ ೧-೬-೪೯ [ಸಂಚಿಕೆ ೨೪೮

ಪ್ರ॥ ಪ್ರ॥ ಸಭೆಯಲ್ಲಿ - ಸಭಾ ಪರಿತ್ಯಾಗ -

ಪೌರಸಭೆಯ ಆಯವ್ಯಯ

ಅಂಗಡಿಗಳ ಮೇಲೆ ತೆರಿಗೆ

ಮೈಸೂರು ೧

ನಿನ್ನೆ ಮಧ್ಯಾಹ್ನ ಮೂರುಗಂಟೆಯಿಂದ ಪುರಸಭೆಯ ವಿಶೇಷ ಅಧಿವೇಶನವು ನಡೆದು, ಸ್ಟ್ಯಾಂಡಿಂಗ್ ಸಮಿತಿಯವರು ಮಂಡಿಸಿದ್ದ ೧೯೪೯-೫೦ನೇ ವರ್ಷದ ಆಯವ್ಯಯದ ಪಟ್ಟಿಯನ್ನು ಪರಿಶೀಲಿಸಿ, ಕೆಲವು ತಿದ್ದುಪಡಿಗಳೊಡನೆ ಅದನ್ನು ಅಂಗೀಕರಿಸಲಾಯಿತು. ಅದರ ಪ್ರಕಾರ, ಒಟ್ಟು ಉತ್ಪತ್ತಿಯು ೩೩,೩೩,೭೫೬ ರೂ., ಖರ್ಚು ೩೩,೧೯,೩೨೬ ರೂ. ಇದ್ದು, ೧೪,೪೩೦ ರೂ. ಉಳಿತಾಯ ಬರುವುದು.

ವರಮಾನದ ಬಾಬಿನಲ್ಲಿ ಈ ಕೆಳಗೆ ಕಂಡ ಸಲಹೆಗಳನ್ನು ಅಂಗೀಕರಿಸಲಾಯಿತು:-

ರಾಜಧಾನಿಗೆ ವಿದ್ಯುಚ್ಛಕ್ತಿ ಇಲಾಖೆಯವರು ಕಳುಹಿಸುವ ವಿದ್ಯುಚ್ಛಕ್ತಿ ಸಾಮಾನುಗಳ ಮೇಲೆ ಸುಂಕವನ್ನು ಹಾಕುವುದು; ವಾಹನಗಳ ಮೇಲಿನ ತೆರಿಗೆ ಬಗ್ಗೆ ಕೊಡುವ ಪರಿಹಾರವನ್ನು ಸರ್ಕಾರದವರು ಪುನರ್ವಿಮರ್ಶಿಸಬೇಕು; ಅಂಗಡಿಗಳ ಮೇಲಿನ ತೆರಿಗೆಯನ್ನು ಶೇಕಡ ೨೦ರಷ್ಟು ಏರಿಸುವುದು; ರೈಲಿನಲ್ಲಿ ಬರುವ ಸಾಮಾನುಗಳ ಮೇಲೆ ಸುಂಕ ವಿಧಿಸುವುದು; ಹೊರಗಿನಿಂದ ಬರುವ ಪ್ರಯಾಣಿಕರ ಮೇಲೆ ತೆರಿಗೆ ಹಾಕುವುದು; ನಾಟಕ, ಸಿನಿಮಾ ಮತ್ತು ಇತರ ಮನರಂಜನ ಪ್ರದರ್ಶನಗಳ ಮೇಲೆ ತೆರಿಗೆ ಹಾಕುವುದು.

ವಿದ್ಯಾಭ್ಯಾಸ ತೆರಿಗೆಯನ್ನು ವಸೂಲು ಮಾಡುವ ಬಗ್ಗೆ ಪುರಸಭೆಗೆ ಸರ್ಕಾರದವರು ಶೇಕಡ ೧೦ರಷ್ಟು ವಸೂಲಿ ಹಣವನ್ನು ಕೊಡತಕ್ಕದ್ದು. ಮೈಸೂರು ನಗರದ ಬಸ್ ಸರ್ವೀಸನ್ನು ರಾಷ್ಟ್ರೀಕರಣ ಮಾಡಿ, ಸರ್ಕಾರದವರೇ ಜುಲೈ ೧ನೇ ತಾರೀಖಿನಿಂದ ಬಸ್ಸುಗಳನ್ನು ನಡೆಸಬೇಕೆಂದು ಕೋರುವುದು. ಒಳಚರಂಡಿ ಯೋಜನೆಗಾಗಿ ಸರ್ಕಾರದವರು ೩ ಲಕ್ಷ ರೂ. ಸಾಲ ಕೊಡಬೇಕೆಂದು ಕೋರುವುದು.

ಸೈಕಲ್ ತೆರಿಗೆಯನ್ನು ೩ರಿಂದ ೩ ರೂ. ಏರಿಸುವುದು ಬೀಡು, ಮತ್ತು ಸ್ಯಾನಿಟರಿ ತೆರಿಗೆಗಳನ್ನು ಹೆಚ್ಚಿಸುವುದು. ಮತ್ತು ... ತೆರಿಗೆಯನ್ನು ವಿಧಾಯಕ ಮಾಡುವ ಸಲಹೆಗಳನ್ನು ಸಭೆ ಒಪ್ಪಲಿಲ್ಲ.

ಖರ್ಚಿನ ಬಾಬಿನಲ್ಲಿ, ಆರೋಗ್ಯ ಪ್ರಜಾ... ರೂ., ಅಧ್ಯಕ್ಷರ ಭತ್ಯ... ಮುನಿಸಿಪಲ್ ನೌಕರರಿಗೂ ... ಬಡ ವಿದ್ಯಾರ್ಥಿಗಳ ಉಚಿತ ಊಟ ... ಸಲಾಗಿದೆ.

ನಿರಾಶ್ರಿತರ ನಿವಾಸಿಗಳಿಗೆ ಉಚಿತ ಹೆಚ್ಚು ನೀರು ಸರಬರಾಜು

...ಗಳು ನಾಗರೀಕರಿಗೆ ಮನೆ ... ಉಚಿತವಾಗಿ ಕೊ... ಪ್ರಮಾಣವನ್ನು ೩ ಸಾ... ಸಾವಿರ ಗ್ಯಾಲನ್ನಿಗೆ ಏರಿಸ... ಸೈಕಲ್ ಮೇಲಿನ ತೆರಿಗ... ರೂಗೆ ಇಳಿಸಬೇಕೆಂ... ಸಲಹೆಯನ್ನು ... ಸಿಥಿಲ...

ಸಂಸ್ಥಾನದ ಜೈಲುಗಳಲ್ಲಿ ೪೪ ಜನ ಕಮ್ಯೂನಿಸ್ಟರು

ಬೆಂಗಳೂರು ೧

ಸಂಸ್ಥಾನದ ಜೈಲುಗಳಲ್ಲಿ ಒಟ್ಟು ೪೪ ಜನ ಕಮ್ಯೂನಿಸ್ಟರುಗಳಿದ್ದಾರೆಂದೂ, ಅವರ ಪೈಕಿ ೪೫ ಜನರು ಸ್ಥಾನಬದ್ಧರಾಗಿರುವರೆಂದೂ, ೧೩ ಜನರ ಮೇಲೆ ಮೊಕದ್ದಮೆ ಹೂಡಲಾಗಿದೆಯೆಂದೂ, ೩ ಮಂದಿಗೆ ಈಗಾಗಲೇ ಶಿಕ್ಷೆ ವಿಧಿಸಲಾಗಿದೆಯೆಂದೂ, ಸಮತಾವಾದಿ ಪಕ್ಷಕ್ಕೆ ಸೇರಿದವರಾರು ಜೈಲಿನಲ್ಲಿಲ್ಲವೆಂದೂ ಸರ್ಕಾರದ ಶ್ರೀಫ಼್ ಕಾರ್ಯದರ್ಶಿಗಳು ಶ್ರೀ ಎಂ. ಸುಬ್ಬಯ್ಯನವರ ಪ್ರಶ್ನೆಗೆ ಉತ್ತರವಾಗಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ತಿಳಿಸಿರುತ್ತಾರೆ.

ಯಳಂದೂರು ವಿದ್ಯಾರ್ಥಿ ನಿಧಿ

ಯಳಂದೂರಿನ ಬಡ ವಿದ್ಯಾರ್ಥಿಗಳಿಗೆ ಸಹಾಯಮಾಡಲು ೧೯೪೫ರಲ್ಲಿ ಸ್ಥಾಪಿತವಾದ ನರಸಿಂಗರಾವ್ ಪೂರ್ಣಯ್ಯನವರ ಸ್ಮಾರಕ ಯಳಂದೂರು ವಿದ್ಯಾರ್ಥಿ ನಿಧಿಯಿಂದ ಇಲ್ಲಿಯವರೆಗೆ ೪೦೪ ವಿದ್ಯಾರ್ಥಿಗಳಿಗೆ ೨೨೮೦೦ರೂ. ಅನ್ನು ಹಂಚಲಾಗಿದೆ. ಹಣದ ಅಭಾವದಿಂದ ಇಂಟರ್ ಮತ್ತು ಬಿ. ಎ ವಿದ್ಯಾರ್ಥಿಗಳಿಗೆ ಸಹಾಯಮಾಡಲು ಅವಕಾಶವಿಲ್ಲವಾಗಿದೆ ಬಡ ವಿದ್ಯಾರ್ಥಿಗಳ ಸಂಖ್ಯೆಯು ದಿನ ದಿನಕ್ಕೆ ಹೆಚ್ಚುತ್ತಿರುವುದರಿಂದ ಈ ನಿಧಿಗೆ ಮಹಾಜನರು ಸಹಾಯ ಮಾಡಬೇಕೆಂದು, ಕಾರ್ಯದರ್ಶಿಗಳಾದ ಶ್ರೀ ಟಿ.ಎಸ್. ಸುಬ್ಬಾಭಟ್ಟರು ಕೋರಿರುತ್ತಾರೆ.

ರೋಡ್ ಟ್ರಾನ್ಸ್‌ಪೋರ್ಟ್ ಕೆಲಸಗಾರರ ಸಂಘ

ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಕೆಲಸಗಾರರ ಸಭೆಯು ಶ್ರೀ ಸಿ. ಜಿ. ಬೇನನಾಥ್‌ರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆಯಿತು. ಶ್ರೀ ಟಿ. ಎಸ್. ಸುಬ್ಬಣ್ಣನವರು ಭಾಷಣ ಮಾಡಿ, ಸಂಘದ ಆವಶ್ಯಕತೆಯನ್ನು ತಿಳಿಸಿದರು. ಅನಂತರ ಮೇಲ್ಕಂಡ ಕೆಲಸಗಾರರ ಸಂಘವನ್ನು ಸ್ಥಾಪಿಸಿ ಅದಕ್ಕೆ ಶ್ರೀ ಸಿ. ಎಸ್. ಹನುಮಂತಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೆ. ಆರ್. ರಂಗಸ್ವಾಮಿಯವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎಂ. ಕೆ. ನಂಜುಂಡಯ್ಯನವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು.

ಪ್ರಜಾ ಮಂಡಲದವರ ಸಭಾ ಪರಿತ್ಯಾಗ

ಪ್ರ॥ ಪ್ರ॥ ಸಭೆಯಲ್ಲಿ ಪ್ರಸಂಗ

(ಸ್ವಂ ಸು ಫೋನ್) ಬೆಂಗಳೂರು ೧

ಈ ದಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಪ್ರಶ್ನೋತ್ತರಗಳಾದನಂತರ, ಶ್ರೀ ಹೆಚ್. ಲಿಂಗಪ್ಪ ಮತ್ತು ೨೨ ಜನ ಪ್ರಜಾ ಮಂಡಲದ ಸದಸ್ಯರುಗಳು ಅಧ್ಯಕ್ಷರ ಚುನಾವಣೆ ಬಗ್ಗೆ ಸದಸ್ಯರುಗಳಿಗೆ ಸಾಕಷ್ಟು ನೋಟೀಸ್ ಕೊಟ್ಟಿಲ್ಲವೆಂಬ ವಿಷಯವಾಗಿ ಕಳುಹಿಸಿದ್ದ ಅವಸರದ ಠರಾವನ್ನು ಅಧ್ಯಕ್ಷರು ತಳ್ಳಿಹಾಕಿದರು. ಮೊದಲನೆಯ ದಿನವೇ ಈ ವಿಷಯವು ಸಭೆಯ ಮುಂದೆ ಬಂದು ದಿವಾನ್-ಅಧ್ಯಕ್ಷರು ಅದನ್ನು ತಳ್ಳಿಹಾಕಿರುವಾಗ ಪುನಃ ಅದನ್ನು ತರಲು ಅವಕಾಶವಿಲ್ಲವೆಂದು ಅಧ್ಯಕ್ಷರು ಹೇಳಿದರು. ಅಧ್ಯಕ್ಷರಿಗೆ ಸಂಬಂಧಪಟ್ಟ ವಿಷಯವನ್ನು ಅವರೇ ಇತ್ಯರ್ಥ ಮಾಡುವುದು ಸರಿಯಾದುದಲ್ಲವೆಂದೂ, ಅದನ್ನು ಸಭೆಯ ತೀರ್ಮಾನಕ್ಕೆ ಬಿಡಬೇಕಾಗಿತ್ತೆಂದೂ ಸೂಚಕರು ತಿಳಿಸಿ, ತಮ್ಮ ಪಕ್ಷದ ಅಸಮಾಧಾನವನ್ನು ವ್ಯಕ್ತಪಡಿಸಲು, ೨೨ ಜನರು ಸಭಾ ಪರಿತ್ಯಾಗ ಮಾಡಿ, ೫ ನಿಮಿಷಗಳನಂತರ ವಾಪಸು ಬಂದರು.

ಪ್ರಶ್ನೋತ್ತರ

ಪ್ರತಿಯೊಂದು ಜಿಲ್ಲೆಗೂ ೧೪-೧೫ ಟ್ರಾಕ್ಟರುಗಳನ್ನು ಒದಗಿಸಲಾಗಿದೆಯೆಂದೂ, ಯಾವ ತಾಲ್ಲೂಕಿಗೂ ಪ್ರತ್ಯೇಕವಾಗಿ ಅದನ್ನು ಕಳುಹಿಸುವುದಿಲ್ಲವೆಂದೂ, ಪ್ರತಿ ಜಿಲ್ಲೆಯನ್ನೂ ಒಂದು ಯೂನಿಟ್ ಆಗಿ ಪರಿಗಣಿಸಲಾಗಿದೆಯೆಂದೂ, ಇವುಗಳಿಂದ ಕಳೆದ ೧೧ ತಿಂಗಳುಗಳಲ್ಲಿ ೧೩ ಸಾವಿರ ಎಕರೆ ಜಮೀನು ಸಾಗುವಳಿಗೆ ಬಂದಿರುವುದಾಗಿಯೂ, ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಶ್ರೀ ಕರಿಬಸಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಟ್ರಾಕ್ಟರುಗಳ ಉಪಕರಣಗಳನ್ನು ತಯಾರಿಸಲು ಸಂಚರಿಸುವ ವರ್ಕ್‌ಷಾಪುಗಳನ್ನು ಏರ್ಪಡಿಸುವ ಬಗ್ಗೆ ಸರ್ಕಾರದವರು ಆಲೋಚಿಸುತ್ತಿದ್ದಾರೆಂದೂ ತಿಳಿಸಲಾಯಿತು.

೨೦೦೦ ಮತ್ತು ಅದಕ್ಕೆ ಮೇಲ್ಪಟ್ಟ ಪ್ರಜಾ ಸಂಖ್ಯೆಯುಳ್ಳ ಪ್ರತಿಯೊಂದು ಗ್ರಾಮದಲ್ಲಿಯೂ ಸಹಕಾರ ಸಂಘವನ್ನು ಏರ್ಪಡಿಸಲಾಗುವುದೆಂದೂ, ಈಗ ೪ ಸಾವಿರ ಸಂಘಗಳು ಸಂಸ್ಥಾನದಲ್ಲಿವೆಯೆಂದೂ ರೈತರಿಗೆ ಬೇಕಾದ ಸಾಮಗ್ರಿಗಳನ್ನು

ಮಂತ್ರಿ ಮಂಡಲದಲ್ಲಿ ಬದಲಾವಣೆ ಆಗಬೇಕು

ಕಾಂಗ್ರೆಸ್ ಪಕ್ಷದವರ ಒತ್ತಾಯ

ಬೆಂಗಳೂರು ೧

ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ೬೦ ಜನ ಸದಸ್ಯರು ನಾಯಕರಾದ ಶ್ರೀ ಕೆ.ಸಿ. ರೆಡ್ಡಿಯವರಿಗೆ ಒಂದು ಪತ್ರ ಬರೆದು, ಹೊಸ ನಾಯಕರು ಚುನಾಯಿತರಾಗಿರುವುದರಿಂದ, ಈಗಿನ ಮಂತ್ರಿಮಂಡಲವನ್ನು ಪುನರ್ರಚನೆ ಮಾಡಬೇಕೆಂದು ಒತ್ತಾಯಮಾಡಿರುತ್ತಾರೆ. ಮಂತ್ರಿಗಳೂ ಮತ್ತು ಪ್ರಮುಖ ಕಾಂಗ್ರೆಸ್ ನಾಯಕರುಗಳೂ ಈ ವಿಚಾರವಾಗಿ ಆಲೋಚನೆ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ.

ಅಕ್ರಮ ಗಾಂಜಾ ಗಿಡಗಳ ಪತ್ತೆ

ಮೈಸೂರು ೧

ಈದಿಗಾ ಬಡಾವಣೆಯಲ್ಲಿರುವ ಜಾಡಮಾಲಿಗಳ ಕಾಲೊನಿಯಲ್ಲಿ ತಿಮ್ಮ ಎಂಬುವನು ತನ್ನ ಕೈತೋಟದಲ್ಲಿ ೭ ಅಡಿ ಎತ್ತರದ ೨ ಗಾಂಜಾ ಗಿಡಗಳನ್ನು ಅಕ್ರಮವಾಗಿ ಬೆಳೆಸುತ್ತಿದ್ದುದನ್ನು ಎಕ್ಸೈಜ್ ಇನ್ಸ್‌ಪೆಕ್ಟರಾದ ಜನಾಬ್ ಬಿ. ಎಸ್. ಮಹಮದ್‌ರವರು ನಿನ್ನೆ ಪತ್ತೆ ಮಾಡಿ, ಅವನ್ನು ವಶಪಡಿಸಿಕೊಂಡು ಆತನನ್ನು ದಸ್ತಗಿರಿ ಮಾಡಿರುತ್ತಾರೆ.

ಅಕಾಲದಲ್ಲಿ ಫಲಾವು ಮಾಡಿದುದಕ್ಕೆ ದಂಡ

ಮಂಡಿ ಮೊಹಲ್ಲಾದಲ್ಲಿರುವ ಉಸ್ಮಾನಿಯ ಹೋಟೆಲಿನಲ್ಲಿ ಈ ದಿನ ಬೆಳಿಗ್ಗೆ ೬-೪೫ ಗಂಟೆಯಲ್ಲಿ ಫಲಾವನ್ನು ಮಾಡುತ್ತಿದ್ದುದನ್ನು ನಗರದ ಫುಡ್ ರೇಷನ್ ಪಾರ್ಟಿಯವರು ಪತ್ತೆ ಮಾಡಿ, ಅದರ ಮಾಲೀಕರಾದ ಮಹಮದ್ ಜಾಫರ್‌ರವರ ಮೇಲೆ ಮೊಕದ್ದಮೆ ಹೂಡಿದ್ದರು. ಆಪಾದಿತರಿಗೆ ೭೦ ರೂ. ದಂಡವನ್ನು ನಗರ ನ್ಯಾಯಾಧೀಶರು ವಿಧಿಸಿದರು.

ಅವುಗಳ ಮೂಲಕ ಒದಗಿಸಲಾಗುವುದೆಂದೂ ಸರ್ಕಾರ ಜನರಲ್ ಕಾರ್ಯದರ್ಶಿಗಳು ಶ್ರೀ ಎಂ. ಬಿ. ಸುಹಸೀವಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಭಾರತ ಸರ್ಕಾರದವರು ಈ ವರ್ಷ ಸಂಸ್ಥಾನಕ್ಕೆ ೧ ಸಾವಿರ ಟನ್ ಕಬ್ಬಿಣವನ್ನು ಹೆಚ್ಚಾಗಿ ಸರಬರಾಜು ಮಾಡಲು ಒಪ್ಪಿರುವುದಾಗಿ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಒಂದು ಉಪ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

೪೮೦೦ ಮೈನರ್ ಕೆರೆಗಳ ಜೀರ್ಣೋದ್ಧಾರ

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಯೋಜನೆಯ ಅಂಗವಾಗಿ ೪೮೦೦ ಮೈನರ್ ಕೆರೆಗಳನ್ನು ೧೦ ವರ್ಷಗಳಲ್ಲಿ ಜೀರ್ಣೋದ್ಧಾರ ಮಾಡುವ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಂಡಿದ್ದಾರೆ. ಕೆರೆಗಳಲ್ಲಿರುವ ಕೆಸರನ್ನು ತೆಗೆದುಹಾಕಲು, ೬೦ ಸಾವಿರ ರೂ. ಖರ್ಚಿನಿಂದ ಟ್ರಾಕ್ಸ್ ಕಾವೇಟರ್ ಎಂಬ ಯಂತ್ರವನ್ನು ತಯಾರಿಸಲಾಗಿದೆ. ಈ ಯಂತ್ರವು ಕೆಸರನ್ನು ತೆಗೆಯುವುದಲ್ಲದೆ, ಅದನ್ನು ಭೂಮಿ ಮೇಲಕ್ಕೂ ತೆಗೆದುಹಾಕುವುದು. ರಸ್ತೆಗಳನ್ನು ನಿರ್ಮಿಸುವುದಕ್ಕೂ ಇದನ್ನು ಉಪಯೋಗಿಸಬಹುದು. ೨೦೦ ಜನರು ಮಾಡುವ ಕೆಲಸವನ್ನು ಈ ಒಂದು ಯಂತ್ರವು ಮಾಡುವುದೆಂದೂ, ಒಂದು ವಾರದಲ್ಲಿ ಒಂದು ಮೊತ್ತ ಕೆರೆಯ ಕೆಸರನ್ನು ತೆಗೆದುಹಾಕುವುದೆಂದೂ ಹೇಳಲಾಗಿದೆ.

[illegible]

ಭಾರತದ ಎಲ್ಲ [illegible] ಬ್ಯಾಂಕಿನ ದ್ರೋಹಿ [illegible] ದಸ್ತಗಿರಿ

[illegible] ಆಫ್ರಿಕದ [illegible] ಬ್ಯಾಂಕಿನ [illegible] ದಸ್ತಗಿರಿ ಮಾಡಿದ್ದಾರೆ

ವ್ಯಭಿಚಾರವನ್ನು ಬಿಡಿಸಲು ಪೋಲೀಸರ ಧಾಳಿ

[illegible] ಆತನನ್ನು [illegible] ಅನೇಕರನ್ನು [illegible] ಬಂಧಿಸಲಾಗಿದೆ

ಕರ್ನಾಟಕ ಯುವಕ [illegible]

[illegible] ಕರ್ನಾಟಕದ ಯುವಕರೆಲ್ಲರೂ ಇದರಲ್ಲಿ ಸಹಕರಿಸಬೇಕೆಂದು [illegible] ಸ್ವಾಗತ ಸಮಿತಿಯವರು ಕೋರಿದ್ದಾರೆ

[illegible] ಏಕತೆಗೆ ಅಂತರ್ವಿವಾಹ

[illegible] ಶ್ರೀ [illegible] ಅಧ್ಯಕ್ಷತೆ [illegible] ಏಕತೆಯ ಸಮ್ಮೇಳನ [illegible] ಸಾಧಿಸಲು ಅಂತರ ಜಾತಿ [illegible] ನಡೆಸಬೇಕೆಂದೂ ಹಿಂದೂ [illegible] ಭಾಗದ [illegible] ಇರುವಿಗಳನ್ನು [illegible] ಮಾಡಬೇಕೆಂದೂ, ನಿರ್ಣಯ ಮಾಡಲಾಯಿತು

ಮನೆ ಕುಸಿದು ಬಿದ್ದು [illegible] ಜನರ ಮರಣ

[illegible] ಮನೆಯೊಂದು ಕುಸಿದು ಬಿದ್ದು [illegible] ಮೃತಪಟ್ಟರೆಂದೂ [illegible] ಗಾಯವಾಯಿತೆಂದೂ ತಿಳಿದಿದೆ

ಪಟ್ಟೇರಿ ಬದಲಾವಣೆ

[illegible] ಕೋ ಆಪರೇಟಿವ್ ಸೊಸೈಟಿಯು [illegible] ಜಿಲ್ಲಾ ಮೋಟಾರು [illegible] ಸಂಘವನ್ನು ಹಳೇ [illegible] ಬದಲಾಯಿಸಿದೆ

Office of the University of Mysore [illegible] Bangalore, D[illegible] 20th May 1949

NOTIFICATION

[illegible] last date for [illegible] applications for [illegible] Degree [illegible]

In partial modification [illegible] Notification No. [illegible] 1-1501-48-49 dated [illegible] May 1949 it is [illegible] that applications for admission to the University Institutions in respect of Degree [illegible] been extended [illegible] 1949 inclusive.

By order
Sd. C. Rangachar
Registrar

Edited, printed and published by [illegible] at the [illegible] Press, D[illegible] Road, Mysore

ಸಂಯುಕ್ತ ಪ್ರಾಂತ್ಯದಲ್ಲಿ ಗ್ರಾಮ ಪಂಚಾಯತಿ ರಾಜ್ಯ

ಕೇಂದ್ರ ಸರ್ಕಾರದ ಆಡಳಿತವನ್ನು ವಿಕೇಂದ್ರೀಕರಣ ಮಾಡಿ ಗ್ರಾಮ ಪಂಚಾಯತಿಗಳಿಗೆ ಪೂರ್ಣವಾದ ಆಡಳಿತಾಧಿಕಾರವನ್ನು ವಹಿಸುವ ಕಾರ್ಯಕ್ರಮದ ಅಂಗವಾಗಿ ಸಂಯುಕ್ತ ಪ್ರಾಂತ್ಯದಲ್ಲಿ [illegible] ಸಾವಿರ ಗ್ರಾಮಪಂಚಾಯಿತಿಗಳನ್ನೂ, [illegible] ಸಾವಿರ [illegible] ಸಂಸ್ಥೆಗಳನ್ನೂ ಸರ್ಕಾರದವರು ಸ್ಥಾಪಿಸಿದ್ದಾರೆ. ಗ್ರಾಮದ ಪ್ರಶ್ನೆಗಳಿಗೆ [illegible] ವನ್ನು ಪರಿಗಣಿಸುವ ಪ್ರಕರಣ [illegible] ಮೊದಲನೆಯ ಪ್ರಯತ್ನವೆಂದು ಹೇಳಲಾಗಿದೆ

ಜಾತಿ ನಿರ್ಮೂಲನ ಸಂಸ್ಥೆ

[illegible] ಕೆಲವು ಜನ ಸಮಾಜ ಸುಧಾರಣಾ ನಾಯಕರುಗಳು ಸೇರಿ ಜಾತಿ ನಿರ್ಮೂಲನಾ ಸಂಸ್ಥೆಯೊಂದನ್ನು ಸ್ಥಾಪಿಸಿರುತ್ತಾರೆ. ಅಂತರ್ ಜಾತಿಯ ವಿವಾಹ ಮತ್ತು [illegible] ಗಳನ್ನು ಹೆಚ್ಚಿಸಲು ಇವರು ಪ್ರಚಾರ ಮತ್ತು ಸಮ್ಮೇಳನಗಳನ್ನು ನಡೆಸಿರುವರು

ಜಕ್ಕೂರಿನಲ್ಲಿ ವೈಮಾನಿಕ ಶಿಕ್ಷಣ ಶಾಲೆ

ಬೆಂಗಳೂರಿನ ಹತ್ತಿರವಿರುವ ಜಕ್ಕೂರಿನಲ್ಲಿ ವೈಮಾನಿಕ ಶಿಕ್ಷಣ ಶಾಲೆಯನ್ನು ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆ. ಇದಕ್ಕೆ ೩,೩೦,೦೦೦ ರೂ ಖರ್ಚಾಗುವುದು

ಕೃಷ್ಣರಾಜಸಾಗರದಲ್ಲಿ ಪವರ್ ಇಂಜನಿಯರಿಂಗ್ ಸಂಶೋಧನೆ

ಕೃಷ್ಣರಾಜಸಾಗರದಲ್ಲಿ ಪ್ರಮುಖ ಪವರ್ ಇಂಜನಿಯರಿಂಗ್ ಮತ್ತು ಹೈಡ್ರಾಲಿಕ್ ಸಂಶೋಧನಾ ಕೇಂದ್ರವನ್ನು ತೆರೆಯುವ ಬಗ್ಗೆ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿದ್ದಾರೆ

ಮನೆ ಬಾಡಿಗೆಗೆ ಇದೆ

[illegible] ರಸ್ತೆಯಲ್ಲಿರುವ ಮುನಿಸಿಪಲ್ ಮಾದರಿ ಮನೆ ನಂಬರ್ [illegible] ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

'ಸಾಧ್ವಿ' ಆಫೀಸ್,
ಮೈಸೂರು

[illegible]

[illegible] ಸರ್ವ ಮಂಗಳಾನಿ ಭವಂತು ||

[illegible]

[illegible] ಅಂಗಡಿ

[illegible]

[illegible] ಮೈಸೂರು

[illegible] ಪಂಚಾಂಗ ಪಂಡಿತರ

[illegible] ಪದಗಳು



[illegible]

ಬೆಲೆ [illegible] 1ಕ್ಕೆ 2-0-0

ಶ್ರೀ [illegible] ಶಾಲೆ, ಮೈಸೂರು.

ರಕ್ಷ ಗಾಂಧೀ ನಿಧಿ ಟಿಕೆಟ್ಟು ಮಾರಾಟಗಾರನ ದಸ್ತಗಿರಿ

ಗ್ವಾಲಿಯರಿನ ಸುವಲಾಲ್ ಎಂಬುವ [illegible] ಖಾದಿ ಬಟ್ಟೆಯನ್ನು ಧರಿಸಿ ರಕ್ಷ ಗಾಂಧಿ ಸ್ಮಾರಕ ನಿಧಿಯ ಟಿಕೆಟುಗಳನ್ನು [illegible] ಯವರಿಗೆ ಮಾರಿ ಹಣವನ್ನು ದುರುಪಯೋಗ ಪಡಿಸುತ್ತಿದ್ದುದನ್ನು ಪೋಲೀಸರು ಪತ್ತೆ ಮಾಡಿ ಆತನನ್ನು ದಸ್ತಗಿರಿ ಮಾಡಿರುತ್ತಾರೆ

ಕೈರೋ ಮೃಗಾಲಯಕ್ಕೆ ಭಾರತದಿಂದ ಖಡ್ಗ ಮೃಗ

ಅಸ್ಸಾಮಿನ ಕಾಡಿನಲ್ಲಿ ಹಿಡಿದ ಎರಡು ಖಡ್ಗ ಮೃಗಗಳನ್ನು ತಲಾ ೩೦ ಸಾವಿರ ರೂಗೆ ಕೈರೋ ಮೃಗಾಲಯಕ್ಕೆ ಮಾರಲಾಗಿದ

೫೫ ವರ್ಷಕ್ಕೆ ನಿವೃತ್ತಿ

ಸಂಯುಕ್ತ ಪ್ರಾಂತ್ಯದ ಎಲ್ಲ ಸರ್ಕಾರಿ ನೌಕರರೂ ೫೫ ವರ್ಷಕ್ಕೆ ನಿವೃತ್ತರಾಗಬೇಕೆಂದೂ ಅನಂತರ ಜೀವದಾನವನ್ನು ಕೊಡಲಾಗುವುದಿಲ್ಲವೆಂದೂ ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

ಗ್ರಾಮ ವೈದ್ಯರುಗಳ ಶಿಕ್ಷಣ ಯೋಜನೆ

ಸರ್ಕಾರದ ವೆಚ್ಚದಲ್ಲಿ ೫೦೦ ಜನ ಗ್ರಾಮ ವೈದ್ಯರುಗಳನ್ನು ತರಪೇತುಮಾಡಲು ನಾಲ್ಕು ಕೇಂದ್ರಗಳನ್ನು ಸದ್ಯದಲ್ಲಿಯೇ ಮದರಾಸ ಸರ್ಕಾರದವರು ತೆರೆಯಲಿದ್ದಾರೆ

ಪಾಕೀಸ್ಥಾನಕ್ಕೆ ೧ ಸಾವಿರ ಜೀಪುಗಳು

ಅಮೆರಿಕದಿಂದ ೧ ಸಾವಿರ ಜೀಪುಗಳನ್ನು ತರಿಸಲು ಪಾಕೀಸ್ಥಾನ ಸರ್ಕಾರದವರು ನಿರ್ಧರಿಸಿದ್ದಾರೆ

ಲಗ್ನದ ಜವಳಿಗಾಗಿ
ಗುರುದೇವಾ ಹಾಲ್
ಬೆಂಗಳೂರು ಜವಳಿ ಅಂಗಡಿ
ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ, ಮೈಸೂರು

ಶ್ರೀ ಗಾಯತ್ರೀ

ದಿನವಹಿ 3 ಪ್ರದರ್ಶನಗಳು
1-6-49ರಿಂದ 4 ದಿನಗಳು ಮಾತ್ರ

The Charge of the Light Brigade

ದಿ ಚಾರ್ಜ್ ಆಫ್ ದಿ ಲೈಟ್ ಬ್ರಿಗೇಡ್

With Errol Flynn and Olivia De Havilland

—ಬೆಳಗಿನ ಪ್ರದರ್ಶನ—
4—6—49ರಿಂದ 3 ದಿನಗಳು ಮಾತ್ರ

If I Were King

With Ronald Colman

If you need the service of an expert Kindergartner & Child educationist to your children, please write to the Director, Sri [illegible]dumba Sisu Vihar, De[illegible] Road, Mysore

ಫೋ: ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೩-೬-೪೮ [ಸಂಚಿಕೆ ೨೪೯

ಆಗಸ್ಟ್ ೬ರ ಒಳಗೆ ಹೊಸ ಮಂತ್ರಿಮಂಡಲ

ಆಗಸ್ಟ್ ೬ ರೊಳಗೆ ಮಂತ್ರಿ ಮಂಡಲದ ಪುನರ್ರಚನೆ

ಕೆ. ಸಿ. ರೆಡ್ಡಿಯವರ ಸೂಚನೆ

ಸ್ವಂ. ಸು. ಫೋ] ಬೆಂಗಳೂರು ೨

ವಿಧಾನದ ಯುದ್ದೆಯು ಆಗಸ್ಟ್ ೬ನೇ ತಾರೀಖು ಮುಕ್ತಾಯವಾಗುವಷ್ಟರೊಳಗೆ ಮಂತ್ರಿಮಂಡಲದ ಪುನರ್ರಚನೆಯು ಆಗುವುದೆಂಬ ಸೂಚನೆಯನ್ನು ಪ್ರಧಾನ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟಿರುತ್ತಾರೆ ಕಾಂಗ್ರೆಸ್ ಪಕ್ಷದಲ್ಲಿ ಈ ವಿಚಾರವಾಗಿ ತೀವ್ರವಾದ ಒತ್ತಾಯವು ಬಂದಿರುತ್ತದೆ. ಪಕ್ಷದ ೬೨ ಮಂದಿ ಸದಸ್ಯರು ಈ ಸಂದರ್ಭದಲ್ಲಿ ಲಿಖಿತ ಮೂಲಕ ಕೊಟ್ಟಿರುವ ಸಲಹೆಯು ವಿಶೇಷವಾಗಿ ಚರ್ಚೆಯಾಗುತ್ತಿದೆ.

ಕಾಂಗ್ರೆಸ್ ಪಕ್ಷದ ಉಪ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಹೇಳಿಕೆಯಲ್ಲಿ ಹೊಸ ಮಂತ್ರಿ ಮಂಡಲದ ರಚನೆಯ ಅವಶ್ಯಕತೆಯನ್ನು ಒತ್ತಿ ಹೇಳಿರುತ್ತಾರೆ ಅವರ ಹೇಳಿಕೆ ಈ ರೀತಿ ಇರುತ್ತದೆ:-

ಇನ್ನು ಎರಡು ತಿಂಗಳೊಳಗೆ ಮಂತ್ರಿ ಮಂಡಲದ ಪುನರ್ರಚನೆಯು ಆಗಬೇಕು. ಇದೆ ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನು ನೇಮಿಸಬೇಕು. ಪ್ರಜಾ ಪ್ರತಿನಿಧಿ ಸಭೆಯ ಮುಂದೆ ಬಂದಿರುವ ಆಯವ್ಯಯ ಪಟ್ಟಿಯನ್ನು ಇಂದಿನ ಮಂತ್ರಿಮಂಡಲದವರು ಸಿದ್ಧಗೊಳಿಸಿರುವುದರಿಂದ ಅವರೇ ಅದನ್ನು ಶಾಸನ ಸಭೆಗಳ ಮುಂದೆ ಮಂಡಿಸಿ ವಿವರಣೆ ಕೊಡಬೇಕು ಆದುದರಿಂದ ಜುಲೈ ತಿಂಗಳ ಅಂತ್ಯದ ವರೆಗೆ ಮಂತ್ರಿ ಮಂಡಲದ ಪುನರ್ರಚನೆಗೆ ಅನಿವಾರ್ಯವಾಗ ಬಹುದು. ಇದಾದ ಕೂಡಲೇ ಈ ಕಾರ್ಯವನ್ನು ಮಾಡಬೇಕು

ನಾನು ಉಪ ಮುಖ್ಯ ಮಂತ್ರಿಯಾಗಿ ನೇಮಿಸಲ್ಪಟ್ಟರೆ ಬರೀ ತೋರಿಕೆಗಾಗಿ ಆ ಸ್ಥಾನವನ್ನು ಪಡೆಯುವುದಿಲ್ಲ. ಇತರ ದೇಶಗಳಲ್ಲಿ ಅದಕ್ಕಿರುವ ಸ್ಥಾನ ಮಾನಗಳನ್ನು ಕೊಡಬೇಕು. ಇಲ್ಲದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ ಕೇವಲ ಹಾಸ್ಯಕ್ಕಾಗಿಯಾಗಲಿ, ತೋರಿಕೆಗಾಗಿಯಾಗಲಿ ನಾನು ಉಪ ಮುಖ್ಯ ಮಂತ್ರಿಯಾಗಲು ಬಯಸುವುದಿಲ್ಲ ಹೊಸ ಭಾವನೆಗಳಿಗೆ ಅನುಗುಣವಾಗಿ ಹೊಸ ಕಾರ್ಯಕ್ರಮಗಳನ್ನು ತರಬೇಕೆಂಬುದೇ ಉದ್ದೇಶ.

ಕಾಂಗ್ರೆಸ್ ಮಂತ್ರಿಮಂಡಲವು ಇನ್ನೂ ೩೩ ವರ್ಷ ಇಂದಿನಂತೆಯೇ ಮುಂದುವರಿಸಿದರೆ ದೇಶವು ಕಮ್ಯೂನಿಸ್ಟರ ಮತ್ತು ಕೋಮುವಾದದ ಆಕ್ರಮಣಕ್ಕೆ ಬಲಿಯಾಗುತ್ತದೆ ಆದ್ದರಿಂದ ಇನ್ನು ಎರಡು ತಿಂಗಳಲ್ಲಿ ಮಂತ್ರಿಮಂಡಲದ ಬದಲಾವಣೆಯಾಗದಿದ್ದರೆ ನಾನು ಮುಂದಿನ ಮಾರ್ಗವನ್ನು ಆಲೋಚಿಸುತ್ತೇನೆ

ಮಸೂದೆಗಳ ಅಂಗೀಕಾರ

ನಿನ್ನೆ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೊಗೆ ಸೊಪ್ಪು, ಸಕ್ಕರೆ, ಬಟ್ಟೆ ಮುಂತಾದುವುಗಳ ಮೇಲೆ ಹಾಕುವ ಎಕ್ಸೈಜು ತೆರಿಗೆ ತಿದ್ದುಪಡಿ ಮಸೂದೆಗಳನ್ನು ಅಂಗೀಕರಿಸಲಾಯಿತು. ಭಾರತ ಸರಕಾರದವರು ಹಾಕಿರುವ ತೆರಿಗೆಗಳಿಗೆ ಇಲ್ಲಿನ ತೆರಿಗೆಗಳು ಅನುಗುಣವಾಗಿರುವಂತೆ ಮಾಡುವುದೇ ಇವರ ಉದ್ದೇಶ. ಪಾಕಿಸ್ಥಾನದಿಂದ ಇಲ್ಲಿಗೆ ಬಂದವರು ತಮಗೆ ಬರಬೇಕಾದ ಬಾಕಿ ಹಣಕ್ಕಾಗಿ ಹಾಕುವ ದಾವಾಗಳ ಸಂಬಂಧವಾದ ಮಸೂದೆಯೂ ಮಂಜೂರಾಯಿತು ಸರ್ಕಾರ, ಗಿರಣಿ, ರೈಲ್ವೆ, ಸ್ಥಳೀಯ ಸಂಸ್ಥೆ ಮುಂತಾದುವುಗಳ ನೌಕರರುಗಳಿಗೆ ಸಲ್ಲುವ ಸಂಬಳದ ಬಾಕಿ ಮೊಬಲಗುಗಳನ್ನು ಜಪ್ತಿ ಮಾಡದಂತೆ ವಿಧಾಯಕ ಮಾಡುವ ಮಸೂದೆಯೂ ಸಹ ಒಪ್ಪಲ್ಪಟ್ಟಿತು

ಭಾಷ್ಯಂರವರ ಪ್ರಯಾಣ

ಸ್ವಂ. ಸು. ಫೋ] ಬೆಂಗಳೂರು ೨

ಈ ದಿನ ಬೆಳಿಗ್ಗೆ ಶ್ರೀ ಕೆ ಟಿ. ಭಾಷ್ಯಂರವರು ಜಿನೀವಾಕ್ಕೆ ತೆರಳಲು ವಿಮಾನದಲ್ಲಿ ಬೊಂಬಾಯಿಗೆ ಪ್ರಯಾಣ ಮಾಡಿದರು. ಅವರು ಹಿಂದಿರುಗಲು ಮೂರು ವಾರ ಕಾಲ ಹಿಡಿಯುವುದು. ಜಿನೀವಾದಲ್ಲಿ ನಡೆಯುವ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನವನ್ನು ಮುಗಿಸಿಕೊಂಡು ಅವರು ಜರ್ಮನಿ, ರಷ್ಯ, ಇಟಲಿ, ಜೆಕೊಸ್ಲೊವೇಕಿಯಗಳಿಗೆ ಭೇಟಿ ಇತ್ತು ಅಲ್ಲಿ ಸಂಸ್ಥಾನಕ್ಕೆ ಬೇಕಾಗುವ ವಿದ್ಯುಚ್ಛಕ್ತಿ ಯಂತ್ರ ಸಾಮಗ್ರಿಗಳನ್ನು ಪರಿಶೀಲಿಸಿಕೊಂಡು ಬರುವರೆಂದು ತಿಳಿದುಬಂದಿದೆ ಈ ಹೆಚ್ಚಿನ ಪ್ರವಾಸದ ವೆಚ್ಚವನ್ನು ಮೈಸೂರು ಸರ್ಕಾರದವರೇ ವಹಿಸುವರು.

೯ನೇ ತಾರೀಖು ರಜಾ

ಶ್ರೀ ಚಕ್ರವರ್ತಿಯವರ ವರ್ಧಂತಿ ಪ್ರಯುಕ್ತ ೯ನೇ ತಾ|| ಸಾರ್ವಜನಿಕ ರಜಾ ದಿನವೆಂದು ಸರ್ಕಾರದವರು ಘೋಷಿಸಿದ್ದಾರೆ.

ಉಪಾಧ್ಯಕ್ಷ ಚುನಾವಣೆ

ಈ ತಿಂಗಳು ೭ನೇ ತಾ|| ಪ್ರಜಾ ಪ್ರತಿನಿಧಿ ಸಭೆಯ ಉಪಾಧ್ಯಕ್ಷ ಚುನಾವಣೆಯು ನಡೆಯುವಂತೆ ಗೊತ್ತಾಗಿದೆ ೫ನೇ ತಾ|| ಒಂದು ಗಂಟೆ ವರೆಗೂ ಉಮೇದುವಾರಿಕೆಗಳನ್ನು ಸೂಚಿಸಬಹುದು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಅವಿರೋಧವಾಗಿ ಆರಿಸಲ್ಪಡುವ ಸೂಚನೆಯಿದೆ

ಚೀಣಾ ಮಾಜಿ ಪ್ರಧಾನಿಯ ಆತ್ಮಹತ್ಯೆ

ಚೀಣದ ಪ್ರಧಾನಿಯಾಗಿದ್ದ ಸೊಯಿಂಗ್ ಚೆರವರು ತಮ್ಮ ಪದವಿಗೆ ರಾಜೀನಾಮೆ ಕೊಡುವುದಕ್ಕಿಂತ ಮುಂಚೆ ಸಮುದ್ರಕ್ಕೆ ಬಿದ್ದು ಆತ್ಮಹತ್ಯ ಮಾಡಿಕೊಳ್ಳುವುದಾಗಿ ತಮಗೆ ತಿಳಿಸಿದ್ದರೆಂದು ಅಧ್ಯಕ್ಷರು ಅಲ್ಲಿನ ಶಾಸನ ಸಭೆಯಲ್ಲಿ ಬಹಿರಂಗಪಡಿಸಿರುತ್ತಾರೆ

ಮಹಾತ್ಮರ ಹುಟ್ಟಿದ ದಿನ ಭಾರತ ರಾಜ್ಯಾಂಗದ ಪ್ರಾರಂಭೋತ್ಸವ

ಭಾರತದ ಹೊಸ ರಾಜ್ಯಾಂಗವನ್ನು ಮಹಾತ್ಮಾ ಗಾಂಧಿಯವರ ಜನ್ಮ ದಿನವಾದ ಅಕ್ಟೋಬರ್ ೨ನೇ ತಾರೀಖಿನಲ್ಲಿಯಾಗಲೀ ಇಲ್ಲವೇ ೧೯೪೯ನೇ ಜನವರಿ ೨೬ನೇ ತಾರೀಖಿನ ದಿನವಾಗಲಿ ಜಾರಿಗೆ ತರಬಹುದೆಂದು ಹೇಳಲಾಗಿದೆ ಜನವರಿ ೨೬ ರಂದು ಸ್ವಾತಂತ್ರ್ಯೋತ್ಸವವು ಪ್ರತಿ ವರ್ಷವೂ ಜರುಗುವುದು.

ರಾಜಕೋಟೆಯಲ್ಲಿ ೯೦೦ ಮಂದಿ ಜಮೀನುದಾರರ ಬಂಧನ

ಜಮೀನುದಾರರು ತಮ್ಮ ಜಮೀನುಗಳನ್ನು ಸಾಗುವಳಿ ಮಾಡುತ್ತಿರುವ ರೈತರಿಂದ ತಪ್ಪಿಸಬಾರದೆಂದು ಸೌರಾಷ್ಟ್ರ ಸರ್ಕಾರದವರು ಮಾಡಿರುವ ಆಜ್ಞೆಯನ್ನು ವಿರೋಧಿಸಿ ರಾಜಕೋಟೆಯ ಅನೇಕ ಮಂದಿ ಜಮೀನುದಾರರುಗಳು ಮೆರವಣಿಗೆ ನಡೆಸಿ ಆಜ್ಞೋಲ್ಲಂಘನೆ ಮಾಡಿದರು. ಈ ಸಂಬಂಧವಾಗಿ ಇದುವರೆಗೆ ೯೦೦ ಮಂದಿ ಜಮೀನುದಾರರನ್ನು ಬಂಧಿಸಲಾಗಿದೆ

ಸರ್ಪದಿಂದ ಮಹಾತ್ಮರ ಸಮಾಧಿಯ ಪ್ರದಕ್ಷಿಣೆ

ದೆಹಲಿಯ ರಾಜಘಾಟಿನಲ್ಲಿ ನಿರ್ಮಿಸಲಾಗಿರುವ ಮಹಾತ್ಮರ ಸಮಾಧಿಗೆ ಮೊನ್ನೆ ದಿನ ಬೆಳಗಿನ ಜಾವ ಒಂದು ಭಾರಿ ಕಾಳಿಂಗ ಸರ್ಪವು ಬಂದು ಸಮಾಧಿಯನ್ನು ಬಳಸಿ ಮೆಟ್ಟಲಿನ ಬಳಿ ಸ್ವಲ್ಪ ಹೊತ್ತು ನಿಂತು ಮಹಾತ್ಮರಿಗೆ ತನ್ನ ಗೌರವವನ್ನು ಸಲ್ಲಿಸಿತೆಂದು ವರದಿಯಾಗಿದೆ. ಇದನ್ನು ಕಂಡ ಹಲವರು ಸರ್ಪವನ್ನು ಹೊಡೆಯಬೇಕೆಂದಿರುವಲ್ಲಿ ಸಮಾಧಿಯ ಮೇಲ್ವಿಚಾರಕರಾದ ಶ್ರೀ|| ಮನೋಹರಲಾಲರು ಅವರನ್ನು ತಡೆದರು. ಅನಂತರ ಸರ್ಪವು ಯಾರಿಗೂ ತೊಂದರೆ ಮಾಡದೆ ಪಕ್ಕದಲ್ಲಿದ್ದ ಪೊದೆಯೊಳಕ್ಕೆ ಹೋಗಿ ಸೇರಿಕೊಂಡಿತೆಂದು ಹೇಳಲಾಗಿದೆ.

ಸೋಷಲಿಸ್ಟರ ಸಭೆ

ಮೈಸೂರು ೨

ಕರ್ನಾಟಕ ಸೋಷಲಿಸ್ಟ್ ಪಾರ್ಟಿಯ ಮೈಸೂರು ಶಾಖೆಯ ಕಾರ್ಯಕರ್ತರುಗಳ ಮತ್ತು ಹಿತೈಷಿಗಳ ಸಭೆಯು ನಾಳೆ ಸಂಜೆ ೬ ಘಂಟೆಗೆ ಪಕ್ಷದ ಕಛೇರಿಯಲ್ಲಿ ನಡೆಯುವುದು.

ಭಾರತವು ಕಾಮನ್‌ವೆಲ್ತ್ ಸೇರಿದುದಕ್ಕೆ ಅಭಿನಂದನೆ

ಪ್ರ|| ಪ್ರ ಸಭೆಯಲ್ಲಿ ನಿರ್ಣಯ

ಸ್ವಂ. ಸು. ಫೋ] ಬೆಂಗಳೂರು ೨

ಭಾರತವು ಕಾಮನ್ ವೆಲ್ತಿನಲ್ಲಿ ಸೇರಿದುದಕ್ಕೆ ಅಭಿನಂದನೆಯನ್ನು ಸೂಚಿಸುವ ನಿರ್ಣಯವನ್ನು ಈ ದಿನ ಪ್ರ|| ಪ್ರ|| ಸಭೆಯಲ್ಲಿ ಶ್ರೀ ಡಿ. ವಿ. ಲಿಂಗಪ್ಪನವರು ಮಂಡಿಸಿದರು. ಶ್ರೀ ಕೆ. ಸಿ. ರೆಡ್ಡಿ ಮುಂತಾದ ಅನೇಕ ಸದಸ್ಯರು ಅದನ್ನು ಅನುಮೋದಿಸಿದರು. ಶ್ರೀ ಮೂಲ್ಕ ಗೋವಿಂದ ರೆಡ್ಡಿಯವರೊಬ್ಬರು ಮಾತ್ರ ವಿರೋಧಿಸಿದರು. ನಮ್ಮ ಕಷ್ಟಕ್ಕೆಲ್ಲ ಬ್ರಿಟಿಷರೇ ಕಾರಣರೆಂದೂ 'ದಕ್ಷಿಣ ಆಫ್ರಿಕ' ಮುಂತಾದ ದೇಶಗಳಲ್ಲಿ ಇನ್ನೂ ಭಾರತೀಯರಿಗೆ ಕಿರುಕುಳಗಳಾಗುತ್ತಿವೆಯೆಂದೂ ಅವರು ಹೇಳಿದರು. ನಿರ್ಣಯವು ಅಂಗೀಕರಿಸಲ್ಪಟ್ಟಿತು. ಪ್ರಶ್ನೋತ್ತರಗಳನಂತರ ಶ್ರೀ ಹೆಚ್. ಸಿ ದಾಸಪ್ಪನವರು ಆಯವ್ಯಯದ ಅಂದಾಜನ್ನು ಮಂಡಿಸಿದರು.

ದೇವನಾಗರಿ ಭಾಷೆಯಲ್ಲಿ ತಂತಿ

ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿ ಭಾಷೆಯ ತಂತಿ ಸಮಾಚಾರಗಳನ್ನು ನೆನ್ನೆ ದಿನ ಇದೇ ಮೊದಲಾಗಿ ಅಲಹಾಬಾದಿನಿಂದ ಆಗ್ರಾ, ಕಾಶಿ, ಕಾನ್ಪುರಗಳಿಗೆ ರವಾನಿಸಲಾಯಿತು.

ಭೂಪಾಲ್ ಸಂಸ್ಥಾನವು ಭಾರತಕ್ಕೆ ಸೇರಿತು

ಭೂಪಾಲ್ ಸಂಸ್ಥಾನವು ನಿನ್ನೆಯಿಂದ ಚೀಫ್ ಕಮೀಷನರ ಪ್ರಾಂತ್ಯವಾಗಿ ಭಾರತ ಸರ್ಕಾರದ ಆಡಳಿತಕ್ಕೆ ವಹಿಸಲ್ಪಟ್ಟಿತು ಶ್ರೀ ಎನ್. ಬಿ. ಬ್ಯಾನರ್ಜಿಯವರು ಅದರ ಅಧಿಕಾರವನ್ನು ವಹಿಸಿಕೊಂಡರು.

ತಿರುಪತಿಗೆ ವಿಮಾನ ಸೌಕರ್ಯ

ಹರಿದ್ವಾರ, ತಿರುಪತಿ ಮತ್ತು ರಾಮೇಶ್ವರಗಳಿಗೆ ಹೋಗಿ ಬರುವ ಯಾತ್ರಿಕರಿಗಾಗಿ ವಿಮಾನ ಸೌಕರ್ಯವನ್ನು ಏರ್ಪಡಿಸಲು ಭಾರತ ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ತಿಳಿದುಬಂದಿದೆ.

ಚನ್ನಯ್ಯನವರ ಪ್ರವಾಸ

ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಪಾಶ್ಚಿಮಾತ್ಯ ಪ್ರವಾಸದ ನಿಮಿತ್ತ ಇದೇ ೬ನೇ ತಾರೀಖು ಸೋಮವಾರ ಮೈಸೂರಿನಿಂದ ಬೆಂಗಳೂರಿಗೆ ತೆರಳುವರು. ೮ನೇ ತಾರೀಖು ವಿಮಾನದಲ್ಲಿ ಬೊಂಬಾಯಿಗೆ ಹೊರಡುವರು ೧೦ ನೇ ತಾರೀಖು ಅಲ್ಲಿಂದ ಲಂಡನ್ನಿಗೆ ತೆರಳುವರು.

ವೇಣು ವಾದನ

ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ದಿನ ರಾತ್ರಿ ೮ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ವಿದ್ವಾನ್ ಟಿ ಪಿ ಶಿವಚಿದಂಬರ ಅಯ್ಯರ್ರವರ ವೇಣು ವಾದನವು ವಿ: ಬಿ ಕೇಶವಮೂರ್ತಿಯವರ ಪಿಟೀಲು ಮತ್ತು ವಿ|| ಕೆ ಬಾಬುರಾಯರವರ ಮೃದಂಗದೊಡನೆ ನಡೆಯುವುದು

ಹೋಟೇಲ್ ಕೆಲಸಗಾರರ ಸಂಘ

ಈ ದಿನ ಹೋಟೇಲು ನೌಕರರ ಸಂಘದ ಸಭೆಯು ರಾತ್ರಿ ೭ ೩೦ ಗಂಟೆಗೆ ಸಂಘದ ಕಛೇರಿಯಲ್ಲಿ ಶ್ರೀ ಟಿ ಎಸ್ ಕೃಷ್ಣನ್ನವರ ಅಧ್ಯಕ್ಷತೆಯಲ್ಲಿ ಜರುಗುವುದು ಎಲ್ಲಾ ಸದಸ್ಯರುಗಳೂ ತಪ್ಪದೆ ಹಾಜರಿರಬೇಕಾಗಿ ಕೋರಲಾಗಿದೆ.

ಕೊಚ್ಚಿ-ತಿರುವಾಂಕೂರು ಯೂನಿಯನ್ನಿಗೆ ಮಲಬಾರು

ಕೊಚ್ಚಿ-ತಿರುವಾಂಕೂರು ಯೂನಿಯನ್ನಿನಲ್ಲಿ ಮಲಬಾರು ಜಿಲ್ಲೆಯು ಸೇರಲು ಏನೂ ಬಾಧಕವಿಲ್ಲವೆಂದೂ, ಮತ್ತು ತಿರುವಾಂಕೂರು ಅಧಿಪತಿಗಳು ಯೂನಿಯನ್ನಿನ ಜೀವಿತಾವಧಿ ರಾಜಪ್ರಮುಖರನ್ನಾಗಿ ನಾಡುತ್ತಿರುವುದು ಇದಕ್ಕೆ ಯಾವ ಅಡ್ಡಿಯನ್ನೂ ತರುವುದಿಲ್ಲವೆಂದೂ ಭಾರತ ಸರಕಾರದ ಸಂಸ್ಥಾನಗಳ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್ನರು ತಿಳಿಸಿದ್ದಾರೆ

ಮದರಾಸಿಗೆ ಮತ್ತೊಬ್ಬ ಹೊಸ ಮಂತ್ರಿ

ಮದ್ರಾಸು ಶಾಸನ ಸಭಾ ಸದಸ್ಯರು, ಪ್ರಮುಖ ಭಾರತೀಯ ಕ್ರೈಸ್ತರೂ ಆದ ರೋಚ ವಿಕ್ಟೋರಿಯಾರವರನ್ನು ಮಂತ್ರಿಗಳನ್ನಾಗಿ ನೇಮಿಸಲಾಗಿದೆ

ಇಂಗ್ಲೆಂಡಿನ ಸ್ತ್ರೀ ವಿದ್ಯಾರ್ಥಿನಿಯರು ಧೋಬಿ ಕೆಲಸಕ್ಕೆ

ವ್ಯಾಸಂಗವೆಂದ ವಿರಾಮ ಸಿಕ್ಕುವ ಜೂಲೈ, ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಇಂಗ್ಲೆಂಡಿನ ೧೦ ಸಾವಿರ ವಿದ್ಯಾರ್ಥಿನಿಯರು ತಮ್ಮ ವ್ಯಾಸಂಗಕ್ಕೆ ಮುಡಿಪಿನ ಸಹಾಯವನ್ನು ಒದಗಿಸಿಕೊಳ್ಳುವುದಕ್ಕಾಗಿ ಲಂಡನ್ನಿನ ಒಂದು ದೊಡ್ಡ ಧೋಬಿ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಲಿದ್ದಾರೆ ಇವರಂತೆಯೇ ಇನ್ನೂ ೨೦ ಸಾವಿರ ವಿದ್ಯಾರ್ಥಿನಿಯರು ಇನ್ನಿತರ ಕೆಲಸಗಳನ್ನು ಮಾಡುವರು

ಹಳೆ ಶತಮಾನದ ಹಿಂದೆಯೇ ಚೀಣದಲ್ಲಿ ಫುಟ್‌ಬಾಲ್

ಫುಟ್‌ಬಾಲ್ ಆಟವನ್ನು ಮೊದಲು ಕಂಡುಹಿಡಿದವರು ಚೀನೀಯರೆಂದೂ, ಎರಡು ಶತಮಾನಗಳ ಹಿಂದೆಯೇ ಅದು ಅವರಿಗೆ ಗೊತ್ತಿತ್ತೆಂದೂ ಲಂಡನ್ನಿನ ಸುಪ್ರಸಿದ್ಧ ಫುಟ್‌ಬಾಲ್ ಆಟದ ಪ್ರಮುಖರಾದ ಗಾರ್ಡನ್ ಕ್ರಾಸ್ ಸಾಂಡರವರು ತಿಳಿಸುತ್ತಾರೆ

ಪ್ರಾಂತ್ಯಗಳಿಗೆ ಸಂಸ್ಥಾನಗಳೆಂಬ ಹೆಸರು

ನೂತನ ರಾಜ್ಯಾಂಗದಲ್ಲಿ ಪ್ರಾಂತ್ಯಗಳನ್ನು ಸಂಸ್ಥಾನಗಳೆಂದು ಕರೆಯಬೇಕೆಂದು ಮೊನ್ನೆ ಭಾರತ ರಾಜ್ಯಾಂಗ ಸಭೆಯಲ್ಲಿ ತೀರ್ಮಾನಿಸಲಾಯಿತು ಗೌರ್ನರುಗಳನ್ನು ಅಧ್ಯಕ್ಷರೇ ನೇಮಕ ಮಾಡಬೇಕೆಂದೂ ಮತ್ತು ಅವರ ಅವಧಿಯು ೫ ವರ್ಷಗಳೆಂದೂ ನಿರ್ಧರಿಸಲಾಯಿತು

ಝೂಡಮಾಲಿಗಳ ಮೇಲೆ ಬಾಂಬು

ತಿರುಚನಾಪಳ್ಳಿಯಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಝೂಡಮಾಲಿಗಳ ಗುಂಪೊಂದರ ಮೇಲೆ ಕಳೆದ ಸೋಮವಾರ ರಾತ್ರಿ ಯಾರೋ ದುರಾತ್ಮರು ಬಾಂಬುಗಳನ್ನು ಎಸೆದುದರ ಪರಿಣಾಮವಾಗಿ ಇಬ್ಬರಿಗೆ ಸ್ವಲ್ಪ ಗಾಯವಾಯಿತು ಪೋಲೀಸರು ತನಿಖೆ ನಡೆಸುತ್ತಿದ್ದಾರೆ

ಬೆಳಗಿನ ಪ್ರದರ್ಶನಗಳು

ಲಕ್ಷ್ಮೀ ಥಿಯೇಟರ್

3-6-49ರಿಂದ 4 ದಿನಗಳು

ಪ್ರಕಾಶ್‌ರವರ

ರಾಮರಾಜ್ಯ

(ತಮಿಳು)

ಪಾತ್ರ—ಶೋಭನಾ ಸಮರ್ಥ್,

ಪ್ರೇಂ ಅದೀಬ್,

ಲಗ್ನದ ಜನರಿಗಾಗಿ

ಗುರುದೇವ ... [illegible]

ಶಿವರಾಂಪೇಟೆ, ... ಮೈಸೂರು

ಲಕ್ಷ್ಮೀ ಥಿಯೇಟರ್

3-6-49ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನ

3-30, 6-30 ಮತ್ತು ರಾತ್ರಿ 9-30ಕ್ಕೆ

ಸೊಹರಾಬ್ ಮೋದಿಯವರ

ಸಂಗೀತಮಯ ಹಿಂದಿ ಚಿತ್ರ

ಮೀರಾ ಮುನ್ಷ

—ಭೂಮಿಕೆ:—

ಮೋತಿಲಾಲ್, ನಯನತಾರಾ ಮತ್ತು ಸಾದಿಕ್ ಅಲಿ

ನಿರೀಕ್ಷಿಸಿ—

ನಯಿ ರೀತ್ (ಹಿಂದಿ)

ಪಾತ್ರ—... [illegible]

Edited, printed, and published by A. R. Nagarajan at the Sadhvi Press, D. Subbiah Road, Mysore

CHAMUNDESWARI TALKIES

From 3-6-1949 .: Daily 3 Shows

Columbia's Spectacular Glorious Technicolor Picture

BANDIT OF SHERWOOD FOREST

ಬ್ಯಾಂಡಿಟ್ ಆಫ್ ಷೆರ್‌ವುಡ್ ಫಾರೆಸ್ಟ್ ಅಥವ ಸನ್ ಆಫ್ ರಾಬಿನ್‌ಹುಡ್

or THE SON OF ROBINHOOD

Starring—Edgar Buchanan, Anita Louise

BANGALORE RACES 1949

ಜೂನ್ 4, 8, 11, 18, 22, 25, 29 ಮತ್ತು ಜುಲೈ 2 ರಲ್ಲೂ

ಜೂನ್ 18 ಮಹಾರಾಜಾ ಗೋಲ್ಡ್ ಕಪ್ ಡೇ

ಬುಕ್ ಮೇಕರ್ಸ್ .. .. ಟೋಟಲೈಜೇಟರ್ಸ್

ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ. 2 ಸ್ವೀಪ್

ಪ್ರವೇಶ { ಮೊದಲನೇ ತರಗತಿ - ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ

ಎರಡನೇ ತರಗತಿ - ಪುರುಷರು ಅಥವಾ ಸ್ತ್ರೀಯರು ರೂ 2 ,,

3-6-49ರಿಂದ ಅಮೋಘ 2ನೇ ವಾರ

ಪ್ರತಿ ದಿನ 4 ಪ್ರದರ್ಶನಗಳು

ಶ್ರೀ ಗಣೇಶ ಮತ್ತು ನ್ಯೂ ಅಪೇರಾ ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ವಾಕ್ಚಿತ್ರ

ವೇಲೈಕಾರಿ

—ಭೂಮಿಕೆ—

ಎಂ. ವಿ. ರಾಜಮ್ಮ,	ಟಿ. ಎಸ್. ಬಾಲಯ್ಯ,
ವಿ. ಎನ್. ಜಾನಕಿ,	ದೊರೆ ರಾಜ್,
ಲಲಿತ	ಪದ್ಮಿನಿ.

ಮೇ ... ಮಾಸಗಳಲ್ಲಿ ಎಲ್ಲಾ ತರಹೆಯ ಕಾಂಪ್ಲಿಮೆಂಟರಿ, ಫ್ರೀ ... ಮತ್ತು ರಿಯಾಯಿತಿಗಳನ್ನೂ ಮನ್ನಾ ಮಾಡಿರುತ್ತೆ

[R A] Pictures' Release.

ಭಿಷಗ್ರತ್ನ ಪಾಂಡ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಗಂಡಸರ ಮೂತ್ರ ಕೋಶದ ಬಿಗುತ್ತು, ಕೆಂಪು ಮೈ ಮೇಲೆ ಮೇಹದ ಪುಟ್ಟೆಗಳು, ಮೇಹ ವ್ರಣಗಳು ಪೂರಾ ಪರಿಹಾರ ಪಥ್ಯವಿಲ್ಲದೆ ಸೇವಿಸುವ ಔಷಧಿ

ಬೆಲೆ ಶೀಸೆ 1ಕ್ಕೆ 2-0-0

ಶ್ರೀ ... ವೈದ್ಯಶಾಲಾ, ಮೈಸೂರು.

ರಾಜಕಮಲ್

ಮೈಸೂರು

3—6—49 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಕಾರ್ದಾರ್‌ರವರ ಹಿಂದಿ ಚಿತ್ರ

ನಾಟಕ್

—ಮುಖ್ಯ ಪಾತ್ರ:—

ಸುರಯ್ಯ, ಅಮರ್

Morning Shows

From 3-6-49 for 4 days

CAESAR & CLEOPATRA

(In Technicolor)

—:With:—

Vivien Leigh, Claud Reins

Flora Robson.

ನಿಮ್ಮ ಮೈ ಮೊಗವುಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಪ್ರಜಾ

ಸಂಪುಟ ೭] ಶುಕ್ರವಾರ ೩-೬-೪೯ [ಸಂಚಿಕೆ ೨೪೦

ಸತಿ ಸುರ್ಯಾತ್ ಸೇಠ್ ಚೀಣಾದ ಅಧ್ಯಕ್ಷರೇ ?

ಚೌಬೀನೆ ಹತೋಟಿ ಆಜ್ಞೆಯಿಂದ ರೈತರಿಗೆ ತೊಂದರೆ

ಪ್ರ|| ಪ್ರ|| ಸಭೆಯಲ್ಲಿ ಪ್ರಶ್ನೋತ್ತರಗಳು

ಬೆಂಗಳೂರು ೨

ಪ್ರಜಾ ಪ್ರತಿನಿಧಿ ಸಭೆಯಲ್ಲಿ ನಿನ್ನೆ ದಿನ ಪ್ರಶ್ನೋತ್ತರ ಕಾಲದಲ್ಲಿ, ಸಂಸ್ಥಾನದಲ್ಲಿ ಹೊಸದಾಗಿ ಜಾರಿಗೆ ಬಂದಿರುವ ಚೌಬೀನೆ ಹತೋಟಿ ಆಜ್ಞೆಯಿಂದ ಗ್ರಾಮಾಂತರ ಪ್ರದೇಶದಲ್ಲಿರುವ ಸಣ್ಣ ಪುಟ್ಟ ರೈತರುಗಳಿಗೆ ತೊಂದರೆಯಾಗಿರುವುದೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೆಂದೂ, ರೈತರನ್ನು ಹೆದರಿಸಿ ಲಂಚ ರುಸುವತ್ತುಗಳನ್ನು ಪಡೆಯಲು ಅರಣ್ಯ ಇಲಾಖೆಯಲ್ಲಿರುವ ಸಣ್ಣ ಪುಟ್ಟ ಅಧಿಕಾರಿಗಳಿಗೆ ಅನುಕೂಲ ಪರಿಸ್ಥಿತಿಯೇರ್ಪಟ್ಟಿರುವುದೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ, ಈ ಆಜ್ಞೆಯಿಂದ ತೊಂದರೆಯಾದವರಿಗೆ ಎಲ್ಲ ಪರಿಹಾರವನ್ನೂ ಕೊಡಲಾಗುವುದೆಂದೂ ಜನರಲ್ ಕಾರ್ಯದರ್ಶಿಗಳು ಶ್ರೀ ಕೆ ರಾಮಭಟ್ಟರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

ಮೀನುಗಳನ್ನು ಸಾಕುವುದಕ್ಕೆ ಸಂಬಂಧಪಟ್ಟ ಶಾಖೆಯು ೧೯೩೯ರಿಂದ ಕೆಲಸ ಮಾಡುತ್ತಿದೆ. ಸಂಸ್ಥಾನದ ಕೆರೆ ಕಾಲವೆ ಮುಂತಾದುವುಗಳಲ್ಲಿ ಸಿಕ್ಕುವ ಮೀನು ಮೊದಲಾದ ಪದಾರ್ಥಗಳನ್ನು ಸಂಗ್ರಹಿಸುವ ಹಕ್ಕನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತಿದೆ. ಯಾವ ಕೆರೆಗೂ ವಿಶೇಷ ವಿನಾಯಿತಿ ಕೊಟ್ಟಿಲ್ಲ. ಆದಕಾರಣ ದೇವಸ್ಥಾನಗಳು ಮುಂತಾದುವುಗಳಲ್ಲಿ ಕೆಲಸ ಮಾಡುತ್ತಿರುವ ಅಡ್ಡೆ ಮುಂತಾದವರುಗಳಿಗೆ ಕೆರೆಗಳಲ್ಲಿ ಮುಫತ್ತಾಗಿ ಮೀನು ಮೊದಲಾದ ಪದಾರ್ಥಗಳನ್ನು ಸಂಗ್ರಹಿಸಲು ಯಾವ ವಿಶೇಷ ಹಕ್ಕೂ ಇರುವುದಿಲ್ಲ-ಎಂದು ಜನರಲ್ ಕಾರ್ಯದರ್ಶಿಗಳು ಶ್ರೀ ಎಚ್. ಬಿ ಚಿಕ್ಕೆ ಅರಸಿನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

ಹೆಬ್ಬಾಳು, ರಾಮನಗರ, ದೊಡ್ಡಬಳ್ಳಾಪುರ, ಹುಣಸೂರು ಮತ್ತು ಅಜ್ಜಂಪುರಗಳಲ್ಲಿ ಕೋಳಿ ಫಾರಮ್ಮುಗಳನ್ನು ತೆರೆಯಲಾಗಿದೆಯೆಂದೂ, ಇವುಗಳಿಗೆ ೧೯೪೭-೪೮ ರಲ್ಲಿ ಒಟ್ಟು ೧೬,೯೫೭ ರೂ ಖರ್ಚಾಗಿದೆಯೆಂದೂ, ಒಟ್ಟು ೭೭೭೦ ರೂ ವರಮಾನ ಬಂದಿದೆಯೆಂದೂ, ೪೪೫ ಕೋಳಿಗಳನ್ನು ಜನಗಳಿಗೆ ಸಾಕುವುದಕ್ಕಾಗಿ ಕೊಡಲಾಗಿದೆಯೆಂದೂ ಶ್ರೀ ಪೆಟ್ ಆರ್.ಟಿ ರಾಜಗೋಪಾಲ ಮೊದಲಿಯಾರ್‌ರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು

ಸುಪ್ರಸಿದ್ಧ ಅಮೃತಮಹಲ್ ರಾಸುಗಳು ಮೇವಿಗಿಲ್ಲದೆ ಸೊರಗಿ ನಷ್ಟವಾಗಿ ಹೋಗುತ್ತಿರುವುದನ್ನು ತಡೆಗಟ್ಟಲು ಸರ್ಕಾರದವರು ತಕ್ಕ ಕಾರ್ಯಕ್ರಮ ಕೈಗೊಳ್ಳಲು ಆಲೋಚಿಸುತ್ತಿರುವುದಾಗಿಯೂ ೧೯೪೭ರಲ್ಲಿ ಜಾರಿಗೆ ತಂದ ದನಗಳ ಸ್ಕೀಮಿನ ಹಣ ಸಹಾಯ ಮಾಡುವ ಯೋಜನೆ ಪ್ರಕಾರ, ೬ ಮಂದಿಗೆ ಹಣವನ್ನು ಕೊಡಲಾಗಿದೆಯೆಂದೂ, ಇಂಥ ರಾಸುಗಳನ್ನು ಅವರು ಪೋಷಿಸುತ್ತಿರುವರೆಂದೂ ಶ್ರೀ ಬಿ ಮುದ್ದೇಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು

ಚಿಕ್ಕನಾಯಕನಹಳ್ಳಿ ಮತ್ತು ಇತರ ಕಡೆಗಳಲ್ಲಿ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸುವ ವಿಚಾರವನ್ನು ಪರ್ಯಾಲೋಚಿ

ಗೋಡ್ಸೆಗೆ ಜೀವಾವಧಿ ಮತ್ತು ಮರಣ ದಂಡನೆ ಶಿಕ್ಷೆ ವಿಧಿಸಬೇಕಂತೆ

ಮಹಾತ್ಮರ ಕೊಲೆ ಅಪಾದಿತನಾದ ನಾಥೂರಾಂ ಗೋಡ್ಸೆಯು ಪೂರ್ವ ಪಂಜಾಬ್ ಹೈಕೋರ್ಟಿನಲ್ಲಿ ತನ್ನ ಅಪೀಲಿನ ಪರವಾಗಿ ನಿನ್ನೆ ದಿನ ವಾದ ಮಾಡಿದನು. ಪಿತೂರಿಯಲ್ಲಿ ಮದನಲಾಲನು ಭಾಗವಹಿಸಿದ್ದನೆಂದು ಕೋರ್ಟು ಅಭಿಪ್ರಾಯಪಡುವುದಾದರೆ, ಆ ಪಿತೂರಿಯ ನಾಯಕನಾದ ತಾನು ಅದಕ್ಕೆ ಜವಾಬ್ದಾರನೆಂದೂ, ಆದುದರಿಂದ ಮದನಲಾಲನ ಶಿಕ್ಷೆಯನ್ನು ಕಡಿಮೆ ಮಾಡಿ, ತನಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿ, ತದನಂತರ ಅವನ ಜೀವಿಸದವರೆಗೆ ತನ್ನನ್ನು ಗಲ್ಲಿಗೇರಿಸುವಂತೆ ಆಜ್ಞೆ ಮಾಡಬೇಕೆಂದೂ, ಗೋಡ್ಸೆಯು ತಿಳಿಸಿದನು. ನಾರಾಯಣ ಆಪ್ಟೆಯು ಬಹಳ ಬುದ್ಧಿಶಾಲಿಯಾಗಿರುವುದರಿಂದ, ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿ, ಜೈಲಿನಲ್ಲಿರುವ ಕೈಗಾರಿಕೆಗಳನ್ನು ಅವನಿಂದ ಅಭಿವೃದ್ಧಿ ಪಡಿಸಬೇಕೆಂದೂ, ಆತನ ಪ್ರಾಣವನ್ನು ಉಳಿಸಬೇಕೆಂದೂ ಗೋಡ್ಸೆಯು ಪ್ರಾರ್ಥಿಸಿದನು

ಸಲು ಒಂದು ಸಮಿತಿಯನ್ನು ಏರ್ಪಡಿಸಲಾಗಿದೆಯೆಂದು ಶ್ರೀ ಕೆಂಚಪ್ಪನವರ ಪ್ರಶ್ನೆಗೆ ಸರ್ಕಾರದ ಉತ್ತರ ಬಂದಿತು.

ಕಮ್ಯುದ್ವತಿಗೆ ಸೇತುವೆ

ಸರಕಾರದವರು ಹಿರಿಯೂರು ತಾಲ್ಲೂಕಿನಲ್ಲಿರುವ ಹಿಕ್ಕಳ ಮತ್ತು ಚಿಚ್ಛಗುಂಡಿ ಎಂಬ ಹಳ್ಳಿಗಳ ನಡುವೆ ಕುಮುದ್ವತಿ ನದಿಗೆ ೭೫ ಸಾವಿರ ರೂ ಖರ್ಚಿನಲ್ಲಿ ಸೇತುವೆ ಕಟ್ಟಲು ಮಂಜೂರ್ಮಾಡಿದ್ದಾರೆ

ಚೆನ್ನಗಿರಿ ತಾಲ್ಲೂಕಿನ ಚಿಕ್ಕಮಲ್ಲಿಕೆರೆಯಲ್ಲಿರುವ ೧೫ ನೀರಾವರಿ ನಾಲೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಅದಕ್ಕೆ ತಗಲುವ ೭೯,೫೩೦ ರೂಗಳ ಅಂದಾಜನ್ನು ಮಂಜೂರ್ಮಾಡಿರುತ್ತಾರೆ

ಹನುಮಂತಯ್ಯನವರು ಆಹಾರ ಸ್ಥಾಯಿ ಸಮಿತಿಯ ಕಮೀಷನರು

ಭಾರತ ಸರ್ಕಾರದ ಆಹಾರ ಇಲಾಖೆಯ ಸ್ಥಾಯೀ ಸಲಹಾ ಸಮಿತಿಯ ಕಮೀಷನರಾಗಿ ಶ್ರೀ ಕೆ ಹನುಮಂತಯ್ಯನವರನ್ನು ನೇಮಿಸಲಾಗಿದೆ

ಇನ್ನು ಮುಂದೆ ಆಯವ್ಯಯ ಅಧಿವೇಶನ ಫೆಬ್ರವರಿಯಲ್ಲಿ

ಹಣಕಾಸಿನ ಮಂತ್ರಿಗಳ ಸೂಚನೆ

ಸ್ವಂ ವ ಫೋ] ಬೆಂಗಳೂರು ೩

ಸಂಸ್ಥಾನದ ೧೯೪೯-೫೦ರ ಆಯವ್ಯಯ ಪಟ್ಟಿಯನ್ನು ಪ್ರ|| ಪ್ರ|| ಸಭೆಯ ಮುಂದೆ ಇಡುತ್ತಾ, ಹಣಕಾಸಿನ ಸಚಿವರಾದ ಶ್ರೀ ಎಚ್. ಸಿ ದಾಸಪ್ಪನವರು, ಭಾರತ ಸರಕಾರದವರು ಮಾಡಿರುವಂತೆ ಇಲ್ಲಿಯೂ ಸಹ ಒಂದು ಕೈಗಾರಿಕಾ ಮತ್ತು ಹಣಕಾಸಿನ ಸಮಿತಿಯೊಂದನ್ನು ಸ್ಥಾಪಿಸಲು ಏರ್ಪಾಡು ಮಾಡುವುದಾಗಿ ತಿಳಿಸಿದರು ಇನ್ನು ಮುಂದೆ ಪ್ರ|| ಪ್ರ|| ಸಭೆಯ ಆಯವ್ಯಯ ಅಧಿವೇಶನವನ್ನು ಜನವರಿ ಅಥವಾ ಫೆಬ್ರವರಿ ಮಾಹೆಯಲ್ಲಿ ನಡೆಸಲಾಗುವುದೆಂದೂ, ಸರಕಾರದ ಹಣಕಾಸಿನ ವರ್ಷವನ್ನು ಜುಲೈ ತಿಂಗಳಿಂದ ಜೂನವರೆಗೆ ಇದ್ದುದನ್ನು ಏಪ್ರಿಲ್ ನಿಂದ ಮಾರ್ಚಿ ತಿಂಗಳವರೆಗೆ ಪರಿವರ್ತಿಸಲಾಗುವುದೆಂದು ಸಚಿವರು ತಿಳಿಸಿದರು

ಬೆಂಗಳೂರು ನಗರದಲ್ಲಿ ಟ್ರಾಲಿ ಬಸ್ಸುಗಳನ್ನು ಹಾಕಲು ೬|| ಲಕ್ಷ ರೂ ಅನ್ನು ಒದಗಿಸಲಾಗಿದೆಯೆಂದೂ ಅವರು ಹೇಳಿದರು ೧೯೫೦ ರಲ್ಲಿ ಕೇಂದ್ರಕ್ಕೂ ಸಂಸ್ಥಾನಕ್ಕೂ ಹೊಸ ಹಣಕಾಸಿನ ಒಪ್ಪಂದವಾಗುವುದೆಂದೂ, ಬರುವ ವರ್ಷದಿಂದ ಭಾರತದ ಹಣಕಾಸಿನಿಂದ ಇತರ ಪ್ರಾಂತ್ಯಗಳಿಗೆ ವಾಪಸು ಬರುವ ಹಣಕಾಸಿನಿಂದ ಇತರ ಪ್ರಾಂತ್ಯಗಳಿಗೆ ವಾಪಸು ಬರುವ ಭಾಗದ ಮೇಲುಪ್ರ ಇಲ್ಲಿಗೂ ಬರುವುದಿಲ್ಲವೆ, ಸಂಸ್ಥಾನಗಳು ಆರ್ಥಿಕ ವಿಷಯದಲ್ಲಿ ಸಮ ಒಂದಿಗೆ ಬರುವವರೆಗೂ ಭಾರತ ಸರ್ಕಾರದಿಂದ ಸಹಾಯವು ದೊರೆಯುವುದೆಂದೂ ತಿಳಿಸಿದರು

ರೈತ ಕೂಲಿಗಾರರ ವಿಚಾರಣೆ ಸಮಿತಿ

ಸಂಸ್ಥಾನದಲ್ಲಿರುವ ರೈತ ಕೂಲಿಗಾರರ ಸ್ಥಿತಿಗತಿಗಳನ್ನು ಪರಿಶೀಲಿಸಲು ಒಂದು ವಿಚಾರಣಾ ಸಮಿತಿಯನ್ನು ಮೈಸೂರು ಸರ್ಕಾರದವರು ಶೀಘ್ರದಲ್ಲಿಯೇ ನಿಯಮಿಸಲಿರುವರೆಂದೂ ಅದರಿಂದ ಅವರುಗಳಿಗೆ ಕನಿಷ್ಠ ವೇತನವನ್ನು ನಿರ್ಧರಿಸಲು ಸಹಾಯಕವಾಗುವುದೆಂದೂ, ಭಾರತ ಸರ್ಕಾರದ ಕಾರ್ಮಿಕ ಶಾಖೆಯ ಸಲಹೆಗಾರರಾದ ಶ್ರೀ ಸಂಜೀವ ಪ್ರಸಾದರವರು ನಿನ್ನೆ ವರ್ತಮಾನಗಾರರಿಗೆ ತಿಳಿಸಿರುತ್ತಾರೆ

ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿ

ಮೈಸೂರು

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಜಾರ್ಜ್ ಮ್ಯಾಥ್ಯೂರವರನ್ನು ಬೆಂಗಳೂರು ಪುರಸಭಾ ಕಮೀಷನರನ್ನಾಗಿಯೂ, ಅಲ್ಲಿನ ಕಮೀಷನರಾದ ಶ್ರೀ ಸಭಿ ದಾರಾ ಷಾರವರನ್ನು ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ಜಿ ಎನ್ ನಾಗರಾಜರಾಯರನ್ನು ಮೈಸೂರು ಜಿಲ್ಲಾಧಿಕಾರಿಯನ್ನಾಗಿಯೂ ನೇಮಿಸಲಾಗುವುದೆಂದು ತಿಳಿದುಬಂದಿದೆ

ಎಲ್. ಎಸ್. ಪರೀಕ್ಷೆ ಫಲಿತಾಂಶ

೧೯೪೯ನೇ ವರ್ಷದ ಎಲ್ ಎಸ್ ಮತ್ತು ಅಪ್ಪರ್ ಪ್ರೈಮರಿ ಪರೀಕ್ಷೆಗಳ ಫಲಿತಾಂಶವು ಇದೇ ೬ನೇ ತಾ|| ಸೋಮವಾರ ಬೆಳಿಗ್ಗೆ ೯ ಗಂಟೆಗೆ ಪ್ರಕಟಿಸಲಾಗುವುದು ಮೈಸೂರು ಸೆಂಟರುಗಳ ಫಲಿತಾಂಶಗಳನ್ನು ಮಹಾರಾಜಾ ಹೈಸ್ಕೂಲು ಮತ್ತು ಮಹಾರಾಣಿ ಹೈಸ್ಕೂಲುಗಳಲ್ಲಿ ಪ್ರಕಟಿಸಲಾಗುವುದು. ಖಾಸಗೀ ವಿದ್ಯಾರ್ಥಿಗಳಿಗೆ ಫಲಿತಾಂಶವನ್ನು ಟಪಾಲು ಮೂಲಕ ಪ್ರತ್ಯೇಕವಾಗಿ ತಿಳಿಸಲಾಗುವುದು.

ಮೈಸೂರಿನಲ್ಲಿ ಐ.ಎಲ್.ಓ. ಸಭೆ?

ಅಂತರ ರಾಷ್ಟ್ರೀಯ ಕೂಲಿಗಾರರ ಸಮ್ಮೇಳನದ ಆಡಳಿತ ಸಮಿತಿಯ ಸಭೆಯನ್ನು ಭಾರತದಲ್ಲಿ ನಡೆಸಬೇಕೆಂದು ಭಾರತ ಸರಕಾರದವರು ಪ್ರಾರ್ಥಿಸಿದ್ದಾರೆ. ಭಾರತದಲ್ಲಿ ಸಭೆ ನಡೆಸಲು ಅವಕಾಶವಾದರೆ ಮೈಸೂರು ನಗರದಲ್ಲಿ ಅದು ಸೇರಬಹುದೆಂದು ತಿಳಿದುಬಂದಿದೆ

ಪೆನ್ಷನ್‌ದಾರರ ಸಭೆ

ರಾಜಧಾನಿಯ ಪೆನ್ಷನ್‌ದಾರರ ಸಂಘದ ಪ್ರಥಮ ವಾರ್ಷಿಕ ಸಭೆಯು ಇದೇ ೫ನೇ ತಾ|| ಭಾನುವಾರ ಸಂಜೆ ೫-೩೦ ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯುವುದು. ಸಂಘವು ಇದುವರೆಗೂ ಮಾಡಿರುವ ಕಾರ್ಯಕ್ರಮವನ್ನು ಪರಿಶೀಲಿಸಿ ಮುಂದಿನ ಕಾರ್ಯಕ್ರಮವನ್ನು ಗೊತ್ತುಮಾಡಬೇಕಾಗಿರುವುದರಿಂದ ಪೆನ್ಷನ್‌ದಾರರೆಲ್ಲರೂ ಸಭೆಗೆ ದಯಮಾಡಿಸಬೇಕೆಂದು ಕೋರಲಾಗಿದೆ

ಡಾ|| ಲೋಹಿಯರವರ ಜಾಮೀನು ರದ್ದು

ಕಳೆದ ತಿಂಗಳು ೨೫ನೇ ತಾ|| ದೆಹಲಿಯಲ್ಲಿ ನೇಪಾಳದ ರಾಯಭಾರಿ ಕಛೇರಿ ಮುಂದೆ ಪ್ರದರ್ಶನ ನಡೆಸಿದರೆಂದು ಡಾ|| ಲೋಹಿಯಾ ಮತ್ತು ೬೬ ಮಂದಿಯನ್ನು ದಸ್ತಗಿರಿ ಮಾಡಿ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಅವರುಗಳು ಕಾನೂನಿಗೆ ವಿರುದ್ಧವಾಗಿ ಪಕ್ಷ ಪತ್ರಿಕೆಗಳನ್ನು ಹಂಚುವುದಕ್ಕೂ ಮತ್ತು ಸಾರ್ವಜನಿಕ ಸಭೆ ನಡೆಸುವುದಕ್ಕೂ ಯತ್ನಿಸುತ್ತಿದ್ದರೆಂಬ ಆಪಾದನೆಯ ಮೇಲೆ ಅವರುಗಳ ಜಾಮೀನನ್ನು ರದ್ದು ಮಾಡಿ ಮತ್ತೆ ದಸ್ತಗಿರಿ ಮಾಡಲಾಗಿದೆ

ಚೀಣಾಕ್ಕೆ ಸತಿ ಸುರ್ಯಾತ್ ಸೇನರು ಅಧ್ಯಕ್ಷರೇ?

ಚೀಣದಲ್ಲಿ ಸ್ಥಾಪಿತವಾಗಲಿರುವ ನೂತನ ಕಮ್ಯೂನಿಸ್ಟ್ ಸರ್ಕಾರಕ್ಕೆ ಸನ್ ಯಾತ್ ಸೇನರವರ ಪತ್ನಿಯು ಅಧ್ಯಕ್ಷರಾಗುವರೆಂದು ಹೇಳಲಾಗಿದೆ

೧೯೪೮ರಲ್ಲಿ ಭಾರತ ಸರ್ಕಾರದವರು ಸ್ಥಾಪಿಸಲಿರುವ ವೈಮಾನಿಕ ಶಿಕ್ಷಣ ಶಾಲೆಗೆ ಈ ತಿಂಗಳಿನಲ್ಲಿ ಬ್ರಿಟನ್ನಿನಿಂದ ವೈಮಾನಿಕ ಶಿಕ್ಷಕರು ಮುಂತಾದವರುಗಳಾಗಿ ಬರಲಿದ್ದಾರೆ

ಶ್ರೀರಾಮ ಸಮಾಜ ಸಂಘ

ಮೈಸೂರು ೩

ಕಳೆದ ಮಂಗಳವಾರ ಸಂಜೆ ರಾಷ್ಟ್ರೀಯ ಗೊಲ್ಲಗೇರಿ ರಾಮ ಮಂದಿರದಲ್ಲಿ ಶ್ರೀ ರಾಮ ಸಮಾಜ ಸಂಘದ ಆಶ್ರಯದಲ್ಲಿ ಬಾಪೂಜಿ ದಿನಾಚರಣೆಯು ನಡೆಯಿತು. ಶ್ರೀ [illegible] ಅಧ್ಯಕ್ಷತೆ ವಹಿಸಿದ್ದರು. ಧ್ವಜ ವಂದನೆಯೊಡನೆ ಕಾರ್ಯಕ್ರಮವು ಆರಂಭವಾಯಿತು. ಸ್ವಾಗತ ಮತ್ತು ಪ್ರಾರ್ಥನೆಗಳಾದನಂತರ ಮಹಾತ್ಮ ಗಾಂಧಿಯವರ ಮತ್ತು 'ಉದಯ' ಎಂಬ ಕೈ ಬರಹದ ಪತ್ರಿಕೆಯ ಉದ್ಘಾಟನೋತ್ಸವವನ್ನು ಅಧ್ಯಕ್ಷರು ನೆರವೇರಿಸಿದರು. ಶ್ರೀಗಳಾದ ಬಿ ಎನ್ ಸೀತಾರಾಂ ಮತ್ತು ಎಸ್. ಆರ್ ಕೃಷ್ಣಸ್ವಾಮಿಯವರುಗಳು 'ಮಹಾತ್ಮಾ ಗಾಂಧೀಜಿ' ಎಂಬ ವಿಷಯವಾಗಿ ಭಾಷಣ ಮಾಡಿದರು. ಶಾಲಾ ಬಾಲಕ ಬಾಲಕಿಯರು ಹಿಂದಿ ಕನ್ನಡ ಸಂಸ್ಕೃತ ಮತ್ತು ಇಂಗ್ಲೀಷು ಭಾಷೆಗಳ ಗೀತೆಗಳನ್ನು ಮನೋಹರವಾಗಿ ಹಾಡಿದರು. ಕಾರ್ಯದರ್ಶಿಗಳಾದ ಶ್ರೀ ಎಸ್ [illegible] ಸಂಘದ ವರದಿಯನ್ನು ಒಪ್ಪಿಸಿ, ಆದರ ಕೆಲಸ ಕಾರ್ಯಗಳಿಗೆ ಮಹಾಜನರ ಬೆಂಬಲವನ್ನು ಕೋರಿದರು. ಈ ಶಾಲೆಯಲ್ಲಿ ದೊರೆಯುವ ಶಿಕ್ಷಣವನ್ನು ಬಾಲಕ ಬಾಲಕಿಯರು ಪಡೆದು ವಿದ್ಯಾ ವಿನಯ ಸಂಪನ್ನರಾಗಿ ಮಹಾತ್ಮ ಗಾಂಧಿಜಿಯವರ ಆದರ್ಶದಂತೆ ನಾಡಿಗೆ ಕೀರ್ತಿಯನ್ನು ತರಲೆಂದು ಅಧ್ಯಕ್ಷರು ಹಾರೈಸಿದರು. ಅರತಿ, ಪ್ರಸಾದ ವಿನಿಯೋಗ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಲಗ್ನದ ಜವಳಿಗಾಗಿ

ಗುರುದೇವ ಹಾಲ್

ಬೆಂಗಳೂರು ಜವಳಿ ಅಂಗಡಿ

ಒಂದುಸಲ ಭೇಟಿ ಕೊಡಿ

ಶಿವರಾಂಪೇಟೆ, :: ಮೈಸೂರು

ಮೈಸೂರು ಅಡಿಷನಲ್

ಸಬಾರ್ಡಿನೇಟ್ ಜಡ್ಜರವರ

ಕೋರ್ಟಿನಲ್ಲಿ

S. C. No 150 of 48—49

ವಾದಿ—ಕಂಟ್ರಾಕ್ಟರ್ ನಂಜಪ್ಪ.

V/s.

ಪ್ರತಿವಾದಿ—N. ಶ್ರೀನಿವಾಸರಾವ್.

ಮೇಲ್ಕಂಡ ಮೊಕದ್ದಮೆಯಲ್ಲಿ ವಾದಿಯ ಕಂಟ್ರಾಕ್ಟರ್ ನಂಜಪ್ಪನವರು [illegible] N ಶ್ರೀನಿವಾಸರಾವ್ ರವರ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ೬೭-೮-೦ ರೂಪಾಯಿಗಳನ್ನು ಮತ್ತು ಕೋರ್ಟು ಖರ್ಚನ್ನು ವಸೂಲು ಮಾಡಿಕೊಳ್ಳಲು ದಾವಾ ಹೂಡಿರುತ್ತಾರೆ. ಓಟೀಸ್ ಮೊಕದ್ದಮೆಯು ಮುಂದಿನ ವಿಚಾರಣೆಗಾಗಿ ೩-೬-೧೯೪೯ ನೇ ತಾರೀಖಿಗೆ [illegible] ಇರುವುದರಿಂದ ಈ ಮೂಲಕ ಪ್ರಸಿದ್ಧ ಪಡಿಸಿರುತ್ತೆ.

ಮೈಸೂರು ಟಿ. ಎಸ್. ಸುಬ್ಬರಾವ್,

೩-೬-೧೯೪೯ ವಾದಿ ಪರ ವಕೀಲರು.

ಭಾರತಕ್ಕೆ ಪಾಲ್ ರಾಬ್‌ಸನ್ ರವರ ಭೇಟಿ

[illegible] ಸುಪ್ರಸಿದ್ಧ ನೀಗ್ರೋ ಸಂಗೀತಗಾರರಾದ ಮಿ॥ ಪಾಲ್ ರಾಬ್‌ಸನ್ ರವರ ಬಹುಶಃ ಭಾರತಕ್ಕೆ ಭೇಟಿ ಕೊಡಬಹುದು. ಇವರು ಪಂಡಿತ ನೆಹರೂರವರನ್ನು ಭೇಟಿ ಮಾಡಿ ವರ್ಣ [illegible] ಸ್ಥಿತಿಯ ಬಗ್ಗೆ ಕುರಿತು ಮಾತುಕತೆ ನಡೆಸುವರೆಂದೂ ಹೇಳಲಾಗಿದೆ.

ಜನರನ್ನು ಕೊಲೆ ಮಾಡು ನಂತೆ ಕಮ್ಯೂನಿಸ್ಟರಿಗೆ ಸೂಚನೆ

ಕಮ್ಯೂನಿಸ್ಟರು ತಮ್ಮ ಶತ್ರುಗಳನ್ನು ಪ್ರತ್ಯಕ್ಷವಾಗಿ ಎದುರಿಸಿ ಕಾದಾಡಬೇಕೆಂದೂ, ತಾವು ಓಡಿಹೋಗುವ ಸಮಯ ಬಂದಾಗ, ಎಷ್ಟು ಸಾಧ್ಯವೋ ಅಷ್ಟು ಜನರನ್ನು ಗುಂಡಿನಿಂದ ಹೊಡೆದು ಸಾಯಿಸಬೇಕೆಂದೂ ಹೈದರಾಬಾದಿನ ಕಮ್ಯೂನಿಸ್ಟರು ತಮ್ಮ ಹಿಂಬಾಲಕರಿಗೆ ಗುಪ್ತ ಸೂಚನೆ ಕೊಟ್ಟಿರುವರೆಂದು ಹೈದರಾಬಾದ್ ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಓಕಳಿ ಎರಚುವುದು ಅಪರಾಧವಲ್ಲ

ಹೋಳಿ ಹಬ್ಬದ ಕಾಲದಲ್ಲಿ ಬಣ್ಣದ ನೀರನ್ನು ಎರಚುವುದು ಅಪರಾಧ ಮತ್ತು ದಂಡನೀಯ ಕೆಲಸವೆಂದು ಭಾವಿಸಬೇಕಾಗಿಲ್ಲವೆಂದು ಕಲ್ಕತ್ತಾ ಹೈಕೋರ್ಟಿನಲ್ಲಿ ನ್ಯಾಯಾಧಿಪತಿ [illegible] ಜನರಿಗೆ ವಿಧಿಸಿದ್ದ ಜುಲ್ಮಾನೆಯನ್ನು ರದ್ದು ಮಾಡಿರುತ್ತಾರೆ.

ವಿವಾಹ ಮಹೋತ್ಸವ

ಇಲ್ಲಿನ ನಿವೃತ್ತ ಉಪಾಧ್ಯಾಯರಾದ ಶ್ರೀ॥ ಕೆ ನಾರಣಪ್ಪನವರು ತಮ್ಮ ದ್ವಿತೀಯ ಪುತ್ರ ಚಿ॥ ಕೆ ಎನ್ ರಾಮುವಿಗೆ [illegible] ಬ್ರ॥ ವಿರಲಶಾಸ್ತ್ರಿಗಳ ಪುತ್ರಿ॥ ಚಿ॥ ಸೌ॥ ಗೋಪಿದೇವಿಯನ್ನು ತಂದುಕೊಂಡು ಮೊನ್ನೆ ದಿನ ರಾಜ [illegible] ಮಹೋತ್ಸವವನ್ನು ನೆರವೇರಿಸಿದರು.

ಚಂದಾದಾರರಲ್ಲಿ ವಿನಂತಿ

[illegible] ಇಲ್ಲವೆ ಚಂದಾ ಹಣ ಕೊಡಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗಿದೆ.

ಏಜೆಂಟರು—

ನ್ಯೂಸ್ ಪೇಪರ್ ಹೌಸ್

[illegible], ಮೈಸೂರು.

[illegible] :: [illegible]

[illegible]

[illegible]

ಎಸ್. ರಾಮಯ್ಯ

2840 [illegible]

[illegible], ಮೈಸೂರು.

3-6-49 ರಿಂದ ಅಮೋಘ **2** ನೇ ವಾರ

ಪ್ರತಿ ದಿನ ೩ ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಆಪೆರಾ

ಟಾಕೀಸುಗಳಲ್ಲಿ

ಜ್ಯೂಪಿಟರ್ ರವರ ಮಹೋನ್ನತ ತಮಿಳು ಚಿತ್ರ

ವೇಲೈಕಾರಿ

—ಭೂಮಿಕೆ:—

ಎಂ. ವಿ. ರಾಜಮ್ಮ, ಟಿ. ಎಸ್. ಬಾಲಯ್ಯ,

ವಿ. ಎನ್. ಜಾನಕಿ, ದೊರೆ ರಾಜ್,

ಲಲಿತ : ಪದ್ಮಿನಿ.

ಮೊದಲು ಮೂರು ವಾರಗಳಲ್ಲ ಎಲ್ಲಾ ತರಹೆಯ ಕಾಂಪ್ಲಿಮೆಂಟರಿ, ಫ್ರೀ ಪಾಸುಗಳು ಮತ್ತು ರಿಯಾಯಿತಿಗಳನ್ನೂ ಮನ್ನಾ ಮಾಡಿರುತ್ತೆ.

[R.V. Pictures' Releas

CHAMUNDESWARI TALKIES

From 3-6-1949 :: Daily 3 Shows

Columbia's Spectacular Glorious Technicolor Picture

BANDIT OF SHERWOOD FOREST

or THE SON OF ROBINHOOD

ಬ್ಯಾಂಡಿಟ್ ಆಫ್ ಷೆರ್‌ವುಡ್ ಫಾರೆಸ್ಟ್, ಅಥವ ಸನ್ ಆಫ್ ರಾಬಿನ್‌ಹುಡ್

Starring:—Edgar Buchanan, Anita Louise

॥ ಶ್ರೀ ಸೀತಾರಾಮಾಭ್ಯಾಂ ನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಶ್ವಾಸಕಾಸಾಂತಕ

ಸೂತಿ ಕಾಸಾತಿಕ್ಕೆ [ಬಾಣಂತಿ ಕೆಮ್ಮಿಗೆ] ಉತ್ತಮ ಗುಣಕಾರಿ

ಕೆಮ್ಮು ಕೈಕಾಲುಗಳು, ಮೈ ಬೆಚ್ಚಗೆ ಜ್ವರ ಬಂದಂತೆ ತೋರುವುದು, ನಿದ್ರೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಕ್ಕೆ ಸರಿಯಾಗಿಲ್ಲದಿರುವುದು ಸಹ ಪರಿಹಾರ.

ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಮಾಶ್ರಮದ ವೈದ್ಯಶಾಲಾ, ಮೈಸೂರು.

ಪ್ರಭಾ ➔ ★ 5-6-49 ರಿಂದ

ದಿನವೂ 3 ಆಟಗಳು

ಮಿನರ್ವಾ ರವರ

✻ ಉಲ್ಟಿ ಗಂಗ ✻

(ಹಿಂದಿ)

ಪ್ರಮೀಳ, ಸಡಿಕ್ ಅಲಿ, ಪರೇಶ್ ಬ್ಯಾನರ್ಜಿ

Edited, printed, and published by A.R Naga rajan at the Sadhvi Press, D. Subbiah Road, Mysore

ಪ್ರಭುದೇವಾ ಟಾಕೀಸ್ :: 4—6—49 ರಿಂದ ಅಮೋಘ 2 ನೇ ವಾರ

ಪ್ರತಿ ದಿನ 3 ಆಟಗಳು

ನಗ್ಗಯ್ಯ, ಕಣ್ಣಾಂಬ, ರಾಮತಿಲಕಂ, ಸಿ. ಎಸ್. ಆರ್. ಮೊದಲಾದವರು ಪಾತ್ರ ವಹಿಸಿರುವ

ಶ್ರೀ ಪ್ರಹ್ಲಾದ ಮಹಾಸಭ್ರಮ (ತೆಲುಗು)

ಸರಸ್ವತಿ ಟಾಕೀಸಿನವರ ಮಹೋನ್ನತ ಚಿತ್ರ

ಫೋ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೪-೬-೪೯ [ಸಂಚಿಕೆ ೨೫೧

ದಿವಾನರು ಪ್ರಭುಗಳ ಸಲಹೆಗಾರರಾಗುವರೆ?

ಪ್ರ॥ಪ್ರ॥ ಸಭೆಯ ಅಧಿವೇಶನ ೨ ದಿವಸ ಹೆಚ್ಚಿತು

ಸ್ವಂ ಸು.ಫೋ॥] ಬೆಂಗಳೂರು ೪
೧೨ನೇ ತಾ॥ ಮುಗಿಯಬೇಕಾಗಿದ್ದ ಪ್ರ॥ ಪ್ರ॥ ಸಭೆಯ ಅಧಿವೇಶನವನ್ನು ಸರ್ಕಾರದವರು ೨ ದಿವಸ ಮುಂದುವರಿಸಿದ್ದಾರೆ ೧೫ನೇ ತಾ॥ ಬ್ರಿಟಿಷ್ ದೊರೆಗಳ ವರ್ಷಂತಿ ಪ್ರಯುಕ್ತ ಸಭೆ ನಡೆಯುವುದಿಲ್ಲ

ವಿಶ್ವವಿದ್ಯಾಲಯದ ರಿಜಿಸ್ಟ್ರಾರ್

ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾಗಿರುವ ಡಾ॥ ಸಿ. ರಂಗಾಚಾರ್ಯರವನ್ನು ಅವರ ಹೊಸ ನೇಮಕದ ತಾರೀಖಿನಿಂದ ಎರಡನೇ ದರ್ಜೆಯ ಪ್ರೊಫೆಸರನ್ನಾಗಿ ನೇಮಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರದ ಸಹಾಯ

ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ೩ ಸಾವಿರ ರೂ. ಮತ್ತು ನಿಘಂಟಿನ ಸಮಿತಿಗೆ - ಸಾವಿರ ರೂ. ಗ್ರ್ಯಾಂಟನ್ನು ಸರ್ಕಾರದವರು ಕೊಡುತ್ತಿರುವರೆಂದೂ, ಹೆಚ್ಚಿನ ಸಹಾಯ ಮಾಡಬೇಕೆಂದು ಮನವಿ ಬಂದುದರಿಂದ ನಿಘಂಟು ಸಮಿತಿಗೆ ೨ ಸಾವಿರ ರೂ. ಕೊಡಲು ಸರ್ಕಾರವು ನಿರ್ಧರಿಸಿರುವುದಾಗಿ ವಿದ್ಯಾ ಸಚಿವ ಶ್ರೀ ಡಿ. ಹೆಚ್. ಚನ್ನಶೇಖರಯ್ಯನವರ ನಿನ್ನೆ ಪ್ರ॥ಪ್ರ॥ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಹಿಂದೂ ಮಹಿಳೆಯ ಅಪಹಾರ

ದೆಹಲಿಯ ಕಾಂಗ್ರೆಸ್ ಕಾರ್ಯಕರ್ತರೂ ಮತ್ತು ಕಾರ್ಮಿಕ ನಾಯಕರೂ ಆದ ಶ್ರೀ ನಾನವಾಲ ದಾಸರ ಪತ್ನಿ ಮೂಲಿ ದೇವಿಯವರನ್ನು ಅಪಹೃತ ಮಹಿಳಾ ರಕ್ಷಣಾ ಇಲಾಖಾ ನೌಕರರುಗಳು ಬಲಾತ್ಕಾರವಾಗಿ ಅವರ ಮನೆಯಿಂದ ಕರೆದೊಯ್ದು, ಮುಸ್ಲಿಂ ನಿರಾಶ್ರಿತ ಕೇಂದ್ರದಲ್ಲಿಟ್ಟಿರುವರೆಂದು ಹೇಳಲಾಗಿದೆ ಆಕೆಯು ೧೮ ವರ್ಷಗಳ ಹಿಂದೆ ವಿವಾಹವಾಗಿದ್ದಳು. ಜಿಲ್ಲಾಧಿಕಾರಿಯವರಿಗೆ ದೆಹಲಿಯ ಮುನಿಸಿಪಲ್ ಸಮಿತಿಯ ಅಧ್ಯಕ್ಷರು ಈ ಬಗ್ಗೆ ಪ್ರತಿಭಟನೆ ಸಲ್ಲಿಸಿರುವುದರಿಂದ, ಆಕೆಯನ್ನು ಬಿಡುಗಡೆ ಮಾಡಬೇಕೆಂದು ಅರ್ಜಿ ಮಾಡಿದರೆಂದೂ ಇದರೂ ಇಲ್ಲಿಯವರಿಗೆ ಅವರನ್ನು ಬಿಡುಗಡೆ ಮಾಡಿಲ್ಲವೆಂದೂ ವರದಿಯಾಗಿದೆ.

ವಿವಾಹ ಮಹೋತ್ಸವಗಳು

ಚಾಮುಂಡಿಪುರದಲ್ಲಿ ಉಪಾಧ್ಯಾಯರಾಗಿರುವ ಶ್ರೀ ಕಲಿಯೂರು ಕೃಷ್ಣಸ್ವಾಮಿಯವರುಗಳು ತಮ್ಮ ಪುತ್ರಿ ಚಿ॥ಸೌ॥ ಶಾಂತಮ್ಮನವರನ್ನು ನಿವೃತ್ತ ಓವರ್‌ಸಿಯರಾದ ಶ್ರೀ ಎಂ ವೆಂಕಟನಾರಣಪ್ಪನವರ ಪುತ್ರ ಶ್ರೀ ಎಂ. ಗೌರೀಶಂಕರರವರಿಗೆ ಕೊಟ್ಟು ವಿವಾಹವನ್ನು ನಿನ್ನೆ ನೆರವೇರಿಸಿದರು

ಚಾಮರಾಜನಗರ ತಾಲ್ಲೂಕು ನಂಜೇದೇವನ ಪುರದ ಧರ್ಮಿಷ್ಠ ಶ್ರೀ ಚಿಕ್ಕಣ್ಣನವರು ತಮ್ಮ ಪುತ್ರಿ ಚಿ॥ಸೌ॥ ಗಂಗಾಂಬಿಕೆಯನ್ನು ಮುಲಿಯೂರಿನ ಶ್ರೀ ಚಿಕ್ಕಲಿಂಗಪ್ಪನವರ ಪುತ್ರ ಶ್ರೀ ಎಂ.ಸಿ. ಬಸಪ್ಪನವರಿಗೆ ಕೊಟ್ಟು ವಿವಾಹವನ್ನು ನಿನ್ನೆ ದಿನ ನಂಜೇದೇವನಪುರದಲ್ಲಿ ನೆರವೇರಿಸಿದರು

ಶ್ರೀರಂಗಪಟ್ಟಣದ ಚೌಬೀನೆ ವರ್ತಕರಾದ ಶ್ರೀ ಎಸ್.ಸಿ ಎಸ್. ಸುಬ್ಬಯ್ಯನವರು ತಮ್ಮ ಪುತ್ರಿ ಚಿ॥ ಸೌ॥ ಸುಬ್ಬಮ್ಮನವರನ್ನು, ಶ್ರೀ ಬಿ ಎಂ ಸೋಮಶೇಖರಯ್ಯನವರಿಗೆ ಕೊಟ್ಟು ಕಳೆದ ೧೯ನೇ ತಾ॥ ವಿವಾಹವನ್ನು ರಾಜಧಾನಿಯಲ್ಲಿ ನಡೆಸಿದರು.

ಪ್ರ॥ ಪ್ರ॥ ಸಭಾ ಉಪಾಧ್ಯಕ್ಷತೆಗೆ ಉಮೇದುವಾರರು

ಸ್ವಂ.ಸು ಫೋ॥] ಬೆಂಗಳೂರು ೪
ಪ್ರಜಾ ಪ್ರತಿನಿಧಿ ಸಭೆಯ ಉಪಾಧ್ಯಕ್ಷಸ್ಥಾನಕ್ಕೆ ಕಾಂಗ್ರೆಸ್ಸಿನಿಂದ ಚಿಕ್ಕಮಗಳೂರಿನ ಶ್ರೀ ಬಿ ಸಿ ಬಸಪ್ಪಶೆಟ್ಟರನ್ನೂ, ಪ್ರಜಾಮಂಡಲಿಯಿಂದ ಶ್ರೀಮತಿ ಗಂಗಮ್ಮನವರನ್ನೂ, ಉಮೇದುವಾರರನ್ನಾಗಿ ನಿಲ್ಲಿಸಲಾಗಿದೆ ಸ್ವತಂತ್ರರಾಗಿ ಶ್ರೀ ಎಸ್. ಶ್ರೀನಿವಾಸಮೂರ್ತಿಯವರೂ ಸ್ಪರ್ಧಿಸಲಿದ್ದಾರೆ.
೦ ನಾಳಿದ್ದಿನಿಂದ ನಿವೃತ್ತರಾಗಬೇಕಾಗಿದ್ದ ಹೈಕೋರ್ಟು ನ್ಯಾಯಾಧೀಶರಾದ ಶ್ರೀ ಕಂದಸ್ವಾಮಿಪಿಳ್ಳೆಯವರಿಗೆ ೬ ತಿಂಗಳು ಜೀವದಾನ ಕೊಡಲಾಗಿದೆ

ಬೆಂಗಳೂರಿಗೆ ರಾಜೇಂದ್ರಸಿಂಹಜಿಯವರ ಭೇಟಿ

ದಕ್ಷಿಣ ಭಾರತದ ಸೈನ್ಯ ವಿಭಾಗದ ಮುಖ್ಯ ದಳಪತಿ ಲೆ ಜ॥ ಮಹಾರಾಜ ರಾಜೇಂದ್ರಸಿಂಹಜಿಯವರು ಇದೇ ೧೭ನೇ ತಾ॥ ಬೆಂಗಳೂರಿಗೆ ಭೇಟಿ ಕೊಟ್ಟು, ಅಲ್ಲಿ ೩ ದಿನಗಳು ಇರುವರು. ಮದರಾಸ್, ಉದಕಮಂಡಲ, ಕೊಯಮುತ್ತೂರು, ಹೈದರಾಬಾದುಗಳಿಗೂ ಅವರು ಭೇಟಿ ಕೊಡುವರು.

ನೂತನ ಅಂಚೆ ಸ್ಟಾಂಪುಗಳು

ಭಾರತದ ದ್ವಿತೀಯಸ್ವಾತಂತ್ರ್ಯೋತ್ಸವದ ದಿನದ ಜ್ಞಾಪಕಾರ್ಥವಾಗಿ ಬರುವ ಆಗಸ್ಟ್ ೧೫ನೇ ತಾ॥ ನಿಂದ ನೂತನ ಅಂಚೆ ಸ್ಟಾಂಪುಗಳನ್ನು ಮಾರಲಾಗುವುದು

ಭಕ್ಷಿ-ಇ-ಮೇಟಿಂಗ್

ಮೈಸೂರು ೪
ಶ್ರೀಮನ್ಮಹಾರಾಜರವರ ಎ ಡಿ ಸಿಗಳಾದ ಶ್ರೀ ಎಲ್. ಮಹದೇವಪ್ಪನವರನ್ನು ಈ ತಿಂಗಳಿನಿಂದ ಎ ಡಿ ಸಿ ಮತ್ತು ಭಕ್ಷಿ-ಇ-ಮೇಟಿಂಗರಾಗಿ ನೇಮಿಸಲಾಗಿದೆ

ಭಾರತ ವಾಚನ

೩ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದ ಮುಂದೆ ಈ ರಾತ್ರಿ ೮-೩೦ ಗಂಟೆಗೆ ಗುಂಡ್ಲುಪೇಟೆ ಶ್ರೀ ನಾರಾಯಣಯ್ಯಂಗಾರ್ಯರಿಂದ ಗದಾಯುದ್ಧ ಎಂಬ ಭಾರತ ವಾಚನವು ನಡೆಯುವುದು ನಾಳೆ ಸಂಜೆ ೬ ಗಂಟೆಗೆ ವಿದ್ವಾನ್ ಗಣೇಶ ಶಾಸ್ತ್ರಿಗಳಿಂದ ಗೀತಾ ಕಾಲಕ್ಷೇಪ ಮತ್ತು ೭ ಗಂಟೆಗೆ ಜನಾಬ್ ತಸದೀಕ್ ಹುಸೇನ್ ಸಾಹೇಬರಿಂದ ಸಂಗೀತಗಳು ಜರುಗುವುವು

ಕೋಲಾರದಲ್ಲಿ ಕಳ್ಳ ಬಟ್ಟಿ ಹೆಚ್ಚಾಗುತ್ತಿದೆ.

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೋತ್ತರಗಳು

ಸ್ವಂ ಸು ಫೋ॥] ಬೆಂಗಳೂರು ೪
ಮದ್ಯ ಪಾನನಿರೋಧವು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಅದನ್ನು ಯಶಸ್ವಿಯಾಗಿ ನಡೆಸುವ ಕಾರ್ಯವನ್ನು ಪೋಲೀಸ್ ಇಲಾಖೆಗೆ ವರ್ಗಾಯಿಸುವುದು ಸೂಕ್ತವೆಂದು ಸರ್ಕಾರವು ಭಾವಿಸಿದೆ ಈ ವಿಷಯವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಲಾಗಿದೆ. ಎಲ್ಲ ಜಿಲ್ಲೆಗಳಲ್ಲಿಯೂ ಮದ್ಯ ಪಾನನಿರೋಧವನ್ನು ಈ ವರ್ಷವೇ ಜಾರಿಗೆ ತರಲು ಸಾಧ್ಯವಿಲ್ಲ-ಎಂದು ಸರ್ಕಾರದ ರೆವಿನ್ಯೂ ಸೆಕ್ರೆಟರಿಗಳು ಶ್ರೀ ಎಂ ಜಿ ಚನ್ನಪ್ಪಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಕೋಲಾರ ಜಿಲ್ಲೆಯಲ್ಲಿ ಮದ್ಯ ಪಾನ ನಿರೋಧವು ಜಾರಿಗೆ ಬಂದಮೇಲೆ ಕಳ್ಳಬಟ್ಟಿ ಸಾರಾಯಿ ತಯಾರಿಕೆ ಅತಿ ಹೆಚ್ಚಾಗಿದೆಯೆಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ ಆ ರೀತಿ ಇದ್ದಲ್ಲಿ ಅದನ್ನು ತಡೆಗಟ್ಟಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ಆರೋಗ್ಯ ಸಚಿವರು ಉಪಪ್ರಶ್ನೆಗೆ ಉತ್ತರವಾಗಿ ಹೇಳಿದರು ಮದರಾಸಿನ ಕಡೆಯಿಂದ ಮೈಸೂರು ನಗರಕ್ಕೆ ಅನೇಕ ಜನರು ಬಂದು ಕುಡಿಯುತ್ತಿರುವ ವಿಚಾರವೂ ಸರ್ಕಾರಕ್ಕೆ ಗೊತ್ತಿಲ್ಲವೆಂದೂ ಮತ್ತೊಂದು ಉಪಪ್ರಶ್ನೆಗೆ ಉತ್ತರ ಬಂದಿತು. ಪ್ರಪಂಚದಲ್ಲೆಲ್ಲಾದರೂ ಮದ್ಯಪಾನನಿರೋಧವು ಯಶಸ್ವಿಯಾಗಿದೆಯೇ ಎಂಬ ಶ್ರೀ ಎಂ. ರಾಮಸ್ವಾಮಿಯವರ ಉಪ ಪ್ರಶ್ನೆಗೆ ಜನರ ಸಹಕಾರದಿಂದ ಅದು ಫಲಕಾರಿಯಾಗುವುದೆಂದು ಸಚಿವರು ಉತ್ತರವಿತ್ತರು.

ಗೃಹ ಸಮಿತಿಗೆ ಶ್ರೀಗಳಾದ ಬಿ ಕೆಂಚಪ್ಪ, ಪಡಾಕ್ಷರಪ್ಪ, ಬಿ ಅಂಜನಪ್ಪ, ಎಲ್ ವೆಂಕಟನಾರಣಪ್ಪ, ಆರ್ ಚೇನಗೊಂಡಪ್ಪ, ಹೆಚ್ ಗುರುಮೂರ್ತಪ್ಪ ಸೂರ್ಯನಾರಾಯಣ ಜೋಯಿಸ್, ಮತ್ತು ಅಬ್ದುಲ್ ಬಾಸಿದ್‌ಖಾನರವರುಗಳು ಸದಸ್ಯರುಗಳಾಗಿ ಚುನಾಯಿತರಾಗಿದ್ದಾರೆ.

ಕೀರ್ತನೆ

ರಾಜಧಾನಿಯ, ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದ ಒಳ

ದಿವಾನರು ಶ್ರೀಮನ್ಮಹಾರಾಜರವರ ಸಲಹೆಗಾರರೇ ?

ಸ್ವಂ ಸು.ಫೋ॥] ಬೆಂಗಳೂರು ೪
ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳ ಹುದ್ದೆಯನ್ನು ವಜಾ ಮಾಡಲಾಗುವುದೆಂದೂ, ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರನ್ನು ಶ್ರೀಮನ್ಮಹಾರಾಜರವರ ಸಲಹೆಗಾರರನ್ನಾಗಿ ಒಂದು ವರ್ಷ ಕಾಲ ನೇಮಿಸುವ ಆಲೋಚನೆ ನಡೆಯುತ್ತಿದೆಯೆಂದೂ ನಂಬಲರ್ಹವಾದ ಕಡೆಯಿಂದ ತಿಳಿದುಬಂದಿದೆ

ಕರ್ಣಾಟಕ ವಿಶ್ವ ವಿದ್ಯಾನಿಲಯದ ಸ್ಥಾನಪತಿಗಳು

ನೂತನವಾಗಿ ಸ್ಥಾಪಿತವಾಗಲಿರುವ ಕರ್ಣಾಟಕ ವಿಶ್ವ ವಿದ್ಯಾನಿಲಯದ ವೈಸ್ ಚಾನ್ಸಲರಾಗಿ ಬೊಂಬಾಯಿ ಹೈಕೋರ್ಟಿನ ವಕೀಲರಾದ ಶ್ರೀ ಆರ್.ಎಂ ಜಹಗೀರ್‌ದಾರರನ್ನು ನೇಮಿಸಲಾಗಿದೆಯೆಂದು ತಿಳಿದುಬಂದಿದೆ.

ಸಾಂಬಶಿವರ್‌ರನ್ನು ಗಲ್ಲಿಗೇರಿಸುವುದು ನಿಂತಿತು

ಮಲಯದಲ್ಲಿ ಶಸ್ತ್ರಾಸ್ತ್ರಗಳನ್ನು ಒಯ್ಯುತ್ತಿದ್ದನೆಂಬ ಆಪಾದನೆಯ ಮೇಲೆ ಮರಣದಂಡನೆಗೆ ಗುರಿಯಾಗಿದ್ದ ಸಾಂಬಶಿವನ ಶಿಕ್ಷೆಯನ್ನು ಸಧ್ಯಕ್ಕೆ ನಿಲ್ಲಿಸಬೇಕೆಂದು ಜೋಹಾರ್ ಸರ್ಕಾರದವರು ಆಜ್ಞೆ ಮಾಡಿದ್ದಾರೆ ಭಾರತ ಸರ್ಕಾರದವರು ಪ್ರಿವಿ ಕೌನ್ಸಿಲಿನಲ್ಲಿ ಆತನ ಪರವಾಗಿ ಅಪೀಲು ಮಾಡಲಿದ್ದಾರೆ.

ಚಿಯಾಂಗರು ಬ್ರಿಟನ್ನಿನಲ್ಲಿ ನೆಲೆಸುವರೇ ?

ಚೀಣದ ಮಾಜಿ ಅಧ್ಯಕ್ಷರಾದ ಚಿಯಾಂಗ್ ಕೈಷೇಕರು ರಾಷ್ಟ್ರೀಯ ಸರ್ಕಾರದ ಹೊರೆಯನ್ನು ತ್ಯಜಿಸಿ ಪ್ಯಾರಿಸ್ಸಿಗೆ ತೆರಳುವರೆಂದೂ, ಅಲ್ಲಿಂದ ಬ್ರಿಟನ್ನಿಗೆ ಹೋಗಿ, ಸತಿ ಚಿಯಾಂಗರೊಂದಿಗೆ ಅಲ್ಲೇ ನೆಲೆಸುವರೆಂದೂ ಹೇಳಲಾಗಿದೆ,

ಪರೀಕ್ಷೆ ಫಲಿತಾಂಶ ಪ್ರಕಟಿಸಕೂಡದೆಂದು ದಾವಾ

ಬೊಂಬಾಯಿನ ಎಸ್. ಎಸ್. ಎಲ್. ಸಿ ಪ್ರಶ್ನೆ ಪತ್ರಿಕೆಗಳು ಮುಂಚೆಯೇ ಹೊರಬಿದ್ದಿದ್ದುದರಿಂದ, ಆ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಕೂಡದೆಂದು ನಾಲ್ಕು ಜನ ವಿದ್ಯಾರ್ಥಿಗಳೂ ಮತ್ತು ಒಬ್ಬ ಉಪಾಧ್ಯಾಯರೂ ಪುಣೆಯ ಕೋರ್ಟಿನಲ್ಲಿ ವ್ಯವಹಾರ ಹೂಡಿದ್ದಾರೆ.

ಯಮುನಾ ನದಿಯ ಮಾರ್ಗ ಬದಲಾವಣೆ

ದೆಹಲಿಯ ಹತ್ತಿರವಿರುವ ಯಮುನಾ ನದಿಯು ತನ್ನ ಮಾರ್ಗವನ್ನು ಬಿಟ್ಟು ಬೇರೆ ಹಾದಿಯನ್ನು ಹಿಡಿದಿದೆಯೆಂದೂ, ಇದರಿಂದ ಅದರ ಬಳಿ ಇರುವ ಜಗತಪುರ ಎಂಬ ಗ್ರಾಮಕ್ಕೆ ಅಪಾಯ ಸಂಭವಿಸಿದೆಯೆಂದೂ, ನದಿಯ ಈ ಮಾರ್ಗವನ್ನು ತಡೆಯಲು ಸಾಧ್ಯವಿಲ್ಲವೆಂದು ಪ್ರವೀಣರು ಅಭಿಪ್ರಾಯಪಟ್ಟಿದ್ದಾರೆಂದೂ ವರದಿಯಾಗಿದೆ

ಇರುವ ಶ್ರೀ ಪಾಲೆ ವೆಂಕಟರಮಣರ ಭಕ್ತವೃಂದದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಶ್ರೀ ಎ ಡಿ ಶ್ರೀನಿವಾಸ ಅಯ್ಯಂಗಾರ್ಯರಿಂದ ಶ್ರೀನಿವಾಸ ಕಲ್ಯಾಣ ಎಂಬ ಕೀರ್ತನೆ ನಡೆಯುವುದು.

ಕತ್ತೆಗಳ ಮೇಲೆ ರಾಗಿಯ ರವಾನೆ

ಕಾನಕಾನಹಳ್ಳಿ ತಾಲ್ಲೂಕು ಮರಳವಾಡಿ ಹೋಬಳಿ ತೇರು ಬೀದಿ ಗ್ರಾಮದ ಶ್ರೀ ವೀರಪ್ಪ ಎಂಬವರ ಮನೆಯಿಂದ ೧೬ನೇ ತಾ॥ ಮಡಿವಾಳ ಕೆಂಪ ಮತ್ತು ಕುಳ್ಳ ಎಂಬುವರು ರಹದಾರಿಯಿಲ್ಲದೆ ರಾಗಿಯನ್ನು ೯ ಕತ್ತೆಗಳ ಮೇಲೆ ಆಡಿನ ಕುಪ್ಪೆಗೆ ಸಾಗಿಸುತ್ತಿದ್ದುದನ್ನು ಪೊಲೀಸರು ಪತ್ತೆ ಮಾಡಿ ಅದನ್ನು ವಶಪಡಿಸಿ ಕೊಂಡಿರುತ್ತಾರೆ

ವಯಸ್ಕರ ಶಿಕ್ಷಣ ತರಗತಿಗಳು

ಚಾಮರಾಜ ಮೊಹಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಸಭೆಯು ಕಳೆದ ಮಂಗಳವಾರ ಶ್ರೀ ಮತಿ ಬಿ ಆರ್ ಕಾವೇರಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು ಇದೇ ೨೦ ನೇ ತಾ॥ ಕನ್ನೇಗೌಡನ ಕೊಪ್ಪಲಿನಲ್ಲಿರುವ ರೈತರ ಯುವಕರ ಸಂಘದಾಶ್ರಯದಲ್ಲಿ ಜನಪದ ಕಲಾ ಪಟ್ಟವನ್ನು ಆಚರಿಸಬೇಕೆಂದು ನಿರ್ಧರಿಸಲಾಯಿತು ಈ ಮೊಹಲ್ಲಾಕ್ಕೆ ಸೇರಿದ ಮಳಲವಾಡಿ, ಕುಕ್ಕರಹಳ್ಳಿ, ಕನ್ನೇಗೌಡನ ಕೊಪ್ಪಲು, ಜಯನಗರ ಮತ್ತು ಕುರುಬರ ಕೇರಿಗಳಲ್ಲಿ ಒಟ್ಟು ೭ ವಯಸ್ಕರ ಶಿಕ್ಷಣ ತರಗತಿಗಳನ್ನು ತೆರೆಯಬೇಕೆಂದೂ ತೀರ್ಮಾನಿಸಲಾಯಿತು

ಮೈಸೂರಿನಲ್ಲಿ ಮತ್ತೊಂದು ಕಾಗದದ ಕಾರ್ಖಾನೆ

ಸಂಸ್ಥಾನದಲ್ಲಿ ಮತ್ತೊಂದು ಕಾಗದದ ಕಾರ್ಖಾನೆಯನ್ನು ೨ ಕೋಟಿ ರೂ ಖರ್ಚಿನಲ್ಲಿ ಸ್ಥಾಪಿಸಲು ಸರ್ಕಾರದವರು ಹಲವು ಖಾಸಗೀ ಮಹನೀಯರುಗಳಿಗೆ ಅನುಮತಿ ಕೊಟ್ಟಿದ್ದಾರೆಂದೂ ಅವರುಗಳು ೪೦ ಟನ್ ತಯಾರಿಸುವ ಯಂತ್ರವನ್ನು ಸ್ಥಾಪಿಸಲಿರುವರೆಂದೂ ತಿಳಿದುಬಂದಿದೆ.

ಶಾಸನ ಸಭೆಗಳಲ್ಲಿ ಸ್ಕ್ಯಾಂಡ್ರಲ್ ಶಬ್ದಕ್ಕೆ ನಿಷೇಧ

ಭಾರತದ ರಾಜ್ಯಾಂಗ ಸಭೆಯಲ್ಲಿ ಶ್ರೀ ಬ್ರಜೇಶ್ವರ ಪ್ರಸಾದರವರು ಮಾತನಾಡುತ್ತಾ ಸ್ಕ್ಯಾಂಡ್ರಲ್ ಎಂಬ ಶಬ್ದವನ್ನು ಉಪಯೋಗಿಸುತ್ತಲು ಆದ ಪಾರ್ಲಿಮೆಂಟಿನ ಪ್ರಮಾಣಕ್ಕೆ ವಿರುದ್ಧವಾದುದರಿಂದ ಅದನ್ನು ಉಪಯೋಗಿಸಕೂಡದೆಂದೂ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು ರೂಲಿಂಗ್ ಕೊಟ್ಟರು

ಕಂದಾಯ ಕೊಡದೆ ಪೌರ ಸಭಾ ಸದಸ್ಯತ್ವ ಹೋಯಿತು

ಚಿಕ್ಕಮಗಳೂರು ಪುರಸಭಾ ಸದಸ್ಯರುಗಳಾದ ಶ್ರೀಗಳು ಬಿ ಜಿ ಶ್ರೀನಿವಾಸ, ಎ ಜಿ ನಾರಾಯಣ ನಾಯಕ್ ಹೆಚ್ ಶಿವಕೃಷ್ಣ ಅಯ್ಯಂಗಾರ್, ಡಿ ದೊಡ್ಡಯ್ಯ, ಜನಾಬ್ ಜಿ ಅಬ್ದುಲ್ ರಹಮಾನ್ ಮತ್ತು ಟಿ ಗೌಸ್ ಮೊಹಿಯುದ್ದೀನರವರುಗಳು ಪುರಸಭೆಗೆ ಸಲ್ಲಿಸಬೇಕಾಗಿದ್ದ ಕಂದಾಯದ ಬಾಕಿಯನ್ನು ೩ ತಿಂಗಳು ಕಾಲಾವಧಿ ಕೊಟ್ಟರೂ ಪಾವತಿ ಮಾಡಲಿಲ್ಲವಾದುದರಿಂದ ಅವರುಗಳು ತಮ್ಮ ಸದಸ್ಯತ್ವಕ್ಕೆ ಕಳೆದುಕೊಂಡಿರುತ್ತಾರೆ

ವಿದ್ಯಾರ್ಥಿಗಳಿಂದ ತರಕಾರಿ ಬೆಳೆಯುವ ಯೋಜನೆ

ಅಸ್ಸಾಂ ಪ್ರಾಂತ್ಯದ ಮಿಡಲ್ ಸ್ಕೂಲ್ ವಿದ್ಯಾರ್ಥಿಗಳು ತಮ್ಮ ಶಾಲೆಗಳ ಕಾಂಪೌಂಡುಗಳಲ್ಲಿ ತರಕಾರಿಗಳನ್ನು ಬೆಳೆಯುವ ಯೋಜನೆಯೊಂದನ್ನು ಜಾರಿಗೆ ತರಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ ಪ್ರತಿ ಶಾಲೆಗೂ ವ್ಯವಸಾಯ ಸಲಕರಣೆಗಳು, ಬೀಜ ಮತ್ತು ಗೊಬ್ಬರಗಳ ವೆಚ್ಚಕ್ಕಾಗಿ ೧೧೦ ರೂ ಅನ್ನು ಕೊಡಲಾಗುವುದು

ಆರ್. ಎಸ್. ಎಸ್. ನವರ ಬಿಡುಗಡೆ

ಪೂರ್ವ ಪಂಜಾಬ್ ಪ್ರಾಂತ್ಯದ ಜೈಲಿನಲ್ಲಿರುವ ೯೦೦ ಜನ ಆರ್ ಎಸ್ ಎಸ್. ನವರನ್ನು ಬಿಡುಗಡೆ ಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ

ಸತ್ಕಾರ ಕೂಟ

ಮೈಸೂರು ೪

ಪಾಶ್ಚಿಮಾತ್ಯ ದೇಶಗಳಿಗೆ ಪ್ರವಾಸ ಕೈಗೊಂಡಿರುವ ಶ್ರೀ ಎಸ್ ಚನ್ನಯ್ಯನವರ ಗೌರವಾರ್ಥವಾಗಿ ನಿನ್ನೆ ರಾತ್ರಿ ಇಂದ್ರ ಭವನದಲ್ಲಿ ಜ್ಯುಬಿಲಿ ಸ್ಟೋರ್‍ಸ್ ಮಾಲಿಕರಾದ ಶ್ರೀ ಎಂ ಆರ್ ಸಿ ಬಸಪ್ಪನವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಸುಮಾರು ೨೦೦ ಜನ ಅತಿಥಿಗಳು ಬಂದಿದ್ದರು ಫಲಾಹಾರದನಂತರ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಭಾಷಣ ಮಾಡಿ, ಮೈಸೂರು ಕಾಂಗ್ರೆಸ್ಸಿನ ಇತಿಹಾಸ ಮತ್ತು ಅದರಲ್ಲಿ ಶ್ರೀ ಚನ್ನಯ್ಯನವರ ಪಾತ್ರ ಇವುಗಳನ್ನು ವಿವರಿಸಿ, ಅವರಿಗೆ ಸುಖ ಪ್ರಯಾಣವನ್ನು ಬಯಸಿದರು ಶ್ರೀ ಚನ್ನಯ್ಯನವರು ಸತ್ಕಾರಕ್ಕಾಗಿ ಧನ್ಯವಾದವನ್ನು ಸಲ್ಲಿಸಿ, ಮೈಸೂರಿನ ರಾಜಕೀಯದಲ್ಲಿ ತಾವುಯಾವಾಗಲೂ ಸಂಪೂರ್ಣ ಆಸಕ್ತಿ ವಹಿಸುವುದಾಗಿತಿಳಿಸಿದರು ಪ್ರಕೃತದಲ್ಲಿ ನಡೆದಿರುವ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯು ನಡೆಯದಿದ್ದರೆ ಒಳ್ಳೆಯದಾಗಿತ್ತೆಂಬ ತಮ್ಮ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದರು

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ಮಾದರಿ ಮನೆ ನಂಬರ್ ೬೫. ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಗಡಿನಾಡು ಗಾಂಧಿಯವರಿಗೆ ಖಾಹಿಲೆ

ಗಡಿನಾಡು ಪ್ರಾಂತ್ಯದ ಮಾಂಟಗಾಮರಿ ಜೈಲಿನಲ್ಲಿ ಬಂಧನದಲ್ಲಿಟ್ಟಿರುವ ಖಾನ್ ಅಬ್ದುಲ್ ಗಫಾರ್ ಖಾನರು ವಿಶೇಷ ಕಾಯಿಲೆಯಿಂದ ನರಳುತ್ತಿರುವರೆಂದೂ ಗರ್ಳಳಿಂದ ಸಂಬಂಧಿಗಳಾರು ಅವರನ್ನು ಭೇಟಿ ಮಾಡಲು ಅವಕಾಶ ಕೊಟ್ಟಿಲ್ಲವೆಂದೂ, ಹೇಳಲಾಗಿದೆ ಅವರಿಗೆ ಸರ್ಕಾರದವರು ಯಾವ ಸೌಲಭ್ಯಗಳನ್ನು ಒದಗಿಸದೆ ಏಕಾಂತ ಕೊಠಡಿಯಲ್ಲಿ ಅವರನ್ನು ಇಟ್ಟಿದ್ದಾರೆ

ರಾಜಕಮಲ್

ಮೈಸೂರು

3—6—49 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಕರ್ದಾರ್‌ರವರ ಹಿಂದಿ ಚಿತ್ರ

ನಾಟಕ್

— ಮುಖ್ಯ ಪಾತ್ರ —

ಸುರಯ್ಯ, ಅಮರ್

Morning Shows
From 3-6-49 for 4 days

CAESAR & CLEOPATRA

(In Technicolor)

- With -

Vivien Leigh, Claud Reins
Flora Robson

ಶ್ರೀ ಗಾಯತ್ರೀ

ದಿನವಹಿ 3 ಪ್ರದರ್ಶನಗಳು

5-6-49ನೇ ಭಾನುವಾರದಿಂದ

4 ದಿನಗಳು ಮಾತ್ರ

For Ever Amber

ಫಾರ್ ಎವರ್ ಅಂಬರ್

ವರ್ಣರಂಜಿತ ಚಿತ್ರ

—: ಬೆಳಗಿನ ಪ್ರದರ್ಶನ :—

ಈ ದಿನ ಮತ್ತು ನಾಳೆ

If I Were King

ಇಫ್ ಐ ವರ್ ಕಿಂಗ್

ಪಾತ್ರ ರೊನಾಲ್ಡ್ ಕೋಲ್ಮನ್

ಬೆಂಗಳೂರು ನರಸಿಂಹರಾಜ ಕಾಲೋನಿಯಲ್ಲಿ ಅಚ್ಚುಕಟ್ಟಾದ ಮನೆ
ಬೆಲೆ ೨೦,೦೦೦ ರೂ

ಲಕ್ಷ್ಮೀಪುರಂನಲ್ಲಿ
40'×60 ಸೈಟು 2800 ರೂ

ರಮಾವಿಲಾಸ ಅಗ್ರಹಾರದಲ್ಲಿ
ಸುಮಾರು ೨೦ ಸಾವಿರ ಬೆಲೆ ಅನ್ನಗೆ ಮೇಲೆ ೧೦ ಸಾವಿರ ರೂ ಆಧಾರ ಬೋಗ್ಯಕ್ಕೆ ಬೇಕಾಗಿದೆ

ಚಾಮುಂಡೀಪುರಂನಲ್ಲಿ
40'×60' ಸೈಟುಗಳ ಬೆಲೆ1400ರೂ

ಒಂದೇ ತಾಕಿನಲ್ಲಿ ರಾಜಧಾನಿಗೆ ಸ್ವಲ್ಪ ದೂರದಲ್ಲಿ ೪೬ ಎಕ್ರೆ ಹೊಲ ರೂ 15000

ಬಿ. ಎಸ್. ಸುಬ್ಬರಾವ್

ಗವರ್ನ್ಮೆಂಟ್ ಬಂಗಲೆ ಪಕ್ಕ ಮೈಸೂರು

ಲಕ್ಷ್ಮೀ ಥಿಯೇಟರ್

3-6-49ರಿಂದ ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು

ಸೊಹರಾಬ್ ಮೋದಿಯವರ ಸಂಗೀತಮಯ ಹಿಂದಿ ಚಿತ್ರ

* ಮೇರಾ ಮುನ್ನ *

ಭೂಮಿಕೆ — ಮೋತಿಲಾಲ್, ನಯನತಾರ. ಸಂಗೀತ – ಸಿ. ರಾಮಚಂದ್ರ

ಇದರ ಸಂಗಡ ಇಂಡಿಯನ್ ನ್ಯೂಸ್ ರಿವ್ಯೂ ಸಹ ತೋರಿಸಲ್ಪಡುತ್ತೆ.

ನಿರೀಕ್ಷಿಸಿ — **ನಯಿ ರೀತ್** (ಹಿಂದಿ)
ಪಾತ್ರ – ಸುಲೋಚನ ಚಟರ್ಜಿ

॥ ಶ್ರೀ ಸೀತಾರಾಮಾಯ ನಮಃ ॥

ಭಿಷಗ್ರತ್ನ ವೈದ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಕೌಲಟಜ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು, ಮೊದಲಾಗಿ ಗುಣವಾಗುತ್ತದೆ

ವಿಳಾಸ –
ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪ್ರಭಾ → ☆ 5-6-49ರಿಂದ

ದಿನವಹಿ 3 ಆಟಗಳು

ದಿ ನ್ಯೂ ಥಿಯೇಟರ್‍ಸ್‌ರವರ

* ಉಲ್ಟಿ ಗಂಗ * (ಹಿಂದಿ)

ಪ್ರಮುಖ ಪಹಾಡಿ ಸನ್ಯಾಲ್, ಪರಿ ಜ್ ಬ್ಯಾನರ್ಜಿ

Office of the University of Mysore
Camp Bangalore,
Dated 28th May 1949.

NOTIFICATION

Leaving Certificates to be attached to Application Forms.

Candidates who apply for admission to more than one College may attach a copy of the Leaving Certificate certified by a Gazetted Officer. The original leaving certificate must be produced on admission to the College.

By order
Sd C Rangachar
Ag Registrar

Edited printed, and published by A.R Nagarajan at the Sadhvi Press, D Subbiah Read, Mysore

ಫೋ॥ ನಂ 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೫-೬-೪೯ [ಸಂಚಿಕೆ ೪೦

ಭರತ ಖಂಡದಲ್ಲಿ ಮರಣ ದಂಡನೆ ರದ್ದು?

ಬಡ್ಜೆಟ್ ಮೇಲಿನ ಟೀಕೆ

ಬೆಂಗಳೂರು ೪

ಆಯವ್ಯಯ ಪಟ್ಟಿಯ ಮೇಲೆ ಪ್ರಜಾಪ್ರತಿನಿಧಿ ಸಭೆಯಲ್ಲಿ ನೆನ್ನೆ ಸದಸ್ಯರು ಟೀಕೆಯ ರೂಪವಾದ ಭಾಷಣಗಳನ್ನು ಮಾಡಿದರು. ಸಾಮಾನ್ಯ ಮನುಷ್ಯನ ತೊಂದರೆಯು ನಿವಾರಣೆಯಾಗಲಿಲ್ಲವೆಂದು ಮೀರ್ ನೂರ್ ಹುಸೇನರೂ, ಬೋರೇಗೌಡನ ಹಿತದೃಷ್ಟಿಯಿಂದ ಸಮರ್ಪಕ ರೀತಿಯಲ್ಲಿ ತಯಾರಿಸಲಾಗಿದೆಯೆಂದು ಶ್ರೀ [illegible]ಪ್ಪ ಸೆಟ್ಟರೂ, ಆಯವ್ಯಯ ಪಟ್ಟಿಗೆ [illegible]ಡನೇ ಭದ್ರವಿಲ್ಲವೆಂದು ಶ್ರೀ ವೈ. ಧರ್ಮಪ್ಪನವರೂ, ಕೇಂದ್ರದೊಡನೆ ಸರ್ಕಾರದ ಆರ್ಥಿಕ ವಿಲೀನೀಕರಣ ಸ್ಪಷ್ಟವಾಗಿರಬೇಕೆಂದು ಡಾ|| ಬಿ|| ರಾಮಸ್ವಾಮಿಯವರೂ, ಮೂಲಧನ, ಸಿಂಕಿಂಗ್ ಫಂಡು ಇವುಗಳಿಂದ ಹಣ ತೆಗೆದರೆ ದೇಶವು ಹೀನಸ್ಥಿತಿಗೆ ಬಂದಂತಾಗುವುದೆಂದೂ, ನೋಡಲು ಮೇಲೆ ಆಯವ್ಯಯ ಪಟ್ಟಿ ಚೆನ್ನಾಗಿ ಕಾಣಿಸಿದರೂ ಒಳಗಡೆ ಭಯಂಕರವಾಗಿದೆಯೆಂದು ಶ್ರೀ ಕೂತುಗೋಡು ನಾಗಭೂಷಣ ಶೆಟ್ಟರೂ ಭಾಷಣ ಮಾಡಿದರು.

ಚೀಣಾ ಯುದ್ಧದ ಮುಕ್ತಾಯವೇ ?

ಚೀಣಾದ ಅಂತರ್ಯುದ್ಧವು ಮುಕ್ತಾಯವಾಗುವ ಸ್ಥಿತಿಗೆ ಬಂದಿರುವ ಸೂಚನೆಗಳು ಕಾಣಬರುತ್ತಿವೆ. ಕಮ್ಯೂನಿಸ್ಟರಿಗೆ ಪೂರ್ಣ ಜಯ ಲಭ್ಯವಾಗಿರುವುದಾಗಿ ತಿಳಿದು ಬರುತ್ತದೆ. ಇನ್ನೂ ೧೦ ಲಕ್ಷ ಸರಕಾರಿ ಸೈನ್ಯಗಳಿವೆಯೆಂದು ಹೇಳಲಾಗುತ್ತಿದ್ದರೂ ಸಹ, ಅವುಗಳ ಮೇಲೆ ಭರವಸೆಯಿಡಲು ಸಾಧ್ಯವಿಲ್ಲವೆಂದು ಹೇಳಲಾಗಿದೆ.

ಬಂಧನದಲ್ಲಿರುವ ಹೈದ್ರಾಬಾದು ಮಾಜಿ ಮಂತ್ರಿಗಳಿಗೆ ವೇತನ

ಗೃಹಬಂಧನದಲ್ಲಿರುವ ಹೈದರಾಬಾದಿನ ಮಾಜಿ ಮಂತ್ರಿಗಳಾದ ರಾಯ್ ರಾಜಮನೋಹರ ಲಾಲ್, ನವಾಬ್ ಫಸ್ಲ ನವಾಜ್ ಜಂಗ್ ಮತ್ತು ಅಬ್ದುಲ್ ಹಮೀದ್ ಖಾನ್ ರವರುಗಳಿಗೆ ತಲಾ ೭೫೦ ರೂ ಗಳಂತೆ ಅವರ ವಿಚಾರಣೆ ಮುಗಿಯುವವರೆಗೆ ಮಾಸಾಶನವನ್ನು ಕೊಡಲು ಅಲ್ಲಿನ ಸರ್ಕಾರದವರು ಏರ್ಪಡಿಸಿರುತ್ತಾರೆ.

ಜ|| ಫ್ರಾಂಕೋ ಕೊಲೆಗೆ ಪ್ರಯತ್ನವೇ ?

ಬಾರ್ಸಿಲೋನದ ಕ್ರಿಸ್ತ ದೇವಾಲಯದಲ್ಲಿ ನೆನ್ನೆ ಪ್ರಾರ್ಥನೆ ನಡೆಯುತ್ತಿದ್ದಾಗ ಬಾಂಬೊಂದು ಸಿಡಿಯಿತು. ಸ್ಪೇನಿನ ಮುಖಂಡರಾದ ಜನರಲ್ ಫ್ರಾಂಕೋರವರನ್ನು ಕೊಲೆ ಮಾಡುವ ಉದ್ದೇಶದಿಂದ ಆ ಬಾಂಬನ್ನು ಎಸೆಯಲಾಯಿತೆಂದು ಹೇಳಲಾಗಿದೆ. ಆದರೆ ಆ ಸಮಯದಲ್ಲಿ ಜ|| ಫ್ರಾಂಕೋರವರು ಇರಲಿಲ್ಲ. ಅವರ ಪತ್ನಿ ಪುತ್ರರು ಇದ್ದರು. ಯಾರಿಗೂ ಏಟು ತಗುಲಲಿಲ್ಲ.

ಕ|| ಪ್ರಾಂ|| ಸೋಷಲಿಸ್ಟ್ ಪಕ್ಷ

ಶಿವಮೊಗ್ಗದಲ್ಲಿ ಸೇರಿದ್ದ ತೃತೀಯ ಕರ್ನಾಟಕ ಪ್ರಾಂತದ ಸೋಷಲಿಸ್ಟ್ ಪಕ್ಷದ ವಾರ್ಷಿಕಾಧಿವೇಶನದಲ್ಲಿ ಈ ಕೆಳಗೆ ಕಂಡವರು ಅಧಿಕಾರ ವರ್ಗಕ್ಕೆ ಚುನಾಯಿತರಾಗಿರುವರು:— ಪ್ರಾಂತೀಯ ಕಾರ್ಯದರ್ಶಿ ಶ್ರೀ ಎಸ್. ನಾಗಭೂಷಣ, ಸಹ ಕಾರ್ಯದರ್ಶಿಗಳು: ಶ್ರೀಗಳು ಜಿ. ಸದಾಶಿವರಾವ್, [illegible] ಪಿ. ಎ ಕಂಗುಪ್ಪಿ

ಮರಣ ದಂಡನೆ ರದ್ದಾಗುವುದೇ ?

ಭಾರತ ಸರ್ಕಾರದ ನ್ಯಾಯಾಂಗ ಸಚಿವರಾದ ಡಾ|| ಅಂಬೇಡಕರರು ರಾಜ್ಯಾಂಗ ಸಭೆಯಲ್ಲಿ ಮಾತನಾಡುತ್ತ ನಮ್ಮ ದೇಶದಲ್ಲಿ ಮರಣ ದಂಡನೆಯ ಶಿಕ್ಷೆಯನ್ನು ರದ್ದು ಮಾಡುವುದೇ ಸೂಕ್ತವಾದ ಮಾರ್ಗವೆಂದು ಹೇಳಿರುವರು. ನಮ್ಮ ದೇಶದ ಜನರು ವಿಶೇಷವಾಗಿ ಅಹಿಂಸಾ ತತ್ವದಲ್ಲಿ ನಂಬಿಕೆಯಿರುವವರು. ಅದೇ ಅವರ ಆರ್ಷೇಯವಾದ ಆಚಾರವಾಗಿದೆ. ಆದ್ದರಿಂದ ಗಲ್ಲಿಗೆ ಹಾಕುವ ಶಿಕ್ಷೆಯನ್ನು ಸಂಪೂರ್ಣವಾಗಿ ರದ್ದು ಮಾಡುವುದೇ ವಿಹಿತವಾದ ಮಾರ್ಗ—ಎಂದು ಅವರು ತಿಳಿಸಿದ್ದಾರೆ.

ಸತ್ಕಾರ ಸಮಾರಂಭ

ಯೂರೋಪು, ಅಮೇರಿಕಾ ಪ್ರವಾಸವನ್ನು ಕೈಗೊಳ್ಳಲಿರುವ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರನ್ನು ಬೀಳ್ಕೊಡಲು ಸಮಾರಂಭವು ಕಾಂಗ್ರೆಸ್ ಕಛೇರಿಯಲ್ಲಿ ಈ ಸಂಜೆ ೬|| ಘಂಟೆಗೆ ನಡೆಯುವುದು. ಕಾಂಗ್ರೆಸ್ ಸದಸ್ಯರೆಲ್ಲರೂ ದಯಮಾಡಿಸಬೇಕೆಂದು ಸಮಿತಿಯ ಕಾರ್ಯದರ್ಶಿಗಳು ಕೋರಿದ್ದಾರೆ.

ಈ ದಿನ ಬೆಳಗ್ಗೆ ಅಡ್ವೊಕೇಟ್ ಶ್ರೀ ಎಂ ಲಕ್ಷ್ಮೀನಾರಾಯಣರಾಯರ ಗೃಹದಲ್ಲಿ ಶ್ರೀಯುತ ಚನ್ನಯ್ಯನವರು ಮತ್ತು ಡಾ|| ಎ ಆರ್. ನಾಯುಡುರವರ ಗೌರವಾರ್ಥವಾಗಿ ಪೌರ ಸಭಾಸದಸ್ಯರಾದ ಶ್ರೀ ಕೆ ಎಸ್ ಸತ್ಯನಾರಾಯಣರಾಯರು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ನೂರಾರು ಜನ ಅತಿಥಿಗಳು ಆಗಮಿಸಿದ್ದರು. ಶ್ರೀ ಕೆ ಎಸ್ ಸೂರ್ಯನಾರಾಯಣರಾಯರು ಸ್ವಾಗತ ಭಾಷಣವನ್ನು ಮಾಡಿದರು. ಮುಖ್ಯ ಅತಿಥಿಗಳು ಸೂಕ್ತ ಉತ್ತರವಿತ್ತರು.

ಓರಿಯಂಟಲ್ ಇಂಡಸ್ಟ್ರೀಸಿನ ಶ್ರೀ ಬಿ ಎಸ್. ಸುಬ್ಬರಾಯರು ಮೇಲ್ಕಂಡ ಅತಿಥಿಗಳಿಬ್ಬರನ್ನೂ ತಮ್ಮ ಮನೆಗೆ ಬರಮಾಡಿಕೊಂಡು ಸತ್ಕರಿಸಿ ಸುಖಪ್ರಯಾಣವನ್ನು ಬಯಸಿದರು.

ಭಾರತ ಸೇವಾ ಸಮಾಜದವರು ನೆನ್ನೆ ಲಕ್ಷ್ಮೀಪುರಂ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ನಡೆಸಿದರು. ಬಾಲಿಕೆಯರಿಂದ ಕವಾತು ಪ್ರದರ್ಶನವೂ ಸಹ ಏರ್ಪಾಡಾಗಿದ್ದಿತು.

ಪ್ರವಾಹದಿಂದ ೧೦೦ ಜನರ ಮರಣ

ಬ್ರೆಜಿಲಿನಲ್ಲಿರುವ ಸಾನ್ ಫ್ರಾನ್ಸಿಸ್ಕೋ ನದಿಯಲ್ಲಿ ವಿಶೇಷ ಪ್ರವಾಹ ಉಂಟಾಗಿ ೧೦೦ ಜನರು ಸತ್ತರೆಂದೂ, ಅನೇಕ ಪಟ್ಟಣಗಳಿಗೆ ನೀರು ನುಗ್ಗಿ ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆಂದೂ ವರದಿಯಾಗಿದೆ.

ಪೆಷಾವರಿನಲ್ಲಿ ಭಾರಿ ಬೆಂಕಿ

ಪೆಷಾವರ್ ನಗರದ ಮಧ್ಯ ಭಾಗದಲ್ಲಿ ಕಳೆದ ಗುರುವಾರ ಭಾರಿ ಬೆಂಕಿಯುಂಟಾಗಿ ೬೦ ಅಂಗಡಿಗಳೂ, ಎರಡು ಅಂತಸ್ತಿನ ೧೨ ಕಟ್ಟಡಗಳೂ ಸುಟ್ಟುಹೋದುವು. ಒಬ್ಬನು ಸತ್ತನು. ಅನೇಕ ಸಂಸಾರಗಳಿಗೆ ನೆಲೆಯಿಲ್ಲದಂತಾಗಿದೆ.

ರಾಜಸ್ಥಾನ ಮಂತ್ರಿ ಮಂಡಲದ ರಾಜೀನಾಮೆಯೇ?

ರಾಜಸ್ಥಾನದ ಮುಖ್ಯ ಮಂತ್ರಿ ಪಂಡಿತ ಹೀರಾಲಾಲ್ ಶಾಸ್ತ್ರಿಯವರ ಮೇಲೆ ಅವಿಶ್ವಾಸ ನಿರ್ಣಯವು ಅಲ್ಲಿನ ಪ್ರಾಂತೀಯ ಕಾಂಗ್ರೆಸ್ ಸಮಿತಿಯಲ್ಲಿ ಬರುವುದಾಗಿಯೂ, ನಿರ್ಣಯಕ್ಕೆ ಬಹುಮತವು ದೊರೆಯುವುದೆಂದೂ ಹೇಳಲಾಗಿದೆ. ಈ ಕಾರಣದಿಂದ ಅಲ್ಲಿನ ಮಂತ್ರಿ ಮಂಡಲವು ರಾಜೀನಾಮೆಯನ್ನು ಕೊಡುವ ಸ್ಥಿತಿ ಬಂದಿದೆಯೆಂದು ತಿಳಿದು ಬಂದಿದೆ.

ಒಂದೇ ಮುಟ್ಟಿದ ಮಾರಾಟ ತೆರಿಗೆ

ಎಲ್ಲಾ ಪ್ರಾಂತಗಳಲ್ಲೂ ಸಹ ಒಂದೇ ಮುಟ್ಟಿದ ಮಾರಾಟದ ತೆರಿಗೆಯು ವಿಧಿಸಲ್ಪಡಬೇಕೆಂಬ ಸಲಹೆಯನ್ನು ಭಾರತ ಸರಕಾರದವರು ಪರಿಶೀಲಿಸುತ್ತಿದ್ದಾರೆ. ಈಗ ಹಲವೆಡೆಗಳಲ್ಲಿ ಕೊಡಬೇಕಾಗಿರುವ ಎರಡು ಮೂರು ಬಾರಿಯ ಈ ತೆರಿಗೆಯಿಂದ ಆಗುವ ತೊಂದರೆಯನ್ನು ನಿವಾರಿಸಲಾಗುವುದೆಂದು ತಿಳಿದುಬಂದಿದೆ.

ಉದಾರ ದಾನ

ಬೆಂಗಳೂರಿನ ಜವಳಿ ವರ್ತಕರಾದ ಶ್ರೀ ಬಗರೆ ಶಿವ[illegible] ನೈಸೂರಿನಲ್ಲಿ ೧-೬-೪೯ ರಲ್ಲಿ ನೆರವೇರಿಸಿದ ತಮ್ಮ ಮಗಳ ವಿವಾಹದ ಕಾಲದಲ್ಲಿ ಭಾರತ ಸ್ತ್ರೀಯರ ಸೋಷಿಯಲ್ ಇನ್‌ಸ್ಟಿಟ್ಯೂಟಿಗೆ ೧೦೦೦ ರೂ ಗಳನ್ನು ದಾನ ಮಾಡುವುದಾಗಿ ತಿಳಿಸಿರುತ್ತಾರೆ. ಈಗಾಗಲೇ ೫೦೦ ರೂ ಪಾವತಿ ಮಾಡಿದ್ದಾರೆ.

ಅಂತರ ರಾಷ್ಟ್ರೀಯ ಕಾರ್ಮಿಕ ಕಚೇರಿ

ಬೆಂಗಳೂರು ೫

ಏಷ್ಯಾ ಖಂಡದಲ್ಲಿ ಕಾರ್ಮಿಕ ವರ್ಗದ ಜನಶಕ್ತಿಯನ್ನು ವೃದ್ಧಿಪಡಿಸಲು ಸ್ಥಾಪಿಸಲಿರುವ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಕಾರ್ಯಕಾರಿ ಕಚೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ನಿರೀಕ್ಷಣೆ ಇದೆ. ಇದರ ಮೂಲಕ ಕಾರ್ಮಿಕರ ವಿನಿಮಯಕ್ಕೂ ಅವಕಾಶ ಕಲ್ಪಿಸಲಾಗುವುದೆಂದು ಹೇಳಲಾಗಿದೆ.

ಚೀಣೀ ಕಮ್ಯೂನಿಸ್ಟರಿಗೂ ರಷ್ಯಕ್ಕೂ ಭಿನ್ನತೆಯೇ

ಸೋವಿಯಟ್ ಯೂನಿಯನ್ನಿಗೂ ಚೀಣೀ ಕಮ್ಯೂನಿಸ್ಟರಿಗೂ ತೀವ್ರ ಭಿನ್ನಾಭಿಪ್ರಾಯಗಳುಂಟಾಗಿವೆಯೆಂದು ಅಮೇರಿಕದ ಸುಪ್ರಸಿದ್ಧ ಸುದ್ದಿಗಾರರಾದ ಡ್ರ್ಯೂ ಪಿಯರ್ಸನ್‌ರವರು ತಿಳಿಸಿದ್ದಾರೆ. ಚೀಣೀ ಕಮ್ಯೂನಿಸ್ಟರು ತಾವು ಆಗಸ್ಟ್ ತಿಂಗಳಲ್ಲಿ ಏರ್ಪಡಿಸುವ ಸುವ್ಯವಸ್ಥಿತ ಸರಕಾರದಲ್ಲಿ, ಈಗಿನ ಸರಕಾರಿ ಪಕ್ಷದ (ಕೌಮಿಂಟಾಂಗ್) ಪ್ರಮುಖರನ್ನೂ ತೆಗೆದುಕೊಳ್ಳುವರೆಂದು ಅವರು ಹೇಳಿರುತ್ತಾರೆ. ಈ ರೀತಿ ಚಿಯಾಂಗ್ ಕೈಶೇಕರ ಕಡೆಯವರನ್ನು ಸೇರಿಸಿಕೊಂಡರೆ ತಾವು ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಕೊಡುವುದಾಗಿ ಅವರ ಮುಖಂಡರಾದ ಮೋಕ್ಸತುಂಗ್‌ರವರಿಗೆ ಬ್ರಿಟನ್ ಮತ್ತು ಅಮೇರಿಕಾಗಳು ಗುಪ್ತ ಆಶ್ವಾಸನೆ ಕೊಟ್ಟಿವೆಯೆಂದು ಹೇಳಲಾಗಿದೆ.

ಕುದುರೆ ಸಮುದ್ರಕ್ಕೆ ಹಾರಿತು

ಆಸ್ಟ್ರೇಲಿಯದಿಂದ ತರಿಸಲಾಗಿದ್ದ ಕೆಲ ಕುದುರೆಗಳನ್ನು ಬೊಂಬಾಯಿಯಲ್ಲಿ ಹಡಗಿನಿಂದ ಇಳಿಸುತ್ತಿದ್ದಾಗ ಒಂದು ಕುದುರೆ ಬೆದರಿ ಸಮುದ್ರಕ್ಕೆ ಹಾರಿ ಮುಳುಗಿ ಸತ್ತುಹೋಯಿತೆಂದು ತಿಳಿದುಬಂದಿದೆ.

ಭಾರತ ಸರ್ಕಾರದ ಆರೋಗ್ಯ ಕಾರ್ಯದರ್ಶಿಗಳಿಗೆ ೧ ರೂ. ಸಂಬಳ

ಬರೋಡದ ದಿವಾನರಾಗಿದ್ದ ಡಾ|| ಜೀವರಾಜ ಮೆಹತಾರವರನ್ನು ಭಾರತ ಸರ್ಕಾರದ ಆರೋಗ್ಯ ಶಾಖೆಯ ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಆರೋಗ್ಯ ಶಾಖೆಯ ಕಾರ್ಯದರ್ಶಿ ಮತ್ತು ಡೈರೆಕ್ಟರ್ ಜನರಲ್ಲರ ಕೆಲಸವನ್ನು ಅವರು ನೋಡಿಕೊಳ್ಳುವರು. ಅವರು ಮಾಹೆಯಾನಾ ಕೇವಲ ನೆಪ ಮಾತ್ರಕ್ಕೆ ಒಂದು ರೂ ಸಂಬಳವನ್ನು ತೆಗೆದುಕೊಳ್ಳುವರು.

ಸರ್ಕಾರಿ ನೌಕರಿಗಳಲ್ಲಿ ಜಾತಿ ಭೇದದ ನಿರ್ಮೂಲ

ಸರ್ಕಾರಿ ನೌಕರಿಗಳಲ್ಲಿಯೂ, ಸಾರ್ವಜನಿಕ ಕಾರ್ಯ ಕ್ಷೇತ್ರಗಳಲ್ಲಿಯೂ ಜಾತಿ ಮತ್ತು ಕೋಮುಗಳ ಭೇದವನ್ನು ಗಮನಿಸಲಾಗದೆಂಬ ಒಕ್ಕೊರಲಿನ ಅಭಿಪ್ರಾಯವನ್ನು [illegible] ಭಾರತ ಸರ್ಕಾರದವರು ಬರೆದಿದ್ದ ಪತ್ರಕ್ಕೆ ಉತ್ತರವಾಗಿ ಪ್ರಾಂತಗಳೂ, ಸಂಸ್ಥಾನಗಳೂ ಏಕ ವಾಕ್ಯತೆಯಿಂದ ಈ ತತ್ವಕ್ಕೆ ಒಪ್ಪಿಗೆಯನ್ನು ಕೊಟ್ಟಿವೆಯೆಂದು ತಿಳಿದುಬಂದಿದೆ.

ವಿಶ್ವಕರ್ಮ ವಿದ್ಯಾರ್ಥಿ ನಿಲಯ

ಮೈಸೂರು ೫

[illegible] ವಿದ್ಯಾರ್ಥಿ ನಿಲಯಕ್ಕೆ ಸೇರಬೇಕೆಂದಿರುವ ವಿದ್ಯಾರ್ಥಿಗಳು ಈ ತಿಂಗಳು ೧೦ ನೇ ತಾರೀಖಿನೊಳಗೆ ನಿಲಯದ ಕಾರ್ಯದರ್ಶಿಗಳಿಗೆ ಅರ್ಜಿ ಹಾಕಿಕೊಳ್ಳಬೇಕಾಗಿ ಕೋರಲಾಗಿದೆ.

ವಾರ ಭವಿಷ್ಯ

ಶ್ರೀ

೫-೬ ರಿಂದ ೧೧-೬-೪೯ರ ವರೆಗೆ

ಮೇಷ—ಅತ್ಯಂತ ವಿರ್ಜನ ವಾರ ಅ ಪಯಶದಾಯಕವಾಗದಿದ್ದರೂ, ಈ ವಾರ ಪ್ರಮಾದಾಯಕ ಪಲಿಪ್ತ ಉಗ ವ ವಾಗುವ ದು ನಿಮ್ಮ ಮೇಲಿ ಆರೋಪಗ ಳು ವ್ಯರ್ಥವಾಗ ಪ್ರ ... ಗರಣೆ ... ಕಲ್ಪ

ವೃಷಭ—ಒಪ್ಪಿ ಕೆಲಸ ಬೀಳು ವುದು. ಆರೋಗ್ಯ ನೆಟ್ಟಗಿರದು ನಾ ಒಗೆಯು ಕಲ್ಪನೆಯಿಂದ ನಿದ್ರಾನಾಶ ಮೇ ಲಧಿಕಾರಿಗಳಿಗೆ ಸಿಟ್ಟು, ವೇಲೆ ಆಕಾರಣ ಕೋಪ ವ್ಯಾಪಾರಾದಿಗಳಲ್ಲಿ ನಷ್ಟ ತಾ|| ೭, ೮ ಕೆಲಸ ಎತ್ತರದಿಂದ ಬೀಳುವ ಪ್ರಸಂಗ ಪ್ರವಾಸ ಜೀವ ಅ ಪಘಾತ ಸಂಭವ

ಮಿಥನ ವಾರವು ಗೊಂದಲದ್ದು ಜೇಬು ಖಾಲಿಯಾಗಿರುವುದು ವಿದ್ಯಾಭ್ಯಾಸದಲ್ಲಿ ತೊಂದರೆ ಪ್ರವಾಸಕ್ಕೆ ಯೋಗ್ಯವಲ್ಲ ಕಳರಾರು ಮಾಡುವರ ಭೇಟಿ ಬೆಲೆ ಯಾದ ವಸ್ತುವಿನ ಅಪಹಾರ ವಿನಾಹ ಅ ಡಚಣೆಯು ಉಂಟಾಗುವುದು ತಾ|| ೯, ೧೦ ದಕ್ಕಳೊಡನೆ ಬಿನ್ನಾಭಿಪ್ರಾಯ ಮೇ ಲಧಿಕಾರಿಗಳೊಡನೆ ತೀವ್ರ ವಾದ

ಕರ್ಕ ಉತ್ತಮ ಯೋಗ ಅತ್ಯುತ್ತಮ, ಆರೋಗ್ಯ ನೆಟ್ಟಗೆ ರಾಜಕಾರ್ಯ ಉಂಟು ಅಧಿಕಾರಿಗಳ ಕ್ಷೇತ್ರ ವಿಸ್ತಾರ ವ್ಯಾಸಂಗದಲ್ಲಿ ಬೌದ್ಧಿಕವೃತ್ತಿ ಉತ್ತಮ ತಾ|| ೭, ೮ ಕೊಂಚ ಮುಗ್ಗಟ್ಟು

ಸಿಂಹ—ನೀವು ನಿರಪರಾಧಿಗಳಿದ್ದರೂ ನೀಚರ ಕಾಟದಿಂದ ತೊಂದರೆ ವ್ಯಾಪಾರ ಉದ್ಯೋಗಗಳಲ್ಲಿ ಅಪ್ರಿಯ ಗೋಷ್ಠಿ ಎದು ರಾಳಿಗಳ ಹಾವಳಿ ಆತ್ಮಧಿಕ ಆಕಸ್ಮಿಕ ಲಾಭಕ್ಕಾಗಿ ಪಟ್ಟ ಪ್ರಯತ್ನದಿಂದ ಆಕಸ್ಮಿಕ ಹಾನಿ ತಾ|| ೫, ೭ ಮ ಹತ್ವದ ಪತ್ರ ಗಮನ

ಕನ್ಯಾ ಆರೋಗ್ಯ ನೆಟ್ಟಗೆ ವಿದ್ಯೆಯಲ್ಲಿ ಮೂರ ದನಲಾಭ ನೌಕರಿಯಲ್ಲಿ ಬಡ್ತಿ ಯ ಯೋಗ ಅಪ್ತರ ಭೇಟಿ ವಿವಾಹ ನಿಶ್ಚಯ ತಾ|| ೯, ೧೦ ಪ್ರವಾಸ ಇಷ್ಟ ವಾರ್ತೆ

ತುಲಾ—ಸಂಗನ ಗೋಪರದಲ್ಲಿ ದ್ದು ವಾಸ್ತವಾಂಶದ ಚಂಚ ಮಾ ರತ ತೊಡಕಿಕ್ಕೆ ಸಿಕ್ಕಂತೆ ನಿಮ್ಮ ಗ್ರಹ ಚಾರವಿದೆ ಆರೋಗ್ಯ ನೆಟ್ಟಗಿರದು ಅಗ್ನಿ, ಶಸ್ತ್ರ ಭಯ ತಾ|| ೯, ೧೦ ನೌಕರಿಯಲ್ಲಿ ಪ್ರವರ್ತನೆ ವ್ಯಾಪಾರಾದಿಗಳಲ್ಲಿ ಸ್ಪರ್ಧೆ ವಿಸ್ತ್ರತ ಶತ್ರುಗಳಾಗುವರು ಸಂಶಯ ಅಪೇಕ್ಷಿತ ಬಂಗ ಅಪ್ರಿಯ ವಾರ್ತೆ

ವೃಶ್ಚಿಕ—ಆರೋಗ್ಯದ ದೃಷ್ಟಿಯಿಂದ ನಿಮಗೆ ಅವರ ಮನಸ್ಸಿಗೆ ಯಾತನೆ ಉದ್ದಿಷ್ಟ ಪಟ್ಟ ಕಾರ್ಯಗಳು ವಿರೋಧ ಪಲನೀಯ ವುದು ವಿರ್ತ ಒದಳ ತಾ|| ೭, ೮ ಅಪಮಾನ ಸ್ತ್ರೀಯರೊಡನೆ ಕಲಹ

ಧನು ಆರೋಗ್ಯ ನೆಟ್ಟಗೆ ಮನಸ್ಸಿನ ಎಲ್ಲಾ ಯೋಜನೆಗಳೆಲ್ಲಾ ಸಿದ್ಧಿಸುವವು. ಮನುಕ್ಷಿ ಮಂಗಲ ಕಾರ್ಯ ಧನಲಾಭ. ವ್ಯಾಪಾರಾದಿಗಳಲ್ಲಿ ಊರ್ಜಿತಾವಸ್ಥೆ, ತಾ|| ೯, ೧೦ ಶುಭಕಾರ್ಯಕ್ಕಾಗಿ ಖರ್ಚು

ಮಕರ—ಪಿತ್ರಾರ್ಜಿತ ಆಸ್ತಿ ಬಗ್ಗೆ ಯೋಗ್ಯ ವ್ಯವಸ್ಥೆಯಾಗುವುದು. ಮಹತ್ವದ ಪತ್ರಾಗಮನ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಧನಲಾಭ ತಾ|| ೯, ೧೦ ಸಿರ್ವಜ್ಞ ಪ್ರವಾಸ ಶುಭವಾರ್ತೆ,

ಕುಂಭ—ಆರೋಗ್ಯ ಕೆಡಬಹುದು ಎದೆನೋವು ಹೆಚ್ಚುವುದು ಮನೆ ಮಾಲೀಕರಿಗೂ ಜಮೀನುದಾರರಿಗೂ ಅವರ ಆಶ್ರಿತರಿಂದ ತಿರಸ್ಕಾರ ತಾ|| ೫, ೬ ನೌಕರಿ ದಂಧೆಗಳಲ್ಲಿ ತೊಂದರೆ ಪಾಪಪಾಪಘಾತ

ಮೀನ ಈ ವಾರ ಆರೋಗ್ಯ ನೆಟ್ಟಗಿರುವುದು ಜವಾಬ್ದಾರಿ ಹೊತ್ತ ಕೆಲಸ ಪೂರೈಸುವುದು ಆಪ್ತ ಪ್ರಿಯ ಜನರ ಭೇಟಿ ಸಧೂವರರ ವಿವಾಹ ಸಿದ್ಧಿಸುವುದು ೭,೮ ವಿಶೇಷ ಖರ್ಚು ಗಡಿಬಿಡಿ

ಉದಕ ಮಂಡಲದಲ್ಲಿ ಗ್ರೀಸಿನ ರಾಜಕುಮಾರರು

ಗ್ರೀಸಿನ ಪೀಟರ್ ರಾಜಕುಮಾರರು ಈಗ ಉದಕ ಮಂಡಲದಲ್ಲಿ ಬಿಡಾರ ಮಾಡಿದ್ದಾರೆ ನೀಲಗಿರಿ ಜಿಲ್ಲೆಯ ನ್ಲಿರವ ತೋಡ ಜನಾಂಗದವರ ಬಹು ಪತಿತ್ವ ಪದ್ಧತಿಯನ್ನು ಅವರು ಪರಿಶೀಲಿಸುವರೆಂದೂ, ಅಲ್ಲಿಂದ ಮಲಬಾರು, ಕೊಚ್ಚಿ, ತಿರುವಾಂಕೂರು ಮತ್ತು ಇತರ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿನ ಗುಡ್ಡಗಾಡಿನ ಜನಗಳ ಪದ್ಧತಿಗಳನ್ನು ಪರಿಶೀಲಿಸುವರೆಂದೂ ತಿಳಿದು ಬಂದಿದೆ

ವಿಜಯ ಲಕ್ಷ್ಮಿ ಪಂಡಿತರಿಗೆ ಅಮೆರಿಕಾ ನೀಗ್ರೋಗಳ ಗೌರವ

ಅಮೆರಿಕಾದ ನೀಗ್ರೋಗಳ ಹೊವಾರ್ಡ್ ವಿಶ್ವವಿದ್ಯಾಲಯದವರು ಭಾರತದ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಡಾಕ್ಟರ್ ಆಫ್ ಲಾಸ್ ಎಂಬ ಗೌರವ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ

ವಿಷ ಮಿಶ್ರಿತ ಆಹಾರದಿಂದ ೧೨ ಜನರ ಮರಣ

ತಾಪ್ತಿ ಲಿಪ್ತಿ ಜಿಲ್ಲೆಯ ಬಾಜಪುರದಲ್ಲಿ ಅನ್ನ ಸಂತರ್ಪಣೆ ನಡೆಯುತ್ತಿದ್ದಾಗ, ೧೨ ಜನರು ಸತ್ತರೆಂದೂ, ಆಹಾರದಲ್ಲಿ ವಿಷವು ಸೇರಿತ್ತೆಂದೂ ಹೇಳಲಾಗಿದೆ

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ಮಾರ್ಕೆಟ್ ನಂಬರ್ ೬೫ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್, ಮೈಸೂರು

ನಾಯಿ ಕೆಮ್ಮು .. ಮೂಲವ್ಯಾಧಿ

ಜಠರಾಮ ಶೂಲೆ

ಲಿವರ್ ಅಂಡ್ ಸ್ಪ್ಲೀನ್

ಈ ವ್ಯಾಧಿಗಳಿಗೆ ಖಾತರಿಯಾದ ಉಚಿತ ಚಿಕಿತ್ಸೆ

ಎಸ್. ರಾಮಣ್ಣ

2830 ಲಿವರ್ ಅಂಡ್ ಸ್ಪ್ಲೀನ್ ಔಷಧಾಲಯ, ಚಾಮುಂಡಿಪುರಂ, ಮೈಸೂರು

ನಾಗವಳ್ಳಿಯಲ್ಲಿ ಭಂಗಾರ

ತುಮಕೂರಿನ ಹತ್ತಿರ ಇರುವ ನಾಗವಳ್ಳಿ ಎಂಬ ಗ್ರಾಮದಲ್ಲಿ ಭಾವಿ ತೋಡುತ್ತಿದ್ದಾಗ ಭಂಗಾರದ ಗಟ್ಟಿ ಸಿಕ್ಕಿತೆಂದೂ, ಅದನ್ನು ಸರಕಾರದ ಭೂಗರ್ಭ ಶಾಸ್ತ್ರಜ್ಞರ ಪರೀಕ್ಷೆಗಾಗಿ ಕಳುಹಿಸಲಾಗಿದೆಯೆಂದೂ ತಿಳಿದು ಬಂದಿದೆ

ರಾಜಕಮಲ್

ಮೈ ಸೂ ರು

3—6—49 ರಿಂದ

ಅನೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಕರ್ದಾರ್‌ರವರ ಹಿಂದಿ ಚಿತ್ರ

ನಾಟಕ್

– ಮುಖ್ಯ ಪಾತ್ರ –

ಸುರಯ್ಯಾ, ಅಮರ್

Morning Shows

Form 3-6-49 for 4 days

CAESAR & CLEOPATRA

(In Technicolor)

– With –

Vivien Leigh, Claud Reins

Flora Robson.

|| ಶ್ರೀ ಸೀತಾರಾಮಾಯನಮಃ ||

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೋಮಾಹಿತ

ಗಂಡಸರ ಮೂತ್ರ ಕೋಶದ ಬೇನೆ, ಕೆಂಪು ಬೈ ಮೇಲೆ ಮೇಹದ ಮಚ್ಚೆಗಳು, ಮೇಹ ವ್ರಣಗಳು ಸಹಾ ಪರಿಹಾರ ಪಥ್ಯವಿಲ್ಲದೆ ಸೇವಿಸುವ ಔಷಧಿ

ವಿಳಾಸ — ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಒಂದು ಪ್ರಕಟಣೆ

ಸಹೋದರರೇ,

ಮುಖ್ಯವಾಗಿ ಗಮನಿಸತಕ್ಕ ವಿಷಯವೇನೆಂದರೆ-

ನಮ್ಮ ಶ್ರೀ ಅಂಬಾಳ್ ನಶ್ಯವು ಮೈಸೂರು ದಸರಾ ಎಗ್ಜಿಬಿಷನ್ನಲ್ಲಿ ಎರಡು ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದಿದೆ ಇದು ಎಲ್ಲರಿಗೂ ತಿಳಿದ ವಿಷಯ ಒಂದುಆಫೀಸರ್ಸ್ ಸ್ಪೆಷಲ್‌ಗೆ, ಇನ್ನೊಂದು ಪ್ರದರ್ಶನಕ್ಕೆ. ದಸರ ಸಮಯದಲ್ಲಿ ನಮ್ಮ ಅನೇಕ ಮಿತ್ರರು ಚಿಲ್ಲರೆ ಬಿಕರಿ ಮಾಡುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಂಡಿದ್ದರಿಂದ ನಾವು ತಾ|| 1 6—49ರಿಂದ ಚಿಲ್ಲರೆ ಮಾರಾಟ ಏರ್ಪಾಡು ಮಾಡಿರುತ್ತೇವೆ ನಮ್ಮ ಮಿತ್ರರೆಲ್ಲರೂ ಇನ್ನು ಮುಂದೆ ನಕಲಿ ನಶ್ಯವನ್ನೂ, ಬೆರಕೆ ನಶ್ಯವನ್ನೂ ಉಪಯೋಗಿಸುವುದನ್ನು ಬಿಟ್ಟು

ಶ್ರೀ ಅಂಬಾಳ್ ಆಫೀಸರ್ಸ್ ನಶ್ಯವೊಂದನ್ನೇ ಪಡೆದು ಉಪಯೋಗಿಸಿ ಆನಂದಹೊಂದುವಂತೆ ಕೇಳಿಕೊಳ್ಳುತ್ತೇವೆ.



SRI AMBAL & CO., P B 3 MADRAS

ಸಿಕ್ಕುವ ಸ್ಥಳ —ದಿ ಮೈಸೂರು ಟ್ರೇಡರ್ಸ್

1590 ದೇವರಾಜ ಮಾರ್ಕೆಟ್ ಚೌಕ ಮೈಸೂರು

Better Late than Never

You have less than 3 months for the September Examination

But we can Coach you for —

B Sc English P C M M E S & Inter Arts & Science

S S L C All Subjects

Join To Day —CITY TUTORIAL COLLEGE

1531 Near V V Market Mysore

ಶ್ರೀ ಗಾಯತ್ರೀ ಟಾಕೀಸ್

5-6-49ರಿಂದ ದಿನವಹಿ 3 ಆಟಗಳು 4 ದಿನಗಳು ಮಾತ್ರ

ಚಿತ್ರಕಲಾ ಪ್ರಪಂಚಕ್ಕೆ ಬಾಲ್ಯದಿಂದಲೇ ಪ್ರಸಿದ್ಧ ಪಡೆದ ಚಲನಚಿತ್ರ ರಸಿಕರ ಮನರಂಜಕವಾದ ವರ್ಣರಂಜಿತ ಚಿತ್ರ

ಫಾರೆವರ್ ಅಂಬರ್—Forever Amber

ಪಾತ್ರ ಲಿಂಡಾ ಡಾರ್ನೆಲ್

• ಬೆಳಗಿನ ಪ್ರದರ್ಶನ:

6-6-49 ಒಂದು ದಿನ ಮಾತ್ರ ಇಫ್ ಐ ವರ್ ಕಿಂಗ್

Edited, printed and published by M R Nagarajan at the Sadhvi Press D... Mysore

ಫೋನ್ ನಂ. 792 ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೬-೬-೪೯ [ಸಂಚಿಕೆ ೨೫೩

—ಪ್ರತಿ ತಾಲ್ಲೂಕಿಗೂ— ಕೈಗಾರಿಕಾ ಶಾಲೆಗಳು

ಪ್ರತಿ ತಾಲ್ಲೂಕಿನಲ್ಲೂ ಕೈಗಾರಿಕಾ ಶಿಕ್ಷಣ ಶಾಲೆ

ಪ್ರ॥ ಪ್ರ॥ ಸಭೆಯಲ್ಲಿ ಸೂಚನೆ

ಸ್ವಂ ಸು ಫೋನ್] ಬೆಂಗಳೂರು ೬

ಇಂದು ಪ್ರಜಾ ಪ್ರತಿನಿಧಿ ಸಭೆಯಲ್ಲಿ, ಪ್ರಶ್ನೋತ್ತರ ಕಾಲದಲ್ಲಿ, ಶ್ರೀ ಎಂ. ...ಚಾರವರ ಪ್ರಶ್ನೆಗೆ ಸರಕಾರದವರು ಉತ್ತರ ಕೊಡುತ್ತಾ, ಸಂಸ್ಥಾನದಲ್ಲಿ ೧೧ ಸರ್ಕಾರಿ ಕೈಗಾರಿಕಾ ಶಾಲೆಗಳೂ ಮತ್ತು ... ಖಾಸಗೀ ಶಾಲೆಗಳೂ ಇವೆಯೆಂದೂ, ಅವುಗಳಲ್ಲಿ ೧೨ ಮಂದಿ ಮಹಿಳೆಯರು ಶಿಕ್ಷಣ ಪಡೆಯುತ್ತಿದ್ದಾರೆಂದೂ, ಶಿಕ್ಷಣ ಮುಗಿಸಿಕೊಂಡು ಹಲವರು ಸಂಪಾದನೆ ಮಾಡುತ್ತಿರುವರೆಂದೂ ತಿಳಿಸಿದರು. ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಕೈಗಾರಿಕಾ ಮತ್ತು ಶಿಕ್ಷಣ ಶಾಲೆಗಳನ್ನು ಸ್ಥಾಪಿಸುವ ಆಲೋಚನೆಯು ಸರ್ಕಾರಕ್ಕಿದೆಯೆಂದೂ ಕೈಗಾರಿಕಾ ಸಚಿವರು ಉಪ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಗ್ರಾಮಾಭಿವೃದ್ಧಿ ಸಮಿತಿಗಳನ್ನೇರ್ಪಡಿಸುವುದರಿಂದ ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಬೇಕೆಂದು ಸರ್ಕಾರದವರು ಆಲೋಚಿಸುತ್ತಿಲ್ಲವೆಂದು ಸರ್ಕಾರದ ರೆವಿನ್ಯೂ ಸೆಕ್ರೆಟರಿಯವರು ಶ್ರೀ ಕೆ. ಎಂ. ...ಜುಂಡಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಜಿಲ್ಲಾ ಬೋರ್ಡಿಗೇ ಈ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ವಹಿಸಬೇಕೆಂದು ಕೆಲವರು ಸಲಹೆಯನ್ನು ಸರ್ಕಾರಕ್ಕೆ ಕಳುಹಿಸಿರುವುದಾಗಿಯೂ, ಈ ವಿಚಾರವನ್ನು ಸರ್ಕಾರದವರು ಪರಿಶೀಲಿಸುತ್ತಿರುವುದಾಗಿಯೂ ಸಚಿವ ಶ್ರೀ ಚೆನ್ನಿಗರಾಮಯ್ಯನವರು ಉಪ ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲೂ ಪಾನನಿರೋಧವನ್ನು ಈ ವರ್ಷವೇ ಜಾರಿಗೆ ತರಲಾಗುವುದಿಲ್ಲ. ನೀರಾ ಎಂಬುದನ್ನು ಮಾಡುವ ಯೋಜನೆಯು ಜನ ಸಂಸ್ಕೃತಿ... ಕಾ ಕಾ ಗು ವು ದ ಕ್ಕೆ ... ಕಾರಣವಾಗುವುದಿಲ್ಲ. ಮದ್ಯಪಾನನಿರೋಧವು ಜಾರಿಯಲ್ಲಿರುವ ಕಡೆ ಇತರ ಯಾವ ರೂಪದಲ್ಲಾದರೂ ಮದ್ಯವನ್ನು ತಯಾರು ಮಾಡಿದರೆ ಕುಡುಕರಾದವರಿಗೆ ಪಾನ ಮಾಡಬೇಕೆಂಬ ದುರ್ಬುದ್ಧಿ ಹುಟ್ಟುವುದಿಲ್ಲವೇ ಎಂಬುದು ಅವರವರ ಅಭಿಪ್ರಾಯವಾದ ಮಾತಾಗಿದೆ—ಎಂದು ಸರ್ಕಾರದವರು ಶ್ರೀ ಸಿ. ಪಟ್ಟಾಭಿರಾಮ ಶೆಟ್ಟಿಯವರ ಪ್ರಶ್ನೆಗೆ ಉತ್ತರವಾಗಿ ...ದರು. ಅನಂತರ ಬಜೆಟ್ಟಿನ ಮೇಲೆ ...ರ್ಚೆ ಮುಂದುವರಿಯಿತು.

... ಆದ ಕೆ. ಹನುಮಂತಯ್ಯ ಮತ್ತು ...ಮಯ್ಯರವರುಗಳು ಹೆಲ್ತ್ ಸಮಿತಿ... ಚುನಾಯಿತರಾಗಿದ್ದಾರೆ.

...೪ ವರ್ಷದ ಕಾರ್ಮಿಕ

...ಧಾರ್ ಜಿಲ್ಲೆಯ ಹಿಂಗನ್‌ಘಾಟಿನ ...ನ ಬಟ್ಟೆ ಗಿರಣಿಯೊಂದರಲ್ಲಿ ೧೦... ವ...ದ ಗಣಪತ್ ಸಾಮು ಎಂಬ ಕಾರ್ಮಿಕ ...ಕೆಲಸ ಮಾಡುತ್ತಿದ್ದಾನೆಂದೂ, ಆತ... ಈ ವಯಸ್ಸಿನಲ್ಲೂ ದೃಢಕಾಯನಾ...ನೆಂದೂ ಹೇಳಲಾಗಿದೆ.

ಗೋವಾ ಭಾರತಕ್ಕೆ ಸೇರಬೇಕು

...ಗಾಮಿನಲ್ಲಿ ನಿನ್ನೆ ನಡೆದ ಗೋವಾ... ಯ ಕಾಂಗ್ರೆಸ್ ಸಭೆಯಲ್ಲಿ, ಗೋ... ಪ್ರತ್ಯೇಕಸ್ಥಾನವಿಲ್ಲವೆಂದೂ ಅದು ...ತದೊಳಗೆ ಸೇರಬೇಕೆಂದೂ ನಿರ್ಧರಿ...ಯಿತು.

ಎಲ್.ಎಸ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದವರು

ಸ್ವಂ ಸು ಫೋನ್] ಬೆಂಗಳೂರು ೬

ಈ ವರ್ಷದ ಎಲ್.ಎಸ್. ಪರೀಕ್ಷೆಗೆ ಒಟ್ಟು ೨೮,೧೨೭ ವಿದ್ಯಾರ್ಥಿಗಳು ಕುಳಿತಿದ್ದರು. ಅದರ ಪೈಕಿ, ೧೭,೭೭೪ ಜನರು ಉತ್ತೀರ್ಣರಾಗಿದ್ದಾರೆ. ೩,೨೦೮ ಮಂದಿ ಮೊದಲನೆಯ ತರಗತಿಯಲ್ಲೂ, ...೭ ಜನರು ಎರಡನೇ ತರಗತಿಯಲ್ಲಿಯೂ ಪಾಸಾಗಿದ್ದಾರೆ. ಈ ಕೆಳಗೆ ಕಂಡ ೧೦ ಜನ ವಿದ್ಯಾರ್ಥಿಗಳು ಕ್ರಮವಾಗಿ ರ್‍ಯಾಂಕ್ ಪಡೆದಿರುತ್ತಾರೆ—

ಆರ್. ನಾಗೇಂದ್ರ (ಯಲಹಂಕ), ಟಿ. ಎಸ್. ಪುಟ್ಟಸ್ವಾಮಿ (ಹೊಳೇನರಸೀಪುರ), ಬಿ. ದತ್ತಾತ್ರೇಯ (ಬೆಂಗಳೂರು, ಬಸವನಗುಡಿ), ಸಿ. ವಿ. ಬಸಪ್ಪ (ಕುಂದಾಪುರ್), ಎಂ. ನಾಗರಾಜರಾವ್ (ಚಿತ್ರದುರ್ಗ), ಹೆಚ್. ಎಸ್. ವಿಶ್ವೇಶ್ವರಯ್ಯ (ರಾಬರ್ಟ್‌ಸನ್ ಪೇಟೆ), ಹೆಚ್. ಸಿ. ಕೃಷ್ಣಮೂರ್ತಿ (ಹಳ್ಳಿ ಮೈಸೂರು), ಎಂ. ಗೌರಮ್ಮ (ಚನ್ನರಾಯಪಟ್ಟಣ), ಬಿ. ಆರ್. ಶ್ರೀನಿವಾಸಮೂರ್ತಿ (ಬೆಂಗಳೂರು) ಮತ್ತು ಹೆಚ್. ಎಂ. ಉತ್ತಮದೇವ (ಬಸಗರ ಹಳ್ಳಿ) ಮತ್ತು ಕೆ. ಆರ್. ಸತ್ಯನಾರಾಯಣ [ಬೆಂಗಳೂರು]

ಕಲ್ಕತ್ತದಲ್ಲಿ ಗಲಭೆ

ಪಶ್ಚಿಮ ಬಂಗಾಳದ ಶಾಸನ ಸಭೆಯ ಉಪ ಚುನಾವಣೆಗೆ ಉಮೇದುವಾರರಾಗಿ ನಿಂತಿರುವ ಕಾಂಗ್ರೆಸ್ ಪ್ರತಿನಿಧಿಯಾದ ಶ್ರೀ ಸುರೇಶ ಚಂದ್ರ ದಾಸರ ಪರವಾಗಿ ನಿನ್ನೆ ದಕ್ಷಿಣ ಕಲ್ಕತ್ತದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಗಲಭೆಯಾಗಿ ಸಿಡಿ ಬಾಂಬುಗಳು ಪ್ರಯೋಗಿಸಲ್ಪಟ್ಟವೆಂದೂ ೨೫ ಜನರಿಗೆ ತೀವ್ರ ಗಾಯವಾಯಿತೆಂದೂ ಹೇಳಲಾಗಿದೆ. ಆ ಸ್ಥಳದಲ್ಲಿದ್ದ ಎರಡು ಸರ್ಕಾರಿ ಬಸ್ಸುಗಳು ಮತ್ತು ಒಂದು ಅಂಗಡಿಗೆ ಬೆಂಕಿ ಇಡಲಾಯಿತು. ಗಲಭೆಯನ್ನು ಅಡಗಿಸಲು ಪೋಲೀಸರು ಗುಂಡು ಹಾರಿಸಿದರು. ಅದರಿಂದ ಒಬ್ಬನು ಸತ್ತನೆಂದು ವರದಿಯಾಗಿದೆ.

೫೮ ಜನ ಜಮೀನುದಾರರ ದಸ್ತಗಿರಿ

ರಾಜಕೋಟೆಯ ೫೮ ಜನ ಜಮೀನುದಾರರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ನಡೆಸಿದರೆಂದು ಅವರನ್ನು ನಿನ್ನೆ ದಸ್ತಗಿರಿ ಮಾಡಲಾಗಿದೆ.

ಪಾಕೀಸ್ಥಾನ-ಅಫ್ಘಾನಿಸ್ಥಾನ ಗಡಿಯಲ್ಲಿ ಸಂಚಾರಕ್ಕೆ ಅಡ್ಡಿ

ಪಾಕೀಸ್ಥಾನ ಮತ್ತು ಅಫಘಾನಿಸ್ಥಾನ ಗಡಿಯಲ್ಲಿ ಸಂಚರಿಸುವ ವಾಹನಗಳ ಮೇಲೆ ಅಫಘಾನ್ ಸರ್ಕಾರದವರು ಪ್ರತಿಬಂಧಕಾಜ್ಞೆಯನ್ನು ವಿಧಿಸಿರುತ್ತಾರೆ. ಪಾಕಿಸ್ಥಾನಕ್ಕೆ ಹೋಗುವ ಮೋಟಾರು ಡ್ರೈವರಗಳು ರಹದಾರಿ ಪಡೆಯುವುದಲ್ಲದೆ, ೧೦ ದಿನಗಳೊಳಗಾಗಿ ಹಿಂದಿರುಗುವ ಶರತ್ತಿಗೆ ರುಜು ಹಾಕಿ ಹಣ ಕಟ್ಟಬೇಕೆಂದೂ ಆಜ್ಞೆ ಮಾಡಲಾಗಿದೆ.

ನಿ(ರಾವರಿಗಾಗಿ ವಿಂಡ್ ಮಿಲ್ಲುಗಳು

ಸಣ್ಣ ಪುಟ್ಟ ನೀರಾವರೀ ಯೋಜನೆಗೆ ಉಪಯೋಗವಾಗುವಂತೆ ವಿಂಡ ಮಿಲ್ಲುಗಳನ್ನು ಅಲಹಾಬಾದ್, ಅಹಮದಾಬಾದ್, ಬೆಳಗಾಂ, ಕೊಯಮುತ್ತೂರು, ದೆಹಲಿ ಮತ್ತು ಪೂನಾಗಳಲ್ಲಿ ಸ್ಥಾಪಿಸಲು ಭಾರತ ಸರ್ಕಾರವು ನಿರ್ಧರಿಸಿದೆ.

೧೯೫೦-೫೧ ರಿಂದ ಆಹಾರದ ಆಮದು ನಿಲ್ಲುವುದು

ಆಹಾರ ಪದಾರ್ಥಗಳನ್ನು ಪರದೇಶಗಳಿಂದ ತರಿಸುವುದನ್ನು ಸಂಪೂರ್ಣವಾಗಿ ೧೯೫೦-೫೧ ರಿಂದ ನಿಲ್ಲಿಸಲಾಗುವುದೆಂದೂ ಮತ್ತು ಪ್ರಾಂತ್ಯ ಮತ್ತು ಸಂಸ್ಥಾನಗಳಿಗೆ ಒದಗಿಸುತ್ತಿರುವ ಆಹಾರದ ಪ್ರಮಾಣವನ್ನು ಕ್ರಮೇಣ ಕಡಿಮೆ ಮಾಡಲಾಗುವುದೆಂದೂ ಭಾರತ ಸರ್ಕಾರದ ಆಹಾರ ಸಚಿವರಾದ ಶ್ರೀ ಜಯರಾಂದಾಸ್ ದೌಲತ್‌ರಾಂರವರು ಮದರಾಸಿನಲ್ಲಿ ತಿಳಿಸಿರುತ್ತಾರೆ.

ಅಸಂಖ್ಯಾತ ಮೀನುಗಳ ಸಾವು

ತಿರುವಾಂಕೂರಿನ ವೆಂಪನಾಡು ತೀರ ಪ್ರದೇಶದಲ್ಲಿ ಮೀನುಗಳು ಅಸಂಖ್ಯಾತವಾಗಿ ಸಾಯುತ್ತಿವೆಯೆಂದೂ, ಈ ಸತ್ತ ಮೀನುಗಳು ದಡಕ್ಕೆ ತಳ್ಳಲ್ಪಟ್ಟು ದುರ್ವಾಸನೆ ಬೀರುತ್ತಿವೆಯೆಂದೂ ಹೇಳಲಾಗಿದೆ. ಈ ರೀತಿ ಹೆಚ್ಚು ಮೀನುಗಳು ಸಾಯುವುದಕ್ಕೆ ಕಾರಣ ಗೊತ್ತಾಗಿಲ್ಲವಾದರೂ ಸಸ್ಯದ ಜಮೀನುಗಳಲ್ಲಿ ರಸಾಯನವನ್ನು ಉಪಯೋಗಿಸುತ್ತಿರುವುದೇ ಇದಕ್ಕೆ ಕಾರಣವಿರಬಹುದೆಂದೂ ಹೇಳಲಾಗಿದೆ. ಸರ್ಕಾರದ ಮೀನಿನ ಇಲಾಖೆಯವರು ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ.

ಪಂಚಾಯಿತಿಗಳಿಗೆ ಭೂಕಂದಾಯ ವಸೂಲಿ ಹಕ್ಕು

ಸಂಯುಕ್ತ ಪ್ರಾಂತ್ಯದಲ್ಲಿ ಜಮೀನುದಾರಿ ಪದ್ಧತಿಯನ್ನು ರದ್ದು ಮಾಡಿದ ಮೇಲೆ ಅಲ್ಲಿನ ಗ್ರಾಮ ಪಂಚಾಯಿತಿಗಳಿಗೆ ಭೂಕಂದಾಯವನ್ನು ವಸೂಲು ಮಾಡುವ ಹಕ್ಕನ್ನು ಕೊಡಲಾಗುವುದೆಂದು ಅಲ್ಲಿನ ಸಚಿವರಾದ ಶ್ರೀ ...ರವರು ತಿಳಿಸಿರುತ್ತಾರೆ. ಗ್ರಾಮ ಪಂಚಾಯಿತಿಗಳು ಪುಟ್ಟ ಸರ್ಕಾರಗಳಾಗಿದ್ದು ಅವುಗಳಿಗೆ ಎಲ್ಲ ಅಧಿಕಾರವನ್ನೂ ವರ್ಗಾಯಿಸಲಾಗುವುದು. ಪ್ರಾಂತ ಸರ್ಕಾರದ ಅಧಿಕಾರಗಳನ್ನು ವಿಕೇಂದ್ರೀಕರಣ ಮಾಡುವ ನೀತಿಗೆ ಅನುಸಾರವಾಗಿ ಗ್ರಾಮ ಪಂಚಾಯಿತಗಳಿಗೆ ಸರ್ಕಾರದ ಆಡಳಿತಾಂಗ, ನ್ಯಾಯಾಂಗ ಮತ್ತು ಶಾಸನಾಂಗಗಳ ಅಧಿಕಾರಗಳನ್ನೂ ಕೊಡಲಾಗುವುದು.

ಪೂರ್ವ ಪಂಜಾಬ್ ಸಂಸ್ಥಾನದ ಕಾಂಗ್ರೆಸ್ ರದ್ದು

ಪಾಟಿಯಾಲ ಮತ್ತು ಪೂರ್ವ ಪಂಜಾಬ್ ಸಂಸ್ಥಾನ ಯೂನಿಯನ್ ಕಾಂಗ್ರೆಸ್ ಸಮಿತಿಗಳ ಸಭೆಯು ನಿನ್ನೆ ದಿನ ಪಾಟಿಯಾಲದಲ್ಲಿ ನಡೆದು, ಸಂಸ್ಥಾನದ ಕಾಂಗ್ರೆಸ್ ಸಮಿತಿಯನ್ನು ರದ್ದು ಮಾಡಬೇಕೆಂದೂ, ತಾತ್ಕಾಲಿಕ ಮಂತ್ರಿ ಮಂಡಲದ ಆಡಳಿತದಲ್ಲಿ ಕಾಂಗ್ರೆಸ್ ಸಮಿತಿಯವರು ಕೈ ಹಾಕಕೂಡದೆಂದೂ ನಿರ್ಣಯ ಮಾಡಲಾಯಿತು.

ಬೊಂಬಾಯಿ ಶಾಸನ ಸಭೆಗೆ ರಾಜರುಗಳ ನಾಮಕರಣ

ಬೊಂಬಾಯಿ ಪ್ರಾಂತ್ಯದಲ್ಲಿ ಐಕ್ಯವಾಗಿರುವ ಡೆಕ್ಕನ್ ಮತ್ತು ಗುಜರಾತ್ ಸಂಸ್ಥಾನಗಳ ರಾಜರುಗಳನ್ನು ಪ್ರಾಂತೀಯ ಶಾಸನ ಸಭೆಯ ಸದಸ್ಯರುಗಳಾಗಿ ನಾಮಕರಣ ಮಾಡಲಾಗುವುದೆಂದು ಬೊಂಬಾಯಿನ ಗೃಹ ಸಚಿವರು ತಿಳಿಸಿರುತ್ತಾರೆ.

ಅಂಗಡಿಯ ರಂಧ್ರದಲ್ಲಿ ನೂರಾರು ಹಾವುಗಳು

ಬಿಹಾರಿನ ಬೆಗುಸರಾಯ ಊರಿನ ಅಂಗಡಿಯವನೊಬ್ಬನು ತನ್ನ ಅಂಗಡಿಯಲ್ಲಿ ಕಂಡ ಒಂದು ಹಾವನ್ನು ಕೊಂದು ಹಾಕಿದನೆಂದೂ, ಅನಂತರ ಅಲ್ಲಿದ್ದ ರಂಧ್ರದಿಂದ ಬಂದ ೩ ಹಾವುಗಳನ್ನು ಕೊಂದು ಆ ರಂಧ್ರವನ್ನು ಅಗೆದು ನೋಡಿದಾಗ ಅಲ್ಲಿ ನೂರಾರು ಹಾವಿನ ಮರಿಗಳೂ ಮೊಟ್ಟೆಗಳೂ ಇದ್ದವೆಂದೂ ಅವುಗಳನ್ನು ನಾಶಮಾಡಲಾಯಿತೆಂದೂ ಹೇಳಲಾಗಿದೆ.

ನಂದಿನ ಪುರ ಸಭಾ ಅವಧಿ ಹೆಚ್ಚಿತು

ಬೆಂಗಳೂರು ಕಾರ್ಪೊರೇಷನ್ನಿನ ಮಸೂದೆಯು ಜಾರಿಗೆ ಬರುವುದು ಇನ್ನೂ ತಡವಾಗಲಿರುವುದರಿಂದ, ಬೆಂಗಳೂರು ದಂಡಿನ ಪುರ ಸಭೆಯ ಚುನಾವಣೆಯನ್ನು ಡಿಸೆಂಬರ್‌ವರೆಗೆ ಮುಂದುವರಿಸಲಾಗಿದೆ.

ಸಿಮೆಂಟು ಸರಬರಾಜು

ಇದೇ ಏಪ್ರಿಲ್ ೧೯ನೇ ತಾ॥ ಗೆ ಹಿಂದೆ ಸಿಮೆಂಟ್ ದವಸಾನಗಳಿಗೆ ಕೊಡಲಾಗಿದ್ದ ಪರವಾನಿಗೆಯನ್ನು ರದ್ದು ಮಾಡಲಾಗಿದೆಯೆಂದೂ, ರದ್ದಾದ ಲೈಸೆನ್ಸುದಾರರುಗಳು ತಮಗೆ ಸಿಮೆಂಟ್ ಅವಶ್ಯಕತೆ ಇದ್ದರೆ, ಬೆಂಗಳೂರಿನಲ್ಲಿರುವ ... ಸಪ್ಲೈ ... ಡೈರೆಕ್ಟರಿಗೆ ಅರ್ಜಿ ಸಲ್ಲಿಸಿ, ಪರವಾನಿಗೆಯನ್ನು ... ಪಡೆಯಬಹುದೆಂದೂ ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ವಿವಾಹ ಮಹೋತ್ಸವಗಳು

[illegible] ತಮ್ಮ [illegible] ಪುತ್ರ [illegible] ವಿವಾಹವನ್ನು [illegible] ಜನವರಿ ನೆರವೇರಿಸಿದರು.

[illegible] ಪುತ್ರಿ [illegible] ಡೆಪ್ಯೂಟಿ [illegible] ವರ ಪುತ್ರರು ಶ್ರೀ ಕೆ ಆರ್ ವಿದ್ಯಾರಣ್ಯ ರವರ ವಿವಾಹವು [illegible] ರಾಜಧಾನಿಯಲ್ಲಿ ನಡೆಯಿತು.

ಮೈಸೂರಿನ [illegible] ಶ್ರೀ ಟಿ. ಎನ್. ಸುಬ್ಬರಾಯಪ್ಪನವರ ಪುತ್ರ ಶ್ರೀ ಆರ್ ಬಸವರಾಜ್ ಮತ್ತು ಬೆಂಗಳೂರಿನ ಶ್ರೀ ಎಂ ಶಿವಣ್ಣನವರ ಪುತ್ರಿ ಸೌ|| ಲೀಲಾವತಿಯವರ ವಿವಾಹದ ಸಂಬಂಧ ವಲ್ಲಿ ನಿನ್ನೆ ದಿನ [illegible] ಭವನದಲ್ಲಿ [illegible] ಮಹೋತ್ಸವವು ವೈಭವದಿಂದ ನಡೆಯಿತು.

ಶಿವಮೊಗ್ಗ ಜಿಲ್ಲಾಧಿಕಾರಿಗಳು

[illegible] ಅಧಿಕಾರಿಗಳಾದ ಶ್ರೀ ಡಿ ಕೆ. ಶ್ರೀನಿವಾಸಾಚಾರ್ಯರನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಗಿದೆ

Office of the University of Mysore
Mysore Dated the 31st May 1949.

NOTIFICATION

Subject University Examinations of September 1949

It is hereby notified that candidates intending to appear for the following Examinations to be held in September 1949 should submit their applications in the prescribed form on or before 10th June 1949 through the Heads of Colleges from which they appeared last

(i) Intermediate in Arts (ii) Intermediate in Science (iii) Intermediate in Commerce (iv) P A Degree, (v) B Sc., Degree (vi) B A. (Hons) Preliminary (vii) B Sc, (Hons) Preliminary (viii) B. Com., (ix) Engineering

Forms of applications for admission to the Examination may be had on application from the Heads of Colleges concerned

For detailed information attention is invited to this office Notification No, Ex. 1091 48-49. dated 31st May 1949

By order
Sd C Rangachar,
Ag Registrar

[illegible]ಯ ದಿನಾಚರಣೆ

[illegible]

[illegible] ಶ್ರೀ [illegible] ಬಾಲಕರು [illegible] ವಿತರಿಸಿದರು. [illegible]

ಇಷ್ಟಲ್ಲದೆ ನಿವಾಸಿಗಳು ನಿನ್ನೆ ಸಂಜೆ ಸಿದ್ದೇಶ್ವರಸ್ವಾಮಿ ದೇವಸ್ಥಾನದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿ, ಶ್ರೀ ಚನ್ನಯ್ಯನವರಿಗೆ ಸುಖ ಪ್ರಯಾಣವನ್ನು ಬಯಸಿದರು.

ಚಾಮುಂಡೇಶ್ವರಿ ಟಾಕೀಸಿನ ಮಾಲೀಕರುಗಳಾದ ಶ್ರೀಗಳು ಟಿ. ಚಲುವಾಚಾರ್ ಮತ್ತು ಟಿ. ಯಾಲಕ್ಕಾಚಾರ್ಯರವರುಗಳು ನಿನ್ನೆ ಸಂಜೆ ತಮ್ಮ ಛತ್ರದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು, ಶ್ರೀಮತಿ ಚೊಕ್ಕಮ್ಮನವರ ಸಂಗೀತವು ನಡೆಯಿತು.

ಶ್ರೀ ಚನ್ನಯ್ಯನವರು ಸತ್ಕಾರಕ್ಕಾಗಿ ವಂದನೆಯನ್ನು ಅರ್ಪಿಸಿ, ತಿನ್ಯಯ್ಯಾಚಾರ್ಯರವರ ಛತ್ರವು ಹಿಂದೆ ಪ್ರಜಾ ಪಕ್ಷವು ಕಾಂಗ್ರೆಸ್ಸಿಗೆ ಸೇರಲು ರಂಗಸ್ಥಳವಾಗಿದ್ದ ಅಂಶವನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡರು ಇಂದಿನ ಮಂತ್ರಿಮಂಡಲದ ವೇಲೆ ತಮ್ಮ ಸ್ವಾರ್ಥ ಸಾಧನೆಗಾಗಿ ಯಾವ ಪ್ರೇರೇಪಣೆಯನ್ನೂ ತಾವು ಮಾಡುತ್ತಿಲ್ಲವೆಂದೂ, ಹಾಗೆ ಮಾಡಿದರೆ ತಮಗೆ ಅಧೋಗತಿಯುಂಟಾಗುವುದೆಂದು ಅರಿತಿರುವುದಾಗಿ ಘೋಷಿಸಿದರು. ಮಹಾಜನರು ವ್ಯಕ್ತಿನಿಂದನೆಯಲ್ಲಿ ತೊಡಗದೆ ಯಾವುದೇ ಸರ್ಕಾರ ಬರಲಿ ಅದಕ್ಕೆ ಬೆಂಬಲ ನೀಡಬೇಕೆಂದು ಕೋರಿದರು.

ಯುವಕರಿಂದಲೇ ನಗರದ ಆಡಳಿತ

ನಾಗರಿಕ ಆಡಳಿತದಲ್ಲಿ ಯುವಕರು ಹೆಚ್ಚು ಪರಿಶ್ರಮ ಪಡೆಯುವಂತೆ ಮಾಡಲು [illegible] ರಾಜಧಾನಿಯಾದ [illegible] ನಗರದ ಆಡಳಿತವನ್ನು ಎರಡು ದಿನಗಳು ಯುವಕರಿಗೆ ವಹಿಸಲಾಗಿದೆ ನಗರದಲ್ಲಿರುವ ಪೋಲೀಸ್, ಕಾರ್ಖಾನೆ, ಹೋಟೇಲು ಮತ್ತು ವಾಹನಗಳ ಆಡಳಿತವನ್ನು ನಡೆಸಿ ಕಾಳಜಿಗಳನ್ನು ಮಾಡುವರು ಈ ಕಾರ್ಯಕ್ರಮದಲ್ಲಿ ಹೆಚ್ಚು ಆಸಕ್ತಿ ವಹಿಸುವವರಿಗೆ ಬಹುಮಾನಗಳನ್ನು ಕೊಡಲಾಗುವುದು.

ಗಾಂಧಿ ಸ್ಮಾರಕ ಶಾಂತಿ ಸ್ಥಾಪನಾ ಸಂಸ್ಥೆ

ಭಾರತ ಮತ್ತು ವಿಶ್ವದಲ್ಲಿ ಶಾಂತಿ ಸೌಹಾರ್ದಗಳ ಸ್ಥಾಪನೆಗೆ ಸಹಾಯ ಮಾಡಲು ಅಖಿಲ ಭಾರತ ಗಾಂಧಿ ಸ್ಮಾರಕ ನಿಧಿ ಸಮಿತಿಯವರು ಆಚಾರ್ಯ ಕಾಕಾ ಕಾಲೇಲ್ಕರರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸ್ಥಾಪಿಸಿರುತ್ತಾರೆ.

ಕಾಶ್ಮೀರದ ಬಿಕ್ಕಟ್ಟು

ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ವಿಶ್ವಸಂಸ್ಥೆಯಿಂದ ನೇಮಿತವಾಗಿರುವ ಸಮಿತಿಯು ತನ್ನ ಕಾರ್ಯದಲ್ಲಿ ಫಲಕಾರಿಯಾಗಲಿಲ್ಲವೆಂದು ವಿಶ್ವಸಂಸ್ಥೆಗೆ ತಿಳಿಸಿರುವುದೆಂದೂ, ಈ ಪರಿಸ್ಥಿತಿಯನ್ನು ಪರಿಶೀಲಿಸಲು ಭದ್ರತಾ ಸಮಿತಿಯು ಶೀಘ್ರದಲ್ಲಿಯೇ ಸೇರುತ್ತದೆಂದೂ ಗೊತ್ತಾಗಿದೆ.

ಗುರುದೇವಾ ಹಾಲ್

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ದವನಾವದ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು



ಬೀರು, ಕಾಪರ್ (ಕ್ಯಾಷ್ ಬಾಕ್ಸ್) 1 ಅಂಗುಲ ದ. [illegible]

ಇವುಗಳು [illegible] ಬೆಲೆ [illegible] ದೊರೆಯುತ್ತವೆ. ರಿಪೇರಿ ಮತ್ತು [illegible] ಮಾಡುತ್ತೇವೆ. [illegible]

ಓ ಸಿಟಿ ಇಂಪ್ಲಿಮೆಂಟ್ ವರ್ಕ್ಸ್

2 67 ಹಳ್ಳದಕೇರಿ ಮೈಸೂರು

[illegible]

ಧನ್ವಂತ್ರಿ ಪಾಳ್ಯದ ವೆಂಕಟಾಚಲ ಪಂಡಿತರ ಆಯುರ್ವೇದೀಯ ಸಿದ್ಧೌಷಧಗಳು

[illegible]

[illegible] [ಮಾರಂತಿ ನಂಚಿಗೆ] [illegible]

[illegible] ಅಪರಿಹಾರ್ಯ [illegible] ವಿಕಾಸ - ಬೆಲೆ ಸೀಸೆ 1ಕ್ಕೆ 2-0-0

ಶ್ರೀ ಸೀತಾರಾಮ [illegible] ವೈದ್ಯಶಾಲಾ, ಮೈಸೂರು.

ಫಲಿತಾಂಶ ಪ್ರಕಟಿಸದಂತೆ ಹೂಡಿದ್ದ ದಾವಾ ವಜಾ

ಪ್ರಶ್ನೆ ಪತ್ರಿಕೆಗಳು ಬಹಿರಂಗವಾದುವೆಂಬ ಕಾರಣದ ಮೇಲೆ ಪರೀಕ್ಷೆಯ ಫಲಿತಾಂಶಗಳನ್ನೇ ಪ್ರಕಟಿಸದಂತೆ ಪೂನೆಯ ಫಲ [illegible] ವಿದ್ಯಾರ್ಥಿಗಳು ಹೂಡಿದ್ದ ದಾವವನ್ನು ನ್ಯಾಯಾಧೀಶರು ತಳ್ಳಿಹಾಕಿರುವರು ಪರೀಕ್ಷೆಗೆ ಕುಳಿತು ಫಲಿತಾಂಶವನ್ನು ಎದುರು ನೋಡುತ್ತಿರುವ ವಿದ್ಯಾರ್ಥಿಗಳ ಮೇಲೆ ಆಗುವ ಪರಿಣಾಮವನ್ನು ಗಮನಿಸಿ ಹೀಗೆ ಮಾಡಲಾಗಿದೆಯೆಂದು ತೀರ್ಪನ್ನು ತಿಳಿಸಲಾಗಿದೆ

ನೀಲಿಯ ಬಣ್ಣದ ಮೊಟ್ಟೆ

ಫಿಲಿಡೆಲ್ಫಿಯಾ ವಿಶ್ವ ವಿದ್ಯಾನಿಲಯದ ಅಧ್ಯಾಪಕರೊಬ್ಬರ ಮನೆಯಲ್ಲಿರುವ ಕೋಳಿಯೊಂದು ನೀಲಿಯ ಬಣ್ಣದ ಮೊಟ್ಟೆಯನ್ನು ಹಾಕಿದೆಯೆಂದೂ ಅದಕ್ಕೆ [illegible] ರೂ ಬೆಲೆ ಕಟ್ಟಿರುವರೆಂದೂ ಹೇಳಲಾಗಿದೆ

ರಸ್ತೆಯಲ್ಲಿ ಚುಂಬಿಸಿದುದಕ್ಕೆ ದಂಡ

ಕೊಲ್ಹಾಪುರದ ರಸ್ತೆಯಲ್ಲಿ ಮಸ್ಲಿಂ ದಂಪತಿಗಳಿಬ್ಬರು ಚುಂಬನ ಮಾಡಿದರೆಂದು ಅವರನ್ನು ಪೋಲೀಸರು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಿದ್ದರು ಅವರ ಗಳಿಗೆ ತಲಾ 50 ಮತ್ತು 10 ರೂ ದಂಡವನ್ನು ನ್ಯಾಯಾಧೀಶರು ವಿಧಿಸಿರುವರು ಒಬ್ಬೊಬ್ಬರಿಗೊಬ್ಬರಿಗಿರುವ ಪರಸ್ಪರ ಪ್ರೇಮವನ್ನು ಬಹಿರಂಗವಾಗಿ ಪ್ರದರ್ಶಿಸುವುದು ಘನತೆ ಮತ್ತು ಗಾಂಭೀರ್ಯ, ನೀತಿ ನಡತೆಗಳಿಗೆ ವಿರೋಧವೆಂದು ನ್ಯಾಯಾಧೀಶರು ಹೇಳಿರುವರು

ಸಿಲೋನಿನಲ್ಲಿ ಮಹಾತ್ಮರ ಪ್ರತಿಮೆ

ಸಿಂಹಳ ದ್ವೀಪದಲ್ಲಿ ಮಹಾತ್ಮರ ಪ್ರತಿಮೆಯನ್ನು ೭ ಅಡಿ ವೇದಿಕೆಯ ಮೇಲೆ ಸ್ಥಾಪಿಸಬೇಕೆಂದು ಅಲ್ಲಿನ ಭಾರತೀಯ ಸಂಘದವರು ನಿರ್ಧರಿಸಿದ್ದಾರೆ.

ಶ್ರೀ ಗಾಯತ್ರೀ

ದಿನವೂ 3 ಆಟಗಳು

5-6-49ರಿಂದ 4 ದಿನಗಳು ಮಾತ್ರ

ಕೋಟ್ಯಾಂತರ ರೂಪಾಯಿಗಳ ವೆಚ್ಚದಿಂದ ಮಾನವನ ಜೀವಿತದಲ್ಲಿ ಕಾಣಬರುದಾದ ಸ್ವರ್ಗ ಸುಖ, ಆಸೆಯ ರಹಸ್ಯ, ನಾಟ್ಯದ ವಿನೋದ ವಿಲಾಸ ವೈಭವಗಳಿಂದೊಡಗೂಡಿದ ಒಂದೇ ಒಂದ ವರ್ಣರಂಜಿತ ಚಿತ್ರ

ಫಾರೆವರ್ ಅಂಬರ್

Forever Amber

ಪಾತ್ರ: - ಲಿಂಡಾ ಡಾರ್ನೆಲ್

Edited, printed, and published by A.R. Nagarajan at the Sadhvi Press, D. Subbiah Road, Mysore

✻ ಬೆಂಗಾಲ್. ಬನಾರಿಸ್, ಮೈಸೂರು ಸಿಲ್ಕ್ ಸೀರೆಗಳು ✻

ಮಂಗಳಕರವಾದ ಮದುವೆ ಜವಳಿಗಳು ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ. ಸಾಬ್ಮಿಟ ಪದಾರ್ಥಗಳು. ಸಾಹುಕಾರ್ ಕಂಪನಿ, ಮೈಸೂರ್.

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೭-೬-೪೯ [ಸಂಚಿಕೆ ೨೫೩

ಸರ್ಕಾರಿ ಸುದ್ದಿಗಳಿಗೆ ಪತ್ರಿಕೆಗಳ ಬಹಿಷ್ಕಾರ?

ಗೋಪಾಲರಾಯರ ಸಮಿತಿಗೆ ಆಸ್ತಿಯನ್ನು ವಶಪಡಿಸಿಕೊಳ್ಳುವ ಅಧಿಕಾರ

(ಸ್ವಂ ಸು. ಫೋ.] ಬೆಂಗಳೂರು ೭

... ಗೋಪಾಲರಾವ್ ವಿಚಾರಣಾ ಸಮಿತಿಗೆ ... ಷ ಅಧಿಕಾರವನ್ನು ಕೊಡುವ ಆಜ್ಞೆ ... ಯಂದನ್ನ ಶ್ರೀಮನ್ಮಹಾರಾಜರವರು ... ಸಿರುವುದನ್ನು ನಿನ್ನೆ ಸರ್ಕಾರದವ ... ಂದು ವಿಶೇಷ ಗೆಜೆಟ್ ಮೂಲಕ ಪ್ರ ... ಡುತ್ತಾರೆ. ಗೋಪಾಲರಾಯರಲ್ಲಿ ವ್ಯ ... ರ ನಡೆಸುತ್ತಿದ್ದವರಿಂದ ಹಣವನ್ನು ... ಲು ಮಾಡುವುದಕ್ಕಾಗಿ, ಅವರುಗಳ ... ಆಸ್ತಿಗಳನ್ನು ವಶಪಡಿಸಿಕೊಳ್ಳಲು ... ತಿಗೆ ಸಂಪೂರ್ಣ ಅಧಿಕಾರ ಕೊಡಲಾ ... ಹಣವನ್ನು ಭೂ ಕಂದಾಯದಂತೆ ... ಲು ಮಾಡಲಾಗುವುದು. ಈ ಕಾರ್ಯ ... ಗಿ ಸಮಿತಿಯವರಿಂದ ನೇಮಿಸಲ್ಪಡು ... ಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಅಧಿ ... ವು ಇರುವುದು. ಗೋಪಾಲರಾಯರಿಗೆ ... ನ ಎಲ್ಲ ಸ್ವತ್ತುಗಳ ಮೇಲಿನ ಅಧಿ ... ರವು ಸಮಿತಿಗೆ ಇರುವುದು ಅದನ್ನು ... ವುದು ಮತ್ತು ಇನ್ನಾವ ರೀತಿಯ ... ದರೂ ವಿಲೇವಾರಿ ಮಾಡಲು ಇನ್ನಾರಿ ... ಹಕ್ಕಿರುವುದಿಲ್ಲ. ಇದರಿಂದ ಬಂದ ಹ ... ನ್ನು ಸಾಲಗಾರರಿಗೆ ಹಂಚಲು ಸಮಿತಿ ... ಧಿಕಾರವಿರುವುದು.

ಜೂಜಿನಲ್ಲಿ ಸೋತು ಆತ್ಮಹತ್ಯ

ಪಾಂಡುರಂಗ ಗೋವಿಂದ್ ಎಂಬ ... ಬೊಂಬಾಯಿನ ಗಿರಣಿ ಕಾರ್ಮಿ ... ನು ತನಗೆ ಬರಬೇಕಾಗಿದ್ದ ... ನ ಬೋನಸ್ ಹಣವಾದ ... ರೂ. ... ತೆಗೆದುಕೊಂಡು ಪಕ್ಕದ ಜೂಜಿನ ... ಹೋಗಿ, ಅಲ್ಲಿ ಎಲ್ಲ ಹಣವನ್ನೂ ... ನು ಮನೆಗೆ ಬರೀ ಕೈಯಲ್ಲಿ ... ರುಗಳು ಅಲ್ಲಿ ಗಂಡ ಹೆಂಡತಿಯ ... ಗಳವುಂಟಾಯಿತು ತನ್ನ ... ವನ್ನು ನೀಗಿಸಲು, ಆತನು ತನ್ನ ಬ ... ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ... ಆತ್ಮಹತ್ಯ ಮಾಡಿಕೊಂಡನು.

ಮೈಸೂರು ಸಿಟಿ ಮುನಿಸಿಪಾಲಿಟಿ,

ಮೈಸೂರು. ೬-೬ ೪೯

ಪ್ರ ಕ ಟ ಣೆ

... ದರಿಂದ ಮೈಸೂರು ನಗರ ನಿವಾಸಿಗ ... ತಿಳಿಯಪಡಿಸುವುದೇನೆಂದರೆ.-

... ಸೂರು ವಾಣಿವಿಲಾಸ ನೀರಿನ ... ಮನೆ ಸೇರಿದ ದೇವರಾಯ ನಾಲೆ ... ನಾರು ಜಿಕಿನೋಸ್ಕರ ನೀರು ಬಿಡ ... ರುವುದರಿಂದ ಬೆಳಗೊಳದ ಪಂ ... ಸ್ಟೇಷನಲ್ಲಿ ಕೆಲಸವನ್ನು ನಿಲ್ಲಿಸ ... ನ ಪ್ರಯುಕ್ತ ಈ ವಾರದ ಬನೇ ... ಮವಾರ ಬೆಳಗ್ಗೆ ... ಗಂಟೆಯಿಂ ... ಯಂಕಾಲ ೬ ಗಂಟೆ ವರೆಗೆ ನೀರ ... ನಿಲಿಸಲಾಗುತ್ತದೆ ... ರದ ಜನರು ... ಗ್ರತೆಯಾಗಿ ಸಾಕಾದಷ್ಟು ನೀರ ... ಬರುವ ಕಾಲದಲ್ಲಿ ಶೇಖರಿಸಿ ... ಬೇಕಾಗಿ ಈ ಮೂಲಕ ...

... ಟಿ. ವೆಂಕಟರಮಣಯ್ಯ,

ಪ್ರೆಸಿಡೆಂಟ್.

ಗೋಧಿ ಬದಲು ಮುಸುಕಿನ ಜೋಳ

ಮೈಸೂರು ೭

ರಾಜಧಾನಿಯಲ್ಲಿ ಗೋಧಿಯ ಸರಬರಾಜು ಕಡಿಮೆಯಾಗಿರುವುದರ ಪ್ರಯುಕ್ತ, ಈ ತಿಂಗಳಿನಿಂದ ಎ ತರಗತಿಯವರಿಗೆ ೧|| ಔನ್ಸ್ ಮುಸುಕಿನ ಜೋಳವನ್ನೂ, ಬಿ ತರಗತಿಯವರಿಗೆ ೧|| ಔನ್ಸ್ ಜೋಳದ ಜೊತೆಗೆ ೧ ಔನ್ಸ್ ಗೋಧಿಯನ್ನೂ ಕೊಡಲಾಗುವುದು—ಎಂದು ನಗರದ ರೇಷನಿಂಗ್ ಅಧಿಕಾರಿಗಳಾದ ಶ್ರೀ ಸಿ. ನರಸಿಂಹ ಮೂರ್ತಿಯವರು ಈ ದಿನ ಬೆಳಗ್ಗೆ ಏರ್ಪಡಿಸಿದ್ದ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ವಿದ್ಯಾ ವರ್ಧಕ ಸಂಘದ ಹೈಸ್ಕೂಲು

ಮಂಡಿ ಮೊಹಲ್ಲಾದಲ್ಲಿರುವ ವಿದ್ಯಾ ವರ್ಧಕ ಸಂಘದ ಆಶ್ರಯದಲ್ಲಿ ಸ್ಥಾಪಿತವಾಗುವ ಹೈಸ್ಕೂಲಿನ ಪ್ರಥಮ ವರ್ಷದ ತರಗತಿಯು ಈ ಸಾಲಿನಿಂದ ಪ್ರಾರಂಭವಾಗುವುದು. ಶಾಲೆಗೆ ಸೇರಲು ಇಚ್ಛಿಸುವ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಈ ತಿಂಗಳು ೧೫ನೇ ತಾರೀಖಿನೊಳಗಾಗಿ ಶ್ರೀ ಕೆ. ಪುಟ್ಟಸ್ವಾಮಿ, ಅಡ್ವೋಕೇಟ್ ಸಯ್ಯಾಜಿರಾವ್ ರಸ್ತೆ ಮತ್ತು ಮೈಸೂರು ಇವರಿಗೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ

ಬಾಲ ಸೇವಾ ಸಮಾಜ

ಕಳೆದ ಶುಕ್ರವಾರ ಬಾಲ ಸೇವಾ ಸಮಾಜ, ಆಜಾದ್ ವಿದ್ಯಾಲಯ ಮತ್ತು ಬಾಪದನದ ಕಾರ್ಯಕರ್ತರ ಸಭೆಯು ನಡೆದು ಕಾರ್ಮವೆಲ್ತ್ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಜಯಪ್ರದವಾಗಿ ಭಾಗವಹಿಸಿದ್ದ ಭಾರತದ ಪ್ರಧಾನಿ ಪಂಡಿತ ನೆಹರೂರವರನ್ನು ಅಭಿನಂದಿಸಿ, ಸಮ್ಮೇಳನದಲ್ಲಿ ಅದರ ತೀರ್ಮಾನವನ್ನು ಅನುಮೋದಿಸುವ ನಿರ್ಣಯವನ್ನು ಮಾಡಲಾಯಿತು. ಪ್ರಜಾ ಪ್ರತಿನಿಧಿ ಸಭೆಗೆ ಹೊಸದಾಗಿ ಪಾಸಗಿ ಅಧ್ಯಕ್ಷ ಸ್ಥಾನವನ್ನು ಅತ್ತುವರಕ್ಕಾಗಿ ಮತ್ತು ಶ್ರೀ ವೆಂಕಟಪ್ಪನವರು ಅಧ್ಯಕ್ಷರಾಗಿ ಚುನಾಯಿತರಾದ ದಕ್ಕಾಗಿ ಅಭಿನಂದನೆಗಳನ್ನು ವ್ಯಕ್ತಪಡಿಸಿದುದಲ್ಲದೆ, ಕಾಂಗ್ರೆಸ್ ಪಾರ್ಟಿಗೆ ಮುಖಂಡರಾಗಿ ಶ್ರೀ ಕೆ ಸಿ. ರೆಡ್ಡಿಯವರನ್ನು ಮತ್ತು ಉಪನಾಯಕರನ್ನಾಗಿ ಶ್ರೀ ಕೆ ಹನುಮಂತಯ್ಯನವರನ್ನು ಆರಿಸಿದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಲಾಯಿತು

೧ ಸೀಸೆ ಸೀಮೆ ಎಣ್ಣೆಗೆ ಒಂದು ರೂ. ಬೆಲೆ

ಪ್ರ. ಪ್ರ. ಸಭೆಯಲ್ಲಿ ಸದಸ್ಯರ ಆರೋಪಣೆ

ಸ್ವಂ ಸು ಫೋ.] ಬೆಂಗಳೂರು ೭

ಪ್ರಜಾ ಪ್ರತಿನಿಧಿ ಸಭೆಯಲ್ಲಿ ಈ ದಿನ ಪ್ರಶ್ನೋತ್ತರ ಕಾಲದಲ್ಲಿ ಹಾಸನ ಜಿಲ್ಲೆಯಲ್ಲಿ ಸೀಮೆ ಎಣ್ಣೆ ಸರಬರಾಜಿನ ವಿಷಯವಾಗಿ ಪ್ರಶ್ನೆಗಳ ಸುರಿಮಳೆಗಳು ನಡೆದುವು ಒಟ್ಟು ಮತ್ತು ಚಿಲ್ಲರೆ ಮಾರಾಟದ ವ್ಯಾಪಾರಿಗಳೂ ಒಬ್ಬರೇ ಆಗಿರುವುದರಿಂದ ಜಿಲ್ಲೆಯಲ್ಲಿ ಸೀಮೆ ಎಣ್ಣೆ ಸಾಕಷ್ಟು ದೊರಕುತ್ತಿಲ್ಲವೆಂದೂ, ಕೆಲವು ಪ್ರದೇಶಗಳಲ್ಲಿ ೧ ಸೀಸೆ ಎಣ್ಣೆಗೆ ೧ ರೂ. ದರವನ್ನು ತೆಗೆದುಕೊಳ್ಳಲಾಗುತ್ತಿದೆಯೆಂದೂ ಶ್ರೀ ಕೆ. ಸಿ. ಪುಟ್ಟೇಗೌಡರು ತಿಳಿಸಿದರು. ಅಷ್ಟು ದುಬಾರಿ ಬೆಲೆಗೆ ಎಣ್ಣೆಯನ್ನು ಮಾರಲಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ, ಸೀಮೆ ಎಣ್ಣೆ ಹತೋಟಿ ಆಜ್ಞೆ ಪ್ರಕಾರ ಚಿಲ್ಲರೆ ಮತ್ತು ಒಟ್ಟು ವ್ಯಾಪಾರವನ್ನು ಶ್ರೀ ವೆಂಕಟಸ್ವಾಮಿಯವರಿಗೆ ಕೊಡಲಾಗಿದೆಯೆಂದೂ, ಜಿಲ್ಲೆಗೆ ಸಾಕಷ್ಟು ಎಣ್ಣೆಯ ಸರಬರಾಜನ್ನು ಮಾಡಲಾಗುತ್ತಿದೆಯೆಂದೂ, ಸರಿಯಾದ ಬೆಲೆಗೆ ಮಾರಲು ವ್ಯವಸ್ಥೆ ಮಾಡಲಾಗುವುದೆಂದೂ ಸಚಿವ ಶ್ರೀ ... ಮರಿಯಪ್ಪನವರು ಉತ್ತರ ಕೊಟ್ಟರು.

ಭದ್ರಾವತಿಯು ಕಾರ್ಮಿಕ ಕ್ಷೇತ್ರವಾಗಿದ್ದರೂ ಆಹಾರ ಧಾನ್ಯಗಳು ಸಾಕಷ್ಟು ಸರಬರಾಜಾಗುತ್ತಿಲ್ಲವೆಂದು ಅಲ್ಲಿನ ಕಾರ್ಮಿಕ ಸಂಘದವರು ದೂರು ಕೊಟ್ಟಿದ್ದಾರೆಂದೂ, ಆದರೆ ಸಾಕಷ್ಟು ಆಹಾರವನ್ನು ಒದಗಿಸಲಾಗುತ್ತಿದೆಯೆಂದೂ, ಒಂದೇ ಮನೆಗೂ ಎರಡೆರಡು ರೇಷನ್ ಕಾರ್ಡುಗಳನ್ನು ಕೊಡಲಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ. ಆ ರೀತಿ ಇದ್ದ ಪಕ್ಷದಲ್ಲಿ ಅದನ್ನು ಸರಿಪಡಿಸಲಾಗುವುದೆಂದೂ, ಸದಸ್ಯರಿಂದ ಬಂದ ಕೆಲಸಗಾರರಿಗೆ ರೇಷನ್ ಕಾರ್ಡ ಬೇಗನೆ ದೊರೆಯುವಂತೆ ವ್ಯವಸ್ಥೆ ಮಾಡಲಾಗುವುದೆಂದು ಶ್ರೀ ರಾಮಯ್ಯನವರ ಪ್ರಶ್ನೆಗೆ ಸಚಿವ ಶ್ರೀ ಟಿ ಮರಿಯಪ್ಪನವರು ಉತ್ತರವಾಗಿ ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯ ನದಿ ಭಾಗಗಳಲ್ಲಿರುವ ಕೆಲವು ತಾಲ್ಲೂಕುಗಳಲ್ಲಿ ಜೋಳವು ಮುಖ್ಯ ಆಹಾರವಾಗಿದೆ ಆ ಪ್ರದೇಶಗಳಲ್ಲಿ

ಸರ್ಕಾರಿ ಸುದ್ದಿಗಳಿಗೆ ಪತ್ರಿಕೆಗಳ ಬಹಿಷ್ಕಾರವೇ?

ವೃತ್ತಪತ್ರಿಕೆಗಳ ಜಾಹಿರಾತಿನ ಮೇಲೆ ತೆರಿಗೆ ಹಾಕಬೇಕೆಂದು ಮದರಾಸ್ ಸರ್ಕಾರದವರು ನಿರ್ಧರಿಸಿರುವುದನ್ನು ಪ್ರತಿಭಟಿಸಿ, ಅದನ್ನು ಸರ್ಕಾರದವರು ತೆಗೆದು ಹಾಕದಿದ್ದಲ್ಲಿ ಸರ್ಕಾರದ ಮಂತ್ರಿಗಳು ಶಾಸನ ಸಭಾಸದಸ್ಯರುಗಳಿಗೆ ಸಂಬಂಧಪಟ್ಟ ಸುದ್ದಿ ಸಮಾಚಾರಗಳನ್ನು ಬಹಿಷ್ಕರಿಸಬೇಕಾಗುವುದೆಂಬ ಎಚ್ಚರಿಕೆಯನ್ನು ಭಾರತ ಮತ್ತು ಪೌರ್ವಾತ್ಯ ವೃತ್ತಪತ್ರಿಕಾ ಸಂಘದ ಮದರಾಸಿನ ಶಾಖೆಯವರು ನಿನ್ನೆ ನಡೆದ ಸಭೆಯಲ್ಲಿ ಕೊಟ್ಟಿರುತ್ತಾರೆ

ಮಕ್ಕಳನ್ನು ಅಪಹರಿಸುವ ದೆವ್ವ

ಆಸ್ಸಾಮಿನ ಟೀ ತೋಟವೊಂದರಲ್ಲಿ ರಾತ್ರಿಯ ಹೊತ್ತು ಕರಿಯ ದೆವ್ವವೊಂದು ಬಂದು ಮಕ್ಕಳನ್ನು ಅಪಹರಿಸಿ ಅವುಗಳನ್ನು ಕೊಲೆ ಮಾಡತ್ತಿವೆಯೆಂದೂ, ಅದನ್ನು ಹಿಡಿಯದಿದ್ದಲ್ಲಿ ಮುಷ್ಕರ ಹೂಡುವುದಾಗಿಯೂ ಅಲ್ಲಿನ ಕಾರ್ಮಿಕರು ಅಧಿಕಾರಿ ವರ್ಗದವರಿಗೆ ಎಚ್ಚರಿಕೆ ಕೊಟ್ಟಿದ್ದಾರೆಂದೂ ವರದಿಯಾಗಿದೆ ತೋಟವನ್ನು ಈಗ ಸಶಸ್ತ್ರ ಪೋಲೀಸರು ಕಾಯುತ್ತಿದ್ದಾರೆ.

ಕೀರ್ತನಕಾರರ ಮಂಡಲಿ

ರಾಜಧಾನಿಯಲ್ಲಿರುವ ಕೀರ್ತನಕಾರರ ಮಂಡಲಿಯ ಮ್ಯಾನೇಜಿಂಗ್ ಕಮಿಟಿ ಸಭೆಯು ಕಳೆದ ಭಾನುವಾರ ಶ್ರೀ ಪಾಂಡುರಂಗ ದೇವಾಲಯದ ಪೂರ್ವ ಭಾಗದಲ್ಲಿ ಹೊಸದಾಗಿ ಕಟ್ಟಿರುವ ಶ್ರೀ ಲಾಲೆ ವೆಂಕಟರಾಯರ ಧರ್ಮ ಛತ್ರದಲ್ಲಿ ಸೇರಿ ಇನ್ನು ಮುಂದೆ ಪ್ರತಿ ಭಾನುವಾರಕ್ಕೆ ಬದಲಾಗಿ ಪ್ರತಿ ಏಕಾದಶಿಯ ದಿವಸ ಕೀರ್ತನೆ ನಡೆಸಬೇಕೆಂದು ತೀರ್ಮಾನಿಸಲಾಯಿತು. ಏಕಾದಶಿ ಪ್ರಯುಕ್ತ ಈ ದಿನ ಆಶುಕವಿರತ್ನಂ ಭಾರತೀಯವರಿಂದ "ಜಯದೇವ" ಎಂಬ ಕೀರ್ತನೆ ನಡೆಯುವುದು

ಬೊಂಬಾಯಿ ಸರ್ಕಾರದವರು ಜೋಳದ ದರವನ್ನು ಪಲ್ಲಾ ಒಂದಕ್ಕೆ ೨೭ ರೂ ನಿಗದಿ ಮಾಡಿರುತ್ತಾರೆ. ಆದರೆ ಮೈಸೂರಿನಲ್ಲಿ ೩೦ ರೂ. ನಿಗದಿ ಮಾಡಲಾಗಿದೆ. ಈ ವ್ಯತ್ಯಾಸವಿರುವುದರಿಂದ, ಮೈಸೂರಿನ ರೈತರಿಗೆ ತುಂಬಾ ನಷ್ಟವಾಗಿರುವುದಾಗಲೀ ಅಥವ ಕಳ್ಳ ಸಂತೆಯಲ್ಲಿ ಗಡಿ ಪ್ರದೇಶಗಳಿಗೆ ಇಲ್ಲಿಂದ ಜೋಳ ರವಾನೆಯಾಗುತ್ತಿದೆಯೆಂಬುದಾಗಲೀ ಸರ್ಕಾರದ ಗಮನಕ್ಕೆ ಬಂದಿಲ್ಲ ಆಹಾರ ಧಾನ್ಯಗಳ ಬೆಲೆಯನ್ನು ಭಾರತ ಸರ್ಕಾರದವರೇ ನಿಗದಿ ಮಾಡಿರುತ್ತಾರೆ ಆಹಾರ ಧಾನ್ಯ ಸಂಗ್ರಹದಲ್ಲಿ ನಮ್ಮ ರೈತರುಗಳು ಸಹಕರಿಸಿದ್ದಾರೆ ಒಟ್ಟು ... ಜೋಳ ಆ ಪ್ರದೇಶದಲ್ಲಿ ಸಂಗ್ರಹವಾಗಿದೆ ಹೊರಕ್ಕೆ ಆಹಾರ ಧಾನ್ಯಗಳು ಹೋಗ ... ದನ್ನು ತಡೆಯಲು ತಕ್ಕ ಬಂದೋಬಸ್ತು ಮಾಡಲಾಗುವುದು ಎಂದು ಸಚಿವರು ಶ್ರೀ ಬಿ ಜಿ. ಚಂದ್ರಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಅನಂತರ ಶ್ರೀ ಎ ಸಿ. ... ಯವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ... ವುದಕ್ಕೆ ಶ್ರೀ ... ರವರ ಒಪ್ಪಿಗೆ ದೊರೆತಿರುವುದಾಗಿ ... ತಿಳಿಸಿದರು ಶ್ರೀಗಳಾದ ಕೆ ಸಿ. ರೆಡ್ಡಿ, ... ಲಿಂಗಯ್ಯ, ಬಿ ವಿ. ಶಿವಲಿಂಗಯ್ಯ, ಮುಂತಾದವರು ಶ್ರೀ ... ರವರನ್ನು ... ನ ದಿಸಿದರು

ಮೆಡಿಕಲ್ ವಿದ್ಯಾರ್ಥಿಗಳಿಗೆ ಕಡ್ಡಾಯದ ಸರ್ವೀಸು

—:o:—

ಪ್ರಾ|| ಪ್ರಾ|| ಸಭೆಯಲ್ಲಿ ಸಚಿವರ ಸೂಚನೆ

ಸ್ವಂ. ಸು. ವರ್ತ] ಬೆಂಗಳೂರು ೬

ಪ್ರಜಾ ಪ್ರತಿನಿಧಿ ಸಭೆಯಲ್ಲಿ ನಿನ್ನೆ ದಿನ ಬಜೆಟ್ಟಿನ ಮೇಲಿನ ಚರ್ಚೆಯು ಮುಕ್ತಾಯವಾಯಿತು ಎಲ್ಲ ಸಚಿವರುಗಳು ಚರ್ಚೆಗೆ ಉತ್ತರವಿತ್ತರವಿತ್ತರು

ಆರೋಗ್ಯ ಸಚಿವರಾದ ಜನಾಬ್ ಮಹಮದ್ ಷರೀಫ್‌ರವರು ಭಾಷಣ ಮಾಡಿ, ಸಂಸ್ಥಾನದಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು, ಮೆಡಿಕಲ್ ಕಾಲೇಜಿನಿಂದ ಉತ್ತೀರ್ಣರಾದ ವಿದ್ಯಾರ್ಥಿಗಳು ೫ ವರ್ಷ ಕಾಲ ಸಂಸ್ಥಾನದ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಕೆಲಸ ಮಾಡಬೇಕೆಂದು ನಿಗದಿ ಮಾಡುವುದನ್ನು ಸರ್ಕಾರವು ಆಲೋಚಿಸುತ್ತಿದೆಯೆಂದೂ, ಮತ್ತು ಸರ್ಕಾರೀ ಆಸ್ಪತ್ರೆಗಳಲ್ಲಿ ಖಾಸಗೀ ವೈದ್ಯರುಗಳು ಗೌರವ ಸರ್ಜನರುಗಳಾಗಿ ಕೆಲಸ ಮಾಡುವ ಯೋಜನೆಯನ್ನು ಸಧ್ಯದಲ್ಲಿಯೇ ಜಾರಿಗೆ ತರಲಾಗುವುದೆಂದೂ ತಿಳಿಸಿದರು. ಮಲೆನಾಡಿನಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸಲಾಗುವುದೆಂದೂ ಈಗಾಗಲೇ ಅನೇಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆಯೆಂದೂ ಹೇಳಿದರು

ವಿದ್ಯಾ ಸಚಿವರು ಮಾತನಾಡಿ, ವಿದ್ಯಾ ಪ್ರಗತಿಗಾಗಿ ಸರ್ಕಾರದವರು ಹೆಚ್ಚು ಹಣವನ್ನು ಕೊಟ್ಟಿದ್ದಾರೆಂದೂ, ವಿದ್ಯಾಭ್ಯಾಸವು ಇನ್ನೂ ಅಭಿವೃದ್ಧಿಗೊಳ್ಳಬೇಕೆಂಬ ಆಸೆಯಿಂದಲೇ ಡಾ|| ಸಿ. ಆರ್. ರೆಡ್ಡಿಯವರನ್ನು ಆಹ್ವಾನಿಸಲಾಯಿತೆಂದೂ, ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಪರಿಶೀಲಿಸುತ್ತಿದೆಯೆಂದೂ ತಿಳಿಸಿದರು. ಆ ವರದಿಯನ್ನು ಸಭೆಯ ಮುಂದೆ ಈಗ ಇಡಲು ಸಾಧ್ಯವಿಲ್ಲವೆಂದೂ ಅವರು ಹೇಳಿದರು

ಕೈಗಾರಿಕಾ ಸಚಿವರು ಭಾಷಣ ಮಾಡಿ ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಸಾಲವನ್ನು ನಡೆಯುವ ನೀತಿಯನ್ನು ಸದಸ್ಯರು ಟೀಕೆ ಮಾಡಿರುವುದು ಸರಿಯಾಗುದಲ್ಲವೆಂದೂ, ಸರ್ ಎಂ ವಿಶ್ವೇಶ್ವರಯ್ಯ ಮುಂತಾದ ಪ್ರವೀಣರ ಸಲಹೆಯನ್ನು ತಾವು ಅನುಸರಿಸುತ್ತಿರುವುದಾಗಿಯೂ ತಿಳಿಸಿದರು.

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಮಾತನಾಡಿ, ಮೈಸೂರು ಭಾರತಕ್ಕೆ ಸೇರಿರುವುದರಿಂದಲೂ ಮತ್ತು ಸಂಸ್ಥಾನದ ಅನೇಕ ಬಾಬುಗಳು ಕೇಂದ್ರಕ್ಕೆ ಸೇರುವುದರಿಂದಲೂ, ನೂತನ ಪರಿಸ್ಥಿತಿಯು ಒದಗಿದೆಯೆಂದೂ, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಬಡ್ಜೆಟ್ಟನ್ನು ತಯಾರಿಸಲಾಗಿದೆಯೆಂದೂ ತಿಳಿಸಿದರು

ನಾಯಿಕೆಮ್ಮು :: ಮೂಲವ್ಯಾಧಿ
ಪರಿಹಾರ ಖಚಿತ
ಲಿವರ್ ಅಂಡ್ ಸ್ಪ್ಲೀನ್
ಕಾಯಿಲೆಗಳಿಗೆ ಖಚಿತವಾದ ಆಯುರ್ವೇದ ಚಿಕಿತ್ಸೆ
ಎಸ್. ತಾಮಣ್ಣ
2830: ಲಿವರ್ ಅಂಡ್ ಸ್ಪ್ಲೀನ್
ಔಷಧಾಲಯ, ಚಾಮುಂಡಿಪುರಂ,
ಮೈಸೂರು.

ಚನ್ನಯ್ಯನವರ ಪ್ರಯಾಣ

ಮೈಸೂರು ೬

ಶ್ರೀ ಎಸ್. ಚನ್ನಯ್ಯನವರು ಈ ದಿನ ಮಧ್ಯಾಹ್ನ ೨ ಘಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು ಅವರು ನಾಳಿದ್ದು ಬೆಳಿಗ್ಗೆ ಬೊಂಬಾಯಿಗೆ ವಿಮಾನದಲ್ಲಿ ತೆರಳಿ, ತಿಂಗಳು ೯ನೇ ತಾ|| ರಾತ್ರಿ ಇಂಗ್ಲೆಂಡಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸುವರು. ಪುರಸಭಾಧ್ಯಕ್ಷರೂ, ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳೂ ಮತ್ತು ಇನ್ನೂ ಅನೇಕ ಪ್ರಮುಖ ಕಾಂಗ್ರೆಸ್ ನಾಯಕರುಗಳೂ ಅವರನ್ನು ಬೀಳ್ಕೊಟ್ಟರು ಮಾರ್ಗದಲ್ಲಿ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದವರು ಅವರಿಗೆ ಹಾರವನ್ನು ಅರ್ಪಿಸಿದರು

ಖೂನಿ ಮೊಕದ್ದಮೆಯಲ್ಲಿ ಆಪಾದಿತರುಗಳ ಖುಲಾಸೆ

ಹೆಗ್ಗಡದೇವನಕೋಟೆ ತಾಲ್ಲೂಕು ಆಲನಹಳ್ಳಿಯ ದೊಡ್ಡ ತಮ್ಮೇಗೌಡ ಉರುಫ್ ವೀರೆಗೌಡ ಎಂಬುವನನ್ನು ಕೃಷ್ಣಯ್ಯನ ಮಗನಾದ ಚಿಕ್ಕ ಬೆಟ್ಟೇ ಗೌಡ, ಜವರ, ಮರಿಕಾಳ ಮತ್ತು ವೆಂಕಟರಾಮಗೌಡ ಎಂಬುವರು ೧೫-೩-೪೮ರಲ್ಲಿ ಕೊಲೆ ಮಾಡಿದರೆಂಬ ಆಪಾದನೆಯ ಮೇಲೆ ಸೆಷನ್ಸಿಗೆ ಗುರಿಯಾಗಿದ್ದರು ಆಪಾದಿತರುಗಳು ತಪ್ಪಿತಸ್ಥರಲ್ಲವೆಂದು ಜಿಲ್ಲಾ ನ್ಯಾಯಾಧೀಶರು ಅವರುಗಳನ್ನು ಖುಲಾಸೆ ಮಾಡಿದರು. ಅಪರಾಧಿಗಳ ಪರವಾಗಿ ಶ್ರೀಗಳಾದ ಚನ್ನಕೇಶವಯ್ಯ ಮತ್ತು ಎಂ. ರಾಮಚಂದ್ರ ರಾಯರೂ, ಸರ್ಕಾರದ ಪರವಾಗಿ ಶ್ರೀ ಜಿ. ಶಂಕರ ಶೆಟ್ಟರೂ ವಕಾಲತ್ತು ವಹಿಸಿದ್ದರು.

ವಿವಾಹ ಮಹೋತ್ಸವಗಳು

ಮೈಸೂರಿನ ಕಂಟ್ರಾಕ್ಟರಾದ ಶ್ರೀ ಎಂ. ಜಿ. ಚನ್ನವೀರಪ್ಪನವರ ಅಣ್ಣನವರಾದ ಶ್ರೀ ಮಹದೇವಪ್ಪನವರ ಪುತ್ರಿ ಚಿ|| ಸೌ|| ಭ್ರಮರಾಂಬಿಕೆ ಮತ್ತು ಶ್ರೀ ಕೆ. ಬಸಪ್ಪನವರ ಪುತ್ರ ಶ್ರೀ ಬಿ. ಶಿವಸ್ವಾಮಿ,

ಶ್ರೀ ಲಲಿತಾಂಬಾ ಆಯುರ್ವೇದ ವೈದ್ಯಶಾಲೆಯ ಶ್ರೀ ಟಿ. ಎಸ್. ರಾಮಾ ಪಂಡಿತರ ಪುತ್ರಿ ಚಿ|| ಸೌ|| ಲಲಿತಾಂಬಾ ಮತ್ತು ಶ್ರೀ ಪಿ. ಅನಂತರಾಮಯ್ಯನವರ ಪುತ್ರ ಶ್ರೀ ಪಿ ಎ. ಗುಂಡಪ್ಪ,

ನಂಜನಗೂಡಿನ ಶ್ರೀ ಎಂ. ಶ್ರೀಕಂಠಯ್ಯನವರ ತಮ್ಮಂದಿರಾದ ಶ್ರೀ ಎಂ. ಪರಮೇಶ್ವರಯ್ಯ ಮತ್ತು ಇಲವಾಲದ ಶ್ರೀ ಶ್ರೀಕಂಠಯ್ಯನವರ ಪುತ್ರಿ ಚಿ|| ಸೌ|| ಕಾಮಾಕ್ಷಮ್ಮ, ಇವರುಗಳ ವಿವಾಹ ಮಹೋತ್ಸವವು ನಿನ್ನೆ ರಾಜಧಾನಿಯಲ್ಲಿ ನಡೆದುವು

Edited, printed, and published by A.R. Nagarajan at the Sadhvi Press, D. Subbiah Road, Mysore.

ಉಪಾಧ್ಯಕ್ಷತೆಗೆ ಬಸಪ್ಪಶೆಟ್ಟರ ಆಯ್ಕೆ

ಸ್ವಂ ಸು. ವರ್ತ] ಬೆಂಗಳೂರು ೬

ಪ್ರಜಾ ಪ್ರತಿನಿಧಿ ಸಭೆಯ ಉಪಾಧ್ಯಕ್ಷರ ಚುನಾವಣೆಯು ನಿನ್ನೆ ಸಂಜೆ ನಡೆದು, ಕಾಂಗ್ರೆಸ್ ಉಮೇದುವಾರರಾದ ಶ್ರೀ ಬಿ. ಪಿ. ಬಸಪ್ಪ ಶೆಟ್ಟರು ಚುನಾಯಿತರಾದರು ಅವರಿಗೆ ೧೮೮ ಓಟುಗಳೂ, ಪ್ರಜಾ ಮಂಡಲಿಯ ಶ್ರೀಮತಿ ಗಂಗಮ್ಮನವರಿಗೆ ೨೪ ಓಟುಗಳೂ ಬಂದುವು. ಉಮೇದುವಾರರಾಗಿ ನಿಂತಿದ್ದ ಇತರ ೬ ಜನರು ವಾಪಸು ತೆಗೆದುಕೊಂಡರು.

○ ಸಾಗರದಲ್ಲಿ ಆಸ್ಪತ್ರೆಯು ಕಟ್ಟಡಕ್ಕಾಗಿ ಸರ್ಕಾರದವರು ೧ ಲಕ್ಷ ರೂ. ಅನ್ನು ಮಂಜೂರು ಮಾಡಿರುತ್ತಾರೆ.

○ ಬೆಂಗಳೂರು ಶೇಷಾದ್ರಿಪುರದ ರೈಲ್ವೆ ಲೆವಲ್ ಕ್ರಾಸಿಂಗ್ ಬಳಿ ಅಂಡರ್ ಬ್ರಿಡ್ಜನ್ನು ಕಟ್ಟಲು ಸರ್ಕಾರದವರು ೧|| ಲಕ್ಷ ರೂ ಅಂದಾಜನ್ನು ಮಂಜೂರು ಮಾಡಿರುತ್ತಾರೆ

ಅಂಚೆ ಕಾಗದಗಳ ಮೇಲೆ ಮುದ್ರೆ ವಜಾ

ಅಂಚೆ ಕಾಗದಗಳನ್ನು ಬೇಗನೆ ಹಂಚನ ಉದ್ದೇಶ್ಯದಿಂದ ಈಗ ಅವುಗಳನ್ನು ಬಟವಾಡೆ ಮಾಡಲು ಕಳುಹಿಸುವುದಕ್ಕೆ ಮುಂಚೆ ಮುದ್ರೆ ಒತ್ತುತ್ತಿದ್ದ ಪದ್ಧತಿಯನ್ನು ವಜಾ ಮಾಡಲಾಗುವುದೆಂದು ಅಂಚೆ ಮತ್ತು ತಂತೀ ಇಲಾಖೆಯವರು ತಿಳಿಸಿರುತ್ತಾರೆ.

ಕಾಡಿಗೆ ಕೋತಿಗಳ ರವಾನೆ

ಲಕ್ನೋದ ಮೋತಿಮಹಲ್ ಎಂಬ ಕೋಟೆಯಲ್ಲಿ ಅಲ್ಲಿನ ಪುರಸಭೆಯವರು ಹಿಡಿದು ಹಾಕಿದ್ದ ೧೫೦೦ ಕೋತಿಗಳನ್ನೂ ದೂರದ ಕಾಡಿಗೆ ತೆಗೆದುಕೊಂಡು ಹೋಗಿ ಬಿಡಲಾಗಿದೆಯೆಂದು ಹೇಳಲಾಗಿದೆ ಒಂದು ಕೋತಿಯನ್ನು ಹಿಡಿಯಲು ೩ ರೂ. ನಂತೆ ಪುರಸಭೆಯವರು ಹಣ ಖರ್ಚು ಮಾಡಿದ್ದಾರೆ

* ಲಕ್ಷ್ಮಿ *
ಥಿಯೇಟರ್
[ಫೋನ್: 584]
ಮುಂದಿನ ಬದಲಾವಣೆ
ಪ್ರತಿದಿನ 3 ಪ್ರದರ್ಶನಗಳು
ನ್ಯೂ ಇಂಡಿಯಾ ಫಿಲಂಸ್‌ರವರ
ನಯಿ ರೀತ್
(ಹಿಂದಿ)
—: ಭೂಮಿಕೆ: —
ಮೆಚ್ಚಿನ ತಾರೆ ಸುಲೋಚನಾ
ಚಟರ್ಜಿ, ಗೀತಾ ಬಾಲಿ ಮತ್ತು
ರಾಜೇಂದ್ರ

ಸಿನಿಮಾ ಪ್ರದರ್ಶನದ ಮೇ[ಲೆ] ತೆರಿಗೆ

ಮದರಾಸ್ ನಗರದ ಎಲ್ಲಾ ಸಿನಿಮಾ ಮಂದಿರಗಳ ಪ್ರತಿಯೊಂದು ಪ್ರದರ್ಶ[ನ]ಕ್ಕೂ ೫ ರೂ. ತೆರಿಗೆಯನ್ನು ಮುಂದಿನ [ತಿಂ]ಗಳಿನಿಂದ ಹಾಕಲಾಗುವುದೆಂದು ಸರ್ಕಾ[ರ]ದವರು ಆಜ್ಞೆ ಮಾಡಿರುತ್ತಾರೆ.

ಉಪನಯನಗಳು

ಚಿಕ್ಕಮಗಳೂರಿನ ಕಾಫಿ ಪ್ಲಾಂಟ[ರ್] ಶ್ರೀ ಟಿ. ಮಂಜನಾಥಯ್ಯರ್‌ರವರ ಕು[]ಮಾರ ಚಿ|| ಟಿ. ಎಂ. ಗೋಪಾಲ,

ಆಯುರ್ವೇದ ಪಂಡಿತರಾದ ಶ್ರೀ [] ಎಸ್. ರಾಮಾಪಂಡಿತರ ಕುಮಾರ [] ಟಿ. ಆರ್. ಶ್ರೀಕಂಠಯ್ಯ,

ದೊಡ್ಡ ಜಟಕದ ಶ್ಯಾನುಭೋಗ್ [] ರಣಪ್ಪನವರ ಕುಮಾರ ಚಿ|| ಶೀನಾ[] ಇವರುಗಳ ಬ್ರಹ್ಮೋಪದೇಶವು ನಿ[ನ್ನೆ] ರಾಜಧಾನಿಯಲ್ಲಿ ನಡೆಯಿತು

ನಿಧನ

ರಾಜಧಾನಿಯ ಪ್ರಭಾತ್ ಬ್ಯಾಂಗಲ್[] ಸ್ಟೋರ್ಸಿನ ಮಾಲೀಕರಾದ ಶ್ರೀ ಎಸ್[] ನಾರಾಯಣ ಸ್ವಾಮಿಯವರ ಪತ್ನಿ ಶ್ರೀಮ[] ತಿ ಭಾಗ್ಯಲಕ್ಷ್ಮಮ್ಮನವರು ಕಳೆದ ೪ನೇ ತಾ|| ಕೇವಲ ೨೧ನೇ ವಯಸ್ಸಿನಲ್ಲಿ ನಿ[ಧನ]ರಾದರೆಂದು ತಿಳಿಸಲು ವಿಷಾದಿಸುತ್ತೇ[ವೆ]

ಉದಾರ ಸಹಾಯ

ರಾಜಧಾನಿಯ ಸಾರ್ವಜನಿಕ ವಿದ್ಯಾ[] ರ್ಥಿ ನಿಲಯಕ್ಕೆ ಶ್ರೀ ಎ. ಜಿ. ಬಂದೀ ಗೌ[ಡ]ರು ತಮ್ಮ ಪುತ್ರಿಯ ವಿವಾಹದ ಸಂಬಂ[ಧ]ದಲ್ಲಿ ೨೫ ರೂ. ಉದಾರ ಸಹಾಯ ಮಾ[ಡಿ]ರುತ್ತಾರೆ.

ಹೊಂಬಾಳೆ ರಂಗಯ್ಯನವರ ವಿದ್ಯಾರ್ಥಿನಿಲಯ

ರಾಜಧಾನಿಯ ಹೊಂಬಾಳೆ ರಂಗಯ್ಯನವರ ಕುಂಚಿಟಿಗರ ವಿದ್ಯಾರ್ಥಿನಿಲಯಕ್ಕೆ ಸೇರಲಿಚ್ಛಿಸುವ ಬಡ ಕಾಲೇಜ್ ವಿದ್ಯಾ[ರ್ಥಿ]ಗಳು ಇದೇ ೨೦ನೇ ತಾ|| ನೊಳಗಾಗಿ [ಅ]ರ್ಜಿಯನ್ನು ಸಲ್ಲಿಸಬೇಕೆಂದು ತಿಳಿಸಲಾ[ಗಿ]ದೆ. ಬ್ರಾಹ್ಮಣರಿಗೆ ೨, ಕುಂಚಿಟಿಗರಿಗೆ [] ಲಿಂಗಾಯಿತರು, ಒಕ್ಕಲಿಗರು, ಕುರುಬ[] ಕುಂಬಾರ ಶೆಟ್ಟರು, ಮಡಿವಾಳ ಶೆಟ್ಟ[] ಮತ್ತು ನಯನಜ ಕ್ಷತ್ರಿಯರುಗಳಿಗೆ ತ[ಲಾ] ೧ ಸೀಟುಗಳನ್ನು ಕೊಡಲಾಗುವುದು

ಗುರುದೇವಾ ಹಾಲ್
—:o:—
ನಮ್ಮಲ್ಲಿ ಶುದ್ಧವಾದ ಮೈಸೂ[ರು] ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾ[ದ] ಕ್ರೇಪ್, ಬೆಂಗಳೂರು, ಧರ್ಮಾವ[ರಂ] ಅರಣಿ ಸೀರೆಗಳು ಗ್ಯಾರಂಟಿಯಾಗಿ ದೊ[ರೆ]ಯುತ್ತವೆ. ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ :: ಮೈಸೂ[ರು]

ರಾಜಕಮಲ್
ಮೈಸೂರು
3—6—49 ರಿಂದ
ಅನೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಕರ್ದಾರ್‌ರವರ ಹಿಂದಿ ಚಿತ್ರ
ನಾಟಕ್
—: ಮುಖ್ಯ ಪಾತ್ರ: —
ಸುರಯ್ಯ, ಅನ್ವರ್

|| ಶ್ರೀ ಸೀತಾರಾಮಾಯನಮಃ ||
ಭಿಷಗ್ರತ್ನ ಸಾಳ್ಕದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ಕೌಮಜ
ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ. ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು, ಮೊದಲಾಗಿ ಗುಣವಾಗುತ್ತದೆ.
ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಫೋ। ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಬುಧವಾರ ೮-೬-೪೯ [ಸಂಚಿಕೆ ೨೫೩

ಮಾರ್ಷಲ್ ಸ್ಟಾಲಿನ್ನರ -ಮರಣ ಶಾಸನ-

ಗೋಧಿ ಬದಲು ಮುಸುಕಿನ ಜೋಳ

ಮೈಸೂರು ೮

ನಿನ್ನೆ ದಿನ ನಗರದ ಚೀಫ್ ರೇಷನಿಂಗ್ ಅಧಿಕಾರಿಗಳಾದ ಶ್ರೀ ಸಿ ನರಸಿಂಹಮೂರ್ತಿಯವರು ಪತ್ರಿಕಾ ಸಮ್ಮೇಳನವನ್ನು ನಡೆಸಿ, ನಗರದ ಪರಿಸ್ಥಿತಿಯನ್ನು ವಿವರಿಸಿದರು. ಗೋಧಿಯ ಅಭಾವದ ಪ್ರಯುಕ್ತ ಈ ತಿಂಗಳಿನಿಂದ ಗೋಧಿಯನ್ನು ಕಡಿಮೆ ಮಾಡಿ, 'ಎಲ್ಲರಿಗೂ ೧ ಔನ್ಸು ಮುಸುಕಿನ ಜೋಳವನ್ನು ಕೊಡಲಾಗುವುದೆಂದು ತಿಳಿಸಿದರು. ನಗರದಲ್ಲಿ ಇತ್ತೀಚೆಗೆ ೮ ಸಾವಿರ ಕಳ್ಳ ರೇಷನ್ ಕಾರ್ಡುಗಳನ್ನು ಪತ್ತೆ ಮಾಡಿ, ಅವುಗಳನ್ನು ವಜಾ ಮಾಡಲಾಯಿತೆಂದೂ ೩೦೦೦ ಹೊಸ ಕಾರ್ಡುಗಳನ್ನು ಕೊಡಲಾಗಿದೆಯೆಂದೂ ಹೇಳಿದರು. ಈ ತಿಂಗಳಿನಿಂದ ಕೆಳಗೆಕಂಡಂತೆ ರೇಷನ್ನನ್ನು ಕೊಡಲಾಗುತ್ತಿದೆ:-

'ಎ' ತರಗತಿಯವರಿಗೆ-ಅಕ್ಕಿ ೭ ಔನ್ಸು, ಗೋಧಿ ೨ ಔನ್ಸು, ಮುಸುಕಿನ ಜೋಳ ೧ ಔನ್ಸು; 'ಬಿ' ತರಗತಿಯವರಿಗೆ-ಅಕ್ಕಿ ೬ ಔನ್ಸು, ಗೋಧಿ ೧ ಔನ್ಸು, ಮುಸುಕಿನ ಜೋಳ ೩ ಔನ್ಸು, ರಾಗಿ ೨ ಔನ್ಸು, ಜೋಳ ೧ ಔನ್ಸು.

ಕೀರ್ತನಕಾರರಿಗೆ ಆಕಾಶವಾಣಿ ಸೌಲಭ್ಯ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯವರು ಆಕಾಶವಾಣಿಯ ಡೈರೆಕ್ಟರನ್ನು ಭೇಟಿ ಮಾಡಿ, ಕೀರ್ತನಕಾರರಿಗೆ ಕೊಡುತ್ತಿರುವ ಸಂಭಾವನೆ ಮತ್ತು ಕಾಲಾವಕಾಶವನ್ನು ಹೆಚ್ಚಿಸಬೇಕೆಂದು ಅರಿಕೆ ಮಾಡಿಕೊಂಡರು. ಅವುಗಳನ್ನು ಪರಿಶೀಲಿಸುವುದಾಗಿ ಡೈರೆಕ್ಟರು ಭರವಸೆ ಇತ್ತರು.

ಚಿಟ್ಟದಪುರದ ವೀರಶೈವ -ವಿದ್ಯಾರ್ಥಿ ನಿಲಯ

ರಾಜಧಾನಿಯ ವೈಸ್ರಾಯ್ ರಸ್ತೆಯಲ್ಲಿರುವ ಚಿಟ್ಟದಪುರದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿ ಉಚಿತ ವಿದ್ಯಾರ್ಥಿ ನಿಲಯಕ್ಕೆ ಸೇರಲಿಚ್ಛಿಸುವ ವೀರಶೈವ ವಿದ್ಯಾರ್ಥಿಗಳು ಇದೇ ೧೫ನೇ ತಾ॥ ಯೊಳಗಾಗಿ ಅರ್ಜಿಯನ್ನು ಕಾರ್ಯದರ್ಶಿಗಳಿಗೆ ಕಳುಹಿಸಬೇಕೆಂದು ತಿಳಿಸಲಾಗಿದೆ.

ಫ್ರಾನ್ಸಿಗೆ ಬ್ರಿಟಿಷ್ ಮಿಲಿಟರಿ ಸಹಾಯ

ಇನ್ನೊಂದು ಯುದ್ಧವು ಆದರೆ ಫ್ರಾನ್ಸಿಗೆ ಮಿಲಿಟರಿ ಸಹಾಯವನ್ನು ಬ್ರಿಟನ್ನು ನೀಡುವುದೆಂದು ಪಶ್ಚಿಮ ಯೂರೋಪಿನ್ನಿನ ಸೈನಿಕ ಮುಖಂಡರಾದ ಮಾಂಟ್ಗೊಮೆರಿಯವರು ಭರವಸೆಯಿತ್ತಿರುವರು.

ಅರಣ್ಯ ಅಧಿಕಾರಿಗಳ ಆತ್ಮಹತ್ಯೆ

ಶಿವಮೊಗ್ಗದಲ್ಲಿ ಅರಣ್ಯ ಇಲಾಖೆಯ ಅಸಿಸ್ಟೆಂಟ್ ಕನ್ಸರ್ವೇಟರಾದ ಶ್ರೀ ಸಿ ಮುತ್ತಣ್ಣನವರು ನಿನ್ನೆ ಬೆಳಿಗ್ಗೆ ತಮ್ಮ ಮನೆಯಲ್ಲಿ ಬಂದೂಕದಿಂದ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ. ಹೊಟ್ಟೆನೋವು ಮತ್ತು ಎದೆನೋವನ್ನು ತಡೆಯಲಾರದ ಈ ರೀತಿ ತಾವು ಪ್ರಾಣವನ್ನು ಕಳೆದುಕೊಳ್ಳುವುದಾಗಿ ಸೂಚಿಸಿ ಒಂದು ಪತ್ರ ಬರೆದಿಟ್ಟಿರುವರೆಂದು ಹೇಳಲಾಗಿದೆ. ನಾಳೆ ದಿನ ಬ್ರಿಟಿಷ್ ರಾಜರ ವರ್ಧಂತ್ಯುತ್ಸವವಾದುದರಿಂದ ಅಂದು ಇಲಾಖೆಗೆ ರಜಾ ದಿನವೆಂದು ಪ್ರಕಟಿಸಲಾಗಿದೆ.

ವರದಕ್ಷಿಣೆ ನಿರೋಧದ ಮಸೂದೆ

ವರದಕ್ಷಿಣೆಯನ್ನು ನಿರ್ಮೂಲ ಮಾಡುವ ಶಾಸನದ ಮಸೂದೆಯೊಂದನ್ನು ಮದರಾಸಿನ ಶಾಸನ ಸಭೆಯ ಮುಂದೆ ಶ್ರೀ ಜಿ ವಿಶ್ವನಾಥಂರವರು ಮಂಡಿಸಲಿದ್ದಾರೆ. ದಕ್ಷಿಣೆಯನ್ನು ತೆಗೆದುಕೊಳ್ಳುವ ವರನಿಗೆ ೬ ತಿಂಗಳು ಶಿಕ್ಷೆ ಮತ್ತು ೧ ಸಾವಿರ ರೂ ದಂಡ, ಅವನ ತಂದೆ ತಾಯಿಗಳಿಗೆ ೨ ವರ್ಷ ಶಿಕ್ಷೆಯನ್ನು ವಿಧಿಸಲಾಗುವುದೆಂದು ಮಸೂದೆಯಲ್ಲಿ ನಮೂದಿಸಲಾಗಿದೆ.

ಜನವರಿ ೨೬ನೇ ತಾ॥ ನೂತನ ರಾಜ್ಯಾಂಗ ಘೋಷಣೆ

ಭಾರತದ ನೂತನ ರಾಜ್ಯಾಂಗವನ್ನು ಬರುವ ಜನವರಿ ೨೬ನೇ ತಾ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಘೋಷಿಸಲಾಗುವುದೆಂದೂ, ಮತ್ತು ಈ ಅಕ್ಟೋಬರ್ ೨ ನೇ ತಾ॥ ಗಾಂಧೀ ಜಯಂತಿ ದಿನ ಅದು ಸಿದ್ಧವಾಗಿರಬೇಕೆಂದೂ ನಿನ್ನೆ ದಿನ ರಾಜ್ಯಾಂಗ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ.

೫ ಅಡಿ ಉದ್ದದ ಹಲ್ಲಿ

ದೆಹಲಿಯ ವಿಶ್ವವಿದ್ಯಾನಿಲಯದ ಪ್ರಾಣಿ ಶಾಸ್ತ್ರದ ಇಲಾಖೆಯವರು ೫ ಅಡಿ ಉದ್ದವಿರುವ ಎರಡು ಹಲ್ಲಿ ಮತ್ತು ೮ ಆನೆಗಳನ್ನು ಬೆಲ್ಜಿಯಮ್ಮಿನ ರಾಜಧಾನಿಯಾದ ಬ್ರಸಲ್ಸಿನ ವೈಜ್ಞಾನಿಕ ಸಂಶೋಧನಾಲಯಕ್ಕೆ ವಿಮಾನದಲ್ಲಿ ಕಳುಹಿಸಿರುತ್ತಾರೆ.

ಮಧ್ಯ ಪ್ರಾಂತ್ಯದಲ್ಲಿ ದುಷ್ಟ ಮೃಗಗಳ ಹಾವಳಿ

ಮಧ್ಯ ಪ್ರಾಂತ್ಯದ ೧೫ ಜಿಲ್ಲೆಗಳ ಅರಣ್ಯ ಪ್ರದೇಶದಲ್ಲಿ ದುಷ್ಟ ಮೃಗಗಳ ಹಾವಳಿಯು ಹೆಚ್ಚಾಗಿ ಅಲ್ಲಿನ ಜನರ ಮತ್ತು ದನಗಳು ಅವುಗಳ ಬಾಯಿಗೆ ತುತ್ತಾಗುತ್ತಿದ್ದಾರೆಂದೂ, ಅವುಗಳನ್ನು ಕೊಂದವರಿಗೆ ೨೫ ರಿಂದ ೪೦ ರೂ ಬಹುಮಾನ ಕೊಡಲಾಗುವುದೆಂದೂ ಸರ್ಕಾರದವರು ಪ್ರಕಟನೆಗಳಲ್ಲಿ ತಿಳಿಸಿರುತ್ತಾರೆ.

○ ಮೈಸೂರು ಪೌರ ಸಭೆಯ ಹೆಲ್ತ್ ಆಫೀಸರಾದ ಶ್ರೀ ಎಸ್ ಆರ್ ಬಾಂಥೋರವರನ್ನು ಮಲೇರಿಯಾ ಸಂಶೋಧನಾ ವಿಶೇಷ ಅಧಿಕಾರಿಗಳ ಸ್ಥಾನಕ್ಕೆ ವರ್ಗಾಯಿಸಲಾಗಿದೆ.

ಸದಸ್ಯರುಗಳು ತಲೆಗೆ ಉಡುಪನ್ನು ಧರಿಸಬೇಕು

ಪ್ರ॥ ಪ್ರ॥ ಸಭೆಯಲ್ಲಿ ಸೂಚನೆ

ಸ್ವಂ. ಸು ಫೋ॥] ಬೆಂಗಳೂರು ೮

ಪ್ರಜಾ ಪ್ರತಿನಿಧಿ ಸಭಾ ಅಧಿವೇಶನವು ಈ ದಿನ ೧೧ ಘಂಟೆಗೆ ಪ್ರಾರಂಭವಾದಾಗ್ಯ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾರೂ ಬಂದಿರಲಿಲ್ಲ. ಪ್ರಜಾ ಮಂಡಲಿಯ ಸದಸ್ಯರಾದ ಶ್ರೀ ಚಾಮೇಗೌಡರು ಇದನ್ನು ಅಧ್ಯಕ್ಷರ ಗಮನಕ್ಕೆ ತಂದು, ಅಧಿಕಾರದಲ್ಲಿರುವ ಪಕ್ಷಕ್ಕೆ ಸೇರಿದವರೆಂದು ಈ ರೀತಿ ಸಭೆಗೆ ಸಕಾಲದಲ್ಲಿ ಸದಸ್ಯರು ಬರದಿರುವುದು ಸರಿಯಾದುದಲ್ಲವೆಂದೂ, ಮಂತ್ರಿಗಳೂ ಸಹ ಕಾಲಕ್ಕೆ ಸರಿಯಾಗಿ ಬರುತ್ತಿಲ್ಲವೆಂದೂ ತಿಳಿಸಿದರು. ೧೧-೧೦ ಗಂಟೆಗೆ ಕೋರಂ ಇದ್ದುದರಿಂದ ಸಭೆಯು ಪ್ರಾರಂಭವಾಯಿತು.

ಪ್ರಶ್ನೋತ್ತರ ಕಾಲವಾದನಂತರ ಶ್ರೀ ಚನ್ನಬೋರೇಗೌಡರು ಪಾರ್ಲಿಮೆಂಟರಿ ಪದ್ಧತಿ ಪ್ರಕಾರ, ಸದಸ್ಯರೂ ಮತ್ತು ಅಧ್ಯಕ್ಷರೂ ತಲೆಗೆ ಉಡುಪನ್ನು ಧರಿಸಿಕೊಂಡು ಬರಬೇಕೆಂದೂ ಸೂಚಿಸಿದರು.

ಅನಂತರ ಶ್ರೀ ಚಿಕ್ಕಲಿಂಗಯ್ಯನವರು ಒಂದು ಹಕ್ಕು ಬಾಧ್ಯತಾ ನಿರ್ಣಯವನ್ನು ತಂದು, ಸರ್ಕಾರದ ಹಣ ಕಾಸಿನ ಇಲಾಖಾ ಕಾರ್ಯದರ್ಶಿಗಳು ಕಾಂಗ್ರೆಸ್ ಪಕ್ಷದವರಲ್ಲಿ ಮಾತ್ರ ಹೋಗಿ, ಚಿನ್ನದ ತೆರಿಗೆ ಮಸೂದೆ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ಮಿಕ್ಕ ಸದಸ್ಯರುಗಳಿಗೆ ಸರಿಯಾದ ಕಾಲದಲ್ಲಿ ಅವುಗಳನ್ನು ಕೊಡದಿದ್ದುದರಿಂದ ಸಭೆಯ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ಬಂದಿದೆಯೆಂದು ತಿಳಿಸಿದರು. ಈ ವಿಚಾರವು ಸಭೆಗೆ ಹೊರಗೆ ನಡೆದಿದ್ದುದರಿಂದ ಸಭೆಯ ಸಂಬಂಧ ಪಟ್ಟಿಲ್ಲವೆಂದು ಅಧ್ಯಕ್ಷರು ರೂಲಿಂಗ್ ಕೊಟ್ಟರು. ಅನಂತರ ಸಚಿವ ಶ್ರೀ ಪಾಪಣ್ಣನವರು ವಿವರಗಳನ್ನು ಕೊಡಲು ಎದ್ದರು. ಅದಕ್ಕೆ ಅಧ್ಯಕ್ಷರು ಅವಕಾಶ ಕೊಡಲಿಲ್ಲ.

ಅವಸರದ ಠರಾವು

ಪ್ರೈಮರಿ ಮತ್ತು ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳು ಸಿಕ್ಕದಿರುವುದರ ಬಗ್ಗೆ ಶ್ರೀ ಎಸ್ ಸಿ ಮಲ್ಲಯ್ಯನವರು ತಂದ ಅವಸರದ ಠರಾವನ್ನು ಅದು ತುರುತಾದ ವಿಷಯವಲ್ಲವೆಂದು ತಳ್ಳಿ ಹಾಕಿದರು.

ಸ್ಟಾಲಿನ್‌ರವರ ಮರಣ ಶಾಸನ

ರಷ್ಯದ ಸ್ಟಾಲಿನ್‌ರವರು ವಿಶೇಷ ವ್ಯಾಧಿಯಿಂದ ನರಳುತ್ತಿರುವರೆಂದೂ, ಮತ್ತು ಅವರು ತಮ್ಮ ಮರಣ ಶಾಸನವನ್ನು ಬರೆದಿಟ್ಟಿರುವರೆಂದೂ, ಅದನ್ನು ಅವರ ೭೦ನೇ ವರ್ಧಂತಿಯ ದಿನ ಪ್ರಕಟಿಸಲಾಗುವುದೆಂದೂ ಲಂಡನ್ನಿನ ಪತ್ರಿಕೆಯೊಂದು ವರದಿ ಮಾಡಿದೆ. ತಮ್ಮ ಮರಣದ ನಂತರ ರಷ್ಯದ ಆಡಳಿತವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಮತ್ತು ತಮ್ಮ ಸ್ಥಾನವನ್ನು ಯಾರು ಆಕ್ರಮಿಸಬೇಕೆಂಬುದನ್ನು ಅದರಲ್ಲಿ ನಮೂದಿಸಲಾಗಿದೆಯೆಂದು ಹೇಳಲಾಗಿದೆ.

ಮೈಸೂರಿನ ವಿದ್ಯಾರ್ಥಿಗೆ ಫ್ರೆಂಚ್ ಸರ್ಕಾರದ ವೇತನ

ಮೈಸೂರು ೮

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿದ್ದು, ಈಗ ಲಂಡನ್ನಿನಲ್ಲಿ ಪ್ರೌಢ ವಿದ್ಯಾಭ್ಯಾಸ ಪಡೆಯುತ್ತಿರುವ ಶ್ರೀ. ಎಂ.ವಿ. ಕೃಷ್ಣಸ್ವಾಮಿಯವರಿಗೆ ಫ್ರೆಂಚ್ ಸರ್ಕಾರದವರು ಪ್ಯಾರಿಸ್ಸಿನ ವೃತ್ತಿ ಶಿಕ್ಷಣಶಾಲೆಯಲ್ಲಿ ಚಲನ ಚಿತ್ರದ ಬಗ್ಗೆ ಶಿಕ್ಷಣ ಪಡೆಯಲು ವಿದ್ಯಾರ್ಥಿ ವೇತನವನ್ನು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಫ್ರೆಂಚ್ ಮತ್ತು ಭಾರತ ಸರ್ಕಾರಗಳ ಸಾಂಸ್ಕೃತಿಕ ಸಂಬಂಧದ ಆಧಾರದಮೇಲೆ ವಿದ್ಯಾರ್ಥಿ ವೇತನವನ್ನು ಪಡೆದವರಲ್ಲಿ ಇವರೇ ಮೊದಲನೆಯವರೆಂದು ಹೇಳಲಾಗಿದೆ.

ಪ್ರಶ್ನೋತ್ತರಗಳು

ಶ್ರೀರಂಗಪಟ್ಟಣ ತಾಲ್ಲೂಕಿನ ಕೆಲವು ಮಿಲ್ಲು ಮಾಲೀಕರುಗಳು ಕಾಳ ಸಂತೆಯ ವ್ಯಾಪಾರವನ್ನು ನಡೆಸುತ್ತಿದ್ದಾರೆಂದು ೧೯೪೮ನೇ ನವೆಂಬರ್‌ನಲ್ಲಿ ದೂರು ಸರ್ಕಾರಕ್ಕೆ ಬಂದಿತ್ತೆಂದೂ, ಈ ವಿಚಾರವಾಗಿ ತನಿಖೆ ನಡೆದು, ಫೈಂಡಿಂಗ್ಸ್ ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳ ಒಟ್ಟು ೪ ಮಿಲ್ಲುಗಳಲ್ಲಿ ಭತ್ತವು ಕಡಿಮೆಯಾಗಿರುವುದು ಕಂಡುಬಂದಿತೆಂದೂ, ಈ ಬಗ್ಗೆ ಕೂಲಂಕಷವಾಗಿ ವಿಚಾರಣೆಯು ನಡೆಯುತ್ತಿದೆಯೆಂದೂ ಗೃಹ ಸಚಿವರು ಶ್ರೀ ಬಿ. ಚಾಮಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಸರ್ಕಾರದವರು ಚೀಫ್ ಮಹಿಳಾ ವೈದ್ಯಾಧಿಕಾರಿಗಳ ಸ್ಥಾನವನ್ನು ವಜಾ ಮಾಡುವ ವಿಚಾರವಾಗಿ ಹಲವು ಪ್ರಶ್ನೆಗಳು ಹಾಕಲ್ಪಟ್ಟವು. ಆ ಸ್ಥಾನವನ್ನು ೧೯೪೯ನೇ ಜೂನ್ ೧೫ನೇ ತಾ॥ ವಜಾ ಮಾಡಲ್ಪಟ್ಟಿತ್ತೆಂದೂ ಮಹಿಳೆಯರ ಆಸ್ಪತ್ರೆಗಳಿಗಾಗಿಯೇ ಪ್ರತ್ಯೇಕವಾಗಿ ಒಬ್ಬ ಮಹಿಳಾ ಅಧಿಕಾರಿಗಳು ಇರುವುದರಿಂದ ಇಲಾಖೆಯ ಕೆಲಸವು ದಕ್ಷತೆಯಿಂದಲೂ ಮತ್ತು ಬೇಗನೆ ನಡೆಯುವುದಕ್ಕೂ ಸಹಾಯಕವಾಗುವುದಿಲ್ಲವೆಂದು ಸರ್ಕಾರದವರಿಗೆ ತೋರಿತು. ಆ ಸ್ಥಾನವು ಅತ್ಯಾವಶ್ಯಕವಾಗಿ ಇದ್ದೇ ಇರಬೇಕೆಂದು ಮಹಿಳಾ ಪ್ರತಿನಿಧಿಗಳು ಸರ್ಕಾರಕ್ಕೆ ಮನವಿ ಮಾಡಿಕೊಂಡಿರುವುದು ನಿಜ ಆದರೆ ಮಹಿಳಾ ವೈದ್ಯರುಗಳೇ ಆ ಸ್ಥಾನವು ಅನವಶ್ಯಕವೆಂದು ತಿಳಿಸಿರುವುದರಿಂದ ಅದನ್ನು ವಜಾ ಮಾಡಲಾಯಿತು. ಅದನ್ನು ಪುನಃ ಸ್ಥಾಪಿಸುವ ವಿಚಾರವು ಸರ್ಕಾರದ ಗಮನದಲ್ಲಿ ಇಲ್ಲವೆಂದು ಆರೋಗ್ಯ ಸಚಿವರು ಶ್ರೀಮತಿ [illegible]ಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಗಾಂಧೀ ಕೊಲೆ ಮೊಕದ್ದಮೆ ಅಪೀಲು

ಮಹಾತ್ಮರ ಕೊಲೆ ಮೊಕದ್ದಮೆಯ ಅಪೀಲಿನ ವಿಚಾರಣೆಯು ಪೂರ್ವ ಪಂಜಾಬ್ ಹೈಕೋರ್ಟಿನಲ್ಲಿ ಮುಗಿದು ಹೋಯಿತು ಅದರ ತೀರ್ಪನ್ನು ಕಾದಿಡಲಾಗಿದೆ

ಮಳೆಯಲ್ಲಿ ಸೇವಕನ ಮನೆಗೆ ೧೨ ಮೈಲಿ ನಡೆದ ಮಂತ್ರಿ

ಬೊಂಬಾಯಿನ ಗೃಹ ಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯಿಯವರು ತಮ್ಮ ಸೇವಕ ವಿಠ್ಠಲ ಲಕ್ಷ್ಮಣನ ಆಹ್ವಾನವನ್ನು ಮನ್ನಿಸಿ ಮಹಾಬಲೇಶ್ವರದಿಂದ ೧೨ ಮೈಲಿ ದೂರವಿರುವ ಆತನ ಊರಿಗೆ ಮಳೆಯು ಸುರಿಯುತ್ತಿದ್ದರೂ ನಡೆದುಕೊಂಡು ಹೋಗಿದ್ದರೆಂದು ವರದಿಯಾಗಿದೆ ಸೇವಕನು ಇತ್ತ ಉಪಹಾರವನ್ನು ಸ್ವೀಕರಿಸಿ ಮೂರು ಗಂಟೆ ಕಾಲ ಅಲ್ಲಿದ್ದು ಜನರ ಕುಂದು ಕೊರತೆಗಳನ್ನು ತಿಳಿದುಕೊಂಡರು

ಹೆಚ್ಚು ಬೆಳೆಯುವವರಿಗೆ ಬಹುಮಾನ

ಹೆಚ್ಚು ಆಹಾರ ಬೆಳೆಯುವ ರೈತ, ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಬಹುಮಾನಗಳನ್ನು ಕೊಡುವ ವ್ಯವಸ್ಥೆಯನ್ನು ಭಾರತ ಸರ್ಕಾರದವರು ಮಾಡಿದ್ದಾರೆಂದೂ, ಅದೇ ರೀತಿ ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲೂ ಮಾಡಲಾಗುವುದೆಂದೂ ಭಾರತ ಸರ್ಕಾರದ ಆಹಾರ ಸಚಿವರು ತಿಳಿಸಿರುತ್ತಾರೆ

ಸುಗಂಧವನ್ನು ಬೀರುವ ಕಲ್ಲಿದ್ದಲು

ಧೂಳು ಮತ್ತು ಹೊಗೆ ಇಲ್ಲದ ಸುವಾಸನೆಯಾಗಿರುವ ಕಲ್ಲಿದ್ದಲನ್ನು ಅಮೆರಿಕದಲ್ಲಿ ತಯಾರಿಸಲಾಗುತ್ತಿದೆಯೆಂದು ವರದಿಯಾಗಿದೆ ಸೆಂಟನ್ನು ಹೆಸೆಸಿದ ಒಂದು ಬಗೆಯ ಎಣ್ಣೆಯನ್ನು ಕಲ್ಲಿದ್ದಲಿಗೆ ಸೇರಿಸುವುದರಿಂದ, ಅದು ಸುವಾಸನೆಯುಳ್ಳದ್ದಾಗಿದ್ದು, ಧೂಳು ಮತ್ತು ಹೊಗೆಯು ಇರುವುದಿಲ್ಲವೆಂದು ಹೇಳಲಾಗಿದೆ

Edited, printed, and published by A.R Nagarajan at the Sadhvi Press, D Subbiah Road, Mysore.

ಅಮೆರಿಕಾ ಮತ್ತು ಅಫ್ಘಾನಿಸ್ತಾನಗಳಿಗೆ ತೀವ್ರ ಭಿನ್ನತೆ

ಅಮೆರಿಕಾ ಮತ್ತು ಅಫ್ಘಾನಿಸ್ತಾನ ಸರಕಾರಗಳ ಸಂಬಂಧವು ವಿಷಮಿಸುತ್ತಿರುವುದಾಗಿ ಮಾಸ್ಕೋ ರೇಡಿಯೋ ವರದಿ ಮಾಡಿದೆ ಅಫ್ಘಾನಿಸ್ತಾನದ ಗಡಿಯ ಕಟ್ಟಿನ ಕ್ಷೇತ್ರಗಳಲ್ಲಿ ರಕ್ಷಣಾ ನೆಲೆಗಳನ್ನು ನಿರ್ಮಿಸಲು ಅಮೆರಿಕಾಕ್ಕೆ ಹಿಂದೆ ಇತ್ತಿದ್ದ ರಹದಾರಿಯನ್ನು ಅಫ್ಘಾನಿಸ್ತಾನವು ರದ್ದುಪಡಿಸುವುದಾಗಿ ವರದಿಯಾಗಿದೆ

೪ ಮೈಲಿ ಆಳದಲ್ಲಿ ಎಣ್ಣೆ

ಲಾಸ್ ಏಂಜಲಿಸ್‌ನಲ್ಲಿ ಒಂದು ಕಡೆ ಎಣ್ಣೆಯನ್ನು ತೆಗೆಯುವ ಸಲುವಾಗಿ ೪ ಮೈಲಿಗಳ ಆಳದಷ್ಟು ಬಾವಿಯನ್ನು ತೋಡಿದಾಗ ಎಣ್ಣೆಯು ದೊರಕಿತೆಂದು ಹೇಳಲಾಗಿದೆ ಪ್ರಪಂಚಕ್ಕೆಲ್ಲಾ ಇದೊಂದು ರಿಕಾರ್ಡ್ ಆಗಿದೆ

ಅತ್ಯಂತ ಚೆಲುವೆಯರಾದ ಮಹಿಳೆಯರು

ಹೈದರಾಬಾದಿನ ರಾಜಕುಮಾರಿ ನಿಲೋಫರ್, ಬೀರಾರಿನ ರಾಜಕುಮಾರಿ ದುರ್ರೆಷಾವಾರ್, ಆಯೇಷಾ ಮತ್ತು ಜಯಪುರದ ಮಹಾರಾಣಿಯವರು ಪ್ರಪಂಚದ ೧೦ ಅತ್ಯಂತ ರೂಪವತಿಯರ ಗುಂಪಿನಲ್ಲಿ ಸೇರಿದ್ದಾರೆಂದು ಲಂಡನ್ನಿನ ಸುಪ್ರಸಿದ್ಧ ಫ್ಯಾಷನ್ ಫೋಟೋಗ್ರಾಫರನೊಬ್ಬನು ತಿಳಿಸಿರುತ್ತಾನೆ.

ಮದ್ರಾಸಿಗೆ ಬೇಡದ ಆಹಾರ ಮೈಸೂರಿಗೆ

ಅತಿ ಬೆಲೆಯುಳ್ಳದ್ದೂ ಮತ್ತು ಮದ್ರಾಸಿನವರಿಗೆ ಬೇಡವಾದದ್ದೂ ಆದ ಸಿಮೋಲಿನಾ ಎಂಬ ಆಹಾರ ಧಾನ್ಯವನ್ನು ಮೈಸೂರಿಗೆ ಕಳುಹಿಸಲಾಗುವುದೆಂದು ಮದರಾಸಿನ ಆಹಾರ ಸಚಿವರು ತಿಳಿಸಿರುತ್ತಾರೆ ಈ ಧಾನ್ಯವು ಮೈಸೂರಿನಲ್ಲಿ ಜನಪ್ರಿಯವಾಗಿದೆಯೆಂದೂ ಅವರು ಹೇಳಿರುತ್ತಾರೆ.

ಮನೆ ಬಾಡಿಗೆಗೆ ಇದೆ

— —:o: —

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂಬರ್ ೬೫. ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಬ್ರಿಟನ್ನಿಂದ ೧,೮೦,೦೦೦ ಸಾವಿರ ಜನರ ವಲಸೆ

ಕೆನಡಾ, ಆಸ್ಟ್ರೇಲಿಯಾ, ನ್ಯೂಜೀಲೆಂಡ್, ಮತ್ತು ದಕ್ಷಿಣ ಆಫ್ರಿಕದಲ್ಲಿ ನೆಲೆಸಲು ಬ್ರಿಟನ್ನಿನಿಂದ ೧,೮೧,೦೦೦ ಜನ ಗಂಡಸರೂ, ಹೆಂಗಸರೂ ಮತ್ತು ಮಕ್ಕಳೂ ಹಡಗಿನಲ್ಲಿ ಪ್ರಯಾಣ ಬೆಳೆಸಿದರು.

ವಿದ್ಯಾರಣ್ಯ ಸ್ಮಾರಕೋತ್ಸವ

ರಾಜಧಾನಿಯ ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಶ್ರೀ ವಿದ್ಯಾರಣ್ಯ ಸ್ಮಾರಕೋತ್ಸವವು ಶ್ರೀ ಅಂಬಳೆ ಸುಬ್ರಹ್ಮಣ್ಯಯ್ಯರ್ ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಬೆಳಿಗ್ಗೆ ೮ ಗಂಟೆಗೆ ಪೂಜೆ, ಸಂಜೆ ೬ ಗಂಟೆಗೆ ಸಭೆ ಜರುಗುವುದು

ದಕ್ಷಿಣ ಕೋರಿಯಾ ಮೇಲೆ ಕಮ್ಯೂನಿಸ್ಟರ ಧಾಳಿ

ದಕ್ಷಿಣ ಕೋರಿಯಾದ ಮೇಲೆ ೧ ಸಾವಿರ ಸಶಸ್ತ್ರ ಕಮ್ಯೂನಿಸ್ಟರು ಮುತ್ತಿಗೆ ಹಾಕಿರುವರೆಂದೂ, ಅದನ್ನು ರಕ್ಷಿಸುತ್ತಿದ್ದ ಸರ್ಕಾರಿ ಸೈನಿಕರ ಪೈಕಿ ೧೦೦ ಜನರು ಸತ್ತರೆಂದೂ ವರದಿಯಾಗಿದೆ

೧೯೫೧ ರ ಆಚೆಗೂ ರೇಷನಿಂಗ್

೧೯೫೧ ರ ಆಚೆಗೂ ರೇಷನಿಂಗ್ ಪದ್ಧತಿಯು ಜಾರಿಯಲ್ಲಿರುವುದೆಂದು ಭಾರತ ಸರ್ಕಾರದ ಆಹಾರ ಸಚಿವರು ತಿಳಿಸಿರುತ್ತಾರೆ

ಗುರುದೇವಾ ಹಾಲ್

———:o:———

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ. ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ :: ಮೈಸೂರು

ಶ್ರೀ ಗಾಯತ್ರೀ

ದಿನವಹಿ 3 ಆಟಗಳು

ಫಾರೆವರ್ ಆಂಬರ್

Forever Amber

ಕಡೆಯ ದಿನ :: ನಿರಾಶರಾಗದಿರಿ

9-6-49ರಿಂದ 3 ದಿನಗಳು ಮಾತ್ರ

ದಿ ರೇಜರ್ಸ್ ಎಡ್ಜ್

ಪಾತ್ರ:–ಟೈರೋನ್ ಪವರ್

* ಲಕ್ಷ್ಮೀ ಥಿಯೇಟರ್ *

9—6—49ರಿಂದ :: ದಿನವಹಿ ೩ ಆಟಗಳು

ನ್ಯೂ ಇಂಡಿಯ ಫಿಲಂಸ್‌ರವರ

★ ನಯಿ ರೀತ್ ★ (ಹಿಂದಿ)

ಭೂಮಿಕೆ:–ಮೆಚ್ಚಿನ ತಾರೆ ಸುಲೋಚನಾ ಚಟರ್ಜಿ, ಗೀತಾ ಬಾಲಿ ಮತ್ತು ರಾಜೇಂದ್ರ

Better Late than Never

You have less than 3 months for the September Examination

—: But we can Coach you for :—

B Sc English P C.M M E S & Inter–Arts & Science

S S.L.C All Subjects

Join To-Day :–CITY TUTORIAL COLLEGE

1531, Near V. V. Market, Mysore

ಶುಭಮಸ್ತು

॥ ಸಮಸ್ತ ಸನ್ಮಂಗಳಾನಿ ಭವಂತು ॥

ಮದುವೆ ಜವಳಿಗಳಿಗೆ

ಹೆಸರುವಾಸಿಯಾದ ಅಂಗಡಿ

ನ್ಯಾಯವಾದ ಬೆಲೆ, ನಾಣ್ಯವಾದ ಮಾಲು.

ಬಾಬುಸಾಬ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೋಮಕಲಾ

ಗಂಡಸರ ಮೂತ್ರ ಕೋಶದ ಬಿಳುಪು, ಕೆಂಪು ಮೈ ಮೇಲೆ ಸೋಜವ ಮಚ್ಚೆಗಳು, ಮೇಹ ವ್ರಣಗಳು ಸಹಾ ಪಥ್ಯವಿಲ್ಲದೆ ಸೇವಿಸುವ ಔಷಧಿ

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪ್ರಭಾ ★ 11 6-49ರಿಂದ

ಪ್ರದರ್ಶನ ಪ್ರಾರಂಭ

ದಿನವಹಿ ೩ ಆಟಗಳು

BAZAR

ಮಧುಕರ್‌ರವರ

* ಬಜಾರ್ * (ಹಿಂದಿ)

• ಯಾಕೂಬ್, ಗೋಪ್, ನಿಗರ್ ಸುಲ್ತಾನ

• ಶ್ಯಾಮ್

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೯-೬-೪೯ [ಸಂಚಿಕೆ ೨೫೪

ಮೈಸೂರಿನಲ್ಲಿ ವಿಶ್ವದ ಕಾರ್ಮಿಕ ಸಮ್ಮೇಳನ

ಸಂಗೀತ ಕಛೇರಿ

ಮೈಸೂರು ೯

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ "ಸಾಧ್ವಿ" ಪತ್ರಿಕಾ ಕಛೇರಿಯ ಮಹಡಿ ಮೇಲೆ ನಾಳೆ ರಾತ್ರಿ ೮-೩೦ ಗಂಟೆಗೆ ಪೌರ್ಣಮಾ ಪ್ರಯುಕ್ತ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಶ್ರೀಮತಿ ಎಸ್ ಸೀತಾಲಕ್ಷ್ಮಮ್ಮನವರಿಂದ ಹಾಡುಗಾರಿಕೆಯೂ, ವಿದ್ವಾನ್ ಆರ್. ವಿಶ್ವೇಶ್ವರರವರಿಂದ ವೀಣಾವಾದನವೂ ನಡೆಯುವುದು. ಸರ್ವರಿಗೂ ಸ್ವಾಗತವುಂಟು

ಮೈಸೂರು ಪ್ರತ್ಯೇಕ ಪ್ರಾಂತ್ಯವಾಗಿರಬೇಕು

ರಾಜಧಾನಿಯ ಕನ್ನೇಗೌಡನ ಕೊಪ್ಪಲಿನ ರೈತ ಯುವಕರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಕಳೆದ ಭಾನುವಾರ ಶ್ರೀ ಎ ಎಸ್ ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಮೈಸೂರು ಪ್ರತ್ಯೇಕ ಪ್ರಾಂತ್ಯವಾಗಿರಬಲ್ಲ ಅರ್ಹತೆಯನ್ನು ಪಡೆದಿರುವುದರಿಂದ, ಮೈಸೂರಿನೊಳಗೆ ಕರ್ನಾಟಕದ ಇತರ ಭಾಗಗಳನ್ನು ಸೇರಿಸಿ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂದೂ, ಅದಕ್ಕೆ ಮೈಸೂರಿನ ರಾಜರು ಶಾಸನ ಬದ್ಧ ಪ್ರಭುಗಳಾಗಿರಬೇಕೆಂದೂ ಮತ್ತು ಶ್ರೀಮನ್ಮಹಾರಾಜರವರ ಸ್ಥಾನ ಮಾನಗಳಿಗೆ ಚ್ಯುತಿ ಬಾರದಂತೆ ರಾಜ್ಯಾಂಗ ರೂಪಿಸಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು

ಲೋಕ ಸೇವಾ ಮಂಡಲಿ

ರಾಜಧಾನಿಯ ಲೋಕ ಸೇವಾ ಮಂಡಲಿಯ ಕಾರ್ಯಕಾರೀ ಸಮಿತಿಯ ಚುನಾವಣೆಯು ಮೊನ್ನೆ ದಿನ ನಡೆದು, ಶ್ರೀ ಕೆ ಆರ್ ರಾಮಸ್ವಾಮಿಯವರನ್ನು ಕಾರ್ಯದರ್ಶಿಯನ್ನಾಗಿ ಚುನಾಯಿಸಲಾಯಿತು ಶ್ರೀಗಳಾದ ಅನಂತರಾಮಯ್ಯ, ಆರ್ ರಘುನಾಥಾಚಾರ್, ಹೆಚ್ ಎಲ್ ಶ್ರೀನಿವಾಸಯ್ಯ ವಿಟ್ಠಲರಾವ್ ಮತ್ತು ಟಿ ಎಸ್ ರಾಮಕೃಷ್ಣಯ್ಯನವರುಗಳು ಸದಸ್ಯರಾಗಿ ಚುನಾಯಿತರಾದರು

ದೇವನೂರು ಸ್ವಾಮಿಗಳ ಸುವರ್ಣ ಮಹೋತ್ಸವ

ನಂಜನಗೂಡು ತಾಲ್ಲೂಕು ದೇವನೂರಿನ ಶ್ರೀ ಗುರುಮಲ್ಲೇಶ್ವರ ಮಹಾಸ್ವಾಮಿಗಳ ಸುವರ್ಣ ಮಹೋತ್ಸವವೂ ಮತ್ತು ಪೂರ್ವಾತನರ ಮಹಾ ಪೂಜೆಯೂ ಇದೇ ೧೩ನೇ ತಾ॥ ಸೋಮವಾರ ನಡೆಯುವವು ಶ್ರೀ ಸಿದ್ಧಗಂಗಾಕ್ಷೇತ್ರದ ಶ್ರೀ ಶಿವಕುಮಾರ ಸ್ವಾಮಿಗಳು ಅಧ್ಯಕ್ಷತೆ ವಹಿಸುವರು ಮೈಸೂರು ಅರಮನೆ ರಂಚಗವಿಯ ಅಧ್ಯಕ್ಷರಾದ ಶ್ರೀ ಗೌರೀಶಂಕರ ಸ್ವಾಮಿಗಳು ಭಾಷಣ ಮಾಡುವರು ಸುತ್ತೂರಿನ ವೀರಸಿಂಹಾಸನದ ಪಟ್ಟಾಧ್ಯಕ್ಷರಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಸನ್ಮಾನ ಜರುಗುವುದು

ಗಣಿ ಕೆಲಸಗಾರರಿಗೆ ೧೮ ಲಕ್ಷ ಡಾಲರುಗಳ ದಂಡ

ಅಮೆರಿಕದಲ್ಲಿ ಗಣಿ ಕೆಲಸಗಾರರ ಮುಷ್ಕರವನ್ನು ಮುಕ್ತಾಯಗೊಳಿಸಬೇಕೆಂಬ ಕೋರ್ಟಿನ ಅಪ್ಪಣೆಯನ್ನು ತಿರಸ್ಕರಿಸಿದ ಆಪಾದನೆಯಮೇಲೆ ಕೂಲಿಗಾರರ ಮುಖಂಡರಾದ ಜಾನ್ ಎಲ್ ಲೆವಿಸ್ ಮತ್ತು ಇತರ ಗಣಿ ಕೆಲಸಗಾರರು ೨೦,೦೦೦ ಡಾಲರುಗಳನ್ನು ಜುಲ್ಮಾನೆ ಕೊಡಬೇಕೆಂದು ಕೋರ್ಟಿನವರು ಆಜ್ಞೆ ಮಾಡಿದ್ದಾರೆ

ಚಿನ್ನದ ಗಣಿಯ ರಾಷ್ಟ್ರೀಕರಣವಿಲ್ಲ

ಪ್ರಾ॥ ಪ್ರಾ॥ ಸಭೆಯಲ್ಲಿ ಸರ್ಕಾರದ ಹೇಳಿಕೆ

ಸ್ವಂ ಸು ಫೋನ್] ಬೆಂಗಳೂರು ೯

ನಿನ್ನೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೋಟಾರು ಎಂಜಿನ್‌ಗಳ ಮೇಲಿನ ತೆರಿಗೆ ಮತ್ತು ಮೈಸೂರು ಲಿಮಿಟೆಡ್ ತಿದ್ದುಪಡಿ ಮಸೂದೆಗಳು ಅಂಗೀಕೃತವಾದುವು

ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ಮೋಟಾರು ಎಂಜಿನ್‌ಗಳ ಮೇಲಿನ ಮಸೂದೆಯನ್ನು ಮಂಡಿಸಿ, ಹೊರ ಪ್ರಾಂತ್ಯಗಳಲ್ಲಿ ಪೆಟ್ರೋಲಿನ ಮೇಲೆ ಗ್ಯಾಲನ್ ಒಂದಕ್ಕೆ ೮ ಆಣೆ ತೆರಿಗೆಯನ್ನು ಹಾಕಲಾಗುತ್ತಿದೆಯೆಂದೂ, ಅದೇ ರೀತಿ ಮೈಸೂರಿನಲ್ಲೂ ತೆರಿಗೆಯನ್ನು ವಿಧಿಸಲಾಗುವುದೆಂದೂ, ಇದರಿಂದ ೧೧ ಲಕ್ಷ ರೂ ವರಮಾನ ಬರುವುದೆಂದೂ, ಅದರ ಮೇಲೆ ಈಗಿರುವ ಮಾರಾಟದ ತೆರಿಗೆಯನ್ನು ವಜಾ ಮಾಡಲಾಗುವುದೆಂದೂ ತಿಳಿಸಿದರು.

ಶ್ರೀಗಳಾದ ಭೂಪಾಳಂ ಎಸ್ ಸಿ ಮಲ್ಲಯ್ಯ, ಧರ್ಮಪ್ಪ, ಮಿರ್ಜಾಲ್ಟರ್ ಮುಂತಾದವರು ಇದನ್ನು ವಿರೋಧಿಸಿ, ಈಗಾಗಲೇ ಪೆಟ್ರೋಲಿನ ದರವು ವಿಶೇಷವಾಗಿದೆಯೆಂದೂ, ಇದರಿಂದ ಬಡ ಜನರಿಗೆ ಕಷ್ಟವಾಗುವುದೆಂದೂ ತಿಳಿಸಿದರು

ಚಿನ್ನದ ಮೇಲಿನ ತೆರಿಗೆ ವಜಾ ಮಾಡುವ ಮಸೂದೆ

ಮೇಲ್ಕಂಡ ಮಸೂದೆಯನ್ನು ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ಮಂಡಿಸಿ ಚಿನ್ನದ ಗಣಿ ಕಂಪೆನಿಯ ವರಮಾನದಲ್ಲಿ ಹೆಚ್ಚು ಭಾಗವನ್ನು ಸರ್ಕಾರದವರು ತೆರಿಗೆಯ ರೂಪದಲ್ಲಿ ತೆಗೆದುಕೊಳ್ಳುತ್ತಿರುವುದರಿಂದ ಗಣಿಯನ್ನು ನಡೆಸಲು ಬಹಳ ಕಷ್ಟವಾಗಿರುವುದೆಂದು ಕಂಪನಿಯವರು ಮನವಿ ಮಾಡಿಕೊಂಡಿರುವುದರಿಂದಲೂ ಮತ್ತು ಇಂತಹ ಕೈಗಾರಿಕೆಯು ಅಭಿವೃದ್ಧಿಗೊಳ್ಳಬೇಕಾಗಿರುವುದರಿಂದಲೂ ಅದರ ಮೇಲಿನ ತೆರಿಗೆಯನ್ನು ವಜಾ ಮಾಡಬೇಕಾಯಿತೆಂದೂ ತಿಳಿಸಿದರು ಇದರಿಂದ ಸರ್ಕಾರಕ್ಕೆ ೩೦ ಲಕ್ಷ ರೂ ನಷ್ಟವುಂಟಾಗುವುದೆಂದೂ ತಿಳಿಸಲಾಯಿತು ಈ ಮಸೂದೆಯು ಜಾರಿಗೆ ಬಂದ ಕೂಡಲೇ ಚಿನ್ನದ ಗಣಿ ಕಂಪೆನಿಯವರು ತಮ್ಮ ಆಡಳಿತದ ಕೇಂದ್ರವನ್ನು ಸಂಸ್ಥಾನದಲ್ಲೇ ಇಡಬೇಕೆಂದೂ ಮತ್ತು ಭಾರತೀಯರನ್ನೇ ಹೆಚ್ಚಾಗಿ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದೂ ಷರತ್ತು ಹಾಕಲಾಗಿದೆಯೆಂದೂ ಅವರು ತಿಳಿಸಿದರು ಚಿನ್ನದ ಗಣಿ ಕೆಲಸವು ಬಹಳ ಕಷ್ಟ ಮತ್ತು ದುಬಾರಿಯಾಗಿರುವುದರಿಂದ ಅದನ್ನು ರಾಷ್ಟ್ರೀಕರಣ ಮಾಡಲು ಸಾಧ್ಯವಿಲ್ಲವೆಂದು ಸಚಿವರು ತಿಳಿಸಿದರು

ಶ್ರೀ ಭೂಪಾಳಂರವರು ಇದನ್ನು ವಿರೋಧಿಸಿ, ಹಿಂದೆ ಕಾಂಗ್ರೆಸ್ಸಿನವರೇ ತೆರಿಗೆಯನ್ನು ವಜಾ ಮಾಡಕೂಡದೆಂದು ವಿರೋಧಿಸಿದವರು ಈಗ ಈ ರೀತಿ ಮಾಡುತ್ತಿರುವುದಕ್ಕೆ ಅರ್ಥವಿಲ್ಲವೆಂದು ಹೇಳಿದರು

ಜೂನ್ ಯನ್ನು ೧೦ನೇ ತಾ॥ ಗೆ ಮುಂದಕ್ಕೆ ಹಾಕಲಾಯಿತು. ೧೧ನೇ ತಾ॥ ಸಹ ಸಭೆಯನ್ನು ನಡೆಸುವ ಸಂಭವವಿದೆಯೆಂದು ಮುಖ್ಯ ಸಚಿವರು ತಿಳಿಸಿದರು

ರೈಲ್ವೆ ಪ್ರಯಾಣಿಕರಿಗೆ ಪಾರಿವಾಳದ ಕಾವಲು

ಅಸ್ಸಾಂ ರೈಲ್ವೆಯ ಡಿಬ್ರುಗರ್ ಮತ್ತು ಲೋಡೋ ಮಾರ್ಗದಲ್ಲಿ ಕಳೆದ ೧೦ ದಿನಗಳಿಂದಲೂ ಪಾರಿವಾಳವೊಂದು ಪ್ರತಿದಿನವೂ ಪ್ರಯಾಣಿಕರ ರೈಲಿನ ಸಂಗಡ ಹೋಗಿ ಬರುತ್ತಿದೆಯೆಂದು ವರದಿಯಾಗಿದೆ ರೈಲ್ವೆ ಎಂಜನಿನ ಮೇಲೆ ಪಕ್ಷಿಯು ಬಂದು ಕುಳಿತುಕೊಳ್ಳುವುದೆಂದೂ, ರೈಲು ಹೊರಟ ಕೂಡಲೇ ಅದರ ಮುಂಭಾಗದಲ್ಲಿ ಹಾರುತ್ತಿರುವುದೆಂದೂ, ಪ್ರತಿ ದಿನವೂ ೬೦ ಮೈಲಿಗಳು ಹೋಗಿ ರೈಲಿನ ಸಂಗಡ ವಾಪಸು ಬರುವುದೆಂದೂ ಹೇಳಲಾಗಿದೆ ಗಂಟೆಗೆ ೩೦ ಮೈಲಿ ರೈಲು ಪ್ರಯಾಣ ಮಾಡುತ್ತಿದ್ದರೂ, ಯಾವಾಗಲೂ ಪಾರಿವಾಳವು ಮುಂದಾಗಿರುವುದೆಂದು ಹೇಳಲಾಗಿದೆ ಕಳೆದ ಎರಡು ದಿನಗಳಿಂದ ಅದು ಈ ರೈಲನ್ನು ಬಿಟ್ಟು, ಬೇರೆ ಮಾರ್ಗದ ರೈಲಿನ ಸಂಗಡ ಹೋಗುತ್ತಿದೆ.

ಕೊಚ್ಚಿಯಲ್ಲಿ ೧೨ ಕೋಟಿ ರೂ ವೆಚ್ಚದ ನೌಕಾ ಶಾಲೆಗಳು

೧೨ ಕೋಟಿ ರೂ ವೆಚ್ಚದಲ್ಲಿ ೪ ನೌಕಾ ಶಿಕ್ಷಣ ಶಾಲೆಗಳನ್ನು ಕೊಚ್ಚಿಯಲ್ಲಿ ಸ್ಥಾಪಿಸಬೇಕೆಂದು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ ಈ ಶಿಕ್ಷಣ ಶಾಲೆಗಳಲ್ಲಿ ತೋಪು ಹಾರಿಸುವುದು, ಟಾರ್ಪೆಡೋ ಹೊಡೆಯುವುದು, ನೌಕಾ ಯಾನ ಮತ್ತು ನಾವಿಕ ವಿದ್ಯೆಗಳನ್ನು ಕಲಿಸಲಾಗುವುದು

ಮೈಸೂರಿನಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮುಂದಿನ ಅಧಿವೇಶನವನ್ನು ಮೈಸೂರಿನಲ್ಲಿ ನಡೆಸಬೇಕೆಂಬ ಭಾರತದ ಆಹ್ವಾನವನ್ನು ಜಿನೀವಾದಲ್ಲಿ ಕಳೆದ ೩ ನೇ ತಾ॥ ಪ್ರಾರಂಭವಾದ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಒಪ್ಪಲಾಯಿತು

ಪರೀಕ್ಷೆಯಲ್ಲಿ ಫೇಲಾದುದಕ್ಕೆ ಆತ್ಮ ಹತ್ಯೆ

ಬೊಂಬಾಯಿ ವಿಶ್ವವಿದ್ಯಾಲಯದ ೧೬ ವರ್ಷದ ಪಾರ್ಸಿ ವಿದ್ಯಾರ್ಥಿಯೊಬ್ಬನು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲವೆಂದು ಒಂದು ಎತ್ತರವಾದ ಗೋಪುರದಿಂದ ಕೆಳಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ

ಜುಲೈ ೧ನೇ ತಾ॥ ನಿಂದ ಕೇರಳ ಯೂನಿಯನ್

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಮುಂದಿನ ತಿಂಗಳು ೧ನೇ ತಾ॥ ಐಕ್ಯವಾಗಿ ಕೇರಳ ಸಂಸ್ಥಾನವನ್ನು ಸ್ಥಾಪಿಸಲಾಗುವುದು. ಅದಕ್ಕೆ ತಿರುವಾಂಕೂರು ಅರಸರು ರಾಜ ಪ್ರಮುಖರಾಗಿರುವರು, ಯೂನಿಯನ್ ಆಡಳಿತವು ಸಮರ್ಪಕವಾಗಿ ನಡೆಯುತಿದ್ದಲ್ಲಿ ಆಗ ರಾಜ ಪ್ರಮುಖರು ವಿಶೇಷ ಅಜ್ಞೆಯನ್ನು ಹೊರಡಿಸಿ, ಆಡಳಿತವನ್ನು ತಾವೇ ವಹಿಸಿಕೊಳ್ಳುವ ವಿಶೇಷ ಅಧಿಕಾರವನ್ನು ಅವರಿಗೆ ಕೊಡಲಾಗಿದೆ ತಿರುವಾಂಕೂರಿನಲ್ಲಿರುವ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದ ಆಡಳಿತವು ರಾಜ ಪ್ರಮುಖರಿಗೆ ಸೇರಿದ್ದು, ಸರ್ಕಾರದವರು ಅದಕ್ಕೆ ೫೦ ಲಕ್ಷ ರೂ ಹಣ ಕೊಡಬೇಕೆಂದು ಸಮ್ಮತಿಸಲಾಗಿದೆ

ವಿಮಾನ ಕಾರ್ಖಾನೆಯಲ್ಲಿ ಬಸ್ ಬಾಡಿಗಳ ತಯಾರಿ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಬಸ್ ಬಾಡಿಗಳನ್ನು ತಯಾರಿಸುವ ವಿಷಯವನ್ನು ದೆಹಲಿಯಲ್ಲಿ ನಾಳೆ ದಿನ ನಡೆಯಲಿರುವ ಅದರ ಆಡಳಿತ ವರ್ಗದ ಸಭೆಯಲ್ಲಿ ಪರಿಶೀಲಿಸಲಾಗುವುದೆಂದು ಹೇಳಲಾಗಿದೆ

ಸಂತೋಷ ಕೂಟ

ರಾಜಧಾನಿಯ ಕಾಶೀಪತಿ ಅಗ್ರಹಾರದಲ್ಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ... ವರ್ಷ ಪ್ರಾರಂಭವಾದ ... ಕಳೆದ ಭಾನುವಾರ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಅನೇಕ ಗಣ್ಯ ವ್ಯಕ್ತಿಗಳು ಆಹ್ವಾನಿತರಾಗಿದ್ದರು ... ಗೊತ್ತಾಗಿದೆ ... ಸಂಗೀತ ಶಿಕ್ಷಣ ... ಕೊಡುತ್ತಿದ್ದಾರೆ

ಕಾರಂಜಿ ಕೆರೆಯಲ್ಲಿ ಶವ

ರಾಜಧಾನಿಯ ಕಾರಂಜಿ ಕೆರೆಯಲ್ಲಿ ನಿನ್ನೆ ಬೆಳಿಗ್ಗೆ ೧೬ ವರ್ಷದ ... ಒಂದು ದೇಹವನ್ನು ... ಪೋಲೀಸರು ... ತನಿಖೆ ನಡೆಸಿದರು. ... ಗೊತ್ತಾಗಿಲ್ಲ

ಸಿಕ್ಕಿಂ ಸಂಸ್ಥಾನದ ಆಡಳಿತ ಭಾರತಕ್ಕೆ

ಸಿಕ್ಕಿಂ ಸಂಸ್ಥಾನದ ಮಹಾರಾಜರಿಗೂ ಅಲ್ಲಿನ ಕಾಂಗ್ರೆಸ್ಸಿಗೂ ಉಂಟಾದ ಹೋರಾಟದ ಸಂಘರ್ಷವಾಗಿ, ಮಹಾರಾಜರು ಮತ್ತು ಈಗ ಇರುವ ಮಂತ್ರಿ ಮಂಡಲವು ದೇಶದಲ್ಲಿ ಉಂಟಾಗಬಹುದಾದ ಭೀತಿಯನ್ನು ತಪ್ಪಿಸಲು ಅಸಾಧ್ಯವಾದುದರಿಂದ ಭಾರತ ಸರಕಾರದವರ ಅಲ್ಲಿನ ಆಡಳಿತದ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳಲಿರುವರೆಂದು ಭಾರತ ಸರಕಾರದ ವಿದೇಶಾಂಗ ಇಲಾಖೆಯು ಪ್ರಕಟಣೆಯೊಂದು ತಿಳಿಸುತ್ತದೆ

ರೈತರುಗಳ ಸತ್ಯಾಗ್ರಹ

ಕೋಲಾರದ ತಾಲ್ಲೂಕು ಜೋಡಿ ವಡಗೂರಿನ ಜೋಡಿದಾರರು ಮತ್ತು ಪೋಲೀಸರು ಅಲ್ಲಿರುವ ರೈತರುಗಳಿಗೆ ಕೊಡುತ್ತಿರುವ ಕಷ್ಟಗಳನ್ನು ತಪ್ಪಿಸಲು ರೈತರು ಇದೇ ೧೦ನೇ ತಾ॥ ಯಿಂದ ಸತ್ಯಾಗ್ರಹ ಹೂಡುವುದಾಗಿ ತಿಳಿಸಿದ್ದಾರೆ ಅಲ್ಲಿರುವ ಜೋಡಿ ಪದ್ಧತಿಯನ್ನು ವಜಾ ಮಾಡಬೇಕೆಂದು ಅವರುಗಳು ಕೋರಿರುತ್ತಾರೆ

ಹೈದರಾಬಾದ್ ಮಾಜಿ ಸಚಿವರ ವಜಾ

ಹೈದರಾಬಾದಿನ ಲಯಾಕಾಲಿ ಮಂತ್ರಿ ಮಂಡಲದಲ್ಲಿ ಹಣಕಾಸಿನ ಸಚಿವರಾಗಿದ್ದ ನವಾಬ್ ಮೊಯಿನ್ ನವಾಜ್ ಜಂಗರನ್ನು ಇದೇ ಮಾರ್ಚಿ ೧೯ನೇ ತಾ॥ ನಿಂದ ಅವರ ಕೆಲಸದಿಂದ ತೆಗೆದು ಹಾಕಲಾಗಿದೆಯೆಂದು ಅಲ್ಲಿನ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ. ಸರ್ಕಾರೀ ಹಣದ ದುರುಪಯೋಗ ಮತ್ತು ನಿಜಾಮರ ಮತ್ತು ಸರ್ಕಾರದ ಆಜ್ಞೆಗಳನ್ನು ಉಲ್ಲಂಘಿಸಿದುದೇ ಅದಕ್ಕೆ ಕಾರಣವೆಂದು ತಿಳಿಸಲಾಗಿದೆ

ನಿಮ್ಮ ಮೈ ಮೊಕಮಲ್ಲಿನಂತೆ

ಹೊಳೆಯಬೇಕೆ? ನೀವು

ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಭಾರತ ಮತ್ತು ಪಾಕೀಸ್ಥಾನ ಗಡಿಯಲ್ಲಿ ಕದನ

ಭಾರತ ಮತ್ತು ಪಾಕಿಸ್ಥಾನದ ಗಡಿ ಪ್ರದೇಶವಾದ ರಾವಿ ನದಿಯ ದಡದಲ್ಲಿರುವ ಕಕ್ಕರ್ ಎಂಬ ಹಳ್ಳಿಗೆ ಅಕ್ರಮವಾಗಿ ನುಗ್ಗಿದ ಹಲವು ಪಾಕಿಸ್ತಾನಿಗಳಿಗೂ ಅಲ್ಲಿ ಹುಲ್ಲು ಮೇಯಿಸುತ್ತಿದ್ದವರ ಸಹಾಯಕ್ಕೆ ಬಂದ ಮಾಜಿ ಸಿಪಾಯಿ ಮತ್ತು ಇತರ ಪೊಲೀಸರಿಗೂ ನಡೆದ ಮೂರು ಗಂಟೆಗಳ ಗುಂಡಿನ ಕಾದಾಟದಲ್ಲಿ ಒಬ್ಬ ಭಾರತೀಯನು ಸತ್ತನೆಂದೂ, ಹಲವು ಪಾಕಿಸ್ತಾನಿಗಳಿಗೆ ಗಾಯವಾಯಿತೆಂದೂ ವರದಿಯಾಗಿದೆ ಪಾಕಿಸ್ತಾನದ ಪುಂಡರು ದನಕರುಗಳನ್ನು ಹೊತ್ತುಕೊಂಡು ಹೋದರೆಂದು ಹೇಳಲಾಗಿದೆ

ಆನೆಗಾಗಿ ನೆಹರೂರವರಲ್ಲಿ ಜಪಾನ್ ಮಕ್ಕಳ ಮನವಿ

ಭಾರತದಿಂದ ಒಂದು ಆನೆಯನ್ನು ಕಳುಹಿಸಿಕೊಡಬೇಕೆಂದು ಜಪಾನಿನ ೧೫೦೦೦ ಜನ ಶಾಲಾ ಮಕ್ಕಳು ಪಂಡಿತ ನೆಹರೂರವರಿಗೆ ಮನವಿಯೊಂದನ್ನು ಕಳುಹಿಸಿರುತ್ತಾರೆ ಟೋಕಿಯೋದಲ್ಲಿರುವ ಮೃಗಾಲಯದಲ್ಲಿ ಆನೆಯಿಲ್ಲದೆ ಮಕ್ಕಳು ಅಲ್ಲಿ ಆಡಲು ಅನಾನುಕೂಲವಾಗಿದೆಯೆಂದು ಹೇಳಲಾಗಿದೆ.

ಗುರುದೇವಾ ಹಾಲ್

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ. ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ .. ಮೈಸೂರು

ಲಕ್ಷ್ಮೀ ಥಿಯೇಟರ್

ಬೆಳಗಿನ ಪ್ರದರ್ಶನಗಳು

10-6-49ರಿಂದ 3 ದಿನಗಳು ಮಾತ್ರ

ಪ್ರಕಾಶ್‌ರವರ

ವಿಕ್ರಮಾದಿತ್ಯ

ಪಾತ್ರ –ಪೃಥ್ವೀರಾಜ್, ಪ್ರೇಮ್ ಅದೀಬ್, ರತ್ನಮಾಲಾ

ವಿವಾಹ ಮಹೋತ್ಸವಗಳು

ದಿವಂಗತ ಧರ್ಮರತ್ನಾಕರ ಸಿ. ಪೆರುಮಾಳ್ ಚೆಟ್ಟಿಯವರ ಪುತ್ರಿ ಚಿ॥ಸೌ॥ ಲೀಲಾವತಿ ಮತ್ತು ಶ್ರೀ ಟಿ ಎಸ್ ಪೊನ್ನುರಂಗಂ ಚೆಟ್ಟಿಯವರ ಪುತ್ರ ಶ್ರೀ ಟಿ.ಪಿ ಓವಾಕರರ ವಿವಾಹವು ನೆನ್ನೆ ದಿನ ರಾಜಧಾನಿಯಲ್ಲಿ ವೈಭವದಿಂದ ನಡೆಯಿತು

ರಾಜಧಾನಿಯ ಹಳೇ ಅಗ್ರಹಾರದ ವರ್ತಕರಾದ ಶ್ರೀ ಎ ಒರಮಯ್ಯನವರು ತಮ್ಮ ಪುತ್ರ ಶ್ರೀ ಬ್ರಹ್ಮಲಿಂಗಪ್ಪನವರಿಗೆ ಬೆಂಗಳೂರಿನ ಶ್ರೀ ಬಿ ಬಸಪ್ಪನವರ ಪುತ್ರಿ ಚಿ॥ ಸೌ॥ ಬಿ ಅಂಬಿಕಾಂಬನನ್ನು ತಂದುಕೊಂಡು ವಿವಾಹವನ್ನು ನಿನ್ನೆ ಬೆಂಗಳೂರಿನಲ್ಲಿ ನೆರವೇರಿಸಿದರು

ಮಾಂಬಳ್ಳಿಯ ಸಾಹುಕಾರ್ ಮತ್ತು ರೇಷ್ಮೆ ವ್ಯಾಪಾರಿಗಳಾದ ಶ್ರೀ ಎಂ ಎಸ್. ಬಸವಣ್ಣದೇವರುರವರು ತಮ್ಮ ಪುತ್ರಿ ಚಿ॥ ಸೌ॥ ನಂಜರಾಜಮ್ಮಣ್ಣಿಯನ್ನು ಮುಡಿಗುಂಡದ ಶ್ರೀ ಪುಟ್ಟಪ್ಪನವರ ಪುತ್ರ ಶ್ರೀ ದೊಡ್ಡಮಲ್ಲಪ್ಪನವರಿಗೆ ಕೊಟ್ಟು ನಿನ್ನೆ ವಿವಾಹವನ್ನು ಮಾಂಬಳ್ಳಿಯಲ್ಲಿ ನಡೆಸಿದರು

○ ರಾಜಧಾನಿಯ ಮಾದರಿ ಶಾಲೆಯಿಂದ ಎಲ್ ಎಸ್ ಪರೀಕ್ಷೆಗೆ ಕುಳಿತ ೨೮ ವಿದ್ಯಾರ್ಥಿಗಳ ಪೈಕಿ, ೪ ಜನ ಪ್ರಥಮ ತರಗತಿಯಲ್ಲೂ ಒಟ್ಟು ೨೩ ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿದ್ದಾರೆ

ಚಾಮುಂಡೇಶ್ವರೀ

ಟಾಕೀಸ್

10—6—49ರಿಂದ

ದಿನವಹಿ 3 ಆಟಗಳು

ಯೂನಿವರ್ಸಲ್‌ರವರ

ಪೂರ್ತಿ ವರ್ಣ ರಂಜಿತ ಚಿತ್ರ

A Night in Paradise

ಎ ನೈಟ್ ಇನ್ ಪ್ಯಾರಡೈಸ್

Featuring –Merle Oberon, Durhan Bay

Edited, printed, and published by A R Nagarajan at the Sadhvi Press, D Subbiah Road, Mysore

ಇದೇ ೩೦ನೇ ತಾ॥ ಸಿನಿಮಾಗಳ ಬಹಿಷ್ಕಾರ

ಪ್ರಾಂತೀಯ ಸರ್ಕಾರಗಳು ಸಿನಿಮಾ ಮಂದಿರಗಳ ಮೇಲೆ ಹೆಚ್ಚು ಮನರಂಜನೆ ತೆರಿಗೆ ಹಾಕಿರುವುದನ್ನು ಪ್ರತಿಭಟಿಸಿ ಇದೇ ೩೦ನೇ ತಾ॥ ಭಾರತದಲ್ಲಿ ೨೨೦೦ ಸಿನಿಮಾ ಮಂದಿರಗಳನ್ನು ಒಂದು ದಿನ ಮುಚ್ಚಬೇಕೆಂದು ಬೊಂಬಾಯಿನಲ್ಲಿ ಮೊನ್ನೆ ನಡೆದ ಸಿನಿಮಾ ಕೈಗಾರಿಕೆಗೆ ಸಂಬಂಧಪಟ್ಟ ೧೪ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಯಿತು

10—6—49ರಿಂದ

ದಿನವಹಿ 3 ಆಟಗಳು

ವುಡ್‌ಲ್ಯಾಂಡ್ಸ್

ಟಾಕೀಸಿನಲ್ಲಿ

ನಿಮ್ಮ ನೆಚ್ಚಿನ ಸಂಗೀತ ಸೊಗಸಿನ

ಸೂರೈಯಾ, ಶಾಸ್ತ್ರಿ ಮತ್ತು

ಗೋಪ್ ಅಭಿನಯಿಸಿರುವ

ಇಂಡಿಯನ್ ನ್ಯಾಷನಲ್

ಪಿಕ್ಚರ್ಸ್‌ರವರ

ಡಾಕ್ ಬಂಗ್ಲೆ

(ಹಿಂದಿ)

ನೂತನ ಸಂಗೀತ ಸಾಮ್ರಾಜ್ಯ

ರಾಜಕಮಲ್

ಮೈ ಸೂ ರು

10—6—49 ರಿಂದ

ಅಮೋಘ 2ನೇ ವಾರ

ಪ್ರತಿ ದಿನ 3 ಆಟಗಳು

ಕರ್ದಾರ್‌ರವರ ಹಿಂದಿ ಚಿತ್ರ

ನಾಟಕ್

– ಮುಖ್ಯ ಪಾತ್ರ —

ಸುರಯ್ಯ, ಅಮರ್

Morning Shows —

From 10-6-49 for 4 d…

AFRICA SPEAKS

(A thrilling adventure … the un explored regi… of equatorial Afric…

THE TUTORIAL SECTION

D. Banumiah's High Sch…

Mysore

Admission to the Co… ing classes for … Supplementary S S L … Examination of 1949 … be received from … For Particulars apply … the Organiser between … & 4-30 p m

B Seshagiri R…

Organiser

BANGALORE RACES 1949

ಜೂನ್ 11, 18, 22, 25, 29 ಮತ್ತು ಜುಲೈ 2 ರಲ್ಲೂ

ಜೂನ್ 18 ಮಹಾರಾಜಾ ಗೋಲ್ಡ್ ಕಪ್ ಡೇ

ಟುಕ್ ಮೇಕರ್ಸ್ ಟೋಟಲೈಜೇಟರ್ಸ್

ಟ್ರಿಬಲ್ ಈವೆಂಟ್, ಜೋಟ್ ಮತ್ತು ರೂ. 2 ಸ್ವೀಪ್

ಪ್ರವೇಶ: ಮೊದಲನೇ ತರಗತಿ - ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ

ಎರಡನೇ ತರಗತಿ - ಪುರುಷರು ಅಥವಾ ಸ್ತ್ರೀಯರು ರೂ 2 ,,

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ವೈದ್ಯೋಪಾಸಕ

ಸೂತಿಕಾವಾತಕ್ಕೆ [ಬಾಣಂತಿ ನಂಜಿಗೆ] ಉತ್ತಮ ಗುಣಕಾರಿ

ಕಣ್ಣು ಕೈಕಾಲುರಿ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ, ಮನಸ್ಸಿಗ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರವಾಗಿ. — ಬೆಲೆ ಶೀಸೆ 1ಕ್ಕೆ 2 0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೧೦-೬-೪೯ [ಸಂಚಿಕೆ ೨೫೫

- ಹಿಂದೂ ಕೋಡಿನ - ಬಗ್ಗೆ ಸತ್ಯಾಗ್ರಹವೇ ?

ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸಭೆ

ಬೆಂಗಳೂರು ೧೦

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಜಂಟಿ ಅಧಿವೇಶನವು ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು, ಶಾಸನ ಸಭೆಗಳ ಅವಧಿಯವರೆಗೂ ಪಕ್ಷದ ನಾಯಕರೂ ಮತ್ತು ಕಾರ್ಯಕಾರೀ ಸಮಿತಿಯ ಸದಸ್ಯರೂ ಅಧಿಕಾರದಲ್ಲಿರತಕ್ಕದ್ದೆಂದು ತೀರ್ಮಾನಿಸಲಾಯಿತು. ಎರಡು ಸಭೆಗಳಿಗೂ ಒಬ್ಬರೇ ಉಪನಾಯಕರಿರಬೇಕೆ ಅಥವ ಪ್ರತ್ಯೇಕವಾಗಿ ಇಬ್ಬರು ಇರಬೇಕೆ ಎಂಬ ವಿಷಯದಲ್ಲಿ ದೀರ್ಘ ಚರ್ಚೆ ನಡೆದು ಅದನ್ನು ಆಗಸ್ಟ್ ೬ನೇ ತಾ॥ ಪರಿಶೀಲಿಸಲು ಮುಂದುವರಿಸಲಾಯಿತು ಅನಂತರ ಕಾರ್ಯಕಾರೀ ಸಮಿತಿಯ ಚುನಾವಣೆ ನಡೆದು ಪ್ರ॥ ಪ್ರ॥ ಸಭೆಯ ಕಾಂಗ್ರೆಸ್ ಪಕ್ಷಕ್ಕೆ ಶ್ರೀ ಬಿ. ಎಸ್ ಗುಪ್ತರವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಎಂ ವಿ. ಕೃಷ್ಣಪ್ಪನವರನ್ನು ವಿಪ್‌ರನ್ನಾಗಿಯೂ, ನ್ಯಾಯವಿಧಾಯಕ ಸಭೆಗೆ ಶ್ರೀ ಹೆಚ್.ಎಸ್. ರುದ್ರಪ್ಪನವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಎಸ್. ಸಿ ನಾಗರೆಡ್ಡಿಯವರನ್ನು ವಿಪ್‌ರನ್ನಾಗಿಯೂ, ಶ್ರೀ ಅಣ್ಣಪ್ಪ ಶೆಟ್ಟರನ್ನು ಖಜಾಂಚಿಯನ್ನಾಗಿಯೂ ಆರಿಸಲಾಯಿತು.

ಗುಡ್ಡಗಾಡಿನವರಿಗೂ ಆಫ್ಘನ್ ಸೈನ್ಯಕ್ಕೂ ಘರ್ಷಣೆ

ಪೂರ್ವ ಆಫ್ಘಾನಿಸ್ಥಾನದಲ್ಲಿರುವ ಗಡಿನಾಡ ಕಣಿವೆ ಪ್ರದೇಶದಲ್ಲಿ ಸಾಫಿ ಕಾಡಿನ ಜನರಿಗೂ ಆಫ್ಘನ್ ಸೈನಿಕರಿಗೂ ಕಾಳಗ ನಡೆಯಿತೆಂದು ವರದಿಯಾಗಿದೆ ೧೯೪೫ ರಲ್ಲಿ ಆಫ್ಘನ್ ಸರ್ಕಾರದ ಮೇಲೆ ದಂಗೆ ನಡೆಸಿದ ಇಬ್ಬರು ಸಾಫಿ ಮುಖಂಡರನ್ನು ದಸ್ತಗಿರಿ ಮಾಡಲು ಸೈನಿಕರು ಬಂದಾಗ, ಅವರನ್ನು ಪ್ರತಿಭಟಿಸಿ, ಅಲ್ಲಿನ ಜನರು ಕದನ ನಡೆಸಿದರೆಂದೂ, ಕೊನೆಯಲ್ಲಿ ಮುಖಂಡರುಗಳು ಶರಣಾಗತರಾದರೆಂದೂ ಹೇಳಲಾಗಿದೆ

ಟಿಹರಿ ಗರ್ವಾಲ್ ಸಂಸ್ಥಾನದ ಐಕ್ಯ

ಉತ್ತರ ಭಾರತದ ಟಿಹರಿ ಗರ್ವಾಲ್ ಮತ್ತು ಕಾಶಿ ಸಂಸ್ಥಾನಗಳು ಆಗಸ್ಟ್ ೧ನೇ ತಾ॥ ಸಂಯುಕ್ತ ಪ್ರಾಂತ್ಯದಲ್ಲಿ ಐಕ್ಯವಾಗುವುವೆಂದು ವರದಿಯಾಗಿದೆ

ಸಂಯುಕ್ತ ಪ್ರಾಂತ್ಯದಲ್ಲಿ ೬ ಲಕ್ಷ ಹೋಂ ಗಾರ್ಡುಗಳು

ಸಂಯುಕ್ತ ಪ್ರಾಂತ್ಯದಲ್ಲಿ ೬ ಲಕ್ಷ ಜನ ಹೋಂಗಾರ್ಡುಗಳನ್ನು ತರಬೇತು ಮಾಡಲಾಗುತ್ತಿದೆ

ಮೋಟಾರುಗಳಿಗೆ ರೋಮನ್ ಲಿಪಿಯಲ್ಲಿ ನಂಬರು

ಮೋಟಾರು ಕಾರುಗಳಿಗೆ ರೋಮನ್ ಲಿಪಿಯಲ್ಲೇ ನಂಬರ್ ಪ್ಲೇಟನ್ನು ಹಾಕಬೇಕೆಂದೂ, ಆ ರೀತಿ ಮಾಡದಿದ್ದಲ್ಲಿ ಶಿಕ್ಷೆಗೆ ಒಳಪಡಿಸಲಾಗುವುದೆಂದೂ ಬೊಂಬಾಯಿ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ

ಲಂಚ ಮುಟ್ಟುವುದಿಲ್ಲವೆಂದು ಅಧಿಕಾರಿಗಳ ಪ್ರತಿಜ್ಞೆ

ಪೂರ್ವ ಪಂಜಾಬಿನ ಪಾಟಿಯಾಲಾ ಸಂಸ್ಥಾನಗಳ ಯೂನಿಯನ್ನಿನ ಸರ್ಕಾರಿ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವರೆಂದು ಹೇಳಲಾಗಿದೆ

ಜಿನ್ನಾ ಸ್ಮಾರಕ ಸ್ಟಾಂಪುಗಳು

ಪಾಕೀಸ್ಥಾನದ ಮಾಜಿ ಗೌರ್ನರ್ ಜನರಲ್ಲರಾದ ಜಿನ್ನಾರವರ ಜ್ಞಾಪಕಾರ್ಥವಾಗಿ ೧, ೩ ಮತ್ತು ೧೦ ಆಣೆಗಳ ಸ್ಮಾರಕ ಅಂಚೆ ಸ್ಟಾಂಪುಗಳನ್ನು ಮುಂದಿನ ಸೆಪ್ಟೆಂಬರ್ ೯ನೇ ತಾ॥ ನಿಂದ ಹಂಚಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ

ಜಾತಿ ಅಥವ ಕೋಮಿನ ಹೆಸರು ಅನವಶ್ಯಕ

ಯಾವ ನೌಕರನೇ ಆಗಲಿ ತಾನು ಇಂತಹ ಕೋಮಿಗೆ ಸೇರಿದವನೆಂದು ತಿಳಿಸಲು ಇಷ್ಟಪಡದಿದ್ದಲ್ಲಿ ಅಂಶವನ್ನು ಒತ್ತಾಯಪಡಿಸಕೂಡದೆಂದು ಸಂಯುಕ್ತ ಪ್ರಾಂತ್ಯ ಸರ್ಕಾರದವರು ಇಲಾಖಾ ಅಧಿಕಾರಿಗಳಿಗೆ ಸೂಚನೆ ಕೊಟ್ಟಿರುತ್ತಾರೆ ಯಾರಾದರೂ ತನ್ನ ಜಾತಿ ಅಥವ ಕೋಮನ್ನು ಸರ್ಕಾರಿ ರಿಕಾರ್ಡುಗಳಲ್ಲಿ ಸೇರಿಸಕೂಡದೆಂದು ಅರ್ಜಿ ಹಾಕಿಕೊಂಡಲ್ಲಿ ಆ ರೀತಿ ಮಾಡಲಾಗುವುದೆಂದು ಸರ್ಕಾರದವರು ತಿಳಿಸಿರುತ್ತಾರೆ.

ರಷ್ಯದಲ್ಲಿ ಮಕ್ಕಳ ರೈಲು

ಮಕ್ಕಳಿಗಾಗಿ ರಷ್ಯದಲ್ಲಿ ೧೫ ರೈಲುಗಳನ್ನು ತಯಾರಿಸಲಾಗಿದೆ ಈ ಪುಟ್ಟ ರೈಲುಗಳನ್ನು ಮಕ್ಕಳೇ ನಡೆಸುತ್ತಾರೆ ಅವರು ತಮ್ಮ ಶಾಲೆಗಳು ಮುಗಿದ ನಂತರ ರೈಲ್ವೆ ಶಿಕ್ಷಣ ಪಡೆಯುವರು ಕಳೆದ ಚಳಿಗಾಲದಲ್ಲಿ ೮ ಸಾವಿರ ಶಾಲಾ ಬಾಲಕ ಬಾಲಕಿಯರು ಈ ಶಿಕ್ಷಣ ಪಡೆದರು

ನಾಜಿಗಳ ಬಾಂಬುಗಳಿಂದ ಸ್ಟಾಲಿನ್‌ಗ್ರಾಡಿನಲ್ಲಿ ನಷ್ಟ

ಕಳೆದ ಯುದ್ಧದಲ್ಲಿ ನಾಜಿಗಳು ರಷ್ಯದ ಸ್ಟಾಲಿನ್‌ಗ್ರಾಡಿನ ಮೇಲೆ ಬಾಂಬುಗಳ ಧಾಳಿಯನ್ನು ನಡೆಸಿದುದರ ಫಲವಾಗಿ ೪೧೬೦೦ ಮನೆಗಳು, ೧೧೧ ಶಾಲೆಗಳು, ೧೨೦ ಮಕ್ಕಳ ಶಾಲೆಗಳು, ೨೨ ಕಾರ್ಮಿಕ ಸಂಘಗಳ ಭವನಗಳು, ೧೨ ಕಾರ್ಖಾನೆಗಳು ಸಂಪೂರ್ಣವಾಗಿ ನಾಶವಾದುವೆಂದು ಹೇಳಲಾಗಿದೆ

ರಷ್ಯಕ್ಕೆ ಪಾಕೀಸ್ಥಾನದ ಪ್ರಧಾನಿಗಳ ಭೇಟಿ

ಪಾಕೀಸ್ಥಾನದ ಪ್ರಧಾನಿ ಮಿ॥ ಲಿಯಾಕತ್ ಆಲಿಖಾನ್‌ರವರು ರಷ್ಯಾ ಸರ್ಕಾರದ ಆಹ್ವಾನವನ್ನು ಅಂಗೀಕರಿಸಿ ಸಧ್ಯದಲ್ಲಿಯೇ ಮಾಸ್ಕೋವಿಗೆ ಭೇಟಿ ಕೊಡಲಿದ್ದಾರೆ

ಹಿಂದೂ ಕೋಡಿನ ಮಸೂದೆಯನ್ನು ಪ್ರತಿಭಟಿಸಲು ಸತ್ಯಾಗ್ರಹ

ಭಾರತದ ಜನರೆಲ್ಲರೂ ಒಟ್ಟಾಗಿ, ಹಿಂದೂ ಕೋಡಿನ ಮಸೂದೆಯನ್ನು ವಿರೋಧಿಸಬೇಕೆಂದೂ' ಅದನ್ನು ತರಕೂಡದೆಂದು ಶಾಸನ ಸಭೆಯ ಮುಂದೆ ಸತ್ಯಾಗ್ರಹ ಹೂಡಬೇಕೆಂದೂ ರಾಜಕುಮಾರಿ ಪ್ರಭಾವತಿ ರಾಣಿಯವರು ದೆಹಲಿಯ ಸಭೆಯೊಂದರಲ್ಲಿ ತಿಳಿಸಿರುತ್ತಾರೆ ತಾವು ಸತ್ಯಾಗ್ರಹದ ಮುಖಂಡತ್ವವನ್ನು ವಹಿಸುವುದಾಗಿಯೂ, ಮಸೂದೆಯನ್ನು ವಾಪಸು ತೆಗೆದುಕೊಳ್ಳುವವರೆಗೆ ತಾವು ಶಾಸನ ಸಭೆಯಿಂದ ಹಿಂತಿರುಗುವುದಿಲ್ಲವೆಂದೂ ಅವರು ಹೇಳಿರುತ್ತಾರೆ

ಕಮ್ಯೂನಿಸ್ಟರಿಗೂ ಜೈಲು ನೌಕರರಿಗೂ ಘರ್ಷಣೆ

ಕಾಶಿಯ ಸೆಂಟ್ರಲ್ ಜೈಲಿನಲ್ಲಿದ್ದ ೨೬ ಮಂದಿ ಕಮ್ಯೂನಿಸ್ಟ್ ಡಿಟೆನ್ಯೂಗಳಿಗೂ ಮತ್ತು ಜೈಲು ನೌಕರರಿಗೂ ಕಳೆದ ಮಂಗಳವಾರ ಘರ್ಷಣೆಯಾಗಿ ೧೪ ಮಂದಿ ಕಮ್ಯೂನಿಸ್ಟರೂ ಮತ್ತು ೧೧ ಮಂದಿ ಜೈಲು ನೌಕರರೂ ಗಾಯಗೊಂಡರೆಂದು ವರದಿಯಾಗಿದೆ ಅಧಿಕಾರಿಗಳು ಬಲಪ್ರಯೋಗದಿಂದ ಪರಿಸ್ಥಿತಿಯನ್ನು ಹತೋಟಿಗೆ ತಂದರು ಈ ಘಟನೆ ಬಗ್ಗೆ ವಿಚಾರಣೆ ನಡೆಯುತ್ತಿದೆ

ಸಂಸ್ಥಾನದಲ್ಲಿ ಖಾದಿ ವಿದ್ಯಾಲಯ

ಸಂಸ್ಥಾನದಲ್ಲಿ ಖಾದಿ ಕೆಲಸಗಾರರಿಗೆ ಶಿಕ್ಷಣ ಕೊಡಲು ಒಂದು ವಿದ್ಯಾಲಯವನ್ನೂ ಮತ್ತು ಚರಕ ಮತ್ತು ಇತರ ಸಲಕರಣೆಗಳನ್ನು ತಯಾರಿಸಲು ಒಂದು ಕಾರ್ಖಾನೆಯನ್ನೂ ಸರ್ಕಾರದವರು ಸ್ಥಾಪಿಸಲಿರುವರೆಂದು ತಿಳಿದುಬಂದಿದೆ ಸಂಸ್ಥಾನದಲ್ಲೆಲ್ಲಾ ಖಾದಿ ಕೇಂದ್ರಗಳನ್ನು ಸ್ಥಾಪಿಸುವ ಆಲೋಚನೆಯೂ ನಡೆದಿರುತ್ತದೆ

ನಿಗ್ರೋಗಳನ್ನು ಕೊಲೆ ಮಾಡಿದವರಿಗೆ ೨೦ ವರ್ಷ ಶಿಕ್ಷೆ

ನಿಗ್ರೋಗಳನ್ನು ಬಹಿರಂಗವಾಗಿ ಹಿಡಿದು ಕೊಲೆ ಮಾಡಿದರೆ ಅಥವ ಕೊಲೆಗೆ ಪ್ರೇರೇಪಿಸಿದರೆ ಅಂತಹವರಿಗೆ ೨೦ ವರ್ಷ ಕಠಿಣ ಶಿಕ್ಷೆ ಮತ್ತು ೧೦ ಸಾವಿರ ಡಾಲರು ಜುಲ್ಮಾನೆ ವಿಧಿಸಬೇಕೆಂಬ ಲಿಂಚಿಂಗ್ ನಿರೋಧದ ಮಸೂದೆಗೆ ಅಮೇರಿಕದ ಸೆನೆಟ್ ಸಭೆಯ ನ್ಯಾಯಾಂಗ ಶಾಖೆಯು ಒಪ್ಪಿಗೆ ಕೊಟ್ಟಿದೆ

ಕರ್ಣಾಟಕ ಪ್ರಾಂತ್ಯದ ಬಗ್ಗೆ ಜನಾಭಿಪ್ರಾಯ ತೆಗೆದುಕೊಳ್ಳಬೇಕು

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು. ಫೋ॥] ಬೆಂಗಳೂರು ೧೦

ಪ್ರಜಾ ಪ್ರತಿನಿಧಿ ಸಭೆಯಲ್ಲಿ ಈ ದಿನ ಪ್ರಶ್ನೋತ್ತರ ಕಾಲದಲ್ಲಿ ಮೈಸೂರು ಕರ್ಣಾಟಕದಲ್ಲಿ ಸೇರಬೇಕೇ ಅಥವ ಬೇಡವೇ ಎಂಬುದನ್ನು ನಿರ್ಧರಿಸಲು ಜನಾಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದೇ ಎಂದು ಶ್ರೀ ಶಿವಪ್ಪನವರು ಪ್ರಶ್ನೆ ಹಾಕಿದರು. ಆ ಬಗ್ಗೆ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲು ಆಲೋಚನೆ ಮಾಡಿಲ್ಲವೆಂದು ಮುಖ್ಯ ಮಂತ್ರಿಗಳು ಉತ್ತರವಿತ್ತರು. ಎರಡು ಕಡೆಯೂ ಕರ್ಣಾಟಕ ಪ್ರಾಂತ್ಯ ರಚನೆ ಬಗ್ಗೆ ಪ್ರಚಾರ ನಡೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ ಮೈಸೂರಿನ ಬಗ್ಗೆ ನಡೆಯುತ್ತಿರುವ ಅಪಪ್ರಚಾರವನ್ನು ನಿಲ್ಲಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕಾದ ಪ್ರಮೇಯವು ಈಗ ಬಂದಿಲ್ಲವೆಂದೂ ಶ್ರೀ ಕೆ. ಸಿ ರೆಡ್ಡಿಯವರು ಹೇಳಿದರು.

ಮೈಸೂರು ರೈಲ್ವೆಯಲ್ಲಿ ಹೆಚ್ಚು ಸೌಲಭ್ಯಗಳನ್ನೊದಗಿಸುವ ಬಗ್ಗೆ ಶ್ರೀ ಚಿಕ್ಕಲಿಂಗಯ್ಯನವರು ಹಲವಾರು ಪ್ರಶ್ನೆಗಳನ್ನು ಹಾಕುತ್ತಿದ್ದಾಗ, ಶ್ರೀ ಗುಪ್ತರವರು ಪಾಯಿಂಟ್ ಆಫ್ ಆರ್ಡರ್ ಎತ್ತಿ ಪ್ರಶ್ನೆಕಾರರು ಉಪನ್ಯಾಸ ಮಾಡುತ್ತಿದ್ದಾರೆಂದೂ, ಅವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯಬಹುದೆಂದೂ ತಿಳಿಸಿದರು. ಶ್ರೀ ಚಿಕ್ಕಲಿಂಗಯ್ಯನವರು ಮತ್ತು ಇತರ ಸದಸ್ಯರು ಅದನ್ನು ಪ್ರತಿಭಟಿಸಿ, ಸಭೆಯ ಸದಸ್ಯರು ಅರ್ಜಿ ಸಲ್ಲಿಸುವುದಕ್ಕಾಗಿ ಅಲ್ಲಿಗೆ ಬಂದಿಲ್ಲವೆಂದೂ ಹಾಗೆ ಹೇಳಿರುವುದು ಸಭೆಯ ಘನತೆಗೆ ತಕ್ಕುದಲ್ಲವೆಂದೂ ತಿಳಿಸಿದರು ಈ ರೀತಿ ಮಾತನಾಡಬಾರದೆಂದು ಶ್ರೀ ಗುಪ್ತರವರಿಗೆ ಅಧ್ಯಕ್ಷರು ಸೂಚನೆ ಕೊಟ್ಟರು.

ಮುಂದಿನ ಅಧಿವೇಶನದಿಂದ ಅಂಕೆಗಳನ್ನು ತೆಗೆದುಹಾಕುವ ಅಂಶವನ್ನು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ಮುಖ್ಯ ಸಚಿವರು ತಿಳಿಸಿದರು.

ನ್ಯಾಯ ವಿಧಾಯಕ ಸಭೆ

ಇದೇ ೨೦ನೇ ತಾ॥ ನಿಂದ ಜುಲೈ ೬ನೇ ತಾ॥ ವರೆವಿಗೆ ನ್ಯಾಯವಿಧಾಯಕ ಸಭೆಯ ಅಧಿವೇಶನವು ನಡೆಯುವುದು. ಒಟ್ಟು ೧೯೧ ಪ್ರಶ್ನೆಗಳೂ, ೪೧ ನಿರ್ಣಯಗಳೂ ಮತ್ತು ೧೭ ಮಸೂದೆಗಳೂ ಪರಿಶೀಲನೆಗೆ ಬರಲಿವೆ. ಕರ್ಣಾಟಕ ಪ್ರಾಂತ್ಯದ ವಿಚಾರವಾಗಿ ಒಂದು ಪರಿಶೀಲನಾ ಸಮಿತಿಯನ್ನು ರಚಿಸಬೇಕೆಂದು ಜನಾಬ್ ಇನಾಯತವರೂ, ಮಹಿಳಾ ಅಭಿವೃದ್ಧಿ ಇಲಾಖೆಯನ್ನು ಸರ್ಕಾರವು ಸ್ಥಾಪಿಸಬೇಕೆಂದು, ಶ್ರೀಮತಿ ಲಕ್ಷ್ಮಮ್ಮನವರೂ ನಿರ್ಣಯಗಳನ್ನು ಮಂಡಿಸಿದ್ದಾರೆ

ಶ್ರೀ ಗಾಯತ್ರೀ

ಪ್ರತಿ ದಿನ 3 ಪ್ರದರ್ಶನಗಳು
9-6 4ರಿಂದ 3 ದಿನಗಳು.
ಪ್ರೇಕ್ಷಕರ ಮತ್ತು ...
... ಗೆದ್ದ ...
... ಚಿತ್ರ

ದಿ ರೇಜಿಸ್ಟರ್ ಎಡ್

... ರೋಡ್ ಸರ್ಕಲ್, ಬೆಂಗಳೂರು

ಮುಂದಿನ ಬದಲಾವಣೆ:- ಎಕ್ಸೈಲ್

ಗುರುದೇವಾ ಹಾಲ್

ವೈಸೂರು ಸ್ಯಾಂಡಲ ಉಡ್ ಆಯಿಲ ಫ್ಯಾಕ್ಟರಿ ಆಫೀಸಿನಿಂದಾ -

ನೋಟೀಸು

ಬಿ. ಸಿ ರಾಮಕೃಷ್ಣ
ಜನರಲ ಮ್ಯಾನೇಜರ್

ಚಾಮುಂಡೇಶ್ವರಿ ಟಾಕೀಸ್

10-6-4 ರಿಂದ

A Night in Paradise

ಎ ನೈಟ್ ಇನ್ ಪ್ಯಾರಡೈಸ್

Featuring Merle Oberon, Turhan Bey

10-6-49 ರಿಂದ

ದಿನವಹಿ 3 ಆಟಗಳು

ವುಡ್‌ಲ್ಯಾಂಡ್ಸ್

ಡಾಕ್ ಬಂಗಲೋ

ನೂತನ ಸಂಗೀತ ಸಾಮಾಜಿಕ

D BANUMIAH'S
COLLEGE of COMMERCE
MYSORE

NOTIFICATION
Dated 10th June 1949

The College will start working from 24th June 1949. Applications for admissions will be received upto 15th June 1949. For further particulars please apply to the undersigned.

B V Banumiah
Organiser.

Edited, printed, and published by V R Nagarajan at the Sadhvi Press, D Subbiah Road Mysore.

MYSORE CITY MUNICIPALITY

NOTICE

Sealed tenders will be received by the Municipal Engineer for the following works on 13-6-1949 —

1 Constructing a channel for road side drain in the North end of Kannegowdana Koppal, Chamaraja Mohalla,

2 Providing and supplying boards of Toll Schedule and Octroi Schedule,

3 Providing slabbed drain behind door No 4399 of Narasimharaja Mohalla,

4 Repairing and improving the girls' Primary School at Doddapet, Lashkar Mohalla,

5 Providing and fixing Burnt Stone slab dust bins in different Mohallas in the City,

6 Extending the Sheep Slaughter house at Jalapuri, Lashkar Mohalla

7 Providing RCC Trellies work and steps to the Verandah of Womens' Hospital at Chamundipuram.

8 Repairs to drain in Hosabeedi, Kannegowdana Koppal, Chamaraja Mohalla

Each tender must be accompanied with a chellan for having remitted Rs 45/-, Rs 60/-, Rs 35/-, Rs 60/-, Rs 50/-, Rs 165/-, Rs 80/- & Rs 30/- for items 1 to 8 respectively. For full particulars, please see the Office Notice Board

(Sd) V K MUKUNDAN,
Municipal Engineer.

ಭಿಷಗ್ರತ್ನ ವಾಕ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು

ಪ್ರಾಶಿಚ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ಸೊಂಟ ನೋವು, ಮೊದಲಾದ ಗುಣವಾಗುತ್ತದೆ

ವಿಳಾಸ — ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು.

ಪ್ರಭಾ 11-6-49 ರಿಂದ
ಅನೋಘ ಪ್ರಾರಂಭ
ದಿನವಹಿ 4 ಆಟಗಳು



ಮಧುಕರ್‌ರವರ

* ಬಜಾರ್ *
(ಹಿಂದಿ)

ಯಾಕೂಬ್, ಗೋಪ್, ನಿಗರ್ ಸುಲ್ತಾನ
ಶ್ಯಾಮ್

10-6-49 ರಿಂದ ಅನೋಘ 3ನೇ ವಾರ
ಪ್ರತಿ ದಿನ 4 ಪ್ರದರ್ಶನಗಳು

ಶ್ರೀ ಗಣೇಶಾ ಮತ್ತು ನ್ಯೂ ಒಪೆರಾ

ಟಾಕೀಸುಗಳಲ್ಲಿ

ಜ್ಯೂಪಿಟರ್‌ರವರ ಮಹೋನ್ನತ ತಮಿಳು ಪಾತ್ರ

ವೇಲೈಕಾರಿ

ಎಂ. ವಿ ರಾಜಮ್ಮ, ಕೆ. ಎಸ್. ಬಾಲಯ್ಯ,
ವಿ. ಎನ್. ಜಾನಕಿ, ಮೂರಿ ರಾಜ್,
ಲಲಿತ : ಪದ್ಮಿನಿ

R V Pictures Release

ಪ್ರಭುದೇವಾ ಟಾಕೀಸ್ :: 11—6—49 ರಿಂದ ಅನೋಘ 3 ನೇ ವಾರ
ಪ್ರತಿ ದಿನ 4 ಆಟಗಳು

ನಗ್ಗಯ್ಯ, ಕಣ್ಣಾಂಬ, ರಾಮತಿಲಕಂ, ಸಿ ಎಸ್ ಆರ್.

ದ್ರೌಪದಿ ವಸ್ತ್ರಾಪಹರಣ
(ತೆಲುಗು)

ಸರಸ್ವತಿ ಟಾಕೀಸಿನವರ
ಮಹೋನ್ನತ ಚಿತ್ರ

ಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು.

ಸಾಧ್ವಿ

ಸಂಪುಟ ೭] ಶನಿವಾರ ೧೧-೬-೪೯ [ಸಂಚಿಕೆ ೨೫೫

ಮೈಸೂರು ರೈಲ್ವೆಯ ಆಡಳಿತ ಭಾರತಕ್ಕೆ

ಜೈಲಿನಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನ

ಕಲ್ಕತ್ತೆಯ ಆಲಿಪೂರ್ ಜೈಲಿನಲ್ಲಿ ಬ್ರಿಟಿಷ್ ದೊರೆಗಳ ಜನ್ಮ ದಿನೋತ್ಸವ ಸಂಬಂಧದಲ್ಲಿ ಏರಿಸಲಾಗಿದ್ದ ಭಾರತದ ರಾಷ್ಟ್ರೀಯ ಧ್ವಜವನ್ನು ಜೈಲಿನ ಖೈದಿಗಳು ತೆಗೆದು ಹಾಕಿ ಕಪ್ಪು ಧ್ವಜಗಳನ್ನು ಹಾರಿಸಿದ್ದರೆಂದೂ ಅದನ್ನು ತೆಗೆಯಲು ಹೋದ ಅಧಿಕಾರಿಗಳ ಮೇಲೆ ಕಲ್ಲು ಮತ್ತು ಇಟ್ಟಿಗೆಗಳನ್ನು ಖೈದಿಗಳು ಎಸೆದು ಗಲಭೆ ನಡೆಸಿದರೆಂದೂ ೧೭ ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ

ಬ್ರಿಟನ್ನಿನ ಮೇಲೆ ಜ|| ಫ್ರಾಂಕೋವಿನ ಆರೋಪಣೆ

ಪ್ರಪಂಚದಲ್ಲಿ ಅತ್ಯಂತ ಬಲಿಷ್ಟ ರಾಷ್ಟ್ರವಾದ ಅಮೇರಿಕದೊಡನೆ ಸ್ನೇಹ ಸೌಹಾರ್ದವನ್ನು ಹೆಚ್ಚಿಸಿಕೊಂಡು ತಾನು ಬಲಗೊಳ್ಳಲು ಸ್ಪೇನಿನ ಜ|| ಫ್ರಾಂಕೋರವರ ಬ್ರಿಟನ್ನಿನ ವಿರುದ್ಧ ಪ್ರಚಾರಕ್ಕೆ ಹೊರಟಿರ ವರೆಂದು ವರದಿಯಾಗಿದೆ ಅಲ್ಲದೆ ತನ್ನ ಗುರಿಯನ್ನು ಸಾಧಿಸಿಕೊಳ್ಳಲು ಆತನ ಸ್ಪೇನ್ ಮಂತ್ರಿ ಮಂಡಲವನ್ನು ಅಮೇರಿಕವು ಒಪ್ಪುವ ರೀತಿಯಲ್ಲಿ ಇಷ್ಟರಲ್ಲೇ ಪುನಃರಚಿಸಿ ಆ ಮೂಲಕವೂ ಅಮೇರಿಕವನ್ನು ತನ್ನ ಕಡೆ ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ

ಕಳೆದ ಮಹಾ ಯುದ್ಧದ ನಂತರ ಬ್ರಿಟನ್ನು ಸ್ಪೇನನ್ನು ಮೆಡಿಟರೇನಿಯನ್ನಿನ ಬಲಯುತವಾದ ರಾಷ್ಟ್ರವಾಗಿ ಮಾಡಲು ಸಹಾಯ ಮಾಡುವುದಾಗಿ ಚರ್ಚಿಲ್ಲರೂ ಅವರ ಅನುಯಾಯಿಗಳೂ ಭರವಸೆ ಕೊಟ್ಟು ಅನಂತರ ವಚನ ಭ್ರಷ್ಟರಾದರೆಂದೂ, ಅಲ್ಲದೆ ಜರ್ಮನ್ ಆಕ್ರಮಿತ ಯೂರೋಪಿನ ಮೇಲೆ ಧಾಳಿ ನಡೆಸುವ ಸಲುವಾಗಿ ಸ್ಪೇನನ್ನೇ ಆಕ್ರಮಿಸಬೇಕೆಂದು ಬ್ರಿಟನ್ನಿನ ವಿದೇಶಾಂಗ ಕಛೇರಿಯವರು ಸಿದ್ಧತೆ ನಡೆಸಿದ್ದರೆಂದೂ, ಆದರೆ ರಷ್ಯವು ಈ ಯೋಜನೆಯನ್ನು ರದ್ದುಗೊಳಿಸಿತೆಂದೂ ಜ|| ಫ್ರಾಂಕೋರವರು ಆರೋಪಿಸಿದ್ದಾರೆ

ಅಂಚೆ ಕವರಿನಲ್ಲಿ ಅಶೋಕ ಸ್ತಂಭ

ಬ್ರಿಟಿಷ್ ರಾಜರ ಚಿತ್ರವನ್ನು ತೆಗೆದು ಹಾಕಿ, ಅಶೋಕ ಸ್ತಂಭದ ಚಿತ್ರವಿರುವ ಹೊಸ ಎರಡಾಣೆ ಅಂಚೆ ಕವರುಗಳನ್ನು ಮುಂದಿನ ವಾರದಿಂದ ಜಾರಿಗೆ ತರಲಾಗುವುದು

ಮದರಾಸಿನಲ್ಲಿ ಸಂಗೀತದ ಕಾಲೇಜು

ಕರ್ನಾಟಕ ಸಂಗೀತದ ಕಾಲೇಜನ್ನು ಮುಂದಿನ ತಿಂಗಳಿನಿಂದ ಮದರಾಸಿನಲ್ಲಿ ಭಾರತ ಮತ್ತು ಮದರಾಸ್ ಸರ್ಕಾರಗಳವರು ಸೇರಿ ಸ್ಥಾಪಿಸಲಿವೆ ಐದು ವರ್ಷ ಶಿಕ್ಷಣ ಪಡೆದ ನಂತರ 'ಸಂಗೀತ ವಿದ್ವಾನ್' ಎಂಬ ಪ್ರಶಸ್ತಿಯನ್ನು ಕೊಡಲಾಗುವುದು ... ಜನ ವಿದ್ಯಾರ್ಥಿಗಳಿಗೆ ಮಾತ್ರ ಈ ವರ್ಷ ಪ್ರವೇಶ ಉಂಟು

ರಾಷ್ಟ್ರ ಗೀತೆಗಳ ಉಚಿತ ಶಿಕ್ಷಣ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಲ್ಲಿ ರಾಷ್ಟ್ರೀಯ ಗೀತೆಗಳ ಉಚಿತ ಶಿಕ್ಷಣವನ್ನು ಎಲ್ಲ ರವಿವಾರ ... ದಿನಗಳಲ್ಲಿ ಕೊಡಲಾಗುವುದೆಂದು ತಿಳಿಸಲಾಗಿದೆ

ಬರ್ಮಾದಲ್ಲಿ ನೂತನ ಗೆರಿಲ್ಲಾ ಸೇನೆ

ಪ್ರಜಾಪ್ರಭುತ್ವ ವಿಮೋಚನಾ ಗೆರಿಲ್ಲಾ ಪಡೆ ಎಂಬ ನೂತನ ಸೇನೆಯೊಂದು ಬರ್ಮಾದಲ್ಲಿ ಇದ್ದಕ್ಕಿದ್ದ ಹಾಗೆಯೇ ಹುಟ್ಟಿಕೊಂಡಿದೆಯೆಂದೂ, ಈ ಒಗ್ಗೆ ರಂಗೂನಿನ ಎಲ್ಲ ಕಟ್ಟಡಗಳ ಮೇಲೆ ಹಸ್ತ ಪತ್ರಿಕೆಗಳನ್ನು ಅಂಟಿಸಲಾಗಿದೆಯೆಂದೂ ವರದಿಯಾಗಿದೆ ದಂಗೆಕೋರರಿಂದ ಬರ್ಮಾವನ್ನು ಮುಕ್ತ ಮಾಡುವುದಾಗಿ ಈ ಹಸ್ತಪತ್ರಿಕೆಗಳಲ್ಲಿ ತಿಳಿಸಲಾಗಿದೆ ಈ ಸೇನೆಯ ವಿವರಗಳು ರಹಸ್ಯವಾಗಿದೆಯೆಂದು ಹೇಳಲಾಗಿದೆ

ಹಿಂದಿ ತರಗತಿಗಳು

ಹಳ್ಳದ ಕೇರಿಯಲ್ಲಿರುವ ಶಾರದಾ ಸಮಾಜದ ಹಿಂದೀ ತರಗತಿಗಳ ಆಡಳಿತವನ್ನು ಇದೇ ೧ನೇ ತಾ|| ನಿಂದ ಭಾರತ ಸೇವಾ ಸಮಾಜದವರು ವಹಿಸಿಕೊಂಡು ಪ್ರತಿದಿನ ಸಂಜೆ ೫ ರಿಂದ ೭ ಗಂಟೆ ವರೆಗೆ ತರಗತಿಗಳನ್ನು ನಡೆಸುತ್ತಿದ್ದಾರೆ ಪಡಕಾಲು ಮಠದ ಒಳ ಇರುವ ಮಾದರಿ ಶಾಲೆಯಲ್ಲಿ ಬೆಳಿಗ್ಗೆ ೮ ಗಂಟೆಯಿಂದ ಪುರುಷರಿಗೂ, ಸ್ತ್ರೀಯರಿಗಾಗಿ ಸಂಜೆ ೮ ಗಂಟೆಯಿಂದಲೂ, ಲಕ್ಷ್ಮೀಪುರದಲ್ಲಿರುವ ಕೃಷ್ಣರಾಜ ಅಪ್ಪರ್ ಪ್ರೈಮರಿ ಬಾಲಿಕಾ ಪಾಠಶಾಲೆಯಲ್ಲಿ ಮಹಿಳೆಯರಿಗಾಗಿ ಸಂಜೆ ೩ ರಿಂದಲೂ ಹಿಂದೀ ತರಗತಿಗಳನ್ನು ಮೇಲ್ಕಂಡ ಸಮಾಜದವರು ಏರ್ಪಡಿಸಿದ್ದಾರೆ

ಸಮಾಜ ಸೇವಾ ಸಮಿತಿ

ರಾಜಧಾನಿಯ ನಜರ್‌ಬಾದಿನಲ್ಲಿರುವ ಸಮಾಜ ಸೇವಾ ಸಮಿತಿಗೆ ಶ್ರೀ ಆರ್ ಜವರಪ್ಪನವರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀಗಳಾದ ಆರ್ ವೆಂಕಟರಾವ್ ಮಾನೆ, ಎಂ ವೇಂಕಟಲಿಂಗಯ್ಯ, ಟಿ ತಿಮ್ಮಯ್ಯ, ಸೇವಪ್ಪ ಮತ್ತು ನರಸಿಂಗ್ ಭಾಗವತರನ್ನು ಕಾರ್ಯಕಾರೀ ಮಂಡಲಿಯ ಸದಸ್ಯರನ್ನಾಗಿಯೂ ಚುನಾಯಿಸಲಾಗಿದೆ

ಮುಮ್ಮಡಿ ಕೃಷ್ಣರಾಜ ಒಡೆಯರ ವರ್ಧಂತಿ

ಮುಂದಿನ ತಿಂಗಳು ೨೦ನೇ ತಾ|| ರಾಜಧಾನಿಯ ಟೌನ್ ಹಾಲಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರವರ ವರ್ಧಂತಿ ಉತ್ಸವವು ದಿವಾನರಾದ ಸರ್ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಯಾವ ಧಾನ್ಯಗಳಿಂದಲೂ ಇಡ್ಲಿ ದೋಸೆ ಮಾಡಕೂಡದು

ಬೆಂಗಳೂರು ೧೧

ಯಾವುದೇ ಹೋಟೇಲಿನಲ್ಲಿ, ಹಾಲನ್ನು ಉಪಯೋಗಿಸುವಂತಹ ತಿಂಡಿಯ ಪದಾರ್ಥಗಳನ್ನಾಗಲೀ, ರೇರ್ಷಪದಾರ್ಥಗಳನ್ನು ಉಪಯೋಗಿಸುವಂತಹ ತಿಂಡಿಯ ಪದಾರ್ಥಗಳನ್ನಾಗಲೀ, ಇಡ್ಲಿ ಅಥವ ದೋಸೆಗಳನ್ನಾಗಲೀ ಅಥವ ಬೇರೆ ಮತ್ತು ಧಾನ್ಯಗಳಿಂದ ಮಾಡಿದ ಇದೇ ಪದಾರ್ಥಗಳನ್ನಾಗಲೀ ಮಾಡಕೂಡದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಎಕ್ಸೈಜ್ ಅಧಿಕಾರಿಗಳ ಆತ್ಮಹತ್ಯೆ

ಕಳಸಾ ತಾಲ್ಲೂಕಿನ ಎಕ್ಸೈಜ್ ಇನ್ಸ್ಪೆಕ್ಟರಾದ ಶ್ರೀ ಕನ್ನಾರ ರಾಮಯ್ಯನವರು ಮೊನ್ನೆ ದಿನ ಚಿಕ್ಕ ಲಾಲಬಾಗಿನಲ್ಲಿರುವ ಎವರೆಸ್ಟ್ ಕೆಫೆ ಹೋಟೇಲಿನ ೪ ನೇ ಅಂತಸ್ತಿನಿಂದ ಕೆಳಕ್ಕೆ ಹಾರಿ ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ

○ ಶ್ರೀ ಎಸ್ ಚನ್ನಯ್ಯನವರಿದ್ದ ವಿಮಾನವು ನಿನ್ನೆ ಮಧ್ಯಾಹ್ನ ೨೦೦ ಮೈಲಿಗಳು ತೆರಳಿ ಎಂಜಿನ್ ತೊಂದರೆಯಿಂದ ಬೊಂಬಾಯಿಗೆ ವಾಪಸು ಬಂದಿತೆಂದು ತಿಳಿದು ಬಂದಿದೆ ಅವರು ನಿನ್ನೆ ರಾತ್ರಿ ಪುನಃ ಪ್ರಯಾಣ ಬೆಳೆಸಿದರು.

ಉಪಾಧ್ಯಾಯರುಗಳ ಸತ್ಯಾಗ್ರಹ

ಚನ್ನರಾಯಪಟ್ಟಣದ ತಾಲ್ಲೂಕು ಪ್ರೈಮರಿ ಶಾಲಾ ಉಪಾಧ್ಯಾಯರುಗಳಿಗೆ ತಮ್ಮ ಸಂಬಳವನ್ನು ಕೊಡಲು ತಡಮಾಡಿದುದಕ್ಕೆ ಅವರು ತಾಲ್ಲೂಕು ಬೋರ್ಡಿನ ಮುಂದೆ ಕಳೆದ ಬುಧವಾರ ಸತ್ಯಾಗ್ರಹ ನಡೆಸಿದರೆಂದೂ ಆದರೆ ಡೆಪ್ಯುಟಿ ಕಮೀಷನರ್ ಜಿಲ್ಲಾಧಿಕಾರಿಗಳು ಕೂಡಲೇ ಸಂಬಳ ಕೊಡಬೇಕೆಂದು ಆಜ್ಞೆ ಮಾಡಿದರೆಂದೂ ಹೇಳಲಾಗಿದೆ

ಉಕ್ಕಿನ ರೈಲ್ವೆ ಗಾಡಿಗಳು

ಪ್ರತಿ ವರ್ಷವೂ ೩೦ ಉಕ್ಕಿನ ರೈಲ್ವೆ ಗಾಡಿಗಳನ್ನು ನಾಲ್ಕು ವರ್ಷ ಸರಬರಾಜು ಮಾಡುವಂತೆ ಸ್ವಿಟ್ಜರ್ಲೆಂಡಿನ ಕಂಪೆನಿಯೊಂದರಲ್ಲಿ ಭಾರತ ಸರ್ಕಾರವು ಒಪ್ಪಂದ ಮಾಡಿಕೊಂಡಿದೆಯೆಂದು ಹೇಳಲಾಗಿದೆ

ಅಂಗಡಿ ಕೆಲಸಗಾರರ ಸಭೆ

ರಾಜಧಾನಿಯ ಮೇಲ್ಕಂಡ ಸಂಘದ ಸಭೆಯು ನಾಳೆ ಬೆಳಿಗ್ಗೆ ೧೦ ೩೦ ಗಂಟೆಗೆ ಶಿವರಾಂಪೇಟೆಯ ಮುಸಿಡಿ 'ನ್ಯೂ ಮಾಡರ್ನ್' ಹೋಟೆಲಿನ ಮಹಡಿ ಕಛೇರಿಯಲ್ಲಿ ನಡೆಯುವುದು.

ಮೈಸೂರು ರೈಲ್ವೆಯ ಆಡಳಿತ ಭಾರತಕ್ಕೆ

ಮೈಸೂರು, ಹೈದರಾಬಾದ್, ರಾಜಸ್ಥಾನ ಮತ್ತು ಸೌರಾಷ್ಟ್ರಗಳ ರೈಲುಗಳ ಆಡಳಿತವನ್ನು ಭಾರತ ಸರ್ಕಾರವು ವಹಿಸಿಕೊಳ್ಳುವುದೆಂದು ಕೇಂದ್ರ ಸರ್ಕಾರದ ರೈಲ್ವೆ ಸಚಿವರು ತಿಳಿಸಿರುತ್ತಾರೆ.

ಮೈಸೂರು ಸಿವಿಲ್ ಸರ್ವಿಸಿನ ದಕ್ಷತೆ ಹೆಚ್ಚಬೇಕು

ಪ್ರ. ಪ್ರ. ಸಭೆಯಲ್ಲಿ ನಿರ್ಣಯ

ಸ್ವಂ.ಸು.ಫೋ|] ಬೆಂಗಳೂರು ೧೧

ಪ್ರಜಾ ಪ್ರತಿನಿಧಿಯು ಈ ದಿನ ೮ರಿಂದ ೧-೩೦ ಗಂಟೆಯವರೆಗೂ ನಡೆಯಿತು,

ಪ್ರಶ್ನೋತ್ತರವಾದ ನಂತರ ಬಡ್ಜೆಟ್ ನಿರ್ಣಯಗಳ ಮೇಲೆ ಚರ್ಚೆ ನಡೆಯಿತು

ಮೈಸೂರು ಸಿವಿಲ್ ಸರ್ವೀಸಿನ ಘನತೆ ಮತ್ತು ದಕ್ಷತೆಯನ್ನು ಹೆಚ್ಚಿಸಲು ಸರ್ಕಾರದವರು ೧೦ ಲಕ್ಷ ರೂ ಅನ್ನು ಮಂಜೂರು ಮಾಡಬೇಕೆಂದು ಶ್ರೀ ಜಿ ರಾಮಯ್ಯನವರು ನಿರ್ಣಯವನ್ನು ಮಂಡಿಸಿದರು ಹೆಸರು ಪಡೆದ ಮೈಸೂರು ಸಿವಿಲ್ ಸರ್ವೀಸಿನ ದಕ್ಷತೆಯು ಈಗ ಕಡಿಮೆಯಾಗಿರುವುದೆಂದೂ, ಅನೇಕ ಅಧಿಕಾರಿಗಳು ಬೇರೆ ಸ್ಥಳಗಳಿಗೆ ಹೋಗುತ್ತಿದ್ದಾರೆಂದೂ, ಕೋಮುವಾರು ತತ್ವವನ್ನು ಮುಂದಿಟ್ಟುಕೊಂಡು ದಕ್ಷರಾದವರನ್ನು ಹಿಂದಕ್ಕೆ ತಳ್ಳಲಾಗುತ್ತಿದೆಯೆಂದೂ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಪುನಃ ಸ್ಥಾಪಿಸಬೇಕೆಂದೂ ಅನೇಕ ಸದಸ್ಯರು ತಿಳಿಸಿದರು. ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಉತ್ತರವಿತ್ತು ಹೆಚ್ಚು ಹಣ ವಿನಿಯೋಗಿಸಲಾಗಿದುವುದರಿಂದ ಸಿವಿಲ್ ಸರ್ವೀಸು ಅಭಿವೃದ್ಧಿ ಹೊಂದುವುದಿಲ್ಲವೆಂದೂ, ಬದಲು ನಿರ್ಣಯದ ತತ್ವವನ್ನು ಸರ್ಕಾರದವರು ಒಪ್ಪಿ ಅದನ್ನು ಅಭಿವೃದ್ಧಿ ಪಡಿಸಲು ಎಲ್ಲ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ಭರವಸೆ ಇತ್ತರು. ಸರ್ಕಾರಕ್ಕೆ ಕೋಮುವಾರು ಭಾವನೆ ಇದೆ ಎಂಬುದು ನಿರಾಧಾರವಾದುದೆಂದೂ ಹೇಳಿದರು. ನಿರ್ಣಯವನ್ನು ಅನಂತರ ವಾಪಸು ತೆಗೆದು ಕೊಳ್ಳಲಾಯಿತು.

ನಾಗಮಂಗಲದ ತಾಲ್ಲೂಕು ಆದಿ ಚುಂಚನ ಗಿರಿಮಠಕ್ಕೆ ವರ್ಷಕ್ಕೆ ೩೦ ಸಾವಿರ ರೂ ಕೊಡಬೇಕೆಂಬ ಶ್ರೀ ಎಂ ಶಂಕರಲಿಂಗೇಗೌಡರ ನಿರ್ಣಯವು ಬಹುಮತದಿಂದ ಬಿದ್ದು ಹೋಯಿತು

ಕೆರೆಗಳ ಪ್ರದೇಶದಲ್ಲಿ ಬಾವಿಗಳನ್ನು ತೆಗೆಸಲು ೫ ಲಕ್ಷ ರೂ, ಕೋಮುವಾರು ಸೌಕರ್ಯ, ಅಸ್ಪೃಶ್ಯತಾ ನಿವಾರಣಾ ಮತ್ತು ಗ್ರಾಮಗಳ ಕೈಗಾರಿಕಾಭಿವೃದ್ಧಿಗಳಿಗಾಗಿ ೩ ಲಕ್ಷ ರೂ, ೧೦೦ ರೂ ಗಿಂತ ಕಡಿಮೆ ಸಂಬಳಬರುವವರಿಗೆ ಕಪ್ಪು ದರದಲ್ಲಿ ಧಾನ್ಯಗಳ ಸರಬರಾಜು-ಇವೇ ಮುಂತಾದ ನಿರ್ಣಯಗಳು ಚರ್ಚೆಗೆ ಬಂದು ವಾಪಸು ತೆಗೆದುಕೊಳ್ಳಲ್ಪಟ್ಟವು

ಉದಕ ಮಂಡಲದಿಂದ ಪ್ರಭುಗಳ ವಾಪಸು

ಮೈಸೂರು ೧೧

ಶ್ರೀಮನ್ಮಹಾರಾಜರವರು ನಿನ್ನೆ ಉದಕ ಮಂಡಲದಿಂದ ಹಿಂದಿರುಗಿದರು.

ಸತ್ಯನಾರಾಯಣ ಪೂಜೆ

ಚಾಮುಂಡಿ ಪುರದಲ್ಲಿರುವ ಎವರೆಸ್ಟ್ ಸ್ಟೋರ್ಸಿನ ಶ್ರೀ ಎಂ ಗೋಪಾಲರಾವ್ ಮತ್ತು ಬಿ ಸಾ|| ಹಿಂದುಳಿದರ ವಿವಾಹದ ಸಂಬಂಧದಲ್ಲಿ ನಿನ್ನೆ ಶ್ರೀ ಸತ್ಯನಾರಾಯಣ ಪೂಜೆಯನ್ನು ಶ್ರೀ ಗೋಪಿ ಶಂಕರ್‌ರವರು ನೆರವೇರಿಸಿ ಸಂತರ್ಪಣೆ ನಡೆಸಿದರು

ಚಿನ್ನದ ಮೇಲಿನ ತೆರಿಗೆ ವಜಾ ಮಸೂದೆ

ಪ್ರ. ಪ್ರ. ಸಭೆಯಲ್ಲಿ ಅಂಗೀಕಾರ

ಸ್ವಂ ಸು] ಬೆಂಗಳೂರು ೧೧

ಪ್ರಜಾ ಪ್ರತಿನಿಧಿಸಭೆಯಲ್ಲಿ ನಿನ್ನೆ ದಿನ ಚಿನ್ನದ ಮೇಲಿನ ತೆರಿಗೆ ವಜಾ ಮಾಡುವ ಮಸೂದೆಯ ಮೇಲೆ ದೀರ್ಘ ಚರ್ಚೆ ನಡೆದು, ಅದು ಅಂಗೀಕೃತವಾಯಿತು. ಶ್ರೀಗಳಾದ ಶಂಕರಲಿಂಗೇಗೌಡ, ಎಲ್. ಸಿದ್ದಪ್ಪ, ಸಿದ್ದಿ ಥಾಮಸ್, ಮೀರ್ ಹಾದಿ ಹುಸೇನ್, ಬಿ ಎನ್ ಗುಪ್ತ ಮುಂತಾದವರು ಮಸೂದೆಯನ್ನು ಸ್ವಾಗತಿಸಿ ಇದರಿಂದ ಚಿನ್ನದ ಗಣಿಯು ಅಭಿವೃದ್ಧಿಯಾಗುವುದೆಂದು ತಿಳಿಸಿದರು. ಕಾರ್ಮಿಕರ ಹಿತ ರಕ್ಷಣೆ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದೂ ಮತ್ತು ಹೆಚ್ಚು ಜನ ಭಾರತೀಯರನ್ನು ಅಧಿಕೃತ ವರ್ಗಕ್ಕೆ ನಾಮಕರಣ ಮಾಡಬೇಕೆಂದೂ ಅವರು ಸಲಹೆ ಕೊಟ್ಟರು.

ಶ್ರೀಗಳಾದ ನಾಗಭೂಷಣಭಟ್ಟ, ಎಸ್ ಸಿ ಮಲ್ಲಯ್ಯ, ಎಂ ಸುಬ್ಬಯ್ಯ ಮುಂತಾದವರು ವಿರೋಧಿಸಿ, ಮಸೂದೆಯಿಂದ ಸಂಸ್ಥಾನಕ್ಕೆ ಆದಾಯವು ಕಡಿಮೆಯಾಗುವುದೆಂದೂ, ಚಿನ್ನದ ಗಣಿಯನ್ನು ರಾಷ್ಟ್ರೀಕರಣ ಮಾಡಬೇಕೆಂದೂ ಹೇಳಿದರು.

ಸಚಿವ ಶ್ರೀ ದಾಸಪ್ಪನವರು ಉತ್ತರವಿತ್ತು, ಈ ಮಸೂದೆಯಿಂದ ಚಿನ್ನದ ಗಣಿ ಕೈಗಾರಿಕೆಯು ಅಭಿವೃದ್ಧಿ ಹೊಂದಿ ಅದರಿಂದ ಸಂಸ್ಥಾನಕ್ಕೆ ಹೆಚ್ಚು ಅನುಕೂಲವಾಗುವುದೆಂದೂ ಹೆಚ್ಚು ಜನ ಭಾರತೀಯರನ್ನು ಸೇರಿಸಬೇಕೆಂದು ಷರತ್ತು ಹಾಕಿರುವುದರಿಂದ ಸ್ವಲ್ಪ ಭಾಗ ರಾಷ್ಟ್ರೀಕರಣ ಮಾಡಿದಂತಾಗಿದೆಯೆಂದೂ ಹೇಳಿದರು.

ಭಾರತ ಸರ್ಕಾರದವರು ಸ್ಥಾಪಿಸಿರುವ ಕೇಂದ್ರ ರೇಷ್ಮೆ ಬೋರ್ಡಿನವರಿಗೆ ಮೈಸೂರು ರೇಷ್ಮೆ ಕೈಗಾರಿಕೆ ಮೇಲೆ ಹತೋಟಿ ಇಟ್ಟುಕೊಳ್ಳುವ ಅಧಿಕಾರವನ್ನು ಕೊಡುವ ಮಸೂದೆಯೂ ಅಂಗೀಕಾರವಾಯಿತು.

ಪ್ರಶ್ನೋತ್ತರಗಳು

ಮೈಸೂರು ಶೈಕ್ಷಣಿಕ ... ತರಗತಿಯವರಿಗೆ ಏರ್ಪಡಿಸಿರುವ ಸೌಲಭ್ಯಗಳ ವಿಚಾರವಾಗಿ ಶ್ರೀ ಕೆ ಚನ್ನಲಿಂಗಯ್ಯನವರು ಹಲವಾರು ಪ್ರಶ್ನೆಗಳನ್ನು ಹಾಕಿದರು. ಈಗಿನ ಏರ್ಪಾಡಿನಿಂದ ಜನರಿಗೆ ತೊಂದರೆಯಾಗಿರುವುದು. ಸರ್ಕಾರಕ್ಕೆ ಗೊತ್ತು ಬಂದಿದೆಯೆಂದೂ, ಆದರೆ ಭಾರತದ ವೈಶ್ಯ ... ಹೊಣೆ ಮೇಲೆ ಈ ವ್ಯಾಪಾರವನ್ನು ಮಾಡಲಾಗಿದೆಯೆಂದೂ, ಅದನ್ನು ಬದಲಾಯಿಸಬೇಕಾದರೆ ಬೋರ್ಡಿನ ಅನುಮತಿಯನ್ನು ಪಡೆಯಬೇಕೆಂದೂ ಸಚಿವ ಶ್ರೀ ಟಿ ಮರಿಯಪ್ಪನವರು ಉತ್ತರವಿತ್ತರು. ಶೈಕ್ಷಣಿಕ ಪ್ರಮಾಣಪತ್ರಗಳಿಗೆ ಸ...ಷ್ಟನ ಸೌಲಭ್ಯವನ್ನೊದಗಿಸಲು ಈ ವರ್ಷ ಸಹ್ಯ ಹಣ ಕೊಡಲಾಗಿದೆಯೆಂದೂ ಅವರು ತಿಳಿಸಿದರು. ಶೈಕ್ಷಣಿಕ ಸಿಲ್ಯಾಣಗಳ ಹೆಸರುಗಳನ್ನು ಕನ್ನಡ, ಇಂಗ್ಲೀಷ್ ಮತ್ತು ಹಿಂದಿಗಳಲ್ಲಿ ಮಾತ್ರ ಬರೆಯಲಾಗಿದೆಯೆಂದೂ ಉರ್ದುವಿನಲ್ಲಿ ಬರೆಯುವುದು ಅನವಶ್ಯಕವೆಂದೂ ಸಚಿವರು ಉಪ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಶ್ರೀಗಳಾದ ಎಲ್. ಕೆ ಮುನಿಕೆಂಪಯ್ಯ, ಬಿ ಚನ್ನಬಸಪ್ಪಗೌಡ, ನಾರಾಯಣಗೌಡ ಅಬ್ದುಲ್ ಗಫಾರ್ ಜಿ ಎಸ್ ದೇವದಾಸ್, ವಾಸುದೇವ ಶೆಟ್ಟಿ, ಬಿ ವಿ. ಶಿವಲಿಂಗಪ್ಪ ಮತ್ತು ಶ್ರೀಮತಿ ರತ್ನಮ್ಮ ಮಾಧವರಾವ್‌ರವರುಗಳು ಹರಿಜನಬಾಧ್ಯತಾ ಸಮಿತಿಗೆ ಚುನಾಯಿತರಾಗಿದ್ದಾರೆ.

೦ ಟಿ ನರಸೀಪುರ, ದೊಡ್ಡಬಳ್ಳಾಪುರ ಚಿಂತಾಮಣಿ, ಕೊಪ್ಪ, ಶ್ರೀರಂಗಪಟ್ಟಣ, ಚನ್ನರಾಯಪಟ್ಟಣ, ಭದ್ರಾವತಿ, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸ ಕಾನೂನನ್ನು ಜಾರಿಗೆ ತರಲಾಗಿದೆ.

ಕೆಲಸಕ್ಕೆ ಸಿದ್ಧವಾಗಿದೆ

ಪಂಚರಾತ್ರ

[By Dr N S Narayana Sastry]
Inter Arts & Inter Science
Text Book for 1949 50
ಬೆಲೆ 1 6 0

ಮಿತ್ರ ಮತ್ತು ಕಂಪೆನಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಲಕ್ಷ್ಮೀ ಥಿಯೇಟರ್

ಫೋನ್. 584

9—6—49ರಿಂದ

ದಿನವಹಿ 3 ಆಟಗಳು

ನ್ಯೂ ಇಂಡಿಯಾ ಫಿಲಂಸ್‌ರವರ ಹಿಂದಿ ಚಿತ್ರ

ನಯಿ ರೀತ್

ಪಾತ್ರ-ಮೆಚ್ಚಿನ ತಾರೆ ಸುಲೋಚನಾ ಚಟರ್ಜಿ, ಗೀತಾ ಬಾಲಿ ಮತ್ತು. ರಾಜೇಂದ್ರ

ಸತ್ಕಾರ ಕೂಟ

ಮೈಸೂರಿನ ನವಜ್ಯೋತಿ ಸ್ಟುಡಿಯೋವಿನ ಮ್ಯಾನೇಜಿಂಗ್ ಡೈರೆಕ್ಟರೂ ಮತ್ತು ಇಂದೂರಿನ ಮಹಾರಾಜರ ಸಂಬಂಧಿಗಳೂ ಆದ ಶ್ರೀ ಪಿ ಬಿ ಪಾಂಡೆಯವರ ಗೌರವಾರ್ಥವಾಗಿ ಮೊನ್ನೆ ಸಂಜೆ ಮೇಲ್ಕಂಡ ಸ್ಟುಡಿಯೋವಿನ ಮ್ಯಾನೇಜಿಂಗ್ ಏಜೆಂಟರುಗಳಾದ ಶ್ರೀಗಳು ಜಿ. ಆರ್ ರಾಮಯ್ಯ ಮತ್ತು ವೈ ಎಸ್. ಹಿರಣ್ಣಯ್ಯನವರುಗಳು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

INTER EXAM.
Sept. 1949

Expert private tuition in English with Special attention to III paper. Tuition for ladies at their residences.

Applyto:-
X, c/o SADHVI

ಗುರುದೇವಾ ಹಾಲ್

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ :: ಮೈಸೂರು

Edited, printed, and published by A.R. Nagarajan at the Sadhvi Press, D. Subbiah Road, Mysore.

ಜೂಜಾಡುತ್ತಿದ್ದ ಹೆಂಗಸರ ದಸ್ತಗಿರಿ

ಕರಾಚಿಯಲ್ಲಿ ಜೂಜಾಡುತ್ತಿದ್ದ ನಾಲ್ಕು ಜನ ಸ್ತ್ರೀಯರನ್ನು ಪೋಲೀಸರು ದಸ್ತಗಿರಿ ಮಾಡಿ ಅವರಲ್ಲಿದ್ದ ಹಣವನ್ನು ವಶಪಡಿಸಿಕೊಂಡಿರುತ್ತಾರೆ.

ರಾಜಕಮಲ್

ಮೈಸೂರು

10—6—49 ರಿಂದ

ಅಮೋಘ 2ನೇ ವಾರ

ಪ್ರತಿ ದಿನ 3 ಆಟಗಳು

ಕರ್ದಾರ್‌ರವರ ಹಿಂದಿ ಚಿತ್ರ

ನಾಟಕ್

—.ಮುಖ್ಯ ಪಾತ್ರ:—
ಸುರಯ್ಯ, ಅಮರ್

Morning Shows :—
From 10-6-49 For 4 days

AFRICA SPEAKS

(A thrilling adventure in the un-explored regions of equatorial Africa.

ಶುಭಮಸ್ತು

|| ಸಮಸ್ತ ಸನ್ಮಂಗಳಾನಿ ಭವಂತು ||

ಮದುವೆ ಜವಳಿಗಳಿಗೆ

ಹೆಸರುವಾಸಿಯಾದ ಅಂಗಡಿ

ನ್ಯಾಯವಾದ ಬೆಲೆ, ನಾಣ್ಯವಾದ ಮಾಲು.

ಬಾದುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು.

|| ಶ್ರೀ ಸೀತಾರಾಮಚಂದ್ರಾಯನಮಃ ||

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೋಮಕಲಾ

ಗಂಡಸರ ಮೂತ್ರ ಕೋಶದ ಬಿಳುಪು, ಕೆಂಪು ಮೈ ಮೇಲೆ ಮೇಹದ ಮಚ್ಚೆಗಳು, ಮೇಹ ವ್ರಣಗಳು ಸಹಾ ಪರಿಹಾರ. ಪಥ್ಯವಿಲ್ಲದೆ ಸೇವಿಸುವ ಔಷಧಿ
ಬೆಲೆ ಶೀಸೆ 1ಕ್ಕೆ 2-0-0

ವಿಳಾಸ: —
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪ್ರಭಾ

11—6—49ರಿಂದ

ಅಮೋಘ ಪ್ರಾರಂಭ

ದಿನವಹಿ 4 ಆಟಗಳು

ವ ಫಿಲಂಸ್‌ರವರ

ಬಜ್ಜಾರ್

(ಹಿಂದಿ)

ಶ್ಯಾಮ್, ಗೋಪ್, ನಿಗರ್ ಸುಲ್ತಾನ

• ಶ್ಯಾಮ್

Office of the University of Mysore
Mysore Dated the 31st May 1949.

NOTIFICATION

Subject: **University Examinations of September 1949.**—

It is hereby notified that candidates intending to appear for the following Examinations to be held in September 1949 should submit their applications in the prescribed form on **or before 30th June 1949 through the Heads of Colleges from which they appeared last.**

(i) Intermediate in Arts (ii) Intermediate in Science (iii) Intermediate in Commerce (iv) B. A., Degree. (v) B. Sc., Degree (vi) B. A. (Hons) Preliminary (vii) B.Sc., (Hons) Preliminary (viii) B. Com., (ix) Engineering.

Forms of applications for admission to the Examination may be had on application from the Heads of Colleges concerned.

For detailed information attention is invited to this office Notification No. Ex. 1091,48-49, dated 31st May 1949.

By order.
Sd. C. Rangachar
Ag. Registrar

ಪೋ ೯೯೦ 792. WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೩] ಭಾನುವಾರ ೧೨-೬-೪೯ [ಸಂಚಿಕೆ ೪೧

ಮದ್ರಾಸ್ ಪತ್ರಿಕೆಗಳಿಗೆ ಸರ್ಕಾರದ ಸವಾಲು

ಮೈಸೂರಿನ ಭವಿಷ್ಯದ ಬಗ್ಗೆ ಪ್ರಜಾಭಿಪ್ರಾಯ ಬೇಕು

ಪ್ರ॥ ಪ್ರ॥ ಸಭೆಯಲ್ಲಿ ಖಾಸಗಿ ನಿರ್ಣಯ

ಬೆಂಗಳೂರು ೧೧

ಮೈಸೂರು ಸಂಸ್ಥಾನವು ಯೂನೈಟೆಡ್ ಕರ್ನಾಟಕದಲ್ಲಿ ವಿಲೀನವಾಗಬೇಕೆಂಬ ಬಗ್ಗೆ ಉಂಟಾಗಿರುವ ಸ್ಥಿತಿಯನ್ನು ಕುರಿತು ಪ್ರಜಾ ಪ್ರತಿನಿಧಿ ಸಭೆಯ ೨೬ ಮಂದಿ ಸದಸ್ಯರು ರುಜುಮಾಡಿ ಕಳುಹಿಸಿದ ವಿಶೇಷ ನಿರ್ಣಯವೊಂದು ಸರಕಾರದವರು ಮೈಸೂರಿನ ಭವಿಷ್ಯದ ಬಗ್ಗೆ ಜನಾಭಿಪ್ರಾಯವನ್ನು ತೆಗೆದುಕೊಳಬೇಕೆಂದು ತಿಳಿಸುತ್ತದೆ

ಗಾಂಧಿ ಆದರ್ಶದ ಪ್ರಸಾರಕ್ಕಾಗಿ ಅಮೆರಿಕದಲ್ಲಿ ಸಂಸ್ಥೆ

ಮಹಾತ್ಮ ಗಾಂಧಿಯವರ ತತ್ವ ಮತ್ತು ಆದರ್ಶಗಳನ್ನು ಪ್ರಸಾರ ಮಾಡಲು ಅಮೆರಿಕಾದಲ್ಲಿ ಸ್ಮಾರಕ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆ ಇದಕ್ಕೆ ನ್ಯೂಯಾರ್ಕಿನ ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಮಾನ್ಯತೆ ಕೊಟ್ಟಿರುವರು ನಿಧಿ ಎತ್ತಲು ಹಲವು ಅಮೇರಿಕನ್ನರೂ ಭಾರತೀಯರೂ ನಿರ್ಧರಿಸಿದ್ದಾರೆ

ಕೊಚ್ಚಿಯಲ್ಲಿ ಪ್ರಮುಖ ನೌಕಾ ನೆಲೆ

ಕೊಚ್ಚಿಯನ್ನು ಪ್ರಮುಖ ನೌಕಾ ನೆಲೆಯನ್ನಾಗಿ ಮಾಡಲಾಗುವುದೆಂದು ಭಾರತದ ನೌಕಾ ದಂಡನಾಯಕರು ತಿಳಿಸಿರುತ್ತಾರೆ ಈ ಪ್ರದೇಶವನ್ನು ರಕ್ಷಣಾ ಕೇಂದ್ರವನ್ನಾಗಿ ಪರಿವರ್ತಿಸುವುದಲ್ಲದೆ ಜೊತೆಗೆ ಶಿಕ್ಷಣ ಶಾಲೆಯನ್ನೂ ಸ್ಥಾಪಿಸಲಾಗುವುದೆಂದೂ ಹೇಳಿರುತ್ತಾರೆ

ಬಟ್ಟೆ ಕೂಪರ್ ರದ್ದು

೫-೬ ಲಕ್ಷ ರೂ ಗಳಷ್ಟು ಬೆಲೆಯುಳ್ಳ ಬಟ್ಟೆಗಳು ಖರ್ಚಾಗದೆ ಇನ್ನೂ ನಾನಾ ಅಂಗಡಿಗಳಲ್ಲಿ ದಾಸ್ತಾನು ಇರುವುದರಿಂದಲೂ, ಜನರು ತಮ್ಮ ಆಗತ್ಯತೆಗಿಂತಲೂ ಹೆಚ್ಚು ಕೊಳ್ಳದಿರುವುದರಿಂದಲೂ, ಕೂಪನ್ ಮೇಲೆ ಬಟ್ಟೆ ಒದಗಿಸುವ ವ್ಯವಸ್ಥೆಯನ್ನು ರದ್ದುಗೊಳಿಸಬೇಕೆಂದು ಸಂಸ್ಥಾನದ ಸಿವಿಲ್ ಸಪ್ಲೈಸ್ ಕಂಟ್ರೋಲು ಸರಕಾರಕ್ಕೆ ಶಿಫಾರಸು ಮಾಡಿದ್ದಾರೆಂದು ತಿಳಿದು ಬಂದಿದೆ ಈ ವಿಷಯವಾಗಿ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಲಹೆಯನ್ನು ತೆಗೆದುಕೊಂಡು ಸರಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳಲಿರುವರೆಂದು ಗೊತ್ತಾಗಿದೆ

ಹರಿಕಥೆ

ಕೊತ್ವಾಲ ರಾಮಯ್ಯನವರ ಬೀದಿಯ ಶ್ರೀ ಕಮಲಾಂಬಾ ನಿಲಯದ ಎದುರು ಹಾಕಿರುವ ಚಪ್ಪರದಲ್ಲಿ ಈ ಸಾಯಂಕಾಲ ೬ ಗಂಟೆಗೆ ವೆ ಬ್ರ॥ ಮುಳಬಾಗಿಲು ನಾರಾಯಣ ದಾಸರಿಂದ ನಾವಿಕ ಮೋಕ್ಷವೆಂಬ ಹರಿಕಥೆ ನಡೆಯುತ್ತೆ

ಆರತಿ-ಅಕ್ಷತೆ

ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ಲಾರಿ ಮಾಲೀಕರಾದ ಶ್ರೀ ಕೆ ಕಾಳಪ್ಪನವರು ತಮ್ಮ ಪುತ್ರ ಶ್ರೀ ಕೆ. ಶಿವಣ್ಣ ಮತ್ತು ತೀರಂಪಳ್ಳಿ ಶ್ರೀ ರಾಚಪ್ಪನವರ ಪುತ್ರಿ ಸೌ॥ ಗುರುಮಲ್ಲಮ್ಮಣ್ಣಿ ಇವರ ವಿವಾಹದ ಸಂಬಂಧವಾಗಿ ಕ್ಯಾತಸಂದ್ರ, ಸಾಹುಕಾರ್ ಚಿಕ್ಕಲಿಂಗಯ್ಯನವರ ವಿದ್ಯಾರ್ಥಿನಿಲಯದ ಮುಂದೆ ಆರತಿ-ಅಕ್ಷತೆಯನ್ನು ನಿರ್ವಹಿಸಿ ಆಹ್ವಾನಿತರನ್ನು ಪ್ರಿನ್ಸ್ ಸಲಿ ಕಾಂಡಾ ವಾದ್ಯದಿಂದ ಸತ್ಕರಿಸಿದರು

ಪ್ರ॥ ಪ್ರ॥ ಸಭೆ ಅಧ್ಯಕ್ಷ, ಉಪಾಧ್ಯಕ್ಷರ ಸಂಬಳ

ಬೆಂಗಳೂರು ೧೨

ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರಿಗೆ ತಿಂಗಳಿಗೆ ೮೦೦ ರೂ ಸಂಬಳ, ೧೫೦ ರೂ ವಾಹನಭತ್ಯ, ವಾಸಕ್ಕೆ ಮನೆ ಇಲ್ಲವೇ ೨೦೦ ರೂ ಬಾಡಿಗೆ ಮತ್ತು ಒಂದು ಮೋಟಾರು ಇಷ್ಟನ್ನೂ ಕೊಡಬೇಕೆಂದೂ, ಉಪಾಧ್ಯಕ್ಷರಿಗೆ ತಿಂಗಳಿಗೆ ೫೦೦ ರೂ ಸಂಬಳವನ್ನು ಕೊಡಬೇಕೆಂದೂ ಮಂತ್ರಿಗಳು ಪ್ರತಿನಿಧಿಸಭೆಗೆ ವಿಶೇಷ ನಿರ್ಣಯವೊಂದನ್ನು ಕಳುಹಿಸಿದ್ದಾರೆ

ಅಮೆರಿಕದ ಶಾಲೆಗಳಲ್ಲಿ ಕಮ್ಯೂನಿಸ್ಟ್ ಉಪಾಧ್ಯಾಯರ ನಿಷೇಧ

ಅಮೆರಿಕದ ಶಾಲೆಗಳಲ್ಲಿ ಕಮ್ಯೂನಿಸ್ಟರನ್ನು ಉಪಾಧ್ಯಾಯರುಗಳಾಗಿ ನೇಮಿಸುವುದನ್ನು ತಾವು ವಿರೋಧಿಸುವುದಾಗಿ ಅಧ್ಯಕ್ಷ ಟ್ರೂಮನ್‌ರವರು ತಿಳಿಸಿರುತ್ತಾರೆ

ಶಾಸನ ಸಭಾ ಸದಸ್ಯರನ್ನು ಹೊಡೆದುದಕ್ಕಾಗಿ ದಸ್ತಗಿರಿ

ತಿರುಪತಿಯ ತಿರುಮಲೆ ದೇವಸ್ಥಾನದ ಧರ್ಮದರ್ಶಿಗಳಲ್ಲೊಬ್ಬರೂ, ಮಾಜಿ ಶಾಸನ ಸಭಾ ಸದಸ್ಯರೂ ಆದ ಶ್ರೀ ಎಂ. ರಾಮಕೃಷ್ಣ ರೆಡ್ಡಿಯವರ ಮೇಲೆ ಕೈ ಮಾಡಿದುದಕ್ಕಾಗಿ ೬ ಜನರನ್ನು ದಸ್ತಗಿರಿ ಮಾಡಲಾಗಿದೆ ಅವರ ಮೇಲೆ ಕೊಲೆಯ ಪ್ರಯತ್ನ ಮುಂತಾದ ಆರೋಪಣೆ ಮೇಲೆ ಮೊಕದ್ದಮೆಗಳನ್ನು ಹೂಡಲಾಗುವುದು.

ಕಲ್ಕತ್ತಾ ಜೈಲಿನಲ್ಲಿ ಕಮ್ಯೂನಿಸ್ಟರ ಅವಾಂತರ

ಕಲ್ಕತ್ತೆಯ ಡಂ ಡಂ ಸೆಂಟ್ರಲ್ ಜೈಲಿನಲ್ಲಿರುವ ಕಮ್ಯೂನಿಸ್ಟ್ ಪಕ್ಷದ ಡಿಟೆನ್ಯೂ ಮತ್ತು ಅಂಡರ್ ಟ್ರಯಲ್ ಖೈದಿಗಳು ಕಳೆದ ಗುರುವಾರ ಜೈಲು ಸಿಬ್ಬಂದಿಗಳ ಮತ್ತು ಪೋಲೀಸರ ಮೇಲೆ ಬಿದ್ದರೆಂದೂ, ಇದರಿಂದ ಪೋಲೀಸರು ಗುಂಡು ಹಾರಿಸಬೇಕಾಗಿ ಬಂದು, ಮೂವರು ಖೈದಿಗಳು ಸತ್ತು ೨೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ ನಾಲ್ಕುರು ಪೋಲೀಸರಿಗೂ, ೬ ಜನ ಜೈಲು ವಾರ್ಡರುಗಳಿಗೂ ಗಾಯವಾಗಿದೆ ಪರಿಸ್ಥಿತಿ ಈಗ ಹತೋಟಿಗೆ ಬಂದಿದೆ

ಬೆಂಗಳೂರು ಮೈಸೂರುಗಳಿಗೆ ನೀರು ಸರಬರಾಜು

ಪ್ರ॥ ಪ್ರ॥ ಸಭೆಯಲ್ಲಿ ಪ್ರಶ್ನೋತ್ತರ

ನಿನ್ನೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಶ್ರೀಮತಿ ಅನ್ನಪೂರ್ಣಮ್ಮನವರು ಬೆಂಗಳೂರು ಮತ್ತು ಮೈಸೂರುಗಳಿಗೆ ನೀರು ಸರಬರಾಜಿನ ವ್ಯವಸ್ಥೆ ಸಂಬಂಧವಾಗಿ ಹಲವು ಪ್ರಶ್ನೆಗಳನ್ನು ಹಾಕಿದರು. ಬೆಂಗಳೂರಿನಲ್ಲಿ ನೀರಿನ ವ್ಯವಸ್ಥೆಗೆ ಸರಕಾರದವರು ೧೩೦ ಲಕ್ಷ ರೂ ಗಳನ್ನೂ ಮೈಸೂರಿನಲ್ಲಿನ ವ್ಯವಸ್ಥೆಗೆ ಅಲ್ಲಿನ ಪೌರಸಭೆ ಮತ್ತು ಸರಕಾರದವರು ಸೇರಿ ಒಟ್ಟು ೪೦ ಲಕ್ಷ ರೂ ಗಳನ್ನೂ ಖರ್ಚು ಮಾಡಿರುವುದಾಗಿಯೂ ನೀರು ಸರಬರಾಜು ಮಾಡಿದುದಕ್ಕೆ ಪ್ರತಿ ಸಂಪ್ರತಿ ಬೆಂಗಳೂರಿನಲ್ಲಿ 2 ಲಕ್ಷ ರೂ ಮತ್ತು ಮೈಸೂರಿನಲ್ಲಿ ೩.೫೪ ಲಕ್ಷ ರೂ. ಗಳನ್ನು ತೆರಿಗೆ ರೂಪದಲ್ಲಿ ವಸೂಲು ಮಾಡಲಾಗುತ್ತಿದೆಯೆಂದೂ. ಮೈಸೂರಿನ ಖರ್ಚಿನ ಬಗ್ಗೆ ಸರಕಾರವು ಒಂದನೇ ೧ ಭಾಗದಷ್ಟು ಹಣ ಕೊಟ್ಟಿರುವುದಾಗಿಯೂ ತಿಳಿಸಲಾಯಿತು ನೀರಿನ ಅಭಾವವು ಇರುವ ಊರುಗಳಲ್ಲೆಲ್ಲಾ ಸರಕಾರದ ಕಡೆಯಿಂದ ನೀರು ಸರಬರಾಯಿ ಆಗುತ್ತಿದೆ ಅಲ್ಲಿನ ವ್ಯವಸ್ಥೆಗಳಿಗೆ ಆಯಾ ಪೌರಸಭೆಗಳು ಖರ್ಚು ಕೊಡಬೇಕಾಗುವುದು ಮೋಟರುಗಳು ಸಿಕ್ಕಿದ ಹಾಗೆಲ್ಲಾ ಹಳ್ಳಿಗಳಿಗೆ ಮೋಟರ್ ಪಂಪು ಕಳುಹಿಸಲಾಗುವುದು-ಎಂದು ತಿಳಿಸಲಾಯಿತು

ಜನರ ಗುಂಪಿನಿಂದ ಕಮ್ಯೂನಿಸ್ಟ್ ಖೈದಿಗಳ ಬಿಡುಗಡೆ

ಬಿಹಾರ್ ಪ್ರಾಂತ್ಯದ ಭಾಗಲಪುರಕ್ಕೆ ಹತ್ತಿರದ ಹಳ್ಳಿಯಿಂದ ೫ ಜನ ಪೋಲೀಸರು ೪ ಮಂದಿ ಕಮ್ಯೂನಿಸ್ಟರನ್ನು ಕರೆದುಕೊಂಡು ಬರುತ್ತಿದ್ದಾಗ ದೊಡ್ಡ ಜನರ ಗುಂಪಿನವರು ಪೋಲೀಸರ ಮೇಲೆ ಬಿದ್ದು, ಖೈದಿಗಳನ್ನು ಬಂಧವಿಮೋಚನೆ ಮಾಡಿದರೆಂದೂ ಘರ್ಷಣೆಯಲ್ಲಿ ಪೋಲೀಸರಿಗೆ ಗಾಯವಾಯಿತೆಂದೂ ವರದಿಯಾಗಿದೆ

ಸಿನಿಮಾಗಳಲ್ಲಿ ಹೊಗೆ ಬತ್ತಿ ಸೇದುವರಿಗೆ ದಂಡ

ಕೆಲವು ದಿನಗಳ ಹಿಂದೆ ಚಿಕ್ಕಪೇಟೆಯ ಅನೇಕ ಸಿನಿಮಾ ಮಂದಿರಗಳಿಗೆ ಪೋಲೀಸರು ಪ್ರವೇಶಿಸಿ ಆಟ ನಡೆಯುತ್ತಿದ್ದಾಗ ಹೊಗೆ ಬತ್ತಿ ಸೇದುತ್ತಿದ್ದ ೬೦ ಜನರನ್ನು ದಸ್ತಗಿರಿ ಮಾಡಿದರು ಅವರೆಲ್ಲರಿಗೂ ದಂಡವನ್ನು ವಿಧಿಸಲಾಯಿತು.

ರುಮೇನಿಯಾ ರಾಜಕುಮಾರಿ ಕಿರೀಟದ ಗಿರವಿ

ರುಮೇನಿಯಾದ ರಾಜಕುಮಾರಿ ಇಲಿಯಾನಾಳು ತನ್ನ ಕಿರೀಟವನ್ನು ೧,೯೫೦೦೦ ರೂ ಗಳಿಗೆ ಅಡು ಇಟ್ಟಿರುವುದಾಗಿ ಗೊತ್ತಾಗಿದೆ ಆಕೆಯು ರುಮೇನಿಯದ ಮಾಜಿ ದೊರೆ ಮೈಕೇಲ್‌ರವರ ಚಿಕ್ಕಮ್ಮ ಪ್ಲಾಟಿನಂ ಲೋಹದಲ್ಲಿ ಅನೇಕ ವಜ್ರ, ಪಚ್ಚೆಗಳನ್ನು ಸೇರಿಸಿ ಈ ಕಿರೀಟವನ್ನು ತಯಾರಿಸಲಾಗಿದೆ ಇದರ ಒಟ್ಟು ಬೆಲೆಯು ೫೭ ಲಕ್ಷ ರೂ ಎಂದು ಹೇಳಲಾಗಿದೆ ಇದರಲ್ಲಿ ೧೫೫ ಕ್ಯಾರಟ್ಟಿನ ಒಂದು ಭಾರಿ ಪಚ್ಚೆಯಿದೆ ಈ ಕಿರೀಟವನ್ನು ರಷ್ಯದ ಜಾರ್ ಅಲೆಕ್ಸಾಂಡರನ ಪತ್ನಿ ಮೇರಿಯು ಹಿಂದೆ ಧರಿಸುತ್ತಿದ್ದಳೆಂದೂ, ಅದು ಇಲಿಯಾನಾಳ ತಾಯಿಗೆ ವಿಕ್ಟೋರಿಯಾ ರಾಣಿ ಸೊಸೆಯ ಮೂಲಕ ಬಂದಿತ್ತೆಂದೂ ಹೇಳಲಾಗಿದೆ ಆಕೆಯು ಅರ್ಜಂಟೈನಾದಲ್ಲಿ ವ್ಯಾಪಾರ ಮಾಡುತ್ತಿರುವ ತನ್ನ ಗಂಡನ ಸಹಾಯಕ್ಕಾಗಿ ಇದನ್ನು ಗಿರವಿಯಿಟ್ಟಿರುವಳು.

ನಾನ್‌ಕಿಂಗನ್ನು ತ್ಯಜಿಸಲು ಸಿದ್ಧತೆ

ದಕ್ಷಿಣ ಚೀಣದ ರಾಜಧಾನಿಯಾದ ನಾನ್‌ಕಿಂಗನ್ನು ಸರ್ಕಾರಿ ನಾಯಕರುಗಳು ತ್ಯಜಿಸಲು ಸಿದ್ಧತೆನಡೆಸುತ್ತಿರುವರೆಂದು ಹೇಳಲಾಗಿದೆ ಉತ್ತರದಿಂದ ಕಮ್ಯೂನಿಸ್ಟರು ಈ ಪ್ರದೇಶಗಳ ಮೇಲೆ ಭಾರಿ ಧಾಳಿ ನಡೆಸಲು ಸೇನೆ ಸಜ್ಜು ಗೊಳಿಸುತಿದ್ದಾರೆ

ಸೀಮೆಯೆಣ್ಣೆ ಹಾಕಿ ಸೊಸೆಯ ಸಜೀವ ದಹನ

ತಿರುಪತಿ ಬಳಿ ನರಸಿಂಗಪುರದ ಜೇಪಾಲಂ ಬೋಡಕ್ಕ ಎಂಬಾಕೆಯು ಕಳೆದ ಬುಧವಾರ ತನ್ನ ಸೊಸೆ ಕಾಂತಮ್ಮನ ಮೇಲೆ ಸೀಮೆ ಎಣ್ಣೆ ಸುರಿದು ಜೀವಸಹಿತ ಸುಟ್ಟುದಕ್ಕಾಗಿ ಆಕೆಯನ್ನು ಪೋಲೀಸಿನವರು ದಸ್ತಗಿರಿ ಮಾಡಿ ಮುಂದಿನ ತನಿಖೆ ನಡೆಸುತ್ತಿದ್ದಾರೆ

ಮದರಾಸಿನ ಪತ್ರಿಕೆಗಳಿಗೂ ಸರ್ಕಾರಕ್ಕೂ ಘರ್ಷಣೆ

ಪತ್ರಿಕೆಗಳ ಜಾಹಿರಾತಿನ ಮೇಲೆ ತೆರಿಗೆ ಹಾಕುವುದಾದರೆ ಸರ್ಕಾರದ ಸಂಬಂಧವಾದ ಎಲ್ಲ ಸಮಾಚಾರಗಳನ್ನೂ ಬಹಿಷ್ಕರಿಸುವುದಾಗಿ ಮದರಾಸ್ ಶಾಖೆಯ ಪೌರ್ವಾತ್ಯ ಮತ್ತು ಭಾರತ ಪತ್ರಿಕೋದ್ಯೋಗಿಗಳ ಸಂಘದವರು ಮಾಡಿದ್ದ ನಿರ್ಣಯವನ್ನು ಅಲ್ಲಿನ ಸರ್ಕಾರದವರು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ ಪತ್ರಿಕೆಗಳು ಅಸಹಕಾರ ಮಾಡಿದರೆ ರೇಡಿಯೋ ಮೂಲಕ ಪ್ರಸಾರ ಕಾರ್ಯ ಮಾಡುವುದಾಗಿ ಹೇಳಿದ್ದಾರೆ ತಾವು ರಾಜೀನಾಮೆ ಕೊಡಬೇಕಾಗಿ ಬಂದರೂ ಈ ತೆರಿಗೆಯನ್ನು ತ್ಯಜಿಸುವುದಿಲ್ಲವೆಂದು ಪ್ರಧಾನಿ ಕುಮಾರಸ್ವಾಮಿ ರಾಜರವರು ಹೇಳಿದ್ದಾರೆ

೪೫ ವರ್ಷದ ಮಹಿಳೆಗೆ ೩೫ ಮಂದಿ ಮಕ್ಕಳು

ನ್ಯೂ ಮೆಕ್ಸಿಕೋದ ಒಬ್ಬ ಕರ್ನೆಲ್‌... ಕೊಳಗಾದವೊಬ್ಬನ ಪತ್ನಿ ದೂರೆ ಟಾರೇಜ್ ಎಂಬಾಕೆಗೆ ೧೯೪೯ರಲ್ಲಿ ಆಕೆಯ ೩೫ ನೇ ಮಗುವು ಜನನವಾಯಿತೆಂದು ತಿಳಿದು ಬಂದಿದೆ ಆಕೆಗೆ ಇನ್ನೂ ೪೫ ವರ್ಷ ಇದೊಂದು ಪ್ರಸಂಚದ ರೆಕಾರ್ಡ್ ಎಂದು ಹೇಳಲಾಗಿದೆ. ಆಕೆ ಮುಂದಾದ ಮಕ್ಕಳು ಆಕೆಗೆ ಆಗಿಲ್ಲವೆಂದು ತಿಳಿಸಲಾಗಿದೆ

ವಾರ ಭವಿಷ್ಯ

[illegible]

ರಂಗೂನಿನಲ್ಲಿ ಭಾರತದ ಕೋಟ್ಯಾಧೀಶರ ಅಪಹರಣ

ರಂಗೂನಿನಲ್ಲಿರುವ ಭಾರತೀಯ ಕೋಟ್ಯಾಧೀಶರಾದ ಶ್ರೀ [illegible]ರವರು [illegible] ತಮ್ಮ ಅಕ್ಕಿ ಗಿರಣಿಗಳನ್ನು [illegible] ಹೋದಾಗ, ಸಶಸ್ತ್ರ [illegible] ಹಣದ ಆಸೆಗಾಗಿ ಅವರನ್ನು ಅಪಹರಿಸಿಕೊಂಡು ಹೋದರೆಂದು ತಿಳಿದುಬಂದಿದೆ [illegible]

[illegible]

ಕುಂಭ—ಕೌಟುಂಬಿಕ ದೃಷ್ಟಿಯಿಂದ ಕಟಕಟಿ ಮನಸ್ಸು ಅಸ್ವಸ್ಥವಾಗುವುದು ದೈಹಿಕ ಅಶಕ್ತತೆ ತೋರುವುದು ತಾ॥ [illegible] ಪ್ರಿಯ ಮಿತ್ರರಿಗೆ ಗಂಡಾಂತರ ಸ್ತ್ರೀ ವರ್ಗದಿಂದ ಸಂತೋಷ

ಮೀನ—ಪರೋಪಕಾರಕಾರ್ಯ ನಿಮ್ಮ ಬಗ್ಗೆ ಆದರವು ಹೆಚ್ಚುವುದು ಶರೀರ ಪ್ರಕೃತಿ ಉತ್ತಮ ತಾ॥ [illegible]

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರನಿ ಸೀರೆಗಳು [illegible] ದೊರೆಯುತ್ತವೆ ದಯಮಾಡಿ ಭೇಟಿ ಕೊಡಿ

[illegible] ಮೈಸೂರು

ರಾಜಕಮಲ್

ಮೈಸೂರು

10–6–49 ರಿಂದ

ಎರಡನೆ 2ನೇ ವಾರ

ಪ್ರತಿ ದಿನ 3 ಆಟಗಳು

[illegible]ರವರ ಹಿಂದಿ ಚಿತ್ರ

ನಾಟಕ್

— [illegible] —

ಸುರಯ್ಯ, ಅಮರ್

Morning Shows –

From 10-6-49 For 4 days

AFRICA SPEAKS

A thrilling adventure in the unexplored regions of equatorial Africa

ಚಪ್ಪಟೆಯಾದ ಮೊಟ್ಟೆ

ಅಮೇರಿಕಾದ ಒಂದು ಪಟ್ಟಣದಲ್ಲಿ ಒಂದು ಕೋಳಿಯು ಚಪ್ಪಟೆಯಾದ ಮೊಟ್ಟೆಗಳನ್ನು ಇಟ್ಟಿದೆ ಆಗಾಗ್ಯೆ ಅದು ಇಟ್ಟ ಮೊಟ್ಟೆಗಳು ಇತರ ಕೋಳಿಗಳ ಮೊಟ್ಟೆಗಳಂತೆ ಇದ್ದುವು. ಈಗ ಆ ಮೊಟ್ಟೆಗಳನ್ನು ಬೇರೊಂದು ಪಕ್ಷಿಯು ಮರಿ ಮಾಡಲು ಏರ್ಪಾಡಾಗಿದೆ

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ಮಾರ್ಕೆಟ್ ಮನೆ ನಂಬರ್ [illegible] ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,

ಮೈಸೂರು

ವಿವಾಹ ಮಹೋತ್ಸವ

ಚಾಮುಂಡಿ ಬೆಟ್ಟದ ಶ್ರೀ ಕೃಷ್ಣಪ್ಪನವರ ಜೇಷ್ಠ ಪುತ್ರಿ ಸೌ॥ ಗೌರಮ್ಮನನ್ನು ಶ್ರೀ ಹೆಚ್. ವೆಂಕಟರಾಮಯ್ಯನವರ ದ್ವಿತೀಯ ಪುತ್ರ ಶ್ರೀ ಹೆಚ್ ವಿ ಶ್ರೀಕಂ[ಠ]ಯ್ಯನವರಿಗೆ ಕೊಟ್ಟು, ಈ ದಿನ ಮೈಸೂರಿನಲ್ಲಿ ವಿವಾಹವು ನೆರವೇರಿಸಲ್ಪಟ್ಟಿತು

ಸಂಗೀತ

ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೭॥ ಗಂಟೆಗೆ [illegible] ಸುಬ್ಬಯ್ಯನ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ [illegible] ವಿದ್ವಾನ್ ವಾಸುದೇವ ಮೂರ್ತಿಯವರ ಸಂಗೀತವು ನಡೆಯುವುದು

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ದ್ರಾಕ್ಷಾಹೃದಯಪಾನಕ

ಸೂತಿಕಾವಾತಕ್ಕೆ [ಬಾಣಂತಿ ನಂಜು] ಉತ್ತಮ ಗುಣಕಾರಿ

ಕಣ್ಣು ಕೈಕಾಲುರಿ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಪರಿಹರಿಸುವುದು

ವಿಳಾಸ — ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಪೂರ್ಣ ಚಂದ್ರನ ವರಪ್ರಸಾದ !

[illegible] ಆಯುರ್ವೇದ [illegible] ಚಂದ್ರನ [illegible] ಪೂರ್ಣ ಚಂದ್ರನನ್ನು ಆಯುರ್ವೇದ ವಿಜ್ಞಾನದ [illegible] ಆಯುರ್ವೇದದ ಹಲವು ಔಷಧಿಗಳ ತಯಾರಿಕೆ [illegible] ಮೂಲಿಕೆಗಳಲ್ಲಿರುವ ಚಿಕಿತ್ಸಾವಸ್ತುಗಳ ಗುಣಗಳನ್ನು ಅಭಿವೃದ್ಧಿಗೊಳಿಸಲು ಚಂದ್ರನೇ ಕಾರಣ [illegible] (ಚಂದ್ರ ಪುಟ) [illegible] ಚಂದ್ರನ ಶೀತಳ ಕಿರಣಗಳ [illegible]

[illegible] ನಗರದಲ್ಲಿರುವ ಆಯುರ್ವೇದಾಶ್ರಮ ಫಾರ್ಮಸಿಯಲ್ಲಿ ಆಧುನಿಕ ವಿಜ್ಞಾನ ಮತ್ತು ಪ್ರಾಚೀನ ಆಯುರ್ವೇದಗಳೆರಡೂ [illegible] ಔಷಧಿಗಳು ತಯಾರಾಗುತ್ತಿವೆ [illegible]

ಆಯುರ್ವೇದಾಶ್ರಮ ಫಾರ್ಮಸಿ ಲಿ [illegible] ಅಹಮದಾಬಾದ

AYURVEDASHRAM

PHARMACY LTD. AHMEDABAD

Edited, printed and published by [illegible] at the [illegible] Press [illegible]

ಬೆಂಗಾಲ್, ಬೆನಾರಿಸ್, ಮೈಸೂರು ಸಿಲ್ಕ್ ಸೀರೆಗಳು

[illegible] ಹೊಸದಾಗಿ ಬಂದಿವೆ. ನ್ಯಾಯವಾದ ಬೆಲೆ. ನಾಜೂಕು ವಸ್ತುಗಳು. ಬಾಹುಸಾರ್ ಕಂಪೆನಿ, ಮೈಸೂರು

ಫೋ॥ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೧೩-೬-೪೯ [ಸಂಚಿಕೆ ೨೨೭

ದೆಹಲಿ ನಗರದಲ್ಲಿ ೧೪ ಔನ್ಸ್ ಪಡಿತರ

ಪ್ರ॥ ಪ್ರ॥ ಸಭೆಯ ಮುಂದೆ ಕಾರ್ಮಿಕರ ಪ್ರದರ್ಶನ

[ಸ್ವಂ ಸು ಪ್ರೋ॥] ಬೆಂಗಳೂರು ೧೩. ಪ್ರಜಾಪ್ರತಿನಿಧಿ ಸಭೆಯು ಈದಿನ ೧೨ ಘಂಟೆಗೆ ಉಪಾಧ್ಯಕ್ಷರಾದ ಶ್ರೀ ಬಿ ಪಿ ಬಸಪ್ಪಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಲು, ದಂಡಿನಲ್ಲಿರುವ ಚರ್ಮ ಹದ ಮಾಡುವ ೨೦೦ ಜನ ಕಾರ್ಮಿಕರು ತಮಗೆ ಸಮರ್ಪಕವಾಗಿ ಆಹಾರ ಸರಬರಾಜಾಗುತ್ತಿಲ್ಲವೆಂದು ಸಭೆಯ ಮುಂದೆ ಪ್ರದರ್ಶನ ನಡೆಸಿದರು ಸರ್ಕಾರದ ಶ್ರೀಸ್ವ ಕಾರ್ಯದರ್ಶಿಗಳು ಅವರನ್ನು ಕಂಡು ಸೂಕ್ತ ವ್ಯವಸ್ಥೆ ಮಾಡಲಾಗುವುದೆಂದು ಭರವಸೆ ಇತ್ತ ಮೇಲೆ ಪ್ರದರ್ಶನಕಾರರು ಹಿಂತಿರುಗಿದರು

ಪ್ರಶ್ನೋತ್ತರಕಾಲದಲ್ಲಿ ಸಂಸ್ಥಾನದಲ್ಲಿ ಒಟ್ಟು ೧೩೩ ಟ್ರಾಕ್ಟರುಗಳು ಮತ್ತು ೭ ಬುಲ್ ಡೋಜರುಗಳನ್ನು ಕೊಡಲಾಯಿತೆಂದೂ, ೪ ಹೊಸ ಬುಲ್ ಡೋಜರುಗಳಿಗೆ ಆರ್ಡರು ಕೊಡಲಾಗಿದೆಯೆಂದೂ, ಇದಕ್ಕಾಗಿ ಒಟ್ಟು ೩೦ ಲಕ್ಷ ರೂ ಖರ್ಚಾಯಿತೆಂದೂ ಸಚಿವ ಶ್ರೀ ಹೆಚ್ ಸಿದ್ದಯ್ಯನವರು ಶ್ರೀ ಎಸ್ ಕರಿಯಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ಇದಕ್ಕಾಗಿ ಪ್ರತಿ ವರ್ಷವೂ ೧೧,೭೩೭ ರೂ ವೆಚ್ಚವಾಗುತ್ತಿದೆ ೧೯೪೮ನೇ ೧ ರಿಂದ ಏಪ್ರಿಲ್ ೧ನೇ ತಾ॥ ವರೆಗೆ ಒಟ್ಟು ೮೪೦೫ ಎಕರೆ ಜಮೀನನ್ನು ಇವುಗಳಿಂದ ಉತ್ತಲಾಗಿದೆ ಜನಪ್ರದದಲ್ಲಿ ೪೦೦ ಎಕರೆ ಕಾಡನ್ನೂ ಮತ್ತು ಚಾಮರಾಜನಗರದಲ್ಲಿ ೨೪೦೦ ಎಕರೆಗಳನ್ನೂ ಬುಲ್ ಡೋಜರುಗಳಿಂದ ಕತ್ತರಿಸಲಾಗಿದೆ-ಎಂದು ಸಚಿವರು ಉತ್ತರವಿತ್ತರು

ಸಾರ್ವಜನಿಕರಿಗೆ ಉಪಯೋಗವಾಗುವಂತಹ ಗಾಡಿಗಳು, ಟ್ರಂಕು ಮತ್ತು ಇತರ ಸಾಮಾನುಗಳು ತಯಾರಿಸುವ ಕಾರ್ಖಾನೆಗಳು ಸಂಸ್ಥಾನದಲ್ಲಿ ೨೮ ಇವೆಯೆಂದೂ, ಇವಕ್ಕೆ ೮೦೭ ಟನ್ ಕಬ್ಬಿಣ ಮತ್ತು ಉಕ್ಕನ್ನು ಈ ವರ್ಷ ಸರಬರಾಜು ಮಾಡಲಾಗಿದೆಯೆಂದೂ ಸರ್ಕಾರದವರು ಮತ್ತೊಂದು ಪ್ರಶ್ನೆಗೆ ಉತ್ತರವಿತ್ತರು

ಪ್ರಶ್ನೋತ್ತರವಾದನಂತರ, ಶ್ರೀಗಳಾದ ಚಿಕ್ಕಲಿಂಗಯ್ಯ, ಎಚ್ ಸಿ ಮಲ್ಲಯ್ಯ, ಮತ್ತು ಇತರರು ಮಾತನಾಡಿ, ಸಭೆಯ ಕಾರ್ಯಕಲಾಪಗಳು ಇನ್ನೂ ವಿಶೇಷವಾಗಿರುವುದರಿಂದ ೪ ದಿನಗಳು ಸಭೆಯನ್ನು ಮುಂದುವರಿಸಬೇಕೆಂದು ತಿಳಿಸಿದರು ಶ್ರೀ ಕೆ ರೆಡ್ಡಿಯವರು ಉತ್ತರವಿತ್ತು, ೧೫ನೇ ತಾ॥ ಸಭೆಯು ನಡೆಯುವುದೆಂದೂ, ೧೬ನೇ ತಾ॥ ಮುಂದುವರಿಸುವುದನ್ನು ಸರ್ಕಾರವು ಪರ್ಯಾಲೋಚಿಸುವುದೆಂದೂ ಹೇಳಿದರು

ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸಂಬಳ

ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರಿಗೆ ತಿಂಗಳಿಗೆ ೮೦೦ ರೂ ಸಂಬಳ, ೧೫೦ ರೂ ವಾಹನ ಭತ್ಯ, ವಾಸಕ್ಕೆ ಮನೆ ಇಲ್ಲದಿದ್ದರೆ ೨೦೦ ರೂ ಬಾಡಿಗೆ ಮತ್ತು ಒಂದು ಮೋಟಾರ ಇಷ್ಟನ್ನೂ ಕೊಡಬೇಕೆಂದು ಸಚಿವ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಒಂದು ವಿಶೇಷ ನಿರ್ಣಯವನ್ನು ಮಂಡಿಸಿದರು ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಿಗಿರುವ ಸ್ಥಾನಮಾನಗಳೇ ಇವರಿಗೆ ಇರಬೇಕೆಂದು ಹಲವು ಸದಸ್ಯರು ತಿಳಿಸಿದರು ಇತರ ಕಡೆ ಇದೇ ರೀತಿ ಇರುವುದೆಂದು ಸ

ಮಗುವಿನ ತಂದೆ ತಾನಲ್ಲವೆಂದು ಮೈಸೂರು ಸಾಬು

ಸುಪ್ರಸಿದ್ಧ ಮೈಸೂರಿನ ಸಿನಿಮಾ ನಟ ಸಾಬುವು ಲಾಸ್ ಏಂಜಲಿಸ್ಸಿನಕೋರ್ಟಿನಲ್ಲಿ ತನ್ನ ಮೇಲೆ ಹೊರಿಸಲಾದ ಅಪಾದನೆ

ಯನ್ನು ನಿರಾಕರಿಸಿ ತಾನು ಬ್ರೆಂಡಾ ಜೂಲಿಯರ್ ಎಂಬ ಇಂಗ್ಲೀಷ್ ನರ್ತಕಿಯ ಮಗುವಿನ ತಂದೆಯಲ್ಲವೆಂದು ಹೇಳಿಕೆ ಕೊಟ್ಟಿದ್ದಾನೆ ಆಕೆಯು ತನಗೆ ಹುಟ್ಟಿದ ಹೆಣ್ಣು ಶಿಶುವು ಸಾಬುವಿನದೆಂದು ಹೇಳಿ ತಿಂಗಳಿಗೆ ೨೦೦೦ ರೂ ಗಳನ್ನು ಮಗುವಿನ ಸಾಕುವಿಕೆಗಾಗಿ ಕೇಳಿದ್ದಳು

ಈಜಿಪ್ಟ್‌ನಲ್ಲಿ ಭಾರತದ ರಾಯಭಾರಿ

ಬೊಂಬಾಯಿ ಸರ್ಕಾರದ ಅಧಿಕಾರಿಗಳಾದ ಜನಾಬ್ ಅಸಫ್ ಅಲಿ ಒಸ್ಮಾನ ಫೈಜೀರವರನ್ನು ಈಜಿಪ್ಟಿನಲ್ಲಿ ಭಾರತದ ರಾಯಭಾರಿಯನ್ನಾಗಿ ನೇಮಿಸಲಾಗಿದೆ

...ಸರ್ಕಾರದವರು ಭರವಸ ಕೊಟ್ಟ ಮೇಲೆ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಉಪಾಧ್ಯಕ್ಷರಿಗೆ ತಿಂಗಳಿಗೆ ೨೫೦ ರೂ ಸಂಬಳವನ್ನು ಕೊಡಬೇಕೆಂದು ಮುಖ್ಯಮಂತ್ರಿಗಳು ಮತ್ತೊಂದು ನಿರ್ಣಯವನ್ನು ಮಂಡಿಸಿದರು ಅವರಿಗೂ ವಾಹನ ಭತ್ಯವನ್ನು ಕೊಡಬೇಕೆಂದು ಕೆಲವರು ತಿದ್ದುಪಡಿ ಸೂಚಿಸಿ, ಅವುಗಳನ್ನು ವಾಪಸ ತೆಗೆದುಕೊಂಡರು. ನಿರ್ಣಯವು ಒಪ್ಪಲ್ಪಟ್ಟಿತು

ದೆಹಲಿಯಲ್ಲಿ ೧೪ ಔನ್ಸ್ ಪಡಿತರ

ದೆಹಲಿಯಲ್ಲಿ ಇದುವರೆಗೆ ಕೊಡುತ್ತಿದ್ದ ೧೨ ಔನ್ಸ್ ಪಡಿತರವನ್ನು ಈ ದಿನದಿಂದ ೧೪ ಔನ್ಸಿಗೆ ಹೆಚ್ಚಿಸಲಾಗಿದೆ ೧೦ ಔನ್ಸ್ ಗೋಧಿ ಹಿಟ್ಟು ಮತ್ತು ೪ ಔನ್ಸ್ ಇತರ ಧಾನ್ಯಗಳನ್ನು ಕೊಡಲಾಗುವುದು

ಸ್ಟಾಂಪು ಮಾರುವ ಯಂತ್ರಗಳು

೧೦೦ ಸ್ಟಾಂಪುಗಳ ಮಾರಾಟದ ಯಂತ್ರಗಳನ್ನು ಪ್ರಮುಖ ನಗರಗಳ ಹೊರಟೇಲು, ಕಚೇರಿಗಳಲ್ಲಿ ಇಟ್ಟು ಅಲ್ಲೇ ಅವನ್ನು ಮಾರಲಾಗುವ ವ್ಯವಸ್ಥೆಯನ್ನು ಮಾಡಲಾಗುವುದೆಂದೂ, ಅದಕ್ಕಾಗಿ ಜರ್ಮನಿಯಿಂದ ಯಂತ್ರಗಳನ್ನು ತರಿಸಲಾಗುವುದೆಂದೂ ಹೇಳಲಾಗಿದೆ

ಕರ್ನಾಟಕ ಪ್ರಾಂತ್ಯಕ್ಕಾಗಿ ಪ್ರಭುಗಳು ಸಿಂಹಾಸನ ತ್ಯಾಗ ಮಾಡಬೇಕು

ಎ. ಎಂ. ಸಿ. ಸಿ. ಗೆ ನಿರ್ಣಯ

ಕರ್ನಾಟಕ ಏಕೀಕರಣ ಸಮಸ್ಯೆಯನ್ನು ಸುಲಭಗೊಳಿಸುವ ದೃಷ್ಟಿಯಿಂದ ಶ್ರೀಮನ್ಮಹಾರಾಜರವರು ತಮ್ಮ ಸಿಂಹಾಸನವನ್ನು ತ್ಯಾಗಮಾಡಿ ಸಹಕರಿಸಬೇಕೆಂದು ಕೋರುವ ನಿರ್ಣಯವನ್ನು ಇದೇ ೧೯ನೇ ತಾ॥ ತುಮಕೂರಿನಲ್ಲಿ ನಡೆಯುವ ಎ ಎಂ ಸಿ ಸಿ ಸಭೆಯಲ್ಲಿ ಶ್ರೀಗಳಾದ ಕೆ ಆರ್ ನುಸ್ವಾಮಿ, ಮತ್ತು ಕೆ ಆರ್ ಶ್ರೀಧರ ಮೂರ್ತಿ ಮೊದಲಾದವರುಗಳು ಮಂಡಿಸಲಿದ್ದಾರೆ

ಸಂಸ್ಥಾನಾದ್ಯಂತ ಪ್ರಭಾವಶಾಲಿಗಳೂ ಮತ್ತು ದಕ್ಷರೂ ಆದ ೨೫ ಜನ ಕಾಂಗ್ರೆಸ್ ಕೆಲಸಗಾರರನ್ನೂ ಪ್ರಜಾ ಸರ್ಕಾರದ ಸಹಕಾರರನ್ನಾಗಿ ನೇಮಿಸಿಕೊಳ್ಳುವುದ ... ಕೇಂದ್ರ ಸಮಿತಿ ಎನ್ನು ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ರಚಿಸಿ ಅವರ ಕಾರ್ಯಕಲಾಪಗಳನ್ನು ಕೇಂದ್ರ ಸಮಿತಿಯ ಅಧೀನ ಪಡಿಸುವುದು ದೇಶದ ಸತ್ಯಾಗ್ರಹಗಳಲ್ಲಿ ಭಾಗವಹಿಸಿದವರ ಚಾರಿತ್ರ್ಯ ... ನ್ನು ಕೂಡಲೇ ತಯಾರಿಸಿ, ಕನ್ನಡಿಗರಾಗಿರುವವರಿಗೆ ಸಹಾಯ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದು ಇವೇ ಮುಂತಾದ ನಿರ್ಣಯಗಳನ್ನೂ ಅವರು ... ಸಿದ್ದಾರೆ

ಪರೀಕ್ಷೆಯಲ್ಲಿ ಫೇಲಾದುದಕ್ಕೆ ಆತ್ಮಹತ್ಯೆ

ಮದರಾಸಿನ ವಿದ್ಯಾರ್ಥಿಯೊಬ್ಬನು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲವೆಂದು ಮೊನ್ನೆ ದಿನ ವಿಷವನ್ನು ತೆಗೆದುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರದಿಯಾಗಿದೆ ಸಂಸಾರಕ್ಕೆ ತನ್ನಿಂದ ಯಾವ ಪ್ರಯೋಜನವೂ ಇಲ್ಲದುದರಿಂದ ತಾನು ಈ ರೀತಿ ಪ್ರಾಣ ತೆಗೆದುಕೊಳ್ಳುವುದಾಗಿ ಪತ್ರ ಬರೆದಿಟ್ಟಿರುವನೆಂದು ಹೇಳಲಾಗಿದೆ

ಮತ್ತೊಬ್ಬ ಫೇಲಾದ ವಿದ್ಯಾರ್ಥಿಯೂ ಗಾಜನ್ನು ಪುಡಿ ಮಾಡಿ ಅದನ್ನು ತಿಂದನೆಂದೂ, ಈಗ ಅವನನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆಯೆಂದೂ ಹೇಳಲಾಗಿದೆ.

ಪ್ರಾಂತ್ಯಗಳಲ್ಲಿ ಒಂದೇ ತರದ ಮಾರಾಟ ತೆರಿಗೆ

ಎಲ್ಲಾ ಪ್ರಾಂತ್ಯಗಳಲ್ಲೂ ಒಂದೇ ತರದ ಮಾರಾಟ ತೆರಿಗೆ ಇರಬೇಕೆಂಬ ಉದ್ದೇಶದಿಂದ ಭಾರತ ಸರ್ಕಾರದವರು ಸದ್ಯದಲ್ಲಿಯೇ ಒಂದು ಮಸೂದೆಯನ್ನು ತರಲಿದ್ದಾರೆಂದು ತಿಳಿದುಬಂದಿದೆ

ತಿರುವಾಂಕೂರಿನ ನೂತನ ರಾಜಕುಮಾರ

ತಿರುವಾಂಕೂರಿನ ಪ್ರಥಮ ರಾಜಕುಮಾರಿ ಕಾರ್ತಿಕ ತಿರುನಾಳ್‌ರವರಿಗೆ ನಿನ್ನೆ ದಿನ ಗಂಡು ಮಗುವು ಜನನವಾಯಿತು.

ದಕ್ಷತೆ ಇಲ್ಲದ ಅಧಿಕಾರಿಗಳ ನಿವೃತ್ತಿ

ದಕ್ಷತೆ ಇಲ್ಲದ ಅಧಿಕಾರಿಗಳನ್ನು ನಿವೃತ್ತಿ ಮಾಡಬೇಕೆಂದು ಸಂಯುಕ್ತ ಪ್ರಾಂತ್ಯ ಸರ್ಕಾರದವರು ಎಲ್ಲ ಇಲಾಖಾ ಉನ್ನತಾಧಿಕಾರಿಗಳಿಗೂ ಸೂಚನೆ ಕೊಟ್ಟಿರುತ್ತಾರೆ. ಪ್ರಾಮಾಣಿಕತೆ ಇಲ್ಲದ ಅಧಿಕಾರಿಗಳನ್ನೂ ಸಹ ನಿವೃತ್ತಿ ಮಾಡಬೇಕೆಂದೂ ತಿಳಿಸಲಾಗಿದೆ

ಸಾರ್ವಜನಿಕ ಸಭೆಗಳಿಗೆ ರಕ್ಷಣೆಯ ಕಾನೂನು

ಬಹಿರಂಗ ಸಭೆಗಳು ನಡೆಯುತ್ತಿರುವಾಗ ಹೊರಗಿನವರು ಬಂದು ಗಲಾಟೆ ನಡೆಸಿದರೆ ಅವರುಗಳನ್ನು ದಸ್ತಗಿರಿ ಮಾಡಿ ಮುಂದಿನ ಕಾರ್ಯಕ್ರಮಗಳನ್ನು ಪೋಲೀಸರು ಕೈಗೊಳ್ಳುವ ಕಾನೂನೊಂದನ್ನು ಈಜಿಪ್ಟ್ ಸರ್ಕಾರದವರು ಜಾರಿಗೊಳಿಸಿದ್ದಾರೆ ಸಾರ್ವಜನಿಕ ಸಭೆಗಳಿಗೆ ಈ ರೀತಿ ರಕ್ಷಣೆ ಕೊಡುವ ಇಂತಹ ಕಾನೂನನ್ನು ಜಾರಿಗೆ ತಂದಿರುವುದು ಇದೇ ಪ್ರಾರಂಭದಲ್ಲಿ ಪ್ರಥಮವೆಂದು ಹೇಳಲಾಗಿದೆ

ಪಟಿಯಾಲ ಮಹಾರಾಣಿಯವರು

ಒಪೆರೇಷನ್ನಿಗೆ ಯಾತ್ರೆಗಾಗಿ ತೆರಳಿದ್ದ ಪಟಿಯಾಲ ಮಹಾರಾಣಿಯವರು ನಿನ್ನೆ ರಾಜಧಾನಿಗೆ ಹಿಂತಿರುಗಿದರು

ಅಂಗಡಿ ಕೆಲಸಗಾರರ ಸಭೆ

ರಾಜಧಾನಿಯ ಮೈಸೂರು ... ಸಂಘದ ಸಭೆಯು ನಿನ್ನೆ ಶ್ರೀ ಕೃಷ್ಣಸ್ವಾಮಿ ... ಅಧ್ಯಕ್ಷತೆಯಲ್ಲಿ ನಡೆದು ... ಶ್ರೀ ಸುಬ್ರಹ್ಮಣ್ಯಂರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಬಿ ಎಸ್ ರಾಮಣ್ಣನವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು

ಕೊಲ್ಲಾಪುರದ ರಾಜ ಮನೆ ತನದವರಿಗೆ ಮಾಸಾಶನ

ಕೊಲ್ಲಾಪುರದ ರಾಜ ಮನೆತನದ ಶಾ ರಾಜಬಾಯಿ ಛತ್ರಪತಿ ವ ತ್ತು ಪದ್ಮರಾಜೆರ ವರಿಗೆ ತಿಂಗಳಿಗೆ ೬ ಸಾವಿರ ಮತ್ತು ೩ ಸಾ ವಿರ ರೂ ಗಳನ್ನು ಕೊಡಲು ಭಾರತ ಸ ರ್ಕಾರದವರು ನಿರ್ಧರಿಸಿದ್ದಾರೆ ಅವರಿಗೆ ಳಿಗ ಜೊಂಬಾಯಿನಲ್ಲಿ ೬ ದು ಅರಮನೆ ಮತ್ತು ಮೂರು ಬಾರುಗಳನ್ನೂ ಮ ತ್ತು ಶ್ರೀಮತಿ ಪದ್ಮರಾಜೆರವರ ವಿವಾಹಕ್ಕಾಗಿ ೧೫ ಲಕ್ಷ ರೂ ಅನ್ನೂ ಮಂಜೂರು ಮಾ ಡಲಾಗಿದೆ

ಆನೆಗೆ ಆರಂಬದ ಕೆಲಸ

ಸೌರಾಷ್ಟ್ರ ಸರಕಾರಕ್ಕೆ ಕಾದಿಯ ವಾಡ ಸಂಸ್ಥಾನಗಳೊಂದಿಗೆ ೧೭ ದ ಜಂಬೂ ಎಂಬ ಗಂಡಾನೆ ಮತ್ತು ಇನ್ನೊಂ ದು ಹೆಣ್ಣಾನೆ ಇವೆರಡೂ ಆ ಸರಕಾರಕ್ಕೆ ಒಂದು ಹವ ಸ್ಯೆಯಾಗಿವೆ ತಿಂಗಳಿಗೆ ೬೦೦ ರೂ ಗಳನ್ನು ಅವುಗಳ ಆಹಾರಕ್ಕೆ ಖರ್ಚು ಮಾಡಬೇಕಾಗಿದೆ ಈ ಪ್ರಶ್ನೆ ನಿವಾರಿಸಲು ಅವುಗಳನ್ನು ವ್ಯವಸಾಯಕ್ಕಾಗಿ ಉಪ ಯೋಗಿಸಬೇಕೆಂದು ಸರ್ಕಾರದವರು ಆ ಜ್ಞೆ ಮಾಡಿದ್ದಾರೆ ಹೆಣ್ಣಾನೆಯು ಹೊಸ ಕೆಲಸದಲ್ಲಿ ಉತ್ಸಾಹವನ್ನಿಟ್ಟಾಗಿದೆ ಆದರೆ ಗಂಡಾನೆಯು ಉತ್ಸಾಹ ತೋರಿಸ್ತಿಲ್ಲ

ಕಲ್ಕತ್ತ ಟ್ರಾಂಗಳಿಗೆ ಬೆಂಕಿ

ದಕ್ಷಿಣ ಕಲ್ಕತ್ತದಲ್ಲಿ ಮೊನ್ನೆ ಒಳಗ್ಗ ಜನರು ಗುಂಪುಗುಂಪಾಗಿ ಸೇರಿ ಒಂದು ಗಂಟೆಕಾಲ ನಗರದಲ್ಲೆಲ್ಲಾ ಟ್ರಾಂಗಳು ಓ ಡಾಡದಂತೆ ಮಾಡಿದರೆಂದೂ, ಎರಡು ಟ್ರಾಂಗಳಿಗೆ ಬೆಂಕಿ ಇಟ್ಟರೆಂದೂ, ಪ್ರಾಂ ತೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿ ನವರು ಸಾರಿದ ಸಾರ್ವತ್ರಿಕ ಮುಷ್ಕರದ ಸಂಬಂಧವಾಗಿ ಈ ಪ್ರದರ್ಶನಗಳು ನಡೆ ದುವೆಂದೂ ಹೇಳಲಾಗಿದೆ

ರಾಜಾಸ್ಥಾನ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು

ರಾಜಸ್ಥಾನದ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆಯು ಮೊನ್ನೆ ಸೇರಿ ಈಗಿನ ರಾಜಸ್ಥಾನದ ಮಂತ್ರಿ ಮಂಡಲವು ರಾಜೀನಾಮೆ ಕೊಡಬೇಕೆಂ ದು ನಿರ್ಣಯ ಮಾಡಿದೆ

ಚೀಣದ ಮಾಜಿ ಪ್ರಧಾನಿಗಳ ಆಸ್ತಿಗಳ ಮುಟ್ಟುಗೋಲು

ಚೀಣದ ಮಾಜಿ ಪ್ರಧಾನಿ ಸುನ್ ಫೋ ಮ ತ್ತು ಈಗಿನ ಪ್ರಧಾನಿ ಹೋ ಯಿಂಗ್ ಚಿನ್ ರವರ ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಹಾ ಕಬೇಕೆಂದು ಕಮ್ಯೂನಿಸ್ಟರು ನಿರ್ಧರಿಸಿದ್ದಾ ರೆಂದು ಚರ್ನ್ ಸಾಂಗ್ ಕೈಷೇಕರ ಸೇನಾ ಧಿಪತಿ ಜನರಲ್ ಫು ಟ್ಸೋ ಯಿರವರ ಆಸ್ತಿ ಯನ್ನು ಉಳಿಸಿಕೊಳ್ಳಬಹುದೆಂದೂ ಹೇ ಳಲಾಗಿದೆ

TUTORIAL CLASS
SADHVI ... COLLEGE
MYSORE
Classes have begun
Working hours
Morning 7 30 to 9 30

Edited, printed, and published by A R Nagaraj at the Sadhvi Press, D Subbiah Road, Mysore

ಗೋಧಿಯ ಬೆಲೆ ಇಳಿತ ಮುಸುಕಿನ ಜೋಳ

ಮೈಸೂರು ೧೩

ಗೋಧಿಯ ದಾಸ್ತಾನು ಬಹಳ ಕಡಿಮೆ ಯಾಗಿರುವುದರಿಂದ ನಗರದಲ್ಲಿ ತಾತ್ಕಾಲಿ ಕವಾಗಿ ಗೋಧಿಯ ಬದಲು ಅಕ್ಕಿ ಮತ್ತು ಮುಸುಕಿನ ಜೋಳವನ್ನು ಕೊಡಲಾಗುವು ದೆಂದು ಡೆಪ್ಯುಟಿ ಕಮೀಷನರ್‌ರವರು ಇನ್ನೊಂದು ಹೊಸ ಪ್ರಕಟಣೆ ಹೊರಡಿಸಿರುತ್ತಾರೆ ಪಡಿತರವನ್ನು ಈ ರೀತಿ ಕೊಡಲಾಗು ವುದು ಎ ಕಾರ್ಡುದಾರರಿಗೆ ಅಕ್ಕಿ ೧ ಔನ್ಸ್ ೧ ಔನ್ಸ್ ಗೋಧಿ ಬದಲು ಮುಸುಕಿನ ಜೋಳ ಮತ್ತು ೧ ಔನ್ಸ್ ಮುಸುಕಿನ ಜೋ ಳ ಬಿ ಕಾರ್ಡುದಾರರಿಗೆ ಅಕ್ಕಿ ೬ ಔನ್ಸ್ ಅ ಕ್ಕಿ ... ಮುಸುಕಿನ ಜೋಳ ೬ ಔನ್ಸ್ ರಾಗಿ ಮತ್ತು ಜೋಳ

ಸೆನೆಟ್ ಸಭೆ

ಮೈಸೂರು ವಿಶ್ವವಿದ್ಯಾಲಯದ ವಾ ರ್ಷಿಕ ಸೆನೆಟ್ ಸಭೆಯು ಇದೇ ೧೮ನೇ ತಾ|| ರಾಜಧಾನಿಯಲ್ಲಿ ನಡೆಯುವುದು

ಬಿ ಜಿ ಕೃಷ್ಣಯ್ಯ ಅಂಡ್ ಸನ್ಸ್

ರಾಜಧಾನಿಯ ಸ್ಯಾನಿಟರಿ ಕಂಟ್ರಾಕ್ಟ ರ್ ರ ಶ್ರೀ ಬಿ ಕೆ ಗೋಪಾಲರವರು ನಿ ನ್ನೆ ಬೆಳಗ್ಗೆ ನ್ಯೂ ಸಯ್ಯಾಜೀರಾವ್ ರಸ್ತೆ ಯಲ್ಲಿ ಮೇಲ್ಕಂಡ ನೂತನ ಅಂಗಡಿಯ ನ್ನು ತೆರೆದ ಸಂದರ್ಭದಲ್ಲಿ ಅನೇಕರನ್ನು ಆಹ್ವಾನಿಸಿ ಸತ್ಕರಿಸಿದರು

ರೈತರ ಸಮ್ಮೇಳನ

ನಂಜನಗೂಡು ತಾಲ್ಲೂಕು ಕೌಲಂದೇ ಹೋಬಳಿ ನೇರಳೇ ಗ್ರಾಮದಲ್ಲಿ ಮೊನ್ನೆ ದಿನ ರೈತರ ಸಮ್ಮೇಳನವು ಶ್ರೀ ಎಂ ಎಲ್ ನಂಜರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನಡೆಯಿತು ಜಿಲ್ಲಾ ಬೋರ್ಡು ಅಧ್ಯ ಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪ ನವರು ಸಮ್ಮೇಳನದ ಆರಂಭೋತ್ಸವವ ನ್ನು ನೆರವೇರಿಸಿದರು ಶ್ರೀಗಳಾದ ಡಿ ಎಂ ಸಿದ್ದಯ್ಯ ಎ ರಾಮಣ್ಣ, ಸಿ ಜೆ ದೇವನಾಯ ಡಿ ದೇವರಾಜೇ ಅರಸ್ ಟಿ ಎಸ್ ಕೃಷ್ಣನವರುಗಳು ಭಾಷಣ ಮಾಡಿ, ರೈತರು ಸುಸಂಘಟಿತರಾಗಬೇಕೆಂ ದೂ, ದೇಶದ ಆಹಾರ ಅಭಾವವನ್ನು ನೀ ಗಿಸಲು ಅವರು ಹೆಚ್ಚು ಪ್ರಯತ್ನ ಮಾಡ ಬೇಕೆಂದೂ ತಿಳಿಸಿದರು ಸಲ್ಲ ಒಂದು ರೈತರ ಸಂಘವನ್ನು ಸ್ಥಾಪಿಸಲಾಯಿತು

ಬಿಕರಿಗೆ ಸಿದ್ಧವಾಗಿದ

ಪಂಚರಾತ್ರ

[By Dr N S Narayana Sastry]
Inter Arts & Inter Science
Text Book for 1949 50
ಬೆಲೆ 1 6 0

ಮಿತ್ರ ಮತ್ತು ಕಂಪೆನಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

ಶ್ರೀಮನ್ಮಹಾರಾಜರವರು ನಿಜವಾದ ಕಾಂಗ್ರೆಸ್ಸಿಗರು

ಯುವಕರ ಸಂಘದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಭಾಷಣ

ಮೈಸೂರು ೧೩

ರಾಜಧಾನಿಯ ಇಟ್ಟಿಗೆಗೂಡು ಯುವಕ ರ ಸಂಘದ ನಾಲ್ಕನೆ ವಾರ್ಷಿಕೋತ್ಸವವು ನಿನ್ನೆ ಸಂಜೆ ನಾಯಸ್ವಾಮಿರವರ ವ್ಯಾಯಾಮ ಶಾಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಓ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ, ಶ್ರೀಕೃಷ್ಣನ ವರಿಂದ ಸ್ವಾಗತ ಸಂಗೀತ ಮತ್ತು ಪ್ರಾಸ್ನಿ ಪ್ರೆಸ್‌ಗಳು ಆದ ನಂತರ ಕಾರ್ಯದ ರ್ಶಿಗಳು ಸಂಘದ ವರದಿಯನ್ನು ಒಪ್ಪಿಸಿ ದರು ಅಧ್ಯಕ್ಷರು ಭಾಷಣ ಮಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಕಾಂಗ್ರೆ ಸ್ ಸಂಸ್ಥೆಯು ಅನಾವಶ್ಯಕವಾಗಿದೆ ಎಂದು ಹೇಳುವುದು ಸರಿಯಲ್ಲವೆಂದೂ ಕೆಲವರು ಮಾಡುವ ತಪ್ಪಿಗಾಗಿ ಕಾಂಗ್ರೆ ಸ್ ಸಂಸ್ಥೆಯೇ ದುಷ್ಟವಾದುದೆಂದು ಹೇ ಳುವುದು ತಪ್ಪೆಂದೂ ತಿಳಿಸಿದರು ಯು ವಕರು ಮುಂದೆ ಒಂದು ತಪ್ಪಿತಸ್ಥರನ್ನು ಸಂಸ್ಥೆಯಿಂದ ಹೊರಕ್ಕೆ ಹಾಕಬೇಕೆಂದೂ ಹೇಳಿದರು ಬಿಳಿ ಟೋಪಿ ಹಾಕಿದವರೆಲ್ಲ ರೂ ಸತ್ಯವಂತರೆಂದು ಹೇಳುವುದಕ್ಕಾಗುವು ದಿಲ್ಲವೆಂದೂ, ಕಾಂಗ್ರೆಸ್ಸಿನವರಲ್ಲದಹೊರಗಿ ನ ಅನೇಕರು ದೇಶ ಪ್ರೇಮಿಗಳಾಗಿದ್ದಾರೆಂ ದೂ ತಿಳಿಸಿದರು ಹಲವರು ಈಗ ಅಧಿಕಾ ರಕ್ಕೆ ಬಂದ ಮೇಲೆ ಅದನ್ನು ಬಿಡಲು ಪರಿ ತಾಪ ಪಡುತ್ತಿದ್ದಾರೆಂದೂ ಆದರೆ ಶ್ರೀಮನ್ಮಹಾರಾಜರವರು ಪ್ರಜೆಗಳಿಗಾಗಿ ತಮ್ಮ ಅಧಿಕಾರವನ್ನೆಲ್ಲಾ ಬಿಟ್ಟುಕೊಟ್ಟು, ವಿಶೇಷ ತ್ಯಾಗ ಮಾಡಿ ನಿಜವಾದ ಕಾಂಗ್ರೆ ಸ್ಸಿಗರಾಗಿದ್ದಾರೆಂದೂ ತಿಳಿಸಿದರು

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್ ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆ ಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿ ಸಿಪಲ್ ಮಾದರಿ ಮನೆ ನಂಬರ್ ೬೫ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಎ. ಎಂ. ಸಿ. ಸಿ ಮುಂದೆ ಸರ್ಕಾರದ ಕಾರ್ಯಗಳನ್ನು ವಿವರಿಸಬೇಕು

ತುಮಕೂರಿನಲ್ಲಿ ಇದೇ ೧೮ ಮತ್ತು ೧೯ ನೇ ತಾ|| ನಡೆಯುವ ಎ ಎಂ ಸಿ ಸಿ ಸ ಭೆಯ ಮುಂದೆ ಸರ್ಕಾರದವರು ಇದುವರೆ ಗೆ ಮಾಡಿರುವ ಕಾರ್ಯಗಳ ವರದಿಯನ್ನು ಇಡುವುದು ದೇಶದ ಹಿತದೃಷ್ಟಿಯಿಂದ ಒ ಳ್ಳೆಯದು ಇದರಿಂದ ಟೀಕೆಗಳಿಗೆ ಆಸ್ಪದ ವಿರುವುದಿಲ್ಲ ರಾಷ್ಟ್ರಪತಿ ಡಾ|| ಪಟ್ಟಾಭಿ ಯವರು ತಿಳಿಸಿರುವಂತೆ ಈ ವಿವರಗಳನ್ನು ಎ ಎಂ ಸಿ ಸಿ ಮೂಲಕ ಜನರಿಗೆ ತಿಳಿಸ ಬೇಕು—ಎಂದು ಕಾಂಗ್ರೆಸ್ ಕಾರ್ಯ ಕಾರಿ ಸಮಿತಿಯಲ್ಲಿ ಶ್ರೀ ಜಿ ಆರ್ ಸ್ವಾಮಿಯವ ರು ಪ್ರಾರ್ಥಿಸಿರುತ್ತಾರೆ

ನೂತನ ಕಮ್ಯೂನಿಸ್ಟ್ ಪಕ್ಷ

ಭಾರತದ ಕಮ್ಯೂನಿಸ್ಟ್ ಪಕ್ಷದಿಂದ ತೆ ಗೆಯಲ್ಪಟ್ಟು ತಲೆ ಮರೆಸಿಕೊಂಡಿರುವ ಅ ನೇಕ ಕಮ್ಯೂನಿಸ್ಟರು ಈಗ ಒಂದು ಹೊ ಸ ಪಕ್ಷವನ್ನು ಸ್ಥಾಪಿಸಲು ಪ್ರಯತ್ನ ನಡೆ ಸುತ್ತಿದ್ದಾರೆಂದೂ, ಅದಕ್ಕೆ ಪಕ್ಷದ ಮಾಜಿ ಕಾರ್ಯದರ್ಶಿಗಳಾದ ಶ್ರೀ ಪಿ ಸಿ ಜೋಷಿ ಯವರು ನಾಯಕರೆಂದೂ ಹೇಳಲಾಗಿದೆ

INTER EXAM
Sept 1949
Expert private tuition in English with Special attention to III paper
Tuition for ladies at their residences
Apply to -
X, c/o SADHVI

ಚಾಮುಂಡೇಶ್ವರಿ
ಟಾಕೀಸ್
From 13-6-49
Daily 3 Shows
Universal's spectacular Technicolor Picture
GYPSY
WILD-CAT
ಜಿಪ್ಸಿ ವೈಲ್ಡ್ ಕ್ಯಾಟ್
(ವರ್ಣರಂಜಿತ ಚಿತ್ರ)
— Starring —
Maria Montez & Jon Hall

D Banumiah's College of Commerce Mysore

NOTIFICATION

Applications for admission to the Junior I Com class will be received up to 15th June 1949

Forms of application can be obtained from the office of the D Banumiah's College of Commerce, Mysore during working hours

B V Banumiah
Principal

|| ಶ್ರೀ ಲಕ್ಷ್ಮೀನಾರಾಯಣಾಯನಮಃ ||

ಭಿಷಗ್ರತ್ನ ಸಾಳ್ವದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು

ಕಾಂತಿಜ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗ ಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿ ಮೆ, ಮುಟ್ಟಿನ ಕಾಲದ ಹೊಟ್ಟೆ, ಸೊಂಟಗಳ ನೋವು ಮೊದಲಾಗಿ ಗುಣವಾಗುತ್ತದೆ

ವಿಳಾಸ - ಬೆಲೆ ಶೀಸೆ 1ಕ್ಕೆ 3-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೧೪-೬-೪೮ [ಸಂಚಿಕೆ [illegible]

ಮದ್ರಾಸ್ ಪ್ರಾಂತ್ಯದಲ್ಲಿ ಹೋಟೇಲ್ ಮುಷ್ಕರ

ಮದರಾಸ್ ಹೋಟೇಲುಗಳು ಮುಚ್ಚುವುವು

ಹೋಟೇಲುಗಳಲ್ಲಿ ಮಾರಾಟ ಮಾಡುವ ಆಹಾರ ಮತ್ತು ಪಾನೀಯಗಳ ಮೇಲೆ ರೂ ೧ಗೆ ೪|| ಕಾಸಿನಂತೆ ಮಾರಾಟದ ತೆರಿಗೆಯನ್ನು ವಿಧಿಸಬೇಕೆಂದು ಮದರಾಸ್ ಸರ್ಕಾರದವರು ನಿರ್ಧರಿಸಿರುವುದನ್ನು ಪ್ರತಿಭಟಿಸಲು, ಮುಂದಿನ ಜುಲೈ ೧ನೇ ತಾ|| ನಿಂದ ಪ್ರಾಂತ್ಯದಲ್ಲಿರುವ ಎಲ್ಲಾ ಹೋಟೇಲುಗಳನ್ನು ಮುಚ್ಚಬೇಕೆಂದು ಮದರಾಸ್ ಪ್ರಾಂತೀಯ ಹೋಟೇಲ್ ಮಾಲೀಕರುಗಳ ಸಂಘದವರು ನಿಶ್ಚೈಸಿ ನಿರ್ಣಯ ಮಾಡಿರುತ್ತಾರೆ. ಎಷ್ಟು ದಿವಸ ಹೋಟೇಲುಗಳನ್ನು ಮುಚ್ಚಿರಬೇಕೆಂಬುವನ್ನು ಮುಂದೆ ತಿಳಿಸಲಾಗುವುದು

ಹೋಟೇಲ್ ಮಾಲೀಕರ ಸಂಘದ ಪ್ರಾರ್ಥನೆ

ಹೋಟೇಲುಗಳಲ್ಲಿ ಇಡ್ಲಿ ಮತ್ತು ದೋಸೆಗಳನ್ನು ಯಾವ ಪದಾರ್ಥದಲ್ಲಿಯೂ ಮಾಡಕೂಡದೆಂದು ಸರ್ಕಾರದವರು ತಂದಿರುವ ಆಜ್ಞೆಯನ್ನು ಇದೇ ೩೦ನೇ ತಾ|| ವರೆಗೆ ಮುಂದೆ ಹಾಕಬೇಕೆಂದು ನಗರದ ಹೋಟೇಲ್ ಮಾಲೀಕರ ಸಂಘದವರು ಸರ್ಕಾರದವರಲ್ಲಿ ಪ್ರಾರ್ಥಿಸಿರುತ್ತಾರೆ

ಸಂಸ್ಥಾನಕ್ಕೆ ಜ|| ಕರಿಯಪ್ಪನವರ ಭೇಟಿ

ಭಾರತದ ಪ್ರಧಾನ ಸೇನಾನಿ ಜ|| ಕರಿಯಪ್ಪನವರು ಮುಂದಿನ ತಿಂಗಳು ೧೧ನೇ ತಾ|| ಬೆಂಗಳೂರಿಗೆ ಆಗಮಿಸಿ, ೧೨ನೇ ತಾ|| ರಾಜಧಾನಿಗೆ ಬಂದು, ೧೭ನೇ ತಾ|| ಕೊಡಗಿಗೆ ಪ್ರಯಾಣ ಬೆಳಸುವರೆಂದು ತಿಳಿದುಬಂದಿದೆ

ಬೆಂಗಳೂರಿಗೆ ಶ್ರೀಮನ್ಮಹಾರಾಜರವರು

ಶ್ರೀಮನ್ಮಹಾರಾಜರವರು ಇದೇ ೩೦ನೇ ತಾ|| ಬೆಂಗಳೂರಿಗೆ ಪ್ರಯಾಣ ಬೆಳಸಿ, ಅಲ್ಲಿ ೨ ವಾರಗಳ ಕಾಲ ಇರುವರೆಂದು ತಿಳಿದುಬಂದಿದೆ

ಯುವಕ ಸಂಘದ ಅಧಿಕಾರಿ ವರ್ಗ

ಇಟಗ್ಗಿಗೂಡು ಯುವಕರ ಸಂಘಕ್ಕೆ ಪ್ರಸಕ್ತಸಾಲಿಗೆ ಶ್ರೀ ಎಂ ಪಿ ಕೃಷ್ಣರವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಸ್. ನಾರಾಯಣರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಎಸ್ ಜಿ ಬಾಲಕೃಷ್ಣ ಮತ್ತು ಟಿ ವಿ ನಾರಾಯಣರವರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ವಿ ಡಿ. ವೇಣುಗೋಪಾಲ[illegible]ರವರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಗಿದೆ.

ಕಮ್ಯೂನಿಸ್ಟ್ ಬಂದಿಗಳ ಉಪವಾಸವೇ?

ಮೈಸೂರು ೧೪

ಕಲ್ಕತ್ತ ಜೈಲುಗಳಲ್ಲಿರುವ ಕಮ್ಯೂನಿಸ್ಟ್ ಬಂದಿಗಳ ಮೇಲೆ ಸರ್ಕಾರದವರು ಗುಂಡು ಹಾರಿಸಿದುದನ್ನು ಪ್ರತಿಭಟಿಸಲು ಮತ್ತು ಮೈಸೂರು ಸರ್ಕಾರದವರು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯ ಪಡಿಸಲು, ಮೈಸೂರು ಜೈಲಿನಲ್ಲಿರುವ ಕಮ್ಯೂನಿಸ್ಟ್ ಸ್ಥಾನಬದ್ಧರೆಲ್ಲರೂ ನಾಳೆ ದಿನ ಉಪವಾಸ ಸತ್ಯಾಗ್ರಹ ಆಚರಿಸುವರೆಂದು ಪಕ್ಷದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಬೀಡಿ ಕೆಲಸಗಾರರ ಪ್ರತಿಭಟನೆ

ರಾಜಧಾನಿಯ ಬೀಡಿ ಕೆಲಸಗಾರರ ಸಂಘದ ಸಭೆಯು ಕಳೆದ ೯ನೇ ತಾ|| ಜನಾಬ್ ಕೆ. ಮಹಮ್ಮದಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಲೆಯಾ ಸರ್ಕಾರದವರು ಕಾರ್ಮಿಕ ಮುಖಂಡರಾದ ಶ್ರೀ ಗಣಪತಿಯನ್ನು ಗಲ್ಲಿಗೇರಿಸಿದ್ದು, ಹೈದರಾಬಾದ್ ಸರ್ಕಾರದವರು ೮ ಜನ ರೈತರ ಮುಖಂಡರಿಗೆ ಮರಣದಂಡನೆ ವಿಧಿಸಿರುವುದು, ನಾನಾ ಜೈಲುಗಳಲ್ಲಿ ವಿಚಾರಣೆಯಿಲ್ಲದೆ ಬಂದಿಗಳಾಗಿರುವವರಿಗೆ ಚಿತ್ರ ಹಿಂಸೆಗಳನ್ನು ಕೊಡುತ್ತಿರುವುದು, ಕೂಲಿಗಾರ ವರ್ಗದ ಪತ್ರಿಕೆಗಳನ್ನು ನಿಲ್ಲಿಸಿರುವುದು ಮತ್ತು ಪೌರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿರುವುದು—ಇವುಗಳನ್ನು ಖಂಡಿಸುವ ನಿರ್ಣಯಗಳನ್ನು ಮಾಡಲಾಯಿತು

ರಾಜ ಮಹಾರಾಜರುಗಳ ಹೆಸರೇ ಇರಕೂಡದು

ಪ್ರಜಾ ಪ್ರಭುತ್ವದಲ್ಲಿ ರಾಜರು, ಮಹಾರಾಜರು, ಮಹಾರಾಜಾಧಿರಾಜ ನವಾಬ್ ಆಥವ ರಾಜ ಪ್ರಮುಖ ಎಂಬ ಹೆಸರುಗಳಿರುವುದು ಸರಿಯಿಲ್ಲವೆಂದು ರಾಜ್ಯಾಂಗ ಸಭೆಯ ಹಲವು ಸದಸ್ಯರುಗಳು ಆಕ್ಷೇಪಣೆ ಎತ್ತಿರುವರೆಂದೂ, ಭಾರತದ ಸಂಸ್ಥಾನಗಳ ರಾಜರುಗಳಿಗೆ ಬೇರೆ ಹೆಸರನ್ನು ಕೊಡುವ ಬಗ್ಗೆ ಆಲೋಚನೆ ನಡೆಯುತ್ತಿದೆಯೆಂದೂ ವರದಿಯಾಗಿದೆ

ಈಗ ಲಂಡನ್ನಿನಲ್ಲಿರುವ ಶ್ರೀ ಎಸ್ ಚನ್ನಯ್ಯನವರು ಈದಿನ ಸೌತಾಂಪ್ಟನ್ನಿಗೆ ಪ್ರಯಾಣ ಮಾಡಿ, ನಾಳೆ ಅಲ್ಲಿಂದ 'ಕ್ವೀನ್ ಮೇರಿ' ಎಂಬ ಹಡಗಿನಲ್ಲಿ ಅಮೆರಿಕಕ್ಕೆ ಪ್ರಯಾಣ ಬೆಳೆಸುವರೆಂದು ಸಮಾಚಾರ ಬಂದಿದೆ

ಸ್ವತಂತ್ರ ಜೀವನಕ್ಕೆ ಸಾಧಕವಾದ ವಿದ್ಯಾಭ್ಯಾಸ ಬೇಕು

—:o:—

ಪ್ರ|| ಪ್ರ|| ಸಭೆಯಲ್ಲಿ ನಿರ್ಣಯ

ಸ್ವಂ ಸು] ಬೆಂಗಳೂರು ೧೪

ಸಂಸ್ಥಾನದಲ್ಲಿ ಈಗಿರುವ ಮಿಡಲ್ ಮತ್ತು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಸ್ವತಂತ್ರ ಜೀವನಕ್ಕೆ ಸಾಧಕವಾಗುವಂತೆ ಮಾರ್ಪಡಿಸಬೇಕೆಂದು ಕೋರುವ ನಿರ್ಣಯವನ್ನು ಶ್ರೀ ಎಸ್ ರಾಮಪ್ಪನವರು ನಿನ್ನೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಂಡಿಸಿದರು. ಈಗಿನ ಸ್ವತಂತ್ರ ವಾತಾವರಣದಲ್ಲಿ ಗುಮಾಸ್ತರನ್ನು ತಯಾರು ಮಾಡುವ ವಿದ್ಯಾಭ್ಯಾಸದಿಂದ ಯಾವ ಪ್ರಯೋಜನವೂ ಇಲ್ಲವೆಂದೂ, ವಿದ್ಯಾರ್ಥಿಗಳಿಗೆ ಸ್ವತಂತ್ರ ಜೀವನೋಪಾಯಕ್ಕೆ ಉಪಯೋಗವಾಗುವ ತರದ ವಿದ್ಯಾಭ್ಯಾಸವನ್ನು ಕೊಡಬೇಕಾದುದು ಸರ್ಕಾರದ ಕರ್ತವ್ಯವೆಂದೂ ಅವರು ಹೇಳಿದರು. ನಿರ್ಣಯವನ್ನು ಸಮರ್ಥಿಸಿ ಅನೇಕರು ಮಾತನಾಡಿದರು. ವಿದ್ಯಾ ಸಚಿವ ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ಉತ್ತರವಿತ್ತು, ಈಗಿನ ವಿದ್ಯಾಭ್ಯಾಸದ ಮಾರ್ಪಾಡಿನ ಬಗ್ಗೆ ಸರ್ಕಾರದವರು ಪರ್ಯಾಲೋಚನೆ ನಡೆಸುತ್ತಿರುವುದರಿಂದ ನಿರ್ಣಯದ ತತ್ವವನ್ನು ಅಂಗೀಕರಿಸುವುದಾಗಿ ತಿಳಿಸಿದರು. ಆದರ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಮುಂದಿನ ವರ್ಷದಿಂದ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಶ್ರೀ ಕೆ ವಿ. [illegible]ಣ್ಣನವರು ನಿರ್ಣಯವನ್ನು ಮಂಡಿಸಿದರು. ಸಂಸ್ಥಾನಾದ್ಯಂತ ಪಾನ ನಿರೋಧವನ್ನು ಜಾರಿಗೆ ತರಬೇಕೆಂಬುದೇ ಸರ್ಕಾರದ ನೀತಿಯೆಂದೂ, ಆದರೆ ಕೆಲವು ಅನಿವಾರ್ಯಗಳಿಂದ ಎಲ್ಲ ಕಡೆಯಲ್ಲೂ ಏಕಕಾಲದಲ್ಲಿ ತರಲು ಸಾಧ್ಯವಿಲ್ಲವೆಂದೂ ಸಚಿವ ಜನಾಬ್ ಮಹಮದ್ ಷರೀಫ್‌ರವರು ಉತ್ತರವಿತ್ತರು. ಆದರ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಹಾಸನ ಜಿಲ್ಲೆಯಲ್ಲಿ ಕೂಡಲೇ ಪಾನ ನಿರೋಧವನ್ನು ಜಾರಿಗೆ ತರಬೇಕೆಂಬ ಶ್ರೀ ಎಸ್ ಶಿವಪ್ಪನವರ ನಿರ್ಣಯವು ಬಿದ್ದುಹೋಯಿತು.

ಸಭೆಯಲ್ಲಿ ಅರಿಕೆಗಳನ್ನು ಚರ್ಚಿಸುವ ಪದ್ಧತಿಯನ್ನು ವಜಾ ಮಾಡಬೇಕೆಂಬ ನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು.

ಗ್ರಾಮಾಭಿವೃದ್ಧಿ ಸಮಿತಿಗಳಿಗೆ ರಾಜೀನಾಮೆ

ಸಂಸ್ಥಾನದ ನೂತನ ಗ್ರಾಮಾಭಿವೃದ್ಧಿ ಸಮಿತಿಗಳಿಗೆ ಸರ್ಕಾರದವರು ಸದಸ್ಯರನ್ನು ನಾಮಕರಣ ಮಾಡಿರುವ ಪದ್ಧತಿಯನ್ನು ಪ್ರತಿಭಟಿಸಲು, ಅದರಲ್ಲಿ ಸದಸ್ಯರಾಗಿರುವ ಪಕ್ಷದವರು ರಾಜೀನಾಮೆ ಕೊಡಬೇಕೆಂದು ಪ್ರಜಾ ಮಂಡಲಿಯ ಕಾರ್ಯಕಾರೀ ಸಮಿತಿಯ ಸಭೆಯು ನಿಶ್ಚೈ ತೀರ್ಮಾನಿಸಿತು.

ಭಾರತ ಸಚಿವರ ಭೇಟಿ

ಭಾರತ ಸರ್ಕಾರದ ಪುನರ್ವ್ಯವಸ್ಥೆ ಇಲಾಖಾ ಸಚಿವರಾದ ಶ್ರೀ ಮೋಹನಲಾಲ್ ಸಕ್ಸೇನಾರವರು ಇದೇ ೧೭ನೇ ತಾ|| ಬೆಂಗಳೂರಿಗೆ ಆಗಮಿಸುವರು.

ಮೈಸೂರು ಪಾಠಶಾಲೆಗೆ ಇತರ ಕೋಮಿನವರು

ಪ್ರ|| ಪ್ರ|| ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ.ಸು.ಫೋ] ಬೆಂಗಳೂರು ೧೪

ಪ್ರಜಾ ಪ್ರತಿನಿಧಿ ಸಭೆಯಲ್ಲಿ ಈ ದಿನ ಪ್ರಶ್ನೋತ್ತರ ಕಾಲದಲ್ಲಿ, ಹಾಸನದಲ್ಲಿ ಔದ್ಯೋಗಿಕ ಶಿಕ್ಷಣ ಶಾಲೆಯನ್ನು ಇದೇ ಜುಲೈ ೧ನೇ ತಾ|| ತೆರೆಯಲಾಗುವುದೆಂದೂ, ಅದರ ಕಟ್ಟಡಕ್ಕಾಗಿ ೭೦ ಸಾವಿರ ರೂ. ಚಂದಾ ಹಣ ಸಂಗ್ರಹಿಸಲಾಗಿದೆಯೆಂದೂ ವಿದ್ಯಾ ಸಚಿವರು ಶ್ರೀ ಡಿ ಆರ್. ಕರೀಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಮೈಸೂರಿನಲ್ಲಿರುವ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ೧೬೭ ವಿದ್ಯಾರ್ಥಿಗಳಿಗೆಸ್ಥಳವನ್ನು ಒದಗಿಸಲಾಗಿಯೆಂದೂ, ಅವರೆಲ್ಲರೂ ಬ್ರಾಹ್ಮಣರೆಂದೂ, ಅಲ್ಲಿ ಇತರ ಕೋಮಿನವರಿಗೆ ಶಿಕ್ಷಣ ಪಡೆಯಲು ಅವಕಾಶವಿಲ್ಲವೆಂದೂ ವಿದ್ಯಾ ಸಚಿವರು ಶ್ರೀ ಟಿ ಸಿ ಪೊನ್ನಪ್ಪನವರ ಪ್ರಶ್ನೆಗೆ ಉತ್ತರವಿತ್ತರು ಎಲ್ಲ ಕೋಮಿನವರಿಗೂ ಅಲ್ಲಿ ಶಿಕ್ಷಣ ಕೊಡುವ ವಿಚಾರವನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದೂ ತಿಳಿಸಿದರು

ಹೊಳೆನರಸೀಪುರದ ಹತ್ತಿರ ಕಲ್ಲಾನಾರು ಮತ್ತು ಕಾಗೆ ಬಂಗಾರಗಳು ಸಿಕ್ಕುತ್ತಿವೆಯೆಂದೂ ಕಲ್ಲಾನಾರಿನಿಂದ ಸಿಮೆಂಟ್ ಜಂಗ್ ಶೀಟುಗಳನ್ನು ತಯಾರಿಸಲು ಸಾಧ್ಯವೇ ಎಂಬ ವಿಷಯವು ಪರಿಶೀಲನೆಯಲ್ಲಿದೆಯೆಂದೂ, ಅದು ಆರ್ಥಿಕವಾಗಿ ಸಾಧ್ಯವಾದಲ್ಲಿ ಅಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದೂ ಸರ್ಕಾರದವರು ಮತ್ತೊಂದು ಪ್ರಶ್ನೆಗೆ ಉತ್ತರ ಕೊಟ್ಟರು.

ಸಂಸ್ಥಾನದಲ್ಲಿ ೧೩೧೬೫ ಮುಜರಾಯಿ ದೇವಸ್ಥಾನಗಳಿವೆಯೆಂದೂ, ಅವುಗಳ ಧರ್ಮದರ್ಶಿಗಳನ್ನು ಸರ್ಕಾರದವರೇ ನೇಮಿಸುತ್ತಿರುವರೆಂದೂ ಸರ್ಕಾರದ ಆಡಳಿತದಲ್ಲಿರುವ ಎಲ್ಲ ದೇವಸ್ಥಾನಗಳಲ್ಲೂ ಹರಿಜನರಿಗೆ ಪ್ರವೇಶವಿದೆಯೆಂದೂ ಸಚಿವ ಶ್ರೀ ಸುಬ್ಬರಾಮ ಶೆಟ್ಟರು ಶ್ರೀ ಎಸ್. ಅಣ್ಣಪ್ಪ ಶೆಟ್ಟರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಪ್ರಶ್ನೋತ್ತರವಾದನಂತರ ಶಾಸನ ಸಭೆಯ ಸದಸ್ಯರಾದ ಶ್ರೀ ಟಿ. ತಿಮ್ಮೇಗೌಡರು ಕಳುಹಿಸಿರುವ ವಯಸ್ಕರ ಶಿಕ್ಷಣದ ಸಂಬಂಧವಾದ ಖಾಸಗೀ ಮಸೂದೆಯನ್ನು ವಾಪಸು ತೆಗೆದುಕೊಳ್ಳಲಾಗಿದೆಯೆಂದು ಮುಖ್ಯ ಮಂತ್ರಿ ಶ್ರೀ ರೆಡ್ಡಿಯವರು ತಿಳಿಸಿದರು ಶ್ರೀ ಭಂಡಾರಿಯವರು ಕ್ರಿಯಾಲೋಪವೆತ್ತಿ, ಖಾಸಗೀ ನಿರ್ಣಯವನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಲು ಅಧಿಕಾರವಿಲ್ಲವೆಂದೂ, ಸದಸ್ಯರೇ ಅದನ್ನು ವಾಪಸು ತೆಗೆದುಕೊಳ್ಳಬೇಕೆಂದೂ ತಿಳಿಸಿದರು. ಈ ಬಗ್ಗೆ ತಮ್ಮ ತೀರ್ಮಾನವನ್ನು ನಾಳೆ ಕೊಡುವುದಾಗಿ ಅಧ್ಯಕ್ಷರು ತಿಳಿಸಿದರು.

ನಾಳೆ ದಿನ ೧೧ ರಿಂದ ೧ ಗಂಟೆ ವರೆಗೆ ಸಭೆಯು ನಡೆಯುವುದೆಂದೂ, ನಾಳಿದ್ದು ನಡೆಸಲು ಸಾಧ್ಯವಿಲ್ಲವೆಂದೂ ಮುಖ್ಯ ಮಂತ್ರಿಗಳು ತಿಳಿಸಿದರು.

ಜಪಾನಿನಲ್ಲಿ ರಷ್ಯದ ಕೈವಾಡ

ಜಪಾನಿನಲ್ಲಿ ಅರಾಜಕತೆ ಉಂಟುಮಾಡಲು ರಷ್ಯವು ಪ್ರಯತ್ನಿಸುತ್ತಿದೆಯೆಂದು ಅಲ್ಲಿನ ಪ್ರಧಾನ ಅಧಿಕಾರಿ ಜ|| ಮೆಕಾರ್ಥರ್ರವರು ತಿಳಿಸಿರುತ್ತಾರೆ

ಮಂತ್ರಿಯ ಟೀಕೆಗೆ ಪ್ರತಿಭಟಿಸಲು ಕಾಂಗ್ರೆಸ್ ಸಮಿತಿಗಳ ಬಂದು

ರಾಯ್‌ಬರೇಲಿ ಜಿಲ್ಲೆಯ ಊರೊಂದರಲ್ಲಿ ಕೆಲವು ದಿನಗಳ ಹಿಂದೆ ಗುಂಡು ಹೊಡೆದ ಸಂದರ್ಭದಲ್ಲಿ [illegible] ಜನ ಹಳ್ಳಿಗರು ಸತ್ತ ವಿಚಾರವನ್ನು ಕುರಿತು ಪ್ರಸ್ತಾಪಿಸುತ್ತಾ, ಸಂಯುಕ್ತ ಪ್ರಾಂತದ ಮಂತ್ರಿಗಳೊಬ್ಬರು ಸ್ಥಳೀಯ ಅಧಿಕಾರಿಗಳೊಡನೆ ಜಿಲ್ಲಾ ಕಾಂಗ್ರೆಸ್ಸಿನವರ ಸಹಕಾರ ಇದ್ದಿದ್ದರೆ ಸದರಿ ಘಟನೆಯನ್ನು ತಪ್ಪಿಸಬಹುದಾಗಿತ್ತೆಂದು ತಿಳಿಸಿದ್ದರೆಂದೂ, ಅಂತಹ ಟೀಕೆಯನ್ನು ಪ್ರತಿಭಟಿಸಿ ಆ ಜಿಲ್ಲೆಯ ಕಾಂಗ್ರೆಸ್ ಸಮಿತಿಯು ತನ್ನ ಮತ್ತು ತನ್ನ ಕೈಕೆಳಗಿನ ಎಲ್ಲ ಕಛೇರಿಗಳನ್ನು ಮುಚ್ಚಬೇಕೆಂದು ತೀರ್ಮಾನಿಸಿದೆಯೆಂದೂ ವರದಿಯಾಗಿದೆ.

'ಜನಗಣಮನ' ಗೀತೆಯಲ್ಲಿ ಬದಲಾವಣೆ

'ಜನಗಣಮನ' ಗೀತೆಯನ್ನು ಅಸ್ಸಾಂ ಪ್ರಾಂತದ ರಾಜಧಾನಿಯಲ್ಲಿ ಸೇರಿದ್ದ ವಾಣಿಜ್ಯ ಸಂಘದ ವಾರ್ಷಿಕ ಸಭೆಯಲ್ಲಿ ಹಾಡುತ್ತಿದ್ದಾಗ 'ಸಿಂಧ' ಎಂಬ ಪದದ ಬದಲು ಅಸ್ಸಾಂ ಎಂಬುದನ್ನು ಸೇರಿಸಿ ಹಾಡಲಾಯಿತು. ಶಿಲ್ಲಾಂಗಿನ ರೇಡಿಯೋವು ಸಹ ಇದೇ ರೀತಿಯಲ್ಲಿ ಹೇಳಿತೆಂದು ವರದಿಯಾಗಿದೆ.

ಕೋಟ್ಯಾಧೀಶನ ಬಂಧ ವಿಮೋಚನೆಗೆ [illegible] ಲಕ್ಷ ರೂ.

ರಂಗೂನಿನಲ್ಲಿ ವಾಸಿಸುತ್ತಿದ್ದ ಸುಪ್ರಸಿದ್ಧ ಭಾರತೀಯ ಕೋಟ್ಯಾಧೀಶರನ್ನು ಹೊತ್ತು ಸಾಗಿಸಿದ ಜನರು ಆತನ ಬಿಡುಗಡೆಗೆ ನೂರು ಲಕ್ಷ ರೂ.ಗಳ ದಂಡವನ್ನು ಕೊಡಬೇಕೆಂದು ಕೇಳುತ್ತಾರೆಂದು ತಿಳಿದು ಬಂದಿದೆ.

ಪ್ರಪಂಚ ಸರ್ಕಾರ ಸ್ಥಾಪನೆಯ ಸಂಸ್ಥೆ

ವಿಶ್ವದ ಫೆಡರಲ್ ಸರ್ಕಾರದ ಸಂಸ್ಥೆ ಎಂಬ ನೂತನ ಸಂಸ್ಥೆಯೊಂದನ್ನು ದೆಹಲಿಯಲ್ಲಿ ನಿನ್ನೆ ದಿನ ಸ್ಥಾಪಿಸಲಾಯಿತು. ಅದಕ್ಕೆ ಶ್ರೀ ಅನಂತಶಯನಂ ಅಯ್ಯಂಗಾರ್ಯರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. 'ಯುದ್ಧವನ್ನು ನಿರ್ಮೂಲ ಮಾಡಿ ಪ್ರಪಂಚಕ್ಕೆ ಒಂದು ಸರ್ಕಾರವನ್ನು ಸ್ಥಾಪಿಸುವುದೇ ಈ ಸಂಘದ ಉದ್ದೇಶವೆಂದು ಹೇಳಲಾಗಿದೆ

D. Banumiah s College of Commerce, Mysore

NOTIFICATION

Applications for admiscion to the Junior [illegible] Com class will be received up to 15th June 1949

Forms of application can be obtained from the office of the D. Banumiah's College of Commerce Mysore during working hours

B V Banumiah
Principal

ಹೈದರಾಬಾದು ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವಿಲ್ಲ

ಹೈದರಾಬಾದಿನ ಸರ್ಕಾರಿ ಶಾಲೆಗಳಲ್ಲಿ ಕೊಡುತ್ತಿರುವ ಧಾರ್ಮಿಕ ಶಿಕ್ಷಣವನ್ನು ನಿಲ್ಲಿಸಿ ಅದರ ಬದಲು ನೀತಿ ಬೋಧೆಯ ಶಿಕ್ಷಣ ಕೊಡಬೇಕೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ.

ಜಮೀನುದಾರರ ಮೇಲೆ ಲಾಠಿ ಪ್ರಯೋಗ

ರಾಜಕೋಟೆಯ ಜಮೀನುದಾರರು ತಮ್ಮ ರೈತರುಗಳನ್ನು ಓಡಿಸಿ ತಾವೇ ವ್ಯವಸಾಯ ನಡೆಸಬೇಕೆಂದು ಕಳೆದ [illegible] ದಿನಗಳಿಂದಲೂ ಪ್ರದರ್ಶನ ನಡೆಸುತ್ತಿದ್ದಾರೆ. ಮೊನ್ನೆ ಅವರುಗಳು ಸೌರಾಷ್ಟ್ರ ಶಾಸನ ಸಭೆಯ ಮುಂದೆ ಪ್ರದರ್ಶನ ನಡೆಸಿದರೆಂದೂ, ಅವರನ್ನು ಚದುರಿಸಲು ಪೋಲೀಸರು ಲಾಠಿ ಪ್ರಯೋಗ ಮಾಡಿದರೆಂದೂ ಹೇಳಲಾಗಿದೆ

ಅಮೆರಿಕದಲ್ಲಿ ನಿರುದ್ಯೋಗ

ಅಮೇರಿಕದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುತ್ತಿದೆಯೆಂದೂ. ಇನ್ನು ಎರಡು ಮೂರು ತಿಂಗಳಲ್ಲಿ [illegible] ಲಕ್ಷ ಜನರಿಗೆ ಕೆಲಸವಿಲ್ಲದೆ ಇರುವ ಸಂಭವವಿದೆಯೆಂದೂ ಅಲ್ಲಿನ ಆರ್ಥಿಕ ಪ್ರವೀಣರು ತಿಳಿಸಿರುತ್ತಾರೆ

ಜಪಾನಿನ ಯುದ್ಧ ಪಾತಕಿಗಳು ಗಲ್ಲಿಗೆ

[illegible] ಸಾವಿರ ಅಮೆರಿಕ ಮತ್ತು ಫಿಲಿಪೈನ್ಸ್ ಸೈನಿಕರನ್ನು ಏಕ ಕಾಲದಲ್ಲಿ ಕೊಲೆ ಮಾಡಲು ಆಜ್ಞೆ ಇತ್ತ ಜಪಾನಿನ ಮೆ|| ಜ|| ಜೊಕಿಟಿಕಾ ಮತ್ತು ಕರ್ನಲ್ ಶಿ [illegible] ಮತ್ತು ಇತರ [illegible] ಮಂದಿ ಯುದ್ಧ ಪಾತಕಿಗಳನ್ನು ಮೊನ್ನೆ ದಿನ ಗಲ್ಲಿಗೇರಿಸಲಾಯಿತು

ಬರ್ನಾರ್ಡ್ ಷಾರ ಪುಸ್ತಕ ಭಂಡಾರದ ಹರಾಜು

ಕಳೆದ ಇಪ್ಪತ್ತು ವರ್ಷಗಳಿಂದಲೂ ಬರ್ನಾರ್ಡ್ ಷಾರವರು ವಾಸಿಸುತ್ತಿದ್ದ ಭವನದಲ್ಲಿರುವ ಎಲ್ಲ ಸಾಮಾನುಗಳನ್ನೂ ಹರಾಜು ಹಾಕಲಾಗುತ್ತದೆ. ಅವರು ಒಬ್ಬ [illegible] ಗ್ರಂಥಗಳ ಪುಸ್ತಕ ಭಂಡಾರವನ್ನೂ ಸಹ ಹರಾಜು ಹಾಕಲಾಗುವುದು

ಮನೆ ಬಾಡಿಗೆಗೆ ಇದೆ

ದಿವಾನ್ಸ್ ರಸ್ತೆಯಲ್ಲಿರುವ ಮುನಿಸಿಪಲ್ ಮಂದಿರದ ಮನೆ ನಂಬರ್ [illegible] ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಅಸ್ಸಾಂ ಗಡಿಯಲ್ಲಿ ಕಮ್ಯೂನಿಸ್ಟರ ದಾಂಧಲೆ

ಅಸ್ಸಾಂ ಗಡಿ ಪ್ರದೇಶಕ್ಕೆ [illegible] ಮೈಲಿ ದೂರದಲ್ಲಿರುವ ಚಿಂದರ್ವಿ ನದಿಯ ಸೇತುವೆಯನ್ನು ಕಮ್ಯೂನಿಸ್ಟರು ನಾಶಪಡಿಸಿದರೆಂದೂ, ಅವರ ಹಾವಳಿಯನ್ನು ತಡೆಗಟ್ಟಲು ಬರ್ಮಾ ಸರ್ಕಾರವು ಹೆಚ್ಚು ಸೈನ್ಯವನ್ನು ಕಳುಹಿಸಿತೆಂದೂ, ಈ ಸೈನಿಕರಿಗೂ ಕಮ್ಯೂನಿಸ್ಟರಿಗೂ ಗುಂಡಿನ ಕಾಳಗವು ನಡೆದು, [illegible] ಜನ ಕಮ್ಯೂನಿಸ್ಟರು ಸತ್ತರೆಂದೂ ವರದಿಯಾಗಿದೆ

ಆಹ್ವಾನ ಪತ್ರಗಳಲ್ಲಿ ಬಿರುದುಗಳಿಲ್ಲ

ಸರ್ಕಾರಿ ಆಹ್ವಾನ ಪತ್ರಗಳಲ್ಲಿ ಬಿರುದುಗಳನ್ನು ಸೂಚಿಸಕೂಡದೆಂದು ಬೊಂಬಾಯಿ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಕೈಗಾರಿಕೆಗಳ ಸಹಾಯಕ್ಕೆ ಸೂರ್ಯನ ಕಿರಣ

ಸೂರ್ಯನ ಕಿರಣಗಳಿಂದ ದೊಡ್ಡ ಕೈಗಾರಿಕೆಗಳನ್ನು ನಡೆಸಲು ಅನುಕೂಲವಾಗುವಂತೆ ಫ್ರಾನ್ಸಿನಲ್ಲಿ ಸಂಶೋಧನೆ ನಡೆಯುತ್ತಿದೆ. ಇನ್ನು ಕೆಲವು ವರ್ಷಗಳಲ್ಲಿ ಕಲ್ಲಿದ್ದಲು ಮತ್ತು ವಿದ್ಯುಚ್ಛಕ್ತಿ ಒಲೆಗಳಂತೆ ಸೂರ್ಯನ ಕಿರಣಗಳ ಒಲೆಗಳನ್ನೂ ಸ್ಥಾಪಿಸಲಾಗುವುದೆಂದು ತಿಳಿದುಬಂದಿದೆ.

ಉಪನಯನಗಳು

ಭಾರತ ಸರ್ಕಾರದ ಹಣಕಾಸಿನ ಇಲಾಖೆಯ ಶ್ರೀ ಸಿ ಎಸ್. ರಾವ್‌ರವರು ತಮ್ಮ ತಮ್ಮಂದಿರಾದ ಶ್ರೀ ಸಿ. ಆನಂದ ರಾಮರಾಯರ ಕುಮಾರ ಚಿ|| ಸಿ.ಎ. ಜಗನ್ನಾಥನ ಉಪನಯನವನ್ನು 'ನಿನ್ನೆ ರಾಜಧಾನಿಯಲ್ಲಿ ನೆರವೇರಿಸಿದರು.

ಕೊಳ್ಳೇಗಾಲದ ಹೆಗ್ಗೇರಿ ಜಮೀನುದಾರ್ ಶ್ರೀ ಸಿ.ವಿ ರಾಜಗೋಪಾಲಯ್ಯಂಗಾರ್ಯರು ತಮ್ಮ ಮೊಮ್ಮಗ ಚಿ|| ಎಸ್. ವೆಂಕಟ ನರಸಿಂಹಯ್ಯಂಗಾರ್ಯನ ಉಪನಯನವನ್ನು ನಿನ್ನೆ ಕೊಳ್ಳೆಗಾಲದಲ್ಲಿ ಜರುಗಿಸಿದರು

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ನ್ಯಾಯಬೆಲೆಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ :: ಮೈಸೂರು

Edited, printed, and published by A R Nagarajan at the Sadhvi Press, D. Subbiah Road, Mysore.

ಬರ್ಮಾಕ್ಕೆ ಆಸ್ಟ್ರೇಲಿಯದ ಶಸ್ತ್ರಾಸ್ತ್ರಗಳಿಲ್ಲ

ಬರ್ಮಾದಲ್ಲಿ ಕಮ್ಯೂನಿಸ್ಟರ ದಂಗೆಯನ್ನು ತಡೆಗಟ್ಟಲು ಶಸ್ತ್ರಗಳನ್ನು ಸರಬರಾಜು ಮಾಡಬೇಕೆಂಬ ಅಲ್ಲಿನ ಸರ್ಕಾರದ ಪ್ರಾರ್ಥನೆಯನ್ನು ಆಸ್ಟ್ರೇಲಿಯವು ನಿರಾಕರಿಸಿದೆ

ವಿವಾಹ ಮಹೋತ್ಸವಗಳು

ಮೈಸೂರು ಪುರಸಭೆಯ ಮಾಜಿ ಸದಸ್ಯರಾದ ಶ್ರೀ ಎಂ ವಿ ವೆಂಕಟರಾಮಯ್ಯನವರ ಪುತ್ರ ಶ್ರೀ ಎಂ. ವಿ ವೆಂಕಟಾಚಲ [illegible] ಮತ್ತು ಚಿಕ್ಕಬಳ್ಳಾಪುರದ ಶ್ರೀ ಸಿ ಸೀತಾರಾಮಯ್ಯನವರ ಪುತ್ರಿ ಚಿ|| ಸೌ|| ಲಕ್ಷ್ಮೀಕಾಂತಮ್ಮನವರ ವಿವಾಹವು ನಿನ್ನೆ ಚಿಕ್ಕಬಳ್ಳಾಪುರದ ತಾಲ್ಲೂಕು ಚಿತ್ರಾವತಿಯಲ್ಲಿ ನಡೆಯಿತು.

ರಾಜಧಾನಿಯ ಸಂಗೀತ ವಿದ್ವಾಂಸ ಆರ್ ರಾಮಕೃಷ್ಣ ಭಾಗವತರ ತಮ್ಮಂದಿರಾದ ಶ್ರೀ ಆರ್ ರಾಮಲಿಂಗಯ್ಯ ಮತ್ತು ಶ್ರೀ ಆರ್ ಗೋಪಾಲಯ್ಯನವರ [illegible] ಚಿ|| ಸೌ|| ಮಹಾಲಕ್ಷ್ಮಮ್ಮನವರ [illegible] ಹವು ನಿನ್ನೆ ರಾಜಧಾನಿಯಲ್ಲಿ ನೆರವೇರಿಸಲ್ಪಟ್ಟಿತು.

ಉದಾರ ಸಹಾಯ

ರಾಜಧಾನಿಯ ಸಾರ್ವಜನಿಕ ವಿದ್ಯಾ [illegible] ನಿಲಯಕ್ಕೆ ಓರಿಯಂಟಲ್ ಇಂಡಸ್ಟ್ರೀಸ್ ಮಾಲಿಕರಾದ ಶ್ರೀ ಬಿ ಸ್.ಸುಬ್ಬರಾಯರು [illegible] ರೂ ಕೊಟ್ಟಿರುತ್ತಾರೆ

ಚಾಮುಂಡೇಶ್ವರಿ ಟಾಕೀಸ್

15-6-49ನೇ ಬುಧವಾರದಿಂದ
ಪ್ರತಿ ದಿನ 3 ಪ್ರದರ್ಶನಗಳು

ಶ್ರೀ
ಆಂಡಾಳ್
(ತಮಿಳು)

ಮುಖ್ಯ ಭೂಮಿಕೆ:-
ಇಸೈವಾಣಿ U.R. ಜೀವರತ್ನಂ
ಪಿ.ಎಸ್. ಗೋವಿಂದನ್
ಕಾಳಿ ಎನ್. ರತ್ನಂ

ಇಂದೇ ನೋಡಿ! ನಿಮ್ಮ ನೆಚ್ಚಿನ ಸಂಗೀತ ಸೊಗಸನಾದ ಸುಬ್ಬಯ್ಯ [illegible]

ಡಾಕ್-ಬಂಗಲೊ
ನೂತನ ಸಂಗೀತ ಸಾಮಾಜಿಕ ಹಿಂದಿ [illegible]
ಪ್ರಭ್‌ಲ್ಯಾಂಡ್ಸ್‌ನಲ್ಲಿ

ರಾಜಕಮಲ್
ಮೈಸೂರು

10—6—49 ರಿಂದ
ಜಯಪ್ರದ 2ನೇ ವಾರ
ಪ್ರತಿ ದಿನ 3 ಆಟಗಳು

ಕರ್ನಾಟಕ ರವರ [illegible] ಚಿತ್ರ,

ನಾಟ್ಯ
ಮುಖ್ಯ ಪಾತ್ರ:—
ನರ್ಗೀಸ್, ಅನ್ವರ್

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು

ಗಂಡಸರ ಮೂತ್ರ ಕೋಶದ ಬಿಳುಪು, ಕೆಂಪು ಮೈ ಮೇಲೆ ಸೀಳುವ ಮಚ್ಚೆಗಳು, ಮೇಹ ಮೂಗಿನ [illegible] ವನ್ನು ನಿಲ್ಲದೆ ಸೇವಿಸುವ ಔಷಧಿ

ವಿಳಾಸ
ಬೆಲೆ ಸೀಸೆ 1ಕ್ಕೆ 2-0-0

ಶ್ರೀ ಸೀತಾರಾಮ [illegible] ವೈದ್ಯಶಾಲಾ, ಮೈಸೂರು.

ಫೋ॥ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಬುಧವಾರ ೧೫-೬-೪೯ [ಸಂಚಿಕೆ ೨೫೯

- ಪ್ರಜಾಭಿಪ್ರಾಯಕ್ಕೆ - ಪ್ರಭುಗಳ ಪುರಸ್ಕಾರ

ಸರ್ಕಾರಿ ಜಾಹಿರಾತಿನ ವ್ಯವಸ್ಥೆ ಖಾಸಗೀ ಸಂಸ್ಥೆಗೆ

ಪ್ರ. ಪ್ರ. ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು.] ಬೆಂಗಳೂರು. ೧೫

ಪ್ರಜಾ ಪ್ರತಿನಿಧಿ ಸಭೆಯಲ್ಲಿ ನಿನ್ನೆ ಪ್ರಶ್ನೋತ್ತರ ಕಾಲದಲ್ಲಿ, ಸಂಸ್ಥಾನದಲ್ಲಿ ೧೭ ವೃತ್ತ ಪತ್ರಿಕೆಗಳು ಪ್ರಕಟವಾಗುತ್ತಿವೆಯೆಂದೂ, ಯಾವ ಪತ್ರಿಕೆಗೂ ವಿಶೇಷ ಆಶ್ರಯವನ್ನು ಕೊಟ್ಟಿರುದ ಯಾವ ಸಂದರ್ಭವೂ ಇಲ್ಲವೆಂದೂ, ಕೆಲವು ಪತ್ರಿಕೆಗಳನ್ನು ತರಿಸಕೊಳ್ಳಬಹುದೆಂದು ಜಿಲ್ಲಾಧಿಕಾರಿಗಳು ಮತ್ತು ಇಲಾಖಾಧಿಕಾರಿಗಳಿಗೆ ಆಗಾಗ್ಗೆ ಸರ್ಕಾರದವರು ಸೂಚನೆ ಕೊಡುತ್ತಿದ್ದುದನ್ನು ಇತ್ತೀಚೆಗೆ ವಾಪಸು ತೆಗೆದುಕೊಳ್ಳಲಾಗಿದೆಯೆಂದೂ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಶ್ರೀ ಎಸ್. ಶ್ರೀನಿವಾಸಮೂರ್ತಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಪತ್ರಿಕೆಯ ವ್ಯಾಪ್ತಿ ಮತ್ತು ಚಂದಾದಾರರ ಮೇಲೆ ಜಾಹಿರಾತನ್ನು ಕೊಡಲಾಗುವುದು. ಜಾಹಿರಾತು ವ್ಯವಸ್ಥೆಯನ್ನು ಒಂದು ಖಾಸಗಿ ಜಾಹಿರಾತು ಸಂಸ್ಥೆಗೆ ವಹಿಸಿಕೊಡುವ ವಿಷಯವನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆ, ಎಂದು ಮುಖ್ಯ ಮಂತ್ರಿಗಳು ಉಪಪ್ರಶ್ನೆಗೆ ಉತ್ತರವಿತ್ತರು.

ಸಾವಿರ ಜನಸಂಖ್ಯೆಯಿರುವ ಗ್ರಾಮಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದೇ ಸರ್ಕಾರದ ಉದ್ದೇಶವೆಂದು ಮುಖ್ಯ ಮಂತ್ರಿ ಶ್ರೀ ರೆಡ್ಡಿಯವರು ನಿರ್ಣಯವೊಂದಕ್ಕೆ ಉತ್ತರ ಕೊಡುತ್ತಾ ತಿಳಿಸಿದರು.

ಅಧ್ಯಕ್ಷರುಗಳ ಪಟ್ಟಿ

ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಗೈರುಹಾಜರಿನಲ್ಲಿ ಅಧ್ಯಕ್ಷತೆವಹಿಸಲು ಶ್ರೀಗಳಾದ ಎಂ. ವಿ ರಾಮರಾವ್, ಎ. ಜಿ. ಖಲೀಲ್, ಶ್ರೀಮತಿ ಸುನಂದಮ್ಮ ಮತ್ತು ಶ್ರೀ ವೈ. ಧರ್ಮಪ್ಪನವರನ್ನು ನೇಮಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು.

○ ಸಂತೇ ಬೆನ್ನೂರು ಮತ್ತು ತ್ಯಾವಣಿಗೆಗಳಲ್ಲಿ ಜಿಲ್ಲಾ ಬೋರ್ಡು ಹೈಸ್ಕೂಲುಗಳನ್ನು ಈ ವರ್ಷದಿಂದ ಮಂಜೂರು ಮಾಡಲಾಗಿದೆ

○ ಸಂಸ್ಥಾನದ ಬಸ್ಸುಗಳಿಗೆ ಈ ತಿಂಗಳಿನಲ್ಲಿ ೯ ದಿನಗಳ ಹೆಚ್ಚು ಪೆಟ್ರೋಲನ್ನು ಕೊಡಲಾಗುವುದು

ಆಹಾರ ಪರಿಸ್ಥಿತಿ ವಿವರಣೆ

ಸಂಸ್ಥಾನದ ಆಹಾರದ ಪರಿಸ್ಥಿತಿಯನ್ನು ಸಚಿವ ಶ್ರೀ ಟಿ. ಮರಿಯಪ್ಪನವರು ವಿವರಿಸಿದರು., ೧೯೪೮-೪೯ರಲ್ಲಿ ೭ ಲಕ್ಷ ೬೩ ಸಾವಿರ ಎಕರೆಗಳಲ್ಲಿ ೪೬,೮೬,೭೫೦ ಪಲ್ಲ ಭತ್ತವನ್ನು ಬೆಳೆಯಲಾಯಿತು ೨೫ ಲಕ್ಷ ಎಕರೆಯಲ್ಲಿ ೪೦,೩೩,೫೮೦ ಪಲ್ಲ ಧಾನ್ಯಗಳನ್ನು ಬೆಳೆಯಲಾಯಿತು ಈ ವರ್ಷ ೧ ಲಕ್ಷ ೪೦ ಸಾವಿರ ಪಲ್ಲ, ರಾಗಿ, ೧೫೭೩೪ ಪಲ್ಲ ಜೋಳವನ್ನು ವಸೂಲು ಮಾಡಲಾಯಿತು. ಈ ವರ್ಷ ೧ ಲಕ್ಷ ೭೨ ಸಾವಿರ ಟನ್ ಆಹಾರ ಕೊರತೆ ಬೀಳುವುದು. ಅದರಲ್ಲಿ, ಕೇಂದ್ರ ಸರ್ಕಾರದವರು ೧ ಲಕ್ಷ ಟನ್ ಆಹಾರ ಒದಗಿಸುವರು ೨೪ ಸಾವಿರ ಟನ್ ಅಕ್ಕಿ, ೭೬ ಸಾವಿರ ಟನ್ ಗೋಧಿ ಕಳುಹಿಸಲು ಅವರು ಒಪ್ಪಿರುವರು. ೭೫ ಲಕ್ಷ ... ಸಾವಿರ ಎಕರೆಯಲ್ಲಿ ... ರಾಗಿ ಬೆಳೆ ... ಸುತ್ತಿದೆ ಇದೇ ಜೂನ್ ತಿಂಗಳಿನವರೆಗೆ ,೧೫,೩೩೦ ವಯಸ್ಕರಿಗೂ ೭೪೯,೪೪೧ ... ಂದಿ ಮಕ್ಕಳಿಗೂ ಆಹಾರವನ್ನು ಒದಗಿಸಲಾಗುತ್ತಿದೆ. ಇದರಿಂದ ಸರ್ಕಾರಕ್ಕೆ ಕಳೆದ ವರ್ಷ ೩೭೬ ಲಕ್ಷದಷ್ಟು ನಷ್ಟವುಂಟಾಗಿದೆ. ಆದರೆ ಕೇಂದ್ರ ಸರ್ಕಾರದವರು ಶೇಕಡಾ ೨೦ ರಷ್ಟು ನಷ್ಟವನ್ನು ವಹಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ ರೈತರು ಆಸಕ್ತಿ ವಹಿಸಿ ನೀರಿನಲ್ಲಿರುವ ಭೂಸಾಗುವಳಿಯನ್ನು ಬೆಳೆಸಬೇಕು ಎಂದು ತಿಳಿಸಿದರು

ಕೈಗಾರಿಕಾ ಸಂಸ್ಥೆಗಳವರು ಆಹಾರ ಬೆಳೆಯಬೇಕು

ಸ್ವಂ ಸು. ಫೋ॥] ಬೆಂಗಳೂರು, ೧೬

ಸಂಸ್ಥಾನದಲ್ಲಿರುವ ಎಲ್ಲ ಸರ್ಕಾರಿ ಮತ್ತು ಖಾಸಗೀ ಕೈಗಾರಿಕಾ ಸಂಸ್ಥೆಗಳವರೂ ಹೆಚ್ಚು ಆಹಾರ ಬೆಳೆ ಪ್ರಚಾರಕ್ಕೆ ಪ್ರೋತ್ಸಾಹ ಕೊಡಬೇಕೆಂದು, ಸರ್ಕಾರದವರು ಒಂದು ಸೂಚನೆ ಹೊರಡಿಸಿರುತ್ತಾರೆ. ಮೇಲ್ಕಂಡ ಸಂಸ್ಥೆಯವರು ತಮ್ಮಲ್ಲಿರುವ ಖಾಲೀ ಜಾಗದಲ್ಲಿ ಆಹಾರವನ್ನು ಬೆಳೆಯಲು ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದೂ, ಜಮೀನು ಇಲ್ಲದವರಿಗೆ ಸರ್ಕಾರದವರು ಅದನ್ನು ಕೊಡುವುದಾಗಿಯೂ ತಿಳಿಸಿದ್ದಾರೆ

ಸೀಮೆಯೆಣ್ಣೆಯ ಕಾಳಸಂತೆ ವ್ಯಾಪಾರವೇ?

ಹಾಸನ ಜಿಲ್ಲೆಯಲ್ಲಿ ಹೋಲ್ ಸೇಲ್ ಸೀಮೆಯೆಣ್ಣೆ ವರ್ತಕರು ಎಣ್ಣೆಯನ್ನು ಸರಿಯಾಗಿ ಸರಬರಾಜು ಮಾಡದೆ ಕಾಳಸಂತೆಯಲ್ಲಿ ಹಣಗಳಿಸುತ್ತಿರುವುದರ ಬಗ್ಗೆ ವಿಚಾರಣೆ ನಡೆಸಬೇಕೆಂದು ಹಾಸನ ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ನಿಯೋಗವೊಂದು ಸಚಿವ ಶ್ರೀ ಟಿ ಮರಿಯಪ್ಪನವರಲ್ಲಿ ಹೋಗಿ ಮೊನ್ನೆ ಮನವಿ ಮಾಡಿಕೊಂಡರು. ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಾಗಿಯೂ, ಚಿಲ್ಲರೆ ವ್ಯಾಪಾರವನ್ನು ಸಂಪೂರ್ಣವಾಗಿ ಸಹಕಾರ ಸಂಘಗಳಿಗೆ ವಹಿಸುವುದಾಗಿಯೂ ಸಚಿವರು ತಿಳಿಸಿದರೆಂದು ಹೇಳಲಾಗಿದೆ

ಕಮ್ಯೂನಿಸ್ಟ್ ಬಂದಿಗಳ ಉಪವಾಸ

ಮೈಸೂರು ಜೈಲಿನಲ್ಲಿರುವ ೩೭ ಜನ ಕಮ್ಯೂನಿಸ್ಟ್ ಬಂದಿಗಳು ಈ ಬೆಳಗ್ಗೆ ೧೦ ಗಂಟೆಯಿಂದ ೪೮ ಗಂಟೆಗಳ ಕಾಲ ಉಪವಾಸವನ್ನು ಪ್ರಾರಂಭಿಸಿದ್ದಾರೆ ಕಲ್ಕತ್ತದ ಜೈಲಿನಲ್ಲಿರುವ ಕಮ್ಯೂನಿಸ್ಟ್ ಬಂದಿಗಳ ಮೇಲೆ ಪೊಲೀಸರು ಗುಂಡು ಹಾರಿಸಿದುದನ್ನು ಪ್ರತಿಭಟಿಸುವುದೇ ಇದರ ಉದ್ದೇಶವೆಂದು ಹೇಳಲಾಗಿದೆ

ಶರತ್‌ಚಂದ್ರ ಬೋಸರಿಗೆ ಜಯ

ಪಶ್ಚಿಮ ಬಂಗಾಳದ ಶಾಸನ ಸಭೆಯ ಉಪಚುನಾವಣೆಯಲ್ಲಿ ಸಮತಾವಾದಿ ಪಕ್ಷದ ಉಮೇದುವಾರರಾದ ಶ್ರೀ ಶರತ್ ಚಂದ್ರ ಬೋಸರು ೧೯೬೭೦ ಓಟುಗಳನ್ನು ಗಳಿಸಿ ಚುನಾಯಿತರಾಗಿದ್ದಾರೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ಸುರೇಶ ಚಂದ್ರದಾಸರಿಗೆ ಕೇವಲ ೫೭೮೦ ಓಟುಗಳು ಬಂದವು ಇತರ ೩ ಜನರು ಠೇವಣಿ ಕಳೆದುಕೊಂಡರು.

ಮದರಾಸಿನಲ್ಲಿ ಅಕ್ಕಿ ಬೆಲೆ ಇಳಿಯಿತು

ಈ ದಿನದಿಂದ ಅಕ್ಕಿಯ ಬೆಲೆಯನ್ನು ಕಡಿಮೆ ಮಾಡಲಾಗುವುದೆಂದು ಮದರಾಸ್ ಸರಕಾರದ ಆಹಾರ ಸಚಿವರು ತಿಳಿಸಿರುತ್ತಾರೆ ಒಂದು ಮಣ ಅಕ್ಕಿಗೆ ವಸೂಲು ಮಾಡುತ್ತಿದ್ದ ಸರ್‌ಚಾರ್ಜನ್ನು ೧೬೦ ದ ೫ ಆಣೆಗೆ ಇಳಿಸಲಾಗುವುದೆಂದೂ ಅವರು ಹೇಳಿದ್ದಾರೆ

ಬ್ರಿಟನ್ನಿನಲ್ಲಿ ರೈಲ್ವೆ ಮುಷ್ಕರ

ಎಲ್ಲ ರೈಲ್ವೆ ಕಾರ್ಮಿಕರಿಗೂ ವಾರಕ್ಕೆ ೧೦ ಶಿಲಿಂಗ್ ಹೆಚ್ಚು ಸಂಬಳ ಕೊಡಬೇಕೆಂದೂ ಇಲ್ಲವಾದರೆ ಸಾರ್ವತ್ರಿಕ ಮುಷ್ಕರ ಹೂಡಬೇಕೆಂದೂ ಬ್ರಿಟನ್ನಿನ ರೈಲ್ವೆ ಕಾರ್ಮಿಕ ಸಂಘವು ನಿರ್ಧರಿಸಿದೆ

ಮೈಸೂರಿಗೆ ೫ ಸಾವಿರ ಟನ್ ಮೈಲೋ

೫ ಸಾವಿರ ಟನ್ ಮೈಲೋ ಹೊತ್ತು ಬಂದ ಹಡಗೊಂದು ಅಮೆರಿಕದಿಂದ ಈಗ ಮದರಾಸಿಗೆ ಬಂದಿದೆ. ಅದನ್ನು ಮೈಸೂರಿಗೆ ಕಳುಹಿಸಲಾಗುವುದು.

ರಾಜಧಾನಿಯಲ್ಲಿ ಗೋವಧೆ

ರಾಜಧಾನಿಯ ಜಲಪುರಿಯ ಮೋಹಿನ್ ಸಾಹೇಬರ ಮನೆಯಲ್ಲಿ ಕಳೆದ ಶನಿವಾರ ರಾತ್ರಿ ಎರಡು ಹಸುಗಳನ್ನು ವಧೆ ಮಾಡಿದುದನ್ನೂ ಮತ್ತೊಂದು ಹಸುವನ್ನು ಕೊಲೆ ಮಾಡಲು ಸಿದ್ಧ ಮಾಡುತ್ತಿದ್ದುದನ್ನೂ ಬಸ್ವನ್ ಪೊಲೀಸರು ಪತ್ತೆ ಮಾಡಿ, ೩ ಜನರನ್ನು ದಸ್ತಗಿರಿ ಮಾಡಿ, ಅವರುಗಳ ಮೇಲೆ ಗೋವಧಾ ನಿರೋಧ ಕಾನೂನಿನ ಪ್ರಕಾರ ಮೊಕದ್ದಮೆ ಹೂಡಿರುತ್ತಾರೆ

ಸಂಗೀತ

ಟಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ೩. ವಿವೇಕಾನಂದ ಸ್ವಾಮಿಗಳ ಭಜನಾಲಯದಲ್ಲಿ ಈ ರಾತ್ರಿ ೬-೩೦ ಗಂಟೆಗೆ ವಿದ್ವಾನ್ ಸಿ ನಾರಾಯಣ ಶಾಸ್ತ್ರಿಗಳಿಂದ ಸಂಗೀತವು ನಡೆಯುವುದು.

ಪ್ರಜಾ ಪ್ರತಿನಿಧಿ ಸಭೆಯ ಮುಕ್ತಾಯ

ಪುನಃ ಪ್ರಜಾ ಮಂಡಲಿಯವರ ಸಭಾ ಪರಿತ್ಯಾಗ

ಸ್ವಂ. ಸು ಫೋ॥.] ಬೆಂಗಳೂರು ೧೫

ಕಳೆದ ತಿಂಗಳು ೩೦ ನೇ ತಾ॥ ಪ್ರಾರಂಭವಾದ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನವು ಈ ದಿನ ೧-೩೦ ಗಂಟೆಗೆ ಮುಕ್ತಾಯವಾಯಿತು.

ಪ್ರಶ್ನೋತ್ತರವಾದ ಮೇಲೆ ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು ಪಶ್ಚಿಮ ಬಂಗಾಳ ಶಾಸನ ಸಭೆಗೆ ಚುನಾಯಿತರಾಗಿರುವ ಶ್ರೀ ಶರತ್ ಚಂದ್ರ ಬೋಸರನ್ನು ಅಭಿನಂದಿಸುವ ಒಂದು ವಿಶೇಷ ನಿರ್ಣಯವನ್ನು ಮಂಡಿಸುವುದಾಗಿ ಹೇಳಿದರು ಅದು ವ್ಯಕ್ತಿಗೆ ಸಂಬಂಧಪಟ್ಟದ್ದೆಂದು ಅಧ್ಯಕ್ಷರು ಅದನ್ನು ತಳ್ಳಿಹಾಕಿದರು. ಅದರ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಶ್ರೀ ಮುಲ್ಕಾ ಗೋವಿಂದ ರೆಡ್ಡಿ, ಚಿಕ್ಕಲಿಂಗಯ್ಯ ಮತ್ತು ಪ್ರಜಾ ಮಂಡಲಿಯ ೩೦ ಜನ ಸದಸ್ಯರು ಸಭಾ ಪರಿತ್ಯಾಗ ಮಾಡಿ, ೫ ನಿಮಿಷಗಳ ನಂತರ ವಾಪಸು ಬಂದರು

ಕರ್ಣಾಟಕ ಏಕೀಕರಣ

ಕರ್ಣಾಟಕ ಪ್ರಾಂತ ರಚನೆಗಾಗಿ ಮೈಸೂರನ್ನು ವಿಲೀನೀಕರಣ ಮಾಡುವುದಾಗಲೀ ಅಥವ ವಿಶಾಲ ಮೈಸೂರನ್ನು ರಚಿಸುವುದಾಗಲಿ- ಈ ಪ್ರಶ್ನೆಯನ್ನು ಮೈಸೂರು ಜನರ ಅಭಿಪ್ರಾಯವನ್ನು ಪಡೆಯದೇ ಇತ್ಯರ್ಥ ಮಾಡಕೂಡದೆಂದು ಶ್ರೀ ಭೂಪಾಳಂರವರು ಒಂದು ವಿಶೇಷ ನಿರ್ಣಯವನ್ನು ಮಂಡಿಸಿದರು ಹಲವು ಸದಸ್ಯರು ಅದನ್ನು ಸಮರ್ಥಿಸಿ ಮಾತನಾಡಿದರು. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಉತ್ತರವಿತ್ತು, ಕರ್ಣಾಟಕ ಏಕೀಕರಣದ ಪ್ರಶ್ನೆಯು ಬಹು ಕಷ್ಟವಾದ ಸಮಸ್ಯೆಯಾಗಿದೆಯೆಂದೂ, ಜನರ ಅಭಿಪ್ರಾಯಕ್ಕೆ ವಿರೋಧವಾಗಿ ಯಾವುದನ್ನೂ ಮಾಡುವುದಿಲ್ಲವೆಂದೂ, ಆದರೆ ಈಗ ಯಾವ ಅಂತ್ಯ ಉತ್ತರವನ್ನೂ ಕೊಡಲು ಸಾಧ್ಯವಿಲ್ಲವೆಂದೂ ತಿಳಿಸಿದರು ಜನಗಳ ಅಭಿಪ್ರಾಯ ಪಡೆಯದೆ ಯಾವ ನಿರ್ಧಾರಕ್ಕೂ ತಾವು ಬರುವುದಿಲ್ಲವೆಂದು ಶ್ರೀ ನಿಜಲಿಂಗಪ್ಪನವರು ತಮಗೆ ತಿಳಿಸಿರುವರೆಂದು ಶ್ರೀ ರೆಡ್ಡಿಯವರು ಹೇಳಿದರು. ಅದರ ಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ಹುಲಿಯ ಬಾಯಿಂದ ಗಂಡನನ್ನು ರಕ್ಷಿಸಿದ ಮಹಿಳೆ

ಕಲ್ಲಿಕೋಟೆಗೆ ಸಮೀಪದಲ್ಲಿರುವ ಮುಕ್ಕಾಡ್ ಎಂಬ ಪ್ರದೇಶದಲ್ಲಿ ದಂಪತಿಗಳಿಬ್ಬರು ಕಾಡು ದುಂಬಿಯನ್ನು ಆಯ್ದು ತಾರುತ್ತಿದ್ದಾಗ, ಒಂದು ದೊಡ್ಡ ಹುಲಿಯು ಗಂಡನ ಮೇಲೆ ಬಿದ್ದಿತೆಂದೂ ಸ್ವಲ್ಪ ಕಾಲ ಅತನು ಹೋರಾಡಿ, ಕೆಳಕ್ಕೆ ಬಿದ್ದನೆಂದೂ, ಆಗ ಅತನ ಹೆಂಡತಿಯು ದೊಣ್ಣೆಯಿಂದ ಹುಲಿಯನ್ನು ಹೊಡೆದು ಓಡಿಸಿದಳೆಂದೂ ವರದಿಯಾಗಿದೆ

○ ಮದರಾಸಿನ ೭ ಜನ ಮಂತ್ರಿಗಳ ಮೇಲೆ ಕೆಲವು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಮಾಡಿರುವ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರು ಮೊನ್ನೆ ಮದರಾಸಿಗೆ ಆಗಮಿಸಿದರು.

ಖಾಸಿಂ ರಜ್ವಿಯ ವಿಚಾರಣೆಗೆ ತಡವೇಕೆ ?

ಹೈದರಾಬಾದ್ ರಜಾಕರರ ನಾಯಕ ನಾದ ಖಾಸಿಂ ರಜ್ವಿ ಮತ್ತು ಲಾಯಕಾಲಿ ಮಂತ್ರಿಮಂಡಲದವರುಗಳ ಮೇಲಿನ ವಿಚಾರಣೆಯು ಪ್ರಾರಂಭವಾಗುವುದಕ್ಕೆ ತಡವಾಗಿರುವುದು ಅದಕ್ಕೆ ಸಂಬಂಧಪಟ್ಟ ಅನೇಕ ಕಾಗದ ಪತ್ರಗಳನ್ನು ಪೋಲೀಸ್ ಸಿ ಐ ಡಿ. ಇಲಾಖೆಯವರು ಹೈದರಾಬಾದ್ ಸರ್ಕಾರವು ಶರಣಾಗತವಾದಾಗ ನಾಶಪಡಿಸಿರುವುದೇ ಕಾರಣವೆಂದು ಹೇಳಲಾಗಿದೆ.

ಇಟಲಿಯಲ್ಲಿ ೪೦ ಲಕ್ಷ ಜನ ಕಾರ್ಮಿಕರ ಮುಷ್ಕರ

ಕಳೆದ ೨೬ ದಿನಗಳಿಂದ ಮುಷ್ಕರ ಹೂಡಿರುವ ಇಟಲಿಯ ಜಮೀನು ಕೆಲಸಗಾರರಿಗೆ ಸಮಾನ ಭೂತಿ ತೋರಿಸಲು ಅಲ್ಲಿನ ೪೦ ಲಕ್ಷ ಜನ ಕಾರ್ಮಿಕರು ನಿನ್ನೆ ದಿನ ಮುಷ್ಕರ ಹೂಡಿದ್ದರು. ಆಸ್ಪತ್ರೆ ಕೆಲಸಗಾರರೂ ಕೆಲಸಕ್ಕೆ ಹೋಗಲಿಲ್ಲ ಕಟ್ಟಡದ ಕೆಲಸಗಾರರೂ ಮುಷ್ಕರ ಹೂಡುವ ಸಂಭವವಿದೆಯೆಂದು ಹೇಳಲಾಗಿದೆ

ದೇವರ ಪಾದದ ಬಳಿ ೪೫ ದಿನಗಳ ಮಗು

ಬೊಂಬಾಯಿನ ಗೀತ್ಸಾಡಿಯಲ್ಲಿರುವ ಶ್ರೀ ಶಂಕರಾಚಾರ್ಯರ ದೇವಸ್ಥಾನದಲ್ಲಿ ದೇವರ ಪಾದದ ಬಳಿ ೪೫ ದಿನಗಳ ಮಗುವೊಂದು ಇದ್ದುದನ್ನು ಭಕ್ತಾದಿಗಳು ಕಳೆದ ಶುಕ್ರವಾರ ಕಂಡು, ಅದರ ವಾರಸುದಾರರು ಯಾರೂ ಇಲ್ಲದುದರಿಂದ ಅದನ್ನು ಆಸ್ಪತ್ರೆಗೆ ಕಳುಹಿಸಿದರು. ವಟಸಾವಿತ್ರಿ ಪೌರ್ಣಿಮಾ ದಿನವಾದುದರಿಂದ ಒಬ್ಬ ತಾಯಿಯು ಶ್ರೀ ಶಂಕರಾಚಾರ್ಯರಿಗೆ ಭಕ್ತಿಪೂರ್ವಕವಾಗಿ ಒಪ್ಪಿಸಿದ ಕಾಣಿಕೆ ಇದೆಂದು ಕೆಲವರು ಹೇಳುತ್ತಿದ್ದಾರೆ

ರೈಲ್ವೆ ಫುಟ್‌ಬೋರ್ಡಿನ ಪ್ರಯಾಣಿಕರ ಮರಣ

ಕಲ್ಕತ್ತದಿಂದ ಬೊಂಬಾಯಿಗೆ ಬರುತ್ತಿದ್ದ ಹಲವು ಪ್ರಯಾಣಿಕರ ಪೈಕಿ, ೭ ಜನರು ಎದುರಿಗೆ ಬರುತ್ತಿದ್ದ ರೈಲಿನ ರಭಸದಿಂದ ಚದರಿ ಕೆಳಕ್ಕೆ ಬಿದ್ದು ಸತ್ತುಹೋದರೆಂದು ವರದಿಯಾಗಿದೆ

ದೇವನೂರಿನಲ್ಲಿ ಸಮಾರಂಭ

ನಂಜನಗೂಡು ತಾಲ್ಲೂಕು ದೇವನೂರಿನಲ್ಲಿ ಶ್ರೀ ಮನ್ನಿರಂಜನ ಗುರುಮಲ್ಲೇಶ್ವರ ಸ್ವಾಮಿಗಳ ಸುವರ್ಣ ಮಹೋತ್ಸವವು ಅತ್ಯಂತ ವೈಭವದಿಂದ ಮೊನ್ನೆ ದಿನ ನೆರವೇರಿತು ಸುಮಾರು ೨೦ ಸಾವಿರ ಜನರು ನೆರೆದಿದ್ದರು. ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಪುಷ್ಪ ಪಲ್ಲಕ್ಕಿ ಉತ್ಸವವು ನಡೆಯಿತು ಸಂಜೆ ಸಿದ್ಧಗಂಗಾಮಠಾಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಮಹಾಸಭೆ ನಡೆಯಿತು ಶ್ರೀ ಗೌರೀಶಂಕರ ಸ್ವಾಮಿಗಳು ಕಾಯಕದ ಮಹತ್ವ ಎಂಬ ವಿಷಯವಾಗಿಯೂ, ಅಧ್ಯಕ್ಷರು ಜನಜೀವನದ ಮಟ್ಟ ಉತ್ತಮವಾಗುವ ಮಾರ್ಗ ಎಂಬ ವಿಷಯವಾಗಿಯೂ ಭಾಷಣ ಮಾಡಿದರು ೧೦ ಸಾವಿರ ಮಂದಿಗೆ ಅನ್ನ ಸಂತರ್ಪಣೆ ನಡೆಯಿತು

ರಾಜ್ಯಾಂಗ ಸಭೆಗೆ ಕಾಶ್ಮೀರದ ಸದಸ್ಯರು

ಕಾಶ್ಮೀರದ ಪ್ರಧಾನಿ ಷೇಕ್‌ಅಬ್ದುಲ್ಲಾ, ಮಿರ್ಜಾ ಅಫಸಲ್ ಬೇಗ್, ಮೌ॥ ಅಹಮದ್ ಸಯೀದ್ ಮತ್ತು ಪಂಡಿತ ಮೋತಿರಾಂರವರುಗಳನ್ನು ಭಾರತದ ರಾಜ್ಯಾಂಗ ಸಭೆಯ ಸದಸ್ಯರನ್ನಾಗಿ ಆರಿಸಲಾಗಿದೆ

ಭಾರತದ ಗಡಿ ಹಳ್ಳಿಗಳ ಮೇಲೆ ಪಾಕೀಸ್ಥಾನದ ಧಾಳಿ

ಭಾರತ ಮತ್ತು ಪಾಕಿಸ್ತಾನ್ ಗಡಿ ಪ್ರದೇಶದಲ್ಲಿರುವ ರಾನಿಯರ್ ಎಂಬ ಹಳ್ಳಿಯ ಮೇಲೆ ೮೦ ಜನ ಸಶಸ್ತ್ರ ಪಾಕೀಸ್ತಾನದ ಸೈನಿಕರು ಧಾಳಿ ನಡೆಸಿ, ದನಗಳನ್ನು ಅಪಹರಿಸಲು ಯತ್ನಿಸಿದರೆಂದೂ, ಅವರಿಗೂ ಭಾರತದ ಪೋಲೀಸರಿಗೂ ಗುಂಡಿನ ಕಾಳಗವು ನಡೆಯಿತೆಂದೂ ವರದಿಯಾಗಿದೆ. ಅಮೃತಸರದ ಹತ್ತಿರವಿರುವ ಡಲ್ ಎಂಬ ಹಳ್ಳಿಯ ಮೇಲೂ ಪಾಕಿಸ್ತಾನದ ದರೋಡೆಕಾರರು ಧಾಳಿ ನಡೆಸಿ, ಜನರ ಮೇಲೆ ಗುಂಡು ಹಾರಿಸಿದರೆಂದು ಹೇಳಲಾಗಿದೆ

Edited, printed, and published by A.R Nagarajan at the Sadhvi Press, D. Subbiah Road, Mysore.

ಮೈಸೂರು ಕಾಂಗ್ರೆಸ್ಸಿಗೆ ಬೇರೆ ಅಧ್ಯಕ್ಷರು ಬೇಕು

ಎ. ಎಂ. ಸಿ. ಸಿ. ಗೆ ನಿರ್ಣಯ

ಈಗಿನ ಮೈಸೂರು ಕಾಂಗ್ರೆಸ್ಸು ಪ್ರತ್ರಚಿತವಾಗಬೇಕೆಂದೂ ಮತ್ತು ಎ ಎಂ ಸಿ.ಸಿ ಯ ಅಧಿವೇಶನದಲ್ಲಿ ಹೊಸ ಅಧ್ಯಕ್ಷರನ್ನು ಚುನಾಯಿಸಬೇಕೆಂದೂ, ಮತ್ತು ಅವರು ಅಖಿಲ ಭಾರತ ಕಾಂಗ್ರೆಸ್ಸಿನ ಮಾದರಿಯಲ್ಲಿ ಹೊಸ ಕಾರ್ಯಕಾರೀ ಸಮಿತಿಯ ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರ ಹೊಂದಿರಬೇಕೆಂದೂ ಸೂಚಿಸುವ ನಿರ್ಣಯವನ್ನು ಶ್ರೀ ಸಿದ್ದಪ್ಪನವರ್ ಕೃಷ್ಣಶರ್ಮರವರು ಮುಂದೆ ನಡೆಯುವ ಎ ಎಂ.ಸಿ ಸಿ ಸಭೆಗೆ ಕಳುಹಿಸಿರುತ್ತಾರೆ

ಮೈಸೂರು ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯು ಮಂತ್ರಿಮಂಡಲಕ್ಕೆ ಯೋಗ್ಯವಾದ ಹಾಗೂ ವಿಶಾಲ ಭಾವನೆಯಿಂದ ಕೂಡಿದ ಕಾರ್ಯ ನೀತಿಯನ್ನು ಹಾಕಿಕೊಡದೆ ಉಪೇಕ್ಷೆ ಮಾಡಿರುವುದರಿಂದಲೂ ಮತ್ತು ಪರಸ್ಪರ ಅಸಮಾಧಾನ, ಅನೈಕ್ಯತೆ ಬೆಳೆದು ಬಂದಿರುವುದರಿಂದಲೂ, ಈಗಿನ ಕಾರ್ಯಕಾರೀ ಮಂಡಲಿಯ ಸದಸ್ಯರೂ ಮತ್ತು ಅಧ್ಯಕ್ಷರೂ ರಾಜೀನಾಮೆ ಕೊಟ್ಟು ತಾತ್ಕಾಲಿಕವಾಗಿ ಒಂದು ಕಾರ್ಯಕಾರೀ ಸಮಿತಿಯನ್ನು ರಚಿಸಿಕೊಳ್ಳಲು ಎ ಎಂ ಸಿ ಸಿ ಗೆ ಅಧಿಕಾರ ಕೊಡಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಶ್ರೀ ಹಚಾ ಎಸ್ ದೊರೆಸ್ವಾಮಿಗಳು ಮಂಡಿಸಿದ್ದಾರೆ

* ಲಕ್ಷ್ಮೀ ಥಿಯೇಟರ್ *

16—6—49ರಿಂದ :: ದಿನವಹಿ ೩ ಆಟಗಳು

ಜಯಂತ್ ದೇಸಾಯಿಯವರ ಅತ್ಯುತ್ತಮ ಹಿಂದಿ ಚಿತ್ರ ರತ್ನ

ಹೀರ * HEERA

—: ಭೂಮಿಕೆ :—

ಈಶ್ವರ್‌ಲಾಲ್, ಸಾರೋ, ಮುಬಾರಕ್, ಗುಲಾಬ್

ಸಂತಾನ ಸಿಂಧೂರ

ಒಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಸಂತಾನವಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ. ಹೊಂಬತ್ತು ವರ್ಷದ ಚಾಲ್ತಿ. ಹಿಂದಿನ ಕ್ಯಾಟ್ಲಾಗುಗಳು ಹಾಗಿರಲಿ ಈಗ ಪ್ರಿಂಟಾಗಿರತಕ್ಕ "ಹಳ್ಳಿಯಿಂದ ದಿಲ್ಲಿಗೆ" ಎಂಬ ನಾಲ್ಕು ಪೇಜಿನ ಹಸ್ತಪತ್ರಿಕೆ ತಾವು ನೋಡಲೇಬೇಕಾದ್ದು ಬರೆದರೆ ಬಿಟ್ಟಿ ರವಾನೆ.

ಎ. ರಾಮಸ್ವಾಮಿ ಅಯ್ಯರ್,

ಅಂಚೆ, ಯಳಂದೂರು [ಮೈಸೂರು ಡಿ॥]

VASANTHA INSTITUTE OF COMMERCE,

653. NARAYANA SASTRY ROAD, MYSORE

EFFICIENT COACHING!! BEST RESULTS !!

Applications for admission to the ONE YEAR DIPLOMA COURSE OF THE MYSORE GOVERNMENT COMMERCIAL EXAMINATIONS are received. For details please call at the Institute

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೂತಿಕಾವಾತಕ್ಕೆ [ಬಾಣಂತಿ ನಂಜಿಗೆ] ಉತ್ತಮ ಗುಣಕಾರಿ

ಕಣ್ಣು ಕೈಕಾಲುರಿ, ಮೈ ಬೆಚ್ಚಗೆ ಕಣ್ಣಿಗೆ ಬಂದಂತೆ ತೋರುವುದು, ನಿದ್ರೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರವಾಗುವುದು.— ಬೆಲೆ ಸೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಗಣೇಶಾ ಟಾಕೀಸ್

17—6—49ರಿಂದ

ದಿನವಹಿ 3 ಆಟಗಳು

ತುಳಸಿ ಜಲಂಧರ್

(ತಮಿಳು)

—. ಭೂಮಿಕೆ :—

ಪಿ. ಯು. ಚಿನ್ನಪ್ಪ ಮತ್ತು ಕನ್ನಾಂಬ

ಚಾಮುಂಡೇಶ್ವರಿ ಟಾಕೀಸ್

15 6-49ನೇ ಬುಧವಾರದಿಂದ ಪ್ರತಿ ದಿನ 3 ಪ್ರದರ್ಶನಗಳು.

ಶ್ರೀ ಆಂಡಾಳ್

(ತಮಿಳು)

ಮುಖ್ಯ ಭೂಮಿಕೆ.—

ಕುಮಾರಿ ಟಿ.ಆರ್. ರಾಜಲಕ್ಷ್ಮಿ

ಟಿ. ಎಸ್. ಗೋವಿಂದನ್

ಕಾಳಿ ಎನ್. ರತ್ನಂ

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ. ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ :: ಮೈಸೂರು

ಇಂದೇ ನೋಡಿ ! ನಮ್ಮ ನಚ್ಚಿನ ಸಂಗೀತ ಸೊಗಸಿನರಾಣಿ ಸುರೈಯ್ಯ ಪಾತ್ರವಹಿಸಿದ

ಡಾಕ್-ಬಂಗಲೊ

ನೂತನ ಸಂಗೀತ ಸಾಮಾಜಿಕ ಹಿಂದಿ ಚಿತ್ರ

ವುಡ್‌ಲ್ಯಾಂಡ್ಸ್‌ನಲ್ಲಿ

TUTORIAL CLASS

SARADA VILAS COLLEGE MYSORE

Classes have begun

Working hours -

Morning 7-30 to 9-30

D. Banumiah's College of Commerce, Mysore

(Affiliated to the University of Mysore)

In continuation to the notification dated 12-6 49 the time for receiving admission to the Junior Inter Commerce Class is extended up to 18th June 1949 Application Forms can be had from the Office

B V. Banumiah

Principal

ಫೋನ್ ನಂ. 792 ದೈನಿಕ ಪತ್ರಿಕೆ

ಸಂಪುಟ ೭] ಗುರುವಾರ ೧೬-೬-೪೯ [ಸಂಚಿಕೆ ೨೬೦

– ಬೆಂಗಳೂರಿನಲ್ಲೂ – ಹೋಟೇಲ್ ಮುಷ್ಕರವೆ?

ಇಂಟರ್ ಕಾಲೇಜುಗಳನ್ನು ವಿದ್ಯಾ ಇಲಾಖೆಗೆ ವರ್ಗಾಯಿಸಬೇಕು

ಸಿ. ಆರ್. ರೆಡ್ಡಿಯವರ ಸಲಹೆ

ಈಗ ಇರುವ ಇಂಟರ್‌ಮೀಡಿಯಟ್ ಕಾಲೇಜುಗಳನ್ನು ವಿದ್ಯಾ ಇಲಾಖೆಯ ಆಡಳಿತಕ್ಕೆ ಒಳಪಡಿಸುವುದು; ಗೃಹ ವಿಜ್ಞಾನವನ್ನು ಹೇಳಿಕೊಡುವ ಪ್ರಥಮ ವರ್ಗದ ಕಾಲೇಜನ್ನು ತೆರೆಯುವುದು; ವಿಶ್ವ ವಿದ್ಯಾಲಯದ ನೈತಿಕ ಮಟ್ಟವನ್ನು ಪುನಃ ಸ್ಥಾಪಿಸುವುದು, ವಿಶ್ವ ವಿದ್ಯಾಲಯವು ಸ್ವತಂತ್ರ ಸಂಸ್ಥೆಯಾಗಬೇಕಾದುದು; ವಿಶ್ವ ವಿದ್ಯಾಲಯದ ಖಾಯಂ ನಿಧಿ ಏರ್ಪಡಿಸಿ ಅದಕ್ಕೆ ಈಗಿನ ಪ್ರಜಾ ಸರಕಾರವು ೧ ಕೋಟಿ ರೂ. ಗಳನ್ನು ತನ್ನ ರಿಸರ್ವ್ ಫಂಡಿನಿಂದ ಕೊಡುವುದು ಇವೇ ಮುಂತಾದ ಶಿಫಾರಸುಗಳನ್ನು ಡಾ|| ಸಿ. ಆರ್. ರೆಡ್ಡಿಯವರು ಮಾಡಿದ್ದಾರೆ

ಮಹಿಳೆಯರಿಗಾಗಿ ಇರುವ ಪ್ರಥಮ ದರ್ಜೆಯ ಕಾಲೇಜುಗಳನ್ನು ಮುಂದೆಯೂ ಪ್ರತ್ಯೇಕವಾಗಿಟ್ಟುಕೊಳ್ಳಬೇಕೆಂದೂ, ಯಾವಾಗಲಾದರೂ ಉಪನ್ಯಾಸಗಳಾದರೆ ಆಗ ವಿದ್ಯಾರ್ಥಿ ವಿದ್ಯಾರ್ಥಿನಿಯರಿಬ್ಬರೂ ಸೇರಿ ಅವುಗಳನ್ನು ಕೇಳಲು ಅವಕಾಶವಿರಬೇಕೆಂದೂ, ಇತರ ಕಡೆಗಳಲ್ಲಿರುವಂತೆಯೇ ಎಸ್ ಎಸ್ ಎಲ್ ಸಿ. ಎಂಬುದನ್ನು ಮೆಟ್ರಿಕ್ಯುಲೇಷನ್ ಎಂದು ಕರೆಯಬೇಕೆಂದೂ, ಔದ್ಯೋಗಿಕ ಕಾಲೇಜುಗಳಿಗೆ ಸೇರಿಸುವ ಸಂದರ್ಭದಲ್ಲಿ ಕೋಮುವಾರು ದೃಷ್ಟಿಯು ಇರುವವರೆಗೂ ಪ್ರತ್ಯೇಕವಾದ ಖಾಸಗೀ ಸಂಸ್ಥೆಗಳು ಹುಟ್ಟುವುದು ಸ್ವಾಭಾವಿಕವೆಂದೂ, ಅದರಲ್ಲಿ ತಪ್ಪೇನೂ ಇಲ್ಲವೆಂದೂ ಅವರು ಹೇಳಿರುತ್ತಾರೆ.

ಅಕೆಡೆಮಿಕ್ ಕೌನ್ಸಿಲ್ ಸಭೆಗೆ ಮದ್ರಾಸಿನಲ್ಲಿ ಇರುವಂತೆ ಪಾಠ ಪ್ರವಚನಗಳ ಮೇಲೆ ಪೂರ್ಣ ಅಧಿಕಾರವಿರಬೇಕೆಂದೂ ಅವರು ಸೂಚಿಸಿರುವರು.

ಲಾಭದ ಪೈರನ್ನು ಬೆಳೆದುದಕ್ಕಾಗಿ ಕ್ರಮ

ಕಡೂರು ತಾಲ್ಲೂಕು ಸಕರಾಯ ಪಟ್ಟಣದಲ್ಲಿ ೧೫ ಜನ ರೈತರು ತಮ್ಮ ೩೦ ಎಕರೆ ಜಮೀನಿನ ಪೈಕಿ ಕೇವಲ ೧೦೦ ಎಕರೆಯಲ್ಲಿ ಕಾರುರಾಗಿಯನ್ನು ಬೆಳೆದು ಮಿಕ್ಕ ಜಮೀನಿನಲ್ಲಿ ಲಾಭ ಬರುವ ಇತರ ಪೈರನ್ನು ಬೆಳೆದರೆಂದು ಅವರುಗಳ ಮೇಲೆ ಆಹಾರ ರಕ್ಷಣಾ ಶಾಸನ ರೀತ್ಯ ಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ

೫ ಸಾವಿರ ರೂ. ನೊಡನೆ ಪರಾರಿಯಾದ ಹುಡಗ

ಬೆಂಗಳೂರು ಜಿಲ್ಲಾ ಖಜಾನೆಯಲ್ಲಿ ಕಂಟ್ರಾಕ್ಟರೊಬ್ಬರು ನೊನ್ನೆ ೫ ಸಾವಿರ, ೨೦ ಅನ್ನು ಪಡೆದು ಎಣಿಸುತ್ತಿದ್ದಾಗ ಅವರ ಹತ್ತಿರಕ್ಕೆ ೧೫ ವರ್ಷದ ಹುಡುಗನೊಬ್ಬನು ಬಂದು ಅವರ ಬಟ್ಟೆಗೆ ಏನೊ ಹತ್ತಲು ಹತ್ತಿದೆಯೆಂದು ತಿಳಿಸಿ, ಅದನ್ನು ತೊಳೆಯಲು ಹಣವಿದ್ದ ಕೋಟನ್ನು ಅವರು ಒಂದು ಕಡೆ ಇಟ್ಟು ಹೊರಕ್ಕೆ ಹೋದಾಗ ಆ ಕೋಟನ್ನು ಅಪಹರಿಸಿಕೊಂಡು ಪರಾರಿಯಾದನೆಂದು ವರದಿಯಾಗಿದೆ

ಗಿರಿಜಾ ಕಲ್ಯಾಣ

ಅರಮನೆ ಕೋಟೆಯಲ್ಲಿರುವ ಶ್ರೀ ತ್ರಿನೇಶ್ವರ ದೇವಸ್ಥಾನದಲ್ಲಿ ನಾಳೆಯಿಂದ ೨೫ ನೇ ತಾ|| ವರೆಗೆ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವವು ನಡೆಯುವುದು.

ಬನ್ನೂರಿಗೆ ಹೈಸ್ಕೂಲು

ಮೈಸೂರು ೧೬

ಜಿಲ್ಲಾ ಬೋರ್ಡಿನ ಮುಂದುವರಿದ ಸಭೆಯು ನಿನ್ನೆ ಶ್ರೀ ಹೆಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಈ ವರ್ಷದಿಂದಲೇ ಬನ್ನೂರಿನಲ್ಲಿ ಹೈಸ್ಕೂಲನ್ನು ತೆರೆಯಬೇಕೆಂದೂ, ಅದಕ್ಕೆ ಮಹಾತ್ಮಾ ಗಾಂಧಿಯವರ ಹೆಸರನ್ನಿಡಬೇಕೆಂದೂ ತೀರ್ಮಾನಿಸಲಾಯಿತು

ಸಾಲಿಗ್ರಾಮದ ಮುನಿಸಿಪಲ್ ಪ್ರೌಢ ವಿದ್ಯಾಶಾಲೆಯ ಕಟ್ಟಡಕ್ಕಾಗಿ ಬೋರ್ಡಿನವರು ಮಂಜೂರು ಮಾಡಿದ ೪೫ ಸಾವಿರ ರೂ. ಹಣದ ಪ್ರತಿಯಾಗಿ ಒಂದು ಸಭಾ ಭವನವನ್ನು ಕಟ್ಟಿಸಿಕೊಡಬೇಕೆಂದು ನಿರ್ಧರಿಸಲಾಯಿತು

ಕೈ ಕತ್ತರಿಸಿದುದಕ್ಕೆ ೯ ತಿಂಗಳ ಶಿಕ್ಷೆ

ಕುಂಭಕೋಣದ ಜಯಕೊಡಿ ಶ್ರೀನಿವಾಸನ್ ಎಂಬುವರ ಮನೆಯಲ್ಲಿ ಅಕ್ರಮ ಶೇಂದಿ ತಯಾರಿಕೆಯನ್ನು ಪೋಲೀಸರು ಪತ್ತೆ ಹಚ್ಚಿದಾಗ, ಶ್ರೀ ಪಿಟ್ಟೆ ಎಂಬ ವರ್ತಕರು ಮಹಜರಿಗೆ ರುಜು ಹಾಕಿದರೆಂದು ಅವರ ಬಲ ಕೈಯನ್ನು ಕತ್ತರಿಸಿದುದಕ್ಕಾಗಿ ಶ್ರೀನಿವಾಸನವರಿಗೆ ೯ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ

ಫ್ರೆಂಚ್ ಸ್ವಾಸ್ಥ್ಯಗಳು ಭಾರತಕ್ಕೆ ಸೇರಲೆಂದು ಶ್ರೀ ಅರವಿಂದರು

ಪುದುಚೇರಿ, ಚಂದ್ರನಾಗೂರು ಮತ್ತು ಇತರ ಫ್ರೆಂಚ್ ಭಾರತ ಪ್ರದೇಶಗಳು ಭಾರತ ಯೂನಿಯನ್ನಿನೊಡನೆ ಸೇರಲೆಂದೂ ಭಾರತವು ಪ್ರಪಂಚದ ಆಧ್ಯಾತ್ಮಿಕ ನಾಯಕರಾಷ್ಟ್ರವಾಗಲೆಂದೂ ಶ್ರೀ ಅರವಿಂದ ಘೋಷರು ಹಾರೈಸಿರುತ್ತಾರೆ

ಕಡಪದಿಂದ ಮೈಸೂರಿಗೆ ರೈಲು

ಮದರಾಸಿನ ಟ್ರಾನ್ಸ್‌ಪೋರ್ಟ್ ಬೋರ್ಡಿನ ಸಭೆಯು ಮೊನ್ನೆ ದಿನ ಸಚಿವ ಶ್ರೀ ಬಿ ಗೋಪಾಲರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದು, ಕಡಪದಿಂದ ಮೈಸೂರಿಗೆ ರೈಲನ್ನು ಹಾಕಲು ಸರ್ವೆ ನಡೆಸಬೇಕೆಂದು ನಿರ್ಧರಿಸಲಾಯಿತು ಕೊಯಮುತ್ತೂರಿನಿಂದ ಮೈಸೂರಿಗೆ ಸತ್ಯಮಂಗಲದ ಮಾರ್ಗವಾಗಿ ಬಸ್ ಸರ್ವೀಸನ್ನು ಏರ್ಪಡಿಸಬೇಕೆಂದೂ ತೀರ್ಮಾನಿಸಲಾಗಿದೆ

ಮೈಸೂರಿನ ವಿಲೀನೀಕರಣಕ್ಕೆ ವಿರೋಧ

ಕರ್ನಾಟಕ ಪ್ರಾಂತ್ಯದಲ್ಲಿ ಮೈಸೂರು ವಿಲೀನವಾಗುವುದನ್ನು ವಿರೋಧಿಸಿ, ಶ್ರೀಮನ್ಮಹಾರಾಜರ ಸ್ಥಾನಕ್ಕೆ ಯಾವ ಧಕ್ಕೆಯೂ ಬರಕೂಡದೆಂಬ ಪತ್ರಕ್ಕೆ ೫ ಸಾವಿರ ಜನರು ರುಜು ಹಾಕಿರುವರೆಂದೂ, ಅದರಲ್ಲಿ ೧೦೦ಕ್ಕಿಂತ ಹೆಚ್ಚು ಮಂದಿ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಿರುವರೆಂದೂ, ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಸಂಸ್ಥಾನದ ವಿಲೀನೀಕರಣ ವಿರೋಧ ಸಂಘದ ಅಧ್ಯಕ್ಷರಾದ ಶ್ರೀ ಎಂ ಕೃಷ್ಣಸ್ವಾಮಿ ಪಿಳ್ಳೆಯವರು ತಿಳಿಸಿರುತ್ತಾರೆ

ದೇಶಕ್ಕಾಗಿ ಮಡಿದವರ ವಿಧವೆಯರಿಗೆ ವೇತನ

ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಮರಣ ಹೊಂದಿದ ದೇಶ ಭಕ್ತರ ಪತ್ನಿಯರಿಗೆ ಅವರ ಜೀವಾವಧಿ ವೇತನವನ್ನು ಕೊಡುವ ವಿಷಯವು ಪೂರ್ವ ಪಂಜಾಬು ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದು ತಿಳಿದು ಬಂದಿದೆ

ಫಾರ್ಮೋಸಾ ಉಳಿಸಲು ಚೀನಾಂಗರ ಪ್ರಾರ್ಥನೆ

ಫಾರ್ಮೋಸಾ ದ್ವೀಪದ ರಕ್ಷಣೆ ಮತ್ತು ಆರ್ಥಿಕ ಭದ್ರತೆಗಾಗಿ ಅಮೆರಿಕವು ವಿಶೇಷ ಧನ ಮತ್ತು ಸೈನ್ಯ ಸಹಾಯ ಮಾಡಬೇಕೆಂದು ಚಿಯಾಂಗ್ ಕೈಷೇಕರು ಸಂಯುಕ್ತ ಸಂಸ್ಥಾನವನ್ನು ಪ್ರಾರ್ಥಿಸಿರುವುದಾಗಿ ಗೊತ್ತಾಗಿದೆ

ಗಡಿನಾಡಿನ ಗಲಭೆಗೆ ರಷ್ಯದ ಪ್ರೇರೇಪಣೆ ?

ಗಡಿನಾಡಿನ ತೊಂದರೆಗಳಿಗೆಲ್ಲಾ ಭಾರತವೇ ಕಾರಣವೆಂದು ಪಾಕೀಸ್ಥಾನವು ಆರೋಪಿಸುತ್ತಿದ್ದರೂ ಸಹ, ಈ ಗಲಾಟೆಗೆ ರಷ್ಯದ ಪ್ರೇರೇಪಣೆಯಿರುವುದೆಂದು ಗೊತ್ತಾಗಿದೆಯೆಂದು, ಲಂಡನ್ನಿನ ಪತ್ರಿಕೆಯೊಂದು ಹೇಳಿದೆ ಅಲ್ಲದೇ ಅಮೇರಿಕದ, ಮುಸ್ಲಿಂ ಜನಾಂಗಗಳ ಮತ್ತು "ಪ್ಲೇವ್" ರಾಷ್ಟ್ರಗಳ ಪ್ರಭಾವವು ಹರಡದಂತೆ ಮಾಡುವ ಸಲುವಾಗಿ ರಷ್ಯವು ಈ ರೀತಿಯ ಪ್ರಚೋದನೆ ಮಾಡುತ್ತಿರುವುದರ ಬಗ್ಗೆ ತಕ್ಕ ಆಧಾರಗಳೂ ಸಹ ದೊರೆತಿವೆಯೆಂದೂ ಆ ಪತ್ರಿಕೆ ತಿಳಿಸಿದೆ

ಜುಲೈ ೧ ರಿಂದ ಬೆಂಗಳೂರು ಹೋಟೇಲುಗಳ ಮುಷ್ಕರ

ಸ್ವಂ. ಸು ಪೋ] ಬೆಂಗಳೂರು ೧೬

ಸರ್ಕಾರದವರು ಹೋಟೇಲುಗಳ ಮೇಲೆ ಹಾಕಿರುವ ವ್ಯಾಪಾರ ತೆರಿಗೆ, ಕಾಲ ನಿಬಂಧನೆ, ಹಾಲಿನಿಂದ ಪದಾರ್ಥಗಳ ತಯಾರಿಕೆಗೆ ಅಡ್ಡಿ, ಯಾವ ಧಾನ್ಯಗಳಿಂದಲೂ ಇಡ್ಲಿ ದೋಸೆಗಳನ್ನು ಮಾಡುವುದಕ್ಕೆ ನಿಷೇಧ-ಇವೇ ಮುಂತಾದ ಆಜ್ಞೆಗಳನ್ನು ಸರ್ಕಾರದವರು ಕೂಡಲೇ ವಾಪಸು ತೆಗೆದುಕೊಳ್ಳಬೇಕೆಂದೂ, ಆ ರೀತಿ ಸರ್ಕಾರದವರು ಮಾಡದಿದ್ದಲ್ಲಿ, ಜುಲೈ ೧ ನೇ ತಾ|| ನಿಂದ ಆ ಆಜ್ಞೆಗಳನ್ನು ವಾಪಸು ತೆಗೆದುಕೊಳ್ಳುವವರೆಗೂ ಹೋಟೇಲುಗಳನ್ನು ಮುಚ್ಚಲಾಗುವುದೆಂದೂ ನಗರ ಮತ್ತು ದಂಡಿನ ಹೋಟೇಲ್ ಮಾಲೀಕರುಗಳು ನಿನ್ನೆ ಸಭೆ ಸೇರಿ ನಿರ್ಧರಿಸಿದ್ದಾರೆ.

ರಾಮಲಿಂಗಂ ಉಯಿಲಿನ ಅಪೀಲು ವಜಾ

ಬೆಂಗಳೂರಿನ ಸುಪ್ರಸಿದ್ಧ ಶ್ರೀಮಂತರಾಗಿದ್ದ ಶ್ರೀ ಪಿ. ರಾಮಲಿಂಗಮ್ಮರವರ ಉಯಿಲಿನ ಬಗ್ಗೆ ಅವರ ಪತ್ನಿ ಮತ್ತು ಮಕ್ಕಳು ದಂಡಿನ ರೆಸಿಡೆಂಟ್ ಕೋರ್ಟಿನ ತೀರ್ಮಾನದ ಮೇಲೆ ಪ್ರಿವಿ ಕೌನ್ಸಿಲಿಗೆ ಹಾಕಿಕೊಂಡಿದ್ದ ಅಪೀಲನ್ನು ವಜಾ ಮಾಡಲಾಗಿದೆ

ಬೋರ್ಡು ಸದಸ್ಯರಿಗೆ ಪ್ರ. ಪ್ರ ಸಭಾ ಸದಸ್ಯರ ಸ್ಥಾನಮಾನ

ಜಿಲ್ಲಾ ಬೋರ್ಡಿನ ಸಭೆಯಲ್ಲಿ ನಿರ್ಣಯ

ಮೈಸೂರು ೧೬

ಜಿಲ್ಲಾ ಬೋರ್ಡಿನ ಸಭೆಯು ಈ ದಿನ ಬೆಳಿಗ್ಗೆಯೂ ಸೇರಿತ್ತು.

ಜಿಲ್ಲಾ ಬೋರ್ಡುಗಳ ಕಾನೂನನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡುವ ವಿಷಯದಲ್ಲಿ ಶಿವಮೊಗ್ಗದಲ್ಲಿ ಕಳೆದ ಏಪ್ರಿಲ್ ತಿಂಗಳಿನಲ್ಲಿ ನಡೆದ ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಸಮ್ಮೇಳನದಲ್ಲಿ ಆದ ತೀರ್ಮಾನುಗಳನ್ನು ಅನುಮೋದಿಸಲಾಯಿತು

ಜಿಲ್ಲಾ ಬೋರ್ಡಿನ ಅವಧಿಯನ್ನು ೩ ರಿಂದ ೪ ವರ್ಷಗಳಿಗೆ ಹೆಚ್ಚಿಸಬೇಕೆಂದೂ ಮತ್ತು ಬೋರ್ಡಿನ ಸದಸ್ಯರ ಸ್ಥಾನಮಾನಗಳನ್ನು ಪ್ರಜಾ ಪ್ರತಿನಿಧಿ ಸಭಾ ಸದಸ್ಯರ ಸ್ಥಾನಮಾನದಂತೆಯೇ ಪರಿಗಣಿಸಬೇಕೆಂದೂ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಅನಂತರ ೧೯೪೯-೫೦ನೇ ವರ್ಷದ ಬಜೆಟ್ ಅಂದಾಜನ್ನು ಅನುಮೋದಿಸಲಾಯಿತು. ಒಟ್ಟು ಉತ್ಪತ್ತಿಯು ೫,೨೪,೦೦೦ ರೂ. ಮತ್ತು ಖರ್ಚು ೫,೪೪,೩೬೭ ರೂ

ನಿಧನ

ಮೈಸೂರು ಪುರಸಭಾ ಸದಸ್ಯರಾದ ಶ್ರೀ ಎಸ್ ಲಿಂಗಣ್ಣನವರ ತಾಯಿ ಶ್ರೀಮತಿ ಅರಸಮ್ಮನವರು ತಮ್ಮ ೭೦ನೇ ವಯಸ್ಸಿನಲ್ಲಿ ಈ ದಿನ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ನ್ಯೂ ಫೌಂಡ್‌ಲೆಂಡಿನ ಮುಖ್ಯ ಮಂತ್ರಿಗಳನ್ನು ವಜಾಗಿರಿ ಮಾಡಬೇಕೆಂದು ಆಪ್ಲಿಕ ನ್ಯಾಯವಾದಿಯಾಗಿದ್ದ ರಾಬರ್ಟ್ ಜೆ. ಮಿತ್ತ ಬ್ರೌನ್ ಎಂಬುವರು ಕೋರ್ಟಿನ ಮುಂದೆ ಮೊನ್ನೆ ಅರ್ಜಿ ಸಲ್ಲಿಸಿದ್ದಾರೆ ಬ್ರೌನರವರು ತಮ್ಮ ಹುದ್ದೆಯನ್ನು ಬಿಡಬೇಕಾಗಿ ಬಂದುದಕ್ಕೆ ಮುಖ್ಯಮಂತ್ರಿಗಳೇ ಕಾರಣವೆಂದು ಆಪಾದಿಸಿದ್ದಾರೆ

ಆಫ್ಘಾನ್ ಗುಡ್ಡಗಾಡಿನವರ ಮೇಲೆ ಬಾಂಬುಗಳು

ದಕ್ಷಿಣ ಆಫಘಾನಿಸ್ತಾನದಲ್ಲಿರುವ ಮೊಘಲಾಕ್ಟೈ ಎಂಬ ಗುಡ್ಡಗಾಡಿನ ಕದೇರದ ಮೇಲೆ ಪಾಕಿಸ್ತಾನದ ವಿಮಾನಗಳು ಬಾಂಬುಗಳನ್ನು ಹಾಕಿತೆಂದೂ ಇದರಿಂದ ೧೫ ಜನರು ಸತ್ತರೆಂದೂ, ೧೭ ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ

ಹುಡುಗ ತಪ್ಪಿಸಿಕೊಂಡಿರುತ್ತಾನೆ

ರಾಮರಾಜ ಎಂಬ ೧೬ ವರ್ಷದ ಬಾಲಕನು ಬುದ್ಧಿ ಭ್ರಮಣೆಯಿಂದ ಕಳೆದ ೮ನೇ ತಾ॥ ನಿಂದ ತಪ್ಪಿಸಿಕೊಂಡಿರುತ್ತಾನೆ ಮೂರೂ ಮುಕ್ಕಾಲು ಅಡಿ ಎತ್ತರ, ತೆಳುವಾದ ಕೆಂಪು ಶರೀರ. ನೋಡುವುದಕ್ಕೆ ಬಹಳ ಲಕ್ಷಣ, ಮಾತನಾಡುವುದಿಲ್ಲ, ಕಪ್ಪು ಬನೀನು ಹಾಕಿದ್ದಾನೆ ರಾಮರಾಜ ಎಂದು ಕರೆದರೆ ಮಾತ್ರ ಹಿಂತಿರುಗಿ ನೋಡುತ್ತಾನೆ ಈತನನ್ನು ಪತ್ತೆ ಹಚ್ಚಿ ಕೊಟ್ಟವರಿಗೆ ೨೦ ರೂ ಬಹುಮಾನ ಕೊಡಲಾಗುತ್ತದೆ

ಕಂಟ್ರಾಕ್ಟರ್ ಶಿವಯ್ಯ,
818, ಕಾಮಾಟಗೇರಿ, ಮಂಡಿ ಮೊಹಲ್ಲ,
ಮೈಸೂರು

ಮೈಸೂರ ಸ್ಯಾಂಡಲ್ ವುಡ್ ಆಯಿಲ್ ಫ್ಯಾಕ್ಟರಿ ಆಫೀಸಿನಿಂದ -

ನೋಟೀಸ್

ಮೈಸೂರು ಗಂಧದ ಎಣ್ಣೆ ಕಾರ್ಖಾನೆಯ ಬಾಯಲರುಗಳಲ್ಲಿ ಬೀಳುವ ಇದ್ದಲು ಚೂರುಗಳನ್ನೂ ಬೂದಿಯನ್ನೂ ದೂರ ಸಾಗಿಸಿಕೊಳ್ಳುವ ಹಕ್ಕನ್ನು ೧೯೪೯ ನೇ ಇಸವಿ ಜೂಲೈ ಒಂದನೇ ತಾರೀಖಿನಿಂದ ಒಂದು ವರ್ಷಕ್ಕೆ ಕೊಡಲಾಗುವುದು ಇಷ್ಟ ಉಳ್ಳವರು ಅದಕ್ಕೆ ಒಪ್ಪಿ ಕೊಡುವ ಮೊಬಲಗನ್ನು ನಮೂದಿಸಿ ಸೀಲಾದ ಕವರಿನಲ್ಲಿಟ್ಟು ಜೂನ್ ೨೦ನೇ ತಾರೀಖಿನ ಮಧ್ಯಾಹ್ನ ೧ ಘಂಟೆ ಒಳಗಾಗಿ ಈ ಕಛೇರಿಗೆ ಕಳುಹಿಸಬೇಕು. ಟೆಂಡರ್ ಜೊತೆಯಲ್ಲಿ ಠೇವಣಿ ಹಣವನ್ನು ಕಳುಹಿಸಬೇಕು.

ಮುಂಗಡ ಠೇವಣಿ ಹಣವನ್ನು ... ಮುಂಚೆ ... ಒಪ್ಪಿಗೆ ... ನೇಮಕದಲ್ಲಿ ... ಗನ್ನು ಒಂದೇ ಮೊತ್ತದಲ್ಲಿ ಪಾವತಿ ಮಾಡಲು ಒಪ್ಪಿಕೊಳ್ಳತಕ್ಕವರು ... ಒಳಪಟ್ಟು ಒಂದು ಕರಾರನ್ನು ಬರೆದುಕೊಡತಕ್ಕದ್ದು. ಹಾಗೆ ತಪ್ಪಿದರೆ ಠೇವಣಿ ಮೊಬಲಗನ್ನು ದಂಡವಾಗಿ ತೆಗೆದುಕೊಳ್ಳುವುದಲ್ಲದೆ, ಹೊಸದಾಗಿ ಏಲಂ ಮಾಡಿ ಉಂಟಾಗುವ ನಷ್ಟವನ್ನು ಅವರ ಠೇವಣಿಯಿಂದ ... ದಾಯದ ಬಾಕಿ ... ಇದರ ಬಗ್ಗೆ ... ಯಾವ ಹಕ್ಕೂ ಇರುವುದಿಲ್ಲ

ಈ ದರಖಾಸ್ತಿನ ವಿಷಯದ ಹೆಚ್ಚಿನ ವಿವರಗಳನ್ನು ... ರಜಾ ದಿನಗಳಲ್ಲದ ಮಿಕ್ಕ ದಿವಸಗಳಲ್ಲಿ ಕಾರ್ಖಾನೆಯ ಆಫೀಸು ಕೆಲಸ ನಡೆಯುವಾಗ ... ಘಂಟೆ ಒಳಗೆ ತಿಳಿಯಬಹುದು.

ಬಿ. ಪಿ. ರಾಮಕೃಷ್ಣ
ಜನರಲ್ ಮ್ಯಾನೇಜರ್

ದ. ಆಫ್ರಿಕಾ ಸರಕಾರದೊಡನೆ ಮಾತುಕತೆ

ಭಾರತ ಮತ್ತು ಪಾಕಿಸ್ತಾನಗಳೆರಡೂ ... ಸರಕಾರದೊಡನೆ ... ಒಪ್ಪಿ ... ತಿಳಿದುಬಂದಿದೆ

ರಾಜಕಮಲ್
ಮೈಸೂರು
17—6—49 ರಿಂದ
ಆನೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
ಸಾಲ್ ಗಿರಾ
(ಹಿಂದಿ)
ಮುಖ್ಯ ಪಾತ್ರ —
ಜೈರಾಜ್, ಸ್ನೇಹಪ್ರಭಾ

Morning Shows
From 17-6-49 For 4 days
UNCLE SILAS
— With —
Kejean Simmons,
Katina Paxinou

ಶ್ರೀ ಗಾಯತ್ರೀ
ಪ್ರತಿ ದಿನ 3 ಪ್ರದರ್ಶನಗಳು
16-6-49 ರಿಂದ 2 ದಿನಗಳು
ಪ್ರೇಮ ಮತ್ತು ದ್ವೇಷಯುಕ್ತವಾದ ಚಿತ್ರ
ದಿ ಡಾರ್ಕ್ ಮಿರರ್
ಪಾತ್ರ - ಒಲಿವಿಯ ಡಿ ಹ್ಯಾವಿಲೆಂಡ್ ಮತ್ತು ಲ್ಯೂ ಏಯರ್ಸ್

- ಮುಂದಿನ ಬದಲಾವಣೆ -
ಇಸ್ತರ್ ವಿಲಿಯಂಸ್ ಪಾತ್ರವಹಿಸಿರುವ
ಆನ್ ಎಕ್ ಐಲೆಂಡ್ ವಿತ್ ಯು

Edited, printed, and published by A R Nagarajan at the Sadhvi Press, D Subbiah Road Mysore.

ಆರ್. ಎಸ್. ಎಸ್. ನವರ ಹೊಸ ರಾಜಕೀಯ ಸಂಸ್ಥೆ

ಆರ್ ಎಸ್ ಎಸ್ ಸಂಸ್ಥೆಯ ಮೇಲಿರುವ ಪ್ರತಿಬಂಧಕವನ್ನು ತೆಗೆದುಹಾಕಲು ಭಾರತ ಸರ್ಕಾರದವರು ನಿರಾಕರಿಸಿರುವುದರಿಂದ ಈ ಸಂಸ್ಥೆಯನ್ನು ಬೇರೆ ರಾಜಕೀಯ ಸಂಘವನ್ನಾಗಿ ಪುನರ್ರಚಿಸಬೇಕೆಂದು ದೆಹಲಿಯಲ್ಲಿ ನಡೆದ ಪ್ರಮುಖ ಆರ್. ಎಸ್. ಎಸ್. ನಾಯಕರುಗಳ ಸಭೆಯಲ್ಲಿ ನಿರ್ಧರಿಸಲಾಗಿದೆ

ಇಂದೇ ನೋಡಿ! ನಿಮ್ಮ ನೆಚ್ಚಿನ ಸಂಗೀತ ಸೊಗಸಿನರಾಣಿ ಸುರೈಯ ಪಾತ್ರವಹಿಸಿರುವ
ಡಾಕ್-ಬಂಗಲೊ
ನೂತನ ಸಂಗೀತ ಸಾಮಾಜಿಕ ಹಿಂದಿ ಚಿತ್ರ
ವುಡ್‌ಲ್ಯಾಂಡ್ಸ್‌ನಲ್ಲಿ

ಚಾಮುಂಡೇಶ್ವರಿ
ಟಾಕೀಸ್
15-6-49ನೇ ಬುಧವಾರದಿಂದ
ಪ್ರತಿ ದಿನ 3 ಪ್ರದರ್ಶನಗಳು
ಶ್ರೀ
ಆಂಡಾಳ್
(ತಮಿಳು)
ಮುಖ್ಯ ಭೂಮಿಕೆ.-
† ಇಷ್ಟವಾಣಿ U.R. ಜೀವರತ್ನಂ
† ಪಿ.ಎಸ್. ಗೋವಿಂದನ್
† ಕಾಳಿ ಎನ್. ರತ್ನಂ

ಶ್ರೀ
ಗಣೇಶಾ ಟಾಕೀಸ್
17—6—49 ರಿಂದ
ದಿನವಹಿ 3 ಆಟಗಳು
ತುಳಸಿ ಜಲಂಧರ್
(ತಮಿಳು)
—: ಭೂಮಿಕೆ :—
ಪಿ. ಯು. ಚಿನ್ನಪ್ಪ ಮತ್ತು ಕನ್ನಾಂಬ

ಲಕ್ಷ್ಮೀ ಥಿಯೇಟರ್
ಬೆಳಗಿನ ಪ್ರದರ್ಶನಗಳು
17-6-49ರಿಂದ 3 ದಿನಗಳು ಮಾತ್ರ
ಪ್ರಕಾಶ್‌ರವರ
ಭರತ್ ಮಿಲಾಪ್
[ಹಿಂದಿ]
ಪಾತ್ರ:-ಅರುಣ್, ಉಮಾಕಾಂತ್
ದುರ್ಗಾ ಖೋಟೆ

ಗುರುದೇವಾ ಹಾಲ್
(ಬೆಂಗಳೂರು ಜವಳಿ ಅಂಗಡಿ)
ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯುವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ .. ಮೈಸೂರು

D. Banumiah's College of Commerce, Mysore.

(Affiliated to the University of Mysore)

In continuation to the notification dated 12-6-49, the time for receiving admission to the Junior Inter Commerce Class is extended up to 18th June 1949 Application Forms can be had from the Office

B. V. Banumiah
Principal.

BANGALORE RACES 1949
ಜೂನ್ 18, 22, 25, 29 ಮತ್ತು ಜುಲೈ 2 ರಲ್ಲೂ
ಜೂನ್ 18 ಮಹಾರಾಜಾ ಗೋಲ್ಡ್ ಕಪ್ ಡೇ
ಬುಕ್ ಮೇಕರ್ಸ್ ಟೋಟಲೈಜೇಟರ್ಸ್
ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ. 2 ಸ್ವೀಪ್
ಪ್ರವೇಶ: ಮೊದಲನೇ ತರಗತಿ - ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ
ಎರಡನೇ ತರಗತಿ - ಪುರುಷರು ಅಥವಾ ಸ್ತ್ರೀಯರು ರೂ 2 ,

(ಶ್ರೀ ಸೀತಾರಾಮಾಯನಮಃ)
ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ಕಾಮಜ
ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು, ಮೊದಲಾಗಿ ಗುಣವಾಗುತ್ತವೆ
ವಿಳಾಸ ಬೆಲೆ ಶೀಸೆ 1ಕ್ಕೆ 2-0-0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನಿಮ್ಮ ಮೈ ಮೊಕಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತವೆ
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೧೭-೬-೪೯ [ಸಂಚಿಕೆ ೨೬೧

ಆಫ್ಘಾನಿಸ್ತಾನದ ಮೇಲೆ ದಂಡಯಾತ್ರೆ ಪ್ರಯತ್ನ

ಭಾರಿ ದರೋಡೆಕೋರನ ಬಂಧನ

ತಾನು ಎಲ್ಲಿಯೇ ಇದ್ದರೂ ಪ್ರತಿ ಶನಿವಾರವೂ ತನ್ನ ತಾಯಿಯ ದರ್ಶನವನ್ನು ಪಡೆದುಕೊಳ್ಳುವ ಪದ್ಧತಿಯನ್ನು ಇಟ್ಟುಕೊಂಡಿದ್ದುದೇ ಅಹಮದ್ ನಗರದ ಭಾರಿ ದರೋಡೆಕೋರನ ದಕಾಳು ಎಂಬುವನ ಬಂಧನಕ್ಕೆ ಕಾರಣವಾಗಿರುತ್ತದೆಯೆಂದು ವರದಿಯಾಗಿದೆ ೨೦೦ ಜನ ತನ್ನ ಸಹಚರರೊಡನೆ ಇವನು ಹಳ್ಳಿಹಳ್ಳಿಗಳಲ್ಲಿ ಕೊಳ್ಳೆ ಹೊಡೆದು ಗ್ರಾಮಾಂತರದವರಿಗೆ ಯಮಸ್ವರೂಪನಾಗಿದ್ದನು" ಗುಂಡಿನೇಟುಗಳೂ ಸಹ ಅವನ ಶರೀರವನ್ನು ಪ್ರವೇಶಿಸುತ್ತಿರಲಿಲ್ಲವೆಂದು ಹೇಳಲಾಗಿದೆ ಬಾಲ್ಯದಿಂದಲೂ ಇದೇ ವೃತ್ತಿಯಲ್ಲಿದ್ದು ಲಕ್ಷಾಂತರ ರೂ. ಗಳನ್ನು ಲೂಟಿ ಮಾಡಿ ತನ್ನ ಅನುಯಾಯಿಗಳಿಗೆ ತಲಾ ೫೦೦ ರೂ. ನಂತೆ ಹಂಚುತ್ತಿದ್ದನು ಇವನನ್ನು ಹಿಡಿದುಕೊಟ್ಟವರಿಗೆ ೨ ಸಾವಿರ ರೂ ಬಹುಮಾನ ಕೊಡುವುದಾಗಿ ಸರ್ಕಾರದವರು ಪ್ರಕಟಿಸಿದ್ದರು ಅವನ ಮೇಲ್ಕಂಡ ಪದ್ಧತಿಯನ್ನು ಪೋಲೀಸಿನವರು ಅರಿತು ಒಂದು ಶನಿವಾರ ರಾತ್ರಿ ಅವನ ಬಿಡಾರದ ಬಳಿ ಹೊಂಚು ಹಾಕಿ ಶಸ್ತ್ರಾಸ್ತ್ರಗಳ ಸಹಿತ ಒಂದು ಕಾಳಗವನ್ನೇ ನಡೆಸಿ ಕಡೆಗೆ ನಾಲ್ಕಾರು ಗುಂಡುಗಳಿಂದ ಅವನನ್ನು ಹೊಡೆದು ಬಂಧಿಸಿರುವರು ೫೬ ಜನರನ್ನು ಬೇಕಾದರೂ ತಾನೊಬ್ಬನೇ ಎದುರಿಸಬಲ್ಲೆನೆಂದು ಆತನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನು .

ವಿವಾಹ ಮಹೋತ್ಸವ

ಅ|| ವಿ|| ಹಿರೇಕ ಶಿವರಾಮಯ್ಯನವರ ಪುತ್ರರು ಶ್ರೀ ಅನಂತ ಪದ್ಮನಾಭರಾಯರಿಗೆ ಕೋಯಮತ್ತೂರಿನಲ್ಲಿರುವ ಶ್ರೀ ಶ್ರೀಕಂಠಯ್ಯನವರ ಪುತ್ರಿ ಚಿ|| ಸೌ|| ಜಯಮ್ಮನನ್ನೂ,

ರಾಜಧಾನಿಯ ಸಂತೇಪೇಟೆ ದಿನಸು ಮಂಡಿಯ ಶ್ರೀ ಲಕ್ಷ್ಮಣ್ಣನವರು ತಮ್ಮ ಪುತ್ರಿ ಸೌ|| ಲಕ್ಷ್ಮೀಬಾಯಿಯನ್ನು ಚಿತ್ರದುರ್ಗದ ಶ್ರೀ ಎಲ್. ಆರ್. ಕೃಷ್ಣಪ್ಪನವರ ಮಗ ಶ್ರೀ ಎಲ್. ಕೆ. ನಾರಾಯಣರಾವ್‌ರಿಗೆ ಕೊಟ್ಟು ಮೊನ್ನೆ ದಿನ ಹನುಮಂತರಾಯರ ಬೀದಿಯಲ್ಲಿರುವ ಅವರ ಮನೆಯಲ್ಲಿ ವಿವಾಹವನ್ನು ನೆರವೇರಿಸಿದರು.

ಷಾಂಗೈ ನಗರದ ಮೇಲೆ ಸರ್ಕಾರಿ ವಿಮಾನ ಧಾಳಿ

ಚೀಣದ ಷಾಂಗೈ ನಗರವು ಕಮ್ಯೂನಿಸ್ಟರ ವಶವಾದಮೇಲೆ ಮೊಟ್ಟಮೊದಲನೇದಾಗಿ ನಿನ್ನೆ ದಿನ ಅಲ್ಲಿನ ಲುಂಗ್ವ ವಿಮಾನ ನಿಲ್ದಾಣದಮೇಲೆ ಸರ್ಕಾರೀ ವಿಮಾನವು ಹೋಗಿ ಧಾಳಿ ನಡೆಸಿತು. ಧಾಳಿ ಶಬ್ದವು ನಗರದೊಳಗೆಲ್ಲಾ ಕೇಳಿಸುತ್ತಿತ್ತು.

ಸಂಗೀತ ಪರೀಕ್ಷೆಗಳ ಫಲಿತಾಂಶ

ರಾಜಧಾನಿಯಲ್ಲಿರುವ ಮೈಸೂರು ಸಹೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಲ್ಲಿ ಈ ವರ್ಷ ಸಂಗೀತ ಪರೀಕ್ಷೆಗಳಲ್ಲಿ ಸೀನಿಯರ್ ದರ್ಜೆಯಲ್ಲಿ ೭ ಜನ ವಿದ್ಯಾರ್ಥಿಗಳೂ, ಜೂನಿಯರ್ ದರ್ಜೆಯಲ್ಲಿ ೧ ಮಂದಿಗೆ ೮ ಜನ ... ಎಲ್. ಎಸ್ ಮತ್ತು ಎಸ್. ಎಸ್. ಎಲ್. ಸಿ ಪರೀಕ್ಷೆಗಳಲ್ಲಿ ಸಂಗೀತವನ್ನು ಐಚ್ಛಿಕವಾಗಿ ತೆಗೆದುಕೊಂಡವರಲ್ಲಿ ಶೇಕಡ ... ರಷ್ಟು ತೇರ್ಗಡೆಯಾಗಿದ್ದಾರೆ ... ಪ್ರೈವೇಟ್ ೭ ಜನರು ಮೊದಲನೇ ತರಗತಿಯಲ್ಲಿ ಉತ್ತೀರ್ಣರಾಗಿರುತ್ತಾರೆ

ಪೌರಸಭಾ ಸದಸ್ಯರನ್ನು ಹೊರಗೆ ಕಳುಹಿಸಲು ಪೋಲೀಸರು

ಮಧುರೆಯ ಪೌರಸಭೆಯು ಕಳೆದ ಮಂಗಳವಾರ ಸೇರಿದ್ದಾಗ, ನಗರದ ಬೀದಿಗಳಿಗೆ ಹೆಸರು ಇಡುವ ವಿಷಯವಾಗಿ ಅಧ್ಯಕ್ಷರಿಗೂ, ಸದಸ್ಯರೊಬ್ಬರಿಗೂ ಮಾತು ಬೆಳೆದು, ಸದಸ್ಯರು ಅಧ್ಯಕ್ಷರ ಮೇಲೆ ಹಲವು ಟೀಕೆಗಳನ್ನು ಮಾಡಿದರೆಂದೂ, ಅವನ್ನು ವಾಪಸು ತೆಗೆದುಕೊಳ್ಳಬೇಕೆಂದು ಸದಸ್ಯರಿಗೆ ಸೂಚನೆ ಕೊಟ್ಟರೂ ಸಹ ಅವರು ಹಾಗೆ ಮಾಡಲಿಲ್ಲವಾದುದರಿಂದ, ಅಧ್ಯಕ್ಷರು ಅವರನ್ನು ಹೊರಕ್ಕೆ ಕಳುಹಿಸಲು ಪೋಲೀಸರ ಸಹಾಯವನ್ನು ಕೇಳಿದರೆಂದೂ ಗೊತ್ತಾಗಿದೆ ಪೋಲೀಸರು ಬರುವುದರೊಳಗೆ, ಸದಸ್ಯರೇ ಸಭೆಯನ್ನು ಬಿಟ್ಟು ಹೋದರೆಂದು ವರದಿಯಾಗಿದೆ

ಇದೇ ೩೦ನೇ ತಾ|| ಮದ್ರಾಸ್ ಸಿನಿಮಾಗಳ ಮುಷ್ಕರ

ಪ್ರತಿಯೊಂದು ಸಿನಿಮಾ ಪ್ರದರ್ಶನದ ಮೇಲೂ ೨ ರಿಂದ ೫ ರೂ. ವರೆಗೆ ತೆರಿಗೆಯನ್ನು ಹಾಕಬೇಕೆಂದು ಸರ್ಕಾರದವರು ನಿರ್ಧರಿಸಿರುವುದನ್ನು ಪ್ರತಿಭಟಿಸಲು ಇದೇ ೩೦ನೇ ತಾ|| ಮದರಾಸ್ ಪ್ರಾಂತ್ಯದಲ್ಲಿ ಎಲ್ಲ ಸಿನಿಮಾ ಮಂದಿರಗಳನ್ನೂ ಮುಚ್ಚಬೇಕೆಂದು ನಿರ್ಧರಿಸಲಾಗಿದೆ

ಗೋವಾಕ್ಕೆ ಹೆಚ್ಚು ಪೋರ್ಚುಗೀಸ್ ಸೈನ್ಯ

ಗೋವಾದಲ್ಲಿ ಸೈನ್ಯದ ಸಂಖ್ಯೆಯನ್ನು ದಿನ ದಿನಕ್ಕೆ ಪೋರ್ಚುಗೀಸ್ ಸರ್ಕಾರದವರು ಹೆಚ್ಚಿಸುತ್ತಿರುವರೆಂದೂ, ಇತ್ತೀಚೆಗೆ ಹೊಸ ಸೈನ್ಯವನ್ನು ಕಳುಹಿಸಿದ್ದಾರೆಂದೂ, ಇದರಿಂದ ಅಲ್ಲಿನ ಜನರಿಗೆ ಗಾಬರಿ ಉಂಟಾಗಿದೆಯೆಂದೂ ಹೇಳಲಾಗಿದೆ

ಕಲ್ಕತ್ತದಲ್ಲಿ ೧೪೪ ನೇ ಕಲಂ ಜಾರಿ

ಕಲ್ಕತ್ತ ನಗರದಲ್ಲಿ ಇತ್ತೀಚೆಗೆ ಉಂಟಾದ ಬೊಂಬು ಸ್ಥಿತಿಯಿಂದ ಅಲ್ಲಿ ಅಶಾಂತಿ ಮತ್ತು ದೌರ್ಜನ್ಯಗಳು ಪ್ರಬಲಿಸಬಹುದೆಂದು ಭಾವಿಸಿ ಅಲ್ಲಿನ ನಗರ ಪೋಲೀಸ್ ಕಮೀಷನರು ನಿನ್ನೆಯಿಂದ ೧೫ ದಿನಗಳ ಕಾಲ ೧೪೪ನೇ ಕಲಮನ್ನು ಜಾರಿಮಾಡಿ ಮೆರವಣಿಗೆ, ಸಭೆ ಮತ್ತು ಇತರ ಪ್ರದರ್ಶನಗಳನ್ನು ಪ್ರತಿಬಂಧಿಸಿದ್ದಾರೆ

೧೯೫೦ರ ಜನವರಿ ವೇಳೆಗೆ ಮೈಸೂರು ರಾಜ್ಯಾಂಗ

[ಸ್ವಂ. ಸು ಪ್ರೋ] ಬೆಂಗಳೂರು ೧೭

ಪ್ರ|| ಪ್ರ|| ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಚುನಾಯಿತರಾಗಿರುವ ಶ್ರೀಗಳು ವಿ ವೆಂಕಟಪ್ಪ ಮತ್ತು ಟಿ. ಸಿ ಬಸಪ್ಪನವರ ಗೌರವಾರ್ಥವಾಗಿ ನೆನ್ನೆ ಶ್ರೀ|| ಬಸವಾರಾಧ್ಯರವರು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು ಆ ಸಂದರ್ಭದಲ್ಲಿ ಭಾಷಣ ಮಾಡುತ್ತಾ ಪ್ರಧಾನ ಮಂತ್ರಿ ಶ್ರೀ|| ಕೆ. ಸಿ ರೆಡ್ಡಿಯವರು ೧೯೫೦ರ ಜನವರಿ ವೇಳೆಗೆ ಭಾರತ ರಾಜ್ಯಾಂಗವು ಜಾರಿಗೆ ಬರುವ ಕಾಲಕ್ಕೆ ಮೈಸೂರಿನ ರಾಜ್ಯಾಂಗವೂ ಜಾರಿಗೆ ಬರುವುದೆಂದು ನುಡಿದರು

ಪ್ರಾಯೋಗಿಕ ಸಾಮೂಹಿಕ ವ್ಯವಸಾಯ

ಕೋಲಾರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಪ್ರಯೋಗಾರ್ಥವಾಗಿ ೧೦೦ ಎಕರೆ ಜಮೀನಿನಲ್ಲಿ ಸಾಮೂಹಿಕ ವ್ಯವಸಾಯವನ್ನು ನಡೆಸಲಾಗುವುದೆಂದು ಹೇಳಲಾಗಿದೆ

ಮದರಾಸಿನಲ್ಲಿ ದಾಸಪ್ಪನವರು

ಸಂಸ್ಥಾನದ ಕೈಗಾರಿಕಾ ಸಚಿವರಾದ ಶ್ರೀ|| ಎಚ್. ಸಿ ದಾಸಪ್ಪನವರು ನೆನ್ನೆ ದಿನ ಮದರಾಸಿನಲ್ಲಿ ಅಲ್ಲಿನ ಪ್ರಧಾನಿಗಳೊಡನೆ ಮೈಸೂರು ಮತ್ತು ಮದರಾಸ್ ಕ್ಕೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು ಕುರಿತು ಮಾತುಕತೆ ನಡೆಸಿದರು. ದಕ್ಷಿಣ ಭಾರತದಲ್ಲಿ ಕೆಮಿಕಲ್ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಅವರು ಮಾತುಕತೆ ನಡೆಸಿದರೆಂದೂ ತಿಳಿದು ಬಂದಿದೆ

ಮೈ ಸುಟ್ಟುಕೊಂಡು ಮಹಿಳೆಯರ ಮರಣ

ಬೆಂಗಳೂರು ನಗರದಲ್ಲಿ ಮೊನ್ನೆ ದಿನ ಇಬ್ಬರು ಮಹಿಳೆಯರು ಮೈಗೆ ಸೀಮೆ ಎಣ್ಣೆ ಸುರಿದು ಬೆಂಕಿ ಹತ್ತಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದು ವರದಿಯಾಗಿದೆ ಇವರಲ್ಲಿ ಒಬ್ಬಾಕೆಯು ಹೊಟ್ಟೆನೋವಿನಿಂದಲೂ ಮತ್ತೊಬ್ಬಳು ಕ್ಷಯ ರೋಗದಿಂದಲೂ ನರಳುತ್ತಿದ್ದರೆಂದು ತಿಳಿದುಬಂದಿದೆ

○ ಮೈಸೂರು ಜಿಲ್ಲೆಯಲ್ಲಿ ೩,೪೨,೩೮೩ ಪಲ್ಲ ಬತ್ತ ಮತ್ತು ೩೯,೨೧೩ ಪಲ್ಲ ರಾಗಿ ಇಲ್ಲಿಯವರೆಗೆ ಸಂಗ್ರಹವಾಗಿದೆಯೆಂದೂ ಮತ್ತು ಸಂಗ್ರಹದ ಗುರಿಯನ್ನು ಮೀರಲಾಗಿದೆಯೆಂದೂ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ

ಅಫ್ಘಾನಿಸ್ತಾನದ ಮೇಲೆ ಪಾಕಿಸ್ತಾನದ ಪಿತೂರಿಯೇ?

ಮೊಹಮೂದ್ ಎಂಬ ಗುಡ್ಡಗಾಡಿನ ಜನರನ್ನು ಕಟ್ಟಿಕೊಂಡು ಅಫ್ಘಾನಿಸ್ತಾನದ ಮೇಲೆ ಅಲ್ಲಿನ ಮಾಜಿ ದೊರೆ ಅಮಾನುಲ್ಲಾರವರ ಸಹೋದರರಾದ ಅಮೀನ್ ಜಾನ್ ಎಂಬುವರು ಪಾಕಿಸ್ತಾನದ ವಾಯುವ್ಯ ಸರಹದ್ದಿನಿಂದ ದಂಡಯಾತ್ರೆ ನಡೆಸಲು ಪ್ರಯತ್ನಿಸಿ ತಮ್ಮ ಸಹೋದರರ ಸಿಂಹಾಸನವನ್ನು ಹಿಂದಕ್ಕೆ ಪಡೆಯಲು ಪ್ರಯತ್ನಿಸಿದರೆಂದೂ, ಆದರೆ ಅವರು ಅಫ್ಘಾನಿಸ್ತಾನದ ಎಲ್ಲೆಯನ್ನು ಮುಟ್ಟುವುದರೊಳಗಾಗಿ ಅವರ ಅನುಯಾಯಿಗಳೆಲ್ಲರೂ ಮಾಯವಾಗಿದ್ದುದರಿಂದ ತಮ್ಮ ಪ್ರಯತ್ನವನ್ನು ತ್ಯಜಿಸಿದರೆಂದೂ ಪಾಕಿಸ್ತಾನದ ವಾರ್ತಾ ಸಂಸ್ಥೆಯು ವರದಿ ಮಾಡಿದೆ ಪಾಕಿಸ್ತಾನದ ಪ್ರಮುಖರು ಗುಡ್ಡಗಾಡಿನವರ ಮೇಲೆ ತಮ್ಮ ಪ್ರಭಾವವನ್ನು ಬೀರಿ ಈ ಪ್ರಯತ್ನವನ್ನು ತಪ್ಪಿಸಿದರೆಂದೂ ಸಹ ಸದರಿ ವರದಿಯು ತಿಳಿಸುತ್ತದೆ· ತಮ್ಮ ಸಹೋದರರು ಸಿಂಹಾಸನವನ್ನು ಕಳೆದುಕೊಂಡಂದಿನಿಂದ ಅಮೀನ್ ಜಾನರು ಸದರಿ ಗುಡ್ಡಗಾಡಿನವರೊಡನೆಯೇ ವಾಸಿಸುತ್ತಿರುವರೆಂದೂ ಹೇಳಲಾಗಿದೆ ಆದರೆ ಅಫ್ಘಾನಿಸ್ತಾನದಿಂದ ಬರುತ್ತಿರುವ ವರದಿಗಳು ಇದಕ್ಕೆ ವ್ಯತಿರೇಕವಾಗಿವೆ. ಪಾಕಿಸ್ತಾನವೇ ಮೇಲ್ಕಂಡ ದಂಡಯಾತ್ರೆಗೆ ಉತ್ತೇಜನ ಕೊಟ್ಟು ಧಾಳಿಕಾರರನ್ನು ಅಫ್ಘಾನಿಸ್ತಾನದ ಕಡೆಗೆ ಕಳುಹಿಸಿದೆಯೆಂದು ಅಪಾದಿಸಲಾಗಿದೆ

ಮಾದರಿ ಶಾಲೆಯ ಸ್ಥಾಪನಾ ದಿನಾಚರಣೆ

ಮೈಸೂರು. ೧೬

ರಾಜಧಾನಿಯ ಕೃಷ್ಣ ವಿಲಾಸ ರಸ್ತೆಯಲ್ಲಿರುವ ಮಾದರೀ ಶಾಲೆಯ ಸ್ಥಾಪನಾ ದಿನಾಚರಣೆಯು ನೆನ್ನೆ ಸಂಜೆ ಪೌರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಸಾಮೂಹಿಕ ವಂದನೆ, ಕೋಲಾಟ ಆದ ನಂತರ ... ಭಾರತಿಯಿಂದ ಪ್ರಾರ್ಥನೆಗಳಾದ ನಂತರ ಶಾಲಾಧ್ಯಕ್ಷ ಶ್ರೀ ಎಸ್ ರಂ. ... ರಿಂದ ಸ್ವಾಗತ ಭಾಷಣವಾಯಿತು. ಶ್ರೀ ಅರಕೆರೆ ನಾರಾಯಣರಾವ್ ಮತ್ತು ಪಾರ್ಟಿಯವರಿಂದ ಸಂಗೀತವು ನಡೆಯಿತು. ಶಾಲಾ ವರದಿಯು ಒಪ್ಪಿಸಲ್ಪಟ್ಟ ಮೇಲೆ ವಿಶ್ವ ಕರ್ನಾಟಕ ಪತ್ರಿಕೆಯ ಪ್ರತಿನಿಧಿಗಳಾದ ಶ್ರೀ ಕೆ ಅನಂತ ಸುಬ್ಬರಾಯರು "ಬಲವ" ಲಿಖಿತ ಪತ್ರಿಕೆಯನ್ನು ಪ್ರಕಾಶಪಡಿಸಿ ಭಾಷಣ ಮಾಡಿದರು. ಅಧ್ಯಕ್ಷರು ಸೂಕ್ತ ಸಲಹೆಗಳನ್ನು ಕೊಟ್ಟು ಶಾಲೆಯು ದೀರ್ಘಕಾಲ ನಡೆದು ಮಕ್ಕಳಿಗೆ ಉಪಯುಕ್ತವಾಗಲೆಂದು ಹಾರೈಸಿದರು. ವಂದೇ ಮಾತರಂ ಗೀತೆಯ ನಂತರ ಸಭೆ ಮುಕ್ತಾಯವಾಯಿತು.

ತುಮಕೂರಿನಲ್ಲಿ ಪ್ರಭುಗಳ ಪ್ರವಾಸ

ಬರುವ ಜುಲೈ ತಿಂಗಳು ಮೊದಲನೇ ವಾರದಲ್ಲಿ ಪ್ರಭುಗಳು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರೆಂದು ತಿಳಿದುಬಂದಿದೆ ಆಗ ಅವರು ತುಮಕೂರಿನಲ್ಲಿ ಹೊಸದಾಗಿ ಕಟ್ಟಲಾಗುವ ಕಾಲೇಜು ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸುವರೆಂದೂ ಹೇಳಲಾಗಿದೆ.

ಕಾಂಗ್ರೆಸ್ ನಾಯಕರ ಮನೆ ಸುಡಲು ಕಮ್ಯೂನಿಸ್ಟರ ಪ್ರಯತ್ನ

ಪಶ್ಚಿಮ ಬಂಗಾಳ ಪ್ರಾಂತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಸುರೇಂದ್ರ ಮೋಹನ ಘೋಷರ ಮನೆಯ ಮೇಲೆ ೩೦೦ ಜನ ಕಮ್ಯೂನಿಸ್ಟರು ನಿನ್ನೆ ರಾತ್ರಿ ಮುತ್ತಿಗೆ ಹಾಕಿ, ಮನೆಗೆ ಬೆಂಕಿಯನ್ನು ಹಾಕಲು ಪ್ರಯತ್ನಿಸಿ ಮತ್ತು ಬಾಂಬುಗಳನ್ನು ಎಸೆದರೆಂದೂ, ಅಕ್ಕಪಕ್ಕದ ಜನರನ್ನು ಹೊಡೆದು ತೀವ್ರ ಗಾಯಪಡಿಸಿದರೆಂದೂ ವರದಿಯಾಗಿದೆ. ಪ್ರಮುಖ ಕಾಂಗ್ರೆಸ್ ನಾಯಕರಾದ ಡಾ॥ ಪ್ರತಾಪ ಚಂದ್ರರಾಯ್‌ರವರ ಮನೆಯ ಮೇಲೂ ಧಾಳಿ ನಡೆಸಿ, ಅವರ ಬ್ಬಿಯವರ ಮೇಲೆ ಪ್ರಾಣಕಗಳನ್ನು ಎಸೆದು ಗಾಯಪಡಿಸಿದರೆಂದೂ ಹೇಳಲಾಗಿದೆ.

ಚಲಿಸುವ ಟಾಕೀಸುಗಳಿಗೆ ಮನರಂಜನೆ ತೆರಿಗೆ ಇಲ್ಲ

ಮುನಿಸಿಪಲ್ ಸರಹದ್ದಿಗೆ ೫ ಮೈಲಿ ದೂರದಲ್ಲಿ ಮತ್ತು ಖಾಯಂ ಸಿನಿಮಾ ಮಂದಿರಗಳಿಗೆ ಎರಡು ಮೈಲಿ ದೂರದಲ್ಲಿ ಸ್ಥಾಪಿಸಲ್ಪಡುವ ಚಲಿಸುವ ಸಿನಿಮಾಗಳಿಗೆ ಮನರಂಜನ ತೆರಿಗೆಯನ್ನು ವಜಾ ಮಾಡಬೇಕೆಂದು ಮದರಾಸಿನ ಶಾಸನ ಸಭೆಯ ಸ್ಥಾಯೀ ಸಮಿತಿಯವರ ಶಿಫಾರಿಸಿದ್ದಾರೆ.

ವಿಯಟ್‌ನಾಂ ಸಂಸ್ಥಾನದ ನೂತನ ದೊರೆಗಳು

ಅನ್ನಾಮಿನ ಮಾಜಿ ಚಕ್ರವರ್ತಿಗಳಾದ ಬಾವೊಡಾಯ್‌ರವರು ವಿಯಟ್‌ನಾಮ್ ಸಂಸ್ಥಾನದ ಅಧಿಪತಿಗಳಾಗಿ ಮೊನ್ನೆ ದಿನ ಅಧಿಕಾರವನ್ನು ವಹಿಸಿಕೊಂಡರು. ಸಂಸ್ಥಾನದ ಭವಿಷ್ಯ ರಾಜ್ಯಾಂಗವನ್ನು ಪ್ರಜೆಗಳೇ ನಿರ್ಧರಿಸಲು ಅವಕಾಶ ಕೊಡಲಾಗುವುದೆಂದು ದೊರೆಗಳು ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ೧೦೦೦ ಜನ ಖೈದಿಗಳನ್ನು ಬಿಡುಗಡೆ ಮಾಡಲಾಗಿದೆ.

ಪ್ರಭುದೇವಾ
ಟಾಕೀಸ್
1—4—4ರಿಂದ
ಪ್ರತಿ ದಿನ 3 ಪ್ರದರ್ಶನಗಳು
* ತಪಸ್ವಿ *
(ಹಿಂದಿ)
ಭೂಮಿಕೆ:- ಕೌಶಲ್ಯ, ಊರ್ಮಿಳ, ಪರೇಶ್ ಬ್ಯಾನರ್ಜಿ, ಅಜಿತ್, ಆರ್. ಪಿ. ಕಪೂರ್.

ಶ್ರೀ
ಗಣೇಶಾ ಟಾಕೀಸ್
17-6-49ರಿಂದ
ದಿನವಹಿ 3 ಆಟಗಳು
ತುಳಸಿ ಜಲಂಧರ್
(ತಮಿಳು)
—: ಭೂಮಿಕೆ :—
ಪಿ. ಯು. ಚಿನ್ನಪ್ಪ ಮತ್ತು ಕನ್ನಾಂಬ

ಆಹಾರ ಮತ್ತು ಪತ್ರಿಕೆಗಳಿಗೆ ಮಾರಾಟ ತೆರಿಗೆ ಇಲ್ಲ

ಬೇಯಿಸಿದ ಆಹಾರ, ವೃತ್ತಪತ್ರಿಕೆಗಳು, ತರಕಾರಿ, ಹಾಲು, ಮೀನು, ಮಾಂಸ ಮತ್ತು ಮೊಟ್ಟೆ, ಇವುಗಳ ಮೇಲೆ ಮಾರಾಟದ ತೆರಿಗೆಯನ್ನು ತಿರುವಾಂಕೂರು ಸರ್ಕಾರದವರು ಮನ್ನಾ ಮಾಡಿದ್ದಾರೆ.

ಕರೆನ್ನರಿಂದ "ದಂಗೆಕೋರ ಸರಕಾರ" ಸ್ಥಾಪನೆ

ಬರ್ಮಾ ಸರಕಾರದ ಮೇಲೆ ದಂಗೆಯೆದ್ದಿರುವ ಕರೆನ್ನರು "ಕರೇ ದಂಗೆ ಕೋರ ಮಂತ್ರಿ ಮಂಡಲ" ವನ್ನು ಸ್ಥಾಪಿಸಿರುವುದಾಗಿ ಕರೆನ್ನರ ರೇಡಿಯೋವು ಪ್ರಸಾರ ಮಾಡಿದೆ. ಸಾಪಾಗ್ಯೆ ಎಂಬುವರು ಇದರ ಮುಖ್ಯ ಮಂತ್ರಿಗಳಾಗಿದ್ದಾರೆಂದು ಗೊತ್ತಾಗಿದೆ.

೫೪ನೇ ವರ್ಷಕ್ಕೆ ಬಿ. ಎ.

೫೪ ವರ್ಷದ ವಿಶ್ವೇಶ್ವರ ತ್ರಿಯಂಬಕ ಎಂಬುವರು ಪುಣೆ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯಲ್ಲಿ ಈ ವರ್ಷ ತೇರ್ಗಡೆಯಾಗಿದ್ದಾರೆ.

ನ್ಯೂ ಒಪೆರಾ
ಟಾಕೀಸ್
ಪ್ರತಿ ದಿನ 3 ಆಟಗಳು
ತಾ॥ 17-6-49 ರಿಂದ
ಅಮೋಘವಾದ 7ನೇ ವಾರ
ವೇಲೈಕ್ಕಾರಿ
(ತಮಿಳು)
ಪಾತ್ರ:- ವಿ. ಎನ್. ಜಾನಕಿ, ಎಂ. ವಿ. ರಾಜಮ್ಮ, ಟಿ. ಎಸ್. ಬಾಲಯ್ಯ, ಗೋರೆರಾಜ್, ಲಲಿತ-ಪದ್ಮಿನಿ.

Edited, printed, and published by A.R Naga-rajan at the Sadhvi Press, D. Subbiah Road, Mysore.

ಪಠಾಣ ನಿಯೋಗದವರ ಮೇಲೆ ಲಾಠಿ ಪ್ರಯೋಗ

ಗಡಿನಾಡು ಪ್ರದೇಶದಲ್ಲಿರುವ ಮಲಕ್ಕಂಡಿನ ಬಳ ಪಠಾಣ ಜನರು ಅಲ್ಲಿನ ಮುಸ್ಲಿಂ ಲೀಗಿನ ಆಡಳಿತವನ್ನು ಸ್ಥಗಿಸಲಾರದೆ ಪೊಲಿಟಿಕಲ್ ಏಜೆಂಟರ ಬಳಿ ನಿಯೋಗ ಹೋದಾಗ ಅವರುಗಳ ಮೇಲೆ ಪೋಲೀಸರು ಕ್ರೂರವಾಗಿ ಲಾಠಿ ಪ್ರಯೋಗ ಮಾಡಿದರೆಂದೂ, ಇದರಿಂದ ಇಬ್ಬರು ಸತ್ತು ೬೦ ಜನರಿಗೆ ತೀವ್ರ ಗಾಯವಾಯಿತೆಂದೂ ವರದಿಯಾಗಿದೆ. ೪೦ ಜನರನ್ನು ದಸ್ತಗಿರಿ ಮಾಡಲಾಗಿದೆ.

Morning Shows at
CHAMUNDESWARI
TALKIES
From 17-6-49 for 3 days
Life of Emile Zola
-: Featuring :-
PAUL MUNI

D Banumiah's College of Commerce, Mysore.

—:o:—

(Affiliated to the University of Mysore)

In continuation to the notification dated 12-6-49, the time for receiving admission to the Junior Inter Commerce Class is extended up to 18th June 1949. Application Forms can be had from the Office

B. V. Banumiah
Principal.

ಗುರುದೇವಾ ಹಾಲ್
(ಬೆಂಗಳೂರು ಬನಶಿ ಅಂಗಡಿ)
ನಮ್ಮಲ್ಲಿ ಶುದ್ಧವಾದ ರೇಷ್ಮೆ ನಾಯಿರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ ಮೈಸೂರು

ಪ್ರಭಾ
18-6-49 ರಿಂದ
ಅಮೋಘ 2ನೇ ವಾರ
ದಿನವಹಿ 4 ಆಟಗಳು
ಮಧುಕರ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ
* ಬಜಾರ್ *
ಯಾಕೂಬ್, ಗೋಪ್, ನಿಗರ್ ಸುಲ್ತಾನ
ಶ್ಯಾಮ್

ಉಡ್ ಲ್ಯಾಂಡ್ಸ್ ಟಾಕೀಸ್
17-6-49 ರಿಂದ
ಅಮೋಘವಾದ 2ನೇ ವಾರ
ಪ್ರತಿ ದಿನ 4 ಆಟಗಳು

Dak Bungalow
* ಡಾಕ್-ಬಂಗಲೊ
ಪಾತ್ರ:- + ಸುರಯ್ಯ, + ಶಾಸ್ತ್ರಿ, + ಗೋಪ.

ಭಿಷಗ್ರತ್ನ ಶಾಸ್ತ್ರದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ಸಾವಿತ್ರಿ
ಗಂಡಸರ ಮತ್ತು ಹೆಂಗಸರ ಬಿಳುಪು, ಕೆಂಪು, ಪಿತ್ತ ಮೇಲೆ ಮೇಹದ ಮುಟ್ಟಿಗಳು, ಮೇಹ ವ್ರಣಗಳು ಸಹಿತ ಪರಿಹಾರ ಸ್ವಚ್ಛವಾಗಿ ಸೇವಿಸುವ ಔಷಧಿ
ಬೆಲೆ ಶೀಶೆ 1ಕ್ಕೆ 2-0-0
ವಿಳಾಸ
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪ್ರಭುದೇವಾ ಟಾಕೀಸ್ 18—6—49ರಿಂದ ಅಮೋಘ 4ನೇ ವಾರ
ಪ್ರತಿ ದಿನ 3 ಆಟಗಳು
ಸರಸ್ವತಿ ಟಾಕೀಸಿನವರ ಮಹೋನ್ನತ ಚಿತ್ರ
ದ್ರೌಪದಿ ವಸ್ತ್ರಾಪಹರಣ
(ತೆಲುಗು)
ಗಗ್ಗಯ್ಯ, ಕನ್ನಾಂಬ, ರಾಮತಿಲಕಂ, ಸಿ. ಎಸ್. ಆರ್. ಮುಂತಾದವರು ಪಾತ್ರ ವಹಿಸಿರುವ

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೧೮-೬-೪೯ [ಸಂಚಿಕೆ ೨೬೨

ಕಾಶ್ಮೀರ ಸಿಂಹಾಸನಕ್ಕೆ ಯುವರಾಜರ ನೇಮಕ

ರಾಜಾಸ್ಥಾನದ ಮಂತ್ರಿಗಳ ರಾಜೀನಾಮೆ ಇಲ್ಲ

ಹೊಸ ಚುನಾವಣೆಯು ರಾಜಾಸ್ಥಾನದ ನಡೆಯುವವರೆಗೆ ಅಲ್ಲಿನ ಮಂತ್ರಿ ಮಂಡಲ ಕೇಂದ್ರ ಸರಕಾರದ ಸಂಸ್ಥಾನ ಶಾಖೆ ಅಧೀನವಾಗಿರುವುದೆಂದು ಸರದಾರ್ ಪಟೇಲರು ತಿಳಿಸಿರುತ್ತಾರೆ. ಅಲ್ಲಿನ ಮಂತ್ರಿ ಮಂಡಲವು ಸ್ಥಳೀಯ ಕಾಂಗ್ರೆಸ್ಸಿಗೆ ಜವಾಬುದಾರಿಯಾಗಿಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ. ಕೆಲವು ದಿನಗಳ ಹಿಂದೆ ಅಲ್ಲಿನ ಕಾಂಗ್ರೆಸ್ಸು ಮಂತ್ರಿ ಮಂಡಲವು ರಾಜೀನಾಮೆ ಕೊಡಬೇಕೆಂದು ತೀರ್ಮಾನಿಸಿತ್ತು.

ಟಿಟೋರನ್ನು ತುಳಿಯಲು ನಿರ್ಧಾರ

ಯೂಗೋಸ್ಲೇವಿಯಾದ ಮಾರ್ಷಲ್ ಟಿಟೋರವರನ್ನು ತುಳಿಯುವ ಉದ್ದೇಶದಿಂದ ಯೂರೋಪಿನ ಕಮ್ಯೂನಿಸ್ಟ್ ಹಿಡಿತವಿರುವ ಎಲ್ಲ ರಾಜ್ಯಗಳೂ ಸೇರಿ ಆ ದೇಶದ ಮೇಲೆ ಆರ್ಥಿಕ ನಿರ್ಬಂಧವನ್ನು ಹಾಕಲು ನಿರ್ಧರಿಸಿರುವುದಾಗಿ ತಿಳಿದು ಬಂದಿದೆ. ಇದೇ ಅಲ್ಲದೆ ಆ ರಾಜ್ಯದೊಡನೆ ರಾಜತಾಂತ್ರಿಕ ಸಂಬಂಧವನ್ನೂ ಸಹ ಕಡಿದು ಹಾಕಲಾಗುವುದೆಂದು ಹೇಳಲಾಗಿದೆ.

ಭಾರತ ಸರಕಾರಕ್ಕೆ ಪತ್ರಿಕೆಗಳ ಮನವಿ

ವೃತ್ತ ಪತ್ರಿಕೆಗಳ ಮೇಲೆ ಜಾಹಿರಾತು ಮತ್ತು ಮಾರಾಟ ತೆರಿಗೆ ಹಾಕುವುದನ್ನು ನಿಲ್ಲಿಸಬೇಕೆಂದು ಪ್ರಾಂತೀಯ ಸರಕಾರಗಳಿಗೆ ಸೂಚನೆಯೀಯುವಂತೆ ಕೇಂದ್ರ ಸರಕಾರಕ್ಕೆ ಬೊಂಬಾಯಿಯಲ್ಲಿ ಸೇರಿದ್ದ ಭಾರತೀಯ ಮತ್ತು ಪೂರ್ವ ರಾಷ್ಟ್ರಗಳ ಪತ್ರಿಕಾ ಸಂಘದ ಸಮಿತಿಯು ಮನವಿ ಮಾಡಿದೆ

ಕಮ್ಯೂನಿಸ್ಟರ ಪತ್ರ ವ್ಯವಹಾರಗಳ ಮೇಲೆ ನಿರ್ಬಂಧ

ಅಮೇರಿಕದ ಪ್ರತಿನಿಧಿ ಸಭೆಯು ಒಂದು ಮಸೂದೆಯನ್ನು ಅಂಗೀಕರಿಸಿ, ಅಲ್ಲಿರುವ ಎಲ್ಲಾ ಕಮ್ಯೂನಿಸ್ಟ್ ಸಂಘಗಳೂ ಸಹ ನಡೆಸುವ ಪತ್ರ ವ್ಯವಹಾರಗಳಿಗೆ ಯಾವುದಾದರೂ ಗುರುತನ್ನು ತೊಡಗಿಸ ಹಾಕಿರಬೇಕೆಂದು ವಿಧಾಯಕ ಮಾಡಲಾಗಿದೆ. ತಪ್ಪಿದರೆ ೫೦೦೦ ಡಾಲರುಗಳ ದಂಡ ಮತ್ತು ಐದು ವರ್ಷ ಕಾರಾಗೃಹವಾಸವನ್ನು ವಿಧಿಸಲಾಗುವುದು.

ಕೇರಳ ಯೂನಿಯನ್ನಿಗೆ ಮದರಾಸ್ ಅಧಿಕಾರಿಗಳು

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ಯೂನಿಯನ್ನಿನ ಆಡಳಿತ ನಿರ್ವಹಣೆಗೆ ಮದರಾಸಿನಿಂದ ಅಧಿಕಾರಿಗಳನ್ನು ಎರವಲಾಗಿ ಕೊಡಬೇಕೆಂದು ಕೇಂದ್ರ ಸರ್ಕಾರದವರು ಕೋರಿರುವುದಾಗಿ ವರದಿಯಾಗಿದೆ.

ಭತ್ತದ ಪೈರನ್ನು ನಾಶಪಡಿಸುವ ಹೊಸ ಹುಳು

ಮಂಗಳೂರು ಜಿಲ್ಲೆಯ ಕಾಸರಗೋಡು, ಪುತ್ತೂರು ಮತ್ತು ಮಂಗಳೂರು ತಾಲ್ಲೂಕುಗಳಲ್ಲಿ ಅನೇಕ ಕಡೆ ಭತ್ತದ ಪೈರನ್ನು ನಾಶಪಡಿಸುವ ಲಕ್ಷಾಂತರ ಹೊಸ ಹುಳುಗಳು ಕಾಣಿಸಿಕೊಂಡಿವೆ. ಭತ್ತದ ಗಿಡದ ಬುಡ ಭಾಗವನ್ನೇ ಅವು ತಿಂದು ಹಾಕುವುದೆಂದು ಹೇಳಲಾಗಿದೆ.

ಹುಡುಗಿಯಿಂದ ಹುಡುಗನ ಅಪಹರಣ

ಕರಾಚಿಯ ೧೩ ವರ್ಷದ ಮುಸ್ಲಿಂ ತರುಣಿಯು ೧೮ ವರ್ಷದ ಯುವಕನೊಬ್ಬನನ್ನು ಅಪಹರಿಸಿದ ಪ್ರಸಂಗವು ವರದಿಯಾಗಿದೆ. ಆಕೆಯು ಆ ತರುಣನನ್ನು ಮೋಹಿಸಿ ತನ್ನನ್ನು ಮದುವೆಯಾಗುವಂತೆ ಆತನನ್ನು ಪ್ರೇರೇಪಿಸುತ್ತಿದ್ದಳೆಂದೂ ತರುಣನ ತಂದೆತಾಯಿಗಳು ಈ ವಿವಾಹಕ್ಕೆ ಸಮ್ಮತಿ ಸದಿರಲು ಆಕೆಯು ಉಪಾಯದಿಂದ ಅವನನ್ನು ರಾವಲ್ಪಿಂಡಿಗೆ ಕರೆದುಕೊಂಡು ಹೋದಳೆಂದೂ ಗೊತ್ತಾಗಿದೆ. ಪೋಲೀಸರಿಗೆ ದೂರು ಕೊಡಲಾಗಿ ಅವರು ಅವರಿಬ್ಬರನ್ನೂ ಪತ್ತೆ ಹಚ್ಚಿ ಕರಾಚಿಗೆ ಕರೆತಂದು ತನಿಖೆ ಕ್ರಮ ನಡೆಸುತ್ತಿದ್ದಾರೆ

ಪ್ರವಾಹದಿಂದ ೨೦ ಸಾವಿರ ಚೀಣೀಯರ ಸಾವು

ಚೀಣದ ಭತ್ತದ ಕಣಜವೆಂದು ಕರೆಯಲಾಗುತ್ತಿರುವ ಹುನಾನ್ ಪ್ರಾಂತ್ಯದಲ್ಲಿ ಅತಿಯಾದ ಪ್ರವಾಹವುಂಟಾಗಿ ೨೦ ಸಾವಿರ ಚೀಣೀಯರು ನೀರಿನ ಪಾಲಾದರೆಂದು ವರದಿಯಾಗಿದೆ. ಈ ಪ್ರವಾಹದ ವಿಷಯದಿಂದ ಕ್ಯಾಂಟನ್ ಕಡೆಗೆ ಚೀಣ ಕಮ್ಯೂನಿಸ್ಟರ ಮುನ್ನಡೆಯು ಸ್ವಲ್ಪ ನಿಧಾನವಾಗುತ್ತಿದೆಯೆಂದು ಹೇಳಲಾಗಿದೆ

ಬಾಂಬೆಸೆದ ತರುಣನ ದಸ್ತಗಿರಿ

ಈಜಿಪ್ಟ್ ದೇಶದ ಪ್ರತಿನಿಧಿ ಸಭೆಯ ಅಧ್ಯಕ್ಷ ಹಮೀದ್ ಗೌಡಾ ಬೇಯವರನ್ನು ಕೊಲ್ಲಲು ಅವರ ಮೇಲೆ ಹ್ಯಾಂಡ್ ಗ್ರೆನೇಡ್ ಬಾಂಬನ್ನು ಎಸೆದ ನಾಲ್ವರು ಯುವಕರ ಪೈಕಿ ಒಬ್ಬನು ದಸ್ತಗಿರಿಯಾಗಿದ್ದಾನೆ

ಕಲ್ಕತ್ತದ ಚುನಾವಣೆಯು ಮಹಾಜನರ ತೀರ್ಮಾನವಲ್ಲ

ಪಶ್ಚಿಮ ಬಂಗಾಳದ ಶಾಸನ ಸಭೆಯ ಉಪ ಚುನಾವಣೆಯಲ್ಲಿ ಶ್ರೀ ಶರತ್ ಚಂದ್ರ ಬೋಸರು ಚುನಾಯಿತರಾಗಿರುವುದನ್ನು ಪಂಡಿತ ನೆಹರೂರವರು ರಾಜ್ಯಾಂಗ ಸಭೆಯಲ್ಲಿ ನಿನ್ನೆ ಪ್ರಸ್ತಾಪಿಸಿ, ಅದು ಮಹಾ ಜನರ ಅಂತ್ಯ ಅಭಿಪ್ರಾಯವೆಂದು ಪರಿಗಣಿಸಬಾರದೆಂದು ಹೇಳಿರುತ್ತಾರೆ. ಅವರೂ ಪ್ರತಿಯೊಬ್ಬ ಕಾಂಗ್ರೆಸ್ಸಿನವರೂ ಜನರಲ್ಲಿ ಹೆಚ್ಚು ಸಂಪರ್ಕವನ್ನಿಟ್ಟುಕೊಳ್ಳಬೇಕೆಂದು ಕೋರಿರುತ್ತಾರೆ

ಸಿರಿಯಾ ಗಡಿ ಬಳಿ ಇರಾಕಿ ಸೈನ್ಯ ಶೇಖರಣೆ

ಇರಾಕಿನ ಮುಖ್ಯ ಮಂತ್ರಿ ನೂರಿ ಸೈಯದ್‌ರವರು ಇರಾಕ್-ಸಿರಿಯಾ ಗಡಿಯು ತಮ್ಮ ದೇಶದ ಭಾಗದಲ್ಲಿ ೫ ಸಾವಿರ ಸೈನ್ಯವನ್ನು ಶೇಖರಿಸಿರುವುದಾಗಿ ಸಿರಿಯಾ ಪತ್ರಿಕೆಗಳು ಹೇಳುತ್ತಿವೆ. ಸಿರಿಯಾದಲ್ಲಿರುವ ಬಿಡುಗಡೆ ಎಂಬ ಅರಬ್ ಜನರನ್ನು ಎತ್ತಿ ಕಟ್ಟುವ ಉದ್ದೇಶದಿಂದ ಅಥವಾ ಈಗ ನಡೆಯುತ್ತಿರುವ ಸಿರಿಯಾ-ಇಸ್ರೇಲ್ ಸಂಧಾನದಲ್ಲಿ ಸಿರಿಯಾದವರ ವರ್ತನೆಯನ್ನು ಶಕ್ತಿಹೀನ ಮಾಡುವುದಕ್ಕಾಗಿ ಈ ರೀತಿ ಸೈನ್ಯ ಶೇಖರಿಸಲಾಗಿದೆಯೆಂದು ಹೇಳಲಾಗಿದೆ

ನಗರ ವಿದ್ಯಾರ್ಥಿ ಕಾಂಗ್ರೆಸ್

ಕಲ್ಕತ್ತಾ ಉಪಚುನಾವಣೆಯಲ್ಲಿ ಅದ್ಭುತ ವಿಜಯಗಳಿಸಿದ ಶ್ರಿ ಶರಚ್ಚಂದ್ರ ಬೋಸರನ್ನು ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಪರವಾಗಿ ಕಾರ್ಯದರ್ಶಿಗಳಾದ ಅಂಬಳೆ ಶ್ರೀನಿವಾಸ ಮೂರ್ತಿಯವರು ಅಭಿನಂದಿಸಿ, ತ್ಯಾಗದ ಪ್ರತೀಕವಾದ ಬೋಸ್ ವಂಶಸ್ಥರ ವಿರುದ್ಧವಾಗಿ ಕಾಂಗ್ರೆಸ್ ಸ್ಪರ್ಧಿಸಿದುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುವ ಪತ್ರವೊಂದನ್ನು ಬರೆದಿರುತ್ತಾರೆ.

ಇಂಟರ್ಮೀಡಿಯೇಟ್ ಪರೀಕ್ಷೆ

ಮುಂದಿನ ಸೆಪ್ಟೆಂಬರ್ ತಿಂಗಳಲ್ಲಿ ಇಂಟರ್‌ಮೀಡಿಯೇಟ್ ಪರೀಕ್ಷೆಗಳನ್ನು ನಡೆಸುವುದಾಗಿ ಸರ್ಕಾರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಗಿರಿಜ ಕಲ್ಯಾಣ

ನಂಜನಗೂಡಿನಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಯುಕ್ತ ೨-೭-೪೯ ರಲ್ಲು ಕಾಶಿಯಾತ್ರೆ ಉತ್ಸವ, ೬-೭-೪೯ ನೇ ರಾತ್ರಿ ಪಲ್ಲಕ್ಕಿ ಉತ್ಸವ, ೬-೭-೪೯ ರಿಂದ ೩ ದಿವಸ ತೆಪ್ಪೋತ್ಸವ ೮-೭-೪೯ ರಲ್ಲು ತೆಪ್ಪೋತ್ಸವವಾದ ನಂತರ ಶಯನೋತ್ಸವವೂ ನಡೆಯುತ್ತವೆ

ಹರಿಕಥೆ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿ ಶ್ರಿ ಕಮಲಾಂಬಾ ನಿಲಯದ ಪ್ರಾಂಗಣದ ಚಪ್ಪರದಲ್ಲಿ ನಾಳೆ ಸಾಯಂಕಾಲ ೬ ಗಂಟೆಗೆ ಮ॥ ಮುಳಬಾಗಿಲು ನಾರಾಯಣದಾಸರಿಂದ ಸಂತ ಸಕ್ಕೂಬಾಯಿ ಎಂಬ ಹರಿಕಥೆ ನಡೆಯುತ್ತೆ.

ಕಾಶ್ಮೀರದ ಯುವರಾಜರಿಗೆ ಮಹಾರಾಜರ ಅಧಿಕಾರ

ಕಾಶ್ಮೀರದ ಯುವರಾಜರಾದ ಶ್ರೀ ಕರಣ್‌ಸಿಂಗ್‌ರವರು ನಾಳಿದ್ದು ಶ್ರೀನಗರಕ್ಕೆ ತೆರಳಿ ಅಲ್ಲಿ ಹಂಗಾಮಿ ಮಹಾರಾಜರಾಗಿ ಅಧಿಕಾರ ಸ್ವೀಕರಿಸುವರೆಂದೂ ಮತ್ತು ಈಗಿನ ಮಹಾರಾಜರು ವಿದೇಶ ಪ್ರವಾಸ ಕೈಗೊಳ್ಳುವರೆಂದೂ ವರದಿಯಾಗಿದೆ

ಮದರಾಸ್ ಹೋಟೇಲುಗಳಿಗೆ ಮಾರಾಟದ ತೆರಿಗೆ ಕಡಿಮೆ

ಮದರಾಸಿನಲ್ಲಿ ೧೦ ಸಾವಿರದಿಂದ ೨೫ ಸಾವಿರದವರೆಗೆ ವ್ಯಾಪಾರ ನಡೆಸುವ ಹೊಟೇಲುಗಳಿಗೆ ರೂಪಾಯಿಗೆ ೩ ಕಾಸಿನಂತೆಯೂ, ೨೫ ಸಾವಿರಕ್ಕೆ ಮೇಲ್ಪಟ್ಟು ವ್ಯಾಪಾರ ನಡೆಸುವ ಹೊಟೇಲುಗಳಿಗೆ ರೂಪಾಯಿಗೆ ೪॥ ಕಾಸಿನಂತೆಯೂ ವ್ಯಾಪಾರದ ತೆರಿಗೆಯನ್ನು ಹಾಕಬೇಕೆಂದು ಉಪಸಮಿತಿಯು ತೀರ್ಮಾನಿಸಿದೆ ಮತ್ತು ಹತ್ತಿಯ ಮೇಲಿನ ತೆರಿಗೆಯನ್ನು ರೂ ೧ಗೆ ೩ ಕಾಸಿನಿಂದ ೧ ಕಾಸಿಗೆ ಇಳಿಸಬೇಕೆಂದೂ ಸಲಹೆ ಮಾಡಿದೆ.

○ ಮದರಾಸ್ ಶಾಸನ ಸಭೆಯು ನೇಮಿಸಿದ್ದ ಉಪ ಸಮಿತಿಯವರು ಸಿನಿಮಾ ಪ್ರದರ್ಶನಗಳ ಮೇಲೆ ವಿಧಿಸಬೇಕೆಂದಿದ್ದ ತೆರಿಗೆಯನ್ನು ಶೇಕಡ ೫೦ ರಷ್ಟಕ್ಕೆ ಇಳಿಸಲು ನಿರ್ಧರಿಸಿದ್ದಾರೆ

ಅಕ್ಯಾಬಿಗೆ ಆಕ್ರಮಣದ ಭಯ

ಪಶ್ಚಿಮ ಬರ್ಮದ ಅರಕಾನ್ ತೀರಪ್ರದೇಶದಲ್ಲಿ ದಂಗೆಕೋರರು ಎರಡು ಮುಖ್ಯ ಪಟ್ಟಣಗಳನ್ನು ಆಕ್ರಮಿಸಿರುವರೆಂದು ವರದಿಯಾಗಿದೆ. ಅಕ್ಯಾಬ್ ರೇವುಪಟ್ಟಣವನ್ನು ರಕ್ಷಿಸಲು ಅಲ್ಲಿಗೆ ಹೆಚ್ಚು ಹೆಚ್ಚಾಗಿ ಸರ್ಕಾರಿ ಸೈನ್ಯಗಳನ್ನು ಕಳುಹಿಸಲಾಗಿದೆ.

ಹಿಂಸಾ ಕೃತ್ಯಗಳ ಪ್ರತಿಭಟನೆಗಾಗಿ ಆದಿರಾಜಯ್ಯನವರ ಉಪವಾಸ

ಮಾಗಡಿ ತಾಲ್ಲೂಕು ಮಾಯಸಂದ್ರದ ಸುತ್ತುಮುತ್ತಲ ಹಳ್ಳಿಗಳಲ್ಲಿ ಕೆಲವು ದಿನಗಳ ಹಿಂದೆ ನಡೆದ ಹಿಂಸಾಕೃತ್ಯಗಳಿಗೆ ಕಾರಣರಾದವರ ಹೃದಯ ಪರಿವರ್ತನೆಯಾಗಲೆಂಬ ಉದ್ದೇಶದಿಂದ ಅಲ್ಲಿನ ಸುಪ್ರಸಿದ್ಧ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಆದಿರಾಜಯ್ಯನವರು ಹನ್ನೊಂದು ದಿನಗಳ ಉಪವಾಸ ವ್ರತವನ್ನು ಕೈಗೊಂಡು, ಈಗಾಗಲೇ ಏಳು ದಿನಗಳು ಉಪವಾಸ ಮಾಡಿರುತ್ತಾರೆ. ತೋಟಗಳ ಲೂಟಿ, ಸ್ತ್ರೀಯರ ಮಾನ ಭಂಗ ಮತ್ತು ಇತರ ಹಿಂಸಾ ಕೃತ್ಯಗಳು ನಡೆದುದಕ್ಕಾಗಿ ಉಪವಾಸವನ್ನು ಅವರು ಮಾಡುತ್ತಿರುವರು.

ಎ. ಎಂ. ಸಿ. ಸಿ. ಅಧಿವೇಶನ

ಧ್ವಜಾರೋಹಣ ಸಮಾರಂಭ

ಸ್ವಂ ಸು ತಂತಿ| ತುಮಕೂರು ೧೮

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನದ ಅಂಗವಾಗಿ ಈ ದಿನ ಬೆಳಿಗ್ಗೆ ಧ್ವಜಾರೋಹಣ ಸಮಾರಂಭವು ಜರುಗಿತು. ಶ್ರೀ ಟಿ. ಸಿದ್ದಲಿಂಗಯ್ಯನವರು ರಾಷ್ಟ್ರಧ್ವಜವನ್ನೂ, ಸ್ವಾಗತಾಧ್ಯಕ್ಷರಾದ ಶ್ರೀ ಬಿ. ಸಿ ನಂಜುಂಡಯ್ಯನವರು ಮೈಸೂರು ಧ್ವಜವನ್ನೂ ಹಾರಿಸಿದರು. ಸಾಯಂಕಾಲ ಅಧಿವೇಶನವು ಸೇರುವುದು. ಮುಖ್ಯ ಮಂತ್ರಿಗಳೂ ಇತರ ಕಾಂಗ್ರೆಸ್ ನಾಯಕರೂ ಬಂದಿರುವರು. ಅಧಿವೇಶನದ ಕಾರ್ಯ ಕಲಾಪಗಳು ಬಹಳ ಬಿರುಸಿನಿಂದ ನಡೆಯುವ ನಿರೀಕ್ಷಣೆ ಇದೆ. ಸಭೆಯಲ್ಲಿ ಹಲ ಮಹತ್ವದ ನಿರ್ಣಯಗಳು ಚರ್ಚೆಗೆ ಬರಲಿವೆ.

ಕುದುರೆ ಜೂಜಿನ ಪುಸ್ತಕ ಗಳ ಮೇಲೆ ಪ್ರತಿಬಂಧಕ

ಕುದುರೆ ಜೂಜಿಗೆ ಸಂಬಂಧಿಸಿದ ಪುಸ್ತಕಗಳು, ಟಿಪ್ಪಣಿಗಳು, ಸೂಚನೆ ಮುಂತಾದ ಜೂಜಿಗೆ ಸಂಬಂಧಪಟ್ಟ ಎಲ್ಲ ಗ್ರಂಥಗಳ ಮಾರಾಟವನ್ನೂ ಜೂಜು ಮೈದಾನಗಳ ಹೊರಗಡೆ ನಿಷೇಧಿಸುವ ವಿಷಯವು ಬೊಂಬಾಯಿ ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದು ಗೊತ್ತಾಗಿದೆ

ರಾಜಕಮಲ್
ಮೈ ಸೂ ರು
17—6—49 ರಿಂದ
ಅನೋಖಾ ಪ್ರಾರಂಭ
ಪ್ರತಿ ದಿನ 3 ಆಟಗಳು
ಸಾಲ್ ಗಿರಾ
(ಹಿಂದಿ)
ಮುಖ್ಯ ಪಾತ್ರ:—
ಜೈರಾಜ್, ಸ್ನೇಹಪ್ರಭಾ

Morning Shows
From 17-6-49 For 4 days
UNCLE SILAS
With —
Kejean Simmons
Katina Paxinou

Morning Shows at
CHAMUNDESWARI
TALKIES
From 17 6-49 for 3 days
Life of Emile
Zola
– Featuring
Paul Muni

ವಿವಾಹ ಮಹೋತ್ಸವಗಳು

ಶಿವಮೊಗ್ಗದ ರಿ ... ದೂರಾದು ... ನವರ ... ಶ್ರೀ ಬಿ ಎಂ ... ಲಲಿತಮ್ಮ ... ನಾರಣಪ್ಪನವರ ... ಗೋಪಾಲ ... ಕೊಟ್ಟು ... ಮೈಸೂರಿನಲ್ಲಿ ವಿವಾಹ ಮಹೋತ್ಸವವು ಜರುಗಿತು

... ಕುದುರೆ ... ಶ್ರೀ|| ಮುನಿಯಪ್ಪನವರ ಕುಮಾರ ಶ್ರೀ ಎಂ ಎನ್ ಸ್ವಾಮಿ ಯವರಿಗೆ ಗುಂಡ್ಲುಪೇಟೆ ತಾಲ್ಲೂಕು ಚಿಕ್ಕಾಟಿಯ ಶ್ರೀ ಸಿ ಜಿ ಗುಂಡಪ್ಪನವರ ಕುಮಾರಿ ಚಿ|| ಸೌ|| ಸಿದ್ದಮ್ಮನವರನ್ನು ಕೊಟ್ಟು ಪೊನ್ನ ನಂಜನಗೂಡಿನಲ್ಲಿಯೂ,

ಬೆಂಗಳೂರು ವಿಶ್ವಕರ್ಣಾಟಕ ಪತ್ರಿಕಾ ಸಂಪಾದಕರಾದ ಶ್ರೀ ಎ ಎಸ್ ವೆಂಕೋಬರಾಯರ ಸಹೋದರರು ಶ್ರೀ|| ಎ ಎಸ್ ನಾಗರಾಜರಾಯರಿಗೆ ನಿವೃತ್ತ ಶಿರಸ್ತೇದಾರ್ ಶ್ರೀ|| ಎಸ್ ವೆಂಕೋಬರಾಯರ ಪುತ್ರಿ ಚಿ|| ಸೌ|| ಗಿರಿಜಾಬಾಯಿಯನ್ನು ಕೊಟ್ಟು ಬೆಂಗಳೂರಿನಲ್ಲೂ ಇತ್ತೀಚೆಗೆ ವಿವಾಹ ಮಹೋತ್ಸವಗಳು ಜರುಗಿದುವು

ಗುರುದೇವಾ ಹಾಲ್
(ಬೆಂಗಳೂರು ಜವಳಿ ಅಂಗಡಿ)
ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ
ಶಿವರಾಂಪೇಟೆ ಮೈಸೂರು

Edited, printed, and published by A R. Nagarajan at the Sadhvi Press, D Subbiah Road, Mysore.

ಬಂದೀಖಾನೆಯನ್ನು ಆಸ್ಫೋಟನೆ ಮಾಡಲು ಪ್ರಯತ್ನ

ಕೊಲಂಬೋದಿನ ವೆಲಿಯೇರ್ ಬಂದೀಖಾನೆಯ ಕೋಣೆಗಳಲ್ಲಿ ಗುಂಡಿನಿಂದ ಬಾದು ಮಾಡಲ್ಪಟ್ಟ ಒಂದು ಮಾರಗಳನ್ನೂ, ಡೈನಾಮೈಟುಗಳನ್ನೂ ಇಟ್ಟು ಅದನ್ನು ಆಸ್ಫೋಟನೆ ಮಾಡಲು ನಡೆದಿದ್ದ ಪ್ರಯತ್ನವನ್ನು ಶಸ್ತ್ರಸಜ್ಜಿತರಾದ ಪೋಲೀಸಿನವರು ಸಕಾಲದಲ್ಲಿ ಅರಿತು ಆಘಾತವನ್ನು ತಪ್ಪಿಸಿದರೆಂದು ವರದಿಯಾಗಿದೆ ಇದ್ದೇ ಸಮಯದಲ್ಲಿ ಬಾಂಬುಗಳಿಂದ ತುಂಬಲಾಗಿದ್ದ ಒಂದು ಮೋಟಾರು ಕಾರನ್ನೂ ಸಹ ಜೈಲಿನ ಹೊರಬಾಗಿಲಿನಲ್ಲಿ ಜಪ್ತಿ ಮಾಡಲಾಗಿದೆ. ಇಬ್ಬರು ಆ ಹರ್ಟ್ರಿಯಲ್ ಖೈದಿಗಳನ್ನು ಈ ಸಂಬಂಧವಾಗಿ ವಿಚಾರಣೆಗೆ ಗುರಿಪಡಿಸಲಾಗಿದೆ

ಮನೆ ಬಾಡಿಗೆಗೆ ಇದೆ
ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ಮಾದರಿ ಮನೆ ನಂಬರ್ ೬೫. ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ
ಸಾಧ್ವಿ ಆಫೀಸ್,
ಮೈಸೂರು

ಕಮ್ಯೂನಿಸ್ಟ್ ಚೀಣದ ವಿರುದ್ಧ ದಂಗೆ ಅನಿವಾರ್ಯ

ಕ್ಯಾಂಟನ್ನಿನಲ್ಲಿರುವ ಚೀಣೀ ರಾಷ್ಟ್ರೀಯ ಸರ್ಕಾರದ ಸಚಿವರಾದ ಜ|| ವೂ ಟಿ ಚೆರವರು ಒಂದು ಹೇಳಿಕೆಯನ್ನಿತ್ತು—ಕಮ್ಯೂನಿಸ್ಟ್ ಆಕ್ರಮಿತ ಚೀಣದಲ್ಲಿ ಪ್ರಜೆಗಳಿಗೆ ಬಹಳ ಮಟ್ಟಿಗೆ ಅತೃಪ್ತಿಯುಂಟಾಗಿದೆಯೆಂದೂ, ಅಲ್ಲಿನ ಪ್ರಜೆಗಳು ಶೀಘ್ರದಲ್ಲೇ ಕಮ್ಯೂನಿಸ್ಟ್ ಸರ್ಕಾರದ ವಿರುದ್ಧವಾಗಿ ದಂಗೆ ಏಳಬಹುದೆಂದೂ ತಿಳಿಸಿದರೆ

ಮಂಚೂರಿಯಾದಲ್ಲಿ ಕಮ್ಯೂನಿಸ್ಟರು ಅನೇಕ ವೈಮಾನಿಕರನ್ನು ತರಪೇತು ಮಾಡುತ್ತಿದ್ದಾರೆಂದೂ. ರಷ್ಯವು ಕಮ್ಯೂನಿಸ್ಟ್ ಚೀಣಾ ಸರ್ಕಾರಕ್ಕೆ ಮಾನ್ಯತೆ ಕೊಟ್ಟು ಚೀಣದಲ್ಲಿ ಒಂದು ಬಲವಾದ ಕಮ್ಯೂನಿಸ್ಟ್ ವಿಮಾನ ಪಡೆಯನ್ನು ಸ್ಥಾಪಿಸಲು ಸಹಾಯ ನೀಡುವುದೆಂದೂ ಹೇಳಲಾಗಿದೆ

TUTORIAL CLASS
SARADA VILAS COLLEGE
MYSORE
Classes have begun
Working hours:–
Morning 7-30 to 9-30

ಪ್ರಭಾ 18-6-49 ರಿಂದ
ಅನೋಖಾ 2ನೇ ವಾರ
ದಿನವಹಿ ೩ ಆಟಗಳು
ಮಧುಕರ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ
ಬಜಾರ್
ಯಾಕೂಬ್, ಗೋಪ್, ನಿಗರ್ ಸುಲ್ತಾನ
ಶ್ಯಾಮ್

ಶ್ರೀ ಗಾಯತ್ರೀ ಟಾಕೀಸ್
18-6-49ರಿಂದ (ಪ್ರತಿ ದಿನ ೩ ಪ್ರದರ್ಶನಗಳು) ೫ ದಿನಗಳು ಮಾತ್ರ
ಆನ್ ಎನ್ ಐಲೆಂಡ್ ವಿತ್ ಯು
ಎಂ ಜಿ ಎಂ ರವರ ಅಪೂರ್ವ ವರ್ಣರಂಜಿತ ಚಿತ್ರ
On an Island with you
ಪಾತ್ರ - ಎಸ್ತರ್ ವಿಲಿಯಂಸ್
ಬೇಗನೆ ಪ್ರದರ್ಶನ ಈ ದಿನ ಮತ್ತು ನಾಳೆ
ದೆ ಸ ಟ ನ ಫ್ಯೂರಿ (ವರ್ಣ-ಚಿತ್ರ)

ಉಡ್‌ಲ್ಯಾಂಡ್ಸ್ ಟಾಕೀಸ್
17-6-49 ರಿಂದ
ಅನೋಖಾವಾದ 2ನೇ ವಾರ
ಪ್ರತಿ ದಿನ ೩ ಆಟಗಳು

ಡಾಕ್-ಬಂಗಲೊ
ಪಾತ್ರ:- † ಸುರಯ್ಯ, † ವಾಸ್ತಿ, † ಗೋಪ್.

ಪ್ರಭುದೇವಾ ಟಾಕೀಸ್
19-6-49ನೇ ಭಾನುವಾರದಿಂದ ಪ್ರಾರಂಭ
ಪ್ರತಿದಿನ ೩ ಪ್ರದರ್ಶನಗಳು
ತ ಪ ಸ್ಯೆ
ಪ್ರಕಾಶ್ ರವರ ಹಿಂದಿ ಚಿತ್ರ
ಪಾತ್ರ: ಕೌಶಲ್ಯ, ಸುಲೋಚನ, ಸರ್ದಾರ್ ಅಖ್ತರ್, ಜಜಿತ್, ಆರ್. ಪಿ. ಕಪೂರ್. ರಣಜಿತ್ ರಾಯ್ ಮುಂತಾದವರು

|| ಶ್ರೀ ಸೀತಾರಾಮಚಂದ್ರಾಯನಮಃ ||
ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು
ವೈದ್ಯೋಪಾನಕ
ಸೂತಿಕಾವಾತಕ್ಕೆ [ಬಾಣಂತಿ ನಂಜಿಗೆ] ಉತ್ತಮ ಗುಣಕಾರಿ
ಕಿಬ್ಬೊಟ್ಟೆ ನೋವು, ಹೊಟ್ಟೆ ಉಬ್ಬರ ತಿನ್ನಲಾಗದಂತೆ ಆಗುವುದು. ನಿದ್ದೆ ಬಾರದಿರುವಿಕೆ, ಮನಸ್ಸಿಗೆ ಕಳವಳ. ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರ ವಿಳಾಸ.— ಬೆಲೆ ಶೀಸೆ 1ಕ್ಕೆ 2-0 0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೧೯-೬-೪೯ [ಸಂಚಿಕೆ ೪೨

ಸರದಾರ್ ಪಟೇಲರ ರಾಜೀನಾಮೆಯೋ ?

ರಾಜಾಜಿಯವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ

ಸೆನೆಟ್ ಸಭೆಯಲ್ಲಿ ತೀರ್ಮಾನ

ಮೈಸೂರು ೧೯

ನೆನ್ನೆ ದಿವಸ ನಡೆದ ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ, ಭಾರತದ ಗವರ್ನರ್ ಜನರಲ್ಲರಾದ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಕೊಡಬೇಕೆಂದೂ, ಅದಕ್ಕಾಗಿ ಒಂದು ವಿಶೇಷ ಘಟಿಕೋತ್ಸವ ಸಮಾರಂಭವನ್ನು ಏರ್ಪಡಿಸಬೇಕೆಂದೂ ಶ್ರೀ ಎಂ ಪಿ ಎಲ್. ಶಾಸ್ತ್ರಿಯವರು ತಂದಿದ್ದ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು

ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿ. ಎಚ್. ಡಿ ಡಿಗ್ರಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಬೇಕೆಂದು ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್ಯರು ಒಂದು ನಿರ್ಣಯವನ್ನು ತಂದಿದ್ದರು. ಅದನ್ನು ಅಕಾಡೆಮಿಕ್ ಕೌನ್ಸಿಲ್ಲಿನ ಪರಿಶೀಲನೆಗೆ ಹಾಕಲಾಯಿತು

ಚಿತ್ರದುರ್ಗದಲ್ಲಿ ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಪಿಸಬೇಕೆಂದು ಶ್ರೀ ವಿ ಎಲ್. ಗೋವಿಂದರೆಡ್ಡಿಯವರು ತಂದಿದ್ದ ನಿರ್ಣಯವು ಮಂಜೂರಾಯಿತು.

ವಿಶ್ವವಿದ್ಯಾಲಯದಲ್ಲಿ ಡಿಪ್ಲೊಮಾ ಇನ್ ಸೈಟ್ರೀರಿಯರ್‌ಷಿಪ್ ಎಂಬ ಶಿಕ್ಷಣ ಕ್ರಮವನ್ನು ಜಾರಿಗೆ ತರಬೇಕೆಂದೂ ಮತ್ತು ಬೆಂಗಳೂರಿನಲ್ಲಿ ಬಿ ಕಾಂ ಕೋರ್ಸಿನಲ್ಲಿ ಸ್ಟೆನೋಗ್ರಾಫಿಯನ್ನು ದ್ವಿತೀಯ ಭಾಷೆಯನ್ನಾಗಿ ಇಟ್ಟಿರುವುದನ್ನು ತೆಗೆದು ಹಿಂದಿಯನ್ನು ಸೇರಿಸಬೇಕೆಂದೂ ತೀರ್ಮಾನಿಸಲಾಯಿತು.

ಸೆನೆಟ್ ಸಭೆಯ ಸದಸ್ಯರಾದ ಶ್ರೀ ಬಿ ಟಿ ಬಸಪ್ಪಶೆಟ್ಟರು ಪ್ರ॥ಪ್ರ॥ ಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾಗಿರುವ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯ ಮಾಡಲಾಯಿತು

ಬರುವ ವರ್ಷಕ್ಕಾಗಿ ಸರ್ಕಾರದವರು ವಿಶ್ವ ವಿದ್ಯಾಲಯಕ್ಕೆ ೪೭ ಲಕ್ಷ ರೂ ಮಂಜೂರು ಮಾಡಿರುವರೆಂದೂ ಈ ಮೈಸೂರು ಕಲಾ ಕಾಲೇಜಿಗೆ ೧ ಲಕ್ಷ ರೂ ಕೊಡಬೇಕೆಂದು ವಿಶ್ವವಿದ್ಯಾಲಯದವರು ಆಲೋಚಿಸಿದ್ದುದನ್ನು ಸರ್ಕಾರದವರು ಮಂಜೂರು ಮಾಡಲಿಲ್ಲವೆಂದೂ ವೈಸ್ ಛಾನ್ಸಲರು ತಿಳಿಸಿದರು ಅಪರ ಶ್ರೀ ಮದ್ಯನರಾಜರವರ ಸ್ಮಾರಕ ನಿಧಿಗೆ ಇದು ವರೆಗೆ ೩ ಲಕ್ಷ ರೂ ವಸೂಲಾಗಿವೆಯೆಂದೂ ಅದನ್ನು ಮೇಲ್ಕಂಡ ಕಾಲೇಜಿಗೆ ವಿನಿಯೋಗಿಸಬಹುದೆಂದೂ ತೀರ್ಮಾನಿಸಲಾಯಿತು

ದಾವಣಗೆರೆಯಲ್ಲಿ ಈ ವರ್ಷದಿಂದ ಇಂಜಿನಿಯರಿಂಗ್ ಕಾಲೇಜನ್ನು ಆರಂಭಿಸಲು ಅವಶ್ಯಕವಾದ ಸಲಕರಣೆಗಳಿಲ್ಲದಿರುವುದರಿಂದ ಅದು ಸಾಧ್ಯವಿಲ್ಲವೆಂದು ವೈಸ್ ಛಾನ್ಸಲರು ತಿಳಿಸಿದರು ಬೆಂಗಳೂರು ಮಹಾರಾಣಿ ಕಾಲೇಜಿನ ಸೈನ್ಸ್ ಲಾಬರೇಟರಿಗೆ ೨ ಸಾವಿರ ರೂ ಮಂಜೂರಾಗಿರುವುದೆಂದೂ, ಮೈಸೂರು ಮಹಾರಾಣಿ ಕಾಲೇಜಿಗೆ ಸರಿಯಾದ ಕಟ್ಟಡವಿಲ್ಲದಿರುವುದರಿಂದ ಈ ವರ್ಷ ಸೈನ್ಸ್ ಲ್ಯಾಬೊರೇಟರಿಯನ್ನು ಸ್ಥಾಪಿಸಲು ಸಾಧ್ಯವಿಲ್ಲವೆಂದೂ, ಆದರೆ ಅಲ್ಲಿನ ವಿದ್ಯಾರ್ಥಿನಿಯರು ಫಸ್ಟ್‌ಗ್ರೇಡ್ ಕಾಲೇಜಿಗೆ ಹೋಗಲು ಬಸ್ ಸೌಕರ್ಯವನ್ನು ಕಲ್ಪಿಸಲಾಗುವುದೆಂದೂ ಮತ್ತು ಕನ್ನಡ ನಿಘಂಟಿಗಾಗಿ ವಿಶ್ವವಿದ್ಯಾಲಯದವರು ಒದಗಿಸಿದ್ದ ೩೦ ಸಾವಿರ ರೂ ಗಳನ್ನು ಸರ್ಕಾರದವರು ಮಂಜೂರು ಮಾಡಲಿಲ್ಲವೆಂದೂ ಅವರು ತಿಳಿಸಿದರು. ಕನ್ನಡ ನಿಘಂಟಿಗಾಗಿ ಮೇಲ್ಕಂಡ ಮೊಬಲಗನ್ನು ಮಂಜೂರು ಮಾಡುವ ಬಗ್ಗೆ ಪುನರ್ವಿಮರ್ಶೆ ಮಾಡಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯ ಮಾಡಲಾಯಿತು

ವಿಶ್ವ ವಿದ್ಯಾಲಯವನ್ನು ಪುನರ್ವ್ಯವಸ್ಥೆಗೊಳಿಸುವ ಬಗ್ಗೆ ಶ್ರೀ॥ ಸಿ ಆರ್ ರೆಡ್ಡಿಯವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ "ವಿಶ್ವ ವಿದ್ಯಾಲಯದ ನೈತಿಕ ಮಟ್ಟವು ಇಳಿದಿದೆಯೆಂದು ಸೂಚಿಸಿರುವರೆಂದೂ ಇದು ತಲೆ ತಗ್ಗಿಸಬೇಕಾದ ಅಂಶವೆಂದೂ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಹೇಳಿದರು ಶ್ರೀ॥ ಸಿ ಆರ್ ರೆಡ್ಡಿಯವರ ವರದಿಯನ್ನು ತಾವು ನೋಡಿಲ್ಲವೆಂದೂ ಆದರೆ ಪತ್ರಿಕೆಗಳಲ್ಲಿ ಈ ಅಂಶವನ್ನು ನೋಡಿ ತಮಗೂ ಆಶ್ಚರ್ಯವಾಗಿರುವುದಾಗಿಯೂ, ವರದಿಯನ್ನು ನೋಡಿದನಂತರ ಅದನ್ನು ಸನೆಟ್ ಸಭೆಯ ಮುಂದೆ ಇಡುವುದಾಗಿಯೂ ವೈಸ್ ಛಾನ್ಸಲರು ತಿಳಿಸಿದರು

ಶರತ್ ಬಾಬುಗಳೊಡನೆ ನೇತಾಜಿಯೂ ಬರುವರೇ ?

ನೇತಾಜಿ ಬೋಸರವರು ಇನ್ನೂ ಜೀವಂತರಾಗಿರುವರೆಂದು ಸ್ವಿಟ್ಸರ್ಲೆಂಡಿನ ಬರ್ನ್ ರೇಡಿಯೋವು ಈ ನಿಂಗಳು ೩ನೇ ತಾರೀಖು ಪ್ರಸಾರ ಮಾಡಿರುತ್ತದೆ. ಆ ದಿನವೇ ಶರತ್ ಚಂದ್ರಬೋಸರು ಅದೇ ರೇಡಿಯೋವಿನಲ್ಲಿ ಭಾಷಣ ಮಾಡಿ, ತಾವು ನೇತಾಜಿ ಬೋಸರೊಡನೆ ಬರುವ ತಿಂಗಳಲ್ಲಿ ವಾಪಸು ಸ್ವದೇಶಕ್ಕೆ ಹಿಂದಿರುಗುವುದಾಗಿ ಹೇಳಿದರೆಂದೂ ವರದಿಯಾಗಿದೆ ನೇತಾಜಿ ಬೋಸರಿಗೆ ಭಾರತ ರಾಜ್ಯಾಧಿಕಾರಿಗಳ ನ್ಯೂನತೆಗಳಿಂದ ತುಂಬಾ ಅತೃಪ್ತಿಯುಂಟಾಗಿದೆಯೆಂದು ಶರತ್ ಬಾಬುಗಳು ತಿಳಿಸಿರುವುದಾಗಿಯೂ ವರದಿಯಾಗಿದೆ

ಚಹಾ ಕೂಟ

ಮೈಸೂರು ಸಹಕಾರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಆವರಣದಲ್ಲಿ ಯೋಗ್ಯ ಸಂಭಾವನೆಯನ್ನು ಕೊಟ್ಟ ಹೊರತು ಕೇವಲ ಗೌರವ ಕಾರ್ಯಕರ್ತರಿಂದ ನಿಜವಾದ ಸಹಕಾರವು ಬಲಿಯಲಾರದು ಎಂಬ ವಿಷಯವಾಗಿ ಚರ್ಚಾ ಕೂಟವನ್ನು ಏರ್ಪಡಿಸಲಾಗಿದೆ.

ಪಟೇಲರ ರಾಜೀನಾಮೆಯೋ?

ಭಾರತದ ಉಪ ಮುಖ್ಯ ಮಂತ್ರಿಗಳಾದ ಸರದಾರ್ ವಲ್ಲಭ ಬಾಯಿ ಪಟೇಲರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನೀಯುವರೆಂದು ನಂಬಲರ್ಹವಾದ ಕಾಂಗ್ರೆಸ್ ವರ್ತುಳಗಳಲ್ಲಿ ಹೇಳಲಾಗುತ್ತಿದೆ. ರಾಜೀನಾಮೆಯಿತ್ತ ಮೇಲೆ ಅವರು ಕಾಂಗ್ರೆಸ್ ಸಂಸ್ಥೆಯಲ್ಲಿ ಧ್ಯೇಯ ಮತ್ತು ಕಾರ್ಯಕ್ರಮಗಳ ಬಗ್ಗೆ ಉಂಟಾಗಿರುವ ಕ್ಷೀಣತೆಯನ್ನು ಹೋಗಲಾಡಿಸಲು ಕಂಕಣಬದ್ಧರಾಗಿ ನಿಲ್ಲುವರೆಂದು ತಿಳಿದುಬಂದಿದೆ. ಪ್ರಾಂತೀಯ ಉಪಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಆದ ಪರಾಜಯಗಳ ಬಗ್ಗೆ ಸರದಾರರಿಗೆ ತುಂಬಾ ಆತಂಕವುಂಟಾಗಿದೆಯೆಂದೂ, ಪ್ರಾಂತ್ಯ ಮಂತ್ರಿವರ್ಗಗಳಲ್ಲಿ ಲಂಚರುಷುವತ್ತು ಹೆಚ್ಚುತ್ತಿರುವ ಬಗ್ಗೆ ಅವರು ಕಳವಳವನ್ನು ವ್ಯಕ್ತಪಡಿಸಿರುವರೆಂದೂ ಹೇಳಲಾಗಿದೆ ಪಶ್ಚಿಮ ಬಂಗಾಳ ಶಾಸನ ಸಭೆಗೆ ಕೆಲವು ದಿನಗಳ ಹಿಂದೆ ನಡೆದ ಉಪಚುನಾವಣೆಯಲ್ಲಿ ಶರತ್ ಚಂದ್ರಬೋಸರಿಗೆ ಆದ ಜಯವನ್ನು ಸರ್ದಾರ್ ಪಟೇಲರು ತಮ್ಮ ವೈಯಕ್ತಿಕ ಸೋಲೆಂದು ಪರಿಗಣಿಸಿದ್ದಾರೆಂದು ಹೇಳಲಾಗಿದೆ. ಕೇಂದ್ರದಿಂದ ಸರದಾರರು ರಾಜೀನಾಮೆಯಿತ್ತು ಹೊರಬಂದರೆ ಪ್ರಾಂತೀಯ ಕಾಂಗ್ರೆಸ್ ರಾಜಕೀಯದಲ್ಲಿ ವಿಶೇಷ ಬದಲಾವಣೆಗಳಾಗುವುವೆಂದು ನಂಬಲಾಗಿದೆ

ಕೇಂದ್ರ ರಾಜ್ಯಾಂಗ ಸಭೆಗೆ ಕಾಶ್ಮೀರದ ಪ್ರತಿನಿಧಿಗಳು

ಭಾರತ ರಾಜ್ಯಾಂಗ ಸಭೆಗೆ ಕಾಶ್ಮೀರ ಸಂಸ್ಥಾನದ ಮಹಾರಾಜರು ತಮ್ಮ ಸಂಸ್ಥಾನದ ಪರವಾಗಿ ಕೆಳಗೆ ಕಂಡ ೪ ಮಂದಿ ಸದಸ್ಯರನ್ನು ಚುನಾಯಿಸಿದ್ದಾರೆ — ಮಹಮದ್ ಅಬ್ದುಲ್ಲ, ಮಿರ್ಜಾ ಅಫ್ಜಲ್ ಬೇಗ್, ಮೌಲಾನಾ ಮಹಮದ್ ಸಯೀದ್ ಮತ್ತು ಪಂಡಿತ ಮೋತಿರಾಂ. ಇವರುಗಳು ಮೊನ್ನೆ ದಿನ ದೆಹಲಿಯಲ್ಲಿ ನಡೆದ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಿದ್ದರು

ನಗರಾಭಿವೃದ್ಧಿ ಸಮಿತಿ

ರಾಜೀನಾಮೆಯಿತ್ತ ಸರದಾರ್ ಎ ವಿ ಸುಬ್ರಹ್ಮಣ್ಯರಾಜ ಅರಸಿನವರ ಸ್ಥಾನದಲ್ಲಿ ಸರದಾರ್ ಕೆ ಒಸವರಾಜೆ ಅರಸಿನವರನ್ನು ಸರಕಾರದವರು ಮೈಸೂರು ನಗರಾಭಿವೃದ್ಧಿ ಸಮಿತಿಯ ಸದಸ್ಯರನ್ನಾಗಿ ನೇಮಿಸಿದ್ದಾರೆ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನ

ನಿಸ್ವಾರ್ಥ ಕಾರ್ಯಕರ್ತರು ಬೇಕೆಂದು ಅಧ್ಯಕ್ಷರ ಭಾಷಣ

ಸ್ವಂ. ಸು ತಂತಿ] ತುಮಕೂರು ೧೯

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ನಿನ್ನೆ ಮಧ್ಯಾಹ್ನ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು. ಸುಮಾರು ೭೦ ಮಂದಿ ಸದಸ್ಯರು ಅಧಿವೇಶನಕ್ಕೆ ಬಂದಿದ್ದರು ಶ್ರೀ ಭಾಷ್ಯಂರವರನ್ನು ಬಿಟ್ಟು ಉಳಿದ ಎಲ್ಲ ಮಂತ್ರಿಗಳೂ ಹಾಜರಿದ್ದರು.

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಬಿ ಸಿ ನಂಜುಂಡಯ್ಯನವರು ಭಾಷಣ ಮಾಡಿ ಸುಸ್ವಾಗತವನ್ನು ಕೋರಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ತ್ರಿಕರಣ ಪೂರ್ವಕವಾಗಿ ಸೇವೆ ಸಲ್ಲಿಸುವ ಮತ್ತು ನಿಸ್ವಾರ್ಥ ಕಾರ್ಯಕರ್ತರ ಅವಶ್ಯಕತೆಯನ್ನು ಕುರಿತು ಒತ್ತಿ ಹೇಳಿ, ಅಂತಹವರು ಮುಂದೆ ಬಂದು ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕೆಂದು ಕೋರಿದರು

ಶ್ರೀಮತಿ ಸರೋಜಿನಿ ನಾಯ್ಡು, ಬಿ ಪಿ ಹಾಲಪ್ಪ ಮತ್ತು ಪಂಡಿತ ರುದ್ರಪ್ಪ- ಇವರುಗಳ ನಿಧನದ ಬಗ್ಗೆ ಸಂತಾಪ ನಿರ್ಣಯಗಳನ್ನು ಮಾಡಲಾಯಿತು

ಮೈಸೂರು ಮತ್ತು ಭಾರತದ ರಾಜಕೀಯ ಹೋರಾಟಗಳಲ್ಲಿ ಭಾಗವಹಿಸಿದ ಸತ್ಯಾಗ್ರಹಿಗಳ ಪಟ್ಟಿಗಳನ್ನು ತಯಾರಿಸಲು ಒಂದು ಉಪ ಸಮಿತಿಯನ್ನು ನೇಮಿಸಬೇಕೆಂಬ ಬಗ್ಗೆ ಖಾಸಗಿ ನಿರ್ಣಯವು ಅಂಗೀಕೃತವಾಯಿತು. ಅಲ್ಲದೆ ಜೈಪುರ ಕಾಂಗ್ರೆಸ್ಸಿನ ಲ್ಲಿ ಕಾಂಗ್ರೆಸ್ಸಿನವರು ನಡೆದುಕೊಳ್ಳಬೇಕಾದ ವಿಧಾನದ ಬಗ್ಗೆ ಆದ ನಿರ್ಣಯವನ್ನು ಜಾರಿಗೆ ಕೊಡುವ ವಿಷಯವಾಗಿ ನಿರ್ಣಯವು ಬಂದು ತೀವ್ರವಾಗಿ ಚರ್ಚೆಯಾಗಿ ಒಪ್ಪಲ್ಪಟ್ಟಿತು. ಸಭೆಯು ಇಂದಿಗೆ ಮುಂದುವರಿಸಲ್ಪಟ್ಟಿತು

ಟ್ರಾಫಿಕ್ ಪೋಲೀಸರ ಸಹಾಯಕ್ಕೆ ಕ್ಯಾಮರಾ

ರಸ್ತೆಗಳ ಮಧ್ಯದಲ್ಲಿ ಆಗಬಹುದಾದ ಆಕಸ್ಮಿಕ ಘಟನೆಗಳನ್ನು ಗುರುತು ಮಾಡಲು ಇನ್ನು ಮುಂದೆ ಕಾನ್ಪುರದಲ್ಲಿ ಕ್ಯಾಮರಾಗಳನ್ನು ಪೋಲೀಸರಿಗೆ ಕೊಡಲಾಗುವುದು. ಇಂತಹ ಆಕಸ್ಮಿಕಗಳು ನಡೆದಾಗ ಅವುಗಳನ್ನು ಬರೆದುಕೊಳ್ಳುವಾಗ ಕಾಲವು ತುಂಬಾ ವ್ಯಯವಾಗುವುದಲ್ಲದೇ, ಕ್ರಮಜಾಸ್ತಿಯಾಗುವುದನ್ನು ತಪ್ಪಿಸಲು ಈ ಹೊಸ ಏರ್ಪಾಡು ಆಗಲಿದೆ

ಸಮಾಜವಾದಿ ಪಕ್ಷದ ಅಧಿಕಾರ ವರ್ಗದ ಚುನಾವಣೆ

ಮೊನ್ನೆ ರಾತ್ರಿ ಕರ್ನಾಟಕ ಸಮಾಜವಾದಿ ಪಕ್ಷದ ಮೈಸೂರು ಸಮಿತಿಯ ಅಧಿಕಾರ ವರ್ಗದ ಚುನಾವಣೆಯು ನಡೆದು ಶ್ರೀ ಪಾಲಿಗೆ ಕೆ ಕಾಳಯ್ಯನವರು ಕಾರ್ಯದರ್ಶಿಗಳಾಗಿಯೂ, ಶ್ರೀಕಂಠ ಶರ್ಮ, ಜಿ ಎಸ್. ರಾಮಣ್ಣ ರಾಮಶೆಟ್ಟಿ, ಭಾರತಿ ರಂಗನ ಇವರುಗಳು ಸದಸ್ಯರಾಗಿಯೂ ಆರಿಸಲ್ಪಟ್ಟರು

ಜನಪದ ಕಲಾ ಪ್ರದರ್ಶನ

ನಾಳೆ ಸೋಮವಾರ ಸಂಜೆ ೫-೩೦ ಗಂಟೆಗೆ ಕನ್ನೇಗೌಡನ ಕೊಪ್ಪಲು ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಆವರಣದಲ್ಲಿ ಸ್ಥಳೀಯ ಯುವಕರ ಸಂಘದ ಆಶ್ರಯದಲ್ಲಿ ಜನಪದ ಕಲಾಪ್ರದರ್ಶನವನ್ನು ನಗರ ವಯಸ್ಕರ ಶಿಕ್ಷಣ ಸಮಿತಿಯವರು ಏರ್ಪಡಿಸಿದ್ದಾರೆ

ವಾರ ಭವಿಷ್ಯ

ತಾ|| ೧೯-೬-೪೯ರಿಂದ ೨೫-೬-೪೯ರ ವರೆಗೆ

ಮೇಷ— ವಾಸದ ಬಹು ಸಮಯ ಸತ್ಸಹವಾಸದಲ್ಲಿ ಕಳೆಯುವುದು. ಆಧ್ಯಾತ್ಮಿಕ ಉನ್ನತಿ. ಧರ್ಮಕಾರ್ಯ ಸಾಂಗವಾಗಿ ನಡೆಯುವುದು. ಹಣಕಾಸಿನ ಚಿಂತೆ ಇರದು. ಕೋರ್ಟು ಕಾರ್ಯದಲ್ಲಿ ಜಯ ತಾ|| ೨೪, ೨೬ ಶುಭವಾರ್ತೆ

ವೃಷಭ—ನಿಮ್ಮ ಮೇಲೆ ಆಪ್ತರ ಕೋಪ ಎಂದಿನಂತೆ ನಗೆ ಮೊಗವಿರದು ಗೂಢ ಮತ್ತು ಕ್ಲಿಷ್ಟ ಸಮಸ್ಯೆಯಲ್ಲಿ ಕೈ ಹಾಕಬೇಕಾಗಬಹುದು. ಆರೋಗ್ಯ ಕೆಡುವುದು. ಖರ್ಚು ಹೆಚ್ಚು ವ್ಯಾಪಾರಾದಿಗಳಲ್ಲಿ ವೈಮನಸ್ಸು ತಾ|| ೨೧, ೨೨ ರಲ್ಲಿ ವಾಹನ ಭಯ

ಮಿಥುನ—ಬಾಯಿಯಿಂದ ಬರುವುದನ್ನು ಕೃತಿಯಲ್ಲಿ ಮಾಡಲು ಸಾಧ್ಯವಾಗಲಾರದು ಹಲವು ನೀಚರು ಎದುರಿಗೆ ಸವಿಮಾತಾಡಿ, ಹಿಂದೆ ನಿಂದಿಸುವರು ಆರೋಗ್ಯ ಚೆನ್ನಾಗಿರದು ವ್ಯಾಪಾರಾದಿಗಳಲ್ಲಿ ತೊಂದರೆ. ತಾ|| ೨೧, ೨೨ ಮಿತ್ರ ಸಹಾಯ ಕ್ಲೇಶ ನಾಶ.

ಕರ್ಕ—ಏಳರಾಟ ಶನಿ ಕಾಟ ಇದ್ದರೂ ಆದರ ತಾಪ ಈ ವಾರ ತಟ್ಟಲಾರದು ಆರೋಗ್ಯ ನೆಟ್ಟಗೆ ಸ್ವೀಕೃತ ಕಾರ್ಯ ಸಿದ್ಧಿ ಕಲ್ಪನಾಶಕ್ತಿಯು ಹೆಚ್ಚಳಕ್ಕೆ ನೌಕರಿ ಸಂಘಗಳಲ್ಲಿ ಮೆಚ್ಚುಗೆ ತಾ|| ೨೩, ೨೪ ಪ್ರಿಯ ಜನ ಭೇಟಿ ಮಹತ್ವದ ಸತ್ಕಾರ್ಯ ಗಮನ

ಸಿಂಹ—ಆರೋಗ್ಯ ಕೆಡದಿದ್ದರೂ ಸಣ್ಣ, ಮಿದಳು ಬಾಧೆಯುಂಟು ಹಿಂದಿನ ಘಟನೆಗಳು ಮರೆಯುವುವು. ಹಣಕಾಸಿನ ಸ್ಥಿತಿ ಚಿಂತಾದಾಯಕ ತಾ|| ೨೧, ೨೨ ಆಕಸ್ಮಿಕ ಪ್ರವಾಸ

ಕನ್ಯಾ—ಮಿಲಿಟರಿ ಪೋಲೀಸಿನಲ್ಲಿರುವ ಈ ರಾಶಿಯವರಿಗೆ ಉತ್ತಮ ವಾರವಿದು. ವೈದ್ಯರಿಗೆ ಯಶ. ಹಣಕಾಸಿನ ದೃಷ್ಟಿಯಿಂದ ಲಾಭದಾಯಕ ನೌಕರಿಯಲ್ಲಿ ಮೇಲಧಿಕಾರ ಪ್ರಾಪ್ತಿ ಮೋಷಾರೋಪ ನಿವಾರಣೆ ಪ್ರವಾಸ ಸಂಭವ ತಾ|| ೨೧, ೨೨, ಕಾರ್ಯ ನಿಮಿತ್ತ ಗಡಿಬಿಡಿ.

ತುಲಾ—ಆರೋಗ್ಯ ನೆಟ್ಟಗಿರದು ಕೋಪವುಂಟಾಗುವುದು ಕೈಕೆಳಗಿನ ನೌಕರರ ದ್ವೇಷ ಬುದ್ಧಿ. ಇಚ್ಛಿತ ಕಾರ್ಯದಲ್ಲಿ ವಿಘ್ನ ಹಣಕಾಸಿನ ತೊಂದರೆ ಅತಿಯಾಗುವುದು. ವಾಹನಾಘಾತ ಸಂಭವ ತಾ|| ೨೩, ೨೪ ಅಗ್ನಿ ಭಯ,

ವೃಶ್ಚಿಕ - ಹಲವರು ವೇಷ ಧರಿಸಿ ಒಳ್ಳೆ ಮಾತನಾಡಿ. ನಿಮ್ಮನ್ನು ಮೋಸದಲ್ಲಿ ಕೆಡಿಸಿಕೊಳ್ಳುವರು ಎಚ್ಚರಿಕೆಯಿಂದಿರಿ ನೌಕರಿಯಲ್ಲಿ ಕೈಕೆಳಗಿನವರ ಕಡೆ ದೃಷ್ಟಿ ಇರಲಿ ತಾ|| ೨೧, ೨೨ ಕಳತ್ರಮೊದಲಾದ ಕಲಹ ತಪ್ಪಿ ತಿಳುವಳಿಕೆ

ಧನು—ಆರೋಗ್ಯ ನೆಟ್ಟಗೆ ಸಜ್ಜನರ ಭೇಟಿ ಉದ್ದೇಶ ಸಫಲವಾಗುವುದು. ಖರ್ಚು ಹೆಚ್ಚುವುದು ನೌಕರಿಯಲ್ಲಿ ಮೇಲ್ಮಟ್ಟದವರ ಸಂತೃಪ್ತಿ. ತಾ|| ೨೩, ೨೪ ಮೇಲಧಿಕಾರಿಗಳ ಭೇಟಿಗೆ ಒಳ್ಳೆ ದಿನಗಳು.

ಮಕರ—ಈ ವಾರ ಅನೇಕ ಪರೋಪಕಾರ ಕಾರ್ಯ ಕೌಟುಂಬಿಕ ದೃಷ್ಟಿಯಿಂದ ಸುಖ ಲಭ್ಯ ಸ್ಥಿರ ಆಸ್ತಿ ಬಗ್ಗೆ ತಕರಾರುಗಳ ಪರಿಹಾರ ನೌಕರಿ ಸಂಘಗಳಲ್ಲಿ ಸಹಕಾರ ತಾ|| ೨೧, ೨೨ ಲಗ್ನಕಾರ್ಯ ಅತಿಥಿ ಅಭ್ಯಾಗತರ ಆಗಮನ

ಕುಂಭ—ಆರೋಗ್ಯ ದೃಷ್ಟಿಯಿಂದ ಈ ವಾರ ಪಥ್ಯ, ಮಿತಿ ಇರಬೇಕು. ಆಹಾರ ವಿಹಾರಗಳನ್ನು ಹೆಚ್ಚು ಪ್ರಮಾಣದಲ್ಲಿ ತೆಗೆದುಕೊಳ್ಳ ಬೇಡಿ ಮಾರ್ಗದಲ್ಲಿ ಕಷ್ಟ ತಾ|| ೨೩, ೨೪ ಪ್ರಿಯವ್ಯಕ್ತಿ ಬಗ್ಗೆ ಅಪ್ರಿಯ ವಾರ್ತೆ

ಮೀನ—ಪರೋಪಕಾರ ಕಾರ್ಯಗಳು ಜರುಗುವುವು ಆರೋಗ್ಯ ನೆಟ್ಟಗೆ ತಾ|| ೨೧, ೨೩ ಮಹತ್ವದ ಪತ್ರಾಗಮನ. ಪ್ರವಾಸ ಮೃಷ್ಟಾನ್ನ ಭೋಜನ ಲಾಭ

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ.

ಶಿವರಾಂಪೇಟೆ ಮೈಸೂರು

Edited, printed, and published by A.R Nagarajan at the Sadhvi Press, D. Subbiah Road, Mysore

ನೆಸ್ಸಿಂಡೀಸಿನಲ್ಲಿ ನೆಹರೂ ಭವನ

ಜನಾಧರಣಾದ ಭಾರತೀಯರ ಸಹಾಯಾರ್ಥವಾಗಿ ನೆಸ್ಸಿಂಡೀಸ್ ದ್ವೀಪದ ಪೀನಾಲ್ ಎಂಬ ಗ್ರಾಮದಲ್ಲಿ ಭಾರತದ ಕಮೀಷನರಾದ ಸತ್ಯಚರಣರವರು ನೆಹರೂ ಭವನ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿರುವರು.

ಮಳೆ ನೀರಿನ ಸಂಶೋಧನೆ

ವ್ಯವಸಾಯಕ್ಕೆ ಅನುಕೂಲವಾಗುವ ರಸಾಯನಿಕ ಅಂಶ ಳ. ಮಳೆ ನೀರಿನಲ್ಲಿ ಎಷ್ಟು ಮಟ್ಟಿಗಿವೆಯೆಂಬ ಬಗ್ಗೆ ಭಾರತ ಸರ್ಕಾರದ ಹವಾಮಾನದ ಇಲಾಖೆಯವರು ಸಂಶೋಧನೆಗಳನ್ನು ನಡೆಸುತ್ತಿದ್ದಾರೆ ಮಳೆ ನೀರಿನಲ್ಲಿ ಸ್ವಾಭಾವಿಕವಾದ ಗೊಬ್ಬರದ ಪ್ರಭಾವವು ಎಷ್ಟರಮಟ್ಟಿಗಿದೆಯೆಂಬುದನ್ನು ಕಂಡುಹಿಡಿಯಲಾಗುತ್ತಿದೆ.

Saradavilas High School, Mysore.

Morning Section classes for the failed S. S. L. C students will be held from the 22nd instant. Candidates seeking admission may apply to the Head Master Saradavilas High School, Mysore

ಅಳತೆ, ತೂಕದ ಬಟ್ಟುಗಳ ತನಿಖೆ

ಸರ್ಕಾರದವರು ಒಂದು 'ಆಜ್ಞೆಯನ್ನು ಹೊರಡಿಸಿ ಸಾರ್ವಜನಿಕರು ಮತ್ತು ವರ್ತಕರು ಇನ್ನು ಮುಂದೆ ತಮ್ಮಲ್ಲಿರುವ ತೂಕದ ಬಟ್ಟುಗಳು ಮತ್ತು ಅಳತೆ ಸೇರು ... ವು ಮೊದಲಾದುವುಗಳನ್ನು ಪ್ರತಿ ವರ್ಷವೂ ಸರ್ಕಾರಿ ಅಧಿಕಾರಿಗಳಿಂದ ಪರೀಕ್ಷೆ ಮಾಡಿಸಿ ಮುದ್ರೆ ಹಾಕಿಸಬೇಕೆಂದು ತಿಳಿಸಿದ್ದಾರೆ ಇದು ವರೆಗೂ ಮೂರು ವರ್ಷಕ್ಕೊಮ್ಮೆ ಈ ರೀತಿ ಮಾಡಲಾಗುತ್ತಿತ್ತು. ಈಗಿನ ಹೊಸ ಆಜ್ಞೆಯನ್ನು ಉಲ್ಲಂಘಿಸುವರೆ ಅಂತಹವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದೆಂದೂ ಎಚ್ಚರಿಸಲಾಗಿದೆ

ಕಲ್ಕತ್ತೆಯಲ್ಲಿ ಬ್ಯಾಂಕ್ ಚೆಕ್ಕುಗಳ ಮೋಸದ ಗುಂಪು

ಸುಳ್ಳು ಚೆಕ್ಕುಗಳನ್ನು ಕೊಡುವುದರ ಮೂಲಕ ಜನರನ್ನು ಸುಮಾರು ಲಕ್ಷ ರೂ. ವರೆಗೆ ಮೋಸ ಮಾಡಿರುವ ಗುಂಪಿನವರನ್ನು ಕಲ್ಕತ್ತೆಯ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ ಬಹಳ ಕಛೇರಿಗಳಲ್ಲಿ ಭಾರಿ ಕಂಪೆನಿಗಳಿಗೆ ಬರುವ ಕಾಗದಗಳನ್ನು ಕಳ್ಳ ಬೀಗದಕೈಗಳ ಮೂಲಕ ತೆಗೆದು ಅವುಗಳಲ್ಲಿರುವ ಚೆಕ್ಕುಗಳಲ್ಲಿ ಬರೆದಿರುವ ಹೆಸರುಗಳನ್ನೂ, ಮೊಬಲಗನ್ನೂ ರಾಸಾಯನಿಕ ದ್ರವಗಳ ಮೂಲಕ ಬದಲಾಯಿಸಿ ಬ್ಯಾಂಕುಗಳಿಂದ ಇವರು ಹಣ ಪಡೆಯುತ್ತಿದ್ದರೆಂದು ಹೇಳಲಾಗಿದೆ

|| ಶ್ರೀ ಸೀತಾರಾಮಾಭ್ಯಾಂ ನಮಃ ||

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಕಾಮಿನಿ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು. ಮೊದಲಾಗಿ ಗುಣವಾಗುತ್ತದೆ.

ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪ್ರಭುದೇವಾ ಟಾಕೀಸ್

19-6-49ನೇ ಭಾನುವಾರದಿಂದ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ತಪಸ್ಯಾ (ಮುಷ್ಕೃಂಗರ್) (ಹಿಂದಿ)

ಈ ಚಿತ್ರದ ಸಂಗಡ ಇಂಡಿಯನ್ ನ್ಯೂಸ್ ರೀಲ್ ಮತ್ತು ಕಾರ್ಟೂನ್ ಸಹ ತೋರಿಸಲಾಗುತ್ತೆ

ಭೂಮಿಕೆ - ಕೌಸಲ್ಯ, ಊರ್ಮಿಳೆ, ಪರೇಶ್ ಬ್ಯಾನರ್ಜಿ, ಅಜಿತ್, ಆರ್. ಪಿ. ಕಪೂರ್. ರಣಜಿತ್ ರಾಯ್ ಮುಂತಾದವರು

ಸಂತಾನ ಸಿಂಧೂರ

ಒಟ್ಟೆ ಸಂಬಂಧದ ಹೊಟ್ಟೆನೋವು ಉಂಟು, ಸಂತಾನವಿಲ್ಲ, ಇಂಥವರಿಗೆ ಗ್ಯಾರಂಟಿ ಔಷಧ ತೊಂಭತ್ತು ವರ್ಷದ ಹಾಲ್ಲಿ ಒಂದಿನ ಕ್ವಾಟ್ಲುಗುಗಳು ಹಾಗಿರಲಿ ಈಗ ಪ್ರಿಂಟಾಗಿರತಕ್ಕ "ತಾಳ್ಮೆಯಿಂದ ತಿಳಿಗೆ" ಎಂಬ ನಾಲ್ಕು ಪೇಜಿನ ಪಸ್ತಪತ್ರಿಕೆ ತಪ್ಪ ನೋಡಲೇಬೇಕಾದ್ದು ಬರೆದರೆ ಬಿಟ್ಟಿ ರವಾನೆ

ಎ. ರಾಮಸ್ವಾಮಿ ಅಯ್ಯರ್,

ಅ ಒಳ, ಯಳಂದೂರು [ಮೈಸೂರು ಡಿ||]

ರಾಜಕಮಲ್

ಮೈಸೂರು

17—6—49 ರಿಂದ

ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಸಾಲ್ ಗಿರಾ

(ಹಿಂದಿ)

—ಮುಖ್ಯ ಪಾತ್ರ—

ಜೈರಾಜ್, ಸ್ನೇಹಪ್ರಭಾ

Morning Shows

From 17-6-49 For 4 days

UNCLE SILAS

—With—

Kejean Simmons, Katina Paxinou

ಒಳ್ಳೆ ಲಾರಿಗಳು

ವಿಕರಿಗೆ ಇವೆ

—:o:—

ಡ ಡ್ಜ್ ಲಾರಿ ಒಂದು, ಫಾರ್ಡ್ಗೆ ಲಾರಿ ಒಂದು

ಈ ಎರಡು ಲಾರಿಗಳು ಒಳ್ಳೆ ಸ್ಥಿತಿಯಲ್ಲಿ ಇವೆ ಬೇಕಾದವರು ಈ ಕೆಳಗಿನ ವಿಳಾಸದಲ್ಲಿ ವಿಚಾರಿಸಬಹುದು

ಡಿ. ಪುಟ್ಟಯ್ಯ,

ಸಂತೆಪೇಟೆ, ಮೈಸೂರು

* ಬೆಂಗಾಲ್, ಬೆನಾರಿಸ್, ಮೈಸೂರು ಸಿಲ್ಕ್ ಸೀರೆಗಳು *

ಮಂಗಳಕರವಾದ ಮದುವೆ ಜವಳಿಗಳು ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ. ನಾಣ್ಯವಾದ ಮಾಲು. ಬಾಪೂಸಾಹೇಬ್ ಕಂಪೆನಿ, ಮೈಸೂರು

ಫೋ। ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಸೋಮವಾರ ೨೦-೬-೪೯ [ಸಂಚಿಕೆ ೨೬೩

ಚಂದ್ರನಗರ ಭಾರತಕ್ಕೆ -ಸೇರಲು ಬಹುಮತ-

...ಂದಿನ ಸರಕಾರಕ್ಕೆ ಬೆಂಬಲ ನೀಡಬೇಕು

. ಎಂ. ಸಿ. ಸಿ.ಯಲ್ಲಿ ನಿರ್ಣಯ

ಇಬ್ಬರು ಸದಸ್ಯರ ಸಭಾ ಪರಿತ್ಯಾಗ

...ಂ ಸು] ತುಮಕೂರು ೨೦

ಮುಂದುವರೆದ ಅ॥ ಮೈ॥ ಕಾಂಗ್ರೆ... ಸಮಿತಿಯು ಪುನಃ ಈ ಪ್ರಾತಃಕಾಲ ...ಟಿ ಸಿದ್ಧಲಿಂಗಯ್ಯನವರ ಅಧ್ಯಕ್ಷತೆ...ಲ್ಲಿ ಸೇರಿದಾಗ, ಕಾರ್ಯಕಾರಿ ಸಮಿತಿಯು...ರು ರಚಿಸಿದ್ದ ಮುಖ್ಯ ನಿರ್ಣಯವನ್ನು ...ಭೆಯು ಪರ್ಯಾಲೋಚಿಸಿ ಅದಕ್ಕೆ ಅಂ...ಕಾರವಿತ್ತಿತ್ತು ಈ ನಿರ್ಣಯದಲ್ಲಿ ೧೯೪೭...ದೀಚೆಗೆ ಸಂಸ್ಥಾನದಲ್ಲಿ ಆಗಿರುವ ರಾ...ಕೀಯ ಪ್ರಗತಿ, ದಿವಾನರ ಹುದ್ದೆಯು ...., ಪ್ರ॥ ಪ್ರ॥ ಸಭೆಗೆ ಖಾಸಗೀ ಅಧ್ಯ...ರ ಚುನಾವಣೆ, ಶಾಸನ ಸಭೆಗಳ ನಾ...ಕರುಗಳ ಆಯ್ಕೆ ಇವುಗಳ ಬಗ್ಗೆ ಸ...ಮಾಧಾನವನ್ನು ವ್ಯಕ್ತಪಡಿಸಿರುವುದಲ್ಲದ...ೂತನ ರಾಜ್ಯಾಂಗವು ಕ್ಷಿಪ್ರವಾಗಿ ರೂಪು...ಳ್ಳದೆ ಇರುವುದಕ್ಕೆ ಕಾರಣಗಳು ಹಲ...ಇದ್ದು ಅವುಗಳ ನಿವಾರಣೆಯೂ ದು...ಸ್ಸಾಧ್ಯವಾದುದನ್ನು ಮನಗಂಡು ಈಗ ...ರದಲ್ಲಿರುವ ಅಸಾಧಾರಣ ಪರಿಸ್ಥಿತಿಯ... ರಾಜ್ಯವ್ಯವಸ್ಥೆ ಸುಗಮವಾಗಿ ಸಾಗು...ತಾಗಲು ಈಗಿನ ಸರಕಾರಕ್ಕೆ ಪೂರ್ಣ ...ತ್ಸಾಹ ಕೊಡಬೇಕೆಂದು ಕೋರಲಾಗಿದೆ.

ದಿವಾನ್ ಹುದ್ದೆ ಕೂಡಲೇ ವಜಾ ಆಗ... ಸಾಧ್ಯವಾಗದಿದ್ದುದಕ್ಕೆ ಶ್ರೀ ವರ್ಷ ಮ...ರಾಜರೊಡನೆ ಆದ ಕರಾರು, ಅ. ಭಾ. ...ಂಗ್ರೆಸ್ಸಿನ ಸೂಚನೆ ಮತ್ತು ಕೇಂದ್ರ ...ಕಾರದ ಸಂಸ್ಥಾನ ಇಲಾಖೆಯಿಂದ ...ದಿದ್ದ ಪತ್ರಗಳೇ ಕಾರಣವೆಂದು ನಿರ್ಣ...ವನ್ನು ಮಂಡಿಸಿದ ಶ್ರೀ ಟಿ. ಸುಬ್ರಹ್ಮ...ಣ್ಯರವರು ತಿಳಿಸಿದರು

ಶ್ರೀ ಕೆ ಪುಟ್ಟಸ್ವಾಮಿಯವರು ಕಾರ್ಯ...ರಿ ಸಮಿತಿಯು ಸರಕಾರದ ಮೇಲೆ ತ...ಇದ್ದ ಹತೋಟಿಯನ್ನು ಶಾಸನ ...ಭೆಗಳಿಗೆ ವರ್ಗಾಯಿಸಿರುವುದರಿಂದ ...ಳ್ಕರ ಒಪ್ಪಂದದಂತೆ ವಿರೋಧಪಕ್ಷ ಮಂತ್ರಿಮಂಡಲ ರಚಿಸಲು ಅವಕಾಶ ...ಕ್ಕಂತಾಗಲಿಲ್ಲವೇ? ಎಂದು ಪ್ರಶ್ನಿಸಿದರು ...ತಹ ಪ್ರಶ್ನೆ ಎದ್ದಾಗ, ಶಾಸನ ಸಭೆಗಳ... ರದ್ದುಗೊಳಿಸಲಾಗುವುದೆಂದು ಶ್ರೀ ...ಬ್ರಹ್ಮಣ್ಯರವರು ತಿಳಿಸಿದರು

ಶ್ರೀಗಳಾದ ಎಂ ಆರ್ ಎ ಶಾಸ್ತ್ರಿ, ...ಎಸ್ ದೊರೆಸ್ವಾಮಿ ಮುಂತಾದವ... ನಿರ್ಣಯವನ್ನು ವಿರೋಧಿಸಿದರು ...ಬಹುಮತದಿಂದ ನಿರ್ಣಯವು ಅಂಗೀಕೃ...ತವಾಯಿತು.

ನಂತರ ಶ್ರೀ ಎಂ ಎಲ್. ನಂಜರಾಜೆ...ಅರಸನವರು ಕಾಮನ್‌ವೆಲ್ತಿನಲ್ಲಿ ಭಾರತವು ...ಸ್ಥಿರವಾಗಿ ಇರುವ ಬಗ್ಗೆ ಎ ಐ ಸಿ ಸಿ ...ಲ್ಲಿ ಪಂಡಿತ ನೆಹರೂರವರು ಕೊಟ್ಟ ...ಹೇಳಿಕೆಯನ್ನು ಸ್ವಾಗತಿಸುವ ನಿರ್ಣಯ...ವನ್ನು ಮಂಡಿಸಿದರು ನಿರ್ಣಯವು ಸ...ರ್ವಾನುಮತದಿಂದ ಅಂಗೀಕೃತವಾಯಿತು

...ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ...ವರೇ ರಾಜೀನಾಮೆಯಿತ್ತ, ಅಧ್ಯಕ್ಷ...ರಾವೇ ಆರಿಸಿದ ಕಾರ್ಯಕಾರಿ ಸಮಿತಿಯ...ಬೇಕೆಂಬ ವಿಷಯವಾಗಿ ಶ್ರೀ ವಿ ಎಸ್ ...ನಾರಾಯಣರಾವ್ ಮತ್ತು ೪೦ ಜನರು ...ದ ನಿರ್ಣಯವನ್ನು ಕಳುಹಿಸಿದ್ದರು ...ನಿರ್ಣಯದ ಯುಕ್ತಾಯುಕ್ತತೆಯ ಬ...ಗ್ಗೆ ಕೆಲಕಾಲ ಚರ್ಚೆಯಾದ ನಂತರ ಅಧ್ಯಕ್ಷ...ರು ಅದನ್ನು ತಳ್ಳಿಹಾಕಿದರು ತಮ್ಮ ಬ...ಗೆ ವಿರುದ್ಧವಾಗಿ ಕರ್ನಾಟಕ ಏಕೀಕ-

ಚಂದ್ರನಗರ ಭಾರತಕ್ಕೆ ಸೇರುವುದು

ಫ್ರೆಂಚರ ಆಡಳಿತಕ್ಕೆ ಸೇರಿದ್ದ ಚಂದ್ರನಗರವು ಭಾರತಕ್ಕೆ ಸೇರುವ ವಿಷಯದಲ್ಲಿ ನಿನ್ನೆ ಅಲ್ಲಿನ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳಲಾಯಿತು ೭,೪೭೩ ಕೊಟ್ಟ ೭,೯೦೪ ಜನರ ಪೈಕಿ ಭಾರತದೊಡನೆ ಸೇರಲು ೭,೪೭೩ ಜನರೂ, ಫ್ರೆಂಚರ ಆಡಳಿತದಲ್ಲೇ ಇರಲು ೧೧೪ ಜನರೂ ಓಟ ಮಾಡಿದರು ೬೨ ಓಟುಗಳು ಕೆಟ್ಟು ಹೋಗಿದ್ದುವು

ಗೋಡ್ಸೆ ಅಪೀಲು ತೀರ್ಪು

ಗಾಂಧಿಜಿ ಕೊಲೆ ಮೊಕದ್ದಮೆಯ ಅಪೀಲಿನ ತೀರ್ಪು ಈ ದಿನ ಕೊಡಲ್ಪಡಲಿವೆ

ಪೃಥ್ವೀ ರಾಜ್

ಈ ರಾತ್ರಿ ಮೈಸೂರಿಗೆ ಬರುವರು

ರಣದ ಬಗ್ಗೆ ನಿರ್ಣಯವನ್ನು ಚರ್ಚೆಗೆ ಅಧ್ಯಕ್ಷರು ತೆಗೆದುಕೊಳ್ಳದಿದ್ದುದನ್ನು ಪ್ರತಿಭಟಿಸಿ, ಶ್ರೀ ಹೆಚ್. ಎಸ್ ದೊರೆಸ್ವಾಮಿಯವರು ಸಭಾ ಪರಿತ್ಯಾಗ ಮಾಡಿದರು. ಇನ್ನೆರಡು ತಿಂಗಳುಗಳಲ್ಲಿ ಕಾಂಗ್ರೆಸ್ ಸಮಿತಿಗಳ ಮತ್ತು ಅಧ್ಯಕ್ಷರ ಚುನಾವಣೆ ನಡೆಸಬೇಕೆಂಬ ಬಗ್ಗೆ ಶ್ರೀ ಆರ್ ಎಸ್ ಆರಾಧ್ಯರವರು ಕಳುಹಿಸಿದ ನಿರ್ಣಯಕ್ಕೆ ಅವಕಾಶ ಕೊಡದಿದ್ದುದರಿಂದ ಅವರೂ ಸಭಾ ಪರಿತ್ಯಾಗ ಮಾಡಿದರು ಕರ್ನಾಟಕ ಏಕೀಕರಣದ ವಿಷಯವಾಗಿ ವಿಶೇಷ ಅಧಿವೇಶನವನ್ನು ಕರೆಯಲಾಗುವುದೆಂದು ಅಧ್ಯಕ್ಷರು ತಿಳಿಸಿದರು ಈ ಅಧಿವೇಶನವನ್ನು ಮೈಸೂರಿನಲ್ಲಾಗಲಿ, ದಾವಣಗೆರೆಯಲ್ಲಾಗಲಿ ನಡೆಸಲು ಆಹ್ವಾನವೀಯಲಾಗಿದೆ

ಭಾರತ ಮತ್ತು ಮೈಸೂರಿನ ಸಂಬಂಧ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ಫೋ] ಬೆಂಗಳೂರು ೨೦

ನ್ಯಾಯವಿಧಾಯಕ ಸಭೆಯ ಆಯವ್ಯಯ ಅಧಿವೇಶನವು ಈ ದಿನ ರಾ॥ ಪ್ರ॥ ಹೆಚ್ ಬಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಹೊಸ ಸದಸ್ಯರಾದ ಶ್ರೀಗಳು ಬಿ ವಾಸುದೇವ ಮೂರ್ತಿ, ಎಂ ಎನ್ ಲಕ್ಷ್ಮಣರಾವ್, ಮೀರ್ ಸಫ್ದರ್ ಹುಸೇನ್, ಟಿ ಸಿ ಬಸಪ್ಪ ಮತ್ತು ಜೆ ಡಬ್ಲ್ಯು ಮೂರ್ಗನ್‌ರವರು ಪ್ರಮಾಣ ವಚನ ಸ್ವೀಕರಿಸಿದರು ಶ್ರೀಮತಿ ಸರೋಜಿನಿ ದೇವಿ, ಶ್ರೀಗಳಾದ ಎ ಸಿ ಮಲ್ಲೇಗೌಡ ಮತ್ತು ಥ॥ ಪ್ರ॥ ಎಂ ಎಲ್. ನಾಗಪ್ಪಶೆಟ್ಟರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು

ಭಾರತ ಸರ್ಕಾರದೊಡನೆ ಶ್ರೀಮನ್ಮಹಾರಾಜರವರು ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್ ಕರಾರಿಗೆ ರುಜು ಹಾಕಿರುವ ವಿಷಯವಾಗಿ ಶ್ರೀ ಎಂ ಲಿಂಗಣ್ಣನವರು ಪ್ರಶ್ನೆ ಹಾಕಿದರು ಇದು ಪ್ರಜೆಗಳ ಗೌರವ ಪ್ರತಿಷ್ಠೆಗಳಿಗೆ ಸಂಬಂಧಿಸಿದ ವಿಷಯವೆಂದೂ ಸಭೆಯಲ್ಲಿ ಚರ್ಚಿಸಲಾಗದೆಂದೂ ಶ್ರೀ ನೇರಳೆ ಮಾದಯ್ಯನವರು ಕ್ರಿಯಾಲೋಪವನ್ನೆತ್ತಿದರು ಸರ್ಕಾರದವರು ಈ ಪ್ರಶ್ನೆಗೆ ಉತ್ತರವಿತ್ತಿರುವರಲ್ಲದೆ ಪ್ರಜಾ ಪ್ರಭುತ್ವದ ಈ ಕಾಲದಲ್ಲಿ ಉತ್ತಮವಾದ ಪದ್ಧತಿಗಳನ್ನು ನಾವು ಜಾರಿಗೆ ತರುವುದಾಗಿ ಹೇಳಿ ಅಧ್ಯಕ್ಷರು ಪ್ರಶ್ನೆಗೆ ಅವಕಾಶವಿತ್ತರು. ಶ್ರೀ ಕೆ ಸಿ ರೆಡ್ಡಿಯವರು ಉತ್ತರ ಕೊಟ್ಟರು ಒಪ್ಪಂದದ ಪ್ರಕಾರ ಭಾರತ ಸರ್ಕಾರಕ್ಕೆ ಸಂಸ್ಥಾನದ ರಕ್ಷಣೆ, ಮಾರ್ಗಾನುಕೂಲ ಮತ್ತು ವಿದೇಶಾಂಗ ವಿಚಾರಗಳು ಸೇರಿವೆ ಶ್ರೀಮನ್ಮಹಾರಾಜರ ಅಧಿಕಾರಕ್ಕೆ ಇದರಿಂದ ಯಾವ ಚ್ಯುತಿಯೂ ಬಂದಿಲ್ಲ ಇತ್ತೀಚೆಗೆ ಬೇರೆ ಯಾವ ಒಪ್ಪಂದವನ್ನೂ ಮಾಡಿಕೊಂಡಿಲ್ಲ ಮಾತ್ರ, ಕತ್ತಿ ಮಾತ್ರ ನಡೆಯುತ್ತಿದೆ ಸಂಸ್ಥಾನದ ಒಳಾಡಳಿತದಲ್ಲಿ ಭಾರತ ಸರ್ಕಾರದವರು ಕೈ ಹಾಕಿಲ್ಲ ಇಲ್ಲಿ ಜವಾಬ್ದಾರಿ ಸರ್ಕಾರ ಪದ್ಧತಿ ಇರುವುದರಿಂದ ಶ್ರೀಮನ್ಮಹಾರಾಜರು ಮಂತ್ರಿಮಂಡಲದ ಸಲಹೆಯಂತೆಯೇ ವರ್ತಿಸುತ್ತಿದ್ದಾರೆ-ಎಂಬುದಾಗಿ ಅವರು ತಿಳಿಸಿದರು

ಸಂಸ್ಕೃತವು ಭಾರತದ ಭಾಗಗಳನ್ನು ಒಂದುಗೂಡಿಸಿದೆ

ಸಿದ್ಧಗಂಗಾ ಸಂಸ್ಕೃತ ಕಾಲೇಜಿಗೆ ಪ್ರಭುಗಳ ಸಂದೇಶ

ತುಮಕೂರು ೧೮

ಸಾಮಾನ್ಯ ಜನರು ಆಡುವ ಭಾಷೆಯಾಗಿ ಸಂಸ್ಕೃತವು ಆಗದಿದ್ದರೂ ಸಹ, ಅದರ ಸಾಹಿತ್ಯ ಪ್ರಭಾವದಿಂದ ಇತರ ಭಾಷೆಗಳು ಸಂಪದ್ಯುಕ್ತವಾಗಿವೆ ಅಲ್ಲದೇ ಭಾರತದ ನಾನಾ ವಿಭಾಗಗಳ ಜನರ ಆಲೋಚನಾ ತರಂಗಗಳನ್ನು ಆ ಭಾಷೆಯು ಒಂದುಗೂಡಿಸಿದೆ ಸಂಸ್ಕೃತಕ್ಕೆ ಉತ್ತೇಜನವಿತ್ತು ಅದರ ಸಾಹಿತ್ಯ ಜ್ಞಾನವನ್ನು ವಿಸ್ತಾರಗೊಳಿಸಿದರೆ ಭಾರತಕ್ಕೆ ಅಮೋಘ ಸೇವೆ ಸಲ್ಲಿಸಿದಂತಾಗುತ್ತದೆ ಎಂದು ಶ್ರೀಮನ್ಮಹಾರಾಜರು ಇಲ್ಲಿ ಈ ದಿನ ನಡೆದ ಸಿದ್ಧಗಂಗೆಯ ಸಂಸ್ಕೃತ ಕಾಲೇಜಿನ ರಜತ ಮಹೋತ್ಸವಕ್ಕೆ ಕಳುಹಿಸಿದ ಸಂದೇಶದಲ್ಲಿ ತಿಳಿಸಿದ್ದರು ದಿವಾನ್ ಸರ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರ್‌ರವರು ಪ್ರಾರಂಭೋತ್ಸವವನ್ನು ನೆರವೇರಿಸಿ ಸಂಸ್ಕೃತ ಭಾಷೆಯ ಹಿರಿಮೆಯನ್ನು ಕೊಂಡಾಡಿದುದಲ್ಲದೇ, ಮೈಸೂರು ದೇಶದಲ್ಲಿ ಮಠಗಳು ವಿದ್ಯಾರ್ಜನೆಗೆ ಮಾಡುತ್ತಿರುವ ಸಹಾಯವನ್ನು ಪ್ರಶಂಸಿಸಿದರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಸಿದ್ಧಗಂಗಾ ಮಠದ ಸ್ವಾಮಿಗಳ ಔದಾರ್ಯವನ್ನು ಹೊಗಳಿದರು

ಮದರಾಸ್ ಹೋಟೆಲುಗಳು ೩ ದಿವಸ ಮಾತ್ರ ಬಂದು

ಹೋಟೆಲುಗಳ ಮೇಲೆ ಮಾರಾಟದ ಮೇಲಿನ ತೆರಿಗೆಯನ್ನು ಸ್ವಲ್ಪ ಮಟ್ಟಿಗೆ ಮದರಾಸಿನಲ್ಲಿ ಬದಲಾಯಿಸಿ ಉಪಸಮಿತಿಯವರು ಸಲಹೆ ಕೊಟ್ಟಿದ್ದಾರಷ್ಟೇ, ಆದರೂ ಸಹ ಈ ಬಗ್ಗೆ ತಮ್ಮ ಅಸಮಾಧಾನವನ್ನು ಸೂಚಿಸಲು ಆ ಪ್ರಾಂತದ ಎಲ್ಲ ಹೋಟಲುಗಳೂ ಜುಲೈ ೧ರಿಂದ ೩ ದಿವಸ ಮುಚ್ಚಬೇಕೆಂದು ಅವುಗಳ ಸಂಘದವರು ನಿರ್ಧರಿಸಿದ್ದಾರೆ

ಕಪೂರ್ತಲಾ ರಾಜರ ನಿಧನ

ಕೆಲವು ದಿನಗಳಿಂದ ಅಲಸ್ಯಗೊಂಡಿದ್ದ ಕಪೂರ್ತಲಾ ಸಂಸ್ಥಾನದ ರಾಜರು ನಿನ್ನೆ ಬೊಂಬಾಯಿನ ತಾಜಮಹಲ್ ಹೋಟಲಿನಲ್ಲಿ ಸ್ವರ್ಗಸ್ಥರಾದರು

ವಿವಾಹ ಮಹೋತ್ಸವಗಳು

ಮೈಸೂರಿನ ಜಮೀನ್ದಾರ್ ಶ್ರೀ ಎಚ್. ಎಸ್ ಕೃಷ್ಣರಾಯರು ಈ ದಿನ ತಮ್ಮ ಕುಮಾರ ಚಿ' ಹೆಚ್ ಕೆ ಸುಬ್ರಹ್ಮಣ್ಯನಿಗೆ ಚಿಕ್ಕಮಗಳೂರು ಕಾಫಿ ಪ್ಲಾಂಟರ್ ಶ್ರೀ ಟಿ ಮಂಜನಾಥ ಅಯ್ಯಂಗಾರ್‌ರವರ ಪುತ್ರಿ ಚಿ॥ ಸೌ॥ ಲಲಿತಮ್ಮನನ್ನು ತಂದುಕೊಂಡು ವಿವಾಹ ಮಹೋತ್ಸವವನ್ನು ನೆರವೇರಿಸಿದರು

ಜವಳಿ ಅಂಗಡಿ ಶ್ರೀ ಅಮಿಕೇಶಯ್ಯನವರ ತಮ್ಮ ಕುಮಾರ ಚಿ॥ ಎಲ್ ಎ ಪದ್ಮನಾಭಯ್ಯನಿಗೆ ಶ್ರೀ ಎಂ ಪಿ ದಾಸಪ್ಪನವರ ಪುತ್ರಿ ಚಿ॥ ಸೌ॥ ವಿಜಯಲಕ್ಷ್ಮಮ್ಮನನ್ನು ತಂದುಕೊಂಡು ನಿನ್ನೆ ವಿವಾಹವನ್ನು ಜರಗಿಸಿದರು

ಮತ್ತೊಂದು ಪ್ರಶ್ನೆಗೆ ಶ್ರೀ ಎಚ್ ಸಿ ದಾಸಪ್ಪನವರು ಉತ್ತರವಿತ್ತು ಸರ್ಕಾರ ಕರಡು ಮಾಡುವ ಬಗ್ಗೆ ನೇಮಿಸಲಾಗಿದ್ದ ಅಧಿಕಾರಿಗಳ ವರದಿಯನ್ನು ಸರ್ಕಾರದವರು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು.

ಸಕ್ಕರೆ ವ್ಯಾಪಾರದ ಮೇಲೆ ಹತೋಟಿ ಇರಬೇಕು

ನಗರ ಆಹಾರ ಸಮಿತಿಗೆ ನಿರ್ಣಯ

ನಗರ ಆಹಾರ ಸಮಿತಿ [illegible] ದ ಶ್ರೀ ಎಂ ಸಿ ನರಸಿಂಹನ್ [illegible] ಸಮಿತಿಗೆ ಕಳುಹಿಸಿರುವ [illegible] ಯುಗಳಲ್ಲಿ ಸಕ್ಕರೆ [illegible] ನೆ ಹೆಚ್ಚುತ್ತಿರುವುದರಿಂದ [illegible] ಹತೋಟಿ [illegible] ಸು ಮಾಡಬೇಕೆಂದು [illegible] ವಾಗಿದೆ [illegible] ಸ್ಥಾನಗಳಲ್ಲಿ [illegible] ಎ ಮತ್ತು ಬಿ ಕಾರ್ಡಿನ [illegible] ೧೨-೧೪ ಔನ್ಸುಗಳಂತೆ [illegible] ಕೆಂದು ಸೂಚಿಸಲಾಗಿದೆ [illegible] ರು ಒದಗಿಸಬೇಕಾದ [illegible] ಕಾರ್ಡು [illegible] ಧಾನ್ಯಗಳನ್ನು [illegible] ದುಪಡಿಯಾಗಬೇಕೆಂದು ಕೋರಲಾಗಿದೆ

ಭಾರತಕ್ಕೆ ಈ ವರ್ಷದಲ್ಲಿ ಆಮದಾಗುವ ಅಕ್ಕಿ

[illegible] ಈ ವರ್ಷ [illegible] ೦,೦೦೦ [illegible] ಕಳುಹಿಸಿಕೊಡಬಹುದೆಂದು [illegible] ರುತ್ತಾರೆಂದು ಗೊತ್ತಾಗಿದೆ

ಧರ್ಮ ಛತ್ರದ ಶಂಕುಸ್ಥಾಪನ

[illegible] ಶ್ರೀ ಪಾಂಡುರಂಗ [illegible] ದ ಎದುರಿನಲ್ಲಿ ಶ್ರೀ [illegible] ಮತ್ತು ಅವರ [illegible] ಗೀರದಿಂದ [illegible] ರುವ ಧರ್ಮ ಛತ್ರದ [illegible] ಶ್ರೀ ಆರ್ ರಾವ ಚಂದ್ರ [illegible] ರಯನವರಿಂದ ಇದೇ [illegible] ಸಂಜೆ [illegible]

ಕರ್ನಾಟಕ ಏಕೀಕರಣದ ಬಗ್ಗೆ ಭಿನ್ನಾಭಿಪ್ರಾಯ

ಕರ್ನಾಟಕ ಏಕೀಕರಣದ ವಿಷಯವಾ [illegible] ರ ಕಾಂಗ್ರೆಸ್ಸಿನ ಕಾರ್ಯಕಾರಿ ಸ [illegible] ಸಿದ್ದ ವಿದು ಜನಗಳ [illegible] ಭಿನ್ನಾಭಿಪ್ರಾಯ ಬಂದಿದೆ [illegible] ಳಲಾಗಿದ ಶ್ರೀ ಟಿ ಸುಬ್ರಹ್ಮ [illegible] ಶ್ರೀ ಕೆ ಪಿ ಪಡೆಯಾರ್ [illegible] ಏಕೀಕರಣವು ಕೂಡಲೇ ಆಗ [illegible] ಕೆಂದೂ [illegible] ಎಸ್. ಚನ್ನಯ್ಯ [illegible] ಬಂಡೀಗೌಡರವರು ತತ್ವ [illegible] ರ ವಾದರೂ ಅದನ್ನು ಕಾರ್ಯ [illegible] ಇದು ಸಕಾಲವಲ್ಲವೆಂದೂ [illegible] ಗೊತ್ತಾಗಿದೆ ಇನ್ನೊಬ್ಬ [illegible] ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗ [illegible] ಯಾವ ಅಭಿಪ್ರಾಯವನ್ನೂ [illegible] ಪಡಿಸಲಿಲ್ಲವೆಂದು ಹೇಳಲಾಗಿದೆ

ಮಂತ್ರಿ ಮಂಡಲದಲ್ಲಿ ಸ್ತ್ರೀಯರಿಗೆ ಪ್ರಾತಿನಿಧ್ಯ

ಶ್ರೀಮತಿ ಯಶೋಧರಾ ದಾಸಪ್ಪನವರ ಕೋರಿಕೆ

ಭದ್ರಾವತಿ ೧೮

[illegible] ಯ ಕರ್ನಾಟಕ ಸಂಘದ ವಾರ್ಷಿಕ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀ [illegible] ಯಶೋಧರಾ ದಾಸಪ್ಪನವರು ಸಂಸ್ಥಾನದ ಮಂತ್ರಿಮಂಡಲದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯವಿರಬೇಕೆಂದು ಮೊನ್ನೆ [illegible] ಮಾಡುತ್ತಾ ತಿಳಿಸಿದರು ವಿವಾಹ [illegible] ವಿಚ್ಛೇದನ ಮುಂತಾದ ವಿಷ [illegible] ದೂರ ದೇಶದ ಪದ್ಧತಿಗಳು ನ [illegible] ದ ಶಕ್ಕೆ ತಕ್ಕದಲ್ಲವೆಂದ ಅವರು ಅ [illegible] ಪಟ್ಟಿರುವರು

ಮನೆ ಬಾಡಿಗೆಗೆ ಇದೆ

[illegible] ರಾಮಾನುಜಾ ರಸ್ತೆಯಲ್ಲಿರುವ [illegible] ನಂಬರ್ [illegible] ಈ [illegible] ಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಗುರುದೇವಾ ಹಾಲ್

([illegible] ಜವಳಿ ಅಂಗಡಿ)
[illegible] ಪ್ರಸಿದ್ದವಾದ ಮೈಸೂರು [illegible] ಸ್ವಂತ ಮಗ್ಗದಿಂದ ತಯಾರಾದ [illegible] ಬೆಂಗಳೂರು, ಧರ್ಮಾವರಂ, [illegible] ಗ್ಯಾರಂಟಿಯಾಗಿ ದೊರೆ [illegible] ಒಮ್ಮೆ ಭೇಟಿ ಕೊಡಿ

ಮೈಸೂರು

ಪ್ರಭುದೇವಾ ಟಾಕೀಸ್

19-6-49 ರಿಂದ ಪ್ರತಿ ದಿನ 3 ಪ್ರದರ್ಶನಗಳ

ತಪಸ್ಯ (ಹಿಂದಿ) ಫಿ

ಅಥವ ಋಷ್ಯಶೃಂಗರ್

ಭೂಮಿಕೆ - ಕೌಸಲ್ಯ, ಊರ್ಮಿಳ, ಪರೇಶ್ ಬ್ಯಾನರ್ಜಿ, ಅಜಿತ್, ಆರ್. ಪಿ ಕಪೂರ್ ರಣಜಿತ್ ರಾಯ್ ಪಾತ್ರವಹಿಸಿರುವ

ಈ ಚಿತ್ರದ ಸಂಗಡ ಇಂಡಿಯನ್ ನ್ಯೂಸ್ ರೀಲ್ ಮತ್ತು ಕಾರ್ಟೂನ್ ಸಹ ತೋರಿಸಲಾಗುತ್ತೆ

ಮೈಸೂರು ಸ್ಟೇಟ್ ರೈಲ್ವೆ

ನಂ 17 44

ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟರವರ ಕಚೇರಿ, ಮೈಸೂರು ೧೬ ೬ ೪೯

ಪ್ರಕಟಣೆ

ಮೈಸೂರು ನಗರದ ರೈಲ್ವೆ ನಿಲ್ದಾಣದಿಂದ ಪ್ರತಿ ದಿನವೂ ಕಚಡಾ ವಗೈರೆ [illegible] ಗೆಯುವ ಬಗ್ಗೆ ಕಂಟ್ರಾಕ್ಟು ತೆಗೆದುಕೊಳ್ಳುವವರಿಂದ ಮೊಹರಾದ ಟೆಂಡರುಗಳನ್ನು ಮೈಸೂರಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆಯ ಮೈಸೂರು ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರು ೧೯೪೯ನೇ ಜೂನ್ ೨೮ನೇ ತಾ॥ ಮಂಗಳವಾರ ಮಧ್ಯಾಹ್ನ [illegible] ಘಂಟೆವರೆಗೆ ಸ್ವೀಕರಿಸುವರೆಂದು ಈ ಮೂಲಕ ಪ್ರಕಟಿಸಲಾಗಿದೆ "ಮೈಸೂರು ನಿಲ್ದಾಣದಲ್ಲಿ ಸ್ಯಾನಿಟರಿ ಕಂಟ್ರಾಕ್ಟಿನ ಬಗ್ಗೆ ಟೆಂಡರು" ಎಂಬ ಶಿರೋನಾಮೆಯನ್ನು ಲಕೋಟೆ ಮೇಲೆ ಹಾಕಿರಬೇಕು ಮೈಸೂರು ನಿಲ್ದಾಣದ ಅಂಗಳ, [illegible] ಸೈಡಿಂಗುಗಳು, ಪೊಲೀಸ್ ಲೈನುಗಳು, ರೈಲ್ವೆ ನಿಲ್ದಾಣ ಪ್ರದೇಶದ ಕ್ವಾರ್ಟರುಗಳು ಮತ್ತು ಕಂಟ್ರಾಕ್ಟಿನ ಅವಧಿಯೊಳಗೆ ಪ್ರಕಟಿಸಲ್ಪಡಬಹುದಾದ ಇತರ ಪ್ರದೇಶಗಳು - ಈ ಕಡೆಗಳಿಂದ ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಸಕಾಲದಲ್ಲಿ ಕಕ್ಕಸವನ್ನು ಸಾಗಿಸಲು ಕಂಟ್ರಾಕ್ಟರು ಬದ್ಧರಾಗಿರಬೇಕು ಇದಕ್ಕಾಗಿ ಕಂಟ್ರಾಕ್ಟರು ಜೋಡೆತ್ತಿನ [illegible] ಯನ್ನಿಡಬೇಕು

೨ ಮೈಸೂರು ರೈಲ್ವೆಯ ಚೀಫ್ ಆಡಿಟರಲ್ಲಿ ೨೫ ರೂ ಡಿಪಾಜಿಟ್ ಮಾಡಿದ ಬಗ್ಗೆ ಪ್ರತಿ ಟೆಂಡರಿನೊಡನೆಯೂ ಜನರಲ್ ರಶೀತಿಯೂ ಇರಬೇಕು ಅಕ್ನಾಲೆಡ್ಜ್‌ಮೆಂಟ್ ರಿಜಿಸ್ಟರ್ ಪೋಸ್ಟಿನಲ್ಲಿ ಟೆಂಡರನ್ನು ಕಳುಹಿಸಬೇಕು ಮುದ್ದಾಗಿಯಾಗಲಿ ಇತರರ ಮೂಲಕ ಕೊಟ್ಟ ಟೆಂಡರನ್ನು ಅಂಗೀಕರಿಸುವುದಿಲ್ಲ

೩ ಟೆಂಡರನ್ನು ಅಂಗೀಕರಿಸುವ, ತಿರಸ್ಕರಿಸುವ ಅಥವ ಹೊಸ ಟೆಂಡರನ್ನು ಕರೆಯುವ ಅಧಿಕಾರವನ್ನು ಡಿ॥ ಟ್ರಾ॥ ಸೂಪರಿಂಟೆಂಡೆಂಟರೇ ಇಟ್ಟುಕೊಂಡಿರುವರು

೪ ಅಂಗೀಕೃತವಾದ ಟೆಂಡರುದಾರರು ತಿಳಿವಳಿಕೆ ಕೊಟ್ಟ ಕೂಡಲೇ ಷರತ್ತಿನ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು

೫ ೧೯೪೯ನೇ ಜುಲೈ ೧ರಿಂದ ೧೯೫೦ನೇ ಜೂನ್ ೩೦ರ ವರೆಗೆ ಹನ್ನೆರಡು ತಿಂಗಳ ಕಾಲ ಕಂಟ್ರಾಕ್ಟು ಜಾರಿಯಲ್ಲಿರುವುದು

ಪಿ. ಆರ್ ಕೃಷ್ಣಸ್ವಾಮಿ,
ಡಿ॥ ಟ್ರಾಫಿಕ್ ಸೂಪರಿಂಟೆಂ

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೋಮಕಲಾ

ಗಂಡಸರ ಮತ್ತು ಹೆಂಗಸರ ಮುಖದ ಬಿಳುಪು, ಕೆಂಪು ಮೈ ಮೇಲಿನ ಮೊಡವೆ ಮಚ್ಚೆಗಳು, ಮೇ [illegible] ವ್ರಣಗಳು ಸಹಾ ಪರಿಹಾರ [illegible] ಧ್ಯವಿಲ್ಲದೆ ಸೇವಿಸುವ ಔಷಧಿ

ವಿಳಾಸ — ಬೆಲೆ ಶೀಸೆ 1ಕ್ಕೆ 2-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಿಕರಿಗೆ ಸಿದ್ಧವಾಗಿದೆ

ಪಂಚಿಕ ರಾತ್ರ

(By Dr N S [illegible]
Inter Arts & Inter Science Text Book [illegible]
ಬೆಲೆ 1 6 [illegible]
ವಿಚಿತ್ರ ಸಾಹಿತ್ಯ [illegible]
[illegible]

ಒಕ್ಕಲಿಗರು

ಬಿಕರಿಗೆ ಇವೆ

ಡಾಕ್ಟ್ [illegible]
[illegible]
[illegible]

[illegible]
Printed [illegible]
published by [illegible]
[illegible] the [illegible]
D [illegible]

5 ದಿನಗಳು ಮಾತ್ರ

ಬೊಂಬಾಯಿನ ಪೃಥ್ವಿ ಥಿಯೇಟರ್ಸ್‌ರವರು ಮೈಸೂರು ಟೌನ್ ಹಾಲ್‌ನಲ್ಲಿ

ಸುಪ್ರಸಿದ್ಧ ಸಿನಿಮಾ ನಟ **ಪೃಥ್ವಿರಾಜ್** ಮತ್ತು ಅವರ ವೃಂದದಿಂದ

22 6-49 ಬುಧವಾರ ರಾತ್ರಿ 10ಕ್ಕೆ

ದೀವಾರ್

21 6 49 ಶುಕ್ರವಾರ ರಾತ್ರಿ 10ಕ್ಕೆ

ಘೆದ್ದಾರ್ (ದೇಶದ್ರೋಹಿ)



23 6-49 ಗುರುವಾರ 10ಕ್ಕೆ

ಶಕುಂತಲಾ

24-6-49 ಶನಿವಾರ ರಾತ್ರಿ 10ಕ್ಕೆ

ಪಠಾಣ್

ಎಂಬ ಹಿಂದಿ ಕಲಾಪೂರಿತ ನಾಟಕಗಳನ್ನು ಅಭಿನಯಿಸುವರು.

ಟಿಕೇಟ್ ದರ - ರೂ 15, 10, 7 8-0 5, 3-8-0, 2 ಮತ್ತು 1

[illegible] ಟೌನ್‌ಹಾಲ್ ಬಳಿ ಪ್ರತಿ ದಿನ ಬೆಳಿಗ್ಗೆ 10ರಿಂದ 1ರ ವರೆಗೆ ಸಂಜೆ 4 ರಿಂದ 6ರ ವರೆಗೆ [illegible] ಮುಂಗಡ ಕಾದಿರಿಸಿಕೊಳ್ಳಬಹುದು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೨೧-೬-೪೮ [ಸಂಚಿಕೆ ೨೬೪]

ಮೈಸೂರುನಗರದಲ್ಲೂ ಹೋಟೆಲುಗಳ ಬಂದ್

ಇಡ್ಲಿ-ದೋಸೆಗಳ ಬಗ್ಗೆ ನಿಲುವಳಿ ನಿರ್ಣಯ

ಶಾಸನ ಸಭೆಯಲ್ಲಿ ಬಿರುಸಿನ ಚರ್ಚೆ

ಸ್ವಂ. ಸು. ಫೋ] ಬೆಂಗಳೂರು ೨೧

ಯಾವ ಧಾನ್ಯಗಳಿಂದಲೂ ಹೋಟಲುಗಳವರು ಇಡ್ಲಿ-ದೋಸೆಗಳನ್ನು ಮಾಡಲಾಗದೆಂದು ಸರ್ಕಾರದವರು ಇತ್ತೀಚೆಗೆ ಹೊರಡಿಸಿರುವ ಆಜ್ಞೆಯು ವಿಚಾರವಾಗಿ ಶ್ರೀ ಎಂ.ಪಿ.ಎಲ್. ಶಾಸ್ತ್ರಿಗಳು ಮಂಡಿಸಿದ್ದ ಅವಸರದ ಠರಾವಿನಮೇಲೆ ನಿನ್ನೆ ಶಾಸನ ಸಭೆಯಲ್ಲಿ ವಿಪುಲ ಚರ್ಚೆ ನಡೆಯಿತು. ಈ ಆಜ್ಞೆಯಿಂದ ಮುಖ್ಯವಾಗಿ ವಿದ್ಯಾರ್ಥಿಗಳು, ವಕೀಲರು, ಕಾರ್ಮಿಕರು ಮತ್ತು ಹೊರಗಿನಿಂದ ಬರುವವರಿಗೆ ತುಂಬಾ ಅನಾನುಕೂಲವಾಗಿದೆಯೆಂದೂ, ಬೇಕಾದರೆ ಸರ್ಕಾರದವರು ಹೋಟಲುಗಳಿಗೆ ರೇಷನ್ ಪ್ರಮಾಣದಲ್ಲಿ ಧಾನ್ಯಗಳನ್ನು ಒದಗಿಸಿ ಮೇಲ್ಕಂಡ ಪದಾರ್ಥಗಳ ತಯಾರಿಗೆ ಹಕೋಟೆಯನ್ನಿಡಬಹುದೆಂದೂ ಸೂಚಿಸಿದರು.

ಶ್ರೀಗಳಾದ ಎಲ್.ಎಸ್. ವೆಂಕಾಜಿರಾವ್, ಎಸ್. ಕೃಷ್ಣಸ್ವಾಮಿ ರಾವ್, ಎಗ್ಗಣ್ಣಪ್ಪ, ಎಂ. ಸಿ. ಲಿಂಗೇಗೌಡ, ಅಬ್ದುಲ್ ರಹಿಮಾನ್ ಮುಂತಾದವರು ನಿರ್ಣಯವನ್ನು ಅನುಮೋದಿಸಿ ಈ ಪ್ರತಿಬಂಧಕವನ್ನು ತೆಗೆದುಹಾಕಬೇಕೆಂದು ಹೇಳಿದರು.

ಶ್ರೀಗಳಾದ ಎಚ್. ಎಂ. ಚನ್ನಬಸಪ್ಪ, ಕಡಿದಾಳ್ ಮಂಜಪ್ಪ, ಟಿ. ಹನುಮಯ್ಯ, ಶ್ರೀಮತಿ ರತ್ನಮ್ಮ ಐಜಾಕ್, ಜ॥ ಅಬ್ದುಲ್ ಅಲಾಂ ಇವರುಗಳು ನಿರ್ಣಯವನ್ನು ವಿರೋಧಿಸಿದರು. ಜ॥ ಮಹಮದ್ ಇಮಾಂರವರು ನಿರ್ಣಯವನ್ನು ವಿರೋಧಿಸಿ ಹೋಟಲುಗಳೇ ಕಾಳಸಂತೆಗೆ ಮೂಲಸ್ಥಾನವೆಂದೂ, ಅವುಗಳಿಂದ ಅಕ್ಕಿಯ ಅಭಾವವು ಹೆಚ್ಚಾಗಿದೆಯೆಂದೂ ಹೇಳಿದರು. ಈ ನಿರ್ಬಂಧವನ್ನು ಹಾಕಿದುದಕ್ಕಾಗಿ ಸರ್ಕಾರದವರನ್ನು ಅಭಿನಂದಿಸಿದುದಲ್ಲದೆ ಇನ್ನೂ ಬಲವಾದ ನಿರ್ಬಂಧಗಳನ್ನು ಹಾಕಬೇಕೆಂದು ಸೂಚಿಸಿದರು.

ಸರ್ಕಾರದ ಪರವಾಗಿ ಶ್ರೀ ಟಿ. ಮರಿಯಪ್ಪನವರು ಉತ್ತರವಿತ್ತರು. ಅಕ್ಕಿಯಿಂದ ಇಡ್ಲಿ-ದೋಸೆಗಳನ್ನು ಮಾಡಲಾಗದೆಂದು ಆಜ್ಞೆ ಮಾಡಿದ ಮೇಲೆ ಹೋಟಲಿನವರು ಇತರ ಧಾನ್ಯಗಳಿಂದ ಅವನ್ನು ಮಾಡುವುದಾಗಿ ನೆಪ ಹೇಳಿ ಅಕ್ಕಿಯನ್ನೇ ಉಪಯೋಗಿಸುತ್ತಿರುವುದಾಗಿ ಪುಕಾರುಗಳು ಬಂದವು. ಯಾವ ಧಾನ್ಯಗಳಿಂದಲೂ ಇಡ್ಲಿ-ದೋಸೆಗಳನ್ನು ಮಾಡದಂತೆ ನಿಷೇಧಿಸುವುದೇ ಇದಕ್ಕೆ ಪರಿಹಾರವೆಂದು ಮೈಸೂರು ನಗರದ ಪೌರಸಭೆ, ಆಹಾರ ಸಮಿತಿ, ಕೇಂದ್ರ ಆಹಾರ ಸಮಿತಿ, ಜಿಲ್ಲಾಧಿಕಾರಿಗಳೇ ಮುಂತಾದ ಕಡೆಗಳಿಂದ ಒತ್ತಾಯ ಬಂದಿತು. ಅದ್ದರಿಂದ ನಿರ್ವಾಹವಿಲ್ಲದೆ ಈ ಆಜ್ಞೆಯನ್ನು ಹಾಕಲಾಯಿತು. ಈಗ ಜನರಿಗೆ ಆಗುವ ತೊಂದರೆಯು ಸರ್ಕಾರದ ಗಮನದಲ್ಲಿದೆ. ಪರಿಸ್ಥಿತಿಯು ಉತ್ತಮಗೊಂಡೊಡನೆ ಇದನ್ನು ಪುನಃ ಪರಿಶೀಲಿಸಲಾಗುವುದು ಎಂದು ಅವರು ಭರವಸೆ ಕೊಟ್ಟರು. ಆದರ ಮೇಲೆ ನಿರ್ಣಯವನ್ನು ಶಾಸ್ತ್ರಿಗಳು ವಾಪಸು ತೆಗೆದುಕೊಂಡರು.

ಹೊರದೇಶಗಳಿಂದ ಕಾಶಿ ಹಿಂದೂ ವಿಶ್ವ ವಿದ್ಯಾಲಯಕ್ಕೆ ಓದಲು ಬರುವವರ ಸಂಖ್ಯೆ ಹೆಚ್ಚುತ್ತಿದೆ. ಬರುವ ವರ್ಷಕ್ಕೆ ೩೦ ಜನರು ಹೊರಗಿನಿಂದ ಬರಲಿರುವರು.

ರೈಲಿನೊಡನೆ ಓಡುವ ಪಾರಿವಾಳ

ಡಿಬ್ರುಗರ್ ಎಂಬಲ್ಲಿ ರೈಲಿನೊಡನೆ ಒಂದು ಪಾರಿವಾಳವು ಪ್ರತಿದಿನವೂ ಓಡುತ್ತಿದೆ. ಸುಮಾರು ಮೂರು ವಾರಗಳ ಹಿಂದೆ ಅದು ತನ್ನ ಸಂಗಾತಿಯಾದ ಹೆಣ್ಣು ಪಾರಿವಾಳವನ್ನು ಕಳೆದುಕೊಂಡು ಅದನ್ನು ಹುಡುಕಲು ರೈಲಿನೊಡನೆ ಓಡುತ್ತಿದೆಯೆಂದೂ ಅಂದಿನಿಂದ ಇದುವರೆಗೆ ಅದು ಅನ್ನಾಹಾರಗಳನ್ನು ಸೇವಿಸಿಲ್ಲವೆಂದೂ ವರದಿಯಾಗಿದೆ.

ಮಧ್ಯ ಪ್ರಾಂತದಲ್ಲಿ ಹೆಂಡದ ರೇಷನ್

ಮಧ್ಯ ಪ್ರಾಂತದ ಸರಕಾರದವರು ತಮ್ಮ ದೇಶದಲ್ಲಿ ಹೆಂಡವನ್ನು ರೇಷನ್ ಮೂಲಕ ಮಾರಾಟ ಮಾಡಿಸಲು ಆಲೋಚಿಸುತ್ತಿರುವುದಾಗಿ ವರದಿಯಾಗಿದೆ. ಪ್ರಾಂತದ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲದಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಪಾನ ನಿರೋಧನ ತತ್ವವನ್ನು ಅಲ್ಲಿನ ಸರಕಾರದವರು ಅಂಗೀಕರಿಸಿದ್ದರೂ ಸರಕಾರದ ಆರ್ಥಿಕ ದೃಷ್ಟಿಯಿಂದ ಮಿತವಾದ ಪಾನವನ್ನು ಸರಬರಾಜು ಮಾಡುವುದರಿಂದ ವಿಶೇಷ ಅನರ್ಥವುಂಟಾಗಲಾರದೆಂದು ಭಾವಿಸಿರುವುದಾಗಿ ಹೇಳಲಾಗಿದೆ.

ಜಪಾನಿನಲ್ಲಿ ಗರ್ಭಸ್ರಾವಕ್ಕೆ ಶಾಸನದ ಸಮ್ಮತಿ

ತಾಯಿಯ ಆರೋಗ್ಯ ಪಾಲನೆ ಮತ್ತು ಮಕ್ಕಳ ಪೋಷಣೆಗೆ ಅನುಕೂಲವಿಲ್ಲದಿದ್ದಲ್ಲಿ ಗರ್ಭಸ್ರಾವವನ್ನು ಮಾಡಿಕೊಳ್ಳುವುದು ನ್ಯಾಯಬದ್ಧವಾಗುವುದೆಂಬ ಬಗ್ಗೆ ಜಪಾನಿನಲ್ಲಿ ಹೊಸ ಶಾಸನವನ್ನು ಮಾಡಲಾಗಿದೆ.

ವಿದ್ಯಾವರ್ಧಕ ಹೈಸ್ಕೂಲು

ಮೇಲ್ಕಂಡ ಹೈಸ್ಕೂಲು ಮಂಡಿ ಮೊಹಲ್ಲಾದಲ್ಲಿರುವ ತಿಮ್ಮಯ್ಯಾಚಾರ್ ಅವರ ಛತ್ರದಲ್ಲಿ ನಡೆಯುತ್ತಿದೆ. ಈ ವರ್ಷ ಹೈಸ್ಕೂಲು ಮೊದಲನೇ ತರಗತಿಗೆ ಮಾತ್ರ ಪ್ರವೇಶಾವಕಾಶವಿರುತ್ತೆ. ನುರಿತ ಅಧ್ಯಾಪಕರುಗಳನ್ನು ನೇಮಿಸಿಕೊಂಡಿರುತ್ತೆ. ಈ ಸ್ಕೂಲಿಗೆ ಸೇರಬೇಕೆನ್ನುವ ವಿದ್ಯಾರ್ಥಿಗಳು ಇದೇ ತಿಂಗಳು ೨೫ ನೆಯ ತಾರೀಖಿನೊಳಗಾಗಿ ಅರ್ಜಿ ಹಾಕಿಕೊಳ್ಳಬೇಕೆಂದು ಕಾರ್ಯದರ್ಶಿ ಶ್ರೀ ಕೆ. ಪುಟ್ಟಸ್ವಾಮಿಯವರು ತಿಳಿಸಿರುತ್ತಾರೆ.

ಐಶ್ವರ್ಯವಂತರು ಮತ್ತು ಬಡವರ ಪಟ್ಟಿ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು. ಫೋ] ಬೆಂಗಳೂರು ೨೧

ಬಡಜನರ ಸೇವೆಯಿಂದ ಕೇವಲ ಕೆಲವು ಜನರು ಮಾತ್ರ ಧನವನ್ನು ಗಳಿಸಿ ಐಶ್ವರ್ಯವಂತರಾಗುತ್ತಿರುವ ಪರಿಸ್ಥಿತಿಯು ಸಂಸ್ಥಾನದಲ್ಲಿ ಇರುವುದರಿಂದ ಕ್ರಮೇಣ ಕಮ್ಯೂನಿಸ್ಟರ ಪ್ರಾಬಲ್ಯಕ್ಕೆ ಅವಕಾಶವಾಗುವುದಿಲ್ಲವೇ? ಎಂಬ ಪ್ರಶ್ನೆಯು ಈ ದಿನ ಶಾಸನ ಸಭೆಯಲ್ಲಿ ಶ್ರೀ॥ ಕಡಿದಾಳ ಮಂಜಪ್ಪನವರಿಂದ ಹಾಕಲ್ಪಟ್ಟಿತು. ಈ ಪರಿಸ್ಥಿತಿಯು ಇರುವುದಾಗಿ ಸರ್ಕಾರಕ್ಕೆ ಕಂಡುಬಂದಿಲ್ಲವೆಂದೂ, ಮುಂದೆ ಆಗಬಹುದಾದ ವಿದ್ಯಮಾನಗಳ ವಿಚಾರವು ಸದಸ್ಯರ ಅಭಿಪ್ರಾಯಕ್ಕೆ ಸಂಬಂಧಿಸಿದುದೆಂದೂ ಶ್ರೀ॥ ಎಚ್. ಸಿ. ದಾಸಪ್ಪನವರು ಹೇಳಿದರು. ಸಂಸ್ಥಾನದ ಪ್ರಜೆಗಳ ಸಂಪಾದನೆ ಉತ್ಪತ್ತಿಯ ಬಗ್ಗೆ ಇನ್ನೂ ತನಿಖೆ ಮಾಡಿಲ್ಲವೆಂದೂ ಸಹ ಅವರು ತಿಳಿಸಿದರು.

ರೈಲ್ವೆ ನಿಲ್ದಾಣಗಳಲ್ಲಿ ಕೋಮುವಾರು ಫಲಾಹಾರಮಂದಿರಗಳಿಗೆ ಅವಕಾಶವಿರಬಾರದೆಂಬ ಕೇಂದ್ರ ಬೋರ್ಡಿನ ನಿರ್ಣಯದಂತೆ ನಮ್ಮಲ್ಲಿಯೂ ಮುಸ್ಲಿಂ ಮತ್ತು ಯೂರೋಪಿಯನ್ ಫಲಾಹಾರ ಮಂದಿರಗಳನ್ನು ವಜಾ ಮಾಡಲಾಗಿದೆಯೆಂದೂ ಜ॥ ಅಲಂರವರ ಪ್ರಶ್ನೆಗೆ ಉತ್ತರವಾಗಿ ಶ್ರೀ ಟಿ. ಮರಿಯಪ್ಪನವರು ತಿಳಿಸಿದರು.

ನಗರ ಪೌರಸಭೆಗಳ ಸುಧಾರಣೆಯನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಿಸಲಾಗಿದೆಯೆಂದೂ, ಇತರ ಪೌರಸಭೆಗಳ ಬಗ್ಗೆ ಸಮಿತಿಯನ್ನು ನೇಮಿಸುವ ಅಭಿಪ್ರಾಯವು ಸರ್ಕಾರಕ್ಕೆ ಇಲ್ಲವೆಂದೂ, ಶ್ರೀ ಆರ್. ಚನ್ನಿಗರಾಮಯ್ಯನವರು ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ನಿಲುವಳಿ ನಿರ್ಣಯ

ಇಂಜನಿಯರಿಂಗ್ ಕಾಲೇಜಿನಲ್ಲಿ ಕೆಮಿಕಲ್ ಇಂಜನಿಯರಿಂಗನ್ನು ರದ್ದು ಮಾಡಿರುವ ಬಗ್ಗೆ ಶ್ರೀ॥ ಎಂ. ಪಿ. ಎಲ್. ಶಾಸ್ತ್ರಿಗಳು ಅವಸರದ ಠರಾವನ್ನು ತಂದರು. ಈ ವಿಷಯವಾಗಿ ವಿವರಗಳು ಬಂದಿಲ್ಲವೆಂದೂ, ವಿಶ್ವ ವಿದ್ಯಾಲಯದ ಅಧಿಕಾರಕ್ಕೆ ಇದು ಸಂಬಂಧಪಟ್ಟಿರುವುದರಿಂದ ಸರ್ಕಾರದವರು ಇದರಲ್ಲಿ ಪ್ರವೇಶಿಸುವುದಿಲ್ಲವೆಂದೂ ಸಚಿವರಾದ ಶ್ರೀ॥ ಡಿ. ಎಚ್. ಚಂದ್ರಶೇಖರಯ್ಯನವರು ಹೇಳಿದರು. ಇದು ಪ್ರಾಮುಖ್ಯ

ಮೈಸೂರಿನಲ್ಲೂ ಹೋಟೆಲುಗಳು ಮುಚ್ಚುವುವೇ?

ಜುಲೈ ೧ ರೊಳಗೆ ಬೇಡಿಕೆಗಳನ್ನು ಈಡೇರಿಸದಿದ್ದರೆ ಹರತಾಳ

ಮೈಸೂರು ೨೧

ಮೈಸೂರು ನಗರದ ಹೋಟಲುಗಳವರ ಸಂಘದ ವಿಶೇಷ ಸಭೆಯು ಮೊನ್ನೆ ದಿನ ನಡೆದು ಹೋಟಲುಗಳಿಗೆ ಇತ್ತೀಚೆಗೆ ಪ್ರಾಪ್ತವಾಗಿರುವ ಕಷ್ಟನಷ್ಟಗಳನ್ನು ಪರಿಶೀಲಿಸಿ ಸರ್ಕಾರದವರು ಈ ತಿಂಗಳು ಅಂತ್ಯದೊಳಗೆ ಹೋಟಲುಗಳ ಮೇಲಿನ ಹಲವು ನಿರ್ಬಂಧಗಳನ್ನು ತೆಗೆದುಹಾಕದಿದ್ದರೆ ನಗರದಲ್ಲಿರುವ ಎಲ್ಲಾ ಹೋಟಲುಗಳೂ, ಫಲಾಹಾರ ಮಂದಿರಗಳೂ, ತಿಂಡಿ ಅಂಗಡಿಗಳೂ ಮತ್ತು ಇತರ ಉಪಾಹಾರ ಗೃಹಗಳೂ ಜುಲೈ ೧ನೇ ತಾರೀಕಿನಿಂದ ತಮ್ಮ ವ್ಯಾಪಾರವನ್ನು ನಿಲ್ಲಿಸಿ ತಮಗೆ ಆಗುತ್ತಿರುವ ಅಪಾರವಾದ ನಷ್ಟವನ್ನು ತಪ್ಪಿಸಿಕೊಳ್ಳದೆ ಗತ್ಯಂತರವೇ ಇಲ್ಲವೆಂದು ನಿರ್ಣಯ ಮಾಡಲಾಗಿದೆ. ಯಾವ ಧಾನ್ಯಗಳಿಂದಲೂ ಇಡ್ಲಿ, ದೋಸೆಗಳನ್ನೂ ಹಾಲಿನಿಂದ ತಿಂಡಿ ಪದಾರ್ಥಗಳನ್ನೂ ಮಾಡದಂತೆ ಪ್ರತಿಬಂಧಿಸಿರುವುದು, ರೇಷನ್ ಪದಾರ್ಥಗಳನ್ನು ಉಪಯೋಗಿಸದಂತೆ ಸೂಚನೆ ಕೊಟ್ಟಿರುವುದು, ವ್ಯಾಪಾರದ ಕಾಲಾವಧಿಯನ್ನು ಗೊತ್ತುಮಾಡಿರುವುದು, ಮಾರಾಟದ ತಿಂಗಳನ್ನು ವಿಧಿಸಿರುವುದು-ಇವೇ ಮುಂತಾದ ಕಾರಣಗಳಿಂದ ಹೋಟಲುಗಳ ವ್ಯಾಪಾರಕ್ಕೆ ಬಹಳ ಮಟ್ಟಿಗೆ ಧಕ್ಕೆಯುಂಟಾಗಿರುತ್ತದೆ. ಆದುದರಿಂದ ಹೋಟಲುಗಳಿಗೆ ಉಚಿತವಾದ ಪ್ರಮಾಣದಲ್ಲಿ ಅಕ್ಕಿ ಮತ್ತು ಗೋಧಿಯ ಸರಬರಾಜು, ವ್ಯಾಪಾರದ ಕಾಲದ ನಿರ್ಬಂಧದ ರದ್ದು, ಮಾರಾಟದ ತಿಂಗಳ ವಿನಾಯಿತಿ, ಇಡ್ಲಿ ದೋಸೆಗಳ ತಯಾರಿಗೆ ಅನುಮತಿ-ಇವುಗಳ ಬಗ್ಗೆ ಸರ್ಕಾರದವರು ಸೌಲಭ್ಯ ಕಲ್ಪಿಸುವಂತೆ ಪ್ರಾರ್ಥಿಸಲಾಗಿದೆ. ತಪ್ಪಿದರೆ ಮೇಲ್ಕಂಡ ಹೋಟಲುಗಳನ್ನು ಮುಚ್ಚತಕ್ಕದ್ದೆಂದೂ ಸಹ ತೀರ್ಮಾನಿಸಲಾಗಿದೆ.

ಕಾಶ್ಮೀರದ ಯುವರಾಜರಿಗೆ ರಾಜ್ಯಾಧಿಕಾರ

ಕಾಶ್ಮೀರದ ಮಹಾರಾಜರಾದ ಶ್ರೀ॥ ಹರಿಸಿಂಗರು ಅನಾರೋಗ್ಯದ ನಿಮಿತ್ತ ಕೆಲವು ಕಾಲ ವಿದೇಶ ಪ್ರವಾಸ ಕೈಕೊಳ್ಳುವುದಾಗಿಯೂ, ಆ ಅವಧಿಯಲ್ಲಿ ಅಲ್ಲಿನ ಯುವರಾಜರು ರಾಜ್ಯಾಡಳಿತವನ್ನು ವಹಿಸುವರೆಂದೂ ಪ್ರಕಟವಾಗಿದೆ. ಈ ಬಗ್ಗೆ ಅಲ್ಲಿನ ಮಹಾರಾಜರು ನೆನ್ನೆ ಒಂದು ರಾಜಘೋಷಣೆಯನ್ನು ಹೊರಡಿಸಿ ಸಂಸ್ಥಾನದ ರಾಜ್ಯಾಡಳಿತ, ನ್ಯಾಯಾಂಗ, ಕಾರ್ಯಾಂಗ, ಶಾಸನಾಂಗಗಳು ಮೊದಲಾದವಿಷಯ ಬಾಬುಗಳ ಅಧಿಕಾರವನ್ನೂ ಯುವರಾಜರಿಗೆ ವಹಿಸಿಕೊಟ್ಟಿರುತ್ತಾರೆ. ಯುವರಾಜ ಶ್ರೀ॥ ಕರಣ್ ಸಿಂಗರವರು ನೆನ್ನೆ ಶ್ರೀನಗರದಲ್ಲಿ ನಡೆದ ರಾಜ ದರ್ಬಾರಿನೊಡನೆ ಆಡಳಿತಾಧಿಕಾರವನ್ನು ವಹಿಸಿಕೊಂಡರು.

ವಾದ ವಿಚಾರವೆಂದೂ, ಬೇಕಾದ ವಿವರಗಳನ್ನು ಸರ್ಕಾರದವರು ತರಿಸಿಕೊಳ್ಳಬಹುದೆಂದೂ ಅಧ್ಯಕ್ಷರು ತಿಳಿಸಿ ನಾಳೆ ಸಂಜೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ಹೇಳಿದರು.

ಜುನಾಗಡದ ಮಾಜಿ ದಿವಾನರು ನಿರಾಶ್ರಿತರು

ಜುನಾಗಡದಿಂದ ಕರಾಚಿಗೆ ಓಡಿಹೋಗಿದ್ದ ಮಾಜಿ ದಿವಾನರಾದ ಸರ್ ಷಾನವಾಜ್ ಭುಟ್ಟೋ ಅವರು ಜುನಾಗಡದಿಂದ ನಿರಾಶ್ರಿತರೆಂದು ಪರಿಗಣಿಸಲ್ಪಟ್ಟಿದ್ದಾರೆ. ಜುನಾಗಡ ಪ್ರಾಂತ್ಯದ ಕಡೆಗಳಲ್ಲಿರುವ ಅವರ ೧೦ ಲಕ್ಷ ರೂ. ಗಳ ಆಸ್ತಿಯನ್ನು ಅವರು ಮಾರಿರುವುದನ್ನು ಈ ಶಾಸನದ ರೀತ್ಯಾ ತಡೆಯಲಾಗಿದೆ. ನಿರಾಶ್ರಿತರ ಅಧಿಕಾರಿಗಳ ಒಪ್ಪಿಗೆಯಿಲ್ಲದೆ ಯಾವ ನಿರಾಶ್ರಿತನ ಆಸ್ತಿಯೂ ಯಾವ ರೀತಿಯಲ್ಲೂ ವಿಲೇ ಆಗಕೂಡದೆಂದು ಹೇಳಲಾಗಿದೆ.

ಹೈದರಾಬಾದು ಹರಿಜನರು ಕ್ರೈಸ್ತ ಮತಕ್ಕೆ

ಹಿಂದೆ ರಜಾಕರರೊಡನೆ ಸೇರಿ ಪೌಜರ ಕೃತ್ಯಗಳನ್ನು ಎಸಗಿದ ಹರಿಜನರನ್ನು ತೋಂದರೆಯಿಂದ ಪಾರು ಮಾಡುವ ಆಶೋತ್ತರ ಹುಟ್ಟಿಸಿ, ಅವರನ್ನು ಸಾವಿರಾರು ಸಂಖ್ಯೆಯಲ್ಲಿ ಕ್ರೈಸ್ತ ಪಾದ್ರಿಗಳು ಕ್ರಿಸ್ತ ಮತಕ್ಕೆ ಸೇರಿಸುತ್ತಿರುವರೆಂದು ವರದಿಯಾಗಿದೆ.

ಜವಾಹರ್ ಮಕ್ಕಳಿಗೆ ನೆಹರೂರವರಿಂದ ಆನೆ

ಆನೆಗಳನ್ನು ಕಳುಹಿಸಿಕೊಡುವಂತೆ ಜಪಾನಿನ ಹಲವು ಮಕ್ಕಳು ಮಾಡಿಕೊಂಡ ಮನವಿಯನ್ನು ಮನ್ನಿಸಿ ಪಂಡಿತ ನೆಹರೂರವರು ಎರಡು ಆನೆಗಳನ್ನು ಅಲ್ಲಿಗೆ ಕಳುಹಿಸಲು ಏರ್ಪಾಡು ಮಾಡಿರುವರು

ಶಾಲಾ ಮಕ್ಕಳಿಗೆ ಛಡಿ ಏಟು

ಮಕ್ಕಳನ್ನು ಒಳ್ಳೆಯ ದಾರಿಗೆ ತರಲು ಶಾಲೆಗಳಲ್ಲಿ ಬೆತ್ತದ ಪ್ರಯೋಗ ಮಾಡುವುದು ಅವಶ್ಯಕವೆಂಬ ಅಭಿಪ್ರಾಯವನ್ನು ಸಂಯುಕ್ತ ಪ್ರಾಂತ್ಯದ ಒಂದು ಸಮಿತಿಯವರು ಸೂಚಿಸಿರುತ್ತಾರೆ.

CENRTAL FOOD TECHNOLOGICAL RESEARCH INSTITUTE, MYSORE.

Council of Scientific and Industrial Research.

—:o:—

Applications are invited for the posts of Machanics and Workshop Assistants to assist in fitting up the laboratories and workshops of the Institute. The appointments are temporary, but those who are found to be promissing and efficient, will be considered for employment on a permanent basis at a later date Preference will be given to those who have the following qualifications .—

1 Wide experience in Workshops and erection of Machinery.

2 Experience in fitting up laboratories and maintenance of services such as water, gas, etc , in the laboratories

3 Experienca inthe internal wiring of buildings and erection, maintenance and running of electrical Machinery

Salaries—Mechanics on Rs. 4 to 5 per day and Assistant Mechanics on Rs. 2 to 2-8-0 per day depending on quelifications and experience. Candidates may be required to attend interview at their own expense Selected persons will have to join immediately

Applications should reach the Planning Officer Central Food Technological Research Institute, V V Mohalla, P.O , Mysore before 30th June 1949.

॥ ಶ್ರೀ ॥

ಗಣೇಶಾ ಟಾಕೀಸ್

22-6-49ನೇ ಬುಧವಾರದಿಂದ
ಪ್ರತಿ ದಿನ 3 ಪ್ರದರ್ಶನಗಳು
ಜಿ. ಎನ್ ಬಾಲಸುಬ್ರಹ್ಮಣ್ಯಂ ಮತ್ತು ಪೆರಿಯನಾಯಕಿ ಪಾತ್ರವಹಿಸಿರುವ

ರುಕ್ಮಾಂಗದ

(ತಮಿಳು)

ಲಕ್ಷ್ಮಿ ಚಿತ್ರ

21-6-49 ರಿಂದ
ಪ್ರತಿ ದಿನ 4 ಆಟಗಳು
ಬಹಳ ದಿನಗಳಿಂದಲೂ ಪ್ರೇಕ್ಷಕರು ಕಾತುರದಿಂದ ನಿರೀಕ್ಷಿಸುತ್ತಿದ್ದ
ಸಿಲ್ವರ್ ಸ್ಕ್ರೀನಿನವರ ಸಂಗೀತ ನೃತ್ಯ ಹಾಸ್ಯದಿಂದ ಕೂಡಿದ ಹಿಂದಿ ಚಿತ್ರ

ಚಲ್ ಚಲ್ ರೆ ನವ್ ಜವಾನ್

(ಹೊಸ ಕಾಪಿ)
ಪಾತ್ರ-ನಾಸೀರ್, ಅಶೋಕ್ ಕುಮಾರ್ ವಿ ಹಚ್ ದೇಸಾಯ್

— ಬರುತ್ತಿದೆ —

ಘರ್-ಕಿ-ಇಜತ್

ರಾಜಕಮಲ್

ಮೈಸೂರು
17—6—49 ರಿಂದ
ಅಮೋಘ ಪ್ರಾರಂಭ

ಸಾಲ್ ಗಿರಾ

(ಹಿಂದಿ)
ಮುಖ್ಯ ಪಾತ್ರ—
ಜೈರಾಜ್, ಸ್ನೇಹಪ್ರಭಾ

ಚಾಮುಂಡೇಶ್ವರೀ

ಟಾಕೀಸ್
22-6-49 ನೇ ಬುಧವಾರದಿಂದ
ಯಶಸ್ವಿಯಾದ 2ನೇ ವಾರ
ಪ್ರತಿ ದಿನ 3 ಆಟಗಳು

ಶ್ರೀ

ಆಂಡಾಳ್

(ತಮಿಳು)
ಪಾತ್ರವಹಿಸಿದವರು
ಇಷ್ಟದಾಸಿ K R ಚೆಲ್ಲಮ್ (?) R ಜೀವರತ್ನಂ
ಸಿ. ಎಸ್. ಗೋವಿಂದನ್
ಕಾಳಿ ಎನ್ ರತ್ನಂ

ಮನೆ ಬಾಡಿಗೆಗೆ ಇದೆ

—o—

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂಬರಿನ ಮನೆ ನಂಬರ್ ... ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಗುರುದೇವಾ ಹಾಲ್

(ಜೆ ಗಳ ... ...)

ನಮ್ಮಲ್ಲಿ ರುಚಿಯಾದ ತಿಂಡಿಗಳು ಶಿಲ್ಪಿಗಳಿಂದ ಸ್ವಂತ ಮಾರ್ಗದಿಂದ ತಯಾರಾದ ಕ್ರೀಮ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ... ದೊರೆಯುತ್ತವೆ. ದಯಮಾಡಿ ಭೇಟಿ ಕೊಡಿ
ಶಿವರಾಂಪೇಟೆ ಮೈಸೂರು

ಒಳ್ಳೆ ಲಾರಿಗಳು ವಿಕರಿಗೆ ಇವೆ

ಷವರ್ಲೆ ಲಾರಿ ಒಂದು,
ಫಾರ್ಡ್ ಲಾರಿ ಒಂದು
... ... ಇವೆ ... ... ವಿಳಾಸದಲ್ಲಿ ವಿಚಾರಿಸಬಹುದು

ವಿ. ಪುಟ್ಟಯ್ಯ,
ಸಂತೇಪೇಟೆ ಮೈಸೂರು.

Edited, printed, and published by A R Nagarajan at the Sadhvi Press, D Subbiah Road, Mysore

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು

ವೈದ್ಯೋಪಾನಕ

ಸೂತಿಕಾವಾತಕ್ಕೆ [ಬಾಣಂತಿ ನಂಜಿಗೆ] ಉತ್ತಮ ಗುಣಕಾರಿ

ಕಣ್ಣುಕೈಕಾಲುಂ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರ
ವಿಳಾಸ:— ಬೆಲೆ ಶೀಸೆ 1ಕ್ಕೆ 2-0-0
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

5 ದಿನಗಳು ಮಾತ್ರ

ಬೊಂಬಾಯಿನ ಪೃಥ್ವಿ ಥಿಯೇಟರ್ಸ್‌ರವರು ಮೈಸೂರು ಟೌನ್ ಹಾಲ್‌ನಲ್ಲಿ
ಸುಪ್ರಸಿದ್ಧ ಸಿನಿಮಾ ನಟ ಪೃಥ್ವಿರಾಜ್ ಮತ್ತು ಅವರ ವೃಂದದಿಂದ

22-6-49 ಬುಧವಾರ ರಾತ್ರಿ 10ಕ್ಕೆ
ದೀವಾರ್
23-6-49 ಗುರುವಾರ ರಾತ್ರಿ 10ಕ್ಕೆ
ಶಕುಂತಲಾ



24-6-49 ಶುಕ್ರವಾರ ರಾತ್ರಿ 10ಕ್ಕೆ
ಘದ್ದಾರ್ (ದೇಶದ್ರೋಹಿ)
25-6-49 ಶನಿವಾರ ರಾತ್ರಿ 10ಕ್ಕೆ
ಪಠಾಣ್

ಎಂಬ ಹಿಂದಿ ಕಲಾಪೂರಿತ ನಾಟಕಗಳನ್ನು ಅಭಿನಯಿಸುವರು.
ಟಿಕೆಟ್ ದರ-ರೂ 15, 10, 7-8-0, 5, 3-8-0, 2 ಮತ್ತು 1
ಟೌನ್ ಹಾಲ್ ಬಳಿ ಪ್ರತಿ ದಿನ ಬೆಳಿಗ್ಗೆ 10ರಿಂದ 1ರ ವರೆಗೆ ಸಂಜೆ 4 ರಿಂದ 8ರ ವರೆಗೆ ಸೀಟುಗಳನ್ನು ಮುಂದಾಗಿ ಕಾದಿರಿಸಿಕೊಳ್ಳಬಹುದು.

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಬುಧವಾರ ೨೨-೬-೪೯ [ಸಂಚಿಕೆ ೨೬೫

- ಆರ್ಜಂಟೈನಾದಲ್ಲಿ - ಹಿಟ್ಲರನು ಇರುವನು ?

ಗೋಡ್ಸೆ-ಆಪ್ಟೆಗಳಿಗೆ ಮರಣ ದಂಡನೆ ಖಾಯಂ

ಗಾಂಧಿ ಕೊಲೆ ಮೊಕದ್ದಮೆ ಅಪೀಲಿನಲ್ಲಿ ಪೂರ್ವ ಪಂಜಾಬ್ ಹೈಕೋರ್ಟಿನವರು ನಿನ್ನೆ ತೀರ್ಪಿತ್ತರು. ಡಾ|| ಸದಾಶಿವ ಪಂಡಾರಕರೆ ಮತ್ತು ಶಂಕರ ಕಿಷ್ಟಯ್ಯರವರುಗಳ ಅಹವಾಲನ್ನು ಅಂಗೀಕರಿಸಿ ಅವರನ್ನು ಖುಲಾಸೆ ಮಾಡಲಾಯಿತು. ಇತರ ಅಪಾದಿತರ ಅಪೀಲನ್ನು ತಿರಸ್ಕರಿಸಲಾಯಿತು. ಗೋಪಾಲ ಗೋಡ್ಸೆಗೆ ದಯೆ ತೋರಿಸುವಂತೆ ಸರ್ಕಾರದವರಿಗೆ ಶಿಫಾರಸು ಮಾಡಲಾಗಿದೆ ಪಿತೂರಿ ಬಗ್ಗೆ ಮಾತ್ರ ನಾಥೂರಾಂ ಗೋಡ್ಸೆ ಮಾಡಿಕೊಂಡಿದ್ದ ಅಪೀಲೂ ವಜಾ ಆಗಿದೆ. ನಾಥೂರಾಂ ಮತ್ತು ನಾರಾಯಣ ಆಪ್ಟೆರವರುಗಳ ಮರಣ ದಂಡನೆಯನ್ನು ಖಾಯಂ ಮಾಡಲಾಗಿದೆ.

ಅಧಿಕ ಧಾನ್ಯ ಬೆಳೆಯಲು ವಿದ್ಯುಚ್ಛಕ್ತಿ ಕಿರಣದ ಪ್ರಯೋಗ

ಬಿತ್ತನೆ ಬೀಜಗಳಿಗೂ, ಜಮೀನುಗಳಿಗೂ ವಿದ್ಯುಚ್ಛಕ್ತಿಯ ಕಿರಣಗಳನ್ನು ಪ್ರಯೋಗಿಸಿ ಹೆಚ್ಚು ಧಾನ್ಯವನ್ನು ಬೆಳೆಯುವ ಯೋಜನೆಯನ್ನು ಮದರಾಸಿನ ಅಧಿಕಾರಿಗಳು ಕೈಗೊಂಡಿದ್ದಾರೆ. ಎಲೆಕ್ಟ್ರೋ-ಕಲ್ಚರ್ ಅಧಿಕಾರಿಗಳಾದ ಶ್ರೀ ಆರ್. ಶ್ರೀನಿವಾಸರಾಯರು ಈ ಉದ್ಯಮದಲ್ಲಿ ತೊಡಗಿದ್ದಾರೆ ಬಿತ್ತನೆ ಬೀಜವನ್ನು ನೀರಿನಲ್ಲಿ ನೆನೆಯ ಹಾಕಿ ಅದಕ್ಕೆ ೧೧೦೦೦ ಓಲ್ಟಿನ ವಿದ್ಯುಚ್ಛಕ್ತಿಯ ಕಿರಣವನ್ನು ಬಿಟ್ಟು ನೊಳಕೆಯಾದ ಮೇಲೆ ಅವನ್ನು ಜಮೀನಿನಲ್ಲಿ ಬಿತ್ತಲಾಗುವುದು. ಜಮೀನಿನ ನೀರಿಗೂ ಸಹ ವಿದ್ಯುಚ್ಛಕ್ತಿಯನ್ನು ಬಿಡಲಾಗುವುದು. ಹೀಗೆ ಮಾಡುವುದರಿಂದ ಶೇ ೩೩ ರಷ್ಟು ಹೆಚ್ಚು ಧಾನ್ಯ ಬೆಳೆಯುವುದೆಂದು ಹೇಳಲಾಗಿದೆ. ಈಗಾಗಲೇ ವಾಯವ್ಯ ಪ್ರಾಂತ್ಯದಲ್ಲಿ ಹಣ್ಣಿನ ವ್ಯವಸಾಯಕ್ಕೆ ಈ ಪ್ರಯೋಗವು ವಿಶೇಷ ಫಲಕಾರಿಯಾಗಿ ಪರಿಣಮಿಸುವುದೆಂದು ತಿಳಿದುಬಂದಿದೆ

ಗುಬ್ಬಿ ವೀರಣ್ಣನವರಿಗೆ ಪ್ರಭುಗಳ ಭೇಟಿ

ಗುಬ್ಬಿ ಕಂಪೆನಿಯ ವಿನೋದ ರತ್ನಾಕರ ಶ್ರೀ|| ಜಿ. ಹೆಚ್. ವೀರಣ್ಣನವರು ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರ ಭೇಟಿಯನ್ನು ಪಡೆದು ನಾಳೆ ನಡೆಯುವ ತಮ್ಮ ಕುಮಾರಿಯ ವಿವಾಹದ ಸಂದರ್ಭದಲ್ಲಿ ಆಹ್ವಾನ ಪತ್ರಿಕೆಯನ್ನೂ, ಫಲ ತಾಂಬೂಲಗಳನ್ನೂ ಒಪ್ಪಿಸಿದರು. ಪ್ರಭುಗಳು ಮಂತ್ರಾಕ್ಷತೆಗಳೊಡನೆ ವಧೂವರರಿಗೆ ಶುಭಾಶಯಗಳನ್ನು ಕಳುಹಿಸಿಕೊಟ್ಟಿರುವರು.

ವಿವಾಹ ಮಹೋತ್ಸವಗಳು

ಸದಾಶಿವ ಮಿಲ್ಲು ಮಾಲೀಕರಾದ ಶ್ರೀ ... ತಮ್ಮಯ್ಯನವರು ತಮ್ಮ ದ್ವಿತೀಯ ಕುಮಾರಿ ಸೌ|| ಇಂದಿರಮ್ಮನವರನ್ನು ನಾಗರಸನಿ ವರ್ತಕರಾದ ಶ್ರೀ ಬೋರಯ್ಯನವರ ಮಕ್ಕಳು ಶ್ರೀ ಬಿ. ಆನಂದಸ್ವಾಮಿಗೆ ಕೊಟ್ಟು ಮೊನ್ನೆ ವಿವಾಹವನ್ನು ನೆರವೇರಿಸಿದರು. ಸಾಲಿಗ್ರಾಮದ ಶ್ರೀ ಎಸ್. ಕೃಷ್ಣಪ್ಪನವರ ಮಕ್ಕಳು ಶ್ರೀ ವೆಂಕಟಕೃಷ್ಣಪ್ಪನವರು ತಮ್ಮ ಸಹೋದರಿ ಸೌ|| ಸರೋಜಮ್ಮನವರನ್ನು ಪಿರಿಯಾಪಟ್ಟಣದ ಶ್ರೀ ಪಿ. ಜಿ. ... ಪ್ಪರಾಯರ ಮಕ್ಕಳು ಚಿ|| ತಿಮ್ಮಪ್ಪನವರಿಗೆ ಕೊಟ್ಟು ಮೊನ್ನೆ ವಿವಾಹವನ್ನು ಜರುಗಿಸಿದರು

ಆರ್ಜಂಟೈನಾದಲ್ಲಿ ಹಿಟ್ಲರ್

ಹಿಟ್ಲರನು ಬದುಕಿದ್ದಾನೆ, ಅರ್ಜಂಟೈನಾದಲ್ಲಿ ನೆಲೆಸಿರುವ ಹಲವು ಮಾಜಿ ನಾಜಿಗಳೊಡನೆ ಆತನು ಇದ್ದಾನೆ-ಎಂಬುದಾಗಿ ಲಂಡನ್ನಿನಿಂದ ವರದಿಯೊಂದು ಬಂದಿರುತ್ತದೆ ಆಸ್ಟ್ರೇಲಿಯದ ಪೋಲೀಸಿನವರು ನಡೆಸಿದ ಸಂಶೋಧನೆಯ ಪರಿಣಾಮವಾಗಿ ಈ ಸುದ್ದಿಯು ಹೊರಬಿದ್ದಿದೆ. ಇದಕ್ಕೆ ಅಧಿಕಾರಯುತವಾದ ಸಮರ್ಥನೆ ದೊರೆಕಿಲ್ಲವೆಂದು ಹೇಳಲಾಗಿದೆ ಜರ್ಮನಿಯಲ್ಲಿ ನಾಜಿಗಳು ಪುನಃ ತಲೆಯೆತ್ತುವ ಸೂಚನೆಗಳಿವೆಯೆಂದು ಆಸ್ಟ್ರೇಲಿಯದ ವಿದೇಶಾಂಗ ಮಂತ್ರಿ ಡಾ|| ಎವರ್ಟ್ ಇವಾಟ್‌ರವರು ಅಲ್ಲಿನ ಶಾಸನ ಸಭೆಯಲ್ಲಿ ಹೇಳಿರುವರು.

ಅಮೇರಿಕಾಕ್ಕೆ ಫಾರ್ಮೋಸಾ ದ್ವೀಪದ ವಿಕ್ರಯ

ಫಾರ್ಮೋಸಾ ದ್ವೀಪವನ್ನು ೧೨,೫೦೦ ಮಿಲಿಯನ್ ಡಾಲರುಗಳಿಗೆ ಅಮೆರಿಕಕ್ಕೆ ಮಾರಲು ಅಮೆರಿಕದಲ್ಲಿರುವ ಚೀನಾ ರಾಯಭಾರಿಯು ಒಪ್ಪಿರುವುದಾಗಿ ವರದಿಯಾಗಿದೆ ಆ ದ್ವೀಪದಲ್ಲಿ ಅಮೇರಿಕನರು ಖಾಯಂ ವಿಮಾನ ನೆಲೆಯೊಂದನ್ನು ಏರ್ಪಡಿಸುವರೆಂದೂ ಹೇಳಲಾಗಿದೆ

ಪಾರಿಭಾಷಿಕ ವಿದ್ಯಾರ್ಥಿಗಳಿಗೆ ನಿರ್ಬಂಧ

ಸಂಸ್ಥಾನದ ಮೆಡಿಕಲ್, ಇಂಜನಿಯರಿಂಗ್ ಮುಂತಾದ ಪಾರಿಭಾಷಿಕ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವು ಮುಗಿದ ಮೇಲೆ ಕಡೆಯ ಪಕ್ಷ ಐದು ವರ್ಷವಾದರೂ, ಸಂಸ್ಥಾನದಲ್ಲಿ ಕಡ್ಡಾಯ ಸೇವೆ ಮಾಡಬೇಕೆಂಬ ಷರತ್ತನ್ನು ಸರಕಾರದವರು ಪರಿಶೀಲಿಸುತ್ತಿರುವರು

ಸ್ವಾಗತ ಸಮಾರಂಭ

ಪುಣೆಯಲ್ಲಿರುವ ಸುಗಂಧ ದ್ರವ್ಯಗಳ ವರ್ತಕರಾದ ಶ್ರೀ ಎಂ. ಆರ್. ಚೆನ್ನಪ್ಪನವರು ತಮ್ಮ ದ್ವಿತೀಯ ಕುಮಾರ ಚಿ|| ಅನಂತರಾಂರವರಿಗೆ ಚಿ|| ಸೌ|| ಶಾಕುಂತಳಾರವರನ್ನು ತಂದುಕೊಂಡು, ವಿವಾಹವನ್ನು ನೆರವೇರಿಸಿದ ಸಂದರ್ಭದಲ್ಲಿ ಕಳೆದ ಭಾನುವಾರ ತಮ್ಮ ಗೃಹದಲ್ಲಿ ಒಂದು ಸ್ವಾಗತಸಮಾರಂಭವನ್ನು ಏರ್ಪಡಿಸಿ ನಗರದ ಪ್ರಮುಖ ಮಹಿಳೆಯರನ್ನೂ ಮಹನೀಯರುಗಳನ್ನೂ ಸತ್ಕರಿಸಿದರು

ರಾಜಬಂಧುಗಳಿಗೆ ಕೊಡುವ ಸಂಭಾವನೆ

ಶಾಸನ ಸಭೆಯಲ್ಲಿ ವಿಮರ್ಶೆ

ಸ್ವಂ. ಸು. ಫೋ.] ಬೆಂಗಳೂರು ೨೨

ನಿನ್ನೆ ಮಧ್ಯಾಹ್ನ ಶಾಸನ ಸಭೆಯಲ್ಲಿ ಆಯ ವ್ಯಯದ ಅಂದಾಜುಗಳ ಮೇಲೆ ಭಾಷಣಗಳಾದುವು ಶ್ರೀ ಕೆ ಎಂ. ಕೃಷ್ಣಸ್ವಾಮಿಗೌಡರು ತಮ್ಮ ಭಾಷಣದಲ್ಲಿ ಶ್ರೀಮನ್ಮಹಾರಾಜರವರ ಬಂಧು ವರ್ಗದವರಿಗೆ ಪ್ರತ್ಯೇಕವಾಗಿ ಕೊಡಲಾಗುತ್ತಿರುವ ಸಂಭಾವನೆಗಳ ವಿಚಾರವನ್ನು ಪ್ರಸ್ತಾಪಿಸಿದರು ಇದರಿಂದ ತಮ್ಮ ರಾಜ ಭಕ್ತಿಯಲ್ಲಿ ಕೊರತೆಯಿದೆಯೆಂದು ಯಾರೂ ಭಾವಿಸಲಾಗದೆಂದು ಅವರು ಹೇಳಿದರು. ಶ್ರೀಮನ್ಮಹಾರಾಜರವರಿಗೆ ಕೊಡಲಾಗುವ ರಾಜಧನದ ವಿಚಾರವನ್ನು ತಾವು ಪ್ರಸ್ತಾಪಿಸುತ್ತಿಲ್ಲವೆಂದೂ, ಆದರೆ ರಾಜ ಬಂಧುಗಳಿಗೆ ಪ್ರತ್ಯೇಕವಾಗಿ ೩ ಲಕ್ಷ ರೂ ಅನ್ನು ಒದಗಿಸಿರುವ ಅಂಶವನ್ನು ಮಾತ್ರ ವಿಮರ್ಶಿಸುತ್ತಿರುವುದಾಗಿಯೂ ಹೇಳಿದರು. ರಾಜಮನೆತನದ ಸಂಭಾವನೆಯನ್ನೆಲ್ಲಾ ಒಂದುಗೂಡಿಸುವುದು ಉತ್ತಮವೆಂದು ಅಭಿಪ್ರಾಯಪಟ್ಟರು.

ಶ್ರೀ ಎಂ. ಸಿ. ರಂಗೇಗೌಡರು ಕ್ರಿಯಾಲೋಪವನ್ನೆತ್ತಿ ಅರಮನೆಗೆ ಸಂಬಂಧಪಟ್ಟ ಅಂಶವನ್ನು ಚರ್ಚಿಸಲಾಗದೆಂದು ಸೂಚಿಸಿದರು ತಾವು ... ಬಂಧುಗಳ ಸಂಭಾವನೆ ವಿಷಯವನ್ನು ಪ್ರಸ್ತಾಪಿಸುತ್ತಿರುವುದಾಗಿ ಶ್ರೀ ಕೃಷ್ಣಸ್ವಾಮಿಗೌಡರು ಹೇಳಿದರು ಅದರೂ ಈ ವಿಷಯವನ್ನು ನಿರುತ್ತರವು ಉತ್ತಮವೆಂದು ಅಧ್ಯಕ್ಷರು ಸಲಹೆಯಿತ್ತರು. ತರುವಾಯ ಶ್ರೀ ಕೃಷ್ಣಸ್ವಾಮಿಗೌಡರು ಭಾಷಣವನ್ನು ಮುಂದುವರಿಸಿ, ಕಾಂಗ್ರೆಸ್ಸಿನ ಚಳವಳಿ ಕಾಲದಲ್ಲಿ ವಿದ್ಯಾರ್ಥಿಗಳು ... ಗೆ ಸರ್ಕಾರದವರು ಉತ್ತೇಜನವೀಯಬೇಕೆಂದು ಸೂಚಿಸಿದರು ವ್ಯವಸಾಯ, ವಿದ್ಯಾಭ್ಯಾಸ ... ನಿರೋಧ ಮುಂತಾದ ... ಸಲಹೆಗಳನ್ನಿತ್ತರು.

... ವಿಷಯದ ಬಗ್ಗೆ ... ತಮ್ಮ ... ಶ್ರೀ ಕೃಷ್ಣಪ್ಪ ... ... ಯವರು ವಿವರಿಸಿದರು

ಮದರಾಸ್ ಮಾಜಿ ವಿದ್ಯಾ ಮಂತ್ರಿ ಮೈಸೂರು ಫಿಲೋಮಿನಾ ಕಾಲೇಜಿಗೆ

ಮೈಸೂರು ೨೨

ರಾಜಧಾನಿಯ ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಫಾ|| ಬ್ರೌರವರ ಸ್ಥಾನದಲ್ಲಿ ಮಂಗಳೂರಿನ ಶ್ರೀ ಸಿ ಜೆ. ವಾರ್ಕಿಯವರನ್ನು ನೇಮಿಸಲಾಗಿದೆಯೆಂದು ತಿಳಿದುಬಂದಿದೆ. ಅವರು ಮದರಾಸಿನ ಮಾಜಿ ವಿದ್ಯಾ ಮಂತ್ರಿಗಳು ಕಾಂಗ್ರೆಸ್ಸಿನ ಕಾರ್ಯ ಕಲಾಪಗಳಲ್ಲಿ ಪ್ರಕಟವಾಗಿ ಪಾತ್ರ ವಹಿಸಿರುವವರು. ವಿದ್ಯಾ ವಿಷಯಗಳಲ್ಲಿ ವಿಶೇಷ ಪರಿಶ್ರಮವುಳ್ಳವರು

ಕುಂಚಿಟಿಗರ ಸಂಘದ ಹಾಸ್ಟಲ್

ಮೇಲ್ಕಂಡ ವಿದ್ಯಾರ್ಥಿ ನಿಲಯಕ್ಕೆ ಸೇರಲಿಚ್ಛಿಸುವವರು ಇದೇ ೨೫ನೇ ತಾ|| ರೊಳಗಾಗಿ ಅರ್ಜಿ ಹಾಕಿಕೊಳ್ಳಬೇಕೆಂದು ತಿಳಿಸಲಾಗಿದೆ

ಧರ್ಮಶಾಲಾ ಸ್ಥಾಪನೆ

ಬೆಂಗಳೂರಿನ ಶ್ರೀ|| ಎಸ್. ಆರ್. ರಾಜವೇಲುರವರು ಕಳೆದ ೧೩ನೇ ತಾ|| ನಂಜನಗೂಡಿನ ಅರಮನೆ ಬೀದಿಯಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಮಾಧವ ಮಹಲ್ ಎಂಬ ಧರ್ಮಶಾಲೆಯನ್ನೂ ಪಂಚತೀರ್ಥ ಪ್ರತಿಷ್ಠಾ ಮಹೋತ್ಸವವನ್ನೂ ನೆರವೇರಿಸಿದರು.

ಗೃಹ ಪ್ರವೇಶ

ರಾಜಧಾನಿಯ ಹಿಂದೂ ಪತ್ರಿಕೆಯ ಪ್ರತಿನಿಧಿಗಳಾದ ಶ್ರೀ ಆರ್. ಗೋಪಾಲಕೃಷ್ಣರಾಯರು ಚಾಮುಂಡಿಪುರದ ೧೩ನೇ ಬ್ಲಾಕಿನಲ್ಲಿ ನೂತನವಾಗಿ ಕಟ್ಟಿಸಿರುವ ಗೋಕುಲ ಎಂಬ ತಮ್ಮ ನೂತನ ಭವನದ ಪ್ರವೇಶ ಮಹೋತ್ಸವವನ್ನು ಮೊನ್ನೆ ದಿನ ನೆರವೇರಿಸಿದರು

ವ್ಯವಸಾಯ ಡಿಪೋಗಳ ವಜಾ

ಸ್ವಂ. ಸು. ಫೋ.] ಬೆಂಗಳೂರು ೨೨

ಸಂಸ್ಥಾನದಲ್ಲಿರುವ ಎಲ್ಲ ಸರ್ಕಾರಿ ವ್ಯವಸಾಯೋಪಕರಣಗಳ ಡಿಪೋಗಳನ್ನು ರದ್ದು ಮಾಡಿ ಅವುಗಳನ್ನು ಸಿಲ್ಲಂದಿಗಳೊಡನೆ ಆಯಾ ಸ್ಥಳಗಳಲ್ಲಿರುವ ವಿವಿಧೋದ್ದೇಶ ಸಹಕಾರ ಸಂಘಗಳಿಗೆ ವಹಿಸಬೇಕೆಂದು ಸರ್ಕಾರದ ಆಜ್ಞೆಯಾಗಿದೆ

ಬನ್ನೂರಿನ ಮಹಾತ್ಮ ಗಾಂಧಿ ಹೈಸ್ಕೂಲು

ಟಿ. ನರಸೀಪುರದ ತಾಲ್ಲೂಕು ಬನ್ನೂರಿನಲ್ಲಿ ಈ ವರ್ಷದಿಂದ ಮಹಾತ್ಮ ಗಾಂಧಿ ಹೈಸ್ಕೂಲಿನ ಮೊದಲನೇ ತರಗತಿಯನ್ನು ತೆರೆಯಲಾಗಿದೆ ಹೈಸ್ಕೂಲಿಗೆ ಸೇರಲಿಚ್ಛಿಸುವವರು ಈ ಶಾಲೆಯ ಗೌರವ ಕಾರ್ಯದರ್ಶಿಗಳಿಂದ ಅರ್ಜಿ ಫಾರಂ ಪಡೆದು ಅರ್ಜಿ ಹಾಕಿಕೊಳ್ಳಬಹುದೆಂದು ತಿಳಿಯಪಡಿಸಲಾಗಿದೆ

ನಿಲುವಳಿ ನಿರ್ಣಯ

ಗೋಪಾಲಿಯಾ ವಿಚಾರಣಾ ಸಮಿತಿಯ ಅಧಿಕಾರವನ್ನು ವಿಸ್ತರಿಸಿ ಶ್ರೀಮನ್ಮಹಾರಾಜರವರಿ ಇತ್ತೀಚೆಗೆ ಹೊರಡಿಸಿರುವ ಆಜ್ಞೆಯ ಮೇರೆಗೆ ಸಂಬಂಧದಲ್ಲಿ ಪ್ರಜಾ ಪ್ರತಿನಿಧಿಗಳು ಪ್ರಭುಗಳಿಗೆ ಕೊಟ್ಟ ಸಲಹೆಯನ್ನು ಪರಿಶೀಲಿಸಲು ಶ್ರೀ ಓ. ವೀರಬಸಪ್ಪನವರ ನಿಲುವಳಿ ನಿರ್ಣಯವನ್ನು ಸಿಸ್ಟೆರಂಪಿಸ್ ರೂಲಿನ ... ಅವಕಾಶ ಕೊಡುವ ಅಂಶವನ್ನು ಈ ದಿನ ಚರ್ಚೆಗೆ ... ಭಾಗವು ... ಅಧ್ಯಕ್ಷರು ತಿಳಿಸಿದರು

ಸಂಸ್ಥಾನದ ಕಾರ್ಮಿಕ ಸಮ್ಮೇಳನ

ಬೆಂಗಳೂರು, ೨೨

ಬರುವ ತಿಂಗಳು ೨೦ ಮತ್ತು ೨೧ನೇ ತಾರೀಖುಗಳಲ್ಲಿ ಸಂಸ್ಥಾನದ ಕಾರ್ಮಿಕ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸುವ ಬಗ್ಗೆ ಬೆಂಗಳೂರಿನ ಸಮಾಜವಾದಿ ಪಕ್ಷದ ಕಾರ್ಯಾಲಯದಲ್ಲಿ ಕೆಲಸಗಾರರ ಸಂಘಗಳ ಸಭೆ ಸೇರಿದ ಸಭೆ ನಡೆಯಿತು ಶ್ರೀ ಎಸ್ ಎ ರಾಮಸ್ವಾಮಿಯವರು ಕಾರ್ಯದರ್ಶಿಯಾಗಿಯೂ, ಶ್ರೀ ಜಿ ವಿ ರಮೇಶರವರು ಖಜಾಂಚಿಯಾಗಿಯೂ, ಉಳ್ಳ ಸ್ವಾಗತ ಸಮಿತಿ ರಚಿಸಲ್ಪಟ್ಟಿತು

ಹರಿಕಥೆ

ಕೀರ್ತನಕಾರರ ಮಂಡಲಿಯ ಆಶ್ರಯದಲ್ಲಿ ಪಾಂಡುರಂಗ ದೇವಸ್ಥಾನದ ಎದುರಿಗೆ ಕಟ್ಟಿರುವ ಧರ್ಮ ಛತ್ರದಲ್ಲಿ ಈ ಸಂಜೆ ೭ ಗಂಟೆಗೆ ಏಕಾದಶಿ ಪ್ರಯುಕ್ತ ಬೆಂಗಳೂರಿನ ಶ್ರೀ|| ಕೆ ಸುಬ್ಬರಾಯ ದಾಸರಿಂದ ನಚಿಕೇತ ಎಂಬ ಉಪಾಖ್ಯಾನವು ನಡೆಯುವುದು

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

D Banumiah's College of Commerce Mysore

NOTIFICATION

Dated 21st June 1949

Students whose applications for admission to the Junior Inter Commerce Class have been accepted are hereby directed to join the College on or before 24-6-49 The College Sessions will commence from 24th June 1949 The working hours will be between 10-30 a m and 4 30 p m

B V Banumiah,
Principal

VASANTHA INSTITUTE of COMMERCE

653 Narayana Shastry Road Mysore

EFFICIENT COACHING

Best RESULT

Applications for admission to the ONE YEAR DIPLOMA CLASS of the MYSORE GOVERNMENT COMMERCE EXAMINATIONS are received

Edited printed and published by A R Nagaraja at the Sadhvi Press, D. Subbiah Road, Mysore

ಪ್ರಭುದೇವಾ ಟಾಕೀಸ್

19-6-49ನೇ ಭಾನುವಾರದಿಂದ ಪ್ರತಿ ದಿನ 3 ಆಟಗಳು

ತಪಸ್ವಿ (ಹಿಂದಿ)

ಅಥವ ಋಷ್ಯಶೃಂಗರ್

ನಟರು ... ಸುರೇಂದ್ರ ... ಆರ್ ... ಕಪೂರ್

ಶ್ರೀ ಗಾಯತ್ರೀ

ಪ್ರತಿ ದಿನ 3 ಪ್ರದರ್ಶನಗಳು

ಇನ್ ಎನ್ ಐರೆಂಡ್ ವಿತ್ ಯು

ತಾ|| 23-6-49ರಿಂದ 2 ದಿನಗಳು (ನಾಳೆಯಿಂದ)

ವಿನೋದಿನಿ ಜಹಾಂಗೀರ್ ನಟಿಸಿರುವ

ವೇರ್ ದೇರೀಸ್ ಲೈಫ್

WHERE THERE's LIFE

Morning Shows on 25th & 26th

GARY COOPER IN

THE PLAINSMAN

ಜಯ ಅಂಡ್ ಕಂಪೆನಿ

ಸಯ್ಯಾಜಿರಾವ್ ರಸ್ತೆ, ಮೈಸೂರು

ಹೊಸದಾದ ಶಾಲುಗಳು, ಸೀರೆಗಳು, ಮದರಾಸ್ ಚಿನ್ನಿ ಪಾಲಿಶ್ ಷರ್ಟಿಂಗ್, ಶಾಲ್ ಮುತ್ತು ಇತರ ಬಟ್ಟೆಗಳು ಬಂದಿವೆ

|| ಶ್ರೀ ||

ಗಣೇಶಾ ಟಾಕೀಸ್

22-6-49ನೇ ಬುಧವಾರದಿಂದ ಪ್ರತಿ ದಿನ 3 ಪ್ರದರ್ಶನಗಳು

ಜಿ.ಎಸ್. ಬಾಲಸುಬ್ರಹ್ಮಣ್ಯಂ ಮತ್ತು ಪೆರಿಯನಾಯಕಿ ಪಾತ್ರವಹಿಸಿರುವ

ರುಕ್ಮಾಂಗದ

(ತಮಿಳು)

ಸ್ಟಾಲಿನ್ನರಿಗೆ ಹೃದಯ ವೇದನೆ

ರಷ್ಯದ ಮಾರ್ಷಲ್ ಸ್ಟಾಲಿನ್ನರು ಹೃದಯ ರೋಗದಿಂದ ನರಳುತ್ತಿರುವುದಾಗಿ ವರದಿಯಾಗಿದೆ ಕಳೆದ ಎರಡು ವರ್ಷಗಳಿಂದ ಮೂರು ಬಾರಿ ಈ ರೀತಿ ಅವರು ವ್ಯಾಧಿಗ್ರಸ್ಥರಾಗಿದ್ದಾರೆ

ಮೈಸೂರು ಸ್ಟೇಟ್ ರೈಲ್ವೆ

ನಂ 1741

ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟರವರ ಕಚೇರಿ, ಮೈಸೂರು ೧೬ ೬ ೪೯

ಪ್ರಕಟನೆ

ಮೈಸೂರು ನಗರದ ರೈಲ್ವೆ ನಿಲ್ದಾಣದಿಂದ ಪ್ರತಿ ದಿನವೂ ಕಚಡಾ ವಗೈರೆ ತೆಗೆಯುವ ಒಪ್ಪ ಕಂಟ್ರಾಕ್ಟನ್ನು ತೆಗೆದುಕೊಳ್ಳುವವರಿಂದ ಮೊಹರಾದ ಟೆಂಡರುಗಳನ್ನು ಮೈಸೂರಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆಯ ಮೈಸೂರು ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರು ೧೯೪೯ನೇ ಜೂನ್ ೨೮ನೇ ತಾ|| ಮಂಗಳವಾರ ಮಧ್ಯಾಹ್ನ ಮೂರು ಗಂಟೆವರೆಗೆ ಸ್ವೀಕರಿಸುವರೆಂದು ಈ ಮೂಲಕ ಪ್ರಕಟಿಸಲಾಗಿದೆ "ಮೈಸೂರು ನಿಲ್ದಾಣದಲ್ಲಿ ಸ್ಯಾನಿಟರಿ ಕಂಟ್ರಾಕ್ಟಿನ ಬಗ್ಗೆ ಟೆಂಡರು" ಎಂಬ ಶಿರೋನಾಮೆಯು ನ್ನು ಲಕೋಟೆ ಮೇಲೆ ಬರೆದಿರಬೇಕು ಮೈಸೂರು ನಿಲ್ದಾಣದ ಅಂಗಳ, ಪ್ಲಾಟ್‌ಫಾರಂಗಳು, ಪೊಲೀಸ್ ಲೈನುಗಳು, ರೈಲ್ವೆ ನಿಲ್ದಾಣ ಪ್ರದೇಶದ ಕ್ವಾರ್ಟರುಗಳು ಮತ್ತು ಕಂಟ್ರಾಕ್ಟಿನ ಅವಧಿಯೊಳಗೆ ಪ್ರಕಟಿಸಲ್ಪಡಬಹುದಾದ ಇತರ ಪ್ರದೇಶಗಳು —ಈ ಕಡೆಗಳಿಂದ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಸಕಾಲದಲ್ಲಿ ಕಶ್ಮಲವನ್ನು ಸಾಗಿಸಲು ಕಂಟ್ರಾಕ್ಟರು ಬದ್ಧರಾಗಿರಬೇಕು ಇದಕ್ಕಾಗಿ ಕಂಟ್ರಾಕ್ಟರು ಜೋಡೆತ್ತಿನ ಗಾಡಿಯನ್ನಿಡಬೇಕು

೨ ಮೈಸೂರು ರೈಲ್ವೆಯ ಚೀಫ್ ಆಡಿಟರಲ್ಲಿ ೨೫ ರೂ ಡಿಪಾಜಿಟ್ ಮಾಡಿದ ಒಗ್ಗೆ ಪ್ರತಿ ಟೆಂಡರಿನೊಡನೆಯೂ ಜನರಲ್ ರಶೀತಿಯೂ ಇರಬೇಕು ಅಕ್ನಾಲೆಡ್ಜ್‌ಮೆಂಟ್ ರಿಜಿಸ್ಟರ್ಡ್ ಪೋಸ್ಟಿನಲ್ಲಿ ಟೆಂಡರನ್ನು ಕಳುಹಿಸಬೇಕು ಖುದ್ದಾಗಿ ಅಥವ ಇತರರ ಮೂಲಕ ಕೊಟ್ಟ ಟೆಂಡರನ್ನು ಅಂಗೀಕರಿಸುವುದಿಲ್ಲ

೩ ಟೆಂಡರನ್ನು ಅಂಗೀಕರಿಸುವ, ತಿರಸ್ಕರಿಸುವ ಅಥವ ಹೊಸ ಟೆಂಡರನ್ನು ಕರೆಯುವ ಅಧಿಕಾರವನ್ನು ಡಿ|| ಟ್ರಾ|| ಸೂಪರಿಂಟೆಂಡೆಂಟರೇ ಇಟ್ಟುಕೊಂಡಿರುವರು

೪ ಅಂಗೀಕೃತವಾದ ಟೆಂಡರುದಾರರು ತಿಳಿವಳಿಕೆ ಕೊಟ್ಟ ಕೂಡಲೇ ಹತ್ತಾಣೆ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು

೫ ೧೯೪೯ನೇ ಜುಲೈ ೧ರಿಂದ ೧೯೫೦ನೇ ಜೂನ್ ೩೦ರ ವರೆಗೆ ಹನ್ನೆರಡು ತಿಂಗಳ ಕಾಲ ಕಂಟ್ರಾಕ್ಟು ಜಾರಿಯಲ್ಲಿರುವುದು

ಸಿ. ಆರ್. ಕೃಷ್ಣಸ್ವಾಮಿ,
ಆ|| ಡಿ|| ಟ್ರಾಫಿಕ್ ಸೂಪರಿಂಟೆಂಡೆಂಟು

|| ಶ್ರೀ ಸೀತಾರಾಮಾಯನಮಃ ||

ಭಿಷಗ್ರತ್ನ ವಾಳ್ವದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಪಾತಜ

ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು, ಮೊದಲಾಗಿ ಗುಣವಾಗುತ್ತದೆ

ವಿಳಾಸ — ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

5 ದಿನಗಳು ಮಾತ್ರ

ಬೊಂಬಾಯಿನ ಪೃಥ್ವಿ ಥಿಯೇಟರ್ಸ್‌ರವರು ಮೈಸೂರು ಟೌನ್ ಹಾಲ್‌ನಲ್ಲಿ

ಸುಪ್ರಸಿದ್ಧ ಸಿನಿಮಾ ನಟ ಪೃಥ್ವಿರಾಜ್ ಮತ್ತು ಅವರ ವೃಂದದಿಂದ

22-6-49 ಬುಧವಾರ ರಾತ್ರಿ 10ಕ್ಕೆ ದೀವಾರ್

24-6-49 ಶುಕ್ರವಾರ ರಾತ್ರಿ 10ಕ್ಕೆ ಘದ್ದಾರ್ (ದೇಶದ್ರೋಹಿ)

23-6-49 ಗುರುವಾರ 10ಕ್ಕೆ ಶಕುಂತಲಾ

25-6-49 ಶನಿವಾರ ರಾತ್ರಿ 10ಕ್ಕೆ ಪಠಾಣ್

ಎಂಬ ಹಿಂದಿ ಕಲಾಪೂರಿತ ನಾಟಕಗಳನ್ನು ಅಭಿನಯಿಸುವರು.

ಟಿಕೇಟು ದರ—ರೂ 15, 10, 7 8-0, 5, 3-8-0, 2 ಮತ್ತು 1

... 6 ... ಟೌನ್ ಹಾಲ್ ಬಳಿ ಪ್ರತಿ ದಿನ ಬೆಳಿಗ್ಗೆ 10ರಿಂದ 1ರ ವರೆಗೆ ಸಂಜೆ 4 ರಿಂದ 8ರ ವರೆಗೆ ನಿಮ್ಮ ಸ್ಥಳ ಮುಂಗಡ ಕಾದಿರಿಸಿಕೊಳ್ಳಬಹುದು

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಗುರುವಾರ ೨೩-೬-೪೯ [ಸಂಚಿಕೆ ೨೬೭

ಹನುಮಂತಯ್ಯನವರು ಕೇಂದ್ರ ಉಪಮಂತ್ರಿ?

ದಿನಚರಿ ವೆಚ್ಚಕ್ಕಾಗಿ ನಿಧಿಗಳ ಉಪಯೋಗ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು ಫೋ] ಬೆಂಗಳೂರು ೨೨

೧೯೪೭ನೇ ಜೂನ್ ಆಖೈರಿಗೆ ರ್ಸ್ಕಾರದಲ್ಲಿದ್ದ ಸೆಕ್ಯೂರಿಟಿಗಳು, ಬಾಂಡುಗಳು ಮತ್ತು ಇತರ ನಿಧಿಗಳೆಷ್ಟೆಂದೂ, ಅವುಗಳಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ವಿಶಿಆಗಿದೆಯೆಂದೂ ಜ|| ಮಹಮದ್ ಇಮಾಂರವರು ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆ ಹಾಕಿದರು. ಶ್ರೀ ಹೆಚ್ ಸಿ, ದಾಸಪ್ಪನವರು ಉತ್ತರವಿತ್ತರು ಒಟ್ಟು ೩೧೦೫ ೪೭ ಲಕ್ಷದಷ್ಟು ನಿಧಿಗಳು ಇದ್ದುವು. ಅದರಲ್ಲಿ ಸರ್ಕಾರದ ಸೆಕ್ಯೂರಿಟಿಗಳು ೨೬೩೮ ೩೮ ಲಕ್ಷ, ಇತರೆ ೨೩ ೪೩ ಲಕ್ಷ, ಫಿಕ್ಸೆಡ್ ಡಿಪಾಜಿಟ್ ೩೮೨ ೬೭ ಲಕ್ಷ, ಜಾಯಿಂಟ್ ಸ್ಟಾಕ್ ೬೦೯೭ ಲಕ್ಷ ರೂ, ಇದರಪೈಕಿ ಮೂರಿದ್ದು ೮೭೧ ೯೮ ಲಕ್ಷ ರೂ ಆಹಾರ ಸರಬರಾಜು ಕೈಗಾರಿಕೆಗಳಿಗೆ ಸಾಲ, ಭಾರಿ ಯೋಜನೆಗಳು, ಮತ್ತು ಪುನರ್ನಿರ್ಮಿತವಾದ ಸಂಬಳ–ಇವುಗಳಿಗೆ ಈ ಹಣವನ್ನು ವೆಚ್ಚ ಮಾಡಲಾಗಿದೆ ದಿನಚರಿ ಮಾಮೂಲು ಬಾಬಿಗೆ ಉಪಯೋಗಿಸಿಲ್ಲ. ಈಗ ೧೭೯೦ ೭೩ ಲಕ್ಷ ರೂ ನಷ್ಟು ಉಳಿದಿದೆ–ಎಂದು ಅವರು ತಿಳಿಸಿದರು

ಪ್ರಕಟಣಾ ಇಲಾಖೆಯನ್ನು ಪುನರ್ವ್ಯವಸ್ಥೆಗೊಳಿಸಲಾಗುವುದೆಂದೂ, ಆದರೆ ವಾರ್ತಾ ಇಲಾಖಾ ಡೈರೆಕ್ಟರೊಬ್ಬರನ್ನು ನೇಮಿಸುವ ಅಭಿಪ್ರಾಯ ಸರ್ಕಾರಕ್ಕಿಲ್ಲವೆಂದೂ ಶ್ರೀ ಕೆ ಸಿ ರೆಡ್ಡಿಯವರು ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ವ್ಯವಸಾಯದ ಕಾಲೇಜನ್ನು ತಮ್ಮ ಕಡೆ ಸ್ಥಾಪಿಸುವಂತೆ ಬೇರೆಬೇರೆ ಜಿಲ್ಲೆಗಳಿಂದ ಮನವಿಗಳು ಬಂದಿವೆ ಇದಕ್ಕಾಗಿ ನೇಮಿಸಲ್ಪಟ್ಟಿರುವ ಸಮಿತಿಯವರು ಈ ಅಂಶವನ್ನು ಪರಿಶೀಲಿಸುವರು–ಎಂದು ಶ್ರೀ ಹೆಚ್. ಸಿದ್ದಯ್ಯನವರು ಇನ್ನೊಂದು ಪ್ರಶ್ನೆಗೆ ಉತ್ತರವಿತ್ತರು

ಭದ್ರಾವತಿ ಹೋಟೆಲುಗಳ ಹರತಾಳ

ಹೋಟಲುಗಳಲ್ಲಿ ಇಡ್ಲಿ, ದೋಸೆಗಳನ್ನು ತಯಾರಿಸಕೂಡದೆಂದು ಆಜ್ಞೆ ವಿಧಿಸಿರುವುದು ಮತ್ತು ಅವುಗಳನ್ನು ನಡೆಸುವ ಕಾಲ ಪರಿಮಿತಿಯನ್ನು ನಿಗದಿ ಮಾಡಿರುವುದೇ ಮುಂತಾದ ಪ್ರತಿ ಬಂಧಕಾಜ್ಞೆಯನ್ನು ಖಂಡಿಸುವ ಸಲುವಾಗಿ ಭದ್ರಾವತಿಯ ಹೋಟಲುಗಳನ್ನು ಜುಲೈ ೧ನೇ ತಾರೀಕು ಒಂದು ದಿನದ ಮಟ್ಟಿಗೆ ಮುಚ್ಚಿ ಹರತಾಳವನ್ನು ಆಚರಿಸಲು ಅಲ್ಲಿನ ಹೊಟೇಲುಗಳ ಮಾಲೀಕರುಗಳು ನಿರ್ಧರಿಸಿರುತ್ತಾರೆ

ಮಹಿಳೆಯರಿಗೆ ನೌಕರಿ

ಸ್ವಂ. ಸು ಫೋ] ಬೆಂಗಳೂರು ೨೩

ಎಲ್ಲಾ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಲ್ಲಿ ಉಪಾಧ್ಯಾಯನಿಯರಾಗಿಯೂ, ಹೆಂಗಸರ ಆಸ್ಪತ್ರೆ ಮತ್ತು ಇತರ ಸಂಸ್ಥೆಗಳು, ಸೆಕ್ರೆಟೇರಿಯಟ್ ಮತ್ತು ಇತರ ಕಂಟ್ರೋಲರ ಕಛೇರಿಯಲ್ಲಿ ಸ್ಟೆನೋಗ್ರಾಫರುಗಳಾಗಿಯೂ, ಅಕೌಂಟೆಂಟ್ಸ್ ಗುಮಾಸ್ತರುಗಳಾಗಿಯೂ ಮಹಿಳೆಯರನ್ನು ಸೇರಿಸಿಕೊಳ್ಳಬಹುದೆಂದು ರಿಕ್ರೂಟ್‌ಮೆಂಟ್ ಬೋರ್ಡಿನವರು ಕೊಟ್ಟಿರುವ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿ ಆಜ್ಞೆ ಮಾಡಿರುತ್ತಾರೆ

೧೯೫೦ನೇ ಏಪ್ರಿಲ್ಲಿಗೆ ಸಂಸ್ಥಾನದ ಆರ್ಥಿಕ ವಿಲೀನೀಕರಣ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು ಫೋ] ಬೆಂಗಳೂರು ೨೩

ಸಂಸ್ಥಾನದ ಹಣಕಾಸಿನ ಆಡಳಿತವನ್ನು ಕೇಂದ್ರ ಸರ್ಕಾರದೊಡನೆ ವಿಲೀನೀಕರಣ ಮಾಡುವ ವಿಚಾರವಾಗಿ ಇಂದು ಶಾಸನ ಸಭೆಯಲ್ಲಿ ವಿಶೇಷ ಪ್ರಶ್ನೋತ್ತರಗಳಾದುವು ಶ್ರೀ ಎಚ್. ಸಿ ದಾಸಪ್ಪನವರು ಉತ್ತರವಿತ್ತು ಈ ರೀತಿ ತಿಳಿಸಿದರು

ಭಾರತ ಸರ್ಕಾರದವರಿಂದ ನೇಮಿತವಾಗಿರುವ ಕೃಷ್ಣಮಾಚಾರಿ ಸಮಿತಿಯವರೊಡನೆ ನಮ್ಮ ಸರ್ಕಾರದವರು ಹಲವು ಬಾರಿ ಮಾತುಕತೆ ನಡೆಸಿದ್ದಾರೆ ಆದರ ವಿವರಗಳು ರಹಸ್ಯವಾದುದರಿಂದ ಹೊರಪಡಿಸಲು ಸಾಧ್ಯವಿಲ್ಲ ಆರ್ಥಿಕ ವಿಲೀನೀಕರಣದ ನೀತಿಗೆ ನಾವು ಒಪ್ಪಿರುತ್ತೇವೆ ಈಗಾಗಲೇ ನಾವು ಕೈಗೊಂಡಿರುವ ಮತ್ತು ಮುಂದ ಕೈಗೊಳ್ಳಲಿರುವ ಯುದ್ಧಾನಂತರದ ಯೋಜನೆಗಳಿಗೆ ಕೇಂದ್ರ ಸರ್ಕಾರದ ನೆರವನ್ನು ಕೋರಿದ್ದೇವೆ ರೈಲ್ವೆ ಮತ್ತು ವರಮಾನ ತೆರಿಗೆಗಳನ್ನು ಕೇಂದ್ರ ಸರ್ಕಾರಕ್ಕೆ ಈಗ ವಹಿಸುವೆವೆಂಬ ಸುದ್ದಿಗೆ ಆಧಾರವಿಲ್ಲ ಈ ಬಾಬುಗಳು ಕೇಂದ್ರಕ್ಕೆ ಸೇರಿದ ಅಂಶಗಳಾದುದರಿಂದ ಅವುಗಳ ಭವಿಷ್ಯ ಕೇಂದ್ರ ಸರ್ಕಾರದ ಕೈನಲ್ಲಿಯೇ ಇದೆ ೧೯೫೦ನೇ ಏಪ್ರಿಲ್ಲಿಗೆ ಸಂಸ್ಥಾನದ ಆರ್ಥಿಕ ವಿಲೀನೀಕರಣವು ಜಾರಿಗೆ ಬರಬಹುದೆಂಬ ನಿರೀಕ್ಷಣೆ ಇದೆ

ಗೋ ಮಾಂಸದ ಆಮದಿಗೆ ಅಡ್ಡಿ

ಹೊರಗಿನಿಂದ ಸಂಸ್ಥಾನದೊಳಕ್ಕೆ ಗೋಮಾಂಸದ ಆಮದನ್ನು ಪ್ರತಿ ಬಂಧಿಸಲು ಸರ್ಕಾರದವರು ಆಲೋಚಿಸುತ್ತಿರುವರೆಂದು ಸಚಿವ ಶ್ರೀ|| ಹಾಮ್ನ ಸುಬ್ಬರಾಮಶೆಟ್ಟರು ಮೊನ್ನೆ ನ್ಯಾಯವಿಧಾಯಕ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು

ಜಪಾನ್ ಹಡಗು ಮುಳುಗಿ, ಅನೇಕರು ನೀರಿನ ಪಾಲು

ಜಪಾನ್ ದ್ವೀಪಗಳ ಪೈಕಿ ಕೆನಾವಾ ಕಡೆಯಿಂದ ಬೀಸಿದ ಭಾರಿ ಬಿರುಗಾಳಿಗೆ ಸಿಕ್ಕಿ ಜಪಾನ್ ಹಡಗೊಂದು ಮುಳುಗಿತು ಆದರ ಪರಿಣಾಮವಾಗಿ ೯೭ ಜನರು ಸತ್ತು ೧೪೦೦ ಜನರು ಪತ್ತೆಯಿಲ್ಲವಾಗಿದ್ದಾರೆ. ಇದಲ್ಲದೆ ಸಮುದ್ರದಲ್ಲಿ ತೇಲುತ್ತಿದ್ದ ಮತ್ತು ತೀರದಲ್ಲಿದ್ದ ಸುಮಾರು ೧೩೦೦ ದೋಣಿಗಳೂ ಪತ್ತೆಯಿಲ್ಲವಾಗಿವೆ

ಸಿ. ಸಿ. ಸಿ. ಕೊಲೆ ಅಪಾದಿತರ ಮರಣ ದಂಡನೆ ರದ್ದು

ಬೆಂಗಳೂರು ೨೩

ಚಿಕ್ಕಲಿಂಗ ಮತ್ತು ಬಸವ ಎಂಬುವರಿಗೆ ಧರ್ಮರತ್ನಾಕರ ಸಿ ಪೆರುಮಾಳ್ ಚೆಟ್ಟರ ಕೊಲೆ ಅಪಾದನೆಗಾಗಿ ಮೈಸೂರ. ಸೆಷನ್ಸ್ ಜಡ್ಜರಿಂದ ವಿಧಿಸಲಾಗಿದ್ದ ಮರಣ ದಂಡನೆಯನ್ನು ಹೈ ಕೋರ್ಟಿನವರು ಅಪೀಲಿನಲ್ಲಿ ಜೀವಾವಧಿ ಶಿಕ್ಷೆಗೆ ಇಳಿಸಿದ್ದಾರೆ. ಕೊಲೆಗೆ ಸಹಾಯಕರಾಗಿದ್ದರೆಂಬ ಕಾರಣದ ಮೇಲೆ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಮರಿಲಿಂಗ ಶೆಟ್ಟಿ, ಮಾದಶೆಟ್ಟಿ, ಕರಿಮಾದಶೆಟ್ಟಿ ಮತ್ತು ಸೊಡ್ಡ ಇವರನ್ನು ಖುಲಾಸೆ ಮಾಡಲಾಗಿದೆ

ರೈಲಿನಲ್ಲಿ ರಾಜಪುತ್ರಿಯರ ವಜ್ರದ ಸರದ ಕಳುವು

ಕೆಲವು ದಿವಸಗಳ ಹಿಂದೆ ಮದ್ರಾಸ್ ಬೊಂಬಾಯಿ ಮೇಲ್ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಧರ್ಮಪುರ ಸಂಸ್ಥಾನದ ಇಬ್ಬರು ರಾಜಪುತ್ರಿಯರು ತಮ್ಮಲ್ಲಿದ್ದ ೧೨ ಸಾವಿರ ರೂ ಬೆಲೆ ಬಾಳುವ ವಜ್ರದ ಹಾರಗಳನ್ನು ಕಳೆದುಕೊಂಡರೆಂದು ವರದಿಯಾಗಿದೆ ಅವರು ಕುಳಿತಿದ್ದ ರೈಲುಗಾಡಿಯ ಫ್ಯಾನನ್ನು ರಿಪೇರಿ ಮಾಡಲು ಶೋಲಾಪುರದ ನಿಲ್ದಾಣದಲ್ಲಿ ಇಬ್ಬರು ವಿದ್ಯುಚ್ಛಕ್ತಿ ಕೆಲಸಗಾರರು ಆ ಗಾಡಿಗೆ ಹತ್ತಿದರು. ಸ್ವಲ್ಪ ಹೊತ್ತಿನ ಮೇಲೆ ರಾಜಕುಮಾರಿಯರಿಗೆ ಸಿ ಪ್ರೆ ಬಂದಂತಾಗಿ, ದಿಕ್ಸಾಲ್ ಎಂಬ ಸ್ಟೇಷನ್ನಿನಲ್ಲಿ ಅವರು ಎಚ್ಚರಗೊಂಡು ತಮ್ಮ ಕರವಸ್ತ್ರದಲ್ಲಿ ಸುತ್ತಿಟ್ಟಿದ್ದ ಹಾರಗಳು ಕಳುವಾಗಿರುವ ಒಗ್ಗೆ ಗಾರ್ಡಿಗೆ ದೂರು ಕೊಟ್ಟರು ಈ ಸಂಬಂಧವಾಗಿ ರೈಲ್ವೆ ಪೊಲೀಸರು ವಿದ್ಯುಚ್ಛಕ್ತಿ ಕೆಲಸಗಾರನೊಬ್ಬನನ್ನು ದಸ್ತಗಿರಿ ಮಾಡಿ ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ

ಕಲ್ಕತ್ತದಲ್ಲಿ ಗುಂಡಿನೇಟು

ದಕ್ಷಿಣ ಕಲ್ಕತ್ತದಲ್ಲಿ ನೆನ್ನೆ ಸಂಜೆ ಒಂದು ಅಕ್ರಮ ಮೆರವಣಿಗೆಯನ್ನು ಚದುರಿಸುವ ಸಲುವಾಗಿ ಪೊಲೀಸರು ಮೊದಲು ಟಿಯರ್‌ಗ್ಯಾಸನ್ನು ಉಪಯೋಗಿಸಿ, ನಂತರ ಗುಂಡು ಹಾರಿಸಿದರೆಂದು ವರದಿಯಾಗಿದೆ ಗುಂಪು ಪ್ರಾಸಕಗಳನ್ನು ಎಸೆದುದರಿಂದ ಒಬ್ಬ ಪೊಲೀಸ್ ಅಧಿಕಾರಿಗೂ ಇಬ್ಬರು ಕಾನ್ಸ್ಟೇಬಲ್ಲುಗಳಿಗೂ ಗಾಯವಾಗಿ ೬೦ ಜನರ ದಸ್ತಗಿರಿಯಾಗಿದೆ

ಶಾಸನ ಸಭೆಯಲ್ಲಿ ವಿರೋಧ ಪಕ್ಷದ ಸ್ಥಾಪನೆ

ಸ್ವಂ. ಸು ಫೋ] ಬೆಂಗಳೂರು ೨೩

ಸರ್ಕಾರದ ನಿರ್ವಹಣೆಯಲ್ಲಿ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟು ಪ್ರಜಾ ಪ್ರಭುತ್ವವು ಯಶಸ್ವಿಯಾಗಿ ಸಾಗುವಂತೆ ಮಾಡಲು ತಾವು ಶಾಸನ ಸಭೆಯಲ್ಲಿ ವಿರೋಧ ಪಕ್ಷವೊಂದನ್ನು ಸ್ಥಾಪಿಸಿರುವುದಾಗಿಯೂ, ಅದಕ್ಕೆ ಪ್ರತ್ಯೇಕವಾದ ಸ್ಥಳವನ್ನು ಏರ್ಪಡಿಸಿಕೊಡಬೇಕೆಂದೂ ಸೂಚಿಸಿ ಈ ಕೆಳಗೆ ಕಂಡ ಸದಸ್ಯರು ಅಧ್ಯಕ್ಷರಿಗೆ ಪತ್ರವನ್ನು ಬರೆದಿರುವರು–ಶ್ರೀಗಳಾದ ಟಿ. ವೀರಬಸಪ್ಪ ಎಂ ಸಿ ಲಿಂಗೇಗೌಡ ಎನ್ ಚನ್ನಪ್ಪ, ಎಚ್ ಎಂ ಗಂಗಾಧರಯ್ಯ ಡಿ ಎಸ್. ಮಲ್ಲಪ್ಪ, ಜೆ. ಮಹಮದ್ ಇಮಾಂ, ಎಂ ಪಿ ಎಲ್. ಶಾಸ್ತ್ರಿ, ಎಸ್ ಕೃಷ್ಣಸ್ವಾಮಿರಾವ್

ಬೆಂಗಳೂರಿನಲ್ಲಿ ಬೈಸಿಕಲ್ ಕಾರ್ಖಾನೆ?

ಸಂಸ್ಥಾನದ ಹಣಕಾಸು ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಮೊನ್ನೆ ಶಾಸನ ಸಭೆಯಲ್ಲಿ ಮಾತನಾಡುತ್ತಾ ಬೆಂಗಳೂರಿನಲ್ಲಿ ಬೈಸಿಕಲ್ ಕಾರ್ಖಾನೆಯನ್ನು ಸ್ಥಾಪಿಸುವ ಸೂಚನೆಗಳಿವೆಯೆಂದು ತಿಳಿಸಿದರು

ಪರಾಂಜಪೆಯ ಬಂಧನ

ಗಾಂಧಿ ಕೊಲೆ ಮೊಕದ್ದಮೆಯಲ್ಲಿ ಖುಲಾಸೆ ಹೊಂದಿದ ಡಾ|| ಪರಾಂಜಪೆಯವರನ್ನು ಬಿಡುಗಡೆ ಮಾಡಿದಕೂಡಲೇ ಸಾರ್ವಜನಿಕ ರಕ್ಷಣಾ ಶಾಸನದ ರೀತ್ಯಾ ಪೊಲೀಸಿನವರು ಪುನಃ ಬಂಧಿಸಿರುವರು ಅವರನ್ನು ಈಗಿನ ಸನ್ನಿವೇಶದಲ್ಲಿ ಬಿಟ್ಟರೆ ಶಾಂತಿಗೆ ಭಂಗ ಬರಬಹುದೆಂದು ಭಾವಿಸಲಾಗಿದೆ.

ವಿವಾಹ ಮಹೋತ್ಸವ

ರಿ|| ಟ್ರಾಫಿಕ್ ಇನ್ಸ್‌ಪೆಕ್ಟರ್ ಶ್ರೀ ಟಿ. ಎನ್ ಸುಬ್ಬರಾಯರು ತಮ್ಮ ಕುಮಾರ ಶ್ರೀ ಟಿ. ಎಸ್ ಭೀಮರಾಯರಿಗೆ ಬೆಂಗಳೂರು ತಾ|| ತಗರದ ಶ್ರೀ ಎ. ಶ್ರೀನಿವಾಸರಾಯರ ಪುತ್ರಿ ಸೌ|| ಶಾರದಾಂಬಾಳನ್ನು ತಂದುಕೊಂಡು ಕಳೆದ ಭಾನುವಾರ ತುಮಕೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ದನಗಳ ಪ್ರದರ್ಶನ

ಮೈಸೂರು ತಾ|| ಅಭಿವೃದ್ಧಿ ಸಮಿತಿ ಆಶ್ರಯದಲ್ಲಿ ನಾಳಿದ್ದು ಮಧ್ಯಾಹ್ನ ೩ ಗಂಟೆಗೆ ವರುಣದ ಹೋಬಳಿ ಜೋಡಿ ಹೊಸಹಳ್ಳಿ ಗ್ರಾಮದಲ್ಲಿ ದನಗಳ ಪ್ರದರ್ಶನ ನಡೆಯುವುದು ಶ್ರೀ ಎಸ್. ರಂಗರಾಮಯ್ಯನವರು ಅಧ್ಯಕ್ಷತೆ ವಹಿಸುವರು

ಹನುಮಂತಯ್ಯನವರಿಗೆ ಕೇಂದ್ರ ಮಂತ್ರಿ ಮಂಡಲದಲ್ಲಿ ಸ್ಥಾನ

ದಿನಚರಿ ಆಡಳಿತದ ಕೆಲಸಗಳನ್ನು ಸಾಧ್ಯವಾದಮಟ್ಟಿಗೆ ತಪ್ಪಿಸಿ ದೇಶದ ಮುಂದಿರುವ ಆಗಾಧವಾದ ಸಮಸ್ಯೆಗಳಿಗೆ ಗಮನ ಕೊಡಲು ಅನುಕೂಲಿಸುವಂತೆ ಪಂಡಿತ ನೆಹರು ಮತ್ತು ಸರ್ದಾರ ಪಟೇಲರುಗಳಿಗೆ ಉಪ ಮಂತ್ರಿಗಳನ್ನು ನೇಮಿಸಬೇಕೆಂದು ಡೆಹಲಿಯಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಹಲವು ಮಂದಿ ಸದಸ್ಯರು ಸಲಹೆ ಮಾಡಿದರೆಂದು ಹೇಳಲಾಗಿದೆ ಆ ಸ್ಥಾನಗಳಿಗೆ ಸೂಚಿಸಲಾಗಿರುವ ಹೆಸರುಗಳ ಪೈಕಿ ಮೈಸೂರು ಕಾಂಗ್ರೆಸ್ಸಿನ ನಾಯಕರಾದ ಶ್ರೀ|| ಕೆ ಹನುಮಂತಯ್ಯನವರ ಹೆಸರನ್ನೂ ಸೇರಿಸಲಾಗಿದೆಯೆಂದು ತಿಳಿದುಬಂದಿದೆ

ಹೋಟೆಲುಗಳನ್ನು ಮುಚ್ಚಲೇ ಬೇಕು

ಮೈಸೂರು ನಗರದ ರೇಷನ್ ಕಾರ್ಡು ಹೋಲ್ಡರುಗಳ ಸಮಿತಿಯ ಸದಸ್ಯರಾದ ಶ್ರೀ ಟಿ ಸಿ ಕೋದಂಡರಾಮ [illegible] ಹೋಟೆಲುಗಳನ್ನು ಮುಚ್ಚಲೇಬೇಕೆಂದು ತಿಳಿಸಿ ಕೆಳಗೆ ಕಂಡ ಹೇಳಿಕೆಯನ್ನು ಕೊಟ್ಟಿರುತ್ತಾರೆ —

ಲಕ್ಷಾಂತರ ಬಡಜನರೂ ಕೂಲಿಯವರೂ, ಮಾಧ್ಯಮಿಕ ವರ್ಗದವರೂ ತಮ್ಮ ಸಂಪಾದನೆಯ ಬಹು ಭಾಗವನ್ನು ಹೋಟೆಲುಗಳಿಗೆ ಹಾಕಿ [illegible] ಸಾರಿಗೆ ಸಾಕಾಗುವುದಿಲ್ಲವೆಂಬ [illegible] ಹೂಡಿ ಸರಕಾರದ ಮೇಲ [illegible] ನ್ನೂ ನಡೆಸುವುದಕ್ಕೆ, ಮತ್ತು [illegible] ಗಳು ನಾನಾ ಬಗೆಯ ರೋಗಗಳನ್ನು ಮುಖ್ಯವಾಗಿ ಕ್ಷಯರೋಗವನ್ನೂ ತಂದುಕೊಳ್ಳುವುದಕ್ಕೆ ಹೋಟೆಲುಗಳೇ ಮುಖ್ಯ ಕಾರಣಗಳಾಗಿರುತ್ತವೆ

ಎಲ್ಲಕ್ಕಿಂತಲೂ ಮಿಗಿಲಾಗಿ ಜನರಿಗೆ ಬಡತನ ಬರಲಿಕ್ಕೆ ಆಹಾರದ ಅಭಾವ ಉಂಟಾಗಲಿಕ್ಕೆ ಕಾಳ ಸಂತೆ ಉಲ್ಬಣವಾಗಲಿಕ್ಕೆ, ಧಾರಣೆಗಳು ಮಿತಿಮೀರಿ ಹೆಚ್ಚಾಗಲಿಕ್ಕೆ, ಅನಾರೋಗ್ಯಕ್ಕೆ [illegible] ಕುರಾರನ್ಯಾಯ ಮಾಗಲಿಕ್ಕೆ [illegible] ಹಣ ಸೂರೆಯಾಗಿ ಒಡನನ ಪ್ರಾಣವಾಗಲಿಕ್ಕೆ ಈ ಹೋಟೆಲುಗಳೇ ಮುಖ್ಯ ಕಾರಣಗಳಾಗಿರುತ್ತವೆಂಬುದು ನಿರ್ವಿವಾದವಾದದ್ದು

ಸರಕಾರವು ಸಂಸ್ಥಾನದ ಎಲ್ಲಾ ಹೋಟೆಲುಗಳನ್ನೂ ಕಡ್ಡಾಯವಾಗಿ ಮುಚ್ಚಿಸಿದರೆ ಪ್ರಜೆಗಳಿಗೆ ಸಕಾಲದಲ್ಲಿ ಮಹೋಪಕಾರವನ್ನು ಮಾಡಿದಂತಾಗುವುದು

ಪ್ರಯಾಣಿಕರಿಗೂ, ಪರಸ್ಥಳದ ಜನರಿಗೂ, ಮತ್ತು ಅನಿವಾರ್ಯ ಪರಿಸ್ಥಿತಿಯ ಜನರಿಗೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಸರಕಾರವು ಆರೋಗ್ಯದ ದೃಷ್ಟಿಯಿಂದ ಸರಕಾರದ ಕ್ಯಾಂಟೀನುಗಳನ್ನು ಏರ್ಪಡಿಸುವುದು ಅಗತ್ಯವಾಗಿರುತ್ತದೆ

CHAMUNDESWARI TALKIES

Morning Shows on 24th 25th & 26th at 10 30 a m

PERSUED

(ಪರ್ಸ್ಯೂಡ್)

Starring Terese Wright, Robert Mitchum

Edited, printed, and published by A R Nagarajan at the Sadhvi Press, D Subbiah Road, Mysore

ದೀವಾರ್

ದೈವ ಭಕ್ತಿ, ಸ್ವಾಮಿ ನಿಷ್ಠೆ, ಕಷ್ಟ ಸಹಿಷ್ಣುತೆಯೇ ಮೊದಲಾದ ಸನಾತನ ಧರ್ಮದ ಆಧಾರದ ಮೇಲೆ ನಿರ್ಮಿತವಾಗಿರುವ ಭಾರತ ಧರ್ಮ ಸಾಮ್ರಾಜ್ಯದಲ್ಲಿ ವಿದೇಶೀಯರ ಪ್ರವೇಶದಿಂದ ಎಂತೆಂತಹ ದುಷ್ಪರಿಣಾಮಗಳುಂಟಾಗಿವೆ, ಅಂತ್ಯದಲ್ಲಿ ಭ್ರಾತೃ ವಾತ್ಸಲ್ಯ, ಮಾತೃ ಪ್ರೇಮ ಇವು ಎಷ್ಟು ಬಲ್ಲ ಯನ್ನು ನಿರ್ಮೂಲ ಮಾಡಿ [illegible] ಗಳಲ್ಲಿ [illegible] [illegible] ನವರ ಮೈಸೂರ [illegible] ಪ್ರಧಾನ ಪಾತ್ರವ [illegible] ಅಭಿನಯಿಸಿದರು. ರಂಗಮಂಟಪವು ತಿಕ್ಕಿರಿಯುವಂತೆ ಪ್ರೇಕ್ಷಕರು ಪ್ರೋತ್ಸಾಹ ನೀಡಿದರು ನಾಟಕದಲ್ಲಿ ಅತಿ ಅಪ್ರಾಸಂಗಿಕಗಳಾವವೂ ಇಲ್ಲದೆ ನೈಸರ್ಗಿಕವಾದ ರೀತಿಯಲ್ಲಿತ್ತು. ಆದರೂ ಕಾಲಕ್ಕೆ ತಕ್ಕಂತೆ ಇನ್ನೂ ಸ್ವಲ್ಪ ಸಂಗೀತ ನಾಟ್ಯಾಭಿನಯ, ಜೊತೆಗೆ ವಿದೂಷಕತೆ ಜೋಡಿಸಲ್ಪಟ್ಟಿದ್ದರೆ ನಾಟಕದ ಮೆಚ್ಚುಗೆ ಇನ್ನೂ ಹೆಚ್ಚಾಗುತ್ತಿತ್ತು ಬಹಳ ತಪ್ಪುಗಳಿಲ್ಲದ ಒಟ್ಟಿನಲ್ಲಿ ಕಲಾ ದೃಷ್ಟಿಯಿಂದ ಈ ಪ್ರದರ್ಶನವು ಆಕರ್ಷಣೀಯವಾಗಿರುತ್ತದೆ

ನಿರಾಶ್ರಿತರ ನಿಧಿಗೆ ಕಾಣಿಕೆ

ನೇತಾಜಿ ಸಂಘದವರು ಪೃಥ್ವಿರಾಜ್ ಕಪೂರ್‌ರವರ ನಾಟಕ ನಿರಾಶ್ರಿತರ ನಿಧಿಗಾಗಿ ರೂ [illegible] ಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ

ಬೆಳಗಿನ ಆಟಗಳು

10-30 ಘಂಟೆಗೆ

ಲಕ್ಷ್ಮೀ ಥಿಯೇಟರಿನಲ್ಲಿ

24-6-49ನೇ ಶುಕ್ರವಾರದಿಂದ

ಮೂರು ದಿನಗಳು ಮಾತ್ರ

[illegible] ಚಿತ್ರ

ಮಿಸ್ಟರ್

(ಅದನ ಮೇರಿ ಬರ್ಗ್)

[illegible]

ವಿವಾಹಿತ ಸ್ತ್ರೀಯರಿಗೆ ಉತ್ತೇಜನವಿಲ್ಲ

ಮದುವೆಯಾದ ಸ್ತ್ರೀಯರಿಂದ ಭಾರತದ [illegible] ಅನಿವಾರ್ಯವೆಂದು [illegible] ಯಾದ [illegible] ನ್ನು ಒದಗಿಸಲಾಗುವುದಿಲ್ಲವೆಂದು [illegible] ಸೂಚಿಸಿರುತ್ತಾರೆ

ಹಿಂದೀ ಗ್ರಂಥ

[illegible] ಇನ್ನೊಂದು ಹೊಸ [illegible] ಪ್ರಕಟಿಸಿದ್ದಾರೆ [illegible] ಮೊದಲಾಗಿ ಇದು [illegible] ಹೇಳಲಾಗಿದೆ

RAJKAMAL, MYSORE

From 24-6-49 for Fdays Daily 3 Shows

THE THREE CABALLEROS

(In Technicolour)

Walt Disney's screen [illegible]

ತಾ| 23-6-49 ರ ದಿನ

ಸಾಲ್‌ಗಿರಾ

(ಹಿಂದಿ)

ಬೆಳಗಿನ ಆಟ

ತಾ|| 24-6-49ರಿಂದ ಪ್ರಾರಂಭ

ಜಂಗಲ್ ಮೆ ಮಂಗಲ್

[ಹಿಂದಿ]

ಮೆ [illegible] ಪ್ರದರ್ಶನ

D Banumiah's College of Commerce Mysore

NOTIFICATION

Dated 21st June 1949

Students whose applications for admission to the Junior Inter Commerce Class have been accepted are hereby directed to join the College on or before 24-6-49 The College Sessions will commence from 24th June 1949 The working hours will be between 10-30 a m and 4 30 p m

B V Banumiah
Principal

ಗುರುದೇವಾ ಹಾಲ್

(ಬೆಂಗಳೂರು ಬಳೆ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರ ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಜಾರ್ಜೆಟ್ [illegible] ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

[illegible] ಮೈಸೂರ

ನಿಮ್ಮ ಮೈ ಮೊಕಮಲ್ಲಿನಂತೆ

ಹೊಳೆಯಬೇಕೆ? ನೀವು

ಲಾವಣ್ಯಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ ನಿಮಗೂ

ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

[illegible]

ಭಿಷಗ್ರತ್ನ ವಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೋಮಕಲಾ

ಗಂಡಸರ ಮೂತ್ರಕೋಶದ ಬಲಹೀನತೆ, ಕೆಂಪು ಮೈ ಮೇಲೆ ರೋಗದ ಮಚ್ಚೆಗಳು [illegible] ಪರಿಹಾರ [illegible] ಬಿಡಿಸುವ ಔಷಧಿ ಬೆಲೆ ಶೀಸೆ 1ಕ್ಕೆ 2-0-0

ವಿಳಾಸ —

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

23-6-49ನೇ ಗುರುವಾರ ರಾತ್ರಿ 10 ಗಂಟೆಗೆ

ಮೈಸೂರು ಟೌನ್ ಹಾಲಿನಲ್ಲಿ

ಸುಪ್ರಸಿದ್ಧ ಸಿನಿಮಾ ನಟರಾದ ಪೃಥ್ವಿರಾಜ್ ಮತ್ತು ಅವರ ವೃಂದದವರು

* ಶಾಕುಂತಲಾ *

ಎಂಬ ನಾಟಕವನ್ನು ಅಭಿನಯಿಸುವರು

ಟಿಕೆಟ್ ದರ ರೂ 15 10, 7 8-0 5, 3-8-0, 2 ಮತ್ತು 1

A Prithvi Productions Release

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶುಕ್ರವಾರ ೨೪-೯-೪೮ [ಸಂಚಿಕೆ ೨೬೭

ಹೈದರಾಬಾದ್ ಮಾಜಿ ಮಂತ್ರಿಯ ದಸ್ತಗಿರಿ

ಗೋಡ್ಸೆಗೆ ಗಲ್ಲಾದರೆ ಗಾಂಧಿಜಿ ಆತ್ಮಕ್ಕೆ ದುಃಖ ?

ನಾಥುರಾಂ ಗೋಡ್ಸೆ, ಮತ್ತು ಆಪ್ಟೆ ಇವರುಗಳನ್ನು ಗಲ್ಲಿಗೇರಿಸಿದರೆ, ಮಹಾತ್ಮ ಗಾಂಧಿಯವರ ಆತ್ಮವು ಬಹು ಸಂಕಟ ಪಡುವುದೆಂದೂ, ಆದ್ದರಿಂದ ಮರಣ ದಂಡನೆಯನ್ನು ತಪ್ಪಿಸಿ ಜೀವಾವಧಿ ಶಿಕ್ಷೆಗೆ ಇಳಿಸಬೇಕೆಂದೂ 'ಬೊಂಬಾಯಿ ಪ್ರಾಂತದ ಹಿಂದೂ ಮಹಾಸಭೆಯ ಉಪಾಧ್ಯಕ್ಷರಾದ ಎಲ್. ಸಿ ಘಟ್ಟೆಯವರು ಗೌರ್ನರ್ ಜನರಲ್ ರಾಜಾಜಿ, ಪಂಡಿತ ನೆಹರೂ ಮತ್ತು ಸರದಾರ್ ಪಟೇಲರಿಗೆ ತಂತಿ ಕಳುಹಿಸಿದಾರೆ. ಘಟ್ಟೆಯವರು ಪಾಕಿಸ್ಥಾನದ ವಿರುದ್ಧವಾಗಿ ಮಹಾತ್ಮಗಾಂಧಿಯವರ ಎದುರಿನಲ್ಲಿಯೇ ಕಪ್ಪು ಬಾವುಟವನ್ನು ಹಿಡಿದು ಪ್ರದರ್ಶನ ಮಾಡಿದ್ದರು

ಬ್ರಿ॥ ಸ್ಮಾರಕಗಳಿರಬೇಕೆಂದು ಮದ್ರಾಸಿನ ಮಂತ್ರಿ

ಬ್ರಿಟಿಷರ ಕಾಲದಲ್ಲಿ ಇಡಲಾದ ಪ್ರತಿಮೆಗಳು ಭಾರತಕ್ಕೆ ಸ್ವಾತಂತ್ರ್ಯ ಲಭ್ಯವಾಯಿತೆಂದು ತೋರಿಸಿಕೊಡುವ ಚಿಹ್ನೆಗಳಾಗಿರುವುದರಿಂದ ಅವುಗಳನ್ನು ತೆಗೆಯದೆ ಹಾಗೆಯೇ ಅವು ಇರಲೆಂಬುದು ಮದ್ರಾಸು ಸರಕಾರದ ಅಭಿಪ್ರಾಯವೆಂದು ಮಂತ್ರಿ ಗೋಪಾಲರೆಡ್ಡಿಯವರು ಶಾಸನ ಸಭೆಯಲ್ಲಿ ತಿಳಿಸಿದರು

ಸೂಯೆಜ್ ಕಾಲುವೆಯ ವಿಸ್ತರಣೆ

ಸೂಯಜ್ ಕಾಲುವೆಯನ್ನು ಏಳು ಮೈಲಿಗಳುದ್ದದಷ್ಟು ಇನ್ನೂ ವಿಸ್ತರಗೊಳಿಸುವ ಯೋಜನೆಯನ್ನು ಆ ಕಾಲುವೆಯ ಕಂಪೆನಿಯವರು ಸಿದ್ಧಪಡಿಸಿಕೊಂಡಿದ್ದಾರೆ. ಈ ಕಾರ್ಯದಿಂದ ಹಡಗುಗಳು ಓಡಾಡಲು ಹೆಚ್ಚು ಸೌಕರ್ಯವಾಗುವುದು.

೨೨ ಮಕ್ಕಳ ತಾಯಿ

ಜಪಾನಿನ ಕೊಕಾಯಿಡ್ ಎಂಬಲ್ಲಿಯ ತನೊಬ್ಬನ ಹೆಂಡತಿಯು ತನ್ನ ೨೨ನೇ ಮಗುವಿಗೆ ಈಗತಾನೆ ಜನ್ಮವಿತ್ತಿದ್ದಾಳೆ ಫ್ರಾನ್ಸಿನ ಮಹಿಳೆಯೊಬ್ಬಳು ೨೪ ಮಕ್ಕಳನ್ನು ಹಡೆದು ಪ್ರಪಂಚದ ರಿಕಾರ್ಡನ್ನು ಸ್ಥಾಪಿಸಿದ್ದಾಳೆ.

ಹೊಸ ಬಸ್ ಸರ್ವಿಸ್ಸು

ಕೆ. ವಿ. ಮೋಟಾರು ಸರ್ವಿಸ್ಸಿನವರು ನೆನ್ನೆಯಿಂದ ಚಾಮರಾಜನಗರ ಮತ್ತು ಮಲ್ಲಿಪಟ್ಟಣಗಳ ಮಧ್ಯೆ ಹೊಸ ಸರ್ವಿಸ್ಸನ್ನು ಆರಂಭಿಸಿರುವರು ಚಾಮರಾಜನಗರ ನಂಜನಗೂಡು, ಮೈಸೂರು, ಕೃಷ್ಣರಾಜನಗರ, ಮಿರ್ಲೆ, ಸಾಲಿಗ್ರಾಮ, ರಾಮನಾಥಪುರ, ಅರಕಲಗೂಡುಗಳ ಮಾರ್ಗದಲ್ಲಿ ಇದು ಸಂಚರಿಸುವುದು

ಹಿಂದೀ ಪರೀಕ್ಷೆಗಳು

ಆಗಸ್ಟು ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರಸಭೆಯ ಪರೀಕ್ಷೆಗಳಿಗೆ ಅರ್ಜಿಗಳನ್ನು ತಾ॥ ೩೦-೯-೪೮ ರವರೆಗೆ ಸಹಕಾರ ಭವನದಲ್ಲಿರುವ ಹಿಂದೀ ಪ್ರಚಾರ ಸಭಾಕಾರ್ಯಾಲಯದಲ್ಲಿ ಪ್ರತಿ ದಿನ ಸಂಜೆ ೫ ರಿಂದ ೭ರವರೆಗೆ ಸ್ವೀಕರಿಸಲಾಗುವುದು

ಸ್ಕೂಲ್ ಫೈನಲ್ ಪರೀಕ್ಷೆ

ಬರುವ ಅಕ್ಟೋಬರ್ ೫ರಿಂದ ಸ್ಕೂಲ್ ಫೈನಲ್ ಸಪ್ಲಿಮೆಂಟರೀ ಪರೀಕ್ಷೆಗಳು ನಡೆಯುವುವು. ಜುಲೈ ೧೫ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು.

ಸಂಸ್ಥಾನದ ಕೀರ್ತಿ ಆಯವ್ಯಯದ ಮೇಲೆ ನಿಂತಿದೆ

ಅದನ್ನರಿತು ತಯಾರಿಸಲಾಗಿದೆ ಯೆಂದು ಹಣಕಾಸಿನ ಸಚಿವರು

ಸ್ವಂ. ಸು. ಫೋ॥] ಬೆಂಗಳೂರು ೨೪

ಶಾಸನ ಸಭೆಯಲ್ಲಿ ನೆನ್ನೆ ಸಂಸ್ಥಾನದ ಆಯವ್ಯಯ ಪಟ್ಟಿ ಮೇಲಿನ ಚರ್ಚೆಯು ರಾತ್ರಿ ೯-೩೦ ಗಂಟೆಗೆ ಮುಕ್ತಾಯವಾಯಿತು.

ಸದಸ್ಯರುಗಳು ಮಾಡಿದ ಟೀಕೆಗಳಿಗೆ ಸಚಿವರುಗಳು ಉತ್ತರವಿತ್ತರು. ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು ದೇಶದಲ್ಲಿ ಆದ ಕಾರ್ಮಿಕರ ಮುಷ್ಕರ ಮುಂತಾದವುಗಳ ದೆಸೆಯಿಂದ ಪೋಲೀಸು ಸಿಬ್ಬಂದಿ ಹೆಚ್ಚಿಸಲಾಯಿತೆಂದರು

ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಹಿಂದಿನ ಸರಕಾರದವರು ಬಿಟ್ಟು ಹೋಗಿರುವ ೩-೪ ಜವಾಬ್ದಾರಿಗಳನ್ನು ಈಗಿನ ಸರಕಾರದವರು ನಿರ್ವಹಿಸಬೇಕಾಗಿದೆಯೆಂದು ತಿಳಿಸಿದರು ಆ ಕಾರಣಕ್ಕಾಗಿ ಪರಿಹಾರ, ಸಂಬಳಗಳ ನಿಮರ್ಿ, ತುಟ್ಟಿ ಭತ್ಯ ಮತ್ತು ಯುದ್ಧಾನಂತರ ಯೋಜನೆಗಳು-ಇವುಗಳೆಲ್ಲಕ್ಕೂ ಹೆಚ್ಚು ಹಣ ಒದಗಿಸಬೇಕಾಯಿತೆಂದರು ಯಾವ ಪ್ರಾಂತ್ಯದಲ್ಲೂ ಯುದ್ಧಾನಂತರ ಯೋಜನೆಗಳ ನಿಧಿಯನ್ನು ಸೇರಿಸಿಲ್ಲವೆಂದೂ, ರಿಸರ್ವ್ ಫಂಡಿನಿಂದ ಹಣ ತೆಗೆದಿದ್ದರೂ ದೇಶದ ಹಣಕಾಸಿನ ಭದ್ರತೆ ಚೆನ್ನಾಗಿದೆಯೆಂದೂ ತಿಳಿಸಿದರು. ಹಿಂದಿನ ಸರಕಾರದವರು ಹೇರಳವಾಗಿ ಹಣ ಕೂಡಿಸಿದ್ದರಿಂದ, ಭಾವಿ ಯೋಜನೆಗಳನ್ನು ಜಾರಿಗೆ ಕೊಡಲು ಅನುಗ್ರಹ ಪ್ರಾಯಶಃ ಧೈರ್ಯ ಸಾಲದಾಗಿತ್ತೆಂದೂ ಆದ್ದರಿಂದ ರಿಸರ್ವ್ ಹಣವು ಬೆಳೆಯಿತೆಂದೂ ತಿಳಿಸಿದರು

ಅಧ್ಯಕ್ಷರಾದ ಶ್ರೀ ಗುಂಡಪ್ಪಗೌಡರು ಮಧ್ಯೆ ಪ್ರವೇಶಿಸಿ, ಸಚಿವರು ಈ ರೀತಿ ಹಿಂದಿನ ಸರಕಾರದ ಅವಹೇಳನ ಮಾಡಬಾರದೆಂದರು

ಸಚಿವರು ಮುಂದುವರಿಯುತ್ತಾ, ಹಿಂದಿನ ಸರಕಾರದ ಅವಹೇಳನ ಮಾಡುತ್ತಿಲ್ಲವೆಂದೂ, ಆಗಿನವರು ದೇಶದ ಅಭ್ಯುದಯಕ್ಕಾಗಿ ಒಂದು ಧೈರ್ಯದ ರೀತಿ ನೀತಿ ಅನುಸರಿಸಲಿಲ್ಲವೆಂದೂ ಹೇಳಿದರು. ಸರಕಾರದವರು ತಾವು ಬಂದ ತರುಣದಲ್ಲೇ ಸಾಲ ತೆಗೆಯುವುದು ಯುಕ್ತವಲ್ಲವೆಂದು ಭಾವಿಸಿರುವರೆಂದೂ ಮೇಲೆ ಹಣಕಾಸಿನ ಸ್ಥಿತಿ ಬಗ್ಗೆ ಪ್ರವೀಣರ ಸಮಿತಿಯನ್ನು ನೇ

ಪ್ರಭುಗಳೊಡನೆ ವೆಂಕಟಪ್ಪನವರ ಭೇಟಿ

ಮೈಸೂರು ೨೪

ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರಾದ ಶ್ರೀ ವಿ ವೆಂಕಟಪ್ಪನವರು ನಿನ್ನೆ ಸಂಜೆ ರಾಜಧಾನಿಗೆ ಆಗಮಿಸಿದರು ಈ ಪ್ರಾತಃಕಾಲ ಅವರಿಗೆ ಶ್ರೀಮನ್ಮಹಾರಾಜರು ಭೇಟಿಯನ್ನು ದಯಪಾಲಿಸಿದ್ದರು.

ವಿವಾಹ ಮಹೋತ್ಸವ

ಗೊಲ್ಲಗೇರಿಯಲ್ಲಿರುವ ಶ್ರೀ ಎಂ. ಸುಬ್ಬಯ್ಯನವರ ಮಕ್ಕಳು ಚಿ॥ ಎಸ್. ಎಸ್. ಅನಂತಸ್ವಾಮಿಗೆ ಕಟ್ಟೇಮಳಲವಾಡಿ ಶ್ರೀ ಶೇಷಗಿರಿಯ್ಯನವರ ಪೌತ್ರಿ ಚಿ। ಸೌ॥ ಶಾಂತಕುಮಾರಿಯನ್ನು ಕೊಟ್ಟು, ಕಳೆದ ಶುಕ್ರವಾರ ಕಟ್ಟೇಮಳಲವಾಡಿಯಲ್ಲಿ ವಿವಾಹವು ನಡೆಯಿತು

ನಿಧನ

ಮೈಸೂರಿನಲ್ಲಿ ಲಾಯರಾಗಿದ್ದ ಶ್ರೀ॥ ಎಸ್. ರಂಗಾಚಾರ್ಯರು ಈಗ್ಗೆ ಕೆಲವು ದಿವಸಗಳಿಂದಲೂ ಕ್ಯಾನ್ಸರ್ ವ್ಯಾಧಿಯಿಂದ ನರಳುತ್ತಿದ್ದು ಈ ದಿನ ಬೆಳಗ್ಗೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮರಣ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಮೃತರಿಗೆ ಪತ್ನಿಯೂ, ಏಳು ಮಂದಿ ಮಕ್ಕಳೂ ಇದ್ದಾರೆ.

ಮಿಸಲು ಸದಸ್ಯರು ಮಾಡಿದ ಸಲಹೆಯನ್ನು ಸರಕಾರದವರು ಗಮನದಲ್ಲಿಡುವರೆಂದು ಭರವಸೆಯಿತ್ತರು. ದೇಶದ ಕೀರ್ತಿ ಆಯವ್ಯಯ ಪಟ್ಟಿಯ ಮೇಲೆ ನಿಂತಿದೆಯೆಂದೂ, ಅದನ್ನು ಅನುಸರಿಸಿಯೇ ಪಟ್ಟಿಯು ತಯಾರಿಸಲಾಗಿದೆಯೆಂದೂ ತಿಳಿಸಿದರು

ಮುಖ್ಯ ಮಂತ್ರಿಗಳು ಶ್ರೀ ದಾಸಪ್ಪನವರ ಅಭಿಪ್ರಾಯವನ್ನು ಸ್ವೀಕರಿಸಿ ಮುಂದಿನ ವೃತ್ತಿಯಿಂದ ಪಟ್ಟಿಯು ಆಗಿದೆಯೆಂದೂ ೧೯೫೦ರಲ್ಲಿ ೪೮ ಕೋಟಿ ರೂ ಗಳಷ್ಟು ಭಾರಿ ಬಾಬುಗಳಿಗೆ ಖರ್ಚಾಗುವುದೆಂದೂ ತಿಳಿಸಿ, ಮಂತ್ರಿಮಂಡಲದ ಪುನರ್ರಚನೆ ವಿಚಾರವನ್ನು ಪ್ರಸ್ತಾಪಿಸಿ, ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಾಗಿ ತಿಳಿಸಿದರು.

ನಿನ್ನೆ ಮಧ್ಯಾಹ್ನ ಅಧ್ಯಕ್ಷರ ಗೈರುಹಾಜರಿನಲ್ಲಿ ಉಪಾಧ್ಯಕ್ಷ ಶ್ರೀ ನೀರಲ ಮಾದಯ್ಯನವರು ಮುಕ್ಕಾಲು ಗಂಟೆ ಕಾಲ ಅಗ್ರಾಸನವನ್ನು ವಹಿಸಿದ್ದರು.

ಸಂಸ್ಥಾನದಲ್ಲಿ ಅಧಿಕಾರಿಗಳ ಸಂಬಳ ಸಾರಿಗೆಗಳು

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು. ಫೋ॥] ಬೆಂಗಳೂರು ೨೪

ಈಗ ಸರ್ಕಾರದ ವಿಮಾ ಶಾಖೆಯ ಕಾರ್ಯದರ್ಶಿಯಾಗಿರುವ ಶ್ರೀ ಎಸ್. ತಂಬೂಚೆಟ್ಟರ ವಿಷಯವಾಗಿ ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆಗಳು ಬಂದವು. ಅವರನ್ನು ಕೆಲಸಕ್ಕೆ ತೆಗೆದುಕೊಂಡಾಗ ಬೇರೆ ಯಾರೂ ಇರಲಿಲ್ಲವೆಂದೂ ಈಚೆಗೆ ಇಲಾಖೆಯ ಪ್ರಗತಿಯು ಸಮರ್ಪಕವಾಗಿದೆಯೆಂದೂ ಸಚಿವರು ಉತ್ತರವಿತ್ತರು. ಗೋಪಾಲರಾಯರೊಡನೆ ಅವರ ವ್ಯವಹಾರದ ಬಗ್ಗೆ ಇನ್ನೂ ವರದಿ ಬಂದಿಲ್ಲವೆಂದೂ ಆದ್ದರಿಂದ ಅವರನ್ನು ಕೆಲಸದಿಂದ ತೆಗೆಯುವ ಪ್ರಶ್ನೆಗೆ ಉತ್ತರ ಕೊಡಲು ಸಾಧ್ಯವಿಲ್ಲವೆಂದೂ ತಿಳಿಸಲಾಯಿತು

ಕಳೆದ ಐದು ವರ್ಷಗಳಿಂದ ಅಧಿಕಾರಿಗಳಿಗೆ ಸಂದಿರುವ ಸಂಬಳ ಮತ್ತು ಭತ್ಯಗಳ ಬಗ್ಗೆ ಶ್ರೀ ಎಚ್. ಎಸ್. ರುದ್ರಪ್ಪನವರು ಪ್ರಶ್ನೆ ಹಾಕಿದರು. ಈ ವಿವರಗಳನ್ನು ಕೂಡಲೇ ಕೊಡುವುದು ಕಷ್ಟವೆಂದು ಶ್ರೀ ದಾಸಪ್ಪನವರು ತಿಳಿಸಿ ಈಗ ಸಂಸ್ಥಾನದಲ್ಲಿ ೧೫೦೦ಕ್ಕೆ ಮೇಲ್ಪಟ್ಟ ಸಂಬಳದ ಅಧಿಕಾರಿಗಳು ೧೫ಜನರೂ, ೮೦೦ಕ್ಕೆ ಮೇಲ್ಪಟ್ಟವರು ೭೪, ೫೦೦ಕ್ಕೆ ಮೇಲ್ಪಟ್ಟವರು ೮೭, ೧೫೦ಕ್ಕೆ ಮೇಲ್ಪಟ್ಟವರು ೪೪೭, ಜಿಲ್ಲಾಧಿಕಾರಿಗಳು ೭೯, ಅ॥ ಕಮೀಷನರುಗಳು ೧೩೫, ಅಮಲ್ದಾರರು ೧೨೭ ಜನರೂ ಇರುವರೆಂದು ತಿಳಿಸಿದರು.

ಭೂಕಂದಾಯದ ಬಗ್ಗೆ ಶ್ರೀ ಹೆಚ್. ಸಿದ್ದಯ್ಯನವರು ೧೫೦೦ರಿಂದೂ. ೧೫ಗಿ ಮಂಡಿಸಿದ ಹೆಚ್ಚಿನ ಬೇಡಿಕೆಯು ಒಪ್ಪಲ್ಪಟ್ಟಿತು

ಹೈದರಾಬಾದು ಮಾಜಿ ಮಂತ್ರಿಯ ಬಂಧನ

ಹಿಂದೆ ಹೈದರಾಬಾದ್ ಸಂಸ್ಥಾನದ ಲಾಯಿಕ್ ಅಲಿ ಮಂತ್ರಿಮಂಡಲದಲ್ಲಿದ್ದು ಇದುವರೆಗೆ ಗೃಹ ಬಂಧನದಲ್ಲಿದ್ದ ಶ್ರೀ ಬಿ. ಎಸ್. ವೆಂಕಟರಾವ್ ಎಂಬುವರನ್ನು ಸಾರ್ವಜನಿಕ ರಕ್ಷಣಾ ಶಾಸನದ ಮೇರೆ ದಸ್ತಗಿರಿ ಮಾಡಿ ಅಲ್ಲಿನ ಸೆಂಟ್ರಲ್ ಜೈಲಿಗೆ ಕಳುಹಿಸಲಾಗಿದೆ

ಲೋಹಿಯಾರವರಿಗೆ ಶಿಕ್ಷೆ

ಆಜ್ಞೋಲ್ಲಂಘನೆ ಮಾಡಿದ ಅಪರಾಧಕ್ಕಾಗಿ ಡಾ॥ ರಾಮಮನೋಹರ ಲೋಹಿಯಾ ಮತ್ತು ಇತರ ೪೩ ಜನರಿಗೆ ದೆಹಲಿಯ ನ್ಯಾಯಾಧೀಶರ ತಲಾ ಎರಡು ತಿಂಗಳು ಸಜಾ ಮತ್ತು ನೂರು ರೂ. ಜುಲ್ಮಾನೆ ವಿಧಿಸಿರುತ್ತಾರೆ.

ಆಫ್ಘಾನಿಸ್ಥಾನಕ್ಕೆ ಭಾರತದಿಂದ ನವಿಲು

ಆಫ್ಘಾನಿಸ್ಥಾನದ ಅರಸರು ಬಿಳಿ ನವಿಲುಗಳನ್ನು ಸಾಕುವುದರಲ್ಲಿ ಬಹಳ ಪ್ರೇಮವುಳ್ಳವರಾಗಿರುವರೆಂದೂ ತಮಗೆ ಒಂದು ಜೊತೆ ಬಿಳಿ ನವಿಲುಗಳನ್ನು ಕಳುಹಿಸಿಕೊಡುವಂತೆ ಅವರು, ಭಾರತ ಸರ್ಕಾರವನ್ನು ಕೋರಿರುವರೆಂದೂ ವರದಿಯಾಗಿದೆ ಕಪೂರ್ತಲಾ ಸಂಸ್ಥಾನದಲ್ಲಿ ಬಿಳಿಯ ನವಿಲುಗಳು ವಿಶೇಷವಾಗಿರುವುವೆಂದೂ, ಆಫ್ಘಾನಿಸ್ಥಾನದ ಅರಸರಿಗಾಗಿ ಅಲ್ಲಿ ಒಂದು ಜೊತೆ ನವಿಲುಗಳನ್ನು ಹುಡುಕಲಾಗುತ್ತಿದೆಯೆಂದೂ ಹೇಳಲಾಗಿದೆ ಅಲ್ಲಿನ ಮಹಾರಾಜರ ಅರಮನೆಯಲ್ಲಿ ಬಿಳಿಯ ನವಿಲುಗಳಿರುವುದೆಂದೂ ಗೊತ್ತಾಗಿದೆ.

ಆದಿರಾಜಯ್ಯನವರ ಉಪವಾಸ ಮುಕ್ತಾಯ

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ಧಲಿಂಗಯ್ಯನವರು ಮತ್ತು ಕಾರ್ಯದರ್ಶಿ ಶ್ರೀ ಎ ಜಿ ರಾಮಚಂದ್ರರಾಯರು ಮಾಗಡಿಯ ಶ್ರೀ ಹಕ್ಕಿ ಆದಿರಾಜಯ್ಯನವರನ್ನು ಕಂಡು ಮಾತನಾಡಿದ ಫಲವಾಗಿ ಶ್ರೀ ಆದಿರಾಜಯ್ಯನವರು ಕೈಗೊಂಡಿದ್ದ ಉಪವಾಸವು ಮೊನ್ನೆ ದಿನ ಮುಕ್ತಾಯವಾಯಿತು

ಮದುಮಗನಿಗೆ ಸಿಡಿಲು ಬಡಿದು ಮರಣ

ಮದ್ರಾಸಿನ ತಾಂಜೂರ ಬಳಿ ಒಂದು ... ಮದುವೆ ಜರುಗುತ್ತಿದ್ದಾಗ, ಮದುಮಗ ಆತನ ಅಕ್ಕನವರು ಮತ್ತು ... ಸಿಡಿಲು ಬಡಿದು ಮೂರು ಮರಣ ಹೊಂದಿದರು

೧೫೦೦ ಮಂದಿ ಕಮ್ಯೂನಿಸ್ಟರ ಬಂಧನ

ಹೈದರಾಬಾದಿನಲ್ಲಿ ಕಮ್ಯೂನಿಸ್ಟರ ಮೇಲೆ ಕೈಗೊಂಡ ಕಾರ್ಯಕ್ರಮದ ಪ್ರಕಾರ ಇದುವರೆಗೆ ೧೫೦೦ ಮಂದಿಯನ್ನು ಹಿಡಿದು ಬಂಧನದಲ್ಲಿರಿಸಲಾಗಿದೆ

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

CHAMUNDESWARI TALKIES

Morning Shows on 24th 25th & 26th at 10 30 a m

PERSUED

(ಪರ್ಸ್ಯೂಡ್)

Starring Terese Wright, Robert Mitchum

ಶ್ರೀ ಗಾಯತ್ರೀ

ಪ್ರತಿ ದಿನ 3 ಆಟಗಳು

ತಾ. 25-6-49 ರಿಂದ 3 ದಿನಗಳು

ಗೃಹಸ್ಥರು ತಮ್ಮ ಜೀವನವನ್ನು ಯಾವರೀತಿ ... ಎಂಬ ರಹಸ್ಯವನ್ನೊಳಗೊಂಡ ವರ್ಣರಂಜಿತ ಚಿತ್ರ

... ರವರ

ಲೈಫ್ ವಿತ್ ಫಾದರ್

LIFE WITH FATHER

ಪಾತ್ರ — ವಿಲಿಯಂ ಪಾವೆಲ್

MORNING SHOWS on 25th Sat, 26th Sun

THE PLAINSMAN

Edited printed, and published by A R Nagarajan at the Sadhvi Press, D Subbiah Road Mysore

ಪ್ರಭಾ

25-6-49 ರಿಂದ ಅಪೋಷ್ಠಿಸೇವಾರ

ಮಧುಕರ್ರವರ ಹಿಂದಿ ಚಿತ್ರ — ಪ್ರತಿ ದಿನ 3 ಪ್ರದರ್ಶನಗಳು

* ಬಜಾರ್ *

ಪಾತ್ರ — ಯಾಕೂಬ್, ಗೋಪ್, ನಿಗರ್ ಸುಲ್ತಾನಾ, ಶ್ಯಾಮ್

ಬೆಳಗಿನ ಪ್ರದರ್ಶನ — 25-6-49ರಿಂದ — 3 ದಿನಗಳು

ಪ್ರಭಾಕರ್ರವರ ಚಾಂದ್

ಮೈಸೂರು ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ ಆಫೀಸ್

ಗಂಧದ ಎಣ್ಣೆ ಕಾರ್ಖಾನೆಗೆ ರೈಲಿನ ಮುಖಾಂತರ ೧೯೪೯-೫೦ರಲ್ಲಿ ಸರಬರಾಜಾಗುವ ಸೌದೆ, ಕಲ್ಲಿದ್ದಲು, ಮುಂತಾದುವುಗಳನ್ನು ಕಾರ್ಖಾನೆಗೆ ಸೇರಿದ ರೈಲ್ವೆ ಸೈಡಿಂಗಿನ ಬಳಿ ವ್ಯಾಗನ್ನಿನಿಂದ ಇಳಿಸಿ ಕಾರ್ಖಾನೆ ಬಾಯಿಲರುಗಳಿಗೂ ಮತ್ತು ಸ್ಟೋರಿಗೂ ಸಾಗಿಸುವ ಕೆಲಸವನ್ನು ಮತ್ತು ಬಾಯಿಲರುಗಳಲ್ಲಿ ಉರಿಸಲು ಅನುಕೂಲಿಸುವಂತೆ ಸೌದೆಯನ್ನು ಸೀಳುವ ಕೆಲಸವನ್ನೂ ಕಂಟ್ರಾಕ್ಟು ಕೊಡಲಾಗುತ್ತೆ

ದರಖಾಸ್ತು ಮಾಡಲು ಇಷ್ಟವುಳ್ಳವರು ಇದರಡಿ ನಮೂದಿಸಿರುವ ಬಾಬುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಟನ್ ಒಂದಕ್ಕೆ ದರವನ್ನು ಕಟ್ಟಿ ಜುಲೈ ತಿಂಗಳು ೬ನೆಯ ತಾರೀಖು ಒಳಗಾಗಿ ದರಖಾಸ್ತು ಮಾಡಬಹುದು

ದರಖಾಸ್ತುದಾರರು ತಮ್ಮ ಪೂರ್ತಿಯಾದ ಅಂಚೆ ವಿಳಾಸವನ್ನು ನಮೂದಿಸಿ ದರಖಾಸ್ತುಗಳನ್ನು ಮೊಹರು ಮಾಡಲ್ಪಟ್ಟ ಕವರುಗಳಲ್ಲಿ ಕಳುಹಿಸತಕ್ಕದ್ದು ಅಲ್ಲದೆ ೨೦೦ ರೂಪಾಯಿಗಳನ್ನು ನಗದು ಡಿಪಾಜಿಟ್ಟಾಗಿ ಹಾಜರು ಮಾಡತಕ್ಕದ್ದು ಹಾಗೆ ಡಿಪಾಜಿಟ್ಟಿಲ್ಲದ ಮತ್ತು ಜುಲೈ ೬ನೆಯ ತಾರೀಖು ಮಧ್ಯಾಹ್ನ ೩ ಗಂಟೆ ಒಳಗೆ ತಲುಪದೆ ಇರುವ ದರಖಾಸ್ತುಗಳನ್ನು ಗಮನಕ್ಕೆ ತರಲಾಗುವುದಿಲ್ಲ ಇಷ್ಟವುಳ್ಳ ದರಖಾಸ್ತುದಾರರು ಆ ದಿವಸ ಹಾಜರಾಗಬಹುದು

ದರಖಾಸ್ತುಗಳನ್ನು ಮಂಜೂರು ಮಾಡುವ ಅಥವಾ ನಿರಾಕರಿಸುವ ಹಕ್ಕು ಈ ಕಾರ್ಖಾನೆ ಡೈರೆಕ್ಟರ್ ಸಾಹೇಬರ ಅಧಿಕಾರಕ್ಕೆ ಒಳಪಟ್ಟಿರುತ್ತದೆ ನಿರಾಕರಿಸುವ ದರಖಾಸ್ತುಗಳ ಬಗ್ಗೆ ಕಾರಣ ತಿಳಿಸಲಾಗುವುದಿಲ್ಲ

ಮಂಜೂರು ಮಾಡಲ್ಪಡುವ ದರಖಾಸ್ತುದಾರರು ಒಂದು ವಾರದ ಒಳಗಾಗಿ ಮತ್ತು ಆರೇ ರೂಪಾ ಕಾಗದದಲ್ಲಿ ಮೇಲಿನ ಇರುವ ಷರತ್ತುಗಳಂತೆ ಕರಾರನ್ನು ಬರೆದು ಕೊಡಬೇಕು ಮತ್ತು ಕಾರ್ಖಾನೆಯವರು ತಿಳಿಸುವ ತಾರೀಖಿಗೆ ಸರಿಯಾಗಿ ಕೆಲಸಕ್ಕೆ ಪ್ರಾರಂಭಿಸಬೇಕು ಇವುಗಳಲ್ಲಿ ಯಾವುದೊಂದು ಅಂಶಕ್ಕೆ ತಪ್ಪಿದರೂ ಡಿಪಾಜಿಟ್ಟು ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ಹಿಡಿದುಕೊಳ್ಳಲ್ಪಡುವುದಲ್ಲದೆ ಕಂಟ್ರಾಕ್ಟನ್ನು ಮತ್ತೊಬ್ಬರಿಗೆ ಹೆಚ್ಚು ದರಗಳ ಪ್ರಕಾರ ಕೊಡಬಹುದಾಗುವ ನಿಮಿತ್ತ ಉಂಟಾಗುವ ಲುಕ್ಸಾನು ಸಹ ದರಖಾಸ್ತುದಾರರಿಂದ ಕಂದಾಯದ ಬಾಕಿ ತರಹ ವಸೂಲು ಮಾಡಲ್ಪಡುತ್ತೆ

ಟೆಂಡರುಗಳಿಗೆ ಸಂಬಂಧಿಸಿದ ವಿಶಿಷ್ಟ ಷರತ್ತುಗಳೂ ಸಹ ಇದಕ್ಕೂ ಅನ್ವಯಿಸತಕ್ಕದ್ದು

— ಕೆಲಸಗಳ ವಿವರ —

೧ ಸೌದೆಯನ್ನು ವ್ಯಾಗನ್ನಿನಿಂದ ಇಳಿಸಿ ತೂಕ ಮಾಡಿಸಿ ಲಾಟು ಕಟ್ಟುವ ಸ್ಥಳಕ್ಕೆ ಸಾಗಿಸುವುದು. ೨ ಕಲ್ಲಿದ್ದಲನ್ನು ವ್ಯಾಗನ್ನಿನಿಂದ ಇಳಿಸಿ ತೂಕ ಮಾಡಿಸಿ ಲಾಟುಕಟ್ಟುವ ಸ್ಥಳಕ್ಕೆ ಸಾಗಿಸುವುದು ೩ ಕಲ್ಲಿದ್ದಲನ್ನು ಲಾಟುಗಳಿಂದ ಬಾಯಿಲರುಗಳ ಬಳಿಗೆ ತೂಕ ಮಾಡಿಸಿ ಸಾಗಿಸುವುದು ೪ ಸೌದೆಯನ್ನು ಲಾಟುಗಳಿಂದ ಬಾಯಿಲರುಗಳ ಬಳಿಗೆ ತೂಕ ಮಾಡಿಸಿ ಸಾಗಿಸುವುದು ೫ ಸೌದೆಯನ್ನು ವ್ಯಾಗನ್ನಿನಿಂದ ಬಾಯಿಲರುಗಳ ಬಳಿಗೆ ತೂಕ ಮಾಡಿ ಸಾಗಿಸುವುದು ೬ ಸೌದೆಯನ್ನು ಲಾಟು ಕಟ್ಟುವುದು ೭ ಕಲ್ಲಿದ್ದಲನ್ನು ಲಾಟು ಕಟ್ಟುವುದು ೮ ಸೌದೆಯನ್ನು ಬಾಯಿಲರುಗಳಲ್ಲಿ ಉರಿಸಲು ಅನುಕೂಲವಾಗುವಂತೆ ಸೀಳುವುದು ೯ ಅಂಗುಲಕ್ಕಿಂತ ದಪ್ಪಕ್ಕೆ ಬಾರದಂತೆ ಕಾರ್ಖಾನೆಯವರು ಒಪ್ಪುವಂತೆ ಒಡೆಯುವುದು

ಬಿ ಪಿ ರಾಮಕೃಷ್ಣ, ಜನರಲ್ ಮ್ಯಾನೇಜರ್

ಪ್ರಭುದೇವಾ ಟಾಕೀಸಿನಲ್ಲಿ

24-6-49ನೇ ಶುಕ್ರವಾರದಿಂದ

ಪ್ರತಿ ದಿನ ಮೂರು ಆಟಗಳು

* ತಾಯಿನಾಡು *

(ತಮಿಳು)

ಪಾತ್ರ:- ಟಿ ಎಸ್. ಮಣಿ ಮುಂತಾದವರು

BANGALORE RACES 1949

ಜೂನ್ 25 29 ಮತ್ತು ಜುಲೈ 2 ರಲ್ಲಿ

ಬುಕ್ ಮೇಕರ್ಸ್ — ಟೋಟಲೈಜೇಟರ್ಸ್

ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ 2 ಸ್ವೀಪ್

ಪ್ರವೇಶ: ಮೊದಲನೇ ತರಗತಿ ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ

ಎರಡನೇ ತರಗತಿ ಪುರುಷರು ಅಥವಾ ಸ್ತ್ರೀಯರು ರೂ 2 ,,

ಶ್ರೀ ಸೀತಾರಾಮಾಯ ನಮಃ

ಭಿಷಗ್ರತ್ನ ವಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಪ್ರಾಣದಾಯಕ

ಸಾತಿಶಯವಾತಕ್ಕೆ [ಬಾಣಂತಿ ನಂಜಿಗೆ] ಅತ್ಯುತ್ತಮ ಗುಣಕಾರಿ

ಕಣ್ಣುಕತ್ತಲು, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ದೆ ಬಾರದಿರುವಿಕೆ, ಮನಸ್ಸಿಗೆ ಕಳವಳ, ... ಸರಿಯಾಗಿಲ್ಲದಿರುವುದು ಸಹ ಪರಿಹಾರ

ವಿಳಾಸ — ಬೆಲೆ ಶೀಸೆ 1ಕ್ಕೆ 2-0-0

ಶ್ರೀ ಸೀತಾರಾಮನ ವೈದ್ಯಶಾಲಾ, ಮೈಸೂರು.

24-6-49ನೇ ಶುಕ್ರವಾರ ರಾತ್ರಿ 10 ಗಂಟೆಗೆ

ಮೈಸೂರು ಟೌನ್ ಹಾಲಿನಲ್ಲಿ

ಸುಪ್ರಸಿದ್ಧ ಸಿನಿಮಾ ನಟರಾದ ಪೃಥ್ವಿರಾಜ್ ಮತ್ತು ಅವರ ತಂಡದವರು

ಘದ್ದಾರ್ (ದೇಶದ್ರೋಹಿ)

ಎಂಬ ನಾಟಕವನ್ನು ಹಿಂದಿ ಭಾಷೆಯಲ್ಲಿ ಅಭಿನಯಿಸುವರು

ಟಿಕೆಟ್ ದರ ರೂ 15 10, 7 8-0 5 ... 8 0 2 ... 1

(A Prithvi Productions Release

ಕೋ॥ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಶನಿವಾರ ೨೫-೬-೪೯ [ಸಂಚಿಕೆ ೨೭೮

- ಆಫ್ಘಾನಿಸ್ತಾನಕ್ಕೂ - ಪಾಕಿಸ್ತಾನಕ್ಕೂ ಘರ್ಷಣೆ

ಪೃಥ್ವಿರಾಜರಿಗೆ ಸತ್ಕಾರ

ಮೈಸೂರು ೨೫

ರಾಜಧಾನಿಗೆ ಬಂದಿರುವ ಸುಪ್ರಸಿದ್ಧ ಸಿನಿಮಾ ನಟರಾದ ಶ್ರೀ ಪೃಥ್ವಿರಾಜ್ ಕಪೂರ್‌ರವರ ಗೌರವಾರ್ಥವಾಗಿ ನವಜ್ಯೋತಿ ಚಿತ್ರ ಕೇಂದ್ರದಲ್ಲಿ ನೆನ್ನೆ ಒಂದು ಸಮಾರಂಭವನ್ನು ಏರ್ಪಡಿಸಲಾಗಿದ್ದಿತು. ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಅತಿಥಿಗಳಿಗೆ ಸ್ವಾಗತವನ್ನು ಬಯಸಿದರು. ಶ್ರೀ ಜಿ. ಆರ್. ರಾಮಯ್ಯನವರು ಬಿನ್ನವತ್ತಳೆಯನ್ನು ಅರ್ಪಿಸಿದರು. ಶ್ರೀಗಳಾದ ಎಸ್. ಸಿ. ದೇವರಾಜೇ ಅರಸ್ ಮತ್ತು ಮೀರ್ ನೂರ್ ಹುಸೇನರವರು ಭಾಷಣ ಮಾಡಿ ಕಲಾ ಪ್ರೇಮಿಗಳ ಪರವಾಗಿ ಅತಿಥಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದರು. ಪೃಥ್ವಿರಾಜರು ಸೂಕ್ತ ಉತ್ತರವನ್ನಿತ್ತು ಚಲನಚಿತ್ರ ಕಲೆಗೆ ಸಕಲರೂ ಪ್ರೋತ್ಸಾಹ ನೀಡಬೇಕೆಂದು ಕೋರಿದರು. ನಾಟ್ಯಪ್ರದರ್ಶನವನ್ನೂ ಸಹ ಏರ್ಪಡಿಸಲಾಗಿತ್ತು.

ಜಯಲಕ್ಷ್ಮೀ ಆಯಿಲ್ ಮಿಲ್ಸ್

ಪೌರಸಭಾ ಸದಸ್ಯರಾದ ಶ್ರೀ॥ ಬಿ. ಕೆ ರಾಜಶೇಖರಯ್ಯನವರು ನಿನ್ನೆ ದಿನ ಬೆಳಿಗ್ಗೆ ಸುಬ್ಬಾನಂದವಾಡಿ ರಸ್ತೆಯಲ್ಲಿ ಮೇಲ್ಕಂಡ ಹೆಸರಿನಿಂದ ಹೊಸ ಗಿರಣಿಯ ಆರಂಭೋತ್ಸವವನ್ನು ನೆರವೇರಿಸಿದರು. ಸಂಜೆ ನಗರದ ಅನೇಕ ಪ್ರಮುಖರನ್ನು ಆಹ್ವಾನಿಸಿ ಸತ್ಕರಿಸಿದರು.

ಹೋಂ ಗಾರ್ಡ್ಸ್ ಪೆರೇಡು

೨೭ ನೇ ತಾರೀಖು ಭಾನುವಾರ ಮೈಸೂರು ನಗರದ ಹೋಂ ಗಾರ್ಡುಗಳ ಜನರಲ್ ಪೆರೇಡು ನಡೆಯುವುದು. ಎಲ್ಲಾ ಹೋಂ ಗಾರ್ಡುಗಳೂ ಯೂನಿಫಾರಮ್ಮಿನಲ್ಲಿ ಬೆಳಿಗ್ಗೆ ೭-೩೦ಕ್ಕೆ ಹಾಜರಾಗಬೇಕೆಂದು ಕೋರಲಾಗಿದೆ.

ಹರಿಕಥಾ ಸಪ್ತಾಹ

ಮೈಸೂರು ಚಲುವಾಂಬಾ ಅಗ್ರಹಾರದ ಹಿಂಭಾಗದ ಬೀದಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ನಿನ್ನೆ ಇಂದ ೭ ದಿನಗಳು ಸಾಯಂಕಾಲ ೭ ಘಂಟೆಗೆ ಬೆಂಗಳೂರು ಶ್ರೀ ಸುಬ್ಬರಾಮ ದಾಸರಿಂದ ಹರಿಕಥಾ ಕಾಲಕ್ಷೇಪ ನಡೆಯುತ್ತದೆ.

ಹರಿಕಥೆ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದ ಮುಂದೆ ನಾಳೆ ಸಂಜೆ ೭ ಗಂಟೆಗೆ ಶ್ರೀ ಮುಳಬಾಗಿಲು ನಾರಾಯಣ ದಾಸರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆ ನಡೆಯುವುದು

ಬ್ರಾಹ್ಮಣರ ವಿದ್ಯಾರ್ಥಿ ನಿಲಯ

ಅಖಿಲ ಮೈಸೂರು ಬ್ರಾಹ್ಮಣರ ಮಹಾಸಭೆಯ ಮೈಸೂರು ನಗರದ ವಿದ್ಯಾರ್ಥಿನಿಲಯಕ್ಕೆ ಸೇರಲು ಇಷ್ಟಪಡುವವರು ಈ ತಿಂಗಳು ೨೭ನೇ ತಾ॥ ನೊಳಗಾಗಿ ಕಾರ್ಯದರ್ಶಿಗಳಿಗೆ ಅರ್ಜಿ ಸಲ್ಲಿಸಬಹುದೆಂದು ತಿಳಿಸಲಾಗಿದೆ. ಈ ಮಹಾಸಭೆಗೆ ಮೈಸೂರು ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ನಾರಾಯಣರವರ ಮಗಳ ಲಗ್ನದಲ್ಲಿ ವಧೂವರರ ಕಡೆಗಳಿಂದ ೨೫ ರೂ ಮತ್ತು ಕಾಫಿ ಪ್ಲಾಂಟರ್ ಶ್ರೀ ಮಂಜನಾಥ ಅಯ್ಯರ್‌ರವರ ಮಗನ ಉಪನಯನದ ಸಂದರ್ಭದಲ್ಲಿ ೫ ರೂ ಕಾಣಿಕೆ ಸಂದಿರುತ್ತದೆ. ಬ್ರಾಹ್ಮಣ ಮಹಾಶಯರೆಲ್ಲರೂ ಸಭೆಯ ಸದಸ್ಯರುಗಳಾಗಿ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ನ್ಯಾಯಾಧೀಶರಿಗೆ ಕೇಡಿಯ 'ಬಹುಮಾನ'

ರಾಜಮಹೇಂದ್ರಿಯ ಸಬ್ ಕೋರ್ಟಿನ ನ್ಯಾಯಾಧೀಶರು ಗೋವರ್ಧನನೆಂಬ ೧೩ ಬಾರಿ ಶಿಕ್ಷೆಗೆ ಒಳಗಾದವನಿಗೆ ಒಂದು ಚಿನ್ನದ ಹಾರದ ಕಳುವಿಗಾಗಿ ೫ ವರ್ಷ ಶಿಕ್ಷೆ ವಿಧಿಸಿದಾಗ, ಅತನು "ಇದೇ ನಿಮಗೆ ಜಸ್ಟೀಸ್" ಎಂದು ಪಾದರಕ್ಷೆಯನ್ನು ಎಸೆದನು. ಅದು ಅವರಿಗೆ ತಗುಲದೆ ಬೆಂಚ್‌ಗ ಮಾಸ್ತರ ಮೇಜಿನ ಮೇಲೆ ಬಿತ್ತು.

ಸಿರಾ ಗಲಭೆ ಅಪಾದಿತರ ಮೇಲೆ ಚಾರ್ಜು

ಸಿರಾದಲ್ಲಿ ನಡೆದ ಕೋಮುವಾರು ಗಲಭೆ ಸಂಬಂಧವಾಗಿ ವಿಶೇಷ ನ್ಯಾಯಾಧೀಶರಾದ ಶ್ರೀ ಎಸ್. ಆರ್ ಜಯರಾಂರವರು ಕಳೆದ ಬುಧವಾರ ತೀರ್ಪು ಕೊಟ್ಟು ಅಬ್ದುಲ್ ಖಾದರ್ ಮತ್ತು ಇತರ ೫೦ ಜನ ಅಪಾದಿತರ ಮೇಲೆ ಚಾರ್ಜು ಹೊರಿಸಿದ್ದಾರೆ.

ಸ್ವಾಗತ ಸಮಾರಂಭ

ಸರಾಫ್ ಮತ್ತು ಜವಳಿ ವರ್ತಕರಾದ ಶ್ರೀ ಜಿ ವಿ. ಸೂರ್ಯನಾರಾಯಣ ಶೆಟ್ಟರು ತಮ್ಮ ಕುಮಾರ ಶ್ರೀ ಜಿ ಎಸ್. ಆನಂದರಾವ್‌ರವರಿಗೆ ಹಾಗಡಿಯ ಸರಾಫ್ ವರ್ತಕರಾದ ಶ್ರೀ ಬಿ ನಾಗಪ್ಪ ಶೆಟ್ಟರ ಪುತ್ರಿ ಚಿ॥ಸೌ॥ ಚಂದ್ರಕಮಲಮ್ಮನನ್ನು ತಂದು ವಿವಾಹವನ್ನು ನೆರವೇರಿಸಿದ ಸಂಬಂಧದಲ್ಲಿ ನೆನ್ನೆ ರಾಜಧಾನಿಯ ಮೆಕ್ಲಿ ರಸ್ತೆಯಲ್ಲಿರುವ ತಮ್ಮ ಭವನದಲ್ಲಿ ಸ್ವಾಗತಸಮಾರಂಭವನ್ನು ಏರ್ಪಡಿಸಿ ನಗರದ ಅನೇಕ ಮಾನ್ಯ ಮಹನೀಯರು ಮತ್ತು ಮಹಿಳೆಯರನ್ನು ಸತ್ಕರಿಸಿದರು.

ಗ್ರಾಮಾಧಿಕಾರಿಗಳ ಸಮ್ಮೇಳನ

ಈ ವರ್ಷದ ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನದ ಅಧ್ಯಕ್ಷತೆಯನ್ನು ಶಾಸನ ಸಭಾ ಸದಸ್ಯರೂ, ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರೂ ಆದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ವಹಿಸುವರೆಂದು ಗೊತ್ತಾಗಿದೆ.

ಲೇಡಿ ಡಾಕ್ಟರ ವರ್ಗ

ರಜಾ ಮುಗಿದ ಮೇಲೆ ಲೇಡಿ ಡಾ॥ ಶ್ರೀಮತಿ ಕೋಕಿಲ ರಾಮಬ್ರಹ್ಮರವರನ್ನು ಶಿವಮೊಗ್ಗ ಮೆಕ್‌ಗ್ಯಾನ್ ಆಸ್ಪತ್ರೆಗೆ ವರ್ಗಾಯಿಸಲಾಗಿದೆ

ವಿದ್ಯಾರ್ಥಿಗಳಿಗೆ ಭೋಜನ ಸೌಕರ್ಯ

ಮೈಸೂರು ೨೫

ರಾಜಧಾನಿಯ ಪೌರಸಭೆಯ ಆಶ್ರಯದಲ್ಲಿ ಪ್ರತಿ ವರ್ಷವೂ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟದ ಸೌಕರ್ಯವನ್ನು ಏರ್ಪಡಿಸಲಾಗುತ್ತಿರುವಂತೆ ಈ ಸಾರಿಯೂ ಸಹ ಸುಮಾರು ೧೦೦ ಜನರಿಗೆ ಸಹಾಯ ಮಾಡಲು ವ್ಯವಸ್ಥೆ ಮಾಡಲಾಗಿದೆ. ಈ ಸೌಕರ್ಯವನ್ನು ಅಪೇಕ್ಷಿಸುವವರು ಪೌರಸಭೆಯಿಂದ ಅರ್ಜಿ ನಮೂನೆಯನ್ನು ತೆಗೆದುಕೊಂಡು ಜುಲೈ ೫ನೇ ತಾ॥ ನೊಳಗೆ ಸಲ್ಲಿಸಬೇಕೆಂದು ಪೌರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಸೂಚಿಸಿರುತ್ತಾರೆ.

ಪ್ರಭುಗಳಿಂದ ಲಕ್ಕವಳ್ಳಿ ಯೋಜನೆಯ ಶಂಕುಸ್ಥಾಪನೆ

ಶ್ರೀಮನ್ಮಹಾರಾಜರವರು ಬರುವ ನವೆಂಬರ್ ತಿಂಗಳಲ್ಲಿ ಲಕ್ಕವಳ್ಳಿ ಜಲಾಶಯದ ಶಂಕು ಸ್ಥಾಪನೆಯನ್ನು ಮಾಡಲಿರುವರೆಂದು ಹೇಳಲಾಗಿದೆ.

ಚಕ್ರಬಂಧ ಸ್ಪರ್ಧೆಗಳ ಮೇಲೆ ಪ್ರತಿಬಂಧಕ

ಚಕ್ರಬಂಧ ಸ್ಪರ್ಧೆ, ಅಂಕಿಗಳುಳ್ಳ ಪಂದ್ಯಗಳು ಇವೇ ಮುಂತಾದುವುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಕೂಡದೆಂದು ಬೊಂಬಾಯಿನ ಸರಕಾರದವರು ವರ್ತಮಾನ ಮತ್ತು ಇತರ ಪ್ರಕಟಣೆಗಳ ಪ್ರಕಾಶಕರಿಗೆ ಎಚ್ಚರಿಕೆ ಕೊಟ್ಟಿದ್ದಾರೆ

ಹಳ್ಳಿ ಅಂಚೆ ಕಛೇರಿಗಳು

ಮೂರು ಸಾವಿರ ಹಳ್ಳಿಗಳ ಅಂಚೆ ಕಛೇರಿಗಳನ್ನು ಈ ವರ್ಷದಲ್ಲಿ ಸ್ಥಾಪಿಸುವ ಉದ್ಯಮದಲ್ಲಿ ಈಗಾಗಲೇ ೧॥ಸಾವಿರ ಕಛೇರಿಗಳನ್ನು ತೆರೆಯಲಾಗಿದೆಯೆಂದು ಭಾರತ ಸಂಚಾರ ಮಂತ್ರಿಗಳು ತಿಳಿಸಿದ್ದಾರೆ. ಕಳೆದ ವರ್ಷ ೭ ಸಾವಿರ ಕಛೇರಿಗಳನ್ನು ತೆರೆಯಲಾಗಿತ್ತೆಂದು ತಿಳಿಸಿದರು

ಸಮಾಜವಾದಿಗಳು ಪುನಃ ಕಾಂಗ್ರೆಸ್ಸಿಗೆ ಬರಲಿ

ಸಮಾಜವಾದಿಗಳು ಪುನಃ ಕಾಂಗ್ರೆಸ್ಸನ್ನು ಪ್ರವೇಶಿಸಿ ದೇಶವನ್ನು ಬಲಪಡಿಸಬೇಕೆಂದು ಬೊಂಬಾಯಿಯ ಮುಖ್ಯಮಂತ್ರಿಗಳಾದ ಶ್ರೀ ಬಿ ಜಿ ಖೇರ್ ರವರು ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿರುವರು

ಸಂಸ್ಥಾನಕ್ಕೆ ಪೆಟ್ರೋಲ್ ಸರಬರಾಜು

ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ ಸು ವರದಿ] ಬೆಂಗಳೂರು ೨೫

ನ್ಯಾಯವಿಧಾಯಕ ಸಭೆಯಲ್ಲಿ ಸಂಸ್ಥಾನಕ್ಕೆ ಪೆಟ್ರೋಲು ಸರಬರಾಜಿನ ವಿಷಯವಾಗಿ ಶ್ರೀ ಎಸ್. ವೀರಬಸಪ್ಪನವರು ಹಾಕಿದ ಪ್ರಶ್ನೆಗೆ ಶ್ರೀ ಮರಿಯಪ್ಪನವರು ಉತ್ತರ ಕೊಟ್ಟು ೧೯೪೮ನೇ ಇಸವಿಯಲ್ಲಿ ೩೪,೪೮,೩೩೩ ಗ್ಯಾಲನ್ ಪೆಟ್ರೋಲನ್ನು ಒದಗಿಸಲಾಗಿತ್ತೆಂದು ತಿಳಿಸಿದರು.

ನಮ್ಮ ಸಂಸ್ಥಾನಕ್ಕೆ ಸರಾಸರಿ ೩ ತಿಂಗಳಿಗೆ ೧೫ ಲಕ್ಷ ಗ್ಯಾಲನ್ ಪೆಟ್ರೋಲು ಬೇಕಾಗುವುದೆಂದು ೭ ವೀರಬಸಪ್ಪನವರ ಉಪಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು.

ಸರ್ಕಾರಿ ಅಧಿಕಾರಿಗಳನ್ನು ಸೂಪರ್‌ಸೀಡ್ ಮಾಡಿದ ವಿಚಾರವಾಗಿ ಕೇಳಿದ ಪ್ರಶ್ನೆಗೆ ಶ್ರೀ ಎಚ್ ಸಿ ದಾಸಪ್ಪನವರು ಅಂತಹ ಪ್ರಸಂಗಗಳೇನೂ ನಡೆದಿಲ್ಲವೆಂದೂ, ಹಿಂದಿನ ಸರ್ಕಾರದ ಕಾಲದಲ್ಲಿ ನಡೆದಿರಬಹುದೆಂದೂ ಹೇಳಿದರು

ಅಫ್ಘನ್ ಗಡಿಯಲ್ಲಿ ಯುದ್ಧದ ಹೊಗೆಯಾಡುತ್ತಿದೆ

ಪಾಕಿಸ್ತಾನಕ್ಕೂ ಅಫ್ಘಾನಿಸ್ತಾನಕ್ಕೂ ಇರುವ ವ್ಯಾಜ್ಯವು ಸಧ್ಯದಲ್ಲಿಯೇ ಭೀಕರ ಸ್ವರೂಪವನ್ನು ತಾಳುವ ನಿರೀಕ್ಷಣೆಯಿರುವುದಾಗಿ ಕಾಬೂಲಿನಿಂದ ವಾರ್ತೆ ಬಂದಿದೆ. ಗಡಿ ಪ್ರದೇಶದ ಅನೇಕ ಕಡೆಗಳಲ್ಲಿ ಪಠಾಣಿಸ್ತಾನದ ಧ್ವಜವನ್ನು ಹಾರಿಸಲಾಗಿದೆಯೆಂದು ತಿಳಿದುಬಂದಿದೆ

ಸಂಸ್ಥಾನಕ್ಕೆ ಕೇಂದ್ರದಿಂದ ೨ ಕೋಟಿ ರೂ. ಸಹಾಯ

ಹೆಚ್ಚು ಪ್ರಮಾಣದಲ್ಲಿ ಆಹಾರ ಧಾನ್ಯವನ್ನು ಉತ್ಪತ್ತಿ ಮಾಡುವ ಸಲುವಾಗಿ ಕೇಂದ್ರ ಸರ್ಕಾರದವರು ಮೈಸೂರು ಸರಕಾರಕ್ಕೆ ೨ ಕೋಟಿ ರೂ ಗಳಷ್ಟು ಸಹಾಯ ದ್ರವ್ಯವನ್ನು ಕೊಡಲಿರುವರೆಂದು ತಿಳಿದುಬಂದಿದೆ

ದಿವಾನರಿಗೆ ರಜಾ

ದಿವಾನರು ಆಗಸ್ಟ್ ತಿಂಗಳಲ್ಲಿ ನಿವೃತ್ತರಾಗುವ ಪೂರ್ವಭಾವಿಯಾಗಿ ಒಂದು ತಿಂಗಳು ರಜಾ ಪಡೆಯುವರೆಂದು ತಿಳಿದುಬಂದಿದೆ

ಪ್ರಭುಗಳೊಡನೆ ಪೃಥ್ವಿರಾಜರ ಭೇಟಿ

ಬೊಂಬಾಯಿನ ಸುಪ್ರಸಿದ್ಧ ಚಲನಚಿತ್ರನಟರಾದ ಶ್ರೀ ಪೃಥ್ವಿರಾಜ್ ಕಪೂರ್ ರವರಿಗೆ ನೆನ್ನೆ ಶ್ರೀಮನ್ಮಹಾರಾಜರವರು ಭೇಟಿ ದಯಪಾಲಿಸಿದ್ದರು

ತನ್ನನ್ನು ಕೂಡಲೇ ಗಲ್ಲಿಗೆ ಹಾಕಬೇಕೆಂದು ಗೋಡ್ಸೆಯ ಪ್ರಾರ್ಥನೆ

ಹೋಗಿನ ಪಾದ್ರಿಗಳ ಸಂಘಗಳಿಂದ ಗೋಡ್ಸೆ ಮತ್ತು ಆಪ್ಟೆ ಇವರುಗಳಿಗೆ ಪ್ರಾಣಭಿಕ್ಷೆ ನೀಡಬೇಕೆಂದು ಮನವಿಗಳು ಬಂದಿರುವುದಾಗಿಯೂ, ಅವರ ಘಾಸಿ ಶಿಕ್ಷೆಯನ್ನು ಇಳಿಸುವ ಸೂಚನೆಗಳಿಲ್ಲವೆಂದೂ ಹೇಳಲಾಗಿದೆ. ನಾಥೂರಾಂ ಗೋಡ್ಸೆಯು ಹೈಕೋರ್ಟಿನ ಮುಂದೆ ವಾದಮಾಡುವಾಗ ಹೈಕೋರ್ಟಿನ ತೀರ್ಪಿನ ಮೊಕದ್ದಮೆ ಶಿಕ್ಷೆಯನ್ನು ಸಮಾ ರಾಜ್ಯದಲ್ಲಿ ಗಲ್ಲಿಗೇರಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದನೆಂದು ವರದಿಯಾಗಿದೆ.

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಪ್ರಸಿದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರ್, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

॥ ಶ್ರೀ ॥

ಗಣೇಶಾ ಟಾಕೀಸ್

26-6-49 ರಿಂದ

ಪ್ರತಿ ದಿನ 3 ಆಟಗಳು

ಮೀರಾ

(ತಮಿಳು)

ಭೂಮಿಕೆ:- ಎಂ. ಎಸ್. ಸುಬ್ಬುಲಕ್ಷ್ಮಿ, ವಿ. ನಾಗಯ್ಯ ಮುಂತಾದವರು

✻ ಲಕ್ಷ್ಮೀ ✻

ಪ್ರತಿ ದಿನ 3 ಆಟಗಳು

ಮುಂದೆ ಮೂವಿಟೋನ್‌ರವರ ಆಕರ್ಷಣೀಯ ಹಿಂದಿ ಚಿತ್ರ

ಘರ್ ಕಿ ಇಜ್ಜತ್

(ಹೊಸ ಕಾಪಿ)

ಮುಮ್ತಾಜ್ ಶಾಂತಿ, ದಿಲೀಪ್ ಕುಮಾರ್, ಜೀವನ್, ಗೋಪ್

-: ನಿರೀಕ್ಷಿಸಿ :-

ಉಪಹಾರಣ (ಹಿಂದಿ)

Edited, printed and published by A. R. Nagarajan at the Sadhvi Press, D. Subbiah Road, Mysore

ಪ್ರಭುದೇವಾ ಟಾಕೀಸಿನಲ್ಲಿ

24-6-49ನೇ ಶುಕ್ರವಾರದಿಂದ

ಪ್ರತಿ ದಿನ ಮೂರು ಆಟಗಳು

★ ತಾಯಿನಾಡು ★

(ತಮಿಳು)

ಪಾತ್ರ:- ಟಿ. ಎಸ್. ಮಣಿ ಮುಂತಾದವರು

ಪ್ರಭಾ

25-6-49ರಿಂದ

ಅಸಾಧಾರಣವಾದ 3ನೇ ವಾರ

ಪ್ರತಿ ದಿನ 3 ಪ್ರದರ್ಶನಗಳು

✻

ಮಧುಕರ್‌ರವರ ಹಿಂದಿ ಚಿತ್ರ

ಬಜಾರ್

✻

ಪಾತ್ರ —ಯಾಕೂಬ್, ಗೋಪ್, ನಿಗಾರ್ ಸುಲ್ತಾನಾ, ಶ್ಯಾಮ

ಬೆಳಗಿನ ಪ್ರದರ್ಶನ - 25-6-49ರಿಂದ -- 3 ದಿನಗಳು

ಪ್ರಭಾತ್‌ರವರ ಚಾಂದ್

॥ ಶ್ರೀ ಸೀತಾರಾಮಾಭ್ಯಾಂ ನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು



ಸ್ತ್ರೀಯರ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ನಡುಗಳ ನೋವು. ಮೊದಲಾಗಿ ಗುಣವಾಗುತ್ತದೆ

ಬೆಲೆ ಸೀಸೆ 1ಕ್ಕೆ 2-0-0

ವಿಳಾಸ:—

ಶ್ರೀ ಸೀತಾರಾಮಾ ವೈದ್ಯಶಾಲಾ, ಮೈಸೂರು.

ಹೆಬ್ಬಾವಿನ ಹೊಟ್ಟೆಯಲ್ಲಿ

ಕೋತಿ

ಕಾಶಿ ಹತ್ತಿರ ಇರುವ ಬಸ್ತಿ ಎಂಬಲ್ಲಿಯ ರೈತರು ಒಂದು ಹೆಬ್ಬಾವನ್ನು ಸೀಳಿದಾಗ ಅದರ ಹೊಟ್ಟೆಯೊಳಗೆ ಒಂದು ಸತ್ತ ಕೋತಿಯು ಸಿಕ್ಕಿತು. ಹೆಬ್ಬಾವು ೧೨ ಅಡಿ ಉದ್ದವಿದ್ದು ೩ ಅಡಿ ಸುತ್ತಳತೆಯುಳ್ಳದ್ದಾಗಿತ್ತು.

ವಿದ್ಯಾವರ್ಧಕ ಹೈಸ್ಕೂಲು

ಈ ಹೈಸ್ಕೂಲಿನ ಮೊದಲನೇ ತರಗತಿಯ ಪಾಠ ಪ್ರವಚನಗಳು ಜುಲೈ ೧ನೇ ತಾ॥ ನಿಂದ ಪ್ರಾರಂಭವಾಗಲಿವೆ. ಇದಕ್ಕೆ ಸೇರಲಿರುವ ವಿದ್ಯಾರ್ಥಿಗಳು ಅಷ್ಟರೊಳಗೆ ಸೇರಬೇಕಾಗಿದೆ. ಸಾಕಾದಷ್ಟು ವಿದ್ಯಾರ್ಥಿಗಳು ಬಂದರೆ ಇಂಗ್ಲೀಷ್ ಮಾಧ್ಯಮ ಭಾಗವನ್ನೂ ತೆರೆಯಲಾಗುವುದು.

RAJKAMAL, MYSORE

FROM 1st JULY 1949

A day you should keep apart to fix up ENGAGEMENT to witness

William Shakespeare's

HAMLET

A Story of MADNESS & MURDER

WITH—LAURENCE OLIVER

From 26-6-49 For 4 days

R.K.O's **The Return of Bad Men**

ಬೆಳಗಿನ ಆಟ ತಾ॥ 24-6-49ರಿಂದ ಪ್ರಾರಂಭ

ಜಂಗಲ್ ಮೆ ಮಂಗಲ್ [ಹಿಂದಿ]

ಮೈಸೂರಿನಲ್ಲಿ ಪ್ರಥಮ ಪ್ರದರ್ಶನ

ಮೈಸೂರು ಸ್ಟೇಟ್ ರೈಲ್ವೆ

ನಂ. ಟಿ. 17-44

ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರಿಂಟೆಂಡೆಂಟರವರ ಕಚೇರಿ, ಮೈಸೂರು ೧೬-೬-೪೯

ಪ್ರಕಟನೆ

ಮೈಸೂರು ನಗರದ ರೈಲ್ವೆ ನಿಲ್ದಾಣದಿಂದ ಪ್ರತಿ ದಿನವೂ ಕಚಡಾ ವಸ್ತುಗಳ ಸಾಗಿಸುವಿಕೆಯ ಬಗ್ಗೆ ಕಂಟ್ರಾಕ್ಟು ತೆಗೆದುಕೊಳ್ಳುವವರಿಂದ ಮೊಹರಾದ ಟೆಂಡರುಗಳನ್ನು ಮೈಸೂರಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆಯ ಮೈಸೂರು ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರವರು ೧೯೪೯ನೇ ಜೂನ್ ೨೮ನೇ ತಾ॥ ಮಂಗಳವಾರ ಮಧ್ಯಾಹ್ನ ಮೂರು ಗಂಟೆವರೆಗೆ ಸ್ವೀಕರಿಸುವರೆಂದು ಈ ಮೂಲಕ ಪ್ರಕಟಿಸಲಾಗಿದೆ "ಮೈಸೂರು ನಿಲ್ದಾಣದಲ್ಲಿ ಸ್ಯಾನಿಟರಿ ಕಂಟ್ರಾಕ್ಟಿನ ಬಗ್ಗೆ ಟೆಂಡರು" ಎಂಬ ಶಿರೋನಾಮೆಯನ್ನು ಲಕೋಟೆ ಮೇಲೆ ಹಾಕಬೇಕು ಮೈಸೂರು ನಿಲ್ದಾಣದ ಅಂಗಳ, ಡಾಕ್ ಸೈಡಿಂಗುಗಳು, ಪೊಲೀಸ್ ಲೈನುಗಳು, ರೈಲ್ವೆ ನಿಲ್ದಾಣ ಪ್ರದೇಶದ ಕ್ವಾರ್ಟರುಗಳು ಮತ್ತು ಕಂಟ್ರಾಕ್ಟಿನ ಅವಧಿಯೊಳಗೆ ಪ್ರಕಟಿಸಲ್ಪಡಬಹುದಾದ ಇತರ ಪ್ರದೇಶಗಳು - ಈ ಕಡೆಗಳಿಂದ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಸಕಾಲದಲ್ಲಿ ಕಶ್ಮಲವನ್ನು ಸಾಗಿಸಲು ಕಂಟ್ರಾಕ್ಟರು ಬದ್ಧರಾಗಿರಬೇಕು ಇದಕ್ಕಾಗಿ ಕಂಟ್ರಾಕ್ಟರು ಜೋಡೆತ್ತಿನ ಗಾಡಿಯನ್ನಿಡಬೇಕು

೨ ಮೈಸೂರು ರೈಲ್ವೆಯ ಚೀಫ್ ಆಡಿಟರಲ್ಲಿ ೨೫ ರೂ ಡಿಪಾಜಿಟ್ ಮಾಡಿದ ಬಗ್ಗೆ ಪ್ರತಿ ಟೆಂಡರಿನೊಡನೆಯೂ ಜನರಲ್ ರಶೀತಿಯೂ ಇರಬೇಕು ಆಕ್ನಾಲೆಡ್ಜ್‌ಮೆಂಟ್ ರಿಜಿಸ್ಟರ್ ಪೋಸ್ಟಿನಲ್ಲಿ ಟೆಂಡರನ್ನು ಕಳುಹಿಸಬೇಕು. ಖುದ್ದಾಗಿ ಅಥವ ಇತರರ ಮೂಲಕ ಕೊಟ್ಟ ಟೆಂಡರನ್ನು ಅಂಗೀಕರಿಸುವುದಿಲ್ಲ.

೩ ಟೆಂಡರನ್ನು ಅಂಗೀಕರಿಸುವ, ತಿರಸ್ಕರಿಸುವ ಅಥವ ಹೊಸ ಟೆಂಡರನ್ನು ಕರೆಯುವ ಅಧಿಕಾರವನ್ನು ಡಿ॥ ಟ್ರಾ॥ ಸೂಪರಿಂಟೆಂಡೆಂಟರೇ ಇಟ್ಟುಕೊಂಡಿರುವರು

೪ ಅಂಗೀಕೃತವಾದ ಟೆಂಡರುದಾರರು ತಿಳಿವಳಿಕೆ ಕೊಟ್ಟ ಕೂಡಲೇ ಕರಾರು ಕಾಗದದಲ್ಲಿ ದಸ್ತಖತ್ತು ಬರೆದುಕೊಡಬೇಕು.

೫ ೧೯೪೯ನೇ ಜುಲೈ ೧ರಿಂದ ೧೯೫೦ನೇ ಜೂನ್ ೩೦ರ ವರೆಗೆ ಹನ್ನೆರಡು ತಿಂಗಳ ಕಾಲ ಕಂಟ್ರಾಕ್ಟು ಜಾರಿಯಲ್ಲಿರುವುದು.

ಪಿ. ಆರ್. ಕೃಷ್ಣಸ್ವಾಮಿ,

ಆ॥ ಡಿ॥ ಟ್ರಾಫಿಕ್ ಸೂಪರಿಂಟೆಂಡೆಂಟ್

25-6-49ನೇ ಶನಿವಾರ ರಾತ್ರಿ 10 ಗಂಟೆಗೆ

ಮೈಸೂರು ಟೌನ್ ಹಾಲಿನಲ್ಲಿ

★ ಪಠಾಣ್ ★

ಎಂಬ ನಾಟಕವನ್ನು ಹಿಂದಿ ಭಾಷೆಯಲ್ಲಿ ಅಭಿನಯಿಸುವರು

ಟಿಕೇಟು ದರ ರೂ 15, 10, 7-8-0, 5, 3-8-0, 2 ಮತ್ತು 1

[A Prithvi Productions Release

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೨೬-೬-೪೯ [ಸಂಚಿಕೆ ೪೩

– ಅಲೆಪ್ಪಿ ಗ್ರಾಮದಲ್ಲಿ – ರಕ್ತದ ಮಳೆ ಬಿತ್ತು

ಆರೋಗ್ಯ ಮತ್ತು ಕಲೆಗಳ ಪ್ರದರ್ಶನ

ಡಿಸೆಂಬರ್ ತಿಂಗಳಲ್ಲಿ ನಡೆಸಲು ಪೌರಸಭೆಯ ನಿರ್ಧಾರ

ಮೈಸೂರು ೨೬

ನಗರದ ಪೌರಸಭೆಯ ಅಧಿವೇಶನವು ನೆನ್ನೆ ಸಂಜೆ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬರುವ ಡಿಸೆಂಬರ್ ತಿಂಗಳಲ್ಲಿ ಆರೋಗ್ಯ ಮತ್ತು ಕಲೆಗಳಿಗೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ಏರ್ಪಡಿಸಬೇಕೆಂದು ನಿರ್ಧರಿಸಲಾಯಿತು.

ಭಾರತದ ದಂಡನಾಯಕರಾದ ಜ॥ ಎಂ ಕಾರಿಯಪ್ಪನವರು ರಾಜಧಾನಿಗೆ ಮುಂದಿನ ತಿಂಗಳಲ್ಲಿ ಬಂದಾಗ ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದ ತೀರ್ಮಾನಿಸಲಾಯಿತು. ಇದಕ್ಕಾಗಿ ಒಂದು ನೂರ ರೂಪಾಯಿಯನ್ನು ಮಂಜೂರು ಮಾಡಲಾಯಿತು

ಸರಕಾರದವರು ಕಳುಹಿಸಿಕೊಟ್ಟಿದ್ದ ಇ... ಹೆಸರಿನ ಪೈಕಿ ಡಾ॥ ಬಿ ಎಲ್ ಲಿಂಗಪ್ಪನವರನ್ನು ಆರೋಗ್ಯಾಧಿಕಾರಿಗಳಾಗಿ ನೇಮಿಸಲಾಯಿತು ಸಾರ್ವಜನಿಕ ಮೂತ್ರಿಗಳ ವಿಚಾರವಾಗಿ ಅನೇಕ ಪ್ರಶ್ನೋತ್ತರಗಳಾದವು ನಗರದ ವಿವಿಧ ಮೊಹಲ್ಲೆಗಳಲ್ಲಿ ಸ್ಥಾಪಿಸಬೇಕಾದ ಮೂತ್ರಿಗಳ ಸಂಖ್ಯೆಯನ್ನು ಪರಿಶೀಲಿಸಿ, ಅವುಗಳ ಕೆಲಸವನ್ನು ಕೈಗೊಳ್ಳಲಾಗುವುದೆಂದು ಅಧ್ಯಕ್ಷರು ತಿಳಿಸಿದರು ವಿವಿಧ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲಾಯಿತು

ಪೃಥ್ವಿರಾಜರಿಗೆ ಚಿತ್ರದ ಸಮರ್ಪಣೆ

ಜಗನ್ಮೋಹನಭವನದ ರಸ್ತೆಯಲ್ಲಿರುವ ಮೈಸೂರು ಆರ್ಟ್ ಸ್ಟುಡಿಯೋವಿನ ಶ್ರೀ ...ಮುರವರು ಶ್ರೀ॥ ಪೃಥ್ವಿರಾಜ್ ಕಪೂರವರಿಗೆ ಮೊನ್ನೆ ದಿನ ತಾವು ತಯಾರಿಸಿರುವ ಸರ್ವೋದಯ ಚಿತ್ರವನ್ನು ಸಮರ್ಪಿಸಿದರು ಅವರು ಅದನ್ನು ಕಂಡು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು

ಶ್ರೀರಂಗಪಟ್ಟಣದಲ್ಲಿ ಸಮಾಜವಾದಿ ಪಕ್ಷ

ಕಾಂಗ್ರೆಸ್ ಕೆಲಸಗಾರರೂ, ಪತ್ರಿಕಾ ಪ್ರತಿನಿಧಿಗಳೂ ಆಗಿರುವ ಶ್ರೀ॥ ಎಸ್. ...ಪತ್ಮನಾಭರವರು ಕಾಂಗ್ರೆಸ್ಸಿಗೆ ರಾಜೀನಾಮೆಯಿತ್ತು ಶ್ರೀರಂಗಪಟ್ಟಣದಲ್ಲಿ ಸಮಾಜವಾದಿ ಪಕ್ಷದ ಸ್ಥಾಪನೆ ಮತ್ತು ಅದರ ತತ್ವದಪ್ರಚಾರದಲ್ಲಿ ತೊಡಗುವರೆಂದು ತಿಳಿದುಬಂದಿದೆ

ಹೂವಿನ ಪಲ್ಲಕ್ಕಿ ಉತ್ಸವ

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ಶ್ರೀ ಗರ್ಭ ನವಮಿ ...ಮಹೋತ್ಸವದ ಸಂದರ್ಭದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಹೂವಿನ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಲಾಗಿದೆ ಉತ್ಸವವು ಶ್ರೀರಾಂಪೇಟೆ, ಮಕ್ಕಾಜಿ ಚೌಕ, ಚಮ್ಮಾ ಮಹಮ ಬೀದಿ ಮತ್ತು ಅಶೋಕ ರಸ್ತೆಗಳಲ್ಲಿ ಹಾದು, ದೇವಸ್ಥಾನವನ್ನು ಸೇರುವುದು

ಕಲ್ಲಿಕೋಟೆಯಲ್ಲಿ ಪ್ರಾಚೀನ ಕಾಲದ ಗುಹೆಗಳು

ಕಲ್ಲೀ ಕೋಟೆಯ ಸಮೀಪದಲ್ಲಿ ಕೂಲಿಯವರು ನೆಲವನ್ನು ಅಗೆಯುತ್ತಿದ್ದಾಗ ಅತ್ಯಂತ ಪ್ರಾಚೀನವಾದ ಎರಡು ಗುಹೆಗಳ ಸಿಕ್ಕಿದುವೆಂದೂ, ಸಾರಿನಿಂದ ತುಂಬಿದ ಮಡಕೆಗಳು ಅಲ್ಲಿ ದೊರೆತುವೆಂದೂ ಹೇಳಲಾಗಿದ

ಖಾಸಿಂ ರಜ್ವಿ ಮೇಲೆ ಲೂಟಿ, ಡಕಾಯಿತಿ ಆಪಾದನೆ

ಹೈದರಾಬಾದಿನ ಪೋಲಿ ನಡೆದ ಪೋಲೀಸ್ ಕಾರ್ಯಾಚರಣೆಗೆ ಕೆಲವು ದಿನಗಳ ಮುಂಚೆ ಬೀಬಿ ನಗರದಲ್ಲಿ ರಜಾಕರರು ಡಕಾಯಿತಿ, ದಂಗೆ, ಲೂಟಿ ಮೊದಲಾದ ಕೃತ್ಯಗಳನ್ನು ನಡೆಸಿದರೆಂದೂ, ಆ ವೇಳೆಯಲ್ಲಿ ಅವರ ನಾಯಕ ರಜ್ವಿಯು ಅಲ್ಲಿಗೆ ಭೇಟಿ ಇತ್ತಿದ್ದನೆಂದೂ ಆಪಾದಿಸಿ ಆ ಒಗ್ಗೆಯೂ ಅವನನ್ನು ವಿಚಾರಣೆಗೆ ಗುರಿಪಡಿಸಲಾಗುವುದೆಂದು ವರದಿಯಾಗಿದೆ ಹೈದರಾಬಾದಿನ ಮಾಜಿ ಲಾಯಿಕಾಲಿ ಸರ್ಕಾರದವರು ಅಲ್ಲಿಗೆ ಕರೆಸಿದ್ದ ಭಾರತ ಯೂನಿಯನ್ನಿನ ಐದು ಸಾವಿರ ಮಂದಿ ಮುಸ್ಲಿಮರನ್ನು ಇಷ್ಟರಲ್ಲೇ ಭಾರತಕ್ಕೆ ವಾಪಸು ಕಳುಹಿಸಲಾಗುವುದು ಹೈದರಾಬಾದಿನಲ್ಲಿ ಅವರು ನೆಲೆಸಿದ್ದ ನಾಂಪಲ್ಲಿ ನಿರಾಶ್ರಿತ ಶಿಬಿರವನ್ನು ರದ್ದುಗೊಳಿಸಲಾಗುವುದು

ಪ್ಲಾಂಟರುಗಳು ಜೈಲಿಗೆ ಹೋಗಲು ಸಿದ್ಧ

ಚಿಕ್ಕಮಗಳೂರಿನಲ್ಲಿ ಕಳೆದ ಭಾನುವಾರ ಸೇರಿದ್ದ ಕಾಫಿ ಪ್ಲಾಂಟರುಗಳ ಸಭೆಯಲ್ಲಿ ಅಬ್ಕಾರಿ ಇಲಾಖಾ ಕಾನೂನು ಪ್ರಕಾರ ಪೌಂಡ್ ಗಡಿಯಿಂದ ೧೫೦ ಕಾಫಿಯನ್ನು ಹೊರಗೆ ಕೊಂಡಯ್ಯಕೂಡದೆಂಬ ನಿಬಂಧನೆಯಿಂದ ಕಾಫಿ ವ್ಯಾಪಾರಕ್ಕೆ ಹಾನಿಯಾಗುವುದೆಂಬ ಅಭಿಪ್ರಾಯ ಬಂದು, ಈ ಸಂಬಂಧವಾಗಿ ಮಂತ್ರಿಗಳಲ್ಲಿ ನಿಯೋಗ ಹೋಗಬೇಕೆಂದು ತೀರ್ಮಾನವಾಯಿತು ಇದು ಸಾಧ್ಯವಾಗದಿದ್ದಲ್ಲಿ ಸದರಿ ಕಾನೂನನ್ನು ಉಲ್ಲಂಘಿಸಿ ಜೈಲಿಗೆ ಹೋಗಲು ಸಿದ್ಧರಿರುವುದಾಗಿ ಸಚಿವರಿಗೆ ಮನವರಿಕೆ ಮಾಡಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಸದಸ್ಯರೊಬ್ಬರು ಅಭಿಪ್ರಾಯಪಟ್ಟರು

ಪಠಾಣರು ಪಾಕಿಸ್ತಾನಕ್ಕೆ ಸೇರಿದರೆ ಯುದ್ಧ!

ವಾಯುವ್ಯ ಗಡಿ ಪ್ರಾಂತದಲ್ಲಿ ವಾಸವಾಗಿರುವ ೭೦ ಲಕ್ಷ ಜನ ಪಠಾಣರನ್ನು ಪಾಕಿಸ್ತಾನರು ತಮ್ಮ ದೇಶಕ್ಕೆ ಸೇರಿಸಿಕೊಂಡರೆ ಆದರೆ ಯುದ್ಧವೂ, ಬಹುಶಃ ನಾರ್ವೂ ಆಗುವುದೆಂಬ ಭೀತಿಯಿಂದ ಬ್ರಿಟನ್ನಿನಲ್ಲಿರುವ ಅಫ್ಘನ್ ರಾಯಭಾರಿಗಳು ತಿಳಿಸಿದ್ದಾರೆ

ಪೃಥ್ವಿರಾಜರಿಗೆ ಪೌರಸಭೆಯ ಸತ್ಕಾರ

ಮೈಸೂರು ೨೬

ಸುಪ್ರಸಿದ್ಧ ಸಿನಿಮಾ ನಟರಾದ ಶ್ರೀ ಪೃಥ್ವಿರಾಜ ಕಪೂರರವರನ್ನು ನಿನ್ನೆ ಪುರಸಭೆಯವರು ಬರಮಾಡಿಕೊಂಡು ಸತ್ಕರಿಸಿದರು. ಆಕಾಶವಾಣಿ ಆರ್ಕೆಸ್ಟ್ರಾದವರಿಂದ ಸುಶ್ರಾವ್ಯವಾದ ವಾದ್ಯ ಗಾನವನ್ನು ಏರ್ಪಡಿಸಲಾಗಿತ್ತು, ಉಪಾಹಾರಾನಂತರ ಅಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಪೃಥ್ವಿರಾಜರನ್ನು ಅವರ ಸಹೋದ್ಯೋಗಿಗಳನ್ನೂ ಸ್ವಾಗತಿಸಿ ಭಾಷಣಮಾಡಿದರು ಮೈಸೂರು ಕಲಾ ಸೇವೆಗಾಗಿ ಕೈಗೊಂಡ ಕಾರ್ಯಗಳನ್ನೂ ರಾಜರುಗಳ ಪ್ರೋತ್ಸಾಹವನ್ನೂ ಕುರಿತು ಪ್ರಸ್ತಾಪಿಸಿದರು. ಶ್ರೀ ಪೃಥ್ವಿರಾಜರು ಉತ್ತರವಿತ್ತು ಮೈಸೂರು ಬಹಳದಿನಗಳಿಂದಲೂ ಸೌಂದರ್ಯಕ್ಕೆ ನೆಲೆವೀಡಾಗಿರುವುದೆಂದೂ, ನೈಸರ್ಗಿಕ ಸೌಂದರ್ಯದಿಂದ ನಗರವು ಶೋಭಿಸುತ್ತಿರುವುದೆಂದೂ ಹೇಳಿದರು

ಮೈಸೂರಿನ ಅರಸರು ವಂಶ ಪಾರಂಪರ್ಯವಾಗಿ ಕಲಾಭಿಮಾನಿಗಳಾಗಿರುವುದಕ್ಕೆ ಕೃತಜ್ಞತೆಯನ್ನು ಸೂಚಿಸಿದರು. ಮೈಸೂರಿನ ಜನರು ತಮ್ಮ ನಾಟಕಗಳನ್ನು ನೋಡಿ ಪ್ರೋತ್ಸಾಹಿಸಿದುದಕ್ಕೆ ಬಹಳವಾಗಿ ಸಂತೋಷಪಟ್ಟರು. ರಂಗ ಭೂಮಿಗಾಗಿ ಒಂದು ಭವನವನ್ನು ನಿರ್ಮಿಸಿರುವ ಪೌರಸಭೆಯು ಭರತ ಖಂಡ ದಲ್ಲಿ ಮೈಸೂರು ನಗರವೊಂದೇ ಎಂದು ಹೇಳಿ, ಈ ಮಾದರಿಯನ್ನು ಅನುಸರಿಸುವಂತೆ ತಾವು ಎಲ್ಲ ಪೌರಸಭೆಗಳಿಗೂ ತಿಳಿಸುವುದಾಗಿ ಹೇಳಿದರು ಕಲೆಯು ನಿಜವಾದ ಆಶ್ರಯದಾತರಾದ ಸಾರ್ವಜನಿಕರು ಅದಕ್ಕೆ ಬೇಕಾದ ಪ್ರೋತ್ಸಾಹವನ್ನು ಕೊಡುವ ಕಾಲವು ಬರುತ್ತಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು. ರಂಗಭೂಮಿಯ ಮೂಲಕ ನಮ್ಮ ದೇಶದ ಸಂಸ್ಕೃತಿ, ಕಲೆ ಮತ್ತು ಸಾಮಾಜಿಕ ಉನ್ನತಿಗಳು ಸಾಧಿಸಲ್ಪಟ್ಟು ತನ್ಮೂಲಕ ಜಗತ್ತಿನ ಕಲ್ಯಾಣಕ್ಕೆ ಸಹಾಯವಾಗಲೆಂದು ಹಾರೈಸಿದರು.

ನೀರಿನ ಪಾತ್ರೆ ಹಿಡಿದು ಮಹಿಳೆಯರ ಪ್ರದರ್ಶನ

ನೀರಿನ ಅಭಾವವು ವಿಪರೀತವಾಗಿರುವುದರಿಂದ ಅಂಬಾಲಾ ನಗರದಲ್ಲಿ ಸ್ತ್ರೀಯರು ಮೊನ್ನೆ ದಿನ ಖಾಲಿ ಪಾತ್ರೆಗಳನ್ನು ಹೊತ್ತುಕೊಂಡು ಪ್ರತಿ ಘಟನಾ ಪ್ರದರ್ಶನವನ್ನು ಮಾಡಿದರೆಂದು ಹೇಳಲಾಗಿದೆ ಆ ನಗರದಲ್ಲಿ ಶಾಖವು ಅತಿಯಾಗಿ ೧೧೦ ಡಿಗ್ರಿವರೆಗೂ ಉಷ್ಣಾಂಶವು ಏರಿದೆ.

ರಕ್ತದ ಮಳೆ

ಕಳೆದ ಬುಧವಾರ ಬೆಳಗ್ಗೆ ೮ ರಿಂದ ೧೧ ಗಂಟೆವರೆಗೆ ತಿರುವಾಂಕೂರು ಸಂಸ್ಥಾನದ ಅಲೆಪ್ಪಿಯಲ್ಲಿ ರಕ್ತದ ಮಳೆಯು ಸುರಿಯಿತೆಂದು ವರದಿಯಾಗಿದೆ. ಮನೆಯ ಗೋಡೆಗಳೆಲ್ಲಾ ಮಳೆಯು ದೆಸೆಯಿಂದ ಕೆಂಪು ಬಣ್ಣಕ್ಕೆ ತಿರುಗಿದುವು ಸ್ವಲ್ಪ ಮಳೆ ನೀರನ್ನು ತೆಗೆದುಕೊಂಡು ಭೂತಗನ್ನಡಿಯಿಂದ ಪರಿಶೀಲನೆ ನಡೆಸಿ ನೋಡಲಾಗಿ ಅದರಲ್ಲಿ ರಕ್ತ ಕಣಗಳನ್ನು ಹೋಲುವ ಅನೇಕ ಕೆಂಪು ಬಿಂದುಗಳಿದ್ದುವೆಂದೂ ಸ್ವಲ್ಪ ಕಾಲಾ ನಂತರ ಆ ನೀರು ವರ್ಣರಹಿತವಾಗಿ ಮಾರ್ಪಟ್ಟಿತೆಂದೂ ಹೇಳಲಾಗಿದೆ

ಉಪಾಧ್ಯಾಯರುಗಳ ಉಪವಾಸ ಮತ್ತು ಪ್ರತ್ಯುಪವಾಸ

ಉತ್ತರ ಬೊಂಬಾಯಿನ ವಿಲೆಪಾರ್ಲೆಯ ಒಂದು ಪಾಠಶಾಲೆಯ ಇಬ್ಬರು ಉಪಾಧ್ಯಾಯರನ್ನು ಕೆಲಸದಿಂದ ವಜಾ ಮಾಡಿದುದಕ್ಕಾಗಿ ಅವರ ಸಹೋದ್ಯೋಗಿಗಳಾದ ಅದೇ ಶಾಲೆಯ ೭ ಮಂದಿ ಉಪಾಧ್ಯಾಯರುಗಳು ಉಪವಾಸ ಮುಷ್ಕರವನ್ನು ಹೂಡಿದರು ಅವರುಗಳು ತಮ್ಮ ಉಪವಾಸ ಮುಷ್ಕರವನ್ನು ನಿಲ್ಲಿಸಬೇಕೆಂದು ಮೇಲ್ಯಂಡ ಶಾಲೆಯ ಇಬ್ಬರು ಉಪಾಧ್ಯಾಯಿನಿಯರೂ ಮತ್ತು ಇನ್ನೂ ೧೨ ಮಂದಿ ಉಪಾಧ್ಯಾಯರೂ ಉಪವಾಸ ಮುಷ್ಕರ ಹೂಡಿರುವರೆಂದು ವರದಿಯಾಗಿದೆ.

ಪಶ್ಚಿಮ ಪಂಜಾಬು ಆಡಳಿತ ಪ್ರೂರ್ತ ಲೀಗಿನ ವಶ

ಪಾಕಿಸ್ಥಾನದ ಮುಖ್ಯಮಂತ್ರಿ ಲಿಯಾಖತ್ ಅಲಿಖಾನರು ಪ॥ ಪಂಜಾಬಿನ ಮುಸ್ಲಿಂ ಲೀಗಿಗೆ ಮಾಡಿದ ಸೂಚನೆಯನ್ನು ಆ ಸಂಸ್ಥೆಯು ಒಪ್ಪಿ ಅಲ್ಲಿಯ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡು ಸರಕಾರವನ್ನು ಸಲಹೆಗಾರರ ಮೂಲಕ ನಡೆಸುವುದಾಗಿ ಗೊತ್ತಾಗಿದೆ

ಪ್ರಧಾನ ಸೇನಾನಿ ವರ್ಧಂತಿ ಅತಿಥಿ

ಮೈಸೂರು ೨೬

ಭಾರತದ ಪ್ರಧಾನ ಸೇನಾನಿ ಜನರಲ್ ಕಾರಿಯಪ್ಪನವರು ಶ್ರೀಮನ್ ಮಹಾರಾಜರ ವರ್ಧಂತ್ಯುತ್ಸವದ ಸಮಯದಲ್ಲಿ ಅತಿಥಿಗಳಾಗುವರೆಂದು ತಿಳಿದು ಬಂದಿದೆ

ಹರಿಕಥೆ

ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀರಾಮ ಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಈ ದಿನ ಸಂಜೆ ೭ ಗಂಟೆಗೆ ದೇವಾಂಗ ಸಂಘದ ಆಶ್ರಯದಲ್ಲಿ ಹರಿಕಥಾ ವಿದ್ವಾನ್ ಶ್ರೀ ಕೆ ಸುಬ್ಬರ ಸುದಾಸರಿಂದ ನಚಿಕೇತ ಎ.ಬ ಪರಿಕಥೆ ನಡೆಯುವುದು ದೇವರಿಗೆ ಸುಬ್ರಹ್ಮಣ್ಯಸ್ವಾಮಿ ಅಲಂಕಾರವನ್ನೂ ಮಾಡಲಾಗುವುದು

○ರಾಜಧಾನಿಯ ಸಹಕಾರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಿಟಿ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಶ್ರೀ ವೈ ಜಿ ವೆಂಕಟಸುಬ್ಬರಾಯರು ಸಹಕಾರ ಸಂಸ್ಥೆಯಲ್ಲಿರುವ ಸಾಮಾನ್ಯ ಲೋಪದೋಷಗಳೂ ಅವುಗಳನ್ನು ಸರಿಪಡಿಸುವ ವಿಧಾನಗಳೂ ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೨೬-೬-೪೯ [ಸಂಚಿಕೆ ೪೩

— ಅಲೆಪ್ಪಿ ಗ್ರಾಮದಲ್ಲಿ — ರಕ್ತದ ಮಳೆ ಬಿತ್ತು

ಆರೋಗ್ಯ ಮತ್ತು ಕಲೆಗಳ ಪ್ರದರ್ಶನ

ಡಿಸೆಂಬರ್ ತಿಂಗಳಲ್ಲಿ ನಡೆಸಲು ಪೌರಸಭೆಯ ನಿರ್ಧಾರ

ಮೈಸೂರು ೨೬

ನಗರದ ಪೌರಸಭೆಯ ಅಧಿವೇಶನವು ನೆನ್ನೆ ಸಂಜೆ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬರುವ ಡಿಸೆಂಬರ್ ತಿಂಗಳಲ್ಲಿ ಆರೋಗ್ಯ ಮತ್ತು ಕಲೆಗಳಿಗೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ಏರ್ಪಡಿಸಬೇಕೆಂದು ನಿರ್ಧರಿಸಲಾಯಿತು.

ಭಾರತದ ದಂಡನಾಯಕರಾದ ಜ|| ಕೆ. ಎಂ. ಕಾರಿಯಪ್ಪನವರು ರಾಜಧಾನಿಗೆ ಜುಲೈ ತಿಂಗಳಲ್ಲಿ ಬಂದಾಗ ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದ ತೀರ್ಮಾನಿಸಲಾಯಿತು. ಇದಕ್ಕಾಗಿ ಒಂದ ಸಾವಿರ ರೂಪಾಯಿಯನ್ನು ಮಂಜೂರು ಮಾಡಲಾಯಿತು.

ಸರಕಾರದವರು ಕಳುಹಿಸಿಕೊಟ್ಟಿದ್ದ ಇಬ್ಬರ ಹೆಸರಿನ ಪೈಕಿ ಡಾ|| ಬಿ. ಎಗ್. ಲಿಂಗರಾಜುರವರನ್ನು ಆರೋಗ್ಯಾಧಿಕಾರಿಗಳಾಗಿ ನೇಮಿಸಲಾಯಿತು. ಸಾರ್ವಜನಿಕ ಮೂತ್ರಿಗಳ ವಿಚಾರವಾಗಿ ಅನೇಕ ಪ್ರಶ್ನೋತ್ತರಗಳಾದವು. ನಗರದ ವಿವಿಧ ಮೊಹಲ್ಲೆಗಳಲ್ಲಿ ಸ್ಥಾಪಿಸಬೇಕಾದ ಮೂತ್ರಿಗಳ ಸಂಖ್ಯೆಯನ್ನು ಪರಿಶೀಲಿಸಿ, ಅವುಗಳ ಕೆಲಸವನ್ನು ಕೈಗೊಳ್ಳಲಾಗುವುದೆಂದು ಅಧ್ಯಕ್ಷರು ತಿಳಿಸಿದರು. ವಿವಿಧ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲಾಯಿತು.

ಪೃಥ್ವಿರಾಜರಿಗೆ ಚಿತ್ರದ ಸಮರ್ಪಣೆ

ಜಗನ್ಮೋಹನಭವನದ ರಸ್ತೆಯಲ್ಲಿರುವ ಮೈಸೂರು ಆರ್ಟ್ ಸ್ಟುಡಿಯೋವಿನ ಶ್ರೀ ರಾಮುರವರು ಶ್ರೀ|| ಪೃಥ್ವಿರಾಜ್ ಕಪೂರರವರಿಗೆ ಮೊನ್ನೆ ದಿನ ತಾವು ತಯಾರಿಸಿರುವ ಸರ್ವೋದಯ ಚಿತ್ರವನ್ನು ಸಮರ್ಪಿಸಿದರು. ಅವರು ಅದನ್ನು ಕಂಡು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಶ್ರೀರಂಗಪಟ್ಟಣದಲ್ಲಿ ಸಮಾಜವಾದಿ ಪಕ್ಷ

ಕಾಂಗ್ರೆಸ್ ಕೆಲಸಗಾರರೂ, ಪತ್ರಿಕಾ ಪ್ರತಿನಿಧಿಗಳೂ ಆಗಿರುವ ಶ್ರೀ|| ಎಸ್. ಸಂಪತ್ಕುಮಾರರವರು ಕಾಂಗ್ರೆಸ್ಸಿಗೆ ರಾಜೀನಾಮೆಯಿತ್ತು ಶ್ರೀರಂಗಪಟ್ಟಣದಲ್ಲಿ ಸಮಾಜವಾದಿ ಪಕ್ಷದ ಸ್ಥಾಪನೆ ಮತ್ತು ಅದರ ತತ್ವದ ಪ್ರಚಾರದಲ್ಲಿ ತೊಡಗುವರೆಂದು ತಿಳಿದುಬಂದಿದೆ.

ಹೂವಿನ ಪಲ್ಲಕ್ಕಿ ಉತ್ಸವ

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ಶ್ರೀ ಗರ್ಭ ನವಮಿ ಮಹೋತ್ಸವದ ಸಂದರ್ಭದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಹೂವಿನ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಲಾಗಿದೆ. ಉತ್ಸವವು ಶ್ರೀರಾಂಪೇಟೆ, ಮರ್ಕ್ಯಾಜಿ ಚೌಕ, ಚಾಮುಂಡಿ ಮಂಡಿ ಬೀದಿ ಮತ್ತು ಅಶೋಕ ರಸ್ತೆಗಳಲ್ಲಿ ಹಾದು, ದೇವಸ್ಥಾನವನ್ನು ಸೇರುವುದು.

ಕಲ್ಲಿಕೋಟೆಯಲ್ಲಿ ಪ್ರಾಚೀನ ಕಾಲದ ಗುಹೆಗಳು

ಕಲ್ಲಿಕೋಟೆಯ ಸಮೀಪದಲ್ಲಿ ಕೂಲಿಯವರು ನೆಲವನ್ನು ಅಗೆಯುತ್ತಿದ್ದಾಗ ಅತ್ಯಂತ ಪ್ರಾಚೀನವಾದ ಎರಡು ಗುಹೆಗಳ ಸಿಕ್ಕಿದುವೆಂದೂ, ನೀರಿನಿಂದ ತುಂಬಿದ ಮಡಕೆಗಳೂ ಅಲ್ಲಿ ದೊರೆತುವೆಂದೂ ಹೇಳಲಾಗಿದೆ.

ಖಾಸಿಂ ರಜ್ವಿ ಮೇಲೆ ಲೂಟಿ, ಡಕಾಯಿತಿ ಆಪಾದನೆ

ಹೈದರಾಬಾದಿನ ಮೇಲೆ ನಡೆದ ಪೊಲೀಸ್ ಕಾರ್ಯಾಚರಣೆಗೆ ಕೆಲವು ದಿನಗಳ ಮುಂಚೆ ಬೀಬಿ ನಗರದಲ್ಲಿ ರಜಾಕರರು ಡಕಾಯಿತಿ, ದಂಗೆ, ಲೂಟಿ ಮೊದಲಾದ ಕೃತ್ಯಗಳನ್ನು ನಡೆಸಿದರೆಂದೂ, ಆ ವೇಳೆಯಲ್ಲಿ ಅವರ ನಾಯಕ ರಜ್ವಿಯು ಅಲ್ಲಿಗೆ ಭೇಟಿ ಇತ್ತಿದ್ದನೆಂದೂ ಆಪಾದಿಸಿ ಒಗ್ಗೆಯೂ ಅವನನ್ನು ವಿಚಾರಣೆಗೆ ಗುರಿಪಡಿಸಲಾಗುವುದೆಂದು ವರದಿಯಾಗಿದೆ. ಹೈದರಾಬಾದಿನ ಮಾಜಿ ಖಾಯಕಾಲಿ ಸರ್ಕಾರದವರು ಅಲ್ಲಿಗೆ ಕರೆಸಿದ್ದ ಭಾರತ ಯೂನಿಯನ್ನಿನ ಐದು ಸಾವಿರ ಮಂದಿ ಮುಸ್ಲಿಮರನ್ನು ಇಷ್ಟರಲ್ಲೇ ಭಾರತಕ್ಕೆ ವಾಪಸು ಕಳುಹಿಸಲಾಗುವುದು. ಹೈದರಾಬಾದಿನಲ್ಲಿ ಅವರು ನೆಲೆಸಿದ್ದ ನಾಂಪಲ್ಲಿ ನಿರಾಶ್ರಿತ ಶಿಬಿರವನ್ನು ರದ್ದುಗೊಳಿಸಲಾಗುವುದು.

ಪ್ಲಾಂಟರುಗಳು ಜೈಲಿಗೆ ಹೋಗಲು ಸಿದ್ಧ

ಚಿಕ್ಕಮಗಳೂರಿನಲ್ಲಿ ಕಳೆದ ಭಾನುವಾರ ಸೇರಿದ್ದ ಕಾಫಿ ಪ್ಲಾಂಟರುಗಳ ಸಭೆಯಲ್ಲಿ ಅಬ್ಕಾರಿ ಇಲಾಖಾ ಕಾನೂನು ಪ್ರಕಾರ ಪೌಂಡ್ ಗಡಿಯಿಂದ ೧೫೦ ಕಾಫಿಯನ್ನು ಹೊರಗೆ ಕೊಂಡೊಯ್ಯಕೂಡದೆಂಬ ನಿಬಂಧನೆಯಿಂದ ಕಾಫಿ ವ್ಯಾಪಾರಕ್ಕೆ ಹಾನಿಯಾಗುವುದೆಂಬ ಅಭಿಪ್ರಾಯ ಬಂದು, ಈ ಸಂಬಂಧವಾಗಿ ಮಂತ್ರಿಗಳಲ್ಲಿ ನಿಯೋಗ ಹೋಗಬೇಕೆಂದು ತೀರ್ಮಾನವಾಯಿತು. ಇದು ಸಾಧ್ಯವಾಗದಿದ್ದಲ್ಲಿ ಸದರಿ ಕಾನೂನನ್ನು ಉಲ್ಲಂಘಿಸಿ ಜೈಲಿಗೆ ಹೋಗಲು ಸಿದ್ಧರಿರುವುದಾಗಿ ಸಚಿವರಿಗೆ ಮನವರಿಕೆ ಮಾಡಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರೂ ಅಭಿಪ್ರಾಯಪಟ್ಟರು.

ಪಠಾಣರು ಪಾಕಿಸ್ತಾನಕ್ಕೆ ಸೇರಿದರೆ ಯುದ್ಧ!

ವಾಯುವ್ಯ ಗಡಿ ಪ್ರಾಂತದಲ್ಲಿ ವಾಸವಾಗಿರುವ ೭೦ ಲಕ್ಷ ಜನ ಪಠಾಣರನ್ನು ಪಾಕಿಸ್ತಾನವು ತನ್ನ ದೇಶಕ್ಕೆ ಸೇರಿಸಿಕೊಂಡುದೇ ಆದರೆ ಯುದ್ಧವೂ, ಬಹುಶಃ ನಾಶವೂ ಆಗುವುದೆಂಬ ಭೀತಿಯಿದೆಯೆಂದು ಬ್ರಿಟನ್ನಿನಲ್ಲಿರುವ ಅಫ್ಘಾನ್ ರಾಯಭಾರಿಗಳು ತಿಳಿಸಿದ್ದಾರೆ.

ಪೃಥ್ವಿರಾಜರಿಗೆ ಪೌರಸಭೆಯ ಸತ್ಕಾರ

ಮೈಸೂರು ೨೬

ಸುಪ್ರಸಿದ್ಧ ಸಿನಿಮಾ ನಟರಾದ ಶ್ರೀ ಪೃಥ್ವಿರಾಜ ಕಪೂರರವರನ್ನು ನಿನ್ನೆ ಪೌರಸಭೆಯವರು ಬರಮಾಡಿಕೊಂಡು ಸತ್ಕರಿಸಿದರು. ಆಕಾಶವಾಣಿ ಆರ್ಕೆಸ್ಟ್ರಾದವರಿಂದ ಸುಶ್ರಾವ್ಯವಾದ ವಾದ್ಯ ಗಾನವನ್ನು ಏರ್ಪಡಿಸಲಾಗಿತ್ತು. ಉಪಾಹಾರಾನಂತರ ಅಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಪೃಥ್ವಿರಾಜರನ್ನು ಅವರ ಸಹೋದ್ಯೋಗಿಗಳನ್ನೂ ಸ್ವಾಗತಿಸಿ ಭಾಷಣಮಾಡಿದರು. ಮೈಸೂರು ಕಲಾ ಸೇವೆಗಾಗಿ ಕೈಗೊಂಡ ಕಾರ್ಯಗಳನ್ನೂ ರಾಜರುಗಳ ಪ್ರೋತ್ಸಾಹವನ್ನೂ ಕುರಿತು ಪ್ರಸ್ತಾಪಿಸಿದರು. ಶ್ರೀ ಪೃಥ್ವಿರಾಜರು ಉತ್ತರವಿತ್ತು ಮೈಸೂರು ಬಹಳದಿನಗಳಿಂದಲೂ ಸೌಂದರ್ಯಕ್ಕೆ ನೆಲೆವೀಡಾಗಿರುವುದೆಂದೂ, ನಿಸರ್ಗದ ಸೌಂದರ್ಯದಿಂದ ನಗರವು ಶೋಭಿಸುತ್ತಿರುವುದೆಂದೂ ಹೇಳಿದರು.

ಮೈಸೂರಿನ ಅರಸರು ವಂಶ ಪಾರಂಪರ್ಯವಾಗಿ ಕಲಾಭಿಮಾನಿಗಳಾಗಿರುವುದಕ್ಕೆ ಕೃತಜ್ಞತೆಯನ್ನು ಸೂಚಿಸಿದರು. ಮೈಸೂರಿನ ಜನರು ತಮ್ಮ ನಾಟಕಗಳನ್ನು ನೋಡಿ ಪ್ರೋತ್ಸಾಹಿಸಿದುದಕ್ಕೆ ಬಹಳವಾಗಿ ಸಂತೋಷಪಟ್ಟರು. ರಂಗಭೂಮಿಗಾಗಿ ಒಂದು ಭವನವನ್ನು ನಿರ್ಮಿಸಿರುವ ಪೌರಸಭೆಯು ಭರತ ಖಂಡ್ರದಲ್ಲೆಲ್ಲಾ ಮೈಸೂರು ನಗರವೊಂದೇ ಎಂದು ಹೇಳಿ, ಈ ಮಾದರಿಯನ್ನು ಅನುಸರಿಸುವಂತೆ ತಾವು ಎಲ್ಲಾ ಪೌರಸಭೆಗಳಿಗೂ ತಿಳಿಸುವುದಾಗಿ ಹೇಳಿದರು. ಕಲೆಯು ನಿಜವಾದ ಆಶ್ರಯದಾತರಾದ ಸಾರ್ವಜನಿಕರು ಅದಕ್ಕೆ ಬೇಕಾದ ಪ್ರೋತ್ಸಾಹವನ್ನು ಕೊಡುವ ಕಾಲವು ಬರುತ್ತಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು. ರಂಗಭೂಮಿಯ ಮೂಲಕ ನಮ್ಮ ದೇಶದ ಸಂಸ್ಕೃತಿ, ಕಲೆ ಮತ್ತು ಸಾಮಾಜಿಕ ಉನ್ನತಿಗಳು ಸಾಧಿಸಲ್ಪಟ್ಟು ತನ್ಮೂಲಕ ಜಗತ್ತಿನ ಕಲ್ಯಾಣಕ್ಕೆ ಸಹಾಯವಾಗಲೆಂದು ಹಾರೈಸಿದರು.

ನೀರಿನ ಪಾತ್ರೆ ಹಿಡಿದು ಮಹಿಳೆಯರ ಪ್ರದರ್ಶನ

ನೀರಿನ ಅಭಾವವು ವಿಪರೀತವಾಗಿರುವುದರಿಂದ ಅಂಬಾಲಾ ನಗರದಲ್ಲಿ ಸ್ತ್ರೀಯರು ಮೊನ್ನೆ ದಿನ ಖಾಲಿ ಪಾತ್ರೆಗಳನ್ನು ಹೊತ್ತುಕೊಂಡು ಪ್ರತಿಭಟನಾ ಪ್ರದರ್ಶನವನ್ನು ಮಾಡಿದರೆಂದು ಹೇಳಲಾಗಿದೆ. ಆ ನಗರದಲ್ಲಿ ಬಿಸಿಲು ಅತಿಯಾಗಿ ೧೧೦ ಡಿಗ್ರಿವರೆಗೂ ಉಷ್ಣಾಂಶವಿರುವುದೆಂದೂ (?).

ರಕ್ತದ ಮಳೆ

ಕಳೆದ ಬುಧವಾರ ಬೆಳಗ್ಗೆ ೮ ರಿಂದ ೧೧ ಗಂಟೆವರೆಗೆ ತಿರುವಾಂಕೂರು ಸಂಸ್ಥಾನದ ಅಲೆಪ್ಪಿಯಲ್ಲಿ ರಕ್ತದ ಮಳೆಯು ಸುರಿಯಿತೆಂದು ವರದಿಯಾಗಿದೆ. ಮನೆಯ ಗೋಡೆಗಳೆಲ್ಲಾ ಮಳೆಯ ದೆಸೆಯಿಂದ ಕೆಂಪು ಬಣ್ಣಕ್ಕೆ ತಿರುಗಿದುವು. ಸ್ವಲ್ಪ ಮಳೆ ನೀರನ್ನು ತೆಗೆದುಕೊಂಡು ಭೂತಗನ್ನಡಿಯಿಂದ ಪರಿಶೀಲನೆ ನಡೆಸಿ ನೋಡಲಾಗಿ ಅದರಲ್ಲಿ ರಕ್ತ ಕಣಗಳನ್ನು ಹೋಲುವ ಅನೇಕ ಕೆಂಪು ಬಿಂದುಗಳಿದ್ದುವೆಂದೂ ಸ್ವಲ್ಪ ಕಾಲಾ ನಂತರ ಆ ನೀರು ವರ್ಣರಹಿತವಾಗಿ ಮಾರ್ಪಟ್ಟಿತೆಂದೂ ಹೇಳಲಾಗಿದೆ.

ಉಪಾಧ್ಯಾಯರುಗಳ ಉಪವಾಸ ಮತ್ತು ಪ್ರತ್ಯುಪವಾಸ

ಉತ್ತರ ಬೊಂಬಾಯಿನ ವಿಲೆಪಾರ್ಲೆಯ ಒಂದು ಪಾಠಶಾಲೆಯ ಇಬ್ಬರು ಉಪಾಧ್ಯಾಯರನ್ನು ಕೆಲಸದಿಂದ ವಜಾ ಮಾಡಿದುದಕ್ಕಾಗಿ ಅವರ ಸಹೋದ್ಯೋಗಿಗಳಾದ ಅದೇ ಶಾಲೆಯ ೬ ಮಂದಿ ಉಪಾಧ್ಯಾಯರುಗಳು ಉಪವಾಸ ಮುಷ್ಕರವನ್ನು ಹೂಡಿದರು. ಅವರುಗಳು ತಮ್ಮ ಉಪವಾಸ ಮುಷ್ಕರವನ್ನು ನಿಲ್ಲಿಸಬೇಕೆಂದು ಮೇಲ್ಕಂಡ ಶಾಲೆಯ ಇಬ್ಬರು ಉಪಾಧ್ಯಾಯಿನಿಯರೂ ಮತ್ತು ಇನ್ನೂ ೧೨ ಮಂದಿ ಉಪಾಧ್ಯಾಯರೂ ಉಪವಾಸ ಮುಷ್ಕರ ಹೂಡಿರುವರೆಂದು ವರದಿಯಾಗಿದೆ.

ಪಶ್ಚಿಮ ಪಂಜಾಬು ಆಡಳಿತ ಪೂರ್ತಿ ಲೀಗಿನ ವಶ

ಪಾಕಿಸ್ಥಾನದ ಮುಖ್ಯಮಂತ್ರಿ ಲಿಯಾಖತ್ ಆಲಿಖಾನರು ಪ|| ಪಂಜಾಬಿನ ಮುಸ್ಲಿಂ ಲೀಗಿಗೆ ಮಾಡಿದ ಸೂಚನೆಯನ್ನು ಆ ಸಂಸ್ಥೆಯು ಒಪ್ಪಿ ಅಲ್ಲಿಯ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡು ಸರಕಾರವನ್ನು ಸಲಹೆಗಾರರ ಮೂಲಕ ನಡೆಸುವುದಾಗಿ ಗೊತ್ತಾಗಿದೆ.

ಪ್ರಧಾನ ಸೇನಾನಿ ವರ್ಧಂತಿ ಅತಿಥಿ

ಮೈಸೂರು ೨೬

ಭಾರತದ ಪ್ರಧಾನ ಸೇನಾನಿ ಜನರಲ್ ಕಾರಿಯಪ್ಪನವರು ಶ್ರೀಮನ್ ಮಹಾರಾಜರ ವರ್ಧಂತ್ಯುತ್ಸವದ ಸಮಯದಲ್ಲಿ ಅತಿಥಿಗಳಾಗುವರೆಂದು ತಿಳಿದು ಬಂದಿದೆ.

ಹರಿಕಥೆ

ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀರಾಮ ಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಈ ದಿನ ಸಂಜೆ ೭ ಗಂಟೆಗೆ ದೇವಾಂಗ ಸಂಘದ ಆಶ್ರಯದಲ್ಲಿ ಹರಿಕಥಾ ವಿದ್ವಾನ್ ಶ್ರೀ ಕೆ. ಸುಬ್ಬರ ಸದಾಶಿವ ನಚಿಕೇತ ಎಂಬ ಹರಿಕಥೆ ನಡೆಯುವುದು. ದೇವರಿಗೆ ಸುಬ್ರಹ್ಮಣ್ಯಸ್ವಾಮಿ ಅಲಂಕಾರವನ್ನೂ ಮಾಡಲಾಗುವುದು.

○ ರಾಜಧಾನಿಯ ಸಹಕಾರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಿಟಿ ಕೋಆಪರೇಟಿವ್ ಬ್ಯಾಂಕಿನಲ್ಲಿ ಶ್ರೀ ವೈ. ಜಿ. ವೆಂಕಟಸುಬ್ಬರಾಯರು ಸಹಕಾರ ಸಂಸ್ಥೆಯಲ್ಲಿರುವ ಸಾಮಾನ್ಯ ಲೋಪದೋಷಗಳೂ, ಅವುಗಳನ್ನು ಸರಿಪಡಿಸುವ ವಿಧಾನಗಳೂ ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು.

ವಾರ ಭವಿಷ್ಯ

ತಾ|| ೨೬-೬-೪೯ರಿಂದ ೨-೭-೪೯ರ ವರೆಗೆ

ಮೇಷ — ಗ್ರಹಮಾನ ಯೋಗ ಚೆನ್ನಾಗಿದೆ ಆರೋಗ್ಯ ನಾಳಗೆ ಒಳ್ಳೆಯದಾಗಿದೆ ಅಂಗಿತ ಪಲಪ್ರದವಾಗುವುದು ನೌಕರಿ ದಂಧೆಗಳಲ್ಲಿ ಜಯ ವ್ಯಕ್ತಿ ಸ್ವಾತಂತ್ರ್ಯ ಲಭ್ಯ ತಾ|| ೨೮, ೨೯ ಗೊಂದಲ, ವಿಚಿತ್ರ ವ್ಯಕ್ತಿಗಳೊಡನೆ ವಾದವಿವಾದ

ವೃಷಭ — ಆರೋಗ್ಯ ನೆಟ್ಟಗಿರದೆ ಚಿಂತಾತುರರಾಗಿರುವಿರಿ ಎದುರಾಳಿಗಳಿಂದ ಅಪಮಾನ ನೌಕರಿಯಲ್ಲಿ ಮೇಲಧಿಕಾರಿಗಳ ಕೋಪ ತಾ|| ೩೦, ೧ ಸ್ತ್ರೀಗೆ ಆಕಸ್ಮಿಕ ಅನಾರೋಗ್ಯ

ಮಿಥುನ — ದಣಕಾಸಿನ ಆದಾಯ ಕಡಿಮೆ, ಖರ್ಚು ಹೆಚ್ಚು ನೌಕರಿಯಲ್ಲಿ ಕೋಲಾಹಲವಾಗಿದ್ದರೂ, ಕೈ ಕೆಳಗಿನವರು ಮಾಡಿದ ತಪ್ಪುಗಳಿಗೆ ಜವಾಬ್ದಾರರಾಗುವುದು ತಾ|| ೩೦, ೧ ಹಣದ ಅಡಚಣೆ ಸ್ವಲ್ಪ ಸುಧಾರಿಸುವುದು.

ಕರ್ಕ — ಚಿತ್ರರಂಗದವರಿಂದ ಮೋಸ ಹಾಳದ ಮಾತುಗಳು ಕೇಳುವುದು ಆರೋಗ್ಯ ನೆಟ್ಟಗೆ, ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಲಾಭ ದಂಗಾದಿ ನೌಕರಿಗೆ ಹಾಯಂ ಆಗುತ್ತೆ ಪತ್ನಿ ಕಡೆಯಿಂದ ಲಾಭ ತಾ|| ೩೦, ೧ ಧನ ಲಾಭ ದರ್ಶಿ

ಸಿಂಹ — ಆರೋಗ್ಯ ನೆಟ್ಟಗೆ ಮನಸ್ಸಿಗೆ ಶಾಂತಿ ನೌಕರ ದಂಧೆಗಳಲ್ಲಿ ಶುಭವಾರ್ತೆ ಸಜ್ಜನರ ಪರಿಚಯ ತಾ|| ೨೮, ೨೯ ಕೀರ್ತಿಯ ವೃದ್ಧಿ ಸ್ತ್ರೀ ವರ್ಗದಿಂದ ಸುಖ ಧನ ಲಾಭ

ತುಲಾ — ಆರೋಗ್ಯ ನೆಟ್ಟಗೆ ಮಾನಸಿಕ ಸ್ಥಿತಿ ತೃಪ್ತಿಕರ ವ್ಯಾಪಾರಾದಿಗಳಲ್ಲಿ ಲಾಭ ತಾ|| ೩೦, ೧ ಉತ್ತಮ ಮಿತ್ರರ ಸಹಾಯ

ವೃಶ್ಚಿಕ — ಗ್ರಹ ಸ್ಥಿತಿ ಚೆನ್ನಾಗಿಲ್ಲ ಪದವಿ ದಲ್ಲಿ ದಾರುಣವಾದ ಚಿಂತೆ, ಸ್ತ್ರೀಯ ಪಕ್ಷಿಯ ವಿರೋಧ ಕಟ್ಟಿಕೊಳ್ಳಬೇಕಾಗುವುದು ಶತ್ರು ಪೀಡೆ ತಾ|| ೨೮, ೨೯ ಮಾನಹಾನಿ ಧನಕ್ಕಾಗಿ ಚಿಂತೆ, ಖರ್ಚು, ಅಪ್ರಿಯ ವಾರ್ತೆ

ಧನು — ಪರಾಕ್ರಮದ ಘಟನೆಗಳು ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ದರ್ಜೆ ಹೆಚ್ಚುವುದು ದಂಧೆಯಲ್ಲಿ ಲಾಭ ದರ್ಶ ಕಾರ್ಯ ಸುಗಮವಾಗಿ ನಡೆಯುವುದು ಕೋರ್ಟಿನ ವಿಚಾರದಲ್ಲಿ ಜಯ ಸುಖ ಪ್ರವಾಸ ತಾ|| ೩೦, ೧ ಮಹತ್ವದ ಪತ್ರಾಗಮನ

ಮಕರ — ಆರೋಗ್ಯ ನೆಟ್ಟಗೆ ಮನಸ್ಸು ವಿಚಿತ್ರವಾಗಿ ವಾಲುತ್ತದೆ ಹಣಕಾಸಿನ ಸ್ಥಿತಿ ಉತ್ತಮ. ಪರ ಸ್ತ್ರೀ ಜಂಟಿ ನೌಕರಿ ಸ್ಥಿತಿ ಉತ್ತಮ. ತಾ|| ೩೦, ೧ ಮಕ್ಕಳಿಗೆ ಕ್ಲೇಶ ಕಾಟ ಇತರ ಕಷ್ಟ ಯೋಚಿಸಬೇಕಾದ ಸಂದರ್ಭ ಒದಗುವುದು ಹಣಕಾಸಿನ ಅಡಚಣೆ ನಿವಾರಣೆ ತಾ|| ೨೮, ೨೯ ಕಳವು ಅಶುಭ ವಾರ್ತೆ, ವಾಹನ ಭಯ

ಮೀನ — ಸಿಮ್ಸ್ ಸನ್ಮಾನಗಳು ಪ್ರಕಾಶಕ್ಕೆ ಬರುವ ನಿಮಗೆ ಸಾರ್ವಜನಿಕ ಸನ್ಮಾನವಾಗುವುದು ಆರೋಗ್ಯ ಉತ್ತಮ ಸ್ವೀಕೃತ ಕಾರ್ಯ ಸಿದ್ಧಿಸುವುದು ತಾ|| ೩೦, ೧ ಖರ್ಚು, ಹಣಕ್ಕಾಗಿ ಇತರರು ಪೀಡಿಸುವರು

Edited printed and published by V R Nagarajan at the Sadhvi Press, D Subbiah Road, Mysore

ಬಟ್ಟೆ ಬೆಲೆ ಇಳಿಯುವುದು

ಕೋರ್ಸ್, ಮೀಡಿಯಂ ಮತ್ತು ಫೈನ್ ಬಟ್ಟೆಗಳ ಮೇಲೆ ಇರುವ ಬೆಲೆಯಲ್ಲಿ ಶೇಕಡಾ ೭ ರೂ ರಷ್ಟು ಇಳಿಸಲಾಗುವುದೆಂದು ಗೊತ್ತಾಗಿದೆ ಇದು ಸಪ್ಟೆಂಬರ್ ತಿಂಗಳಲ್ಲಿ ಜಾರಿಗೆ ಬರಬಹುದು

ವಿವಾಹ ಮಹೋತ್ಸವ

ಮೈಸೂರು ನುಂಡಿ ಮೊಹಲ್ಲಾ ಸವಾಯ್ ಬೀದಿಯಲ್ಲಿರುವ ಡಬೇಕರ್ ತಿಪ್ಪಣ್ಣರಾಯರ ಅಣ್ಣಾ ರಾವ್ಪತರಾವ್ ಸುಬ್ಬರಾಯರ ಕುಮಾರ ಚಿ|| ಶಂಕರರಾಯರಿಗೆ ಶ್ರೀ ಈಶ್ವರರಾಯರ ಕುಮಾರ್ತಿ ಸೌ|| ಸರಸ್ವತಿಬಾಯಿಯನ್ನು ಕೊಟ್ಟು ಕಳೆದ ಸೋಮವಾರ ವಿವಾಹ ಮಹೋತ್ಸವವು ನೆರವೇರಿಸಲ್ಪಟ್ಟಿತು

ಹಾಂಕಾಂಗ್ ಬಳಿ ಕದನ

ಹಾಂಕಾಂಗಿಗೆ ೧೦ ಮೈಲಿ ದೂರದ ಚೀಣೀ ಕಮ್ಯೂನಿಸ್ಟ ಸೈನ್ಯಗಳಿಗೂ ಸರಕಾರಿ ಸೈನ್ಯಗಳಿಗೂ ಕದನವಾಗುತ್ತಿಯೆಂದು ತಿಳಿದುಬಂದಿದೆ

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರ, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

|| ಶ್ರೀ ||

ಗಣೇಶಾ ಟಾಕೀಸ್

26-6-49 ರಿಂದ 4 ದಿನಗಳು ಮಾತ್ರ

ಪ್ರತಿ ದಿನ 3 ಆಟಗಳು

ಮೀರಾ

(ತಮಿಳು)

ಭೂಮಿಕೆ — ಎಂ ಎಸ್ ಸುಬ್ಬಲಕ್ಷ್ಮಿ ವಿ ನಾಗಯ್ಯ, ಟಿ ಎಸ್ ಬಾಲಯ್ಯ ದೊರೆರಾಜ್ ಮುಂತಾದವರು

1-7-49ನೇ ಶುಕ್ರವಾರದಿಂದ

ಶಂಭಗವಲ್ಲಿ

(ತಮಿಳು)

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ವಿಸಿಲ್ ಮಾಡರಿ ಮನೆ ನಂಬರ್ ೬೫ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ ಮೈಸೂರು

ಪ್ರಭುದೇವಾ ಟಾಕೀಸಿನಲ್ಲಿ

24-6-49ನೇ ಶುಕ್ರವಾರದಿಂದ

ಪ್ರತಿ ದಿನ ಮೂರು ಆಟಗಳು

✱ ತಾಯಿನಾಡು ✱

(ತಮಿಳು)

ಪಾತ್ರ:- ಟಿ. ಎಸ್. ಮಣಿ ಮುಂತಾದವರು

RAJKAMAL, MYSORE

FROM 1st JULY 1949

A day you should keep apart to fix up ENGAGEMENT to witness

William Shakespeare's

HAMLET

A Story of MADNESS & MURDER

WITH -EXPERIENCE OF LIFE

N B—Advance Bookings From 27-6-49 and onwards for classes 15 as and above, daily between 10 a m & 12 noon

From 26-6-49 For 4 days

R K O's The Return of Bad Men

ಬೆಳಗಿನ ಆಟ ತಾ|| 24-6-49ರಿಂದ ಪ್ರಾರಂಭ

ಜಂಗಲ್ ಮೆ ಮಂಗಲ್ [ಹಿಂದಿ]

ಮೈಸೂರಿನಲ್ಲಿ ಪ್ರಥಮ ಪ್ರದರ್ಶನ

ಶುಭಮಸ್ತು

|| ಸಮಸ್ತ ಸನ್ಮಂಗಳಾನಿ ಭವಂತು ||

ಮದುವೆ ಜವಳಿಗಳಿಗೆ

ಹೆಸರುವಾಸಿಯಾದ ಅಂಗಡಿ

ನ್ಯಾಯವಾದ ಬೆಲೆ, ನಾಣ್ಯವಾದ ಮಾಲು

ಬಾಪುಸಾಡ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

|| ಶ್ರೀ ಸೀತಾರಾಮಾಯನಮಃ ||

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಗಂಡಸರ ಮೂತ್ರಕೋಶ ಬಿಳುಪು, ಕೆಂಪು ಮೈ ಮೇಲೆ ಸೋರುವ ಮಚ್ಚೆಗಳು, ಮೇಹ ವ್ರಣಗಳು ಸಹಾ ಪರಿಹಾರ ಪಥ್ಯವಿಲ್ಲದೆ ಸೇವಿಸುವ ಔಷಧಿ

ವಿಳಾಸ ಬೆಲೆ ತೀಸೆ 1ಕ್ಕೆ 2-0-

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಈ ರಾತ್ರಿ 10 ಗಂಟೆಗೆ : : ರಾಜಧಾನಿಯಲ್ಲಿ ಕಡೇ ನಾಟಕ

ಮೈಸೂರು ಟೌನ್ ಹಾಲಿನಲ್ಲಿ

ಸುಪ್ರಸಿದ್ಧ ಸಿನಿಮಾ ನಟರಾದ ಪೃಥ್ವಿರಾಜ್ ಮತ್ತು ಅವರ ತಂಡದವರು

✱ ದೀವಾರ್ ✱

ಎಂಬ ನಾಟಕವನ್ನು ಹಿಂದಿ ಭಾಷೆಯಲ್ಲಿ ಅಭಿನಯಿಸುವರು

ಟಿಕೆಟ್ ದರ ರೂ 15 10 7 5 0, 3 8 0 2 ರೂ 1

'A Prithvi Productions Release

ಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಸೋಮವಾರ ೨೭-೬-೪೯ [ಸಂಚಿಕೆ ೨೬೯

ಮದ್ರಾಸ್ ಹೋಟೇಲು ಮುಷ್ಕರ ೧ ದಿನ ಮಾತ್ರ

ನೇತಾಜಿ ವಿಮಾನ ಅಪಘಾತಕ್ಕೆ ಸಿಕ್ಕಲಿಲ್ಲ

ನೇತಾಜಿ ಸುಭಾಷ್ ಚಂದ್ರಬೋಸರು ವಿಮಾನ ಅಪಘಾತಕ್ಕೆ ಸಿಕ್ಕಿ ಸಾಯಲಿಲ್ಲವೆಂಬುದು ತಮಗೆ ಚೆನ್ನಾಗಿ ಗೊತ್ತಿರುವುದೆಂದು ಹಿಂದೆ ಜಪಾನ್ ಯುದ್ಧ ಪಾತಕಿಗಳ ವಿಚಾರಣೆಗೆ ನೇಮಿತರಾಗಿದ್ದ ಅಂತರ ರಾಷ್ಟ್ರೀಯ ಕೋರ್ಟಿನ ನ್ಯಾಯಾಧೀಶರಾದ ರಾಧಾ ವಿನೋದ ಪಾಲ್‌ರವರು ತಿಳಿಸಿರುತ್ತಾರೆ

ಪೆಟ್ರೋಲ್ ಪಡಿತರ ಪ್ರಮಾಣ ಹೆಚ್ಚಿತು

ಖಾಸಗಿ ಮೋಟಾರು ಕಾರುಗಳಿಗೂ, ಮೋಟಾರು ಸೈಕಲ್ಲುಗಳಿಗೂ ಜುಲೈ ೧ರಿಂದ ಕೊಡುವ ಪೆಟ್ರೋಲಿನ ಪ್ರಮಾಣವನ್ನು ಇನ್ನೂ ಅರ್ಧದಷ್ಟು ಹೆಚ್ಚಿಸಲಾಗುವುದೆಂದು ತಿಳಿಯಪಡಿಸಲಾಗಿದೆ

ಸಂಸ್ಥಾನಕ್ಕೆ ಗಾಡ್ಗಿಲ್ಲರ ಭೇಟಿ

ಭಾರತ ಸರಕಾರದ ಮರಾಮತ್ತು ಮಂತ್ರಿಗಳಾದ ಎನ್. ವಿ. ಗಾಡ್ಗಿಲ್ಲರು ಮದ್ರಾಸಿಗೆ ಬರುವ ತಿಂಗಳಲ್ಲಿ ಭೇಟಿ ಕೊಡುವರು ಹಾಗೆಯೇ ಮೈಸೂರು ಸಂಸ್ಥಾನಕ್ಕೂ ಬರುವರೆಂದು ಗೊತ್ತಾಗಿದೆ

ಕಲ್ಕತ್ತಕ್ಕೆ ಚಲಿಸುವ ನ್ಯಾಯಾಸ್ಥಾನ

ಟ್ರಾಫಿಕ್ ನಿಯಮಗಳನ್ನು ಉಲ್ಲಂಘಿಸಿದವರ ವಿಚಾರಣೆ ನಡೆಸಲು ಕಲ್ಕತ್ತದಲ್ಲಿ ನೆನ್ನೆಯಿಂದ ಚಲಿಸುವ ನ್ಯಾಯಾಸ್ಥಾನಗಳನ್ನು ಏರ್ಪಡಿಸಲಾಗಿದೆ ಸದರಿ ನ್ಯಾಯಾಸ್ಥಾನಕ್ಕೆ ಒಬ್ಬ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ

ಪ್ರಶ್ನೆ ಪತ್ರಿಕೆಗಳ ಕಳುವಿಗಾಗಿ ದಂಡ

ಹೋಷಿಯಾರ್ ಪುರದ ಸರ್ಕಾರೀ ಇಂಜನಿಯರಿಂಗ್ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಅಲ್ಲಿನ ಜವಾನನಿಗೆ ೧೦ ರೂ. ಕೊಟ್ಟು ಪ್ರಶ್ನೆ ಪತ್ರಿಕೆಗಳನ್ನು ಪಡೆದು, ಮೊದಲೇ ಪ್ರಶ್ನೆಗಳನ್ನು ಎಲ್ಲರಿಗೂ ತಿಳಿಸಿದುದರಿಂದ ಸದರಿ ವಿದ್ಯಾರ್ಥಿಗಳಿಗೆ ೪೦ ರೂ ಜುಲ್ಮಾನೆ ವಿಧಿಸಲಾಗಿದೆ

ಗ್ರೀಸಿನ ಮುಖ್ಯ ಮಂತ್ರಿಯ ನಿಧನ

ಗ್ರೀಸ್ ದೇಶದ ಮುಖ್ಯ ಮಂತ್ರಿಗಳಾದ ಸೊಫೊಲಿಸ್‌ರವರು ಮೊನ್ನೆ ದಿನ ಹೃದಯ ರೋಗದಿಂದ ನಿಧನರಾದರು ಅವರ ಜಾಗದಲ್ಲಿ ಸಾಲ್ದಾರಿಸ್‌ರವರು ಮುಖ್ಯ ಮಂತ್ರಿಗಳಾಗುವರೆಂದು ಹೇಳಲಾಗಿದೆ.

ಕಾಶ್ಮೀರ ಸಮಸ್ಯೆ ಬಗೆಹರಿಯುವ ಭರವಸೆ

ಕಾಶ್ಮೀರ ಸಮಸ್ಯೆಯು ಸುಮುಖವಾಗಿ ಪರಿಹಾರವಾಗುವ ಸೂಚನೆಗಳಿವೆಯೆಂದು ವಿಶ್ವ ಸಂಸ್ಥೆಯ ಕಾರ್ಯದರ್ಶಿ ಟ್ರಿಗ್ವಿಲೀಯವರು ತಿಳಿಸಿದ್ದಾರೆ

ಕಾಲ ಮೀರಿ ಊಟ ಕೊಟ್ಟುದಕ್ಕೆ ಜುಲ್ಮಾನೆ

ರಾಜಧಾನಿಯ ಸಾಡೆ ರಸ್ತೆಯಲ್ಲಿರುವ ಮುಬಾರಕ್ ಹೋಟಲಿನಲ್ಲಿ ರಾತ್ರಿ ೧೦-೪೫ ಗಂಟೆಯಲ್ಲಿ ಊಟ ಕೊಟ್ಟರೆಂಬ ಅಪಾದನೆಯ ಮೇಲೆ ಅಬ್ದುಲ್ ಕಾದರ್ ಮತ್ತು ಅಬ್ದುಲ್ ರಹೀಂ ಎಂಬುವರಿಗೆ ತಲಾ ೨೦ ರೂ ಜುಲ್ಮಾನೆಯನ್ನು ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ

ಹೊಸ ಹೈಸ್ಕೂಲುಗಳು

ಮೈಸೂರು ೨೬

ಬೆಟ್ಟದಪುರ ಮತ್ತು ಸರಗೂರುಗಳಲ್ಲಿ ಜಿಲ್ಲಾ ಬೋರ್ಡು ಹೈಸ್ಕೂಲುಗಳನ್ನೂ, ಬನ್ನೂರು ಮತ್ತು ಕಬ್ಬಹಳ್ಳಿಯಲ್ಲಿ ಖಾಸಗಿ ಹೈಸ್ಕೂಲುಗಳನ್ನೂ ನಡೆಸಲು ಸರಕಾರದ ಮಂಜೂರಾತಿ ದೊರೆತಿರುತ್ತದೆ ಇವುಗಳು ಕೂಡಲೇ ಆರಂಭವಾಗುವುವು ಬೆಟ್ಟದಪುರದಲ್ಲಿ ಎಲ್ಲ ಕೋಮುಗಳ ಸುಮಾರು ೩೦ ಜನ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಗಳನ್ನು ಕಲ್ಪಿಸುವ ವಿದ್ಯಾರ್ಥಿ ನಿಲಯವನ್ನೂ ಸಹ ಏರ್ಪಡಿಸಲಾಗುವುದು

ಹರಿಜನ ಸೇವಕ ಸಂಘ

ಮೈಸೂರು ಜಿಲ್ಲಾ ಹರಿಜನ ಸೇವಕ ಸಂಘದ ಸಭೆಯು ಶ್ರೀಮತಿ ಕಾವೇರಮ್ಮನವರ ಅಧ್ಯಕ್ಷತೆಯಲ್ಲಿ ನೆನ್ನೆ ನಡೆಯಿತು ವರ್ಧಂತಿ ಕಾಲದಲ್ಲಿ ದೇವಾಲಯ ಪ್ರವೇಶದ ಬಗ್ಗೆ ಪ್ರಚಾರವನ್ನು ಕೈಗೊಳ್ಳಲು ರಾಜಧಾನಿಯಲ್ಲಿ ಮುಜರಾಯಿ ಸಚಿವರಾದ ರಾ|| ಪ್ರಸನ್ನ ಪಾವಿ.ಡಿ ಸುಬ್ಬರಾಮಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ನಡೆಸಬೇಕೆಂದು ತೀರ್ಮಾನವಾಯಿತು.

ತಿರುಯಾತ್ರೆ

ನಿನ್ನೆ ದಿನ ಪಾಲಹಳ್ಳಿಯ ಅರ್ಚಕಿಸ್ಟ ಜೊವಾನ್ ಆರಳಪ್ಪನವರ ಜನ್ಮೋತ್ಸವ ತಿರುಜಾತ್ರೆಯು ಅವರ ದೇವಾಲಯದಲ್ಲಿ ವೈಭವದಿಂದ ಜರುಗಿತು ಈ ಸಮಾರಂಭಕ್ಕೆ ಮೈಸೂರು ಮತ್ತಿತರ ಕಡೆಗಳಿಂದ ಸುಮಾರು ೧೫೦೦ ಜನ ಯಾತ್ರಿಕರು ಬಂದಿದ್ದರು

ನೀರಿನಲ್ಲಿ ಮುಳುಗಿ ಮರಣ

ಕುಕ್ಕರಹಳ್ಳಿ ಕೆರೆಯಲ್ಲಿ ನಿನ್ನೆ ದಿನ ಕರೂರು ಬ್ಯಾಂಕಿನ ಏಜೆಂಟರಾದ ಶ್ರೀ ವಿ ಕೆ ನಟರಾಜರವರ ಪುತ್ರ ೧೫ ವರ್ಷದ ಎನ್ ಕೃಷ್ಣಮೂರ್ತಿ ಎಂಬುವರು ಈಜುವುದಕ್ಕೆ ಹೋಗಿ ಅಕಸ್ಮಾತ್ ಮುಳುಗಿ ಹೋದರೆಂದು ವರದಿಯಾಗಿದೆ

ಬಾಪೂ ಪ್ರಾರ್ಥನಾ ಸಭೆ

ಮೈಸೂರಿನ ಬಾಲ ಸೇವಾ ಸಮಾಜದ ಆಶ್ರಯದಲ್ಲಿ ಕಳೆದ ಶುಕ್ರವಾರ ಶ್ರೀ ಬಿ ಆನಂದರಾಯರ ಅಧ್ಯಕ್ಷತೆಯಲ್ಲಿ ಬಾಪೂ ಸ್ಮರಣಾ ದಿನಾಚರಣೆಯು ನಡೆಯಿತು. ಬಾಲಕ ಬಾಲಕಿಯರಿಂದ ಬಾಪೂ ಗೀತೆಗಳು ಜರುಗಿದುವು

ಮದರಾಸ್ ಹೋಟೇಲುಗಳು ೧ ದಿನ ಮಾತ್ರ ಬಂದು

ಮದರಾಸ್ ಸರ್ಕಾರದವರು ಹೋಟೇಲುಗಳ ಮೇಲೆ ವರಮಾನ ತೆರಿಗೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಪ್ರಾಂತ್ಯದ ಎಲ್ಲ ಹೋಟೇಲುಗಳೂ ಜುಲೈ ೧ನೇ ತಾ|| ನಿಂದ ೩ ದಿನಗಳು ಮುಚ್ಚಬೇಕೆಂದು ಹಿಂದೆ ಮಾಡಿದ್ದ ನಿರ್ಧಾರವನ್ನು ಈಗ ಬದಲಾಯಿಸಿ, ೧ ದಿನ ಮಾತ್ರ ಮುಚ್ಚಬೇಕೆಂದು ಮದರಾಸ್ ಹೋಟೇಲ್ ಸಂಘದವರು ತೀರ್ಮಾನಿಸಿದ್ದಾರೆ

ಹಡಗು ಮುಳುಗಿ ೩೯ ಜನರ ಮರಣ

ಬ್ರೋಚ್ ಹತ್ತಿರ ನರ್ಮದಾ ನದಿಯಲ್ಲಿ ಹೋಗುತ್ತಿದ್ದ ಹಡಗೊಂದು ಅಕಸ್ಮಾತ್ ಮುಳುಗಿ, ೧೩ ಜನ ಮಹಿಳೆಯರು ಮತ್ತು ೧೬ ಮಂದಿ ಗಂಡಸರು ನೀರುಪಾಲಾದರೆಂದು ಹೇಳಲಾಗಿದೆ

೨ ತಲೆ, ೪ ಕೈಗಳ ಮಗು

ರಾಜಕೋಟೆಗೆ ೪೦ ಮೈಲಿ ದೂರದಲ್ಲಿರುವ ಗೋಪಾಲಪೇರ್ ಎಂಬ ಗ್ರಾಮದಲ್ಲಿ ರಜಪೂತ ಮಹಿಳೆಯೊಬ್ಬಳಿಗೆ ೨ ತಲೆ, ೪ ಕೈಗಳುಳ್ಳ ಒಂದು ಮಗು ಜನನವಾಗಿದೆಯೆಂದು ವರದಿಯಾಗಿದೆ

ನಿವೃತ್ತ ಶಾಸಿಸ್ತರುಗಳ ತೊಂದರೆ

೫೫ ವರ್ಷಕ್ಕೆ ಮೇಲ್ಪಟ್ಟ ಶಾಸಿಸ್ತರುಗಳನ್ನು ಮುಂದಿನ ತಿಂಗಳು ೧ನೇ ತಾ|| ನಿಂದ ನಿವೃತ್ತಿ ಮಾಡಲಾಗುವುದೆಂದು ಹೈಕೋರ್ಟಿನವರು ಆಜ್ಞೆ ಮಾಡಿರುತ್ತಾರೆ. ಇಂತಹ ಕಷ್ಟಕಾಲದಲ್ಲಿ ಜೀವನ ನಡೆಸಲು ತುಂಬಾ ತೊಂದರೆಯಾಗಿರುತ್ತದೆ ಆದುದರಿಂದ ಸರ್ಕಾರದವರು ಅವರಿಗೆ ಸೂಕ್ತವಾದ ಸಹಾಯ ಮಾಡಬೇಕೆಂದು ಅವರ ಒತ್ತಿನಗಳೊಬ್ಬರು ಪ್ರಾರ್ಥಿಸಿರುತ್ತಾರೆ

ಸಮಾಜವಾದಿ ಪಕ್ಷದ ಪತ್ರಿಕೆ

ಮೈಸೂರು ನಗರದ ಸಮಾಜವಾದಿ ಪಕ್ಷದ ಸಭೆಯು ನಿನ್ನೆ ಶ್ರೀ ಪ್ರಾಣೇಶರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಪಕ್ಷದ ಒಂದು ಪತ್ರಿಕೆಯನ್ನು ರಾಜಧಾನಿಯಿಂದ ಹೊರಡಿಸಬೇಕೆಂದು ನಿರ್ಧರಿಸಲಾಯಿತು. ಡಾ|| ಲೋಹಿಯಾ ಮತ್ತು ಇತರ ೩೭ ಮಂದಿಯನ್ನು ಬಂಧಿಸಿದುದಕ್ಕಾಗಿ ಕೇಂದ್ರ ಸರ್ಕಾರದವರನ್ನು ಖಂಡಿಸಲಾಯಿತು.

ಬಸ್ ರಾಷ್ಟ್ರೀಕರಣಕ್ಕಾಗಿ ೧೬ ಲಕ್ಷ ರೂ. ಖರ್ಚು

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು ಪ್ರೋ] ಬೆಂಗಳೂರು ೨೬

ಇಂದು ಶಾಸನ ಸಭೆಯಲ್ಲಿ ಬಸ್ಸುಗಳ ರಾಷ್ಟ್ರೀಕರಣದ ವಿಚಾರವಾಗಿ ಶ್ರೀ ಡಿ. ಎಸ್. ಮಲ್ಲಪ್ಪನವರ ಪ್ರಶ್ನೆಗೆ ಸಚಿವ ಶ್ರೀ ಮರಿಯಪ್ಪನವರು ಉತ್ತರ ಕೊಡುತ್ತಾ. ೧೯೪೯ನೇ ಮಾರ್ಚಿ ಅಂತ್ಯದವರೆಗೆ ಒಟ್ಟು ೧೬,೪೪,೩೪೯ ರೂ ಖರ್ಚಾಗಿದೆಯೆಂದೂ ಒಟ್ಟು ೧೩೧ ಬಸ್ಸುಗಳು ಇವೆಯೆಂದೂ, ಈ ಕೆಲಸವು ಸಮರ್ಪಕವಾಗಿ ನಡೆಯುತ್ತಿದೆಯೆಂದೂ ತಿಳಿಸಿದರು

ಬೆಂಗಳೂರು ಹತ್ತಿರವಿರುವ ವೈಮಾನಿಕ ಶಿಕ್ಷಣ ಶಾಲೆಯ ಡೈರೆಕ್ಟರಾದ ಕ್ಯಾ|| ಸುಂದರಂರವರಿಗೆ ೧೬೫೦ ರೂ ಸಂಬಳ, ಮತ್ತು ವರ್ಷಕ್ಕೆ ೧೨೫೬ ರೂ ಪ್ರೀಮಿಯಂ ಕೊಡಲಾಗುತ್ತಿದೆಯೆಂದೂ, ಅವರ ಪತ್ನಿಯವರು ವೈಮಾನಿಕರಾಗಿದ್ದರೂ ಯಾವ ಸಂಭಾವನೆಯನ್ನೂ ಅವರಿಗೆ ಕೊಡುತ್ತಿಲ್ಲವೆಂದೂ ಸಚಿವ ಶ್ರೀ ಮರಿಯಪ್ಪನವರು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ಮದರಾಸ್ ಸರ್ಕಾರದ 'ಹನುಮಾನ್' ವಿಮಾನವನ್ನು ಬೆಂಗಳೂರಿನಲ್ಲಿ ಇಡಲಾಗಿದೆಯೆಂದೂ, ಅದರ ಸಿಬ್ಬಂದಿ ಖರ್ಚಿಗಾಗಿ ತಿಂಗಳಿಗೆ ೪೫೦೦ರೂ ಅನ್ನು ಮೈಸೂರು ಸರ್ಕಾರಕ್ಕೆ ಮದರಾಸಿನವರು ಕೊಡುತ್ತಿದ್ದಾರೆಂದೂ, ಅದರ ಮೇಲ್ವಿಚಾರಣೆಯನ್ನೂ ಸಹ ಶ್ರೀ ಸುಂದರಂರವರೇ ನೋಡಿಕೊಳ್ಳುತ್ತಿದ್ದಾರೆಂದೂ, ಅದಕ್ಕೆ ಅವರಿಗೆ ಯಾವ ಸಂಭಾವನೆಯನ್ನೂ ಕೊಡುತ್ತಿಲ್ಲವೆಂದೂ ಸಚಿವರು ತಿಳಿಸಿದರು

ಜನಾಬ್ ಇಮಾಂರವರ ನಾಯಕತ್ವದಲ್ಲಿ ಸ್ಥಾಪಿಸಲ್ಪಟ್ಟಿರುವ ನೂತನ ವಿರೋಧ ಪಕ್ಷಕ್ಕೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು

ಪೊಲೀಸರ ಹೊಡೆತದಿಂದ ಬಂದಿಯ ಮರಣ

ಗೋವಾದ ಸಂಜಿಮ್ ಜೈಲಿನಲ್ಲಿ ಬಂಧನದಲ್ಲಿದ್ದ ಶ್ರೀ ದೇಶಪಾಂಡೆ ಎಂಬ ಭಾರತದ ಪ್ರಜೆಯನ್ನು ಪೊಲೀಸರು ಹೊಡೆದು ಚಿತ್ರಹಿಂಸೆಗೆ ಗುರಿಪಡಿಸಿದುದರ ಪರಿಣಾಮವಾಗಿ ಅವರು ಸತ್ತುಹೋದರೆಂದು ಹೇಳಲಾಗಿದೆ

ಎ. ಐ. ಸಿ. ಸಿ. ಸಭೆ

ಮುಂದಿನ ತಿಂಗಳು ೧೬ನೇ ತಾ|| ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನವು ಮೈಸೂರು ಅಥವ ಚಿತ್ರದುರ್ಗದಲ್ಲಿ ನಡೆಯುವುದೆಂದು ತಿಳಿದು ಬಂದಿದೆ

ಲೋಹಿಯಾ ದಿನಾಚರಣೆ

ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ಸಮಾಜವಾದಿ ಪಕ್ಷದ ಆಶ್ರಯದಲ್ಲಿ ಲೋಹಿಯಾರವರ ದಿನಾಚರಣೆಯು ಶ್ರೀ ಪಿ ಎಸ್ ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಗಳಾದ ಕಾಳಯ್ಯ ಶ್ರೀಕಂಠವರ್ಮ, ರಾಮಶೆಟ್ಟಿ ಮುಂತಾದವರು ಭಾಷಣ ಮಾಡಿದರು. ಡಾ|| ರಾಮಮನೋಹರ ಲೋಹಿಯಾರವರನ್ನು ದಸ್ತಗಿರಿ ಮಾಡಿದುದಕ್ಕೆ ಕೇಂದ್ರ ಸರ್ಕಾರದವರನ್ನು ಖಂಡಿಸುವ ಮತ್ತು ನೇಪಾಳದ ಪ್ರಜಾ ಹೋರಾಟಕ್ಕೆ ಬೆಂಬಲ ನೀಡುವ ನಿರ್ಣಯಗಳನ್ನು ಮಾಡಲಾಯಿತು.

೨೫ ಸಾವಿರದಷ್ಟು ಹುಳು ತಿಂದ ನೋಟುಗಳು

ಹುಳುಕಾಲ ಬಚ್ಚಿಟ್ಟಿದ್ದು ಹುಳ ಹಿಡಿದು ಅನುಪಯುಕ್ತವಾದ ಸುಮಾರು ೨೫ ಸಾವಿರ ರೂ ಗಳ ಐದು ರೂಪಾಯಿ ನೋಟುಗಳು ಕ್ಯಾಂಟಿಯ ರೈಲ್ವೆ ಸ್ಟೇಷನ್ ಬಳಿ ಸಿಕ್ಕಿದವೆಂದು ವರದಿಯಾಗಿದೆ

ಖಾಸಿಂ ರಜ್ವಿಯವರೇ ಸ್ವತಃ ವಾದಿಸುವರು

ಖಾಸಿಂ ರಜ್ವಿಯ ವಿಚಾರಣೆಯು ಬರುವ ತಿಂಗಳು ೧೫ನೇ ತಾ|| ಹೈದರಾಬಾದಿನಲ್ಲಿ ಸಿಕಂದರಾಬಾದಿನಲ್ಲೋ ಆರಂಭವಾಗಬಹುದೆಂದು ಹೇಳಲ್ಪಟ್ಟಿದೆ ಈ ಮೊಕದ್ದಮೆಯಲ್ಲಿ ರಜ್ವಿಯು ತನ್ನ ಪರ ತಾನೇ ವಕಾಲತ್ತು ವಹಿಸಿ ವಾದಿಸಲಿರುವನೆಂದೂ ತನಗೆ ಬೇರೆ ವಕೀಲರು ಬೇಕಿಲ್ಲವೆಂದು ನಿರಾಕರಿಸಿರುವನೆಂದೂ ವರದಿಯಾಗಿದೆ ವಿಚಾರಣೆ ಕಾಲದಲ್ಲಿ ತನ್ನ ಪತಿಗೆ ಸಹಾಯ ಮಾಡಲು ಖಾಸಿಂರಜ್ವಿಯ ಪತ್ನಿಯು ಕರಾಚಿಯಿಂದ ಹೈದರಾಬಾದಿಗೆ ಬರಬಹುದೆಂದೂ, ಆಕೆಯೊಡನೆ ಕರಾಚಿಯ ಸುಪ್ರಸಿದ್ಧ ವಕೀಲರೊಬ್ಬರೂ ಬರಬಹುದೆಂದೂ ಹೇಳಲಾಗಿದೆ

ಪ|| ಬಂಗಾಳದಲ್ಲಿ ಜಾಹಿರಾತಿನ ತೆರಿಗೆಯಿಲ್ಲ

ಪಶ್ಚಿಮ ಬಂಗಾಳದಲ್ಲಿ ಪತ್ರಿಕೆಗಳ ಜಾಹೀರಾತುಗಳ ಮೇಲೆ ತೆರಿಗೆಯನ್ನು ವಿಧಿಸಲಾಗುವುದಿಲ್ಲವೆಂದು ಅಲ್ಲಿನ ಸಚಿವಮಂಡಲದವರು ತಿಳಿಸಿರುತ್ತಾರೆ ಜಾಹೀರಾತು ತೆರಿಗೆಯನ್ನು ವಿಧಿಸುವುದರಿಂದ ಮದರಾಸ್, ಬೊಂಬಾಯಿಗಳಿಗಿಂತಲೂ ಕಲ್ಕತ್ತದಲ್ಲಿ ಹೆಚ್ಚಿನ ವರಮಾನ ಬರುವುದಾದರೂ, ಪತ್ರಿಕೆಗಳು ಜ್ಞಾನ ಪ್ರಸಾರಣೆಯ ಮುಖ್ಯ ಸಾಧನಗಳಾದುದರಿಂದ, ಅವುಗಳ ಮೇಲೆ ಸುಂಕ ವಿಧಿಸುವುದು ಯುಕ್ತವಲ್ಲವೆಂದು, ಹೇಳಿ ಮದರಾಸ್ ಮತ್ತು ಬೊಂಬಾಯಿ ಸರ್ಕಾರಗಳೂ ಈ ಅಂಶವನ್ನು ಪುನಃ ಪರಿಶೀಲಿಸ ಬೇಕೆಂದೂ ಅವರು ತಿಳಿಸಿದ್ದಾರೆ

ಆಂಧ್ರ ಮತ್ತು ಒರಿಯಾ ದವರಿಗೆ ಹೊಡೆದಾಟ

ಒರಿಸ್ಸಾ ಭಾಷೆಯ ಪ್ರಾಧಾನ್ಯತೆ ಬಗ್ಗೆ ಪ್ರತಿಭಟನೆಯನ್ನು ಸೂಚಿಸುವುದಕ್ಕಾಗಿ ಬರಹಾಂಪುರದಲ್ಲಿ ಆಂಧ್ರರು ಮೆರವಣಿಗೆ ಹೊರಟಾಗ ಅವರನ್ನು ವಿರೋಧ ಮಾಡಲು ಒರಿಯಾದವರು ಎದುರಿಗೆ ಬಂದಾಗ್ಯೆ ಇಬ್ಬರಿಗೂ ತೀವ್ರಾಟವಾಗಿ ಕೈ ಬಾಂಬುಗಳನ್ನು ಹಾಕಲಾಯಿತು. ಒಬ್ಬ ವಕೀಲರೂ ಸೇರಿ ಹದಿನೈದು ಜನರಿಗೆ ಗಾಯವಾಯಿತು ಪೊಲೀಸರು ಲಾಠಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದರು ಪ್ರಾಣಾಪಾಯಕರವಾದ ಗಾಯಗಳೂ ಹಲವರಿಗೆ ಆಗಿವೆಯೆಂದ ತಿಳಿದುಬಂದಿದೆ

ಕಲಾ ಪ್ರದರ್ಶನ

ಈದಿಗಾದಲ್ಲಿರುವ ಶ್ರೀ ಗಂಗಾ ಪರಮೇಶ್ವರ ಯುವಕ ಸಂಘದ ಆಶ್ರಯದಲ್ಲಿ ನಗರ ವಯಸ್ಕರ ಶಿಕ್ಷಣ ಸಮಿತಿಯವರು ಜನಪದ ಕಲಾ ಪ್ರದರ್ಶನವನ್ನು ನಿನ್ನೆ ಸಂಜೆ ಏರ್ಪಡಿಸಿದ್ದರು ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆ ಸ್ವಾಗತ ಭಾಷಣ, ವಿವಿಧ ವಿನೋದಾವಳಿ, ನೃತ್ಯ ಮತ್ತು ಬಯಲು ನಾಟಕ ಪಟ್ಟಾವರಸೆ ಕುಸ್ತಿಗಳಾದನಂತರ, ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು

ಛತ್ರದ ಶಂಕುಸ್ಥಾಪನೆ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ವಿಠ್ಠಲಸ್ವಾಮಿ ದೇವಸ್ಥಾನದ ಎದುರಿಗೆ ಮೈಸೂರು ಹಾಲಿನ ಮಾಲೀಕರಾದ ಶ್ರೀ ಎ ಪಟ್ಟಾಜಿರಾವ್ ಮತ್ತು ಅವರ ಮಕ್ಕಳುರವರು ಕಟ್ಟುವ ಧರ್ಮ ಛತ್ರದ ಶಂಕುಸ್ಥಾಪನೆ ಮಹೋತ್ಸವವನ್ನು ಶ್ರೀ ಆರ್ ರಾಮಚಂದ್ರ ಬಾಂಭೋರೆಯವರು ಕಳೆದ ೨೩ನೇ ತಾ|| ನೆರವೇರಿಸಿದರು. ಶ್ರೀ ಯು ಎಲ್ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು

ಸ್ತ್ರೀ ಪೊಲೀಸರು ಅಲಂಕಾರಕ್ಕೆ ಮಾತ್ರ ?

ಹಲವಾರು ಪ್ರಾಂತಗಳಲ್ಲಿ ಮಹಿಳಾ ಪೊಲೀಸು ಪಡೆಗಳನ್ನು ಏರ್ಪಡಿಸುವುದರ ಬಗ್ಗೆ ಮದ್ರಾಸಿನ ಶಾಸನ ಸಭೆಯಲ್ಲಿ ಮಂತ್ರಿ ಗೋಪಾಲರೆಡ್ಡಿಯವರು ಹೇಳಿಕೆಯಿತ್ತು, ಸ್ತ್ರೀ ಪೊಲೀಸರಿಂದ ಕೆಲಸವೇನೂ ಆಗುವುದಿಲ್ಲವೆಂದೂ, ಅವರು ಕೇವಲ ಭೂಷಣ ಪ್ರಾಯರೆಂದೂ ತಿಳಿಸಿರುವರು

ವರಲಕ್ಷ್ಮೀ ಸಂಗೀತ ಮಂದಿರ

ರಾಜಧಾನಿಯ ಕಾಶೀಪತಿ ಲಾಯದಲ್ಲಿರುವ ಮೈಸೂರು ಸಹೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ಯಾವ ಕೋಮುವಾರು ಮತ್ತು ಇತರ ಭೇದ ಭಾವನೆಗಳಿಲ್ಲದೆ ಎಲ್ಲರಿಗೂ ಸುಲಭ ರೀತಿಯಲ್ಲಿ ಕರ್ನಾಟಕ ಸಂಗೀತ ಶಿಕ್ಷಣವನ್ನೂ ಕಳೆದ ೫ ವರ್ಷಗಳಿಂದಲೂ ಏರ್ಪಡಿಸಲಾಗಿದೆ ಈ ಸಂಗೀತ ಮಂದಿರವು ಇನ್ನೂ ಹೆಚ್ಚು ಸೇವೆ ಸಲ್ಲಿಸಲು ಮಹಾಜನರು ಪ್ರೋತ್ಸಾಹ ನೀಡಬೇಕೆಂದು ಅದರ ವ್ಯವಸ್ಥಾಪಕರು ಕೋರಿರುತ್ತಾರೆ

ಆದಿ ಜಾಂಬವರ ಸಂಘದ ಪ್ರಾರಂಭೋತ್ಸವ

ಮಂಡಿ ಮೊಹಲ್ಲಾದಲ್ಲಿರುವ ಆದಿ ಜಾಂಬವರ ಸಂಘದ ಪ್ರಾರಂಭೋತ್ಸವವನ್ನು ಬೆಂಗಳೂರಿನ ಕಾರ್ಮಿಕ ನಾಯಕರಾದ ಶ್ರೀ ಟಿ ಪಿ ಕುಮಾರರವರು ಮೊನ್ನೆ ದಿನ ನೆರವೇರಿಸಿದರು. ಅದರ ವಾರ್ಷಿಕ ಸಭೆಯು ನಿನ್ನೆ ಬೆಳಗ್ಗೆ ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಸಂಯುಕ್ತ ಪ್ರಾಂತ್ಯದಲ್ಲಿ ಶಾಖೆಯಿಂದ ಮರಣಗಳು

ಸಂಯುಕ್ತ ಪ್ರಾಂತ್ಯದ ಲಕ್ನೋ ಮತ್ತು ಅಲಹಾಬಾದುಗಳಲ್ಲಿ ಕಳೆದವಾರ ವಿಪರೀತ ಶಾಖೆಯ ಬೇಸಗೆಯಿಂದ ೧೧ ಮಂದಿ ಮೃತಪಟ್ಟು ೩೦ ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದು ಗೊತ್ತಾಗಿದೆ ಪ್ರಾಂತ್ಯದ ಸಂಚಾರ ಮಾರ್ಗಗಳಲ್ಲೆಲ್ಲಾ ಅಸಂಖ್ಯಾತವಾಗಿ ಪಕ್ಷಿಗಳು ಸತ್ತು ಬಿದ್ದು ವರದಿಯಾಗಿದೆ

ನಾಗರಿಕರಿಗೆ ಮಿಲಿಟರಿ ಶಿಕ್ಷಣ

ಇದೇ ೨೦ನೇ ತಾ||ನಿಂದ ಬೆಂಗಳೂರಿನಲ್ಲಿ ನಾಗರಿಕರಿಗೆ ಸೈನ್ಯ ಶಿಕ್ಷಣವನ್ನು ಕೊಡಲು ಸರ್ಕಾರದವರು ವ್ಯವಸ್ಥೆ ಮಾಡಿದ್ದಾರೆ ವಾರದಲ್ಲಿ ಆರು ದಿನಗಳು ಪ್ರತಿ ದಿನ ಬೆಳಗ್ಯೆ ೬-೩೦ರಿಂದ ೧ ಗಂಟೆ ಕಾಲ ಸಂಪಂಗಿ ಕೆರೆಯ ಮೈದಾನದಲ್ಲಿ ಶಿಕ್ಷಣ ಕೊಡಲಾಗುವುದು

ದನಗಳ ಪ್ರದರ್ಶನ

ಮೈಸೂರು ತಾಲ್ಲೂಕು ವರುಣದ ಹೋಬಳಿ ಜೋಡಿ ಹೊಸ ಹಳ್ಳಿಯಲ್ಲಿ ಮೊನ್ನೆ ದಿನ ದನಗಳ ಪ್ರದರ್ಶನವು ನಡೆಯಿತು, ಶ್ರೀ ಎಸ್. ರಂಗರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು ಅಮಲ್ದಾರ್ ಶ್ರೀ ಎಸ್ ಆರ್ ನರಸಿಂಗರಾಯರು ಸ್ವಾಗತ ಭಾಷಣ ಮಾಡಿದರು ಶ್ರೀಗಳಾದ ಹೆಚ್ ಕೆ ಕುಮಾರಸ್ವಾಮಿ ಮತ್ತು ಸಿ ನಂಜುಂಡಯ್ಯನವರು ಜಾನುವಾರುಗಳ ಅಭಿವೃದ್ಧಿ ವಿಚಾರವಾಗಿ ಭಾಷಣ ಮಾಡಿದರು ಉತ್ತಮ ರಾಸುಗಳಿಗೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು

ಕಟ್ಟಡ ಕೆಲಸಗಾರರ ಸಹಕಾರ ಸಂಘ

ರಾಜಧಾನಿಯ ಕಟ್ಟಡ ಕೆಲಸಗಾರರ ಸಹಕಾರ ಸಂಘದ ಕಾರ್ಯಾಲಯವನ್ನು ...ರ್ವೆ ರಸ್ತೆಯಲ್ಲಿರುವ ಯಾಲಕ್ಕಾಚಾರ್ ಛತ್ರದ ಪಕ್ಕದ ಭವನಕ್ಕೆ ವರ್ಗಾಯಿಸಲಾಗಿದೆ

ಬಿಕರಿಗೆ ಸಿದ್ಧವಾಗಿದೆ

ಪಂಚ ರಾತ್ರ

[By Dr N S Narayan Sastry]
Inter Arts & Inter Science
Text Book for 1949 50
ಬೆಲೆ 1—6—0

ಮಿತ್ರ ಮತ್ತು ಕಂಪೆನಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮೈಸೂರು

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಂಬರು ಮನೆ ನಂಬರ್ ೬೫ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

ಕಸಿ ಮಾವು

ಮತ್ತು ಇತರ ಜಾತಿಯ ಹಣ್ಣಿನ ಗಿಡಗಳು ದೊರೆಯುತ್ತವೆ

ಭೂದೇವಿ ಫಾರಂ

ಕೃಷ್ಣ ಸ್ಟೇಟ್ ಸರ್ಕಲ್, ಮೈಸೂರು

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು

ಮೊಲ್ಟಂಡ ಶಿಶುವಿಹಾರವು ಬೇಸಿಗೆ ರಜದ ನಂತರ ನವ ತ್ರೈ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ ಆಧ್ಯಾತ್ಮಿಕ ರೀತಿಯ ಕಿಂಡರ್‌ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶ ವಿರುವುದರಿಂದ ಬಾಲಕರ ಮಾತಾಪಿತೃಗಳು ಕೃಪೆ ಮಾಡಿ ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡಬೇಕೆಂದು ಅಪೇಕ್ಷಿಸಲಾಗಿದೆ

ಬಿ ಕೃಷ್ಣಮೂರ್ತಿ
ವ್ಯವಸ್ಥಾಪಕ

|| ಶ್ರೀ ಸೀತಾರಾಮಾಯನಮಃ ||

ಭಿಷಗ್ರತ್ನ ಸಾಳ್ವದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಹೃದ್ಯೋಪಾನಕ

ಸೂತಿಕಾವಾತಕ್ಕೆ [ಬಾಣಂತಿ ನಂಜಿಗೆ] ಅತ್ಯುತ್ತಮ ಗುಣಕಾರಿ

ಸನ್ನಿಕೈಕಾಲುರ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ರೆ ಬಾರದಿರುವಿಕೆ ಮನಸ್ಸಿಗೆ ಕಳವಳ ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಇವು ಪರಿಹಾರ

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ —

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸಿಟಿ ರೇಷನಿಂಗ್

ನಂ M 96/48-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪ್ಪೊ ಮೊಹಲ್ಲಾ ಷಾಪ್ ಗೋಡೌನ್, ವರ್ತಕರ ಡಿಪ್ಪೊ ಮತ್ತು ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳಲ್ಲಿ ಮುಚ್ಚಲ್ಪಡುತ್ತವೆ 30-6-49 ಗುರುವಾರ-ದಾಸ್ತಾನು ಎಣಿಕೆ ಬಗ್ಗೆ ಸರ್ಕಾರಿ ಡಿಪ್ಪೊ ವರ್ತಕರ ಡಿಪ್ಪೊ ಮತ್ತು ಸಹಕಾರ ಸಂಘಗಳಿಗೆ ಪೂರ್ತಿ ರಜ

1 7-49 ಶುಕ್ರವಾರ-ದಾಸ್ತಾನು ಎಣಿಕೆ ಬಗ್ಗೆ ಸರ್ಕಾರಿ ಗೋಡೌನ್‌ಗಳಿಗೆ ಪೂರ್ತಿ ರಜ

[ಸಹಿ] ಡಿ. ಜೆ. ಬಾಲರಾಜ್
ರೇಷನಿಂಗ್ ಆಫೀಸರ್, ಮೈಸೂರು

Edited, printed and published by A R Nagarajan at the Sadhvi Press, D Subbiah Road, Mysore

❋ ಬೆಂಗಾಲ್, ಬೆನಾರಿಸ್, ಮೈಸೂರು ಸಿಲ್ಕ್ ಸೀರೆಗಳು ❋

ಮಂಗಳಕರವಾದ ಮದುವೆ ಜವಳಿಗಳು ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ. ನಾಜೂಕಾದ ಮಾಲು. ಬಾಹುಸಾಬ್ ಕಂಪೆನಿ, ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೨೮-೬-೪೯ [ಸಂಚಿಕೆ ೨೭೦

ನಾಲ್ಕಿದ್ದು ಸಂಸ್ಥಾನದಲ್ಲಿ ಸಿನಿಮಾಗಳ ಮುಷ್ಕರ

ಆಡಳಿತ ವೆಚ್ಚಕ್ಕೆ ಬೇಡಿಕೆಗಳ ಮಂಜೂರಾತಿ

ಶಾಸನ ಸಭೆಯಲ್ಲಿ ಕತ್ತರಿ ನಿರ್ಣಯಗಳ ವಾಪಸು

ಸ್ವಂ ಸು. ಪೋ॥] ಬೆಂಗಳೂರು ೨೮

ನಿನ್ನೆ ಶಾಸನ ಸಭೆಯಲ್ಲಿ ವಿವಿಧ ಇಲಾಖೆಗಳ ಆಡಳಿತ ವೆಚ್ಚಕ್ಕಾಗಿ ಕೆಳಗೆ ಕಂಡಂತೆ ಮೊಬಲಗುಗಳು ಮಂಜೂರಾದುವು. ಕೋತಾ ನಿರ್ಣಯಗಳೆಲ್ಲವೂ ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟವು:—

ಸಾಮಾನ್ಯ ಆಡಳಿತ ರೂ. ೩೫,೪೪,೮೯೦, ಮುಜರಾಯಿ ರೂ. ೬,೭೬,೩೦೦, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನೆ ರೂ. ೨೮೧,೦೦೦, ಸ್ಟೇಷನರಿ ಮತ್ತು ಪ್ರಿಂಟಿಂಗ್ ರೂ ೧೩,೮೧೦೦೦ ಮಿಸಲೇನಿಯಸ್ ರೂ ೨,೯೬,೦೦೦, ಕೋರ್ಟುಗಳು ರೂ. ೨೦,೫೬,೦೦೦,.

ಸಾಮಾನ್ಯ ಆಡಳಿತದ ಮೇಲೆ ಶ್ರೀ ಓ ವೀರಬಸಪ್ಪನವರು ಒಂದು ಕತ್ತರಿ ಪ್ರಯೋಗವನ್ನು ತಂದು ಪ್ರಜಾಪ್ರಭುತ್ವ ಪದ್ಧತಿಯನ್ನು ಸರ್ಕಾರವು ಜಾರಿಗೆ ತರುವ ವಿಷಯದಲ್ಲಿ ಸಮರ್ಪಕವಾಗಿ ಮುಂದುವರಿದಿಲ್ಲವೆಂಬ ಅಂಶವನ್ನು ಚರ್ಚಿಸಲು ತೊಡಗಿದರು. ರಾಜ್ಯಾಂಗಕ್ಕೆ ಸಂಬಂಧಪಟ್ಟ ಅಂಶಗಳನ್ನು ಶಾಸನ ಸಭೆಯು ಚರ್ಚಿಸಲು ಅವಕಾಶವಿಲ್ಲವೆಂದು ಶ್ರೀ ಕೆ ಸಿ ರೆಡ್ಡಿಯವರು ಕ್ರಿಯಾಲೋಪವನ್ನೆತ್ತಿದರು ರಾಜ್ಯಾಂಗದ ಲೋಪ ದೋಷಗಳನ್ನು ಚರ್ಚಿಸದೆ ಆಡಳಿತದಲ್ಲಿ ಎಷ್ಟು ಮಟ್ಟಿನ ಸುಧಾರಣೆ ನಡೆದಿದೆಯೆಂಬುದನ್ನು ಪರಿಶೀಲಿಸಲು ಅಡ್ಡಿ ಇಲ್ಲವೆಂದು ಅಧ್ಯಕ್ಷರು ಹೇಳಿದ ಮೇಲೆ ಚರ್ಚೆ ಮುಂದುವರಿಯಿತು. ಮುಂದೆ ಇದೇ ವಿಷಯಗಳು ಸಭೆಯಲ್ಲಿ ಬಂದಿದ್ದಾಗ ಅವುಗಳ ಚರ್ಚೆಗೆ ಅವಕಾಶವನ್ನು ನಿರಾಕರಿಸಲಾಗಿದೆಯೆಂದು ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ಮತ್ತೊಂದು ಕ್ರಿಯಾಲೋಪವನ್ನು ತಂದರು ಈ ವಿಷಯದಲ್ಲಿ ಮೊದಲೇ ರೂಲಿಂಗ್ ಕೊಟ್ಟಿರುವುದರಿಂದ ಅವರ ಕ್ರಿಯಾಲೋಪವನ್ನು ಅಧ್ಯಕ್ಷರು ತಳ್ಳಿಹಾಕಿದರು

ಶ್ರೀ ಓ. ವೀರಬಸಪ್ಪನವರು ತಮ್ಮ ವಾದವನ್ನು ಮುಂದುವರಿಸಿ ಪ್ರಜಾಪ್ರಭುತ್ವ ಮಾರ್ಗದಲ್ಲಿ ಸಾಕಾದಷ್ಟು ಪ್ರಗತಿ ಆಗಿಲ್ಲವೆಂದು ಹೇಳಿದರು ಶಾಸನ ಸಭೆಯ ಪಕ್ಕ್ಯ ಬಾಧ್ಯತೆಗಳನ್ನು ವಿಸ್ತರಿಸಿಲ್ಲವೆಂದೂ, ದಿವಾನರ ಅಧಿಕಾರವು ಸಭೆಯ ಮೇಲೆ ಇದ್ದೇ ಇದೆಯೆಂದೂ ಹೇಳಿದರು.

ಶ್ರೀ ಕೆ. ಸಿ. ರೆಡ್ಡಿಯವರು ಉತ್ತರವಿತ್ತರು. ಭಾರಿ ಬದಲಾವಣೆಗಳನ್ನು ಮಾಡಲು ಸಾಧ್ಯವಿಲ್ಲವಾದರೂ ಕೆಲವು ಸುಧಾರಣೆಗಳನ್ನು ಮಾಡಲಾಗಿದೆ. ರಾಜ್ಯಾಂಗ ರಚನಾ ಕಾರ್ಯವು ಬೇಗ ಮುಗಿಯಬೇಕೆಂದು ಶ್ರೀಮನ್ಮಹಾರಾಜರವರೂ ಸಹ ಕುತೂಹಲರಾಗಿರುತ್ತಾರೆ. ದಿವಾನರ ಹುದ್ದೆಯೇ ರದ್ದಾಗಲಿರುವುದರಿಂದ ಅವರ ಅಧಿಕಾರದ ವಿಷಯವನ್ನು ಅಷ್ಟಾಗಿ ಗಮನಿಸಬೇಕಾಗಿಲ್ಲ—ವೆಂದು ಅವರು ಹೇಳಿದರು. ಕೋತಾ ನಿರ್ಣಯವು ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿತು

ವಿಶ್ವ ಸಂಸ್ಥೆಯ ಕಛೇರಿಯಲ್ಲೂ ಮತ್ತು ಅಲ್ಲಿಗೆ ಹೋಗುವ ಭಾರತ ನಿಯೋಗದಲ್ಲೂ ಮೈಸೂರಿನ ಅಧಿಕಾರಿಗಳನ್ನೂ ಮತ್ತು ಖಾಸಗೀ ಮಹನೀಯರನ್ನೂ ನೇಮಿಸಿಕೊಳ್ಳಬೇಕೆಂದು ಭಾರತ ಸರ್ಕಾರದವರನ್ನು ಒತ್ತಾಯ ಪಡಿಸುವ ಬಗೆ, ಜನಾ

ನೈಜಾಮರ ಕುಟುಂಬದವರಿಗಾಗಿ ನಿಧಿ

ಹೈದರಾಬಾದಿನ ನೈಜಾಮರ ಒಟ್ಟು ಆಸ್ತಿಯು ಸುಮಾರು ೩೦೦ ಕೋಟಿ ರೂ. ಯೆಂದೂ, ಅವರು ತಮ್ಮ ಹತ್ತಿರದ ಬಂಧು ವರ್ಗದವರ ಜೀವನಕ್ಕಾಗಿ ನಿಧಿಗಳನ್ನು ಕಲ್ಪಿಸುತ್ತಿದ್ದಾರೆಂದೂ ಹೇಳಲಾಗಿದೆ. ಬೆರಾರಿನ ರಾಜಕುಮಾರರ ಹೆಸರಿನಲ್ಲಿ ೬ ಕೋಟಿ ರೂ, ಎರಡನೇ ರಾಜಕುಮಾರ ಮೋಜಂ ಜಾಹಾ ಮತ್ತು ಆತನ ಹೆಂಡತಿಗಾಗಿ ೫ ಕೋಟಿ ರೂ. ಬೆರಾರಿನ ರಾಜಕುಮಾರಿ ಮತ್ತು ಆಕೆಯ ಮಕ್ಕಳಿಗಾಗಿ ೫ ಕೋಟಿ ರೂ, ಆಸಫ್‌ಜಾಹಿ ರಾಜಮನೆತನದವರಿಗಾಗಿ ೯ ಕೋಟಿ ರೂ. ನಿಧಿಗಳನ್ನು ಏರ್ಪಡಿಸಿದ್ದಾರೆ. ತಮ್ಮ ಹೆಂಡತಿ ಮತ್ತು ಹೆಣ್ಣು ಮಕ್ಕಳಿಗಾಗಿ ತಿಂಗಳೊಂದಕ್ಕೆ ೫೦೦೦ರಿಂದ ೫೦೦೦ ರೂ. ಆದಾಯ ಬರುವ ನಿಧಿಯನ್ನು ಕಲ್ಪಿಸಿದ್ದಾರೆ.

ಅನೆಕಲ್ಲು ಅನಾಹುತದಿಂದ ೩೧ ಜನರ ಮರಣ

ಮೆಕ್ಸಿಕೋದಲ್ಲಿರುವ ರಚುಕ ಎಂಬ ಬೆಳ್ಳಿ ಗಣಿ ಪ್ರದೇಶದಲ್ಲಿ ವಿಪರೀತ ಪ್ರವಾಹ ಮತ್ತು ಆನೆ ಕಲ್ಲು ಮಳೆಯಿಂದ ೧೫ ಜನ ಹೆಂಗಸರೂ ಮತ್ತು ೧೬ ಮಂದಿ ಗಂಡಸರೂ ಸತ್ತರೆಂದೂ, ೪೦ ಜನರಿಗೆ ತೀವ್ರ ಗಾಯವಾಯಿತೆಂದೂ, ೪೦೦ ಮಂದಿ ಪತ್ತೆ ಇಲ್ಲವೆಂದೂ ವರದಿಯಾಗಿದೆ

ಚಾಮುಂಡಿ ಬೆಟ್ಟದಲ್ಲಿ ಹುಲಿಯ ಅವಾಂತರ

ಚಾಮುಂಡಿ ಬೆಟ್ಟದಲ್ಲಿ ಕಳೆದ ೧೫ ದಿನಗಳಿಂದಲೂ ಒಂದು ಹುಲಿಯು ಸೇರಿಕೊಂಡು, ದನಕರುಗಳು ಮತ್ತು ಜನರಿಗೆ ತುಂಬಾ ತೊಂದರೆಯನ್ನು ಕೊಡುತ್ತಿದೆ. ಈಗಾಗಲೇ ೩ ದನಗಳನ್ನು ತಿಂದು ಹಾಕಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಅದನ್ನು ಹೊಡೆದು ಹಾಕಲು ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ

ಬ ಅಬ್ದುಲ್ ರಹಿಮಾನರವರು ಕೋತಾ ನಿರ್ಣಯವನ್ನು ತಂದರು. ಈ ಒಗ್ಗೆ ಕೇಂದ್ರ ಸರ್ಕಾರದವರಲ್ಲಿ ಒತ್ತಾಯ ಪಡಿಸಲಾಗುತ್ತಿದೆಯೆಂದೂ, ಅದು ಬೇಗ ಫಲಕಾರಿಯಾಗಬಹುದೆಂದೂ ಶ್ರೀ ಕೆ ಸಿ. ರೆಡ್ಡಿಯವರು ಉತ್ತರ ವಿತ್ತರು ಅದನ್ನು ವಾಪಸು ತೆಗೆದುಕೊಳ್ಳಲಾಯಿತು

ಅಶಕ್ತ ಪೋಷಕ ಸಂಘದ ರಜತ ಮಹೋತ್ಸವ

ಸ್ವಂ. ಸು. ಪೋ॥] ಬೆಂಗಳೂರು ೨೮

ಇಲ್ಲಿನ ಅಶಕ್ತ ಪೋಷಕ ಸಭೆಯ ರಜತ ಮಹೋತ್ಸವದ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರು ಈ ದಿನ ಬೆಳಿಗ್ಗೆ ನೆರವೇರಿಸಿ, ಅದರ ಕೆಲಸ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅನಾಥರ ರಕ್ಷಣೆ ಒಗ್ಗೆ ಜನರೂ ಮತ್ತು ಸರ್ಕಾರದವರೂ ಈಗ ಹೆಚ್ಚು ಆಸಕ್ತಿ ವಹಿಸುತ್ತಿರುವುದು ಸಂತೋಷದ ಸಂಗತಿಯೆಂದೂ, ಸಂಘವು ಇನ್ನೂ ಹೆಚ್ಚಾಗಿ ಸೇವೆ ಸಲ್ಲಿಸಲೆಂದೂ ಪ್ರಾರ್ಥಿಸಿದರು ತಾವು ಅದರ ಪೋಷಕರಾಗಲು ಒಪ್ಪಿರುವುದಾಗಿ ತಿಳಿಸಿದರು ಈ ಸಂಬಂಧದಲ್ಲಿ ಡಾ॥ ಶ್ರೀನಿವಾಸ ಜೋಯಿಸರು ೧೦ ಸಾವಿರ ರೂ. ಮತ್ತು ಶ್ರೀ ಮಿಸ್ರಿಮಲ್ ಪರಾಶ್‌ಮಲ್ ರವರು ೧೦೦೧ ರೂ ಕೊಟ್ಟರು.

ಶಾಸನ ಸಭೆ

ಈ ದಿನ ಶಾಸನ ಸಭೆಯು ಕೋರಂ ಇಲ್ಲದುದರಿಂದ ೧೨-೧೫ಕ್ಕೆ ಪ್ರಾರಂಭವಾಯಿತು. ಸಭೆಯ ನಾಯಕರೂ ಮತ್ತು ಇತರ ಸದಸ್ಯರು ಸರಿಯಾದ ಕಾಲಕ್ಕೆ ಬಾರದಿದ್ದಲ್ಲಿ ಇನ್ನು ಮುಂದೆ ಸಭೆಯನ್ನು ಮಾರನೇ ದಿನಕ್ಕೆ ಮುಂದುವರಿಸಬೇಕಾಗುವುದೆಂದು ಅಧ್ಯಕ್ಷರು ತಿಳಿಸಿದರು

ಸೆಕ್ಯೂರಿಟಿಗಳನ್ನು ಸರ್ಕಾರದವರು ಮಾರಿದ ಬಗ್ಗೆ ಶ್ರೀ ಟಿ ಎಸ್. ಮಲ್ಲಪ್ಪನವರು ಕೇಳಿದ ಪ್ರಶ್ನೆಗೆ ಸಚಿವ ಶ್ರೀ ವಾಸಪ್ಪನವರು ಉತ್ತರವಿತ್ತು, ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯು ಭದ್ರವಾಗಿದೆಯೆಂದೂ, ಮುಂದಿನ ವರ್ಷ ಸಾಲ ತೆಗೆದುಕೊಳ್ಳುವ ಸಂಭವವಿಲ್ಲವೆಂದೂ ಹೇಳಿದರು.

ಮತ್ತೊಂದು ಪ್ರವೇಶ ಪತ್ರಕ್ಕೆ ಪ್ರಭುಗಳ ರುಜು

ಸಂಸ್ಥಾನದ ಕೈಗಾರಿಕಾ ಪ್ರಗತಿ, ಟ್ರೇಡ್ ಯೂನಿಯನ್, ಕಾರ್ಮಿಕ ವಿಮೆ, ವಿಮಾ, ಬ್ಯಾಂಕಿಂಗ್, ಕ್ರಿಮಿನಲ್ ಲಾ, ಸಿವಿಲ್ ಪ್ರೊಸೀಜರ್ ಕೋಡ್, ವಿದ್ಯುಚ್ಛಕ್ತಿ ಈ ಬಾಬುಗಳನ್ನು ಕೇಂದ್ರ ಸರ್ಕಾರದ ಅಧಿಕಾರಕ್ಕೆ ಒಳಪಡಿಸುವ ಒಗ್ಗೆ ಶ್ರೀಮನ್ಮಹಾರಾಜರವರು ಪುನರ್ವಿಮರ್ಶಿತ ಪ್ರವೇಶ ಪತ್ರಕ್ಕೆ ರುಜು ಹಾಕಿರುತ್ತಾರೆ ಎಲ್ಲಾ ಸಂಸ್ಥಾನಗಳ ರಾಜರುಗಳು ಇಂತಹ ಪತ್ರಕ್ಕೆ ರುಜು ಹಾಕಿದ್ದಾರೆ ಹೀಗೆ ರುಜು

ಸಿನಿಮಾ ಮಂದಿರಗಳ ಮುಷ್ಕರ

ಸಿನಿಮಾ ಮಂದಿರಗಳ ಮೇಲೆ ಸರ್ಕಾರದವರು ಮನರಂಜನೆ ತೆರಿಗೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಮೈಸೂರು ಸಂಸ್ಥಾನಾದ್ಯಂತ ಸಿನಿಮಾ ಮಂದಿರಗಳು ಇದೇ ೩೦ನೇ ತಾ॥ ಮುಚ್ಚಬೇಕೆಂದು ಸಂಸ್ಥಾನದ ಫಿಲಂ ಸಂಸ್ಥೆಯವರು ನಿರ್ಧರಿಸಿದ್ದಾರೆ.

ರಾಜರುಗಳ ಆಸ್ತಿ ಪಾಸ್ತಿಗಳ ನಿರ್ಧಾರ

ಭಾರತದಲ್ಲಿರುವ ೩ ಅಥವ ೪ ಸಂಸ್ಥಾನಗಳನ್ನು ಬಿಟ್ಟು ಮಿಕ್ಕ ರಾಜರುಗಳ ಖಾಸಗೀ ಆಸ್ತಿಪಾಸ್ತಿಗಳ ಪಟ್ಟಿಯನ್ನು ಕೇಂದ್ರ ಸರ್ಕಾರದವರು ತಯಾರಿಸಿದ್ದಾರೆಂದೂ ಒಟ್ಟು ೧೦೦ ಕೋಟಿ ರೂ. ಆಗಬಹುದೆಂದೂ ಹೇಳಲಾಗಿದೆ ಅವರುಗಳ ರಾಜಧನವನ್ನೂ ನಿಗದಿ ಮಾಡಲಾಗಿದೆ. ಈ ಹಣದ ಹೊರತು ಬೇರಾವ ವಿಧದಲ್ಲೂ ಅವರಿಗೆ ವರಮಾನ ಇರಕೂಡದೆಂದೂ, ವಂಶ ಪಾರಂಪರ್ಯವಾಗಿ ಬಂದ ಭೂಮಿ ಮಾತ್ರ ಅವರಿಗೆ ಸೇರಿರುವುದೆಂದೂ, ಅದಕ್ಕೂ ಅವರು ಕಂದಾಯ ಕೊಡಬೇಕೆಂದೂ ನಿರ್ಧರಿಸಲಾಗಿದೆ. ಅರಸರು ವಾಸ ಮಾಡುವ ಅರಮನೆ ಮತ್ತು ಇನ್ನೊಂದು ಸಮುದ್ರ ತೀರದ ಅರಮನೆಗಳೆರಡೂ ಮಾತ್ರ ಅವರಿಗೆ ಸೇರುತ್ತವೆ ಅವರಿಗೆ ಸೇರಿದ ಮೋಟಾರು ಕಾರುಗಳಲ್ಲಿ ಅರ್ಧ ಭಾಗವನ್ನು ಸರ್ಕಾರಕ್ಕೆ ಒಪ್ಪಿಸಬೇಕು. ಕೆಲವು ಸಂದರ್ಭದಲ್ಲಿ ಮಾತ್ರ ರಾಜರ ಸಂಬಂಧಿಗಳಿಗೆ ಮಾಸಾಶನ ಕೊಡುವ ವ್ಯವಸ್ಥೆ ಮಾಡಲಾಗಿದೆ.

ಮುಸುಕಿನ ಜೋಳದ ಬದಲು ರಾಗಿ

ರಾಜಧಾನಿಯ ಎ. ತರಗತಿಯ ರೇಷನ್ ಕಾರ್ಡು ಹೋಲ್ಡರುಗಳಿಗೆ ಗೋಧಿ ಮತ್ತು ಮುಸುಕಿನ ಜೋಳ ಸಿಗದಿದ್ದಲ್ಲಿ ಸಣ್ಣ ಕೆಂಪು ಜೋಳ ಅಥವ ರಾಗಿಯನ್ನು ಕೊಡಲು ಏರ್ಪಾಡಾಗಿರುತ್ತದೆ ರಾಗಿ ಅಥವ ಜೋಳವನ್ನು ತೆಗೆದುಕೊಳ್ಳುವುದರ ಮೂಲಕ ಪೂರ್ತಾ ಪಡಿತರವನ್ನು ಹೊಂದಬಹುದು.

ಪೃಥ್ವೀರಾಜ್‌ರವರಿಗೆ ನಟರಾಜನ ವಿಗ್ರಹದ ಅರ್ಪಣೆ

ಮೊನ್ನೆ ದಿನ ಟೌನ್‌ಹಾಲಿನಲ್ಲಿ ನಡೆದ ದಿವಾರ್ ನಾಟಕದಲ್ಲಿ ಶ್ರೀ ಪೃಥ್ವಿರಾಜರವರಿಗೆ ಶ್ರೀ ಎಸ್. ಆರ್. ಶ್ರೀಕಂಠಾಚಾರ್ ಸಹೋದರರು ತಾವು ತಯಾರಿಸಿದ್ದ ನಟರಾಜನ ವಿಗ್ರಹವನ್ನು ಅರ್ಪಿಸಿದರು.

ಕಡಿಮೆ ಅಳತೆಗಾಗಿ ಜುಲ್ಮಾನೆ

ಬಿಂಟಿಕೊಪ್ಪಲಿನ ರಾಮಕೃಷ್ಣ ಸ್ಟೋರಿನ ಸುಂದರನಾರಾಯಣ ಶೆಟ್ಟರು ಕಮ್ಮಿ ತೂಕವನ್ನು ಉಪಯೋಗಿಸಿ ಬೆಲ್ಲ ಮಾರಿದರೆಂದು ಅವರಿಗೆ ೨೫ ರೂ ದಂಡವನ್ನೂ, ಮತ್ತೊಬ್ಬ ವರ್ತಕರಾದ ಶ್ರೀ ಹೆಚ್. ಎಲ್ ಶ್ರೀನಿವಾಸಯ್ಯನವರು ಕಮ್ಮಿ ತೂಕ ಮತ್ತು ಅಳತೆಗಳನ್ನಿಟ್ಟುಕೊಂಡಿದ್ದರೆಂದು ೩೦ ರೂ ಜುಲ್ಮಾನೆಯನ್ನೂ ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ

ಹಾಕಿದ ಮೊತ್ತ ಸಂಸ್ಥಾನಗಳಲ್ಲಿ ಮೈಸೂರೇ ಕೊನೆಯದು. ಸಂಸ್ಥಾನಗಳ ಆರ್ಥಿಕ ಏಲೀನೀಕರಣ ಸಮಿತಿಯ ವರದಿಯನ್ನು ಪರಿಶೀಲಿಸಿದನಂತರ, ತೆರಿಗೆ ವಿಚಾರವನ್ನು ಇತ್ಯರ್ಥಪಡಿಸಲಾಗುವುದು

೨೫ ಸಾವಿರದಷ್ಟು ಹುಳು ತಿಂದ ನೋಟುಗಳು

ಬಹುಕಾಲ ಬಚ್ಚಿಟ್ಟಿದ್ದು ಹುಳ ಹಿಡಿದು ಅನುಪಯುಕ್ತವಾದ ಸುಮಾರು ೨೫ ಸಾವಿರ ರೂ ಗಳ ಐದು ರೂಪಾಯಿ ನೋಟುಗಳು ಕ್ಯಾಂಟಿಯ ರೈಲ್ವೆ ಸ್ಟೇಷನ್ ಬಳಿ ಸಿಕ್ಕಿದವೆಂದು ವರದಿಯಾಗಿದೆ.

ಖಾಸಿಂ ರಜ್ವಿಯವರೇ ಸ್ವತಃ ವಾದಿಸುವರು

ಖಾಸಿಂ ರಜ್ವಿಯ ವಿಚಾರಣೆಯು ಬರುವ ತಿಂಗಳು ೧೫ನೇ ತಾ॥ ಹೈದರಾಬಾದಿನಲ್ಲೋ ಸಿಕಂದರಾಬಾದಿನಲ್ಲೋ ಆರಂಭವಾಗಬಹುದೆಂದು ಹೇಳಲಾಗಿದೆ ಈ ಮೊಕದ್ದಮೆಯಲ್ಲಿ ರಜ್ವಿಯು ತನ್ನ ಪರ ತಾನೇ ವಕಾಲತ್ತು ವಹಿಸಿ ವಾದಿಸಲಿರುವನೆಂದೂ ತನಗೆ ಬೇರೆ ವಕೀಲರು ಬೇಕಿಲ್ಲವೆಂದು ನಿರಾಕರಿಸಿರುವನೆಂದೂ ವರದಿಯಾಗಿದೆ ವಿಚಾರಣೆ ಕಾಲದಲ್ಲಿ ತನ್ನ ಪತಿಗೆ ಸಹಾಯ ಮಾಡಲು ಖಾಸಿಂರಜ್ವಿಯ ಪತ್ನಿಯು ಕರಾಚಿಯಿಂದ ಹೈದರಾಬಾದಿಗೆ ಬರಬಹುದೆಂದೂ, ಆಕೆಯೊಡನೆ ಕರಾಚಿಯ ಪ್ರಸಿದ್ಧ ವಕೀಲರೊಬ್ಬರೂ ಬರಬಹುದೆಂದೂ ಹೇಳಲಾಗಿದೆ

ಪ॥ ಬಂಗಾಳದಲ್ಲಿ ಜಾಹಿರಾತಿನ ತೆರಿಗೆಯಿಲ್ಲ

ಪಶ್ಚಿಮ ಬಂಗಾಳದಲ್ಲಿ ಪತ್ರಿಕೆಗಳ ಜಾಹೀರಾತುಗಳ ಮೇಲೆ ತೆರಿಗೆಯನ್ನು ವಿಧಿಸಲಾಗುವುದಿಲ್ಲವೆಂದು ಅಲ್ಲಿನ ಸಚಿವರೊಬ್ಬರು ತಿಳಿಸಿರುತ್ತಾರೆ ಜಾಹೀರಾತು ತೆರಿಗೆಯನ್ನು ವಿಧಿಸುವುದರಿಂದ ಮದರಾಸ್, ಬೊಂಬಾಯಿಗಳಿಗಿಂತಲೂ ಕಲ್ಕತ್ತಾದಲ್ಲಿ ಹೆಚ್ಚಿನ ವರಮಾನ ಬರುವುದಾದರೂ, ಪತ್ರಿಕೆಗಳು ಜ್ಞಾನ ಪ್ರಸಾರಣೆಯ ಮುಖ್ಯ ಸಾಧನಗಳಾದುದರಿಂದ, ಅವುಗಳ ಮೇಲೆ ಸುಂಕ ವಿಧಿಸುವುದು ಯುಕ್ತವಲ್ಲವೆಂದೂ, ಹೇಳಿ ಮದರಾಸ್ ಮತ್ತು ಬೊಂಬಾಯಿ ಸರ್ಕಾರಗಳೂ ಈ ಅಂಶವನ್ನು ಪುನಃ ಪರಿಶೀಲಿಸ ಬೇಕೆಂದೂ ಅವರು ಆಶಿಸಿದ್ದಾರೆ

ಆಂಧ್ರ ಮತ್ತು ಒರಿಯಾ ದವರಿಗೆ ಹೊಡೆದಾಟ

ಒರಿಸ್ಸಾ ಭಾಷೆಯ ಪ್ರಾಧಾನ್ಯತೆ ಬಗ್ಗೆ ಪ್ರತಿಭಟನೆಯನ್ನು ಸೂಚಿಸುವುದಕ್ಕಾಗಿ ಬರ್ಹಾಂಪುರದಲ್ಲಿ ಆಂಧ್ರರು ಮೆರವಣಿಗೆ ಹೊರಟಾಗ ಅವರನ್ನು ವಿರೋಧ ಮಾಡಲು ಒರಿಯಾದವರು ಎದುರಿಗೆ ಬಂದಾಗ್ಯೆ ಇಬ್ಬರಿಗೂ ತಿಕ್ಕಾಟವಾಗಿ ಕೈ ಬಾಂಬುಗಳನ್ನು ಹಾಕಲಾಯಿತು ಒಬ್ಬ ವಕೀಲರೂ ಸೇರಿ ಮೂರು ಜನರಿಗೆ ಗಾಯವಾಯಿತು ಪೋಲೀಸರು ಲಾಟಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದರು ಪ್ರಾಣಾಪಾಯಕರವಾದ ಗಾಯಗಳೂ ಹಲವರಿಗೆ ಆಗಿವೆಯೆಂದು ತಿಳಿದುಬಂದಿದೆ

ಕಲಾ ಪ್ರದರ್ಶನ

ಕುದಿಗಾದಲ್ಲಿರುವ ಶ್ರೀ ಗಂಗಾ ಪರಮೇಶ್ವರ ಯುವಕ ಸಂಘದ ಆಶ್ರಯದಲ್ಲಿ ನಗರ ವಯಸ್ಕರ ಶಿಕ್ಷಣ ಸಮಿತಿಯವರು ಜನಪದ ಕಲಾ ಪ್ರದರ್ಶನವನ್ನು ನಿನ್ನೆ ಸಂಜೆ ಏರ್ಪಡಿಸಿದ್ದರು. ಪೌರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ, ಸ್ವಾಗತ ಭಾಷಣ, ವಿವಿಧ ವಿನೋದಾವಳಿ, ನೃತ್ಯ ಮತ್ತು ಬಯಲು ನಾಟಕ ಪಟ್ಟಾವರಸೆ ಕುಸ್ತಿಗಳಾದನಂತರ, ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು.

ಛತ್ರದ ಶಂಕುಸ್ಥಾಪನೆ

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ವಿಠ್ಠಲಸ್ವಾಮಿ ದೇವಸ್ಥಾನದ ಎದುರಿಗೆ ಮೈಸೂರು ಹಾಲಿನ ಮಾಲೀಕರಾದ ಶ್ರೀ ಎಸ್ ಪಟ್ಟಾಜಿರಾವ್ ಮತ್ತು ಅವರ ಮಕ್ಕಳವರು ಕಟ್ಟುವ ಧರ್ಮ ಛತ್ರದ ಶಂಕುಸ್ಥಾಪನೆ ಮಹೋತ್ಸವವನ್ನು ಶ್ರೀ ಆರ್ ರಾಮಚಂದ್ರ ಬಾಂಭೋರೆಯವರು ಕಳೆದ ೨೩ನೇ ತಾ॥ ನೆರವೇರಿಸಿದರು. ಶ್ರೀ ಯು ಎಸ್ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು

ಸ್ತ್ರೀ ಪೋಲೀಸರು ಅಲಂಕಾರಕ್ಕೆ ಮಾತ್ರ ?

ಹಲವಾರು ಪ್ರಾಂತಗಳಲ್ಲಿ ಮಹಿಳಾ ಪೋಲೀಸು ಪಡೆಗಳನ್ನು ಏರ್ಪಡಿಸುವುದರ ಬಗ್ಗೆ ಮದ್ರಾಸಿನ ಶಾಸನ ಸಭೆಯಲ್ಲಿ ಮಂತ್ರಿ ಗೋಪಾಲರೆಡ್ಡಿಯವರು ಹೇಳಿಕೆಯಿತ್ತು, ಸ್ತ್ರೀ ಪೋಲೀಸರಿಂದ ಕೆಲಸವೇನೂ ಆಗುವುದಿಲ್ಲವೆಂದೂ, ಅವರು ಕೇವಲ ಭೂಷಣ ಪ್ರಾಯರೆಂದೂ ತಿಳಿಸಿರುವರು.

ವರಲಕ್ಷ್ಮೀ ಸಂಗೀತ ಮಂದಿರ

ರಾಜಧಾನಿಯ ಕಾಶೀಪತಿ ಅಗ್ರಹಾರದಲ್ಲಿರುವ ಮೈಸೂರು ಸಹೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ಯಾವ ಕೋಮುವಾರು ಮತ್ತು ಇತರ ಭೇದ ಭಾವನೆಗಳಿಲ್ಲದೆ ಎಲ್ಲರಿಗೂ ಸುಲಭ ಖರ್ಚಿನಲ್ಲಿ ಕರ್ನಾಟಕ ಸಂಗೀತ ಶಿಕ್ಷಣವನ್ನು ಕಳೆದ ೫ ವರ್ಷಗಳಿಂದಲೂ ಏರ್ಪಡಿಸಲಾಗಿದೆ ಈ ಸಂಗೀತ ಮಂದಿರವು ಇನ್ನೂ ಹೆಚ್ಚು ಸೇವೆ ಸಲ್ಲಿಸಲು ಮಹಾಜನರು ಪ್ರೋತ್ಸಾಹ ನೀಡಬೇಕೆಂದು, ಅದರ ವ್ಯವಸ್ಥಾಪಕರು ಕೋರುತ್ತಾರೆ

ಆದಿ ಜಾಂಬವರ ಸಂಘದ ಪ್ರಾರಂಭೋತ್ಸವ

ಮಂಡಿ ಮೊಹಲ್ಲಾದಲ್ಲಿರುವ ಆದಿ ಜಾಂಬವರ ಸಂಘದ ಪ್ರಾರಂಭೋತ್ಸವವನ್ನು ಬೆಂಗಳೂರಿನ ಕಾರ್ಮಿಕ ನಾಯಕರಾದ ಶ್ರೀ ಟಿ.ಪಿ ರಾಮರಾವರು ಮೊನ್ನೆ ದಿನ ನೆರವೇರಿಸಿದರು. ಅದರ ವಾರ್ಷಿಕ ಸಭೆಯು ನಿನ್ನೆ ಬೆಳಗ್ಗೆ ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಸಂಯುಕ್ತ ಪ್ರಾಂತ್ಯದಲ್ಲಿ ಶಖೆಯಿಂದ ಮರಣಗಳು

ಸಂಯುಕ್ತ ಪ್ರಾಂತ್ಯದ ಲಕ್ನೋ ಮತ್ತು ಅಲಹಾಬಾದುಗಳಲ್ಲಿ ಕಳೆದವಾರ ವಿಪರೀತ ಶಖೆಯ ದೆಸೆಯಿಂದ ೧೧ ಮಂದಿ ಮೃತಪಟ್ಟು ೩೦ ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದು ಗೊತ್ತಾಗಿದೆ ಪ್ರಾಂತ್ಯದ ಸಂಚಾರ ಮಾರ್ಗಗಳಲ್ಲೆಲ್ಲಾ ಅಸಂಖ್ಯಾತವಾಗಿ ಪಕ್ಷಿಗಳು ಸತ್ತು ಬಿದ್ದಿದ್ದು ವರದಿಯಾಗಿದೆ

ನಾಗರಿಕರಿಗೆ ಮಿಲಿಟರಿ ಶಿಕ್ಷಣ

ಇದೇ ೨೦ನೇ ತಾ॥ ನಿಂದ ಬೆಂಗಳೂರಿನಲ್ಲಿ ನಾಗರಿಕರಿಗೆ ಸೈನ್ಯ ಶಿಕ್ಷಣವನ್ನು ಕೊಡಲು ಸರ್ಕಾರದವರು ವ್ಯವಸ್ಥೆ ಮಾಡಿದ್ದಾರೆ ವಾರದಲ್ಲಿ ಆರು ದಿನಗಳು ಪ್ರತಿ ದಿನ ಬೆಳಗ್ಗೆ ೬-೩೦ರಿಂದ ೧ ಗಂಟೆ ಕಾಲ ಸಂಪಂಗಿ ಕೆರೆಯ ಮೈದಾನದಲ್ಲಿ ಶಿಕ್ಷಣ ಕೊಡಲಾಗುವುದು

ದನಗಳ ಪ್ರದರ್ಶನ

ಮೈಸೂರು ತಾಲ್ಲೂಕು ವರುಣದ ಹೋಬಳಿ ಜೋಡಿ ಹೊಸ ಹಳ್ಳಿಯಲ್ಲಿ ಮೊನ್ನೆ ದಿನ ದನಗಳ ಪ್ರದರ್ಶನವು ನಡೆಯಿತು. ಶ್ರೀ ಎಸ್. ರಂಗರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಅಮಲ್ದಾರ್ ಶ್ರೀ ಎಂ. ಆರ್ ನರಸಿಂಗರಾಯರು ಸ್ವಾಗತ ಭಾಷಣ ಮಾಡಿದರು ಶ್ರೀಗಳಾದ ಹೆಚ್ ಕೆ ಕುಮಾರಸ್ವಾಮಿ ಮತ್ತು ಸಿ ನಂಜುಂಡಯ್ಯನವರು ಜಾನುವಾರುಗಳ ಅಭಿವೃದ್ಧಿ ವಿಚಾರವಾಗಿ ಭಾಷಣ ಮಾಡಿದರು ಉತ್ತಮ ರಾಸುಗಳಿಗೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು

ಕಟ್ಟಡ ಕೆಲಸಗಾರರ ಸಹಕಾರ ಸಂಘ

ರಾಜಧಾನಿಯ ಕಟ್ಟಡ ಕೆಲಸಗಾರರ ಸಹಕಾರ ಸಂಘದ ಕಾರ್ಯಾಲಯವನ್ನು ಇರ್ವಿನ್ ರಸ್ತೆಯಲ್ಲಿರುವ ಬಾಲಕ್ಯಾಚಾರ್ಯರ ಛತ್ರದ ಪಕ್ಕದ ಭವನಕ್ಕೆ ವರ್ಗಾಯಿಸಲಾಗಿದೆ

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವು ಬೇಸಿಗೆ ರಜದ ನಂತರ ಪುನಃ ಆರಂಭವಾಗಿ ಕೆಲಸ ಕಾರ್ಯಗಳು ಚುರುಕಿನಿಂದ ನಡೆಯುತ್ತಿವೆ ಆಧುನಿಕ ರೀತಿಯ ಕಿಂಡರ್ ಗಾರ್ಟನ್ ಸಲಕರಣೆಗಳಿಂದ ಉತ್ತಮ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು. ಇನ್ನು ಕೆಲವೇ ಹುಡುಗರನ್ನು ಸೇರಿಸಿಕೊಳ್ಳಲು ಅವಕಾಶ ಇರುವುದರಿಂದ, ಬಾಲಕರ ಮಾತಾಪಿತೃಗಳು ತ್ವರೆ ಮಾಡಿ ಶಿಶುವಿಹಾರದ ಪ್ರಯೋಜನವನ್ನು ಪಡೆದು ತಮ್ಮ ಪ್ರೋತ್ಸಾಹ ನೀಡಬೇಕೆಂದು ಆಶಿಸಲಾಗಿದೆ

ಬಿ. ಕೃಷ್ಣಮೂರ್ತಿ
ವ್ಯವಸ್ಥಾಪಕ

Edited, printed and published by A R Nagarajan at the Sadhvi Press, D Subbiah Road, Mysore

ಬಿಕರಿಗೆ ಸಿದ್ಧವಾಗಿದೆ

ಪಂಚರಾತ್ರ

[By Dr N S Narayan Sastry]
Inter Arts & Inter Science
Text Book for 1949-50
ಬೆಲೆ 1-6-0

ಮಿತ್ರ ಮತ್ತು ಕಂಪೆನಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಮನೆ ಬಾಡಿಗೆಗೆ ಇದೆ

ರಾಮಾನುಜಾ ರಸ್ತೆಯಲ್ಲಿರುವ ಮುನಿಸಿಪಲ್ ನಾಲ್ಕು ಮನೆ ನಂಬರ್ ೬೫ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ

ಸಾಧ್ವಿ ಆಫೀಸ್,
ಮೈಸೂರು

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ · ಮೈಸೂರು

ಕಸಿ ಮಾವು

ಮತ್ತು ಇತರ ಜಾತಿಯ ಹಣ್ಣಿನ ಗಿಡಗಳು ದೊರೆಯುತ್ತವೆ.

ಭೂದೇವಿ ಫಾರಂ

ರೈಲ್ವೆ ಸ್ಟೇಷನ್ ಸರ್ಕಲ್, ಮೈಸೂರು

॥ ಶ್ರೀ ಲಕ್ಷ್ಮೀನಾರಾಯಣಸಹಾಯ ॥

ಭಿಷಗ್ರತ್ನ ಶಾಸ್ತ್ರದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೂತಿಕಾವಾತಕ್ಕೆ (ಬಾಣಂತಿ ನಂಜಿಗೆ) ಉತ್ತಮ ಗುಣಕಾರಿ

ಕಣ್ಣು ಕೈ ಕಾಲುರಿ, ಮೈ ಬೆಚ್ಚಗೆ ತಣ್ಣಗೆ ಆದಂತೆ ತೋರುವುದು, ನಿದ್ರೆ ಬಾರದಿರುವಿಕೆ ಮನಸ್ಸಿಗೆ ಕಳವಳ, ಜೀರ್ಣಶಕ್ತಿ ಸರಿಯಾಗಿಲ್ಲದಿರುವುದು ಸಹ ಪರಿಹಾರ

ಬೆಲೆ ಶೀಸೆ 1ಕ್ಕೆ 2-0-0

ವಿಳಾಸ — ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸಿಟಿ ರೇಷನಿಂಗ್

ನಂ M 96/48-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊಹಲ್ಲಾ ಸಬ್ ಗೋಡೌನ್ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳು ಮುಚ್ಚಲ್ಪಡುತ್ತವೆ 30-6-49 ಗುರುವಾರ—ದಾಸ್ತಾನು ಎಣಿಕೆ ಬಗ್ಗೆ ಸರ್ಕಾರಿ ಡಿಪೋ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಿಗೆ ಪೂರ್ತಿ ರಜ

1-7-49 ಶುಕ್ರವಾರ—ದಾಸ್ತಾನು ಎಣಿಕೆ ಬಗ್ಗೆ ಸಬ್ ಗೋಡೌನ್‌ಗಳಿಗೆ ಮಾತ್ರ ಪೂರ್ತಿ ರಜ

[ಸಹಿ] ಬಿ. ಜಿ ಬಾಲರಾಜ್
ರೇಷನಿಂಗ್ ಆಫೀಸರ್, ಮೈಸೂರು ಸಿಟಿ

❊ ಬೆಂಗಾಲ್, ಬೆನಾರಿಸ್, ಮೈಸೂರು ಸಿಲ್ಕ್ ಸೀರೆಗಳು ❊

ಮಂಗಳಕರವಾದ ಮದುವೆ ಜವಳಿಗಳು ಅನೇಕವಾಗಿ ಬಂದಿವೆ. ನ್ಯಾಯವಾದ ಬೆಲೆ. ನಾಣ್ಯವಾದ ಮಾಲು. ಬಾಬುಸಾಬ್ ಕಂಪೆನಿ, ಮೈಸೂರು

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೭] ಮಂಗಳವಾರ ೨೮-೬-೪೯ [ಸಂಚಿಕೆ ೨೭೦

ನಾಳಿದ್ದು ಸಂಸ್ಥಾನದಲ್ಲಿ ಸಿನಿಮಾಗಳ ಮುಷ್ಕರ

ಆಡಳಿತ ವೆಚ್ಚಕ್ಕೆ ಬೇಡಿಕೆಗಳ ಮಂಜೂರಾತಿ

ಶಾಸನ ಸಭೆಯಲ್ಲಿ ಕತ್ತರಿ ನಿರ್ಣಯಗಳ ವಾಪಸು

ಸ್ವಂ ಸು ವರದಿ] ಬೆಂಗಳೂರು ೨೭

ನಿನ್ನೆ ಶಾಸನ ಸಭೆಯಲ್ಲಿ ವಿವಿಧ ಇಲಾಖೆಗಳ ಆಡಳಿತ ವೆಚ್ಚಕ್ಕಾಗಿ ಕೆಳಗೆ ಕಂಡಂತೆ ಮೊಬಲಗುಗಳು ಮಂಜೂರಾದುವು ಖೋತಾ ನಿರ್ಣಯಗಳೆಲ್ಲವೂ ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟವು –

ಸಾಮಾನ್ಯ ಆಡಳಿತ ರೂ ೩೫,೪೪,೮೦೦, ಮುಜರಾಯಿ ರೂ ೬,೭೬,೩೦೦, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನೆ ರೂ ೨೮೧,೦೦೦, ಸ್ಟೇಷನರಿ ಮತ್ತು ಪ್ರಿಂಟಿಂಗ್ ರೂ ೧೫,೮೧೦೦೦ ಮಿಸಲೇನಿಯಸ್ ರೂ ೨,೯೬,೦೦೦, ಕೋರ್ಟುಗಳು ರೂ ೨೦,೫೬,೨೦೦,

ಸಾಮಾನ್ಯ ಆಡಳಿತದ ಮೇಲೆ ಶ್ರೀ ಓ ವೀರಬಸಪ್ಪನವರು ಒಂದು ಕತ್ತರಿ ಪ್ರಯೋಗವನ್ನು ತಂದು ಪ್ರಜಾಪ್ರಭುತ್ವ ಪದ್ಧತಿಯನ್ನು ಸರ್ಕಾರವು ಜಾರಿಗೆ ತರುವ ವಿಷಯದಲ್ಲಿ ಸಮರ್ಪಕವಾಗಿ ಮುಂದುವರಿದಿಲ್ಲವೆಂಬ ಅಂಶವನ್ನು ಚರ್ಚಿಸಲು ತೊಡಗಿದರು. ರಾಜ್ಯಾಂಗಕ್ಕೆ ಸಂಬಂಧಪಟ್ಟ ಅಂಶಗಳನ್ನು ಶಾಸನ ಸಭೆಯು ಚರ್ಚಿಸಲು ಅವಕಾಶವಿಲ್ಲವೆಂದು ಶ್ರೀ ಕೆ ಸಿ ರೆಡ್ಡಿಯವರು ಕ್ರಿಯಾಲೋಪವನ್ನೆತ್ತಿದರು ರಾಜ್ಯಾಂಗದ ಲೋಪದೋಷಗಳನ್ನು ಚರ್ಚಿಸದೆ ಆಡಳಿತದಲ್ಲಿ ಎಷ್ಟು ಮಟ್ಟಿನ ಸುಧಾರಣೆ ನಡೆದಿದೆಯೆಂಬುದನ್ನು ಪರಿಶೀಲಿಸಲು ಅಡ್ಡಿ ಇಲ್ಲವೆಂದು ಅಧ್ಯಕ್ಷರು ಹೇಳಿದ ಮೇಲೆ ಚರ್ಚೆ ಮುಂದುವರಿಯಿತು. ಹಿಂದೆ ಇದೇ ವಿಷಯಗಳು ಸಭೆಯಲ್ಲಿ ಬಂದಿದ್ದಾಗ ಅವುಗಳ ಚರ್ಚೆಗೆ ಅವಕಾಶವನ್ನು ನಿರಾಕರಿಸಲಾಗಿದೆಯೆಂದು ಶ್ರೀ ಡಿ ಹೆಚ್ ಚಂದ್ರಶೇಖರಯ್ಯನವರು ಮತ್ತೊಂದು ಕ್ರಿಯಾಲೋಪವನ್ನು ತಂದರು ಈ ವಿಷಯದಲ್ಲಿ ಮೊದಲೇ ರೂಲಿಂಗ್ ಕೊಟ್ಟಿರುವುದರಿಂದ ಅವರ ಕ್ರಿಯಾಲೋಪವನ್ನು ಅಧ್ಯಕ್ಷರು ತಳ್ಳಿಹಾಕಿದರು

ಶ್ರೀ ಓ ವೀರಬಸಪ್ಪನವರು ತಮ್ಮ ವಾದವನ್ನು ಮುಂದುವರಿಸಿ ಪ್ರಜಾಪ್ರಭುತ್ವ ಮಾರ್ಗದಲ್ಲಿ ಸಾಕಾದಷ್ಟು ಪ್ರಗತಿ ಆಗಿಲ್ಲವೆಂದು ಹೇಳಿದರು ಶಾಸನ ಸಭೆಯ ಹಕ್ಕು ಬಾಧ್ಯತೆಗಳನ್ನು ವಿಸ್ತರಿಸಿಲ್ಲವೆಂದೂ, ದಿವಾನರ ಅಧಿಕಾರವು ಸಭೆಯ ಮೇಲೆ ಇದ್ದೇ ಇದೆಯೆಂದೂ ಹೇಳಿದರು

ಶ್ರೀ ಕೆ ಸಿ ರೆಡ್ಡಿಯವರು ಉತ್ತರವಿತ್ತು ಈ ಭಾರಿ ಬದಲಾವಣೆಗಳನ್ನು ಮಾಡಲು ಸಾಧ್ಯವಿಲ್ಲವಾದರೂ ಕೆಲವು ಸುಧಾರಣೆಗಳನ್ನು ಮಾಡಲಾಗಿದೆ ರಾಜ್ಯಾಂಗ ರಚನಾ ಕಾರ್ಯವು ಬೇಗ ಮುಗಿಯಬೇಕೆಂದು ಶ್ರೀಮನ್ಮಹಾರಾಜರವರೂ ಸಹ ಕುತೂಹಲರಾಗಿರುತ್ತಾರೆ ದಿವಾನರ ಹುದ್ದೆಯೇ ರದ್ದಾಗಲಿರುವುದರಿಂದ ಅವರ ಅಧಿಕಾರದ ವಿಷಯವನ್ನು ಅಷ್ಟಾಗಿ ಗಮನಿಸಬೇಕಿಲ್ಲ- ಎಂದು ಅವರು ಹೇಳಿದರು ಖೋತಾ ನಿರ್ಣಯವು ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿತು

ನಿನ್ನೆ ಸಂಜೆ ಯ ಕಛೇರಿಯಲ್ಲಿ ಮತ್ತು ಅಲ್ಲಿಗೆ ಹೋಗುವ ಭಾರತ ನಿಯೋಗದ ಮೈಸೂರಿನ ಅಧಿಕಾರಿಗಳನ್ನೂ ಮತ್ತು ಖಾಸಗಿ ಮಹನೀಯರನ್ನೂ ನೇಮಿಸಿಕೊಳ್ಳಬೇಕೆಂದು ಭಾರತ ಸರ್ಕಾರದವರ ಒತ್ತಾಯ ನಡೆಸುವ ಬಗ್ಗೆ ಜನ

ನೈಜಾಮರ ಕುಟುಂಬದವರಿಗಾಗಿ ನಿಧಿ

ಹೈದರಾಬಾದಿನ ನೈಜಾಮರ ಒಟ್ಟು ಆಸ್ತಿಯು ಸುಮಾರು ೩೦೦ ಕೋಟಿ ರೂ ಯೆಂದೂ, ಅವರು ತಮ್ಮ ಪತ್ನಿ ರವ ೬೦ ಥು ವರ್ಗದವರ ಜೀವನಕ್ಕಾಗಿ ನಿಧಿಗಳನ್ನು ಕಲ್ಪಿಸುತ್ತಿದ್ದಾರೆಂದೂ ಹೇಳಲಾಗಿದೆ, ಬಿರಾರಿನ ರಾಜಕುಮಾರರ ಹೆಸರಿನಲ್ಲಿ ೬ ಕೋಟಿ ರೂ, ಎರಡನೇ ರಾಜಕುಮಾರ ಮೋಜಂ ಜಾಹಾ ಮತ್ತು ಆತನ ಹೆಂಡತಿಗಾಗಿ ೪ ಕೋಟಿ ರೂ ಬಿರಾರಿನ ರಾಜಕುಮಾರಿ ಮತ್ತು ಆಕೆಯ ಮಕ್ಕಳಿಗಾಗಿ ೨ ಕೋಟಿ ರೂ, ಅಸಫ್‌ಜಾಹಿ ರಾಜಮನೆತನದವರಿಗಾಗಿ ೯ ಕೋಟಿ ರೂ ನಿಧಿಗಳನ್ನು ಏರ್ಪಡಿಸಿದ್ದಾರೆ ತಮ್ಮ ಹೆಂಡತಿ ಮತ್ತು ಹೆಣ್ಣು ಮಕ್ಕಳಿಗಾಗಿ ತಿಂಗಳೊಂದಕ್ಕೆ ೫೦೦೦ದಿಂದ ೫೦೦೦ ರೂ ಆದಾಯ ಬರುವ ನಿಧಿಯನ್ನು ಕಲ್ಪಿಸಿದ್ದಾರೆ

ಅನೆಕಲ್ಲು ಅನಾಹುತದಿಂದ ೩೧ ಜನರ ಮರಣ

ಮೆಕ್ಸಿಕೋದಲ್ಲಿರುವ ರಚಾಕ ಎಂಬ ಬೆಳ್ಳಿ ಗಣಿ ಪ್ರದೇಶದಲ್ಲಿ ವಿಪರೀತ ಪ್ರವಾಹ ಮತ್ತು ಆನೆ ಕಲ್ಲು ಮಳೆಯಿಂದ ೧೦ ಜನ ಹೆಂಗಸರೂ ಮತ್ತು ೧೬ ಮಂದಿ ಗಂಡಸರೂ ಸತ್ತರೆಂದೂ ೪೦ ಜನರಿಗೆ ತೀವ್ರ ಗಾಯವಾಯಿತೆಂದೂ, ೪೦೦ ಮಂದಿ ಪತ್ತೆ ಇಲ್ಲವೆಂದೂ ವರದಿಯಾಗಿದೆ

ಚಾಮುಂಡಿ ಬೆಟ್ಟದಲ್ಲಿ ಹುಲಿಯ ಅವಾಂತರ

ಚಾಮುಂಡಿ ಬೆಟ್ಟದಲ್ಲಿ ಕಳೆದ ೧೫ ದಿನಗಳಿಂದಲೂ ಒಂದು ಹುಲಿಯು ಸೇರಿಕೊಂಡು, ದನಕರುಗಳು ಮತ್ತು ಜನರಿಗೆ ತುಂಬಾ ತೊಂದರೆಯನ್ನು ಕೊಡುತ್ತಿದ್ದ ಈಗಾಗಲೇ ೩ ದನಗಳನ್ನು ತಿಂದು ಹಾಕಿರುತ್ತದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಅದನ್ನು ಕೊಲ್ಲುವ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ

ಬೀ ಜಬ್ಬಲ್ ರಹಿಮಾನವರು ಖೋತಾ ನಿರ್ಣಯವನ್ನು ತಂದರು. ಈ ಬಗ್ಗೆ ಕೇಂದ್ರ ಸರ್ಕಾರದವರಲ್ಲಿ ಒತ್ತಾಯ ಪಡಿಸಲಾಗುತ್ತಿದೆಯೆಂದೂ, ಅದು ಬೇಗ ಫಲಕಾರಿಯಾಗಬಹುದೆಂದೂ ಶ್ರೀ ಕೆ ಸಿ ರೆಡ್ಡಿಯವರು ಉತ್ತರವಿತ್ತರು. ಅದನ್ನು ವಾಪಸು ತೆಗೆದುಕೊಳ್ಳಲಾಯಿತು.

ಅಶಕ್ತ ಪೋಷಕ ಸಂಘದ ರಜತ ಮಹೋತ್ಸವ

ಸ್ವಂ ಸು ವರದಿ] ಬೆಂಗಳೂರು ೨೭

ಇಲ್ಲಿನ ಅಶಕ್ತ ಪೋಷಕ ಸಭೆಯ ರಜತ ಮಹೋತ್ಸವದ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರು ಈ ದಿನ ನೆರವೇರಿಸಿ, ಅದರ ಕೆಲಸ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಅನಾಥರ ರಕ್ಷಣೆ ಒಂದು ಜನಸೇವೆ ಮತ್ತು ಸರ್ಕಾರದವರೂ ಈಗ ಹೆಚ್ಚು ಆಸಕ್ತಿ ವಹಿಸುತ್ತಿರುವರು. ಸಂತೋಷದ ಸಂಗತಿಯೆಂದೂ, ಸಂಘವು ಇನ್ನೂ ಹೆಚ್ಚಾಗಿ ಸೇವೆ ಸಲ್ಲಿಸಲೆಂದೂ ಹಾರೈಸಿದರು ಶಾಶ್ವತ ಪೋಷಕರಾಗಲು ಒಪ್ಪಿರುವುದಾಗಿ ತಿಳಿಸಿದರು. ಈ ಸಂಬಂಧದಲ್ಲಿ ಡಾ॥ ಶ್ರೀನಿವಾಸ ಜೋಯಿಸರು ೧೦ ಸಾವಿರ ರೂ ಮತ್ತು ಶ್ರೀ ಮಿಸ್ತ್ರಿ ಲಾ ಪಂಚಮ್‌ವಾಲ್ ರವರು ೧೦೦೦ ರೂ ಕೊಟ್ಟರು.

ಶಾಸನ ಸಭೆ

ಈ ದಿನ ಶಾಸನ ಸಭೆಯ ಕೋರಂ ಇಲ್ಲದುದರಿಂದ ೧೨-೧೫ಕ್ಕೆ ಪ್ರಾರಂಭವಾಯಿತು ಸಭೆಯ ನಾಯಕರೂ ಮತ್ತು ಇತರ ಸದಸ್ಯರ ಸರಿಯಾದ ಕಾಲಕ್ಕೆ ಬಾರದಿದ್ದಲ್ಲಿ ಇನ್ನು ಮುಂದೆ ಸಭೆಯನ್ನು ಮಾರನೇ ದಿನಕ್ಕೆ ಮುಂದುವರಿಸಬೇಕಾಗಬಹುದೆಂದು ಅಧ್ಯಕ್ಷರು ತಿಳಿಸಿದರು

ಸಕ್ಕರೆಗಳನ್ನು ಸರ್ಕಾರದವರು ಮಾರಿದ ಬಗ್ಗೆ ಶ್ರೀ ಬಿ ಎಸ್ ಮಲ್ಲಪ್ಪನವರು ಕೇಳಿದ ಪ್ರಶ್ನೆಗೆ ಸಚಿವ ಶ್ರೀ ದಾಸಪ್ಪನವರು ಉತ್ತರವಿತ್ತು ಸಂಸ್ಥಾನದ ಪಡಿತರ ಪರಿಸ್ಥಿತಿಯು ಭದ್ರವಾಗಿದೆಯೆಂದೂ, ಮುಂದಿನ ವರ್ಷ ಸಾಲ ತೆಗೆದುಕೊಳ್ಳುವ ಸಂಭವವಿಲ್ಲವೆಂದೂ ಹೇಳಿದರು.

ಮತ್ತೊಂದು ಪ್ರವೇಶ ಪತ್ರಕ್ಕೆ ಪ್ರಭುಗಳ ರುಜು

ಸಂಸ್ಥಾನದ ಕೈಗಾರಿಕಾ ಸ್ಪೆಷಲ್ ಟ್ರೇಡ್ ಯೂನಿಯನ್, ... ಸಿನಿಮಾ ಎಗ್ಸಿಬಿಟರ್ಸ್ ... ಸಿವಿಲ್ ಸ್ಟ್ರೇಟಿಜಿ ... ಕೇಂದ್ರ ಸರ್ಕಾರದ ಅಧಿಕಾರಕ್ಕೆ ... ಶ್ರೀಮನ್ಮಹಾರಾಜರವರ ... ತ ಪ್ರವೇಶ ಪತ್ರಕ್ಕೆ ರುಜು ... ಎಲ್ಲ ಸಂಸ್ಥಾನಗಳ ರಾಜರುಗಳು ... ತ್ರ್ಯ ರುಜು ಹಾಕಿದ್ದಾರೆ ... ರುಜು

ಸಿನಿಮಾ ಮಂದಿರಗಳ ಮುಷ್ಕರ

ಸಿನಿಮಾ ಮಂದಿರಗಳ ಮೇಲೆ ಸರ್ಕಾರದವರು ಮನರಂಜನೆ ತೆರಿಗೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಮೈಸೂರು ಸಂಸ್ಥಾನಾದ್ಯಂತ ಸಿನಿಮಾ ಮಂದಿರಗಳು ಇದೇ ೩೦ನೇ ತಾ॥ ಮುಚ್ಚಬೇಕೆಂದು ಸಂಸ್ಥಾನದ ಫಿಲಂ ಸಂಸ್ಥೆಯವರು ನಿರ್ಧರಿಸಿದ್ದಾರೆ

ರಾಜರುಗಳ ಆಸ್ತಿ ಪಾಸ್ತಿಗಳ ನಿರ್ಧಾರ

ಭಾರತದಲ್ಲಿರುವ ೩ ಅಥವ ೪ ಸಂಸ್ಥಾನಗಳನ್ನು ಬಿಟ್ಟು ಮಿಕ್ಕ ರಾಜರುಗಳ ಖಾಸಗೀ ಆಸ್ತಿಪಾಸ್ತಿಗಳ ಪಟ್ಟಿಯನ್ನು ಕೇಂದ್ರ ಸರ್ಕಾರದವರು ತಯಾರಿಸಿದ್ದಾರೆಂದೂ ಒಟ್ಟು ೧೦೦ ಕೋಟಿ ರೂ ಆಗಬಹುದೆಂದೂ ಹೇಳಲಾಗಿದೆ ಅವರುಗಳ ರಾಜಧನವನ್ನು ನಿಗದಿ ಮಾಡಲಾಗಿದೆ ಈ ಹಣದ ಹೊರತು ಬೇರಾವ ವಿಧದಲ್ಲೂ ಅವರಿಗೆ ವರಮಾನ ಇರಕೂಡದೆಂದೂ, ವಂಶ ಪಾರಂಪರ್ಯವಾಗಿ ಬಂದ ಭೂಮಿ ಮಾತ್ರ ಅವರಿಗೆ ಸೇರಿರುವುದೆಂದೂ, ಅದಕ್ಕೂ ಅವರು ಕಂದಾಯ ಕೊಡಬೇಕೆಂದೂ ನಿರ್ಧರಿಸಲಾಗಿದೆ ಅರಸರು ವಾಸ ಮಾಡುವ ಅರಮನೆ ಮತ್ತು ಇನ್ನೊಂದು ಸಮುದ್ರ ತೀರದ ಅರಮನೆಗಳೆರಡೂ ಮಾತ್ರ ಅವರಿಗೆ ಸೇರಿರುತ್ತವೆ ಅವರಿಗೆ ಸೇರಿದ ಮೋಟಾರು ಕಾರುಗಳಲ್ಲಿ ಅರ್ಧಭಾಗವನ್ನು ಸರ್ಕಾರಕ್ಕೆ ಒಪ್ಪಿಸಬೇಕು. ಕೆಲವು ಸಂದರ್ಭದಲ್ಲಿ ಮಾತ್ರ ರಾಜರ ಸಂಬಂಧಿಗಳಿಗೆ ಮಾಸಾಶನ ಕೊಡುವ ವ್ಯವಸ್ಥೆ ಮಾಡಲಾಗಿದೆ

ಮುಸುಕಿನಜೋಳದ ಬದಲು ರಾಗಿ

ರಾಜಧಾನಿಯ ಎ ತರಗತಿಯ ರೇಷನ್ ಕಾರ್ಡು ಹೋಲ್ಡರುಗಳಿಗೆ ಗೋಧಿ ಮತ್ತು ಮುಸುಕಿನ ಜೋಳ ಸಿಗದಿದ್ದಲ್ಲಿ ಸಣ್ಣ ಕೆಂಪು ಜೋಳ ಅಥವ ರಾಗಿಯನ್ನು ಕೊಡಲು ಏರ್ಪಡಿಸಲಾಗಿರುತ್ತದೆ ರಾಗಿ ಅಥವ ಜೋಳವನ್ನು ತೆಗೆದುಕೊಳ್ಳುವುದರ ಮೂಲಕ ಪೂರ್ತಾ ಪಡಿತರವನ್ನು ಹೊಂದಬಹುದು.

ಪೃಥ್ವೀರಾಜ್‌ರವರಿಗೆ ನಟರಾಜನ ವಿಗ್ರಹದ ಅರ್ಪಣೆ

ಮೊನ್ನೆ ದಿನ ಬೆಂಗಳೂರಿನಲ್ಲಿ ನಡೆದ ದಿವಾರ್ ನಾಟಕದಲ್ಲಿ ಶ್ರೀ ಪೃಥ್ವಿರಾಜರವರಿಗೆ ಶ್ರೀ ಎಸ್. ಆರ್ ಶ್ರೀಕಂಠ ಶಾಸ್ತ್ರಿ ಸಹೋದರರು ತಾವು ತಯಾರಿಸಿದ್ದ ನಟರಾಜನ ವಿಗ್ರಹವನ್ನು ಅರ್ಪಿಸಿದರು

ಕಡಿಮೆ ಅಳತೆಗಾಗಿ ಜುಲ್ಮಾನೆ

ಬಂಡಿಕೊಪ್ಪಲಿನ ರಾಮಕೃಷ್ಣ ಸ್ಟೋರ್ಸಿನ ಸುಂದರನಾರಾಯಣ ಶೆಟ್ಟರು ಕಡಿಮೆ ತೂಕವನ್ನು ಉಪಯೋಗಿಸಿ ಬೆಲ್ಲ ಮಾರಿದರೆಂದು ಅವರಿಗೆ ೨೫ ರೂ ದಂಡವನ್ನು, ಮ್ಯಾಜಿಸ್ಟ್ರೇಟರಾದ ಶ್ರೀ ಹೆಚ್ ಎಲ್ ಶ್ರೀನಿವಾಸಯ್ಯನವರು ಕಡಿಮೆ ತೂಕ ಮತ್ತು ಅಳತೆಗಳನ್ನಿಟ್ಟುಕೊಂಡಿದ್ದರೆಂದು ೫೦ ರೂ ಜುಲ್ಮಾನೆಯನ್ನೂ ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ

ಹಾಸನದ ಮೊದಲ್ಲ ಸಂಸ್ಥಾನಗಳಲ್ಲಿ ಮೈಸೂರು ಸಂಸ್ಥಾನದ ಸಂಸ್ಥಾನಗಳ ಆರ್ಥಿಕ ಏಕೀಕರಣ ಸಮಿತಿಯ ವರದಿಯನ್ನು ಪರಿಶೀಲಿಸಿದನಂತರ, ತೆರಿಗೆ ವಿಚಾರವನ್ನು ಇತ್ಯರ್ಥಪಡಿಸಲಾಗುವುದು

ಸಂಸ್ಥಾನಗಳ ಸೈನ್ಯ ಭಾರತಕ್ಕೆ

ಭಾರತದಲ್ಲಿರುವ ಎಲ್ಲ ಸೈನ್ಯ ಶಾಖೆಗಳಲ್ಲೂ ಒಂದೇ ಆಡಳಿತ ಮತ್ತು ಪದ್ಧತಿ ಇರಬೇಕೆಂಬ ಧ್ಯೇಯದಿಂದ ಸಂಸ್ಥಾನಗಳಲ್ಲಿರುವ ಸೈನ್ಯಗಳನ್ನೆಲ್ಲಾ ಭಾರತ ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳುವ ಯೋಜನೆಯು ಕಾರ್ಯಗತಕ್ಕೆ ಬಂದಿದೆಯೆಂದೂ, ಈಗಾಗಲೇ ಬರೋಡ, ಕೊಲ್ಹಾಪುರ, ಕಚ್, ಸಿರ್‌ಮೂರ್, ಮಂಡಿ, ರಾಜ ಪಿಸ್‌ಲಾ ಮುಂತಾದ ೧೧ ಸಂಸ್ಥಾನಗಳ ಸೈನ್ಯಗಳನ್ನು ಕೇಂದ್ರ ಸರ್ಕಾರವು ವಹಿಸಿಕೊಂಡಿದೆಯೆಂದೂ, ೩೭ ಇತರ ಸಂಸ್ಥಾನಗಳ ಸೈನ್ಯಗಳನ್ನು ೩ ಯೂನಿಯನ್ನುಗಳಲ್ಲಿ ಐಕ್ಯ ಮಾಡಲಾಗಿದೆಯೆಂದೂ ಹೇಳಲಾಗಿದೆ. ಹೈದರಾಬಾದ್ ಮತ್ತು ಮೈಸೂರು ಸೈನ್ಯಗಳನ್ನೂ ಸದ್ಯದಲ್ಲಿಯೇ ವಹಿಸಿಕೊಳ್ಳಲಾಗುವುದೆಂದೂ ಗೊತ್ತಾಗಿದೆ

ಚಂದ್ರನಗರದಲ್ಲಿ ಭಾರತ ಧ್ವಜಾರೋಹಣ

ಚಂದ್ರನಗರದಲ್ಲಿ ಮೊನ್ನೆ ದಿನ ಭಾರತದ ಧ್ವಜವನ್ನು ಅಲ್ಲಿನ ಪುರ ಸಭಾಧ್ಯಕ್ಷರು ಸಹಸ್ರಾರು ಜನರ ಸಮ್ಮುಖದಲ್ಲಿ ಹಾರಿಸಿದರು.

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್ ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ . ಮೈಸೂರು

Edited, printed and published by A.R Nagarajan at the Sadhvi Press, D Subbiah Road, Mysore

ಕೊರಿಯಾ ನಾಯಕರ ಕೊಲೆ

ಕೊರಿಯಾದ ಶ್ರಮಜೀವಿ ರಾಜಕೀಯ ಪಕ್ಷದ ನಾಯಕರಾದ ಕಿಂ ಕೂ ರವರನ್ನು ಮಿಲಿಟರಿ ಉಡುಪನ್ನು ಧರಿಸಿದ್ದವನೊಬ್ಬನು ಬಂದೂಕಿನಿಂದ ಹೊಡೆದು ನಿನ್ನೆ ದಿನ ಕೊಲೆ ಮಾಡಿದನೆಂದೂ, ನಂತರ ಆತನು ಪೋಲೀಸರ ವಶವಾದನೆಂದೂ ವರದಿಯಾಗಿದೆ

ಖಾರದ ಪುಡಿ ಎರಚಿ ಬಂದಿಯ ಬಿಡುಗಡೆ

ಮದರಾಸ್ ಪ್ರಾಂತ್ಯದ ತಿರುಪತ್ತೂರಿಗೆ ದೇವಕೋಟೆಯಿಂದ ಒಬ್ಬ ಕಮ್ಯೂನಿಸ್ಟ್ ಬಂದಿಯನ್ನು ಪೊಲೀಸರು ಒಯ್ಯುತ್ತಿದ್ದಾಗ ಕರೆದುಕೊಂಡು ಬರುತ್ತಿದ್ದಾಗ ೩೦ ಜನ ಸಶಸ್ತ್ರ ಕಮ್ಯೂನಿಸ್ಟರ ಗುಂಪು ಒಬ್ಬಿಗೆ ನುಗ್ಗಿ, ಪೋಲೀಸರ ಮೇಲೆ ಖಾರದ ಪುಡಿಯನ್ನು ಎರಚಿ, ಚಾಕುಗಳಿಂದ ತೀವ್ರ ಗಾಯಪಡಿಸಿ, ಬಂದಿಯನ್ನು ಬಿಡುಗಡೆ ಮಾಡಿ, ಪರಾರಿಯಾದರೆಂದು ವರದಿಯಾಗಿದೆ

ಶ್ರೀ ಗಾಯಿತ್ರೀ

28-6-49 ರಿಂದ 2 ದಿನಗಳು ಮಾತ್ರ

ಪ್ರತಿ ದಿನ 3 ಆಟಗಳು

ಹಿಚ್ಚೇ ಬಂದಾದ ಭಯಂಕರ ಪತ್ತೇದಾರಿ ಚಿತ್ರ

ವುಮನ್ ಇನ್ ವೈಟ್

WOMAN IN WHITE

ಪಾತ್ರ:-ಎಲಿಯಾನರ್ ಪಾರ್ಕರ್, ಲೆಕ್ಸಿಸ್ ಸ್ಮಿತ್

ಮುಂದಿನ ಬದಲಾವಣೆ

ದಿ ವಾಲ್ಸ್ ಆಫ್ ಜೆರಿಕೊ

ಪೋಲೀಸರ ಮೇಲೆ ಹಳ್ಳಿಯವರ ಧಾಳಿ

ಕಲ್ಕತ್ತದ ಉತ್ತರಕ್ಕಿರುವ ಗ್ರಾಮಗಳಲ್ಲಿ ಕಮ್ಯೂನಿಸ್ಟರ ಪ್ರೇರಣೆಯಿಂದ ಹಳ್ಳಿಯವರು ಪೋಲೀಸರ ಮೇಲೆ ಧಾಳಿ ನಡೆಸಿ, ಬಿಲ್ಲು, ಬಾಣ ಭರ್ಜಿ ಮತ್ತು ಲಾಠಿಗಳನ್ನು ಪ್ರಯೋಗಿಸಿದರೆಂದೂ, ಪೋಲೀಸರು ಎರಡು ಕಡೆ ಗುಂಡು ಹಾರಿಸಿದರೆಂದೂ ವರದಿಯಾಗಿದೆ. ಈ ಘರ್ಷಣೆಯಲ್ಲಿ ಇಬ್ಬರು ಸತ್ತು ೧೭ ಮಂದಿಗೆ ಗಾಯವಾಗಿದೆ.

Office of the University of Mysore, Mysore Dated the 31st May 1949.

NOTIFICATION

Supplementary University Examinations of September 1949

It is hereby notified that candidates intending to appear for the following Examinations to be held in September 1949 should submit their applications in the prescribed form **on or before 30th June 1949 through the Heads of Colleges from which they appeared last**

(i) Intermediate in Arts (ii) Intermediate in Science (iii) Intermediate in Commerce (iv) B A, Degree, (v) B Sc, Degree (vi) B. A. (Hons) Preliminary (vii) B Sc, (Hons) Preliminary (viii) B Com and Engineering

Forms of applications for admission to the Examination may be had on application from the Heads of Colleges concerned

For detailed information attention is invited to this office Notification No Ex 1091 48 49 dated 31st May 1949

By order,
Sd C Rangachar
Ag. Registrar.

ಮೈಸೂರು ಸಿಟಿ ರೇಷನಿಂಗ್

ನಂ. M 96/48-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪ್ರೋ ಮೊದಲ್ಗೊಂಡು ಸಬ್ ಗೋಡೌನ್, ವರ್ತಕರ ಡಿಪ್ರೋ ಮತ್ತು ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳು ಮುಚ್ಚಲ್ಪಡುತ್ತವೆ 30-6-49 ಗುರುವಾರ-ದಾಸ್ತಾನು ಎಣಿಕೆ ಬಗ್ಗೆ ಸರ್ಕಾರಿ ಡಿಪ್ರೋ ವರ್ತಕರ ಡಿಪ್ರೋ ಮತ್ತು ಸಹಕಾರ ಸಂಘಗಳಿಗೆ ಪೂರ್ತಿ ರಜ.

1-7-49 ಶುಕ್ರವಾರ-ದಾಸ್ತಾನು ಎಣಿಕೆ ಬಗ್ಗೆ ಸಬ್ ಗೋಡೌನ್‌ಗಳಿಗೆ ಮಾತ್ರ ಪೂರ್ತಿ ರಜ

[ಸಹಿ] ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಯ:-೧ ಸೆಟ್ ರೂ ೩-೪-೦. ಪ್ಯಾಕಿಂಗ್ ಮತ್ತು ಟಿ.ಪಿ ೧೨ ಆಣೆ

ತಯಾರಿಸುವವರು.

ಎ. ರಾಮಸ್ವಾಮಿ ಅಯ್ಯಂಗಾರ್,
ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಪ್ಲಾಲಿಸ್ ಸ್ಟೋರ್ಸ್ ಎದುರು, ಸೊಪ್ಪಿನ ಕೋಳಿ ಬೀದಿ ೧೩೯೭ನೇ ನಂಬರ್ ಮನೆಯಲ್ಲಿ ೪-೭-೪೯ರ ಲಾಗಾಯ್ತು ೮-೭-೪೯ರ ವರಿಗೆ ಕ್ಯಾಂಪ್ ಮಾಡುತ್ತಾರೆ. ನೋಡತಕ್ಕ ಕಾಲ ಬೆಳಗ್ಗೆ ಎಂಟರಿಂದ ಹನ್ನೊಂದು ಘಂಟೆ

RAJKAMAL, MYSORE

FROM 1st JULY 1949 DAILY 3 SHOWS

William Shakespeare's

HAMLET

With Laurence Olivier, Jean Simmons etc,

The greatest Drama in World Literature, snatching away the Academy Award of the year 1948

See this greatest tragedy - a tragedy of a man of thought, who failed as a man of action

N.B. Advance Bookings from 27-6-49 & onwards for classes 15 as and above, daily between 10 a.m & 12 noon

To-day and tomorrow -

R.K.O's **The Return of Bad Man**

ಶ್ರೀ ಸೀತಾರಾಮಾಯನಮಃ

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸ್ತ್ರೀಯರ ಗರ್ಭಕೋಶದ ವ್ಯಾಧಿಗಳನ್ನು ಗುಣಪಡಿಸುತ್ತದೆ ಮುಟ್ಟಿನ ಹೆಚ್ಚು ಕಡಿಮೆ, ಮುಟ್ಟಿನ ಕಾಲದ ಹೊಟ್ಟೆ, ಸೊಂಟ ಕಾಲುಗಳ ನೋವು. ಮೊದಲಾಗಿ ಗುಣವಾಗುತ್ತದೆ

ಬೆಲೆ ತೀಸೆ 1ಕ್ಕೆ 2 0 0

ವಿಳಾಸ

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

WANTED TEACHERS

Applications (preferably in prescribed forms) are invited from duly qualified candidates for the posts of teachers for High Schools to be opened in the following places under the auspices and management of the Mysore District Board:—

1 Saragur, Heggadadevankote taluk.
2 Bettadapur, Periyapatna taluk.
3 Kabbahally, Gundlupet taluk.
4 Bannur, T Narsipur taluk

For each of the High Scoools the following staff is required

1 Head master.	1 Urdu Munshi
5 Assistant masters	1 Drill Instructor.
1 Kannada pandit	1 Second grade clerk.
1 Sanscrit pandit	

The scales of pay prescribed by Governmen will be paid Preference will be given to people with training and teaching experience. Intending candidate should submit their applications to the undersigned on or before 3rd July 1949

(Sd) H M Channabasapp
President,
Mysore District Board

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೬] ಬುಧವಾರ ೨೮-೬-೫೫ [ಸಂಚಿಕೆ ೨೬೧

ಮದ್ರಾಸ್ ಹೋಟಲು ಗಳಿಗೆ ಎಚ್ಚರಿಕೆ

ಮದರಾಸ್ ಹೊಟೇಲುಗಳ ಮುಷ್ಕರದ ಪುನರ್ವಿಮರ್ಶೆ?

ಮದರಾಸ್ ಪ್ರಾಂತ್ಯದ ಹೊಟೇಲುಗಳನ್ನು ಬರುವ ತಿಂಗಳು ೧ನೇ ತಾ॥ ಮುಚ್ಚಬೇಕೆಂದು ಅಲ್ಲಿನ ಹೊಟೇಲ್ ಸಂಘದವರು ನಿರ್ಧರಿಸಿರುವುದರಿಂದ ಜನರಿಗೆ ತುಂಬಾ ಕಷ್ಟ ಉಂಟಾಗುವುದೆಂದೂ ಆ ರೀತಿ ಮಾಡಕೂಡದೆಂದು ಮದರಾಸ್ ಪ್ರಧಾನಿಯವರು ಸಂಘದ ಅಧ್ಯಕ್ಷರಿಗೆ ಸೂಚನೆ ಇತ್ತಿರುವರೆಂದೂ ತಿಳಿದುಬಂದಿದೆ. ಈ ಬಗ್ಗೆ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ, ಮುಷ್ಕರದ ಯತ್ನವನ್ನು ತೀವ್ರ ಅಸಮಾಧಾನ ದೃಷ್ಟಿಯಿಂದ ವೀಕ್ಷಿಸುವುದಾಗಿ ಎಚ್ಚರಿಕೆ ಕೊಟ್ಟಿರುತ್ತಾರೆ. ತಮ್ಮ ನಿರ್ಧಾರವನ್ನು ಪುನರ್ವಿಮರ್ಶಿಸಲಾಗುವುದೆಂದು ಸಂಘದ ವ್ಯಕ್ತರು ತಿಳಿಸಿರುತ್ತಾರೆ.

ತುಂಗಭದ್ರಾ ಜಲಾಶಯದ ಬಳಿ ಚಿನ್ನದ ಪತ್ತೆ

ಆದವಾನಿಗೆ ೫ ಮೈಲಿ ದೂರದಲ್ಲಿ ಕಟ್ಟುತ್ತಿರುವ ತುಂಗಭದ್ರಾ ಜಲಾಶಯದ ಬಳಿ ಕಾರ್ಮಿಕರ ಮಕ್ಕಳಿಗೆ ಚಿನ್ನದ ಒಂದು ಮತ್ತು ಗಟ್ಟಿಗಳು ತುಂಬಿದ್ದ ಮಡಕೆಯೊಂದು ಸಿಕ್ಕಿತೆಂದೂ, ಅದರಲ್ಲಿ ೫೫ ತೊಲ ಚಿನ್ನ ಇತ್ತೆಂದೂ ಹೇಳಲಾಗಿದೆ. ಅದು ೨೦೦ ವರ್ಷಗಳ ಹಿಂದಿನದೆಂದು ತಿಳಿದುಬಂದಿದೆ. ಪೊಲೀಸರು ಅದನ್ನು ವಶಪಡಿಸಿಕೊಂಡಿರುತ್ತಾರೆ.

ಸಿಡಿಲಿನಿಂದ ೩ ಜನರ ಮರಣ

ಒರಿಸ್ಸಾ ಪ್ರಾಂತ್ಯದ ಬಲಾಂದ ಎಂಬ ಹಳ್ಳಿಯಲ್ಲಿ ಗಂಡ, ಹೆಂಡತಿ ಮತ್ತು ಒಬ್ಬ ಮಗ ಮನೆಯೊಳಗಿದ್ದಾಗ ಭಾರಿ ಸಿಡಿಲು ಬಿದ್ದು ೩ ಜನರೂ ಸತ್ತುಹೋದರೆಂದೂ ಇನ್ನೊಬ್ಬ ಮಗಳಿಗೆ ಜ್ಞಾನ ತಪ್ಪಿ ಕೊನೆಯಲ್ಲಿ ಉಳಿದುಕೊಂಡಳೆಂದೂ ವರದಿಯಾಗಿದೆ.

ಮರದಿಂದ ತಯಾರಾದ ವಿಮಾನ

ಇಂಗ್ಲೆಂಡಿನ ಇಬ್ಬರು ಇಂಜಿನಿಯರುಗಳು ಪ್ಲೈವುಡ್ ಮರದಿಂದ ಮಾಡಿದ ವಿಮಾನವೊಂದರಲ್ಲಿ ಯೂರೋಪಿನಿಂದ ಆಸ್ಟ್ರೇಲಿಯಕ್ಕೆ ಬಂದಿದ್ದಾರೆ. ಗಂಟೆಗೆ ೧೦ ಮೈಲಿ ವೇಗವಾಗಿ ಸಂಚರಿಸಿ, ೩೩ ದಿನಗಳಲ್ಲಿ ಆಸ್ಟ್ರೇಲಿಯವನ್ನು ಅದು ತಲುಪಿತು.

ಬೆಟ್ಟ ಹಲಸೂರು ವೆಂಕಟ ರಾಮಾ ಶಾಸ್ತ್ರಿಗಳ ನಿಧನ

ಮೈಸೂರು ೨೮

ಆ॥ ಮ॥ ಬೆಟ್ಟ ಹಲಸೂರು ವೆಂಕಟರಾಮಾ ಶಾಸ್ತ್ರಿಗಳು ಈ ದಿನ ಬೆಳಿಗ್ಗೆ ತಮ್ಮ ೬೦ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

ಇವರು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳಲ್ಲಿ ಅದ್ಭುತವಾದ ಪಾಂಡಿತ್ಯವನ್ನು ಪಡೆದಿದ್ದರು. ಇವರ ಪ್ರತಿಭೆಯನ್ನು ಮೆಚ್ಚಿ ಆಳಿದ ಮಹಾಪ್ರಭುಗಳು 'ಪಂಡಿತ ರತ್ನಂ' ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದ್ದರು. ಇವರ ತಮ್ಮ ಉದ್ಗ್ರಂಥಗಳಿಂದ ಕನ್ನಡ ಸಾಹಿತ್ಯಕ್ಕೆ ಗಣನೀಯ ಸೇವೆ ಸಲ್ಲಿಸಿದ್ದಾರೆ. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲೆಂದು ಬೇಡಿ, ಅವರ ಕುಟುಂಬದವರಿಗೆ ನಮ್ಮ ಪ್ರಾಮಾಣಿಕ ಸಂತಾಪವನ್ನು ಸೂಚಿಸುತ್ತೇವೆ.

ಕೊಡಗು ಮೈಸೂರಿಗೆ ಸೇರುವ ಬಗ್ಗೆ ಅಭಿಪ್ರಾಯ ಸಂಗ್ರಹಣೆ

ಕೊಡಗನ್ನು ಮೈಸೂರಿಗೆ ಸೇರಿಸುವ ಬಗ್ಗೆ ಸಾರ್ವಜನಿಕಾಭಿಪ್ರಾಯವನ್ನು ತಿಳಿಯಲು ಕೇಂದ್ರ ಸರ್ಕಾರದ ಗೃಹಶಾಖಾ ಕಾರ್ಯದರ್ಶಿಗಳಾದ ಶ್ರೀ ಹೆಚ್. ವಿ. ಆರ್. ಅಯ್ಯಂಗಾರ್ಯರು ನಾಳಿದ್ದಿನ ಅಲ್ಲಿಗೆ ಭೇಟಿ ಕೊಡುವರೆಂದೂ, ಅವರ ವರದಿಯು ಬಂದ ಮೇಲೆ ಸರ್ದಾರ್ ಪಟೇಲರು ಅಂತ್ಯ ತೀರ್ಮಾನಕ್ಕೆ ಬರುವರೆಂದೂ ತಿಳಿದು ಬಂದಿದೆ.

ಪ್ರಭುಗಳಿಂದ ಆಸ್ಪತ್ರೆಯ ಪ್ರಾರಂಭ

ಮುಂದಿನ ತಿಂಗಳು ೧ನೇ ತಾ॥ ಶ್ರೀಮನ್ಮಹಾರಾಜರವರು ಚಾಮುಂಡಿ ಪುರದಲ್ಲಿರುವ ಮೋಹನದಾಸ್ ತುಳಸೀದಾಸ್‌ರವರ ನೂತನ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸುವರು. ಮಾರನೇ ದಿನ ಪ್ರಭುಗಳು ಚನ್ನರಾಯಪಟ್ಟಣಕ್ಕೆ ಭೇಟಿ ಕೊಟ್ಟು ಅಲ್ಲಿನ ಆಸ್ಪತ್ರೆ ಮತ್ತು ಬಸ್ ಸ್ಟ್ಯಾಂಡುಗಳ ಶಂಕುಸ್ಥಾಪನೆ ನಡೆಸಿ, ಅಲ್ಲಿಂದ ಶ್ರವಣಬೆಳಗೊಳ, ಕಾಂತರಜಪುರಕ್ಕೆ ಭೇಟಿ ಕೊಡುವರು.

ಹರಿಕಥೆ

ರಾಜಧಾನಿಯ ಚೆಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಈ ದಿನ ಮತ್ತು ನಾಳೆ ಸಂಜೆ ೭ ಘಂಟೆಗೆ ಬೆಂಗಳೂರಿನ ಶ್ರೀ ಸುಬ್ಬರಾಯದಾಸರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆ ನಡೆಯುವುದು.

ಸಂಗೀತ

ಹಳೇ ಅಗ್ರಹಾರದಲ್ಲಿರುವ ಆಡಮನೆ ಆಸ್ಪೆಂಟ್ ಪ್ರೊಫೆಸರ್ ಶ್ರೀ ಟಿ. ಆರ್. ಚಾಮರಾಜ ಮನೆಯಲ್ಲಿ ಹನುಮಜ್ಜಯಂತ್ಯುತ್ಸವದ ಪ್ರಯುಕ್ತ ಈ ದಿನ ಸಂಜೆ ೬-೩೦ ಗಂಟೆಗೆ ಆ॥ ವಿ॥ ಸ್ವರಮೂರ್ತಿಯವರ ಸಂಗೀತವು ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನ

ಸಂಸ್ಥಾನದ ಪತ್ರಿಕೋದ್ಯೋಗಿಗಳ ಅರನೇ ಸಮ್ಮೇಳನವು ಬರುವ ಆಗಸ್ಟ್ ೭ ಮತ್ತು ೮ನೇ ತಾ॥ ಗಳಲ್ಲಿ ಹಾಸನದಲ್ಲಿ ನಡೆಯಬೇಕೆಂದು ನಿರ್ಧರಿಸಲಾಗಿದೆ.

ಭಾರತ ಮಹಿಳೆಗೆ ಮರಣ ದಂಡನೆ

ದಕ್ಷಿಣ ಆಫ್ರಿಕದ ಕೆನಿಯಾದಲ್ಲಿರುವ ೨೨ ವರ್ಷದ ತೇಜ್ ಸಿಂಗ್ ಎಂಬ ಭಾರತೀಯ ಮಹಿಳೆಯು ತನ್ನ ಮಾವನನ್ನು ಗುಂಡಿನಿಂದ ಹೊಡೆದು ಸಾಯಿಸಿದಳೆಂಬ ಆಪಾದನೆಯ ಮೇಲೆ ಆಕೆಗೆ ಮರಣ ದಂಡನೆಯನ್ನು ವಿಧಿಸಲಾಗಿದೆ.

ಅಂಚೆ ನೌಕರರ ಪ್ರತಿಭಟನೆ

ಅಂಚೆ ಇಲಾಖೆಯ ಕೆಳದರ್ಜೆ ನೌಕರರಿಗೆ ಹೆಚ್ಚು ಸಂಬಳ ಮತ್ತು ಇತರ ಸೌಲಭ್ಯಗಳ ಬಗ್ಗೆ ಕೇಂದ್ರ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳದಿರುವುದರಿಂದ, ಮುಂದಿನ ತಿಂಗಳು ೧೧ನೇ ತಾ॥ ಪ್ರತಿಭಟನಾ ದಿನಾಚರಣೆಯನ್ನು ದೇಶದಾದ್ಯಂತ ನಡೆಸಬೇಕೆಂದು ಅಖಿಲ ಭಾರತ ಅಂಚೆ ಇಲಾಖಾ ಕೆಳದರ್ಜೆ ನೌಕರರ ಸಂಘದ ಸಭೆಯು ಮೊನ್ನೆ ಬೊಂಬಾಯಿನಲ್ಲಿ ಸೇರಿ ನಿರ್ಣಯ ಮಾಡಿದೆ. ಮುಷ್ಕರ ಮಾಡಕೂಡದೆಂದೂ, ಆದರೆ ಸಭೆಗಳನ್ನು ನಡೆಸಬೇಕೆಂದೂ ತಿಳಿಸಲಾಗಿದೆ.

ಮಣಿಪುರದಲ್ಲಿ ಸತ್ಯಾಗ್ರಹ

ಮಣಿಪುರದ ರಾಜರ ದಬ್ಬಾಳಿಕೆಯನ್ನು ತಪ್ಪಿಸಲು ಸಂಸ್ಥಾನದ್ಯಂತ ಸತ್ಯಾಗ್ರಹ ಹೂಡಬೇಕೆಂದು ಅಲ್ಲಿನ ಕಾಂಗ್ರೆಸ್ ನಿರ್ಧರಿಸಿದೆ. ಮಹಾರಾಜರನ್ನು ತೆಗೆದುಹಾಕಬೇಕೆಂದೂ ಮತ್ತು ಅಲ್ಲಿ ಭಾರತ ಸರ್ಕಾರದವರು ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದೂ ಕೋರುವ ನಿರ್ಣಯಗಳನ್ನು ಕಾಂಗ್ರೆಸ್ಸು ಅನುಮೋದಿಸಿದೆ.

ಯೋಗಶಾಸ್ತ್ರ ಸಂಶೋಧನೆಗೆ ಸರ್ಕಾರದ ಸಹಾಯ

ಬೊಂಬಾಯಿನ ಹತ್ತಿರವಿರುವ ಲೋನಾವಾಲದಲ್ಲಿ ಕಳೆದ ೨೫ ವರ್ಷಗಳಿಂದಲೂ ಕೆಲಸ ಮಾಡುತ್ತಿರುವ ಯೋಗ ಶಿಕ್ಷಣ ಶಾಲೆಯವರು ಸಂಶೋಧನೆ ನಡೆಸಲು ಕೇಂದ್ರ ಸರ್ಕಾರದವರು ೨೦ ಸಾವಿರ ರೂ ಗ್ರಾಂಟನ್ನು ಕೊಟ್ಟಿರುತ್ತಾರೆ.

ಪ್ರಾಚೀನ ನಾಣ್ಯಗಳ ಶೋಧನೆ

ಸಂಯುಕ್ತ ಪ್ರಾಂತ್ಯದ ಜಿಲ್ಲೆ ಎಂಬ ಪ್ರದೇಶದಲ್ಲಿ ೩೦೦೦ ವರ್ಷಗಳ ಪ್ರಾಚೀನ ನಾಣ್ಯ ಶಾಸನಗಳನ್ನೊಳಗೊಂಡ ಅವಶೇಷಗಳು ಪತ್ತೆ ಆಗಿವೆಯೆಂದು ವರದಿಯಾಗಿದೆ.

ಕರ್ಣಾಟಕ ಪ್ರಾಂತ್ಯ ರಚನೆ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು ಫೋ.] ಬೆಂಗಳೂರು ೨೮

ಇಂದು ಶಾಸನ ಸಭೆಯಲ್ಲಿ, ವಿಶ್ವ ವಿದ್ಯಾನಿಲಯದ ಸುಧಾರಣೆ ಬಗ್ಗೆ ಡಾ॥ ಸಿ. ಆರ್. ರೆಡ್ಡಿಯವರು ವರದಿಯನ್ನು ಒಪ್ಪಿಸಿರುವರೆಂದೂ, ಅದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದೂ, ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಸಿ. ಆರ್. ರೆಡ್ಡಿಯವರಿಗೆ ೧೫ ಸಾವಿರ ರೂ. ಸಂಭಾವನೆ ಕೊಡಲಾಯಿತೆಂದೂ, ಅವರ ವರದಿಯನ್ನು ಪರಿಶೀಲಿಸಲು ಯಾವ ಪ್ರತ್ಯೇಕ ಸಮಿತಿಯನ್ನೂ ರಚಿಸಿಲ್ಲವೆಂದೂ ಅವರು ಹೇಳಿದರು.

ಕರ್ಣಾಟಕ ಪ್ರಾಂತ್ಯ ರಚನೆ ಬಗ್ಗೆ ಧಾರ್ ಮತ್ತು ತ್ರಿಮೂರ್ತಿ ಸಮಿತಿಗಳ ವಿಚಾರವಾಗಿ ಹಲವು ಪ್ರಶ್ನೆಗಳು ಕೇಳಲ್ಪಟ್ಟವು. ಸರ್ಕಾರಕ್ಕೆ ಅಧಿಕೃತವಾಗಿ ಯಾವ ವರದಿಯೂ ಬಂದಿಲ್ಲವೆಂದೂ, ಆದುದರಿಂದ ಸರ್ಕಾರದವರು ಅದರ ಬಗ್ಗೆ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದೂ ಶ್ರೀ ಕೆ. ಸಿ. ರೆಡ್ಡಿಯವರ ಉತ್ತರವಿತ್ತರು. ಮೈಸೂರನ್ನು ಸೇರಿಸಿ ಕರ್ಣಾಟಕ ಪ್ರಾಂತ್ಯ ರಚಿಸಬೇಕೆಂದು ಭಾರತ ಸರ್ಕಾರದವರು ಯೋಚಿಸುತ್ತಿರುವರೇ-ಎಂಬ ವಿಚಾರವು ಸರ್ಕಾರಕ್ಕೆ ಗೊತ್ತಿಲ್ಲವೆಂದೂ, ಈ ವಿಚಾರದಲ್ಲಿ ಮೈಸೂರು ಶಾಸನ ಸಭೆಗಳ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಭಾರತಸರ್ಕಾರದವರು ಅಂತ್ಯ ನಿರ್ಧಾರಕ್ಕೆ ಬರಕೂಡದೆಂದು ಮೈಸೂರು ಸರ್ಕಾರದವರು ಅವರಿಗೆ ತಿಳಿಸಿಲ್ಲವೆಂದೂ ಶ್ರೀ ರೆಡ್ಡಿಯವರು ಹೇಳಿದರು.

ಮೈಸೂರಿಗೆ ಸೇರಿದವರೊಬ್ಬರು ನೇರವಾಗಿ ದೆಹಲಿಗೆ ಹೋಗಿ ಪ್ರಚಾರ ನಡೆಸುತ್ತಿರುವುದನ್ನು ಸರ್ಕಾರದವರು ತಡೆಗಟ್ಟುವರೇ ಎಂಬ ಪ್ರಶ್ನೆಗೆ ಅದಕ್ಕೆ ಸರ್ಕಾರದವರು ಜವಾಬ್ದಾರರಲ್ಲವೆಂದು ಅಧ್ಯಕ್ಷರು ಹೇಳಿದರು. ಮೈಸೂರು ರಾಜ್ಯಾಂಗ ಸಭಾಧ್ಯಕ್ಷರೇ ಸಭೆಯ ನಿರ್ಣಯಕ್ಕೆ ವಿರೋಧವಾಗಿ ಪ್ರಚಾರ ನಡೆಸುತ್ತಿಲ್ಲವೇ ಎಂಬ ಪ್ರಶ್ನೆಗೆ, ಅದು ಅಭಿಪ್ರಾಯದ ಮಾತು ಎಂದು ಮುಖ್ಯ ಮಂತ್ರಿಗಳು ತಿಳಿಸಿದರು. ಹಿಂದೆಯೇ ತಿಳಿಸಿದಂತೆ ಜನರ ಅಭಿಪ್ರಾಯಕ್ಕೆ ವಿರೋಧವಾಗಿ ಸರ್ಕಾರದವರು ನಡೆಯುವುದಿಲ್ಲವೆಂದು ಶ್ರೀ ರೆಡ್ಡಿಯವರು ಕೊನೆಯಲ್ಲಿ ಹೇಳಿದರು.

ಕಾಲ ಮೀರಿ ಕಾಫಿ ಕೊಟ್ಟದ್ದಕ್ಕೆ ದಂಡ

ಕೃಷ್ಣರಾಜ ಮೊಹಲ್ಲಾ ಸುಣ್ಣದಕೇರಿಯಲ್ಲಿರುವ ರಾಜರಾಜೇಶ್ವರಿ ಭವನದಲ್ಲಿ ಕಾಲ ಮೀರಿ ಕಾಫಿ ಕೊಡುತ್ತಿದ್ದರೆಂದು ಅದರ ಮಾಲೀಕರಾದ ಸಿ. ಎಂ. ಕರಿಯಪ್ಪನವರಿಗೆ ನಗರ ನ್ಯಾಯಾಧೀಶರು ೨೦ ರೂ. ಜುಲ್ಮಾನೆ ವಿಧಿಸಿರುತ್ತಾರೆ.

ವಿ. ಪಿ. ಮೆನನ್‌ರವರ ಆಗಮನ

ಭಾರತ ಸರ್ಕಾರದ ಸಂಸ್ಥಾನ ಶಾಖೆ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್‌ರವರು, ನವಾನಗರದ ಜಾಂಸಾಹೇಬರೊಡನೆ ನಾಳೆ ದಿನ ಬೆಂಗಳೂರಿಗೆ ಆಗಮಿಸುವರು.

ಬಹಿರಂಗ ಸಭೆ

ಇಂದಿನ ಆಹಾರ ಪರಿಸ್ಥಿತಿ ಮತ್ತು ಹೊಟೇಲುಗಳ ವಿಚಾರವನ್ನು ಪರಿಶೀಲಿಸಲು ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಪ್ರಜಾ ಮಂಡಲಿಯವರು ಸಾರ್ವಜನಿಕ ಸಭೆಯನ್ನು ಏರ್ಪಡಿಸಿರುವರು.

ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜ್

ವೈದ್ಯರ ಸಮ್ಮೇಳನದಲ್ಲಿ ದಿವಾನರ ಭಾಷಣ

ಬೆಂಗಳೂರು ಜೂ

ಭಾರತದ ಮೆಡಿಕಲ್ ಕೌನ್ಸಿಲ್ ನಿರೀಕ್ಷಿಸುತ್ತಿರುವ ಮಟ್ಟಕ್ಕೆ ಮೈಸೂರು ಮೆಡಿಕಲ್ ಕಾಲೇಜನ್ನು ತರಲು ಸರ್ಕಾರದವರು ಕಾರ್ಯಕ್ರಮ ಕೈಗೊಂಡಿರುವುದಾಗಿಯೂ, ಅದಕ್ಕೆ ಶೀಘ್ರದಲ್ಲಿಯೇ ಅಂಗೀಕಾರ ದೊರೆಯಬಹುದೆಂದೂ ದಿವಾನರು ಮೊನ್ನೆ ಟೌನ್‌ಹಾಲಿನಲ್ಲಿ ನಡೆದ ಸಂಸ್ಥಾನದ ಮೆಡಿಕಲ್ ಗ್ರಾಜುಯೇಟ್ಸ್ ಸಂಘದ ಪ್ರಥಮ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು.

ಒಂದೇ ವಿಧವಾದ ವೈದ್ಯ ಶಿಕ್ಷಣವಿರುವ ದೃಷ್ಟಿಯಿಂದ ಎಲ್ ಎಂ ಪಿ ಯನ್ನು ರದ್ದು ಮಾಡಲಾಯಿತೆಂದೂ, ಬೆಂಗಳೂರಿನಲ್ಲಿ ಮೆಡಿಕಲ್ ಸ್ಕೂಲಿಗೆ ಬದಲು ಒಂದು ಕಾಲೇಜನ್ನು ಸ್ಥಾಪಿಸುವ ವಿಚಾರವು ಸರ್ಕಾರದ ಗಮನದಲ್ಲಿದೆಯೆಂದೂ ಅವರು ಹೇಳಿದರು ಎಲ್ ಎಂ ಪಿ ಮತ್ತು ಎಂ. ಬಿ ಬಿ ಎಸ್ ಎಂಬ ವ್ಯತ್ಯಾಸವಿರುವುದು ಹೋಗಬೇಕೆಂದೂ, ಸಂಸ್ಥಾನದ ಆಸ್ಪತ್ರೆಗಳಿಗೆ ಈಗಿರುವ ವೈದ್ಯರ ಅಭಾವವನ್ನು ಹೋಗಲಾಡಿಸಲು ಮತ್ತು ವೈದ್ಯ ವೃತ್ತಿಯನ್ನು ಹೆಚ್ಚು ಆಕರ್ಷಣೀಯವನ್ನಾಗಿ ಮಾಡಲು ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳುವರೆಂದೂ ತಿಳಿಸಿದರು

॥ ಶ್ರೀ ॥

ಗಣೇಶಾ ಟಾಕೀಸ್

1-7-49ರಿಂದ ಆಮೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ಶಂಭಗವಲ್ಲಿ

(ತಮಿಳು)

ಪಾತ್ರ:-ಎಂ.ಎಸ್.ವಿಜಯಾಳ್, ಟಿ ಎಸ್ ಬಾಲಯ್ಯ, ನಾಟ್ಯರಾಣಿ ಎ.ಆರ್. ಶೆಂಮಿಯನಾಯಕಿ, ಮತ್ತಿತರರು

ಇಂದೇ ಕೊನೆಯ ದಿವಸ

* ಮೀರಾ *

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಯ:-1 ಸೆಟ್ ರೂ 3-8-0. ಪ್ಯಾಕಿಂಗ ಮತ್ತು ಟಿ ಬಿ ಗಿ ಚಾರ್ಜಿ

ತಯಾರಿಸುವವರು.

ಎ. ರಾಮಸ್ವಾಮಿ ಅಯ್ಯರ್, ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಪೊಲೀಸ್ ಸ್ಟೇಷನ್ ಎದುರು, ... ಪ್ರತಿ ... ನ ... ತಿಂಗಳ ... ಬೆಳಿಗ್ಗೆ ಎಂಟರಿಂದ ಹನ್ನೊಂದು ಘಂಟೆ

ಖಾಸಿಂ ರಜ್ವಿಯ ವಿಚಾರಣೆ

ಹೈದರಾಬಾದಿನ ರಜಾಕಾರರ ನಾಯಕನಾದ ಖಾಸಿಂ ರಜ್ವಿಯ ಮೇಲಿನ ಕೊಲೆ ಮತ್ತು ಇತರ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಒಂದು ವಿಶೇಷ ಕೋರ್ಟನ್ನು ಸ್ಥಾಪಿಸಲಾಗಿದೆ ಅದಕ್ಕೆ ಶ್ರೀಗಳಾದ ಸಿಂಟ್ರೋ, ಮಹಮದ್ ಅಲಿ ಖಾನ್ ಮತ್ತು ಜಗನ್ನಾಥರಾವ್ ರವರುಗಳನ್ನು ವಿಶೇಷ ನ್ಯಾಯಾಧೀಶರನ್ನಾಗಿ ನೇಮಿಸಲಾಗಿದೆ

ಸೀಮೆ ಎಣ್ಣೆಗೆ ಬದಲು ಕಡಲೇ ಕಾಯಿ ಗ್ಯಾಸ್

ಕಡಲೇ ಕಾಯಿ ಎಣ್ಣೆಯಿಂದ ಒಂದು ತರಹ ವಾಯುವನ್ನು ಹೈದರಾಬಾದ್ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಶಾಖೆಯವರು ಕಂಡುಹಿಡಿದಿದ್ದಾರೆ. ಅದನ್ನು ಸೀಮೆ ಎಣ್ಣೆ ಬದಲು ಉಪಯೋಗಿಸಬಹುದೆಂದು ಹೇಳಲಾಗಿದೆ

ಪಾಕಿಸ್ತಾನದಲ್ಲಿ ವೈದ್ಯರ ಅಭಾವ

ಭಾರತವು ವಿಭಜನೆಯಾದನಂತರ, ಹಿಂದೂ ವೈದ್ಯರೆಲ್ಲ ಹಿಂದಿರುಗಿದ್ದರಿಂದ, ಪಾಕಿಸ್ತಾನದ ಆಸ್ಪತ್ರೆಗಳಲ್ಲಿ ಅನೇಕ ತಿಂಗಳಿಂದ ವೈದ್ಯರೇ ಇಲ್ಲದೆ ರೋಗವು ಹರಡುತ್ತಿದೆ ಇದನ್ನು ನಿವಾರಿಸಲು ೫೦ ಹಕೀಮರುಗಳನ್ನು ನೇಮಿಸಲಾಗಿದೆ ಅವರು ಕಣ್ಣಿಗೆ ಶಸ್ತ್ರ ಚಿಕಿತ್ಸೆ ಮಾಡಕೂಡದೆಂದು ನಿರ್ಬಂಧವನ್ನು ಹಾಕಲಾಗಿದೆ

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು, ಧರ್ಮಾವರಂ, ಆರಣಿ ಸೀರೆಗಳು ಗ್ಯಾರಂಟಿಯಾಗಿ ದೊರೆಯುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ :: ಮೈಸೂರು

ಚಾಮುಂಡೇಶ್ವರೀ ಟಾಕೀಸ್

ತಾ॥ 29-6-49 ನೇ ಬುಧವಾರದಿಂದ

ಯಶಸ್ವೀಯವಾದ 3 ನೇ ವಾರ

ಪ್ರತಿ ದಿನ 3 ಆಟಗಳು

ಶ್ರೀ ಆಂಡಾಳ್

(ತಮಿಳು)

-:ಮುಖ್ಯ ಭೂಮಿಕೆ:-

ಇಸ್ಪೇಟ್ ರಾಣಿ ಯು. ಆರ್. ಜೀವರತ್ನಂ

ಪಿ. ಎಸ್ ಗೋವಿಂದನ್

ಕಾಳಿ ಎನ್. ರತ್ನಂ

Edited, printed and published by A.R. Nagarajan at the Sadhvi Press. D. Subbiah Road, Mysore

ದೇವರ ವಿಗ್ರಹಗಳ ನಾಶ

ಮಚಲೀ ಪಟ್ಟಣದ ಬಳಿ ಇರುವ ಹಿಂದೂ ದೇವಾಲಯಕ್ಕೆ ಮುಸ್ಲಿಮರು ನುಗ್ಗಿ ವಿಗ್ರಹವನ್ನು ನಾಶಪಡಿಸಿದರೆಂದೂ, ಇನ್ನೆರಡು ದೇವಾಲಯಗಳಲ್ಲಿ ವಿಗ್ರಹಗಳನ್ನು ತಲೆಕೆಳಗಾಗಿ ನಿಲ್ಲಿಸಿದರೆಂದೂ ವರದಿಯಾಗಿದೆ

ಮೋಟಾರು ಕೆಲಸಗಾರರ ಸಂಘ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯು ಕಳೆದ ಭಾನುವಾರ ಶ್ರೀ ಕೆ ದೌಲತ್‌ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಮಾಲೀಕರುಗಳಿಗೂ ಕೆಲಸಗಾರರಿಗೂ ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಒಪ್ಪಂದವು ಮುರಿದು ಬಿದ್ದ ಕಾರಣ ಸರ್ಕಾರದವರು ಇಲ್ಲಿಯ ವರೆಗೆ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ ಕೂಡಲೇ ಬ್ಯಾಲಟ್ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು ಕೆಲವು ಬಸ್ ಮಾಲೀಕರುಗಳು ಕೆಲಸಗಾರರಿಗೆ ಸಂಬಳವನ್ನು ಕೊಡದೆ ಹಿಂಸಿಸುತ್ತಿರುವುದನ್ನು ಖಂಡಿಸಲಾಯಿತು ಮಾರುತಿ ಮೋಟಾರ್ ಸರ್ವೀಸಿನ ಮಾಲೀಕರು ಸಂಘದವರನ್ನು ದೂಷಿಸುತ್ತಿರುವುದನ್ನು ಖಂಡಿಸಿ, ಇನ್ನು ಮುಂದೆ ಅವರು ಸಂಘದೊಡನೆ ಸಹಕರಿಸಬೇಕೆಂದು ಕೋರಲಾಯಿತು.

ಬಿಕರಿಗೆ ಸಿದ್ಧವಾಗಿದೆ

ಪಂಚರಾತ್ರ

[By Dr. N S Narayan Sastry]

Inter Arts & Inter Science Text Book for 1949-50

ಬೆಲೆ 1-6-0

ಮಿತ್ರ ಮತ್ತು ಕಂಪೆನಿ,

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಮೈಸೂರು ಸಿಟಿ ರೇಷನಿಂಗ್

ನಂ. M. 96, 48-49

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪ್ಪೋ ಮೊದಲ್ಗೊಂಡು ಸಬ್ ಗೋಡೌನ್, ವರ್ತಕರ ಡಿಪ್ಪೋ ಮತ್ತು ಸಹಕಾರ ಸಂಘಗಳು ಈ ಕೆಳಗೆ ಕಂಡ ದಿವಸಗಳು ಮುಚ್ಚಲ್ಪಡುತ್ತವೆ 30-6-49 ಗುರುವಾರ-ದಾಸ್ತಾನು ಎಣಿಕೆ ಬಗ್ಗೆ ಸರ್ಕಾರಿ ಡಿಪ್ಪೋ ವರ್ತಕರ ಡಿಪ್ಪೋ ಮತ್ತು ಸಹಕಾರ ಸಂಘಗಳಿಗೆ ಪೂರ್ತಿ ರಜ.

1-7-49 ಶುಕ್ರವಾರ-ದಾಸ್ತಾನು ಎಣಿಕೆ ಬಗ್ಗೆ ಸಬ್ ಗೋಡೌನ್‌ಗಳಿಗೆ ಮಾತ್ರ ಪೂರ್ತಿ ರಜ.

[ಸಹಿ] ಡಿ. ಜೆ. ಬಾಲರಾಜ್,

ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಸ್ವಾಗತ ಸಮಾರಂಭ

ಯಳಂದೂರು ತಾಲ್ಲೂಕು ಶಿನಕಹಳ್ಳಿಯ ವರ್ತಕರೂ ಮತ್ತು ಜಮೀನುದಾರರೂ ಆದ ಶ್ರೀ ಆರ್ ಮಹಂತದೇವರುರವರು ತಮ್ಮ ಸಹೋದರ ಶ್ರೀ ಬಸವಣ್ಣ ಮತ್ತು ಚಿ॥ ಸೌ॥ ಭಾಗೀರಥಾಂಬರವರ ವಿವಾಹ ಸಂಬಂಧದಲ್ಲಿ ಕಳೆದ ಬುಧವಾರ ಆರತಕ್ಷತೆಯನ್ನು ಶಿನಕಹಳ್ಳಿಯಲ್ಲಿ ನೆರವೇರಿಸಿದ್ದರು.

VASANTHA INSTITUTE of COMMERCE,

653 Narayana Sastry Road Mysore

EFFICIENT COACHING! BEST RESULTS!!

Applications for admission to the One Year Diploma Course of the Mysore Government Commercial Examinations are received

ಶ್ರೀ ಗಾಯಿತ್ರೀ

28-6-49 ರಿಂದ 2 ದಿನಗಳು ಮಾತ್ರ

ಪ್ರತಿ ದಿನ 3 ಆಟಗಳು

ವಿಶ್ವವಿಖ್ಯಾತ ಒಂದಾದ ಜಯಂಕರ ಸತ್ತದಾರಿ ಚಿತ್ರ

ವುಮನ್ ಇನ್ ವೈಟ್

WOMAN IN WHITE

ಪಾತ್ರ:-ಎಲಿಯಾನರ್ ಪಾರ್ಕರ್, ಅಲೆಕ್ಸಿಸ್ ಸ್ಮಿತ್

ಮುಂದಿನ ಬದಲಾವಣೆ.-

ದಿ ವಾಲ್ಸ್ ಆಫ್ ಜೆರಿಕೊ.

ಭಾರಿ ಮನೆಗಳು ಬೆಲೆಗೆ

—:o:—

ಚಾಮುಂಡಿ ಪುರಂ, ಮೈಸೂರು ... ರೋಡ್, ಸರ್ಕಾರಿ ಬಾಡಿಗೆ ... ಬರುವ ಫ್ಲಾಟ್, ನಲ್ಲಿ, ದೀಪ, ಭಾವಿ, ವಿಶಾಲವಾದ ಕಾಂಪೌಂಡ್, ಔಟ್ ಹೌಸ್ ಗ್ಯಾರೇಜ್ ಇರುವ ತಾರಸಿ ಮತ್ತು ಮಂಗಳೂರು ಹೆಂಚಿನ ಭಾರಿ ಮನೆ ಬೆಲೆ 19,500 ರೂ.

ಸಾವರ್ಗ ತಕ್ಷಣ ಮಾರಾಟಕ್ಕಿದೆ

36'×15' ಇರುವ ಮಂಗಳೂರು ಹೆಂಚು ಕಟ್ಟಡ. ಜಾಗ ಇಲ್ಲ. 36'×15' ಕಟ್ಟಡವನ್ನೂ ಕಟ್ಟಲು ತಾಪತ್ರಯವಿಲ್ಲ ಪೂರ್ತಿ ಸಾಮಾನು ಸಿಗುತ್ತೆ. ಹೆಂಚು ಜಂತಿ, ಕಿಟಕಿ, ಬಾಗಿಲು, ಕಂಬ, ವಗೈರ ಒಡು ಎಲ್ಲಾ ಇವೆ ಬೆಲೆ 3000. ರೂ ಮಾತ್ರ

ಈ ಮನೆ ಇದೆ

ಚಾಮುಂಡಿ ಪುರಂ ಸಿಮೆಂಟ್ ಬ್ಲಾಕ್ 1022ನೇ ನಂಬರ್ ಮನೆ. ನಲ್ಲಿ, ಫ್ಲಾಟ್ ದೀಪ, ಮಹಡಿ, ಗ್ಯಾರೇಜ್ ಭಾವಿ ಎಲ್ಲಾ ಇದೆ ಬೆಲೆ ರೂ 20,000

ಬಿ. ಎಸ್. ಸುಬ್ಬರಾವ್,

ಚಾಮುಂಡಿ ಪುರಂ, ಮೈಸೂರು

॥ ಶ್ರೀ ಸೀತಾರಾಮಾಭ್ಯಾಂ ನಮಃ ॥

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ಸೋಮಕಲಾ

ಗಂಡಸರ ಮರ್ಮರೋಗದ ... ಕೆಟ್ಟ ... ಸೋಲಿ ... ಮುತ್ತಿಗಳು, ... ಸಂಹಾರ ... ಸೇವಿಸುವ ಔಷಧಿ

ಬೆಲೆ ಶೀಶೆ 1ಕ್ಕೆ 2-0-0

ವಿಳಾಸ:—

ಶ್ರೀ ಸೀತಾರಾಮಾಶ್ರಮ ವೈದ್ಯಶಾಲಾ, ಮೈಸೂರು.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೭] ಗುರುವಾರ ೩೦-೬-೪೯ [ಸಂಚಿಕೆ ೨೭೨

- ಹೋಟಲುಗಳೆಲ್ಲಾ -
ನಾಳೆಯಿಂದ ಬಂದ್

ಮುಷ್ಕರ ಹೂಡುವ ಹೋಟೆಲ್ ಲೈಸೆನ್ಸ್ ರದ್ದು

ಮೈಸೂರು ೩೦

ನಾಳೆಯಿಂದ ರಾಜಧಾನಿಯ ಹೋಟಲುಗಳನ್ನೆಲ್ಲಾ ಬಂದು ಮಾಡಲಾಗುವುದೆಂದು ಹೋಟಲು ಸಂಘದವರು ನಿರ್ಧರಿಸಿದ್ದಾರಷ್ಟೆ. ಮುಷ್ಕರ ಹೂಡುವ ಹೋಟಲುಗಳ ರಹದಾರಿಯನ್ನು ನಾಳೆಯಿಂದ ರದ್ದು ಮಾಡಲಾಗುವುದೆಂದೂ, ಮುಂದೆ ಹೋಟಲು ನಡೆಸುವವರು ಆಹಾರದ ಡೈರೆಕ್ಟರಿಂದ ಹೊಸ ರಹದಾರಿಯನ್ನು ಪಡೆಯಬೇಕಾಗುವುದೆಂದೂ ಪುರಸಭಾಧ್ಯಕ್ಷರು ತಿಳಿಸಿರುತ್ತಾರೆ.

ಹೊಟೆಲು ಮುಚ್ಚುವುದರಿಂದ ಆಗುವ ಪ್ರಯೋಜನಗಳು

ಮೈಸೂರು ಹೋಟೇಲ್ ಸಂಘದವರು ನಾಳೆಯಿಂದ ಹೋಟಲುಗಳನ್ನು ಮುಚ್ಚಬೇಕೆಂದು ನಿರ್ಧರಿಸಿರುವುದರಿಂದ ಈಗಾಗಲೇ ಸೌದೆ, ಹಾಲು, ಮೊಸರು, ತರಕಾರಿಗಳ ಬೆಲೆಯು ತೀರ ಕಡಿಮೆಯಾಗಿ ಜನರಿಗೆ ಪದಾರ್ಥಗಳು ಸುವ್ಯವಸ್ಥೆಯಿಂದ ದೊರಕುತ್ತಿವೆ. ಆದುದರಿಂದ ಹೋಟೇಲು ಸಂಘದವರು ಇದಕ್ಕಾಗಿ ಅಭಿನಂದನೀಯರು. ಹೋಟಲು ಮುಚ್ಚುವುದರಿಂದ ಕೆಲವರಿಗೆ ಮಾತ್ರ ತೊಂದರೆಯಾಗಬಹುದು. ಅವರಿಗೆ ಸರ್ಕಾರದವರು ಕ್ಯಾಂಟೀನ್ ವ್ಯವಸ್ಥೆಯನ್ನು ಏರ್ಪಡಿಸಬೇಕು–ಎಂದು ನಗರದ ಆಹಾರ ಸಮಿತಿಯ ಸದಸ್ಯರಾದ ಎಂ. ಸಿ. ನರಸಿಂಹಯ್ಯನವರು ಬರೆದಿದ್ದಾರೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಕಾರ್ಯಕಾರಿ ಸಮಿತಿಯ ಸಭೆಯು ಶ್ರೀ ಎ. ಕೆ. ಎಸ್. ರಾಘವೇಂದ್ರರವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆಯಿತು. ಆಗಸ್ಟ್ ತಿಂಗಳಿನಲ್ಲಿ ನಡೆಯುವ ವಾರ್ಷಿಕೋತ್ಸವಕ್ಕೆ ಪ್ರಧಾನ ಮಂತ್ರಿ ಮತ್ತು ಇತರ ಸಚಿವರುಗಳನ್ನು ಆಹ್ವಾನಿಸಬೇಕೆಂದು ಮತ್ತು ನಿಲಯಕ್ಕೆ ಕಟ್ಟಡದ ನಿಧಿಯನ್ನು ಕೂಡಿಸಬೇಕೆಂದೂ ನಿರ್ಧರಿಸಲಾಯಿತು. ವಿದ್ಯಾರ್ಥಿಗಳ ಪೈಕಿ ಹೆಚ್ಚು ಕ್ರಿಕೆಟ್ ಕೋರ್ಸಿನವರಿಗೆ ಸಹಾಯ ನೀಡಬೇಕೆಂದು ತೀರ್ಮಾನಿಸಲಾಯಿತು.

ಖಜಾನೆಯಲ್ಲಿ ಜನರಿಗೆ ತೊಂದರೆ

ಮೈಸೂರು ಜಿಲ್ಲಾ ಖಜಾನೆಯಲ್ಲಿ ಹಣ ಕಟ್ಟಲು ಹೋಗುವವರಿಗೆ ತುಂಬಾ ತೊಂದರೆಯಾಗುತ್ತಿದೆ. ೩ ಅಥವ ೪ ಗಂಟೆಗಳ ಕಾಲ ವೃಥಾ ಕಾಲಹರಣ ಮಾಡಬೇಕಾಗುತ್ತಿದೆ. ಬ್ಯಾಂಕುಗಳಲ್ಲಿರುವಂತೆ ಬೇರೆ ಹಣ ಕೊಡುವವರ ಬಿಲ್ಲನ್ನಿಗೆ ರುಜು ಹಾಕಿ ಕಳ ಹಿಸಿಕೊಡುವ ವ್ಯವಸ್ಥೆಯನ್ನು ಇಲ್ಲೂ ಜಾರಿಗೆ ತರುವುದರಿಂದ ಈಗಿರುವ ತೊಂದರೆ ತಪ್ಪುವುದು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಡಬೇಕೆಂದು ಒಬ್ಬ ನೊಂದವರು ಕೋರಿರುತ್ತಾರೆ.

ಶ್ರೀ ಚಾಮುಂಡೇಶ್ವರಿ ವಿಗ್ರಹದ ಪ್ರತಿಷ್ಠೆ

ಮೈಸೂರು, ಶಾಕಮ್ಮನಗುಡಿ ಎದುರಿಗಿರುವ ಶ್ರೀ ಜ್ವಾಲಲಿಂಗೇಶ್ವರ ಚೌಡೇಶ್ವರಿ ... ನವರ ದೇವಸ್ಥಾನದಲ್ಲಿ ನಾಳೆ ... ಶ್ರೀ ... ನವರು ಶ್ರೀ ... ನವರ ... ಮುನ್ನೂ ಮತ್ತು ಗಂಗಾಭಿಷೇಕವನ್ನು ನೆರವೇರಿಸುವರು. ನಾಳೆ ರಾತ್ರಿ ಹರಿಕಥೆಯನ್ನೂ ಸಹ ಏರ್ಪಡಿಸಲಾಗಿದೆ.

ಭಾರತಕ್ಕೆ ಬ್ರಿಟಿಷ್ ಪ್ರಧಾನಿಗಳ ಭೇಟಿ

ಮುಂದಿನ ಜನವರಿ ತಿಂಗಳಿನಲ್ಲಿ ಭಾರತವನ್ನು ರಿಪಬ್ಲಿಕ್ ಎಂದು ಘೋಷಿಸಲಾಗುವ ಸಮಾರಂಭಕ್ಕೆ ಬ್ರಿಟನ್ನಿನ ಪ್ರಧಾನಿ ಅಟ್ಲಿ, ಸಚಿವರುಗಳಾದ ಸರ್ ಸ್ಟಾಫರ್ಡ್ ಕ್ರಿಪ್ಸ್, ಎ. ವಿ. ಅಲೆಗ್ಸಾಂಡರ್‌ರವರುಗಳು ಬರಲಿದ್ದಾರೆಂದು ಹೇಳಲಾಗಿದೆ.

ಪಾಕೀಸ್ತಾನದಲ್ಲಿ ಮಹಿಳಾ ನೌಕಾ ಪಡೆ

ಪಾಕೀಸ್ತಾನದಲ್ಲಿ ಮಹಿಳೆಯರ ನೌಕಾ ಪಡೆಯನ್ನು ಮೊಟ್ಟ ಮೊದಲನೆಯ ಬಾರಿ ಏರ್ಪಡಿಸಲಾಗಿದೆ. ಅದಕ್ಕೆ ಸೇರುವ ಮಹಿಳೆಯರಿಗೆ ಆರು ವಾರಗಳ ಶಿಕ್ಷಣ ಕೊಡಲಾಗುವುದು.

ಕಲ್ಲಿದ್ದಲು ಗಣಿ ಕಾರ್ಮಿಕರ ಮುಷ್ಕರ

ಆಸ್ಟ್ರೇಲಿಯದ ಕಲ್ಲಿದ್ದಲು ಗಣಿ ಕಾರ್ಮಿಕರು ಕಳೆದ ೩ ದಿನಗಳಿಂದಲೂ ಮುಷ್ಕರ ಹೂಡಿರುವುದರಿಂದ, ದೇಶದ ಅನೇಕ ಕಾರ್ಖಾನೆಗಳು ಮುಚ್ಚಿ ೫ ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆಂದು ಹೇಳಲಾಗಿದೆ.

ಪೊಲೀಸಿನವರಿಗೆ ವಿಶೇಷ ಅಧಿಕಾರ

ಆಕ್ಷೇಪಕರ ಚಟುವಟಿಕೆಗಳಲ್ಲಿ ಭಾಗವಹಿಸುವರೆಂಬ ಅನುಮಾನದ ಮೇಲೆ ಯಾರನ್ನು ಬೇಕಾದರೂ ವಾರೆಂಟು ಇಲ್ಲದ ದಸ್ತಗಿರಿ ಮಾಡುವ ವಿಶೇಷ ಅಧಿಕಾರವನ್ನು ಪೊಲೀಸ್ ಇನ್ಸ್‌ಪೆಕ್ಟರುಗಳು ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಪಶ್ಚಿಮ ಬಂಗಾಳ ಸರ್ಕಾರದವರು ಕೊಟ್ಟಿರುತ್ತಾರೆ.

ನೂತನ ರಥಕ್ಕೆ ನರಬಲಿಯೆ?

ಕೃಷ್ಣಗಿರಿ ತಾಲ್ಲೂಕು ಸುನ್ನಂಪಟ್ಟಿಯಲ್ಲಿ ಕಳೆದ ... ನೇ ತಾ॥ ರಥಕ್ಕೆ ನರಬಲಿಯನ್ನು ಅರ್ಪಿಸಿದರೆಂಬ ಆಪಾದನೆಯ ಮೇಲೆ ಮದುಗೆಲಿ ... ನಾರಾಯಣಾಚಾರಿ, ಕೀರ್ತಿಗಿರಿ ಮತ್ತು ರಂಗಪ್ಪನಾಯಕ ಎಂಬುವರನ್ನು ಪೊಲೀಸ್ಸಿಗೆ ಗುರಿಪಡಿಸಲಾಗಿದೆ. ಚನ್ನರಾಯ ದೇವರ ನೂತನ ರಥಕ್ಕಾಗಿ ಚಿನ್ನಮ್ಮಾಳ್ ಎಂಬಾಕೆಯನ್ನು ಇವರು ಕೊಲೆಮಾಡಿ, ಆಕೆಯ ರಕ್ತವನ್ನು ರಥದಮೇಲೆ ಸಿಂಪಡಿಸಿದರೆಂದು ಆಪಾದಿಸಲಾಗಿತ್ತು.

ಹೈದರಾಬಾದಿನಿಂದ ಪಾಕೀಸ್ತಾನಕ್ಕೆ ೨ ಕೋಟಿ ರೂ.

ಕಳೆದ ೬ ತಿಂಗಳಿನಲ್ಲಿ ಹೈದರಾಬಾದಿನಿಂದ ಪಾಕೀಸ್ತಾನಕ್ಕೆ ದಿನಕ್ಕೆ ಒಂದು ಲಕ್ಷ ರೂ. ನಂತೆ ಒಟ್ಟು ೨ ಕೋಟಿ ರೂ. ಅನ್ನು ಬ್ಯಾಂಕುಗಳ ಮೂಲಕ ಅಕ್ರಮವಾಗಿ ವರ್ಗಾಯಿಸಲಾಗಿದೆಯೆಂದೂ, ಇದೂ ಅಲ್ಲದೆ ಮಣಿ ಆರ್ಡರು ಮೂಲಕವೂ ಹೆಚ್ಚು ಹಣ ಅಲ್ಲಿಗೆ ಹೋಗಿದೆಯೆಂದೂ ಹೇಳಲಾಗಿದೆ.

ಶಸ್ತ್ರ ಚಿಕಿತ್ಸೆಯಿಂದ ಹೆಣ್ಣು ಗಂಡಾಯಿತು

ಅಮೆರಿಕದ ೨೩ ವರ್ಷದ ಜೋನಿ ಎಂಬುವಳನ್ನು ಶಸ್ತ್ರ ಚಿಕಿತ್ಸೆಯಿಂದ ವೈದ್ಯರು ಗಂಡಸಾಗಿ ಪರಿವರ್ತನೆ ಮಾಡಿರುವ ವರ್ತಮಾನ ವರದಿಯಾಗಿದೆ. ಆಕೆಯ ಶರೀರದಲ್ಲಿ ಗಂಡಸಿನ ಚಿಹ್ನೆಗಳು ಇದ್ದುದರಿಂದ ಆಕೆಯು ಗಂಡಸಾಗಬಹುದೆಂದು ವೈದ್ಯರು ತಿಳಿಸಿದರೆಂದೂ, ಈಗಿನ ಕಾಲವು ಪುರುಷರ ಯುಗವಾದುದರಿಂದ ಗಂಡಸಾಗಲು ಆಕೆಯು ಅಪೇಕ್ಷೆಪಟ್ಟಳೆಂದೂ, ಅದರ ಮೇಲೆ ಶಸ್ತ್ರ ಚಿಕಿತ್ಸೆ ಮಾಡಲಾಯಿತೆಂದೂ, ಈಗ ಆತನು ಜಾನ್ ಎಂಬ ಹೆಸರಿನಿಂದ ಕೆಲಸಕ್ಕೆ ಸೇರಿದ್ದಾನೆಂದೂ ವರದಿಯಾಗಿದೆ.

ಒಂದು ಮಗುವಿಗಾಗಿ ೫೦೦ ಜನರ ಅರ್ಜಿ

ಆಸ್ಟ್ರೇಲಿಯದ ಮೆಲ್‌ಬೋರ್ನ್ ಉದ್ಯಾನವನದಲ್ಲಿ ಆ ತಾನೆ ಜನನವಾಗಿದ್ದ ಮಗುವೊಂದು ಪತ್ತೆ ಆಗಿ ಅದನ್ನು ಆಸ್ಪತ್ರೆಗೆ ದಾಖಲು ಮಾಡಲಾಯಿತೆಂದೂ, ಅದನ್ನು ಪೋಷಿಸಲು ಮಕ್ಕಳಿಲ್ಲದ ೫೦೦ ಜನರು ಅರ್ಜಿ ಹಾಕಿಕೊಂಡಿದ್ದಾರೆಂದೂ ಹೇಳಲಾಗಿದೆ.

ಸರ್. ಸಿ. ವಿ. ರಾಮನ್‌ರವರಿಗೆ ಫ್ರಾನ್ಸಿನ ಗೌರವ

ಭಾರತದ ಸುಪ್ರಸಿದ್ಧ ವೈಜ್ಞಾನಿಕ ಸರ್ ಸಿ. ವಿ. ರಾಮನ್‌ರವರನ್ನು ಫ್ರೆಂಚ್ ಸೈನ್ಸ್ ಅಕಾಡೆಮಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

... ಕಾಶಿಯಲ್ಲಿ ಕಪಿಗಳ ಉಪಟಳವು ವಿಪರೀತವಾಗಿ, ಅನೇಕ ಸಂದರ್ಭದಲ್ಲಿ ಮಕ್ಕಳು ಮತ್ತು ಹೆಂಗಸರನ್ನು ಕಚ್ಚಿವೆಯೆಂದೂ, ಅವನ್ನು ಹಿಡಿಯಲು ಪುರಸಭೆಯವರು ೧೦ ಸಾವಿರ ರೂ. ಗ್ರಾಂಟನ್ನು ಮಂಜೂರು ಮಾಡಿದ್ದಾರೆಂದೂ ಹೇಳಲಾಗಿದೆ.

ಗ್ರಾಮಾಂತರಗಳಲ್ಲಿ ಅಂಚೆ ಕಛೇರಿಗಳು

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ವ. ಫೋನ್] ಬೆಂಗಳೂರು ೩೦

ಶಾಸನ ಸಭೆಯಲ್ಲಿ ಈ ದಿನ, ಸಚಿವ ಶ್ರೀ ದಾಸಪ್ಪನವರು ಶ್ರೀ ಟಿ. ಮಾದಯ್ಯಗೌಡರ ಪ್ರಶ್ನೆಗೆ ಉತ್ತರವಿತ್ತು, ೨ ಸಾವಿರ ಪ್ರಜಾಸಂಖ್ಯೆಯುಳ್ಳ ಪ್ರತಿಯೊಂದು ಗ್ರಾಮದಲ್ಲೂ ಅಂಚೆ ಕಛೇರಿಯನ್ನು ಸ್ಥಾಪಿಸಬೇಕೆಂದು ಭಾರತ ಸರ್ಕಾರದವರು ನಿರ್ಧರಿಸಿರುವರೆಂದೂ, ಅದರ ಪ್ರಕಾರ, ಕಳೆದ ವರ್ಷ ೭೫ ಪೋಸ್ಟಾಫೀಸುಗಳನ್ನು ತೆರೆಯಲಾಯಿತೆಂದೂ ಈ ವಿಚಾರದಲ್ಲಿ ಮೈಸೂರು ಸರ್ಕಾರದವರಿಗೆ ಯಾವ ಅಧಿಕಾರವೂ ಇಲ್ಲವೆಂದೂ ತಿಳಿಸಿದರು.

ಬೆಂಗಳೂರಿನಲ್ಲಿ ೧೦ ಲಕ್ಷ ರೂ. ಖರ್ಚಿನಿಂದ ೭೦೭ ಮನೆಗಳ ಯೋಜನೆಗಳನ್ನು ಕಟ್ಟಲು ಸರ್ಕಾರದವರು ಕಾರ್ಮಿಕ ಗೃಹ ಕಾನೂನನ್ನು ಜಾರಿಗೆ ತಂದಿರುವುದಾಗಿಯೂ, ಇತರ ಭಾಗಗಳಲ್ಲಿ ಅದನ್ನು ಜಾರಿಗೆ ತಂದಿಲ್ಲವೆಂದೂ ಸಚಿವ ಶ್ರೀ ದಾಸಪ್ಪನವರು ಶ್ರೀ ರಾಮಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಗೋಪಾಲರಾವ್ ಸಮಿತಿಗೆ ವಿಶೇಷ ಅಧಿಕಾರ ಕೊಡುವ ಬಗ್ಗೆ ಶ್ರೀಮನ್ಮಹಾರಾಜರವರು ಹೊರಡಿಸಿದ ಅವಸರದ ಶಾಸನವನ್ನು ಚರ್ಚಿಸಲು ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು ಹಿಂದೆ ತಂದಿದ್ದ ಅವಸರದ ಠರಾವನ್ನು ಸಭೆಯಲ್ಲಿ ಚರ್ಚಿಸುವ ಬಗ್ಗೆ ಅಧ್ಯಕ್ಷರು ತಮ್ಮ ರೂಲಿಂಗನ್ನು ಕಾದಿಟ್ಟಿದ್ದರಷ್ಟೆ. ಈದಿನ ಅದನ್ನು ಅವರು ತಳ್ಳಿಹಾಕಿದರು. ಶಾಸನ ಸಭೆಯು ೧೯೪೦ನೇ ಇಸವಿಯ ರಾಜ್ಯಾಂಗದ ಪ್ರಕಾರ ಕೆಲಸ ಮಾಡುತ್ತಿರುವುದರಿಂದಲೂ ಅದರಂತೆ ಶ್ರೀಮನ್ಮಹಾರಾಜರವರಿಗೆ ಶಾಸನ ಮಾಡಲು ವಿಶೇಷಾಧಿಕಾರವಿರುವುದರಿಂದಲೂ ಈ ಅಂಶವನ್ನು ಪರಿಶೀಲಿಸಲು ಅವಕಾಶವಿಲ್ಲವೆಂದು ತಿಳಿಸಿದರು.

ನಾಳೆಯಿಂದ ಹೋಟಲುಗಳನ್ನು ಮುಚ್ಚಲು ನಿರ್ಧಾರ

ಬೆಂಗಳೂರು ೩೦

ಸಂಸ್ಥಾನದ ಹೋಟಲುಗಳ ಮಾಲೀಕರುಗಳ ಸಭೆಯು ನಿನ್ನೆ ನಡೆದು, ಸರ್ಕಾರದವರು ಇತ್ತೀಚೆಗೆ ಹೋಟಲುಗಳ ಮೇಲೆ ಹಾಕಿರುವ ನಿರ್ಬಂಧ ಆಜ್ಞೆಗಳಿಂದ ವ್ಯಾಪಾರವನ್ನು ನಡೆಸಲು ಸಾಧ್ಯವಿಲ್ಲವಾದ ಪ್ರಯುಕ್ತ, ಸದರಿ ಆಜ್ಞೆಯು ರದ್ದಾಗುವವರೆಗೂ ನಾಳೆಯಿಂದ ಹೋಟಲುಗಳನ್ನು ಮುಚ್ಚಬೇಕೆಂದು ತೀರ್ಮಾನಿಸಲಾಯಿತು. ಮುಸ್ಲಿಂ ಹೋಟಲಿನವರೂ ಇದಕ್ಕೆ ಒಪ್ಪಿ, ಮುಷ್ಕರದಲ್ಲಿ ಭಾಗ ವಹಿಸುವುದಾಗಿ ತಿಳಿಸಿರುತ್ತಾರೆ.

ಲಿಯಾಕತಾಲಿ ಮಂತ್ರಿಮಂಡಲದ ೩ ಜನರ ಬಿಡುಗಡೆ

ಹೈದರಾಬಾದಿನ ಮಾಜಿ ಲಯಾಕಾಲಿ ಮಂತ್ರಿಮಂಡಲದ ರೆವಿನ್ಯೂ ಸಚಿವ ನವಾಬ್ ಜಂಗ್ ... ನವಾಜ್ ..., ನ್ಯಾಯಾಂಗ ಸಚಿವ ರಾಜಾ ರಾಜಮೋಹರ್ ... ಮತ್ತು ಪ್ರಾಂತೀಯ ಸಚಿವ ... ಅವರುಗಳನ್ನು ಬಿಡುಗಡೆ ಮಾಡಲಾಗಿದೆ. ಅವರುಗಳ ಮೇಲೆ ಯಾವ ಆಪಾದನೆಗಳನ್ನೂ ಹೊರಿ...

ಹಿಂದೂ ದೇವಾಲಯಗಳ ಮೇಲೆ ಧಾಳಿ

ಕರಾಚಿಯಲ್ಲಿರುವ ಹಿಂದೂ ದೇವಾಲಯ ಮತ್ತು ಮಠಗಳ ಮೇಲೆ ಪಾಕಿಸ್ಥಾನ ಪೋಲೀಸ್ ಅಧಿಕಾರಿಗಳು ಧಾಳಿ ನಡೆಸುತ್ತಿರುವದು ಇತ್ತೀಚೆಗೆ ಹೆಚ್ಚುತ್ತಿದೆಯೆಂದೂ, ಇದರಿಂದ ಅಲ್ಲಿ ಹಿಂದೂಗಳಿಗೆ ಗಾಬರಿ ಉಂಟಾಗಿದೆಯೆಂದೂ ಜೇಬುಗಳ್ಳರ ಪತ್ತೆಗಾಗಿ ದೇವಾಲಯಗಳಿಗೆ ಪ್ರವೇಶ ಮಾಡಲಾಗುತ್ತಿದೆಯೆಂದು ಪೋಲೀಸರು ತಿಳಿಸಿರುತ್ತಾರೆ. ಸುಕ್ಕೂರಿನ ಸವಲಿ ದೇವಾಲಯದ ಇಬ್ಬರು ಅರ್ಚಕರನ್ನು ಬಂಧಿಸಿ ಅಲ್ಲಿಂದ ಗಡೀಪಾರು ಮಾಡಲಾಗಿದೆ

ಕಲ್ಕತ್ತ ಪೋಲೀಸರ ಮೇಲೆ ಬಾಂಬು

ಕಲ್ಕತ್ತದ ಕಾಲೇಜ್ ರಸ್ತೆಯಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ನೆರೆದ ಜನರನ್ನು ಚದುರಿಸಲು ಹೋದ ಪೋಲೀಸರ ಮೇಲೆ ಜನರ ಗುಂಪು ಬಾಂಬುಗಳನ್ನು ಎಸದರೆಂದೂ, ಅನೇಕ ಬಸ್ಸುಗಳಿಗೆ ಬೆಂಕಿ ಇಟ್ಟರೆಂದೂ ವರದಿಯಾಗಿದೆ. ಈ ಗಲಭೆಯಲ್ಲಿ ಒಬ್ಬನು ಸತ್ತು ೬ ಜನರಿಗೆ ಗಾಯವಾಯಿತು ಗಲಭೆಕಾರರು ಕಲ್ಕತ್ತೆಗೆ ೧೧ ಮೈಲಿ ದೂರದಲ್ಲಿರುವ ರಿಷರಾ ರೈಲ್ವೆ ಸಿಗ್ನಾಲಿಗೆ ನೀ[illegible] ಬೆಂಕಿ ಇಟ್ಟರು

ಮದರಾಸ್ ಸರ್ಕಾರದ ಜವಾನರ ಸಂಬಳ ಹೆಚ್ಚಿಕೆ

ಮದರಾಸ್ ಸರ್ಕಾರದ ಎಲ್ಲ ಜವಾನರ ಸಂಬಳವನ್ನೂ ೧೬ ರಿಂದ ೧೮ ರೂಗೆ ಹೆಚ್ಚಿಸಲು ನಿರ್ಧರಿಸಲಾಗಿದೆ

॥ ಶ್ರೀ ॥

ಗಣೇಶಾ ಟಾಕೀಸ್

1-7-49ರಿಂದ ಅರ್ಧವೇ ಪ್ರಾರಂಭ

ಪ್ರತಿ ದಿನ ೩ ಪ್ರದರ್ಶನಗಳು

ಶಂಭಗವಲ್ಲಿ

(ತಮಿಳು)

ಪಾತ್ರ – ಎಂ ಎಸ್ ವಿಜಯಾಳ್, ಟಿ ಎಸ್ ಬಾಲಯ್ಯ, ನಾಟ್ಯರಾಣಿ ಎ.ಎಸ್ ಪದ್ಮನಾಯಕಿ, ಮತ್ತಿತರರು

ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)

ನಮ್ಮಲ್ಲಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ಸ್ವಂತ ಮಗ್ಗದಿಂದ ತಯಾರಾದ ಕ್ರೇಪ್, ಬೆಂಗಳೂರು ವರ್ಮಾಪರಂ, ಅರಣಿ ಸೀರೆಗಳು ಗ್ಯಾರಂಟಿಯಾಗಿ ಮಾರಲ್ಪಡುತ್ತವೆ ದಯವಿಟ್ಟು ಭೇಟಿ ಕೊಡಿ

ಶಿವರಾಂಪೇಟೆ ಮೈಸೂರು

Edited, printed and published by A R. Nagarajan at the Sadhvi Press, D Subbiah Road, Mysore

೧೧ ದಿನಗಳ ಸೂತ್ರ ಯಜ್ಞ

ಮಹಾತ್ಮ ಗಾಂಧಿಜೀಯವರ ೮೧ನೇ ಜಯಂತಿಯ ಸಂಬಂಧದಲ್ಲಿ ಸೌರಾಷ್ಟ್ರ ರಚನಾತ್ಮಕ ಕೆಲಸಗಾರರ ಸಮಿತಿಯವರು ೮೧ ದಿನಗಳ ತನಕ ಸೂತ್ರ ಯಜ್ಞವನ್ನು ನಡೆಸಲು ವ್ಯವಸ್ಥೆ ಮಾಡಿದ್ದಾರೆ

ಮೈಸೂರು ಶ್ರೀಮನ್ಮಹಾರಾಜ ಸಂಸ್ಕೃತ ಕೃಷ್ಣರಾಜ [illegible] ಭಾಷಾ ವೈದ್ಯ ಅಂಬಳೆ ನರಸಿಂಹ [illegible] ಮಗನಾದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು ಉಂಟು, ಮಕ್ಕಳಿಲ್ಲ, ಇಂಥವರಿಗೆ ಗ್ಯಾರಂಟೀ ಔಷಧ

ಕ್ರಯ -೧ ಸೆಟ್ ರೂ ೪-೪-೦ ಪ್ಯಾಕಿಂಗ್ ಮತ್ತು ಟಪಾಲು ಖರ್ಚು ಅಣೆ ತಯಾರಿಸುವವರು

ಎ. ರಾಮಸ್ವಾಮಿ ಅಯ್ಯರ್, ಅಂಬಳೆ, ಯಳಂದೂರು

ಇವರು ಮೈಸೂರು ಕೃಷ್ಣರಾಜ ಪೋಲೀಸ್ ಸ್ಟೇಷನ್ ಎದುರು, ಸೊಪ್ಪಿನ ಕೇರಿ ವೀಧಿ ೧೧ನೇ ನಂಬರ್ ಮನೆಯಲ್ಲಿ ೪-೭-೪೯ರ ಬಾಗಾಯ್ತು ೮-೭-೪೯ರ ವರಿಗೆ ಕ್ಯಾಂಪ್ ಮಾಡುತ್ತಾರೆ ನೋಡತಕ್ಕ ಕಾಲ ಬೆಳಗ್ಗೆ ೭ಂಟರಿಂದ ಹನ್ನೊಂದು ಘಂಟೆ

ಆದು ಜುಲೈ ೧ನೇ ತಾ॥ ಪ್ರಾರಂಭವಾಗುವುದು

ಶ್ರೀ ಗಾಯಿತ್ರೀ

1-7-49 ರಿಂದ 2 ದಿನಗಳು ಮಾತ್ರ

ಪ್ರತಿ ದಿನ 3 ಆಟಗಳು

20th ಸೆಂಚುರಿಯವರ ಅಮೋಘ ಚಿತ್ರ

ದಿ ವಾಲ್ಸ್ ಆಫ್ ಜೆರಿಕೋ

THE WALLS OF JERICHO

ಪಾತ್ರ: ಲಿಂಡಾ ಡಾರ್ನೆಲ್ ಮತ್ತು ಕಾರ್ನೆಲ್ ವೈಲ್ಡ್

ಮುಂದಿನ ಬದಲಾವಣೆ -

ನ್ಯೂಯಾರ್ಕ್ ಈಟಿರ್ ಆಫ್ ಕುಮಾರ್

ಪಾತ್ರ :-ಮೈಸೂರ್ ಸಾಬು

— Morning Shows :—

On 2nd and 3rd July 1949

R K O's

THE BODY SNATCHER

With :-Boris Karloff

ಮೈಸೂರು ಸ್ಯಾಂಡಲ್ ಉಡ್‌ಆಯಿಲ್ ಫ್ಯಾಕ್ಟರಿ ಆಫೀಸ್

ಗಂಧದ ಎಣ್ಣೆ ಕಾರ್ಖಾನೆಗೆ ರೈಲಿನ ಮುಖಾಂತರ ೧೯೪೯-೫೦ರಲ್ಲಿ ಸರಬರಾಜಾಗುವ ಸೌದೆ, ಕಲ್ಲಿದ್ದಲು, ಮುಂತಾದುವುಗಳನ್ನು ಕಾರ್ಖಾನೆಗೆ ಸೇರಿದ ರೈಲ್ವೆ ಸೈಡಿಂಗಿನ ಬಳಿ ವ್ಯಾಗನ್ನಿನಿಂದ ಇಳಿಸಿ ಕಾರ್ಖಾನೆ ಬಾಯಿಲರುಗಳಿಗೂ ಮತ್ತು ಸ್ಟೋರಿಗೂ ಸಾಗಿಸುವ ಕೆಲಸವನ್ನು ಮತ್ತು ಬಾಯಿಲರುಗಳಲ್ಲಿ ಉರಿಸಲು ಅನುಕೂಲಿಸುವಂತೆ ಸೌದೆಯನ್ನು ಸೀಳುವ ಕೆಲಸವನ್ನೂ ಕಂಟ್ರಾಕ್ಟು ಕೊಡಲಾಗುತ್ತೆ.

ದರಖಾಸ್ತು ಮಾಡಲು ಇಷ್ಟವುಳ್ಳವರು ಇದರಡಿ ನಮೂದಿಸಿರುವ ಬಾಬುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಟನ್ ಒಂದಕ್ಕೆ ದರವನ್ನು ಕಟ್ಟಿ ಜುಲೈ ತಿಂಗಳು ೮ನೆಯ ತಾರೀಖು ಒಳಗಾಗಿ ದರಖಾಸ್ತು ಮಾಡಬಹುದು.

ದರಖಾಸ್ತುದಾರರು ತಮ್ಮ ಪೂರ್ತಿಯಾದ ಅಂಚೆ ವಿಳಾಸವನ್ನು ನಮೂದಿಸಿ ದರಖಾಸ್ತುಗಳನ್ನು ಮೊಹರು ಮಾಡಲ್ಪಟ್ಟ ಕವರುಗಳಲ್ಲಿ ಕಳುಹಿಸತಕ್ಕದ್ದು ಅಲ್ಲದೆ ೨೦೦ ರೂಪಾಯಿಗಳನ್ನು ನಗದು ಡಿಪಾಜಿಟ್ಟಾಗಿ ಹಾಜರು ಮಾಡತಕ್ಕದ್ದು ಹಾಗೆ ಡಿಪಾಜಿಟ್ಟಿಲ್ಲದ ಮತ್ತು ಜುಲೈ ೮ನೆಯ ತಾರೀಖು ಮಧ್ಯಾಹ್ನ ೩ ಗಂಟೆ ಒಳಗೆ ತಲುಪದೆ ಇರುವ ದರಖಾಸ್ತುಗಳನ್ನು ಗಮನಕ್ಕೆ ತರಲಾಗುವುದಿಲ್ಲ ಇಷ್ಟವುಳ್ಳ ದರಖಾಸ್ತುದಾರರು ಆ ದಿವಸ ಮೊಹರು ಬಿಚ್ಚುವಾಗ ಹಾಜರಾಗಬಹುದು

ದರಖಾಸ್ತುಗಳನ್ನು ಮಂಜೂರು ಮಾಡುವ ಅಥವಾ ನಿರಾಕರಿಸುವ ಹಕ್ಕು ಈ ಕಾರ್ಖಾನೆ ಡೈರೆಕ್ಟರ್ ಸಾಹೇಬರ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ನಿರಾಕರಿಸುವ ದರಖಾಸ್ತುಗಳ ಬಗ್ಗೆ ಕಾರಣ ತಿಳಿಸಲಾಗುವುದಿಲ್ಲ

ಮಂಜೂರು ಮಾಡಲ್ಪಡುವ ದರಖಾಸ್ತುದಾರರು ಒಂದು ವಾರದ ಒಳಗಾಗಿ ಹತ್ತು ಆಣೆ ಛಾಪಾ ಕಾಗದದಲ್ಲಿ ಮಾಮೂಲು ಇರುವ ಷರತ್ತುಗಳಂತೆ ಕರಾರನ್ನು ಬರೆದು ಕೊಡಬೇಕು ಮತ್ತು ಕಾರ್ಖಾನೆಯವರು ತಿಳಿಸುವ ತಾರೀಖಿಗೆ ಸರಿಯಾಗಿ ಕೆಲಸಕ್ಕೆ ಪ್ರಾರಂಭಿಸಬೇಕು ಇವುಗಳಲ್ಲಿ ಯಾವುದೊಂದು ಅಂಶಕ್ಕೆ ತಪ್ಪಿದರೂ ಡಿಪಾಜಿಟ್ಟು ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ಹಿಡಿದುಕೊಳ್ಳಲ್ಪಡುವುದಲ್ಲದೆ ಕಂಟ್ರಾಕ್ಟನ್ನು ಬೇರೊಬ್ಬರಿಗೆ ಹೆಚ್ಚು ದರಗಳ ಪ್ರಕಾರ ಕೊಡಬೇಕಾದಾಗುವ ನಿಮಿತ್ತ ಬಂದಂತಹ ನಷ್ಟವನ್ನು ಸದರಿ ದರಖಾಸ್ತುದಾರರಿಂದ ಕಂದಾಯದ ಬಾಕಿ ತರಹ ವಸೂಲು ಮಾಡಲ್ಪಡುತ್ತೆ

ಟೆಂಡರುಗಳಿಗೆ ಸಂಬಂಧಿಸಿದ ವಿಶಿಷ್ಟ ಷರತ್ತುಗಳೂ ಸಹ ಇರತಕ್ಕದ್ದು ಅನ್ವಯಿಸತಕ್ಕದ್ದು

— ಕೆಲಸಗಳ ವಿವರ

[illegible]

ಬಿ. ಪಿ. ರಾಮಕೃಷ್ಣ, ಜನರಲ್ ಮ್ಯಾನೇಜರ್

RAJKAMAL, MYSORE

FROM 1st JULY 1949 DAILY 3 SHOWS

William Shakespeare's

HAMLET

WITH—LAURENCE OLIVIER JEAN SIMMONS ETC.,

The greatest Drama in World Literature, snatching away the Academy Award of the year 1948

See this greatest tragedy a tragedy of a man of thought, who failed as a man of action

ಬೆಳಗಿನ ಆಟ 1-7-49ರಿಂದ ಪ್ರಾರಂಭ

ಬ್ಯಾರಿಸ್ಟರ್

(ಹಿಂ) ಭೂಮಿಕೆ.— ಬೆಂಜಮಿನ್, ಗೀತಾ ಬೋಸ್.

BANGALORE RACES 1949

ಜುಲೈ 2 ರಂದು

ಬುಕ್ ಮೇಕರ್ಸ್ ಟೊಟಲೈಸೇಟರ್

ಟ್ರಿಬಲ್ ಈವೆಂಟ್, ಟೋಟ್ ಮತ್ತು ರೂ. 2 ಸ್ವೀಪ್

ಪ್ರವೇಶ — ಮೊ ತರಗತಿ - ಪುರುಷರು ರೂ 6, ಸ್ತ್ರೀಯರು ರೂ 4 ದಿನಕ್ಕೆ; ಎರಡನೇ ತರಗತಿ - ಪುರುಷರು ಅಥವಾ ಸ್ತ್ರೀಯರು ರೂ 2 ,,

॥ ಶ್ರೀ ಸೀತಾರಾಮಾಯನಮಃ ॥

ಭಿಷಗ್ರತ್ನ ವಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು

ವೈದ್ಯೋಪಾಸಕ

[illegible]

ಕಣ್ಣುಕೈಕಾಲು, ಮೈ ಉರಿ [illegible] ದಾಹ, ತಲೆಸುತ್ತು ತಲೆನೋವು, ಕಣ್ಣುಕತ್ತಲೆ, ಮನಸ್ಸಿಗೆ ಕಳವಳ, ಕೋಪ [illegible] ನಿವಾರಕ.— ಬಾಟ್ಲು 1ಕ್ಕೆ 2-0-0

ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು.